ರ. ನಂ. ಬಿ. ೧೯೪೭ ವಾ. ಚಂದಾ ೧—೪—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಪುಷ್ಯ ಬಹುಳ ೨ ಶಕೆ ೧೮೪೭. ತಾ॥ ೧-೧-೧೯೨೬. | ಸಂಚಿಕೆ ೩೮

ಸಂಪಾದಕರ ಭೂಮಿ.

(*)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ!
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ॥
ಚಿನ್ಮಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ.।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ।
ಗಂಧವಹನೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಮುಂಬೈ ಕರ್ನಾಟಕದ ಅಂಚೆ ಮನೆಗಳಲ್ಲಿ ಮಾತೃಭಾಷೆಗೆ ಮನ್ನಣೆ ಇರಕೂಡದೆಂಬದಾಗಿ ಸರಕಾರವು ಸರ್ವತ್ರದಲ್ಲಿಯೂ ಸಾರಿದಂತೆ ಕಾಣುತ್ತದೆ. ದಕ್ಷಿಣಮಹಾರಾಷ್ಟ್ರವೆಂಬ ಅಪದ್ಧವಾದ ಹೆಸರನ್ನಿಟ್ಟು, ಕನ್ನಡ ನುಡಿಗೆ ಇಲ್ಲಿ ಯಾವ ಬಗೆಯ ಆಸ್ಪದವೂ ಇಲ್ಲದಂತೆ ಮಾಡಿ, ಅಂಚೆಮನೆಗಳಲ್ಲೆಲ್ಲ, ಮರಾಟಿಯು ಮೆರೆಯುತ್ತಿರುವಂತೆ ಮಾಡಿದ್ದು, ಅನ್ಯಾಯದ ಮಾತು. ಮನಿಯಾರ್ಡರ ನಮೂನೆಗಳು ಮರಾಟಿಯಲ್ಲಿ! ಪಾವತಿಗಳು ಮರಾಟಿಯಲ್ಲಿ 'ಸೇವಿಂಗ್ಸ ಬ್ಯಾಂಕ್ಸ' ಪುಸ್ತಕಗಳುಮರಾಟಿಯಲ್ಲಿ! ನೋಟೀಸುಗಳು ಸಹ ಮರಾಟಿಯಲ್ಲಿ! ಕನ್ನಡ ನಾಡಿನ ಅಂಚೆಮನೆಗಳಲ್ಲಿ ಕನ್ನಡವೇ ಕಣ್ಣಿಗೆ ಕಾಣಿಸದು. ಜನರ ಸೌಕರ್ಯಕ್ಕಾಗಿ ನಮೂನೆಗಳೆಲ್ಲ ಮಾತೃ ಭಾಷೆಯಲ್ಲಿರಬೇಕಾಗಿ ಸರಕಾರದ ಉದ್ದೇಶವಿದ್ದುದು ಸ್ಪಷ್ಟವಿದೆ. ಆದರೆ ಇಲ್ಲಿ ಅವ ಭಾಷೆಯಿರಬೇಕೆಂಬುದನ್ನು ವಿಚಾರಿಸದೇ ಕುರುಡರಂತೆ ನಟಿಸುವದು ಸರಕಾರಕ್ಕೆ ಭೂಷಣವಲ್ಲ. ಹಳ್ಳಿಯ ಅಂಚೆಮನೆಗಳಲ್ಲಿಯೂ ಅರೇ ಮಾತಿನ ನಮೂನೆಗಳು!! ಜನರಿಗೆ ಅದು ತಿಳಿಯುವ ಬಗೆ ಹೇಗೆ? ಸರಕಾರದ ಹಣವು ಈ ನಮೂನೆಗಳನ್ನು ಪೂರೈಸಿಕೊಡಲಿಕ್ಕೆ ವೆಚ್ಚವಾಗುವದೇನೋ ನಿಜ. ಆದರೆ ಅವು ಕನ್ನಡದಲ್ಲಿರದ್ದರಿಂದ ಆ ವೆಚ್ಚವು ನಿರರ್ಥಕವಾದುದು. ಇನ್ನು ಕನ್ನಡದ ನಮೂನೆಗಳಿಲ್ಲ. ಅವನ್ನು ಹೊಸದಾಗಿ ಅಚ್ಚುಹಾಕಿಸುವದರಿಂದ ಹೆಚ್ಚಾಗಿ ವೆಚ್ಚವು ಬರುವದೆನ್ನಬೇಕೆ? ಕರ್ನಾಟಕದ ಉಳಿದ ಭಾಗಗಳಲ್ಲಿ ಕನ್ನಡ ನಮೂನೆಗಳು ಪ್ರಚಾರದಲ್ಲಿದ್ದುದು ಕಂಡು ಬರುತ್ತದೆ. ಆದ್ದರಿಂದ ಈ ಬಗ್ಗೆ ಯೋಗ್ಯ ಏರ್ಪಾಡು ಮಾಡಲು ಸರಕಾರಕ್ಕೆ ತೊಂದರೆ ಏನೂ ಇಲ್ಲ ಧೋರಣದ (policy) ಒಗಟು, ಹೆಚ್ಚು ವೆಚ್ಚದ ವಿಷಯ, ಪ್ರಯಾಸದ ಪ್ರಕರಣಗಳಿದ್ದರೆ, ಸರಕಾರವು ಸಾರ್ವಜನಿಕ ಸೂಚನೆಗಳನ್ನೂ, ಸೌಕರ್ಯಗಳನ್ನೂ, ದುರ್ಲಕ್ಷಿಸುವದು ಅನುಭವದ ಮಾತಾಗಿದೆ. ಆದರೆ ಈ ವಿಷಯದಲ್ಲಿ ಅಂತಹದೇನೂ ಇಲ್ಲವಲ್ಲ! ಉತ್ತರ ಕರ್ನಾಟಕದಲ್ಲಿ ಇನ್ನು ಮೇಲೆ ಮರಾಟಿಯು ಬದಲು ಕನ್ನಡ ನಮೂನೆಗಳಿರಬೇಕೆಂಬದಾಗಿ ಒಂದು ಹುಕುಮನ್ನು ಹೊರಡಿಸಿದರೆ ಎಲ್ಲವೂ ತಾನೇ ಏರ್ಪಾಡಾಗುವದು. ಆದರೆ ಇದಕ್ಕಾದರೂ ಸರಕಾರಕ್ಕೆ ಅವಕಾಶವು ದೊರೆಯುವದೇ?

ಕನ್ನಡಿಗರು ಕನ್ನಡದಲ್ಲಿಯೇ ಹೆಸರು ಬರೆಯಬೇಕು. ಕನ್ನಡದಲ್ಲಿಯೇ ಸಹಿ ಮಾಡಬೇಕು. ಎಂಬುದಕ್ಕೆ ಯಾವ ಅಭಿಮಾನಿಯೂ ವಿರೋಧಿಸನು. ಇನ್ನು ಇಂಗ್ಲೀಷ ಅಥವಾ ಮರಾಟಿಯ ಮೋಹದಿಂದ ಮಹಾನುಭವರ್ನೋರ್ವನು ವಿರೋಧಿಸಿದರೂ ಅದು ಮಹತ್ವದ್ದಲ್ಲ. ಅದನ್ನು ಕನ್ನಡಿಗರು ದುರ್ಲಕ್ಷಿಸಬೇಕು. ಆದರೆ ಅಭಿಮಾನಿಶಾಲಿಗಳೆಂದು ಹೇಳಿಕೊಳ್ಳುವಂತಹರು ಸಹ ಇಂಗ್ಲೀಷಿನಲ್ಲಿ ಸಹಿ ಮಾಡುವರು; ಇಂಗ್ಲೀಷಿನಲ್ಲಿ ಲೆಕ್ಕಪತ್ರಗಳನ್ನಿಡುವರು. ಅದಿರಲಿ. ಹೆಸರುಗಳನ್ನು ಸಹ ಇಂಗ್ಲೀಷ ಪದ್ಧತಿಯಂತೆ 'ಹೆಚ್ 'ನಟೇಶರಾವ' 'ಹೆಚ್. ಎನ್. ರಾವ' ಎಂಬದಾಗಿ ಬಹು ಅಸಹ್ಯವಾದ ಪದ್ಧತಿಯಿಂದ ಬರೆಯುವರು! ಇಂತಹ ಹೆಸರುಗಳನ್ನೋದಿದರೆ, ಮೈಜುಮ್ಮೆನ್ನುತ್ತದೆ! ಆದರೆ ದುರ್ದೈವದಿಂದ ಅದೇ ಸಾರ್ವತ್ರಿಕವಾಗಿದೆ! ಇದು ತಪ್ಪಾದ ಪದ್ಧತಿಯೆಂಬ ಕಲ್ಪನೆ ಸಹ ಅನೇಕರಿಗಿಲ್ಲ! ಆದುದರಿಂದ ಸಾಹಿತ್ಯ ಪರಿಷತ್ತಿನಂತಹ ಸಂಸ್ಥೆಯವರೂ ವೃತ್ತಪತ್ರಕಾರರೂ ಈ ವಿಷಯವನ್ನು ಚರ್ಚಿಸಿ, ಜನರಿಗೆ ಇದನ್ನು ತಿಳುಹಿಸಿಕೊಟ್ಟರೆ ಹಿತವಾಗುವದು. ಅದೇ ಪ್ರಕಾರವಾಗಿ ಮುಖಂಡರೂ, ಸಾರ್ವಜನಿಕ ಕೆಲಸಗಳಲ್ಲಿ ಭಾಗತೆಗೆದುಕೊಂಡವರೂ, ಸರಕಾರೀ ಅಮಲದಾರರೂ, ಯಾವಾಗಲೂ ಶುದ್ಧವಾಗಿ, ಕನ್ನಡದಲ್ಲಿಯೇ ಸಹಿ ಮಾಡುವದು, ಹೆಸರು ಬರೆವಾಗ ಇಂಗ್ಲೀಷ ಪದ್ಧತಿಯನ್ನನುಕರಿಸದೇ ಕನ್ನಡ ಪದ್ಧತಿಯನ್ನನುಸರಿಸುವದು ಮೊದಲಾಗಿ ಮಾಡಿದರೆ ಜನ ಸಾಮಾನ್ಯರ ಲಕ್ಷವು ತಮ್ಮ ತಪ್ಪಿನ ಕಡೆಗೆ ತಾನಾಗಿ ಎಳೆಯುವದು.

ರೇಲವೇ ಬೋರ್ಡಿನ ಬಗ್ಗೆ 'ಕನ್ನಡಿಗ'ನು ಕಷ್ಟಪಡಹತ್ತಿ ೩೧ ವಾರಗಳಾದವು. ಈ ಅವಧಿಯಲ್ಲಿ ಅಭಿಮಾನಿಗಳು ಅನೇಕ ಅರ್ಜಿಗಳನ್ನು ನಮ್ಮ ಕಡೆಗೆ ಕಳಿಸಿರುವರು. ಸಿಮ್ಲಾದಲ್ಲಿಯ ಅಧಿಕಾರಿಗಳಿಗೆ ಅವನ್ನೆಲ್ಲ ಅರ್ಪಿಸಬೇಕೆಂದು ಇಂಗ್ಲೀಷ ಅರ್ಜಿಯನ್ನು ಅಚ್ಚುಹಾಕಿಸಿದ್ದಾಯಿತು. ಒಂದೆಡೆಗೆ ಸಹಿಗಳನ್ನೆಲ್ಲ ಸೇರಿಸಿ ಗಣನೆ ಮಾಡಲು, ಒಟ್ಟಿಗೆ ೫೫೦೦ ಸಹಿಗಳು ಮಾತ್ರ ಇವೆಂಬುದು ತಿಳಿಯಿತು! ಕನ್ನಡಿಗರ ಕಳವಳವೆಷ್ಟಿದೆಂಬುದನ್ನೂ ಕಂಡದ್ದಾಯಿತು!

ಕನಿಷ್ಟ ೧೦ ಸಾವಿರ ಸಹಿಗಳನ್ನು ಸಂಗ್ರಹಿಸಬೇಕಾಗಿದೆ ಆದರೆ ಜನರ ನಿರುತ್ಸಾಹವು ಅಡ್ಡಬರುತ್ತದೆ. ಇರಲಿ. ಈಗಲಾದರೂ ಉತ್ಸಾಹಿ ಜನರು ಮತ್ತೆ ಸಹಿಗಳನ್ನು ಹೆಚ್ಚಾಗಿ ದೊರಕಿಸಿ ನಮ್ಮ ಕಡೆಗೆ ಕೂಡಲೇ ಕಳಿಸಬೇಕಾಗಿ ಕೋರುತ್ತೇವೆ. ಈಗ್ಗೆ ಬಂದ ಸಹಿಗಳಲ್ಲಿ ಉತ್ತರ ಕರ್ನಾಟಕದ ಸಹಿಗಳೇ ಹೆಚ್ಚಾಗಿದ್ದರೂ, ಜನಸಂಖ್ಯೆಯ ಮಾನದಿಂದ ಎಷ್ಟು ಬರಬೇಕಾಗಿದೆಯೋ ಅಷ್ಟು ಬಂದಿರುವದಿಲ್ಲ ಈ ರೈಲವೇಯೋಜನೆಯಿಂದ ಕಾರವಾರ ಜಿಲ್ಹೆಗೆ ಹೆಚ್ಚಾಗಿ ಅನುಕೂಲವಾಗುವದರಿಂದ ಅಲ್ಲಿಂದ ಇನ್ನೂ ವಿಶೇಷ ಸಹಿಗಳು ಬರಬೇಕಾಗಿದ್ದವು. ಮಂಗಳೂರ ಜಿಲ್ಹೆಯಿಂದ ತಕ್ಕ ಮಟ್ಟಿಗೆ ಬಂದಿವೆ ಮೈಸೂರವರೂ ಉತ್ಸಾಹದಿಂದ ಹೆಚ್ಚಾಗಿ ಕಳಿಸಿದ್ದಾರೆ. ಆದರೆ ಜನಸಂಖ್ಯೆಯ ಪ್ರಮಾಣದಿಂದ ನೋಡಿದರೆ ಕಡಿಮೆಯೆಂದೆನ್ನಬೇಕಾಗುವದು. ಕೊಡಗಿನಿಂದ ತೀರ ಕಡಿಮೆ ಸಹಿಗಳು ಬಂದ ಕಾರಣವು ತಿಳಿಯದು. ಇಲ್ಲಿ ಈಗ್ಗೆ ಎರಡು ವಾರಪತ್ರಿಕೆಗಳೂ, ಒಂದು ಮಾಸಿಕವೂ ಇರುವದರಿಂದ ಜನರಲ್ಲಿ ದೇಶಾಭಿಮಾನವೂ ಸಾರ್ವಜನಿಕ ಹಿತಚಿಂತನೆಯೂ ಹೆಚ್ಚಾಗಿರಲಿಕ್ಕೆ ಸಾಕು. ಮೇಲಾಗಿ ಕೊಡಗಿನಲ್ಲಿ ಈ ಯೋಜನೆಯಿಂದ ರೈಲವೇ ಹಾಯುವದು. ಹೀಗಿದ್ದರೂ ಹೆಚ್ಚಾಗಿ ಸಹಿಗಳು ಬಾರದಿದ್ದುದು ನಮಗೆ ಆಶ್ಚರ್ಯವೆನಿಸುವದು. ಬಳ್ಳಾರಿ ಜಿಲ್ಹೆಯಿಂದ ಬಹು ಸ್ವಲ್ಪ ಅರ್ಜಿಗಳಿವೆ. ನಿಝಾಮ, ಕರ್ನಾಟಕದಿಂದ ಅಧಿಕ ಸಂಖ್ಯೆಯು ಬರಬಹುದೆಂಬದಾಗಿ ನಮ್ಮ ಆಸೆಯಿದ್ದಿತು. ಯಾಕಂದರೆ ಇಲ್ಲಿ ವಾಡೀ ಮತ್ತು ರಾಯಚೂರಗಳಿಗೆ ಗದಗಿನಿಂದ ರೈಲವೇ ಹಾಕಲ್ಪಡುವದರಿಂದ ನಿಝಾಮ ಕರ್ನಾಟಕದ ಬಹುದೊಡ್ಡ ಭಾಗಕ್ಕೆ ರೈಲವೇ ಸೌಕರ್ಯಗಳು ಒದಗಿ ಬರುವವು. ಆದರೆ ಹಿಂದುಳಿದ ಕರ್ನಾಟಕದ ಭಾಗವೆಂದು ಪಡೆದುಕೊಂಡ ತಮ್ಮ ಹೆಸರನ್ನು ಕಿತ್ತಿ ಹಾಕಲಿಕ್ಕೆ ಇಲ್ಲಿಯ ಕನ್ನಡಿಗರು ಒಪ್ಪರೆಂಬಂತೆ ಕಾಣುತ್ತದೆ! ಕರ್ನಾಟಕದ ಹೊರಗಿದ್ದ ಕನ್ನಡಿಗರು ಮಾತ್ರ ಅಭಿಮಾನದಿಂದ ತಮ್ಮ ಶಕ್ತ್ಯನುಸಾರವಾಗಿ ಸಹಿಗಳನ್ನು ಕಳಿಸಿರುವರು. ಇರಲಿ. ನಾವು ಈಗ್ಗೆ ದೊರಕಿದ ೫೫೦೦ ಸಹಿಗಳನ್ನು ಮೊದಲನೇ ಕಂತೆಂದು ರೈಲವೇ ಬೋರ್ಡಿಗೆ ಕಳಿಸುವೆವು. ಜನೇವರಿ ತಿಂಗಳ ಕೊನೆಯಲ್ಲಿ ಎರಡನೇ ಕಂತನ್ನು ಕಳಿಸುವೆವು. ಆದುದರಿಂದ ಈಗ್ಗೆ ತಡವಿಲ್ಲದೇ ಮಹನೀಯರೆಲ್ಲ ಇನ್ನೂ ಹೆಚ್ಚಾಗಿ ಸಹಿಗಳನ್ನು ಕಳಿಸಬೇಕಾಗಿ ಪ್ರಾರ್ಥನೆಯಿದೆ .ಕೆಲವು ಸ್ಥಳಗಳಿಗೆ ನಾವು ಕಳಿಸಿದ ಅರ್ಜಿಯ ನಮೂನೆಗಳು ಮರಳಿ ನಮ್ಮ ಕಡೆಗೆ ಬಂದಿರುವದಿಲ್ಲ. ಆ ಸ್ಥಳಗಳ ಜನರು ಈಗಲಾದರೂ ಬೇಗನೇ ಕಳುಹಿಸಬೇಕಾಗಿ ಆಗ್ರಹ ಪಡುತ್ತೇವೆ.

'ಕನ್ನಡಿಗನಿ'ಗೆ ಉಪಕಾರ ಕರ್ತೃಗಳಾಗಿ, ನಾಗಪೂರದ 'ಪೋಸ್ಟಮಾಸ್ತರ ಜನರಲ್'ರಾದ ಶ್ರೀ ಗುರುರಾವ ಬೇಪೂರವರು ೧೦ ರೂ. ಅಭಿಮಾನದಿಂದ ಕಳಿಸಿದ್ದಕ್ಕಾಗಿ ಕನ್ನಡಿಗನು ಋಣಿಯಾಗಿದ್ದಾನೆ. ಕರ್ನಾಟಕದ ಹೊರಗಿದ್ದ ಕನ್ನಡಿಗರು ಸಹ ಇದೇ ಬಗೆಯಾಗಿ ಅಭಿಮಾನದಿಂದ 'ಕನ್ನಡಿಗ'ನನ್ನು ಪೋಷಿಸಬೇಕಾಗಿ ವಿನಂತಿಯಿದೆ.

ಒಪ್ಪಿಗೆ

ಸ್ವರಾಜ್ಯ ಡೈರಿ ೧೯೨೬. ಇದು ಕನ್ನಡಿಗರಿಗೆ ಪರಿಚಿತವಾದುದೇ. ಇಂಗ್ಲೀಷ ಪ್ರತಿಯ ಪ್ರಚಾರವು ಸಮಾಧಾನಕರವಾಗಿರಲಿಲ್ಲವಾದುದರಿಂದ ಈ ಸಲ ಕನ್ನಡ ಪ್ರತಿಯನ್ನು ಮಾತ್ರ ಹೊರಡಿಸಿದರು. ಕನ್ನಡಿಗರು ತಕ್ಕ ಪ್ರೋತ್ಸಾಹನೆಯನ್ನು ಕೊಡದಿದ್ದರೆ ಮುಂದಿನ ಸಲ ಇದು ಕೂಡ ಮಾಯವಾಗುವದೆಂದು ಸಂಪಾದಕರು ಈಗಾಗಲೇ ಸೂಚಿಸಿರುವರು. ಸ್ವರಾಜ್ಯ ಡೈರಿಯೆಂದರೆ ಅದೊಂದು ಚಿಕ್ಕ ವಿಶ್ವಕೋಶವು. ಆದುದರಿಂದ ಇಂತಹ ಉಪಯುಕ್ತವಾದ ಡೈರಿಯು ಕಾಯಂವಾಗಿರುವಂತೆ ಕನ್ನಡಿಗರು ಪ್ರೋತ್ಸಾಹಿಸಬೇಕು. ಪ್ರಕಾಶಕರು:— ಪಿ. ಎ. ಪೈ. ಬ್ರದರ್ಸ ಉಡುಪಿ. ಬೆಲೆ ೮ ಆಣೆ.

ಕಾನಪೂರದಲ್ಲಾದ ೪೦ ನೇಯ ರಾಷ್ಟ್ರೀಯ ಮಹಾಸಭೆಯು

(ನಮ್ಮ ಪ್ರತಿನಿಧಿಯಿಂದ) **ಕಾನಪುರ**

ಈ ಸಲದ ಕಾಂಗ್ರೆಸ್ಸು ಯಶಸ್ವಿಯಾಗಲಿಕ್ಕೆ ಕರ್ನಾಟಕದ ಡಾ. ಹರ್ಡೀಕರರೂ ಅವರ ಸ್ವಯಂಸೇವಕರೂ ಅನೇಕರೀತಿಯಿಂದ ಸಹಾಯಕರಾಗಿದ್ದನ್ನೇ ಮೊದಲು ನಾನು ಅಭಿಮಾನದಿಂದ ಇಲ್ಲಿ ಬರೆಯಲು ಸಂತೋಷಪಡುವೆನು. ಈಗ್ಗೆ ೧-೧॥ ತಿಂಗಳಿನಿಂದಲೂ ಇವರು ಇಲ್ಲಿಯೇ ಇದ್ದು ಪೂರ್ವಸಿದ್ಧತೆಯನ್ನು ಮಾಡುವರು. ಗುರುವಾರ ತಾ॥ ೨೪ ನೇ ದಿನ ಮುಂಜಾನೆ ಮಹಾತ್ಮಾ ಗಾಂಧೀಯವರಿಂದ ಪ್ರದರ್ಶನವು ತೆರೆಯಲ್ಪಟ್ಟಂದಿನಿಂದ **ರಾಷ್ಟ್ರೀ ವಾರವು** ಪ್ರಾರಂಭವಾಯಿತೆಂದೆನ್ನಬಹುದು. ತಮಗೆ ಖಾದಿಯ ಹುಚ್ಚು ಹತ್ತಿದ್ದರಿಂದ, ಈ ಪ್ರದರ್ಶನ ಮಂಟಪದ ಯಾವ ಭಾಗದಲ್ಲಿಯೂ, ಖಾದಿಯ ಹೊರತಾಗಿ, ಉಳಿದ ಬಟ್ಟೆಯಿರಕೂಡದಂತೆ ವ್ಯವಸ್ಥಾಪಕರು ಏರ್ಪಾಡುಮಾಡಿದರೆ ಮಾತ್ರ, ತಾವು ಈ ಸಮಾರಂಭವನ್ನು ಜರುಗಿಸತಕ್ಕವರೆಂದು ಮೊದಲೇ ಮಹಾತ್ಮರು ತಿಳಿಸಿದ್ದರು. ಈ ಸಲ ಇಲ್ಲಿ ಒಟ್ಟು ೩೦ ಪರಿಷತ್ತುಗಳಾಗುವವು. ಇವುಗಳಲ್ಲನೇಕರು ಮಹಾತ್ಮರನ್ನು ತಮ್ಮ ತಮ್ಮ ಸಭೆಗಳಿಗೆ ಅಧ್ಯಕ್ಷರನ್ನಾಗಿ ಮಾಡಬೇಕೆಂದಿದ್ದರು. ಆದರೆ "ಖಾದಿಯ ಹೊರತಾಗಿ ನಾನೊಂದೂ ಒಲ್ಲೆನೆ"ಂದು ಹೇಳಿ ಮಹಾತ್ಮರು, ಪ್ರದರ್ಶನದ ಸಮಾರಂಭದಲ್ಲಿ ಮಾತ್ರ ಭಾಗ ತೆಗೆದುಕೊಳ್ಳಲು ಒಪ್ಪಿದರು. ನಾಲ್ಕು ವರ್ಷದ ಕೆಳಗೆ ಖಾದೀ ಬಟ್ಟೆಯನ್ನು ತಾವೇ ರೂ೧-೧-೦ ಗೆ ವಾರಿನಂತೆ ಮಾರಿದ್ದನ್ನೂ, ಈಗ್ಗೆ ಭರತ ಖಂಡದ ಎಲ್ಲ ಭಾಗಗಳಲ್ಲಿಯೂ, ಖಾದಿಯು ೯ ಆಣೆಗೆ ಒಂದು ವಾರಿನಂತೆ ಮಾರಾಟವಾಗುವದನ್ನೂ ನೋಡಿದರೆ, ಖಾದಿಯ ಪ್ರಗತಿಯು ಯಾವ ಪ್ರಮಾಣದಿಂದಾಗುತ್ತಿರುವದೆಂಬುದು ಸ್ಪಷ್ಟವಾಗುತ್ತದೆಂಬದನ್ನೂ ಮಹಾತ್ಮರು ಹೇಳಿದರು. ನಾಲ್ಕೇ ವರ್ಷದಲ್ಲಾದ ಈ ಪ್ರಗತಿಯನ್ನು ಕಂಡು ತಮಗೆ ಅತ್ಯಂತ ಆನಂದವಾಗಿದೆಂದೂ ನುಡಿದರು.

ಅದೇ ದಿನ ಮಧ್ಯಾಹ್ನದಲ್ಲಿ ವಿಷಯನಿಯಾಮಕ ಸಭೆಸೇರಿತು. ಮುಂದಾಳುಗಳೆಲ್ಲರೂ ಬಹುತರವಾಗಿ ಬಂದಿದ್ದಾರೆ. ವಲ್ಲಭಭಾಯಿ ಪಟೇಲರವರು ಖದ್ದರದ ಕರೀ ಉಡುಪಿನಲ್ಲಿ ಸಭೆಗೆ ಬಂದಿದ್ದರು. ನೂಲುವ ಸಭಾಸದತ್ವದ ಬದಲು, ನೂಲುವ ಮತ್ತು ೪ ಆಣೆಯ ಪದ್ಧತಿಗಳೆರಡೂ ಇರಬೇಕೆಂಬದಾಗಿ ಆದ ಪಾಟ್ನಾದ ಠರಾವು ವಿಶೇಷವಾದ ಕಳವಳದಿಂದ ಚರ್ಚಿಸಲ್ಪಟ್ಟಿತು. ಮಹಾರಾಷ್ಟ್ರದ ಕೇಳಕರರು ವಿರೋಧಪಕ್ಷದ ಮುಖಂಡರು. ಕಡೆಗೆ ಪಾಟ್ನಾದ ಗೊತ್ತುವಳಿಯೇ ಬಹು ಮತದಿಂದ ತೇರ್ಗಡೆ ಹೊಂದಿತು. ಕರ್ನಾಟಕದಿಂದ ವಿಷಯ ನಿಯಾಮಕ ಸಭೆಯಲ್ಲಿದ್ದ ಸಭಾಸದರಲ್ಲಿ ಹೆಚ್ಚು ಜನರು ಮೂಕ ಭಾವವನ್ನು ಹೊಂದಿ ಕುಳಿತಿರುವದನ್ನು ಕಂಡು ನನಗೆ ಆಶ್ಚರ್ಯವಾಯಿತು. ಧಾರವಾಡದ ಶ್ರೀ. ಕಪ್ಪೂರವರು ಕೇಳಕರರ ವಿರುದ್ಧವಾಗಿ ಮಾತನಾಡಿದರು. ಹಿಂದುಸ್ಥಾನದ ಸ್ವರಾಜ್ಯದ ಯೋಜನೆಯನ್ನು ಗೊತ್ತು ಪಡಿಸುವದಕ್ಕಾಗಿ ಶಿಷ್ಟಮಂಡಲವನ್ನು ಕೂಡಿಸಬೇಕೆಂದು ದಿಲ್ಲಿಯ ಕಾಯದೇ ಮಂಡಲದಲ್ಲಿ ನಿರ್

ಯವಾದಂತೆ, ಸರಕಾರದವರು ಬೇಗನೆ ಅದಕ್ಕೆ ಸಮಾಧಾನಸ್ವರೂಪವನ್ನು ಕೊಡಬೇಕು. ಫೇಬ್ರುವಾರಿ ಕೊನೆಯೊಳಗಾಗಿ ಹೀಗೆ ಮಾಡದಿದ್ದರೆ, ಅಥವಾ ಈ ಬಗ್ಗೆ ಸಮರ್ಪಕವಾದ ಉತ್ತರವನ್ನೂ ಕೊಡದಿದ್ದರೆ, ಸ್ವರಾಜ್ಯಪಕ್ಷೀಯರು ಕಾಯದೇ ಮಂಡಲಗಳ ಕೆಲಸಕ್ಕೆ ಒಲವತ್ತರವಾದ ವಿರೋಧವನ್ನುಂಟು ಮಾಡಬೇಕು. ಮುಂದೆ ಪ್ರಸಂಗವು ಒದಗಿದರೆ, ಸವಿನಯ ಕಾಯದೇ ಭಂಗವನ್ನೂ ಪ್ರಾರಂಭಿಸಬಹುದೆಂಬದಾಗಿ ಪಂಡಿತ ಮೋತೀಲಾಲ ನೆಹರೂರವರು ತಂದ ಸೂಚನೆಯು ಬಹುಮತದಿಂದ ಸ್ವೀಕೃತವಾಯಿತು. ಇದಕ್ಕೆ ಮಹಾರಾಷ್ಟ್ರದ ಶ್ರೀ. ಜಯಕರರು ಪ್ರತಿಯೋಗೀ ಸಹಕಾರಿತೆಯ ಉಪಸೂಚನೆಯನ್ನು ತಂದರು. ಆದರೆ ಅದಕ್ಕೆ ಜಯದೊರೆಯಲಿಲ್ಲ.

ಕಾಂಗ್ರೆಸ್‌ದ ಪ್ರಾರಂಭವು.

ಇಲ್ಲಿ ಜನಸಮ್ಮರ್ದವು ಅತಿಶಯವಾಗಿದೆ. ಶನಿವಾರ ತಾ|| ೨೬ ನೇಯ ದಿನ ಕಾಂಗ್ರೆಸ್ಸು ಪ್ರಾರಂಭವಾಯಿತು. ಜನಸಮ್ಮರ್ದದ ಜಯಜಯಕಾರದೊಂದಿಗೆ ಮಧ್ಯಾಹ್ನದ ೨|| ಗಂಟೆಗೆ ಸರಿಯಾಗಿ ಮುಖಂಡರೆಲ್ಲರೂ ವಾದ್ಯ ವೈಭವದೊಡನೆ ಮಂಟಪಕ್ಕೆ ಆಗಮಿಸಿದರು. ಮಂಟಪವು ಬಹು ಅಂದವಾಗಿ ಶೃಂಗರಿಸಲ್ಪಟ್ಟಿದೆ. ಮಹಾತ್ಮಾ, ಲೋಕಮಾನ್ಯ, ದೇಶಬಂಧೂ, ಲಜಪತರಾಯ, ಮಹಮ್ಮದಅಲ್ಲಿ ಮೊದಲಾದ ಮಹನೀಯರ ಭಾವ ಚಿತ್ರಗಳು ತೂಗು ಹಾಕಲ್ಪಟ್ಟಿವೆ. ಬಾಲ ಬಾಲಿಕೆಯರು ರಾಷ್ಟ್ರೀಯ ಪದಗಳನ್ನು ಸುಸ್ವರದಲ್ಲಿ ನುಡಿಸಿದನಂತರ ಸ್ವಾಗತ ಮಂಡಲದ ಅಧ್ಯಕ್ಷರಾದ ಶ್ರೀ. ಮುರಾರೀಲಾಲರು ತಮ್ಮ ಭಾಷಣವನ್ನು ಮಾಡಿದರು. ಅಜಮೀರ-ನಾರವಾಡದಿಂದ ಬಂದ ೪೦೦ ಜನ ಪ್ರತಿನಿಧಿಗಳ ಆರಿಸುವಿಕೆಯು ಬೇಕಾಯದೇಶೀರವಾದುದೆಂದು ವಿಷಯನಿಯಾಮಕ ಸಭೆಯವರ ತೀರ್ಮಾನಿಸಿದ್ದರಿಂದ, ಈ ಪ್ರಾಂತದ ಸ್ಥಳವು ಬರಿದಾಗಿದ್ದಿತು. ಮತ್ತು ಸಭಾ ಪ್ರಾರಂಭದಲ್ಲಿ ಇವರಲ್ಲನೇಕರು ತಾವು ಒಳಗೆ ಬರತಕ್ಕವರೆಂದು ಬಹು ಗಲಾಟೆಯನ್ನೆಬ್ಬಿಸಿದ್ದರು. ಸ್ವಯಂಸೇವಕರ ಪ್ರಾರ್ಥನೆಗಳನ್ನು ಏನೂ ಮನ್ನಿಸಲಿಲ್ಲ. ತಾವೆಲ್ಲರೂ ಒಳಗೆ ಧುಮ್ಮಿಕ್ಕ ತಕ್ಕವರೇ ಎಂದು ಹಟಹಿಡಿದರು. ಹಲವು ಸ್ವಯಂಸೇವಕರು ಗಾಯ ಹೊಂದಿದರು. ಸ್ವಯಂ ಸೇವಕರ ವಿಶೇಷ ಪರಿಶ್ರಮದಿಂದ ಗದ್ದಲವು ಒಳಗೆ ನುಗ್ಗಲು ಅವಕಾಶವಾಗಲಿಲ್ಲ. ಮಂಡಲದಲ್ಲಿ ಅಜಮಾಸ ೧೫ ಸಾವಿರ ಜನರು ನೆರೆದಿದ್ದರು. ಅಧ್ಯಕ್ಷರಾದ ಶ್ರೀಮತೀ ಸರೋಜಿನೀ ದೇವಿಯರ ಹತ್ತಿರ ಮಹಾತ್ಮರು ಕುಳಿತಿದ್ದರು. ಸರೋಜಿನೀಯವರ ಭಾಷಣವು ಅತ್ಯಂತ ಸ್ಫೂರ್ತಿದಾಯಕವಾಗಿದ್ದಿತು. ದಕ್ಷಿಣ ಆಫ್ರಿಕೆಯಿಂದ ಬಂದ ಹಿಂದೀಯರು ಅಧ್ಯಕ್ಷರಿಗೆ ಅವರ ಒಂದು ಭಾವ ಚಿತ್ರವನ್ನು ಕಾಣಿಕೆಯಾಗಿ ಅರ್ಪಿಸಿದರು.

ಅಧ್ಯಕ್ಷರ ಭಾಷಣ

ಅಧ್ಯಕ್ಷರು ತಾವು ಹೇಳಬೇಕಾದುದನ್ನು ಓದಲಿಲ್ಲ. ಆದರೆ ಕವಿತಾ ಮಯವಾದ ಸಂದೇಶವನ್ನು ಭಾಷಣ ರೂಪದಲ್ಲಿ ಹೇಳಿದರು. ಮಹಾತ್ಮಾ ಗಾಂಧೀಯವರ ಸ್ವಾರ್ಥತ್ಯಾಗದಿಂದ ಭರತ ಖಂಡದಲ್ಲುಂಟಾದ ಜಾಗ್ರತಿಯನ್ನು ಬಣ್ಣಿಸಿದರು. ಗ್ರಾಮಗಳ ಸುಧಾರಣೆಯಾಗುವದು ಅತ್ಯಾವಶ್ಯವು; ಈ ಕೆಲಸಕ್ಕೋಸ್ಕರ ಹೆಚ್ಚಾಗಿ ಸ್ವಾರ್ಥತ್ಯಾಗಿಗಳಾದ ಸ್ವಯಂಸೇವಕರನ್ನು ಕೂಡಿಸಬೇಕೆಂದರು. ಕುರುಕ್ಷೇತ್ರದಲ್ಲಿ ಯುದ್ಧ ಮಾಡಿದ ಆರ್ಯರ ಮತ್ತು ಶೂರ ರಜಪೂತರ ವಂಶಿಜರಾದ ನಾವು ಯುದ್ಧ ಕಲೆಯನ್ನು ಮರೆಯುವದು ಯೋಗ್ಯವಲ್ಲವೆಂದೂ, ಆದ್ದರಿಂದ ರಾಷ್ಟ್ರೀಯ ಶಿಕ್ಷಣದಲ್ಲಿ ಯುದ್ಧ ಕಲೆಗೆ ತಕ್ಕದ್ದಾದ ಮಹತ್ವವನ್ನು ಕೊಡಬೇಕೆಂದೂ ಇವರ ಅಭಿಪ್ರಾಯ. ಪರದೇಶದಲ್ಲಿದ್ದ ಭಾರತೀಯರ ಪರಿತಾಪಗಳ ದುಃಖದ ಕತೆಯನ್ನು ಹೃದಯದ್ರಾವಕವಾಗಿ ವರ್ಣಿಸಿದರು. ಪರದೇಶದಲ್ಲಿಯೂ ಹಿಂದೀಯರು ತಳಮಳವನ್ನು ಹೊಡಚಿ ಕೊಂಡು ಆಗ್ರಹಪಟ್ಟರು. ಹಿಂದೂ- ಮುಸಲ್ಮಾನರ ಒಗಟಾಟದ ಪ್ರಶ್ನೆಯಂತೂ ಬಹು ಕಠಿಣವಾಗಿದೆ. ನಮ್ಮ ವೇದಗಳಲ್ಲಿ ಹೇಳಿದಂತೆ ಪರಧರ್ಮ ಸಹಿಷ್ಣುತೆಯನ್ನು ಹಿಂದೂ ಜನರು ಎಂದೂ ಮರೆಯಬಾರದಾಗಿ ಒತ್ತಿ ಹೇಳಿದರು. ತಾವು ಭಾರತೀಯರೆಂಬುದನ್ನು ಮರೆಯಕೂಡದೆಂದೂ, ಪರದೇಶದ ಮುಸಲ್ಮಾನರ ರಾಷ್ಟ್ರಗಳ ಚಿಂತನೆಯನ್ನೇ ಸದಾಸರ್ವದಾ ಮಾಡಿ, ಭರತಖಂಡದ ಹಿತಾಹಿತಗಳನ್ನು ಮೂಲೆಗೊತ್ತದಂತೆ ಎಚ್ಚರಾಗಿರಬೇಕೆಂದೂ ಮುಸಲ್ಮಾನ ಬಾಂಧವರಲ್ಲಿ ಮೊರೆ ಯಿಟ್ಟರು. ಕಡೆಗೆ ರಾಷ್ಟ್ರೀಯ ಸಭೆಯ ಮುಖ್ಯ ಧ್ಯೇಯವಾದ ಸ್ವರಾಜ್ಯ ಸಂಪಾದನೆಯಲ್ಲಿ ಸಹಕಾರ, ಅಸಹಕಾರಗಳೆಂಬ ತೀಕ್ಷ್ಣತರವಾದ ಭೇದಭಾವಗಳಿರಬಾರದೆಂದು, ಕೈಲಾಸದಿಂದ ಕನ್ಯಾಕುಮಾರಿಯ ವರೆಗೂ, ಸಿಂಧೂ ನದಿಯಿಂದ ಬ್ರಹ್ಮಪುತ್ರಾನದಿಯ ವರೆಗೂ, ಅಖಂಡ ಭರತಖಂಡಕ್ಕೆ ಒಂದೇ ಒಂದು ತಳವಳವು ಇರುವಂತೆ ಮಾಡಬೇಕೆಂದೂ, ಇದರಿಂದ ಜನರನ್ನು ಜಾಗೃತಗೊಳಿಸಬೇಕೆಂದೂ ಪ್ರಚಂಡವಾದ ಸಾಮರ್ಥ್ಯವು ಭಾರತೀಯರಲ್ಲಿ ಬರುವಹಾಗ ನಮ್ಮ ಸಾಧನ ವಿರಬೇಕೆಂದೂ ಸಾರಿ ಸಾರಿ ಹೇಳಿದರು

ಅಧ್ಯಕ್ಷರ ಭಾಷಣವಾದನಂತರ ಮಹಾಸಭೆಯ ಮುಂದೆ ತೀರ್ಮಾನುಗಳಿಡಲ್ಪಟ್ಟವು. ದಾಸ, ಬ್ಯಾನರ್ಜಿ, ಮೊದಲಾದವರ ಮೃತ್ಯುವಿನ ಬಗ್ಗೆ ದುಃಖದಾಯಕ ಠರಾವುಗಳನ್ನು ಎಲ್ಲರೂ ಎದ್ದು ನಿಂತು ಸ್ವೀಕರಿಸಿದರು. ಆ ಮೇಲೆ ದಕ್ಷಿಣ ಆಫ್ರಿಕೆಯ ಹಿಂದೀಯರ ಕಷ್ಟಗಳನ್ನು ಸರಕಾರದವರು ಕೂಡಲೇ ದೂರಮಾಡಬೇಕಾಗಿ ಮಹಾತ್ಮರು ಸೂಚಿಸಿದರು. ಇದು ಸರ್ವಾನುಮತದಿಂದ ಒಪ್ಪಲ್ಪಟ್ಟಿತು. ಇದಕ್ಕೆ ದಕ್ಷಿಣ ಆಫ್ರಿಕೆಯಿಂದ ಬಂದ ಶ್ರೀ. ಅಬ್ದುಲ್ ರಹೀಮರು ತಮ್ಮ ಆಭಾರ ಪ್ರಕಟಿಸಿದರು.

ಎರಡನೇ ದಿನ ಠರಾವುಗಳು ಸಭೆಯ ಮುಂದೆ ಇಡಲ್ಪಟ್ಟವು. ಬಂಗಾಲ ' ಆರ್ಡಿನನ್ಸ' ಬೇಗನೇ ರದ್ದಾಗಬೇಕಾಗಿಯೂ, ಬ್ರಹ್ಮದೇಶದಲ್ಲಿ ಭಾರತೀಯರು ಪ್ರವೇಶಿಸದ ಹಾಗೆ ಅಲ್ಲಿನ ಸರಕಾರದವರ (ಬ್ರಹ್ಮದೇಶದವರ ವಿರುದ್ಧ ಮತ ವಿದ್ದಾಗ್ಯೂ,) ಕಠಿಣ ಕಟ್ಟಳೆಗಳನ್ನು ಮಾಡಿದ್ದಕ್ಕೆ ವ್ಯಾಯಿಸರಾಯರು ತಮ್ಮ ಸಮ್ಮತಿಯನ್ನು ಕೊಡಬಾರದಾಗಿಯೂ, ಕಾಂಗ್ರೆಸ ಸಭಾಸದರೆಲ್ಲ ಯಾವಾಗಲೂ ಖಾದಿಯ ಬಟ್ಟೆಯನ್ನೇ ಧರಿಸಬೇಕಾಗಿಯೂ ತೀರ್ಮಾನುಗಳು ಸ್ವೀಕೃತವಾದವು ಕಡೆಯ ಠರಾವಿಗೆ ಮಹಾರಾಷ್ಟ್ರದ ಕೆಲವು ಜನರು ವಿರುದ್ಧ ಮತಕೊಟ್ಟರು. ಕೊಯಿಮತ್ತೂರಿನ ಮಿಲ್ ದ ಒಡೆಯರಾದ ಶ್ರೀ. ವೆಂಕಟರಾಯರು ಖಾದಿಯ ಠರಾವಿಗೆ ಸಂಪೂರ್ಣವಾಗಿ ಒಪ್ಪಿಗೆಯನ್ನು ಕೊಟ್ಟರು ಬಡ ಕೂಲಿಕಾರರ ಪ್ರಯುಕ್ತ ದಿಂದ ಸರಕಾರದವರು ಹತ್ತಿಯ ಕರವನ್ನು ತೆಗೆದು ಹಾಕಿದ್ದರಿಂದ ಪ್ರತಿವರ್ಷವೂ ಮೂರು ಕೋಟಿ ರೂಪಾಯಿಗಳು ಹಿಂದುಸ್ಥಾನದಲ್ಲಿ ಉಳಿಯುವವು. ಈ ಲಾಭದಲ್ಲಿಯ ಕೆಲವು ಹಣವನ್ನಾದರು ಮಿಲ್ಲಿನ ಮಾಲಕರು ಖಾದಿಯ ಹುಟ್ಟುವಳಿಗಾಗಿ ಕಾದಿಡಬೇಕಾಗಿ ಹೇಳಿದರು. ಹಿಂದೀಯವರಿಗೆಲ್ಲ ಬಟ್ಟೆಗಳನ್ನು ಪೂರೈಸುವಷ್ಟು ಸಾಮರ್ಥ್ಯವು ಹಿಂದೀ ಮಿಲ್ಲುಗಳಲ್ಲಿಲ್ಲದ್ದರಿಂದಲೂ, ಬಡವರಿಗೆ ದುಷ್ಕಾಳದಲ್ಲಿ ಸರಕಾರದ ಸಹಾಯಕ್ಕಿಂತ ನೂಲುವ ನೇಯುವ ಸಹಾಯವೇ ಅವರ ಕಷ್ಟಗಳನ್ನು ಹೆಚ್ಚಾಗಿ ದೂರಮಾಡುವದು ತಮಗೆ ತಮ್ಮ ಅನುಭವದಿಂದ ಗೊತ್ತಿದೆಯೆಂದೂ ಸರಸವಾಗಿ ಭಾಷಣ ಮಾಡಿದರು. ಮಾಂಸಾಹಾರಿಗಳು ಕಾಂಗ್ರೆಸ್ಸನ್ನು ಸೇರಬಾರದೆಂದರೆ ಎಷ್ಟು ಕಠಿಣವಾಗುವದೋ ಖಾದೀಧರಿಸದವರು ಬರಬಾರದೆನ್ನುವದೂ ಅಷ್ಟೇ ಕಠಿಣ

(೬ ನೇ ಪುಟದಲ್ಲಿ ನೋಡಿರಿ)

ವಾಙ್ಮಯ ವಿಚಾರ

ಉತ್ತರ ಭಾರತ

(ಲೇಖಕ:- ಎಮ್. ಎಸ್. ರಾಮಪ್ಪಭಟ್ಟ ಕುಬಳಿ ದ. ಕ.)

ಇದೊಂದು ಭಾಮಿನೀ ಷಟ್ಪದಿಯಲ್ಲಿ ರಚಿತವಾದ ಕಾವ್ಯವು ಇದರಲ್ಲಿ

ಮೂಲ, ಮೌರ್ಯ, ಸ್ನೇಹ ಸೇನಾ।
ಮೇಲೆ ಶಾಂತ್ರಿಕಯಾತ್ರೆ ಯುದ್ಧವು।
ಸಾಲಿನಲಿ ನಿರ್ಯಾಣಕನ್ಯವಿಯೋಗ ಪಂಚತ್ವಾ॥
ಕೇಳಿ ಸಮ್ಯಗ್ರಹಣ ಕ್ಷಪಣಕ।
ಲೀಲ ಕಲಹವು ವಾದರಾಕ್ಷಸ।
ಮೇಲೊಳಭಿಷೇಕಂಗಳೊಂದುವದಷ್ಟದಶಪರ್ವಾ॥

ಎಂದು ಕವಿಗಳೇ ಹೇಳಿದಂತೆ ಮೂಲ, ಮೌರ್ಯ, ಸ್ನೇಹ ಮೊದಲಾದ ೧೮ ಪರ್ವಗಳು ಪ್ರಕಟವಾಗುವವು. ಈಗ ನಮ್ಮೆಡೆಗೆ ಉತ್ತರ ಭಾರತದ ಪ್ರಥಮ ಭಾಗವು ಬಂದಿದೆ. ಮೂಲ ಪರ್ವ, ಮೌರ್ಯಪರ್ವ, ಮತ್ತು ಸ್ನೇಹ ಪರ್ವ, ಇವುಗಳು ಇದರಲ್ಲಿ ಇರುತ್ತವೆ. 'ಚಂದ್ರವಂಶಪರಂಪರೆಯ ಸರ್ವಾರ್ಥಸಿದ್ಧಿಮಹಾರಾಜನ ಪುತ್ರರೆನಿಪ ನಂದ ಮೌರ್ಯರಾದಿಗಳ' ಚರಿತ್ರವನ್ನು ಶ್ರವಣ ಪಠನಕ್ಕೆ ಯೋಗ್ಯವಾಗುವಂತೆ ಸುಲಭ ಶೈಲಿಯಲ್ಲಿ ಬರೆಯುವುದೇ ಕವಿಗಳ ಉದ್ದೇಶವು. ಕವಿಗಳ ಉದ್ದೇಶವು ಸಫಲವಾಗಿಲ್ಲ. ಇಷ್ಟೇ ಅಲ್ಲ ಅವರು ತಮ್ಮ ಶಕ್ತಿಗೆ ನಿಲುಕದ ಕಾರ್ಯವನ್ನು ಕೈಕೊಂಡಿರುವರೆಂದು ಹೇಳಲು ನಮಗೆ ವಿಷಾದವೆನಿಸುತ್ತದೆ. ಮೇಲಿನ ಪದ್ಯದಲ್ಲಿಯ ದೋಷಗಳೇ ಇದಕ್ಕೆ ಪ್ರಮಾಣವು.

ಮೊದಲನೆಯ ತುತ್ತಿಗೇ ಹರಳು

ಘನ ಕನಡ ಕಾವ್ಯದಲಿ ಸರ್ವಾ।
ರ್ಥನ ಕಥನ ಭಾಮಿನಿಯೊಳ್ವಿರಚಿಸಿ॥
ದೆನು ಮಹಾತ್ಮರಪೇಕ್ಷೆ ಸ್ಮರಣೆಯೊಳ್ವಿಬುಧಕವಿ
ರಾಮಾ॥

'ಕನ್ನಡ' ವೆಂದು ಬರೆಯಲು ಕವಿಗೆ 'ಭಾಮಿನಿ'ಯು ಅಡ್ಡಿಯನ್ನು ತಂದಳಲ್ಲವೇ? ಎರಡನೆಯ ಸಾಲಿನಲ್ಲಿ ವೃತ್ತ ದೋಷವಿದೆ.

ನೆನೆದು ಬಲ್ಲರ ನುಡಿಯ ಸರ್ವಾ।
ರ್ಥನ ಕತೆಯ ಭಾಮಿನಿಯ ವೃತ್ತದಿ
ಘನದ ಕನ್ನಡದೊಳಗೆ ಬರೆದನು ವಿಬುಧಕವಿರಾಮಾ॥

ಹೀಗೆ ಯಾವದಾದರೆಂದು ತೆರನಾಗಿ ಕವಿಗಳು ಬರೆದಿದ್ದರೆ ಚೆನ್ನಾಗಿತ್ತು.

ತನುಮನವು ಧನವುಗಳಲ್ಲದೆ।
ಮಿನುಗುವುದೆ ಮತ್ಸಹಸಮುದ್ರಣ
ಧನಸಹಾಯವಸಾಧ್ಯ ತನ ಮನ ದಣಿಸುತಿದ ಕೃತಿಸಿ॥

ಇದೇನೂ ಸುಲಭಶೈಲಿಯ ಮಾದರಿಯಲ್ಲ. ಕವಿಗಳ ಸಮಾಸ ಮಾಡುವ ಚಾತುರ್ಯವಾದರೂ ವಿಲಕ್ಷಣವಾಗಿರುತ್ತದೆ. ನಿರತ ಎಂಬ ಶಬ್ದವನ್ನು ಪೀಠಿಕಾ ಸಂಧಿಯಲ್ಲಿಯೇ ೯ ಸಾರೆ ಉಪಯೋಗಿಸಿದ್ದಾರೆ. ಒಗ್ಗಿಸಲಿ, ಬಳಕಲಿ ಮೊದಲಾದ ಪದಗಳಾದರೂ ಮೇಲಿಂದ ಮೇಲೆ ನಮಗೆ ಅಭಿನಂದವನ್ನು ಮಾಡುತ್ತವೆ. ಔಚಿತ್ಯಾನೌಚಿತ್ಯಗಳನ್ನು ಲಕ್ಷಿಸದೆ ಪದ ಪ್ರಯೋಗವನ್ನು ಮಾಡಬಾರದೆಂದು ಕವಿಗಳಿಗೆ ನಮ್ಮ ಬಿನ್ನಹ. ಇದರಲ್ಲಿ ಪ್ರತಿಭೆಯ ಬೆಳಕಿಲ್ಲ. ಶಬ್ದಸೌಷ್ಟವವಿಲ್ಲ; ಅರ್ಥ ಗಾಂಭೀರ್ಯವಿಲ್ಲ. ಕವಿಗಳು ಪುರಾಣಪದ್ಧತಿಯನ್ನು ಅನುಸರಿಸುವದೇನೋ ನಿಜ. ಆದರೆ ಅದರಲ್ಲಿಯ ಉತ್ತಮವಾದ ಗುಣಗಳು ಇದರಲ್ಲಿ ಬಂದಿರುವದಿಲ್ಲ. ಆದರೂ ಪ್ರಯತ್ನವು ಸ್ತುತ್ಯವಿದೆ. ಕವಿಗಳು ಪ್ರಯತ್ನಪಟ್ಟು ಮುಂದಿನ ಭಾಗಗಳನ್ನು ಹೃದಯಂಗಮವಾಗಿ ಮಾಡುವರೆಂದು ಹಾರೈಕೆ.

ಕನ್ನಡದ ಸ್ಥಿತಿ

ನಮ್ಮ ವಿಶ್ವವಿದ್ಯಾಲಯದಲ್ಲಿ ಕನ್ನಡದ ಓದನ್ನು ನಿರ್ಬಂಧವಾಗಿ ಇರಿಸುತ್ತೇವೆಂದೂ ಅದು ಮೈಸೂರ ವಿಶ್ವವಿದ್ಯಾಲಯದ ಅಸಾಧಾರಣ ಧರ್ಮವೆಂದೂ ಹೇಳಿಕೊಂಡು ಹೊರಟದ್ದೇನು? ಪರಿಣಾಮದಲ್ಲಿ ಆಗುತ್ತಿರುವುದೇನು? ಪಂಚ ಪಾಂಡವರು ಮಂಚದ ಕಾಲಿನ ಹಾಗೆ ಮೂರು ಜನ ಎಂದು ಹೇಳಿ ಎರಡು ತೋರಿಸಿ ಒಂದನ್ನು— ಅದು ಒಂದೂ ಅಲ್ಲ ಸೊನ್ನೆಯೂ ಅಲ್ಲ ಹಾಗೆ—ಬರೆಯುವಂತೆ ಆಗಿದೆಯಲ್ಲ! ಛಾನ್ಸೆಲರಾದ ನಮ್ಮ ಮಹಾರಾಜರವರು ಹಿಂದೆ ದೇಶಭಾಷಾವಾತ್ಸಲ್ಯದಿಂದಲೂ ದೂರದರ್ಶಿತೆಯಿಂದಲೂ ಕನ್ನಡದ ವ್ಯಾಸಂಗಕ್ಕೆ ಅಗ್ರಸ್ಥಾನದ ಪ್ರಾಶಸ್ತ್ಯವನ್ನು ಕೊಡಬೇಕೆಂದು ಸೂಚಿಸಿ ಈ ವಿದ್ಯಾಪೀಠವನ್ನು ಪ್ರತಿಷ್ಠಿಸಿದರೂ ಘಟನಾಪ್ರವಾಹವು ಅದಕ್ಕೆ ಕೇವಲ ವಿರುದ್ಧವಾಗಿ ಹೋಗುತ್ತಿರುವದು ಆಶ್ಚರ್ಯವಾಗಿದೆ. ನಮ್ಮ ವೈಸ್ ಛಾನ್ಸೆಲರವರು ದೇಶಭಾಷಾವಾತ್ಸಲ್ಯಗಳಿಗೆ ತವರೂರಾದ ಬಂಗಾಳದೇಶದವರು; ಅವರಿಗೆ ಬಂಗಾಳಿ ಭಾಷೆ ಹೇಗೋ ನಮಗೆ ಕನ್ನಡ ಹಾಗೆ; ಇದನ್ನು ಅವರಿಗೆ ಯಾರಾದರೂ ಹೇಳಿಕೊಡಬೇಕೆ? ಇಂಥ ಅಧಿಕಾರಿಗಳ ಕಾಲದಲ್ಲಿ-- ವಿಶ್ವವಿದ್ಯಾನಿಲಯ ಪ್ರಾಸಾದದಲ್ಲಿ-- ಕನ್ನಡಕ್ಕೆ ಕ್ಷಯರೋಗ ತಗಲುವುದುಂಟೆ? ಎಂದಿಗೂ ಇಲ್ಲ. ಒಬ್ಬೊಬ್ಬರು ಒಂದೊಂದು ಕಾರಣವನ್ನಿಟ್ಟುಕೊಂಡು ಮನಸ್ಸಿದ್ದರೂ ಮಾತನಾಡದೆ ನಮ್ಮ ಬುಡಕ್ಕೆ ನಾವೇ ನೀರು ತಿದ್ದಿಕೊಳ್ಳುತ್ತಿದ್ದೇವೆ; ಪುನರ್ವ್ಯವಸ್ಥೆಯ ಸಭೆಯಲ್ಲಿದ್ದವರು ನಮ್ಮವರೇ; ಈ ಆತ್ಮಹತ್ಯಸದೃಶವಾದ ತೀರ್ಮಾನವನ್ನು ಮಾಡಿದವರು ನಮ್ಮವರೇ. ನಾಳೆ ಅದನ್ನು ಸೇನೆಟ್ ಸಭೆಯಲ್ಲಿ ಕೈಯೆತ್ತಿ ಅನುಮೋದಿಸಿ ಚಿರಜೀವಿಯಾಗಿ ಮಾಡುವವರೂ ಅವರೇ. ನಾವು ಕೇಳಿದಮಟ್ಟಿಗೆ ಸೆನೇಟ್ ಸಭಿಕರು ಕನ್ನಡದ ಪರವಾಗಿ ವಾದಿಸಿದರೆ ವೈಸ್ ಛಾನ್ಸೆಲರವರು ಅವರಿಗೆ ವಿರುದ್ಧವಾಗಿ ಹೋಗುವಹಾಗಿಲ್ಲ. ಆದರೆ ಇದು ಬೆಕ್ಕಿಗೆ ಗಂಟೆ ಕಟ್ಟುವಂಥ ಕೆಲಸ; ಎಲ್ಲ ಇಲಿಗಳಿಗೂ ಬೆಕ್ಕಿನಮೇಲೆ ಕಣ್ಣು. ಆದರೂ ಒಂದೊಂದೂ ಒಂದೊಂದು ನೆವಹೇಳಿ ತಪ್ಪಿಸಿ ಕೊಳ್ಳುತ್ತದೆ ಕ್ಷಯರೋಗವು ಒಂದು ಸೇರುವಾಗ ಅದು ಅದೃಶ್ಯವಾಗಿ ಬರುತ್ತದೆ. ಶಾಲೆಯು ಒಂದುನಿಂತು ಕೆಲಸವು ಎಡವಟ್ಟಾದರೆ ಅದನ್ನು ತಿದ್ದುವದು ಕಷ್ಟವಾದೀತು. ಹಿಂದಿನ ಮೇಟ್ರಿಕ್ಯುಲೇಷನ ಪರೀಕ್ಷೆಯನ್ನು ಬದಲಾಯಿಸುವುದಕ್ಕೆ ಹೋಗಿ ಅದು ಈಗ ಹಳಸಿದ ಹಿಟ್ಟಿನಂತಾಗಿದೆ; ಅದಕ್ಕೆ ಪ್ರತಿವರ್ಷವೂ ಒಂದೊಂದು ಮಸಾಲೆಯನ್ನು ಬೆರಸುತ್ತಲೇ ಇದೆ; ಆದರೇನು, ಇದರಿಂದ ಅಡಿಗೆ ಮಾಡುವವರಿಗೆ ಸುಖವಿಲ್ಲ; ಊಟಮಾಡುವವರಿಗೆ ಹಿತವಿಲ್ಲ. ಕನ್ನಡದ ವಿಚಾರವೂ ಮುಂದೆ ಹೀಗಾದೀತು ಎಂದು ನಮಗೆ ಭಯ. ಈಗಲೇ ಕನ್ನಡ ಓದುವವರಿಲ್ಲದೆ ಕನ್ನಡಸಾಹಿತ್ಯದ ದಾರಿಯಲ್ಲಿ ಕಾಡುಕೊಂಟಿಗೆಗಳನ್ನು ಬೆಳೆಸಿಟ್ಟಂತಾಗಿದೆ. ಮುಂದೆ ಕನ್ನಡ ಓದು ಬರಹಗಳನ್ನು ಬಲ್ಲ

ರೇಲವೇ ಬೋರ್ಡಿನ ಅರ್ಜಿಗಳನ್ನು ಕಳಿಸಿರಿ! ಬೇಗನೇ ಕಳಿಸಿರಿ

ವರು ಇನ್ನೂ ಕಡಿಮೆಯಾದರೆ ನಮ್ಮ ಮೈಸೂರು ದೇಶವು "ಮಕ್ಕಳಿಲ್ಲ, ಮರಿಯಿಲ್ಲ, ಹೆಸರು ತಾಯಮ್ಮ" ಎಂಬಂತೆ "ಕನ್ನಡ ಓದುವವರಿಲ್ಲ; ಬರೆಯುವವರಿಲ್ಲ; ಹೆಸರು ಕನ್ನಡದೇಶ" ಎನ್ನುವ ಹಾಗಾಗುತ್ತದೆ. ಮೈಸೂರು ದೇಶವು ಕನ್ನಡದೇಶದ ಮಧ್ಯದಲ್ಲಿದೆ, ಅದರ ಜಾತಿಯು ಶುದ್ಧವಾಗಿದೆ, ಸಂಕರವಿಲ್ಲ ಎಂದು ನಾವು ಹೇಳಿಕೊಳ್ಳುತ್ತಿರುವದು ಬರಿಯ ಒಣ ಹೆಮ್ಮೆಯಾಗುತ್ತದೆ. ತಾಯಿಯ ಹಾಲು ಸಾಲದೆ ಮಗುವಿಗೆ ಹುಯ್ಯುವ ಹಾಲು ಕುಡಿಸುತ್ತಿರುವಾಗ, ಇರುವ ಸ್ತನ್ಯವನ್ನೂ ಬಿಡಿಸಿ ಮಗುವನ್ನು ಉಪವಾಸ ಕೆಡವುವವರುಂಟೇ? ಆದ್ದರಿಂದ ಈ ವಿಚಾರದಲ್ಲಿ ಬಾಯಿ ನಡೆಯತಕ್ಕ ಪ್ರತಿಯೊಬ್ಬರೂ, ನಮ್ಮ ಜನಗಳಲ್ಲಿ ಸಾಮಾನ್ಯವಾಗಿ ಸ್ವಭಾವಸಿದ್ಧವಾಗಿ ಬಂದಿರಬಹುದಾದ ಔದಾಸೀನ್ಯವನ್ನು ಬಿಟ್ಟು, ಯಾವ ಯಾವದೋ ಕಾರಣಗಳನ್ನು ಮನಸ್ಸಿನಲ್ಲಿಟ್ಟುಕೊಂಡು ಲೆಕ್ಕಾಚಾರ ಮಾಡುತ್ತ ಹಿಂದೆ ಮುಂದೆ ನೋಡಿ "ಹೋದರೆ ಹೋಗಲಿ" ಎಂದು ಉಪೇಕ್ಷೆ ಮಾಡುವುದನ್ನು ಬಿಟ್ಟು ಕನ್ನಡವು ಬಲಿಯುವದಕ್ಕೆ ತಕ್ಕ ಏರ್ಪಾಟನ್ನು ಮಾಡಿಸುವರೆಂದು ಭಾವಿಸುತ್ತೇವೆ.

ಈ ವಿಚಾರದಲ್ಲಿ ಆಸಕ್ತಿವಹಿಸಬೇಕಾದವರು ಕೇವಲ ಮೈಸೂರು ದೇಶಿಯರೇ ಅಲ್ಲ. ಇದನ್ನು ಕರ್ನಾಟಕದ ಸಕಲಭಾಗಗಳವರೂ ಯೋಚಿಸಿ, ಮಾಡತಕ್ಕದ್ದನ್ನು ಮಾಡಬೇಕಾಗಿದೆ. ಈಗ ಕರ್ನಾಟಕಕ್ಕೆಲ್ಲಾ ಒಂದು ವಿಶ್ವವಿದ್ಯಾಲಯವು ಬೇಕೆಂದೂ ಅದು ಮೈಸೂರು ವಿಶ್ವವಿದ್ಯಾನಿಲಯವೇ ಏಕೆ ಆಗಬಾರದೆಂದೂ ವಿಚಾರವು ನಡೆಯುತ್ತಿದೆಯಷ್ಟೆ? ಅದರ ಸಾಧ್ಯಾಸಾಧ್ಯತೆಯು ಹೇಗಾದರೂ ಇರಲಿ, ಒಂದು ವೇಳೆ ಸಾಧ್ಯವಾಗಿ, ಅಷ್ಟು ಹೊತ್ತಿಗೆ ನಮ್ಮಲ್ಲಿ ಕನ್ನಡವು ಗಗನಕುಸುಮವಾಗಿ, ಇತರ ಪ್ರಾಂತಗಳ ಕರ್ನಾಟಕರು ನಮ್ಮ ವಿಶ್ವ ವಿದ್ಯಾನಿಲಯದೊಳಕ್ಕೆ ಹಸಿದು ಬಂದರೆ ಗೋಕುಲಾಷ್ಟಮಿಯು ಶಿವರಾತ್ರಿಯ ಮನೆಗೆ ಊಟಕ್ಕೆ ಹೋದಹಾಗಾಗುವದಿಲ್ಲವೇ?

ಕನ್ನಡವನ್ನು ಐಚ್ಛಿಕವಾಗಿ ಮಾಡಿ ಅದಕ್ಕೆ ಹೆಚ್ಚು ಪ್ರಾಶಸ್ತ್ಯವನ್ನು ಕೊಟ್ಟಿದ್ದೇವೆನ್ನಬಹುದು. ಇದು ಖಂಡೇರಾಯನನ್ನು ಗಿಣಿಯಹಾಗೆ ಸಾಕಿದಂತೆಯೇ ಹೊರತು ಮತ್ತೆ ಬೇರೆ ಅಲ್ಲ; ಈ ಅಂಶಕ್ಕೆ ಪ್ರಾಮಾಣ್ಯವನ್ನು ಒದಗಿಸುವದಕ್ಕಾಗಿಯೇ ಮ॥ ಶಾಸ್ತ್ರಿಗಳ ಬೆಂಬಲವನ್ನು ಇಟ್ಟುಕೊಂಡು ಈ ಗೋಳಾಟವನ್ನು ಮೊದಲು ಮಾಡಿದ್ದು.

ಕನ್ನಡಕ್ಕೆ ಪ್ರಾಶಸ್ತ್ಯ ಕೊಡಲು ಇರುವ ಒಂದು ಮುಖ್ಯವಾದ ಅಡ್ಡಿಯಾವುದೆಂದರೆ— "ಮೈಸೂರು ದೇಶದಲ್ಲಿ ಇಷ್ಟೊಂದು ಭಾಷೆಗಳಿವೆಯಲ್ಲ ಇವುಗಳಿಗೆ ಅನ್ಯಾಯ ಮಾಡಿದಂತಾಗುವದಿಲ್ಲವೇ, ಇವು ಮೂಲೆಬಿದ್ದು ಹೋಗುವುದಿಲ್ಲವೇ" ಎಂದು ಆಕ್ಷೇಪಿಸುತ್ತಿರುವವರ ಕೂಗು:—ಹೊಟ್ಟೆಯಲ್ಲಿ ಹುಟ್ಟಿ ಹೆಸರು ಹೇಳುವ ಮಗನಿಗೆ ಅನ್ನ ಹಾಕಬೇಕಾದರೆ ಭಿಕ್ಷಾನ್ನದ ಹುಡುಗರಿಗೆಲ್ಲಾ ಹೊಟ್ಟೆ ತುಂಬಿದೆಯೇ ಇಲ್ಲವೇ ಎಂದು ವಿಚಾರಮಾಡುವಂಥ ಪ್ರಕರಣ. "ಸರ್ವೇಜನಾಸ್ಸುಖಿನೋಭವಂತು" ಎಂಬ ಪಾರಮಾರ್ಥಿಕ ಬುದ್ಧಿಯು ಸ್ತುತ್ಯವಾದದ್ದೇ! ಆದರೆ ಕನ್ನಡದೇಶದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡದೆ ಹೋದರೆ ಮೆಕ್ಸಿಕೋ ದೇಶದವರೋ ನ್ಯೂಝೀಲ್ಯಾಂಡ್‌ನವರೋ ಕೊಡುತ್ತಾರೆಯೇ? ಅಲ್ಲದೆ ಎಷ್ಟು ದೇಶಭಾಷೆಗಳಿಗಾದರೂ ಏಕೆ ಪ್ರಾಶಸ್ತ್ಯ ಕೊಡಬೇಕು? ಈಗ ಮೈಸೂರು ದೇಶದಲ್ಲಿ—ಅವರವರ ಮನೆಯಮಾತು ಯಾವುದಾದರೂ ಆಗಿರಲಿ— ಕನ್ನಡವನ್ನು ಅರಿಯದವರು ಎಷ್ಟು ಜನರಿದ್ದಾರೆ? ಬಹುಸ್ವಲ್ಪ. ನಮ್ಮ ದೇಶದಲ್ಲಿ ಎಲ್ಲರೂ ಕನ್ನಡವನ್ನು ಕಲಿಯಬೇಕೆಂದು ನಿರ್ಬಂಧ ಪಡಿಸಿದರೆ ಇಂಥವರ ಮಕ್ಕಳು ಮೊದಲಿಂದ ಕನ್ನಡವನ್ನೇ ಆರಂಭಿಸುತ್ತಾರೆ. ಬೇಕಾದರೆ ಇಂಥವರೆಲ್ಲರೂ ತಕ್ಕಷ್ಟು ಕನ್ನಡವನ್ನು ಕಲಿಯಲು ಸಾಕಾದಷ್ಟು ಅವಕಾಶಕೊಟ್ಟು ೧೯೩೫ನೇ ಇಸವಿಯಿಂದ ಕನ್ನಡವನ್ನು ನಿರ್ಬಂಧವಾಗಿ ಎಲ್ಲರೂ ಓದಬೇಕು ಎಂದು ವಿಧಿಸಬಹುದು. ಇದರಿಂದ ನಮ್ಮ ದೇಶದ ತಮಿಳರೂ ತೆಲಗರೂ ತಮ್ಮ ಮಾತನ್ನೇನು ಮರೆಯುವದಿಲ್ಲ. ತಮ್ಮ ಮಾತಿನ ಮೇಲೆ ಅಷ್ಟು ಮಮತೆ ಇದ್ದರೆ ಮನೆಯಲ್ಲಿಯೇ ಹೆಚ್ಚಾಗಿ ಓದಿ ಕೊಳ್ಳುತ್ತಾರೆ. ಸಾಲದಿದ್ದರೆ ತಮಿಳು ವಿಶ್ವವಿದ್ಯಾಲಯವನ್ನೂ ಆಂಧ್ರ ವಿಶ್ವವಿದ್ಯಾಲಯವನ್ನೂ ಆಶ್ರಯಿಸುತ್ತಾರೆ! ಇಲ್ಲದಿದ್ದರೆ ಇವರ ಭಾಷೆಗಳನ್ನು ಐಚ್ಛಿಕವಾಗಿಡೋಣ; ಅಂಥ ಆಸಕ್ತಿ ಇರುವವರು ಅವುಗಳನ್ನು ತೆಗೆದುಕೊಂಡು ಪಂಡಿತರಾಗಲಿ! ಭಾಷಾವ್ಯವಸ್ಥೆಯನ್ನನುಸರಿಸಿ ಹೊಸ ಹೊಸ ವಿದ್ಯಾಪೀಠಗಳು ಹುಟ್ಟುತ್ತಿರುವಾಗ ನಮ್ಮ ವಿಶ್ವವಿದ್ಯಾಲಯದಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯ ಕೊಡದಿದ್ದರೆ ಅಸ್ವಾಭಾವಿಕವೂ ದೇಶಕಾಲವಿರುದ್ಧವೂ ಆಗುತ್ತದೆ.

ಕಳೆಕೀಳದಿದ್ದರೆ ಪೈರು ಹೇಗೆ ಬೆಳೆದೀತು?

—ಪ್ರಬುದ್ಧ ಕರ್ನಾಟಕ

✓ ನಾಟಕದ ಹಾಡು

ಈಗಿನ ನಮ್ಮ ನಾಟಕದ ಹಾಡಿನಲ್ಲಿ ಹಾಲಿಲ್ಲ. ನೀ ರಸವಾಗೆಂದು ಹೇಳುವ ರಸದೇವಿಯ ನಲಿದಾಟವೇ ಇಲ್ಲ. ಕರ್ನಾಟಕದ ಹಾಡೇ ಅದು! ಏನೋ ನೀರಸವಾದ, ಕೇವಲ ಕದ್ದ, ಇಲ್ಲವೆ 'ಜೋಳ ಹಾಕಿಕೊಂಡ' ಜೋಕಮಾರನ ಜೋಗುಳವೇ ಹಾಡ್ಯಾಡಿ ಅಳುತ್ತಿರುವದು! ಅಂದರೆ ಬೇಕಾದ ಹರ್ಷದಾಸವೇ ಇಲ್ಲದಾದ ಮೇಲೆ, ಹಾಡಿದರೂ ಅತ್ತಂತೆಯೇ ಸರಿ. ನಾಟ್ಯಕ್ಕೆ ನಟೇಶ್ವರನು ಬೇಕಾದರೆ ಹಾಡಿ ಕುಣಿಸಲಿಕ್ಕೆ ಮೋಹಿನಿಯು ಬೇಕಾಗುತ್ತಾಳೆ. ನಾವನ್ನುವದೆಂದರೆ, ನಾಟ್ಯ ಕೌಶಲ್ಯವು ಸಂವಿಧಾನಕಕ್ಕೆ ಪರಿಪೋಷಕವಲ್ಲ. ಇನ್ನೊಂದು ಅಂಗವು ಅವಶ್ಯವು. ಅದೊಂದರೆ, ಕಾವ್ಯವು- ಭಾವನೆಯ ಬೆಲ್ಲವು! ಕೃತಿಯು ಒಣಬಾಯಲ್ಲಿ ಕೊಟ್ಟರೆ ನೀರು ತರಿಸಿ ರುಚಿಸುವ ಸವಿಯು!

ನಾಟಕಕ್ಕೆ ಎಲ್ಲಿಯ ಹಾಡೆಂದು ಈಗ ಎಷ್ಟೋ ಭಾಂಧವರ ತಲೆಯಲ್ಲಿ ಸೇರಿದೆ. ಅದಕ್ಕಾಗಿ ವಾದ ಭೂಮಿಯಾದರೂ ತೆರವಾಗಿ ನಿಂತದೆ. ಆದರೆ ಅದೆಲ್ಲ ಸುಳ್ಳು; ಮಹಾಕವಿಯಿಲ್ಲದೆ, ಸಂಗೀತ ಗುರುವಿಲ್ಲದೆ ನಾಟಕವಿಲ್ಲ! ಇದ್ದರೂ, ಹಾಡುವ ನಾಟಕವಿಲ್ಲ! ಹಿಂದಿನ ಎಲ್ಲ ಸಂಸ್ಕೃತ ಪದ್ಧತಿಗಳನ್ನು ನೋಡಿರಿ. ಕವಿಯ ಕೃಯಲ್ಲಿಯೇ ನಾಟ್ಯದರಗಿಣಿಯಾಟ. ಅಂತೇ ನಾಟಕಾಲಂಕಾರ ಕಾವ್ಯಾಲಂಕಾರರಾಗಿಯೂ ವಿರಾಜಿಸಬೇಕು. ಭಾವನೆಯನ್ನು ಬಣ್ಣಬಣ್ಣದ ಮಾತಿನಲ್ಲಿ ಕಂಡು ಮಧುರಾಳಾಪದಿಂದ ಕಿವಿಯನ್ನು ಎರೆದು ಬಿಡಬೇಕು. ಆಗಾದ ಆನಂದವು 'ವೃಷ್ಟಿಮುಚ್ಚಿತವಾದ ನಿಸರ್ಗ-ದೇವಿಗೂ ವಿರಳ. ಅಂಥ ಹಾಡಿಗೆ ನಾಲ್ಕೂ ಹೊತ್ತಿನಲ್ಲಿಯೂ ಶಾಸ್ತ್ರಶುದ್ಧ- ತಾಲಬದ್ಧ- ಸಂಗೀತಕಾರನೇನು ಬೇಕಿಲ್ಲ. ಕೇವಲ ಶಬ್ದದ ಮೇಲೆ ನಾಲಿಗೆಯಿಟ್ಟು ನಡೆದರೆ ಹೂವಿನ ಹಾಸಿಗೆ ಯಾಗಿ ಅಳ್ಳಿಯಗಾದೆಯಾಗಿ- ಎಂಥ ವಿರಸಿಗೂ ವೈಮನಸ್ಯವುಂಟಾಗದಿರಬೇಕು.

ಅವೆಲ್ಲವನ್ನು ಬಿಟ್ಟು, ನಮ್ಮ ನಾಟಕಗಳಲ್ಲಿ ಹೇಳಿದ ಕೆಲವು ಮಾತನ್ನೇ ಎಳೆದೆನ್ನುವಶಬ್ದ ಭಾಂಡಾರಕ್ಕೆ ಹಾಡೆಂದು ಕರೆದು ಹಾಡುವರು. ಗೀತಾದೇವಿಯೊಡನೆ ಆಡುವರು! 'ಏನು ಮಾಡಲೀ? ಎಂದು ಮಾತಾಡಬೇಕಿದ್ದರೆ, ಅದನ್ನೇ ಪಿಯಾನಿನ ಗರ್ಜನೆಯಲ್ಲಿ ಯಾವದೋ ಒಂದು ಕಾಕತಾಲೀಯ ನ್ಯಾಯದ ರಾಗದಿಂದ ಜಗ್ಗಿ ಜಗ್ಗಿ 'ಏ--ನು ---ಮಾಡಲೀ ---' ಎಂದು ಹಾಡಿಬಿಡುವರು. ಅದಕ್ಕೆ ಭಾವನೆಯ ಸ್ವರೂಪ ಒತ್ತಟ್ಟಿಗಿರಲಿ, ವಾಕ್‌ಸ್ವರೂಪವೂ ಕೂಡಿಲ್ಲ

ಇಂಥ ಪ್ರಯತ್ನವೆಂದನೆ ತಲೆತುರಿಸಿ ಪ್ರಾಸಕೂಡಿಸುವ ನರಕವಿಗಳದಲ್ಲವೇ! ಮತ್ತೊಂದು, ಇಂಥ ಹಾಡಿನಲ್ಲಿ ಸಾಂಪ್ರದಾಯ ವಿಶಿಷ್ಟ ಕೆಲವು ರಚನೆಗಳು. ಹಿಂದಿನ ಕವಿಗಳು ಸಮಯಕ್ಕೆ ತಕ್ಕುದಾಗಿ ಕಣ್ಣು- ಕೈ-ಕಾಲುಗಳಿಗೆ ಕಮಲವೆಂದೂ, ಮೂಗಿಗೆ ಸಂಪಿಗೆಯೆಂದೂ, ಹೀಗೆ ಅವಯವಗಳನ್ನು ಸೃಷ್ಟಿಪುತ್ರಿಯರಿಗೆ ಹೋಲಿಸಿ ಎಲ್ಲರೂ ಅದರ ಅನುಕರಣ ಮಾಡುತ್ತಿದ್ದರು.' ಒಂದು ರೀತಿಯಲ್ಲಿ ಅವರ ಅನುಭವಕ್ಕೆ ಅದು ಹಿತವೇ! ಆದರೆ ಈಗಿನವರ ಪಾತ್ರಗಳು ಎಷ್ಟೋ ಸಾರೆ ಅಂಥ ಆಕೃತಿಯ ಆನಂದವನ್ನು ಹಚ್ಚಿಕೊಳ್ಳದಲೆ, ಕವಿತೆಯನ್ನು ಕಮಲ-ಮಯವಾಗಿ ಮಾಡಿ ಬಿಡುವರು. ಒಮ್ಮೆ ಹೀಗಾಯಿತು. ಒಂದು ಪ್ರತಿ-ಪಾತ್ರವು ನಾಟಕದ ರಾಸಿನಲ್ಲಿ ಮಾತನಾಡುತ್ತ ಆಡುತ್ತ 'ನನ್ನನ್ನು ವರಿಸು- ಇಲ್ಲವಾದರೆ ನಿನ್ನ ಕಣ್ಣೇ ಕಿತ್ತಿ ಹಾಕುತ್ತೇನೆ' ಎಂದದ್ದೇ ಸ್ವಲ್ಪ ಶಾಂತನಾಗಿ 'ಕಮಲಾಕ್ಷಿಯೇ ಬೇಗ ಬಾ' ಎಂದು ಹಾಡಿನಲ್ಲಿ ಬಯಕೆ ಮಾಡಿದನು. ಕಣ್ಣು ಕಮಲವಾದರೆ ಕಿತ್ತಿ ಹಾಕುವ ಕಲ್ಪನೆಯು ಏಕೆ? ಅಂದರೇ ನುಹಾಡಿಗೂ ಮಾತಿಗೂ ಸಂಬಂಧವೇ ಇಲ್ಲ. ಅಥವಾ ಕಮಲಾಕ್ಷಿಯಂದರೆ 'ಹೆಂಗಸು' ಎಂಬದೊಂದೇ ಅರ್ಥ-ಪರಿಚಯ. ಗಾಯನ ಪುರುಷನ ವಿಚಾರವನ್ನು ನೋಡದೆ, ಆಚಾರವನ್ನಿಟ್ಟು ನೋಡಿರೆಂದರೆ ಹೇಗೆ ಸಹ್ಯವಾದೀತು? ಕಮಲದಂತೆ ಕಣ್ಣೆನ್ನುವಲ್ಲಿ ಹಿಂದಿನವರು ಅಂಥ ಸೌಂದರ್ಯ ರೂಪದ ಕನಸು ಕಂಡಿದ್ದರು. ಅದರಂತೆ ನಾವು ಕಂಡು ಅನ್ನಬೇಕು. ಹೊಸ ಹೋಲಿಕೆಯು ತೋರಿದರೆ ಒಡನುಡಿಯಬೇಕು. ಒಂದೊಪ್ಪತ್ತಿಗೆ ಕವಡಿಯಂತೆ ಕಣ್ಣೆನ್ನಬಹುದು. ಆದರೆ ನಮ್ಮ ಸಾರಸ್ವತ ಸೌಖ್ಯವನ್ನು ಮಾತ್ರ ಕಳೆದುಕೊಳ್ಳದಿರಬೇಕು. ಇಷ್ಟು ಮಾತ್ರ ನಿಜ. ಎಷ್ಟೋ ನಾಟಕಗಳಲ್ಲಿ 'ಅವಸರ'ದ ಹಾಡೂ, ಅನವಸರದ ಹಾಡೂ, ಹೀಗೊಂದು ಮಾತ್ರ ಯೋಗ್ಯರಾಗ ಯೋಜನೆಯಾಗಿರುತ್ತದೆ ಆದರೆ, ಶಬ್ದ ಸೌಷ್ಠವವಿಲ್ಲ, ಹಾಡಿದಾಗ ಕೂಡ ಹರಿಸುವ, ಅಂದರೆ ನುಡಿದಾಗ ನುಡಿಸುವ ಕಾವ್ಯ ಸೌಭಾಗ್ಯವಿಲ್ಲ! ಅಲ್ಲ! ಪ್ರಾಸಕ್ಕಾಗಿ ಬಳಲಬೇಕು. ಯತಿಗಾಗಿ ಯತ್ನಿಸಬೇಕು. ಮೇಲೆ ನಟರ ಬಾಯಲ್ಲಿ ಬಿರುಸಾಗ ಬಾರದು! ಪಾಪ! ಇವೆಲ್ಲ ಹೇಗೆ ಸಾಧಿಸಬೇಕು.

ಇನ್ನೊಂದು—ಹಾಡು. ಎಂಥದಾದರೂ ಅನ್ನುತ್ತನ್ನುತ್ತ ಮುಚ್ಚಿಕೊಂಡು ಹೋಗುವ ಮೌನರಾಗವು ಕೆಲಜನ ನಟರಿಗೆ ಗೊತ್ತಿಲ್ಲ. ಯಾಕೆಂದರೆ ಪಿಯಾನು-ಕಾಲು ಒತ್ತಿಸಿಕೊಳ್ಳುವ ವಾದ್ಯರಾಜನು- ಧಾಟಿಯನ್ನು ಹಚ್ಚಿಕೊಟ್ಟು ಅರ್ಥವನ್ನು ಹಾಡಿದಾಗಲೇ ಇವರು ಸೂರ ಹಿಡಿಯುವದು. ಅಂತೆಯೆ ಸಹಾಯಕವಾದ ಪೋಷಕವಾದ ವಾದ್ಯವು ತಾನೇ ಗಾಯಕನಾಗಿ ಬಿಡುತ್ತೆ. ಅದರಲ್ಲಿ ತಬಲೆಯವನು ತಲೆತಲೆ ಬಡೆದನೆಂದರೆ ಹಾಡು ಹಾಡುತ್ತ ಪಾರಾಗಿ ಬಿಡುತ್ತದೆ. ಕಿವಿಯು ಕೈಗೆ ಸಿಕ್ಕುವದಿಲ್ಲ. ನಾಟಕಕರ್ತೃರ ಕ್ಷಮೆಯನ್ನು ಬೇಡಿ, ಹಾಡಿನ ಸಾಹಸವನ್ನು ಇಲ್ಲಿ ಹೇಳಿ ಬಿಡುತ್ತೇವೆ. 'ಘನ-ಕೋಮಲ ಬಾಲೆಯಿವಳೋ' ಎಂಬಲ್ಲಿ 'ಘನ' ವಿಷ್ಟು ಚೆನ್ನಾಗಿ ಕೇಳಿಸಿ, ಉಳಿದದ್ದು ಅಳಿಸಿ ಹೋಗುತ್ತದೆ. ತೀವ್ರ ಶ್ರುತಿಯಿದ್ದವರು 'ಘನ' ವಿಷ್ಟು ಕೇಳಿ 'ಕೋಮಲ'ವನ್ನು ಕೇಳದೆಯೆ 'ಘನಹಾಡಪಾ' ಎಂದು ಅಲವೆನ್ನುತ್ತಾರೆ. ಒಂದು ಮಾತುಹೇಳುತ್ತೇನೆ, ಇಲ್ಲಿಯ 'ಘನ-ಕೋಮಲ' ಶಬ್ದಗಳ ಸಮಾಸವೆಂದರೆ, ಕಡಿದಾಡುವ ಸ್ತ್ರೀಪುರುಷ ಸಮಾಗಮವೇ ಸರಿ.

ಆದುದರಿಂದ, ಹೇಳುವ ತಾತ್ಪರ್ಯವೇನಂದರೆ, ಭಾರತ ಮುನಿಯ ಶಿಷ್ಯನು ಭಾರತೀ ದೇವಿಯ ಭಕ್ತನಾದರೂ ಆಗಬೇಕೆಂದರು. ನಾಟಕ-ಕಾರನು ಕವಿತಾ ಕಾಮಿನಿಯ ಆಳುಮನುಷ್ಯ
ನಾದರೂ ಆಗಬೇಕೆಮು —ಸಾಕಿನ್ನು.
ರಸದೇವಿ ಯೊಲಿಯಲಿ. —ರಸಿಕರಂಗ

(೩ ನೇ ಪುಟದಿಂದ ಬಂದದ್ದು.)

ವಾಗುವದೆಂದು ಮೌಲಾನಾ ಹಜರತ್ ಮೋಹನೀಯವರು ಹೇಳಿ ಈ ಖಾದಿ ಠರಾವವನ್ನು ವಿರೋಧಿಸಿದರು. ಕಡೆಗೆ ಬಹು ಮತದಿಂದ ಅದು ಸ್ವೀಕೃತವಾಯಿತು.

ಅಮೇರಿಕೆಯಿಂದ ಬಂದ ಡಾ. ಜಾನ್ಸೀ ಹೊಮ್ಸರವರು ಮಹಾತ್ಮರ ಪ್ರಶಂಸನಾಪರವಾದ ಭಾಷಣವನ್ನು ಈ ದಿನ ಮಾಡಿದರು.

ಕಡೆಯ ಠರಾವೆಂದರೆ, ಪಂಡಿತ ಮೋತೀಲಾಲರದು. ಕಾಯದೇಭಂಗದ ಉಲ್ಲೇಖಮಾಡದೇ ಸ್ವಲ್ಪ ಸೌಮ್ಯವಾದ ಉಪಸೂಚನೆಯೊಂದನ್ನು ಪಂಡಿತ ಮಾಲವೀಯವರು ತಂದರು. ೨ ನೇ ದಿನದ ಕಾರ್ಯಕ್ರಮವು ಇಲ್ಲಿಗೆ ಮುಗಿಯಿತು.

ಮೂರನೇ ದಿನ ಮಧ್ಯಾಹ್ನದ ೧೨ ಗಂಟೆಗೆ ಮಹಾ ಸಭೆಯಲ್ಲಿ ನೆಹರೂರವರ ಠರಾವಿನ ಮೇಲೆ ವಾದವಿವಾದವಾಗಿ ಕಡೆಗೆ ನೆಹರೂರವರ ಠರಾವು ತೀರ್ಮಾನಿಸಲ್ಪಟ್ಟಿತು.

ಇನ್ನು ಮೇಲೆ ಕಾಂಗ್ರೆಸ್ಸಿನ ಕೆಲಸವೆಲ್ಲವೂ ಶಕ್ಯವಿದ್ದ ಮಟ್ಟಿಗೆ ಹಿಂದೀಯಲ್ಲಿಯೇ ನಡೆಯಬೇಕಾಗಿ ನಿರ್ಣಯವಾಯಿತು. ಡಾ. ಅನಸಾರೀ ಶ್ರೀ. ಸಂತಾನಮ್ ಮತ್ತು ಎ. ರಂಗಸ್ವಾಮಿ ಅಯ್ಯಂಗಾರ ಇವರು ಹೊಸದಾಗಿ ಕಾರ್ಯದರ್ಶಿಗಳಾಗಿ ಆರಿಸಲ್ಪಟ್ಟರು. ಲೆಕ್ಕತಪಾಸಕರೂ, ಕೋಶಾಧ್ಯಕ್ಷರೂ, ಕಳೆದ ವರ್ಷದಂತೆಯೇ.
ಮುಂದಿನವರ್ಷದಕಾಂಗ್ರೆಸ ಆಸಾಮದಲ್ಲಿ ಸೇರುವದು.

ಕಡೆಗೆ ಸ್ವಾಗತಾಧ್ಯಕ್ಷರಾದ ಮುರಾರೀಲಾಲರು ಸ್ವಾಗತ ಮಂಡಳದ ಪರವಾಗಿಯೂ, ಎಸ್. ಶ್ರೀನಿವಾಸ ಅಯ್ಯಂಗಾರರು ಪ್ರತಿನಿಧಿಗಳ ಪರವಾಗಿಯೂ, ಪರಸ್ಪರರ ಆಭಾರ ಮನ್ನಿಸಿದರು. ಅಧ್ಯಕ್ಷರು ಒಳ್ಳೇ ವೀರವಾಣಿಯಿಂದ ಎಲ್ಲರ ಮೇಲೆಯೂ ಪರಿಣಾಮವಾಗುವಂತೆ ಸಮಾರೋಪದ ಭಾಷಣವನ್ನು ಮಾಡಿದರು. ತಮ್ಮ ಕೈಯ್ಯಲ್ಲಿಯ ಸ್ವರಾಜ್ಯ ಪತಾಕೆಯನ್ನು ಎಂತಹ ಧಿಟ್ಟನಾದ ವೈರಿಯು ಬಂದರೂ ಕಲಕದೆಂದು ಬಹು ಗಂಭೀರವಾದ ವಾಣಿಯಿಂದ ಹೇಳಿದರು. ಲಾಲಾ ಲಜಪತರಾಯರು ಅಧ್ಯಕ್ಷರ ಆಭಾರವನ್ನು ಮನ್ನಿಸಿದ ಮೇಲೆ ೪೦ ನೇಯ ರಾಷ್ಟ್ರೀಯ ಮಹಾಸಭೆಯು ಕರತಾಡನೆಯ ಮತ್ತೂ ಜಯ ಜಯಕಾರದ ನಿನಾದದಿಂದ ಸಮಾಪ್ತವಾಯಿತು.

ಸ್ವದೇಶೀ ಪ್ರದರ್ಶನವು ಇನ್ನೂ ಕೆಲಕಾಲ ಇರುವದು. ಸಾವಿರಾರು ಜನರು ದಿನಾಲು ಸಂದರ್ಶಿಸುತ್ತಲಿದ್ದಾರೆ. ಇವರೆಲ್ಲರೂ ಪ್ರೇಕ್ಷಕರು ಮಾತ್ರ! ಪ್ರದರ್ಶನದಲ್ಲಿಯ ವಸ್ತುಗಳಿಗೆ ವಿಶೇಷವಾದ ಬೇಡಿಕೆಯಿಲ್ಲ. ಈ ಸಲ ಸಾಮಾನುಗಳು ಮಾರಾಟವಾಗದೇ ಹಾಗೇ ಇವೆ.

ಶ್ರೀ. ಕೇಳಕರ, ಜಯಕರ ಮತ್ತು ಡಾ. ಮುಂಜೇರವರು ಸ್ವರಾಜ್ಯ ಪಕ್ಷವನ್ನು ಬಿಟ್ಟರು ಕಾಯದೇ ಮಂಡಲಗಳಲ್ಲಿಯ ತಮ್ಮ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟರು. ಇನ್ನು ಮೇಲೆ ಪ್ರತಿಯೋಗೀ ಸಹಕಾರಿತೆಯ ಬಗ್ಗೆ ದೇಶದಲ್ಲಿ ಸಂಚರಿಸಿ, ಚಳವಳ ಮಾಡುವರು

ಕಾನಪೂರದಲ್ಲಾದ ಇತರ ಸಭೆಗಳು

ತಾ॥ ೨೮ ದೇ ದಿನ.

ಅಖಿಲ ಭಾರತೀಯ ಲೋಕಲ್‌ಬೋರ್ಡ ಪರಿಷತ್ತು. ಅಧ್ಯಕ್ಷರು— ಬಿ. ಎನ್. ಸರ್ಮಾ.

ಅಖಿಲಭಾರತೀಯ ರೈತರ ಪರಿಷತ್ತು ೫೦೦೦ ಜನ ರೈತರು ಕೂಡಿದ್ದರು. ಮಹಾತ್ಮರ ಉಪದೇಶಪರಭಾಷಣವಾಯಿತು. ಅಧ್ಯಕ್ಷರು:— ಸಿಂಗಾರವೇಲೂ

ಅಸ್ಪೃಶ್ಯತಾ ನಿವಾರಣೆಯ ಪರಿಷತ್ತು ಸ್ವಾಮೀ ಶ್ರದ್ಧಾನಂದರು ಅಧ್ಯಕ್ಷರು.

ಅಖಿಲಭಾರತೀಯ ರಾಜಕೀಯ ಕೈದಿಗಳ ಪರಿಷತ್ತು ಸ್ವಾಮಿ ಗೋವಿಂದಾನಂದರು ಅಧ್ಯಕ್ಷರು

ಸಂಗೀತ ಪರಿಷತ್ತು. ಮುಂಬೈ ಗಂಧರ್ವ ಮಹಾ ವಿದ್ಯಾಲಯದಿಂದ ನೆರವೇರಿತು.

ವರ್ತಮಾನಸಾರ

ಶಿವಮೊಗ್ಗೆಯಲ್ಲಿ ನೆರೆಯುವ ಮೈಸೂರ ಪ್ರಾಂತದ ಆಯುರ್ವೇದ ಪರಿಷತ್ತಿಗೆ ಇಲ್ಲಿಯ ಡಾ. ಜಠಾರವರು ಅಧ್ಯಕ್ಷರಾಗಿ ನಿಯೋಜಿಸಲ್ಪಟ್ಟಿದ್ದಾರೆ.

ಇಹವೃತ್ತ

ಉಡುಪಿಯಲ್ಲಿ ೧೯೨೬ ನೆಯ ಜನವರಿ ೧೮ ರಿಂದ ೨೨ ರ ವರೆಗೆ ನಡೆಯುವಪರ್ಯಾಯ ಮಹೋತ್ಸವಕ್ಕೆ ಜನಗಳು ಹೋಗಬೇಕಾಗಿರುವುದರಿಂದ ಜನವರಿಯಲ್ಲಿ ಬೆಂಗಳೂರಲ್ಲಿ ಆಯುರ್ವೇದ ಸಮ್ಮೇಳನವು ನಡದರೆ ಬರತಕ್ಕವರಿಗೆಲ್ಲಾ ಅನುಕೂಲವಿಲ್ಲವೆಂಬ ತಿಳಿಯಬರುವ ಅಂಶವನ್ನು ಸೂಕ್ಷ್ಮನೋಡಿ ಭಾವಿಸಿ ಸ್ವಾಗತ ಸಭೆಯವರು ಸಮ್ಮೇಳನವು ಜನವರಿ ೧೭ ನೆಯ ತಾರೀಖಿನಿಂದ ನಡೆಯಬೇಕೆಂಬ ತೀರ್ಮಾನವನ್ನು ಬದಲಾಯಿಸಿ ೧೯೨೬ ನೇ ಫೆಬ್ರವರಿ ೧೮ ರಿಂದ ನಡೆಯುವಂತೆ ಈಗ ತೀರ್ಮಾನಿಸಿದ್ದಾರೆ

ಈ ವಾರದಲ್ಲಿ ಭರತಖಂಡದಲ್ಲಿ ಎತ್ತನೋಡಿದರೂ ಸಭೆಗಳೇ. ಇದು ಸಭೆಗಳ ಸುಗ್ಗಿಯ ವಾರವು. ಎಲ್ಲ ಸಭೆಗಳ ಸಾರಾಂಶದ ಸುದ್ದಿಗಳನ್ನು ಸಹ ಸಂಗ್ರಹಿಸುವದು 'ಕನ್ನಡಿಗ' ನಂತಹ ಚಿಕ್ಕ ವಾರಪತ್ರಿಕೆಗೆ ಶಕ್ಯವಿಲ್ಲ. ಕನ್ನಡನಾಡಿನಲ್ಲಿ ದೈನಿಕವೊಂದು ಸ್ವತಂತ್ರವಾಗಿ ಸುಳಿದಾಡುವ ಸುಪ್ರಸಂಗವು ಬರುವವರೆಗೆ ಕನ್ನಡಿಗರ ಈ ಕೊರತೆಯು ತಪ್ಪಿದ್ದಲ್ಲ.

ಮದ್ರಾಸದಲ್ಲಿ ನಡೆದ 'ಥಿಯೊಸಫಿಕಲ್' ಸಂಘದ ೫೦ ನೇ ವರ್ಷದ ಮಹೋತ್ಸವಾರಂಭಕ್ಕಾಗಿ ಜಗತ್ತಿನ ಎಲ್ಲ ಭಾಗಗಳಿಂದಲೂ ಪ್ರತಿನಿಧಿಗಳು ಬಂದಿರುವರು. ಪ್ರಾರಂಭದ ದಿನ ೮ ಸಾವಿರ ಜನರು ಅನೀ ಬಿಜಾಂಟ ಅಮ್ಮನವರ ಭಾಷಣಕ್ಕಾಗಿ ಅಡ್ಯಾರದಲ್ಲಿ ನೆರೆದಿದ್ದರು.

ಅಮರಾವತಿಯಲ್ಲಾದ ದ್ವಿತೀಯ ಬ್ರಾಹ್ಮಣೇತರ ಕಾಂಗ್ರೆಸ್ಸು.

ಮದ್ರಾಸ ಸರಕಾರದ ಮುಖ್ಯ ಮಂತ್ರಿಗಳಾದ ಪನಗಲ್ಲ ರಾಜಾ ಇವರ ಅಧ್ಯಕ್ಷತೆಯಲ್ಲಿ ಈ ದ್ವಿತೀಯ ಕಾಂಗ್ರೆಸ್ಸು ಅಮರಾವತಿಯಲ್ಲಿ ೨೭ ನೇ ತಾ॥ ದಿನ ಮೊದಲಗೊಂಡಿತು. ಸರ. ಕೆ. ವಿ. ರೆಡ್ಡಿ, ಶಿವಜ್ಞಾನ ಪಿಳ್ಳೆ ಮೊದಲಾದ ಮುಖಂಡರೊಂದಿಗೆ ಅಧ್ಯಕ್ಷರು 'ಸ್ಪೆಶಲ್ ಟ್ರೇನಿ' ನಿಂದ ೧೨೦ ಪ್ರತಿನಿಧಿಗಳೊಡನೆ ಅಮರಾವತಿಗೆ ಬರಲು, ಸ್ಟೇಶನ್ನಿನಲ್ಲಿ ಪ್ರಮುಖ ಜನರು ವೈಭವದಿಂದ ಸ್ವಾಗತಮಾಡಿದರು. ಸ್ವಾಗತಾಧ್ಯಕ್ಷರಾದ ಶ್ರೀ. ನಾಯುಡೂರವರು, ತಾವೆಲ್ಲ ಬ್ರಾಹ್ಮಣರ ಸಂಪರ್ಕವಿಲ್ಲದ ಹಾಗೆ ಸ್ವತಂತ್ರರೀತಿಯಿಂದಲೇ ತಮ್ಮ ಜಾತಿಯ ಉದ್ಧಾರಮಾಡಿಕೊಳ್ಳಬೇಕಾಗಿ ಹೇಳಿದರು. ಬ್ರಾಹ್ಮಣೇತರ ಚಳವಳವು ಬ್ರಾಹ್ಮಣ ದ್ವೇಷಿಯಾದ ಚಳವಳವು ಸರ್ವಥಾ ಅಲ್ಲವೆಂದೂ, ತಮ್ಮ ಉನ್ನತಿಗಾಗಿ ಪ್ರಯತ್ನಿಸಲು ಇದು ಸ್ಥಾಪಿತವಾಗಿದೆಯೆಂದೂ, ಅಧ್ಯಕ್ಷರು ಹೇಳಿದರು. ಈ ಕಾಂಗ್ರೆಸ್ಸಿನಲ್ಲಿ ಈ ಸಲ ಮುಸಲ್ಮಾನರೂ, ಕ್ರಭೂ ಜನರೂ ಸಹ ಭಾಗತೆಗೆದುಕೊಂಡದ್ದು ಇದರ ೧ ನೇ ವೈಶಿಷ್ಟ್ಯವು. ಬ್ರಾಹ್ಮಣೇತರ ಸಾಮಾಜಿಕ ಪರಿಷತ್ತು, ಬ್ರಾಹ್ಮಣೇತರ ಮಹಿಳಾ ಪರಿಷತ್ತುಗಳು ಸಹ ನೆರೆದಿದ್ದು ೨ ನೇ ವೈಶಿಷ್ಟ್ಯವು. ರಾಷ್ಟ್ರೀಯ ಕಾಂಗ್ರೆಸ್ಸಿನ ಸಮಯದಲ್ಲಿ ಅನೇಕ ಪರಿಷತ್ತು ಕೂಡುವದರಿಂದ ಅದರ ಮಾಹಾತ್ಮ್ಯೆಯು ಹೆಚ್ಚಾಗಿದೆ ಆದ್ದರಿಂದ ತಾವೂ ಅದರ ಅನುಕರಣಮಾಡಿ, ಅನೇಕ ಪರಿಷತ್ತುಗಳನ್ನು ಕೂಡಿಸಿ, ಬ್ರಾಹ್ಮಣೇತರ ಕಾಂಗ್ರೆಸಿಗೆ ಸಹ ಚನ್ನಾಗಿ ಮಹತ್ವವನ್ನು ಕೊಡಬೇಕೆಂದು ಯೋಚಿಸಿದ್ದು ೩ ನೇ ವೈಶಿಷ್ಟ್ಯವು. ಸಾಮಾಜಿಕ ಪರಿಷತ್ತಿಗೆ ಕೊಲ್ಹಾಪೂರದ ಮಹಾರಾಜರು ಅಧ್ಯಕ್ಷರು. ಮಹಿಳಾ ಪರಿಷತ್ತಿಗೆ ಆರ್. ಜಿ. ಪ್ರಧಾನರ ಪತ್ನಿಯವರು ಅಧ್ಯಕ್ಷರು. ಶ್ರೀಯುತ ಆರ್. ಜಿ ಪ್ರಧಾನರೂ, ಶರಾಫ ಉದ್ದಿಸರೂ ಖಾನಬಹದ್ದೂರ ಅಬ್ದುಲರಹಿಮಾನರೂ ಇವರಲ್ಲಿ ಭಾಗ ತೆಗೆದು ಕೊಂಡಿದ್ದರು.

ರಾಷ್ಟ್ರೀಯವಾರದ ಸುದ್ದಿಗಳು

ಬ್ರಿಟೀಶ್ ಪಾರ್ಲಮೆಂಟಿನ ಸದಸ್ಯರಾದ ರೂಥರ ಫೋರ್ಡರವರು ರಾಷ್ಟ್ರೀಯ ಸಭೆಗೆ ಬಂದಿದ್ದರು. ಇವರು ಗಾಂಧೀ ಟೊಪ್ಪಿಗೆಯನ್ನೇ ಧರಿಸುತ್ತಲಿದ್ದರು.

ಮಹಾತ್ಮಾಗಾಂಧಿಯವರ ಫ್ರಾನ್ಸದೇಶದ ಹೊಸ ಶಿಷ್ಯಳಾದ ಕುಮಾರಿ ಸ್ಲೆಡಳು ಶುದ್ಧವಾಗಿಯೂ ಖಾದಿಯ ಝುಗೆಯನ್ನು ಧರಿಸಿದ್ದಳು.

ಅಮೇರಿಕೆಯಿಂದ ಬಂದ ಹೋಮ್ಸರವರು ವೃತ್ತ-ಪತ್ರಿಕಾ ವ್ಯವಸಾಯದವರು. ಇವರು ಇಲ್ಲಿಯ ಸಂಗತಿಗಳನ್ನೆಲ್ಲ ಅಭ್ಯಾಸಿಸಲು ಬಂದಿದ್ದಾರೆ.

ಲಾಲಾ ಲಜಪತರಾಯರು ೨೪ ನೇ ತಾ॥ ದಿನ ರಾಷ್ಟ್ರೀಯ ಧ್ವಜಾರೋಪಣದ ಕಾರ್ಯವನ್ನು ಸಾಂಗಮಾಡಿದರು.

ಕರ್ನಾಟಕದ ಡಾ. ಹರ್ಡೀಕರರು ಕೈಯಲ್ಲಿ ಬಾಬೂಕನ್ನು ಹಿಡಿದು ಸ್ವಯಂಸೇವಕರೊಂದಿಗೆ ಟಿಳಕನಗರದಲ್ಲಿ ಯಾವಾಗಲೂ ರಾಷ್ಟ್ರೀಯ ಸಭೆಯ ಸೇವೆ ಮಾಡುತ್ತ ಕರ್ನಾಟಕದ ಕೀರ್ತಿಯನ್ನು ಹೆಚ್ಚಿಸುತ್ತಲಿರುವರು

ಸ್ವಯಂಸೇವಕರ ಪರಿಷತ್ತು ೨೫ ನೇ ತಾ॥ ಕೂಡಿತು.

ಸಂಗೀತ ಸಮ್ಮೇಲನದ ದ್ವಿತೀಯ ಅಧಿವೇಶನವು ೨೮ ನೇ ತಾ॥ ದಿನ ಆಯಿತು.

ಅಖಿಲಭಾರತೀಯ ಕವಿಗಳ ಪ್ರಥಮ ಸಮ್ಮೇಲನವು ತಾ॥ ೨೬ ನೇ ದಿನ ಸಂಧ್ಯಾಕಾಲದ ೭ ಗಂಟೆಗೆ ಕೇಳಕರ ಮೈದಾನದಲ್ಲಿ ಸೇರಿದ್ದಿತು. ಜಗನ್ನಾಥ ಪ್ರಸಾದರು ಅಧ್ಯಕ್ಷರಾಗಿದ್ದರು.

ಕಾಂಗ್ರೆಸ ಪ್ರತಿನಿಧಿಗಳ ಒಟ್ಟು ಸಂಖ್ಯೆ ೩೧೬೨. ಕರ್ನಾಟಕದ ಪ್ರತಿನಿಧಿಗಳು, ೮೭.

ಸವಿನಯ ಕಾಯದೇ ಭಂಗವನ್ನು ಬೇಗನೇ ಕಾಂಗ್ರೆಸ್ಸಿನವರು ಪ್ರಾರಂಭಿಸಬೇಕೆಂದು ವಿಷಯ ನಿಯಾಮಕ ಮಂಡಲದಲ್ಲಿ ಬಂದ ಸೂಚನೆಯ ಮೇಲೆ ಮತವನ್ನು ಎಣಿಸಲು ಪ್ರಾರಂಭಿಸಿದಾಗ, ಮಹಾತ್ಮಾ ಗಾಂಧೀಯವರು ವಿರುದ್ಧ ಮತವನ್ನು ಕೊಡಲಿಕ್ಕೆ ಎಲ್ಲರಗಿಂತಲೂ ಮೊದಲು ಕೈಯನ್ನೆತ್ತಿದರು. ಕೂಡಲೇ ಎಲ್ಲರೂ ಖೊಳ್ಳನೇ ನಗಲು ಮಹಾತ್ಮರೂ ನಗಹತ್ತಿದರು. ಲಾಲಾ ಲಜಪತರಾಯ ಮೊದಲಾದ ಮುಖಂಡರು ಕಾಯದೇಭಂಗದ ಮಾತು ಸಧ್ಯದಲ್ಲಿ ಬೇಡವೆಂಬುದಾಗಿಯೇ ಮತ ಕೊಟ್ಟರು.

ಪಂಡಿತ ಮೋತೀಲಾಲನೇಹರೂರವರ ಮುಖ್ಯ ಠರಾವು ಫುಲಸ್ಕೇಪಿನ ಮುದ್ರಿತವಾದ ಎರಡು ಪುಟಗಳಷ್ಟು ದೊಡ್ಡದಾಗಿದ್ದಿತು! ಈ ಉದ್ದನ್ನ ಠರಾವನ್ನು ಸಂಪೂರ್ಣವಾಗಿ ಓದೋದುತ್ತಲೇ ಜನರು ಬೇಸತ್ತರು! ಒಟ್ಟಿಗೆ ಈ ಠರಾವು ೬ ತಾಸುಗಳ ವರೆಗೆ ಚರ್ಚಿಸಲ್ಪಟ್ಟಿತು

ಕಾಂಗ್ರೆಸದ ಕೆಲಸವೆಲ್ಲ ಹಿಂದೀ ಉರ್ದೂ ಭಾಷೆಗಳ ಹೊರತಾಗಿ ಉಳಿದ ಯಾವ ಭಾಷೆಯಲ್ಲಿಯೂ ಇರಕೂಡದೆಂಬ ಸೂಚನೆಯು ಬಂದ ಕೂಡಲೇ, ಮದ್ರಾಸದ ಪ್ರತಿನಿಧಿಗಳಿಂದ ವಿರೋಧವು ಹೆಚ್ಚಾಯಿತು. ತಮಗೆ ಹಿಂದೀ ತಿಳಿಯುವದಿಲ್ಲ, ಇಂಗ್ಲೀಷಿಗೆ ಕಾಂಗ್ರೆಸ್ಸದ ಅಪ್ಪಣೆಯಿಲ್ಲವಾದ್ದರಿಂದ ತಾವು ಹೇಳತಕ್ಕದ್ದನ್ನು ತಮ್ಮ ಮಾತೃಭಾಷೆಯಲ್ಲಿಯೇ ಹೇಳುವೆನೆಂದು ಶ್ರೀ. ರಾಮಭದ್ರ ಉದ್ಯಾವರವರು ತಮಿಳಿನಲ್ಲಿ ಮಾತನಾಡಹತ್ತಿ ಕೊಂಚ ಮೌಜುಮಾಡಿದರು. ಆ ಮೇಲೆ ಇಂಗ್ಲೀಷಿನಿಂದ ಮಾತನಾಡಲು ಅಪ್ಪಣೆ ದೊರೆಯಿತು. ಕಡೆಗೆ ಶಕ್ಯವಿದ್ದ ಮಟ್ಟಿಗೆ ಹಿಂದೀಯಲ್ಲಿ ನಡೆಯಬೇಕಾಗಿ ನಿರ್ಣಯವಾಯಿತು.

ಕಾನಪೂರಕ್ಕೆ ಮಹಾತ್ಮರೂ, ಸರೋಜಿನಿದೇವಿಯವರೂ ೨೪ ನೇ ತಾ॥ ದಿನ ಸಾಯಂಕಾಲದಲ್ಲಿ ಬಂದು ತಲ್ಪಿದರು. ಸಾವಿರಾರು ಜನರು ಅವರ ಸ್ವಾಗತಕ್ಕಾಗಿ ಸ್ಟೇಶನ್ನಿಗೆ ಹೋಗಿದ್ದರು.

ರೇಲವೇ ಬೋರ್ಡಿನ ಸುದ್ದಿ

ಚನಬಸಪ್ಪಾ ಮುರಿಗೆಪ್ಪಾ ಹಾಲಪ್ಪನವರ ಸಂಪಾದಕ ಬಸವರಾಜ ಹಾವೇರಿ=೨೦೯; ಸಂಗಪ್ಪಾ ಚಂದಪ್ಪಾ ದೇಸಾಯಿ, ಸಾಸನೂರ ಪೋಸ್ಟ ತಾಳಿಕೋಟಿ=೩೬; ವೆಂಕಟಪ್ಪಾ ಬುಕ್ಕ ಪಬ್ಲಿಶರ ತರೀಕೆರೆ ನಗರ್ತಪೇಟೆ ಬೆಂಗಳೂರಸಿಟಿ=೧೦೧; ಎಚ್. ಎಸ್. ವಾಕ Co ಎಚ್ ಆರ್. ವಿ. ಶಾಸ್ತ್ರೀ ಶಿವಮೊಗ್ಗ=೮೮; ನಾಗಪ್ಪಾ ಬ್ಯಾಳಿ ಬಾಗಲಕೋಟೆ=೩೦ ಒಟ್ಟು=೪೬೪

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ್ಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೮೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲವಾಡ ದವಾಖಾನೆ ವಾಯು, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೯೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೨೫ } **ಬಿ. ಎನ್. ಆರಾಧ್ಯ**
ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE
IN
LIFE ASSURANCE
GO TO
THE ORIENTAL
IN AGE SIZE AND STRENGTH
THE
GREATEST INDIAN
LIFE ASSURANCE COMPANY
Apply for full particulars to-
N. K. Kulkarni- Agent Bagalkot

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ
ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ
ರಚಿತವಾದ ಸಚಿತ್ರ ಸಂಗೀತ ನಾಟಕಗಳು
ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ
ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ.
ಶಿಕ್ಷಣಸಂಭ್ರಮ ಬೆಲೆ ೧ ರೂ.

ಅಂಚೆವೆಚ್ಚಬೇರೆ

ವಿಳಾಸ:— ನಾರಾಯಣರಾವ, ಕೃಷ್ಣರಾವ, ಹುಯಿಲಗೋಳ ಬಿ. ಎ. ಎಲ್. ಎಲ್. ಬಿ. ಪೋ. ತಾ|| ಗದಗ

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ,
ಎಮ್. ಎಲ್ ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಈ ಮಾಸಪತ್ರಿಕೆಯು 'ಹೆಲ್ತ' ಎಂಬ ಇಂಗ್ಲಿಷ ಮಾಸಪತ್ರಿಕೆಯ ಕನ್ನಡ ಪ್ರತಿಯಾಗಿದೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ಮೊಬಲಗು ವರ್ಷಕ್ಕೆ ೧-೮-೦ ಬಿಡಿಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ- '**ಆರೋಗ್ಯಚಂದ್ರಿಕೆ**'
೩೨೩, ತಂಬುಶೆಟ್ಟಿಬೀದಿ, ಮದ್ರಾಸ

ಕಿರ್ಲೋಸ್ಕರವಾರ್ತೆ

ಸಂಪಾದಕ ಹಾಗೂ ಪ್ರಕಾಶಕ-ಶ್ರೀ. ಲಕ್ಮೈ. ಬಾಗಲವಾಙ್ಮಯವಿಶಾರದ

ಇದೊಂದು ತಿಳಿಗನ್ನಡ ಮಾಸಪತ್ರಿಕೆಯು. ಇದರಲ್ಲಿ ಕರ್ನಾಟಕ- ತರುಣರ ಉನ್ನತಿಯಾಗುವದಕ್ಕೆ ಅವಶ್ಯವಾದ ಲೇಖಗಳು ಪ್ರಕಟವಾಗುತ್ತವೆ ಇದನ್ನು ನಿಯಮಿತವಾಗಿ ಓದುವದರಿಂದ ತರುಣರ ಆತ್ಮ ವಿಶ್ವಾಸವು ಜಾಗೃತಿಗೊಳ್ಳುವದು.

ವಾರ್ಷಿಕಚಂದಾ ೧| ರೂ. ಮಾದರಿ ಸಂಚಿಕೆ ಫುಕ್ಕಟ.
ಇಂದೇ ಕಾಗದವನ್ನು ಬರೆದು ತರಿಸಿಕೊಳ್ಳಿರಿ.

ಕಿರ್ಲೋಸ್ಕರವಾರ್ತೆ } **ಕಿರ್ಲೋಸ್ಕರವಾಡಿ**
ಜಿಲ್ಹಾ ಸಾತಾರೆ

ಗ್ರಾಮಸ್ಥರ ಮತ್ತು ವಕೀಲರ
ನಮೂನೆಗಳು

ನಮ್ಮ ಮುದ್ರಾಮಂದಿರದಲ್ಲಿ! ಗ್ರಾಮಸ್ಥರ ನಮೂನೆನ ಬರ ೧; ೧೯; ಮತ್ತು ೧೭ ದೊರೆಯುತ್ತವೆ. ಬೇರೆ ನಮೂನೆಗಳು ಬೇಕಾದಲ್ಲಿ ಮುದ್ರಿಸಿ ಕೊಡುವೆವು

ವಕೀಲರಿಗೆ ಬೇಕಾಗುವ ಬೇರೆ ಬೇರೆ ನಮೂನೆಗಳು ಮಾರಲಿಕ್ಕೆ ದೊರೆಯುತ್ತವೆ

ಮುದ್ರಣ, ರೂಲಿಂಗ, ಬಾಯಿಂಡಿಂಗ ಕೆಲಸಗಳು ನಮ್ಮಲ್ಲಿ ದಕ್ಷತೆಯಿಂದ ಮಾಡಲ್ಪಡುವವು.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಮಾರತಕ್ಕದ್ದಿದೆ.

ಸುಪರ್ ರಾಯಲ್ ಆಕಾರದ ಹ್ಯಾಂಡ ಪ್ರೆಸ್ ಮತ್ತು ಪ್ರೂಫ ಪ್ರೆಸ್ಸಗಳನ್ನು ಮಾರಾತಕ್ಕವರಿದ್ದೇವೆ. ಇವು ಒಳ್ಳೇ ಸ್ಥಿತಿಯಲ್ಲಿದ್ದು ಚನ್ನಾಗಿ ಕೆಲಸ ಕೊಡುತ್ತವೆ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಈ ಪತ್ರಿಕೆಯು ಮಂಗಳವೇಢೆ ರಾಜೆ-ರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. . ೧೯೪೭ ವಾ. ಚಂದಾ ೧—೪-೦ ಮಾತ್ರ

ಸ್ವಧರ್ಮ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಪುಷ್ಯ ಬಹುಳ ೯ ಶಕೆ ೧೮೪೭. ತಾ. ೮-೧-೧೯೨೬. | ಸಂಚಿಕೆ ೩೯

ಸಂಪಾದಕರ ಭೂಮಿ.

(*)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ!
ಚಿನ್ನದಾದರು ಚೆನ್ನ ಮೇಣಬತ್ತಿಯ ನೊಂದು।
ಚಿನ್ಮಯಾಕಾಶದಲ್ಲಿ॥

ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ।
ಗಂಧವಹವೆಂದು ತಿಳಿಯ॥

—ಅಂಬಿಕಾತನಯ ದತ್ತ

ಕಾಂಗ್ರೆಸ್ಸದ ಸಂಗತಿಗಳೆನ್ನೆಲ್ಲ ಸರ್ವರೂ ಈಗ್ಗೆ ತಿಳಿದುಕೊಂಡಿರುವರು. ಸರೋಜಿನಿ ದೇವಿಯವರೆಂದರೆ ಭರತ ಖಂಡದಲ್ಲಿ ಮನ್ನಣೆ ಹೊಂದಿದ ಕವಯಿತ್ರಿಯರು! ಹಿಂದೀ ಸ್ತ್ರೀಯರಲ್ಲಿ ಅಧ್ಯಕ್ಷ ಪದವಿಯನ್ನು ಪಡೆದವರೆಂದರೆ ಇವರೇ ಮೊದಲನೇಯವರು. ಈ ದೃಷ್ಟಿಯಿಂದಲೇ ನಾವು ಅಧ್ಯಕ್ಷರ ಭಾಷಣದ ಪ್ರಶಂಸೆಯನ್ನು ಮಾಡಬೇಕೇ ವಿನಃ ಅದರಲ್ಲಿ ಮಹತ್ತರವಾದ ರಾಜಕೀಯ ಕೌಶಲ್ಯವಾಗಲೀ ಹೊಸವಿಚಾರವಾಗಲೀ ಆವುದೂ ಇಲ್ಲ. ಕಾಂಗ್ರೆಸ್ಸದ ಕಾರ್ಯವಂತೂ ಉದ್ಬುದ್ಧ ಠರಾವುಗಳಲ್ಲಿ ಫಲಕಾರಿಯಾಗಿದೆ. ಪ್ರತಿವರ್ಷದ ಸಾಂಪ್ರದಾಯದಂತೆ ಮುಖಂಡರ ಸ್ಫೂರ್ತಿದಾಯಕ ಭಾಷಣಗಳಾಗಿವೆ! ದೊಡ್ಡ ದೊಡ್ಡ ಅಕ್ಷರಗಳಿಂದ ವೃತ್ತಪತ್ರಿಕೆಗಳಲ್ಲೆಲ್ಲ, ಪದ್ಧತಿಯಂತೆ, ಮಹಾಸಭೆಯು ಗೌರವವಾಗಿದೆ! "ಕಳೆದ ವರ್ಷ ಹಾಗಾಗಿದ್ದಿತು, ಈ ವರ್ಷ ಹೀಗಾಗಿದೆ! ಕಾಂಗ್ರೆಸ್ಸದ ಕಾರ್ಯವು ಆಶಾಜನಕವಾಗಿದೆ" ಎಂಬದಾಗಿ ರೂಢಿಗನುಸರಿಸಿದ ಲೇಖಗಳೂ ಪ್ರಕಟವಾಗಿವೆ. ಆದರೆ ಮುಂದೇನು? ಪ್ರತಿಯೊಂದು ಜಿಲ್ಲೆಯಲ್ಲಿಯೂ, ತಾಲೂಕಿನಲ್ಲಿಯೂ, ಒಬ್ಬನಾದರೂ ಮುಖಂಡನು, ಕಾಂಗ್ರೆಸ್ಸದ ಹೊರತಾಗಿ, ಉಳಿದ ಕೆಲಸವನ್ನು ಮಾಡದೇ, ಅದಕ್ಕೋಸ ತನ್ನ ಸರ್ವಸ್ವವನ್ನು ವೆಚ್ಚಮಾಡದೇ, ಕಾಂಗ್ರೆಸ್ಸವು ಇಂತಹ ಜನರ ಹೊಟ್ಟೆಗಾಗಿ ಹಣವನ್ನು ಕಾದಿಡದೇ, ಹೋದರೆ, ರಾಜಕೀಯ ಪ್ರಗತಿಯು ಈಗಿನಂತೆ ಕುಂಠಿತವಾಗದೇ ಇರದು.

ರಾಷ್ಟ್ರೀಯವಾರವು ಸಮಾಪ್ತವಾದಂತಾಯಿತು. ಈ ವಾರವೆಂದರೆ ಸಭೆಗಳ ಸುಗ್ಗಿಯ ವಾರವು. ಕಾಂಗ್ರೆಸ್ಸದ ಸ್ಥಳದಲ್ಲಿಯೂ ಬೇರೆಸ್ಥಳದಲ್ಲಿಯೂ ಸೇರಿದ ಸಮ್ಮೇಲನಗಳ ಸಾಧ್ಯಂತವಾದ ಸಂಗತಿಗಳನ್ನೆಲ್ಲ ಓದಿದರೂ, ರಾಷ್ಟ್ರದ ಪ್ರಗತಿಯು ಚನ್ನವು ಕಾಣಲೊಲ್ಲದು. ರಾಜಕೀಯ ಕ್ಷೇತ್ರದಲ್ಲಿ ಪಂಗಡಗಳು ಹೆಚ್ಚಾಗಿವೆ. ಅಂತೆಯೇ ಕಾನಪೂರದಲ್ಲಿ ಬೇರೆ ಸಭೆ; ಕಲಕತ್ತೆಯಲ್ಲೊಂದು ಬೇರೆ; ಅಮರಾವತಿಯಲ್ಲಿಯೂ ಮತ್ತೊಂದು ಸಭೆ. ಈ ಪಂಗಡಗಳಲ್ಲಿಯೂ ಒಳ ಪಂಗಡಗಳು! ಮೇಲೆ ವೈಯುಕ್ತಿಕ ಮತಭೇದವು. ಈ ಮತಭೇದ ರೂಪಿಯಾದ ಒಳ್ಜಗಳಗಳಿಂದ ಜನರೆಲ್ಲ ಬೇಸತ್ತಿರುವರು. ಕಾಂಗ್ರೆಸ, ಸಮ್ಮೇಲನ, ಸಭೆಗಳಿಂದ ಇವೆಲ್ಲ ಮಾಯವಾಗಬಹುದೇನೆಂದು ಕೇಳಿಕೊಳ್ಳುವಷ್ಟಿಲ್ಲ. ಮತಭೇದದ ಕತೆಯೇ ಎಲ್ಲೆಲ್ಲಿಯೂ ಹೆಚ್ಚಾಗುತ್ತಿರುವದು. ಅಖಂಡರಾಷ್ಟ್ರದ ಕಾಂಗ್ರೆಸ್ಸಿನಿಂದ ಮೊದಲು ಮಾಡಿಕೊಂಡು, ಸ್ಥಾನಿಕ ಮುನಸಿಪಾಲಟಿ ಲೋಕಲ್ ಬೋರ್ಡುಗಳ ಸಭೆಗಳ ವರೆಗೂ, ಮತಭೇದ, ಒಣ ಜಗಳಾಟ, ಬಹಳವಾದರೆ ಪಿಷ್ಟೆಪಿಂಡಿದ ಜೊಳ್ಳು ಠರಾವುಗಳು!! ಆಯಿತು. ಹಿಂದುಸ್ಥಾನದ ಪ್ರಗತಿಯೆಂದರೆ ಠರಾವುಗಳ ಹುರಿದುಂಬಿಸುವ ಶಬ್ದಗಳಲ್ಲಿ ಮಾತ್ರ! ಕಾರ್ಯಾಭಾವದ ಆಲಾಪವೇ ಎಲ್ಲೆಲ್ಲಿಯೂ ಕೇಳ ಬರುವಂತಹ ಸಮಯದಲ್ಲಿ, ಮತ್ತೆ ಮತ್ತೆ ಹೊಸ ಸಭೆಗಳೂ ಸಂಸ್ಥೆಗಳೂ ಉದ್ಭವವಾಗುವವು. 'ಆಲ್ ಇಂಡಿಯಾ' 'ಅಖಿಲ ಭಾರತ' ಶಬ್ದಗಳಿಗೆ ಅರ್ಥವೇ ಇಲ್ಲದಂತಾಗಿದೆ. 'ಆಲ್ ಇಂಡಿಯಾ ಲೋಕಲ್ ಬೋರ್ಡ ಕಾನ್‌ಫರನ್ಸ' 'ಆಲ್ ಇಂಡಿಯಾ ಲಾಯಬ್ರರಿ ಕಾನ್‌ಫರನ್ಸ' 'ಆಲ್ ಇಂಡಿಯಾ ಮ್ಯುಜಿಕ್ ಕಾನ್‌ಫರನ್ಸ'!! ವರ್ಷಕ್ಕೊಂದುಸಲ ನಾಲ್ಕಾರು ಜನರು ಸೇರುವದು ಪ್ರತಿನಿಧಿಗಳೆಂದು ಹೆಸರನ್ನಿಡುವದು, 'ಆಲ್ ಇಂಡಿಯಾ' ಎಂದು ವೃತ್ತಪತ್ರಿಕೆಗಳಲ್ಲಿ ತಂತಿ ಬಡೆಯಲು ೪-೬ ರೂಪಾಯಿಗಳನ್ನು ವೆಚ್ಚ ಮಾಡುವದು! ಆಯಿತು! ಇಲ್ಲಿಗೆ ಅಖಿಲ ಭರತಖಂಡದ ಪರಿಷತ್ತುಗಳ ಕಾರ್ಯವೆಲ್ಲವೂ ಸಫಲವಾದಂತಾಯಿತು. ರಾಷ್ಟ್ರೀಯ ಕಾಂಗ್ರೆಸ್ಸಿನಂತಹ ಬಲಿತ ಮಹಾ ಸಂಸ್ಥೆಗೆ ಸಹ ಸರಿಯಾದ ದಾರಿಯ ಸುಳುವು ದೊರೆಯಲೊಲ್ಲದೆಂದು ರಾಷ್ಟ್ರವೆಲ್ಲ ವ್ಯಸನಪಡುತ್ತಲಿದೆ. ಇಂತಹ ಸಮಯದಲ್ಲಿ ಅಸಂಖ್ಯವಾದ ಚಿಕ್ಕ ಚಿಕ್ಕ ಸಭೆಗಳು ನಾಯಕರಿಲ್ಲದೇ ಹೊಯ್ದಾಡುವದರಲ್ಲಿ ಕಾಲಹರಣಮಾಡುವದೇಕೋ ತಿಳಿಯದು. ಪ್ರತಿಯೊಂದು ಸಂಸ್ಥೆಯು, ಕನಿಷ್ಟಪಕ್ಷದಲ್ಲಿ ಆ ಆ ವಿಷಯದಲ್ಲಿ ಒಬ್ಬಿಬ್ಬ ನಿಷ್ಣಾತರಾದ ಕಾರ್ಯವಾಹಕರನ್ನು (ಅವರ ಹೊಟ್ಟೆಯ ಚಿಂತನೆಯನ್ನು ದೂರಮಾಡುವಷ್ಟು ಸಾಮರ್ಥ್ಯ ಪಡೆದುಕೊಂಡು) ನೇಮಿಸಿಕೊಳ್ಳದೆ, ಒಣ ಸಭೆಗಳಲ್ಲಿ ಕಾಲಹರಣಮಾಡುವದು ನಿರರ್ಥಕವಾದುದು.

ಕೊಡಗಿನಲ್ಲಿ ನವೀನ ಜಾಗೃತಿಯಂತೂ, ಕಂಡು ಬರುತ್ತಲಿದೆ. 'ಕೊಡಗು' 'ಲೋಕಪಾವನ'ಗಳೆಂಬ ಎರಡು ವಾರಪತ್ರಿಕೆ

ಗಳೂ 'ಲೋಕರಹಸ್ಯ'ವೆಂಬ ಒಂದು ಮಾಸಿಕವೂ ಕನ್ನಡದಲ್ಲಿ ಹೊರಡುತ್ತಲಿವೆ. ಈ ಪತ್ರಿಕೆಗಳಿಂದ ಅಲ್ಲಿಯ ಜನತೆಯಲ್ಲಿ ಹೊಸ ಚೈತನ್ಯವು ಉಂಟಾದುದು ಸಂತೋಷವು. ಆದರೆ ಕೊಡಗರು ಕೊಡಗೇತರರು ಎಂಬ ಭೇದ ಭಾವವು ದಿನೇ ದಿನೇ ಬೆಳೆಯುತ್ತಿದ್ದನ್ನು ಕಂಡು ನಮಗೆ ವ್ಯಸನ ವೆನಿಸುತ್ತದೆ. ಈ ಪತ್ರಿಕೆಗಳಿಂದ ಮೂಲತಃ ಈ ಭೇದವಿರದಿದ್ದರೂ, ಈ ಭಾವನೆಗೆ ಪತ್ರಿಕೆಗಳಲ್ಲಿ ಅವಕಾಶ ಇದೆ, ಇದು ವೃತ್ತಪತ್ರಿಕೆಗಳಿಂದ ಉಂಟಾಗುವದೊಂದು ಹಾನಿ ಇರಲಿ. ಕನ್ನಡ ವಾಙ್ಮಯದಲ್ಲಿಯೂ ಕೊಡಗು ಮುಂದಡಿಯನ್ನಿಡ ಹತ್ತಿದೆ 'ವಿದ್ಯಾರ್ಥಿ' ಎಂಬದೊಂದು ದ್ವೈಮಾಸಿಕ ಪತ್ರಿಕೆಯೂ ಫೆಬ್ರುವರಿಯಿಂದ ಪ್ರಾರಂಭವಾಗುವದು. ಇನ್ನು ಮುಂದಿನ ಹೆಜ್ಜೆಯೆಂದರೆ ಗ್ರಂಥಪ್ರಸಾರ. ಈ ಕಾರ್ಯದ ಕಡೆಗೂ ಕೊಡಗಿನ ಕನ್ನಡಿಗರು ಲಕ್ಷ್ಯ ಪೂರೈಸುವರಾಗಿ ಕೋರುತ್ತೇವೆ. ಬೆಳಗಾವಿ ಬಳ್ಳಾರಿ ಜಿಲ್ಲೆಗಳು, ಕೊಡಗಿನಕಿಂತಲೂ ಮುಂದಾದ ಜಿಲ್ಲೆಗಳಾಗಿದ್ದರೂ, ಕೊಡಗಿನಕಿಂತ ೮-೧೦ ಪಟ್ಟು ದೊಡ್ಡವಾಗಿದ್ದರೂ, ಅಲ್ಲಿ ಒಂದಾದರೂ ಕನ್ನಡ ವಾರಪತ್ರಿಕೆಯಿಲ್ಲದ್ದು ಶೋಚನೀಯವಾಗಿದೆ, ಮತ್ತು ಅಲ್ಲಿಯ ಕನ್ನಡಿಗರು ಕನ್ನಡಕ್ಕೆ ತೋರಿಸುತ್ತಿರುವ ಔದಾಸೀನ್ಯದ ದ್ಯೋತಕವಾಗಿದೆ.

ವಿಜಾಪೂರಜಿಲ್ಲೆಯ ಬ್ರಾಹ್ಮಣರ ಉನ್ನತಿಗಾಗಿ, ಸಾಗಿನ ರವಿವಾರ (ತಾ| ೧೭ ನೇ ಜಾನೇವರಿ) ದಿನ, ಈ ಜಿಲ್ಲೆಯ ಪ್ರಮುಖರೆಲ್ಲ ಸೇರಿ, ಒಂದು ಸಂಘವನ್ನು ಸ್ಥಾಪಿಸಲಿಕ್ಕೆ ಪರಿದಿದರು. ಈ ಕಾರ್ಯದಲ್ಲಿ ಶ್ರೀಯುತರಾದ ಕಂಭಾವಿ ರಾಘವೇಂದ್ರರಾಯರು ಮುಖಂಡತ್ವವನ್ನು ವಹಿಸಿದ್ದರಿಂದ, ಈ ಸಂಸ್ಥೆಗೆ ಮೂರ್ತ ಸ್ವರೂಪವು ಸ್ವಲ್ಪಾವಧಿಯಲ್ಲಿಯೇ ಬರುವದನ್ನು ಪವದಲ್ಲಿ ಸಂಶಯವಿಲ್ಲ. ಇರಲಿ. ಬ್ರಾಹ್ಮಣರಲ್ಲಿ ಮುಖ್ಯವಾಗಿರತಕ್ಕದು ಬ್ರಾಹ್ಮಣ್ಯವು. ಬ್ರಾಹ್ಮಣರಲ್ಲಿ ಬ್ರಾಹ್ಮಣ್ಯವೇ ಹೋಗಿದ್ದರಿಂದ ಈ ಸಮಾಜವು ಇಷ್ಟೊಂದು ಕೀಳ್ಸ್ಥಿತಿಗೆ ಬಂದಿದೆ. ನಮ್ಮ ಸಮಾಜದ ಸಲುವಾಗಿಯೇ ಬೇಕಾದಷ್ಟು ಸಂಸ್ಥೆಗಳಾಗಲಿ; ಬೇಕಾದಷ್ಟು ಆರ್ಥಿಕ ಸಹಾಯವು ದೊರೆಯಲಿ; ಹೆಚ್ಚಾಗಿ ಬ್ಯಾಂಕುಗಳಾಗಲಿ, ಮಿಲ್ಲುಗಳಾಗಲಿ; ಏನು ಬೇಕಾದ್ದಾಗಲಿ. "ನಾನು ಬ್ರಾಹ್ಮಣನು; ಬ್ರಾಹ್ಮಣ ಕುಲಕ್ಕೆ ಒಪ್ಪುವ ಉಚ್ಚತನದ ಭಾವನೆಯು ನನ್ನಲ್ಲಿರತಕ್ಕದ್ದು; ಬ್ರಾಹ್ಮಣ್ಯವನ್ನು ನಾನು ಕಾಯ್ದುಕೊಳ್ಳಲೇ ಬೇಕು." ಎಂಬ ಭಾವನೆಯು ಪ್ರತಿಯೊಬ್ಬ ಬ್ರಾಹ್ಮಣನಲ್ಲಿ ಬರುವಂತಹ ಚಳವಳವು ಉದ್ಭವವಾಗದಿದ್ದರೆ, ಬ್ರಾಹ್ಮಣರ ಉನ್ನತಿಯ ಆಶೆಯೇ ಇಲ್ಲ. ಯಾವ ವ್ಯವಸಾಯದ ಬ್ರಾಹ್ಮಣನನ್ನು ಉದಾಹರಣೆಗಾಗಿ ತೆಗೆದುಕೊಂಡರೂ,| ನೀತಿಭ್ರಷ್ಟತೆ, ಅಹಂಭಾವನೆ, ದುರ್ಘಟ ಇವೇ ಮೊದಲಾದ ದುರ್ಗುಣಗಳು ಹೆಚ್ಚು ಜನರಲ್ಲಿ ಕಂಡು ಬರುತ್ತಲಿವೆ. ವ್ಯಾಪಾರದಲ್ಲಿದ್ದ ಬ್ರಾಹ್ಮಣನಿಗೆ ಸುಳ್ಳು ಹೇಳುವದು, ಎರಡನೇಯವರನ್ನು ರಕ್ಕಿಸುವದು ಸಹಜವಾಗಿದೆ; ಸರಕಾರೀ ನೌಕರಿಯಲ್ಲಿದ್ದವನಿಗೆ, ತಿರುಪತಿ ಮಂತ್ರಾಲಯಗಳಿಗೆ ಹೋಗಿ, ಹಣ ಸುರಿಯುವದೂ ಅತ್ತಊರಲ್ಲಿ ಮುಸುಕಿನಲ್ಲಿ ಹಣ ಎತ್ತುವದೂ ಸಹಜವಾಗಿದೆ; ಶ್ರಾದ್ಧ ಕರ್ಮಗಳಲ್ಲಿಯೂ ನನಗೆ ಇಂತಿಷ್ಟೇ ಹಣವನ್ನು ತೆತ್ತಬೇಕು, ದಕ್ಷಿಣೆಗಾಗಿ ಇಲ್ಲವೆ ಹೊಲದ ಉತ್ಪನ್ನಕ್ಕಾಗಿಯೇ ಗುಡಿಗಳಲ್ಲಿ, ದೇವರ ತಲೆಯ ಮೇಲಿಷ್ಟು ನಾನು ನೀರನ್ನು ಹೊಯ್ಯತಕ್ಕವನೆಂದು ಹೇಳುವದು ವೈದಿಕರಲ್ಲಿ ಸಹಜವಾಗಿದೆ; ಕ್ಷೇತ್ರಸ್ಥರಾದ ವೈದಿಕರ ಅಧಃಪಾತದ ಬಗ್ಗೆ ಯಂತೂ ಬರೆಯುವದಕ್ಕೆ ನಾಚಿಕೆ ಬರುತ್ತದೆ; ವಕೀಲಿ ವ್ಯವಸಾಯದ ಸದ್ಗುಣಗಳನ್ನೆಲ್ಲರೂ ಬಲ್ಲರು; ಡಾಕ್ಟರುಗಳಿಗೆ ರೋಗಿಗಳ ವೈಸ್ವಾವಸ್ಥೆಯಾಗಲಿ, ಬಡತನದ ಭವಣೆಯಾಗಲಿ, ಲಕ್ಷ್ಯದಲ್ಲಿ ಬರುವದಿಲ್ಲ; ಆದರೆ ಮೊದಲು ಫೀ ಹಣವು ಲಕ್ಷ್ಯಕ್ಕೆ ಬರುತ್ತದೆ; ಈ ಸ್ಥಿತಿಯು ಬ್ರಾಹ್ಮಣ ಸಮಾಜದ ಬಹುಜನರಲ್ಲಿ ಕಂಡು ಬಂದೇ ಬರುತ್ತಿದೆ. ಉಳಿದ ಸಮಾಜದವರಲ್ಲಿ ಸಹ ಈ ಸ್ಥಿತಿಯಿದ್ದರೂ, ನಾವು ಅದನ್ನು ಲೆಕ್ಕಿಸಕೂಡದು, ಅನ್ಯರು ಅಧಃಪತನದ ದಾರಿಯನ್ನು ಹಿಡಿದಿದ್ದರೆ ಕಾಲ ಮಹಾತ್ಮೆಯೆಂದು ಹತಾಶರಾಗಿ, ಉಚ್ಚಕುಲದವರೆಂದೆನಿಸಿಕೊಳ್ಳುವ ಬ್ರಾಹ್ಮಣರು ಸಹ ಆ ಅಧಃಪಾತದ ಮಾರ್ಗಕ್ಕೆ ಹತ್ತುವದೇಕೆ? ಬ್ರಾಹ್ಮಣರಿಗೆ ಸರಕಾರೀ ನೌಕರಿಯು ದೊರೆಯುವದಿಲ್ಲ; ಬ್ರಾಹ್ಮಣರ ಆರ್ಥಿಕ ಸ್ಥಿತಿಯು ಬಹು ಕನಿಕರವಾಗಿದೆ. ಎಂಬದಿಷ್ಟೇ ನಮ್ಮ ಸಮಾಜದ ಕೊರತೆಯಲ್ಲ. ತಾತ್ವಿಕ ವಿಚಾರದ ಬದಲು ತಾರ್ಕಿಕ ವಿಚಾರವೇ ಬ್ರಾಹ್ಮಣರಲ್ಲಿ ಸೇರಿದೆ; ಆಧ್ಯಾತ್ಮಿಕ, ಧಾರ್ಮಿಕ, ಸಾತ್ವಿಕ ಮೊದಲಾದ ಶಬ್ದಗಳು ಬ್ರಾಹ್ಮರಿಗೆ ಕರ್ಣಕಠೋರವಾಗಿವೆ. ಈ ಉಚ್ಚ ಭಾವನೆಗಳ ಕೊರತೆಯನ್ನು ಮೊದಲು ಬ್ರಾಹ್ಮಣ ಸಂಘಗಳು ದೂರಾಗುವಂತೆ ಪ್ರಯತ್ನಿಸಬೇಕು. ನಮ್ಮ ಸಮಾಜವನ್ನು ಆಧ್ಯಾತ್ಮಿಕ|ಶ್ರದ್ಧೆಯಿಂದ ಪುನಃನಿರ್ಮಾಣ ಮಾಡಬೇಕು. ಅಂದರೆ ಮಾತ್ರ ಉನ್ನತಿಯ ಮಾರ್ಗವನ್ನು ಹಿಡಿದಂತಾಗುವದು. ಬೆಂಗಳೂರ, ಧಾರವಾಡಗಳಲ್ಲಿ ಬ್ರಾಹ್ಮಣ ಸಂಘಗಳಾದವು. ದೊಡ್ಡ ಸಭೆಗಳಾದವು. 'ಬ್ರಾಹ್ಮಣ' ವೆಂಬ ವಾರಪತ್ರಿಕೆಯೂ ಹೊರಟಿತು. ಆದರೆ ಇವುಗಳಿಂದ ಆ ಆ ಸ್ಥಳಗಳ ಬ್ರಾಹ್ಮಣರ ಉನ್ನತಿಯು ಕಿಂಚಿತ್ತಾದರೂ ಆಗಿಲ್ಲ. ಅದೇ ಪ್ರಕಾರವಾಗಿ ವಿಜಾಪೂರದಲ್ಲೂ ಆಗದಂತೆ ಚಾಲಕರು ಎಚ್ಚರಾಗಿರಬೇಕು. ಧಾರವಾಡ ಬೆಂಗಳೂರಗಳಲ್ಲಿಯ ಸಂಘಗಳು ಯಾವ ಉದ್ದೇಶದಿಂದ ಹೊರಟವು; ಈಗ್ಗೆ ಅವುಗಳ ಅವಸ್ಥೆಯೇನಾಗಿದೆ; ಹೀಗಾದ ಕಾರಣವೇನೆಂಬುದನ್ನು ಕಂಡು ಹಿಡಿದು, ಈ ಜಿಲ್ಲೆಯವರು ಹೊಸದೊಂದು ಮಾರ್ಗವನ್ನು ಹಿಡಿಯಬೇಕು.

ಸ್ವೀಕಾರ

(೧) ಕರ್ನಾಟಕಬಂಧು ಇದೊಂದು ಬಳ್ಳಾರಿಯಲ್ಲಿ ಹೊರಡುವ ಮಾಸಪತ್ರಿಕೆ ವಾ. ವರ್ಗಣಿ ಅಂಚೆ ವೆಚ್ಚಸಹ ೧-೪-೦, ಮಾತ್ರ ಬಳ್ಳಾರಿಯಲ್ಲಿ ಕನ್ನಡ ಪತ್ರವೊಂದು ಹೊರಟದ್ದು ಬಹು ಚೆನ್ನವು. ಇದೇ ಬಗೆಯಾಗಿ ಅಲ್ಲಿ ಕನ್ನಡಕ್ಕೆ ಆದರ ದೊರೆತು, ವಾರಪತ್ರಿಕೆಯೊಂದು ಬೇಗನೆ ಉದಯವಾದರೆ ಒಳಿತಾಗುವದು. ಕರ್ನಾಟಕಬಂಧುವಿನಲ್ಲಿ ತತ್ವಜ್ಞಾನ, ಕಥೆ, ಕವಿತೆಗಳಿಗೆ ಆಸ್ಪದವಿರುವಂತೆ, ವಾಙ್ಮಯವೃದ್ಧಿ, ಸಂಪಾದಕರ ಸ್ಫುಟ, ಕರ್ನಾಟಕದ ಐತಿಹಾಸಿಕ ಲೇಖಗಳು, ಇವೇ ಮೊದಲಾದವುಗಳಿಗೂ ಎಡೆಕೊಡಬೇಕಾಗಿ ಚಾಲಕರಲ್ಲಿ ನಮ್ಮ ಸೂಚನೆಯಿದೆ.

(೨) ರಿಪೋರ್ಟ. ಇಲಕಲ್ಲಿನ ಶ್ರೀ ಮಹಾಂತೇಶ ವಾಚನಾಲಯದ ೬ ನೇ ವರ್ಷದ್ದು. ಈ ವರ್ಷದಲ್ಲಿ ೨೧೬೪ ರೂ. ಗಳು ಜಮಾ ಆಗಿವೆ. ೨೩೦೫ ರೂ. ಠೇವು ಇಡಲ್ಪಟ್ಟಿವೆ. ಈ ಸಂಸ್ಥೆಯ ಆರ್ಥಿಕ ಸ್ಥಿತಿಯು ಇಷ್ಟು ಚನ್ನಾಗಿದ್ದುದನ್ನು ನೋಡಿ ಆನಂದವಾಗುತ್ತದೆ. ಆದರೆ ಗ್ರಂಥಗಳಿಗಾಗಿ ೯-೬-೦ ಮತ್ತು ಮಾಸಿಕ, ವಾರಪತ್ರಿಕೆಗಳಿಗಾಗಿ (ಕನ್ನಡ, ಮರಾಟೀ, ಇಂಗ್ಲೀಷ ಎಲ್ಲವೂ ಕೂಡಿ) ೫೮-೪-೦ ವೆಚ್ಚ ಮಾಡಿದ್ದು, ಸಂಸ್ಥೆಯ ಸ್ಥಿತಿಯ ಮೇಲಿನಿಂದ ವಿಚಾರಿಸಿದರೆ ತೀರ ಸ್ವಲ್ಪ. ವಾಚನಾಲಯದ ಉದ್ದೇಶವು ಜ್ಞಾನಪ್ರಸಾರವು; ಬಡ್ಡಿಯಲ್ಲ ಆದುದರಿಂದ ಗ್ರಂಥಗಳನ್ನೂ ಪತ್ರಿಕೆಗಳನ್ನೂ ಹೆಚ್ಚಾಗಿ ತರಿಸಬೇಕಾಗಿ ಸಂಸ್ಥೆಯ ಚಾಲಕರಿಗೆ ಸೂಚಿಸುತ್ತೇವೆ

(೩) ವರದಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಿಂದ ಬಂದದ್ದು. ಒಂದು ತಿಂಗಳ ಮೇಲೆ ಗದಗಿನಲ್ಲಿ ನೆರೆದ ಸಭೆಯ ಸುದ್ದಿಯು ನಮ್ಮ ಕೈಸೇರಿದೆ. ವರದಿಯು ಕನ್ನಡಿನಲ್ಲಿದ್ದದ್ದನ್ನು ನೋಡಿ 'ಕನ್ನಡಿಗ'ನಿಗೆ ಸಂತೋಷ. ಆದರೆ ಸಹಿಗಳೆಲ್ಲವೂ ಇಂಗ್ಲೀಷಿನಲ್ಲೇಕೋ ತಿಳಿಯದು. ಲೆಕ್ಕ ಪತ್ರಗಳೆಲ್ಲ ಚೊಕ್ಕಟವಾಗಿವೆ. ಇದನ್ನು ಉಳಿದ ಸಾರ್ವಜನಿಕ ಸಂಸ್ಥೆಗಳು ಕಲಿಯುವಂತಿದೆ.

ಬ್ರಾಹ್ಮಣರಲ್ಲಿ ವಿಜ್ಞಾಪನೆಯು

ಶ್ರೀಯುತರುಗಳಾದ ಕೆಂಭಾವಿ ರಾಘವೇಂದ್ರರಾವ, ದೇಸಾಯಿ ಪಾಂಡುರಂಗರಾವ ಮೊದಲಾದ ಈ ಜಿಲ್ಲೆಯ ೨೮ ಜನ ಪ್ರಮುಖರ ಸಹಿಯಿಂದ ಒಂದು ಪ್ರಕಟನೆಯು ಹೊರಟಿದೆ. ಅದರ ಸಾರಾಂಶವು ಹೀಗಿದೆಃ—

ಅಖಿಲ ಭಾರತ ವರ್ಷದಲ್ಲಿಯ ನಮ್ಮ ದೇಶಬಾಂಧವರಲ್ಲಿನೇಕ ಸಣ್ಣ ದೊಡ್ಡ ಜ್ಞಾತಿಯವರು ತಮ್ಮ ತಮ್ಮ ಜ್ಞಾತಿ ಬಾಂಧವರ ಸರ್ವಾಂಗ ಸುಧಾರಣೆಯನ್ನು ಮಾಡುವ ಸಲುವಾಗಿ ಸುಸಂಘಟಿತವಾದ ಪ್ರಯತ್ನ ಮಾಡಲಾರಂಭಿಸಿ ಬಹಳ ದಿವಸಗಳಾಗಿವೆ. ಎಲ್ಲ ಬಗೆಯಿಂದ ರಾಷ್ಟ್ರದ ಉನ್ನತಿಯಾಗಲಿಕ್ಕೆ ಇಂಥ ಪ್ರಯತ್ನವು ಯೋಗ್ಯಮಾರ್ಗದಿಂದಲೂ, ಯೋಗ್ಯಮರ್ಯಾದೆಯಲ್ಲಿಯೂ, ಆಗುವದು ಅತ್ಯಂತ ಇಷ್ಟವಾದದ್ದಿರುತ್ತದೆ. ಇತರ ಜ್ಞಾತಿಗಳನ್ನು ಯಾವರೀತಿಯಿಂದಲೂ ವಿರೋಧಿಸದೆ, ಅಪ್ರತಿಕಾರ ಬುದ್ಧಿಯಿಂದ ಸ್ವಹಿತ ಸಂರಕ್ಷಣೆಯನ್ನೂ, ಸಂವರ್ಧನೆಯನ್ನೂ, ಮಾಡಿಕೊಳ್ಳುವದು ಈಗಿನ ದೇಶಕಾಲ ಪರಿಸ್ಥಿತಿಯಲ್ಲಿ ಅತ್ಯಂತ ಅವಶ್ಯವಿರುವದೆಂದು ಕಂಡು ಬಂದದ್ದರಿಂದ ನಮ್ಮ ಜ್ಞಾತಿಯ ಪ್ರಮುಖ ಜನರ ಲಕ್ಷ್ಯವು ಈ ಸಂಗತಿಯ ಕಡೆಗೆ ಎಳೆಯಲ್ಪಡುತ್ತಿದೆ. ಬ್ರಾಹ್ಮಣ ವರ್ಗದ ಎಲ್ಲ ತರದ ಉನ್ನತಿಯಾಗಬೇಕೆಂಬ ಮತ್ತು ತದಂತರ್ಭೂತ ಉಪವಿಭಾಗಗಳ ಏಕೀಕರಣಮಾಡಿ ಬ್ರಾಹ್ಮಣ ವರ್ಗವು ಸುಸಂಘಟಿತ, ಸಬಲ ಮತ್ತು ಸ್ವಾವಲಂಬಿಯಾಗಬೇಕೆಂಬ ಉದ್ದೇಶದಿಂದ 'ವಿಜಾಪೂರ ಜಿಲ್ಲಾ ಬ್ರಾಹ್ಮಣ ಸಂಘ'ವನ್ನು ಸ್ಥಾಪಿಸಿ ಮಾಡುವದು ಅತ್ಯಂತ ಅವಶ್ಯವಾಗಿದೆ.

ಬ್ರಾಹ್ಮಣ ಕುಲೋತ್ಪನ್ನ, ಉಪನೀತ ವೇದ ಪ್ರಾಮಾಣ್ಯವನ್ನು ಒಪ್ಪುವ ೧೮ ವರ್ಷಕ್ಕೆ ಮಿಕ್ಕಿದ ಬ್ರಾಹ್ಮಣ ಜ್ಞಾತಿಯ ಸ್ತ್ರೀ ಪುರುಷರು, ವರ್ಷಕ್ಕೆ ೧ ರೂ. ಚಂದಾ ಕೊಟ್ಟು, ಈ ಸಭೆಯ ಸಭಾಸದರಾಗಬಹುದು.

ಉದ್ದೇಶಕ್ಕನುಸರಿಸಿ ಸಂಘದ ಕೆಲಸದ ಪ್ರಗತಿಯಾಗುವದಕ್ಕೂ, ಜಿಲ್ಲೆಯಲ್ಲೆಲ್ಲ ಕಾರ್ಯದ ಪ್ರಸಾರವಾಗುವದಕ್ಕೂ ಸಂಘದ ಸಭಾಸದರ ಸಂಖ್ಯೆಯನ್ನು ಬೆಳಿಸುವದಕ್ಕೂ, ಬ್ರಾಹ್ಮಣರ ಖಾನೇಸುಮಾರಿಯನ್ನು ಮಾಡುವದಕ್ಕೂ, ಅಲ್ಲಲ್ಲಿ ಬ್ರಾಹ್ಮಣರ ಸಂಘವನ್ನು ಸ್ಥಾಪಿಸುವದಕ್ಕೂ, ಧಾರ್ಮಿಕ ಶಿಕ್ಷಣದ ಅನುಕೂಲತೆಯನ್ನು ಮಾಡುವದಕ್ಕೂ, ಪಾಠಶಾಲೆಗಳನ್ನು ಸ್ಥಾಪಿಸುವದಕ್ಕೂ, ಬ್ರಾಹ್ಮಣ ವಿದ್ಯಾರ್ಥಿಗಳಿಗೆ ಸಹಾಯ ಮಾಡುವದಕ್ಕೂ, ಪರಸ್ಪರ ಸಹಕಾರಿ ತತ್ವಕ್ಕನುಸರಿಸಿ ಸಭಾಸದರಿಗೆ ಆರ್ಥಿಕ ಸಹಾಯವನ್ನು ಮಾಡುವದಕ್ಕೂ, ಔದ್ಯೋಗಿಕ, ಇತರ ಧಂಗೆ ಶಿಕ್ಷಣದ ಅನುಕೂಲತೆಯನ್ನು ಮಾಡುವದಕ್ಕೂ, ಗೋರಕ್ಷಣೆ ಹಾಗೂ ಒಕ್ಕಲತನಕ್ಕೆ ಸಹಾಯ ಮಾಡುವದಕ್ಕೂ, ಈ ಎಲ್ಲ ಕೆಲಸಗಳಿಗೆ ತಗಲುವ ಹಣವನ್ನು ಕೂಡಿಸುವದಕ್ಕೂ, ಹಾಗೂ ಇತರ ಉಪಯುಕ್ತ ಸಂಗತಿಗಳ ಸಲುವಾಗಿ ಉಪಮಂಡಲಗಳನ್ನು ಸ್ಥಾಪಿಸುವದಕ್ಕೂ, ಉಪನಿಯಮಗಳನ್ನು ಏರ್ಪಡಿಸುವದಕ್ಕೂ, ಕಾರ್ಯಕಾರೀ ಮಂಡಲಕ್ಕೆ ಅಧಿಕಾರ ಕೊಟ್ಟಿದೆ.

ವಿಜಾಪೂರ ಜಿಲ್ಲೆಯಲ್ಲಿಯ ಬ್ರಾಹ್ಮಣರೆಲ್ಲ ಈ ಸಂಘದ ಸಭಾಸದರಾಗಿ ಬ್ರಾಹ್ಮಣವರ್ಗದ ಏಳ್ಗೆಗೆ ಸಹಾಯ ಮಾಡಬೇಕೆಂದು ಸವಿನಯ ಪ್ರಾರ್ಥಿಸುತ್ತೇವೆ.

ಮೇಲೆ ಬರೆದ ಉದ್ದೇಶವನ್ನು ನೆರವೇರಿಸುವದರ ಸಲುವಾಗಿ ವಿಜಾಪೂರ ಜಿಲ್ಲಾ ಬ್ರಾಹ್ಮಣ ಸಂಘದ ಪ್ರಾಥಮಿಕ ಸಭೆಯು ಇದೇ ಮಾಘ ಶುದ್ಧ ಚತುರ್ಥಿ ಶಕೆ ೧೮೪೭ ರವಿವಾರ (ತಾ|| ೧೭ ಜಾನೇವಾರಿ ೧೯೨೬.) ದಿವಸ ವಿಜಾಪುರದಲ್ಲಿ ಪ್ರೋ. ಛತ್ರೆ ಇವರ ಶ್ರೀ ನರಸಿಂಹ ಥಿಯೇಟರದಲ್ಲಿ ಮುಂಜಾನೆ ಮತ್ತು ಸಂಜೆಯ ಕಡೆಗೆ ಕೂಡಿಸಬೇಕೆಂದು ಗೊತ್ತಾಗಿದೆ. ಈ ಪ್ರಾಥಮಿಕ ಸಭೆಯಲ್ಲಿ ಈ ವಿಷಯವನ್ನು ಪೂರ್ಣ ಚರ್ಚಿಸಿ, ಬ್ರಾಹ್ಮಣ ಸಂಘವನ್ನು ಸ್ಥಾಪಿಸಬೇಕಾಗಿದೆ. ಈ ಬ್ರಾಹ್ಮಣ ಉದ್ದೇಶದ ವಿಷಯವಾಗಿ ಯಾರಿಗಾದರೂ ಸೂಚನೆಗಳನ್ನು ಮಾಡತಕ್ಕದ್ದಿದ್ದರೆ ಸಭೆಯು ಕೂಡುವದಕ್ಕಿಂತ ಮೊದಲು ರಾ. ಬ. ರಾಘವೇಂದ್ರರಾವ ಕೆಂಭಾವಿ ವಕೀಲ ವಿಜಾಪೂರ ಇವರ ಕಡೆಗೆ ಸೂಚನೆಗಳನ್ನು ಕಳುಹಿಸಿ ಕೊಡಬೇಕು.

ಈ ಕಾರ್ಯವು ಬಳ್ಳೇ ಮಹತ್ವವಾದದ್ದರಿಂದ ಎಲ್ಲ ಬ್ರಾಹ್ಮಣ ವರ್ಗದವರೂ ತಪ್ಪದೇ ಸಭೆಗೆ ಬರಬೇಕೆಂದು ವಿನಯಪೂರ್ವಕವಾಗಿ ಬಿನ್ನವಿಸುತ್ತೇವೆ.

ನನ್ನ ಗಂಡ

ಅಹಾ! ನನ್ನ ಗಂಡ! ನನ್ನ ಅವಸ್ಥೆ! ಏನೆಂತ ಹೇಳಲಿ? ಎದೆ ಎದೆ ಒಡಕೊಳ್ಳುವ ಕಾಲ ಬಂತಲ್ಲಾ! ನನ್ನ ದುರವಸ್ಥೆ- ನನ್ನ ಗಂಡ ಈಗ ಆಸ್ಪತ್ರೆಯಲ್ಲಿ ಮಲಗಿರುತ್ತಾರೆ. ಆದರೂ ಸಾಯುವ ರೋಗವಲ್ಲ. ಗುಣವಾಗುವದೆಂತ ವೈದ್ಯರ ಅಭಿಪ್ರಾಯ.

ಅಹಾ! ನನ್ನ ಗಂಡ ಉಚ್ಚ ಶಿಕ್ಷಣ ಪಡೆದಿರುವರು. ದೊಡ್ಡ ಮನೆತನದವರು. ಕುಡಕರೂ ಅಲ್ಲ. ಮಂದುಗಾರರೂ ಅಲ್ಲ. ಆದರೆ ನನ್ನ ದುರ್ದಶೆ! ವರ್ತಮಾನ ಪತ್ರಿಕೆಗಳಲ್ಲಿ ತೋರುವ 'ಬೇಕು' ಎಂಬ ಒಂದು ಪ್ರಕಟಣೆಯನ್ನಾದರೂ ನನ್ನ ಗಂಡ ನೋಡದೆ ಬಿಡಲಿಲ್ಲ. ಈ ಪ್ರಕಟನೆಗಳ ಕೆಲಸದ ಬಗ್ಗೆ ಅವರು ಮಾಡದೆ ಬಿಟ್ಟ ಪ್ರಯತ್ನ ಒಂದೂ ಇಲ್ಲ. ಪ್ರಕಟನೆಯನ್ನು ನೋಡಿ ದಾಕ್ಷಿಣ ಕಾಗದ ಪತ್ರಗಳನ್ನು ನಡೆಯಿಸಿದರು. ಮುದ್ದಾಂ ಹೋಗಿ ಮಾತನಾಡಿದರು. ದೊಡ್ಡದೊಡ್ಡವರ ಶಿಫಾರಸು ಪತ್ರಗಳನ್ನು ಒದಗಿಸಿಕೊಂಡರು. ನೂರಾರು ಪೈಲುಗಳನ್ನು ನಡೆದರು. ಕೆಲಸ ಒಂದೂ ದೊರಕಲಿಲ್ಲ. ನನ್ನ ಪುಣ್ಯ!

ಅಹಾ! ನನ್ನ ಗಂಡ ಯಾವ ಕೆಲಸವನ್ನು ಮಾಡಲಿಕ್ಕೂ ಅಂಜುವವರಲ್ಲ. ಆ ಕೆಲಸ, ಈ ಕೆಲಸ; ದೊಡ್ಡದು ಸಣ್ಣದು ಎಂಬ ಭೇದಾಭೇದವಿಲ್ಲದೆ ಯಾವುದನ್ನೂ ಮಾಡಲಿಕ್ಕೆ ಮನಸ್ಸಿದ್ದವರು. ಕೆಲವು ವೇಳೆ ಮೈಲಿಗೆ ವಸ್ತ್ರ ಧರಿಸಿಕೊಂಡು ಬಂದರಕ್ಕೂ ಹೋದರು. ಮತ್ತೊಂದು ಸಮಯ ಪೋಷಾಕಿನ ಉಡುಪು ಉಟ್ಟುಕೊಂಡು, ಕುತ್ತಿಗೆಗೆ ಟೈ-ಕಲ್ಲರ್ ಕಟ್ಟಿಕೊಂಡು ದೊಡ್ಡ ಆಫೀಸುಗಳಿಗೂ ಹೋದರು. ಮಾಡುವದೇನು? ನನ್ನ ಅದೃಷ್ಟ! ಯಾವ ಕೆಲಸವೂ ದೊರಕದು.

ಅನಂತರ? ನನ್ನ ಗಂಡ! ತನ್ನ ಒಳ್ಳೊಳ್ಳೇ ಉಡುಪುಗಳನ್ನು ಮಾರಿದರು. ಶಿಕ್ಷಣಕಾಲ ಕಾಲೇಜುಗಳಲ್ಲಿ ದೊರಕಿದ ಒಳ್ಳೊಳ್ಳೇ ಚಿನ್ನ ಬೆಳ್ಳೀ ಪದಕಗಳನ್ನು ಅಡವಿಟ್ಟರು. ನನ್ನ ಚಿನ್ನ-ಕಂಠೀಸರ- ಕೈಬಳೆ, ನಂತರ ಸೀರೆಗಳು- ಮನೇ ಸಾಮಾನು ಒಂದೊಂದೇ ಹೋಯಿತು. ಗಂಜಿಗೆ ತತ್ವಾರ. ಆದರೂ ಇಂದು ಮೆಣಸಿಲ್ಲ, ನಾಳೆಗೆ ಉಪ್ಪಿಲ್ಲ. ಎಂದು ಹೇಳಿದವಳು ನಾನಲ್ಲ. ನಮ್ಮ ಈ ದಾರಿದ್ರ್ಯಾವಸ್ಥೆಯು ನೆರೆಮನೆಯ ಹೆಂಗಸರಿಗಾರಿಗೂ ಗೊತ್ತಿಲ್ಲ. ಗಂಜಿ ಇಲ್ಲದೆ ಸತ್ತರೂ ನಮ್ಮ ಗುಟ್ಟು ನೆರೆಮನೆಯವರಿಗೆ ಗೊತ್ತಾಗಬಾರದೆಂಬುದೇ ನನ್ನ ಇಚ್ಛೆ.

ಅಹಾ! ಈಗ ನನಗೆ ಕಮ್ಮಿ; ನನ್ನ ಗಂಡ ಆಸ್ಪತ್ರೆಯಲ್ಲಿ. ನನಗೆ ಸಂಕಟವಾಯಿತಲ್ಲಾ ಎಂಬುದೇ ಅವರ ಸಂಕಟ. ಅವರಿಗೆ ಒಂದು ಸಲ ಗುಣವಾಗಿ ಒಂದು ಕೆಲಸ ಸಿಕ್ಕಲಿ ಎಂಬುದೇ ನನ್ನ ಅನುದಿನದ ಪ್ರಾರ್ಥನೆ. ಇಲ್ಲವಾದರೆ ನನಗೆ ಪರಲೋಕಪ್ರಾಪ್ತಿ.

—ಸತ್ಯಪ್ರಿ

ಕನ್ನಡಿಗರಿಗೆ ವಿಶ್ವವಿದ್ಯಾಲಯ

(ಲೇಖಕ— ಮುಕುಂದರಾವ)

ಕೆಲವು ಪ್ರಶ್ನೆಗಳ ಮೂಲಕ ಕರ್ನಾಟಕದಲ್ಲಿ ವಿಶ್ವವಿದ್ಯಾಲಯದ ಸ್ಥಾಪನೆಯ ವಿಷಯ ನಾವೆಲ್ಲ ಆಲೋಚಿಸುವಂತೆ "ಕನ್ನಡಿಗ"ನು ಮಾಡಿದ್ದಾನೆ. ಪ್ರಶ್ನೆಗಳ ಉದ್ದೇಶವು ನಮ್ಮೆದುರಿಗೆ ಇರುವ ವಿಷಯದ ಸಂಪೂರ್ಣ ರೂಪವನ್ನು ತೋರಿಸುವದೇ ಹೊರತು ಬೇರೇನಲ್ಲ ಎಂಬ ಅಭಿಪ್ರಾಯದಿಂದ "ಕನ್ನಡಿಗ"ನ ಪ್ರಶ್ನೆಗಳನ್ನು ಒಂದೊಂದಾಗಿ ಆಲೋಚಿಸದೆ ನನ್ನ ಮನಸ್ಸಿನಲ್ಲಾದ ಕೆಲವು ಆಲೋಚನೆಗಳನ್ನು ಇಲ್ಲಿ ಬರೆಯ ಬೇಕೆಂದಿದ್ದೇನೆ.

ವಿಶ್ವವಿದ್ಯಾಲಯವು ಒಂದು ಜನಾಂಗದ ಭಾಷೆ, ಸಂಸ್ಕೃತಿಗಳನ್ನು ಮೇಲ್ಮರಗತಿಗೆ ತರಲಿಕ್ಕೆ ಅಗತ್ಯವಾದ ಸಾಧನವಲ್ಲದೆ ಮತ್ತೊಂದಲ್ಲ. ಕನ್ನಡನಾಡಿನ ಸಂಸ್ಕೃತಿಯ ಸೇವೆಯನ್ನು ಮಾಡಿ ಅದರ ಮೂಲಕ ಆರ್ಯ ಸಂಸ್ಕೃತಿಯ ಸೇವೆ ಮಾಡಲಿಕ್ಕೆ ನಮ್ಮಲ್ಲಿ ಉತ್ತಮ ತರದ ಮೂರು ವಿಶ್ವವಿದ್ಯಾಲಯಗಳಾದರೂ ಬೇಕಾದಾವು. ಪ್ರಸ್ತುತಕ್ಕೆ ಅದು ಸಾಧ್ಯವಲ್ಲವಾದ್ದರಿಂದ ಮೈಸೂರಿನ ವಿಶ್ವವಿದ್ಯಾಲಯದ ನರಳಿನಲ್ಲಿ ನಾವೆಲ್ಲ ಸೇರುವದು ಸುಲಭವೆಂದು ಮೊದಲು ತೋರಿದರೂ ಅದರಲ್ಲಿ ಬಹಳ ತೊಡಕುಗಳಿವೆ. ಮೈಸೂರಿನವರೊಡನೆ ಸೇರಬೇಕೆನ್ನುವ "ನಾವು" ಯಾರು? ನಮ್ಮ ಅಂಕೆಯಲ್ಲಿ ಎಷ್ಟು ಕಾಲೇಜುಗಳಿವೆ? ಎಂಬದನ್ನು ವಿಚಾರಿಸುವ. ಧಾರವಾಡದ ಮಹಾ ವಿದ್ಯಾಲಯವನ್ನು ಮೈಸೂರಿನೊಡನೆ ಜೋಡು ಮಾಡಲಿಕ್ಕಾಗದೆಂತೆನ್ನುವ; ಮಂಗಳೂರಿನ ವಿಷಯವೇನು? ಇಲ್ಲಿ ಮೂರು ಕಾಲೇಜುಗಳಿವೆ- ಹುಡುಗರಿಗಾಗಿ ಒಂದನೆ ತರಗತಿಯ ಕಾಲೇಜು ಒಂದು, ಹೆಂಗಸರಿಗಾಗಿ ಒಂದನೇ ತರಗತಿಯ ಕಾಲೇಜು ಒಂದು, ಹುಡುಗರಿಗಾಗಿ ಎರಡನೇ ತರಗತಿಯ ಕಾಲೇಜು ಒಂದು. ಈ ಮೂರರಲ್ಲಿ ಎರಡನೇ ತರಗತಿಯ ವಿದ್ಯಾಲಯವೊಂದು ಮಾತ್ರ ಸರಕಾರದ ಆಡಳಿತೆಯಲ್ಲಿದೆ ಉಳಿದೆರಡು ರೋಮಿಯ ಪಾದ್ರಿಗಳಿಂದ ನಡಸಲ್ಪಡುವಂಥವು, ಅವುಗಳಿಗೆ ಧನಸಹಾಯವು ರೋಮಿಯ ಕ್ರೈಸ್ತ ಸಮಾಜದಿಂದ ಮಾತ್ರ ಸಿಕ್ಕುತ್ತಿದೆ ಸದ್ಯದ ಸ್ಥಿತಿಯಲ್ಲಿ ಹೈಸ್ಕೂಲುಗಳಲ್ಲಿ ಸಹ ಕನ್ನಡದ ಸ್ಥಾನವನ್ನು ಏರಿಸುವುದು ತಮಗೆ ಕಷ್ಟವೆನ್ನುವ ರೋಮೀಯ ಕ್ರೈಸ್ತರು ಇಂಗ್ಲಿಷೇ ಸರ್ವಸ್ವವೆನ್ನುವ ಮದ್ರಾಸು ವಿಶ್ವವಿದ್ಯಾಲಯವನ್ನು ಬಿಟ್ಟು ಕನ್ನಡಕ್ಕೆ ಹೆಚ್ಚಿನ ಗೌರವ ಕೊಡಬೇಕೆನ್ನುವವರೊಂದಿಗ ಸೇರಲಿಕ್ಕಿಲ್ಲ. ಅವರು ಈ ಕೆಲಸವು ತಪ್ಪೆಂದು ನಾವು ಹೇಳಿದ ಮಾತ್ರಕ್ಕೆ ಯಾವ ಫಲವೂ ಇಲ್ಲ. ಈಗಿನ ಸ್ಥಿತಿಯಲ್ಲಿ ಅವರನ್ನು ಕರ್ನಾಟಕ ಪ್ರಿಯರನ್ನಾಗಿ ಮಾಡುವುದು ಅಸಾಧ್ಯ. ಇದೊಂದೇ ತೊಡಕಲ್ಲ. ವಿಶ್ವವಿದ್ಯಾಲಯವು ಪರೀಕ್ಷೆಗಳನ್ನು ಮಾಡುವ ಒಂದು ಸಂಸ್ಥೆಯಾಗಿರದೆ ತನ್ನ ಕೈಕೆಳಗಿರುವ ಕಾಲೇಜುಗಳಲ್ಲಿ ಬೇರೆ ಬೇರೆ ತರದ ವಿದ್ಯಾಂಗಗಳನ್ನು ಪೋಷಿಸುವಂಥಾದ್ದಾಗಿರಬೇಕು. ಮೈಸೂರಿನೊಡನೆ ಮುಂಬಯಿ ಪ್ರಾಂತದ ಮತ್ತು ಮದ್ರಾಸಿನ ಕನ್ನಡಿಗರು ಸೇರಿದರೆ ವಿಶ್ವವಿದ್ಯಾಲಯದ ಕೆಲಸದ ವಿಷಯ ಮನಸ್ತಾಪವು ಬರುವುದರಲ್ಲಿ ಸಂಶಯವಿಲ್ಲ. ಮುಂಬಯಿ, ಮದ್ರಾಸು, ಮೈಸೂರು ಸರಕಾರದವರು ತಮ ತಮಗೆ "ಅನುಕೂಲವಿದ್ದಷ್ಟು" ಎಂದು ಧನಸಹಾಯ ಮಾಡಿದರೆ ಪ್ರಾಂತ್ಯದವರಲ್ಲಿ ಕಲಹಕ್ಕೆ ಕಾರಣವಾಗುವುದು.

ಹೀಗಿರುವಾಗ ಮೈಸೂರಿನ ಹೊರಗಿನ ಕನ್ನಡಿಗರು ಬೇರೊಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸ ಬೇಕಾಗಿದೆ. ಇಂಥ ಕೆಲಸದಲ್ಲಿ ಹಳೆಯದಾದರೂ ಪರೀಕ್ಷೆ ಮಾಡುವ ವಿಶ್ವವಿದ್ಯಾಲಯಗಳನ್ನು ನಾವು ಅನುಕರಿಸದೆ ನಿಜವಾಗಿ ಶೋಧನ, ಸಂಸ್ಕೃತಿಯ ವೃದ್ಧಿ ಇವುಗಳಲ್ಲಿ ಕೈಯಿಕ್ಕುವ ವಿದ್ಯಾಲಯಗಳನ್ನು ಸ್ಥಾಪಿಸಬೇಕು. ಆಲೋಚಿಸಿ ನೋಡಿದರೆ ಯಾವದಾದರೊಂದು ಜಿಲ್ಲೆಯನ್ನು ಒಂದು ವಿಶ್ವವಿದ್ಯಾಲಯದ ಕೈಕೆಳಗೆ ತರುವುದೆಂಬುದು ಸುಳ್ಳು ಮಾತು. ವಿಶ್ವವಿದ್ಯಾಲಯವು ಉಚ್ಚಶಿಕ್ಷಣವನ್ನು ಪ್ರತ್ಯಕ್ಷವಾಗಿ, ಮಧ್ಯ ತರಗತಿಯ ಶಿಕ್ಷಣವನ್ನು ಅಪ್ರತ್ಯಕ್ಷವಾಗಿ ಮಾತ್ರ ಸುಧಾರಿಸುತ್ತದೆ. ಮಧ್ಯ ತರಗತಿಯ ಶಿಕ್ಷಣದಲ್ಲ ಬದಲಾವಣೆಗಳಾಗಬೇಕೆಂದು ಎಲ್ಲರೂ ಒಪ್ಪಿರುತ್ತಾರೆ. ಹೈಸ್ಕೂಲುಗಳಲ್ಲಿ ಮಾತೃಭಾಷೆಗೆ ಮನ್ನಣೆಯ ಪೀಠವು ಸಿಕ್ಕುವ ಸಮಯವು ಹತ್ತಿರವಿದೆ. ಹೀಗಿರುವಾಗ ಉತ್ತಮ ತರದೊಂದು ವಿಶ್ವವಿದ್ಯಾಲಯವಿದ್ದು ಕನ್ನಡದ ಉನ್ನತಿಗೆ ಬೇಕಾದ ಕೆಲಸವನ್ನು ಮಾಡಿದರೆ ತಾನಾಗಿ ಕನ್ನಡವು ಮೇಲಕ್ಕೇರುತ್ತದೆ.

ಈ ಉದ್ದೇಶವನ್ನು ಸಾಧಿಸಬೇಕಾದರೆ ಇಚ್ಛೆಯಿಲ್ಲದವರನ್ನು ಬಲಾತ್ಕಾರದಿಂದ ನಮ್ಮೊಡನೆ ಕಟ್ಟಿಕೊಂಡು ಕೆಲಸವನ್ನು ಹಾಳು ಮಾಡಿಕೊಳ್ಳಬಾರದು. ಅದಕ್ಕಾಗಿ ನನ್ನ ಅಲ್ಪಮತಿಗೆ ತೋರುವದೇನಂದರೆ, ಕನ್ನಡ ವಿಶ್ವವಿದ್ಯಾಲಯದ ಅಡಿಗೆ ಬರಲು ಒಪ್ಪಿಗೆಯಿಲ್ಲದ ಮಂಗಳೂರಿನ ಈಗಿನ ಕಾಲೇಜುಗಳನ್ನು ಬಲಾತ್ಕರಿಸದೆ, ಇಲ್ಲ ಇರುವಂಥ ಅಡ್ಡಿಯಿಲ್ಲದ ಸ್ಥಳದಲ್ಲಿ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು. ಧಾರವಾಡದಲ್ಲಿ ಅನುಕೂಲತೆ ಇದ್ದರೆ ಕಾಶಿಯ "ಹಿಂದೂ ಯುನಿವರ್ಸಿಟಿ"ಯಂತೆ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕು. ಈಗ ಇರುವ ಕಾಲೇಜನ್ನು ವೃದ್ಧಿಗೆ ತಂದು, ಇತಿಹಾಸ, ಕರ್ನಾಟಕ ಸಾಹಿತ್ಯ, ಸಂಸ್ಕೃತ, ಶಿಲ್ಪವೇ ಮೊದಲಾದ ಕಲೆಗಳನ್ನು ಅಭ್ಯಸಮಾಡಲಿಕ್ಕೆ ಮತ್ತು ಅವುಗಳಲ್ಲಿ ಶೋಧವು (Research) ಮಾಡಲಿಕ್ಕಾಗುವಂತೆ ಸಲಕರಣೆಗಳನ್ನು ಕನ್ನಡಿಗರು ಮಾಡಿಕೊಡಬೇಕು. ಮುಂಬಯಿ ಸರಕಾರದಿಂದ ಸಹಾಯವು ಸಿಕ್ಕುವಂತೆ ಕೆಲಸ ಮಾಡಬೇಕು. ಈ ತರದ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರೆ ಮೈಸೂರು ವಿಶ್ವವಿದ್ಯಾಲಯದೊಂದಿಗೆ ಸ್ನೇಹವನ್ನು ಬೆಳೆಸಿ ವಿಜ್ಞಾನದ ಭಾಗಗಳನ್ನು ಇಬ್ಬರು ಹಂಚಿಕೊಂಡು ಒಂದೊಂದು ವಿಶ್ವವಿದ್ಯಾಲಯವು ಕೆಲವು ಭಾಗಗಳ ವೃದ್ಧಿಯಲ್ಲಿ ನಿರತವಾಗಿರಬಹುದು. ಅದೇ ಸಮಯದಲ್ಲಿ ಮಂಗಳೂರಿನ ಕರ್ನಾಟಕಾಭಿಮಾನಿಗಳು ಇನ್ನೊಂದು ಮಹಾ ವಿದ್ಯಾಲಯವನ್ನು ತೆರೆಯುವ ಆಲೋಚನೆಯನ್ನು ಮಾಡಬಹುದು. ಉಚ್ಚಶಿಕ್ಷಣಕ್ಕೆ ಬೇಕಾದ ಸಲಹೆಗಳಿಗೆ ಇಲ್ಲಿನ ಹಿಂದುಗಳು ಬೇರೆಯವರ ಮೇಲೆ ನಂಬಿರದೆ ತಮ್ಮದೊಂದು ಸಂಸ್ಥೆಯನ್ನು ಸ್ಥಾಪಿಸಿದರೆ, ಧಾರವಾಡದಲ್ಲಿ ಆದ ಕೆಲಸವನ್ನು ಕಣ್ಣಾರೆ ಕಂಡು ನಾವೂ ಹಾಗೆಯೇ ಮಾಡಬಹುದು. ಕನ್ನಡವನ್ನು ವಿಶ್ವವಿದ್ಯಾಲಯದ ಅಧಿದೇವತೆಯಾಗಿ ಮಾಡುವದು ಸಾಧ್ಯವೆಂದು ತೋರಿಸಿದಲ್ಲಿ ಈಗಿನ ಕಾಲೇಜುಗಳ ಅಧಿಕಾರಿಗಳು ಸಹ ಅದಕ್ಕೆ ಸಹಿ ಹಾಕುವರು. ಕನ್ನಡದ ಗೌರವವು ವಿಶ್ವವಿದ್ಯಾಲಯದ ಕೈಕೆಳಗಿನ ನೆಲದ ಅಳತೆಯಿಂದ ತೂಕ ಮಾಡುವದು ತಪ್ಪು, ವಿಶ್ವವಿದ್ಯಾಲಯದ ಕೆಲಸದಿಂದಲೇ ಅಳೆಯಬೇಕು.

ಖಾದೀ ಪ್ರಚಾರ

ಕೊಡಗಿನ ಏಳು ಸಾವಿರ ಸೀಮೆಯಲ್ಲೂ ಕಣಿವೆ ಹೋಬಳಿಯಲ್ಲೂ, ಕೈನೂಲು ಮತ್ತು ಕೈಮಗ್ಗದ ಕೈಗಾರಿಕೆಯೂ ಪ್ರಬಲವಾಗಿಯೇ ಇತ್ತು. ಕೊಡಗಿನ ಇತರ ಭಾಗದ ಜನರು ಸ್ವತಃ ಕೈನೂಲು ತಯಾರಿಸಿ ತಮ್ಮ ಬಟ್ಟೆಯನ್ನು ತಾವೇ ನೇಯಿಸುತ್ತಿರಲಿಲ್ಲವಾದರೂ ಶನಿವಾರಸಂತೆ ಗಿಂಟನಷ್ಟೇ ಉಪ್ಪಸಗಳೂ ನೇಕಾರಗಳಿಗೂ ಉಪಯೋಗಿಸುತ್ತಿದ್ದರೆಂಬುದು ಈಗ ಜೀವದಲ್ಲಿ ಹರು

ಯಕ್ಷಗಾನೋಜ್ಜೀವಿನೀ ಪರಿಷತ್ತು.

ಕುಂದಾಪೂರದಲ್ಲಿ ಈ ಪರಿಷತ್ತು ಜಾನೇವಾರಿ ೯ ನೇ ತಾ|| ಸೇರುವದು. ಈ ಕಲೆಯನ್ನು ಉದ್ಧರಿಸಲು ನಮ್ಮ ಮಂಗಳೂರಿನ ಬಂಧುಗಳು ಅವಿಶ್ರಾಂತವಾಗಿ ಶ್ರಮಪಡುತ್ತಿರುವದು ಶ್ಲಾಘ್ಯವು. ಈ ಕಾರ್ಯದಲ್ಲಿ ಅವರಿಗೆ ಜಯ ದೊರೆಯಲಿ! ಅಖಂಡಕರ್ನಾಟಕವೆಲ್ಲ ಈ ಕಾರ್ಯದಲ್ಲಿ ಭಾಗ ತೆಗೆದು ಕೊಳ್ಳಬೇಕೆಂಬ ಅಭಿಲಾಷೆಯು ಬಾಲಕರಲ್ಲಿದೆ. ಆದರೆ ಸಾಕಷ್ಟು ಅವಲಂಬವನ್ನು ಕೊಡದೇ, ಗಡಿಬಿಡಿಯಿಂದ, ಸಭೆಕರೆದರೆ ಅದು ಶಕ್ಯವಾಗುವದು ಹೇಗೆಂಬುದು ಚಾಲಕರಿಗೆ ತಿಳಿಯದಿದ್ದುದು ಆಶ್ಚರ್ಯ. ದ್ವಿತೀಯ ಪರಿಷತ್ತಿನ ಸಮಯಕ್ಕಾದರೂ ಅವಕಾಶವನ್ನು ಕೊಡಬೇಕು; ಎಲ್ಲ ಸ್ಥಳಗಳಿಗೂ ಸಮ್ಮೇಲನದ ಸುದ್ದಿಯು ಸಾರಲ್ಪಡಬೇಕು.

ನೋಟೀಸು.

ಲಿಕ್ವಿಡೇಟರ ಕಚೇರಿ ಬಾಗಲಕೋಟೆ.

ತಾರೀಖು ೪ ಜನವರಿ ೧೯೨೬ ಇಸ್ವಿ

ಯಾವತ್ತು ಜನರಿಗೆ ತಿಳಿಸುವದೇನಂದರೆ—

ಹುನಗುಂದ ತಾಲ್ಲೂಕ ಸಂಗಮ ಗ್ರಾಮದ ಶ್ರೀ ಸಂಗಮೇಶ್ವರ ಶೇತಕಿ ಸಹಕಾರಿ ಸಂಘವು ಮೆ|| ರಜಿಸ್ಟ್ರಾರ ಸಾಹೇಬ ಬಹಾದ್ದೂರ ಸಹಕಾರಿ ಸಂಘಗಳು, ಮುಂಬಯಿ ಇಲಾಖೆಯವರ ಹುಕುಂ ನಂಬರ ೩/೭೫೫— ತಾರೀಖು ೧೪-೧೧-೧೯೨೫ ನ್ವಯಾ ರದ್ದು ಮಾಡಲ್ಪಟ್ಟಿದೆ. ಯಾರಾದರೂ ಸದರಿ ಸಂಗಮ ಸೋಸಾಯಿಟಿಯ ಮೇಲೆ ಲೇವಾದೇವಿ ಮಾಡುವದಿದ್ದಲ್ಲಿ ಕೆಳಗೆ ಸಹಿಮಾಡಿದವರ ಕೂಡ ಮಾಡತಕ್ಕದ್ದು. ಸೊಸಾಯಟಿಯ ಮೇಲೆ ಯಾವದಾದರೂ ಹಕ್ಕು ಇದ್ದವರು ಈ ಪಿಪ್ಪದಿಂದ ಎರಡು ತಿಂಗಳೊಳಗಾಗಿ ಕೆಳಗಿನ ಪತ್ತೇಕ್ಕೆ ತಿಳಿಸಬೇಕು. ಇಲ್ಲವಾದರೆ ಸೊಸಾಯಿಟಿಯು ಲೆಕ್ಕ ಪತ್ರದ ಆಧಾರದಿಂದ ಮುಂದಿನ ಲಿಕ್ವಿಡೇಶನ ಕೆಲಸನಡೆಸಲಾಗುವದು.

ಎಸ್. ಆರ್. ದ್ವಾರಪಾಲಕ
ಪ್ರೋಪಗೆಂಡಾ ಆಫೀಸರ, ಮತ್ತು
ಲಿಕ್ವಿಡೇಟರ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರುಷ್ವ ನಿತ್ಯಂ ಸ್ವದೇಶಸೇವನಂ।

ಪ್ರಿಯ ದೇಶಬಾಂಧವರೇ,

ಇತ್ತ ನೋಡಿರಿ! ಒಮ್ಮೆ ಓದಿರಿ!

ಮಾತೃಭಕ್ತಿಯನ್ನು ಪ್ರಕಾಶಗೊಳಿಸಿರಿ !!

"ಕಾನಡಾ ಧುರೀಣ"

ಈ ಅತ್ಯುತ್ತಮವಾದ ರಾಷ್ಟ್ರೀಯ ವಾರಪತ್ರಿಕೆಯು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಾರ ಹೊಂದುತ್ತಿದೆ. ಇದರಲ್ಲಿ ಸಮಯೋಚಿತವಾಗಿ ಪ್ರಕಟವಾಗುವ ಸ್ವಮತ ಪರಮತಗಳ ಮೇಲಿನ ಸಿದ್ಧಾಂತ, ನವ್ಯ-ಭವ್ಯವಿಷಯಪ್ರತಿಪಾದನೆ, ಸುವಿಚಾರ ರಮಣೀಯವೂ ವಿಚಿತ್ರ ಸ್ಫೂರ್ತಿದಾಯಕವೂ ಆದ ಸಂಪಾದಕರ ಅಪ್ರತಿಮ ಲೇಖಗಳು, ಸುಜ್ಞರ ಕವಿತಾಲಾಪಗಳು, ಮಹಾಪುರುಷರ ವಾಗ್ರಸಾಯನವು, ಪ್ರೋತ್ಸಾಹಕರಿಂದ ದೊರೆಯುವ ದೇಶದೇಶಾಂತರ ವೃತ್ತಾಂತಗಳು ಸಹ ಕನ್ನಡಿಗರೆಲ್ಲರಿಗೂ ಅತ್ಯಂತ ಮನೋಹರವಾಗಿರುವವು. ಸುಪ್ರಸಿದ್ಧ ವಿದ್ವಾಂಸರ ಪ್ರಶಂಸೆಗೆ ಪಾತ್ರವಾದ ಈ ಪತ್ರಿಕೆಯೇ ಕರ್ನಾಟಕದಲ್ಲಿ ಹೆಚ್ಚಿನದೆಂದು ತಜ್ಞರು ತಿಳಿದು ಹೇಳದಿರಲಾರರು ವಾರ್ಷಿಕವಂದಾ ಅಂಚೆ ವೆಚ್ಚ ಸೇರಿ ೩-೧-೦

ವಿಳಾಸ:— ವ್ಯವಸ್ಥಾಪಕ, "ಕಾನಡಾ ಧುರೀಣ"
ಕುಮಟಾ, (ಉತ್ತರ ಕನ್ನಡ)

ಕನ್ನಡ ಸಹಕಾರಿ

ಎಂಬ ನಿಖಿಲಕರ್ನಾಟಕದ ಸರ್ವತೋಮುಖವಾದ

ತಿಳಿಗನ್ನಡ ಪಕ್ಷಪತ್ರಿಕೆ.

ಈ ಪತ್ರಿಕೆಯ ವಂದಾದರವು ವರ್ಷ ಒಂದಕ್ಕೆ ಅಂಚೆವೆಚ್ಚ ಸೇರಿ ಮೂರು ರೂಪಾಯಿ ಆಗಿರುತ್ತದೆ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ೨ ರೂಪಾಯಿ. ಶಾಲೆಯ ಅಥವಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ೧|| ರೂಪಾಯಿ ಮಾತ್ರ. ಬಿಡಿಸಂಚಿಕೆಗಳು ಪ್ರತಿ ಒಂದಕ್ಕೆ ಎರಡು ಆಣೆಯಂತೆ ದೊರೆಯುವವು.

ತ್ವರೆಮಾಡಿರಿ

ಬೆಲಧಡಿ ಸಂಸ್ಥಾನದ

ಶ್ರೀ ಬ್ರಹ್ಮಾನಂದ ಮಹಾರಾಜರು ರಚಿಸಿದ

ಭಜನ ಪದ್ಯಾವಲಿಯು ಮುಂಬಯಿಯಲ್ಲಿ ಉತ್ತಮ ಗ್ಲೇಜ ಕಾಗದ ಮೇಲೆ ಅಂದವಾಗಿ ಗುಚ್ಛಿಕವಾಗಿ ಮುದ್ರಣಕ್ಕೆ ಸಿದ್ಧವಾಗಿದೆ. ಈಗಾಗಲೇ ೫೦೦ ಪ್ರತಿಗಳು ಸೂರಲ್ಪಟ್ಟಿರುವವು. ಇನ್ನು ಸ್ವಲ್ಪೇ ಪ್ರತಿಗಳು ಉಳಿದಿರುವವು. ಕಾರಣ ಬೇಕಾದವರು ತ್ವರೆ ಮಾಡಬೇಕು ಕ್ರಯ ೮ ಆಣೆ ಮಾತ್ರ.

ವಿಳಾಸ:— ಮ್ಯಾನೇಜರ ಗ್ರಾಮಾಧಿಕಾರಿ ಪ್ರಿಂಟಿಂಗ ಪ್ರೆಸ್
ವಿಜಾಪುರ

ಲೋಕರಹಸ್ಯ

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಬಡವರಿಗೆ ಬೇಕಾದ ಹಣಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಶಾಸ್ತ್ರವು. ಪ್ರತಿಯೊಬ್ಬನೂ ತಿಳಿಯಬೇಕಾದ ಲಾಭ ಸಂಗತಿ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ನೂತನ ಪತ್ರಿಕೆಗೆ ವರ್ಷಕ್ಕೆ ವಂದಾ ರೂ. ೩ ಆ ೦ ಮಾದರಿ ಸಂಚಿಕೆಗೆ ೦-೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ. **"ಲೋಕರಹಸ್ಯ" ಆಫೀಸು,**
ವೀರಾಜೇಂದ್ರ ಪೇಟೆ (ಕೊಡಗು)

ಇತಿವೃತ್ತ

ಥಂಡಿ ಇರುವದಿಲ್ಲ ಬೇಸಿಗೆಯು ಪ್ರಾರಂಭವಾಗಿವೆನ್ನಬಹುದು.

ಉತ್ತರಾಧಿಮಠಾಧಿಕರು ಇಲ್ಲಿಗೆ ಬರುವದು ಗೊತ್ತಾಗಿದೆ. ಮಹಾಸಮಾರಾಧನೆಯು ಸಿದ್ಧತೆಯು ಪ್ರಾರಂಭವಾಗಿದೆ. ಇನ್ನೇನು ಉಂಡಿ ಜಿಲೇಬಿಗಳು ಹಾರಾಡುವವು!

ತಾಲೂಕ ಕಾಂಗ್ರೆಸ ಕಮೀಟಿಯ ಸಾಧಾರಣ ಸಭೆಯು ತಾ|| ೧೦ ನೇ ರವಿವಾರ ಸಂಜೆಯ ೬ ಘಂಟೆಗೆ ಕಮೀಟಿಯ ಕಾರ್ಯಾಲಯದಲ್ಲಿ ಜರುಗುವದು. ಹೊಸ ವರ್ಷದ ಅಧಿಕಾರಿಗಳನ್ನು ಆರಿಸುವದೂ, ಕಾನಪೂರ ಕಾಂಗ್ರೆಸ್ಸಿನ ಕಾರ್ಯಕ್ರಮದ ವಿಚಾರವೂ ಚರ್ಚಿಸಲ್ಪಡುವವು.

ವ ಹಳಬರು ಒಪ್ಪುವ ಮಾತಾಗಿದೆ. ಈಗಲಾದರೋ ಶನಿವಾರಸಂತೆ ಪ್ರಾಂತ್ಯದಲ್ಲಿ ಕೈನೂಲಿನ ಕಸಬು ನಿಂತೇ ಹೋಗಿದೆ. ಆದರೆ ಕೈಮಗ್ಗಗಳು ಕೆಲವು ಮಟ್ಟಿಗಾದರೂ ನಡಿಯುತ್ತಲಿವೆ. ಆದರೆ ಅವೆಲ್ಲಾ ಕಾರ್ಖಾನೆ ನೂಲುಗಳನ್ನೇ ಉಪಯೋಗಿಸುತ್ತಲಿವೆ. ಕಣಿವೆ ಹೋಬಳಿಯ ಶಿರಂಗಾಲ, ಹೆಬ್ಬಾಲೆ ಗ್ರಾಮಗಳಲ್ಲಿ ಕೆಲವು ಮನೆಗಳಲ್ಲಿ ಈಗಲೂ ತಮ್ಮ ಮನೆಗೆ ಬೇಕಾದ ಬಟ್ಟೆಗಳನ್ನು ಕೈನೂಲು ಮಾಡಿ ತಾವೇ ಬಟ್ಟೆಯಾಗಿ ನೇಯಿಸಿದುಕೊಳ್ಳುತ್ತಾರೆ ಕೊಡಗಿನ ಎಲ್ಲಾ ಭಾಗಗಳಲ್ಲಿ ಕೈನೂಲು ಮಾಡಿಸುವ ಕಸಬನ್ನು ಏರ್ಪಡಿಸಲು ಸಾಧ್ಯವಿಲ್ಲದಿದ್ದರೂ ಪುರಾತನ ಕಾಲದಿಂದಲೂ ಈ ಕಸಬನ್ನು ಅನುಸರಿಸಿ ಬಂದು ಈಗ ಸ್ವಲ್ಪ ಮಟ್ಟಿಗೆ ಮಾತ್ರ ಅನುಸರಿಸುತ್ತಿರುವ ಅಥವಾ ಬಿಟ್ಟು ಬಿಟ್ಟಿರುವ ಊರುಗಳಲ್ಲಿ ಪುನಃ ಸ್ಥಾಪಿಸುವದು ಬಹಳ ಸುಲಭವಾಗಿದೆ. ಖಾದಿಯನ್ನು ಮಾರಾಟ ಮಾಡುತ್ತಿರುವ ಮಹನೀಯರು ಸಹ ತಮಿಳು ನಾಡಿನಿಂದ ಖಾದಿಯನ್ನು ತರಿಸುವದು ಬಿಟ್ಟು ದೇಶದೊಳಗಿನ ಖಾದಿಯನ್ನೇ ಮಾರಾಟಮಾಡಲು ಒಪ್ಪಿದರೆ ದೇಶದ ಕೆಲವು ಭಾಗದವರಿಗಾದರೂ ಹೊಟ್ಟೆ ತುಂಬಾ ಅನ್ನ ಕೊಟ್ಟಂತಾಗುತ್ತದೆ. ಖಾದಿಯನ್ನು ಮಾರಾಟ ಮಾಡುವವರೂ ಇತರ ದೇಶದ ಮುಖಂಡರೂ ಸಹ ಕಣಿವೆ ಹೋಬಳಿ ಜನರಿಗೂ ಶನಿವಾರಸಂತೆ ಜನರಿಗೂ ಪ್ರೋತ್ಸಾಹ ಕೊಟ್ಟು ದೇಶಕ್ಕೆ ಬೇಕಾದಷ್ಟು ಬಟ್ಟೆಯನ್ನು ದೇಶದೊಳಗೆ ತಯಾರಾಗುವಂತೆ ಏರ್ಪಾಡು ಮಾಡಿದರೆ ಅದಕ್ಕಿಂತ ದೊಡ್ಡ ದೇಶಸೇವೆಯಿಲ್ಲವೆಂತ ನಮ್ಮ ಅಭಿಪ್ರಾಯ. ದೇಶದ ಮುಂದಾಳುಗಳು ಮಾತ್ರ ಇದಕ್ಕೆ ಗಮನ ಕೊಟ್ಟರೆ ಸಾಲದು. ಕೊಡಗಿನ ಸರಕಾರವು ಸಹ ಈ ವಿಷಯಕ್ಕೆ ಕೂಡಲೇ ಗಮನ ಕೊಟ್ಟು ಜೀರ್ಣವಾಗಿ ಹೋದ ಕಸಬನ್ನು ಪುನರುಜ್ಜೀವನ ಮಾಡಬೇಕಾದದ್ದು ಸರಕಾರದವರ ಕೆಲಸವಾಗಿದೆ.

ಕೊಡಗು

ನವ್ಯಸಮಾಜದ ಹುಳುಕು

ಮುದಿಹುಡುಗ— ಶಾಸ್ತ್ರಿಗಳೇ, ಒಬ್ಬ ಚಿಕ್ಕ ವರನಿದ್ದಾನೆ. ಚಿಕವನೆಂದರೆ ತೀರ ಚಿಕ್ಕವನೇ ಸರಿ.

ಶಾಸ್ತ್ರಿ— ವರನು ನಿನ್ನ ಮೊಮ್ಮಗನೋ? ಆತನ ವಯಸ್ಸೆಷ್ಟು?

ಮುದಿಹುಡುಗ— ಛೆ! ಛೆ! ನಿಮ್ಮೆದುರಿನಲ್ಲಿಯೇ ನಿಂತಿದ್ದಾನೆ. (ನಾನೇ) ತಿಳಿಯಲಿಲ್ಲವೇ. ಬಹಳವೇನಾಗಲಿಕ್ಕಿಲ್ಲ. ಎಪ್ಪತ್ತರ ಒಳಹೊರಗಿರಬಹುದಷ್ಟೆ.

ಶಾಸ್ತ್ರಿ— ಕನ್ಯಾದಕ್ಷಿಣ...?

ಮುದಿಹುಡುಗ— ಅದರ ಯೋಚನೆಯನ್ನೇ ಬಿಡಿರಿ ಹತ್ತು ಸಾ.... ರೂಪಾಯಿ.

ಶಾಸ್ತ್ರಿ— ತಾವಿನ್ನೂ ಕಿರಿಯರು. ಈಗಾಗಲೇ ಮದುವೆಯೋ!

ಮುದಿಹುಡುಗ— ಶಾಸ್ತ್ರಿಗಳೇ ನೀವಿನ್ನೂ 'ಕನ್ನಡಿಗ'ನನ್ನು ಓದಿಲ್ಲವೆಂಬಂತೆ ತೋರುವುದು

ಶಾಸ್ತ್ರಿ— ಇಲ್ಲ! ಅದಕ್ಕೂ ನಿಮ್ಮ ಮದುವೆಗೂ ಸಂಬಂಧವೇನು?

ಮುದಿಹುಡುಗ— ಅದರಲ್ಲಿ! ಪುನರ್ವಿವಾಹದ ವಿಷಯವಾಗಿ ಬಾಹೀರಾತಿದೆ ನೋಡಿ ಕಮಲಾ ಕಾಂತನಿಗೇನೋ ಕುಲೀನ ವಿಧವೆಯರು ಬೇಕಂತೆ! ಆದರೆ ಅತನು ಕೋರಿದಂತಹ ಕುಲೀನ ವಿಧವೆಯರು ಈಗೆಲ್ಲಿ ದೊರೆಯುರು?

ಶಾಸ್ತ್ರಿ— ಅದಕ್ಕೇನು ಮಾಡಬೇಕೆನ್ನುವಿರಿ?

ಮುದಿಹುಡುಗ— ನಡುವೆ ನಾವು ಬಾಕಿ ಬೇಡಿ. ಪೂರಾಕೇಳಿ. ನಾವಿನ್ನು ಬದುಕುವವರಾದರೂ ಎಷ್ಟು ದಿನ? ಇಂದೋ ನಾಳೆಯೋ! ಹೊರಡಲಿಕ್ಕಿರುವೆವು. ಆಮೇಲೆ ವಿಧವೆಯರಿಗೇನು ಕೊರತೆ?

ಶಾಸ್ತ್ರಿ— ಹೀಗೇನು! ನೀವು ವಿಧವೆಯರನ್ನು ತಯಾರಿಸುವ ಕೆಲಸವನ್ನು ಕೈಕೊಂಡಿರುವಿರಿ? ನಿಮ್ಮ ಈ ಕಾರ್ಯವು ಸ್ತುತ್ಯವಾದುದೇ ಸರಿ!

ಮುದಿಹುಡುಗ— ಇಷ್ಟೇ ಅಲ್ಲ! ನಿಮ್ಮ ಸಹಾಯವು ದೊರೆತರೆ ನಾವೊಂದು ಮುದಿ ಹುಡುಗರ ಗುಂಪನ್ನೇ ಮಾಡಿಕೊಳ್ಳುವವರಿದ್ದೇವೆ, ಆಗ ನಿಮಗೆ ಹಣದ ಸುಗ್ಗಿಯೋ ಸುಗ್ಗಿ! ಎಷ್ಟು ಕನ್ಯೆಯರನ್ನು ತಂದು ಕೊಡುವಿರೋ ಅಷ್ಟು ಹತ್ತು ಸಾವಿರ ರೂಪಾಯಿಗಳು ದೊರೆಯುವವು ಆ ಮೇಲೆ ನಿಮ್ಮ ಕೈ ಹಿಡಿವವರಾರು?

ಶಾಸ್ತ್ರಿ— ಹಾಗಾದರೆ ರಾಯರೇ ವಿಧವೆಯರು ಬೇಕಾಗಿದ್ದರೆ ನಿಮ್ಮೀ 'ಮುದಿಹುಡುಗರ ಗುಂಪಿ'ನಿಂದಲೇ ತರಿಸಿಕೊಳ್ಳಬೇಕೆಂದು ಕಮಲಾಕಾಂತನಿಗೆ ಓಲೆಯನ್ನು ಬರೆಯುವದಲ್ಲದೆ ವ್ಯಾಪಾರಸ್ಥರು ಈ ಕೆಲಸದಲ್ಲಿ ಕೈ ಹಾಕಿ ಹೇರಳವಾಗಿ ಕಮಿಶನ್ನು ಪಡೆಯಬೇಕೆಂದು ಪ್ರಕಟನೆಯನ್ನು ಹೊರಡಿಸುವಾ!

ಮುದಿಹುಡುಗನು ನಗಲು ಆತನ ಕೃತ್ರಿಮ ಹಲ್ಲುಗಳು ಥಳಕ್ಕನೆ ಹೊಳೆದವು.

+ ಪ್ರಸಂಗಿ

ಖಾದಿಯ ಮಹತ್ವ

೧ ಖಾದಿಯು ಸಾತ್ವಿಕತನದ ಚಿಹ್ನವಾಗಿದೆ.

೨ ಖಾದಿಯು ಆರೋಗ್ಯಕ್ಕೆ ಪೋಷಕವಾಗಿದೆ.

೩ ಖಾದಿಯು ಸ್ವರಾಜ್ಯದ ಆಸ್ತಿಯ ಚಿಹ್ನವಾಗಿದೆ.

೪ ಖಾದಿಯು ಬಡಬಗ್ಗರ ಖಾದ್ಯವಾಗಿದೆ.

೫ ಖಾದಿಯನ್ನು ಬಿಟ್ಟು ಪರದೇಶಿ ಇಲ್ಲವೇ ದೇಶೀ ಗಿರಣಿಯ ಅರಿವೆಯನ್ನು ವಾಪರಿಸುವದರಿಂದ ಗಿರಣಿಯ ಕೂಲಿಕಾರರ ಕೊರತೆಯನ್ನು ಹೆಚ್ಚಿಸಿ ನಿಷ್ಕೃತಿಗೆ ಆಸ್ಪದ ಕೊಟ್ಟಂತಾಗುವದು.

೬ ಖಾದಿಯು ಪರದೇಶೀ ಹಾಗು ದೇಶೀ ಅರಿವೆಗಿಂತ ಹೆಚ್ಚು ತಾಳುವದು.

೭ ಖಾದಿಯನ್ನು ವಾಪರಿಸುವದು ಸ್ವಾವಲಂಬನದ ಚಿಹ್ನವಾಗಿದೆ.

೮ ಖಾದಿಯು ದಾಸ್ಯ-ದಾರಿದ್ರ್ಯಗಳನ್ನು ದೂರಮಾಡುವ ಅತ್ಯುತ್ಕೃಷ್ಟ ಸಾಧನವಾಗಿದೆ.

೯ ಖಾದಿಯು ಶಾಂತತಾಯುಕ್ತವಾದ ಅಹಿಂಸಾತ್ಮಕ ಅಸಹಕಾರ ಯುದ್ಧದಲ್ಲಿ ಪ್ರತಿಯೊಬ್ಬ ಸೈನಿಕನು ಉಡ-ತೊಡತಕ್ಕ ಬಟ್ಟೆಯಾಗಿದೆ.

೧೦ ಖಾದಿಯು ರಾಷ್ಟ್ರೀಯ ಮಹಾಸಭೆಯ ಠರಾವಿಗೆ ವೇದವಾಕ್ಯದಂತೆ ಮಾನಕೊಟ್ಟು ಕಾರ್ಯಪ್ರವೃತ್ತಿಯನ್ನು ಅಂಗೀಕರಿಸುವ ಚಿಹ್ನವಾಗಿದೆ.

೧೧ ಖಾದಿಯನ್ನು ವಾಪರಿಸುವದೇ ಲೋಕಮಾನ್ಯರ ಮೇಲಿನ ಭಕ್ತಿಯನ್ನು ಪ್ರದರ್ಶಿಸುವಲ್ಲಿ ಹಾಗೂ ಮಹಾತ್ಮರ ಅನುಯಾಯಿತ್ವವನ್ನು ಪತ್ಕರಿಸಿದ ದ್ಯೋತಕವಾಗಿದೆ.

೧೨ ಖಾದೀ! ಖಾದಿ!! ಖಾದಿ!! ಎಂಬುದೇ ಹಿಂದೀ ರಾಷ್ಟ್ರಸೂತ್ರಧಾರರಾದ ಮಹಾತ್ಮಾ ಗಾಂಧಿಯವರ ಕೊನೆಯ ಸಂದೇಶವಾಗಿದೆ

—ಪಿ. ಪ್ಪಿ. ಲಕ್ಷ್ಮಣ ಶರ್ಮಾ.

ಪರರಾಷ್ಟ್ರೀಯ ರಾಜಕಾರಣ

(ಲೇಖಕ:—ಜಡುನಾವ ಸೂಳೀಕೇರಿ.)

ಮೋಸಲ್

ಅತ್ತ ಇತ್ತ ಮಾಡಿ, ಕೊನೆಗೆ ರಾಷ್ಟ್ರಸಂಘದವರು ಮೋಸಲ್ ಜಿಲ್ಲೆಯನ್ನು ಇಂಗ್ಲಂಡದ ಉಡಿಯಲ್ಲಿ ಹಾಕಿ, ನೆನೆಗುದಿಗೆ ಬಿದ್ದು ಕುಳಿತಿದ್ದ ಮೋಸಲ್ ಪ್ರಶ್ನೆಯನ್ನು ಬಿಡಿಸಿ ತೆಗೆದರು; ಜಿನಿವಾದಲ್ಲಿ ಕೂಡಿದ ವಿಧಾತೃಗಳು ಮೋಸಲ್‌ದ ಹಣೇ ಬರಹವನ್ನು ಹೀಗೆಯೇ ಬರೆಯುವರೆಂಬ ಮಾತು ಇಂಗ್ಲಂಡವು ನಡೆಯಿಸಿದ ರಾಜಕಾರಣಗಳ ಮೇಲಿಂದ ತಜ್ಞರ ಕಂಣಿಗೆ ಢಾಳವಾಗಿ ಕಾಣುತ್ತಲೇ ಇತ್ತು! ಆದರೆ, ಕೆಲ ಕಾಲದವರೆಗೆ ರಾಷ್ಟ್ರಸಂಘದ ವಾತಾವರಣದಲ್ಲಿ ಇಂಗ್ಲಂಡಕ್ಕೆ ಒಂದು ಪ್ರತಿಕೂಲ ಗ್ರಹವು ಸಂಚಾರ ಮಾಡುತ್ತಲಿದ್ದದರಿಂದ, ಮೋಸಲ್‌ಪ್ರಶ್ನೆಯ ಪರ್ಯವಸಾನವು ಸಂಶಯಿತವಾಗಿಯೇ ನಿಂತುಕೊಂಡಿತ್ತು ಕೊನೆಗೆ

ಇಂಗ್ಲಂಡದ ರಾಜಕಾರಣಗಳು ಮಾಡಿದ ತಪಸ್ಸಿನಿಂದಲೂ ಶಾಂತಿಯಿಂದಲೂ ಪ್ರತಿಕೂಲ ಗ್ರಹದ ಬಾಧೆಯು ತಪ್ಪಿ, ಇಂಗ್ಲಂಡಕ್ಕೆ ಮೋಸಲ್‍ದಂಥ ಪಕ್ವ, ಸ್ವಾದಿಷ್ಟ ಫಲದ ಲಾಭವಾಯಿತು! ಇರಲಿ.

ಪಕ್ವವೂ, ಸ್ವಾದಿಷ್ಟವೂ ಆದ ಫಲವು ಇಂಗ್ಲಂಡಕ್ಕೆ ದೊರೆತದ್ದೇನೋ ನಿಜ, ಆದರೆ, ಆ ಫಲವು, ಇಂಗ್ಲಂಡದ ಹೊಟ್ಟೆಯಲ್ಲಿ ಜೀರ್ಣವಾಗುವದೋ ಇಲ್ಲವೋ ಎಂಬ ಸಂಶಯ [ಭೂತವು ಇಂಗ್ಲಂಡದ ಮುಖ್ಯಮಂತ್ರಿಗಳಾದ ಮಿ. ಬಾಲ್ಡವಿನ್‍ರನ್ನು ಬಡಿದು ಕೊಂಡಂತೆ ತೋರುತ್ತದೆ. ಇಲ್ಲವಾದರೆ, ಮಿ॥ ಬಾಲ್ಡವಿನ್‍ರು ತುರ್ಕಸ್ಥಾನದ ವಕೀಲರನ್ನು ಕರೆಯಿಸಿ

“ ಮೋಸಲ್ ಜಿಲ್ಲೆಯನ್ನು ರಾಷ್ಟ್ರದ ಸಂಘದವರು ಇಂಗ್ಲಂಡಕ್ಕೆ ಕೊಟ್ಟ ಮಾತನ್ನು ಒಪ್ಪಿಕೊಂಡು, ಎರಡನೇ ಯಾವವಾದರೂ ಸವಲತುಗಳನ್ನು ಕೇಳಿಕೊಳ್ಳುವ ಇಚ್ಛೆಯಿದ್ದರೆ, ನೀವು ಕೇಳಿಕೊಳ್ಳ ಬಹುದು, ನಾವು ಕೊಡುವದಕ್ಕೆ ಸಿದ್ಧರಿದ್ದೇವೆ”

ಇತ್ಯಾದಿಯಾಗಿ ಮಾಡಿದ ಭಾಷಣದ ಅರ್ಥವೇನು? ಬಾಲ್ಡವಿನ್ ಮಂತ್ರಿಗಳು ಕಾನ್‍ಝರ್ವೇಟಿವ್ ಪಕ್ಷಕ್ಕೆ ಸೇರಿದವರು. ಮೊದಲು ಮೊಸಲ್ ಜಿಲ್ಲೆಯನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಬೇಕು—ಬಳಿಕ, ಅಲ್ಲಿ ತಮ್ಮ ಸೈನ್ಯದ ಶಿಬಿರವನ್ನು ನಿಲ್ಲಿಸಿ, ಹೊಸ ರಾಜಕಾರಭಾರವನ್ನು ಪ್ರಾರಂಭಿಸಬೇಕು— ತುರ್ಕಸ್ಥಾನದ ಬೇಡಿಕೆಗಳು ಏನಾದರೂ ಇದ್ದಲ್ಲಿ ಆ ಬಳಿಕ ನೋಡಿಕೊಳ್ಳಬೇಕು. ಎಂಬದಾಗಿ ಕಾನ್ಸರ್ವೇಟಿವ್ ಪಕ್ಷದವರು ಬಡಬಡಿಸುತ್ತಲಿದ್ದಾರೆ. ಇವರ ಈ ಬಡಬಡಿಕೆಗೂ, ಇವರ ಮುಖಂಡರೆನಿಸಿದ ಬಾಲ್ಡವಿನ್ ಮಂತ್ರಿಗಳು ನಡೆಯಿಸಿದ ವಿಸಂಗತ ರಾಜಕಾರಣಕ್ಕೂ, ಇಂಗ್ಲಂಡದ ಜನತೆಯು ಬೇಸತ್ತು ಉದಾಸೀನತೆಯನ್ನು ತಾಳಿದೆ.

ಇತ್ತ ತುರ್ಕಸ್ಥಾನವು ಮೋಸಲ್‍ದ ನಿರ್ಣಯದಿಂದ ತನಗಾದ ವೇದನೆಯನ್ನು ಎದೆಯಲ್ಲಿಯೇ ಹತ್ತಿಕ್ಕಿ ಮುಚ್ಚಿಕೊಂಡು ಜನಕ್ಕೆ ತೋರಗೊಡದೆ ಆಡ್ಡಾಡುತ್ತಿದ್ದರೂ, ಅದರದೊಂದು ಕಿಡಿಯು ತಾ॥ ೧೬–೧೨–೧೯೨೫ ನೇ ದಿನ ಪ್ಯಾರಿಸದಲ್ಲಿ ಆದ ತುರ್ಕ-ರಶಿಯಾಕ್ಕೂ ಆದ ಒಪ್ಪಂದದಲ್ಲಿ ವ್ಯಕ್ತವಾಗಿದೆ. ಅದೊಂದೇ ಕಿಡಿಯಿಂದ ತುರ್ಕಸ್ಥಾನದ ಮನೋಭೂಮಿಯ ಮೇಲೆ ಮೋಸಲ್-ನಿರ್ಣಯದ ಚಿತ್ರವು ಹೇಗೆ ಒಡಮೂಡಿದೆಯೆಂಬುವದು ಕಂಡು ಬರುವಂತಿದೆ ರಶಿಯಾದೊಡನೆ ಒಪ್ಪಂದ ಬೆಳೆಸಿ, ಇಂಗ್ಲಂಡದ ಕಾರಸ್ಥಾನಕ್ಕೆ ತುರ್ಕಸ್ಥಾನವು ಪ್ರತ್ಯುತ್ತರವನ್ನೇ ಕೊಟ್ಟಿರುವದೇನೋ ಎನ್ನುವಂತೆ ೧೬ ತಾರೀಖಿನ ದಿನವೇ ಅಂದರೆ, ರಾಷ್ಟ್ರಸಂಘದವರು ಮೋಸಲ್ ಜಿಲ್ಲೆಯನ್ನು ಇಂಗ್ಲಂಡದ ಉಡಿಯಲ್ಲಿ ಚಲ್ಲಿದ ದಿನವೇ ತುರ್ಕ ಪ್ರತಿನಿಧಿಯಾದ ರಶೀದಬೇಗವರು ಆ ಒಪ್ಪಂದಕ್ಕೆ ತಮ್ಮ ರುಜು ಹಾಕಿದರು! ರಶಿಯಾದ ಪಕ್ಷದಿಂದ ಎಮ್. ಚಿಚೆರಿನ್‍ರೂ, ತುರ್ಕರ ಪಕ್ಷದಿಂದ ರಶೀದ ಬೇಗರೂ, ಪ್ಯಾರಿಸ್‍ದಲ್ಲಿ ಒಪ್ಪಂದದ ಕಾಗದದ ಮೇಲೆ ರುಜು ಮಾಡುವಾಗ ಒಬ್ಬರ ಮುಖವನ್ನೊಬ್ಬರು ನೋಡುತ್ತ ತಾವೀರ್ವರೂ ಸಮದುಃಖಿಗಳೆಂದೂ, ದುಃಖದಲ್ಲಿ ಕಲೆತ ಮೈತ್ರಿಯು ಬಹುದಿನ ಬಾಳುವದೆಂಬದಾಗಿಯೂ ಮಾತನಾಡಿಕೊಂಡರು ಬ್ರಿಟಿಶ್ ಪರ ರಾಷ್ಟ್ರ-ಮಂತ್ರಿಗಳಾದ ಚೇಂಬರಲೇನರು ಲೋಕಾರ್ನೊ ಒಪ್ಪಂದದಲ್ಲಿ ರಶಿಯಾಕ್ಕೆ ಕೊಟ್ಟ ಆಘಾತವನ್ನೂ, ಮೋಸಲ್ ಪ್ರಕರಣದಲ್ಲಿ ತುರ್ಕಸ್ಥಾನಕ್ಕೆ ಕೊಟ್ಟ ತಪ್ಪರಾಶಿಯನ್ನೂ, ರಶೀದ ಬೇ ಹಾಗೂ ಚಿಚೆರಿನ್ ಇವರೀರ್ವರು ನೆನೆ ನೆನೆದು ಒಪ್ಪಂದದ ಕಾಗದಕ್ಕೆ ರುಜು ಹಾಕಿದರು! ಈ ಹೊಸೋ ತುರ್ಕ ಒಪ್ಪಂದದ ಕರಾರಗಳು ಯಾವವು, ಈ ಒಪ್ಪಂದದಿಂದ ಇಂಗ್ಲಂಡದ ಮೇಲೆ ಏನು ಪರಿಣಾಮವಾಗುವದು, ತುರ್ಕರಿಗೂ ರಶಿಯನ್‍ರಿಗೂ ಒಪ್ಪಂದದಿಂದ ಆಗತಕ್ಕ ಲಾಭಗಳಾವವು, ಇತ್ಯಾದಿಗಳನ್ನು ಕುರಿತು ಮುಂದಿನ ಸಾರೆ ವಿಚಾರ ಮಾಡುವಾ.

ಉತ್ತರ ಕರ್ನಾಟಕದ ಪ್ರಥಮ ಆಯುರ್ವೇದ ಪರಿಷತ್ತು.

ತಾ॥ ೩-೧—೨೬ ನೇ ದಿನ ರವಿವಾರ ಮಧ್ಯಾಹ್ನದ ೩ ಗಂಟೆಗೆ, ಗದಗಿನ ಡಾ. ಉಮಚಗೀ ವಾಸುದೇವರಾಯರ ಅಧ್ಯಕ್ಷತೆಯಲ್ಲಿ ಈ ಸಭೆ ಸಾಂಗವಾಯಿತು. ಸ್ವಾಗತಾಧ್ಯಕ್ಷರಾದ ಡಾ. ಜಠಾರವರು ತಮ್ಮ ಅಸುಭವವನ್ನು ಚನ್ನಾಗಿ ಬಿತ್ತರಿಸಿದರು—‘ಮೊದಲಿಗೆ ವೈದ್ಯರಿಗೂ ಡಾಕ್ಟರರಿಗೂ ಭೂಮ್ಯಾಕಾಶದಷ್ಟು ಅಂತರ ವಿದ್ದದ್ದು ಹೋಗಿ ಈಗ್ಗೆ ನಾವೀರ್ವರು ಕೂಡಿಯೇ ಇಂತಹ ಸಭೆಗಳನ್ನು ಏರ್ಪಡಿಸುತ್ತಿರುವದು ಸಂತೋಷದ ಮಾತು. ಆಯುರ್ವೇದ ವೆಂದಮಾತ್ರಕ್ಕೆ ಇಂಗ್ಲೀಷ ಶಾಸ್ತ್ರ ಬಲ್ಲಂಥ ಡಾಕ್ಟರುಗಳಾದ ನಾವು ಅದನ್ನು ತಿರಸ್ಕಾರದಿಂದ ನೋಡುತ್ತಲಿದ್ದೆವು. ಆದರೆ ಈಗೀಗ ನಾವೆಲ್ಲ ಎಚ್ಚರಾಗಿರುವೆವು ಆಯುರ್ವೇದ ಔಷಧಗಳಲ್ಲಿದ್ದ ಗುಣವನ್ನು ನಾವೀಗ ಕಂಡಿರುವೆವು. ಈ ಔಷಧಗಳೇ ನಿಜವಾಗಿ ನಮ್ಮ ದೇಶದ ಹವೆ, ನೀರು ಸ್ಥಿತಿಗತಿಗಳಿಗೆ ಹೆಚ್ಚು ಯೋಗ್ಯವಾದವುಗಳು. ಇವನ್ನೆಲ್ಲ ಲೆಕ್ಕಿಸದೇ, ನಾವೆಲ್ಲ ಡಾಕ್ಟರರು ಪರದೇಶೀ ಔಷಧಗಳನ್ನು ಕೊಂಡು, ದಳ್ಳಾಳಿಯ ಲಾಭವನ್ನು ಮಾತ್ರ ಪಡೆದು, ನಮ್ಮ ಸ್ವಂತ ರಾಷ್ಟ್ರದ ಶಾಸ್ತ್ರೀಯ ಪದ್ಧತಿಯ ಅಮೋಲ್ಯ ಗುಣಗಳುಳ್ಳ ಔಷಧಗಳನ್ನು ಇಷ್ಟು ದಿನಗಳ ವರೆಗೆ ತ್ಯಜಿಸಿದ್ದು ಮಹಾ ಪಾತಕ, ಶುದ್ಧವಾಗಿಯೂ ರಾಷ್ಟ್ರವಾತ್ಸಲ್ಯದ ಭ್ರಷ್ಟತೆಯು (ಚಹಾಟಿ). ಪರದೇಶೀ ಔಷಧಗಳನ್ನು ನಾವಿಲ್ಲಿ ಸಿದ್ಧ ಪಡಿಸುವದು ಅಶಕ್ಯವಾದುದರಿಂದ ಅವುಗಳನ್ನು ಪರರಾಷ್ಟ್ರಗಳಿಂದ ತರಿಸಬೇಕಾಗುತ್ತದೆ. ಇದರಿಂದ ಅವು ತುಟ್ಟಿಯಾಗಿದ್ದರೂ, ನಾವು ಅವನ್ನೇ ಕೊಂಡು, ನಮ್ಮ ಹಣವನ್ನೆಲ್ಲ ಪರದೇಶಕ್ಕೆ ಅಟ್ಟುತ್ತಿರುವೆವು. ಯಾವ ಪರದೇಶೀ ಔಷಧಕ್ಕೆ ನಾಲ್ಕಾಣೆ ಬೀಳುವದೋ ಅದೆ ಗುಣವುಳ್ಳ ಸ್ವದೇಶೀ ಔಷಧಕ್ಕೆ ನಾಲ್ಕು ಕಾಸುಗಳು ಬೀಳುವವು. ಹೀಗಿದ್ದು ನಾವೆಲ್ಲ ಪರದೇಶೀ ಔಷಧಗಳನ್ನು ಮಾತ್ರ ಕೊಳ್ಳುತ್ತಿರುವದು ತಪ್ಪು” ಎಂದು ಸ್ಪಷ್ಟವಾಗಿ ಮಾತನಾಡಿದರು. ಅಧ್ಯಕ್ಷರು ಅಂದದ್ದೇನಂದರೆ— “ಡಾಕ್ಟರುಗಳಾದ ನಾವು ಬಂದಂದಿನಿಂದ ಎಲ್ಲರೂ ಅಲ್ಪಸ್ವಲ್ಪ ಬೇನೆಯುಂಟಾದ ಕೂಡಲೆ ದವಾಖಾನೆಗೆ ಓಡಿ ಬರುವರು. ಮೊದಲು ಹಿಂದುಸ್ಥಾನವು ಸ್ವಾವಲಂಬಿಯಾಗಿದ್ದಿತು. ಪ್ರತಿಯೊಂದು ಕುಟುಂಬದಲ್ಲಿಯೂ ಸಣ್ಣ ಬೇನೆಗಳಿಗೆ ತಕ್ಕ ಉಪಚಾರ ಮಾಡುವಷ್ಟು ಜ್ಞಾನವುಳ್ಳ ಹಿರಿಯರಿದ್ದರು. ಆದರೆ ಈಗ್ಗೆ ಆ ಪದ್ಧತಿಯೇ ಹಾಳಾಗಿ, ಎಲ್ಲರೂ ಪರಾವಲಂಬಿಗಳಾಗಿ ದವಾಖಾನೆಗೆ ಬರುವರು. ಬೀದಿಯ ಎಡಬಲದಲ್ಲಿರುವ ಗಿಡಮೂಲಿಕೆಗಳ ಉಪಯೋಗವು ಅನೇಕ ಜನರಿಗೆ ಗೊತ್ತಿದ್ದರಿಂದ, ಯಾವ ಬೆಲೆಯನ್ನು ಕೊಡದೇ ಬೇನೆಯನ್ನು ನಾಶಪಡಿಸಿಕೊಳ್ಳುತ್ತಿದ್ದರು ಆದರೆ ಈಗ್ಗೆ ಸಣ್ಣ ಬೇನೆಗಳಿಗೆ ಸಹ ನಮ್ಮೆಡೆಗೆ ಬರುವಂತಹ ಕಾಲವು ಬಂದೊದಗಿದ್ದರಿಂದ ನಾವು, ತುಟ್ಟಿಯಾದ ಕೆಲಂಡ ಪರದೇಶೀ ಔಷಧಕ್ಕಾಗಿ ದಿನಾಲು ೪—೬ ಆಣೆಗಳನ್ನು ವೆಚ್ಚಮಾಡಬೇಕಾಗುತ್ತದೆ. ಇದು ಖಂಡಿತವಾಗಿಯೂ ವ್ಯಸನಕರವಾದ ವಿಷಯವು” ಎಂಬದಾಗಿ ಹೇಳಿದರು. ಆಯುರ್ವೇದದ ಅಭಿಮಾನಿಗಳಾದ ಬಾಗಲಕೋಟೆಯ ದರ್ಬಾರ ರಾಮಭಾಸರು, ಮತ್ತು ವಿಜಾಪುರದ ಕೌಜಲಗಿ ಶ್ರೀನಿವಾಸರಾಯರು ವ್ಯತ್ಯುದೇವತೆಯ ದವಡೆಯೊಳಗಿಂದ ಪಾರಾದುದಕ್ಕಾಗಿ ಸಭೆಯವರು ಆನಂದ ಪ್ರಕಟಿಸಿದರು. ಆ ವೇಳೆ ಮಹತ್ವದ ಠರಾವುಗಳು ನಿರ್ಣಯಿಸಲ್ಪಟ್ಟವು (೧) ಕರ್ನಾಟಕದಲ್ಲಿಯ ಆಯುರ್ವೇದದ ಕಾರ್ಯವು ಚನ್ನಾಗಿ ನಡೆಯಲಿಕ್ಕೆ ಆಯಾ ಕರ್ನಾಟಕ ಆಯುರ್ವೇದ ಮಹಾ ಮಂಡಳದಲ್ಲಿ ಮೂರು ಭಾಗಗಳನ್ನು ಕಲ್ಪಿಸಬೇಕು. (ಅ) ಬೆಳಗಾವಿ, ಧಾರವಾಡ, ವಿಜಾಪುರ, ಉತ್ತರ ಕರ್ನಾಟಕದ ದೇಶೀಯ ಸಂಸ್ಥಾನಗಳು, ಬಳ್ಳಾರಿ ಮತ್ತು ನಿಜಾಮ ಕರ್ನಾಟಕದ ಭಾಗಗಳೆಲ್ಲ ಒಳಗೊಂಡಿರುವ ಉತ್ತರಕರ್ನಾಟಕ ಭಾಗ (ಅ) ಕಾರವಾರ ಮಂಗಳೂರ ಜಿಲ್ಲೆಗಳಿಗಾಗಿ ಪಶ್ಚಿಮ ಕರ್ನಾಟಕ ಭಾಗ (ಇ) ಮೈಸೂರ, ಕೊಡಗು, ಮತ್ತು ಮದ್ರಾಸ ಕರ್ನಾಟಕಗಳಿಗಾಗಿ ದಕ್ಷಿಣಕರ್ನಾಟಕ ಭಾಗ (೨) ಉತ್ತರಕರ್ನಾಟಕದ ಭಾಗಕ್ಕೆ ಒಂದು ಆಯುರ್ವೇದ ಕಾಲೇಜವನ್ನು ಸ್ಥಾಪಿಸಬೇಕು. ಬಾಗಲಕೋಟೆಯ ಸುಪ್ರಸಿದ್ಧ ವರ್ತಕರಾದ ಶೇಟ ದರ್ಬಾರ ರಾಮದಾಸರು ಈ ಬಗ್ಗೆ ಅಮೋಲ್ಯವಾದ ಅನುಕೂಲತೆಗಳನ್ನು ಒದಗಿಸಿಕೊಟ್ಟಿದ್ದರಿಂದ ಬಾಗಲ ಕೋಟೆಯಲ್ಲಿಯೇ ಈ ಕಾಲೇಜನ್ನು ಸ್ಥಾಪಿಸುವದು ಉತ್ತಮ (೩) ಈ ಡಾಕ್ಟರುಗಳು ಆಯುರ್ವೇದವನ್ನು ಕಲಿಯಲು ಅನುಕೂಲ ವಾಗುವಂತೆ ಬೆಳಗಾವಿಯಲ್ಲಿ ಒಂದು ವರ್ಗವನ್ನು ಪ್ರಾರಂಭಿಸುವದು. ಶಾಸ್ತ್ರೋಕ್ತವಾಗಿ ಆಯುರ್ವೇದವನ್ನು ಕಲಿತಂಥ ವೈದ್ಯರುಗಳಿಗೆ, ಸುಲಭವಾದ ಶಸ್ತ್ರಕ್ರಿಯೆ, ವನಸ್ಪತಿ ಶಾಸ್ತ್ರ ಜಂತು ಶಾಸ್ತ್ರ, ಶರೀರ ಶಾಸ್ತ್ರ, ಮೊದಲಾದವುಗಳನ್ನು ಕಲಿಸುವ ವ್ಯವಸ್ಥೆಯೂ ಈ ವರ್ಗದಲ್ಲಿರತಕ್ಕದ್ದು (೪) ‘ಧನ್ವಂತರಿ’ ಪತ್ರಿಕ

ಲೂಂದು, ಅದನ್ನು ಅತ್ಯುತ್ತಮವಾದ ಆಯುರ್ವೇದ ಕೈಪಿಡಿಯಾಗುವಂತೆ ನಡಿಸುವದು. (೫) ತನ್ನ ತನ್ನ ಸ್ಥಳಗಳಲ್ಲಿ ಆಯುರ್ವೇದ ದವಾಖಾನೆಗಳನ್ನು ತೆರೆಯಬೇಕಾಗಿ ಕರ್ನಾಟಕದಲ್ಲಿಯ ಮುನಸೀಪಾಲಿಟಿ ಲೋಕಲ್ ಬೋರ್ಡುಗಳಿಗೆ ಪ್ರಾರ್ಥಿಸುವದು

ಕಡೆಯ ಠರಾವಿಗೆ ಅನುಕೂಲವಾಗಿ ಲೋಕಲ್ ಬೋರ್ಡಿನಿಂದ ಈ ವರ್ಷ ಆಯುರ್ವೇದ ದವಾಖಾನೆಯನ್ನು ಈ ಜಿಲ್ಲೆಯಲ್ಲಿ ಸ್ಥಾಪಿಸುವೆವೆಂದು ಡಾ. ಜಠಾರರು ಹೇಳಿದರು. ಸರಕಾರೀ ದವಾಖಾನೆಗಳಲ್ಲಿ ವೆಚ್ಚವು ಹೆಚ್ಚಾಗಿ ಬರುತ್ತದೆ. ಬಡವರಿಗೆ ಆ ವೆಚ್ಚದ ಪ್ರಮಾಣದಂತೆ ಲಾಭವೆಂದೂ ದೊರೆಯುವದಿಲ್ಲ. ತಾಲೂಕಿನ ಸ್ಥಳದಲ್ಲಿಯ ನಾಲ್ಕಾರು ಜನ ಶ್ರೀಮಂತರೂ, ಅಮಲದಾರರೂ ಮಾತ್ರ ದವಾಖಾನೆಯ ಲಾಭವನ್ನು ಪಡೆಯುವರು ಪ್ರತಿವರ್ಷದಲ್ಲಿಯೂ ಲೆಕ್ಕದಿಂದ ನೋಡಲು ಬಡವರಿಗೆ ಆದ ಲಾಭವೆಂದರೆ ಜಂತಿನ ಪುಡಿಯಂತಹ ಕ್ಷುಲ್ಲಕವಾದ ಔಷಧವು ದೊರೆಯುತ್ತದೆಂಬುದು. ಈ ದವಾಖಾನೆಗಾಗಿ ನಾವು ೧೦-೨೦ ಸಾವಿರ ರೂಪಾಯಿಗಳನ್ನು ಮೊದಲು ಕಟ್ಟಡದಲ್ಲಿ ವೆಚ್ಚಮಾಡುವದು ನಿರರ್ಥಕವು. ಆದ್ದರಿಂದ ಅವನ್ನೆಲ್ಲ ಬಂದು ಮಾಡಿ ಅಲ್ಪ ಬೆಲೆಬೀಳುವ ಆಯುರ್ವೇದ ದವಾಖಾನೆಗಳನ್ನು ಹೊರಡಿಸುವದು ವಿಹಿತವಾದುದೆಂದು ಡಾ. ಜಠಾರರು ಒತ್ತಿ ಒತ್ತಿ ಹೇಳಿದರು.

ಈ ಸಭೆಗೆ ಬೆಳಗಾವಿ, ಧಾರವಾಡ, ವಿಜಾಪೂರ, ಬಳ್ಳಾರಿ, ಜಿಲ್ಲೆಗಳಿಂದ ಪ್ರತಿನಿಧಿಗಳೂ ಈ ಬಾಗಲಕೋಟೆಯ ಪ್ರಮುಖ ಜನರೂ ಆ ದಿನ ಸಭೆಗೆ ಬಂದಿದ್ದರು. ಸಭೆಯ ಕಾರ್ಯವೆಲ್ಲ ಉತ್ಸಾಹದಿಂದ ನೆರವೇರಿತು. ಕರ್ನಾಟಕ ಆಯುರ್ವೇದ ಚಳವಳದ ಪ್ರವರ್ತಕರಾದ ಬೆಳಗಾವಿಯ ಡಾ. ಸವಣೂರವರ, ಅಧ್ಯಕ್ಷರ, ಆಯುರ್ವೇದ ಕಾಲೇಜಿಗೆ [illegible] ವಚನವನ್ನಿತ್ತ ಶೇಟ ರಾಮದಾಸರ ಮತ್ತು ಪಟ್ಟಣಗರ ಆಭಾರ ಮನ್ನಿಸಿದ ಮೇಲೆ ಸಭೆಯ ವಿಸರ್ಜನೆಯಾಯಿತು.

ವರ್ತಮಾನಸಾರ

ಮುಂಬೈ ಕರ್ನಾಟಕ

ಅಖಂಡ ಕರ್ನಾಟಕಕ್ಕೆಲ್ಲ ಒಂದೇ ಒಂದಾದ ಗದ್ಯ ನಾಟಕ ಮಂಡಳಿಯವರು ಅಂದರೆ ವಿಜಾಪುರದ ಭಾರತ ಸೇವಾ ನಾಟಕ ಮಂಡಳಿಯವರು ಧಾರವಾಡಕ್ಕೆ ಹೋದಾಗ್ಗೆ ಧಾರವಾಡಿಗರಿಂದ ಅವರಿಗೆ ತಕ್ಕ ಪ್ರೋತ್ಸಾಹನವು ದೊರೆಯಲಿಲ್ಲವಾಗಿ ತಿಳಿಯುತ್ತದೆ. ಕರ್ನಾಟಕದ ಆಧಾರಸ್ತಂಭವೆಂಬದಾಗಿ ಧಾರವಾಡಿಗರು ಜಂಬ ಬಡಿಯುವದೇಕೆಂದು ಓರ್ವ ಬಾತಮೀದಾರನು ಕೇಳುತ್ತಾನೆ ಇದಕ್ಕೆ ಧಾರವಾಡಿಗರಲ್ಲಿ ಯಾರಾದರೂ ಉತ್ತರ ಕೊಡಬಹುದೋ?

ಅದೇ ಪ್ರಕಾರವಾಗಿ ಸುವರ್ಣ ಪದಕಗಳನ್ನು ಹೊಂದಿದ ಶ್ರೀ. ಹಂಪೀಹೊಳ್ಳಿ ಬಿ. ಎ. ಇವರ "ಗಜರಾ" ನಾಟಕಕ್ಕೂ ಪ್ರೋತ್ಸಾಹನವು ಧಾರವಾಡಿಗರಿಂದ ದೊರೆತದ್ದು ಅಷ್ಟಕ್ಕಷ್ಟೇ. ಇದರಲ್ಲಿ ಶಿಕ್ಷಕರೂ, ಶಾಲೆ ಕಾಲೇಜುಗಳ ವಿದ್ಯಾರ್ಥಿಗಳೂ, ಉಳಿದ ಸುಶಿಕ್ಷಿತ ಸದ್ಗೃಹಸ್ಥರೂ ಅಭಿನಯಕಾರರು ಶ್ರೀ. ಹಂಪೀಹೊಳ್ಳಿಯವರೇ ಮುಖ್ಯ ಪಾರ್ಟ ಮಾಡಿದರು ಎಲ್ಲಿಯೂ ದೋಷವಿರದಿದ್ದರೂ ಪ್ರೇಕ್ಷಕರು ಗೊಂದಲ ಮಾಡಿದುದೇಕೆಂದು ಇನ್ನೋರ್ವ ಬಾತಮೀದಾರನು ಕೇಳುತ್ತಾನೆ ಹೂ! ಧಾರವಾಡದ ರಸಿಕರೇ, ಉತ್ತರ ಕೊಡಿ!

ಬೆಳಗಾವ ಜಿಲ್ಲೆ ಮೂಡಲಗಿಯಲ್ಲಿ ಎಲ್ಲ ವ್ಯಾಪಾರಸ್ಥರೂ ಮುಂದಿನ ವರ್ಷದಿಂದ ಕನ್ನಡದಲ್ಲಿಯೇ ತಮ್ಮ ಲೆಕ್ಕ ಪತ್ರಗಳನ್ನಿಡಬೇಕೆಂದು ನಿರ್ಧರಿಸಿದ್ದಾರೆ ಕಚ್ಚಾ ಕಿರ್ದಿಯನ್ನು ಈಗಾಗಲೇ ಕನ್ನಡದಲ್ಲಿಡಲು ಪ್ರಾರಂಭಿಸಿರುವರು. ಈ ಭಾಗದಲ್ಲಿ ಕನ್ನಡದ ಉನ್ನತಿಯ ಬಗ್ಗೆ ಉಪದೇಶಕರ ಕೊರತೆಯು ಅತಿಶಯವಿದೆ. ಮುಖಂಡರು ಇತ್ತಕಡೆಗೆ ಲಕ್ಷ ಕೊಡುವರೋ ಎಂದು ಶ್ರೀ ಸೋನವಾಲ ರಾವಜೀಯವರು ಕೇಳುತ್ತಾರೆ. ಮುಖಂಡ ಮಹನೀಯರೇ, ಸತ್ಯ ಋಷಿಗಳೇ, ಏನು ಉತ್ತರ ಕೊಡುವಿರಿ?

ಮದ್ರಾಸ ಕರ್ನಾಟಕ

ಕೊಯಿಮತ್ತೂರಿನಲ್ಲಿಯ ಬರಗಾಲದ ಕಷ್ಟಗಳ ನಿವಾರಣೆಗಾಗಿ ಭಾರತಸೇವಾ ಸಮಾಜ (ಸರ್ವಂಟ ಆಫ ಇಂಡಿಯಾ ಸೋಸಾಯಟಿ) ದವರು ಬಹು ಶ್ರಮ ಪಡುತ್ತಲಿದ್ದಾರೆ.

ದಕ್ಷಿಣಹಿಂದುಸ್ಥಾನ ಪ್ರಾಂಗತಿಕರ ಸಂಘದ ಶಾಖೆಯು ಉದಕಮಂಡಲದಲ್ಲಿ ಸ್ಥಾಪಿಸಲ್ಪಟ್ಟಿದೆ

೫೦೦ ಜನ ಸಂಖ್ಯೆಯುಳ್ಳ ಪ್ರತಿಯೊಂದು ಹಳ್ಳಿಯಲ್ಲಿಯೂ ನೀಲಗಿರಿ ಜಿಲ್ಲಾ ಬೋರ್ಡಿನವರು ಒಂದು ಪ್ರಾಥಮಿಕ ಶಾಲೆಯನ್ನು ಹಾಕಿದ್ದಾರೆ.

ಪ್ರತ್ಯೇಕ ಕರ್ನಾಟಕ ಪ್ರಾಂತ-ನಿರ್ಮಾಣೆಯ ವಿಚಾರಣೆಗಾಗಿ, ಅಧಿಕಾರಿಗಳಿಂದಲೂ, ಬಿನ್ ಅಧಿಕಾರಿಗಳಿಂದಲೂ, ಕೂಡಿದಂತಹ ಒಂದು ಕಮೀಟಿಯನ್ನು ಸರಕಾರದವರು ಬೇಗನೇ ನೇಮಿಸಬೇಕೆಂದು 'ಕೌನ್ಸಿಲ್ ಆಫ್ ಸ್ಟೇಟ' ದಲ್ಲಿ ಡಾ. ಯು. ರಾಮರಾಯರು ಒಂದು ಠರಾವನ್ನು ತರತಕ್ಕವರಿರುವರು.

ನಿಝಾಮ್ ಕರ್ನಾಟಕ

ಶ್ರೀ ವ್ಯಾಸರಾಯರ ಪೀಠಸ್ಥ ಶ್ರೀ ಕುಂದಾಪುರ ಶ್ರೀ. ಶ್ರೀ ಶ್ರೀಗಳವರು ರಾಯಚೂರಿಗೆ ಬಂದಿರುತ್ತಾರೆ. ಇಲ್ಲಿಯ ಮಠ ಮಠ ಜಗಳದೊಳಗೆ ಅವರನ್ನು ಕೂಡ ಸೇರಿಸಿ ಕೊಂಡಿರುತ್ತಾರೆ. ಅವರ ಭೋಜನವೇ ಇಲ್ಲ. ಕೇವಲ ಹಾಲು ಮೊಸರು ಅವಲಕ್ಕಿ ಮುಂತಾದ್ದರ ಮೇಲೆ ಇರುತ್ತಾರೆ. ಬಹಳ ಸಾತ್ವಿಕರು ಮತ್ತು ಉದಾರ ಮನಸ್ಸಿನವರು ಇದ್ದಾಗ್ಯೂ ಇಲ್ಲಿಯ ಉತ್ತರಾದಿ ಮಠದ ಮಠಾಧಿಕಾರಿಯಾದ ಅಗ್ನಿಹೋತ್ರಿ ಸ್ವಾಮಿ ರಾಮಾಚಾರ್ಯರು ಅವರಿಗೆ ನಿರರ್ಥಕ ಅಪವಾದಗಳನ್ನು ತಗಲಗೊಡಹತ್ತಿದ್ದಾರೆ. ಪು. ಶು ೩ ಶುಕ್ರವಾರ ದಿವಸ ಶ್ರೀ. ಶ್ರೀಗಳವರು ತಮ್ಮ ಮಠದ ಖರ್ಚಿನಿಂದ ಪೂಜೆ ಮಾಡಿದರು ಇಲ್ಲಿಯ ಸದ್ಗೃಹಸ್ಥರಿಗೆ ಆಮಂತ್ರಣವನ್ನು ಕೊಟ್ಟಿದ್ದರು ಅಂದರೆ ಉತ್ತರಾದಿ ಮಠಕ್ಕೆ ಆಮಂತ್ರಣವಿತ್ತು. ಅವತ್ತಿನ ದಿವಸವೇ ಇಲ್ಲಿಯ ರಾಯರ ಮಠದ ಶಿಷ್ಯರು ಭೋಜನದ ಹೊತ್ತಿಗೆ ಹೋದಲ್ಲಿ ಉ. ಮ. ಅಧಿಕಾರಿಗಳು ಅವರನ್ನೇ ಹೊರಗೆ ಹಾಕಿದರು. ಇವರಿಗೆ ಬ್ರಾಹ್ಮಣರೆಂದು ಯಾರನ್ನಬೇಕೊ? ತಿಳಿಯದು. ಅದೆಲ್ಲವು ಆಯಿತು, ಇದು ವರೆಗೂ ಶ್ರೀ. ಶ್ರೀಗಳವರನ್ನು ಉಭಯ ಮಠದವರು ಕರೆಯುತ್ತಿದ್ದರು. ಈ ಸಂಗತಿ ರಾಯರ ಮಠದ ಶಿಷ್ಯ ಜನರಿಗೆ ತಿಳಿದಾಗಿನಿಂದ ಶ್ರೀ. ಶ್ರೀಗಳವರ ಮೇಲೆ ಕೋಪಿಸಿಕೊಂಡು ಅವರನ್ನು ಕರೆಯಬಾರದೆಂದು ನಿರ್ಧಾರ ಮಾಡುವವರಿದ್ದಾರೆ ಇದು ವರೆಗೆ ಇವರು ಯಾರು ಕರೆದಿಲ್ಲ ಉತ್ತರಾದಿ ಮಠದ ಭಕ್ತಗಳೇ ನಡೆದಿರುವವು.

[illegible]ಸಿದ್ಧಾಂತ ಸಭಾಧ್ಯಕ್ಷರಾದ ಶ್ರೀ ಕೊಳ್ಳಿ ರಾಮಾಚಾರ್ಯರವರು ಇನ್ನಾಕ್ಷಯನಾಮ ಸಂವತ್ಸರದ ಸಭಾಪಟ್ಟಿಗೆ ಹೊರಟಿಲ್ಲ ಕೋರ್ಟ ಅಜ್ಜಿನಲ್ಲಿದೆ ಅಜ್ಜಾದ ನಂತರ ಹೊರಡತಕ್ಕವರಿದ್ದಾರೆ.

ಹಿಂದುಸ್ಥಾನ

ಸರಸ್ವತೀ ನದಿಯು ಬಂಗಾಲದಲ್ಲಿ ದೊಡ್ಡದು ಡಚ್ಚರು ಹಿಂದುಸ್ಥಾನಕ್ಕೆ ಬಂದಾಗಿನಿಂದ ೩೦೦ ವರ್ಷಗಳಿಂದಲೂ ಆ ನದಿಯಲ್ಲಿ ವ್ಯಾಪಾರದ ಹಡಗಗಳು ಅಲೆದಾಡುತ್ತಲಿದ್ದವು. ಅದರೆ ಉಸುಬಿನ ರಾಶಿಯು ಈಗ್ಗೆ ಹೇರಳವಾಗಿ ಅಲ್ಲಲ್ಲಿ ಬಿದ್ದದರಿಂದ ಹಡಗಗಳಿಗೆ ಸಂಚರಿಸಲು ಮಾರ್ಗವಿಲ್ಲ. ಅದುದರಿಂದ ದಾರಿಯಲ್ಲಿಯ ಮಳಲಿನ ರಾಶಿಗಳನ್ನು ತೆಗೆಯುವದು ಲಾಭಕರವಾಗುವದೋ ಎಂಬುದನ್ನು ವಿಚಾರಿಸಲು ಹುಗಳೀಯಲ್ಲಿ ತಜ್ಞರ ಸಭೆ ಸೇರುವದು. ಹುಗಳೀ ಜಿಲ್ಲಾ ಬೋರ್ಡಿನವರು ಈ ಬಗ್ಗೆ ತಗಲುವ ವೆಚ್ಚದ ದೊಡ್ಡ ಭಾಗವನ್ನು ವಹಿಸಲು ಸಿದ್ಧರಿದ್ದಾರೆ.

ಅಂಚೆಯ ತಿಕೀಟು, ಕಾರ್ಡ, ಮೊದಲಾದವುಗಳು ಇನ್ನು ಮೇಲೆ ವಿಲಾಯತಿಯಲ್ಲಿ ಮುದ್ರಣವಾಗವೇ, ಇದಕ್ಕಾಗಿ ನಾಶಿಕದಲ್ಲಿ ಸ್ಥಾಪಿತವಾದ ಸರಕಾರಿ ಮುದ್ರಾಲಯದಲ್ಲಿ ಸಿದ್ಧವಾಗುವವು ಹಿಂದುಸ್ಥಾನದಲ್ಲಿಯೇ ತಯಾರಾದ ಇಂತಹ ತಿಕೀಟುಗಳು ಈ ಕಾರಖಾನೆಯಿಂದ ಈಗ್ಗೆ ಹೊರಗೆ ಬಿದ್ದವು

[illegible] ಲಿಂಗಟನ್ನರು ಸ್ವಲ್ಪೇ ದಿನಗಳಲ್ಲಿ ಮದ್ರಾಸ ಪ್ರಾಂತದಲ್ಲಿ ಸಂಚರಿಸುವರು. ಆಗ್ಗೆ ಅವರು ಹಾಯ್ದು ಹೋಗುವ ಎಲ್ಲೋದ ರೇಲವೇ ಹಳಿಗಳನ್ನು ಸುಧಾರಿಸಲಿಕ್ಕೆ ಎಸ್. ಆಯ್. ಆರ್. ರೇಲ್ವೇಯವರಿಗೆ ಮದ್ರಾಸ ಸರಕಾರದವರು ಅವರ ವೆಚ್ಚಕ್ಕಾಗಿ ೧೬,೦೨೪ ರೂ ಕೊಡಬೇಕಂತೆ! ಓರ್ವ ವ್ಯಕ್ತಿಯ ಒಂದು ಕ್ಷಣದ ಹಾಯುವಿಕೆಗಾಗಿ ೧೬ ಸಾವಿರ ರೂಪಾಯಿಗಳು ಬೇಕಂತೆ! ಅಂತೆಯೇ ಹಿಂದುಸ್ಥಾನದಲ್ಲಿ ದಾರಿದ್ರ್ಯವು ತಪ್ಪದು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲವಾಡ ದವಾಖಾನೆ ವಾಯ, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಲಾ.

(೪) ಬಾಂಡ ನಂ. ೧೬೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೫೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಆಮಳ ಪುರಮ್.

೧-೮-೨೫ | ಬಿ. ಎಸ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE
IN LIFE ASSURANCE
GO TO **THEORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ
ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ
ರಚಿತವಾದ ಸಚಿತ್ರ ಸಂಗೀತ ನಾಟಕಗಳು
ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ
ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ. } ಅಂಚೇವೆಚ್ಚ
ಶಿಕ್ಷಣಸಂಭ್ರಮ ಬೆಲೆ ೧ ರೂ. } ಬೇರೆ
ವಿಳಾಸ:—ಗ್ರಂಥಕರ್ತ ಗದಗ

ಮಾರತಕ್ಕದ್ದಿದೆ.

ಸುಪರ್ ರಾಯಲ್ ಆಕಾರದ ಹ್ಯಾಂಡ ಪ್ರೆಸ್ ಮತ್ತು ಪ್ರೂಫ ಪ್ರೆಸ್ಸಗಳನ್ನು ಮಾರತಕ್ಕವರಿದ್ದೇವೆ. ಇವು ಒಳ್ಳೇ ಸ್ಥಿತಿಯಲ್ಲಿದ್ದು ಚನ್ನಾಗಿ ಕೆಲಸ ಕೊಡುತ್ತವೆ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಆರೋಗ್ಯಚಂದ್ರಿಕೆ

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ, ಎಮ್. ಎಲ್ ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾವೊಂದಕ್ಕೆ ವರ್ಷಕ್ಕೆ ೧-೮-೦ ಬಿಡಿಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ- ' ಆರೋಗ್ಯಚಂದ್ರಿಕೆ '
೩೨೨, ತಂಬುಶೆಟ್ಟಿಬೀದಿ, ಮದ್ರಾಸ

ಕಿರ್ಲೋಸ್ಕರವಾರ್ತೆ

ಸಂಪಾದಕ ಹಾಗೂ ಪ್ರಕಾಶಕ-ಶ್ರೀ. ಲ. ಕೃ. ಬಾಗಲವಾಡ್ಕರ ಯುವಿಕಾರಪ

ಇದೊಂದು ತಿಳಿಗನ್ನಡ ಮಾಸಪತ್ರಿಕೆಯು ಇದರಲ್ಲಿ ಕರ್ನಾಟಕ- ತರುಣರ ಉನ್ನತಿಯಾಗುವದಕ್ಕೆ ಅವಶ್ಯವಾದ ಲೇಖಗಳು ಪ್ರಕಟವಾಗುತ್ತವೆ ಇದನ್ನು ನಿಯಮಿತವಾಗಿ ಓದುವದರಿಂದ ತರುಣರ ಆತ್ಮ ವಿಶ್ವಾಸವು ಜಾಗೃತಿಗೊಳ್ಳುವದು.

ವಾರ್ಷಿಕಚಂದಾ ೧| ರೂ. ಮಾದರಿ ಸಂಚಿಕೆ ಪುಕ್ಕಟ.
ಇಂದೇ ಕಾಗದವನ್ನು ಬರೆದು ತರಿಸಿಕೊಳ್ಳಿರಿ.

ಕಿರ್ಲೋಸ್ಕರವಾರ್ತೆ } ಕಿರ್ಲೋಸ್ಕರವಾಡಿ
ಜಿಲ್ಲಾ ಸಾತಾರೆ

ಗ್ರಾಮಸ್ಥರ ಮತ್ತು ವಕೀಲರ ನಮೂನೆಗಳು

ನಮ್ಮ ಮುದ್ರಾಮಂದಿರದಲ್ಲಿ ಗ್ರಾಮಸ್ಥರ ನಮೂನೆ ನಂಬರ ೧; ೧೪; ಮತ್ತು ೧೬ ದೊರೆಯುತ್ತವೆ. ಬೇರೆ ನಮೂನೆಗಳು ಬೇಕಾದಲ್ಲಿ ಮುದ್ರಿಸಿ ಕೊಡುವೆವು.

ವಕೀಲರಿಗೆ ಬೇಕಾಗುವ ಬೇರೆ ಬೇರೆ ನಮೂನೆಗಳು ಮಾತ್ರ ಲಿಕ್ಕ ದೊರೆಯುತ್ತವೆ.

ಮುದ್ರಣ, ರೂಲಿಂಗ, ಬಾಯಿಂಡಿಂಗ ಕೆಲಸಗಳು ನಮ್ಮಲ್ಲಿ ದಕ್ಷತೆಯಿಂದ ಮಾಡಲ್ಪಡುವವು.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಕನ್ನಡ ನವಜೀವನ.

ಈ ವಾರಪತ್ರಿಕೆಯ ಪ್ರಥಮ ಸಂಪುಟದ ಸಂಚಿಕೆಗಳನ್ನೆಲ್ಲ ಬಾಯಿಂಡ ಮಾಡಿಸಿ ಇಟ್ಟಿದೆ. ಅಸಹಕಾರದ ಘುಂಘುಮಾತದಲ್ಲಿ ಮಹಾತ್ಮರ ಲೆಕ್ಕಣಿಕೆಯಿಂದ ಹೊರಸೂಸಿದ ಅಮೃತಮಯ ಲೇಖಗಳನ್ನು ಓದುವ ಇಚ್ಛೆಯಿದ್ದರೆ ಇಂದೇ ಪತ್ರ ಬರೆಯಿರಿ. ಪ್ರತಿಗಳು ಸ್ವಲ್ಪೇ ಉಳಿದಿವೆ. ಸಾದಾ ಬೈಂಡ ೬ ರೂ ತೊಗಲಿನ ಬೈಂಡ ೮-೮-೦.

ವ್ಯವಸ್ಥಾಪಕ,
"ಕನ್ನಡಿಗ" ಬಾಗಲಕೋಟೆ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. . ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಶುದ್ಧ ೧ ಶಕೆ ೧೮೪೭. ತಾ|| ೧೫-೧-೧೯೨೬ | ಸಂಚಿಕೆ ೪೦

ಸಂಪಾದಕನ ಭೂಮಿ.

(*)

ನನ್ನ ಮನಸಿನ ಮೋಹಮೂಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ದೊಮ್ಮಿ ।
ಚಿನ್ನದಾದರು ಚಿನ್ನ ಮೋಹಬಸ್ತಿಯ ನೊಂದು
ಚಿನ್ಮಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ವೀರಶಾಸನಕ್ಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ
ಗಂಧವಹವೆಂದು ತಿಳಿಯೆ ॥

—ಅಂಜಿಕಾಕನಯ ದತ್ತ

ಹುಬ್ಬಳ್ಳಿಯು ಕರ್ನಾಟಕದಲ್ಲಿ ವ್ಯಾಪಾರದ ಕೇಂದ್ರ ಸ್ಥಾನವಾಗಿರಲಿಕ್ಕೆ, ಅಲ್ಲಿದ್ದ ರೇಲವೇ ಸೌಕರ್ಯವು ಮುಖ್ಯವಾದ ಕಾರಣವು. ಈಗ್ಗೆ ಹುಬ್ಬಳ್ಳಿಯ ಮೇಲೆ ರೇಲವೇ ಕಂಪನಿಯವರು ಒಂದು ಗದೆಯುತ್ತಿರುವರೆಂಬ ಸುದ್ದಿಯಿದೆ. ಮದ್ರಾಸ ಸದರ್ನ ಮರಾಠಾ ರೇಲವೇ ಕಂಪನಿಯವರು ಹುಬ್ಬಳ್ಳಿಯಲ್ಲಿಯೂ, ಮದ್ರಾಸಿನಲ್ಲಿಯೂ ಒಂದೊಂದು "ವರ್ಕಶಾಪ" ಸ್ಥಾಪಿಸಿರುವರು. ಸಣ್ಣ ಹಳಿಗಳಿಗೆ (ಮೀಟರಗೇಜ) ಬೇಕಾಗುವ ಸಾಮಗ್ರಿಗಳು ಹುಬ್ಬಳ್ಳಿಯ 'ವರ್ಕಶಾಪ'ನಲ್ಲಿಯೂ ದೊಡ್ಡ ಹಳಿಗಳಿಗೆ (ಬ್ರಾಡಗೇಜ) ಬೇಕಾಗುವ ಸಾಮಗ್ರಿಗಳು ಮದ್ರಾಸಿನಲ್ಲಿಯೂ ಸಿದ್ಧವಾಗುತ್ತವೆ. ಆದರೆ ಹೀಗೆರಡು ಸ್ಥಳಗಳಲ್ಲಿ ಬೇರೆ ಬೇರೆ 'ವರ್ಕಶಾಪು' ಗಳಿರುವದರಿಂದ ರೇಲವೇ ಕಂಪನಿಯವರಿಗೆ ವೆಚ್ಚವು ಹೆಚ್ಚಾಗಿ ಬರುವದಂತೆ. ಆದ್ದರಿಂದ ಹುಬ್ಬಳ್ಳಿಯಲ್ಲಿಯ 'ವರ್ಕಶಾಪ'ನ್ನು ಸಹ ಮದ್ರಾಸಿಗೆ ಒಯ್ಯುವ ವಿಚಾರವು ಹೊರಟಿದೆಯಂತೆ. ಆದರೆ ಸಣ್ಣ ಹಳಿಗಳ (ಮೀಟರ ಗೇಜಿನ) ಡಬ್ಬಿಗಳೂ, ಇಂಜಿನುಗಳೂ ದೊಡ್ಡ ಹಳಿಗಳುಳ್ಳ ಮದ್ರಾಸದ ವರೆಗೆ ಹೋಗುವಂತಿಲ್ಲ. ಈ ಆತಂಕವನ್ನು ದೂರಮಾಡಲಿಕ್ಕೆ ತಿರುಪತಿ ಸ್ಟೇಶನ್‌ದಿಂದ ಮದ್ರಾಸದ ವರೆಗೆ ಸಣ್ಣ ಹಳಿಗಳನ್ನು ಹಾಕುವ ಯೋಜನೆಯನ್ನು ಮಾಡಿದ್ದು, ಅದು ಇಷ್ಟರಲ್ಲಿಯೇ ಮೂರ್ತ ಸ್ವರೂಪವನ್ನು ಹೊಂದಲಿಕ್ಕಿರುವದಂತೆ ಆದಾಯಿತೆಂದರೆ ಹುಬ್ಬಳ್ಳಿಯಲ್ಲಿಯ 'ವರ್ಕಶಾಪ'ನ್ನು ಕಿತ್ತುವರಂತೆ. ಈ ಬಗೆಯ ಒಂದು ಗುಪ್ತ ಸಂಗತಿಯನ್ನು ಒಂದು 'ಹಂ. ಗುಪ್ತಿಯು' 'ನಮ್ಮ ಕಿವಿಯಲ್ಲಿ ನುಡಿದಿದೆ. ಈ ಸುದ್ದಿಯು ನಿಜವಿದ್ದರೆ ಹುಬ್ಬಳ್ಳಿಯ ಮಹತ್ವವು ಅತಿಶಯವಾಗಿ ಕಡಿಮೆಯಾಗುವದು. ಆದುದರಿಂದ ಈ ಬಗ್ಗೆ ಸತ್ಯವಾದ ಸಂಗತಿಗಳನ್ನು ಕಾಯದೇ ಮಂಡಲಗಳ ಕರ್ನಾಟಕದ ಸಭಾಸದರು ಹೊರಗೆಡಿವಿ, ಈ ಸಂಗತಿಯು ನಿಜವಿದ್ದರೆ ಈಗಿನಿಂದಲೇ ಹುಬ್ಬಳ್ಳಿಯನ್ನು ಹಾಳುಗೆಡಹುವ ವಿಚಾರದ ಪ್ರತೀಕಾರವನ್ನು ಮಾಡಬೇಕು. ಹಿಂದಕ್ಕೆ ಧಾರವಾಡದಲ್ಲಿದ್ದ 'ಹೆಡ್ ಆಫೀಸ' ಮದ್ರಾಸಕ್ಕೆ ಹೋಯಿತು. ಈಗ್ಗೆ ಈ 'ವರ್ಕಶಾಪ' ಸಹ ಹೋಗಬಹುದು. ಕರ್ನಾಟಕದಿಂದ ಪುಷ್ಟವಾಗುವ ರೇಲವೇ ಕಾರ್ಯಾಲಯಗಳು ಕರ್ನಾಟಕದಲ್ಲಿರುವದೇ ಯೋಗ್ಯವು. ಕಾಯದೇ ಮಂಡಲಗಳಲ್ಲಿರುವ ಕರ್ನಾಟಕದ ಸಭಾಸದರೇ, ನೀವು ಈ ವಿಷಯದಲ್ಲಿ ಬೇಗನೇ ವಿಚಾರ ಮಾಡುವಿರೋ?

ಗದಗ ಬೆಟಗೇರಿಗಳ ಮಧ್ಯದಲ್ಲಿರುವ ರಾಜಬೀದಿಯಲ್ಲಿ ರೇಲವೇದ ದಾರಿಯು ಅಡ್ಡಬರುವದರಿಂದ ಅಲ್ಲಿ ಅಡ್ಡಾಡುವ ಪ್ರವಾಸಿಕರಿಗೆ ಯಾವಾಗಲೂ ತೊಂದರೆಯಾಗುತ್ತದೆ. ಮೇಲಾಗಿ ಸಾಮಾನುಗಳನ್ನು ಹೇರಿಕೊಂಡು ಹೋಗುವ ಚಕ್ಕಡಿಗಳ ಗೋಳಾಟವನ್ನಂತೂ ಹೇಳಲಾಗಿಲ್ಲ. ಟಾಂಗಾ, ಮೋಟಾರ, ಸಾಯಕಲ್ಲ ಮೊದಲಾದ ನಾನಾತರದ ವಾಹನಗಳು ಬಹುವೇಳೆಯವರೆಗೆ ಹಾದಿಕಾಯುತ್ತ ನಿಲ್ಲಬೇಕಾಗುತ್ತವೆ. ರಾಜಬೀದಿಯಲ್ಲಿ ಹೀಗೆ ಅನೇಕ ಕಾಲದ ವರೆಗೆ ಮೇಲಿಂದ ಮೇಲೆ ವಾಹನಗಳು ನಿಲ್ಲುವದರಿಂದ ಎಂಥ ಕಷ್ಟವಾಗುವದೆಂಬುದು ಯಾರಿಗಾದರೂ ತಿಳಿಯಬಹುದಾಗಿದೆ ಆದರೆ ಇಷ್ಟು ದಿನಗಳ ವರೆಗೂ ರೇಲವೇಯವರು ಇತ್ತ ಕಡೆಗೆ ಲಕ್ಷ್ಯಕೊಡಲಿಲ್ಲ. ನಗರ ಪಿತಾಮಹರೂ ಕಣ್ಣೆತ್ತಿ ನೋಡಲಿಲ್ಲ ಈಗ್ಗೆ ಪುರಜನರೆಲ್ಲ ಕೂಡಿ ಮುನಸೀಪಾಲ್ಟಿಗೆ ಅರ್ಜಿ ಮಾಡಿರುವರೆಂದೂ, ಮುನಸೀಪಾಲ್ಟಿಯವರು ರೇಲವೇ ಅಧಿಕಾರಿಗಳಿಗೆ ಬರೆದು, ಈ ರಾಜ ಬೀದಿಯಲ್ಲಿ ಕಮಾನನ್ನು ನಿಲ್ಲಿಸಿ ಅದರ ಮೇಲಿಂದ ರೇಲವೇ ಹಾಯ್ದು ಹೋಗುವ ಹಾಗೆ ಮಾಡಬೇಕೆಂದೂ ಕೇಳಿದ್ದಾರಂತೆ. ಇದು ನಿಜವಿದ್ದರೆ ಸ್ತುತ್ಯವಾದುದು. ನಿಜವಿಲ್ಲವಾದರೆ ಪುರಜನರು ಹೀಗೆ ಮುನಸೀಪಾಲ್ಟಿಯ ಕಿವಿಹಿಂಡುವದರಲ್ಲಿ ತ್ವರೆಮಾಡಬೇಕು ಈ ಬಗ್ಗೆ ಪುರಜನರಿಗೆ ಸಹಾಯ ಮಾಡಲು 'ಕನ್ನಡಿಗ'ನೂ ಸಿದ್ಧನಿರುವನು. ಈ ವಿಷಯದಲ್ಲಿ ಮುಂದಾದ ಗದಗಿನ ಉತ್ಸಾಹೀ ಜನರು ಸವಿಸ್ತರವಾಗಿ ಮುನಸೀಪಾಲ್ಟಿಗೂ, ವೃತ್ತಪತ್ರಗಳಿಗೂ. ರೇಲವೇ ಅಧಿಕಾರಿಗಳಿಗೂ, ಸರಕಾರಕ್ಕೂ, ಕಾಯದೇ ಮಂಡಲಗಳ ಸಭಾಸದರಿಗೂ ಬರೆಯಬೇಕು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ
ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲವಾಡ ದವಾಖಾನೆ ವಾಯ, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಲಾ.

(೪) ಬಾಂಡ ನಂ. ೧೭೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೩೫ { **ಬಿ. ಎನ್. ಆರಾಧ್ಯ** ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE
IN LIFE ASSURANCE
GO TO **THEORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ
ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ
ರಚಿತವಾದ ಸಚಿತ್ರ ಸಂಗೀತ ನಾಟಕಗಳು
ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ
ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ. } **ಅಂಚೆವೆಚ್ಚ**
ಶಿಕ್ಷಣಸಂಭ್ರಮ ಬೆಲೆ ೧ ರೂ. } **ಬೇರೆ**

ವಿಳಾಸಃ—ಗ್ರಂಥಕರ್ತೃ ಗದಗ

ಮಾರತಕ್ಕದ್ದಿದೆ.

ಸುಪರ್ ರಾಯಲ್ ಆಕಾರದ ಹ್ಯಾಂಡ ಪ್ರೆಸ್ ಮತ್ತು ಪ್ರೂಫ ಪ್ರೆಸ್ಸಗಳನ್ನು ಮಾರತಕ್ಕವರಿದ್ದೇವೆ. ಇವು ಒಳ್ಳೇ ಸ್ಥಿತಿಯಲ್ಲಿದ್ದು ಚನ್ನಾಗಿ ಕೆಲಸ ಕೊಡುತ್ತವೆ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಆರೋಗ್ಯಚಂದ್ರಿಕೆ

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ,
ಎಮ್. ಎಲ್ ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರ ಮಾಸಪತ್ರಿಕೆ.

ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವೊಬ್ಬರಿಗು ವರ್ಷಕ್ಕೆ ೧-೮-೦ ಬಿಡಿಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

ಪತ್ರವ್ಯವಹಾರ- 'ಆರೋಗ್ಯಚಂದ್ರಿಕೆ'
೩೨೩, ತಂಬುಶೆಟ್ಟಿಬೀದಿ, ಮದ್ರಾಸ

ಕಿರ್ಲೋಸ್ಕರವಾರ್ತೆ

ಸಂಪಾದಕ ಹಾಗೂ ಪ್ರಕಾಶಕ-ಶ್ರೀ. ಅ. ಕೃ. ಬಾಗಲ ವಾಙ್ಮಯವಿಶಾರದ

ಇದೊಂದು ತಿಳಿಗನ್ನಡ ಮಾಸಪತ್ರಿಕೆಯು ಇದರಲ್ಲಿ ಕರ್ನಾಟಕ- ತರುಣರ ಉನ್ನತಿಯಾಗುವದಕ್ಕೆ ಅವಶ್ಯವಾದ ಲೇಖಗಳು ಪ್ರಕಟವಾಗುತ್ತವೆ. ಇದನ್ನು ನಿಯಮಿತವಾಗಿ ಓದುವದರಿಂದ ತರುಣರ ಆತ್ಮ ವಿಶ್ವಾಸವು ಜಾಗೃತಿಗೊಳ್ಳುವದು.

ವಾರ್ಷಿಕಚಂದಾ ೧| ರೂ. ಮಾದರಿ ಸಂಚಿಕೆ ಪುಕ್ಕಟ.
ಇಂದೇ ಕಾಗದವನ್ನು ಬರೆದು ತರಿಸಿಕೊಳ್ಳಿರಿ.

ಕಿರ್ಲೋಸ್ಕರವಾರ್ತೆ } **ಕಿರ್ಲೋಸ್ಕರವಾಡಿ** ಜಿಲ್ಲಾ ಸಾತಾರೆ

ಗ್ರಾಮಸ್ಥರ ಮತ್ತು ವಕೀಲರ ನಮೂನೆಗಳು

ನಮ್ಮ ಮುದ್ರಾಮಂದಿರದಲ್ಲಿ ಗ್ರಾಮಸ್ಥರ ನಮೂನೆ ನಂಬರ ೧; ೧೪; ಮತ್ತು ೧೭ ದೊರೆಯುತ್ತವೆ. ಬೇರೆ ನಮೂನೆಗಳು ಬೇಕಾದಲ್ಲಿ ಮುದ್ರಿಸಿ ಕೊಡುವೆವು.

ವಕೀಲರಿಗೆ ಬೇಕಾಗುವ ಬೇರೆ ಬೇರೆ ನಮೂನೆಗಳು ಮಾರಲಿಕ್ಕೆ ದೊರೆಯುತ್ತವೆ

ಮುದ್ರಣ, ರೂಲಿಂಗ, ಬಾಯಿಂಡಿಂಗ ಕೆಲಸಗಳು ನಮ್ಮಲ್ಲಿ ದಕ್ಷತೆಯಿಂದ ಮಾಡಲ್ಪಡುವವು.

ವಿದ್ಯಾರಣ್ಯ ಮುದ್ರಾ ಮಂದಿರ **ಬಾಗಲಕೋಟೆ**

ಕನ್ನಡ ನವಜೀವನ.

ಈ ವಾರಪತ್ರಿಕೆಯ ಪ್ರಥಮ ಸಂಪುಟದ ಸಂಚಿಕೆಗಳನ್ನೆಲ್ಲ ಬಾಯಿಂಡ ಮಾಡಿಸಿ ಇಟ್ಟಿದೆ. ಅಸಹಕಾರದ ಝುಂಝಾವಾತದಲ್ಲಿ ಮಹಾತ್ಮರ ಲೆಕ್ಕಣಿಕೆಯಿಂದ ಹೊರಸೂಸಿದ ಅಮೃತಮಯ ಲೇಖಗಳನ್ನು ಓದುವ ಇಚ್ಛೆಯಿದ್ದರೆ ಇಂದೇ ಪತ್ರ ಬರೆಯಿರಿ. ಪ್ರತಿಗಳು ಸ್ವಲ್ಪೇ ಉಳಿದಿವೆ. ಸಾದಾ ಬೈಂಡ ೬ ರೂ ತೊಗಲಿನ ಬೈಂಡ ೮-೮-೦.

ವ್ಯವಸ್ಥಾಪಕ,
"ಕನ್ನಡಿಗ" ಬಾಗಲಕೋಟೆ

ಈ ಪತ್ರಿಕೆಯು ಮಂಗಳವೇಢೆ ರಾಮೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ
ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಪಡಿಸಲ್ಪಟ್ಟಿತು.

ರ. ನಂ. ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ನವಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ } ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಶುದ್ಧ ೧ ಶಕೆ ೧೮೪೭. ತಾ॥ ೧೫-೧-೧೯೨೬. { ಸಂಚಿಕೆ ೪೦

ಸಂಪಾದಕನ ಭೂಮಿ.

(*)

ನನ್ನ ಮನಸಿನ ಮೋಹಮೂಡಿ ಕಟ್ಟುವೆನಾನು ।
ನಿನ್ನ ಜೀವನವ ಮಾಡಿದಂಥ ಮುಕ್ಕಳ ದೊಮ್ಮ ।
ಚಿನ್ನದಾದರು ಚಿನ್ನ ಮೋಹಬತ್ತಿಯ ನೊಂದು
ಚಿನ್ಮಯಾಕಾಶದಲ್ಲಿ ॥

ನನ್ನ ದೇಹವು ನಿನ್ನ ಮೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ
ಗಂಧವಹವೆಂದು ತಿಳಿಯೆ ॥

— ಅಂಬಿಕಾತನಯ ದತ್ತ

ಹುಬ್ಬಳ್ಳಿಯು ಕರ್ನಾಟಕದಲ್ಲಿ ವ್ಯಾಪಾರದ ಕೇಂದ್ರ ಸ್ಥಾನವಾಗಿರಲಿಕ್ಕೆ, ಅಲ್ಲಿದ್ದ ರೇಲವೇ ಸೌಕರ್ಯವು ಮುಖ್ಯವಾದ ಕಾರಣವು. ಈಗ್ಗೆ ಹುಬ್ಬಳ್ಳಿಯ ಮೇಲೆ ರೇಲವೇ ಕಂಪನಿಯವರು ಒಂದು ಗದೆಯತ್ತಿರುವರೆಂಬ ಸುದ್ದಿಯಿದೆ. ಮದ್ರಾಸ ಸದರ್ನ ಮರಾಠಾ ರೇಲವೇ ಕಂಪನಿಯವರು ಹುಬ್ಬಳ್ಳಿಯಲ್ಲಿಯೂ, ಮದ್ರಾಸಿನಲ್ಲಿಯೂ ಒಂದೊಂದು "ವರ್ಕಶಾಪ" ಸ್ಥಾಪಿಸಿರುವರು. ಸಣ್ಣ ಹಳಿಗಳಿಗೆ (ಮೀಟರಗೇಜ) ಬೇಕಾಗುವ ಸಾಮಗ್ರಿಗಳು ಹುಬ್ಬಳ್ಳಿಯ 'ವರ್ಕಶಾಪ'ನಲ್ಲಿಯೂ ದೊಡ್ಡ ಹಳಿಗಳಿಗೆ (ಬ್ರಾಡಗೇಜ) ಬೇಕಾಗುವ ಸಾಮಗ್ರಿಗಳು ಮದ್ರಾಸಿನಲ್ಲಿಯೂ ಸಿದ್ಧವಾಗುತ್ತವೆ. ಆದರೆ ಹೀಗೆರಡು ಸ್ಥಳಗಳಲ್ಲಿ ಬೇರೆ ಬೇರೆ 'ವರ್ಕಶಾಪು' ಗಳಿರುವದರಿಂದ ರೇಲವೇ ಕಂಪನಿಯವರಿಗೆ ವೆಚ್ಚವು ಹೆಚ್ಚಾಗಿ ಬರುವದಂತೆ. ಆದ್ದರಿಂದ ಹುಬ್ಬಳ್ಳಿಯಲ್ಲಿಯ 'ವರ್ಕಶಾಪ'ನ್ನು ಸಹ ಮದ್ರಾಸಿಗೆ ಒಯ್ಯುವ ವಿಚಾರವು ಹೊರಟಿದೆಯಂತೆ. ಆದರೆ ಸಣ್ಣ ಹಳಿಗಳ (ಮೀಟರ ಗೇಜಿನ) ಡಬ್ಬಿಗಳೂ, ಇಂಜಿನುಗಳೂ ದೊಡ್ಡ ಹಳಿಗಳ ಮೇಲೆ ಮದ್ರಾಸದ ವರೆಗೆ ಹೋಗುವಂತಿಲ್ಲ. ಈ ಆತಂಕವನ್ನು ದೂರಮಾಡಲಿಕ್ಕೆ ತಿರುಪತಿ ಸ್ಟೇಶನ್‌ದಿಂದ ಮದ್ರಾಸದ ವರೆಗೆ ಸಣ್ಣ ಹಳಿಗಳನ್ನು ಹಾಕುವ ಯೋಜನೆಯನ್ನು ಮಾಡಿದ್ದು, ಅದು ಸ್ವಲ್ಪರಲ್ಲಿಯೇ ಮೂರ್ತ ಸ್ವರೂಪವನ್ನು ಹೊಂದಲಿಕ್ಕಿರುವದಂತೆ. ಹೀಗಾಯಿತೆಂದರೆ ಹುಬ್ಬಳ್ಳಿಯಲ್ಲಿಯ 'ವರ್ಕಶಾಪ'ನ್ನು ಕಿತ್ತುವ [illegible]ಕೆ. ಈ ಬಗೆಯ ಒಂದು ಗುಪ್ತ ಸಂಗತಿಯನ್ನು ಒಂದು '[illegible] ಗುಬ್ಬಿಯು' ನಮ್ಮ ಕಿವಿಯಲ್ಲಿ ನುಡಿದಿದೆ. ಈ ಸುದ್ದಿಯು ನಿಜವಿದ್ದರೆ ಹುಬ್ಬಳ್ಳಿಯ ಮಹತ್ವವು ಅತಿಶಯವಾಗಿ ಕಡಿಮೆಯಾಗುವದು. ಆದುದರಿಂದ ಈ ಬಗ್ಗೆ ಸತ್ಯವಾದ ಸಂಗತಿಗಳನ್ನು ಕಾಯದೇ ಮಂಡಲಗಳ ಕರ್ನಾಟಕದ ಸಭಾಸದರು ಹೊರಗೆಡಿವಿ, ಈ ಸಂಗತಿಯು ನಿಜವಿದ್ದರೆ ಈಗಿನಿಂದಲೇ ಹುಬ್ಬಳ್ಳಿಯನ್ನು ಹಾಳುಗೆಡಹುವ ವಿಚಾರದ ಪ್ರತೀಕಾರವನ್ನು ಮಾಡಬೇಕು. ಹಿಂದಕ್ಕೆ ಧಾರವಾಡದಲ್ಲಿದ್ದ 'ಹೆಡ್ ಆಫೀಸ' ಮದ್ರಾಸಕ್ಕೆ ಹೋಯಿತು. ಈಗ್ಗೆ ಈ 'ವರ್ಕಶಾಪ' ಸಹ ಹೋಗಬಹುದು. ಕರ್ನಾಟಕದಿಂದ ಪುಷ್ಟವಾಗುವ ರೇಲವೇ ಕಾರ್ಯಾಲಯಗಳು ಕರ್ನಾಟಕದಲ್ಲಿರುವದೇ ಯೋಗ್ಯವು. ಕಾಯದೇ ಮಂಡಲಗಳಲ್ಲಿರುವ ಕರ್ನಾಟಕದ ಸಭಾಸದರೇ, ನೀವು ಈ ವಿಷಯದಲ್ಲಿ ಬೇಗನೇ ವಿಚಾರ ಮಾಡುವಿರೋ?

ಗದಗ ಬೆಟಗೇರಿಗಳ ಮಧ್ಯದಲ್ಲಿರುವ ರಾಜಬೀದಿಯಲ್ಲಿ ರೇಲವೇದ ದಾರಿಯು ಅಡ್ಡಬರುವದರಿಂದ ಅಲ್ಲಿ ಅಡ್ಡಾಡುವ ಪ್ರವಾಸಿಕರಿಗೆ ಯಾವಾಗಲೂ ತೊಂದರೆಯಾಗುತ್ತದೆ. ಮೇಲಾಗಿ ಸಾಮಾನುಗಳನ್ನು ಹೇರಿಕೊಂಡು ಹೋಗುವ ಚಕ್ಕಡಿಗಳ ಗೋಳಾಟವನ್ನಂತೂ ಹೇಳಲಾಗಲ್ಲ. ಟಾಂಗಾ, ಮೋಟಾರ, ಸಾಯಕಲ್ಲ ಮೊದಲಾದ ಯಾವತ್ತು ತರದ ವಾಹನಗಳು ಬಹುವೇಳೆಯವರೆಗೆ ದಾರಿಕಾಯುತ್ತ ನಿಲ್ಲಬೇಕಾಗುತ್ತವೆ. ರಾಜಬೀದಿಯಲ್ಲಿ ಹೀಗೆ ಅನೇಕ ಕಾಲದ ವರೆಗೆ ಮೇಲಿಂದ ಮೇಲೆ ವಾಹನಗಳು ನಿಲ್ಲುವದರಿಂದ ಎಂಥಾ ಕಷ್ಟವಾಗುವದೆಂಬದು ಯಾರಿಗಾದರೂ ತಿಳಿಯಬಹುದಾಗಿದೆ. ಆದರೆ ಇಷ್ಟು ದಿನಗಳ ವರೆಗೂ ರೇಲವೇಯವರು ಇತ್ತ ಕಡೆಗೆ ಲಕ್ಷ್ಯಗೊಡಲಿಲ್ಲ. ನಗರ ಪಿತಾಮಹರೂ ಕಣ್ಣೆತ್ತಿ ನೋಡಲಿಲ್ಲ. ಈಗ್ಗೆ ಪುರಜನರೆಲ್ಲ ಕೂಡಿ ಮುನಸೀಪಾಲ್ಟಿಗೆ ಅರ್ಜಿ ಮಾಡಿರುವರೆಂದೂ, ಮುನಸೀಪಾಲ್ಟಿಯವರು ರೇಲವೇ ಅಧಿಕಾರಿಗಳಿಗೆ ಬರೆದು, ಈ ರಾಜಬೀದಿಯಲ್ಲಿ ಕಮಾನನ್ನು ನಿಲ್ಲಿಸಿ ಅದರ ಮೇಲಿಂದ ರೇಲವೇ ಹಾಯ್ದು ಹೋಗುವ ಹಾಗೆ ಮಾಡಬೇಕೆಂದೂ ಕೇಳಿದ್ದಾರಂತೆ. ಇದು ನಿಜವಿದ್ದರೆ ಸ್ತುತ್ಯವಾದುದು. ನಿಜವಿಲ್ಲವಾದರೆ ಪುರಜನರು ಹೀಗೆ ಮುನಸೀಪಾಲ್ಟಿಯ ಕಿವಿಹಿಂಡುವದರಲ್ಲಿ ತ್ವರೆಮಾಡಬೇಕು. ಈ ಬಗ್ಗೆ ಪುರಜನರಿಗೆ ಸಹಾಯ ಮಾಡಲು 'ಕನ್ನಡಿಗ'ನೂ ಸಿದ್ಧನಿರುವನು. ಈ ವಿಷಯದಲ್ಲಿ ಮುಂದಾದ ಗದಗಿನ ಉತ್ಸಾಹೀ ಜನರು ಸವಿಸ್ತರವಾಗಿ ಮುನಸೀಪಾಲ್ಟಿಗೂ, ವೃತ್ತಪತ್ರಗಳಿಗೂ, ರೇಲವೇ ಅಧಿಕಾರಿಗಳಿಗೂ, ಸರಕಾರಕ್ಕೂ, ಕಾಯದೇ ಮಂಡಲಗಳ ಸಭಾಸದರಿಗೂ ಬರೆಯಬೇಕು.

ಕರ್ನಾಟಕವೆಂದರೆ ಸರಕಾರಕ್ಕೆ ತೊತ್ತಿನ ಮಕ್ಕಳಂತೆ ಭಾಸವಾಗುತ್ತಿರುವದು ಅಂತೆಯೇ ಮುಂಬೈ ಸರಕಾರವಾಗಲಿ, ಮದ್ರಾಸ ಸರಕಾರವಾಗಲಿ, ಕನ್ನಡ ಭಾಗಗಳ ಕೊರತೆಗಳ ಕಡೆಗೆ ಲಕ್ಷಕೊಡರು ಧಾರವಾಡದ ಕರ್ನಾಟಕ ಕಾಲೇಜದಲ್ಲಿ ಕನ್ನಡ ಪಂಡಿತರಿಲ್ಲದೇ ಆರು ತಿಂಗಳುಗಳು ಸಂಪೂರ್ಣವಾಗಿ ಸಂದಿದವು. ಎಲ್ಲ ಕಡೆಗೂ ಬೊಬ್ಬಾಟವೆದ್ದ ಮೇಲೆ ಕನ್ನಡ ಪಂಡಿತರ ಯೋಜನೆ ಯಾಯಿತು. ಈಗ್ಗ ಅದೇ ಕಾಲೇಜದಲ್ಲಿ ಗಣಿತ ಪಂಡಿತರಿಲ್ಲದೇ ಎರಡು ತಿಂಗಳುಗಳಾದರೂ, ಸರಕಾರದವರು ಯಾರನ್ನೂ ನೇಮಿಸಿಲ್ಲವೆಂಬವಾಗಿ ಕರ್ನಾಟಕ ಟಾಯಿಮ್ಸದಿಂದ ತಿಳಿಯುತ್ತದೆ ವಿದ್ಯಾರ್ಥಿಗಳೆಲ್ಲ ಗಣಿತ ತಾಸಿನಲ್ಲಿ ಮನೆಗೆ ಹೋಗಬೆಕಂತೆ ಇದೊಳ್ಳೇ ವಿದ್ಯಾರ್ಥಿಗಳಲ್ಲಿರುವ ವಾತ್ಸಲ್ಯ! ಕರ್ನಾಟಕ ಕಾಲೇಜು ಎಂದ ಮಾತ್ರಕ್ಕೆ ಪಂಡಿತರಾರೂ ಸರಕಾರಕ್ಕೆ ದೊರೆಯುವದಿಲ್ಲ. ಹೀಗೇ ಮೇಲಿಂದ ಮೇಲೆ ಸ್ಥಳಗಳನ್ನು ತುಂಬದೇ ಹಣವನ್ನು ಉಳಿಸಲಿಕ್ಕೆ ಸರಕಾರವು ಇದೊಂದು ಹೊಸ ಯುಕ್ತಿಯನ್ನೇ ತೆಗೆದಿರುವದೋ ಏನೋ ಎಂಬ ಸಂಶಯ ಬರುವದು. ಎಲ್ಲೆಲ್ಲಿ ನೋಡಿದರೂ 'ರಿಟ್ರೆಂಚ್ಮೆಂಟ'! ಇಂತಹ ದಿನಗಳಲ್ಲಿ 'ರಿಟ್ರೆಂಚ ಮೆಂಟ'ದ ಇದೊಂದು ಹೊಸ ಕಲ್ಪನೆಯೂ? ಜಾಧವ ಮಹಾಶಯ! ತಮ್ಮ ಮಂತ್ರಿತ್ವದ ಪ್ರಭಾವವು ಹೀಗೇಯೋ?

ಉತ್ತರ ಕರ್ನಾಟಕದ ಪ್ರಥಮ ಆಯುರ್ವೇದ ಪರಿಷತ್ತಿನಲ್ಲಿ ತೀರ್ಮಾನಿಸಲ್ಪಟ್ಟ ನಿರ್ಣಯಗಳೆಲ್ಲ ಮಹತ್ವದ್ದಾಗಿವೆ ಮುನಸಿಪಾಲ್ಟಿ ಲೋಕಲ್ ಬೋರ್ಡಗಳು ತಮ್ಮ ತಮ್ಮ ಭಾಗಗಳಲ್ಲಿ ಆಯುರ್ವೇದ ಚಿಕಿತ್ಸಾಲಯಗಳನ್ನು ಸ್ಥಾಪಿಸಬೇಕೆಂಬುದಾಗಿ ಪ್ರಾರ್ಥಿಸಬೇಕೆಂಬುದು ಅವುಗಳಲ್ಲಿ ಎಲ್ಲಕ್ಕೂ ಮಹತ್ವದ್ದು. ಆಯುರ್ವೇದ ಔಷಧಗಳಲ್ಲಿ ನಮ್ಮ ಜನರ ವಿಶ್ವಾಸವು ಹೆಚ್ಚಿದೆ ಅವು ಅಗ್ಗವಾಗಿ ದೊರೆಯುತ್ತವೆ. ಮೇಲಾಗಿ ಒಳ್ಳೇ ಗುಣಕಾರಿ ಯಾಗಿವೆ. ದೇಶೀ ಚಿಕಿತ್ಸಾಲಯಗಳಿಗೆ ಅಷ್ಟೊಂದು ವೆಚ್ಚವೂ ಬರುವದಿಲ್ಲ. ಈ ಬಗ್ಗೆ 'ಕನ್ನಡಿಗ'ನ ಕಳೆದ ಸಂಚಿಕೆಯಲ್ಲಿ ಪ್ರಕಟವಾದ ಆಯುರ್ವೇದ ಪರಿಷತ್ತಿನ ವೃತ್ತಾಂತವನ್ನೋದಿದರೆ ಎಲ್ಲವೂ ಸ್ಪಷ್ಟವಾಗುವದು. ಈ ಸಂಗತಿಗಳನ್ನೆಲ್ಲ ಒದಗಿಟ್ಟು, ಪರದೇಶಕ್ಕೆ ವ್ಯರ್ಥವಾಗಿ ನಾವು ದುಡ್ಡನ್ನಟ್ಟುವದು ಸರಿಯಲ್ಲ. ಈ ವಿಷಯವಾಗಿ ಅಧಿಕಾರಯುಕ್ತವಾದ ಸಂಗತಿಗಳನ್ನರಿಯಲಿಕ್ಕೆ ಅವಲವಿಕೆಯಿದ್ದ ಮಹನೀಯರೂ, ಸ್ಥಾನಿಕ ಸಂಸ್ಥೆಗಳೂ ಮದ್ರಾಸ ಸರಕಾರದವರಿಂದ ಪ್ರಸಿದ್ಧವಾದ ಆಯುರ್ವೇದ ಕಮೀಟಿಯ ವರದಿಯನ್ನು ನೋಡಬೇಕು. ಆಯುರ್ವೇದ ಪರಿಷತ್ತಿನವರು ಈ ಕೆಲಸವನ್ನೇ ಎತ್ತಿ ಹಿಡಿದು, ಸ್ಥಾನಿಕ ಸಂಸ್ಥೆಗಳಿಗೆ ವಸ್ತುಸ್ಥಿತಿಯನ್ನೆಲ್ಲ ಲೇಖರೂಪದಿಂದ ಅರುಹಿ, ಕರ್ನಾಟಕದಲ್ಲಿಯ ಎಲ್ಲ ಮುನಸಿಪಾಲ್ಟೀ ಲೋಕಲ್ ಬೋರ್ಡಗಳ ಅಧಿಕಾರಿಗಳನ್ನು ಸಂದರ್ಶಿಸಿ, ಈ ವರ್ಷದಲ್ಲಿ ಇದೊಂದೇ ಕಾರ್ಯವನ್ನಾದರೂ ಮಾಡಿದರೆ ದೊಡ್ಡದೊಂದು ಕೆಲಸವನ್ನು ಮಾಡಿದಂತಾಗುವದು.

ಹಾರ್ನಿಮನ್ ಸಾಹೇಬರು ಮುಂಬೈಗೆ "ಬಿನೇ ತಾ"! ದಿನ ಸುರಕ್ಷಿತವಾಗಿ ಬಂದು ತಲ್ಪಿದರು. ಮುಂಬೈ ಕಾಯದೇ ಮಂಡಲದಲ್ಲಿಯೂ ದಿಲ್ಲಿಯ ಹಿರೇ ಮಂಡಲದಲ್ಲಿಯೂ ಇವರ ಬಿಡುಗಡೆಯ ವಿಷಯವಾಗಿ ತೀರ್ಮಾನಗಳಾಗಿದ್ದರೂ, ಜನರ ಇಚ್ಛೆಯ ವಿರುದ್ಧವಾಗಿ ಸರಕಾರದವರು ಅವರನ್ನು ಹಿಂದುಸ್ಥಾನದ ಹೊರಗೆ ಇಟ್ಟಿದ್ದರು. ಹೀಗೇ ಒಳ್ಳೀತನದಿಂದ ಕುಳಿತರೆ ಬ್ರಿಟಿಶ್ ಸರಕಾರವು ಮಣಿಯದೆಂದು ತಿಳಿದು, ಹಾರ್ನಿಮನ್ನರು ಫ್ರೆಂಚರ ವಸಾಹತಿಯಾದ ಪಾಂಡಿಚೇರಿಗೆ 'ಬರಲು ಅಪ್ಪಣೆ ಪಡೆದು ಕೊಂಡರು ಅವರನ್ನು "ಡಿಫೆನ್ಸ್ ಆಫ ಇಂಡಿಯಾ ಆಕ್ಟ" (ಹಿಂದುಸ್ಥಾನದ ಸಂರಕ್ಷಣದ (?) ಕಾಯದೇ)ದ ಪ್ರಕಾರ ಹಿಂದುಸ್ಥಾನಕ್ಕೆ ಬರಕೂಡದೆಂದು ಸರಕಾರದವರು ನಿರ್ಬಂಧಿಸಿದ್ದರು. ಯುದ್ಧವು ಮುಗಿದು ೬ ತಿಂಗಳುಗಳ ಮೇಲೆಯೇ ಈ ಕಾಯದೇಯ ಅವಧಿಯು ಮುಗಿದಿದ್ದಿತು ಅದ್ದರಿಂದ ಹಾರ್ನಿಮನ್ನರು ಯಾವ ಕಾಯದೇಯ ಆಧಾರದಿಂದ ಹೊರಗೆ ಹಾಕಲ್ಪಟ್ಟಿದ್ದರೋ ಆ ಕಾಯದೆಯೇ ಜೀವಂತವಾಗಿ ಇಲ್ಲದ್ದರಿಂದ ಅವರು ಇಲ್ಲಿಗೆ ಮರಳಿ ಬರಲು ಕಾಯದೇದಿಂದ ಆತಂಕವಿರಲಿಲ್ಲ. ಆದರೆ ಈಗಿನ ದಿನಗಳಲ್ಲಿ ಬ್ರಿಟಿಶರಿಗೆ ಕಾಯದೇ ಬೇಕಾಗಿದ್ದರಷ್ಟೇ? ಅವರು 'ಹಂ ಕರೇಸೋ ಕಾಯದಾ' ಎಂಬ ತತ್ವವನ್ನನುಸರಿಸುತ್ತಿರುವದು ಹಿಂದಿಯರ ಅನುಭವಕ್ಕೆ ಬಂದದೆ. ಅದ್ದರಿಂದ ಹಾರ್ನಿಮನ್ನರಿಗೆ ಹಿಂದುಸ್ಥಾನಕ್ಕೆ ಬರಲು ಸಮುದ್ರಯಾನದ ಚೀಟಿಯನ್ನೇ ಕೊಡಲಿಕ್ಕೆ ಸರಕಾರದವರು ನಿರಾಕರಿಸಿದರು ಆ ಮೇಲೆ ಹಾರ್ನಿಮನ್ನರು ಒಂದು ಯುಕ್ತಿಯನ್ನು ತೆಗೆದರು. ಬ್ರಿಟಿಶರು ಅಪ್ಪಣೆಯ ಚೀಟಿಯನ್ನು ಕೊಡದಿದ್ದರಿಲ್ಲ; ಫ್ರೆಂಚ ಅಥವಾ ಪೋರ್ತುಗೀಸರಿಂದ ಅವರ ವಸಾಹತಿಗಳಾದ ಪಾಂಡೀಚೇರಿ, ಗೋವೆಗಳಿಗೆ ಬರಲು ಅಪ್ಪಣೆ ಪಡೆದು ಕೊಂಡರು. ಹಿಂದುಸ್ಥಾನದ ಈ ಭಾಗಕ್ಕೆ ತಲ್ಪಿದ ಮೇಲೆ ಬ್ರಿಟಿಶರ ಹಿಂದುಸ್ಥಾನಕ್ಕೆ ಹೋಗಲು ಆತಂಕವಿಲ್ಲವೆಂಬದನ್ನು ಅರಿತು ಮದ್ರಾಸಕ್ಕೆ ಬಂದು ಬಿಟ್ಟರು. ಸಿಂಹಲ ದ್ವೀಪದಲ್ಲಿ ಹಡಗದಿಂದಿಳಿವಾಗ ಪೊಲೀಸ ಸಾಹೇಬರು ಕೊಂಚ ತೊಂದರೆ ಕೊಟ್ಟರೂ, ಮುಂದೆ ಇವರಿಗೆ ಎಲ್ಲ ಕಡೆಯಲ್ಲೂ ಅಪ್ಪಣೆಯು ಸುಲಭವಾಗಿ ದೊರೆಯಿತು ಅಂತೂ ಹಾರ್ನಿಮನ್ನರ ಯುಕ್ತಿಯಂತೂ ಸಾಧ್ಯವಾಯಿತು. ೭ ವರ್ಷಗಳ ಮೇಲೆ ಮರಳಿ ಭರತಖಂಡಕ್ಕೆ ಬಂದ ಈ ಸಂತೋಷದ ಸುದ್ದಿಯನ್ನು ಕೇಳಿ ಯಾವ ಭಾರತೀಯನಿಗ ಆನಂದವಾಗದೇ ಇದ್ದೀತು? ಮುಂಬೈ ಪ್ರಾಂತದವರಂತೂ ವಿಶೇಷವಾಗಿ ಆನಂದ ಹೊಂದುವರು. ಇನ್ನು ಶ್ರೀ. ಹಾರ್ನಿಮನ್ನರು 'ಮುಂಬೈಕ್ರಾನಿಕಲ'' ಪತ್ರದ ಸಂಪಾದಕರಾಗುವದರಿಂದ, ಈ ಪ್ರಾಂತದಲ್ಲಿಯ ಸಾರ್ವಜನಿಕ ಚಳವಳಿಗಳಿಗೆ ಹೊಸ ಹುರುಪು ಬರುವದರಲ್ಲಿ ಸಂದೇಹವಿಲ್ಲ. ಬಹುದಿನಗಳಿಂದಲೂ ಬೆದರಿಕೊಂಡು ಕುಳಿತಿದ್ದ ಸರಕಾರವು ಹಾರ್ನಿಮನ್ನರೆಂದರೆ ಭೂತವೂ ಅಲ್ಲ; ಪಿಶಾಚಿಯೂ ಅಲ್ಲ! ಎಂಬುದನ್ನು ಇನ್ನಾದರೂ ಕಂಡು ಹಿಡಿಯಲಿ. ಬ್ರಿಟಿಶ ನ್ಯಾಯದೇವತೆಯು ಬಹು ನ್ಯಾಯವಂತಳು ಪಕ್ಷಾಭಿಮಾನವು ಕೂಡ ಅವಳಲ್ಲಿಲ್ಲ' ಎಂಬದಾಗಿ ಒದರಾಡುವ ಮಾತುಗಳಿಂದ ಬಣ್ಣಿಸುತ್ತಿರುವ ಇಂಗ್ಲೀಷರ ನ್ಯಾಯಪ್ರೀತಿಯು ಶ್ರೀ. ಹಾರ್ನಿಮನ್ನರ ಪ್ರಕರಣದಿಂದ ಪುನಃ ತಾನೇ ಪ್ರಕಟವಾಗಿದೆ

ಬೆಳಗಾವಿಯ ಜಿಲ್ಹಾ ಬೋರ್ಡಿನವರು ೫೦೦ ಅಥವಾ ಹೆಚ್ಚು ಜನ ಸಂಖ್ಯೆಯುಳ್ಳ ಪ್ರತಿಯೊಂದು ಹಳ್ಳಿಯಲ್ಲಿಯೂ ಏಕ ಕಾಲಕ್ಕೆ ಪ್ರಾಥಮಿಕ ಶಾಲೆಗಳನ್ನು ಪ್ರಾರಂಭಿಸಿದ್ದು ಬಹು ಸಾಹಸದ ಕೆಲಸವು ಇದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಆದರೆ ಬೆಳಗಾವಿ ಜಿಲ್ಲೆಯಲ್ಲಿಯ ಶಾಲೆಗಳಾದ್ದರಿಂದ 'ಕನ್ನಡಿಗ'ನು ಕೊಂಚ ಚಿಂತಿಸಬೇಕಾಗಿದೆ ಇವೆಲ್ಲ ಕನ್ನಡಶಾಲೆಗಳೋ ಅಥವಾ ಮರಾಟಿಶಾಲೆಗಳೋ ಎಂಬದನ್ನು ಅಧ್ಯಕ್ಷರು ಪ್ರಕಟಿಸಬೇಕು. ಮರಾಟಿಶಾಲೆಗಳಾಗಿದ್ದರೆ ಅದರ ಕಾರಣವನ್ನು ಅರುಹಬೇಕು. ಶ್ರೀ ಪಂಡಿತಪ್ಪಾ ಚಿಕ್ಕೋಡಿಯವರೇ ಅಧ್ಯಕ್ಷರಿದ್ದದರಿಂದ, ನಾವು ಚಿಂತಿಸುವದಕ್ಕೆ ಅಸ್ಪದವಿಲ್ಲವೆನ್ನುವಹಾಗಿಲ್ಲ. ಯಾಕೆಂದರೆ ಅಧ್ಯಕ್ಷರೊಬ್ಬರೇ ಕನ್ನಡಾಭಿಮಾನಿಗಳಾಗಿದ್ದ ಬೆಳಗಾವಿಯಂತಹ ಪ್ರತಿಕೂಲದ ವಾತಾವರಣದಲ್ಲಿ ಬಹುಮತವು ಶ್ರೀ. ಪಂಡಿತಪ್ಪನವರ ವಿರುದ್ಧವಾಗಿ ಹೋಗುವದು ಸ್ವಾಭಾವಿಕವಾಗಿದೆ ಅದ್ದರಿಂದ ಕನ್ನಡಿಗರು ಚಿಂತಿಸಬೇಕಾಗಿದೆ. ಕನ್ನಡದ ಬಗ್ಗೆ ತಲೆ ಬೇಸರಿಕೆಯು

ಟಾಗುತ್ತಿರುವ ಬೆಳಗಾವಿಯ ಜಿಲ್ಹೆಯ ಬೋರ್ಡಿನವರು ಈ ವಿಷಯವನ್ನು ಲಕ್ಷ್ಯಕ್ಕೆ ತಾರದಿದ್ದರೆ ಬೆಳಗಾವಿಯಲ್ಲಿಯ ಒಂದೇ ಒಂದಾದ ಕನ್ನಡಪತ್ರಿಕೆಯಾದ "ಗೋಸೇವಕ"ವು ಇದನ್ನು ಶೋಧಿಸಿ ಪ್ರಸಿದ್ಧಿಸಬೇಕಾಗಿ ಪ್ರಾರ್ಥನೆ,

ಉತ್ತರಾದಿ ಮಠದ ಶ್ರೀಗಳವರಾದ ಶ್ರೀಮತ್ ಪರಮಪೂಜ್ಯ ಸತ್ಯಧ್ಯಾನ ತೀರ್ಥರು ಈ ವಾರದಲ್ಲಿಯೇ ಇಲ್ಲಿಗೆ ಬರತಕ್ಕವರಿರುವರೆಂಬದನ್ನು ಅರುಹಲು ನಾವು ಸಂತೋಷ ಬಡುತ್ತೇವೆ. ಮತ್ತು ಬಹು ಆದರದಿಂದ ಅವರ ಸ್ವಾಗತವನ್ನೀಕ್ಷಿಸುತ್ತೇವೆ. ಬಾಗಲಕೋಟೆಯಲ್ಲಿ ಈ ಮಹಾಸಮಾರಾಧನೆಯನ್ನು ಮಾಡಬೇಕೆಂದು ಅನೇಕ ಸಲ ಪ್ರಯತ್ನ ಒಟ್ಟಿದ್ದರೂ, ಇಲ್ಲಿಯವರೆಗೆ ಅದು ಸಾಧ್ಯವಾಗಿರಲಿಲ್ಲ. ಈಗ್ಗೆ ಪ್ರತ್ಯಕ್ಷವಾಗಿ ಇಲ್ಲಿಯೇ ಈ ಉತ್ಸವವು ನೆರವೇರುವದರಿಂದ, ಇಲ್ಲಿಯ ಜನರು ಬಹು ಉತ್ಸಾಹದಿಂದ ಪೂರ್ವಸಿದ್ಧತೆಯನ್ನು ಮಾಡತೊಡಗಿದ್ದಾರೆ. ಬಾಗಲಕೋಟೆಯು ತನ್ನ ಯೋಗ್ಯತೆಗೆ ತಕ್ಕಂತೆ ಇಲ್ಲಿಗೆ ಬರುವ ಸಾವಿರಾರು ಜನ ಅತಿಥಿಗಳ ಯೋಗಕ್ಷೇಮವನ್ನು ಮಾಡುವದರಲ್ಲಿ ಕಡಿಮೆಯಾಗದು. ಇಂತಹ ಸುಪ್ರಸಂಗವನ್ನು ಬಾಗಲಕೋಟೆಯ ಜನಗಳಿಗೆ ಒದಗಿಸಿಕೊಟ್ಟಿದ್ದಕ್ಕಾಗಿ ವೈಷ್ಣವ ವೃಂದವು ಶ್ರೀಗಳವರನ್ನು ಅಭಿನಂದಿಸುತ್ತದೆ

ಸ್ವೀಕಾರ ಮತ್ತು ವಿಮರ್ಶೆ.

೧. **ಆಯುರ್ವೇದ**. ಇದೊಂದು ತೀರ್ಥಹಳ್ಳಿಯಲ್ಲಿ ವಿದ್ವಾನ್ ಪಿ, ಸೂರ್ಯನಾರಾಯಣಶಾಸ್ತ್ರಿಗಳ ಸಂಪಾದಕತ್ವದಲ್ಲಿ ಪ್ರಸಿದ್ಧವಾದ ನವೀನ ಮಾಸಪತ್ರಿಕೆ. 'ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೩—೮—೦ ಆಯುರ್ವೇದ ಗ್ರಂಥಗಳನ್ನು ಕನ್ನಡಿಸುವದು, ಸಾಮಾನ್ಯ ಜನರಿಗೆ ತಿಳಿಯುವಂತಹ ಸುಲಭ ಚಿಕಿತ್ಸೆಗಳನ್ನು ತಿಳಿಸುವದು ಆಯುರ್ವೇದ ವೈದ್ಯರ ಜೀವನ ಚರಿತ್ರೆಗಳನ್ನು ಅವರ ಚಿತ್ರಗಳೊಂದಿಗೆ ಪ್ರಕಟಿಸುವದು ; ಪ್ರಾಚೀನ ಜೈನ ಮತ್ತು ಇತರರಿಂದ ಬರೆಯಲ್ಪಟ್ಟ ಕನ್ನಡ ಆಯುರ್ವೇದ ಗ್ರಂಥಗಳನ್ನು ಪ್ರಕಟಿಸುವದು. ಇವೇ ಪತ್ರಿಕೆಯ ಉದ್ದೇಶಗಳು. ಇಂತಹ ಪತ್ರಿಕೆಗೆ ಕನ್ನಡಿಗರೆಲ್ಲರೂ ಪ್ರೋತ್ಸಾಹಿಸಬೇಕು. ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ವೈದ್ಯರುಗಳಿಂದ ಚಿಕಿತ್ಸೆ ಹೊಂದುವ ರೋಗಿಗಳಬೇನೆಯ ಸ್ವರೂಪ ವೈದ್ಯರು ಅದಕ್ಕೆ ಕಲ್ಪಿಸಿದ ಚಿಕಿತ್ಸೆ, ಅದರ ಪರಿಣಾಮ, ಹೊಸ ಬೇನೆಗಳ ಲಕ್ಷಣ, ಅವುಗಳಿಂದ ವೈದ್ಯರುಗಳಿಗೆ ಬಂದ ಅನುಭವ, ಇಂಥವುಗಳನ್ನೆಲ್ಲ ಈ ಮಾಸಿಕದಲ್ಲಿ ವಿವೇಚಿಸಬೇಕಾಗಿ ಚಾಲಕರಿಗೆ ನಮ್ಮ ಸೂಚನೆಯಿದೆ.

೨ **ಸಾರಸ್ವತ** (ಹೇಮಂತ ಸಂಚಿಕೆ) ಸಾರಸ್ವತವು ಕೊಂಕಣೀ ಭಾಷೆಯಲ್ಲಿ (ಕನ್ನಡ ಲಿಪಿಯಿಂದ) ಹೊರಡುವ ಪಾಕ್ಷಿಕ ಪತ್ರಿಕೆಯು. ಉಡುಪಿಯಲ್ಲಿ ಪ್ರಕಟವಾಗಹತ್ತಿ ೨ ವರ್ಷಗಳಾದವು. ಶ್ರೀ ವಾಮನ ಕುಡವರೂ, ಎ. ಎಸ್. ಕಾಮತರೂ ಇದರ ಸಂಪಾದಕರು. ಇದರಲ್ಲಿಯ ಲೇಖಗಳಲ್ಲಿ ಹೊಸವಿಚಾರವೂ ಮಾಧುರ್ಯವೂ ಇವೆ. ಇದರ ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೧—೪—೦ 'ಕನ್ನಡಿಗ'ನು ಹುಟ್ಟಿದಂದಿನಿಂದ ಈ ಪತ್ರಿಕೆಯನ್ನು ಸಂತೋಷದಿಂದ ನಿರೀಕ್ಷಿಸುತ್ತಲಿದ್ದಾನೆ. ಈಗ್ಗೆ ಈ "ಸಾರಸ್ವತ" ದ ಹೇಮಂತ ಸಂಚಿಕೆಯು ನಮ್ಮ ಕೈ ಸೇರಿದೆ. ೫೪ ಪುಟಗಳುಳ್ಳ, ಸಚಿತ್ರವಾದ, ಅಂದವಾಗಿ ಮುದ್ರಣವಾದ, ಸಂಚಿಕೆಯನ್ನು ಕಂಡು ಆರಿಗೆ ಆನಂದವಾಗದು? ಇದರಲ್ಲಿಯ ವಿಷಯಗಳೆಲ್ಲ ರುಚಿಕಟ್ಟಿನವಾಗಿವೆ. ಸ್ಥಳಾನುಕೂಲತೆಯಂತೆ ಇದರಲ್ಲಿಯ ಲೇಖಗಳನ್ನು 'ಕನ್ನಡಿಗ' ನು ಪ್ರಸಿದ್ಧಿಸುವನು. ಸಾರಸ್ವತ ಜನರಲ್ಲಿಯ ಮಹನೀಯರ ಚಿತ್ರಗಳೂ, ಸಂಕ್ಷಿಪ್ತ ಚರಿತ್ರೆಗಳೂ ಇದರಲ್ಲಿ ಪ್ರಕಟವಾಗಿವೆ. ಕೊಂಕಣೀ ಭಾಷೆಗೆ ಸಾರಸ್ವತನು ವಾಙ್ಮಯ ಸ್ವರೂಪವನ್ನು ಕೊಡಹತ್ತಿರುವದು ಅವರ ತೀಕ್ಷ್ಣವಾದ ಬುದ್ಧಿಮತ್ತೆಗೆ ಯೋಗ್ಯವಾದುದು ಕವಿತೆಗಳನ್ನು ಸಹ ಈ ಸಂಚಿಕೆಯಲ್ಲಿ ಕಾಣಬಹುದು. ಕೊಂಕಣಿ ಭಾಷೆಯನ್ನಾಡುವ ಮಹನೀಯರೆಲ್ಲರು ಅವಶ್ಯವಾಗಿ ಪ್ರೋತ್ಸಾಹಿಸಬೇಕು ; ಮತ್ತು ಕೊಂಕಣೀಯು ಕನ್ನಡ ನುಡಿಯ ಸಂಬಂಧವನ್ನು ಪಡೆದುಕೊಂಡದ್ದರಿಂದ, ಭಾಷೆಯ ವಿಷಯದಲ್ಲಿ ಮನಸ್ಸಿದ್ದ ಕನ್ನಡಿಗರು 'ಸಾರಸ್ವತ' ವನ್ನು ಕೊಂಡು ಅದನ್ನು ಓದುತ್ತ, ಕೊಂಕಣೀ ಭಾಷೆಯ ಪರಿಚಯವನ್ನು ಮಾಡಿಕೊಳ್ಳಬೇಕು.

ಪತ್ರವ್ಯವಹಾರ.

ಬಾಗಲಕೋಟೆಯ ಮ್ಯುನಸೀಪಾಲ್ಟಿಗೆ—

ಮಹನೀಯರಾದ ಸಭಾಸದರೇ

ಈ ಊರಲ್ಲಿಯ ಎಲ್ಲ ಬೀದಿಗಳಲ್ಲಿ ವಿಶೇಷತಃ ಸ್ಟೇಶನ್ ಹಾಗೂ ಕಲಾದಗೀ ಬೀದಿಗಳಲ್ಲಿ ಯಾವ ಬಗೆಯ ಧೂಳು ಈಗಾಗಲೇ ಏಳುತ್ತಿರುವದೆಂಬದನ್ನು ತಾವು ಬಲ್ಲಿರಷ್ಟೆ? ಬೇಸಿಗೆಯು ಭರದಿಂದ ಬಂತೆಂದರೆ, ಜನರಿಗೆ ಎಷ್ಟು ಕಷ್ಟವಾಗುವದೆಂಬದನ್ನು ತಾವು ವಿಚಾರಿಸಿರುವಿರೋ? ಧೂಳಿಗಾಗಿ ತಾವು ಯೋಗ್ಯ ಏರ್ಪಾಡು ಮಾಡದಿದ್ದರೆ, ಮೋಟಾರುಗಳು ಹೆಚ್ಚಾಗಿದ್ದರಿಂದ, ದಿನಾಲು ನಾವೆಲ್ಲ ಮಣ್ಣನ್ನು ಸೇವಿಸಲೇ ಬೇಕಾಗುವದು. ಈ ಊರಲ್ಲಿ ನದಿಯದೆ. ನೀರಿಗೆ ಕೊರತೆಯಿಲ್ಲ. ಮುನಸೀಪಾಲ್ಟಿಗೂ ಹಣವು ಇದೆಯಷ್ಟೇ? ಅಂದಮೇಲೆ ಈ ಸಂಗತಿಯನ್ನು ತಾವು ದುರ್ಲಕ್ಷಿಸುತ್ತಿರುವದೇಕೆ?

ಇತಿ ತಮ್ಮ

ಓರ್ವ ಪುರವಾಸಿ

ವಿಜಾಪೂರ ಜಿಲ್ಹೆಯ ಕಲೆಕ್ಟರ ಸಾ॥ ರವರ

೧೯೩೬ ನೇ ಜನವರಿ ತಿಂಗಳ ಸಂಚಾರ ಕ್ರಮವು

ತಾರೀಖು

೮ ರಿಂದ ೧೦ ರ ವರೆಗೆ ಹಿಪ್ಪರಗಿ; ೧೧ ರಿಂದ ೧೬ ರ ವರೆಗೆ ಸಿಂದಗಿ; ೧೭ ಬಿಜಾಪೂರ; ೧೮ ರಿಂದ ೧೯ ರ ವರೆಗೆ ಸಿಂದಗಿ; ೨೦ ರಿಂದ ೨೧ ರ ವರೆಗೆ ಸಾದ; ೨೨ ರಿಂದ ೨೬ ರ ವರೆಗೆ ಇಂಡಿ; ೨೭ ರಿಂದ ೨೯ ರ ವರೆಗೆ ಝುಳಕಿ; ೩೦ ಬಿಜಾಪೂರ;

ಇಹವೃತ್ತ

ಶ್ರೀ. ಮದ್ ಉತ್ತರಾದಿ ಮಠಾಧೀಶರು ಅಷ್ಟಮಿಯ ದಿನ ಇಲ್ಲಿಗೆ ಬರುವದಾಗಿ ತಿಳಿಯುತ್ತದೆ. ಕಿಲ್ಲೇಯಲ್ಲಿ ನದೀ ದಂಡೆಗೆ ಮಂಟಪವು ಸಿದ್ಧವಾಗುತ್ತಲಿದೆ ವಿದ್ಯಾರ್ಥಿಗಳ ಮತ್ತು ಶಿಕ್ಷಕರ ಅನುಕೂಲತೆಗಾಗಿ ಇಲ್ಲಿಯ ಶಾಲೆಗಳು ಮುಂಜಾನೆ ವರ್ಗಗಳನ್ನು ನಡಿಸುವವಾಗಿ ಕೇಳುತ್ತೇವೆ. ಬಸವೇಶ್ವರ ಹಾಯಸ್ಕೂಲಿನವರು ಸಹ ಈ ಸಮಯದಲ್ಲಿ **ಬ್ರಾಹ್ಮಣ ವಿದ್ಯಾರ್ಥಿ ಹಾಗೂ ಶಿಕ್ಷಕರ ಸೌಕರ್ಯಗಳ ಕಡೆಗೆ ಲಕ್ಷ್ಯಕೊಡಬೇಕಾಗಿ ಸೂಚನೆಯಿದೆ.**

ಮೊನ್ನೆ ತಾ॥ ೧೦-೧-೩೬ ನೇ ದಿವಸ ವಿಶೇಷ ಸಭಾಸದರು ಬಾರದ್ದರಿಂದ ಮುಂದರಿಸಲ್ಪಟ್ಟ ತಾಲೂಕ ಕಾಂಗ್ರೆಸ ಕಮೀಟಿಯ ಸಾಧಾರಣ ಸಭೆಯು ಬರುವ ಶನಿವಾರ ತಾ॥ ೧೬-೧-೩೬ ನೇ ದಿವಸ ಸಂಜೆಯ ೬ ಘಂಟೆಗೆ ಕಾಂಗ್ರೆಸ್ ಕಮೀಟಿಯ ಕಾರ್ಯಾಲಯದಲ್ಲಿ ಜರಗುವದು. ಕಳೆದ ವರ್ಷವಾದರೂ ಸಭಾಸದರು ಬಾರದ್ದರಿಂದ ಸಭೆಯನ್ನು ಮುಂದರಿಸಬೇಕಾಗಿತ್ತು ಮುಂದೆ ಸಭೆಯು ಕೂಡ ಜರಗಲಿಲ್ಲ. ಕಾರಣ ದಯವಿಟ್ಟು ಎಲ್ಲ ಸಭಾಸದರು ಈ ಸಾರೆ ಯಾದರೂ ಸಭೆಗೆ ಬಂದು ಕಾರ್ಯವನ್ನು ನಿರ್ವಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಕರ್ನಾಟಕದ ಏಕೀಕರಣ

ಈ ಕರ್ನಾಟಕ ದೇಶವು ೭ ವಿಭಾಗಗಳಾಗಿ ಬೇರೆ ಬೇರೆ ಸರಕಾರಗಳ ಕೈಕೆಳಗಿದೆ. ಇವುಗಳಲ್ಲಿ ಅತೀ ದೊಡ್ಡದಾದ ವಿಭಾಗವು ಮೈಸೂರು ಸಂಸ್ಥಾನವಾಗಿಸಿ ಒಂದು ತುಂಡು ಹೈದರಾಬಾದ ನೈಜಾಮರ ಆಳ್ವಿಕೆಗೆ ಸೇರಿಯದೆ. ಇನ್ನು ಉಳಿದ ಭಾಗಗಳು ಬಳ್ಳಾರಿ, ಅನಂತಪುರ ಜಿಲ್ಲೆಗಳ ತುಂಡುಗಳು. ಕೊಯಿಮತ್ತೂರು ಜಿಲ್ಲೆಯ ತುಂಡು. ಕೊಡಗು. ತೌಳವ ಎಂಬ ದಕ್ಷಿಣ ಕನ್ನಡ ಜಿಲ್ಲೆ ಹೈಗ, ಸುಧಾಪುರ ಬೀಳಗಿ, ಮುಂತಾದವುಗಳನ್ನು ಒಳಗೊಂಡಿರುವ, ಉತ್ತರ ಕನ್ನಡ ಜಿಲ್ಲೆ, ಧಾರವಾಡ, ಹುಬ್ಬಳ್ಳಿ, ವಿಜಾಪುರ ಜಿಲ್ಲೆಗಳು ಈ ಎಲ್ಲಾ ವಿಭಾಗಗಳನ್ನು ಒಂದು ಕಾಲದಲ್ಲಿ ಕದಂಬ ರಾಜರೂ, ಚಾಲುಕ್ಯರೂ ರಾಷ್ಟ್ರಕೂಟರೂ, ಹೊಯ್ಸಳರೂ, ಆಳಿಕೊಂಡಿದ್ದರು. ಈ ಕರ್ನಾಟಕದಲ್ಲಿರುವ ರಾಜರುಗಳ ಕುಟುಂಬಗಳೇ ಕಾಣುವದಿಲ್ಲ. ಕೊಡಗು ವೀರರಾಜರ ಕುಟುಂಬದವರು ಕಾಶಿಯಲ್ಲಿರುತ್ತಾರಂತೆ, ಸೊಂದೆಯ ಅರಸರ ಕುಟುಂಬದವರು ಗೋವೆಯಲ್ಲಿರುತ್ತಾರಂತೆ. ಮೈಸೂರಿನ ಮಹಾರಾಜರವರೊಬ್ಬರೇ ಕರ್ನಾಟಕ ರಾಜಕುಟುಂಬಗಳಲ್ಲಿ ಒಬ್ಬರಾಗಿರುತ್ತಾರೆ ಆದುದರಿಂದ ಸಪ್ತ ಖಂಡಗಳಾಗಿ ವಿಭಾಗಿಸಲ್ಪಟ್ಟಿರುವ ಕರ್ನಾಟಕ ದೇಶವನ್ನು ಆ ಮಹಾರಾಜರ ಕೈಕೆಳಗೆ ಇರಿಸಿ, ಏಕ ಖಂಡವಾಗಿ, ಮೈಸೂರನ್ನೆ ಅದಕ್ಕೆ ರಾಜಧಾನಿಯಾಗಿ ಮಾಡಿ ಭಟ್ಕಳವನ್ನೂ, ಮಂಗಳೂರನ್ನೂ ಮುಖ್ಯ ಬಂದರಗಳಾಗಿ ಮಾಡಿ ಕರ್ನಾಟಕದ ಎಲ್ಲಾ ಭಾಗಗಳಿಂದ ಈ ಎರಡು ಬಂದರಗಳಿಗೆ ರೈಲುಮಾರ್ಗಗಳನ್ನು ಹಾಕಿಸಿ ರಾಜಧಾನಿಗೆ ಕೂಡಿಸಬಹುದು. ಕರ್ನಾಟಕಕ್ಕೆ ಒಂದು ಹೊಸ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಅಗತ್ಯವೇ ಇರುವದಿಲ್ಲ ಮೈಸೂರು ವಿಶ್ವವಿದ್ಯಾಲಯವನ್ನೇ ಕರ್ನಾಟಕದ ವಿಶ್ವವಿದ್ಯಾಲಯವಾಗಿ ಮಾಡಬಹುದು. ಹೊಸ ಸರಕಾರಿ ಕಟ್ಟೋಣಗಳನ್ನೂ ಕಟ್ಟಿಸುವ ಖರ್ಚೂ ಕರ್ನಾಟಕದ ಗವರ್ನರರಿಗೂ ಅವರ ಶಿಬಂದಿಯವರಿಗೂ ಕೊಡುವ ಸಂಬಳದ ಖರ್ಚೂ ಉಳಿಯುವುದು ಮೈಸೂರು ನ್ಯಾಯವಿಧಾಯಕ ಸಭೆಯನ್ನೇ ಕರ್ನಾಟಕದ ಪಾರ್ಲಿಮೆಂಟ ಸಭೆಯಾಗಿ ಮಾಡಬಹುದು. ಮೈಸೂರು ರೈಲ್ವೆಗಳನ್ನೇ ಕರ್ನಾಟಕದ ಸ್ಟೇಟ ರೈಲ್ವೇಗಳಾಗಿ ಮಾಡಬಹುದು. ಇದಕ್ಕಿಂತ ಸುಲಭವಾದ ಉಪಾಯವು ಕರ್ನಾಟಕದ ಏಕೀಕರಣಕ್ಕೆ ಮತ್ತೊಂದಿರುವದಿಲ್ಲ.

—ಸ್ವದೇಶಾಭಿಮಾನಿ

ವಿದ್ಯಾನಗರವು ಮೊದಲಿಂದಲೂ ಕರ್ನಾಟಕ ದೇಶದಲ್ಲಿರುವದೋ?

ಈ ವಿಷಯದಲ್ಲಿ ಕರ್ನಾಟಕಾಂಧ್ರ ವಾಙ್ಮಯಾಭಿಮಾನಿಗಳಲ್ಲಿ ವಿವಾದಾಸ್ಪದವಾದ ವಿಚಾರಗಳೆಷ್ಟೋ ಹೊರಟಿರುವವು. ಹಲವರು ಭಾಷಾಭಿಮಾನಿಗಳಾದರೂ ಹಸಿಯೇ ಅನುಕೂಲತೆಯ ದೃಷ್ಟಿಯಿಂದ ಸತ್ಯಾಂಶವನ್ನು ತ್ಯಾಗ ಮಾಡಿ ದುರಾಗ್ರಹದ ಹೋರಾಟದಲ್ಲಿ ಪ್ರಸಕ್ತರಾಗಲುದ್ಯುಕ್ತರಾಗುವರು. ಪರಸ್ಪರ ಮತ್ಸರಾಸೂಯೆಗಳಿಂದ ಕಲುಷಿತವಾದ ಮನಸುಳ್ಳವರಿಗೆ ಭಾಷಾಭಿರುಚಿಯು ಇರುವದು ಹೇಗೆ?

ವಿದ್ಯಾನಗರವು ಕರ್ನಾಟಕಾಂಧ್ರ ದೇಶಗಳಲ್ಲಿ ಯಾವ ರಾಷ್ಟ್ರಕ್ಕೆ ಸೇರಿಸುವದೆಂಬ ವಿಚಾರದ ಒಂದೆರಡು ಅಂಶಗಳನ್ನು ಈ ಕೆಳಗೆ ವಿವರಿಸುತ್ತೇವೆ.

ಶ್ರೀಕೃಷ್ಣದೇವರಾಯರ ಆಂತಃಪುರಸ್ಥಾನದಲ್ಲಿ ನಾಟ್ಯ ರಸಾಧಿಪತ್ಯವನ್ನು ವಹಿಸಿದ್ದ, ಅಭಿನವಭರತಾಚಾರ್ಯ, ರಾಯಬಯಕಾರ, ತೋಡರಮಲ್ಲ, ಸೂಕ್ಷ್ಮಭರತಾಚಾರ್ಯ, ಮುಂತಾದ ಬಿರುದಾಂಕಿತನಾದ ಭಂಡಾರು ಶ್ರೀಲಕ್ಷ್ಮೀನಾರಾಯಣನೆಂಬಾತನು ಸಂಗೀತ ಸೂರ್ಯೋದಯವೆಂಬ ಒಂದು ಗ್ರಂಥವನ್ನು ರಚಿಸಿರುವನು. (ತಾಳಾಧ್ಯಾಯ, ನೃತ್ಯಾಧ್ಯಾಯ, ಸ್ವರಗೀತಾಧ್ಯಾಯ, ಜಾತ್ಯಧ್ಯಾಯ, ಮತ್ತು ಪ್ರಬಂಧಾಧ್ಯಾಯ,) ಎಂಬದಾಗಿ ಐದು ಅಧ್ಯಾಯಗಳುಳ್ಳ ಈ ಗ್ರಂಥಾವತರಣಿಕೆಯಲ್ಲಿ ಶ್ರೀ ವಿದ್ಯಾನಗರಿಯನ್ನು ಈ ಪ್ರಕಾರ ವರ್ಣಿಸಿರುವನು,

ಶ್ಲೋಕ|| ಕರ್ಣಾಟಾಹ್ವಯ ದೇಶ ಸೌಖ್ಯಜನನೀ ಶ್ರೀ ತುಂಗಭದ್ರಾವೃತಾ| ಮಾತಂಗೋನ್ನತ ಮಾಲ್ಯವತ್ ಕ್ಷಿತಿಧರ ಶ್ರೀ ಹೇಮಕೂಟಾನ್ವಿತಾ|| ಪಂಪಾಧೀಶ್ವರ ವಿಠ್ಠಲೇಶ್ವರ ಕೃಪಾ ದೃಷ್ಟಿಪ್ರಭಾ ಮಂಡಿತಾ| ಶ್ರೀ ವಿದ್ಯಾನಗರೀ ವಿಭಾತಿ ಧರಣೀ ಧಮ್ಮಿಲ್ಲಮಾಣಿಕ್ಯವತ್||

ಮತ್ತು ಶ್ರೀಕೃಷ್ಣದೇವರಾಯರಿಗೆ ಸಪ್ತಕಾಂಡ ರಾಮಾಯಣವನ್ನು ಶ್ರವಣಮಾಡಿಸಿದ ಹಾಗೂ ಶ್ರೀಮದ್ವಾಲ್ಮೀಕಿ ರಾಮಾಯಣಕ್ಕೆ ಬೃಹದ್ವಿವರಣವೆಂತಲೂ, ಲಘುವಿವರಣವೆಂತಲೂ, ಉಭಯ ವ್ಯಾಖ್ಯಾನವನ್ನು ರಚಿಸಿದ ಸಂಸ್ಕೃತ ವಿದ್ವಾಂಸನಾದ ಈಶ ದೀಕ್ಷಿತನೆಂಬಾತನು ಈ ಪ್ರಕಾರ ಬರೆದಿರುವನು.

ಶ್ಲೋಕ|| ಕರ್ಣಾಟಾಧೀಶ್ವರೇ ರಾಜ್ಯಂ ಕೃಷ್ಣರಾಯೇ ಪ್ರಶಾಸತಿ| ರಾಮಾಯಣಂ ಚಿತ್ರಕೂಟೇ ವ್ಯಾಖ್ಯಾದೀಶ್ವರ ದೀಕ್ಷಿತಃ||

ಇದಲ್ಲದೆ, ಶ್ರೀಕೃಷ್ಣದೇವರಾಯರ ಆಸ್ಥಾನ ಪಂಡಿತನಾದ ಪೆದ್ದಣ್ಣನೆಂಬ ಮಹಾಕವಿಯು ಸಮಸ್ಯವನ್ನು ಪೂರ್ತಿಮಾಡಿದ, ಶ್ರೀ ಕೃಷ್ಣರಾಯರಿಂದ ರಾಧಾಮಾಧವನೆಂಬ ಬಿರುದನ್ನು ಪಡೆದ, ಸರಸವಾದ ತೆಲುಗು ಭಾಷೆಯಲ್ಲಿ ರಾಧಾಮಾಧವ, ವಿಷ್ಣುಮಾಯಾ ವಿಲಾಸನಾಟಕ ಪ್ರಬಂಧವು, ತಾರಕ ಬ್ರಹ್ಮರಾಜೀಯವೂ, ಮುಂತಾದ ಉದ್ಗ್ರಂಥಗಳನ್ನು ರಚಿಸಿದ, ಚಿಂತಲಪೂಡಿ ಎಲ್ಲಯ್ಯನೆಂಬ ಕವಿಯು ಸಹಾ ತೆಲುಗುಭಾಷೆಯಲ್ಲಿ ಈ ಪ್ರಕಾರ ಹೇಳಿರುವನು.

ಶ್ಲೋಕ|| ರಾಧಾಮಾಧವ, ಮಯ್ಯಕಾಂಕಿತ ಮುಗಾ ಬ್ರೌಢಕೃಯುಂಜಪ್ಪಿ| ಕನ್ಯಾ ಧುರ್ಯಂಬುನ ಕೃಷ್ಣರಾಯ ವಿಭು ಕರ್ಣಾಟೇಶು ಮೆಚ್ಚಿಂಚಿನಾ|| ನಾಧಾತ್ಮ ಪ್ರತಿಮಾನ ಸತ್ಕೃಪಲಲ್ಲೋನರ್ ಭೂಷಣಶ್ರೀಣಿತೋ| ರಾಧಾಮಾಧವ ನಾಮ ನುಂದಿನ ಜಗತ್ಪ್ರಖ್ಯಾತ ಚಾರಿತ್ರುಡರ್||

—ಸುಬೋಧ

ಮುರಗೋಡ ಮಹಾಲಿನ ಪತ್ರ

ಸಬಂದ ಮಹಾಲಿನಲ್ಲಿ ಮುರಗೋಡ ಯರಗಟ್ಟಿಯ ಹೊರತು ಪೋಷ್ಟಿನ ಸೋಯಿ ಇಲ್ಲ ಕೆಲವು ಹಳ್ಳಿಗಳಿಗೆ ತಿಂಗಳೊಪ್ಪತ್ತಾದರೂ ಪೋಸ್ಟಮನ್ನರ ದರ್ಶನವೇ ಇಲ್ಲ. ವ್ಯಾಪಾರಿ ಜನರಿಗೆ ಇದರಿಂದ ತೊಂದರೆ ಯಾಗಿದೆ.

ಭಾರೋಜಿಕೊಪ್ಪದಲ್ಲಿ ವ್ಯಾಪಾರಕ್ಕಾಗಿ ಹುಟ್ಟುವ ಖಾದಿಯು ಗಿರಾಕಿಗಳು ಇಲ್ಲದ್ದರಿಂದ ಮಂದವಾಗಿದೆ. ರೈತರ ಉಪಯೋಗಕ್ಕೆಂದು ಇದ್ದ ಮಗ್ಗಗಳು ಅನೇಕ ಹಳ್ಳಿಗಳಲ್ಲಿ ನಡೆದಿರುವವು. ಕಾಂಗ್ರೆಸ ಮೆಂಬರರೂ ಈರ್ವರ ಹೊರತು ಇನ್ನೂ ಯಾರೂ ಆಗಿರುವದಿಲ್ಲ ಆಗುವ ಲಕ್ಷಣವು ಮಾತ್ರ ತೋರುವದು. ಮುರಗೋಡ ಮಹಾಲಿನಲ್ಲಿ ಘಾರೆಪ್ಪ ತ್ರಾಸವು ಹೆಚ್ಚಿದೆ ಘಾರೆಪ್ಪನಿಂದ ಸರಕಾರಕ್ಕೂ ಉತ್ಪನ್ನವಿಲ್ಲ ಜನರಿಗೆ ತ್ರಾಸವು ಕಡಿಮೆಇಲ್ಲ. ದನಗಳಿಗೂ ಜರಾಯಿಯ ಫಾರೆಸ್ಟ ಕಟ್ಟಿಗೆಯ ತ್ರಾಸವು ಎಷ್ಟೋ ಕುಟುಂಬಗಳನ್ನು ಜಿಂದು ಬೆಡನ್ನಾಗಿ ಮಾಡಿದೆ ಇಮಾರತಿಯ ಕಟ್ಟಿಗೆಯ ಬೆಳವಣಿಗೆಯಂತೂ ಇಲ್ಲವೇ ಇಲ್ಲ.

ಶ್ಯಾಮಲೆಯ ದುರಭಿಮಾನ

ರಾ॥ ನಾರಾಯಣರಾವ ರಾಜಹಂಸಉರ್ಫ ಬಾಲಗಂಧರ್ವ ಇವರು ಹುಬ್ಬಳ್ಳಿಗೆ ಬಂದಂದಿನಿಂದ ಕನ್ನಡಿಗರಲ್ಲಿ ಒಂದು ತರದ ಚಳವಳಿ ಎದ್ದಿದೆ. ಅವರು ತಮ್ಮ ಅತುಲವಾದ ಅಭಿನಯದಿಂದಲೂ ಹಾವಭಾವದಿಂದಲೂ, ಮಧುರವಾದ ಗಾಯನದಿಂದಲೂ— ಇವರ ಇಂಪಾದ ಧನಿಯನ್ನು ಕೇಳಿ ಇವರಿಗೆ ಬಾಲಗಂಧರ್ವನೆಂಬ ಪದವಿಯನ್ನು ಕೊಟ್ಟರಲ್ಲದೆ ಶ್ಯಾಮಲೆಯು ಮತದಂತೆ ಇವರ ವಯಸ್ಸು ನೋಡಿ ಇವರಿಗೆ ಪದವಿಯನ್ನು ಕೊಡಲಿಲ್ಲ. ಅವರು ಇಡೀ ಕರ್ನಾಟಕಸ್ಥರ ಮನಸ್ಸನ್ನು ಎಳೆದು ಕೊಂಡಿದ್ದಾರೆಂಬ ಮಾತು ಅವರ ನಾಟಕವನ್ನು ನೋಡಲಿಕ್ಕೆ ಹೋದವರಿಗೆ ಒಡೆದು ಕಾಣುತ್ತದೆ ದೂರದೂರಿನಿಂದ ಬರುವ ಜನರಾದರೂ ಇದಕ್ಕೆ ಸಾಕ್ಷಿಯಾಗಿದ್ದಾರೆ. ಮಹಾರಾಷ್ಟ್ರ ರಂಗ ಭೂಮಿಯ ಮೇಲೆ— ಅದೇಕೆ ಇಡೀ ಹಿಂದುಸ್ಥಾನದಲ್ಲಿ— ಇವರಂಥ ಸ್ತ್ರೀಪಾರ್ಟ ಮಾಡುವವರು ಯಾರೂ ಇಲ್ಲೆಂದರೂ ಅತಿಶಯೋಕ್ತಿಯಾಗದು. ಇವರಕಿಂತ ಮೊದಲು ರಾ॥ ಗಣಪತರಾಯರು ಗಂಡು ಪಾರ್ಟ ಮಾಡುತ್ತಿದ್ದು, ಇವರು ಯುರೋಪಿಯನ್ನರನ್ನು ಸಹ ತಮ್ಮ ಅಭಿನಯದಿಂದ ತಲೆ ಬಗ್ಗಿಸಲಿಕ್ಕೆ ಹಚ್ಚಿದರೆಂಬ ಮಾತು ಕನ್ನಡಿಗರಿಗೆ ಅರಿದಲ್ಲ. ಈ ಪ್ರಕಾರ ಮಹಾರಾಷ್ಟ್ರವು ಜಗತ್ತಿಗೆ ಒಂದರ ಹಿಂದೊಂದು ರತ್ನಗಳನ್ನು ತೋರಿಸುತ್ತಿರುವಾಗ ಕರ್ನಾಟಕ ರಂಗಭೂಮಿಯು ಕತ್ತಲೆಯಿಂದ ಮುಸುಕಲ್ಪಟ್ಟಿದೆ. ಬಾಲಗಂಧರ್ವನ ಆಗಮನದಿಂದ ಜನರಿಗೆ ತಮ್ಮ ರಂಗಭೂಮಿಯ ವಿಷಯವಾಗಿ ವಿಚಾರಗಳು ಬರಹತ್ತಿವೆ ಯಾವ ತರದಿಂದ ನಮ್ಮ ರಂಗಭೂಮಿಯು ಮುಂದರಿದೀತು. ಮತ್ತು ಇಂಥ ಅಭಿನಯ ನಟಸಾಮ್ರಾಟರು ನಮ್ಮಲ್ಲಿ ಉದಯಿಸಿ ನಮ್ಮ ಕರ್ನಾಟಕ ಮಾತೆಯ ಹೆಸರನ್ನು ಹೇಗೆ ಮುಂದೆ ತಂದಾರೆಂಬ ವಿಚಾರಗಳು ಪ್ರತಿಯೊಬ್ಬ ಕನ್ನಡಿಗನಿಗೆ ಬರಹತ್ತಿವೆ. ಹೀಗೆ ಪರಪ್ರಾಂತದವರು ಬಂದು ನಮ್ಮ ಕರ್ತವ್ಯಗಳನ್ನು ಅಪ್ರತ್ಯಕ್ಷರೀತಿಯಿಂದ ನಮಗೆ ತಿಳಿಸಿಕೊಟ್ಟು ನಮಗೆ ಎಚ್ಚರಿಕೆ ಹುಟ್ಟಿಸಿ ನಮ್ಮ ಕರ್ನಾಟಕದ ಉದಯದ ಸೂರ್ಯನ ಎಳೆ ಕಿರಣಗಳನ್ನು ನಾವು ಕಾಣುತ್ತಿರುವಾಗ ಇದನ್ನು ನೋಡಿ ಸಹಿಸಲಾರದೆ ಶಾಮಲೆಯು ತನ್ನ ಅವಿಚಾರಿಯಾದ ಲೇಖಣಿಯಿಂದ ಎಲ್ಲರನ್ನು ಕತ್ತಲೆಯಲ್ಲಿ ಕೆಡವುವವಳಿದ್ದಾಳೆ.

ತನ್ನ ಮನೆ, ದೇಶ, ಭಾಷೆ ಇವು ಪ್ರತಿಯೊಬ್ಬ ಮನುಷ್ಯನ ಅಭಿಮಾನಾಸ್ಪದ ವಸ್ತುಗಳಾಗಿವೆ ಆದರೆ ಪ್ರತಿಯೊಂದಕ್ಕೂ ಪ್ರಕೃತಿ ಸಿದ್ಧವಾದ ಒಂದು ಮೇರೆಯು ಇದ್ದೇ ಇರತ್ತದೆ. ಈ ಮೇರೆ ದಾಟಿದವೆಂದರೆ ಅವಕ್ಕೆ 'ದುರ್' ಎಂಬ ವಿಶೇಷಣವನ್ನು ಹಚ್ಚ ಬೇಕಾಗುತ್ತದೆ ಅದರಂತೆ ಶ್ಯಾಮಲೆಯು ಬಾಲಗಂಧರ್ವನ ಅಭಿನಯ ಚಾತುರ್ಯವನ್ನೂ, ಹಾಡುವಿಕೆಯನ್ನೂ ಮಾದರಿಯಾಗಿ ಇಟ್ಟುಕೊಂಡು ತನ್ನ ಜನರು ಸುಧಾರಿಸುವ ಉಪಾಯವನ್ನು ಹೇಳಿದ್ದರೆ ಅದು ಸದಭಿಮಾನವಾಗುತ್ತಿತ್ತು. ಆದರೆ ಅದನ್ನೆಲ್ಲ ಬಿಟ್ಟು, ಬಾಲ (ಅಲ್ಲದ) ಗಂಧರ್ವನು ಪುರುಷರ ಕೃಷ್ಣಾ (ಹೆಣ್ಣು ಹೆಸರಲ್ಲ) ನು, ಇವನಿಗೆ ಹುಬ್ಬಳ್ಳಿಯ ಊರಿನಲ್ಲಿ ಸಿದ್ಧಸ್ವತ ಸ್ಥಳಕ್ಕೆ ಮಗನಾಯಿತೇನು ಬಾಲನಲ್ಲ ನಿನ್ನ ಮಹಾರಾಷ್ಟ್ರದೇವಿ! ಬಾಲನಲ್ಲ ಗಂಧರ್ವನು. (ಇಲ್ಲಿ ಶಾಮಲೆಯು ಗಂಧರ್ವನ ವಯಸ್ಸನ್ನು ಲಕ್ಷ್ಯದಲ್ಲಿ ತಂದಂತೆ ಕಾಣುತ್ತದೆ) ಮುಂತಾದ ಅಸಂಬದ್ಧವಾದ ಉದ್ಗಾರಗಳಿಂದ ತನ್ನಲ್ಲಿದ್ದ ದುರಭಿಮಾನವನ್ನು ವ್ಯಕ್ತ ಪಡಿಸಿದ್ದಾಳೆ. ಇದು ಕನ್ನಡಿಗರಿಗೆ ಶೋಭಿಸುವದಿಲ್ಲೆಂದೂ ಮತ್ತು ಅವರ ಗುಣಗ್ರಾಹಿತ್ವಕ್ಕೆ ಕಪ್ಪು ಹಚ್ಚುವದೆಂದೂ ಕಂಡು ಬಂದದ್ದರಿಂದ ನನಗೆ ಲೇಖವನ್ನು ಬರೆಯುವ ಪ್ರಸಂಗ ಬಂದಿತು.

ಬಾಲಗಂಧರ್ವನ— ಶ್ಯಾಮಲೆ ಮತ್ತೊಮ್ಮೆ ಹೇಳುತ್ತೇನೆ ಕೇಳು. ಇವರ ಕೀರ್ತಿಮಾಧುರ್ಯಕ್ಕೆ ಮೆಚ್ಚಿ ಮೇಲೆ ಹೇಳಿದ ಪದವಿಯನ್ನು ಕೊಟ್ಟರಲ್ಲದೆ ಇವರ ವಯಸ್ಸಿಗೆ ಮೆಚ್ಚಿ ಬಿರುದನ್ನು ಕೊಟ್ಟಿಲ್ಲ— ಕಂಠ ಮಾಧುರ್ಯದಿಂದಲೂ ಅಪ್ರತಿಮವಾದ ಅಭಿನಯದಿಂದಲೂ, ಮಂಜುಳ ಸ್ವರದಿಂದಲೂ, ಇಡೀ ಭರತ ಭೂಮಿಯು ತಲ್ಲೀನಳಾಗಿರುವಾಗ, ಶ್ಯಾಮಲೆಯು ಅರಣ್ಯ ರೋದನದಿಂದ ಅವನಿಗೇನು ಆಗಬೇಕಾಗಿದೆ? ಬಾಲಗಂಧರ್ವನು ಮರಾಠಿಗನೆಂಬದಿಷ್ಟೇ ಕಾರಣದಿಂದ ಅವನಿಗೆ ನಮ್ಮೀ ಕರ್ನಾಟಕದಲ್ಲಿ ಸ್ಥಳದೊರೆಯಬಾರದೆ? ಇವರ ಅಭಿನಯ ಚಾತುರ್ಯವನ್ನೂ ಇಂಪಾದ ಸ್ವರವನ್ನೂ ಕೇಳಿ ಸದಾಶಿವರಾವ ಗರುಡ, ಗುರುರಾವ ದೇಶಪಾಂಡೆ, ಇವರು ಬೆಪ್ಪಾಗಿ ಕೂತಿರುವರಲ್ಲ! ಇವರಿಗೇನು ಹೇಳುವಿ? ಶ್ಯಾಮಲೆ? ಅಭಿನಯ ಕೇಸರಿ (?) ಗಾಯನ ಪಿಪ್ರಣರೇ ಇವನ ನಾಟಕವನ್ನು ನೋಡಲಿಕ್ಕೆ ಹೋಗಬೇಕೆ? ಇದು ಅವರ ಗುಣಗ್ರಾಹಿತ್ವವನ್ನು ವ್ಯಕ್ತ ಪಡಿಸುತ್ತದಲ್ಲದೆ ಮತ್ತೇನು? "ಗುಣಾಃ ಪೂಜಾಸ್ಥಾನಂ ಗುಣಿಷು ನಚಲಿಂಗಂ ನಚವಯಃ" ಎಂಬ ತತ್ವವನ್ನಾದರೂ ಅವರು ಒಪ್ಪುವದಿಲ್ಲವೆ?

ಇನ್ನು, ಪ್ರೋ. ಭಾಟೆಯ ರ ಬಗ್ಗೆ. ಪ್ರೋ. ಭಾಟೆಯವರು ಕರ್ನಾಟಕ ಕಾಲೇಜದಂಥ ಒಂದು ಸಂಸ್ಥೆಯ ಪ್ರಿನ್ಸಿಪಾಲರಿರುವರಷ್ಟೇ ಅಲ್ಲದೆ, ಕನ್ನಡ ಪ್ರೊಫೆಸರರಲ್ಲಿ ಕಂಡು ಬರದ ಉಜ್ವಲ ದೇಶಾಭಿಮಾನದ ಜ್ಯೋತಿಯು ಅವರಲ್ಲಿ ಪ್ರಕಾಶಿಸುತ್ತದೆ. ಅಂತೇ ಅವರು ಸಿಕ್ಕಷ್ಟು ಸಂಬಳದಿಂದ ಸಂತುಷ್ಟರಾಗಿ ತಮ್ಮ ಸಂಸ್ಥೆಯ ಸಲುವಾಗಿ ತಮ್ಮ ಸ್ವತಃ ಮನ ಧನಗಳನ್ನು ಸಹ ಅರ್ಪಿಸಿದ್ದಾರೆ. ಇಂಥ ಸಂಸ್ಥೆಗಳು ಜೀವಂತವಿದ್ದದ್ದು ಕಂಡರೆ ನಮ್ಮ ಕನ್ನಡಿಗರಿಗೆ ತಲೆಸೂಲಿಯೇ ಏಳುತ್ತದೆ. ಅಂತೇ ಅವರು ವ್ಹಿಕ್ಟೋರಿಯಾ ಹಾಯಸ್ಕೂಲ, ಮತ್ತು ಕಾಲೇಜ ಎಂಬ ಎರಡು ಸಂಸ್ಥೆಗಳನ್ನು ನುಂಗಿ ನೀರು ಕುಡಿದು ತಣ್ಣಗೆ ಕೂತಿದ್ದಾರೆ. ಅದೇ ಭಾಟೆಯವರನ್ನು ಮತ್ತು ಅವರ ಬಂಧುಗಳನ್ನು ನೋಡಿರಿ! ಫರ್ಗ್ಯುಸನ್, ವಿಲಿಂಗ್ಡನ್ ಮುಂತಾದ ಕಾಲೇಜಗಳನ್ನು ತಮ್ಮ ಸ್ವಾರ್ಥವನ್ನು ಬದಿಗಿಟ್ಟು ಇಷ್ಟು ಪ್ರಯತ್ನದಿಂದ ನಡಸಿದ್ದಾರೆ. ಅವರ ಯೋಗ್ಯತೆಯೇ ತರುಣರು ನಮ್ಮಲ್ಲಿ ಹುಟ್ಟಿದ ಹೊರ್ತು ನಮ್ಮ ಕರ್ನಾಟಕವು ತಲೆಯೆತ್ತದಮ್ಮಾ ಶ್ಯಾಮಲೆ!

ಮರಾಟಿಗರಲ್ಲಿರುವ ಅನೇಕ ಗುಣಗಳು ಅನುಕರಣೀಯವಾಗಿವೆ. ಅವರು ಮರಾಟಿಗರೆಂಬದಿಷ್ಟೇ ಕಾರಣದಿಂದ ಅವರನ್ನು ನಿಂದಿಸಿದರೆ ಕರ್ನಾಟಕಕ್ಕೇನು ಬಂತು!

ಬಾಲಗಂಧರ್ವನಲ್ಲಿ ಅಭಿನಯವಿಲ್ಲ, ಸೌಂದರ್ಯವಿಲ್ಲ, ಅವನನ್ನು ತಂದು ನಮ್ಮ (ಅಲ್ಲ ನಿಮ್ಮ) ಶರಾವತಿಯ ಮೇಲೆ ನಿವಾಳಿಸಿರಿ, ಅವರಲ್ಲಿ ಗಾಯನ ವಿದ್ಯೆಯಿಲ್ಲವೆಂದು ಹಳಿಯುವ ನೀನು ಕನ್ನಡ ರಂಗಭೂಮಿಯ ಮೇಲೆ ಬಂದು ನಿಂತು ಅವನನ್ನು ನಾಚಿಸಬಾರದೆ

ವಾಚಕರಲ್ಲಿ ವಿಜ್ಞಾಪನೆ.

ಇನ್ನು ೮ ಸಂಚಿಕೆಗಳು ಹೊರಬಿದ್ದರೆ, "ಕನ್ನಡಿಗ"ನ ಮೊದಲನೇ ವರ್ಷವು ಮುಗಿದಂತಾಯಿತು. ಮುಂದಿನ ವರ್ಷದಿಂದ ಜನರಿಗೆ ಈಗಿನಕಿಂತಲೂ ಹೆಚ್ಚು ಉಪಯೋಗವಾಗುವಹಾಗೆ "ಕನ್ನಡಿಗ"ನಲ್ಲಿ ಸುಧಾರಣೆಯನ್ನು ಮಾಡಬೇಕೆಂದಿರುವೆವು. ನಿರ್ಧಾರಗಳೆಲ್ಲ ಕಡೆಯ ಸಂಚಿಕೆಯ ಲ್ಲಿ ಪ್ರಕಟವಾಗುವವು. ಇಷ್ಟರಲ್ಲಿ ನಮ್ಮ ವಾಚಕರು ತಮಗೆ ತೋಚಿದ ಸುಧಾರಣೆಗಳನ್ನು ಸೂಚಿಸಬೇಕಾಗಿ ಸವಿನಯ ಪ್ರಾರ್ಥನೆಯಿದೆ. ಯೋಗ್ಯ ಸೂಚನೆಗಳನ್ನೂ, ಅವುಗಳ ಶಕ್ಯಾಶಕ್ಯತೆಯ ವಿಚಾರವನ್ನೂ "ಕನ್ನಡಿಗ"ನಲ್ಲಿ ಪ್ರಸಿದ್ಧಿಸುವೆವು.

—ವ್ಯವಸ್ಥಾಪಕ "ಕನ್ನಡಿಗ"

ಗಂಧರ್ವನಲ್ಲಿ ಗಾಯನ ಕಲೆಇಲ್ಲ. ಕಲೆ ಶಬ್ದಕ್ಕೆ ಶಾಸ್ತ್ರ ಎಂಬ ಅರ್ಥ—ವೆಂದು ಕುಂದಗೋಳ ರಾಮರಾಯರ ಕಡೆಗೆ ಬೊಟ್ಟು ಮಾಡುವಿ. ಸೌಂದರ್ಯ ಬೇಕಾದರೆ ಶರಾವತಿ! ಬೇಕಾದರೆ ಟೀ ರಾಘವಾಚಾರ್ಯರು ಯಾರಿರುವರು? ಹೆಸರು ಮೈಸೂರಿನವರಂತಿದೆ. ಹೆಸರನ್ನು ನಾವು ಕೇಳಿಲ್ಲ!— ಮುಂದೆ ಕಲಿವಿ. ಇಷ್ಟು ಭಿನ್ನ ಭಿನ್ನ ಶರೀರಗಳಲ್ಲಿದ್ದ— ಇವು ಆ ಆ ವ್ಯಕ್ತಿಗಳಲ್ಲಿ ಇದ್ದವಾದರೆ— ಗುಣಗಳು ಒಂದೇ ವ್ಯಕ್ತಿಯಾದ ಗಂಧರ್ವನಲ್ಲಿ ವ್ಯಕ್ತವಾದರೆ ಅದಕ್ಕೆ ನೀನು ಮತ್ಸರಿಸುವಿಯಾಕೆ? ಅವನು ಮುರಾರಿಯಲ್ಲಿ ಹಾಡಿದ ಮಾತ್ರಕ್ಕೆ ಅಪಾತ್ರನೆ? ಶ್ಯಾಮಲೆ, ನಿನ್ನ ಆ ಕುಂಚಿತ ದೃಷ್ಟಿಯಿಂದ ಇವನು ಅಪಾತ್ರನಾದರೂ ಬಹು ಜನ ಸಮಾಜದ ಪ್ರೀತಿ ಪಾತ್ರನಲ್ಲವೆ!

ಶ್ಯಾಮಲೆ, ಲೇಖನ ವ್ಯವಸಾಯವನ್ನು ಕೈಕೊಳ್ಳಬೇಕೆಂದು ನಿನ್ನ ಮನಸ್ಸಿನಲ್ಲಿದ್ದರೆ ಯಾವದಾದರೊಂದು ವಿಷಯವನ್ನು ಅಭ್ಯಾಸಮಾಡಿ ಅದರ ಮೇಲೆ ಲೇಖ ಬರೆಯುತ್ತ ಹೋಗು ಸುಮ್ಮನೆ ಗುಣಗಳ ಮೇಲೆ ಟೀಕೆ ಮಾಡುವದರಲ್ಲಿ ಕಾಲಹರಣ ಮಾಡಬೇಡ- ಇದೇ ನಿನ್ನ ಕರ್ನಾಟಕದ ಅಭಿಮಾನವನ್ನು ಬೇರೆ ಕಡೆಗೆ ಉಪಯೋಗಿಸು. ಕನ್ನಡದಲ್ಲಿ ಉತ್ತಮವಾದ ನಾಟಕವನ್ನು ಬರೆ. ಬಾಲಗಂಧರ್ವರನ್ನೂ ಗಾಯನ ನಿಪುಣರನ್ನೂ, ಅಭಿನಯ ಚತುರರನ್ನೂ ತಯಾರಿಸು ಅಂದರೆ ಮಾತ್ರ ನಿನ್ನ ವಿದ್ಯೆಯನ್ನು ಕಂಡು ಇದೇ ಬಾಲಗಂಧರ್ವನು ಆನಂದ ಪಡುವನು. ನಿನ್ನಂತೆ ಮತ್ಸರ ಬಡಲಿಕ್ಕಿಲ್ಲ ತಂಗೀ' ತಿಳಿಯಿತೆ'

—ನಿನ್ನ ಪ್ರೀತಿಯ ಅಣ್ಣ

ವರ್ತಮಾನಸಾರ

ಮುಂಬೈ ಕರ್ನಾಟಕ

ಪ್ರತಿವರ್ಷದಂತೆ ನವಲಗುಂದದಲ್ಲಿ ಶ್ರೀ. ಲಾಲಗಡೀ ಪ್ರಾಣದೇವರ ಗುಡಿಯಲ್ಲಿ ಮಾಘ ಶುದ್ಧ ೮ರಿಂದ ೧೦ ವರೆಗೆ ಶ್ರೀ ಮದಾನಂದ ತೀರ್ಥ ಗುರುಗಳ ಬದರಿಕಾಶ್ರಮ ಪ್ರವೇಶದ ಉತ್ಸವವು ನೆರವೇರಿಸಲ್ಪಡುವದು.

ಗದಗ ಸ್ಟೇಶನ್‌ದ ಪ್ಲಾಟ ಫಾರ್ಮಿನ ಮೇಲೆ ಚಪ್ಪರವನ್ನು ಹಾಕಿಸುವದಕ್ಕಾಗಿ ೭ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿದ್ದು, ಈ ಕೆಲಸವು ೧೯೩೬-೩೭ ರಲ್ಲಿ ಪ್ರಾರಂಭವಾಗುವದೆಂದು ಬೆಳಗಾವಿಯ ರೇಲವೇ ಮಂಡಲದವರಿಗೆ ರೇಲವೇಯವರು ತಿಳಿಸಿದ್ದಾರೆ

ಮದ್ರಾಸ ಕರ್ನಾಟಕ

ತಾ॥ ೨೦-೧೩-೩೫ ರ ದಿನ ಬಳ್ಳಾರಿಯಲ್ಲಿ ವೀರಶೈವ ತರುಣ ಸಂಘದ ಮಂದಿರದಲ್ಲಿ ಟ್ರೆಜರಿ ಡೆಪ್ಯೂಟಿ ಕಲೆಕ್ಟರ ಮ॥ ಭೋಗಶೆಟ್ಟರ ಬಸಪ್ಪನವರ ಅಧ್ಯಕ್ಷತೆಯಲ್ಲಿ ವಾಚನಾಲಯದ ಸ್ಥಾಪನೋತ್ಸವವು ನಡೆಯಿತು. ಸಮಾರಂಭಕ್ಕೆ ಅನೇಕ ವಕೀಲರು, ಶಾಸ್ತ್ರಿಗಳು ವರ್ತಕ ಮಂಡಲಿಯವರು ಮತ್ತು ವಿದ್ಯಾರ್ಥಿಗಳು ಆಗಮಿಸಿದ್ದರು ಈ ಸಂಘದ ಪ್ರೆಸಿಡೆಂಟರಾದ ಮ॥ ಟಿ. ಯಚ್. ಎಂ ಚಂದ್ರಶೇಖರ ಶಾಸ್ತ್ರಿ ಬಿ. ಎ. ಬಿ. ಎಲ್ ಇವರೂ ಉತ್ಸಾಹಿ ತರುಣರೂ ಕೂಡಿ ಸಮಾಜಸೇವೆಯ ಒಳ್ಳೇ ಕೆಲಸಗಳನ್ನು ಮಾಡುತ್ತಾ ಇದ್ದು ಈಗ್ಗೆ ಕೆಲವು ದಿವಸಗಳ ಹಿಂದೆ ಇಲ್ಲಿಗೆ ಬಂದು ಅನೇಕ ಜನರ ಮೆಚ್ಚಿಗೆಗೆ ಪಾತ್ರರಾದ ವಿನೋದ ರತ್ನಾಕರ ಮ॥ ಹಿರಣ್ಣನವರಿಂದ ೩೧೯ ರು ಈ ಸಂಘದ ವಾಚನಾಲಯಕ್ಕೆ ಕೊಡಿಸಿದರು. ಮೇ॥ ಯಚ್. ಯಂ ಚಂದ್ರಶೇಖರ ಶಾಸ್ತ್ರಿಗಳು ಕರ್ನಾಟಕದ ಏಕೀಕರಣಕ್ಕೆ ವೀರಶೈವರು ಪ್ರಯತ್ನಮಾಡಬೇಕೆಂತ ಹೇಳಿದ ಮೇಲೆ ಕಾರ್ಯದರ್ಶಿಯಾದ ಕವುತಾಳದ ಶ್ಯಾಂತ ರುದ್ರಪ್ಪನವರು ಎಲ್ಲಾ ತರುಣರಿಗೆ ಉತ್ತೇಜನ ಬರುವಹಾಗೆ ಮಾತಾಡಿದರು. ಸಭಾಧ್ಯಕ್ಷರು ತಾವು ಆಂಧ್ರ ದೇಶದಲ್ಲಿ ಇದ್ದುದರಿಂದ ಕನ್ನಡ ಮಾತನಾಡಲಿಕ್ಕೆ ಹೆಚ್ಚು ಪರಿಶ್ರಮ ವಿಲ್ಲದಿದ್ದರೂ. ಈ ಹೊತ್ತಿನಿಂದ ಬರುವ ವರ್ಷದೊಳಗಾಗಿ ಚನ್ನಾಗಿ ಭಾಷಣಮಾಡುವೆನೆಂದು ನಿರ್ಧರಿಸಿ ವಾಚನಾಲಯದ ಉಪಯೋಗವು ಹೆಚ್ಚಿಗೆ ಇರುವದರಿಂದ ಅದನ್ನು ಎಲ್ಲರೂ ಪ್ರೋತ್ಸಾಹಿ ಬೇಕಾಗಿ ಸೂಚಿಸಿ ತಮ್ಮ ಭಾಷಣವನ್ನು ಮುಗಿಸಿದರು

ಉಡುಪಿಯಲ್ಲಿ ಪರ್ಯಾಯ ಮಹೋತ್ಸವವು ಬಹುವಿಜೃಂಭಣೆಯಿಂದ ಸಾಂಗವಾಯಿತು. ಪರ್ಯಾಯ ಶ್ರೀಗಳವರು ರಾಘವೇಂದ್ರ ಸ್ವಾಮಿಗಳ ಸ್ವಾಗತ ಮಾಡುವಾಗ್ಗೆ ಶ್ರೀ. ರಾಮದೇವರಿಗೆ ಹೂವುಗಳನ್ನರ್ಪಿ, ಲಾಜಾ ವೃಷ್ಟಿಗಳನ್ನು ಧಾರಾಳವಾಗಿ ಕರೆದು, ಮುಂದೆ ಸಮ್ಮುಖದಲ್ಲಿದ್ದ ಶ್ರೀ. ಸುಶೀಲೇಂದ್ರ ಶ್ರೀಗಳವರಿಗೂ ಸುಮವೃಷ್ಟಿಯನ್ನು ಸೂಸಿ, ಶ್ರೀಗಳವರ ಕರಗಳನ್ನು ಹಿಡಿದು, ಮುಂದಕ್ಕೆ ಬಂದು ಉಭಯತ್ರರೂ ಆಲಿಂಗಿಸುವಂತೆ ಸೇರಿ, ಸಂಭಾವಿಸಿ, ಶ್ರೀ ರಾಮದೇವರನ್ನು ಶ್ರೀಕೃಷ್ಣ ದೇವಾಲಯದಲ್ಲಿ ಪ್ರವೇಶ ಗೈಸಿದರು.

ಮೈಸೂರ ಕರ್ನಾಟಕ

ಮೈಸೂರ ಕಾಯದೇ ಮಂಡಲವು ಬೆಂಗಳೂರಿನಲ್ಲಿ ಫೆಬ್ರುವರೀ ೨೪ರಲ್ಲಿ ಸೇರುವದು

ಮೈಸೂರ ಗಂಧದ ಎಣ್ಣೆಯ ವ್ಯವಹಾರವು ಬಹು ಲಾಭಕರವಾಗಿದೆ. ಅಮೇರಿಕೆಯ ಜನರು ಈ ಎಣ್ಣೆಗೆ ಮೋಹಿಸಿ ಬಿಟ್ಟಿದ್ದಾರೆ. ಈ ವರ್ಷ ೨೬ ಲಕ್ಷರೂಪಾಯಿಗಳ ವ್ಯವಹಾರವಾಯಿತು. ೧೯ ಲಕ್ಷ ವೆಚ್ಚವಾಯಿತು.

ನಿಝಾಮ್ ಕರ್ನಾಟಕ

ರಾಯಚೂರಿನ ಸುಪ್ರಸಿದ್ಧ ವರ್ತಕರೂ, ತಮ್ಮ ಧರ್ಮನಿಷ್ಠವಾದ ಆಚರಣೆಯಿಂದ ಗೃಹಸ್ಥಯೋಗಿ ಎಂಬ ಹೆಸರು ಪಡೆದವರೂ ಆದ ಶ್ರೀ ಹರದರ ಧರಣಪ್ಪ ನಾಗಪ್ಪ ಇವರು ಬೇರೆ ಬೇರೆ ಸಂಸ್ಥೆಗಳಿಗೆ ಪ್ರತಿವರ್ಷವೂ ಸಾವಿರಾರು ರೂಪಾಯಿಗಳನ್ನು ದಾನಮಾಡುತ್ತಿರುವರು. ಈಗ್ಗೆ ಅವರು ೫೦ ಸಾವಿರ ರೂಪಾಯಿಗಳನ್ನು ಧರ್ಮಕ್ಕಾಗಿ ತೆಗೆದು, ಪಂಚರನ್ನು ನೇಮಿಸಿ, ಸರ್ಕಾರದಲ್ಲಿ ನೋಂದಾಯಿಸಿ, ಅದರ ಬಡ್ಡಿಯಿಂದ ಪ್ರತಿವರ್ಷವೂ ಬೇರೆ ಬೇರೆ ಕಡೆಯ ಧಾರ್ಮಿಕ ಸಂಸ್ಥೆಗಳ ಪ್ರೋತ್ಸಾಹನ ಹೊಂದುವ ಹಾಗೆ ವ್ಯವಸ್ಥೆ ಮಾಡಿದ್ದಾರೆ. ಧನ್ಯ! ಧನ್ಯ!

ಕೊಡಗು ಕರ್ನಾಟಕ

ಪೆನ ಶನ್ ಹೊಂದಿದ ಡೆಪ್ಯುಟೀ ಪೋಲೀಸ ಸುಪರಿಂಟೆಡಂಟ್‌ರಾದ ಖಾನ ಬಹದ್ದೂರ ಅಹಮ್ಮದ ಖಾನ ಅವರಿಗೆ 'ಪೋಲೀಸ ಮೆಡಲ್' ದೊರತಿದೆ.

ಹಿಂದುಸ್ಥಾನ

ಮಹಾತ್ಮಾ ಗಾಂಧಿಯವರು ಒಂದು ವರ್ಷದ ವರೆಗೆ ಸತ್ಯಾಗ್ರಹ ಆಶ್ರಮದಲ್ಲಿಯೇ ಇದ್ದು, ಅದರ ಸುಸಂಘಟನೆಯನ್ನೂ ಖಾದಿಯ ಬಗ್ಗೆ ಶಾಶ್ವತವಾದ ಏರ್ಪಾಡನ್ನೂ, ಮಾಡುವವರಾಗಿ ತಿಳಿಯುತ್ತದೆ. ಖಾದಿಯಬಗ್ಗೆ ಈ ವರ್ಷದಲ್ಲಿ ೧ ಕೋಟಿ ರೂಪಾಯಿ ಕೂಡಿಸುವರು

ಅಮೇರಿಕೆಯ ಜನರು ಕವಿವರ್ಯ ಟಾಗೋರ ಮತ್ತು ಮಹಾತ್ಮಾಗಾಂಧೀ ಇವರೀರ್ವರಿಗೆ ಅತಿಶಯವಾದ ಆದರವನ್ನು ತಳೆದಿರುವರೆಂದು, ಅಮೇರಿಕೆಯಿಂದ ಮದ್ರಾಸಕ್ಕೆ ಬಂದ ಚಾರ್ಲ್ಸ ಜೇಫರನ್ನರು ಹೇಳಿದರು

ಸರಕಾರೀ ಗ್ಯಾಜೆಟ್

ಶ್ರೀಯುತ ಜಯಕರರ ರಾಜೀನಾಮೆಯನ್ನು ಗವರ್ನರರು ಸ್ವೀಕರಿಸಿದ್ದಾರೆ ಇವರ ಸ್ಥಳಕ್ಕೆ ಮುಂಬೈ ವಿಶ್ವವಿದ್ಯಾಲಯದ ಪದವೀಧರರಾದ ಇನ್ನೋರ್ವ ಪ್ರತಿನಿಧಿಯನ್ನು ೧೮ ಫೆಬ್ರುವರಿಯೊಳಗಾಗಿ ನೇಮಿಸತಕ್ಕದ್ದು ಡಾ. ಪರಾಂಜಪೆಯವರು ಈಗಾಗಲೇ ಉಮೇದವಾರರಾಗಿದ್ದಾರೆ.

ಪೋಲೀಸ ಸುಪರಿಂಟೆಂಡೆಂಟ್ ಗಾರ್ಡನ್ ಸಾಹೇಬರಿಗೆ ಪೋಲೀಸ ಮೆಡಲ್ ಕೊಡಲ್ಪಟ್ಟದೆ.

ಬೆಳಗಾವಿ ಜಿಲ್ಲೆಯಲ್ಲಿ, ಹುಕ್ಕೇರಿ, ಯಮಕನಮರಡಿ, ಗೋಕಾಕ ಫಾಲ್ಸ್ ಇವು ಹೊಸ ಪೋಲೀಸ ಸ್ಟೇಶನ್ ಎಂಬದಾಗಿ ಪ್ರಸಿದ್ಧವಾಗಿದೆ

ಧಾರವಾಡದ ಅಸಿಸ್ಟಂಟ ಜಜ್ಜರಾದ ಕಾರ್ಕರರು ೩ ತಿಂಗಳ ೨೬ ದಿನಗಳ ವರೆಗೆ ರಜೆ ತೆಗೆದು ಕೊಂಡಿದ್ದಾರೆ.

ಹುಕ್ಕೇರಿ ಗೋಕಾವಿಗಳ ನಡುವೆ ಒಂದೇ ಕೋರ್ಟು ಇರಬೇಕಾಗಿಯೂ, ೮ ತಿಂಗಳು ಹುಕ್ಕೇರಿಯಲ್ಲಿ ೪ ತಿಂಗಳು ಗೋಕಾವಿಯಲ್ಲಿ ನಡೆಯಬೇಕಾಗಿಯೂ ಅಪ್ಪಣೆ ಯಾಗಿದೆ.

।ಮನಸಾ ವಚಸಾ ಶರೀರತಃಕುರುನಿತ್ಯಂನಿಜದೇಶಸೇವನಂ।

ಪ್ರಿಯ ದೇಶಬಾಂಧವರೇ,

ಇತ್ತ ನೋಡಿರಿ! ಒನ್ಮೆ ಓದಿರಿ!!

ಮಾತೃಭಕ್ತಿಯನ್ನು ಪ್ರಕಾಶಗೊಳಿಸಿರಿ !!

“ಕಾನಡಾ ಧುರೀಣ”

ಈ ಅತ್ಯುತ್ತಮವಾದ ರಾಷ್ಟ್ರೀಯ ವಾರಪತ್ರಿಕೆಯು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಾರ ಹೊಂದುತ್ತಿದೆ. ಇದರಲ್ಲಿ ಸಮಯೋಚಿತವಾಗಿ ಪ್ರಕಟವಾಗುವ ಸ್ವಮತ ವಿಮತಗಳ ಮೇಲಿನ ಸಿದ್ಧಾಂತ, ನವ್ಯ-ಭವ್ಯವಿಷಯಪ್ರತಿಪಾದನ, ಸುವಿಚಾರ ರಮಣೀಯವೂ ವಿಚಿತ್ರ ಸ್ಫೂರ್ತಿದಾಯಕವೂ ಆದ ಸಂಪಾದಕರ ಅಪ್ರತಿಮ ಲೇಖಗಳು, ಸುಜ್ಞರ ಕವಿತಾಲಾಪಗಳು, ಮಹಾಪುರುಷರ ವಾಗ್ರಸಾಯನವು, ಪ್ರೋತ್ಸಾಹಕರಿಂದ ದೊರೆಯುವ ದೇಶ ದೇಶಾಂತರ ವೃತ್ತಾಂತಗಳು ಸಹ ಕನ್ನಡಿಗರೆಲ್ಲರಿಗೂ ಅತ್ಯಂತ ಮನೋಹರವಾಗಿರುವವು ಸುಪ್ರಸಿದ್ಧ ವಿದ್ಯಾವಂತರ ಪ್ರಶಂಸೆಗೆ ಪಾತ್ರವಾದ ಈ ಪತ್ರಿಕೆಯೇ ಕರ್ನಾಟಕದಲ್ಲಿ ಹೆಚ್ಚಿನದೆಂದು ತಜ್ಞರು ತಿಳಿದು ಹೇಳದಿರಲಾರರು ವಾರ್ಷಿಕಚಂದಾ ಅಂಚೆ ವೆಚ್ಚ ಸೇರಿ ೩-೧-೦

ವಿಳಾಸಃ— ಮ್ಯಾನೇಜರ, “ ಕಾನಡಾ ಧುರೀಣ ” ಕುಮಟಾ, (ಉತ್ತರ ಕನ್ನಡ)

ಕನ್ನಡ ಸಹಕಾರಿ

ಎಂಬ ನಿಖಿಲಕರ್ನಾಟಕದ ಸರ್ವತೋಮುಖವಾದ ತಿಳಿಗನ್ನಡ ಪಕ್ಷಪತ್ರಿಕೆ.

ಈ ಪತ್ರಿಕೆಯ ಚಂದಾದರವು ವರ್ಷ ಒಂದಕ್ಕೆ ಅಂಚೆವೆಚ್ಚ ಸೇರಿ ವರೂರು ೧ರೂಪಾಯಿ ಆಗಿರುತ್ತದೆ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ೨ ೧ರೂಪಾಯಿ. ಶಾಲೆಯ ಅಥವಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ೧| ರೂಪಾಯಿ ಮಾತ್ರ. ಬಿಡಿಸಂಚಿಕೆಗಳು ಪ್ರತಿ ಒಂದಕ್ಕೆ ಎರಡು ಆಣೆಯಂತೆ ದೊರೆಯುವವು

ಲೋಕರಹಸ್ಯ

ಕೃಷಿಯ ಅತ್ಯುತ್ತಮ ರೀತಿಗಳು, ವ್ಯಾಪಾರದ ವಿಷಯಗಳು ಹೊಲಿಗೆ, ಮಕ್ಕಳನ್ನು ಸಾಕುವ ವಿಷಯಗಳನ್ನು ಒಡವರಿಗೆ ಬೇಕಾದ ಹಣಸಂಪಾದನೆಯ ವಿಷಯಗಳು, ರಸಿಕರಿಗೆ ವಿನೋದ ವಿಚಾರ, ರಾಜಕೀಯ ವಿಷಯಗಳು, ಆಯುರ್ವೇದ ಯುನಾನಿ ವೈದ್ಯ ಸಂಗ್ರಹ. ಪ್ರತಿಯೊಬ್ಬನೂ ತಿಳಿಯಬೇಕಾದ ಲಾ' ವಿಚಾರ, ವಿದ್ಯಾ ವಿಷಯ, ವೇದಾಂತ ವಿಚಾರಗಳಿಂದಲೂ, ತುಂಬಿ ತುಳುಕುತ್ತಿರುವ ಈ ಮಾಸ ಪತ್ರಿಕೆಗೆ ವರ್ಷಕ್ಕೆ ಚಂದಾ ರೂ. ೩-೮-೦ ಮಾದರಿ ಸಂಚಿಕೆಗೆ ೦-೫-೦.

ಪ್ರತಿ ತಿಂಗಳಲ್ಲೂ ೬೦ ಪುಟಗಳಿಗೆ ಕಡಿಮೆಯಿಲ್ಲದೆ ವಿಷಯಗಳಿರುತ್ತವೆ. “ ಲೋಕರಹಸ್ಯ ” ಆಫೀಸು, ವೀರಾಜೇಂದ್ರ ಪೇಟೆ (ಕೊಡಗು)

ತ್ವರೆಮಾಡಿರಿ

ಬೆಳಧಡಿ ಸಂಸ್ಥಾನದ

ಶ್ರೀ ಬ್ರಹ್ಮಾನಂದ ಮಹಾರಾಜರು ರಚಿಸಿದ ಭಜನ ಪದ್ಯಾವಲಿಯು ಮರಾಠಿಯಲ್ಲಿ ಉತ್ತಮ ಗ್ಲೇಜ ಕಾಗದ ಮೇಲೆ ಅಂದವಾಗಿ ಮುದ್ರಿತವಾಗಿ ಮಾರಾಟಕ್ಕೆ ಸಿದ್ಧವಾಗಿದೆ. ಈಗಾಗಲೇ ೫೦೦ ಪ್ರತಿಗಳು ಖರ್ಚಾಗಿಬಿಟ್ಟಿರುವವು ಇನ್ನು ಸ್ವಲ್ಪೇ ಪ್ರತಿಗಳು ಉಳಿದಿರುವವು. ಕಾರಣ ಬೇಕಾದವರು ತ್ವರೆ ಮಾಡಬೇಕು ಕ್ರಯ ೬ ಆಣೆ ಮಾತ್ರ.

ವಿಳಾಸಃ— ಮ್ಯಾನೇಜರ ಗ್ರಾಮಾಧಿಕಾರಿ ಪ್ರಿಂಟಿಂಗ ಪ್ರೆಸ್ ವಿಜಾಪುರ

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ರೇಟು............ ...ನೂರಕ್ಕೆ ವರ್ಷಕ್ಕೆ			2½
ಸೇವಿಂಗ್ಸ ಬ್ಯಾಂಕ ರೇಟು	”	”	4½
ಮುದ್ದತೀ ರೇಟು ೬ ತಿಂಗಳಿಗೆ	”	”	6
” ೧೨ ತಿಂಗಳಿಗೆ	”	”	7

ಸಾರಕೋನ ವಾರಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ.

ಜಾಹೀರ ನೋಟೀಸು

ಯಾವತ್ತು ಜನರಿಗೆ ಕೆಳಗೆ ಸಹಿಮಾಡುವವರ ಕಡೆಯಿಂದಾ ನೋಟೀಸಿನಿಂದಾ ತಿಳಿಸುವದರಲ್ಲಿ ಒರುತ್ತದಲ್ಲಾ—

ನನ್ನ ಗಂಡನಾದ, ವೆಂಕಟೇಶ ಬಾಳಾಜಿ ಟಂಕಸಾಲಿ, ಸಾ|| ಬಾಗಲಕೋಟೆ, ಇವನು ನನಗೂದಾ, ಯೋಗ್ಯರೀತಿಯಿಂದಾ, ಪ್ರಸಂಗ ಪಾಡದ ನನ್ನನ್ನು ವ ನನ್ನ ಮಕ್ಕಳನ್ನು ಕೂಡಾ ವೇಳೆಕ್ಕೆ ಅಪಾಯವಾಗುವಂತೆ ನೇಹಮೀ ಹೊಡಮ ವ ಬಡದು ಆಖ್ಯೆರಕ್ಕೆ ಮನೆಯಿಂದಾ ಹೊರಗೆ ಹಾಕಿರುತ್ತಾನೆ. ಅದ್ದರಿಂದ ಈ ಬಗ್ಗೆ ಕೋರ್ಟನಲ್ಲಿ ಸಾದಾರಿದಾವಾ ಮಾಡಿದ್ದೇನೆ. ಈ ಹಕೀಕತತಿಳಕೊಂಡು ನವರೀ ನನ್ನ ಗಂಡನು ನನನ್ನು ವ ನನ್ನ ಮಕ್ಕಳನ್ನು ಮುಣಿಗಿಸುವ ಇರಾದೆಯಿಂದಾ ತನ್ನ ಸ್ಥಾವರ ಜಂಗಮ ಮಿಳಕತು ವಿಲ್ಹೆವಾಟ ಮಾಡತಕ್ಕವನು ಇದ್ದಾನೆ. ಆದರೆ ಸದರ ಸ್ಥಾವರ ಜಂಗಮ ಮಿಳಕತಿಯ ಮೇಲೆ ನನ್ನದು ವ ನನ್ನ ಹೆಣ್ಣು ಮಕ್ಕಳದು ಪೋಟಗಿ ಬೋಜಾ, ವ ನನ್ನ ಹೆಣ್ಣು ಮಕ್ಕಳ ಲಗ್ನದ ಬೋಜಾ ಸಹಿತ ಇರುತ್ತದೆ. ವ ನನ್ನ ಗಂಡನ ಮಗನ ½ ವಾಟಣಿ ಹಕ್ಕು. ವ ಅವನ ಪೋಟಗೀ ಹಕ್ಕು ವ ವುಪನಯನದ ಹಕ್ಕು ಸಹಿತ ಇರುತ್ತದೆ ಅದ್ದರಿಂದಾ ಯಾರೂ ನವರೀ ಮಿಳಕತು ವತ್ತೀ ಅಗರ ಖರೀದಿ ವಗೈರೆ ತಗೋಬಾರದು. ತಗೊಂಡರೆ ಅದರ ಮೇಲೆ ನನ್ನ ವ ನನ್ನ ಹೆಣ್ಣು ಮಕ್ಕಳ ಪೋಟಗೀಬೋಜಾ, ವ ನನ್ನ ಹೆಣ್ಣು ಮಕ್ಕಳ ಲಗ್ನದ ಬೋಜಾ ಇರುತ್ತದೆ. ವ ನನ್ನ ಗಂಡನ ಮಗನ ½ ವಾಟಣಿ ಹಕ್ಕು ವ ಪೋಟಗಿ ಹಕ್ಕು ವ ವುಪನಯನದ ಖರ್ಚಿನ ಬೋಜಾ ಸಹಿತ ಇರುತ್ತದೆ. ತಿಳಿಯುವದು.

ತಾ| ೩-೧-೧೯೨೬ ನೇ ಇಸ್ವಿ

ಭಾಗೀರಥಿಬಾಯಿ ಕೋಂ ವೆಂಕಟರಾವ ಟಂಕಸಾಲಿ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂ ಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆ ಯ ಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ವೀರಜರಾಮ ಸಾರಥಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ವಾಯ, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಒಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯ ಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೬೬ ಶ್ರೀ. ಸಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಆಮಳ ಪುರಮ್.

೧-೮-೨೫ { ಬಿ. ಎನ್. ಆರಾಧ್ಯ ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ
ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ
ರಚಿತವಾದ ಸಚಿತ್ರ ಸಂಗೀತ ನಾಟಕಗಳು
ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಬಹುಮಾನ ಪಡೆದ

ಶ್ರೀ. ಧರ್ಮರಹಸ್ಯ ಬೆಲೆ ೧ ರೂ. } ಅಂಚೆ ಸೆಚ್ಚ
ಶಿಕ್ಷಣಸಂಭ್ರಮ ಬೆಲೆ ೧ ರೂ. } ಬೇರೆ

ವಿಳಾಸ:—ಗ್ರಂಥಕರ್ತ ಗದಗ

ಕನ್ನಡ ನವಜೀವನ.

ಈ ವಾರಪತ್ರಿಕೆಯ ಪ್ರಥಮ ಸಂಪುಟದ ಸಂಚಿಕೆಗಳನ್ನೆಲ್ಲ ಬಾಯಿಂಡ ಮಾಡಿಸಿ ಇಟ್ಟಿದೆ. ಅಸಹಕಾರದ ಝುಂಝಾವಾತದಲ್ಲಿ ಮಹಾತ್ಮರ ಲೆಕ್ಕಣಿಕೆಯಿಂದ ಹೊರಸೂಸಿದ ಅಮೃತಮಯ ಲೇಖಗಳನ್ನು ಓದುವ ಇಚ್ಛೆಯಿದ್ದರೆ ಇಂದೇ ಪತ್ರ ಬರೆಯಿರಿ. ಪ್ರತಿಗಳು ಸ್ವಲ್ಪೇ ಉಳಿದಿವೆ. ಸಾದಾ ಬೈಂಡ ೬ ರೂ ತೊಗಲಿನ ಬೈಂಡ ೮-೮-೦.

ವ್ಯವಸ್ಥಾಪಕ,
"ಕನ್ನಡಿಗ" ಬಾಗಲಕೋಟೆ

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ, ಎಮ್. ಎಲ್ ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರಮಾಸಪತ್ರಿಕೆ ಇದರಲ್ಲಿ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವರ್ಷಕ್ಕೆ ೧-೮-೦ ಬಿಡಿ ಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

'ಆರೋಗ್ಯಚಂದ್ರಿಕೆ' ೩೨, ತಂಬುಶೆಟ್ಟಿಬೀದಿ, ಮದ್ರಾಸ

ಕಿರ್ಲೋಸ್ಕರವಾರ್ತೆ

ಸಂಪಾದಕ-ಶ್ರೀ. ಲ. ಕೃ. ಬಾಗಲವಾಡ್ಯಯವಿಶಾರದ

ಇದೊಂದು ತಿಳಿಗನ್ನಡ ಮಾಸಪತ್ರಿಕೆಯು. ಇದರಲ್ಲಿ ಕರ್ನಾಟಕ- ತರುಣರ ಉನ್ನತಿಯಾಗುವದಕ್ಕೆ ಅವಶ್ಯವಾದ ಲೇಖಗಳು ಪ್ರಕಟವಾಗುತ್ತವೆ ಇದನ್ನು ನಿಯಮಿತವಾಗಿ ಓದುವದರಿಂದ ತರುಣರ ಆತ್ಮ ವಿಶ್ವಾಸವು ಜಾಗೃತಿಗೊಳ್ಳುವದು. ವಾರ್ಷಿಕ ಚಂದಾ ೧| ರೂ. ಮಾದರಿ ಸಂಚಿಕೆ ಪುಕ್ಕಟೆ. ಇಂದೇ ಕಾಗದವನ್ನು ಬರೆದು ತರಿಸಿ ಕೊಳ್ಳಿರಿ

ಕಿರ್ಲೋಸ್ಕರವಾರ್ತೆ } **ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರೆ**

ಗ್ರಾಮಸ್ಥರ ಮತ್ತು ವಕೀಲರ ನಮೂನೆಗಳು

೧ ನಮ್ಮ ಮುದ್ರಾಮಂದಿರದಲ್ಲಿ! ಗ್ರಾಮಸ್ಥರ ನಮೂನೆ ನಂಬರ ೧; ೧೪; ಮತ್ತೂ ೧೬ ದೊರೆಯುತ್ತವೆ. ಬೇರೆ ನಮೂನೆಗಳು ಬೇಕಾದಲ್ಲಿ ಮುದ್ರಿಸಿ ಕೊಡುವೆವು. ೨ ವಕೀಲರಿಗೆ ಬೇಕಾಗುವ ಬೇರೆ ಬೇರೆ ನಮೂನೆಗಳು ಮಾರಲಿಕ್ಕೆ ದೊರೆಯುತ್ತವೆ.

ಮುದ್ರಣ, ರೂಲಿಂಗ, ಬಾಯಿಂಡಿಂಗ ಕೆಲಸಗಳು ನಮ್ಮಲ್ಲಿ ದಕ್ಷತೆಯಿಂದ ಮಾಡಲ್ಪಡುವವು.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಮಾರಾಟಕ್ಕಿದ್ದಿದೆ.

ಸುಪರ್ ರಾಯಲ್ ಆಕಾರದ ಹ್ಯಾಂಡ ಪ್ರೆಸ್ ಮತ್ತೂ ಪ್ರೂಫ ಪ್ರೆಸ್ಸಗಳನ್ನು ಮಾರಾಟಕ್ಕಿಟ್ಟಿದ್ದೇವೆ. ಇವು ಒಳ್ಳೇ ಸ್ಥಿತಿಯಲ್ಲಿದ್ದು ಚನ್ನಾಗಿ ಕೆಲಸ ಕೊಡುತ್ತವೆ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಸಾಣೇಕಲ್ಲುಗಳು

ಸಣ ದೊಡ್ಡ ಸಾಣೇ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ. ಮುಂಗಡ ಹಣವಿಲ್ಲದಆರ್ಡರುಗಳ ಕಡೆಗೆ ಲಕ್ಷ್ಯಕೊಡಲಾಗುವದಿಲ್ಲ. ವಿಶೇಷಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಸ್ವಸ್ತಿಕ ಏಜನ್ಸಿ
ಬಾಗಲಕೋಟೆ (Dist. Bijapur)

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭

ವಾ. ಚಂದಾ ೧—೧೨—೦ ಮಾತ್ರ

ಕರ್ನಾಟಕ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಶುದ್ಧ ೯ ಶಕ ೧೮೪೭. ತಾ. ೨೨-೧-೧೯೨೬ | ಸಂಚಿಕೆ ೪೧

ಮಧ್ವಮತವು ಮಾಡಿದ ಕಾರ್ಯ.

[ಲೇ— [illegible]]

ಕರ್ನಾಟಕವು ಶ್ರೀಮನ್ಮಧ್ವಾಚಾರ್ಯರಿಗೆ ಜನ್ಮಕೊಟ್ಟು ಜಗತ್ತಿನ ವಿಚಾರವಿಕಾಸಕ್ಕೆ ಬಹುದೊಡ್ಡ ಸಹಾಯಮಾಡಿದೆ. ಕರ್ನಾಟಕವು ಭಾರತೀಯ ಸಂಸ್ಕೃತಿಗೂ, ಜಗತ್ತಿನ ವಿಚಾರ ವಿಕಾಸಕ್ಕೂ ಎಷ್ಟು ಬಗೆಗಳಿಂದ ಪೋಷಣ ಮಾಡಿದೆ ಎಂಬುವರ ಸಂಪೂರ್ಣ ಸ್ವತಂತ್ರವನ್ನೊಳಗೊಂಡ ಒಂದೆರಡು ಗ್ರಂಥಗಳು ಬೇಗನೆ ಬರೆಯಲ್ಪಡುವುದು ಕರ್ನಾಟಕದ ಸ್ವಾಭಿಮಾನ ಜ್ಯೋತಿಯನ್ನು ಪ್ರಜ್ವಲಿಸುವ ದೃಷ್ಟಿಯಿಂದ ಅತ್ಯವಶ್ಯಕವಾಗಿದೆ. ಎಲ್ಲವನ್ನೂ ಒಳಗೊಂಬ ಗ್ರಂಥವು ಹೊರಬೀಳುವ ಮೊದಲು ಒಂದೊಂದು ಬಗೆಯವರೂ ತಮ್ಮ ವಿಷಯಗಳ ವಿಮರ್ಶನಾಪೂರ್ವಕ ಐತಿಹ್ಯವನ್ನು ಬರೆದು ಪ್ರಕಟಿಸಿದರೂ ಎಷ್ಟೋ ಕೆಲಸವಾಗುವಂತಿದೆ. ಈಗ್ಗೆ ಮಧ್ವಮತವನ್ನೇ ತಕ್ಕೊಂಡರೆ ಈ ವಿಚಾರದಲ್ಲಿ ಆಧುನಿಕ ದೃಷ್ಟಿಯಿಂದ ವಿಮರ್ಶನಾಪೂರ್ವಕವಾಗಿ ಬರೆದ ಗ್ರಂಥಗಳು ಇಲ್ಲವೆಂದರೂ ಸಲ್ಲುವದು. ಜರ್ಮನ್ನ ಪಂಡಿತರು ಮಧ್ವಸಿದ್ಧಾಂತದ ಸೂಕ್ಷ್ಮ ಅಭ್ಯಾಸವನ್ನು ನಡಿಸಿದ್ದು, ಒಂದು ಲೇಖವು ಹಿಂದಕ್ಕೆ ಮಾಡರ್ನರಿವ್ಯೂದಲ್ಲಿ ಬಂದಿದೆ. ಕರ್ನಾಟಕವು ಮಧ್ವಮತದ ತವರುಮನೆ. ಕೊಂಚ ತಡವಾದರೂ ಮಧ್ವಸಿದ್ಧಾಂತದ ಎಲ್ಲ ಮಹಾಗ್ರಂಥಗಳನ್ನು ಕನ್ನಡಿಸಲು ಹಿರಿಯರು ಸೊಂಟಕಟ್ಟಿದ್ದು ಅವರಿಗೆ ಅಸಕೊಳ್ಳುವಂತಹ ಕೆಲಸವಾಗಿದೆ.

ಕಾರಣವಿಲ್ಲದೆ ಕಾರ್ಯವಿಲ್ಲ. ಇಂಥಯಾವ ಕಾರಣಗಳಿಗಾಗಿ ಮಧ್ವಮತವು ಹುಟ್ಟಿತು ? ಯಾವ ಕಾರ್ಯವಮಾಡಿತು ? ಅದರ ಇಂದಿನ ಸ್ಥಿತಿಯಾವದು ? ಇವೆಲ್ಲ ಮಾತುಗಳನ್ನು ಅರಳಿಸಿ ಬರೆಯುವ ತಾಣವಿದಲ್ಲ. ಆದರೂ ಸ್ವಲ್ಪದರಲ್ಲಿ ಹೇಳಿ ಮುಗಿಸುವದು ಅವಶ್ಯ.

ಯಾವದೇವರಾದು ಹೆಚ್ಚಾದರೆ ಹರಿಯುವುದು; 'ಹರಿ'ಯು ಒಳ್ಳೆಯದೇನೋ; ನಿಜ 'ಹರಿ'ಯಲ್ಲಿಯೇ 'ಹರ'ನುಂಟು. ಶಾಂಕರಮತವು ಒಳ್ಳೇ ಭರದಿಂದ ಹಿಗ್ಗಿತು. ಆ ಹಿಗ್ಗಿನಲ್ಲಿಯೇ ಅದು ಹೆಚ್ಚಿಬಿಟ್ಟಿತು. ಶಾಂಕರ ಮತದ ಮಹಾತತ್ವಗಳನ್ನು ಅರಿತು ಅರಗಿಸುವಷ್ಟು ಶಕ್ತಿಯು ಜನಸಾಮಾನ್ಯದಲ್ಲಿ ಇರುವುದು ಕಠಿಣ. ಅದರಿಂದ ಬಹುಜನರು ಶಾಂಕರಮತದ ತತ್ವಗಳನ್ನು ಸ್ವೀಕರಿಸಿ ಕೊಳ್ಳದೆ, ಆ ಮತದ ಹೊರಗಿನ ಪದರ ಮಾತುಗಳನ್ನೇ ಆ ಮತದ ಜೀವಾಳವೆಂದು ತಿಳಿದು, ಅವುಗಳನ್ನು ಪಾಲಿಸತೊಡಗಿದರು. ಇದು, ಜಗತ್ತಿನ ಪ್ರತಿಯೊಂದು ಧರ್ಮದ ಹಾಗೆ ಆಗುವಾಗ, ನಕಲಿನಂತೆ ಬೆಂಬತ್ತಿ, ಕೊನೆಗೆ ಆ ಧರ್ಮದ ಇಳಿಗಾಲಕ್ಕೆ ಕಾರಣವಾಗುವ ದೋಷವಾಗಿದೆ. ಇದು ಹಬ್ಬುಗೆಗೆ ಬಿಟ್ಟುಬಿಡತಕ್ಕ ಹತ್ತಿಕೊಂಡ ಹುಳುವಾಗಿದೆ. ಈ ಹುಳುವು ಒಮ್ಮೆ ಹತ್ತಿದ ಬಳಿಕ ಆ ಧರ್ಮವನ್ನು ಹಿಂಬಾಲಿಸುವ ಜನರಿಗೆ ಏಳಿಗೆಯ ಬದಲು ಇಳಿಗೆಯು ತಪ್ಪಿದ್ದಲ್ಲ. ಇದರ ಪರಿಹಾರಾರ್ಥವಾಗಿ ಮಧ್ವಮತದ ಉದಯವಾಯಿತು.

ಶ್ರೀ ಮಧ್ವಮತವು ಜನರಿಗೆ ನವಜೀವನವನ್ನು ಕೊಡಲು ಅವತಾರ ತಾಳಿತು. ಜನರ ಜಾಡ್ಯವನ್ನು ಹೋಗಲಾಡಿಸಿತು.

[೯ ನೇ ಪುಟ ನೋಡಿ.]

ಬ್ರಾಹ್ಮಣರ ಉಪಜೀವನವು.

(ಮಾರ್ಗಶಿರ ಶುದ್ಧ ಪೌರ್ಣಿಮೆಯ ದಿನ ಗದುಗಿನ ವೀರನಾರಾಯಣದೇವರ ಗುಡಿಯಲ್ಲಿ ಬ್ರಾಹ್ಮಣರು ಉಪಜೀವನವನ್ನು ಸಾಗಿಸುವದೆಂತು ಎಂಬ ಪ್ರಶ್ನೆಯು ಹೊರಟಾಗ್ಗೆ ಶ್ರೀಮತ್ಪರಮಹಂಸೇತ್ಯಾದಿ ಬಿರುದಾಲಂಕೃತ ಉತ್ತರಾದಿ ಮಠಾಧೀಶರಾದ ಶ್ರೀ ಶ್ರೀ ಸತ್ಯಧ್ಯಾನತೀರ್ಥರು ದಯಪಾಲಿಸಿದ ವಿಷಯವು ಪ್ರಶ್ನೋತ್ತರ ರೂಪದಲ್ಲಿ ಸಂಕ್ಷಿಪ್ತವಾಗಿ ಕೆಳಗೆ ಕೊಡಲ್ಪಟ್ಟಿದೆ. — ಸಂ. ಕ.)

ಪ್ರ:— ಮಹಾಸ್ವಾಮಿಯವರೇ, ಈಗಿನ ಕಠಿಣ ದಿನಗಳಲ್ಲಿ ಬ್ರಾಹ್ಮಣರು ಉಪಜೀವಿಸುವದು ಹೇಗೆ ?

ಉ:— ನಿಮ್ಮ ಹಿರಿಯರು ಹೇಗೆ ಉಪಜೀವಿಸುತ್ತಿದ್ದರು?

ಪ್ರ:— ಕೆಲವರು ಹೊಲದ ಉತ್ಪನ್ನದಿಂದ ಕೆಲವರು ವ್ಯವಹಾರದಿಂದ ಕೆಲವರು ನೌಕರಿಯಿಂದ ಕೆಲವರು ಈ ಜನರಮೇಲೆ ಅವಲಂಬಿಸಿ ವೈದೀಕವೃತ್ತಿಯಿಂದ ತಮ್ಮ ಉಪಜೀವನವನ್ನು ಸಾಗಿಸುತ್ತಿದ್ದರು. ಈಗ್ಗೆ ನೌಕರಿಯಂತೂ ದೊರೆಯುವದಿಲ್ಲ; ಹೊಲದ ಉತ್ಪನ್ನವೆನ್ನುವೇಕೇ? ಬೆಳೆಯೇ ಇಲ್ಲ; ವೈದಿಕರನ್ನಂತೂ ಕೇಳುವವರಿಲ್ಲ. ವ್ಯವಹಾರ ಮಾಡಬೇಕೆಂದರೆ ನಾಲ್ಕಾರು ಜನ ಶ್ರೀಮಂತರಿಗೆ ಮಾತ್ರ ಅದು ಶಕ್ಯವಾದುದು. ಉಳಿದವರ ಕೈಯಲ್ಲಿ ಒಂದು ಕಾಸು ಸಹ ಇಲ್ಲ. ಅಂತೆಯೇ ಬ್ರಾಹ್ಮಣರ ಭವಣೆಗಳಿಗೆ ಎಣೆಯಿಲ್ಲದಾಗಿದೆ.

ಉ:— ನಮ್ಮಂಥಹ ಸನ್ಯಾಸಿಗಳಿಗೆ ಕೇಳಿದರೆ ನಾವು ಬೇರೆ ಹೇಳಬೇಕಾದುದೇನು ? ನೀವು ಹೇಳುವ ಕಾರಣವು ನಮಗೆ ಸಮಂಜಸವಾಗಿ ಕಾಣದು. ಈಗಲೂ ಅನೇಕ ಜನ ಬ್ರಾಹ್ಮಣರು ದೊಡ್ಡ ದೊಡ್ಡ ಸರಕಾರೀ ನೌಕರಿಯಲ್ಲಿದ್ದಾರೆ, ವಕೀಲಿ, ವ್ಯಾಪಾರಗಳಿಂದ ಹೇರಳವಾಗಿ ಹಣಗಳಿಸುತ್ತಲಿದ್ದಾರೆ; ತಿಂಗಳಿಗೆ ಸಾವಿರಾರು ರೂಪಾಯಿ ಉತ್ಪನ್ನ ಬರುವಂತಹ ಜಹಗೀರದಾರ, ಇನಾಮದಾರ ದೇಸಾಯಿ, ದೇಶಪಾಂಡೆಯವರಿದ್ದಾರೆ ಪ್ರತಿ ತಿಂಗಳಲ್ಲಿಯೂ ವೈದೀಕ ವೃತ್ತಿಯಿಂದ ಜಾಸ್ತಿಯಾಗಿ ಗಳಿಸಿ, ದರ್ಬಾರ ಮಾಡಿದಂತಹ ಜನರೂ ಇದ್ದಾರೆ. ಆದರೆ ಇವರಲ್ಲಿ ಆರಿಗೂ ಬ್ರಾಹ್ಮಣ ಧರ್ಮವು ಬೇಕಾಗಿಲ್ಲ. ಬ್ರಾಹ್ಮಣ ಧರ್ಮಕ್ಕೆ ಎಂತಹ ಹ್ರಾಸವಾದರೂ ಈ ಮಹನೀಯರಿಗೆ ಧರ್ಮದ ಅವನತಿಯ ಕಲ್ಪನೆಯೂ ಬರುವದಿಲ್ಲ. ಅವರಿಗೆ ಸ್ನಾನ ಸಂಧ್ಯಾದಿ ದೈನಿಕ ಕರ್ಮಗಳು ಬೇಡ; ಬಡವ ಬ್ರಾಹ್ಮಣರ ವಿಚಾರವೂ ಬೇಡ; ಇಲಕಲ್ಲ ಸೀರೆ; ವಸ್ತ್ರ; ಒಡವೆ; ಅಂತಸ್ತಿನ ಮನೆ; ಮೋಟಾರು; ಮುನಸೀಪಾಲ್ಟಿಯ ಮೆಂಬರರಾಗಲು ಹಣ ಸೂರೆ ಮಾಡುವದು; ಇವೇ ಮೊದಲಾದ ವಿಲಾಸಗಳಲ್ಲಿ ಬ್ರಾಹ್ಮಣರ ಹಣವೆಲ್ಲ ವ್ಯಯವಾಗುವದನ್ನು ನಿಲ್ಲಿಸಿ ಪ್ರತಿಯೊಬ್ಬನು ತನ್ನ ಸ್ವಂತ ಉಪಜೀವನಕ್ಕೆ ಸಾಕಾಗುವಷ್ಟು ಮಾತ್ರ ಇಟ್ಟುಕೊಂಡು, ಸಾತ್ವಿಕ ಭಾವನೆಯಿಂದ ತನ್ನ ದೈನಿಕ ಕರ್ಮಗಳನ್ನಾಚರಿಸಿ, ಉಪಭೋಗಗಳಲ್ಲಿ ವೆಚ್ಚ ಮಾಡದೇ, ಬಡವರಾದ ಬ್ರಾಹ್ಮಣರನ್ನು ರಕ್ಷಿಸುತ್ತ ಹೋದರೆ, ನಮ್ಮ ಸಮಾಜದಲ್ಲಿ ಏನೂ ಕೊರತೆಯುಂಟಾಗದು.

ಪ್ರ:— ಶ್ರೀಗಳವರೇ, ಇದೆಲ್ಲ ತಾತ್ವಿಕ ವಿಚಾರವಾಯಿತು ಆದರೆ, ಬ್ರಾಹ್ಮಣರು ಈಗಿನ ಕಠಿಣ ಕಾಲದಲ್ಲಿ ಉಪಜೀವಿಸುವ ಮಾರ್ಗವು ಹೇಗೆಂಬುದು ತಿಳಿಯಲಿಲ್ಲ.

ಉ:— ನಿಮ್ಮ ಹಿರಿಯರು ಹೇಗೆ ಉಪಜೀವಿಸುತ್ತಿದ್ದರೆಂಬದನ್ನು ಬಲ್ಲಿರಾ? ಇನ್ನೂ ಬಹುದಿನಗಳಾಗಿಲ್ಲ; ಈಗ್ಗೆ ೩೦ ವರ್ಷಗಳ ಹಿಂದೆ ಹೊಲಗಳಿಂದಾಗಲೀ ನೌಕರಿಯಿಂದಾಗಲೀ, ಆಗುವ ಉತ್ಪನ್ನಕ್ಕಿಂತಲೂ ಹೆಚ್ಚು ಉತ್ಪನ್ನವು ಅವೇ ಹೊಲಗಳಿಂದಲೂ ನೌಕರಿಯಿಂದಲೂ ಹೆಚ್ಚಾಗಿ ಬರುತ್ತಿದೆಯಷ್ಟೇ.

ಪ್ರ:— ಅದೇನು ನಿಜ; ಆದರೆ ಪ್ರತಿಯೊಂದು ಸಾಮಗ್ರಿಯು ವಿಪರೀತವಾಗಿ ತುಟ್ಟಿಯಾಗಿದೆ. ಮೊದಲಿನ ಉತ್ಪನ್ನಕ್ಕಿಂತಲೂ ಈಗ್ಗೆ ಹೊಲದ ಲಾವಣಿಯು ಹೆಚ್ಚಾಗಿದ್ದರೂ ಸಹ ಹೊಟ್ಟೆ ತುಂಬದು.

ಉ:— ಉತ್ಪನ್ನವು ಹೆಚ್ಚಾದ್ದನ್ನು ನೀವೆಲ್ಲ ದುರುಪಯೋಗಮಾಡುತ್ತಿರುವದರಿಂದ ಹೀಗೆ ಬ್ರಾಹ್ಮಣರು ಕಷ್ಟಪಡಬೇಕಾಗಿದೆ. ನಿಮ್ಮ ಹಿರಿಯರು ಒಂದು ಬಗಲ ಬಂಡಿಯಿಂದ ಸಂತುಷ್ಟರಾಗುತ್ತಿದ್ದರೆ ಈಗ್ಗೆ ಅನೇಕ ಬಗೆಯ ಕೋಟುಗಳು, ಶರ್ಟಗಳು, ತೆಳ್ಳಗಿನ ಧೋತರಗಳು, ನಿಮಗೆ ಬೇಕಾಗಿವೆ. ನಿಮ್ಮ ಹಿರಿಯರು ನುಚ್ಚು ಬಕ್ಕರಿಯಿಂದ ತಮ್ಮ ಹಸಿವೆಯನ್ನು ಹಿಂಗಿಸಿ ನಿಮಗಿಂತಲೂ ದೃಢಕಾಯದವರಾಗಿರುತ್ತಿದ್ದರು; ನೀವು ದಿನಾಲು ನಾಲ್ಕು ಸಲ ಚಹ ತಿಂಡಿ ತಿಂದರೂ ಅವರ ಒಂದು ಪಾಲಿನಷ್ಟು ಸಹ ಶಕ್ತಿಯು ನಿಮಗಿಲ್ಲ. ಇದರಿಂದ ನಿಮ್ಮ ಹಣವೂ ವ್ಯಯವಾಗಿದೆ; ದೇಹಾರೋಗ್ಯವೂ ನಾಶವಾಗಿದೆ; ೨೦ ವರ್ಷಗಳ ಹಿಂದೆ ಯಾವ ಜಹಾಗೀರದಾರನು ನುಚ್ಚು ಭಕ್ಕರಿಯಿಂದ ಸುಖವಾಗಿದ್ದು ಹಣವನ್ನು ಗಳಿಸಿದ್ದನೋ ಅದೇ ಜಹಾಗೀರದಾರನ ಮಗನು ತಂದೆಯ ಹಣವನ್ನೆಲ್ಲ ವಿಲಾಸದಲ್ಲಿ ಹಾಳಮಾಡಿ ಮೊದಲಿನಕಿಂತಲೂ ಹೆಚ್ಚಾದ ಹೊಲದ ಲಾವಣಿಯ ಉತ್ಪನ್ನವು ಸಹ ವೆಚ್ಚ ಮಾಡಿ ಸಾಲದಲ್ಲಿ ಮುಳುಗಿರುವನು. ಆದರೂ ಮೋಟಾರಿನ ಮತ್ತು ಪಟ್ಟಣದಲ್ಲಿ ಅಂತಸ್ತಿನ, ಮನೆಯಲ್ಲಿರುವ ಹವ್ಯಾಸವನ್ನು ಬಿಡುವದಿಲ್ಲ. ಒರ್ವ ಬಡ ಕಾರಕೂನನಿಗೆ ಸಹ ಹೆಂಡತಿಗಾಗಿ ಇಳಕಲ್ಲಿನ ಸೀರೆ ಬೇಕಾಗುತ್ತದೆ. ೨೫ ರೂ ಪಗಾರವಿದ್ದರೂ, ಹೊರಗಿನ ಬಣ ಆಡಂಬರಕ್ಕಾಗಿ ನೀರಿನವರಿಂದ ನೀರು ಹಾಕಿಸಿಕೊಂಡು ತನ್ನ ಗೌರವವನ್ನು ಹೆಚ್ಚಿಸಿಕೊಳ್ಳಬೇಕಾಗುತ್ತದೆ. ವೈದೀಕನಿಗೆ ಸ್ವಲ್ಪ ದಕ್ಷಿಣೆಯು ಹೆಚ್ಚಾಯಿತೆಂದರೆ ಕೂಡಲೇ ಬೆರಳಿನಲ್ಲಿ ಉಂಗುರ ಹೊತ್ತುಕೊಳ್ಳಲಿಕ್ಕೆ ಜರದ ಶ್ಯಾಲು ಬೇಕಾಗುತ್ತವೆ ಇಂತಹ ಹುಚ್ಚು ಕಲ್ಪನೆ. ಬಣ ಗೌರವದ ಲಾಲಸೆ, ವಿಲಾಸದ ಕಳವು ಇವುಗಳನ್ನೆಲ್ಲ ನೀವು ತ್ಯಜಿಸಿ ನಿಮ್ಮ ಹಿರಿಯರ ಅನುಕರಣೀಯವಾದ ಮಾರ್ಗವನ್ನು ಲಕ್ಷಿಸಿ ಬ್ರಾಹ್ಮಣ್ಯದ ನಿತ್ಯಕರ್ಮಗಳನ್ನು ಮಾಡುತ್ತ ದಾನ ಧರ್ಮದಲ್ಲಿ ನಿಮ್ಮ ಗಳಿಕೆಯನ್ನು ವ್ಯಯಮಾಡುತ್ತ ಹೋದರೆ ಬ್ರಾಹ್ಮಣರ ಉಪಜೀವನದ ಪ್ರಶ್ನೆಯು ಹೊರಡುವದೇ ಇಲ್ಲ. ಇದೂ ಮೀರಿ ಹೊರಟದ್ದೇ ಆದರೆ ನಾವು ಸ್ವತಃ ನಮ್ಮ ಮಠದ ಉತ್ಪನ್ನವನ್ನು ಅದೂ ಸಹ ಕಡಿಮೆಯಾದರೆ ದೇಶ ದೇಶ ಸಂಚಾರ ಮಾಡಿ ದೊಡ್ಡ ನಿಧಿಯನ್ನು ಏರ್ಪಡಿಸಿ ಕೊಡುವೆವು. ಆದರೆ ನಿಮಗೆ ಬ್ರಾಹ್ಮಣ್ಯವೆಲ್ಲಿ ಬೇಕಾಗಿದೆ? ಧರ್ಮವೆಲ್ಲಿ ಬೇಕಾಗಿದೆ? ತ್ಯಾಗ ಬುದ್ಧಿಯೂ ಜಾಣತನವೂ, ಕಷ್ಟ ಸೋಸುವ ಶಕ್ತಿಯೂ ಎಲ್ಲವೂ ನಿಮ್ಮಲ್ಲಿದೆ. ಆದರೆ ಧರ್ಮದ ಅವಶ್ಯಕತೆಯೇ ನಿಮಗಿಲ್ಲ. ಅಂತೇ ಅಸಹಕಾರದ ಪ್ರಶ್ನೆಯಿದ್ದರೆ ನಿಮ್ಮಲ್ಲಿ ಅನೇಕರು ವಕೀಲಿ ಬಿಡಲು ಸಿದ್ಧರಿರುವರು. ಜೇಲಿಗೆ ಹೋಗಲು ಸಿದ್ಧರಿರುವಿರಿ. ಬೇಕಾದಂತಹ ಕಷ್ಟ ಸೋಸಲು ಸಿದ್ಧ. ಹೊಡೆಯುವಿರಿ ರಾಜಕೀಯ ವಿಷಯಗಳೇ ನಿಮಗೆ ಮಹತ್ವವಾಗಿ ಕಾಣುವದರಿಂದ ನೀವು ಹೀಗೆ ಮಾಡುವಿರಿ. ಆದರೆ ಧಾರ್ಮಿಕ ವಿಷಯವು ರಾಜಕೀಯ ವಿಷಯದಕಿಂತ ಹೆಚ್ಚಾಗಿ ಮಹತ್ವವಾದುದೆಂಬದು ನಿಮಗೆ ತಿಳಿಯದು. ನಿಮ್ಮ ಧರ್ಮವನ್ನು ನೀವು ಕಾಯ್ದು ಕೊಂಡರೆ, ಅದಕ್ಕಾಗಿ ಸ್ವಾರ್ಥ ತ್ಯಾಗ ಮಾಡಿದರೆ, ಕಷ್ಟಪಟ್ಟರೆ, ನಿಮಗೆ ಬೇಕಾದಂತಹ ಬಿಸ್ಕಟ್ಟಿನ ರಾಜಕಾರಣವೂ ಹಗುರಾಗುವದು. ಪುಣ್ಯ ಪಡೆಯುವಿರಿ. ಇಹ ಪರಗಳಲ್ಲಿ ಸುಖವೂ ಆಗುವದು.

ಪರರಾಷ್ಟ್ರೀಯ ರಾಜಕಾರಣ

(ಲೇ:— ಬಾಗಲಕೋಟಕರ)

ರೂಸೋ ತುರ್ಕಿ ಒಪ್ಪಂದ

ಪ್ಯಾರಿಸ್ ಪಟ್ಟಣದಲ್ಲಿ ೧೭ ನೇ ಡಿಸೆಂಬರ ೧೯೩೫ ನೇ ದಿನ ಆದ ರೂಸೋ-ತುರ್ಕಿ ಒಪ್ಪಂದದಲ್ಲಿ ಅಡಕವಾಗಿದ್ದ ನಿಯಮಗಳೂ ಸಮಯುಗಳೂ ಸ್ಥೂಲರೂಪವಾಗಿ ಕೆಳಗಿನಂತೆ ಇವೆ

(೧) ರಶಿಯದ ಮೇಲಾಗಲಿ, ತುರ್ಕಿಯ ಮೇಲಾಗಲೀ, ಪರಚಕ್ರವು ಬಂದಪಕ್ಷದಲ್ಲಿ, ಆ ಸಮಯದಲ್ಲಿ ರಶಿಯರು ತುರ್ಕರಿಗಾಗಲೀ, ತುರ್ಕರು ರಶಿಯರಿಗಾಗಲೀ ಸಹಾಯಮಾಡಕೂಡದು; ಮೇಲಾಗಿ, ಶತ್ರುರಾಷ್ಟ್ರದವರು ರಶಿಯಾ ಅಥವಾ ತುರ್ಕಿಯ ರಾಜಕೀಯ ಪ್ರಭುತ್ವದ ವಿರುದ್ಧವಾಗಿ ನಡೆಯಿಸುವ ಯಾವದೇ ಕಾರಸ್ಥಾನದಲ್ಲಿ ರಶಿಯವಾಗಲೀ, ಟರ್ಕಿಯಾಗಲೀ ಯಾವದೇ ತರದ ಅಂಗವನ್ನು ತೆಗೆದುಕೊಳ್ಳದೆ ತಟಸ್ಥವೃತ್ತಿಯನ್ನು ಕಾಯ್ದುಕೊಂಡಿರಬೇಕೆಂಬದಾಗಿ ಮೊದಲನೇ ಭಾಗದ ಇತ್ಯರ್ಥವಿದೆ.

(೨) ಮೊದಲನೇ ಭಾಗದಲ್ಲಿ ರಾಜಕೀಯ ಬಾಬುಗಳಿಗೆ ಹತ್ತುವ ಸಮಯುಗಳೆಲ್ಲ ರಶಿಯಾ ಮತ್ತು ಟರ್ಕಿ ಇವುಗಳ ನಡುವೆ ನಡೆಯುವ ವ್ಯಾಪಾರೋದ್ಯಮಗಳಿಗೂ ಹತ್ತಿರಬೇಕೆಂದೂ, ಪರಸ್ಪರರು ಪರಸ್ಪರರ ವ್ಯಾಪಾರೋದ್ಯಮಗಳ ಮಹತ್ವವನ್ನು ಕಾಯಬೇಕೆಂದೂ, ಎರಡನೇ ಭಾಗದ ಸಾರಾಂಶವು.

(೩) ಟರ್ಕಿ ಮತ್ತು ರಶಿಯಾ ಈ ಎರಡೂ ರಾಷ್ಟ್ರಗಳ ನಡುವೆ ಉಪಸ್ಥಿತವಾದ ಜಗಳಗಳ ನಿವಾರಣೆಯು, ಒಂದು ವೇಳೆ ದರಬಾರೀ ಮಾರ್ಗದಿಂದ ಆಗದಿದ್ದ ಪಕ್ಷಕ್ಕೆ, ಪಂಚರ ಮುಖವಾಗಿ ನಿವಾರಣೆ ಮಾಡಿಕೊಳ್ಳತಕ್ಕದ್ದೆಂಬದಾಗಿ ಮೂರನೇ ಭಾಗದ ಅಂಶವು.

ಹೀಗೆ ಮೂರು ಭಾಗಗಳಿಂದ ರೂಸೋ ತುರ್ಕಿ ಒಪ್ಪಂದವು ಪೂರ್ಣವಾಗಿದೆ. ಮೇಲೆ ಮೇಲೆ ಓದುವವರಿಗೆ ಈ ಒಪ್ಪಂದದ ಸಮಯುಗಳಲ್ಲಿ ವಿಶೇಷವಾದ ಅರ್ಥವು ಕಂಡು ಬರುವಂತಿಲ್ಲ, ತಥಾಪಿ ರಾಜಕಾರಣದ ದೃಷ್ಟಿಯಿಂದ ತುಸು ದೂರ ವಿಚಾರಮಾಡಿ ನೋಡುವವರಿಗೆ ಇದರೊಳಗಿನ ವಿಶೇಷ ಅರ್ಥವು ಕಂಡುಬರದಿರಲಾರದು ಪರಚಕ್ರವು ಬಂದಾಗ ಒಬ್ಬರಿಗೊಬ್ಬರು ಸಹಾಯ ಮಾಡದೆ, ತಟಸ್ಥವೃತ್ತಿಯನ್ನು ತಾಳಿರಬೇಕೆಂಬ ಸಮಯವು ಅರ್ಥಹೀನವೆನಿಸುವದಾಗಿದ್ದರೂ, ಇದರ ಅರ್ಥವನ್ನು ಎರಡನೇ ಭಾಗದಲ್ಲಿ "ಪರಸ್ಪರರು ಪರಸ್ಪರರ ವ್ಯಾಪಾರೋದ್ಯಮಗಳ ಮಹತ್ವವನ್ನು ಕಾಯಬೇಕೆಂಬ" ದಾಗಿ ಮಾಡಿಕೊಂಡ ಸಮಯವು ಪೂರ್ಣವಾಗಿ ತಂದುಕೊಡುತ್ತದೆ. ಉದಾಹರಣಾರ್ಥವಾಗಿ — ನಾಳೆ ಇಂಗ್ಲಂಡವು ಮೋಸಲ್‌ದ ಸಲುವಾಗಿ ತುರ್ಕರ ವಿರುದ್ಧವಾಗಿ ಯುದ್ಧವನ್ನು ಹೂಡಿತೆಂದು ಕಲ್ಪಿಸುವಾ — ಈ ಯುದ್ಧದ ಜ್ವಾಲೆಗಳು ಮೋಸಲ್‌ದ ಸೀಮೆಯಲ್ಲಿಯೇ ವ್ಯಾಪ್ತವಾಗಿದ್ದುಕೊಂಡಿರುವವರೆಗೆ ಮಾತ್ರ ರಶಿಯನ್ ರಾಷ್ಟ್ರಕ್ಕೆ ತನ್ನ ಕತ್ತಿಯನ್ನು ಒರೆಯಿಂದ ಹೊರಗೆ ಹಿರಿಯಲು ಅಧಿಕಾರವುಂಟಾಗುವದಿಲ್ಲ. ಆದರೆ ಅದೇ ಜ್ವಾಲೆಗಳು ಮೋಸಲ್‌ದ ಸೀಮೆಯನ್ನು ದಾಟಿ ಒಂದೇ ಇಂಚು ಹೊರಬಿದ್ದರೆ ಸಾಕು ರಶಿಯಾಕ್ಕೆ ಈ ಒಪ್ಪಂದದ ಆಧಾರವಾಗಿ ಇಂಗ್ಲಂಡದ ವಿರುದ್ಧವಾಗಿ ಖಡ್ಗವೆತ್ತಲು ಅಧಿಕಾರವು ಪ್ರಾಪ್ತವಾಗುವದು. ಹೀಗೆ ಈ ಒಪ್ಪಂದದವು ಚಮತ್ಕಾರಪೂರ್ಣವಾದ ಒಪ್ಪಂದವಾಗಿದೆ. ವ್ಯಾಪಾರೋದ್ಯಮಗಳ ಮಹತ್ವವನ್ನು ಪರಸ್ಪರರು ಕಾಯಬೇಕೆಂಬ ವಾಕ್ಯದಲ್ಲಿ ಬಹಳ ವ್ಯಾಪಕವಾದ ಅರ್ಥವಿದೆಯೆನ್ನುವದು ಇದೇ ಕಾರಣಕ್ಕಾಗಿಯೇ. ತುರ್ಕರೊಡನೆ ಯುದ್ಧಮಾಡುವದಕ್ಕೆಂದು ಇಂಗ್ಲಂಡದ ಒಂದೇ ಒಂದು ಹಡಗವು ಕಪ್ಪು ಸಮುದ್ರವನ್ನು ಪ್ರವೇಶಮಾಡಿದರೆ ಸಾಕು, ಅಷ್ಟರಿಂದಲೇ ರಶಿಯಾಕ್ಕೆ ತನ್ನ ವ್ಯಾಪಾರೋದ್ಯಮಗಳಿಗೆ ಆಘಾತ ತಟ್ಟಿತೆಂಬ ನೆವಮುಂದೆ ಮಾಡಿ, ಈ ಒಪ್ಪಂದದ ಆಧಾರದಿಂದ ಇಂಗ್ಲಂಡದ ವಿರುದ್ಧ ಶಸ್ತ್ರವೆತ್ತಲು ಕಾರಣವುಂಟಾಗುವದು. ಅದರಂತೆಯೇ, ಇಂಗ್ಲಂಡಕ್ಕೂ ರಶಿಯಾಕ್ಕೂ ಯುದ್ಧಪ್ರಸಂಗವುಂಟಾಯಿತೆಂದು ಕಲ್ಪಿಸಿಕೊಳ್ಳುವಾ, ರಶಿಯಾದ ದಕ್ಷಿಣಕ್ಕೆ ತುರ್ಕರ ಗಡಿನಾಡು ಹಬ್ಬಿರುವದರಿಂದ, ಈ ಗಡಿನಾಡಿನ ವರೆಗೆ ಯುದ್ಧದ ಜ್ವಾಲೆಗಳು ಹೋದಲ್ಲಿ, ತುರ್ಕಸ್ಥಾನವು ಆತ್ಮ ಸಂರಕ್ಷಣೆಗಾಗಿ ಇಂಗ್ಲಂಡದ ವಿರುದ್ಧ ಕಾದಾಡಬೇಕಾಗುವದು.

ಈ ರೀತಿಯಾಗಿ ಈ ರೂಸೋ-ತುರ್ಕಿ ಒಪ್ಪಂದವು ಗೋಮುಖವ್ಯಾಘ್ರದಹಾಗೆ, ಮೇಲೊಂದು ತರ, ಒಳಗೊಂದು ತರ ಆಗಿ ಇಂಗ್ಲಂಡದ ಮುತ್ಸದ್ದಿಗಳನ್ನು ಬಲ್ಲೇ ವಿಚಾರದಲ್ಲಿ ಕೆಡವಿರುವದು. ಸದ್ಯಕ್ಕೆ ಇಂಗ್ಲಂಡದ ಮುತ್ಸದ್ದಿಗಳು ಈ ಯುದ್ಧವನ್ನು ಹೇಗೆ ತಪ್ಪಿಸಿಕೊಳ್ಳಬೇಕೆಂಬ ಆಲೋಚನೆಯಲ್ಲಿರುವರು ಅಂಗೋರಾದಲ್ಲಿ ತುರ್ಕರ ಪಾರ್ಲಿಯಾಮೆಂಟು ಕೂಡಿದೆ! ಮೋಸಲ್‌ದ ಸಲುವಾಗಿ ಇಂಗ್ಲಂಡದೊಡನೆ ಯುದ್ಧ ಪ್ರಸಕ್ತಿಯನ್ನು ಎತ್ತಬೇಕೋ ಎತ್ತಬಾರದೋ ಎಂಬವರ ವಿಚಾರವು ಆ ಪಾರ್ಲಿಯಾಮೆಂಟಿನಲ್ಲಿ ನಡೆದಿದೆ. ಈ ಮೋಸಲ್‌ದ ನಿರ್ಣಯದ ಪರ್ಯವಸಾನವು ಯುದ್ಧರೂಪದಲ್ಲಾಗುವದೋ, ಅಥವಾ ಮತ್ತಾವ ರೂಪದಲ್ಲಾಗುವದೋ, ಎಂಬ ಸಂಗತಿಯು ತಿಳಿದು ಬರಲಿಕ್ಕೆ ಇನ್ನೂ ೩|೪ ತಿಂಗಳುಗಳ ಅವಧಿಯು ಹಿಡಿಯುತ್ತದೆ

(೭ನೇ ಪುಟದಿಂದ ಮುಂದುವರಿದದ್ದು)

ತಾಯಿ:— (ಸಿಟ್ಟಿನಿಂದ) ಹಾಗಾದರೆ ಬಿಡಪ್ಪಾ! ನಿನ್ನ ಇಷ್ಟ. ಯಾವ ಮಾತು ಹೇಳಿದರೂ ಅದಕ್ಕೊಂದು ನಿನ್ನದು ಏನಾದರೂ ಅಡ್ಡ ಇದ್ದೇ ಇರುತ್ತದೆ ಬೆಂಕೀ ಹಚ್ಚಲಿ! ದೇವರು ನನಗೆ ಆಯುಷ್ಯವನ್ನಾದರೂ ಎಷ್ಟು ಕೊಟ್ಟಾನು? ನೋಡು! ಇವನ್ನೆಲ್ಲ ನಾವು ಕಣ್ಣಿನಿಂದ ನೋಡಬೇಕಲ್ಲ' ವಾಸು? ಕಡೆಯ ಮಾತು ಹೇಳುತ್ತೇನೆ,— ನೀನು ಸ್ವಾಮಿಗಳನ್ನು ಪಾದಪ್ರಕ್ಷಾಲನೆಗೆ ಕರೆಯದಿದ್ದರೆ ನಾನೇನೂ ಮನೆಯಲ್ಲಿ ಇರುವವಳಲ್ಲ' ನಗುವವರ ಮುಂದೆ ನಗೆಗೀಡು ಆಗಿ ಇಲ್ಲಿ ಇರುವದಕ್ಕಿಂತ, ಆ ಶ್ರೀ ಸ್ವಾಮಿಗಳು ಹೋಗುವ ವರೆಗೆ ನನ್ನ ತಂಗಿಯ ಹತ್ತರ ಧಾರವಾಡಕ್ಕೆ ಹೋಗುತ್ತೇನೆ, ತಿಳಿಯಿತೇ? ನನ್ನ ಕಣ್ಣುಮುಚ್ಚಿ, ನಂತರ ನೀನು ಏನಾದರೂ ಮಾಡಿಕೋ;

ವಾಸು:— ಅವ್ವಾ, ಇದು ಸಿಟ್ಟಿನ ಮಾತಲ್ಲ. ಪ್ರಪಂಚದ ಮಾತಿದೆ, ಮನೆಯ ಅಭಿಮಾನವು ನಿನಗಿರುವಷ್ಟೇ ನನಗೂ ಅದೆ ಆದರೆ, ಏನು ಮಾಡಲಿ ಈ ಮಂಗ ದಿವಸಗಳೊಂದು ಇವೆಯಲ್ಲಾ! ಅದಕ್ಕಾಗಿ ಇಷ್ಟೆಲ್ಲ ವಿಚಾರ. ೫೦ ರು. ಕಟ್ಟಲೇ ಬೇಕೆಂಬದಾಗಿ ಬಾಳಾಚಾರ್ಯರು ಹೇಳಿದ ಮಾತು ಇನ್ನೂ ಎಷ್ಟು ಸುಳ್ಳಿದೆಯೋ ಎಷ್ಟು ಖರೆಯಿದೆಯೋ ನೋಡಿಕೊಳ್ಳುತ್ತೇನೆ. ನಾಳೆ, ನಾನೇ ಸ್ವತಃ ಶ್ರೀಗಳಿಗೆ ಭೆಟ್ಟಿಯಾಗಿ ನನ್ನ ಸ್ಥಿತಿಗತಿಗಳನ್ನು ಅವರಿಗೆ ಹೇಳಿ, ತನ್ನ ಅಲ್ಪ ಸೇವೆ ತೆಗೆದುಕೊಂಡು ಪಾದಪ್ರಕ್ಷಾಲನೆಗೆ ನಮ್ಮ ಮನೆಗೆ ದಯಮಾಡಿಸುವದಕ್ಕೆ ಅಂಗಲಾಚಿ ಬೇಡಿಕೊಳ್ಳುತ್ತೇನೆ.

ತಾಯಿ:— ನೀನು ಏನಾದರೂ ಮಾಡು. ಹಿರಿಯರಿಂದ ನಡೆಯುತ್ತ ಬಂದ ಸಂಪ್ರದಾಯವನ್ನು ಮಾತ್ರ ಮುಗ್ಗಿಸಿದರೆ— ನಾನು ಕೇಳುವದಿಲ್ಲ.

ಸಂಪಾದಕರ ಭೂಮಿ.

ಶ್ರೀಮಧ್ವನವಮಿಯ ಉತ್ಸವವು ಈ ದಿನ ಈ ಊರಲ್ಲಿ ಶ್ರೀಮದುತ್ತರಾದಿ ಮಠಾಧೀಶರಾದ ಶ್ರೀ ಸತ್ಯಧ್ಯಾನ ತೀರ್ಥಗಳವರಿಂದ ಪ್ರಾರಂಭಿಸಲ್ಪಡುವದು. ಈ ಮಹೋತ್ಸವಕ್ಕೆ ೧೦ ಸಾವಿರ ಜನರು ಕಲೆಯ ತಕ್ಕವರಿರುವರು. ಈ ಎಲ್ಲ ಮಹನೀಯರು ಶ್ರೀ ರಾಮ, ವೇದವ್ಯಾಸ ದೇವರುಗಳ ದರ್ಶನ ಪಡೆದು ಅಷ್ಟರಿಂದಲೇ ಸಂತುಷ್ಟರಾಗಿ ಮರಳಿ ತಮ್ಮ ತಮ್ಮ ಗ್ರಾಮಗಳಿಗೆ ಹೋಗದೇ, ಇನ್ನೊಂದು ಮಹತ್ವದ ಕಾರ್ಯ ಮಾಡಿದರೆ ಅವರು ಪುಣ್ಯ ಪಡೆಯುವರು. ಈಗಿನ ದಿನಗಳಲ್ಲಿ ಬ್ರಾಹ್ಮಣರ ಅವನತಿಯು ಎಷ್ಟಾಗಿದೆಂಬುದನ್ನು ಎಲ್ಲರೂ ಕೊಂಚ ವಿಚಾರಿಸಬೇಕು. ಯಾವ ಮಧ್ವಮುನಿಗಳ ಜಯಂತ್ಯುತ್ಸವಕ್ಕಾಗಿ ಇಲ್ಲಿ ಎಲ್ಲರೂ ಕಲೆತಿರುವರೋ ಅಂತಹ ಮಹನೀಯರ ಶಿಷ್ಯರೆಂದೆನಿಸಿಕೊಳ್ಳುವಂತಹ ಮಾಧ್ವರ ಗತಿಯೇನಾಗಿದೆಂಬುದನ್ನೂ ಮನದಲ್ಲಿ ತರಬೇಕು. ಎಲ್ಲರೂ ಅವರ ಶಿಷ್ಯರೆಂದು ಕರೆದುಕೊಂಡು, ಅವರ ಈ ಜಯಂತ್ಯುತ್ಸವದಲ್ಲಿ ಭಾಗ ತೆಗೆದುಕೊಳ್ಳತಕ್ಕವರಿದ್ದರಿಂದ, ಆ ತೇಜಃಪುಂಜ ಮುನಿಗಳ ಶಿಷ್ಯರಾಗಿರಲು ವೈಷ್ಣವ ಬ್ರಾಹ್ಮಣ ಸಮಾಜದಲ್ಲಿ ಎಷ್ಟು ಜನರು ಅರ್ಹರಿರುವರೆಂಬುದನ್ನು ಪ್ರತಿಯೊಬ್ಬ ಮಾಧ್ವನು ತಿಳಿದುಕೊಳ್ಳಬೇಕು. ಧರ್ಮೋದ್ಧಾರಕ್ಕಾಗಿ ಶ್ರೀ ಮದಾನಂದ ತೀರ್ಥರು ಮಾಡಿದ ಕಾರ್ಯವೆಂಥದು? ಅವರ ಶಿಷ್ಯರು ಈಗ್ಗೆ ಮಾಡುತ್ತಿರುವ ಕಾರ್ಯವೆಂತಹದು? ಮುಂಜಾನೆಯಿಂದ ಸಂಜೆಯವರೆಗೆ ಹೊಟ್ಟೆ ಹೊಟ್ಟೆಯೆಂಬುದಾಗಿ ಒದರಿಕೊಂಡು, ಹೊಟ್ಟೆಗಾಗಿ ಹಿಡಿ ಹಿಟ್ಟು ದೊರಕಿಸುವದರಲ್ಲಿಯೇ ಎಲ್ಲರೂ ಕಾಲವನ್ನು ಕಳೆಯುವರು. ಹಿಟ್ಟು ದೊರಕಿಸುವ ಮಾರ್ಗವಾದರೂ ಸಾತ್ವಿಕವಾಗಿದೆಯೊ? ಇಲ್ಲ. ತಾಮಸಿಕ ಭಾವನೆಯೇ ಎಲ್ಲೆಲ್ಲಿ ದೃಗ್ಗೋಚರವಾಗುತ್ತದೆ. ಬ್ರಾಹ್ಮಣರು ಸರ್ವಥಾ ತಾಮಸಿಕರಾಗಿರಕೂಡದು. ಆದರೆ ತಾಮಸಿಕ ಗುಣವೇ ಪ್ರಧಾನವಾಗಿ ಹೋಗಿದೆ. ಆದ್ದರಿಂದಲೇ ಬ್ರಾಹ್ಮಣರ ತೇಜವೂ, ಬ್ರಾಹ್ಮಣರಲ್ಲಿದ್ದ ಸದ್ಗುಣಸಾಗರವೂ, ಬತ್ತಿ ಹೋಗಿವೆ. ಇದನ್ನು ಹೋಗಲಾಡಿಸಲು ಯಾವ ಮಾರ್ಗವನ್ನು ಬ್ರಾಹ್ಮಣರು ಹಿಡಿಯಬೇಕೆಂಬುದನ್ನು ಇಲ್ಲಿ ಕಲೆತಂಥ ಮಹನೀಯರೆಲ್ಲ ವಿಚಾರಿಸಿ, ನಮ್ಮ ಸಮಾಜದಲ್ಲಿಯ ಅತ್ಯಂತ ಪಂಡಿತರೂ ಅಧಿಕಾರಯುಕ್ತರೂ ಆದ ಶ್ರೀ ಶ್ರೀ ಸತ್ಯಧ್ಯಾನತೀರ್ಥರಂಗಳವರ ಆಶೀರ್ವಾದದಿಂದ, ಯಾವದೊಂದು ಶ್ರೇಷ್ಠ ಮಾರ್ಗವನ್ನು ನಿಶ್ಚಿತ ಪಡಿಸಬೇಕು. ಮುಂದಿನ ವರ್ಷದ ಮಧ್ವನವಮಿಯ ಉತ್ಸವದೊಳಗಾಗಿ ಕೃತಿಯಲ್ಲಿ ಬರುವಂತೆ ಪ್ರಯತ್ನವಾಗಬೇಕು. ಇದೇ ಈಗಿನ ಅವನತಿಯಲ್ಲಿ ಅತ್ಯಂತ ಅವಶ್ಯವಾಗಿ ಬೇಕಾದುದು. ಇಲ್ಲಿ ಕೂಡಿದ ನಮ್ಮ ಮತದ ಮುಖಂಡ ಮಹನೀಯರು ಈ ಕಾರ್ಯದಲ್ಲಿ ಪ್ರವೃತ್ತರಾಗುವರೋ?

ಕರ್ನಾಟಕ ಏಕೀಕರಣದ ವಿಷಯವಾಗಿ ವಿಚಾರಮಾಡುವದಕ್ಕೆ ಒಂದು ಕಮಿಟಿಯನ್ನು ಏರ್ಪಡಿಸಬೇಕಾಗಿ, 'ಕೌನ್ಸಿಲ್ ಆಫ್ ಸ್ಟೇಟ'ದಲ್ಲಿರುವ ಕರ್ನಾಟಕದ ಮೊದಲನೇ ಪ್ರತಿನಿಧಿಗಳಾದ ಡಾ. ಯೂ. ರಾಮರಾಯರು ಒಂದು ಠರಾವನ್ನು ತರತಕ್ಕವರಿದ್ದವರಷ್ಟೇ! ಅದೇ ಪ್ರಕಾರವಾಗಿ ಉದಾರ ಅಂತಃಕರಣದಿಂದ ಉತ್ಕಲದವರಿಗೂ ಪ್ರತ್ಯೇಕ ಪ್ರಾಂತವನ್ನು ಕೊಡಬೇಕೆಂದೂ ಅವರು ಮತ್ತೊಂದು ಠರಾವನ್ನು ತರುವರು. ಹೀಗೆ ಆಂಧ್ರದ ಪಶ್ಚಿಮ ಉತ್ತರ ಭಾಗಗಳು ನಮ್ಮ ಕೈ ಬಿಟ್ಟರೆ ತಮಗೆ ಹಾನಿಯಾಗುವದೆಂಬ ಸ್ವಾರ್ಥ ಕಲ್ಪನೆಯಿಂದ ಅಂಜಿ ಆಂಧ್ರರ ಪ್ರತಿನಿಧಿಗಳಾದ ಶ್ರೀ. ರಾಮದಾಸರು ಈ ಎರಡೂ ಠರಾವುಗಳಿಗೆ ತಮ್ಮ ಸಮ್ಮತಿ ಇಲ್ಲವಾಗಿ ಮದ್ರಾಸದ ಪತ್ರಿಕೆಗಳಲ್ಲಿ ಲೇಖ ಬರೆದಿರುವರು. ಆಂಧ್ರ ವಿಶ್ವವಿದ್ಯಾಲಯದ ಬಾಬಿನಲ್ಲಿ ಕರ್ನಾಟಕಕ್ಕೆ ಆಂಧ್ರರ ನ್ಯಾಯದ ಬುದ್ಧಿಯ ಬಿಸಿಯು ಹತ್ತಿದೆ. ಆದ್ದರಿಂದ ಕನ್ನಡಿಗರು ಅವರಲ್ಲಿನ್ನು ಈ ವಿಷಯದಲ್ಲಿ ವಿಶ್ವಾಸವನ್ನಿಡುವಂತಿಲ್ಲ. ಆಂಧ್ರರಿಗೆ ಸ್ವತಂತ್ರವಾದ ಪ್ರಾಂತವು ದೊರೆಯಬೇಕೆಂದು ಮದ್ರಾಸ ಕಾಯದೇ ಮಂಡಲದಲ್ಲಿ ಠರಾವುಗಳು ಬರತಕ್ಕವಿವೆ. ಆದರೆ ಅದೇ ಬಗೆಯ ಠರಾವು ಕರ್ನಾಟಕದ ಡಾ. ಯೂ ರಾಮರಾಯರು ಅದೇ ತತ್ವಕ್ಕನುಸರಿಸಿ, ದಿಲ್ಲಿಯ ಕಾಯದೇ ಮಂಡಲದಲ್ಲಿ ತರಲಿಚ್ಛಿಸಿದರೆ, ಆಂಧ್ರದ ಪ್ರತಿನಿಧಿಗಳು ಅದನ್ನು ವಿರೋಧಿಸುವದು ಆಶ್ಚರ್ಯವಾದುದು. ತಮಗೆ ಈ ಬಗೆಯ ಅಪವಾದವು ಬರಬಾರದೆಂಬ ದೂರದೃಷ್ಟಿಯಿಂದ, ರಾಮದಾಸರು ಕಾರಣವನ್ನು ಬೇರೆಯಾಗಿ ಕೊಡಹತ್ತಿದ್ದಾರೆ. ಸ್ವರಾಜ್ಯ ಪಕ್ಷದವರು ಸರಕಾರವನ್ನು ವಿರೋಧಿಸತಕ್ಕದು; ಅದನ್ನು ಬಿಟ್ಟು ಸರಕಾರಕ್ಕೆ ವಿಚಾರಣೆಯ ಕಮೀಟಿಯನ್ನು ನೇಮಿಸಿರೆಂದು ಕೇಳುವದು ಸ್ವರಾಜ್ಯ ಪಕ್ಷಕ್ಕೆ ಸಮ್ಮತವಾದ ಸಂಗತಿಯಲ್ಲವಂತೆ. ದ್ವಿದಲ ಪದ್ಧತಿಯು ನಾಶವಾಗಿ, ಸಂಪೂರ್ಣವಾದ ಪ್ರಾಂತಿಕ ಸ್ವರಾಜ್ಯದ ಅಧಿಕಾರವು ಪ್ರಾಂತಗಳಿಗೆ ದೊರೆಯುವ ವರೆಗೂ, ಇಂತಹ ಪ್ರತ್ಯೇಕ ಪ್ರಾಂತದ ಗೊಂದಲದಲ್ಲಿ ಕನ್ನಡಿಗರು ಬೀಳಬಾರದಂತೆ! ಸ್ವರಾಜ್ಯದ ಸಿದ್ಧತೆಗಾಗಿಯೇ ಪ್ರತ್ಯೇಕ ಪ್ರಾಂತಗಳ ಅವಶ್ಯಕತೆಯಿರುವಾಗ, ಆದ್ದರಿಂದಲೇ ಕಾಂಗ್ರೆಸ್ಸಿನವರು ಸಹ ಭಾಷಾನ್ವಯ ಪ್ರಾಂತವನ್ನು ನಿರ್ಮಿಸಿದ್ದು ಪ್ರತ್ಯಕ್ಷವಾಗಿ ಕಾಣುತ್ತಿರುವಾಗ, ಈ ಬಗೆಯ ಯುಕ್ತಿವಾದವನ್ನು ಹೂಡಿದರೆ ಉಪಯೋಗವೇನು! ಯಾವ ವಿಷಯದಲ್ಲಿ ಸ್ವರಾಜ್ಯಪಕ್ಷದ ಪ್ರತಿಷ್ಠೆಯು ಕಡಿಮೆಯಾಗದಂತೆ ಸರಕಾರದ ಒಳ ಗುಂಪಿನ ಹಿಡಿತದಲ್ಲಿ ಸಿಲುಕದಂತೆ, ಸರಕಾರದಿಂದ ನಮಗೆ ಇಷ್ಟವಾದ ಸಂಗತಿಗಳನ್ನು ಸೆಳೆದು ಕೊಳ್ಳಲು ಶಕ್ಯವಿದೆಯೋ, ಅಂತಹ ವಿಷಯಗಳಲ್ಲಿ ಸ್ವರಾಜ್ಯಪಕ್ಷವು ಸರಕಾರಕ್ಕೆ ಸಹಕಾರಿಯಾಗಿರಲು ಆತಂಕವಿಲ್ಲವೆಂದು ನಿರ್ಣಯವಾಗಿದ್ದರಿಂದಲೇ ಸ್ವರಾಜ್ಯವಾದಿಗಳು ಉಪ್ಪಿನ ಮೇಲಿನ ಸುಂಕ ಮತ್ತು ಇನ್ನಿತರ ಠರಾವುಗಳಿಗೆ ತಮ್ಮ ಸಮ್ಮತಿಯನ್ನು ಕೊಟ್ಟಿದ್ದಾರೆ; ಶ್ರೀ ಪಂಡಿತ ನೆಹರೂರವರು ಸ್ಕೀನ ಕಮೀಟಿಯ ಸಭಾಸದತ್ವವನ್ನು ಸ್ವೀಕರಿಸಿದ್ದಾರೆ; ಪಟೇಲರು 'ಪ್ರೆಸಿಡೆಂಟ'ರಾಗಿದ್ದಾರೆ. ಈ ಸಂಗತಿಗಳನ್ನೆಲ್ಲ ಬಚ್ಚಿಟ್ಟು, ಇಲ್ಲದ ವಿರೋಧವನ್ನು ಹೂಡಿ ಮನಸ್ಸಿನಲ್ಲಿಯ ಕಾಲ್ಪನಿಕ ಕಲ್ಮಷಕ್ಕೆ ಎಡೆಗೊಡುವದು ವಿಹಿತವಲ್ಲವೆಂಬುದನ್ನು ಶ್ರೀ ರಾಮದಾಸರು ತಿಳಿದುಕೊಳ್ಳಲಿ. ಈ ವಿಷಯದಲ್ಲಿ ಡಾ. ಯೂ. ರಾಮರಾಯರಿಗೆ ಕರ್ನಾಟಕದ **ಸಂಪೂರ್ಣವಾದ** ಬೆಂಬಲವಿದೆಂಬುದರಲ್ಲಿ ಎಳ್ಳಷ್ಟೂ ಸಂದೇಹವಿಲ್ಲ

ಕಾರವಾರದ ಕಾನನಗಳ ಕಷ್ಟಮಯವಾದ ಕತೆಗಳನ್ನು ಕೇಳಿ ಕೇಳಿ, ಎಂತಹ ಕಠಿಣ ಹೃದಯದ ಎಷ್ಟೆ ಮನುಷ್ಯನಿದ್ದರೂ, ಅವನ ಎದೆ ಕರಗದೇ ಇರದು. ಆದರೆ ನಮ್ಮ ಮಾ ಬಾಪ (?) ಸರಕಾರದ ಸದಯಾಂತಃಕರಣಕ್ಕೆ ಸ್ವಲ್ಪಾದರೂ ಈ ಸಂಗತಿಯು ತಗಲಿರುವದಿಲ್ಲ. ರೈತರು ಅನೇಕ ಬಗೆಯಿಂದ, ಸರಕಾರಕ್ಕೆ ಎಲ್ಲ ಸಂಗತಿಗಳನ್ನು ಅರುಹಿದ್ದರಿಂದ ಅರುಹುತ್ತಲಿರುವದರಿಂದ ತಮ್ಮ ಕಿವಿಗೆ ಈ ವಿಷಯವು ಬಿದ್ದಿಲ್ಲವೆಂದು ಹೇಳುವ ಪಾಶ್ಚಿಮಾತ್ಯ ಜಾಣತನವನ್ನು ಅಧಿಕಾರಿಗಳು ತೋರ್ಪಡಿಸಲು ಮಾರ್ಗವಿಲ್ಲ. ಹಣವೊಂದೇ ಸರಕಾರದ ಎದುರಿನಲ್ಲಿ ನಿಲ್ಲುತ್ತದೆ, ಜನರ ಬೇಡಿಕೆಗಳನ್ನು ಪೂರೈಸುವದೆಂದರೆ ಕಾನನಗಳ ಉತ್ಪನ್ನವನ್ನು ಕಡಿಮೆ ಮಾಡಿಕೊಳ್ಳಬೇಕಾಗುವದು. ದುಡ್ಡು ದುಡ್ಡೆಂದು ಕನಕರಿಸುವ ಸರಕಾರವು ಇದಕ್ಕೆ ಹೇಗೆ ಸಮ್ಮತಿಸಬೇಕು! ಈಗ್ಗೆ ಕಾಡಾನೆಗಳ ಕಾಟವೊಂದು ಕಲ್ಪನಾತೀತವಾಗಿ ಕಾರವಾರ ಜಿಲ್ಹೆಯಲ್ಲಿ ಬೆಳೆದಿದೆ. ಇದರಿಂದ ಅನೇಕ ಹಳ್ಳಿಗಳು ನಿರ್ಜನವಾಗಿವೆ; ಪೈರುಗಳೂ, ತೋಟಗಳೂ ಹಾಳಾಗಿವೆ. ಜನರಿಲ್ಲದ್ದರಿಂದ ಉತ್ತಮವಾದ ಸಾಗುವಳಿಯ ಗದ್ದೆಗಳು ಪಡಭೂಮಿಯಾಗಿವೆ; ಅಡವಿಗ

ಕಲ್ಲಿಯ ಬೆಲೆಬಾಳುವ ಮರಗಳು ನಾಶವಾಗಿವೆ. ಇವುಗಳಲ್ಲಿಯ ಒಂದೊಂದೇ ಹಾನಿಯಿಂದ ಅಪರಿಮಿತವಾದ ನಾಶವು ಕಾರವಾರ ಜಿಲ್ಹೆಯ ರೈತರಿಗೆ ತದ್ ಮುಖಾಂತರವಾದ ಕನ್ನಡಿಗರಿಗೆ ಉಂಟಾಗಿದೆಂಬದು ಒಡೆದು ಕಾಣುತ್ತದೆ. ಆದರೆ ಎಲ್ಲ ಹಾನಿಗಳೂ ಏಕಕಾಲಕ್ಕೆ ಉದ್ಭವವಾಗಿ, ಒಂದೇ ಸವನೇ ರೈತರ ವಿನಾಶಕ್ಕೆ ಕಾರಣವಾಗುತ್ತಿರುವದನ್ನು, ತಿಳಿದೂ ತಿಳಿದೂ, ಅದನ್ನು ನಿಲ್ಲಿಸದಿರುವದು, ಸರಕಾರದ ವಿನಾಶಕ್ಕೆ ಕಾರಣವಾಗುವದೆಂಬದನ್ನು ಅಧಿಕಾರಿಗಳು ಅವಶ್ಯವಾಗಿ ಅರಿತುಕೊಳ್ಳಲಿ ರೈತರ ಸಂತಾಪದ ಕಿಚ್ಚು ಯಾವಾಗಲೂ ಸರಕಾರದ ಆಳಿಗಾಲದ ಕುಂಡವಾಗಿದೆಂಬದು ಇತಿಹಾಸದಿಂದ ಸಿದ್ಧವಾಗುತ್ತಿರುವದು ಸರಕಾರಕ್ಕೆ ಗೊತ್ತಿದ್ದರೆ ಅವರು ಇನ್ನಾದರೂ ತೀವ್ರವಾಗಿ ರೈತರ ಕಷ್ಟಗಳನ್ನು ದೂರಮಾಡಲಿ.

ಬ್ರಾಹ್ಮಣರ ಸಭೆಯು.

(ಲೆ| ಬುರ್ಲಿ ಶ್ರೀನಿವಾಸಾಚಾರ್ಯರು ಬಾಗಲಕೋಟೆ.)

ನಮ್ಮ ವಿಜಾಪೂರದ ಪ್ರಮುಖ ನಾಗರಿಕರೂ. ವಯೋವೃದ್ಧರೂ. ಧರ್ಮಾಭಿಮಾನಿಗಳೂ ಆಗಿರುವ ರಾವ ಬಹದ್ದೂರ ರಾಘವೇಂದ್ರ ರಾವ ಕೆಂಭಾವಿ ಇವರೇ ಮೊದಲಾದ ಕೆಲವು ಮಹನೀಯರು ನಮ್ಮ ಬ್ರಾಹ್ಮಣ ಸಮಾಜದ ಉನ್ನತಿಗಾಲೋಚಿಸುತ್ತಿರುವದನ್ನು ನೋಡಿ ಸಂತೋಷಬಟ್ಟು ನಮ್ಮ ಅಭಿಪ್ರಾಯವನ್ನಿಷ್ಟು ಪ್ರಕಟಿಸ ಬೇಕೆಂದು ಮಾಡಿದ್ದೇವೆ. ಇದನ್ನು ವಾಚಕರು ವಿಮರ್ಶಿಸಬೇಕೆಂದು ಬಿನ್ನಹವಿದೆ. ಸದ್ಯಸ್ಥಿತಿಯಲ್ಲಿ ನಮ್ಮ ಬ್ರಾಹ್ಮಣ ಸಮಾಜವು ಅವನತವಾಗಿರುವದೆಂಬುವನ್ನು ಎಲ್ಲರೂ ಒಪ್ಪುವರು ಆದರೆ ಉನ್ನತಿಗಾಗಿ ಮಾರ್ಗಗಳು ಮಾತ್ರ ಎರಡು ಇರುವವಾಗಿ ಕಂಡು ಬರುತ್ತದೆ. ಬಿ ಎ. ಮುಂತಾದ ಪದವೀಧರರಾದ ತರುಣರು ಸಹ ನಿರುದ್ಯೋಗಿಗಳಾಗಿ ದಾರಿದ್ರ್ಯದಿಂದ ಪೀಡಾಡುತ್ತಿರುವದರಿಂದಲೂ, ಈ ವರ್ಗವು ದಿನದಿನಕ್ಕೆ ಬೆಳೆಯುತ್ತಿರುವದರಿಂದಲೂ ಇವರಿಗೆ ಸ್ವಾವಲಂಬನ ಉದ್ಯಮಗಳನ್ನು ನಿರ್ಮಿಸಿ ಹಾದಿಗೆ ಹಚ್ಚಬೇಕೆಂಬುವದು ಮೊದಲನೇಯದು ಅಲಭ್ಯವಾದ ಮನುಷ್ಯಜನ್ಮ ತತ್ರಾಪಿ-ಬ್ರಾಹ್ಮಣ್ಯವು ಬಂದಿರಲು, ದುರಾಶಾ ನೌಕರಿಯೆಂಬ ಪಿಶಾಚದ ಮೋಹವಾದರೂ, ಸುಪುಣ್ಯದಿಂದ ಸರಕಾರದಿಂದಲೆ ದೂರವಾಗುತ್ತಿರುವ ಸಮಯದಲ್ಲಿ ಯಾದರೂ, ಸ್ವಧರ್ಮದ ಕಡೆಗೆ ಲಕ್ಷ್ಯಕೊಟ್ಟು, ಜನ್ಮಸಾರ್ಥಕ ಮಾಡಿಕೊಳ್ಳುವದೇ ಉತ್ತಮವಾದ್ದರಿಂದ ಬ್ರಾಹ್ಮಣರು ಆಧ್ಯಾತ್ಮಿಕ ಉನ್ನತಿಯನ್ನು ಮಾಡಿಕೊಳ್ಳತಕ್ಕದ್ದೆಂಬುವದು ಎರಡನೇಯ ಮಾರ್ಗ ಇವೆರಡೇ ಅವನತಿಯ ಪರಿಹಾರಕ ಸಾಧನಗಳೆಂತಲೂ ಹೇಳುತ್ತಿರುವರು.

ಪರಮಾರ್ಥದ ಕಡೆಗೆ ಸ್ವಲ್ಪವೂ ಸಹ ವಿಚಾರವಿಲ್ಲದೆ ಆಹಾರ ವಿಹಾರ ಮಾತ್ರಗಳಲ್ಲಿ ಪರ್ಯವಸಾನ ಮಾಡಿದರೆ, ಹಂದಿ, ನಾಯಿ, ನರಿಗಳಿಗೆ ಸಮಾನ ವಾದಂತಾಗುವದಿಲ್ಲವೇ! ಅಂದಮೇಲೆ ದುರ್ಲಭವಾದ ಮನುಷ್ಯನ ಜನ್ಮಬಂದದ್ದು ಸಾರ್ಥಕವೇನು?

ನಮ್ಮ ಪೂರ್ವಜರಾದ ಯಾವ ಮಹರ್ಷಿಗಳು ವಿಶ್ವಾಮಿತ್ರನಂತಹ ತೇಜಸ್ವಿಯ ಮುಖದಿಂದ ಸಹ धिग् बलं क्षत्रियबलं ब्रह्मतेजो बलं बलम् ಎಂಬ ಉದ್ಗಾರವನ್ನು ಹೊರಡಿಸಿದರೋ, ಅದೇ ಮಹಾತ್ಮರಾದ ವಸಿಷ್ಠಾದಿಗಳ ಗೋತ್ರಜರೆಂದು ಹೇಳಿಕೊಳ್ಳುವ ನಾವು ಬ್ರಹ್ಮತೇಜವನ್ನು ಕಳೆದುಕೊಂಡು, ಸರ್ವಜಾತಿಗಳಿಗೂ ದ್ವೇಷ್ಯರಾಗಿ ದುಃಖ ಬಡುವದನ್ನು ನೆನೆಸಿದರೆ ವಿಪರೀತವಾಗಿ ವ್ಯಸನವಾಗುವದು.

ಈ ಪರಿಸ್ಥಿತಿಯ ಮೂಲವೆಂದರೆ ನಾವು ಆಧ್ಯಾತ್ಮಿಕ ಮಾರ್ಗವನ್ನೂ ಬ್ರಾಹ್ಮಣ್ಯದ ಕಲ್ಪನೆಯನ್ನೂ ತ್ಯಜಿಸಿದ್ದೇ ಹೊರತು ಬೇರೆ ಆರ್ಥಿಕ ಕಾರಣಗಳು ಸರ್ವಥಾ ಅಲ್ಲ.

ಬ್ರಾಹ್ಮಣ ಸಮಾಜದ ಉನ್ನತಿಗಾಗಿ ಯತ್ನಿಸುವರು ರಮಣೀಯವಾದ ಪವಿತ್ರ ನದೀತೀರದಲ್ಲಿ ಒಂದು ಬ್ರಹ್ಮಾಶ್ರಮವನ್ನು ಸ್ಥಾಪಿಸಬೇಕು ಅದರಲ್ಲಿ ಉಪನೀತರಾದ ಸಣ್ಣ ಹುಡುಗರನ್ನೇ ಸಂಗ್ರಹಿಸಬೇಕು. ಪ್ರಥಮದಲ್ಲಿ ತರ್ಕವೇದಾಧ್ಯಾಯನ ಕಾವ್ಯಜ್ಞಾನವನ್ನು ಸಂಪಾದಿಸಿ ಕೊಟ್ಟು, ಉಪಯುಕ್ತ ನ್ಯಾಯ ವ್ಯಾಕರಣಗಳನ್ನು ಹೇಳಿ ಅಮೇಲೆ ವೇದಾಂತದಲ್ಲಿ ಅವರು ಪಾರಂಗತರಾಗುವಂತೆ ಮಾಡತಕ್ಕದ್ದು. ಆಶ್ರಮದಿಂದ ಅವರು ಹೊರಬೀಳುವದರೊಳಗಾಗಿ ಮನ್ವಾದಿ ಧರ್ಮಶಾಸ್ತ್ರ ನಿಷ್ಣಾತರಾಗಿಯೂ, ಕನ್ನಡ ಹಿಂದೀ ಇಂಗ್ಲೀಷ ಭಾಷೆಯಲ್ಲಿಯೂ, ಧಾರ್ಮಿಕ ರಾಜಕೀಯ ಸಾಮಾಜಿಕ ಮೊದಲಾದ ಸದ್ಯಸ್ಥಿತಿಗತಿಗಳ ವಿಚಾರಗಳಲ್ಲಿಯೂ ಪ್ರಬಲರಾಗಿರತಕ್ಕದ್ದು. ಈ ಶಾಸ್ತ್ರಮಾರ್ಗ ಬಿಟ್ಟು ವೇದಮಾರ್ಗದಲ್ಲಿ ನಿಷ್ಣಾತರಾಗಲಪೇಕ್ಷೆಯುಳ್ಳವರು ಸ್ವಶಾಖಾಧ್ಯಯನವನ್ನು ಸಾಂಗೋಪಾಂಗ ಪೂರ್ಣವಾಗಿ ಮಾಡಿಕೊಂಡು ಮನ್ವಾದಿ ಧರ್ಮಶಾಸ್ತ್ರದಲ್ಲಿ ಪರಿಶ್ರಮ ಮಾಡತಕ್ಕದ್ದು. ಇದರಂತೆ ಉಭಯ ಶಾಖೆಗಳಲ್ಲಿಯ ಪೂರ್ವಾಪರ ಸಂಸ್ಕಾರಗಳಲ್ಲಿ ಪರಿನಿಷ್ಠಿತರಾಗಿ ಯಜ್ಞಯಾಗಾದಿ ಶ್ರೌತಕಲಾಪಗಳಲ್ಲಿಯೂ ತಯಾರಾಗಬೇಕು. ಭಾಗವತ ಮಹಾಭಾರತ ರಾಮಾಯಣಾದಿಗಳ ರಹಸ್ಯವನ್ನು ಎಲ್ಲರೂ ಅರಿತಿರಬೇಕು ಈ ಆಶ್ರಮದಲ್ಲಿರುವ ಪ್ರತಿವ್ಯಕ್ತಿಯೂ ದರೂ ವಿಹಿತವಾದ ವರ್ಣಾಶ್ರಮದ ಧರ್ಮಗಳನ್ನು ಯಥಾಶಕ್ತಿಯಾಗಿ ತಪ್ಪದೇ ಸಕಾಲಗಳಲ್ಲಿ ಆಚರಿಸುತ್ತಿರಬೇಕು. ಈ ನಿರ್ಬಂಧವು ಎಲ್ಲರಿಗೂ ಇದ್ದೇ ತೀರಬೇಕು. ಈ ಕ್ರಮದಿಂದ ವ್ಯಾಸಂಗ ಮಾಡುವ ಕುಮಾರರಾಗಲಿ, ಮಾಡಿಸುವ ಅಧ್ಯಾಪಕರಾಗಲಿ ಸರ್ವಥಾ ತೇಜಸ್ವಿಗಳಾಗುವರೆಂಬದರಲ್ಲಿ ಏನೂ ಸಂಶಯವಿಲ್ಲ.

ಈ ತರದ ಅಭಿರುಚಿಯುಳ್ಳ ತರುಣರಾದರೂ ಆಶ್ರಮದ ನಿರ್ಬಂಧಗಳನ್ನು ಪಾಲಿಸುತ್ತ, ಅಭಿರುಚಿಸಿದ ವಿಷಯಗಳ ವ್ಯಾಸಂಗವನ್ನು ಅವಶ್ಯವಾಗಿ ಮಾಡಬಹುದು- ಪ್ರಥಮದಲ್ಲಿ ಒಬ್ಬಿಬ್ಬರೇ ಅಧ್ಯಾಪಕರೂ-೪-೫-ಜನ ವಿದ್ಯಾರ್ಥಿಗಳೂ ಆದರೆಸಾಕು. ಸಂಸ್ಥೆಯು ಅಭಿವೃದ್ಧಿ ಆದಹಾಗೆ, ಸಹಾಯವಾದರೂ ಬೆಳೆದು, ಶ್ರೇಯಸ್ಸು ಬರುವದು

ಇದರಲ್ಲಿ ಯಾವದೂ ನಮಗೆ ಅಸಾಧ್ಯವಾಗಿ ಕಾಣಿಸುವದಿಲ್ಲ. ಈ ತರದ ಬ್ರಾಹ್ಮಣರ ಉಜ್ಜೀವನದ ಸಾಧನವನ್ನು ಲಕ್ಷದಲ್ಲಿ ಇಟ್ಟು ಪ್ರಯತ್ನ ಮಾಡಬೇಕು.

ಇನ್ನು, ಆರ್ಥಿಕ ಸ್ವಾವಲಂಬನ ಉದ್ಯಮಗಳನ್ನು ಸ್ಥಾಪಿಸಿಯಾದರೂ ತರುಣವರ್ಗಕ್ಕೆ ಅವಶ್ಯ ಸಹಾಯ ಮಾಡಬೇಕು- ಆದರೆ ಸಹಾಯ ಬೇಡುವ ತರುಣರಿಗೆ ಸ್ನಾನ ಸಂಧ್ಯಾದಿ ಅವಶ್ಯಕ ಕರ್ಮಗಳನ್ನು ಮಾಡೇ ತೀರಬೇಕೆಂತಲೂ, ದುಷ್ಟವಾದ ವ್ಯಸನಗಳನ್ನು ಸರ್ವಥಾ ಸೇವನ ಮಾಡಬಾರದೆಂತಲೂ, ನಿರ್ಬಂಧಗಳನ್ನು ಕಟ್ಟಿಯೇ ತೀರಬೇಕು. ಅಂತೂ ಈ ಪರಿಯಾಗಿ ಎರಡು ಶಾಖೆಗಳನ್ನು ಮಾಡಿ ಮೊದಲು ನಮ್ಮ ಕರ್ನಾಟಕ ಪ್ರಮುಖ ನಗರಗಳಲ್ಲಿ ಉದ್ದೇಶವನ್ನು ಪ್ರಸಾರ ಮಾಡುತ್ತ ಅಲ್ಲಲ್ಲಿ ಉಪಸಂಘಗಳನ್ನು ಸ್ಥಾಪಿಸುತ್ತ ಪ್ರಯತ್ನ ಮಾಡಿಯೇ ತೀರಬೇಕು. प्रयत्नमेकं समतो विधाय भूतिमान्नुमः ನಾಗಿ ಮೊದಲು ಯತ್ನಮಾಡುತ್ತ ಶ್ರೇಯಸ್ಸನ್ನು ಸಂಪಾದಿಸಬೇಕೆಂದು ಮುಖ್ಯಭೀಮಸೇನ ದೇವರು ಹೇಳಿದ್ದನ್ನು ಮನನ ಮಾಡಬೇಕು.

ಇಲ್ಲಿ ಕೆಲವರು ರಾಜಾಶ್ರಯ ವಿಲ್ಲದೇ ಈ ಕಾರ್ಯಗಳು ಸಾಧ್ಯವಿಲ್ಲೆಂದು ಹೇಳುವದುಂಟು ಆದರೆ ಇಲ್ಲದ್ದನ್ನು ಚಿಂತಿಸಿ ಫಲವೇನು? ಇನ್ನು ಯಾವ ಮಹರ್ಷಿ ಯಾದರೂ ಕೇವಲ ರಾಜಾಶ್ರಯದಿಂದಿದ್ದಿಲ್ಲ ಯಾವರಾಜನಾದರೂ ಮಹರ್ಷಿಗಳ ಆಶ್ರಮಕ್ಕೆ ಹೋಗಿ ಧಾನ್ಯದ ರಾಶಿಯನ್ನಾಗಲೀ, ದ್ರವ್ಯದ ರಾಶಿಯನ್ನಾಗಲೀ, ಸುರುವಿದರೆಂತಲೂ ಪುರಾಣೇತಿಹಾಸಗಳಲ್ಲಿ ಉಲ್ಲೇಖವಿಲ್ಲ. ಅವರು ನಿಸ್ಪೃಹರಾಗಿದ್ದು ತಪಸ್ಸಿಗೆ ಲಕ್ಷ್ಯಕೊಡುತ್ತಿದ್ದರು. ಅವರ ನಿಸ್ಪೃಹ ತನವನ್ನು ನಿರೀಕ್ಷಿಸಿಯೇ ರಾಜಾಧಿರಾಜರು ಅವರ ಸೇವೆಯಲ್ಲಿ ತತ್ಪರರಾಗಿರುತ್ತಿದ್ದರು

ಆದುದರಿಂದ ನಮ್ಮಲ್ಲಿಯ ಬ್ರಾಹ್ಮಣ ಸಭೆಯವರು ಇದನ್ನೆಲ್ಲವನ್ನು ಚನ್ನಾಗಿ ವಿಮರ್ಶಿಸಿ ಪ್ರಥಮ ಅಸಾಧ್ಯವಾಗಿದ್ದರೂ ಕ್ರಮದಿಂದ ಸಾಧ್ಯವಾಗುವಂತೆಯೂ, ಕಡೆಗೆ ಅಭಿರುಚಿ ಹುಟ್ಟಿಸುವದಕ್ಕೆ ಆದಿಂದ ಕರ್ನಾಟಕದಲ್ಲಿ ಯತ್ನಿಸುವದನ್ನಾದರೂ ಪರಿಗ್ರಹಿಸ ಬೇಕೆಂತಲೂ, ಈ ಉದ್ದೇಶವನ್ನು ಭಗವಾನ್ ಶ್ರೀ ಕೃಷ್ಣನು ತೀವ್ರದಲ್ಲಿ ಕೈಗೂಡಿಸಿ ಬ್ರಹ್ಮವರ್ಚಸ್ವಿಗಳಾದ ಭಾರತ ಮಹೀಸುರ ತರುಣರನ್ನು ನಿರ್ಮಾಣ ಮಾಡಲೆಂದು ಪ್ರಾರ್ಥಿಸಿ ಮುಗಿಸುವಾ.

ಬಾರುಕೋಲು.

ಶಸ್ತ್ರ ಶೌರ್ಯಾದಿಗಳೆಲ್ಲಿವೆ. ?

ಬುಸಾದಿಯ ಕಾಲದಿಂದ ಶಸ್ತ್ರಾಗಾರವೆಂದು ಹೆಸರಾದ ಹಿಂದುಸ್ಥಾನದಲ್ಲಿ ಶಸ್ತ್ರಗಳೇ ಇಲ್ಲದಾಗಿವೆ. ಕ್ಷತ್ರಿಯರ ಬಲವು ಕುಂದಿದೆ ಶಸ್ತ್ರಬಲದಿಂದ ಮಾರೀಚ ರಾವಣ ಕುಂಭಕರ್ಣಾದಿ ದುಷ್ಟ ದೈತ್ಯರ ಸಂಹಾರಮಾಡಿ ಭೂಭಾರ ಇಳುಹಿದ, ಸದ್ಧರ್ಮ ಸ್ಥಾಪನ ಮಾಡಿದ ಹಿರಿದಿನ ಕಲಿಗಳೆಂದು ಹೆಸರು ಪಡೆದ ಆರ್ಯರ ವಂಶಜರಾದ ನಾವು ಈಗ ಶಸ್ತ್ರಗಳು ಕಣ್ಣಿಗೆ ಬಿದ್ದರೆ, ಅಂಜಿ ಅಡಕಲ ಸಂದಿಯೊಳಗಾಗಲಿ ಇಕ್ಕಲದೊಳಗಾಗಲಿ, ಅಡಗಿಕೊಂಡು ಕುಳಿತುಕೊಳ್ಳುವದರಲ್ಲಿ ನಿಷ್ಣಾತರಾಗಿದ್ದೇವೆ. ಪಿಸ್ತೂಲಗಳನ್ನಾಗಲಿ ಕುಬಾಕಿಗಳನ್ನಾಗಲಿ ಕೊಟ್ಟರೆ ನಮ್ಮ ಮೇಲೆ ನಾವೇ ಹಾರಿಸಿಕೊಳ್ಳುವಷ್ಟು ಯುದ್ಧ ಕಲೆಯಲ್ಲಿ ನಿಪುಣರಾಗಿರುವೆವು. ಗುರಿನೋಡಿ ಗುಂಡು ಹಾರಿಸುವದಂತೂ ದೂರೇ ಉಳಿಯಿತು. ಅಪ್ಪಿತಪ್ಪಿ ಎಲ್ಲಿಯೋ ಒಂದು ಮೂಲೆಯಲ್ಲಿ ಶೂರರು ಉಳಿದಿದ್ದರೆ ಅವರು ನೀತಿಯಿಂದ ನಡೆಯಿರಿ, ಬಂಧು ಪ್ರೇಮ ಬೆಳೆಯಿಸಿರಿ, ಕರೆ ಕುದಿದು ಗಟಾರಗಳಲ್ಲಿ ನಾಯಿಗಳಂತೆ ಉರುಳಾಡ ಬೇಡಿರಿ ಎಂದು ಉಪದೇಶ ಮಾಡುತ್ತಿರುವ ದೇಶಭಕ್ತರ ಮೇಲೆ ಗುಂಡಿನ ಮಳೆ ಸುರಿಸುವ ಸತ್ಕಾರ್ಯದಲ್ಲಿ ಗಟ್ಟಿಗರಿದ್ದಾರೆ. ಎದೆಗೆ ಎದೆ ಹಚ್ಚಿ ಹೋರಾಡುವ, ಮಲಗಿದ ಹುಲಿ ಎಬ್ಬಿಸಿ, ಅದನ್ನು ಕೈಯಿಂದ ಗುದ್ದಿ ಗುದ್ದಿ, ಹಣ್ಣು ಮಾಡಿ ಕೊಲ್ಲುವಷ್ಟು ಬಾಹು ಬಲವು ನಮ್ಮ ಪೂರ್ವಜರಲ್ಲಿ ಇತ್ತು. ಈಗ ಅವರ ವಂಶಜರಾದ ನಾವು ನೊಣ ಹಿಡಿಯುವ ಹುಲಿಯನ್ನು ಹಿಡಿಯುವದಕ್ಕೆ ಸಹ ಹೆದರಿ, ಹಿಂಜರಿಯುವಷ್ಟು ಎದೆಗಾರರಿರುತ್ತೇವೆ. ಏನೇ ಆಗಲಿ ನೊಣ ಹಿಡಿಯುವ ಹುಲಿಯು ಸಚೇತನ ಪದಾರ್ಥವಾದರು ಇದೆ ಅಚೇತನವೆಂದರೆ ಜೀವವಿಲ್ಲದಂತಹ ಹೊಲದಲ್ಲಿಯ ಬೆದರಿಗೆ ಬೆದರಿ, ಹೌ ಹೌ ಎಚ್ಚರದಪ್ಪಿ ಬೀಳುವಂತಹ ಹೇಡಿನ ಗಂಡುಗಲಿಗಳು ನಾವಾಗಿರುವೆವು. ಈಗಿನ ನಮ್ಮ ರಣ ಬಹಾದ್ದೂರರಿಗೆ, ರಾವಬಹಾದ್ದೂರರಿಗೆ, ಖಾನಸಾಹೇಬರಿಗೆ ಪದವೀಧರರಿಗೆ, ನಮ್ಮ ದಯಾಳು ಸರಕಾರದವರ ಬೆಂಬಲವೊಂದಿದೆ. ಅಂಥಇಂಥ ಬೆಂಬಲವಲ್ಲ ನಮ್ಮ ರಕ್ಷಣದ ಆರಭಾರಗಳನ್ನೆಲ್ಲ ಹೊತ್ತಿರುವದು ಶಸ್ತ್ರಗಳಂತೂ ಇರಲಿ. ಒಂದುದೊಡ್ಡ ದುಡ್ಡ ಬಡಿಗೆಯನ್ನು ಹಿಡಿದುಕೊಂಡು ಹೊರಗೆಬಂದವರನ್ನು ಬಾಡಿಗೆ ಇಲ್ಲದಮನೆಗೆ ಕಳಿಸಲು ಪಿನಲ್ ಕೋಡಿನ ಬೆದರಿಕೆಯೊಂದಿದೆ. ಹೀಗಿದ್ದ ಮೇಲೆ ಕೇಳುವದೇನು! ತೊಳಡಿಸುವವರಿಗೆ ಹಾಸಿಗೆ ಹಾಸಿ ಕೊಟ್ಟಂತಾಗಿರುವದು. ನಮ್ಮ ಸರಕಾರದವರ ಬಲಗೈಗಳಂತಿರುವ ವ್ಯಾಪಾರೀ ವರ್ಗವು ನಮ್ಮ ಕೋಮಲ ಕೈ ಬೆರಳುಗಳಿಗೆ ಚಿಕ್ಕ ಚಿಕ್ಕ ಲೀಡಪೇನ್ಸಿಲ್‌ಗಳನ್ನು ಕೆತ್ತುವ ಶ್ರಮವಾಗಲೇ ಕೂಡದೆಂಬ ಸದುದ್ದೇಶದಿಂದ ನಿಬ್ಬಗಳನ್ನು ಹಿಡಿಕೆಗಳನ್ನು ಸ್ಟ ಲೀಡಪೇನ್ಸಿಲ್‌ಗಳನ್ನು ಬಹು ಪ್ರಯಾಸದಿಂದ ಸಿದ್ಧ ಪಡಿಸಿ ಪೇಟೆಗಳಲ್ಲಿ ಮಾರಲಿಕ್ಕೆ ಇಟ್ಟಿರುವದು. ಇದಕ್ಕಿನ್ನ ಬೇಕು ಕರುಣೆಯೆಂದು! ಮಾತಿ ಹೊತ್ತ ಗಂಡಸರೆಂದು ಜಿಗಿದಾಡುವ ನಮಗಿಂತ ಬಳೆಗಳನ್ನಿಟ್ಟುಕೊಂಡ ಹೆಂಗಸರೇ ಹೆಚ್ಚು ಬಲಿಷ್ಠರಾಗಿರುವರು; ಶೂರರಾಗಿರುವರು; ಧೀರರಾಗಿರುವರು ಯಾಕಂದರೆ ಹಲ್ಲಿ ಕಾಯ್ಗಳನ್ನು ಹೆಚ್ಚುವಾಗಾಗಲಿ, ಹಲಸಿನ ಕಾಯ್ಗಳನ್ನು ಕೊಚ್ಚುವಾಗಾಗಲಿ. ಈಳಿಗೆಗಳ ಸ್ಪರ್ಶದಿಂದ ಅವರ ಕೈಗಳು ಪಾವನವಾಗುವವು ಗಂಡಸರಾದ ನಮ್ಮ ಪಾಲಿಗೆ ಆ ಯೋಗವೂ ಇಲ್ಲ. ಈಗಿನ ಗಂಡಸರು ಅಬಲೆಯರಗಿಂತ ಅಬಲರಾಗಿರುವರು ಸ್ತ್ರೀಯರಂತೆ ಸೀರೆಗಳನ್ನುಟ್ಟು ಬಳೆಗಳನ್ನಿಟ್ಟುಗೊಂಡು, ಬಲು ಬೆಡಗಿನಿಂದ ಬೀದಿ ಬೀದಿ ಮುರುಕು ಮಾಡುತ್ತ, ಸುಳಿದಾಡುವದೊಂದು ಉಳಿದಿದೆ. ಈಗ ನಮ್ಮಲ್ಲಿ ಅದಕ್ಕೂ ಸಿದ್ಧರಾದ ಗಂಡಸರುಂಟು. ದುಷ್ಟರ ಮರ್ದನಕ್ಕಾಗಿ, ಸಜ್ಜನರ ರಕ್ಷಣಕ್ಕಾಗಿ ಅಧರ್ಮ ನಾಶಕ್ಕಾಗಿ, ಸದ್ಧರ್ಮ ಸ್ಥಾಪನಕ್ಕಾಗಿ ಗಂಡಸರ ನಿರ್ಮಾಣವು ಆಗಿರುವದೆಂದು ವೇದ ಶಾಸ್ತ್ರಗಳೆಲ್ಲವೂ ಪುರಾಣಗಳೆಲ್ಲವೂ ಸಾರಿ ಸಾರಿ ಹೇಳುತ್ತಿರುವವು. ಈಗಿನ ಕಾಲದ ಪರಿಸ್ಥಿತಿಯೇ ಬೇರೆ ಗಂಡಸರು ಹುಟ್ಟಿದ್ದು ಅಂಗ ಯುದ್ಧಕ್ಕೆ; ಅನಂಗ ಯುದ್ಧಕ್ಕೆ. ಪ್ರತಿ ವರ್ಷ ಒಂದೇಕೆ ಎರಡು ಮೂರು ಸೂಳೆಗಳನ್ನು ತಮ್ಮ ಕಾಮಿನಿಯರಿಗೆ ದಯಪಾಲಿಸಲಿಕ್ಕೆ ಮಿತಿಮೀರಿ ಸಾಹಸ ಮಾಡುತ್ತಿರುವ ಮೇಲಾದ ನರ ಪಶುಗಳು ಎಂಬ 'ಖ್ಯಾತಿಯನ್ನು' ಪಡೆದಿರುವರು ಇಂಥ ನರಪಶುಗಳ ಹಾವಳಿಯಿಂದ ಹಿಂದುಸ್ಥಾನದ ಜನ ಸಂಖ್ಯೆಯು ಅಪಾರ ಮಾಸದ ನೊಣದಂತೆ ಎಲ್ಲಿ ನೋಡಿದಲ್ಲಿ ಬೆಳೆದಿರುವದು ಈ ಪರಿ ಬೆಳೆ ದುಪಯೋಗವೇನು? ಬಲಿಷ್ಠ ಸಂತತಿಯಲ್ಲ ಕುರಿಗಳು ಒಂದರ ಹಿಂದೊಂದು ದಡ್ಡಿಯೊಳಗೆ ಹೊಕ್ಕಂತೆ ಶಾಲೆ ಕಾಲೇಜುಗಳಲ್ಲಿ ಒಳನುಗ್ಗುವದು ನಿಸ್ಸಾರ ಗಿಡಗಂಟಿಗಳನ್ನು ಸೇವಿಸುವದು. ಎಂದರೆ ಅರ್ಥವಿಲ್ಲದೆ ವಿದ್ಯೆಯನ್ನು ಕಲಿತು ಪದವೀಧರರಾಗಿ ಹೊರಬೀಳುವದು. ಆ ಮೇಲೆ ಹೊಟ್ಟೆಗಿಲ್ಲ, ಬಟ್ಟೆಗಿಲ್ಲ, ನವಕರಿ, ನವಕರಿ, ಎನ್ನುತ್ತ ಮಧುಕರಿ ಬೇಡುವ ತಿರುಕರಂತೆ ಸರಕಾರದವರ ಬಾಗಲಿಗೆ ಎಡತಾಕಿ ಎಡತಾಕಿ, ಒದಿಸಿಗೊಂಡು ಬರುವುದು ಅನ್ನ ತಿನ್ನುವ ನಾಲಿಗೆಯಿಂದ ಬದುಕುವಂಥವಲ್ಲ ಶ್ವಾನವೃತ್ತಿಯೇ ಮೇಲಾದದ್ದೆಂದು ತಿಳಿದುಕೊಳ್ಳುವ ಸಂತತಿಯಾಗಿದೆ. ಗಟ್ಟಿಗರು ಕೂಗಿ ಬೆದರಿಸಿದರಾಯಿತು. ಗಂಗಾ ಯಮುನಾ ಪ್ರವಾಹಗಳು ಈಗಿನವರ ನಯನ ಸರೋವರದಿಂದ ಹರಿಬಿದ್ದು ನಾಶಿಕಾಬಾದದ ಹತ್ತಿರ ಸಂಗಮವಾಗಿ ಮುಂದೆ ಪಾತಾಳ ಲೋಕಕ್ಕಿಳಿಯುವವು ಅಯ್ಯೋ? ಇಂತಹ ರಣ ಹೇಡಿಗಳಿಂದ ದೇಶೋದ್ಧಾರವೆಲ್ಲಿಯದು! ಶಸ್ತ್ರೋದ್ಧಾರವೆಲ್ಲಿಯದು; ಆತ್ಮೋದ್ಧಾರವೆಲ್ಲಿಯದು! ದುಡಿದು ತಂದು ತಿನ್ನುವಶಕ್ತಿ ಇಲ್ಲ ಶ್ವಾನ ವೃತ್ತಿಯು ಹೊರತು ಅನ್ಯ ಗತಿ ಇಲ್ಲ. ಮಾನಮರ್ಯಾದೆಗಳಿಲ್ಲ. ಬಲಿಷ್ಠ ಪುರುಷರೊಬ್ಬರು ಬಂದರೆ ಅವರಿಗೆ ತಮ್ಮ ಹೆಂಡಂದಿರನ್ನು ಒಪ್ಪಿಸಿ ಮೇಲೆ ಸಾಷ್ಟಾಂಗ ನಮಸ್ಕಾರ ಹಾಕುವರು. ದಿಂಡುರಿಕೆ ಉರುಳೆಂದರೂ ಉರುಳುವರು ಇದಕ್ಕೆ ಉದಾಹರಣೆಗಳು ಬೇಕೋ? ದೂರವೇಕೆ ಗುಲಬುರ್ಗಾ ಜಾಲನವಾಲಾ ದಿಲ್ಲಿ ಮೊದಲಾದ ಸ್ಥಳಗಳಲ್ಲಿ ಆದ ಹಿಂದು ಮುಸಲ್ಮಾನರ ದಂಗೆಗಳೇ ಮೊದಲಾದ ಉದಾಹರಣೆಗಳಿರುವವು ಇಷ್ಟಾದರೂ « Arms Act » ಬೇಡವೆಂದು ಉತ್ತರ ಕುಮಾರನಂತೆ ಬಾಯಿ ಬಡಾಯಿ ಮಾಡುವ ವೀರರು ಕೌನ್ಸಿಲ್‌ದಲ್ಲಿ ಇಲ್ಲದಾಗಿದೆ ಕಾಮಣ್ಣನಂತೆ ಶೃಂಗಾರರಾಗಿ ಕೌನ್ಸಿಲ್ಲಕ್ಕೆ ಹೋದ ಹಲಕೆಲವು ಮೆಂಬರ 'ಮನಸ್ಸಿನಲ್ಲಿ 'Arms Act' ಕಿತ್ತು ಹಾಕಬೇಕೆಂಬುದು ಇದ್ದರೂ ಅವರು ಸಾಹೇಬರ, ಗವ್ಹರ್ನರ ಸಾಹೇಬರವರ, ವ್ಹಾಯಿಸರಾಯ ಸಾಹೇಬರವರ ಸವಿಮಾತುಗಳಿಗೆಲ್ಲ ಬಾಯಿ ಬೆದರಿಕೆಗೆ ಹೆದರಿ ಅವರ ಅಭಿಪ್ರಾಯಗಳಿಗೆ ಕಬಲೆತ್ತುಗಳ ಹಾಗೆ ತಲೆ ಹಾಕುವದು ಮಹಾಭಾಗ್ಯವೆಂದು ತಿಳಿದುಕೊಂಡಿರುವರು « ಹೀಗಾದರೆ ಶೌರ್ಯವೆಲ್ಲಿ ಹುದು ಹೇಳಿರೋ « ಹಾಗಲ್ಲ ಶೌರ್ಯವಿದೆ ಹೇಳುವೆನು ಕೇಳಿರೋ « ಶೌರ್ಯವೆಲ್ಲಿರುವದು ಕೇಳುವಿರಾ? ಶೌರ್ಯಕ್ಕೇನು ಕಡಿಮೆ, ಎಲ್ಲಿಯೋ ಮೂಲೆಯಲ್ಲಿ ಹುಟ್ಟಿದ ಹೇಡರ ಸೋಗುಗಳಿಗೆ ಸವಿಮಾತುಗಳಿಗೆ ಬೆರಗಾಗಿ ಒಂದೇ ಕಡೆಯಲ್ಲಿ ಹುಟ್ಟಿದ ಅಣ್ಣ ತಮ್ಮಂದಿರನ್ನು ಹಡೆದ ತಂದೆ ತಾಯಿಗಳನ್ನು ಕೈಯುಂದದಲ್ಲಿ ಜಂದು ಹಿಡಿದು ಹೊರಗೆ ಹಾಕುವದರಲ್ಲಿ ಶೌರ್ಯವಿದೆ, ಗಂಡಂದಿರನ್ನೊಲಿಸಿ, ಮಲಮಕ್ಕಳ ಸುಂದರ ಸಂಸಾರ ಹಾಳುಗೆಡಿಸಿ ಅವರ ಕೈಗಳಲ್ಲಿ ಭಿಕ್ಷಾ ಪಾತ್ರೆಯನ್ನು ಕೊಡಲು ಪಣ ಮಾಡಿದ ಮಲತಾಯಿಗಳಲ್ಲಿ ಶೌರ್ಯವಿದೆ? ತುರುಬು ತೂಕದ ಕನ್ನೆ ಪಾಡಿ ಗಿರಾಕಿಗಳನ್ನು ವಂಚಿಸುವ ವ್ಯಾಪಾರೀ ವರ್ಗದಲ್ಲಿ ಶೌರ್ಯವಿದೆ. ಕಳವು ಹಾದರ ನ್ಯಾಯಗಳನ್ನು ಸುಳ್ಳಿನ ಬಲದಿಂದ ಗೆಲ್ಲಿಸುವ ವಕೀಲರಲ್ಲಿ ಶೌರ್ಯವಿದೆ ತಮ್ಮ ಸುಂದರ ಮತ್ತು ಸುಶೀಲ ಹೆಂಡಂದಿರನ್ನು ಕಾಲಿನಿಂದೊದ್ದು ಸೂಳೆಯರ ಪಾದ ಸೇವೆಯ ಮಾಡುವ ವಿಟರಲ್ಲಿ ಶೌರ್ಯವಿದೆ ನಂಬಿಗಸ್ಥರ ಗೋಣ ಮುರಿಯುವದರಲ್ಲಿ ಶೌರ್ಯವಿದೆ. ಗೆಳೆಯರನ್ನು ವಂಚಿಸುವದರಲ್ಲಿ ಶೌರ್ಯವಿದೆ. ಬಡರೈತರನ್ನು ಸುಲಿದುಕೊಳ್ಳುವದರಲ್ಲಿ ಶೌರ್ಯವಿದೆ. ಸುರಾ ಪಾನ ಮಾಡುವದರಲ್ಲಿಯಂತೂ ಮಿಗಿಲಾದ ಶೌರ್ಯವು ಇದ್ದದ್ದು ಕಂಡು ಬಂದದೆ ಪೇಶ್ವೆ ಕಾಲದಲ್ಲಿ ಸುರಾದೇವಿಗೆ ಆಸ್ಪದ ವಿದ್ದಿಲ್ಲ ಈಗ ಎಲ್ಲಿ ನೋಡಿದಲ್ಲಿ ಸುರಾಲಯಗಳೇ ಇರುವವು

ಒಕ್ಕಲಿಗ

ಹೊಸರಿತ್ತಿ ಪಂಚಾಂಗ (೧೮೪೮)
ಕೋಟು ಚಿಲ್ಲರೆಯಾಗಿ ದೊರೆಯುತ್ತವೆ
ನರಗುಂದ ಬಂಧು ಬಾಗಲಕೋಟೆ.

ವಿನೋದ.

(By Mr. Jayarao Sulikeri.)

[೧ನೇ ಚಿತ್ರ.]

ತಿರಕಂಭಟ್ಟ:— ರಾಮ್ಯಾ, ಶ್ರೀಗಳವರು ಬಂದಿದ್ದಾರೆ; ಈಗಾದರೂ ಎರಡುದಿನ ಸಂಧ್ಯಾವಂದನೆ ಮಾಡು. ತಲೆಯ ಮೇಲಿನ ಜನ್ನಿಯನ್ನು ಎರಡು ದಿನದ ಮಟ್ಟಿಗಾದರೂ ಬೋಳಿಸು. ಸ್ವಾಮಿಗಳು ನೋಡಿದರೆ, ನೀನು ಬ್ರಾಹ್ಮಣನೋ ಹೊಲೆಯನೋ ಎಂದು ಕೇಳ್ಯಾರು? ಶ್ರೀಗಳು ಇರುವವರೆಗಾದರೂ ಈ ಹುಚ್ಚುಚ್ಚಾರ ಕಡಿಮೆ ಮಾಡು ನೋಡೋಣ.

ರಾಮ್ಯಾ:— ಅಪ್ಪಾ ಮುಂಜಿವೆ ಆದ ಮರುದಿನವೇ ಬಿಟ್ಟ ಸಂಧ್ಯಾವಂದನೆಯು ಅಕ್ಕಸ್ಕನೇ ಈಹೊತ್ತು ಒಂದೇ ದಿನದಲ್ಲಿ ಹೇಗೆ ಬರಬೇಕು. ನನ್ನ ತಲೆಯ ಮೇಲಿನ ಜನ್ನಿಗೇಕೆ ಆಕ್ಷೇಪ? ಅದನ್ನು ತೆಗೆದರೆ ನನ್ನ ಆರೋಗ್ಯ ಕೆಡುತ್ತದೆ. ಅದರಿಂದ, ನಾನು ಅದನ್ನು ತೆಗೆಯಲಾರೆ

ತಿರಕಂಭಟ್ಟ:— ಅಯ್ಯೋ, ದಡ್ಡ ಮುಂಡೇ ಮಗನೇ, ಜಾಲಿಯ ತುಂಡನಂತೆ ಇದ್ದುಕೊಂಡು, ದಿನಾಲು ಐದಾರು ಭಕ್ಕರಿಗಳನ್ನು ಸಹಜವಾಗಿ ಕತ್ತರಿಸುವ ನಿನಗೆ ಜನ್ನೆ ತೆಗಿಸಿದರೆ ಆರೋಗ್ಯ ಕೆಡುವದೇ? ನನ್ನ ಕರ್ಮ! ನೀ ಏನು ಮಾಡೀ! ನಿನ್ನ ಆ ಸಂಧ್ಯಾವಂದನೆ ಹಾಳಾಗಿ ಹೋದರೆ ಹೋಗಲಿ; ಮೊದಲು ಈ ತಲೆ ಬೋಳಿಸಿಕೋ, ಇಲ್ಲವಾದರೆ, ನನ್ನ ಮನೆಯ ಮಾನವನ್ನೇ ಕಳೆದು ಬಿಟ್ಟೀ?

ರಾಮ್ಯಾ:— ಅಪ್ಪಾ, ಜನ್ನೆಯು ನನ್ನೊಬ್ಬನ ತಲೆಯ ಮೇಲೆಯೇ ಇಲ್ಲ ಜನ್ನೆ ಬಿಟ್ಟವರು ಊರಲ್ಲಿ ಎಷ್ಟೋ ಜನ ಅದ, ಅವರೆಲ್ಲರ ಮಾನ ಹೋದರೆ ನಮ್ಮದೂ ಹೋಗುತ್ತದೆ!

ತಿರಕಂಭಟ್ಟ:— (ಸಿಟ್ಟಿನಿಂದ) ಛೀ, ಕುಲಕಂಟಕಾ! ಊರ ಸುದ್ದಿಯನ್ನು ತೆಗೆದುಕೊಂಡು ನಿನಗೇನು ಮಾಡುವದದೆ? ನಿನ್ನದು ನೀನು ನೋಡಿಕೋ. ಕೊರಳೊಳಗಿನ ಜನಿವಾರ ನೋಡು, ಇಲ್ಲಣ ಆಗಿದೆ. ಅದನ್ನು ಚನ್ನಾಗಿ ತಿಕ್ಕಿ ಚಳ ಚಳ ಮಾಡಿಕೋ. ಜನ್ನೆಯನ್ನು ತೆಗೆದು ಚಂಡಿಕೆಯನ್ನು ಬಿಟ್ಟುಕೋ. ಪೂರಾ ಸಂಧ್ಯಾವಂದನೆ ಬರದಿದ್ದರೆ ಹೋಗಲಿ! ೨೪ ಕೇಶವ ನಾರಾಯಣಗಳನ್ನಾದರೂ ಅನ್ನಲಿಕ್ಕೆ ಕಲಿ ನಾಡದೇ ಸಂಧ್ಯಾವಂದನೆಯ ಪರೀಕ್ಷಾ ಸಂಧ್ಯಾವಂದನೆ ಚಲೋ ಅಂದವರಿಗೆ ೫ ರೂಪಾಯಿ ಇನಾಮು ಕೊಡುತ್ತಾರೆ! ಅಂಥ ಇನಾಮು ನೀನು ಪಡೆದು ನನ್ನ ಕೈಯಲ್ಲಿ ೫ ರೂಪಾಯಿ ತಂದು ಕೊಟ್ಟರೆ, ನನಗೆಷ್ಟು ಆನಂದ!! ಆದರೆ, ಅಂಥದೆಲ್ಲಿದೆ ನನ್ನ ದೈವ! ಹುಟ್ಟಬೇಕು, ನಿಮ್ಮಂಥ ಸುಪುತ್ರರು ಮನೆಮನೆಗೆ!

ರಾಮ್ಯಾ:— (ತಿರಸ್ಕಾರದಿಂದ) ಏನು ಕಿಟಿಕಿಟಿ ಯಪ್ಪಾ ಇದು. ಸ್ವಾಮಿಗಳು ಬಂದದ್ದು ನಮಗೊಂದು ಪಿಡುಗು ಬಂದ ಹಾಗೆಯೇ ಆಗಿದೆ. ದಿನಾಲು ಇಷ್ಟು ಒಟಒಟ ನಡೆದೇ ಅದೆ. ಅನಕಾ, ಸ್ವಾಮಿಗಳು ಹೋಗುವ ವರೆಗೆ ನಾನು ಈ ಊರನ್ನಾದರೂ ಬಿಟ್ಟು ಹೋಗಲೋ?

ತಿರಕಂಭಟ್ಟ:— (ತಿರಸ್ಕಾರ ಮಿಶ್ರಿತ ಸಿಟ್ಟಿನಿಂದ) ಅಯ್ಯೋ ಕುಲಗೇಡೀ, ಧರ್ಮಲಂಡಾ, ಬ್ರಹ್ಮಕುಲಕ್ಕೆ ಕಲಂಕ ತರುವಂಥ ನಷ್ಟಾ ಬುದ್ಧಿಯನ್ನು ಹೇಳಿದರೆ, ಗುದ್ದಾಡ ಬರುತ್ತೀಯಾ? ದೇವರೇ, ನನ್ನ ಹೊಟ್ಟೆಯಲ್ಲಿ ಎಂಥ ರತ್ನವನ್ನು ನಿರ್ಮಾಣ ಮಾಡಿರುತ್ತೀ!

ರಾಮ್ಯಾ:— ಅಪ್ಪಾ, ನೀನು ಹಗಲೆಲ್ಲ ನನಗೆ ಹಾಗೆ ಹೀಗೆ ಅನ್ನಬೇಡ. ಮಂದಿ ಮಕ್ಕಳು ಬಂದಾಗ್ಯೆ ನೀನು ನನಗೆ ಬೈದಾಡುವದು ಅಪಮಾನವೆನಿಸುತ್ತದೆ ನನ್ನ ಜನ್ನೆಯ ಸಲುವಾಗಿ ಸ್ವಾಮಿಗಳು ನನಗೆ ಮುದ್ರೆ ಹಾಕದಿದ್ದರೆ ಬಿಡಲಿ. ನಾನೇನೂ ಜನ್ನೆ ತೆಗೆಯುವದಿಲ್ಲ. ಸ್ವಾಮಿಗಳ ಮುದ್ರೆಯು ಸ್ವಾಮಿಗಳ ಹತ್ತರ ಇರಲಿ, ನನ್ನ ಜನ್ನೆಯು ನನ್ನ ತಲೆಯ ಮೇಲೆ ಇರಲಿ. (ಹೊರಟು ಹೋಗುತ್ತಾನೆ)

ತಿರಕಂಭಟ್ಟ:— (ಸಂತಾಪದಿಂದ) ಸುಡು, ನಿನ್ನ ಮೋರೆಗೆ ನಿನ್ನಂಥ ವಿಧಿ ಕಟ್ಟಿಕೊಂಡು ಮಠದಲ್ಲಿ ಹೋಗಿ ಅಪ್ರತಿಷ್ಠೆ ಮಾಡಿಕೊಳ್ಳುವದಕ್ಕಿಂತ ಅನಕಾ ನಾನೇ ಎಲ್ಲಿಯಾದರೂ ಹೋಗಿ ಬಿಡುವದು ನೆಟ್ಟಗೆ. (ಸ್ವಲ್ಪ ವಿಚಾರ ಬಂದು) ಎಲ್ಲಿಯಾದರೂ ಹೊರಗೆ ಹೋಗಿ ಬಿಟ್ಟರೆ ನಾಲ್ಕಾರು ದಿನ ದೊರಕುವ ಮೃಷ್ಟಾನ್ನವೂ ಎರವಾಗುವದಲ್ಲ! ಏನು ಮಾಡಲಿ! ಅಯ್ಯೋ ಎಂಥ ಸಂಕಟ!

[೨ ನೇ ಚಿತ್ರ.]

ತಾಯಿ:— ವಾಸೂ, ನಾಳೆ ಸ್ವಾಮಿಗಳನ್ನು ನಮ್ಮ ಮನೆಗೆ ಪಾದ ಪ್ರಕ್ಷಾಲನೆಗೆ ಕರೆದುಕೊಂಡು ಬಾ.

ವಾಸೂ:— ಅವ್ವಾ, ೫೦ ರೂಪಾಯಿಗಳನ್ನು ಕೊಡದ ಹೊರ್ತು ಸ್ವಾಮಿಗಳು ಪಾದಪ್ರಕ್ಷಾಲನೆಗೆ ನಮ್ಮ ಮನೆಗೆ ಬರಲಾರರೆಂದು ಬಾಳಾಚಾರ್ಯರು ಹೇಳಿದರು,

ತಾಯಿ:— ಎಷ್ಟು ಬೇಡಿದರೂ, ಕೊಟ್ಟು ಕರೆಯಲೇ ಬೇಕಲ್ಲ ಮಪ್ಪಾ! ಅದಕ್ಕೆ ಬೇರೆ ವಿಧಿಯೇನಿದೆ?

ವಾಸೂ:— ಈಗ ಐದತ್ತು ಕವಡಿಗಳು ಸಹ ನನ್ನಲ್ಲಿ ಇಲ್ಲ. ಇನ್ನು ಅಷ್ಟು ರೂಪಾಯಿಗಳನ್ನು ಎಲ್ಲಿಂದ ತರಲಿ?

ತಾಯಿ:— ಅದು ಹೇಗೆ ಬಿಟ್ಟೀತಪ್ಪ! ಹೇಗಾದರೂ ಮಾಡಲೇ ಬೇಕು, ಹಿರಿಯರ ಕಾಲದಿಂದ ನಡೆಯುತ್ತ ಬಂದ ಸಂಪ್ರದಾಯವನ್ನು ನೀನು ಮುಗ್ಗಿಸಿ ಬಿಡುತ್ತೀಯೋನು? ಏನಾದರೂ ಮಾಡಲೇ ಬೇಕು. ಪಾದಪ್ರಕ್ಷಾಲನೆಗೆ ಕರೆಯಲೇಬೇಕು.

ವಾಸೂ:— ಹೌದವ್ವಾ, ಅದೆಲ್ಲ ಖರೆ ಹಿರಿಯರ ಕಾಲದ ದಿನಗಳಿಗೂ ಈಗಿನ ದಿನಗಳಿಗೂ ಅಂತರವಿದೆ. ಆಗಿನ ದಿನಗಳು ಚಲೋ ಇದ್ದವು. ನಾಲ್ಕು ದುಡ್ಡು ಕೈಯಲ್ಲಿ ಓಡಾಡುತ್ತಿತ್ತು. ಹೊಲಗಳಾದರೂ ಈಗಿನಷ್ಟು ಕಲ್ಲು ಆಗಿದ್ದಿಲ್ಲ ಕಡಾ ಕಟ್ಟು ಆಗ ಹುಟ್ಟುತ್ತಿತ್ತು. ಈಗೇನಿದೆ? ಹೊಲಗಳು ಬೋಳರ್ ಬಿದ್ದಿವೆ ಎಂಥ ಅಪ್ಪರು ಸಹ ಒಂದು ಬಿಲ್ಲೀ ದುಡ್ಡು ಕಡಾ ಕೊಡುವದಿಲ್ಲ. ಬಂಗಾರವನ್ನು ತೆಗೆದುಕೊಂಡು ಹೋಗದ ಹೊರ್ತು ಪೇಟೆಯಲ್ಲಿ ಯಾರೂ ದುಡ್ಡಿನ ಮೋರೆ ತೋರಿಸುವದಿಲ್ಲ. ಹೀಗೆ ಈಗಿನ ಸ್ಥಿತಿಯಾಗಿ ಕುಳಿತಿದೆ. ಏನು ಮಾಡಲೆವ್ವಾ, ನೀನೇ ಹೇಳು.

ತಾಯಿ:— ವಾಸೂ, ಅದೆಲ್ಲ ಒತ್ತಟ್ಟಿಗಿರಲಿ. ಇಂಥ ಸಂಧಿಗಳು ದಿನಾ ಬರುವವೇನು? ಹನ್ನೆರಡು ವರುಷಕ್ಕೊಮ್ಮೆ ಇಂಥ ಸಂಧಿಗಳು ಬರುತ್ತಿರುವವು. ಈಗ ನೀನು ಅಳದಕ್ಕೆ ಓದಿದರೆ, ಹೇಗೆ ಚಂದ ಕಂಡೀತು? ಮಂದಿ ಏನಂದಾರು? ವಿಚಾರ ಮಾಡು. ನೀನು ಇನ್ನ ಸಾವಿರ ಸಂಕಟಗಳನ್ನು ಬದಿಗೊತ್ತಿ ಪಾದಪ್ರಕ್ಷಾಲನೆ ಮಾಡಿಸಲಿಕ್ಕೇ ಬೇಕು. ಇಲ್ಲದಿದ್ದರೆ, ನಮ್ಮ ಮನೆಯ ಬೂಜು ಏನು ಉಳಿಯುವದು? ನನ್ನ ಜೀವಮಾನ ಇರುವವರೆಗಾದರೂ ಹಿರಿಯರ ಸಂಪ್ರದಾಯಗಳನ್ನು ಮುಗ್ಗಿಸ ಬೇಡ ಕಂಡಿಯಾ?

ವಾಸೂ:— ಅವ್ವಾ, ಇಲ್ಲದ್ದೊಂದು ಉಲುಸ್ ತಂದು ಹಾಕಿದರೆ, ನಾನೇನು ಮಾಡಲಿ! ಬುದ್ಧಾ, ನಾನು ಕರೆಯುವದನ್ನು ಬಿಟ್ಟಿಲ್ಲ. ನನ್ನ ಹತ್ತರ ಏನು ಬೆಳ್ಳಿಯೋ, ಬಂಗಾರವೇ ನೋಡು. ೫೦ ರೂಪಾಯಿಗಳ ವ್ಯವಸ್ಥೆಯನ್ನು ಇಂದು ಹೇಗೆ ಮಾಡುವದು, ನೀನೇ ಹೇಳು?

ತಾಯಿ:— ಮಾಡುವದೇ ಮನಸ್ಸಿನಲ್ಲಿ ಬಂದರೆ ೫೦ ಇಟ್ಟು ನೂರರದು ಆಗುತ್ತದೆ. ಮನೆಯಲ್ಲಿ ೧೬ ತೊಲದ ಹಂಡೆ ಅದೆಯಲ್ಲಾ! ಅದನ್ನು ಶೀನಪ್ಪನಾಯಕರ ಹತ್ತರ ವೈದಿಟ್ಟು ನಾನು ಈಗಿಂದೀಗ ೫೦ ರೂಪಾಯಿ ತಂದು ಕೊಡುತ್ತೇನೆ ಹೂ! ನಾಳಿನ ಕೆಲಸ ಸಾಗಿಸು ಮುಂದೆ ನಿನಗೆ ಅನುಕೂಲವಾದಾಗ ಅದನ್ನು ಬಿಡಿಸಿಕೊಂಡು ಬರುವಿಯಂತೆ!

ವಾಸೂ:— ಅಹಾ! ತಿರುಗಿ ಮುರುಗಿ ಆ ಹಂಡೆಯ ಮೇಲೆ ನಿನ್ನ ಕಣ್ಣು ಅದನ್ನು ಒತ್ತೇ ಇಟ್ಟು ನೀರು ಯಾತರಲ್ಲಿ ತುಂಬಿಕೊಳ್ಳಬೇಕು? ಗಡಿಗೆ ಮಡಿಕೆಗಳನ್ನು ತರಲಿಕ್ಕೆ ಕುಂಬಾರನ ಹತ್ತರ ಇನ್ನು ಹೋಗಬೇಕು!

(೩ ನೇ ಪುಟಕ್ಕೆ ನೋಡು.)

ಈಗಿನ ಬ್ರಾಹ್ಮಣರು.

ನೀನೇ ನಿನ್ನೊಳು ನೋಡೋ ||
ಬ್ರಾಹ್ಮಣಬ್ರುವನೇ |
ನೀನೇ ನಿನ್ನೊಳು ನೋಡೊ ||

ತುಲಸಿಯ ಮಾಲೆಯ ಧರಿಸಿದರೇನು |
ತಿಲಕವ ನೊಸಲಲಿ ಇರಿಸಿದರೇನು ||
ಒಲವಿನ ದಾರಿಯ ದೂರದಿ ತೊರೆಯುತ |
ಕಲುಷದ ಕೂಟಕೆ ಎಳೆಯುತಲಿರುವೆ || ೧ ||

ಚಿನ್ನನ ನೆನಹನು ನುಣ್ಣನೆ ಬಿಟ್ಟೆಯೊ |
ಬಣ್ಣದ ಬಗೆಬಗೆ ನುಡಿಗಳ ನುಡಿಯುವೆ ||
ಹೆಣ್ಣಿನ ಹೊನ್ನಿನ ಹಂಬಲ ಹಿಡಿಯುತ |
ಮಣ್ಣನು ಪಕಪಕ ಮುಕ್ಕುತಲಿರುವೆ || ೨ ||

ನಿನ್ನಯ ಮುನ್ನಿನ ಬಲ್ಸಿರಿಯಳಿಯಿತು |
ಬನ್ನದ ಬಟ್ಟಲ ತುಂಬುತ ಬಂದಿತು ||
ಇನ್ನೂ ನಿಜವನುತಿಳಿಯಲು ಬಹುದು |
ನನ್ನಿಯ ಚಿನ್ನನು ಕಟ್ಟಲು ಬಹುದು || ೩ ||

ಚಿನ್ನದ ಮಳೆಯನು ಸುರಿಸಿದ ಯೋಗಿಯ |
ಉನ್ನತ ರೀತಿಯ ಬಗೆಯಲಿ ಜಾನಿಸಿ ||
ಕುನ್ನಿಯೆ ಒಡಕಿನ ಒಡಲನು ಜನಗಳ |
ಉನ್ನತಿಗಾಗಿಯೆ ಮುಚ್ಚುತ ನೀಡೋ || ೪ ||

ಪಾಪದ ಫಲವಾದ ಶೋಕವು — ರಾಮದಾಸ

'ಗೂಳಿ ಬಿದ್ದರೆ ಆಳಿಗೊಂದು ಕಲ್ಲು' ಎಂಬಂತೆ ಈಗಿನ ಬ್ರಾಹ್ಮಣರ ಸ್ಥಿತಿಯಾಗಿದೆ. ಸರಕಾರದವರ ಕಟಾಕ್ಷವು ಬ್ರಾಹ್ಮಣರ ಮೇಲೆ; ಬ್ರಾಹ್ಮಣೇತರರ ಕಣ್ಣು ಬ್ರಾಹ್ಮಣರ ಮೇಲೆ; ಹೀಗೆ ಎಲ್ಲೆಡೆಯಿಂದಲೂ ಬ್ರಾಹ್ಮಣರಿಗೆ ತಿರಸ್ಕಾರ ಹೀಗಾಗಲು ಕಾರಣವೇನು? ಬ್ರಾಹ್ಮಣರು ತಮ್ಮ ಸತ್ವವನ್ನು ಕಳೆದು ಕೊಂಡು ಧರ್ಮಭ್ರಷ್ಟರಾಗಿದ್ದಾರೆ ಅವರು ಧರ್ಮಬಲದಿಂದ ಸರಿದರು; ಕರ್ಮಬಲದಿಂದ ಇಳಿದರು. ಧೈರ್ಯ, ತೇಜ, ಕ್ಷಮೆ, ತಿತಿಕ್ಷೆ, ಜ್ಞಾನ, ಬ್ರಹ್ಮಚರ್ಯ, ನಿಷ್ಠೆ ಮೊದಲಾದ ಗುಣಗಳಿಗೆ ಬ್ರಾಹ್ಮಣರು ಎರವಾಗಿದ್ದಾರೆ. ವಿಷಯ ಸುಖಗಳಿಗೆ ಅವರ ಮನಸ್ಸು ಸೋತು ಹೋಗಿದೆ ನಶ್ವರವಾದ ದೇಹದ ವಿಷಯದಲ್ಲಿ ಅವರ ಮೆಚ್ಚಿಕೆಯು; ಓದನದ ಬಯಕೆಗಾಗಿ ಅವರ ಓದುವಿಕೆಯು. ಉಚ್ಚನೀತಿಯಿಂದಲೂ, ಪವಿತ್ರವಾದ ಜೀವನದಿಂದಲೂ ಉಳಿದ ಜಾತಿಗಳಿಗೆ ಮಾರ್ಗದರ್ಶಕರಾಗುವುದೇ ಬ್ರಾಹ್ಮಣರ ಗುರಿಯು 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ' ಎಂಬಂತೆ ಹಿರಿಯಕ್ಕನ ಚಾಳಿಯು ಮನೆಮಂದಿಗೆ ಬ್ರಾಹ್ಮಣರು ಸ್ವತ್ವವನ್ನು ಬಿಟ್ಟು ಶೂದ್ರವೃತ್ತಿಯನ್ನು ಕೈಕೊಂಡರು, ಎಲ್ಲ ಸಮಾಜವು ಅದನ್ನೇ ಆದರ್ಶವಾಗಿಟ್ಟುಕೊಂಡಿತು. ಬ್ರಾಹ್ಮಣರು ಕೆಳಗಿಳಿದರು; ಉಳಿದವರೂ ಬಿದ್ದರು. ಹೀಗೆ ಬ್ರಾಹ್ಮಣರು ಬಿದ್ದುದರಿಂದಲೇ ಸಮಾಜದಲ್ಲಿಯ ಶಾಂತಿ ಸುಖಗಳು ಮಾಯವಾದವು. ಬೆಳಕು ಅಡಗಿ ಕತ್ತಲೆಯು ಸುತ್ತೆಲ್ಲ ಹಬ್ಬಿತು. ಪಾರತಂತ್ರ್ಯ ರಾಹುವು ದೇಶವನ್ನು ಮುತ್ತಿದನು. ಭೋಗಸಾಮ್ರಾಜ್ಯವೆಲ್ಲ ನಷ್ಟವಾಗಿ, ಬಳಲಿಕೆಯ ಬವಣೆಯು ಪ್ರಾರಂಭವಾಯಿತು. ದಿಟವನ್ನು ಬಿಟ್ಟು ಸಟೆಯ ಬೆನ್ನ ಹತ್ತಿದ್ದರಿಂದಲೇ ಇಂಥ ಪರಿಸ್ಥಿತಿಯು ಪ್ರಾಪ್ತವಾಯಿತು. ನರರನ್ನು ಒಲಿಸುವ ಹಂಬಲವು ಬೆಚ್ಚಿತು. ಆತನಲ್ಲಿಯ (ಸಚ್ಚಿದಾನಂದನಲ್ಲಿಯ) ಆದರವು ಅಳಿಯಿತು. ಒಟ್ಟಿನ ಮೇಲೆ, ಉಳಿಗಾಲವು ಕಳೆದು ಅಳಿಗಾಲವು ಅಡಿಯಿಟ್ಟಿತು. ಇವೆಲ್ಲ ಸರಿ. ಇನ್ನು ಮುಂದೆ ಉಪಾಯವೇನು? ಬ್ರಾಹ್ಮಣರು ಪ್ರೇಷ್ಠದ ದಾರಿಯನ್ನು ಬಿಟ್ಟು ಶ್ರೇಷ್ಠದದಾರಿಯನ್ನು ಹಿಡಿಯತಕ್ಕದ್ದು. ವಿಷಯಸುಖಲಂಪಟತ್ವಕ್ಕೆ ತಿಲಾಂಜಲಿಯನ್ನು ಕೊಡಬೇಕು. ಮೆಚ್ಚಿದರೆ ಧನವಾಹನಗಳನ್ನು ಕೊಡತಕ್ಕ ಅರಸನ ಮೆಚ್ಚುಗೆಯ ಹಂಬಲವನ್ನು ಬಿಡಬೇಕು. ನಚ್ಚಿದರೆ ತನ್ನನ್ನೇ ಕೊಟ್ಟು ಬಿಡುವ ಅರಸರ ಅರಸನಾದ ಅವನನ್ನೇ ನಂಬಬೇಕು. ಅವನ ಅಡಿದಾವರೆಗಳಲ್ಲಿಯೇ ನಮ್ಮ ನೋಟವನ್ನು ನೀಡಬೇಕು. ಅವನನ್ನು ಮೆಚ್ಚಿಸಲು ನೆನಿಸಬೇಕು. ಎಣಿಸಬೇಕು. ತೊಳಲಬೇಕು ಬಳಲಬೇಕು. ಬೇಕಾದ ತ್ಯಾಗವನ್ನು ಮಾಡಬೇಕು. ಯೋಗದಲ್ಲಿ ಮನವನ್ನು ನಿಲಿಸಬೇಕು. 'ಇದೆಲ್ಲ ಯೋಗಿ ಜೋಗಿಗಳ ಮಾತು, ಪ್ರಾಪಂಚಿಕರ ಮಾತಲ್ಲ; ಹೊಟ್ಟೆ ಹೊರಕೊಳ್ಳಲು ಸಾವಿರಾರು ಉದ್ಯೋಗಗಳನ್ನು ಮಾಡಬೇಕಾಗುತ್ತದೆ; ಇದಕ್ಕೇನೆನ್ನುವಿರೆಂದು ಕೇಳಬಹುದು. ಇನ್ನೂ ಜಡದೃಷ್ಟಿಯು ಅಳಿದಿಲ್ಲವೆಂದೇ ನಮ್ಮ ಉತ್ತರವು. ಮನುಷ್ಯನಲ್ಲಿಯೇ ನಿಮ್ಮ ನಂಬಿಗೆಯು ಹೊರತು ದೇವರಲ್ಲಿ ನಿಮ್ಮ ನಂಬಿಗೆ ಇಲ್ಲ. ದೇವರಲ್ಲಿ ನಿಮ್ಮ ನಂಬಿಗೆ ಇದ್ದರೆ, 'ನಹಿ ಕಲ್ಯಾಣಕೃತ್ ಕಶ್ಚಿತ್ ದುರ್ಗತಿಂ ತಾತಗಚ್ಛತಿ' ಎಂಬ ಭಗವಂತನ ನುಡಿಯ ಮೇಲೆ ನಿಮ್ಮ ವಿಶ್ವಾಸವಿರುತ್ತಲಿದ್ದಿತು. 'ನಿತ್ಯಾಭಿಯುಕ್ತಾನಾಂ ಯೋಗಕ್ಷೇಮಂ ವಹಾಮ್ಯಹಂ' ಎಂದು ಅವನು ಸಾರಿ ಸಾರಿ ಹೇಳಿದ್ದಾನೆ. ಇನ್ನು ಮೇಲಾದರೂ ನಿಮ್ಮ ಸಂಶಯ ವೃತ್ತಿಯನ್ನು ಬಿಸುಟಿ, ದ್ರವ್ಯ ಸಂಗ್ರಹ ತತ್ಪರರೂ, ಉದರಂಭರಿಗಳೂ, ಹೊಟ್ಟೆಗಾಗಿ ಕಾಷಾಯಾಂಬರ ಬಿಸು ಕೃತ ವೇಷರೂ ಆಗದೆ, ಬ್ರಹ್ಮ ಮಾರ್ಗವನ್ನು ತುಳಿಯಿರಿ. ಮೊದಲಿನ ಋಷಿಗಳ ಮೇಲ್ಪಂಕ್ತಿಯನ್ನು ಅನುಸರಿಸಿರಿ ಧ್ರುವನ ಸತ್ವವನ್ನೂ ನಿಷ್ಠೆಯನ್ನೂ, ನೆನೆಯಿರಿ. ವಿದ್ಯಾಕ್ಷರ ತ್ಯಾಗ ಬುದ್ಧಿಯನ್ನು ನೋಡಿರಿ. ರಂತಿದೇವನ ಪವಿತ್ರವಾದ ಆಚರಣೆಯನ್ನು ಎಣಿಸಿರಿ. ನಿಮ್ಮ ಊರಿಗೆ ದಯಪಾಲಿಸಿದ ಶ್ರೀಗಳವರ ವೃತ್ತಿಯನ್ನು ಸ್ಮರಿಸಿರಿ. ನಿಮ್ಮ ಸಂಸ್ಕೃತಿಗೂ, ನಿಮ್ಮ ಉಚ್ಚಕುಲಕ್ಕೂ, ಅನುರೂಪವಾದ ಆಚರಣವನ್ನು ಇಡಿರಿ. ನಿಮ್ಮ ಪಾಪದ ನೆರಗು ಸ್ವರ್ಗಲೋಕಕ್ಕೂ ಕೂಡ ಸೋಂಕಿದೆ. ನೀವು ಒಳಗಿನ ಕಲ್ಮಷವನ್ನು ಹೊರದೂಡಿ ಮಡಿಮುಕರಾಗಿರಿ. ದಾಸ್ಯಕ್ಕೆ ಮಿಕ್ಕ ಜೇಡಿ; ನಿಮ್ಮ ಪ್ರೇಮವು ಎಲ್ಲ ಜಾತಿಯವರನ್ನು ಬೆಳಗಲಿ; ತಿಂಗಳನ ಎಳೆಬೆಳಕಿನಂತೆ, ಬಡ ಎಲ್ಲರಲ್ಲಿಯೂ ಆನಂದ ರಸವನ್ನು ಸೂಸಲಿ. ಒಣಗಿದ ಪೈರಿಗೆ ಮಳೆಯು ಜೀವಕಳೆಯನ್ನು ತುಂಬುವಂತೆ, ನಿಮ್ಮ ಕಾರುಣ್ಯವು ಎಲ್ಲರನ್ನು ಜೀವವುಳ್ಳವರನ್ನಾಗಿ ಮಾಡಲಿ. ಎಲ್ಲ ದಾನಗಳಲ್ಲಿ ಶ್ರೇಷ್ಠವಾದ ಜ್ಞಾನ ದಾನವನ್ನು ಮಾಡಲುಸಿದ್ಧರಾಗಿರಿ. ಫಲಾಭಿಸಂಧಿಯಿಲ್ಲದೆ ಕಾರ್ಯಗಳಲ್ಲಿ ಆಸಕ್ತರಾಗಿರಿ. ಮೊದಲಿನವರಂತೆ ಜನ ಸೇವೆಯನ್ನು ಮನಮುಟ್ಟಿ ಮಾಡಿರಿ. ಬ್ರಾಹ್ಮಣರು ಸಿರಿಯನ್ನು ಎಂದೂ ಬಯಸಿಲ್ಲ. ಚಾಣಕ್ಯನು ದೊರೆಯ ಮಂತ್ರಿ ಯಾಗಿದ್ದರೂ ಕೂಡ, ತನ್ನ ಗುಡಿಸಲಿನಲ್ಲಿಯೇ ಇರುತ್ತಿದ್ದನು. ಅವನ ಅತುಲವಾದ ಸಂಪತ್ತೆಂದರೆ ಇಂಗಳಕಾಯಿ ಎಣ್ಣೆ, ದರ್ಭೆಗಳು, ಚಾಪೆ, ಕೃಷ್ಣಾಜಿನ, ಪುಸ್ತಕ ಬೂದಿ. ಇದರಂತೆಯೇ ನಿಮ್ಮ ಬಾಳುವೆಯಾಗಲಿ, ಅಂದರೆ ನೀವು ಸ್ವಾಭಿಮಾನಿಪುರುಷರಾಗುವಿರಿ, ಜಗದ್ವಂದ್ಯರಾಗುವಿರಿ, ಲೋಕ ಪಾವನರಾಗುವಿರಿ ಇಲ್ಲದಿದ್ದರೆ,—

(೧ ನೇ ಪುಟದಿಂದ ಬಂದುದು)

ಅದ್ವೈತದ ಮಬ್ಬಿನಲ್ಲಿ ಸಂಸಾರವು ತುಚ್ಛವೆಂದು ವೈರಾಗ್ಯಶಾಲಿಗಳಾದವರ ತಲೆಯಲ್ಲಿ ಬೆಳಕು ಕೆಡವಿತು. ಶ್ರೀಮಚ್ಛಂಕರಾಚಾರ್ಯರ ಜಗನ್ಮಿಥ್ಯಾವಾದದ ಅಪಾರ್ಥವು ಜನರಲ್ಲಿ ಮನೆಮಾಡಿ ಅವರು ಈ ಜಗತ್ತಿನ ವ್ಯವಹಾರಗಳ ಕಡೆಗೆ ಬೆನ್ನು ತಿರುವಿದ್ದರು. ಆದರೆ ಅವರಿಗೆ ಅತ್ತ ಪರಮಾರ್ಥ ದರ್ಶನವೇನು ಆಗಲಿಲ್ಲ! ಮನೆಗೆದ್ದು ಮಾರುಗೆದೆಯು ಜೇಕೆಂಬ ವಿವೇಕವನ್ನು ಮರೆತ ಜನರಿಗೆ ಶ್ರೀ ಮಧ್ವಮತವು ಒಳ್ಳೇ ಹಾದಿಗೆ ಹಚ್ಚಿತು. ಈ ಸೃಷ್ಟಿಯು ದೃಶ್ಯರೂಪವು ಒಂದೇಸವನೆ ಬದಲಾಗುತ್ತಿದ್ದರೂ ಸಂಸಾರವೂ ಸತ್ಯವಾಗಿದೆ. "ನಾಹಂಕರ್ತಾ, ಹರಿಃಕರ್ತಾ ತತ್ಪೂಜಾ ಕರ್ಮಚಾಖಿಲಂ" ಎಂದು ಎಲ್ಲವನ್ನು ಶ್ರೀಹರಿಗರ್ಪಿಸಿ ಈ ಲೋಕದ ಕರ್ಮಗಳನ್ನು ಮಾಡುತ್ತಿರಬೇಕೆಂಬ ಅತ್ಯಂತ ಶ್ರೇಷ್ಠವಾದ ತತ್ವವನ್ನು ಮಧ್ವಮತವು ಜನರಿಗೆ ಬೋಧಿಸಿತು. 'ಜಗನ್ಮಿಥ್ಯಾ,' 'ಸಂಸಾರಸುಳ್ಳು' ಎಂಬ ಜೊಳ್ಳುಮಾತುಗಳನ್ನಾಡಿ, ಬಾಯಬ್ರಹ್ಮರಾದ ಜನರು ಸಾಮಾನ್ಯ ಜನರ ಕೈಗನ್ನಡಿಯಾದಕಾರಣ ನಮ್ಮ ನಾಡಿನಲ್ಲಿ ಸ್ವಾಭಿಮಾನ, ಸ್ವಕುಲಾಭಿಮಾನ, ಸ್ವದೇಶಾಭಿಮಾನಗಳು ಇಲ್ಲದಂತಾದವು. ಈ ಲೋಕದ ವ್ಯವಹಾರಗಳಕಡೆಗೆ ದುರ್ಲಕ್ಷ್ಯವಾದುದರಿಂದ ಹಲವೆಡೆಗಳಲ್ಲಿ ಆಚಾರ ಶೈಥಿಲ್ಯವೂ ಉಂಟಾಯಿತು. ಶ್ರೀ ಮಧ್ವಮತವು ಈ ದೋಷಗಳಿಗೆ ಆಸ್ಪದ ಕೊಡದೆ, ತಾರತಮ್ಯದಿಂದ ಎಲ್ಲ ಮಾತುಗಳಿಗೂ ಮಹತ್ವಕೊಡಲು ಕಲಿಸಿತು. ಮೊದಲು ಒಂದು ಮೆಟ್ಟಿಲನ್ನು ಏರಿದರೆ ಇಡೀ ಹಾದಿಯು ಒಂದು ಇಷ್ಟು ಅಂಶ ಕೆಲಸವಾಯಿತು. ಕಾರಣ ಮೊದಲು ಮೆಟ್ಟಿಲು ಏರುವದನ್ನು ಬಿಡಲಾಗದು. ನಡುವಿನ ಮೆಟ್ಟಿಲ ಬಿಟ್ಟು ಒಮ್ಮೆಲೆ ಕೊನೆಗೆ ಕಾಲಿರಿಸಿದರೆ ಮೋಕ್ಷಸಿಗದೆ ಕೈತಪ್ಪುವದೆಂದು ಸ್ಪಷ್ಟವಾಗಿ ಬೋಧಿಸಿತು ಶ್ರೀ ಮಧ್ವಮತವು ಪ್ರತಿಯೊಂದು ಕೆಲಸದಲ್ಲಿ ತದಂತರ್ಗತ ಶ್ರೀ ಹರಿಪೂಜೆಯೇ ಹೇಗೆ ಆಗುತ್ತದೆಂಬುದನ್ನು ಸುಂದರವಾಗಿ ತಿಳಿಸಿದ್ದರಿಂದ ಈ ಸಂಸಾರವಲ್ಲೆಲ್ಲ ಪಾಪವನ್ನೇ ನೋಡಿ ಹೇಸಿಕೆಯಿಂದ, ಹಗಲೆಲ್ಲ ಮೋರೆ ಕೆಡಿಸುವ ಮೂರ್ಖತನವನ್ನು ಬಿಟ್ಟು, ಜನರು ಎಲ್ಲೆಲ್ಲಿಯೂ ಶ್ರೀಹರಿಯನ್ನು ಕಂಡು ಆತನ ಸೇವೆಯೆಂದು ಸಂಸಾರವನ್ನು ಸಾಗಿಸಹತ್ತಿದರು. ಹೀಗೆ ಒಳಗೆ ಶ್ರೀಹರಿಯನ್ನು ಕಾಣುತ್ತ, ಹೊರಗೆ ಸಂಸಾರವನ್ನು ಆತನಿಗಾಗಿ "ಮಾಡಿಮಾಡಿಸುವ" ಶ್ರೀಹರಿಪ್ರೇರಣೆಯಿಂದ ಸಾಗಿಸಿದರೆ, ಯಾವನಾದು ನಲವಿನ ಬೀಡು ಆಗದಿದ್ದೀತು. ಹೀಗೆ ಮಧ್ವಮತವು ಭೂಲೋಕಕ್ಕೆ ವೈಕುಂಠವನ್ನು ತರುವ ಮಹಾಕಾರ್ಯಕ್ಕಾಗಿ ಹುಟ್ಟಿತು.

'ಎಲ್ಲವೂ ಸಮ,' 'ಎಲ್ಲ ಒಂದು' ಎಂಬ ಮಹಾಮಂತ್ರದ ಮರ್ಮವರಿಯದ ಜನರು ತಮ್ಮ ಸ್ವತ್ವದ ರಕ್ಷಣೆಗೆ ಆವಶ್ಯಕವಾದ ಸಾತ್ವಿಕ ಸಿಟ್ಟು, ಸಾತ್ವಿಕ ಅಭಿಮಾನಗಳನ್ನು ಕಳಕೊಂಡರು. ಕೈಯೊಳಗಿನದೂ ಹೋಯಿತು. ಕನ್ನಡಿಯೊಳಗಿನ ಗಂಟೂ ಕಾಣದಾಯಿತು. ಹೀಗೆ ಇಹಪರಗಳೆರಡನ್ನೂ ಕಳಕೊಂಡು, ಪೇಚಾಡುವಾಗ ಮಧ್ವಮತವು ಜನರಿಗೆ ಯುಕ್ತವಾದ ವೀರವೃತ್ತಿಯನ್ನು ತಾಳಲಿಕ್ಕೆ ಕಲಿಸಿತು, ಅಸುರ ಮರ್ದನ ಶ್ರೀಹರಿಯೂ, ಬ್ರಹ್ಮತೇಜೋ ಬಲದ ಪ್ರತ್ಯಕ್ಷ ಮೂರ್ತಿಯಾದ ಮಾರುತಿರಾಯನೂ ಆರಾಧ್ಯದೇವತೆಗಳಾದರು. 'ಊರೇನು ಕಾಡೇನು,' 'ಮನೆಯೇನು ಮಠವೇನು,' 'ಸ್ವಕೀಯರೇನು ಪರಕೀಯರೇನು,' 'ಯಾರು ಆಳಿದರೇನು ಯಾರು ಅಳಿದರೇನು' ಎಂಬೀ ತರದ ಆಶ್ಚರ್ಯಕಾರಕವಾದ ಹೇಡಿತರದ ಉದ್ಗಾರಗಳು ಬಾಯಬ್ರಹ್ಮರ ಬಾಯೊಳಗಿಂದ ಉಚ್ಚಪಂಕಿ ಮಧ್ವಮತವು ಮದ್ದು ಮಾಡಿತು. ಮಧ್ವಮತವು ತ್ಯಾಗಭೋಗಗಳ ಮಧುರ ಸಮನ್ವಯ ಮಾಡಿ ನಮ್ಮನಾಡಿಗೆ ಜೀವದಾನ ಕೊಟ್ಟಿತು.

ವೈರಿಭಯದನ್ನು ಕಂಡು ಹೆದರಿ ಹಿಕ್ಕೇ ಹಾಕುವ ಹೇಡಿಗಳಿಗೂ 'ಸೋಽಹಂ' ಎಂಬುವುದು ಸುಲಭವಾಗಿತ್ತು. ಅಲ್ಲದೆ ವೇದಾಂತದ ಸೋಗು ಹಾಕಿದ ಬಳಿಕ ಮಾಯಾವಾದದ ಶಬ್ದಜಾಲದಲ್ಲಿ ಚಳಕದಿಂದ ತನ್ನ ವೈರಾಗ್ಯತನವನ್ನು, ಹೇಡಿತನವನ್ನು ಬಚ್ಚಿಡುವದಕ್ಕೆ ಆಸ್ಪದ ವಾಗಿತ್ತು. ಹಾಗೂ ಮತ್ತೆ ಕೆಲವರಿಗೆ ಸೋಽಹಂ ಎಂದು ನಿರೀಶ್ವರವಾದಿಗಳಾಗಿ ಸ್ವೇಚ್ಛಾಚಾರಗಳನ್ನು ನಡಿಸಲು ಅನುವಾಗಿತ್ತು. ಆದರೆ ಶ್ರೀ ಮಧ್ವಮುನಿರಾಯನ ದ್ವೈತಸಿದ್ಧಾಂತದ ಘನಗುಡುಗು ಕೇಳಿ ಇಂಥವರಸದ್ದು ಅಡಗದಿದ್ದರೂ ನಡುಗು ಹುಟ್ಟಿತು! ಸೋಽಹಂ ಮಂತ್ರವು ಸಿಕ್ಕಸಿಕ್ಕವರ ತುತ್ತಲ್ಲ; ಎಲ್ಲರಿಗೂ ದಕ್ಕುವ ಮಾತಲ್ಲ. 'ತಾವು ಅದ್ಕಲು ಅರ್ಹರಾದೆವೇ' ಎಂದು ಬಹುಜನರಿಗೆ ಆ ಹಾದಿಯನ್ನು ತುಳಿಯುವಾಗ ಬಲವಾದ ವಿಚಾರಕ್ಕೆ ಹಚ್ಚಿತು. ವಿಮರ್ಶೆಗೆ ಆತ್ಮನಿರೀಕ್ಷಣೆಗೆ ಈಡು ಮಾಡಿತು. ಶ್ರೀಹರಿಯ ಕೃಪೆಯಾಗದೇ ಏನೊಂದೂ ಆಗದೆಂಬ ಉತ್ತಮ ತತ್ವವು ಜನರಲ್ಲಿ ನೆಲೆಗೊಂಡು ಭಕ್ತಿಮಾರ್ಗಕ್ಕೆ ಬಲ ಬಂದಿತು.

ಕನ್ನಡದಲ್ಲಿ ಶ್ರೀ ಪುರಂದರ ದಾಸರು ಮೊದಲಾದವರ ದಾಸಕೂಟವು ಹುಟ್ಟಲಿಕ್ಕೆ ಶ್ರೀ ಮಧ್ವಮತವೇ ಕಾರಣವು. ದಾಸಕೂಟದ ಉಪಕಾರಗಳು ಸಂಗೀತಶಾಸ್ತ್ರ, ವಾಙ್ಮಯ. ಸಾಮಾನ್ಯ ಜನರ ನಡವಳಿಕೆಗಳಮೇಲೆ ಎಷ್ಟಾಗಿವೆಯೆಂದು ಹೇಳಬೇಕಾದುದಿಲ್ಲ.

ಇಂತು ಮಧ್ವಮತವು ಜನಜೀವನಕ್ಕೆ ಹೊಸ ಚೈತನ್ಯವನ್ನುಂಟುಮಾಡಲಿಕ್ಕೆ ಹೊಸ ಹೊಳಪು ಕೊಡಲಿಕ್ಕೆ, ಸಂಸಾರದಲ್ಲಿ ಶ್ರೀಹರಿಯ ಸೇವೆಯು ಸ್ವರ್ಗಸುಖವುಂಟೆಂದು ತೋರಿಸಲಿಕ್ಕೆ, ಭೂವೈಕುಂಠವನ್ನು ಮಾಡಲಿಕ್ಕೆ ಕರ್ನಾಟಕ ಮಾತೆಯ ಸುಪುತ್ರನಿಂದ ಪ್ರಸ್ಥಾಪಿಸಲ್ಪಟ್ಟಿತು. ಇಂಥ ಮಹಾತ್ಮನನ್ನು ಹೆತ್ತ ತಾಯ ಮಹಾತ್ಮ್ಯವನ್ನು ಎಷ್ಟೆಂದು ಹೇಳಬೇಕು!

ಶ್ರೀಮಧ್ವಮತದ ಈ ಉದಾತ್ತ ಸಂದೇಶವು ಎಷ್ಟೋ ಕಿವುಡರಿಗೆ ಇನ್ನೂ ಕೇಳಿಸಿಲ್ಲ. ಇದಕ್ಕೆ ಕೆಲವು ಕಾರಣಗಳೂ ಉಂಟು. ಮೊಟ್ಟ ಮೊದಲು ಹೇಳಿದಂತೆ ಹುಟ್ಟುಗೆಗಂಟಿಕೊಂಡಿರುವ ಹುಳುವು ಮಧ್ವಮತಕ್ಕೂ ಬಿಡಲಿಲ್ಲ. ಇದರ ಅನುಯಾಯಿಗಳಲ್ಲಿಯೂ ಎಷ್ಟೋ ಜನರು ಮಧ್ವಮತದ ರಹಸ್ಯವನ್ನು ತೊರೆದು, ಬಾಹ್ಯಡಾಂಭಾಚಾರಿಗಳಾದರು. ತಟ್ಟೆತಟ್ಟೆಗಳ ತಾಕಲಾಟ, ಮಡಿಮಡಿಯೆಂಬ ಹಾರಾಟ, ಪರಧರ್ಮ ದೂಷಣಾದಿ ಅನಾಚಾರಗಳ ಸೊಲ್ಲು ಕೇಳಿ ಗಡಚಿಕ್ಕಿದ ಜನರಿಗೆ ಶ್ರೀಮಧ್ವಮುನಿರಾಯರ ಉದಾತ್ತ ಸಂದೇಶದ ರಹಸ್ಯವೂ ಕೇಳಬರವಾಗಿದೆ! ಶಾಂಕರಾದ್ವೈತದೊಳಗಿನ ಮಾಯಾ ವಾದದ ಖಂಡನ ಮಾಡುವಾಗ ಎಷ್ಟೋ ದಾಸರೇ ಜಗನ್ಮಿಥ್ಯಾ ವಾದಿಗಳಂತೆ ಹಾಡಿದ್ದು ಕೇಳಬರುತ್ತದೆ! "ಎರಡು ದಿನದ ಬಾಳು ಸಂಸಾರ"ವೆಂಬ ಅಪಸ್ವರದ ಹಲವು ಹಾಡುಗಳನ್ನು ದಾಸರ ಪದಗಳಲ್ಲಿ ಕಾಣಬಹುದು!

ಸತ್ಯದ ಗುತ್ತಿಗೆಯನ್ನು ದೇವರು ಒಬ್ಬರಿಗೇ ಕೊಟ್ಟಿಲ್ಲ. ಧರ್ಮಸ್ಥಾಪಕರು ಸತ್ಯ. ನಿತ್ಯ ತ್ರಿಕಾಲಾಬಾಧಿತ ತತ್ವಗಳನು ಕಾಲಧರ್ಮಕ್ಕನುಸರಿಸಿ, ರೂಪಿಸಿ ನಿರೋಪಿಸುತ್ತಾರೆ. ಕಾಲವು ಬದಲುತ್ತವೆ. ಅದರ ಮೇಲೆ ಕಟ್ಟಿದ ಧರ್ಮದ ಕಟ್ಟಡದಲ್ಲಿಯೂ ತಕ್ಕ ಮಾರ್ಪಾಟುಗಳನ್ನು ಮಾಡಬೇಕಾಗುತ್ತದೆ. ಹಾಗೆ ಮಾಡದಿದ್ದರೆ ಆ ಕಟ್ಟಡವು ಜನದ ಎದುರಿಗೆ ಅನುಪಯುಕ್ತವಾಗಿ ಸ್ವಲ್ಪ ಕಾಲದಲ್ಲಿಯೇ ಬರಿದಾಗದೇ ಇರದು. ಇದರ ಮನವರಿಕೆಗಾಗಿ ಬೌದ್ಧ ಧರ್ಮವನ್ನು ತಕ್ಕೊಳ್ಳ ಬಹುದು. ಆತ್ಮನು ಅಮರ ನಾದರೂ ಅವನು ತನಗೆ ಬೇಕಾಗಿರುವಂಥ ದೇಹವನ್ನು ಕಾಲಕಾಲಕ್ಕೆ ಧರಿ

ಸುತ್ತಿರುತ್ತಾನೆ. ಇದ್ದ ದೇಹದಲ್ಲಿಯೇ ಮಾರ್ಪಾಟುಗಳನ್ನು ಮಾಡಿಕೊಳ್ಳುತ್ತಿರುತ್ತಾನೆ. ಒಂದು ವಯಸ್ಸಿಗಾಗಿ ಹೊಲಿಸಿದ ಅಂಗಿಯು ಕೊನೆಯವರೆಗೂ ಬಾರದು. ಇದನ್ನರಿಯದೆ ಧರ್ಮದ ಹುಚ್ಚು ಕಲ್ಪನೆಗಳಿಂದ ತಕ್ಕ ತಿದ್ದುಪಾಟುಗಳಿಗೆ ತಡೆಹಾಕುವ ಅಥವಾ ಎದುರು ಬಂದು ಕೂಗುವ ಹುಂಬತನವನ್ನು ಕೆಲವರು ಮಾಡುತ್ತಾರೆ. ಇದರಿಂದ ಅವರು ಧರ್ಮ ನಾಶವನ್ನೂ, ದೇಶಘಾತವನ್ನೂ ಮಾಡುತ್ತಾರೆಂಬದನ್ನು ಮರೆಯಲಾಗದು. ಧರ್ಮವು ನಿತ್ಯವೂ ಶಾಶ್ವತವೂ ಹೌದು; ಆದರೆ ಧರ್ಮದ ದೇಹವಾದ ಬಾಹ್ಯಾಚರಣಗಳಲ್ಲಿ ಧರ್ಮದ ಮರ್ಮಕ್ಕೆ ಬಾಧೆ ಬರದಂತೆ ಆಗಾಗ್ಗೆ ತಿದ್ದುಪಡೆಯನ್ನು ಮಾಡುವುದರಲ್ಲೇ ಜಾಣತನವಿದೆ. ಆತ್ಮೋದ್ಧಾರವಿದೆ. ಧರ್ಮೋದ್ಧಾರವಿದೆ. ಲೋಕೋದ್ಧಾರವಿದೆ.

ಶ್ರೀಗಳ ಆಗಮನ.

ಅತ್ಯಂತ ಉತ್ಸಾಹದಿಂದ ಮೆರವಣಿಗೆ.

೧೦ ಸಾವಿರ ಜನರ ಆಗಮನ.

ಅಷ್ಟಮಿಯ ದಿನ ಸಾಯಂಕಾಲದ ೫॥ ಘಂಟೆಯ ಸುಮಾರಕ್ಕೆ ಶ್ರೀಗಳವರು ಶಿರೂರ ಅಗಸಿಯ ವೆಂಕಟೇಶ ದೇವಾಲಯಕ್ಕೆ ಬಂದು ತಲ್ಪಿದರು. ಅವರ ಸ್ವಾಗತಕ್ಕಾಗಿ ಮೊದಲೇ ಅಲ್ಲಿ ಕಲೆತ ಸದ್ಗೃಹಸ್ಥರೆಲ್ಲ ಶ್ರೀಗಳವರ ದರ್ಶನ ತೆಗೆದುಕೊಂಡ ಕೂಡಲೇ ಮೆರವಣಿಗೆಯು ಹೊರಟಿತು. ಆನೆಯ ಮೇಲೆ ಶೃಂಗರಿಸಿದ ಅಂಬಾರಿಯಲ್ಲಿ ಕುಳಿತು, ತೋರಣ ಧ್ವಜಗಳಿಂದ ಅಲಂಕೃತವಾದ ಬೀದಿ ಬೀದಿಗಳಲ್ಲಿ ಶ್ರೀಗಳು ಸಾಗಿರಲು, ಮನೆ ಮನೆಗಳಲ್ಲಿ ಕೋಮಲೆಯರು ಆರತಿ ಅಕ್ಷತೆಗಳಿಂದ ಸತ್ಕರಿಸಿದರು. ಬೀದಿಯ ಎರಡೂ ಮಗ್ಗಲುಗಳಲ್ಲಿ ಜನರ ಸಂದಣಿಯು ಅತ್ಯಂತವಾಗಿದ್ದಿತು. ೫—೬ ಸಾವಿರ ಜನರು ಮೆರವಣಿಗೆಯನ್ನು ಹಿಂಬಾಲಿಸಿ ನಡೆದಿದ್ದರು. ಶ್ರೀಗಳವರು ಪೇಟೆಯೊಳಗಿಂದ ಹಾಯ್ದು ಸತ್ಯಬೋಧ ಸ್ವಾಮಿಯವರ ಮಠಕ್ಕೆ ಬಂದು ಹಿರಿಯರ ದರ್ಶನ ತೆಗೆದುಕೊಂಡು, ಘಟಪ್ರಭಾನದೀ ದಂಡೆಯಲ್ಲಿ ಕಿಲ್ಲೆಯ ಕೊನೆಯ ಭಾಗಕ್ಕೆ ಬಹು ಅಂದವಾಗಿ ಏರ್ಪಡಿಸಲ್ಪಟ್ಟ ಉತ್ಸವ ಮಂಟಪಕ್ಕೆ ತಲ್ಪಿದರು. ಆನೆ ಅಂಬಾರಿಗಳ ಆಭರಣ ವಸ್ತ್ರಗಳನ್ನು ಈ ಕಾಲಕ್ಕೆ ಹೊರಗೆ ತೆಗೆಯದೇ ಒಳಗೇ ಏಕೆ ಮುಚ್ಚಿಟ್ಟಿದ್ದರೋ ತಿಳಿಯದು. ಇದನ್ನೆಲ್ಲ ಇಂತಹ ಉತ್ಸವ ಸಮಯದಲ್ಲಿ ಉಪಯೋಗಿಸದಿದ್ದರೆ, ಅವುಗಳನ್ನೇನು ಮಾಡುಬೇಕು? ಸಂಸ್ಥಾನದ ದಿವಾಣರು ಸರ್ವಾಧಿಕಾರಿಗಳೂ, ಮೊದಲೇ ಬಂದಿದ್ದರೂ ಈ ಅವ್ಯವಸ್ಥೆಯೇ ಕಾಯಿತು ?

ಉತ್ಸವ ಮಂಟಪವು ಅತ್ಯಂತ ವಿಶಾಲವಾಗಿದ್ದು, ೧೨ ಸಾವಿರ ಜನರು ಏಕಕಾಲಕ್ಕೆ ಭೋಜನಕ್ಕೆ ಕೂಡುವಂತಿದೆ. ಮಂಟಪದ ಪ್ರವೇಶ ದ್ವಾರದಲ್ಲಿ ಅಂಗಡಿಗಳಿವೆ. ಒಳಗೆ ಚಿಕ್ಕಾದ ಚೊಕ್ಕದ ಕಾರಂಜಿಯು ಹೂವಿನ ಗಿಡಗಳ ಮಧ್ಯದಲ್ಲಿ ಬಹು ರಮಣೀಯವಾಗಿದೆ. ಈ ಕಾರಂಜಿಯ ಸುತ್ತಲೂ ಸ್ವಲ್ಪ ಬಯಲು ಬಿಟ್ಟು, ವರ್ತುಲಾಕಾರದಲ್ಲಿ ಜನರಿಗೆ ವಿಶ್ರಮಿಸಲು ಬಾಕುಗಳನ್ನು ಹಾಕಿದ್ದಾರೆ. ಮುಖದ್ವಾರವು ಚನ್ನಾಗಿ ಶೃಂಗರಿಸಲ್ಪಟ್ಟಿದೆ. ಒಳಗೆ, ರಾಮಚಾವಡಿ, ಸೀತಾಚಾವಡಿ, ವೇದವ್ಯಾಸಚಾವಡಿ, ಎಂಬದಾಗಿ ಅನೇಕ ಭಾಗಗಳನ್ನು ಮಾಡಿರುವರು. ಶ್ರೀನಾರಾಯಣ ದೇವರ ಗುಡಿಯ ಮುಂದೆ ಒಂದನ್ನು ರಾಮ ದೇವರ ಪೂಜೆಗಾಗಿಯೂ, ಇನ್ನೊಂದನ್ನು ಚಿಕ್ಕ ನೈವೇದ್ಯಕ್ಕಾಗಿಯೂ ಉಪಯೋಗವಾಗಲು ಬರುವಂತೆ ದೊಡ್ಡ ಕಟ್ಟೆಗಳನ್ನು ಸಿದ್ಧಪಡಿಸಿದ್ದಾರೆ.

ಈ ಪೂರ್ವ ಸಿದ್ಧತೆಯನ್ನು ಇಲ್ಲಿಯ ಭಕ್ತರು ತಮ್ಮ ತಮ್ಮಲ್ಲಿ ಹಂಚಿಕೊಂಡು ಅಚ್ಚುಕಟ್ಟುತನದಿಂದ ಎಲ್ಲ ಕಾರ್ಯವನ್ನು ನೆರವೇರಿಸಿದ್ದಾರೆ. ಶ್ರೀಧಾರವಾಡ ಯಲಗುರ್ದ ರಾಯರು, ಮಂಗಳವೇಢೆ ಕೃಷ್ಣರಾಯರು, ಸವಣೂರ ತಮ್ಮಣ್ಣ ನಾಯಕರು, ಸೊಲ್ಲಾಪುರ್ ರಾಮಣ್ಣನಾಯಕರು, ಇವರೇ ಮೊದಲಾದ ಸದ್ಗೃಹಸ್ಥರು ಎಲ್ಲಭಾರವನ್ನು ಸಂತೋಷದಿಂದ ಹೊತ್ತಿದ್ದಾರೆ. ಶ್ರೀ ಜೋರಾಪೂರ ಕೃಷ್ಣರಾಯರಂತೂ ಅವರ ಸಹಾಯಕರಾದ ಶ್ರೀ ನೀರಲಕೇರಿ ಶ್ರೀನಿವಾಸರಾಯರು ಮೊದಲಾದ ಸ್ವಯಂ ಸೇವಕರೊಂದಿಗೆ ಹಗಲಿರಳು ಒಂದೇ ಸಮನಾಗಿ ಅತ್ಯಂತ ಕಳಕಳಿಯಿಂದ ಶ್ರೀರಾಮ, ವೇದವ್ಯಾಸರುಗಳ ಸೇವೆಮಾಡ ತೊಡಗಿದ್ದಾರೆ. ನದಿಯಿಂದ ಇಂಜಿನ ಹಚ್ಚಿ ನೀರನ್ನು ಮಂಟಪಕ್ಕೆ ತಂದಿರುವರು. ಇಲ್ಲಿ ನಲ್ಲಿಗಳು ಹಚ್ಚಲ್ಪಟ್ಟಿವೆ. ಭೋಜನಕ್ಕೆ ಬಡಿಸುವದಕ್ಕಾಗಿ ಸ್ವಯಂ ಸೇವಕರನ್ನು ಒಳ್ಳೇ ಶಿಸ್ತಿನಿಂದ ಏರ್ಪಡಿಸಿದ್ದಾರೆ. ಆದರೆ ಇಷ್ಟೆಲ್ಲ ಯೋಗ್ಯವಾದ ವ್ಯವಸ್ಥೆಯನ್ನು ಕೊನೆಯವರೆಗೆ ಚೊಕ್ಕಟವಾಗಿಡುವ ಭಾರವು ಮಠದ 'ದಿಂಡೇರು' ಶಿಷ್ಯರು, ಪ್ರತಿಷ್ಠೆಯಿಂದ ಓಡಾಡುವ ದೊಡ್ಡ ಗೃಹಸ್ಥರು ಇವರನ್ನೆಲ್ಲ ಕೂಡಿದೆ. ಇವರೆಲ್ಲ ತಮ್ಮ ಅಹಂಭಾವತೆಯನ್ನು ಬಿಟ್ಟು, ಸ್ವಯಂ ಸೇವಕರ ವಿನಂತಿಗೆ ಲಕ್ಷ್ಯಗೊಡುವದೆಂತಹ ಮಾತು !

ಸ್ಟೇಶನ್‌ದಲ್ಲಿ ಯೋಗ್ಯ ವ್ಯವಸ್ಥೆಯಿಲ್ಲದೆ ಜನರ ಸಂದಣಿಯನ್ನು ಲಕ್ಷದಲ್ಲಿ ತಂದು ಹೆಚ್ಚಾಗಿ ಟಿಕೀಟುಗಳನ್ನು ಹಚ್ಚುವ ಏರ್ಪಾಡಾಗಿದೆ. ಬಾಗಲಕೋಟೆಯ ಸ್ಟೇಶನ್ ಮಾಸ್ತರರು ಈ ಬಗ್ಗೆ ಒಳ್ಳೇ ದಕ್ಷರಾಗಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. 'ಕನ್ನಡಿಗನೂ' ಈ ವಿಷಯದಲ್ಲಿ ಎಚ್ಚರಿಕೊಟ್ಟಿದ್ದಾನೆ,

ವಿಜಾಪೂರಿನ ಬ್ರಾಹ್ಮಣರ ಸಭೆ.

ಈ ಜಿಲ್ಲಾ ಸಭೆಯು ವಿಜಾಪೂರದಲ್ಲಿ ತಾರೀಖು ೧೬ ನೇ ರವಿವಾರ ದಿನ ಮೊದಲೇ ಪ್ರಸಿದ್ಧವಾದಂತೆ ಸೇರಿದ್ದಿತು ಶ್ರೀ ದೇಸಾಯಿ ಪಾಂಡುರಂಗರಾಯರು ಅಧ್ಯಕ್ಷರಿದ್ದರು. ಈ ಜಿಲ್ಹೆಯ ಪ್ರತಿಯೊಂದು ತಾಲೂಕಿನಿಂದಲೂ ಪ್ರತಿನಿಧಿಗಳು ಬಂದಿದ್ದರು. ೫೦೦ ಜನರು ನೆರೆದಿದ್ದರೆಂದ ಮೇಲೆ ಈ ವಿಷಯವು ಎಲ್ಲರಿಗೂ ರುಚಿಸಿದ್ದು ತಾನೇ ವ್ಯಕ್ತವಾಗುವದು 'ಕನ್ನಡಿಗನ' ಸುದ್ದಿಗಾರನಾದ ನಾನು ಮೊದಲು ಒಂದು ವಿಷಯವನ್ನು ಇಲ್ಲಿ ಕಾಣಿಸಬೇಕಾಗಿದೆ. ವಿಜಾಪೂರವು ಕರ್ನಾಟಕದಲ್ಲಿರದೇ ಮಹಾರಾಷ್ಟ್ರದಲ್ಲಿದೆಂದಾಗಿಯಾದರೂ ಇಲ್ಲಿಯ ಹಲವು ಮಹನೀಯರಿಗೆ ತಿಳಿದದ್ದೇ ನಮ್ಮ ಪುಣ್ಯ ಯಾಕಂದರೆ ವಿಜಾಪೂರವು, ಅಂದಮಾನದಲ್ಲಿಯಾಗಲಿ, ನಿಕೋಬಾರದಲ್ಲಿಯಾಗಲೀ, ಇಲ್ಲವೆಂಬುದು ಇವರಿಗೆ ತಿಳಿದದೆ. ಅಂತೆಯೇ ಅಂದಮಾನ ನಿಕೋಬಾರಗಳಲ್ಲಿ ನಡೆಯುವ ಭಾಷೆಗಳಲ್ಲಿ ಇವರು ಮಾತನಾಡಲಿಲ್ಲ. ವಿಜಾಪೂರದಲ್ಲಿ ಹತ್ತುತ್ತು ವರ್ಷಗಳ ವರೆಗೆ ಇದ್ದರೂ ಕನ್ನಡದಲ್ಲಿ ಮಾತನಾಡುವಷ್ಟು ಶಕ್ತಿಯಿಲ್ಲೆಂಬ ಗೊಸ್ಸು ಸೊಗನ್ನು ಹಾಕುವ ಜನರು ಇಲ್ಲಿದ್ದರು. ವಕೀಲೀ ಫೀ, ಅಥವಾ ಡಾಕ್ಟರರ ಫೀ ದೊರೆತರೆ ಈ ಮಹನೀಯರಿಗೆ ಕನ್ನಡದಲ್ಲಿ ಮಾತನಾಡಲಿಕ್ಕೆ ಬರುತ್ತದೆ. ಕನ್ನಡಬೇಕಾಗಿದ್ದರೆ ಕನ್ನಡ ಭಾಷೆಯ ಜ್ಞಾನವು ಚನ್ನಾಗಿದೆಯೆಂದು ಸರ್ಟಿಫಿಕೇಟು ತೋರಿಸಲಿಕ್ಕೆ ಜಾಣತನವೂ ಬರುತ್ತದೆ. ಆದರೆ ಸಾರ್ವಜನಿಕ ಕಾರ್ಯಗಳಲ್ಲಿ ಅವರ್‍ಾಲಾಕಾನಡೀ ಯೇತನಾಹಿ, ಆಮ್ಹೀ ಮರಾಟೇತ ಬೊಲಣಾರ ಎಂಬ ಸೊಕ್ಕಿನ ಮತ್ತು ಹಟಮಾರಿತನದ ಮುಕ್ತಾ ಫಲಗಳು ಹೊರಸೋಸುತ್ತವೆ! ಈ ಮಹನೀಯರು ಇನ್ನೂ ತಮ್ಮ ಅಮಲಿನಲ್ಲಿಯೇ ಇದ್ದಾರೆ. ಇರಲಿ; ಇವರು ಎಷ್ಟುದಿನ ಹಾರಾಡುವರೋ ನೋಡುವ ಕೆಂಭಾವೀ ರಾಘವೇಂದ್ರ ರಾಯರೂ

ಸಹ ಮರಾಟೆಯ ಮೋಹಕ್ಕೆ ಬೀಳಬೇಕೆಂದವ ಕನ್ನಡಿಗರ ದುರ್ದೈವವೆಂದೇ ಅನ್ನಬೇಕಾಗುತ್ತದೆ.

ಶ್ರೀ ರಾಘವೇಂದ್ರರಾವ ಕಂಭಾವಿಯವರು ಬ್ರಾಹ್ಮಣ ಸಂಘ ಸ್ಥಾಪನೆಯ ಬಗ್ಗೆ ಮೊದಲು ನಿರ್ಣಯವನ್ನು ಸೂಚಿಸಿದರು.

ಈ ಸಂಘದ ಉದ್ದೇಶಗಳು ಕೆಳಗೆ ಬರೆದಂತೆ ಇರುತ್ತವೆ.

(೧) ಬ್ರಾಹ್ಮಣರು ಮುಖ್ಯವಾಗಿ ತರುಣರು ಸ್ವಾರ್ಥತ್ಯಾಗಪೂರ್ವಕವಾದ ಲೋಕಸೇವೆಗೆ ಸಿದ್ಧರಾಗಿರುವಂತೆ ಅವರ ಧಾರ್ಮಿಕ ನೈತಿಕ ಸಾಮಾಜಿಕ ಮಾನಸಿಕ ಮತ್ತು ಶಾರೀರಿಕ ಸ್ಥಿತಿಯನ್ನು ಸುಧಾರಿಸುವದಲ್ಲದೆ ಅವರು ಪ್ರಶಸ್ತವಾದ ಮಾರ್ಗದಿಂದ ಉಪಜೀವನವನ್ನು ಸಾಗಿಸುವದಕ್ಕೆ ಸಮರ್ಥರಾಗುವಂತೆ ಮಾಡತಕ್ಕದ್ದು.

ವಿಜಾಪೂರ ಜಿಲ್ಹೆಯಲ್ಲಿಯ ಬ್ರಾಹ್ಮಣರ ಸಮಾಜವನ್ನು ಸುಸಂಘಟಿತ ಮಾಡಿ ಅವರ ಧಾರ್ಮಿಕ, ನೈತಿಕ, ಸಾಮಾಜಿಕ, ಆರ್ಥಿಕ, ಶೈಕ್ಷಣಿಕ ಮತ್ತು ಶಾರೀರಿಕ ಉನ್ನತಿಯನ್ನು ಮಾಡುವ ಹಾಗೂ ಇತರ ಸಮಾಜಗಳ ಕೂಡ ಬ್ರಾಹ್ಮಣ ಸಮಾಜದ ಸ್ನೇಹ ಸಂವರ್ಧನೆಯನ್ನೂ ಸೌಹಾರ್ದ್ರವನ್ನೂ ಉಂಟುಮಾಡುವ ಉದ್ದೇಶದಿಂದ ವಿಜಾಪೂರ ಜಿಲ್ಹಾ ಬ್ರಾಹ್ಮಣ ಸಂಘವನ್ನು ಈ ಸಭೆಯು ಈ ಮೂಲಕ ಸ್ಥಾಪಿಸುತ್ತದೆ

ಈ ಸಂಘವನ್ನು ಸ್ಥಾಪಿಸುವ ಉದ್ದೇಶವು ಇತರ ಸಮಾಜಗಳಿಗೆ ಅಪಾಯ ಮಾಡುವದಕ್ಕೆ ಇರುವದಿಲ್ಲ ಇತರ ಸಮಾಜಗಳು ತಮ್ಮ ತಮ್ಮ ಸಂಘಗಳನ್ನು ಸ್ಥಾಪಿಸುತ್ತಿರುವಾಗ ಯಾವಾದರೂ ನಮ್ಮ ಸಮಾಜದ ಸಂಘವನ್ನು ಸ್ಥಾಪಿಸುವದು ಅವಶ್ಯವದೆ ನಮ್ಮ ಪೂರ್ವಜರ ಧ್ಯೇಯವೆಲ್ಲ ಅಳಿದು ಹೋಗಿ, ಅವರ ತೇಜವು ಈಗ ನಮ್ಮಲ್ಲಿ ಎಷ್ಟೋ ಉಳಿದಿರುವದಿಲ್ಲ ನಾವು ಸ್ವೀಕರಿಸಿದ ಶೂದ್ರ ವೃತ್ತಿಯೇ ಇದಕ್ಕೆ ಮುಖ್ಯ ಕಾರಣವೆಂದು ನನ್ನ ಮತ. ನಾವು ಇದೇ ರೀತಿಯಾಗಿ ಮುಂದೆ ಆಚರಿಸ ಹತ್ತಿದರೆ, ಬ್ರಾಹ್ಮಣ ವರ್ಗದ ಅಸ್ತಿತ್ವವು ಅಳಿದು ಹೋಗುವ ಸಂಭವವಿದೆ ಆದ್ದರಿಂದ ಈ ಸಭೆಯನ್ನು ಸ್ಥಾಪಿಸಿ, ನಮ್ಮಲ್ಲಿ ಧಾರ್ಮಿಕ ನೈತಿಕ ಉನ್ನತಿಯನ್ನು ಮಾಡಿಕೊಂಡು, ಹಿಂದಿನ ಋಷಿಗಳ ಸ್ವಾವಲಂಬನವನ್ನಾದರೂ ನಾವು ತಿರುಗಿ ಸಂಪಾದನೆಮಾಡಿಕೊಳ್ಳಬೇಕು ಈಗ ನಮ್ಮ ಆರ್ಥಿಕ ಸ್ಥಿತಿಯಾದರೂ ಕೆಟ್ಟಿರುವದು. ನಾವು ಚೈನಿಯಿಂದ ಇರಬೇಕೆಂಬ ನನ್ನ ಮತವಿಲ್ಲ ಆದರೆ ನಮ್ಮ ಜೀವನ ಕ್ರಮವನ್ನು ಸುರಳಿತವಾಗಿ ಸಾಗಿಸುವಷ್ಟು ನಮ್ಮಲ್ಲಿ ಶಕ್ತಿಯು ಬರುವಂತೆ ಮಾಡಿಕೊಳ್ಳಬೇಕು. ಅದರಂತೆ ನಮ್ಮ ಶಾರೀರಿಕ ಉನ್ನತಿಯನ್ನು ಮಾಡಿಕೊಳ್ಳಬೇಕು. ಶ್ರೀ ಶ್ರೀನಿವಾಸರಾವ ಕೌಜಲಗಿಯವರು ಉಪಸೂಚನೆಯನ್ನು ಮುಂದೆ ತಂದರು ಬ್ರಾಹ್ಮಣರ ಧ್ಯೇಯವು ಕೇವಲ ಸ್ವತಃ ಉನ್ನತಿಯ ವಿಚಾರವಿರದೆ ಇಡೀ ಮಾನವ ಜಾತಿಯ ಉನ್ನತಿಯೇ ಆಗಿರುವದರಿಂದ ಈಗ ಸೂಚಿಸಲ್ಪಟ್ಟ ಸಂಘವು ಕಾರಣವಿಲ್ಲ ಶಾಸ್ತ್ರದಲ್ಲಿ ವರ್ಣಿಸಿದಂತೆ ತಮ್ಮ ಆಚರಣೆಯನ್ನು ಇಟ್ಟುಕೊಂಡಂಥ ಬ್ರಾಹ್ಮಣರು ಈಗ್ಗೆ ಇರುವರೋ ಇಲ್ಲವೋ ಎಂಬ ಬಗ್ಗೆ ನನಗೆ ಸಂಶಯವಿರುವದು. ವೇದದಲ್ಲಿ ಹೇಳಿದಂತೆ ಬ್ರಾಹ್ಮಣರ ಕರ್ತವ್ಯವು "ಸರ್ವ ಭೂತ ಹಿತೇರತಃ" ಎಂಬದಾಗಿ ಇರತಕ್ಕದ್ದು ಅದನ್ನು ನಾವು ಬಿಟ್ಟು ಕೊಟ್ಟದ್ದರಿಂದಲೇ ನಮಗೆ ಈ ಅವನತ ಸ್ಥಿತಿಯು ಪ್ರಾಪ್ತವಾಗಿರುವದು. ಆದ್ದರಿಂದ ನಾನು ನನ್ನ ಉಪಸೂಚನೆಯನ್ನು ಮುಂದೆ ಇಟ್ಟಿರುವೆನೆಂದು ಹೇಳಿದರು ಉಪಸೂಚನೆಯು:—

ಬ್ರಾಹ್ಮಣ ಧರ್ಮದ ಮೂಲತತ್ವಗಳಾದ ಲೋಕಸಂಗ್ರಹ ಮತ್ತು ಮಾನವಜಾತಿಯ ಸುಖಸಂವರ್ಧನ ಇತ್ಯಾದಿಗಳ ಅಭಿವೃದ್ಧಿಗೆ ಮೂಲವಾದ ಉಚ್ಚವೃತ್ತಿಯಿಂದ ಬ್ರಾಹ್ಮಣವರ್ಗವು ಚ್ಯುತವಾಗಿ ಇಂದಿನ ಹೀನಸ್ಥಿತಿಗೆ ಇಳಿದಿರುವದೆಂದು ವಿಜಾಪೂರ ಜಿಲ್ಹೆಯ ಯಾವತ್ತೂ ಬ್ರಾಹ್ಮಣರ ಈ ಸಭೆಗೆ ತೋರುವದರಿಂದ, ಮತ್ತು ಬ್ರಾಹ್ಮಣ ವರ್ಗವು ಪ್ರಸ್ತುತದಲ್ಲಿ ಸಂಪತ್ತು ಅಧಿಕಾರ ಮತ್ತು ಲೌಕಿಕ ಸುಖ ಇವುಗಳನ್ನೇ ಧ್ಯೇಯವಾಗಿಟ್ಟುಕೊಂಡಂತೆ ಕಂಡು ಬರುವ ಪ್ರವೃತ್ತಿಯನ್ನು ಬಿಟ್ಟುಕೊಡುವದೇ ಬ್ರಾಹ್ಮಣ ವರ್ಗದ ನಿಜವಾದ ಉನ್ನತಿಯಾಗುವದೆಂದು ಈ ಸಭೆಗೆ ತೋರುವದರಿಂದ, ಮತ್ತು ಬ್ರಾಹ್ಮಣವರ್ಗವು ಸದ್ಯಕ್ಕೆ ಅನುಸರಿಸುವ ಅಧೋಗತಿಯ ತಪ್ಪುಮಾರ್ಗದಿಂದ ಬ್ರಾಹ್ಮಣ ತರುಣರನ್ನು ಕ್ರಮೇಣ ಪರಾವೃತ್ತಮಾಡಿ ಎಲ್ಲ ಸಮಾಜಗಳ ನಿಜವಾದ ಸುಖದ ಸಲುವಾಗಿ ದೇಶಕಾಲ ವಿದ್ಯಮಾನವನ್ನನುಸರಿಸಿ ಪ್ರಯುಕ್ತಿಸುವದೇ ಬ್ರಾಹ್ಮಣರ ಪವಿತ್ರ ಧರ್ಮವೆಂಬ ಉಚ್ಚಧ್ಯೇಯದ ಸನಾತನ ಸ್ವರೂಪವನ್ನು ಬ್ರಾಹ್ಮಣತ್ವಕ್ಕೆ ತಂದು ಕೊಡುವಂತೆ ಬ್ರಾಹ್ಮಣ ಯುವಕರನ್ನು ಸಮಾಜಸೇವೆಗೆ ಸಿದ್ಧಗೊಳಿಸುವಂಥ ಸಮಯವು ಈಗ ಒದಗಿರುವದರಿಂದು ಈ ಸಭೆಗೆ ತೋರುವದರಿಂದ, ಈ ಜಿಲ್ಹೆಯಲ್ಲಿ ಬ್ರಾಹ್ಮಣ ಸಂಘವೆಂಬ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ಈ ಸಭೆಯ ಅಭಿಪ್ರಾಯವಿರುತ್ತದೆ.

ಶ್ರೀ ಅರಬಟ್ಟಿಯವರು, ಚಾತುರ್ವರ್ಣ್ಯವೆಲ್ಲ ಒಂದೇ ಸಂಘವಿದ್ದು ಅದರ ಉಪಶಾಖೆಗಳು ಬೇರೆ ಬೇರೆ ಜಾತಿಗಳಿರುತ್ತವೆ ಬ್ರಾಹ್ಮಣರ ಧರ್ಮವೂ ಎಲ್ಲರಿಗೂ ನಿಜವಾದ ವಿದ್ಯೆಯನ್ನು ಕೊಟ್ಟು ಅವರನ್ನೂ ತಮ್ಮನ್ನೂ ಮೋಕ್ಷಕ್ಕೆ ಒಯ್ಯುವದೇ ಇರುತ್ತದೆ; ಹೀಗೆ ಅವರು ಇತರರಿಗೆ ಸಹಾಯ ಮಾಡುವದರಿಂದ ಅವರ ಉಪಜೀವನವು ಸಾಗುವದು. ಆದ್ದರಿಂದ ಶ್ರೀ ಕೌಜಲಗಿ ಹಾಗೂ ಶ್ರೀ ರಾಘವೇಂದ್ರರಾಯರ ಎರಡು ನಿರ್ಣಯಗಳು ಏಕವಾಕ್ಯತೆಯನ್ನು ಮಾಡಿ ನಿರ್ಣಯಿಸಬೇಕೆಂದರು ಉಪಸೂಚನೆಯು ಸ್ವೀಕೃತವಾಗಲಿಲ್ಲ. ಶ್ರೀ ರಾಘವೇಂದ್ರರಾಯರ ಸೂಚನೆಯು ಬಹುಮತದಿಂದ ಪಾಸಾಯಿತು

ಬ್ರಾಹ್ಮಣರು ಪಾಲಿಸತಕ್ಕ ನಿಯಮಗಳನ್ನೊಳಗೊಂಡ ಕೆಳಗಿನ ಠರಾವವು ಶ್ರೀ. ದೇಶಪಾಂಡೇ ಕೆ. ಎಸ್. ರವರಿಂದ ಸೂಚಿಸಲ್ಪಟ್ಟಿತು ಸರ್ವಾನುಮತದಿಂದ ಸ್ವೀಕರಿಸಲ್ಪಟ್ಟಿತು.

ಈಗಿನ ಬ್ರಾಹ್ಮಣರ ಪೀಳಿಗೆಯ ನೈತಿಕ ಮತ್ತು ಆಧ್ಯಾತ್ಮಿಕ ಉನ್ನತಿಗಾಗಿ ಕೆಳಗೆ ಕಾಣಿಸಿದ ನಿಯಮಗಳನ್ನು ಎಲ್ಲರೂ ಪಾಲಿಸಬೇಕೆಂದು ಪ್ರತ್ಯಕ್ಷ ಮಾಸದಲ್ಲಿ ಕೂಡುವ ಈ ಸಂಘದ ಸಾಧಾರಣ ಮಂಡಳದವರು, ಲಕ್ಷ್ಯಕೊಡಬೇಕಾಗಿ, ಈ ಸಭೆಯು ಸೂಚಿಸುತ್ತದೆ— (೧) ಸಂಧ್ಯಾವಂದನೆ ಮತ್ತು ನಿತ್ಯ ಕರ್ಮಗಳನ್ನು ಪ್ರತಿಯೊಬ್ಬ ಬ್ರಾಹ್ಮಣನು ಪಾಲಿಸತಕ್ಕದ್ದು (೨) ಬ್ರಾಹ್ಮಣರ ಸನಾತನ ಸ್ವರೂಪವು ಉಚ್ಚಧ್ಯೇಯವನ್ನೂ, ಸಂಧ್ಯಾವಂದನಾದಿ ವೈದಿಕ ಕರ್ಮಗಳನ್ನೂ ತಿಳಿಸಿ ಕೊಡುವದಕ್ಕಾಗಿ ಪ್ರತಿಯೊಂದು ತಾಲೂಕ ಅಥವಾ ಮುಖ್ಯವಾದ ಸ್ಥಳದಲ್ಲಿ, ಓರ್ವ ಪ್ರಚಾರಕರನ್ನು ನೇಮಿಸಬೇಕು. (೩) ಸಾತ್ವಿಕವಾದ ಸಾದಾವೃತ್ತಿಯನ್ನು ಬ್ರಾಹ್ಮಣನ ಜೀವಿತದ ಮುಖ್ಯವಾದ ಧ್ಯೇಯವಾಗಿರಬೇಕು; ಮತ್ತು ಬ್ರಾಹ್ಮಣರು ಸಮಾರಂಭಗಳಲ್ಲಿ ಬಹು ಹಣವನ್ನು ವ್ಯಯಮಾಡುವ ಪದ್ಧತಿಯನ್ನು ನಿಲ್ಲಿಸಬೇಕು. (೪) ಮಾದಕ ದ್ರವ್ಯಗಳ ವ್ಯವಹಾರವನ್ನು ಬ್ರಾಹ್ಮಣರು ಸರ್ವಥಾ ಮಾಡಕೂಡದು

ಬ್ರಾಹ್ಮಣರೂ ಅವರ ವೃತ್ತಿಗಳೂ

(ಲೇ: ನಾಗಸಂಪಗಿ ರಾಮಾಚಾರ್ಯರು ಬಾಗಲಕೋಟೆ)

ಈಗಿನ ಬ್ರಾಹ್ಮಣರಲ್ಲಿ ವೈದಿಕ ಗೃಹಸ್ಥರೆಂಬ ಭೇದಗಳಿವೆ, ವೈದಿಕರು ಪ್ರತಿಗ್ರಹದಿಂದ ಉಪಜೀವಿಸುವರೆಂತಲೂ, ಗೃಹಸ್ಥರಾದವರು ಸರಕಾರೀ ನೌಕರೀ ವ್ಯಾಪಾರ ಮುಂತಾದ ಉದ್ಯಮಗಳಲ್ಲಿ ತೊಡಗಿರಬೇಕೆಂತಲೂ ವಾಡಿಕೆಯಾಗಿರುವದ. ಆದರೆ ಹೀಗೆ ಪುರಾಣೇತಿಹಾಸಗಳಲ್ಲಿ ವಿಭಾಗವು ನಮ್ಮ ಕಣ್ಣಿಗೆ ಬಿದ್ದಿಲ್ಲ. ನೌಕರಿಯಿಂದ ಉಪಜೀವಿಸುವದೆಂದರೆ सेवा श्ववृत्तिराख्याता ಎಂಬಂತೆ ನಿಂದ್ಯವಾದದ್ದೇ ಸರಿ. ಇನ್ನು ವ್ಯಾಪಾರ ಮಾಡುವದಂತೂ ವಣಿಕ್ ಅಂದರೆ ವೈಶ್ಯನ ವೃತ್ತಿಯಾಗಿರುವದರಿಂದ ಇದಾದರೂ ವಿಹಿತವಾಗುವದಿಲ್ಲ. ಆಪದ್ಧರ್ಮಗಳಲ್ಲಿ ಇದು ಒಂದು ಪಕ್ಷದಲ್ಲಿ ಉಕ್ತವಾದರೂ ಆಪತ್ತಿಲ್ಲದ ಧನಸಂಪನ್ನನಾದವನಿಗೆ ವಿಹಿತವಾಗಲಾರದು. ಇರಲಿ. ಇನ್ನು ಪ್ರಾಚೀನರಾದ ಬ್ರಾಹ್ಮಣರು ಯಾವ ವೃತ್ತಿಯಿಂದ ಉಪಜೀವಿಸುತ್ತಿದ್ದರೆಂಬದನ್ನು ವಿಮರ್ಶಿಸುವ. ಪೂರ್ವಕಾಲದ ಬ್ರಾಹ್ಮಣರಲ್ಲಿಯಾದರೂ, ಕೆಲವರು ನಗರವಾಸಿಗಳಾಗಿದ್ದರೆಂತಲೂ, ಕೆಲವರು ಅರಣ್ಯಗಳಲ್ಲಿ, ಆಶ್ರಮ

ಗಳಲ್ಲಿ ಇರುತ್ತಿದ್ದರೆಂತಲೂ ಕಂಡು ಬರುತ್ತಿರುವದು. ಪುರಾಣಗಳಲ್ಲಿ ನಗರ ವರ್ಣನ ಪ್ರಸಂಗದಲ್ಲಿ **[illegible]** ಎಂಬ ಉಲ್ಲೇಖವು ವಿಪುಲವಾಗಿರುವದರಿಂದ ಶಹರಗಳಲ್ಲಿ ಬ್ರಾಹ್ಮಣರು ಇರುತ್ತಿರಬೇಕೆಂದು ಸಿದ್ಧವಾಗುವದು. ಆದರೆ ಅವರು ಹೀಗೆಯೇ ಉಪಜೀವಿಸುವರೆಂದು ಮಾತ್ರ ನಿಶ್ಚಯದಿಂದ ಹೇಳಲು ಸಾಧ್ಯವಿಲ್ಲ. ಅಥವಾ ಅವರು ಯಾಜನ ಅಧ್ಯಾಪನ ಪ್ರತಿಗ್ರಹಗಳಿಂದ ಜೀವಿಸುತ್ತಿರಬಹುದೆನ್ನಲಿಕ್ಕೂ ಅಡ್ಡಿ ಇಲ್ಲ ಆದರೆ ಈ ತರಹದ ಶಹರವಾಸಿಗಳಕಿಂತಲೂ ಅರಣ್ಯಗಳಲ್ಲಿ ಏಕಾಂತವಾದ ರಮಣೀಯ ಪ್ರದೇಶಗಳಲ್ಲಿ ಆಶ್ರಮಗಳನ್ನು ಮಾಡಿಕೊಂಡು, ಶಿಷ್ಯಪರಿವಾರವನ್ನು ರಕ್ಷಿಸುವ ಬ್ರಾಹ್ಮಣರೇ ಹೆಚ್ಚಾಗಿರಬೇಕೆಂದು ಅನಿಸುತ್ತದೆ. ಅವರು ಯಜ್ಞಗಳನ್ನು ಮಾಡಿ ದೇವತೆಗಳನ್ನು ಹವಿರ್ಭಾಗಗಳಿಂದ ತೃಪ್ತಿಪಡಿಸಿ, ದೇಶದಲ್ಲಿ ಸುವೃಷ್ಟಿಯಾಗುವಂತೆ ಮಾಡುತ್ತಿದ್ದರು.

अग्नौ प्रास्ताहुतिः सम्यगादित्यमुपतिष्ठते ॥ आदित्याज्जायते वृष्टिर्वृष्टेरन्नं ततः प्रजाः ॥ ಅಗ್ನಿಯಲ್ಲಿ ಹಾಕಿದ ಆಹುತಿಯು ಸೂರ್ಯನಿಗೆ ಮುಟ್ಟಿ ಆ ಸೂರ್ಯನಿಂದ ಉತ್ಪನ್ನವಾದ ಮಳೆಯಾಗಿ ಮಳೆಯಿಂದ ಅನ್ನವೂ ಅನ್ನದಿಂದ ಪ್ರಜೆಗಳೂ ಆಗುವರೆಂದು ಈ ವಚನದ ಅಭಿಪ್ರಾಯವು.

ಅಂತೂ ಬ್ರಾಹ್ಮಣರು ತಾವು ಯಜ್ಞಗಳಿಂದ ದೇಶಹಿತವನ್ನು ಸಾಧಿಸುತ್ತಿದ್ದರು. ಮತ್ತು ತಾವು ಯಜ್ಞಗಳನ್ನು ಮಾಡಿಸಿಯಾದರೂ ದಕ್ಷಿಣೆಯನ್ನು ಸಂಪಾದಿಸುತ್ತಿದ್ದರು. ಆದರೆ ಈಗಿನ ನಾಮಧಾರಿಗಳಾದ ಬ್ರಾಹ್ಮಣರಂತೆ ಶಿಕ್ಷವಿಂದ ಅವರು ಪ್ರತಿಗ್ರಹವನ್ನು ಮಾಡುತ್ತಿರಲಿಲ್ಲವಾದ್ದರಿಂದ ಯೋಗ್ಯರಾದ ಮಹಾತ್ಮರ ಯಾಗಗಳಲ್ಲಿ ದಕ್ಷಿಣೆಯನ್ನು ಹೆಚ್ಚಿಗೆ ಸಂಪಾದಿಸುತ್ತಿದ್ದರು. ಸೋಮಯಾಗಾದಿ ಯಜ್ಞಗಳಲ್ಲಿ ಸೋಮಪ್ರವಾಕನೆಂಬುವನು, ಆರ್ತ್ವಿಜ್ಯವನ್ನು ನಿಶ್ಚಯ ಪಡಿಸಬೇಕಾಗಿ, ಯಾಗಮಾಡುವ ಯಜಮಾನನ ಹತ್ತಿರ ಬಂದು **कोऽत्र का दक्षिणा** ಇತ್ಯಾದಿ ಪ್ರಶ್ನಗಳನ್ನು ಮಾಡುತ್ತಿರುವನು. ಇಂತಹ ಯಜ್ಞಗಳಿಗೆ ಇಂತಿಷ್ಟೇ ದಕ್ಷಿಣೆಯು ದೊರೆಯಬೇಕೆಂತಲೂ, ಋತ್ವಿಜರಲ್ಲಿ ಇಂಥವರು ಇಷ್ಟೇ ಭಾಗವನ್ನು ಸ್ವೀಕರಿಸಬೇಕೆಂತಲೂ ಶಾಸ್ತ್ರಕಾರರೇ ನಿರ್ಬಂಧವನ್ನು ಮಾಡಿಟ್ಟಿರುವರು. ಆದರೆ ಆಗಿನ ದಕ್ಷಿಣೆ ಮಾತ್ರ ದ್ರವ್ಯರೂಪವಾಗಿರುವದು ಕಡಿಮೆಯಾಗಿ ಕಾಣಿಸುವದು **द्वादश शतानि गावो दक्षिणा** ಇತ್ಯಾದಿ ಪ್ರತಿ ವಚನಗಳನ್ನು ವಿಮರ್ಶಿಸಿದಲ್ಲಿ ಗೋಗಳೇ ದಕ್ಷಿಣೆಯಾಗಿದ್ದವೆಂಬದು ಸ್ಪಷ್ಟವಾಗುವದು. ಆದರೆ ಅವರು ತಾವು ಯಜ್ಞ ಯಾಗಗಳನ್ನು ಮಾಡಿಯೂ ಮಾಡಿಸಿಯೂ, ದೇಶವನ್ನು ಸಂಪನ್ನವನ್ನಾಗಿ ಮಾಡಿ, ಸಾವಿರಾರು ಗೋಗಳನ್ನು ದಕ್ಷಿಣೆಯಾಗಿ ತೆಗೆದುಕೊಂಡು, ಸಮೃದ್ಧವಾದ ಅಡವಿಗಳಲ್ಲಿ ಅವುಗಳನ್ನು ರಕ್ಷಿಸುತ್ತಿದ್ದರು. ಈಗಿನಂತೆ ಆಗಿನ ಸಮಯದಲ್ಲಿ ಅರಣ್ಯರಕ್ಷಣದ ಕಾಯಿದೆಗಳಿದ್ದಿಲ್ಲ. ಈಗಿನ ಇದಕ್ಕಿದೇ ಕಾಯದೆಗಳ ವಿರುದ್ಧವಾಗಿ ಕಾಯಿದೆಗಳಿದ್ದವು. **अटवी पर्वताश्चैव नद्यः स्थानानि तीर्थानि सर्वाण्यस्वामिकान्याहुर्नास्ति तत्र परिग्रहः** ಇವೆಲ್ಲವೂ ಅಸ್ವಾಮಿಕವಾಗಿರಬೇಕೆಂತಲೂ, ಆದ್ದರಿಂದ ಸರ್ವಭೋಗ್ಯವೆಂದೂ ನಿರ್ಣಯವಿರುವದರಿಂದ ಎಷ್ಟೋ ಸಾವಿರ ಆಕಳಗಳ ಸಂರಕ್ಷಣೆಯು ಅವರಿಗೆ ಸುಲಭವಾಗಿ ಹೋಗಿತ್ತು. ಆಗ್ಯೆ ಈಗಿನ ಕಾಲದಂತೆ ಪರಿಸ್ಥಿತಿಯು ಇದ್ದರೆ ಒಂದು ಆಕಳವು ಆನಿಯಂತೆ ರಕ್ಷಿಸಲು ಅಸಾಧ್ಯವಾಗುತ್ತಿತ್ತು. ಯಾಜನದ ಈ ಗೋದಕ್ಷಿಣೆಯಿಂದ ಅವರ ಆಶ್ರಮಕ್ಕೆ ಆಶ್ರಮವೇ ರಕ್ಷಿತವಾಗುತ್ತಿತ್ತೆಂಬದರಲ್ಲಿ ಸಂಶಯವಿಲ್ಲ. ಆ ಆಕಳಗಳೂ ಸಹ ಕೊಡ ಕೊಡ ಹಾಲು ಕರೆಯತಕ್ಕವಿದ್ದವು. ಇರಲಿ; ಇದು ಯಾಜನ ವಿಷಯವಾಯಿತು. ಇನ್ನು ಅಧ್ಯಾಪನವನ್ನು ವಿವರಿಸುವ ಅಧ್ಯಾಪನದಿಂದ ದ್ರವ್ಯವನ್ನು ಸ್ವೀಕರಿಸುವದು ದೋಷವೆಂದು ಪರಿಗಣಿತವಾಗಿರುವದಷ್ಟೇ! ಆದರೆ ಇಂತಿಷ್ಟು ದಿವಸಗಳಲ್ಲಿ ಇಷ್ಟೇ ಪಗಾರವನ್ನು ಕೊಡಬೇಕೆಂದು ಕರಾರ ಮಾಡಿ ತೊಗೊಳ್ಳುವದು ನಿಂದ್ಯವಾಗಿರುವದೇ ಹೊರತು ಬೇರೆ ಇಲ್ಲ. ಪಗಾರಿಯಾದ ಅಧ್ಯಾಪಕನು ಶ್ರಾದ್ಧಾದಿಗಳಿಗೆ ಸರ್ವಥಾ ಅಭೋಜ್ಯನೆಂದು ಹೇಳಿ ಬಿಟ್ಟಿದ್ದಾರೆ. ಆದರೆ ನಾವು ಹೇಳುವ ಅಧ್ಯಾಪನವೆಂಬ ಜೀವನ ಸಾಧನವು ಈ ತರದಲ್ಲ. ಶಿಷ್ಯನು ಗುರು ಕುಲವಾಸವನ್ನು ಮುಗಿಸಿ ಸಂಪೂರ್ಣವ್ಯಾಸಂಗ ಮಾಡಿ ಪಾರಂಗತನಾಗಿ, ತನ್ನ ಮನೆಗೆ ಹೋಗುವ ಸಮಯದಲ್ಲಿ, ಅವನ ತಪಶಕ್ತಿ, ಬಲ-ವಿದ್ಯಾ ಮುಂತಾದವುಗಳಿಗೆ ತಕ್ಕಂತೆ ಗುರು ದಕ್ಷಿಣೆಯನ್ನು ಬೇಡುವದು, ಅದನ್ನು ಆ ಶಿಷ್ಯನು ಪೂರ್ಣಮಾಡುವದು, ಹೀಗೆ ಪದ್ಧತಿಯು ಇತ್ತೆಂದು ಪುರಾಣೇತಿಹಾಸಗಳಿಂದ ತಿಳಿದು ಬರುತ್ತದೆ. ಆದರೆ ಈಗಿನ ಕಾಲಕ್ಕೆ ಗುರುಕುಲವಾಸವೂ ಇಲ್ಲ; ದಕ್ಷಿಣೆಯೂ ಇಲ್ಲ. ಸಾಮಾನ್ಯವಾಗಿ ಅಧ್ಯಾಪನವು ಈಗಿನ ಸಮಯದಲ್ಲಿ ಉಪಜೀವಿಕೆಯಾಗಿರುವದೆಂಬುವದಕ್ಕೆ ಉದಾಹರಣವೆಂದರೆ ಪುರಾಣೀಕರೆಂದು ಹೇಳಬಹುದು. ಅವರಲ್ಲಿಯಾದರೂ ಇಷ್ಟು ದಿವಸ ಪುರಾಣ ಹೇಳಿದರೆ ಇಂತಿಷ್ಟೇ ರುಪಾಯಿಗಳನ್ನು ಕೊಡಬೇಕು. ಹೀಗೆ ಕರಾರವಾದರೆ ಅವರಾದರೂ ನಿಂದ್ಯರೇ ಸರಿ. ಹೀಗಿಲ್ಲದೇ ಯದೃಚ್ಛೆಯಿಂದ ಬಂದದ್ದೇ ಪರಮಾತ್ಮನಿಂದ ಕರವೆಂದು ತಿಳಿದು ಶ್ರೀಮದ್ಭಾಗವತಾದಿದಿವ್ಯಗ್ರಂಥಗಳ ಪ್ರವಚನ ಮಾಡಿಸಿದಲ್ಲಿ ಉಪಜೀವಿಕೆಯು ಅಧ್ಯಾಪನದಲ್ಲಿಯೇ ಪರಿಗಣಿತವಾಗುವದೆಂಬದು ಸ್ಪಷ್ಟವೇ. ಶಿಷ್ಯರಲ್ಲಿ ರಾಜರ ಮಹಾರಾಜರ ಪುತ್ರರೂ ಮಹರ್ಷಿ ಕುಮಾರರೂ ಅನೇಕರಿರುತ್ತಿರುವದರಿಂದ ಅವರಿಗೆ ದ್ರವ್ಯದ ಕೊರತೆಯೂ ಇರುತ್ತಿದ್ದಿಲ್ಲ. ಅವರಾದರೂ ಅದನ್ನು ಕಾಂಕ್ಷಿಸುತ್ತಿದ್ದಿಲ್ಲ. ವರತಂತುನಂತಹ ಒಬ್ಬೊಬ್ಬ ಮಹರ್ಷಿಗಳು ಕೌತ್ಸನಂತಹ ತೇಜಸ್ವೀ ಶಿಷ್ಯಗೆ ಒಮ್ಮೆ ಕೋಟ್ಯಾವಧಿ ರೂಪಾಯಿಗಳನ್ನು ಬೇಡಿದ್ದರೂ ಸಹ ಅದು ಅನೇಕ ಕಾರಣಗಳಿಂದ ಪ್ರಸಕ್ತವಾಗಿರುವದಲ್ಲದೇ ದ್ರವ್ಯದ ದುರಾಶೆಗಾಗಿಯಲ್ಲ. ಅತಿ ಉದಾರನಾದ ರಘುರಾಜನು ಸರ್ವಜಿತ್ ಯಾಗವನ್ನು ಮಾಡಿ ಸರ್ವಸ್ವವನ್ನು ಸಮರ್ಪಣ ಮಾಡಿದಾಗ್ಯೆ ಅವನ ಉದಾರತನವನ್ನು ಪರೀಕ್ಷಿಸಬೇಕಾಗಿಯೂ, ತಾವು ಒಂದು ಮಹತ್ತರವಾದ ಕಾರ್ಯವನ್ನು ನೆರವೇರಿಸಬೇಕಾಗಿಯೂ ಮಾಡಿದ ಯುಕ್ತಿಗಳವು. ಇನ್ನು ಪ್ರತಿಗ್ರಹವಂತೂ ಸ್ಪಷ್ಟವೇ ಸರಿ. ಅದರಲ್ಲಿಯೂ ನಿಷಿದ್ಧಾನಿಷಿದ್ಧವಿಚಾರ ಪೂರ್ವಕವಾಗಿ, ಯೋಗ್ಯವನ್ನು ಮಾಡುತ್ತಿದ್ದರೆ, ಪಾಪ ಬರುವದಿಲ್ಲ. ಅದರಲ್ಲಿಯೂ ಪ್ರತಿಗ್ರಹವನ್ನೇ ಬಿಟ್ಟು ನಿರಿಚ್ಛನಾಗಿರುವದು ಹೆಚ್ಚು ಶ್ರೇಯಸ್ಕರವು. ಆದರೆ ಹ್ಯಾಗೆ ಹೆಚ್ಚು ಆಶೆಯನ್ನು ಬಿಡುವನೋ ಹಾಗೆ ಇವನಯೋಗ್ಯತೆಯೂ ಹೆಚ್ಚಾಗುವದು. ಯಾಚಕನಕಿಂತಲೂ, ಅಯಾಚಿತವೃತ್ತಿಯವನು ಪ್ರಬಲನು. ಸಂಗ್ರಹಿಗಳಲ್ಲಿ ಹಗೆ ಕಾಳಿನವನಕಿಂತಲೂ, ಗಳಿಗೆ ಕಾಳಿನವನು ಪ್ರಬಲ. ಗಳಿಗೆ ಕಾಳಿನವನಕಿಂತಲೂ, ಮೂರು ದಿವಸದ ಆಹಾರ ವಿದ್ದವನು ಪ್ರಬಲನು ಅವನಕಿಂತಲೂ ನಾಳಿನ ಪೂರ್ತಿ ಇದ್ದವನು ಬಲಿಷ್ಠನು. ಅವನ ಕಿಂತಲೂ, ಇವತ್ತಿಗೆ ಮಾತ್ರ ಇದ್ದವನು ಪ್ರಬಲ. ಹೀಗೆ ಹ್ಯಾಗೆ ಹ್ಯಾಗೆ ಸಂಗ್ರಹದ ಆಶೆಗಳು ಕಡಿಮೆಯಾಗಿರುವವೋ ಹಾಗೆ ಹಾಗೆ ಅವರು ಪ್ರಬಲರೆಂದು ಪರಿಗಣಿಸಿದ್ದಾರೆ. ಈಗ್ಯೆ ಹಿಂದೆ ಹೇಳಿದ ವೃತ್ತಿಗಳಲ್ಲಿ ಸದ್ಯಸ್ಥಿತಿಗೆ ಅನು ಸಂಧಾನ ಮಾಡಿಕೊಂಡು, ಆಶೆಯನ್ನು ದೂರದಲ್ಲಿ ಪರಿತ್ಯಾಗಮಾಡಿ ಸಂತೋಷದಿಂದ ಇರಹತ್ತಿದರೆ ಸರ್ವವೂ ಪೂರ್ಣವೇ ಸರಿ. ದುರಾಶೆಯಿದ್ದರೆ ಧನಸಂಪನ್ನನಾದರೂ ಬಡವನೇ ಸರಿ. ಆದುದರಿಂದ ಪೂರ್ವೋಕ್ತವಾದ ವೃತ್ತಿಗಳಲ್ಲಿ ಪವಿತ್ರವಾದ ಯಾವ ವೃತ್ತಿಯನ್ನಾದರೂ ಆಶ್ರಯಿಸಿ ಉಪಜೀವನ ಮಾಡಬಹುದು. ಮೊದಲು ನೌಕರಿ ವ್ಯಾಪಾರಗಳನ್ನು ನಾವು ಹೇಳಿರುವೆವಷ್ಟೇ! ಆದರೆ ಈಗಿನ ಪರಿಸ್ಥಿತಿ

ಯಲ್ಲಿ ಅಷ್ಟೇನು ಅವು ನಿಂದ್ಯವಾದವುಗಳಲ್ಲ. ಇಂಥ ಉದ್ಯೋಗಗಳಲ್ಲಿ ಇದ್ದರೂ ಸಹ, ಸ್ನಾನ ಸಂಧ್ಯಾದಿ ನಿಯಮಗಳನ್ನು ಪರಿಪಾಲಿಸುತ್ತಿದ್ದರೆ, ಭಗವತ್ಕಥೆಗಳಲ್ಲಿ ಆ ಸಕ್ತಿ ಮಾಡುತ್ತಿದ್ದರೆ. ಅವನು ಸದ್ಗತಿಯನ್ನು ಹೊಂದೇ ಹೊಂದುವನು. ಈಗ್ಯೆ ನಾವು ಪ್ರಾಚೀನ ಪರಿಸ್ಥಿತಿಯನ್ನು ಹೆಚ್ಚಾಗಿ ಸ್ಮರಣೆ ಮಾಡುವದರ ಕಾರಣವೇನೆಂದರೆ ಬ್ರಾಹ್ಮಣರಲ್ಲಿ ಎಷ್ಟೋ ತರುಣರು ನಿರುದ್ಯೋಗಿಗಳಾಗಿ ಕರ್ತವ್ಯ ಚಿಂತೆಯಲ್ಲಿ ಮುಳುಗಿ, ದುಃಖಬಡುತ್ತಿರುವದನ್ನು ನೋಡಿ, ಈ ಉಪಾಯಗಳನ್ನು ಇಲ್ಲಿ ವಿಮರ್ಶಿಸಿದ್ದೇವೆ. ಇವುಗಳನ್ನು ಚನ್ನಾಗಿ ಪರ್ಯಾಲೋಚಿಸಿ ಸ್ವಕೀಯ ಆಚರಣದಲ್ಲ ತಂದು ಶ್ರೇಯಸ್ಸ ಸಂಪಾದಿಸಬೇಕೆಂದೂ ಶ್ರೀ ಲಕ್ಷ್ಮೀನರಸಿಂಹ ದೇವರು ಅವರ ಇಷ್ಟಾರ್ಥವನ್ನೂ ಪರಿಪೂರ್ಣ ಮಾಡಲೆಂದೂ ಅನನ್ಯ ಭಾವದಿಂದ ಪ್ರಾರ್ಥಿಸುತ್ತೇವೆ.

ಮಾಧ್ವ ವಿದ್ವಾಂಸರಿಗೆ ವಿದ್ಯಾದಕ್ಷಿಣೆ

ಶ್ರೀ ಮನ್ಮಧ್ವಾಚಾರ್ಯರ ಸಿದ್ಧಾಂತಗಳಿಗೆ ಚಾಲನೆಕೊಡಬೇಕಾದರೆ ನಾವು ಏನು ಮಾಡಬೇಕೆಂಬ ವಿಚಾರವು ಈಗ ೧೦-೧೧ ವರ್ಷಗಳಿಂದ ನನ್ನ ಮನಸ್ಸಿನಲ್ಲಿ ಕಟಿಯುತ್ತಿದೆ. [illegible] ಕಾಲಕ್ಕೆ ತಕ್ಕಂತೆ ಹೊಸ ಮಾದರಿಯ ಗ್ರಂಥ ರಚನೆ ಯಾಗುವದು ಮಾಧ್ವಮತದ ಸಾಂಪ್ರದಾಯವಾಗಿತ್ತು. ಸಿದ್ಧಾಂತಗಳೇನೋ ಹಳೆಯವೇ ಆದರೆ ಅದನ್ನು ಮುಂದರಿಸುವ ರೀತಿಯು ಮಾತ್ರ ಹೊಸದು. ಆದ ಕಾರಣವೇ ಮಂದಬುದ್ಧಿಗಳ ಅವಗಾಹನಾರ್ಥವಾಗಿ ನಮ್ಮ ಪಂಡಿತರು ಅನೇಕ ಟೀಕೆ ಟಿಪ್ಪಣಿಗಳನ್ನು ಬರೆದರು. ಆ ಪ್ರವಾಹವು ಈಗ ಹರಿಗಟ್ಟಿದೆ. ಅದಕ್ಕೆ ಹರಿಕೆಗೆದು ಕೊಟ್ಟರೆ ಶ್ರೀಮದಾಚಾರ್ಯರ ಮತಕ್ಕೆ ಒಂದು ಬಗೆಯಿಂದ ಚಾಲನವನ್ನು ಕೊಟ್ಟಂತಾಗುವದೆಂದು ಈಗ ನನ್ನ ನಂಬಿಗೆಯಾಗಿದೆ. ಶ್ರೀ ಮದಾಚಾರ್ಯರ ಗ್ರಂಥಗಳಲ್ಲಿಯೂ ಟೀಕಾಚಾರ್ಯರ ಗ್ರಂಥಗಳಲ್ಲಿಯೂ ಮತ್ತೂ ಅನೇಕ ಪಂಡಿತರ ಗ್ರಂಥಗಳಲ್ಲಿಯೂ ಚಾರ್ವಾಕ, ಬೌದ್ಧ ರಾಮಾನುಜ ಮುಂತಾದ ಅನೇಕ ಮತಗಳ ವಿಚಾರವು ಮಾಡಲ್ಪಟ್ಟಿದೆ. ಶ್ರೀ ಮದಾಚಾರ್ಯರು ತಮ್ಮ ಪೂರ್ವದಲ್ಲಿದ್ದ ೨೧ ಭಾಷ್ಯಗಳನ್ನು ಖಂಡನಮಾಡಿದರೆಂಬದು ಪ್ರಸಿದ್ಧವೇ ಅದೆ. ಆದರೆ ಆ ಭಾಷ್ಯಗಳು ಯಾವವು ಅವುಗಳ ಖಂಡನವನ್ನು ಯಾವ ರೀತಿಯಾಗಿ ಮಾಡಿರುವರೆಂಬದು ಅನೇಕರಿಗೆ ಗೊತ್ತಿರುವದಿಲ್ಲ. ಆದಕಾರಣ, ಆಯಾ ಮತದ ಬಗ್ಗೆ ನಮ್ಮ ಮತ ಗ್ರಂಥಗಳಲ್ಲಿರುವ ವಾಕ್ಯಗಳನ್ನು ಕ್ರೋಢೀ ಕರಿಸಿ ಒಂದೆಡೆಗೆ ತಂದರೆ ಅದರಿಂದ ಉಪಯೋಗ ವಾಗಬಹುದೆಂದು ನನಗೆ ತೋರುತ್ತದೆ. ಈ ಹೊಸ ಹಾದಿಗೆ ಉಪಕ್ರಮವನ್ನು ಮಾಡಿಸುವ ಉದ್ದೇಶದಿಂದ **"ಚಾರ್ವಾಕದರ್ಶನ ವಿಚಾರ"**ವೆಂಬದೊಂದು ಹೊಸ ಸಂಸ್ಕೃತ ಪುಸ್ತಕವನ್ನು ಪ್ರಭವ ಸಂವತ್ಸರದ ಚೈತ್ರ ಶುದ್ಧ ಪ್ರತಿಪದೆಯ ಒಳಗಾಗಿ ತಯಾರಿಸಿ ಕೊಟ್ಟವರಿಗೆ ಐವತ್ತು ರೂಪಾಯಿ ಪಾರಿತೋಷಕವನ್ನು ಕೊಡುವದನ್ನು ಗೊತ್ತು ಮಾಡಿರುವೆನು ವಿಷ್ಣು ತತ್ವ ನಿರ್ಣಯ ಸುಧಾ ಯುಕ್ತಿ ಮಲ್ಲಿಕೆ, ಮುಂತಾದ ಮಧ್ವಮತ ಪುಸ್ತಕಗಳಲ್ಲಿ ಅಲ್ಲಲ್ಲಿ ಬಂದಿರುವ ಈ ವಿಷಯದ ಮೇಲಿನ ವಾಕ್ಯಗಳನ್ನು ಉಧೃತ ಮಾಡಿ, ಪುನರುಕ್ತಿ ಮುಂತಾದ ದೋಷಗಳು ಬರದಂತೆ ಅವುಗಳನ್ನು ಒಂದೆಡೆಗೆ ಆಧಾರ ಸಹಿತವಾಗಿ ವ್ಯವಸ್ಥಿತ ರೀತಿಯಿಂದ ಕ್ರೋಢಿ ಕರಿಸಬೇಕು. ಇದ್ದುಕ್ಕಿದ್ದಂತೆಯೇ ಇಡಬೇಕು. ಅದರಲ್ಲಿ ತಮ್ಮ ಕೈ ಗಂಟಿನ ಪೂರ್ವ ಪಕ್ಷ ಉತ್ತರ ಪಕ್ಷಗಳನ್ನು ಸೇರಿಸಬಾರದು. ಈ ಪುಸ್ತಕವು ಸರಿಯಾಗಿದೆಯೋ ಇಲ್ಲವೋ ಎಂಬುದನ್ನು ಪರೀಕ್ಷಿಸಬೇಕೆಂದು ನಮ್ಮ ಮತಸಿದ್ಧಾಂತಗಳಲ್ಲಿ ಅಪ್ರತೀಯ ಪಂಡಿತರೆಂದು ಖ್ಯಾತಿಗೊಂಡಿರುವ ಶ್ರೀಮದುತ್ತರಾದಿ ಶ್ರೀಗಳವರೆಗೆ ನಾನು ಪ್ರಾರ್ಥಿಸಿಕೊಳ್ಳುವೆನು ಅವರು ಅಥವಾ ಮತ್ತಾರಾದರೂ ಒಪ್ಪಿಬ್ಬರು ಪಂಡಿತರು ಒಪ್ಪಿದ ಬಳಿಕ ಪಂಡಿತರಿಗೆ ಪಾರಿತೋಷಕವು ಕೊಡಲ್ಪಡುವದು. ಈ ಪ್ರಬಂಧವನ್ನು ಮುಂದೆ ಪ್ರಕಟಿಸುವೆನು. ಗ್ರಂಥವನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಬೇಕು. ಗ್ರಂಥವನ್ನು ತಯಾರಿಸಲಿಚ್ಛಿಸುವವರು ಮೊದಲೇ ಆ ಬಗ್ಗೆ ಸೂಚನೆಯನ್ನು ಕೊಟ್ಟರೆ ಒಳ್ಳೇದು.

ವೆಂಕಟೇಶ ಭೀಮರಾವ ಆಲೂರ, ಬಿ. ಎ. ಎಲ್. ಎಲ್. ಬಿ.

ಸಂಪಾದಕ ಜಯಕರ್ನಾಟಕ ಧಾರವಾಡ

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು	ನೂರಕ್ಕೆ ವರ್ಷಕ್ಕೆ	2½
ಸೇವ್ಹಿಂಗ್ಸ ಬ್ಯಾಂಕ ಠೇವು	,, ,,	4½
ಮುದ್ದತೀ ಠೇವು ೬ ತಿಂಗಳಿಗೆ	,, ,,	6
,, ೧೨ ತಿಂಗಳಿಗೆ	,, ,,	7

ಪಾರಲೋನ ಪಾರ ಜಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರು ನಿಷ್ಕಂ ನಿಜಕೇಶವ ಸೇವನಂ।

ಪ್ರಿಯ ದೇಶಬಾಂಧವರೇ.

ಇತ್ತ ನೋಡಿರಿ! ಒಮ್ಮೆ ಓದಿರಿ

ಮಾತೃಭಕ್ತಿಯನ್ನು ಪ್ರಕಾಶಗೊಳಿಸಿರಿ!!!

"ಕಾನಡಾ ಧುರೀಣ"

ಈ ಅತ್ಯುತ್ತಮವಾದ ರಾಷ್ಟ್ರೀಯ ವಾರಪತ್ರಿಕೆಯು ಕರ್ನಾಟದ ಎಲ್ಲ ಭಾಗಗಳಲ್ಲಿಯೂ ಪ್ರಚಾರ ಹೊಂದುತ್ತಿದೆ. ಇದರಲ್ಲಿ ಸಮಯೋಚಿತವಾಗಿ ಪ್ರಕಟವಾಗುವ ಸ್ವಮತ ವಿಮತಗಳ ಮೇಲಿನ ಸಿದ್ಧಾಂತ, ನವ್ಯ-ಭವ್ಯವಿಷಯಪ್ರತಿಪಾದನೆ, ಸುವಿಚಾರ ರಮಣೀಯವೂ ವಿಚಿತ್ರ ಸ್ಫೂರ್ತಿದಾಯಕವೂ ಆದ ಸಂಪಾದಕರ ಪ್ರಥಿತಮ ಲೇಖಗಳು, ಸುಜ್ಞರ ಕವಿತಾಲಾಪಗಳು, ಮಹಾಪುರುಷರ ವಾಗ್ರಸಾಯನವು, ಪ್ರೋತ್ಸಾಹಕರಿಂದ ದೊರೆಯುವ ದೇಶದೇಶಾಂತರ ವೃತ್ತಾಂತಗಳು ಸಹ ಕನ್ನಡಿಗರೆಲ್ಲರಿಗೂ ಅತ್ಯಂತ ಮನೋಹರವಾಗಿರುವವು. ಸುಪ್ರಸಿದ್ಧ ವಿದ್ಯಾವಂತರ ಪ್ರಶಂಸೆಗೆ ಪಾತ್ರವಾದ ಈ ಪತ್ರಿಕೆಯೇ ಕರ್ನಾಟಕದಲ್ಲಿ ಹೆಚ್ಚಿನದೆಂದು ತಜ್ಞರು ತಿಳಿದು ಹೇಳದಿರಲಾರರು ವಾರ್ಷಿಕವರ್ಗಣಿ ಅಂಚೆ ವೆಚ್ಚಸೇರಿ ೩-೧-೦

ವಿಳಾಸ— ಮ್ಯಾನೇಜರ, "ಕಾನಡಾ ಧುರೀಣ"

ಕುಮಟಾ, (ಉತ್ತರ ಕನ್ನಡ)

ಜಾಹೀರಾತು.

ಈ ಜಾಹಿರಾತದಿಂದ ವಿಜಾಪೂರ ಜಿಲ್ಹೆಯ ಯಾವತ್ತು ಜನರಿಗೆ ತಿಳಿಸುವದೇನಂದರೆ—

ಪ್ರಾಥಮಿಕ ಶಿಕ್ಷಣದ ಕಾಯದೇ ಅನ್ವಯ ಮಾಡಿದ ಲೋಕಲ ಬೋರ್ಡ ಕಾಯದೇ ಅನ್ವಯಾ ಈ ಜಿಲ್ಹೆಯಲ್ಲಿ ಪ್ರಾಥಮಿಕ ಶಾಲೆಗಳು ಡಿ|| ಲೋಕಲ ಬೋರ್ಡಿಗೆ ಬರತಕ್ಕದ್ದವೆ. ಈ ಬಗ್ಗೆ ಕೆಳಗೆ ತೋರಿಸಿದ ಪ್ರಕಾರ ಸ್ಕೂಲಬೋರ್ಡಿನ ನಿವಡಣೂಕ ಆಗಬೇಕಾಗಿದೆ, ಆ ಸಂಬಂಧಿ ಇಲೆಕಶನ ತಾ|| ೧೦ ಮಾರ್ಚ ೧೯೨೬ ನೇದ್ದನೇ ನೇಮಿಸಿದೆ. ಕಾರಣಾ ಸದ್ರಿ ಬೋರ್ಡಿಗೆ ಉಮೇದ್ವಾರರಾಗಿ ನಿಂದರ ಲಿಚ್ಛಿಸುವರು ಸ್ಕೂಲಬೋರ್ಡ ಇಲೇಕಶನ ನಿಯಮ ೨ ನೇ ದ್ದರ ಪ್ರಕಾರ ತಾ|| ೫ ಫೇಬ್ರುವಾರಿ ೧೯೨೬ ನೇದ್ದರ ವಳಗಾಗಿ ತಂಮ ಅರ್ಜಿಯನ್ನು ಮೆ|| ಪ್ರೆ|| ಸಾ|| ಡಿ|| ಲೊ|| ಬೊರ್ಡ ವಿಜಾಪೂರ ಹೆಸರಲೆ ಕಳಿಸಬೇಕು. ಸದರಿ ಅರ್ಜಿಯಲ್ಲಿ ನೀವು ಯಾವ—ವರ್ಗದ ತರ್ಫೆಯಿಂದ ನಿಂದರ ಲಿಚ್ಛಿಸುವಿರಿ. ಅದನ್ನು ಖುಲಾಸಮಾಡಬೇಕು. ಮತ್ತು ನೀವು ಈ ಜಿಲ್ಹೇದ ರಹಿವಾಶಿ—ಇದ್ದಬಗ್ಗೆ ಮತ್ತು ಲೋಕಲ ಬೋರ್ಡ ಆಕ್ಟದ ಕಲ್ಮ್ ನೇದ್ದರ ಪ್ರಕಾರ ನಾಲಾಯಖ ಆಗದೇ ಇದ್ದ ಬಗ್ಗೆ ದಾಖಲೆ ಇಡಬೇಕು.

ಸ್ಕೂಲ ಬೋರ್ಡಿನ ಮೆಂಬರ ತಪಶೀಲು.

ಶೇಜನಂಬರ.	ವರ್ಗ.	ಸಂಖ್ಯಾ.
೧	ಶಿಕ್ಷಣದಲ್ಲಿ ಅನುಭವ ಇದ್ದವರು.	೧
೨	ಹೆಂಗಸರು.	೧
೩	ಮುಸಲ್ಮಾನ.	೧
೪	ಹಿಂದುಳಿದ ವರ್ಗ.	೨
೫	ಅಸ್ಪೃಶ್ಯ ವರ್ಗ.	೧
೬	ಮ್ಯುನಿಸಿಪಾಲಿಟಿ (ಗುಳೇದಗುಡ್ಡ ವ ಇಲಕಲ್ಲ.)	೨
೭	ಜನರಲ್.	೪
೮	ಸರಕಾರತರ್ಫೆ ನೇಮಿಸಲ್ಪಡವರು ನಿಧಾನ	೪
		೧೬

ವರ್ಗ ಈ ಶಬ್ದದ ವ್ಯಾಖ್ಯಾ ಇಲೆಕ್‌ಶನ್ ರೂಲ ೧೬ ವ ಶೆಡ್ಯೂಲ B ದರಲ್ಲಿ ನೋಡಬೇಕು.

ವರ್ಗ ನಂಬರ ೭ ನೇದ್ದರ ಉಮೇದ್ವಾರರು ಅರ್ಜಿಯನ್ನು ಕಳಿಸುವ ಕಾರಣ ಇಲ್ಲಾ. ಅವರು ತಾ|| ೨೬–೨–೧೯೨೬ ನೇ ದಿವಸ್ಸ ನಾಮಿನೇಶನ್ ಪೆಪರ ಮಾತ್ರ ಕೊಡಲಿಕ್ಕೆ Proposer ಮತ್ತು Seconder ಗೆ ಸಂಗಡ ಕರಕೊಂಡು ಬರಬೇಕು.

ತಾ|| ೧೦ ಮಾರ್ಚ ೧೯೨೬ ನೇ ದಿವಸ್ಸ ಇಲೆಕ್‌ಶನ್ ಕೆಲ್ಸ ಪೂರ್ಣಪಡಿಶಿ ತಾ|| ೧೧ ಮಾರ್ಚ ೧೯೨೬ ನೇ ದಿವಸ್ಸ ಮತಗಳನ್ನು ಎಣಿಶಿ ಆಖೇರ ನಿಕಾಲಿ ಪ್ರಶಿದ್ಧ ಮಾಡುವದರಲ್ಲಿ ಬರುವದು. ತಿಳಿಯುವದು ತಾ|| ೨೦–೧–೧೯೨೬ ಇಸ್ವಿ.

Sd/. S. T. PATIL.

President D. L. B.

ಕನ್ನಡ ಸಹಕಾರಿ

ಎಂಬ ನಿಖಿಲಕರ್ನಾಟಕದ ಸರ್ವತೋಮುಖವಾದ

ತಿಳಿಗನ್ನಡ ಪಕ್ಷಪತ್ರಿಕೆ.

ಈ ಪತ್ರಿಕೆಯ ಚಂದಾದರವು ವರ್ಷ ಒಂದಕ್ಕೆ ಅಂಚೆವೆಚ್ಚ ಸೇರಿ ಮೂರು ರೂಪಾಯಿ ಆಗಿರುತ್ತದೆ. ಪ್ರಾಥಮಿಕ ಶಾಲಾ ಉಪಾಧ್ಯಾಯರಿಗೆ ೨ ರೂಪಾಯಿ. ಶಾಲೆಯ ಅಥವಾ ಕಾಲೇಜುಗಳ ವಿದ್ಯಾರ್ಥಿಗಳಿಗೆ ೧|| ರೂಪಾಯಿ ಮಾತ್ರ. ಬಿಡಿಸಂಚಿಕೆಗಳು ಪ್ರತಿ ಒಂದಕ್ಕೆ ಎರಡು ಆಣೆಯಂತೆ ದೊರೆಯುವವು.

ವ್ಯವಸ್ಥಾಪಕ
ಕನ್ನಡ ಸಹಕಾರಿ ಮಂಗಳೂರ

ಲೋಕಬಂಧು

ಐರಣಿ ಇವರ ಸಂಪಾದಕತ್ವದ ಕೆಳಗೆ ಪ್ರತಿ ರವಿವಾರ ಹೊರಡುತ್ತಿದೆ. ಇದರಲ್ಲಿ ರಾಜಕೀಯ ಸಾಮಾಜಿಕ ಔದ್ಯೋಗಿಕ ಶೈಕ್ಷಣಿಕ ಮುಂತಾದ ವಿಷಯಗಳು ಚನ್ನಾಗಿ ಪ್ರತಿಪಾಲಿಸಲ್ಪಡುವದಲ್ಲದೆ ಎಲ್ಲ ಪ್ರಚಲಿತ ಸಂಗತಿಗಳು ಸುಲಭ ಭಾಷೆಯಲ್ಲಿ ಬರಿಯಲ್ಪಡುವವು.

ವಾರ್ಷಿಕ ವರ್ಗಣಿ ಮುಂಗಡ ೩-೮-೦ } ಮ್ಯಾನೇಜರ ಲೋಕಬಂಧು ಆ. ಧಾರವಾಡ.

ದ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ

ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೫ ಶ್ರೀ. ಧೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ವಾಯ, ಸಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೭ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೬೭ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೨೫ | ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ

ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ

ರಚಿತವಾದ ಸಚಿತ್ರ ಸಂಗೀತ ನಾಟಕಗಳು

ಕರ್ನಾಟಕ ಸಾಹಿತ್ಯ ಪರಿಷತ್ತಿನಿಂದ ಬಹುಮಾನ ಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ } ಅಂಚೆವೆಚ್ಚ
ಶಿಕ್ಷಣಸಂಭ್ರಮ ಬೆಲೆ ೧ ರೂ } ಬೇರೆ

ವಿಳಾಸ —ಗ್ರಂಥಕರ್ತ

ಕನ್ನಡ ನವಜೀವನ.

ಈ ವಾರಪತ್ರಿಕೆಯ ಪ್ರಥಮ ಸಂಪುಟದ ಸಂಚಿಕೆಗಳನ್ನೆಲ್ಲ ಬಾಯಿಂಡ ಮಾಡಿಸಿ ಇಟ್ಟಿದೆ. ಅಸಹಕಾರದ ಝುಂಝಾವಾತದಲ್ಲಿ ಮಹಾತ್ಮರ ಲೆಕ್ಕಣಿಕೆಯಿಂದ ಹೊರಸೂಸಿದ ಅಮೃತಮಯ ಲೇಖಗಳನ್ನು ಓದುವ ಇಚ್ಛೆಯಿದ್ದರೆ ಇಂದೇ ಪತ್ರ ಬರೆಯಿರಿ. ಪ್ರತಿಗಳು ಸ್ವಲ್ಪೇ ಉಳಿದಿವೆ. ಸಾದಾ ಬೈಂಡ ೬ ರೂ ತೊಗಲಿನ ಬೈಂಡ ೮-೮-೦.

ವ್ಯವಸ್ಥಾಪಕ,
"ಕನ್ನಡಿಗ" ಬಾಗಲಕೋಟೆ

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ,

ಎಮ್. ಎಲ್. ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರಮಾಸಪತ್ರಿಕೆ ಇದರಲ್ಲಿ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವರ್ಷಕ್ಕೆ ೧-೮-೦ ಬಿಡಿ ಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

' ಆರೋಗ್ಯಚಂದ್ರಿಕೆ ' ೩೨೩, ತಂಬುಶೆಟ್ಟಿಬೀದಿ, ಮದ್ರಾಸ

ಕಿರ್ಲೋಸ್ಕರವಾರ್ತೆ

ಸಂಪಾದಕ-ಶ್ರೀ. ಅ. ಕೃ. ಬಾಗಲ ವಾಙ್ಮಯವಿಶಾರದ

ಇದೊಂದು ತಿಳಿಗನ್ನಡ ಮಾಸಪತ್ರಿಕೆಯು. ಇದರಲ್ಲಿ ಕರ್ನಾಟಕ- ತರುಣರ ಉನ್ನತಿಯಾಗುವದಕ್ಕೆ ಅವಶ್ಯವಾದ ಲೇಖಗಳು ಪ್ರಕಟವಾಗುತ್ತವೆ. ಇದನ್ನು ನಿಯಮಿತವಾಗಿ ಓದುವದರಿಂದ ತರುಣರ ಆತ್ಮ ವಿಶ್ವಾಸವು ಜಾಗೃತಿಗೊಳ್ಳುವದು. ವಾರ್ಷಿಕಚಂದಾ ೧| ರೂ. ಮಾದರಿ ಸಂಚಿಕೆ ಪುಕ್ಕಟ ಇಂದೇ ಕಾಗದವನ್ನು ಬರೆದು ತರಿಸಿ ಕೊಳ್ಳಿರಿ

ಕಿರ್ಲೋಸ್ಕರವಾರ್ತೆ } **ಕಿರ್ಲೋಸ್ಕರವಾಡಿ
ಜಿಲ್ಹಾ ಸಾತಾರೆ**

ಗ್ರಾಮಸ್ಥರ ಮತ್ತು ವಕೀಲರ ನಮೂನೆಗಳು

೧ ನಮ್ಮ ಮುದ್ರಾಮಂದಿರದಲ್ಲಿ! ಗ್ರಾಮಸ್ಥರ ನಮೂನೆ ನಂಬರ ೧; ೧೪; ಮತ್ತು ೧೭ ದೊರೆಯುತ್ತವೆ. ಬೇರೆ ನಮೂನೆಗಳು ಬೇಕಾದಲ್ಲಿ ಮುದ್ರಿಸಿ ಕೊಡುವೆವು. ೨ ವಕೀಲರಿಗೆ ಬೇಕಾಗುವ ಬೇರೆ ಬೇರೆ ನಮೂನೆಗಳು ಮಾರಲಿಕ್ಕೆ ದೊರೆಯುತ್ತವೆ.

ಮುದ್ರಣ, ರೂಲಿಂಗ, ಬಾಯಿಂಡಿಂಗ ಕೆಲಸಗಳು ನಮ್ಮಲ್ಲಿ ದಕ್ಷತೆಯಿಂದ ಮಾಡಲ್ಪಡುವವು.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಮಾರತಕ್ಕದ್ದಿದೆ.

ಸುಪರ್ ರಾಯಲ್ ಆಕಾರದ ಹ್ಯಾಂಡ ಪ್ರೆಸ್ ಮತ್ತು ಪ್ರೂಫ ಪ್ರೆಸ್ಸಗಳನ್ನು ಮಾರತಕ್ಕವರಿದ್ದೇವೆ. ಇವು ಒಳ್ಳೇ ಸ್ಥಿತಿಯಲ್ಲಿದ್ದು ಚನ್ನಾಗಿ ಕೆಲಸ ಕೊಡುತ್ತವೆ.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಸಾಣೀಕಲ್ಲುಗಳು

ಸಣ್ಣ ದೊಡ್ಡ ಸಾಣೀ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ ಮುಂಗಡ ಹಣವಿಲ್ಲದೆ ೯೦.ಗಳ ವರೆಗೆ ಉದ್ರಿಕೊಡಲಾಗುವದಲ್ಲ. ವಿಶೇಷಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ಶ್ರೀಸಿಂಹ ಏಜನ್ಸಿ
ಬಾಗಲಕೋಟೆ (Dist. Bijapur)

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರರಾವ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ | ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ವದ್ಯ ೧ ಶಕೆ ೧೮೪೭. ತಾ॥ ೨೯-೧-೧೯೨೬. | ಸಂಚಿಕೆ ೪೨

ಸಂಪಾದಕರ ಭೂಮಿಕೆ.

(*)

ನನ್ನ ಮನಸಿನ ಮೋಹವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮು।
ಚಿನ್ನದಾದಲು ಚಿನ್ನ ಮೋಹಬಟ್ಟೆಯ ನೊಂದು
ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಉತ್ತರ ಕನ್ನಡ ಜಿಲ್ಹೆಯಲ್ಲಿ ಸಾಮಾನ್ಯವಾಗಿ ಟಪಾಲಿನ ಅವ್ಯವಸ್ಥೆಯು ಉಂಟೆಂಬ ಮಾತು, ಇಷ್ಟು ದಿನಗಳಿಂದಲೂ ಉತ್ತರ ಕನ್ನಡದ ಪತ್ರಿಕೆಗಳು ಕಿರಚಿಕೊಳ್ಳುವದರಿಂದ, ಎಲ್ಲರಿಗೂ ತಿಳಿದಿರಬಹುದಾದುದು. ಈ ತೊಂದರೆಯನ್ನು ಹೋಗಲಾಡಿಸಲಿಕ್ಕೆ ಉತ್ತರ ಕನ್ನಡದವರು, ಡಾ. ಯು. ರಾಮರಾಯರಿಗೂ ಶ್ರೀ ದತ್ತಾತ್ರೆಯರಾವ ಬೆಳವಿಯವರಿಗೂ ಈ ಪ್ರಶ್ನೆಯನ್ನು ಅಸೆಂಬ್ಲಿಯಲ್ಲಿಯೂ ಕೌನ್ಸಿಲ್ ಆಫ ಸ್ಟೇಟಿನಲ್ಲಿಯೂ ತರಬೇಕೆಂದು ಬೇಡಿದ್ದಾರೆ. ಈ ಪ್ರಶ್ನೆಯನ್ನು ಪ್ರಯಾಸಬಟ್ಟು ಬಿಡಿಸಿಕೊಟ್ಟಲ್ಲಿ ಈ ಮಹನೀಯರು ಉತ್ತರ ಕನ್ನಡಕ್ಕೆ ನಿಜವಾಗಿಯೂ ಉಪಕಾರ ಮಾಡಿದಂತಾಗುತ್ತದೆಂದು ನಾವೂ ದನಿಗೂಡಿಸಿ ಬೇಡಿಕೊಳ್ಳುತ್ತೇವೆ. ಸರಕಾರವಾದರೂ ಇಂಥ ವಿಷಯ ವಿಚಾರಣೆಯಲ್ಲಿ ಏಕಾಗಿ ಸುಮ್ಮನಿರಬೇಕಾದ ನಿಯಮ ನಿರ್ಬಂಧನೆಗಳ ಬಿಗುವಿನಲ್ಲಿರುವದೊ? ಬೇಡಿ ಇಸಗೊಂಡೇವೆಂದರೆ ಕಾಡಿ ಕಸಗೊಳ್ಳಿರೆಂದೇ ಸರಕಾರದ ಸಂದೇಶ ವಾದಂತಾಗಿದೆ. ಆದ್ದರಿಂದ ಸಾರ್ವಜನಿಕವಾಗಿ ಮುಂದೆ ಬಂದ ಈ ಪ್ರಶ್ನೆಯ ಯೋಗ್ಯವಿಚಾರವನ್ನು ಸರಕಾರದವರು ಮಾಡಬೇಕು.

ಕೊಡಗಿನ ನ್ಯಾಯವಿಧಾಯಕ ಸಭೆಯಲ್ಲಿ ಶ್ರೀ ನಿಡತದ ಸುಬ್ಬಣ್ಣಯ್ಯನವರು ಕನ್ನಡಿನಲ್ಲಿ ಮಾತನಾಡಲುಪಕ್ರಮಿಸಿದಾಗ್ಯೆ 'ಚೀಫ ಕಮೀಶನರ'ರು ಅದಕ್ಕೆ ಆಕ್ಷೇಪಿಸಿದ್ದನ್ನು ಕಂಡು ಆಶ್ಚರ್ಯವಾಗುತ್ತದೆ. ಕೊಡಗು ನಾಡಿನಲ್ಲಿ ಕನ್ನಡ ಒಂದೇ ದೇಶಭಾಷೆಯಾಗಿದೆ. ಉಳಿದ ಕಾಯದೇ ಮಂಡಲಗಳಲ್ಲಿ ಈ ಬಗೆಯ ಒಂದೇ ದೇಶಭಾಷೆಯ ಸೌಕರ್ಯವಿಲ್ಲದೇ, ಅನೇಕ ದೇಶಭಾಷೆಗಳಿಗೆ ಆಸ್ಪದವಿದ್ದಕೂ ಸಹ ಆ ಎಲ್ಲ ಭಾಷೆಗಳು ಕಾಯದೇ ಮಂಡಲಗಳಲ್ಲ ಬರಲು ನಿಯಮಗಳ ಆತಂಕವಿಲ್ಲ. ಇಷ್ಟೇ ಅಲ್ಲದೇ ದೇಶಭಾಷೆಗಳಲ್ಲಿ ಪ್ರತಿನಿಧಿಗಳು ಅವಶ್ಯವಾಗಿ ಮಾತನಾಡಬಹುದೆಂಬದಾಗಿ ಕಾನೂನದ ಆಧಾರವಿದೆ. ಮುಂಬೈ ಕಾಯದೇ ಮಂಡಲದಲ್ಲಿ ಉರ್ದೂ ಸಿಂಧೀ, ಗುಜರಾತೀ, ಮರಾಟೀ, ಕನ್ನಡಗಳಿಗೆ ಆಸ್ಪದವಿದೆ. ಮದ್ರಾಸ ಕಾಯದೇಮಂಡಲಗಳಲ್ಲಿ ತಮಿಳ ತೆಲಗು, ಮಲಿಯಾಳ, ಕನ್ನಡಗಳಿಗೆ ಆಶ್ರಯವಿದೆ. ಆದರೆ ಕೊಡಗಿನಲ್ಲಿ ಕನ್ನಡವೊಂದೇ ಪ್ರಧಾನ ಭಾಷೆಯಾಗಿರುವದರಿಂದ ನಿಜವಾಗಿ ನೋಡಿದರೆ ಕನ್ನಡದ ಹೊರ್ತು ಮಿಕ್ಕ ಯಾವ ನುಡಿಗೂ ಅಲ್ಲಿ ಆಸ್ಪದ ವಿರಕೂಡದು. ಇಂಗ್ಲೀಷಿಗೂ ಕೂಡ ಕೊಡಗು ಕಾಯದೇ ಮಂಡಲದಲ್ಲಿ ಬಹಿಷ್ಕಾರವಿರತಕ್ಕದ್ದು. 'ಚೀಫಕಮೀಶನರ' ಮೊದಲಾದ ಅಧಿಕಾರಿಗಳು ಕನ್ನಡವನ್ನು ಅವಶ್ಯವಾಗಿ ಕಲಿಯಬೇಕು. ಪರಿಸ್ಥಿತಿಯು ಹೀಗಿದ್ದರೂ ಸಹ ಕನ್ನಡದಲ್ಲಿ ಮಾತನಾಡಕೂಡದೆಂದು ಆಕ್ಷೇಪಿಸಿದ್ದು ಒಂದು ಬಗೆಯ ಉದ್ಧಾಮತನವೇ ಸರಿ. ಕಡೆಗೆ ಶ್ರೀ ಸುಬ್ಬಣ್ಣನವರ ಭಾಷೆಯನ್ನು ಇಂಗ್ಲೀಷಿನಲ್ಲಿ ಭಾಷಾಂತರಿಸುವ ಏರ್ಪಾಡುಮಾಡಿ 'ಚೀಫಕಮೀಶನರರು ತಮ್ಮ ಮಾನವನ್ನುಳಿಸಿಕೊಂಡದ್ದು ವಿಹಿತವಾಯಿತು. ಶ್ರೀ ಸುಬ್ಬಣ್ಣಯ್ಯನವರು ಸತ್ಯಾಗ್ರಹ ಮಾಡಿ, ಕೆಳಗೆ ಕುಳಿತು ಮೌನವ್ರತಸ್ಥರಾದ್ದರಿಂದ ಒಂದು ಬಗೆಯ ಜಯವು ಕನ್ನಡಕ್ಕೆ ದೊರೆಯಿತು. ಇದಕ್ಕಾಗಿ ಸುಬ್ಬಣ್ಣಯ್ಯನವರನ್ನು ನಾವು ಅಭಿನಂದಿಸುತ್ತೇವೆ. ಇನ್ನು ಮೇಲೆ ಕೊಡಗಿನ ಕಾಯದೇ ಮಂಡಲದಲ್ಲಿ ಕಾರ್ಯವೆಲ್ಲ ಕನ್ನಡದಲ್ಲಿಯೇ ನಡೆಯಬೇಕೆಂಬ ಠರಾವನ್ನು ಶ್ರೀ ಸುಬ್ಬಣ್ಣಯ್ಯನವರು ಬೇಗನೇ ತಂದು 'ಚೀಫಕಮೀಶನ'ರಿಗೆ 'ಬೋ' ಹಾಕಬೇಕಾಗಿ ಸೂಚಿಸುತ್ತೇವೆ.

ಮೈಸೂರ ಸರಕಾರದ ಪ್ರಕಟನಾ ಶಾಖೆಯಲ್ಲಿ- ನಡೆದ 'ಬೇಬಂದಶಾಹಿ'ಯು ಯಾರಿಗಾದರೂ ತಿರಸ್ಕಾರವನ್ನು ಹುಟ್ಟಿಸುವದು. ಆದರೆ 'ವಿಶ್ವಕರ್ನಾಟಕ'ದಲ್ಲಿ ಸಕಾಲಕ್ಕೆ ಟೀಕೆಗಳು ಬಂದಿದ್ದರೂ ಸಹ ಸರಕಾರದ ಲಕ್ಷವು ಅತ್ತ ಹೋಗದೇಯಿದ್ದುದು, ಮೈಸೂರ ಸರಕಾರದಂತಹ ಪ್ರಗತಿ ಪರವಾದ ಸಂಸ್ಥಾನಕ್ಕೆ ಒಪ್ಪುವಂತಹದಲ್ಲ. ಪ್ರಕಟನಾಶಾಖೆಯಲ್ಲಿ ಸಂಬಳ ಪಡೆಯುವಂತಹ ಜನವಿದ್ದಾರೆ; ಅವರು ಈ ಕೆಲಸಕ್ಕಾಗಿಯೇ ನೇಮಿಸಲ್ಪಟ್ಟಿದ್ದಾರೆ; ಹೀಗಿದ್ದರೂ ಸಹ ಪ್ರಕಟನಾಶಾಖೆಯ ಅಕ್ಟೋಬರ ತಿಂಗಳ ಇಂಗ್ಲೀಷ ಪತ್ರಿಕೆಯು ದಿಸೆಂಬರದಲ್ಲಿ ಪ್ರಸಿದ್ಧವಾಗಿದೆ! ಕನ್ನಡ ಪತ್ರಿಕೆಯಲ್ಲಿ ಇದಕ್ಕೂ ಹೆಚ್ಚಾದ 'ಬೇಬಂದಶಾಹಿ'ಯಿದೆ. ಎಂಜಲದ ವಿಷಯಗಳನ್ನೇ ಆರಿಸಿ ಇದರಲ್ಲಿ ಪ್ರಸಿದ್ಧಿಸುವರು. ನಿಯಮಿತತನವಂತೂ ಇಲ್ಲವೇ ಇಲ್ಲ. ಜುಲೈ ತಿಂಗಳ ಸಂಚಿಕೆಯು ದಿಸೆಂಬರದಲ್ಲಿ ಪ್ರಸಿದ್ಧವಾಗಿದೆ!! ಮೈಸೂರಿನಲ್ಲಿಯೇ ಈ ಬಗೆಯ ಮನ್ನಣೆಯು ಮಾತೃಭಾಷೆಗೆ ದೊರೆಯುತ್ತಿರುವದು ಯೋಗ್ಯವಲ್ಲ. ಅಧಿಕಾರಿಗಳು ಬೇಗನೇ ಎಚ್ಚರಿಯಲಿ!

ಶ್ಯಾಮಲಾದೇವಿಯು

ದುರಭಿಮಾನಿಯೇ?

ಕನ್ನಡಿಗರಾ, ಇವನೆಂಥ ಎದೆಗಾರನು? ನನ್ನಕ್ಕನ ಮೇಲೆ (ಹೆಣ್ಣು ಮಗಳೆಂದು ತಿಳಿದೋ ಏನೋ?) ಗದೆಯನ್ನೇ ಎತ್ತಿ ಬಿಟ್ಟಿದ್ದಾನೆ ಇಲ್ಲಣ್ಣಾ ಇಲ್ಲ. ತಿಳಿಯಿತು. ಇವನೊಬ್ಬ ಹಂಡಬಂಡನಿರಬಹುದು (ಅರ್ಧ ಕನ್ನಡ ಅರ್ಧ ಮರಾಠಿ) ಇಲ್ಲವಾದರೆ ಯಾವನೊಬ್ಬನ ಮರಾಟಿಗನ ಕೈಯೊಳಗಿನ ಆಟದ ಗೊಂಬೆಯಾಗಿರಬಹುದು. ಮತ್ತಿನ್ನೇನು? "ಮೃದಂಗೋ ಮುಖಲೇಪೇನ ಕರೋತಿ ಮಧುರಧ್ವನಿಮ್"

ಕನ್ನಡಿಗರಾ, ನಿಜವಾಗಿಯೂ ನನ್ನ ಶ್ಯಾಮಲಕ್ಕನು ದುರಭಿಮಾನಿಯೇ? ಅವಳು ಸ್ವಾಭಿಮಾನದ ಮೂರ್ತಿಯು ಪುರುಷರೆಂದು ಜಂಬಪಡೆದು ತಮ್ಮ ಜನರನ್ನು ತಾವೇ ತಿರಸ್ಕರಿಸುವಂತಹ (ಈ "ಪ್ರೀತಿಯ ಅಂಣ"ನಂತಹ) ಜನರು ಇನ್ನೆಂಥ (ಹೆಣ್ಣು ಮಗಳಾದರೇನಾಯಿತು) ಹಲವು ಗುಣಗಳನ್ನು ಕಲಿಯಬೇಕಾಗಿದೆ. ದುರ್ದೈವದಿಂದ ಕನ್ನಡಿಗರ ಸ್ಥಿತಿಯು ಇಲ್ಲಿಯವರೆಗೆ ಬಂದಿದೆ. ಅಂಣಾ, ನನ್ನಕ್ಕನ ಲೇಖದ ಸಾರವು ಗಂಧರ್ವನ ವಿಷಯಕ ದ್ವೇಷವಲ್ಲ; ಮಹಾರಾಷ್ಟ್ರ ರಂಗಭೂಮಿಯ ಅವಹೇಲನವಲ್ಲ; ಭಾಟಿಯವರಂಥ ಸ್ವಾರ್ಥತ್ಯಾಗಿಯ (ವ್ಯಕ್ತಿಯ) ಸಲುವಾಗಿ ಅಸೂಯೆ ತಿರಸ್ಕಾರವಲ್ಲ. ನನ್ನಕ್ಕನ ಲೇಖದ ಮೂಲೋದ್ದೇಶವು ಕನ್ನಡಿಗರಿಗೆಲ್ಲರಿಗೂ ಉಪದೇಶಪರವಾಗಿರುವದೆಂಬುದು ಅವಳ ಕಡೆಯ ವಾಕ್ಯದ ಮೇಲಿಂದಲೇ ತಿಳಿದು ಬರುವದು. ಗಂಧರ್ವನು ಸಂಗೀತ ಸಾಮ್ರಾಜ್ಯದಲ್ಲಿ ಸಮ್ರಾಟನೆಂಬುದು ನಿಜ, ಅಭಿನಯ ಪಟುವೆಂಬುದೂ ಅಹುದು. ಈ ಪ್ರೀತಿಯ ಅಂಣನು ಬರೆದಂತೆ ನಾಟ್ಯಕಲೆಯ ಎಲ್ಲ ಅಂಗಗಳು ಸಂಪೂರ್ಣವಾಗಿ ಗಂಧರ್ವನಲ್ಲಿ ಕಂಡು ಬರುವದಾದರೂ ಸತ್ಯವೇ ಸರಿ ಗಂಧರ್ವನ ಕಂಪನಿಯು ಮಹಾರಾಷ್ಟ್ರಕ್ಕೆ (ಹಿಂದುಸ್ಥಾನಕ್ಕೂ ಸಹ?) ಆದರ್ಶಭೂತವಾಗಿರುವದನ್ನು ನಾನು ಒಪ್ಪುವೆನು ಆದರೆ ಕನ್ನಡಿಗರಾ (ಇದು ಮಾತ್ರ ಬಹು ದುಃಖದಾಯಕ ಸಂಗತಿಯು) ಇಂತಹ ಅಪೂರ್ವ ಕಂಪನಿಯು ಅನ್ನುದ್ದಿಷ್ಟವಾಗಿ ಕನ್ನಡಿಗರನ್ನು ಜರಿದು ನುಡಿದರೂ ಕನ್ನಡಿಗರು ಅದರನ್ನು ಎತ್ತಿ ಹಿಡಿಯುವದೆಂದರೆ ಎಷ್ಟು ಲಾಂಛನಾಸ್ಪದವು? ಹುಬ್ಬಳ್ಳಿಯ 'ಲೋಕಮತ' ಕಾರರು ಪ್ರಕಟಿಸಿದಂತೆ "ಥಿಯೇಟರಾತ ಸಗಳೇ ಮೋಂಥರೀ ಭರಲೇ ಆಹೇತ" ಎಂಬ ಅನಿಸಿಕೊಂಡರೂ ಅಭಿಮಾನಶೂನ್ಯರಾಗಿ ಹಣಕೊಟ್ಟು ಅವರ ಹೋರೆಯನ್ನು ನೋಡಲು ಈ 'ಪ್ರೀತಿಯ ಅಂಣ'ಂದಿವರಿಗೆ ನಾಚಿಕೆಯಾದರೂ ಹೇಗೆ ಬರಲಿಲ್ಲವೋ ತಿಳಿಯದು ಪರಕೀಯನು ತನ್ನ ಗುಣದಿಂದ ಎಷ್ಟೋ ಉಜ್ವಲನೂ, ಆದರಣೀಯನೂ, ಅನುಕರಣೀಯನೂ ಇದ್ದರೂ ಅವನಿಂದ ಮತ್ತೊಂದು ಜನಾಂಗದ ಅವಹೇಲನ ವಾಗುತ್ತಿರಲು ನನ್ನ ಸಹೃದಯ ಶ್ಯಾಮಲಕ್ಕನು ಕಣ್ಣಿಗೆ ಕಾಣ್ಣಿಲುವದು ಹೇಗೆ? ಆವೇಶದ ಭರದಲ್ಲಿ ಒಂದೆರಡು ಬಿಸಿನುಡಿಗಳು ಅವಳ ಲೆಕ್ಕಣಿಕೆಯಿಂದ ಹೊರಬಿದ್ದಿರಬಹುದು ಅವುಗಳನ್ನು ಈ 'ಪ್ರೀತಿಯ ಅಂಣ'ನು ಸಹಿಸಲಾಗಲಿಲ್ಲೇ? ಅಣ್ಣಾ, ನನ್ನಕ್ಕನ ಎರಡು ಅಕ್ಷರದ ಮಾತುಗಳನ್ನು ಕೇಳದ ನೀನು ಪರರಿಂದ ಉಪಹಾಸದ ನುಡಿಗಳನ್ನು ಕೇಳಿ ಓದಿ ತಣ್ಣಗೆ ಕೂತೆಯಾ? ಆಹಾ ಎಂತಹ ಸಹನ ಶೀಲತೆಯು! ಎಂತಹ ಧೈರ್ಯವು!! ಅಪೂರ್ವ ಸ್ವಾರ್ಥತ್ಯಾಗವು!!! ಆದುದರಿಂದಲೇ ಕನ್ನಡಿಗರು ದಶಾವತಾರದ ಕೀಲಿಯ ಹತ್ತಿರುವ ಕನ್ನಡ ನಾಟಕ ಕಲೆಯು ಹಿಂದಾಗಿದೆ; ಗಾಯನ ಕಲೆಯು ಪರಿಪಕ್ವತೆಯನ್ನು ಹೊಂದಿಲ್ಲ; ಒಂದೇ ಒಂದು ವ್ಯಕ್ತಿಯಲ್ಲಿ ನಾಟ್ಯ ಕಲೆಯ ಎಲ್ಲ ಗುಣಗಳು ಸಧ್ಯಕ್ಕೆ ಸಿಕ್ಕುವದಿಲ್ಲ. ಇದಕ್ಕೆಲ್ಲ ಏನು ಕಾರಣವು? ಕನ್ನಡಿಗರ ಔದಾಸೀನ್ಯ, ಸ್ವಾಭಿಮಾನ ಶೂನ್ಯತೆ, ಪರಗುಣ–ಪ್ರಭ್ಯಾಪನ ಅಕ್ಕ ಪ್ರತಾರಕ ಇವುಗಳಲ್ಲದೆ ಮತ್ತೇನು? ಯಾರಾದರೂ ಏನಾದರೂ ಹೇಳ ಬಂದರೆ ಅವರನ್ನು ಉತ್ತೇಜಿಸುವದು ಒತ್ತಟ್ಟಿಗಿರಲಿ, ನಿಂದಿಸುವವರೇ ಕರ್ನಾಟಕದಲ್ಲಿ ಬಹಳ. ಎಂದ ಮೇಲೆ ಪರಕೀಯರು ನಗಬಾರದೇಕೆ? ಗಂಧರ್ವನು ಗಂಧರ್ವನಾಗಲು ಎಷ್ಟು ದಿನಗಳು ಬೇಕಾದವು. ಎಷ್ಟು ಕಡೆಯಿಂದ ಅವನಿಗೆ ಉತ್ತೇಜನವು ದೊರೆಯಿತು? ಮರಾಟಿಗರು ಅವನ ವಿಷಯಕ್ಕೆ ಎಷ್ಟು ಅಭಿಮಾನ ತಾಳಿಗಳು? ಅಂತಹ ರತ್ನವು ಕರ್ನಾಟಕದಲ್ಲಿರುವದಿಲ್ಲದಕ್ಕೇನು ಅಂತಂತಹೋ ಭಗವಂತನೇ ಬಲ್ಲ. ಈ 'ಪ್ರೀತಿಯ ಅಂಣ'ನು ಟಿ ರಾಘವಾಚಾರ್ಯರ ಹೆಸರನ್ನು ಕೇಳಿಲ್ಲವೇ? ಪಾಪ! "ರಂಗಭೂಮಿ" ಪತ್ರ ಪಟಗಳನ್ನಾದರೂ ನೋಡದಾರದಿಲ್ಲ, ತನ್ನ ಸೊತ್ತು ಎಷ್ಟು ಚಿಕ್ಕದಾದರೂ ತನ್ನದೆಂಬ ಅಭಿಮಾನವೇ ಹೆಚ್ಚು ತನ್ನದೆಂಬ ಸ್ವಾತಂತ್ರ್ಯವೇ ಮೇಲು. 'ಪ್ರೀತಿಯ ಅಂಣ', 'ಭಂಗಬಟ್ಟೆಂಬಕಸಿಯನ್ನ ತಿಂಕಲೂ ತಂಗಾಳದ ಲೇಸು' ಎಂಬ ಸರ್ವಜ್ಞ ವಚನವನ್ನು ಓದಿಲ್ಲವೇ? ಓದಿಲ್ಲವಾದರೆ ಕೇಳು.

ಇನ್ನು ಭಾಟಿಯವರ ಪ್ರಕರಣವು ಇದರ ವಿಷಯಕ್ಕೆ 'ಲೋಕಪಕ್ಷ' ಮತ್ತು 'ಕೇಸರಿ' ಈ ಎರಡೂ ಪತ್ರಗಳಿಗೂ ವಿಚಾರಾಂಶವನ್ನು ಪ್ರಕಟಿಸಲು 'ಜಯಕರ್ನಾಟಕ'ವು ಆಹ್ವಾನವನ್ನು ಕೊಟ್ಟು ಎರಡು ತಿಂಗಳಾಗುತ್ತ ಬಂದರೂ ಏಕೂ ನಿಜಸ್ಥಿತಿಯು ಹೊರಬೀಳಲಿಲ್ಲ. ಏಕೆ? ಹೆಚ್ಚಾಗಿ ಕೆದರಿದರೆ ಹುಳುಕು ಹೊರಬೀಳುವವು. ಇಸ್ತ್ರಿಯನ್ನು ಮುಚ್ಚಿದ ಹಾಗೆ ಕಪ್ಪೇ, ಗೋಡೆಯನ್ನು ಕೊರೆದ ಹಾಗೆ ಹುಂಚೇ ಹೊರೆಡುವದಲ್ಲವೇ? ಶ್ರೀ ಭಾಟಿಯವರು ಸುಧಾರಕರು, ಸ್ವಾರ್ಥತ್ಯಾಗಿಗಳು ಡೆಕ್ಕನ್ ಎಜ್ಯುಕೇಶನ್ ಸೋಸಾಯಟಿಯಲ್ಲಿ ಹಗಲಿರಳೂ ಅವಿಶ್ರಾಂತವಾಗಿ ವಿದ್ಯಾದಾನಕ್ಕಾಗಿ ಹೆಣಗಾಡುವವರು ಇವೆಲ್ಲ ಅಂಶಗಳಲ್ಲಿ ಅವರು ಸರ್ವಥಾ ಅಭಿನಂದನೀಯರು. ಆದರೆ ನನ್ನಕ್ಕನು ಅವರ ಈ ಗುಣಗಳಿಗಾಗಿ ಮತ್ಸರ ಪಟ್ಟಿಲ್ಲ ಅವರ ಸ್ವಾರ್ಥತ್ಯಾಗಕ್ಕಾಗಿ ಅವಳಲ್ಲಿ ಆದರವಿಲ್ಲವೆಂತಲ್ಲ. ಅವರಂತಹ ವ್ಯಕ್ತಿಯು ಕರ್ನಾಟಕದಲ್ಲಿ ಒಂದಾದರೂ ಇಲ್ಲವೆಂಬುದು ಅವಳ ಹೃದಯದಲ್ಲಿ ಕುದಿಯುತ್ತಿರಬಹುದು ಆದರೆ ಕರ್ನಾಟಕದಲ್ಲಿ ಈ ಮರಾಟಿಗರ ಗೊಂದಲವೇಕೆ? ಧಾರವಾಡ ಕರ್ನಾಟಕ ಕಾಲೇಜದಲ್ಲಿ ಮರಾಟಿಗರು (ಪ್ರೊಫೆಸರರು ಮತ್ತು ಹುಡುಗರು) ಈ ಭಾಟೀ ಪ್ರಕರಣಕ್ಕೆ ಕಾರಣರೆಂಬುದು ಎಲ್ಲ ವಿದ್ಯಾರ್ಥಿಗಳಿಗೂ ಗೊತ್ತಂಟು ಅದರಲ್ಲಿಯೂ ಗ್ಯಾದರಿಂಗ ಕಮಿಟಿಯ ಚೇರಮನ್ನರಾದ ಪ್ರೊ. ಭಟ್ಟರವರು ಇದಕ್ಕೆ ಮೂಲ ಪುರುಷರು ಶ್ರೀ ಭಾಟಿಯವರು ಮೊದಲು ನಿಮಂತ್ರಿಸಲ್ಪಟ್ಟಿದ್ದರಂತೆ. ಮುಂದೆ ಬರಬೇಡಿರೆಂದು ತಾರು ಹೋಯಿತಂತೆ. ಮುತ್ತೊಂದು ಕೆಲಸಕ್ಕಾಗಿ ಆಹೊತ್ತು ಶ್ರೀ ಭಾಟಿಯವರು ಧಾರವಾಡಕ್ಕೆ ಬಂದಿದ್ದರಂತೆ ಅವರನ್ನು ಒಬ್ಬರು ಹೋಗಿ ಕಾಲೇಜಕ್ಕೆ ಕರೆದು ಕೊಂಡು ಬಂದರಂತೆ. ಅವರು ಬಂದ ಕೂಡಲೇ ಬೇಡೆಂದರೂ ಬಂದರೆಂದು ತಿಳಿದು ಹುಡುಗರು ನಕ್ಕರಂತೆ ನಕ್ಕಿರಬಹುದು. ಆಶ್ಚರ್ಯವೇನಿದೆ? ಇಷ್ಟು ಗೊಂದಲವಿದ್ದಾಗ ಪ್ರೊ. ಭಟ್ಟರು ಅವರು ಕಾಲೇಜಕ್ಕೆ ಕರಿಸಬಾರದಾಗಿತ್ತು. ಕರಿಸಿದರೂ ಶ್ರೀ ಭಾಟಿಯವರು ಬರಬಾರದಾಗಿತ್ತು. ಬಂದ ಮೇಲೆ ಉಪಾಯವಿಲ್ಲ ಒರಳಿನಲ್ಲಿ ತಲೆ ಇಟ್ಟರೆ ಒನಕೆಯ ಪೆಟ್ಟು ತಪ್ಪುವದೇ? ಇಷ್ಟಾದರೂ ಸಹ ಧಾರವಾಡದ ಮಾತೃಜ್ಞರಾದ ದಿವಾನಬಹದ್ದೂರ ರೊದ್ದ ಶ್ರೀನಿವಾಸರಾಯರು ಶ್ರೀ. ಭಾಟಿಯವರ ಮಾತುಗಳನ್ನು ಕೇಳಿರೆಂದು ಹೇಳಿದ ಮಾತ್ರವೇ ಎಲ್ಲರೂ ಸೌಜನ್ಯದಿಂದಿದ್ದು ಶಾಂತಿಯಿಂದ ಅವರ ಭಾಷಣವನ್ನು ಕೇಳಿದರಂತೆ. ಇದಕ್ಕೂ ಹೆಚ್ಚಿನ ಸನ್ಮಾನವು ಶ್ರೀ. ಭಾಟಿಯವರಿಗೆ ಈ ಪ್ರಸಂಗದಲ್ಲಿ ಇನ್ನುವುದಾಗಬೇಕಿತ್ತು? ದೇಶ, ಕಾಲ, ಪಾತ್ರ ಪ್ರಸಂಗಕ್ಕನುಸರಿಸಿ ಅದಷ್ಟೆಲ್ಲ ಒಳಿತೇ ಆಗಿದೆ ಇದನ್ನನು ಲಕ್ಷಿಸಿಯೇ ಶಾಮಲಕ್ಕನು ಮರಾಟಿಗರ ಹಾವಳಿಯನ್ನು ನಿಗ್ರಹಿಸಬೇಕೆಂದು ಬರೆದಿರುವಳಲ್ಲದೆ ವ್ಯಕ್ತಿದ್ವೇಷ, ಭಾಷಾ ದ್ವೇಷ, ಸಮಾಜದ್ವೇಷದಿಂದಲ್ಲ, ಸ್ತ್ರೀಯರ ಕೋಮಲ ಹೃದಯಕ್ಷೇತ್ರದಲ್ಲಿ ಇಂಥ ಕಂಟಕಗಳು ಎಂದಾದರೂ ಸಿಕ್ಕುವವೇ?

ಶ್ಯಾಮಲಕ್ಕನು ಲೇಖನ ವ್ಯವಸಾಯವನ್ನೇ ಕೈಕೊಳ್ಳುವದಾದರೆ ಒಂದು ವಿಷಯವನ್ನು ಚನ್ನಾಗಿ ಅಭ್ಯಾಸಮಾಡಿ ಆದರ ಮೇಲೆ ಲೇಖನಗಳನ್ನು ಬರೆಎಂದು "ಪ್ರೀತಿಯಅಂಣ"ನು ಉಪದೇಶಿಸಿರುವನು. ಯೋಗ್ಯ, ಸರ್ವಥಾಯೋಗ್ಯ ಆದರೆ ಅಂಣಾ, ನನ್ನಕ್ಕನಿಗೆ ನಿನ್ನಂತೆ ಪರರ ಬಂಟತನವನ್ನೇ ಹೊಗಳಿ ಅಕ್ಕ ಲಾಭವನ್ನು ಪ್ರಕಟಿಸುವ ಧೈರ್ಯವಿಲ್ಲರ್ಯ್ಯ ನೀನು ಮಾತ್ರ ಅವಳ ಮಾತುಗಳನ್ನು ತಪ್ಪು ತಿಳಿದು ಇದ್ದುದನ್ನು ಮುಚ್ಚಿ ಇಲ್ಲದ್ದನ್ನು ಬರೆದು ಭಗಿನೀಪ್ರೇಮವನ್ನು

ಸಮಾಜದ್ರೋಹವನ್ನು ಬಗೆದು ಕೀರ್ತಿ ಪಂಕ ನಾದೆ. ಶಾಕಯ್ಯಾ ಸಾಕು ಇನ್ನು ಮಾತ್ರ ಮುಂದುವರಿಯ ಬೇಡ. ಇಲ್ಲವಾದರೆ ಎಷ್ಟು ಬೇಳುವಿ ಕೆಂದರೆ ನಿಂನ ಕಂಟಾಗಳು ಅದವು ಕಂದವುಗಳು, ನಮ್ಮಲ್ಲಿನ ಇನ್ನೂ ಕರ್ನಾಟಕದಲ್ಲಿ ಇಂಥ ಮಹಾ ಪುರುಷರು ಇರುವರೆಂದು ತಿಳಿದು ವ್ಯಸನ ಪಡುತ್ತಿರ ಬಹುದು. ಬೇಡವ್ವಾ ಶಾಮಲಕ್ಕಾ ನೀನೇ ಸೂ ಚಂಕೆ ಮಾಡ ಕೂಡದವ್ವಾ ಸಾನಿದ್ದೀಕೆ. ನಿನ್ನ ಕಿರಿಕವ್ವ ಈ ಪೋಕರಿಗಳು ನಿನಗೇನು ಮಾಡುವರು.? ನೀನು ನಿನ್ನ ಸ್ವಾಭಿಮಾನ ವನ್ನು ಕಾಲತ್ರಯದಲ್ಲಿಯೂ ಬಿಡಬೇಡವ್ವಾ, ಇಷ್ಟೇ ನನ್ನ ಕೋರಿಕೆ.

— ಶ್ಯಾಮಲಕ್ಕನ ಕಿರಿಕವ್ವ.

ಸರಕಾರದವರು ಕರ್ನಾಟಕದ

ಕಡೆಗೆ ಕಣ್ಣು ಚನ್ನಾಗಿ ತೆಗೆಯ ಬೇಕು.

ಶುದ್ಧ ಕರ್ನಾಟಕ ಜಿಲ್ಹೆಗಳಲ್ಲಿ ಸರಕಾರೀ ಕಾಗದ ಪತ್ರಗಳ ನಮೂನೆಗಳನ್ನು ಇನ್ನೂ ಮರಾಠಿ ಭಾಷೆಯಲ್ಲಿ ಅಚ್ಚುಹಾಕಿ ಕಳಿಸುವ ದನ್ನು ನೋಡಿ ಯಾವ "ಕನ್ನಡಿಗ"ನೂ ದುಃಖಿತನಾಗದೇ ಇರಲಿಲ್ಲ. ಬಾಗಲಕೋಟೆಯ ಸರ್ವೇ ಆಫೀಸಿನಲ್ಲಿ ನಕಲಿನ ಅರ್ಜಿ ಫಾರ್ಮುಗಳು ಶುದ್ಧವಾಗಿ ಮರಾಠಿ ಇರುತ್ತವೆ. ದಯಮಾಡಿ ಸರಕಾರದವರು ಹಿಂದೆ ಮರೆತಂತೆ ಮುಂದೆ ಮರಿಯದೆ ಕರ್ನಾಟಕದಲ್ಲಿ ಸರಕಾರದ ಎಲ್ಲ ಆಫೀಸಿನಲ್ಲಿಯೂ ಸಂಪೂರ್ಣವಾಗಿ ನಮೂನೆಗಳನ್ನು ಕನ್ನಡದಲ್ಲಿಯೇ ಅಚ್ಚು ಹಾಕಿಸಿ ಕಳಿಸುವ ವ್ಯವಸ್ಥೆ ಆಗಬೇಕೆಂದು ವಿನಂತಿ ಇದೆ

—ಮುರಗಪ್ಪಾ ಸ್ವಾಮಿ ಜಂಗಿನ.

ಮಹಾ ಸಮಾರಾಧನೆಯ ಉತ್ಸವವು

ಬಾಗಲಕೋಟೆಯು ಕಳೆದವಾರದಲ್ಲಿ ಭಕ್ತರ ಸಂದಣಿಯಿಂದ ತುಂಬಿ ತುಳುಕುತ್ತಿದ್ದಿತು. ಮಧ್ವನವಮಿಯಿಂದ ತ್ರಯೋದಶಿಯ ವರೆಗೆ ಶ್ರೀ. ರಾಮದೇವರ ಉತ್ಸವ, ಪಂಡಿತರ ಪರೀಕ್ಷೆ. ತೀರ್ಥ ಪ್ರಸಾದ, ಸಂಭಾವನೆ, ದಕ್ಷಿಣೆಗಳ ಕಾರ್ಯಕ್ರಮವು ಅತ್ಯಂತ ವಿಜೃಂಭಣೆ ಯಿಂದ ಸಾಂಗವಾಯಿತು. ಕರ್ನಾಟಕದ ಎಲ್ಲ ಭಾಗಗಳಿಂದಲೂ ಪಂಡಿ ತರೂ, ಸುಪ್ರಸಿದ್ಧ ವೈದಿಕರ ಗೃಹಸ್ಥರೂ ಇತರ ಭಕ್ತರೂ ಬಂದಿದ್ದರು. ಒಟ್ಟಿಗೆ ೫ ಸಾವಿರ ಜನರು ಹೊರಗಿನಿಂದ ಬಂದಿದ್ದರೆಂಬದಾಗಿ ತಿಳಿಯು ತ್ತದೆ. ಕಡೆಯ ದಿನವಂತೂ ಮಂಟಪವು ಸಾಲದೇ ಗ್ರಾಮದೇವತೆಯಾದ ಕಿಲ್ಲೇಯಲ್ಲಿಯ 'ದ್ಯಾಮವ್ವ'ನ ಗುಡಿಯ ವರೆಗೆ ಬ್ರಹ್ಮವೃಂದವು ಭೋಜನಕ್ಕೆ ಕುಳಿತಿದ್ದಿತು. ೧೮ ಸಾವಿರ ರೂಪಾಯಿಗಳು ಭೋಜನದ ದಕ್ಷಿಣೆಯಲ್ಲಿ ವಿನಿಯೋಗವಾದವು. ಪಂಡಿತರ ಸಂಭಾವನೆಗಾಗಿ ೧೦-೧೨ ಸಾವಿರ ರೂಪಾಯಿಗಳು ಬೇರೆ. ಶ್ರೀ. ಸತ್ಯಧ್ಯಾನ ತೀರ್ಥಂ ಗಳವರ ಉದಾರ ಮನಸ್ಸು, ಪಂಡಿತರ ಬಗ್ಗೆ ಅವರಲ್ಲಿದ್ದ ಅಭಿಮಾನ, ಭಕ್ತರನ್ನು ಕಂಡರೆ ಅವರಿಗುಂಟಾಗುವ ಆನಂದ, ಇವುಗಳನ್ನು ಇಲ್ಲಿ ಕಲೆತ ಮಹಾ ಜನಗಳು ಕಣ್ಣಾರೆ ಕಂಡು ಧನ್ಯರಾದರು. ಇದಕ್ಕೆ ಪರ ಮತೀಯರು ಸಹ ತಲೆದೂಗುತ್ತಿರುವರು. ಬಾಗಲಕೋಟೆಯಲ್ಲಿ ಇದಂಥ ಉತ್ಸವ ಸಮಾರಂಭವು ಹಿಂದಕ್ಕೆ ಎಂದಿಗೂ ಆಗಿಲ್ಲವೆಂದು ಮುದುಕರು ಹೇಳುತ್ತಿರುವರು.

ದಿನಾಲು ಹರಿಕೀರ್ತನೆಯು ನಡೆಯುತ್ತಲಿದ್ದಿತು. ಶ್ರೀ ಮುಧ ವೇಡಕರ ಕೃಷ್ಣರಾಯರು ಮಾಡಿದ ಅರ್ವಾಚೀನ ಪದ್ಧತಿಯ ಕೀರ್ತ ನವೂ ಒಂದು ದಿನವಾಯಿತು. ಸ್ತ್ರೀಯರೂ, ವೈದಿಕರೂ, ಗೃಹಸ್ಥರೂ ಈ ಕೀರ್ತನೆಗಾಗಿ ಬಹು ಮೆಚ್ಚಿದರು. ವಿಜಾಪೂರ ಬ್ರಾಹ್ಮಣ ಸಂಘದ ಪತಿಯಿಂದ ದ್ವಾದಶಿಯ ದಿನ ಜಾಹೀರ ವ್ಯಾಖ್ಯಾನವೂ ಆಯಿತು. ಶ್ರೀ ಕೂರ್ಮಾಚಾರ್ಯರು ಅಧ್ಯಕ್ಷರಿದ್ದರು ಸಮಾರಾಧನೆಯಲ್ಲಿ ಆಗುತ್ತಿರುವ ಅನ್ನದಾನದ ವೆಚ್ಚವು ಇಷ್ಟು ಮಿತಿಮೀರಿ ಇಂತಹ ಅವ್ಯ ವಸ್ಥೆಯಿಂದ ಆಗಬಾರದೆಂಬದಾಗಿ ಓರ್ವರು ವಿಧಾನಮಾಡಿದರು. ಕೂಡಲೇ ಟೀಕೆ, ಪ್ರತಿಟೀಕೆ, "ಅವ್ಹಾನಗಳಾಗಿ" ಸಭೆಯಲ್ಲಿ ಗಲಾಟೆಯೆ ದ್ದಿತು. ಈ ಬಗೆಯ ಪದ್ಧತಿಯು ಬ್ರಾಹ್ಮಣರಿಗೆ ಸರ್ವಥಾ ಅಯೋ ಗ್ಯವಾದುದೆಂದೂ, ಶಾಂತತೆಯು ಬ್ರಾಹ್ಮಣರಲ್ಲಿ ಯಾವಾಗಲೂ ಇರ ತಕ್ಕದ್ದೆಂದೂ ವೇ॥ ಕೂರ್ಮಾಚಾರ್ಯರು ಹೇಳಿ ಸಭೆಯಲ್ಲಿ ಶಾಂತತೆಯನ್ನುಂಟು ಮಾಡಿದರು.

ತೀರ್ಥಪ್ರಸಾದ, ಮುದ್ರಾಧಾರಣೆ, ಸಂಭಾವನಾಗ್ರಹಣ, ಶ್ರೀ. ರಾಮದರ್ಶನಗಳ ಕಾಲದಲ್ಲಿ ಆಬಾಲವೃದ್ಧರೂ, ಸ್ತ್ರೀಪುರುಷರೂ, ಪಂಡಿ ತ ಪಾಮರರೂ, ಯಾವ ಬಗೆಯ ಶಿಸ್ತನ್ನು ಪಾಲಿಸದೇ, ಸ್ವಯಂಸೇ ವಕರ ಮಾತನ್ನು ಲಕ್ಷಿಸದೇ, ಮನಬಂದಂತೆ ವರ್ತಿಸಿ ಗಲಾಟೆ ಮಾ ಡುವ ಪದ್ಧತಿಯು ನಮ್ಮ ಸಮಾಜದಲ್ಲಿ ಬಹು ರೂಢವಾಗಿದೆ, ಅದು ಬೇಗನೇ ದೂರಾಗುವ ಲಕ್ಷಣವೂ ಕಾಣದು. ಇದೊಂದು ನಮ್ಮಲ್ಲಿ ಯ ದೊಡ್ಡ ಕುಂದು. ಅದೇ ರೀತಿಯಾಗಿ ಎಲೆಯಲ್ಲಿ ಚೆಲ್ಲುವದು, ಮನೆಗೆ ಉಂಡಿ ಚಲೇಬಿಗಳನ್ನು, ಇತರ ಸಾಮಾನುಗಳನ್ನು ಹೊತ್ತು ಕೊಂಡು ಹೋಗುವದು, ಇವೇ ಮೊದಲಾದ ದುಷ್ಟ ಆಚರಣೆಗಳು ಬ್ರಾಹ್ಮಣ ಕುಲಕ್ಕೆ ಒಪ್ಪುವಂತಹವಲ್ಲವೆನ್ನುವದನ್ನು ಇಲ್ಲಿ ನಿವೇದಿಸಲು ನಾವು ಅತ್ಯಂತ ವಿಷಾದ ಪಡುತ್ತೇವೆ. ಸ್ವಾರ್ಥ, ಶಿಲ್ಹಾರೇ, ಮಾಧ್ವಾ ಯನರಿಗೆಲ್ಲ ಮಠದ ರಾಯಸ್ಸನ್ನು ಕಳಿಸಿ, ಮಾಧ್ವಮತೀಯರಾಗಿದ್ದರೂ, ಶ್ರೀ ರಾಘವೇಂದ್ರ ಸ್ವಾಮಿಗಳ ಮಠದ ಶಿಷ್ಯರಿಗೆ ಕಳಿಸದೇ ಇದ್ದುದು ಏಕೋ ಸರಿಯಾಗಿ ಕಾಣದು.

'ಕನ್ನಡಿಗ'ನೂ ಹಂದರೆದ ಜಡ್ಡು

ಕಳೆದ ವಾರದಲ್ಲಿ ಬಾಗಲಕೋಟೆಯಲ್ಲಾದ ಮಹಾ ಸಮಾರಾಧನೆ ಯ ಉತ್ಸವಕ್ಕಾಗಿ 'ಕನ್ನಡಿಗ'ನ ೧೬ ಪುಟಗಳುಳ್ಳ ಸಂಚಿಕೆಯು ಹೊರಟಿತು. ಆ ದಿನದಿಂದಲೇ ಸಮಾರಂಭವು ಪ್ರಾರಂಭವಾಗಿ ಮೊಳೆ ಜೋಡಿಸುವವರೂ ಮುದ್ರಕರೂ ಬಾರದೇ ೫—೬ ದಿನಸಾಟೀ ತೆಗೆದುಕೊಂಡದ್ದರಿಂದ, ಈ ಸಲ ಕನ್ನಡಿಗನ ನಾಲ್ಕೇ ಪುಟಗಳು ಹೊರ ಟಿವೆ. ಮುಂದಿನ ವಾರದಲ್ಲಿಯೂ ನಾಲ್ಕೇ ಪುಟಗಳು ಹೊರಡುವವು, ಆ ಮೇಲೆ ಯಥಾ ಪ್ರಕಾರವಾಗಿ ೮ ಪುಟಗಳು ಪ್ರಕಟವಾಗುವವು.

ವ್ಯವಸ್ಥಾಪಕ

—'ಕನ್ನಡಿಗ'

ಇಹವೃತ್ತ

ಊರಲೆಲ್ಲ ಶ್ರೀಗಳಾಗಮನದ ಗದ್ದಲವೇ ಗದ್ದಲವಾಗಿದೆ.

ಮುಂಬೈ ಇಲಾಖೆಯ 'ಸೆಟ್ಲಮೆಂಟಗಳಲ್ಲಿ ಸಿದ್ಧವಾದ' ವಸ್ತುಗಳ ಪ್ರದರ್ಶನವು ಹುಬ್ಬಳ್ಳಿಯಲ್ಲಿ ಜರಗಿತು. ಈ ಊರ 'ಸೆಟ್ಲಮೆಂಟ'ದವರು ಒಳ್ಳೇ ಉತ್ತಮವಾದ ಕಟ್ಟಿಗೆಯ ಜಿನಸುಗಳನ್ನು ಸಿದ್ಧ ಪಡಿಸಿ ಒಯ್ದಿ ದ್ದಾರೆ.

ಹಿಂದೂ ಮುಸಲ್ಮಾನರ ಕಲಹದ ಕೆಟ್ಲೆಯು 'ಸ್ಪೆಶಲ್ ಮ್ಯಾಜಿ ಸ್ಟ್ರೇಟ'ರಾದ ಶ್ರೀ. ಮುಡಕವಿಹರಿಯವರಿಂದ ಪುನಃ ಚೌಕಶೀ ಮಾಡಲ್ಪ ಡುವದು.

'ಕನ್ನಡಿಗನು' ಸೂಚಿಸಿದಂತೆ ಮುನಸಿ ಪಾಲ್ಟಿಯವರು ಬೀದಿಗಳಲ್ಲಿಯ ಧೂಳನ್ನು ನೀರು ಉಸುಕು ಹಾಕಿ, ಗಟ್ಟಿ ಮಾಡಿ ದ್ದಾರೆ. ಅಂತೂ ನಗರ ಪಿತೃಗಳು ಸಾರ್ವಜನಿಕ ವಿಷಯದ ಕಡೆಗೆ ಲಕ್ಷಕೊಡುತ್ತಿರುವರು. ಸಂತೋಷದ ಮಾತು.

ವಿಜಾಪೂರ ಜಿಲ್ಹಾ ಕಲೆಕ್ಟರ ಸಾಹೇಬರವರ ಪ್ರವಾಸದ ಕಾರ್ಯಕ್ರಮವು.

ಜನೇವರಿ ತಾ॥ ೨೮ ಇಂಡಿ; ೩೦ ವಿಜಾಪೂರ ೩೦ ರಿಂದ ಫೆಬ್ರುವರಿ ೨ ರ ವರೆಗೆ ಮನಗೋಳಿ; ೩—೮ ಬಾಗೇವಾಡಿ; ೯—೧೧ ಮುಳವಾಡ; ೧೨—೧೬ ವಿಜಾಪೂರ; ೧೮—೨೦ ಕೊಲ್ಹಾರ; ೨೧—೨೫ ಬಾಗಲ ಕೋಟೆ; ೨೬—೨೮ ಹುನಗುಂದ

ಜಾಹೀರಾತು.

ಈ ಜಾಹಿರಾತದಿಂದ ವಿಜಾಪೂರ ಜಿಲ್ಹೆಯ ಯಾವತ್ತು ಜನರಿಗೆ ತಿಳಿಸುವದೇನಂದರೆ—

ಪ್ರಾಥಮಿಕ ಶಿಕ್ಷಣದ ಕಾಯದೇ ಅನ್ವಯ ಮಾಡಿದ ಲೋಕಲ ಬೋರ್ಡ ಕಾಯದೇ ಅನ್ವಯಾ ಈ ಜಿಲ್ಹೆಯಲ್ಲಿ ಪ್ರಾಥಮಿಕ ಶಾಲೆಗಳು ಡಿ|| ಲೋಕಲ ಬೋರ್ಡಿಗೆ ಬರತಕ್ಕದ್ದವೆ. ಈ ಬಗ್ಗೆ ಕೆಳಗೆ ತೋರಿಸಿದ ಪ್ರಕಾರ ಸ್ಕೂಲಬೋರ್ಡಿನ ನಿವಡಣೂಕ ಆಗಬೇಕಾಗಿದೆ, ಆ ಸಂಬಂಧಿ ಇಲೆಕ್ಶನ ತಾ|| ೧೦ ಮಾರ್ಚ ೧೯೨೬ ನೇದ್ದನೇ ನೇಮಿಸಿದೆ. ಕಾರಣಾ ಸದ್ರಿ ಬೋರ್ಡಿಗೆ ಉಮೇದ್ವಾರರಾಗಿ ನಿಂದರ ಲಿಚ್ಛಿಸುವರು ಸ್ಕೂಲಬೋರ್ಡ ಇಲೇಕ್ಶನ ನಿಯಮ ೨ ನೇ ದ್ದರ ಪ್ರಕಾರ ತಾ|| ೫ ಫೇಬ್ರುವಾರಿ ೧೯೨೬ ನೇದ್ದರ ವಳಗಾಗಿ ತಂಮ ಅರ್ಜಿಯನ್ನು ಮೆ|| ಪ್ರೆ|| ಸಾ|| ಡಿ|| ಲೊ|| ಬೊರ್ಡ ವಿಜಾಪೂರ ಹೆಸರಲೆ ಕಳಿಸಬೇಕು. ಸದರಿ ಅರ್ಜಿಯಲ್ಲಿ ನೀವು ಯಾವ—ವರ್ಗದ ತರ್ಫೆಯಿಂದ ನಿಂದರ ಲಿಚ್ಛಿಸುವಿರಿ. ಅದನ್ನು ಖುಲಾಸಮಾಡಬೇಕು. ಮತ್ತು ನೀವು ಈ ಜಿಲ್ಹೆದ ರಹಿವಾಶಿ—ಇದ್ದಬಗ್ಗೆ ಮತ್ತು ಲೋಕಲ ಬೋರ್ಡ ಆಕ್ಟದ ಕಲ್ಮ ೯ ನೇದ್ದರ ಪ್ರಕಾರ ನಾಲಾಯಖ ಆಗದೇ ಇದ್ದ ಬಗ್ಗೆ ದಾಖಲೆ ಇಡಬೇಕು.

ಸ್ಕೂಲ ಬೋರ್ಡಿನ ಮೆಂಬರ ತಪಶೀಲು.

ಕ್ರಮನಂಬರ.	ವರ್ಗ.	ಸಂಖ್ಯಾ.
೧	ಶಿಕ್ಷಣದಲ್ಲಿ ಅನುಭವ ಇದ್ದವರು.	೧
೨	ಹೆಂಗಸರು.	೧
	ಮುಸಲ್ಮಾನ.	೧
೪	ಹಿಂದುಳಿದ ವರ್ಗ.	೨
೫.	ಅಸ್ಪೃಶ್ಯ ವರ್ಗ.	೧
೬	ಮ್ಯುನಿಸಿಪಾಲಿಟಿ (ಗುಳೇದಗುಡ್ಡ ವ ಇಲಕಲ್ಲ.)	೨
೭	ಜನರಲ್.	೪
೮	ಸರಕಾರತರ್ಫೆ ನೇಮಿಸಲ್ಪಡವರು ನಿಧಾನ	೪
		೧೬

ವರ್ಗ ಈ ಶಬ್ದದ ವ್ಯಾಖ್ಯಾ ಇಲೆಕ್ಶನ್ ರೂಲ ೧೬ ವ ಶೆಡ್ಯೂಲ B ದರಲ್ಲಿ ನೋಡಬೇಕು.

ವರ್ಗ ನಂಬರ ೭ ನೇದ್ದರ ಉಮೇದ್ವಾರರು ಅರ್ಜಿಯನ್ನು ಕಳಿಸುವ ಕಾರಣ ಇಲ್ಲಾ. ಅವರು ತಾ|| ೨೬-೨-೧೯೨೬ ನೇ ದಿವ್ಸ ನಾಮಿನೇಶನ್ ಪೇಪರ ಮಾತ್ರ ಕೊಡಲಿಕ್ಕೆ Proposer ಮತ್ತು Seconder ಗೆ ಸಂಗಡ ಕರಕೊಂಡು ಬರಬೇಕು.

ತಾ|| ೧೦ ಮಾರ್ಚ ೧೯೨೬ ನೇ ದಿವ್ಸ ಇಲೆಕ್ಶನ್ ಕೆಲ್ಸ ಪೂರ್ಣವಡಿತಿ ತಾ|| ೧೧ ಮಾರ್ಚ ೧೯೨೬ ನೇ ದಿವ್ಸ ಮತಗಳನ್ನು ಎಣಿಶಿ ಆಖೇರ ನಿಕಾಲೆ ಪ್ರಶಿದ್ಧ ಮಾಡುವದರಲ್ಲಿ ಬರುವದು. ತಿಳಿಯುವದು ತಾ|| ೨೦-೧-೧೯೨೬ ಇಸ್ವಿ.

Sd/. S. T. PATIL.

President D. L. B.

Notice for Tenders.

Sealed tenders are invited for constructing an opthalmic wing in the compound of the Civil Hospital at Bijapur, estimating Rs. 11360/ and will be received by the Under signed in his office at Bijapur up to 10 A.M. on 2 nd February 1926. A sum of Rs. 300/ in currency notes should accompany the tender as earnest money. Blank forms of tender can be had on payment of Re. 1/ to the Accountant of this office.

The plan of the building is kept in the office and may be seen by the tenderer personally.

Office of the Ex. Engr. B. D.
Bijapur,
16-1-26.

Sd. S. B. Rege.
Executive Engineer
Bijapur Division

ಈ ಪತ್ರವು ಮುಂಗಳವೇಢ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಸಲ್ಪಟ್ಟಿತು.

೧೮೪೭

ವಾ. ಚಂದಾ ೧-೮-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡದ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೫ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ವದ್ಯ ೭ ಶಕೆ ೧೮೪೭. ತಾ॥ ೫-೨-೧೯೨೬. | ಸಂಚಿಕೆ ೪೩

ಸಂಪಾದಕರ ಭೂಮಿ.

(*)

ನನ್ನ ಮನಸಿನ ಮೋಹವೂಡಿ ಕಟ್ಟುವೆನಾನು ।
ನಿನ್ನ ದೆಸೆಯ ಮಾಡಿದಂಥ ಮುಕ್ಕಳ ದೊಸು ।
ಚಿನ್ನದಾದರು ಚಿನ್ನ ಮೋಹಬಸ್ತಿಯ ನೊಂದು
ಚಿನ್ನಯಾಕಾಶದಲ್ಲ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ಸಿದ್ಧಗಾಲ ಸಿದ್ಧವಿದೆ ।
ಕನ್ನ ಪ್ರಾಣವು ನಿನ್ನ ಗದ್ದುಗೆಯನು ಬೀರಬಸ
ಗಂಧವಹವೆಂದು ತಿಳಿಯೆ ॥

—ಅಂಬಿಕಾತನಯ ದತ್ತ

ಕರ್ಣಾಟಕ ಸಾಹಿತ್ಯ ಪರಿಷತ್ತೂ ಕನ್ನಡದಲ್ಲಿ ಸಹಿಯೂ— ಕರ್ನಾಟಕ- ಸಾಹಿತ್ಯ ಪರಿಷತ್ತಿನ ವಿಶೇಷ ಅಧಿವೇಶನವು ಒಳ್ಳಾರಿಯಲ್ಲಿ ಕೂಡಿದ್ದು ಎಲ್ಲರಿಗೂ ಗೊತ್ತಿದೆ. ಆಗಿನ ಸಭಾಕಾರ್ಯದಲ್ಲಿ ಯಾವತ್ತು ಠರಾವುಗಳೂ ಕಾರ್ಯಕ್ರಮಗಳೂ ಆಂಗ್ಲಭಾಷೆಯಲ್ಲಿ ನಡೆದವು. ಇದನ್ನು ಕಂಡು 'ವಸಂತ' ದ ಸಂಪಾದಕರಾದ ಕೊ. ಶಿ. ಕಾರಂತರವರಿಗೆ ಆಶ್ಚರ್ಯವಾಯಿತು. ಅದು ಸ್ವಾಭಾವಿಕವೇ. ಕರ್ಣಾಟಕ. ಸಾಹಿತ್ಯವನ್ನು ಪುನರುಜ್ಜೀವಿಸಿ, ಉಳಿಸಲು ಹೊರಟ ಪರಿಷತ್ತು ತನ್ನ ಕಾರ್ಯಕಲಾಪವನ್ನೆಲ್ಲ ಆಂಗ್ಲಭಾಷೆಯಲ್ಲಿ ನಡೆಯಿಸುವದೆಂದರೆ ಸೋಜಿಗದ- ನಗೆಗೀಡಾದ ಮಾತೇಸರಿ. ಕಾರಂತರವರು ಇದರ ವಿಷಯದಲ್ಲಿ ಒಂದು ಚಿಕ್ಕ ಲೇಖವನ್ನು ಬರೆದು, 'ಕನ್ನಡಿಗ'ನಿಗೆ ಕಳುಹಿಸಿದರು. ಅದರಿಂದ ಪರಿಷತ್ತಿನ ಮೇಲೆ ಏನೂ ಪರಿಣಾಮವಾಗಿಲ್ಲ; ಇಷ್ಟೇ ಅಲ್ಲ, ಆದರ ಗೌರವಕಾರ್ಯದರ್ಶಿಗಳಾದ ಬೆಳ್ಳಾವೆ ವೆಂಕಟನಾರಣಪ್ಪನವರು ಒಂದು ಸ್ವಲ್ಪ ಮುನಿದು ಕೊಂಡಿದ್ದಾರೆ. ಪರಿಷತ್ತಿನ ವಿಚಿತ್ರ ವರ್ತನದಬಗ್ಗೆ ಪ್ರಕಟವಾದ ಬರಹವನ್ನು ಓದಿಕೊಂಡು, ಶ್ರೀ. ವೆಂಕಟನಾರಾಣಪ್ಪನವರು 'ಕನ್ನಡಿಗ'ನಿಗೆ ಹೀಗೆ ಆಂಗ್ಲಭಾಷೆಯಲ್ಲಿ ತಿಳುಹಿಸಿದ್ದಾರೆ. (ಸಾಹಿತ್ಯ ಪರಿಷತ್ತಿನೊಡನೆ 'ಕನ್ನಡಿಗ'ನು ಪತ್ರವ್ಯವಹಾರವನ್ನು ಆಗಾಗ್ಗೆ ನಡೆಯಿಸುತ್ತಿರುತ್ತಾನೆ ಗೌರವಕಾರ್ಯದರ್ಶಿಗಳು ವಾಡಿಕೆಯಾಗಿ ಕನ್ನಡದಲ್ಲಿ ಪತ್ರ ಬರೆದು ಇಂಗ್ಲೀಷದಲ್ಲಿ ಸಹಿ ಹಾಕುತಲಿದ್ದರು. ಈ ಸಾರೆ, ಸಿಟ್ಟಿಗೆದ್ದು, ಹೋಗಲಿ ನಿನ್ನ ಮನಸಿ ಪಾಳಾಗ! ತಗೋ ಇಂಗ್ಲೀಷಿನಲ್ಲಿ ಪತ್ರಾ! ಎಷ್ಟದ ನಿನ್ನ ದವಣಿಗೆ 'ಕನ್ನಡಿಗಾ' ಎಂದಂದ್ಕೊಂಡು ಇಂಗ್ಲೀಷಿನಲ್ಲಿ ಪರಿಷತ್ತಿನ ಕೆಲಸಗಾರರು ಇಂಗ್ಲೀಷಿನಲ್ಲಿ ಸಹಿ ಮಾಡುವದರಬಗ್ಗೆ ಕನ್ನಡಿಗನಲ್ಲಿ ಪ್ರಕಟವಾದ ಟಿಪ್ಪಣಿಯನ್ನು ನಾನು ನೋಡಿದೆನು. ಕನ್ನಡಭಾಷೆಯು ಏಳ್ಗೆಯಾಗಲು, ನಾವು ಇಂಗ್ಲಿಷನ್ನು ಮರೆಯುವದಾಗಲಿ ಅದನ್ನು ಪೂರ್ಣವಾಗಿ ಬಿಟ್ಟುಕೊಡುವುದಾಗಲಿ ಬೇಕಿಲ್ಲ. ಕನ್ನಡ ಭಾಷೆಯ ಅಭಿವೃದ್ಧಿ ಯಾಗಲು, ಇನ್ನೂ ಚೆನ್ನಾಗಿ ನಾವು ಆಂಗ್ಲಭಾಷೆಯ ಅಭ್ಯಾಸವನ್ನು ಮಾಡಬೇಕು.) ಆಂಗ್ಲ ಬರೆದು ಬಿಟ್ಟಿದ್ದಾರೆ) ' I saw the note in your paper about the parishats officials ' sjgning in English For getting or giving up English is not necessary to improve our vernacular. In fact we should cultivate still letter the study of English so that we may improve Kannab ಭಾಷೆಯನ್ನು ಮರೆಯಬೇಕೆಂದಾಗಲಿ, ಸಂಪೂರ್ಣವಾಗಿ ಅದನ್ನು ಬಿಡಬೇಕೆಂದಾಗಲಿ ಕಾರಂತರವರು ಬರೆದಿಲ್ಲ. 'ಕನ್ನಡಿಗ'ನೂ ಬರೆದಿಲ್ಲ, ಬರೆಯುವದಿಲ್ಲ. ಶ್ರೀ. ವೆಂಕಟನಾರಣಪ್ಪನವರು ಕನ್ನಡಿಗನಲ್ಲಿ ಪ್ರಕಟವಾದ ಸುಶಿಕ್ಷಿತ ಕನ್ನಡಿಗರಲ್ಲಿ ಒಂದು ಬಿನ್ನಪ (ಸಂಚಿಕೆ ೩೩) ಎಂಬ ಬರಹವನ್ನು ಓದಬೇಕೆಂದು ನಮ್ಮ ಆಗ್ರಹ. ಅದರಲ್ಲಿ ನಾವು ಇಂಗ್ಲೀಷ ಅಭ್ಯಾಸವನ್ನು ಚೆನ್ನಾಗಿ ಮಾಡಬೇಕೆಂದು ಕನ್ನಡಿಗರಿಗೆ ಸೂಚಿಸಿದ್ದೇವೆ. ಇಲ್ಲದ್ದನ್ನು ಎಣಿಸಿಕೊಂಡು ಜವಾಬ್ದಾರಿಗಳಾದ ಅಧಿಕಾರಿಗಳು ಬರೆಯ ಬಾರದಾಗಿ ಬೇಡಿಕೆ. ಹೀಗಿರಲು ಆಂಗ್ಲಭಾಷೆಯನ್ನು ಓದಬೇಡಿರೆಂದು ಯಾವ ಗೂಗೆಯ ಹೇಳಿರುವದಯ್ಯ; ಸಹಿಯನ್ನು ಕನ್ನಡದಲ್ಲಿ ಮಾಡಿರಿ; ಸಾಹಿತ್ಯ ಪರಿಷತ್ತಿನ ಕಾರ್ಯಕಲಾಪವೆಲ್ಲ ಕನ್ನಡದಲ್ಲಿಯೇ ನಡೆಯಲಿ ಎಂಬುದೇ ಬರಹದ ಉದ್ದೇಶವು. ಪತ್ರವನ್ನು ಕನ್ನಡಲ್ಲಿ ಬರೆದು. ಇಂಗ್ಲೀಷಿನಲ್ಲಿ ಸಹಿಯನ್ನು ಹಾಕಿದರೆ, ಕನ್ನಡ ಭಾಷೆಯು ಸುಧಾರಿಸಿದಂತಾಯಿತೋ? ಇಂಗ್ಲೀಷ ಸಹಿಯಲ್ಲಿ ಕರ್ಣಾಟಕ ಸಾಹಿತ್ಯದ ಜೀವಾಳವುಂಟೋ? ಅಥವಾ ಅದರ ಬೆಳವಣಿಗೆಯ ಮೊಳಕೆ ಯುಂಟೋ ? ಆಂಗ್ಲಭಾಷೆಯಲ್ಲಿ ಸಹಿ ಮಾಡಿದೊಡನೆ ಕನ್ನಡಕ್ಕೆ ಉಕ್ಕು ಬರುವದೋ? ಅದರಲ್ಲಿರುವ ಮಾಟವಾದರೂ ಏನು; ಇಂಗ್ಲೀಷಿನಲ್ಲಿ ಎಲ್ಲ ವ್ಯವಹಾರವನ್ನು ನಡೆಯಿಸಿದರೂ ಕೂಡ, ಕನ್ನಡಕ್ಕೆ ಕಳೆಯೇರಿ ಜೀವ ಬರುವಂತಿದ್ದರೆ, ಮನೆಯ ಮಾತು ಕಥೆಗಳೂ ಕನ್ನಡದಲ್ಲಿ ಸಾಗಲಿ. ಅಂದರೆ ಇದಕ್ಕೂ ತೀವ್ರವಾಗಿ ಕನ್ನಡವು ಕಮನೀಯವಾಗಿ ಬೆಳೆಯುವದು. ಆ ಕನ್ನಡದ ತಾಯಿಯು ಪರಿಷತ್ತಿನ ಅಧಿಕಾರಿಗಳನ್ನು ಹಾಡಿ ಹರಸುವಳು. ಮಿಲ್ಟನನು ಲ್ಯಾಟಿನ ಭಾಷೆ

ಯ ಭಕ್ತನು ಪಾಪ, ಅವನಿಗೇನು ಗೊತ್ತು, ನಮ್ಮ ಪರಿಷತ್ತಿನವರ ವಿಚಾರವು. ಲ್ಯಾಟಿನ ಭಾಷೆಯಲ್ಲಿ ಪಾರಂಗತನಿದ್ದರೂ ಕೂಡ ತನ್ನ ಸ್ವಭಾಷೆಯಾದ ಇಂಗ್ಲಿಷ ನಲ್ಲಿಯೇ, 'ಪ್ಯಾರಡಾಯಿಜ, ಲಾಸ್ಟ' ಎಂಬ ಗ್ರಂಥವನ್ನು ಬರೆದನು. ಅವನ ಲ್ಯಾಟಿನ ಭಾಷೆಯಲ್ಲಿ ಅದನ್ನು ಬರೆದಿದ್ದರೆ ಇಂಗ್ಲೀಷ ಭಾಷೆಯೂ ಇನ್ನೂ ಹೆಚ್ಚು ಸುಧಾರಿಸಬಹುದಾಗಿತ್ತು. ಲೋ. ಟಿಳಕ; ಆಗರಕರ ಚಿಪಳೂಣಕರ ಮೊದಲಾದವರ ಉದಾಹರಣೆಗಳನ್ನಾದರೂ ನಮ್ಮ ಪರಿಷತ್ತಿನ ಅಧಿಕಾರಿಗಳು ನೆನೆಯಲಿ. ಅಯರಿಶ ಕವಿಯಾದ, ಈ ಇವನ ಉದಾಹರಣೆಯಾದರೂ ಪರಿಷತ್ತಿನ ಮುಂದೇ ಇದೆ. ಪರಿಷತ್ತಿನವರ ಮತವೇನೇ ಇರಲಿ. ಕನ್ನಡ ಸಾಹಿತ್ಯವು ಬೆಳೆಯಬೇಕಾದರೆ ಕನ್ನಡಿಗ- ಕನ್ನಡಿಗರಲ್ಲಿಯ ಎಲ್ಲ ವ್ಯವಹಾರವೂ ಕನ್ನಡದಲ್ಲಿಯೇ ಸಾಗತಕ್ಕದ್ದು—

ಶ್ರೀ ಶಿವಯೋಗ ಮಂದಿರ ಜಾತ್ರೆಯು.

ಕರ್ನಾಟಕ ಮತ್ತು ಬೇರೆ ಬೇರೆ ಪ್ರಾಂತಗಳಿಂದ ಧರ್ಮಪರಾಯಣರೂ ಶಾಸ್ತ್ರಜ್ಞರೂ ಕಲಾಕೋವಿದರೂ ಪ್ರಸಿದ್ಧ ವ್ಯಾಖ್ಯಾತರೂ ಮತ್ತು ಕೀರ್ತನಕಾರರೂ ಬರುವರು. ಒಕ್ಕಲಿಗರಿಗೆ ಅನುಕೂಲವಾಗಬೇಕೆಂದು ಜಮಖಂಡಿ, ಚಿಂತಲಿ ಕುರವತ್ತಿ, ಶಿರಹಟ್ಟಿ, ಜಾತ್ರೆಗಳಂತೆ ಎತ್ತುಗಳ ಪ್ರದರ್ಶನ ಇತ್ಯಾದಿ ಕಾರ್ಯಗಳಿಗೆ ಹೆಚ್ಚು ಸಾಹಾಯ್ಯ ದೊರಕುವ ಏರ್ಪಾಡು ಮಾಡಲ್ಪಡುವದು. ಮತ್ತು ಉತ್ತಮವಾಗಿ ಸಾಕಿ ಸಲುಹಿದ ಎತ್ತು ಹೋರಿಗಳಿಗೆ ತಜ್ಞಮಂಡಲದವರು (ಸಿಲೆಕ್ಟ ಕಮೀಟಿಯವರು) ಇನಾಮುಗಳನ್ನು ಹಂಚುವರು. ಇನ್ನು ಹೊಸ ಪದ್ಧತಿಯ ಒಕ್ಕಲತನದ ಸಾಮಾನುಗಳನ್ನು ಉಪಯೋಗಿಸುವದಕ್ಕಾಗಿ ಬರಬೇಕೆಂದು ಒಂದು ಒಕ್ಕಲತನ ಪ್ರದರ್ಶನವು ಇಡಲ್ಪಡುವದು. ಇದಲ್ಲದೆ ವೀರಶೈವರಾಗಲೀ ಇಲ್ಲವೆ ಕರ್ನಾಟಕದ ಬೇರೆ ಯಾವದೇ ಜನಾಂಗದವರಾಗಲೀ ಕೈಗಾರಿಕೆಯಲ್ಲಿ ನಿಪುಣರಾದವರು ತಮ್ಮ ಕೈಗಳಿಂದಲೇ ತಯಾರಿಸಿದ ಸಾಮಾನುಗಳನ್ನೂ, ಕಸೀದೆ, ಹಣಿಕೆ ಬಟ್ಟೆಗಳನ್ನೂ, ಕಟ್ಟಿಗೆ ಕಬ್ಬಿಣಗಳಿಂದ ಮಾಡಿದ ಪ್ರದರ್ಶನೀಯ ಸಾಮಾನುಗಳನ್ನೂ ಪಂಚಸೂತ್ರಗಳ ಸೂಕ್ಷ್ಮ ಹಿಡಿದ ಲಿಂಗಗಳನ್ನೂ ಶಾಸ್ತ್ರೋಕ್ತವಾದ ಭಸ್ಮ ಮುಂತಾದ ಎಲ್ಲ ಬಗೆಯ ಕೌಶಲ್ಯದ ಸಾಮಾನುಗಳನ್ನೂ ಒಳಮಾಡಿಕೊಂಡು ಕೈಗಾರಿಕೆಯ ವಸ್ತು ಪ್ರದರ್ಶನವನ್ನು ಮಾಡುವದು ನಿರ್ಣಯಿಸಲ್ಪಟ್ಟಿದೆ. ಅವುಗಳಲ್ಲಿ ಉತ್ತಮವೆಂದು ನಿರ್ಣಯಿಸಲ್ಪಟ್ಟ ವಸ್ತುವಿಗೆ ಇನಾಮುಗಳನ್ನೂ ಅನೇಕ ತರದ ಉತ್ತೇಜನವನ್ನೂ ಕೊಡುವವರಲ್ಲಿ ಬರುವದು

ಟೀಪು:— (೧) ಹೆಣ್ಣು ಮಕ್ಕಳ ದೆಸೆಯಿಂದ ಸಭೆಯ ವ್ಯವಸ್ಥೆಯು ವಿಶೇಷ ಕಾಳಜಿಯಿಂದ ಬೇರೆಯಾಗಿ ಮಾಡಲ್ಪಡುವದು.

(೨) ಕೈಗಾರಿಕೆಯ ಸಾಮಾನುಗಳನ್ನು ಟಪಾಲದ್ವಾರ ಇಲ್ಲವೆ ರೇಲ್ವೆಯಿಂದ ಮ್ಯಾ। ಕುಣಸಿಮಠ ಪೋ|| ಮಾ|| ಬದಾಮಿ ಇವರ ಹೆಸರಿನಿಂದ ತಾರೀಖು ೮-೨-೧೯೨೬ ರೊಳಗಾಗಿ ತಮ್ಮ ವಿಳಾಸವನ್ನು ಸ್ಪಷ್ಟವಾಗಿ ಬರೆದು ಕಳಿಸಬೇಕು. ಅಂದರೆ ಕೆಲಸ ತೀರಿದ ಕೂಡಲೇ ತಿರುಗಿ ಪರತ ಕಳಿಸಲಿಕ್ಕೆ ಅನುಕೂಲವಾಗುವದು,

(೩) ಎತ್ತು ಹೋರಿಗಳನ್ನು ಮಾರಲಿಕ್ಕೆ ತರುವವರು ತಾರೀಖು ೧೦-೨-೧೯೨೬ ಒಳಗಾಗಿ ಮಂದಿರಕ್ಕೆ ಬರಬೇಕು. ಅವರ ಮೊದಲಾದ ವ್ಯವಸ್ಥೆ ಮಾಡಲ್ಪಡುವದು.

ಶ್ರೀ ಮದುತ್ತರಾದಿ ಮಠಾಧೀಶರು. ಅಥವಾ

ಮಹಾಸಮಾರಾಧನೆಯು ಭೋಜನಪ್ರಧಾನವದೋ!

ಬಾಗಲಕೋಟೆಯು ಬಹು ಧನ್ಯವಾಯಿತು ಇಲ್ಲಿಯ ವೈಷ್ಣವ ವೃಂದವು ಹೊತ್ತ ಹರಕೆಯು ಒಮ್ಮೆ ಕೈಗೂಡಿತು ಬ್ರಾಹ್ಮಣರ ಬಹು ದಿವಸದ ಹಾರೈಕೆಯು ಇದೊಮ್ಮೆ ಈಡೇರಿತು. ಪ್ರಚಂಡವಾದ ಜನಸಮುದಾಯದಿಂದ ನದೀ ದಂಡೆಯ ಮೇಲಿನ ಭವ್ಯ ಮಂಟಪವು ಮಂಡಿತವಾಯಿತು. ಮಹಾನುಭಾವರ ಮಹಾಸಮಾರಾಧನೆಯು ಮಹೋತ್ಸವದಿಂದ ಸಾಂಗವಾಯಿತಷ್ಟೆ? ಇರಲಿ. ವಿಶಾಲವಾದ ಪಾಕಶಾಲೆ ಮತ್ತು ಭವ್ಯವಾದ ಭೋಜನಶಾಲೆಗಳ ಪ್ರೇಕ್ಷಕರು ಮಹಾಸಮಾರಾಧನೆಯೆಂದರೆ 'ಸವಿಯೂಟದ ಸೊಬಗು' ಎಂದು ಊಹಿಸುವದು ಸಹಜವು. ಬಹು ಜನರಿಗೆ ಹೀಗೆ ಅನಿಸುವದೂ ಸಹಜವು. ಈ ಜನರನ್ನು ಛಲಿಸುವದಕ್ಕಾಗಿಯೇ 'ಇನ್ನೇನು ಉಂಡಿ ಜಿಲೇಬಿಗಳು ಹಾರಾಡುವವು' ಎಂದು ಬಾಗಕೋಟಿನ ಪ್ರಯೋಗವನ್ನು 'ಕನ್ನಡಿಗನು' ಮಾಡಿದ್ದನ್ನು ಓದುಗರು ಮರೆತಿರಲಿಕ್ಕಿಲ್ಲ ಮಹಾಸಮಾರಾಧನೆಯೆಂದರೆ ಭೋಜನ ಪ್ರಧಾನವೆಂದು ಎಲ್ಲರಿಗೂ ಅನಿಸುವದು.

ಆದರೆ ಸ್ವಲ್ಪ ವಿಚಾರಿಸಿದರೆ, ದೂರದೂರಿನ ಜನರು ನಾಲ್ಕು ದಿವಸ ಸವಿಯೂಟ ಸವಿಯುವದಕ್ಕಾಗಿ ಹೊಟ್ಟೆಗೆ ಕಲೆಯುವರೆಂದು ಯಾರಾದರು ತಿಳಿದರೆ ಅದು ಅಷ್ಟೊಂದು ಸಯುಕ್ತಿಕವಾಗಿ ತೋರುವದಿಲ್ಲ ಮಹಾಸಮಾರಾಧನೆಯು ಭೋಜನ ಪ್ರಧಾನವಾದರೂ, ಭೋಜನದ ಮುಖ್ಯೋದ್ದೇಶದಿಂದ ಯಾರೂ ಹೊಟ್ಟೆಗೆ ಕಲೆಯುವದಿಲ್ಲ ಹಾಗಾದರೆ ಜನರು ಏತಕ್ಕಾಗಿ ಬರುವರೆಂಬ ಪ್ರಶ್ನೆಯು ಉಪಸ್ಥಿತವಾಗುವದಷ್ಟೇ? ಇದನ್ನಷ್ಟು ತಿಳಿಸುವದೇ ಈ ಬರಹದ ಉದ್ದೇಶವು ಪ್ರೇಕ್ಷಕರು ಒಳಗಣ್ಣಿನಿಂದ ವಸ್ತುಸ್ಥಿತಿಯನ್ನವಲೋಕಿಸಿದರೆ ಕೆಳಗಿನ ವಿಧಾನಗಳು ಸತ್ಯವೆಂದು ಮನಗಾಣುವರು. 'ಧರ್ಮಕ್ಷೇತ್ರಗಾಥಾಃ' ಎಂಬುವದರ ಭಾವವನ್ನು ಮನದಲ್ಲಿ ತಳೆದು ಸಾಧುವರ್ಯರ ದರ್ಶನಕ್ಕೆಂದು ದೂರ ದೂರಿನ ಜನರು ಬರುವರು. ಭಕ್ತಜನರು— ಆರ್ತ, ಜಿಜ್ಞಾಸು, ಅರ್ಥಾರ್ಥಿ ಮತ್ತು ಜ್ಞಾನಿ — ಹೀಗೆ ಚತುರ್ವಿಧ. ಅಪಾರವಾದ ಸಂಸಾರ ಸಾಗರವನ್ನು ದಾಟಲು ದಾರಿಯನ್ನರಿಯದೆ ದುಃಖಿತರಾದವರು, ಸಾಧುವರ್ಯರ ದರ್ಶನದಿಂದ ತಾವು ಜೀವನ್ಮುಕ್ತರಾಗಲಿಚ್ಛಿಸಿ ಮಹಾಸಮಾರಾಧನೆಯ ವ್ಯಾಜದಿಂದ ಆಗಮಿಸುವರು ಸೂರ್ಯನಂತೆ ಅಜ್ಞಾನತಮಸ್ಸನ್ನು ಹೊಡೆದೋಡಿಸಿ, ಚಂದ್ರನಂತೆ ಜ್ಞಾನಚಂದ್ರಿಕೆಯನ್ನು ಶ್ರೀ ಶ್ರೀಗಳವರು ಬೀರಲು ಸಮರ್ಥರಿರುವರೆಂದು ತಿಳಿದು ಜಿಜ್ಞಾಸುಗಳು ಆಗಮಿಸುವರು. ಮೇಘರಾಜನಂತೆ ದ್ರವ್ಯದ ಮಳೆಸುರಿಸಲು ಶ್ರೀ ಶ್ರೀಗಳವರು ಶಕ್ತರಿರುವರೆಂದು ತಿಳಿದು ಅರ್ಥಾರ್ಥಿಗಳು ಆಗಮಿಸುವರು ಶೇಷದೇವರಂತೆ ಸಚ್ಛಾಸ್ತ್ರಸಂಪ್ರವಚನೆಯಿಂದ ಶಿಷ್ಯ ಸಮೂಹಕ್ಕೆ ಸೌಖ್ಯವನ್ನೀಯುವರೆಂದು ಭಾವಿಸಿ ವಿದ್ಯಾರ್ಥಿಗಳು ಆಗಮಿಸುವರು. ಜ್ಞಾನಿಗಳಾದವರು ಗುರುಮುಖದಿಂದ ತಮ್ಮ ಜ್ಞಾನಾಭಿವೃದ್ಧಿಯನ್ನು ಮಾಡಲೆಣಿಸಿ ಮಹಾಸಮಾರಾಧನೆಯ ನಿಮಿತ್ತ ಮಾಡಿಕೊಂಡು ಗುರುವರ್ಯರ ದರ್ಶನಕ್ಕೆ ಬರುವರು.

ಮಧ್ವಶಾಸ್ತ್ರದ ಐರಾವತವನ್ನೇರಿ ಸದ್ವಾಕ್ಯ ವಜ್ರಾಯುಧದಿಂದ ದುರ್ಮತಗಳ ಪರ್ವತಗಳನ್ನು ಭೇದಿಸುವ ಸತ್ಯಧ್ಯಾನ ದೇವೇಂದ್ರನ ಸಿಂಹನಿನಾದವನ್ನು ಕಿವಿ ಮುಟ್ಟ ಕೇಳಿ ಧನ್ಯರಾಗಬೇಕೆಂದೆಣಿಸಿ ಪಂಡಿತರಾದವರು ಬರುವರು ಹೀಗೆ ಬೇರೆ ಬೇರೆ ಜನರ ಆಗಮನದ ಲಾಲನೆಯನ್ನು ಭಿನ್ನ ಭಿನ್ನವಾಗಿ ಹೇಳಿದ್ದಾಯಿತು.

ಇನ್ನು ಸರ್ವರಿಗೂ ಸಾಮಾನ್ಯವಾದ ಲಾಲಸೆಗಳಾವವೆಂಬುವದನ್ನು ವಿಚಾರಿಸುವಾ! ಪಾಪಸಂಹತಿಯನ್ನು ಶೀಘ್ರದಲ್ಲಿಯೇ ಸಂಹರಿಸಲು ಸಮರ್ಥವಾದ ತಪ್ತಮುದ್ರಾಪ್ರದಾನದ ನೋಟವನ್ನು ಕಣ್ಣುಟ್ಟಿ ನೋಡಿ, 'ಹರಿಯ ಶ್ರೀಮುದ್ರೆ ಎಮಗಾಭರಣವಾಯಿತು' ಎಂಬ ಶಬ್ದಗಳನ್ನು ಕಿವಿಮುಟ್ಟ ಕೇಳಿ ಧನ್ಯರಾಗಬೇಕೆಂದು ಭಾವಿಸಿ, ತಾವೂ ತಪ್ತ ಮುದ್ರೆಗಳನ್ನು ತೆಗೆದುಕೊಳ್ಳಬೇಕೆಂದು ಬರುವರು.

ತ ಪಾವನಗೈಯುವ ಗಂಗೆಗಿಂತ ಉತ್ತುಂಗವಾದ ಪರಿತೀರ್ಥವು ಚಿ ೯ ದೊರಕುವದೆಂದೂ, ಬ್ರಹ್ಮಹತ್ಯಾದಿ ಪಂಚಮಹಾಪಾತಕವನ್ನು ೇಡ ಕಳೆಯಲರ್ಹವಾದ ಶಂಖೋದಕವನ್ನು ಶಿರಸಿನಲ್ಲಿ ಧರಿಸ ಕೆಂದೂ ಬರುವರು ಅಷ್ಟೇಕೆ! ಒಂದನ್ನು ಮಾತ್ರ ಹೇಳಿಬಿಡುವಾ. ಸತ್ಯಬೋಧತೀರ್ಥರು ಸಮರ್ಪಿಸಿದ ಸೂಕವಲ್ಲಿಯ ಪಿಷವನ್ನು ತ ಕಂಠದಲ್ಲಿ ಧರಿಸಿದ ಶ್ರೀರಾಮದೇವರಿಗೆ ಇದಿರಿಗ ಭಕ್ತ್ಯಾದಯರು ಭ ಯುತರಾಗಿ ನಿವೇದಿಸಿದ ಭಕ್ಷ್ಯ ಭೋಜ್ಯವನ್ನು ಭುಂಜಿಸಿ ಭುಕ್ತಿ ದೊ ಮೋಕ್ಷವನ್ನು ದೊರಕಿಸಬೇಕೆಂದು ಬರುವರು ಮಹಾನುಭಾವರ ದಾರವಿಂದವಮಕರಂದವನ್ನು ಆಘ್ರಾಣಿಸಲುತ್ಸುಕರಾಗಿ ಬರುವರು

ಸಜ್ಜನರಾದರು ಶ್ರೀ ಶ್ರೀಗಳವರ ಸ್ತೋತ್ರವನ್ನು ಸಧ್ಯಾನನೆಯು ವರಾಗಿ ಹೀಗೆ ಮಾಡಿರುವರು— "ಅನ್ನ ವಸ್ತ್ರ ದ್ರವ್ಯದಾನದಲ್ಲಿ ಶ್ರೀ ೇಗಳವರು ಕರ್ಣ ಸಮರೆಂದೆನ್ನಬೇಕೋ, ವೈರಾಗ್ಯ ಭಾಗ್ಯವನ್ನೀಡು ಲ್ಲಿ ಮಹದೇವರಿಗೆ ಸಮರು. ಪರಬೊಮ್ಮನನ್ನು ಧ್ಯಾನಿಸುವಲ್ಲಿ ಬೊ ್ರರು. ಭಕ್ತಿ ಮುಕ್ತಿಗಳ್ನ ದಾರಿ ತೆರುವಲ್ಲಿ ವಿಷ್ಣು ಸದೃಶರೇ ಸ್ವ ಂತಹ ಶ್ರೀ ಸತ್ಯಧ್ಯಾನ ಕಲ್ಪವೃಕ್ಷವನ್ನು ಭೂಸುರರು ಜ್ಞಾನವೈರಾಗ್ಯ ಪ್ರಾಪ್ತಿಗಾಗಿ ಆಶ್ರಯಿಸಲಿ ಇಂತಹ ಸುರಧೇನುವನ್ನು ಸಂತತವಾಗಿ ಜ್ಞನರು ಸ್ಮರಿಸಲಿ, ಸ್ತುತಿಸಲಿ. ನಿಶ್ಚಿಂತರು ಇಂತಹ ಚಿಂತಾಮಣಿಯ ಧರಿಸಲಿ." ಈ ಸ್ತೋತ್ರವನ್ನು ಪಠಿಸುವ ಜಿಹ್ವೆಯೇ ಜಿಹ್ವೆಯು.

ಮಧ್ವೇಶಾರ್ಪಣಮಸ್ತು

—ಭೀ. ರಾ. ಕಂಚಿ.

ಗುಬ್ಬಿ ನಾಟಕ ಮಂಡಳಿಯವರ

'ಕಬೀರದಾಸ'

(೨)

ಇಂದು, 'ಕನ್ನಡಿಗ'ನ ಮೂಲಕ ರಂಗಭೂಮಿಯ ಸೇವೆಯನ್ನು ಮಾಡಲು ನಟವರ್ಗದವರಿಗೆ ಸೂಚನೆಗಳನ್ನೂ, ನಾಟ್ಯಾಭಿನಯನಗಳ ಮರ್ಗಗಳನ್ನೂ ಕೊಡಲಾರಂಭಿಸಿರುವೆವು ಈ ದಿಶದ ಲೇಖನವು, ಹೆ ರ್ ವಾಸಿಯಾದ ಗುಬ್ಬಿ ನಾಟಕ ಸಂಘಾಪಕರ 'ಕಬೀರ' ದಾಸದ ಕು ತೆ ಇರುತ್ತದೆ. ಇನ್ನು ಮುಂದೆ ಸಮಯ ದೊರೆತಂತೆ ಈ ಕಂಪನಿ ಯವರ ಇತರ ನಾಟಕಗಳ ಕುರಿತೂ ಬರೆಯುವೆವು. ಇವು ಮಿತ್ರ ಭಾ ದ ಸೂಚನೆಗಳೆಂದು ಸಂಬಂಧಿಸಿದವರು ಮಂತೆಯುದಿರಲಿ

ಮುಖ್ಯಪಾತ್ರವಾದ ಕಬೀರನ ಭೂಮಿಕೆಯು ರಾ|| ಮಲ್ಲಪ್ಪನವರಿಂದ ನರ, ಮಾತುಗಳಲ್ಲಿ ರಸದ ಅತಿರೇಕಗಳನ್ನು ಸೂಚಿಸುವ ಸಾಡ ಕ್ಕ ಕಂಠಸ್ವರದ ಏರು ತಗ್ಗುಗಳು ಕಾಣುವುದಿಲ್ಲ. ನಾಟಕಾಂತ್ಯದ ವರೆಗೂ ಸ್ವರವು ಒಂದೇ ರೀತಿಯಾಗಿ ಹರಿಯುವುದು. ಈ ನಾಟಕದಲ್ಲಿ ಂದುಸ್ಥಾನಿ, ಮಾತುಗಳನ್ನು ಈ ಪಾತ್ರವರ್ಗಕ್ಕೆ ಸೇರಿಸಿರುವದಕ್ಕೆ ಅ ರ್ಥವಿಲ್ಲಮಾತ್ರವಲ್ಲ. ಮಲ್ಲಪ್ಪನವರು ಅವುಗಳನ್ನು ಆಡುವಾಗ, ಉರ್ದು ಭಾಷಾ ಸೌಂದರ್ಯವು ನಾಶವಾಗಿ, ವಾಕ್ಯಗಳು 'ಇಂಗು—ಮೆಣ—ಸೂ ಠಿ—ರಿಗಿ' ಯಾಗುವವು. ಇವರ ಮುಖವು ಮಾತಿಗೆ ತಕ್ಕಂತೆ, ಭಾವ ಪ್ರದರ್ಶನವಾಗುವದೇ ಇಲ್ಲ. ಯಾವಾಗಲು ಅಳುತ್ತಿರುವವನ ಮೋರೆ ಯೇ ತೋರುವದು ಶ್ರೀ ರಾಮದರ್ಶನದಿಂದ ಅವರ ಮುಖಭಾವ ದಲ್ಲಿ ಹರ್ಷವಾಗಲಿ, ಕಮಾಲನ ಮರಣದಿಂದ ದುಃಖಭಾವವಾಗಲಿ ಇ ಲ್ಲಿಲ್ಲ. ಕಬೀರನು ಕಮಾಲನ ಮರಣದ ಕುರಿತು ಮಾತನಾಡುವಾಗ ಸುಖದಿಂದ ಕಣ್ಣೀರಿಟ್ಟದ್ದನ್ನು ಕಂಡೆವು—ಆದರೂ, ಮುಖಭಾವದಲ್ಲಿ ಆ ಚಿತ್ರವಿದ್ದಿಲ್ಲ. ಮಲ್ಲಪ್ಪನವರು ಉತ್ತಮ ಹಾಡುಗರು, ಅವರು ಹಾಡಿದ ಹಣವೆ'— 'ಪತಿಯೇ ಗತಿ' ದೇಹಕ್ಕೆ ಎಂಬ ಪದಗಳು ಅತಿಸುಶ್ರಾವ್ಯ ವಾಗಿದ್ದುವು. ಆದರೆ ನಾಟಕದಲ್ಲಿ ಸಂಗೀತಕ್ಕಿಂತಲೂ ನಟನೆಗೆ ಹೆಚ್ಚಿನ ಮಾನ್ಯತೆ ಬೇಡವೇ?

ಶ್ರೀ ರಾಮನ ಭೂಮಿಕೆಯು ಸಾಧಾರಣ. ಇವರದು ಮಾತುಗ ಳೆಲ್ಲಾ ಕುದುರೆಯೋಟವೇ— ಅಭಿನಯವಿಚಾರದಲ್ಲಿ 'ಶಿಲಾಮೂರ್ತಿ ಗಳೇ' ಮಾತಿನಲ್ಲಿ ರಸವಾಗಲಿ, ಮಾಧುರ್ಯವಾಗಲಿ, ಇಲ್ಲ.

ಮದನ ಸಾಹುಕಾರನನ್ನು ಅಭಿನಯಿಸಿದವರು ರಾ|| ನಾಗೇಶ ರಾಯರು. ಇವರು ಉತ್ತಮ ಹಾಡುಗಾರರು— ಇವರಿಗೆ ಸ್ಟೇಜಿನಲ್ಲಿ ಗಂಭೀರ ಭಾವದಿಂದ, ಭೂಮಿಕೆಗೆ ತಕ್ಕಂತೆ ನಿಲ್ಲುವ ಪದ್ಧತಿ ತಿಳಿದಂ ತಿಲ್ಲ. 'ಮದನಸಾಹುಕಾರನು' ಕಾಮಿಯು, ಸ್ವಲ್ಪಮಟ್ಟಿಗೆ ಸ್ವಲ್ಪ ಕಡಿಮೆ ಬುದ್ಧಿಯವನು—ಅಲ್ಲದೆ ಇವರು ತೋರಿಸುವಂತೆ ಹುಚ್ಚನಲ್ಲ. ಇವರಲ್ಲಿ ಶೃಂಗಾರ ರಸವಾಗಲಿ ಇತರರಸಗಳಾಗಲಿ ಕಂಡು ಬರುವ ದಿಲ್ಲ. ತನ್ನನ್ನು ಕಾಡುವ ಮದಾಲಸೆಯನ್ನು ದೂರಪಡಿಸಲು ಯೋಚಿ ಸುತ್ತಿರುವ ವೇಳೆಯಲ್ಲಿ ಆಕೆಯು ಬಂದರೆ, ಇವರು ಜಿಗುಪ್ಸೆ, ತಿರಸ್ಕಾರ ಗಳನ್ನು ತೋರಿಸುವ ಬದಲು, ನಗುವರು ಹುಚ್ಚನಂತೆ ವರ್ತಿಸುವರು. ಇನ್ನೊಮ್ಮೆ 'ಭೂತಗಳು ಕಾಡುವಾಗ' 'ಭಯ; ಗಾಬರಿ' ಸೂಚನನ ಟನೆಯು ನಿರ್ಜೀವತರದ್ದಿದೆ.

ಮದನನ ಮಿತ್ರ ವಸಂತನ ಭೂಮಿಕೆಯು, ಕಂಪನಿಯ ಒಡೆಯ ರಾದ ವೀರಣ್ಣನವರಿಂದ ವಸಂತನು, ಕಪಟಿಯು ಸ್ವಲ್ಪಮಟ್ಟಿಗೆ ಮದನ ನ ಪರಿಹಾಸ್ಯಕ್ಕಾಗಿ ನಗುವವನಿರಬಹುದು. ಅಲ್ಲದೆ ಸದಾಕಾಲದಲ್ಲಯೂ 'ಹಾಸ್ಯಗಾರನಲ್ಲ' ವೀರಣ್ಣನವರು ಉತ್ತಮ ಅಭಿನಯಗಾರರು, ಹಾ ಸ್ಯ ಪ್ರದರ್ಶಕರು ಆದರೆ ಅವರ ನಟನೆಯಲ್ಲಿ, ಇದರ ಅತಿರೇಕವು ಕಾ ಣುವದು ವಿಷಾದಕರ.

ಮದಾಲಸೆಯ ಭೂಮಿಕೆಯು ಶ್ರೀ ನ್ಯಾಸರಾಯರದು. ಇವರ ಶೃಂಗಾರದ ಭೂಮಿಕೆಯಲ್ಲಿ, ವಾರಾಂಗನೆಯ ನಟನೆಯು ವೈಪರೀ ತ್ಯವನ್ನು ಹೊಂದುವುದು. ಮದನನ ಮೇಲೆ ತಿರಸ್ಕಾರ ಉಂಟಾಗುವ ಸಂದರ್ಭದಲ್ಲಿ, ಸಮಿಪ ಸಮಿಪಕ್ಕೂ ಭಾವಪರಿವರ್ತನೆಯನ್ನು ಹೊಂದುವ ಒಂದು ಚಿಕ್ಕ ಆತ್ಮಗತೆ ಭಾವನವಿದೆ. ಆದರಲ್ಲಿ, ಮಾತುಗಳ ವಶಕ್ಕೆ ತ ಕ್ಕಂತೆ ಭಾವವು ಸರಾಗವಾಗಿ ಪರಿವರ್ತನೆಹೊಂದುವುದಿಲ್ಲ ಮದನನೊ ಡನೆ ಮದಾಲಸೆಯು ಮಾಡುವ ಜಗಳದಲ್ಲಿ, ಕುಣಿದಾಟವು ಬಹಳ ಹೆ ಚ್ಚಾಗುವದು.

ಬೀಗಯವರ ಭೂಮಿಕೆಯನ್ನಭಿನಯಿಸಿದವರ ಹೆಸರು ನಮಗೆ ಬಾರದು ಆವರಲ್ಲಿಯ ಮುಖಭಾವವು ಚೆನ್ನಾಗಿ ಚಿತ್ರತವಾಗುವಂತಿಲ್ಲ. ಈ ಭೂಮಿಕೆಯು ಉತ್ತಮರೀತಿಯಿಂದಲಾಗದಿದ್ದರೂ ಕೀರ ಕೆಡುವ ದಿಲ್ಲ.

ಮಂಗಾನಿಬನೆಂಬ ಸೇವಕ— ಕುಶಲ ಮಾತುಗಳನ್ನು ಹಾಸ್ಯಕ್ಕಾ ಗಿ ಬಹಳ ಬಾರಿ ಸೇರಿಸುವರು. ಅದು ಅತಿರೇಕವಾಯಿತು. ಅವನ ಆ ಮಾತುಗಳು 'ಆತ್ಮಗತ' ವಿದ್ದರೆ ಉತ್ತಮ. ಆತನು ಮದನನ ಎದುರು ವಸಂತನನ್ನು ಕರೆಯುವುದು ಬಹಳವಾಗುತ್ತ. ಆಗ ಮದನನನ್ನು ಸುಮ್ಮನಿರುವದಾಗಲಿ, ವಸಂತನು ಅಷ್ಟೊಂದು ದೀರ್ಘಕಾಲದ ವರೆಗೆ ಆದನ್ನು ನಟಿಸುವದಾಗಲಿ, ಅಸ್ವಭಾವಿಕವಾಗಿ ತೋರುವವು. ಕಮಾ ಲನ ಭೂಮಿಕೆಯು ಇನ್ನೂ ಹೆಚ್ಚಿನ ವಿದ್ವತ್ತಿಕೆಯನ್ನು ಹೊಂದಬೇಕು.

ಜೊತೆಗೆ ಈ 'ಹಾಸ್ಯ' ನಟನೆಯು ಉತ್ತಮವಿದೆ ರಾ|| ವೀರಣ್ಣ ನವರು ತಮ್ಮ ನಾಟಕಗಳಲ್ಲಿ 'ಶೃಂಗಾರ' ವೃತ್ತಿಗಳನ್ನು ಕಡಿಮೆಮಾಡಿ, ಹಾಸ್ಯದ ಅತಿರೇಕದಿಂದಲೇ ಜನರಂಜನೆಯನ್ನು ಮಾಡುವ ಪದ್ಧತಿ ಯನ್ನು ನಾಟ್ಯಕಲೆಯ ಸುಧಾರಣೆಯ ಸಲುವಾಗಿ, ಬಿಡಬೇಕೆಂಬುದೇ ನಮ್ಮ ಪ್ರಾರ್ಥನೆ.

ಆವರ ಈ 'ಕಬೀರದಾಸ' ನಾಟಕವು ಅವರಾಡುವ ನಾಟಕದಲ್ಲಿ ಹೆಸರುವಾಸಿಯಾದದ್ದು. ಆದರ ಕುರಿತೇ ಇಷ್ಟೊಂದು ತುಲನೆಯು ಬಂದುದನ್ನು ಕಂಡು ವಾಚಕರು ನಮ್ಮನ್ನು 'ದ್ವೇಷಿ'ಗಳೆಂದು ಕರೆಯ ಬಹುದು ನಾವು ಈಗ, ಸುಧಾರಣೆಗನುಕೂಲಿಸುವಂತೆ, ದೋಷಗ ಳನ್ನು ತೋರಿಸುತ್ತ ಹೋದುದರಿಂದ ಹಾಗೆ ತೋರ ಬಹುದಲ್ಲದೆ, ಅವರ ನಾಟಕವು 'ವ್ಯರ್ಥ' ಎಂಬುದರಿಂದ ಎಂದೆಂದೂ ಅಲ್ಲ. ಅವರ 'ಕಬೀರದಾಸವು' ಪ್ರೇಕ್ಷಣೀಯವೇ ಆಗಿದೆಯೆಂದು ತಿರುಗೊಮ್ಮೆ ಹೇಳಿ ನಮ್ಮ ಲೇಖನಿಯನ್ನು ಕೆಳಕ್ಕಿರಿಸುವೆವು.

ಇಂತು, ನಾಟಕಪ್ರಿಯ

ಮಂಗಳೂರುಪ್ರಾಂತ | ಭಾವಿಕ

ಹಿಂದುಸ್ಥಾನ

ಕಲಕತ್ತೆಯಲ್ಲಿ ಗರ್ಭ ಶ್ರೀ ಸಂಕನಾದೊರ್ವ ಜಮೀನದಾರನು, ಈಗಿನ ಸುಧಾರಿಸಿದ ಹೊಸಯಂತ್ರಸಾಮಗ್ರಿಗಳ ಸಹಾಯದಿಂದ ಅತ್ಯು ತ್ತಮವಾದೊಂದು ದೈನಿಕ ಪತ್ರವನ್ನು ಹೊರಡಿಸತಕ್ಕವನಿದ್ದಾನೆ. ಓರ್ವ ಇಂಗ್ಲೀಷ ಸದ್ಗೃಹಸ್ಥನು ಇದರ ಸಂಪಾದಕನಾಗುವನು,

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು	ನೂರಕ್ಕೆ	ವರ್ಷಕ್ಕೆ	2½
ಸೇವ್ಹಿಂಗ್ಸ ಬ್ಯಾಂಕ ಠೇವು	”	”	4½
ಮುದ್ದತೀ ಠೇವು ೬ ತಿಂಗಳಿಗೆ	”	”	6
” ೧೨ ತಿಂಗಳಿಗೆ	”	”	7

ಪಾರಲೋನ ವಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರು ನಿತ್ಯಂ ನಿಜದೇಶಸೇವನಂ।

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೫ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿನ ಸಾಯಂಕಾಲದ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಒಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಹುಕ್ಕೇರಿ. ಬುಕಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೫೪೯ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ವಾಯ, ಸಯಾನ, ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೭ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೬೭ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೩೫ { **ಬಿ. ಎಸ್. ಆರಾಧ್ಯ** ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಪ್ರಕಟಣೆ

ಕಾರವಾರ ಜಿಲ್ಹೆಯ ಕರ್ಕಿಯೆಂಬ ಗ್ರಾಮದಲ್ಲಿ “ ದತ್ತಾತ್ರೇಯಪಾಠಶಾಲೆ ” ಎಂಬ ಹೆಸರಿನ ವೇದಶಾಸ್ತ್ರ ಶಾಲೆಯು ಸ್ಥಾಪಿಸಲ್ಪಟ್ಟಿರುವುದು. ಸದ್ಯಕ್ಕೆ ೩೪ ವಿದ್ಯಾರ್ಥಿಗಳು, ಸಂಸ್ಕೃತ, ವೇದ, ಜ್ಯೋತಿಷ್ಯ, ಹಾಗು ಯಾಜ್ಞಿಕಗಳನ್ನು ಕಲಿಯುತ್ತಿರುವರು. ಬೇರೆ ಬೇರೆ ವಿಷಯುಗಳನ್ನು ಕಲಿಸುವುದಕ್ಕಾಗಿ ನಾಲ್ವರು ಅಧ್ಯಾಪಕರಿರುವರು. ವಿದ್ಯಾರ್ಥಿಗಳಿಗೆ ಸ್ವಾವಲಂಬನ, ಸುಲಭಜೀವನ, ಸದ್ವೃತ್ತಿಗಳನ್ನು ಕಲಿಸುವ ಏರ್ಪಾಡು ನಡೆದಿರುವದು ವಿದ್ಯಾರ್ಥಿಗಳಾಗಲೀ ಇತರರಾಗಲೀ ಸಂಸ್ಥೆಯ ಮಾಹಿತಿಯ ಬಗ್ಗೆ ಕೆಳಗಿನ ಪತ್ತೆಗೆ ಬರೆದುಕೊಳ್ಳಬೇಕು.

ಪತ್ತೆ:— “ ದತ್ತಾತ್ರೇಯ ಪಾಠಶಾಲಾ ”
ಚಾಲಕ: – ಗಣಪತಿ ಶಂಕರಭಟ್ಟ ಕರ್ಕಿ
ಪೋ. ಕರ್ಕಿ (ಜಿ. ಕಾರವಾರ)

ಪ್ರಿಯ ದೇಶಬಾಂಧವರೇ,
ಇತ್ತ ನೋಡಿರಿ! **ಒಮ್ಮೆ ಓದಿರಿ**
ಮಾತೃಭಕ್ತಿಯನ್ನು ಪ್ರಕಾಶಗೊಳಿಸಿರಿ !!

“ಕಾನಡಾ ಧುರೀಣ”

ಈ ಅತ್ಯುತ್ತಮವಾದ ರಾಷ್ಟ್ರೀಯ ವಾರಪತ್ರಿಕೆಯು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಾರ ಹೊಂದುತ್ತಿದೆ. ಇದರಲ್ಲಿ ಸಮಯೋಚಿತವಾಗಿ ಪ್ರಕಟವಾಗುವ ಸ್ವಮತ ವಿಮತಗಳ ಮೇಲಿನ ಸಿದ್ಧಾಂತ, ಸವ್ಯ-ಭವ್ಯವಿಷಯಪ್ರತಿಪಾದನೆ, ಸುವಿಚಾರ ರಮಣೀಯವೂ ವಿಚಿತ್ರ ಸ್ಫೂರ್ತಿದಾಯಕವೂ ಆದ ಸಂಪಾದಕರ ಅಪ್ರತಿಮ ಲೇಖಗಳು, ಸುಜ್ಞರ ಕವಿತಾಲಾಪಗಳು, ಮಹಾಪುರುಷರ ವಾಗ್ರಸಾಯನವು, ಪ್ರೋತ್ಸಾಹಕವಿಂದ ದೊರೆಯುವ ದೇಶದೇಶಾಂತರ ವೃತ್ತಾಂತಗಳು ಸಹ ಕನ್ನಡಿಗರೆಲ್ಲರಿಗೂ ಅತ್ಯಂತ ಮನೋಹರವಾಗಿರುವವು. ಸುಪ್ರಸಿದ್ಧ ವಿದ್ವಾಂಸರ ಪ್ರಶಂಸೆಗೆ ಪಾತ್ರವಾದ ಈ ಪತ್ರಿಕೆಯೇ ಕರ್ನಾಟಕದಲ್ಲಿ ಹೆಚ್ಚಿನದೆಂದು ತಜ್ಞರು ತಿಳಿದು ಹೇಳದಿರಲಾರರು. ವಾರ್ಷಿಕ ಚಂದಾ ಅಂಚೆ ಮೆಚ್ಚ ಸೇರಿ ೩-೧-೦

ವಿಳಾಸ:— ಮ್ಯಾನೇಜರ, “ ಕಾನಡಾ ಧುರೀಣ ”
ಕುಮಟಾ, (ಉತ್ತರ ಕನ್ನಡ)

ಸಾಣೇಕಲ್ಲುಗಳು

ಸಣ್ಣ ದೊಡ್ಡ ಸಾಣೇ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ. ಮುಂಗಡ ಹಣವಿಲ್ಲದ ಆರ್ಡರುಗಳ ಕಡೆಗೆ ಲಕ್ಷ ಕೊಡಲಾಗುವದಿಲ್ಲ. ವಿಶೇಷಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ನೃಸಿಂಹ ಏಜನ್ಸಿ
ಬಾಗಲಕೋಟೆ (Dist. Bijapur)

ಈ ಪತ್ರಿಕೆಯು ಮಂಗಳವೇಢ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ.ನಂ. ೩. ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕರ್ಣಾಟಕ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಇದು ಪ್ರತಿ ಬುಧವಾರ ಪ್ರಕಟವಾಗುವುದು — ಪತ್ರ

ಸಂಪಾದಕರು— ಮಂಗಳವೇಢೇ ರಾಜಾರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬೆಂಗಳೂರು ಬುಧವಾರ ಮಿತಿ ಮಾಘ ಬಹುಳ ೧೦ ಶಕೆ ೧೮೪೭. ತಾ ೧೦-೨-೧೯೨೬. | ಸಂಚಿಕೆ ೪೪

ಸಂಪಾದಕನ ಭಾವ.

(೯)

ನನ್ನ ಮನಸಿನ ಮೋಹವಾದ ಕಟ್ಟುವೆನಾನು ।
ನಿನ್ನ ಚರಣದ ಮಾತಿನಂಥ ಪಾಕ್ಕಳ ಮೇಲೆ ।
ಚಿನ್ನದಾದರು ಚಿನ್ನ ಮೋಹಬಟ್ಟೆಯ ನೊಂದು
ಚಿನ್ನಯುಗಳ ಪದಕ್ಕೆ ॥

ನನ್ನ ದೇಹವು ನಿನ್ನ ನಿರೀಕ್ಷಣಕಾಗಿ ।
ರನ್ನಸ್ಸ್ನ ಕಲ್ಲಾಗಿ ನಿಲ್ಲಲಿ ನಿಸ್ಪಂದ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಲಿ
ಗಂಧವಹನೆಂದು ತೀಡಿ ॥

— ಅಂಬಿಕಾತನಯ ದತ್ತ

ವಿಜಾಪುರ ಜಿಲ್ಲೆ ಪ್ರಾಂತ್ಯದ ಸಂಘದ ಉದ್ಘೋಷ ಪತ್ರಿಕೆಯನ್ನು ನೋಡಿದುದಾಯಿತು. ಒಂದು ಮಗ್ಗಲಿಗೆ ಕನ್ನಡವು ಇನ್ನೊಂದು ಮಗ್ಗಲಿಗೆ ಮರಾಠಿ ಇದೇನು ಇಂದ್ರಜಾಲವು! ಕಣ್ಣೊಳಗೆ ಮಣ್ಣು ತೂರಿದ ಕೆಲಸ! ವಿಜಾಪುರವು ಕನ್ನಡ ಜಿಲ್ಲೆಯು. ಪ್ರಮುಖರಾದವರಲ್ಲಿ ಉದ್ಘೋಷ ಪತ್ರಿಕೆಯನ್ನು ಮುದ್ರಿಸುವದೇಕೆ? ವಿಜಾಪುರ, ಬಾಗಲಕೋಟೆ ಮೊದಲಾದ ಎರಡು ಮೂರು ಪಟ್ಟಣಗಳಲ್ಲಿ ಬೆರಳಿನಿಂದ ಎಣಿಸಲಿಕ್ಕೆ ಬರುವಷ್ಟು ಮರಾಠಿಗರಿದ್ದಾರೇನೋ ನಿಜ. ಅವರಿಗೆ ಕನ್ನಡವು ಚೆನ್ನಾಗಿ ಬರುತ್ತದೆ ಬರುವದಿಲ್ಲೆಂದು ಕಲ್ಪಿಸಿದರೂ ಕೂಡ, ನಾಲ್ಕಾರು ಜನರ ಸಲುವಾಗಿ ಮರಾಠಿಯಲ್ಲಿ ಅದನ್ನು ಮುದ್ರಿಸಬೇಕೋ ಹೇಗೆ? ಅಥವಾ ನಾವು ನಮಗೆ ಸ್ವಾಮ್ಯವೇನು ತೋರುವದಿಲ್ಲ ಅಲ್ಲದ ನಲ್ಲನ ಕೆಲಸಕ್ಕೆ ಕೈಹಾಕುವದು ವಿಷ್ಯರ ಲಕ್ಷಣವಲ್ಲ ರಾವಬಹದ್ದೂರ ರಾಘವೇಂದ್ರರಾಯರಂಥವರು ಹೀಗೆ ಮಾಡುವದು ಯುಕ್ತಿಯುಕ್ತವಾಗಿ ಕಾಣುವದಿಲ್ಲ. 'ನಮ್ಮ ನುಡಿ, ನಮ್ಮ ನಾಡ.' ಎಂಬ ಉಜ್ವಭಾವನೆಯಿಂದ ಪ್ರೇರಿತರಾಗಿ ರಾಯರಂಥ ಮಹನೀಯರು ನಡೆಯಬೇಕಾಗಿ ಪ್ರಾರ್ಥನೆ. ಮರಾಠಿಗೆ ಇಲ್ಲಿ ಪ್ರಾಧಾನ್ಯವನ್ನು ಕೊಟ್ಟು, ಕನ್ನಡದ ಸಾಸ್ಕೃತಿಯನ್ನು ಕೊಲ್ಲುವದು ಶ್ರೇಯದ ಮಾರ್ಗವಲ್ಲ ಪ್ರಾಂತದ ಭಾಷೆಗೆ ಮಹತ್ವಕೊಡಿರೆಂದು ಬರೆಯಲು ಕೆಲವರು ತಲೆತಿರುಕತನವೆಂದು ಹೇಳುತ್ತಾರೆ. ಅವರು ತಾವಾಗಿ ಈ ಸಂಗತಿಯನು ವಿಚಾರಿಸಿದರೆ —ಮನಸಾಕ್ಷಿಯಾಗಿ— ಈ ವಿಷಯವನ್ನು ವಿವೇಚಿಸಿದರೆ, ನಾವು ಆಡುವ ಮಾತಿನ ಸತ್ಯತೆಯ ಬಗ್ಗೆ ಅವರಿಗೆ ಪ್ರತೀತಿಯುಂಟಾಗುವದು. ನಾವು ನಮ್ಮ ಮುಂದಾಳುಗಳಿಗೆ ಮೇಲಿಂದ ಮೇಲೆ ಎಚ್ಚರ ಕೊಡುತ್ತ ಬಂದಿದ್ದೇವೆ, ಬೇಡಿಕೊಂಡಿದ್ದೇವೆ; ಕಾಡಿ ಹೇಳಿಕೊಂಡಿದ್ದೇವೆ. ಇನ್ನೂ ಅವರ ಮನಸ್ಸು ಕಲ್ಲಾಗಿಯೇ ಇದೆ. ಪುನಃ ಪುನಃ ಎಚ್ಚರಕೊಡುವದು ನಮ್ಮ ಕರ್ತವ್ಯವಾಗಿದ್ದರಿಂದ, ಮುಂದಾಳುಗಳೇ ನಿಮಗೆ ಬಿಟ್ಟು ಹಾಕಿ ನಿಮ್ಮದವರನ್ನು ಮರೆಯಬೇಡಿರಿ; ಅವರಿಗೆ ಕೃತಘ್ನರಾಗಬೇಡಿರಿ' ಎಂದು ಕೇಳುತ್ತೇವೆ

ಇಂದೋರಿನ ದಿವಾಣರ ಸ್ಥಾನಕ್ಕೆ ಕನ್ನಡಿಗನನ್ನೇ ಆರಿಸಬೇಕೆಂದು 'ಕರ್ನಾಟಕ' ಎಂಬ ಪತ್ರಿಕೆಯು ಸಾರಿ ಸಾರಿ ಹೇಳುತ್ತಿದೆ. ಕನ್ನಡಿಗರಲ್ಲಿ ಅಂತಹ ದೊಡ್ಡ ಅಧಿಕಾರಕ್ಕೆ ಯಾರೂ ಯೋಗ್ಯರಿಲ್ಲವೆಂದು ಸರ್ವಸಾಮಾನ್ಯರಾದ ತಿಳುವಳಿಕೆಯಿರುವದು ಆದರೆ ಇಂದೂರ ಸಂಸ್ಥಾನಕ್ಕೆ ನರಸಿಂಗರಾವ ಎಂಬುವರು ದಿವಾಣರಿದ್ದು ಅಲ್ಲಿಯ ಕೆಲಸವನ್ನು ಬಹಳ ಸುವ್ಯವಸ್ಥಿತವಾಗಿ ನಡೆಯಿಸಿಕೊಂಡಿರಬಹುದು ಕನ್ನಡಿಗರಿಗೆ ಭೂಷಣಾಸ್ಪದವಾದ ಸಂಗತಿಯೇ, ಅವರ ಹಿಂದಿನವರು ನಾಲ್ಕು ದಿವಾಣರು ಅಯೋಗ್ಯರಿದ್ದುದರಿಂದ ಸಂಸ್ಥಾನದಲ್ಲಿ ಅವ್ಯವಸ್ಥೆಯಾಗಿತ್ತು. ಇವರು ಬಂದೊಡನೆ ತಮ್ಮ ದಕ್ಷತೆಯಿಂದಲೂ, ಜಾಣತನದಿಂದಲೂ ಎಲ್ಲವನ್ನು ಸುಧಾರಿಸಿದರು. ಇವರ ವಿಷಯಕ್ಕೆ ಟೈಮ್ಸ್ ಆಫ್ ಇಂಡಿಯಾ ಪತ್ರದಲ್ಲಿ ಹೀಗೆ ಬರೆದಿರುತ್ತದೆ. Mr Narasingarao has evolved some order out of the chaos that prevailed at his entry into the present office and as far as I have been able to make out, the only complaint against him is that he does not mix with the people of Indore.

(ಅವರು ಅದಿಕಾರದ ಸೂತ್ರವನ್ನು ತೆಗೆದುಕೊಳ್ಳುವ ಕಾಲದಲ್ಲಿ ಎಲ್ಲೆಡೆಯಲ್ಲಿಯೂ ಅವ್ಯವಸ್ಥೆಯಿತ್ತು. ಅವರು ಸ್ವೀಕರಿಸಿದೊಡನೆ, ಎಲ್ಲವೂ ವ್ಯವಸ್ಥಿತವಾಗಿ ಅಚ್ಚುಕಟ್ಟುತನವೂ ತಲೆದೋರಿದೆ) ಇದನ್ನು ನೋಡಿದರೆ, ಕನ್ನಡಿಗರಲ್ಲಿ ಯೋಗ್ಯತೆಯಿದೆ; ವಿದ್ಯೆಯಿದೆ ಬುದ್ಧಿಯಿದೆ; ಕಾರ್ಯದಕ್ಷತೆಯಿದೆ. ಆದರೆ ಅವರಿಗೆ ಸಂಧಿಯು ಸಿಕ್ಕುವದಿಲ್ಲ. ಯೋಗ್ಯ ಸಂಧಿಗಳು ದೊರೆತರೆ, ಅವರು ಎಂತಹ ಕಠಿಣವಾದ ಕೆಲಸವನ್ನಾದರೂ ಮಾಡಬಲ್ಲರು.

ಬೆಂಗಳೂರಿನ ನೂಲುವ ಸಂಘದವರು ಒಂದು ದೊಡ್ಡ ರಾಟಿಯ ಪ್ರದರ್ಶನವನ್ನೂ ನೂಲುವ ಹೋರಾಟವನ್ನೂ ಏರ್ಪಡಿಸಿದ್ದರು. ಅದಕ್ಕೆ ಮೈಸೂರಿನ ಉದ್ಯೋಗ ವ್ಯಾಪಾರ ಖಾತೆಯ ಮುಖ್ಯ ಚಾಲಕರಾದ ಮೆಕ್ಕಿ ಇವರು ಅಧ್ಯಕ್ಷರಿದ್ದರು. ಅವರ ಭಾಷಣವು ಸೊಗಸುವಂತಹದೂ ಬೋಧಪ್ರದವಾದುದೂ ಇರುತ್ತದೆ. ರಾಟಿಯ ಮೇಲೆ ಟೀಕೆ ಮಾಡುವುದು ಸರ್ವಥಾ ಯೋಗ್ಯ

ವಲ್ಲವೆಂದೂ ದಾರಿದ್ರ್ಯವನ್ನೂ ನಿರುದ್ಯೋಗವನ್ನೂ ತೆಗೆದು ಹಾಕಲು ಅದರಂತಹ ಸಾಧನವು ಮತ್ತೊಂದಾವದಿಲ್ಲವೆಂದೂ ಅವರು ಹೇಳಿರುವರು.

ಅವರು ಅಂದದ್ದು- "೧೦೦ರಲ್ಲಿ ೫೦ ಕ್ಕಿಂತ ಹೆಚ್ಚು ಜನರು ಒಕ್ಕಲತನದ ವ್ಯವಸಾಯವನ್ನು ಮಾಡುತ್ತಿರುವರು; ಅವರು ಸುಮಾರು ೧ ವರ್ಷದಲ್ಲಿ ೬ ತಿಂಗಳ ನಿರುದ್ಯೋಗಿಗಳಾಗಿರುವರು ಇಷ್ಟೇ ಅಲ್ಲ; ಮಳೆಯು ಚನ್ನವಿ ಬಿದ್ದಿತು. ಇಲ್ಲದಿದ್ದರೆ ಇಲ್ಲ ಹೀಗಾಗಿ ಪ್ರತಿಸಾರೆ ಬರವು ಬಿಟ್ಟಿದ್ದಲ್ಲ. ಇಂತಹ ಕಾಲದಲ್ಲಿ ನಿರುದ್ಯೋಗಿಗಳಾದ ಜನರಿಗೆ ರಾಟಿಯೇ ಉಪಜೀವಿಕೆಯ ಸಾಧನವು ಇದರ ಹೊರತು ಮತ್ತೊಂದು ಉದ್ಯೋಗವೇ ಇಲ್ಲ. ರಾಷ್ಟ್ರದ ಅಭಿರುಚಿಯು ಕೆಟ್ಟುಹೋದದ್ದರಿಂದ, ಖಾದಿಯು ಪ್ರಸಾರವಾಗ ಬೇಕಾದಷ್ಟು ಆಗಿರುವದಿಲ್ಲ! ಇದರ ಮೇಲಿಂದ ಖಾದಿಯ ಮಹತ್ವವು ಒಡೆದು ಕಾಣುವಂತಿದೆ ಖಾದಿಯು ಪ್ರಸಾರ ವಾಗುವದರಿಂದ ಜನರಿಗೆ ಉದ್ಯೋಗ ದೊರೆಯುವದು. ಉದ್ಯೋಗದಿಂದ ದುಡ್ಡು ಸಿಗುವದು, ಜನರ ಆರ್ಥಿಕಸ್ಥಿತಿಯು ಸುಧಾರಿಸುವುದು. ಒಟ್ಟಿನ ಮೇಲೆ ರಾಷ್ಟ್ರದ ಕಲ್ಯಾಣವೇ ರಾಟಿಯನ್ನವಲಂಬಿಸಿರುವುದು ರಾಟಿಯೇ ಕಾಮಧೇನುವು; ಅದೇ ಕಲ್ಪತರುವು. ಆದ್ದರಿಂದ ನಮ್ಮ ಕರ್ನಾಟಕವು— ರಾಟಿಯ ತವರು ಮನೆಯಾದ್ದರಿಂದ ಅದನ್ನು ಹೆಚ್ಚಾಗಿ ಉಪಯೋಗಿಸಿ, ದಾರಿದ್ರ್ಯವನ್ನು ದೂಡಿ, ನಿರುದ್ಯೋಗವನ್ನು ಓಡಿಸಿ, ಐಶ್ವರ್ಯದ ಶಿಖರವನ್ನು ಮುಟ್ಟಬೇಕೆಂದು ನಾವು ಸೂಚಿಸುತ್ತೇವೆ

ದಾವಣಗೇರಿ ಪ್ರಾಣಿದಯಾ ಜ್ಞಾನ ಪ್ರಚಾರಕ ಸಂಘದವರು ಮೈಸೂರಿನ ಕಾಯದೆ ಕೌನ್ಸಿಲ್ ಮೆಂಬರರಿಗೊಂದು ಬಿನ್ನಹ ಪತ್ರಿಕೆಯನ್ನು ಕಳುಹಿಸಿರುತ್ತಾರೆ. ಆಕಳುಗಳ ಮತ್ತು ದನಗಳ ಕೊಲೆಯನ್ನು ನಿಲಿಸಿ, ಮೈಸೂರಿನ ಆರ್ಥಿಕ ಸಂಪತ್ತಿಯನ್ನೂ ಜನಸಾಮಾನ್ಯದ ಆರೋಗ್ಯತೆಯನ್ನು ಹೆಚ್ಚಿಸಬೇಕೆಂಬುದೇ ಆ ಬಿನ್ನಹ ಪತ್ರಿಕೆಯ ಉದ್ದೇಶವು. ಮೈಸೂರು ಒಕ್ಕಲತನದ ನಾಡು, ಒಕ್ಕಲತನವು ಬೆಳೆಯ ಬೇಕಾದರೆ, ದನಗಳು ಬೇಕು. ಉತ್ಕೃಷ್ಟವಾದ ಹೋರಿಗಳೂ ಎತ್ತುಗಳೂ ದೊರೆಯಬೇಕಾದರೆ, ಉತ್ಕೃಷ್ಟವಾದ ಆಕಳಗಳು ಬೇಕು. ಆಕಳಗಳು ರಾಷ್ಟ್ರದ ಸಂಪತ್ತು. ಎಲ್ಲ ಜಾತಿಯವರೂ ಆಕಳುಗಳನ್ನು ಸಾಕಿ ಸಲಹುವುದು ಅತ್ಯಾವಶ್ಯಕವಾಗಿದೆ. ಆಕಳುಗಳನ್ನು ಬಕರೀದ ಮೊದಲಾದ ಹಬ್ಬಗಳಲ್ಲಿ ಕೊಂದರೆ ಆಧ್ಯಾತ್ಮಿಕ ಉನ್ನತಿಯಾಗುವದೆಂದು ತಪ್ಪು ತಿಳುವಳಿಕೆಯು ಮುಸಲ್ಮಾನರಲ್ಲುಂಟು. ಆಕಳುಗಳನ್ನು ಕೊಲ್ಲುವುದು ಧರ್ಮವಲ್ಲ. ಅದು ಧರ್ಮವಲ್ಲವೆಂದೇ ತಿಳಿದು! ಹೈದರಾಬಾದದ ನಿಜಾಮರೂ ಅಫಗಾಣಿಸ್ತಾನದ ಅಮೀರರೂ ಆಕಳಗಳನ್ನು ಬಕರೀದ ಹಬ್ಬದ ದಿವಸ ಕೊಲ್ಲಬಾರದೆಂದು ಕಟ್ಟುಮಾಡಿದ್ದಾರೆ. ಅವರು ಮುಸಲ್ಮಾನ ಧರ್ಮದ ಮರ್ಮವನ್ನು ಅರಿತವರು. ತನ್ಮ ಹಿತವನ್ನು ತಾವರಿತುಕೊಂಡು, ನಮ್ಮ ಮುಸಲ್ಮಾನಬಂಧುಗಳು ಆಕಳುಗಳನ್ನು ಕೊಲ್ಲುವದರಿಂದ ಪರಾಙ್ಮುಖರಾಗಬೇಕು. ತಾವು ದೇವರ ದಯೆಯನ್ನು ಕೋರುವಂತೆ ತಿರ್ಯಗ್ಜಾತಿಗೆ ಪೂರಕವಾದ ದನಗಳ ಜಾತಿಗೆ-ದಯೆಯನ್ನು ತೋರಿಸುವುದು ತಮ್ಮ ಕರ್ತವ್ಯವಲ್ಲವೇ? ಸರ್ವಭೂತ ಹಿತವನ್ನು ಸಾಗಿಸುವದು ಶ್ರೇಷ್ಠವಾದ ಧರ್ಮವಲ್ಲವೇ? ಭೌತಿಕ ದೃಷ್ಟಿಯಿಂದ ಈ ಪ್ರಶ್ನವನ್ನು ವಿಚಾರಿಸಿದರೂ ಆಕಳುಗಳನ್ನು ಕೊಲ್ಲಬಾರದೆಂದೇ ಸಿದ್ಧವಾಗುವುದು "ಆಕಳವು ಮನುಷ್ಯನ ಸುಖದ ಸಾಧನಗಳೊಳಗೊಂದಾಗಿರುತ್ತದೆ. ಅದಿಲ್ಲದೆ ಯಾವ ರಾಷ್ಟ್ರವೂ ಏಳ್ಗೆಯನ್ನೂ ಸಭ್ಯತೆಯನ್ನೂ ಪೊಂದಿಲ್ಲ ಆದರಿಂದ ಮನುಷ್ಯನಿಗೆ ಅತ್ಯಂತ ಶ್ರೇಷ್ಠವಾದ ಪೋಷಕವಾದ ಆಹಾರವು ದೊರೆಯುತ್ತದೆ. ಅದು ಹುಲ್ಲು ಹಸರುಗಳನ್ನು ತಿಂದು ಮನುಷ್ಯನಿಗೆ ಆರೋಗ್ಯಕರವಾದ ಶಕ್ತಿವರ್ಧಕವಾದ ಆಹಾರವನ್ನು ಕಲ್ಪಿಸಿ ಕೊಡುತ್ತದೆ. ಮಕ್ಕಳು ಮರಿಗಳು ಹಾಲು ಕುಡಿದು ಹಿಗ್ಗುತ್ತವೆ. ಸಾಕಿದವನ ಕುಟುಂಬವು ಪೋಷಿತವಾಗುತ್ತದೆ. ಇಷ್ಟಾಗಿ ಹಾಲು ಹೆಚ್ಚಾಗಿ ಉಳಿದು ಮಾರಿಕೊಳ್ಳಲು ಬರುತ್ತದೆ. ಅದಿಲ್ಲದೆ, ಒಕ್ಕಲತನವು ಚೆನ್ನಾಗಿ ಚಿರವಾಗಿ ಸಾಗಲಾರದು ಅದು ಅಭಿವೃದ್ಧಿಯನ್ನು ಹೊಂದಲಾರದು. ಆಕಳವಿಲ್ಲದೆ ಜನರು ಆರೋಗ್ಯವುಳ್ಳವರೂ ಸುಖಿಗಳೂ ಆಗಲಾರರು. ಆಕಳುಗಳು ಎಲ್ಲಿ ನಲಿಯುವವೋ, ಅಲ್ಲಿ ಸಂಪತ್ತೂ, ಸಭ್ಯತೆಯೂ ನಲಿಯುವವು. ಭೂಮಿಗಳು ಬೆಳೆಯುವವು; ಮನೆಗಳು ಕಳೆತುಂಬುವವು. ಸಾಲದ ಜಾಲವು ಇಲ್ಲದಂತಾಗುವುದು. ನಿಜವಾಗಿಯೇ ಆಕಳವು ಏಳ್ಗೆಯ ತವರು" ಇಷ್ಟಲ್ಲ ಐಹಿಕ ಸಂಪತ್ತಿಯನ್ನೊದಗಿಸ ಕೊಡುವ ಆಕಳವು ಪೂಜ್ಯವಲ್ಲವೇ? ಅದೇ ಕಾಮಧೇನುವು. ಅದೇ ಕಲ್ಪವೃಕ್ಷವು. ಎಲ್ಲ ಜಾತಿಯವರೂ ಆಕಳುಗಳನ್ನು ಪೋಷಿಸಿ ರಾಷ್ಟ್ರದ ಏಳ್ಗೆಯನ್ನು ಮಾಡಬೇಕಿಕಾಗಿ ಬೇಕೆ.

✓ ರಂಗ ಭೂಮಿ

(*)

(ಲೇ:- ಲಿಂಗಪ್ಪ,ಸಿ.ಪಿ.ಚವ್ಹಾ)

'ಕನ್ನಡಿಗ'ನಲ್ಲಿ ರಂಗಭೂಮಿಗಳು ಮೇಲೆ ಮೇಲೆ ಬರುತ್ತಿದ್ದರೂ, "ರಂಗಭೂಮಿಯ ಪತನ" ವೆಂದೇಕೆ ಹಲುಬುವರು! ಮೇಲೆ ಮೇಲೆ ಬರುತ್ತವೆಂದು ಬೇಸರ ಬೇಡಿ ಮೇಲೆ ಮೇಲೆ ಬರಲಿಕ್ಕೆ-'ನೈಂಯೊಳಗಿನ ಎಡ್ಡು' ಎನ್ನುವಿರಾ? ೬ ೮ ಬೇರೆ ಬರಹಗಾರರು ಬರೆದಿರುವಂತೆ, ನಾನೊಂದು ವಿಧ: ಎಲ್ಲರೂ ಬರದಂತೆ ನನಮೂ ಬರಹ.

ರಂಗಭೂಮಿಯು, ಫೈಲ್ಬಿಟ್ಟು, ಸ್ಟೇಜಿಗೆ ಬಂದೊಡನೆ ಅದು ಒದ್ದುಬಿಟ್ಟಿದೆ. "ಜನರ ಸ್ಥಿತಿಕೋನ್ನತಿಗಾಗಿ ಆಡಲ್ಪಡುತ್ತಿದ್ದ ಆಟಗಳು" ಅಡಗಿ ದುಷ್ಟ ಇಸಕೊಳ್ಳುವ, ಇಸಕೊಂಡು ತೋರಿಸುವ ಆಟಗಳು ಆಡಲ್ಪಡಹತ್ತಿದ ಕೂಡಲೇ ರಂಗಭೂಮಿಯು ಮಾರಾಟವಾಯ್ತು. ನಮ್ಮ ಅಜ್ಜ ಅಪ್ಪಂದಿರು ಮೊನ್ನೆ ಮೊನ್ನೆಯ ವರೆಗೆ ಬೈಲಾಟಗಳಲ್ಲಿ ಕುಣಿದರೂ ಅವರೇನು ತಲೆಪಟ್ಟಿಯನ್ನು ಹಾಕಲಿಲ್ಲ ತಲೆಗೂದಲೂ ಬೆಳೆಯಲಿಲ್ಲ, ಸೋಗು ಹಾಕಿ, ತಸಬೀರು ತೆಗೆಯಿಸಿಕೊಳ್ಳಲಿಲ್ಲ. ಮೇಲಾಗಿ ಸಂಗೀತವಿಹೀನರಾಗಲಿಲ್ಲ.

ಸದಾಶಿವರಂಥ ಸಾಧುಗಳೇನೊ ರಂಗಭೂಮಿಗೆ ಬೇಕು; ಆದರೆ ಸಾಧುತ್ವವು ತಲೆಗೂದಲುಗಳಿಂದಲೇ ಬಂದಿರಬಾರದು; ಹಾಗೆ ಆದರೆ ಅವರು ಸಾಧುಗಳೆನಿಸದೆ ವೇಷಧರರನ್ನು ಬಿಂಬಿಸುವ "ಬಾವಾ"ಗಳೇ ಸೈ. "ಬಾವಾ ಬಂತು" ಅಂದ ಕೂಡಲೇ ಮಕ್ಕಳು ಹೆದರುವರು. ಅವೇನೊ ಮಕ್ಕಳ ಬಾವಾಗಳು. ಆದರೆ, ನಮ್ಮ ನಾಟಕೀ —ಬಾವಾಗಳಿಗೆ ಎಲ್ಲರೂ ಅಂಜುವರು; ಯಾರೂ ನಂಬರು; ಜಿರೀ ನಾಟಕಶಾಲೆಯಷ್ಟೇ ಶಾಬಾಸಗಿರಿ. ಸದಾಶಿವಶ್ರೀನಿವಾಸರಾಯರಂಥ ಸಾಧುಗಳು ಒಬ್ಬಿಬ್ಬರೆ ನಾಟಕಗಳಲ್ಲಿದ್ದರೆ, ಕೆಲಸವಾಗದು. ಉಳಿದವರೂ ಹೀಗೆಲ್ಲಿರುವರು? ಅವರಾದರೂ, ಕೃಷ್ಣಶರ್ಮರು ಹೇಳಿದಂತೆ ಹಾದಿಬಿಡುವರು. ಇದಿರಲಿ!

ನಟರು ಸಾಧುಗಳೂ ಇದ್ದಾರು, ಸದುದ್ದೇಶಿಗಳೂ ಇದ್ದಾರು ಆದರೆ, ನೋಡುಗರೆಲ್ಲರೂ ಸಾಧುಗಳೇ ಬೇಕಲ್ಲ! ಬಂದ ಹೆಣ್ಮಕ್ಕಳ ನೀರಿನಂಥ ಎದೆಗೆ ಯಾವ ಬಣ್ಣವು ಹಿಡಿ ಮೂಡುವುದು? ನಾಟಕವನ್ನು ನೋಡಬಂದು, ಚರಿತ್ರಾಂಶವನ್ನು ಬದಿಗಿಟ್ಟು ಮರೆತು

ಬಿಟ್ಟು—"ಹೆಣ್ಣು ನೋಗು ಚಿನ್ನಾಗಿತ್ತು; ಹೆಂಗಸರಿಗಿಂತ ಹೆಂಗಸಾಗಿ ಮೂಗುಮುರಿಯುತ್ತಿತ್ತು" ಎನ್ನುವವರೂ ಬಹುಮಂದಿ. ನಮ್ಮೂರ ನಾಟಕಮಂಡಲಿಯು ಕೆಲವು ಹುಡುಗರಂತೂ, ಹೆಣ್ಮಕ್ಕಳು ನೋಡಲಿಕ್ಕೆ ಬಂದಿದ್ದರೆ ಜೆಸ್ಸಾದ ಅಭಿನಯವನ್ನು ಮಾಡುತ್ತಿದ್ದರ; ಇಲ್ಲದಿದ್ದರ, ಮಂಗಹರಿ! ಇಂಥಲ್ಲಿ ಗಮಕರಂಥ ಮಂದಾಕುಗಳು, ಸಾಧು ಗಾಗಿದ್ದರೂ ಉಪಯೋಗವೇನ? ಸಾಧುಸ್ಥವಸುತ್ತು, "ನಾದ" ಮುಸುಕಿದಂತೆ.

ನಾನು ಒಹುದಿನ ನಟನಾಗಿದ್ದೆನ, ನಾಟಕದ ನಟನವನ್ನು ನಟಿಸಬರದಿದ್ದರೂ, ಓಣಿ ಓಣಿಗಳಲ್ಲಿ ಚಲುವನಂತೆ ನಟಿಸುತ್ತಿದ್ದೆನು ಬೆಳೆಯುವನೆ, ಎಷ್ಟೋ, ಸಬಕಾರಗಳಿಂದ ನಾಪಾಂಚರನಂತೆ ನಟಿಸುತ್ತಿದ್ದೆನು ನನ್ನ ತಲೆಯ ವಿಲಕ್ಷಣ ಕೂದಲುಗಳನ್ನು ಕಂಡು, ನನ್ನ ಸಲಿಗೆಯುವನೊಬ್ಬನು, ಹೀಗೆ ಅಂದನು.

"ದೇವಾಧಿ ದೇವರನ್ನು ಮನೆಮೂಳಿಗರನ್ನಾಗಿ ಮಾಡಿದ ರಾವಣನು, ಸೀತೆಯನ್ನು ಅಪಹರಿಸಬೇಕೆಂದು ಕಲ್ಪಿಸಿದ ಕೂಡಲೇ, ಸನ್ಯಾಸಿಯ ವೇಷವನ್ನು ಧರಿಸಬೇಕಾಯ್ತು. ಅಂತೆ ನೀನು, ನಾಟಕವನ್ನು ಇನ್ನೂ ಮಾಡಿಲ್ಲವಾದರೂ, ತಲೆಗೂದಲ ಬೆಳೆಸಿ, ಸನ್ಯಾಸಿಯ ಸೋಗಿನ ಪೂರ್ವಸಿದ್ಧತೆಯನ್ನು ಮಾಡಿಕೊಂಡಿರುವಿ"

ಈ ರಂಗಭೂಮಿಯ ಪ್ರಸಾದದಿಂದಲೇ, ನಾವು ಕ್ರಾಪುಗಳನ್ನೂ, ಕ್ರಾಪುಗಳ ಮಧ್ಯದಿಂದ ಟೊಪ್ಪಿಗೆಗಳನ್ನೂ ಕಂಡೆವಲ್ಲವೆ? ರಂಗಭೂಮಿಯು, ನಮಗೆ ಟೊಪ್ಪಿಗೆ ಹಾಕಿತು. ನಾನೇನು ರಂಗಭೂಮಿಯನ್ನು ಬೇಡೆಂದು ಬೆದರಿಸಲಾರೆ; ಬೆದರಿಸಲು ಅರಿಸನ್ನು ಮೊದಲಿನ ಪದ್ಧತಿಗಳೂ, ರೀತಿಗಳೂ, ಮೊದಲಿನಂತೆ ಬಂದ ಆಟಿಗಳು ಬೈಲಿಗೆ ಬಂದು, ಬೈಲಾಟಗಳೀಪರಿ ನಮ್ಮ ಸ್ವಕಿಕೋನ್ನತಿಯಾಗುವದರಲ್ಲಿ ಸಂದೇಹವಿಲ್ಲ ಅದಕ್ಕಾ ಮೊದಲು, ನಮಗೆ 'ಪುರಾಣ ಪಠಣ' ದ ಅವಶ್ಯಕತೆ ಬಹಳ: ಬಳಿಕ ರಂಗಭೂಮಿ.

"ನೀರಿಳಿಯ ದಗಂಟಲೊಳ್, ಕಡುಬಂ ತುರುಕಿದಂತೆ" ಆಗಬಾರದು.

ಸೌ॥ ಕಮಲಾಬಾಯಿ ಸಸಿಹಿತ್ತಲ

ಇವರ ನಿಧನ

ಸೌ॥ ಕಮಲಾಬಾಯಿಯವರು ಸಾರಸ್ವತ ಸಮಾಜದಲ್ಲಿ ಪ್ರಖ್ಯಾತ ಕಾಂಗ್ರೆಸದ ಅನುಯಾಯಿಗಳಾಗಿದ್ದರು, ಕಲಕತ್ತಾ ಸ್ಪೆಶಲ್ ಕಾಂಗ್ರೆಸದಿಂದ ನಿಧನರ ವರೆಗೆ ಅವರು ಮಾಡಿದ ಕಾಂಗ್ರೆಸದ ಕಾರ್ಯವು ಅಪೌಲ್ಯವಾಗಿರುವದು. ಸ್ವತಃ ಖಾದಿ ಧರಿಸುವದಲ್ಲದೇ ಅನೇಕ ಭಗನಿಯರಿಗೆ ಖಾದಿಮೇಲೆ ಪ್ರೇಮಹುಟ್ಟಿಸಿ ನೂಲುವ ಮತ್ತು ನೇಯುವ ವರ್ಗಗಳನ್ನು ತೆಗೆದು ಅನೇಕ ಮಹಿಳೆಯರಿಗೆ ಈ ಕಲೆಯ ಪರಿಚಯವನ್ನು ಮಾಡಿ ಕೊಟ್ಟರು. ಬೆಳಗಾಂವಿ ಕಾಂಗ್ರೆಸ್ಸಿಗೆ ಹೋದಂದಿನಿಂದ ಇವರು ಅಸ್ವಸ್ಥರಾಗಿದ್ದರೂ ನಿಧನದ ದಿನಗಳ ಮೊದಲು ಸಹ ಇತರ ಸ್ವಯಂಸೇವಿಕೆಯರನ್ನೊಂದು ಗೂಡಿಸಿ ಖಾದಿಯನ್ನು ಮನೆಮನೆಗೆ ಒಯ್ದು ಸ್ವತಃ ಮಾರುತ್ತಿದ್ದರು. ಇವರಿಗೆ ಮರಾಟಿಯು ಹೆಚ್ಚಿಗೆ ಪರಿಚಯವಾದದ್ದರಿಂದ ಮೊದ ಮೊದಲು ಇವರ ವರ್ಗಗಳಲ್ಲಿ ಮರಾಟಿ ರಾಷ್ಟ್ರಗೀತೆಗಳೇ ಪ್ರಚಾರದಲ್ಲಿದ್ದವು. ಆದರೆ ಕರ್ನಾಟಕದಲ್ಲಿ ಕನ್ನಡಕ್ಕೆ ಪ್ರಾಮುಖ್ಯತೆ ಇರಬೇಕೆಂಬ ಇವರ ವಿಚಾರವಾಗಿ ಕನ್ನಡರಾಷ್ಟ್ರಗೀತೆಗಳನ್ನೇ ಸಂಪೂರ್ಣವಾಗಿ ಕಲಿಸುವ ಏರ್ಪಾಟನ್ನು ಮಾಡಿದರು. ಇವರ ನಿಧನದಿಂದ ಕರ್ನಾಟಕದ ಕಾಂಗ್ರೆಸದ ಕೆಲಸಕ್ಕೆ ಆದ ಹಾನಿಯು ಹೇಳಲು ಅಸಾಧ್ಯವಾಗಿರುವದು. ಇವರ ಪತಿಗಳಾದ ಮಂಗೇಶರಾಯರು ಮುಂಬೈ ಯುನಿವರ್ಸಿಟಿಯ ಪದವೀಧರರಾಗಿದ್ದು ಮುಂಬೈ ಕಾರ್ಪೊರೇಶನ್ನಲ್ಲಿಯ ತಮ್ಮ ನೌಕರಿಯನ್ನು ೨೦ ನೇ ಸಾಲಿನಲ್ಲಿ ಬಿಟ್ಟು ಕೊಟ್ಟು ಧಾರವಾಡದಲ್ಲಿ ಸ್ವತಂತ್ರ ಧಂದೆ ನಡೆಸಿರುವರು. ಇವರ ಪತ್ನಿಯವರ ನಿಧನದಿಂದ ಇವರಿಗಾದ ದುಃಖದಲ್ಲಿ ಕರ್ನಾಟಕವು ಸಹ ಭಾಗಿಯಾಗಿರುವದು. ಕಮಲಾಬಾಯಿಯವರು ಹೊಸ್ಪೇಟೆಯಲ್ಲಿ ಜಾ ತಾ. ೩೩ ನೇ ದಿನ ನಿಧನಹೊಂದಿದರು. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹುನಗುಂದ ವೀರಶೈವ ತರುಣ

ಸಂಘದ ವಿದ್ಯಾವರ್ಧಕ ಫಂಡಿಗೆ ದೇಣಗಿ

ತಾ. ೨೧-೧-೨೬ ನೇ ದಿಂದ ತಾ॥ ೮-೨-೨೬ ರವರೆಗೆ ಗಂಜೀಹಾಳ, ಹಿರೇಮಳಗಾವಿ, ಹುಲಗಿನಹಾಳ, ಅಮೀನಗಡ, ಸೂಳಿಭಾವಿ, ಕೆಲೂರ ಗ್ರಾಮಗಳಲ್ಲಿ ಸಂಘದ ಸೆಕ್ರೆಟರಿ ಗಳಾದ ಶ್ರೀಯುತ ಎಸ್ ಟಿ. ಅಡಿವೆಪ್ಪನವರ ಬಸನಶೆಟ್ಟಿ ವಾ॥ ಇವರು ಸಂಚಾರಮಾಡಿ ಅನುಕ್ರಮವಾಗಿ ೮-೪೪ ೨೫-೩೦-೩ ರೂಪಾಯಿ ವಸೂಲಮಾಡಿರುತ್ತಾರೆ. ಕೆಲೂರ ಗ್ರಾಮದವರು ಶ್ರೀ ಮಹಾಂತೇಶ ಫ್ರೀ ಬೋರ್ಡಿಂಗಕ್ಕೆ ೮ ಚೀಲ ಧಾನ್ಯವನ್ನು ವಸೂಲಮಾಡಿ ಕೊಟ್ಟಿರುತ್ತಾರೆ. ಸದರಿ ವರ್ಗಣಿ ಕಲ್ಲದಲ್ಲಿ ಶ್ರೀಮಂತ ರಾಘವೇಂದ್ರರಾವ ದೇಸಾಯಿ ಗಂಜೀಹಾಳ ರಾ॥ ಧಂಡಪ್ಪಣ್ಣಾ ಭದ್ರಶೆಟ್ಟಿ ಹಿರೇಮಳಗಾವಿ ಶ್ರೀಮಂತ ಗಿರಿರಾಜ ದೇಸಾಯಿ ಹುಲಗಿನಹಾಳ ರಾ॥ ಬಸಪ್ಪಣ್ಣಾ ಶೀಲವಂತರ ಅಮೀನಗಡ ರಾ॥ ಹನುಮಂತಗೌಡ್ರು ಪಾಟೀಲ ಪ್ರೆಸಿಡೆಂಟ ಡಿ॥ ಲೋಕಲಬೋರ್ಡ ಸೂಳೀಭಾವಿ ವ ಶ್ರೀಮಂತ ಮಂಜಪ್ಪಣ್ಣಾ ನಾಡಗೌಡ್ರು ವ ರಾ॥ ಸಂಗಪ್ಪಾ ಪೊತಗೇರಿ ಮಾಸ್ತರ ಕೆಲೂರ ಇವರು ಪೂರ್ಣ ಸಹಾಯ ಮಾಡಿದಕ್ಕಾಗಿ ಈ ಸಂಘವು ಪೂರ್ಣ ಆಭಾರಿ ಆಗಿದೆ. ಇದರಂತೆ ಈ ಸಂಘದ ಪತಿಯಿಂದ ಎರಡನೇ ಗ್ರಾಮಗಳಿಗೆ ಬಂದಲ್ಲಿ ಸದರಿಯವರು ಮೇಲಿನವರ ಉದಾಹರಣೆಯನ್ನೇ ಅನುಕರಿಸುವರೆಂದು ಆಶಿಸುತ್ತೇನೆ.

— —ಓರ್ವಸಭಾಸದ

॥ಸತ್ಕ್ಷೇತ್ರ॥

ಅಥರಗಾದ ಶ್ರೀ ರೇವಣಸಿದ್ಧ ಶಿವಶರಣರವರ ಜಾತ್ರೆ

ಇಂಡಿ ತಾಲೂಕ ಪೈಕಿ ಅಥರಗಾದ ಶ್ರೀ ರೇವಣಸಿದ್ಧ ಶಿವಶರಣರ ಪುಣ್ಯತಿಥಿಯ ದಿವಸ ಈ ಸಾರೆ ಜಾತ್ರೆಯನ್ನು ಮಾಡಬೇಕೆಂದು ನಿಶ್ಚಯಿಸಿದೆ. ಕಾರಣ ಯಾವತ್ತು ಯಾತ್ರಸ್ಥರು ಒಂದು ಸಲ್ಲಿಯು ಶಿವಶರಣರ ದರ್ಶನದಿಂದ ಪುನೀತರಾಗಬೇಕೆಂದು ಕೋರುವೆವು.

ಕಾರ್ಯಕ್ರಮವು

ಶುಕ್ರವಾರ ತಾ॥ ೧೯-೨-೧೯೨೬ ರಿಂದ ಸಪ್ತಾಹ ಪ್ರಾರಂಭಿಸಿ ೧೯-೨-೨೬ ಶುಕ್ರವಾರ ಪ್ರಾತಃಕಾಲಕ್ಕೆ ಮುಗಿಸಿ, ಮುಂದೆ ಸಾಯಂಕಾಲದವರೆಗೂ ಅನ್ನಸಂತರ್ಪಣೆ, ಮತ್ತು ಶ್ರೀ ಸಾಧು ಶಿರೋಮಣಿ ಮಂಜಪ್ಪನವರೇ ಮೊದಲಾದ ವ್ಯಾಖ್ಯಾನಕಾರರ ವ್ಯಾಖ್ಯಾನಗಳೂ, ರಾತ್ರಿ ಶಿವಶರಣರ ಭಾವಚಿತ್ರದ ಮೆರವಣಿಗೆಯೂ, ಆಗುವವು.

ಮರುದಿವಸ ಶನಿವಾರ ಲಾವಣಿಪದಗಳೂ, ಕುಸ್ತಿಗಳೂ, ಆಗುವವು. ಸರ್ವ ಜನರು ಬರಬೇಕೆಂದು ವಿನ್ನಹ.

ಕಾರ್ಯನಿರ್ವಾಹಕರು

ಅಥರಗಾ (೧) ರಾಮನಗೌಡರು ಪಾಟೀಲ

(೨) ದಾದಾಗೌಡರು ಬಿರಾದಾರ

ಹಿಂದುಸ್ತಾನಿ ಸೇವಾದಲ

ಪ್ರ. ನ ೧

೧೯೨೦ ನೇ ಇಸ್ವಿಯಲ್ಲಿ ಮ. ಗಾಂಧಿಯವರು ಪ್ರಾರಂಭಿಸಿದ ಅಸಹಕಾರದ ಯುದ್ಧವನ್ನು ಮುಂದೆ ನಡಿಸುವದಕ್ಕಾಗಿ ಎಷ್ಟೋ ಜನ ರಾಷ್ಟ್ರೀಯ ಮುಖಂಡರನ್ನು ಬಂದಿವಾಸಕ್ಕಾಗಿ ಅಟ್ಟಿದ್ದರಿಂದ ಮ. ಗಾಂಧಿಯವರು ಈ ಯುದ್ಧವು ಜೋರಿನಿಂದ ನಡೆಯಬೇಕಾದರೆ ರಾಷ್ಟ್ರಕ್ಕೆ ಅತ್ಯವಶ್ಯವಾಗಿ ಬೇಕಾದ ಸ್ವಯಂ ಸ್ಫೂರ್ತಿಯಿಂದ ಮುಂದೆ ಬಂದ ಸ್ವಾರ್ಥತ್ಯಾಗಿಗಳಾದ ಸೇವಕರನ್ನು ತಯಾರಿಸಬೇಕೆಂದು ವಿಚಾರಿಸಿ ೯ ನಿಯಮಗಳಿಂದ ಕೂಡಿದ ಪ್ರತಿಜ್ಞಾ ಪತ್ರವೊಂದನ್ನು ತಯಾರಿಸಿ ಆ ಪತ್ರದ ನಿಯಮಗಳನುಸಾರವಾಗಿ ಕಾರ್ಯವನ್ನು ಪ್ರಾರಂಭಿಸಬೇಕೆಂದು ಅಹಮ್ಮದಾಬಾದ ಕಾಂಗ್ರೆಸಿನಲ್ಲಿ ಠರಾವು ಪಾಸ ಮಾಡಿಕೊಂಡರು.

ಈ ಕೆಲಸವನ್ನು ೧೯೨೨ ನೇ ಇಸ್ವಿಯಲ್ಲಿ ಪ್ರಾರಂಭಮಾಡಿದ ಸ್ವಲ್ಪ ದಿವಸಗಳಲ್ಲಿಯೇ ಮ. ಗಾಂಧಿಯವರು ಸೆರೆಮನೆಗಟ್ಟಲ್ಪಟ್ಟದ್ದರಿಂದ ಈ ಕಾರ್ಯಕ್ರಮವು ಎಷ್ಟು ಜೋರಿನಿಂದ ನಡೆಯಬೇಕೊ ಅಷ್ಟು ಜೋರಿನಿಂದ ನಡೆಯದೆ ಅಲ್ಲಿಗೇ ತಗ್ಗಿ ಬಿಟ್ಟಿತು. ಅದರಂತೆ ಕರ್ನಾಟಕದಲ್ಲಿಯೂ ಡಾ. ಹರ್ಡೀಕರರವರ ಅಹಮ್ಮದಾಬಾದ ಪ್ರತಿಜ್ಞಾ ಪತ್ರದ ಪ್ರಕಾರ ಸ್ವಯಂಸೇವಕರನ್ನು ಕೂಡಿಸುವ ಕೆಲಸವು ನುಗ್ಗಾಯಿತು.

ಮುಂದೆ ಅದೇ ವರ್ಷದಲ್ಲಿ ಗಯಾ ಕಾಂಗ್ರೆಸದಲ್ಲಿ ಕಾಯದೇಭಂಗದ ಸಲುವಾಗಿ ೫೦ ಸಾವಿರ ಸ್ವಯಂ ಸೇವಕರನ್ನು ಇಡೀ ಹಿಂದುಸ್ಥಾನದಲ್ಲಿ ತಯಾರಿಸಬೇಕೆಂದು ಠರಾಯಿಸಲ್ಪಟ್ಟಿತು. ಇದರ ಪ್ರಕಾರ ಕೆಲಸವಾಗದೆ ಆ ಠರಾವು ಒಣ ಕಾಗದದಲ್ಲಿಯೇ ಉಳಿಯಿತು ಇದರ ಕರ್ನಾಟಕದಲ್ಲಿ ಮಾತ್ರ ಡಾ. ಹರ್ಡೀಕರರು ೨ ಸಾವಿರ ಸ್ವಯಂಸೇವಕರನ್ನು ಕೂಡಿಸುವ ಪ್ರತಿಜ್ಞೆಯಿಂದ ಎಷ್ಟು ಜೋರಿನಿಂದ ಕೆಲಸ ಮಾಡಿದರೂ ದುರ್ದೈವದಿಂದ ಆ ಕೆಲಸಕ್ಕೆ ಪೂರ್ಣ ಸಹಾಯವು ಸಿಗದೇ ಹೋಯಿತು.

ಕರ್ಮ ಧರ್ಮ ಸಂಯೋಗದಿಂದ ೧೯೨೩ ನೇ ಇಸ್ವಿಯಲ್ಲಿ ನಾಗಪೂರ ಸತ್ಯಾಗ್ರಹವು ಪ್ರಾರಂಭವಾಗಲು ವರ್ಕಿಂಗ ಕಮೀಟಿಯ ಸೂಚನೆಯ ಮೇರೆಗೆ ಪ್ರತಿಯೊಂದು ಪ್ರಾಂತದಿಂದ ಅನೇಕ ಸ್ವಯಂಸೇವಕರು ಈ ಸತ್ಯಾಗ್ರಹದಲ್ಲಿ ಭಾಗತೆಗೆದು ಕೊಂಡರು. ಅದರಂತೆ ನಮ್ಮ ಕರ್ನಾಟಕದಿಂದಲೂ ಆರು ಮಂದಿ ಸ್ವಯಂಸೇವಕರು ಭಾಗತೆಗೆದು ಕೊಂಡಿದ್ದರು. ಆಗ ಇದಕ್ಕೆಲ್ಲ ಭಾಗ ತೆಗೆದುಕೊಂಡ ಹದಿನೇಳುನೂರು ಸ್ವಯಂ ಸೇವಕರಲ್ಲಿ ಎಷ್ಟೋ ಜನರು ಅಲ್ಲಿಯ ಕಷ್ಟಗಳನ್ನು ತಾಳಲಾರದ ಅಶಕ್ತರೂ ನಿರ್ಬಲ ಮನಸ್ಸಿನವರೂ ಇದ್ದು ಕ್ಷಮಾಪಣೆಯನ್ನು ಬೇಡಿಕೊಂಡು ಮರಳಿ ತಮ್ಮ ಮನೆಗೆ ಹೋದರು. ಹೀಗಾಗಿ ಆ ಸತ್ಯಾಗ್ರಹದ ತಯಾರಿಯು ಹೇಗಿರಬೇಕೋ ಹಾಗೆ ಇದ್ದುದರಿಂದ ಡಾ. ಹರ್ಡೀಕರರವರು ಇದರಲ್ಲಿ ಏನಾದರೂ ವ್ಯವಸ್ಥೆ ಮಾಡಬೇಕೆಂದೂ ನಾವು ಜೈಲಿನಿಂದ ಹೊರಗೆ ಹೋದ ಬಳಿಕ ಸ್ವಯಂಸೇವಕರ ಮಂಡಲದ ಸಲುವಾಗಿ ಸುಸಂಘಟಿತ ರೀತಿಯಿಂದ ಏನಾದರೂ ಕೆಲಸ ಮಾಡಬೇಕೆಂದೂ ವಿಚಾರಿಸಿ ಪ್ರತಿಯೊಂದು ಪ್ರಾಂತದಿಂದ ಬಂದ ಸ್ವಯಂಸೇವಕರನ್ನು ಜೈಲಿನಲ್ಲಿಯೇ ಒಕ್ಕಟ್ಟಿಗೆ ಕೂಡಿಸಿ ಈ ವಿಷಯವಾಗಿ ಪರಸ್ಪರರು ನಿರ್ಣಯಿಸಿಕೊಂಡರು ಇದೇ ನಮ್ಮ ಹಿಂದುಸ್ಥಾನಿ ಸೇವಾದಲದ ಜನನವೆಂದು ನಿರ್ವಿವಾದವಾಗಿ ಹೇಳಬಹುದು

ಶ್ರೀ ಕೃಷ್ಣನಂತೆ ಕಾರಾಗೃಹದಲ್ಲಿ ಜನ್ಮವೆತ್ತಿದ ನಮ್ಮ ಸೇವಾಮಂಡಲವು ಹೊರಗೆ ಬಂದ ಮೇಲೆ ಡಾ. ಹರ್ಡೀಕರರು ನಮ್ಮ ಕರ್ನಾಟಕದಲ್ಲಿ ಅತ್ಯಂತ ಜೋರಿನಿಂದ ಕೆಲಸವನ್ನು ಪ್ರಾರಂಭಿಸಿದರು ಅದರಂತೆ ಹಿಂದುಸ್ಥಾನದ ಪ್ರತಿಯೊಂದು ಪ್ರಾಂತದಲ್ಲಿಯೂ ಕೆಲಸ ಮಾಡಬೇಕೆಂದು ಪಂ. ಜವಾಹರ ಲಾಲ ನೆಹರೂರವರಿಗೆ ತಮ್ಮ ವಿಚಾರವನ್ನು ತಿಳಿಸಲು ಅವರು ತಮ್ಮ ತನು, ಮನ, ಧನದಿಂದ ಸಹಾಯ ಮಾಡುವೆನೆಂದು ವಚನ ಕೊಟ್ಟರು. ಆ ಮೇರೆ ೧೯೨೩ ನೇ ಇಸ್ವಿಯಲ್ಲಿ ದಿಲ್ಲಿಯ ಸ್ಪೆಶಲ ಕಾಂಗ್ರೆಸಿನ ಕಾಲದಲ್ಲಿ ಈ ಸೇವಾಮಂಡಲದ ತಾತ್ಕಾಲಿಕ ಮಂಡಲವೊಂದನ್ನು ಕೂಡಿಸಿ ಅದರಲ್ಲಿ ಅದೇ ಇಸ್ವಿಯಲ್ಲಿ ಕೂಡುವ ಕೊಕೊನಾಡಾ ಕಾಂಗ್ರೆಸಿನ ಕಾಲಕ್ಕೆ ಆಲ್ ಇಂಡಿಯಾ ವ್ಹಾಲಂಟಿಯರ ಪರಿಷತ್ತನ್ನು ಕೂಡಿಸಬೇಕೆಂದು ಠರಾವ ಪಾಸ ಮಾಡಿಕೊಂಡರು. ಅದರಂತೆ ಆ ಪರಿಷತ್ತಿನಲ್ಲಿ ಈ ರಾಷ್ಟ್ರಸೇವಾ ಮಂಡಲಕ್ಕೆ ಹಿಂದುಸ್ತಾನಿ ಸೇವಾದಲವೆಂಬ ಹೆಸರನ್ನು ಇಟ್ಟರು ಮತ್ತು ಅದರ ಬಗ್ಗೆ ಕೆಲವು ನಿಯಮಗಳೂ ಮಾಡಲ್ಪಟ್ಟವು. ಆ ನಿರ್ಣಯದ ಪ್ರಕಾರ ಕರ್ನಾಟಕದಲ್ಲಿ ಹಿಂದುಸ್ತಾನಿ ಸೇವಾದಲವು ಸ್ಥಾಪಿತವಾಗಿ ಆ ಸೇವಾದಲದ ಮುಖಾಂತರ ಶಿಕ್ಷಣ ಪಡೆದ ಸ್ವಯಂಸೇವಕರು ಬೆಳಗಾವಿಯ ಮಹಾ ಸಭೆಯಲ್ಲಿ ಹೇಗೆ ಕೆಲಸಮಾಡಿದರೆಂಬುದೂ ಮತ್ತು ಕರ್ನಾಟಕದಿಂದ ೧೨ ಮಂದಿ ಅಗ್ರನಾಯಕರು ಮೊನ್ನಿನ ಕಾನಪುರ ಕಾಂಗ್ರೆಸ್ಸಿಗೆ ಹೋಗಿ ಏನೇನು ಕೆಲಸ ಮಾಡಿದರೆಂಬುದೂ, ಅಲ್ಲ ಪ್ರತಿನಿಧಿಗಳಾದ ಕರ್ನಾಟಕಸ್ಥರಿಗೆ ತಿಳಿದ ಮಾತೇ ಆಗಿದೆ. ಇದಲ್ಲದೆ ವೃತ್ತ ಪತ್ರಗಳನ್ನೋದುವ ಪ್ರತಿಯೊಬ್ಬರಿಗೆ ಈ ವಿಷಯವೇನೂ ಹೊಸದಲ್ಲ.

ಬೆಳಗಾಂವಿ ಕಾಂಗ್ರೆಸಿನಲ್ಲಿ ಕೂಡಿದ ಹಿಂದುಸ್ತಾನಿ ಸೇವಾದಲದ ಮೊದಲನೇ ಪರಿಷತ್ತಿನಲ್ಲಿ ಪಾಸಾದ ಠರಾವಿಗನುಸರಿಸಿ ಆ ವರ್ಷ ನಡೆದ ಮೊನ್ನೆ ಕಾನಪೂರದಲ್ಲಿ ಶ್ರೀ ತುಲಸೀದಾಸ ಗೋಸಾಯಿ ಎಮ್ ಎಲ್ ಎ ಇವರ ಅಧ್ಯಕ್ಷತೆಯ ಕೆಳಗೆ ಹಿಂದುಸ್ತಾನಿ ಸೇವಾದಲದ ೨ ನೇ ಪರಿಷತ್ತು ಜರಗಿತು. ಅದರಲ್ಲಿ ಅಖಿಲ ಭಾರತ ಹಿಂದುಸ್ತಾನಿ ಸೇವಾದಲದ ಮೆಂಬರರೂ ಕಾರ್ಯಕ್ರಮವೂ ಕೆಳಗೆ ಬರೆದಂತೆ ಇರಬೇಕೆಂದು ಗೊತ್ತಾಯಿತು

ಮೆಂಬರರು

೧ ಶ್ರೀಮತಿ ಸರೋಜಿನೀ ನಾಯಡು	೭ ಮುಖನಲಾಲ ಚತುರ್ವೇದಿ
೨ ,, ಎಮ್. ಎ. ಅನಸಾರಿ	೮ ಶ್ರೀ ಮೌಲಾನಾ ಶೌಕತ ಅಲಿ
೩ ,, ಶ್ರೀನಿವಾಸ ಅಯ್ಯಂಗಾರ	೯ ,, ಮಣಿಲಾಲ ಕೊಠಾರಿ
೪ ,, ಬಾಬೂ ರಾಜೇಂದ್ರ ಪ್ರಸಾದ	೧೦ ,, ಪ. ಸಿ. ಗೋಸ್ವಾಮಿ ಅಧ್ಯಕ್ಷ
೫ ,, ಆಚಾರ್ಯ ಗಿಡವಾಣಿ	೧೧ ,, ಪ. ಜವಾಹಿರಲಾಲ ನೆಹರು (ಖಜೀನದಾರ)
೬ ,, ಬಾಬಾಸಾಹೇಬ ದೇಶಮುಖ	೧೨ ,, ನಾ. ಸು. ಹರ್ಡೀಕರ (ಜನರಲ ಸೆಕ್ರೆಟರಿ.)

ಕಾರ್ಯಕ್ರಮವು

೧ ಕರ್ನಾಟಕದಲ್ಲಿ ಕಾನಪೂರ ಕಾನ್ಫರನ್ಸಿನಲ್ಲಿ ಠರಾಯಿಸಿದ ಪ್ರಕಾರ ೧ ಸಾವಿರ ಹಿಂದುಸ್ತಾನಿ ಸೇವಾದಲದ ಸದಸ್ಯರನ್ನು ಕೂಡಿಸುವದು

೨ ಕರ್ನಾಟಕ ಪ್ರಾಂತದಲ್ಲಿ ಹಿಂದುಸ್ತಾನಿ ಸೇವಾದಲದ ಜಿಲ್ಹಾ ವ ತಾಲೂಕಾ ಗ್ರಾಮಿಕ ಬೋರ್ಡುಗಳನ್ನು ತಯಾರಿಸುವದು

೩ ಕನಿಷ್ಟ ಪಕ್ಷಕ್ಕೆ ಹತ್ತಾದರೂ ವ್ಯಾಯಾಮ ಮಂದಿರಗಳನ್ನು ಕರ್ನಾಟಕದಲ್ಲಿ ಯೋಗ್ಯ ಕಂಡ ಊರುಗಳಲ್ಲಿ ಸ್ಥಾಪಿಸುವದು ಮತ್ತು ಅದರ ವ್ಯವಸ್ಥೆಯನ್ನು ಮಾಡುವದು.

೪ ನಮ್ಮ ಪ್ರಾಂತದಲ್ಲಿ ಕನಿಷ್ಟ ಪಕ್ಷಕ್ಕೆ ೫೦ ಮಂದಿಯನ್ನಾದರೂ ಕ್ಯಾಂಪಿನ ಶಿಕ್ಷಣ ಕೊಟ್ಟು ತಯಾರಿಸುವದು.

೫ ಅಖಿಲಭಾರತ ಹಿಂದುಸ್ಥಾನಿ ಸೇವಾದಳದಿಂದ ಬಂದ ಆಜ್ಞೆಗಳನ್ನು ಪರಿಪಾಲಿಸುವದು.

ಸದಸ್ಯತನ

ಹಿಂದುಸ್ಥಾನಿ ಸೇವಾದಳದ ಸದಸ್ಯರಾಗಬಿಚ್ಛಿಸುವವರು ಆ ಸದಸ್ಯತನದ ನಾಲ್ಕಾಣೆ ರೊಕ್ಕವನ್ನು ಕೊಡುವದಲ್ಲದೆ ವ್ಹಾಲಂಟಿಯರ ಮಾಸಿಕ ಪತ್ರದ ವಾರ್ಷಿಕ ಚಂದಾ ೧ ರೂಪಾಯಿಯನ್ನೂ ಕೊಡಬೇಕಾಗುವದು. ಸದಸ್ಯರಲ್ಲದವರಿಗೆ ವ್ಹಾಲಂಟಿಯರ ಮಾಸಿಕ ಪತ್ರದ ಚಂದಾ ೩ ರೂಪಾಯಿ ಬೀಳುವದು.

ಪ್ರತಿಜ್ಞಾ ಪತ್ರವು.

ನಾನು ಊರು ಜಿಲ್ಹಾ ಪ್ರಾಂತ

ಶಾಂತ ಮತ್ತು ಯೋಗ್ಯ ಉಪಾಯಗಳಿಂದ ಹಿಂದುಸ್ಥಾನಕ್ಕೆ ಸ್ವರಾಜ್ಯವನ್ನು ದೊರಕಿಸುವದರ ಸಲುವಾಗಿ ನಾನು ಪ್ರಯತ್ನ ಮಾಡುತ್ತೇನೆಂದು ಪ್ರತಿಜ್ಞಾಪೂರ್ವಕವಾಗಿ ಹೇಳುತ್ತೇನೆ.

ಮತ್ತು ಹಿಂದುಸ್ಥಾನದ ಎಲ್ಲ ಜಾತಿ ಪಂಗಡಗಳ ಜನರಲ್ಲಿ ಶಾಂತತೆಯನ್ನು ಮತ್ತು ಪ್ರೇಮ ಭಾವವನ್ನೂ ಹೆಚ್ಚಿಸಲು ನನ್ನ ಶಕ್ತಿಯನ್ನು ಮೀರಿ ಪ್ರಯತ್ನ ಮಾಡುವೆನು.

ನಾನು ಸದಸ್ಯನಾಗಿರುವ ಹಿಂದುಸ್ಥಾನಿ ಸೇವಾದಳದ ನೇಮಗಳನ್ನು ಅಕ್ಷರಶಃ ಪಾಲಿಸುವೆನು

ನನ್ನ ಸದಸ್ಯತ್ವದ ಬಗ್ಗೆ ನಾಲ್ಕಾಣೆ ಫೀ ಹಣವನ್ನು ಇಸವಿ ಸನ್ನ ೧೯೨೬ ನೇ ವರ್ಷದ ಬಾಬತು ವ್ಹಾಲಂಟಿಯರ ಮಾಸಪತ್ರಿಕೆಯ ವರ್ಗಣಿಯ ಬಗ್ಗೆ ೧ ರೂ ಯನ್ನು ಕೊಟ್ಟಿರುವೆನು.

ಸದಸ್ಯರು ಕೆಳಗಿನ ಮಾಹಿತಿಯನ್ನು ಸೇವಾದಳದ ಆಫೀಸಿನ ಮುಖಾಂತರ ತಿಳಿಸ ತಕ್ಕದ್ದು.

೧ ಮದುವೆ ಆಗಿದೆಯೋ ಇಲ್ಲವೋ? ೨ ಗೊತ್ತಿದ್ದ ಭಾಷೆಗಳು ೩ ದೊರೆತ ಶಿಕ್ಷಣವು ೪ ಸದ್ಯದ ವ್ಯವಸಾಯ ೫ ಸಾಂಪತ್ತಿಕಸ್ಥಿತಿ ೬ ಸಾಧಾರಣ ಅಭಿರುಚಿ ೭ ಸ್ವತಂತ್ರನೋ ಪರಾವಲಂಬಿಯೋ ೮ ಸ್ವಯಂಸೇವಕ ಶಿಕ್ಷಣವು ದೊರೆತಿದೆಯೋ? ೯ ಧರ್ಮ ಇಲ್ಲವೆ ಯಾವದಾದರೂ ಜಾತಿ ೧೦ ರಾಷ್ಟ್ರಕಾರ್ಯದ ಸಲುವಾಗಿ ವೇಳೆಯು ದೊರೆಯುವದೊ?

ನಾ. ರಾ. ವೈದ್ಯ ಗದಗ

ಕನ್ನಡಿಗರಿಗೆ ಅನಾವೃತ ಪತ್ರ

(ಪೂರ್ವ ವಾಕ್ಯಯನನ್ನು ನೋಡಿರಿ)

ಒಂದು ಕಡೆಯಿಂದ ಅಜ್ಞಾನವೂ ಮತ್ತೊಂದು ಕಡೆಯಿಂದ ಹಳೆಯದೇ ಒಳ್ಳೆಯದೆನ್ನುವ ಸುಧಾರಣಾವಿರೋಧವೂ ಕನ್ನಡನಾಡನ್ನೆಲ್ಲ ಆವರಿಸಿಕೊಂಡಿರುವಲ್ಲಿ ಉತ್ತರ ಪ್ರಾಂತದಲ್ಲಿ ಮರಾಠಿಯವರ ಏರಿಬರುವಿಕೆಯು ಅವಿಶ್ರಾಂತವಾಗಿ ಸಾಗುತ್ತಿರುವಾಗ ಜೈನಕವಿಗಳ ನೆನಪು ಸಹ ಆಗದೆ ಹೋಗಿದ್ದು ಆಶ್ಚರ್ಯವಲ್ಲ! ವಿಶೇಷವೇನು? ಕನ್ನಡದಲ್ಲಿ ಜೈನ ಕವಿಗಳಿರುವರೆಂಬ ಸುದ್ದಿಯು 'ಛಂದಸ್ಸಾರ'ವೆಂಬ ಪುಸ್ತಕದೊಳಗಿನ ಉಲ್ಲೇಖದಿಂದಷ್ಟೇ ನಮಗೆ ಕೇಳಬಂದಿತ್ತು. ಬೆಳಗಾವಿಯ ನಾರಿನವರಾದ ನಮ್ಮ ಕೆಲವರು ವಿದ್ಯಾರ್ಥಿಗಳು ಧಾರವಾಡಕ್ಕೆ ಬಂದು ಓದುತ್ತಿರುವಲ್ಲಿ ಮೈಸೂರಿನಪದ್ಯಸಾರವನ್ನು ಅವರು ನಮಗೆ ತೋರಿಸದಿದ್ದರೆ ನಮ್ಮ ಗತಿಯು ಕನ್ನಡದಲ್ಲಿ ಅಂಧಗತಿಯೇ ಆಗುತ್ತಿತ್ತೆಂದು ಹೇಳಬಹುದಾಗಿದೆ. ಪಂಪಭಾರತವು ಪ್ರಕಟವಾಗಿ ೨೦ ವರುಷಗಳಾಗಿ ಹೋದರೂ ಅದರ ಹೆಸರೂ ನಮಗೆ ಗೊತ್ತಾಗಲಿಲ್ಲವೆಂಬ ದುರ್ದೈವಕ್ಕೆನ್ನೇನು ಹೇಳೋಣ? ಜೈಮಿನಿ-ರಾಜಶೇಖರಗಳೇ ನಮಗೆ ಮುಖ್ಯವಾಗಿ ಹೋಗಿದ್ದವು!

ಧಾರವಾಡದ ಕೆಲವರು ದೊಡ್ಡ ಮನುಷ್ಯರು ಕನ್ನಡಕ್ಕಾಗಿ ಪ್ರಯತ್ನಪಡುತ್ತ ಬಂದಿರುವರು. ಹೀಗಿದ್ದರೂ, ಶಾಸ್ತ್ರೀಯವಾದ ಭಾಷಾಜ್ಞಾನವು ಅವರಲ್ಲಿ ಬಹಳ ಕಡಿಮೆಯಾಗಿತ್ತೆಂದು, ಈಗ ಸಹ ಕೆಲವರು ಬರೆಯುವಲ್ಲಿ, ಕನ್ನಡದ ಶಬ್ದಗಳವು ಅಕಾರಾಂತವೋ ಉಕಾರಾಂತವೋ ಎಂಬದನ್ನು ನೋಡದಿರುವದರಿಂದ ಸ್ಪಷ್ಟವಾಗುತ್ತಿರುವದು. ಇಂತಹ ಸಂದರ್ಭದಲ್ಲಿ ಕನ್ನಡದ ತೇಜಸ್ವಿತೆಯು ಬಹುಜನರಿಗೆ ತಿಳಿದುಬಂದು ಅವರು ಅದನ್ನು ಪುರಸ್ಕರಿಸುತ್ತ ಬರುವದು ಹೇಗೆ? ಮತ್ತು, ವೈಷ್ಣವವೇದವನ್ನು ಮನ್ನಿಸದ 'ಜೈನ ಕಾವ್ಯ' ವೆಂದು 'ಅವೈದಿಕ'ವೆಂದು ಜೈನಕೃತಿಗಳ ಬಗೆಯಲ್ಲಿ ಉದಾಸೀನರಾದ ಪಂಡಿತನಾಮಧಾರಿಗಳು ಮೈಸೂರಿನಲ್ಲಿ ಈಗಲೂ ಕೆಲವರಿರುವಲ್ಲಿ ಪೂರ್ವದ ಆ ಐತ್ತರೇಯರಾದ-ಬಡ ವೈದಿಕರನ್ನು ಹಳಿಯುವದರಲ್ಲಿ ಅರ್ಥವೇನು? ಶ್ರೀಮನ್ಮಹಾರಾಜ ಶ್ರೀಸಯಾಜಿರಾಯರು, "ಸಾಮಾಜಿಕ ಕೃಪಣತೆಯನ್ನೂ, ಧಾರ್ಮಿಕ ಮರಳತೆಯನ್ನೂ, ಉಚ್ಚನೀಚ ಭಾವನೆಗಳನ್ನೂ ಬಿಟ್ಟು ಬಿಡಿರಿ. ಪಾಶ್ಚಾತ್ಯರ ಒಳ್ಳೆಯಮಾತುಗಳನ್ನು ಸ್ವೀಕರಿಸಲು ಅಂಜಬೇಡಿರಿ" ಎಂದು ಮೊನ್ನೆ ಸಮಾರಂಭವಲ್ಲಿ ಸಾರಿ ಸಾರಿ ಹೇಳಿರುವರು! ಇಂತಹ ಸಮಯದಲ್ಲಿ ಭರತಖಂಡದಲ್ಲಿಯ ಶ್ರೇಷ್ಠಧರ್ಮವಾದ ಜೈನಮತವು ನಮ್ಮದಲ್ಲ, ನಮ್ಮ ದೇವರಿಗೆ ಕೈಮುಗಿಯುವದಿಲ್ಲವೆಂಬ ಅದೊಂದೇ ಮಾತನ್ನು ಮುಂದೆ ಮಾಡುವದು ಅಶ್ಲಾಘ್ಯವಾದೀತು. ಅದ್ವೈತವನ್ನು ಹಳಿಯುವದೇ ಕರ್ತವ್ಯವೆಂದು ತಿಳಿದ ನಮ್ಮ ವೀರ ವೈಷ್ಣವರು ಇಷ್ಟುದಿನ ನಡೆದ-ಬಂದ ಕೆಟ್ಟ ಆರೀತಿಯನ್ನು ಬೇಗನೆ ಬಿಟ್ಟುಕೊಡುವದೇ ಉಚಿತವಾಗಿರುವದು-ಲೋಕವು ಮುಂದು ಮುಂದಕ್ಕೆ ನಡೆದಿರುವಲ್ಲಿ ಕನ್ನಡಿಗನನ್ನು ಮಲಗಿರುವದು ಸರಿಯೋ?

ಕನ್ನಡಿಗರೇ, ಜನವರಿಯ ೨೩ನೆಯ ತಾರೀಖು ಮೊನ್ನೆ ಹೋಯಿತಲ್ಲ? ೧೫೬೫ನೆಯ ಇಸವಿಯ ಆದಿನದ ಮಂಗಳವಾರದಲ್ಲಿ ನಡೆದ ಭಯಪ್ರದವಾದ ತಾಳಿಕೋಟೆಯ ರಂಗದಲ್ಲಿ, ಲೋಕವಿಖ್ಯಾತವಾದ ನಮ್ಮ ಸಾಮ್ರಾಜ್ಯವು ಮಣ್ಣುಗೂಡಿತಲ್ಲ? ವಿಜಯನಗರದ ಆಂತಹ ಪ್ರಚಂಡ ಸಾಮ್ರಾಜ್ಯಸ್ಥಾಪಕರಲ್ಲಿ ಭಾಗಿಗಳಾದ ನಾವು ಕಡಿಮೆಯವರೇ? ನಮ್ಮ ಮಾತು ಸೊಪ್ಪಾಗಿನದೇ? ಸರ್ವಥಾ ಅಲ್ಲ! ವೀರಶ್ರೀಯ ನರ್ತನವೇ ಅಲ್ಲಿಲ್ಲಿ ತುಂಬಿಹೋದ ಪಂಪಭಾರತವನ್ನು ನೋಡಿರಿ-ಯುದ್ಧಾರಂಭದಲ್ಲಿ ಇತ್ತ ಧರ್ಮಪುತ್ರನೂ ಅತ್ತ ರಾಜರಾಜನಾದ ಸುಯೋಧನನೂ 'ಕೇಯಿಲ್ಲೀಸಿ' ದರಂತೆ! ಕೆಯ್ಯೀಸು-'ಕೈಬೀಸು' ಎಂಬ ಶಬ್ದದಲ್ಲಿ ಕೋಪಿಸಿನ ಬೆಂಕಿಗ ಊದಿನಕಡ್ಡಿಯನ್ನಿಟ್ಟ ಪ್ರಚಂಡವಾದ ಅರ್ಥವು ತುಂಬಿಕೊಂಡಿರುವದನ್ನು ಮನಗಾಣಿರಿ! ಅದಾವನೋ ನಾಮಧಾರಕನು ಮರಾಠಿಯ ಮೊಗದಲ್ಲಿ, ಗಡಿಗೆಯಲ್ಲಿ ಕಲ್ಲುಹಾಕಿ ಅದನ್ನು ಅಲ್ಲಾಡಿಸಿದರೆ ಕನ್ನಡವು ಕೇಳಬರುವದೆಂ'ದನಂತೆ, ಒಡನೆ ಮರುಳರಾದ ನಾವಾಗ ಚಪ್ಪಾಳೆ ಹಾಕಿದೆವಲ್ಲವೇ? ಇಂತಹ ಸ್ವಾಭಿಮಾನಶೂನ್ಯತೆಯು ಆದೆಷ್ಟರದು? ಅಂತರ್ಮುಖರಾಗಿ ನಮ್ಮನ್ನು ನಾವು ನೋಡಿಕೊಳ್ಳದೆ ಮತ್ಸರಿಗಳಾದ ಪಂಡಿತವರ್ಯರ ಮಾತನ್ನು ಕೇಳುವದೇ? ಪರಮ ಪೂಜ್ಯವೂ, ಕೋಟ್ಯವಧಿ ಜನರನ್ನು ಚೈತನ್ಯಯುಕ್ತರಾಗಿ ಮಾಡುವದೂ ಆದ ನಮ್ಮ ಕನ್ನಡದಮಾತನ್ನು ನಿಂದಿಸುವವರನ್ನು ಪುರಸ್ಕರಿಸುವದೇ? ಅಲ್ಲ ತೆಗೆಯಿರಿ! ಆ ಅನಾಮಧೇಯರ ಸುದ್ದಿಯನ್ನೇ ಎತ್ತಬೇಡಿರಿ!!

ಹೀಗಿದ್ದರೂ, ಗುಣಜ್ಞರೂ ಔಚಿತ್ಯವಿಚಾರಸಂಪನ್ನರೂ ಆದ ಮರಾಠಿಯವರನೇಕರಿರುವರು. ಕೇಸರಿಯವರು ಕಾಂಗ್ರೆಸ್ಸಿಗೆ ಬಂದವರಲ್ಲಿ ಸಂಪಾದಕರಾದ ಶ್ರೀ ಕೇಳಕರರ-ಹೆಸರನ್ನೇ ಹೊದ ೨ ವಾರ ಕೊಡಿರುವರು. ಸ್ವರಾಜ್ಯದವರು ಶ್ರೀ ಗಂಗಾಧರರಾವ ದೇಶಪಾಂಡೆಯವರ ಜೋಡಿಗೆ ಶ್ರೀ ಮುಜಲಿಯವರ ಹೆಸರನ್ನೂ ಹೇಳಿರುವರು. ಕನ್ನಡಿಗರನ್ನು ಅಲ್ಲಗಳೆಯಲು ನಿಂತ ಕೇಸರಿಗೆ ನಮ್ಮಂಥ ಬಡವರು ಮಾಡುವದೇನು? ಈ ಲೇಖನವನ್ನು ಓದಿ ನಮಗೆ ಗೊತ್ತಾಗಬೇಕು ಮರಾಠಿಯನ್ನು ದ್ವೇಷಿಸುತ್ತ ಬಂದವರು ನಾವಲ್ಲ.

...ಪ್ರಸ್ತುತದಲ್ಲಿ, ಪೂರ್ವಾಪರಾಲೋಚನೆಯಿಲ್ಲದೆ ಸಾಗುವದು ವಿಹಿತವಲ್ಲವೆಂದು ನಿಶ್ಚಿತವಾದ ನಮ್ಮ ಮತವಾಗಿರುವದು. ಮತವಿದನ್ನು 'ಗ್ರಂಥಗಳ ಹೊರೆಯನ್ನು ನಮ್ಮ ಮೇಲೆ ಹಾಕಿ, ಕನ್ನಡಕ್ಕೆ ಹಳೆಯ ಮಡಿಯುವಿಸಲು ಬೇಕೇ" ಎಂದು ಹಲವರು ಆಕ್ಷೇಪಿಸಬಹುದು! "ಆದುದಷ್ಟು, ಪೂರ್ವದ ನಿಮ್ಮ ರೂಪವೇ ನಿಮಗೆ ತಿಳಿಯದ ಮುಂದೆ ಹೋಗುವವರು ನೀವು ಅದೆಂತು ಮುಂದೆ ಬಂದೀರಿ?!! ಎಂದದಕ್ಕೆ ನಾವು ಧೈರ್ಯದಿಂದ ಉತ್ತರಿಸಬಲ್ಲವರಾಗಿದ್ದೇವೆ! ಚಿತ್ರರೇಖಾದ ಕ್ರಮಿಕ ಪುಸ್ತಕಗಳು ಕಾವ್ಯಪ್ರಯೋಗ ಪರಿಣತರಲ್ಲದವರಿಂದ ರಚಿತವಾದ ಮಾತು ವಾಙ್ಮಯದಲ್ಲಿಯ ನಮ್ಮ ಹೀನದಶೆಯನ್ನೇ ಸೂಚಿಸುತ್ತಿಲ್ಲವೇ? ವಿವಿಧವೃತ್ತ' ದಂತೆ ಮುಂಬಯಿಯಲ್ಲಿ ಒಳ್ಳೆಯ ಪುಸ್ತಕಗಳ ಹೆಸರುಗಳನ್ನು ಅನೇಕ ಮರಾಠಿಯವರಿಗೆ ಕೇಳಿದಲು ಸರ್ವಾನುಮತದಿಂದ ಜ್ಞಾನೇಶ್ವರಿಗೆ ಅಗ್ರಮಾನವು ಕೊಡಲ್ಪಟ್ಟಿರುವದು. ಜ್ಞಾನೇಶ್ವರಿಯು ಕಠಿಣವೆಂದು ಹಳೆಯದೆಂದು ಅದರ ಯೋಗ್ಯತೆಯು ಕಡಿಮೆಯೇ? ಪಂಪಭಾರತ ವಿಚಾರವು ಸಹ ಅದರಂತೆಯೇ ಇರುವದು. "ಕಠಿಣ, ತಿಳಿಯುವದಿಲ್ಲ, ಹಳೆಯ ದಾರಿ ಏತಕ್ಕೆ?" ಮೊದಲಾದ ಮಾತುಗಳಿವು ನಮ್ಮ ಹೇಡಿತನವನ್ನೂ ಆಲಸ್ಯವನ್ನೂ ಸೂಚಿಸುತ್ತಿರುವವು. ಜ್ಞಾನೇಶ್ವರ ಹೋರೋಹರಂತರ ಪುರಸ್ಕಾರಕ್ಕಾಗಿ ಮರಾಠಿಯವರು ಪಟ್ಟ ಪಾಡು, ಮಾಡಿದ ಶ್ರಮಗಳು, ಇವುಗಳಲ್ಲಿಯ ಸ್ವಲ್ಪಾಂಶವಾದರೂ ನಮ್ಮಿಂದ ಆಗಲಿಕ್ಕಿಲ್ಲವೇ? ದಿನಾವಧಿ ಬೇಕೆಂಬದನ್ನು ನಾವು ಒಪ್ಪುತ್ತೇವೆ ಒಂದೇದಿನದಲ್ಲಿ ಎಲ್ಲವೂ ಕೂಡಿಬಾರದು, ಸರಿ! ಆದರೆ ನಮ್ಮವರು ಕೆಲಸಕ್ಕೆ ಹತ್ತುವದಾದರೂ ಎಂದಿನಿಂದ? ವಿಲಂಬವು ಘಾತಕವೆಂದು ಸ್ಪಷ್ಟವಾಗಿ ಸೂಚಿಸಲಪೇಕ್ಷಿಸುತ್ತೇವೆ. ಮರಾಠಿಯವರು ತಮ್ಮವನಾದ ಜ್ಞಾನೇಶನನ್ನು ಗೌರವಿಸಿದಷ್ಟು ಪೆಟ್ಟಿಲ್ಲ, ಜೈನರನ್ನು ನಾವೀಗ ಔದಾರ್ಯದಿಂದ ನೋಡುವದೇ ಹೆಚ್ಚು ಶ್ರೇಯಸ್ಕರ.

ಕನ್ನಡವು ಕಳೆಯೇರಲು ಜನರೇ ಮುಂದಾಗಬೇಕು ಸರಕಾರವು ಹಿಂದಿನಿಂದ ಅವರ ದಾರಿಗೆ ಒಂದೇ ಬರುವದು. ತಪ್ಪು ತಪ್ಪಾದ ಕ್ರಮಿಕ ಪುಸ್ತಕಗಳೇ ಸರಿಯಾಗಿರುವವೆಂದು ಗೋಣಾಡಿಸುವವರು ನಾವೇ ಎಂದು. ಅಲ್ಲವೇ ಇವೆಲ್ಲವನ್ನು ನಮ್ಮ ಮುಂದಿನ ತಲೆಗೆ ಕಟ್ಟಿದವರು? ಎಂದ ಮೇಲೆ ತಪ್ಪು ಯಾರದು? ವಿಚಾರಿಸಿರಿ! ಪಂಪಭಾರತ ಆದಿಪುರಾಣ, ಗದಾಯುದ್ಧ, ಪಂಪರಾಮಾಯಣ, ಅರ್ಥನೇಮಿ ಪುರಾಣ-ಎಂಬ ಜೈನ ಪಂಚಕೃತಿಗಳನ್ನೂ, ಪಂಪಭಾರತ, ಕುಮಾರವ್ಯಾಸ ಭಾರತ, ಗದಾಯುದ್ಧ ಸರ್ವಜ್ಞ, ವಚನಶಾಸ್ತ್ರಸಾರಗಳೆಂಬ ಕರ್ನಾಟಕ ಕೃತಿ ಪಂಚಕವನ್ನೂ—ಸಾವಧಾನವಾಗಿ ಅವಲೋಕಿಸಿ, ಈಗಿನ ಕವಿಚರಿತ್ರವನ್ನು ಓದಿದ ತರುವಾಯದಲ್ಲಿ ನಮ್ಮ ತರುಣರಿನ್ನು ಮುದ್ರಿಸಿ ಶಿಷ್ಟವಾದವುಗಳಲ್ಲಿ ಈ ಅರಿಕೆಯಾಗಿರುವದು

ಶಬ್ದಮಣಿದರ್ಪಣ, ಕಿಟ್ಟೆಲ್‌ಕೋಶಗಳನ್ನಿಟ್ಟುಕೊಂಡು ಕನ್ನಡಕ್ಕೆ ಈಗಿನ ಕಾಲಕ್ಕೆ ತಕ್ಕಂತಹ ಚಾಲನೆಯನ್ನು ಕೊಡಲು ಯತ್ನಿಸಬೇಕು. ವಾಙ್ಮಯಕಾರ್ಯವು ಒಂದೆರಡು ಅನೇಕರ ವ್ಯಾಖ್ಯಾನಗಳಿಂದ ಸಾಧಿಸುವ ಅಲ್ಪ ವಿಷಯವೇ? ಶಂಬ ವಿ ಪೂರ್ವದ ವಾಙ್ಮಯಾಚಾರ್ಯರು ಸಾವಿರಾರು ವರುಷಗಳಿಂದ ರಚಿಸಿರುವ ಕರ್ನಾಟಕದ ವಾಙ್ಮಯ ರಂಗದಲ್ಲಿಯ ಮಾತು ಮುಗಿದುಹೋಯಿತೆ? ಪ್ರಯತ್ನವೇನನ್ನು ಮಾಡದೇ, ಬರಿಯ ಸ್ಫೂರ್ತಿಯಿಂದಲೋ ಚಿತ್ರರೇಖೆಯಿಂದೋ ಕರ್ನಾಟಕದಿಂದಿರುವದಾದರೆ, ಮೈಸೂರಿನವರ ಇದಿರಿನಲ್ಲಿ ಅವರು ನಿಸ್ತೇಜರಾಗುತ್ತಲೇ ಬರುವರು ಖಂಡಿತ! ಹಾಗಾಗುವದು ರಾಷ್ಟ್ರದೃಷ್ಟಿಯಿಂದ ಹಾನಿಕಾರಕವಾದೀತು. ಕನ್ನಡನಾಡು ಒಕ್ಕಟ್ಟು ಇದೀಗ ಕಟ್ಟಬಿದಾಕ್ತಿದ್ದರೂ, ನಮಗೆ ತೋಚಿದ ಕೆಲವು ಸೂಚನೆಗಳನ್ನಿಟ್ಟಿದ್ದೇವೆ ರಕ್ಷಣೆಗಳು ಬಲಿಯುವವರೆಗೆ ಸಧ್ಯದಲ್ಲಿ ಈ ರಾಷ್ಟ್ರೀಯ ಭಾಷೆಗಳ ಸಂಬಂಧ ದೃಷ್ಟಿಯಿಂದ ಮೈಸೂರಿನ ದಾರಿಯಲ್ಲಿ ಕೆಲಸದಿಂದ ಸಾಗುವದು. ಚಿತ್ರರೇಖೆಯರಿಗೆ ಉಚಿತವಾಗಿದೆಂದೂ ಸೂಚಿಸುತ್ತಿರುವೆವು ಮೈಸೂರಿನವರಿಂದ ತಿಳಿಸಬೇಕೆಂದೂ; ತಾವೇ ಸಿದ್ಧರಾಗಬೇಕು ಎಲ್ಲ ಚಲನ ವಲನಕ್ಕೂ ಮೂಲಾಧಾರನಾದ ವಾಙ್ಮಯವನ್ನು ಅಲಕ್ಷಿಸುತ್ತಿರುವ ಆಕ್ಷೇತ್ರದಲ್ಲಿ ಕರ್ನಾಟಕ ಲೇಖಕವು ಮುಂದಾಗಿ ಅಭಿಮಾನದ ಪ್ರಗತಿಗೆ ನಮ್ಮವರನ್ನು ತಡವಾಡದೆ ಸಹಾಯಕರಾಗುವಂತೆ ಈಶ್ವರನು ಅನುಗ್ರಹಿಸಲೆಂದು ಅನನ್ಯ ಭಾವದಿಂದ ಪ್ರಾರ್ಥಿಸುತ್ತ ಈ ಲೇಖವನ್ನು ನಿಲ್ಲಿಸಿದ್ದೇವೆ

ಜೈನಕಾವ್ಯ ಪಂಚಕ

ಟಿಪ್ಪಣಿ:— ×ನೇಲೆ ಬರೆದ ಲೇಖನದಲ್ಲಿ ಸೂಚಿಸಿದ ಜೈನಕಾವ್ಯಪಂಚಕದಲ್ಲಿ ೧ ಪಂಪಭಾರತ ೨ ಶಾಂತಿ ಪುರಾಣ ೩ ಗದಾಯುದ್ಧ ೪ ಪಂಪರಾಮಾಯಣ ೫ ಅರ್ಥನೇಮಿ ಪುರಾಣ —ಈ ಹೆಸರುಗಳಿರಲಿಲ್ಲವವು. ಪೊನ್ನ ಮಹಾಕವಿಯ ಶಾಂತಿಪುರಾಣವು ಈವರೆಗೆ ಬಾರದಿದ್ದರೂ ಅದಕ್ಕೆ ಸ್ಥಳವಿದ್ದೇ ತೀರಬೇಕು. ರಘುಭಾವದಲ್ಲಿ, ಸಂಸ್ಕೃತ ಆದಿಪುರಾಣವನ್ನಿಟ್ಟುಕೊಂಡು ಅದನ್ನು ಓದಬಹುದು, ವಿಶಿಷ್ಟವಾದ ಜೈನ ದೃಷ್ಟಿಯಿಂದಲೂ, ಸಾಮಾನ್ಯವಾದ ಕರ್ನಾಟಕ ದೃಷ್ಟಿಯಿಂದಲೂ ಪಂಪಭಾರತಕ್ಕೆ ಅಗ್ರಮಾನ್ಯತೆಯು ನಿಶ್ಚಿತವಾಗಿ ಸಲ್ಲಬೇಕು

—ಸೇವಕ:— ಕೆ. ಶ್ರೀನಿವಾಸ

ವರ್ತಮಾನಸಾರ

ಇಹವೃತ್ತ

ಈ ಊರಲ್ಲಿ ನದಿ ಇರುವದು ಎಲ್ಲರಿಗೂ ಗೊತ್ತುಂಟು. ಈ ಊರ ಜನವಸ್ತಿಯು ದಟ್ಟವಾಗಿದ್ದುದರಿಂದ ರಾತ್ರಿ ೮ ಘಂಟೆಯ ವರೆಗೆ ಜನರು ಅಲ್ಲಿ ಇರುತ್ತಾರೆ. ಕತ್ತಲೆಯ ದಿವಸಗಳಲ್ಲಿ ಸಾರಿನ ಪಾವಟಿಗೆಗಳು ಕಾಣಿಸುವದಿಲ್ಲ. ನದಿಯ ದಂಡೆಯಮೇಲೆ ದೀಪದ ಕಂಬವಿದ್ದರೂ ದೀಪವನ್ನು ಯಾಕೆ ಹಚ್ಚುವದಿಲ್ಲವೋ ತಿಳಿಯದು ಇನ್ನು ಮೇಲಾದರೂ ಅದರ ವ್ಯವಸ್ಥೆಯನ್ನು ಮಾಡಬೇಕೆಂದು ಈ ಊರಮುನಿಸಿಪಾಲ್ಟಿಯ ಮೆಂಬರರಿಗೆ ಬೇಡಿಕೊಳ್ಳುತ್ತೇನೆ

ಮುಂಬೈ ಕರ್ನಾಟಕ

"ಮುಂದಾಳು' ಎಂಬ ವಾರಪತ್ರಿಕೆಯು ವಿಜಾಪುರದಲ್ಲಿ ಶ್ರೀ. ಗುಡಗುಂಟಿಯವರಿಂದ ಬೇಗನೇ ಪ್ರಾರಂಭಿಸಲ್ಪಡುವದು ಶ್ರೀ. ಹಳಕಟ್ಟಿಯವರು "ಶಿವಚಿಂತಕ' ವನ್ನು ಹೊರಡಿಸುವದಿಲ್ಲ,

ದಿಲ್ಲಿಯಲ್ಲಿ ನಡೆಯತಕ್ಕ ನರೇಂದ್ರ ಮಂಡಲಕ್ಕೆ ಕರ್ನಾಟಕದಿಂದ ಮುಧೋಳ ಹಾಗೂ ಸಾಂಗಲೀ ಮಹಾರಾಜರು ಹೋಗುವರು.

ಮದ್ರಾಸ ಕರ್ನಾಟಕ

ಕಳೆದವಾರದಲ್ಲಿ ಉದಕಮಂಡಲದಲ್ಲಿ ಬಡಗರು ಸಭೆ ಗ್ರಾಮಸುಧಾರಣೆಯ ಬಗ್ಗೆ ಅನೇಕ ಠರಾವುಗಳನ್ನು ಮಾಡಿಕೊಂಡರು. ಪಂಚಾಯತವನ್ನು ಸ್ಥಾಪಿಸಬೇಕಾಗಿ ಗೊತ್ತಾಗಿದೆ.

ಮರುದಿನ ತೋಡರ ಸಭೆಯು ಜರಗಿತು. ಕುಮಾರಿ ಲ್ಯಾಂಗ, ಶ್ರೀಯುತರುಗಳಾದ ಆರಿಗೌಡರ, ಕೇ ಟಿ ಗೌಡರ ಇವರ ಭಾಷಣಗಳಾದವು. ಬಲಾತ್ಕಾರದ ವಿವಾಹ, ಮೊದಲಾದ ಸಾಮಾಜಿಕ ದುಷ್ಪದ್ಧತಿಗಳನ್ನು ತ್ಯಜಿಸಬೇಕಾಗಿ ನಿರ್ಣಯಿಸಿದ್ದಾರೆ

ಅಂತ್ಯಜರಿಗೆ ಪಲಕೆಲವು ಸೌಕರ್ಯಗಳಿರಬೇಕಾಗಿ ಮದ್ರಾಸ ಕಾಯದೇ ಮಂಡಲದಲ್ಲಿ ಕೊಯಿಮ ತ್ತೂರಿನ ಶ್ರೀ ಆರ್ ವೀರಿಯನ್‌ರವರು ಠರಾವತರತಕ್ಕವರಿದ್ದಾರೆ

ಮೈಸೂರ ಕರ್ನಾಟಕ

ಕಳೆದ ವರ್ಷದಲ್ಲಿ ಮೈಸೂರ ಸರಕಾರದ ಸಾಬೂನದ ವ್ಯಾಪಾರವು ಚೆನ್ನಾಗಿ ಆಯಿತು ೧,೬೦,೯೬೩ ರೂಪಾಯಿಯ ಸಾಬೂನದ ಬಡಿಗೆಗಳು ಮಾರಲ್ಪಟ್ಟವು ಭಂಡವಲದ ಮೇಲಿನ ಬಡ್ಡಿಯು ಹೋತರಗಿ, ೧೪ಸಾವಿರ ೨೩ ಲಾಭವಾಗಿದೆ

ನಿಜಾಮ ಕರ್ನಾಟಕ

ಪ್ರತಿವರ್ಷದಂತೆ (ಗುಲಬರ್ಗಾ ಜಿಲ್ಲಾ) ಸುರಪುರನಗರದಲ್ಲಿ ಶ್ರೀಮತ್ಪರಮಹಂಸ ಪರಿವ್ರಾಜಕ ಶ್ರೀ ಭಗವತ್ಪೂಜ್ಯವಾದ ಶ್ರೀ ಶೃಂಗೇರಿ ಪೀಠದ ಶಿಷ್ಯ ಜಗದ್ಗುರುಗಳಾದ ಶ್ರೀಮತ್ ಸುರೇಶ್ವರಾಚಾರ್ಯರ ಪುಣ್ಯತಿಥಿ ಮಹೋತ್ಸವವು ಬಹುವಿಜೃಂಭಣೆ ಇಂದ ನೆರವೇರಿತು ಈ ಸ ಮಹೋತ್ಸವದಲ್ಲಿ ಅನೇಕ ಜನರ ಗಾಯನ ವ್ಯಾಖ್ಯಾನ

ಎಂಬ ಶೇಷದಾಸರ ಪೆಪ್ಪಳ ಸುರಪುರ ಇವರು ತಿಳಿ

೩

ಕಿರ್ಲೋಸ್ಕರವಾರ್ತೆ

ಸಂಪಾದಕ—ಶ್ರೀ. ಅ. ಕೃ. ಬಾಗಲ ವಾಙ್ಮಯವಿಶಾರದ

ಇದೊಂದು ತಿಳಿಗನ್ನಡ ಮಾಸಪತ್ರಿಕೆಯು. ಇದರಲ್ಲಿ ಕರ್ನಾಟಕ- ತರುಣರ ಉನ್ನತಿಯಾಗುವದಕ್ಕೆ ಅವಶ್ಯವಾದ ಲೇಖಗಳು ಪ್ರಕಟವಾಗುತ್ತವೆ. ಇದನ್ನು ನಿಯಮಿತವಾಗಿ ಓದುವದರಿಂದ ತರುಣರ ಆತ್ಮ ವಿಶ್ವಾಸವು ಜಾಗೃತಿಗೊಳ್ಳುವದು. ವಾರ್ಷಿಕಚಂದಾ ೧॥ ರೂ. ಮಾದರಿ ಸಂಚಿಕೆ ಪುಕ್ಕಟ. ಇಂದೇ ಕಾಗದವನ್ನು ಬರೆದು ತರಿಸಿ ಕೊಳ್ಳಿರಿ

ಕಿರ್ಲೋಸ್ಕರವಾರ್ತೆ } **ಕಿರ್ಲೋಸ್ಕರವಾಡಿ ಜಿಲ್ಹಾ ಸಾತಾರೆ**

ಗ್ರಾಮಸ್ಥರ ಮತ್ತು ವಕೀಲರ ನಮೂನೆಗಳು

೧ ನಮ್ಮ ಮುದ್ರಾಮಂದಿರದಲ್ಲಿ! ಗ್ರಾಮಸ್ಥರ ನಮೂನೆ ನಂಬರ ೧; ೧೪; ಮತ್ತು ೧೭ ದೊರೆಯುತ್ತವೆ. ಬೇರೆ ನಮೂನೆಗಳು ಬೇಕಾದಲ್ಲಿ ಮುದ್ರಿಸಿ ಕೊಡುವೆವು. ೨ ವಕೀಲರಿಗೆ ಬೇಕಾಗುವ ಬೇರೆ ಬೇರೆ ನಮೂನೆಗಳು ಮಾರಲಿಕ್ಕೆ ದೊರೆಯುತ್ತವೆ.

ಮುದ್ರಣ, ರೂಲಿಂಗ, ಬಾಯಿಂಡಿಂಗ ಕೆಲಸಗಳು ನಮ್ಮಲ್ಲಿ ದಕ್ಷತೆಯಿಂದ ಮಾಡಲ್ಪಡುವವು.

ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಕನ್ನಡ ನವಜೀವನ.

ಈ ವಾರಪತ್ರಿಕೆಯ ಪ್ರಥಮ ಸಂಪುಟದ ಸಂಚಿಕೆಗಳನ್ನೆಲ್ಲ ಬಾಯಿಂಡ ಮಾಡಿಸಿ ಇಟ್ಟಿದೆ. ಅಸಹಕಾರದ ಘುಂಘಾವಾತದಲ್ಲಿ ಮಹಾತ್ಮರ ಲೆಕ್ಕಣಿಕೆಯಿಂದ ಹೊರಸೂಸಿದ ಅಮೃತಮಯ ಲೇಖಗಳನ್ನು ಓದುವ ಇಚ್ಛೆಯಿದ್ದರೆ ಇಂದೇ ಪತ್ರ ಬರೆಯಿರಿ. ಪ್ರತಿಗಳು ಸ್ವಲ್ಪೇ ಉಳಿದಿವೆ. ಸಾದಾ ಬೈಂಡ ೬ ರೂ ತೊಗಲಿನ ಬೈಂಡ ೮ ೮-೦.

ವ್ಯವಸ್ಥಾಪಕ,

"ಕನ್ನಡಿಗ" ಬಾಗಲಕೋಟೆ

ರಕ್ತ ಶುದ್ಧಿ ಮತ್ತು ವೀರ್ಯ ವರ್ಧಕ

कडकीचा काढ.

ಇದರ ಸೇವನೆಯಿಂದ ಮೈಯೊಳಗಿನ ಎಂಥ ಹಳೇ ಕಡಕೀ ರೋಗವಿದ್ದರೂ ನಾಶವಾಗುತ್ತದೆ. ಮತ್ತು ಅಶಕ್ತತೆ, ಧಾತುಜನ್ಯ ವಿಕಾರ, ನಪುಂಸಕತ್ವ, ವೀರ್ಯವು ಮೂತ್ರದೊಂದಿಗೆ ಹೋಗೋಣ, ವೀರ್ಯವು ನೀರಾಗೋಣ. ಇದಲ್ಲದದೆ ಕೈಕಾಲು ಕಣ್ಣು ಮುಂತಾದವುಗಳು ನೋಯೋಣ, ಹಳೇ ಪರಮೀ ರೋಗ ಮೂತ್ರ ಉರಿಯೋಣ, ಕೀವು ಹೋಗೋಣ ಇತ್ಯಾದಿ ಇತ್ಯಾದಿಗಳ ಮೇಲೆ ರಾಮಬಾಣವಂತಿದೆ. ಒಂದು ಡಬ್ಬಿಗೆ ಬೆಲೆ-೨ ರೂಪಾಯಿ ಒಮ್ಮೇಲೇ ೧೦ ಡಬ್ಬಿಗಳ ತರಿಸಿದರೆ ೫ ರೂಪಾಯಿ ಅಂಚೆವೆಚ್ಚ ಬೇರೆ.

ಅನುಭವಬಂದ ನಿಜವಾದ ಔಷಧ.

ಜಂತನಾಶಕ ಪುಡಿ.

ಈ ಪುಡಿಯನ್ನು ಸೇವಿಸಿಯಿಂದ ಆಗಿಂದಾಗ್ಗೆ ಜಂತುಗಳು ಬೀಳುವವು. ಅನುಭವನೋಡಿರಿ. ಬೆಲೆ ೧ ಪುಡಿಗೆ ೦ ೧-೦ ಇಣೆ ೧೦೦ ಪುಡಿಗಳಿಗೆ ವ್ಹೀಪಿಸಹಳ ೦ ೦ ಒಮ್ಮೇಲೇ ೬೦೦ಪುಡಿ ತರಿಸಿದರೆ ೬ ರೂಪಾಯಿ.

ವಿಳಾಸ — ವೆ.ಸರ್ ಅರ್ಜುನವಾಡಕರ

ಹೊಸರ ಬೆಳಗಾವ

ಶ್ರೀ. ನಾರಾಯಣರಾವ ಕೃ. ಹುಯಿಲಗೋಳ

ಬಿ. ಎ. ಎಲ್. ಎಲ್. ಬಿ. ಗದಗ ಇವರಿಂದ

ರಚಿತವಾದ ಸಚಿತ್ರ ಸಂಗೀತ ನಾಟಕಗಳು

ಕರ್ನಾಟಕ ಸಾಹಿತ್ಯ ಪರಿಷತ್ತಿನಲ್ಲಿ ಬಹುಮಾನಪಡೆದ

ಸ್ತ್ರೀಧರ್ಮರಹಸ್ಯ ಬೆಲೆ ೧ ರೂ
ಶಿಕ್ಷಣಸಂಭ್ರಮ ಬೆಲೆ ೧ ರೂ } **ಅಂಚೇವೆಚ್ಚ ಬೇರೆ**

ವಿಳಾಸಃ—ಗ್ರಂಥಕರ್ತ

ಆರೋಗ್ಯಚಂದ್ರಿಕೆ.

ಮದ್ರಾಸ ಸಂಪಾದಕರು:- ಡಾಕ್ಟರ ಯು ರಾಮರಾವ,

ಎಮ್. ಎಲ್. ಸಿ. ಯವರು

ಆರೋಗ್ಯಚಂದ್ರಿಕೆಯು ಆರೋಗ್ಯ ಮತ್ತು ಶುಚಿತ್ವದ ವಿಷಯದಲ್ಲಿ ಸಾಮಾನ್ಯ ಪ್ರಜಾವರ್ಗಕ್ಕೆ ಶಿಕ್ಷಣ ದೊರೆಯುವದಕ್ಕಾಗಿ ಏರ್ಪಡಿಸಿದ ಒಂದು ಸಚಿತ್ರಮಾಸಪತ್ರಿಕೆ ಇದರಲ್ಲಿ ಆರೋಗ್ಯ ಚಂದ್ರಿಕೆಯಲ್ಲಿ ಪ್ರಸಿದ್ಧರಾದ ಡಾಕ್ಟರರುಗಳ ಮತ್ತು ಆಯುರ್ವೇದ ಪಂಡಿತರ ಲೇಖನಗಳು ಆಗಿಂದಾಗ್ಗೆ ಪ್ರಕಟವಾಗುವವು. ಅಂಚೆಯ ವೆಚ್ಚ ಸೇರಿ ಈ ಪತ್ರಿಕೆಯ ಚಂದಾ ವರ್ಷಕ್ಕೆ ೧-೮ ಬಿಡಿ ಪತ್ರಿಕೆ ಒಂದಕ್ಕೆ ೦-೨-೦ ಹಿಂದಿನ ಸಂಚಿಕೆಗಳು ಕೂಡಾ ದೊರೆಯುವವು.

'ಆರೋಗ್ಯಚಂದ್ರಿಕೆ' ೩೨೩, ತಂಬುಶೆಟ್ಟಿಬೀದಿ, ಮದ್ರಾಸ.

"ಕನ್ನಡಿಗ"ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೧-೦

ಬಿಡಿ ಸಂಚಿಕೆಗೆ ೧ ಆ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಅರ್ಧವರ್ಷವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಕರ್ಮವೀರ.

ಕರ್ನಾಟಕದಲ್ಲಿಯ ಎಲ್ಲಕ್ಕೂ ಶ್ರೇಷ್ಠವಾದ ಪತ್ರಿಕೆಂದರೆ ಇದೆ. ಕರ್ಮವೀರನೆಂದರೆ ಸ್ವಾರ್ಥತ್ಯಾಗದ ಮೂರ್ತಿಯು. ವಾ. ಚ. ರೂ. ೩—೮—೦

ವ್ಯವಸ್ಥಾಪಕ ಕರ್ಮವೀರ.

ಧಾರವಾಡ

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ರೇವು…………	ನೂರಕ್ಕೆ ವರ್ಷಕ್ಕೆ		$2\frac{1}{2}$
ಸೇವಿಂಗ್ಸ ಬ್ಯಾಂಕ ರೇವು	”	”	$4\frac{1}{2}$
ಮುದ್ದತೀ ರೇವು ೬ ತಿಂಗಳಿಗೆ	”	”	6
” ೧೨ ತಿಂಗಳಿಗೆ	”	”	7

ಪಾರಲೋನ ಪಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರು ನಿತ್ಯಂ ನಿಜದೇಶಸೇವನಂ।

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿನ ಸಾಯಂಕಾಲದ ೫–೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ ಬಸವಾರಾಧ್ಯ ಬಿ. ಏ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು, ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೧೧೭೦೨ ಶ್ರೀ. ಆರ್. ಜಿ ಮುಕ್ಕೇರಿ. ಬುಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೪೪೭ ಶ್ರೀ. ವೀರಭದ್ರಪ್ಪ ಸಾರಥಿ ರಾಸಾಯಿಕ ಕಂಪಾವುಂಡರ, ಅಲವಾಡ ದವಾಖಾನೆ ವಾಯು, ಸಯಾನ ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೭೬ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀರ ಪುರು ಗೋದಾವರಿ ಜಿಲ್ಹಾ.

(೪) ಬಾಂಡ ನಂ. ೧೨೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಸಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೬ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋ-ಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೨೫ { ಬಿ. ಎಸ್. ಆರಾಧ್ಯ / ಚೀಫ ಏಜಂಟ ಹುಬ್ಬಳ್ಳಿ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಪ್ರಕಟನೆ

ಕಾನಡಾದ ಜಿಲ್ಲೆಯ ಕರ್ಕಿಯೆಂಬ ಗ್ರಾಮದಲ್ಲಿ “ದತ್ತಾತ್ರೇಯ ಪಾಠಶಾಲೆ” ಎಂಬ ಹೆಸರಿನ ವೇದಶಾಸ್ತ್ರ ಶಾಲೆಯು ಸ್ಥಾಪಿಸಲ್ಪಟ್ಟಿರುವುದು. ಸದ್ಯಕ್ಕೆ ೩೪ ವಿದ್ಯಾರ್ಥಿಗಳು, ಸಂಸ್ಕೃತ, ವೇದ, ಜ್ಯೋತಿಷ್ಯ, ಹಾಗು ಯಾಜ್ಞಿಕಗಳನ್ನು ಕಲಿಯುತ್ತಿರುವರು. ಬೇರೆ ಬೇರೆ ವಿಷಯಗಳನ್ನು ಕಲಿಸುವುದಕ್ಕಾಗಿ ನಾಲ್ವರು ಅಧ್ಯಾಪಕರಿರುವರು. ವಿದ್ಯಾರ್ಥಿಗಳಿಗೆ ಸ್ವಾವಲಂಬನ, ಸುಲಭಜೀವನ, ಸಭ್ಯವೃತ್ತಿಗಳನ್ನು ಕಲಿಸುವ ಏರ್ಪಾಡು ನಡೆದಿರುವದು ವಿದ್ಯಾರ್ಥಿಗಳಾಗಲೀ ಇತರರಾಗಲೀ ಸಂಸ್ಥೆಯ ಮಾಹಿತಿಯ ಬಗ್ಗೆ ಕೆಳಗಿನ ಪತ್ತೆಗೆ ಬರೆದುಕೊಳ್ಳಬೇಕು

ಪತ್ತೆ—“ದತ್ತಾತ್ರೇಯ ಪಾಠಶಾಲಾ”
ಚಾಲಕ – ಗಣಪತಿ ಶಂಕರಭಟ್ಟ ಕರ್ಕಿ
ಪೋ. ಕರ್ಕಿ (ಜಿ ಕಾನಡಾ)

ಪ್ರಿಯ ದೇಶಬಾಂಧವರೇ,
ಇತ್ತ ನೋಡಿರಿ! ಒಮ್ಮೆ ಓದಿರಿ
ಮಾತೃಭಕ್ತಿಯನ್ನು ಪ್ರಕಾಶಗೊಳಿಸಿರಿ!!!

“ಕಾನಡಾ ಧುರೀಣ”

ಈ ಅತ್ಯುತ್ತಮವಾದ ರಾಷ್ಟ್ರೀಯ ವಾರಪತ್ರಿಕೆಯು ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಪ್ರಚಾರ ಹೊಂದುತ್ತಿದೆ. ಇದರಲ್ಲಿ ಸಮಯೋಚಿತವಾಗಿ ಪ್ರಕಟವಾಗುವ ಸ್ವಮತ ವಿಮತಗಳ ಮೇಲಿನ ಸಿದ್ಧಾಂತ, ಸರ್ವ-ಧರ್ಮವಿಷಯಪ್ರತಿಪಾದನೆ, ಸುವಿಚಾರಶೀಲವೂ ವಿಚಿತ್ರ ಸ್ಫೂರ್ತಿದಾಯಕವೂ ಆದ ಸಂಪಾದಕರ ಅಗ್ರಲೇಖಗಳು, ಸುಜ್ಞಾನ ಕವಿತಾಲಾಪಗಳು, ಮಹಾಪುರುಷರ ಜಾಗ್ರತಾಮನವು, ಪ್ರೋತ್ಸಾಹಕವಾದ ದೊರೆಯುವ ದೇಶದೇಶಾಂತರ ವೃತ್ತಾಂತಗಳು ಸಹ ಕನ್ನಡಿಗರೆಲ್ಲರಿಗೂ ಅತ್ಯಂತ ಮನೋಹರವಾಗಿರುವವು ಸುಪ್ರಸಿದ್ಧ ವಿದ್ಯಾವಂತರ ಪ್ರಶಂಸೆಗೆ ಪಾತ್ರವಾದ ಈ ಪತ್ರಿಕೆಯೇ ಕರ್ನಾಟಕದಲ್ಲಿ ಹೆಚ್ಚಿನದೆಂದು ಪ್ರಾಜ್ಞರು ತಿಳಿದು ಹೇಳದಿರಲಾರರು. ವಾರ್ಷಿಕ ವರ್ಗಣಿ ಅಂಚೆ ವೆಚ್ಚಸೇರಿ ೩–೧–೦

ವಿಳಾಸ— ಮ್ಯಾನೇಜರ, “ಕಾನಡಾ ಧುರೀಣ”
ಕುಮಟಾ, (ಉತ್ತರ ಕನ್ನಡ)

ಸಾಣೇಕಲ್ಲುಗಳು

ಸಣ್ಣ ದೊಡ್ಡ ಸಾಣೇ ಕಲ್ಲುಗಳು ನಮ್ಮ ಕಡೆಗೆ ದೊರೆಯುತ್ತವೆ. ಮುಂಗಡ ಹಣವಿಲ್ಲದ ಆರ್ಡರುಗಳ ಕಡೆಗೆ ಲಕ್ಷ್ಯಕೊಡಲಾಗುವದಿಲ್ಲ. ವಿಶೇಷ ಸಂಗತಿಗಾಗಿ ಕೆಳಗಿನ ವಿಳಾಸಕ್ಕೆ ಬರೆದು ಕೇಳಿರಿ.

ನೃಸಿಂಹ ವಿಜಾಪುರಿ
ಬಾಗಲಕೋಟೆ (Dist. Bijapur)

ಈ ಪತ್ರಿಕೆಯು ಮಂಗಳವೇಢೆ ರಾಮರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ನಂ. ಪಿ. ೧೯೪೭

ವಾ. ಚಂದಾ ೧-೧೪-೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಮಾಘ ಬಹುಳ ೮ ಶಕೆ ೧೮೫೮. ತಾ ೧೯-೨-೧೯೩೭. | ಸಂಚಿಕೆ ೪೫

ಶ್ರೀ ಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರು.

ಈಗ ಬಾಗಲಕೋಟೆಗೆ ಬಿಜಯಂಗೈದಿರುವ ಶ್ರೀಮದುತ್ತರಾದಿಮಠ ಪೀಠಸ್ಥರಾದ ಶ್ರೀಸತ್ಯಧ್ಯಾನತೀರ್ಥ ಶ್ರೀ ಪಾದಂಗಳವರು. ಇವರ ಗುರುಗಳಾದ ಶ್ರೀ ಸತ್ಯಜ್ಞಾನ ತೀರ್ಥರ ಗುರುಗಳಾದ ಸತ್ಯಧೀರರ ಪೂರ್ವಾಶ್ರಮದ ಮಕ್ಕಳು ಇವರಿಗೆ ಪೂರ್ವಾಶ್ರಮದಲ್ಲಿ ಸೇತೂರಾಮಾಚಾರ್ಯರೆಂಬ ಹೆಸರು. ಶ್ರೀ ಸತ್ಯ ಧೀರರ ಕಾಲದಿಂದಲೂ ಶ್ರೀಮದುತ್ತರಾದಿ ಮಠದಲ್ಲಿ ವಾಸವಾಗಿದ್ದುಕೊಂಡು ಶಾಸ್ತ್ರಾಧ್ಯಯನದಲ್ಲಿಯೂ ಮಠದ ಕಾರಂಪರ್ಯವನ್ನು ನಿರೀಕ್ಷಿಸುವದರಲ್ಲಿಯೂ ಮಗ್ನರಾಗಿರುತ್ತಿದ್ದರು. ಶ್ರೀ ಸತ್ಯಧೀರರ ಆಡಳಿತೆಯ ಕೊನೆಯ ಭಾಗದಲ್ಲಿಯೂ ಶ್ರೀ ಸೇತೂ ರಾಮಾಚಾರ್ಯರೇ ಮಠದ ಎಲ್ಲ ಲೌಕಿಕ ವ್ಯವಹಾರಗಳನ್ನು ನೋಡುತ್ತ ಬಂದರು. ಹೆಸರಿಗೆ ಮಾತ್ರ ದಿವಾಣರೊಬ್ಬರು ಸರ್ವಾಧಿಕಾರಿಗಳಾಗಿದ್ದರೂ, ಮಠದ ಮುಖ್ಯ ಸೂತ್ರಧಾರಕತ್ವವು ಇವರ ಕಡೆಗೇ ಇತ್ತೆನ್ನಬಹುದು. ಹೀಗೆ ೩೫ ವರ್ಷಕಿಂತ ಹೆಚ್ಚು ಕಾಲದ ಅನುಭವ ಜನ್ಯ ಜ್ಞಾನವು ಶ್ರೀ ಸತ್ಯಧ್ಯಾನತೀರ್ಥರಿಗೆ ಉಂಟಾದ ಮೂಲಕ ಉತ್ತರಾದಿ ಮಠದ ಲೌಕಿಕ ವ್ಯವಹಾರವೆಂಬುದು ಶ್ರೀಗಳವರಿಗೆ ಕರತಲಾಮಲಕವಾಗಿದೆ.

ಹೀಗೆ ಮಠದ ಲೌಕಿಕ ವ್ಯವಹಾರವನ್ನು ನಿರೀಕ್ಷಿಸುವದರಲ್ಲಿ ತೊಡಗಿದಾಗಲೂ ಶ್ರೀ ಸೇತೂರಾಮಾಚಾರ್ಯರು ಶಾಸ್ತ್ರಾಧ್ಯಯನವನ್ನು ಒಂದೇ ಸಮನೆ ಸಾಗಿಸಿ ವೈದಿಕ ಧರ್ಮದ ಅಂಗೋಪಾಂಗಗಳನ್ನೆಲ್ಲ ಸಾಂಗವಾಗಿ ಓದಿ ನಿಷ್ಣಾತರಾದರು. ದ್ವೈತಶಾಸ್ತ್ರ ಗ್ರಂಥಗಳಲ್ಲಿ ಇವರಿಗಿರುವಷ್ಟು ಪ್ರಾವೀಣ್ಯವು ಈಗಿನ ಕಾಲದಲ್ಲಿ ಬೇರೆ ಯಾರಲ್ಲಿಯೂ ಇಲ್ಲವೆಂದು ಹೇಳಿದರೆ ಅತಿಶಯೋಕ್ತಿಯಾಗಲಾರದು. ವೈದಿಕ ವಿದ್ಯೆಯ ಆಗರವೆನಿಸಿದ ಕಾಶಿಯಲ್ಲಿಯೂ ತರ್ಕನ್ಯಾಯದ ಸೀಮೆಯೆನಿಸಿದ ಪುಣೆ ಪಟ್ಟಣದಲ್ಲಿಯೂ ಹಿಂದಕ್ಕೆ ಸಭೆಗಳಾಗಿ ವಾದ ನಡೆದಾಗ್ಗೆ ದ್ವೈತಮತ ಸಿದ್ಧಾಂತವನ್ನು ಪ್ರತಿಪಕ್ಷಿಗಳಿಗೂ ಹೃದಯಂಗಮವಾಗಿ ಇವರು ಪ್ರತಿಪಾದಿಸಿದ್ದು ಪ್ರಸಿದ್ಧವಾಗಿದೆ. ಲೋಕಮಾನ್ಯ ಟಿಳಕರ "ಗೀತಾರಹಸ್ಯ" ಗ್ರಂಥವು ಪ್ರಸಿದ್ಧವಾದನಂತರ ಶ್ರೀಗಳವರಿಗೂ ಲೋಕಮಾನ್ಯರಿಗೂ ಭೆಟ್ಟಿಯಾದಾಗ್ಗೆ ದ್ವೈತಮತ ಸಿದ್ಧಾಂತಗಳನ್ನು ಗೀತಾರಹಸ್ಯದಲ್ಲಿ ಉದಾಹರಿಸುವಾಗ್ಯೆ ಹೇಗೆ ಪ್ರಮಾದವಾಗಿರುವುದೆಂಬುದನ್ನು ಲೋಕಮಾನ್ಯರ ನಿದರ್ಶನಕ್ಕೆ ತಂದುಕೊಟ್ಟು ಅವರನ್ನು ತಲೆದೂಗಿಸಿದ ಅದ್ಭುತ ಸಾಮರ್ಥ್ಯವು ಶ್ರೀಗಳವರಲ್ಲಿ ಉಂಟು. ನೊನ್ನೆ ಮೊನ್ನೆ ೧೯೧೯ ರಲ್ಲಿ ಶ್ರೀ ಪದ್ಮ ಸರೋವರದಲ್ಲಿ ಕಂಚಿಯ ಮಹಾ ವಿದ್ವಾಂಸರೊಬ್ಬರು ರಚಿಸಿದ "ಚಂದ್ರಿಕಾಖಂಡನ" ಗ್ರಂಥ ಖಂಡನ ಪೂರ್ವಕ "ಚಂದ್ರಿಕಾ ಮಂಡನ" ಮಾಡಿದ ಶ್ರೀಗಳವರ ವಿದ್ವತ್ಕೀರ್ತಿಯು ದಿಗಂತ ವಿಶ್ರಾಂತವಾಗಿದೆ.

ಶ್ರೀಗಳವರ ಧರ್ಮಾಭಿಮಾನವೂ ಉಚ್ಚ ಪ್ರಕಾರದ್ದಾಗಿರುವದು. ಪರದೇಶೀ ಸಕ್ಕರೆಗೂ ಕೇಶರಕ್ಕೂ ಶ್ರೀಮದುತ್ತರಾದಿ ಮಠ

ದಿಂದ ಬಹಿಷ್ಕಾರ ದೊರೆತದ್ದು ಇವರ ಅಡಳತೆಯಲ್ಲಿಯೇ! ಇವುಗಳನ್ನು ಮಠದಿಂದ ಬಹಿಷ್ಕರಿಸಿದಂತೆಯೇ ತಮ್ಮ ಲಿಯಾವತ್ತು ಶಿಷ್ಯ ಸಮೂಹದ ಮನೆಗಳಿಂದಲೂ ಬಹಿಷ್ಕರಿಸುವಂತೆ ಅನುಗ್ರಹ ಮಾಡಿದರೆ ಎಷ್ಟೊಂದು ಸೊಗಸಾದೀತು? ಸಕ್ಕರೆ ಕೇಶರಗಳಂತೆಯೇ ಪರದೇಶದ ಬಟ್ಟೆಗಳಿಗೂ ಬಹಿಷ್ಕಾರ ಹಾಕುವ ಪ್ರೇರಣೆಯು ಶ್ರೀಗಳವರ ಅಂತರಂಗದಲ್ಲಿ ಶ್ರೀ ಸೇತೂರವರ ಅನುಗ್ರಹದಿಂದುಂಟಾದರೆ ಎಂಥ ಮಹತ್ಕಾರ್ಯವಾದೀತು? ಶ್ರೀ ಭಗವಂತನು ಇಂಥ ಸುಯೋಗವನ್ನೆಂದಿಗೆ ತರುವನೋ ತರಲಿ.

ಕನ್ನಡನಾಡಿನ ಬಗ್ಗೆ ಅಜ್ಞಾನವು ಕರ್ನಾಟಕದ ಕನ್ನಡ ಹಾಗು ಇಂಗ್ಲಿಷ ಶಾಲೆಗಳಲ್ಲಿಯ ವಿದ್ಯಾರ್ಥಿಗಳಿಗೆ ಕನ್ನಡ ನಾಡಿನ ವಿಸ್ತಾರವೆಷ್ಟು, ಯಾವ ಯಾವ ಪ್ರಾಂತಗಳಲ್ಲಿ ಎಷ್ಟೆಷ್ಟು ಕನ್ನಡ ಜಿಲ್ಲೆಗಳು ಸೇರಿವೆ ಮೊದಲಾದ ಮಹತ್ವದ ವಿಷಯಗಳ ಜ್ಞಾನವು ಇರುವದಿಲ್ಲೆಂಬ ಮಾತು ನಮಗೆ ಅತಿಶಯ ದುಃಖವನ್ನುಂಟು ಮಾಡುತ್ತದೆ. ಕನ್ನಡ ೪ನೇ, ೬ನೇ, ೭ನೇ, ಇಯತ್ತೆಗಳಲ್ಲಿ ಕಲಿಸಲ್ಪಡುವ ಇತಿಹಾಸ ಹಾಗೂ ಭೂಗೋಲ ಈ ವಿಷಯಗಳಲ್ಲಿ ಕರ್ನಾಟಕಕ್ಕೆ ಸ್ಥಾನವೇ ಇರುವದಿಲ್ಲ. ೪ನೇ ಇಯತ್ತೆಗಳಲ್ಲಿ ಕರ್ನಾಟಕದ ಇತಿಹಾಸವನ್ನೂ, ಮುಂಬಯಿ ಕರ್ನಾಟಕದ ಭೂಗೋಲವನ್ನೂ ಕಲಿಸುತ್ತಿರುವದೇನೋ ನಿಜ. ಆದರೇನು! ಈಗಿನ ನಿಜವಾದ ಕನ್ನಡ ನಾಡಿನ ವಿಸ್ತಾರ, ಜನಸಂಖ್ಯೆ, ಜನರ ನಡೆನುಡಿಗಳು ಕನ್ನಡ ಅರಸರು, ಶಿಲ್ಪಿಗಳು, ಕವಿಗಳು, ಕರ್ಮಯೋಗಿಗಳು, ಮಂತ್ರಿಗಳು, ಗ್ರಂಥಕಾರರು ಮೊದಲಾದವರ ಬಗ್ಗೆ ಎಳ್ಳಷ್ಟಾದರೂ ನಮ್ಮ ವಿದ್ಯಾರ್ಥಿಗಳಿಗೆ ಜ್ಞಾನವಿರುವದಿಲ್ಲ. ಕನ್ನಡನಾಡಿನಲ್ಲಿ ಹುಟ್ಟಿ, ಕನ್ನಡನಾಡಿನ ಶಾಲೆಗಳಲ್ಲಿ ಕಲಿತು, ಕನ್ನಡನಾಡಿನಲ್ಲಿಯೇ ಹೊಟ್ಟೆಯನ್ನು ತುಂಬಿಸಿಕೊಂಡು, ಕಡೆಗೆ ಅಲ್ಲಿಯೇ ಮಣ್ಣು ಪಾಲಾಗುವ ನಮಗೆ ವಿಶೇಷವಾಗಿ ನಮ್ಮ ವಿದ್ಯಾರ್ಥಿಗಳಿಗೆ ಈ ತರದ ಜ್ಞಾನವಿರುವದು ಲಾಂಛನಾಸ್ಪದವೇ ಸರಿ. ಕನ್ನಡ ಮುಲ್ಕೀ ಪರೀಕ್ಷೆಯ ಇತಿಹಾಸ ಭೂಗೋಲಗಳ ಪರೀಕ್ಷಕರು ಬಹುತರವಾಗಿ ಕನ್ನಡಿಗರೇ ಇರುವರು. ಅವರೆ, ಕನ್ನಡ ಸಂಸ್ಕೃತಿಯ ವಿಷಯವಾಗಿ ಅವರಲ್ಲಿಯೂ ಅಜ್ಞಾನವೂ ನಿರಭಿಮಾನವೂ ಇರುವದರಿಂದ ವಿದ್ಯಾರ್ಥಿಗಳ ಪರೀಕ್ಷೆಯನ್ನು ಬೇರೆ ದೃಷ್ಟಿಯಿಂದಲೇ ತೆಗೆದುಕೊಳ್ಳುವರು. ಪ್ರಶ್ನ ಪತ್ರಿಕೆಯಲ್ಲಿ ಕರ್ನಾಟಕಕ್ಕೆ ಸಂಬಂಧಿಸಿದ ಮಹತ್ವದ ಪ್ರಶ್ನೆಗಳೇ ಇರುವದಿಲ್ಲ. ಆದ್ದರಿಂದ, ಮುಲ್ಕೀ ಪರೀಕ್ಷೆಗೆ ವಿದ್ಯಾರ್ಥಿಗಳನ್ನು ಸಿದ್ಧಗೊಳಿಸುವ ಶಿಕ್ಷಕರಾದರೂ ಕರ್ನಾಟಕದ ಬಗ್ಗೆ ಅಜ್ಞಾನಿಗಳೇ ಆಗಿರುವದೂ, ಪರೀಕ್ಷೆಗೆ ದೃಷ್ಟಿಯನ್ನಿಟ್ಟುಕೊಂಡು ಕಲಿಸುವದೂ ಸಹಜವೇ ಆಗಿರುವದು. ಇದರಿಂದ, ಶಿಕ್ಷಕರ ಕಡೆಗೆ ದೋಷವಿಲ್ಲವೆಂದು ಯಾರೂ ತಿಳಿಯ ಕೂಡದು. ನಾವಿರುವ ನಾಡಿನ ಬಗ್ಗೆ ವಿದ್ಯಾರ್ಥಿಗಳಲ್ಲಿ ಅಭಿಮಾನವನ್ನು ಹುಟ್ಟಿಸುವದು ಶಿಕ್ಷಕರ ಕರ್ತವ್ಯವೇ ಆಗಿದೆ.

ಆದ್ದರಿಂದ, ಈ ಸಂದರ್ಭದಲ್ಲಿ ನಾವು ಆಗ್ರಹ ಪೂರ್ವಕವಾಗಿ ಸೂಚಿಸುವದೇನೆಂದರೆ – ಕನ್ನಡ ಹಾಗು ಇಂಗ್ಲಿಷ ಶಾಲೆಗಳೊಳಗಿನ ಶಿಕ್ಷಕರು ತಮ್ಮ ವಿದ್ಯಾರ್ಥಿಗಳಿಗೆ ಮೊಟ್ಟಮೊದಲು ಕನ್ನಡನಾಡಿನ ಹಾಗು ಕನ್ನಡ ಸಂಸ್ಕೃತಿಯ ಬಗ್ಗೆ ತಾವು ಅವಶ್ಯವಿದ್ದ ಜ್ಞಾನವನ್ನು ಮಾಡಿ ಕೊಂಡು, ವಿದ್ಯಾರ್ಥಿಗಳಲ್ಲಿ ಅವುಗಳ ಬಗ್ಗೆ ಅಭಿಮಾನವೂ, ಜಾಗೃತಿಯೂ ಉಂಟಾಗುವಂತೆ ಅವರಿಗೆ ಬೋಧಿಸತಕ್ಕದ್ದು. ಇದಕ್ಕೆ ತಪ್ಪಿದಲ್ಲಿ ಶಿಕ್ಷಕರು ಮಾತೃ ಭೂಮಿಯ ದ್ರೋಹಿಗಳೆಂಬ ದೋಷಕ್ಕೆ ಗುರಿಯಾಗುವರು. ಮುಲ್ಕೀ ಪರೀಕ್ಷೆಯ ಇತಿಹಾಸ ಭೂಗೋಲಗಳ ಪರೀಕ್ಷಕರಾದರೂ ತಮ್ಮ ಪ್ರಶ್ನೆಪತ್ರಿಕೆಯಲ್ಲಿ ಕರ್ನಾಟಕದ ವಿಷಯಕ್ಕೆ ಕೆಲವು ಪ್ರಶ್ನೆಗಳನ್ನು ಕೊಡಲಿಕ್ಕೆ ಮರೆಯಬಾರದು. ನಮ್ಮ ಈ ಸೂಚನೆಯನ್ನು ಈ ಸಾರೆಯ ಪರೀಕ್ಷಕರು ಮನ್ನಿಸುವರೆಂದು ನಂಬಿದ್ದೇವೆ.

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಕಾರ್ಯಕಾರೀ ಮಂಡಲದ ಸಭೆಯು ಮೊನ್ನೆ ಧಾರವಾಡದಲ್ಲಿ ಜರುಗಿತು. ಅದರಲ್ಲಿ ಚರ್ಚಿಸಲ್ಪಟ್ಟ ಸಂಗತಿಗಳಲ್ಲಿ ಮಹತ್ವವಾದವುಗಳೆಂದರೆ ಮೂರೇ ಎಂದು ಹೇಳಬಹುದು. ಕರ್ನಾಟಕ ಏಕೀಕರಣ ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕದಲ್ಲಿ ಕಾಂಗ್ರೆಸದ ವತಿಯಿಂದ ಕೌನ್ಸಿಲಗಳಿಗೆ ಉಮೇದವಾರರನ್ನು ನಿಲ್ಲಿಸುವದು. ಇವೇ ಮಹತ್ವವಾದ ಆ ಮೂರು ವಿಷಯಗಳು. ಈಗಿನಿಂದಲೇ ಎಲ್ಲ ಜಿಲ್ಹಾ ಕಾಂಗ್ರೆಸ ಕಮಿಟಿಗಳು ತಮ್ಮ ತಮ್ಮ ಜಿಲ್ಹೆಯಲ್ಲಿಯ ಚುನಾವಣೆಯ ಬಗ್ಗೆ ಚಳವಳಿಯನ್ನು ಮಾಡಬೇಕೆಂಬದಾಗಿ ಕಡೆಯ ವಿಷಯದ ಬಗ್ಗೆ ನಿರ್ಧಾರವಾಯಿತು. ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ಒಂದು ಪ್ರಶ್ನೆ ಮಾಲಿಕೆಯನ್ನು ತಯಾರಿಸಿ ಆ ಬಗ್ಗೆ ಕರ್ನಾಟಕದ ಎಲ್ಲ ಭಾಗದ ಜನರ ಅಭಿಪ್ರಾಯ ವೇನಿರುವದೆಂಬದನ್ನು ಗೊತ್ತು ಪಡಿಸಿಕೊಂಡು ಆ ಮೇಲೆ ಆ ಬಗ್ಗೆ ವಿಚಾರಮಾಡಬೇಕೆಂದು ನಿರ್ಣಯವಾಯಿತು. ಏಕೀಕರಣದ ವಿಷಯಕ್ಕಾದರೂ ಒಂದು ಪ್ರಶ್ನೆ ಮಾಲಿಕೆಯನ್ನು ಸಿದ್ಧ ಪಡಿಸುವದರಲ್ಲಿ ಬಂದಿದೆ. ಅಲ್ಲದೆ ಪ್ರಾಂತಿಕ ಕಾಂಗ್ರೆಸ ಕಮಿಟಿಯ ಅಧ್ಯಕ್ಷರಾದ ದೇ. ಭ. ಶ್ರೀನಿವಾಸರಾವ ಕೌಜಲಗಿಯವರು ತಮಗೆ ಯೋಗ್ಯ ಕಂಡ ಒಬ್ಬ ಕಾರ್ಯದರ್ಶಿಯನ್ನು ಆರಿಸಿಕೊಂಡು ಅಖಂಡ ಕರ್ನಾಟಕದಲ್ಲಿ ಪ್ರವಾಸವನ್ನು ಬೆಳೆಸಿ ಕರ್ನಾಟಕಸ್ಥರಲ್ಲಿ ಜಾಗ್ರತಿಯನ್ನುಂಟು ಮಾಡಬೇಕೆಂದು ಗೊತ್ತುವಳಿಯಾಗಿದೆ. ಈ ರೀತಿಯಾಗಿ ಏಕೀಕರಣದ ಪ್ರಶ್ನೆಯೂ, ವಿಶ್ವವಿದ್ಯಾಲಯದ ಪ್ರಶ್ನೆಯೂ ಜನರ ಎದುರಿನಲ್ಲಿ ಪ್ರಾಮುಖ್ಯದಿಂದ ಬಂದಿರುವವು. ಕರ್ನಾಟಕ ಸುದೈವಕ್ಕೆ ಪ್ರಾರಂಭಕಾಲವು ಒದಗಿದಂತೆ ಕಾಣುವದು. ಶ್ರೀ. ಮಧ್ವರಾವ ಕೆಂಭಾವಿಯವರು ಬರುವ ಮೇ ತಿಂಗಳಗಳಲ್ಲಿ ಕರ್ನಾಟಕದ ಸಂಬಂಧದಿಂದ ಸಂಪೂರ್ಣ ಮಾಹಿತಿಯನ್ನು ತಲೆಹಾಕಿ ಪುಸ್ತಕ ರೂಪದಿಂದ ಪ್ರಸಿದ್ಧಿಸಲು ಯೋಗ್ಯವಾಗುವಂತೆ ತಯಾರಿಸಬೇಕೆಂದು ಸಹ ನಿರ್ಣಯವಾಗಿರುವದು. ಈ ಎಲ್ಲ ಸಂಗತಿಗಳ ಸಂಬಂಧವಾಗಿ ಕರ್ನಾಟಕಸ್ಥರೆಲ್ಲರು ಚನ್ನಾಗಿ ವಿಚಾರ ಮಾಡಿ ತಮಗೆ ತೋರಿದ ಮಾರ್ಗಗಳನ್ನು ಸೂಚಿಸಿ ಕರ್ನಾಟಕದ ಪ್ರಗತಿಗೆ ಸಹಾಯ ಮಾಡಬೇಕಾಗಿ ನಾವು ಅತ್ಯಾಗ್ರಹಪೂರ್ವಕವಾಗಿ ಬೇಡಿಕೊಳ್ಳುತ್ತೇವೆ. ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಈ ವಿಷಯಗಳನ್ನು ಬಳ್ಳೆ ಉತ್ಸಾಹದಿಂದ ಕೈಕೊಂಡದ್ದಕ್ಕಾಗಿ ನಮಗೆ ಅತ್ಯಂತ ಆನಂದವಾಗಿದೆ. ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ಈ ವಿಷಯಗಳಲ್ಲಿ ಭಾಗತೆಗೆದು ಕೊಳ್ಳುವದರಿಂದ ಎಷ್ಟೋ ಜನರು ತಮ್ಮ ಅಂಗವನ್ನು ತೆಗೆಯ ಹತ್ತಿರುವರೆಂಬದಾಗಿ ಕೆಲವರ ಆಕ್ಷೇಪವಿದೆ. ಆದರೆ ಇದು ಸರಿಯಲ್ಲವೆಂಬದಾಗಿ ನಾವು ಸ್ಪಷ್ಟವಾಗಿ ಹೇಳುವೆವು. ಯಾವ ವಿಷಯಗಳ ಬಗ್ಗೆ ನಮ್ಮೆಲ್ಲರಲ್ಲಿ ಐಕಮತ್ಯವಿರುವದೋ ಆ ವಿಷಯಗಳನ್ನು ನಾವೆಲ್ಲರೂ ಕೂಡಿ ಏಕೆ ಮಾಡಬಾರದು? ರಾಜಕೀಯ ವಿಷಯಗಳ ಸಂಬಂಧವಾಗಿ ನಮ್ಮಲ್ಲಿ ಎಷ್ಟೇ ಮತಭೇದಗಳಿದ್ದರೂ ಏಕೀಕರಣವು ನಮ್ಮೆಲ್ಲರಿಗ ಬೇಕಾದ ವಿಷಯವಾದ ಮೇಲೆ ಉಳಿದ ಎಲ್ಲ ಮತಭೇದಗಳನ್ನು ಬದಿಗಿಟ್ಟು ಒಮ್ಮನಸ್ಸಿನಿಂದ ಎಲ್ಲರೂ ಪ್ರಯತ್ನಿಸುವದೇ ಯೋಗ್ಯವಾಗಿದೆ. ಈ ರೀತಿಯಾಗಿ ನಾವೆಲ್ಲರೂ ವರ್ತಿಸದ್ದರೆ ಯಾವ ಸಾರ್ವಜನಿಕ ಕಾರ್ಯವೂ ಸಾಗಲಾರದೆಂದು ಖಾತ್ರಿಯಾಗಿ ಹೇಳಬಹುದು. ಆದ್ದರಿಂದ ಎಲ್ಲ ಕರ್ನಾಟಕಸ್ಥರು ಜಾತಿ ಪಂಗಡ, ರಾಜಕೀಯ ಮತಭೇದ, ಮುಂತಾದ ಯಾವ ಭೇದಗಳನ್ನೂ ಎಣಿಸದೆ ಕರ್ನಾಟಕ ಮಾತೆಯ ಸೇವೆಗಾಗಿ ನಾವೆಲ್ಲರು ಟೊಂಕಕಟ್ಟೋಣ ಪರಮಾತ್ಮನು ಈ ಸದ್ಬುದ್ಧಿಯನ್ನು ಎಲ್ಲರಿಗು ದಯಪಾಲಿಸಲಿ.

ಕರ್ನಾಟಕ ಪ್ರಾಂತಿಕ ಮಂಡಲದ

ಕಾರ್ಯಕಾರಿ ಸಭೆಯಲ್ಲಾದ ಕೆಲಸಗಳು.

ಕರ್ನಾಟಕ ಪ್ರಾಂತಿಕ ಮಂಡಲದ ಕಾರ್ಯಕಾರಿ ಸಭೆಯು ಮೊನ್ನೆ ರವಿವಾರ ೧೪ ನೇ ತಾರೀಖಿನ ದಿವಸ ಧಾರವಾಡದಲ್ಲಿ ಕೂಡಿತ್ತು.

ದೇ. ಭ. ಶ್ರೀನಿವಾಸರಾವ ಕೌಜಲಗಿ ಇವರು ಅಧ್ಯಕ್ಷರಾಗಿದ್ದರು. ಕರ್ನಾಟಕ ಪ್ರಾಂತದ ಏಕೀಕರಣದ ವಿಷಯವು ಮೊದಲು ಚರ್ಚೆಗೆ ಹೊರಟಿತು. ಕರ್ನಾಟಕ ವಿಶ್ವವಿದ್ಯಾಲಯದ ಸ್ಥಾಪನೆಗೆ ಮೊದಲು ಯತ್ನಿಸಬೇಕೋ ಪ್ರಾಂತಿಕ ಏಕೀಕರಣಕ್ಕೆ ಮೊದಮೊದಲು ಕೈಯಿಕ್ಕಬೇಕೋ ಎರಡೂ ಕಾರ್ಯಗಳನ್ನು ಒಮ್ಮೆಗೇ ಕೈಕೊಳ್ಳಬೇಕೋ ಎಂಬುದಾಗಿ ದೀರ್ಘ ಚರ್ಚೆಯಾಯಿತು. ಕೊನೆಗೆ ವಿಶ್ವವಿದ್ಯಾಲಯದ ವಿಚಾರದಲ್ಲಿ ಅನೇಕ ಅಂತರಂಗ ಬಹಿರಂಗ ತೊಂದರೆಗಳಿರುವ ಮೂಲಕ ಅದನ್ನು ಸದ್ಯಕ್ಕೆ ಬದಿಗಿರಿಸಿ ಏಕೀಕರಣದ ಪ್ರಸ್ತಾಪವನ್ನೇ ಒತ್ತರದಿಂದ ಮುಂದೆ ಸಾಗಿಸಬೇಕೆಂದು ಗೊತ್ತಾಯಿತು. ಆದರೂ ವಿಶ್ವವಿದ್ಯಾಲಯದ ವಿಚಾರವನ್ನು ಪೂರಾ ಮೂಲೆಗುಂಪು ಮಾಡದೆ ಈ ವಿಷಯವಾಗಿ ಒಂದು ಪ್ರಶ್ನೆಮಾಲಿಕೆಯನ್ನು ಸಿದ್ಧಪಡಿಸಿ ಮುದ್ರಿಸಿ ಕರ್ನಾಟಕದೊಳಗಿನ ಶಿಕ್ಷಣ ವಿಷಯವಿಚಾರ ಧುರೀಣರ ಕಡೆಗೂ ಬೇರೆ ಪ್ರಮುಖರ ಕಡೆಗೂ ಕಳಿಸಿ ಲೋಕಮತವೇನಿರುವದೆಂಬುದನ್ನು ತಿಳಿದುಕೊಳ್ಳುವದು ಗೊತ್ತಾಯಿತು.

ಅದೇ ಮೇರೆಗೆ ಪ್ರಾಂತಿಕ ಏಕೀಕರಣವು 'ಬೇಗನೆ ಸಾಧ್ಯವಾಗುವಂತೆ ಯಾವ ಉಪಾಯಗಳನ್ನು ಕೈಕೊಳ್ಳಬೇಕೆಂಬುದಾಗಿ ಚರ್ಚೆ ನಡೆದು ಈ ವಿಷಯವಾಗಿಯೂ ಪ್ರಶ್ನಮಾಲಿಕೆಯೊಂದನ್ನು ಸಿದ್ಧಪಡಿಸಿ ಪ್ರಮುಖ ಲೋಕಮತವೇನಿರುವದೆಂಬುದನ್ನು ತಿಳಿದುಕೊಳ್ಳಬೇಕೆಂದು ಮತ್ತು ಕರ್ನಾಟಕಪ್ರಾಂತದಲ್ಲಿ ಸೇರುವದಕ್ಕೆ ಯೋಗ್ಯವಾದ ಯಾವತ್ತೂ ಭಾಗಗಳ ಕ್ಷೇತ್ರ ಜನಸಂಖ್ಯೆ ಕಂದಾಯದ ಹುಟ್ಟುವಳಿ, ವ್ಯವಹರಣೆಯ ವೆಚ್ಚ ಮೊದಲಾದ ಸಂಗತಿಗಳನ್ನೆಲ್ಲ ಸರಕಾರದ ಲೆಖ್ಖಪತ್ರಗಳ ಆಧಾರದಿಂದ ತಲೆಹಾಕಿ ಬ್ರಿಟಿಶ ಕರ್ನಾಟಕದ ಪ್ರದೇಶವನ್ನೆಲ್ಲ ಒಂದು ಪ್ರಾಂತವಾಗಿ ವಿಂಗಡಿಸಿ ಅದಕ್ಕೊಂದು ಸ್ವತಂತ್ರವಾದ ವ್ಯವಹರಣೆಯನ್ನೇರ್ಪಡಿಸುವದು ಶಕ್ಯವೂ ಸಾಧ್ಯವೂ ಆಗುವದನ್ನು ಎಲ್ಲರ ನಿದರ್ಶನಕ್ಕೆ ತಂದುಕೊಟ್ಟು ಕರ್ನಾಟಕ ಏಕೀಕರಣ ವಿಚಾರವನ್ನು ಬಲಪಡಿಸುವಂಥ ಪುಸ್ತಕವೊಂದನ್ನು ಕಾರ್ಯದರ್ಶಿಗಳಾದ ಶ್ರೀಮಧ್ವರಾವ ಕೆಂಭಾವಿಯವರು ಬರಿಸಿ ಬರುವ ಮೇ ತಿಂಗಳಲ್ಲಿ ಬಳ್ಳಾರಿಯಲ್ಲಿ ಕೂಡುವ ಪ್ರಾಂತಿಕ ಮಂಡಲಕ್ಕೆ ಒಪ್ಪಿಸಬೇಕೆಂದು ನಿರ್ಣಯವಾಯಿತು.

ಹಾಗೆಯೇ, ಕರ್ನಾಟಕದ ಏಕೀಕರಣದ ವಿಷಯವಾಗಿ ಕನ್ನಡನಾಡಿನ ಗಡಿಸೀಮೆಯ ಕನ್ನಡಿಗರಲ್ಲಿ ತಿಳಿವನ್ನೂ ಎಚ್ಚರವನ್ನೂ ಹುಟ್ಟಿಸುವ ಕಾರ್ಯಕ್ಕೆ ಪ್ರಾಂತಿಕ ಮಂಡಲದ ಅಧ್ಯಕ್ಷರಾದ ದೇ. ಭ. ಕೌಜಲಗಿ ಶ್ರೀನಿವಾಸರಾಯರು ತಮಗೆ ಯೋಗ್ಯಕಂಡ ಕಾರ್ಯದರ್ಶಿಯನ್ನು ಆರಿಸಿ ಸಂಗಡ ಕರೆದುಕೊಂಡು ಪ್ರವಾಸ ಮಾಡಬೇಕೆಂದೂ ಮೇಲ್ಕಾಣಿಸಿದ ಎಲ್ಲ ಕೆಲಸಗಳಿಗೆ ತಗಲುವ ವೆಚ್ಚವನ್ನು ಪ್ರಾಂತಿಕಮಂಡಲವು ಏಕೀಕರಣ ಕಾರ್ಯಕ್ಕಾಗಿ ವಿಂಗಡಿಸಿಟ್ಟ ೨ ಸಾವಿರ ರೂಪಾಯಿಗಳೊಳಗಿಂದ ...ಸಬೇಕೆಂದೂ ಗೊತ್ತುವಳಿಯಾಯಿತು.

ಕರ್ನಾಟಕದೊಳಗಿನ ಎಲ್ಲ ಕಾಂಗ್ರೆಸ್ ಸಂಸ್ಥೆಗಳನ್ನು ೧೯೨೧ ನೇ ವರ್ಷದಂತೆ ಮತ್ತೆ ಪುನರುಜ್ಜೀವನಗೊಳಿಸಿ ಅವುಗಳ ದೇಶಕಾರ್ಯ ಕರ್ತೃತ್ವಶಕ್ತಿಯನ್ನು ಬಲಪಡಿಸುವದಲ್ಲದೆ ಕಾನಪೂರ ಕಾಂಗ್ರೆಸ್ಸಿನ ೨ ನೇ ಗೊತ್ತುವಳಿಯ ಮೇರೆಗೆ ಬರುವ ಕೌನ್ಸಿಲ್ ಚುನಾವಣೆಯ ಕರ್ನಾಟಕದ ಎಲ್ಲಭಾಗಗಳಲ್ಲಿ ರಾಷ್ಟ್ರೀಯ ಸಭೆಯ ಅನುಯಾಯಿಗಳೇ ಉಮೇದವಾರರಾಗಿ ನಿಂತು ಆರಿಸಿ ಬರುವಂತೆ ಪ್ರಯತ್ನ ಮಾಡುವದು ಸಾಧ್ಯವಾಗುವಂತೆ ಆಯಾ ಜಿಲ್ಹಾ ಸಭೆಗಳ ಅಧ್ಯಕ್ಷರೂ ಕಾರ್ಯದರ್ಶಿಗಳೂ ಈಗಿನಿಂದ ಪ್ರಯತ್ನ ಮಾಡಬೇಕೆಂದೂ ರಾಷ್ಟ್ರೀಯ ಮಹಾಸಭೆಯ ಕಾರ್ಯಕಾರಿ ಮಂಡಲದಿಂದ ಬಂದ ಪತ್ರದ ಮೇರೆಗೆ ನಿರ್ಣಯಿಸಲಾಯಿತು.

ಬಳ್ಳಾರಿಯಲ್ಲಿ ಬರುವ ಮೇ ತಿಂಗಳಲ್ಲಿ ಕೂಡುವ ಕರ್ನಾಟಕ ಪ್ರಾಂತಿಕ ಪರಿಷತ್ತಿಗೆ ಮಿ. ಹಾರ್ನಿಮನ್ ಶ್ರೀ. ಶ್ರೀನಿವಾಸ ಅಯ್ಯಂಗಾರ ಹಾಗು ಡಾ. ಯು. ರಾಮರಾವ ಈ ಮೂವರೊಳಗಿನ ಯಾರನ್ನಾದರೂ ಅಧ್ಯಕ್ಷರನ್ನಾರಿಸಬೇಕೆಂದು ಬಳ್ಳಾರಿಯ ಸ್ವಾಗತ ಮಂಡಲಕ್ಕೆ ಸೂಚಿಸಲಾಯಿತು. ನಿಖಿಲಭಾರತ ನೂಲುವ ಸಂಘದ ಕರ್ನಾಟಕದ ಏಜಂಟರಾದ ದೇ. ಭ. ಗಂಗಾಧರರಾಯರ ಬೇಡಿಕೆಯ ಮೇರೆಗೆ ನೂಲುವ ಹಾಗು ಖಾದೀ ಪ್ರಸಾರದ ಕಾರ್ಯಕ್ಕೆ ೩೦೦ ರೂಪಾಯಿಗಳನ್ನು ವೆಚ್ಚಮಾಡಿ ಮ್ಯಾಜಿಕ್ ಲ್ಯಾಂಟರ್ನ ಮತ್ತು ಅದರ ಸ್ಲಾಯಿಡುಗಳನ್ನು ಕೊಂಡು ಕೊಡಬೇಕೆಂದು ಗೊತ್ತಾಯಿತು.

ತಲೆಯೊಳಗಿನ ಮಡ್ಡು

(೧) ಇಹ ಪರಗಳಲ್ಲಿ ಹಿತಕರವಾದ ಧರ್ಮ ತತ್ವಗಳನ್ನು ಉಪದೇಶಿಸಿದ ನಮ್ಮ ಪೂಜ್ಯಗುರುಗಳಾದ ಶಂಕರಾಚಾರ್ಯ, ಮಧ್ವಾಚಾರ್ಯ, ಮತ್ತು ಬಸವಣ್ಣನವರು, ಕರ್ನಾಟಕಸ್ಥರಲ್ಲವೇ! ಎಂದು ಮರಾಟಿಗರೂ, ಮತ್ತು "ಅರ್ವಾಚೀನ ರಾಜಕಾರಣದಲ್ಲಿ ನಮ್ಮ ಗುರುಗಳಾದ ತಿಲಕ ಮಹಾರಾಜರವರು ಮರಾಠಿಗರಲ್ಲವೇ"!! ಎಂದು ಕರ್ನಾಟಕಸ್ಥರೂ, ಪರಸ್ಪರರಲ್ಲಿ ಆದರಾಭಿವೃದ್ಧಿಯ ಮಾತುಗಳನ್ನಾಡುವದನ್ನು ಬಿಟ್ಟು, 'ಕಪಟಿ ಮಹಾರಾಷ್ಟ್ರ' 'ಹುಂಬ ಕರ್ನಾಟಕ' ಎಂದು ಬಿರಿನುಡಿಗಳನ್ನು ಬಳಸುವದು ಶಿಷ್ಟತನವೋ? ಸಭ್ಯತನವೋ? ಶಿಷ್ಟತನವೂ ಅಲ್ಲ. ಸಭ್ಯತನವೂ ಅಲ್ಲ. ಇದು ತಲೆಯೊಳಗಿನ ಮಡ್ಡು.

(೨) ಕನ್ನಡವನ್ನು ಕಲಿಯದೆ ಕೇವಲ ಮರಾಠಿಯನ್ನಾಗಲೀ ಉರ್ದುವನ್ನಾಗಲೀ ಗುಜರಾಥಿಯನ್ನಾಗಲೀ ಅರಿತು, ಕರ್ನಾಟಕದಲ್ಲಿ ಊರ್ಜಿತಸ್ಥಿತಿಯನ್ನು ಹೊಂದುವೆನೆಂದು ತಿಳಿದುಕೊಳ್ಳುವದು, ಸ್ವಾಭಿಮಾನವೋ? ಭಾಷಾಭಿಮಾನವೋ? ಎರಡೂ ಅಲ್ಲ; ಇದು ತಲೆಯೊಳಗಿನ ಮಡ್ಡು.

(೩) ಚಲ್ವಾಗಿ ಬರೆದ ಕನ್ನಡ ನುಡಿಯ ಕಮ್ಮಗಿನ ಸಾರು ನೀಡದೆ, ಸವಿಯಿಲ್ಲದ ಸಿಕ್ಕ ಬರಹದ ಆ ಸಾರಕ್ಕೆ ರಸಿಕರು ಮೋರೆ ಕಿವಿಚಿದರೆ, "ಅಯ್ಯೋ ನಿಮಗೆ ನಮ್ಮ ಸಾರು ಸೇರುವದುಂಟೇ? ನಿಮಗೆ 'ಮರಾಠಿಯ ಝುಣಕವಾಗಲೀ' 'ಇಂಗ್ಲೀಷ ಸೂಪಾಗಲೀ' ಸವಿಯಾಗಿ ತೋರುವದು" ಎಂದು ಸ್ವಜನರನ್ನು ಹೀಯಾಳಿಸುವದು ನೀತಿಯೋ ಪ್ರಿಯ್ನನ್ನ ಪ್ರೀತಿಯೋ ಎರಡೂ ಅಲ್ಲ. ಇದೇ ತಲೆಯೊಳಗಿನ ಮಡ್ಡು.

ವಿ. ಕ. ಪಟವರ್ಧನ

ಬಾಗಲಕೋಟ

ವಿಶ್ವವಿದ್ಯಾಲಯವೆಂದರೇನು?

(ಲೇಖಕ— ಶ್ರೀನಿವಾಸ ವ. ಮೂರ್ತಿ ಬಾಳಗಾ, ಸಂಪಾದಕ ನ್ಯಾ,)

ಭಾರತದಲ್ಲಿ ಈಗ ಎಲ್ಲೆಲ್ಲಿಯೂ ವಿಶ್ವವಿದ್ಯಾನಿಲಯವನ್ನು ಸ್ಥಾಪಿಸುವ ಸಮಾರಂಭವು ನಡೆಯುತ್ತಲಿದೆ. ಆಂಧ್ರರು ತಮಗೊಂದು ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿಕೊಂಡರು. ತಮಿಳರೂ, ತುಳುವರೂ, ಮಹಾರಾಷ್ಟ್ರರೂ, ಸೌರಾಷ್ಟ್ರರೂ ತಮಗೊಂದು, ವಿಶ್ವವಿದ್ಯಾನಿಲಯವನ್ನು ಸ್ಥಾಪಿಸಿಕೊಳ್ಳಲು ಹವಣಿಸುತ್ತಿದ್ದಾರೆ. ಕನ್ನಡಿಗರೂ ಕೂಡ ಅಖಿಲ ಕರ್ನಾಟಕಕ್ಕೆ ಒಂದು ಸ್ವತಂತ್ರ ವಿಶ್ವವಿದ್ಯಾನಿಲಯವನ್ನು ಮಾಡಿಕೊಳ್ಳಬೇಕೆಂದು ಚಳವಳವನ್ನೆಬ್ಬಿಸಿ ಪ್ರಯತ್ನಿಸುತ್ತಿರುವುದು ಸರ್ವರಿಗೂ ತಿಳಿದ ವಿಚಾರವೇ ಆಗಿದೆ. ಹೀಗೆ ಎಲ್ಲೆಲ್ಲಿಯೂ ಹೊರಟ "ವಿಶ್ವವಿದ್ಯಾನಿಲಯವೆಂಬ ಘೋಷದಿಂದ ಶಿಕ್ಷಣವಾತಾವರಣವೆಲ್ಲವೂ ತುಂಬಿದೆ. ಪ್ರಕೃತ ಲೇಖನವು ವಿಶ್ವವಿದ್ಯಾನಿಲಯವೆಂದರೇನು? ಅದು ಯಾವ ಪ್ರಕಾರವಿರಬೇಕು? ಅದರ ಯೋಗ್ಯತೆ ಎಂಥಾದ್ದು? ಅದರ ಕಾರ್ಯವೇನು, ಅದು ಯಾವ ಉದ್ದೇಶವನ್ನು ಸಾಂಗಗೊಳಿಸಲು ಸ್ಥಾಪಿಸಲ್ಪಡುತ್ತಿದೆ! ಅದರಿಂದ ನಿವಾರಣೆ ಯಾಗಬಹುದಾದ ಕೊರತೆಯೇನು? ಅದು ಅನುಸರಿಸತಕ್ಕ ಮಾರ್ಗವಾವುದು? ಇದಕ್ಕೂ ಇತರ ವಿದ್ಯಾಶಾಲೆಗೂ ಇರುವ ವ್ಯತ್ಯಾಸವೇನು? ಇದರ ಚರಿತ್ರೆ ಎಂಥಾದ್ದು ಮುಂತಾದವುಗಳನ್ನು ವಿಶದ ಪಡಿಸುವುದಕ್ಕೆ ಯತ್ನಿಸುತ್ತದೆ.

ವಿಶ್ವವಿದ್ಯಾನಿಲಯವೆಂಬ ಶಬ್ದದಿಂದ ವಿಶ್ವವಿದ್ಯೆಗಳ ನಿಲಯ ಅಥವಾ ಆವಾಸಸ್ಥಾನ ಎಂದು ಅರ್ಥವಾಗುತ್ತದೆ. ಅಂದರೆ ಅದು ಪೃಥ್ವಿಯಲ್ಲಿರುವ ಸಕಲ ಕಲೆಗಳ ಸಕಲ ಶಿಕ್ಷಣದ ಜ್ಞಾನಮಂದಿರವು, ಅಲ್ಲಿ ಎಲ್ಲ ತರಹವಿದ್ಯಬಲ್ಲಂಥ ಶಿಕ್ಷಕರು ಪಾಠಹೇಳುವರು. ಮತ್ತು ದೇಶವಿದೇಶಗಳಿಂದ ವಿದ್ಯಾರ್ಜನೆಗಾಗಿ ಅನೇಕ ತರುಣರು ಬಂದುಕೂಡುವರು. ಈ ಸ್ಥಳವಾದರೋ ವಿಚಾರ ಪರಂಪರೆಗಳ ಸಂಸರ್ಗವೂ, ಸರಣವೂ ಆಗತಕ್ಕ ಪ್ರದೇಶವಾಗಿದೆ.

ಕೇವಲ ಉಚ್ಚ ತರಗತಿಯ ಮಾನಸಿಕ ಶಿಕ್ಷಣ ಕೊಡತಕ್ಕ ಮಂದಿರವು ವಿಶ್ವವಿದ್ಯಾನಿಲಯವೆಂದು ಕರೆಯಲ್ಪಡುವುದಿಲ್ಲ. ಯಾವ ಶಿಕ್ಷಣದಿಂದ ವಿಶ್ವರಚನೆಯಲ್ಲಿರುವ ಸಕಲವಸ್ತು ವಿಶೇಷದ ಅನುಭವವಾಗುವುದೋ, ಯಾವ ಅಧ್ಯಯನದಿಂದ ಸೃಷ್ಟಿಯಲ್ಲಿರುವ ಸಕಲಶಾಸ್ತ್ರಗಳೂ ಕರತಲಾಮಲಕವಾಗುವುವೋ ಯಾವ ಅಭ್ಯಾಸದಿಂದ ಭೌತಿಕ; ಬೌದ್ಧಿಕ, ನೈತಿಕ ಆಧ್ಯಾತ್ಮಿಕ, ಆರ್ಥಿಕ, ಧಾರ್ಮಿಕ, ವ್ಯಾವಹಾರಿಕ ವಿಚಾರಗಳು ಸ್ಪಷ್ಟವಾಗುವುವೋ, ಆ ಕಲಿಯುವಿಕೆಗೆ ವಿಶ್ವವಿದ್ಯಾಶಿಕ್ಷಣವೆನ್ನಲ್ಪಡುವುದು.

ಹಾಗಾದರೆ ಏಕ ಪ್ರದೇಶದಲ್ಲಿ ಪ್ರಪಂಚದಲ್ಲಿರುವ ಸಕಲ ವಿಚಾರವನ್ನೂ ಗ್ರಾಹ್ಯಮಾಡಲಾಗುವದೇ? ಸರ್ವವಿಷಯವನ್ನೂ ಪುಸ್ತಕಗಳಿಂದಲೂ, ಅಧ್ಯಾಪಕರಿಂದಲೂ ತಿಳಿಯಲು ಶಕ್ಯವೇ? ತೀರ್ಥಯಾತ್ರೆ, ಜನಗಳ ಕೂಟ, ಸುಪ್ರಸಿದ್ಧದೇವಾಲಯ, ಜಾತ್ರೆ ಉತ್ಸವ, ಸಣ್ಣ ಪುಟ್ಟ ಓಣಿಗಳು, ರಾಜಮಾರ್ಗಗಳು, ಉದ್ಯಾನಗಳು, ಅರಣ್ಯ ಪ್ರದೇಶಗಳು ರಾಜ ಪ್ರಾಸಾದಗಳ, ಪರ್ಣಕುಟೀರ, ಪರ್ವತ ಶಿಖರ, ಪಾತಾಳ ಪ್ರದೇಶ, ಸಾಗರ, ಮರುಭೂಮಿ ಮುಂತಾದ ಸ್ಥಳಗಳಿಗೆ ಹೋದರೆ, ಪ್ರತಿಭಾಶಾಲಿಗಳು ರಚಿಸಿರುವ ಗ್ರಂಥಗಳಿಗಿಂತಲೂ, ಬುದ್ಧಿವಂತರ ಬೋಧನೆಗಿಂತಲೂ ಎಷ್ಟೋ ಹೊಸವಿಚಾರಗಳು ಭಾಸವಾಗುತ್ತವೆ. ಇಂಥವುಗಳೆಲ್ಲವನ್ನು ವಿಶ್ವವಿದ್ಯಾನಿಲಯಗಳಲ್ಲಿ ಕಲಿಯಲು ಸಾಧ್ಯವೇ? ಸಮ್ಮಿಶ್ರವೂ ಚಿತ್ರವಿಚಿತ್ರವೂ ಆದ ಸಕಲ ವಸ್ತುಗಳ ಯಥಾರ್ಥ ಮತ್ತು ಸಂಪೂರ್ಣಜ್ಞಾನವನ್ನು ಪಡೆಯಲು ವಿಶ್ವವಿದ್ಯಾನಿಲಯವು ಸಹಾಯ ಮಾಡುವದೇ? ನಡೆ ನುಡಿ, ಆಚಾರ ವ್ಯವಹಾರ, ಉಡಿಗೆ ತೊಡಿಗೆ, ಗೌರವ ಗಾಂಭೀರ್ಯ, ಶೌರ್ಯ, ಸದ್ಗುಣ, ಹಾವಭಾವ, ನೀತಿ ನಿಯಮ, ಸಂಗೀತ ಸಾಹಿತ್ಯ, ಸಂಭಾಷಣ, ಸಮಾಲೋಚನ ಸೌಖ್ಯಜೀವನ, ಬುದ್ಧಿ ಕೌಶಲ್ಯ ಮುಂತಾದ ವಿಚಾರಗಳನ್ನು ವಿಶ್ವವಿದ್ಯಾನಿಲಯವು ತಿಳಿಸಿಕೊಡಲು ಸಮರ್ಥವಾಗುವುದೇ? ರಾಜಸಭೆ, ನ್ಯಾಯಸ್ಥಾನ, ಖನಿಜಗಳ ಕಣಿಗಳು ಯಂತ್ರಗಳ ಕಾರ್ಖಾನೆ, ಮುಂತಾದವುಗಳಲ್ಲಿರುವ ವಿಚಾರಗಳನ್ನು ವಿಶ್ವವಿದ್ಯಾನಿಲಯವು ತಿಳಿಯಪಡಿಸುವುದೇ?

ಶಾಸ್ತ್ರಪ್ರಯೋಗಗಳು ಮತ್ತು ಅನುಭವಗಳು ಶಾಂತಪ್ರದೇಶದಲ್ಲಿ ಸಿದ್ಧಿಯಾಗುತ್ತವೆ. ಹೊಸಶೋಧನೆಗಳು ಏಕಾಂತದಲ್ಲಿ ಮಾತ್ರ ಸಾಧನೆಯಾಗುತ್ತವೆ. ತತ್ವ ಜ್ಞಾನಗಳು ಜನಭರಿತ ಸ್ಥಳಗಳನ್ನು ಜಾತ್ರೆ ಕೂಟಗಳನ್ನೂ ಇಚ್ಛಿಸುವುದಿಲ್ಲ. ಸ್ತೋತ್ರಪ್ರಾರ್ಥನಾದ ದೇವತಾಕಾರ್ಯಕ್ಕೂ ಗಣಿತ ಮತ್ತು ಭೌತಿಕ ಶಾಸ್ತ್ರದ ಸಿದ್ಧಾಂತಕ್ಕೂ ಬಹಳ ಅಂತರವಿದೆ. ಉಕ್ತವ್ಯತಿರಿಕ್ತ ವಿಚಾರಗಳನ್ನು ತಿಳಿದು ಕೊಳ್ಳಲು ಏಕ ಪ್ರದೇಶವಾದ ವಿಶ್ವವಿದ್ಯಾನಿಲಯವು ಯೋಗ್ಯಪ್ರದೇಶವೆ? ಹೀಗೆ ವಿಶ್ವವಿದ್ಯಾನಿಲಯದ ವಿಚಾರವಾಗಿ ಅನೇಕ ಪ್ರಶ್ನೆಗಳು ಉತ್ಪನ್ನವಾಗುತ್ತವೆ. ಇವುಗಳೆಲ್ಲವನ್ನು ಅರಿಯಲು ಸಮರ್ಥವಾಗಿರಬೇಕಾದರೆ ವಿಶ್ವವಿದ್ಯಾನಿಲಯವು ಎಲ್ಲಿರಬೇಕು! ಹೇಗಿರಬೇಕು? ಎಂಬ ಪ್ರಶ್ನೆಗಳೂ ಉದಯವಾಗುವುವು. ಇವುಗಳಿಗೆ ಉತ್ತರ ಕೊಡಬೇಕಾದರೆ ಮೊದಲು ಆರಂಭಿಸಿದಂತೆ ಪುನಸ್ಮರಣ ಮಾಡಬೇಕಾಗುತ್ತದೆ.

ವಿಶ್ವವಿದ್ಯಾನಿಲಯವೆಂಬುದು ಎಲ್ಲ ತರಹಜ್ಞಾನವನ್ನು ಪಡೆಯಲು ಬಂದು ಸೇರುವ ವಿದ್ಯಾರ್ಥಿಗಳ ಮತ್ತು ಅವರಿಗೆ ಬೋಧಿಸುವ ವಿದ್ಯಾಶಿಕ್ಷಕರ ಸಂಗಮಸ್ಥಾನವಾಗಿರುವುದರಿಂದ ಪ್ರಕೃತಿಯ ಮತ್ತು ಕಲಾವೈಭವದ ಸೌಂದರ್ಯ ಪ್ರದೇಶವಾಗಿಯೂ, ಭೂಮಿಯು ಸಕಲ ವಿಧವಾದ ಸಸ್ಯವರ್ಗದಿಂದಲೂ, ಖನಿಜವರ್ಗದಿಂದಲೂ ಕೂಡಿ ಸಂಪದ್ಯುಕ್ತವಾಗಿಯೂ, ವಾಣಿಜ್ಯದ ಕೇಂದ್ರಸ್ಥಾನವಾಗಿಯೂ, ಕಲಾಕೋವಿದರಿಂದ ಆಶ್ರಯಿಸಲ್ಪಟ್ಟ ಸ್ಥಳವಾಗಿಯೂ ಇರತಕ್ಕದ್ದು. ಅದು ಎಲ್ಲ ತರಹನಮೂನೆಗಳಿಗೆ ಮಾತೃಭೂಮಿಯಾಗಿಯೂ ಪ್ರತಿಭಾಸಂಪನ್ನರ ಕೂಟಸ್ಥಳವಾಗಿಯೂ ಚಿತ್ರವಿಚಿತ್ರವೂ ಆದ ಅಪರೂಪ ಮತ್ತು ಬಹು ಮೂಲ್ಯಸಂಗ್ರಹವಾಗಿಯೂ ಚಿತ್ರಗಾರ, ಶಿಲ್ಪಗಾರ, ಗಾಯಕ ಮುಂತಾದವರ ಆಶ್ರಯಸ್ಥಾನವಾಗಿಯೂ ಇರತಕ್ಕದ್ದು ಅಲ್ಲಿ ಸುಪ್ರಸಿದ್ಧ ಬೋಧಕರೂ, ಬೃಹಸ್ಪತಿಗಳಂಥ ವಾಚಾಳಿಗಳೂ, ಅರ್ಥ ಶಾಸ್ತ್ರಜ್ಞರೂ, ಗಣಿತ ಶಾಸ್ತ್ರಜ್ಞರೂ, ರಾಜಕಾರ್ಯ ನಿರ್ವಾಹಕರೂ ಕೂಡಿರಬೇಕು. ಆಸ್ಥಳಕ್ಕೆ ದಶೋ ಸಾವಿರಾರು ವಿದ್ಯಾಪೀಠಗಳಿಂದ ಜನರು ಬಂದು ನೆರೆಯಬೇಕಲ್ಲದೆ ವಾದ, ವಿವಾದ, ಬೋಧ, ಗ್ರಾಹ್ಯ ಮುಂತಾದುವುಗಳಿಂದ ಸತ್ಯಾಂಶವನ್ನು ಹೊರಗೆಡವು ಬೇಕು. ಆಗಲೇ ರಹಸ್ಯಗಳು ಗೋಚರವಾಗುವುವು. ಶೋಧನೆಗಳು ಪರಿಪಕ್ವ ಹೊಂದುವುವು. ಭಿನ್ನ ಭಿನ್ನ ಮತಗಳು ಕಲೆತು ನವನವಜ್ಞಾನವೂ ವಿಕಾಸಹೊಂದಿ ಅವಿಚಾರವೂ, ದೋಷವೂ ಬಯಲಿಗೆ ಬರುವುವು. ಅಲ್ಲಿಯ ಪಂಡಿತನಾದರೊ ತನ್ನ ಪೂರ್ಣಪಾಂಡಿತ್ಯ ಪ್ರಭಾವದಿಂದಲೂ, ವಾಗ್ಮಿಯಿಂದಲೂ, ನೆರೆದಿರುವ ಶಿಷ್ಯವರ್ಗದವರಿಗೆ ಮತಾಭಿಮಾನಾವೇಶದಿಂದ ಸುಬೋಧನೆ ಮಾಡುತ್ತಲೂ ತನ್ನ ಪ್ರೇಮದ ಜ್ಯೋತಿಯನ್ನು ಶ್ರವಣ ಮಾಡತಕ್ಕವರ ಹೃದಯದಲ್ಲಿ ಬೆಳಗುತ್ತಲೂ ಇರಬೇಕು. ಅಲ್ಲಿಯ ಗುರು ಶಿಷ್ಯರಲ್ಲಿ ಔಪದೇಶಿಕ ಪ್ರಶ್ನೋತ್ತರಗಳು ನಡೆಯುತ್ತಲೂ, ವಿಚಾರ ಪರತೆಯು ವೃದ್ಧಿಯಾಗುತ್ತಲೂ, ಏಕ

ವಿದ್ಯಾನಿಲಯವು ಭೂಲೋಕದ ಜ್ಞಾನಮಂದಿರವಾಗಿ, ಆಧ್ಯಾತ್ಮಿಕ ಶ್ರೇಯಸ್ಸಿನ ಸೋಪಾನವಾಗಿ, ಶ್ರದ್ಧಾಭಕ್ತಿಗಳ ಸಾಮ್ರಾಜ್ಯವಾಗಿ ಮುಂದಿನಮಕ್ಕಳ ಸರ್ವಜ್ಞಾನ ಭಂಡಾರವಾಗಿ ಶೋಭಿಸತಕ್ಕದ್ದು. ಅಲ್ಲಿ ಶಿಕ್ಷಣ ಕೊಡತಕ್ಕ ವಿಷಯಗಳಾವುವೆಂದರೆ:—

ಗಣಿತಶಾಸ್ತ್ರ, ಅರ್ಥಶಾಸ್ತ್ರ, ರಸಾಯನಶಾಸ್ತ್ರ, ಭೌತಿಕ ಶಾಸ್ತ್ರ, ಭೂಗರ್ಭಶಾಸ್ತ್ರ, ಪ್ರಾಣಿಶಾಸ್ತ್ರ ನ್ಯಾಯಶಾಸ್ತ್ರ, ಶಿಲ್ಪ ಶಾಸ್ತ್ರ, ಶರೀರಶಾಸ್ತ್ರ, ಮಾನಸಿಕ ಶಾಸ್ತ್ರ, ಭೂಗೋಲ ಶಾಸ್ತ್ರ, ವಾಯುಮಂಡಲಶಾಸ್ತ್ರ ಯಂತ್ರ ರಚನಾ ಶಾಸ್ತ್ರತರ್ಕಶಾಸ್ತ್ರ ನೀತಿ ಶಾಸ್ತ್ರ, ವನಸ್ಪತಿಶಾಸ್ತ್ರ, ಭಾಷಾ ಮತ್ತು ಸಾಹಿತ್ಯ, ಚರಿತ್ರೆ ಖಗೋಲ, ಸಾಂಘಿಕ ಸಂಸ್ಕರಣ, ತತ್ವಜ್ಞಾನ ಪ್ರಕಾಶ, ಚಿತ್ರ, ರೇಖನೆ, ಕಟ್ಟಡ ನಿರ್ಮಾಣ; ಸಂಗೀತ, ನೃತ್ಯ, ವ್ಯವಸಾಯ ವಾಣಿಜ್ಯ ಕೈಗಾರಿಕೆ, ನಾಕ ಮತ್ತು ಸೈನಿಕ ಶಿಕ್ಷಣ, ವ್ಯಾಯಾಮ ಮತ್ತು ವ್ಯವಹಾರ ಶಿಕ್ಷಣ, ಇಷ್ಟಲ್ಲದೆ ಇಲ್ಲಿ ಬಾರದ ಇನ್ನೂ ಎಷ್ಟೋ ವಿಷಯಗಳೂ ಈ ಅಜ್ಞಾಳಬರ ಹಕ್ಕಿಂತ ಪ್ರಾಜ್ಞನ ಲೇಖನಿಯು ವರ್ಣಿಸುವ ಎಲ್ಲ ವಿಚಾರಗಳನ್ನು ಬೋಧಿಸುವುದೇ ವಿಶ್ವವಿದ್ಯಾನಿಯವು.

ಆಧುನಿಕ ಕಾಲದಲ್ಲಿ ಕನ್ನಡಿಗರಿಗೊಂದು ಏಕೆ, ಭಾರತೀಯರಿಗೊಂದು ಇಂತಹ ವಿಶ್ವವಿದ್ಯಾನಿಯವು ಲಭಿಸುವುದೋ?

ರಂಗನ ರಸಿಕತ್ವ

ಇದು ಹೊಸಯುಗವು ಪರರ ಛಿದ್ರಾನ್ವೇಷಣೆ ಮಾಡುವ ಯುಗವು ಆದರೆ ಇದು ಮಾತ್ರ ನಮ್ಮ ಸುಯೋಗವೇ ಸರಿ

ರಂಗದೇವತೆಯನ್ನು ರೇಗಿಸುವದಕ್ಕಾಗಿ; ಛೆ ಅಲ್ಲ; ರಂಗಿಸುವದಕ್ಕಾಗಿಯೇ ಅನ್ನಿರಿ ಈಗಿನ ಉತ್ಸಾಹೀ ತರುಣರು ಮುಂದರಿಯ ಹತ್ತಿದ್ದಾರೆ. ಆದರೆ ಅವರ ಸಧ್ಯದ ಸ್ಥಿತಿಯು “ಕಡಬಡವನು ಕಂಡ ಭಾಗ್ಯದ ನಿಧಿಯಂತೆ” ಅಥವಾ “ಕಡುನಿದ್ರೆಯಲ್ಲಿ ಬಡಿದೆಬ್ಬಿಸಿದ ಮಾನವನಂತೆ' ಆಗಿದೆ. ಹಿಂದಿನದು ಗೊತ್ತಿಲ್ಲ ಮುಂದಿನದು ತಿಳಿಯಲಿಲ್ಲ; ನಡೆಯುವದು ಅರವಿಲ್ಲ; ಬಾಲ್ಯದೃಷ್ಟಿಯಿಂದಲೋ ಅಥವಾ ಟೀಕೆಮಾಡುವ ನೈಜ ಸ್ವಭಾವದಿಂದಲೋ, ಕನಸಿನಲ್ಲಿ ಕಂಡದ್ದನ್ನು ಒಟಗುಟ್ಟ ಹತ್ತಿರುವರು.

ಸದ್ಯಕ್ಕೆ ನಮ್ಮ ರಸಿಕ ರಂಗನ ಮಾತನ್ನಷ್ಟು ಆಲಿಸುವಾ ಇವರ ಪಾಲಿಗೆ 'ನಾಟಕದ ಹಾಡಿನಲ್ಲಿ ಹಾಲಿಲ್ಲವಂತೆ' ಇಂಥ ರಸಿಕರು ಅಳಳಬವೊಲೆಯಲ್ಲಿ ಯಾದರೂ ಹಾಲನ್ನು ಕಾಣುವರೋ ಇಲ್ಲವೋ ಸಂಶಯವು ಈ ಜಗತ್ತಿನಲ್ಲಿ ನನಗಂತೂ ಒಂದು ವಿಚಿತ್ರ ಅನುಭವವು ಬಂದಿದೆ. ಅದೆಂದರೆ, ಬೇಡುವ ಬಯಕೆಯೂ ಕೋರುವ ಕೋರಿಕೆಯೂ ಎಂದೂ ಕೈಗೂಡಲಿಲ್ಲ ಆದರವು ಹೆಚ್ಚಿದಂತೆ ಇಚ್ಛಿತವಸ್ತುವು ಹಿಂಜರಿಯುವದು. ಇದರಂತೆಯೇ ರಸಿಕನೆಂದೆನಿಸಿಕೊಳ್ಳುವ ನಮ್ಮ ರಂಗನಿಗೆ ಹಾಡನ್ನು ಕೇಳುವ ಸುಯೋಗವೇ ಕಾಡಿಸಿರಲಿಕ್ಕಿಲ್ಲ. ಇದಲ್ಲದೆ ಇವರು ಜೋಳ ಹಾಕಿಸಿ ಕೊಳ್ಳುವ ಜೋಕುಮಾರನ ಜೋಗುಳವನ್ನು ಕೇಳಿ, ಏನೋ ಇಂಥ ಮಹತ್ಕಾರ್ಯಕ್ಕೆ ಕೈ ಹಾಕಿರಬಹುದು

ಈ ಮಹಾನುಭಾವರಿಗೆ ನಾಟಕದ ಹಾಡು ಅತ್ಯಂತ ಕೇಳಿಸಿದ್ದರೆ ನಾಟಕದ ಮಾತು ಹಾಡಿದಂತೆ ಕೇಳಿಸಿರಬಹುದು ಇವೇನೋ ನಮ್ಮ ತರ್ಕ ಇಷ್ಟೇ.

ಇವರು ಹಾಡಿಗೂ ಕವಿತ್ವಕ್ಕೂ ಸಂಬಂಧವನ್ನು ಹೋಲಿಸಿದ್ದಾರೆ. ಇದು ನಮಗಂತೂ ಬಾದರಾಯಣ ಸಂಬಂಧವೆಂದು ತೋರುತ್ತದೆ. ಕವಿತೆ (Poetry) ಯಲ್ಲಿ ಹಾಡುಂಟು (Music) ಇಷ್ಟರಿಂದಲೆ ಹಾಡಿಗೆ ಕವಿತ್ವವು ಬೇಕೇ ಬೇಕು ಎಂದು ಪ್ರತಿಪಾದಿಸುವದು ಅಸಮಂಜಸ ಸ್ತ್ರೀ ಪುರುಷರಿಬ್ಬರಿಗೂ ಕಣ್ಣು ಮುಂಗುಗಳುಂಟೆಂದು ಸ್ತ್ರೀಯರಿಲ್ಲದೂ ಪುರುಷರಿಂದಾಗಲೀ ಅಥವಾ ಪುರುಷರಿಲ್ಲದೂ ಸ್ತ್ರೀಯರಿಂದಾಗಲೀ ನಿರ್ಧರಿಸಲಾಗದು.

Poetry appeals to the human heart through words, while singing through music ಕವಿತೆಯಲ್ಲಿ ಶಬ್ದಗೌರವವೇ ಗೌರವವು ಆದರೆ ಹಾಡಿನಲ್ಲಿ ಸಮಯಾನುಸಾರ ಎರಿಳಿತದ ನರ್ತನವೇ ಸಾಕು. "Music is an etherial science" ನಾಟಕಕ್ಕೆ ಕವಿತ್ವವು ಬೇಕಾಗಿದ್ದರೂ ಹಾಡಿಗೆ ಕವಿತ್ವವು ಬೇಡಾ ಅಂದರೆ ಇದು ಅಪದ್ಧವೆಂದು ಹೇಳಲಾಗದು. ಇದಲ್ಲದೇ ಕವಿತ್ವಕ್ಕೆ ಮಹತ್ವವನ್ನು ಕೊಟ್ಟು ಹಾಡನ್ನು ಹೇಳಹತ್ತಿದರೆ, ಪ್ರೇಕ್ಷಕ ವಿದ್ವನ್ಮಣಿಗಳ ಲಕ್ಷವು ಭಾವ ಗರ್ಭತದ ಕಡೆಗೆಳೆದು ಹಾಡಿನ ಇಂಪನ್ನು (music) ದುರ್ಲಕ್ಷಿಸುವರು ಅಂದರೆ ಇದರಿಂದ, ಮನಸ್ಸಿಗೆ ಸ್ವಲ್ಪ ವಿಶ್ರಾಂತಿಯನ್ನು ಕೊಡಬೇಕೆಂಬ ಕಾರ್ಯವು ಸಾಧಿಸುವದಿಲ್ಲ. ನಾಟ್ಯರಸವನ್ನು ಸ್ವಾದಿಸಿ ಬಹು ಭಾರವಾದ ಮನಸ್ಸಿಗೆ ಸ್ವಲ್ಪ ವಿಶ್ರಾಂತಿಯನು ಕೊಡುವದಕ್ಕಾಗಿ ಇರುತ್ತದೆ.

ಇದಲ್ಲದೆ, ಸಮಯಾನುಸಾರ ವರ್ತಿಸುವದು ಸುಶೀಲರ ಮುಖ್ಯಾಂಗವು. ನಾಟಕದ ಹಸ್ತ ಪತ್ರಿಕೆಗಳನ್ನು ನೋಡಿರಿ. ಮ್ಯಾನೇಜರ ಮಹಾನುಭಾವರ ಕೌಶಲ್ಯಕ್ಕೆ ಯಾರು ಬಟ್ಟು ಕಚ್ಚಲಿಕ್ಕಿಲ್ಲ. ಅವರು ಎಂದೂ ತಪ್ಪದೆ “ಸಮಯಾನುಸಾರವಾಗಿ ಟಿಕೀಟಿನ ದರಗಳು ಹೆಚ್ಚಿಸಲ್ಪಡುವವು” ಎಂಬ ಬ್ರಹ್ಮವಾಕ್ಯವನ್ನು ಜೋಡಿಸಲಿಕ್ಕೆ ಎಂದೂ ತಪ್ಪರು. ಇಂಥ ಧುರೀಣರ ಭಾವೀಧೋರಣವನ್ನು ನೋಡಿಯಾದರೂ ನಮ್ಮ ರಸಿಕ ರಂಗನು ತನ್ನ ಅಜ್ಞಾನವನ್ನು ಹೋಗಲಾಡಿಸಿ ಕೊಳ್ಳತಕ್ಕದ್ದಿತ್ತು. ಈಗಿನ ಕಾಲದಲ್ಲಿ ಹಿಂದುಸ್ಥಾನದ ಸಧ್ಯದ ಅವನತ ಸ್ಥಿತಿಯಲ್ಲಿ, ನವನಾಗರಿಕತೆಯ ಅಧಃಪತನದ ಯುಗದಲ್ಲಿ ಕಲಿತವರು ಕಡಿಮೆಯೆಂದು ಕೈಯಲ್ಲಿ ಕಡ್ಡಿಕೊಟ್ಟ ಹೇಳಬಹುದು. ಕವಿತ್ವವನ್ನು ಸ್ವಾದಿಸಬೇಕಾದರೆ, ಚಿತ್ರಲಿಕ್ಕೆ ಹೊಲವನ್ನು ಹದಮಾಡುವಂತೆ ಮನಸ್ಸನ್ನು ತಿದ್ದಬೇಕಾಗುತ್ತದೆ. ಕವಿತ್ವದ ಸ್ವಾದವೆಂದರೆ, ಪರಟಿಯಲ್ಲಿಯ ಕೊಪ್ಪರಿಯಂದೇ ಹೇಳಬೇಕು. ಇಲ್ಲವಾದರೆ, ಬುದ್ಧಿಯಲ್ಲಿಯು, ಕಡ್ಡಿಯಾಗಲಿ ಕಬ್ಬಿನಲ್ಲಿಯ ರಸವೆಂದಾಗಲೀ ಅನ್ನಬೇಕು. ಕವಿತ್ವವು ಸರ್ವಸಾಮಾನ್ಯರಿಗಲ್ಲದೇ ಪಂಡಿತ ಮಹಾಶಯರಿಗೆ ಈಗಿನ ಸೂತ್ರ ಧಾರರಿಗೆ ನದಿಯನ್ನು ಕುರಿತು आयि अयि भूयिसत्रा पारिपार्श्विक ಎಂದೆನ್ನುವ ಭಾಗವೆಲ್ಲಿರುವದು. ಅಂದಮೇಲೆ ಹಾಡಿನಲ್ಲಿ ಪುನಃ ಪೂರ್ವಕವಾಗಿ ಕವಿತ್ವವನ್ನು ಬೆರಿಸುವದೆಂದರೆ, ಕಲ್ಲಿನ ಮೇಲೋಗರದಂತೆಯೇ ಸರಿ.

ಇರಲಿ, ನಮ್ಮ ರಂಗನಿಗೆ ಈಗಿನ ಅಂಗನೆಯರಲ್ಲಿ ಸೌಂದರ್ಯವು ತೋರಲಿಲ್ಲವಂತೆ ಇದೇನೋ ಪರ ಮಾಶ್ಚರ್ಯವು. ಈಗಿನ ಸ್ತ್ರೀಯರಲ್ಲಿ ಸೌಂದರ್ಯವಿಲ್ಲವೋ ಅಥವಾ ಅವರಲ್ಲಿಯ ಗುಣಗಣಿಸುವ ಯುವ ಗುಣವು ನಮ್ಮಲ್ಲಿಲ್ಲವೋ

ನಾಟ್ಯಾಲಂಕಾರವು ಅಭಿನಯಿಸುವದಕ್ಕೆ ನಾಮಧೇಯದಲ್ಲಿದೆ ಕವಿತ್ವಕ್ಕಿಲ್ಲ ರಸಿಕರಂಗನೆಂದೆನಿಸಿ ಕೊಳ್ಳುವವನು ಸುಗುಣಗಳ ಮಾಧುರ್ಯವನ್ನು ಹೀಗಿರುವವನಲ್ಲಿದೇ ಅರಸಿಕರ ರಸಿಕಾಗ್ರನೆಂದೂ ಅಗಲಾರನು.

ಕೇ. ಆರ್. ಆಲೂರ
ಕರ್ನಾಟಕ ಕಾಲೇಜ ಧಾರವಾಡ

ಸಮಾಜ ಸೇವಕರು

(ಲೇ:— ಮುಕುಂದರಾವ ಬಿ. ಎ.)

ನಮ್ಮ ಪ್ರಾಂತ್ಯವು ಉನ್ನತಿಗೆ ಬಂದು ದೇಶದ, ಕನ್ನಡಿಗರ ಮಾನವ ಕುಲದ ಏಳ್ಗೆಯನ್ನು ಸಾಧಿಸಬೇಕಾದರೆ ಮೊದಲಾಗಿ ನಮ್ಮಲ್ಲಿ ಒಂದು ಸೇವಾಸಂಘ ವಿರಬೇಕೆಂದು ಹಿಂದೊಮ್ಮೆ ಪ್ರಸ್ತಾಪಿಸಿದ್ದೆವು ಈ ಸಲ ಯಾವ ರೀತಿಯ ಸಂಘವನ್ನು ಸ್ಥಾಪಿಸಬೇಕು. ಅದರ ಕೆಲಸವನ್ನು ಯಾವದಾರಿಯನ್ನು ಹಿಡಿದು ಸಾಗಿಸ ಬೇಕು. ಎಂಬದನು ವಿಚಾರಿಸಬೇಕು.

ಮೊದಲಾಗಿ ನಾವು ಮನಸ್ಸಿನಲ್ಲಿ ಇಟ್ಟುಕೊಳ್ಳ ಬೇಕಾದ್ದೇನೆಂದರೆ ನಮ್ಮ ಸಂಘದದಿಗಂತವು ತತ್ಕಾಲದ ಮಟ್ಟಿಗೆ ಕರ್ನಾಟಕಕ್ಕಿಂತ ಹೊರಗಣ ದೇಶವನ್ನು ಆವರಿಸುವ ಆಶೆಮಾಡಬಾರದು. ಕಾಲಕ್ರಮೇಣ

ನಮ್ಮ ನಾಡನ್ನು ಸುಸ್ಥಿತಿಗೆ ತಂದಮೇಲೆ, ಸಂಘಕ್ಕೆ ರಾಷ್ಟ್ರರೂಪವನ್ನು ಕೊಡುವ ಅನುಕೂಲವು ಬಂದೀತು, ಆದರೆ ಆರಂಭದಲ್ಲೇ "ಓಲ್ ಇಂಡಿಯಾ" ಮುಂತಾದ ಕೋಟಿ ಶೃಂಗಾರವನ್ನು ಮಾಡಲಿಕ್ಕೆ ಪ್ರಯತ್ನಿಸ ಬಾರದು. ಇಡೀ ದೇಶವನ್ನು ಲೆಕ್ಕಕ್ಕೆ ತರುವಾಗ ಅನೇಕ ಬದಲಾವಣೆಗಳನ್ನು ಮಾಡಬೇಕಾದುದರಿಂದ ಎಳೆಯ ಸಸಿಯ ಕೊಡಿಗಳನ್ನು ಮುರಿದಂತಾಗಿ ನಮ್ಮ ಕೃತ್ಯವು ಬೇಗನೇ ಮಣ್ಣುಪಾಲಾಗುವುದು. ಹದಿನೆರಡು ಮಿಲಿಯ ಜನರು ವಾಸಿಸಿದ್ದ ಭಾಗವನ್ನು ಉದ್ಧರಿಸಿ ಜಗತ್ತಿನಲ್ಲಿ ಪ್ರಖ್ಯಾತಿಗೆ ತರುವ ಕೆಲಸವು ಸಣ್ಣದಲ್ಲ; ಅವನ್ನು ಪೂರ್ತಿ ಮಾಡಲಿಕ್ಕೆ ಬೇಕಾದ ಶಕ್ತಿಯನ್ನು ನಮ್ಮ ತೋಳುಗಳಲ್ಲಿಯೂ, ಧೈರ್ಯವನ್ನು ಎದೆಯಲ್ಲಿಯೂ, ಜ್ಞಾನವನ್ನು ತಲೆಯಲ್ಲಿಯೂ, ದೇವರು ಇಟ್ಟಿದ್ದಾದರೆ "ಇನ್ನೇನು ಬೇಡೆನು" ಎಂದು ಸಾಷ್ಟಾಂಗ ಪ್ರಣಾಮವನ್ನು ಮಾಡಬಹುದು.

ಸಂಘದ ಬೀಜವಾಗಿ ಒಂದು ಪುಸ್ತಕಾಲಯ ಮತ್ತು ಮುದ್ರಾಯಂತ್ರವನ್ನು ಸ್ಥಾಪಿಸುವದು ಅಗತ್ಯ. ಗ್ರಂಥಾಲಯದಲ್ಲಿ ಸಮಾಜಶಾಸ್ತ್ರದ(Sociology)ಪ್ರತಿಯೊಂದು ಭಾಗವನ್ನು ಅಭ್ಯಾಸ ಮಾಡಲಿಕ್ಕೆ ಅಗತ್ಯವಿರುವ ಪುಸ್ತಕ ಮತ್ತು ಪತ್ರಿಕೆಗಳನ್ನು ಶೇರಿಸ ಬೇಕು. ಕೃಷಿ ಸುಧಾರಣೆ, ಒಕ್ಕಲಿಗರಲ್ಲಿ ಸಹಕಾರ, ನೀರಾವರಿ, ಗೋರಕ್ಷಣೆ, ಒಕ್ಕಲು ಧನಿಗಳಲ್ಲಿ ಇರಬೇಕಾದ ನಿಯಮಗಳೇ ಮುಂತಾದ ಆರ್ಥಿಕ ಪ್ರಶ್ನೆಗಳು; ಶಿಶುಪಾಲನೆ, ವಿವಾಹಕ್ರಮಗಳು, ಆಹಾರ, ಮದ್ಯಪಾನ, ಅಂಗಸಾಧನೆಯೇ ಮೊದಲಾದ ವಿಚಾರಗಳು; ಕೈಗಾರಿಕೆ, ವ್ಯಾಪಾರ, ವಿದ್ಯಾಪ್ರಚಾರವೇ ಮುಂತಾದ ಸಂಗತಿಗಳು, ಹೀಗೆ ಅನೇಕ ವಿಷಯಗಳನ್ನು ಸಂಪೂರ್ಣ ಅಭ್ಯಾಸಿಸಿ ಶೋಧಿಸಲಿಕ್ಕೆ ಅನುಕೂಲವನ್ನು ಒದಗಿಸಬೇಕು. ಅಂಥ ಸಿದ್ಧತೆಯ ಉಪಯೋಗ ಮಾಡಿದವರ ಬೋಧನೆಯನ್ನು ಪತ್ರಿಕೆಯ ರೂಪದಿಂದಾಗಲೀ, ಚಿಕ್ಕ ದೊಡ್ಡ ಗ್ರಂಥಗಳ ದ್ವಾರಿಯಿಂದಾಗಲೀ ಎಲ್ಲರಿಗೂ ಹಂಚಬೇಕು. ಹೀಗೆ ಸಂಘದ ಮೂಲವು ಚಿಕ್ಕದಾಗಿದ್ದರೆ ಅದನ್ನು ಬೆಳ್ಸುಕಾಲ ನಡಿಸುವುದು ಕಷ್ಟವಾಗುವುದಿಲ್ಲ ಕನ್ನಡ ನಾಡಿನ ಶೋಧಕರಿಗೆ ಬೇಕಾದ ಸೌಕರ್ಯಗಳನ್ನು ಒದಗಿಸಿ ಅವರ ಒರೆಗಲ್ಲಿನಲ್ಲಿ ಶುದ್ಧವೆಂದು ಕಂಡು ಬಂದ ಬೋಧನೆಗಳನ್ನು ಕನ್ನಡಿಗರಿಗೆ ದಾನ ಮಾಡಲಿಕ್ಕೆ ಯೋಗ್ಯರಾದ ನಾಲ್ಕಾರು ಮರ್ಯಾದಸ್ಥರನ್ನು ಸಂಘದ ವಿಚಾರಕರ್ತರಾಗಿ ನಿಯಮಿಸ ಬಹುದು. ಸ್ವತಃ ಶೋಧನೆಯನು ಮಾಡಿದವರನ್ನು ಸಂಘದ ಸಭಿಕರೆಂದು ಆರಿಸಬೇಕೆಂದೂ, ಅವರು ಪ್ರತಿವರ್ಷ ಇಂತಿಷ್ಟೇ ವಂತಿಗೆಯನ್ನು ಕೊಡಬೇಕೆಂದೂ ನಿಶ್ಚಯಿಸಬೇಕಾದೀತು.

ಇಂಥ ಅಸ್ತಿವಾದವು ಬಲವಾದ್ದೆಂದು ಕಂಡು ಬಂದ ನಂತರ ಸಂಘದ ಬೋಧನೆಗಳಿಗೆ ಕಾರ್ಯರೂಪವನ್ನು ಕೊಡಲಿಕ್ಕಾಗಿ ಯೋಗ್ಯರಾದವರಿಗೆ ತಕ್ಕ ಶಿಕ್ಷಣ ಕೊಟ್ಟು ಅವರ ಮೂಲಕ ಶಾಲೆಗಳನ್ನೂ ಚಿಕಿತ್ಸಾಗ್ರಹಗಳನ್ನೂ, ಶ್ರಮಜೀವಿಗಳ ಸಂಘವನ್ನೂ ನಡಿಸ ಬಹುದು. ಹೀಗೆ ಕ್ರಮೇಣ "ಸರ್ವೆಂಟ್ಸ ಒಫ್ ಇಂಡಿಯಾ ಸೊಸೈಟಿ" "ರಾಮಕೃಷ್ಣಮಿಶ್ಯನ್" ಮೊದಲಾದ ಸಂಸ್ಥೆಗಳಂತೆಯೇ ನಡಿಸಬಹುದು. ಕನ್ನಡದೇಶದ ಪ್ರತಿಯೊಬ್ಬ ಹಳ್ಳಿಯವನೂ, ಪ್ರತಿಯೊಬ್ಬ ಕೂಲಿಯವನೂ, ನಮ್ಮ ಸೇವಾಸಂಘದ ಮೂಲಕ ಪ್ರತ್ಯಕ್ಷವಾಗಲೀ ಅಪ್ರತ್ಯಕ್ಷವಾಗಲೀ ಸುಖವನ್ನು ಹೊಂದಬೇಕು

ಕರ್ನಾಟಕದಲ್ಲಿ ದಾನಮಾಡುವವರು ಕಡಮೆ ಇರಲಿಕ್ಕಿಲ್ಲ ಆದರೆ ಸೆರೆಯ ನೀರಿನಂತೆ ಈ ಹೊತ್ತು ಒಂದು ರೀತಿ ನಾಳೆ ಅದರ ವಿರುದ್ಧವಾಗದೆ ಒಂದೇ ರೀತಿಯಲ್ಲಿ ಹರಿಯುವ ಹಾಗೆ ಮಾಡಿ ದಾನಿಗಳ ಔದಾರ್ಯವು ಒಳ್ಳೇ ರೂಪದಲ್ಲಿ ಎಲ್ಲರಿಗೆ ಸಿಗುವಂತೆ ಮಾಡಬೇಕು ಇಂಥ ಮಹತ್ಕಾರ್ಯದ "ಶ್ರೀಗಣ" ಹಾಕಲಿಕ್ಕೆ ವಿಪರೀತ ಧನಸಹಾಯವಾಗಲೀ ಸೇವೆಯಾಗಲೀ ಅಗತ್ಯವಲ್ಲ ದತ್ತಿಸ್ವತ್ತು ಮಂದಿ ಶ್ರೀಮಂತರಾದ ದೇಶಾಭಿಮಾನಿಗಳೂ ಅವರ ಬೆಂಬಲಕ್ಕೆ ನೂರು ಇನ್ನೂರು ಮಧ್ಯಮ ತರಗತಿಯ ಧನಿಕರೂ ಇದ್ದರೆ ಸಾಕು ಸುಶಿಗಿಂತ ಶ್ರದ್ಧೆಯ ಅಗತ್ಯ; ಒಂದು ಸಲ ಹಿಡಿದ ಮೇಲೆ ತನ್ನ ಎರಡೇ ಕೈಗಳು ಮಾತ್ರ ಉಪಯೋಗಿಸಿಯಾದರೂ "ಸಾಯುವವರೆಗೆ ಈ ಕೆಲಸ ಬಿಡೆ" ಎಂದು ದವಡೆಗಿ ಹಿಡಿದು ಕೆಲಸ ಮಾಡುವವರೇ ಬೇಕಾದವರು. ಕರ್ನಾಟಕದ ಒಂದೊಂದು ಹಳ್ಳಿಯಿಂದ ಒಬ್ಬೊಬ್ಬರು ತಜ್ಞರು ಮುಂದ ಬಂದು ಸೊಂಟ ಕಟ್ಟಿದರೆ ಪ್ರಾರಂಭಿತ ಕೆಲಸವನ್ನು ಕೋಲಂಕಾರವಾಗಿ ನಿಭಾಯಿಸ ಲಿಕ್ಕೆ ಕಷ್ಟವಿಲ್ಲ.

ಹಿಂದುಸ್ಥಾನ

೧೧ನೇ ತಾರೀಖಿನ ದಿವಸ ಪುಣೆಯ ಕರ್ನಾಟಕ ವಿದ್ಯಾರ್ಥಿಗಳ ಸಂಘದವರು ವಾರ್ಷಿಕ ಸಮ್ಮೇಲನವನ್ನು ನೆರವೇರಿಸಿದರು. ಅಗ್ನ್ಯಾಂಗ್ಲರ ಕಟ್ಟಿಯವರ ಉಪನ್ಯಾಸವಾಯಿತು. ಬೆಳಗ್ಗೆ ಆಟ ನೋಟಗಳೂ ರಾತ್ರಿ ಗಾಯನವೂ ಏರ್ಪಡಿಸಲ್ಪಟ್ಟಿದ್ದವು- ಗಾಯಕರು ಕನ್ನಡಿಗರಿದ್ದರೆ ಚೆನ್ನಾಗಿ ಆಗುತ್ತಿತ್ತು-

ಅದೇ ಭಾನುವಾರ ಸಾಯಂಕಾಲ ಮುಂಬೈಯ ವನಿತಾ ವಿಶ್ರಾಮ ಮಂದಿರದಲ್ಲಿ ಡಾ. ಯೂ ರಾಮರಾಯರು 'ಕರ್ನಾಟಕದ ಏಕೀಕರಣದ ಮೇಲೆ ಮುಂಬೈ ಕರ್ನಾಟಕ ಸಭೆಯ ಪರವಾಗಿ ಉಪನ್ಯಾಸವನ್ನು ಕೊಟ್ಟರು. ಸುಮಾರು ಎರಡುನೂರು ಜನರು ನೆರೆದಿದ್ದರು. ಸಭೆಯ ಕಾರ್ಯವು ಚೆನ್ನಾಗಿ ಸಾಗಿರಬಹುದೆಂಬದಾಗಿ ಪ್ರತಿಯೊಬ್ಬನು ಊಹಿಸಿದರೂ ಕನ್ನಡಿಗರ ಮತ್ತು ಕರ್ನಾಟಕ ಸಭೆಯ ಜೀವಾಳವಾದ ತಾಯ್ನುಡಿಗೆ ಉಪನ್ಯಾಸಗಾರರು ದುರ್ಲಕ್ಷಿಸಿದ್ದು ಮಾತ್ರ ತಕ್ಕದುದಲ್ಲ. ಅದಕ್ಕೆ ಇನ್ನು ಮುಂದಾದರೂ 'ಮುಂಬೈ ಕರ್ನಾಟಕ ಸಭೆಯ' ಮುಂದಾಳುಗಳಾಗಲೀ ಕಾರ್ಯದರ್ಶಿಗಳಾಗಲೀ ಈ ವಿಷಯವಾಗಿ ಜಾಗ್ರತೆಯಾಗಿರಬೇಕಾಗಿ ಬೇಡಿಕೊಳ್ಳುವದು.

ಮುಂಬೈ ಕರ್ನಾಟಕಸ್ಥರಿಗಾಗಿ 'ಮುಂಬೈ ಕರ್ನಾಟಕ ಸಭೆಯವರು ಗಾಮದೇವಿಯಲ್ಲಿ ೬ನೇ ಹಾರ್ವೆರೋಡದಲ್ಲಿ ಒಂದು ವಾಚನಾಲಯವನ್ನು ಹೊಸದಾಗಿ ತೆಗೆದಿರುವರು. ಅಲ್ಲಿ ಸಾಧ್ಯವಿದ್ದಮಟ್ಟಿಗೆ ಕರ್ನಾಟಕ ಪತ್ರಿಕೆಗಳನ್ನು ಸಂಗ್ರಹಿಸಿದ್ದು ಅದರ ಉಪಯೋಗವನ್ನು ಎಲ್ಲ ಕನ್ನಡಿಗರೂ ಹೊಂದಬೇಕಾಗಿ ಅದರ ಕಾರ್ಯದರ್ಶಿಗಳು ಬಯಸುತ್ತಾರೆ.

ಮೋಟಾರ ಡ್ರಾಯವ್ಹಿಂಗ ಕ್ಲಾಸ



ಮೋಟಾರ ಗಾಡಿಗಳನ್ನು ರಿಪೇರಿ ಮಾಡುವ ಬಗ್ಗೆ ಪೂರ್ಣ ಜ್ಞಾನವನ್ನು ಸಂಪಾದಿಸುವದಕ್ಕೂ, ಬೇರೆ ಬೇರೆ ಕಂಪನಿಗಳ ಎಲ್ಲತರಹದ ಮೋಟಾರುಗಳನ್ನು ನಡಿಸಲಿಕ್ಕೆ ಕಲಿಯುವದಕ್ಕೂ, ಅಖಂಡ ಬ್ರಿಟಿಶ್ ಹಿಂದುಸ್ಥಾನದ ಲಾಯಸೆನ್ಸ ದೊರಕಿಸಿ ಮೋಟಾರ ಮೆಕ್ಯಾನಿಕ್ಸ ಆಗುವದಕ್ಕೂ ಇದೊಂದೇ ವಿಶ್ವಸನೀಯವಾದ ಸಂಸ್ಥೆಯು. ವಿದ್ಯಾರ್ಥಿಗಳಿಗೆ ಖಾತ್ರೀಪೂರ್ವಕವಾದ ಶಿಕ್ಷಣವನ್ನು ಕೊಡುವೆವು. ವಿಶೇಷಮಾಹಿತಿ ಸಮಕ್ಷಮ ಅಥವಾ ಪತ್ರ ವ್ಯವಹಾರದಿಂದ.

ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಕ್ಲಾಸ ೬೧೦ ಬುಧವಾರಪೇಠ ಪುಣೆ ಶಹರ.

Sathe's British Sports
Agency Sadashive
Poona City.
Dealers, in Tennis, Football Cricket Hockey Badmington other Games.
Send for our Catalogue.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟೀಟ್ಯೂಶನ್

ಜಮಖಂಡಿಕರ ವಾಡೇ ४६३ ಶನಿವಾರ ಪುಣೇಶಹರ

ರಕ್ತ ಶುದ್ಧಿ ಮತ್ತು ವೀರ್ಯ ವರ್ಧಕ

कडकीचा काढा.

ಇದರ ಸೇವನೆಯಿಂದ ಮೈಯೊಳಗಿನ ಎಂಥ ಹಳೇ ಕಡಕೀ ರೋಗವಿದ್ದರೂ ನಾಶವಾಗುತ್ತದೆ. ಮತ್ತು ಅಶಕ್ತತೆ, ಧಾತುಜಸ್ಯ ವಿಕಾರ, ನಪುಂಸಕತ್ವ, ವೀರ್ಯವು ಮೂತ್ರದೊಂದಿಗೆ ಹೋಗೋಣ, ವೀರ್ಯವು ನೀರಾಗೋಣ. ಇದಲ್ಲದದೆ ಕೈಕಾಲು ಕಣ್ಣು ಮುಂತಾದವುಗಳು ಸೋಯೋಣ, ಹಳೇ ಪರಮೀ ರೋಗ ಮೂತ್ರ ಉರಿಯೋಣ, ಕೀವುಹೋಗೋಣ ಇತ್ಯಾದಿ ಇತ್ಯಾದಿಗಳ ಮೇಲೆ ರಾಮಬಾಣದಂತಿದೆ. ಒಂದು ಡಬ್ಬಿಗೆ ಕಿಂ-೨ ರೂಪಾಯಿ ಒಮ್ಮೇಲೇ ೧೦ ಡಬ್ಬಿಗಳನ್ನು ತರಿಸಿದರೆ ೫ ರೂಪಾಯಿ ಅಂಚೆವೆಚ್ಚ ಬೇರೆ.

ಅನುಭವಬಂದ ನಿಜವಾದ ಔಷಧ.

ಜಂತನಾಶಕ ಪುಡಿ.

ಈ ಪುಡಿಯ ಸೇವನೆಯಿಂದ ಆಗಿಂದಾಗ್ಗೆ ಜಂತುಗಳು ಬೀಳುವವು. ಅನುಭವನೋಡಿರಿ. ಕಿಂ ೧ ಪುಡಿಗೆ ೦-೧-೦ ಆಣೆ ೧೦೦ ಪುಡಿಗಳಿಗೆ ವ್ಹೀಪಿಸಹಳ-೦-೦ ಒಮ್ಮೇಲೇ ೨೦೦ಪುಡಿ ತರಿಸಿದರೆ ೭ ರೂಪಾಯಿ.

ವಿಳಾಸ— ಮೆಸರ್ಸ ಅರ್ಜುನವಾಡಕರ

ವೆಂಕಟರ ಬೆಳಗಾವ

Notice for Tenders.

Sealed tenders are invited for constructing a dispensary at Guledgudd estimating to Rs. 17,839 and will be received by the under signed in his office at Bijapur up to 2 P. M. on 1 st Marrch 1926. A sum of the Rs 500 in curreny notes should accompany the tender as earnest money. Blank forms of tender can be had on payment of Rs. 1 to the Accountant of this office.

The plain of the building is kept in the office and may be seen by the tender, if necessary.

Sd/ S. B. Rege.
Executive Ecgineer.
Bijapur.

ಹೊಟ್ಟೆನೋವು ಹೊಟ್ಟೆನೋವು

ಪೋಟದುಖೀ

ಹೊರಕಡೆಗೆ ಸಾಫ ಆಗದಿರುವದು, ಹೊಟ್ಟೆಯಲ್ಲಿ ಗುರ್ರೆನ್ನುವದು, ಅಜೀರ್ಣ ಆಗುವದು ಭೋಳಿಬರುವದು, ಕಣ್ಣು ಕತ್ತಲೆಗಡಿಸುವದು, ಕರಳಿನಲ್ಲಿನೀರು ಹಿಡಿಯುವದು, ವಾಯುವಿನಿಂದ ಮತ್ತುವಾಫಿನಿಂದ ಹೊಟ್ಟೆಯಲ್ಲಿ ಗ್ಯಾಸ್(Gas)ಆಗಿ ಹೊಟ್ಟೆಶೂಲಿ, ಹೊಟ್ಟೆಯುಬ್ಬುವದು, ಇತ್ಯಾದಿ ಹೊಟ್ಟೆಯಸಂಭಂಧವಾದ ಎಲ್ಲಬಗೆಯ ಹೊಸಹಳೇ ವಿಕಾರಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣ ಹೊಂದುವವು. ಇದಲ್ಲದೆ ಹೊಟ್ಟೆಯೊಳಗಿನ ಎಲ್ಲ ವಿಕಾರಗಳಿಗೂ

ಸೋಹೋನಿ ಇವರ ಪೋಟದುಖೀ

ಯು ಖಾತ್ರಿಯ ಮತ್ತು ರಾಮಬಾಣ ಔಷಧವಿದೆ. ಬಾಟ್ಲಿಯೊಂದಕ್ಕೆ ರೂ ೨॥ ಟಪಾಲ ಖರ್ಚ ಬೇರೆ.

ಪ್ರಮಾಣ- ಪ್ರತಿಯೊಂದು ಸಲ ೨ ಗುಳಿಗೆ ಮಧ್ಯಾಹ್ನದ ಮತ್ತು ರಾತ್ರಿಯ ಊಟವಾದಮೇಲೆ ಒಂದು ಗುಟಕು ನೀರಿನಲ್ಲಿ ತೆಗೆದು ಕೊಳ್ಳಬೇಕು.

ವಿಶೇಷ ಸೂಚನೆ ಪತ್ರ ವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಿಳಾಸ— ಪಿ. ಎಸ್. ಸೋಹೋನಿ ಬೇಲ ಬಾಗದ ಹತ್ತರ ೨೩೪ ಬುಧವಾರ ಪೇಟ ಪುಣೆ ಶಹರ

ಪೋರವಾಲ ಬ್ರ್ಯಾಶ ಟೂಥ್ ಪಾವಡರ

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ, ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ಬೇರೆ ಬೇರೆ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ- ೫ ಆಣೆ. ಟ. ಖ. ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜೆಂಟರು ಬೇಕು.

ಪೋರವಾಲ ಬ್ರ್ಯಾಂಡ ಕೊ.

(ರಜಿಸ್ಟರ್ಡ) ಪುಣೇಶಹರ

ಕ್ಷಯ, ಕಿವಿಸೋರುವದು, ಹೊರೆಯುವದು, ಡಬ್ಬಿ ಹಾಕುವದು, ಕೀವು ರಕ್ತ ಬರುವದು, ಸಪ್ಪಳ ಆಗುವದು, ಕಡಿಮೆ ಕೇಳಿಸುವದು, ತಿಂಡಿ, ಇತ್ಯಾದಿಗಳ ಮೇಲೆ ರಾಮಬಾಣ ಟ. ಖ- ಸಹ ೧ ಬಾಟ್ಲಿಗೆ ೨।= —Dr. w. N. Dixit.

Poona city

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು...............ನೂರಕ್ಕೆ ವರ್ಷಕ್ಕೆ			$2\frac{1}{2}$
ಸೇವ್ಹಿಂಗ್ಸ ಬ್ಯಾಂಕ ಠೇವು	”	”	$4\frac{1}{2}$
ಮುದ್ದತೀ ಠೇವು ೬ ತಿಂಗಳಿಗೆ	”	”	೬
” ೧೨ ತಿಂಗಳಿಗೆ	”	”	7.

ವಾರಲೋನ ವಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರುನಿತ್ಯಂ ನಿಜದೇಶಸೇವನಂ।

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೫ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿನ ಸಾಯಂಕಾಲದ ೫-೩೦ ಗಂಟೆಗೆ; ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿಟೀ ಮ್ಯಾಜಿಸ್ಟ್ರೇಟರಾದ ಶ್ರೀ. ಬಿ. ಬಸವಾರಾಧ್ಯ ಬಿ. ಎ. ಬಿ. ಎಲ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ೧೦೦೦ ರೂ. ಸಾಲವು ದೊರೆಯ ಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೧೧೬೦೨ ಶ್ರೀ. ಆರ್. ಜಿ. ಮುಕ್ಕೇರಿ. ಬುಕ ಸೇಲರ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೪೫ ಶ್ರೀ. ದೀರಜರಾಮ ನಾರಭಿರಾಮ ನಾಯಿಕ ಕಂಪಾವುಂಡರ, ಆಲಪಾಡ ದವಾಖಾನೆ ಪಾಯ, ನಯಾನ. ಬಿಬಿ. ಸಿ. ಆಯ ರೇಲ್ವೇ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೫೬೭ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಲಾ.

(೪) ಬಾಂಡ ನಂ. ೧೭೬ ಶ್ರೀ. ನಂದಗಿರಿ ವೆಂಕಟರಾಮ ದಾಸ ಪ್ರೊಪ್ರಾಯಿಟರ ಮುಕುಂದ ಪುರ. ಕಾಕಿನಾಡು

(೫) ಬಾಂಡ ನಂ. ೪೩೮ ಶ್ರೀ. ಆರ್. ವೆಂಕಟಯ್ಯಾ ಗುರು ಇನಾಮದಾರ ಭೋಪಯ್ಯಾ ಅಗ್ರಹಾರ ಅಮಳ ಪುರಮ್.

೧-೮-೨೫ { **ಬಿ. ಎನ್. ಆರಾಧ್ಯ**
ಚೀಫ ಏಜಂಟ ಹುಬ್ಬಳ್ಳಿ

ಜಾಹೀರ ನೋಟೀಸು.

ಬಾಗೇವಾಡಿ ತಾಲೂಕ ಲೋಕಲ ಬೋರ್ಡ ಮೆಂಬರರ ಪೈಕಿ ಮಿ॰ ಕೃಷ್ಣರಾವ ಭೀಮರಾವ ಬಮ್ಮಣಗಿ (ಹೆಬ್ಬಾಳ) ಗ್ರೂಪ ರಾಜೀನಾಮೆ ಕೊಟ್ಟ ಮೂಲಕಾ ಲೊ. ಬೋ. ಆಕ್ಟ ಕಲ್ಮ ೩೩ ನೇ ಪ್ರ॥ ಈ ಗ್ರೂಪಿನ ಬಗ್ಗೆ ಮತ್ತೆ ಚುನಾವಣೆ ಮಾಡಲ್ಪಡುವದು.

ಚುನಾವಣೆ ತಾರೀಖು ವೇಳ್ಯ ಮತ್ತು ಸ್ಥಳಗಳ ಸಂಬಂಧ ಬೇಕಾಗುವ ಎಲ್ಲ ಮಾಹಿತಿ ಕೆಳಗೆ ತೋರಿಸಿದ ಪ್ರ। ಪ್ರಸಿದ್ಧ ಮಾಡಿರುತ್ತದೆ.

ಚುನಾವಣೆ ತಾರೀಖು	೧೨-೪-೧೯೨೬
ಉಮೇದ್ವಾರರ ಅರ್ಜಿಗಳನ್ನು ಸ್ವೀಕರಿಸುವ ಕಡೆಯ ತಾರೀಖು	೨೭-೨-೨೬
ಉಮೇದ್ವಾರರ ಅರ್ಜಿಗಳ ತಪಾಸಣಿ	೧-೩-೨೬ ಮಧ್ಯಾನ್ಹ ೨ ರಿಂದ ೫ ವರೆಗೆ
ಮತಕೊಡುವದು.	೧೨-೪-೨೬

ಸ್ಟಾಂಡರ್ಡ ಟಾಯಿಮ ಮುಂಜಾನೆ ೭ ಘಂಟೆಯಿಂದಾ ೧೧॥ ಘಂಟೆಯವರೆಗೆ ಮತ್ತು ಮಧ್ಯಾಹ್ನದಲ್ಲಿ ೧ಘಂಟೆಯಿಂದಾ ಸಂಜೆಯ ೫॥ ಘಂಟೆಯವರೆಗೆ.

ಮತಗಳನ್ನು ಎಣಿಸುವದು -೧೫-೪-೨೬.

ಟೀಪು:- ಈ ಗ್ರೂಪಿನ ಬಗ್ಗೆ ಪ್ರಸಿದ್ಧಿಸಿದ ಮತದಾರರ ಪತ್ರಿಕೆಯಲ್ಲಿ ನಮೂದಿಸಿದ ಮತದಾರರಿಗಷ್ಟೇ ಮತಕೊಡಲಿಕ್ಕೆ ಬರುವದು. ಎರಡನೇ ಗ್ರೂಪಿನ ಮತದಾರರಿಗೆ ಈ ಗ್ರೂಪಿನಲ್ಲಿ ಮತ್ತು ಕೊಡಲಿಕ್ಕೆ ಬರುವದಿಲ್ಲ.

Collector of Bijapur.

ಕಣ್ಣಿನ ಔಷಧ

ಹೂವು, ಮೋತಿಬಿಂದು, ದೃಷ್ಟಿ ಮಾಂದ್ಯ, ಕಂಣುಜಿಟ್ಲ, ಕಣ್ಣು ಬರೋಣ, ಕೆಂಪಾಗೋಣ, ಮತ್ತು ಗುಡ್ಡಿ ರೆಪ್ಪಿ ಬಕ್ಕಿಗಳ ವಿಕಾರಗಳ ಇಂತಹ ಕಂಣಿನ ಎಲ್ಲ ಬೇನೆ ಗಳಿಗೆ ಈ ಔಷಧವು ಸಂಜೀವಿನಿಯೋ ಶಸ್ತ್ರಕ್ರಿಯೆಗಿಂತಲೂ ಮೇಲು! ರಾ. ಬ. ಪೆಂಡಸೆ- ಡಿ. ಡಿ. ಕಲೆಕ್ಟರ ಅನ್ನುತ್ತಾರೆ “ಅನೇಕರಿಗೆ ಈ ಔಷಧ ಕೊಟ್ಟ ಗುಣದ ಬಗ್ಗೆ ಖಾತ್ರಿಯಾಯಿತು ಮಗಳ ಕಂಣುಗಳು ನೆಟ್ಟಗಾದವು” ಎಂಥ ರೋಗಕ್ಕೂ ಎರಡೇ ಪಾತ್ರೆ ಪಾತ್ರೆಯೊಂದಕ್ಕೆ ರು ೧॥ ಟ ಖ ಬೇರೆ.

ಸೂಚನೆ: -ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಾ. ವಿ. ಕರಮರಕರ ೫೩೦ ಶನಿವಾರ ಪುಣೆಶಹರ

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ನೋ. ಸಿ. ೧೯೪೭ ವಾ. ಚಂದಾ ೧—೮—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

[illegible] ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಂದುರ ಮುಳ್ಳಗಾಡ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟೆ ಬುಧವಾರ ಮಿತಿ- ಫಾಲ್ಗುಣ ವದ್ಯ ೧೪ ಶಕೆ ೧೮೪೭. ತಾ. ೨೮-೩-೧೯೨೬. | ಸಂಚಿಕೆ ೪೭

ಸಂಪಾದಕರ ಭೂಮಿಕೆ.

(*)

ನನ್ನ ಮನಸಿನ ವೀಣೆಯಾದಿ ಕಟ್ಟುವೆನಾನು ।
ನಿನ್ನ ಬೆಸಸಿನ ಮಾಣಿಕದಂಥ ಮುಕ್ಕಳ ದೊನ್ನು ।
ಚಿನ್ನದಾದರು ಚೆನ್ನ ವೀಣೆಬಟ್ಟೆಯು ನೊಂದು
ಚಿನ್ನಯೂಕಾಶದಲ್ಲಿ ॥
ನನ್ನ ಜೀವವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬದ
ಗಂಧವಹವೆಂದು ತಿಳಿಯು ॥

---ಅಂಜಲಿಕಾತನಯ ದತ್ತ

ಪ್ರತ್ಯೇಕ ಕರ್ನಾಟಕ ಪ್ರಾಂತದ ಬಗ್ಗೆ ನಾಮದಾರ ಮೂ. ರಾಮರಾಯರು ದಿಲ್ಲಿಯ “ಕೌನ್ಸಿಲ್ ಆಫ್ ಸ್ಟೇಟ” ದಲ್ಲಿ ತಂದ ಠರಾವು ಸ್ವೀಕೃತವಾಗಲಿಲ್ಲ. ಏಕೀಕರಣದ ಪ್ರಶ್ನೆಯನ್ನು ಆಳವಾಗಿ ವಿಚಾರಿಸಿ, ಆ ಬಗ್ಗೆ ಸರಕಾರದ ಕಾಯದೇ ಕಾನೂನುಗಳನ್ನೆಲ್ಲ ಓದಿ, ಮನನ ಮಾಡಿ, ಮುಂದೆ ಮಾರ್ಗವನ್ನು ನಿಶ್ಚಯಿಸುವದು ನಮ್ಮ ಮುಖಂಡರಿಂದ ಇನ್ನೂ ಆಗಲೊಲ್ಲದು. ಈ ಪ್ರಶ್ನೆಯ ಬಗ್ಗೆ ಮೊದಲು ಜನರಲ್ಲಿ ಸಾಕಷ್ಟು ಜಾಗೃತಿಯಾಗಬೇಕು. ಮುಂಬಯಿ, ಮದ್ರಾಸ, ಮತ್ತು ಕೊಡಗು ಪ್ರಾಂತಗಳ ಕಾಯದೇ ಮಂಡಲಗಳಲ್ಲಿ ಈ ಠರಾವು ತೀರ್ಮಾನವಾಗಬೇಕು. ಕಡೆಗೆ ದಿಲ್ಲಿಯ ಮಂಡಲಗಳಲ್ಲಿ ಚರ್ಚೆಯಾಗಬೇಕು. ಮುಂಬಯಿ ಮಂಡಲದಲ್ಲಿ ಈ ಪ್ರಶ್ನೆಯು, ಕಾರ್ಯಕ್ರಮದಲ್ಲಿ ಅನೇಕ ಸಲ ಬಂದಿದ್ದರೂ ಅದರ ಮೇಲೆ ವಾದ ವಿವಾದವು ಈ ವರೆಗೂ ಜರುಗಿಯೇ ಇಲ್ಲ. ಇತ್ತ ಮದ್ರಾಸ, ಕೊಡಗು ಮಂಡಲಗಳಲ್ಲಿಯ ಕರ್ನಾಟಕ ಪ್ರತಿನಿಧಿಗಳಿಗೆ ಈ ಬಗ್ಗೆ ಅಷ್ಟೊಂದು ಕಳಕಳಿಯಿಲ್ಲ. ಆದುದರಿಂದಲೇ ಸಧ್ಯದಲ್ಲಿ ಮೂ. ರಾಮರಾಯರು ತಂದ ಠರಾವು ನಿರಾಕರಿಸಲ್ಪಟ್ಟಿತು. ಮದ್ರಾಸ, ಕೌನ್ಸಿಲ'ದಲ್ಲಿ ಈ ವಿಚಾರವನ್ನು ಶ್ರೀ. ರಾಮರಾಯರು ತಾವಲ್ಲಿರುವಾಗ ಎತ್ತಲೇಯಿಲ್ಲ. ಮತ್ತು “ಕೌನ್ಸಿಲ್ ಆಫ್ ಸ್ಟೇಟ” ದಲ್ಲಿ ತರುವ ಮೊದಲು ಜನರಲ್ಲಿ ಈ ಬಗ್ಗೆ ಜಾಗೃತಿಯನ್ನುಂಟು ಮಾಡಲಿಕ್ಕೂ ಪ್ರಯತ್ನಿಸಲಿಲ್ಲ. ಅಂತೆಯೇ ಅವರ ಠರಾವಿಗೆ ತಗ್ಗಿ ಈ ಬಗೆಯ ಅನಾದರವು ತೋರಿಸಲ್ಪಟ್ಟಿತು. ಡಾಕ್ಟರರು ಕರ್ನಾಟಕದ ಅಭಿಮಾನಿಗಳು; ಶ್ರೀಮಂತರು; ಸಾರ್ವಜನಿಕ ಕಾರ್ಯಗಳನ್ನು ಹೇಗೆ ಸಾಧಿಸಬೇಕೆನ್ನುವವರಲ್ಲಿ ನುರಿತವರು. ಆದ್ದರಿಂದ ಇನ್ನು ಮೇಲಾದರೂ ಈ ಏಕೀಕರಣದ ವಿಷಯವಾಗಿ ಸುವ್ಯವಸ್ಥಿತವಾದ ಚಳವಳವನ್ನು ಕರ್ನಾಟಕದಲ್ಲಿ ಮೊದಲು ಹೂಡಿ ಜನರು ಏಕೀಕರಣವನ್ನು ಸರ್ವಾನುಮತದಿಂದ ಬಯಸುವಂತೆ ಮಾಡಿದರೆ ಕರ್ನಾಟಕವು ಅವರಿಗೆ ಋಣಿಯಾಗುವದು.

ರಾಷ್ಟ್ರೀಯ ಸಭೆಯ ಸದ್ಯಸ್ಥಿತಿಯು ಉತ್ಸಾಹಜನಕವಾಗಿರುವದಿಲ್ಲವೆಂದು ಹೇಳಬಹುದು. ಕಾನಪೂರದಲ್ಲಿಯ ಅಧಿವೇಶನವು ತೀರಿಹೋಗಿ ಈಗ್ಗೆ ಎರಡು ತಿಂಗಳುಗಳು ಕಳೆದು ಹೋದವು. ಇನ್ನೂ ರಾಷ್ಟ್ರೀಯ ಸಭೆಯ ಸಂದೇಶವನ್ನು ಹಳ್ಳಿ ಹಳ್ಳಿಗಳಿಗೆ—ಏಕೆ ಶಹರಗಳಿಗೆ—ಸಹ ಮುಟ್ಟಿಸುವ ಕಾರ್ಯವನ್ನು ಮುಂದಾಳುಗಳು ಪ್ರಾರಂಭಿಸಿರುವದಿಲ್ಲವೆಂಬದು ಖೇದಜನಕವಾಗಿದ್ದರೂ ಈಗಲಾದರೂ ಆಂಧ್ರ, ತಮಿಳನಾಡು ಪಂಜಾಬ ಪ್ರಾಂತಿಕ ಕಮೀಟಿಗಳು, ಆ ಕಾರ್ಯವನ್ನು ಪ್ರಾರಂಭ ಮಾಡುವದು ಆನಂದದ ಸಂಗತಿಯು. ಕರ್ನಾಟಕ ಪ್ರಾಂತಿಕ ಕಮೀಟಿಯವರಾದರೂ ಈ ಬಗ್ಗೆ ನಿರ್ಣಯವನ್ನು ಮಾಡಿರುವರಾದರೂ ಮುಂದಾಳುಗಳ ಪ್ರವಾಸವು ಪ್ರಾರಂಭವಾಗದ ಹೊರತು ಕಾರ್ಯಕ್ಕೆ ಪ್ರಾರಂಭವಾಗಿದೆಯೆಂದು ಹೇಳಲು ಬರುವಂತಿಲ್ಲ. ಅದರ ಬಗ್ಗೆ ವಿಚಾರ ಮಾಡಿದರೆ ರಾಷ್ಟ್ರೀಯ ಸಭೆಯು ತೇಜವು ೧೯೨೦ರಲ್ಲಿಯಂತೆ ಜನರಲ್ಲಿ ತೋರುವದಿಲ್ಲವೆಂದು ಹೇಳಬಹುದು. ಮುಂಬಯಿ ಇಲಾಖೆಯಲ್ಲಿಯ ವಿಶ್ವವಿದ್ಯಾಲಯದ ಕಡೆಯಿಂದ ರಾಷ್ಟ್ರೀಯಸಭೆಯ ಉಮೇದವಾರರಾದ ಡಾ. ದೇಶಮುಖರು ಚುನಾವಣೆಯಲ್ಲಿ ಆರಿಸಿ ಬರಲಿಲ್ಲವೆಂಬದು, ರಜಿಸ್ಟ್ರೇಶನ್ ಆಫೀಸಿನಲ್ಲಿ ಬಂಗಾಲ ಅರ್ಜಿಗಳನ್ನು ಚಿಲ್ಲನ್ನು ರದ್ದು ಪಡಿಸುವ ಕುರಿತಾಗಿ ಅಮರನಾಥ ದತ್ತರು ತಂದ ಸೂಚನೆಯು ಮಂಜೂರಾಗದೆ ಬಿದ್ದದ್ದು ಮುಂತಾದವುಗಳೆಲ್ಲ ಕೌನ್ಸಿಲುಗಳನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ರಾಷ್ಟ್ರಸಭೆಯು ಬಹುಮತದಿಂದ ನಿರ್ಣಯ ಮಾಡಿದ ಮೇಲೆ ಆ ನಿರ್ಣಯವನ್ನು ಅಮಲಿನಲ್ಲಿ ತರುವದಕ್ಕೆ ಎಲ್ಲ ಕಡೆಯಿಂದಲೂ ಜೋರಿನಿಂದ ಪ್ರಯತ್ನವು ನಡೆಯಬೇಕು. ರಾಷ್ಟ್ರೀಯ ಸಭೆಯಂಥ ಮಹತ್ವದ ಸಂಸ್ಥೆಯ ಬೆಂಬಲವಿದ್ದ ಪ್ರತಿಯೊಬ್ಬ ಉಮೇದವಾರನು ಚುನಾವಣೆಯಲ್ಲಿ ಆರಿಸಿ ಬರಲಿಕ್ಕೆ ಬೇಕು. ರಾಷ್ಟ್ರೀಯ ಸಭೆಯ ಕಡೆಯಿಂದ ಆರಿಸಿ ಬಂದ ಪ್ರತಿಯೊಬ್ಬ ಕೌನ್ಸಿಲ ಸಭಾಸದನು ಕೌನ್ಸಿಲದ ಪ್ರತಿಯೊಂದು ಅಧಿವೇಶನದಲ್ಲಿ ತಪ್ಪದೆ ಹಾಜರ ಇರತಕ್ಕದ್ದು. ಅಮರನಾಥ ದತ್ತರ ಸೂಚನೆಯು ನಾಪಾಸಾಗಿದ್ದಕ್ಕೆ ಎಷ್ಟೋ ಸಭಾಸದರು ಸಭೆಗೆ ಬಂದಿದ್ದಿಲ್ಲವೆಂಬದೇ ಕಾರಣವೆಂಬದನ್ನು ಲಕ್ಷ್ಯದಲ್ಲಿಡತಕ್ಕದ್ದು. ಹೀಗಾಗುವದಕ್ಕೆ ಮುಖ್ಯವಾಗಿ ಎರಡು ಕಾರಣಗಳಿರುವವೆಂದು ನಮಗೆ ಅನಿಸುತ್ತವೆ. ಮುಂದಾಳುಗಳಲ್ಲಿ ಮತಭೇದ, ಕಾರ್ಯ

ವಾಹಕರ ಕೊರತೆ ಇವೇ ಎರಡು ಆ ಮುಖ್ಯ ಕಾರಣಗಳು. ಮತಭೇದ ಪ್ರಶ್ನೆಯು ಬಿಕ್ಕಟ್ಟಿನದಿದ್ದು ಬಿಡಿಸಲು ಸಾಧ್ಯವಿಲ್ಲ. ಮತಭೇದಗಳನ್ನೆಲ್ಲ ಮುಂದೂಗೆದು ಎಲ್ಲರನ್ನು ಒಂದು ಗೂಡಿಸುವಂಥ ಕಾರ್ಯಕರ್ತನು ಇಲ್ಲದಂತಾಗಿದೆ. ಮಹಾತ್ಮಾಜಿಯವರಿಗೆ ಕೌನ್ಸಿಲಗಳಲ್ಲಿ ವಿಶ್ವಾಸ ವಿಲ್ಲದ್ದರಿಂದ ಅವರು ಈ ವಿಚಾರದಲ್ಲಿ ಏನೂ ಭಾಗ ತೆಗೆದು ಕೊಳ್ಳದೆ ಖಾದಿಯ ಪ್ರಸಾರದಲ್ಲಿಯೇ ತಮ್ಮ ಕಾಲವನ್ನು ಕಳೆಯ ಹತ್ತಿರುವರು ಅವರ ವಿಷಯಕ್ಕೆ ಜನರಲ್ಲಿದ್ದ ಅಭಿಮಾನವನ್ನು ಕುಂದಿಸುವದಕ್ಕೆ ಕೆಲ ಕುತ್ಸಿತ ಟೀಕಾಕಾರರು ತಮ್ಮ ಆಟವನ್ನು ಹಾಗೆಯೇ ಸಾಗಿಸಿದ್ದರೂ ಮಹಾತ್ಮರು ಆ ಬಗ್ಗೆ ಏನೂ ಲಕ್ಷಿಸದೆ ಖಾದಿಯ ಕಾರ್ಯವನ್ನು ಕೈಕೊಂಡು ಅದರ ಪ್ರಸಾರವು ಹೇಗೆ ಆದೀತೆಂಬ ಯೋಜನೆಯಲ್ಲಿರುವರು. ಆದ್ದರಿಂದ ಕೌನ್ಸಿಲದ ಎಲ್ಲ ಭಾರವು ಪಂಡಿತ ಮೋತೀಲಾಲರ ಮೇಲೆಯೇ ಬಿದ್ದದೆ. ಅವರಿಗೆ ಲಾಲಾಜಿಯವರು ನೆರವಾಗಿರುವರು. ಪಂಡಿತರ ವರ್ಚಸ್ವವನ್ನೂ ಕುಗ್ಗಿಸಬೇಕೆಂಬದಾಗಿ ನಮ್ಮ ಪ್ರತಿಯೋಗೀ ಸಹಕಾರಿತಾವಾದಿಗಳು ಪ್ರಯತ್ನಿಸ ಹತ್ತಿರುವರು. ಇಂಥ ಪರಿಸ್ಥಿತಿಯಲ್ಲಿ ಸಹಕಾರ್ಯವನ್ನು ಮಾಡಿದರೆ ರಾಷ್ಟ್ರೀಯ ಸಭೆಗೆ ಯಶಸು ದೊರೆಯುವದರಲ್ಲಿ ಸಂದೇಹವಿಲ್ಲ. ರಾಷ್ಟ್ರೀಯ ಸಭೆಯ ವಿಷಯವಾಗಿ ಜನರಲ್ಲಿ ಆದರವು ಸ್ವಲ್ಪ ಕಡಿಮೆಯಾಗಿದ್ದರೂ ಇನ್ನೂ ನಷ್ಟವಾಗಿಲ್ಲ ಆದ್ದರಿಂದ ಯೋಗ್ಯ ಕಾರ್ಯವಾಹಕರನ್ನು ನಿಯಮಿಸಿ ರಾಷ್ಟ್ರೀಯ ಸಭೆಯ ರಣಭೇರಿಯನ್ನು ಎಲ್ಲ ಕಡೆಗೆ ಕೇಳಿಸುವಂತೆ ಹೊಡೆಯುವ ಏರ್ಪಾಟನ್ನು ಮಾಡಿ ಜನರಲ್ಲಿ ನವ ಜಾಗೃತಿಯನ್ನು ಉಂಟುಮಾಡಬೇಕೆಂದು ಮುಂದಾಳುಗಳಲ್ಲಿ ಪ್ರಾರ್ಥನೆಯಿದೆ. ಇನ್ನು ಕಾರ್ಯ ನಿರ್ವಾಹಕರ ಕೊರತೆ ಯಾವದೇನೋ ನಿಜ ರಾಷ್ಟ್ರೀಯ ಸಭೆಯ ಕಾರ್ಯದಲ್ಲಿಯೇ ಹಗಲಿರುಳು ತೊಡಕಿರುವಂಥ ಕಾರ್ಯವಾಹಕರು ಇಲ್ಲದ ಹೊರತು ಈ ಕಾರ್ಯವು ಅಷ್ಟು ಸುರಳಿತವಾಗಿ ಸಾಗಲಾರದು. ಹಳ್ಳಿಹಳ್ಳಿಗಳಲ್ಲಿ ತಿರುಗಾಡಿ ರಾಷ್ಟ್ರೀಯ ಸಂದೇಶವನ್ನು ಜನರಿಗೆ ತಿಳಿಸಿ ಹೇಳಿ ಅವರಲ್ಲಿ ರಾಷ್ಟ್ರೀಯ ಸಭೆಯ ವಿಷಯವಾಗಿ ಆದರವು ನೆಲೆಗೊಳ್ಳುವಂತೆ ಮಾಡುವ ಯೋಗ್ಯತೆಯುಳ್ಳ ಕಾರ್ಯವಾಹಕರು ಬೇಕು. ಅಂಥವರಿಗೆ ರಾಷ್ಟ್ರೀಯ ಸಭೆಯಿಂದ ವೇತನವನ್ನು ಕೊಟ್ಟರೂ ಚಿಂತೆಯಿಲ್ಲ. ವೇತನವಿಲ್ಲದೆ ಕಾರ್ಯಮಾಡುವಂಥ ಜನರು ದೊರೆತರಂತೂ ನೆಟ್ಟಗೆ, ಆದರೆ ಇಂಥವರು ದೊರೆಯುವದಿಲ್ಲವೆಂದು ಸುಮ್ಮನೆ ಕುಳಿತು ಪ್ರಯೋಜನವಿಲ್ಲ. ಯೋಗ್ಯರೀತಿಯಿಂದ ಕಾರ್ಯವನ್ನು ನಡಿಸಿದರೆ ಇಂಥ ಕಾರ್ಯವಾಹಕರ ಹೊಟ್ಟೆಗೆ ಬೇಕಾಗುವ ವೇತನವನ್ನು ಕೊಡದೆ ಇರುವಷ್ಟು ಹಿಂದೀ ಜನರು ಕೃತಘ್ನರಿರುವರೆಂದು ನಮಗೇನೂ ಅನಿಸುವದಿಲ್ಲ. ಆದ್ದರಿಂದ ಮುಂದಾಳುಗಳು ಯೋಗ್ಯ ಕಾರ್ಯವಾಹಕರನ್ನು ಕಲೆಹಾಕಿ ಬೇಗನೇ ಕಾರ್ಯಪ್ರವೃತ್ತರಾಗಬೇಕೆಂದು ಪುನಃ ನಾವು ಅಂಗಲಾಚಿ ಬೇಡಿಕೊಳ್ಳುತ್ತೇವೆ.

ಈಗಿನಯುಗವೆಂದರೆ ಪ್ರಜಾಶಕ್ತಿಯ ಯುಗವು. ಪ್ರಜಾಶಕ್ತಿಯೆಂದರೆ ಒಂದು ಪ್ರಕಾರದ ಸಮಾಜಸಂಘಟನೆಯು. ವ್ಯಕ್ತಿಗಳ ಕೂಟವೇ ಸಮಾಜವು. ಪ್ರತಿಯೊಂದು ವ್ಯಕ್ತಿಯ ಆತ್ಮವಿಕಾಸಕ್ಕೆ ಅನುಕೂಲತೆಗಳನ್ನು ಮಾಡಿಕೊಡುವದರಿಂದಲೇ ಸಮಾಜದ ಹಿತವು ಸಾಧ್ಯವಾಗುವುದು. ಇಂತಹ ಅನುಕೂಲತೆಗಳಲ್ಲಿ ಮುಖ್ಯವಾದುದು ಶಿಕ್ಷಣವು. ಸದ್ಯದ ಶಿಕ್ಷಣದಲ್ಲಿ ಸಮಾಜಸೇವೆಯ ಗುರತೇ ಇಲ್ಲ. ಅದು ಸಮಾಜ ಹಿತಕ್ಕಾಗಿ ಏರ್ಪಟ್ಟಿಲ್ಲ; ಪ್ರಜಾಸತ್ತೆಯ ಆದರ್ಶವು ಅದರೊಳಗಿರುವದಿಲ್ಲ. ಇನ್ನು ಸಮಾಜಹಿತದ ಬುದ್ಧಿಯುತ್ಪನ್ನವಾಗುವಂತೆ ಶಿಕ್ಷಣದಲ್ಲಿ ಏರ್ಪಾಟಾಗಬೇಕು. ಹೊಸಸಮಾಜವು ಉದಯವಾಗಿದೆ. ಅದಕ್ಕೆ ತಕ್ಕಂತೆ ಅದರಲ್ಲಿ ಮಾರ್ಪಾಟಾಗಲೇಬೇಕು. ಈಗಿನ ಶಿಕ್ಷಣದಲ್ಲಿ ಬುದ್ಧಿಯ ಬೆಳವಣಿಗೆಗಷ್ಟೆ ಅನುಕೂಲತೆಯಿದೆ; ಕೈಗಾರಿಕೆಗೆ ಎಡೆಯಿಲ್ಲ. ಅದರಿಂದ ಮನುಷ್ಯನ ವಿಕಾಸವು ಏಕದೇಶೀಯವಾಗಿದೆ. ಬುದ್ಧಿಯ ಬೆಳವಣಿಗೆಯೊಡನೆ ಕಲಾಕೌಶಲ್ಯದ ಏಳ್ಗೆಯಾಯಿತೆಂದರೆ, ಸಮಾಜದ ಉನ್ನತಿಯು ಸರ್ವತೋಮುಖಸುಂದರವಾಗುವುದು. ಮಹಾತ್ಮಾಗಾಂಧಿಯವರು ಈ ತತ್ವವನ್ನವಲಂಬಿಸಿಯೆ ರಾಷ್ಟ್ರೀಯ ಶಿಕ್ಷಣದಲ್ಲಿ ನೂಲುವ ಅತ್ಯಾವಶ್ಯಕವೆಂದು ನಿಯಮಿಸಿ ಬಿಟ್ಟರು. ನೂಲುವದರಲ್ಲಿ ಅಡಕವಾಗಿರುವ ತತ್ವವು ಬಹಳ ಹಿತಕರವಾದುದೂ, ಸುಂದರವಾದುದೂ ವ್ಯಾಪಕವಾದುದೂ ಇರುತ್ತದೆ. ಮೊನ್ನೆ ಮೊನ್ನೆ ಸಾ॥ ತದಲ್ಲಾದ ಮಾಧ್ಯಮಿಕ ಶಿಕ್ಷಕರ ಪರಿಷತ್ತಿನ ಅಧ್ಯಕ್ಷರಾದ ಶ್ರೀ: ವಾಡಿಯಾ ಇವರು (ವಿಲ್ಸನ ಕಾಲೇಜದ ಪಂಡಿತರು) ಹೀಗೆ ನುಡಿದಿದ್ದಾರೆ 'ಶಾಲೆಗಳಲ್ಲಿ ಉದ್ಯೋಗ ಕಲಾಕೌಶಲ್ಯಗಳನ್ನು ಕಲಿಸುವುದು ಬಹಳೇ ಆವಶ್ಯಕವಾದುದು; ಇದರ ಉದ್ದೇಶವು ಬಹಳ ಉದಾರವಾದದು ಇರುತ್ತದೆ ಶಿಕ್ಷಣವು ಜೀವನದ ಸುಖಕ್ಕಾಗಿ ಜೀವನದ ಸೊಗಸು, ಸುಖಸರ್ವಸ್ವವೂ ಪ್ರತಿಯೊಬ್ಬನ ನಿರ್ಮಾಣ ಶಕ್ತಿಯಲ್ಲಿಯೇ ಒಟ್ಟಾಗಿರುವವು. ಈ ದೃಷ್ಟಿಯಿಂದ ನೋಡಿದರೆ ಪ್ರಾಥಮಿಕ ಮಾಧ್ಯಮಿಕ ಶಾಲೆಗಳಲ್ಲಿ ಉದ್ಯೋಗ ಕಲೆಗಳನ್ನು ಕಲಿಸುವುದು ಧರ್ಮವಾಗುವುದು. ಇದರಿಂದ ಹುಡುಗರಲ್ಲಿಯ ವಿಶಿಷ್ಟವಾದ ನಿರ್ಮಾಣಕ ಶಕ್ತಿಯು ಬಯಲಿಗೆ ಬರುವುದು. ಮತ್ತು ಆ ಶಕ್ತಿಯನ್ನು ಬೆಳೆಯಿಸಲು ಪ್ರೋತ್ಸಾಹನಕೊಡಲು ಅನುಕೂಲವಾಗುವುದು. ಅವನು ಬೆಳೆದಂತೆ ಆ ಶಕ್ತಿಯು ಅರಳಿ ಬೆಳೆಯಲು, ತನ್ನ ಪ್ರಭಾವವನ್ನು ತೋರ್ಪಡಿಸಲು ಎಡೆಯು ದೊರೆಯುವದು; ಇದರಲ್ಲಿಯೇ ರಾಟಿಯ ಸುಂದರವಾದ ತತ್ವವು ವ್ಯಕ್ತವಾಗಿದೆ ರಾಟಿಯೊಡನೆ ವೀಣೆಬಾರಿಸುವುದು ಪದ್ಯ ರಚಿಸುವುದು ಮೊದಲಾದವುಗಳನ್ನು ಕವಿಸ್ವಬಾಣ ರಾಟೆಯೆಂದರೆ ಉಚ್ಚಶಿಕ್ಷಣದ ಕೊನೆಯು, ಪ್ರಜಾಸತ್ತೆಯ ಹೆಗ್ಗುರುತು. ಸಮಾಜಸೇವೆಯ ಪರಮಾವಧಿಯು. ಕಲಹಗಳಿಗೆ ಕುಠಾರವು, ಸುಖಶಾಂತಿಗಳ ತಾಯಿಯು ಪ್ರೇಮಸ್ನೇಹಗಳ ಕಿರೀಟವು. ಇದರಿಂದ ಸಮಾಜದ ಕೊರತೆಯು ಅಳಿದು ವ್ಯಕ್ತಿಯ ಜೀವನವು ಸುಖಮಯವಾಗುವುದು.

ಘಟಪ್ರಭಾ ನದಿಗೆ ಬೆಳಗಾವಿ ಜಿಲ್ಲೆಯ ದಡ್ಡಿ ಎಂಬಲ್ಲಿ ಒಡ್ಡು ಹಾಕಿ ಬೆಳಗಾವಿ ವಿಜಾಪೂರ ಜಿಲ್ಲೆಗಳ ಹಾಗೂ, ಉತ್ತರ ಕರ್ನಾಟಕ ಸಂಸ್ಥಾನಗಳಾದ ಕೊಲ್ಹಾಪೂರ, ಮುಧೋಳ ಮೊದಲಾದ ಸಂಸ್ಥಾನಗಳ ಬರ ನಿವಾರಣೆಗಾಗಿ ಕಾಲುವೆಗಳನ್ನು ಹಾಕಬೇಕಾಗಿ ಸರಕಾರದವರು ೧೯೦೮ ನೇ ಇಸ್ವಿಯಿಂದ ವಿಚಾರಮಾಡಿ, ಕಡೆಗೆ ಅದು ಶಕ್ಯವಿಲ್ಲೆಂದು ಈಗ್ಗೆ ಪ್ರಕಟಮಾಡಿದ್ದಾರೆ! ಈ ೧೬ ವರ್ಷಗಳಲ್ಲಿ ಅವರಿಗೆ ಈಗ್ಗೆ ತೋರಿಸಿದ ವಿಚಾರಗಳು ಹೇಗೆ ಹೊಳೆಯಲಿಲ್ಲವೋ ತಿಳಿಯದು. ಹಣ ಹಾಗೂ ಕಾಲದ ವ್ಯರ್ಥ ದುರುಪಯೋಗವಾದಂತಾಗಿದೆ. ಸಂಸ್ಥಾನಗಳ ಸಂಗಡ ಸಂಬಂಧವನ್ನು ಕೂಡುವದು ಕಠಿಣವಾದದ್ದೊಂದು ಕೆಲಸವಂತೆ. ಅದೇ ಪ್ರಕಾರವಾಗಿ ಹಳ್ಳಿಗಳು ಮುಳುಗುವದು; ಫಲವತ್ತರವಾದ 'ಭತ್ತದಗದ್ದೆಗಳು ನೀರಪಾಲಾಗುವದ; ಇವೇನು ಅಕಸ್ಮಾತ್ತಾಗಿ ಫಕ್ಕೆಂದು ಎದರು ಬಂದು ನಿಂತ ವಿಷಯಗಳಲ್ಲ! ಮೊದಲಿನಿಂದಲೂ ಇವೆಲ್ಲ ಗೊತ್ತಿದ್ದ ಸಂಗತಿಗಳು. ಹೀಗಿದ್ದರೂ ಈ ಕೆಲಸಕ್ಕೆ ಮೊದಲು ಕೈ ಹಾಕಿದ್ದೇಕೆ? ಕರ್ನಾಟಕದ ಬರಗಾಲದ ಭವಣೆಗಳನ್ನು ಲಕ್ಷದಲ್ಲಿ ತಂದರೆ ಇವೇನು ಮಹತ್ವದ ಆತಂಕಗಳಲ್ಲ ಸಧ್ಯಕ್ಕೆ ಸರಕಾರದ ಬೊಕ್ಕಸಕ್ಕೆ ಅಭಾವವಾದ ಉತ್ಪನ್ನವು | ಈ ಕಾಲುವೆಗಳಿಂದ ಬಾರ

ದಿದ್ದರೂ ಮುಂದೆ ಒಂದೇ ಬರುತ್ತಿತ್ತು ಮುಖ್ಯವಾಗಿ ಮಳೆಯಿಲ್ಲದೆ ಗೋಳಾಡುವ ರೈತರ ಕಷ್ಟಗಳು ದೂರಾಗುತ್ತಲಿದ್ದವು ಇದೊಂದೇ ಕಾರಣವನ್ನು ಸರಕಾರವು ಆಳವಾಗಿ ವಿಚಾರಿಸಿ, ಈ ದಿಕ್ಕಿನ ಒಡ್ಡನ್ನು ತೀವ್ರವಾಗಿ ಪ್ರಾರಂಭಮಾಡಬೇಕಿತ್ತು. ಮುಂಬೈ ಇಲಾಖೆಗೆ ಈ ಕಾಲುವೆಗಳಿಂದ ಆತಷ ಉತ್ಪನ್ನವು ಉಂಟಾಗುವದಿಲ್ಲವೆಂಬ ಸ್ವಾರ್ಥ ಕಲ್ಪನೆಯಿಂದಲೇ ಸರಕಾರವು ಈ ವಿಷಯವನ್ನು ಹಿಂದಕ್ಕೊತ್ತಿದೆಂಬವು, ಸರಕಾರದ ಕಾರಣಗಳನ್ನು ಸೂಕ್ಷ್ಮವಾಗಿ ಓದಿನೋಡಿದವರಿಗೆ ತಿಳಿಯದೇ ಇರದು. ಮುಂಬೈ ಇಲಾಖೆಯು ಸಲುವಾಗಿ ಕರ್ನಾಟಕದ ನಾಡಿಗಳಲ್ಲಿ ಬತ್ತಿದರೂ ಸರಕಾರಕ್ಕೆ ಈ ಪ್ರಾಂತದ ಕಷ್ಟಗಳ ಬಗ್ಗೆ ಕರುಣೆ ಬರುವದಿಲ್ಲ. ಕಾರವಾರ ಜಿಲ್ಹೆಯ ಅರಣ್ಯ ಖಾತೆಯವರ ಚಲ್ಲಾಟದಿಂದ ಮುಂಬೈ ಇಲಾಖೆಯು ಪೋಷಿಸಲ್ಪಟ್ಟಿದೆ. ಆದ್ದರಿಂದ ಆ ಖಾತೆಯು ಹೊರಟು ಸರಕಾರಕ್ಕೆ ಬೇಕು. ಧಾರವಾಡ ಬೆಳಗಾವಿ, ವಿಜಾಪೂರಗಳಲ್ಲಿಯ ಹತ್ತಿಯಿಂದ ಮುಂಬೈ ಇಲಾಖೆಯು ಉತ್ಪನ್ನವು ಹೆಚ್ಚಾಗುತ್ತಿದೆ. ಆದ್ದರಿಂದ ಒಕ್ಕಲತನದ ಖಾತೆಬೇಕು. ರೈತರು ಹೊಟ್ಟೆಗಿಲ್ಲವೆಂದು ಕಷ್ಟಬಟ್ಟು ಸಾಲದಲ್ಲಿ ಮುಳುಗಿದ್ದರೂ, ಸರಕಾರದ ಕಂದಾಯವನ್ನು ... [illegible]

ಬಟ್ಟಿತಲ್ಲ' " ಎಂದೆಂದರು. ಅಂತೂ ಕನ್ನಡ ಪತ್ರಿಕೆಯ ಪ್ರತಿಧ್ವನಿಯು ಇಲ್ಲಿಯ ಜನರಿಗೆ ಕೇಳಬಂದಿತು.

ಕರ್ನಾಟಕದಿಂದ ಮೇಲೆ ಬರೆದ ಮೂವರೂ ಶ್ರೀ ವರದಾಚಾರ್ಯ ಬಂದಿದ್ದಾರೆ. ಶ್ರೀ ಅಂಗಡೀ, ದಳವಿ, ಜೋಗರಸರ, ವಿಜಾಪೂರ ಬೆಳಗಾವಿಗಳ ಮುಸಲ್ಮಾನ ಪ್ರತಿನಿಧಿಗಳೂ ಈ ವರೆಗಂತೂ ಬಂದಿಲ್ಲ. ಈ ಸಲ ನಮ್ಮ ಜಿಲ್ಹೆಯ ರಕ್ಕಸಗೀ ದೇಸಾಯರು ಎಲ್ಲ ಕರ್ನಾಟಕ ಪ್ರತಿನಿಧಿಗಳಿಗಿಂತಲೂ ಹೆಚ್ಚು ಠರಾವುಗಳನ್ನು (೩೭) ತರುವರಾಗಿ ಸೂಚಿಸಿದ್ದಾರೆ. ಶ್ರೀಯುತರುಗಳಾದ ಕರ್ಕಿಯವರು ೩೭, ಜೋಗರಸರು, ೧೧, ಕಂಬಳೀಯವರು, ೧೦ ಅಂಗಡೀಯವರು ೨ ಠರಾವುಗಳನ್ನು ತರಬೇಕೆಂದಿದ್ದಾರೆ. ಆದರೆ ಈ ಎಲ್ಲರ ಠರಾವುಗಳಲ್ಲಿ ಒಂದಾದರೂ ಪಾಸಾದಕ್ಕೆ ಅವಕಾಶ ಇಲ್ಲವೋ ಸಂಶಯವಿದೆ. ಯಾಕಂದರೆ ಮಾರ್ಚ ೩೦-೩೧ ಈ ಎರಡೇ ತಾ| ಗಳು ಲೋಕ ಪ್ರತಿನಿಧಿಗಳ ಠರಾವುಗಳಿಗಾಗಿ ನೇಮಿಸಲ್ಪಟ್ಟಿವೆ. ಕರ್ನಾಟಕದ ಸಂಬಂಧವಾಗಿ ಎಲ್ಲರೂ ಒಂದೊಂದು ರೀತಿಯಿಂದ ಠರಾವುಗಳನ್ನು ಸೂಚಿಸಿದ್ದು ಸಂತೋಷದ ಸಂಗತಿ.

...ಶ್ರೀ ಕರ್ಕಿಯವರು ಕೇಳಿದ
...ಇದಲ್ಲಿಯ ಕನ್ನಡಿಗರ ಸಂಖೆ,
...ಶಾಲೆಗಳು, ಕನ್ನಡವಾಚನಾ
...ಯವೆಷ್ಟಿದೆ? ಸರಕಾರದಿಂದ
... ಮುಖ್ಯವಾದವಾಗಿದ್ದವು.
...ಈ ಮಂತ್ರಿಗಳು ನುಡಿದ
...ವೈಭವದಿಂದ ಬಂದರು.
...ಕ್ಷಣವಾದ ತೆರಳಿದರು.
...ಪ್ರಾರಂಭಿಸತಕ್ಕದ್ದೆಂದು

...ಆಗಸ್ಟ ರಿಂದ ಅಲ್ಲಿಯ
...ದರು. ಆದರೆ ಇದರ
...ವನ್ನು ಕೈಕೊಳು
... ಮೇಲೆಯೇಸಾಗಿಸು
...ಕಾರದವರು. ಹೀಗು
...ಹಕ್ಕನ್ನು ಕೆ
...ಹತ್ತಿ ಬರುವದೆಂದು
...ಡಗು ವಹೆಯ ಖಾತೆ
...ಲ್ಲಿಯೇ ಆಗುವದು.

...ದಲ್ಲಿ ಓದಲ್ಪಟ್ಟಿತು.
...ದವಿವಾದವು ನಾ
...ಕದ ಪ್ರತಿನಿಧಿಗಳಲ್ಲಿ
...ಡುವಾ. ಅಂದಾಜ
...ಕೂಡಿಸುವದಕ್ಕಾಗಿ
...ಚಿಸಿದ್ದಾರೆ. ೧೯೩೨
...ಕೋರ್ಟ ಫೀ ಏರಿಸು
...ಆಸ್ತಿಯ ಮಾಲಾ
...ಮ ಹೊಸ ಕರಗಳ...

ವಾಹಕರ ಕೊರತೆ ಇವೇ ಎರಡು ಅ ಮುಖ್ಯ ಕಾರಣಗಳು. ಮತ ಭೇದ ಪ್ರಶ್ನೆಯು ಬಿಕ್ಕಟ್ಟಿನದಿದ್ದು ಬಿಡಿಸಲು ಸಾಧ್ಯವಿಲ್ಲ. ಮತ ಭೇದಗಳನ್ನೆಲ್ಲ ಮುಂದೊಗೆದು ಎಲ್ಲರನ್ನು ಒಂದು ಗೂಡಿಸುವಂಥ ಕಾರ್ಯಕರ್ತನು ಇಲ್ಲದಂತಾಗಿದೆ. ಮಹಾತ್ಮಾಜಿಯವರಿಗೆ ಕೌನ್ಸಿಲಗಳಲ್ಲಿ ವಿಶ್ವಾಸ ವಿಲ್ಲದ್ದರಿಂದ ಅವರು ಈ ವಿಚಾರದಲ್ಲಿ ಏನೂ ಭಾಗ ತೆಗೆದು ಕೊಳ್ಳದೆ ಖಾದಿಯ ಪ್ರಸಾರದಲ್ಲಿಯೇ ತಮ್ಮ ಕಾಲವನ್ನು ಕಳೆಯ ಹತ್ತಿರುವರು. ಅವರ ವಿಷಯಕ್ಕೆ ಜನರಲ್ಲಿದ್ದ ಅಭಿಮಾನವನ್ನು ಕುಂದಿಸುವದಕ್ಕೆ ಕೆಲ ಕುತ್ಸಿತ ಟೀಕಾಕಾರರು ತಮ್ಮ ಆಟವನ್ನು ಹಾಗೆಯೇ ಸಾಗಿಸಿದ್ದರೂ ಮಹಾತ್ಮರು ಆ ಬಗ್ಗೆ ಏನೂ ಲಕ್ಷಿಸದೆ ಖಾದಿಯ ಕಾರ್ಯವನ್ನು ಕೈಕೊಂಡು ಅದರ ಪ್ರಸಾರವು ಹೇಗೆ ಆದೀತೆಂಬ ಯೋಜನೆಯಲ್ಲಿರುವರು. ಆದ್ದರಿಂದ ಕೌನ್ಸಿಲದ ಎಲ್ಲ ಭಾರವು ಪಂಡಿತ [illegible] ಬಿದ್ದದೆ. ಅವರಿಗೆ ಲಾಲಾಜಿಯ ವರ್ಚಸ್ಸವನ್ನೂ ಕುಗ್ಗಿಸಬೇಕೆಂ ಕಾರಿತಾ ವಾದಿಗಳು ಪ್ರಯತ್ನಿ ಯಲ್ಲಿ ಸಹಕಾರ್ಯವನ್ನು ಮ ದೊರೆಯುವದರಲ್ಲಿ ಸಂದೇಹ ವಾಗಿ ಜನರಲ್ಲಿ ಅದರವು ಸ ನಷ್ಟವಾಗಿಲ್ಲ ಆದ್ದರಿಂದ ಯ ಸಿ ರಾಷ್ಟ್ರೀಯ ಸಭೆಯು ರಣ ಕೊಡೆಯುವ ಏರ್ಪಾಟನ್ನು ಉಂಟುಮಾಡಬೇಕೆಂದು ಇನ್ನು ಕಾರ್ಯ ನಿರ್ವಾಹ ರಾಷ್ಟ್ರೀಯ ಸಭೆಯು ಕಾ ವಂಥ ಕಾರ್ಯವಾಹಕರು ಸುರಳಿತವಾಗಿ ಸಾಗಲಾರ ಉ ಸಂದೇಶವನ್ನು ಜನ ಸಭೆಯ ವಿಷಯವಾಗಿ ಯೋಗ್ಯತೆಯುಳ್ಳ ಕಾರ್ಯ ಉ ಸಭೆಯಿಂದ ವೇತನವ ವಿಲ್ಲದೆ ಕಾರ್ಯಮಾಡುವ ಇಂಥವರು ದೊರೆಯುವದಿ ವಿಲ್ಲ. ಯೋಗ್ಯರೀತಿಯ ಕಾರ್ಯವಾಹಕರ ಕೊರ ಇರುವಷ್ಟು ಹಿಂದೀ ಜನ ಅನಿಸುವದಿಲ್ಲ. ಆದ್ದರಿಂ ಹಕರನ್ನು ಕಳೆಹಾಕಿ ! ಪುನಃ ನಾವು ಅಂಗಲಾ

ಈಗಿನಯುಗವ ಪ್ರಜಾಸತ್ತೆಯೆಂದರೆ ಒ ವ್ಯಕ್ತಿಗಳ ಕೂಟವೇ ಸ ವಿಕಾಸಕ್ಕೆ ಅನುಕೂಲತೆ ಜದ ಹಿತವು ಸಾಧ್ಯ ಮುಖ್ಯವಾದುದು ಶಿಕ್ಷ ಯ ಗುರುತೇ ಇಲ್ಲ. ಅ ಸತ್ತೆಯ ಆದರ್ಶವು ಅ ಬುದ್ಧಿಯುಕ್ತನಾಗುವಂತೆ ಶಿಕ್ಷಣದಲ್ಲಿ ಏರ್ಪಾಟಾಗಬೇಕು.

ಹೊಸಸಮಾಜವು ಉದಯವಾಗಿದೆ. ಅದಕ್ಕೆ ತಕ್ಕಂತೆ ಅದರಲ್ಲಿ ಏರ್ಪಾಟಾಗಲೇಬೇಕು. ಈಗಿನ ಶಿಕ್ಷಣದಲ್ಲಿ ಬುದ್ಧಿಯ ಬೆಳವಣಿಗೆಗೆ ಅನುಕೂಲತೆಯಿದ್ದ; ಕೈಗಾರಿಕೆಗೆ ಎಡೆಯಿಲ್ಲ. ಅದರಿಂದ ಮನುಷ್ಯನ ವಿಕಾಸವು ಏಕದೇಶೀಯವಾಗಿದೆ. ಬುದ್ಧಿಯ ಬೆಳವಣಿಗೆಯೊಡನೆ ಕಲಾಕೌಶಲ್ಯದ ಏಳ್ಗೆಯಾಯಿತೆಂದರೆ, ಸಮಾಜದ ಉನ್ನತಿಯು ಸರ್ವತೋಮುಖಸುಂದರವಾಗುವದು. ಮಹಾತ್ಮಾ ಗಾಂಧಿಯವರು ಈ ತತ್ವವನ್ನವಲಂಬಿಸಿಯೆ ರಾಷ್ಟ್ರೀಯ ಶಿಕ್ಷಣದಲ್ಲಿ ನೂಲುವ ಆತ್ಯಾವಶ್ಯಕವೆಂದು ನಿಯಮಿಸಿ ಬಿಟ್ಟರು. ನೂಲುವದರಲ್ಲಿ ಅಡಕವಾಗಿರುವ ತತ್ವವು ಬಹಳ ಹಿತಕರವಾದುದೂ, ಸುಂದರವಾದುದೂ ವ್ಯಾಪಕವಾದುದೂ ಇರುತ್ತದೆ. ಮೊನ್ನೆ ಮೊನ್ನೆ ಸಾತಾರದಲ್ಲಾದ ಮಾಧ್ಯಮಿಕ ಶಿಕ್ಷಕರ ಪರಿಷತ್ತಿನ ಅಧ್ಯಕ್ಷರಾದ ಶ್ರೀ [illegible] (ಮಾನ್ಯ ಕಾಲೇಜಿನ ಪಂಡಿತರು.) ಹೀಗೆ ಸು

ಜಾಹೀರನಾಮಾ.

[illegible] ಜನರಿಗೆ ತಿಳಿಸುವದೇನಂದರೆ.

[illegible] ವೇಟತಾ [illegible] ಜಹಾಗೀರದಾರರ [illegible] ಕೋರ್ಟ ಆಫ ವಾರ್ಡ [illegible] ಪ್ರಕಾರಾ [illegible] ಇವರ ವ್ಯವಸ್ಥೆಯು ಕೆಳಗೆ ಇದ್ದದ್ದು [illegible] ಡಿಪಾರ್ಟಮೆಂಟ ನಂಬರ [illegible] ತಾರೀಖು [illegible] ನೇ [illegible] ಇಸ್ವಿಯ ಪ್ರಕಾರ ಸದರ [illegible] ಕೊಟ್ಯಾಳ, ಸಂಸ್ಥಾನ [illegible] ಈ ಗ್ರಾಮದ [illegible] ಕೆಳಗೆ ತೋರಿಸಿದ ಜಮೀನುಗಳನ್ನು ಮಾರುವ [illegible] ಮಂಜೂರ [illegible] ಸದರ ಜಮೀನುಗಳ [illegible] ಲಿಲಾವ [illegible] ತಾರೀಖು ೧೬ ನೇ ಮಾರ್ಚ ಸನ ೧೯೨೫ ನೇ ಇಸ್ವಿಯ ಸೋಮವಾರ ದಿವಸ ಮಧ್ಯಾಹ್ನದ ೧೨ ಘಂಟೆಯ ನಂತರಾ ನೇ॥ ಮಾಮಲೇದಾರ ಸಾ॥ ತಾಲೂಕ [illegible] ಇವರ ಸಮಕ್ಷಮಾಗುವದು.

ಮಾರಾಟದ ಜಮೀನುಗಳ ತಪಶೀಲು

ಅನುಕ್ರಮ ನಂಬರ	ಗ್ರಾಮ	ಸರ್ವೆ ನಂಬರ	ಕ್ಷೇತ್ರ ಎ.	ಗು.	ಆಕಾರ			ಜಮೀನು ಯಾವ ಪ್ರಕಾರದ್ದು
೧	ಕೊಟ್ಯಾಳ ಸಂಸ್ಥಾನ	೧೫೭	೨೩	೩೮	೪೩	—	—	ಜಾತ ಇನಾಮು
೨	[illegible]	೧೫೬	೨೫	೮	೪೩	—	—	[illegible]

...ದ್ದರೂ ಮುಂದೆ ಒಂದೇ ಬರುತ್ತಿತ್ತು, ಮುಖ್ಯವಾಗಿ ಮಳೆಯಿಲ್ಲದೆ ತೋರಾಡುವ ರೈತರ ಕಷ್ಟಗಳು ದೂರಾಗುತ್ತಲಿದ್ದವು. ಇದೊಂದೇ ಕಾರಣವನ್ನು ಸರಕಾರವು ತಳವಾಗಿ ವಿಚಾರಿಸಿ, ಈ ದಿಶೆಯ ಒಡ್ಡನ್ನು ತೀವ್ರವಾಗಿ ಪ್ರಾರಂಭಮಾಡಬೇಕಿತ್ತು. ಮುಂಬೈ ಇಲಾಖೆಗೆ ಈ ಕಾಲುವೆಗಳಿಂದ ಅಂತಹ ಉತ್ಪನ್ನವು ಉಂಟಾಗುವದಿಲ್ಲವೆಂಬ ಸ್ವಾರ್ಥ ಕಲ್ಪನೆಯಿಂದಲೇ ಸರಕಾರವು ಈ ವಿಷಯವನ್ನು ಹಿಂದಕ್ಕೊತ್ತಿದೆಂಬದು, ಸರಕಾರದ ಕಾರಣಗಳನ್ನು ಸೂಕ್ಷ್ಮವಾಗಿ ಓದಿನೋಡಿದವರಿಗೆ ತಿಳಿಯದೇ ಇರದು. ಮುಂಬೈ ಇಲಾಖೆಯು ಸಮವಾಗಿ ಕರ್ನಾಟಕದ ನಾಡಿಗಳಲ್ಲಿ ಬತ್ತಿದರೂ ಸರಕಾರಕ್ಕೆ ಈ ಪ್ರಾಂತದ ಕಷ್ಟಗಳ ಬಗ್ಗೆ ಕಳಕಳಿ ಬರುವದಿಲ್ಲ. ಕಾರವಾರ ಜಿಲ್ಹೆಯ ಅರಣ್ಯ ಖಾತೇದವರ ಚಲ್ಲಾಟದಿಂದ ಮುಂಬೈ ಇಲಾಖೆಯು ಹೊಕ್ಕುಳವು ಕುಂಬಿಸೆ. ಆದ್ದರಿಂದ ಆ ಖಾತೆಯು ಮೊದಲು ಸರಕಾರಕ್ಕೆ ಬೇಕು. ಧಾರವಾಡ ಬೆಳಗಾವಿ, ವಿಜಾಪೂರಗಳಲ್ಲಿಯ ಹತ್ತಿಯಿಂದ ಮುಂಬೈ ಇಲಾಖೆಯ ಉತ್ಪನ್ನವು ಹೆಚ್ಚಾಗುತ್ತಿದೆ. ಆದ್ದರಿಂದ ಒಕ್ಕಲತನದ ಖಾತೆಬೇಕು. ರೈತರು ಹೊಟ್ಟೆಗಿಲ್ಲವೆಂದು ಕಷ್ಟ ಪಟ್ಟು ಸಾಲದಲ್ಲಿ ಮುಳುಗಿದ್ದರೂ, ಸರಕಾರದ ಕಂದಾಯವನ್ನು ತೆರಿಸುವದಕ್ಕಾಗಿ ಮಾಮಲೇದಾರ ಖಾತೆ ಬೇಕು. ಆದರೆ ಅನೇಕ ಕಾಲದಿಂದಲೂ ಕಷ್ಟಪಡುತ್ತಲಿದ್ದರೂ ಕರ್ನಾಟಕದ ರೈತರ ದುಷ್ಕಾಳದ ಗೋಳನ್ನು ದೂರಮಾಡಲಿಕ್ಕಾಗಿ ಮಹಾ ಕಾಲುವೆಗಳ ಸ್ವತಂತ್ರ ಖಾತೆಯೇನೂ ಕರ್ನಾಟಕಕ್ಕೆ ಅವಶ್ಯಕವಿಲ್ಲ! ಈಗ್ಗೆ ಮುಂಬೈ ಇಲಾಖೆಯು ಸ್ಥಾಪನೆಯಾದಂದಿನಿಂದ ಸಿಂಧ, ಗುಜರಾತ, ಮಹಾರಾಷ್ಟ್ರಗಳಲ್ಲಿ ಕಾಲುವೆಗಳಿಗಾಗಿ ಸರಕಾರದ ಹಣವು ಎಷ್ಟು ವೆಚ್ಚವಾಗಿದೆ? ಮತ್ತು ಕರ್ನಾಟಕಕ್ಕೆ ಎಷ್ಟು ವೆಚ್ಚವಾಗಿದೆಂಬದನ್ನಾದರೂ ಸರಕಾರವು ವಿಚಾರಿಸಿ, ನೋಡಿ, ಈ ಘಟಪ್ರಭಾ ನದಿಯ ಕಾಲುವೆಯ ಬಗ್ಗೆ ಈ ಬಗೆಯ ಉಲ್ಲೇಖವನ್ನು ಮಾಡಬೇಕಾಗಿತ್ತು. ಚಂಡಿನಂತೆ ಅತ್ತಿಂದಿತ್ತ ಇತ್ತಿಂದತ್ತ ಓಡಾಡುವ ಕರ್ನಾಟಕಕ್ಕೆ ಸರಕಾರದ ಲಕ್ಷ್ಯವು ಹೇಗೆ ಹತ್ತೀತು?

ಮುಂಬೈ ಕಾಯದೇಮಂಡಲ

(ನಮ್ಮ ಪ್ರೇಷಿತ ಪ್ರತಿನಿಧಿಯಿಂದ)

ಮುಂಬೈ ತಾ|| ೨೩-೨-೩೭

ಕನ್ನಡ ಪತ್ರಿಕೆಗಳು ಈ ವರೆಗೂ ಕಾಯದೇ ಮಂಡಲಗಳಿಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಿರಲಿಲ್ಲ. ' ಕನ್ನಡಿಗ ''ನು ಮಾತ್ರ ಈಗ್ಗೆ ಈ ಕಾರ್ಯವನ್ನು ಪ್ರಾರಂಭಮಾಡಿದ್ದು ಸಂತೋಷದ ಸಂಗತಿಯು. ಇನ್ನು ಮೇಲೆ ಇದೇ ಪ್ರಕಾರವಾಗಿ ಮದ್ರಾಸ, ಮೈಸೂರ, ಕೊಡಗು ಕಾಯದೇ ಮಂಡಲಗಳಿಗೂ ತನ್ನ ಪ್ರತಿನಿಧಿಗಳನ್ನು ಕಳಿಸುವ ' ಕನ್ನಡಿಗ ''ನ ವಿಚಾರವನ್ನು '' ಕನ್ನಡಿಗ ''ನ ವಾಚಕ ವೃಂದವು ಚಂದಾದಾರ ಸಂಖ್ಯೆಯನ್ನು ಬೆಳಸಿ ಮೂರ್ತಸ್ವರೂಪ ಕೊಡಬಹುದಾಗಿ ಆಶಿಸುತ್ತೇನೆ. ಇಲ್ಲಿಗೆ ಬಂದೊಡನೇ ನನಗೆ ''ರಿಪೋರ್ಟರರ ಪಾಸು'' ದೊರೆಯಲಿಲ್ಲ. ಕನ್ನಡಿಗರನ್ನು ಕೇಳುವವರಾರು? ಶ್ರೀಯುತರುಗಳಾದ ದೇಸಾಯರೂ ಕಂಬಳೀಯವರೂ ಕರ್ಕಿಯವರೂ ಅಭಿಮಾನದಿಂದ ಪ್ರಯತ್ನಪಟ್ಟು ಅದನ್ನು ದೊರಕಿಸಿದರು. ಇಷ್ಟು ಜನರು ಈ ವಿಷಯದಲ್ಲಿ ಮನಸ್ಸು ಹಾಕಿದ್ದನ್ನು ಕಂಡು, ಕಾಯದೇ ಮಂಡಲದ ಕಾರ್ಯದರ್ಶಿಗಳು ''ಅಬ್ಬಾ! ಇದೇನು? ಕನ್ನಡ ಪತ್ರಿಕೆಯು ಗೊಂದಲವನ್ನೇ ಎಬ್ಬಿಸಿಬಿಟ್ಟಿತಲ್ಲ'' ಎಂದೆಂದರು. ಅಂತೂ ಕನ್ನಡ ಪತ್ರಿಕೆಯ ಪ್ರತಿಧ್ವನಿಯು ಇಲ್ಲಿಯ ಜನರಿಗೆ ಕೇಳಬಂದಿತು.

ಕರ್ನಾಟಕದಿಂದ ಮೇಲೆ ಚುನಾಯಿತರಾದ ಮೂವರೂ ಶ್ರೀ ಹರ್ಡೀಕರರೂ ಬಂದಿದ್ದಾರೆ. ಶ್ರೀ ಅಂಗಡೀ, ದಳವೀ, ಜೋಗೆರವರೂ, ವಿಜಾಪೂರ ಬೆಳಗಾವಿಗಳ ಮುಸಲ್ಮಾನ ಪ್ರತಿನಿಧಿಗಳೂ ಈ ವರೆಗಂತೂ ಬಂದಿಲ್ಲ. ಈ ಸಲ ನಮ್ಮ ಜಿಲ್ಲೆಯ ರಕ್ಕಸಗೀ ದೇಸಾಯರು ಎಲ್ಲ ಕರ್ನಾಟಕ ಪ್ರತಿನಿಧಿಗಳಿಗಿಂತಲೂ ಹೆಚ್ಚು ಠರಾವುಗಳನ್ನು (೩೭) ತರುವರಾಗಿ ಸೂಚಿಸಿದ್ದಾರೆ. ಶ್ರೀಯುತರುಗಳಾದ ಕರ್ಕಿಯವರು ೨೭, ಜೋಗೆರವರು, ೧೧, ಕಂಬಳೀಯವರು, ೧೦ ಅಂಗಡೀಯವರು ೨ ಠರಾವುಗಳನ್ನು ತರಬೇಕೆಂದಿದ್ದಾರೆ. ಆದರೆ ಈ ಎಲ್ಲರ ಠರಾವುಗಳಲ್ಲಿ ಒಂದಾದರೂ ವಾದಕ್ಕಾದರೂ ಬರುವದೋ ಇಲ್ಲವೋ ಸಂಶಯವಿದೆ. ಯಾಕಂದರೆ ಮಾರ್ಚ ೨೭-೨೮ ಈ ಎರಡೇ ತಾ|| ಗಳು ಲೋಕ ಪ್ರತಿನಿಧಿಗಳ ಠರಾವುಗಳಿಗಾಗಿ ನೇಮಿಸಲ್ಪಟ್ಟಿವೆ. ಕರ್ನಾಟಕದ ಸಂಬಂಧವಾಗಿ ಎಲ್ಲರೂ ಒಂದೊಂದು ರೀತಿಯಿಂದ ಠರಾವುಗಳನ್ನು ಸೂಚಿಸಿದ್ದು ಸಂತೋಷದ ಸಂಗತಿ.

ನಿನ್ನೆ ಪ್ರಶ್ನೋತ್ತರ ಸಮಯದಲ್ಲಿ ಶ್ರೀ ಕರ್ಕಿಯವರು ಕೇಳಿದ ಅನೇಕ ವಿಷಯಗಳಲ್ಲಿ, ಮುಂಬೈಪಟ್ಟಣದಲ್ಲಿಯ ಕನ್ನಡಿಗರ ಸಂಖ್ಯೆ, ಕನ್ನಡ ವಿದ್ಯಾರ್ಥಿಗಳ ಸಲುವಾಗಿ ಶಾಲೆಗಳು, ಕನ್ನಡವಾಚನಾಲಯ ಇವುಗಳಿಗೆಲ್ಲ ಸರಕಾರದ ಸಹಾಯವೆಷ್ಟಿದೆ? ಸರಕಾರದಿಂದ ಮಂಜೂರಾದ ಕನ್ನಡಗ್ರಂಥಗಳು ಇವೇ ಮುಖ್ಯವಾದವಾಗಿದ್ದವು. ಚೌಕಸೀ ನಡೆದಿದೆಂಬ ಹಲ್ಲವಿಯನ್ನು ಶಿಕ್ಷಣ ಮಂತ್ರಿಗಳು ನುಡಿದರು. ಗವರ್ನರರು ಸರಿಯಾಗಿ ನಿನ್ನೆ ೨-೨೦ ಕ್ಕೆ ವೈಭವದಿಂದ ಬಂದರು ೪೫ ಮಿನಿಟುಗಳವರೆಗೆ ಪ್ರಾಸ್ತಾವಿಕ ಭಾಷಣಮಾಡಿ ತೆರಳಿದರು. ಸಮುದ್ರವನ್ನು ಹೂಳುವ ಕೆಲಸವನ್ನು ಪ್ರಾರಂಭಿಸತಕ್ಕದ್ದೆಂದು ಹೆಚ್ಚಾಗಿ ವಿವರಿಸಿದರು.

ಕರ್ನಾಟಕದಲ್ಲಿ ಮಳೆಯು ಸಕಾಲದಲ್ಲಿ ಆಗದ್ದರಿಂದ ಅಲ್ಲಿಯ ಒಕ್ಕಲಿಗರ ಸ್ಥಿತಿಯು ಚನ್ನಾಗಿಲ್ಲವೆಂದು ಒಪ್ಪಿದರು. ಆದರೆ ಇದರ ನಿವಾರಣೆಗಾಗಿ ಯಾವವಾದರೂ ಉಪಾಯವನ್ನು ಕೈಕೊಳುವರೋ ಅಥವಾ ಬರೇ ಮುಕ್ತ ಫಲಗಳ ಮೇಲೆಯೇ ಸಾಗಿಸುವರೋ ನೋಡಬೇಕು. ಹಿಂದುಸ್ಥಾನ ಸರಕಾರದವರು ಹಡಗು ಪಡೆಯ ಖಾತೇದಲ್ಲಿ ಹಿಂದೀಯರಿಗೆ ಎಲ್ಲ ಬಗೆಯ ಹಕ್ಕನ್ನು ಕೊಟ್ಟದ್ದರಿಂದ ಮುಂಬೈ ಪಟ್ಟಣಕ್ಕೆ ಬಹು ಮಹತ್ವ ಬರುವದೆಂದು ಗವರ್ನರರು ಹೇಳಿದರು. ಯಾಕಂದರೆ ಈ ಹಡಗು ಪಡೆಯ ಖಾತೆಯ ಮುಖ್ಯ ಕಾರ್ಯಾಲಯವು ಮುಂಬೈಯಲ್ಲಿಯೇ ಆಗುವದು.

ಅಂದಾಜ ಪತ್ರಿಕೆಯೂ ಸಾಯಂಕಾಲದಲ್ಲಿ ಓದಲ್ಪಟ್ಟಿತು. ೬೦ ಲಕ್ಷ ರೂಪಾಯಿಗಳು ಕಡಿಮೆ ಬಿದ್ದಿವೆ. ವಾದವಿವಾದವು ನಾಳೆಯಿಂದ ಪ್ರಾರಂಭವಾಗುವದು. ನಮ್ಮ ಕರ್ನಾಟಕದ ಪ್ರತಿನಿಧಿಗಳಲ್ಲಿ ಯಾರು ಹೇಗೆ ಕಾರ್ಯಮಾಡುವರೋ ನೋಡುವಾ. ಅಂದಾಜ ಪತ್ರಿಕೆಯಲ್ಲಿ ಕಡಿಮೆ ಬಿದ್ದ ಹಣವನ್ನು ಭರ್ತಿಕೊಡಿಸುವದಕ್ಕಾಗಿ ಹೊಸ ಕರಗಳನ್ನು ಪುನಃ ಹೇರಬೇಕೆಂದು ಸೂಚಿಸಿದ್ದಾರೆ. ೧೯೩೭ನೇ ವರ್ಷದಲ್ಲಿದ್ದಂತೆ ಸ್ಟಾಂಪ ಕಾನೂನು, ಕೋರ್ಟ ಫೀ ಏರಿಸುವದು, ಮತ್ತು ಮುಂಬೈ ನಗರದಲ್ಲಿಯ ಸ್ಥಾವರ ಆಸ್ತಿಯ ಮಾರಾಟದ ಕರವನ್ನು ಹೆಚ್ಚಿಸುವದು, ಹೀಗೆ ಈ ಮೂರು ಹೊಸ ಕರಗಳು ಬರತಕ್ಕವಿವೆ.

ತುಣುಕು ಮಿಣುಕು

ಕನ್ನಡಿಗರು ಏನು ಮಾಡುತ್ತಿರುವರು? ಈಗಲಾದರೂ ಎಚ್ಚತ್ತಿರುವರೇ? ಅಥವಾ ಹರಿದಾಸರ ಉಪಕಥೆಯೊಳಗಣ ಅಲಸರಂತೆ, ಮನೆಗೆ ಬೆಂಕಿಬಿದ್ದು ಕೂಗಾಟ ಕೇಳಿಸಿದರೂ, 'ಯಾರಪ್ಪ, ಎದ್ದು ನೋಡಬೇಕ?'—ಎಂದು ಇನ್ನೊಂದು ಬದಿಗೆ ತಿರುಗಿ ಪುನಃ ನಿದ್ದೆ ಹೋಗುತ್ತಿರುವರೋ?- ಎಂಬ ಪ್ರಶ್ನೆಯು ಈಗ ನಮ್ಮ ಕಣ್ಣಿಗೆ ಕಟ್ಟಿದಂತಾಗಿದೆ. ಕರ್ನಾಟಕರ ಉತ್ತರಾಭ್ಯುದಯವೆಲ್ಲ ಈ ಪ್ರಶ್ನೆಗೆ ದೊರೆಯತಕ್ಕ ಉತ್ತರವನ್ನವಲಂಬಿಸಿರುವದರಿಂದ ಇದರ ನಿರ್ಣಯವನ್ನು ನಮ್ಮ ವಾಚಕರೇ ಮಾಡಲಿ!

* * * *

ಆಂಧ್ರರೂ ಮರಾಟಿಗರೂ ಒತ್ತಿ ಒತ್ತಿ ಒಂದು ಕನ್ನಡ ನಾಡಿನ ಭಾಗಗಳನ್ನು ನುಂಗುತ್ತಿರುವುದನ್ನು ಕಂಡು ೨-೩ ವರ್ಷಗಳಿಗೆ ಹಿಂದೆ ಧಾರವಾಡದ ನಮ್ಮ ಬಂಧುಗಳಿಗೆ ಎಚ್ಚರವಾದಂತೆ ತೋರಿತು. ಆಗಲೇ ಧಾರವಾಡದವರಿಗೆ ಸ್ವತಂತ್ರ ಕರ್ನಾಟಕ ರಾಷ್ಟ್ರದ ಕನಸು ಕೂಡ ಬಿದ್ದಿತಂತೆ. ಒಡನೆಯೇ ಧಾರವಾಡದಲ್ಲಿ ಒಂದು "ಕರ್ನಾಟಕ ಸಭೆ" ಹೊರಟಿತು. ಧಾರವಾಡಪ್ರಾಂತ್ಯದ ದೇಶಭಕ್ತರು ಕೆಲವರು ಬಳ್ಳಾರಿ ಮುಂತಾದ ಸ್ಥಳಗಳಿಗೆ ಹೋಗಿ ಉಪನ್ಯಾಸಗಳ ಮೂಲಕ ಒಂದು ವಿಧವಾದ ಚಳವಳವನ್ನು ಪ್ರಾರಂಭಿಸಿದರು. ಹೊಸಪೇಟೆಯಲ್ಲಿ ಶ್ರೀ. ಎ. ಪಿ. ವಾಸುದೇವಾಚಾರ್ಯರು ಅಧ್ಯಕ್ಷರಾಗಿ ಒಂದು ರಾಜಕೀಯ ಪರಿಷತ್ತು ಸಹ ನಡೆದು ಕರ್ನಾಟಕ ರಾಷ್ಟ್ರನಿರ್ಮಾಣದ ವಿಷಯವು ಸರ್ವಜನ ಸಮಾಧಾನದಿಂದ ವಾಗಿ ಅಂಗೀಕರಿಸಲ್ಪಟ್ಟಿತು. ಇದರ ಫಲವಾಗಿ ರಾಷ್ಟ್ರೀಯ ಸಭೆಯಲ್ಲಿ ಕರ್ನಾಟಕರಿಗೂ ಒಂದು ಪ್ರಾಂತಿಕ ಕಾಂಗ್ರೆಸ್ ಕಮಿಟಿಯೂ ಲಭಿಸಿತು.

* * * *

ಸರಿ. ಕರ್ಣಾಟಕರು ಪುನಃ ನಿದ್ದೆ ಹೋದರು. ತಾವು ಪ್ರಾರಂಭಿಸಿದ ಕಾರ್ಯವನ್ನು ಬಿಡದೆ ನಡೆಯಿಸಿ ತಳವನ್ನು ಇನ್ನಷ್ಟು ಬಲಪಡಿಸಿ ಕೊಳ್ಳಬೇಕೆಂಬ ಅಭಿಪ್ರಾಯವು ನಿದ್ರಾಳುಗಳಾದ ಕನ್ನಡಿಗರ ಬುದ್ಧಿಗೆ ಹೊಳೆಯಲಿಲ್ಲ. ಅತ್ತ ಆಂಧ್ರರೂ ಮರಾಟಿಗರೂ ಹೆಗ್ಗಣಗಳಂತೆ ಒಳಗಿಂದೊಳಗೆ ಕೊರೆಯುತ್ತಲೇ ಇದ್ದರು. ಉಪಾಯವಾಗಿ ತಮ್ಮ ಆಕ್ರಮಣಕಾರ್ಯವನ್ನು ಸಾಧಿಸುತ್ತ ಇದ್ದರು. ಬೊಂಬಾಯಿ ಕರ್ಣಾಟಕದ ಭಾಗವಾದ ಸಾಂಗಲಿಯಲ್ಲಿ ಮರಾಟಿಗರ ಒಂದು ಕಾಲೇಜು ಪ್ರಾರಂಭವಾಯಿತು. ಮತ್ತು ಮರಾಟಿಗರಿಗೆ ಪ್ರತ್ಯೇಕವಾದ ಒಂದು ಯೂನಿವರ್ಸಿಟಿ ಬೇಕೆಂಬ ಅಭಿಪ್ರಾಯವು ಬೊಂಬಾಯಿ ಯೂನಿವರ್ಸಿಟಿ ಕಮಿಟಿಯವರಿಂದ ವ್ಯಕ್ತಪಡಿಸಲಾಯಿತು. ಈ ಅಭಿಪ್ರಾಯವು ಬೊಂಬಾಯಿ ಯೂನಿವರ್ಸಿಟಿ ಸಿನೇಟಿನವರಿಂದಲೂ ಅನುಮೋದಿಸಲ್ಪಟ್ಟಂತೆ ಇತ್ತೀಚಿಯ ವೃತ್ತಪತ್ರಿಕೆಗಳಿಂದ ತಿಳಿಯಬರುತ್ತದೆ. ಮದ್ರಾಸಿನಲ್ಲಿಯೂ ಮಂತ್ರಿಗಳೆಲ್ಲ ಆಂಧ್ರರೆಂಬ ಗರ್ವದಿಂದ ಅಂಧರಾದ ಆಂಧ್ರರು "ಆಂಧ್ರ ಯೂನಿವರ್ಸಿಟಿಯ ಬಿಲ್ಲು" ಎಂಬ ಚಟವನ್ನು ನ್ಯಾಯ ವಿಧಾಯಕ ಸಭೆಯ ಮುಂದೆ ತಂದರು. ಮತ್ತು ಸ್ಪಷ್ಟವಾಗಿಯೂ ಉತ್ಕಲ ಮತ್ತು ಕರ್ಣಾಟಕದೇಶದ ಅಂಶಗಳಾಗಿರುವ ಜಿಲ್ಲೆಗಳನ್ನು ಕೂಡ ಆ ಯೂನಿವರ್ಸಿಟಿಯ ವ್ಯಾಪ್ತಿಯೊಳಗೆ ಬರುವಂತೆ ಆ ಬಿಲ್ಲಿನಲ್ಲಿ ಸೇರಿಸಿಕೊಂಡರು.

ಗಾಢನಿದ್ರೆಯಲ್ಲಿದ್ದ ಕನ್ನಡಿಗರು ಇದರಿಂದಲೂ ಎಚ್ಚರಗೊಳ್ಳಲಿಲ್ಲ. ಆಕಸ್ಮಾತ್ತಾಗಿ ಕರ್ನಾಟಕ ಸಾಹಿತ್ಯಸಮ್ಮೇಲನದ ಹನ್ನೊಂದನೆಯ ಅಧಿವೇಶನವು ಬೆಳಗಾಂವಿಯಲ್ಲಿ ನಡೆಯಿತು. ಅದರ ಅಧ್ಯಕ್ಷೋಪನ್ಯಾಸದೊಳಗಣ ಈ ಸಂಬಂಧವಾದ ಚುಚ್ಚುಮಾತುಗಳಿಂದ ಕನ್ನಡಿಗರು ಒಂದಿಷ್ಟು ಕಣ್ಣು ಬಿಟ್ಟು ಅತ್ತಿತ್ತ ನೋಡಿದರು. ಮತ್ತು ಆಂಧ್ರ ಯೂನಿವರ್ಸಿಟಿಯ ಬಿಲ್ಲಿನ ಚರ್ಚೆಯು ನಡೆಯುತ್ತಿರುವ ಸುಮಾರಿಗೆ ತೀವ್ರವಾದ ಚಳುವಳಿಯನ್ನು ಪ್ರಾರಂಭಿಸಿ ಒಂದಿಷ್ಟು ಚಟುವಟಿಕೆಯನ್ನು ತೋರಿಸಿದರು. ಫಲಿತಾಂಶವು ಏನಾದರೂ ಆಗಲಿ, ಮದ್ರಾಸು ಗೌರ್ನರವರ ಪರ್ಯಂತ ಹೋಗಿ ಬಂದರು. ಆದರೆ ಇದರಲ್ಲಿಯೂ ಮುಖ್ಯವಾಗಿ ಉತ್ತರ ಕರ್ನಾಟಕರೂ ಕೊಂಚಮಟ್ಟಿಗೆ ಬಳ್ಳಾರಿ ಮತ್ತು ಮೈಸೂರಿನವರೂ ಒಂದಿಷ್ಟು ಕೆಲಸ ಮಾಡಿದರೆ ವಿನಾ ನಮ್ಮ 'ಮಂಗಳೂರ ಜಿಲ್ಲೆಯವರು ದೇಶಸೇವೆ ಮಾಡಿದ ಪಾಪವನ್ನು' ಕಿಂಚಿತ್ತಾದರೂ ಕಟ್ಟಿಕೊಳ್ಳಲಿಲ್ಲ. ಬಳ್ಳಾರಿಯ ಪ್ರತಿನಿಧಿಗಳು ಕೂಡ "ಬಾಯಿಯು ಬಲ್ಲಾ ಮಗ, ಬಂದಿಟು....ಮಗ" ಎಂಬಂತೆ, ಮನಸ್ಸಿನಲ್ಲಿ ಹೇಗಿದ್ದರೂ 'ಇರಲಿ, ಬಾಯಿಂದಾದರೂ ಕರ್ನಾಟಕಕ್ಕೆ ಅನುಕೂಲವಾಗಿಯೇ ಮಾತನಾಡಿದರು. ಆದರೆ ನಮ್ಮ ಮಂಗಳೂರು ಜಿಲ್ಲೆಯ ಪ್ರತಿನಿಧಿಗಳು-ಇವರು ಚಿರಂಜೀವಿಗಳಾಗಿ ಬಾಳಲಿ! ಇವರ ಕೀರ್ತಿಯು ಆಚಂದ್ರತಾರ್ಕವಾಗಿ ಬೆಳಗಲಿ!!- ಬಾಯಲ್ಲಿಯೂ ಮನಸ್ಸಿನಲ್ಲಿಯೂ ಒಂದೇ ರೀತಿಯಾಗಿ ವರ್ತಿಸಿ ಕರ್ನಾಟಕಕ್ಕೆ ಪ್ರತಿಕೂಲವಾಗಿಯೇ ಓಟು ಕೊಟ್ಟುಬಿಟ್ಟರು. ಧನ್ಯ! ಧನ್ಯ!! ಪಂಪರನ್ನಾದಿ ಮಹಾಕವಿಗಳು ಈ ಹೊತ್ತು ಬದುಕಿದ್ದರೆ, ತಮ್ಮ ಪಂಗಡಕ್ಕೆ ಸೇರಿದ ಈ ಪ್ರತಿನಿಧಿಗಳನ್ನು ಕಥಾನಾಯಕರನ್ನಾಗಿಟ್ಟುಕೊಂಡು ಗ್ರಂಥಗಳನ್ನೇ ಬರೆಯುತ್ತಿದ್ದರಲ್ಲವೇ?

* * * *

ಮಂಗಳೂರು ಜಿಲ್ಲೆಯ ಪ್ರತಿನಿಧಿಗಳು ಹಾಗೆ ಮಾಡಿದರು. ಹೋಗಲಿ, ಮಂಗಳೂರ ಪ್ರಾಂತದ ಉಳಿದವರು ಏನು ಮಾಡಿದರು? ಮ್ಯುನಿಸಿಪಾಲಿಟಿಯವರು ಏನು ಮಾಡಿದರು. ತಾಲೂಕ ಬೋರ್ಡುಗಳವರು ಏನು ಮಾಡಿದರು? ಸ್ವರಾಜ್ಯಪಕ್ಷದವರು ಏನು ಮಾಡಿದರು? ಇನ್ನು ಬೇರೆ ಬೇರೆ ಸ್ಥಳೀಕ ಸಂಘಗಳನ್ನು ನಡೆಸುವರೆಂದು ಕೂಗಳಿಸಿಕೊಳ್ಳುವವರು ತಾನೇ ಏನು ಮಾಡಿದರು? ಯಾರಾದರೂ ಹೇಳಬಲ್ಲರೇ? ಇವರಿಗೆ ಯಾರಿಗೂ ಸ್ವತಂತ್ರ ಕರ್ನಾಟಕ ರಾಷ್ಟ್ರವು ಬೇಕಾಗಿರಲಿಲ್ಲವೇ? ಬರದಖಂಡಕ್ಕೆ ಸ್ವರಾಜ್ಯ ಸಿಕ್ಕಿದ ಮಾತ್ರದಿಂದ ಕರ್ನಾಟಕದ ಬಂಧನವು ತಪ್ಪಿದಂತಾಯಿತೇ? "ಕಂಠೀರವನ" ಅವಿರತವಾದ ಘನಗಂಭೀರ ಘರ್ಜನೆಯು ಕೂಡ ಅರಣ್ಯರೋದನವಾಗಿ ಪರಿಣಮಿಸಿತಲ್ಲ?

* * * *

ಆಂಧ್ರ ಯೂನಿವರ್ಸಿಟಿ ಮಸಿವಿದೆಯು ಇತರರ ಓಟುಗಳ ಬಲದಿಂದಲೂ ಕನ್ನಡಿಗರ ನಿರ್ವೀರ್ಯದಿಂದಲೂ ಪಾಸಾಗಿಯೇ ಬಿಟ್ಟಿತು. ಕನ್ನಡಿಗರು ಪುನಃ ನಿದ್ದೆ ಹೋದರು. ಆ ಬಳಿಕವೂ ಎಲ್ಲ ಕಡೆಗಳ ಕನ್ನಡಿಗರು ಏಕಕಂಠರಾಗಿ ಅದಕ್ಕೆ ಮಂಜೂರಾತಿಯನ್ನು ಕೊಡಲಾಗದೆಂದು ಗವರ್ನರವರನ್ನು ಬೇಡುತ್ತಲೂ, ತೀವ್ರವಾಗಿ ಚಳುವಳಿಯನ್ನು ನಡೆಯಿಸುತ್ತಲೂ ಇದ್ದಿದ್ದರೆ ಏನೋ ಒಂದು ಆಶೆಗೆ ಅವಕಾಶವಿರುತ್ತಿದ್ದಿತು. ಆದರೆ ಕನ್ನಡಿಗರ ಅನಾಸ್ಥೆಯು ದೆಸೆಯಿಂದ ಅದೂ ನಿರಾಶೆಯಾಗಿ ಆ ಆಕ್ಟಿಗೆ ಗವರ್ನರವರು ಮಂಜೂರಾತಿಯನ್ನು ಕೊಟ್ಟಂತೆ ಸರಕಾರಿ ಗ್ಯಾಜೆಟ್ಟಿನಲ್ಲಿ ಪ್ರಕಟವಾಗಿದೆ. ಈ ಮೇಲೆ ಬಳ್ಳಾರಿಯನ್ನು ಆ ಆಕ್ಟಿನ ವ್ಯಾಪ್ತಿಯಿಂದ ಬಿಂಗಡಿಸುವುದು ಎಲ್ಲಿಯ ಮಾತು? ಸಾಲದುದಕ್ಕೆ ಕರ್ನಾಟಕದ ದಕ್ಷಿಣದ ಭಾಗಗಳನ್ನು ನುಂಗುವುದಕ್ಕೆ ತಮಿಳು ಯೂನಿವರ್ಸಿಟಿಯ ಬಿಲ್ಲೊಂದು ಸಹ ಬೇಗನೆ ಹೊರಡುವುದರಲ್ಲಿದೆ. ಆಹಾ! ಕನ್ನಡಿಗರು ಎಲ್ಲಿ ಮಲಗಿರುವರು?

ಆಂಧ್ರ ಯೂನಿವರ್ಸಿಟೀ ಆಕ್ಟಿನ ವ್ಯಾಪ್ತಿಯಿಂದ ಕರ್ನಾಟಕದ ಭಾಗಗಳನ್ನು ಬಿಡಿಸಿ ಕೊಳ್ಳಬೇಕೆಂಬ ಉದ್ದೇಶದಿಂದ ಕರ್ನಾಟಕಕ್ಕೂ ಒಂದು ವಿಶ್ವವಿದ್ಯಾಲಯದ ಏರ್ಪಾಡನ್ನು ಕೆಲವರು ಸೂಚಿಸಿದರು. ಆದರೆ ಇದಾವರೂ ಯಾರಿಗೆ ಬೇಕಾಗಿದೆ? ಕರ್ನಾಟಕದ ಯಾವ ಜಿಲ್ಲೆಗಳ, ಯಾವ ಸಂಸ್ಥೆಗಳ ಜನರು ಇದನ್ನು ಅನುಮೋದಿಸಿ, ಸಭೆಗಳನ್ನು ನೆರೆಯಿಸಿ, ಈ ಉದ್ಯಮಕ್ಕೆ ಬೆಂಬಲವನ್ನು ಕೊಟ್ಟರು? ನಮ್ಮ ಡಾ|| ಯು. ರಾಮರಾಯರವರು ಸ್ಟೇಟ ಕೌನ್ಸಿಲದಲ್ಲಿ ಕರ್ನಾಟಕ ರಾಷ್ಟ್ರನಿರ್ಮಾಣದ ಕುರಿತು ಸೂಚನೆಯನ್ನು ಕಳುಹಿಸಿರುವರು ಇದಕ್ಕಾದರೂ ಉಪಸ್ತಂಭಕವಾಗಿ ಕರ್ನಾಟಕದ ಮಹಾಜನರುಗಳೂ, ಸಂಸ್ಥೆಗಳೂ ನಿರ್ಣಯಗಳನ್ನು ಮಾಡಿ ಪ್ರೆಸ್‌ರಾಯರವರಿಗೆ ಕಳುಹಿಸಿಕೊಟ್ಟರೇ? ಅಕಟಾ! ನಿರ್ಭಾಗ್ಯವಾದ ಕರ್ನಾಟಕದೇಶವೇ! ನಿನ್ನ ಪುತ್ರರ ಅನಾಸ್ಥೆಗಾಗಿ ಎಷ್ಟೆಂದ ಸೊರಗೋಣ!

* * * *

ಸ್ವರಾಜ್ಯಪಾರ್ಟಿ, ರಾಷ್ಟ್ರೀಯ (ನ್ಯಾಶನಲ್) ಪಾರ್ಟಿ, ಸ್ವತಂತ್ರ (ಇಂಡಿಪೆಂಡೆಂಟ) ಪಾರ್ಟಿ, ಜಸ್ಟಿಸ್ (ಬ್ರಾಹ್ಮಣೇತರ) ಪಾರ್ಟಿ ಮುಂತಾದ ಹೆಸರುಗಳಿಗೆ ಕರ್ನಾಟಕದಲ್ಲಿ,- ಮುಖ್ಯವಾಗಿ ಮಂಗಳೂರು ಜಿಲ್ಲೆಯಲ್ಲಿ-- ಏನೇನೂ ಬೆಲೆಯಿಲ್ಲವೆಂದು ತೋರುತ್ತಿದೆ. ಚುನಾವಣೆಗಳೆಲ್ಲ ಪ್ರಾಯಶಃ ಜಾತಿಕುಲಗಳ ಮೇಲೆಯೇ ಹೊಂದಿ ನಡೆಯುತ್ತಲಿವೆಯೆಂದು ಹೇಳಬೇಕಾಗಿದೆ. ಮೊನ್ನೆ ನಡೆದ ಮಂಗಳೂರಿನ ಚುನಾವಣೆಯಲ್ಲಿ ಜಯಶಾಲಿಗಳಾದ ಶ್ರೀ. ನಾಗಣ್ಣ ಹೆಗ್ಗಡೆಯವರು ಸ್ವರಾಜ್ಯಪಾರ್ಟಿಯವರಂತೆ! ಹಾಗೆಂದರೇನು? ಕರ್ನಾಟಕ ರಾಷ್ಟ್ರ ನಿರ್ಮಾಣ ವಿಷಯದಲ್ಲಿಯೂ ಕನ್ನಡಿಗರ ಹಿತಸಂಬಂಧಗಳನ್ನು ಕಾಪಾಡಿ ಕನ್ನಡ ಜಿಲ್ಲೆಗಳಾಗಲಿ, ಭಾಗಗಳಾಗಲಿ ಅನ್ಯರ ಪಾಲಾಗದಂತೆ ಮಾಡುವ ವಿಷಯದಲ್ಲಿಯೂ, ಇವರ ಅಭಿಪ್ರಾಯವೇನು? ಯಾರಾದರೂ ಕೇಳಿದರೆ? ಇವರಾದರೂ ಹೇಳಿದರೇ? ಒಂದಾ ಕಾಣಲಿಲ್ಲ ಕ್ಷಿಪ್ರದಲ್ಲಿಯೇ ಸರ್ವಸಾಮಾನ್ಯವಾದ ಚುನಾವಣೆ (General Elections) ಗಳಾಗುವುವಷ್ಟೆ! ಆಗಲಾದರೂ ಜಾತಿಕುಲಗಳನ್ನು ನೋಡದೆ, ಬ್ರಾಹ್ಮಣ ಬ್ರಾಹ್ಮಣೇತರರೆಂದು ಲಕ್ಷಿಸದೆ, ಈ ಒಂದೇ ವಿಷಯವನ್ನೇ ಮುಂದಿಟ್ಟುಕೊಂಡು ಕನ್ನಡಿಗರು ತಮ್ಮ ಓಟುಗಳನ್ನು ಯೋಗ್ಯರಾದ ಜನರಿಗೆ ಕೊಡುವರೇ? ಸಂಯುಕ್ತ ಕರ್ನಾಟಕದ ವಿಷಯವಲ್ಲಿಪ್ರತಿ ಉಮೇದುವಾರರ ಅಭಿಪ್ರಾಯವನ್ನು ಮುಂದಾಗಿ, ಬಹಿರಂಗವಾಗಿ, ಕೇಳಿಕೊಳ್ಳುವರೇ? ಹೀಗೆ ಮಾಡಿದರೆ ಮಾತ್ರವೇ ಕನ್ನಡಿಗರಿಗೂ ಕನ್ನಡ ದೇಶಕ್ಕೂ ಉಳಿಗಾಲವಿದೆಯೋ ವಿನಾ ಅನ್ಯಥಾ ಇಲ್ಲವೆಂದು ಸಾರಿಸಾರಿ ಹೇಳುವೆವು.

* * * *

ಕನ್ನಡಿಗರು ಎಚ್ಚತ್ತುದನ್ನು [(ನಿಜವಾಗಿಯೂ ಎಚ್ಚತ್ತಿರುವರೇ?) ಕಂಡು ಆಂಧ್ರರು ನಿರಾಶರಾದರೆಂದು ತಿಳಿದರೆ, ತಿಳಿದು ಮರಳಿಯೂ ನಿದ್ದೆ ಹೋದರೆ, ಕನ್ನಡಿಗರಷ್ಟು ಮೂಢರು ಇಲ್ಲವೆಂದು ಹೇಳಬಹುದು ಶ್ರೀ. ಡಾ. ಯು. ರಾಮರಾಯರವರ ಕರ್ನಾಟಕ ರಾಷ್ಟ್ರನಿರ್ಮಾಣ ಸೂಚನೆಯಿಂದ ಆಂಧ್ರರ ಹೊಟ್ಟೆಯಲ್ಲಿ ಸಾಸುವೆ ಅರೆದಂತಾಗಿದೆ. ಅವರು ಹಲವೆಲ್ಲ ಕುಹಕಗಳಿಗೂ ಒಳಸಂಚುಗಳಿಗೂ ಪ್ರಾರಂಭಿಸಿರುವರು. ತೆಲುಗರಾದ ಶ್ರೀ. ರಾಮದಾಸರು ಶ್ರೀ ರಾಮರವರ ಆ ಸೂಚನೆಯು ಸ್ವರಾಜ್ಯಪಕ್ಷೀಯರಿಗೆ ಅಸಮ್ಮತವೆಂದು ಪತ್ರಿಕೆಗಳಲ್ಲಿ ವಾದಿಸಿದರು. ಆದರೆ ಕನ್ನಡಿಗರು ಆ ಅಭಿಪ್ರಾಯವನ್ನು ಅನುಮೋದಿಸದೆ ಶೀಘ್ರವಾಗಿಯೇ ಪ್ರತ್ಯುತ್ತರ ಕೊಟ್ಟರು. ಈಗಲಿನ್ನು ಬಳ್ಳಾರಿಯ ಜನರಿಗೆ ತಮ್ಮ ನಾಟಕಕಲಾಪ್ರವೀಣತೆಯ ಪೂರ್ವಸ್ಮರಣೆಯು ಪುನಃ ಉಂಟಾದಂತಿದೆ. ಬಳ್ಳಾರಿಯ ಆಂಧ್ರ ಪ್ರಮುಖರು ಸೇರಿ 'Bellary Dramatic Association' ಎಂಬ ಸಂಸ್ಥೆಯನ್ನು ಹೊರಡಿಸಲು ಕೈಕೊಂಡಿರುವರಂತೆ. ಇವರೊಳಗೆ ಕರ್ನಾಟಕರ ಆಕಾಂಕ್ಷೆಗಳಿಗೆ ಪ್ರತಿಪಕ್ಷಿಯಾಗಿ ಬಳ್ಳಾರಿಯಿಂದ ಒಂದು ಶಿಷ್ಟ ಮಂಡಲವನ್ನು ಮದ್ರಾಸಿಗೆ ಕರಕೊಂಡು ಹೋಗಿದ್ದ ದಿವಾನ್ ಬಹದ್ದೂರ್ ಗೋಪಾಲಸ್ವಾಮಿ ಮೊದಲಿಯಾರರವರು ಪ್ರಮುಖರಾದ ಒಬ್ಬರೆಂಬುದು ಕನ್ನಡಿಗರು ಲಕ್ಷಿಸತಕ್ಕ ವಿಷಯವಾಗಿದೆ ಬಳ್ಳಾರಿಯ ಮುದಿ ಜಗ್ಗಣಗಳು ಮೊದಲಿನಂತೆಯೇ ಇದ್ದರೂ, ತರುಣಮಂಡಲಿಯಲ್ಲಿ ಕರ್ನಾಟಕ ಭಾಷಾಭಿಮಾನವೂ, ಹೊಸ ಹುರುಪೂ, ಉಂಟಾದುದನ್ನು ಕಂಡೇ ಈ ದೊಡ್ಡ ಮನಷ್ಯರುಗಳು ಈ ಹೊಸ 'ಕ್ಲಪ್ತಿ'ಯನ್ನು ತೆಗೆದಿರುವರೆಂಬುದು, ಕಣ್ಣಿದ್ದ ಯಾರಿಗೂ ಹೊಳೆಯದೆ ಹೋಗದು. ಹೀಗಿದ್ದು ಕೂಡ ಕೆಲ ಕೆಲವು ಕನ್ನಡಿಗರೂ ಸಹ ಇದರಲ್ಲಿ ಸೇರಿಕೆಯಾಗಿರುವಂತೆ ತಿಳಿದು ಬರುತ್ತದೆ ಇದು ನಮ್ಮ ದುರದೃಷ್ಟ. ಆದರೆ ನಿರುಪಾಯವಾದ ವಿಷಯ. ಸುಮಾರು ೩೦ ವರ್ಷಗಳಿಗೆ ಹಿಂದೆ ಅಜ್ಞಾನ್ನಕವಾಗಿದ್ದ ಬಳ್ಳಾರಿಯ ಜನರುಗಳಿಗೆ ಕನ್ನಡಿಗರಿಂದಲೇ ನಡೆಸಲ್ಪಟ್ಟ 'ಸರಸವಿನೋದಿನೀ' ಎಂಬ ಸಭೆಯವರು ತೆಲುಗು ನಾಟಕಗಳ ಹುಚ್ಚು ಹಿಡಿಸಿ, ಆ ಜಿಲ್ಲೆಯನ್ನು ಆಂಧ್ರವಾಗಿ ಮಾರ್ಪಡಿಸಿದ ವಿಷಯವನ್ನು ಬಳ್ಳಾರಿಯ ಆಂಧ್ರರು ಇನ್ನೂ ಮರೆತಿಲ್ಲ. ಮತ್ತು ಮೆಲ್ಲಮೆಲ್ಲನೆ ಬೆಳೆಯುತ್ತಲಿರುವ ಕರ್ನಾಟಕ ಭಾಷಾಭಿಮಾನವನ್ನು ಮುಚ್ಚಿಡಗಿಸಿ ಬಿಡುವುದಕ್ಕಾಗಿಯೇ ಅವರು ಈ ರಾಮಬಾಣ ವೈಶಿಷ್ಟವನ್ನು ಪುನಃ ಮಸಕಿ ತೆಗೆದಿರುವರೆಂಬುದು ಸ್ಪಷ್ಟವು ಆದಿರಲಿ ಇದಕ್ಕೆ ಕನ್ನಡಿಗರ ಪ್ರತ್ಯುತ್ತರವಾದರೂ ಏನು?

ನಿಜ ಪ್ರಾದ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯವರು ಕರ್ನಾಟಕ ಪ್ರಾಂತ್ಯ ರಚನೆಗೆ ಬೇಕಾದ ಸಮಾಚಾರಗಳನ್ನು ಸಂಗ್ರಹಿಸುತ್ತಿರುವರಂತೆ. ಮತ್ತು ಮೇ ತಿಂಗಳ ಕೊನೆಗೆ ಬಳ್ಳಾರಿಯಲ್ಲಿ ಮಹಾಸಭೆ ಸೇರಿಸುವರಂತೆ ಅದರ ಉಪಯೋಗವೇನು? ಬಳ್ಳಾರಿಯ ಕನ್ನಡಿಗರೇ ತಮಗೆ ಕನ್ನಡ ಬೇಕಿಲ್ಲ, ಭಾಷೆಯೂ ಬೇಡವೆಂದೂ, ಆಂಧ್ರದ ಸಹವಾಸವೇ ಬೇಕೆಂದೂ, ಇಮಿತಾಡಿದ ಪಕ್ಷದಲ್ಲಿ, ಇವರೇನು ಮಾಡಬಲ್ಲರು? ಹೀಗಾಗುವದರಿಂದ ಅಂಥ ದುರ್ಘಟನೆ ಬಾರದಂತೆ ಮುಂದಾಗಿ ತಕ್ಕ ಏರ್ಪಾಡುಗಳನ್ನು ಮಾಡಬೇಕಾದುದು ಆ ಕಮಿಟಿಯವರ ಕರ್ತವ್ಯವಲ್ಲವೇ? ಬಾಣಕ್ಕೆ ಪ್ರತಿ ಬಾಣ ಹೂಡಿ ನಮ್ಮ ಪ್ರತಿಪಕ್ಷಿಗಳನ್ನು ಮೊದಲಿಂದಲೂ ಮುರಿಯಬೇಕಾದುದು ಅವಶ್ಯವಲ್ಲವೇ? ಉಪನ್ಯಾಸಗಳಿಂದಲೂ, ಲೇಖನಗಳಿಂದಲೂ, ಮಹಾಸಭೆಗಳಿಂದಲೂ, ನಾಟಕಾದಿಗಳಿಂದಲೂ, ಕನ್ನಡಿಗರಲ್ಲಿ ಕನ್ನಡದ ವಿಷಯದಲ್ಲಿ ಅಭಿಮಾನವನ್ನು ಹುಟ್ಟಿಸಿ, ಬೆಳೆಯಿಸಬೇಕಲ್ಲವೇ? ಯಾವುದಕ್ಕಿಂತಲೂ ಮುಖ್ಯವಾಗಿ ಸಾಧನಪಟ್ಟಗಳ ಕಡೆಗೆ ಲಕ್ಷಿಸದೆ ಪರಮೋದ್ದೇಶವನ್ನೇ ಗಮನಿಸಿ, ನಮ್ಮ ವಿರೋಧಿಗಳ ತಂತ್ರಗಳನ್ನೆಲ್ಲ ಮುರಿಯುವಂತೆಯೂ, ಅವರು ನಮ್ಮ ಕನ್ನಡಿಗರ ಮನಸ್ಸುಗಳನ್ನು ಕೆಡಿಸುವದಕ್ಕಾಗಿ ಪ್ರಚುರ ಗೊಳಿಸುವ ಸುಳ್ಳು ಅಭಿಪ್ರಾಯಗಳನ್ನು ಆಗಾಗಲೇ ಖಂಡಿಸುವಂತೆಯೂ ಕರ್ನಾಟಕದ ಪೂರ್ವ ಮಹತ್ವವು ಕನ್ನಡಿಗರ ಮನಸ್ಸಿನಲ್ಲಿ ಮೂಡುವಂತೆಯೂ, ಕರ್ನಾಟಕ ರಾಜ್ಯಕ್ಕೆಲ್ಲ ಸ್ಫೂರ್ತಿದಾಯಕವಾಗುವಂತೆ ಬಳ್ಳಾರಿಯಲ್ಲಿ ಒಂದು ಬಲವಾದ ಕನ್ನಡ ವಾರಪತ್ರಿಕೆಯನ್ನು ಒಡನೆಯೇ ಹೊರಡಿಸಿ ನಡೆಯಿಸಿ ಕೊಂಡು ಬರಬೇಕಾದುದು ಈ ಕರ್ನಾಟಕ ಕಾಂಗ್ರೆಸ್ ಕಮಿಟಿಯವರು ಮಾಡಬೇಕಾದ ಮೊದಲನೆಯ ಕೆಲಸವಲ್ಲವೇ?

— ಕೇಶವ

ಮಂಗಳೂರ.

(ನಮ್ಮ ಸ್ವಂತ ಸುದ್ದಿಗಾರನಿಂದ) ೪-೩-೨೬

ಕರ್ನಾಟಕ ಏಕೀಕರಣ ಸಭೆ— ಇಂದು ಸಾಯಂಕಾಲ ೫-೪೫ ಗಂಟೆಗೆ ಇಲ್ಲಿಯ ಕೆನರಾ ಶಾಲೆಯ "ಭುವನೇಂದ್ರ" ಸಭಾ ಮಂದಿರದಲ್ಲಿ ಕರ್ನಾಟಕ ಏಕೀಕರಣದ ಕುರಿತು ಒಂದು ಸಭೆಯು ಜರುಗಿತು. ಏಕೀಕರಣದ ಉದ್ದಿಶ್ಯ ಬದ್ಧಕಂಕಣರಾಗಿ ಹೊರಟ ರಾವ್ ಬಹುದ್ದೂರ್ ಡಾಕ್ಟರ್ ಸಿ. ಬಿ. ರಾಮರಾವ್ ಬಿ. ಎ. ಎಮ್. ಡಿ. ಯವರು ಸಭೆಗೆ ಚಿತ್ತೈಸಿದ್ದರು. ಸದಸ್ಯರ ಅನುಮೋದನೆ ಪ್ರಕಾರ ಮಂಗಳೂರು ಹೈಕೋರ್ಟ ವಕೀಲ್ ಶ್ರೀಯುತ ಅಮ್ಮೆಂಬಳ ಶ್ರೀನಿವಾಸಪೈ ಬಿ. ಎ. ೭. ಎಲ್ ರವರು ಅಧ್ಯಕ್ಷಸ್ಥಾನವನ್ನಲಂಕರಿಸಿ ಭಾಷಣ ಕರ್ತರಾದ ಡಾಕ್ಟರರ ಜನ್ಮಕಥನವನ್ನು ವಿವರಿಸಿ ಸಭಿಕರಿಗೆ ಪರಿಚಯಗೊಳಿಸಿದರು ಸ್ಥಳೀಕ ಹಲವು ಪಂಡಿತರೂ, ವಕೀಲರೂ ಮಾನ್ಯ ಡಿಸ್ಟ್ರಿಕ್ಟ್ ಬೋರ್ಡ ಪ್ರೆಸಿಡೆಂಟರಾದ ರಾವ್ ಬಹದ್ದೂರ್ ನಯಂಪಳ್ಳಿ ಸುಬ್ಬರಾವ್ ಅವರ್ಗಳವರೂ ಇನ್ನೂ ಅನೇಕ ವಿದ್ಯಾವಂತರೂ ಸಭೆಗೆ ನೆರೆದಿದ್ದರು. ರಾವ್ ಬಹದ್ದೂರ ರಾಮರಾಯರು ಭಾಷಣವಿತ್ತದ್ದೇನಂದರೆ:- ತಾನು ಸುಮಾರು ೪೦ ವರ್ಷಗಳಿಂದ ಮಲೆಯಾಳಿ ತೆಲಗು ದೇಶಗಳಲ್ಲಿದ್ದು ಮಾತೃಭಾಷೆಯಾದ ಕನ್ನಡವು ಮರೆತಂತಾಗಿದೆಯೆಂತಲೂ ಆದುದರಿಂದ ಕನ್ನಡಿಗನಾದ ನನಗೆ ಈವತ್ತು ಇಂಗ್ಲೀಷಿನಲ್ಲಿ ಮಾತಾಡಲು ಕಾರಣವಾಗಿರುವದರಿಂದ ಬಹಳ ವ್ಯಸನವೆನ್ನಿಸುತ್ತದೆಂದೂ ಈಗ ಕನ್ನಡವನ್ನು ಕಲಿಯಲು ಉಪಕ್ರಮಿಸಿದ್ದೇನಂತಲೂ, ಮುಂದಕ್ಕೆ ಕನ್ನಡಲ್ಲಿಯೇ ಮಾತಾಡಲು ಪ್ರಯತ್ನ ಪಡುವನೆಂದು ಒತ್ತಿ ಹೇಳಿದರು. ನಂತರ ಆಂಧ್ರ, ತಮಿಳು, ಮಲೆಯಾಳಿ ದೇಶಗಳ ಜನರು ತಮ್ಮ ಭಾಷಾವನತೆಯ ಉನ್ನತಿಗಾಗಿ ಮುಂದುವರಿದು ಅಖಿಲ ಪ್ರೌಢವಿದ್ಯಾಲಯಗಳನ್ನು ಸ್ಥಾಪಿಸಿ ಇಲ್ಲವೇ ಸದ್ಯದಲ್ಲಿ ಸ್ಥಾಪಿಸಲಿಕ್ಕಿರುವರೆಂದೂ ಆದರೆ ಹಿಂದೆ ವಿಜಯನಗರ ರಾಜರ ಕಾಲದಲ್ಲಿ ಉನ್ನತಿಗೆ ಬಂದಿದ್ದ ಕನ್ನಡಭಾಷೆಯು ಇಂದು ನಾಮಾವಶೇಷವಾಗುತ್ತ ಬರುತ್ತದೆಂತಲೂ, ಇದು ಕನ್ನಡಿಗರಾದ ನಮ್ಮ ಉದಾಸೀನದಿಂದಾಗಿರುತ್ತದೆಂದೂ, ಕರ್ನಾಟಕದಲ್ಲೇ ಮಿತಿಮೀಲ್ಲದಷ್ಟು ಕನ್ನಡ ಪ್ರಜೆಗಳಿರುವರೆಂದೂ, ಖಾನೆಸುಮಾರಿಯ ಲೆಕ್ಕವನ್ನು ನೋಡುವದಾದರೆ ವರ್ಷ ಹೋಗುತ್ತ ಕನ್ನಡಿಗರ ಸಂಖ್ಯೆಯು ಕ್ಷೀಣವಾಗುತ್ತಾ ಬರುತ್ತದೆಂದೂ ಆದಕಾರಣ ಇನ್ನಾದರೂ ನಾವು ಬೇರೆ ವಿಶ್ವವಿದ್ಯಾಲಯಗಳನ್ನು ಆದರ್ಶವಾಗಿಟ್ಟುಕೊಂಡು ಮಾತೃಭಾಷೆಯ ಸಲುವಾಗಿ ಪ್ರಯತ್ನಪಡುವದು ನಮ್ಮ ಕರ್ತವ್ಯವೆಂದು ಹೇಳಿದರಲ್ಲದೆ ಕನ್ನಡ ಸಹೋದರರೇ! ಮಲಬಾರು ಪ್ರಾಂತದಲ್ಲಾಗಲಿ, ಯಾವ ಮತದವನೇ ಆಗಲಿ ಮಲೆಯಾಳಿಯನ್ನರಿತಿದ್ದು ಆ ಭಾಷೆಯನ್ನೇ ಆಡುತ್ತಿರುವರು. ನಾವಾದರೋ ಮತಕ್ಕೊಂದು ಭಾಷೆ, ಮನೆಗೊಂದು ಭಾಷೆ; ಊರಿಗೊಂದು ಭಾಷೆ; ಹೀಗಾಗಿ ನಮ್ಮ ಕರ್ನಾಟಕ ಭಾಷೆಗೆ ಸಂಶಯವು ಹಿಡಿದಿರುತ್ತದೆ. ಆದರೆ ಈ ದುರ್ದಶೆಯನ್ನು ನಿವಾರಿಸಲು ಬೇಕಾದುದು ಅದೇನು? ಕರ್ನಾಟಕ ಪ್ರಾಂತರಚನೆ ಐಕ್ಯಮತ್ಯ ಸಾಧನೆ. ಕರ್ನಾಟಕರಾದ ನಾವೆಲ್ಲರೂ ಒಂದಾಗಿ ಕಲೆತು ಬೆಳಗಾವಿಯ ನಮ್ಮ ಬಂಧುಗಳನ್ನೂ ಮುಂಬಯಿಯ ಸಹೋದರರನ್ನೂ, ಧಾರವಾಡದ ಮಿತ್ರರನ್ನೂ ಎಲ್ಲಾ ಕನ್ನಡಿಗರೊಡಗೂಡಿ ಆಂಧ್ರ ಜನರಂತೆ ವಿಶ್ವವಿದ್ಯಾಲಯಕ್ಕಾಗಿ ಸಾಧಿಸಬೇಕು. ಹೀಗೆ ನಾವು ಸ್ಥಾಪಿಸಿದರೆ ಸರಕಾರವು ಒಲ್ಲೆಂದು ಹೇಳುವದೇನು? ಆದರೆ ಈ ವಿಶ್ವವಿದ್ಯಾಲಯವು ಏರ್ಪಡಿಸುವದಾದರೂ ಎಲ್ಲಿ? ದಕ್ಷಿಣಕನ್ನಡದಲ್ಲಿಯೂ ಮುಂಬಯಿಯಲ್ಲಿಯೂ ಆಗುವಂತಿಲ್ಲ ಇನ್ನು ಮೈಸೂರಿನ ಮಾತು. ಅವರೂ ನಮ್ಮವರೇ ಇದಕ್ಕಾಗಿ ನಾವು ಸಾಧಿಸಿದರೆ ಮೈಸೂರು ಸರಕಾರವು ಒಲ್ಲೆಂದು ಹೇಳಲಾರರು. ಮೈಸೂರ್ಶ್ರೀ ಮಹಾರಾಜರು ಸ್ವತಃ ಕನ್ನಡಿಗರಾಗಿದ್ದು ತಮ್ಮ ಅರಮನೆಯಲ್ಲಿ ಕನ್ನಡ ಭಾಷೆಯನ್ನೇ ಆಡುವರು. ಆದರೆ ಪ್ರಥಮತಾ ಮುಂದುವರಿಯತಕ್ಕವರು ನಾವು, ಈ ಕುರಿತು ಡಾಕ್ಟರ್ ಯು. ರಾಮರಾಯರವರು ಸ್ವತಃ ಈ ವಿಚಾರವನ್ನು ಮುಂದೆ ಡಿಲ್ಲಿಗೆ ಹೋಗತಕ್ಕವರು ಮೈಸರಾಯರೊಡನೆ ನಿವೇದಿಸಲಿಕ್ಕಿರುವರು.

ಭಾಷಣವು ಸಮಾಪ್ತಿಯಾಗಲು ನೆರೆದ ಸದಸ್ಯರೊಳ್ಳಬ್ಬರು ಸಭೆಯ ಉದ್ದೇಶವೇ ಕರ್ನಾಟಕ ಸಮೀಕರಣ ವೆಂತಾದರೆ ಭಾಷಣವು ಕನ್ನಡದಲ್ಲಿ ಆಗತಕ್ಕದೆಂದು ಸೂಚಿಸಲು ಸಭಿಕರಲ್ಲಿ ನ್ಯೂಟರು ಶ್ರೀಯುತರ ಭಾಷಣದ ತಾತ್ಪರ್ಯವನ್ನು ಸರಸವಾದ ಕನ್ನಡ ಮೃದು ಮಧುರ ವಾಣಿಯಿಂದ ಚಳೋರೀತಿಯಲ್ಲಿ ವಿವರಿಸಿದರು ತರುವಾಯ ಮತ್ತೊಬ್ಬರು ಕನ್ನಡವು ಮಾತೃಭಾಷೆಯು ಮಾತ್ರ ಭಾಷೆಯಾಗಿದ್ದರೂ ಅದಕ್ಕೆ ಹೆಚ್ಚಿನ ಗೌರವವು ಕೊಡಬೇಕೆಂದಿದ್ದರೂ ಸದ್ಯದ ಸ್ಥಿತಿಯಲ್ಲಿ ಅದು ಕಲಿತವರು ತಪ್ಪನೆ ಮನೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆಂದೂ ಹಿಂದೆ ಕನ್ನಡವನ್ನು ಶಾಲೆಗಳಲ್ಲಿ ಒತ್ತಾಯವಾಗಿ ಕಲಿಸುತ್ತಿದ್ದರೆಂದೂ ಈಗಬಾದರೋ ಅದು ಕಲಿಯುವವನ ಇಚ್ಛೆಯೆಂದೂ ಈ ಕಾರಣಗಳಿಂದ ಕನ್ನಡಿಗರು ವಿರಳರಾಗುತ್ತ ಬಂದಿರುವರೆಂದೂ- ಇವೇ ಮೊದಲಾದ ತಂತಮ್ಮ ಸದಭಿಪ್ರಾಯಗಳನ್ನು ಪ್ರಕಟಿಸಿದರು. ಸದಸ್ಯರಲ್ಲನೇಕರು ಮಾತನಾಡುವಾಗ ಇಂಗ್ಲೀಷ ಶಬ್ದಗಳು ಕಲಿತಿರುವದಾದರೂ ಇವರು ಕನ್ನಡದಲ್ಲೇ ಮಾತನಾಡಲು ಪ್ರಯತ್ನ ಪಟ್ಟುದು ಸ್ತುತ್ಯವೇಸರಿ. ತರುವಾಯ ರಾವ್ ಬಹದ್ದೂರ ಎಸ್. ಸುಬ್ಬರಾವ್ ಅವರ್ಗಳವರು ಕರ್ನಾಟಕ ವಿಶ್ವವಿದ್ಯಾಲಯದ ಕುರಿತು ಅತ್ಯಗತ್ಯವಾದ ಏರ್ಪಾಡುಗಳು ಮಾಡುವದು ನಮ್ಮೆಲ್ಲರ ಪ್ರಥಮ ಕರ್ತವ್ಯವಾದುದರಿಂದ ಈ ಸಂಸ್ಥೆ ವಿಚಾರಿಸಲು ಸದ್ಯಕ್ಕೆ ಮಂಗಳೂರಿನಲ್ಲಿ ಇದರ ಆದೊಂದು ಉಪಸಭೆಯನ್ನು ನೇಮಿಸುವದು ಅತ್ಯಗತ್ಯವೆಂದೂ ಇದು ಕನ್ನಡಭಾಷೆಯ ಊರ್ಜಿತಕ್ಕೆ ಹೆದ್ದಾರಿಯೆಂದೂ ವಿವರಿಸಿ ಒಂದು ಠರಾವನ್ನು ಸಭೆಯು ಮುಂದಿಟ್ಟರು. ಸದಸ್ಯರೆಲ್ಲರೂ ಕೃತಜ್ಞತಾಪೂರ್ವಕ ಸಮ್ಮತಿಯಿತ್ತುದರಿಂದ ಠರಾವು ಸರ್ವಸಮ್ಮತದಿಂದ ಪಾಸಾಯಿತು. ಇದಕ್ಕೆ ಕೆಲವು ಮಹನೀಯರನ್ನು ನಿಯಮಿಸಿ ಉಪಸಭೆ ನಿರ್ಮಿಸಲಾಯಿತು. ತರುವಾಯ ರಾವ್ ಬಹಾದ್ದೂರ್ ಸಿ ಬಿ ರಾಮರಾಯರು ಮುಂದೆ ಕರ್ನಾಟಕ ಪ್ರಾಂತಗಳಲ್ಲಿ ಈ ವಿಷಯದ ಕುರಿತು ಭಾಷಣಗಳನ್ನು ಕೊಟ್ಟು ಅವರ ಅನುಮೋದನೆಗಳನ್ನು ಪಡೆಯಬೇಕೆಂದು ಎರಡನೆಯ ಠರಾವು ಮಂಜೂರುಮಾಡಿ ಅತಿಥಿಗಳಾದ ರಾಮರಾಯರಿಗೆ ಧನ್ಯವಾದವನ್ನು ಅರ್ಪಿಸಿ ಸಭೆಯು ಮುಕ್ತಾಯವಾಯಿತು.

ನೋಟೀಸು

ಈ ಜಿಲ್ಹೆಯೊಳಗಿನ ಪಬ್ಲಿಕ ವರ್ಕ್ಸ ಖಾತೆಕ್ಕೆ ಬೇಕಾಗುವ ಕಿರಕೋಳ ಸಾಮಾನ ೧೯೨೬ ೧೯೨೭ ಸಾಲಿನಲ್ಲಿ ಪುರವಠೆ ಮಾಡುವದಕ್ಕೆ ಮೊಹರಬಂದ ಟೆಂಡರಗಳು ತಾರೀಖು ೧೫ ನೇ ಮಾರ್ಚ ೧೯೨೬ ದಿವಸ ಕೆಳಗೆ ಸಹಿ ಮಾಡುವವರ ಕಚೇರಿಯಲ್ಲಿ ತಗೊಳ್ಳಲಾಗುವವು. ಬಾಕಿ ಮಾಹಿತಿ ಸದರ ಕಚೇರಿಯಲ್ಲಿ ಸಿಗುವದು.

Bijapur 17th February 1926.	}	Sd/- S. P. Pe_e Executive Engineer Bijapur District.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

೫ ಸುಬಂಧಿಕರ ವಾಡೇ ೪೯೩ ಶನಿವಾರ ಪುಣೇಶಹರ

ರಕ್ತ ಶುದ್ಧಿ ಮತ್ತು ವೀರ್ಯ ವರ್ಧಕ ಹೊಟ್ಟೆನೋವು ಹೊಟ್ಟೆನೋವು

೫	,,	೧೭೭	೨೪	೨೪	೩೧	—	—	ಜಾತ ಇನಾಮು
೬	,,	೧೭೭	೧೮	೬	೨೨	—	—	,,

ಟೀಪು:— ಸರ್ವೇ ನಂಬರ ೧೭೭ ವ ೧೭೭ ಇವುಗಳ ಈಗ ಇದ್ದ ಕವಲಿ ಹಕ್ಕು ಯಿಟ್ಟು ಲಿಲಾವ ಮಾಡುತ್ತಿದೆ

ಲಿಲಾವಿನ ಶರ್ತಗಳು.

೧ ಮೇಲೆ ನಮೂದ ಮಾಡಿದ ಜಮೀನುಗಳನ್ನು ಒಂದೊಂದಾಗಿ ಅಥವಾ ಎರಡು ಆಗರ ಹೆಚ್ಚು ಒಮಿ ನುಗಳನ್ನು ಕೂಡಿಸಿ ಮಾಡುವದರಿಂದ ಇವುಗಳಲ್ಲಿ ಯಾವದು ಸೋಯಿಸ್ಕರವೆಂತಾ ಅನಿಸುವದೋ ಅದರಂತೆ ಮಾಡುವದ ಲ್ಲಿ ಬರುವದು.

೨ ಲಿಲಾವಿನ ಕೆಲಸವು ಯಾವಸ್ಥಿತಿಯಲ್ಲಿದ್ದರೂ ತಹಕೂಬ ಇಡುವದು ಲಿಲಾವ ಮಾಡುವ ಅಧಿಕಾರಸ್ಥರಿಗೆ ವಾಜವಿ ಅಂತಾ ಕಂಡು ಬಂದಲ್ಲಿ ಲಿಲಾವ ತಹಕೂಬ ಇಡುವದರಲ್ಲಿ ಬರುವದು

೩ ಲಿಲಾವ ಮೂಲು ವಾರ ಆಗುವದು. ಆದರೆ ಲಿಲಾವು ಮೆ॥ ಕಲೇಕ್ಟರಸಾಹೇಬ ಬಹಾದ್ದೂರ ಜಿಲ್ಹಾ ವಿಜಾಪೂರ ಇವರ ಮಂಜೂರಿಗೆ ಒಳಪಟ್ಟಿರುವದು.

೪ ಲಿಲಾವು ಮಂಜೂರ ಮಾಡುವದು ಆಗರ ಬಿಡುವದು ಮೆ॥ ಕಲೇಕ್ಟರ ಸಾಹೇಬ ಬಹಾದ್ದೂರ ಜಿಲ್ಹಾ ವಿಜಾಪೂರ ಇವರ ಮರ್ಜಿ ಪ್ರಕಾರ ಇರುವದು.

೫ ಲಿಲಾವಿನಲ್ಲಿ ಸವಾಲ ಮಾಡಲಿಚ್ಛಿಸುವವರು ತಮ್ಮ ಲಾಯಖೀ ಬಗ್ಗೆ ತಮ್ಮ ತಾಲೂಕದ ಮಾಮಲೇದಾರ ಸಾ॥ ರ ಕಡೆಯಿಂದಾ ಲಾಯಖೀ ಸರ್ಟಿಫಿಕೇಟ ತರತಕ್ಕದ್ದು ಸರ್ಟಿಫಿಕೇಟ ಹಾಜರಮಾಡದ ಜನರಿಗೆ ಸವಾಲ ಮಾಡಲಿಕ್ಕೆ ಪರವಾನಗಿ ಕೊಡಲಾರದು.

೬. ಲಿಲಾವಿನಲ್ಲಿ ಆಖೈರ ಸವಾಲಿಗೆ ಬೀಳುವವರು ಆಖೈರ ಸವಾಲಿನ ¼ ಹಣವನ್ನು ಲಿಲಾವಿನ ಕಾಲಕ್ಕೆ ಹಜರ ಭರತಕ್ಕದ್ದು, ವ ಉಳಿದ ¾ ಹಣವನ್ನು ಲಿಲಾವ ಮಂಜೂರಾದ ತಾರೀಖಿನಿಂದಾ ೧೫ ದಿವಸಗಳಲ್ಲಿ ವಿಜಾಪೂರ ತಾಲೂಕದ ಮಾಮಲೇದಾರ ಸಾ॥ ರ ತಿಜೋರಿಯಲ್ಲಿ ಭರಣಾ ಮಾಡತಕ್ಕದ್ದು.

ತಪ್ಪಿದಲ್ಲಿ ಆದ ಲಿಲಾವ ರದ್ದ ಮಾಡಿ ಹಜರ ಭರಿಸಿದ ¼ ಹಣವನ್ನು ಜಪ್ತ ಮಾಡಿ ಸದರಹು ಆಸ್ತಿಯನ್ನು ಫೇರ ಲಿಲಾವ ಮಾಡಿ ಕಡಿಮೆ ಬೀಳೋ ರಕಮನ್ನು ಮೂಳ ಲಿಲಾವದಾರನ ಕಡಿಂದಾ ವಸೂಲ ಮಾಡುವದರಲ್ಲಿ ಬರುವದು.

೭ ಮೆ॥ ಕಲೆಕ್ಟರ ಸಾಹೇಬ ಬಹಾದ್ದೂರ ಜಿಲ್ಹಾ ವಿಜಾಪೂರ ಇವರ ಕಡಿಇಂದಾ ಲಿಲಾವ ಮಂಜೂರ ಆಗಿ ಬರದ ಹೊರತು ಸದರಹು ಆಸ್ತಿಯ ವಿಕ್ರಿ ಪಕ್ಕಾ ಆಗಲಾರದು. ವಿಕ್ರಿಯು ಮಂಜೂರ ಆಗಿ ಠರಾಯಿಸಿದ ನಂತರ ವಿಕ್ರಿಯು ದಾಖಲೆ ಕೊಡುವ ದರಲ್ಲಿ ಬರುವದು.

V. H. NAIK.

ಕಲೇಕ್ಟರ ಮತ್ತು ಕೋರ್ಟ ಆಫ್ ವಾರ್ಡ್ಸ ಜಿಲ್ಹಾ ವಿಜಾಪೂರ

ವಿಜಾಪೂರ
ತಾ॥ ೫ ೨ ೧೯೩೬

ಮಂಗಳೂರ.

(ನಮ್ಮ ಸ್ವಂತ ಸುದ್ದಿಗಾರರಿಂದ) ೯-೨-೨೬

ಕರ್ನಾಟಕ ಏಕೀಕರಣ ಸಭೆ:— ಇಂದು ಸಾಯಂಕಾಲ ೫-೬೪ ಗಂಟೆಗೆ ಇಲ್ಲಿಯ ಕೆನರಾ ಶಾಲೆಯ "ಭುವನೇಂದ್ರ" ಸಭಾ ಮಂದಿರದಲ್ಲಿ ಕರ್ನಾಟಕ ಏಕೀಕರಣದ ಕುರಿತು ಒಂದು ಸಭೆಯು ಜರುಗಿತು. ಏಕೀಕರಣದ ಉದ್ದಿಷ್ಟ ಬದ್ಧಕಂಕಣರಾಗಿ ಹೊರಟ ರಾವ್ ಬಹದ್ದೂರ್ ಡಾಕ್ಟರ್ ಸಿ. ಬಿ. ರಾಮರಾವ್ ಬಿ. ಎ. ಎಮ್. ಡಿ. ಯವರು ಸಭೆಗೆ ಚಿತ್ತೈಸಿದ್ದರು. ಸದಸ್ಯರ ಅನುಮೋದನೆ ಪ್ರಕಾರ ಮಂಗಳೂರು ಹೈಕೋರ್ಟು ವಕೀಲ್ ಶ್ರೀಯುತ ಅಮ್ಮೆಂಬಳ ಶ್ರೀನಿವಾಸಪೈ ಬಿ. ಎ. ಬಿ. ಎಲ್‌ರವರು ಅಧ್ಯಕ್ಷಸ್ಥಾನವನ್ನಲಂಕರಿಸಿ ಭಾಷಣ ಕರ್ತರಾದ ಡಾಕ್ಟರರ ಜನ್ಮಕಥನವನ್ನು ವಿವರಿಸಿ ಸಭಿಕರಿಗೆ ಪರಿಚಯಗೊಳಿಸಿದರು. ಸ್ಥಳೀಕ ಹಲವು ಪಂಡಿತರೂ. ವಕೀಲರೂ ಮಾನ್ಯ ಡಿಸ್ಟ್ರಿಕ್ಟ್ ಬೊರ್ಡು ಪ್ರೆಸಿಡೆಂಟರಾದ ರಾವ್ ಬಹದ್ದೂರ್ ನಯಂಪಳ್ಳಿ, ಸುಬ್ಬರಾವ್ ಆ ವರ್ಗಗಳವರೂ ಇನ್ನೂ ಅನೇಕ ವಿದ್ಯಾವಂತರೂ ಸಭೆಗೆ ನೆರೆದಿದ್ದರು. ರಾವ್ ಬಹದ್ದೂರ ರಾಮರಾಯರು ಭಾಷಣವಿತ್ತದ್ದೇನೆಂದರೆ:- ತಾನು ಸುಮಾರು ೪೦ ವರ್ಷಗಳಿಂದ ಮಲೆಯಾಳಿ ತೆಲುಗು ಪದದಲ್ಲಿಯೂ ಮುಂಬಯಿಯಲ್ಲಿಯೂ ಆಗುವಂತಿಲ್ಲ ಇನ್ನು ಮೈಸೂರಿನ ಮಾತ.. ಅವರೂ ನಮ್ಮವರೇ ಇದಕ್ಕಾಗಿ ನಾವು ಸಾಧಿಸಿದರೆ ಮೈಸೂರು ಸರಕಾರವು ಒಲ್ಲೆಂದು ಹೇಳಲಾರರು. ಮೈಸೂರ್ಮಹಾರಾಜರು ಸ್ವತಃ ಕನ್ನಡಿಗರಾಗಿದ್ದು ತಮ್ಮ ಅರಮನೆಯಲ್ಲಿ ಕನ್ನಡ ಭಾಷೆಯನ್ನೇ ಆಡುವರು. ಆದರೆ ಪ್ರಥಮತಾ ಮುಂದುವರಿಯತಕ್ಕವರು ನಾವು, ಈಕುರಿತು ಡಾಕ್ಟರ್ ಯು. ರಾಮರಾಯರುರವರು ಸ್ವತಃ ಈ ವಿಚಾರವನ್ನು ಮುಂದೆ ಡಿಲ್ಲಿಗೆ ಹೋಗತಕ್ಕವರು ವೈಸರಾಯರೊಡನೆ ನಿವೇದಿಸಲಿಕ್ಕಿರುವರು.

ಭಾಷಣವು ಸಮಾಪ್ತಿಯಾಗಲು ನೆರೆದ ಸದಸ್ಯರೊಲ್ಲಬ್ಬರು ಸಭೆಯ ಉದ್ದೇಶವೇ ಕರ್ನಾಟಕ ಸಮೀಕರಣ ವೆಂತಾದರೆ ಭಾಷಣವು ಕನ್ನಡದಲ್ಲಿ ಆಗತಕ್ಕದೆಂದು ಸೂಚಿಸಲು ಸಭಿಕರಲ್ಲಿ ನ್ನೊಬರು ಶ್ರೀಯುತರ ಭಾಷಣದ ತಾತ್ಪರ್ಯವನ್ನು ಸರಸವಾದ ಕನ್ನಡ ಮೃದು ಮಧುರ ವಾಣಿಯಿಂದ ಚಳೋರೀತಿಯಲ್ಲಿ ವಿವರಿಸಿದರು ತರುವಾಯ ಮತ್ತೊಬ್ಬರು ಕನ್ನಡವು ಮಾತೃಭಾಷೆಯು ಮಾತ್ರ ಭಾಷೆಯಾಗಿದ್ದರೂ ಅದಕ್ಕೆ ಹೆಚ್ಚಿನ ಗೌರವವು ಕೊಡಬೇಕೆಂದಿದ್ದರೂ ಸದ್ಯದ ಸ್ಥಿತಿಯಲ್ಲಿ ಅದು ಕಲಿತವರು ತೆಪ್ಪನೆ ಮನೆಯಲ್ಲಿ ಕುಳಿತುಕೊಳ್ಳಬೇಕಾಗುತ್ತದೆಂದೂ ಹಿಂದೆ ಕನ್ನಡವನ್ನು ಶಾಲೆಗಳ ...

ಮುಂಬೈ ಕರ್ನಾಟಕ

ಶ್ರೀ ದೇಶಪಾಂಡೇ ಗಂಗಾಧರರಾಯರು ಖಾದಿಯ ಪ್ರಚಾರದ ಬಗ್ಗೆ ಕಾಲವಾರ, ಮಂಗಳೂರ ಜಿಲ್ಲೆಗಳಲ್ಲಿ ಪ್ರವಾಸಮಾಡತಕ್ಕವರಿದ್ದಾರೆ. ... ಕನ್ನಡಿಗರ ಪತ್ರ ರೂಪಾಯಿಗಳನ್ನು ... ಹಿಸುತ್ತೇವೆ

ಹೋಳಿ ಹಬ್ಬದ ರಜೆ.

ಕನ್ನಡಿಗನ ಮುಂದಿನ ಸಂಚಿಕೆಯು ಹೋಳಿ ಹಬ್ಬದ ಸಲುವಾಗಿ ಹೊರಡುವದಿಲ್ಲ.

ವ್ಯವಸ್ಥಾಪಕ.

ದ್ದಾರೆ. ಅಲ್ಲಿ ಸಹ ಮರಾಟಿಯಲ್ಲಿಯೇ ಭಾಷಣ ಮಾಡುವೆನೆಂದು ಹಟ ಹಿಡಿಯಲಿಕ್ಕಿಲ್ಲವಷ್ಟೆ?

ಅಂಕೋಲೆಯಲ್ಲಿ ಹೊಸ ಗಂಧರ್ವ ನಾಟಕ ಮಂಡಳಿಯು ಸ್ಥಾಪನೆಯಾಗಿದ್ದು ಅವರ "ಸತ್ಯವಿಜಯ" ನಾಟಕವು ಕೆಲದಿನಗಳ ಹಿಂದೆ ಅಭಿನಯಿಸಲ್ಪಟ್ಟಿತು. ಊರಲ್ಲಿಯ ಪ್ರಸಿದ್ಧ ವೈದಿಕರ ಹುಡುಗರು ಸಹ ಇದರಲ್ಲಿ ನಟರಾಗಿದ್ದಾರೆ. ಊರಲ್ಲಿ ಈ ಕಂಪನಿಗೆ ಸಹಕಾರವು ಸಿಕ್ಕಿದೆಯಂತೆ. ಆದರೆ ಸಣ್ಣ ಪುಟ್ಟ ಕಳವಿನಗೂ, ಉಡಾಳ ಹುಡುಗರಿಗೆ ಸ್ವತಂತ್ರ ರೀತಿಯಿಂದ ರಾತ್ರಿ ಕಾಲದಲ್ಲಿ ತಿರುಗಾಡಲಿಕ್ಕೂ ಇಂತಹ 'ಬೇಜವಾಬದಾರ ಕಂಪನಿ' ಯಿಂದ ಸಹಾಯವಾಗಿದೆಯೆಂದು 'ಶಾಸನಾ ಧುರೀಣ'ನ ಬಾತಮೀದಾರರ ಅಭಿಪ್ರಾಯವಿದೆ, ಇದಕ್ಕೆ ನಾಟಕ ಮಂಡಳಿಯವರೂ ಊರಲ್ಲಿಯ ಪ್ರಮುಖರೂ ಏನೆಂಥ ಉತ್ತರ ಕೊಡಬಲ್ಲರು?

ಧಾರವಾಡ ಜಿಲ್ಲೆಯ ವಾಲ್ಮೀಕಿ ಜನರ ಪ್ರಥಮ ಪರಿಷತ್ತು ಹುಬ್ಬಳ್ಳಿಯಲ್ಲಿ ಬಹು ಯಶಸ್ವಿಯಾಗಿ ನಡೆಯಿತು. ೩೫೦೦ ಜನರು ಕೂಡಿದ್ದರು.

ಮದ್ರಾಸ ಕರ್ನಾಟಕ

ಮಂಗಳೂರ ಉಡುಪಿಯಲ್ಲಿ ಗಾಯನ ವಿಶಾರದ ಶ್ರೀ ಬಿಡಾರದ ಕೃಷ್ಣಪ್ಪನವರ ಗಾಯನಕೂಟಗಳಾದವು. ಅವರು ಕಾರ್ಕಳದ ಶ್ರೀನಿವಾಸ ಪ್ರಮೋದಸಂಸ್ಕೃತ ಮಹಾವಿದ್ಯಾಲಯದ ಭೋಜನ ಶಾಲೆಯ ಸಹಾಯಾರ್ಥವಾಗಿ ೫೦ ರೂ ಉಚಿತವಾಗಿ ಕೊಟ್ಟಿರುವರು.

ಉಡುಪಿಯ "ಸತ್ಯಾಗ್ರಹಿ" ಯ ಕಾರ್ಯಾಲಯವು ಇನ್ನು ಮೇಲೆ ಮಂಗಳೂರಿಗೆ ಹೋಗುವದಂತೆ

ಕೋಯಿಮುತ್ತೂರ ಜಿಲ್ಲೆಯ ಪ್ರಥಮ ಆಯುರ್ವೇದ ಪರಿಷತ್ತು ಕಳೆದ ವಾರದಲ್ಲಿ ಸಾಂಗವಾಯಿತು.

ಹಿಂದುಸ್ಥಾನ

ಸ್ವಾಮೀ ಲವಣಾನಂದರು ಪರಲೋಕವಾಸಿಗಳಾದರು.

ಮುಂಬೈ ಇಲಾಖೆಯಲ್ಲಿ ಕೆಲಿಕೋ ಅಂಗಡಿಗಳನ್ನು ಸಂಪೂರ್ಣವಾಗಿ ಬಂದು ಮಾಡುವದಕ್ಕೂ, ಅದರಿಂದುಂಟಾಗುವ ಉತ್ಪನ್ನಹಾನಿಯನ್ನು ಯಾವ ಬಗೆಯಿಂದ ತುಂಬಬೇಕೆಂಬದನ್ನು ವಿಚಾರಿಸಲು ಸರಕಾರದವರು ಒಂದು ಕಮಿಟಿಯನ್ನು ಸ್ಥಾಪಿಸಿದ್ದಾರೆ ಶ್ರೀ. ಕರಬೇಲಿಯವರು ಅದರ ಸಭಾಸದರು.

ಇಂದೂರಿನ ದಿವಾನರೂ, ಕನ್ನಡಿಗರೂ, ಆದ ಶ್ರೀ. ನರಸಿಂಗರಾಯರು ಮುಮತಾಜ — ಮಹಾರಾಜರ ಪ್ರಕರಣದ ಸಲುವಾಗಿ ಪ್ರಮುಖ ಕಾರ್ಯದಲ್ಲಿ ತೊಡಗಿದ್ದರಿಂದ, ದಿವಾಣದ ಕೆಲಸಕ್ಕೆ ಸರ ದಕ್ಷಿಣಾಮೂರ್ತಿ ... ನೇಮಿಸಲ್ಪಟ್ಟಿದ್ದಾರೆ.

ಮದ್ರಾಸಕ್ಕೆ ಪ್ರತ್ಯೇಕವಾದ ಪ್ರಾಂತವನ್ನು ಕೊಡಬೇಕೆಂದು ಹಳ ನಡೆದಿದೆ ಈ ಬಗ್ಗೆ ನಾಗಪೂರ ಕಾಯದೇ ಮಂಡಲದಲ್ಲಿ ಠರಾವು ಬರತಕ್ಕದಿದೆ ಎಲ್ಲರೂ ಪ್ರಾಂತ ದೊರಕಿತಲಿ! ಕನ್ನಡಿಗರು ಮಲಗಲಿ!!

ಸ್ವೀಕಾರ

ಕಣೆಪುರ ಸತ್ಯಾಗ್ರಹದ ಚರಿತ್ರೆ. ಶ್ರೀ ತಗಡೂರ ರಾಮಚಂದ್ರರಾಯರಿಂದ ಪ್ರಕಟಿಸಲ್ಪಟ್ಟಿದೆ. ಇದರಲ್ಲಿ ಪ್ರಾರಂಭದಿಂದ ಈಗಿನವರೆಗೆ ಕಣೆಯರು ಮಾಡಿದ ಚಳವಳದ ಇತಿಹಾಸವು ಕೊಡಲ್ಪಟ್ಟಿದ್ದು, ಇದನ್ನೋದುವದರಿಂದ ಕಣೆಯರ ಸತ್ಯಾಗ್ರಹದ ಬಗ್ಗೆ ಎಲ್ಲ ಸಂಗತಿಗಳೂ ಗೊತ್ತಾಗುವವು. ಇಷ್ಟವಿದ್ದವರು ಈ ಪುಸ್ತಕದ ಪ್ರತಿಯು ಪ್ರಕಟಿಯವಾಗಿ ಶ್ರೀ. ರಾಮಚಂದ್ರರಾಯರಿಂದ ಪಡೆಯ ಬಹುದು. ಈ ಚರಿತ್ರೆಯ ವ್ಯವಸ್ಥೆಯಲ್ಲಿ ಶಾಂತತೆ, ಅಹಿಂಸೆ, ಸಾತ್ವಿಕ ಬುದ್ಧಿಗಳಿಂದ ಚೊಕ್ಕದಾಗಿದೆಂಬದು ಈ ಪುಸ್ತಕದಿಂದ ಸ್ಪಷ್ಟವಿದೆ.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

ಜ ಸುಖಂಡಿಕೆ ನಾಡೇ ೪೯೫ ಶನಿವಾರ ಪುಣೇಶಹರ.

ರಕ್ತ ಶುದ್ಧಿ ಮತ್ತು ವೀರ್ಯ ವರ್ಧಕ

ಕಡಕಾಚಾ ಕಾಢ.

ಇದರ ಸೇವನೆಯಿಂದ ಮೈಯೊಳಗಿನ ಎಂಥ ಹಳೇ ಕಡಕೀ ರೋಗವಿದ್ದರೂ ನಾಶವಾಗುತ್ತದೆ. ಮತ್ತು ಅಶಕ್ತತೆ, ಧಾತುಜನ್ಯ ವಿಕಾರ, ನಪುಂಸಕತ್ವ, ವೀರ್ಯವು ಮೂತ್ರದೊಂದಿಗೆ ಹೋಗೋಣ, ವೀರ್ಯವು ನೀರಾಗೋಣ. ಇದಲ್ಲದೆ ಕೈಕಾಲು ಕಣ್ಣು ಮುಂತಾದವುಗಳು ನೋಯೋಣ, ಹಳೇ ಪರಮೀ ರೋಗ ಮೂತ್ರ ಉರಿಯೋಣ, ಕೀವುಹೋಗೋಣ ಇತ್ಯಾದಿ ಇತ್ಯಾದಿಗಳ ಮೇಲೆ ರಾಮಬಾಣವಂತಿದೆ. ಒಂದು ಡಬ್ಬಿಗೆ ಬೆಲೆ-೨ ರೂಪಾಯಿ ಒಮ್ಮೇಲೇ ೧೦ ಡಬ್ಬಿಗಳನ್ನು ತರಿಸಿದರೆ ೫ ರೂಪಾಯಿ ಅಂಚೆವೆಚ್ಚ ಬೇರೆ.

ಅನುಭವದಿಂದ ನಿಜವಾದ ಔಷಧ.

ಜಂತನಾಶಕ ಪುಡಿ.

ಈ ಪುಡಿಯ ಸೇವನೆಯಿಂದ ಆಗಿಂದಾಗ್ಗೆ ಜಂತುಗಳು ಬೀಳುವವು. ಅನುಭವನೋಡಿರಿ. ಬೆಲೆ ೧ ಪುಡಿಗೆ ೦-೧-೦ ಆಣೆ ೧೦೦ ಪುಡಿಗಳಿಗೆ ವ್ಹೀಪಿಸಹ ೪-೦-೦ ಒಮ್ಮೆಲೇ ೨೦೦ಪುಡಿ ತರಿಸಿದರೆ ೭ ರೂಪಾಯಿ.

ವಿಳಾಸ — ಮೆಸರ್ಸ ಅರ್ಜುನವಾಡಕರ

ಶೇಂಟಿರ ಬೆಳಗಾವ

ಪೋರವಾಲ ಬ್ಲ್ಯಾಕ ಟುಥ್ ಪಾವಡರ

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ, ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್‌ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ- ೫ ಆಣೆ. ಟ. ಖ. ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು

ಪೋರವಾಲ ಬ್ರಂಡ ಕೊ.

(ರಜಿಸ್ಟರ್ಡ) ಪುಣೇಶಹರ

ಕೆ ವುಡಕಿನ, ಕಿವಿಸೋರುವುದು, ಹೊಸೆಯುವದು, ಹಬ್ಬ ಹಾಕುವದು, ಕೀವು ರಕ್ತ ಬರುವದು, ಸಪ್ಪಳ ಆಗುವದು, ಕಡಿಮೆ ಕೇಳಿಸುವದು, ತಿಂಡಿ, ಇತ್ಯಾದಿಗಳ ಮೇಲೆ ರಾಮಬಾಣ ಟ. ಖ. ಸಹ ೧ ಬಾಟ್ಲಿಗೆ ೨|= -Dr. w. N Dixit. Poona city

ಹೊಟ್ಟೆನೋವು ಹೊಟ್ಟೆನೋವು

ಪೋಟದುಖೀ

ಹೊರಕಡೆಗೆ ಸಾಫ ಆಗದಿರುವದು, ಹೊಟ್ಟೆಯಲ್ಲಿ ಗುಡ್ರುಸ್ಸು ವದು, ಅಜೀರ್ಣ ಆಗುವದು ಢೋಳೆಬರುವದು, ಕಣ್ಣು ಕತ್ತಲೆ ಗಡಿಸುವದು, ಕಲೆಕಲ್ಲಿನೀರು ಹಿಡಿಯುವದು, ವಾಯುವಿನಿಂದ ಮತ್ತು ವಾಫಿನಿಂದ ಹೊಟ್ಟೆಯಲ್ಲಿ ಗ್ಯಾಸ್(Gas) ಆಗಿ ಹೊಟ್ಟೆಶೂಲಿ, ಹೊಟ್ಟೆಯುಬ್ಬುವದು, ಇತ್ಯಾದಿ ಹೊಟ್ಟೆಯಸಂಬಂಧವಾದ ಎಲ್ಲಬಗೆಯ ಹೊಸಹಳೇ ವಿಕಾರಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣ ಹೊಂದುವವು. ಇದಲ್ಲದೆ ಹೊಟ್ಟೆಯೊಳಗಿನ ಎಲ್ಲ ವಿಕಾರಗಳಿಗೂ

ಸೊಹೋನಿ ಇವರ ಪೋಟದುಖೀ

ಯು ಖಾತ್ರಿಯ ಮತ್ತು ರಾಮಬಾಣ ಔಷಧವಿದೆ. ಬಾಟ್ಲಿಯೊಂದಕ್ಕೆ ರೂ ೨|| ಟಪಾಲ ಖರ್ಚ ಬೇರೆ.

ಪ್ರಮಾಣ- ಪ್ರತಿಯೊಂದು ಸಲ ೨ ಗುಳಿಗೆ ಮಧ್ಯಾಹ್ನದ ಮತ್ತು ರಾತ್ರಿಯ ಊಟವಾದನೇಲೆ ಒಂದು ಗುಟುಕು ನೀರಿನಲ್ಲಿ ತೆಗೆದು ಕೊಳ್ಳಬೇಕು.

ವಿಶೇಷ ಸೂಚನೆ ಪತ್ರ ವ್ಯವಹಾರ ಇಂಗ್ಲೀಸ ಅಥವಾ ಮರಾಠಿಯಲ್ಲಿ

ವಿಳಾಸ:— ಪಿ. ಎಸ್. ಸೊಹೋನಿ: ಬೈಲ ಬಾಗದ ಹತ್ತರ ೧೭೪ ಬುಧವಾರ ಪೇಟ ಪುಣೆ ಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪುಕ್ಕಟ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ, ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು.

ಲಿಟೋ ವಾಚ ಕಂ. (India) ಮುಂಬೈ ನಂ. ೪

ಮೈಸೂರ ಕ್ರಾನಿಕಲ್ ಬೆಂಗಳೂರ.

ಮೈಸೂರ ದೇಶದಲ್ಲಿಯ ರಾಷ್ಟ್ರೀಯ ಪಕ್ಷದ ವಾರಪತ್ರಿಕೆ ಅಂದರೆ ಇದೇ ಅಖಂಡ ಕರ್ನಾಟಕದ ದೃಷ್ಟಿಯುಳ್ಳ ಮೈಸೂರಲ್ಲಿಯ ಪ್ರತಿಕೆಯಂದರೆ ಇದೇ. ವಾ. ವ. ೨-೮-೦

ಮ್ಯಾನೇಜರ.

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವಿದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು	......ನೂರಕ್ಕೆ ವರ್ಷಕ್ಕೆ	2½
ಸೇವಿಂಗ್ಸ್ ಬ್ಯಾಂಕ ಠೇವು	” ”	4½
ಮುದ್ದತಿ ಠೇವು ೬ ತಿಂಗಳಿಗೆ	” ”	6
” ೧೨ ತಿಂಗಳಿಗೆ	” ”	7

ಪಾರಲೋಕಿನ ಪಾರ ಜಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ. ಬೇಕಾದವರಿಗೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರೇಣ ನಿತ್ಯಂ ಸಜ್ಜನಸೇವನಂ।

ದಿ ವಸಿಯಾಟಿಕ್ ಗ್ಯಾರಂಟಿ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂಪನಿ ನಗರ

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ ಸಂಜೆ ೫ ಗಂಟೆಗೆ, ಈ ಕಂಪನಿಯ ಹೆಡ್ ಆಫೀಸಿನಲ್ಲಿ ಮೈಸೂರಿನ ರಿಟಾಯರ್ಡ ಸಿವಿಲ್ ಡಿಸ್ಟ್ರಿಕ್ಟ ಜಡ್ಜರಾದ ರಾ. ಬ. ಎಚ್. ಎನ್. ಎಸ್. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದಸ್ಯರುಗಳಿಗೆ ೧೦೦೦ ರೂ. ಗಳ ಬಹುಮಾನ ದೊರೆಯಿತು :—

(೧) ಬಾಂಡ ನಂ. ೧೯೬೭ ಶ್ರೀ. ಆರ್. ಜಿ ಮುಲ್ಲೀ, ಬಿ. ಎ. ಸೇಲಂ ವಿದ್ಯಾರ್ಥಿಗಳ ಸ್ವಂತ ಪುಸ್ತಕಾಲಯ ಧಾರವಾಡ

(೨) ಬಾಂಡ ನಂ. ೧೧೨೩ ಶ್ರೀ. ವೀರಭದ್ರಾಮ ಸಾಂಭಶಿವ ರಾವ ಸಾಹುಕಾರ ಕಂಚಾಪುರದ, ಅವರ ದವಾಖಾನೆ ಹಾಂಡು, ನವಸಾರಿ. ಬಿ. ಸಿ ಆಯ ರೈಲ್ವೆ ಸುರತ (ಬಡೋದಾ ಏಜನ್ಸಿ)

(೩) ಬಾಂಡ ನಂ. ೧೧೪೭ ಶ್ರೀ. ಶ್ರೀರಾಮಮೂರ್ತಿ ಆರಾಧ್ಯಲು ರಾಮಚಂದ್ರರಾವ ಗುರು ಪೀಠ ಪುರು ಗೋದಾವರಿ ಜಿಲ್ಹಾ

(೪) ಬಾಂಡ ನಂ. ೧೨೬ ಶ್ರೀ. ನಂದಗಿರಿ ವೆಂಕಟರಾಮ ಬಾಪೈ ಪ್ರೊಪಾಯಟರ ಮುಕುಂದ ಪ್ರೆ. ಕಾಕಿನಾಡ.

(೫) ಬಾಂಡ ನಂ. ೬೫೭ ಶ್ರೀ. ಆರ್. ವೆಂಕಟಯ್ಯ ಗುಪ್ತ ಶಿವಮೊಗ್ಗ ಭೋಪಯ್ಯಾ ಅಗ್ರಹಾರ ಬಿಸಿಳ ಸ್ಟ್ರೀಟ್.

೧-೮-೨೬	ಬಿ. ಎನ್. ಆಚಾರ್ಯ ಜನರಲ ಮ್ಯಾನೇಜರ

ಕಣ್ಣಿನ ಔಷಧ

ಹೂವು, ಪೋರೆಬಿಂದು, ದೃಷ್ಟಿ ಮಾಂದ್ಯ, ಕಣ್ಣುಬೇನೆ, ಕಣ್ಣು ಬರೋಣ, ಕಣ್ಣಬೇಗೋಣ, ಮತ್ತು ಗುಡ್ಡಿ ದೃಷ್ಟಿ ಶಕ್ತಿಗಳ ವಿಕಾರಗಳು ಇಂತಹ ಕಣ್ಣಿನ ಎಲ್ಲ ಬೇನೆಗಳಿಗೆ ಈ ಔಷಧವು ಸಂಜೀವಿನಿಯೇ ದಸ್ತ್ರಕ್ರಿಯೆಗಿಂತಲೂ ಹೆಚ್ಚು! ರಾ. ಬ. ವೆಂಕಟ. ಡಿ. ಡಿ. ಕಲೆಕ್ಟರ ಅನ್ನುತ್ತಾರೆ 'ಅನೇಕರಿಗೆ ಈ ಔಷಧ ಕೊಟ್ಟಿರುವದ ಬಗ್ಗೆ ಖಾತ್ರಿಯಾಯಿತು ಮಗಳ ಕಣ್ಣುಗಳು ನೆಟ್ಟಗಾದವು' ಎಂಥ ರೋಗಕ್ಕೂ ಎರಡೇ ಮಾತ್ರೆ. ಮಾತ್ರೆಯೊಂದಕ್ಕೆ ರು ೧। ಟ ಖ ಬೇರೆ.

ಸೂಚನೆ —ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಾ. ವಿ ಕರಮರಕರ ೫೩೦ ಶನಿವಾರ ಪುಣೆ ಶಹರ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to—
N. K. Kulkarni Agent Bagalkot

ಮೋಟಾರ ಡ್ರಾಯವ್ಹಿಂಗ

ಕ್ಲಾಸ



ಮೋಟಾರ ಗಾಡಿಗಳನ್ನು ರಿಪೇರಿ ಮಾಡುವ ಬಗ್ಗೆ ಪೂರ್ಣ ಜ್ಞಾನವನ್ನು ಸಂಪಾದಿಸುವದಕ್ಕೂ, ಬೇರೆ ಬೇರೆ ಕಂಪನಿಗಳ ಎಲ್ಲ ತರದ ಮೋಟಾರುಗಳನ್ನು ನಡೆಸಲಿಕ್ಕೆ ಕಲಿಯುವದಕ್ಕೂ, ಅಖಂಡ ಬ್ರಿಟಿಶ್ ಹಿಂದುಸ್ಥಾನದ ಲಾಯಸೆನ್ಸ ದೊರಕಿಸಿ ಮೋಟಾರ ಮೆಕ್ಯಾನಿಕ್ಸ ಆಗುವದಕ್ಕೂ ಇದೊಂದೇ ವಿಶ್ವಸನೀಯವಾದ ಸಂಸ್ಥೆಯು. ವಿದ್ಯಾರ್ಥಿಗಳಿಗೆ ಖಾತ್ರಿ(ಪೂರ್ವಕವಾದ ಶಿಕ್ಷಣವನ್ನು ಕೊಡಲಾಗುವದು. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರ ವ್ಯವಹಾರದಿಂದ.

ದಿ ನಾವಸ್ಕರ ಮೋಟಾರ ಡ್ರಾಯವ್ಹಿಂಗ ಕ್ಲಾಸ ೬೧೦ ಬುಧವಾರಪೇಠ ಪುಣೆ ಶಹರ.

Sathe's British Sports

Agency Sadashive
Poona City.
Dealers in Tennis Football
Cricket Hockey Badminton
other Games.
Send for our Catalogue.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಮರಾಯ ಹುಕ್ಕೇರಿ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಣಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಸಹಿತ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೧ | ಬಾಗಲಕೋಟ ಶುಕ್ರವಾರ ಮಿತಿ ಫಾಲ್ಗುಣ ಬಹುಳ ೧೨ ಶಕ ೧೮೪೭. ತಾ। ೧೨-೩-೧೯೨೬. | ಸಂಚಿಕೆ ೪೭

ಸಂಪಾದಕರ ಭೂಮಿ.

(೨)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಳ್ಳಗದೊನ್ನು।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ನಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ।

— ಅಂಬಿಕಾತನಯ ದತ್ತ

ಕನ್ನಡ-ಮರಾಟಿಯ ಬಗ್ಗೆ ಇಲ್ಲಿಯ ವಕೀಲರಾದ ಶ್ರೀ. ಜೇನಾಪೂರದ ಗೋವಿಂದರಾಯರು ಬರೆದ ಪತ್ರವು ಇದೇ ಸಂಚಿಕೆಯಲ್ಲಿ ಬೇರೆಕಡೆಗೆ ಪ್ರಕಟವಾಗಿದೆ. ಈ ಲೇಖವನ್ನು ಬರೆದದ್ದಕ್ಕಾಗಿ ನಾವು ಶ್ರೀ. ಗೋವಿಂದರಾಯರನ್ನು ಮೊದಲು ಅಭಿನಂದಿಸತ್ತೇವೆ. ಯಾಕಂದರೆ, ಸುಶಿಕ್ಷಿತರು -ಅದರಲ್ಲಿಯೂ ವಕೀಲರು- ಕನ್ನಡ ಪತ್ರಿಕೆಗಳನ್ನು ಓದತಕ್ಕದ್ದಲ್ಲ; ಓದಿದರೂ, ಕನ್ನಡ ಪತ್ರಿಕೆಗಳಿಗೆ ಲೇಖ ಬರೆಯತಕ್ಕದ್ದಲ್ಲ; ಎಂಬ ಕಲ್ಪನೆಯು ರೂಢವಾಗಿದ್ದ ಈಗಿನ ಯುಗಕ್ಕೆ ಇವರು ಅಪವಾದವನ್ನುಂಟು ಮಾಡಿರುವರು. ಕನ್ನಡ ಪತ್ರಿಕೆಗಳ ಘಡಿಕೆಗಳನ್ನು ಒಡೆಯದೇ ಹಾಗೇ ಇಟ್ಟುಬಿಡುವದು ವಕೀಲರ ಸ್ವಭಾವವಾಗಿದೆ. ಹೀಗೇಕೆಂದು ಕೇಳಿದರೆ 'ಸುಡುಗಾಡು ಕನ್ನಡ ಪತ್ರಿಕೆಯಲ್ಲೇನಿದೆಂ'ದು ಉತ್ತರ ಕೊಡುವರು. ಆದರೆ ಸುಡುಗಾಡು ಸುಟ್ಟ ಸಂಗತಿಗಳಿಗೆ ಸೋತುಹೋದ ಸಮಾಚಾರದ ಜ್ಞಾನವು ಈ ಮಹನೀಯರಲ್ಲಿ ಜಾಗ್ರತವಾಗಿದ್ದಮೇಲೆ, ತಾವೇ ಮುಂದಕ್ಕೆಬಂದು ಆ 'ಸುಡಗಾಡ'ನ್ನು ಸುಡುಗಾಡಿಗೆ ಓಡಿಸಲಿಕ್ಕೆ ಇವರೊಲ್ಲರು. ಈಗ್ಗೆ ಶ್ರೀ. ಗೋವಿಂದರಾಯರಿಗೆ ನಾವು ಬರೆದದ್ದೇನೋ ಅಯೋಗ್ಯವಾಗಿ ಕಂಡಿತು; ಅದಕ್ಕೆ ಸುಮ್ಮನೇ ಕೂಡ್ರದೇ, ಉತ್ತರ ಬರೆದದ್ದರಿಂದ ಅವರ ವ್ಯವಸಾಯ ಬಂಧುಗಳಿಗೆ ಈ ವಿಷಯವನ್ನು ಕೇಳಲಿಕ್ಕೆ, ಇದರ ಮೇಲಾಗುವ ಟೀಕೆ-ಪ್ರತಿಟೀಕೆಗಳನ್ನು ಓದಲಿಕ್ಕೆ ಕೊಂಚ ಅಭಿಲಾಷೆಯಾಗುವದು ಸ್ವಾಭಾವಿಕ. ಇದೇ ಪ್ರಕಾರವಾಗಿ ಕರ್ನಾಟಕದ ಪ್ರತಿಯೊಬ್ಬ ಸುಶಿಕ್ಷಿತನೂ ಕನ್ನಡ ಪತ್ರಿಕೆಗಳ ಗಾಯನ ಲೋಕದಲ್ಲಿ ತನಗೆ ತೋಚಿದ "ತಾನು" ಗಳನ್ನು ತೆಗೆದುಕೊಳ್ಳುತ್ತ ಹೋದರೆ, ಕನ್ನಡ ಪತ್ರಿಕೆಗಳ ಮಹಾತ್ಮೆಯು ತಾನಾಗಿಯೇ ಬೆಳೆಯುವದರಲ್ಲಿ ಸಂಶಯವಿಲ್ಲ. ಇನ್ನು ಶ್ರೀ. ಗೋವಿಂದರಾಯರ ವಿಷಯವನ್ನು ಸಮಾಲೋಚಿಸುವ. ಈಗಿನ ಎರಡೂ ಮಗ್ಗಲಿಗೆ ಬರೆಯದೆ ತಮ್ಮ ಲೇಖವನ್ನು ಶ್ರೀ. ಗೋವಿಂದರಾಯರು ಒಂದೇ ಕಡೆಗೆ ಬರೆದಿದ್ದರೆ ಒಳಿತಾಗುತ್ತಿತ್ತು. ಇರಲಿ. ಶ್ರೀ. ಗೋವಿಂದರಾಯರು ತೆಗೆದ ವಿಷಯಗಳೆಂದರೆ ಎರಡು. ಮರಾಟಿಗರಾದ ಶ್ರೀ. ದೇಸಾಯಿ, ಲಿಮಯೇ ಪ್ರಭೃತಿಗಳಿಗೆ 'ಸೊಕ್ಕು' 'ಹಟಮಾರಿ' ಶಬ್ದಗಳನ್ನು ಪ್ರಯೋಗಿಸಿ, ಕನ್ನಡಿಗರಾದ ಶ್ರೀ. ಕೆಂಭಾವಿಯವರಿಗೆ ಹಾಗೇನೂ ಬರೆಯದೆ, ಅವರು ಕನ್ನಡಿಗರಿದ್ದರೂ ಮರಾಟಿಯಲ್ಲಿ ಮಾತಾಡಿದ್ದು "ದುರ್ದೈವದ" ಸಂಗತಿಯೆಂದು ಬರೆದು, ಮುಂದೆ ಶ್ರೀ. ಕೆಂಭಾವಿಯವರಿಗೆ "ಜ್ಞಾನಿಯರು" ಎಂಬದಾಗಿ ಬರೆದದ್ದು ಮೊದಲನೇ ಮಾತು ಆದದ್ದು; ನಾವು 'ಬಳವಾಗಿ' ವಿಚಾರಿಸಿಯೇ ಹೀಗೆ ಬರೆದಿರುವೆವು. ಯಾವ ಮರಾಟರು ಅಜಮುತ್ತಂದಿರಿಂದ, ಅಥವಾ ತಾವೇ ೧೫-೨೦ ವರ್ಷಗಳಿಂದ, ಕರ್ನಾಟಕದಲ್ಲಿದ್ದು, ಬೆಳೆದು, ಸಂಪಾದನೆಮಾಡಿ, ಕರ್ನಾಟಕದ ಉಪ್ಪನ್ನುಂಡು, ಸಾರ್ವಜನಿಕ ಸಭೆಗಳಲ್ಲಿ ಸಹ ಕರ್ನಾಟಕದ ಭಾಷೆಯಲ್ಲಿ ಮಾತನಾಡಲಿಕ್ಕೆ ಅಲ್ಲಗಳೆಯುವರೋ ಅಂಥ ಮರಾಟರಿಗೆ ಅನೇಕ ಸಲ ಬೇಡಿಕೊಂಡದ್ದಾಯಿತು; ಹೇಳಿಕೊಂಡದ್ದಾಯಿತು; ಬೆನ್ನು ಹತ್ತಿದ್ದಾಯಿತು; ವಾದವಿವಾದ ಮಾಡಿದ್ದಾಯಿತು. ಇಷ್ಟಾದರೂ ಕಣ್ತೆರೆಯಲೊಲ್ಲರು. ಮತ್ತೆ ಮರಾಟಿಯಲ್ಲಿಯೇ ಮಾತನಾಡುವರು. ಇದು ಹಟಮಾರಿತನವಲ್ಲದಿದ್ದರೆ ಮತ್ತೇನು? ಹೇಳಿದ್ದನ್ನು ಕೇಳದೆ, ಕನ್ನಡಿಗರ ಪ್ರಾರ್ಥನೆಯನ್ನು ಕಾಲಪದಾರ್ಥವೆಂದೆಣಿಸಿ, ಸಾರ್ವಜನಿಕ ಸಭೆಯಲ್ಲಿ ತಮಗೆ ಕನ್ನಡ ಬರುತ್ತಿದ್ದರೂ ಮರಾಟಿ ಮಾತನಾಡಿ, ಕನ್ನಡಿಗರನ್ನು ರೇಗಿಸುವದು ಸೊಕ್ಕಾಗದಿದ್ದರೆ ಅದೇನಾಗುವದು? ಕೆಲವು ಮರಾಟರು ನಮಗೆ ಕನ್ನಡ ಬರುವದಿಲ್ಲವೆಂದು ಹೇಳುವರು. ೧೫-೨೦ ವರ್ಷಗಳಿಂದಲೂ ಕನ್ನಡನಾಡಿನಲ್ಲಿದ್ದು, ಹಣಸಂಪಾದನೆ ಮಾಡಲಿಕ್ಕೆ ಮಾತ್ರ ಬರುತ್ತದೆ! ಆದರೆ ಕನ್ನಡ ಕಲಿಯಲಿಕ್ಕೆ ಇವರಿಗೆ ಬರುವದಿಲ್ಲ! ಮಹಾರಾಷ್ಟ್ರವ ನೆರೆಹೊರೆಯವರಾದ್ದರಿಂದ ಕನ್ನಡಿಗರೆಲ್ಲರೂ ಮರಾಟೀ ಭಾಷೆಯನ್ನು ಕಲಿತಿರುವದು ಉತ್ತಮ; ಯಾಕಂದರೆ ಬಹುಭಾಷೆಯುಳ್ಳ ಭರತಖಂಡದಲ್ಲಿ ಪ್ರತಿಯೊಬ್ಬನೂ ತನ್ನ ಮಾತೃಭಾಷೆ ರಾಷ್ಟ್ರೀಯಭಾಷೆ, ಮತ್ತು ತನ್ನ ನೆರೆಹೊರೆಯ ಪ್ರಾಂತದ ಭಾಷೆಯನ್ನು ಕಲಿಯಲಿಕ್ಕೇ ಬೇಕು; ಎಂಬದಾಗಿ "ಕೇಸರಿ" ಯಲ್ಲಿ ಉಪದೇಶ ಬಂದಾಗ್ಗೆ, ಅದನ್ನು ಹಿಡಿದುಕೊಂಡು ಬಂದು ಕನ ಗರಿಗೆ ತೋರಿಸಲಿಕ್ಕೆ ಈ ಕರ್ನಾಟಕದ ಮರಾಟರಿಗೆ ಬಹು ಬೆ

ಚಪಲತನ ಬರುತ್ತದೆ. ಆದರೆ ಅದೇ "ಕೇಸರಿಯು" ಹೇಳುವಂತೆ ತಾವು ತಮ್ಮ ಮಾತೃಭಾಷೆಯ ಹೊರತಾಗಿ, ಕನ್ನಡನಾಡಿನಲ್ಲಿ ಉರುಳಾಡಿದರೂ ಕನ್ನಡವನ್ನು ಕಲಿಯಲಿಕ್ಕೆ ಕರ್ನಾಟಕ ಮರಾಟರಿಗೆ ಬಾರದು. ಅಥವಾ ಕೋರ್ಟಿನಲ್ಲಿ ವಕೀಲಿ ಸನದು ದೊರೆಯಬೇಕಾದರೆ, ಕನ್ನಡಪಕ್ಷಕಾರರಕೂಡ ಮಾತನಾಡಬೇಕಾದರೆ, ಕನ್ನಡ ಪಕ್ಷಕಾರರ ಫೀ ತೆಗೆದುಕೊಂಡು ಕೋರ್ಟಿನಲ್ಲಿ ಖಟ್ಲೆ ನಡಿಸಬೇಕಾದರೆ ಕನ್ನಡಿಗರಕೂಡ ವ್ಯಾಪಾರ ಮಾಡಬೇಕಾದರೆ ಕನ್ನಡವು ಅವಶ್ಯವಾಗಿ ಬರುತ್ತದೆ !!! ಸಾರ್ವಜನಿಕ ಸಭೆಗೆ ಬಂದ ಕೂಡಲೇ ಆ ಭಾಷೆಯ ಜ್ಞಾನವು ಎತ್ತಕಡೆಗೋ ಓಡಿಹೋಗುತ್ತದೆ. ಇವೆಲ್ಲ ಹಟಮಾರಿತನದ ಮತ್ತು ವೈಸೊಕ್ಕಿನ ಲಕ್ಷಣಗಳಲ್ಲವೋ? ಅಲ್ಲವಾಗಿದ್ದರೆ ಮರಾಟರ ತತ್ವವಾದರೂ ಏನೆಂಬದನ್ನು ತಿಳಿಸಲಿ. ೫೦-೬೦ ವರ್ಷಗಳಿಂದ ಕರ್ನಾಟಕದಲ್ಲಿದ್ದು, ಇಲ್ಲಿಯ ಉಪ್ಪನ್ನು ತಿಂದು, ಕರ್ನಾಟಕ ಭಾಷೆಯನ್ನು ಸಾರ್ವಜನಿಕ ಸಭೆಯಲ್ಲಿಯೂ ಮಾತನಾಡಬಾರದೆಂಬದಕ್ಕೆ ಮರಾಟರ ವಿಧಾನಗಳೇನಾದರೂ ಇವೆಯೇ? ಯಾವದಾದರೂ ತತ್ವಕ್ಕೆ ಆ ವಿಧಾನಗಳು ಅಂಟಿಕೊಂಡಿರುವವೋ? ಹಾಗಿದ್ದರೆ ನಾವು ಈಗ್ಗೆ ಸಾರ್ವಜನಿಕ ರೀತಿಯಿಂದ ಕರ್ನಾಟಕದಲ್ಲಿಯ ದುರಭಿಮಾನಿಗಳಾದ ಎಲ್ಲ ಮರಾಟರಿಗೂ ಆಹ್ವಾನ ಕೊಡುವೆವು. ಶಕ್ತದಿಂದಲೇ ಅವರು ಪ್ರೌಢರಾಗಿದ್ದರೆ ಸೆಡ್ಡು ಹೊಡೆದು ಮುಂದಕ್ಕೆ ಬರಲಿ, ತಮ್ಮ ತತ್ವಗಳೇನಿವೆಂಬದನ್ನು ಬರೆದು ತಿಳಿಸಲಿ! ಅವರು ಬಾರದಿದ್ದರೆ ಶ್ರೀ. ಗೋವಿಂದರಾಯರಂತಹ ಅವರ ಕೈವಾರಿಗಳಾದರೂ ಈ ಆಹ್ವಾನವನ್ನು ಸ್ವೀಕರಿಸಲಿ! ಇನ್ನು ಕನ್ನಡಿಗರಾದ ಶ್ರೀ. ಕೆಂಭಾವಿಯವರಬಗ್ಗೆ. ಇವರು ಸಹ ಮೊದಲೆಲ್ಲ ಮರಾಟಿಯಲ್ಲಿಯೇ ಮಾತಾಡುತ್ತಿದ್ದರು. ಆದರೆ ಕನ್ನಡದ ಹೊಸ ಯುಗದ ಗಾಳಿಯು ಬೀಸಿದಂದಿನಿಂದ ಕನ್ನಡದಲ್ಲಿ ಮಾತನಾಡುತ್ತಿರುವರು. ಹೀಗೆ ಅವರ ದೃಷ್ಟಿಕೋನವು ಬದಲಾಗಿದ್ದರೂ ಸಹ ಅವರು ಮರಾಟಿಗೆ ಮೋಹಿಸಿದ್ದು ದುರ್ದೈವವೆಂದು ಹೇಳಿ ಅವರಿಗೆ ಎಚ್ಚರಿಕೆ ಕೊಟ್ಟಿದೆ. ಮುಂದೆ ಅವರು ಸಹ ಈ "ಹಟಮಾರಿ, ವೈಸೊಕ್ಕಿ"ನ ಮಾಲಿಕೆಯಲ್ಲಿ ಬಂದರೆ-ಹಾಗೆ ಬರಲಾರರೆಂದು ನಮ್ಮ ವಿಶ್ವಾಸವಿದೆ-ಅವರಿಗೂ ಸಹ ಅವರಂತೆಯೇ "ಮಂಗಳಾರುತಿ" ಯಾಗುವದೆನ್ನುವದರಲ್ಲಿ ಸಂದೇಹವಿಲ್ಲ. ಶ್ರೀ. ಗೋವಿಂದರಾಯರ ಎರಡನೇ ವಿಷಯವೆಂದರೆ—ಉತ್ತರಾದಿ ಮಠದವರು ತಮ್ಮ ರಾಯಸುಗಳನ್ನು ಅವು ಕನ್ನಡಭಾಷೆಯಲ್ಲಿದ್ದರೂ-ಬಾಳಬೋಧ ಲಿಪಿಯಲ್ಲಿ ಮುದ್ರಿಸಿದ್ದು. ನಾವು ಈ ಮಠದ ಶಿಷ್ಯರಾದ್ದರಿಂದ, ಇವರ ಈ ದೋಷವನ್ನು ನಾವು ಟೀಕಿಸಲಾರೆವೆಂದೂ, ಅದರಿಂದ ನಮ್ಮ ಮಾಲೆಯನ್ನೇ ನಮ್ಮ ಕೊರಳಲ್ಲಿ ಹಾಕಬೇಕೆಂದೂ ಶ್ರೀ. ಗೋವಿಂದರಾಯರು ಯೋಜಿಸಿದ್ದರೆ, ಅವರ ಇಚ್ಛೆಯು ಯಶಸ್ವಿಯಾಗಲಾರದು. ಯಾಕೆಂದರೆ ಕನ್ನಡಕ್ಕೆ ಸ್ವತಂತ್ರ ಲಿಪಿಯಿರುವಾಗ್ಗೆ ಕನ್ನಡದ ಎಲ್ಲ ವಿಷಯಗಳೂ ಶುದ್ಧವಾಗಿ ಕನ್ನಡ ಲಿಪಿಯಲ್ಲಿಯೇ ನಡೆಯತಕ್ಕದೆಂದು "ಕನ್ನಡಿಗ"ನ ಖಂಡಿತವಾದ ಮತವು. ಮಠಾಧೀಶರು ಹಾಗೆ ಮಾಡದಿರುವದು "ಕನ್ನಡಿಗ"ನ ದೃಷ್ಟಿಯಿಂದ ದೋಷವೇ ಸರಿ. ಅದೇ ಪ್ರಕಾರವಾಗಿ ಗೋಗಲಿಯ ಬ್ರಾಹ್ಮಣರ ವಿನಂತಿ ಪತ್ರಿಕೆಯೂ ಕನ್ನಡ ಲಿಪಿಯಲ್ಲಿರದ್ದು ಅಯೋಗ್ಯವು. ವೀರವೈದಿಕ ಮತೀಯ ಬ್ರಾಹ್ಮಣರಲ್ಲಿದ್ದ ಬಾಳಬೋಧ ಲಿಪಿಯ ಮೋಹವು ಎಷ್ಟು ಬೇಗನೇ ಕಡಿಮೆಯಾಗುವದೋ ಅಷ್ಟು ಗುಣ. ಸಾರ್ವಜನಿಕ ಕಾರ್ಯ, ಕನ್ನಡ ನುಡಿಯ ಬೆಡಗು, ಕರ್ನಾಟಕ ಮೊದಲಾದ ಸಂಗತಿಗಳ ಬಗ್ಗೆ ಸ್ಪಷ್ಟವಾದ ವಿಚಾರವಿಲ್ಲದ ವೈದಿಕ ಮತೀಯರಲ್ಲಿ ಕನ್ನಡದ ಬಗ್ಗೆ ಜಾಗ್ರತಿಯನ್ನುಂಟುಮಾಡುವ ಕಾರ್ಯವನ್ನು "ಕನ್ನಡಿಗ" ನಿನ್ನೂ ತನ್ನ ಕೈಯಲ್ಲಿ ತೆಗೆದುಕೊಂಡಿಲ್ಲವಾದ್ದರಿಂದ ಆ ಬಗ್ಗೆ ಇನ್ನೂ ಟೀಕೆಗಳು **ಸಾರ್ವಜನಿಕ ರೂಪವಾಗಿ** ಬಂದಿಲ್ಲ. ಪ್ರಸಂಗ ಬಂದಿತೆಂದರೆ "ಕನ್ನಡಿಗ"ನು ಅದನ್ನು ಹೊಗಗೊಡನು.

ಡಾ ಯಮೂ. ರಾಮರಾಯರು ಕರ್ನಾಟಕದ ಏಕೀಕರಣದ ಬಗ್ಗೆ ತಂದ ಸೂಚನೆಯು ಸರಕಾರದಿಂದ ಸ್ವೀಕೃತವಾಗಲಿಲ್ಲವೆಂಬದನ್ನು ಟೀಕಿಸುವಾಗ್ಗೆ ಅನೇಕ ವೃತ್ತಪತ್ರಿಕೆಗಳು ಒಂದು ತಪ್ಪು ವಿಧಾನವನ್ನು ಮಾಡಿವೆ. ಹಿಂದಕ್ಕೆ ಮುಂಬೈ ಕಾಯದೇ ಮಂಡಲದಲ್ಲಿ ಇದೇ ವಿಷಯವು ಹೊರಟಾಗ್ಗೆ ಈ ಪ್ರಶ್ನೆಯು ಪ್ರಾಂತಿಕ ಸರಕಾರದ್ದಲ್ಲ; ಆದರೆ ವರಿಷ್ಠ ಮಂಡಲದ್ದು. ಎಂಬದಾಗಿ ಮುಂಬೈ ಕಾಯದೆ ಮಂಡಲದಿಂದ ಉತ್ತರವು ಬಂದಿದೆಂದು ಹಲವರು ಹೇಳುತ್ತಿರುವರು. ಆದರೆ ಕರ್ನಾಟಕದ ಏಕೀಕರಣದ ಪ್ರಶ್ನೆಯು ಈ ವರೆಗೂ ಮುಂಬೈ ಕಾಯದೇ ಮಂಡಲದಲ್ಲಿ ವಾದವಿವಾದಕ್ಕೆ ಹೊಂಟಿರುವದೇ ಇಲ್ಲ. ಆದ್ದರಿಂದ ಮುಂಬೈ ಕಾಯದೇ ಮಂಡಲದವರು ಈ ಏಕೀಕರಣದ ವಿಷಯವು ತಮ್ಮದಿರದೇ, ವರಿಷ್ಠ ಕಾಯದೇ ಮಂಡಲದ್ದೆಂದು ಹೇಳಲು ಅವಕಾಶವೇ ಇಲ್ಲ. ಹಿಂದಕ್ಕೆ ವಿಜಾಪುರದ ಶ್ರೀ. ಹಳಕಟ್ಟಿಯವರು ಮದ್ರಾಸದ ಕರ್ನಾಟಕ ಭಾಗವನ್ನು ಮುಂಬೈ ಇಲಾಖೆಗೆ ಸೇರಿಸಬೇಕೆಂಬದಾಗಿ ಒಂದು ಸೂಚನೆಯನ್ನು ಮುಂಬೈ ಕಾಯದೇ ಮಂಡಲದಲ್ಲಿ ತರಲು ಪ್ರಯತ್ನಿಸಿದರು. ಆದರೆ ಮದ್ರಾಸ-ಕರ್ನಾಟಕಕ್ಕೆ ಸಂಬಂಧಿಸಿದ ಈ ವಿಷಯವು ಮುಂಬೈ ಸರಕಾರಕ್ಕೆ ಸಂಬಂಧ ಪಟ್ಟದ್ದಲ್ಲವೆಂದೂ, ಇದು ವರಿಷ್ಠ ಕಾಯದೇ ಮಂಡಲದ ಅಧಿಕಾರದ ಪ್ರಶ್ನೆಯೆಂದೂ ಅವರಿಗೆ ಉತ್ತರವು ದೊರೆತಿತ್ತು. ಮತ್ತು ಆ ಸೂಚನೆಯನ್ನು ತರಲು ಅಪ್ಪಣೆ ದೊರೆಯಲಾರದೆಂದು ಅಧ್ಯಕ್ಷರಿಂದ ಅವರಿಗೆ ತಿಳಿಸಲ್ಪಟ್ಟಿತು. ಇದನ್ನೇ ಅನೇಕರು ತಪ್ಪು ತಿಳಿದುಕೊಂಡಿದ್ದಾರೆಂಬದು ಸ್ಪಷ್ಟವಿದೆ. ಇಂತಹ ತಪ್ಪು ತಿಳುವಳಿಕೆಯು ಜನರಲ್ಲಿ ರೂಢವಾಗಬಾರದೆಂದು ನಾವು ಈ ವಿಷಯವನ್ನು ಈ ದಿನ ಬೇಕೆಂದು ವಿವರಿಸಿರುವೆವು. ಜವಾಬ್ದಾರಿಯುಳ್ಳಂಥ ವೃತ್ತಪತ್ರಿಕೆಗಳು ಸಹ ಈ ಬಗೆಯ ತಪ್ಪು ವಿಧಾನವನ್ನು ಮಾಡಿದ್ದು ವಿಹಿತವಲ್ಲ. ಒಂದು ಪತ್ರಿಕೆಯಂತೂ ಈ ಪ್ರಶ್ನೆಗೂ "ಪ್ರಿವೀ ಕೌನ್ಸಿಲ್ಲ"ಕ್ಕೂ ಸಂಬಂಧ ಹಚ್ಚಿದ್ದನ್ನು ಕಂಡು, ಆ ಲೇಖಕನ ಪಾಂಡಿತ್ಯದಬಗ್ಗೆ ನಗೆ ಬರುತ್ತದೆ. ಜನರಲ್ಲಿ ನಿಜ ಜ್ಞಾನಪ್ರಚಾರ ಮಾಡುವ ಗುರಿಯನ್ನಿಟ್ಟುಕೊಂಡ ಪತ್ರಿಕಾ ಕರ್ತೃಗಳು ಬೇಗನೇ ತಮ್ಮ ತಪ್ಪನ್ನು ತಿದ್ದಿಕೊಳ್ಳುವದು ಉತ್ತಮ.

ಮುಂಬೈಯಲ್ಲಿ (ಆದಿತ್ಯವಾರ) ೭ ನೇ ತಾ. ದಿನ ಮುಂಜಾನೆ ೯ ಘಂಟೆಗೆ ಸರದಾರ ಗೃಹದಲ್ಲಿ ಕರ್ನಾಟಕ ಏಕೀಕರಣ ವಿಷಯವಾಗಿ ಚರ್ಚೆಯಾಯಿತು. ಶ್ರೀ. ಸರದೇಸಾಯಿಯವರು ಅಧ್ಯಕ್ಷರಾಗಿದ್ದರು. ಶ್ರೀ. ಕರ್ನಾಟಕ ಭೂಷಣರಾದ ಕೌಜಲಗಿಯವರೂ ಬಂದಿದ್ದರು. ಎಲ್ಲ ಕೌನ್ಸಿಲ್ ಸಭಾಸದರು ಇದ್ದರು. ಶ್ರೀ ಕೌಜಲಗಿಯವರು ಏಕೀಕರಣದ ಮಹತ್ವವನ್ನು ಅದರಿಂದ ಕರ್ನಾಟಕಕ್ಕೆ ಆಗುವ ಲಾಭಗಳನ್ನು ತಿಳಿಸಿಹೇಳಿದ ನಂತರ ಶ್ರೀ. ಜೋಗ ಇವರು ಇದೇ ವಿಷಯದ ಮೇಲೆ ಸ್ವಲ್ಪ ಮಾತನಾಡಿದರು. ನಂತರ ಶ್ರೀ. ರಾವಬಹದ್ದೂರ ಎಸ್. ಟಿ. ಕಂಬಳಿಯವರು ಏಕೀಕರಣದ ವಿಷಯವಾಗಿ ಜನರಲ್ಲಿ ಹೆಚ್ಚು ಚಳವಳಿಯನ್ನು ಮಾಡಬೇಕು. ಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವದರ ಸಲುವಾಗಿ ವಿಶೇಷತಃ ರೈತರಿಗೆ ತಿಳಿಯಹೇಳುವದಕ್ಕಾಗಿ ಚಳವಳಿ ಮಾಡಬೇಕೆಂದು ತಿಳಿಸಿಹೇಳಿದರು. ದ್ರವ್ಯದ ಕೊರತೆಯನ್ನು ದೂರ ಮಾಡಬೇಕು. ದ್ರವ್ಯವನ್ನು ಕೂಡಿಸಬೇಕೆಂದೂ ಹೇಳಿದರು.

ಈ ಸಭೆಯು ಚರ್ಚೆಯು ಸಾಧಾರಣವಾಗಿ ೩, ೪ ತಾಸುಗಳವರೆಗೆ ನಡೆಯಿತು

(೬ ನೇ ಪುಟದಿಂದ ಬಂದದ್ದು)

ಸಂಗತಿಯಬಗ್ಗೆ ಚೌಕಶೀ ನಡೆದಿದೆ (೪) ವಿಜಾಪೂರ ಬಾಗಲಕೋಟೆಗಳಲ್ಲಿ ಪ್ರಯಾಣಿಕರಿಗೆ ತೊಂದರೆಯಾಗುತ್ತದೆಂಬುದು ನಮಗೆ ಗೊತ್ತಿಲ್ಲ. (೫) ಮುಂಬೈ ಇಲಾಖೆಯಲ್ಲಿ ಶುದ್ಧ ಹವೆಯ ಆರೋಗ್ಯದ ಗುಡ್ಡಗಳಲ್ಲಿ ಸ್ಥಳಗಳು :- ಅಂಬೋ-ದೇವಾಲಿ; ನಾಸಿಕ, ಇಗತಪುರಿ; ಮಾತೇರಾನ; ಖಂಡಾಲಾ; ಲೋನಾವಳ; ಮಹಾಬಳೇಶ್ವರ; ಪಂಚಗಣಿ; ಮತ್ತು ಪುಣೆ. (೬) ಸರಕಾರೀ ರಿಪೋರ್ಟಗಳೂ ಇತರ ಗ್ರಂಥಗಳೂ (ಗ್ಯಾಝೆಟ್‌ದ ಹೊರ್ತಾಗಿ) ಯಾವ ಯಾವ ಪತ್ರಿಕೆಗಳಿಗೆ ಕಳಿಸಲ್ಪಡುತ್ತವೆಂಬುದನ್ನು ತಿಳಿಸುವೆನು; ಚೌಕಸಿ ನಡೆದಿದೆ; ೨೦೦೦ ಕ್ಕಿಂತ ಹೆಚ್ಚು ಚಂದಾದಾರರಿದ್ದವುಗಳಿಗೆ ಸಾಧಾರಣವಾಗಿ ಅವು ಕಳಿಸಲ್ಪಡುವವು. ವಿಶೇಷ ಸವಲತ್ತುಗಳಿಗೆ ಯೋಗ್ಯವೆಂದು ಸರಕಾರಕ್ಕೆ ತೋರಿದ ಕೆಲವು ಪತ್ರಿಕೆಗಳಿಗೆ ೨ ಸಾವಿರದ ನಿಯಮವನ್ನು ಶಿಥಿಲಪಡಿಸಿ, ಅವನ್ನು ಪೂರೈಸುವೆವು (೭) (ಅ) ಗಾಡಿಗಳು ಒಳರದ ಮೊದಲು ಬಾಗಲಕೋಟೆಯ ಸ್ಟೇಶನ್‌ದಲ್ಲಿ ಬಾಗಿಲುಗಳನ್ನು ತೆರೆದಿರುವದಿಲ್ಲೆಂದು ‘ ಕನ್ನಡಿಗ’ನಲ್ಲಿ ಬರೆದ ಸಂಪಾದಕೀಯ ಲೇಖವನ್ನು ಸರಕಾರವು ನೋಡಿದ್ದಾಯಿತು. ಆದರೆ ಜನರಿಂದ ರೇಲವೇಯವರಿಗೆ ಯಾರೂ ತಕರಾರು ಮಾಡಿಲ್ಲವಾದ್ದರಿಂದ ಈ ವಿಷಯದಲ್ಲಿ ಏನೂ ಮಾಡಲಾರೆವು. (ಆ) ಗಾಡಿಗಳು ಒಂದಕೂಡಲೇ ತಿಕೀಟ ಕೊಡುವದನ್ನು ಒಂದು ಮಾಡುವಬಗ್ಗೆ ವಿಚಾರ ನಡೆದಿದೆ.

ಶ್ರೀ. ಕಂಬಳಿಯವರು.

ಪ್ರ:—ಶಿಗ್ಗಾವಿ ತಾಲೂಕಿನಲ್ಲಿ ಕಾಡ ಹಂದಿಗಳಿಂದ ಬೆಳೆಗಳಿಗೆ ನಾಶವಾಗುವದನ್ನು ನಿಲ್ಲಿಸುವದಕ್ಕೆ ರೈತರಿಂದ ಹಣ ವಸೂಲ ಮಾಡಿದಬಗ್ಗೆ ಚೌಕಶೀ ಮಾಡುವೆವು (೨) ನವಲಗುಂದ ತಾಲೂಕಿನಲ್ಲಿ ದಿವಾಣಿ ಕೋರ್ಟ ಇರದ್ದರಿಂದ ತೊಂದರೆ ಯಾಗುತ್ತದೆಂಬುದನ್ನು ಬಲ್ಲೆವು. ಆದರೆ ಆ ಬಗ್ಗೆ ಸರಕಾರಕ್ಕೆ ಯಾವ ಸೂಚನೆ ತಕರಾರುಗಳು ಬಂದಿಲ್ಲ.

ಶ್ರೀ. ಅಂಗಡಿಯವರು.

(೧) ಭಾರತ ಮಂತ್ರಿಗಳ ಅನುಮತಿಯಂತೆಯೇ ಈಗಿನ ಮಾಮಲೇದಾರರ ಪಗಾರವಿದೆ. ಅವರ ಪ್ರಾರಂಭದ ಪಗಾರವು ೨೫೦ ರೂ. ಇರಬೇಕೆಂಬದಾಗಿ ಹಿಂದುಸ್ಥಾನ ಸರಕಾರದವರಿಂದಾದ ಠರಾವು ನಮಗೆ ಗೊತ್ತಿಲ್ಲ. (೨) ಕಡಿಮೆ ಪಗಾರದ ಜನರ ವಸತಿಗಾಡಿಗೆಗಳ ಬಗ್ಗೆ ಸರಕಾರವು ಮುಂಬೈ ಪ್ರಾಂತದಲ್ಲಿಲ್ಲ ವಿಚಾರ ಮಾಡಿದೆ. ಗದಗ, ಧಾರವಾಡ, ಹುಬ್ಬಳ್ಳಿ, ಬೆಳಗಾವಿಗಳಲ್ಲಿರುವವರ ಬಗ್ಗೆ ಸವಲತ್ತು ಕೊಡುವದು ಅವಶ್ಯವಿಲ್ಲ. (೩) ಮುಲಕೀ ಖಾತೆಯ ಕಾರಕೂನರ ೬ ನೇ ಪರಿಷತ್ತಿನ ಠರಾವುಗಳನ್ನು ಸರಕಾರವು ನೋಡಿದೆ ಪೆನ್‌ಶನ್‌ದ ನಿಯಮಗಳ ಬದಲಾವಣೆ ಹಾಗು ಪ್ರಾವಿಡೆಂಟ ಫಂಡಗಳ ಸ್ಥಾಪನೆಯ ವಿಚಾರವನ್ನು ಭಾರತ ಮಂತ್ರಿಗಳು ನಡಿಸಿದ್ದಾರೆ.

ಶ್ರೀ. ಕರ್ಕಿಯವರು.

(೧) ಮುಂಬೈಯಲ್ಲಿ ಕನ್ನಡ ಲಾಯಬ್ರರಿಗಳಿಲ್ಲ. ಅವಕ್ಕೆ ಸಹಾಯ ಮಾಡುವ ಪ್ರಶ್ನೆಯೇ ಹುಟ್ಟುವದಿಲ್ಲ. (೨) ಶಿರಸೀ ಮುನಸೀಪಾಲಿಟಿಗೆ ಬರುವ ಅಡಿಕೆ, ಯಾಲಕ್ಕಿ, ಮೆಣಸುಗಳಮೇಲೆ ೧೯೨೦ ನೇ ಸಪ್ಟಂಬರದಿಂದ ಜಕಾತಿ ಕೂಡಿಸಿದೆ. ೨೮ ಪೌಂಡುಗಳ ೧ ಮಣಕ್ಕೆ ಜಕಾತಿಯದರ:—ಅಡಿಕೆ, ೩ ಪೈ; ಯಾಲಕ್ಕಿ ೧ ಆಣೆ, ಮೆಣಸು ೬ ಪೈ. ೧೯೨೪-೨೫ ರಲ್ಲಿಯ ಜಕಾತಿಯ ಉತ್ಪನ್ನ:— ಅಡಿಕೆ, ರೂ. ೩೫೩೦; ಯಾಲಕ್ಕಿ ೧೦೩ ರೂ.; ಮೆಣಸು, ೪೪೪ ರೂ. ೧೯೨೪-೨೫ ರಲ್ಲಿ ೧೧೫ ರೂ. ಒಟ್ಟಿಗೆ ‘ ರೀಫಂಡ’ ಮಾಡಿದೆವು. ೩) ಮುಂಬೈಯಲ್ಲಿ ಕನ್ನಡ ಮಾತನಾಡುವವರ ಸಂಖ್ಯೆ ೫೬೦೭ ಇದೆ. ಒಂದೇ ರಾತ್ರಿ ಶಾಲೆಯ ಹೊರ್ತಾಗಿ, ಕನ್ನಡ ವಿದ್ಯಾರ್ಥಿಗಳಬಗ್ಗೆ ಯಾವ ಶಿಕ್ಷಣ ಸಂಸ್ಥೆಗಳೂ ಇಲ್ಲ. ಸರಕಾರವಾಗಲೀ, ಮುಂಬೈ ಮುನಸೀಪಾಲಟಿಗಳಾಗಲೀ ಕನ್ನಡ ಶಾಲೆಗಳನ್ನು ತೆರೆಯುವ ವಿಚಾರದಲ್ಲಿಲ್ಲ. (೪) ಸಿದ್ದಾಪೂರ ದವಾಖಾನೆಯಲ್ಲಿ ನೂಲಗಿತ್ತಿಯರಿಲ್ಲ. ಹಣದ ಕೊರತೆಯಿದ್ದದರಿಂದ ಸಧ್ಯಕ್ಕೆ ಸರಕಾರವು ಯಾರನ್ನು ನೇಮಿಸುವದಿಲ್ಲ. ಈ ಬಗ್ಗೆ ‘ ಕಾನಡಾ ವೃತ್ತ’ದಲ್ಲಿ ಪ್ರಸಿದ್ಧವಾದ ಸಂಗತಿ ನಮಗೆ ಗೊತ್ತಿಲ್ಲ.

ಇತರರು.

ಶ್ರೀ. ಬೋಲೆಯವರು. ಪ್ರ:—ಕಳೆದ ಸಭೆಯಲ್ಲಿ ಭಾಗ ತೆಗೆದುಕೊಳ್ಳದೇ ಇದ್ದಂಥ ಸ್ವರಾಜ್ಯ ಪಕ್ಷೀಯರು ತಾವು ಕೆಲಸ ಮಾಡದೇಯಿದ್ದ ದಿನಗಳಲ್ಲಿ ಸಹ ತಮ್ಮ ಭತ್ತೇ ತೆಗೆದುಕೊಂಡಿರುವರೋ ? ಉ:—ಕೆಲವರು ತೆಗೆದುಕೊಂಡಿದ್ದಾರೆ; ಕೆಲವರು ತೆಗೆದುಕೊಂಡಿಲ್ಲ

ಶ್ರೀ ಪ್ರಧಾನರು. ಸಬ್‌ರಜಿಸ್ಟರರು ೫ ವರ್ಷಗಳಿಂದಲೂ ತಮ್ಮ ಪರಿಷತ್ತಿನ ಮುಖಾಂತರವಾಗಿ ಕೇಳುತ್ತಬಂದ ಬೇಡಿಕೆಗಳ ಮತ್ತು ಬಹು ಜನರಿಂದ ತುಂಬ ತೊಂದರೆಯಾದ ಸಬ್‌ರಜಿಸ್ಟರರ ಗ್ರೇಡಗಳಬಗ್ಗೆಯೂ ಸರಕಾರವು ವಿಚಾರ ಮಾಡುತ್ತಲಿದೆ.

ಶ್ರೀ ಗುಂಜಾಳರು. ಶೇತಕೀ ಕಾಯದೇದ ತಿದ್ದುಪಾಟಿನ ಬಗ್ಗೆ ಹಿಂದುಸ್ಥಾನ ಸರಕಾರದ ಸಂಗಡ ಪತ್ರವ್ಯವಹಾರ ನಡೆದಿದೆ. ಅರ್ಥರ ಕಮೀಶನ್‌ದಲ್ಲಿ ಸೂಚಿಸಿದಂತೆ ಹೆಚ್ಚುಕಡಿಮೆ ಯಾಗಲಾರದು. (೨) ಆಯುರ್ವೇದ ಯುನಾನಿಗಳ ಶೋಧಕ (Research) ಚಿಕಿತ್ಸಾಲಯಗಳನ್ನು ಸ್ಥಾಪಿಸುವ ವಿಚಾರ ನಡೆದಿದೆ.

ಶ್ರೀ. ಮುನಸೂರಿ. ಬಾಂದ್ರಾದ ಕೊಲೆಮನೆಯಲ್ಲಿ ದಿನಾಲು ೧೦೦-೧೫೦ ಗಬ್ಬ ಇದ್ದಂಥ ಕುರಿಗಳು ಕೊಲ್ಲಲ್ಪಡುವವು. ಆದರೆ ಅವೆಲ್ಲ ಗಬ್ಬಿದ್ದದ್ದು ಸ್ಪಷ್ಟವಾಗಿ ತಿಳಿಯುವದಿಲ್ಲ. ಗಬ್ಬಾದಂಥ ಆಕಳು ಎಮ್ಮೆಗಳು ಕೊಲ್ಲಲ್ಪಡುವದಿಲ್ಲ.

ಶ್ರೀ. ಮುಜುಮದಾರ (ಅ) ಸರಕಾರೀ ಅಮಲದಾರರ ಮೇಲೆ ದಿವಾಣಿ ಮೊಕದ್ದಮೆ ಮಾಡುವದಾದರೆ ಮುಂಬೈ ಇಲಾಖೆಯಲ್ಲಿ ಡಿಸ್ಟ್ರಿಕ್ಟ ಜಡ್ಜರಲ್ಲಿ ಮಾಡಬೇಕು. (ಆ) ಬಂಗಾಲ ಮದ್ರಾಸ ಪ್ರಾಂತಗಳಲ್ಲಿ ಸಬ್ ಜಡ್ಜರ ಕಡೆಗೆ ಮಾಡಿದರೆ ನಡೆಯುವದು (ಇ) ಜಿ ಆಯ್. ಪೀ. ರೇಲವೇಯು ಸರಕಾರದ್ದಾದರಿಂದ ಇದರಮೇಲೆ ಆಗುವ ದಿವಾಣೀ ಮೊಕದ್ದಮೆಗಳು ‘ಅ’ ಕಲಮಿನಲ್ಲಿ ಹೇಳಿದಂತೆ ನಡೆಯತಕ್ಕದ್ದು. (ಈ) ‘ಇ’ ಕಲಮಿನಿಂದ ಜನರಿಗೆ ತೊಂದರೆಯಾಗುತ್ತಿರುವದರಿಂದ ಆಬಗ್ಗೆ ತಿದ್ದುಪಡೆಮಾಡಬೇಕೆಂಬ ವಿಚಾರವು ನಡೆದಿದೆ.

ಶ್ರೀ. ದೇಸಾಯಿ. ಭಾರತೀಯ ಸಂಗೀತ ಶಿಕ್ಷಣದಬಗ್ಗೆ ಸರಕಾರವು ಯಾವ ಸಂಸ್ಥೆಯನ್ನೂ ತೆಗೆಯದು. ಯಾರಾದರೂ ತೆಗೆದರೆ ನಾವು ಸಹಾಯ ಮಾಡುವೆವು

ಶ್ರೀ. ಮುನಸೂರಿ. “ ವೀರ ದುರ್ಗಾದಾಸ” ಎಂಬ ಚಿತ್ರಪಟವು ಹಿಂದೂ ಮುಸಲ್ಮಾನರಲ್ಲಿ ಅಸಂತೋಷವನ್ನುಂಟು ಮಾಡುವಂತಹದಿದ್ದದರಿಂದ ಸರಕಾರವು ಅದಕ್ಕೆ ಅಪ್ಪಣೆ ಕೊಟ್ಟಿಲ್ಲ.

ಕನ್ನಡ-ಮರಾಠೀ

ಶ್ರೀಯುತ "ಕನ್ನಡಿಗ" ಪತ್ರದ ಸಂಪಾದಕರಿಗೆ—

ಸಪ್ರೇಮ ನಮಸ್ಕಾರಗಳು.

ನಮ್ಮ ಕನ್ನಡಭಾಷೆಯಬಗ್ಗೆ ತಮ್ಮ ಅಭಿಮಾನವನ್ನೂ ಆದರ ಬೆಳವಣಿಗೆಯ ಸಲುವಾಗಿ ತಾವು ನಡಿಸಿದ ಅವಿಶ್ರಾಂತ ಪ್ರಯತ್ನವನ್ನೂ ಕಂಡು ತುಂಬಾ ಆನಂದ ವಾಗುತ್ತದೆ. ಆದರೆ ತಮ್ಮ ಪ್ರೇಮವೂ ಅಭಿಮಾನವೂ ಪ್ರಸಂಗಾನುಸಾರ ಕೊಂಚ ವಿಸಂಗತವಾಗಿ ತೋರಿಬಂದ ಮೂಲಕ ಸಂಶಯ ನಿವಾರಣಾರ್ಥವಾಗಿ ತಮಗೆ ಈ ಪತ್ರ ಬರೆಯಬೇಕಾಯಿತು. ಸ್ವನೇ ಇರಲಿ.

ಮರಾಠಿಯೇ ಮಾತೃ ಭಾಷೆಯಾದ ಶ್ರೀಯುತ ಪಾಂಡುರಂಗರಾವ ದೇಸಾಯಿ, ದಾಜೀಸಾಹೇಬ ಲಿಮಯೆ ಮುಂತಾದ "ಮರಾಠಿಗರು" ಇತ್ತೀತ್ತಲಾಗಿ ನಮ್ಮ ನಾಡಿನಲ್ಲಿ ಬಂದು ನಿಂತ ಕಾರಣದಿಂದಲೇ ಸಭೆಗಳಲ್ಲಿ ಮರಾಠಿಯಲ್ಲಿ ಮಾತಾಡುವದು ತಮಗೆ ಸೇರದು. ಇಂಥ "ಮರಾಠಿಗರ" ವಿಷಯವಾಗಿ ತಮ್ಮ ಪತ್ರದಲ್ಲಿ "ಸೊಕ್ಕಿನ" "ಹಟಮಾರಿತನ" ಮುಂತಾದ ಗ್ರಾಮ್ಯಶಬ್ದಗಳನ್ನು ಪಯೋಗಿಸಿ ಸಂಭಾವನೆ ಮಾಡಿದಿರಿ, ಆದರೆ ಕನ್ನಡ ಭಾಷೆಯೇ ಮಾತೃಭಾಷೆಯಾಗಿ, ಕೇವಲ ಕನ್ನಡನಾಡಿನಲ್ಲಿಯೇ ಹುಟ್ಟಿಬೆಳೆದ ಶ್ರೀಯುತ ಕೆಂಭಾವಿ ರಾಘವೇಂದ್ರರಾಯರು ಅದೇ ಸಭೆಯಲ್ಲಿ ಮರಾಠಿಯಲ್ಲಿ ಭಾಷಣ ಮಾಡಿದರೆ, ಅವರ ಮೇಲಂವಾಗಿ ಟೀಕೆಯ ತೆಗೆಯುವ, "ಕನ್ನಡಿಗರ ದುರ್ದೈವ" ವನ್ನೇ ಹೇಳಿದಿರಿ. "ಆಳವಾಗಿ" ವಿಚಾರಿಸಲು, ರಾಘವೇಂದ್ರರಾಯರ ವಿಷಯವಾಗಿಯೂ ತಾವು ಅದೇ ಮಾದರಿಯ ಬರಹವನ್ನೇ ಉಪಯೋಗಿಸಬೇಕಾಗಿತ್ತು. ಹಾಗೆ ಮಾಡದೆ, ಎರಡನೇ ಪ್ರಸಂಗದಲ್ಲಿ "ರಾಯರಂಥ ಸುಶೀಲರು" ಮುಂತಾದ ವಿಶೇಷಣಗಳಿಂದ ಅವರನ್ನು ಗೌರವಿಸಿದಿರಿ. ಈ ತಾರತಮ್ಯದ ಕಾರಣವೇನು?

ನಮ್ಮ ನಾಡಿನಲ್ಲಿ ಬೋರ್ಡಿನಮೇಲೆ ತಮ್ಮ ಹೆಸರನ್ನು ಬಾಲಬೋಧ ಅಥವಾ ದೇವನಾಗರಿ ಲಿಪಿಯಲ್ಲಿ ಬರೆಸಿದವರನ್ನೂ ಹಸ್ತಪತ್ರಿಕೆಗಳನ್ನು ಮರಾಠೀ ಭಾಷೆಯಲ್ಲಿ ಮುದ್ರಿಸಿ ಪ್ರಸಿದ್ಧ ಮಾಡಿದವರನ್ನೂ ತಾವು ಕೂಡಲೇ ದೂಷಿಸಿದಿರಿ. ವಿಜಾಪೂರ ಜಿಲ್ಹಾ ಬ್ರಾಹ್ಮಣರ ಸಂಘದ ಉದ್ದೇಶ ಪತ್ರಿಕೆಯು ಒಂದುಮಗ್ಗಲಿಗೆ ಕನ್ನಡದಲ್ಲಿ, ಮತ್ತೊಂದು ಮಗ್ಗಲಿಗೆ ಮರಾಠಿಯಲ್ಲಿ ಮುದ್ರಿಸಲ್ಪಟ್ಟದ್ದನ್ನು ನೋಡಿ, ಕನ್ನಡಭಾಷೆಯ ತಮ್ಮಂಥ ಉತ್ಕೃಷ್ಟ ಅಭಿಮಾನಿಗಳಿಗೆ "ಇಂದ್ರಜಾಲ" ವೆಂದೆನಿಸಿತು. ಆದರೆ ಬಾಗಲಕೋಟೆಗೆ ದಯಮಾಡಿಸುವ ಪೂರ್ವದಲ್ಲಿ ಶ್ರೀ ಉತ್ತರಾದಿ ಮಠಾಧಿಪತಿಗಳು ತಮ್ಮ ಶಿಷ್ಯವೃಂದಕ್ಕೆ ಕಳುಹಿಸಿದ ರಾಯಸವೂ, ಹಾಗೆಯೇ ಗಲಗಲಿಯ ಕೆಲವು ಬ್ರಾಹ್ಮಣರು ಶ್ರೀಗಳವರಿಗೆ ಬರೆದು ಕಳುಹಿದ ವಿನಂತಿ ಪತ್ರವೂ ಯಾವಭಾಷೆಯಲ್ಲಿ ಮುದ್ರಿಸಲ್ಪಟ್ಟಿರುತ್ತವೆ? ಅವುಗಳ ಭಾಷೆಯು ಕನ್ನಡ ವಿದ್ದರೆ, ಕನ್ನಡ ಭಾಷೆಗೆ ಸ್ವತಂತ್ರ ಲಿಪಿಯಿಲ್ಲವೆ? ಇದ್ದರೆ, ಕನ್ನಡ ಲಿಪಿಯಲ್ಲಿ ಯಾಕೆ ಮುದ್ರಿಸಲಿಲ್ಲವೆಂದು ಶ್ರೀಗಳವರಿಗೂ ಗಲಗಲಿಯ ಬ್ರಾಹ್ಮಣರಿಗೂ ಕೇಳಿರುತ್ತೀರೋ? ಇನ್ನೂ ಕೇಳದಿದ್ದರೆ, ಯಾಕೆ ಕೇಳಲಿಲ್ಲ?

ಮೇಲಿನ ಪ್ರಶ್ನವನ್ನೂ ಅದಕ್ಕೆ ತಾವು ಕೊಡುವ ಉತ್ತರವನ್ನೂ ತಮ್ಮ ಪತ್ರದ ಮುಂದಿನ ಸಂಚಿಕೆಯಲ್ಲಿ ದಯವಿಟ್ಟು ಪ್ರಸಿದ್ಧ ಮಾಡುವಿರೆಂದು ಆಶಿಸುವ

ಬಾಗಲಕೋಟೆ, | ತಮ್ಮ ಪ್ರೇಮಾಭಿಲಾಷಿ,
೧೫-೩ ೧೯೨೫ | ಗೋವಿಂದರಾವ ಜೇನಾಪೂರ.

ನಾಟಕವೂ ಸಮಾಜ ಸುಧಾರಣೆಯೂ

ಕರ್ನಾಟಕದಲ್ಲಿ ನಾಟ್ಯಕಲೆಯ ಅಭಾವವಿದೆಯಷ್ಟೇ! ಅದಕ್ಕೆ ತಕ್ಕ ಪ್ರೋತ್ಸಾಹವೆಯುಂತೂ ಇಲ್ಲ. ಮತ್ತು ಸುವ್ಯವಸ್ಥೆಯಂತೂ ಇಲ್ಲವೆ ಇಲ್ಲ. ಅದ್ದರಿಂದಲೇ ಕರ್ನಾಟಕ ನಾಟ್ಯದೇವಿಯು ವಿಧವಾ* ಸ್ವರೂಪದಲ್ಲಿರುವಳು ಈಗ ನಾಟಕವೆಂದರೆ ಅದೊಂದು ಮೂರ್ಖಜನರ ಹುಡುಗಾಟವೆಂದೇ ಕೆಲಜನ ಪಂಡಿತರ ಗ್ರಹಿಕೆ ಯಾಗಿರುವದು. ಆದರೆ ಅದೇ ಪಂಡಿತರ ಬಾಯಿಂದ ಮರಾಠಿಯವರ ವಿಷಯವಾಗಿ ಈ ಬಗೆಯ ಉದ್ಗಾರಗಳು ಹೊರಡುವದಿಲ್ಲ. ಈ ಪರಿಸ್ಥಿತಿಯು ದಿಕ್ಕಾಪಾಲಾಗಿ ಓಡಬೇಕಾದರೆ, ಕನ್ನಡಿಗರಿಗೆ ಅಭಿಮಾನವು ಬೇಕು. ಅಂಥಹ ಅಭಿಮಾನವನ್ನು ಹುಟ್ಟಿಸಲು ಪ್ರಯತ್ನಿಸುವ ಕನ್ನಡಿಗರಲ್ಲಿ ನನ್ನ ವಿನಂತಿ ಏನೆಂದರೆ—

(೧) ನಮ್ಮಲ್ಲಿ "ಕರ್ನಾಟಕ ನಾಟ್ಯಕಲಾ ಸಂಘ" ವೆಂಬ ಕಂಪನಿಯನ್ನು ಸ್ಥಾಪಿಸತಕ್ಕದ್ದು. ಸಂಘಕ್ಕೆ ತಗಲುವ ಖರ್ಚಿನ ವಿಷಯವನ್ನು ಎಲ್ಲ ಕರ್ನಾಟಕದವರು ಅಭಿಮಾನದಿಂದ ಪೂರೈಸತಕ್ಕದ್ದು. ಕರ್ನಾಟಕ ಸಾಹಿತ್ಯ ಪರಿಷತ್ತು, ವಿದ್ಯಾವರ್ಧಕ ಸಂಘ ಮೊದಲಾದ ಸಂಸ್ಥೆಯವರು ಇವಕ್ಕೆ ತನುಮನಧನದಿಂದ ಸಹಾಯ ಮಾಡತಕ್ಕದ್ದು. ಮತ್ತು ಕರ್ನಾಟಕದಲ್ಲಿ "ಕರ್ನಾಟಕ ನಾಟ್ಯಕಲೋತ್ತೇಜಕ" ವರ್ಗಣಿಯನ್ನು ಕೂಡಿಸಬೇಕು. ಆಗಿಯೇ ಕರ್ನಾಟಕಸ್ಥರ ನಾಟ್ಯಕಲಾ ರಸಿಕತ್ವದ ಸ್ವರೂಪವು ಹೊರಬೀಳುವದು. ಅಲ್ಲದೆಯೇ ಕರ್ನಾಟಕಸ್ಥರ ಕರ್ನಾಟಕಾಭಿಮಾನದ ಜ್ಯೋತಿಯ ಪ್ರಕಾಶದ ಬೆಳೆಯು ತಿಳಿಯುವದು. ಆಗ್ಗೆ ಆ ಕರ್ನಾಟಕಸ್ಥರಿಗೆ ನಿಜವಾದ ಕನ್ನಡಿಗರೆಂಬ ಹೆಸರು ತಗುವದು. ಆದ್ದರಿಂದ ಕರ್ನಾಟಕ ಮುಖಂಡರು ತಡಮಾಡದೆ ಈ ಸಂಘವನ್ನು ಸ್ಥಾಪಿಸಬೇಕಾಗಿ ವಿನಂತಿ.

(೨) ಆ ಸಂಘದ ನಟರ ವಿಷಯವಾಗಿ ಹೇಳತಕ್ಕದ್ದೇನಂದರೆ- ಜಗತ್ತಿನಲ್ಲಿ ಅಹಿಂಸೆಯೇ ಪರಮೋಧರ್ಮ ವೆಂಬ ಮಂತ್ರವನ್ನು ಊದುತ್ತ ತಿರುಗುವ ಮಹಾತ್ಮಾ ಗಾಂಧಿಯವರ ತತ್ವಕ್ಕೆ ಅನುಸರಿಸಿ ಶಾಲೆ ಕಾಲೇಜುಗಳ ಮತ್ತು ನೌಕರಿ ಮುಂತಾದ ಪರಸ್ವಾಧೀನತೆಯನ್ನು ತ್ಯಜಿಸಿದ ಮಹಾತ್ಮರ ಅಸಹಕಾರೀ ಶಿಷ್ಯರನ್ನು ಈ ಸಂಘದಲ್ಲಿ ಸಮಾವೇಶ ಮಾಡಿಕೊಳ್ಳತಕ್ಕದ್ದು. ಇದು ಮುಖ್ಯವಾದ ಕೆಲಸವು. ಯಾಕಂದರೆ ಅವರು ಜಗತ್ಕಲ್ಯಾಣದಗೋಸ್ಕರ ತಮ್ಮ ಹೊಟ್ಟೆಗ ಕೇರುಬಿಡದುಕೊಂಡು ಎರಡನೇ ಸ್ವತಂತ್ರೋದ್ಯೋಗದಿಂದ ಉಪಜೀವಿಸವೇಕೆಂದರೆ ಕಾಂಚಾಣದ ಅಭಾವ ಇದ್ದಂದ ಮೈಮರೆದು ಗಾಬರಿಯಾಗಿ ಕುಳಿತಿರುವ ಆ ಸ್ವಾರ್ಥತ್ಯಾಗಿ ಮಹಾತ್ಮರಗಳ ಹೊರೆಯನ್ನು ಕರ್ನಾಟಕಸ್ಥರು ಕೇಳದಿದ್ದರೆ ಮತ್ತಾರು ಕೇಳಬೇಕು? ಕಾರಣ ಬಹುಶಃ ಅಂಥ ಜನರನ್ನೇ ಸಂಘದ ಸ್ವೀಕಾರಮಾಡಿಸಿಕೊಳ್ಳಬೇಕು. ಅವರಾದರೂ ಅಲ್ಪಸಂತೋಷದಿಂದ ಸಂಘವನ್ನು ನಡಿಸಬಲ್ಲವು.

(೩) ಮತ್ತು ಈ ಸಂಘದಿಂದ ಬಂದ ಲಾಭವು ಕರ್ನಾಟಕಕ್ಕೇ ವಿನಿಯೋಗಿಸಲ್ಪಡತಕ್ಕದ್ದು. ಇದರಿಂದ ಅಲ್ಪಸ್ವಲ್ಪವಾದರೂ ನಮ್ಮ ಕಂಡಬಂದ ಕನ್ನಡಿಗರ ಕಣ್ಣಲ್ಲಿ ಅಂಜನವನ್ನು ಹಾಕಿ ಎಚ್ಚರಗೊಳಿಸಿದಂತೆಯೂ, ನಿರಭಿಮಾನಿ ಮಕ್ಕಳ ನಡತೆಗೆ ಭಯಗೊಂಡು ನಿಶ್ಚೇಷ್ಟಿತಳಾಗಿ ಕುಳಿತಿರುವ ಕರ್ನಾಟಕ ಮಾತೆಯ ನೆತ್ತಿಗೆ ನೀರು ಬಡೆದಹಾಗೂ ಆಗುವದು. ಆದ್ದರಿಂದ ಅಭಿಮಾ

* ಇದು ನಿಜವೆ? ಈ ಬಗ್ಗೆ ನಾಟ್ಯಪ್ರೇಮಿಗಳು ಉತ್ತರ ಕೊಡಲಿ!
—ಸಂ. ಕ.

...ಗಳು ಸ್ಫೂರ್ತಿಯಿಂದ ಈ ಕೆಲಸಕ್ಕೆ ಟೊಂಕಕಟ್ಟಬೇಕೆಂದು ಮತ್ತೊಮ್ಮೆ ಹೇಳಿ, ಕನಸಿನಲ್ಲಿಯೂ ಕೂಡಾ ಕನ್ನಡದ ಉನ್ನತಿಯೊಂದು ಜಪಿಸುತ್ತಿರುವ ನನ್ನ ಪ್ರಿಯ "ಕನ್ನಡಿಗ" ನಿಗೆ ತನ್ನಲ್ಲಿ ಸ್ಥಳಕೊಡಲು ಅನನ್ಯಭಾವದಿಂದ ಬೇಡಿಕೊಳ್ಳುತ್ತೇನೆ.

—ಕನ್ನಡಿಗರ ಆಳು

ಮಠ ಸಂಸ್ಥೆಗಳ ಪುನರ್ಘಟನೆಯೂ, ಮಧ್ವಮತ ಪ್ರಚಾರವೂ,

ಮಠಸಂಸ್ಥೆಗಳ ಸ್ಥಾಪನೆಯ ಉದ್ದೇಶವೇನಂದರೆ, ಧರ್ಮರಕ್ಷಣೆ, ಹಾಗು ಧರ್ಮಶಾಸನಗಳನ್ನು, ಮಾಡಿ ಸಮಾಜಸುಧಾರಣೆಯನ್ನು ಉತ್ತಮರೀತಿಯಿಂದ ನೆರವೇರಿಸಿ, ಜನತೆಯ ಐಹಿಕ ಮತ್ತು ಪಾರಮಾರ್ಥಿಕ ಹಿತವನ್ನುಂಟು ಮಾಡುವದು. ಆದರೆ ಸಾಂಪ್ರತಕಾಲದಲ್ಲಿ ಮಠಸಂಸ್ಥೆಗಳು ಬ್ರಾಹ್ಮಣ ಸಮುದಾಯಕ್ಕೆ ಪಂಚಪಕ್ವಾನ್ನಗಳಿಂದ ಯುಕ್ತವಾದ ಭೋಜನಸಮಾರಂಭವನ್ನು ಮಾಡಿಸುವದರಲ್ಲಿಯೇ ಮಾತ್ರ ಬಹುಭಾಗ ದ್ರವ್ಯವನ್ನೂ ಉತ್ಸಾಹವನ್ನೂ ವೆಚ್ಚಮಾಡುತ್ತವೆ. ಇದೇ ದ್ರವ್ಯವನ್ನೂ, ಉತ್ಸಾಹವನ್ನೂ (೧) ಜನತೆಗೆ ಧರ್ಮಶಿಕ್ಷಣವನ್ನು ಕೊಡುವದಕ್ಕೋಸ್ಕರವಾಗಿ ಪ್ರತಿಯೊಂದು ಜಿಲ್ಹೆಗೆ ಒಬ್ಬರಂತೆ ಧರ್ಮೋಪದೇಶಕರನ್ನು ನೇಮಿಸುವದಕ್ಕೆ (೨) ಪರಿಸ್ಥಿತಿಗನುರೂಪವಾಗಿ ಆಚಾರಧರ್ಮನಿರ್ಣಯವನ್ನು ಮಾಡುವದಕ್ಕೋಸ್ಕರ ಧರ್ಮಪರಿಷತ್ತುಗಳನ್ನು ನೆರವೇರಿಸುವದಕ್ಕೂ (೩) ಗೋರಕ್ಷಣ ಸಂಸ್ಥೆಗಳನ್ನು ಸ್ಥಾಪಿಸುವದಕ್ಕೂ (೪) ಸಂಸ್ಕೃತ ವಿದ್ಯಾಪೀಠವನ್ನು ನಿರ್ಮಾಣ ಮಾಡುವದಕ್ಕೂ ವೆಚ್ಚಮಾಡಿದರೆ, ಸಮಾಜಸುಧಾರಣೆಯೂ ಆರ್ಯಸಂಸ್ಕೃತಿಯ ರಕ್ಷಣವೂ ಚನ್ನಾಗಿ ಆಗುವವು.

ದ್ವೈತಸಿದ್ಧಾಂತವು ಪೃಥ್ವಿಯಮೇಲೆ ಎಲ್ಲಕಡೆಗೂ ಪ್ರಸಾರವಾಗಬೇಕಾದರೆ, ವಿವೇಕಾನಂದ ರಾಮತೀರ್ಥರು ಅದ್ವೈತಸಿದ್ಧಾಂತವನ್ನು ಹೇಗೆ ಅರ್ವಾಚೀನ ಭಾಷಾಶೈಲಿಯಿಂದ ಸುಂದರವಾಗಿ ವಿವೇಚಿಸಿರುತ್ತಾರೋ, ಹಾಗೆಯೇ ಮಾಧ್ವಮತಸ್ಥರಾದ ಆಧುನಿಕ ಪದವೀಧರರು ದ್ವೈತಸಿದ್ಧಾಂತವನ್ನು ಮನೋಹರವಾದ ಅರ್ವಾಚೀನ ಭಾಷಾಶೈಲಿಯಿಂದ ಪ್ರತಿಪಾದಿಸಿ ಗ್ರಂಥಗಳನ್ನು ಬರೆಯುವದು ಅತ್ಯಾವಶ್ಯವಾಗಿದೆ.

ಭಗವತ್ಪೂಜ್ಯರಾದ ಶ್ರೀಮದಾನಂದತೀರ್ಥರ ಹಾಗು ಅವರ ಪಟ್ಟಶಿಷ್ಯರಾದ ಶ್ರೀನರಹರಿತೀರ್ಥರ, ಶ್ರೀಪದ್ಮನಾಭತೀರ್ಥರ ಶ್ರೀಮಾಧವತೀರ್ಥರ, ಶ್ರೀಅಕ್ಷೋಭ್ಯತೀರ್ಥರ, ಶ್ರೀಟೀಕಾಚಾರ್ಯರು ಪ್ರಭೃತಿ ಸುಪ್ರಸಿದ್ಧ ಶಿಷ್ಯರೆಲ್ಲರ ಜೀವನ ಚರಿತ್ರೆಗಳನ್ನು ಐತಿಹಾಸಿಕ ಚಿಕಿತ್ಸಾ ದೃಷ್ಟಿಯಿಂದ ಸಪ್ರಮಾಣವಾಗಿ ಬರೆಯಿಸಿ ಪ್ರಸಿದ್ಧಪಡಿಸುವದು ಮಾಧ್ವಮಠ ಸಂಸ್ಥೆಗಳ ಕರ್ತವ್ಯವಾಗಿದೆ.

(ಕೇವಲ ಪವಾಡಗಳಿಂದ ಯುಕ್ತವಾದ ಭಾವಿಕ ಜೀವನ ಚರಿತ್ರೆಗಳಿಗೆ ಚಿಕಿತ್ಸಕದೃಷ್ಟಿಯ ಐತಿಹಾಸಿಕ ಬೆಲೆಯು ಈ ೨೦ನೇ ಶತಮಾನದಲ್ಲಿ ಏನೂ ಬರುವದಿಲ್ಲ.)

ಧಾರವಾಡ } ನಾರಾಯಣ ಶ್ರೀನಿವಾಸ
೧೪—೧—೨೬ } ರಾಜಪುರೋಹಿತ ಧಾರವಾಡ.

ಸ್ವೀಕಾರ.

ಬೆಳಗಾವಿಯ ಜಾಪಟೆ ಬ್ರದರ್ಸ ಇವರಿಂದ ಮೆಂಥಾಲಿನ ಬಾಟ್ಲಿಯು ಬಂದಿದೆ. ಇದನ್ನು ಅವರು ಹೊಸದಾಗಿ ಸಿದ್ಧಪಡಿಸಿರುವರು. ತಲೆಶೂಲೆ, ನೋವುಗಳಿಗೆ ಉಪಯೋಗವಾಗುವದು.

ಮುಂಬೈ ಕಾಯದೇ ಮಂಡಲ.

(ನಮ್ಮ ಕಾಯದೇ ಮಂಡಲದ ಪ್ರತಿನಿಧಿಯಿಂದ)

ಮುಂಬೈ ೨೮—೨—೧೯೨೬.

ಒಂದು ವಾರದ ಸುದ್ದಿಯು.

ಇಲ್ಲಿಯ ಕಾನೂನ ಮಂಡಲದ ಸಭೆಯು 'ಟೌನ ಹಾಲದಲ್ಲಿ' ಈಗ್ಗೆ ೭ ದಿವಸಗಳಿಂದಲೂ ಕೂಡಿದ್ದು 'ಅಂದಾಜ ಪತ್ರಿಕೆ' ಗಳ ವಿಷಯವಾಗಿ ಚರ್ಚೆಯನ್ನು ನಡೆಸಿರುತ್ತದೆ. ಮಹತ್ವದ ವಿಷಯವೆಂದರೆ ಇದೇ. 'ಪ್ರೇಕ್ಷಕರಿಗೂ' ಮತ್ತು 'ಪ್ರೆಸ ರಿಪೋರ್ಟರ' ರ ಜನರಿಗೂ ಇದ್ದ ಜಾಗೆಯು ಅಷ್ಟು ಚನ್ನಾಗಿ ಇರುವದಿಲ್ಲ. ಕೇಳಿಸುವದಂದರೆ ಸ್ವಲ್ಪ ಕಠಿಣವೇ. ಪ್ರತಿದಿವಸ, ಸಭಾಸದರು ಮೊದಲೇ ಕಳಿಸಿದ ಪ್ರಶ್ನೆಗಳಿಗೆ ಉತ್ತರಗಳನ್ನು ಕೊಡುವದು ಮುಗಿದ ನಂತರ, ಅಧ್ಯಕ್ಷರು ಕರೆದ ಸಭಾಸದರು ಅಂದಾಜ ಪತ್ರಿಕೆಯ ಮೇಲೆ ಮಾತಾಡುವರು. ಈ ವರ್ಷದ ಅಂದಾಜ ಪತ್ರಿಕೆಯಲ್ಲಿಯ ಕೊರತೆಯು ೭೦ ಲಕ್ಷ ರೂಪಾಯಿ ಇರುತ್ತದೆ. ಇದರಲ್ಲಿಯ ಮುಖ್ಯ ಸಂಗತಿಯಂದರೆ 'ಸಮುದ್ರ ಹೂಳಿಯು' ವ ಖಾತೆಯನ್ನು ಮುಂದೆ ಸಾಗಿಸುವದು. ಈ ವರೆಗೂ ಮಾಡಿದ ಇಲ್ಲಿಯ ಎಲ್ಲ ಜಾತಿಯ, ಪಂಗಡದ, ಮತ್ತು ಮುಖಂಡರ ಅಭಿಪ್ರಾಯಕ್ಕೆ ಸರಕಾರವು ಸೊಪ್ಪುಹಾಕುವದೆಂಬದು ಇದರಮೇಲಿಂದ ತಿಳಿದು ಬರುತ್ತದೆ. ಸಮುದ್ರ ಹೂಳುವಕೆಲಸವನ್ನು ಒಂದು ಮಾಡಬಡಬೇಕೆಂದು ಒದರಿಕೊಳ್ಳುವ ಜನರ ಧ್ವನಿಯು ಅರಣ್ಯಧ್ವನಿಯೇ, ಸರಕಾರವು ಅದನ್ನು ಬಂದು ಮಾಡದು. ಇಷ್ಟೇ ಅಲ್ಲದೆ ಅದಕ್ಕೆ ಇನ್ನೂ ಹೆಚ್ಚಾಗಿ ಹಣಬೇಕೆಂದು ಕೇಳಿದ್ದಾರೆ. ಅಂತೆಯೇ ಹೊಸತೆರಿಗೆಗಳು ಮೇಲಿಂದಮೇಲೆ ಸರಕಾರಕ್ಕೆ ಬೇಕಾಗುತ್ತವೆ.

ಸ್ಟಾಂಪ ಕಾನೂನಿನ ಮೊದಲನೇ ವಾಚನದ ಚರ್ಚೆಯಾಗಿ ಬಹುಮತದಿಂದ ಅದು ಠರಾಯಿಸಲ್ಪಟ್ಟಿತು. ಈ ಠರಾವಿಗೆ ೪೫ ಸಭಾಸದರು ಸರಕಾರದ ಪಕ್ಷದಿಂದ ಮತಕೊಟ್ಟರು. ಮತ್ತು ೪೦ ಸಭಾಸದರು ಅದಕ್ಕೆ ವಿರೋಧಿಸಿದರು. ವಿರೋಧಿಸಿದವರ ಪೈಕಿ ನಮ್ಮ ಕರ್ನಾಟಕಸ್ಥರು ಯಾರಂದರೆ :-ಶ್ರೀ ಜೋಗ; ಶ್ರೀ. ಆಕಿ; ಶ್ರೀ. ಸರದೇಸಾಯಿ. ಶ್ರೀ ಪಠಾಣರವರು ಸರಕಾರಕ್ಕೆ ಅನುಕೂಲವಾಗಿ ತಮ್ಮ ಮತ ಕೊಟ್ಟರು ! ಶ್ರೀ. ಕಂಬಳಿಯವರು ಮತವನ್ನೇ ಕೊಡಲಿಲ್ಲ !! ಇವರು ಲೋಕನಿಯುಕ್ತ ಪ್ರತಿನಿಧಿಗಳು ! ಶ್ರೀ. ರಕ್ಕಸಗೀ ದೇಸಾಯರು ಸ್ವತಂತ್ರರೀತಿಯಿಂದ ವಿಚಾರಿಸಿ ಮತಕೊಟ್ಟದ್ದನ್ನು ನೋಡಿ ಆನಂದವಾಗುತ್ತದೆ.

ಅಂದಾಜ ಪತ್ರಿಕೆಯಲ್ಲಿ ಕರ್ನಾಟಕಕ್ಕೆ ಸಂಬಂಧಪಟ್ಟ ಯಾವ ತರದ ಮಹತ್ವದ ಸುಧಾರಣೆಗಳೂ ಇಲ್ಲ. ನಿಜವಾಗಿ ನೋಡಿದರೆ ಘಟಪ್ರಭೆಯ ಕಾಲುವೆಯ ಸಲುವಾಗಿ ಆದ ರಚನೆಯೂ ಮತ್ತು ಕರ್ನಾಟಕ ಕಾಲೇಜದಲ್ಲಿಯ ಶಾಸ್ತ್ರೀಯ (Science) ಭಾಗವನ್ನು ಪೂರ್ಣಗೊಳಿಸುವದೂ ಮತ್ತು ಇತರ ಅನೇಕ ಸಂಗತಿಗಳ ಪ್ಲಾಗ್ಯೂ ಅವುಗಳಕಡೆಗೆ ಸರಕಾರದ ದೃಷ್ಟಿ ಇರುವದಿಲ್ಲ. ಘಟಪ್ರಭೆಯ ಯೋಜನೆಯು ಸಂಪೂರ್ಣ ಬಿಡಲ್ಪಟ್ಟಿದೆಂಬ ಉತ್ತರವು ಸರಕಾರದಿಂದ ಬಂದಿತು. ಉಳಿದವುಗಳ ಹೆಸರೇ ಇಲ್ಲ.

ಕರ್ನಾಟಕ ಸಭಾಸದರಲ್ಲಿ ಶ್ರೀ. ಕಂಬಳಿ ಮತ್ತು ಸರದೇಸಾಯಿ ಇವರು ಈ ಕಾಲುವೆಯ ಸಂಬಂಧಿ ಹೆಚ್ಚು ಭಾಷಣಮಾಡಿದರು. ಶ್ರೀ. ದೇಸಾಯರ ಭಾಷಣವು ಆಹ್ವಾನರೂಪವಾಗಿದ್ದರೂ ಅದರ ಪರಿಣಾಮವೇನು ಸರಕಾರದವರ ಮೇಲೆ ಆದಂತೆ ತೋರಲಿಲ್ಲ, ಕರ್ನಾಟಕಕ್ಕೆ ಸರಕಾರವು ತೋರಿಸುವ ಈ ತರದ ಬೇಪರವಾ...

ನತೆಗೆ ಹೊಸದಾಗಿ ಏನಾದರೂ ಸಾಕ್ಷಿಬೇಕಾಗಿದ್ದರೆ ಇಲ್ಲಿ ಪ್ರತ್ಯಕ್ಷವಾಗಿ ಕಾಣಬಹುದು!

ನಮ್ಮ ಕರ್ನಾಟಕದ ಪ್ರತಿನಿಧಿಗಳು ಎಷ್ಟು ಮಹತ್ವವಾದ ಠರಾವುಗಳನ್ನು ಮುಂದೆ ತಂದರೂ ಅವು ವ್ಯರ್ಥವೇ. ಕರ್ನಾಟಕ ಪ್ರತಿನಿಧಿಗಳು ಒಮ್ಮನಸ್ಸಿನಿಂದಲೂ ದಿಟ್ಟತನದಿಂದಲೂ ಕಾರ್ಯ ಮಾಡುವದಿಲ್ಲವೆಂಬುದೇ ಇದರ ಕಾರಣವು.

ಕರ್ನಾಟಕವು ತನಗೆ ಸರಕಾರವು ತೋರಿಸುವ ಮಲಮಕ್ಕಳ ಪ್ರೀತಿಯನ್ನು ಧಿಕ್ಕರಿಸಬೇಕೆಂದು ಬಯಸುತ್ತಿದ್ದರೆ ಬೇಗನೇ ಕುಂಭಕರ್ಣನ ನಿದ್ರೆಯಿಂದ ಎಚ್ಚರಿಯಬೇಕು

೧—೩—೨೬.

ಪ್ರತಿದಿವಸದಂತೆ ಈ ಹೊತ್ತು ಮುಂಬೈ ಲೇಜಿಸ್ಲೇಟಿವ್ಹ ಕೌನ್ಸಿಲ ೨ ಘಂಟೆಗೆ ಸುರುವು ಆಯಿತು. ಪ್ರೇಕ್ಷಕರ ಗ್ಯಾಲರಿಯಲ್ಲಿ ಸರ ಮಹಾದೇವ ಚೌಬಾಳರು ಕುಳಿತಿದ್ದರು. ಬೆಳಗಾವಿಯ ಶ್ರೀ. ಅಂಗಡಿಯವರು ಈ ದಿನ ಬಂದರು. ಪ್ರಶ್ನೋತ್ತರದ ಹೊರತಾಗಿ ಉಳಿದ ವಿಷಯಗಳು ಸಪ್ಪಗೆ ಇರುತ್ತವೆ. ಅಂದಾಜ ಪತ್ರಿಕೆಯ ಮೇಲೆ ಅಭ್ಯಾಸ ಮಾಡಿ ಮಾತನಾಡದೇ ಹರಟೆ ಬಡೆಯುವವರೇ ಹೆಚ್ಚು. ಸಮುದ್ರ ಹುಗಿಯುವ ವಿಷಯದ ಮೇಲೆ ಎಲ್ಲ ಪಂಗಡದವರೂ ಮಾತನಾಡಿ, ಸರಕಾರಕ್ಕೆ ಏಕವಾಕ್ಯತೆಯಿಂದ ವಿರೋಧಿಸಿದರು. ಪ್ರಶ್ನೋತ್ತರದನಂತರ ಈ ದಿನ ಸ್ಟ್ಯಾಂಪ ಬಿಲ್ಲು ಎರಡನೇ ಸಲ ತೆಗೆದುಕೊಳ್ಳಲ್ಪಟ್ಟಿತು.

ಜಿ ಬಿ ಪ್ರಧಾನ (ರಾಣೆ, ವೆಂಬುವರು ಈ ಬಿಲ್ಲನ್ನು ಒಂದು ಶಿಷ್ಟ ಮಂಡಳಕ್ಕೆ ಒಪ್ಪಿಸಬೇಕೆಂದು ಉಪಸೂಚನೆಯನ್ನು ತಂದರು ಬೊಕ್ಕಸದ ಮಂತ್ರಿಗಳು ವಿರೋಧಿಸಿದರು ಈ ಉಪಸೂಚನೆಗೆ ೨೬ ಮತಗಳ ಅನುಕೂಲವಾಗಿಯೂ ಮತ್ತು ೪೫ ಮತಗಳು ಪ್ರತಿಕೂಲವಾಗಿಯೂ ಬಿದ್ದವು. ಶ್ರೀ. ಕಂಬಳಿ ಮತ್ತು ಅಂಗಡಿಯವರು ಈ ಸೂಚನೆಗೆ ವಿರೋಧಿಸಿ ಮತಕೊಟ್ಟರು ಅಂದರೆ ಸರಕಾರದಂತೆ ಮತ ಕೊಟ್ಟರು. ಸರದೇಸಾಯಿ, ಜೋಗ, ಕರ್ಕಿ, ಇವರು ಅನುಕೂಲವಾಗಿ ಮತಕೊಟ್ಟರು. ಇದಾದ ನಂತರ ೨ ನೇ ಸಲ ಸ್ಟ್ಯಾಂಪ ಕಾನೂನು ಓದಲ್ಪಟ್ಟಿತು. ಆಗ್ಗೆ ಮತ್ತೆ ಮಿ. ಎ ಎನ್. ಸುರ್ವೆಯವರು ಒಂದೇ ವರ್ಷದ ವರೆಗೆ ಈ ಕಾನೂನ ಕಾಯಿದೆಯಾಗಿ ಇರತಕ್ಕದೆಂದೂ ಪಿ. ಜಿ. ಪಟವಾರಿಯವರು ೨ ವರ್ಷ ಇರತಕ್ಕದ್ದೆಂದೂ ಮತ್ತು ಸರಕಾರದ ವರೂ ಕಡಿತನಕ ಇರತಕ್ಕದೆಂದೂ ಉಪಸೂಚನೆಗಳನ್ನು ತಂದರು.

ಡಾ. ಪರಾಂಜಪೆಯವರು ೧೧ ವರ್ಷಗಳವರೆಗೆ ಅಮಲಿನಲ್ಲಿ ಇರತಕ್ಕದೆಂದು ಪ್ರತಿಪಾದಿಸಿದರು. ಇದಕ್ಕೆ ಸರಕಾರವು ಒಪ್ಪಲಾಗಿ ಈ ಸ್ಟ್ಯಾಂಪ ಕಾನೂನು ಒಂದೇ ವರ್ಷದವರೆಗೆ ಅಮಲಿನಲ್ಲಿ ಇರತಕ್ಕದ್ದೆಂದು ಮೂರನೇ ಸಲ ಠರಾಯಿಸಲ್ಪಟ್ಟಿತು.

ಇದಾದನಂತರ 'ಕೋರ್ಟ ಫೀ ಆಕ್ಟ' ದ ಮೇಲೆ ಬೊಕ್ಕಸದ ಮಂತ್ರಿಗಳು ಮಾತನಾಡಿದರು.

ಪ್ರಶ್ನೋತ್ತರಗಳು

ಕಾಯದೇ ಮಂಡಲದಲ್ಲಿ ಪ್ರಶ್ನೋತ್ತರಗಳು ನಡೆಯುವದೇನೋ ನಿಜ. ಆದರೆ ಇವನ್ನೆಲ್ಲ ಓದಿಕೊಂಡು ಸಾರ್ವಜನಿಕ ದೃಷ್ಟಿಯಿಂದ ಅಭ್ಯಾಸಮಾಡಿ, ಸರಕಾರದ ವಿರುದ್ಧ ಬಡಿದಾಡಲು ಸಜ್ಜು ಮಾಡಿಕೊಳ್ಳುವವರು ವಿರಳ ಅಂತೆಯೇ ಕೇಳಿದ ಪ್ರಶ್ನೆಗಳು ಪುನಃ ಕೇಳಲ್ಪಡುವವು. ಅವಕ್ಕೆಲ್ಲ ಸರಕಾರದವರು ಇಂಥಿಂಥ ಸಭಾಸದರ ಇಂಥಿಂಥ ಪ್ರಶ್ನೆಗೆ ಕೊಟ್ಟ ಉತ್ತರವನ್ನು ನೋಡಿಕೊಳ್ಳಿ ಎಂಬುದಾಗಿ ಉತ್ತರಕೊಡಬೇಕಾಗುವದು. ಈಗಿನ ಪ್ರತಿನಿಧಿಗಳು ತಮ್ಮ ತಮ್ಮ ವ್ಯವಸಾಯ ಮಾಡಿಕೊಂಡು, ಹೊತ್ತು ಸಾಧಿಸಿದರೆ, ಮಾತ್ರ ಕಾಯದೇ ಮಂಡಲದ ಬಗ್ಗೆ ವಿಚಾರ ಮಾಡುವರು. ಕಳವಳದಿಂದ ಕೆಲಸಮಾಡುವದಕ್ಕಿಂತ ಪ್ರತಿಷ್ಠೆಗಾಗಿಯೇ ಕಾಯದೇ ಮಂಡಲದಲ್ಲಿ ಸೇರುವವರು ಹೆಚ್ಚು ಜನರು. ನಾಮದಾರ ಪಟೇಲರಂತೆ ಹಿಂದಿನ ಎಲ್ಲ ರಿಪೋರ್ಟುಗಳನ್ನೂ, ಸರಕಾರದ ಕಾಗದ ಪತ್ರಗಳನ್ನೂ ಓದಿ, ಸರಕಾರದ ತಪ್ಪು ತಡೆಗಳನ್ನು ಕಂಡುಹಿಡಿದು, ಧಿಟ್ಟತನದಿಂದ ಒಡಿದಾಡಲಿಕ್ಕೆ ಅವಕಾಶ ಬೇಕಾಗುವದು. ಇನ್ನು ಸ್ವಲ್ಪೇ ಕಾಲದಲ್ಲಿ ಮುಂಬೈ ಇಲಾಖೆಯ ಕಾಯದೇ ಮಂಡಲದ ಚುನಾವಣಿಯಾಗುವದಷ್ಟೇ? ಆಗ್ಗೆ ಪ್ರತಿಯೊಂದು ಜಿಲ್ಲೆಯ ಮತದಾರರು ಸಂಪೂರ್ಣವಾಗಿ ಕಾಯದೇ ಮಂಡಲದ ಕೆಲಸವನ್ನು ಮಾಡುವೆನೆಂದು ವಚನವನ್ನಿತ್ತ ಪ್ರತಿನಿಧಿಗಳನ್ನೇ ಆರಿಸಿ ಕಳಿಸಿದರೆ ಕೊಂಚಾದರೂ ಕಾರ್ಯವಾಗಬಹುದು.

(೧) ಶ್ರೀ. ಜೋಗರ ಪ್ರಶ್ನೆಗಳಿಗೆ ಉತ್ತರ:- ಸಾಕಷ್ಟು ದನಗಳಿಲ್ಲದ್ದರಿಂದ ಸಾಗುವಳಿಯಾಗದ ಭೂಮಿಯು ಎಷ್ಟಿದೆಂಬದು ಸರಕಾರಕ್ಕೆ ಗೊತ್ತಿಲ್ಲ. (೨) ಮುದ್ರಾಲಯಗಳ ಕಾನೂನಿನ ಪ್ರಕಾರ ಸರಕಾರಕ್ಕೆ ಬರುವ ವೃತ್ತಪತ್ರಿಕೆಗಳು ೨ ವರ್ಷಗಳ ಮೇಲೆ ನಾಶಮಾಡಲ್ಪಡುವವು. ಗ್ರಂಥಗಳು ಮಾತ್ರ ರೆಕಾರ್ಡ ಆಫೀಸಿನಲ್ಲಿ ಕಾದಿಡಲ್ಪಡುವವು. ಸರಕಾರದ ಅಪ್ಪಣೆಯಿಂದ ಬೇಕಾದವರು ಅವನ್ನು ಓದಬಹುದು. (೩) ಜೇಲ ಮ್ಯಾನುಅಲ್ 'ದ ಪ್ರಕಾರ ಶ್ರೀ ದಿವಾಕರರಿಗೆ ಅವರು ಜೇಲಿನಲ್ಲಿದ್ದಾಗ್ಗೆ ಭೆಟ್ಟಿಯಾಗಲು ಬಂದ ಶ್ರೀ ಕಬ್ಬೂರವರಿಗೆ ಅಪ್ಪಣೆ ದೊರೆಯಲಿಲ್ಲ. (೪) "ಮುಂಬೈ ಕ್ರಾನಿಕಲ್" ದಲ್ಲಿ ಶ್ರೀ. ದಿವಾಕರರು ತುರಂಗಗಳ ಬಗ್ಗೆ ಬರೆದ ಲೇಖವನ್ನು ಸರಕಾರವು ಓದಿದೆ. ಆದರೆ ಶ್ರೀ ಮಜಲೆ ನೋಹರೇ ಪ್ರಭೃತಿಗಳ ದೇಹಾರೋಗ್ಯವು ಅವರು ಏಕಾಂತವಾಸದಲ್ಲಿದ್ದದರಿಂದ ಕೆಟ್ಟಿತೆಂಬದು ನಮಗೆ ಗೊತ್ತಿಲ್ಲ. ರಾಜಕೀಯ ಕೈದಿಗಳನ್ನು ವಿಚಾರಣೆಯಲ್ಲಿ ಏಕಾಂತವಾಸದಲ್ಲಿಟ್ಟಿರಲಿಲ್ಲ. (೫) ಸಜ್ಜೆ ಜೊಳ, ಗೋಧಿಗಳ ರೊಟ್ಟಿಗಳನ್ನು, ಯೆರವಡೆಯಲ್ಲಿ ಈಗ್ಗೆಯೂ ಕೊಡುತ್ತಿವೆ. ಹಲವರಿಗೆ ಅಕ್ಕಿಯ ಅನ್ನವನ್ನು ಕೊಡುತ್ತಿದ್ದವು. ಆರೋಗ್ಯದ ಕ್ಟರುಗಳು ಇದೇನು ಅವಶ್ಯಕವಿಲ್ಲವೆಂದು ಹೇಳಿದ್ದರಿಂದ ಅಕ್ಕಿಯ ಅನ್ನವನ್ನು ಯಾರಿಗೂ ಕೊಡುವದಿಲ್ಲ ಶಸ್ತ್ರಕ್ರಿಯೆ ಅವಶ್ಯವಿದ್ದ ರೋಗಿಗಳನ್ನು ಸಸೂನ ದವಾಖಾನೆಗೆ ಕಳಿಸುತ್ತದೆ. ಮಾಂಸಾಹಾರಿಗಳಿಗೂ ಶಾಕಾಹಾರಿಗಳಿಗೂ ಪ್ರತ್ಯೇಕವಾದ ಭಾಂಡಿಗಳಿವೆ ಸರಾಣ ಹಾಗೂ ಬಲೂಚೀ ಕೈದಿಗಳಿಗೆ ಹೆಚ್ಚಿನ ಸವಲತ್ತುಗಳೇನೂ ಇಲ್ಲ. (೬) ಫಾಯನಲ್ ಅಥವಾ ಮ್ಯಾಟ್ರಿಕ್ ಆದ ಪ್ರಾಥಮಿಕ ಶಾಲಾಧ್ಯಾಪಕರ ಸಂಖ್ಯೆ, ಅವರ ಪಗಾರಗಳ ಬಗ್ಗೆ ಮಾಹಿತೀ ತರಿಸುವೆವು.

ಶ್ರೀ ರಕ್ಕಸಗೀ ದೇಸಾಯರು.

(೧) ಇನಾಮದಾರ, ಪಾಟೀಲ ಗ್ರಾಮಪಂಚಾಯತ ಇವರ ಬಗ್ಗೆ ಶ್ರೀ. ದೇಸಾಯರು ಪ್ರಶ್ನೆಗಳನ್ನು ಕೇಳಿರುವರು. ಸ್ಥಳ ಸಂಕೋಚಕ್ಕಾಗಿ ಇಲ್ಲಿ ಅವನ್ನೆಲ್ಲ ಕೊಟ್ಟಿಲ್ಲ. (೨) ಕನ್ನಡ ನಮೂನೆಗಳು ಪೋಷ್ಟ ಆಫೀಸಿನಲ್ಲಿ ಇರದ್ದಕ್ಕಾಗಿ ಕನ್ನಡಿಗರಿಗೆ ತೊಂದರೆಯಾಗುವದೆಂದು ಯಾರೂ ತಕರಾರು ಮಾಡಲಿಲ್ಲವಾದ್ದರಿಂದ ಸರಕಾರದ ಲಕ್ಷ್ಯವು ಅತ್ತ ಹೋಗಿಲ್ಲ ಕನ್ನಡ ಮನಿಯಾರ್ಡರ ನಮೂನೆಗಳ ಬಗ್ಗೆ ಸೂಚನೆಯು ಬಂದಿದೆ. "ಲೋಕಬಂಧು' ಎನ್ನಲ್ಲಿ ಒಂದ ಲೇಖವು ಸರಕಾರಕ್ಕೆ ಗೊತ್ತಿಲ್ಲ. (೩) ಹುನಗುಂದ ತಾಲೂಕಿನ ಜಲಕುಂಡಿಯ ಹಳ್ಳಕ್ಕೆ ಒಡ್ಡು ಹಾಕಿ, ಬಳಗಳಿಗೆ ನೀರನ್ನು ಪೂರೈಸುವ ವಿಚಾರವು ಕಳೆದ ಶತಮಾನದ ಕೊನೆಯಲ್ಲಿ ನಡೆದದ್ದರ ವಿಶದವಾದ

(೩ ನೇ ಪುಟದಮೇಲೆ ನೋಡಿ)

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯುವ್ಹಿಂಗ ಇನ್ ಸ್ಟೀಟ್ಯೂಶನ್

ಜಮುಖಂಡಿಕರ ವಾಡೇ ೪೯೫ ಶನಿವಾರ ಪುಣೇಶಹರ

ಕಣ್ಣಿನ ಔಷಧ

ಹೂವು, ಮೋತಿಬಿಂದು, ದೃಷ್ಟಿ ಮಾಂದ್ಯ, ಕಂಣುಚಿಟ್ಟು, ಕಣ್ಣು ಬರೋಣ, ಕೆಂಪಾಗೋಣ, ಮತ್ತು ಗುಡ್ಡಿ ರೆಪ್ಪಿ ಬಕ್ಕಿಗಳ ವಿಕಾರಗಳ ಇಂತಹ ಕಂಣಿನ ಎಲ್ಲ ಬೇನೆ ಗಳಿಗೆ ಈ ಔಷಧವು ಸಂಜೀವಿನಿಯೇ ಶಸ್ತ್ರಕ್ರಿಯೆಗಿಂತಲೂ ಮೇಲು! ರಾ. ಬ. ಪೆಂಡಸೆ- ಡಿ. ಬಿ. ಕಲೆಕ್ಟರ ಅನ್ನುತ್ತಾರೆ "ಅನೇಕರಿಗೆ ಈ ಔಷಧ ಕೊಟ್ಟ ಗುಣದ ಬಗ್ಗೆ ಖಾತ್ರಿಯಾ ಯಿತು ಮಗಳ ಕಂಣುಗಳು ನೆಟ್ಟಗಾದವು" ಎಂಥ ರೋಗಕ್ಕೂ ಎರ ಡೇ ಮಾತ್ರೆ. ಮಾತ್ರೆಯೊಂದಕ್ಕೆ ರು ೧॥ ಟ ಖ ಬೇರೆ.

ಸೂಚನೆ:— ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಾ. ವಿ. ಕರಮರಕರ ೫೩೦ ಶನಿವಾರ ಪುಣೆಶಹರ

Sathe's British Sports

Agency Sadashive

Poona City.

Dealers, in Tennis, Football, Cricket Hockey Badminton & other Games.

Send for our Catalogue.

ಪೊರವಾಲ ಬ್ಲ್ಯಾಕ ಟೂಥ್ ಪಾವಡರ

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ, ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ- ೫ ಆಣೆ. ಟ. ಖ. ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಲ್ಯಾಂಡ ಕೊ.

(ರಜಿಸ್ಟರ್ಡ) ಪುಣೇಶಹರ

ಕಿವುಡತನ, ಕಿವಿಯೊಡೆಯುವದು, ಸೊಸೆಯುವದು, ಡಬ್ಬ ಹಾಕುವದು, ಕೀವು ರಕ್ತ ಬರುವದು, ಸಪ್ಪಳ ಆಗುವದು, ಕಡಿಮೆ ಕೇಳಿಸುವದು, ತಿಂಡಿ, ಇತ್ಯಾದಿಗಳ ಮೇಲೆ ರಾಮಬಾಣ ಟ. ಖ. ಸಹ ೧ ಬಾಟ್ಲಿಗೆ ೨|= —Dr. w. N Dixit. Poona city

ಹೊಟ್ಟೆನೋವು **ಹೊಟ್ಟೆನೋವು**

ಪೋಟದುಖೀ

ಹೊರಕಡೆಗೆ ಸಾಫ ಆಗದಿರುವದು, ಹೊಟ್ಟೆಯಲ್ಲಿ ಗುರ್ರೆನ್ನುವದು, ಅಜೀರ್ಣ ಆಗುವದು ಢೋಳೆಬರುವದು, ಕಣ್ಣು ಕತ್ತಲೆಗಡಿಸುವದು, ಕರಳಿನಲ್ಲಿನೀರು ಹಿಡಿಯುವದು, ವಾಯುವಿನಿಂದ ಮತ್ತು ವಾತಿನಿಂದ ಹೊಟ್ಟೆಯಲ್ಲಿ ಗ್ಯಾಸ(Gas) ಆಗಿ ಹೊಟ್ಟೆಶೂಲಿ, ಹೊಟ್ಟೆಯುಬ್ಬುವದು, ಇತ್ಯಾದಿ ಹೊಟ್ಟೆಯಸಂಭಂಧವಾದ ಎಲ್ಲಬಗೆಯ ಹೊಸಹಳೇ ವಿಕಾರಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣ ಹೊಂದುವವು. ಇದಲ್ಲದೆ ಹೊಟ್ಟೆಯೊಳಗಿನ ಎಲ್ಲ ವಿಕಾರಗಳಿಗೂ

ಸೊಹೋನಿ ಇವರ ಪೋಟದುಖೀ

ಯು ಖಾತ್ರಿಯ ಮತ್ತು ರಾಮಬಾಣ ಔಷಧವಿದೆ. ಬಾಟ್ಲಿಯೊಂದಕ್ಕೆ ರೂ ೨॥ ಟಪಾಲ ಖರ್ಚು ಬೇರೆ.

ಪ್ರಮಾಣ— ಪ್ರತಿಯೊಂದು ಸಲ ೨ ಗುಳಿಗೆ ಮಧ್ಯಾಹ್ನದ ಮತ್ತು ರಾತ್ರಿಯ ಊಟವಾದಮೇಲೆ ಒಂದು ಗುಟುಕು ನೀರಿನಲ್ಲಿ ತೆಗೆದು ಕೊಳ್ಳಬೇಕು.

ವಿಶೇಷ ಸೂಚನೆ ಪತ್ರ ವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಿಳಾಸ— ಪಿ. ಎಸ್. ಸೊಹೋನೀ ಬೇಲ ಬಾಗದ ಹತ್ತಿರ ೧೭೪ ಬುಧವಾರ ಪೇಟೆ ಪುಣೆ ಶಹರ

पोटदुखी.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ ರಿಸ್ಟವಾಚ

ಬೆಲೆ ೭-೮-೦ ಪಟ್ಟೆ ಸಹಿತ; ಟ. ಖ. ಪುಕ್ಕಟ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ, ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು.

ಲಿಬೆರೋ ವಾಚ ಕಂ. (India) ಮುಂಬೈ ನಂ. ೪

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು	ಸೂರಕ್ಕೆ	ವರ್ಷಕ್ಕೆ	2½
ಸೇವ್ಹಿಂಗ್ಸ ಬ್ಯಾಂಕ ಠೇವು	"	"	1½
ಮುದ್ದತೀ ಠೇವು ೬ ತಿಂಗಳಿಗೆ	"	"	6
" ೧೨ ತಿಂಗಳಿಗೆ	"	"	7

ಪಾರಲೋನ ವಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜಿನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರೇಣ ಕುರು ನಿತ್ಯಂ ನಿಜದೇಶಸೇವನಂ।

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನೂತನವಾಗಿ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾವ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲವೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೫೬೨೦ ಮಿ. ಪಿರ್‍ಲ ಜಿವನ್ಮಾಜಿ ಸೇಟ ಕಲಾಸ್ ಅಲಿಬಾಗ ಬಾಂಬೆ,

(೨) ಬಾಂಡ ನಂ ೧೩೬೦೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ (ಜಿ. ತುಮಕೂರು.)

(೩) ಬಾಂಡ ನಂ. ೧೯೯೪೭ ಮಿ| ವೆಂಕಟರಮಣ. ವೆಂಕಟರಮಣ ಹೆಗಡೆ, ಸೋಕಳಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಹಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೭೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ|| ರಾಮಚಂದ್ರ ವಾಮನ ಕಾಂದೇಕರ C/o ಕಾಬಸ್ಕರ ಪಾಡಾ ಪ್ಯಲೇರರೋಡ (ಬರೋದಾ)

(೬) ಬಾಂಡ ನಂ. ೧೮೯೦ ಮಿ|, ಆರ್. ಎಚ್. ನಾಟೆಸನ್ ಮೆಕ್ಯಾನಿಕ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎಸ್. ಆರಾಧ್ಯ

ಚೀಫ ಏಜಂಟ (ಮುಂಬಯಿ ಇಲಾಖಾ)

ಜಾಹೀರನಾಮಾ.

ಮೆ|| ಕಲೆಕ್ಟರ ಸಾ' ಬಾ|| ಜಿಲ್ಹಾ ವಿಜಾಪೂರ ಇವರ ಕಡಿಂದಾ ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ—

ತಾ|| ೧-೪-೧೯೨೬ ದಿಂದ ೩೧-೩-೧೯೨೭ ಮಾರ್ಚಕ್ಕೆ ಮುಗಿಯುವ ಒಂದು ವರ್ಷದ ಮುದ್ದತಿ ಮಟ್ಟಿಗೆ ವಿಜಾಪೂರ ಜಿಲ್ಹೆಯೊಳಗಿನ ಸರಕಾರಿ ರಸ್ತೆಗಳಮೇಲಿನ ಟೋಲನಾಕೆಗಳಲ್ಲಿ ಟೋಲ ವಸೂಲಮಾಡುವ ಹಕ್ಕನ್ನು ವಿಜಾಪೂರದಲ್ಲಿ ತಾ|| ೨೬-೩-೧೯೨೬ ಶುಕ್ರವಾರ ದಿವಸ ಮಧ್ಯಾಹ್ನ ೧೨ ಘಂಟೆಗೆ ದರಬಾರ ಹಾಲಿನಲ್ಲಿ ಉಘಡ ಲಿಲಾವ ಮಾಡುವದರಲ್ಲಿ ಬರುವದು. ಸವಾಲಿನಲ್ಲಿ ಬೇಡುವವರು ಆ ವೇಳೆಕ್ಕೆ ಹಾಜರ ಇರಬೇಕು.

Bijapur, 25-2-1926.

Sd/- V. H. NAIK.
Collector of Bijapur.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ಜ ಹೆಚ್ಚಿಗೆಯಾದ ಕಾರಣ ಮುಂದ್ಯಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೬೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ—ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕಾನಿಕಲ್ ಕ್ಲಾಸ ೩೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಈ ಪತ್ರಿಕೆಯು ... ರಾಜಪುರೋಹಿತ ... ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಮುಂಬೈ ಸರಕಾರದ ಗ್ಯಾಝೆಟ್.

ರ್ಯಾಂಗಲರ ಕಟ್ಟೀಯವರು ಎಲ್ಫಿನ್‌ಸ್ಟನ್ ಕಾಲೇಜದ ಮತ್ತು ಶ್ರೀ. ಸತ್ಯಾವಳಿಯವರು ಕರ್ನಾಟಕ ಕಾಲೇಜದ ಗಣಿತ ಪಂಡಿತರಾಗಿ ನೇಮಿಸಲ್ಪಟ್ಟಿದ್ದಾರೆ.

ಬೆಳಗಾವಿಯ ಜಿಲ್ಹೆಗೆ ಶ್ರೀ. ದಳವೀಯವರು ಪಬ್ಲಿಕ್ ಪ್ರಾಸೀಕ್ಯೂಟರರಾಗಿಯೂ, ಶ್ರೀ ಘೋಡ ಮತ್ತು ಇನಾಮದಾರರು ಅವರ ಸಹಾಯಕರಾಗಿಯೂ ನೇಮಿಸಲ್ಪಟ್ಟಿದ್ದಾರೆ.

ಶ್ರೀ ಗಾರಪಾಠ ಮತ್ತು ಅಂಬೇಕರರಿಗೆ ವಿಜಾಪೂರದಲ್ಲಿಯೂ, ಶ್ರೀ ಜಮಖಂಡಿಯವರಿಗೆ ಧಾರವಾಡದಲ್ಲಿಯೂ ವಕೀಲಿ ಸನದು ದೊರೆತಿವೆ.

ಇಂಗ್ಲಂಡದ ಶಿಕ್ಷಣಾಲಯಗಳಿಗೆ ಹೋಗತಕ್ಕವರು ಮೊದಲು (ದಿ ಬಾಂಬೆ ಪ್ರಾವಿನ್ಸಿಯಲ್ ಅಡ್ವೈಜರೀ ಕಮಿಟಿ, ದಿ ಯುನಿವ್ಹರ್ಸಿಟಿ, ಬಾಂಬೆ) ಈ ವಿಳಾಸಕ್ಕೆ ಪತ್ರ ಬರೆದು ಎಲ್ಲ ವಿಶೇಷವಾದ ಸಂಗತಿಗಳನ್ನು ತಿಳಿದುಕೊಳ್ಳತಕ್ಕದ್ದು. ವಿದ್ಯಾರ್ಥಿಗಳ ಸೌಕರ್ಯಕ್ಕಾಗಿ ಸರಕಾರದವರು ಈ ಸಂಸ್ಥೆಯನ್ನು ಮುದ್ದಾಂ ಸ್ಥಾಪಿಸಿದ್ದಾರೆ. ಮುಂಬೈ ಇಲಾಖೆಯ ಪ್ರತಿಯೊಂದು ಜಿಲ್ಹೆಯೊಳಯೂ ಇದರ ಶಾಖೆಗಳಾಗಿವೆ. ಆಯಾ ಜಿಲ್ಹೆಯವರು ಆ ಆ ಶಾಖೆಯಲ್ಲಿ ವಿಚಾರಿಸಬಹುದು.

ಜಿಲ್ಹೆಗಳ ಪೀಕಿಯ ಧಾರಣೆ, ಇತ್ಯಾದಿ.

ವಿಜಾಪೂರ — ಹತ್ತಿ ಬಿಡಿಸುವದು, ಗೋದಿ ಹಾಗೂ ಬಿಳಿಜೋಳಗಳನ್ನು ಕಿತ್ತುವದು ಸಾಗಿದೆ. ಮೇವು ಸಾಕಷ್ಟಿದೆ ದನಗಳು ಒಳ್ಳೇ ಸ್ಥಿತಿಯಲ್ಲಿವೆ. ಮುದ್ದೇಬಿಹಾಳ ತಾಲೂಕಿನ ಹೊರ್ತಾಗಿ ಉಳಿದ ಕಡೆಗೆ ಕುಡಿಯುವ ನೀರು ಸಾಕಷ್ಟಿದೆ. ೧ ರೂ ಗೆ ಜೋಳ ೧೦।, ಅಕ್ಕಿ ೪॥ ಶೇರು.

ಧಾರವಾಡ — ಹತ್ತಿ ಬಿಡಿಸುವದೂ, ಗೋದಿ ಕೊಯ್ಯುವದೂ ಸಾಗಿವೆ. ಮೇವು ಸಾಕಷ್ಟಿದೆ. ದನಗಳ ಸ್ಥಿತಿ ಚನ್ನಾಗಿದೆ. ಕುಡಿಯುವ ನೀರು ಸಾಕಷ್ಟಿದೆ. ಹುಬ್ಬಳ್ಳಿ, ಬಂಕಾಪೂರ, ಕಲಘಟಗಿ ತಾಲೂಕ ಹಾಗೂ ಸವಣೂರ ಸಂಸ್ಥಾನಗಳ ಹೊರ್ತಾಗಿ ಎಲ್ಲ ಕಡೆಗೆ ನೀರಾವರಿ (Irrigation) ಸಾಕಷ್ಟಿದೆ. ೧ ರೂ ಗೆ ಗೋದಿ ೫॥; ಅಕ್ಕಿ ೬॥; ಜೋಳ ೧೦॥; ಬೇಳೆ ೪॥ ಶೇರುಗಳು.

ಬೆಳಗಾವಿ — ಹಿಂಗಾರಿ ಬೆಳೆಗಳ ಸುಗ್ಗಿಯು ತೀರುತ್ತ ಬಂದಿದೆ. ತೋಟಪಟ್ಟಿಗಳು ಚನ್ನಾಗಿವೆ. ಬೆಲ್ಲದ ಕೆಲಸವೂ ಹತ್ತಿ ಬಿಡಿಸುವದೂ ಸಾಗಿವೆ. ಭೂಮಿಗಳನ್ನು ಹಸನ ಮಾಡುತ್ತಿರುವರು. ಪರಸಗಡದ ಕೆಲವು ಭಾಗಗಳನ್ನು ಬಿಟ್ಟರೆ ಎಲ್ಲ ಕಡೆಗೂ ಮೇವು ಸಾಕಷ್ಟಿದೆ. ಕುಡಿಯಲಿಕ್ಕೂ ನೀರಾವರಿಗೂ ಸಾಕಷ್ಟು ನೀರಿದೆ. ೧ ರೂ. ಗೆ ಜೋಳ ೯; ಸಜ್ಜೆ ೯; ಅಕ್ಕಿ ೫।; ಗೋದಿ ೪; ಬೇಳೆ ೬ ಶೇರುಗಳು.

ಕಾರವಾರ — ತೋಟಪಟ್ಟಿಗಳು ಚನ್ನಾಗಿವೆ. ಕಾರವಾರ ತಾಲೂಕದಲ್ಲಿ ಹಿಂಗಾರಿ ಬೆಳೆಗಳ ಮತ್ತು ಉಳಿದಲ್ಲಿ ಕಬ್ಬಿನ ಸುಗ್ಗಿಯು ಮುಂದರಿದಿದೆ. ಶಿರಸಿ ತಾಲೂಕ, ಸಿದ್ದಾಪೂರ ಪೇಟೆಗಳಲ್ಲಿ ಬಿತ್ತುವದು ನಡೆದಿದೆ. ಹಳಿಯಾಳ, ಕಾರವಾರ, ಅಂಕೋಲೆ, ಕುಮಟಾ ಮತ್ತು ಹೊನ್ನಾವರ ತಾಲೂಕಗಳಲ್ಲಿ ಬೆಳೆಗಳು ಒಳ್ಳೇ ಸ್ಥಿತಿಯಲ್ಲಿವೆ. ಹೊನ್ನಾವರ, ಸಿರಸಿ ತಾಲೂಕಗಳಲ್ಲಿಯೂ, ಮುಂಡಗೋಡ ಪೇಟೆಯಲ್ಲಿಯೂ ಭೂಮಿಯನ್ನು ಹಸನ ಮಾಡುತ್ತಿರುವರು. ನೀರು ಮೇವುಗಳು ಸಾಕಷ್ಟಿವೆ. ೧ ರೂ ಗೆ ರಂಗೂನ ಅಕ್ಕಿ ೪॥; ಸ್ಥಾನಿಕ ಅಕ್ಕಿ ೬ ಶೇರುಗಳು.

ಟಿಪ್ಪಣಿ — ಮೇಲೆ ಕೊಟ್ಟ ಸರಕಾರದ ರಿಪೋರ್ಟಿನ ಸತ್ಯಾಂಶವನ್ನು ಆ ಆ ಸ್ಥಳದ ವಾಚಕರು ನಮಗೆ ತಿಳಿಸಿದರೆ ನೆಟ್ಟಗಾಗುವದು. ವಾಚಕರಿಗೆ ಈ ಸಂಗತಿಗಳು ಅವಶ್ಯಕವೆಂದೆನಿಸಿದರೆ ಪ್ರತಿವಾರದಲ್ಲಿ ಇವನ್ನು ಪ್ರಸಿದ್ಧಿಸುವೆವು. ಎಲ್ಲರೂ ತಮ್ಮ ಅಭಿಪ್ರಾಯವನ್ನು ತಿಳಿಸಬೇಕು.

ವರ್ತಮಾನಸಾರ.

ಇಹವೃತ್ತ

ಶ್ರೀ ಮದುತ್ತರಾದಿ ಮಠಾಧೀಶರು ಕಳೆದ ವಾರದಲ್ಲಿ ಇಲ್ಲಿಂದ ವಿಜಾಪೂರ ಮಾರ್ಗವಾಗಿ ತೆರಳಿದರು. ಬಾಗಲಕೋಟೆಯ ಬ್ರಾಹ್ಮಣ್ಯಂದಕ್ಕೆ ಹೋಗುವಾಗ್ಗೆ ಕೊಟ್ಟ ದಕ್ಷಿಣೆಗಾಗಿ ೩ ಸಾವಿರ ರೂಪಾಯಿಗಳು ವೆಚ್ಚವಾದವು. ಇಲ್ಲಿಯ ಶಿಷ್ಯರಿಂದ ೩೦ ಸಾವಿರ ರೂ ಗಳ ಭಕ್ತಿಯಾಯಿತು. ಅವರಿಗೆ ಆರಾಧನೆಗಾಗಿ ೧ ಲಕ್ಷ ರೂ ವೆಚ್ಚವಾಯಿತು.

ಹಿಂದೂ ಮುಸಲ್ಮಾನರ ದಂಗೆಯು ಈ ವರುಷವೂ ಆಗುವದೆಂಬ ಭಯದಿಂದ, ಈ ಸಲ ಹೋಳೀಹುಣ್ಣಿವೆಯಲ್ಲಿ ಹಿಂದೂ ಜನರ ಮೆರವಣಿಗೆಯು ಪ್ರತಿವರ್ಷದ ಪದ್ಧತಿಯ ಬೀದಿಗಳಲ್ಲಿ ಹಾಯದೇ ಬೇರೆ ಕಡೆಗೆ ಹಾಯಬೇಕೆಂದು ಕಲೆಕ್ಟರ ಸಾ॥ ಹುಕುಂ ಬಂದದ್ದರಿಂದ, ಹಿಂದೂ ಜನರು ಈ ಹುಕುಮನ್ನು ನಿಷೇಧಿಸಬೇಕೆಂದು ಮೆರವಣಿಗೆಯನ್ನು ಹೊರಡಿಸಲೇಯಿಲ್ಲ. ಈ ವರೆಗೂ ಕಾರಣದ ಹೆಸರೇ ಇಲ್ಲ. ಪೋಲೀಸರನ್ನು ಇಟ್ಟು ದಂಗೆಯು ಆಗದಂತೆ ಪ್ರಯತ್ನಿಸುವದನ್ನು ಬಿಟ್ಟು ಎಂದಿನಿಂದಲೂ ರೂಢಿಯಲ್ಲಿದ್ದ ಮಾರ್ಗವನ್ನು ಬಿಡಬೇಕೆಂದು ಸರಕಾರವು ಹೇಳಲು ಯಾವ ಕಾಯದೇದ ಆಧಾರವಿದೆ ? ಈ ಬಗ್ಗೆ ದಿವಾಣೀ ಮೊಕದ್ದಮೆಯನ್ನು ನಡಿಸುವ ವಿಚಾರವಿದೆಯಂತೆ.

ವಿಜಾಪೂರ ಕಲೆಕ್ಟರ ಸಾ॥ ರವರ ಮುಕ್ಕಾಂ ಮಾರ್ಚ್, ೮—೧೩ ಕಟಗೇರಿ, ೧೪—೨೩ ಬದಾಮಿ, ೨೪ ಕ್ಕೆ ವಿಜಾಪೂರ.

ಮುಂಬೈಕರ್ನಾಟಕ

ಕರ್ನಾಟಕ ಪ್ರಾಂತಿಕ ಸ್ವಯಂಸೇವಕರ ಪರಿಷತ್ತನ್ನು ಬಳ್ಳಾರಿಯ ರಾಷ್ಟ್ರೀಯವಾರದಲ್ಲಿ ನೇರಿಸಬೇಕೆಂದು ನಿಶ್ಚಯವಾಗಿದೆ. ಪ್ರತಿಯೊಂದು ಜಿಲ್ಹೆಯವರು ಕನಿಷ್ಠ ೧೦ ಪ್ರತಿನಿಧಿಗಳನ್ನು ಆರಿಸಬೇಕು. ಪ್ರತಿನಿಧಿಗಳ ಫೀ ೪ ಆಣೆ ಪ್ರೇಕ್ಷಕರ ಫೀ ೧ ರೂ ಮತ್ತು ೮ ಆಣೆ.

ಮದ್ರಾಸ ಕರ್ನಾಟಕ

ಮದ್ರಾಸ ಕರ್ನಾಟಕದ ಎಲ್ಲ ಜಿಲ್ಹೆಗಳಿಂದಲೂ ಮೈಸೂರ ಪ್ರಾಂತದಿಂದಲೂ ಬಂದು ಮದ್ರಾಸಿನಲ್ಲಿರತಕ್ಕ ಎಲ್ಲ ಜಾತಿಯ ಸಂಘಗಳನ್ನೊಳಗೊಂಡ ಕನ್ನಡಿಗರ ಸಭೆಯು ಕೆಲದಿನಗಳ ಹಿಂದೆ ಮದ್ರಾಸಿನಲ್ಲಿ ನೆರೆದಿತ್ತು. ರಾ ರಾ. ಎಸ್. ಪೊನ್ನುಸ್ವಾಮೀ ಅಯ್ಯರ ಬಿ ಎ ಬಿ ಎಲ್ ಹಾಯಕೋರ್ಟ ವಕೀಲರು ಅಧ್ಯಕ್ಷರಿದ್ದರು. ರಾ. ಬಾ. ಸಿ. ಬಿ. ರಾಮರಾಯರು ಕರ್ನಾಟಕ ವಿಶ್ವವಿದ್ಯಾಲಯದ ಬಗ್ಗೆ ವ್ಯಾಖ್ಯಾನ ಕೊಟ್ಟರು. ಬಹಳ ಕಾಲದವರೆಗೆ ವಾದವಿವಾದವಾಗಿ, ಕರ್ನಾಟಕಕ್ಕೆ ಪ್ರತ್ಯೇಕವಾದ ವಿಶ್ವವಿದ್ಯಾಲಯವೊಂದು ಅವಶ್ಯಕವಿದೆಯೆಂದೂ ಈ ಬಗ್ಗೆ ಅಧಿಕಾರಿಗಳನ್ನು ಕಾಣಲು ರಾ. ಬ. ಸಿ ಬಿ. ರಾಮರಾಯರಿಗೆ ಅಧಿಕಾರಕೊಟ್ಟಿದೆಂದೂ ಸರ್ವಾನುಮತದಿಂದ ಠರಾಯಿಸಲ್ಪಟ್ಟಿತು.

ಸ್ವರಾಜ್ಯವಾದಿಗಳ ಜಯವು.

ದಿಲ್ಲಿಯಲ್ಲಿ ಕೂಡಿದ ಅಖಿಲಭಾರತೀಯ ರಾಷ್ಟ್ರೀಯ ಸಭೆಯ ಮಂಡಳದವರು ನಿರ್ಣಯಿಸಿದಂತೆ ಸೋಮವಾರ ತಾ॥ ೮ ನೇ ದಿನ ಸ್ವರಾಜ್ಯ ಪಕ್ಷದ ೪೦ ಜನರು ದಿಲ್ಲಿಯ ವರಿಷ್ಠ ಕಾಯದೇ ಮಂಡಲದ ಅಂದಾಜ ಪತ್ರಿಕೆಯ ವಾದವಿವಾದದಲ್ಲಿ ಭಾಗತೆಗೆದುಕೊಳ್ಳದೇ ಹೊರಗೆ ಬಂದರು. ಕೂಡಲೇ ಅಧ್ಯಕ್ಷರಾದ ಶ್ರೀ. ಪಟೇಲರು ಸರಕಾರದ ಲಕ್ಷವನ್ನು ಲೋಕಪ್ರತಿನಿಧಿಗಳ ನಿಷೇಧದ ಕಡೆಗೆ ಎಳೆದು ಸರಕಾರವು ಈ ಬಗ್ಗೆ ಯೋಗ್ಯ ವಿಚಾರ ಮಾಡದಿದ್ದರೆ, ತಾವು ಅಧ್ಯಕ್ಷರ ದರ್ಜೆತಕ್ಕ ವಿಶೇಷ ಹಕ್ಕನ್ನು ಉಪಯೋಗಿಸಿ, ವರಿಷ್ಠ ಕಾಯದೇ ಮಂಡಲದ ಅಧಿವೇಶನವನ್ನು ಕಡೆತನಕ ಬಂದು ಮಾಡುವೆನೆಂದು ಚನ್ನಾಗಿ ಧಮಕಿ ಹಾಕಿ, ಆ ದಿನ ಕೆಲಸವನ್ನು ತತ್ಕಾಲದಲ್ಲಿ ಬಂದು ಮಾಡಿದರು. ಹಿಂದುಸ್ಥಾನದ ಇತಿಹಾಸದಲ್ಲಿ ಇದೊಂದು ಅತ್ಯಂತ ಮಹತ್ವದ ಸಂಗತಿಯೆನ್ನುವದರಲ್ಲಿ ಸಂಶಯವಿಲ್ಲ. ಯಾಕೆಂದರೆ ಯಾವ ಅಧ್ಯಕ್ಷನೂ ಇಂದಿಗೂ ಹೀಗೆ ಸರಕಾರಕ್ಕೆ ಧಮಕಿ ಹಾಕಿರಲಿಲ್ಲ. ಸರಕಾರದ ಸಭಾಸದರಿಗೆ ಬೋಧ ಹಾಕಿದಂತಾಗಿದೆ. ಜನರಲ್ಲಿ ಮುಂದೆ ಈ ವಿಷಯ

ವು ಹೇಗೆ ಸಾಗುವದೋ ಎನ್ನುವದನ್ನು ತಿಳಿಯಲು ಬಹಳೇ ಆತುರತೆಯಾಗಿದೆ

ಮುಂಬೈ, ಮದ್ರಾಸ, ಪಂಜಾಬ ಮೊದಲಾದ ಪ್ರಾಂತಿಕ ಕಾಯದೇ ಮಂಡಳದ ಸಭಾಸದರು, ಕೌನ್ಸಿಲ್ ಆಫ್ ಸ್ಟೇಟಿನ ಸಭಾಸದರೂ ಸಹ ೮ ನೇ ತಾ॥ ದಿನ ಹೊರಗೆ ಬಂದಿದ್ದಾರೆ

ಈ ನಪೂರ ಕಾಂಗ್ರೆಸದಲ್ಲಿ ನಿರ್ಣಯಿಸಿದಂತೆ ಸರಕಾರವು ರಾಜಕೀಯ ಸುಧಾರಣೆಯ ಬಗ್ಗೆ ಸಮಾಧಾನಕರವಾದ ಉತ್ತರವನ್ನು ಕೊಡದೇಯಿದ್ದುದರಿಂದ ಸ್ವರಾಜ್ಯ ಪಕ್ಷದವರು, ಸರಕಾರದ ಕ್ರಿಯೆಯನ್ನು ನಿಷೇಧಿಸಲು ಇದೊಂದು ಮಾರ್ಗವನ್ನು ತೆಗೆದಿರುವರು

ಎಲ್ಲ ಪ್ರಾಂತಗಳ ಹೊಸ ಕಾಯದೇ ಮಂಡಳಗಳಲ್ಲಿ ಸ್ವರಾಜ್ಯ ಪಕ್ಷೀಯರೇ ಆರಿಸಿ ಬರುವಂತೆ ಪೂರ್ಣ ಪ್ರಯತ್ನ ಮಾಡಲು, ರಾಷ್ಟ್ರೀಯ ಸಭೆಯಿಂದ ಇದಕ್ಕೆ ೫೦ ಸಾವಿರ ರೂಪಾಯಿಗಳು ತೆಗೆದಿಡಲ್ಪಟ್ಟಿವೆ

ಸಾ. ರುದ್ರಪ್ಪನವರ ಶೋಚನೀಯ ಮೃತ್ಯು.

ಆಥಣಿಯ ಸುಪ್ರಸಿದ್ಧ ರಾಷ್ಟ್ರೀಯ ಕನ್ನಡ ಮುಂದಾಳುಗಳಾಗಿದ್ದ ಸಾ॥ ರುದ್ರಪ್ಪನವರು ಕಳೆದ ವಾರದಲ್ಲಿ ದಿವೈಕ್ಯರಾದರೆಂದು ತಿಳಿಸಲು ವಿಷಾದಪಡುತ್ತೇವೆ ಇವರು ಎಲ್ಲ ಸಮಾಜದ ಪ್ರೀತಿಗೆ ಪಾತ್ರರಾಗಿದ್ದರು ಬಡವರ ಮೇಲೆ ಪ್ರೀತಿ ಬಹಳ ಯಾವಾಗಲೂ ಸಮಾಜ ಸೇವೆಯಲ್ಲಿ ನಿರತರಾಗಿದ್ದರು ಲೋಕಮಾನ್ಯರ ಪ್ರಿಯ ಶಿಷ್ಯರಾಗಿದ್ದರು ಜಗದೀಶನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ

ಆಯುರ್ವೇದ.

ತಿಳಿಗನ್ನಡ ವೈದ್ಯಕ ಸಂಬಂಧವಾದ ಮಾಸಪತ್ರಿಕೆ. ಈ ಪತ್ರಿಕೆಯಲ್ಲಿ ಮಾಧವನಿದಾನ, ಶಾರ್ಙ್ಗಧರ ಮೊದಲಾದ ಪ್ರಾಚೀನ ವೈದ್ಯ ಗ್ರಂಥಗಳು ಸಂಸ್ಕೃತದಿಂದ ಭಾಷಾಂತರಿಸಿ ಕೆಲಕೆಲವು ಪುಟಗಳು ಪ್ರಕಟಿಸಲ್ಪಡುವುದಲ್ಲದೆ ಅನೇಕ ಉಪಯುಕ್ತ ವೈದ್ಯಕ ಸಂಬಂಧ ಲೇಖನಗಳೂ ಪ್ರಕಟಿಸಲ್ಪಡುವವು. ಕೇವಲ ವೈದ್ಯರಿಗಲ್ಲದೆ ಪ್ರತಿಯೊಬ್ಬರಿಗೂ ಸಂಗ್ರಹಿಸಲವಶ್ಯಕವಾದದ್ದು.

ವಾರ್ಷಿಕ ವರ್ಗಣಿ ೩-೮-೦ (ಅಂಚೆವೆಚ್ಚ ಸೇರಿ)

ವಿಳಾಸ:—"ಆಯುರ್ವೇದ" ಕಾರ್ಯಾಲಯ

ತೀರ್ಥಹಳ್ಳಿ (ಮೈಸೂರ ಸಂಸ್ಥಾನ)

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಪೈಸೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಬಹುದು. ಇಂಥ ಸುಸಂಧಿಯನ್ನು ಕಳೆಗೊಳ್ಳಬಾರದು.!

ವಿಳಾಸ:—"ಗೆಳೆಯರ ಗುಂಪು,, ಬಲಸಂಗಿ (ಪೋ)

ಜಿಲ್ಹಾ ವಿಜಾಪೂರ.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to—
N. K. Kulkarni. Agent Bagalkot

ನೋಟೀಸ

ರಾ. ಶಿವಪ್ಪಾ ತಂದೆ ಕೆಂಚಪ್ಪಾ ವ ಕಲ್ಲಪ್ಪಾ ತಂದೆ ಶಿವಪ್ಪಾ ಬಿರಾದಾರ ಪಾಟೀಲ ಸಾಕಿನ ಸುನಗಣಗೇರಿ ತಾಲೂಕ ಜೇವರ್ಗಿ ಜಿಲ್ಹಾ ಕಲಬುರಗಿ ಇವರಿಗೆ—

ಗುರುಗವಡಾ ಬಸಗೌಡಾ ಪಾಟೀಲ ವಸತಿ ಬಾಗೇವಾಡಿ ತಾ॥ ಬಾಗೇವಾಡಿ ಜಿಲ್ಹಾ ವಿಜಾಪೂರ ನಾನು ಈ ನೋಟೀಸಿನಿಂದಾ ತಿಳಿಸುವದೇನಂದರೆ—ನಿಮ್ಮಪೈಕಿ ಶಿವಪ್ಪಾ ತಂದೆ ಕೆಂಚಪ್ಪ ಬಿರಾದಾರ ಈತನ ಮಗಳಾದ ಕಲ್ಲವ್ವಾ ಇವಳನ್ನು ಲಗ್ನಮಾಡಿಕೊಳ್ಳಬೇಕಂತಾ ಮಾಡಿದ್ದು ಅದರಂತೆ ನಿಶ್ಚಯ ಮಾಡಲಿಕ್ಕೆ ಸಂ ೧೯೨೩ ಇಸ್ವಿ ಮಾಹೆ ನವಂಬರ ತಿಂಗಳಲ್ಲಿ ನಿಶ್ಚಯ ಮಾಡುವ ಕುರಿತು ಇಲ್ಲಿಂದಾ ಜನರನ್ನು ಕಳ್ಸಿಕೊಟ್ಟಿದ್ದೆ. ಅವರ ಸಂಗಡ ನಾನು ನಿಶ್ಚಯಕಾಲಕ್ಕೆ ಕೊಟ್ಟ ಸಾಮಾನಗಳ ವಿವರಾ—

೧ ಭಂಗಾರದ ಬಳೆಗಳು ಎರಡು (೬) ಆರು ತೊಲಿವು.
೨ ಭಂಗಾರದ ವಜ್ರದ ಟಿಕ್ಕಿ (೧) ಮೂರು ತೊಲಿದು
೩ ಬೆಳ್ಳಿ ರುಳಿ ಎರಡು (೧೦೦) ನೂರು ತೊಲಿ ತೂಕದವು
೪ ಬೆಳ್ಳಿ ಡಾಬ ಒಂದ (೨೫) ಇಪ್ಪತ್ತೈದ ತೊಲಿದು
೫ ಇಪ್ಪತ್ತೈದು (೨೫) ರೂಪಾಯಿದ ಶೀರಿ ಒಂದು, ಮತು ಹತ್ತು ರೂಪಾಯಿದ ಶೀರಿ ಒಂದು
೬ ನಾಲ್ಕು (೪) ರೂಪಾಯಿದ ನಾಲ್ಕು ಖಣಗಳು

ಈ ಪ್ರಕಾರ ಸಾಮಾನ ಇಟ್ಟು ನಿಶ್ಚಯ ಮಾಡಲಿಕ್ಕೆ ಕಳ್ಸಿದೆ. ಈ ಪ್ರಕಾರ ನಿಶ್ಚಯ ಮಾಡಿಕೊಂಡು ಬಂದರು. ಪುನಃ ಲಗ್ನ ಮಾಡಿಕೊಡಲಿಕ್ಕೆ ಎರಡು ಮೂರು ಸಾರೆ ಕೇಳಿದೆ ನೀವು ಲಗ್ನಮಾಡಿಕೊಡಲಿಲ್ಲಾ. ಯಾಕಮಾಡಿಕೊಡುವದಿಲ್ಲಾ ಅಂದರೆ ನಮ್ಮ ಅಪ್ಪನ ನನ್ನ ಮಗಳು ಕಲ್ಲವ್ವಾ ಈಕೆ ನುಪ್ಪಿನವನು ಆಗಿರುತ್ತಾನೆ ಲಗ್ನ ಆಗುವದಿಲ್ಲಾ ಅಂದಿರಿ. ಆ ಕಾರಣ ನೀವು ನೇ ಕಡಿಗೆ ಕೊಟ್ಟಿ ಅಂತ ನಮಗೆ ಖಾತ್ರಿ ಬಂದಿರುತ್ತದೆ. ಈಗ ಎರಡನೇ ಕಡಗೆ ಲಗ್ನ ಮಾಡಿ ಕೊಟ್ಟೀದಿ ಅಂತಾ ಕೇಳತೀನಿ ಅದರ ಸಲುವಾಗಿ ನಾನು ನಿಶ್ಚಯದ ಕಾಲಕ್ಕೆ ಇಟ್ಟ ನನ್ನ ಸಾಮಾನ ಈ ನೋಟೀಸ ಮುಟ್ಟಿದ ಎಂಟುದಿವಸದಲ್ಲಿ ನನಗೆ ಕೊಟ್ಟು ನನ್ನ ಪಾವತಿ ತೆಗೆದುಕೊಂಡು ಹೋಗಬೇಕು. ಎಂಟು ದಿವಸದ ಒಳಗಾಗಿ ನೀನು ಒಂದು ವೇಳೆ ನನಗೆ ಕೊಟ್ಟು ಪಾವತಿ ತೆಗೆದುಕೊಂಡು ಹೋಗದೇ ಇದ್ದರೆ ರೀತಿಪ್ರಕಾರ ನಿಮ್ಮಮೇಲೆ ಕೋರ್ಟಿನಲ್ಲಿ ದಾವಾಮಾಡಿ ಸಾಮಾನ ವ ಕೋರ್ಟ ಖರ್ಚ ಸಹಿತ ತೆಗೆದುಕೊಳ್ಳುತ್ತೇನೆ. ಈ ನೋಟಿಸಿನ ಖರ್ಚ ನಿಮ್ಮ ಮೇಲೆ ಇದೆ. ಅಂತಾ ಬರೆಕೊಟ್ಟ ನೋಟೀಸ ಸಹಿ ತಾ॥ ೨೮-೩-೧೯೨೬.

ಸಹಿ ಗುರುಗವಡಾ ಬಸಗೌಡಾ ಪಾಟೀಲ.

ಸಾ॥ ಬಾಗೇವಾಡಿ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮುಂಗಳವಾರಪೇಟೆ ಒಂದ್ಯಾಗಳು

C/o ಕನ್ನಡಿಗನ ಕಾರ್ಯಾಲಯ

ಮುಂಬೈ ಕಾಯದೇ ಮಂಡಲ.

(ನಮ್ಮ ಕಾಯದೇ ಮಂಡಲದ ಪ್ರತಿನಿಧಿಯಿಂದ.)

೨ ನೇ ವಾರದ ಸುದ್ದಿಯು

ಬೆಳಗಾವಿಯ ಶ್ರೀ. ದಳವೀ. ಮತ್ತು ಸಯ್ಯದ ಶಹಾಗಡೇ ಸಾಹೇಬರೂ, ವಿಜಾಪೂರದ ಖಾನಬಹಾದ್ದೂರ ಬೇದ್ರೇಕರರೂ ೨ ನೇ ತಾ|| ದಿನ ಬಂದರು. ಶ್ರೀ. ಅಂಗಡೀ ಯವರು ಬಾದೇ ಜಳ ಗಾವಿಗೆ ''ತಿರುಗುಪ್ಪೆ ಒಯ್ದರು.'' ಅಂದಾಜ ಪತ್ರಿಕೆಯ ಪ್ರತಿಪಕ್ಷದ ಬಾಜಿನಮೇಲೆ ಒಂದೇ ಸವನೆ ಟೀಕೆಗಳ ಸುರಿಮಳೆಯಾಯಿತು ಶ್ರೀ. ಜಾಧವರ ಮೇಲೆ ಎಲ್ಲರು ಏಕಕಾಲದಲ್ಲಿ ಹರಿಹಾಯ್ದರು. ಶಿಕ್ಷಣಮಂತ್ರಿಗಳಿದ್ದು, ತಮ್ಮ ಕರ್ತವ್ಯವನ್ನು ಬಿಟ್ಟುಕೊಟ್ಟು, ಇಲ್ಲದ್ದೊಂದು ರಾಜಕೀಯ ಕೆಲಸದಲ್ಲಿ ಭಾಗ ತೆಗೆದುಕೊಳ್ಳುವದು, ಬ್ರಾಹ್ಮಣೇತರರ ಮುಖಂಡರೆಂದು ಏನಾವದೊಂದು ಕೆಲಸದ ನೆವದಿಂದ ಅನ್ಯ ಪ್ರಸಂಗಳಿಗೂ ಪ್ರವಾಸ ಬೆಳೆಸುವದು, ಸರಿಯಲ್ಲವೆಂದು ಬಹುರೀತಿಯಿಂದ ಟೀಕಿಸಿದರು.

ರ್‍ಯಾ ಸಾಹೇಬರು ೭,೮೬,೦೦೦ ರೂ. ಗಳನ್ನು ಕೇವಲ ಯುರೋಪಿಯ ವಿದ್ಯಾರ್ಥಿಗಳ ಶಿಕ್ಷಣದ ಸಲುವಾಗಿ ಕೇಳಿದರು. ಶ್ರೀ. ನರಿಮನ್ನರು ೧೬೦೦೦ ರೂ. ಕೊಡಬಹುದೆಂದು ಸೂಚನೆ ತಂದರು. ಯುರೋಪೀಯರು ನಮ್ಮ ವಿದ್ಯಾಖಾತೆಯ ಮಂತ್ರಿಗಳಲ್ಲಿ ಯಾಕೆ ವಿಶ್ವಾಸವನ್ನಿಡಲಾರದೆಂದು ಉದ್ಗಾರ ತೆಗೆದರು. ಶಿಕ್ಷಣ ಖಾತೆಯು ಎಲ್ಲರ ವಿದ್ಯೆಗಾಗಿ ಏರ್ಪಾಡು ಮಾಡುವದರಿಂದ ಯುರೋಪಿಯರ ಶಿಕ್ಷಣಕ್ಕೆಸಹ ಮಂತ್ರಿಗಳೇ ಜವಾಬ್ದಾರರು, ಎಂಬವಾಗಿ ಆವೇಶದಿಂದ ಹೇಳಿದರು. ಆದರೆ ಕೇಳುವರಾರು? ಇಂತಹ ಸಣ್ಣ ವಿಷಯಗಳಿಗೆ ಲಕ್ಷ್ಯಕೊಡಲು ಮಂತ್ರಿಗಳವರಿಗೆ ವೇಳೆಯಿಲ್ಲದೆಂದು ಮಾಂಟಗಾಮೇರಿ ಸಾಹೇಬರು ಕೇಳಿದರು. ಲಾರೆನ್ಸ ಸಾಹೇಬರು ಒಳ್ಳೇ ಬೆದರಿಕೆಯನ್ನು ಹಾಕಿದರು ಗವ್ಹರ್ನರ ಸಾಹೇಬರ ಕಡೆಯಿಂದ ಅದಕ್ಕೆ ಒಪ್ಪಿಗೆಯನ್ನು ತರುವೆ. ಆದಕಾರಣ ನೀವು ಈ ಹಣವನ್ನು ಕಡಿಮೆ ಮಾಡಬೇಡಿರಿ ತಿಳಿಸುತ್ತೇನೆ'' ಎಂದು ಆರ್ಭಟಿಸಿದರು. ಕಡೆಗೆ ಬಹುಮತದಿಂದ ಸರಕಾರಕ್ಕೇ ಜಯವು ದೊರೆಯಿತು !! ನಮ್ಮ ಕರ್ನಾಟಕದಿಂದ ಬಂದ ಬ್ರಾಹ್ಮಣೇತರರು ಮತ್ತು ಮುಸಲ್ಮಾನ ಪ್ರತಿನಿಧಿಗಳು ಸರಕಾರದವರಂತೇ ಮತಕೊಟ್ಟರೆಂದು ಬೇರೆ ಹೇಳಲಿಕ್ಕೆ ಬೇಕಾಯಿಲ್ಲ. ೬ ನೇ ತಾ|| ದಿನ ಶ್ರೀ. ಕೌಜಲಗೀ ಶ್ರೀನಿವಾಸರಾಯರೂ, ಡಾ. ನಾಡಗೇರರೂ ಅಧ್ಯಕ್ಷರ ಗ್ಯಾಲರಿಯಲ್ಲಿ ಕುಳಿತಿದ್ದರು. ಈ ದಿನ ಆರೋಗ್ಯ ಖಾತೆಯಲ್ಲಿಯ ಮಂಜೂರಿಕೆಯ ಬಗ್ಗೆ ಚರ್ಚೆ ಯಾಯಿತು. ಆಗ್ಗೆ ಶ್ರೀ. ಜೋಗಲು ಇದರಲ್ಲಿ ಭಾಗ ತೆಗೆದುಕೊಂಡು ವಿಶೇಷ ಕಳವಳದಿಂದ ಮಾತನಾಡಿದರು. ಹಳ್ಳಿಹಳ್ಳಿಗಳಲ್ಲಿ ಔಷಧೋಪಚಾರ, ಕರ್ನಾಟಕಕ್ಕೆ ರೋಗ ಚಿಕಿತ್ಸೆಗಾಗಿ ಶಾಲೆ, ಇವುಗಳ ಬಗ್ಗೆ ಹೆಚ್ಚಾಗಿ ಭಾಷಣಮಾಡಿ, ಬಡವರ ಸಲುವಾಗಿ ಗುಬ್ಬಳ್ಳಿಯಲ್ಲಿದ್ದ ಕೋ-ಆಪರೇಟೀವ ಔಷಧಾಲಯಕ್ಕೆ ಸರಕಾರವು ಯಾಕೆ ಸಹಾಯ ಮಾಡಿಲ್ಲವೆಂದು ಕೇಳಲಾಗಿ, ಅರ್ಜಿಗಳನ್ನು ಬಂದಿಲ್ಲವೆಂದು ಶಿಕ್ಷಣ ಮಂತ್ರಿಗಳು ನೆವವನ್ನು ಹೇಳಿದರು. ಅರ್ಜಿ ಕಳಿಸುತ್ತೇವೆಂದು ಶ್ರೀ. ಜೋಗಲು ನುಡಿಯಲು, ಕರ್ನಾಟಕದ ಈ ಔಷಧಾಲಯಕ್ಕೆ ಅವಶ್ಯವಾಗಿ ಸಹಾಯ ಮಾಡುವೆನೆಂದು ಶ್ರೀ. ಜಾಧವರು ವಚನ ಕೊಟ್ಟರು.

೩ ನೇ ವಾರದ ಸುದ್ದಿಯು.

ಸೋಮವಾರ ೮ ನೇ ತಾ|| ದಿನ ಸ್ವರಾಜ್ಯಪಕ್ಷೀಯರೆಲ್ಲ ಕಸ್ಸಿರ ಪಕ್ಷೀಯ ಸಭೆಯ ಆಜ್ಞೆಯ ಪ್ರಕಾರ ಎದ್ದು ಹೊರಗೆ ಹೋದರೆಂಬದು ಸಭೆಯು ನಿಸ್ತೇಜವಾಗಿ ಕಂಡಿತು. ಸ್ವರಾಜ್ಯ ಪಕ್ಷೀಯರದ್ದಾಗಿ ಹೊರತಾಗಿ ಉಳಿದ ಜನರಲ್ಲಿ ಅನೇಕರು ಬೇರೆ ಬೇರೆ ಕಾರಣದಿಂದ ಬಂದಿರಲಿಲ್ಲ. ನಮ್ಮ ಕರ್ನಾಟಕದ ಪೈಕೀ ಶ್ರೀ. ಜೋಗಲೊಬ್ಬರೇ ಗವ್ಹ ಸ್ವರಾಜ್ಯವಾದಿಗಳು, ಶ್ರೀ. ಕರ್ಕಿಯವರು ಸ್ವತಂತ್ರ ಪಕ್ಷದವರಿದ್ದರಾದ್ದರಿಂದ ಅವರು ಮತ್ತು ಶ್ರೀ. ಪರಾಂಜಪೆರು ಇವರಿಬ್ಬರೇ ಕರ್ನಾಟಕದವರಲ್ಲಿ ಸಭೆಯಲ್ಲಿದ್ದರು ಶ್ರೀ. ಕಂಬಳಿಯವರೂ, ಸರದೇಸಾಯಿಯವರೂ ಊರಿಗೆ ಯಾಪಲಾಯನ. ಮುಸಲ್ಮಾನ ಜನರಲ್ಲಿ ಸಹಕಾರಿಗಳು. ರತಿಯ ವಿಚಾರಗಳನ್ನು ಹಬ್ಬಿಸುವದಕ್ಕಾಗಿ ಬೇಡಿದ ಮಂಜೂರ ರೂ. ರತೀಗಳ ಬಗ್ಗೆ ಶ್ರೀ ಕರ್ಕಿಯವರು ಮಾತನಾಡಿದರು. ಕೇವಲ ಮುಸಲ್ಮಾನರ ಸಲುವಾಗಿಯೇ ಒಂದು ಸ್ವತಂತ್ರ ಸ್ಥಳವನ್ನೇಕೆ ನಿರ್ಮಾಣ ಮಾಡುವದು? ಉಳಿದ ಜಾತಿಯವರಿಗೆ ಈ ವಿಷಯವು ಬೇಡವೋ ದ ಅ ಎಂದು ಕೇಳಿದರು. ೯ ನೇ ತಾ|| ದಿನ ಸ್ವರಾಜ್ಯ ಪಕ್ಷೀಯರಲ್ಲಿ ಜಿಲ್ಲೆಯಾರೂ ಬಂದಿರಲಿಲ್ಲ. ಕರ್ನಾಟಕದ ಪೈಕೀ ಶ್ರೀ ಕರ್ಕಿ, ಬೇದ್ರೇಕರ, ಮತ್ತು ಸೈಯ್ಯದ ಶಾಹಾದರು ಬಂದಿದ್ದರು. ಸ್ವರಾಜ್ಯವಾದ ಪಕ್ಷೀಯರು ಹೊರಗೆ ಹೋಗಿದ್ದರಿಂದ ವಾದವಿವಾದಗಳಲ್ಲಿ ಹುರುಪು ವಾದಳಿಲ್ಲದಾಗಿದೆ.

ಯ ಸ್ವಿದ್ದ [illegible]
ದಲ್ಲಿ ಅವರು ನವರ ಉದ್ದೇಶವೇನಿದೆಯೋ ತಿಳಿಯದು. ಇರಲಿ ಸ್ವರಾಜ್ಯ ಯುದ್ಧಕ್ಕೆ ಭಾರತೀಯರು ಸನ್ನದ್ಧರಾಗಲು ಭಾಷಾನ್ವಯ ಪ್ರಾಂತರಚನೆಯಿಂದ ಹೆಚ್ಚಾಗಿ ಸಹಾಯವಾಗುವದೆಂದೇ ಕಾಂಗ್ರೆಸನವರು ಇದನ್ನು ತಮ್ಮ ಆಚರಣೆಯಲ್ಲಿ ತಂದರು. ಮತ್ತು ಇದರಿಂದ ಭರತಖಂಡದಲ್ಲಿ ಹೆಚ್ಚಾದ ರಾಷ್ಟ್ರಾಭಿಮಾನವು ಉಂಟಾಗಿದೆಂಬದೂ, ಪ್ರತ್ಯಕ್ಷ ಅನುಭವದ ಮಾತಾಗಿದೆ. ಭಾಷಾನ್ವಯ ಪ್ರಾಂತರಚನೆಯಾದ್ದರಿಂದಲೇ ಭರತಖಂಡದಲ್ಲಿ ಕರ್ನಾಟಕ, ಆಂಧ್ರ, ಮೊದಲಾದ ಬಲವಾದ ಉಪರಾಷ್ಟ್ರಗಳವೆಂಬದು ಜನರ ನಿದರ್ಶನಕ್ಕೆ ಬಂದಿತು; ಈ ಜನರಿಗೆ ರಾಷ್ಟ್ರಕಾರ್ಯದ ಭಾರವನ್ನು ಹೊರುವ ಪ್ರಸಂಗವೂ ಉಂಟಾಯಿತು. ಭಾಷಾನ್ವಯ ಪ್ರಾಂತ ಲಕ್ಷ್ಯಾಪ್ರಹಾರ ನಡೆಯುತ್ತಿರುವದು ! [illegible] ಕನ್ನಡಿಗರು ತಮ್ಮ ಅವಸ್ಥೆಯನ್ನು ಕಣ್ಣಾರೆ ನೋಡಿಕೊಳ್ಳಬೇಕು. ಕರ್ನಾಟಕದ ಭಾಗದಲ್ಲಿ ಕನ್ನಡ ನಮೂನೆಗಳನ್ನೇ ಪೂರೈಸಬೇಕೆಂಬ ಅತಿ ಸುಲಭವಾದ ಈ ಸಂಗತಿಯು ಓರ್ವ ಸಣ್ಣ ಬಾಲಕನಿಗಾದರೂ ತಿಳಿಯುವಂತಹದು. ಆದರೆ ಬಹು ಬಲಶಾಲಿಯಾದ ನಮ್ಮ 'ಮಾಬಾಪ' ಬ್ರಿಟಿಶ್ ಸರಕಾರಕ್ಕೆ ಅದು ತಾನಾಗಿಯೇ ತಿಳಿಯುವದಿಲ್ಲ. ಬೇರೆಯವರು ತಿಳಿಸಿದರೂ ಅತ್ತ ಲಕ್ಷ್ಯಕೊಡುವದಿಲ್ಲ! "ಕನ್ನಡ ನಮೂನೆಗಳು ನಮ್ಮಲ್ಲಿಲ್ಲ; ನಮಗೆ ಅವನ್ನೇ ಪೂರೈಸಿರಿ" ಎಂಬದಾಗಿ ಕನ್ನಡಿಗರು ಸರಕಾರಕ್ಕೆ ತಕರಾರು ಮಾಡಿಲ್ಲವಂತೆ !! ಆದ್ದರಿಂದ ಸರಕಾರವು ಈ ಬಗ್ಗೆ ಏನೂ ಮಾಡಲಿಲ್ಲವಂತೆ! ಇದಕ್ಕೆ ಕನ್ನಡಿಗರು ಏನೆಂದು ಉತ್ತರ ಕೊಡುವರು! ಈಗಾದರೂ

ಜಿಲ್ಲಾ ವಿಜಾಪೂರ.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot

ಹಳೇ ಮೋಟಾರ

ಸೋಸಿದರಿಂದ ಮತ್ತು ಹೊಸ ಮೋಟಾ
ರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ
ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ
ಮಾಧವಾತ್ರಮ ಮುಂಬೈ ನಂಬರ ೪
ಹಾಗೇ ಕೋಟಿಯ ಏಜಂಟರು ಮಂಗಳವೇಢೇ ಬಂಧುಗಳು
C/o ಕನ್ನಡಿಗನ ಕಾರ್ಯಾಲಯ

ರ. ನಂ. [illegible]

ವಾ. ಚಂದಾ ೧—೧೨—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು

ವರ್ಷ ೧ | ಬಾಗಲಕೋಟೆ ಶುಕ್ರವಾರ ಮಿತಿ ಅಧಿಕ ಚೈತ್ರ ಶುದ್ಧ ೫ ಶಕೆ ೧೮೬೦. ತಾ|| ೧೯ ೩-೧೯೩೮. | ಸಂಚಿಕೆ ೩೮

ಸಂಪಾದಕನ ಭೂಮಿಕೆ.

(*)

ನನ್ನ ಮನಸಿನ ಮೇಣವಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ಬಿಸ್ಲದಾದರು ಬೆನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠಶಾಸನವಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾತನಯ ದತ್ತ

ಅನೀಬೆಸೆಂಟ ಅಮ್ಮನವರ "ನ್ಯೂ ಇಂಡಿಯಾ" ಪತ್ರಿಕೆಯು ಭಾಷಾನ್ವಯ ಪ್ರಾಂತ ರಚನೆಯಬಗ್ಗೆ ಒಂದು ವಿಚಿತ್ರವಾದ ವಿಧಾನವನ್ನು ಮಂಡಿಸಿದೆ. ಫೇಬ್ರುವರಿ ೧೯ನೇ ತಾ|| ಸಂಚಿಕೆಯ ಸಂಪಾದಕೀಯ ಸ್ಫುಟವನ್ನು ಲವಲವಿಕೆ ಇದ್ದವರು ಓದಬಹುದು. ಸ್ವರಾಜ್ಯವು ದೊರೆತಮೇಲೆ ಈ ಭಾಷಾನ್ವಯ ಪ್ರಾಂತರಚನೆಯ ಕಾರ್ಯವನ್ನು ಭಾರತೀಯರು ಕೈಯಲ್ಲಿ ತೆಗೆದುಕೊಳ್ಳಬೇಕಂತೆ! ಯಾಕೆಂದರೆ ಈಗಿಯೇ ಪ್ರಾರಂಭಿಸಿದರೆ, ಇಲ್ಲದ ಸಂಶಯ, ಜಗಳಾಟ, ಭಯ ಮೊದಲಾದವು ನೆರೆಹೊರೆಯ ಪ್ರಾಂತಗಳಲ್ಲುಂಟಾಗಿ, ಒಗ್ಗಟ್ಟಿಗೆ ಕುಂದು ಬರುವದಂತೆ! ಇದು ಅಮ್ಮನವರ "ತಿದ್ದಿ ಸುಧಾರಿಸಿದ ಆವೃತ್ತಿ"ಯಿದ್ದಂತೆ ತೋರುತ್ತದೆ. ಯಾಕೆಂದರೆ ಕಲಕತ್ತೆಯ ಕಾಂಗ್ರೆಸ್ಸಿನ ಅಧ್ಯಕ್ಷರಿದ್ದಾಗ್ಗೆ ಅಮ್ಮನವರು ಭಾಷಾನ್ವಯ ಪ್ರಾಂತರಚನೆಯ ಬಗ್ಗೆ ವಿವೇಚಿಸಿ, ಆದಷ್ಟು ಬೇಗನೆ ಸರಕಾರದವರು ಈ ತತ್ವವನ್ನು ಕೃತಿಯಲ್ಲಿ ತರಬೇಕೆಂದು ಒತ್ತಾಯಪಟ್ಟಿದ್ದರು. ಆಗ್ಗೆ ಹಾಗೆ ಹೇಳಿ, ಈಗ್ಗೆ ಹೀಗೆ ವಿಧಾನಿಸುವದರಲ್ಲಿ ಅಮ್ಮನವರ ಉದ್ದೇಶವೇನಿದೆಯೋ ತಿಳಿಯದು. ಇರಲಿ ಸ್ವರಾಜ್ಯ ಯುದ್ಧಕ್ಕೆ ಭಾರತೀಯರು ಸನ್ನದ್ಧರಾಗಲು ಭಾಷಾನ್ವಯ ಪ್ರಾಂತರಚನೆಯಿಂದ ಹೆಚ್ಚಾಗಿ ಸಹಾಯವಾಗುವದೆಂದೇ ಕಾಂಗ್ರೆಸಿನವರು ಇದನ್ನು ತಮ್ಮ ಆಚರಣೆಯಲ್ಲಿ ತಂದರು. ಮತ್ತು ಇದರಿಂದ ಭರತಖಂಡದಲ್ಲಿ ಹೆಚ್ಚಾದ ರಾಷ್ಟ್ರಾಭಿಮಾನವು ಉಂಟಾಗಿದೆಂಬುದೂ, ಪ್ರತ್ಯಕ್ಷ ಅನುಭವದ ಮಾತಾಗಿದೆ. ಭಾಷಾನ್ವಯ ಪ್ರಾಂತರಚನೆಯಾದ್ದರಿಂದಲೇ ಭರತಖಂಡದಲ್ಲಿ ಕರ್ನಾಟಕ, ಆಂಧ್ರ, ಮೊದಲಾದ ಬಲವಾದ ಉಪರಾಷ್ಟ್ರಗಳವೆಂಬುದು ಜನರ ನಿದರ್ಶನಕ್ಕೆ ಬಂದಿತು; ಈ ಜನರಿಗೆ ರಾಷ್ಟ್ರಕಾರ್ಯದ ಭಾರವನ್ನು ಹೊರುವ ಪ್ರಸಂಗವೂ ಉಂಟಾಯಿತು. ಭಾಷಾನ್ವಯ ಪ್ರಾಂತರಚನೆಯಾದ್ದರಿಂದಲೇ, ಕರ್ನಾಟಕಕ್ಕೆ ಎಂದೆಂದೂ ಬಾರದ ಕಾಂಗ್ರೆಸ್ಸು ಬಂದಿತು. ಕನ್ನಡಿಗರು ಕರ್ನಾಟಕ ಕಾಂಗ್ರೆಸನ್ನು ಯಶಸ್ವಿಯಾಗಿ ಮಾಡಿತೋರಿಸಿ ಕರ್ತೃತ್ವಶಕ್ತಿಯು ತಮ್ಮಲ್ಲಿ ಉಂಟೆಂಬುದನ್ನು ಜಗತ್ತಿಗೆ ತೋರಿಸಲು ಅನುವಾಯಿತು. ಮುಂಬೈ ಮದ್ರಾಸ ಪ್ರಾಂತಗಳಲ್ಲಿಯೇ ಕನ್ನಡಿಗರು ಮೊದಲಿನಂತೆ ಸೇರಿಕೊಂಡಿದ್ದರೆ, ಅವರಿಗೆ ಕಾಂಗ್ರೆಸನ್ನು ಕೂಡಿಸುವಂತಹ ಸುಪ್ರಸಂಗವು ಬರುತ್ತಿರಲಿಲ್ಲ; ನಮ್ಮ ಕರ್ನಾಟಕ ರಾಷ್ಟ್ರದ ವಿಕಾಸವಾಗುತ್ತಿರಲಿಲ್ಲ. ಇವನ್ನೆಲ್ಲ ಅಮ್ಮನವರು ತಮ್ಮ ಮುಪ್ಪಿನಲ್ಲಿ ಮರೆತಂತೆ ತೋರುತ್ತದೆ. ನಮ್ಮಲ್ಲಿ ಭಾಷಾನ್ವಯ ಪ್ರಾಂತಿಕ ಸರಕಾರಗಳಿಲ್ಲದ್ದರಿಂದಲೇ, ಅದೊಂದು ರಾಷ್ಟ್ರೀಯ ಅಭಿವೃದ್ಧಿಗೆ ಆತಂಕವಾಗಿದೆ. ಸಧ್ಯದಲ್ಲಿ ಭಾಷಾನ್ವಯ ಪ್ರಾಂತಿಕ ಸರಕಾರಗಳಾದರೆ, ಭಾರತೀಯರ ಒಕ್ಕಟ್ಟು ಹೆಚ್ಚಾಗುವದೇ ಹೊರತಾಗಿ ಅಮ್ಮನವರು ಅನ್ನುವಂತೆ ಕಡಿಮೆಯಾಗದು. (೨೭-೨-೩೮)

ಅಂಚೆಮನೆಗಳಲ್ಲಿ ಕನ್ನಡ ನಮೂನೆಗಳಿಲ್ಲದ್ದರಿಂದ ಆ ಬಗ್ಗೆ ಏರ್ಪಾಡು ಮಾಡುವಿರಾ? ಎಂಬವಾಗಿ ವಿಜಾಪೂರ ಜಿಲ್ಲೆಯ ಪ್ರತಿನಿಧಿಗಳಾದ ಶ್ರೀ. ಸರದೇಸಾಯರು ಮುಂಬೈ ಕಾಯದೇ ಮಂಡಲದಲ್ಲಿ ಕೇಳಿದ ಪ್ರಶ್ನೆಗಳಿಗೆ ಸರಕಾರದವರು ಕೊಟ್ಟ ಅನಾದರದ ಉತ್ತರವನ್ನು, ಕಳೆದ ಸಂಚಿಕೆಯಲ್ಲಿ ಪ್ರಸಿದ್ಧವಾದ "ಪ್ರಶ್ನೋತ್ತರ"ಗಳಿಂದ ವಾಚಕರು ತಿಳಿದುಕೊಂಡಿರಬೇಕು. ಕರ್ನಾಟಕವೆಂದರೆ ಸರಕಾರಕ್ಕೆ ಒರ್ವ ಗುಲಾಮನೆಂಬ ಭಾವನೆಯಾಗಿದ್ದಂತೆ ತೋರುತ್ತದೆ. ಕರ್ನಾಟಕವು ಪ್ರತಿನಿತ್ಯದಲ್ಲಿಯೂ ತನ್ನ ಮೌನತದಿಂದ ಸರಕಾರದ ಜೋಹುಕುಮವನ್ನು ಹೊರಬೇಕು. ಅದರ ಪ್ರತಿಫಲವೆಂದು ಕ್ಷುಲ್ಲಕ ವಿಷಯಗಳಲ್ಲಿ ಸಹ ಸರಕಾರದಿಂದ ಲತ್ತಾಪ್ರಹಾರ ಮಾಡಿಸಿಕೊಳ್ಳಬೇಕು! ಈಗಲಾದರೂ ಕನ್ನಡಿಗರು ತಮ್ಮ ಅವಸ್ಥೆಯನ್ನು ಕಣ್ಣಾರೆ ನೋಡಿಕೊಳ್ಳಬೇಕು. ಕರ್ನಾಟಕದ ಭಾಗದಲ್ಲಿ ಕನ್ನಡ ನಮೂನೆಗಳನ್ನೇ ಪೂರೈಸಬೇಕೆಂಬ ಅತಿ ಸುಲಭವಾದ ಈ ಸಂಗತಿಯು ಒರ್ವ ಸಣ್ಣ ಬಾಲಕನಿಗಾದರೂ ತಿಳಿಯುವಂತಹದು. ಆದರೆ ಬಹು ಬಲಶಾಲಿಯಾದ ನಮ್ಮ 'ಮಾಬಾಪ' ಬ್ರಿಟಿಶ್ ಸರಕಾರಕ್ಕೆ ಅದು ತಾನಾಗಿಯೇ ತಿಳಿಯುವದಿಲ್ಲ. ಬೇರೆಯವರು ತಿಳಿಸಿದರೂ ಅತ್ತ ಲಕ್ಷ್ಯಕೊಡುವದಿಲ್ಲ! "ಕನ್ನಡ ನಮೂನೆಗಳು ನಮ್ಮಲ್ಲಿಲ್ಲ; ನಮಗೆ ಅವನ್ನೇ ಪೂರೈಸಿರಿ" ಎಂಬದಾಗಿ ಕನ್ನಡಿಗರು ಸರಕಾರಕ್ಕೆ ತಕರಾರು ಮಾಡಿಲ್ಲವಂತೆ!! ಆದ್ದರಿಂದ ಸರಕಾರವು ಈ ಬಗ್ಗೆ ಏನೂ ಮಾಡುವದಿಲ್ಲವಂತೆ! ಇದಕ್ಕೆ ಕನ್ನಡಿಗರು ಏನೆಂದು ಉತ್ತರ ಕೊಡುವರು? ಈಗಲಾದರೂ

ಎಷ್ಟತ್ತು ಮುಂಬೈ ಕರ್ನಾಟಕದ ಕನ್ನಡಿಗ ... ತಮ್ಮ ಭಾಗದ 'ಸುಸರಂಜಿಸಲಿಗೂ' ಮುಂಬೈ 'ಕ್ರೋ... ...ಸ್ತರ ಜನರಲ್ಲರಿಗೂ ತಕರಾರುಗಳನ್ನು ಕೂಡಲೇ ಕಳಿಸಬೇಕು. ಅಥವಾ ನಮಗೆ ಕನ್ನಡವೇನು? ಮರಾಟಿಯೇನು? ಇಂಗ್ಲೀಷೇನು? ಯಾವುದಿದ್ದರೂ ಸರಿಯೇ. ಎಂಬ ಉದಾಸೀನತೆಯಿಂದ ... ಧಾರವಾಡ ಕಾರವಾರ ಜಿಲ್ಲೆಗಳ ಕನ್ನಡಿಗರು ... ಸುಪರಿಂಟೆಂಡೆಂಟ್ ಪೋಸ್ಟ್ ಆಫಿಸಿಸ್'' ಧಾರವಾಡ ಇವರಿಗೂ ... ಬೆಳಗಾವಿ ಜಿಲ್ಲೆಗಳ ಕನ್ನಡಿಗರು ''ಸುಪರಿಂಟೆಂಡೆಂಟ್ ... ಆಫಿಸಿಸ್'' ಬೆಳಗಾವಿ ಇವರಿಗೂ ಮತ್ತು ನಾಲ್ಕೂ ಜಿಲ್ಲೆಯ ಕನ್ನಡಿಗರು ''ಪೋಸ್ಟ ಮಾಸ್ತರ ಜನರಲ್''ಮುಂಬಯಿ ಇವರಿಗೂ ತಕರಾರದ ಅರ್ಜಿಗಳನ್ನು ಕೂಡಲೇ ಕಳಿಸಬೇಕು. ಅರ್ಜಿಗಳು ಯಾವ ಭಾಷೆಯಲ್ಲಿದ್ದರೂ ಸರಿ. ಮುಂಬಯಿಯ ಹೆಡ್ಡಾಫೀಸದ ... ಇಂಗ್ಲೀಷಿನಲ್ಲಿರಬೇಕು. ಈ ತರದಂಗಡಿಗಳಿಗೆ ತಿಕೀಟುಗಳ ... ಇಲ್ಲ. ಪಾಕೀಟಿನ ಒಳಗಡೆಯ ಮೇಲ್ಭಾಗದಲ್ಲಿ ... ''ಕನ್ನಡದ ತಕರಾರುಗಳ ಬಗ್ಗೆ'' ಎಂಬದಾಗಿ ಬರೆದು ... ಕಳಿಸಿ ಗಕ್ಷ್ಮೆ ಕಳಿಸಿದವರ ಹೆಸರನ್ನು ಹಾಕಿಸಿ. ತಿಕೀಟ ... ಅರ್ಜಿಗಳನ್ನು ಕಳಿಸಬೇಕು. ಹೀಗೆ ಮಾಡಿದ್ದನ್ನು ''ಕನ್ನಡಿಗ''ಕ್ಕೆ ತಿಳಿಸಿದರೆ ಒಳಿತು ... ಮುಂದೆ ಕೆಲ್ಸಾಗಿ ... ... ವದು.

ಕರ್ನಾಟಕಕ್ಕೆ ಭಾಷಾಸ್ವಯುವಾಗಿ ಸ್ವತಂತ್ರ ಪ್ರಾಂತವನ್ನು ಬೇಡಬೇಕೆಂಬ ಅವಲಂಬಿಕೆಯು ಅಲ್ಲಲ್ಲಿಯಲ್ಲಿ ಹೆಚ್ಚಾಗಿದೆ. ... ತ್ತಿದೆ. ವರ್ಹಾಡದ ಉತ್ಪನ್ನದಲ್ಲಿ ನೂರಕ್ಕೆ ೬೦ ರ ಭಾಗವು ಮಧ್ಯಪ್ರಾಂತಕ್ಕೆ ಹೋಗಿ ೪೦ ರ ಭಾಗವು ಮಾತ್ರ ದೇಶೀಯರಿಗಾಗಿ ಉಳಿಯುತ್ತದೆ. ೧೯೨೪-೨೫ ರಲ್ಲಿ ವರ್ಹಾಡದ ಪಾಲಿಗೆ ನೂರಕ್ಕೆ ೨೯ ರ ಪ್ರಮಾಣದ ಉತ್ಪನ್ನವುಮಾತ್ರ ದೊರೆತಿತು! ೧೯೨೫ ರಲ್ಲಿ ೨೭ ರ ಪ್ರಮಾಣಕ್ಕೆ ಇಳಿಯಿತು!! ಕೂಡಲೇ ಕಾಯದೇ ಮಂಡಲದಲ್ಲಿ ಪ್ರತಿನಿಧಿಗಳೆಲ್ಲ ಏಕವಾಕ್ಯತೆಯಿಂದ ಸರಕಾರವನ್ನು ಈ ದುರ್ಲಕ್ಷ್ಯದ ನಡತೆಗಾಗಿ ಟೀಕಿಸಿದರು; ಮುಂದೆ ಒಂದೇ ಸಮನೆ ಸರಕಾರದ ಬೆನ್ನು ಹತ್ತಿದರು. ೧೯೨೬ ರಲ್ಲಿ ಇದರ ಪರಿಣಾಮವೆಂದು ೩೯(!)ರ ಪ್ರಮಾಣವು ಮಾತ್ರ ಕೊಡಲ್ಪಟ್ಟಿತು! ಇದಕ್ಕಿಲ್ಲ ಪ್ರತ್ಯೇಕ ನೋಡಿ, ತಮ್ಮ ಪ್ರಾಂತವನ್ನು ಪ್ರತ್ಯೇಕ ಮಾಡಿಕೊಳ್ಳದೇ ಗತಿಯಿಲ್ಲವೆಂದು, ಮನಗಂಡು, ಮಧ್ಯಪ್ರಾಂತದ ಸಂಬಂಧವೆ ತಮಗೆ ಬೇಡೆಂದು ಅಲ್ಲಿಯ ಜನರು ನಿರ್ಧರಿಸಿದ್ದಾರೆ; ಇದರಿಂದಮಧ್ಯಪ್ರಾಂತದ ಸರಕಾರಕ್ಕೆ ಈಗಾಗಲೇ ಬಿಸಿಹತ್ತಿದೆ; ಮುಂದೆ ಅಂದಾಜ ಪತ್ರಿಕೆಯಲ್ಲಿ ಹಾಯ ಕೂಡಿಸುವದು ಹೇಗೆಂಬ ಘನ ಚಿಂತೆಯಲ್ಲಿ ಸರಕಾರದವರು ತೊಡಗಿದ್ದಾರೆ. ಆಗ್ರಾ ಹಾಗೂ ಅಯೋಧ್ಯಗಳ ಸಂಯುಕ್ತ ಪ್ರಾಂತದಿಂದ ಕೆಲವು ಹಿಂದೀ ಭಾಷೆಯ ಜಿಲ್ಲೆಗಳನ್ನೂ, ಜಹಾಗೀರದಲ್ಲಿಯ ಕನಿಷ್ಟ ಒಂದಾದರೂ ಸಂಪತ್ತಿನಿಂದ ತುಂಬಿದ ಹಿಂದೀ ಭಾಷೆಯ ಜಿಲ್ಲೆಯನ್ನೂ ಕಿತ್ತಿ ತೆಗೆದು, ನೆರೆಹೊರೆಯ ಹಿಂದೀ ಭಾಷೆಯಾದ ಮಧ್ಯಪ್ರಾಂತಕ್ಕೆ ಸೇರಿಸದಿದ್ದರೆ, ನಮ್ಮ ಪ್ರಾಂತವು ಜೀವಂತ ಉಳಿಯಲಾರದೆಂದು ಮಧ್ಯಪ್ರಾಂತ ಸರಕಾರವು ಈಗಾಗಲೇ ಗುಂಡಲವನ್ನೆಬ್ಬಿಸಿದೆ! ಹೋಗಲಿ ಯಾವ ಬಗೆಯ ಅಷ್ಟೆ ಹಾರವನ್ನು ಕೋರಿರುವೆ, ವರ್ಹಾಡದ ಮುಂದಾಳುಗಳು ಪ್ರತ್ಯೇಕ ಪ್ರಾಂತದಬಗ್ಗೆ ಹೇಗೆ ಜಯವನ್ನು ಸಂಪಾದಿಸುತ್ತಿರುವರೆಂಬದನ್ನು

ಮಹತ್ವದ ಸೂಚನೆಯು

ಈ ೪೮ ನೇ ಸಂಚಿಕೆಯಿಂದ ''ಕನ್ನಡಿಗ'' ದ ... ವರ್ಷದ ಚಂದಾ ಹಣವನ್ನು ವಾಚಕರು ಮನಿಯಾರ್ಡರದಿಂದ ಕೂಡಲೇ ಕಳಿಸಬೇಕಾಗಿ ... ಆಬಳಿಕ ವಿ. ಪಿ. ತೆಗೆದರು ಚಂದಾದಾರರಮೇಲೆ ಕೂಡದು. ಇನ್ನು ಯಾರಿಗೆ ಮುಂದಿನ ... ಸಂಚಿಕೆಯು ... ಅವರು ... ಕೂಡಲೇ ಪತ್ರ ಬರೆದು ತಿಳಿಸುವ ಕೃಪೆ ಮಾಡಬೇಕು. —ವ್ಯವಸ್ಥಾಪಕ

ಈ ... ಬಗ್ಗೆ ಮಧ್ಯಪ್ರಾಂತ ಕಾಯದೇ ಮಂಡಲದಲ್ಲಿ ರಂಪವು ನಡೆದಿದೆ. ವರ್ಹಾಡ ಪ್ರಾಂತದಲ್ಲಿ ಈ ಬಗ್ಗೆ ಸ್ವತಃಸಿದ್ಧಗೊಂಡ ಅ, ಕಾಯದೇ ಮಂಡಲದಲ್ಲಿ ಕಲಸ ಮಾಡತಕ್ಕ ಪ್ರತಿನಿಧಿಗಳು, ಕರ್ನಾಟಕದ ಪ್ರತಿನಿಧಿ ... ಈ ಸ್ವತಂತ್ರ ಪ್ರಾಂತದ ವಿಷಯ ಎಲ್ಲ ... ಅಭ್ಯಾಸ ಮಾಡ, ಕಾಯದೇ ಮಂಡಲದಲ್ಲಿ ಹೋರಾಡುತ್ತ ... ದಲಗಿ, ಅದರಿಂದ ಭಾಷಾನುಸಾರ ಪ್ರಾಂತಕ್ಕೆ ಬೇಗನೆ ದೊರೆಯುವ ಚಿನ್ಹಗಳು ಕಾಣುತ್ತವೆ. ಕಾಯದೇ ಮಂಡಲದ ಪ್ರಾರಂಭದ ... ವರ್ಹಾಡದ ... ನ್ನು ಸಮರ್ಥಿಸಿ ಗವರ್ನರ ಸಾಹೇಬರು ಹೀಗೆ ಹೇಳಿದರು :- ''ಮಧ್ಯಪ್ರಾಂತದಿಂದ ವರ್ಹಾಡವನ್ನು ಬೇರೆ ಮಾಡಿ, ಡೆಪ್ಯುಟೀ ಗವರ್ನರರ ಕೆಳಗೆ ತಮಗೆ ಪ್ರಾಂತಿಕ ಸರಕಾರದ ಹಕ್ಕನ್ನು ಕೊಡಬೇಕೆಂಬ ಠರಾವುಗಳು ಈ ಸಲ ಕಾಯದೇ ಮಂಡಲದಲ್ಲಿ ಬರುವವು. ವರ್ಹಾಡದಲ್ಲಿ ಆಪ್ತೀಯ ... ; ಜನರು ಬರಿಸ್ವ ... ; ... ದೇ ಇಲ್ಲಿ ನಡೆಯುತ್ತದೆ, ಇವರ ಭಾಗಕ್ಕೆ ... ವು ದೊರೆಯುವದರಿಂದ ಅದು ಬೇಗನೆ ... ಪ್ರಸಂಗವು ಬರುತದೆ'' ... ಸಂಗತಿ ... ಇದು ಕನ್ನಡಿಗರ ಲಕ್ಷ್ಯದಲ್ಲಿರಲಿ! ಈಗ್ಗೆ ವರ್ಹಾಡದ ... ವರ ... ಗಿನ್ನ ಜನರ ... ಉಪಯೋಗ ... ಆಪ್ತಿಯು ಕೆಲ್ಸಾದ ... ಗೆಗಿನ, ... ಕಲ್ಯಾಣಕ್ಕೂ ಸ್ಥಳಿಕ ಉದ್ಯೋಗಗಳಿಗೂ ... ಲಕ್ಷ್ಯವು ಪೂರೈಸುವದಿಲ್ಲ; ಮಧ್ಯಪ್ರಾಂತದಲ್ಲಿಯ ಅಂದಾಜ ಪತ್ರಿಕೆಗೆ ವರ್ಹಾಡದ ಉತ್ಪನ್ನವೇ ಪ್ರತಿವರ್ಷದಲ್ಲಿಯೂ ... ಪೂರೈಸು

ಕರ್ನಾಟಕದ ಮುಂದಾಳುಗಳೂ, ಕಾಯದೇ ಮಂಡಲದ ಪ್ರತಿನಿಧಿಗಳೂ ವಿಚಾರಿಸಿ, ಬುದ್ಧಿಗಲಿಸು ಮುಂದಾದರೂ ಕರ್ನಾಟಕದ ಏಕೀಕರಣದ ಕಾರ್ಯಕ್ಕೆ ಪ್ರವೃತ್ತರಾಗಬೇಕು.

ತ್ರೈಮಾಸಿಕ ಪ್ರಕಟಣೆಗಳ ವಿಷಯದಲ್ಲಿ ಒಟ್ಟಿಗೆ ಮುಂಬೈ ಇಲಾಖೆಯಲ್ಲಿ ೮೭೭ ಗ್ರಂಥಗಳು ಹೊರಟವೆ. ಇಂಗ್ಲೀಷ, ಮರಾಟಿ, ಗುಜರಾತಿ, ಸಿಂಧಿ, ಉರ್ದು ಗಳಸಂಬೆ ಸಮಪಾಕವಿದೆ. ಆದರೆ ಕನ್ನಡದಲ್ಲಿ ಸದ್ಬೋಧ ಚಂದ್ರಿಕೆಯ ಹೊರತಾಗಿ ಯಾವ ಮಾಸಿಕವೂ ಪ್ರಕಟವಾಗಲಿಲ್ಲವೆಂದು ಸರಕಾರದ ವರದಿಯಿದೆ. ... ಶಿಕ್ಷಣಸಂಸ್ಥೆಗಳಿಂದ ಹೊರಡುವ ಮಾಸಿಕ ಪ್ರಕಟಣೆಗಳ ... ಆದರೆ ಧಾರವಾಡದ ಟ್ರೇನಿಂಗ ಕಾಲೇಜು ... ಕರ್ನಾಟಕ ಕಾಲೇಜು, ಇಸ್ಲಾಮಿಕ ... ಸಹ ... ಗಳಿಂದ ಹೊರಡುವ ಮಾಸಿಕ ತ್ರೈಮಾಸಿಕಗಳೂ, ''ಜಯ ಕರ್ನಾಟಕ'' ದಂಥ ಮಾಸಿಕವೂ ಹೊರಡುವ ಸಮಾಚಾರವು ಸರ ಸರಕಾರಕ್ಕೆ ಗೊತ್ತಿರದ್ದು ಆಶ್ಚರ್ಯ. ಕಳೆದ ಸಲವೂ ಇದೇ ಅನಾವಸ್ಥೆಯಿದ್ದಿತು. ಕರ್ನಾಟಕವೆಂದರೆ ಸರಕಾರಕ್ಕೆ ಲೆಕ್ಕಕ್ಕಿಲ್ಲದ ವಿಷಯವಾಗಿ ... ಈ ಪ್ರಕಟಣೆಯಲ್ಲಿ ಕನ್ನಡ ಗ್ರಂಥಗಳು ೧೭ ಮಾತ್ರ ಇವೆ! ಅವುಗಳಲ್ಲಿ (೧) ಶಿಕ್ಷಣ ಸೂತ್ರಗಳು (೨) ... ಸಾಧನ (೩) ನಿಬಂಧ ಸಂಗ್ರಹ (೪) ಕಾವ್ಯಕಲ್ಪಲತಾ ಇವುಗಳನ್ನು ಬಿಟ್ಟರೆ, ಉಳಿದವುಗಳೆಲ್ಲ ಪದ್ಯಾವಲಿಗಳಂತವು ಚಿಕ್ಕ ಪ್ರತಿಗಳಿಗೇ ಗುಜರಾತಿ, ಮರಾಟಿ, ಇಂಗ್ಲೀಷ ಪುಸ್ತಕಗಳ ಸಂಖ್ಯೆಯು (ಸುಯೆಸು ಮೇಲಿಂದ ವಾಙ್ಮಯ ವಿಕಾಸವನ್ನು ಗಣಿಸುವದಿದ್ದರೆ) ದಿನಾಲು ಹೆಚ್ಚಾಗುತ್ತಲಿದೆ. ಕನ್ನಡ ಗ್ರಂಥಗಳನ್ನು ಸಂಖ್ಯೆಯ ಮೇಲಿಂದ ಗಣಿಸಿದರೂ ಸರಿ; ಗ್ರಂಥಗಳ ಮಹತ್ವ ಬಿಂದ ಎಣಿಸಿದರೂ ಸರಿ; ಹೇಗೆ ನೋಡಿದರೂ ಸರಿ. ಸಾಹಿತ್ಯ ವೃದ್ಧಿಯು ಸಾಲದು !!

ಅಹಂಕಾರ ಸ್ವಾಭಿಮಾನಗಳು.

ಸ್ವಾಭಿಮಾನವು ಮನುಷ್ಯ ಮಾತ್ರದವರಿಗೆ ಪ್ರಾಣಕ್ಕಿಂತ ಹೆಚ್ಚಿನದು. ಹೆಂಗಸಿನ ಪಾತಿವ್ರತ್ಯ, ರಾಷ್ಟ್ರದ ಸ್ವಾತಂತ್ರ್ಯ, ಮನುಷ್ಯನ ಸ್ವಾಭಿಮಾನ ವಿವೇಕ ಇವುಗಳನ್ನು ಅರ ಪ್ರತಿಫಲಕ್ಕಾಗಿಯೂ ಮಾರಕೊಡದೆಂದು ಬಲ್ಲಿದರು ಹೇಳುತ್ತಾರೆ. ಇಂತಹ ಸಂದರ್ಭದಲ್ಲಿ ಸಭೆಯಲ್ಲಿ ಮಾತನಾಡಲುದ್ಯುಕ್ತರಾದ ದೊಡ್ಡ ಮನುಷ್ಯರಿಗೆ ಕನ್ನಡ ಶಬ್ದಗಳು ನೆನಪಿಗೆ ಬಾರದೆ ಆಂಗ್ಲವನ್ನು ಹೇಳುವದು, ಇಲ್ಲವೆ ಕನ್ನಡವಲ್ಲದ ಇನ್ನೊಂದು ಮಾತಿನಲ್ಲಿ ಉಪಕ್ರಮಿಸುವದು ನಮ್ಮ ಸ್ವಾಭಿಮಾನ ಶೂನ್ಯತೆಯನ್ನೇ ತೋರಿಸುತ್ತಿರುವದಲ್ಲವೇ? ತಿಂಕಣದ ಅನೇಕ ಕನ್ನಡಿಗರು ಈಗಲೂ ಆಂಗ್ಲ ಭಾಷೆಯಲ್ಲಿ ಲಗ್ನ ಪತ್ರಿಕೆಗಳನ್ನು ಬರೆದು ಮುದ್ರಿಸುತ್ತಿರುವರು. ಸ್ವಾಭಿಮಾನ ಶೂನ್ಯತೆಗೆ ಮತ್ತೆ ಕೊಂಬುಗಳಿರುವವೇ? ಇನ್ನಂತಹ ಲಬ್ಧಪ್ರತಿಷ್ಠಿತತೆಯು? ನಮ್ಮವರೀಗ, ಯುರೋಪಿನೊಳಗಿನ ಕ್ರಿಶ್ಚನ್ನರಂತೆ ದೇವರ ಮನೆಯಲ್ಲಿ ಸಹ ಸಂಧ್ಯಾವಂದನ ಪ್ರಾರ್ಥನಾದಿಗಳನ್ನೂ ಆಂಗ್ಲದಲ್ಲಿಯೇ ಆಚರಿಸುವದೊಂದು ಉಳಿದಿರುವದು. ಆಂಗ್ಲರು ಸಹ ನಮ್ಮ ರೀತಿಯನ್ನು ಕಂಡು ಮನಸಿನಲ್ಲಿ ನಗುತ್ತಿರಬಹುದು. ಎಲ್ಲರಿಗೂ- ಕನ್ನಡ ತೆಲುಗ ತಮಿಳರಿಗೂ ತಿಳಿಯಬೇಕೆಂಬ ಉದ್ದೇಶ ಸಾಧನೆಗಾಗಿ ಬೇಕಾದರೆ ಹಿಂದೀ ಭಾಷೆಯಲ್ಲಿ ಲಗ್ನಪತ್ರಿಕೆಗಳನ್ನು ಹಾಕಲಿ. ಮತ್ತು ಕನ್ನಡದ ಸಮಾಚಾರವಷ್ಟೇ ಅರಿಯದವರು ನಮ್ಮ ಲಗ್ನಮಂಟಪಗಳಲ್ಲಿ ಬರುವವರಾದರೂ ಏತಕ್ಕೆ? ಒಬ್ಬಿಬ್ಬರು ಬರುವರೆಂದು ಸಾರ್ವಜನಿಕರಾದ ಕನ್ನಡ ಪತ್ರಗಳಿಂದ ಬಾಧಕವಾದರೂ ಏನು? ವಸ್ತುಸ್ಥಿತಿಯು ಇದಲ್ಲ. ಅಚ್ಚಕನ್ನಡಿಗರು ಆಂಗ್ಲವು ತಮಗೆಲ್ಲ ತಿಳಿಯದೆ ಹೋದರೂ ಅನ್ಯರಿಂದ ಆ ಭಾಷೆಯಲ್ಲಿ ಕಾಗದ ಬರೆಯಿಸಿ ಮುದ್ರಿಸುತ್ತಿರುವರು. ಇದನ್ನು ಬಹಿಷ್ಕರಿಸಿ, ಕನ್ನಡದ ಚೀಟಿಗಳನ್ನು ಲಗ್ನವೇ ಮೊದಲಾದ ಸಮಾರಂಭಗಳಲ್ಲಿ ಪ್ರಕಟಿಸುವ ಭಾರವು ದೊಡ್ಡ ಮನುಷ್ಯರ ಮೇಲಿರುವದು. ಅವರ ರೀತಿಯನ್ನು ಸಾಮಾನ್ಯರೂ ಅನುಸರಿಸಬಹುದು.

ಸ್ವಾಭಿಮಾನವೂ ಸ್ವಮತಾಭಿಮಾನವೂ ಅಳತೆ ಮೀರಿದರೆ, ಅದು ಅಹಂಕಾರವಾಗುವದು. ಪಾಶ್ಚಾತ್ಯ ಸುಧಾರಣಾಗ್ರಣಿಯಾದ ಲೂಥರನ ಮಾತೊಂದನ್ನಿಲ್ಲಿ ಉದಾಹರಿಸಬಹುದು. ಪೋಪ ಸಾಹೇಬನ ತಿರಸ್ಕಾರದ ಖಡ್ಗವು ತನ್ನ ತಲೆಯಲ್ಲಿ ಆವಾಗಲೂ ತೂಗಾಡುತ್ತಿದ್ದ ಆತನು ಅಂಜಲಿಲ್ಲ. ಅವನು ತನ್ನ ಕೈಗೆ ದೊರೆಯದಿರಲು ಪೋಪನು ಲೂಥರನ ಪ್ರತಿಮೆಯನ್ನು ಸುಟ್ಟುಹಾಕಿ ಜಯಘೋಷಮಾಡಿ ತೃಪ್ತನಾದನು! ಲೂಥರನು ಅತ್ಯಂತ ಉದಾರಿಯು, ತನ್ನ ಸರ್ವಸ್ವವನ್ನೂ ದಾನ ಮಾಡುತ್ತಿದ್ದನು. ಒಮ್ಮೆ ತನ್ನ ಗೃಹಿಣಿಗೆ ಕಾಣಿಕೆಯಾಗಿ ಬಂದ ವಸ್ತುವನ್ನು ಸಹ ಬಡವನಿಗೆ ಕೊಟ್ಟು ಕೃತಾರ್ಥನಾದನು. ಇನ್ನೊಮ್ಮೆ, ಭಿಕ್ಷುಗಾರನು ಬಂದಿರಲು ಮನೆಯಲ್ಲಿ ಏನೂ ಇರಲಿಲ್ಲ; ಬೊವಕೀಮ ರಾಜನ ಮುದ್ರೆಯು ರೂಪಾಯಿಯೊಂದುಮಾತ್ರ ಉಳಿದಿತ್ತು. ಕೂಡಲೆ ಆ ರೂಪಾಯಿಯುಳ್ಳ ಧರಣಿಯನ್ನೆತ್ತಿಕೊಂಡು, 'ಅತಿಥಿದೇವೋಭವ' ಎಂಬಂತೆ, ಬೊವಕೀಮನೇ, ಹೊರಗೆ ಬಾ, ಕೃಸ್ತನಾಥನು ದರಿದ್ರರೂಪದಿಂದ ಬಂದಿರುವನು! ಎನ್ನುತ್ತ ಆ ರುಪಾಯಿಯನ್ನು ಭಿಕ್ಷುಕನಿಗಿತ್ತನು ಇಂತು ತನ್ನ ಸರ್ವಸ್ವವನ್ನು ಕೃಸ್ತ ಸೇವೆಗೆ ಒಪ್ಪಿಸಿದ್ದರೂ ಅವನೆಂತಹ ನಿರಹಂಕಾರಿಯು! ತನ್ನ ಅನುಯಾಯಿಗಳಿಗೆ, "ನೀವು ಲೂಥರಕರೆನಿಸಿಕೊಳ್ಳಬಾರದು. ಲೂಥರನೆಂಬವನು ಎಲ್ಲಿರುವ? ಅವನ ಆಧಾರವೇನುಗುಂಟೋ? ಆ ಕೃಸ್ತನ ಹೆಸರಿನಲ್ಲಿ [illegible] ಕ್ರಿಶ್ಚನ್ನರೆನ್ನಿಸಿಕೊಳ್ಳಿರಿ!" ಹೀಗೆ ಹೇಳುತ್ತಿದ್ದನು. [illegible]ಗಾಗಿ ದೊಡ್ಡಮಾತೇ ಮುಂದಿಡಬೇಕೆಂದು ಅತಿಪ್ರಚಂಡನಾದ ಲೂಥರನ ಮಾತನ್ನು ಇಲ್ಲಿ ಬರೆದುಕೊಂಡಿದ್ದೇವೆ. [illegible] ಉತ್ತಮ ಗ್ರಂಥಗಳ ಒಗೆಯಲ್ಲಿ ಸಹ ಅತನ [illegible]ವನಾಗಿದ್ದನು. ತನ್ನ ಮುಂದಾಗುವ ಗ್ರಂಥಕರ್ತರು ಕನ್ನ[illegible]ಗಿಂತ ಉತ್ತಮ ಕೃತಿಗಳನ್ನೇ ರಚಿಸುವರೆಂಬ [illegible]. ವಾಙ್ಮಯವಿಭೂವಾದ ತಾನು ಬರೆದುದನ್ನು [illegible] 'ಇವರು ಬೇತಾಳನನ್ನು ಎಬ್ಬಿಸಿದರೆಂ'[illegible] ಮೊನ್ನೆ ಒಬ್ಬರು ಅಪ್ರಬುದ್ಧರು ಒಂದೇ ಗೊಂದಲವ[illegible]ಮಾಡಿದ್ದರು. ಕನ್ನಡದ ಪ್ರಖ್ಯಾತ ಕವಿಯಾದ ಪಂಪನು [illegible] ಪೂರ್ವದ ಮಹಾಮುನಿಗಳ ಕಥೆಯನ್ನೆತ್ತಿಕೊಳ್ಳಲು [illegible] ತನ್ನ ಧಾರ್ಷ್ಟ್ಯವು ಆದೆಷ್ಟರಮಾತೆಂದು ಹೇಳಿದ್ದಾನೆ. ಕನ್ನಡ[illegible] ಅಹಂಕಾರವನ್ನು ಬಿಟ್ಟು ಉಚಿತ ಸ್ವಾಭಿಮಾನದಿಂದ [illegible]ವೆಂದು ಈ ಕಾಗದವನ್ನು ಬರೆದಿದ್ದೇವೆ.

—ಶ್ರೀಕೃಷ್ಣ. ಬಿ. ಗಲಗಲಿ.

ಸ್ವೀಕಾರ.

(೧) ಮುಂದಾಳು. ವಿಜಾಪೂರದಲ್ಲಿ ಹೊರಟ ಹೊಸದೊಂದು ವಾರಪತ್ರಿಕೆ ವಾ. ಚಂ. ೩-೮-೦ ಇದರ ಸಂಪಾದಕರಾದ ಶ್ರೀ. ಗು[illegible]ಟಿಯವರನ್ನು ಕನ್ನಡಿಗರೆಲ್ಲ ಚನ್ನಾಗಿ ಬಲ್ಲವರಾದ್ದರಿಂದ "ಮುಂದಾಳು"ವಿನ ಮುಂದೈಚ್ಛೆಯು ಹೇಗೆ ಸಾಗುವದೆನ್ನುವದನ್ನು ನಾವೇನು ಹೇಳಬೇಕಾಗಿಲ್ಲ. ಅಂಬೆಗಾಲನ್ನಿಕ್ಕುವ ಬಾಲಕನು ಏನು ಬೀಳುವೆನೆಂಬ ಹೆದರಿಕೆಯಿದ್ದರೂ, ಎದ್ದು ನಿಲ್ಲುವ ಪ್ರಯತ್ನವನ್ನು ಬಿಡನು. ಅಂತೆಯೇ ಅವನು ದೊಡ್ಡ ಮನುಷ್ಯನಾಗಿ ಧೈರ್ಯತನದಿಂದ ಓಡಾಡಲು ಅನುವಾಗುವದು. ಅದೇ ಪ್ರಕಾರವಾಗಿ ಚಂದಾದಾರರ ಸಂಖೆಯು ಕನ್ನಡ ನಾಡಿನಲ್ಲಿ ಹೆಚ್ಚಾಗಿ ದೊರೆಯದೆಂಬವನ್ನು ಕನ್ನಡ ತರುಣರು ಚನ್ನಾಗಿ ಬಲ್ಲವರಾದರೂ, ಕರ್ನಾಟಕ ರಾಷ್ಟ್ರನಿರ್ಮಾಣಕಾರ್ಯದಲ್ಲಿ ಧೈರ್ಯಶಿಸಿಬಂದ ಪ್ರಯತ್ನಿ[illegible] ಸೊಂಟಕಟ್ಟಿ ಮುಂದೆ ಬಂದು ಹೊಸ ಹೊಸ ಪತ್ರಿಕೆಗಳನ್ನು [illegible]ತ್ತಿರುವರು. "ಮುಂದಾಳು"ವು ಚಿರಾಯುವಾಗಲಿ! [illegible]ಗೆ "ಕನ್ನಡಿಗ"ನದೊಂದು ಸೂಚನೆ ಮಾತ್ರ ಇದೆ. ಕನ[illegible]ನಲ್ಲಿ ಹುಟ್ಟಿ "ಮುಂದಾಳು" ಎಂಬ ಅಚ್ಚಕನ್ನಡ ಶಬ್ದವನ್ನು [illegible]ಕೊಂಡು ಕನ್ನಡ ಸಂಸ್ಕೃತಿಗೆ ಶೋಭೆಯನ್ನುಂಟು ಮಾಡ[illegible] ಪ್ರಯತ್ನಿಸುವವನಿಗೆ ಮಿ. ಎಸ್. ಗುಡಗುಂಟಿ, ಜಿ. ಎ[illegible] [illegible]; ಎ. ಜಿ. ಬಿನವಾರ ದಂತಹ ಇಂಗ್ಲೀಷ ಮಾದರಿಯ ಹೆಸರು ಬರೆಯುವ ಪದ್ಧತಿಯು ಸರಿಯಲ್ಲ. ವಿಜಾಪೂರದಲ್ಲಿ [illegible] ಮೋಹವು ಅನೇಕರಿಗಿದೆ. ಅದನ್ನು ಹೋಗಲಾಡಿಸಲು "ಮುಂದಾಳು" ವಿಶೇಷ ಶ್ರಮಪಡಬೇಕಾಗಿ "ಕನ್ನಡಿಗ"ನ ಆಗ್ರಹದ ಬಿನ್ನಹವಿದೆ.

(೨) ಅನುಭವಾಮೃತ ಹೊಸಕೆರೆ ಚಿದಂಬರಯ್ಯನವರಿಂದ ಪರಿಶೋಧಿಸಲ್ಪಟ್ಟದ್ದು.

(೩) ತುಲಸೀದಾಸ ರಾಮಾಯಣ. ಭಾಗ ೨

(೪) ಆಯುರ್ವೇದ ಮಾಸಪತ್ರಿಕೆ. ನಂ. ೪ ಇವುಗಳ [illegible] ಸ್ವಲ್ಪಾವಧಿಯಲ್ಲಿ ಪ್ರಕಟವಾಗುವದು.

ರಂಗಭೂಮಿಯೂ ಶಿಲಾಲೇಖಗಳೂ.

(ಗೆಳೆಯರ ಗುಂಪಿನವರಲ್ಲಿ ಚಿಕ್ಕವಲ್ಲನ ಸಂಪಾದನೆ.)

ನಾನು ಜಾನೇವಾರಿ ೧೨ ರಿಂದ ಫೆಬ್ರುವರಿ ೧೫ ವರೆಗೆ ಒಂದು ತಿಂಗಳ ಮಟ್ಟಿಗೆ ಐಹೊಳ್ಳಿ, ಪಟ್ಟದಕಲ್, ಬಾದಾಮಿ, ಆಲವಡಿ, ಶಿರೂರ, ಜೇವೂರು, ಭೈರಮಟ್ಟಿ, ಹಳ್ಳೂರು, ಸಂಗಮ, ಬಾಗೇವಾಡಿ, ಮುತ್ತಗಿ, ಇಂಗಳೇಶ್ವರ, ಮನಗೂಳಿ ಮುಂತಾದೆಡೆಗೆ ಹೋಗಿ, ತಿರುಗಿ, ನೋಡಿ, ಶಿಲಾಲಿಪಿಗಳನ್ನು (೪೦-೫೦) ಸಂಗ್ರಹಿಸಿಕೊಂಡು ಬಂದಿರುವೆನು. ಇದೀಗ ರಂಗಭೂಮಿಯು ನಲುಮೆಯಾಗಿ ತವಕಬಡುತ್ತಿರುವ "ಕನ್ನಡಿಗ"ನಿಗೆ ಸಾಕ್ಷಿ ಹೇಳುವ ಕೆಲಸದ ಮಟ್ಟಿಗಾದರೂ ನಾನು ನೆರವಾಗದೆ ಇರಲಿಕ್ಕಾದೀತೆ??? ೭ ನೇ ಶತಮಾನದಲ್ಲಿ ಕರ್ನಾಟಕದ ರಂಗಭೂಮಿ ರಂಗುರಂಗಾಗಿದ್ದಿತೆಂಬುದಕ್ಕೆ ಹೊಣೆ ಹೇಳುವ ೨ ಶಿಲಾಲಿಪಿಗಳನ್ನು ಇದರ ಜೊತೆಗೆ ಜೋಡಿಸಿದ್ದೇನೆ. ಅಲ್ಲದೆ ಸುಮಾರು ಅದೇ ಕಾಲದ ಶಿಲ್ಪಕಲಾಗೌರವವನ್ನು ಕರ್ನಾಟಕಕ್ಕೊದಗಿಸಿಕೊಡುವ ಐಹೊಳ್ಳಿಯದೊಂದು ಲಿಪಿಯನ್ನು ಕಳುಹಿಸಿದ್ದೇನೆ.

ನಟಸೇವ್ಯನೂ, ನರಸೊಬ್ಬನೂ ವರ್ಣಿತ ಪುರುಷರು. ಅಚಲನ್ ಎಂಬವನು ಬರೆದವನು ಮಾತ್ರ. ಲಿಪಿಯ ಅಕ್ಷರಗಳನ್ನು ನೋಡಿ ಕಾಲವನ್ನು ಗೊತ್ತುಮಾಡಿದ್ದೇನೆ. ಮೊದಲನೇ ಪದ್ಯವು ಉತ್ಪಲಮಾಲೆ ಅನಂತರದವೆರಡು ಆರ್ಯಾ ಪದ್ಯಗಳು. ಐಹೊಳ್ಳಿಯದು ಗದ್ಯ, ಐಹೊಳ್ಳಿಗೆ ಆರ್ಯಪುರವೆಂದು ಹಿಂದಿನ ಹೆಸರು

ಪಟ್ಟದಕಲ್ಲಿನ ಬಸವಣ್ಣದೇವರ ಗುಡಿಯಲ್ಲಿ ಮೂಡಲ ಬಾಗಿಲು ಮಂಟಪದ ಒಳಗಡೆ ಬಲಬದಿಗೆ ಗೋಡೆಯಮೇಲೆ ಬರೆದಲಿಪಿ-ಕಾಲ ಸುಮಾರು ೭ ನೇ ಶತಮಾನ —

ಖ್ಯಾತ ಮಹಾಪ್ರಭಾವ ಭರತಾಗಮಯುಕ್ತ ಬಹುಪ್ರಕಾರವಾ | ಮಾತಿನೊಳಿಲ್ಲನೀನೊ ನಟಸೇವ್ಯನ ಮುನ್ನೆ ಯುಧೋಕ್ತಮಾರ್ಗದಿ || ಸ್ನೀತೆರದಿದ್ದುದಗ್ರತಲಸಜ್ಜರ ಮೆಮ್ಮುಡಿದನ್ನದೆ ಕೆಯ್ವುಡಿ | ಸ್ನಾತನೆ ನರ್ತಕಂ ನಟರೊಳಗ್ಗಳ ವಿಭೂಮಸಾಂತರಾಳದೊಳ್ ||೧|| ದೇವಯ್ಯಗಳಾ ಮಗ ಅಚಲನ್

ಪಟ್ಟದಕಲ್ಲಿನ ಬಸವಣ್ಣದೇವರ ಗುಡಿಯಲ್ಲಿ ಮೂಡಲಬಾಗಿಲು ಮಂಟಪದ ಮುಮ್ಮಗಲು ಎಡಮೂಲೆಗಂಬದ ಹಿಂಬದಿಗೆ ಬರೆದಲಿಪಿ-ಕಾಲ ಸುಮಾರು ೭ ನೇ ಶತಮಾನ—

ಭರತನುತ ವಚನರಚನಾ |
ವಿರಚಿತ **ನಟಸೇವ್ಯ** ಸಿಂಘನಾದೇನ ||
ಪರನಟ ಮದಾಂಧಹಸ್ತೀ |
ಪರಿಹೀನಮದೋಭವತ್ಯೇವ ||೧||
ನಟಸೇವ್ಯ ಭರತ ಮತಯುತ |
ಪಟುತರ ವಚನಾಶನಿ ಪ್ರಪಾತೇನ ||
ಕುಟಿಲೋನ್ನತ ನಟಶೈಲ |
ಸ್ಫುಟಿತಾನತ ಮಸ್ತಕಃ ಪತತಿ ||೨|| ಅಚಲನ್.

ಐಹೊಳ್ಳಿಯ ಮಲ್ಲಯ್ಯನ ಗುಡಿಯ ಬಾಗಿಲ ಬಲಬದಿಗೆ ಹೊರಗೋಡೆಗಂಬದಮೇಲೆ ಬರೆದ ಲಿಪಿ-ಕಾಲ ಸುಮಾರು ೮ ನೇ ಶತಮಾನ—

ಸ್ವಸ್ತಿ ಜಮ್ಬುದ್ವೀಪಾನ್ತರೇ ಕಶ್ಚಿತ್ ವಾಸ್ತು ಪ್ರಾಸಾದ
ತದ್ಗತಃ **ನರಸೊಬ್ಬ** ಸಮೋ ವಿದ್ವಾನ್
ನಭೂತೋ ನಭವಿಷ್ಯತಿ ||

ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವು.

(ಶ್ರೀಕ್ಷೇತ್ರ ಕಾಶಿಯಲ್ಲಿಯ ಓರ್ವ ಕನ್ನಡಿಗರಿಂದ)

ಡಾ. ಯೂ. ರಾಮರಾಯರಿಗೆ "ಕೌನ್ಸಿಲ್ ಆಫ್ ಸ್ಟೇಟ್"ದಲ್ಲಿ ಸರಕಾರದಿಂದ, ಈ ಏಕೀಕರಣ ಪ್ರಶ್ನೆಯ ಮೇಲೆ, ದೊರೆತ ಉತ್ತರವು ನೌಕರಶಾಹಿಗಳ ಬುದ್ಧಿಮತ್ತೆಗೆ ತಕ್ಕಂಥದೇ ಇರುತ್ತದೆ. "ರಾಜಕೀಯ ಸೌಕರ್ಯಗಳ ಬಗ್ಗೆ ಜನರಿಂದ ಅಷ್ಟೊಂದು ಲೋಕಪ್ರಿಯವಾದ ಮತ್ತು ಆಗ್ರಹದ ಬೇಡಿಕೆ ಇರದೇಯಿದ್ದರೆ, ಆ ಸೌಕರ್ಯಗಳನ್ನು ಅವರಿಗೆ ಒದಗಿಸಿ ಕೊಡತಕ್ಕದ್ದಲ್ಲ" ಎಂಬ ಜಾನ್ ಸ್ಟುವರ್ಟ ಮಿಲ್ಲರ ಎಂದಿಗೊ ಶಿಥಿಲವಾಗಿ ಹೋದ ವಿಧಾನಗಳಿಗೆ ಬಿಗಿತನದಿಂದ ಅಂಟಿಕೊಳ್ಳಲಿಲ್ಲವೆಂದು ಸರಕಾರವನ್ನು ಯಾರೂ ದೂಷಿಸರು ತನ್ನ ಸ್ವಂತ ಭಾಷೆ, ಸ್ವಂತ ಮನೆ, ಮತ್ತೂ ಸ್ವಂತ ಸಂಸ್ಕೃತಿಗಳಿಗೆ ಎಡೆಯಿಲ್ಲದೇ ಹೋದರೆ ರಾಷ್ಟ್ರದ ಜೀವಾಳವು ಎಂದೂ ವಿಕಾಸಗೊಳ್ಳದೆಂಬ ತತ್ವವು ಈಗ್ಗೆ ಜಗಮಾನ್ಯವಾಗಿದೆ. ಕರ್ನಾಟಕ ಪ್ರಾಂತವು ಪ್ರತಿಯೊಂದು ಅಂಗದಲ್ಲಿಯೂ ತುಂಡು ತುಂಡಾಗಿ; ಸರಕಾರದ "ಆಡಳಿತೆಯ ಸೌಕರ್ಯ"ಕ್ಕಾಗಿ ಕತ್ತರಿಸಲ್ಪಟ್ಟದ್ದರಿಂದಲೇ ಅದರ ಜೀವಾಳಕ್ಕೆ ಫಲಪತ್ತಾದ ಭೂಮಿಯಿಲ್ಲೆನ್ನುವದು. ಸರಕಾರದ ಸಭಾಸದರ ಸ್ಮೃತಿಯಲ್ಲಿಲ್ಲ. ಅದೇ ಕಾರಣದಿಂದಲೇ ಸರಕಾರವು ವಾದಿಸುವಂತಹ "ಆಗ್ರಹದ ಬೇಡಿಕೆ"ಯು ಕರ್ನಾಟಕದಲ್ಲಿಲ್ಲ. ಒಂದು ಕಾಲಕ್ಕೆ ಅತ್ಯುಚ್ಚವಾದ ವೈಭವದ ಶಿಖರದಲ್ಲಿದ್ದ ಕರ್ನಾಟಕದ ಈಗಿನ ಮೃತಪ್ರಾಯ ಸ್ಥಿತಿಗಿಂತ, ತಮ್ಮ ಅನುಕೂಲವೇ ಹೆಚ್ಚು ವಿಚಾರಾರ್ಹವೆಂದು ಸರಕಾರಕ್ಕೆ ತೋರುತ್ತದೆ. "ಆಗ್ರಹದ ಬೇಡಿಕೆ" ಯೆಂದರೆ ಅದರ ಅರ್ಥವಾದರೂ ಏನಿರಬಹುದು ತಿಳಿಯದು. ಕರ್ನಾಟಕದವರು ಏಕೀಕರಣದ ಚಳವಳವನ್ನು ಎಂದಿಗೋ ಪ್ರಾರಂಭಿಸಿ, ರಾಷ್ಟ್ರೀಯ ಸಭೆಯಿಂದ ತಮ್ಮದೊಂದು ಸ್ವತಂತ್ರ ಪ್ರಾಂತವನ್ನು ಸಹ ದೊರಕಿಸಿಕೊಂಡು ಬಿಟ್ಟಿದ್ದಾರೆ. ಇದಕ್ಕೂ ಹೆಚ್ಚಾಗಿ ಯಾವ ಚಳವಳವು ಬೇಕಾಗಿದೆ? ಸಾವಧಾನದಿಂದ ಸನದಶೀರವಾದ ಚಳವಳವನ್ನು ಯಾವಾಗಲೂ ಮಾಡಬೇಕೆನ್ನುವ ಸರಕಾರವು, ಕರ್ನಾಟಕಸ್ಥರು ಈ ಏಕೀಕರಣ ಚಳವಳಕ್ಕೆ 'ಪೈಶಾಚಿಕ' ನೃತ್ಯದ ಸ್ವರೂಪವನ್ನು ಕೊಡಬೇಕೆಂದಿರುವರೋ? ಹಾಗೆ ಮಾಡಿದರೆ ಮಾತ್ರ "ಆಗ್ರಹದ ಬೇಡಿಕೆಯ" ಅಸ್ತಿತ್ವವು ಸರಕಾರದ ಲಕ್ಷ್ಯದಲ್ಲಿ ಬರುವದೊ"?

ಈ ಏಕೀಕರಣದ ವಿಷಯವು ಕೇವಲ ಪ್ರಾಂತಿಕ ಸರಕಾರಕ್ಕೆ ಸಂಬಂಧಿಸಿದ್ದೆಂದು ವಾದಿಸುವದು ವ್ಯರ್ಥ. ಸಾಮ್ಯವಾಗಲೀ ಕಾರಣವಾಗಲಿ ಯಾವದೂ ಇಲ್ಲದೇ, ಯಾವ ಪ್ರಾಂತಗಳಲ್ಲಿ ಈಗ್ಗೆ ಕರ್ನಾಟಕವು ಬಲಾತ್ಕಾರದಿಂದ ಸೇರಿಸಲ್ಪಟ್ಟಿದೆಯೋ ಅಲ್ಲಿ ಕರ್ನಾಟಕರು ಕಲ್ಪನಾತೀತವಾಗಿ ಅಲ್ಪ ಸಂಖ್ಯಾಕರಾಗಿದ್ದು ಬಲಶಾಲಿಗಳಾದ ನೆರೆಹೊರೆಯ ಜನಾಂಗಗಳ ಸಂಗಡ ಗುದ್ದಾಡಬೇಕಾಗಿದೆ. ಆದ್ದರಿಂದ ಈ ಪ್ರಶ್ನೆಯು ಮಧ್ಯವರ್ತಿ ಸರಕಾರದ್ದೇ ಆಗಿದೆ. ಅವರೇ ಕರ್ನಾಟಕದ ಈ ನ್ಯಾಯವಾದ ಬೇಡಿಕೆಯನ್ನು ಪೂರೈಸತಕ್ಕದ್ದು. ಆದರೆ ಯಾವನಿಗಾದರೂ ಬೇಡಾದ ವಿಷಯದಲ್ಲಿ ನೆವಗಳು ಬಹು ಸುಲಭವಾಗಿ ಯಾವಾಗಲೂ ದೊರೆಯುವವು.

ಇನ್ನು ಮುಂದೆ, ಸರಕಾರದ ಸಭಾಸದರು ಎಂತಹರೇ ಇರಲಿ, ಅವರ ಬಾಯಿಯು ಬಂದಾಗುವಂತೆಯೇ "ಆಗ್ರಹದ ಬೇಡಿಕೆ"ಯ ಚಳವಳವನ್ನು ಹೂಡಲು, ಕನ್ನಡಿಗರ ಕಣ್ಣುಗಳು ಈಗಲಾದರೂ ಸರಕಾರದ ಉತ್ತರದಿಂದ ತೆರೆಯುವವೆಂಬ ಆಶೆಯಿದೆ. ಡಾ. ಯೂ. ರಾಮರಾಯರ ದೇಶಾಭಿಮಾನಕ್ಕಾಗಿ ಎಲ್ಲ ಕನ್ನಡಿಗರೂ ಅವರಿಗೆ ಋಣಿಯಾಗಿರಬೇಕು.

ಮುಂಬೈ ಕಾಯದೇ ಮಂಡಲ-

(ನಮ್ಮ ಕಾಯದೇ ಮಂಡಲದ ಪ್ರತಿನಿಧಿಯಿಂದ)

ಮುಂಬೈ ತಾ|| ೯-೩-೩೬

ಈಗ್ಗೆ ಮೂರು ವಾರಗಳು ಸಂಪೂರ್ಣವಾದವು. ಸರಕಾರದ ಕೆಲಸವು ಚೊಕ್ಕಟವಾಗಿ ನಡೆದಿದೆ. ಲೋಕಪ್ರತಿನಿಧಿಗಳು ಇದ್ದರೂ ಸರಿ, ಇಲ್ಲದಿದ್ದರೂ ಸರಿ ತಮ್ಮ ಕಾರ್ಯವನ್ನು ಸಾಧಿಸಿಕೊಳ್ಳುವದೊಂದು, ಅವರಿಗೆ ಚನ್ನಾಗಿ ಗೊತ್ತಿದೆ. ಸ್ವರಾಜ್ಯ ಪಕ್ಷೀಯರು ಈ ಮಂಡಲವನ್ನು ಬಿಟ್ಟು ಹೋದದ್ದೊಂದು ಸರಕಾರಕ್ಕೆ ಒಳಿತಾಗಿರಬಹುದು ಯಾಕೆಂದರೆ, ಯಾವಾಗಲೂ ಎಲ್ಲರೀತಿಯಿಂದಲೂ ಟೀಕೆಯು ನಿಂತಿದೆ. ಈಗ ಮೊದಲಿನಂತೆ ಸರಕಾರದ ಕಾರ್ಯದಲ್ಲಿ ತಲೆ ಹಾಕುವವರಿಲ್ಲ. ಇಲ್ಲದ ಸಂಗತಿಗಳಿಂದ ಸಾಹೇಬ ಜನರ ತಲೆ ಕೆಡಿಸುವದು ಉಳಿದಂತಾಗಿದೆ. ತಲೆಯು ಶಾಂತವಾಗಿದ್ದರಿಂದ ಬರುವ ಬೇಸಿಗೆಯಲ್ಲಿ ಮಹಾಬಳೇಶ್ವರಕ್ಕೆ ಹೋಗುದನ್ನಾದರೂ ಬಂದು ಇಟ್ಟರೆ, ರೈತರ ಹಣವಾದರೂ ಉಳಿಯಬಹುದು.

“ಇದೇನಯ್ಯಾ! ನೀವಿನ್ನೂ ಇಲ್ಲಿಯೇ ಇರುವಿರಿ!” ಎಂಬದಾಗಿ ನನ್ನನ್ನು ಕೇಳುವರು ಬಹಳ. “ಅಹುದು; ಕರ್ನಾಟಕದ ಪ್ರತಿನಿಧಿಗಳು ಏನೇನು ಕೆಲಸ ಮಾಡುವರು? ಏನೇನು ಕೆಲಸ ಮಾಡುವದಿಲ್ಲ? ಕರ್ನಾಟಕ ಜನರ ಪರಿಯಿಂದ ಮುಂಬೈಗೆ ಬಂದು ಇಲ್ಲಿ ಕನ್ನಡಿಗರ ಕಷ್ಟಗಳನ್ನು ದೂರ ಮಾಡಲು ಒದ್ದಾಡುವರೋ ಅಥವಾ ಉಸ್ತು ಹುಡಿಯುವರೋ ನೋಡುವದಕ್ಕೆ ನಿಮ್ಮ ವೃತ್ತ ಪತ್ರದ ಪ್ರತಿನಿಧಿಯಾಗಿ ಬಂದಿರುವೆನೆಂದು” ಕಾಯದೇ ಮಂಡಲದ ಸಭಾಸದರಿಗೆ ಹೇಳಿ, ಏನೋ ಗೊಂದಲವನ್ನುಂಟು ಮಾಡಿರುವೆ. ಕಾಯದೇ ಮಂಡಲದಲ್ಲಿದ್ದ ಕರ್ನಾಟಕ ಪ್ರತಿನಿಧಿಗಳೇ ತಮ್ಮ ತಮ್ಮ ಸ್ವಸ್ಥಾನಕ್ಕೆ “ಗಪ ಗಪ್ಪ”ರಾದ ಮೇಲೆ ನೀನೇನಿಲ್ಲಿ ಮಾಡುವಿರಿ ಎಂದೂ ನನಗೆ ಕೇಳುವರು! ನಾನಿದಕ್ಕೆ ಏನೆಂದು ಉತ್ತರ ಕೊಡಬೇಕು? ಅಥವಾ ನನ್ನಪರಿಯಿಂದ ಕರ್ನಾಟಕದ ಲೋಕನಿಯುಕ್ತ ಪ್ರತಿನಿಧಿಗಳು ತಮ್ಮ ತಮ್ಮ ಸ್ಥಳಗಳಿಂದ “ಕನ್ನಡಿಗ”ನಿಗೆ ತಾವೇ ಉತ್ತರ ಕಳಿಸಲಿಕ್ಕೋ ಪತ್ರ ಬರೆದ್ಧರಂತ ಕೊಡುವ ನಮ್ಮ “ಲೋಕನಿಯುಕ್ತ” (?) ಪ್ರತಿನಿಧಿಗಳಿಗೆ ಉತ್ತರ ಕೊಡುವ ಧೈರ್ಯವಾದರೂ ಇದೆಯೆ? ಮತದಾರರೇ ಎಚ್ಚರಿಕೆ! ಎಲ್ಲವನ್ನೂ ತಿಳಿದುಕೊಳ್ಳಿ. ಚುನಾವಣೆಯ ದಿನಗಳು ಸಮೀಪಿಸಿವೆ. ಯಾರಿಗೆ ಮತಕೊಡಬೇಕೆನ್ನುವದನ್ನು ವಿಚಾರಿಸಿರಿ. ಈಗಿದ್ದ ನಮ್ಮ ಕರ್ನಾಟಕದ ಪ್ರತಿನಿಧಿಗಳು ೯ ಜನರು ಯಾರೆಂದರೆ:— ಶ್ರೀಯುತರುಗಳ ದ ಕಂಬಳಿ; ಅಂಗಡಿ; ದಳವಿ; ಸರದೇಸಾಯಿ; ಜೋಗ; ಕರ್ಕೀ; ಪರಾಂಜ; ಬೇಂದ್ರೇಕರ ಹಾಗೂ ಸೈಯ್ಯದ ಪಾಷಗಡಿ ಸಾಹೇಬ ಯಾರಾರು ಹೇಗೆ ಮತಕೊಟ್ಟಿರುವರೆಂಬದನ್ನೆಲ್ಲ ನಾನು ಪೂರ್ವದಲ್ಲಿ ತಿಳಿಸಿರುವೆನು. ಇನ್ನೂ ತಿಳಿಸುವೆನು. ಇಂಥವರಿಗೆ ನೀವು ಮುಂದಿನ ವರ್ಷ ಆರಿಸಿರಿ, ಅಥವಾ ಬಿಡಿರಿ. ಎಂಬದಾಗಿ ನಾನೇನು ಈಗ್ಗೆ ನುಡಿಯುವದಿಲ್ಲ. ಆದರೆ ನಾನು ಆದ ಸಂಗತಿಗಳನ್ನು ಮಾತ್ರ ತಿಳಿಸುವೆ. ನೀವೇ ವಿಚಾರಿಸಿರಿ.

೧೦-೩-೩೬.

ಈ ದಿನ ಶ್ರೀ. ಕೌಜಲಗೀ ಶ್ರೀನಿವಾಸರಾಯರು ಪುನಃ ಪ್ರೇಕ್ಷಕರಾಗಿ ಬಂದಿದ್ದರು. ನಮ್ಮ ಕರ್ನಾಟಕದ ಸಭಿಕರಲ್ಲಿ ಶ್ರೀ. ಕಂಬಳಿ, ಅಂಗಡಿ, ಮತ್ತು ಶ್ರೀ ಸರದೇಸಾಯಿಯವರನ್ನು ಬಿಟ್ಟು, ಎಲ್ಲರೂ ಬಂದಿದ್ದರು.

ತಾ|| ೮ ಮತ್ತು ೯ ಇವೆರಡು ದಿವಸಗಳಲ್ಲಿಯೂ ವಾದವಿವಾದವು ಸ್ವರಾಜ್ಯ ಪಕ್ಷೀಯರಿಲ್ಲದ್ದರಿಂದ ತೇಜೋಹೀನವಾಗಿತ್ತೆಂದು ಈ ಮೊದಲೇ ತಿಳಿಸಿರುತ್ತೇನೆ. ಪ್ರಶ್ನೋತ್ತರಗಳು ನಡೆದಿರುವಾಗ್ಗೆ ಸ್ವರಾಜ್ಯ ಪಕ್ಷೀಯರೆಲ್ಲರೂ ಬಂದಿದ್ದು, ‘ಹೊರಗೆ ಹೋಗು’ ವದೊಂದು ಪ್ರದರ್ಶನ ಮಾಡಿದರು. ರಾಷ್ಟ್ರೀಯ ಸಭೆಯ ಆಜ್ಞೆಯ ಪ್ರಕಾರ ತಾವೆಲ್ಲರೂ ಕಾಯದೇ ಮಂಡಲದಿಂದ ಹೊರಗೆ ಹೋಗುವೆವೆಂದು ಅಧ್ಯಕ್ಷರಿಗೆ ಶ್ರೀ. ಭೋಪಟಕರರು ತಮ್ಮ ‘ಕಾರಣಗಳನ್ನು’ ಓದಿ ಹೇಳಿ ಎಲ್ಲರೂ ಸಭೆಯಿಂದ ಹೊರಬೀಳಹತ್ತಿದರು. ಕೂಡಲೆ ಬೊಕ್ಕಸದ ಮಂತ್ರಿಗಳಾದ ಲಾರೆನ್ಸ ಸಾಹೇಬರು, ಸ್ವರಾಜ್ಯಪಕ್ಷೀಯರು ಬಿಟ್ಟು ಹೋಗುವದನ್ನು ನೋಡಿ, ತಮಗೆ ಬಹಳ ಖೇದವೆನಿಸುವದೆಂದರು; ಆದರೂ ಕೂಡ, ಈ ಸಭೆಯಲ್ಲಿ ಇನ್ನೂ ೯೦ ಜನ ಸಭಿಕರು ಉಳಿಯುವದರಿಂದ ಈ ಸಭೆಯು ಜನರ ಹಿತದ ಸಲುವಾಗಿ ತಮ್ಮ ಕೆಲಸವನ್ನು ಮಾಡಲಿಕ್ಕೆ ಯೋಗ್ಯ ಉಳ್ಳದ್ದಾಗುವದೆಂದೂ ಗುರುಗುಟ್ಟಿದರು. ಆ ಮೇಲೆ ಜಲಾಶಯ ತಜ್ಞರಾದ ಬಾಗಸನ್ ಸಾಹೇಬರ ಸಲುವಾಗಿ ೬೦ ಸಾವಿರ ರೂಪಾಯಿಗಳನ್ನು ತೆಗೆದಿಡುವದು ಅನಾವಶ್ಯವೆಂದು ವಾದವಿವಾದ ನಡೆಯಿತು. ಈಗ್ಗೆ ಇವರು ಶೋಧಿಸಿ ಕಡಿಸಿದ ೨೧ ಭಾವಿಗಳಲ್ಲಿ ಕೇವಲ ೮-೯ ಭಾವಿಗಳಲ್ಲಿ ನೀರು ಬಿದ್ದಿವೆ ಅಂದರೆ ನೂರಕ್ಕೆ ೫೦ ರಂತೆ ತಪ್ಪು ಕಂಡು ಬರುವದು. ಆದ್ದರಿಂದ ಇಷ್ಟು ದೊಡ್ಡ ಪಗಾರದ ಸಾಹೇಬರು ಬೇಡ. ಹಿಂದುಸ್ಥಾನದ ಜಲಾಶಯ ತಜ್ಞರು (೩ ಸಾವಿರ ವೆಚ್ಚ ಮಾಡಿದರೆ) ೩೦ ಜನರು ದೊರೆಯುವರೆಂಬದಾಗಿ ಟೀಕೆಗಳಾದವು. ತಿಂಗಳಿಗೆ ೫ ಸಾವಿರ ರೂ. ವೆಚ್ಚಮಾಡಿ, ಈ ಸಾಹೇಬರನ್ನಿಡುವದೆಂದರೆ ಈ ಸಭೆಯು ಅಪಮಾನವನ್ನು ಮಾಡಿದಂತೆಯೇ ಸರಿ. ಎಂದು ಶ್ರೀ ಪರಾಂಜಪೆಯವರು ಸಹ ಹೇಳಿದರು.

೧೧-೩-೩೬.

ಈ ಹೊತ್ತು ನಮ್ಮ ಕರ್ನಾಟಕ ಸಭಿಕರಲ್ಲಿ ಬಾರದೇ ಇದ್ದ ಸಭಿಕರೆಂದರೆ ಮೂವರು. ಅವರು ಶ್ರೀ. ಕಂಬಳಿ, ಅಂಗಡಿ ಮತ್ತು ಸರದೇಸಾಯಿ.

ಸರಕಾರಿ ಮಸೂದೆಗಳ ಮೇಲೆ ಇವತ್ತಿನ ವಾದವಿವಾದವು ನಡೆಯಿತು. ಮುಂಬೈ ನಗರದ ಪೋಲೀಸ ಕಾನೂನು ಮೊದಲನೇ ಸಲ ಓದುವದಾಗಿ, ಮುಂದಿನ ಕಾಯದೇ ಮಂಡಲದ ಸಭೆಯ ವರೆಗೆ ಮುಂದೂಡಲ್ಪಟ್ಟಿತು. “ಸ್ಟಾಂಪ ಆಕ್ಟ”ವು ಪಾಸಾಯಿತು. ಮುಂಬೈ ನಗರದಲ್ಲಿಯ ಸ್ಥಾವರ ಆಸ್ತಿಯ ಮಾರಾಟದ ಕರವನ್ನು ಹೆಚ್ಚಿಸುವ ಬಗ್ಗೆ ವಾದವಿವಾದಗಳು ಪ್ರಾರಂಭವಾದವು ಮತ್ತು ಮಸೂದೆಯು ಸ್ವರೂಪದಲ್ಲಿ ಮೊದಲನೇ ಸಲ ಓದಿ ಸ್ವೀಕರಿಸಲ್ಪಟ್ಟಿತು.

ಯಾವ ಯಾವ ವೇಳೆಗೆ ಮತ ತೆಗೆದುಕೊಳ್ಳುವದು ಬರುತ್ತಿತ್ತೋ ಆಗ್ಗೆ ನಮ್ಮ ಕರ್ನಾಟಕ ಪ್ರತಿನಿಧಿಗಳು (ಕರ್ಕಿಯವರನ್ನೂ ಜೋಗರವರನ್ನೂ ಬಿಟ್ಟು) ಸರಕಾರಕ್ಕೇನೇ ಮತ ಕೊಟ್ಟಿರುವರು! ಶ್ರೀ ಸರದೇಸಾಯರವರು ಎರಡು ದಿವಸ ಇಲ್ಲಿರದ್ದರಿಂದ ಅವರು ಯಾವ ಕಡೆಗೆ ಮತಕೊಡುತ್ತಿದ್ದರೂ ಅದು ನನಗೆ ತಿಳಿಯದು.

೧೨-೩-೩೬

ಇವತ್ತಿನ ದಿವಸ ಬರದೇ ಇದ್ದ ಕರ್ನಾಟಕ ಸಭಿಕರೆಂದರೆ ಕಂಬಳಿ ಮತ್ತು ಶ್ರೀ ಅಂಗಡಿಯವರಿಬ್ಬರೇ. ಶ್ರೀ ಸರದೇಸಾಯಿಯವರು ಬಂದಿರುತ್ತಾರೆ.

“ಸ್ಟಾಂಪ ಆಕ್ಟ” ಮೂರನೇ ಸಲ ಪಾಸಾಗಿ ಕಾಯದೇ ಮಾಡಲ್ಪಟ್ಟಿತು. ಮತಗಳನ್ನು ತೆಗೆದುಕೊಂಡಾಗ್ಗೆ ಶ್ರೀ. ಕರ್ಕಿ, ಜೋಗ ಸರದೇಸಾಯರವರು ಸರಕಾರದ ವಿರುದ್ಧ ಮತ ಕೊಟ್ಟಿರುತ್ತಾರೆ. ಕರ್ನಾಟಕದ ಬೇರೆ ಉಳಿದ ಮುಸಲ್ಮಾನ ಮತ್ತು ಬ್ರಾಹ್ಮಣೇತರ ಪ್ರತಿನಿಧಿಗಳು ಸರಕಾರದವರಿಗೇನೇ ಮತ ಕೊಟ್ಟಿರುತ್ತಾರೆ.

ಇದಾದನಂತರ ಸೂ[illegible]ದ ಮಸೂದೆಯು ಬಂದಾಗ್ಗೆ ಶ್ರೀ ಸರದೇಸಾಯರು ಮತನಾಡಿದರು. ಈ ಮಸೂದೆಯು ಮೊದಲನೇ ಸಲ ಓದಲ್ಪಟ್ಟು, ಅದು ಶಿಕ್ಷ ಮಂಡಲಕ್ಕೆ ಒಪ್ಪಿಸಲ್ಪಡಬೇಕೆಂದು ನಿರ್ಣಯಿಸಲ್ಪಟ್ಟಿತು. ಕಡೆಗೆ “ಕೋರ್ಟ ಫೀ ಆಕ್ಟ” ಮೊದನೇ ಸಲ ಓದಲ್ಪಟ್ಟು ೨ ನೇ ಸಲ ಪ್ರತಿಯೊಂದು ನಿಯಮದ ಮೇಲೆ ವಾದವಿವಾದವಾಗಿ ಪಾಸಾಗಿ ಕಾಯದೇ ಮಾಡಲ್ಪಟ್ಟಿತು.

೧೩-೩-೩೬.

ಇವತ್ತಿನ ಸಭೆಯು ೧ ಘಂಟೆಗೆ ಸರಿಯಾಗಿ ನಡೆಯಿತು. ಪ್ರಶ್ನೋತ್ತರಗಳಾದನಂತರ ಸೂಳೆಗಾರಿಕೆಯ ಮಸೂದೆಯ ಮೇಲೆ ಪುನಃ ವಾದವಿವಾದಗಳಾದವು. ಸೂಳೆಯರನ್ನು ಅಡ್ಡಮಾರ್ಗಕ್ಕೆ ಹಚ್ಚುವಂಥ ಹುಡುಗಿಯರನ್ನು ರಕ್ಷಿಸಲಿಕ್ಕೆ ಬಿಗಿಯಾದ ನಿಯಮಗಳನ್ನು ಸರಕಾರವು ಮಾಡಬೇಕೆಂದು ಮಾತಾಡಿದರು. ಆ ಮೇಲೆ ಮೊದಲನೇ ಸಲ ಓದಲ್ಪಟ್ಟು, ಶಿಕ್ಷಮಂಡಲದ ವಿಚಾರಕ್ಕೆ ಕೊಡಲ್ಪಟ್ಟಿತು.

ಪ್ರಶ್ನೆಗಳಿಗೆ ಸರಕಾರದಿಂದ ಬಂದ ಉತ್ತರಗಳು

ಅಂಗಡಿ ಉತ್ತರ ಭಾಗದ ಮಾಮಲೇದಾರ ಸಂಘದ ಶಿಷ್ಟಮಂಡಲಕ್ಕೆ ಗವರ್ನರ ಸಾಹೇಬರು ನವಂಬರದಲ್ಲಿ ಭೆಟ್ಟಿಕೊಟ್ಟರು. ಮಂಡಲದ ಮಾಮಲೇದಾರರ ಪಗಾರದ ಸಲುವಾಗಿ ಹೇಳಿದರು. ಆಬಗ್ಗೆ ಯೋಗ್ಯವಾದ ವಿಚಾರ ನಡೆದಿರುವದೆಂಬ ಉತ್ತರವು ಅವರಿಗೆ ಕೊಡಲ್ಪಟ್ಟಿತು. (೨) ಮಾಮಲೇದಾರಕಿಂತ ಮುನಸೀಫರ ಶಿಕ್ಷಣದ ಪದವಿಯು ಹೆಚ್ಚಿರುವದರಿಂದಲೂ, ಎಲ್. ಎಲ್. ಬಿ. ಶಿಕ್ಷಣವು ಮುಗಿದ ಮೇಲೆ ಮುನಶೀಫರು ಪುನ: ೩ ವರ್ಷಗಳ ವರೆಗೆ ವಕೀಲಿಯಲ್ಲಿ ಕಾಲವನ್ನು ಕಳೆಯಲೇ ಬೇಕಾದ್ದರಿಂದಲೂ, ಮಾಮಲೇದಾರರಕಿಂತ ಮುನಸೀಫರ ಪಗಾರವು ಹೆಚ್ಚಾಗಿದೆ.

ಕಕೇರ ನವಎಪ್ರ ದಂಡೆಯ ಪಳ್ಳಿಗಳಲ್ಲಿಯ ಸಾಗುವಳಿ ಭೂಮಿಗಳ ಹತ್ತಿರ ಇದ್ದ ಪಟ್ಟಿಗಳನ್ನು ರೈತರಿಗೆ ಬಹು ಜೋಕೆಯಿಂದ ಕೊಡಬೇಕೆಂಬ ಹುಕುಮನ್ನು ಈ ಸರಕಾರವು ಹೊರಡಿಸಿಯೇ ಇಲ್ಲ. (೨) ಹುಬ್ಬಳ್ಳಿಯಲ್ಲಿಯ ರೇಲವೇ ವರ್ಕಶಾಪನ್ನು ಮದ್ರಾಸಕ್ಕೆ ಒಯ್ಯುವದಿಲ್ಲ.

ಜೋಗ (೧) ನವಲೂರಿನ ಹೆಗ್ಗೇರಿ ಕೆರೆಯ ಬಗೆ ಚೌಕಶೀ ಮಾಡುವೆವು. (೨) ರತ್ನಾಗಿರಿಯ ಬಂದಿವಾಸದಲ್ಲಿದ್ದಾಗ್ಗೆ ಡಾ. ಕಬ್ಬೂರವರು ಬಂದಿವಾಸಿಗಳ ಸೌಕರ್ಯಗಳ ಬಗ್ಗೆ ಗವರ್ನರರಿಗೆ ಬರೆದ ಪತ್ರವು ಈ ಮಂಡಲದ ಮೋಜಿನ ಮೇಲಿದೆ. ಅದರಲ್ಲಿ ಕಾಣಿಸಿದಂತೆ ಎಲ್ಲವನ್ನೂ ನೆರವೇರಿಸುವದು ಅಶಕ್ಯ. ಅವರೂ ನಾಲ್ಕೂ ಧಾರ್ಮಿಕ ಪಂಥದವರಿಗೆ ಎರಡೆರಡು ಕೂಟಗಳು ಹೆಚ್ಚಾಗಿ ಕೊಡಲ್ಪಟ್ಟಿವೆ. ಹಾಗೂ ಬಂದಿವಾಸಿಗಳಿಗೆ ತಂಬಾಕು ಪೂರೈಸಲ್ಪಟ್ಟಿದೆ.

ಡಾ. ಕಬ್ಬೂರವರು ಕೇಳಿದ ಸಂಕ್ಷಿಪ್ತ ಸಂಗತಿಗಳು:—

(೧) ಕ್ರಿಶ್ಚನ್ನರಿಗೆ ತಮ್ಮ ಧಾರ್ಮಿಕ ಪ್ರಾರ್ಥನೆಗಾಗಿ ಒಂದೆಡೆಗೆ ಸೇರಲು ಅಪ್ಪಣೆಯಿದ್ದಂತೆ, ಹಿಂದೂ ಜನರಿಗೂ ಹರಿಕೀರ್ತನೆಗಳಿಗಾಗಿ ಅಪ್ಪಣೆ ಇರಬೇಕು. (೨) ಈಗಿದ್ದ ನಾಲ್ಕು ಕೂಟಗಳೆಂದರೆ ಕ್ರಿಶ್ಚನ್‌ಧರ್ಮದವು. ಬಿನ್-ಕ್ರಿಶ್ಚನ್ನರೇ ಹೆಚ್ಚಾಗಿ ತುರುಂಗದಲ್ಲಿರುವದರಿಂದ ಎಲ್ಲ ಧರ್ಮದವರಿಗೂ ಕೂಟಗಳನ್ನು ಕೊಡಬೇಕು (೩) ಹಿಂದೂ ಜನರಿಗೆ ಏಕಾದಶಿ, ಶಿವರಾತ್ರಿ, ಗೋಕುಲಾಷ್ಟಮಿಗಳಲ್ಲಿ ಉಪವಾಸ ಮಾಡಲು ಎಲ್ಲ ಸೌಕರ್ಯಗಳನ್ನೂ ಒದಗಿಸಿ ಕೊಡಬೇಕು. ಮುಸಲ್ಮಾನರಂತೆ ಸಂಜೆಯವರೆಗೆ ಉಪವಾಸವಿದ್ದು ಆ ಮೇಲೆ ಊಟಮಾಡಿರೆಂದರೆ, ಹಿಂದೂಗಳೂ ಮುಸಲ್ಮಾನರಾಗಬೇಕೆಂದು ಹೇಳಿದ ಹಾಗೆಯೇ ಸರಿ. (೪) ವೆಚ್ಚವಾಗಲೀ ನಿಯಮೋಲ್ಲಂಘನವಾಗಲೀ ಆಗದಿರುವದರಿಂದ, ಹಿಂದೂ ಜನರಿಗೆ ತಮ್ಮ ತಮ್ಮ ಧರ್ಮದ ಪ್ರಕಾರ ಹಣೆಗೆ ತಿಲಕವನ್ನು ಹಚ್ಚಲು ಅವಕಾಶವಿರಬೇಕು (೫) ಬಂದಿಗಳನ್ನೆಲ್ಲ ಒಂದೆಡೆಗೆ ಸೇರಿಸಿ, ಅವರ ದೇಹವನ್ನು ಪರೀಕ್ಷಿಸುವದಕ್ಕೋಸ್ಕರ ಈಗಿನಂತೆ, ಸಂಪೂರ್ಣವಾಗಿ ಅವರನ್ನು ಬತ್ತಲೇ ಮಾಡುವ ದುಷ್ಟ, ಹಾಗೂ ನಾಚಿಕೆ ಬರುವ ಪದ್ಧತಿಯನ್ನು ನಿಲ್ಲಿಸಬೇಕು. (೬) ತಂಬಾಕನ್ನು ಸರಕಾರದವರು ಕೊಡದಿದ್ದರೂ ಪ್ರತಿಯೊಬ್ಬನು ಸೇದೇ ಸೇದುವನಾದ್ದರಿಂದ, ಅದನ್ನು ದೊರಕಿಸಲು, ಅವನು ಸುಳ್ಳು ಹೇಳುವದು, ಅನ್ಯರನ್ನು ಅಂಜಿಸುವದು, ಹುಡುಗರ ಸಂಗಡ ಅನೀತಿಕರವಾದ ಸಂಬಂಧವನ್ನಿಡುವದು ಇತ್ಯಾದಿ ಮಾಡಬೇಕಾಗುವದು. ಇದಕ್ಕಿಂತ ಪ್ರತಿಯೊಬ್ಬನಿಗೆ ೨ ದ್ರಾಮ ತಂಬಾಕ ಕೊಡುವದು ಒಳಿತು. ಇದರ ವೆಚ್ಚವು ತಲೆಗೆ ೪ ಆಣೆಗಿಂತ ಹೆಚ್ಚಾಗದು.

ಕಂಬಳಿ ನವಲಗುಂದದಲ್ಲಿ ಕಳೆದ ೧೦ ವರ್ಷಗಳ ಮಳೆಯ ಪ್ರಮಾಣವು:— ೧೯೧೬= ೩೫ ಇಂಚು; '೧೭=೪೦; '೧೮=೩೪; '೧೯=೧೬; '೨೦=೩೨; '೨೧=೨೯; '೨೨=೧೯; '೨೩=೧೮; '೨೪=೨೦: '೨೫=೧೭ ಇಂಚುಗಳು ಬಾಂದುಗಳನ್ನು ಹಾಕಲು ಸರಕಾರದಿಂದ ವಿಶಿಷ್ಟ ಪದ್ಧತಿಯು ಯಾವುದೂ ಅನುಸರಿಸಲ್ಪಟ್ಟಿಲ್ಲ. ಜನರು ತಾವೇ ಬಾಂದು ಹಾಕಿದ್ದಾರೆ. ಬಾಂದುಗಳ ಸಲುವಾಗಿ ನೇಮಿಸಲ್ಪಟ್ಟ ಆಮಲದಾರನು ೧೯೨೩ ರಿಂದ ಕೆಲಸ ಮಾಡುತ್ತಲಿದ್ದಾನೆ. ಅಥಣಿ, ಗದಗ, ಬಾಗಲಕೋಟೆ, ಸಿಂದಗಿಗಳಲ್ಲಿ ಕೆಲಸ ಮಾಡಿರುವನು ಎಲ್ಲ ಕಡೆಗೂ ಅವನನ್ನು ಬೇಡುತ್ತಲಿದ್ದಾರೆ. ಅನುಕೂಲವಾದ ಕೂಡಲೇ ನವಲಗುಂದಕ್ಕೂ ಅವನನ್ನು ಕಳಿಸುವೆವು. ೧೯೨೨ ರಿಂದ ಒಕ್ಕಲತನದ ಖಾತೆಯವರು ಈ ಬಾಂದಿನ ಬಗ್ಗೆ ಪ್ರಯೋಗವನ್ನು ನಡಿಸಿದ್ದಾರೆ. (೨) ಬಂಕಾಪೂರದಲ್ಲಿ ಉತ್ಪಾದನಕ್ಕಾಗಿ ಸಾಕಲ್ಪಟ್ಟ ಹೋರಿಗಳ ಬಗ್ಗೆ ಆದ ವೆಚ್ಚವು ೧೯೨೫ರಲ್ಲಿ ೧೫ ಸಾವಿರ ರೂ. ಈಗ್ಗೆ ೩ ಕಳ್ಸ ಗೂಳಿಗಳೂ ೧೭ ಹೋರಿಗಳೂ, ೧೩ ಹೋರಿಕರಗಳೂ, ಇವೆ. ಮುಂದಿನ ವರ್ಷದಲ್ಲಿ ೨೫ ಕಟ್ಟು ಗೂಳಿಗಳನ್ನು ಕೂಡಿಸುವೆವು. ಆಮೇಲೆ ಪ್ರತಿವರ್ಷವೂ ೫ ಹೊಸದಾಗಿ ಕಲೆಹಾಕಿ, ೪೦ ರ ವರೆಗೆ ಆ ಸಂಖ್ಯೆಯು ಒಯ್ಯಲ್ಪಡುವದು.

ಸರದೇಸಾಯಿ ವಿಜಾಪೂರದಿಂದ ಧಾರವಾಡಕ್ಕೆ ಹೋಗುವ ರೇಲ್ವೇ ಪ್ರಯಾಣಿಕರು ವಿಶೇಷತ: ವಿದ್ಯಾರ್ಥಿಗಳು, ಗದಗ ಹಾಗೂ ಹುಬ್ಬಳ್ಳಿಗಳಲ್ಲಿ ಬದಲು ಮಾಡಬೇಕಾಗುವದಿಲ್ಲ; ಯಾಕೆಂದರೆ ಗದಗಿನಿಂದ ಧಾರವಾಡದ ವರೆಗೆ ಗಾಡಿಗಳಿವೆ. ವಿಜಾಪೂರದಿಂದ ಧಾರವಾಡಕ್ಕೆ ದಿನಾಲು ಪ್ರಯಾಣಮಾಡುವ ಜನರ ಸಂಖ್ಯೆಯು ಸಾಕಷ್ಟಿಲ್ಲವಾದ್ದರಿಂದ ಸ್ವತಂತ್ರ ಡಬ್ಬಿಯನ್ನು ಹಚ್ಚುವದೂ, ಸ್ವತಂತ್ರವಾದ ಗಾಡಿಯನ್ನೇ ಓಡಿಸುವದೂ ಲಾಭಕರವಾದದ್ದಲ್ಲವೆಂದು ರೇಲವೇ ಕಂಪನಿಯವರು ಹೇಳುತ್ತಾರೆ. (೨) ಪ್ರಾಥಮಿಕ ಶಾಲಾ ಶಿಕ್ಷಕರ ಪಗಾರದ ಬಗ್ಗೆ ನೇಮಿಸಿದ ಕಮೀಟಿಯ ಕೆಲಸವು ತೀರಿದೆ. ಅವರ ರಿಪೋರ್ಟನ್ನು ಸರಕಾರವು ವಿಚಾರಿಸುತ್ತಲಿದೆ. ಅದು ಯಾವಾಗ್ಗೆ ಪ್ರಕಟವಾಗುವದೆನ್ನುವದನ್ನು ಹೇಳಲು ಸಾಧ್ಯವಿಲ್ಲ. (೩) ವಿಜಾಪೂರ ಜಿಲ್ಲೆಯಲ್ಲಿ ಪೋಲೀಸರಿಂದ ಹಾಕಲ್ಪಟ್ಟ ಮೋಟಾರ ಅಪಘಾತಗಳ ಕಟ್ಲೆಗಳೆಲ್ಲ ಅವರ ವಿರುದ್ಧವಾಗಿವೆನ್ನುವದು ಸುಳ್ಳು.

ಇತರರು

ದೇವ ೧೯೨೪ ನೇ ಇಸ್ವಿಯಿಂದ ಔದ್ಯೋಗಿಕ ಶಿಕ್ಷಣದ ಬೇಡಿಕೆಯನ್ನು ಸರಕಾರದವರು ಮುಂದೆ ಹಾಕುತ್ತಿರುವರು. ಹಣದ ಕೊರತೆಯ ಸಲುವಾಗಿ ಈ ಬಗ್ಗೆ ಯಾವ ಯೋಚನೆಯಾಗುವದೂ ಅನಿಶ್ಚಿತ. ೧೯೨೧ ನೇ ಇಸ್ವಿಯ ಔದ್ಯೋಗಿಕ ಶಿಕ್ಷಣ ಕಮೀಟಿಯ ರಿಪೋರ್ಟಿನ ವಿಚಾರಣೆಯನ್ನು ಯಾವಾಗ್ಗೆ ಮಾಡುವೆವೆಂದು ಹೇಳಲು ಈಗ್ಗೆ ಬರುವಂತಿಲ್ಲ

(೨) ಪ್ರಾಥಮಿಕ ಶಾಲಾಶಿಕ್ಷಕರ ಪಗಾರದ ಸಾಕೇ— ಪರಾಂಜಪೇ ಯೋಜನೆಯ ಬಗ್ಗೆ ೧೫೨ ಮುನಸಿಪಾಲ್ಟಿಗಳ ಅಭಿಪ್ರಾಯ ಕೇಳಲು, ೫೦ ಅನುಕೂಲವಾಗಿ, ೯೪ ವಿರುದ್ಧವಾಗಿ, ೫ ಸಧ್ಯದಲ್ಲಿ ಬೇಡವೆಂದು ಉತ್ತರ ದೊರೆತಿವೆ ಮೂವರಿಂದ ಉತ್ತರವಿಲ್ಲ ೨೬ ಲೋಕಲ್ ಬೋರ್ಡಗಳಲ್ಲಿ, ೮ ಅನುಕೂಲ, ೧೭ ಪ್ರತಿಕೂಲ, ೨ ಸಧ್ಯದಲ್ಲಿ ಅವಶ್ಯವಿಲ್ಲೆಂದು ತಿಳಿಸಿದ್ದಾರೆ.

ಗುಂಜಾಳ ಆಯುರ್ವೇದ ಹಾಗೂ ಯುನಾನಿ ಔಷಧಗಳು ಪರೀಕ್ಷೆ ಪ್ರಯೋಗಶಾಲೆಯ ಹೊರತಾಗಿ ಎಲ್ಲಿಯೂ ಸರಕಾರದಿಂದ ಪರೀಕ್ಷಿಸಲ್ಪಟ್ಟಿಲ್ಲ. ರಕ್ತಾತಿಸಾರ, ಬಹುಮೂತ್ರ ಮತ್ತು ಕ್ರಿಮಿಗಳ ಬಗ್ಗೆ ಕೆಲವು ಔಷಧಗಳ ಶೋಧ ನಡೆದಿದೆ (೨) ಕಳೆದ ೫ ವರ್ಷಗಳಲ್ಲಿ ಹಾಯಕೋರ್ಟಿನಿಂದ ಸನದು ಕಾಯಂ ಅಥವಾ ತಾತ್ಪೂರ್ತಿಕ ರದ್ದು ಮಾಡಲ್ಪಟ್ಟವಕೀಲರ ಹೆಸರು ಹೀಗಿವೆ— (೧) ಕೌಜಲಗೀ ಹಣಮಂತರಾವ ಹಾಗೂ ತಿಳಗೂಳ ವಿಜಾಪೂರ ಜಿಲ್ಲೆ (೨) ಚೌಕರ ಹಾಗೂ ಫಿರೋದಿಯಾ, ಅಹಮ್ಮದನಗರ (೩) ಕಬ್ಬೂರ, ಮುದವಡೇಕರ, ಗುತ್ತಲ, ಹಾಗೂ ಜೋಶೀ ಧಾರವಾಡ ಜಿಲ್ಲೆ (೪) ದೇಶ ಪಂಡರ ಅಹಮ್ಮದಾಬಾದ (೫) ದಾಸ್ತಾನೆ ಖಾನದೇಶ (ಈ ೧೦ ಜನರಲ್ಲಿ ೬ ಜನರು ಕನ್ನಡಿಗರೆನ್ನುವದು ಅಭಿಮಾನದ ಮಾತು —ಸಂ. ಕ.)

ಸೋಮನ ಅಹ್ಮದನಗರದ ಮುನಸಿಪಾಲ್ಟಿಯವರು ಕಲೆಕ್ಟರರ ಅನುಮತಿ ಪಡೆಯುಕೊಂಡು, ತಮ್ಮಲ್ಲಿಯ "ಬೇವಾರಸಾ" ಹೆಣಗಳನ್ನು ಆವುಗಳ ಆಪ್ತರೂ, ಜಾತಿಯವರೂ ಆರಂಭ ಪಡದಿದ್ದರೆ, ಅಲ್ಲಿಯ ಆಯುರ್ವೇದ ಶಾಲೆಯವರು ತಮ್ಮ ವಿದ್ಯಾರ್ಥಿಗಳ ಶಿಕ್ಷಣಕ್ಕಾಗಿ ಪಡೆಯಬಹುದೆಂದು ಅಪ್ಪಣೆ ಕೊಟ್ಟಿದ್ದಾರೆ. ಅದೇ ಪ್ರಕಾರವಾಗಿ ಉಳಿದ ಸ್ಥಾನಗಳಲ್ಲಿಯೂ ಆಯುರ್ವೇದ ಶಾಲೆಗಳಿಗೆ ಈ ಸೌಕರ್ಯಗಳನ್ನು ಕೊಡಬೇಕೋ ಬೇಡವೆಂಬದನ್ನು ಸರಕಾರದವರು ವಿಚಾ[illegible]

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡೆಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತಿ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

ಜಮಖಂಡಿಕರ ವಾಡೇ ೪೧೫ ಶನಿವಾರ ಪುಣೇಶಹರ

ಕಣ್ಣಿನ ಔಷಧ

ಜೂವು, ನೋತಿಬಿಂದು, ದೃಷ್ಟಿ ಮಾಂದ್ಯ, ಕಂಜುಜಿಟ್ಟು, ಕಣ್ಣು ಬರೋಣ, ಕೆಂಪಾಗೋಣ, ಮತ್ತು ಗುಡ್ಡ ರೆಪ್ಪೆ ಬಕ್ಕಿಗಳ ವಿಕಾರಗಳ ಇಂತಹ ಕಣ್ಣಿನ ಎಲ್ಲ ಬೇನೆ ಗಳಿಗೆ ಈ ಔಷಧವು ಸಂಜೀವಿನಿಯೇ ಶಸ್ತ್ರಕ್ರಿಯೆಗಿಂತಲೂ ಮೇಲು! ರಾ. ಬ. ಪೆಂಡಸೆ- ಡಿ. ಡಿ. ಕಲೆಕ್ಟರ ಅನ್ನುತ್ತಾರೆ "ಅನೇಕರಿಗೆ ಈ ಔಷಧ ಕೊಟ್ಟಿಗುಣದ ಬಗ್ಗೆ ಖಾತ್ರಿಯಾಯಿತು ಮಗಳ ಕಣ್ಣುಗಳು ನೆಟ್ಟಗಾದವು" ಎಂಥ ರೋಗಕ್ಕೂ ಎರಡೇ ಮಾತ್ರೆ. ಮಾತ್ರೆಯೊಂದಕ್ಕೆ ರು ೧॥ ಟ ಪ ಬೇರೆ.

ಸೂಚನೆ:—ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಾ. ವಿ. ಕರಮರಕರ ೫೩೦ ಶನಿವಾರ ಪುಣೆಶಹರ



Sathe's British Sports
Agency Sadashive
Poona City.
Dealers in Tennis, Football, Cricket Hockey adminton & other Games.
Send for our Catalogue.

ಮೊರದಾಲ ಬ್ರ್ಯಾಕ ಟೂಥ್ ಪಾವಡರ

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ, ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠ ಸಾಧುವಿದೆಯೆಂದೇ. ಒಂದೇ ಸಲ ಉಪಯೋಗಿಸಿ, ಖಾತ್ರಿಪಡಿಸಿಕೊಳ್ಳಿ. ಬಾಟ್ಲಿ- ೫ ಆಣೆ ಟಿ. ಖ. ಬೇರೆ. ಪ್ರತ್ಯೇಕ ಸ್ಥಳದಲ್ಲಿ ಸಿಗುವುವು ಬೇಕು.

—ಮೊರದಾಲ ಬ್ರ್ಯಾಂಡ ಕೊ.

(ಸದಾಶಿವಪೇಟ) ಪುಣೇಶಹರ

ಶ್ರೀವೃದತನ, ತಿವಿತೊಡೆಯುವದು, ಹೊಟ್ಟೆಯುರಿ, ಹಬ್ಬು ಹಾಕುವದು, ಕೀವು ರಕ್ತ ಬರುವದು, ಸಪ್ಪಳ ಆಗುವದು, ಕಡಿಮೆ ಕೇಳಿಸುವದು, ತಿಂಡಿ, ಇತ್ಯಾದಿಗಳ ಮೇಲೆ ಉಪಯೋಗ

ಟಿ. ಖ. ಸಹ ೧ ಬಾಟ್ಲಿಗೆ ೩ = —Dr. W. N. Pilai. Poona city

ಹೊಟ್ಟೆನೋವು ಹೊಟ್ಟೆನೋವು

ಪೋಟದುಖೀ

ಮೊರಕಡೆಗೆ ಸಾಫ ಆಗದಿರುವದು, ಹೊಟ್ಟೆಯಲ್ಲಿ ಗುಡ್ರಿಸ್ನು ವದು, ಅಜೀರ್ಣ ಆಗುವದು ಛೋಳಿಬರುವದು, ಕಣ್ಣು ಕತ್ತಲೆ ಗವಿಸುವದು, ಕರಳಿನಲ್ಲಿ ನೀರು ಹಿಡಿಯುವದು, ವಾಯುವಿನಿಂದ ಮತ್ತು ನಾಭಿಯಿಂದ ಹೊಟ್ಟೆಯಲ್ಲಿ ಗ್ಯಾಸ(Gas) ಆಗಿ ಹೊಟ್ಟೆಶೂಲಿ, ಹೊಟ್ಟೆಯುಬ್ಬುವದು, ಇತ್ಯಾದಿ ಹೊಟ್ಟೆಯ ಸಂಬಂಧವಾದ ಎಲ್ಲಬಗೆಯ ನೋವುಗಳೇ ವಿಕಾರಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣ ಹೊಂದುವವು ಇದಲ್ಲದೆ ಹೊಟ್ಟೆಯೊಳಗಿನ ಎಲ್ಲ ವಿಕಾರಗಳಿಗೂ

ಸೋಹೋನಿ ಇವರ ಪೋಟದುಖೀ

ಯು ಖಾತ್ರಿಯ ಮತ್ತು ರಾಮಬಾಣ ಔಷಧವಿದೆ. ಬಾಟ್ಲಿಯೊಂದಕ್ಕೆ ರೂ ೧, ಟಪಾಲ ಖರ್ಚ ಬೇರೆ.

ಪ್ರಮಾಣ- ಪ್ರತಿಯೊಂದು ಸಲ ೨ ಗುಳಿಗೆ ಮಧ್ಯಾಹ್ನದ ಮತ್ತು ರಾತ್ರಿಯ ಊಟವಾದಮೇಲೆ ಒಂದು ಗುಟಕ ನೀರಿನಿಂದ ಕೊಳ್ಳಬೇಕು.

ವಿಶೇಷ ಸೂಚನೆ ಪತ್ರ ವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ಮಿಳುವ— ಪಿ. ಎಸ್. ಸೋಹೋನಿ ಬೇಲ ಬಾಗದ ಹತ್ತರ ೧೩೬ ಬುಧವಾರ ಪೇಟ ಪುಣೆ ಶಹರ

ಪೆಂಡ್ಯುಲಮ್.

ಅಸಲ ಗ್ಯಾರಂಟೀಡ್, ಸ್ವಿಸ್ ಮೇಡ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ
ಸಹಿತ; ಟಿ. ಖ. ಪುಕ್ಕಟೆ
ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಖಾಳಜಿಯಿಂದ ತಪಾಸಿಸಿ, ಮತ್ತು ಟಾಯಿಮ ಹಚ್ಚಿ ಕಳಿಸಲಾಗುವದು

ಯಿಜಿನ ವಾಚ ಕಂ. (India) ಮುಂಬೈ ನಂ. ೪

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕ ನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆವಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು...............	ನೂರಕ್ಕೆ	ವರ್ಷಕ್ಕೆ	2½
ಸೇವ್ಹಿಂಗ್ಸ ಬ್ಯಾಂಕ ಠೇವು	”	”	4½
ಮುದ್ದತೀ ಠೇವು ೬ ತಿಂಗಳಿಗೆ	”	”	6
” ೧೨ ತಿಂಗಳಿಗೆ	”	”	7

ಪಾರಲೋನ ಪಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರು ನಿತ್ಯಂ ನಿಜದೇಶಸೇವನಂ।

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನೂತನವಾಗಿ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್‌ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧,೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೭೨೦ ಮಿ. ವಿಠ್ಠಲ ಚಿಮ್ನಾಜಿ ಸೇಟ ಕಲಾಸ್ ಅಲಿಬಾಗ ಬಾಂಬೆ,

(೨) ಬಾಂಡ ನಂ ೧೨೭೦೭ ಮಿ|| ರಂಗಪ್ಪಾ ತ್ಯಾವಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೭ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರೂಸಾಪೇಟ ಬಳ್ಳಾರಿ.

(೫) ಬಾಂಡ ನಂ. ೫೯೧೦ ಮಿ|| ರಾಮಚಂದ್ರ ವಾಮನ ಕಾಂದೇಕರ C/o ಕಾಟುಸ್ಕರ ವಾಡಾ ವ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೯೦ ಮಿ|| ಆರ್. ಎಚ್. ನಾಟಿಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ

ಚೀಫಏಜಂಟ (ಮುಂಬಯಿ ಇಲಾಖಾ)

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಬಹುದು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು. !

ವಿಳಾಸ:— “ಗೆಳೆಯರ ಗುಂಪು,, ಹಲಸಂಗಿ (ಪೋ.) ಜಿಲ್ಲಾ ವಿಜಾಪೂರ.

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ವಿನ್ನಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಪಡೆದು, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರಾಚಾರ ಮುದ್ಗಲಾವ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ವಿಜಾಪೂರದ ಕರ್ನಾಟಕ ಏಕೀಕರಣ ಶಾಖಾಸಭೆಯವರು ಈ ವರ್ಷದಲ್ಲಿ ಮಾಡಬೇಕೆಂದಿದ್ದ ಕಾರ್ಯಕ್ರಮವನ್ನು ಕಾರ್ಯದರ್ಶಿಗಳು ಕೂಡಲೇ ಕೃತಿಯಲ್ಲಿ ತರಬೇಕು. ನಿರ್ಣಯಗಳಾಗಹತ್ತಿ ವೇಳೆಯು ಬಹಳಾಗಿ ಹೋಗಹತ್ತಿದೆ. ಸ್ಥಾನಿಕ ಸಂಸ್ಥೆಗಳ ಅಧಿಕಾರಿಗಳನ್ನೆಲ್ಲ ಸಮಕ್ಷಮ ಕಾಣದ ಹೊರತಾಗಿ ಅವರು ಏಕೀಕರಣದ ಬಗ್ಗೆ ಠರಾವುಗಳನ್ನು ಮಾಡರು. ಅವರಿಗೆ ಮೊದಲು ಈ ಕಲ್ಪನೆಯನ್ನು ತಂದು ಕೊಡಬೇಕು. ಅದೇ ಪ್ರಕಾರವಾಗಿ ರೂಪಾಯಿಗಳನ್ನು ಕೂಡಿಸುವದಕ್ಕಾಗಲೀ, ಸಭಾಸದರನ್ನು ಹೆಚ್ಚಿಸುವದಕ್ಕಾಗಲೀ ಏಕೀಕರಣದ ಉದ್ದೇಶವನ್ನು ಹಳ್ಳಿಹಳ್ಳಿಗಳಲ್ಲಿ ಅರುಹುವದಕ್ಕಾಗಲೀ, ಈ ಜಿಲ್ಲೆಯ ಎಲ್ಲ ತಾಲೂಕ ಹಾಗೂ ದೊಡ್ಡ ಹಳ್ಳಿಗಳಲ್ಲಿ ಪ್ರವಾಸ ಮಾಡಲೇಬೇಕು. ಅದ್ದರಿಂದ ಈ ಬಗ್ಗೆ ತ್ವರೆಯಿಂದ ತಕ್ಕ ಏರ್ಪಾಡು ಮಾಡಬೇಕಾಗಿ ಸೂಚನೆಯಿದೆ. ಸೊಲ್ಲಾಪೂರದಲ್ಲಿಯ ಜನರಿಗಾಗಿ ಚಿಕ್ಕ ಪುಸ್ತಕಗಳನ್ನು ಬೇಗನೇ ಬರೆಯಿಸಿ, ಪ್ರಸಿದ್ಧಿಸಬೇಕೆಂಬ ಠರಾವಿಗೆ ಬೇಗನೇ ಮೂರ್ತಸ್ವರೂಪ ಕೊಡಬೇಕು.

ವಿಜಾಪೂರ ಜಿಲ್ಲಾ ಕಲೆಕ್ಟರ ಸಾಹೇಬರ ತಿಪ್ಪದ ಮುಕ್ಕಾಂ—೧೪–೧೮ ಮಾರ್ಚ ಬಬಲೇಶ್ವರ; ೧೯–೨೦ ಕೊಲಗೇರಿ; ೨೧ ತಾ॥ ಮಧ್ಯಾಹ್ನ ೪ ಗಂಟೆಯಿಂದ ಹೊರಟು ಸಾಯಂಕಾಲಕ್ಕೆ ವಿಜಾಪೂರ.

ವರ್ತಮಾನಸಾರ.

ಇಹವೃತ್ತ

ಹಿಂಬ —ಮುಸಲ್ಮಾನರ ವಂಗಿಯ ಪ್ರನರ್ವಿಚಾರಣೆಯು ತೀರ್ಪು ಕಳೆದವಾರದಲ್ಲಿ ಕೊಡಲ್ಪಟ್ಟದು. ಮೊದಲಾಗಿದ್ದ ಕೌಶಶಿಯಲ್ಲಿ ವಿಧಿಸಿದಂತೆಯೇ ದಂಡ ಶಿಕ್ಷೆಗಳು ವಿಧಿಸಲ್ಪಟ್ಟವು. ಪುನಃ ಪೇಲ್ವಿಚಾರಣೆಗಾಗಿ ಅರ್ಜಿ ಮಾಡಲ್ಪಡುವದಾಗಿ ಕೇಳುತ್ತೇವೆ.

ವಾಮನರಾಯರ ಸಾಲೆಯಿಂದಾದ ೪೬೦ ರೂ ಉತ್ಪನ್ನದಲ್ಲಿ, ೨೦೦ ರೂ. ಇಂಗ್ಲೀಷ, ೧೬೫ ರೂ. ಕನ್ನಡ, ೬೫ ರೂ ಮರಾಟಿ ಪುಸ್ತಕಗಳನ್ನು ಕೊಳ್ಳುವದಕ್ಕೂ ೧೦ ರೂ. ಜಿಲ್ಲರ ವೆಚ್ಚಕ್ಕೂ ಉಪಯೋಗ ಮಾಡಬೇಕಾಗಿ “ಹಾರ್ಡಿಂಜ ಲಾಯಬ್ರರಿಯವರು ಕಡೆಗೆ ನಿರ್ಣಯಿಸಿದರು! ಅಂತೂ ಬಂಪಾವರ್ತಿ ಕರ್ನಾಟಕದಲ್ಲಿದ್ದು, ಮರಾಟಿಗಿಂತ ಕನ್ನಡ ಪುಸ್ತಕಗಳನ್ನು ಹೆಚ್ಚಾಗಿ ತರಿಸಬೇಕೆಂದು ಬಂಬು ವಾಚನಾಲಯದವರಾದರೂ ನಿಶ್ಚಯಿಸಿದರು! ತನ್ನ ಮನೆಯಲ್ಲಿ ತನಗೆ ಸ್ಥಾನದೊರೆಯಬೇಕಾದರೆ ಕನ್ನಡ ನುಡಿಯು ಹೋರಾಡಬೇಕಾಗುತ್ತದೆ. ಎಂತಹ ದಿನಗಳಿವು! ತಾಲೂಕ ಸ್ಥಳದ ಕಿತ್ತೆಯನ್ನು ವಿಜಾಪೂರ ಸಾರ್ವಜನಿಕ ವಾಚನಾಲಯದವರು ತೀರುವರೋ? ಅಥವಾ ಕನ್ನಡ ಪುಸ್ತಕಗಳನ್ನು ತರಿಸದೇ ಮರಾಟಿ ಪುಸ್ತಕಗಳನ್ನೇ ತರಿಸುತ್ತ ಹೋಗುವರೊ?

ರಂಗಭೂಮಿ.

ತಿಳಿಗನ್ನಡದ] [ಮಾಸಿಕಪತ್ರಿ.

ಇಡೀ ಕರ್ನಾಟಕದಲ್ಲಿ ಇಂತಹ ಸರ್ವಾಂಗಸುಂದರ ಮಾಸಪತ್ರಿಕೆಯು ಹುಟ್ಟಿರಲಿಲ್ಲ. ಇದರಲ್ಲಿ ಹಿಂದುಸ್ಥಾನದ ಹಲವು ಪ್ರಸಿದ್ಧ ವಿದ್ವಾಂಸರ ಅಭಿನಯ ಪಟುಗಳು ಲೇಖಗಳು, ಅಭಿನಯ ಚಿತ್ರಗಳೂ, ಬೋಧಪ್ರದವೂ ಮನೋಹರವೂ ಆದ ಚಿಕ್ಕ ಚಿಕ್ಕ ನಾಟಕಗಳೂ ಹಳ್ಳಿಯ ಜನರಿಗೆ ಸಹ ತಿಳಿಯುವಂತಹ ಸುಲಭ ಶೈಲಿಯಲ್ಲಿ ಪ್ರಸಿದ್ಧವಾಗುವವು. ಇದನ್ನು ತರಿಸಿ ನೋಡಿದರೆ ಇದರ ಯೋಗ್ಯತೆಯನ್ನು ತಿಳಿಯಬಹುದು. ವಾರ್ಷಿಕ ವರ್ಗಣೆ ಈಗಲೇ ವರ್ಗಣಿದಾರರಾಗುವವರಿಗೆ) ೩ ರೂ. ಮಾತ್ರ. ಮಾದರಿ ಸಂಚಿಕೆಗೆ ೦—೫—೬ ಟಿಕೀಟುಗಳನ್ನು ಕಳುಹಿಸಿರಿ. ಜಾಹೀರಾತಿನಬಗ್ಗೆ ಬರೆದುಕೊಳ್ಳಿರಿ.

ಇದೇ ಭಾದ್ರಪದ ಚೌತಿಯಿಂದ ಪ್ರಾರಂಭ.

ವ್ಯವಸ್ಥಾಪಕ, “ ರಂಗಭೂಮಿ ” ಆಫೀಸ
ಬಸವನಗುಡಿ, ಬೆಂಗಳೂರು ಸಿಟಿ.

“ಕನ್ನಡಿಗ”ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೧-೦

ಬಿಡಿ ಸಂಚಿಕೆಗೆ ೧ ಆ. ಹಿಂದಿನಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡೆಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಕರ್ಮವೀರ.

ಕರ್ನಾಟಕದಲ್ಲಿಯ ಎಲ್ಲಕ್ಕೂ ಶ್ರೇಷ್ಠವಾದ ಪತ್ರಿಕೆಂದರೆ ಇದು. ಕರ್ಮವೀರನೆಂದರೆ ಸ್ವಾರ್ಥತ್ಯಾಗದ ಮೂರ್ತಿಯು. ವಾ. ಚ. ರೂ. ೩—೮—೦

ವ್ಯವಸ್ಥಾಪಕ ಕರ್ಮವೀರ.

ಆಯುರ್ವೇದ.

ತಿಳಿಗನ್ನಡ ವೈದ್ಯಕ ಸಂಬಂಧವಾದ ಮಾಸಪತ್ರಿಕೆ. ಈ ಪತ್ರಿಕೆಯಲ್ಲಿ ಮಾಧವನಿದಾನ, ಶಾರ್ಙ್ಗಧರವೇ ಮೊದಲಾದ ಪ್ರಾಚೀನ ವೈದ್ಯ ಗ್ರಂಥಗಳು ಸಂಸ್ಕೃತದಿಂದ ಭಾಷಾಂತರಿಸಿ ಕೆಲಕೆಲವು ಪುಟಗಳು ಪ್ರಕಟಿಸಲ್ಪಡುವುದಲ್ಲದೆ ಅನೇಕ ಉಪಯುಕ್ತ ವೈದ್ಯಕ ಸಂಬಂಧ ಲೇಖನಗಳೂ ಪ್ರಕಟಿಸಲ್ಪಡುವವು. ಕೇವಲ ವೈದ್ಯರಿಗಲ್ಲದೆ ಪ್ರತಿಯೊಬ್ಬರಿಗೂ ಸಂಗ್ರಹಿಸಲವಶ್ಯಕವಾದದ್ದು.

ವಾರ್ಷಿಕ ಚಂದಾ ೩-೮-೦(ಅಂಚೇವೆಚ್ಚಸೇರಿ.)

ವಿಳಾಸ—“ ಆಯುರ್ವೇದ ” ಕಾರ್ಯಾಲಯ
ತೀರ್ಥಹಳ್ಳಿ (ಮೈಸೂರ ಸಂಸ್ಥಾನ).

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೆ ಬಾ ಧುಗಳು

C/o ಕನ್ನಡಿಗನ ಕಾರ್ಯಾಲಯ

[redacted]

[redacted]

[redacted]

FLASH NO-1



[redacted]



[redacted]

VII

KANNADIGA

WEEKLY

YEAR. 2. Nos. 1-48.

FROM 26-3-1926

TO 18-3-1927.

ಕನ್ನಡಿಗ

ವಾರಪತ್ರಿಕೆ

ವರ್ಷ. 2. ಸಂಚಿಕೆ. 1-48.

26-3-1926 ರಿಂದ

18-3-1927 ಗೆ.

ಸ. ಬಂದಾ ೧-೧೩- ಪತ್ರ

೨. ೧೯೪೭

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು [illegible])

[illegible] ॥ — [illegible]

ಸಂಪಾದಕರು — ಮಂಗಳವೇಢೇ [illegible]ರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಅಧಿಕ ಜ್ಯೇಷ್ಠ ಶುದ್ಧ ೧೨ ಶಕೆ ೧೮೫೦. ತಾ। ೨೯-೫-೧೯೨೮. | ಸಂಚಿಕೆ ೧

ಸಂಪಾದಕರ ಭೂಮಿಕೆ.

(*)

ನನ್ನ ಮನಸಿನ ವೀಣವಾಗಿ ಕಟ್ಟುವೆನಾನು।
ನಿನ್ನ ಬೆರಳನು ಮಾಡಿಕೊಂಡು ಸುಕ್ಕಳ ದೊರೆಯೆ।
ಬಿನ್ನಹದಲ್ಲಿ ಬನ್ನ ವೀಣಬಟ್ಟೆಯು ನೊಂದು ಬಿನ್ನ[illegible]
ನನ್ನ ದೇಹವು ನಿನ್ನ ದೇವಾಸನವಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹ [illegible]
—ಅಂಬಿಕಾ ತನಯ ದತ್ತ

ಕರ್ನಾಟಕ ಸಾಹಿತ್ಯ ಪರಿಷತ್ತಿನವರಿಂದಲೂ ಕನ್ನಡಿಗರ ಆಶ್ರಯದಿಂದಲೂ "ಕನ್ನಡಿಗ"ನ ಮೊದಲನೇ ವರ್ಷವು ಮುಗಿಯಿತೆಂದು ಹೇಳಲು ಆನಂದವಾಗುತ್ತದೆ. ಈ ಒಂದು ವರ್ಷದ ಸ್ವಲ್ಪಾವಧಿಯಲ್ಲಿ "ಕನ್ನಡಿಗ"ನು ಮಾಡಿದ ಕಾರ್ಯವು ಕರ್ನಾಟಕಸ್ಥರ ಕಣ್ಣೆದುರಿನಲ್ಲಿದೆ. ಒಂದೇ ವರ್ಷದ ಬಾಲಕನಾದರೂ ಎಂತೆಂಥ ಕಾರ್ಯವನ್ನು ಮಾಡಿರುವನೆಂದು "ಕನ್ನಡಿಗ"ನು ಅಭಿಮಾನದಿಂದ ಹೇಳಬಹುದಾಗಿದೆ. ಅದಾವುವೆಂದರೆ— (೧) ಕನ್ನಡದ ಬಗ್ಗೆ ಕನ್ನಡಿಗರಲ್ಲಿ ಹೆಚ್ಚು ಅಭಿಮಾನ ಹುಟ್ಟಿಸಿದ್ದು. (೨) ಕನ್ನಡಿಗರಲ್ಲಿದ್ದ [illegible] ಹೋಗಲಾಡಿಸಲು ಚಳವಳಿ ಮಾಡಿದ್ದು. (೩) ಕರ್ನಾಟಕದ ಏಕೀಕರಣದ ಬಗ್ಗೆ [illegible] ಮಾಡಿದ್ದು. (೪) ಅಖಂಡ ಕರ್ನಾಟಕ ಪ್ರತ್ಯೇಕ ಪ್ರಾಂತದ ಕಲ್ಪನೆಗೆ ಪ್ರಸ್ತಾವನೆಗಳಿಂದ ಬಲಕೊಟ್ಟಿದ್ದು. (೫) ಕರ್ನಾಟಕದ ಅಭಿವೃದ್ಧಿಗೆ ಅನುಕೂಲವಾಗುವಂತಹ ಹೊಸ ರೈಲ್ವೇಗಳ ಯೋಜನೆಯನ್ನು ಹಳೇ ಯೋಜನೆಗಳನ್ನು ರೈಲ್ವೆ ಅಧಿಕಾರಿಗಳು ಪ್ರಾರಂಭಿಸುವದಕ್ಕೆ ೫-೬ ಸಾವಿರ ಜನ ಕೆಲ[illegible] — ಕರ್ನಾಟಕದ ಎಲ್ಲ ಭಾಗದ ಕನ್ನಡಿಗರ — ಸಹಿ [illegible] ಬಗ್ಗೆ ಪ್ರಯತ್ನ ನಡೆಸಿದ್ದು. (೬) ಸಾಹಿತ್ಯದ ವಿಷ[illegible] ಮುದ್ರಣ [illegible] ಗ್ರಂಥಕರ್ತರಾಗ[illegible], [illegible], ಇದ್ದುದರಿಂದ ಇವರು ಬರೆದ ಪುಸ್ತಕಗ[illegible] ಗ್ರಂಥಗಳ ಹೊರಗಿನ ಆವರಣ[illegible] ಅಭಿಪ್ರಾಯ ಬರೆಯುತ್ತ ಗ್ರಂಥಗಳ[illegible] ಚೆನ್ನಾಗಿ ಓದಿ, ಆಳವಾಗಿ ವಿಚಾರಿಸಿ, ಸತ್ಯ[illegible]ದ ಮತವನ್ನು ಪ್ರಕಟಿಸಿದ್ದು. (೭) ಕಲಕತ್ತೆಯ ಅಖಿಲ ಭಾ[illegible] ಸಾಹಿತ್ಯ ಸಂಘದ [illegible] ಪ್ರಶ್ನೆಗಳ ಬಗ್ಗೆ ಕನ್ನಡಿಗರಲ್ಲಿ ಎಚ್ಚ[illegible] ಮಾಡಿ, ಈ ಮುಖ್ಯವಾದ ಪ್ರಶ್ನೆಗಳ [illegible]

ಕರ್ನಾಟಕದಲ್ಲಿ ನಿರ್ಮಾಣವಾಗಿರುವ ಹಾಗೆ ಪ್ರಯತ್ನಿಸಿ, ಕನ್ನಡಿಗರ ಕಲ್ಯಾಣಕ್ಕಾಗಿ ಸರಕಾರದವರೊಡನೆ ಪತ್ರವ್ಯವಹಾರ ನಡೆಸಿ, ನಿಜವಾದ ಸಂಗತಿಗಳನ್ನು ಹೊರಗೆಡಹಿದ್ದು. (೮) ಕರ್ನಾಟಕ ರಂಗಭೂಮಿಯ [illegible]ವಾಗಿ ಹೆಣಗಾಡಿದ್ದು. (೯) ಕನ್ನಡಿಗರು ಕನ್ನಡದಲ್ಲಿಯೇ ಸಹಿ ಮಾಡಬೇಕು, ಮಾತಾಡಬೇಕು. [illegible] ಅನ್ಯಭಾಷೆಯ ಪದ್ಧತಿಯ ಪ್ರಾಬಲ್ಯವನ್ನು ಕನ್ನಡಿಗರು [illegible] ಮುಂದೆ [illegible], ಇಂಗ್ಲಿಷ[illegible] ಪದ್ಧತಿಯ [illegible] ಬಿಡಬೇಕೆಂದು. [illegible] ಕನ್ನಡಿಗರಲ್ಲಿ [illegible] (೧೦) ವಾರ್ಷಿಕ [illegible] ಲಕ್ಷಿಸದೇ [illegible] ಕಾಲ[illegible] "ಮಹಿಂದಸಂತ"[illegible], ನನ್ನ[illegible] ಪ್ರತಿನಿಧಿಗಳನ್ನು [illegible] ಕರ್ನಾಟಕದ [illegible] ಸಂಗತಿಗಳನ್ನೆಲ್ಲ [illegible] "ಕನ್ನಡಿಗ"ನು [illegible] (೧೨) ಕರ್ನಾಟಕದ ಪ್ರತಿಯೊಂದು ಭಾಗದ [illegible] ಮುಂಬಯಿ ಕರ್ನಾಟಕ, ಮದ್ರಾಸ ಕರ್ನಾಟಕ, ಮೈಸೂರ ಕರ್ನಾಟಕ, ಕೊಡಗು ಕರ್ನಾಟಕ [illegible] ಕರ್ನಾಟಕಗಳೆಂದೂ ಸ್ಪಷ್ಟವಾದ ಭಾಗಗಳನ್ನು ಕಲ್ಪಿಸಿ, ಆ ಆ ಸುದ್ದಿಗಳನ್ನು ಆ ಆ ಭಾಗಗಳಲ್ಲಿ ಪ್ರಕಟಿಸುತ್ತ, ಅಖಂಡ ಕರ್ನಾಟಕ ಭಾವನೆಯು ಬೆಳೆಯುವ ಹಾಗೆ [illegible], (೧೩) ಈ [illegible] ಭಾಗದ ಕರ್ನಾಟಕದ ವಿಷಯವಾಗಿ ಸಂಪಾದಕೀಯ ಟಿಪ್ಪಣಿಗಳನ್ನು ಬರೆದು, ಕರ್ನಾಟಕ [illegible] ಭಾಗದ [illegible] ಕೊರತೆಗಳು ಇನ್ನೊಂದು ಭಾಗದವರಿಗೆ ಗೊತ್ತಾಗುವಂತೆ ಮಾಡಿದ್ದು (೧೪) ಉತ್ತರ ಕರ್ನಾಟಕದ [illegible] ಕನ್ನಡ [illegible] ಪ್ರ[illegible] ಹಾಗೆ ಕಾಯಿದೇ ಮಂಡಲದ ವರೆಗೆ ಪ್ರಶ್ನೆ ಕೇಳಿಸುವುದರಿಂದ ಈ ಕಾರ್ಯದಲ್ಲಿ ಜಯ ದೊರೆಯುವ ಹಾಗೆ ಅರ್ಜಿಗಳನ್ನು ಬೆಂಬಲಿಸಿದ್ದು. (೧೫) ಕರ್ನಾಟಕದ ಬಂದ[illegible] ಸೊಲ್ಲಾಪುರ ಜಿಲ್ಲೆಗಳಲ್ಲಿಯ ಕನ್ನಡದ ಸ್ಥಿತಿ, ವಿಜ[illegible] ಜಿಲ್ಲೆಯ ರೈಲ್ವೆಗಳ [illegible] ಕೊರತೆ ಮತ್ತು [illegible] ಬಗ್ಗೆ ಕಾಯಿದೇ ಮಂಡಲ[illegible] ಪ್ರಶ್ನೆ[illegible] ಹಾಗೆ ಪ್ರಯತ್ನಿಸಿ [illegible] ಸರಕಾರದಿಂದ [illegible] ಸಂಗತಿಗಳನ್ನು ಬೆಂಬಲಿಸಿದ್ದು. (೧೬) ಬಾಗಲಕೋಟೆ[illegible] [illegible] ಕೊರತೆಗಳನ್ನು [illegible] ಮುಖ್ಯ[illegible] ಕೊರತೆಗಳನ್ನೂ [illegible], ಆ ಬಗ್ಗೆ "ಕನ್ನಡಿ[illegible] [illegible] ಕೊಟ್ಟು ತಕ್ಕಮಟ್ಟಿಗೆ ಜಯ ಸಂಪಾ[illegible]

[illegible] ರಕ್ಷೆಯ
[illegible] ಕನ್ನಡ
[illegible] ತುಂಟ!!
[illegible] ನುಡಿ
[illegible] ಮೇಲೆ ಅಭಿ
[illegible] ವಿಷಯ
[illegible] ಬಡಿ
[illegible] ತುಂಟರ
[illegible] ವಾದೇ
[illegible] ಯು!
[illegible] ಹೋಗುವೆ
[illegible] ಮನಕೆ
[illegible] ನಿಜವಾಗಿ
ಮುಂದಿನ
[illegible] ಯ
ಮೇಲಾಗ
[illegible] ದರೆ
[illegible] ತುಂಬಿಲ್ಲ
[illegible] ವೃತ್ತಿ
[illegible] ತಪ್ಪು ಒಪ್ಪು
[illegible] ನಿನ್ನ ಬೆಡಗು!
[illegible] ಹುಟ್ಟಲಿಕ್ಕೆ
ಯೋಜನೆಗೆ; ಎನೆಂ
[illegible] ಹೇಳಲಿ—

[illegible] ದರೆ ಬರ
[illegible]; ಎಂದು.
[illegible] ನಿನ್ನ ಗತಿ!!
[illegible] ಯಿತಪ್ಪ
[illegible]!! ನಿನ್ನಿಂದ
[illegible] ದೂರದಿಂದ
[illegible]!!! ಮುಂದೆ
[illegible] ಒಂದು
[illegible] ಕಣ್ಣು!!!

[illegible] ದ ಹೊಸ
[illegible] (ವ್ಹಿ. ಪಿ)
[illegible]) ನಿಂದ

[೧೭] ಕರ್ನಾಟಕದ ಎಲ್ಲ ಭಾಗಗಳ ಲೇಖಗಳನ್ನು ಪಡೆದು ಪ್ರಕಟಿಸಿ, ಆ ಆ ಭಾಗದ ಭಾಷಾಶೈಲಿಯು ಇತ್ತಕಡೆಯ ಜನರಿಗೆ ಪರಿಚಯವಾಗುವ ಹಾಗೆ ಅವಕಾಶವನ್ನುಂಟು ಮಾಡಿದ್ದು, [೧೮] ಕರ್ನಾಟಕದಲ್ಲಿ ಲೇಖಕರಿಗೆ ಕೊಂಚವಾದರೂ ವೇತನವನ್ನು ಕೊಟ್ಟದ್ದು. "ಕನ್ನಡಿಗ"ನೇನೋ ತನ್ನ ಈ ಹದಿನೆಂಟು 'ಪುರಾಣ'ಗಳನ್ನು ಹೇಳಿದ್ದಾಯಿತು, ಈ ವರ್ಷದಲ್ಲಿ ಆ ಸಂಚಿಕೆಗಳನ್ನು ಬಿಟ್ಟು ಬಿಡದೇ 'ಶ್ರವಣ' ಮಾಡಿದವರಿಗೆ ಈ 'ಪುರಾಣ'ಗಳ ಸತ್ಯಾಸತ್ಯತೆಯು ತಿಳಿದು ಬರುವದು. ಇನ್ನೂ ಮುಂದಿನ ವರ್ಷದಲ್ಲಿ ಇದಕ್ಕೂ ಹೆಚ್ಚಾಗಿ 'ಕನ್ನಡಿಗ'ರ ಸೇವೆಯಲ್ಲಿ ತತ್ಪರನಾಗಬೇಕೆಂದು 'ಕನ್ನಡಿಗ'ನ ಇಚ್ಛೆಯಿದೆ ನಿಜವಾಗಿ ನಾವು ಈ ಎರಡನೇ ವರ್ಷದಲ್ಲಿ 'ಕನ್ನಡಿಗ'ನನ್ನು ನಿಲ್ಲಿಸಿಬಿಡಬೇಕಿತ್ತು. ಯಾಕೆಂದರೆ ಹಾನಿಯಾದರೆ ಮುಂದೆ ನಾವು ನಡಿಸುವದಿಲ್ಲವೆಂದು ಕಳೆದವರ್ಷದ ೧೨ನೇ ಸಂಚಿಕೆಯಲ್ಲಿಯೇ ಪ್ರಕಟಿಸಿದೆವು. ಆದರೆ 'ಕನ್ನಡಿಗ'ನ ಪ್ರಚಾರವು ಒಂದೇ ವರ್ಷದ ಅವಧಿಯಲ್ಲಿ ೧೪೦೦ ವರೆಗೆ ಮುಟ್ಟಿದ್ದರಿಂದ, ಈ ವರುಷ ಹಾನಿ [illegible] ಮುಂದೆ ಹಾಗಾಗಲಿಕ್ಕಿಲ್ಲೆಂದು ಊಹಿಸಲು ಮಾರ್ಗವಿದೆ. ವಾರ್ಷಿಕ ವರ್ಗಣಿ ಒಂದೇ ಒಂದು ರೂಪಾಯಿಯಿದ್ದದರಿಂದ, ೩ ಸಾವಿರ ಜನ ಚಂದಾದಾರರು ದೊರೆಯದಿದ್ದರೆ 'ಕನ್ನಡಿಗ'ನು ಜೀವಿಸಲಾರನು. ವಾರ್ಷಿಕ ವರ್ಗಣಿ ಒಂದು ರೂಪಾಯಿಯೆಂದರೆ ಅದಿಗೆ [illegible] ಇದನ್ನು ಲಕ್ಷ್ಯದಲ್ಲಿಟ್ಟು ಕಳೆದ ಒಂದು ವರ್ಷದ ಸ್ವಾರ್ಥತ್ಯಾಗದಲ್ಲಿ "ಕನ್ನಡಿಗ"ನು ಮಾಡಿದ ಸೇವೆಯು ಕರ್ನಾಟಕದ ಅಭಿಮಾನಿಗಳಾದ [illegible] ಅಂತಃಕರಣ ಒಪ್ಪಿದ್ದಾಗಿದ್ದರೆ, [illegible] ರಾಧನವನ್ನು [illegible] ಉದಾರದಿಂದ [illegible]

೧ ಎಲ್ಲ ವಾಚಕರು [illegible] [illegible] "ಕನ್ನಡಿಗ"ನಿಗೆ ಚಂದಾದಾರರನ್ನಾಗಿ ಮಾಡಿಕೊಟ್ಟು, 'ಕನ್ನಡಿಗ'ನು ಮುಂದಿನ ವರ್ಷದಲ್ಲಿ [illegible] ಉತ್ಸಾಹದಿಂದ ಕನ್ನಡಿಗರ ಸೇವೆಯಲ್ಲಿ ತೊಡಗುವಂತೆ ಅಪ್ಪಣೆ [illegible] [illegible] ಮುಂದೆ [illegible] ಕೊಡಬೇಕಾಗಿ [illegible] ಮುಂದಿಗಳಿಗೆ ಕೊಡಗು, [illegible] ಎಲ್ಲಿಯು [illegible] ನಮ್ಮ ಪ್ರತಿನಿಧಿಗಳನ್ನು ಈ ವರುಷದಿಂದ ಕಳುಹಿಸಿ, ಅಲ್ಲಿ ಕರ್ನಾಟಕದ ಪ್ರತಿನಿಧಿಗಳು ಏನೇನು ಕಾರ್ಯಮಾಡುವರೆಂಬುದನ್ನು ಕನ್ನಡಿಗರಿಗೆ ತಿಳಿಸಬೇಕಾಗಿಯೂ, ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿಯೂ, ಪಟ್ಟಣದಲ್ಲಿಯೂ, ನಮ್ಮ ಪ್ರತಿನಿಧಿಗಳನ್ನಿಟ್ಟು ಪ್ರತಿ ಗುರುವಾರ ಅಲ್ಲಿಂದ ತಂತಿಗಳ ಮೂಲಕ ಸುದ್ದಿಗಳನ್ನು ಪ್ರತಿ [illegible] ನಿಜವಾದ ಪತ್ರಿಕೆಗಳ ಧೋರಣೆಗ [illegible] ತರಿಸಿಕೊಂಡು, ಕರ್ನಾಟಕದ [illegible] ಯಲ್ಲಿಯೂ ಅವನ್ನು ಪ್ರಕಟಿಸಬೇಕಾಗಿಯೂ, 'ಕನ್ನಡಿಗ'ನು ತನ್ನ [illegible] ಪ್ರತಾಪದ [illegible] 'ಕನ್ನಡಿಗ'ನು ತನ್ನ [illegible] ಕರ್ನಾಟಕದ ಎಲ್ಲ ಭಾಗಗಳಿಗೂ ಕಳುಹಿಸ [illegible] ರೂಪಾಯಿ [illegible] ಬೇಕಾಗಿದೆ, ವಾರ್ಷಿಕ ಚಂದಾ ಒಂದೇ ರೂಪಾಯಿದಲ್ಲಿ [illegible] ಸಿಕ್ಕಬೇಕಾಗಿಯೂ ನಮ್ಮ ಇನ್ನೂ [illegible] ಅತ್ಯಂತ [illegible] [illegible] ೧೪೦೦ [illegible] ಈ ಕನ್ನಡದ [illegible] [illegible] ಕನ್ನಡಿಗ [illegible] ಅಭಿಮಾನಿ [illegible] ವರ್ಷದಲ್ಲಿ "ಕನ್ನಡಿಗ"ನ [illegible] [illegible] ಉಪಕಾರಗಳನ್ನು, ಅವರನ್ನು [illegible] ಸ್ಮರಿಸುತ್ತೇವೆ:—

ಉಪಕಾರಕರ್ತೃಗಳು. ವಾರ್ಷಿಕ ಚಂ[illegible]
೧೦ ರೂ. ಕೊಟ್ಟವರು

೧ ದೇಶಭಕ್ತ ಗಂಗಾಧರರಾವ ದೇಶಪಾಂಡೆ ಬೆಳಗಾವಿ
೨ ರಾಜಸಭಾ ಭೂಷಣ ಕರ್ಪೂರ ಶ್ರೀನಿವಾಸರಾಯರು [illegible]
೩ ರಾಜಾ ಶ್ರೀನಿವಾಸರಾವ ಕೌಲಗಿ ಬಿ. ಎ. [illegible] ರೋಡ ಹೈದ್ರಾಬಾದ
೪ ಸರದಾರ ಮಹಮೂದ ಅಲ್ಲಿಖಾನ ಸಾವೇನೂರ [illegible] ನವಾಬ ಹುಬ್ಬಳ್ಳಿ
೫ ಸ್ವ. ಎಸ್. ನಾಯಕ ಎಮ್. ಎ. ಬಾವಾ. ಜ್ಯೂ ಕಲೇಕ್ಟರ ವಿಜಾಪೂರ
೬ ಗುರುರಾವ ದೇಶಪೂರ ಆರ್. ಸಿ. ಯಸ್. ಪೋಷ್ಟಮಾಸ್ತರ ಜನರಲ್ ನಾಗಪೂರ
೭ ದೆವ್ಯಾಂಗ್ಲರ ಪಿ. ಎಸ್. ಶೆಟ್ಟಿ ಎಮ್. ಎ. ಪ್ರಿನ್ಸಿಪಾಲ ಎಲ್ಫಿನ್‌ಸ್ಟನ್ ಸ್ಕೂಲ ಮುಂಬೈ

ವಿಶೇಷ ವಾರ್ಷಿಕ ಚಂದಾ ೫ ರೂ. ಕೊಟ್ಟವರು

೧ ಕರ್ನಾಟಕ ಭೂಷಣ ಶ್ರೀನಿವಾಸರಾವ ಕೌಜಲಗಿ ವಿಜಾಪುರ
೨ ಪಿ. [illegible] ಜೋಗ ಎಮ್. ಎಲ್. ಸಿ. ಧಾರವಾಡ
೩ [illegible] ಪಾಟೀಲ ಹುಬ್ಬಳ್ಳಿ
೪ [illegible] ರಾವ [illegible]
೫ ಸಿ. ಎಸ್. ವೆಂಕಟಸುಬ್ಬಯ್ಯ, ಎಮ್. ಎಲ್. ಸಿ. ಮಡಿಕೇರಿ
೬ [illegible], ಸುಬ್ರಹ್ಮಣ್ಯ ಎಮ್. ಎಲ್. ಸಿ. [illegible]
೭ [illegible] ಜಹಾಗೀರದಾರ ಎಮ್. ಎ. ಎಲ್. ಎಲ್. ಬಿ. ಮುಂಬಯಿ
೮ [illegible] ರಾಯಚೂರ ವಕೀಲ ಹಾವೇರಿ
೯ ಎಸ್. ಪಿ. ಹಿರೇಮಠ ಬಿ. ಎ. ಎಲ್. ಎಲ್. ಬಿ. ವಕೀಲ ಹಾವೇರಿ
೧೦ [illegible] ಪಾಟೀಲ ಬಿ. ಎ. ಎಲ್. ಎಲ್. ಬಿ. ವಕೀಲ ಹುಬ್ಬಳ್ಳಿ
೧೧ ರಾಘವಾಚಾರ್ಯ ರಾಯಚೂರ ಹಾವೇರಿ
೧೨ ಎಸ್. ಬಿ. ಗುಂಡಳ್ಳಿ ಸಬ್ ಇನಸ್ಪೇಕ್ಟರ ಹುಬ್ಬಳ್ಳಿ
೧೩ ಬಿ. ಜಿ. ದೇಶಪಾಂಡೆ ಧಾರವಾಡ
೧೪ ನಾರಾಯಣ ಭಾವಿಕಟ್ಟಿ ತೀರ್ಥಹಳ್ಳಿ
೧೫ [illegible] ರಾವ ದೇಸಾಯಿ ಕಲಾದಗಿ
೧೬ ಪಿ. [illegible] ಎಮ್. ಎಲ್. ಸಿ. ಹೊನ್ನಾವರ [illegible]

[illegible] ಪ್ರಕಾರವಾಗಿ ಅಭಿಮಾನಿಗಳು ಈ ವರ್ಷದಲ್ಲಿ ಹೆಚ್ಚಾಗಿ ಸಹಾಯ ಮಾಡಬೇಕಾಗಿ ವಿನಯದ ಪ್ರಾರ್ಥನೆಯು.

ಗ್ರಂಥವಿಮರ್ಶೆ

ವಿಂಧ್ಯಾಚಲ (ದ್ವಿತೀಯ ಖಂಡ)

ಇದು ಆ ದಿ ವಿದ್ಯಾರಣ್ಯ ಗ್ರಂಥಮಾಲೆಯ, ೧೧ ನೆಯ [illegible] ಸ್ವ. ಶಿವರಾಮ ಮಹಾದೇವ ಪರಾಂಜಪೆಯವರ [illegible] ಯ ಅನುವಾದವು. ಇದರ ಭಾಷೆಯು ಬಹಳ [illegible] ಭಾಷಾಂತರವಾದುದರಿಂದ ಮೂಲದಲ್ಲಿಯ ಸೌಂದರ್ಯ ಎಷ್ಟೋ ಕಡೆಯಲ್ಲಿ ವ್ಯತ್ಯಾಸ ಒಂದಿದೆ. ಕೆಲವೆಡೆಯಲ್ಲಿ ವಾ[illegible] ಗಳು ಮರಾಠೀ ವಾಕ್ಯರಚನೆಯನ್ನನುಸರಿಸುತ್ತವೆ [illegible] [illegible] ಎಂಬ ಪ್ರಯೋಗವು ತಪ್ಪಾದುದು. ಇದರಲ್ಲಿ [illegible] ಚಿತ್ರಗಳಿವೆ. ಗ್ರಂಥಕರ್ತರು ಕನ್ನಡದ ಏಳಿಗೆಗಾಗಿ [illegible] [illegible] ದುಡಿಯುತ್ತಿದ್ದಾರೆ.

ಪರಶುರಾಮ ರಾಮಾಯಣ

ಕರ್ನಾಟಕ ಕಾವ್ಯರತ್ನ ಮಾಲಾ ಧಾರವಾಡ (ಕುಮಟಾ)

'ಇದು ಕೃಷ್ಣ ದ್ರಗ್ರಂಥವಾಗಿರದೆ, ಜೈಮಿನಿಯಂತೆಯೇ ಸರ್ವೋ ಹೊಗದು ಸಹಜವಾಗಿ ನಿಲ್ಲುವ ಮಹಾ ಕಾವ್ಯವಾಗಿದೆ' ಎಂದು ಹೊಸಕೇರಿ ಚಿದಂಬರಯ್ಯನವರು ಇದನ್ನು ಹೊಗಳಿದ್ದಾರೆ. ಜೈಮಿನಿಯನ್ನು ಮೇಲ್ಪಂಕ್ತಿಯಾಗಿಟ್ಟು ಬೊಬ್ಬೂರ ರಂಗನೆಂಬ ಕವಿಯು ಈ ಕಾವ್ಯವನ್ನು ರಚಿಸಿದನು. ಶೈಲಿಯಲ್ಲಿಯೂ ಅಲಂಕಾರ ವಿಶೇಷದಲ್ಲಿಯೂ, ಪದವಿನ್ಯಾಸದಲ್ಲಿಯೂ, ವೃತ್ತದಲ್ಲಿಯೂ ಈ ಕಾವ್ಯವು ಜೈಮಿನಿಯನ್ನೇ ಅನುಸರಿಸುತ್ತಿದೆ. ಇದಕ್ಕಾಗಿ ಕೆಳಗಣ ಪದ್ಯಗಳನ್ನು ನೋಡಿರಿ—

ಶ್ರೀ ರಮೆಯ ಮಂಗಳ್ಳ ಗೆಯು ಸಲ್ಲಿಗೆಯ ಸರಳಿಸುತೆ।
ಸಾರಿಸದೆ ಪ್ರಾರಂಭಗಳ ಸೃಷ್ಟಿ ನಿರಯಿಸುತೆ
ರಾಮ ಮನಿಷ್ಟದ್ಧ್ಯಾನ ವೆಂಬುದು ರಸಾಲವಂ ಪೆರೆಯು
ಸುತೆ ಸೌರಂಭದಾ॥
ನಾಟಿಂ ಭಾಗವತ ಕೇಳಿಗಳಿಂ ಮೊರೆಯುಸುತೆ,
ಶ್ರೋರಸತ್ತ್ವರಚನೆ ವಸಂತಕಾಲ ನಲಿವ ಬೊ।
ಬ್ಬೂರ ವಾಸ ವಸಂತ ಮಾಧವಂ ಸನ್ಮತಿ ಶುಭೋದಯವನೆ
ಮಾಗಿಯಲಿ॥ (ಪರಶುರಾಮ ರಾಮಾಯಣ)
ಸಂ. ೧ ಶ್ಲೋ ೧

ಶ್ರೀವಘುವಿನಂಬಕಚಕೋರಕಂಪೊರೆಯುಭ
ಕ್ತಾವಳಿಯ ಸ್ವಾತ್ಮಕುಮುದಕೋರಕಂ ಬಿರಿಯೆ ಜಗ
ತೀವಲಯದಮಲಸೌಭಾಗ್ಯೆತ್ನಾಕರಂ ಪೆರ್ಚೆಸಿಂ ಮೀರೆ
ವರೆಲೆ॥

ಆವಗಂ ಸಾಸ ಕಾರುಣ್ಯಾಮೃತದ ಕಲೆಗಳಿಂ।
ತೀವಿಪೆಳಗೆಯ ಬೆಳಗಂಗಳಂ ಪಸುಮತ
ದೇವಪೂರ್ಣಲಯ ಲಕ್ಷ್ಮೀರಮಣನಾಖ್ಯ ಚಂದ್ರನಂದನೆ
ಮಾಗಿಯಲಿ (ಜೈಮಿನಿ ಸ. ೧ ಶ್ಲೋ ೧)

ರಾಮನಂ ಘನನಾಭಿ ರಾಮನಂ ರಘುಕುಲೋ
ದ್ದಾಮನಂ ಭಾಸುರಿತ ರಾಮನಂ
[ರಾ ೧.೧]
[ಜೈ ——]
ರಾಮನಂ ಕೋದಂಡ ಭೀಮನಂ ಲಾವಣ್ಯ।
ಕಾಮ ನಂ ತ್ರೈಲೋಕ್ಯ ಸೋಮನಂ
[ಬೊಬ್ಬೂರು ರಂಗ]

ಶ್ಲೇಷಾಲಂಕಾರ ಮೊದಲಾದವುಗಳಿಗೂ ಎಷ್ಟೋ ಉದಾಹರಣೆಗಳನ್ನು ಕೊಡಬಹುದು ಶೈಲಿಯು ಸುಲಭವಾಗಿಯೂ ಸುಬೋಧವಾಗಿಯೂ ಇರುವದೇನೋ ನಿಜ. ಆದರೆ ಜೈಮಿನಿಭಾರತವನ್ನು ಸಗಟ್ಟಲಾರನೆಂದು ನಮ್ಮ ಮತ ವೆಂಕಪ್ಪ ಹೆಗ್ಗಡೆಯವರು ಬಹಳ ಪರಿಶ್ರಮ ಪಟ್ಟು, ಈ ಕಾವ್ಯವನ್ನು ಮುದ್ರಿಸುದುದಕ್ಕಾಗಿ ನಾವು ಅವರನ್ನು ಅಭಿನಂದಿಸದೆ ಇರಲಾರೆವು. ಹೆಗ್ಗಡೆಯವರು ಮುನ್ನುಡಿಯನ್ನು ಗದ್ಯದಲ್ಲಿ ಬರೆದಿದ್ದರೆ ಚೆನ್ನಾಗಿತ್ತು.

ಶ್ರೀಮದನಂತನ ಕಥೆ

[ಬೆಲೆ ೦-೪-೬ ಅಂಚೆವೆಚ್ಚ ಬೇರೆ]

ಕರ್ನಾಟಕ ಸುಕಾವ್ಯ ರತ್ನ ಮಾಲೆಯ ದ್ವಿತೀಯ ಮಣಿಯು ಚನ್ನಿ ವೆಂಕಪ್ಪಾ ಪರಸಯ್ಯ ಹೆಗ್ಗಡೆ ಕವತೆ ಕೋರಿಯವರು ಸಂಸ್ಕೃತದಿಂದ ಕನ್ನಡಕ್ಕೆ ಪರಿವರ್ತಿಸಿರುವರು. ಇದು ಪಂಪಧರ್ಮಿ ಯನ್ನುಳಿದ ತನ್ನ ನ ಸರಳವಾಗಿಯೂ ಸುಬೋಧವಾಗಿಯೂ

ಪತ್ರವ್ಯವಹಾರ.

'ಕನ್ನಡಿಗ'ನಿಗೆ ಸ್ವಾಗತ!

ಕನ್ನಡಿಗಣ್ಣಾ!

ನೀನ್ಯಾರೆಂದು ಕನ್ನಡಾಭಿಮಾನದ ಪೆಟ್ಟಿ! ಕನ್ನಡ ದೇಶಿಗಳ ಒಡ್ಡಿ!! ನಿರಂಜನೆಯ ಕಟ್ಟು!!! ಅಂದರೆ ನೀನು ಕನ್ನಡ ಕನ್ನಡ ವೆಂದು ಕಾದಾಡುವ ಚಾಟಿ! ಕನ್ನಡ ಪತ್ರಿಕೆಗಳಲ್ಲಿ ಹೆಚ್ಚಿನ ಬಂಟ!! ಕನ್ನಡಿಗರೆಲ್ಲರಿಗೆ ಒಳಿತನ್ನು ಬಯಸುವ ನಂಟ!!! ನಿನ್ನ ನುಡಿಗಳು ಕನ್ನಡಿಗರ ಎದೆಗಳನ್ನು ತುಂಬುವವು! ಅವುಗಳ ಮೇಲೆ ಅಭಿಮಾನದ ಮಳೆಯನ್ನು ಸುರಿಸುವವು!! ಅದರಲ್ಲಿ ಕನ್ನಡದ ವಿಷಯವಾಗಿ ನನ್ನಿಯನ್ನು ಬೆರಸುವವು!!! ಒಕ್ಕಲಿಗನ ಬಾರಕೋಲು ಬಡಿತವೂ ಹೇಳಿನ ಕೊಂಡೆಪ್ಪನ ಕೊಂಡಿಯ ಕಡಿತವೂ, ತುಂಟರ ಚಳ್ಳೆಯ ಹಿಡಿತವೂ ನನ್ನ ಮನವನ್ನು ಮೆಚ್ಚಿಸಿದವು! ಕಾವಲಿಲ್ಲದೇ ಏಯು ಬರೆದ ಹಿರಿಯು ಕನ್ನಡತನವನ್ನು ಕವಿಯ ಸಾರಸಾಲೆಯು! ನಿನ್ನನ್ನು ಕಾಣಲು ಬಹಳ ಆತುರವೆನಗೆ! "ದಕ್ಕಾಗಿ ಹೋಗುವೆ ಮುಂದಿಯ ಮನೆಗೆ! ಕಾಲಕಾಲಕ್ಕೆ ನೀನು ಬರುತ್ತಿದ್ದರೆಯೇ ಮನಕೆ ಸೊಗಸಿನ ಬಗೆ!!! ಇದು ಬಣ್ಣದ ಮಾತೆಂದೆನ ಬೇಡ; ನಿಜವಾಗಿಯೂ ಹಿಗ್ಗುವೆನು, ನಿನ್ನನ್ನು ನೋಡಿ; ಅದಕ್ಕಾಗಿಯೇ ಮುಂದಿನ ಸಾರೆ ಅಪ್ಪುವೆನು ಕರೆದು ಕೈಮಾಡಿ; ಮಾತನಾಡುವೆನಣ್ಣಾ ಬಿಡೆಯ ಬಿಟ್ಟು; ನನಗೆ ಹೊಳೆದುದನು ನಿನ್ನ ಮುಂದಿಟ್ಟು; ಎನ್ನ ಮೇಲಾಗ ಬೇಡಯ್ಯ ಸಿಟ್ಟು ನಿನ್ನ ಹೃದಯವೇನೋ ಚಿನ್ನದ ಕಣಿ ಸರಿ! ಆದರೆ ನಿನ್ನನ್ನು ಗುರುತಿಸುವನು ಜಾಣರು!! ನಿನ್ನ ಹೆಸರಿನ ತುಂಬೆಲ್ಲ ಬರಿಯ ಗರಿ!!! ನಿನ್ನ ವೈರಿಯಿಲ್ಲವಯ್ಯ ಊಹು! ಕರ್ನಾಟಕ ವೃತ್ತವನ್ನು ಕಂಡು ನಾಚು!! ಮುದ್ರಣವು ಮುದ್ದಾಗಲಿ! ತಪ್ಪು ಒಪ್ಪಾಗಲಿ!! ಹಾಳೆ ನುಣುಪಾಗಲಿ!!! ಆವಾಗ ನೋಡಿಕೋ ನಿನ್ನ ಬೆಡಗು! ಆಮೇಲೆ ಮರಿಸಿಂಹನಂತೆ ಗುಡುಗು!! ನೆರೆನಾಡಿಗರಲ್ಲಿ ಹುಟ್ಟಲಿಕ್ಕಿಲ್ಲವೇ ನಡುಗು!!! ಒಪ್ಪುವಿಯೇನಯ್ಯ ನನ್ನ ಯೋಚನೆಗೆ; ಎನೆಂಬೆಯ್ಯ ಈ ಸೂಚನೆಗೆ. ಏನು ಹೇಳುವಿಯನಗೆ? ಅಂದು ಹೇಳಿರಲಿ— ……ವು. ಆದರೆ ಇಷ್ಟಕ್ಕೆ …… ವೆ.

ಇಂದಿನ ವರುಷ ಬರುವೆ; ಮುಂದಿನ ವರುಷ ಸಾಲವಾದರೆ ಬರದಿರುವೆ; ಇಲ್ಲದಿದ್ದರೆ ಕನ್ನಡದೇಳ್ಗೆಗಾಗಿ ಟೊಂಕಕಟ್ಟಿರುವೆ; ಎಂದು. ಹೇಗಿರುವದು ನಿನ್ನ ಸಾಂಪತ್ತಿಕ-ಸ್ಥಿತಿ! ನಾಳೆ ಹೇಗೆ ನಿನ್ನ ಗತಿ!! ಕಡೆಯ ಸಂಚಿಕೆಯಲ್ಲಿ ಒಡಮೂಡಲಿ ನಿನ್ನ ನಮನ!!! ಮುಗಿಯಿತೆಪ್ಪ ನನ್ನ ಮಾತು! ಇಂದಿನ ವರೆಗಿನ ನಿನ್ನ ಸಾಸಕ್ಕೆ ಸೋತು!! ನಿನ್ನಿಂದ ಕಂಗೊಳಿಪುದಣ್ಣಾ ಕನ್ನಡವನವು ಪೂತು!!! ಮುಂದೂಮುಂದೆ ಬಾರಯ್ಯ! ತಿಳಿದವನಾದವನಿಗೆ ಹೆಚ್ಚೇನು ಹೇಳಲಯ್ಯ!!! ಮುಂದೆ ನೀನು ಹೋರಟರೆ ನನ್ನ ಮೇಲಿರಲಿ ಕಣ್ಣು! ವಾ ಕೈಕ್ಕೆಮ್ಮೆ ಒಂದು ನನ್ನ ಮನೆಯಲ್ಲುಣ್ಣು!!! ಹೋಗಿಬರುವೆನಯ್ಯ ನಣ್ಣ ಕಣ್ಣು!!! ಇವನಾವನೋ ಹುಚ್ಚು ಬೋಡಿ ಎಂಬೆಯೊ?

ನಾನಣ್ಣಾ ನಾನು
+ ಪ್ರಸಂಗಿ.

ಅಣ್ಣಾ

ಹಿಂದಿನರಗಳೆಯಿಂದ ನಾನು ನಿನ್ನ ಮುಂದಿನ ವರುಷದ ಹೊಸ ಚಾಂದಾದಾರನೆಂದು ತಿಳಿಯುತಿಲ್ಲೇ? (ಹಿಂದಿದ) ಹಿಪ್ಪಿ(ವ್ಹಿ. ಪಿ)ಯಾಗಿ ಬರಬೇಡ. ನಾನೇ ಮೈಲಿನಿಂದ (ಮನಿಯಾರ್ಡರ) ನಿಂದ ಕಳಿಸುವೆನು ೧-೧೩-೦ ಗಳನ್ನು; ತಿಳಿಯಿತೇನಯ್ಯ?

(೬ ನೇ ಪುಟದಲ್ಲಿ ನೋಡಿರಿ)

ಬ್ರಾಹ್ಮಣರೂ ಉಪಜೀವನವೂ,

ಮೊನ್ನೆ ಮೊನ್ನೆ ಬಾಗಲಕೋಟೆಯಲ್ಲಿ ಉತ್ತರಾದಿ ಮಠಾಧೀಶರಾದ ಶ್ರೀ ಸತ್ಯಧ್ಯಾನಸ್ವಾಮಿಗಳವರು ಮಹಾಸಮಾರಾಧನೆಯನ್ನು ಮಾಡಿದ್ದೂ ಸಾವಿರಗಟ್ಲೆ ಬ್ರಾಹ್ಮಣ ಭೋಜನವಾಗಿ ಭೂರಿ ದಕ್ಷಿಣೆ ಸಂಭಾವನೆಗಳಾಗಿದ್ದೂ, ಒಟ್ಟಾರೆ ಈ ಸಮಾರಾಧನೆಗೆ ಅಜಮಾಸು ೧೫೦೦೦ ಖರ್ಚಾದದ್ದೂ ಎಲ್ಲ ಕರ್ನಾಟಕಸ್ಥರಿಗೂ ಗೊತ್ತಾದಮಾತೇಸರಿ. ಈ ಪ್ರಕಾರ ಪ್ರತಿವರ್ಷ ಮಹಾಸಮಾರಾಧನೆಯಾಗುವದೂ, ಬ್ರಾಹ್ಮಣಭೋಜನವಾಗುವದೂ, ಒಂದು ದೃಷ್ಟಿಯಿಂದ ಸ್ತುತ್ಯವು! ಆದರೆ ಇನ್ನೊಂದು ದೃಷ್ಟಿಯಿಂದ ಆಳವಾಗಿ ವಿಚಾರಮಾಡಿನೋಡಿದರೆ, ಶ್ರೀಗಳವರು ಗದಗಿನ ಮುಕ್ಕಾಮು ಮಾಡಿದಾಗ್ಗೆ ಅಲ್ಲಿ ಕೆಲ ಬ್ರಾಹ್ಮಣರಿಂದ ಬ್ರಾಹ್ಮಣರ ಉಪಜೀವನದ ಬಗ್ಗೆ ಆದ ಪ್ರಶ್ನೋತ್ತರಗಳು ಸ್ಮರಣೆಗೆ ಬರುವವು ಅವು ಕನ್ನಡಿಗನ ಶ್ರಾವಣ ಸಂಚಿಕೆಯಲ್ಲಿ ಪ್ರಸಿದ್ಧವಾಗಿವೆ. ಶ್ರೀಗಳು ದಯಪಾಲಿಸಿದ ಉತ್ತರಗಳ ಆಶಯವು ಈ ಪ್ರಕಾರವಿದೆ :—

"ನಮ್ಮ ಬ್ರಾಹ್ಮಣ ಸಮಾಜದಲ್ಲಿ ಅನೇಕ ದೊಡ್ಡ ದೊಡ್ಡ ಜಹಗೀರದಾರ ದೇಸಾಯಿ, ದೇಶಪಾಂಡೆ ಮೊದಲಾದ ವತನದಾರರು ಅನೇಕ ದೊಡ್ಡ ದೊಡ್ಡ ಸರಕಾರೀ ಸಂಬಳದವರೂ, ವಕೀಲರೇ ಮೊದಲಾದವರೂ ಪ್ರತಿತಿಂಗಳಿಗೆ ಹೇರಳವಾಗಿ ಹಣಗಳಿಸುತ್ತಲಿದ್ದಾರೆ ಆದರೆ ಬ್ರಾಹ್ಮಣಧರ್ಮದ ಹ್ರಾಸವು ಈ ಮುಸನೀಯರ ಕಲ್ಪನೆಯಲ್ಲಿಯೂ ಕೂಡ ಇರದೆ, ತಾವು ಮಾತ್ರ ಅನೇಕಾನೇಕ ಭೋಗವಿಲಾಸಗಳಲ್ಲಿ ಮಗ್ನರಾಗಿ ದೊಡ್ಡ ದೊಡ್ಡ ಉಪಾಧಿಗಳ ಆಶೆಗಾಗಿ ಹಣದ ಅಪಲಾಪವನ್ನು ಮಾಡುತ್ತಲಿರುವರು. ಇಂಥ ವಿಲಾಸಗಳಲ್ಲಿ ವ್ಯಯವಾಗುತ್ತಿರುವ ಹಣವನ್ನು ಸಿಲ್ಲಿಸಿ, ಅದನ್ನೇ ಬಡವರಾದ ಬ್ರಾಹ್ಮಣರಿಗೆ ಉಪಜೀವನದ ಬಗ್ಗೆ ಉಪಯೋಗಿಸಿದ್ದರೆ, ನಮ್ಮ ಸಮಾಜದಲ್ಲಿ ಬಡತನದ ಕೊರತೆಯುಂಟಾಗದೆ ಸದಾಸುಖದಲ್ಲಿರುವದು" ಎಂಬ ತಾತ್ಪರ್ಯದ ಶ್ರೀಗಳವರಿಂದ ಹೊರಟ ಉತ್ತರವು ಅತಿ ಸಮಂಜಸವೂ ಶ್ಲಾಘನೀಯವೂ ಇರುವದು. ಆದರೆ ಈ ಉತ್ತರವು ಬ್ರಾಹ್ಮಣ ಧನವಂತರಿಗೂ, ದೊಡ್ಡ ಪಗಾರದ ಅಧಿಕಾರಸ್ಥರಿಗೂ ಎಷ್ಟು ಸಂಬಂಧ ಇದೆಯೋ ಅಷ್ಟೇ ಕೂಡ [illegible] ಶ್ರೀಗಳವರಿಗೂ ಸಂಬಂಧಿಸುವದೆಂಬುದನ್ನು ಯಾರೂ ಮರೆಯಲಾಗದು. ಶ್ರೀಗಳವರು ಪ್ರತಿವರ್ಷ ಒಬ್ಬರ ಕೇವಲ ಒಂದು ಸಮಾರಾಧನೆಯ ನಿಮಿತ್ತವಾಗಿ ಲಕ್ಷಗಟ್ಲೆ ರೂಪಾಯಿಗಳನ್ನು ವ್ಯಯ ಮಾಡುತ್ತಿರುವದು ರಾಷ್ಟ್ರ ದೃಷ್ಟಿಯಿಂದ ಸಮಾಜದೃಷ್ಟಿಯಿಂದ ಒಂದು ಪ್ರಕಾರದ ದುಂದುಗಾರಿಕೆಯಲ್ಲವೆ? ಈ ಸಮಾರಾಧನೆಯನ್ನು ಅಷ್ಟು ಕಟ್ಟಿನಲ್ಲಿ ಸ್ವಲ್ಪೇ ಖರ್ಚಾಗುವಂತೆಮಾಡಿ ಉಳಿಯುವ ಲಕ್ಷಾವಧಿ ರೂಪಾಯಿಗಳನ್ನು ಬಡಬ್ರಾಹ್ಮಣರ ಉಪಜೀವನಕ್ಕಾಗಿ ಉಪಯೋಗಿಸಿದರೆ, ಬ್ರಾಹ್ಮಣರ ಉಪಜೀವನದ ಪ್ರಶ್ನೆಯು ದೂರಾಗಲಿಕ್ಕಿಲ್ಲವೆ? ಇನ್ನು ಬ್ರಾಹ್ಮಣಭೋಜನವು ಪುಣ್ಯಪ್ರದವೂ, ಪವಿತ್ರವೂ ಆಗಿರುವದೆಂದು ಶಾಸ್ತ್ರವು ಹೇಳುತ್ತದೆಂದು ಶ್ರೀಗಳಾಗಲೀ, ಮತ್ತಾರಾಗಲೀ, ಉತ್ತರಕೊಡಬಹುದು. ಅದು ಸರ್ವಸಮ್ಮತವು! ಆದರೆ ಒಬ್ಬ ಬ್ರಾಹ್ಮಣನಿಗೆ ನಾಲಿಗೆ ರುಚಿಗನುಕೂಲವಾದ ಪಕ್ವಾನ್ನದ ಊಟವನ್ನು ಹಾಕಿದರೆ ಅತ್ಯಂತ ಪುಣ್ಯಲಭಿಸುವದೆಂದು ಹೇಳುವಾಗ ಪ್ರತಿವರ್ಷ ಒಂದೆರಡುಸಮಾರಾಧನೆಗಳಲ್ಲಿ ವೆಚ್ಚವಾಗುವ ಅಪಾರವಾದ ಧನವನ್ನು ಉಳಿಸಿ ಸಾವಿರಾರು ಬಡಬ್ರಾಹ್ಮಣರಿಗೆ ಸಹಾಯಮಾಡಿದ್ದಾದರೆ ಅವರ ಉಪಜೀವನದ ಪ್ರಶ್ನೆಯು ದೂರಾಗಿ ಅವರ ಉಪಜೀವನವು ನಿರಂತರವೂ ನಿರಾತಂಕವೂ ಆಗುವದಿಲ್ಲವೇ? ಹೀಗೆ ಮಾಡಿದಲ್ಲಿ ಎಷ್ಟು ಪುಣ್ಯಪ್ರಾಪ್ತವಾಗುವದೆಂಬುದನ್ನು ಸುಜ್ಞರೇ ವಿಚಾರಮಾಡಲಿ.

ಆದ್ದರಿಂದ ಶ್ರೀಗಳವರ ಮುಖದಿಂದ ಹೊರಟ ಉತ್ತರದಂತೆ ಬ್ರಾಹ್ಮಣ ಶ್ರೀಮಂತ ವರ್ಗದವರೂ, ಸಂಬಳದವರೂ, ಇತ್ತ ಕಡೆಗೆ ಲಕ್ಷ್ಯಗೊಟ್ಟು ತಮ್ಮ ಸ್ವ ಸುಖವಿಲಾಸಾದಿಗಳಲ್ಲಿ ವ್ಯಯವಾಗುವ ಹಣವನ್ನು ನಿಲ್ಲಿಸಿ ಬಡಬ್ರಾಹ್ಮವರ್ಗದ ಉಪಜೀವನಕ್ಕೆ ಮಾರ್ಗ ಮಾಡಿಕೊಡುವದು ಶ್ರೇಯಸ್ಕರವು ಅದರಂತೆ ಶ್ರೀಗಳವರಾದರೂ ಸಮಾರಾಧನೆಯಲ್ಲಿ ಪ್ರತಿವರ್ಷ ವೆಚ್ಚವಾಗುವ ವಿಪುಲವಾದ ಧನವನ್ನು ನಿಲ್ಲಿಸಿ ಅದೇಹಣವನ್ನು ತಮ್ಮ ಉತ್ತರದಂತೆಯೇ ಬಡಬ್ರಾಹ್ಮಣರ ಉಪಜೀವನಕ್ಕಾಗಿ ವ್ಯವಸ್ಥೆಮಾಡಿಕೊಟ್ಟದ್ದಾದರೆ ತೀವ್ರವೇ ನಮ್ಮ ಭರತ ಖಂಡದ ಬ್ರಹ್ಮವರ್ಗದ ಉಪಜೀವನದ ಪ್ರಶ್ನೆಯು ಪರಿಹಾರವಾಗಿ ಧರ್ಮಮಾರ್ಗದಲ್ಲಿ ಪ್ರವೃತ್ತವಾಗಲಿಕ್ಕೆ ಅನುಕೂಲವಾಗುವದಲ್ಲದೇ ಪೂರ್ವದ ಬ್ರಹ್ಮತೇಜಸ್ಸನ್ನೂ, ಧರ್ಮರಕ್ಷಣೆಯನ್ನೂ, ಸಾಧಿಸಿಕೊಂಡು ಸುಖಸಾಮ್ರಾಜ್ಯದಲ್ಲಿ ನಲಿದಾಡಬಹುದೆಂದು ನಮ್ಮ ದೃಢನಂಬಿಗೆ ಇದೇ ಮಾತನ್ನೂ ರಾಷ್ಟ್ರದ ಧುರೀಣರೂ, ಮಹಾತ್ಮರೂ, ಸಾರಿ ಸಾರಿ ಹೇಳುತ್ತಿರುವರು. ಆದ್ದರಿಂದ ಸರ್ವ ಬ್ರಾಹ್ಮಣ ಧನಿಕರು, ದೊಡ್ಡದೊಡ್ಡ ಸಂಬಳದವರು, ಉತ್ಕೃಷ್ಟದಾದರೂ ಶ್ರೀಗಳವರೂ, ಮಠಾಧೀಶರೂ, ಪೀಠಾಧ್ಯಕ್ಷರ , ಇತ್ತಕಡೆಗೆ ಗಮನಿಸುವರೋ? ಇತಿ.

ದೇವಾಂಗ ಸಂಸ್ಕೃತಪಾಠಶಾಲಾ ಬೆಟಗೇರಿ } ತಮ್ಮ ನಿರಂತರ ಸುಖಾಭಿಲಾಷಿ ರಾಜೋ ರಾಮಚಂದ್ರಗುಡಿಸಾಗರ ಲೇಖಕ.

"ಓಂ ,

ಹಿತೋಪದೇಶ

[ಮಹಾತ್ಮಾ ಗಾಂಧಿಯವರ ಲೇಖಗಳಿಂದ.]

ಸ್ವತಃ ತನ್ನ ಜೀವನವ ತಿರಸ್ಕಾರಮಾಡಿ ಎಲ್ಲ ಜೀವಗಳನ್ನೂ ಸಮಾನವೆಂದು ಭಾವಿಸುತ್ತ ಅವುಗಳಮೇಲೆ ದಯಮಾಡುತ್ತಿರಬೇಕು. ಮತ್ತು ಯಾವದೇತರದ ಸ್ವಂತ ಸುಖಕ್ಕಾಗಿ ಜೀವಹಾನಿಯನ್ನೊಂದೂ ಮಾಡಬಾರದು. ದೇಹದಮೇಲೆ ಅಸಾಮಾನ್ಯಪ್ರೇಮ ಮಾಡಬಾರದು ಹಾಗು ಮರಣದಬಗ್ಗೆ ಎಳ್ಳಷ್ಟೂ ಭಯಹಿಡಿಯಬಾರದು ದೇಹವು ಅತ್ಯಂತ ಪೋಷಣ(ಕ್ಷಣಭಂಗುರ)ವೆಂದು ನೆನೆದು ಇದರಕ್ಷಣದಲ್ಲಿ ಮೋಕ್ಷ ಸಾಮಗ್ರಿಯನ್ನು ತಯಾರಿಸಬೇಕು.

ಸತ್ಯವನ್ನೆ ಶೋಧಿಸುತ್ತ, ಸತ್ಯವನ್ನೇ ಆಚರಿಸುತ್ತ, ಸತ್ಯದ ಉಪಾಸನೆಯನ್ನೇ ಮಾಡುತ್ತ, ಸತ್ಯದ ಯೋಗಕ್ಷೇಮಕ್ಕೆ, ನನ್ನ ಬಲವಾದ ಇಚ್ಛೆ.

ಸೃಷ್ಟಿಯ ಸಂಗಡಲೇ ಮಿತ್ರಭಾವದಿಂದಿರುವದು ನನ್ನ ಉದ್ದೇಶ, ಅನ್ಯಾಯದ ವಿರುದ್ಧ ಕಾಳಗ ಮಾಡುವಾಗಲೂ, ಪ್ರೇಮವನ್ನು ಇಟ್ಟಿರಲು ಪ್ರಯತ್ನಿಸಬೇಕೆಂದು ನನ್ನ ಉದ್ದೇಶ.

ನನ್ನ ಧರ್ಮವು ಸತ್ಯ ಮತ್ತು ಅಹಿಂಸೆ ಇವುಗಳನ್ನೇ ಆಧರಿಸಿಕೊಂಡಿದೆ. ಸತ್ಯವೇ ನನಗೆ ಈಶ್ವರನು ಅಹಿಂಸೆಯೇ ಅವನ್ನು ಸಾಧಿಸಲು ಮಾರ್ಗವು

" ಸತ್ಯವೇ ಪರಮಾತ್ಮ !
• ಪರಮಾತ್ಮನೇ—ಸತ್ಯ
ಉಳಿದದ್ದೆಲ್ಲ-ಮಿಥ್ಯಾ।।,

ಅನು. ಗೂಳೇಶ ಡಂಗ ರ

ಕರ್ನಾಟಕ ವಿಶ್ವವಿದ್ಯಾಲಯದ ವಿಷಯದಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯಿಂದ ಹೊರಟ

ಪ್ರಶ್ನೆಮಾಲಿಕೆ

[೧] ಭಾಷಾನುಕ್ರಮವಾಗಿ ವಿಶ್ವವಿದ್ಯಾಲಯಗಳನ್ನು ಸ್ಥಾಪಿಸಬೇಕೆಂಬ ತತ್ವವು ನಿಮಗೆ ಮಾನ್ಯವಿರುವದೋ? ಮಾನ್ಯವಿದ್ದರೆ ಕರ್ನಾಟಕದಲ್ಲಿ ಈ ತರದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವ ಸಮಯವು ಈಗ ಬಂದಿರುವದೆಂದು ನಿಮಗೆ ತೋರುವದಿಲ್ಲವೋ?

ಟಿಪ್ಪಣಿ— ಈ ಸಂಧರ್ಭದಲ್ಲಿ ಮುಂಬೈ ಸರಕಾರದವರು ಈ ತತ್ವವನ್ನು ಒಪ್ಪಿಕೊಂಡಿರುವರೆಂಬದನ್ನು ಆತರ ವಿಶ್ವವಿದ್ಯಾಲಯ ಸುಧಾರಣಾ ಕಮಿಟಿ (೧೯೨೪-೧೯೨೫) ಯ ವರದಿಯ ಪುಟ ೪೬ ಪರಿಚ್ಛೇದ ೫೯ರಲ್ಲಿ ನೋಡಬಹುದು ಮುಂಬೈ ವಿಶ್ವವಿದ್ಯಾಲಯದವರೂ ಈ ತತ್ವವನ್ನು ಒಪ್ಪಿಕೊಂಡಿರುವರು.

[೨] ಬ್ರಿಟಿಶ ಕರ್ನಾಟಕಕ್ಕೆ ಅಂದರೆ ಮುಂಬೈ ಮದ್ರಾಸ ಇಲಾಖೆಗಳೊಳಗಿನ ಕರ್ನಾಟಕ ಭಾಗ ಹಾಗೂ ಕೊಡಗು ಪ್ರಾಂತಗಳಿಗೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವು ಇರುವದು ಯೋಗ್ಯವಾಗುವದೆಂದು ನಿಮಗೆ ತೋರುವದೋ?

[೩] ಭಾವೀ ಕರ್ನಾಟಕ ವಿಶ್ವವಿದ್ಯಾಲಯವು ಯಾವನಮೂದೆಯದಿರಬೇಕೆಂದು ನಿಮ್ಮ ಅಭಿಪ್ರಾಯವು? ಒದು ಯುನಿಟರಿ ಅಂದರೆ ಒಂದೇ ಕೇಂದ್ರದಲ್ಲಿ ಎಲ್ಲ ಕಾಲೇಜುಗಳನ್ನು ಕಲಿಸುವ ಜವಾಬದಾರಿಯನ್ನು ಸಹ ಹೊತ್ತ ಅಥವಾ ಫೆಡರೇಟಿಡ್ ಅಂದರೆ ಬೇರೆ ಬೇರೆ ಕೇಂದ್ರಗಳಲ್ಲಿ ಕಾಲೇಜುಗಳಿದ್ದು ಅವು ತಮ್ಮ ತಮ್ಮ ವ್ಯವಸ್ಥೆಯನ್ನು ನೋಡಲಿಕ್ಕೆ ಸ್ವತಂತ್ರವಿದ್ದರೂ ಅವೆಲ್ಲವು ಒಂದೇ ಮಧ್ಯಸ್ಥ ಶೈಕ್ಷಣಿಕ ಕೋಲ್ಮಿಬಾರದ ಮಂಡಳಿಗೆ ಒಳಪಟ್ಟ ಅಥವಾ ಅಫಿಲಿಯೇಟೆಡ್ ಅಂದರೆ ಈಗಿರುವ ಮುಂಬೈ ವಿಶ್ವವಿದ್ಯಾಲಯಗಳಂತೆ ಕೇವಲ ಪರೀಕ್ಷಕ ವಿಶ್ವವಿದ್ಯಾಲಯವಿರಬೇಕೋ?

[೪] ಬ್ರಿಟಿಶ ಕರ್ನಾಟಕಕ್ಕೆ ಒಂದು ಪ್ರತ್ಯೇಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು ಶಕ್ಯವಿಲ್ಲದಿದ್ದರೆ ಸದ್ಯಕ್ಕೆ ಮೈಸೂರ ವಿಶ್ವವಿದ್ಯಾಲಯವನ್ನೇ ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡಿಕೊಳ್ಳುವದು ಯೋಗ್ಯವಾಗುವದೋ? ಹಾಗಾದ ಪಕ್ಷದಲ್ಲಿ ಅದನ್ನು ಯಾವ ಕರಾರುಗಳ ಮೇಲೆ ಮಾಡಿಕೊಳ್ಳಬೇಕು?

[೫] ಈ ಎರಡು ವಿಶ್ವವಿದ್ಯಾಲಯಗಳಲ್ಲಿ ಇಡೀ ಬ್ರಿಟಿಶ ಕರ್ನಾಟಕಕ್ಕೆ ಯಾವದು ಹೆಚ್ಚು ಮಾನ್ಯವಾಗುವದು?

[೬] [ಅ] ಬ್ರಿಟಿಶ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸಬೇಕೆಂದು ನಿಮ್ಮ ಅಭಿಪ್ರಾಯವಿದ್ದರೆ ಅದನ್ನು ಸಾಧಿಸಲಿಕ್ಕೆ ಯಾವ ಉಪಾಯಗಳನ್ನು ಸೂಚಿಸುವಿರಿ?

(ಬ) ಮೈಸೂರ ವಿಶ್ವವಿದ್ಯಾಲಯವನ್ನು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಮಾಡಿಕೊಳ್ಳಬೇಕೆಂದು ನಿಮ್ಮ ಮತವಿದ್ದರೆ ಅದರ ಸಂಬಂಧ ಯಾವ ಉಪಾಯಗಳನ್ನು ನೀವು ಸೂಚಿಸುವಿರಿ?"

"ಕನ್ನಡಿಗ"ನ ಉತ್ತರ

(೧) ನೀರಡಿಸಿದವನಿಗೆ ನೀರು ಕೊಡಬೇಕೆಂಬ ತತ್ವವು ನಿಮಗೆ ಮಾನ್ಯವಿದೆಯೋ ಎಂದು ಕೇಳುವದು ಎಷ್ಟು ಹಾಸ್ಯಾಸ್ಪದವಾಗುವದೋ ಅಷ್ಟೇ ಹಾಸ್ಯಾಸ್ಪದವಾಗಿ ಈ ಪ್ರಶ್ನೆಯು ತೋರುತ್ತದೆ. ಭಾಷಾನುಕ್ರಮವಾಗಿ ವಿಶ್ವವಿದ್ಯಾಲಯಗಳನ್ನು ನಿರ್ಮಿಸುವದು ನಿಸರ್ಗಸಿದ್ಧವಾಗಿದೆ. ಈ ತರದ ವಿಶ್ವವಿದ್ಯಾಲಯವನ್ನು ಕರ್ನಾಟಕದಲ್ಲಿ ಆದಷ್ಟು ಬೇಗನೇ ಸ್ಥಾಪಿಸಬೇಕು.

[೨] ಬ್ರಿಟಿಶ ಕರ್ನಾಟಕಕ್ಕೆ ಸ್ವತಂತ್ರವಾದ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದಕ್ಕಿಂತ ಅಖಂಡ ಕರ್ನಾಟಕದಲ್ಲಿ ಒಂದೇ ಒಂದು ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು ಕರ್ನಾಟಕದ ಸಂಸ್ಕೃತಿಕ ಏಕೀಕರಣದ ದೃಷ್ಟಿಯಿಂದ ಅತ್ಯಂತ ಅವಶ್ಯಕವಾದುದು.

(೩] ಸಧ್ಯದಲ್ಲಿ "ಅಫಿಲಿಯೇಟೆಡ್" ವಿಶ್ವವಿದ್ಯಾಲಯಗಳೇ ದೊರೆತರೆ ಸಾಕು. ಮೊದಲು ಅಖಂಡ ಕರ್ನಾಟಕ ಭಾವನೆಯು ಎಲ್ಲ ಕನ್ನಡಿಗರಲ್ಲಿಯೂ ಮೂಡಲಿ; ಆ ಮೇಲೆ "ಫೆಡರಲ್" ಅಥವಾ "ಯುನಿಟರಿ"ಗಳ ಬಗ್ಗೆ ವಿಚಾರಮಾಡಬೇಕು. ಯಾಕಂದರೆ ಮೊದಲು ಈ ಭಾವನೆಯು ಬಾರದಿದ್ದರೆ, ಕರ್ನಾಟಕ ರಾಷ್ಟ್ರನಿರ್ಮಾಣ ಕಾರ್ಯದ ರಥವು ಮುಂದೆ ಸಾಗದು ಅಫಿಲಿಯೇಟೆಡ್ ವಿಶ್ವವಿದ್ಯಾಲಯವು ಎಲ್ಲಕ್ಕಿಂತಲೂ ಸುಲಭ ಸಾಧ್ಯ ಆದ್ದರಿಂದ ಅದನ್ನೇ ಮೊದಲು ನಾವು ಸ್ಥಾಪಿಸಬೇಕು

೪ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವದು ಯೋಗ್ಯವು ಮೈಸೂರ ಮಹಾರಾಜರು ಕುಲಗುರುಗಳಾಗಿರಬೇಕು ಎಲ್ಲ ಕಾರ್ಯಗಳೂ 'ಸಿನೇಟ'ದ ಅಧಿಕಾರಕ್ಕೆ ಒಳಪಟ್ಟಿರಾಯಿತು ಈ 'ಸಿನೇಟ' ಸಭೆಯಲ್ಲಿ ಕರ್ನಾಟಕದ ಪ್ರತಿಯೊಂದು ಜಿಲ್ಲೆಯಿಂದ ಜನಸಂಖೆಯ ಪ್ರಮಾಣದ ಮೇಲಿಂದಲೂ ಕಾಲೇಜಗಳ ವರ್ಚಸ್ಸಿನಂತೆಯೂ ಪ್ರತಿನಿಧಿಗಳಿರಬೇಕು. ವಿಶ್ವವಿದ್ಯಾಲಯದ ಮುಖ್ಯಕಾರ್ಯಾಲಯವು ಬೆಂಗಳೂರ ದಂಡಿನಲ್ಲಿದ್ದರೆ ಅನೇಕ ಬ್ರಿಟಿಶ ಕರ್ನಾಟಕದ "ಸಂಸ್ಥಾನಿಕರಲ್ಲಿ ಸೇರಿಕೊಂಡು ಒಂದು ಗಣಿಗೆ ಬದ್ಧರಾಗುವ" ಕಲ್ಪನೆಯೂ ಭಯವೂ ದೂರಾಗುವವು

೫ ಯಾವದು ಮಾನ್ಯವಾಗುವದೆನ್ನುವದನ್ನು ಈ ದಿನ ಹೇಳಬೇಕಾದ್ದಿಲ್ಲ. ಆದರೆ ಮೈಸೂರ ವಿಶ್ವವಿದ್ಯಾಲಯವನ್ನೇ ಕರ್ನಾಟಕ ವಿಶ್ವವಿದ್ಯಾಲಯವನ್ನಾಗಿ ಮಾಡುವದು ಹೆಚ್ಚು ಶ್ರೇಯಸ್ಕರವೂ ಅವಶ್ಯಕವೂ ಇದ್ದುದರಿಂದ ಈ ವಿಚಾರವೇ ಎಲ್ಲರಿಗೂ ಮಾನ್ಯವಾಗುವಂತೆ ಚಳವಳವನ್ನು ಮಾಡಬೇಕು

೬ [ಅ] ಈ ಪ್ರಶ್ನೆಗೆ ನಮ್ಮ ಒಪ್ಪಿಗೆಯಿಲ್ಲದ್ದರಿಂದ ಆ ಬಗ್ಗೆ ಮಾರ್ಗಗಳನ್ನು ಸೂಚಿಸಲಾರೆವು [ಬ] ಮೊದಲು ಬ್ರಿಟಿಶ ಕರ್ನಾಟಕದವರು ಈ ವಿಚಾರಕ್ಕೆ ಒಪ್ಪುವಂತೆ ಚಳವಳಮಾಡಬೇಕು ಆಮೇಲೆ ಬ್ರಿಟಿಶ ಕರ್ನಾಟಕದವರು ಏಕಮತದಿಂದ ಮೈಸೂರಜನರ ಹಾಗೂ ಸರಕಾರದ ಸಮ್ಮತಿ ಇದಕ್ಕೆ ಅನುಕೂಲವಾಗುವಂತೆ ಚಳವಳಮಾಡಿ, ಮುಂಬೈ, ಮದ್ರಾಸ, ಹೈದ್ರಾಬಾದ, ಕೊಡಗು, ನ್ಯಾಯವಿಧಾಯಕ ಸಭೆಗಳಲ್ಲಿ ಈ ಬಗ್ಗೆ ಠರಾವುಗಳನ್ನು ಮಾಡಿಸಿ, ದಿಲ್ಲಿಯ ಎರಡೂ ಕಾಯದೆ ಮಂಡಳಗಳಲ್ಲಿಯೂ ಠರಾವುಗಳು ಸ್ವೀಕೃತವಾಗುವ ಹಾಗೆ ಮಾಡಬೇಕು. ಇಷ್ಟೆಲ್ಲ ಪ್ರಯತ್ನ ಮಾಡಿದ ಮೇಲೆ ಮಾತ್ರ ಸರಕಾರದವರು ತಮ್ಮ ಸಮ್ಮತಿಗಳನ್ನು ಕೊಡದೆ ಇರಲಾರರು. ಆದರೆ ಇಷ್ಟೆಲ್ಲ ಪ್ರಚಂಡಕಾರ್ಯವು. ಬಹು ಚೊಕ್ಕಟವಾಗಿ ನಡೆಯದೇ ಹೋದರೆ ಏನೂ ಕೆಲಸವಾಗದು ಆದ್ದರಿಂದ ಧನದ ನಿಧಿಯೊಂದು ಬೇಕು; ಮತ್ತೂ ಈ ಶಿಕ್ಷಣ ವಿಷಯಕ ಚಳವಳದಲ್ಲಿ ಪರಿಣತರಾದ ಆರೇ ಕಾರ್ಯದರ್ಶಿಗಳನ್ನು ಸಂಬಳದಿಂದ ನೇಮಿಸಬೇಕು. ಅವರು ಕರ್ನಾಟಕದ ತುಂಬೆಲ್ಲ ತಿರುಗಾಡಬೇಕು. ಮುಂಬೈ ಮದ್ರಾಸ ಮಡಿಕೇರಿ, ದಿಲ್ಲಿಗಳಂತಹ ಸರಕಾರದ ಕೇಂದ್ರಸ್ಥಾನಗಳನ್ನು ಅನೇಕಸಲ ಸಂದರ್ಶಿಸಬೇಕು, ಉತ್ತರ ಕರ್ನಾಟಕ ಸಂಸ್ಥಾನಗಳಂತಹ ಚಿಕ್ಕ, ಮೈಸೂರಂತಹ ದೊಡ್ಡ ಹಾಗೂ ಹೈದರಾಬಾದಿನಂತಹ ಅಸಹ್ಯವಾದ ರಾಜ್ಯವ್ಯವಸ್ಥೆಯುಳ್ಳ ಸಂಸ್ಥಾನಗಳ ಸಂಗಡ ಬ್ರಿಟಿಶ ಸರಕಾರದ ಒಪ್ಪಂದಗಳೇನಿವೆ, ಅವುಗಳೆಷ್ಟೆಲ್ಲ— ವಿಶೇಷತಃ ಹೈದರಾಬಾದ ಕರ್ನಾಟಕವನ್ನು—ಈ ಅಖಂಡ ಕರ್ನಾಟಕ ವಿಶ್ವವಿದ್ಯಾಲಯದಲ್ಲಿ ಏಕೀಕರಿಸಲು, ಆತಂಕಗಳೇನಿವೆ, ಏನಿಲ್ಲ; ಇದ್ದರೆ ಅವನ್ನು ಪರಿಹರಿಸುವ ಉಪಾಯಗಳಾವವು, ಎಂಬ ಪ್ರಶ್ನೆಗಳನ್ನೆಲ್ಲ ಅಭ್ಯಸಿಸಬೇಕು, ಇಂತಹ ಕಾರ್ಯಗಳಲ್ಲಿ ಕಾಲಾಭಾವದ ಮೂಲಕ ಗೌರವ ಕಾರ್ಯದರ್ಶಿಗಳಿಂದ ಆಗುವ ಸಂಭವವು ಕಡಿಮೆ; ಆದ್ದರಿಂದ ಇಷ್ಟು ತಲಸ್ಪರ್ಶಿಗೂ ಇಂತಹ ವಿಷಯದಲ್ಲಿ ಮುನ್ನರಿಗಳು ಅವಕಾಶದ ನ್ಯೂನತೆ ಮಾಡಬೇಕಾದರೆ ಪಗಾರದ ಕಾರ್ಯದರ್ಶಿಗಳನ್ನೇ ನೇಮಿಸಬೇಕಾಗುವದು.

ವಾಚಕರಿಗೆ ವಿಜ್ಞಾಪನೆ

"ಕನ್ನಡಿಗ"ನ ಹೊಸವರ್ಷವು ಪ್ರಾರಂಭವಾಯಿತು ಮುಂದಿನ ವಾರದಿಂದ ಕ್ರಮವಾಗಿ ೨ನೇ ವರ್ಷದ ವ್ಹಿ. ಪಿ. ಕಳಿಸುವೆವು. ಆದರೆ ಯಾವ ಚಂದಾದಾರರಿಗೆ ವ್ಹಿ ಪಿ ಯ ಸಾಕ್ಕಣಿಯ ತೆರಿಗೆಯು ಹೆಚ್ಚಾಗಬಾರದೆಂಬ ಇಚ್ಛೆಯಿದೆಯೋ ಅವರು ಈ ಸಂಚಿಕೆ ತಲ್ಪಿದೊಡನೆ ಮನಿಯಾರ್ಡರದಿಂದ ೧-೧೪-೦ ರೂ. ಕಳಿಸಬೇಕಾಗಿ ಬಿನ್ನಹ. ಇನ್ನು ಯಾರಿಗೆ 'ಕನ್ನಡಿಗ'ನ ಭೆಟ್ಟಿಯು ಅವಶ್ಯಕತೆಯಿಲ್ಲವೊ ಅವರು ಮಾತ್ರ ದಯವಿಟ್ಟು ಕೂಡಲೇ ನಮಗೆ ಒಂದು ಪತ್ರ ಬರೆದು ಹಾಗೆ ತಿಳಿಸಿದರೆ ಹೆಚ್ಚಾಗಿ ಉಪಕೃತರಾಗುವೆವು.

ವ್ಯವಸ್ಥಾಪಕ.

(೩ ನೇ ಪುಟದಿಂದ ಬಂದಿದ್ದು)

(ಗುಟ್ಟಿನ ಮಾತು ಹೇಳಿದರೆ ಸಿಟ್ಟೇ! ಬುದ್ಧಿ ಹೇಳಿದವನ ಕೂಡ ಗುದ್ದಾಟವೇ? ಕನಸು ಮನಸ್ಸುಗಳಲ್ಲಿಯೂ ಕೂಡ 'ಕನ್ನಡ! ಕನ್ನಡ' ವೆಂದು ಕನವರಿಸುತ್ತ ಹಗಲಿರುಳು ಅದರ ಉನ್ನತಿಯನ್ನೇ ನೆನೆಯುತ್ತಿರುವ ನನ್ನಿಗನ ಮೇಲೆ ಮುನಿಸೇ! ಹಸುಳೆಸು ಹೊಟ್ಟೆಗೆ ಹಿಡಿ ಹಿಟ್ಟಿಲ್ಲದೆ, ಅದನ್ನು ಕಟ್ಟಿ ಕಟ್ಟಿ ಮರುಗಿ ಸೊರಗಿ ಕೊರಗುತ್ತಿರುವಾಗ ಒಟ್ಟಿಯ ಬಗೆಯಲ್ಲಿ! ಕಾಡಿ ಕಾಡಿ ಬೇಡಿದರೂ ನೀಡುವರಿಲ್ಲ! ಅತ್ತುಕರೆದರೂ ನೋಡಿ ಎತ್ತಿಹಿಡಿಯುವರಿಲ್ಲ! ಕೂಗಿ ಚೀರುಚಿದರೂ ಕಿವಿಗೊಡುವರಿಲ್ಲ! ಈ ನಿಟ್ಟಿನಿಂದ ನೋಡು. ಎಳೆಯಾ ಎಲ್ಲರೂ ಕೂಸನ್ನು ಬರಿಗೈಯಿಂದ ನೋಡಿದರೆ, ಅದು ಕಳೆಗೊಂಡು ಬೆಳೆಯುವುದು ಹೇಗಯ್ಯಾ, ಉಡುಪನ್ನೊಗೆದು ಹಸನಾದ ನುಣುಪಾದ ಅರಿವೆಗಳನ್ನು ತೊಡಬೇಕಾದರೆ ಎಲ್ಲರೂ ಅದನ್ನು ಬಂಗಾರ ಮಾಡಬೇಕು. ಅಂದರೆ ಅದು ಸಿಂಗಾರವಾಗಿ ಮೆರೆಯುವದು ಇಷ್ಟೇ ನನ್ನ ಮಾತಿನ ಒಟ್ಟು —ಸಂ. ಕ.)

ಮುಂಬೈ ಕಾಯದೇ ಮಂಡಲ
(ನಮ್ಮ ಕಾಯದೇ ಮಂಡಲದ ಪ್ರತಿನಿಧಿಯಿಂದ)

ಮುಂಬೈ ತಾ. ೨೩-೩-೩೨

ಕಳೆದ ವಾರ್ತೆ.

ಕರ್ನಾಟಕ ಪ್ರತಿನಿಧಿಗಳಲ್ಲಿ ಶ್ರೀ. ಅಂಗಡಿ ಹಾಗೂ ಧಳವೀಲವರು ೧೫ ದಿವಸಿನಿಂದ ಬಂದಿರುವದೇ ಇಲ್ಲ. ಶ್ರೀ ಜೋಗರು ಸ್ವರಾಜ್ಯ ಪಕ್ಷೀಯರಾದ್ದರಿಂದ ಬರುವಂತಿಲ್ಲ. ಶ್ರೀ ಕಂಬಳೀಯವರು ೧೭ ವಾನೇ ದಿನ ಮರಳಿ ಬಂದರು.

ಮುಂಬೈ ಇಲಾಖೆಯಲ್ಲಿಯ ಬೀದಿಗಳೆಲ್ಲ ಸರಿಯಾಗಿಲ್ಲದ್ದರಿಂದ ಸರಕಾರವು ಬೇಡಿದ ಹಣದಲ್ಲಿ ೧೦ ರೂಪಾಯಿ ಕಡಿಮೆ ಮಾಡಿ, ಈ ಬಗ್ಗೆ ಇಲ್ಲಿ ಸರಕಾರದ ಧೋರಣವನ್ನು ನಿಷೇಧಿಸಬೇಕೆಂದು ಶ್ರೀ ಕರ್ಕಿಯವರು ಒಂದು ಉಪಸೂಚನೆಯನ್ನು ತಂದರು; ಕಾರವಾರ ಜಿಲ್ಲೆಯಲ್ಲಿ ರೇಲವೇ ಇಲ್ಲದ್ದರಿಂದ ಜನರಿಗೆ ತೊಂದರೆಯಾಗುವದನ್ನು ಸರಕಾರದವರು ಒಪ್ಪಿದರು, ಆದರೆ ಆ ಬಗ್ಗೆ ಯಾವ ಯೋಚನೆಯನ್ನು ಹೇಳಲಿಲ್ಲ. ಯಾಕೆಂದರೆ ಕರ್ನಾಟಕದ ಬಗ್ಗೆ ಅವರಿಗೆ ವಿಚಾರಿಸುವ ಕಾರಣವೇ ಇಲ್ಲ. ಕಾರವಾರ ಜಿಲ್ಲೆಯ ಬೀದಿಗಳ ಅವಸ್ಥಾ ಕರ ವಾಗಿ ಇದ್ದದು ಸರಕಾರಕ್ಕೆ ಗೊತ್ತಿದ್ದರೂ, ಹಣದ ಅಭಾವದ ಮೂಲಕ ಆ ಬಗ್ಗೆ ಏನೂ ಮಾಡಲಿಲ್ಲವೆಂದರು, ಕಾರವಾರ ಜಿಲ್ಲೆಯಲ್ಲಿ ಅರಣ್ಯದಿಂದ ಬರುವ ಉತ್ಪನ್ನದಕ್ಕಿಂತ ಹೆಚ್ಚಾಗಿ ಹಣವನ್ನು ಆ ಜಿಲ್ಲೆಯ ಬೀದಿಗಳ ದುರಸ್ತಿಗಾಗಿ ವೆಚ್ಚಮಾಡುತ್ತಿರುವೆವೆಂದು ಸರಕಾರವು ಭರವಸೆಕೊಟ್ಟ ಕೂಡಲೇ ಶ್ರೀ ಕರ್ಕಿಯವರು ತಮ್ಮ ಉಪಸೂಚನೆಯನ್ನು ಹಿಂದಕ್ಕೆ ತೆಗೆದುಕೊಂಡರು.

ಈ ವಾರದಲ್ಲಿ ಸಮುದ್ರ ಸುಂಗಿಯುವ ವಿಷಯವೇ ನಡೆಯಿತು. ಮುಂದೆ ಸರಕಾರಕ್ಕೆ ಇದರಿಂದ ಬಹಳೇ ಲಾಭವಾಗುವದಂತೆ! ಆದರಿಂದ ಸರಕಾರದವರು ಇದನ್ನು ಮುಂದರಿಸಲಿಕ್ಕೆ ಅಪ್ಪಣೆ ಬೇಕೇಬೇಕೆಂದು ವಾದಿಸಿದರು ಮತ್ತು ಅಪ್ಪಣೆಯನ್ನು ಕೊನೆಯಲ್ಲಿ ದೊರಕಿಸಿಕೊಂಡರು ಮುಸಲ್ಮಾನ ಹಾಗೂ ಬ್ರಾಹ್ಮಣೇತರರು ಅವರಂತೆ ನಡೆಕೊಳ್ಳಲು ಒಂಟಿ ಕಾಲಿನ ಮೇಲೆ ನಿಲ್ಲುತ್ತಿರುವಾಗ ತಿರುಗುವದು ಆಶ್ಚರ್ಯವಲ್ಲ!

೧೯ ನೇ ತಾರೀಖಿನ ದಿನ "ವತನದಾರ ಹಿಂದೂ ಜೋಯಿಸರ" ಮಸೂದೆಯನ್ನು ಶ್ರೀ ಬೋಳೆಯವರು ತಂದರು. ಈ ಮಸೂದೆಯ ಮೇಲೆ ಶ್ರೀ ಕಂಬಳೀಯವರು ಒಳ್ಳೇ ಹುರುಪಿನಿಂದ ಮಾತನಾಡಿದರು. ಹಳ್ಳಿಗಳಲ್ಲಿ ಇರುವ 'ಜೋಯಿಸರು ತಮ್ಮ ಕೆಲಸಗಳನ್ನು ಚನ್ನಾಗಿ ಮಾಡುವದಿಲ್ಲ ತಮಗೆ ಹಾಕಿ ಕೊಟ್ಟ ವತನದಕ್ಕಿಂತ ಜನರಿಂದ ಹೆಚ್ಚಿಗೆ ಸುಲಿಯುತ್ತಾರೆ, ಆ ಜೋಯಿಸರನ್ನು ಬಿಟ್ಟು ಎರಡನೇಯವರನ್ನು ಕರೆದರೆ ತಮ್ಮ ಹಕ್ಕನ್ನು ಬಲಾತ್ಕಾರದಿಂದ ನಡಿಸಿ ತಮಗೆ ದೊರೆಯುವ ಹಣವನ್ನು ಬಿಡುವದೇ ಇಲ್ಲ. ಈ ಬ್ರಾಹ್ಮಣ ಜೋಯಿಸರ ಉಪದ್ರವಿಷ್ಟೇ ಅಲ್ಲ, ಬೇರೆ ಜಾತಿಯ ಜನರು ತಮ್ಮ ಕಾರ್ಯವನ್ನು (ಮದುವೆ ಮುಂತಾದ ಕಾರ್ಯಗಳಂತೆ) ಮಾಡಲಿಕ್ಕೆ ಹೋದರೆ ನಿಮಗೆ ಅಧಿಕಾರವಿಲ್ಲವೆಂತಲೂ ಬೆದರಿಸುತ್ತಿದ್ದಾರೆ. ಇಂಥ ಈ ಬ್ರಾಹ್ಮಣರನ್ನು ನೋಡುವದು ನಮಗೆ ಬಹಳ ಕಷ್ಟವೆನಿಸುತ್ತದೆ.

"ಇದಲ್ಲದೆ ದಿವಾಣಿ ಕೋರ್ಟುಗಳಲ್ಲಿ ಜಾತಿ ಕಂದು ಲಿಂಗಾಯತರಿಂದ ಹಣವನ್ನು ವಸೂಲ ಮಾಡುತ್ತಾರೆ ಯಾರಿಗೆ ಈ ಬ್ರಾಹ್ಮಣ ಜೋಯಿಸರು ಬೇಕಾಗಿರುವದಿಲ್ಲವೋ ಅವರು ಸಹ ಈ ಬ್ರಾಹ್ಮಣ ಜೋಯಿಸನ ಕಡೆಗೆ ಹೋಗಬೇಕಾಗುತ್ತದೆ."

"ಇನ್ನು ದಾವೆ ತಂದ ಬ್ರಾಹ್ಮಣ ಜೋಯಿಸನಿಗೆ ಸಹಾಯವು ಎಷ್ಟೆಂದು ಕೇಳಲಿ! ಅಪ್ಪಬ್ಬವಕೀಲರು (ಬ್ರಾಹ್ಮಣ) ಅವನಿಗೆ ಸಹಾಯ ಮಾಡುವರು! ಜಡ್ಜಿಗಳು (ಬ್ರಾಹ್ಮಣರು) ಅವನಂತೆ 'ಕಟ್ಟಿ' ನಿಕಾಲಿ ಮಾಡುವರು. ಇಷ್ಟಾಗಿಯೂ ಒಂದು ವೇಳೆ ಅವರು ಹಾಯಕೋರ್ಟಿಗೆ ಹೋಗಿದ್ದಾದರೆ ಅಲ್ಲಿಯ ಜಜ್ಜ ಜನರಿಗೆ 'ಹಿಂದೂ ಲಾ'ದ ಜ್ಞಾನವೇಯಿರುವದಿಲ್ಲವಾದ್ದರಿಂದ ಅವರು ಹಾಯಕೋರ್ಟಿನ ಪಂಡಿತರನ್ನು ಕೇಳುವರು, ಅವರು ಬ್ರಾಹ್ಮಣರಿಗೆ ಅನುಕೂಲಿಸಿಯೇ ಉತ್ತರ ಕೊಡುವರು, ಆದ್ದರಿಂದ ಮೊದಲಿನಿಂದ ಹಾಕಿ ಕೊಡಲ್ಪಟ್ಟ ಈ ಜೋಯಿಸರ ವತನದ ಹಕ್ಕನ್ನು ನಿರ್ಮೂಲ ಮಾಡಬೇಕು"

ಶ್ರೀ ಪರಾಂಜಪೆಯವರು ಇದಕ್ಕೆ ಉತ್ತರ ಕೊಟ್ಟರು. ವತನದಾರ ಜೋಯಿಸರ ಬಗ್ಗೆ ಮಾತ್ರ ಈ ಮಸೂದೆಯು ಇರತಕ್ಕದ್ದಲ್ಲ, ಆದರೆ ಹಳ್ಳಿಗಳಲ್ಲಿಯ ಪಾಟೀಲ, ಅಯ್ಯ, ವಾಲೀಕಾರ ಹೊಲೆಯ, ಮಾದಿಗ ಮೊದಲಾದ ಪ್ರತಿಯೊಬ್ಬನು ವತನವಿರುವದರಿಂದ ಶುಭಕಾರ್ಯಗಳಲ್ಲಿ ತನಗೆ ಬರಬೇಕಾದ ಬಾಬುಗಳು ಬೇಕೆಂಬುದನ್ನು ಕಾಯದೇದಿಂದ ರದ್ದ ಪಡಿಸತಕ್ಕದ್ದೆಂದು ಒತ್ತಿ ಹೇಳಿದರು! ಈ ಮಸೂದೆಯು ಸ್ವೀಕೃತವಾಗಿ ಪುನರ್ವಿಚಾರಣೆಗಾಗಿ ಒಂದು ಉಪಮಂಡಳಕ್ಕೆ ಒಪ್ಪಿಸಲ್ಪಟ್ಟಿತು.

ತಾ. ೨೦ ನೇ ದಿನ ಶ್ರೀ. ಜಾಧವರಾಯರು ಮದ್ರಾಸ ವರಿಷ್ಠಾಡಗಳಿಗೆ ಇಲ್ಲಿಯ ತಮ್ಮ ಕೆಲಸವನ್ನು ಬಿಟ್ಟು ಬ್ರಾಹ್ಮಣೇತರ ಚಳವಳನ್ನು ಅಭಿವೃದ್ಧಿಗೊಳಿಸಲು, ಹೋದದ್ದಕ್ಕಾಗಿ ಚನ್ನಾಗಿ ಛೀ ಹಾಕಿಸಿಕೊಂಡರು. ತಮ್ಮ ತಪ್ಪನ್ನು ಕೊನೆಗೆ ಒಪ್ಪಿದರು.

ಜೂಜಾಟವದನ್ನು ನಿಲ್ಲಿಸಬೇಕೆಂಬ ಬಗ್ಗೆ ಬಹು ವಾದವಿವಾದವಾಯಿತು. ಶ್ರೀ ಸರದೇಸಾಯರೂ ಈ ಬಗ್ಗೆ ಮಾತನಾಡಿದರು ಏನಾದರೂ ನಿಲ್ಲಿಸಬಾರದೆಂದೇ ನಿಶ್ಚಯವಾಯಿತು. ಸರಕಾರಕ್ಕೆ ಜಯವು ಕಟ್ಟಿಟ್ಟಂತೆಯಾಗಿದೆ.

ಕೆಲವು ಖಾಸಗೀ ಮಸೂದೆಗಳ ಮೇಲೆ ವಾದವಿವಾದಗಳಾದವು, ಠರಾವುಗಳು ಒಂದೆರಡು ಸಭೆಯ ಮುಂದೆ ಬಂದು, ಉಳಿದವುಗಳೆಲ್ಲ ಮುಂದಿನ ಅಧಿವೇಶನಕ್ಕೆ ಮೂಡಲ್ಪಟ್ಟವು. ಶನಿವಾರ ೨೬ ನೇ ತಾರೀಖಿನ ದಿನ ಈ ಅಧಿವೇಶನದ ಕೆಲಸವಲ್ಲ ತೀರಿಹೋಯಿತು. ಪ್ರಶ್ನೋತ್ತರಗಳನ್ನು ಮುಂದಿನ ಸಲ ಕಳಿಸುವೆ.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—
ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್
ಜಮಖಂಡಿಕರ ವಾಡೇ ೪೯೫ ಶನಿವಾರ ಪುಣೇಶಹರ

ಹೊಟ್ಟೆನೋವು ಹೊಟ್ಟೆನೋವು

ಪೋಟದುಖೀ

ಶೌಚಕಡೆಗೆ ಸಾಫ ಆಗದಿರುವದು, ಹೊಟ್ಟೆಯಲ್ಲಿ ಗುದ್ರಿಸ್ಸುವದು, ಅಜೀರ್ಣ ಆಗುವದು ಭೋಳಿಬರುವದು, ಕಣ್ಣು ಕತ್ತಲೆಗಡಿಸುವದು, ಕರಳಿನಲ್ಲಿಸೀರು ಒಡೆಯುವದು, ವಾಯುವಿನಿಂದ ಮತ್ತು ವಾಫಿನಿಂದ ಹೊಟ್ಟೆಯಲ್ಲಿ ಗ್ಯಾಸ (Gas) ಆಗಿ ಹುಟ್ಟಿಕೊಳ್ಳುವದು, ಹೊಟ್ಟೆಯುಬ್ಬುವದು, ಇತ್ಯಾದಿ ಹೊಟ್ಟೆಯ ಸಂಬಂಧವಾದ ಎಲ್ಲ ಬಗೆಯ ರೋಗಗಳೇ ಏಕ ತಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣ ಹೊಂದುವವು. ಇದಲ್ಲದೆ ಹೊಟ್ಟೆಯೊಳಗಿನ ಎಲ್ಲ ವಿಕಾರಗಳಿಗೂ

ಸೊಹೋನಿ ಇವರ ಪೋಟದುಖೀ

ಯು ಖಾತ್ರಿಯ ಮತ್ತು ರಾಮಬಾಣ ಔಷಧವಿದೆ. ಬಾಟ್ಲಿಯೊಂದಕ್ಕೆ ರೂ ೩॥ ಟಪಾಲ ಖರ್ಚು ಬೇರೆ.

ಪ್ರಮಾಣ- ಪ್ರತಿಯೊಂದು ಸಲ ೨ ಗುಳಿಗೆ ಮಧ್ಯಾಹ್ನದ ಮತ್ತು ರಾತ್ರಿಯ ಊಟವಾದಮೇಲೆ ಒಂದು ಗುಟುಕು ನೀರಿನಲ್ಲಿ ತೆಗದು ಕೊಳ್ಳಬೇಕು.

ವಿಶೇಷ ಸೂಚನೆ ಪತ್ರ ವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಿಳಾಸ— ಪಿ. ಎಸ್. ಸೊಹೋನೀ ಬೇಲ ಬಾಗದ ಹತ್ತಿರ ೧೭೪ ಬುಧವಾರ ಪೇಟ ಪುಣೆ ಶಹರ

पोटदुखी.

ಅಸ್ಸಲ, ಗ್ಯಾರಂಟೀಡ, ೯ ವರ್ಷಕ ಗೋಲ್ಡ ಗಿಲ್ಟ ರಿಸ್ಟವಾಚ

ಬೆಲೆ ೩-೮-೦ ಪಟ್ಟಿ ಸಹಿತ ಟಿ. ಪಿ. ಪ್ರತ್ಯೇಕ

ಲೈಟ್ ವಾಚ ಕಂ. (India) ಮುಂಬೈ ನಂ. ೪

ಕಣ್ಣಿನ ಔಷಧ

ಹೂವು, ಮೋತಿಬಿಂದು, ದೃಷ್ಟಿ ಮಾಂದ್ಯ, ಕಂಬುಚಿಟ್ಟಿ, ಕಣ್ಣು ಬರೋಣ, ಕಂಬಾಗೋಣ, ಮತ್ತು ಗುಂಪ್ಪಿ ರೆಪ್ಪಿ ಬಿಕ್ಕಿಗಳ ವಿಕಾರಗಳ ಇಂತಹ ಕಣ್ಣಿನ ಎಲ್ಲ ಬೇನೆಗಳಿಗೆ ಈ ಔಷಧವು ಸಂಜೀವನಿಯೇ ಶಸ್ತ್ರಕ್ರಿಯೆಗಿಂತಲೂ ಮೇಲು! ರಾ ಬ. ಪಂಡಿತ- ಡಿ. ಡಿ. ಕಲೆಕ್ಟರ ...

ಸೂಚನೆ: ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ.
ವಾ. ವಿ ಕರಮರಕರ ೫೪೦ ಶನಿವಾರ ಪುಣೆಶಹರ

ಹಳೇ ಮೋಟಾರ

ಸೋಸೀಪರದಿಂದ ಮತ್ತು ದೇಶ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ವಿ. ಗರವಾರೆ
ಮಾಧವಾಶ್ರಮ ಮುಂಬೈ ನಂಬರ ೪
ಬಾಗಲಕೋಟೆಯ ಏಜಂಟರು ಮಂಗಳವಾರ ಪೇಠ ಒಂಫಗಳು
C/o ಕನ್ನಡಿಗನ ಕಾರ್ಯಾಲಯ

ಸೊರವಾಲ ಬ್ಲೈಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ, ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರುಗಳಿಗಿಂತ ಶ್ರೇಷ್ಠವಾದುದೊಂದೇ. ಒಂದು ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ ೫ ಆಣೆ ಟಪಾಲ ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಸೊರವಾಲ ಬ್ರಾಂಡ ಕೊ. (ರಜಿಸ್ಟರ್ಡ) ಪುಣೇಶಹರ

ಶಿಲಾಲಿಪಿಗಳನ್ನು ಓದಬೇಕೆನ್ನುವಿರಾ?

ಬೇಕಾದವರು ನಮ್ಮ ಕಡೆಗೆ ೬ ಪೈಸೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಿರಿ. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು!

ವಿಳಾಸ — ಗೆಳೆಯರ ಗುಂಪು, ಬಲಸಂಗಿ (ಪೋ) ಜಿಲ್ಲಾ ವಿಜಾಪುರ.

ಗುಬ್ಬಿ ಶ್ರೀ ಚೆನ್ನಬಸವೇಶ್ವರ ನಾಟಕ ಸಂಘ

ಇವರು ಎಪ್ರಿಲ ೧ ನೇ ವಾರದಿಂದ ಮುಡಕೇರಿಯಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನಾಡಲು ಪ್ರಾರಂಭಿಸುವರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ಜಾಹೀರ ನೋಟಿಸ

ಯಾವತ್ತೂ ಜನರಿಗೆ ತಿಳಿಪಡಿಸುವದೇನಂದರೆ ಈ ಚಿಟ್ಠಿಯಲ್ಲಿಯ ಕೆಳಗೆ ಬರೆದ ಊರುಗಳ ಹತ್ತರ ನದಿಯ ಮೇಲೆ ನಾವು ಆಡಿಸುವ ಹಕ್ಕನ್ನು ೧ ನೇ ಎಪ್ರೀಲ ೧೯೪೭ ದಿಂದಾ ಒಂದು ವರುಷದ ಮೂರ್ತಿ ತಾರೀಖು ೧೫ ಎಪ್ರೀಲ ೧೯೪೭ ಮಧ್ಯಾನ್ಹ ಸಂಜೆಯ ೫ ಘಂಟೆಗೆ ಬಾಗಲಕೋಟ ಸಬ್ಬ್‌ಡಿವ್ಹಿಜನಲ್ ಆಫೀಸದಲ್ಲಿ ಲಿಲಾವ ಮಾಡಲಾದೀತು.

ನಾವಿನ ಹೆಸರು.	ಸ್ಥಳ	
ಕಲಾದಗಿ	ಘಟಪ್ರಭಾ ನದಿಯ ಮೇಲೆ.	
ಅನಗವಾಡಿ	ಸದರ	
ಗೋವನಕೊಪ್ಪ	ಮಲಪ್ರಭಾ ನದಿಯ ಮೇಲೆ	
ಚಿಕ್ಕಗಡ್ಡ	ಸದರ	

ಲಿಲಾವಿನಲ್ಲಿ ಬೇಡಲಿಚ್ಛಿಸುವವರು ಎಸರ್ಟ ಫಾಯಿದೆ ಸರ್ಟಿಫಿಕೇಟುಗಳನ್ನು ಸ್ವತಃ ಹಾಜರ ಮಾಡತಕ್ಕದ್ದು. ಮತ್ತು ತಾರೀಖು ೧೦ ನೇ ಎಪ್ರಿಲ ೧೯೪೭ ನೇ ದರ ಒಳಗಾಗಿ ಲಿಲಾವಿನಲ್ಲಿ ಬೇಡುವ ಘೌಂಟಾ ೧೦ ರೂಪಾಯಿಗಳನ್ನು ಸಬ್ಬ್ ಡಿವ್ಹಿಜನಲ ಆಫೀಸರ ಬಾಗಲಕೋಟ ಇವರ ಕಡಿಗೆ ಡಿಪಾಜಿಟ್ ಮಾಡತಕ್ಕದ್ದು ಡಿಪಾಜಿಟ ಇಟ್ಟ ರಕಮಿನ ಪಾವತಿಯನ್ನು ಸಬ ಡಿವ್ಹಿಜನಲ ಆಫೀಸರ ಬಾಗಲಕೋಟ ಇವರು ಪಾವತಿ ಕೊಡುವರು.

ಲಿಲಾವಿನ ಶರ್ತುಗಳು ಮುಂತಾದವು ಬಾಗಲಕೋಟ ಸಬ್ಬ್ ಡಿವ್ಹಿಜನಲ ಆಫೀಸದಲ್ಲಿ ಕಚೇರಿಯ ವೇಳೆಯಲ್ಲಿ ರವಿವಾರ ಹಾಗೂ ಸೂಟಿ ದಿವಸಗಳ ಹೊರ್ತಾಗಿ ನೋಡಲಿಕ್ಕೆ ಸಿಗುವವು. ಮತ್ತು ಲಿಲಾವು ಆಗುವ ಸಮಯದಲ್ಲಿ ಸಹ ತಿಳಿಸುವದರಲ್ಲಿ ಬರುವದು.

Sd/ S. B. Rege.
Executive Engineer, Bijapur District

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲೈಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಮೀಟಿಂಗ ಎತ್ತು ನ ಶ್ರಮುಕ್ರ ೧೯೪೭ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನೂತನವಾಗಿ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಮೆಂಬರರು ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದಸ್ಯರುಗಳಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಬಹುಮಾನ ಕೊಡಬೇಕೆಂದು ನಿರ್ಣಯವಾಯಿತು—

(೧) ಬಾಂಡ ನಂ. ೫೬೦೦ ಮಿ. ವಿಠ್ಠಲ ಚಿಮ್ಮಾಜಿ ನಾಡ ಕರ್ಣಿ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೭ ಮಿ| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ ತುಮಕೂರು)

(೩) ಬಾಂಡ ನಂ. ೧೪೯೪೭ ಮಿ|| ವೆಂಕಟರಮಣ ವೆಂಕಟರ ಮಣ ಹೆಗಡೆ, ಸೇತುವೆ ಮ್ಯಾನೇಜರು ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕೆನರಾ

(೪) L. R. C. ಬಾಂಡ ನಂ ೧೫೭೩ ಮಿ| ಜಿ ವೆಂಕಟಪ್ಪಾ ವ್ಯಾಪಾರ ಮತ್ತು ಜಮೀನದಾರ ಬ್ರಾಹ್ಮಣರ ಬೀದಿ ಬಳ್ಳಾರಿ.

(೫) ಬಾಂಡ ನಂ. ೫೫೦ ಮಿ|| ರಾಮಚಂದ್ರ ವಾಮನ ಕಾಂಬಳೆ ಕಾಯಸ್ಥರ ವಾಡಾ ಪ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೩೦ ಮಿ| ಆರ್. ಎಸ್. ನಾಡಿಗೇರ್ ಮಾಸ್ತರ ಗವರ್ನಮೆಂಟ ಸಿಟಿ ಹಾಯಿಸ್ಕೂಲ ಹೈದರಾಬಾದ, (ಸಿಂಧ)

ಬಿ. ಎಸ್ ಕೃಷ್ಣ
ಚೀಫ ಏಜಂಟ (ಮುಂಬಯಿ ಇಲಾಖಾ)

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯ ವಿದ್ಯಾರಣ್ಯಮುದ್ರಣಾಲಯದಲ್ಲಿ ಮುದ್ರಿಸಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಅಕ್ಕಿಯ ವ್ಯಾಪಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವೀದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯಂತಹ್ನ ನಮುಕ್ಕನು ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು............	ನೂರಕ್ಕೆ	ವರ್ಷಕ್ಕೆ	2½
ಸೇವ್ಹಿಂಗ್ಸ ಬ್ಯಾಂಕ ಠೇವು	,,	,,	4½
ಮುದ್ದತೀ ಠೇವು ೬ ತಿಂಗಳಿಗೆ	,,	,,	6
,, ೧೨ ತಿಂಗಳಿಗೆ	,,	,,	7

ಪ್ರಾಮಿಸರಿ ನೋಟು ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರು ನಿತ್ಯಂ ನಿಜದೇಶಸೇವನಂ।

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುಂಬಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿಯುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣ ಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ— ದಿ ಸ್ಪೆಶ್ಯಲ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೮೧ ಬುಧವಾರ ಪೇಠ ಜಾನಿ ಪಡಕೀ ಗಲ್ಲಿ, ಪುಣೆ ಸಿಟಿ.

"ಕನ್ನಡಿಗ"ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫೦ ರೂ. ಉಪಕಾರಕರ್ತರಿಗೆ ವಾ. ೨೫ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬,೦೦೦ ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ.	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್‌ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ.ಯಿಂದ ೫-೧-೦

ಬಿಡಿ ಸಂಚಿಕೆಗೆ ೧ ಆ. ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to—

N. K. Kulkarni. Agent Bagalkot.

ಇಹವೃತ್ತ

ಗುಬ್ಬಿ ಚನ್ನಬಸವೇಶ್ವರ ನಾಟಕ ಸಭೆ ಶಾಖಾ ನಂ ೧ ಇಲ್ಲಿಗೆ ಬಂದಿದ್ದು, ಪ್ರಯೋಗಗಳು ತಾಜ ನಾಟಕ ಶಾಲೆಯಲ್ಲಿ ನಡೆದಿವೆ. ನಾಳಿನ ದಿನ ಹೊಸ ನಾಟಕವಾದ "ಚಂದ್ರಗ್ರಹಣ" ವು ಅಭಿನಯಿಸಲ್ಪಡುವದು. "ಗ್ರಹಣ" ವು ಹೇಗೆ ಹಿಡಿಯುತ್ತದೆನ್ನುವದನ್ನು ಮುಂದಿನ ವಾರದಲ್ಲಿ ತಿಳಿಸುವೆವು!

ಪಾರ್ಶಿ ಆಲ್‌ಫ್ರೆಡ್ ನಾಟಕ ಮಂಡಳಿಯವರೂ ಬಂದಿದ್ದು ನಿಡಗುಂದಿ ನಾಟಕಶಾಲೆಯಲ್ಲಿ ಪ್ರಯೋಗಗಳು ಆಗಹತ್ತಿವೆ. "ಪಂಜಾಬ ಮೇಲ" ಬೇಗನೇ ಅಭಿನಯಿಸಲ್ಪಡುವದು,

ಬೀಳಗಿಯಿಂದ ಬಾಗಲಕೋಟೆಗೆ ಬರುವ ಗುಡ್ಡದದಾರಿಯಲ್ಲಿ ವಂಟಿನ ಮಲ್ಲಿಕಾರ್ಜುನ [ವಾರಿ ಮಲ್ಲಪ್ಪನ] ಗುಡಿಯೂ ಹೊಂಡವೂ ಅವೆ. ೩-೪ ವರ್ಷ ಮಳೆ ಇಲ್ಲದ್ದರಿಂದ ಹೊಂಡವು ಬತ್ತಿ ದಾರೀಕಾರರಿಗೆ ನೀರಿಲ್ಲದೆ ಸಾಯುವ ಪ್ರಸಂಗ ಬರುತ್ತದೆ. ಈ ಕಷ್ಟವನ್ನು ಯಥಾಶಕ್ತಿ ದೂರಮಾಡಬೇಕೆಂದು ಬೂದ್ಯಾಳ ಮಲ್ಲಪ್ಪನವರೆಂಬ ಉದಾರ ಗೃಹಸ್ಥರು ದಿನಾಲು ಎರಡು ಗಾಡಿ ನೀರು ಕಳುಹಿಸಿ ಆ ದೇವಸ್ಥಾನದ ಹತ್ತರ ಅರವಟ್ಟಿಗೆ ಇಟ್ಟಿರುವರೆಂದು ಕೇಳುತ್ತೇವೆ. ಸ್ತುತ್ಯವು.

ಜೀವದಯಾ ಸಂಸ್ಥೆಯ ಪತಿಯಿಂದ ಶ್ರೀ ಮುತಾಲೀಕರು ೪-೬ ಜನ ಸ್ವಯಂಸೇವಕರೊಂದಿಗೆ ಯಮನೂರಿಗೆ ಹೋಗಿ, ಅಲ್ಲಿ ವಧೆಯಾಗುವ ಮೂಕಪ್ರಾಣಿಗಳನ್ನು ಉಳಿಸಿಕೊಂಡರು. ಅದೇ ಪ್ರಕಾರವಾಗಿ ಮಂಗಳಗುಡ್ಡದ ಜಾತ್ರೆಯಲ್ಲಿಯೂ ಪ್ರಯತ್ನಿಸಲು ಹೋಗಿದ್ದಾರೆ.

IN LIFE ASSURANCE

GO TO THE ORIENTAL

IN AGE SIZE AND STRENGTH

THE GREATEST INDIAN

N. R. ... Agent

ನಂ. ೭. ೧೯೪೭ ವಾ. ಚಂದಾ ೧—೧೨—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮುಂಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಅಧಿಕ ಚೈತ್ರ ವದ್ಯ ೪ ಶಕೆ ೧೮೬೯. ತಾ॥ ೨ ೪-೧೯೪೭. | ಸಂಚಿಕೆ ೨

ಸಂಪಾದಕರ ಭೂಮಿಕೆ.

(*)

ನನ್ನ ಮನಸಿನ ಮೇಣವನಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ

ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹ ಗಂಧವಹವೆಂದು ತಿಳಿಯೋ॥

—ಅಂಬಿಕಾ ತನಯ ದತ್ತ

ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯು ಇತ್ತಿತ್ತಲಾಗಿ ಕರ್ನಾಟಕದ ಅತ್ಯಂತ ಮಹತ್ವದ ಪ್ರಶ್ನೆಗಳಾದ ಕರ್ನಾಟಕ ಏಕೀಕರಣ ಹಾಗೂ ಕರ್ನಾಟಕ ವಿಶ್ವವಿದ್ಯಾಲಯಗಳ ಬಗ್ಗೆ ಹೆಚ್ಚಾಗಿ ಮನಸ್ಸನ್ನು ಹಾಕಹತ್ತಿರುವದು ಆನಂದದ ಸಂಗತಿ. ಮೊದಮೊದಲು ಈ ಪ್ರಶ್ನೆಗಳೆಂದರೆ ಪ್ರಾಂತಿಕ ಕಾಂಗ್ರೆಸ ಕಮೀಟಿಯವರಿಗೆ ಅಷ್ಟೊಂದು ಮಹತ್ವದ ವಿಷಯಗಳಾಗಿರಲಿಲ್ಲ. ಆದರೆ ಈಗ್ಗೆ ಅವರ ದೃಷ್ಟಿಕೋನವು ಬದಲಾಗಿ, ಕರ್ನಾಟಕ ರಾಷ್ಟ್ರ ನಿರ್ಮಾಣದ ಕಾರ್ಯಗಳಿಗೆ ಮನಸ್ಸು ಎಳೆಯುತ್ತಿರುವದು ಶುಭಚಿಹ್ನವು. ಅಲ್ಲಿ ಈ ಪರಿಸ್ಥಿತಿಯನ್ನುಂಟು ಮಾಡಿದ್ದಕ್ಕಾಗಿ ಈಗಿನ ಅಧ್ಯಕ್ಷರಾದ ಕರ್ನಾಟಕ ಭೂಷಣ ಕೌಜಲಗೀ ಶ್ರೀನಿವಾಸರಾಯರನ್ನು ನಾವು ಅಭಿನಂದಿಸುವೆವು. ಕಳೆದ ವಾರದಲ್ಲಿ ಕರ್ನಾಟಕ ವಿಶ್ವವಿದ್ಯಾಲಯದ ಪ್ರಶ್ನೆಮಾಲಿಕೆಯೂ, 'ಕನ್ನಡಿಗ'ನ ಉತ್ತರವೂ ಪ್ರಸಿದ್ಧವಾಗಿವೆ. ಈ ವಾರದಲ್ಲಿ ಕರ್ನಾಟಕ ಏಕೀಕರಣದ ಪ್ರಶ್ನೆಮಾಲಿಕೆಯೂ "ಕನ್ನಡಿಗ"ನ ಉತ್ತರವೂ ಪ್ರಸಿದ್ಧವಾಗಿವೆ. ಕರ್ನಾಟಕದ ಅಭಿವೃದ್ಧಿಯಲ್ಲಿ ಕಳಕಳವಿದ್ದ ವಿಚಾರಶೀಲರಾದ ಮಹಾಜನಗಳೆಲ್ಲ ಕೂಡಲೇ ಈ ಎರಡೂ ಪ್ರಶ್ನೆಮಾಲಿಕೆಗಳಿಗೆ ಉತ್ತರ ಬರೆದು ಶ್ರೀಮಾನ್ ಕೌಜಲಗೀ ಶ್ರೀನಿವಾಸರಾಯರ ಕಡೆಗೆ ಕಳುಹಿಸಬೇಕಾಗಿ ಆಗ್ರಹಪಡುತ್ತೇವೆ. ಈ ಪ್ರಶ್ನೆಮಾಲಿಕೆಗಳೆರಡೂ ಮಹತ್ವದವಿದ್ದು, ಅವುಗಳಿಗೆ ಕನ್ನಡಿಗರು ತಮ್ಮ ತಮ್ಮ ಮತವನ್ನು ಬೇಗನೆ ಪ್ರಕಟಿಸುವದು ಅತ್ಯಾವಶ್ಯಕವಾದುದು.

ಕನ್ನಡವೂ ಮರಾಟಿಯ ನಾಟಕಗಳೂ ಎಂಬ ಲೇಖವು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಪ್ರಕಟವಾಗಿದೆ. ವಾಚಕರು ಅದನ್ನು ಅವಶ್ಯವಾಗಿ ಓದಬೇಕು. ಅಂದರೆ ನಾಟಕದ ವಿಷಯದಲ್ಲಿ ತಮ್ಮ ಕುಲಗುರುಗಳಾದ ಕನ್ನಡಿಗರಿಗೆ ಮರಾಟರು ಯಾವ ಬಗೆಯ ಸಂಭಾವನೆಯನ್ನು ಮಾಡುತ್ತಿರುವರೆಂಬುದು ತಿಳಿಯುವದು. ಮಹಾರಾಷ್ಟ್ರ ನಾಟಕಗಳ ಪಿತಾಮಹರಾದ ಕೈ. ಕಿರ್ಲೋಸ್ಕರರೂ —ಕರ್ನಾಟಕದ ಕಿರ್ಲೋಸ್ಕರರು— ಕನ್ನಡ ನಾಟಕಗಳ ಮಾಧುರ್ಯದಿಂದ ಆನಂದವನ್ನು ಹೊಂದಿ, ನಾಟ್ಯಕಲೆಯ ವಿಷಯದಲ್ಲಿ ಉಚ್ಚ ಭಾವನೆಯಿಂದ ಪ್ರೇರಿತರಾಗಿ, ಮೊದಲು ಕನ್ನಡದ ಹೆಸರಾದ ಶಾಕುಂತಲ ನಾಟಕವನ್ನು ಮರಾಟಿಯಲ್ಲಿ ಭಾಷಾಂತರಿಸಿದರು. ತಾವು ರಚಿಸಿದ, ನಾಟಕಗಳಲ್ಲಿ ಕನ್ನಡ ರಾಗಗಳನ್ನು ಸಹ ಸೇರಿಸಿದರು. ಶ್ರೀ ದೇವಲರು ಕೂಡ ಅವರ ಕಿತ್ತೆಯನ್ನೇ ತೀಡಿದರು. ಕರ್ನಾಟಕದಿಂದ ಹೀಗೆ ಉಗಮ ಹೊಂದಿ ಮಹಾರಾಷ್ಟ್ರದಲ್ಲಿ ಹರಿಯುತ್ತಿರುವ ಮರಾಠೀನಾಟ್ಯ ಕಲೆಯ ನಿಸ್ಸೀಮ ಭಕ್ತರೆಲ್ಲ ಕನ್ನಡಕ್ಕೆ ಮೊದಲು ಮಾನಕೊಡಲೇ ಬೇಕಾಗುವದು. ಆದರೆ ಇದನ್ನು ಮರೆತು, 'ಭಾವಬಂಧನ'ವೆಂಬ 'ವ್ಯಕ್ತ ನಾಟಕ' ನಾಟಕಗಳಲ್ಲಿ ಕನ್ನಡವನ್ನು ಹೀಯಾಳಿಸುವದನ್ನೇ ತಮ್ಮ ಮುಂದಿಟ್ಟುಕೊಂಡು ತಮ್ಮ ಮಹನೀಯರಿಗೇನೆನ್ನಬೇಕೋ ತಿಳಿಯದು. ಮರಾಟರು ಕನ್ನಡನುಡಿಗೆ ಎಂತಹ ನಿಂದಾಜನಕವಾದ 'ಸಂಭಾವನೆ'ಯನ್ನು ಮಾಡಿದರೂ ಅನೇಕಜನಕನ್ನಡಿಗರಲ್ಲಿ ಸಾತ್ವಿಕ ಕೋಪವು ಕೆಲಕದು. ಶ್ಯಾಮಲೆಯು, ಬರೆಯುವ ಭರದಲ್ಲಿ, ಗಂಧರ್ವ ನಾಟಕದವರ ಬಗ್ಗೆ ಒಂದೆರಡು ಶಬ್ದಗಳನ್ನು ಕಠೋರವಾಗಿ ಬರೆದಳು; ಕೂಡಲೇ ಅನೇಕ ಕನ್ನಡಿಗರು ರೇಗಿದರು. ಆದರೆ ಹುಬ್ಬಳ್ಳಿಯಲ್ಲಿ ಗಂಧರ್ವ ನಾಟಕದವರ ಜವಾಬ್ದಾರಿಯುಳ್ಳ ಓರ್ವ ಅಧಿಕಾರಿಯು "ಥಿಯೇಟರಾತ ಕಾಯ ಪೆಂಢರೇ ಭರಲೇಲೆ ಆಹೇತ" ಎಂದರೆ ನಮ್ಮ ಕನ್ನಡದ ಅಭಿಮಾನಿಗಳಿಗೆ (!) ಏನೂ ಅನಿಸಲಿಲ್ಲ! ಇದು ಕನ್ನಡದ ಹಲವು ಪ್ರತಿಷ್ಠಿತರ ಅಥವಾ ಸ್ವಯಂ ಪ್ರತಿಷ್ಠಿತರ ಕನ್ನಡದ ಅಭಿಮಾನದ ಉತ್ಕರ್ಷ! ತಮಗೆ ಮರಾಟಿಯು ಬಾರದಿದ್ದರೂ, ಗಂಧರ್ವನ ನಾಟ್ಯಕಲಾ ಚಾತುರ್ಯಕ್ಕೆ ತಕ್ಕ ಮರ್ಯಾದೆಯನ್ನು ಕೊಡಬೇಕೆಂದು ನಾಟ್ಯಕಲಾಪ್ರೇಮಿಗಳಾದ ಕನ್ನಡಿಗರು, ಗಂಧರ್ವನಾಟಕಗಳನ್ನು ನೋಡಹೋದರೆ, ಕನ್ನಡಿಗರ ಉದಾರತನ, ನಾಟ್ಯಕಲಾ ಪ್ರೀತಿಗಳ ಬಗ್ಗೆ ಆದರ ಭಾವವನ್ನು ತೋರಿಸದೇ, ಕರ್ನಾಟಕದಲ್ಲಿ ಬಂದು, ಹಣ ಸಂಪಾದನೆ ಮಾಡಿಕೊಂಡು ಹೋಗುವ ಗಂಧರ್ವ ನಾಟಕ ಕಂಪನಿಯವರಿಗೆ "ಪೆಂಢರೇ" ಎಂಬ "ಸಂಭಾವನೆ" ಯನ್ನು ಮಾತ್ರ ಕನ್ನಡಿಗರ ಪಾಲಿಗೆ ಅರ್ಪಿಸಲು ಬುದ್ಧಿಯಾಯಿತ! ಇದಕ್ಕೆ ಕೋಪವನ್ನು ತಳೆದು, ಶಾಮಲೆಯು ಗಂಧರ್ವ ಕಂಪನಿಯನ್ನು ಟೀಕಿಸುವಾಗ್ಗೆ, ಬರೆಯುವ ಭರದಲ್ಲಿ ಒಂದೆರಡು ಶಬ್ದಗಳನ್ನು ಹೆಚ್ಚಾಗಿ ಬರೆದದ್ದು, ಧಾರವಾಡ-ಹುಬ್ಬಳ್ಳಿಗಳ ಹಲವು ಕನ್ನಡಿಗ

ರಿಗೆ ರುಚಿಸಿದಂತೆ! ಅದರ "ನಾಂಥರ" ದಂತಹ ಸಂಭಾವನೆಯು ರುಚಿಸುವದು! ಇದೇನು ಕನ್ನಡದ ಅಭಿಮಾನವೋ? ಅಥವಾ ಮರಾಟಿಯ ವೇಷವೋ? ಇರಲಿ 'ಭಾವಬಂಧ'ನ ನಾಟಕವನ್ನು ಅಭಿನಯಿಸುವ ಮರಾಟಿ ನಾಟಕ ಮಂಡಳಿಯು ಕರ್ನಾಟಕದ ಯಾವದಾದರೂ ನಗರಕ್ಕೆ ಬಂದದ್ದಾದರೆ, ಇನ್ನು ಮೇಲೆ ಅಲ್ಲಿಯ ಕನ್ನಡಿಗರು ಈ ಬಗ್ಗೆ ಚಳವಳ ಮಾಡಿ, ಕನ್ನಡಿಗರಿಗೆ ಅಪಮಾನವಾಗುವಂತಹ ಆ ನಾಟಕವನ್ನು ತಮ್ಮ ಊರಲ್ಲಿ ಮಾಡಗೊಡದಂತೆ, ಸ್ಥಾನಿಕ ಅಧಿಕಾರಿಗಳ ಲಕ್ಷ್ಯಕ್ಕೆ ತಂದು ಕೊಡಬೇಕು. ಇನ್ನು ಶ್ರೀಮಂತ ಕನ್ನಡಾಭಿಮಾನಿಗಳು, ಈ ನಾಟಕದಲ್ಲಿಯ ಕನ್ನಡದ ಬಗ್ಗೆ ಇರುವ ನಿಂದ್ಯಾ ಜನಕವಾದ ಶಬ್ದಗಳನ್ನೆಲ್ಲ ತೆಗೆದು ಹಾಕಬೇಕೆಂದು 'ಭಾವಬಂಧ'ನ ನಾಟಕದ ಪ್ರಕಾಶಕರಿಗೆ ಒತ್ತಾಯಪಡಿಸಲು ಕಾಯದೆಯ ಉಪಯೋಗವನ್ನು ಮಾಡಿಕೊಳ್ಳಬೇಕು.

ಧಾರವಾಡದ ಲಿಂಗಾಯತ ಕರ್ನಾಟಕಶಿಕ್ಷಣ ಮಂಡಳಿಯವರು ಒಂದು "ಆರ್ಟ್ಸ ಕಾಲೇಜ"ಯನ್ನು ತೆರೆಯಬೇಕೆಂದಿರುವರೆಂಬದು ಎಲ್ಲರಿಗೂ ಗೊತ್ತಿದ್ದ ಮಾತು. ಇನ್ನು ಇದನ್ನು ಎಲ್ಲಿ ತೆಗೆಯಬೇಕೆಂಬ ಬಗ್ಗೆಯೂ, "ಆರ್ಟ್ಸ ಕಾಲೇಜ"ಯನ್ನು ಹೊರಡಿಸದೇ ಔದ್ಯೋಗಿಕ ವಿದ್ಯಾಲಯವನ್ನು ಸ್ಥಾಪಿಸಬೇಕೆಂಬ ಬಗ್ಗೆಯೂ ಅಲ್ಲಲ್ಲಿ ಚರ್ಚೆ ನಡೆದಿರುವದು. ಉದ್ಯೋಗವಿಲ್ಲದ ಪದವೀಧರರ ಸಂಖ್ಯೆಯನ್ನು ಬೆಳಿಸುವದಕ್ಕಿಂತ, ಔದ್ಯೋಗಿಕ ಶಿಕ್ಷಣ ಸಂಸ್ಥೆಗಳನ್ನು ಹೊರಡಿಸುವದು ಹೆಚ್ಚು ಶ್ರೇಯಸ್ಕರವೆನ್ನುವದರಲ್ಲಿ ಸಂಶಯವಿಲ್ಲ ಆದರೆ ಈ ಮಂಡಳದವರು ಈಗ್ಗೆ "ಆರ್ಟ್ಸಕಾಲೇಜ"ದ ಬಗ್ಗೆ ಸಿದ್ಧತೆಯನ್ನು ಮಾಡಿರುವದರಿಂದಲೂ, ಔದ್ಯೋಗಿಕ ಶಿಕ್ಷಣಾಲಯಗಳಿಗೆ ಹೆಚ್ಚಾದ ಹಣವೂ ಸಿದ್ಧತೆಯೂ ಬೇಕಾಗುವದರಿಂದಲೂ, ಸಧ್ಯಃ "ಆರ್ಟ್ಸಕಾಲೇಜ"ಯನ್ನೇ ಹೊರಡಿಸಬೇಕೆಂದು ನಿರ್ಣಯಿಸಿದ್ದರೆ ಅವರು ಬಿ. ಎ. ದ ವರೆಗಿದ್ದ ಸಂಪೂರ್ಣವಾದ ಒಂದೇ ಸಂಸ್ಥೆಯನ್ನು ತೆರಿಯುವದಕ್ಕಿಂತ, 'ಇಂಟರ' ದವರೆಗಿರುವ ಎರಡನೇ ತರಗತಿಯ ಎರಡು 'ಕಾಲೇಜ' ಗಳನ್ನು ಬೆಳಗಾವಿ ಮತ್ತು ವಿಜಾಪುರಗಳಲ್ಲಿ ತೆಗೆದು, ಕೆಲವು ವರ್ಷಗಳ ಮೇಲೆ ಧಾರವಾಡದಲ್ಲಿ ಮತ್ತೊಂದು ೧ ನೇ ತರಗತಿಯ 'ಕಾಲೇಜ'ನ್ನೂ ತೆರೆಯಬಹುದು. ಕರ್ನಾಟಕದ ಉತ್ತರ ಗಡಿನಾಡಿನ ಜಿಲ್ಹೆಗಳಾದ ಬೆಳಗಾವಿ ವಿಜಾಪುರಗಳಲ್ಲಿ ಕರ್ನಾಟಕಸ್ಥರಿಂದ ನಡೆವ ಶಿಕ್ಷಣ ಸಂಸ್ಥೆಗಳಿರುವದು ಕರ್ನಾಟಕ ಪ್ರಾಂತ, ಕನ್ನಡನುಡಿ, ಕನ್ನಡ ಸಂಸ್ಕೃತಿಗಳ ದೃಷ್ಟಿಯಿಂದ ಅತ್ಯಂತ ಅವಶ್ಯಕವಾದ ವಿಷಯ. ಉತ್ತರದಿಂದ ಕರ್ನಾಟಕದಲ್ಲಿ ನುಗ್ಗುತ್ತಿರುವ ಮರಾಟರ ದಾಳಿಯನ್ನು ತಡೆಯಲು ಇದೊಂದು ಉಪಾಯ. ಆದುದರಿಂದ ಈ ವಿಚಾರವನ್ನು ಈ ಶಿಕ್ಷಣ ಮಂಡಲದವರು ಮೊದಲು ಮಾಡಬೇಕಾಗಿ ಸೂಚನೆ.

ಬಾಗಲಕೋಟೆಯ ಮುನಸೀಪಾಲ್ಟಿಗೆ ನವಿಯ ದಂಡೆಯಲ್ಲಿ ಕಲ್ಲಿನ ಕಟ್ಟೆಯನ್ನು ಕಟ್ಟಿ ಮಾಡಲು ಒಂದು ವಿನಂತಿಪರವಾದ ಪತ್ರವನ್ನು ಶ್ರೀ ಲಿಂಗಪ್ಪನವರು ಬರೆದಿದ್ದು, ಅದನ್ನು ಈ ಸಂಚಿಕೆಯಲ್ಲಿ ಪ್ರಕಟಮಾಡಿದೆ. ನದಿಯ ಘಟ್ಟದ ಮೇಲೆ ತುಳಸಿಯ ವೃಂದಾವನದ ದೀಪವನ್ನು ರಾತ್ರಿಕಾಲಕ್ಕೆ ಇತ್ತಿತ್ತ ಹಚ್ಚುವದನ್ನು ಮುನಸೀಪಾಲ್ಟಿಯವರು ಬಿಟ್ಟದ್ದಕ್ಕಾಗಿ ಹಿಂದಕ್ಕೆ "ಕನ್ನಡಿಗ"ನು ಬರೆದಿದ್ದನು. ಆ ಬಗ್ಗೆ ನಗರ ಪಿತಾಮಹರು ಎಷ್ಟು ಲಕ್ಷ್ಯವಿತ್ತರೋ! ಶ್ರೀ ಲಿಂಗಪ್ಪನವರು ಸೂಚಿಸಿದಂತೆ ೧೦೦—೨೫೦ ಕಲ್ಲುಗಳನ್ನು ದಂಡೆಯ ಮೇಲೆ ಹಾಕಲು ವಿಶೇಷವಾದ ವೆಚ್ಚವೇನು ಮುನಸೀಪಾಲ್ಟಿಗೆ ತಟ್ಟದು. ಆದ್ದರಿಂದ ದೀಪ ಹಾಗೂ ಒಗೆಯುವ ಕಲ್ಲುಗಳ ಬಗ್ಗೆ ಮುನಸೀಪಾಲ್ಟಿಯ ಸಭಾಸದರು ಕೂಡಲೇ ವ್ಯವಸ್ಥೆ ಮಾಡಬೇಕಾಗಿ ಆಗ್ರಹವಿದೆ. ಚುನಾವಣೆಯ ದಿನಗಳು ದೂರಿಲ್ಲ, ಅದರ ಅಂಜಿಕೆಯಿಂದಾದರೂ, ಸಭಾಸದರು. ಈ ಜನರ ಕಲ್ಯಾಣದ ಕೆಲಸವನ್ನು ಮೈಮೇಲೆ ತೆಗೆದುಕೊಂಡು ಮಾಡುವರೋ?

ಉಡುಪಿಯಲ್ಲಿ ಮಧ್ವಸಿದ್ಧಾಂತದ ಗ್ರಂಥಗಳನ್ನು ಕನ್ನಡ ನುಡಿಯಲ್ಲಿ ಪ್ರಸಿದ್ಧಿಸುವದಕ್ಕಾಗಿ ಒಂದು "ಜಾಯಿಂಟಸ್ಟಾಕ ಕಂಪನಿ"ಯು ಸ್ಥಾಪಿಸಲ್ಪಟ್ಟಿದೆ. ಈ ವಿಚಾರವು ಹೊರಟು ಸ್ವಲ್ಪೇ ದಿನಗಳಾದವು. ಇಷ್ಟರಲ್ಲಿಯೇ ಇದು ಮೂರ್ತ ಸ್ವರೂಪವನ್ನು ಕಂಡದ್ದು ಉಡುಪಿಯಲ್ಲಿಯ ಪ್ರವರ್ತಕರ ಕರ್ತೃತ್ವ ಶಕ್ತಿಯನ್ನು ತೋರ್ಪಡಿಸುತ್ತದೆ. ಈ ಬಗ್ಗೆ ಹೆಚ್ಚಿನ ಸಂಗತಿಗಳು ಬೇಕಾದವರು ಉಡುಪಿಗೆ ಬರೆದು ತಿಳಿದು ಕೊಳ್ಳಬಹುದು. ಈ ಮಂಡಲದವರು ಭಾಷಾಂತರ ಮಾಡಿದ ನಮೂನೆಯ ಪುಟಗಳನ್ನು ನಮ್ಮ ಕಡೆಗೆ ಕಳುಹಿಸಿದ್ದಾರೆ. ಇವನ್ನು ನೋಡಿದರೆ, ಭಾಷಾಂತರವು ಸಮಂಜಸವಾಗಿಲ್ಲವೆನ್ನಬೇಕಾಗುವದು. ಅನ್ವಯ, ಪದಿ ಅರ್ಥ, ಒಟ್ಟು ಸಾರಾಂಶ ಹೀಗೆ ಇವರು ಭಾಷಾಂತರದಲ್ಲಿ ಕ್ರಮವನ್ನು ಏರ್ಪಡಿಸಿದ್ದಾರೆ. ಈ ಪದ್ಧತಿಯು ಪಂಡಿತರಿಗೆ ಉಪಯೋಗವಿಲ್ಲ. ಸಾಮಾನ್ಯ ಜನರಿಗೆ ಇದರಿಂದ ಸಿಜವಾದ ಮೂಲ ತತ್ವಗಳು ಸುಲಭವಾಗಿ ತಿಳಿಯುವದಿಲ್ಲ. ಗದ್ಯವಾಚನ ಗ್ರಂಥಗಳಂತೆ, ಪ್ರಕರಣಗಳನ್ನು ಸುಲಭವಾದ ಹಾಗೂ ರುಚಿಕಟ್ಟಾದ ಶೈಲಿಯಲ್ಲಿ ಬರೆಯುವದರಿಂದ ಸಾಮಾನ್ಯರಿಗೆ ತತ್ವಗಳೆಲ್ಲ ತಿಳಿಯುವವು. ಮೂಲ ಸಂಸ್ಕೃತಗ್ರಂಥಗಳನ್ನು ಕನ್ನಡದಲ್ಲಿ ಭಾಷಾಂತರ ಮಾಡುವ ಉದ್ದೇಶವೆಂದರೆ, ಸಂಸ್ಕೃತವನ್ನರಿಯದ ಸಾಮಾನ್ಯರಿಗೆ ಮಧ್ವಮತ ತತ್ವಗಳೆಲ್ಲ ತಿಳಿಯಬೇಕೆಂಬುದು. ಆದ್ದರಿಂದ ತಮ್ಮ ಉದ್ದೇಶವು ಸಫಲವಾಗಬೇಕೆಂಬ ಲಾಲಸೆಯು ಪ್ರವರ್ತಕರಲ್ಲಿದ್ದರೆ ಅವರು ಈ ಬಗ್ಗೆ ಯೋಗ್ಯ ವಿಚಾರ ಮಾಡಿ, ಮುಂದೆ ಸಾಗಬೇಕಾಗಿ ಸೂಚನೆ.

"ಕನ್ನಡಿಗ"ನ ಪೋಷಕರ ಯಾದಿಯು ಕಳೆದ ವಾರದಲ್ಲಿ ಪ್ರಸಿದ್ಧವಾಗಿದೆಯಷ್ಟೇ? ಆದರೆ ಅದರಲ್ಲಿ ಬಾಗಲಕೋಟೆಯ ಸುಪ್ರಸಿದ್ಧವ್ಯಾಪಾರಸ್ಥರಾದ ಶ್ರೀ ತಂಬಾಕೆಯವರ ಹೆಸರು, ಅವರ ಹಣವು ಜಮಾ ಖರ್ಚ ಆಗದ್ದರಿಂದ ಆಗ್ಗೆ ಪ್ರಸಿದ್ಧವಾಗಿರಲಿಲ್ಲ. ಆದ್ದರಿಂದ ಈಗ್ಗೆ ಪ್ರಕಟಮಾಡಿದೆ.

ಸ್ವೀಕಾರ

(೧) **ಚಂದ್ರೋದಯ.** ಧಾರವಾಡದ ರಾಷ್ಟ್ರೀಯ ಪಕ್ಷದ ಸುಪ್ರಸಿದ್ಧ ಮುಂದಾಳುಗಳೂ ವೀರಶೈವರೂ ಆದ ಹೊನ್ನಾಪೂರ ಮಠದ ಶ್ರೀ. ಗದಿಗಯ್ಯಾ ಸ್ವಾಮಿಯವರು ಈ ವಾರಪತ್ರಿಕೆಯನ್ನು ಪುನಃ ಹೊರಡಿಸುವರು. ಪಕ್ಷಪಾತವಿಲ್ಲದೇ ವಿಷಯ ವಿವೇಚನೆ ಮಾಡುವದರಲ್ಲಿ ಶ್ರೀ. ಗದಿಗಯ್ಯನವರು ಹೆಸರಾಗಿದ್ದಾರೆ. ಅವರ ಗೃಹಕೃತ್ಯದ ಅನಾನುಕೂಲತೆಯ ಮೂಲಕ ಇಷ್ಟು ದಿನ ಬಂದಾಗಿದ್ದು ಈಗ್ಗೆ ಮತ್ತೆ ಇದು ಹೊರಟಿದೆ. ನೂತನ ವೇಷಧಾರಿಯಾದ ಬಂಧುವು ಈ ಸಲವಾದರೂ ಚಿರಾಯುವಾಗಲಿ! ಜಿ ಎಚ್. ಹೊನ್ನಾಪೂರಮಠ ಎಂಬದಾಗಿ ಇಂಗ್ಲೀಷ ಪದ್ಧತಿಯ ಹೆಸರನ್ನು ಬರೆಯುವದು ಕನ್ನಡ ಸಂಸ್ಕೃತಿಗೆ ಒಪ್ಪುವಂತಹದಲ್ಲವಾದ್ದರಿಂದ, ಅದನ್ನು ತೆಗೆದು ಹಾಕಬೇಕಾಗಿ ಶ್ರೀ. ಗದಿಗಯ್ಯಸ್ವಾಮಿಯವರಿಗೆ "ಕನ್ನಡಿಗ"ನ ಪ್ರೇಮಪೂರ್ವಕವಾದ ಸೂಚನೆಯಿದೆ ವಾ. ಚಂದಾ. ಅಂಚೆವೆಚ್ಚ ಸೇರಿ ೩-೦-೦.

(೨) **ಶಿವಾನುಭವ** ವಾ. ಚಂದಾ ೩-೦-೦. ವಿಜಾಪೂರದ ಹೆಸರುವಾಸಿಯಾದ ಕನ್ನಡ ಭಕ್ತರೂ, ವಾಙ್ಮಯ ಸಂಶೋಧಕರೂ ಆದ ರಾ॥ ಸಾ॥ ಹಳಕಟ್ಟಿಯವರು ಇದರ ಸಂಪಾದಕರು. ಇದು ತ್ರೈಮಾಸಿಕ ಪತ್ರಿಕೆಯು. ವೀರಶೈವರ ಪ್ರಾಚೀನ ಗ್ರಂಥಗಳನ್ನೆಲ್ಲ ಪ್ರಕಟಿಸಬೇಕೆಂಬದು ಇದರ ಮುಖ್ಯ ಉದ್ದೇಶ. ಸಾಮಾಜಿಕ, ರಾಜಕೀಯ ಇತಿಹಾಸವನ್ನು ಸಂಶೋಧಿಸುವ ವಿಚಾರ

ಇದೆ. ಪ್ರತಿಯೊಂದು ಮತದವರು ಹೀಗೆ ತಮ್ಮ ತಮ್ಮ ಮತದ ವಾಙ್ಮಯವನ್ನು ಹೊರಗೆಡಹುತ ಹತ್ತಿದರೆ, ಕನ್ನಡನುಡಿಯ ಪ್ರಾಚೀನ ವೈಭವವೆಲ್ಲ ಹಗುರಾಗಿ ಕನ್ನಡಿಗರ ಕೈಸೇರುವದು. ವಿಶದವಾದ ವಿಮರ್ಶೆಯು "ಕನ್ನಡಿಗ"ನಲ್ಲಿ ಪುನಃ ಬರುವದು.

(೩) **ನಂದಿನಿ** ಗೋಕರ್ಣದಲ್ಲಿ, ಪ್ರಸಿದ್ಧವಾದ ಮಾಸ ಪತ್ರಿಕೆ ಸಂಚಿಕೆ ೫.

(೪) **ಮೈಸೂರು ಬ್ಲ್ಯಾಂಕ್ ಬುಕ್ ಮತ್ತು ಪಬ್ಲಿಸಿಟಿ ಜನರಲ್** ದಿಸೆಂಬರ ೧೯೨೫.

(೫) **ಮೈಸೂರ ಸರಕಾರದ ಗ್ಯಾಝೆಟ್.** ಮೈಸೂರು ಸರಕಾರದವರು ತಮ್ಮ ಪ್ರಕಟಣೆಗಳನ್ನೆಲ್ಲ "ಕನ್ನಡಿಗ" ನಿಗೆ ಕಳುಹಿಸಲು ಒಪ್ಪಿದ್ದಕ್ಕಾಗಿ, ಮಹಾರಾಜರ ಸರಕಾರದವರಿಗೆ "ಕನ್ನಡಿಗ"ನು ತುಂಬಾ ಕೃತಜ್ಞನಾಗಿರುವನು.

ಪತ್ರವ್ಯವಹಾರ

ಬಾಗಲಕೋಟೆ ಮುನಸಿಪಾಲಟಿ

೧ ನಮ್ಮ ಊರ ಮುಂದೆ ಘಟಪ್ರಭಾ ನದಿ ಇದ್ದದ್ದು ಸರ್ವರಿಗೂ ಗೊತ್ತುಂಟು. ಆದರೆ ಇಲ್ಲಿ ಒಂದು ತರದ ಅಡಚಣಿ ಇರುತ್ತದೆ ಅದಾವದೆಂದರೆ ಕಿಲ್ಲೇದ ಅಗಸಿಮುಂದಿನ ತುಳಸೀ ಘಟ್ಟ ಘಾಟ ಸ್ವಲ್ಪ ಇದ್ದು ಜನರಿಗೆ ಒಗಿಯಲಿಕ್ಕೆ ಬಹಳ ಅಡಚಣಿ; ಮತ್ತು ಮಡಿ ಮೈಲಗಿಯ ಅನಾನುಕೂಲದಿಂದ ಜನರು ತುಳಸಿಕಟ್ಟಿ ಪಶ್ಚಿಮ ಕಡಿಗೆ ಬಿಸಿಗಲ್ಲಿಗೆ ಹೋಗಬೇಕಾಗುತ್ತದೆ. ಅಲ್ಲಿ ಸಾಕಷ್ಟು ಒಗಿಯಲಿಕ್ಕೆ ಕಲ್ಲುಗಳು ಇರುವದಿಲ್ಲ. ಜಾಗಾ ಮಾತ್ರ ಅಜಮಾಸ ೪ ಫರ್ಲಾಂಗ ಉದ್ದ ಇದ್ದು ಯಾವ ತರದ ಬೇಕಿಯಿರುವದಿಲ್ಲ. ಇಲ್ಲಿ ಒಗಿಯಲಿಕ್ಕೆ ಬಹಳ ಅನುಕೂಲ ಇರುತ್ತದೆ. ಒಗಿಯುವ ಕಲ್ಲಿನ ಅಡಚಣೆಯು ಬಹಳ ಇರುವದರಿಂದ ಹೆಂಣು ಮಕ್ಕಳು ಮೊದಲಿಗೆ ಒಗಿಯುವವರದು ಆಗುವರೆಗೆ ಅರ್ಧತಾಸ ತಾಸ ವರೆಗೆ ಕೂತು, ಆಮೇಲೆ ಒಟ್ಟೆಗಳನ್ನು ಒಗಿದುಕೊಂಡು, ಹೋಗಬೇಕಾಗುತ್ತದೆ. ಇದರಿಂದ ಹೆಂಣು ಮಕ್ಕಳಿಗೆ ಎಷ್ಟು ತೊಂದರೆ ಆಗುತ್ತದೆನ್ನುವದು ವಾಚಕರೇ ತಿಳಕೊಳ್ಳಬಹುದು. ಮನೆಯಲ್ಲಿ ಅತ್ತಿಯವರು ಒಗ್ಗರೆ ಇದ್ದರೆ ಸಾಕು. ಇದನ್ನು ಬಣ್ಣಿಸುವದೇ ಕಷ್ಟ. ಆದ ಕಾರಣ ನಗರದ ಮುನಸಿಪಾಲಟಿಯವರು ಇತ್ತ ಕಡಿಗೆ ದಯಾಳು ದೃಷ್ಟಿಯಿಂದ ನೋಡಿ ಚೌರಸ ೨ ಫೂಟಿನ ಗುಡ್ಡದ ಕಲ್ಲು ಅಜಮಾಸ ೧೦೦—೧೫೦ ಮಾರಿಗೆ ಒಂದರಂತೆ ಹಾಕಿಸಿದರೆ ಈ ಉಪಕಾರ ಮತ್ತು ಇದರ ಪುಣ್ಯ ಇಷ್ಟೆಂದು ಹೇಳಲಿಕ್ಕಾಗದು. ಜನರಿಗಾಗುವ ಅನಾನುಕೂಲತೆಗಳನ್ನು ಪರೀಕ್ಷಿಸಿ ನೋಡುವದಿದ್ದರೆ, ಸಂಜೆಯ ಮುಂದೆ, ವಿಶ್ರಾಂತಿ ದಸೆಯಿಂದಾದರೂ ಅರ್ಧತಾಸು ಒಂದು ಸಾರ್ವಜನಿಕ ಹಿತವನ್ನು ಮುನಸಿಪಾಲಟಿ ಅಧಿಕಾರಸ್ಥರು ಸಾಧಿಸಿಕೊಳ್ಳಲಿ! ಖರ್ಚಿನ ಬಾಬಾದರು ಬಹು ಸ್ವಲ್ಪವೇ ಇರುತ್ತದೆ. ಇದನ್ನು ತೀವ್ರ ವಿಚಾರ ಮಾಡಿ ಅಮಲಿನಲ್ಲಿ ತರಬೇಕೆಂದು ಬೇಡಿಕೊಳ್ಳುತ್ತೇನೆ.

೨ ಇದರಂತೆ ಇನ್ನೊಂದು ಮಹತ್ವದ ಅಡಚಣಿ ಇರುತ್ತದೆ. ಅಗಸಿಯಿಂದ ನದಿಯವರೆಗೆ ಗಿಡಗಳು ಇರುತ್ತವೆ. ಬೇಸಿಗಿ ಕಾಲದಲ್ಲಿ ನೆರಳು ಮನಸಿಗೆ ಎಷ್ಟು ಆನಂದ ಮಾಡುತ್ತದೆಂಬದು ಸರ್ವರಿಗೂ ಗೊತ್ತು ಇರುತ್ತದೆ. ಇಂತಹ ಮಹತ್ವದ ಗಿಡಗಳನ್ನು, ಆಡುಕುರಿಗಳನ್ನು ಸಾಕಿದವರು, ಯಾವಾಗಲೂ ಯಾವ ತರದ ಘಾತಮಿಲ್ಲದೆ, ಕೊಂಬುಗಳನ್ನು ಕಡಿದು, ತೊಗಲಿನ ಟೊಂಗಿಗಳನ್ನು ಸವರ ಸವರಿ ಸಾಕಷ್ಟು ತೊಪ್ಪಲನ್ನು ತೆಗೆದುಕೊಂಡು ಹೋಗುತ್ತಾರೆ. ಇದರಿಂದ ಬರಲು ಗಿಡಗಳಿಗೆ ಬೊಡ್ಡೆಗಳು ಮಾತ್ರ ನಿಂತಿರುತ್ತವೆ! ಈ ಹಗಲಿಹಾಡು ಇಲ್ಲದಂತೆ ಮಾಡಲು ಯಾವ ಖಾತೇದ ಅಧಿಕಾರಸ್ಥರೂ ಪ್ರಯತ್ನಿಸಿದಂತೆ ಕಂಡು ಬರುವದಿಲ್ಲ. ಈ ವಿಷಯವು ಕ್ಷುಲ್ಲಕವಾಗಿ ಕಂಡರೂ ಪರೋಪಕಾರ ಕೆಲಸದಲ್ಲಿ ಮಹತ್ವದ್ದು ಇರುತ್ತದೆ. ಕಾರಣ ಇತ್ತ ಕಡಿಗೆ ಅಧಿಕಾರಸ್ಥರು ಲಕ್ಷ್ಯ ಕೊಟ್ಟು ಮುಂದೆ ಗಿಡಗಳು ಜೋಪಾನ ಆಗುವಂತೆ ವ್ಯವಸ್ಥೆ ಮಾಡಬೇಕು ಪಕ್ಕದಲ್ಲಿ ಪೋಲೀಸಗ್ಯಾಟ ಸಹ ಇರುತ್ತದೆ. ಸದರಿ ಗ್ಯಾಟಿಗೆ ಹುಕುಮು ಕೊಡತಕ್ಕದ್ದು.

ತಮ್ಮ ಕರ್ನಾಟಕಾಭಿಮಾನಿ
ನಿಂಗಪ್ಪಾ ನೀಲಧರ ಸಕ್ರೋಜಿ
ಬಾಗಲಕೋಟೆ

(೨)

ಇನಾಮದಾರರ ಹಕ್ಕು

ರಾಷ್ಟ್ರದಲ್ಲಿಯ ಪ್ರತಿಯೊಬ್ಬರು ತಮಗೆ ಸಂಬಂಧ ಪಟ್ಟ ತಮ್ಮ ತಮ್ಮ ಹಕ್ಕುಗಳನ್ನು ಕಾದಿಟ್ಟುಕೊಳ್ಳಲಿಕ್ಕೆ ಪ್ರಯತ್ನಿಸಿದರೆ ಮುಂದಾಳುಗಳ ಕಾರ್ಯವು ಕೆಲ ಮಟ್ಟಿಗೆ ಹಗುರಾಗುವದರಲ್ಲಿ ಸಂದೇಹವಿಲ್ಲ. ಯೋಗ್ಯಕಾಲದಲ್ಲಿ ಅಧಿಕಾರಿಗಳ ಕಣ್ಣಿಗೆ ಅವರ ತಪ್ಪುಗಳನ್ನು ತಂದು ಕೊಟ್ಟ ಸಮಯಕ್ಕೆ ವಿಚಾರಣೆ ಯಾಗುವ ಸಂಭವವುಂಟು ಎಲ್ಲ ಅನ್ಯಾಯಗಳು ದೂರವಾಗುವವೆಂದು ನಾವು ಹೇಳಲಾರೆವು. ಆದರೂ ಅನ್ಯಾಯವು ಸಂಭವಿಸಿದ ಕೂಡಲೇ ಅದನ್ನು ಬೈಲಿಗೆಳೆದು ಮೇಲಧಿಕಾರಿಗಳಿಗೆ ತಿಳಿಸಿದ ಪಕ್ಷದಲ್ಲಿ ಕಾಯದೇ ಕೌನ್ಸಿಲಗಳಲ್ಲಿ ಪ್ರಶ್ನೆ ಕೇಳಿ, ಅದರ ಮೇಲೆ ಆವಿಷಯಕ್ಕೆ ಜವಾಬದಾರನಾದ ಮಂತ್ರಿಯ ಉತ್ತರವಾದರೂ ದೊರಕುವ ಸಂಭವವಿರುವದು ಭೂಯಾರ ಗ್ರಾಮದ ಗೌಡ, ಕುಲಕರ್ಣಿ ಇವರ ನೇಮಣೂಕ ಆಗುವಕಾಲಕ್ಕೆ ಅಲ್ಲಿಯ ಇನಾಮದಾರರ ಅಪ್ಪಣೆ ಕೇಳುವ ಪರಿಪಾಠವಿದ್ದರೂ ಕೂಡ, ಯಾವನೋ ಒಬ್ಬ ಅಧಿಕಾರಿಯು ಇನಾಮದಾರರ ಸಮ್ಮತಿಯನ್ನು ಪಡೆಯದೆ ಗ್ರಾಮಸ್ಥರ ನೇಮಣೂಕ ಮಾಡಲು, ಅಲ್ಲಿಯ ಇನಾಮದಾರರು ಕಾಯದೇ ಕೌನ್ಸಿಲದಲ್ಲಿ ಪ್ರಶ್ನೆ ಕೇಳಿಸಿ ಪ್ರಾಂತ ಅಧಿಕಾರಿಗಳು ಮಾಡಿದ ನೇಮಣೂಕ ಅಯೋಗ್ಯವಿದೆ ಎಂದು ಸಾರಿದರು. ಅಲ್ಲದೆ ಈ ಪ್ರಕಾರದ ತಪ್ಪು ಆಗದುವದೆಂದು ಹೇಳಿ ಇನ್ನು ಮುಂದೆ ಇಂಥ ಪ್ರಕಾರದ ತಪ್ಪು ಆಗಲಿಕ್ಕಿಲ್ಲವೆಂದು ಸರಕಾರದವರ ಕಡೆಯಿಂದ ಸದರೀ ಜಹಾಗಿರದಾರರಿಗೆ ಬರೆದು ಬಂದದೆ. ತಮ್ಮ ಹಕ್ಕುಗಳ ಬಗ್ಗೆ ಈ ಪ್ರಕಾರ ಕಾಳಜೀ ತಕ್ಕೊಂಡು ಕಾದಿಟ್ಟುಕೊಂಡ ಬಗ್ಗೆ ನಾನು ಭೂಯಾರ ಗ್ರಾಮದ ಇನಾಮದಾರರನ್ನು ಅಭಿನಂದಿಸುತ್ತೇನೆ.

ರಘೋತ್ತಮಾಚಾರ್ಯ
ಜಹಗಿರದಾರ ಭೂಯಾರ

ಇಹಸ್ಪೃತ್ತ

ಬಸಿಲು ಹೆಚ್ಚಾಗಿದೆ

ಕಳೆದವಾರ ಕಾಜನಾಟಕಶಾಲೆಯ ಕಾವಲುಗಾರನಾದ ಹಸನಎಂಬವನು ಶ್ರೀ. ಮಾನ್ವಾಕಳ ರಾಮರಾಯರ ೮ ವರ್ಷದ ಮಗಳನ್ನು ಹೊಡೆದು ಬಡಿದು ಕತ್ತಿಗೆ ಹಿಚಿಕಿ, ಮಯ್ಯಲ್ಲಿಯ ೬ ೭ ತೊಲಿ ಭಂಗಾರದ ಆಭರಣಗಳನ್ನು ಉಚ್ಚಿಕೊಂಡು, ಅವಳು ಸತ್ತಳೆಂದು ತಿಳಿದು ಬಾಗಿಲುಗಳಿಗೆ ಅವಳನ್ನು ಚೀಲದಲ್ಲಿ ಹಾಕಿ, ಹಳ್ಳದ ಘಸ್ ಬುಡದಲ್ಲಿ ಒಗೆದಿದ್ದನು! ಜೀವವು ಪೂರ್ಣವಾಗಿ ಹೋಗಿದ್ದಿಲ್ಲವಾದ್ದರಿಂದ ಗಾಳಿಯಿಂದ ಅವಳು ಸ್ಮೃತಿಗೆ ಬಂದು ಅಳಹತ್ತಿದ್ದನ್ನು ಓರ್ವ ದಾರಿಕಾರನು ಕಂಡು, ಅವಳನ್ನು ಊರಲ್ಲಿ ಮನೆಗೆ ತಂದುಬಿಟ್ಟನು. ಮುದುಗಿಯು ಬಹು ಧೈರ್ಯದವಳಿದ್ದಾಳೆ, ದೇಹದಲ್ಲಿ ಎಲ್ಲ ಕಡೆಗೂ ಗಾಯವಿದೆ. ೧೦೦ ೧೫೦ ಬೂ. ಗಳಿಗಾಗಿ ಎಂಥ ಕ್ರೂರತನವು! ಬೇಗನೇ ಕಳ್ಳನು ಕೈಗೆ ಸಿಗುವಂತಾಗಲಿ. ಅಪರಾಧಿಯು ಬಂದೀವಾನದಲ್ಲಿದ್ದಾನೆ.

ಕನ್ನಡವೂ— ಮರಾಠಿಯ ನಾಟಕಗಳೂ

—⁂—

ಕನ್ನಡ ನಾಡಿನ ಗೌರವವನ್ನು ಕಾಯ್ದು ಕೊಳ್ಳುವ ಕಳವಳಿಯ ಪ್ರಯತ್ನದಲ್ಲಿ ಅದಕ್ಕೆ ವಿರೋಧವಾದ ಕೆಲವು ಸಂಗತಿಗಳನ್ನು ಕಳೆದು ಹಾಕುವದು ಅವಶ್ಯವಿರುವದು. ಮಿಕ್ಕ ಪ್ರಾಂತಗಳ ಮಾನದಿಂದ ನೋಡಿದರೆ ಸದ್ಯಕ್ಕೆ ನಾವು ಕೆಲಂಚ ಹಿಂದುಳಿದವರೇನೊ ನಿಜವು. 'ಕನ್ನಡಿಗ'ನು ಹೊಡೆದೋಡಿಸಲು ಟೊಂಕ ಕಟ್ಟಿದ ನಮ್ಮ ಅಭಿಮಾನ ಶೂನ್ಯತೆಯೇ ಇದಕ್ಕೆ ಕಾರಣವಾಗಿರುವದು. ಕೆಸರಿನಲ್ಲಿ ಸಿಲುಕಿದ ಕರಿರಾಜನ ಮೇಲೆ ಕಪ್ಪೆಯು ಕೂಡ ಕುಣಿದು ಕೂಡುವಂತೆ, ಮತ್ಸರ ಬುದ್ಧಿಯ ಕೆಲವು ಜನರು ಈ ಸ್ಥಿತಿಯ ದುರುಪಯೋಗವನ್ನು ಮಾಡಿಕೊಂಡಿರುವರು

ಪ್ರತಿಭೆಯ ಪಟ್ಟ ಶಿಷ್ಯರೆನಿಸುವ ಕೈ. ವಾ. ಗಡಕರಿಯವರು ಸಾಮಾಜಿಕ ಸುಧಾರಣೆಯ ನಿಸ್ಸೀಮ ಕೈವಾರಿಗಳಾಗಿದ್ದರೂ, ಚಿರಕಾಲದಿಂದ ನಡೆದು ಬಂದ ರೂಢಿಯ ಬಂಧನಗಳನ್ನು ಸಹಸಾ ಛೇದಿಸಲು ಅವರಿಗೆ ಸಾಧ್ಯವಾಗಲಿಲ್ಲವೆಂಬುದು ಅವರ 'ಪ್ರೇಮಸನ್ಯಾಸ' ಮೊದಲಾದ ನಾಟಕಗಳಿಂದ ತಿಳಿದು ಬರುವದು ಅದರಂತೆಯೇ ಅವರ ಬಂಧುಗಳಲ್ಲಿ ಬೇರೂರಿದ ಕನ್ನಡಿಗರ ವಿಷಯಕ್ಕಿರುವ ಅನಾದರದ ಭಾವನೆಯು ಅವರ ಸಮಂಜಸ ಮನದಲ್ಲಿಯಾದರೂ ಅವರಿಗೆ ತಿಳಿಯದಂತೆ ಸೇರಿತ್ತೆಂಬುದು ಅವರ "ಭಾವಬಂಧನ" ನಾಟಕದಲ್ಲಿಯ ಕೆಳಗಿನ ನಾಲ್ಕು ಶಬ್ದಗಳಿಂದ ತಿಳಿಯುವಂತಿದೆ

ದೊಡ್ಡ ನದಿಗಳ ಉಗಮವು ಸಣ್ಣ ಪುಟ್ಟ ಝರಿಗಳಲ್ಲಿರುವಂತೆ ದ್ವೇಷ ಮೊದಲಾದ ಭಾವನೆಗಳಿಗಾದರೂ ಹುಟ್ಟು ಮೊದಲು ಸಣ್ಣ ಸಂಗತಿಗಳೇ ಕಾರಣಗಳಾಗಿರುವವು. ಕನ್ನಡವನ್ನು ಕನಸಿನಲ್ಲಿಯೂ ಕೂಡ ಕನವರಿಸದ ಮರಾಠಿಯ ಗ್ರಂಥಕರ್ತರು ಹಾಸ್ಯದ ಪ್ರಸಂಗಗಳಲ್ಲಿ ಮಾತ್ರ ಅದನ್ನು ನೆನಿಸುವರೆಂದರೆ- ಕನ್ನಡ ಭಾಷೆಗೆ ಹಾಸ್ಯಮೂಲಗುಣವಾಗುವದಿಲ್ಲವೇನು? ಮೃಚ್ಛಕಟಿಕದಲ್ಲಿಯ ಬೌದ್ಧ ಭಿಕ್ಷುವಿನ ಬಾಯಲ್ಲಿ- ಅಯ್ಯಯ್ಯೋ ಮೊದಲಾದ ಆಮುಂಗಲ ಶಬ್ದಗಳನ್ನು ಕನ್ನಡದಲ್ಲಿ ಹಾಕಲು ಬೌದ್ಧರ ಭಾಷೆಯು ಕನ್ನಡವೇನು' ಗಡಕರಿಯವರಿಗೆ ಭಾವಬಂಧನದಲ್ಲಿ ವಿನೋದದ ಕೀಳು ಪಾತ್ರಗಳು ಬೇಕಾಗಲು, ಕನ್ನಡವು ನೆನಪಾಯಿತು. ಕೂಡಲೆ, 'ಗಿಡಸಾಪ್ಪಾ' — ಕಾಮಾಣ್ಣಾ— ಎಂಬ ಉದ್ಬುದ್ಧ ಅಪಸ್ವರವಾದ ಹೆಸರುಗಳಾದರೂ ಸಿದ್ಧವಾದವು. ಹೋಗಲಿ, ಪಾಪ, ಇದೇನೂ ಅಷ್ಟು ಮಹತ್ವದ್ದಲ್ಲ. ಇದರಲ್ಲಿಯ 'ಗಿಡಸಾಪ್ಪಾ'ನು 'ಕಾಸಜೀ ಗವಯೀ' ಯನ್ನು ಕುರಿತು- ರುಂಡು ಗುಂಡು, ಕುಂಡಾ, ಎಂದು ಹೆಸರು ಕೇಳುವ ಬಗೆಯನ್ನಾದರೂ ನೋಡಿರಿ. ಈ ಶಬ್ದಗಳಿಂದ ನಿಜವಾಗಿ ಕನ್ನಡ ಶಬ್ದಗಳು ಹೊರಟವೆ ಎಂದೇ ಅನ್ನುವಂತೆ ಕಂಡು ಬಂದಿತಂತೆ! ಇದಕ್ಕೊಂದು ನಮೂನೆ ಕಾಣ್ಣದೂ ತೋರಿರುವರು!! "ಶೀಕಪಾ- ಬಂತಿಂಟಕ್ಕಿ- ಆ ರೂರ ದಡಪತಿ" -ಸಾಕ್ಕೆ ಎಂಬುತ್ತಾರಂತೆ! ಕರ್ಕಶ ವರ್ಣ ಅನ್ನು ಕೂಡಿಸಿದರೆ ಕನ್ನಡವಾಗಬಹುದಂತೆ! ಅಬ್ಬಾ! 'ಘೋಷ' ವರ್ಣಗಳ ಮಕ್ತೆಯನ್ನೇನಾದರೂ ಈ ನಾಮಧಾರಿಗೆ ಕೊಟ್ಟಿರುವರೇನು? ಇದಲ್ಲದೇ- ಸಂದರ್ಭವೆನ್ನದೆ ಹಾಗೆ ಉಗಳಿದ್ದರೇಕೆ 'ಸಿಬಣ್ಣ ಜೋಗಿ.... ಕಾಸಜೀ ವಿಷ' ಬಿಂಬವೆನಿಸುವ 'ಕನ್ನಡ' ಕಲ್ಲುಗಳು; ಕಾಸಜೀ, ಚಾ.ಟ್ಯಾ. ಕಾಂಟ್ಯ; ಕನ್ನಡ ಕಂಟಿಗರು; 'ಕಾಸಜಿ ಕಾಪಾಲಿ' ಕನ್ನಡಿಗನಾದ ಈ ಕಾಗೆಯರು- ಇವೇ ಮೊದಲಾದ ನಿಂದಾವ್ಯಂಜಕವಾದ ಶಬ್ದಗಳು ನಿಜವಾದ ಕನ್ನಡಿಗನ ಕಿವಿಯಲ್ಲಿ ಕಾದ ಸೀಸವನ್ನು ಸುರಿದಂತಾಗಲಿಕ್ಕಿಲ್ಲವೆ? ಆದರೆ ಸ್ವಭಾಷೆಯ ವಿಷಯಕ್ಕೆ ಅಷ್ಟೊಂದು ಅಭಿಮಾನವು ಕನ್ನಡಿಗರಲ್ಲಿ ಕಾಣಬರಬೇಕಷ್ಟೇ? ಮರುಳನನ್ನು ಕಂಡು ಮರುಳನು ......ಯನ್ನುವಂತೆ ಇವೆಲ್ಲವುಗಳನ್ನು ಕೇಳಿ ಉಳಿದವರಂತೆ ಚಪ್ಪಳೆಯನ್ನಿಕ್ಕಿ ಬರುವರೇ ಬಹಳ!

ಬೇಕಾದ ಹಾಗೆ ಹೀಯಾಳಿಸಲಿ, ಕನ್ನಡವು ಬೀದಿಯಲ್ಲಿ ಬೆಳೆದಿರುವದಿಲ್ಲವೆಂಬದನ್ನು ಇವರು ಇನ್ನಾದರೂ ತಿಳಿದು ಕೊಳ್ಳಲಿ. ಗಡಕರಿಯವರಂತೂ ಕೈಲಾಸವಾಸಿಗಳಾದರು; ಅವರ ಅನುಯಾಯಿಗಳಿಗಾದರೂ ಬುದ್ಧಿ ಬರಲಿ! ಕುರಡೀ ಕುರಾರ ಮುಳದಂತೆ ಪರಭಾಷೆಯಲ್ಲಿಯ ಶಬ್ದಗಳನ್ನು, ಕದ್ದು, ತನ್ನ ರೂಪವನ್ನು ಕೊಟ್ಟು ತನ್ನದೆಂದು ಹೇಳಿಕೊಳ್ಳುವ ಭಾಷೆಯು ಕನ್ನಡವಲ್ಲ. ಅದೊಂದು ಸ್ವತಂತ್ರ ಭಾಷೆಯಿರುವದು ಕೆಲವೆಡೆಯಲ್ಲಿ ಉಳಿದ ಭಾಷೆಗಳನ್ನಾದರೂ ಹಿಂದಕ್ಕಟ್ಟುವಂಥ ಬಹು ಪ್ರಾಚೀನವಾದ ಲಲಿತ ವಾಙ್ಮಯದ ಬೆಂಬಲವಾದರೂ ಅದಕ್ಕಿರುವದು. ಮರಾಠಿಗೆ ಬೇಕಿದ್ದರೂ ಬೇಡದ ಹಾಗೆ ಸ್ವತಂತ್ರಲಿಪಿಯಾದರೂ ಇರುವದು. ಮಾಧುರ್ಯದ ಮೋಹಬಂದ ಕೆದರೆ ಶಾಸ್ತ್ರಸಮ್ಮತವೂ ತಾಳಬದ್ಧವೂ ಆದ ಸ್ವತಂತ್ರರಾಗಗಳೂ ಅದಕ್ಕಿರುವವು ಇಷ್ಟೇಯೇಕೆ? ಈಗಿನ ಕನ್ನಡ ರಂಗಭೂಮಿಯ ಆದ್ಯ ಪ್ರವರ್ತಕರಾದ ಕೈ. ವಾ. ಬಳ್ಳಾರಿಯ ಬಸಪ್ಪನವರು ಪರ್ಯಾಯದಿಂದ ಮರಾಠಿ ರಂಗಭೂಮಿಯ ಜನಕರೂ ಕೂಡ ಆಗಿರುವದಿಲ್ಲವೇನು? ಹೀಗಿದ್ದರೂ ದುರಭಿಮಾನದ ಪರೆಯಿಂದ ಮುಚ್ಚಿದ ಕಣ್ಣುಗಳಿಗೆ ಇವೆಲ್ಲವುಗಳೂ ಕಾಣಬೇಕಷ್ಟೇ! 'ಕನ್ನಡಿಗ'ನ ನೇತ್ರಾಂಜನವೇ ಅದಕ್ಕೆ ತಕ್ಕ ಮದ್ದಾಗಿರುವದು.

— ಘನಶ್ಯಾಮ

ಶ್ರೀ ಗುಬ್ಬಿ ಚನ್ನಬಸವೇಶ್ವರ ನಾಟಕ ಮಂಡಲದವರ ಚಂದ್ರಗ್ರಹಣ

—⁂—

ಈ ನಾಟಕವನ್ನು ಮೊನ್ನಿನ ಶನಿವಾರ ದಿವಸ ಆಡಿತೋರಿಸಿದರು. ನಾಟಕದ ಕಥಾವಸ್ತುವು ಮಹಾರಾಷ್ಟ್ರದ ಇತಿಹಾಸಕ್ಕೆ ಸಂಬಂಧಪಟ್ಟದ್ದಿರುತ್ತದೆ. ಜಗದೇವರಾಯನು ಕಥಾನಾಯಕನು ಇವನು ವಿಜಾಪುರ ಬಾದಶಹನ ಉಪ್ಪನ್ನುಂಡವನಿದ್ದುದರಿಂದ, ಕೊನೆಯವರೆಗೆ ಅವನ ವಿಷಯದಲ್ಲಿ ಅಚಲವಾದ ನಿಷ್ಠೆಯುಳ್ಳವನಾಗಿದ್ದನು. ಶಿವಾಜಿ ಮಹಾರಾಜರವರ ಮಧ್ಯಸ್ಥಿಕೆಯಿಂದ ಈ ನಾಟಕವು ಸುಖಪರ್ಯವಸಾಯಿಯಾಗುವದು ಈ ನಾಟಕದ ಮುಖ್ಯವಾದ ಉದ್ದೇಶವೇನೆಂದರೆ, ಜಗದೇವರಾಯನಂಥ ಶೂರ ಮರಾಠಾ ಪುರುಷನನ್ನು ಮುಸಲ್ಮಾನರ ಸೇವೆಯಿಂದ ಬಿಡಿಸಿ, ಮಹಾರಾಷ್ಟ್ರ ದೇಶದ ಸೇವೆಯಲ್ಲಿ ತೊಡಗಿಸುವದು. ಜಗದೇವರಾವ ಶಿವಾಜಿ ಇವರ ನಡುವಿನ ಭಾಷಣಗಳು ಬಹಳ ಸ್ಫೂರ್ತಿದಾಯಕವಾದವುಗಳಿರುವವು. ನಾಟಕದಲ್ಲಿ ಹುರುಪುಂಟು; ನೀತಿಯುಂಟು. ಆದರೆ ಕಲಾದೃಷ್ಟಿಯಿಂದ ನಾಟಕದಲ್ಲಿ ಕೆಲವು ಕುಂದುಗಳಿವೆ. ಕಥಾವಿಸ್ತಾರಕ್ಕೆ ಯೋಗ್ಯವಾದ ಪರಿಪೋಷವು ಪಾತ್ರಗಳಿಂದ ದೊರೆತಿರುವದಿಲ್ಲ. ಇವು ಮೂಲ ಮರಾಠಿ ನಾಟಕದ ತಪ್ಪುಗಳು. ವೀರ ಶೃಂಗಾರ ಕರುಣ ರಸಗಳನ್ನು ಈ ನಾಟಕದಲ್ಲಿ ಕಾಣಬಹುದು. ಜಮನಾಜಿ ಭಾಸ್ಕರನು ಅಭಿನಯವೆಂದರೆ ಬರಿ ಕುಣಿ

ನಾಟವಲ್ಲವೆನ್ನುವದನ್ನು ತಿಳಿದು ಕೊಳ್ಳಲಿ. ಭಾಷಣ ಶೈಲಿಯಲ್ಲಿ ಕನ್ನಡದ ಸೊಲ್ಲಿಗೆ ಅನುಗುಣವಾಗಿರುವಂತೆ ಎಲ್ಲ ನಟರೂ ಜಾಗ್ರತರಾಗಿರಬೇಕು. ಜಗದೇವರಾಯ ಮತ್ತು ಹಿಕಮತ್ ಇವರು ತಮ್ಮ ಪಾತ್ರಗಳನ್ನು ಚೆನ್ನಾಗಿ ಅಭಿನಯಿಸಿದರು. ಭಾವಗಳು ಬದಲಾದಂತೆ ಧ್ವನಿ, ಭಾಷೆಯ ಶೈಲಿ ಹಾವಭಾವಗಳಲ್ಲಿಯೂ ಕೂಡ ಬದಲಾದ ರೀತಿಯನ್ನು ತೋರ್ಪಡಿಸಿದರು. ಜಗದೇವರಾಯ ಅಭಿನಯಕ್ಕೆ ಮತ್ತಿಷ್ಟು ಸೌಂದರ್ಯ ವುಂಟಾಗುವದು. ಚಂದ್ರಾವತಿಯು ಭಾವಕ ನುಸರಿಸಿ ಅಭಿನಯಿಸಬೇಕಾಗಿ ಕೋರಿಕೆ ಎರಡನೇ ಸಲ ಜಗದೇವ ರಾಯನಿಂದ ಅಗಲುವಾಗ ಅಳುವ ಪ್ರಸಂಗದಲ್ಲಿ ನಕ್ಕು ಬಿಟ್ಟಳು! ಹೊಸ ಕಂಪನಿಯಾದ್ದರಿಂದ ದೋಷಗಳಿರುವದ ಸ್ವಾಭಾವಿಕ. ಇಂತಹ ದೋಷಗಳಿದ್ದರೂ ನಾಟಕವು ಒಟ್ಟಿನಮೇಲೆ ಸೊಗಸಾಯಿತು. ಪ್ರೇಕ್ಷಕರ ಮೇಲೆ ಒಳ್ಳೇ ಪರಿಣಾಮವನ್ನುಂಟು ಮಾಡಿತು! ಮೊದಲಿಂದಲೂ ಕಡೆಯ ವರೆಗೆ ಪ್ರೇಕ್ಷಕರು ಏಕಾಗ್ರ ಚಿತ್ತದಿಂದ ಕುಳಿತುಕೊಂಡಿದ್ದರು. ಆದಿನವಂತೂ ಜನವಾಗಿ ಕೂಡಿತು. ಒಂದೆರಡು ಪಾರಿತೋಷಕಗಳೂ ಕುಮಾರಿ ಪದ್ಮಾರಾಯಿ ಯವರಿಗೆ ದೊರೆತವು. ಕರ್ನಾಟಕದ ನಾಟಕಮಂಡಳಗಳಲ್ಲಿ ಐತಿಹಾಸಿಕ ನಾಟಕಗಳನ್ನು ಅಭಿನಯಿಸುವದು ವಿರಳ. ಕರ್ನಾಟಕ ನಾಟ್ಯಪ್ರೇಮಿಗಳಾದ ಗುಬ್ಬೀಯವರು ಇನ್ನೂ ಹೆಚ್ಚಾಗಿ ಐತಿಹಾಸಿಕ ನಾಟಕಗಳನ್ನು ಅಭಿನಯಿಸಬೇಕಾಗಿಯೂ, ಅದರಲ್ಲಿಯೂ ಕರ್ನಾಟಕ ಇತಿಹಾಸಕ್ಕೆ ಸಂಬಂಧಪಟ್ಟವುಗಳನ್ನು ವಿಶೇಷ ಕಳವಳದಿಂದ ರಂಗಭೂಮಿಯ ಮೇಲೆ ತರಬೇಕಾಗಿಯೂ, ಆಗ್ರಹ ಪೂರ್ವಕವಾಗಿ ಸೂಚಿಸುತ್ತೇವೆ.

ಕರ್ನಾಟಕ ಏಕೀಕರಣದ ವಿಷಯದಲ್ಲಿ ಕರ್ನಾಟಕ

ಪ್ರಾಂತಿಕ ಕಾಂಗ್ರೆಸ ಕಮೀಟಿಯಿಂದ ಕೊಟ್ಟ

ಪ್ರಶ್ನೆಮಾಲಿಕೆ

(೧) ಹಿಂದುಸ್ಥಾನದಲ್ಲಿ ಭಾಷಾನುಕ್ರಮವಾಗಿ ಪ್ರಾಂತ ರಚನೆಯಾಗಬೇಕೆಂಬ ತತ್ವಕ್ಕೆ ತಮ್ಮ ಒಪ್ಪಿಗೆ ಇರುವದೋ?

(೨) ಸದ್ಯಕ್ಕಿದ್ದ ಬ್ರಿಟಿಶ ಪ್ರಾಂತಗಳ ರಚನೆಯು ಭಾಷಾನುಕ್ರಮದಿಂದ ಮಾಡಲ್ಪಟ್ಟಿಲ್ಲವೆಂಬದನ್ನು ತಾವು ಬಲ್ಲಿರೋ?

(೩) ಬ್ರಿಟಿಶ ಪ್ರಾಂತವು ಮುಂಬಯಿ ಮದ್ರಾಸ, ಕೊಡಗು ಎಂಬ ಮೂರು ಬೇರೆ ಬೇರೆ ಆಡಳಿತಗಳಿಗೆ ಒಳಗಾಗಿದೆಯೆಂಬದು ತಮಗೆ ಗೊತ್ತಿರುವದೋ!

(೪) ಬ್ರಿಟಿಶ ಕರ್ನಾಟಕವು ಹೀಗೆ ಮೂರು ಆಡಳಿತಗಳಲ್ಲಿ ಹರಿದು ಹಂಚಲ್ಪಟ್ಟಿದ್ದರಿಂದ ಕರ್ನಾಟಕದ ಸಾಂಸ್ಕೃತಿಕ, ರಾಜಕೀಯ, ಔದ್ಯೋಗಿಕ ಸಾಂಪತ್ತಿಕ ಪ್ರಗತಿಗೆ ಬಾಧೆಯುಂಟಾಗಿರುವದೆಂದು ನಿಮಗೆ ತೋರುವದಿಲ್ಲವೋ?

(೫) ಹಿಂದುಸ್ಥಾನದಲ್ಲಿ ಬಂಗಾಲ ಹಾಗೂ ಅಸಾಮ ಪ್ರಾಂತಗಳು ಭಾಷಾನುಕ್ರಮದಿಂದ ರಚಿಸಲ್ಪಟ್ಟಿರುವವೆಂಬ ಸಂಗತಿಯೂ ಒರಿಸಾ ಹಾಗು ಆಂಧ್ರ ಪ್ರಾಂತಗಳು ಇದರ ಸಲುವಾಗಿಯೇ ಚಳವಳ ಮಾಡುತ್ತಿರುವರೆಂಬ ಸಂಗತಿಯೂ ತಮಗೆ ಗೊತ್ತಿರುವದಷ್ಟೇ?

(೬) ಭಾಷಾನುಕ್ರಮದಿಂದ ಪ್ರಾಂತರಚನೆ ಮಾಡಬೇಕೆಂಬ ತತ್ವವನ್ನು ಬ್ರಿಟಿಶ ಸರಕಾರದವರು ಒಪ್ಪಿ ಕೊಂಡಿರುವರೆಂಬದನ್ನು ತಾವು ಅರಿತಿರುವಿರೋ

("ಇಂಡಿಯನ್ ಕಾನಸ್ಟಿಟ್ಯೂಶನಲ್ ರಿಫಾರ್ಮ" ದ ಮೇಲೆ ಮಾಂಟೆಗ್ಯು ಮತ್ತು ಚೆಮ್ಸ್‌ಫೋರ್ಡ ಸಾಹೇಬರು ಮಾಡಿದ ರಿಪೋರ್ಟಿನ ಪ್ಯಾರಿಗ್ರಾಫ ೨೪೬ ಪಾನ ೧೫೮-೧೫೯ ನೋಡಬೇಕು)

(೭) ಭಾರತೀಯ ಮಹಾಸಭೆಯು (ಕಾಂಗ್ರೆಸ್ಸು) ಈ ತತ್ವಕ್ಕೆ ಒಪ್ಪಿಗೆಯನ್ನಿತ್ತು ೧೯೨೦ ರಲ್ಲಿ ಆದ ನಾಗಪುರ ಅಧಿವೇಶನದಲ್ಲಿ ಭಾಷಾನುಕ್ರಮವಾಗಿ ಕಾಂಗ್ರೆಸ ಪ್ರಾಂತಗಳನ್ನು ಮಾಡಿ ಕರ್ನಾಟಕಕ್ಕೆ ಒಂದು ಪ್ರತ್ಯೇಕ ಕಾಂಗ್ರೆಸ ಪ್ರಾಂತವನ್ನು ಕೊಟ್ಟಿದ್ದು ತಮಗೆ ಗೊತ್ತಿರುವದೋ?

(೮) ನಮ್ಮ ಕರ್ನಾಟಕದ ಸದ್ಯದ ವಿಚ್ಛಿನ್ನ ಸ್ಥಿತಿಯನ್ನು ಲಕ್ಷ್ಯಕ್ಕೆ ತಂದರೆ ಈಗ ನಾವು ನಮ್ಮ ಕರ್ನಾಟಕವನ್ನು ಏಕೀಕರಿಸಿ ಭಾಷಾನುಕ್ರಮವಾದ ಒಂದು ಪ್ರಾಂತವನ್ನಾಗಿ ಮಾಡಿಕೊಳ್ಳದಿದ್ದರೆ ನಮ್ಮ ನೆರೆಹೊರೆಯ ಪ್ರಾಂತಗಳಲ್ಲಿ ನಾವು ನಮಾವಿಷ್ಟರಾಗಿ ಹೋಗುವೆವೆಂಬದು ನಿಮಗೆ ತೋರುವದಿಲ್ಲವೋ?

(೯) ಎಲ್ಲವಿಷಯಗಳಲ್ಲಿಯೂ ಕರ್ನಾಟಕದ ಏಳ್ಗೆಯಾಗಬೇಕಾದರೆ ಕರ್ನಾಟಕವು ಒಂದು ಪ್ರತ್ಯೇಕ ಪ್ರಾಂತವಾಗುವದು ಅವಶ್ಯವಿರುವದೆಂದು ತಮಗೆ ತೋರುವದಿಲ್ಲವೋ?

(೧೦) ಒಂದು ಏಕೀಕೃತ ಕರ್ನಾಟಕ ಪ್ರಾಂತವಾಗಬೇಕೆಂಬ ಧ್ಯೇಯವನ್ನು ಸಾಧಿಸಿಕೊಳ್ಳಲಿಕ್ಕೆ ಯಾವ ಸಾಧನಗಳನ್ನು ತಾವು ಸೂಚಿಸುವಿರಿ

(೧೧) ಈ ಏಕೀಕರಣದ ಬಗ್ಗೆ ತಮ್ಮ ಆಕ್ಷೇಪಗಳೇನಾದರೂ ಇವೆಯೋ? ಇಲ್ಲವಾದರೆ ಯಾವ ಆಕ್ಷೇಪಗಳಿಗಾದರೂ ಆಸ್ಪದವಿರುವದೋ?

(೧೨) ಈ ವಿಷಯದ ಬಗ್ಗೆ ಮತ್ತೇನಾದರೂ ಪ್ರಶ್ನೆಗಳು ತಮ್ಮ ಧ್ಯಾನಕ್ಕೆ ಬರುವವೋ? ಬಂದರೆ ಅವುಗಳನ್ನು ಬರೆದು ಅವುಗಳಿಗೆ ದಯವಿಟ್ಟು ಉತ್ತರಗಳನ್ನು ಕೊಡಬೇಕು

"ಕನ್ನಡಿಗ"ನ ಉತ್ತರ

[೧] ಸಂಪೂರ್ಣವಾದ ಒಪ್ಪಿಗೆಯಿದೆ.

[೨] ಚೆನ್ನಾಗಿ ಬಲ್ಲೆವು.

[೩] ಗೊತ್ತಿದೆ.

[೪] ಕರ್ನಾಟಕದ ಸಾಂಸ್ಕೃತಿಕ, ರಾಜಕೀಯ, ಔದ್ಯೋಗಿಕ ಹಾಗೂ ಸಾಂಪತ್ತಿಕ ಈ ನಾಲ್ಕು ವಿಷಯಗಳಲ್ಲದೆ, ವಾಙ್ಮಯಾತ್ಮಕ, ಸಾಮಾಜಿಕ ವಿದ್ಯಾ ವಿಷಯಕ ಇವೇ ಮೊದಲಾದ ಪ್ರತಿಯೊಂದು ವಿಷಯದ ಪ್ರಗತಿಗೆ ಬಾಧೆಯುಂಟಾಗಿದೆ.

[೫] ಗೊತ್ತಿದೆ, ವರ್‍ಹಾಡದವರು ಸಹ ತಮಗೆ ಪ್ರತ್ಯೇಕವಾದ ಪ್ರಾಂತವು ಬೇಕೆಂದು ಆಗ್ರಹ ಪಡುತ್ತಲಿದ್ದಾರೆ.

[೬] ಅರಿತಿರುವೆವು. [ಹಿಂದುಸ್ಥಾನದ ಸುಧಾರಣೆಯ ಕಾನೂನು ("ಗೌರ್ನಮೆಂಟ ಆಫ ಇಂಡಿಯಾ ಆ್ಯಕ್ಟ") ಹಾಗೂ ಪಾರ್ಲಮೆಂಟಿನ ಜಾಯಿಂಟ ಕಮೀಟಿಗಳಲ್ಲಿ ಸಹ ಈ ಬಗ್ಗೆ ಸ್ಪಷ್ಟವಾದ ಉಲ್ಲೇಖವಿದೆ. ಮುಂಬೈ, ಮದ್ರಾಸುಗಳಲ್ಲಿಯ ಕಾಯದೇ ಮಂಡಳಗಳಲ್ಲಿಯ ಕರ್ನಾಟಕೇತರರಾದ ಮರಾಠಿ, ಗುಜರಾತಿ, ತಮಿಳು ತೆಲಗು ಮೊದಲಾದ ಪ್ರಾಂತಗಳ ಪ್ರತಿನಿಧಿಗಳು, ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತವನ್ನು ಕೊಡಬೇಕೆಂಬ ವಿಚಾರವನ್ನು ವಿರೋಧಿಸಿದರೂ ಕೂಡ, ಆ ಮಂಡಲಗಳಲ್ಲಿದ್ದ ಕರ್ನಾಟಕದ ಪ್ರತಿನಿಧಿಗಳಲ್ಲಿ ೩ ಜನರು ಈ ಪ್ರಾಂತರಚನೆಯು ಕರ್ನಾಟಕಕ್ಕೆ ಅವಶ್ಯಕವಾದುದೆಂದು ಮತ ಕೊಟ್ಟರೆ, ಸರಕಾರದವರು ಈ ಠರಾವು ಕಾಯದೇ ಮಂಡಳದಲ್ಲಿ ಸ್ವೀಕೃತವಾಯಿತೆಂದು ತಿಳಿಯಬೇಕೆಂದೂ ಬರೆದಿಟ್ಟಿರುವರು]

[೭] ಗೊತ್ತಿದೆ.

[೮] ನಾವೂ ನಮಾವಿಷ್ಟಯವಾಗಿ ಹೋಗುವೆವು. ನಮ್ಮ ಸಂಸ್ಕೃತಿಯೂ ಹಾಳಾಗಿ ಹೋಗುವದು, ನಮ್ಮ ಭಾಷೆಯೂ ಸೊರಗಿ ಹೋಗುವದು, ಸ್ವಲ್ಪದರಲ್ಲಿ ಹೇಳಬೇಕಾದರೆ ಕನ್ನಡಿಗರೆಂಬ ಜನಾಂಗವೇ ಕ್ರಮವಾಗಿ ಲಯವಾಗುವದು!

[೯] ಅವಶ್ಯ ಅತ್ಯಾವಶ್ಯ

[೧೦] ಎಲ್ಲಕ್ಕೂ ಮೊದಲು ಹಣದ ಸಹಾಯವು ಬೇಕು ಕರ್ನಾಟಕದಲ್ಲಿಯ ಕನಿಷ್ಠ ೧೦೦ ಜನ ಅಭಿಮಾನಿಶಾಲಿಗಳಾದ ಶ್ರೀಮಂತರು ಕಳೆದು ವರಿಗೆ ೨೦ ರೂ ದಂತೆ ವರ್ಗಣಿ ಕೊಟ್ಟರೆ ೩ ಸಾವಿರ ರೂಪಾಯಿಗಳು ಕೂಡುವವು ಇಲ್ಲದಿದ್ದರೆ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು

೩ ಸಾವಿರ ರೂಪಾಯಿಗಳನ್ನು ಇದಕ್ಕಾಗಿ ತೆಗೆದಿಡಬೇಕು. ಇಷ್ಟು ನಿರ್ಧಾರವಾಯಿತೆಂದರೆ ಒಂದೇ ಸವನೆ ಕಳಕಳದಿಂದ ಕೆಲಸ ಮಾಡುವ, ಹಾಗೂ ಕರ್ನಾಟಕತ್ವದ ಸಂಪೂರ್ಣ ಕಲ್ಪನೆಯುಳ್ಳ, ೬ ಜನ ಪಗಾರೀ ಕಾರ್ಯದರ್ಶಿಗಳನ್ನು ನೇಮಿಸಬೇಕು. ಇವರಲ್ಲಿ ಓರ್ವನನ್ನು, ಮುಂದೆ ಈ ಕೆಲಸಕ್ಕೆ ಬೇಕಾಗುವ ಹಣದ ನಿಧಿಯನ್ನು ಕೂಡಿಸಲಿಕ್ಕೂ, ಇನ್ನೋರ್ವನನ್ನು ಮುಖ್ಯ ಕಾರ್ಯಾಲಯದಲ್ಲಿ ಕೆಲಸ ಮಾಡಲಿಕ್ಕೂ, ಮೂನ್ನೋರ್ವನನ್ನು ಏಕೀಕರಣದ ಬಗ್ಗೆ ಅವಶ್ಯಕವಾದ ಸರಕಾರೀ ಮತ್ತು ಬಿನ್-ಸರಕಾರೀ ಸಂಗತಿಗಳನ್ನು ಸಂಗ್ರಹಿಸಲಿಕ್ಕೂ, ಉಳಿದ ಮೂವರನ್ನು ಕರ್ನಾಟಕದ ತುಂಬೆಲ್ಲ ತಿರುಗಾಡಿ, ಏಕೀಕರಣದ ಚಳವಳವನ್ನು ಪ್ರಜ್ವಲಿಸಲಿಕ್ಕೂ ನೇಮಿಸಬೇಕು. ಇಷ್ಟಾದರೆ ಒಳ್ಳೇ ವ್ಯವಸ್ಥಿತ ರೀತಿಯಿಂದ ಕಾರ್ಯ ಮಾಡಲಿಕ್ಕೆ ಅವಕಾಶವಾಗಿ, ಕರ್ನಾಟಕದಲ್ಲಿ ಈ ಬಗ್ಗೆ ಪ್ರಚಂಡವಾದ ಚಳವಳವನ್ನು ಹೂಡಲು ಸುಗಮವಾಗುವದು. ಈ ಬಗೆಯ ಪ್ರಚಂಡವಾದ ಚಳವಳಿಯು ಒಂದೆರಡು ವರ್ಷ ನಡೆದರೆ ಸಾಕಿದೆ; ಕರ್ನಾಟಕಕ್ಕೆ ಸ್ವತಂತ್ರವಾದ ಪ್ರಾಂತವು ದೊರೆತೇ ದೊರೆಯುವದೆಂದು "ಕನ್ನಡಿಗ"ನ ದೃಢವಾದ ನಂಬಿಗೆಯಿದೆ. ಈಗ್ಗೆ ಹೊಸ ಚುನಾವಣೆಯ ದಿನಗಳು ಸಮೀಪಿಸಿವೆ. ಮುಂಬೈ, ಮದ್ರಾಸ, ಕೊಡಗು ಪ್ರಾಂತಗಳ ಹಾಗೂ ದಿಲ್ಲಿಯ ಕಾಯದೇ ಮಂಡಲಗಳಿಗೆ ನಿಲ್ಲುವ ಉಮೇದವಾರರಲ್ಲಿ, ಕರ್ನಾಟಕತ್ವದ ಸಂಪೂರ್ಣ ಜ್ಞಾನವಿರುವದು ಅತ್ಯಂತ ಅವಶ್ಯಕವಾದುದು. ಆದ್ದರಿಂದ ಈ ಚುನಾವಣೆಯ ಕೋಲಾಹಲವು ಏಳುವ ಪೂರ್ವದಲ್ಲಿ, ಕರ್ನಾಟಕ ಏಕೀಕರಣ ಚಳವಳದ ಝುಂಝಾವಾತವು ಕನ್ನಡಿಗರನ್ನೆಲ್ಲ ಮುಸುಕಬೇಕು ಅಂದರೆ ಉಮೇದವಾರರು ಸಹ ಈ ಏಕೀಕರಣದ ಬಗ್ಗೆ ತಮ್ಮ ಚುನಾವಣೆಯ ಲೋಕಸಂಗ್ರಹದ ಕಾರ್ಯದಲ್ಲಿ ಸಂಪೂರ್ಣವಾಗಿ ಒಪ್ಪಿ ಪೂರೈಸುವರು. ಇದರಿಂದ ಮಹಾಜನರಿಗೂ ಈ ವಿಷಯವು ಗೊತ್ತಾಗುವದು ಆ ಮೇಲೆ ಮುಂದಿನ ಹೊಸ ಕಾಯದೆ ಮಂಡಲಗಳಲ್ಲಿ ಈ ಬಗ್ಗೆ ತಾನೇ ಕೋಲಾಹಲವು ಏಳುವದು

[೧೧] ತಾತ್ವಿಕ ರೀತಿಯಿಂದ ಯಾವ ಆಕ್ಷೇಪಣೆಯೂ "ಕನ್ನಡಿಗ"ನಿಗಿಲ್ಲ. ಆದರೆ ಬೇಗನೆ ಕೃತಿಯಲ್ಲಿ ಈ ವಿಚಾರವು ಇಳಿಯುವೆಂಬದೊಂದೇ ದೊಡ್ಡ ಆಕ್ಷೇಪ. ಈ ಬಗ್ಗೆ ಸಂಪೂರ್ಣವಾಗಿ ವಿಚಾರ ಮಾಡದ ಹಲಕೆಲವು ಜನರು ಏನಾದರೂ ಕ್ಷುಲ್ಲಕ ಆಕ್ಷೇಪಗಳನ್ನು ಮುಂದರಿಸಿದರೂ, ಅವನ್ನೇನು ನಾವು ಲಕ್ಷಿಸುವದು ಅವಶ್ಯವಿಲ್ಲ. ಯಾಕಂದರೆ ಮೇಲೆ ಸೂಚಿಸಿದಂತೆ ಏಕೀಕರಣದ ಕಾರ್ಯವು ವ್ಯವಸ್ಥಿತರೀತಿಯಿಂದ ನಡೆಯುತ್ತೆಂದರೆ, ಆ ಮಂಡಲದವರು ಎಲ್ಲರಿಗೂ ಸಮಾಧಾನವಾಗಿ ಉತ್ತರ ಕೊಡಬಲ್ಲರು.

[೧೨] ಕೇಳಿದ ೧೧ ಪ್ರಶ್ನೆಗಳು ಸಾಕಿವೆ. ಮುಂದಿನ ಕಾರ್ಯವು ಮಾತ್ರ ಬೇಗನೇ ಸಾಗಲಿ.

ವರ್ತಮಾನಸಾರ.

ಮುಂಬೈ ಕರ್ನಾಟಕ

ಧಾರವಾಡ ಜಿಲ್ಲೆಯ ಡೆಪ್ಯೂಟಿ ಕಲೆಕ್ಟರರಾದ ಮಿ॥ ಭದ್ರಾಪುರರವರು ಈಗ ಕೆಲವು ದಿವಸಗಳಿಂದ ಹಾನಗಲ್ಲಿನಲ್ಲಿರುವರು. ಅವರ ಪತ್ನಿಯವರು ಅಲ್ಲಿಯ ತಾರಕೇಶ್ವರ ದೇವಸ್ಥಾನಕ್ಕೆ ಹೋಗಿದ್ದರು. ಅಲ್ಲಿಯ ಪೂಜಾರಿಯು ಇವರಿಗೆ ಕಾಯಿ ಒಡೆದು ಕೊಟ್ಟು ಮಂಗಳಾರತಿಯನ್ನು ಕೊಟ್ಟು ಹೊರಗೆ ಕುಳಿತ ಮತ್ತೊಬ್ಬನಿಗೆ ಮಂಗಳಾರತಿಯನ್ನು ಕೊಡುವದಕ್ಕೋಸ್ಕರ ಹೋಗಿರಲು ಮಿ॥ ಭದ್ರಾಪುರ ಇವರ ಪತ್ನಿಯವರು ಗರ್ಭಗುಡಿಯಲ್ಲಿ ಹೊಕ್ಕು ದೇವರ ಗದ್ದುಗೆಯ ಮೇಲೆ ೨ ಬಿಲ್ವಗಳನ್ನು ಇಟ್ಟು ದೇವರ ಮೇಲೆ ಇದ್ದ ಹೂವನ್ನು ತಮ್ಮ ತಲೆಯಲ್ಲಿ ಇಟ್ಟುಕೊಂಡರು ಅಷ್ಟರಲ್ಲಿ ಪೂಜಾರಿಯು ಒಳಗೆ ಬಂದು "ಒಳಗೆ ಹೋಗಿ ದೇವರಿಗೆ ಮೈಲಿಗೆ ಮಾಡಿದಿರಿ, ದೇವರಿಗೆ ಸಂಪ್ರೋಕ್ಷಣ ಮಾಡಬೇಕಾಯಿತು. ಅದರ ಖರ್ಚನ್ನು ನಿಮ್ಮ ಕಡೆಯಿಂದ ವಸೂಲು ಮಾಡುವದರಲ್ಲಿ ಬರುವದು." ಎಂದು ಹೇಳಿದನು. ಅದಕ್ಕೆ ಮಿ॥ ಭದ್ರಾಪುರರವರ ಪತ್ನಿಯವರು "ಬ್ರಾಹ್ಮಣರು ಹೋಗಬಹುದು, ಬ್ರಾಹ್ಮಣೇತರರು ಹೋದರೆ ದೇವರಿಗೆ ಮೈಲಿಗೆಯಾಗುವದು, ಇದೆಲ್ಲಿಯದು? ನಾಳೆಯಿಂದ ಬ್ರಾಹ್ಮಣೇತರರನ್ನೇ ತಂದು ಹಚ್ಚಿ ಪೂಜೆ ಮಾಡಿಸುವೆನು. ಮತ್ತು ಅದೇನಾಗುವದೋ ನೋಡುವೆನು." ಎಂದೆನ್ನುತ್ತ ಮೋಟಾರಿನಲ್ಲಿ ಕುಳಿತು ಹೋದರು!

ಇಂಡೀ ತಾಲೂಕ ಪೈಕಿ "ಅಗರಖೇಡ" ದಲ್ಲಿ ತಾ॥ ೧೭-೪-೨೬ ಇ. ಶನಿವಾರ ದಿವಸ ಒಬ್ಬನ ಕೊಲೆಯಾಯಿತಂತೆ ಕೊಲೆಗಳಾಗುವದರ ಮೂಲ ಕಾರಣಗಳು ಸರಕಾರಕ್ಕಿನ್ನೂ ತಿಳಿದಂತೆ ಕಾಣುವದಿಲ್ಲ. ತಿಳಿದರೂ ಬಂದು ಮಾಡುವದು ಅವರಿಗೆ ಬೇಕಾಗೀಲಿಕ್ಕಿಲ್ಲ ಮೂಲವನ್ನರಿಯದೆ ಮೇಲೆ ಎಷ್ಟು ಮಾಡಿದರೂ ವ್ಯರ್ಥ. ಈ ತಾಲೂಕಿನಲ್ಲಿ ತಿಂಗಳೆರಡು ತಿಂಗಳಲ್ಲಿಯೇ ೨೫ ಕೊಲೆಗಳಾಗಿವೆ!! ಎಂದು ಕೇಳಿಕೆ. ನಿಜವೇ ಇದ್ದರೆ ೨೦ ಕೊಲೆಗಳಿಗೆ "ವ್ಯಭಿಚಾರ"ವೇ ಮೂಲವಾಗಿರಬೇಕು. ಉಳಿದ ೪-೫ ಕೊಲೆಗಳು ಹೊಲಮನೆಯ ಜಗಳದ್ದಾದರೆ ಹೆಚ್ಚು. ಸರಕಾರದವರು ಕೊಲೆಗಳನ್ನು ಕಡಿಮೆ ಮಾಡಬೇಕೆಂದಿದ್ದರೆ "ವ್ಯಭಿಚಾರ" ನಿಲ್ಲಿಸಬೇಕು. ಏನೇ ಆಗಲಿ ವಕೀಲರಿಗೆ ಚಲ್ಲಾಟವಿದೆ!

ನಮ್ಮ ಮೈಸೂರಿನ ಪತ್ರ

ಮೈಸೂರ ತಾ॥ ೨೧ ೪ ೨೬

ಸರ್ ಬ್ಯಾನರ್ಜಿಯವರು ಎಪ್ರಿಲ್ ಕೊನೆಗೆ ತಮ್ಮ ಪದವಿಯಿಂದ ನಿವೃತ್ತಿಹೊಂದಿ, ಪಾಶ್ಚಾತ್ಯ ದೇಶಗಳಿಗೆ ಸಂಚಾರ ಹೊರಡುವರು.

ನಮ್ಮ ಮಹಾರಾಜರು ರಾಜತಂತ್ರದಲ್ಲಿ ನಿಪುಣರು, ಹೀಗಿರುವದರಿಂದಲೇ, ಮಹತ್ತರವಾದ ಜವಾಬುದಾರಿಯುಳ್ಳ ಪದವಿಯನ್ನು, ತಕ್ಕವರಿಗೆ ಮಾತ್ರ ಸಲ್ಲಿಸಿರುವರು. ಮಿರಜಾ ಸಾಹೇಬರ ದಿವಾಣಗಿರಿಯಲ್ಲಿ, ರಾಜ್ಯಾಡಳಿತಗಳಲ್ಲಿ ಅನೇಕ ಬದಲಾವಣೆಗಳುಂಟಾಗಿ, ಪ್ರಜೆಗಳಿಗೆ ಹೆಚ್ಚು ಸುಧಾರಣೆಗಳು ದೊರೆಯುವ ಸಂಭವವುಂಟು. ಇವರಿಗೆ ಕನ್ನಡವು ಚನ್ನಾಗಿ ಬರುವದು, ಇವರ ಕಾಲದಲ್ಲಿಯಾದರೂ, ಕರ್ನಾಟಕ ವಿಶ್ವವಿದ್ಯಾಲಯಕ್ಕೆ, ಮೂರ್ತ ಸ್ವರೂಪವು ಉಂಟಾಗಬಹುದೆನಿಸುತ್ತದೆ.

ಮೈಸೂರ ಜಿಲ್ಲಾ ಕಾಂಗ್ರೆಸ ಕಮಿಟಿ ಭವನದಲ್ಲಿ ಯುಗಾದಿ ಹಬ್ಬದ ದಿವಸ ಪಂಚಾಂಗ ಶ್ರವಣವಾದ ಮೇಲೆ, ಶ್ರೀಮಾನ್ ಬೇಲೂರು ಕೇಶವದಾಸರು ಸೀತಾ ಕಲ್ಯಾಣ, ಎಂಬ ಹರಿಕಥೆಯನ್ನು ಮಾಡಿದರು. ಮೈಸೂರಿನ ಪಿತಾಮಹರಾದ ವೆಂಕಟಕೃಷ್ಣಯ್ಯನವರೇ ಮೊದಲುಗೊಂಡು ಅನೇಕರು ಕೀರ್ತನವನ್ನು ಕೇಳಿ ಆನಂದಪಟ್ಟರು

ಮೈಸೂರಿನ ವಿಶ್ವವಿದ್ಯಾಲಯದ, ಸಸ್ಯಶಾಸ್ತ್ರದ ಪ್ರೋಫೇಸರರಾದ ಡಾ॥ ಎಂ. ಎ. ಸಂಪತ್ಕುಮಾರ ಎಂಬವರು, ಮುಂದೆ ಲಾಹೋರಿನಲ್ಲಿ ನಡೆಯುವ ಸಸ್ಯಶಾಸ್ತ್ರದ ಸಭೆಗೆ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವರು

ಹಿಂದುಸ್ಥಾನ

ಉಪ್ಪಿನ ಕರವು ೧॥ ರೂಪಾಯಿದ್ದರಿಂದ ಮುಂಬೈ ಸರಕಾರಕ್ಕೆ ಈ ವರ್ಷದಲ್ಲಿ ೫೩ ಲಕ್ಷ ರೂ ಉತ್ಪನ್ನವು ಕಡಿಮೆಯಾಗಿದೆ.

ಮುಂಬೈಯಲ್ಲಿಯ ಆಲ್ಬರ್ಟ ಪ್ರದರ್ಶನ ಶಾಲೆಗೆ ೧೯೨೪-೨೫ನೇ ಇಸ್ವಿಯಲ್ಲಿ ವಿಜಾಪೂರದಿಂದ ಯುದ್ಧದಲ್ಲಿ ಉಪಯೋಗಿಸತಕ್ಕಂಥ ಕೆಲವು ಪಾತ್ರೆಗಳನ್ನು ತೆಗೆದುಕೊಂಡು ಹೋಗಿ ಇಟ್ಟಿರುವರು

ಪರದೇಶ

ಪ್ಯಾರಿಸ ನಗರದಲ್ಲಿ ಮ್ಯಾಡಮ್ ಸಾರ್ಷಿಯೋ ಇವಳಿಗೆ ೨೫೦ ಪೌಂಡು ಕೊಟ್ಟು ಆಕೆಯ ನರ್ತನದ ಸಂತೋಷ ಕೂಟವನ್ನು ಕೆಲ ಜನರು ಏರ್ಪಡಿಸಿದ್ದರು. ಆದರೆ ಆ ದಿನ, ಆ ನರ್ತಕಿಯು ತೋರ್ಪಡಿಸಿದ ವಿಶಿಷ್ಟ ಪದ್ಧತಿಯ ಕುಣಿತವು ಸರಿಯಾಗಿರಲಿಲ್ಲವೆಂದೂ, ಅದ್ದರಿಂದ ತಮಗೆ ತಮ್ಮ ೨೫೦ ಪೌಂಡು ಹಣವು ಮರಳಿ ದೊರೆಯಬೇಕೆಂದೂ ಆ ಜನರು ನ್ಯಾಯಾಸನದಲ್ಲಿ ಬೇಡಿಕೊಂಡರು ಆ ವಿಶಿಷ್ಟ ಪದ್ಧತಿಯ ಕುಣಿತವೇ ಶ್ರೇಷ್ಠವಾಗಿತ್ತೆಂದೂ, ಬೇಕಾದರೆ ಕೋರ್ಟಿನವರಿಗೆ ಪುನಃ ಕುಣಿದು ತೋರಿಸುವೆನೆಂದೂ ನರ್ತಕಿಯು ವಾದಿಸಿದಳು. ಇನ್ನು ಸ್ವಲ್ಪ ದಿನಗಳಲ್ಲಿ ಜಡ್ಜರ ಮುಂದೆ ಆಕೆಯು ಪುನಃ ನರ್ತಿಸಬೇಕು. ಆ ಮೇಲೆ ಜಡ್ಜರು ನಿರ್ಣಯಿಸಬೇಕೆಂಬುದಾಗಿ ಗೊತ್ತಾಗಿದೆ. ನ್ಯಾಯಗಳ ವೈಚಿತ್ರ್ಯದ ಪರಮಾವಧಿಯೇ ಇದು!

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ!

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—
ದಿ ಮೋಟಾರ ಡ್ರಾಯವ್ಹಿಂಗ ಇನ್‌ಸ್ಟಿಟ್ಯೂಶನ್
ಜಮುಖಂಡಿಕರ ವಾಡೇ ೪೬೫ ಶನಿವಾರ ಪುಣೇಶಹರ

ಹೊಟ್ಟೆನೋವು **ಹೊಟ್ಟೆನೋವು**

ಪೋಟದುಖೀ

ಹೊರಕಡೆಗೆ ಸಾಫ ಆಗದಿರುವದು, ಹೊಟ್ಟೆಯಲ್ಲಿ ಗುರ್ರೆನ್ನುವದು, ಅಜೀರ್ಣ ಆಗುವದು ಭೋಳಿಬರುವದು, ಕಣ್ಣು ಕತ್ತಲೆ ಗಡಿಸುವದು, ಕರಳಿನಲ್ಲಿ ನೀರು ಹಿಡಿಯುವದು, ವಾಯುವಿನಿಂದ ಮತ್ತು ವಾಫಿನಿಂದ ಹೊಟ್ಟೆಯಲ್ಲಿ ಗ್ಯಾಸ(Gas) ಆಗಿ ಹೊಟ್ಟೆಶೂಲಿ, ಹೊಟ್ಟೆಯುಬ್ಬುವದು, ಇತ್ಯಾದಿ ಹೊಟ್ಟೆಯ ಸಂಭಂಧವಾದ ಎಲ್ಲಬಗೆಯ ಹೊಸಹಳೇ ವಿಕಾರಗಳು ಈ ಔಷಧದಿಂದ ಸಂಪೂರ್ಣವಾಗಿ ಗುಣ ಹೊಂದುವವು ಇದಲ್ಲದೆ ಹೊಟ್ಟೆಯೊಳಗಿನ ಎಲ್ಲ ವಿಕಾರಗಳಿಗೂ

ಸೊಹೋನಿ ಇವರ ಪೋಟದುಖಿ

ಯು ಖಾತ್ರಿಯ ಮತ್ತು ರಾಮಬಾಣ ಔಷಧವಿದೆ. ಬಾಟ್ಲಿಯೊಂದಕ್ಕೆ ರೂ ೨॥ ಟಪಾಲ ಖರ್ಚು ಬೇರೆ.

ಪ್ರಮಾಣ- ಪ್ರತಿಯೊಂದು ಸಲ ೨ ಗುಳಿಗೆ ಮಧ್ಯಾಹ್ನದ ಮತ್ತು ರಾತ್ರಿಯ ಊಟವಾದಮೇಲೆ ಬಿಸಿ ನೀರಿನಲ್ಲಿ ತೆಗೆದು ಕೊಳ್ಳಬೇಕು.

ವಿಶೇಷ ಸೂಚನೆ ಪತ್ರ ವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ

ವಿಳಾಸ:— ಪಿ. ಎನ್. ಸೊಹೋನೀ ಬೇಲ ಬಾಗದ ಹತ್ತಿರ ೧೭೪ ಬುಧವಾರ ಪೇಟೆ ಪುಣೆ ಶಹರ

पोटदुखी.

ಕಣ್ಣಿನ ಔಷಧ

ಹೂವು. ಮೋತಿಬಿಂದು, ದೃಷ್ಟಿ ಮಾಂದ್ಯ, ಕಂಣುಚಿಟ್ಟು, ಕಣ್ಣು ಬರೋಣ, ಕೆಂಡಾಗೋಣ, ಮತ್ತು ಗುಡ್ಡಿ ರೆಪ್ಪೆ ಬಕ್ಕಿಗಳ ವಿಕಾರಗಳ ಇಂತಹ ಕಂಣಿನ ಎಲ್ಲ ಬೇನೆ ಗಳಿಗೆ ಈ ಔಷಧವು ಸಂಜೀವಿನಿಯೇ ಶಸ್ತ್ರಕ್ರಿಯೆಗಿಂತಲೂ ಮೇಲು! ರಾ. ಬ. ಶಂಡಸೆ. ಬಿ. ಡಿ. ಕಲೆಕ್ಟರ ಆನ್ನುತ್ತಾರೆ "ಅನೇಕರಿಗೆ ಈ ಔಷಧ ಕೊಟ್ಟಗುಣದ ಬಗ್ಗೆ ಖಾತ್ರಿಯಾಯಿತು ಮಂಗಳ ಕಂಣುಗಳು ನೆಟ್ಟಗಾದವು" ಎಂಥ ರೋಗಕ್ಕೂ ಎರಡೇ ಖಾತ್ರಿ. ಬಾತ್ಲಿಯೊಂದಕ್ಕೆ ರು ೧॥ ಟ ಖ ಬೇರೆ.

ಸೂಚನೆ:—ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ
ವಾ. ವಿ. ಕರಮರಕರ ೫೫೦ ಶನಿವಾರ ಪುಣೆಶಹರ

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೇ ಬಂಧುಗಳ, C/o ಕನ್ನಡಿಗನ ಕಾರ್ಯಾಲಯ

ಮೊರವಾಲ ಬ್ಲ್ಯಾಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ-೫ ಆಣೆ. ಟ. ಖ. ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಮೋರವಾಲ ಆ್ಯಂಡ ಕೊ.(ರಜಿಸ್ಟರ್ಡ) ಪುಣೇಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪುಕ್ಕಟ

ಟಿಪ್ಪಣೀ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬರ್ಟೀ ವಾಚ ಕಂ. (India) ಮುಂಬೈ ನಂ. ೪

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಪೈಸೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರ ಕಲಿತು ಕೊಳ್ಳಬಹುದು. ಇಂಥ ಸುಸಂಧಿಯನ್ನು ಕಳಕೊಳ್ಳಬಾರದು.!

ವಿಳಾಸ:— "ಗೆಳೆಯರ ಗುಂಪು" ಬಲಸಂಗಿ. ಜಿಲ್ಲಾ ವಿಜಾಪೂರ.

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಭೆ

ಇವರು ಎಪ್ರಿಲ ೧ ನೇ ವಾರದಿಂದ ಮಡಕೇರಿಯಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ ಡಲು ಪ್ರಾರಂಭಿಸುವರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ಜಾಹೀರ ನೋಟಿಸ

ಯಾವತ್ತೂ ಜನರಿಗೆ ತಿಳಿಪಡಿಸುವದೇನಂದರೆ ಈ ಜಿಲ್ಹೆಯಲ್ಲಿಯ ಕೆಳಗೆ ಬರೆದ ಊರಗಳ ಹತ್ತರಾ ನದಿಯ ಮೇಲೆ ನಾವು ಆಡಿಸುವ ಹಕ್ಕನ್ನು ೧ ನೇ ಎಪ್ರೀಲ ೧೯೨೬ ದಿಂದಾ ಒಂದು ವರುಷದ ಪೂರ್ತಿ ತಾರೀಖ ೧೫ ಎಪ್ರಿಲ ೧೯೨೬ ಮಧ್ಯಾಹ್ನ ಸಂಜೆಯ ೫ ಘಂಟೆಗೆ ಬಾಗಲಕೋಟ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಲಿಲಾವ ಮಾಡಲಾದೀತು.

ನಾವಿನ ಹೆಸರು.	ಸ್ಥಳಾ.	
ಕಲಾದಗಿ	ಘಟಪ್ರಭಾ ನದಿಯ ಮೇಲೆ.	
ಅನಗವಾಡಿ	ಸದರ	
ಗೋವನಕೊಪ್ಪ	ಮಲಪ್ರಭಾ ನದಿಯ ಮೇಲೆ	
ಚೊಳಚಗುಡ್ಡ	ಸದರ	

ಲಿಲಾವಿನಲ್ಲಿ ಬೇಡಲಿಚ್ಛಿಸುವವರು ಎರ್ಡು ಲಾಯಿಖ ಸರ್ಟಿಫಿಕೇಟುಗಳನ್ನು ಸ್ವತಃ ಹಾಜರ ಮಾಡತಕ್ಕದ್ದು. ಮತ್ತು ತಾರೀಖ ೧೦ ನೇ ಎಪ್ರಿಲ ೧೯೨೬ ನೇ ದರ ಒಳಗಾಗಿ ಲಿಲಾವಿನಲ್ಲಿ ಬೇಡುವ ಫೀ ಅಂತಾ ೧೦ ರೂಪಾಯಿಗಳನ್ನು ಸಬ್ ಡಿವ್ಹಿಜನಲ ಆಫಿಸರ ಬಾಗಲಕೋಟ ಇವರ ಕಡಿಗೆ ಡಿಪಾಜಿಟ್ ಎಂದು ಇಡತಕ್ಕದ್ದು. ಡಿಪಾಜಿಟ ಇಟ್ಟ ರಕಮಿನ ದೆಶೆಯಿಂದ ಸಬ ಡಿವ್ಹಿಜನಲ ಆಫಿಸರ ಬಾಗಲಕೋಟ ಇವರು ಪಾವತಿ ಕೊಡುವರು.

ಲಿಲಾವಿನ ಶರ್ತುಗಳು ಮುಂತಾದವು ಬಾಗಲಕೋಟ ಸಬ್ ಡಿವ್ಹಿಜನಲ್ ಆಫೀಸದಲ್ಲಿ ಕಚೇರಿಯ ವೇಳೆಯಲ್ಲಿ ರವಿವಾರ ಹಾಗೂ ಸೂಟಿ ದಿವಸಗಳ ಹೊರ್ತಾಗಿ ನೋಡಲಿಕ್ಕೆ ಸಿಗುವವು. ಮತ್ತು ಲಿಲಾವು ಆಗುವ ಪೂರ್ವದಲ್ಲಿ ಓದಿ ತಿಳಿಸುವದರಲ್ಲಿ ಬರುವದು.

Sd/ S. B. Fege.
Executive Engineer, iapr ct

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ॥ ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನೂತನವಾಗಿ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦-ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೦ ಮಿ. ವಿಠ್ಠಲ ಚಿಮ್ಮಾಜಿ ಸೇಟ ಕೆಲಾಸ್ ಅಲಿಬಾಗ ಜಾಂಜಿ,

(೨) ಬಾಂಡ ನಂ. ೧೩೬೦೬ ಮಿ॥ ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಕು ಸಿರಾ. (ಜಿ. ತುಮಕುರು.)

(೩) ಬಾಂಡ ನಂ. ೧೪೯೪೬ ಮಿ॥ ವೆಂಕಟರಮಣ. ವೆಂಕಟರಮಣ ಹೆಗಡೆ, ಸೇತಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನ. ಥ್ರ ಕ್ಯಾನರಾ.

(೪) L. K. C. ಬಾಂಡ ನಂ. ೧೮೭೩ ಮಿ ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೫೬೦ ಮಿ॥ ರಾಮಚಂದ್ರ ವಾಮನ ಕಾಂಕರ. ಕಾಬುಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೮೯೦ ಮಿ॥ ಆರ್. ಎಚ್. ನಾಟೆಸನ್ ಮಾಸ್ತರ ಗವರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಈ ಪತ್ರಿಕೆಯು ಬಾಗಲಕೋಟೆ ರಾಜೆ ರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ಐಶ್ವರ್ಯ ಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಇಹವೃತ್ತ

ವಿಜಾಪೂರದ ಬ್ರಾಹ್ಮಣರ ಸಂಘವು ಹೊರಟು ೨-೩ ತಿಂಗಳ ಗಳಾದವು. ಈ ಅವಧಿಯಲ್ಲಿ ಏನೇನು ಕಾರ್ಯವಾಗಿದೆ, ಏನೇನು ಆಗಿಲ್ಲವೆನ್ನುವದನ್ನೂ ಆ ಬಗ್ಗೆ ಮುಂದಿನ ಕಾರ್ಯವು ಹೇಗೆ ಸಾಗುವದೆಂಬುದನ್ನೂ ಅರುಹಬೇಕಾಗಿ ಶ್ರೀ ಶಂಭೂ ಶಂಕರ ದಾತಾರ ಇವರು ವಿಜಾಪೂರದ ಕಾರ್ಯದರ್ಶಿಗಳಿಗೆ ಪ್ರಶ್ನೆ ಕೇಳುತ್ತಾರೆ, ಬಾಗಲಕೋಟೆಯಲ್ಲಿ ಈ ವರೆಗೆ ನಂಜನ ಸಭಾಸದರಾಗಿದ್ದಾರೆಂದು ತಿಳಿಯುತ್ತದೆ

ಜಾಹೀರ ನೋಟೀಸು

ಕೆಳಗೆ ಸಹಿ ಮಾಡುವವರ ಕಡಿಂದಾ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ:—

೧ ಭೀಮಾಜಿ ಸ್ವಾಮಿರಾವ ವ ಪೋಟಹಿಸೇದಾರ ಸುಬ್ಬಾಜಿ ತಿಮ್ಮಾಜಿ	ಸಾಕಿನ	ಬಾಗಲಕೋಟ
೨ ರಾಮಚಂದ್ರ ತಿಮ್ಮಾಜಿ		ಸದರ
೩ ಸುಮತೀಂದ್ರ ಅಂಣಾಜಿ		ಸದರ
೪ ರಂಗೋ ರಾಘವೇಂದ್ರ		ಸದರ

ನೀವು ನಿಮ್ಮ ಹಯಾತಿನವರಿಗೆ ವ ನಿಮ್ಮ ಪಶ್ಚಾತ್ ನಿಮ್ಮ ವಾರಸದಾರರು ಇಂದಿನ ವರೆಗೆ ವೆಸ್ಟರ್ನ್ ಪೇಟೆಂಟ ಪ್ರೆಸ್ಸ ಕಂಪನಿ ಕಡಿಯಿಂದಾ ಜಮೀನಿಯ ಲಾವಣಿ ಬಾಕಿ ರೂಪಾಯಿ ತಗೋತಾ ಬಂದಿರತೀರಿ ಆದ್ರೆ ಈ ವರ್ಷ ಅಂದ್ರ ೧೯೨೫ ದಿಸಂಬರದಲ್ಲಿ ಬರತಕ್ಕವರು ಇಂದಿನ ವರಿಗೂ ಬರಲಿಲ್ಲಾ. ನಾವು ನಿಮ್ಮ ಪೈಕಿ ಮೂರುಮಂದಿ ವಾರಸದಾರರ ಪತ್ತೆ ವ ಜವಳಿ ಇಲ್ಲಿಯವರಿಗೆ ವ್ಯಾಪಕವಾಗಿ ಇನ್ನೂ ಸದರಿಯವರ ಪತ್ತೆ ಆಗಲಿಲ್ಲಾ. ಆದರೂ ನಾವು ನೇಮಿ ಪ್ರಕಾರ ವೆಂಕಾಜಿ ಸುಮತೀಂದ್ರ ಇವರಿಗೆ ಯಲ್ಲಾ ರಕಮು ಮನಿಯಾರ್ಡರಮಾಡಿದ್ದಿವಿ ಮತ್ತು ಬಾಕಿಹಿಸೇದಾರರಿಗೂ ಮುಟ್ಟಿಸಬೇಕೆಂದು ಬರೆದಿದ್ದಿವಿ ಆದರೆ ಸದರಿ ಯವರು ಮನಿಯಾರ್ಡರ ಪರತ ಬಿಟ್ಟಿರತಾರೆ ಆದರೆ ಈ ನೋಟಿಸಿನಿಂದ ಯಲ್ಲಾ ವಾರಸದಾರರಿಗೆ ಹಿಂಗೆ ತಿಳಿಸತೇವಲ್ಲಾ— 'ಸದರ ಮೇಲೆ ಬರಕೊಟ್ಟ ಹಿಸೇದಾರರು ಅವರ ವಾರಸದಾರರು ವ ಪೋಟ ಹಿಸೇದಾರರು ಮತ್ತೆ ಅವರ ವಾರಸದಾರರು ತಮ್ಮ ತಮ್ಮ ಹಿಸೇಕ್ಕೆ ಬರತಕ್ಕ ರಕಮು ತಕ್ಕೊಂಡು ಮಾಮೂಲಿಯಂತೆ ಪಾವತಿ ಕೊಡಬೇಕು, ಅಥವಾ ಮನಿಯಾರ್ಡರ ಮಾಡಿ ಕಳಿಸಲಿಕ್ಕೆ ತಿಳಿಸಿದರೆ ಆದರಂತೆ ಕಳಸತೇವೆ ಕಂಪನಿಯು ಕಡಿಂದಾ ಯಾವ ತರಹೇದ ಜೋಖಿಮ ಇಲ್ಲಾ ನಿಮ್ಮಾತರಣ ಲಾವಣಿ ರಕಮು ತಕ್ಕೊಳ್ಳದೆ ಏನಾದರೂ ಕೆಲ್ಸ ನಡಿಸಿದರೆ ಆದರ ಬಗ್ಗೆ ಕಂಪನಿ ಜವಾಬದಾರ ಇಲ್ಲ. ಉಲಟ ಕಂಪನಿಗೆ ಖರ್ಚು ಬಿದ್ದರೆ ಅದರ ಬಗ್ಗೆ ಜವಾಬದಾರಿಯು ನಿಮ್ಮ ಮೇಲೆ ಇರುತ್ತದೆ. ಅಂತಾ ಕೊಟ್ಟ ನೋಟೀಸು ತಾರೀಖು ೩೦ ಮಾಹೆ ಮಾರ್ಚ ಸನ್ನ ೧೯೩೬ ನೇ ಇಸ್ವಿ

ಕಂಪನಿ ವಕೀಲ ಮಿ। ಗೋವಿಂದರಾವ ಬೆಳಗಲ್ಲ.

Mysore Chronicle.

(English Weekly)

Editor:—T. T. SHARMAN

Annual Subscription Rs. 4—0—0

BENGALORE CITY.

ಜಯಕರ್ನಾಟಕ

ಕನ್ನಡದಲ್ಲಿ ಶ್ರೇಷ್ಠ ತರಗತಿಯ ಒಂದೇ ಒಂದು ಮಾಸಪತ್ರಿಯು. ಇದು ಡೆಮಿ ಅಕ್ಟೋ ಆಕಾರದ ೮೦ ಪುಟಗಳುಳ್ಳದ್ದಾಗಿರುತ್ತದೆ, ಇದರಲ್ಲಿ ಪ್ರಸಿದ್ಧ ಲೇಖಕರು ಬರೆದ ವಿವೇಚನಾತ್ಮಕ ಲೇಖಗಳೂ, ಮನೋಹರವಾದ ಕಥೆಗಳೂ, ಸರಸವಾದ ಕವಿತೆಗಳೂ, ಸಾಹಿತ್ಯ ಸೇವಾಧುರೀಣರ ಲೇಖಗಳೂ ನಾಟಕಗಳೂ ಕರ್ನಾಟಕ ಮಹಾಪುರುಷರ ಚರಿತ್ರೆಗಳೂ ಪ್ರತಿ ಸಂಚಿಕೆಯಲ್ಲಿ ಪ್ರಕಟವಾಗುವವು

ಸಂಪೂರ್ಣವು ಅಚ್ಚುಕಟ್ಟು ವಾರ್ಷಿಕ ಚಂದಾ ತೀರ ಸ್ವಲ್ಪೇ ರೂ. ೫-೮-೦. ಇಂದೇ ನಿಮ್ಮ ಹೆಸರನ್ನು ನೊಂದಾಯಿಸಿರಿ.

ಕಾರ್ಯದರ್ಶಿ ಜಯಕರ್ನಾಟಕ ಧಾರವಾಡ

ತಿಳಿಗನ್ನಡ] ## ರಂಗಭೂಮಿ. [ಮಾಸಿಕಪತ್ರಿಕೆ

ಇಡೀ ಕರ್ನಾಟಕದಲ್ಲಿ ಇಂತಹ ಸರ್ವಾಂಗ ಸುಂದರ ಮಾಸ ಪತ್ರಿಕೆಯು ಹುಟ್ಟಿರಲಿಲ್ಲ ಇದರಲ್ಲಿ ಹಿಂದುಸ್ಥಾನದ ಹಲವು ಪ್ರಸಿದ್ಧ ವಿದ್ವಾಂಸರ ಅಭಿನಯ ಫೋಟೋಗ್ರಾಫ ಚಿತ್ರಗಳೂ, ಅಭಿನಯ ಚಿತ್ರಗಳೂ, ಬೋಧಪ್ರದವೂ ಮನೋಹರವೂ ಆದ ಚಿಕ್ಕ ಚಿಕ್ಕ ನಾಟಕಗಳೂ ಹಳ್ಳಿಯ ಜನರಿಗೆ ಸಹ ತಿಳಿಯುವಂಥಹ ಸುಲಭ ಶೈಲಿಯಲ್ಲಿ ಪ್ರಸಿದ್ಧವಾಗುವವು. ಇದನ್ನು ತರಿಸಿ ನೋಡಿರಿ. ಇದರ ಯೋಗ್ಯತೆಯನ್ನು ತಿಳಿಯಬಹುದು. ವಾರ್ಷಿಕ ವರ್ಗಣಿ (ಈಗಲೇ ವರ್ಗಣಿದಾರರಾಗುವವರಿಗೆ) ೩ ರೂ. ಮಾತ್ರ ಮಾದರಿ ಸಂಚಿಕೆ ೦ ೪ ೬ ಟಿಕೀಟುಗಳನ್ನು ಕಳುಹಿಸಿರಿ ಜಾಹೀರಾತಿನ ಬಗ್ಗೆ ಬರೆದು ಕೇಳ್ಳಿರಿ ವ್ಯವಸ್ಥಾಪಕ

"ರಂಗಭೂಮಿ" ಬಸವನ ಗುಡಿ, ಬೆಂಗಳೂರು ಸಿಟಿ.

ಕಾನಡೆರಾಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡಬಿಚ್ಚಿಸುವವರು ಆ ವಾರಪತ್ರಿಕೆಯನ್ನು ಮೊದಲು ಓದಬೇಕು. ವಾರ್ಷಿಕ ಚಂದಾ ೩-೮-೦ ಪತ್ತೆ:—

ಸಂಪಾದಕ ಕಾನಡಾ ಧುರೀಣ. ಕುಮಟಾ, ಜಿ ಉತ್ತರ ಕನ್ನಡ

ಸಾಧ್ವೀ ಮತ್ತು ಸಂಪದಭ್ಯುದಯ

ಶ್ರೇಷ್ಠವಾದ ಕನ್ನಡದ ವಾರಪತ್ರಿಕೆ ಮತ್ತು ದಿನದ ಪತ್ರಿಕೆ.

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸ್ವತಂತ್ರವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩ ೧೩-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ ೨೨-೦-೦ ತಿಂಗಳಿಗೆ ೧ ೧೨ ೦ ಜಾಹಿರಾತಿನ ದರವನ್ನು ಅಥವಾ ಮಾದರಿ ಸಂಚಿಕೆಯನ್ನು ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಿಸಿಕೊಳ್ಳಬಹುದು.

ಎಂ. ವೆಂಕಟಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯ ಮೈಸೂರು

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು ಬೇರೆ ನಮೂನೆಯ ಹಳೇ ಮತ್ತು ಹೊಸ ಅಕ್ಕಿಯ ಚೀಲಗಳು ನಮ್ಮ ಬ್ಯಾಂಕಿನಲ್ಲಿ ಬಹು ಸೋವಿಯದರದಿಂದ ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

ಬ್ಯಾಂಕಿಗೆ ಅನುಸರಿಸಿದ ಸರ್ವ ತರಹದ ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆಯುವದರಿಂದ ಈ ಬ್ಯಾಂಕು ದಿನೇ ದಿನೇ ಅಭಿವೃದ್ಧಿಯನ್ನು ಹೊಂದುತ್ತದೆಂದು ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು	ನೂರಕ್ಕೆ	ವರ್ಷಕ್ಕೆ	2½
ಸೇವಿಂಗ್ಸ ಬ್ಯಾಂಕ ಠೇವು	”	”	4½
ಮುದ್ದತೀ ಠೇವು ೬ ತಿಂಗಳಿಗೆ	”	”	6
” ೧೨ ತಿಂಗಳಿಗೆ	”	”	7

ಪಾರಲೋನ ಪಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ ಬಾಜಾರದ ಬೆಲೆಗೆ ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಮ್ಮತವಾದ ಎಲ್ಲ ತರದ ಜೀನಸುಗಳನ್ನು ಇಟ್ಟುಕೊಂಡು ವ್ಯಾಪಾರಸ್ಥರಿಗೆ ಯೋಗ್ಯ ಬಡ್ಡಿಯಿಂದ ಸಾಲವನ್ನು ಕೊಡುತ್ತಲಿದ್ದೇವೆ,

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟೆ

।ಮನಸಾ ವಚಸಾ ಶರೀರತಃ ಕುರು ನಿತ್ಯಂ ನಿಜದೇಶಸೇವನಂ।

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:— ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

“ಕನ್ನಡಿಗ”ನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೨೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ವಿ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೦೦೦೦ ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮ್ಮತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ-	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೨-೧೩-೦ ,, ವಿ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ೪-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ೪-೧೩-೦ ವಿ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೧ ಆ ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to–
N. K. Kulkarni. Agent Bagalkot.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೨೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ, ಜಿ. ರಾಯಚೂರ, ನಿಜಾಂ

ವಿಶ್ವಕರ್ನಾಟಕ

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

ರ ಸಂ. ೬. ೧೯೪೭

ವಾ. ಚಂದಾ ೧—೧೩—೦ ಮಾತ್ರ

([illegible])

[illegible]

ಸಂಪಾದಕರು — [illegible] ರು.

ವರ್ಷ ೩ } [illegible] ಬುಧವಾರ ಮಿತಿ [illegible] { ಸಂಚಿಕೆ ೩

ಸಂಪಾದಕನ ಭೂಮಿ.

( )

ನನ್ನ ಮನಸಿನ ವೀಣವಾದಿ ಕಟ್ಟುವೆನಾನು ।
ನಿನ್ನ [illegible] ಮಾಡುವಂಥ [illegible] ದೊರೆ ।
ಚಿನ್ನ [illegible] ಚಿನ್ನ [illegible] ಹೊಂದು ಚಿನ್ನಯಾಕಾಶದಲಿ
ನನ್ನ ದೇಹವು ನಿನ್ನ [illegible] ।
[illegible] ಕಲ್ಲಾಗಿ [illegible] ।
ನನ್ನ ಪ್ರಾಣವು ನಿನ್ನ ಗಂಧವನು ಕೀರಬಹ ಗಂಧವಹವೆಂದು ತಿಳಿ ।

— [illegible]

ಡಾ। ನಾಡಗೀರ ಇವರನ್ನು ಮುಂಬಯಿಯ [illegible] ವೈದ್ಯ ವಿದ್ಯಾಲಯದ [illegible] (ಮುಖ್ಯ [illegible]) [illegible] ವರು ಇದು ಅವರಲ್ಲಿಯ ಯೋಗ್ಯತೆಯನ್ನೂ ಉದ್ಯೋಗತತ್ಪರತೆಯನ್ನೂ ಚನ್ನಾಗಿ ವ್ಯಕ್ತ ಪಡಿಸುತ್ತದೆ. ಡಾ। ನಾಡಗೀರ ಇವರು [illegible] ಕನ್ನಡಿಗರು. [illegible] ಹುಬ್ಬಳ್ಳಿಯ [illegible] ದವರು. ಶಸ್ತ್ರಕ್ರಿಯೆಯಲ್ಲಿ ಅತ್ಯುತ್ತಮವಾದ ನಿಪುಣತೆಯನ್ನು ಪಡೆದವರು. ಇಂದವರಿಗೆ ಇಂಥ ಉಚ್ಚವಾದ ಸ್ಥಾನವು ದೊರೆತದ್ದರಲ್ಲಿ ಏನೂ ಆಶ್ಚರ್ಯವಲ್ಲ. ಇವರಿಗ ಸಿಗದಿದ್ದರೆ, ಮಾತ್ರ ಸೋಜಿಗದ ಮಾತೆನಿಸಬಹುದಾಗಿತ್ತು. ಇವರಲ್ಲಿಯ ಜಾಣತನವನ್ನೂ ಯೋಗ್ಯತೆಯನ್ನೂ ಕಂಡು ಹಿಡಿದು ನಾಡಿಯ ವೈದ್ಯ ವಿದ್ಯಾಲಯದ ಶರೀರ ಶಾಸ್ತ್ರದ ಅಧ್ಯಾಪಕರನ್ನಾಗಿ ಇವರನ್ನು ನಿಯಮಿಸಿದರು. ಕಸ್ತೂರಿಯನ್ನು ಕರಡಿಗೆಯಲ್ಲಿಟ್ಟರೂ ಅದು ತನ್ನ ಪರಿಮಳವನ್ನು ಸೂರೆಮಾಡದೆ ಬಿಡುವದಿಲ್ಲ. ಅನುವು ಸಿಕ್ಕರೆ ಕೇಳುವದೇನು? ಇವರು ಕುಶಾಗ್ರ ಬುದ್ಧಿಯ ಪ್ರಭಾವವನ್ನು ತೋರಗೊಡುವಲು ಎಡೆಯು ದೊರೆತಿತು. ಅದರಿಂದ ಮೇಲಿನವರ ಲಕ್ಷ್ಯವು ತಾನಾಗಿಯೇ ಇತ್ತ ಕಡೆಗೆ ಒಲೆಯಿತು. ನಾಡಗೀರರವರು ಉಚ್ಚ ಪದದಲ್ಲಿ ಮಂಡಿತರಾದರು. ಇವರ ಚರಿತ್ರವು ಉದಾರವಾದುದು. ಆನೆಯು ತಲೆಯಷ್ಟು ಪಗಾರ ತೆಗೆದುಕೊಂಡು, ಉಂಡುಟ್ಟು ಸುಖದಿಂದಿರುವ ಕೋಟಿಯವರು ಇವರಲ್ಲ. ಇವರದಾರಿಯೇ ಬೇರೆ. ತಮಗೆ ದೇವರು ದಯಪಾಲಿಸಿದ ಜ್ಞಾನವನ್ನು ಎರಡನೆಯವರ ಕಲ್ಯಾಣಕ್ಕೆ ವೆಚ್ಚಮಾಡುವುದೇ ಇವರ ಹಿರಿಯ ಗುರಿಯು. ಶರೀರ ಸುಖವು ಅನ್ಯ ಸುಖಗಳ ತಾಯಿ. ಇದನ್ನು ನೆನೆದು ಇವರು ಹುಬ್ಬಳ್ಳಿಯಲ್ಲಿ ಒಂದು ಸಾರ್ವಜನಿಕ ದವಾಖಾನೆಯನ್ನು ಸ್ಥಾಪಿಸಿದ್ದಾರೆ. ಇಂತಹ ಕನ್ನಡಿಗರು ನಮ್ಮ ನಾಡಿನಲ್ಲಿ ದೊರೆಯುವದು ನಮಗೆ ಭೂಷಣಾಸ್ಪದವಾದ ಸಂಗತಿಯಲ್ಲವೇ? ಇಂತಹ ಕನ್ನಡಿಗರನ್ನು ಪಡೆದ ಕನ್ನಡ [illegible] ಧನ್ಯ[illegible] ಯೋಗ್ಯತೆಯ ಗೌರವದಿಂದಲೇ [illegible] ನಮ್ಮ ಪತ್ರಿಕೆಯು [illegible] ನಾಡಗೀರರನ್ನು [illegible] ಅಭಿನಂದಿಸುತ್ತೇವೆ. [illegible] ತಲೆಯೆತ್ತಿ [illegible] ವನ್ನು ಸುಂದರಗೊಳಿಸಲ್ಲವೇ? [illegible] ಸ್ವರ್ಗದಿಂದ [illegible] ಕೂಡ [illegible].

ಶಾಂತೇಶ ಕವಿಗಳ [illegible] ಭಾವವಾದದವರು [illegible] ದಿಂದ ಅವರ [illegible] ಜಾಗೃತಿಯು ಚೆನ್ನಾಗಿ ವ್ಯಕ್ತವಾಗುತ್ತದೆ. ಇದಕ್ಕಾಗಿ ನಾವು [illegible] ಮನಮುಟ್ಟಿ ಅಭಿನಂದಿಸುತ್ತೇವೆ. ಇಂತಹ [illegible] ಗಳು ರಾಷ್ಟ್ರದ [illegible] ಣಿಗೆಗೆ ಅತ್ಯಾವಶ್ಯಕ. ಇದರ [illegible] ಕವಿಗಳೂ, [illegible] ಮೇಲಾದ ಬಂಗಾರದ ರಾಷ್ಟ್ರದ ನಿರ್ಮಾಣಕರ [illegible] ದೃಷ್ಟಿಯಿಂದ ನೋಡಿದರೆ ಇಂಗ್ಲಂಡವು [illegible] ಅವರ ಸಾಹಿತ್ಯಪ್ರೇಮವೇ ಕಾರಣವಾದುದು ಕಾಣುವದು. [illegible] ರ, [illegible] ಇವರೇ ಮೊದಲಾದ [illegible] ರಾಷ್ಟ್ರದ ಜ್ಯೋತಿಯನ್ನು ಬೆಳಗಿದವರು. ಇಂದವರ ಕೀರ್ತಿಸ್ತಂಭವನ್ನು [illegible] (ಇಂಗ್ಲಂಡವು) ಪ್ರತಿ [illegible] ತಪ್ಪದೆ [illegible] ರಾಷ್ಟ್ರದ ಇತಿಹಾಸ, ಅದರ ಸಂಸ್ಕೃತಿ ಇವುಗಳು ನಷ್ಟವಾಗದಂತೆ, ಕಾಯ್ದುಕೊಳ್ಳುವವರೇ ಇವರು. ಅಂದ ಮೇಲೆ, [illegible] ಬಗ್ಗೆ ಕೃತಜ್ಞತೆಯನು [illegible], ಅವರ ವಾರ್ಷಿಕ ಶ್ರಾದ್ಧವನ್ನು ಮಾಡಿ ನಾಡಿನ ಜೀವಣಿಗೆಯನ್ನು [illegible] ಭದಿಂದ ಸಾಗಿಸುವದು ಆ ಆ ನಾಡಿನವರ ಕರ್ತವ್ಯವಲ್ಲವೆ? ಕನ್ನಡನಾಡಿನ ಅಭಿಮಾನವು ನಾಮಶೇಷವಾಗಿರುವ ಕಾಲದಲ್ಲಿ ಶಾಂತೇಶ ಕವಿಗಳು ತಲೆದೋರಿದರು. ತಮ್ಮ ಕೀರ್ತನಗಳಿಂದಲೂ ಹೊಸ ತರದ ಕಾವ್ಯಗಳಿಂದಲೂ ಕನ್ನಡಕ್ಕೆ ಕಳೆದುಂಬಿದರು; ಕನ್ನಡಿಗರಲ್ಲಿ ಹುರುಪನ್ನುಂಟು ಮಾಡಿದರು. ಕನ್ನಡನಾಡು ಕನ್ನಡನುಡಿ ಇವುಗಳ ಬಗ್ಗೆ ಕನ್ನಡಿಗರ ಎದೆಯಲ್ಲಿ [illegible] ಬೇರನ್ನೂರಿದರು. ಕನ್ನಡವೆಂಬ ಸೊಲ್ಲು ಕಿವಿಗೆ ಬಿದ್ದೊಡನೆ ಅಭಿಮಾನದ ವಿದ್ಯುತ್ಸಂಚಾರವಾಗುವಂತೆ ಮಾಡಿದರು. ಇಂತಹ ಮಹನೀಯರನ್ನು ಮನ್ನಿಸುವುದು ಅಗ್ಯ ಕರ್ತವ್ಯವೆಂದು ಭಾವಿಸಿ, ಧಾರವಾಡಿಗರು ಅವರ ಶ್ರಾದ್ಧವನ್ನು ಪ್ರತಿವರ್ಷ ಜರುಗಿಸುತ್ತಿದ್ದಾರೆ. [illegible] ಸೋಜಿಗದ ಮಾತಲ್ಲ. ಅವರ ನನ್ನು [illegible] ವರ್ತಿತ್ತು. ಮಾತ್ರ [illegible] ಪ್ರಯೋಜನವಾದುದು.

ಶ್ರೀ. ವಾಸುದೇವಾಚಾರ್ಯ ಕೆರೂರ ಎಂದೊಡನೆ, ಒಳ್ಳೆ ಉಬ್ಬು ಉಬ್ಬಿ ಸೂರಾಡುವ ಬಗಳೆ. ಅವರ 'ಇಂದಿರಾ' ಕಾದಂಬರಿಯು ಇಲ್ಲ ಸೊಗಸಾದುದು ಎಂದು ಒಬ್ಬನೂ ಅವರ 'ನಲದಮಯಂತಿ' 'ರಮೇಶಲಲಿತಾ' 'ಸುಂದರ ಸೃಷ್ಟಿ' ಇವೆನು ಕೇಳ್ದೆನೆಂದು ಮರೆಯಲಾರ, ಏಕೆ! ಅವರ 'ಗುಲ್ಬಾಯಿ' ಯು ಹೇಗೆ, ಅದರಲ್ಲಿಯ ವಿನೋದವೇನು? ಸೃಷ್ಟಿಯ ವರ್ಣನೆಯೇನು ಎಂದು ಮುಗದೊಬ್ಬನೂ ಆವೇಶದಿಂದಲೂ ಉತ್ಸುಕತೆಯಿಂದ ಲೂ ವರ್ಣಿಸುವನು. ಆ ವಾಸುದೇವನೂ ಕನ್ನಡದ ಸರಸ್ವತಿಯ ಅಡಿಯಲ್ಲಿಯೇ ತನ್ನ ಜೀವನದ ಸುಮನವನ್ನು ನೀಡಿದ ವಾಸುದೇವನು. ಈ ವೇಷವನ್ನು ಕೂಡಿಸು ದೋಷ ರಹಿತನಾಗಿ ಮೆರೆದ ಆ ವಾಸುದೇವನು. ಅವನಗಿ ನಾಲ್ಕಾರು ವರ್ಷಗಳಾಗಿ ಹೋದವು. ಅವನ ಜ್ಯೋತಿಯು ಬಾಗಲಕೋಟೆಯ ಕಿಲ್ಲೆಯ ಸುತ್ತಲೂ ಮಿನುಗುತ್ತಿದೆ; ಮಿಂಚುತ್ತಿದೆ, ಬೆಳಗುತ್ತಿದೆ; ಕೊಳಗುತ್ತಿದೆ. ಯಾರಿಗೂ ಕಾಣಲೊಲ್ಲದು; ದೃಷ್ಟಿಯನ್ನು ಮೇಲಕ್ಕೆತ್ತಿರಿ. ಅದರ ಹೊಳಪು ಕಾಣುವುದು. ಇನ್ನು ಕಣ್ಣಿದ್ದು ಕುರುಡರಾಗುವುದು ಸರಿಯಲ್ಲ ಪುಣ್ಯಶ್ಲೋಕನಾದ ವಾಸುದೇವನನ್ನು ಪ್ರತಿವರ್ಷ ಕರೆಯಿರಿ. ಸಾಹಿತ್ಯ ಸುಮನಗಳಿಂದ ಅವನನ್ನು ಅರ್ಚಿಸಿರಿ. ಉಡಪು ತೊಡಪುಗಳಿಂದ ಅವನನ್ನು ಸಿಂಗರಿಸಿ ನಿಮ್ಮ ಭಾಗ್ಯೋದಯವನ್ನು ಅವನಿಂದ ಪಡೆಯಿರಿ.

ಮಂಗಳೂರಿನ ಡಾ. ಬಿ ದಾಸಣ್ಣಾಚಾರ್ಯರು ಜರ್ಮನಿಯಲ್ಲಿ ತಮ್ಮ ಶಾಸ್ತ್ರೀಯ ಅಭ್ಯಾಸವನ್ನು ಮುಗಿಸಿಕೊಂಡು ಮರಳಿ ಕರ್ನಾಟಕಕ್ಕೆ ಬಂದಿದ್ದಾರೆ. ಇವರು ಪ್ರತಿಕ್ಷಣಕ್ಕೆ ದೀಪದ ರೀತಿಯಿಂದ ಹೊಸ ಬಾಳಿನ ಶಕ್ತಿಯನ್ನು ಹೊಸದಾಗಿ ಕಂಡು ಹಿಡಿದಿದ್ದಾರೆ. ಇವರಿಗೆ "ಪಿ ಎಚ್. ಡಿ" ಎಂಬ ಘನತರ ಪಾಂಡಿತ್ಯದ ಪದವಿಯೂ ದೊರೆತಿದೆ. ಜರ್ಮನಿಯ ಪಂಡಿತರು ಇವರ ಬುದ್ಧಿಮತ್ತೆಗಾಗಿ ಬೆರಗಾಗಿದ್ದಾರೆ. ಇಂಗ್ಲಂಡದಲ್ಲಿರುವ "ಇಂಡಿಯನ್ ಹಾಯ ಕಮೀಶನರ" ಅಂದರೆ ಹಿಂದುಸ್ಥಾನ ಸರಕಾರದ ವ್ಯಾಪಾರೀ ಪ್ರತಿನಿಧಿಯು ಇವರಿಗೆ ಒಂದು ವರ್ಷದ ವೇತನವನ್ನೂ ಕೊಟ್ಟು ಗೌರವಿಸಿದ್ದಾರೆ. ಜರ್ಮನಿಯಲ್ಲಿಯ ಅಭ್ಯಾಸವನ್ನು ತೀರಿಸಿಕೊಂಡು ಡಾ. ದಾಸಣ್ಣಾಚಾರ್ಯರು ಲಂಡನಕ್ಕೆ ಹೋಗಿ ಅಲ್ಲಿಯ "ಯುನಿವರ್ಸಿಟಿ ಕಾಲೇಜ" ದಲ್ಲಿ ಇನ್ನೂ ಶಾಸ್ತ್ರೀಯ ಶೋಧಗಳನ್ನು ನಡಿಸಿರುವರು. ಅಲ್ಲಿಯೂ ಅವರಿಗೆ ಶಾಸ್ತ್ರೀಯ ಹಾಗೂ ಔದ್ಯೋಗಿಕ ಖಾತೆಯವರಿಂದ ವೇತನವು ದೊರೆತಿದೆ. ಇವರು ಇಲ್ಲಿ ಒಂದೆರಡು ತಿಂಗಳು ಮಾತ್ರ ಇದ್ದು ಪುನಃ ಲಂಡನಕ್ಕೆ ಹೋಗುವರು. ಜರ್ಮನಿಯ ಜನರಲ್ಲಿ ಇಂಗ್ಲಂಡಿನವರಿಗಿಂತ ಹಿಂದುಸ್ಥಾನದವರ ಬಗ್ಗೆ ಹೆಚ್ಚಾದ ಪ್ರೀತಿಯಿದೆಯೆಂದು ಇವರು ಅಭಿಪ್ರಾಯ ಪಟ್ಟಿದ್ದಾರೆ. ಕರ್ನಾಟಕದ ಯುವಕರು ಪರದೇಶಗಳಲ್ಲಿ ಸಹ ತಮ್ಮ ನಾಡಿನ ಕೀರ್ತಿಯನ್ನು ಇದೇ ಬಗೆಯಾಗಿ ಹೆಚ್ಚಿಸಲಿ!

ದೇಶೀಯ ಸಂಸ್ಥಾನಗಳ ಪ್ರಜೆಗಳೆಂದರೆ ಚೆಲ್ಲಾಟದ ಗೊಂಬೆಗಳೆಂಬವಾಗಿ ಆ ಆ ರಾಜರುಗಳು ಅರಿತಿರುವರು. ಅಂತೆಯೇ ಯಾವ ಸಂಸ್ಥಾನದಲ್ಲಿ ನೋಡಿದರೂ ಪ್ರಜೆಗಳಿಗೆ ಸುಖವಿಲ್ಲ. ಹೈದರಾಬಾದಿನಲ್ಲಿ ಸ್ವಾತಂತ್ರ್ಯದ ಗಾಳಿಯು ಈ ಇಪ್ಪತ್ತನೆಯ ಶತಮಾನದಲ್ಲಿ ಕೂಡ ಬೀಸದಂತೆ ನಿಝಾಮ ಸಾಹೇಬರು ಏರ್ಪಾಡು ಮಾಡಿದ್ದಾರೆ. ಬಡೋದೆಯಲ್ಲಿ ಪ್ರಜೆಗಳಿಗೆ ಅನೇಕ ಹಕ್ಕುಗಳು ದೊರೆಯಲಿಲ್ಲವೆಂದರೂ, ತೆರಿಗೆಯು ಹೆಚ್ಚಾಗಬೇಕೆಂದೂ, ಶಾಲೆಯ ಫೀ ದರವು ಏರಿಸಲ್ಪಡಬೇಕೆಂದೂ ನಿರ್ಣಯಿಸಿ, ಪ್ರಜೆಗಳನ್ನು ರೇಗಿಸಿ, ಗಾಯಕವಾಡರು ಪರದೇಶಕ್ಕೆ ತಮ್ಮ ವಿಲಾಸಕ್ಕಾಗಿ ಪುನಃ ತೆರಳಿದರು! ಪ್ರಜೆಗಳ ಕಲ್ಯಾಣದ ಕಾರ್ಯಗಳಿಗೆ ಇಂದೂರಿನ ಬೊಕ್ಕಸದಲ್ಲಿ ಹಣವಿಲ್ಲ; ಆದರೆ ಮಹಾರಾಜರ ಸ್ತ್ರೀಯಳ ಸಲುವಾಗಿ ಲಕ್ಷೋಪಲಕ್ಷ ರೂಪಾಯಿಗಳು ಸೂರೆಯಾಗುತ್ತವೆ! ವಿಲಾಸಕ್ಕಾಗಿ ವಿಲಾಯತಿಗೆ ಹೋಗಲು ಎಲ್ಲಾ ಪುಟ್ಟ ಸಂಸ್ಥಾನಿಕರಿಗೂ ರಾಜಾಧಿರಾಜ ಮಹಾರಾಜರಿಗೂ ಅವಕಾಶ ಹಾಗೂ ಹಣ ದೊರೆಯುತ್ತದೆ; ಆದರೆ ಹೊಟ್ಟೆಗೆ ಕೂಳಿಲ್ಲದೇ ಸಾಯುವ ಪ್ರಜೆಗಳಿಗೆ ಹಿಡಿ ಹಿಟ್ಟನ್ನು ಹಾಕಲು ಹಣವು ದೊರೆಯುವದಿಲ್ಲ! ಸಾಂಗಲಿಯಲ್ಲಿ ಸಾರ್ವಜನಿಕ ವ್ಯಾಖ್ಯಾನಗಳನ್ನೇರ್ಪಡಿಸ ಬೇಕಾದರೆ ಸಹ ಸರಕಾರದ ಸಮ್ಮತಿಯನ್ನು ಮೊದಲು ಸಂಪಾದಿಸ ಬೇಕಂತೆ! ಮುಧೋಳದಲ್ಲಿ ಜನರು ತಮ್ಮ ಸ್ವಂತ ವೆಚ್ಚದಿಂದ ಸಹ ಕನ್ನಡ ಶಾಲೆಗಳನ್ನು ಸ್ಥಾಪಿಸಕೂಡದಂತೆ! ಸೊಂಡೂರಿನಲ್ಲಿ ಖಾದಿಯ ಬಟ್ಟೆಯನ್ನು ಯಾರೂ ಧರಿಸಕೂಡದಂತೆ! ಸವಣೂರಿನಲ್ಲಿ ಬ್ರಿಟಿಶ್ ಸರಕಾರದ ಕ್ಕಿಂತ ೨-೩ ಪಟ್ಟು ಹೆಚ್ಚಾದ ತೆರಿಗೆಯನ್ನು ಪ್ರಜೆಗಳು ಸರಕಾರಕ್ಕೆ ತೆತ್ತಬೇಕಂತೆ; ಮತ್ತೆ ಟೊಪ್ಪಿಗೆಯನ್ನು ಸಹ ಯಾವನೂ ಸಂಸ್ಥಾನದಲ್ಲಿ ತಿರುಗಬಾರದಂತೆ. ಈ ಬಗೆಯ ಉಚ್ಛೃಂಖಲ ವೃತ್ತಿಯು ರಾಜ್ಯಾಡಳಿತದಿಂದ ಪ್ರಜೆಗಳಲ್ಲಿ ಬೇಸತ್ತಿದ್ದಾರೆ. ನೆರೆಹೊರೆಯ ಬ್ರಿಟಿಶ ರಾಜ್ಯದ ಪ್ರಜೆಗಳಲ್ಲಿ ಸಹ ಆ ಸಂಸ್ಥಾನಗಳ ರಾಜರ ಬಗ್ಗೆ ಆದರವೂ ಕಡಿಮೆಯಾಗ ಹತ್ತಿದೆ. ಈ ವೃತ್ತಿಯು ಹಿಂದುಸ್ಥಾನದ ಎಲ್ಲ ಭಾಗದ ಸಂಸ್ಥಾನಿಕರಲ್ಲಿಯೂ ಅವತರಿಸಿದೆ. ಇಂಥಹ ಪ್ರಸಂಗದಲ್ಲಿ ರಾಜ ನಿಷ್ಠೆಗರು ಸಂಸ್ಥಾನಿಕರಿಗೆ ಸತ್ಕಾರವನ್ನು ಅವರಿಗೆ ಮರೆಕೊಡುತ್ತಿರುವರು ಹೇಳಿ, ಭರತಖಂಡದಲ್ಲಿಯ ಸಂಸ್ಥಾನಿಕರೆಲ್ಲರೂ ಬ್ರಿಟಿಶ ಸಾಮ್ರಾಟರ ಕರೆ; ನಿಝಾಮರಂತಹ ಘನತೆಯುಳ್ಳವರು ಸಹ ಬ್ರಿಟಿಶರ ಜಹಾಗೀರದಾರರೇ; ಆದರೆ ಮಿತ್ರರಲ್ಲವೆಂಬುದಾಗಿ ಅಪ್ಪಣೆ ಕೊಡಿಸಿದರು. ಎಲ್ಲರಿಗೂ ಆ ಕಾಲಕ್ಕೆ ಆಶ್ಚರ್ಯವನ್ನುಂಟು ಮಾಡಿದ್ದರೂ, ಅನೇಕರು ಬ್ರಿಟಿಶ್ ಪ್ರಜೆಗಳಿಗೆ 'ಹೀಗಾಗುವದೇ ದೇಶೀಯ ರಾಜರುಗಳಿಗೆ ಉಚಿತವಾದ ಅಂಜನ' ವೆಂಬ ಭಾವನೆಯಾಗಿದೆ. ಸಂಸ್ಥಾನಿಕರ ದೃಷ್ಟಿಯಿಂದ ನೋಡಿದರೆ, ಲಾರ್ಡ ರೀಡಿಂಗರ ನಿರ್ಣಯವು ಬಹು ಚಿಂತಾಜನಕವಾದುದು. ಅಗ್ಗ ಸಂಸ್ಥಾನಿಕರೆಲ್ಲ ಒಟ್ಟುಗೂಡಿ ಬ್ರಿಟಿಶ್ ಸರಕಾರವನ್ನು ಕೈ ಹಿಡಿದು ಕೇಳಬೇಕು. ಇಂತಹ ಪ್ರಸಂಗಗಳಲ್ಲಿ ಬ್ರಿಟಿಶ್ ಪ್ರಜೆಗಳೆಲ್ಲರೂ ಸಂಸ್ಥಾನಿಕರಿಗೆ ಸಹಾನುಭೂತಿಯನ್ನು ತೋರ್ಪಡಿಸಬೇಕೆಂಬ ಇಚ್ಛೆಯಾಗುವದು ಸ್ವಾಭಾವಿಕ. ಇದರಿಂದ ಸಂಸ್ಥಾನಿಕರೆಲ್ಲ ಲಾರ್ಡ ರೀಡಿಂಗರು ತಮಗೆ ಹಾಕಿದ ನೇತ್ರಾಂಜನದಿಂದ ಚೆನ್ನಾಗಿ ಕಣ್ತೆರೆದು, ತಮ್ಮ ತಮ್ಮ ಪ್ರಜೆಗಳಿಗೆ ರಾಜ್ಯದಾಡಳಿತದ ಹಕ್ಕುಗಳನ್ನು ಕೊಟ್ಟು, ತಾವು ಪ್ರಜೆಗಳ ನಿಜವಾದ ಪಾಲಕರೇ ಹೊರತು, ಅವರನ್ನು ಪೀಡಿಸುವ ಹುಲಿಗಳಲ್ಲವೆನ್ನುವದನ್ನು ಅರಿತು, ಅದನ್ನು ಕೂಡಲೇ ಕೃತಿಯಲ್ಲಿ ತಂದು, ತಮ್ಮ ಪ್ರಜೆಗಳ ಪ್ರೀತಿಗೂ, ನೆರೆಹೊರೆಯ ಬ್ರಿಟಿಶ್ ಪ್ರಜೆಗಳ ಆದರಕ್ಕೂ ಒಳಗಾಗಬೇಕು ಇಲ್ಲವಾದರೆ "ಮಾಡಿದ್ದುಣ್ಣೋ ಮಹಾರಾಯಾ" ಎಂಬದಾಗಿ ಜಪಿಸುತ್ತ ಕೂಡ್ರಬೇಕಾಗುವದು.

ಮುಂಬಯಿಯಲ್ಲಿ ನವ ರಾಜಕೀಯ ಪಕ್ಷೀಯರ ಸಭೆಯೊಂದು ಆಯಿತು. ಈ ಸಭೆಗೆ ಬರಲು ಸ್ವರಾಜ್ಯ ಪಕ್ಷೀಯರಿಗೆ ಅಪ್ಪಣೆಯಿರಲಿಲ್ಲ. ಯಾಕೆಂದರೆ ಈ ಪಕ್ಷದವರು ಅಹಿತವನ್ನು ಮಾಡುವರಂತೆ! ಸ್ವರಾಜ್ಯೀಯರಿಗೆ ಸಹಾಯ ಮಾಡಬೇಕೆಂದರೆ ನೌಕರ ಶಾಹಿಯವರಿಗೆ ಸಹಾಯ ಮಾಡಿದಂತೆಯೇ ಆಯಿತಂತೆ! ಇದೊಂದು ಹೊಸ ವಿಚಾರವನ್ನು ಶ್ರೀ ಚಿಂತಾಮಣಿಯವರು ಹೊರಗೆಡವಿದ್ದಾರೆ. ಮುಂದೆ ಬರುವ ಚುನಾವಣೆಯಲ್ಲಿ ಸ್ವರಾಜ್ಯ ಪಕ್ಷೀಯರು ಬಹುಜನರೆಂದೂ, ಸಂಯುಕ್ತ ರಾಷ್ಟ್ರೀಯ

ಯ ಪಕ್ಷದವರೇ ಅಂದರೆ, ಸ್ವತಂತ್ರ್ಯಮತ, ಉದಾರಮತ, ಬಹಿಷ್ಕಾರಮತ, ಕೇಳಕರಮತದವರೇ ಒಂದೇ ಕೆಂದೂ ಪ್ರಯತ್ನಿಸಲು ಈ ಪರಿಸತ್ತು ಕೂಡಿತ್ತು. ರಾಷ್ಟ್ರದಲ್ಲಿ ಒಂದೇ ಮತವನ್ನು ಸ್ಥಾಪಿಸಿ, ಸರಕಾರವನ್ನು ದಣ್ಣಿಗೆ ತರುವ ವಿಚಾರವು ಸರಿಯಾದುದು. ಆದರೆ ನೌಕರಶಾಹಿಗಿಂತ ಮೊದಲು ಸ್ವರಾಜ್ಯ ಪಕ್ಷದವರನ್ನೇ ಅಂದರೆ ತಮ್ಮ ನಾಡಿನವರನ್ನೇ ಬಗ್ಗಬಡಿಯಬೇಕೆಂಬ ಉದ್ದೇಶದಿಂದ ಪ್ರೇರಿತರಾಗಿ, ಈ ಕಾರ್ಯಕ್ಕೆ ಹತ್ತಿದ್ದು ಸಮಂಜಸವಲ್ಲ. ಈ ಅಸಮಂಜಸ ಕಾರ್ಯದಲ್ಲಿ ಕನ್ನಡಿಗರಾದರೂ ಇಲ್ಲದ್ದೊಂದು ವಿಶೇಷ.

ವಾಙ್ಮಯ ವಿಚಾರ

ಚಿಗುರೆಲೆ (ಕವಿ.— ರಾ. ಸು. ಸಾಲಿ. ಬಿ. ಏ. ಕರ್ಜಗಿ)

ಇದೊಂದು ಚಿಕ್ಕ ಪದ ಗ್ರಂಥವು ಇದರಲ್ಲಿ ಒಂಬತ್ತು ಚಿಗುರೆಲೆಗಳು ಇರುವವು ಚಿಗುರೆಲೆಗೆ ಇರುವ ಮಾಧುರ್ಯ ಸೌಂದರ್ಯ ಕೌತುಕಮಾರ್ದವಗಳು ಚಿಗುರೆಲೆಗಳಿಗೆ ಇರವೆಂಬುದು ಅನುಭವದ ಮಾತು. ಆದರೆ ಒಂದೆರಡು ಎಲೆಗಳಂತೂ ಬಾಡಿಹೋಗಿವೆ. 'ಕರ್ಮಯೋಗ'ದಲ್ಲಿ ಕವಿಯು ಪರಮಾತ್ಮನ ವಿಷಯದಲ್ಲಿ ತನ್ನ ಸ್ವಾಭಿಪ್ರಾಯವನ್ನು ವ್ಯಕ್ತಪಡಿಸಲೆಳಸಿದ್ದಾನೆ ಸೃಷ್ಟಿಯ ಸೌಂದರ್ಯವನ್ನೀಕ್ಷಿಸಿದರೆ, ಅನೇಕ ದ ಸುಮಗಳು ಮಾಯವಾಗಿ ವಸುಂಧರೆಯು ಆನಂದದ ದಂಡೆಯನ್ನು ಮುಟ್ಟುವದೆಂಬುದೇ ಕವಿಯ ಆಶಯವು. ಕವಿಯು ಸರಳವಾದ ಪದ್ಯಗಳನ್ನು ರಚಿಸಲು ಹವಣಿಸಿದ್ದು ಯೋಗ್ಯವೇ; ಆದರೆ ಎಷ್ಟೋ ಸ್ಥಳಗಳಲ್ಲಿ ರಸಹೀನವಾದ ಪದಪ್ರಯೋಗಗಳಿಗೆ ಅನುವು ದೊರೆತಿದೆ ಕೆಲವು ಕವಿತೆಗಳಲ್ಲಿ Sentimentalism (ಭಾವದ ಆಭಾಸವು) ಎದ್ದು ಕಾಣುತ್ತಿದೆ. 'ಚಿಗುರೆಲೆ'ಯು ಭಾವಗೀತೆಗಳ ಮಾಲಿಕೆಗೆ ಸೇರಿದುದು. ಇಂಥ ಗೀತಿಕೆಗಳು ನಮ್ಮಲ್ಲಿ ಇತ್ತೀಚೆಗೆ ಉದಯವಾಗುತ್ತಿರುವವು. ಇದೊಂದು ಶುಭಚಿಹ್ನವು

ಸರ್ವಮಾನ್ಯ ಶತಕವು.

(ಕವಿ— ಆದಿಪೂಡಿ ಸೋಮನಾಥ ರಾಯರು ಮುನ್ಸು ಕೃಷ್ಣ ಮೊದಲಿ ಬೀದಿ ಮೈಲಾಪೂರ ಮದ್ರಾಸ)

"ನೀತಿಯನ್ನಳಿದ ದುರ್ಜಾತಿ ಕವಿತ್ವವು
ಮಾನವಿಲ್ಲದ ವೇಶ್ಯೆಗಿರ್ಪ ಧನವು॥"

ಎಂದು ಕವಿಗಳು ತಮ್ಮ ಕಾವ್ಯದ ಕಲ್ಪನೆಯನ್ನು ಹೇಳಿ ಬಿಟ್ಟಿದ್ದಾರೆ. ಇದರಲ್ಲಿ ಪರಮಾತ್ಮನ ಮಹಿಮೆಯೂ, ಭಕ್ತಿಯ ಹಿರಿಯತನವೂ ವರ್ಣಿತವಾಗಿವೆ. ಜಗತ್ತಿನಲ್ಲಿ ಸುಖದಿಂದ ಬಾಳುವೆಮಾಡಿ, ಪರದಲ್ಲಿ ಅಚಲ ಪದವಿಯನ್ನು ಪಡೆಯಲು ಭಕ್ತಿಯೇ ಸಾಧನವೆಂದು ಇದರಲ್ಲಿಸ್ಪಷ್ಟವಾಗಿಪ್ರತಿಪಾದಿಸಲ್ಪಟ್ಟಿದೆ ಭಕ್ತಿಯಿಲ್ಲದೆಬೇರೊಂದು ಶಕ್ತಿಯುಂಟೆ 'ಎಲ್ಲ ಸಿರಿಯೆಲ್ಲ ಬಿಟ್ಟು ಪೋಗುವುದುಕೊನೆಗೆ, ಬಿಡದೆ ನೆರವಾಗಿ ಬರುವುದು ಭಕ್ತಿಯೊಂದೇ, ಅದನನಾರ್ಜಿಸಲರಿಯದು ಸುಖವು ಮುಂದೆ" "ದೋಷಸೈನ್ಯಂಗಳಂ ಧ್ವಂಸವಂ ಮಾಡಲು ಪ್ರಬಲವಾದ ಫಿರಂಗಿ ಭಕ್ತಿಯಸ್ತ್ರ" ಎಂಬವುಗಳಿಂದ ಶತಕದ ಉದ್ದಿಷ್ಟವು ಗೊತ್ತಾಗುವಂತಿದೆ. ನೀತಿಯ ದೃಷ್ಟಿಯಿಂದ ಈ ಪದ್ಯ ಗ್ರಂಥವು ಸಫಲತೆಯನ್ನು ಹೊಂದಿದೆ. ಕಾವ್ಯ ದೃಷ್ಟಿಯಿಂದ ನೋಡಲು ಗಳಿರುವಂತೆ ಇದರಲ್ಲಿ ಕೆಲವು ಕುಂದುಗಳು ಇದ್ದರೂ ಶತಕದಲ್ಲಿ ಪ್ರಸಾದ ಗುಣವುಂಟು; ಸರಳವಾದ ಶಬ್ದಸಂಯೋಜನೆಯುಂಟು; ಅಲ್ಲಲ್ಲಿ ಛಂದೋಭಂಗವಾದ ಪದ್ಯಗಳುಂಟು. ತೆಲುಗಿನ ಪ್ರಭಾವವುಂಟು; "ಕವಿಯನುಗುಣಿಕೊಳ್ಳುವ ಕವಿತಾ ಪ್ರಯೋಗವು ಬಂದುದನ್ನು ಹಿಡಿದು" ಆದರೆ ಕೆಲವೆಡೆಗಳಲ್ಲಿ ಪದ್ಯವು ಗದ್ಯವಾಗಿ ಪರಿಣಮಿಸಿದೆ ಆದರಿಂದ ಕಾವ್ಯದ ಸೊಬಗಿಗೆ ಕೇಡು ಬಂದಿದೆ. ಬುದ್ಧಿ ಪೂರ್ವಕವಾಗಿ ಸಾಮಾನ್ಯಜನರಿಗೆ ಭಾಷೆಯನ್ನು ಉಪಯೋಗಿಸಬೇಕೆಂದು ಕವಿಗಳು ಹೇಳಿರುವರು. ಆದರೆ ಹೀಗೆ ರಚಿಸಿದ ಪದ್ಯಗಳು ಕಳೆಗುಂದಿದವಾಗಿ ತೃಪ್ತಿಯು ಅನುಭವದ ಮಾತು. ಸ್ವಲ್ಪ ಇದರಿಂದ ಕಾವ್ಯದ ಬೆಲೆಯು ಕಡಿಮೆಯಾಗುವದು. ವರ್ಡ್ಸ್ ವರ್ಥನು ಸರ್ವಸಾಮಾನ್ಯ ಜನರಿಗೂ ತಿಳಿಯುವಂತೆ ಬಳಿಕೆಯ ಭಾಷೆಯಲ್ಲಿಯೇ ಕವಿತೆಗಳನ್ನು ಬರೆಯಬೇಕೆಂದು ಪ್ರತಿಪಾದಿಸುತ್ತಿದ್ದನು. ಮತ್ತು ಹಾಗೆಯೇ ಬರೆಯುತ್ತಿದ್ದನು. ಈ ಉದ್ದೇಶದಿಂದ ಬರೆದ ಅವನ ಕವಿತೆಗಳೆಲ್ಲ ಸಪ್ಪೆಯಂತ ರುಚಿಯಿಲ್ಲದವುಗಳಾಗಿರುವವೆಂಬುದು ಗೊತ್ತಿದ್ದ ಮಾತು ಪ್ರತಿಭೆಯ ಬೆಳಕಿನಲ್ಲಿ ಮೂಡಿರುವ ಪದ್ಯಗಳೇ ಉಚ್ಚತರಗತಿಯ ಕಾವ್ಯಗಳಾಗುವವು. ಇರಲಿ. ಕವಿಗಳು ಇದರಲ್ಲಿ ಸಮಾಜಸುಧಾರಣೆಯ ವಿಷಯವನ್ನಾದರೂ ಎತ್ತಿದ್ದಾರೆ. ಬಾಲವಿವಾಹವು ಇವರಿಗೆ ಬೇಕಿಲ್ಲ; ಸ್ವಯಂವರಗಳು ಇವರಿಗೆ ಬೇಕಿವೆ. ಸ್ತ್ರೀ ಶಿಕ್ಷಣವು ಇವರಿಗೆ ಸಮ್ಮತವಾದುದು. ಜಗತ್ತಿನಲ್ಲಿಯ ದೊಡ್ಡ ದೊಡ್ಡ ಜನರೆಲ್ಲ ಪರಮಾತ್ಮನ ವಿಭೂತಿಯ ಅಂಶಸಂಭೂತರೆಂದು ಇವರ ನಂಬಿಗೆ ಇದ್ದುದರಿಂದ ಜಾತಿ-ಭೇದವನ್ನೆಣಿಸದೆ, ಎಲ್ಲ ಸದ್ಗುಣ ಮಂಡಿತರನ್ನು ಇವರು ವರ್ಣಿಸಿದ್ದಾರೆ. ಇವರು ಕನ್ನಡಿಗರನ್ನು

'ತುಳಕದೆ ಗರ್ವದಿಂ ತುಂಬಿದ ಕೊಡದಂತೆ।
ಶಾಂತಿಯಿಂದೊಪ್ಪಿರೆ ಕನ್ನಡಿಗರು।
ಸೇರು ಮಾಡಿದ ಮಾವು ಮರೆಯದೇ ಪಾಡಲಿ ಕೋಗಿಲೆ
ಯಂದದಿಂ ಕನ್ನಡಿಗರು.
ಗೊನೆಯಿಂದ ಬಗ್ಗುವ ಕದಳೀವೃಕ್ಷದಂತೆ ವಿನಯದಿಂ ಬಗ್ಗಲಿ ಕನ್ನಡಿಗರು॥

ಎಂದು ಹರಸಿದ್ದಾರೆ. ಈ ಶತಕವು ಬೋಧಪ್ರದವಾದುದೂ ಹಿತಕರವಾದುದೂ ಇರುತ್ತದೆ ಮುದ್ರಣವು ಅಂದವಾಗಿದೆ. ಕನ್ನಡಿಗರು ಇದನ್ನೋದಿ ನೋಡ ಬೇಕೆಂದು ಕೇಳಿಕೆ.

ಮುಂಬೈ ಕರ್ನಾಟಕ

ಕೆಳಗಿನ ಮಹಾರಾಜರಿಗೆ ಹಿಂದಕ್ಕೆ ಕೊಡಲ್ಪಟ್ಟ ಹಾಯಕೋರ್ಟಿನ ಅಧಿಕಾರವು ಕೊಲ್ಹಾಪೂರ ಸರಕಾರದಿಂದ ರದ್ದು ಮಾಡಲ್ಪಟ್ಟಿದೆ ತಮ್ಮ ಅಧಿಕಾರವನ್ನು ದುರುಪಯೋಗ ಮಾಡಿದ್ದರ ಪರಿಣಾಮ ಹೀಗಿದೆ!

ರಡ್ಡೀ ವಿದ್ಯಾವರ್ಧಕ ಫಂಡನ್ನು ವರ್ಗಣಿ ರೂಪದಿಂದಲೂ ದೇಣಿಗೀ ರೂಪದಿಂದಲೂ, ಸಮಾಜಬಾಂಧವರು ಕೊಡುತ್ತಾ ಬಂದಿರುತ್ತಾರೆ. ಈ ಸಮಾಜದ ಚಟುವಟಿಕೆಗಳನ್ನು ಶಕ್ಯವಿದ್ದ ಮಟ್ಟಿಗೆ ಹೆಚ್ಚಿಸಲಿಕ್ಕೂ ಈ ಉಚ್ಚತರಗತಿಯ ಶಿಕ್ಷಣವನ್ನು ಹೊಂದಲಿಚ್ಛಿಸುವ ಯೋಗ್ಯ ರಡ್ಡೀ ಬಡ ವಿದ್ಯಾರ್ಥಿಗಳಿಗೆ ಸ್ಕಾಲರಶಿಪ್ ಕೊಡಲಿಕ್ಕೂ ಹಣದ ಅವಶ್ಯಕತೆಯು ಇರುವದು ಈಗ ಸಂಘದಲ್ಲಿ ಹಣವು ಕೊರತೆ ಇದ್ದ ಮೂಲಕ ಯಾವತ್ತೂ ರಡ್ಡೀ ಬಾಂಧವರು ಸಂಘಕ್ಕೆ ಕೊಡಬೇಕಾಗಿದ್ದ ದೇಣಿಗಿಯನ್ನು ತೀವ್ರವಾಗಿ ಉದಾರ ಮನಸ್ಸಿನಿಂದ ಕಳಿಸಬೇಕೆಂದು ಕಾರ್ಯದರ್ಶಿಗಳ ವಿನಂತಿಯದೆ

ಮಧ್ವ ಮತವು ಸಾರುವ ತಾತ್ಪರ್ಯ.

—ಶ್ರೀರಂಗ—

ಸುಧಾರಣೆಯ ತಿಖರವನ್ನೇರಿದ ಆಂಗ್ಲದೇಶವು ಅಕಾಲದಲ್ಲಿ ತೀರ ಹೀನಾವಾಗಿದ್ದರೂ, ಅಲ್ಲಿ ಬೇರೆ ಬೇರೆ ಭಾಷಗಳೂ ಪರ್ವಗಳೂ, ಪಂಗಡಗಳೂ ತಲೆದೋರುತ್ತಿರುವ ವೇಳೆ ಇಂದ್ರರಲ್ಲಿ ಅತ್ಯಂತ ಸ್ಥೂಲವಾದ ನಮ್ಮ ಹಿಂದುಸ್ಥಾನದಲ್ಲಿ ಭಿನ್ನ ಭಿನ್ನ ಭಾಷೆಗಳೂ, ಅಸಂಖ್ಯ ಜಾತಿಗಳೂ ಮತಗ ಪಂಗಡಗಳೂ, ನೆಲೆಸಿರು ವದು ಸಹಜವು. ಅದರಂತೆಯೇ ಸುಂದರವಾದ ವೇದಾಂತ ಮಂದಿರಗಳೂ ನಮ್ಮಲ್ಲಿ ಅನೇಕವುಂಟು. ಆದರೆ ಹಿಂಸೆಯಲ್ಲಿ ಪರಿಣಮಿಸುವ ಅಜ್ಞಾನ ರಕ್ತಸಾರಕವಾದ ಮಾತ್ಸರ್ಯ ಬೀಜವನ್ನು ಭಿನ್ನ ಭಿನ್ನ ಮತೀಯರು ಪರಸ್ಪರರಲ್ಲಿ ಬಿತ್ತದೆ ಸಕಲರಲ್ಲಿಯೂ ಸ್ನೇಹ ಭಾವದಿಂದ ನ್ಯಾಯವನ್ನು ಶೋಧಿಸಲು ಪ್ರಯತ್ನಿಸಿದರೆ ವಿಭಿನ್ನ ತತ್ವಗಳು ಅವರ್ಣನೀಯ ತತ್ವ ಸಾಧನಗಳೆಂದರೆ ಸರಿಯಾಗಲಿಕ್ಕಿಲ್ಲವೆ? ಅವರವರೂ ಒಬ್ಬರು ಒಂದು ಮತದ ರಾದರೂ ಅನ್ಯ ಮತಗಳನ್ನು—ಟೀಕಾಕಾರ ದೃಷ್ಟಿಯಿಂದಾದರೂ ಚಿಂತೆಯಿಲ್ಲ—ಚನ್ನಾಗಿ ಅಭ್ಯಾಸಿಸಿ ಗುಣಗಳನ್ನು ಗ್ರಹಿಸಲು ಹೆಣಗಾಡಿದರೆ ಅದೊಂದು ಆನಂದ ಭೂವರಾಗೆ ಸರಿ. ಈಗ ನಾವೀಗ ಹೇಳಬೇಕಾದುದೇನೆಂದರೆ ಶ್ರೀ ಜಿ. ಬಿ. ಶಂಕರ ರಾಯರು ಶಿವ ತತ್ವ ರಾಗಿದ್ದರೂ ಕೂಡ ಮಧ್ವ ಮತದ ತತ್ವಗಳನ್ನು 'ಜಯ ಕರ್ನಾಟಕ' ದ ಮೊದಲನೆಯ ಅಂಕದಲ್ಲಿ ಒಂದು ಲೇಖವಾಗಿ ಬರೆದಿರುವರು. "ಶ್ರೀಗ ಮಧ್ವಮತವು ಭೂಲೋಕಕ್ಕೆ ಸ್ವರ್ಗವನ್ನು ತರುವ ಸುಧಾರಕಾಚಾರ್ಯರಿಗಾಗಿ ಹುಟ್ಟಿತು" ಹೀಗೆಯೂ ಇನ್ನೂ ಅನೇಕ ತೆರನಾಗಿಯೂ ಮಧ್ವ ಮತದ ಮಹಾತ್ಮ್ಯವನ್ನು ಕೊಂಡಾಡಿ ತಮ್ಮ ಬುದ್ಧಿಯನ್ನು ಧನ್ಯ ಮಾಡಿ ಕೊಂಡಿರುವರೆ ಮುದ್ರಿಸ್ಮೃತಿಯಲ್ಲಿವು ಆದರೂ ಮಧ್ವ ತತ್ವದ ಕೆಲವು ಅವರ ಭಾವನೆಯು ಸರಿಯಾದದಲ್ಲ ಇನ್ನೂ ಪೂರ್ಣವಾಗಿ ಉಳಿದದ್ದು ಬೇಕಾಗಿದೆ. ಆದ್ದರಿಂದ ಅಂತಹ ತಮ್ಮ ಸುಗಂಧವನ್ನು ಸಜ್ಜನ ಸಮೂಹದಲ್ಲಿ ಬೀರಲೆಂದೇ ಬಯಸುವೆವು.

ಶ್ರೀಮನ್ಮಧ್ವ ಮತವು ಉದಯಿಸುವ ಮೊದಲು ಆಗಿನ ಕಾಲದ ಪರಿಸ್ಥಿತಿಯನ್ನು ಅವರು ಹೀಗೆ ವಿವೇಚಿಸಿರುವರು "ಜಗನ್ಮಿಥ್ಯಾವಾದದ ಅಪಾರ್ಥವು ಜನರಲ್ಲಿ ಮನೆಮಾಡಿ ಅವರು ಈ ಜಗತ್ತಿನ ವ್ಯವಹಾರಗಳ ಕಡೆಗೆ ಬೆನ್ನು ತಿರುವಿದ್ದರು .. . ಅವರನ್ನು ಶ್ರೀ ಮಧ್ವ ಮತವು ಒಳ್ಳೇ ಹಾದಿಗೆ ಹಚ್ಚಿತು"! ಇದರ ಮಥಿತಾರ್ಥವು ಇಂತು ತಿಳಿಯಲಿಕ್ಕಿಲ್ಲವೇ? ಜಗನ್ಮಿಥ್ಯಾವಾದದ ಅಪಾರ್ಥವನ್ನು ಮಧ್ವ ಮತವು ಹೋಗಲಾಡಿಸಿತೆಂದರೆ ಮಿಥ್ಯಾವಾದದ ಸತ್ಯತೆಯನ್ನು ಅದು ಪ್ರತಿಪಾದಿಸಿದಂತಾಗುವದು. ಅಥವಾ ಪಾರಮಾರ್ಥಿಕ ದೃಷ್ಟಿಯಿಂದಾ ಮಿಥ್ಯಾವಾದವೇ ಯೋಗ್ಯವು ಆದರೆ ಲೌಕಿಕ ವ್ಯವಹಾರವು ಸರಿಯಾಗಿ ಸಾಗಬೇಕಾಗಿ ಮಧ್ವಮತವು ಜಗತ್ಸತ್ಯತೆಯನ್ನು ಪ್ರತಿಪಾದಿಸಿತೆಂತಲೂ ಆಗುವದು. ಆದರೆ ಇದು ಸರಿಯಲ್ಲವೆಂದು ನಮಗೆ ಅನಿಸುವದು. ಪರಮಾರ್ಥದಲ್ಲಿಯೂ ಜಗತ್ತು ಸತ್ಯವುಂಟೆಂದು ಮಧ್ವಮತವು ಪ್ರತಿಪಾದಿಸುವದು. ಇದೆಲ್ಲವನ್ನು ವಿಂಗಡಿಸಿ ಬರೆಯುವ ತಾಣವಿದಲ್ಲ ಆದರೂ ಭಗವದ್ವಾಕ್ಯವನ್ನಷ್ಟು ಉದಾಹರಿಸುವೆವು.

ಅಸತ್ಯಮಪ್ರತಿಷ್ಠಂತೇ ಜಗದಾಹುರನೀಶ್ವರಮ್ ।
ಪ್ರಭವಂತ್ಯುಗ್ರ ಕರ್ಮಾಣಃ ಕ್ಷಯಾಯ ಜಗತೋಹಿತಾಃ ॥

ಈ ಜಗತ್ತಿಲ್ಲ ಅಸತ್ಯವೆಂತಲೂ ನಿರಾಧಾರವೆಂತಲೂ ಈಶ್ವರನಿಲ್ಲವೆಂತಲೂ ವಾದಿಸುವ ಜನರು ಕ್ರೂರ ಕರ್ಮಗಳನ್ನಾಚರಿಸುತ್ತ ಜಗತ್ತಿನ ಕ್ಷಯವನ್ನುಂಟು ಮಾಡುವದಕ್ಕಾಗಿಯೇ ಹುಟ್ಟುತ್ತಾರೆ ಇದರ ತಥ್ಯಾಂಶವೇನೆಂದರೆ ಜಗತ್ತಿನ ಹಿತೇಚ್ಛುಗಳು ಅದು ಸತ್ಯ, ಸಾಧಾರ, ಸೇಶ್ವರ ಎಂದು ಸಾರುವರು, ಇದಲ್ಲದೇ 'ಸತ್ಯಃ ಸೋಽಸ್ಯ ಮಹಿಮಾ' ಇತ್ಯಾದಿ ಶ್ರುತಿಗಳೂ ಕೂಡ ವಿಶ್ವ ಸತ್ಯತೆಯನ್ನು ಪ್ರತಿಪಾದಿಸುವವು.

'ಸೋಽಹಂ' ಮಂತ್ರವು ಸಿಕ್ಕ ಸಿಕ್ಕವರ ತುತ್ತಲ್ಲ. ಎಲ್ಲರಿಗೂ ದಕ್ಕುವ ಮಾತಲ್ಲ. ಶ್ರೀ ಹರಿಕ್ಯಾಪೆ 'ಯಾಗದೇ ಪ್ರಿಯೋಽಹಂ ಆಗಬೇಕು ಉತ್ತಮ ತತ್ವವು ಜನರಲ್ಲಿ ನೆಲೆಗೊಂಡು ಭಕ್ತಿಮಾರ್ಗಕ್ಕೆ ಬಲ ಬಂದಿತು' ಇದರ ಮೇಲಿಂದ ಶ್ರೀಹರಿಕ್ಯಾಪೆ ಯವರು ಕೇವಲ ಸನ್ಯಾಸಿಯರಿಗಾದರೂ 'ಸೋಽಹಂ' ಮಂತ್ರವು ದಕ್ಕುದ ಮಾತೆಂದು ಅಂದಮೇಲೆ ಒಂದೂ ಕಾಲು ಲಕ್ಷ ಅದ್ವೈತ ಗ್ರಂಥಗಳನ್ನು ಮುಂದಿಟ್ಟುಕೊಂಡ ತ್ರಿವಿಕ್ರಮ ಪಂಡಿತಾಚಾರ್ಯರಂತಹ ಮಹಾಮಹಿಮರಿಗಾದರೂ ಐಕ್ಯವಾದದ ವಿಷಯಕ್ಕೆ ಬಲವಾದ ಸಂದೇಹವು ಏಕೆ ಉತ್ಪನ್ನವಾಗಬೇಕು? ತಮ್ಮ ಮುಕ್ತಿಯಲ್ಲಿ ಐಕ್ಯ ವುಂಟೆಂದು ಹೇಳಬೇಕೋ? ಹಾಗೆ ಶ್ರೀ ರಾಮಾನುಜಾಚಾರ್ಯರು ಪ್ರತಿಪಾದಿಸುವ ಮಾರ್ಗದಲ್ಲಿ ಮುಕ್ತಾವಸ್ಥೆಯಲ್ಲಿಯೂ ಕೂಡ ಮುಕ್ತರಿಗೂ ಪರಮಾತ್ಮನಿಗೂ ಭೇದವು ಇದ್ದೇ ತೀರುವದೆಂದು ದ್ವೈತ ಸಿದ್ಧಾಂತವು ಕೊನೆಯ ವರೆಗೂ ಅಬಾಧಿತವಾಗಿ ಪ್ರತಿಪಾದಿಸುವದು. ಈಗಲಾದರೂ, ಭಗವದ್ವಾಕ್ಯದ ಸಹಾಯವನ್ನೇ ಅಪೇಕ್ಷಿಸುವೆವು.

ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ

ಇಲ್ಲಿ 'ಅನ್ಯ' ಎಂಬ ಪದದಿಂದ ಭೇದವೂ 'ಉತ್ತಮ' ಎಂಬದರಿಂದ ಶ್ರೀ ಹರಿ ಸರ್ವೋತ್ತಮತ್ವವೂ ವಿವಕ್ಷಿತವಾಗಿವೆ ಇರಲಿ; ಇಲ್ಲಿ ನಾವು ಅಧಾರಗಳನ್ನು ಕೊಡುವ ಉದ್ದೇಶವೇನೆಂದರೆ ಶ್ರೀ ಶಂಕರರಾಯರು ಮಧ್ವಮತದ ತತ್ವಗಳನ್ನು ಒಪ್ಪಿಲ್ಲವೆಂತಲ್ಲ, ಆದರ ದ್ವೈತ ತತ್ವವು ಐಕ್ಯವೂ ಸಮಕ್ಕೂ ಗಟ್ಟಿಯಾದ ನೆಲೆಯಿಲ್ಲವುವ ವೆಂದು ಅವರ ಬರಹದಲ್ಲಿ ಧ್ವನಿತವಾಗುವದರಿಂದ ಆ ತಪ್ಪು ತಿಳುವಳಿಕೆಯನ್ನು ಹೋಗಲಾಡಿಸುವದಕ್ಕಾಗಿ, ಭಗವಂತನ ವಾಕ್ಯಗಳನ್ನು ಉದಹರಿಸುವೆವು.

ಇನ್ನು ಎಲ್ಲ ಮತಗಳಿಗೂ ಹತ್ತುವಂತೆ ಹುಟ್ಟುಗಗಂಟಿಕೊಂಡಿರುವ ಹುಳವು ಮಧ್ವ ಮತಕ್ಕೂ ಬಿಡಲಿಲ್ಲವೆಂದು ಅವರ ಮತವಿದೆ ಕೆಲವರು ಬಾಹ್ಯ ಡಂಭಾಚಾರಿಗಳಿರಬಹುದು, ನಾವಿಲ್ಲೆನ್ನುವದಿಲ್ಲ ಹಲವರು 'ಮಡಿ ಮಡಿ' ಯೆಂದು ಮೂರು ಮೊಳ ಹಾರುತ್ತಿರಬಹುದು, ನಾವಲ್ಲಗಳೆಯುವದಿಲ್ಲ. ಆ ಹುಳವು ವ್ಯಕ್ತಿಗಳಿಗೆ ಅಂಟಿಕೊಂಡಿರಬಹುದು ಉದಾತ್ತ ತತ್ವಗಳಿಗಲ್ಲ. ಅಂದರೆ ಶ್ರೀಮನ್ಮಧ್ವಮತವು ಅತ್ಯುಳಿಯದ ತನ್ನ ಸಿಜ್ಜಾದ ಪ್ರಭೆಯನ್ನು ಹೆಚ್ಚು ಜನರಲ್ಲಿ ಹಬ್ಬಿಸುತ್ತಿದೆ. ಇನ್ನು ಮಡಿ ಮೈಲಿಗೆಗಳ ಪವಿತ್ರ ವಿಚಾರದಿಂದ ಮಡಿಮಾಡಿದರೆ ಅಯೋಗ್ಯವಲ್ಲೆಂದು ತೋರುತ್ತದೆ.

'ಎರಡು ದಿನದ ಹಾಳು ಸಂಸಾರ' ಎಂಬೀ ಮೊದಲಾದ ಪದಗಳ ಅವರು ಅಪಸ್ವರ ವಿರುವವೆಂದು ತಿಳಿದಿರುವರು ಆದರೆ ಅವು ವಸ್ತುತಃ ಹಾಗಿಲ್ಲವೆಂದು ನಮ್ಮ ಮತವು ಏಕೆಂದರೆ ಕೇವಲ ಸಂಸಾರ ಸುಖವೇ ಶಾಶ್ವತವೆಂದು ನೆಚ್ಚಿಗೆಯಿಂದ ಮೆಚ್ಚಿದ ಹುಚ್ಚರನ್ನು ಎಚ್ಚರಿಸುವೇಕಾಗಿ ದಾಸರ ಅಂತಹ ಪದಗಳು ಗುಣ ರೂಪವಾದ ಒಳ್ಳೇ ಔಷಧರೂಪ ವಿರುವವೆಂದರೆ ಯುಕ್ತವಾಗುತ್ತದೆ. ಅಂತೆಯೇ ಅವು ಬಹು ಬೋಧ ಪ್ರದಗಳೆಂದು ಸಮಗ್ರಿಸುವದು. ಸಾರಾಂಶ 'ವಿಷಯಿಷ್ಯಂತೀಃ ಪಂಥಾಃ' ಎಂಬ ವೇದವಾಕ್ಯದ ನೀತಿಯು ಮಧ್ವ ಮತದಲ್ಲಿ ಪ್ರಶಸ್ತವುಂಟೆಂದು ಅಮತದ ಆಶಯವು. ಇರಲಿ;

ನ್ನು ಅಡ್ಡ್ಯೃತದನ್ನು ಹಳಿಯುವ ಹಟದಿಂದ ಬರೆದಿರುವೆನೆಂದು ಕೆಲವು ಜನ ಊಹಿಸುವವರು ಇರಬಹುದಷ್ಟೇ? ಆದರೆ ಓದುಗರಲ್ಲಿ ಒಂದು ವಿಶಿಷ್ಟ ಮತದ ತತ್ವಗಳ ತಿಳುಹು ತಿಳಿಯಾಗಿ ಉಳಿಸಲೆಂದು ಬಿನಗೊಂಡೆ. ಡಿ ಕೋಪವೇ?"

——— ಕಂಚಿ

ಅಮಚ್ಯೂರ

"ಅಮಚೂರ ನಾಟಕ ಕಂಪನಿಗಳ ಬೆಳವಣಿಗೆಗೆ ಉಪಾಯಗಳೆಂಬ ವಿಷಯವನ್ನೆತ್ತಿ ಮೊನ್ನೆ ಸಾಹಿತ್ಯೋತ್ಸವದಲ್ಲಿ ನಮ್ಮ ನಾಡ ಕಲಾಭಿಮಾನಿಗಳೊಬ್ಬರು ನಿಬಂಧವನ್ನು ಓದಿದರು. ಆ ಪ್ರಸಂಗದಲ್ಲಿ ಶ್ರೀಕ್ಷೇತ್ರ-ಮಧ್ಯಸ್ಥರ ಯಾರೊಬ್ಬನು ನಿಜವಾದ ಆತುರತೆಯಿಂದ ಕೇಳಿದನು "ಅಮಚೂರ" ಇದಕ್ಕೆ ಕನ್ನಡ ಶಬ್ದವೇ ಇಲ್ಲವೇ? ಇಲ್ಲದ ಪಕ್ಷದಲ್ಲಿ ಕನ್ನಡದಲ್ಲಿ ಅವರ ಬೆಳವಣಿಗೆ ಯಾದರೂ ಏಕೆ? ಇವರೇ ನಿಬಂಧವಾಚಕರಿಂದ ಏನಾದರೂ ಹೇಳಬಹುದಾಗಿತ್ತು. ಆದರೆ ಪ್ರಶ್ನೆಯು ಅಂತ್ಯದಲ್ಲಿ ಕೇಳಲ್ಪಟ್ಟಿತ್ತು. ಆ ಕೇಳಿ ಅವರಿಗೆ ಕೇಳಿಸಲಿಲ್ಲ. ನನಗೆ ಮಾತ್ರ ಮುಂದಿನ ದಿವಸ ಬುಧವಾರಿಯ ಮೇಲೆ ಕೂತ ಕರಿಗೆ ನಾಟಕದಲ್ಲಿ 'ಅಭ್ಯಾಗತ' ಗಳು ಕೂಡ ಕಿವಿಗೆ ಬೀಳುವಂತೆ ಸ್ಪಷ್ಟವಾಗಿ ಪ್ರಶ್ನೆಯು ಕೇಳಿಸಿತು. ಆಗ 'ಸ್ಥಳೀಯ' ನೆಂಬ ಪ್ರಯೋಗವನ್ನು ಹೇಳಬೇಕೆಂದೆನು; ಆದರೆ ಅದರ ವಿಷಯಕ್ಕೆ ಮನಸ್ಸು ಸಂಕೋಚಪಟ್ಟಿತು. ಯಾಕೆಂದರೆ ಈಗೀಗ ಇಂಥ ಕಂಪನಿಗಳವರು ಸ್ಥಳಾಂತರವನ್ನು ಮಾಡುತ್ತ ಊರೂರಿಗೆ ತಿರುಗುತ್ತಲಿರುವ ರೆಂಬ ಸಂಶಯವು ಆಭಾಸವಾಗಿ ತೋರಿತು. ಹಿಟ್ಟಿನೇ ಏನೋ ಕೇಳುವವರಂತೆ ಅಮಚ್ಯೂರ ಅಂದರೆ 'ಬೈಟಿ ನಾಟಕ ಕಂಪನಿಗಳು' ಎಂದು ಉಚ್ಚರಿಸಿದ್ದೆನು. ಅಷ್ಟಕ್ಕೆ ಕೆಲವರು ನಕ್ಕರು. ಆದರೆ ಕನ್ನಡಿಗನ ಮುಂದೆ ಅದರ ವಿಮರ್ಶೆ ಯಾಗದ ಹೊರತು ಮನಸ್ಸಿಗೆ ಸಮಾಧಾನವಿಲ್ಲೆಂದು ಬಹಳ ದಿವಸದ ಬಳಿಕ ಈ ವಿಷಯವನ್ನು ಮುಂದೆ ಮಾಡಿ ಕೊಂಡೆನು.

"ಬೈಟಿ ಯೆನ್ನ ಬೇಕೆಂದಲ್ಲಿ ಎಷ್ಟೋ ಇಂಥ ಕಂಪನಿಗಳು ಸ್ವಸಾಮರ್ಥ್ಯ- ನಿರ್ಭಯತೆಯಿಂದ ಹೊಟ್ಟೆಗೆ ಕೇಡನ್ನಾದರೂ ಹಾಕಿ ದುಡಿಯುತ್ತಲಿವೆ. ಇದಕ್ಕೆ ಎಲ್ಲಿಂದ ಬರಬೇಕು ಆ 'ಬೈಟಿತನ' ಈ ರೀತಿ ಮತ್ತು ವಸ್ತುಸ್ಥಿತಿಗಾದ ಕಂಪನಿಯ ಉದಾಹರಣೆಯನ್ನು ಕೊಡುವೆ ಕೂಡ ನನೆದಂತಿದೆ. ಅಂದರೆ- ಈ ದುರ್ದೈವವು ಸಾಮಾನ್ಯವಾದದ್ದು. ಆದುದರಿಂದ ಆ ಶೀಘ್ರ ವಿನೋದದ ಅಂಕಿತ ನಾಮವನ್ನು ಅಳಿಸಿ, ನಾನು ಇನ್ನೊಮ್ಮೆ ವಿಚಾರಮಾಡಿ 'ಗೌರವ ನಾಟಕ ಸಂಘ' ಗಳೆಂಬ ನಾಮಧೇಯವನ್ನು ಕೊಟ್ಟೆನು. ಇದಕ್ಕೆ ಯಾರ ಆಕ್ಷೇಪ ಬರುವಂತಿಲ್ಲವೆಂದು ನಾನು ಉಬ್ಬಿದ್ದೆನು. ಯಾಕೆಂದರೆ ಈ ಸಂದರ್ಭದಲ್ಲಿ 'ಗೌರವ ಕಾರ್ಯದರ್ಶಿ' ಗಳು ಮೊದಲೇ ಕಾರ್ಯ ನಡಿಸುತ್ತಿರೆ ನನ್ನದೇನು 'ನವ'- ನೀತವಲ್ಲ. ಆದರೆ ನೋಡಬೇಕೆಂದರೆ ಹೀಗೆ- ಆ ಕಾರ್ಯದರ್ಶಿಗಳಂತೆ ಕೆಲಸವನ್ನು ಬೇಡದೆ ಇವರಲ್ಲಿ ದುಡಿಯುವರೆಂಬ ಕಲ್ಪನೆಯು 'ಗೌರವ' ಶಬ್ದದಿಂದ ಚನ್ನಾಗಿ ಕಟ್ಟಿಸಿತು. ಅಂದರೆ ಆ ನಾಮಧೇಯವನ್ನು ಶಾಶ್ವತವಾಗಿ ಮಾಡಿದ್ದರೆ, ಕೀರ್ತಿಯು ಹೆಚ್ಚುವಯೋ ಬೈಲಾ- ಗವನ್ನು ಕೊಡಿಸಬೇಕೆಂದು ನನ್ನದೇನೋ ಮನೋಭಾವ. ಅದಾಗುವ ತೆರವೇ ಮತ್ತೆ ಶಂಕೆಯು ಕೇಳಲಿಲ್ಲ. ಅಂದರೂ ಗಟ್ಟಿ ಮನಸ್ಸಿನಿಂದ ವರ್ಷದಲ್ಲಿ ಯಾವಾಗಲಾದರೂ ಒಮ್ಮೆ ರಂಗಭೂಮಿಯ ಮೇಲೆ ಬರುವ ಕಂಪನಿಗಳೆಂಬ ಬಿರುದನ್ನು ಇವೇ ಕಸಿದುಕೊಂಡಂತೆ ಗೋಚರ ಮಾಡಿದೆನು ಸ್ವಾಭಾವಿಕವಾದ ಸಂತೋಷವಾಯಿತು. ಆದರೆ 'ವಾಲಂಟಿಯರ' ಗಳಿಗೆ ಸರಿಯಾಗುವಂಥ ವ್ಯವಹಾರಿಕವಾದ ಹೆಸರು ಬೇಕಲ್ಲವೆ? ಇದಲ್ಲದೆ 'ಪ್ರತಿಭಾದಿ-ಲಲಿತಕಲಾದರ್ಶ' ಇತ್ಯಾದಿ ಸಂಸ್ಕೃತ ಶಬ್ದಾದಿ ನಾಮ ಕರಣವಿಲ್ಲದ ನಾಟಕಕ್ಕೆ ಶೋಭೆಯುಂಟೇ? ಅಂದಮೇಲೆ ಕಳ್ಳಿಯಂತಿರ ನಾಟಕ ಹೆಸರಿಂದ ಗೊತ್ತುಗದಂತೆ ಬೇಕು! ಅಷ್ಟೇ ಯುವನನ್ನೊಂದು ಹುಟ್ಟಿಸಿಕೊಳ್ಳಲು ಹೆಸರು ಹೊಸದೊಂದೇ ಬೇಕಾಯಿತು; ವ ಕನ್ನಡ ಯಾನ ಸಂಶೋಧಕಕ್ಕೂ ಅಡ್ಡಗಟ್ಟುವ ಭಗವಂತನಂಥ ಶಂಕೆಗಳು ಬೇರೆ; 'ಅಮಚ್ಯೂರ' ಇದಕ್ಕೆ ವಿಶ್ವವ್ಯಾಪಕವಾದ ಸಾರ್ಥಕ್ಯವನ್ನು ಕೊಡಬೇಕೆಂಬ ಹುಚ್ಚಿನಿಂದು. ಇಷ್ಟರಲ್ಲಿ ಓರ್ವ ನಾಟ್ಯಬಲ್ಲವ 'ನಾಟಕವು ನಮ್ಮ ವ್ಯವಸಾಯವಲ್ಲ' ಎಂದು ಕೂಗುತ್ತ ಹಸ್ತಪತ್ರಿಕೆಗಳನ್ನು ಹಂಚುತ್ತಿದ್ದನ್ನು ಕಂಡೆನು, ಆಗಿನೋ ಸ್ವಾಭಿಮಾನಕ್ಕೆ ಬಂದು ಕಾದಿತು. ಅದೇ ಸ್ಫೂರ್ತಿಯ ಸಾಮರ್ಥ್ಯದಿಂದ ಎದ್ದು 'ಅಮಚ್ಯೂರ' ಅಂದರೆ 'ವ್ಯವಸಾಯವಿಚಾರವಿರಹಿತ ನಾಟ್ಯ ಕಲಾಭಿವೃದ್ಧಿ-ತತ್ಪರ ಸ್ವರ ಸಂಘ' ವೆಂಬ ಬಾಯಿ ತುಂಬ ಬಿರುದನ್ನು ಕೊಟ್ಟೆನು. ವ್ಯವಸಾಯ ದಕ್ಷಿಯ ಕಂಡಿತರಿಗೂ ಕೂಡ ಇಷ್ಟು ಅರ್ಧ- ಅಗಲುಳ್ಳ ಬಿರುದು ದೊರೆತಿರಲಿಕ್ಕಿಲ್ಲ. ನಾಟ್ಯದೇವಿಯ ಭಾಗ್ಯ- ಆದರೆ ಇನ್ನೂ- ವ್ಯವಹಾರ ಶೂನ್ಯವೆಂದು ಎಲ್ಲಿ ಬಯ್ಯುವರೋ ಎಂದು ಅಂಜಿಕೊಂಡೆ, ಇದೆಂದೇ ಧ್ಯಯಾರವಾತ್ರ, ಬಯ್ದವರಿಗೆ ಕೇಳಲಿಕ್ಕೆ ಬರುತ್ತದೆ. ಹಾಗಾದರೆ ನನ್ನ ಮನಸ್ಸ ತೃಪ್ತಿಯಾಗುವಂತೆ 'ಅಮಚ್ಯೂರ' ಇದರ ಪರ್ಯಾಯವೇನು ಕನ್ನಡದಲ್ಲಿ? ಎಂದು.

—"ರಸಿಕ ರಂಗ"

ಗುಬ್ಬೀ ನಾಟಕ ಸಭಾ ಶಾಖೆಯು

ಮಹಾನಂದಾ ನಾಟಕವು.

(ಬಿ. ಎ. ಶಾಂಕರನ)

ನಾವು ಕಡಿಗೊಮ್ಮೆ ರಾತ್ರಿ ಹತ್ತೊಂದು ಬಾರಿಸಲು ನಂಬಿಗ್ರಾ ಮದ ನಾರಾಯಣನ ದೇವಾಲಯದ ಸಮ ಪಕ್ಕ ಬಂದೆವು ಮೊತ್ತ ಮೊದಲು ನಮಗೆ ಈಶ್ವರಾಲಯದಲ್ಲಿ ಆ ಗ್ರಾಮದ ಪ್ರಸಿದ್ಧ ಗಣಿಕಾಸ್ತ್ರೀ ಮದ ದರ್ಶನವಾಯಿತು (ಶುಭಸ್ಯಾ, ಅಶುಭಸ್ಯಾ, ಮಾಡಕರು ಕೆ-ಣು ಕೊಳ್ಳಲಿ;) ಅವಾರನಾರೀ ಪ್ರಾಕಾರದಲ್ಲಿ ಅನೇಕರು- ಬ್ರಹ್ಮಾನಂದನ ಪಟ್ಟಶಿಷ್ಯರು— ತಮ್ಮ ಗುರುಗಳು ಮನ ಸೋಲುವಂತೆ ತಾಳ ಒಪ್ಪಿ ಅಪಸ್ವರದಲ್ಲಿ ಒಳ್ಳೇ ಭಕ್ತಿ ಪೂರ್ವಕವಾಗಿ ಹಾಡಿ ನಲಿದಾಡುತ್ತಿದ್ದರು. ಗಣಿಕಾ ಸ್ವಾಮಿನಿಯಾದ ಮಹಾನಂದೆಯು ವೇಶ್ಯೆಯರಿಗೆ ಅನ ಗುಣವಾಗಿ ಉಡುಪು ತೊಡವುಗಳಿಂದ ಮಂಡಿತಳಾಗಿ ಕೆಳದಿಯರಿಂದ ಕೂಡಿ ಇಷ್ಟದೇವತಾರಾಧನ ಮಾಡಿ ನಡೆದಳು.

ಪ್ರಯೋಗವು ಮುಂದೆ ಸಾಗಿದಂತೆ ಅನೇಕ ಚಿತ್ರವಿಚಿತ್ರ ಸಂಗತಿಗಳು ತಲೆಯತ್ತಿದವು. ನಾಟಕ ಕಾರನ ವಿಶಿಷ್ಟ ಸೃಷ್ಟಿಯೂ, ಪ್ರೇಕ್ಷಕ ಜನ ಪ್ರಿಯನೂ ಪರ್ಯಾದಿಂದ ನಾಟಕದ ನಾಯಕನೂ ಗಾನ ನರ್ತನ ಅಭಿನಯಗಳ ಖಣಿಯೂ, ಗುಣ ಖಣಿಯೂ, ಸರ್ವಾಂಗ ಸುಂದರನೂ (?) ಆದ ಬ್ರಹ್ಮಾನಂದನನ್ನು ಬೀದಿಯಲ್ಲಿ ಕಂಡೆವು. ಬ್ರಹ್ಮಾನಂದರು, ಸದರ್ನ ಮರಾಠಾ ರೇಲ್ವೆಯವರು ಮೋಲಗಾಡಿಯು (?) ತಿಳ್ಳಿನಂತಿರುವ ತನ್ನ ಹುಂಜಿಲ ಕಂಠದಿಂದ ಒಳ್ಳೇ ಸುಸ್ವರದಲ್ಲಿ ಅಭಿನಯ ದೊಂದಿಗೆ— ಪ್ರೇಕ್ಷಕರು 'ಕೃತಕರ್ಮಕ್ಕಾಗಿ' ಯಥೇಚ್ಛವಾಗಿ ತಮ ಗ್ರಹಗಳನ್ನು ನಿಂದಿಸುವಂತೆ ರಭಸದಿಂದ ಕುಣಿ ಕುಣಿದು ಹಾಡಿ ಹಣ್ಣು ಮಾಡಿಕೊಂಡರು. ಕಟ್ಟೆಯ ಮೇಲಿನವರಿಗೂ 'ಗ್ಯಾಲರಿ' ಯಲ್ಲಿಯವರಿಗೂ, ಸಾಕಷ್ಟು ಬ್ರಹ್ಮನಿಗೂ ಕೂಡ ಮಂಗು ಹಿಡಿಸುವ ಬ್ರಹ್ಮಾನಂದನ ನಾಟ್ಯಕಲಾ ಚಾತುರ್ಯಕ್ಕೆ ಮನ ಸೋತು ಮೆಚ್ಚಿದವರಾಗಿ ಇಮ್ಮಡಿ ಸಪ್ಪಳ ದಿಂದ ಧನ್ಯವಾದ ಮಾಡಿದರು! ಸ್ಥೂಲಕಾಯರಾದ ಇವರಂಥ ಕೀರ್ತಿಗಳ ಅಭಿನಯವಾದರೂ ಸ್ಥೂಲವಾಗಿತ್ತೆಂದು ಸ್ಥೂಲ ಮಾನದಿಂದ ಮಾತ್ರ ಹೇಳಬಲ್ಲೆವು! ಬಹು ಬಲಾಢ್ಯರೂ, ಕುಬೇರನ ಭಾಂಡಾರವನ್ನು ಸಹ ಸೂರೆಗೆ ಉಪಹಾರವೆಂದು ಕೊಡಬಲ್ಲ ನಮ್ಮ ಶೇಟರು ಅಹುದಿಸುವುದರಲ್ಲಿ, ಗರ್ವರಹಿತರು ಅಂತೆಯೇ! ಬ್ರಹ್ಮಾನಂದನಂಥ ಶೀಲ ಮನುಷ್ಯನ ಕೂಡ ಅವರು ಎಷ್ಟು ಸಲಿಗೆಯಿಂದ ವರ್ತಿಸುವರು! ಸಂಕೋಚವಿಲ್ಲದೆ ಮಾತಬಂದಂತೆ ಅಸಮಂಜಸವಾದ ಹೀನ ಕುಚೇಷ್ಟೆ ಮಾಡುವರು.

ಯ್ಯಾಕೆ ವಾಚಕರೇ, ಈಗಿನ ಧನಾಢ್ಯ ಶ್ರೀಮಂತ ಹುಡುಗಿಯರ ಸಂಗಡ ಹುಡುಗಾಟಿಕೆ ಮಾಡುವದನ್ನು ನಿವೃತ್ತಿಯಾದರೂ ಕಲ್ತುಕೊಂಡಿರುವಿರಾ? ಈಗಿನ ಶ್ರೀಮಂತರೇ ಜನು ಸೊಕ್ಕಿನವರಲ್ಲವೇ? ಶೇಟ್ಜಿಗಳು ಗಾಯನಕಲೆಯಲ್ಲಿಯಂತೂ ಕೇವಲ ಗಂಧರ್ವರೇ! ಪಾಪ!! ಇಂಥ ಮಹನೀಯರಿಗೆ 'ಕರ್ನಾಟಕ ಗಂಧರ್ವ' ಎಂಬ ಸಂಕುಚಿತ ಸಂಭಾವನೆ ಮಾಡಿದ್ದಾರೆ!! ಶೇಟ್ಜಿಗಳು ವಸಂತಮಂದೆಯ ಸೌಂದರ್ಯವನ್ನು, ದುರ್ಗಾವಾದ 'ದುರ್ಗಾ' ರಾಗದಲ್ಲಿ ದುರ್ಗಬೇದನಕಂಡಲಕ್ಷ್ಯಯು ಮತ್ತೊಂದು ಸೈನಿಕರ ಗುಡುಗಿನಂತೆ ಗರ್ಜಿಸಿದರು. "ಆದಿಮಾಯೆ ಮಾಯೆ" ಈ ಪುರುಷ ಸಿಂಹನ ಗರ್ಜನೆಗೆ ಬೆದರಿ ಬೆಪ್ಪಾಗಿ ನಿಂತಿದ್ದರಿಂದ ಪುರಂದರ ಶೇಟ್ಜಿಗಳಿಗೆ ಅನಾಯಾಸವಾಗಿ ಆಲಿಂಗನದ ಕೃಪೆ ದೊರೆತಂತಾಯಿತು, ಭಲೆ ಆದಿಮಾಯೆಯೇ ಕಾರುಣ್ಯದ ಮೂರ್ತಿಯಲ್ಲವೇ ನೀನು?

ನಾಟಕದಲ್ಲಿ ಇನ್ನೊಂದು ಮಹತ್ವದ ಭೂಮಿಕೆಯೆಂದರೆ ಸದಾನಂದೆಯದು. ಗಾನದೇವಿಯು ದಕ್ಷಿಣ ಹಿಂದೂಸ್ತಾನದವಳಾದ್ದರಿಂದ ಉತ್ತರ ಕರ್ನಾಟಕದ ರಂಗಭೂಮಿಯ ಮೇಲೆ ಹಾಡುವವಳಲ್ಲ. ಮಾತಿನಲ್ಲಿ ಮಾರ್ದವ ಇದೆ. ಅಭಿನಯದಲ್ಲಿ ಕೌಶಲ್ಯ ವಿಶೇಷ; ಸ್ವರದಲ್ಲಿ ಮಾಧುರ್ಯ ಎಷ್ಟಿರಬೇಕು! ಆದರೆ ಮೂರ್ಛನೆಯ ಗಂಧರ್ವರಿಯರ ಗೊಣಗಿರೂ ಅವಿನೀತರೂ ಆದ ಉತ್ತರ ಕರ್ನಾಟಕ ಜನಗಳು ಇವಳ ಯೋಗ್ಯತೆಯನ್ನು ಕಂಡು ಹಿಡಿಯುವದೆಂತು? ಗ್ಯಾಲರಿಯವರೂ, ಪಿಟದವರೂ ಇವಳನ್ನು ಒಂದೇ ಸವನೆ ಅಣಕಿಸಿದರು. "ಇದೆಲ್ಲಿಯ ತಂಜಾವರೀ ತೆರಬಾಯಿ" ಎಂದು ಬೊಬ್ಬೆ ಇಟ್ಟರು ಆದರೂ ಧಿಟ್ಟೆಯಾದ ಸದಾನಂದೆಯು ಅಭಿನಯಕೌಶಲ್ಯದಿಂದ ಪ್ರೇಕ್ಷಕರ ಚಿತ್ತವನ್ನು ಆಕರ್ಷಿಸದೆ ಬಿಡಲಿಲ್ಲ. ತನ್ನ ಭೂಮಿಕೆಯನ್ನು ಪಾರು ಗಾಣಿಸಿದಳು! ಪ್ರೇಕ್ಷಕರಲ್ಲಿ ಆನಂದವನ್ನುಂಟು ಮಾಡಲು ಸೋತರೂ ಕರ್ತವ್ಯವನ್ನು ಮಾಡಿದೆನೆಂದು ಸದಾನಂದೆಯು ಆನಂದ ಸಾಗರದಲ್ಲಿ ಓಲಾಡಲೂ ನಿರ್ಬಂಧವೇನು?

ವರ್ತಮಾನಸಾರ.

ಇಹವೃತ್ತ

ಗದುಗಿನ ನಾಟಕ ಸಭಾ ಶಾಖೆಯವರು ನಿನ್ನಿನ ದಿನ "ಕನ್ನಡಿಗ"ನು ನಡಸುತ್ತಿರುವ ಕನ್ನಡನಾಡಿನ ಸೇವೆಗಾಗಿ ತಮ್ಮ ಸೌಭದ್ರ ನಾಟಕವನ್ನು ಮುಂದಾಗಿ ಕೊಟ್ಟು, ಅವನನ್ನು ಗೌರವಿಸಿದರು.

ಮದ್ರಾಸ ಕರ್ನಾಟಕ

ಬಳ್ಳಾರಿಯ ರಾಷ್ಟ್ರೀಯ ಶಾಲೆಯಲ್ಲಿ ಕರ್ನಾಟಕ ಕೀರ್ತನ ಸಮ್ಮೇಲನವನ್ನು ನೆರೆಯಿಸುವದು ಗೊತ್ತಾಗಿದೆ. ಕೀರ್ತನ ಕೇಸರಿ ಜಯರಾಮಾಚಾರ್ಯರು ಇದರ ಕಾರ್ಯದರ್ಶಿಗಳು.

"ಉದಯ"ವೆಂಬ ಸಚಿತ್ರ ಕನ್ನಡ ವಾರ ಪತ್ರಿಕೆಯು ಮದರಾಸದಲ್ಲಿ ಬೇಗನೇ ಪ್ರಕಟವಾಗುವದು

ಕಳೆದ ವಾರದಲ್ಲಿ ಕೊಯಿಮತ್ತೂರಿನ ಕಾಫೀ ಗಿರಣಿಗೆ ಬೆಂಕಿ ಹಗಲಿ ೧೫ ಲಕ್ಷ ರೂ. ಹಾನಿಯಾಯಿತು

ಇರೋಡ ಮುನಿಸಿಪಾಲ್ಟಿಯಲ್ಲಿ ದುಷ್ಟ ಪತ್ರ ಹಾಕಲ್ಪಟ್ಟಿರುವದೆಂದು ಸಭಾಸದರ ವಿರುದ್ಧವಾಗಿ, ಹಲವು ಕಾಂಟ್ರಾಕ್ಟಗಾರರು ಮೊರೆ ಅರ್ಜಿ ಮಾಡಿದ್ದರಿಂದ, ಕಲೆಕ್ಟರರು, ಕೊಯಿಮತ್ತೂರಿನಿಂದ ಅಲ್ಲಲ್ಲಿ ಓವರ್ಸೀಯರ ಅರಿವು ಗೊತ್ತಿಲ್ಲದಂತೆ ಹೋಗಿ, ಮುನಸೀಪಾಲ್ಟಿಯ ಕಚೇರಿಯಲ್ಲಿ ಶೋಧಿಸಿ, ಕಾಗದಗಳನ್ನು ನೋಡಬಾಗಿ, ಎಲ್ಲವೂ ಸುಳ್ಳೆಂದು ಗೊತ್ತಾಯಿತು.

ಚಿತ್ರದುರ್ಗ ಜಿಲ್ಲೆ [illegible] ಸಾದನಹಳ್ಳಿ [illegible] ಮೈಲು ದೂರದಲ್ಲಿರುವ [illegible] ಅಶ್ವತ್ಥ [illegible] ಒಂದು ಮುಂತಾದವು [illegible] ಬಾಣಾವರ [illegible] ಗಳು [illegible] ಗ್ರಾಮಗಳ [illegible] ಇವುಗಳೆಂದಲೂ ಗಾಳಿ, ಆಹಾರ ಮತ್ತು ಪತ್ರಿಕೆ ಇವುಗಳ ವಿಷಯವಾಗಿ ವ್ಯಾಖ್ಯಾನ ಮಾಡುತ್ತ ಡಾಕ್ಟರ ಮುಲ್ಲರ

ವರು ರೋಗಿಗಳ ಮನಸ್ಸನ್ನು ಸಂತೋಷ ಪಡಿಸುತ್ತ ಒಟ್ಟು ಎಲ್ಲರೊಂದಿಗೆ ಸೇರಿ ಕೊಳ್ಳುತ್ತಿರುವರು.

ನಿಜಾಮ ಕರ್ನಾಟಕ

ಗುಲಬುರ್ಗಾ ಜಿಲ್ಲೆಯ ಸೇಡಂ ತಾಲೂಕಿನ ಊರಿನ ಹಾಗೂ ತಾಲೂಕದಲ್ಲಿ ಜೀವದಯಾ ಸಂಘಗಳು ಸ್ಥಾಪಿಸಲ್ಪಟ್ಟಿವೆ.

ಕೊಡಗು ಕರ್ನಾಟಕ

ನಂಜನಗೂಡಿನಲ್ಲಿ ನೆರೆಯಲಿರುವ ಕಾಂಗ್ರೆಸ ಸಭೆಯ ಅಧ್ಯಕ್ಷ ಪದವಿಗೆ, ಉತ್ತರ ಕರ್ನಾಟಕದಿಂದ ಕಾಂಗ್ರೆಸ ಧುರೀಣರು ಕೌಜಲಗಿ ಶ್ರೀನಿವಾಸರಾಯರೂ ಶ್ರೀಯುತ ಗಂಗಾಧರರಾವ ದೇಶಪಾಂಡೆ, ದಿವಾಕರ, ಕಂಭಾವಿ ಮೊದಲಾದವರೂ ಬರುವರು. ಕನ್ನಡ ಅಧ್ಯಕ್ಷ, ಸೇಲಂ ಕೊಯಿಮತ್ತೂರ, ನೀಲಗಿರಿ, ಹೊಸೂರ, ಜಿಲ್ಲೆಗಳ ಕನ್ನಡ ಏಕೀಕರಣದ ಬಗ್ಗೆ ಯೋಚನೆ ಮಾಡುವರು.

ನಮ್ಮ ಮೈಸೂರಿನ ಪತ್ರ

ಸಂಸ್ಥಾನಗಳಲ್ಲಿ ಈಗ ಎಲ್ಲಿ ನೋಡಿದರೂ, ತಾಲೂಕು ಪರಿಷತ್ತುಗಳ ಸಮಾರಂಭ ಅಧ್ಯಕ್ಷರ ಸಾರಥ್ಯದಲ್ಲಿ [illegible] ಉಪ್ಪಿಟ್ಟು ಕಾಫೀ ಇವುಗಳ ಗಡಿಬಿಡಿಯಂತೂ ಹೇಳಲೇ ಬಾರದು. [illegible] ವಸೂಲು ಮಾಡಿದ ರೊಕ್ಕದ ಈ [illegible] ಖರ್ಚು ಮಾಡುವದು ವಿಹಿತವಲ್ಲ. ಪ್ರಜೆಗಳಿಗೆ ತಮ್ಮ [illegible] ವೃದ್ಧಿಪಡಿಸಿ ಕೊಳ್ಳಲಿಕ್ಕೆ ಯಾರಾದರೂ [illegible]. ಮಾಗಿ [illegible] ನೋಡಿದರೆ, [illegible] ಮಂಟಪಗಳು [illegible] ಅಧಿಕಾರಿಗಳ ಡಾಂಭಿಕತನ [illegible].

ಕೆಲವು ಅಧಿಕಾರಿಗಳು ಪ್ರಜೆಗಳ ಕರ್ತವ್ಯವೇನೆಂಬುವದನ್ನು ತಿಳಿದುಕೊಂಡು ವರ್ತಿಸುವಂತೆ ಕಾಣಬರುತ್ತೆ, ಅಂಥವರಲ್ಲಿ ಕೆಲವರು, ಪರಿಷತ್ತುಗಳಲ್ಲಿ, [illegible] ಇವುಗಳ ಮಹತ್ವವನ್ನು ವರ್ಣಿಸಿ ಹಾಡಲು ಯತ್ನಿಸಿದ್ದಾರೆ. ಇವರೂ ಕೂಡ ವಚನ ಶೂರರೇ ಹೊರತು, ಕಾರ್ಯ. ತ. ಸೊನ್ನೆ!

ನಮ್ಮ ಶ್ರೀಮನ್ ಮಹಾರಾಜರು ಹಾಕಿ ಕೊಟ್ಟ ಮೇಲ್ಪಂಕ್ತಿಯನ್ನು, ಸ್ವಲ್ಪದ ಅಧಿಕಾರಿಗಳು, ಕಾರ್ಯತಃ ಇಲ್ಲದಿದ್ದರೂ, ಬಾಯು ಮಾತಿನಿಂದಾದರೂ, ಅನುಸರಿಸುತ್ತಿರುವುದರಲ್ಲಿ ಆಶ್ಚರ್ಯವೇನೂ ಕಂಡುಬರುವದಿಲ್ಲ.

ವಿಶ್ವವಿದ್ಯಾಲಯದಲ್ಲಿ, ಅನೇಕ ಬದಲಾವಣೆಗಳುಂಟಾಗಿವೆ. ಇದುವರೆಗೂ ರಜಿಸ್ಟ್ರರಾಗಿದ್ದ ಶ್ರೀ. ಸುಬ್ರಹ್ಮಣ್ಯ ಅಯ್ಯರವರಿಗೆ ೩ ತಿಂಗಳ ರಜೆಯು ಕೊಡಲ್ಪಟ್ಟು, ಅವರ ಸ್ಥಾನಕ್ಕೆ ಪ್ರೊ. ಸುಲ್ತಾನ ಮೊಹಿಯುದ್ದೀನ ಎಂಬುವರನ್ನು ನೇಮಕ ಮಾಡಿರುವರು. ಡಾ. ಬ್ರಜೇಂದ್ರನಾಥಶೀಲರು ಸ್ಥಾನವನ್ನು ಬಿಟ್ಟು ಹೊರಡುವರೆಂದೂ, ವೈಸ್ ಛಾನ್ಸಲರ ಪದವಿಗೆ ಶ್ರೀ. ಎನ್. ಎಸ್. ಸುಬ್ಬರಾಯರು ಬರುವರೆಂದೂ ಸುದ್ದಿ. ಬರುವ ದಸರಾದ ವೇಳೆಯಲ್ಲಿ ಜರಗುವ ವಿಶ್ವವಿದ್ಯಾಲಯದ "ಕಾನ್ವೊಕೇಶನ್ನಿ"ನ ಖರ್ಚಿಗಾಗಿ ೧೦೦೦೦ ರೂಪಾಯಿಗಳನ್ನು ಅಂದಾಜು ಮಾಡಿರುತ್ತಾರೆ

ರಾಜಮನೆತನದವರೆಲ್ಲರೂ, ಬೇಸಗೆಯ ನಿಮಿತ್ತ ನೀಲಗಿರಿಗೆ ಹೋಗಿರುವರು. ಶ್ರೀ. ಯುವರಾಜರು ತಮ್ಮ ನೀಲಗಿರಿ ಪ್ರವಾಸವನ್ನು ಮುಗಿಸಿಕೊಂಡು ಮತ್ತೆ, ಯುರೋಪ ಅಮೇರಿಕಾ, ಮೊದಲಾದ ಪರದೇಶ ಯಾತ್ರೆಗೆ ತೆರಳುವರಂತೆ

ಮೈಸೂರು ಜಿಲ್ಲಾ ಕಾಂಗ್ರೆಸ ಕಮಿಟಿಯವರು ರಾಷ್ಟ್ರೀಯ ವಾರವನ್ನು ಅತ್ಯಂತ ಉತ್ಸಾಹದಿಂದ ನಡೆಸುತ್ತಿರುವರು. ಸ್ವಯಂಸೇವಕರು ಮನೆ ಮನೆಗೆ ಖಾದಿಯನ್ನು ಹೊತ್ತುಕೊಂಡು ಮಾರಾಟ ಮಾಡುತ್ತಿರುವರು

ಮೈಸೂರು } ಕೌಜಲಗಿ ಜಿ. ಪದ್ಮರಾವ
[illegible]

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—
ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್
ಜವಾಹಿರಿಕರ ವಾಡೇ ೪೬೫ ಶನಿವಾರ ಪುಣೇಶಹರ

ಗುಲಕಂದ! ಗುಲಕಂದ! ಗುಲಕಂದ!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಖಳೀ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು. ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಆಂದವಾದ ಮಾಲೆಗಳೂ ತುರಾಯಿ ಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತುಂಬಾ ಕಮೀಶನ್.

ವಿಳಾಸ— ಧೂಡಗೆ ಮಾಷಾಣಕರ ಕಂಪನಿ

ಬುಧವಾರ ಪೇಟ ಪುಣೆಶಹರ.

ಕಣ್ಣಿನ ಔಷಧ

ಹುವು. ನೋತಿಬಿಂದು, ದೃಷ್ಟಿ ಮಾಂದ್ಯ, ಕಂಣುಜಿಟ್ಟ, ಕಣ್ಣು ಬರೋದು. ಕಂದಾಗೋದು, ಮತ್ತು ಗುಡ್ಡಿ ರೆಪ್ಪೆ ಬಕ್ಕಿಗಳ ಒಳಭಾಗಗಳ ಇಂತಹ ಕಂಣಿನ ಎಲ್ಲ ಬೇನೆಗಳಿಗೆ ಈ ಔಷಧವು ಸಂಜೀವಿನಿಯೇ ಶಸ್ತ್ರಕ್ರಿಯೆ ಬೇಕಾಗಲಾರದು! ರಾ ಬ. ಹೆಂಡಸೆ. ಡಿ. ಡಿ. ಕಲೆಕ್ಟರ ಅನ್ನುವರು 'ಅನೇಕರಿಗೆ ಈ ಔಷಧ ಕೊಟ್ಟಿರುವದರ ಬಗ್ಗೆ ಖಾತ್ರಿಯಾ ಯಿತು ಮಂಗಳ ಕಂಬಗಳು ನೆಟ್ಟಿಗಾದವು' ಎಂಥ ರೋಗಕ್ಕೂ ಎರ ಡೇ ಮಾತ್ರೆ. ಮಾತ್ರೆಯೊಂದಕ್ಕೆ ರು ೧॥ ಟ ಖ ಬೇರೆ.

ಸೂಚನೆ: –ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ ವಾ. ವಿ ಕರಮರಕರ ೫೩೦ ಶನಿವಾರ ಪುಣೆಶಹರ

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿರುತ್ತದೆ. ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನ ದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಳ್ಳಬೇಕು ೧ ಪ ಡಿ ಕಿಂ ರೂ ೦-೦-೬, ೫೦೦ ಕಿಂ. ರೂ. ೦-೯-೦ ೫೦೦ ಕಿಂ ರೂ ೧ ೮-೮; ೧೦೦೦ ಪುಡಿಗಳ ಕಿಂ. ರೂ. ೧೨-೦-೦, ಟ ಸೆ. ಖರ್ಚವಗೈರೆ. ಪ್ರತ್ಯೇಕ.

ಸುಗಂಧಿ ನಶ್ಯ:— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ದಂಡ ಶ್ಲೈತ. ಫ ೧. ಅರಕಶೇಸೆಕ್ಕ ಮುಂತಾದ ವ್ಯಾಧಿಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದ ರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾ ಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ ೦-೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦. ವಿ. ಪೋ. ಖರ್ಚ ಬೇರೆ.

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿಯ ತಂಬಾ ಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರವತ್ ನೋಡಿ ವ್ಹಾಲಿಗೆ ಆರ್ಡರ ಕೊಡಬಹುದು ಇದರ ಹೊರತು ನಮ್ಮಲ್ಲಿಯ ಬಾಜಾರ ದಲ್ಲಿ ಎಲ್ಲಾ ಪ್ರಕಾರಗಳ ತುಂಬಾಕು ಬರುತ್ತದೆ. ಬೇಕಾದ ನಮೂ ನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು. ಖರೀದಿ ಮಾಡಿ ಕಳಿಸುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್ ಬಿ. ಕದಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ.
ಮು ಪೋ. ನಿಪ್ಪಾಣಿ, ಜಿ. ಬೆಳಗಾವ.

Mysore Chronicle.

(English Weekly)

Editor:—**T. T. SHARMAN**

Annual Subscription Rs. 4—0—0

BENGALORE CITY.

ಗುಬ್ಬಿ ಶ್ರೀಚೆನ್ನಬಸವೇಶ್ವರ ನಾಟಕ ಸಭೆ

ಇವರು ಎಪ್ರಿಲ ೧ ನೇ ವಾರದಿಂದ ಗದಗಿನಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸುವರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗವರ್ನಮೆಂಟ ಸೆಕ್ಯುರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮಪತ್ರ ೧೯-೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನಲ್ಲಿ ನೂತನವಾಗಿ ಚುನಾಯಿಸಲ್ಪಟ್ಟ ಬೋರ್ಡ ಅಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಟ್ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸಭ್ಯ[illegible]ಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವನ್ನು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೨೦ ಮಿ. ಏಕ್ನಾಲ ಚಿನ್ನಾಜಿ ಸಬ ಕಲೆಕ್ಟರ್ ಆಲಿಬಾಗ ಒಾಂಬೆ,

(೨) ಬಾಂಡ ನಂ. ೧೩೬೦೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲೂಕ ಸಿರಾ (ಜಿ[illegible]ಮಕೂರು.)

(೩) ಬಾಂಡ ನಂ. ೧೪೯೪೬ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೋಂಕಲಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ. ೧೮೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರ ಮತ್ತು ಜಮೀನದಾರ ಬ್ರಹ್ಮಾವರ ಒಕ್ಕಾಲಿ.

(೫) ಬಾಂಡ ನಂ. ೫೫೦ ಮಿ|| ರಾಮಚಂದ್ರ ವಾಮನ ಕಾಂ[illegible] [illegible]ಸ್ಕರ ವಾಡಾ ಶ್ಯಾಲಸರೋಡ (ಬರೋಡಾ)

(೬) ಬಾಂಡ ನಂ. ೧೮೬೦ ಮಿ|| ಆರ್. ಎಚ್. ಸ್ಟಾಟಿಸನ್ ಮಾಕ್ಸ್ಟ ಗವರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎಸ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ)

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ, ಸಹಿತ; ಟಿ. ಖ. ಪುಕ್ಕಟೆ

ಟಿಪ್ಪಣೀ— ಗಡಿಯಾಳ ವನ್ನು ಕೊಳ್ಳುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

[illegible] ವಾಚ ಕಂ. (In [illegible]) ಮುಂಬೈ ನಂ. ೪

ಕರ್ನಾಟಕ·ಧುರೀಣ.

ಉತ್ತಮ ದರ್ಜೆಯ ವಾರಪತ್ರಿಕೆ.

[illegible] ಸ್ವಾಂತ್ರ್ಯದ ರಾಜಕೀಯ ವಿಚಾರಗಳನ್ನೂ [illegible] ಕನ್ನಡದ ಕೈಲಿಯನ್ನೂ ನೋಡ ಬಯಸುವವರು ಈ ವಾರಪತ್ರಿಕೆಯನ್ನು ತಪ್ಪದೆ ಓದಬೇಕು.

ವಾರ್ಷಿಕ ವರ್ಗಣಿ ೩-೩-೦ ಪತ್ತೆ:—

ಸಂಪಾದಕ [illegible] ಕರ್ನಾಟಕ ಧುರೀಣ, ಬೆ ಉತ್ತರ ಕನ್ನಡ

ಶ್ರೀ[illegible]?

[illegible] ಪೋಸ್ಟ ಟಿಕೀಟಿ ಕಳಿಸಿ [illegible] ತಿಳಿದು ಕೊಳ್ಳಬಹುದು ಇಂಥ ಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಬೆಲಸಗಿ.

ಜಿಲ್ಲಾ ವಿಜಾಪೂರ.

ಬೋರವಾಲ ಬ್ಲ್ಯಾಕ ಟೂಥ್ ಪಾವಡರ

ಇದು ಹಲ್ಲುಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲುಗಳನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್‌ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರಿಮಾಡಿಕೊಳ್ಳಿ. ಡಜನ್ನು— ೫ ಆಣೆ. ಟಿ. ಖ. [illegible] ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಬೋರವಾಲ ಟ್ರೇಡಿಂಗ ಕೊ. (ರಜಿಸ್ಟರ್ಡ) ಫುಲೇಕರ

ಹಲ್ಲೀ ಉಪಚಾರ

ನೋಯುತ್ತಿರುವ ಮತ್ತು ಹೊಸ ನೂತನ [illegible] ಉದುರಿ ಹಾಗು ಕುಳಿತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಡಾ. ವಿ. ಗರವಾರೆ

ಮಾಧವಬಾಗ, ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೇ ಬಂಧುಗಳು

C/o ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢ ರಾಜೇಂದ್ರ ಇವರ ಮಕ್ಕಳಾದ ಶ್ರೀನಿವಾಸರಾಯರು ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

[illegible]

FOR SAFETY AND GOOD [illegible]

IN [illegible]

GO TO THE [illegible]

[illegible]

LIFE ASSURANCE COMPANY

Apply for full particulars to-

M. K. Kulkarni, Agent [illegible]

[illegible]

[illegible]

ಅಕ್ಕಿಯ ವಖಾರ

ಉತ್ತಮ ರಾಮಸಾಗರ ಮತ್ತು [illegible] ನಮೂನೆಯ [illegible] ನಮ್ಮ ಬ್ಯಾಂಕಿನಲ್ಲಿ ಬಹು [illegible] ದೊರೆಯುತ್ತವೆ. ಬೇಕಾದವರು ಅಕ್ಕಿಯನ್ನು ಸಮಕ್ಷಮ ನೋಡಿ ಖಾತ್ರಿ ಮಾಡಿಕೊಳ್ಳಬಹುದು.

[illegible] ವ್ಯವಹಾರವು ವ್ಯವಸ್ಥಿತ ರೀತಿಯಿಂದ ನಡೆದಿರುವದರಿಂದ ಈ ಬ್ಯಾಂಕು ದಿನೇ ದಿನೇ [illegible] ತಿಳಿಸಲು ನಮಗೆ ಆನಂದವಾಗುತ್ತದೆ.

ಚಾಲತೀ ಠೇವು	ನೂರಕ್ಕೆ ವರ್ಷಕ್ಕೆ	2½
[illegible]	,, ,,	4½
[illegible]	,,	6
,, ೧೨ ತಿಂಗಳಿಗೆ	,, ,,	7

ವಾರಲೋನ ವಾರ ಬಾಂಡ ಮತ್ತು ಸರಕಾರೀ ಎಲ್ಲ ಕಾಗದಗಳನ್ನು ಚಾಲತೀ [illegible] ಕೊಡಕೊಳ್ಳುತ್ತೇವೆ ಬೇಕಾದರೆ ಅವುಗಳ ಮೇಲೆ ಸಾಲವನ್ನು ಸಹ ಕೊಡುತ್ತೇವೆ.

ಬ್ಯಾಂಕಿಗೆ ಸಂಬಂಧವಾದ ಎಲ್ಲ ತರದ ಕೆಲಸಗಳನ್ನು [illegible] ವ್ಯಾಪಾರಸ್ಥರಿಗೆ [illegible] ಸಾಲವನ್ನು ಕೊಡುತ್ತೇವೆ.

ದಿ ಅಶೋಕ ಬ್ಯಾಂಕ ಲಿಮಿಟೆಡ್ ಬಾಗಲಕೋಟಿ

[illegible] ದೇಶಸೇವನಂ

[illegible] !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರ್ಟಿಫಿಕೇಟ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣ ಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೩೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಆಥವಾ ಪತ್ರದ್ವಾರ.

ಪತ್ತಾ— ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತುಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ **ಜುನಿ ತಪಕೀರಗಲ್ಲಿ, ಪುಣೆ ಸಿಟಿ.**

ಸಾಧ್ವೀ ಮತ್ತು ಸಂಪದಭ್ಯುದಯ

ಶ್ರೇಷ್ಠವಾದ ಕನ್ನಡ ಪತ್ರಿಕೆ [illegible] ಪತ್ರಿಕೆ **ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಲ್ಲಿ** [illegible] ಪ್ರಚುರವಾಗುತ್ತಲಿರುವವು ಇವುಗಳಲ್ಲಿ ತಾತ್ವಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸ್ವತಂತ್ರವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ವದೇಶ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ [illegible] ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. [illegible] ತಿಂಗಳಿಗೆ [illegible] ಪರಸ್ಥಳದವರಿಗೆ ವರ್ಷಕ್ಕೆ ರೂ. [illegible] ತಿಂಗಳಿಗೆ [illegible] ಆಣೆ. ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನು ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಿಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯಂ. ಮೈಸೂರು.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to—
N. K. Kulkarni. Agent Bagalkot.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೩೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಷ್ಟ ಜಿ. ರಾಯಚೂರ, ನಿಜಾಂ

ವಿಶ್ವಕರ್ನಾಟಕ

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿಮೋಚಕ ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೩-೮-೦

ಡಿರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ವಿಶ್ವಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

ರ. ನಂ. ೬. ೧೯೪೭ ವಾ. ಚಂದಾ ೧—೪—೦ ಮಾತ್ರ

ಕನ್ನಡಿಗ.

ಸಂಯುಕ್ತಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ } ಬಾಗಲಕೋಟೆ ಶುಕ್ರವಾರ ಮಿತಿ ನಿಜ ಚೈತ್ರ ಶುದ್ಧ ೪ ಶಕೆ ೧೮೪೮. ತಾ॥ ೧೬-೪-೧೯೨೬. { ಸಂಚಿಕೆ ೪

ಸಂಪಾದಕರ ಭೂಮಿ.

ನನ್ನ ಮನಸಿನ ಪೀಠವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ ।
ಚಿನ್ನದಾಣದ ಚಿನ್ನ ಮೇಣಬಸ್ತಿಯ ನೊಂದು ಚಿನ್ನಯಾಕಾಶದಲ್ಲಿ
ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೌ॥

—ಅಂಬಿಕಾ ತನಯ ದತ್ತ

ಕರ್ನಾಟಕದ ಅಂಜೆಮನೆಗಳಲ್ಲಿ ಕನ್ನಡ ನಮೂನೆಗಳೇ ಇರಬೇಕೆಂದು "ಕನ್ನಡಿಗ"ನು ನಡಿಸಿದ ಪ್ರಯತ್ನದಲ್ಲಿ ಅವನಿಗ ಸಂಪೂರ್ಣವಾದ ಜಯವು ದೊರೆತಿದೆಂದು ವಾಚಕರಿಗ ಅರುಹಲು ಆನಂದವಾಗುತ್ತದೆ. ಮುಂಬೈ ಕಾಯದೇ ಮಂಡಲದಲ್ಲಿ "ಈ ಬಗ್ಗೆ "ಕನ್ನಡಿಗ"ನು ಬರೆದ ಟೀಕೆಗಳನ್ನು ಸರಕಾರದವರು ನೋಡಿರುವರು" ಎಂಬದಾಗಿ ಒಂದು ತಿಂಗಳ ಹಿಂದೆ ಸರದೇಸಾಯರು ಪ್ರಶ್ನೆ ಕೇಳಿದಾಗ್ಗೆ " ನೋಡಿರುವೆವು ಆದರೆ ಜನರಿಂದ ತಕರಾರುಗಳೇನೂ ಬಂದಿಲ್ಲವಾದ್ದರಿಂದ ಆ ಬಗ್ಗೆ ಏನೂ ಏರ್ಪಾಡು ಮಾಡಿಲ್ಲವೆಂಬ ಒಂದು ಬಗೆಯ ಜಾಬದ ಉತ್ತರವನ್ನು ಕೊಟ್ಟಿದ್ದರೂ, ಇಷ್ಟು ಬೇಗನೇ ಕನ್ನಡ ನಮೂನೆಗಳೇ ಉತ್ತರ ಕರ್ನಾಟಕದ ಅಂಜೆಮನೆಗಳಲ್ಲಿರಬೇಕೆಂಬದಾಗಿ ಅಪ್ಪಣೆ ಕೊಡಿಸಿದ್ದನ್ನು ಕಂಡು ನಮಗೆ ಆನಂದವಾಗುತ್ತದೆ ಮತ್ತು ಕರ್ನಾಟಕದ ಬಹುದಿನದ ಈ ಕೊರತೆಯನ್ನು ತೆಗೆದು ಹಾಕಲು ಸರಕಾರದವರು ಮನಸ್ಸು ಮಾಡಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುವೆವು ಆದರೆ ಇದೇ ಬಗೆಯಾಗಿ ಕರ್ನಾಟಕದ ಎಲ್ಲ ಕೊರತೆಗಳನ್ನು ಸ್ವಭಾಷಾ ಭಕ್ತಿಯಿಂದ ದೂರೀಕರಿಸಿ, ಮೇಲಿಂದ ಮೇಲೆ ಅಭಿನಂದನ ಮಾಡುವ ಪ್ರಸಂಗಗಳನ್ನು ತಂದು ಸರಕಾರದವರು ಕೊಡುವರೋ ಇಥವಾ ಸತ್ತ್ವ ತಮ್ಮ ಅನಾನುಕೂಲತೆ, ಜನರ ತಕರಾರುಗಳ ಅಭಾವ ಇವೇ ಮೊದಲಾದ ಹಳೇ ಪುರಾಣಗಳನ್ನು ಬಿಚ್ಚುವರೋ ನೋಡಬೇಕು.

"ಕನ್ನಡಿಗ"ನಿಗೆ ಗುಬ್ಬೀನಾಟಕ ಸಭಾ ನಂ. ೧ ಇವರು ಕಳೆದ ಗುರುವಾರ ತಮ್ಮ "ಸೌಭದ್ರ" ನಾಟಕವನ್ನಾಡಿ ಅದರ ಉತ್ಪನ್ನವನ್ನು ಅವನಿಗೆ ಮುದವಾಗಿ ಕೊಟ್ಟು, ಆಶ್ರಯದಾತೃಗಳಾಗಿಯೂ, ಕಲಘಟಗಿಯ ಶ್ರೀ ನರಸಿಂಹನವರ ಲಕ್ಷ್ಮಣರಾಯರು ಪೋಷಕರಾಗಿಯೂ ವಿಶೇಷ ಸಹಾಯ ಮಾಡಿರುವರೆಂದು ತಿಳಿಸಲು ಆನಂದವಾಗುತ್ತದೆ. ವಿಶೇಷಸಹಾಯಕ್ಕಾಗಿ ನಾವು ಅವರನ್ನು ಅಭಿನಂದಿಸುವೆವು. ಇದೇ ಪ್ರಕಾರವಾಗಿ ಈ ಎರಡನೇ ವರ್ಷದಲ್ಲಿಯೂ ಕರ್ನಾಟಕದ ಅಭಿಮಾನಿಗಳು ಸಹಾಯ ಮಾಡಬೇಕಾಗಿ ಬಿನ್ನಹವಿದೆ.

ವರದಾಚಾರ್ಯ ನಾಟಕ ಶಿರೋಮಣಿ— ಇವರ ಮರಣದಿಂದ ರಂಗಭೂಮಿಯ ಒಂದು ರತ್ನವು ಕಳೆದು ಹೋದಂತಾಯಿತು ಇವರು ರಂಗಭೂಮಿಯ ಸುಧಾರಕರಲ್ಲಿ ಅಗ್ರಗಣ್ಯರಾಗಿದ್ದರೂ ಮಾರ್ಗದರ್ಶಕರಾಗಿದ್ದರು. ಇವರು ಶ್ರೀ ವೈಷ್ಣವಕುಲದವರು ಇವರ ಜನ್ಮವು ೧೮೬೯ ನೇ ಇಸವಿಯಲ್ಲಿ ಆಯಿತು. ಇವರ ತಂದೆಯವರಾದ ರಂಗಸ್ವಾಮಿಯವರು ಚಿತಲದುರ್ಗದಲ್ಲಿಯೂ, ಶಿವಮೊಗ್ಗೆಯಲ್ಲಿಯೂ, ಮುಲ್ಕೀ ಖಾತೆಯ ಸಿರಸ್ತೆದಾರರಿದ್ದರು. ಇವರಿಗೆ ಸಾಹಿತ್ಯಸಂಗೀತಗಳಲ್ಲಿ ಪ್ರೇಮವು ಬಹಳ ವರದಾಚಾರ್ಯ ಇವರಿಗೆ ಲಲಿತಕಲಾಪಕ್ಷಪಾತವು ತಂದೆಯವರಿಂದಲೂ, ಪ್ರಾಪ್ತವಾಯಿತು. ವರದಾಚಾರ್ಯರು ಪ್ರವೇಶಪರೀಕ್ಷೆಯಲ್ಲಿ (ಮ್ಯಾಟ್ರಿಕ್) ಉತ್ತೀರ್ಣರಾಗಿ ಬೆಂಗಳೂರಿಗೆ ಉಚ್ಚಶಿಕ್ಷಣ ಪಡೆಯಲು ತೆರಳಿದರು. ಅದೇ ಸಮಯದಲ್ಲಿ ಇವರ ತಾಯಿಯವರು ತೀರಿಕೊಳ್ಳಲು ಇವರಿಗೆ ಮೇಲೆ ಮುಗಿಲು ಹರಿದು ಬಿದ್ದಂತಾಯಿತು. ದುಃಖೋದ್ರೇಕದಿಂದ ಅಭ್ಯಾಸಕ್ರಮವನ್ನು ಬಿಟ್ಟುಕೊಟ್ಟರು; ಆರೋಗ್ಯಖಾತೆಯಲ್ಲಿ ಒಂದು ಚಿಕ್ಕ ಕೆಲಸ ಹಿಡಿದರು. ಮೈಸೂರ ರಂಗಭೂಮಿಗೆ ಆಗ ತಾನೆ ಹೊಸರಂಗ ಲೋಕಶಿಕ್ಷಣ ಜನರು ಕೋರಿಬಂದ ಮೊದಲಾದವುಗಳಿಗಾಗಿ, ಕಡೆತನಕ ಸ್ಥಿರವಾಗಿ ಉಳಿಯುವ ನಾಟಕಗೃಹವೊಂದನ್ನೇರ್ಪಡಿಸಬೇಕೆಂದು ಜನರು ಓಡಾಡುತ್ತಿದ್ದರು. ಆಗಿನ ದಿವಾಣರಾದ ರಂಗಾಚಾರ್ಯರು ಉತ್ಸಾಹದಿಂದ ಗಾಳಿಯ ಬಲವನ್ನರಿತು, ಶ್ರೀ ಚಾಮರಾಜೇಂದ್ರ ಕರ್ನಾಟಕ ನಾಟಕ ಸಭೆಯನ್ನು ಸ್ಥಾಪಿಸಿ ಅರಮನೆಗೆ ಜೋಡಿಸಿದರು. ಇದಕ್ಕೆ ಪ್ರತಿ ಸ್ಪರ್ಧಿಯಾದ ನಾಟಕ ಮಂಡಲವೊಂದನ್ನು ಕೆಲವು ಸಾಹಸಿಗರಾದ ತರುಣರು ಸ್ಥಾಪಿಸಿದರು ಅದು ಹುಟ್ಟಿದೊಡನೆ, ಮೃತವಾಯಿತು ಆಮೇಲೆ ಸ್ತ್ರೀ ಪಾತ್ರ ನಟನ ಕುಶಲರಾದ ಗೌರೀನರಸಿಂಹ ಎಂಬುವರು. ಶ್ರೀ ಸರಸ್ವತೀ ವಿಲಾಸ ರತ್ನಾವಳೀ ನಾಟಕಸಭೆಯನ್ನು ಸ್ಥಾಪಿಸಿದರು, ವರದಾಚಾರ್ಯರು ಈ ಸಭೆಗೆ ಸೇರಿ ನಾಟಕವನ್ನಾಡಿದರು ಪ್ರೈಂಸ್ ನಂತೆ ಒಮ್ಮೊಂದೊಮ್ಮೆ ಕೀರ್ತಿಕಾಮಿನಿಯು ಇವರಿಗೆ ಒಲಿದು ಬಿಟ್ಟಳು ಇವರ ಕೌಶಲವನ್ನು ಎಲ್ಲರೂ

ಮಾತ ಕೊಡಲಿಲ್ಲ. ಮುಂದೆ ಅನಾರೋಗ್ಯ ಪ್ರಾರಂಭವಾಗಿ ಇವರಿಗೆ ಈ ಮುಖವನ್ನು ಬಿಡಬೇಕಾಯಿತು. ಇವರಿಗೆ ಕೆಲಕಾಲ ದಾರಿದ್ರ್ಯ, ನಿರುದ್ಯೋಗ ಇವುಗಳಿಂದ ಹೇಳಿಕೊಳ್ಳದಷ್ಟು ತೊಂದರೆಯಾಯಿತು ಆದರೂ ಇವರು ಕುಗ್ಗಲಿಲ್ಲ. ಶಾಂತಚಿತ್ತರಾಗಿ ತಮ್ಮ ಭವಿಷ್ಯವನ್ನೇ ಎದುರು ನೋಡುತ್ತ ಕಾದುಕೊಂಡಿದ್ದರು. ಬೆಂಗಳೂರ ಮುನಿಸಿಪಾಲಿಟಿಗೆ ಸ್ಥಾಪಿತವಾದಾಗ, ಅಲ್ಲಿ ಕೆಲವು ದಿವಸ ಕೆಲಸ ಮಾಡಿದರು. ಕೊನೆಗೆ ಲಂಡನ್‌ದಲ್ಲಿ ರತ್ನಾವಳಿ ನಾಟಕ ಮಂಡಳಿಯ ಒಕ್ಕೂಟದವರು ಆಮಂತ್ರಿಸಿದರು. ಇವರಿಗೆ ಅನಿರೀಕ್ಷಿತವಾಗಿ ಇವರು ರಂಗಭೂಮಿಯ ಉಪಾಸನೆಯನ್ನು ಪುನಃ ಮುಂದುವರಿಸಿದರು. ಇವರು ಸಂಸ್ಕೃತದಲ್ಲಿ, ಸಂಸ್ಕೃತ ಅಗ್ರಕರೂ, ರಸಿಕರೂ, ಆಗಿದ್ದರು. ಆದರೆ ನಟನೆಯಲ್ಲಿ ಜೀವನೋತ್ಪತ್ತಿಯ ಸಾಧನಗಳು ದೊರೆಯುತ್ತಿರಲಿಲ್ಲ. ಸಾಹಿತ್ಯ ದೊಡ್ಡ ಪರಿಶೀಲನೆ ಅದಾಯ ದೊರೆಯುವಂತಿರಲಿಲ್ಲವೆಂದು ಹೇಳುತ್ತಾರೆ. ರಸಿಕತನವನ್ನು ಬಿಡಲು ಸಹಿಸಲಿಲ್ಲ, ಭಾವಿಕರು ಇವನ್ನು ಬಿಡುವುದೇ ಇಲ್ಲ ಎಂದರು. ಇವರ ಮನಸ್ಸಿನಲ್ಲಿ ಸಾಂಸ್ಕೃತಿಕ ವಿಚಾರಗಳು ಇದ್ದವು; ಇವು ನಾಟಕಗಳಿಗೆ ಇವರು ಮೂಲವಾಗಿ ಇತ್ತಿದ್ದರು. ನ್ಯಾಯಾಲಯದ ಬ್ಯಾರಿಸ್ಟರು ಬರಹ, ಅಲ್ಲಿಯ ಜನರ ಪ್ರೀತಿಯಾದ ಉಪಚಾರ ಪಡೆದು ಬಂದರು. ಅವರು ನಾಟಕಗಳ ಸಂಸ್ಕರಣ ಹಾಗೂ ಶೃಂಗಾರಗಳನ್ನು ಅಭ್ಯಸಿಸುವುದರಲ್ಲಿ ಅವರ ಸಂಗಡವಿದ್ದವರು, ಇವರು ಇವರಲ್ಲೇ ಪ್ರಮುಖರು. ಶಾಕುಂತಲ, ಮಾಲವಿಕಾಗ್ನಿಮಿತ್ರ, ಪ್ರಿಯದರ್ಶಿಕಾ ಈ ನಾಟಕಗಳನ್ನು ನೋಡಿದವರು ಇದಕ್ಕೆ ಸಾಕ್ಷಿ ಯಾಗಿದ್ದಾರೆ. ಒಟ್ಟಿನಲ್ಲಿ ಹೇಳಬೇಕಾದರೆ ಇವರು ನಾಟಕದ ಬೆಳವಣಿಗೆಗೂ, ಪುನರುಜ್ಜೀವನಕ್ಕೂ ಕಾರಣಭೂತರು! ರಂಗಭೂಮಿಯ ದೋಷಗಳನ್ನು ತೆಗೆದು ಹಾಕಲು ಪ್ರಯತ್ನ ಪಡುತ್ತಿರುವ ಮೊದಲಿಗರಲ್ಲೊಬ್ಬರು. ವೃತ್ತ ಕಂದಗಳನ್ನು ಬಲು ಸೊಗಸಾಗಿ– ಕರ್ಣಮಧುರವಾಗಿ– ಅರ್ಥತಿಳಿಯುವಂತೆ ಅನ್ನುವವರೆಂದರೆ ಇವರೊಬ್ಬರೇ ಎಂದು ಹೆಸರು. ಅರ್ಥದ ಪರಿವೆಯನ್ನರಿಯದೆ ಪದ್ಯಗಳನ್ನು ಬಾಯಿಗೆ ಬಂದಂತೆ ಬೊಗಳುವವರೇ ಬಹಳ. ಇಂತಹ ಸ್ಥಿತಿಯಲ್ಲಿ ಮೇಲು ಪಂಕ್ತಿಯು ಹಾಕಲು ವರದಾಚಾರ್ಯರು ಯತ್ನಿಸಿದರು. ಇವರು ಮೊನ್ನೆ ಮೊನ್ನೆ ಇದೇ ತಿಂಗಳ ೪ ನೇ ತಾರೀಖಿಗೆ ಇಹಲೋಕ ಯಾತ್ರೆಯನ್ನು ಮುಗಿಸಿದರು. ರಂಗಭೂಮಿಯ ಇತಿಹಾಸದಲ್ಲಿ ಇವರ ಹೆಸರು ಚಿರಕಾಲವಾಗಿ ಉಳಿಯುವದು. ಮರಣಕಾಲದಲ್ಲಿ ಇವರು ೫೭ ವಯಸ್ಸಿನವರಿದ್ದರು. ಇವರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ.

ವಿಜಾಪುರ ನಗರ ಸಭೆಯಲ್ಲಿ (ಮುನಸಿಪಾಲ್ಟಿ) ಅವ್ಯವಸ್ಥೆಯು ಆಧಿಪತ್ಯವು ನಡೆಸಿದಂತೆ ತೋರುತ್ತದೆ. ಒಂದೆಡೆಯಲ್ಲಿ ದಿವಾನ ಸಾಹೇಬ ಜಾನವೇಕರ,ಇಸ್ಮಾಯಿಲ್ ಸಾಹೇಬ ಪೇದ್ರೀಕರ ಇವರು ನಗರ ಸಭೆಯ ಹಣವನ್ನು ತಮ್ಮ ಮನೆಗಾಗಿ ಉಪಯೋಗ ಮಾಡಿರುವರೆಂದು ಆರೋಪ. ಮತ್ತೊಂದೆಡೆಯಲ್ಲಿ ಶ್ರೀ ಅಚರೇಕರ ಇವರು ಸಭೆಯ ಸಭಾಸದತ್ವಕ್ಕೆ ಅರ್ಹರಲ್ಲವೆಂಬ ನಿರ್ಣಯದ ಹವಣಿಕೆ. ಮುಗದೊಂದೆಡೆಗೆ ದಿವಾನ ಸಾಹೇಬರ ವಿಶ್ವಾಸಕ್ಕೆ ಅಪಾತ್ರರೆಂಬ ವಿಧಾನ ಇವೆಲ್ಲವುಗಳಿಂದ ನೋಡಲು ನಗರ ಸಭೆಗೆ ರೋಗದ ಗಾಳಿ ಬೀಸಿದಂತೆ ಕಾಣುತ್ತದೆ. ನಗರ ಸಭೆಯೆಂದರೆ ಸ್ವರಾಜ್ಯಪಾತ್ರತೆಯ ಶಿಕ್ಷಣ ಭವನವು. ಇಂತಹ ಸಂಸ್ಥೆಯಲ್ಲಿ ಸಭಾಸದರಾಗಿ ದುಡಿಯುವವರು ತಮ್ಮ ಶೀಲಕ್ಕೆ ಊರು ಕಟ ದಂತೆ ನಡೆಯಬೇಕಲ್ಲವೆ. ಅದಕ್ಕೆ ಸಂಶಯದ ಸೊಂಕು ತಗಲಲು ಅನುವು ಇರದಂತೆ ಎಚ್ಚರಬೇಕು. ಇಂತಹ ಅನಿಷ್ಟ ಪರಿಸ್ಥಿತಿಯಲ್ಲಿಯೂ ಕೂಡ, ಅಲ್ಲೊಂದು ಬೆಳಕಿನ ಕಿರಣವು ಬೆಳಗುತ್ತಿದೆ. ಬೆಳಗಾವಿಯವರು ಒತ್ತಾಯದ ಮಾಫೀ ಶಿಕ್ಷಣವನ್ನು ಕೊಡಲು ಯತ್ನಿಸುತ್ತಿರುವರು ವಿಜಾಪುರದ ನಗರ ಸಭೆಯು ಉಚಿತ ಪ್ರಾಥಮಿಕ ಕೇವಲ ಮಾಫಿ ಶಿಕ್ಷಣವನ್ನು ಪ್ರಾರಂಭಿಸಲು ನಿರ್ಣಯಿಸಿದೆ. ಇದೊಂದು ಹೆಜ್ಜೆ ಆದರೆ ಹೆಜ್ಜೆಯು ಮಾತ್ರ ನಿಶ್ಚಿತವಾಗಿ ಮುಂದಿನ ಪ್ರಗತಿಗೆ ನೆರವಾಗುವಂತಹದಿರಬೇಕು. ಈಗ ನಗರ ಸಭೆಯನ್ನು ಹೀಗೆಯೇ ದಬ್ಬುವದೋ ಎಂದು ನಡೆದರೂ ಅಭ್ಯಂತರವಿಲ್ಲ ಹೊಸ ಕಿಡ ಹೋಗುವವು ಮಾಡುವಾಗಿ, ವಿಜಾಪುರಸ್ಥರ ಹಿತವು ಆ ಸಭೆಯಿಂದ ನೆರವು ತೆಂದು ನಾವು ಬಯಸುತ್ತೇವೆ.

ಮೈಸೂರಿನ ಮಹಾರಾಜರು ಮಿರ್ಜಾ ಅಲ್ಲಿಖಾನ ಎಂಬವರನ್ನು ಮಂತ್ರಿಪದವನ್ನು ನಿಯಮಿಸಿ ಕನ್ನಡಿಗರಿಗೆ ಸಂತೋಷವನ್ನುಂಟು ಮಾಡಿದರು. ಈ ಮಂತ್ರಿವರ್ಯರಿಗೆ ಕನ್ನಡವು ಚೆನ್ನಾಗಿ ಬರುತ್ತಿದೆ. ಜನ ಸಂಗತನವನ್ನು ಕಾಯುವ ಎಲ್ಲ ಮಾರ್ಗವೋ ನ ಹಾದಿ ಜನಹಂ ನಾಶೆ ಬಿಟ್ಟಿದೆ ಯೆಂಬುದೆ ಆಶ್ಚರ್ಯವಿಲ್ಲ. ನಾ ಹಾರಾಜರವರು ನಾಡಿನ ಏಳ್ಗೆಗಾಗಿ ತಮಕಂಡಂತೆ ಯತ್ನಿಸುತ್ತಿದ್ದಾರೆಂಬುದು ಅವರ ಕೃತಿಗಳಿಂದ ವ್ಯಕ್ತವಾಗುತ್ತಿದೆ. ಆ ಯುವ ಪ್ರಜೆಯು ತಮ್ಮ ರಾಜ್ಯದ ಕಷ್ಟಗಳನ್ನು ಭರಿಸುತ್ತಿರುವರು. ಖಾದಿಯು ಸ್ವಚ್ಛವಾದ ಬಟ್ಟೆಯಲ್ಲಿಯ ಪಾವಿತ್ರ್ಯವು ಇವರಿಗೆ ಮನದಟ್ಟಾಗಿದೆ. ಅದನ್ನಲ್ಲಿ ನ್ಯಾಯಪ್ರೀತಿಯುಳ್ಳವರಂತೆ, ಶೀರುದ್ಯಾ ಗುಣವೊಂದು ಇದ್ದರೆ, ಧರ್ಮವನ್ನು ಸ್ವರ್ಗವಾಗಿ ಪರಿಣಮಿಸುವುದು. ನಮ್ಮರಸರಲ್ಲಿ ನ್ಯಾಯ ಶೀರತ್ವಗಳೆರಡೂ ಮನೆಮಾಡಿ ಕೊಂಡಿವೆ. ಮುಸಲ್ಮಾನರನ್ನು ಮಂತ್ರಿಪದಕ್ಕೆ ಏರಿಸಿ, ಅವರು ತಮ್ಮ ಗುಣಪಕ್ಷಪಾತಿತ್ವವನ್ನೂ ನ್ಯಾಯಬುದ್ಧಿಯನ್ನೂ ತೋರ್ಪಡಿಸಿದರು. ಖಾದಿಯಲ್ಲಿಯೇ ಸಕಲ ಧರ್ಮವು ಅಡಕವಾಗಿದೆಯೆಂದು ಜಗತ್ತಿಗೆ ದೀವಟಿಗೆಯನ್ನು ಹಿಡಿದರು. 'ಧರ್ಮಾತ್ ರಕ್ಷಣಂ ಶ್ರೇಯಃ' ಎಂಬುದರಂತೆ ಪ್ರಜಾಪರಿಪಾಲನೆಯೇ ಅರಸರ ಶ್ರೇಷ್ಠವಾದ ಕರ್ತವ್ಯವು ಖಾದಿಯ ಉಡುಪು ಇವರ ಕರ್ತವ್ಯದಕ್ಷತೆಯ ಕುರುಹು. ಖಾದಿಯನ್ನು ತೊಡುವದರಿಂದ ಪ್ರಜೆಗಳಿಗೆ ಹಿತವಾಗುತ್ತದೆ; ಹಿಂಸೆಯು ಹಿಮ್ಮೆಟ್ಟುತ್ತದೆ ಉದ್ಯೋಗವೆಲ್ಲರಿಗೂ ದೊರೆತು ನಾಡಿನಲ್ಲಿ ಸುಖಶಾಂತಿಗಳು ನಲಿಯುವವು. ದೊಡ್ಡವರು ಆಚರಿಸಿದಂತೆ ಸಣ್ಣವರು ಆಚರಿಸುವರು ಜನಕನು ಋಷಿಯಾದರೂ ಲೋಕಸಂಗ್ರಹಕ್ಕಾಗಿ ದುಡಿದಂತೆ, ನಮ್ಮ ಮಹಾರಾಜರಾದರೂ ದುಡಿದು ಶಾಶ್ವತ ಕೀರ್ತಿಯನ್ನು ಪಡೆಯಲೆಂದು ಕನ್ನಡಿಗನ ಹಾರೈಕೆ.

ಗಾಳಿಗೆ ರವದಿಯು ತೂರಿ ಹೋಗುವಂತೆ ಪಾಶ್ಚಿಮಾತ್ಯಸಂಸರ್ಗದಿಂದ ನಿಜಾಮುಸರಕಾರದ 'ಮೊಗಲಾಯಿ'ಯು ಕನ್ನಡ ಕಾಣಕ್ಕೆಯಾಗುವದೆಂದು ತಿಳಿದರೆ ತಪ್ಪು ಈಗ ಅಲ್ಲಿಯ ಶಿಕ್ಷಣಾಧಿಕಾರಿಗಳು ಶಿಕ್ಷಣಖಾತೆಯಲ್ಲಿ ತಿದ್ದು ಪಾಟಗಳನ್ನು ಮಾಡಲಿರುವರು. ಆ ತಿದ್ದು ಪಾಟಗಳನ್ನು ನೋಡಿದರೆ, ಸಂಸ್ಥಾನವು ಹಿಂದೆ ಹಿಂದೆ ಜಗ್ಗುತ್ತಿದೆಂಬದು ಸ್ಪಷ್ಟವಾಗುವದು. ಆ ತಿದ್ದು ಪಾಟುಗಳು ಜನಹಿತಕ್ಕೂ ಲೋಕಸತ್ತೆಯ ಯುಗಕ್ಕೂ ಅನುಗುಣವಾದವುಗಳಿರುವದಿಲ್ಲ ಹೊಸ ಶಾಲೆಗಳನ್ನು ಸ್ಥಾಪಿಸಲು ಯಾರಾದರೂ ಎಣಿಸಿದರೆ, ಅವರು ಮೊದಲು ಅವುಗಳ ಸ್ಥಳ, ಅಭ್ಯಾಸಕ್ರಮ ಮೊದಲಾದವುಗಳ ವಿಷಯದಲ್ಲಿ ಸರಕಾರಕ್ಕೆ ತಿಳುಹಿ, ಸಮ್ಮತಿ ಪಡೆದು ಸ್ಥಾಪಿಸಬೇಕಾದ್ದು ಹಾಗೆಯೇ ಸ್ಥಾಪಿಸಿದಲ್ಲಿ ಅವುಗಳನ್ನು ಸರಕಾರವು ಬಂದುಮಾಡಿಸಬಹುದು ಮೊದಲೇ ಶಿಕ್ಷಣದ ಅಭಾವ ಮೇಲೆ ಇಂತಹ ಕಠೋರವಾದ ನಿರ್ಬಂಧಗಳು, ಹೀಗಿರಲು ಕೇಳುವದೇನು! ಅನಕ್ಷರತೆಯೂ, ಅಶಿಕ್ಷಿತತನವೂ ಹಬ್ಬಲು ಪೂರ್ಣ ಸ್ವಾತಂತ್ರ್ಯ. ಇಷ್ಟರಿಂದಲೇ ಆ ಸಂಸ್ಥಾನದ ಕನ್ನಡಿಗರಿಗೆ

ಕಡೆಯಲ್ಲಿ ಎಲ್ಲರೂ ಉರ್ದು ಭಾಷೆಯನ್ನು ಕಲಿಯಬೇಕು. ಉರ್ದು ಮಾತೃಭಾಷೆಯಾಗಿಯೂ ಜನರು ಅಲ್ಲಿ ೧೦೦ ಕ್ಕೆ ೧೦ ರಂತೆ ಸಿಗುವರು- ಉಳಿದವರೆಲ್ಲರೂ ಕನ್ನಡ, ಮರಾಠಿ, ಮತ್ತು ತೆಲುಗು ಮಾತಾಡುವವರು ಇರುವರು. ಇವರೆಲ್ಲರಿಗೂ ಅನರ್ಥ ಪರಂಪರೆಯು ಕಟ್ಟಿಟ್ಟದ್ದೇ? ಈ ಸಾಲೆಯ ಮಾದಿಯಲ್ಲಿ ೧೧೯ ಪ್ರಾಥಮಿಕ ಶಾಲೆಗಳು ಪ್ರಾರಂಭವಾಗುವದೆಂದು ಇದು ಉಕ್ತವಾಗಿದೆ. ಶಿಲ್ಪಕಲಾ ಕೌಶಲ್ಯ ಶಿಕ್ಷಣದ ಹೆಸರೇ ಇಲ್ಲ. ಹೀಗೆ ಆಡಳಿತವು ನಡೆದರೆ, ಪ್ರಗತಿಯ ಹೆಜ್ಜೆಯು ಮುಂದೆ ಬೀಳುವದೆಂತು? ಮುಂಚಿನ ಅರಸರ ಪ್ರಜಾರಂಜನತತ್ಪರತೆಯನ್ನು ನೋಡಿದರೆ, ಈಗಿನವರು ಬೆರಟು ಕಚ್ಚಬೇಕಾಗುವದು. ದಿಲೀಪನನ್ನು ಕಾಳಿದಾಸನು ಪ್ರಜಾನಾಂ ವಿನಯಾಧಾನಾತ್ ರಕ್ಷಣಾತ್ ಭರಣಾದಪಿ ಸಪಿತಾ ಪಿತರಸ್ತಾಸಾಂ ಕೇವಲಂ ಜನ್ಮಹೇತವ: (ಪ್ರಜೆಗಳಿಗೆ ಅರಸನೇ ಹೊಟ್ಟೆಗೆ ಹಾಕಿ ವಿದ್ಯೆಬುದ್ಧಿಗಳನ್ನು ಕಲಿಸುತ್ತಿದ್ದನು) ಎಂದು. ವರ್ಣಿಸಿದ್ದಾನೆ. ರಾಮಚಂದ್ರನು ಸ್ನೇಹಂ ದಯಾಂ ಚ ಸೌಖ್ಯಂ ಚ ಯದಿ ವಾ ಜಾನಕೀಮಪಿ ಆರಾಧನಾಯ ಲೋಕಾನಾಂ ಮುಂಚತೋ ನಾಸ್ತಿ ಮೇ ವ್ಯಥಾ (ಜನರ ಆರಾಧನೆಗಾಗಿ ನಾನು ನನ್ನ ಪಂಚಪ್ರಾಣಗಳ ತಿದ್ದ ಜಾನಕಿಯನ್ನು ಕೂಡ ತ್ಯಜಿಸುವೆ) ಎಂದು ನುಡಿದು ಅದರಂತೆ ನಡೆದನು. ಇಂಥ ಮಹಾನುಭಾವರ ಹೆಜ್ಜೆಗಳಲ್ಲಿ ಹೆಜ್ಜೆಯನ್ನಿಡುವದು ನಮ್ಮ ಸಂಸ್ಥಾನಿಕರಿಗೆ ಶ್ರೇಯಸ್ಕಾರವಲ್ಲವೆ.

ಪತ್ರವ್ಯವಹಾರ

೧ ಕನ್ನಡಿಗಣ್ಣನಡಿದಾವರೆಗಳಿಗೆ

ನಾನು ಹೋದ ವರ್ಷದಂತೆ ನಿನಗೆ ಕರೆ ಕಳುಹ ಬೇಕೆಂದಿರುವಷ್ಟರಲ್ಲಿ ನೀನಾಗಿಯೇ ನನ್ನಲ್ಲಿಗೆ ಬಂದುದರಿಂದ ನನಗಾದ ಆನಂದವೆಷ್ಟೆಂದು ನನಗೇ ಗೊತ್ತು. ನನ್ನ ಮನ ವಾರ್ತೆಯನ್ನು ನೀನು ಈ ಕಳೆದ ಒಂದೇ ವರ್ಷದ ಅವಧಿಯಲ್ಲಿ ಮಾಡಿದ ಕಾರ್ಯಭಾರಗಳನ್ನೂ ನಾನು ಬಲ್ಲೆನು. ಇದ್ದರೆ ನಿನ್ನಂತಹ ಅಣ್ಣನೇ ಇರಬೇಕೆಂದು ಎಣಿಸುತ್ತಿರುವೆನು. ಹೀಗಿರಲು ನಿನ್ನ ಭೆಟ್ಟಿಯ ಅವಶ್ಯಕತೆಯಿಲ್ಲವೆಂದು ಹೇಳುವವರಿರಬಹುದೆ?— ನಿನ್ನ ಮುಂದಿನ ಧ್ಯೇಯಗಳೆನಿತೋ ಮಹತ್ವದವುಗಳು. ಆದರೆ ಆಧ್ಯೇಯಗಳನ್ನೆಲ್ಲ ಫಲದ್ರೂಪಿಸಿಕೊಡುವುದಕ್ಕೆ ಕನ್ನಡಿಗರು ಸಿದ್ಧರಿರುವರೋ? ಎಂದು ಸಂದೇಹಪಡುವೆನು. ಹಾಗೂ ನೀನು ಹಿಡಿದ ಕೆಲಸವನ್ನು ಕಡೆಗೊಂಡುವವರಾಗಿ ಕೈಲಾದಷ್ಟು ಹೋಗುವವನು. ಕೃಷ್ಣನಿಗೆ ಕುಚೇಲನ ಒಂದು ಹಿಡಿ ಅವಲಕ್ಕಿಯಂತೆ ನಾನು ನಿನಗೆ ಕಳುಹುವ ಒಂದು ರೂಪಾಯಿ ಹದಿಮೂರಾಣೆಗಳ ಮನಿ ಆರ್ಡರು. ಇರಲಿ. ಏನು ಮಾಡುವೋಣ? ಆ ಕೃಷ್ಣನೇ ನಿನ್ನ ಎಲ್ಲ ಧ್ಯೇಯಗಳನ್ನು ಪೂರ್ಣಗೊಳಿಸಲು ಸಹಾಯಕನಾಗಲಿ.

—ಇದೇ ನಿನ್ನ ಕಿರಿತಮ್ಮನಾದವನೊಬ್ಬ

ಸಿರಿಗನ್ನಡಕ್ಕೆ ಗೆಲುವಾಗಲಿ

"ಸಿರಿಗನ್ನಡಂ ಗೆಲ್ಗೆ" ಎಂದು ಬರೆಯೋದುವವರಿಗೆನೂ ಕಡಿಮೆಯಿಲ್ಲ. ತಲೆಯಲ್ಲಿ ತುಂಬಿರುವ ಮಂತ್ರವು ಕೈಗಿಳಿಯುವ ಬಗೆ ಹೇಗೆ!? ಜ್ಞಾನವೃದ್ಧರೂ, ವಯೋವೃದ್ಧರೂ ಆದ ಕನ್ನಡದ ಕುಲಗುರುಗಳೆನಿಸುವರೆಂಬುವನ್ನು ನೋಡಿ ಕನ್ನಡಿಗರು ಕೃತಾರ್ಥರಾಗಲಿ!! ಪ್ರಕೃತ ವಿವರ ವಿಚಕ್ಷಣ. ರಾವ್ ಬಹಾದ್ದೂರ್ ಶ್ರೀ ಎಸ್ ಆರ್. ನರಸಿಂಹಾಚಾರ್ಯರು ನಿಜವಾಗಿಯೂ 'ನರಸಿಂಹ' ಮೂರ್ತಿಯೆಂಬುದು ಎಲ್ಲರಿಗೂ ತಿಳಿದ ಅಂಶವಷ್ಟೆ. ನಮಗೆ ಬಂದೊಂದಿಲೆಯಲ್ಲಿ ಇಂತಿದೆ—

"ನನಗೂ ವೃದ್ಧಾಪ್ಯವಾಗುತ್ತಿ ಇದೆ. ಅರುವತ್ತಾರು ವಯಸ್ಸಾಯಿತು. ಶಾಕೂವಲಪಿಡೆ, ನಡೆವುದು ಕಷ್ಟ ಕಣ್ಣು ಅಬಲವಾಗುತ್ತಬಂದಿದೆ. ದೇಹದಲ್ಲಿ ಅಷ್ಟೇನ ದೌರ್ಬಲ್ಯ ಕಾಣುವದಿಲ್ಲ. ಆದರೂ ಮುಪ್ಪಿನ ಫಲಅನಿವಾರ್ಯ" ಮುಪ್ಪಿನವರು ಹೀಗೆನ್ನುವಾಗ ಹೊಲಸನೆತ್ತರದ, ಬಿಸಿ ನೆತ್ತರದ ಕನ್ನಡಿಗರು ತಮ್ಮ ತಾರುಣ್ಯವನ್ನು ಸಫಲಗೊಳಿಸಲಾರದ ಸುಮನೆಕುಳಿತು ಕೊಳ್ಳುವರೆ! ಆಚಾರ್ಯರಿಗೆ ಪರಮಾತ್ಮನು ಆಯುರಾರೋಗ್ಯಗಳನ್ನು ದಯಪಾಲಿಸಿ ಕನ್ನಡಿಗರ ಕಣ್ದಿರಿಗೆ ಆದರ್ಶವಾಗಲಿ!! ಇಂಥವರ ಸಲುವಾಗಿ "ಮನಸ್ಸಿಗೆ ತೋರಿದಂತೆ ಒರೆಯುತ್ತಿರುವ" ಶ್ರೀ. ಡಾ. ವೆಂಕಟಸುಬ್ಬಯ್ಯನವರ ಲೇಖನ ಮಾಲಿಕೆಗಾಗಿ "ಪ್ರಬುದ್ಧ ಕರ್ನಾಟಕ"ವು ಎಚ್ಚರಾಗಿ ಕಣ್ಣು ತೆರೆಯಲಿ.

— ಚೆನ್ನವಕ್ಕ

ಇದೇ ತಿಂಗಳಲ್ಲಿ ಮುಂಬಯಿ ಇಲಾಖೆಯ ಇನಾಮುದಾರರ ಸಭೆಯು ಸಾತಾರೆಯಲ್ಲಿ, ಸೇರತಕ್ಕದ್ದದೆ. ಇನಾಮುದಾರರ ಹಿತಸಂಬಂಧದ ವಿಚಾರವು ಜರಗುವದು. ಇನಾಮುದಾರರ ಸ್ಥಿತಿಯು ದಿನೆ ದಿನೆ ಸೋಚನೀಯವಾಗಿ ಆಗತೊಡಗಿದೆ. ಹೊಸವಾದರಿಯ ಹಕ್ಕುಗಳು ಜನತೆಗೆ ದೊರೆಯುವ ಕಾಲಕ್ಕೆ ಇನಾಮುದಾರರ ಒಂದೊಂದು ಹಕ್ಕುಗಳು ನಷ್ಟವಾಗ ತೊಡಗಿವೆ ಈ ಸಂಗತಿಗಳ ಕಡೆಗೆ ಇನಾಮುದಾರರು ಎಷ್ಟು ಲಕ್ಷ್ಯಕೊಡತಕ್ಕದ್ದು ಅಷ್ಟು ಕೊಡದೆ ಇದ್ದ ಮೂಲಕ ಈ ಪರಿಸ್ಥಿತಿ ಉತ್ಪನ್ನವಾಗಿದೆ. ಅದಕ್ಕೆ ಸಾತಾರೆಯಲ್ಲಿ ನೆರೆಯುವ ಇನಾಮುದಾರರ ಪರಿಷತ್ತು ಮಹತ್ವದ್ದಾಗಿದೆ. ಕೆಲಮಟ್ಟಿಗೆ ಇನಾಮುದಾರರನ್ನು ಸಾಮಾನ್ಯ ಜನರಲ್ಲಿ ಅಡಕು ಮಾಡಿ ಮತ್ತೊಂದು ಮಟ್ಟಿಗೆ ಸರದಾರರ ಬದಿಗೆ ಸೇರಿಸಿದ್ದರಿಂದ ಇನಾಮುದಾರರ ಹಕ್ಕುಗಳ ಕಾಳಜಿ ಮಾಡುವವರು ಯಾರೂ ಇಲ್ಲದಂತಾಗಿದೆ. ಸರದಾರರು ತಮ್ಮ ಹಕ್ಕುಗಳ ಬಗ್ಗೆ ವಿಚಾರ ಮಾಡುವರೇ ಹೊರ್ತು ತಮಗಿಂತಲೂ ಸ್ವಲ್ಪ ಹೀನರಾಗಿದ್ದ ಇನಾಮುದಾರರ ಕಡೆಗೆ ಅವರು ಲಕ್ಷ್ಯಕೊಡಲಾರರು. ಉಳಿದವರಂತೂ ಸಾಮಾನ್ಯ ಜನರ ಹಕ್ಕುಗಳ ಕಡೆಗೇನೇ ಲಕ್ಷ್ಯವಿದ್ದದರಿಂದ ಇನಾಮುದಾರರ ಹಿತ ಸಂಬಂಧಗಳಿಗೆ ದುರ್ಲಕ್ಷ್ಯ ಮಾಡುವದು ಅಸ್ವಾಭಾವಿಕವಿದ್ದದ್ದು ಸಹಜವೇ. ಹೀಗೆ ಇನಾಮುದಾರರ ಹಿತಗಳ ವಿಚಾರವೇ ಆಗದೆ ಇದ್ದ ಮೂಲಕ ಅವರ ಹಕ್ಕುಗಳು ದಿನೆ ದಿನೆ ಕಡಿಮೆ ಯಾಗಹತ್ತಿವೆ. ಆದ್ದರಿಂದ ನನಗೆ ತೋಚಿದ ಪ್ರಕಾರ ಕೆಲವು ವಿಷಯಗಳ ಬಗ್ಗೆ ಇನಾಮುದಾರರ ಪರಿಷತ್ತಿನಲ್ಲಿ ಚರ್ಚೆಯಾಗುವದು ಯೋಗ್ಯವೆಂದು ಕಂಡು ಬರುತ್ತದೆ. ಇವಷ್ಟೇ ವಿಷಯಗಳೆಂತಲ್ಲ ಕೆಳಗೆ ಬರದ ವಿಷಯಗಳು ನನಗೆ ಮುಖ್ಯ ಎಂದು ಕಂಡು ಬಂದಿವೆ.

(೧) ಇನಾಮುದಾರರು ಎಲ್ಲಕ್ಕಿಂತಲೂ ಲೋಕಲ್ ಫಂಡ ಹೆಚ್ಚು ಕೊಡುತ್ತಾರೆ. ಇದು ಹೆಚ್ಚು ಕಡಿಮೆ ಮಾಡುವ ಪ್ರಸಂಗದಲ್ಲಿ ಅದನ್ನು ಕೇಳದೆ ಮಾಡುವದು. ಅಯೋಗ್ಯವದೆ. ಅದರಂತೆ ಇನಾಮುದಾರರ ವತಿಯಿಂದ ಒಬ್ಬನಾದರೂ ಲೋಕಲ್ ಬೋರ್ಡಿನಲ್ಲಿ ಮೆಂಬರ ಇರುವದಿಲ್ಲ.

(೨) ಲೋಕಲ್ ಫಂಡ ಕಮ್ಮಿ ಮಾಡುವ ಚರ್ಚೆ ನಡೆದವೆ ಇನಾಮುದಾರರ ಮೇಲೆ ಕಸನದಿನಲ್ಲಿದ್ದವರಿಗೆ ವಿರುದ್ಧ

(೬ ನೇ ಪಾನಿನಲ್ಲಿ ನೋಡಿರಿ)

ಓಂ ತತ್ಸತ್

ರಂಗಭೂಮಿಯ ಸ್ಥಿತಿ ಎಂಬ

ಚಕ್ಕವಿನೋದಿ ನಾಟಕವು

(ಲೇಖಕ— ಸಿದ್ಧಲಿಂಗಪ್ಪ, ರುದ್ರಪ್ಪ, ಕಂಬಿ, ಇಳಕಲ್ಲ)

ಅಂಕ ೧

ಪ್ರವೇಶ ೧ ಸ್ಥಲ ನಾಟಕಗೃಹದ ಮುಂಭಾಗ

ಎಲಿ, ಸಿಗಾರೇಟಿ, ಸೋಡಾ, ಅಂಗಡಿಯವರ ಗಲಾಟೆ,

ಗಿರಾಕಿಗಳ ಗದ್ದಲ

ಸೋಡಾ ಅಂಗಡಿಯವ॥ ಕಡಕ ಸೋಡಾ ಕುಡಿಡರಿ ನೋಡಿರಿ
ಸಿಗಾರೇಟ ಅಂಗಡಿಯವ॥ ಸಿಗರೇಟ ಸಿಲ್ವರ ಫೇದರ ನೋಡಿರಿ.
ಎಲಿ ಅಂಗಡಿಯವ॥ ಯಲೀ ಪಟ್ಟೀ ಎಮುಕರ ಸೋಡಿರಿ
ಸೋಡಾ ಅಂಗಡಿಯವ॥ ರೊಕ್ಕ ಬಾಳ ಬ್ಯಾಡ ಬಲು ಜೋಕ್ಕ .
ಸಿಗಾರೇಟ ಅಂಗಡಿಯವ॥ ಜೈನಿ ಯಾಗುವದು ಚವಲಕ್ಕ.
ಎಲ್ಲರೂ ಒರ್‍ರಿ ಬರ್‍ರಿ

(ಗಿರಜಾ, ರಮೇಶರು ಪ್ರವೇಶಿಸುತ್ತಾರೆ.)

ರ— ಒಮ್ಮೆಯಾದರೂ ಸಿಗರೇಟ ಕೊಡಿಸೊ ? ಬಲು ಜೀನನಪ್ಪಾನೀನು

ಗಿ— ಜೀನತನವನ್ನು ಬಿಡಲಿಕ್ಕೆ ಜೇಬಿನಲ್ಲಿ ರೊಕ್ಕವಿದ್ದರಲ್ಲವೇ?

ರ— ಏನಪ್ಪಾ ಇದು. ರೊಕ್ಕವಿಲ್ಲವೆಂದು ಸುಳ್ಳು ಹೇಳಿ ಒಚ್ಚಿಟ್ಟರೆ ನಾಟಕದವರೆಂದು ಹೇಳಿಕೊಳ್ಳಬೇಕಾದರೂ ನಾಚಿಕೆ ಹಣಕಲೆಹಾಕಬೇಕಾದರೆ ಬೇರೆ ಕೆಲಸ ವಿರಲಿಲ್ಲವೆ.? ತೆಗೆ ಬಿಚ್ಚು ಎರಡು ಆಣೆ.

ಗಿ— ನಿಜವಾಗಿ ಇಲ್ಲಪ್ಪ ನನ್ನಲ್ಲಿ. ಈಗ ಎರಡು ತಿಂಗಳಿನ ಸಂಬಳವೇ ಸಿಕ್ಕಿಲ್ಲ. ಮ್ಯಾನೇಜರರನ್ನು ಕೇಳಿದರೆ ಇಂದು ನಾಳೆಂದು ಎಳೆದಾಡಿಸುತ್ತಾರೆ.

ರ— ಏನು? ನಿನ್ನ ಸಂಬಳವು ಸಿಕ್ಕಿಲ್ಲವೇ? ನಿನ್ನಂಥ ಮುಖ್ಯಪಾತ್ರ ವಹಿಸುವವನಿಗೆ ಸಂಬಳಕೊಡದೇ ನಿನ್ನನ್ನು ಇಳಿದ. ಕೊಂಡು ಮ್ಯಾನೇಜರನು ಕೋಡಗನಾಗುವನೇ?

ಗಿ— ಕೋಡಗನೇಕಾಗುವನು ಕುಬೇರನಾಗುವನು. ಅವಳಿಲ್ಲವೇ ಆ ವಯ್ಯಾರಿ ಅವಳ ಕಾಲದಲ್ಲಿ ಇಷ್ಟೆಲ್ಲರಿಗೂ ತೊಂದರೆ

ರ— ನಾನೊಂದು ಮಾತು ಕೇಳಬೇಕೆಂದಿರುವೆನು ಗಿರಜಾ ಕೇಳಲೋ?

ಗಿ— ಅದೇನು ಅಂಥ ಮಹತ್ವ ರಮೇಶ,

ರ— ಅಂಥಮಹತ್ವವೇ ಇದೆ. ಮ್ಯಾನೇಜರರು ಆ ಚಂದ್ರಿಕೆಯೊಡನೆ ಜನ್ಮಾಟವಾಡುತ್ತಿರುವರಂತೆ.

ಗಿ— ಮೆಲ್ಲಗೆ ಮಾತಾಡು ಯಾತ್ತಾರಾದರೂ ಕೇಳ್ಯಾರು.

ರ— ಮೆಲ್ಲಗೇಕೆ? ಮುಂದೇನು ಗೊತ್ತಿಲ್ಲವೇ? ನಾಟಕದವರೆಂದರೆ ನಾಡಿನಲ್ಲಿಲ್ಲದ ಘಟಿಂಗರು.

ಗಿ— ಹಾಗಾದರೆ ನೀನು

ರ— ನನನ್ನು ಹಿಡಿದೇ ಎಲ್ಲರ ಸುದ್ದಿ.

(ಗಂಟೆಯ ಶಬ್ದ ವಾಗುವದು)

ಗಿ— ಇರಲಿ ಗಂಟೆ ಯಾಯಿತು. ಒಳಕ್ಕೆ ನಡೆ ಇನ್ನು ಹೋಗುವಾ

ರ— ಈ ಆಟಕಿನಲ್ಲಿ ನಮ್ಮದೇನಿದೆ? ಮಹಾಪತಿವ್ರತೆಯಾದ ಚಂದ್ರಿಕೆಯು ಅಯ್ಯೋ ಕಿಲ್ಲಿಪ್ಪಾ. ಸಾಧ್ವಿಯಾದ ಸೀತೆಯು ರಾವಣನಿಂದೊಯಿಗೆ ಅಶೋಕವನಕೆ ತೆರಳಿ. ಆಮೇಲಲ್ಲವೇ? ಕೊಡಗಗಳಾದ ನಾವು ಬಿಡಿಸಲಿಕ್ಕೆ ಹೋಗುವದು. ಅದೋ ಅಲ್ಲಿ ನೋಡು ಯಜಮಾನಿನದೊಂದು ಅಸಾಮಿಯು.

ಗಿ— ಇವರು ಈ ಊರಲ್ಲಿ ವಿಲಾಸಿಗಳೆಂದು ಹೆಸರಾದ ವಸಂತರಾಯರು ಇವರು ಈ ದಿನ ಕಂಪನಿಗೆ ಬಹುಮಾನ ಕೊಡತಕ್ಕವರಿದ್ದಾರೆ.

ರ— ಕಂಪನಿಗಿವನ್ನಾ, ಚಂದ್ರಿಕೆಯ ಚೆಲ್ವಿಕೆಗೆ, ಯಮುಕಿನ ಯಡೆಯಾಟಕ್ಕೆ. ಅದೋ ಮ್ಯಾನೇಜರನೇ ಸುಸ್ವಾಗತಕ್ಕಾಗಿ ಸಾಗಿ ಬಂದನು. ನಾವು ಇಲ್ಲಿ ನಿಲ್ಲುವದು ಬೇಡಾ. ಆದರೆ ಗಿರಜಾ ಕದೆಗೂ ಬಾಯಿ ಬೆಚ್ಚಗೆ ಮಾಡಲಿಲ್ಲವಲ್ಲಾ.

ಗಿ— ಇರಲಿ ನಡೆ ಆಮೇಲೆ ನೋಡುವಾ.

(ಹೋಗುವರು ವಸಂತ, ಬಾಳೂ ಒರುವರು.)

ವ— ಬಾಳು, ಈ ಬಹುಮಾನದಿಂದ ಚಂದ್ರಿಕೆಯು ಜನ್ಮಾಗಿ ಮನ ಸೋಲುವುದಲ್ಲವೇ?

ಬಾ— ಚಿನ್ನದಲ್ಲಿ ಜನ್ನಿಗಳನ್ನು ಮೋಹ ಮಾಡುವ ಮನ್ನೆರಿಯುವ ಇದೇ ಪಣ್ಣಿನಲ್ಲಿದೆಯೆಂದು ಭಾವಿಸುವಿರಾ?

ವ— ಹಾಗಲ್ಲೋ ಚಂದ್ರಿಕೆಯನ್ನು ಚಿನ್ನದಿಂದ ಇಂದಿನವರೆಗೇನು ಸ್ವಲ್ಪ ಚಂದಗೊಳಿಸಿದೆನೋ? ಕಂಪನಿಯು ಒಂದಾಗಿನಿಂದ ಅವಳ ಸಂತೋಷಕ್ಕೆ ಸಾಹಸ ಮಾಡಿದ್ದೆಷ್ಟು? ಆದರೆ ಮ್ಯಾನೇಜರನು ನನ್ನ ಅಂದದ ಮುಂದೆ ರಕ್ಕೊಂದುದಿನವಾದರೂ ಕಳಿಸಲು ಅನವರ್ನಿಸುವನೋ ಅಥವಾ ನನ್ನಲ್ಲಿ ಅವಳ ಅನುರಾಗವೇ ಇಲ್ಲವೋ ತಿಳಿಯದಾಗಿದೆ.

[illegible]ಗೆ ಇಷ್ಟು ತಿಳಿಯದೇ? ಗಂಡಸ್ಸಳ್ಳ ಗರತಿಯರಿಗೆ ಗಂಡನಲ್ಲಿ ಅನುರಾಗದ ಅವಶ್ಯಕತೆ ವಿಲಾಸಿಗಳಾದ ತರುಣರಿಗೆ ವೇಶ್ಯೆಯರ ವನಪಿನ ಅವಶ್ಯಕತೆ. ಆದರೆ ಇಂಥ ವಿಶ್ವತೋಷಿತೆಯರಿಗೆ (ಜಗತ್ತನ್ನು ಸಂತೋಷ ಪಡಿಸುವವರಿಗೆ) ಸಂಪತ್ತಿನ ಅವಶ್ಯಕತೆ

ವ— ಅದಿರಲಿ, ಮ್ಯಾನೇಜರನೇ ಅವಳಲ್ಲಿ ಅನುರಕ್ತನಾಗಿರುವನೆಂದು ಕೇಳಿಕೆ. ಅಂದಮೇಲೆ ಅನ್ಯರಿಗೆ ಅಸ್ಪದವೆಲ್ಲಿ?

ಬಾ— ಇದಾವ ದೊಡ್ಡಮಾತೆಂದು ಗುಡ್ಡದಷ್ಟು ಮಾಡಿದಿರಿ ನಾಟಕಗಳಲ್ಲಿ ರಮಣಿಯರಿದ್ದರೆ ರಂಗಭೂಮಿಗೆ ರಂಗು ಬರುತ್ತದೆ. ಮ್ಯಾನೇಜರರಾಗುವವರಿಗೆ ಮಗ್ಗಲಲ್ಲಿ ಮುದ್ದು ಮಣಿಗಳಿದ್ದರ ಮಹತ್ವ ಬರುತ್ತದೆ. ಇದು ಈ ಕಾಲವಲ್ಲಿ ನಾಟಕ ಶಾಸ್ತ್ರದ ಸಿದ್ಧಾಂತವು.

ವ— ನಿನ್ನ ಸಿದ್ಧಾಂತವನ್ನು ಸ್ವಲ್ಪ ಹೊತ್ತು ಸುತ್ತಿಡು ಮೊದಲು ಅವಳನ್ನು ವಶಪಡಿಸಿಕೊಳ್ಳುವ ಹಂಚಿಕೆ ಹೇಳು. ನಾನಂತೂ ಅವಳ ಕಾಲದಲ್ಲಿ ಜೀವಕೊಡಲು ಸಿದ್ಧನಿರುವೆನು. ಅಹಹಾ! ಏನವಳ ಅಭಿನಯ, ಏನು ಸಂಗೀತ, ಏನು ಸೌಂದರ್ಯ, ಅವಳನ್ನು ನೋಡುವ ಕಾಲಕ್ಕೆ ನನಗೆ ಜಲಿಸಿದ ಚಿತ್ರದಂತೆ, ಸಮಾಧಿಸ್ಥನಾದ ಸಾಧುವಿನಂತೆ ಸ್ಥಿತಿಯಾಗುತ್ತದೆ.

ಬಾ— ಅದೋ ಮ್ಯಾನೆಜರನೇ ಬಂದನು. ಅವಳನ್ನು ವಶಮಾಡಿಕೊಳ್ಳುವ ಚಿಂತೆ ಬಿಡಿರಿ. ನನಗೊಂದು ಹಂಚಿಕೆ ಸಿಕ್ಕಿದೆ.

(ಮ್ಯಾನೇಜರನು ಬರುವನು.)

ಮ್ಯಾ— ಏನು? ವಸಂತರಾಯರೇ, ನೀವು ಅಪರಿಚಿತರಂತೆ ಆಚೆಯಲ್ಲಿ ನಿಂತಿರುವಿ. ಅಲ್ಲಿ ಬನ್ನಿರಿ ಸ್ವಾಮಿ ನಿಮಗಾಗಿ ಆಸನಗಳು ಕಾದಿಡಲ್ಪಟ್ಟವೆ.

ವ— ಸಂತೋಷ ಮ್ಯಾನೇಜರರೇ ಇಂದೇ ನಾನು ನಿಮ್ಮ ಕಂಪನಿಗೆ ಬಹುಮಾನ ಸೂಚಕವಾದ ಚಿನ್ನದ ಪದಕವನ್ನು ಕೊಡಬೇಕೆಂದಿದ್ದೇನೆ.

ಅದೆಲ್ಲ ತಮ್ಮ ರಸಿಕತೆಯನ್ನೂ, ನಾಟ್ಯಕಲಾಭಿಮಾನವನ್ನೂ, ಉದಾರತೆಯನ್ನೂ, ವ್ಯಕ್ತಪಡಿಸುತ್ತದೆ. ಆ ಪದಕದಮೇಲೆ " ಕರ್ನಾಟಕ ಕೋಕಿಲೆ ಚಂದ್ರಿಕಾ " ಎಂದು ಹೆಸರು ಕೂಡಾ ಕೊರೆಯಿಸಿದ್ದೇನೆ. ಮ್ಯಾನೇಜರ (ಸ್ವಗತ) ಕೋಕಿಲೆಯ ಮೇಲೆ ಕಾಕ ಪುರುಷನ ದೃಷ್ಟಿ ಬಿದ್ದಂತೆ ತೋರುತ್ತದೆ. (ಪ್ರಕಾಶ) ಹೌದು ಅವಳು ಹಾಗೆ ಗಾಯನ ಕಲಾಭಿಜ್ಞಳೇ ಇದ್ದಾಳೆ. ಸಂದೇಹವಿಲ್ಲಾ ಮ್ಯಾನೇಜರರೇ ಅವಳಿಗೆ ಪದಕವೊಂದೇ ಅಲ್ಲಾ. ಕಂಪನಿಗೆ ಒಂದು ನೂರು ರೂಪಾಯಿ ಜೇರಿ.

ತಮ್ಮ ಕೃತಜ್ಞತೆಯನ್ನು ಕಂಪನಿಯು ಎಂದಿಗೂ ಮರೆಯದು. ರಾಮಾ ಏ ರಾಮಾ,(ರಾಮನು ಬರುವನು) ರಾಯರು ಬಂದಿದ್ದಾರೆ. ಅವರಿಗೆ ಚಹಾ ಫಲಾಹಾರದ ವ್ಯವಸ್ಥೆ ಮಾಡೆಂದು ಹೇಳು ನಡೆ. ವಸಂತರಾವ, ಏನೋ ಜಡವರ ಕಂಪನಿ ತಮ್ಮಂಥವರ ಉದಾರಾಶ್ರಯವೇ ಆಶ್ರಯ ಅದರಲ್ಲಿಯೂ ತಲೆಯೊಲ್ಲೊಂದು ಹುಚ್ಚು, ನಾಟ್ಯದ ಸೇವಾ. ಸಮಾಜ ಸೇವಾ.

ಸಮಾಜಸೇವೆಯೋ ಏದರಲ್ಲಿ ಮ್ಯಾನೇಜರರೇ!(ಸ್ವ) ಹೊಟೆಯ ಸೇವೆಯಲ್ಲವೇನು

ಎಂಥ ದಡ್ಡನಪ್ಪಾ ನೀನು. ನಾಟಕಗಳೆಂದರೆ ಚರವಿದ್ಯಾಲಯ. ನೀತಿಬೋಧಿಸುವ ನಿಲಯ ನಮ್ಮ ಕಂಪನಿಯಲ್ಲಿ ನೀತಿ ಬೋಧೆಮಾಡದಂಥ ಕಥೆಗಳಾವವು ಇರುವವು ಹೇಳಿರಿ. " ರಾಮ ವನವಾಸ " ಅದರಲ್ಲಿ ಸೀತೆಯ ಪಾತಿವ್ರತ್ಯ ರಾಮನ ಪಿತೃಭಕ್ತಿ. ನೀವು ನಾಟಕ ನೋಡಿದರೆ ತಿಳಿದೇ ಹೋಗುತ್ತದಲ್ಲಾ. ಇಂದು ಚಂದ್ರಿಕೆಯು ಸ್ವಂತಃ ಸೀತೆಯ ಸೋಗನ್ನು ಹಾಕುವಳು. ವಸಂತರಾವ, ಚಂದ್ರಿಕೆಯು ವೇಶ್ಯಾಕನ್ಯೆ ಯಾಗಿದ್ದರೂ ಸೀತೆಯ ಪಾರ್ಟನ್ನು ಇಷ್ಟು ಅತ್ಯುತ್ತಮವಾಗಿ ಅಭಿನಯಿಸುವಳು. ಭಲೆ, ಗರತಿಯರು ಕೂಡಾ ಬೊಟ್ಟು ಕಚ್ಚಬೇಕು. ಇದಲ್ಲದೇ ರಾವಣನ ಕೂಡ ನಡೆದ ಸಂವಾದದಲ್ಲಿ ಚಂದ್ರಿಕೆಯು ನಿಶ್ಚಿತ ಸ್ವರದಿಂದ ಹೇಳುವ ಪಾತಿವ್ರತ್ಯ ಪ್ರಭಾವದ ಮಾತುಗಳನ್ನು ಕೇಳಿ ವ್ಯಭಿಚಾರಿಗಳಾದ ಸ್ತ್ರೀಯರು ನಾಚಿಕೆಯಿಂದ ತಲೆ ತಗ್ಗಿಸಬೇಕು.

(ಸ್ವಗತ)ಕಾಗಿಯು ರಾಗವನ್ನು ಹೇಳಿದಂತೆ ವೇಶ್ಯೆಯರು ಪಾತಿವ್ರತ್ಯ ಪ್ರಭಾವವನ್ನು ಹೇಳಹತ್ತಿದ ಮೇಲೆ ದೇಶದಲ್ಲಿ ವ್ಯಭಿಚಾರಿಗಳಾದ ಸ್ತ್ರೀಯರ ಸುಳುವೇ ಸಿಕ್ಕುವದಿಲ್ಲ.

ಹೌದು. ಅವಳ ಅಭಿನಯವನ್ನೆ ನೈಪುಣ್ಯವೇ ಅದು ಪರಿಣಾಮಕಾರಕ

ಒಳಗೆ ನಡೆಯಿರಿ ಫಲಾಹಾರದ... ಮೇಲೆ ಮಾತಾಡೋಣವಂತೆ

(ಹೋಗುವರು.)

ಪ್ರವೇಶ ೩

ನಾಟಕಗೃಹದ ಒಳಗಿನ ಕೋಣೆ

(ವೇಷ ಚಂದ್ರಿಕೆಯರು ಬರುವರು)

ಚಂದ್ರಿಕೆ, ಇಂದು ನಿನ್ನ ಸುತ್ತೊಟ್ಟ ಚಂದ್ರಾಮನು ತಿರುಗುತ್ತಲಿದ್ದಾನೆಯಲ್ಲಾ?

ಇಂಥ ನೂರಾರು ಮಂದಿ ಚಂದ್ರಾಮರು ತಿರಗಿದರೂ ಚಂದ್ರಿಕೆಯಮನವು ಚಲಿಸುವದಿಲ್ಲ ತಿಳಿಯಿತೇ?

ರ- ಪಂಚವಟಿಯಿಂದ ಪಾರುಮಾಡಿ ಸುಂದರಳಾದ ಸೀತೆಯನ್ನು ಅಶೋಕ ವನಕ್ಕೆ ಒಯ್ದುಕೊಂಡು ಹೋಗಬೇಕೆಂದು ದಶಾನನನು ಹೊಂಚು ಹಾಕುತ್ತಲಿದ್ದಾನೆ.

ಚ- ಆ ಮೇಲೆ ನಿಮ್ಮಂಥ ಕಪಿಸೈನ್ಯವೇನು ಸುಮ್ಮನಿರುವದೇ! ಆಕಾಶ ಪಾತಾಳಗಳೊಂದು ಮಾಡಿ ಹುಡುಕಾಡದೇ ಬಿಡುವದೇ?

ರ- ಅಯ್ಯೋ, ಗುಳ್ಳಾಗಂಟೀ, ಮಾತಿನಲ್ಲಿಯೇ ನಮ್ಮನ್ನು ಮಂಗಗಳನ್ನಾಗಿಮಾಡಿದಿಯಲ್ಲಾ.

ಚ- ನಾನು ಸೀತೆಯಾದಮೇಲೆ ನೀವು ನನ್ನ ಮಂಗಲವನ್ನು ಬಯಸುವ ಮಂಗಗಳೇ ಸರಿ. ಇದೆಲ್ಲನು ಕೆಟ್ಟ ನುಡಿ,

ರ- ಮಂ[illegible] ವ.ಹಾಣಿಯೇ, ಮಂಗಗಳ ಹಿರಿಯನಾದ ಹನುಮನು ಸಿ[illegible] ಇಂದು ರಮಣನಾದ ರಾಮನಲ್ಲಿಗೆ ಒಯ್ಯುವನು ತಡೆ.

(ಅಲಂಗಿಸುವನು, ಮ್ಯಾನೇಜರನು ಬರುವನು)

ಮ್ಯಾ- ಮೂರ್ಖರೇ ಇದನ್ನೇನು ಮಂಗಚೇಷ್ಟೆ ನಡೆಯಿಸಿರುವಿರಿ ನಿರ್ಲಜ್ಜರೇ, ನಾಟಕ ನಡೆದದೆಯೆಂದರೇನು? ದೊಡ್ಡಮನುಷ್ಯನೋರ್ವನು ಒಳಕ್ಕೆ ಬರುತ್ತಿರುವನೆಂದರೇನು? ನಿಮಗೆ ಎಚ್ಚರವೇ ಇಲ್ಲಾ. ರಮೇಶ ನೀನು ಬರಬರುತ್ತ ಮರ್ಯಾದೆಯನ್ನು ಮೀರಿ ಮಾಡುತ್ತಲಿರುವ ಕೃತ್ಯದಿಂದ ನಮ್ಮ ಕಂಪನಿಯು ಲೌಕಿಕವೂ, ನಾರ್ಟಿ ಜನರ ವರ್ತನವೂ, ಕೆಡುತ್ತ ನಡೆದಿದೆ. ಇದೊಂದು ಸಾರೆ ಕ್ಷಮೆಮಾಡಿದ್ದೇನೆ. ಮುಂದೆ ಹೀಗೆ ಮಾಡಿದ್ದಾದರೆ ಕಂಪನಿಯು ಹೊಸ್ತಿಲ ಹೊರಗೆ ಕಾಲಿಡಬೇಕಾದೀತು ಜೋಕೆ.

ರ- (ಸ್ವಗತ) ಹೊಸ್ತಿಲ ಹೊರಗೆ ಕಾಲು ಯಾರವು ನನ್ನವೇ? ಆಗಲಿ (ಹೋಗುವನು)

ಮ್ಯಾ- ಚಂದ್ರಿಕೆ, ಈ ಊರ ವಿಲಾಸಿ ವಸಂತರಾಯರು ಸುವರ್ಣ ಪದಕವನ್ನು ನಿನಗೆ ಅರ್ಪಿಸತಕ್ಕವರಿದ್ದಾರೆ. ಇದೋ ನೋಡು ಅವರೇ ಬಂದರು.

(ವಸಂತ ಬಾಳು ಬರುವರು.)

ಬನ್ನಿರಿ, ಬನ್ನಿರಿ, ವಸಂತರಾಯರೇ ಕುಳಿತು ಕೊಳ್ಳಿರಿ. ಚಂದ್ರಿಕೆ, ಇವರು ಈ ಊರ ಶ್ರೀಮಂತ ಶ್ರೇಷ್ಠರು, ಉದಾರರು, ರಸಿಕರು. ಇವರೇ ಇಂದು ಪದಕಕೊಡತಕ್ಕವರು.

ಚ- ನಾಟಕಕ್ಕೆ ಇವರು ಬಂದಾಗ್ಯೆ ನಾನು ಎಷ್ಟೋಸಾರೆ ನೋಡಿದ್ದೇನೆ. ಕೀರ್ತಿಯನ್ನು ಕರ್ಣೋಪಕರ್ಣವಾಗಿ ಕೇಳಿಯೂ ಇದ್ದೇನೆ.

ಮ್ಯಾ- ಚಂದ್ರಿಕೆ, ರಾಯರಿಗಾಗಿ ಎಲಿ ಅಡಿಕೆಯತಾಟನ್ನಾದರೂ ತಕ್ಕೊಂಡುಬಾ.

(ಹೋಗುವಳು)

ಬಾ- ಮ್ಯಾನೇಜರರೆ, ನಿಮ್ಮ ಕೋಕಿಲೆಯ ಕಂಠಕ್ಕೆ ವಸಂತರಾಯರು ಮೋಹಿತರಾಗಿದ್ದಾರೆ. ನಾಳೆ ಕಿಂಚಿತ್ ಅವರು ತಮ್ಮ ಮನೆಯಲ್ಲಿ ಗಾಯನ ಸಮಾರಂಭ ಮಾಡಿಸಬೇಕೆಂಬ ಅಪೇಕ್ಷೆ ತಳೆದಿದ್ದಾರೆ.

ಮ್ಯಾ- ಏನು ಮಾಡುವದವೆ. ಅವಳಿಗೆ ಅವಧಿಯೇ ಸಿಕ್ಕುವದಿಲ್ಲ ಅದರಲ್ಲಿ ನಾಟಕದ ತಾಲೀಮು ಪ್ರತಿದಿನ ಮಾಡಬೇಕಾದುದು ಅವಶ್ಯಕ ಆಗಲಿ ದೊಡ್ಡವರು ಕೇಳುತ್ತಾರೆಂದ ಮೇಲೆ ಒಪ್ಪಲೇಬೇಕಾಗದು.

(ಚಂದ್ರಿಕೆಯು ತಟ್ಟು ತರುವಳು ಗಂಟೆಯೂ ಆಗುವದು)

ಚ- ಗಂಟೆಯಾಯಿತು. ನಾನು ಕೂಡಲೆ ಹೋಗುವದು ಅವಶ್ಯ.

ವ್ಯಾ- ಸಾವುಕಾರರಿಗೆ ಕೈಮುಟ್ಟಿ ಎರಡು ಎಲೆ ಕೊಟ್ಟು ಹೋಗು.

ಚ- (ಎಲೆತಕ್ಕೊಂಡು) ನೀವು ಶ್ರೀಮಂತರು ಚಿನ್ನವನ್ನು ಕೊಟ್ಟರೆ ನಾವು ಬಡವರು ಚಿನ್ನದಂಥ ಎರಡು ಎಲೆ ಕೊಡುವವರು (ಕೊಟ್ಟು ಮುರಕಮಾಡಿ ಹೋಗುವಳು)

ವ್ಯಾ- ತಾವು ಪಿಟ್ಟಿನಲ್ಲಿ ನಡೆಯಿರಿ. ನಾವು ಕೆಲವು ಕಾಲ ಸ್ಟೇಜಿನಲ್ಲಿ ನಿಲ್ಲಬೇಕಾಗಿದೆ.

ವ- (ಮುಂದೆ ಬಂದು) ಬಾಳೂ, ಭಾಗ್ಯವು ಈ ದಿನ ತೆರೆಯಿತು ನೋಡು

ಬಾ- ದುಡ್ಡಿನ ಚೀಲ ತೆರೆದಿಟ್ಟರೆ ಎಲ್ಲ ಭೋಗ ಭಾಗ್ಯಗಳು ತಾನಾಗಿಯೇ ತಲೆಬಾಗಿ ಬರುವವು ನೋಡಿರಿ

(ಮುಂದೆ ಸಾಗುವದು)

(೩ ನೇ ಪಾನಿನಿಂದ ಒಂದದ್ದು)

ಆವಂತೆ ನನಗೆ ತೋರುತ್ತದೆ ಇಂಥ ಸಮಯದಲ್ಲಿ ಯಾವ ಲೋಕಲ್ ಬೋರ್ಡಿನಲ್ಲಿ ಪ್ರತಿನಿಧಿಯಲ್ಲಿ ಅಂಥ ಸಭೆಯು ಇನಾಮುದಾರರ ಮೇಲೆ ಹೆಚ್ಚು ವಜ್ಜೆ ಇಕ್ಕುವದು ನ್ಯಾಯವಾಗುವದೇ

(೩) ಮೇಲಾಗಿ ಹೊಸ ಹೊಸ ಕಾಯದೆಗಳು ಇನಾಮುದಾರರ ಪ್ರಾಬಲ್ಯವನ್ನು ಜನರಲ್ಲಿ ಕಡಿಮೆ ಮಾಡತೊಡಗಿವೆ. ಗ್ರಾಮಪಂಚಾಯತಿ ಬಿಲ್ಲಿನಲ್ಲಿ ಊರ ಗೌಡನೇ ಸರಪಂಚ ನಾಗತಕ್ಕದ್ದೆಂದು ಹೇಳಿದೆ ಇನಾಮುಗ್ರಾಮಗಳಲ್ಲಿ ಗೌಡನು ಇನಾಮುದಾರರ ನೌಕರನು. ನೌಕರನು ಸರಪಂಚನಾದರೆ ಇನಾಮುದಾರನು ಹಂಚನಿರುವದು ಎಂಥ ವಿಚಿತ್ರವಾದದ್ದು ನೋಡಿರಿ ಇನಾಮು ಗ್ರಾಮದಲ್ಲಿ ಇನಾಮುದಾರನೇ ಸರಪಂಚನಾಗತಕ್ಕದ್ದೆಂದು ಸದರೀ ಗ್ರಾಮ ಪಂಚಾಯತಿ ಬಿಲ್ಲಿನಲ್ಲಿ ಈ ಪ್ರಕಾರ [illegible] ತಕ್ಕದ್ದು

(೪) ಹಕ್ಕುರಜಿಸ್ಟರ ಇನಾಮುದಾರರ ಹಕ್ಕುಗಳನ್ನಾರ ಹೊಂದುತ್ತಲಿವೆ ಗ್ರಾಮಸ್ಥರಿಗೆ ಹಕ್ಕುರಜಿಸ್ಟರದ ಉತಾರೆ ಬೇಕಾದರೆ ನಮಗೆ ಅದರ ಫೀಲಿ ಕೊಡಬೇಕಾಗುವದು ಮತ್ತು ಜಮಾವ ಇನಾಮುಸಂಬಂಧಿ ನೋಂದಣಿ ಮಾಡುವ ಅಧಿಕಾರ ಇನಾಮುದಾರರದ್ದು ಆದರೆ ಈಗ ಹಕ್ಕು ರಜಿಸ್ಟರದ ಅನುಸರಣದ ನಷ್ಟವಾಗಿದೆ.

(೫) ಹಕ್ಕು ರಜಿಸ್ಟರ ಇನಾಮು ಗ್ರಾಮಗಳಿಗೆ ಲಾಗುಮಾಡಲಿಕ್ಕಾಗದು ಇನಾಮುಗ್ರಾಮದ ಸರ್ವೆ ಮಾಡಲಿಕ್ಕೆ ಸರಕಾರಕ್ಕೆ ಅಧಿಕಾರವಿಲ್ಲ ಹೀಗಿದ್ದು ಹಕ್ಕುರಜಿಸ್ಟರ ಸಲುವಾಗಿ ಸರ್ವೆಮಾಡುತ್ತೇನೆಂದು ಹೇಳುವದು ಬೇಕಾಯದೇಶೀರ ಎಂದು ನನ್ನ ಮತವಿದೆ.

(೬) ಇಡೀ ಗ್ರಾಮದಲ್ಲಿ ಒಬ್ಬನೇ ಖಾತೇದಾರನಿದ್ದರೆ ಆವನಿಗನೇ ವರಿಷ್ಠ ಮಂಡಲದ ಸಲುವಾಗಿ ಮತದಾನದ ಅಧಿಕಾರವಿರುವದಾಗಿ ಕಂಡು ಬರುತ್ತದೆ. ಆದರೆ ಯಾವ ಇನಾಮು ಗ್ರಾಮದಲ್ಲಿ ಒಬ್ಬರಕಿಂತಲೂ ಹೆಚ್ಚು ಖಾತೆದಾರರಿರುವರೋ ಅಂಥ ಇನಾಮುಗ್ರಾಮಗಳಲ್ಲಿ ಎಲ್ಲ ಖಾತೆದಾರರಿಂದ ಆರಿಸಲ್ಪಟ್ಟಂಥಾ ಒಬ್ಬನಿಗೆ ಮತದಾನದ ಹಕ್ಕು ಇರಬೇಕೆಂತ ವ್ಯವಸ್ಥೆ ಆಗತಕ್ಕದ್ದು ಅವಶ್ಯಕವಿದೆ.

(೭) ಸರದಾರರ ಸಂಖ್ಯೆಯನ್ನು ಸ್ವಲ್ಪ ಹೆಚ್ಚಿಸಬೇಕು ನಮ್ಮ ಇಡೀ ಜಿಲ್ಲೆಯಲ್ಲಿ ಒಬ್ಬನೇ ಸರದಾರನಿರುವನು. ಮೊದಲು ಬಹು ಜನರಿದ್ದರು ಅವರು ಯಾಕೆ ದಿನೆ ದಿನೆ ಕಡಿಮೆ ಯಾಗುತ್ತ ಹೋದರು ಅದು ಏಕೆ?

(೮) ಉತ್ತರ, ದಕ್ಷಿಣ, ಮಧ್ಯ ಭಾಗಗಳಿಗೆ ಇನಾಮುದಾರರ ತರ್ಫೆಯಿಂದ ಬೇರೆ ಬೇರೆ ಪ್ರತಿನಿಧಿಯು ಇರತಕ್ಕದ್ದು ಆವಶ್ಯವಿದೆ.

(೯) ಗ್ರಾಮಸ್ಥರ ನೇಮಣೂಕ ಮಾಡುವದು ಇನಾಮುದಾರರ ಅಧಿಕಾರವಿರುವದು. ಸರಕಾರದವರು ತಮಗೆ ನೇಮಣೂಕ ಮಾಡುವದು ಯೋಗ್ಯವಲ್ಲೆಂದು ತಿಳಿದರೆ ಮಂಡಲದಲ್ಲಿ ಒಪ್ಪಿದ ಬಳಿಕ ನಾವು ಇಂಥವನ್ನು ಗ್ರಾಮಸ್ಥರನ್ನಾಗಿ ನೇಮಿಸಿದ್ದೇವೆ. ಅದರ ವಿರುದ್ಧ ತಕರಾರ ನಿಮ್ಮ ದೇನಾದರೂ ಇದೆಯೋ ಎಂದು ಹುಕುಂ ಮಾಡುವ ಅಧಿಕಾರವು ಪ್ರಾಂತ ಅಧಿಕಾರಿಗಳಿಗೆ ಹೇಗೆ ಬರುತ್ತದೆ.

ಈ ಪ್ರಕಾರ ಠರಾವುಗಳನ್ನು ತರಬೇಕೆಂದು ನನ್ನ ಇಚ್ಛೆ ಮತ್ತು ತಮ್ಮ ತಮ್ಮ ಹಕ್ಕುಗಳನ್ನು ಕಾಯ್ದುಕೊಳ್ಳಲಿಕ್ಕೆ ಸರ್ವ ಇನಾಮುದಾರರಿಗೆ ವಿನಂತಿ ಮಾಡಿಕೊಳ್ಳುತ್ತೇನೆ

ತಮ್ಮ

ರಘೋತ್ತಮಾಚಾರ್ಯ ರಾಮಚಂದ್ರಾಚಾರ್ಯ

ಜಾಹಗೀರದಾರ ಧಾರವಾಡ

ವರ್ತಮಾನಸಾರ.

ಇಹವೃತ್ತ

ಕನ್ನಡಿಗನು ರೈಲ್ವೆ ಕಂಪನಿಗೆ ಮಾಡಿದ ಅರ್ಜಿಗೆ ಉತ್ತರವು ಬಂದಿದೆ ಬಾಗಲಕೋಟೆಯ ಸ್ಟೇಶನದಲ್ಲಿ ಗಾಡಿಗಳು ಬರುವದಕ್ಕಿಂತ ಮುಂಚೆ ೧೫ ನಿಮಿಷಗಳ ಮುಂಚೆ ಟಿಕೀಟು ಕೊಡುವದು ಪ್ರಾರಂಭವಾಗುವದೆಂದೂ, ಗಾಡಿಯು ಬಂದ ನಂತರ ಸಹ, ಅದು ಬಿಡುವದಕ್ಕೆ ೫ ಮಿನಿಟ ಇರುವತನಕ ಟಿಕೀಟು ಕೊಡುವದರಿಂದ ಬರುವದೆಂತಲೂ, ಬರೆದು ಬಂದಿದೆ ಇದು ಕಂಪನಿಯವರ ಹೊಸ ಏರ್ಪಾಡು. ಇದರಂತೆಯೇ ಕನ್ನಡಿಗನ ಎಲ್ಲ ಧ್ಯೇಯಗಳು ಸಾಧವಾಗಲೆಂದು ಬಯಸುತ್ತೇವೆ

ಮುಂಬೈ ಗಾವಟಿ

ಸಿಟಿ ಹಾಲಿಯ ಲೋಕಲ್ ಬೋರ್ಡ ಧರ್ಮ ಶಾಲೆಯಲ್ಲಿ ೧೦-೧೫ ದಿನಗಳ ಹಿಂದೆ ಕ್ಷಯ ರೋಗದಿಂದ ಒಬ್ಬ ರೋಗಿಯು ಮರಣವಾಗಿದ್ದರೂ, ಲೋಕಲ್ ಬೋರ್ಡಿನವರು ರೋಗಿಯು ವಾಸಿಸುತ್ತಿದ್ದ ಕೋಣೆಯನ್ನು, ಸುಣ್ಣ ಹಚ್ಚಿಸಿಲ್ಲ; ಸಾರಿಸಿಲ್ಲ; ಡಿಸ್ ಇನ್‌ಫೆಕ್ಟ ಮಾಡಿಸಿಲ್ಲ; ಸಾರ್ವಜನಿಕ ಆರೋಗ್ಯತೆಯ ಬಗ್ಗೆ ದಕ್ಷರಾಗಿರುವದು ಹೀಗೆಯೋ? ತರುಣರೂ ಉತ್ಸಾಹಿಗಳೂ ಆದ ಜಿಲ್ಹಾ ಲೋಕಲ್‌ಬೋರ್ಡಿನ ಅಧ್ಯಕ್ಷರಾದವರೂ ಈ ಬಗ್ಗೆ ಚೌಕಶೀ ಮಾಡುವರೋ? ಅಥವಾ ತಾಲೂಕ ಬೋರ್ಡಿನ ಅಧ್ಯಕ್ಷರೇ ಎಚ್ಚರಿಯುವರೋ?

ಮದ್ರಾಸ ಕರ್ನಾಟಕ

ಬಳ್ಳಾರಿಯಲ್ಲಿ ಕೀರ್ತನ ಪರಿಷತ್ತು ನೆರೆಯುವದು ಈ ಮೊದಲೇ ತಿಳಿಸಿದಷ್ಟೆ? ಈಗ್ಗೆ ಪರಿಷತ್ತಿನ ೩ನೇ ೪ ನೇ ಪ್ರಕಟನೆ ಪತ್ರಿಕೆಗಳು ನಮ್ಮ ಕಡೆಗೆ ಬಂದಿವೆ. ದಾಸರಿಗೆ ಸರ್ಟಿಫಿಕೇಟು ವಗೈರೆ ಕೊಡುವದು ಗೊತ್ತಾಗಿದಂತೆ ಸೂಚನೆ ತರಲಿಚ್ಛಿಸುವವರು ಮೇ ೧೫ ನೇ ತಾ|| ನೊಳಗಾಗಿ ಕಾರ್ಯದರ್ಶಿಗಳ ಕಡೆಗೆ ಸೂಚನೆಗಳನ್ನು ಕಳಿಸಬೇಕು ಅಧ್ಯಕ್ಷಪದಕ್ಕಾಗಿ ಎಂ. ಕೆ. ರಂಗರಾವ ಅವರನ್ನು ಕೇಳಲಾಗಿದೆ.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—
ದಿ ಮೋಟಾರ ಡ್ರಾಯವ್ಹಿಂಗ ಇನ್‌ಸ್ಟಿಟ್ಯೂಶನ್
ಜವುಬಂದಿ ನಂ ನಾಹೇ ೪೬೫ ಶನಿವಾರ ಪುಣೇಶಹರ

ಗುಲಕಂದ ಗುಲಕಂದ ಗುಲಕಂದ

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು [illegible] ವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು, ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸ್ವಾಭಾವಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತಯಾರಾಗಿ ದೊರೆಯುತ್ತವೆ ವ್ಯಾಪಾರಸ್ತರಿಗೆ ತುಂಬಾ ಕಮೀಶನ್.

ವಿಳಾಸ:— ಧೋಡಗೆ ಪಾಷಾಣಕರ ಕಂಪನಿ
ಬುಧವಾರ ಪೇಟ ಪುಣೆಶಹರ

ಸುಗಂಧಿ
ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ರುಚಿಯಿದ್ದು, ಸುವಾಸನೆಯುಳ್ಳದ್ದಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ತೊಳ್ಳಲಿಕ್ಕೆ ೧ ಪುಡಿ ಕಿಂ ರೂ ೦-೨-೬, ೨ನೇ ಕಿಂ ರೂ ೦-೯-೦ ೫೦೦ ತೋ ರೂ ೧ ೮-೦; ೧೦೦ ಪುಡಿಗಳ ಕಿಂ. ರೂ. ೧೭-೦-೦, ಟ ಪೆ ಖರ್ಚು ಗಿರಾಕರ ಪ್ರತ್ಯೇಕ.

ಸುಗಂಧಿ ನಶ್ಯ— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಪೈತ್ಯ ಧಂಡಿ, ಅರ್ಧಶಿರಶೂಲೆ ಮುಂತಾದವುಗಳು ಕೂಡಲೆ ಸಮಾಧಾನವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚುರುಕತನವು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಮಾಡಿಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ ಒಮ್ಮೆ ಪರೀಕ್ಷಿಸಿ ನೋಡಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ರೂ ೦ ೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦ ಟ ಪೋ. ಖರ್ಚ ಬೇರೆ.

ಉತ್ತಮ ಬೀಡಿಗಳು— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ ಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರವಠ್ ನೋಡಿ ವ್ಯಾಲಿಗೆ ಆರ್ಡರ ಕೊಡಬಹುದು ಇವರ ಹೊರತು ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ ಬೇಕಾದವರು ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ತೆಗೆದು ಖರೀದಿ ಮಾಡಿ ಕಳಿಸುವೆವು ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್ ಬಿ ಕಾವಂ,
ಬೀಡಿ ಮತ್ತು ತಂಬಾಕು ಜರ್ದಾ ದುಕಾನ.
ಮು ಪೋ. ನಿಪ್ಪಾಣಿ, ಜಿ. ಬೆಳಗಾವ

ಅಪರೋಕ್ಷಜ್ಞಾನಿಗಳಾದ
ಶ್ರೀ ಪ್ರಾಣೇಶ ವಿಠಲ ವಿರಚಿತ
ಶ್ರೀ ಹರಿಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ
೨ ದ್ವಿತೀಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ
೩ ತೃತೀಯ, ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ
ಭಾಮಿ, ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೨೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ
ಲಿಂಗಸೂಗೂರ ಪೋಷ್ಟ ಜಿ. ರಾಯಚೂರ, ನಿಜಾಂ

ಕಣ್ಣಿನ ಔಷಧ

ಹೂವು. ಮೋತಿಬಿಂದು, ದೃಷ್ಟಿ ಮಾಂದ್ಯ, ಕಂಣುಚಿಟ್ಲು, ಕಣ್ಣು ಬರೋಣ, ಕೆಂಗಣ್ಣರೋಣ, ಮತ್ತು ಗುಡ್ಡಿ ರೆಪ್ಪೆ ಬಕ್ಕಿಗಳ ವಿಕಾರಗಳು ಇಂತಹ ಕಣ್ಣಿನ ಎಲ್ಲ ಬೇನೆಗಳಿಗೆ ಈ ಔಷಧವು ಸಂಜೀವಿನಿಯೇ ಶಸ್ತ್ರಕ್ರಿಯೆಗಿಂತಲೂ ಮೇಲು! ರಾ ಬ. ಪಂಡಿತ [illegible] ಅವರು ಅನ್ನುತ್ತಾರೆ "ಅನೇಕರಿಗೆ ಈ ಔಷಧ ಕೊಟ್ಟು ಗುಣದ ಬಗ್ಗೆ ಖಾತ್ರಿಯಾಯಿತು ಮುಗಳ ಕಣ್ಣುಗಳು ನೆಟ್ಟಗಾದವು" ಎಂಥ ರೋಗಕ್ಕೂ ಎರಡೇ ಮಾತ್ರೆ ಖಾತ್ರಿಯಿಂದಕ್ಕೆ ರು ೧॥ ಟ ಖ ಬೇರೆ.

ಸೂಚನೆ—ಪತ್ರವ್ಯವಹಾರ ಇಂಗ್ಲೀಷ ಅಥವಾ ಮರಾಠಿಯಲ್ಲಿ
ವಾ. ವಿ ಕರವ [illegible] ರವಿವಾರ ಪುಣೆಶಹರ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ

ಇವರು ಎಪ್ರಿಲ ೧ ನೇ ವಾರದಿಂದ ಮಡಕೇರಿಯಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸುವರು.

ಜಿ. ಎಚ್ ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೪-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೊರ್ಡ ಅಫ್ ಡಾಯರೆಕ್ಟರ್ಸ್ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಟ್ಟಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂಯತೆ:—

(೧) ಬಾಂಡ ನಂ. ೫೬೭೦ ಮಿ. ವಿಠ್ಠಲ ಬಿವ್ಮಾಜಿ ಸೇಟ ಕಲಾಸ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೭೦೭ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೭ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೬೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೯೦ ಮಿ|| ರಾಮಚಂದ್ರ ವಾಮನ ಕಾಂಳಗ ಕಾಯಸ್ಥರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೮೪೦ ವಿ.|| ಆರ್. ಎಚ್. ನಾಟಿಸನ್ ಮಾಸ್ತರ ಗವ್ನರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎಸ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಪೋರವಾಲ ಬ್ಲ್ಯಾಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಪ್ರಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ-೫ ಆಣೆ ಟ ಖ ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಬ್ರಾಂಡ ಕೊ.(ರಜಿಸ್ಟರ್ಡ) ಪುಣೇಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ ರಿಸ್ಟವಾಚ

ಬೆಲೆ ೭-೮-೦ ಪಟ್ಟೆ ಸಹಿತ; ಟ ಖ ಪ್ರತ್ಯೇಕ

ಟಿಪ್ಪಣೀ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವೈರೆ ಹಚ್ಚಿ ಕಳಿಸುವೆವು

ಲಿಚೋ ವಾಚ ಕಂ. (India) ಮುಂಬೈ ನಂ. ೪

ಕಾನಡಾಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡ ಬಯಸುವವರು ಈ ವಾರಪತ್ರಿಕೆಯನ್ನು ತಪ್ಪದೇ ಓದಬೇಕು. ವಾರ್ಷಿಕ ಚಂದಾ ೩-೧೨-೦ ಪತ್ತೆ:—

ಸಂಪಾದಕ ಕಾನಡಾಧುರೀಣ- ಕುಮಟಾ, ಜಿ ಉತ್ತರ ಕನ್ನಡ

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಬಹುದು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಿ.
ಜಿಲ್ಲಾ ವಿಜಾಪುರ

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ
ಮಾಧವಾಶ್ರಮ ಮುಂಬೈ ನಂಬರ ೪
ಬಾಗಲಕೋಟೆಯ. ಏಜಂಟರು ಮಂಗಳವೇಢೆ ಬಂಧುಗಳು
C/o ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ಬಾಳಾಚಾರ್ಯರ ವ ಕೃಷ್ಣರಾವ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಪ್ರಸಿದ್ಧಿಸಲ್ಪಟ್ಟಿತು.

ನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರ್ಕಾರದ ಲಾಯಸನ್ಸವನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ನ್ಯಾಶನಲ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಪ್ರಯೋಗ ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ್‌ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಸರಿಯಾದ ಗಂಟೆಯನ್ನು ತೋರಿಸುತ್ತದೆ. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ಒಕ್ಕೆ ರೂ. 7 2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟೆನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಶಬ್ದಗಳ ವರೆಗೂ ಬರೆಯುವದು! 14 ಕ್ಯಾರೆಟ್ ಬಂಗಾರದ ಮುಳ್ಳು ಇರುವದು. ಇದನ್ನು ಈ ತಿಂಗಳೊಳಗಾಗಿ ತರಿಸಿಕೊಂಡವರಿಗೆ 12 ರೋಜ್ ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು. ಕ್ರಯ ಪೇನಾ 1ಕ್ಕೆ 2-0-0

ವಿಳಾಸ:— ಎಸ್. ಪಾಲ್ ಅಂಡ್ ಕೊ,
ಪಿ. ಬಿ ನಂಬರ್. 542,
ಪಾರ್ಕ್‌ಟೌನ್ ಮದ್ರಾಸು.

ಸಾಧ್ವೀ ಮತ್ತು ಸಂಪದಭ್ಯುದಯ

ಶ್ರೇಷ್ಠವಾದ ಕನ್ನಡದ ಪತ್ರಿಕೆ ಮತ್ತು ಪತ್ರ ದಿನಚರಿ ಪತ್ರಿಕೆ.

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ವಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸ್ವತಂತ್ರವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೩-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಇಗೆ ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಿಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ
ಸಾಧ್ವೀ ಮತ್ತು ಸಂಪದಭ್ಯುದಯ. ಮೈಸೂರು.

FOR SAFETY AND GOOD SE[illegible]
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to—
N. K. Kulkarni. Agent Bagalkot.

ವಿಶ್ವಕರ್ನಾಟಕ

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿಮರ್ಶೆ ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೩-೮-೦

ಬಿರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

ರ. ನಂ. ೬. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡದ ನವಜೀವನವು ಸಮಾವಿಷ್ಟವಾಗಿದೆ)
ಯಥಾ [illegible] । [illegible] ॥ — ಮನು
ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ನಿಜ ಚೈತ್ರ ಶುದ್ಧ ೧೧ ಶಕೆ ೧೮೪೪ ತಾ॥ ೭ ೪-೧೯೨೨. | ಸಂಚಿಕೆ ೫

ಸಂಪಾದಕನ ಭೂಮಿ.

(೧)

ನನ್ನ ಮನಸಿನ ಮೌನವಾಣಿ ಕಟ್ಟುವೆನಾನು ।
ನಿನ್ನ ಜೀವನದ ಸಮಾಧಿಯಂಥ ಮುಕ್ಕಳ ದೊಡ್ಡು।
ಚಿನ್ನದಾನದ ಚಿನ್ನ ಮೌನಶಕ್ತಿಯು ನೊಂದು ಚಿನ್ಮಯಾಕಾಶದಲ್ಲಿ
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಜನ್ಮವು ನಿನ್ನ ಗಂಧವನು ಕೀರ್ತಿಸುವ ಗಂಧವಹನೆಂದು ತಿಳಿಯು
—ಅಂಬಿಕಾ ತನಯ ದತ್ತ

ಕರ್ನಾಟಕದಲ್ಲಿ ಸರಕಾರದ ಸಹಾಯ ದ್ರವ್ಯದಿಂದ ನಡೆದ ಮಾಧ್ಯಮಿಕ ಶಾಲೆಗಳು ಕೆಲವುಂಟು. ಇವುಗಳ ಸ್ಥಿತಿಯು ಅಷ್ಟೇನು ತೃಪ್ತಿಕರವಾಗಿಲ್ಲ. ಮೊದಲು ಸ್ಥಾನಿಕ ಜನರು ಕೀರ್ತಿ ಗೌರವಾಭಿಲಾಷೆಗಳಿಂದ ಪ್ರೇರಿತರಾಗಿ ಶಿಕ್ಷಣ ಸಂಸ್ಥೆಯನು ಸ್ಥಾಪಿಸುತ್ತಾರೆ. ಕೆಲವು ದಿವಸಗಳ ವರೆಗೆ ಆಸಕ್ತಿಯನ್ನು ತೋರಿಸುತ್ತಾರೆ; ಒಮ್ಮೆ ತಮ್ಮ ಉದ್ದಿಷ್ಟವು ಕೈಗೂಡಿತೆಂದರೆ ಸಂಸ್ಥೆಯನ್ನು ದೈವಕ್ಕೆ ಒಪ್ಪಿಸಿಬಿಡುತ್ತಾರೆ. ಅಲ್ಲಿ ಕೆಲಸ ಮಾಡುವ ಶಿಕ್ಷಕರು ಸಾಯುತ್ತಿರುವರೋ ಬದುಕಿರುವರೋ ಎಂಬ ವಿಚಾರವೇ ಶಿಕ್ಷಣಮಂಡಳದವರ ತಲೆಯಲ್ಲಿ ಸೇರುವದಿಲ್ಲ. ಶಿಕ್ಷಕರೆಂದರೆ ದ್ವಾರಸರೆಂದು ಇವರ ಕಲ್ಪನೆ. ಅವರಿಗೆ ದೊರೆಯುವ ವೇತನವು ತೀರ ಸ್ವಲ್ಪ. ಹೀಗಾಗಿ ಶಿಕ್ಷಣದ ಬಳ್ಳಿಯು ಮೂಲಕ್ಕೆ ಕೊಡಲಿಯು ಬೀಳುತ್ತಲಿದೆ. ಸರಕಾರವು ಶಿಕ್ಷಣದ ಎಲ್ಲ ಭಾರವನ್ನು ಹೊರತಕ್ಕದ್ದು. ಏನು ಅದರ ಮುಖ್ಯ ಕರ್ತವ್ಯವು. ಎಲ್ಲ ಶಿಕ್ಷಣದ ಹೊಣೆಯನ್ನು ಹೊರದಿದ್ದರೆ ಬಿಡಲಿ. ಸ್ವಯಂಸ್ಫೂರ್ತಿಯಿಂದ ಶಿಕ್ಷಣಮಂಡಲದವರು ಸ್ಥಾಪಿಸಿದ ಶಾಲೆಗಳಿಗೆ ಸಹಾಯವನ್ನು ಚೆನ್ನಾಗಿ ಕೊಟ್ಟು ವಿದ್ಯಾ ಪ್ರಸಾರದ ಶ್ರೇಯವನ್ನು ಪಡೆಯಬಾದರೂ ಎಳಸುವರೋ ಅದೂ ಇಲ್ಲ ‘ ರಾವಣನ ಹೊಟ್ಟೆಗೆ ಕಾಸಿನ ಶುಂಠಿ ’ ಯೆಂಬಂತೆ ಶಾಲೆಯ ವೆಚ್ಚವು ಹೇರಳವಾಗಿದ್ದರೂ, ಏನು ಸ್ವಲ್ಪ ಹಣವನ್ನು ಕೊಟ್ಟು ಮೋರೆಯ ಮೇಲೆ ಕೈಯಳೆಯುವ ಧೋರಣವನ್ನು ಅದು ಕೈಕೊಂಡಿರುತ್ತದೆ. ಹಣವಿಲ್ಲದ ಬಾಳುವೆಯೆಷ್ಟು? ಬದುಕೆಲ್ಲಿ? ಶಾಲೆಗಳು ಟಿಕು ಟಿಕು ಜೀವ ಹಿಡಕೊಂಡು ಇದ್ದು ನಿಲ್ಲುತ್ತವೆ. ಮನುಷ್ಯರನ್ನು ಕೂಡಲಿಲ್ಲ, ಸತ್ತು ಸ್ವರ್ಗವ ಕೂಡಲಿಲ್ಲ. ಎಂಬುದು ಅನಿಷ್ಟ. ಹೊಟ್ಟೆಗಿಲ್ಲದ ಶಿಕ್ಷಕರು ಕಲಿಸುವದೆಂತು? ಹುಡುಗರಿಗೆ ನಿಜವಾಗಿ ಶಿಕ್ಷಣವು ದೊರೆಯುವದೆಂತು? ಹೀಗಾಗಿ ಹುಡುಗರೂ ಶಿಕ್ಷಕರೂ ಸಂಕಟಕ್ಕೀಡಾಗುವರು. ಮಾನಸಿಕ ಶಾರೀರಿಕ ಅವನತಿಯು ಎಲ್ಲಿಯಲ್ಲಿಯೂ ಹಬ್ಬುವದು. ರಾಷ್ಟ್ರದ ಜೀವನದ ಆಧಾರವೇ ಕಡಿಯುವದು. ಇದಕ್ಕೆ ಶಿಕ್ಷಕರ ಸಂಕಷ್ಟಗಳ ಸಮಾಪ್ತಿಯಿಲ್ಲ. ವರ್ಷಕ್ಕೊಮ್ಮೆ ಇನ್ಸಪೆಕ್ಟರರು (ಮೇಲ್ವಿಚಾರಣೆಯ ಅಧಿಕಾರಿಗಳು) ಬರುವರು. ‘ಶಾಲೆಯಲ್ಲಿ ಈ ವ್ಯವಸ್ಥೆಯಿಲ್ಲ; ಶಾಲೆಯಲ್ಲಿ ಅವ್ಯವಸ್ಥೆಯಿಲ್ಲ’ ಎಂದು ಜಿಗುಪ್ಸೆ ಆವೇಶದಿಂದ ನುಡಿಯುವರು. ಕೊಡುವ ಕಾಸಿನಲ್ಲಿ ಎಲ್ಲ ತರದ ಏರ್ಪಾಟುಗಳೂ ಮಾರ್ಪಾಟುಗಳೂ ಆಗಬೇಕೆಂದು ಬಯಸುವ ಶಿಕ್ಷಣಾಧಿಕಾರಿಗಳ ಹಾರಿಕೆಯನ್ನಾದರೂ ನೋಡಿರಿ. ಎಲ್ಲ ತರದ ವ್ಯವಸ್ಥೆಯನ್ನು ನೋಡಲು ಬರುವವರೂ ತಾವೇ; ಹಣದ ಬಗ್ಗೆ ಶಿಫಾರಸು ಮಾಡುವವರೂ ತಾವೇ ಹೀಗಿದ್ದು, ವೆಚ್ಚಕ್ಕೆ ಅನುಗುಣವಾಗಿ ಸಹಾಯ ದ್ರವ್ಯವು ಸಿಗುವಂತೆ ಮೇಲಧಿಕಾರಿಗಳು ಏಕೆ ನೋಡಿಕೊಳ್ಳಬಾರದು. ಶಿಕ್ಷಣಕ್ಕಾಗಿ ವೆಚ್ಚ ಮಾಡಿದ ದ್ರವ್ಯವು ವ್ಯರ್ಥವಾಗಿ ಎಂದೂ ಹೋಗುವದಿಲ್ಲ. ಸಹಾಯ ದ್ರವ್ಯವನ್ನು ಹೆಚ್ಚು ಕೊಟ್ಟು, ಶಿಕ್ಷಕರ ಸಾಂಪತ್ತಿಕ ಸ್ಥಿತಿಯನ್ನು ಸುಧರಿಸುವದು ಶಿಕ್ಷಣಾಧಿಕಾರಿಗಳ ಕರ್ತವ್ಯವು. ಇದಕ್ಕೆ ಶಿಕ್ಷಣಮಂಡಳದವರೂ ತಮ್ಮ ಕೈಯನ್ನು ಹಚ್ಚಬೇಕು. ಶಿಕ್ಷಣಮಂಡಳದವರು ಜಾಗೃತರಾಗಿ ಶಿಕ್ಷಕರ ಸ್ಥಿತಿಯನ್ನು ಸುಧಾರಿಸಲು ಪ್ರಯತ್ನ ಮಾಡಬೇಕು. ಅಂದರೆ ಶಾಲೆಯು ಉನ್ನತಿಯಾಗಿ, ಹುಡುಗರ ಕಲ್ಯಾಣವಾಗಿ, ಅವರಿಗೆ ನಿಜವಾದ ಹೆಸರು ದೊರೆಯುತ್ತದೆ. ಈಗ ಶಿಕ್ಷಕರ ಶಿಕ್ಷಣದ ಪರ್ವವೋ ಅದು ಮುಂಬೈಯಲ್ಲಿ ಇರುವುದು. ಅದಕ್ಕಾಗಿ ಕೈಬಿಚ್ಚಿನಿಂದ ಹೋಗಬೇಕೆಂದರೆ ಶಿಕ್ಷಕರಲ್ಲಿ ಯೋಗ್ಯತೆಯುಳ್ಳ ಶಿಕ್ಷಣಮಂಡಳದವರು ‘ದೊಕ್ಕಕ್ಕೆ ದಕ್ಕಿ’ ಯಾಗದಂತೆ ಎಚ್ಚರ ವಹಿಸುವರು. ನಾವೂ ನೀವೂ ನೆಂಟರು; ನೆಂಟರ ಗಂಟಿಗೆ ಕೈ ಹಚ್ಚಕೂಡದೆಂದು ಸರಕಾರದ ವೃತ್ತಿಯು ಕೆಲವೊಂದು ವೇತನವೃತ್ತಿಗಳನ್ನು ಸರಕಾರವು ಕಲ್ಪಿಸಿದ್ದೇನೋ ನಿಜ. ಆದರೆ ಆ ವ್ಯವಸ್ಥೆಯು ಸಾಕಷ್ಟಿರುವದಿಲ್ಲದ್ದರಿಂದ ಇನ್ನೂ ಹೆಚ್ಚಾಗಿ ಏರ್ಪಾಟಾಗುವುದು ಇಷ್ಟ. ಈ ದೃಷ್ಟಿಯಿಂದ ಶಿಕ್ಷಣಾಧಿಕಾರಿಗಳು ಇತ್ತ ಕಡೆಗೆ ನೋಡಬೇಕೆಂಬಾಗಿ ಪ್ರಾರ್ಥನೆ.

ರಂಗಭೂಮಿಯ ಸುಧಾರಣೆಗಾಗಿ ರಂಗಭೂಮಿಯೆಂಬ ಮಾಸ ಪತ್ರಿಕೆಯು ಬೆಂಗಳೂರಿಂದ ಹೊರಡುತ್ತಿರುವುದು ಎಲ್ಲ ಕನ್ನಡಿಗರಿಗೂ ಗೊತ್ತಿದ್ದ ಮಾತು. ಇದಕ್ಕೆ ಇಷ್ಟು ದಿವಸಗಳ ವರೆಗೆ ದತ್ತಾತ್ರೇಯ ನಾಟಕ ಮಂಡಲದ ಒಡೆಯರಾದ ಸದಾಶಿವ

ರಾವ ಗರೂಡ ಇವರ ಆಸರವು ಇದ್ದಿತು. ಈಗ ಏಕೋ ಏನೋ ಅವರು ತಮ್ಮ ಸಹಾಯವನ್ನು ನಿಲ್ಲಿಸಿಬಿಟ್ಟಿದ್ದಾರೆ. ಆದರಿಂದ ಪತ್ರಿಕೆಯು ತೊಂದರೆಯಲ್ಲಿದೆ. ಕರ್ನಾಟಕದಲ್ಲಿ ಇಂಥಹ ಪತ್ರಿಕೆಯು ಹೊರಬಿದ್ದದ್ದು ಇದೇ ಮೊದಲು; ನಾಟ್ಯದ ಕೊನೆ. [illegible] ನಾಟಕದಲ್ಲಿಯೇ ನಾಟಕ ರಂಗಭೂಮಿಯು ನಟರು ಇವೆಲ್ಲರಲ್ಲಿಯೂ ಸ[illegible]ದಿ ಒಂದು ತರದ ಉಚ್ಚ ನೀತಿ ಮತ್ತೆಯನ್ನು ಜನಸಮಾಜದಲ್ಲಿ ಹರಡುವುದೇ ಈ ಪತ್ರಿಕೆಯ ಉದ್ದೇಶವು- ಸಾಹಿತ್ಯ ಕಲೆಗಳಿಗೆ ಕಳೆದುಂಬುವ ಕಾದಂಬರಿ; ಇಂತಹ ಪತ್ರಿಕೆಗಳು ಬೇಕು. ಕನ್ನಡಿಗರು ಒಂದು ಸಂಸ್ಥೆಯನ್ನು ಕೂಡ ಚನ್ನಾಗಿ ನಡಿಸಲಾರರೆಂಬ ಮಾತು ನಮಗೆ ಸತ್ಯವಾಗಿ ಭಾಸವಾಗ ಹತ್ತಿದೆ. ಲೇಖಕರು ಬರೆಯಬೇಕೆನಿಸಿದರೆ, ಜನರ ಸಹಾಯವಿಲ್ಲ. ಜನರು ಇದ್ದಲ್ಲಿ ಲಲಿತ ಕಲೆಗಳ ವಿಷಯದಲ್ಲಿ ಆದರವಿಲ್ಲ. ಇಲ್ಲಿದ್ದರೆ ಅಲ್ಲಿಯಿಲ್ಲ ಅಲ್ಲಿಯಿದ್ದರೆ ಇಲ್ಲಿಲ್ಲ. ಹೀಗೆ ಹೀನವಾದ ಸ್ಥಿತಿಯು ಒದಗಿದೆ. ಕನ್ನಡ ನಾಟಕ ಮಂಡಳಿಗಳು ಎಷ್ಟೋ ಇವೆ, ಕೆಲವು ಮಂಡಳಿಯವರು ಸುಪ್ರಸನ್ನರಿದ್ದಾರೆ ಅವರಿಗೆ ರೊಕ್ಕ ಗಳಿಸಿದಷ್ಟು ರಂಗದೇವತೆಯ ಪ್ರಸಾದದಿಂದಲೇ ಇಂಥವರು ಅದೇ ರಂಗದೇವತೆಯನ್ನು ಹೆಚ್ಚಾಗಿ ಪ್ರಸನ್ನ ಮಾಡಿಕೊಳ್ಳುವ ರಂಗಭೂಮಿಯ ಮುಖಾಂತರವಾಗಿ ಹಣಗಳಿಸತಕ್ಕದ್ದು. ಕನ್ನಡಿಗರಾದವರು ಸ್ವಭಾಷಾಭಿಮಾನದಿಂದ ಇಂಥಹ ಕೆಲಸಕ್ಕೆ ಔದಾರ್ಯದಿಂದ ನೆರವಾಗಿ ನಾಡಿನ ಬೆಳವಣಿಗೆಯ ಹಬ್ಬವು ಮುಂದೆ ಬೀಳುವಂತೆ ನೋಡಿಕೊಳ್ಳತಕ್ಕದ್ದು.

ಉತ್ತರ ಕರ್ನಾಟಕದವರೆಲ್ಲ ವಕೀಲಿ ಬಿಟ್ಟವರೆಲ್ಲ ಪುನಃ ಹೇಳಿಕೆಯಂತೆ ಕೇಳಿಕೊಂಡು ಸನದು ಪಡೆದುಕೊಂಡರು. ವಕೀಲಿಯ ವ್ಯವಸಾಯವನ್ನು ಮಾಡತೊಡಗಿದರು. ಇದೆಲ್ಲವೂ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ. ಇದರಲ್ಲೇನೂ ಸೋಜಿಗವಿಲ್ಲ. ಆದರೆ ವಕೀಲಿಯ ವ್ಯವಸಾಯವನ್ನು ಮಾಡಿಯೂ ನಾಡಿನ ಸೇವೆಯನ್ನು ಮಾಡಬೇಕೆಂದು ಅವರನ್ನುವುದು ಕೌತುಕಕರವಾದರೂ ತಮಿಳ ನಾಡಿನಲ್ಲಿ ಖಾದಿಯ ಪ್ರಸಾರವು ಭರದಿಂದ ಸಾಗಹತ್ತಿದೆ. ಆದರೆ ಉತ್ತರ ಕರ್ನಾಟಕದಲ್ಲಿ ಸೂರ್ಯನ ಉದಯವಾದೊಡನೆ ಕತ್ತಲೆ ಗವಿ ಸೇರುವಂತೆ, ಚಳವಳಿಯು ಎಲ್ಲ ಸದ್ದೂ ಅಡಗ ಹತ್ತಿದೆ. ಇದಕ್ಕೆ ಕಾರಣವು ಮುಖಂಡರು ತಮ್ಮ ಹೊಟ್ಟೆಯ ವ್ಯವಸಾಯದಲ್ಲಿ ಅದೇಕೆ ಸ[illegible]ದ ವ್ಯವಸಾಯದಲ್ಲಿ ತೊಡಗಿರುವದು. ರೊಕ್ಕವನ್ನು ಗಳಿಸುವದರಲ್ಲಿಯೇ ಎಲ್ಲ ಶಕ್ತಿಯು ಕ್ಷೀಣವಾಗುತ್ತಿದೆ. ಅಸ್ವಲೆ ದೇಶಸೇವೆಗೆಲ್ಲಿಯ ಉತ್ಸಾಹವು [illegible]? ಎರಡೂ ಮಾಡುತ್ತೇನೆಂಬುವುದು ಕಲ್ಲಿನ ಚೆಲ್ಲಾಟ [illegible] ಒಂದೇ ಏಟಿನಲ್ಲಿ ಎರಡು ಯತ್ನಿಸಿದಂತೆಯೇ ಸರಿ. ಮನುಷ್ಯನ ಧ್ಯೇಯವು ಸಾಧ್ಯವಾಗಬೇಕಾದರೆ ಎಲ್ಲವನ್ನೂ ಬಿಟ್ಟು ಅದಕ್ಕೆ ಅಂಟಬೇಕಾಗುತ್ತದೆ. ಅದರ ಹುಚ್ಚು ಹಿಡಿಯಬೇಕಾಗುತ್ತದೆ. ಧ್ರುವನಿಗೆ ಆಕಾಶದಲ್ಲಿ ಪದವಿಯು ದೊರೆತದ್ದು ಏತರಿಂದ ಅನನ್ಯ ಭಕ್ತಿಯಿಂದ. ಹರಿಶ್ಚಂದ್ರನಿಗೆ ಸತ್ಯವಂತನೆಂಬ ಹೆಸರು ದೊರೆತದ್ದು ಹೇಗೆ? ಸತ್ಯದಲ್ಲಿಯ [illegible] ನಿಷ್ಠೆಯಿಂದ. ಕೆಲಸ ಮಾಡಲು ನಿಷ್ಠೆಯು ಬೇಕು, ಶುದ್ಧವಾದ ಹೃದಯವು ಬೇಕು. ಹೃದಯವು ಶುದ್ಧವಿಲ್ಲದೆ, ಹಣಕ್ಕೋಸ್ಕರ ಎಷ್ಟೋ ಜನರು ಅಸಹಕಾರದಲ್ಲಿ ಸೇರಿದರು. ತಾವೂ ಬಿದ್ದರು; ಎಲ್ಲವನ್ನೂ ಯವನ್ನ ಕೆಡಿಸಿದರು. ಇನ್ನು ಮೇಲೆ ಎಚ್ಚರ. [illegible] ಮಡಿಯಲು ಸಿದ್ಧರಾಗಿ ಸಿದ್ಧರಿದ್ದರೆ, ಇಂತಹ ಕಾರ್ಯದಲ್ಲಿ ಕೈಹಾಕಬೇಕು. [illegible] ಆಗ ಮುಂದಿದೆ ಸ್ವರ್ಗ ಹಿಂದಿದೆ ನರಕ. ಹಿಂದುಸ್ಥಾನವು [illegible] ಆಗಬೇಕಾದರೆ, ಅದರ ವಿಷಯದಲ್ಲಿ ಸತತೋದ್ಯೋಗ ಬೇಕು. ಕಷ್ಟಗಳು ಒದಗಿದರೆ ಧೈರ್ಯ [illegible] ಸಹಿಷ್ಣುತೆ

ಬೇಕು. ಮೇಲಾಗಿ [illegible] ಬೇಕು ಏಕಾಗ್ರತೆಯು ಬೇ[illegible]ಯು ದಾರಿಯು ಕಾಣದು. ಬೆಳಕ[illegible] ಪರಮಾತ್ಮನು ಎಲ್ಲ ವನ್ನೂ ಬಿಟ್ಟು [illegible]

ಹಿಂದುಸ್ಥಾ[illegible] ಅವು ರಾಷ್ಟ್ರ ಸಂಘದಲ್ಲಿ ಪ್ರತಿಷ್ಠ[illegible] ತೊಂದರೆಗಳನ್ನು ತೆಗೆದು ಹಾಕ[illegible] ಈಗ ಜಗತ್ತಿನ ಜೀವವು ಇಂಗ್ಲಂ[illegible] ಬಲಾಢ್ಯ ರಾಷ್ಟ್ರಗಳ ಕೈಯ[illegible] ರಾಷ್ಟ್ರಗಳನ್ನ ಅವಲಂಬಿಸಿದೆ. [illegible] ಜಗತ್ತಿನಲ್ಲಿ ಶಾಂತಿ ಸುಖಗಳನ್ನು [illegible] ವಿಶ್ವಬಂಧುತ್ವವನ್ನು [illegible] ಇವು ಕೋರಿಕೆಯು ಹವಣಿಕೆ [illegible] ನಾಶವು ಎಲ್ಲ ಯ[illegible] ಕಾಣಿಸುತ್ತವೆ ದೇಶಗಳು ವಹಿಸಿ[illegible] ಶಕ್ತಿ[illegible] ಸ್ವ[illegible] ತಮ್ಮ ತಮ್ಮ ಸೈನ್ಯ[illegible] ವಿಯುಷ್ಯ ವನುತ್ತವೆ ಅ[illegible] ಪ್ರಸಾದ ಸಂಚಾರ, ಆವಿಶ್ಕಾ[illegible] ಗೊಂದಲ ಮಾತಿನಲ್ಲಿಂದು [illegible] ನಡೆಯಲ್ಲಿ ಬಂದರೆ, ಏ[illegible] ಒಣಹೊಟ್ಟೆ ಎಲ್ಲ ಪ[illegible] ಅದುನಿಮಿತ್ತ ಶಾಂತಿಯನ್ನು [illegible] ಸಂ ಬುತ್ತಿ[illegible] ಕೈ ನಿಜ ಮಾನವತೆಯ [illegible]ಗತವಾಗಿ ಉಳಿಯುವದು [illegible] ಕೀರ್ತಿಗೆ ಕಿವಿಯೊಡೆಯೊ[illegible] ಸಂಸ್ಕೃತಿಯನ್ನು ಸು[illegible] ಬಹಿಸುವ ಪಕ್ಕೆ ಅದು [illegible] ಪ್ರಕಾರ ವಾಗುವದು. ಹಿ[illegible] ಒಬ್ಬಿಯಿಂದ ಸಾಮ್ರಾಜ್ಯಕ್ಕೆ [illegible] ಬಳಕೆಗಳ ಹೋರಾಟವು [illegible] ವಾರ ಆಳಿ ದು ಹೋಗ[illegible] ಗೌರವದಿಂದ ಹಿಂದುಸ್ಥಾನಕ್ಕ[illegible] ವು ಪ್ರ ಯತ್ನಪೂರ್ವ[illegible] ದಲ್ಲಿ ಭಾಗ್ಯ ತಿಯಿದೆ. ವಿಶ್ವ[illegible] ಯಾವದು ತಾನೇ ಅಸಾಧ್ಯ[illegible] ಸತ್ಯ ಪೊಂದಿದ್ದರೆ ಸ[illegible] ಒದಗುತ್ತದೆ. ಅದ್ದರಿಂದ ತಿ[illegible] ಘಿಸುವದಿಲ್ಲ. ಉಗುಬಿಸಿ[illegible] ತೀವ್ರವಾಗಿ ನಿರ್ಣಯಿಸಿ, ಓ[illegible] ಬರೆಸಿ ಕೊಟ್ಟನೆ [illegible] ರಾತಿಯ ಸೊಕ್ತ್ರ[illegible] ಆಧ್ಯಾತ್ಮಿಕ ತೆ ಜನ್ಮ[illegible] ಅದರ ಪ್ರೇಮ ದಸೋ[illegible] ವಿಶ್ವ ಬಂಧುತ್ವವ[illegible] ಹೀನು ಸ್ಥಾನದಲ್ಲಿ[illegible]

[illegible] ಸಂಸ್ಥಾನಿಕರ ಬೆನ್ನು ಹತ್ತಿದಂತೆ ಕಾಣುತ್ತದೆ. [illegible] ಹತ್ತಿರ [illegible] ಮಹಾರಾಜರು ಕಟ್ಟಿಸಿದ್ದ [illegible] ಹತ್ತಿರ ನದಿಯಿಂದ ಮತ್ತೊಬ್ಬ ಸಂಸ್ಥಾನಿಕನ [illegible] ಪ್ರಚಂಡವಾಗಿ ಬೀಸುತ್ತಿದೆ. [illegible] ಸಂಸ್ಥಾನವು [illegible] ಸೇರಿರುವದು. ಅಲ್ಲಿಯ [illegible] ಲಕ್ಷ ರೂಪಾಯಿಗಳು. [illegible] ಸಮಾಜ [illegible] ಇವರು ಬಲೂಚಿ [illegible] ಲೋಕಹಿತದ ಸಲುವಾಗಿ [illegible] ಇವರು ವಿಲಾಸಲಂಪಟರಾಗಿ ಸಂಸ್ಥಾನದ ಹಣವನ್ನು [illegible] ವೆಚ್ಚ ಮಾಡುತ್ತಿರುವರೆಂದು ಸುದ್ದಿ. ಪ್ರಜೆಗಳ [illegible] ಹಚ್ಚುತ್ತಿದೆಯಂತೆ. ಸಂಸ್ಥಾನದ [illegible] ಮೊನ್ನೆ ದೊಡ್ಡ ಪರಿವಾರದೊಡನೆ [illegible] ಹಣವನ್ನು ಸೂರೆಮಾಡಿದರು. [illegible] ತಮ್ಮ ಸೊಗಸಿಗಾಗಿಯೇ [illegible] ಸಾರ್ವಜನಿಕ ಕಾರ್ಯ, [illegible] ಕಂಥವುಗಳಿಗೆ ಏನೂ ವೆಚ್ಚಮಾಡುವದಿಲ್ಲ [illegible] ಅಧಿಕಾರಿಗಳೂ, [illegible] ಸೂರೆಯುವ [illegible] ಪ್ರಕಟಿತವಾಗಿದೆ. ಎಲ್ಲ ಕಡೆಯಲ್ಲಿ [illegible] ವೃತ್ತಿ. ಹೀಗಾಗಿ ಪ್ರಜೆಗಳಿಗೆ ಈ [illegible] ಓಡಿಹೋಗಬೇಕೆಂಬ ಪ್ರವೃತ್ತಿ [illegible] ವಜೀರ [illegible] ಮಂತ್ರಿಗಳನ್ನು ಈ ಸ್ಥಿತಿಯನ್ನು [illegible] ಯತ್ನ [illegible] ಸ್ವತಂತ್ರವೃತ್ತಿಯಿಂದ [illegible] ರಿಗೆ ಆ ಅಧಿಕಾರಿಗಳಿಂದ [illegible] ವಿರೋಧ ಉಂಟಾಗ ಹತ್ತಿರುತ್ತದೆ. ಕೆಲವರು [illegible] ದ್ವೇಷಭಾವವುಳ್ಳವರೂ ಕೂಡ ಇರುತ್ತಾರೆ [illegible] ನಿನ್ನ ಪ್ರಭಾವವೇ ಅಂತಹದು. [illegible] ಗುಲಾಮಗಿರಿಯವರೇ ವಿರೋಧಿಗಳಲ್ಲಿ ಅಗ್ರಗಣ್ಯರು. ಆದಾಯದ ಮತ್ತು ಸೈನ್ಯದ ವ್ಯವಸ್ಥೆಯನ್ನು ಮೊದಲಿಂದ [illegible] ಬಂದಿರುವರೂ ಇವರೇ. ವೆಚ್ಚ ಕಡಿಮೆ ಮಾಡಲು ವಜೀರರು ಯತ್ನಿಸಿದರೆ? ಇವರಿಗೆ ಬಿಗಿಯುಂಟಾಯಿತು. ಆದ್ದರಿಂದ [illegible] ಅಲ್ಲಿಯ ಬಾಳುವೆಯನ್ನು ಮಾಡುವದೂ ಕೂಡ ಕಷ್ಟವಾಗಿದೆಯಂತೆ ಇಂತಹ ಸ್ಥಿತಿಯಲ್ಲಿ ಜನರು ಏನು ಮಾಡಬೇಕು? [illegible] ಉಪಾಯವೇನ? ಉದ್ಯಮವೇನ? ಬ್ರಿಟಿಷ ಸರಕಾರದ ಧೋರಣವಂತೂ ಗೊತ್ತೇ ಇದೆ. ವಿಚಾರಣಾ [illegible] ನಿಯಮಿಸಿ, ಅವ್ಯವಸ್ಥೆಯಿದ್ದರೆ ಕೆಲಕಾಲ ರಾಜ್ಯಸೂತ್ರವನ್ನು ತನ್ನ ಕೈಯೊಳಗೆ ತೆಗೆದುಕೊಳ್ಳುವದು. ಸರಕಾರದ ಧೋರಣವು ಹೇಗೇ ಇರಲಿ, ಸಂಸ್ಥಾನಿಕರು ಯೋಗ್ಯಕಾಲದಲ್ಲಿ ಎಚ್ಚತ್ತು ತಮ್ಮ [illegible] ರಾಗಭೋಗ ಕಾಮಕ್ಕೆ ತಮ್ಮ ಯೌವನವನ್ನೂ ಧನವನ್ನೂ ಆಹುತಿ ಕೊಡದೆ ಪ್ರೇಮದಿಂದ ಪ್ರಜೆಗಳನ್ನು ಮಕ್ಕಳಂತೆ ಸಾಕಿ ಸಲಹಿ, ಅವರು ತಮ್ಮನ್ನು ಹಾಡಿ ಹರಸುವಂತೆ ಆಳಬೇಕು. ಅಂದರೆ ಸಂಸ್ಥಾನಿಕರಿಗೆ ಏಳ್ಗೆಯಾಗುವದು ತಾವೂ ಉಳಿಯುವರು; ತಮ್ಮ ಮಕ್ಕಳೂ ಒಪ್ಪತ್ತು ಓದುಕುವರು. ಇಲ್ಲದಿದ್ದರೆ ಸಂಸ್ಥಾನಿಕರು ಇದ್ದರೋ ಇಲ್ಲವೋ ಎಂಬುವ ಹೊತ್ತು ಬರುವುದು. ಹೇಳಹೆಸರಿಲ್ಲದೆ ಹಾಳಾಗುವರು. ಇಂಥ ಅವಸ್ಥೆಯನ್ನು ದೇವರು ತರದಿರಲಿ.

ಮೈಸೂರಿನ ಪತ್ರ

ಜನರ ಸೌಕರ್ಯಕ್ಕಾಗಿಯೂ, ತ್ವರೆಯಿಂದ ತಮ್ಮ ಊರುಗಳನ್ನು ಸೇರಿಕೊಳ್ಳುವುದಕ್ಕೆ ಅನುಕೂಲಿಸುವಂತೆ ಮೋಟಾರು ಬಂಡಿಗಳು, ದಿನೇ ದಿನೇ ಅಭಿವೃದ್ಧಿಯಾಗುತ್ತಿರುವುದೇನೋ ಒಳ್ಳೆಯದು. ಆದರೆ ಸದ್ಯದ ಪರಿಸ್ಥಿತಿಯನ್ನು ನೋಡಿದರೆ ನಮ್ಮ ಸಂಸ್ಥಾನದಲ್ಲಿ, ಅದರಿಂದ ಎಷ್ಟು ಪ್ರಯೋಜನವಾಗಬೇಕೋ ಅದಕ್ಕೆ ಇಮ್ಮಡಿಯಾಗಿ ಅನಾಹುತಗಳುಂಟಾಗುತ್ತಿರುವವು. ಈಗ ಸುಮಾರು ೩ ತಿಂಗಳ ಹಿಂದೆ ಮೈಸೂರಿನಿಂದ ಗುಂಡ್ಲುಪೇಟೆಗೆ ಹೋಗುತ್ತಿದ್ದ ಒಂದು ಮೋಟಾರ ಬಂಡಿಯು, ಮರಕ್ಕೆ ಹೊಡೆದದ್ದರಿಂದ ಅದರಲ್ಲಿ ಪ್ರಯಾಣಮಾಡುತ್ತಿದ್ದ, ಸಾಹುಕಾರ್ ಕಬ್ಬಳ್ಳಿ ಚನ್ನಬಸಪ್ಪರೆಂಬವರು ದುರ್ಮರಣಕ್ಕೆ ಪ್ರಾಪ್ತರಾದರು. ಚನ್ನಬಸಪ್ಪನವರು ಲಿಂಗಾಯತ ಮತದವರಿದ್ದು, ದಾನಧರ್ಮಗಳನು ಮಾಡಿ ಸತ್ಕೀರ್ತಿಯನ್ನು ಸಂಪಾದಿಸಿದ್ದರು. ಇದನ್ನು ಮರೆಯುವದರೊಳಗಾಗಿ, ಮೊನ್ನೆ ಮೇಲುಕೋಟೆಯಲ್ಲಿ ನಡೆದ ವೈರಮುಡಿ ಉತ್ಸವಕ್ಕೆ ಹೋಗುವ ಮತ್ತು ಅಲ್ಲಿಂದ ಬರುವ ಮೋಟಾರು ಬಂಡಿಗಳು, ರಸ್ತೆಯಲ್ಲಿ ಹೋಗುತ್ತಿದ್ದ ಎತ್ತಿನ ಗಾಡಿಯೊಂದಕ್ಕೆ ತಗಲಿದ್ದರಿಂದ, ತಕ್ಷಣವೇ ಒಬ್ಬನು ಮೃತಪಟ್ಟನು. ಅನೇಕರಿಗೆ ಬಹಳ ಘಾಯಗಳಾದವು. ಹೀಗಾಗುವದಕ್ಕೆ, ಮೋಟಾರು ಮಾಲೀಕರು, ಅನುಭವವಿಲ್ಲದ ಕೇವಲ ಸಣ್ಣ ಹುಡುಗರನ್ನು ಮೋಟಾರು ನಡಿಸುವುದಕ್ಕೆ ಕಳುಹಿಸುವದೇ ಕಾರಣ ಇವಲ್ಲದೆ ಒಬ್ಬರ ಮೇಲೊಬ್ಬರು ಪೈಪೋಟಿ. ಇವುಗಳಿಂದ ಪ್ರಜೆಗಳಿಗೆ ಹಿಂಸೆಯೇ ಹೊರತು, ಸುಖವೆಲ್ಲಿಯದು? ಸರಕಾರದವರು ಇನ್ನು ಮುಂದಾದರೂ ಹೆಚ್ಚು ನಿಗಾ ಕೊಡುವರೆಂದು ಊಹಿಸಿದೆ.

ಕಣಿಯರ ಸತ್ಯಾಗ್ರಹ

ಶ್ರೀ|| ತಗಡೂರು ರಾಮಚಂದ್ರರಾಯರು, ತಮಗೂ ಸರಕಾರಿ ಅಧಿಕಾರಿಗಳಿಗೂ, ನಡೆದ ವಿಷಯವಾಗಿಯೂ, ಸತ್ಯಾಗ್ರಹದ ಚರಿತ್ರೆಯ ಚರ್ಚೆಯ ಮೇಲೆ ಒಂದು ಚಿಕ್ಕ ಪುಸ್ತಕವನ್ನು ಪ್ರಕಟಿಸಿರುವರು. ಪುಸ್ತಕವನ್ನು ಚೆನ್ನಾಗಿ ಪರಿಶೀಲಿಸಿ ನೋಡಿದರೆ ಸರಕಾರಿ ಅಧಿಕಾರಿಗಳ ವರ್ತನವೂ, ಪ್ರಜೆಗಳಿಗೆ ಕೊಡತಕ್ಕ ಕಿರುಕುಳಗಳೂ, ಕಂಡುಬರುವವು

ಸ್ವಲ್ಪ ದಿವಸಗಳ ಕೆಳಗೆ, ಶ್ರೀ. ರಾಮಚಂದ್ರರಾಯರೂ, ಶ್ರೀಮನ್ ಗೋವಿಂದಾಚಾರ್ಯ ಸ್ವಾಮಿಗಳವರೂ, ಚಾಮರಾಜನಗರ, ಯಳಂದೂರು, ಕೊಳ್ಳೇಗಾಲ ಮುಂತಾದ ಊರುಗಳಲ್ಲಿ ಸಂಚಾರ ಮಾಡಿ, ಕಣಿಯರನೇಕರಿಗೆ, ಮಂತ್ರೋಪದೇಶವನ್ನು ಮಾಡಿ ಕೊಂಡು ಬಂದರು

ಸರ್ಕಾರದವರು, ಕಣಿಯರ ಬಾಲಕರನ್ನು ಶಾಲೆಗಳಿಗೆ ಸೇರಿಸಬೇಕೆಂದು ಹುಕುಂ ಮಾಡಿರುವರು. ಅದರಂತೆ, ಮಳವಳ್ಳಿ ತಾಲ್ಲೂಕು ಬೆಳಕವಾಡಿ ಎಂಬ ಗ್ರಾಮದಲ್ಲಿ, ೮ ಜನ ಕಣಿಯ ಬಾಲಕರನ್ನು ಶಾಲೆಗೆ ಸೇರಿಸಿಕೊಂಡವೇಳೆಯಲ್ಲಿ, ಬಾಕಿ ಉತ್ತಮ ಜಾತಿ ಬಡಾಯಿ ಕೊಚ್ಚಿಕೊಳ್ಳುವ ಜನರು, ತಮ್ಮ ತಮ್ಮ ಬಾಲಕರನ್ನು ವಾಪಸು ಕರೆಸಿಕೊಂಡರೆಂಬುದಾಗಿ ತಿಳಿಯ ಬಂದಿದೆ. ಅಲ್ಲದೆ, ಕಣಿಯ ಜನಗಳಿಗೆ. ಆ ಗ್ರಾಮದಲ್ಲಿ, ಅಂಗಡಿಗಳಲ್ಲಿ, ಸಾಮಾನುಗಳು ಕೊಡಕೂಡದೆಂದೂ, ಭಾವಿ ಕೆರೆ ಕೊಳ್ಳಗಳಲ್ಲಿ, ನೀರನ್ನು ಉಪಯೋಗಿಸ ಕೂಡದೆಂದೂ, ಕಟ್ಟುಮಾಡಿರುತ್ತಾರೆ. ಮೊನ್ನೆಯುಗಾದಿ ದಿವಸ, ಕಣಿಯ ಜನಗಳು ನೀರನ್ನು ತರುತ್ತಿರುವಾಗ್ಗೆ, ಕೆಲವು ಹುಡುಗ ಜನಗಳು ಸೇರಿಕೊಂಡು, ಕಣಿಯರನ್ನು ಹೊಡೆದು, ಅವರ

(೬ ನೇ ಪಾನಿನಲ್ಲಿ ನೋಡಿರಿ)

ಚಿಂತ್ರಸ್ತತ್ರ

ರಾಜಭಂಬಿಯ ಸ್ಥಿತಿ ಎಂಬ

ಚಿಕ್ಕಪಿತೋಪಿ ನಾಟಕವು

(ಲೇಖಕರು— ಸಿದ್ಧಲಿಂಗಪ್ಪ, ರುದ್ರಪ್ಪ, ಶಂಠಿ, ಇಲಕಲ್ಲ)

ಅಂಕ ೧

ಪ್ರವೇಶ ೧

ಹಿಂದಿನ ಸಂಚಿಕೆಯಿಂದ ಒಂದಗ್ಗ

ಸ್ಥಳ— [illegible]ಸುತನ ಮನೆ

(ಬಾಲೂರವೇರದು ಬರವನು)

ರ- ಬಾಳಾಜೀ ನಿಮ್ಮ [illegible] ಸವ [illegible] ಹೊಂಕೆಸೂಯೋ ಇಲ್ಲವೋ? ಇದರಿಂದ ಚಂದ್ರಿಕೆಯು ಸಹವಾಸವು ನಾಯಕನವರೆಗ ಸ್ಥಿರವಾಗಿ ಉಳಿಯುವನು ಮತ್ತು ದುಶ್ಚದೂಷಕಿಸುವ ಉದ್ಯೋಗಗಳಲ್ಲಿ ದೊಡ್ಡವಾದ ಕ ನ ತದಲ್ಲಿ ಅಪಜಯವೇ ಇಲ್ಲ [illegible] ಕೀರ್ತಿ ವರಸಗ ಕಂತು ಕಟ್ಟಿಟ್ಟ ನನಾತು,

ಬಾ- [illegible] ಪರಿಕ್ಕಾರ ಪುಸ್ತ [illegible] ಶರವಿಗೆ ಚಂದ್ರಿಕೆಯು ಗಲ ಟವಲ್ಲಿಯೇ ಹುಟ್ಟಿ ಆದಿಂಬ

ರ- ನಾನಿದ್ದಲ್ಲಿ ಚಂದ್ರಿಕೆಯು ಸೂಟರ ಲಬಿಸದು. ಹಾ [illegible] ಸ್ತ್ರೀಯನ್ನು [illegible] ವಣ್ಣದೆಂಸ್ಟ ದಿವಸ ನಿಲ್ಲುವದು

ಬಾ- ಸು [illegible] ಪುಟಿದಲ್ಲಿ ಹ ಕಿವರೆ ವಾಂಡುಗಳು ನಾಗ [illegible] ವೇ ಇಲ್ಲ

ರ- ಕ [illegible] ತ ನಿಶಾನ ಪತ್ರ ಅನುಕೂಲ ಕ ಲವ್ರ ನಿಷ್ಟ ವದ [illegible] ಗಳಿ [illegible] ಯಾವ ಅಲ್ಲ ಯೂ [illegible] ಧಿಸ [illegible] ಅಂತಿಯ [illegible] ನು ಹೇಳುತ್ತೇನೆ ನಾಟಕದ [illegible] ನಸಿದ್ದತೆ [illegible] ಲ್ಲ ಆಗುತ್ತದ ಆ ವ್ಯಾನೇಜರನ ಜಾಪಲ್ಲಿ ಯ [illegible] ಹಾ ಅನ್ನುವಲ್ಲಿ ಸುಣ್ಣ ಹಾಕುತ್ತೇನೆ ನೋಡು ನನ್ನ ಸಾಮರ್ಥ್ಯವನ್ನು.

ಬಾ- [illegible] ಪ್ರಿಯಂತ ತರುಣಾ ಸೌಂದರ್ಯ [illegible] ಜಂಬಲವಾದದ್ದು ನಾ [illegible] ದಿನಸಂತರ [illegible] ವಾಗ ವಿದ್ದರೆ [illegible]

ರ- ತೃಪ್ತಿಯು [illegible] ಬಲ್ಲಿ [illegible] ರಲ್ಲಿ [illegible] ಯಾ [illegible] ಕುಸಿಬಂತ್ಯಾಗ ಆದಿರವಿ ಚಂದ್ರಿಕೆಯ [illegible] ವರಿಗೆ [illegible] ವಾಂಗನಿತ್ತಾಗಿ [illegible] ಶಿವವು [illegible] ಚಂದ್ರಿಕೆ ವಸಂತರಾಯನೂ ಬಂದ [illegible] ಕೊಳ್ಳು [illegible] ಪೀಠ ವಾದನಕ್ಕೆ ಒಪ್ಪಿ [illegible] ಲಕ್ಷಣವಿದೆ ಈಗಲೇ ಇಲ್ಲಿ ಸೋದು ವ್ಯಾನೇಜರನಿಗೆ ರಾಜೀನಾಮೆ ಪತ್ರವನ್ನು ಕೊ [illegible] ಚಂದ್ರಿಕೆ [illegible] ([illegible])

ಬಾ- ಮಾತಾಡುವವರಲ್ಲಿ [illegible] ಹಾಕಿದರಲ್ಲಾ [illegible] ನಿಂದ ಮರು [illegible] ಗಳಿಸುವ [illegible] ನ್ನು ನಾಟಕದ [illegible] ರೆಲ್ಲರೂ ಕಲಿತಿದುತ್ತಾರೆ [illegible] ರೀ! ನನ್ನ ಸ್ವಪನದೇನು ಗಂಟು ಹೋಗುತ್ತದೆ. ಕತ್ತೆಯ ಕಾಲು ಮುರಿದರೇನು ನಾಯಿಯ ಹಲ್ಲು ಮುರಿದರೇನು?

(ಹೋಗುವನು ವಸಂತ ಚಂದ್ರಿಕಾ ಬರುವರು)

ವ- ಶಿಗೇಯೂ! ಇದು ವಚನ ಇದು ತಿರು ಬೀಳದ ವಚನ ಇದು ಶಾಸ್ತ್ರ ವಚನ ಆ ವ್ಯಾನೇಜರನಿಗೆ ಇಷ್ಟು ಸೊಕ್ಕೇ?

ಚ- ನಾನೇನು ಹೇಳಲಿ? ನಾನು ನಿಮ್ಮನ್ನು ನೋಡಿದಾಗಿನಿಂದ ನಿಮ್ಮಲ್ಲಿ

ವ- ನಿಮ್ಮಲ್ಲಿ ಏನು?

ಚ- ನಿಮ್ಮಲ್ಲಿ ನನ್ನನ್ನು ನೋಡಿ ಹೇಗೆ ಆಗಿತ್ತೋ ಹಾಗೆ ಆದರೆ ಮಾಡಲೇನು? ನಾನು ಅವರ ಚಾಕರಳೆಂದೇ ಮಾ ವನ್ನು ಮುಚ್ಚಿಟ್ಟೆನು.

ವ- ಆಗಲಿ ಏನೂ ಚಿಂತೆ ಯಿಲ್ಲಾ

ಬಾ- (ಪ್ರವೇಶ) ಏನಾಗುವದು ಮಣ್ಣು, ಎಲ್ಲ ಪಾರ್ಟಿನವರು ರಾಜೀ ನಾಮೆ ಕೊಟ್ಟು ನಿಮ್ಮ ಕತ್ತಿಗೆ ಕತ್ತಿಯಿಟ್ಟರಲ್ಲಾ.

ವ- ಇಷ್ಟರಲ್ಲಿಯೇ ರಾಜೀನಾಮೆ ಕೊಟ್ಟರೇ?

ಚ- ನಾವು ಮೊದಲೇ ಸಂಕೇತ ಮಾಡಿದ್ದೆವು ನಿಮ್ಮಂಥವರ ಆಶ್ರಯವಿಲ್ಲದರೆ ವರ್ತಾವೆಯೆಂದು ನಾವು ನಿಮ್ಮ ಮುಖವನ್ನು ನೋಡಿದ ಕೂಡಲೇ ಮನದಲ್ಲಿ ನಿಶ್ಚಯಿಸಿದ್ದೆವು.

ಬಾ- (ಸ್ವಗತ) ವಶೀಕರಣ ಲಕ್ಷಣವುಬದ ಮೇಲೆ ಯಾರಿಗೇನು ತಿಳಿಯುತ್ತಿಲ್ಲಾ.

ವ- ಅದಕ್ಕೇಕೆ ಚಿಂತೆ ನಡೆ ಆದರೆ ಚಂದ್ರಿಕ, ನಿನ್ನ ಚಾತುರ್ಯಕ್ಕೆ ನಾನು ಬೆರಗಾದೆನು ನೋಡು.

ಬಾ (ಸ್ವಗತ) ಇನ್ನೂ ಏನು ಇಂಥಾ ಮುಂದೆ ಚಾತುರ್ಯಕ್ಕೆ ಬೆರಗಾಗಿ ಬೆನ್ನಾಗುವ ಪ್ರಸಂಗ ಬಂದರಾಯಿತಲ್ಲೋ! ನಾನೇನು ಊರುಸೇರು ಕೆ ದಿವಸಳು ಅವಳು ನಿಮ್ಮಂತೆ ಬಂದೇ ಊರದಲ್ಲ

ವ- ಚಂದ್ರಿಕ, ನಡೆ ಸಾಕು ನಡೆ ಇನ್ನು (ಹೋಗುವರು)

ಪ್ರವೇಶ ೪

ಸ್ಥಳ— ವ್ಯಾನೇಜರನ ಆಫಿಸು

ವ್ಯಾನೇಜರನು ಕೈಯಲ್ಲಿ ಕಾಗದಗಳನ್ನು ಹಿಡಿದು, ಕೆನ್ನೆಗೆ ಕೈ ಹಚ್ಚಿ (ಚಿಂತಾಕ್ರಾಂತನಾಗಿ ಮುಖ ಮುದುರಿಸಿಕೊಂಡು ಕುಳಿತಿರುವನು)

ವ್ಯಾ ಏನು! ಎಲ್ಲರದೂ ಒಮ್ಮೆಲೇ ರಾಜೀನಾಮೆಯೋ ಇದೇನು ಕೇಡುಗಾಲ ಬಂದಿತು. ರಾಮಾ! ಏ ರಾಮಾ!

ರಾ- (ಪ್ರವೇಶಿಸಿ) ಯಾಕೆ ರಾಯರೇ?

ವ್ಯಾ ರಾಯರೆನ್ನುವದೇನು ಗಾಡಿನಲ್ಲಿದು ಆದರೆ ಬಂದಿಲ್ಲ ಹೋಗು ಆ ಚಂದ್ರಿಕೆಯು ಯಲ್ಲಿ?

ರಾ- ಆಕೆ ಮುಂಜಾನೆಯೇ ಮನೆಯಿಂದ ಸವಲಕನು ಹಾರಿಸಿ ಕೊಂಡು ಬೊಂದಿಗೆ ಹೋದಳು ನನಗೆ ಗೊತ್ತಿದ್ದ ಹ ದೆಂದು ಸುಮ್ಮನಾದೆನು

ವ್ಯಾ ಅಯ್ಯೋ! ಕುಟಿಲೇ, ಹ್ಯಾಂಡವಿಲ್ಲು ಹಂಚಿದ್ದಾರೆಲ್ಲಾ ಹೇಗೆ ರಾಮಾ

ರಾ ಮೋಸ ಬಂದು ಕಾಸು ಹೊರತ್ತಾಯಿತು

ವ್ಯಾ- ಏನು ಮಾಡಲಿನ್ನು? ನನಗೆ ರಂಗಭೂಮಿಯ ಸ್ಥಿತಿ ನೀರೆ ಯುದೆ ಹೊಂತು ಕಾಣದಾಡಿಯೋ? ಬೆಳ್ಳನ್ನು ತೂಟ ಕೆಯಿಂದು ಸಾಧಾರವೇ? ಮುಸ್ತಿ, ನನ್ನ ಅನ್ನವನ್ನು ತಿಂದ ನನಗೆ ತಿರುಗಿ ಬಿದ್ದಿರೋ ರವ್ವಾ, ಗಿರಿಜ್ಜ, ರಾಮ್ಯಾ ಪಾತ್ರಳೇ ಮೋಸಮಾಡಿದಿರಲ್ಲಾ!

ರಾ- ರಾಯರೇ, ನಾನಿಲ್ಲೇ ಇದ್ದೇನೆ ನಾನೇನು ಮೋಸ ಮಾಡಿದೆನು ಸೀರೆಯುಟ್ಟು ಕೊಂಡು ಸ್ತ್ರೀ ಯಾಗಲಿಕ್ಕೆ ಹೇಳಿರಿ ವಲ್ಕಲಗಳನ್ನುಟ್ಟುಕೊಂಡು ವನವಾಸಿಯಾದ ರಾಮನಾಗಲಿಕ್ಕೆ ಹೇಳಿರಿ ಇಲ್ಲವೇ ಬಾಲಪಚ್ಚಿದ ಬಲಭೀಮನಾಗಲಿಕ್ಕೆ ಹೇಳಿರಿ ಹಾಗೆಮಾಡುತ್ತೇನೆ.

ಮ್ಯಾ- ಕತ್ತೆ ತಿಂತಿಣಿ ತೆಗೆದುಕೊಂಡು ಎಲ್ಲಮನ ಜೋಗತಿಯಾಗು ಹೋಗು ಒಮ್ಮೆಗನೇ ನನ್ನೆದುರಿಗೆ ನೀನೂ ನಿಲ್ಲಬೇಡಾ

ರಾ- ನಾನು ಜೋಗತಿಯಾದ ಮೇಲೆ ನಿಮಗೆ ನೀರು ಕೂಳು ಕೊಡುವವರಿಲ್ಲದೇ ಜೋಗಳ ಹಾಡಬೇಕಾದೀತು. ನೋಡಿರಿ ರಾಯರೇ (ಹೋಗುವನು)

ಮ್ಯಾ- ರಾಮ್ಯಾ ರಾಮ್ಯಾ ಹ್ಯಾಂಡಬಿಲ್ಲು ಗಂಡಲ್ಲಿ ಹರಿಯುತ್ತ ಹೋಗು ಇಲ್ಲವಾದರೆ ಸರಿಯಾಗಿ ಒಂಬತ್ತುವರೆಗಂಟೆಗೆ ಊರ ಪಿರ್ಕ್ಯಾಜಿಗಳು ಬಂದು ರಂಗಭೂಮಿಯ ಮೇಲೆ ರಾಮಾಯಣ ಮಹಾಭಾರತ ಹಾದರಗಿತ್ತಿಯರನ್ನು ಹಿಡಿದು ತಂದು, ರಂಗಭೂಮಿಯನ್ನು ರಂಗುಮಾಡಿ ಮಂದಿಯನ್ನು ದಂಗುಬಡಿಸಬೇಕೆಂದರೆ ನನಗೆ ಇಂಗು ಹಚ್ಚಿದರು. ಆಗಲಿ ಪಸಂತ್ಯಾ ಇವೆಲ್ಲ ನಿನ್ನದೇ ಕಾರಸ್ಥಾನ. ಈ ಸೇಡನ್ನು ತೀರಿಸಿಕೊಳ್ಳದಿದ್ದರೆ ನಂಬ್ಬಬೇಕ್ಯಾಕೆ (ಹೋಗುವನು)

ಸಮಾಪ್ತ.

ಜಯ ಕರ್ನಾಟಕ ಮಾತಾ

[illegible]ಗಳು ಹೋಗುತ್ತವೆ, ಅಂಚೆಯವರಿಗೆ ಸುಗ್ಗಿ. ವಿ ಪಿ ಹೋಗಿ ಸೇರುತ್ತದೆ. ಹುಬ್ಬು ಗಂಟುಹಾಕುವವರೋ- ನಿದ್ದಾನವನ್ನೂ ತಪ್ಪಿ ಬಯ್ಯುವರೋ- ಉಗಿಯುವರೊ- ಸಂಪಾದಕ ಮಹಾಶಯರು ಸರ್ವ ವ್ಯಾಪಿಯಾಗಿದ್ದರೆ ಎಷ್ಟು ವಿಷಮ ದೃಶ್ಯಗಳನ್ನೂ ನೋಡಬಹುದೋ. ಹತ್ತು ದಿನಗಳಾದ ಮೇಲೆ ಮಳೆಯಕಾಲದ ಹುಳುಗಳಂತೆ ರಾಶಿ ರಾಶಿಯಾಗಿ ವಿಕೃತಿ ಸ್ವರೂಪಗಳನ್ನೂ ಮಾಸಿಮ ನಿಮಕಾಗಿ ಹೋದ ಪತ್ರಿಕೆಗಳ ಹಿಂಡುಗಳು ತೌರುಮನೆಯನ್ನೂ ಬಂದು ಸೇರುತ್ತವೆ. ಇದೇ ಈ ಕಾಲದ ದಕ್ಷಬ್ರಹ್ಮನ ಯುಗ.

× × × ×

ಆದರೆ ನಮ್ಮವರೇನು ಲೊಭಿಗಳೇನು ಅಲ್ಲವೇ ಅಲ್ಲ ಉದಾರಮನಸ್ಕರೇನೋ ಇರಬಹುದು. ಆದರೆ ಉದಾಸೀನವನ್ನೂ ಬಿಟ್ಟಿಲ್ಲ. ಅಷ್ಟೇ [illegible]! ಉದಾಸೀನ ಈ ಚತುರ್ಥಾಕ್ಷರಿಯೇ ನಮ್ಮನ್ನು ಜಡವಾದ ಜಂತುಗಳನ್ನಾಗಿ ಮಾಡಿರುವುದು. ಇದೇ ನಮ್ಮ ಎಷ್ಟೋ ಅನರ್ಥಗಳಿಗೆ ಕಾರಣ.

× × × ×

ಉದಾಸೀನ ವಿಲ್ಲದಿದ್ದರೆ ಒಂದು ವಿಧವಾದ ಮೂಢ ದೈನ್ಯಭಾವವು ನಮ್ಮವರನ್ನು ನಿಸ್ತೇಜರನ್ನಾಗಿ ಮಾಡುತ್ತಿದೆ. "ನಾವು ಏನು ಮಾಡಬಲ್ಲೆವು? ನಮ್ಮಲ್ಲಿ ಯೋಗ್ಯತೆಯಿಲ್ಲ ದೊಡ್ಡವರು ಮಾಡಿಕೊಳ್ಳಲಿ." ಇದು ಇತರರ ಕೆಲಸ ನಮ್ಮಂತಹ ಅಲ್ಪರಿಂದ ಏನಾಗುತ್ತದೆ. ಎಂಬ ಪಲ್ಲವಿಯನ್ನು ಹಾಡುತ್ತ ನಿಶ್ಚೇತನರಾಗಿ

ಚಂದಾದಾರರಲ್ಲಿ ಬಿನ್ನಹ.

ಹೊಸ ವರ್ಷ ಚಂದಾ ಹಣವನ್ನು ಮನಿಯಾರ್ಡರದಿಂದ ಕಳಿಸದೇಯಿದ್ದವರಿಗೆಲ್ಲ ವ್ಹಿ. ಪಿ ಕಳಿಸಲ್ಪಟ್ಟಿದೆ. ದಯವಿಟ್ಟು ಅಭಿಮಾನಿ ಶಾಲಿಗಳು ವಿ ಪಿ. ಸ್ವೀಕರಿಸಿ ಹಿಂದಿನಂತೆ ಕನ್ನಡಿಗವನ್ನು ಪ್ರೋತ್ಸಾಹಿಸಬೇಕಾಗಿ ಬಿನ್ನಹ. ವ್ಯವಸ್ಥಾಪಕ "ಕನ್ನಡಿಗ"

ತುಂಬಿನ ಹರಟೆ

ಕರ್ನಾಟಕ [illegible] ಕೀಕರಣದ ಒಗ್ಗೆ ಪ್ರಶ್ನೆ ಮಾಲಿಕೆ ಹೊರಟಿದೆ. ಉತ್ತರ ಮಾಲಿಕೆಗಳು ಬರಬೇಕೆಂದು ಮಾತ್ರ ಎಲ್ಲರ ಇಚ್ಛೆ. ಆದರೆ [illegible] ಇಲ್ಲ ಬರೆದ ಪ್ರಶ್ನೆಗಳಿಗೆ ಉತ್ತರಗಳು ಬರೆಯುವ ಅಭ್ಯಾಸವನ್ನೂ ಮಾಡಿದರೆ ಎಂದಿಗೂ ನಮಗೆ ಸ್ವರಾಜ್ಯ ಒಂದೇ ಇರಬೇಕೆಂಬುದರಲ್ಲಿ ನನಗೇನು ಸಂದೇಹವಿಲ್ಲ ಇದು ಸಾಮಾನ್ಯ ಜನರ ಮೇಲೆ ಮಾಡಿದ ಟೀಕೆಯಲ್ಲ ಅಸಾಮಾನ್ಯರಲ್ಲಿಯೂ ಈ ದೋಷವು ಉಂಟು. ಯಾವದಾದರೊಂದು ಸಂಸ್ಥೆಯ ಕಾರ್ಯದರ್ಶಿಯು ಗೋಳನ್ನು ನೋಡಿ. ಅವನು [illegible] ಕೊಳ್ಳಿ. ಸದಸ್ಯರೆಲ್ಲರಿಗೂ ಪತ್ರವನ್ನು ಬರೆಯುವನು. ಒಂದು ಕ್ಲಿಪ್ತ ದಿನದೊಳಗಾಗಿ ಉತ್ತರ ಬರಬೇಕೆಂದು [illegible] ಕರ್ತವ್ಯಾಗಿ ಮತ್ತೊಮ್ಮೆ ಬರೆಯುವನು. ನೂರು ಸದಸ್ಯರಲ್ಲಿ ಇಪ್ಪತ್ತು ಜನ ಆಲಸ್ಯ ಮಾಡಿದರಾದರು ಉ[illegible] ಕಾರ್ಯದರ್ಶಿಯ ಧೈರ್ಯವು [illegible] ಕಾಸಾರಾಪತ್ರ [illegible] ಇಂತಹದೇ. ಕೈಮೋಡಿಸಿ ತನ್ನ ಚಂದಾದಾರರನ್ನು ಬೇಡುವರು ಅಯ್ಯಾ ನಮ್ಮ ಪತ್ರಿಕೆಯ [illegible] ಅದಕ್ಕೆ [illegible] ಮಾಡಿ [illegible] ದಯಮಾಡಿ, [illegible] ವಿ ಪಿ. (ವ್ಹಿ. ಪಿ ಎನ್ನಬೇಕೊ !) ಯನ್ನು ಸ್ವೀಕರಿಸಿ!! ಒಂದೂ ಎರಡೋ ಪತ್ರಿಗಳು ಮಾತ್ರ [illegible] ವಿ ಪಿ ಗಳ [illegible] ವಿ. ಪಿ

ನರುಲ್ಲಿ ಬಹಳ ಜನ ಕಾಬುಬಾಚಿ ತೂಕುಡಿಸುತ್ತಿರುವರು. ಇದರ ಮರ್ಮವೇನೆಂದರೆ ಅವರು ನಿಜವಾಗಿಯೂ ಅಲ್ಪರೇ ಆಗುವರು ಆ "ಇತರರು" ಯಾರೋ ದೇವರಿಗೇ ಗೊತ್ತು,

× × × ×

[illegible] ಕರ್ನಾಟಕದ ಎಷ್ಟರ ಮಟ್ಟಿಗೆ [illegible] ನೋಡಬೇಕಾಗಿದೆ. ನನಗೇನೋ ದೊಡ್ಡವರಲ್ಲಿ, ಮುದುಕರಲ್ಲಿ ನಂಬುಗೆಯಿಲ್ಲ ಬಲವಾದ ನೆರಿಗೆ ಸಿಕ್ಕಿ ದಿಕ್ಕು ತೋಚದೆ ನರಳುವ ಮೀನುಗಳಂತೆ ಈಗಿನ ಮುದಕರ ಪಾಡು (ಮಿಸೆಯು ನರೆತಿದ್ದ ಮಾತ್ರಕ್ಕೆ ಮುದಕರೆಂದು ಮಾತ್ರ ನಂಬಬೇಡಿ "ಮುದಕರಂದ ಮಾತ್ರಕ್ಕೆ ಗುಪ್ಪಿನ ವಯಸ್ಸಿನವರ ಮೇಲೆ ನಾನು ಟೀಕೆಯನ್ನು ಮಾಡುತ್ತೇನೆಂದು ಎಣಿಸಬಾರದು ನಾನು ಹೇಳುವುದು ಮಿಸುಳ್ಳ ಮೆತ್ತಗಾಗಿದ್ದ "ಮುದುಕರ" [illegible]) ಹುಟ್ಟು ಕುರುಡರಂತೆ ಕೆಲವರು [illegible] ಇದನ್ನು ಯಾವ ತರುಣರೇ ಮರೆಯ [illegible] ಇಂತಹ [illegible] ವೃದ್ಧಕ್ಕೆ ಬಂದು [illegible] ತೆಗಳನ್ನೂ ಕೆಡಿಸಿ ಯಾದು ಬೇಕೇ!

× × × ×

[illegible] ತರುಣರ ಶಕ್ತಿ ಮುದಕರಲ್ಲಿಯೂ [illegible]. ([illegible]! ಮುದುಕರಿಗಳು [illegible]) ಉತ್ಸಾಹವು ಹುಟ್ಟುವುದಕ್ಕೆ ನಾನು ಹೇಳುವುದು ಈ ಶಕ್ತಿಯು ತರುಣರ ಸಣ್ಣ ಪುಟ್ಟ ಗುಂಪುಗಳಿಂದ ಬೆಳೆಯುತ್ತದೆ. ಈಗಾಗಲೇ ಒಂದು [illegible] ತುಂಟರ ಗುಂಪೊಂದು ಇತ್ತ ರಚಿಸ್ಪರಾದ

ವು. ಅಂದರೆ ಬಹಿರಂಗವಾಗಿ ಪ್ರವರ್ತಿಸುವವು ಬಯಲಿಗೆ ಬಂದವು ಇನ್ನೂ ಕರ್ನಾಟಕದಲ್ಲಿ ಗುಪ್ತವಾಗಿ ಎಷ್ಟು ಗೆಳೆಯರ ಗುಂಪುಗಳೂ ತುಂಟರ ಗುಂಪುಗಳೂ ಇವೆಯೋ ನಾನು ಕಾಣೆ. ಹೀಗೆ ಇಲ್ಲದಿದ್ದರೆ ಕರ್ನಾಟಕಕ್ಕೆ ವಿಮೋಚನೆ ಯಿಲ್ಲ. ಆದರೆ ಎಲ್ಲಕ್ಕಿಂತಲೂ ಮುಖ್ಯವಾಗಿ **ಹುಚ್ಚರಗುಂಪುಗಳು** ಬೇಕು. ಹುಚ್ಚರು ಹೊರಡದಿದ್ದರೆ ದೊಡ್ಡ ಕೆಲಸಗಳು ಸಾಗಲಿಕ್ಕಿಲ್ಲ ನಾನೂ ಎಲ್ಲಿಯಾದರೂ ಆದೀತೇನೊ ಎಂದು ಕಾದಿದ್ದೇನೆ ಆದರೆ ನನ್ನ ಮನಸ್ಸಿನಲ್ಲಿ ಮಾತ್ರ ಇಂತಹ ಗುಂಪಿಗಳಿಗೆಲ್ಲಕ್ಕೂ ಕಾರ್ಯದರ್ಶಿ (General secretary) ಯಾರೆಂಬವನ್ನೂ ನಿಯಮಿಸಿಟ್ಟಿದ್ದೇನೆ ಅದು ಯಾರು ಹೇಳಲೇನು? ನನ್ನ ಪರಮಮಿತ್ರರಾದ "ಕನ್ನಡಿಗ"ನಸಂಪಾದಕರು ಹೇಗೆ ಅವರ ವಿಷಯವಾಗಿ ಮಾಡಿದ ಪ್ರಣಯ ಟೀಕೆಗಾಗಿ ಈ ಜೇಟಿಯನ್ನು ಅವರು ಹೇಗೆ ಮುಪ್ರಿಸದೆ ಇರುವರೋ ನೋಡುವಾ.

—ತುಂಟರಚಳ್ಳಿ

(೪ ನೇ ಪಾನಿನಿಂದ ಬಂದಿದ್ದು)

ಹೆಂಗಸರಿಗೆ ಮಾನಭಂಗ ಮಾಡಿದರೆಂದೂ, ಅವನ್ನು ವಿಚಾರಣೆಮಾಡಲೋಸುಗ ಮ|| ರಾಮಚಂದ್ರರಾಯರು,ಮೋಪ್ಲಾ-ಪ್ರಾಂತ್ಯಕ್ಕೆ ಹೋಗಿರುವರೆಂದೂ, ತಿಳಿದು ಬರುತ್ತದೆ. ಇಂಥಾದಬ್ಬಾಳಿಕೆಗಳು ಇಣಿಯರ ಕಾರ್ಯಕ್ಕೆ ಹೆಚ್ಚು ಉತ್ತೇಜಕವಾದವುಗಳು ಈ ಮಧ್ಯ, ಉತ್ತಮ ವರ್ಣದವರೆಂದು ಹೇಳಿಕೊಳ್ಳುವವರ ವರ್ತನವು ಬಹಳ ನಿಂದ್ಯವಾದುದು

ರಾಜಧಾನಿಯ ಪೈಸ್‌ರಾಡು ರೋಡಿನಲ್ಲಿರುವ, ಶ್ರೀಮನ್ ಗೋವಿಂದಾಚಾರ್ಯಸ್ವಾಮಿಗಳವರ ಮನೆಯ ಬಯಲಿನಲ್ಲಿ ಈ ತಿಂಗಳು ೧೧ನೇ ಯ ತಾರೀಖು ಸಾಯಂಕಾಲ ೬ ಘಂಟೆಗೆ, ಒಂದು ಸಭೆ ಸೇರಿತ್ತು. ಅಗ್ರ್ಯ, ಶ್ರೀ. ಪಿ. ಆರ್. ರಾಮಯ್ಯನವರು, ಹಿಂದೂಧರ್ಮದ ವಿಷಯವಾಗಿ ಉಪನ್ಯಾಸ ಮಾಡಿದರು.

ಕೌಲೂರ. ಭೀಮಣ್ಣರಾವ

ಹಿಂದುಸ್ಥಾನಿ ಸೇವಾದಳ

ಅಸಾಮ ಕಾಂಗ್ರೆಸಕ್ಕೆ ಸ್ವಯಂಸೇವಕರಾಗಲಿಚ್ಛಿಸುವವರು ಕೆಳಗೆ ಬರೆದಷ್ಟರಲ್ಲಿ ಒಂದು ಕಲಮನ್ನಾದರೂ ಪೂರ್ತಿಗೊಳಿಸಬೇಕಾಗಿ ಡಾಕ್ಟರ ಹರ್ಡೀಕರರಿಂದ ಪ್ರಸಿದ್ಧವಾಗಿದೆ

(೧) ಜಿಲ್ಹೆಯಲ್ಲಿ ಕನಿಷ್ಠ ೧೦೦ ಕಾಂಗ್ರೆಸ್ ಸಭಾಸದರನ್ನಾಗಿ ಮಾಡುವದು.

(೨ ಜಿಲ್ಹೆಯಲ್ಲಿ ಕನಿಷ್ಠ ೧೦೦ ರೂ. ಹಣವನ್ನು ಸಂಗ್ರಹ ಮಾಡುವದು

(೩) ಕನಿಷ್ಠ ೨೦೦ ಜನರನ್ನು ಹಿಂದುಸ್ಥಾನೀ ಸೇವಾದಳದ ಸಭಾಸದರನ್ನಾಗಿ ಮಾಡುವದು. ಮತ್ತು ೧೧ ಜನರಿಗೆ ಸೇವಾದಳದ ಶಿಕ್ಷಣವನ್ನು ಕೊಡುವದು.

(೪) ಹಿಂದುಸ್ಥಾನೀ ಸೇವಾದಳದ ಶಾಖೆಗಳನ್ನು ಭದ್ರವಾಗಿ ಮಾಡುವದು ಮತ್ತು [illegible] ವ್ಯಾಯಾಮ [illegible] ಸ್ಥಾಪಿಸುವದಲ್ಲದೆ ಆ ಶಾಲೆಗಳಲ್ಲಿ ೧೧ ಜನರಿಗೆ ಶಿಕ್ಷಣವನ್ನು ಕೊಡುವದು.

( ) [illegible] ೧೦೦ ಸಭಾಸದರನ್ನು ಸೇವಾದಳಕ್ಕೆ [illegible] ಹಾಗೂ ಕನಿಷ್ಠ ೧೧ ಜನರಿಗೆ ದಳದ ಶಿಕ್ಷಣವನ್ನು ಕೊಡುವದು.

ವರ್ತಮಾನಸಾರ

ಇಹವೃತ್ತ

ಮೊನ್ನಿನ ಶನಿವಾರ ತಾ|| ೧೭-೪ ೨೬ ನೇ ದಿನ ರಾತ್ರಿ ಚಾಕೀ ಮಠದಲ್ಲಿ ಒಟ್ಟಿದ ಬಣವಿಗಳಿಗೆ ಬೆಂಕಿ ತಗಲಿ ಬಹಳೇ ಹಾನಿಯಾಯಿತು. ಸುಮಾರು ೨೦೦-೨೫೦ ಬಣವಿಗಳು ಅಗ್ನಿನಾರಾಯಣನಿಗೆ ಸಮರ್ಪಣವಾದವು ವ್ಯಾಪಾರದ ಶಹರವಾಗಿದ್ದರಿಂದ ಈ ತರಹದ ಅನರ್ಥಗಳು ಮೇಲಿಂದ ಮೇಲೆ ಆಗುವವು ಇಷ್ಟರೂ ಮ್ಯುನಿಸಿಪಾಲ್ಟಿಯವರು ನೀರಿನ ವ್ಯವಸ್ಥೆಯನ್ನಿಟ್ಟಿಲ್ಲ. ಯಾವ ಜಾಗದಲ್ಲೊಂದು ಮಧ್ಯವರ್ತಿಸ್ಥಳದಲ್ಲಿ ನೀರಿನ ಸಂಗ್ರಹವಮಾಡಿಡುವದು ಮುನಿಸಿಪಾಲಟಿಯ ಕರ್ತವ್ಯವಲ್ಲವೇ?

ಜ್ವರದ ಬಾಧೆಯು ವಿಶೇಷವಾಗಿದೆ ನೀರಿನಬೋಗಳಿಯಾದರೂ ಹೆಚ್ಚಾಗಿದೆ. ಊರ ಬಾವಿಗಳಲ್ಲಿ ನೀರು ಬಹಳೇ ಕಡಿಮೆಯಾಗಿದೆ. ಮುನಿಸಿಪಾಲ್ಟಿಯವರು ಬಾವಿಯೊಳಗಿನ ಕೆಸರು ತೆಗೆಸುವರೋ?

ಮುಂಬೈಕರ್ನಾಟಕ

ಮುಂಬೈ ಕರ್ನಾಟಕದಲ್ಲಿ ಒಟ್ಟಿಗೆ ೪೬ ಗಿರಣಿಗಳು "ಪ್ರೆಸಿಂಗ ಫ್ಯಾಕ್ಟರಿ" ಇರುತ್ತವೆ ಅವುಗಳಲ್ಲಿ ವಿಜಾಪುರ ಜಿಲ್ಹೆಯಲ್ಲಿ ೧೩; ಬೆಳಗಾವಿಜಿಲ್ಹೆಯಲ್ಲಿ ೧೦; ಧಾರವಾಡ ಜಿಲ್ಹೆಯಲ್ಲಿ ೨೩;

ಮದ್ರಾಸ ಕರ್ನಾಟಕ

ಬಳ್ಳಾರಿಯಲ್ಲಿ ಇದೇವರ್ಷ ಮೇ ತಿಂಗಳು ೨೦, ೨೧ ನೇ ತಾರೀಖುಗಳಲ್ಲಿ ನಾಲ್ಕನೆಯ ಕರ್ನಾಟಕ ಪ್ರಾಂತಿಕ ಮಹಾಸಭೆಯೂ ಕರ್ನಾಟಕ ಏಕೀಕರಣ ಸಭೆಯೂ ಜರುಗುವವೆಂದು ಕಾರ್ಯದರ್ಶಿಗಳು ತಿಳಿಸುತ್ತಾರೆ.

ಇದೇವರ್ಷ ಮೇ ತಿಂಗಳು ೨೨, ೨೩ ತಾರೀಖಿನಲ್ಲಿ ಬಳ್ಳಾರಿಯಲ್ಲಿ ಕರ್ನಾಟಕ ಸಾಹಿತ್ಯ ಪರಿಷತ್ತು ಜರುಗುವದು.

ಕೀರ್ತನ ಸಮ್ಮೇಲನದ ೪ ನೇ ಪ್ರಕಟನೆಯು ನಮ್ಮೆಡೆಗೆ ಬಂದಿದೆ ಸಮ್ಮೇಲನದವರು ಈ ಸಲ ೧೦೦ ಪುಟಕ್ಕಿಂತ ಕಡಿಮೆ ಇರದ ಒಂದು ಕೀರ್ತನ ಬರೆದವರಿಗೆ ೫೦ ರೂಪಾಯಿ ಬಹುಮಾನ ಕೊಡುವರಂತೆ! ಕೀರ್ತನವು ಕನ್ನಡ ಭಾಷೆಯಲ್ಲಿರಬೇಕು ಪದ್ಯಗಳು ವಿಶೇಷವಾಗಿ ಹಳೆಗನ್ನಡ ಆಧಾರಸಹಿತ ಕನ್ನಡದಲ್ಲಿರಬೇಕು ಅಲ್ಲದೆ ಕೀರ್ತನೋಪಯೋಗಿ ನಿಬಂಧ ಬರೆದವರಿಗೆ ಸಹ ಬಹುಮಾನ ಕೊಡುವರಂತೆ ಬರುವದ್ದು ಕೀರ್ತನಕಾರರೂ ಕೀರ್ತನಾಭಿಮಾನಿಗಳೂ, ಈ ಸಮ್ಮೇಲನದಲ್ಲಿ ಭಾಗವಹಿಸಬೇಕೆಂದು ಪ್ರಾರ್ಥನೆ

ಹಿಂದುಸ್ಥಾನ

ಮಹಾತ್ಮಾ ಗಾಂಧಿಯವರ ಪ್ರಸಿದ್ಧ ಶಿಷ್ಯೆಯಾದ ಕುಮಾರಿ ಮ್ಯಾಡಲೀನ ಸ್ಲೇಡಳು "ಯಂಗ್ ಇಂಡಿಯಾ" ದಲ್ಲಿ ತನ್ನ ಹೊಸ ಆಯುಷ್ಯಕ್ರಮದ ಬಗ್ಗೆ ಒಂದು ಲೇಖ ಬರೆದಿದ್ದು ಅದರಲ್ಲಿ ತಾನು ಸತ್ಯಾಗ್ರಹಾಶ್ರಮದಲ್ಲಿ ಸುಖದಿಂದ ಇರುವೆನೆಂದು ತಿಳಿಸಿದ್ದಾಳೆ. ಊಟ, ಉಡಿಗೆಗಳೆಲ್ಲ ಹಿಂದೀಯರಂತೆಯೆ

ವ್ಯಕ್ತಿ ಸತ್ಯಾಗ್ರಹ ಸಂಘವು ಮದ್ರಾಸಿನಲ್ಲಿಯೂ ಸ್ಥಾಪನೆಯಾಯಿತು ಕರ್ನಾಟಕದಲ್ಲಿಯೂ ಹೀಗೆ ಸ್ಥಾಪಿಸಬೇಕೆಂದು ಹೇಳುತ್ತಿರುವ ಅದು ಈಗಿಲ್ಲವೆ!

ಮುಂಬೈ ಇಲಾಖೆಯ ಬ್ರಾಹ್ಮಣೇತರರ ೧ ನೇ ಪರಿಷತ್ತು ಮುಂಬೈಯಲ್ಲಿ ಮೇ ೧-೨ ತಾ. ಗಳಲ್ಲಿ, ಕೊಲ್ಹಾಪುರದ ರಾಮರಾವ ಪಾಟೀಲರ ಅಧ್ಯಕ್ಷತೆಯಲ್ಲಿ ನೆರೆಯುವದು.

ಜರ್ಮನ್ ಜನರು ಮಹಾತ್ಮಾಗಾಂಧಿಯವರ ಕೃತಿಗಳನ್ನು ಹೆಚ್ಚಾಗಿ ಅಭ್ಯಾಸಿಸುತ್ತಿರುವರು.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ, ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

ಜನುಖಂಡಿಕರ ವಾಡೇ ೪೬೫ ಶನಿವಾರ ಪುಣೇಶಹರ

ಗುಲಕಂದ ಗುಲಕಂದ ಗುಲಕಂದ

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ನೂರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು. ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತಯಾರಾಗಿಯೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತುಂಬಾ ಕಮಿಶನ್.

ವಿಳಾಸ:— ಧುಂಡಗೆ ಸಾವಾಣಕರ ಕಂಪನಿ.

ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ ವಿರುತ್ತದೆ. ಇದರ ಸೇವನದಿಂದ ಬಾಯಿಯು ಹೊಲಸು. ವೇದನೆ, ಹುಳ ಇವು [illegible]ವಾಗಿ ಹಲ್ಲುಗಳು ಒಳ್ಳೇ ಪಕ್ಕಿಯಾಗುತ್ತವೆ. ಇದರ ಸೇವನದ ದಮ್ಮು, [illegible] ಂತಾದ ವಿಕಾರಗಳುಂಟಾಗುವ ಸ್ವಲ್ಪವೂ [illegible]ತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ನುಭವ [illegible] ರೂ ೨-೦-೬. ೨೫೦ ಕಿಂ [illegible] ಕಿಂ ರೂ ೧-೮-೦; ೧೦೦೦ ಪುಡಿಗಳ [illegible] ವಿ ಖರ್ಚುವಗೈರೆ ಪ್ರತ್ಯೇಕ.

ಸುಗಂಧಿ- [illegible] — ಈ ನಸ್ಯವು ಒಳ್ಳೇ ತಂಬಾಕಿನಿಂದ [illegible]ದ್ದು, ಇದರಿಂದ ಪೈತ್ಯ ಥಂಡಿ, ಅರತಲೆನೋವು ಮುಂತಾದಗಳು ಕೂಡಲೆ ಮಾಯವಾಗಿ ತಲೆಯು ಹಗುರವಾಗಿದ್ದರೂ [illegible] ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದ [illegible]ದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ ಒಮ್ಮೆ ಪರೀಕ್ಷಿಸಿ ಖಾತ್ರಿ ಮಾಡಿಕೊಳ್ಳಿರಿ. ೧ ಡಬ್ಬಿ ಕಿಂ [illegible] ೧ ಡಜನ [illegible] ಕಿಂ ರೂ. ೨-೦-೦. ಪೋಸ್ಟೇಜ ಬೇರೆ.

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ [illegible] ಕಿಮ್ಮತ್ತಿನ [illegible] ಬಿದ, ಪುರವತ್ ನೋಡಿ ಮ್ಯಾನೆಜರ [illegible] ನಮ್ಮಲ್ಲಿಯ ಬಾಜಾರ [illegible] ಎಲ್ಲಾ ಪ್ರಕಾರ [illegible] ತಂಬಾಕು ಬರುತ್ತದೆ ಬೇಕಾದ [illegible] ತಂಬಾಕನ್ನು [illegible] ವಿಕ್ರಿ ಮಾಡಿ [illegible] ಸುವೆವು ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ [illegible] ಉತ್ತರ ಬರೆಯುವೆವು

ಪತ್ತೆ:— [illegible] ಬೀಡಿ ಮತ್ತು ತಂಬಾಕು ಜರ್ದಾ [illegible] ಬೆಳಗಾವ.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಛಾಪಿ ಹಚ್ಚಿದ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣ ಯುಕ್ತ ೩೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

ಕಣ್ಣಿನ ಔಷಧ

ಹೂವು. ಪೊರೆ [illegible], ದೃಷ್ಟಿ ಮಾಂದ್ಯ, ಕಾಮಾಲೆ [illegible], ಕಣ್ಣು [illegible], [illegible], ಮತ್ತು [illegible] ರೆಪ್ಪೆ ಬಕ್ಕಗಳ ವಿಕಾರ ಇಂತಹ ಕಣ್ಣಿನ ಎಲ್ಲ ಬೇನೆಗಳಿಗೆ ಈ ಔಷಧವು ಸಂಜೀವಿನಿಯು [illegible] ಡಾ. ಡಿ. ಕಲಿಕ್ಟರ [illegible] ಅನೇಕರಿಗೆ ಈ ಔಷಧ ಕೊಟ್ಟಿರುವದ ಬಗ್ಗೆ [illegible] ಎಂಥ ರೋಗಗಳೂ [illegible]

[illegible] ಇಂಗ್ಲಿಷ [illegible] ಅಥವಾ [illegible]ಯಲ್ಲಿ [illegible] ಶನಿವಾರ ಪುಣೆಶಹರ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ

ಇವರು ಎಪ್ರಿಲ ೧ ನೇ ವಾರದಿಂದ ಮಡಕೇರಿಯಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನು ಪ್ರಾರಂಭಿಸುವರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫–೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಛೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಈಗ ಕಾಣಿಸಿದ ಸದ್ಗೃಹಸ್ಥರಿಗೆ ಒಟ್ಟಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ತೀ—

(೧) ಬಾಂಡ ನಂ. ೬೭೦ ಮಿ|| ಏಕ್ಯಲಿ ಬಸಪ್ಪಾಜಿ ಸೇಟ ಕಲಾಸ್ ಅಲಿಬಾಗ ಜಾಂಬೆ,

(೨) ಬಾಂಡ ನಂ ೧೩೬೦೭ ಮಿ| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ. ಸಿರಾ ತಾಲ್ಲೂಕ ಸಿರಾ (ಜಿ ತ.ಮಕೂರು.)

(೩) ಬಾಂಡ ನಂ. ೧೪೯೪೭ ಮಿ| ವಂಕಟರಮಣ. ವೆಂಕಟರ ಮಣ ಜಿಗಳೆ, ಸೇಠಕೆರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. B. C. ಬಾಂಡ ನಂ ೧೮೭೩ ಮಿ|| ಬಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರಹ್ಮಾವರ ಬಳ್ಳಾರಿ.

(೫) ಬಾಂಡ ನಂ. ೩೯೦ ಮಿ|| ರಾಮಚಂದ್ರ ನಾಮನ ಕಾಂ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೯೦ ಮಿ|. ಆರ್. ಎಚ್. ನಾಟಿಸಸ್ ಮಾಸ್ತರ ಗವರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ. (ಡೆಕ್ಕನ)

ಬಿ. ಎಸ್. ಅರಸೇಘ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಪೋರವಾಲ ಬ್ಲ್ಯಾಕ ಟೂಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ–೫ ಆಣೆ ಟ ಪಿ ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಬ್ರಾಂಡ ಕೊ (ರಜಿಸ್ಟರ್ಡ) ಪುಣೇ ಶಹರ

ಅಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟಿ. ಖ ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ಪಕ್ಕೆ ಮಾಡಿ ಕಳಿಸುವೆವು

ಲಿಬರ್ಟಿ ವಾಚ ಕಂ. (J. B. 13) ಮುಂಬೈ ನಂ. ೪

ಕಾನಡೀಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಮನಃಪೂರ್ವಕವಾಗಿ ಬರೆದ ಸ್ವತಂತ್ರ ರಾಜಕೀಯ ವಿಚಾರಗಳನ್ನೂ ಹಿಂದಿದ್ದ ಕನ್ನಡದ ವೈಭವ ನ್ನೂ ನೋಡ ಬಯಸುವವರು ಈ ವಾರಪತ್ರಿಕೆಯನ್ನು ತರಿಸಿ ಓದಬೇಕು. ವಾರ್ಷಿಕ ವರ್ಗಣಿ ೩–೧೨–೦ ಪತ್ರ—

ಸಂಪಾದಕ ಕಾನಡೀಧುರೀಣ- ಕುಮಟಾ, ಜಿ. ಉತ್ತರ ಕನ್ನಡ

ಹಾಲಿಬಿ ಗಳನ್ನು ಹಿಡಬೇ ಕನ್ನುವಿರೋ?

ಹಾಗಾದರೆ ನಮ್ಮ ಕಡೆಗೆ ೭ ಬಿಲ್ಲೆಯ ಪೋಸ್ಟ ಟಿಕೇಟು ಕಳುಹಿಸಿ, ಎಲಾ ತರಹ ಹಕ್ಕಿಗಳನ್ನು ಹಿಡಿಯಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ— "ಗೆಳೆಯರ ಗುಂಪು" ಜಲಸಿಗಿ.

ಜಿಲ್ಲಾ ವಿಜಾಪೂರ.

ಹಳೇ ಮೂಳೇರೋಗ

ನೋವುರಹಿತ ಮತ್ತು ದೇಹದ ಉದ್ರೇಕವಿಲ್ಲದೆ ಹೊಸ ರೋಗಿಗಳಿಗೂ ವೀರ್ಯವೃದ್ಧಿ ಹಾಗು ಕಾಂತಿಯಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ—

ಡಾ. ವಿ. ಗರೆವಾರೆ.

ಮಹಾವಾಕ್ಯಮ ಮುಂಬೈ ನಂಬರ ೪

ಬಾಗಲಕೋಟ. ವಿ ೦ಟರ್. ಬಾಗಲಕೋಟೆ ಬಂಧುಗಳು ಸ್ವದೇಶಗಳಾಯ

ಈ ಪತ್ರಿಕೆಯು ಮಂಗಳವೇಢ ರಾಜೇಶ್ವರಿ ಮುಕ್ಕಳ ಕಾರದ ಪ್ರೆಸ್ ಕಟುಂಬ ಬಾಗಲಕೋಟ
ವಿದ್ಯಾರ್ಣವ ಮುದ್ರಣಾಲಯದಲ್ಲಿ ಮುದ್ರಿಸಲ್ಪಟ್ಟು ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಪೋಸ್ಟ್

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ } ಬಾಗಲಕೋಟೆ ಶುಕ್ರವಾರ ಮಿತಿ ನಿಜ ಚೈತ್ರ ಬಹುಳ ೫ ಶಕೆ ೧೮೫೯ ತಾ|| ೩೦-೪-೧೯೩೭. { ಸಂಚಿಕೆ ೬

ಸಂಪಾದಕರ ಭೂಮಿ

(೨)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಪೂಜನವ ಮಾಡಿದಂಥ ಮುಕ್ಕಳ ದೊಣ್ಣು ।
ಚಿನ್ನವಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹ ಗಂಧವಹವೆಂದು ತಿಳಿಯು
—ಅಂಬಿಕಾ ತನಯ ದತ್ತ

ಕರ್ನಾಟಕದಲ್ಲಿ ಮೊದಲು ಅಯ್ಯನವರ ಮಠಗಳಿರುತ್ತಿದ್ದವು. ಚಿಕ್ಕಬಾಲಕರು ಮುಂಜಾವಿನಲ್ಲೆದ್ದು ವಿದ್ಯೆ ಕಲಿಯಲೆಂದು ಮಠಗಳಿಗೆ ಹೋಗುತಲಿದ್ದರು. ಅಯ್ಯನವರಿಗೂ ಹುಡುಗರಿಗೂ ಪ್ರೇಮದ ಸಂಬಂಧವೇ ಸಂಬಂಧ. ಊರವರೆಲ್ಲ ಕೂಡಿ ಅಯ್ಯನವರ ಹೊಟ್ಟೆ ಒಟ್ಟಿ ನೋಡಿಕೊಳ್ಳುತ್ತಿದ್ದರು. ಅಯ್ಯನವರಾದರೂ ಕೊಟ್ಟದ್ದನ್ನು ಆನಂದದಿಂದ ಸ್ವೀಕರಿಸಿ, ತಮ್ಮ ಕೆಲಸವನ್ನು ಪವಿತ್ರಬುದ್ಧಿಯಿಂದ ಮಾಡುತ್ತಿದ್ದರು. ಆಗಿನ ಅಯ್ಯನವರು ಕಲಿಸುವ ಶಿಕ್ಷಣವು ವ್ಯವಹಾರಕ್ಕೆ ಅತ್ಯುಪಯುಕ್ತವಾದುದಿರುತ್ತಿತ್ತು. ಭಾಷಾವಿಷಯ ಗಣಿತ ಬಾಯಿಲೆಕ್ಕ ಮೊದಲಾದವುಗಳನ್ನು ಅತ್ಯುತ್ತಮವಾಗಿ ಕಲಿಸುತ್ತಿದ್ದರು. ಆಗಿನವರು ಬರೆಯುವ ಅಕ್ಷರಗಳು ಮುತ್ತುಮುತ್ತಾಗಿರುತ್ತಿದ್ದವು. ಲೆಕ್ಕಗಳನ್ನಂತೂ ಹುಡುಗರು ಕುಶಲತೆಯಿಂದಲೂ ತೀವ್ರವಾಗಿಯೂ ಬಿಡಿಸುತ್ತಿದ್ದರು. ಈಗಿನ ಪ್ರಾಥಮಿಕ ಶಾಲೆಗಳ ಸ್ಥಿತಿಯು ವಿಚಿತ್ರವಾಗಿರುತ್ತದೆ. ಪ್ರೇಮದ ಮಾತೊತ್ತಟ್ಟಿಗಿರಲಿ. ಕೈತುಂಬ ಸಂಬಳ ದೊರಕಿದರೂ ಶಿಕ್ಷಕರು ಕಲಿಸುವ ಗೊಡವೆಗೆ ಹೋಗುವದಿಲ್ಲ. "ರಜಿಸ್ಟರ" ದ ಪಟಗಳನ್ನು ಗೋಡೆಗೆ ಇಳಿಬಿಟ್ಟು ಕುಳಿತರೆ ತೀರಿ ಹೋಯಿತು. ಕೆಲವು ಶಿಕ್ಷಕರಂತೂ ತಂಬಾಕು ಹಾಕಿಕೊಂಡು ಕುರ್ಚಿಯ ಮೇಲೆ ಕೂತು ಗೊಡ್ಡು ಹರಟೆಯನ್ನು ಹೊಡೆಯುತ್ತ, ಶಾಲಕಳೆಯುವರು. ಶಿಕ್ಷಣದ ಅಧಿಕಾರಿಗಳು ಬಂದಾಗ ಹೊರಗಣ ಆಡ್ಡು ಕಟ್ಟಿನಿಂದ ಅವರನ್ನು ಮರಳು ಮಾಡಿ ಕಳುಹಿಸುವರು. ಇದರಿಂದ ನಾಡಿಗೆ ಸರ್ವಾಂಗೀಣವಾದ ಹ್ರಾಸವು ಪ್ರಾಪ್ತವಾಗಿದೆ. ಗುದ್ದಿಂದ ಕಲ್ಲುರುಳಿದರೆ ಹೇಗೋ ಹಾಗೆ, ಸಮಾಜವು ಕೆಳಗಿಳಿಯಹತ್ತಿದೆ. ಶಿಕ್ಷಣದಲ್ಲಿ ತಿದ್ದು ಪಡೆ ಮಾಡುವ ಏರ್ಪಾಟುಗಳು ಎಷ್ಟೋ ನಡೆದಿವೆ. ಶಿಕ್ಷಣದ ವಿಷಯವಲ್ಲಿ ಎಷ್ಟೋ ತಜ್ಞರು ಲೇಖಗಳನ್ನೂ ತತ್ತ್ವ ಗ್ರಂಥಗಳನ್ನು ಬರೆಯುತಲಿದ್ದಾರೆ. ಹುಡುಗರ ಒಲವು ತಿಳಿದು ಕೊಳ್ಳಲಿಕ್ಕೆ ಒಂದು ಶಾಸ್ತ್ರ ಅವರ ಬುದ್ಧಿಯನ್ನು ಅಳೆಯಲಿಕ್ಕೆ ಮತ್ತೊಂದು ಶಾಸ್ತ್ರ. ಹೀಗೆ ಅನೇಕ ಶಾಸ್ತ್ರಗಳ ಓಡಾಟವೇ ಅಲ್ಲಲ್ಲಿ ಕಂಡು ಬರುತ್ತದೆ. ಆದರೆ ಹುಡುಗರಲ್ಲಿ ಶಾರೀರಿಕ ಮಾನಸಿಕ ಬೌದ್ಧಿಕ ಉನ್ನತಿಯೇನೂ ಕಂಡು ಬರುವದಿಲ್ಲ. ಎಲ್ಲ ರೀತಿಯಿಂದಲೂ ಹುಡುಗರು ಹೆಚ್ಚೆಚ್ಚು ಕೆಡುತಲಿದ್ದಾರೆ. ಗುರುಶಿಷ್ಯರಲ್ಲಿ ಭಕ್ತಿ ಭಾವವಿಲ್ಲ. ಹುಡುಗರಿಗೆ ಕಲಿಯುವ ಇಚ್ಛೆಯಿಲ್ಲ. ಶಿಕ್ಷಕರಿಗೆ ಕಲಿಸುವ ಲಾಲಸೆಯಿಲ್ಲ. ಹೀಗಾಗಲು ಕಾರಣವೇನು? ಮೊದಲಿನವರು ಈಗ್ಯೂ ಕೂಡ ಬಿಕ್ಕಟ್ಟಾದ ಲೆಕ್ಕಗಳನ್ನು ಬಿಡಿಸುತ್ತಾರೆ. ಬಾಯಿ ಲೆಕ್ಕಗಳನ್ನು ಕಣ್ಣುಮುಚ್ಚಿ ತೆರೆಯುವದರೊಳಗೆ ಬಿಡಿಸುತ್ತಾರೆ ಈಗಿನ ಪದವೀಧರರಿಗೆ ಒಂದು ಸರಳವಾದ ಬಾಯಿ ಲೆಕ್ಕವೂ ಕೂಡ ಬರುವದಿಲ್ಲ. ಬಡ್ಡೀವ್ಯವಹಾರ ಮೊದಲಾದವುಗಳನ್ನು ನಡೆಸುಸಲಿಕ್ಕೆ ಇವರಿಗೆ ಆಯತಾ ಸಿದ್ಧವಾಗಿರುವ ಕೋಷ್ಟಕಿನ(ಜಂತ್ರೀ) ಪುಸ್ತಕವು ಬೇಕು. ಬಹುಶಃ ಎಲ್ಲ ಈಗಿನವರ ಅಕ್ಷರಗಳು ಒಡ ಹೊಟ್ಟೆಯುಳ್ಳವುಗಳಾಗಲಿ ಡುಮ್ಮ ಹೊಟ್ಟೆಯುವುಗಳಾಗಲಿ ಇರುವವು. ಒಂದು ಬದಾಮಿಯನ್ನು ನೋಡಿದರೆ, ಮತ್ತೊಂದು ಬನಶಂಕರಿಯನ್ನು ನೋಡುವುವು. ಅವಕ್ಕೆ ಪ್ರಮಾಣವ ಕಟ್ಟಿಲ್ಲ ಕರ ಎಗಳನ್ನು ಬರೆಯಿಸುವುದು ದುಃಕಥೆಯಾಗಹತ್ತಿದೆ. ಈಗಿನ ಕಾಲದಲ್ಲಿ 'ಬತ್ತ್ಯೆಯದ ಶಿಕ್ಷಣ' 'ಬತ್ತಾಯದ ಶಿಕ್ಷಣ' ಎಂಬ ಕೂಗು ಎಲ್ಲಕಡೆಗೂ ಕೇಸರಿಟ್ಟಿದೆ. ಹೀಗಿದ್ದೂ ಸಮಾಜವು ಸುಧಾರಿಸಲೊಲ್ಲದು ಮೊದಲುಎಲ್ಲೆಡೆಯಲ್ಲಿಯು ಸಾಕ್ಷರತೆಯೂ ಇಲ್ಲದಿದ್ದರೂ ಸಂಸ್ಕೃತಿಯಿದ್ದಿತು. ಧಾರ್ಮಿಕ ಶಿಕ್ಷಣ ಮೊದಲಾದವುಗಳಿಗೆನಾನಾ ತರದ ಸಾಧನಗಳಿದ್ದವು. ಅಟ್ಟದ ಆಟಗಳನ್ನಾಡುವದರಿಂದ ಜನರಿಗೆ ಬೋಧೆಯಾಗುತಲಿದ್ದಿತು. ಜಾತ್ರೆಗಳಲ್ಲಿ ಅನುಭವಪದ ತತ್ತ್ವಪದ ಮೊದಲಾದವುಗಳನ್ನು ಅನ್ನುತಿದ್ದರು ಇದರಿಂದ ನೈತಿಕದ ಅಂಶಕ್ಕೆ ಜೀವ ಬರುತಲಿದ್ದಿತು. ಶಾಲೆಗಳಲ್ಲಿಯೂ ಆಟ ನೋಟಗಳಲ್ಲಿಯೂ ಜಾತ್ರೆಯಾತ್ರೆಗಳಲ್ಲಿಯೂ ಶಿಕ್ಷಣವು ದೊರೆಯುತಲಿದ್ದಿತು. ಪುರಾತನದ ಬಾಳುವೆಯ ರಹಸ್ಯವೇ ಈಗಿನವರಿಗೆ ತಿಳಿಯದಂತಾಗಿದೆ. ಗುರುಶಿಷ್ಯರಲ್ಲಿ ಹೇಗೆ ವ್ಯವಹಾರವಿತ್ತೆಂಬುದಕ್ಕೂ, ಮೊದಲಿನ ಜನರಾದರೂ, ಗುರುಗಳೊಡನೆ ಹೇಗೆ ವ್ಯವಹರಿಸುತ್ತಿದ್ದರೆಂಬುದಕ್ಕೆ ಕೆಳಗಣ ಪದ್ಯಗಳನ್ನು ಓದಿರಿ.

ಹರಕೆಯನು ಕೇಳಿ ಹರುಷವ ಮಾಡಿ ನಮಗೆ||
ಕರಿಸಿಕೊಡಿ ಹಚ್ಚಡವ ನಮ್ಮಯ್ಯಗಳಿಗೆ||
ಬೆರಿಸಿಕೊಡಿ ಕಡಲೆಯನು ಬೆಲ್ಲವನು ನಮಗೆ
ಸರಸತಿಯು ಕರುಣ ತುಂಬಾರಲಿ ನಿಮಗೆ||

ಈಗ್ಯೂ ಕೂಡ ಅಯ್ಯನವರಿಗೆ (ಗುರುಗಳಿಗೆ) ನಾಗರ ಪಂಚಮಿ ಮೊದಲಾದ ಹಬ್ಬಗಳಲ್ಲಿ ಕೊಬ್ಬರಿ ಮುಂತಾದ್ದನ್ನು ಕೊಟ್ಟು ಸ್ನಾನಮಾಡುವ ರೂಢಿಯುಂಟು. ಮೊದಲಿನ, ಸ್ಥಿತಿ ಈಗಿನ ಸ್ಥಿತಿಗಳಲ್ಲಿಯ ವ್ಯತ್ಯಾಸವನ್ನು ನೋಡಿ ಚೆಲುವಾದುದನ್ನು ಪಥ್ಯವಾದದನ್ನೂ ಸ್ವೀಕರಿಸಬೇಕು. "ಹಳೆಯದೆಲ್ಲ ಹಳಿಯಲುತಕ್ಕ" ೦ಬ ಗ್ರಹಿಕೆಯು ಶೀರ ತಪ್ಪಾಗುವುದು ಶಿಕ್ಷಣ ಸುಧಾರಕರಿಗೆ ಇದೊಂದು ಸೂಚನೆಯನ್ನು ಕನ್ನಡಿಗನು ಮಾಡಿದ್ದಾನೆ. ಒತ್ತಾಯದಶಿಕ್ಷಣವು ಮೊದಲಿನಂತೆ ಮರದ ಕ್ರಮವನ್ನು ಏರ್ಪಡಿಸಿದರೆ, ಹೆಚ್ಚು ಕುಲಭವಾಗಿ ಸಿಕ್ಕುವುದು.

ಕರ್ನಾಟಕ ಕೀರ್ತನ ಸಮ್ಮೇಲನವು ತೀವ್ರವೇ ಒಳ್ಳೆ ಪ್ರ.ಲ್ಲಿಕೂಡತಕ್ಕದ್ದಿರುವುದು. ಕೀರ್ತನ ಪದ್ಧತಿಯಲ್ಲಿ ಸುಧಾರಣೆಯಾಗುವುದು ಅತ್ಯಾವಶ್ಯಕವಾದುದು. ಉತ್ತರ ಕರ್ನಾಟಕದಲ್ಲಿ ಕೀರ್ತನ ಕಾರರು ಮರಾಠಿಯ ಅಭಂಗಗಳನ್ನೂ ಮರಾಠಿಯ ಹಾಡುಗಳನ್ನೂ ಹೇಳುವ ರೂಢಿಯುಂಟು. ಕನ್ನಡದಲ್ಲಿ ವೇದಾಂತದ ವಿಷಯದಲ್ಲಿಯೂ, ನೀತಿ ತತ್ವಗಳ ವಿಷಯದಲ್ಲಿಯೂ ಬೇಕಾಷ್ಟು ವಚನಗಳೂ ಹಾಡುಗಳೂ ದೊರೆಯುವವು. ಪುರಂದರದಾಸ, ಕನಕದಾಸ, ಪ್ರಸನ್ನವಿಠ್ಠಲ, ಪ್ರಸನ್ನವೆಂಕಟ ವಾದಿರಾಜ, ಜಗನ್ನಾಥರಾಯ ನಿಜಗುಣ ಶಿವಯೋಗಿ, ಸರ್ಪಣ್ಣ, ಬಸವೇಶ್ವರ, ಮೊದಲಾದವರು ತಮ್ಮ ಸೂಕ್ತಿ ಮಾಲೆಯನ್ನು ನಮಗಾಗಿ ಹಿಂದೆ ಇಟ್ಟಿರುವರು. ಈ ಮಾಲೆಯಲ್ಲಿ ತತ್ವಜ್ಞಾನವೂ, ಉಂಟು. ಅದರೊಡನೆ ಕಾವ್ಯ ಮಾಧುರ್ಯವುಂಟು. ಕರ್ನಾಟಕ ಕಾವ್ಯ ಮಹೋದಧಿಯು ಆಲೋಡನ ಮಾಡಿದರೆ ಅತ್ಯುತ್ತಮವಾದ ರತ್ನಗಳು ದೊರೆಯುವವು. ಇದರ ಕಡೆಗೆ ಯಾರ ಪ್ರವೃತ್ತಿಯೂ ಆಗಿರುವದಿಲ್ಲ. ಇದಕ್ಕೆ ಕಾರಣವಾದರೂ ಇದೆ. ಈಗ ಕೀರ್ತನ ಮಾಡುವವರು ಕಲಿತವರಿರುವದಿಲ್ಲ. ಹೊಟ್ಟೆಬಟ್ಟೆಗಾಗಿ ಕೀರ್ತನಮಾಡುವವರೇ ಬಹಳ. ಪರಮಾತ್ಮನ ಗುಣಸಂಕೀರ್ತನ ಮಾಡಿ, ಎಲ್ಲರಿಗೂ ಆನಂದವನ್ನುಂಟು ಮಾಡುವ ಸದಿಚ್ಛೆಯಿಂದ ಕೀರ್ತನ ಮಾಡತಿಳಿಸುವವರು ಬಹಳ ಕಡಿಮೆ. ಕೀರ್ತನಕಾರರಿಗೆ ಹರಿದಾಸರೆಂದು ಹೆಸರು. ಇವರಿಗೆ "ಹರಿದಾಸ" ರೆಂದೆನ್ನುವದಕಿಂತ 'ಅರಾದಾಸ' ರೆಂದೆನ್ನುವುದು ಹೆಚ್ಚು ಒಪ್ಪುತ್ತಿದೆ. " ನನ್ನಲ್ಲಿ ಸತತ ಭಕ್ತಿಯುಳ್ಳವರಾಗಿ, ನನ್ನನ್ನು ಯಾರುಭಜಿಸುತ್ತಾರೆಯೋ, ಅವರ ಯೋಗಕ್ಷೇಮವನ್ನು ನಾನು ನೋಡಿಕೊಳ್ಳುತ್ತೇನೆಂ" ಬ 'ಭಗವಂತನ ನುಡಿಯಲ್ಲಿ ವಿಶ್ವಾಸವುಳ್ಳವರು ಇನ್ನು ಮುಂದೆ ಕೀರ್ತನಗಳಲ್ಲಿ ತೊಡಗಬೇಕು. ಕನ್ನಡದ ಸಾಹಿತ್ಯವನ್ನು ಚೆನ್ನಾಗಿ ಅಭ್ಯಾಸಮಾಡಿ ಕನ್ನಡ ಪದ್ಯಗಳಿಂದಲೂ ಕನ್ನಡ ವಚನಗಳಿಂದಲೂ ವೇದಾಂತವಿಷಯವನ್ನು ಪ್ರತಿಪಾದಿಸಬೇಕು. ಹೀಗೆ ಮಾಡುವದರಿಂದ ಕೀರ್ತನದ ನಿಜವಾದ ಉದ್ದಿಷ್ಟವು ಸಾಧ್ಯವಾಗಿ, ಕರ್ನಾಟಕ ಸಾಹಿತ್ಯದ ಪ್ರಸಾರವು ಎಲ್ಲೆಡೆಯಲ್ಲಾಗಿ ಅದರ ಮೇಲ್ಮೆ ಆಗುವುದು. ಎರದುಕೊಳ್ಳುವವರ ಕಿಳಗೆ ಬಗ್ಗುವುದು ಇಲ್ಲದಂತಾಗುವುದು. ಆದುದರಿಂದ ಕೀರ್ತನಕಾರರಿಗೆ ತಮ್ಮ ವ್ಯವಸಾಯದ ಗುಟ್ಟು- ತಿರುಳು- ತಿಳಿಯುವ ಹಾಗೆ ಸಮ್ಮೇಲನ ಒರಗಿಸುವವರು ಏರ್ಪಾಟು ಮಾಡಬೇಕು. ಕೀರ್ತನವು ಲೋಕಶಿಕ್ಷಣದ-ಧರ್ಮ ಜಾಗೃತಿಯ- ಅತ್ಯುತ್ತಮವಾದ ಸಾಧನವು. ಸಂಸ್ಕೃತಿಯನ್ನು ಸಂರಕ್ಷಿಸುವ ಅಮೋಘವಾದ ಉಪಾಯವು. ನಮ್ಮ ನಾಡಿನಲ್ಲಿ ಜಾಗೃತಿಯಾಗಬೇಕಾದರೆ, ಉಪನ್ಯಾಸ ವ್ಯಾಖ್ಯಾನಗಳಿಂದ ಆಗಲಾರಿಯದು ಅದರ ಕೀರ್ತನದಿಂದ ಹೆಚ್ಚಾಗಿ ಆಗುವದು. ಈ ಪದ್ಧತಿಯು ಆದಿಬುನಾದಿಯಿಂದ ಬಂದದು. ನಮ್ಮ ನಾಡಿನ ಪ್ರಕೃತಿಗೆ ಇದು ಅನುರೂಪವಾದುದು. ತಾನಾಜಿಯು ಜನರನ್ನು ಒಲಿಸಿಕೊಂಡುದು ಗೊಂದಲಿಗನಾಗಿ ಕಥೆಯನ್ನು ಹೇಳಿಯೇ. ಇದನ್ನೆಲ್ಲ ನೆನೆದು, ಕೀರ್ತನದ ಮಹತ್ವವನ್ನು ಅರಿತುಕೊಂಡು ಯೋಗ್ಯವಾದ ಏರ್ಪಾಟುಗಳನ್ನು ಸಮ್ಮೇಲನ ಕಾರರು ಮಾಡಬೇಕಾಗಿ ಬೇಡಿಕೆ.

ಕನ್ನಡ ಮುಲ್ಕೀ ಪರೀಕ್ಷೆಯ ಅರ್ಜಿಗಳಿಗೆ ಬಹುಃ ಕನ್ನಡಶಾಲೆಯ ಮುಖ್ಯಾಧ್ಯಾಪಕರು ಮರಾಠಿಯಲ್ಲಿ ಸಹಿ ಮಾಡಿರುತ್ತಾರೆ ಇದೊಂದು ಸೋಜಿಗದ ಸಂಗತಿಯಾಗಿದೆ. ಇವರು ಕನ್ನಡ ಶಾಲೆಯ ಅಧ್ಯಾಪಕರು. ಕನ್ನಡವೇ ಇವರ ಜನ್ಮ ಭಾಷೆಯು. ಹೀಗಿದ್ದು ಅರ್ಜಿಗಳಿಗೆ ಕನ್ನಡ ಸಹಿಯನ್ನು ಮಾಡದೆ ಮರಾಠೀ ಸಹಿಯನ್ನು ಮಾಡಿದ್ದಾರೆ. ಇದರಿಂದ ಇವರ ಅಭಿಮಾನ ಶೂನ್ಯತೆಯೇ ವ್ಯಕ್ತವಾಗುತ್ತಿದೆ ಮರಾಠಿ ಸಹಿ ಮಾಡಿದರೆ, ಇವರಿಗೇನು ಹೆಚ್ಚಿನ ಸಂಬಳ ದೊರೆಯುವದಿಲ್ಲ ಮರಾಠಿ ಸಹಿ ಮಾಡದಿದ್ದರೆ, ಇವರ ಗೌರವಕ್ಕೇನೂ ಹಾನಿ ತಟ್ಟುವದಿಲ್ಲ. ಹೀಗಿದ್ದು ಇವರಿಗೆ ಮರಾಠಿಯಲ್ಲಿ ಇಷ್ಟೊಂದು ಮೋಹವೇ? ಹಡೆದ ತಾಯಿಯನ್ನು ಬಿಟ್ಟು, ಸಾಕ ತಾಯಿಯ ಕಡೆಗೇಕೆ ನಿಮ್ಮೊಲವು? ಮರಾಠಿಯವರೇನಾದರೂ ನಿಮ್ಮಂತೆ ಮಾಡುವರೋ ನೋಡಿರಿ. ಇನ್ನುವೇಲಾದರೂ ನಿಮ್ಮ ದೃಷ್ಟಿ ದೋಷವನ್ನು ಕಳೆದು ಕೊಂಡು, ಹಿತದ ಮಾರ್ಗವನ್ನು ಅನುಸರಿಸಿರಿ.

ಕರ್ನಾಟಕದ ಸಾಹಿತ್ಯವನ್ನು ಸಂಧಾರಿಸ ಬೇಕೆಂದು ಎಷ್ಟೋಪ್ರಯತ್ನಗಳು ನಡೆದಿವೆ. ಕರ್ನಾಟಕದ ಏಕೀಕರಣವಾಗದ ಹೊರತು ಈ ಕಾರ್ಯವು ಸಾಧ್ಯವಾಗಲಾರದೆಂದು ನಮ್ಮ ಮತ. ಕನ್ನಡ ನಾಡಿನ ಏಳ್ಗೆ, ಕನ್ನಡ ನುಡಿಯ ಬೆಳೆಗೆ ಇವೆಲ್ಲವುಗಳು ಏಕೀಕರಣವನ್ನೇ ಆಶ್ರಯಿಸಿವೆ ಖಂಡವಾಗಿದ್ದನ್ನು ಅಖಂಡ ಮಾಡುವದಕ್ಕೆ ನಮ್ಮೆಲ್ಲರ ಮನಃಪೂರ್ವಕವಾದ ಪ್ರಯತ್ನಗಳು ಅತ್ಯಾವಶ್ಯಕ. ಒಂದೆಡೆ ತಮಿಳು; ಮತ್ತೊಂದೆಡೆಯಲ್ಲಿ ತೆಲಗು ಬೇರೊಂದೆಡೆಯಲ್ಲಿಮರಾಠೀ. ಹೀಗಾಗಿ ಮುಂದೆ ಹೆಜ್ಜೆ ಇಡಲು ಮುಳ್ಳು ಇರುವು ತಿಂದ ಕರಚಕಾಯಿಯಂತೆ ನಮ್ಮ ನುಡಿಯು ಸತ್ವಹೀನವಾಗಿದೆ ಏಕೀಕರಣದ ಕೆಲಸವು ಸಮಾಧಾನಕರವಾಗಿ ನಡೆದಿಲ್ಲ ಚಟುವಟಿಕೆಯಿಲ್ಲದೆ ಈಗಿನ ಯುಗದಲ್ಲಿ ಯಾವ ಕೆಲಸವೂ ಕೊನೆಮುಟ್ಟುವದಿಲ್ಲ, ಚಟುವಟಿಕೆಗಾರರು ಸುಮ್ಮನೆ ಅಪ್ಪಗೈಹಾಕಿಕೊಂಡು ಕುಳಿತರೆ, "ಕುಳಿತವನ ದೈರ್ಯವು ಕೂಡ್ರುವದು" ಎಂಬಂತೆ ನಾಡಿನಹಾಡು ಆಗುವದು. ಆದ್ದರಿಂದ ಏಕೀಕರಣದ ಸಭೆಯವರು ಆಲಸ್ಯ ಉದಾಸೀನತೆ ಮೊದಲಾದವುಗಳನ್ನು ತೊರೆದು ಆಸ್ಥೆಯಿಂದಲೂ ಉತ್ಸಾಹದಿಂದಲೂ, ಕಾರ್ಯದಲ್ಲಿ ಪ್ರವೃತ್ತರಾಗುವರೆಂದು ನಾವು ಆಶಿಸುತ್ತೇವೆ ಈಗ ಹೋರಾಡದ ಹೊರತು ಗತ್ಯಂತರವಿಲ್ಲ ಅಂಜಿದವನ ಮೇಲೆ ಕಪ್ಪೆ ಕಟ್ಟಿಟ್ಟದ್ದೇ. ಶತ್ರುವಿನೊಡನೆ ಹೋರಾಡಿ, ಜಯವನ್ನು ಪಡೆಯುವ ಪ್ರಸಂಗವು ಬಂದಿರಲು ಅದನ್ನು ಕಳೆದು ಕೊಳ್ಳುವದು ವಿಹಿತವಲ್ಲ. ಕಳೆದುಕೊಂಡು ಪುಡುಕಬಾರದೆಂದು ಹಿರಿಯರ ನೊಲ್ಲು- ಅನುಭವದ ಮಾತು. ಗಾಳಿಬಂದ ಕೈಯಲ್ಲಿ ತೂರಿಕೊಳ್ಳಲು ಸಿದ್ಧರಾಗುವುದು ಎಚ್ಚರಿಕೆಯುಳ್ಳವರ ಲಕ್ಷಣ. ಇನ್ನು ಎಷ್ಟು ದಿವಸಗಳವರೆಗೆ ಈ ಕಾರ್ಯವನ್ನು ನೆನಗುದಿಗೆ ಕೆಡುವುವುದು!

ತಿಗಳರ ಕನ್ಯೆಯನ್ನು ಗಲಗಲಿಯಲ್ಲಿರುವ ಕೆ. ಬಿಂಡಿಕೆ ರಾಮಾಚಾರ್ಯರೆಂಬವರು ಮದುವೆ ಮಾಡಿಕೊಂಡಿರುವದರಿಂದ ಒಂದು ಕೋಲಾಹಲವೇ ಎದ್ದಿದೆ ಶ್ರೀ. ಉತ್ತರಾದಿ ಮಠದ ಸ್ವಾಮಿಗಳು ಅದಕ್ಕೆ ತಮ್ಮ ಒಪ್ಪಿಗೆಯಿಲ್ಲವೆಂದು ನುಡಿಯುತ್ತಾರೆ ಹಿಂದಿನ ಶ್ರೀಗಳೆಲ್ಲರೂ ಇಂತಹ ವ್ಯವಹಾರಕ್ಕೆ ಅಣ್ಣಿಯನ್ನು ತಂದಿಲ್ಲ

ವೆಂದು ರಾಮಾನುಜಾಚಾರ್ಯ ಮೊದಲಾದವರು ಪ್ರಮಾಣಗಳನ್ನು ತೋರಿಸುತ್ತಲಿದ್ದಾರೆ. ಈಗಿನ ಶ್ರೀಗಳವರ ಕಡೆಗೆ ಎರಡು ಮೂರು ಸಾರೆ ಈ ವಿಷಯದ ಬಗ್ಗೆ ನಿರ್ಣಯವಾಗಬೇಕೆಂದು ಮಹಾಸಮಾರಾಧನೆಯ ಕಾಲಕ್ಕೆ ಹೋಗಿದ್ದರು ಆಗ ಏನೂ ಆಗದಿರುವದರಿಂದ ಪುನಃ ಅವರು ವಿಜಾಪುರಕ್ಕೆ ಕೊನೆಯ ನಿರ್ಣಯವನ್ನು ಕೇಳಲು ವಿಜಾಪುರಕ್ಕೆ ಹೋಗಿದ್ದಾರೆ. ಒಂದು ಹಸ್ತಪತ್ರಿಕೆಯನ್ನು ತೆಗೆದಿದ್ದಾರೆ ಶ್ರೀಗಳವರು ಎಲ್ಲರೀತಿಯಿಂದಲೂ ಧರ್ಮ ಸುಧಾರಣೆಯ ಕಾರ್ಯದಲ್ಲಿ ಅಧಿಕಾರವುಳ್ಳವರು ಮೇಲಾಗಿ ಪರಂಪರೆಯಿಂದ ತಿಗಳರೊಡನೆ ಬಳಕೆಯು ಪ್ರಾಪ್ತವಾಗಿದೆ. ಹಿಂದಿನ ಶ್ರೀಗಳವರ ಆಜ್ಞೆಯಿಂದ ಒಡಗೂಡಿದ್ದೆ, ಮತ್ತೂ ಪುನೀತವಾಗಿದೆ. ಆದುದರಿಂದ ಶ್ರೀಗಳವರು ಈ ವ್ಯಾಜ್ಯವನ್ನು ಹೆಚ್ಚು ಬೆಳೆಯಿಸದೆ, ಎರಡೂ ಪಕ್ಷದವರಿಗೂ ಸಮ್ಮತವಾಗುವಂತೆ ನಿರ್ಣಯ ಕೊಡಬೇಕಾಗಿ ಪ್ರಾರ್ಥನೆ. ಸಮಾಜದ ಕಟ್ಟು ಶಿಥಿಲವಾಗಿರುವ ಸಮಯದಲ್ಲಿ ವಿಶೇಷ ಜಾಗೃತಿಯು ಬೇಕಾಗುವದೆಂದು ಶ್ರೀಗಳವರಿಗೆ ಸೂಚಿಸುವ ಆವಶ್ಯಕತೆಯಿಲ್ಲ. ಆದುದರಿಂದ ತಡಮಾಡದೆ ಶ್ರೀಗಳವರು ಬಿಕ್ಕಟನೊಳಗಿಂದ ಶ್ರೀ. ರಾಮಾನುಜಾಚಾರ್ಯ, ಬಾಬುರಾವ ಗಣಿ ಮೊದಲಾದವರನ್ನು ಬಿಡಿಸಬೇಕಾಗಿ ವಂದನ ಪೂರ್ವಕವಾಗಿ ಬೇಡಿಕೊಳ್ಳುತ್ತೇವೆ.

ಧಾರವಾಡದ ಕರ್ನಾಟಕ ಹೈಸ್ಕೂಲು ಕೆಟ್ಟ ಮುಹೂರ್ತದಲ್ಲಿ ಹುಟ್ಟಿದಂತೆ ತೋರುತ್ತದೆ. ಹಿಂದಕ್ಕೊಮ್ಮೆ ಪರಸ್ಪರರಲ್ಲಿ ಬಡಿದಾಟವಾಗಿ ಹೈಸ್ಕೂಲು ನಾಮಶೇಷವಾಗುವದಿತ್ತು ಇನ್ನೂ ಆಯುಃಪ್ರಮಾಣವು ಮುಗಿದಿದ್ದಿಲ್ಲವಾದ್ದರಿಂದ ಆ ಕಲ್ಲಿಗೆ ಬಡಿದು ಈ ಕಲ್ಲಿಗೆ ಬಡಿದು ಅದು ಬದುಕಿತ್ತು ಮತ್ತೆ ಏಳ್ಗೆಯನ್ನು ಪಡೆಯ ಹತ್ತಿತು. ಪುನಃ ವ್ಯವಸ್ಥಾಪಕ ಮಂಡಲದವರ ದೋಷದಿಂದಲೋ ಶಾಲೆಯ ಅಧ್ಯಾಪಕರ ದೋಷದಿಂದಲೋ ಕೋಲಾಹಲದ ಕಲಕಲಾಟವು ಕೇಳಬರುತ್ತಿದೆ. ಕನ್ನಡಿಗರಿಗೆ ಇನ್ನೂ ಸಾರ್ವಜನಿಕ ಸಂಸ್ಥೆಗಳ ಬೆಲೆಯೇ ಗೊತ್ತಿದ್ದಂತೆ ತೋರುವದಿಲ್ಲ. ಪರಸ್ಪರರ ವಿಷಯದಲ್ಲಿ ಮಾತ್ಸರ್ಯವನ್ನು ತಾಳಿ ಲೋಕೋಪಕಾರಿಗಳಾದ ಸಂಸ್ಥೆಗಳನ್ನು ನಷ್ಟಪಡಿಸಲುದ್ಯುಕ್ತವಾಗುವದು ಕೀಳುತನದ ಕಥೆಯೇ ಸರಿ. ಮನೆಯ ಜಗಳವ ತೀರಿಸಲಸಮರ್ಥರಾದವರು ಹೊರಗಣ ಕಲಹಗಳನ್ನೆಂತು ಶಾಂತಗೊಳಿಸುವರು? ಆದ್ದರಿಂದ ಒಂದು ಪಕ್ಷದವರು 'ಮಾತುಬಲ್ಲಗ್ಗ ತಾ ಸೋತು ಹೋಗುವದು ಲೇಸು' ಎಂಬಂತೆ ಉದಾರತನದಿಂದ ಹಿಂದಕ್ಕೆ ಸರೆದು ಮತ್ತೊಂದು ಪಕ್ಷದವರಿಗೆ ಶಾಲೆಯನ್ನು ನಡೆಯಿಸಲು ಬಿಟ್ಟುಬಿಡಬೇಕು. ಮತ್ತು ಶಾಲೆಯು ಉತ್ತರೋತ್ತರವಾಗಲೆಂದು ಹರಕೆಗಳನ್ನು ಕೊಡತಕ್ಕದ್ದು 'ವಿಷವೃಕ್ಷೋಽಪಿ ಸಂವರ್ಧ್ಯ ಸ್ವಯಂಛೇತ್ತುಮಸಾಂಪ್ರತಮ್' ಎಂಬಂತೆ ವಿಷವೇರಿದವರಿಗೆ ಹಾಲೆರಯಬೇಕೇ. ಇದರಿಂದ ವ್ಯಕ್ತಿದ್ವೇಷವಳಿದು ಸೇಡಿನ ಭರವು ಕಡಿಮೆಯಾಗುವುದು. ಮತ್ತು ವ್ಯಕ್ತಿಯ ಉನ್ನತಿಯಾಗುವುದು ಸಂಸ್ಥೆಯ ಬೆಳವಣಿಗೆಯಾಗುವುದು. ನಾಡಿನ ಹಿತವಾಗುವುದು.

ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಪರಿಷತ್ತು

ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಪರಿಷತ್ತು, ಬಳ್ಳಾರಿಯಲ್ಲಿ ಇದೇ ಮೇ ೨೨ ನೇ ತಾರೀಖು ಸಾಯಂಕಾಲ ೪ ಗಂಟೆಗೆ ಕೂಡುವದು ಪರಿಷತ್ತಿನ ಅಧ್ಯಕ್ಷರ ಹೆಸರು ಬೇಗನೆ ಪ್ರಸಿದ್ಧಮಾಡುವದರಲ್ಲಿ ಬರುವದು. ಪರಿಷತ್ತಿನ ಪ್ರತಿನಿಧಿಗಳು ಹಿಂದುಸ್ಥಾನೀ ಸೇವಾದಲದ ಸಭಾಸದ ಅಥವಾ ಸಹಾಯಕರಿರಲಿಕ್ಕೇ ಬೇಕು. ಪ್ರತಿನಿಧಿಗಳಿಗೆ ಕೊಡಬೇಕಾಗುವದಿಲ್ಲ. ಪರಿಷತ್ತಿನ ಅಧಿಕಾರಸ್ಥರು ಪ್ರತಿನಿಧಿಗಳ ಊಟದ ವ್ಯವಸ್ಥೆಯನ್ನು ಮಾಡುವರು. ಬಳ್ಳಾರಿಗೆ ಹೋಗಿ ಬರುವ ಗಾಡಿ ಹಾಸಲನ್ನು ಪ್ರತಿನಿಧಿಗಳೆ ವಹಿಸಬೇಕಾಗುವದು. ಪ್ರತಿನಿಧಿಗಳು ಮೇ ೧೯ ನೇ ತಾರೀಖಿನ ದಿವಸ ಬಳ್ಳಾರಿಯಲ್ಲಿ ಹಾಜರ ಇರಲಿಕ್ಕೇ ಬೇಕು. ಮೇ ೨೦ ನೇ ತಾರೀಖಿಗೆ ಕೂಡುವ ರಾಜಕೀಯ ಪರಿಷತ್ತಿನಲ್ಲಿ ಸ್ವಯಂಸೇವಕರ ಪ್ರತಿನಿಧಿಗಳಿಗೆ ಕೆಲಸಮಾಡಬೇಕಾಗುವದು. ಸ್ವಯಂಸೇವಕ ಪರಿಷತ್ತಿನ ಪ್ರತಿನಿಧಿಗಳು ಸ್ವಯಂ ಸೇವಕರಿಗೆ ಯೋಗ್ಯವಾದ ಒಂದೇ ಮಾದರಿಯ ಅರಿವೆಗಳನ್ನು ಧರಿಸತಕ್ಕದ್ದು. ಪರಿಷತ್ತಿನಲ್ಲಿ ಕೆಳಗೆ ಬರೆದ ಠರಾವುಗಳ ಬಗ್ಗೆ ವಿಚಾರಮಾಡುವದರಲ್ಲಿ ಬರುವದು.

(೧) ಕರ್ನಾಟಕ ಪ್ರಾಂತದಲ್ಲಿ ಈ ವರ್ಷ ಮಾಡಬೇಕಾದ ಕೆಲಸವನ್ನು ನಿಶ್ಚಯಿಸುವದಕ್ಕೆ ಹಾಗೂ ಪ್ರಾಂತಿಕಮಂಡಲದ ಸಹಾಯದಿಂದ ಆ ಕೆಲಸವನ್ನು ಯೋಗ್ಯ ರೀತಿಯಿಂದ ಕೊನೆಗಾಣಿಸುವದಕ್ಕೆ ಉಪಾಯಗಳನ್ನು ಯೋಜಿಸುವದು

(೨) ಪ್ರಾಂತದಲ್ಲಿಯ ತರುಣರನ್ನು ಕೆಲವೊಂದು ವಿಶಿಷ್ಟ ಸಂಸ್ಥೆಯಲ್ಲಿ ಏಕೀಕರಿಸಿ ಯೋಗ್ಯವಾದ ಶಿಕ್ಷಣವನ್ನು ಕೊಟ್ಟು ಹಿಂದುಸ್ಥಾನ ಸ್ವಾತಂತ್ರ್ಯಸಮರದಲ್ಲಿ ಹೆಣಗಾಡಲು ಯೋಗ್ಯವಾದ ಕಾರ್ಯಕ್ರಮವನ್ನು ಯೋಜಿಸುವದು.

ಹಿಂದುಸ್ಥಾನೀ ಸೇವಾದಲದ ಪತಿಯಿಂದ ಒಂದು ಪ್ರದರ್ಶನವನ್ನಾದರೂ ಏರ್ಪಾಡ ಮಾಡುವದರಲ್ಲಿ ಬರುವದು ದಲದ ಸಭಾಸದರು ತಯಾರ ಮಾಡಿದ ಸಾಮಾನುಗಳನ್ನು ಹಾಗೂ ಸ್ವಯಂಸೇವಕರಿಗೆ ಯೋಗ್ಯವಾದ ಸಾಮಾನುಗಳನ್ನು ಪ್ರದರ್ಶನದಲ್ಲಿ ಇಡುವದರಲ್ಲಿ ಬರುವದು. ಪರಿಷತ್ತಿನ ದಿವಸ ಸ್ವಯಂಸೇವಕ ಹಾಗೂ ಬಾಲ ಚಮೂಗಳ 'ರ್‍ಯಾಲೀ' ಆಗುವದು.

ಆಟಗಳನ್ನಾಡಿಸಿ ಪಾರಿತೋಷಕಗಳನ್ನು ಕೊಡುವದರಲ್ಲಿ ಬರುವದು. ಪ್ರತಿನಿಧಿಗಳೆಲ್ಲರು ವಿಜಯನಗರ ಸಾಮ್ರಾಜ್ಯವನ್ನು ಸಂದರ್ಶಿಸುವದಕ್ಕಾಗಿ ಹಂಪಿಗೆ ಹೋಗುವರು. ಕರ್ನಾಟಕ ಇತಿಹಾಸವನ್ನು ಬಲ್ಲಂಥ ಪಂಡಿತರು ಅವರನ್ನು ಹಿಂಬಾಲಿಸುವರು.

ಹುಬ್ಬಳ್ಳಿ
ಏಪ್ರಿಲ ೨೦-೧೯೩೬

ನಾ. ಸು. ಹರ್ಡೀಕರ
ಕಾರ್ಯದರ್ಶಿ
ಕರ್ನಾಟಕ ಪ್ರಾಂತಿಕ ಸ್ವ. ಸೇ. ಮಂಡಳ

ಅಮೃತ ವಚನಗಳು.

(ಲೇಖಕ:— ಪಿ ಪ್ಹಿ. ಲಕ್ಷ್ಮಣಶರ್ಮಾ, ಸುಂಡಿರಾಪುರ)

ಈಶ್ವರ ಮಾರ್ಗಾನುಸಾರಿಗಳು ಶತ್ರುವನ್ನು ಕೂಡ ನಿರಾಶೆಗೊಳಿಸುವದಿಲ್ಲ. ನಿನಗೆ ಕೇಡು ಬಯಸುವವರು ನಾಚಿ ಬಿನ್ನರಾಗುವಂತೆ ಸದ್ವರ್ತನಿಯಾಗು. ಸನ್ಮಾರ್ಗಗಾಮಿಯಾದರೆ, ನಿನ್ನ ವೈರಿಗಳಿಗೆ ಸಹ ನಿನ್ನ ದೋಷಗಳನ್ನು ಪ್ರಕಟಮಾಡುವ ಸಾಮರ್ಥ್ಯವು ಬರುವದಿಲ್ಲ. ಯಾರಾದರೂ ನಿನಗೆ ದುಃಖ ಕೊಟ್ಟರೆ ಸಮಾಧಾನ ವೃತ್ತಿಯನ್ನು ಧರಿಸು. ಕ್ಷಮೆಯಿಂದ ನಿನ್ನ ಪಾಪಮೋಚನವಾಗುವದು. ನಿನ್ನ ಊರ್ಜಿತಾವಸ್ಥೆಯಲ್ಲಿ ಶತ್ರುಗಳ ಶಕ್ತಿಯು ಕಡಿಮೆಯಾಗಬೇಕೆಂದಿದ್ದರೆ ನಿನ್ನ ಕೆಲಸದಲ್ಲಿ ಮರ್ಯಾದೆಯನ್ನು ಮೀರಿ ನಡೆಯಬೇಡ.

ಸಾಂಕೇತಿಕ ನಾಮಧಾರಿಗಳಾದ
ವೃತ್ತಪತ್ರ ಲೇಖಕರು

—⁂—

ಕನ್ನಡಿಗರಲ್ಲಿ ಎಂದಿನಿಂದಲೂ ಬರುತ್ತಿರುವ ಸಾಂಕೇತಿಕ ನಾಮಗಳನ್ನು ಓದಿ ಈ ಲೇಖಕರು ಯಾಕೆ 'ಅಜ್ಞಾತವಾಸ'ದಲ್ಲಿರುವರೋ ಎಂದು ಬಹುಜನ ವಾಚಕರಿಗೆ ಸೋಜಿಗ ಎನಿಸಬಹುದು. ಅವರಲ್ಲಿ ಬಳಗೊಂದು ಕೆಲಸಗೊಂದು ಇಲ್ಲದ ಟೀಕಾ ಶಲ್ಯಧಾರಿಗಳಂತೂ "ಇದೆಲ್ಲ ಸಂಕೇತ, ನಾಮಧಾರಣವು ಇಲ್ಲದ ವಿದ್ಯೆಯು ಏನೆಂಬ 'ಸೆಂಸು'" ಎಂಬಿತ್ಯಾದಿಯಾಗಿ ಹೇಳುತ್ತಾರೆ, ಮತ್ತು ಕೆಲವರು ತಮ್ಮ ಸ್ವಂತ ಹೆಸರಿನಿಂದ ತಮ್ಮ ಸುತ್ತ ಬರುವದಲ್ಲವೆಂಬ ದುರ್ಬುದ್ಧಿಯಿಂದ ಲೇಖಕರು ಯಾರ ಮರೆಯಾಗಿ ಪಾರಾಗಿ ಬಿಡುತ್ತಾರೆಂದು ಇಂಥವರ ಅಭಿಪ್ರಾಯ. ಹೀಗಿರುವಲ್ಲಿ 'ಹಿತಾಭಿಲಾಷಿ' ಎಂಬ ಸಂಕೇತದ ಮೇಲೆ ಲೇಖವೊಂದು ವೃತ್ತಪತ್ರದಲ್ಲಿ ಬಂದಿತ್ತು. ಅದರಲ್ಲಿ ಒಬ್ಬ ಸರಕಾರೀ ನೌಕರಸ್ಥನ ಮೈಗೆ ಮುಳ್ಳು ಬರುವಂಥ ಟೀಕೆಯಿತ್ತು. ನನ್ನದೆಂದು ಅವನ ಹೊರತು ಬೇರೆಯವರಿಗೆ ತಿಳಿಯುವಂತಿದ್ದಿಲ್ಲ. ಆ ದರೆ ಮೈಗೆ ಎಲ್ಲಾ ಪ್ರಕಾಶಕರ ಕಾರ್ಯತೆಯಿಂದ ಕಳಿತುಕೊಂಡವಾದ್ದರಿಂದ ಅಸಹ್ಯವಾಗಿದ್ದಬಿಟ್ಟಿತು. ಆ ಮನುಷ್ಯನು ಬಹಳ ಸಂತಾಪದಿಂದ ಯಾವನು ಹೀಗೆ ಬರೆದಿರುವನೆಂದು ಓದ ಹೋಗಲು ಅವನು ಒಬ್ಬ 'ಹಿತಾಭಿಲಾಷಿ'ಯು, ಅವನು ಬೇಗ ಅಹಿತದನ್ನು ಬಗೆಯುವನು ನಾದಾ ಮತ್ತೂ ಏನೂ ದಕ್ಕೆ ಹುಡುಕ್ಹೋದನೆಯೆಂದರೆ ಇಡೀ ವೃತ್ತಪತ್ರವು ಇಂಥವರು ಯಾವನೆಂದು ಗುರುತಿಸದಂತೆ ಸಂಕೇತಗಳಿಂದಲೇ ತುಂಬಿ ಹೋಗಿತ್ತು. ಎತ್ತ ಓದಲ್ಲಿ, 'ವಾಯುಸುತರು' 'ಲಕ್ಷ್ಮೀಪುತ್ರ'ರು 'ಸರಸ್ವತೀ ಭಕ್ತ'ರು 'ನಾರದ ಮಹರ್ಷಿ'ಗಳು ಇತ್ಯಾದಿ 'ದೇವರುಮಕ್ಕಳೆಂದು' ಯಾರೂ ಪುಣ್ಯಕ್ಕೆ ಬರೆದಿದ್ದಿಲ್ಲ. ಆದರೆ ದೇವಲೋಕವೇ ಇಳಿದು ಬಂದಂತಾಗಿತ್ತು. ಹೆಚ್ಚಿನ ದುರ್ದೈವವೆಂದರೆ ಆ ಅಧಿಕಾರಿಯ ಪಾಲಿಗೆ ಸಂಪಾದಕರು ಕೂಡ ಸಂಕೇತದಲ್ಲಿಯೇ 'ಸಂಪಾದಕ ಶಿರೋಮಣಿ' ಎಂಬ ಹೆಸರನ್ನಿಟ್ಟುಕೊಂಡು ಅವರು ಕೂಡ ಹಾರಿಸಿಕೊಂಡು ಬಿಟ್ಟಿದ್ದರು. ಇನ್ನು ಯಾರಿಗೆಂದು ತನ್ನ ಕೋಪದ ಆವಿರ್ಭಾವವನ್ನು ತೋರಿಸಬೇಕೆಂಬದು ತಿಳಿಯದ ಇಂಥ ಸಂಕೇತಗಳನ್ನೇ ಕಿತ್ತು ಹಾಕಬೇಕೆಂದು ಅವನು ಪ್ರೆಸ್ ಆಕ್ಟಿನ ಕರ್ತೃಗಳಿಗೆ ಅರ್ಜಿಯನ್ನು ಬೇಗ ಪ್ರವಾಗಿ ಬರಿಯುವವನಿದ್ದನು; ಅಷ್ಟರಲ್ಲಿ ನಿಃಸಂಕೇತವಾಗಿದ್ದ ಮುದ್ರಾಲಯದ ಹೆಸರೊಂದು ದೊರೆಯಿತು. ಅಂತೇ ಎಲ್ಲವೂ ಸುರಕ್ಷಿತವಾಗಿ ಸಾಗಿತು. ಆದರೆ ಈ ಪರಿಣಾಮಕ್ಕೆ ಬಹುಮುಖವನ್ನು ನೋಡಿದರೆ ಅಂಕಿತ ನಾಮಗಳನ್ನು ಬಿಟ್ಟು ಸಂಕೇತ ನಾಮಗಳನ್ನು ಧರಿಸುವದು ಎಷ್ಟು ಅಪಾಯ ಸ್ಯವಾಗಿರುವದೆಂಬುದನ್ನು ಲೇಖಕರು ನೋಡಿಕೊಳ್ಳಬೇಕು.

ಇನ್ನು ಈ ಸಾಂಕೇತಿಕ ಪದ್ಧತಿಯಲ್ಲಿ ಗುಣಗಳಾ ಉಂಟು. ಇಲ್ಲವೆನ್ನುವಂತಿಲ್ಲ, ಯಾಕೆಂದರೆ, 'ಶ್ರೀನಿವಾಸ-ಸುತ' ನೆಂಬ ಹೆಸರಿನ ಮೇಲೆ ಒಮ್ಮೆ ಲೇಖವು ಪ್ರಸಿದ್ಧವಾಯಿತು. ಬಹಳೇ ಉತ್ಕೃಷ್ಟವಾಗಿದೆಯೆಂದು ಓದಿದವರಲ್ಲಿ ಅನುಭವಿಕ ವಯೋವೃದ್ಧರು ತಮ್ಮ ಅಭಿಪ್ರಾಯವನ್ನಿತ್ತರು. ನಾನು ಅದರ ಲೇಖನ ಮಾಡಿದೆಂದು ಮುಂದಕ್ಕೆ ಹರಿದು ಹೇಳಿದೆನು 'ಈ ಲೇಖವು ನನ್ನದು'ಎಂದು ಅವರು ಪ್ರಶ್ನಿಸುವದಕ್ಕೇ ಬೇಕಾಯಿತು. 'ಶ್ರೀನಿವಾಸ ಸುತ' ನು ನಾನಲ್ಲವೇ ಹೀಗೆ ಅನಧಿಕಾರಿಯಾದರೂ ಸಂಕೇತದ ಸದುಪಯೋಗವನ್ನು ಪರಹಸ್ತದಿಂದ ಕಸಿದುಕೊಂಡ. ಕೊಡಲಿಕ್ಕೆ ಬರುತ್ತದೆ. ಆದರೆ ಆ ಲೇಖನನ್ನು ಯಾರಾದರೂ ಅವಮಾನಿಸಿದರೆ ಈ 'ಶ್ರೀನಿವಾಸ ಸುತರು ಬೇರೊಬ್ಬರೆಂದು ಧಾರಾಳವಾಗಿ ಹೇಳಲಿಕ್ಕೆ ಮಾತ್ರ ಮರೆಯ ಕೂಡದು.

ಇನ್ನು ಎಷ್ಟೋ ಸಜ್ಜನ ಲೇಖಕರು ತಮ್ಮ ತಾಯಿ-ತಂದೆ ಅಣ್ಣ ತಮ್ಮ ಇತ್ಯಾದಿಗಳ ಸ್ಮರಣಾರ್ಥವಾಗಿ ತಮ್ಮ ಲೇಖನ ಸ್ವಾಧ್ಯಾಯವನ್ನು ಒಂದು ಅಂಥ ಸಾಯುಕ್ತಿಕವಾದ ಸಂಕೇತದಿಂದ ಜೋಡಿಸುತ್ತಾರೆ. ಕೆಲವರು ಸೀತಾತನಯರು, ಕೆಲವರು ಜಾನಕೀತನಯರು, ಮತ್ತೆ ಕೆಲವರು ವಾಲ್ಮೀಕೀ ಆರ್ಯರು. ಈ ಮೂವರೂ ಪುರಾಣಕಾಲದಿಂದ ಲವ ಕುಶರೆಂಬ ಒಂದೇ ಜೋಡಿಯಾಗಿ ಇರಬಹುದು ಇದರೆ ವಾಙ್ಮಯದಲ್ಲಿ ಈಗ ಎಷ್ಟು ಸಿಕ್ಕ ಉಪನಾಮವು ಬೇರೆ, ನಿಶ್ಚಯವಾಗಿ ಇವರು ಲವ-ಕುಶರಲ್ಲ.

ಆಶ್ಚರ್ಯವೇ ಇವೆಲ್ಲ ಸಂಕೇತಗಳಲ್ಲಿಯ ವಿನೋದಾತ್ಮಕವಾದ ಸ್ವಭಾವವು ಯಾವೆಂದರೆ 'ಪರಪುರವಾಸಿ' ಅಥವಾ ಸಾಕೇತಪುರನಿವಾಸಿ, ಇತ್ಯಾದಿಯಾಗಿ ಬರೆಯುವದನ್ನು ನೋಡಿದರೆ ಆ 'ಪರಪುರ' ಅಥವಾ 'ಸಾಕೇತಪುರ' ದಲ್ಲಿಯ ಒಂದು ನಾಯಿಯೂ ಕೂಡ ಆ ಲೇಖವನ್ನು ಬರೆದಿರುವದೆಂದು ಅನ್ನಲಿಕ್ಕೆ ಅಡ್ಡಿಯಿಲ್ಲ! ಹಿಂದಕ್ಕೆ ಒಬ್ಬ ವೈರಾಗಿಗೆ ಅವನ ಹೆಸರವನ್ನು ಕೇಳಲು 'ವಿಶ್ವವೆಂಬ ಧರ್ಮಶಾಲೆಯಲ್ಲಿ ಇಳಕೊಂಡ ಮುಸಾಫರನೆಂದು ಹೇಳಿದನಂತೆ! ಆ ಪ್ರಕಾರವಾಗಿ ಪ್ರತಿಯೊಬ್ಬ ಲೇಖಕನು ಸಂಕೇತದ ಮಿತಿಯನ್ನು ಮೀರುತ್ತ 'ಮನುಷ್ಯ-ಸುತ' ನೆಂಬ ಬಿರುದನ್ನು ಇಟ್ಟುಕೊಂಡರೆ ಏನಾಗುವದೋ ದೇವರೇ ಬಲ್ಲ!

ಈಗ ತಥ್ಯಾಂಶಕ್ಕೆ ಬರುವಾ. ನನ್ನ ಮನೋಗತವೆಂದರೆ ಈ ಸಂಕೇತಗಳಲ್ಲಿ ನಿಜವಾದ ವಾಙ್ಮಯ-ಹಿರಿಯರಿಗೆ ಮಾನಸೋಗು ಅಥವಾ ಮುಚ್ಚುಮರೆ ಯಾವದಿಲ್ಲ. ದುಷ್ಟತನದ ತಕ್ಕಡಿಯಿಂದ ಎಲ್ಲರನ್ನೂ ತೂಕಕ್ಕೆ ಹಚ್ಚುವದು ಜಗತ್ತಿನ ಯೋಗ್ಯ ವ್ಯವಹಾರವಲ್ಲ. ಅಂದಮೇಲೆ ಪಾವಿತ್ರ್ಯದಂಥ ಧಾರ್ಮಿಕ ವ್ಯವಸಾಯದಲ್ಲಿ ದುಷ್ಟ ಧ್ಯೇಯದಿಂದ ಸಂಕೇತರಚನೆಯು ಹೇಗೆ ಶಕ್ಯವಾದೀತು? ಬಹಳಾದರೆ ವಿನೋದಕ್ಕೆ ಅಂದರೆ ಸಾವಿನ್ಯದಿಂದ 'ನಗೆ' ಯೆಂಬ ವಾಙ್ಮಯದ ಮುಖ್ಯಾಂಗವನ್ನು ಬೆಳಸುವದಕ್ಕೆ. ಇನ್ನು ಏನಾದರೂ ಬೇರೆ ಹೇಳುವಿದ್ದರೆ ಸದ್ಯಕ್ಕೆ ಬರುತ್ತದೆ. ಅದೇ ಮೇಲೆಳೆ ಹತ್ತಿರುವ ಸೂರ್ಯನು ಅರುಣೋದಯದಲ್ಲಿ ಒಮ್ಮೊಮ್ಮೆ ಮೋಡಗಳ ಮುಸುಕಿನಲ್ಲಿ ಇರುವಂತೆ ಲೇಖನ ಕಲೆಯ ಪ್ರಥಮಾವಸ್ಥೆಯಲ್ಲಿದ್ದ ತರುಣ ಲೇಖಕರು ಸಂಕೇತದಿಂದ ತಮ್ಮ ವಿಷಯವನ್ನು ತೋರ್ಪಡಿಸುವರು. ಇದರಲ್ಲಿ ಕೀರ್ತಿಯಾಡಂಬರವು ಇಲ್ಲೆಂಬದು ಸ್ಫುಟವು ಹಾಗಿದ್ದರೆ ಪ್ರಕಟವಾಗಿ ಅಸಂಕೇತವಾದ ಸಂಪೂರ್ಣ ನಾಮಧೇಯವು ಪದವಿಗಳಿಂದ ಕೂಡಿಕೊಂಡು ಬರಬಹುದಾಗಿತ್ತು. ಮತ್ತೆ ಕೆಲವರು. ತಮ್ಮ ಸರಸ್ವತಿಗೆ ಸ್ಫೂರ್ತಿಗೊಟ್ಟ ಪುರುಷ-ವಿಶೇಷನ ಸ್ಮರಣಾರ್ಥವಾಗಿ ಸಂಕೇತದ ಚಿರಾಯುಷ್ಯವುಳ್ಳ ಸ್ತಂಭವನ್ನು ನಿಲ್ಲಿಸ ಬಹುದು ಇನ್ನು ಬಂಧು ಬಳಗದವರ ನಾಮಧಾರಣೆಗೆ ಕಾರಣವೆಂದರೆ ತಮ್ಮ ಪ್ರೀತಿಗೆ ಪಾತ್ರರಾದವರಿಗೆ ತಮ್ಮ ಲೇಖನಗಳು ಅರ್ಪಣವೆಂಬ ದೃಷ್ಟಿಯಿಂದ ನಮ್ಮಲ್ಲಿ ಎಂದಿನಿಂದಲೂ 'ಇದಂ ನ ಮಮ' ಎಂಬ ಭಾವನೆಯು ಬೇರೂರಿದೆ. ಅದರ ಅಂಕುರವೇ ಲೇಖಕರ ಈ ಅರ್ಪಣ ಬುದ್ಧಿಯಲ್ಲಿದೆ. ಇದೆಲ್ಲ ವಾಯಿತು. 'ರಸಿಕ ರಂಗ' ಅರ್ಥವೇನೆಂದು ಯಾರಾದರೂ ತಿರುಗಿ ಕೇಳ ಬಹುದು. ಬಿಚ್ಚಿ ಹೇಳಬೇಕಾದರೆ ಇದರಲ್ಲಿ ಸಂಕೇತವೇನೂ ಇಲ್ಲ. ಇನ್ನೇನು 'ರಸಿಕ' ರಾಗಲಿಕ್ಕೆ ಬಯಸುವವರಲ್ಲಿ ನಾನೊಬ್ಬನಿರುವೆನೆಂದು 'ರಸಿಕ-ರಂಗ' ನಾಗಿರುವೆನು. ಅದನ್ನು ಉಪನಾಮವನ್ನಾಗಿ ಮಾಡಿ ಅಪಹಾಸ್ಯಕ್ಕೆ ಮಾತ್ರ ಈಡು ಮಾಡದೆ ನನ್ನ ರಸಜ್ಞಾನದ ಉತ್ಕಟೇಚ್ಛೆಗೆ ಪ್ರೇರಕವಾಗಿಯೇ ಮಾಡಬೇಕೆಂದು ಬೇಡಿಕೊಳ್ಳುವ

'ರ. ರ.'

ಸಾಹಿತ್ಯದಲ್ಲಿ ಲಾವಣಿಗಳಸ್ಥಾನ

Ballad....which appears to have arisen spontaneously in almost all literatures and represents one of the earliest stages in the evolution of poetic art - Hudson

ಒಹುಶಃ ಎಲ್ಲ ದೇಶಗಳ ಸಾಹಿತ್ಯೋದ್ಭವದ ಬುಡಕ್ಕೆ ಇರುವ ಬೇರುಗಳು ಲಾವಣಿ ಮೊದಲಾದಂಥ ಸಹಜಸ್ಫೂರ್ತಿಯಿಂದೊಗೆದ ಸರಳವಾದ ಹಾಡುಗಳ ರೂಪದಲ್ಲಿ ಪ್ರೊಡೋಲವೆ ಮುಂದೆ ಬೆಳೆದ ಪ್ರೌಢ ಕಾವ್ಯಗಳಿಗೆ ಇವುಗಳೇ ಮೂಲ ಆದ್ದರಿಂದ ನಮ್ಮ ಅಜ್ಜ ಮುತ್ತಿಂದರ ವಿಷಯವಾಗಿ ಸರಸ ಸಂಗತಿಗಳನ್ನು ಕೇಳಲು ಉತ್ಸುಕರಾಗುವಂತೆ ಸಾಹಿತ್ಯದ ಮೂಲ ವಸ್ತುವಿನಲ್ಲಿ ಅಭಿಮಾನಗೊಳ್ಳಬಾರದೆ?

ಸೃಷ್ಟಿಯ ಮಕ್ಕಳು ಸರಿಸಿರುವಂತೆ ಲಾವಣಿಗಳು ಎಲ್ಲ ಸಾಹಿತ್ಯಗಳಲ್ಲಿ ಮೊದಲು ಮೈಗೊಂಡಂತೆ ನಮ್ಮ ಸಾಹಿತ್ಯದಲ್ಲಿಯೂ ಇಲ್ಲದೇ ಇಲ್ಲ. ಹಳ್ಳಿಗಳಲ್ಲಿ ಅವುಗಳ ಸ್ವನ ಕೇಳದಿರುವದು ವಿರಳ. ಆ ಬಾಲವೃದ್ಧರ ಬಾಯಿಗಳಲ್ಲಿ ಬೇರೂರಿವೆ; ಅಥವಾ ಮೊದಲಿನಲ್ಲಿ ಮೂಡದೇ ಇಲ್ಲ. ದನಕಾಯುವವರ ಬಾಯಲ್ಲಿ, ಕಾಯಕರ ಬಾಯಲ್ಲಿ, ಬೀಸಿಗಳವರ ಬಾಯಲ್ಲಿ, ಹಳ್ಳಿಯ ಕಲಾವಂತರ ಬಾಯಲ್ಲಿ ಅವುಗಳನ್ನು ಕಾಣಬಹುದು. ಇಂಥ ವ್ಯಾಪಕವಾದ ಗೂಢ ಸಾಹಿತ್ಯವನ್ನು ವಿಸ್ತಾರದಲ್ಲಿ ಪ್ರಾರ್ಥನಾವಾಗ್ಮಯವು ಸಿಗಟ್ಟಲಾರದು. ಇಷ್ಟರಿಂದಲೇ ಲಾವಣಿಗಳನ್ನು ಅತಿಯಾಗಿ ಹರಿಸಿಡುವದು ಮಾತ್ರ ಒಳ್ಳೆಯದಲ್ಲ.

ಇಂಗ್ಲಿಷಿನಲ್ಲಿ ಸರಸವಾದ ಪ್ರಾಚೀನ ಲಾವಣಿಗಳು ಹೇರಳವಾಗಿವೆ. ಅವರೆ Wordsworth ಮತ್ತು Coleridge ಕವಿಗಳು ಉಪಯೋಗಿಸುವವರೆಗೆ ಅವುಗಳಿಗೆ ಮಾನವಿರಲಿಲ್ಲ ಒಳ್ಳೆ ಸಂಸ್ಕಾರವನ್ನು ಹೊಂದಿ ತಮ್ಮ ಸರಸ ಸಂಗೀತವನ್ನು ಜಗದಲ್ಲಿ ಸೂರೆ ಸೂರೆ ಸಾರಿದವು. ಮಹಾರಾಷ್ಟ್ರಕ್ಕೆ ಮೂಲ ಸಾಹಿತ್ಯವೆಂದರೆ ರಾಮಜೋಶಿ ಮೊದಲಾದವರ ಲಾವಣಿಗಳೇ, ಅವನ್ನು ಕಸಿದರೆ ಆ ಸಾಹಿತ್ಯಕ್ಕೆ ಕಾಲುಗಳಿಲ್ಲದಾಗುತ್ತಿವೆ. ಇತ್ತೀಚೆಗಾಗಿ ಮರಾಠಿಗರು ಹೆಚ್ಚಾಗಿ ಲಕ್ಷ್ಯವನ್ನು ಪೂರೈಸುತ್ತಿದ್ದಾರೆ ಆ ಕಡೆಗೆ ಆದರೆ ನಮ್ಮ ಸ್ಥಿತಿಗತಿ? ಸ್ಥಿತಿ ಹೋರೆ ಮುಸುಕಿಕ್ಕಿಕೊಂಡು ಕುಳಿತಿದೆ. ಗತಿಯ ಮಾತೇಕೆ? ಸಾರಿಕೆ ಬರಬೇಕು.

ಲಾವಣಿಗಳ ಕವಿಯು ಕಲಿತವನಲ್ಲ. ಕೇವಲ ಹೃದಯೋರ್ಮಿಗಳಿಗೆ ಸ್ಥಾನ ಕೊಡುವ ವಿಭೂತಿಗಳನ್ನು ನೋಡಿ, ಸತ್ಕಥೆಗಳನ್ನು ಕೇಳಿ ಶೂರರ ಶೌರ್ಯವನ್ನವಲೋಕಿಸಿ, ಜಂಗಳೆಯರ ಹೂವಿನಂಥ ಹೃದಯದೆಸಕಗಳಿಗೆ ಮನಸೋತು, ಹಾಡಿಗನು ಹೃದಯದಿಂದ ಹಾಲ್ಹೊರೆಯನ್ನು ಹರಿಸುವನು, ಶುದ್ಧ ಅವ್ಯಕ್ತ ಕಲೆ ಹೊರಬೀಳುವದೊಮ್ಮೆ. ಇಂಥವರಲ್ಲದೆ ಮತ್ತಾರಿಗಿದೆ ಕವಿತ್ವದ ಅಧಿಕಾರ? ಸೃಷ್ಟಿಯೊಳಗಿನ ಸಿಂಪುಗಳನ್ನೊಡೆದು ಮುತ್ತಿನ ಮಾಲೆಗಳನ್ನು ಸೂರೆ ಮಾಡುವರು. ನಾದ ಬ್ರಹ್ಮದ ಜೀವಿಯೇ ಅವರ ವಾಸಸ್ಥಾನ ಇಂಥವರ ಉತ್ತಮ ಕೃತಿಗಳನ್ನು ತುಂಬ್ಕೊಂಡ ಸಾಹಿತ್ಯಕ್ಕೆ ಪರಿಮಿತ ಸಹಾಯವಾಗುವದರಲ್ಲಿ ಸಂದೇಹವಿಲ್ಲ.

ಅವರ ಶಬ್ದಗಳು ಹಸುಗೂಸಿನ ಬಾಯ ಬಳಕೆಯಲ್ಲಿದ್ದಂಥವು, ಭಿನ್ನವಲ್ಲ. ವರ್ಣಿಸುವ ಪ್ರಸಂಗವು ಸಹಜ ಸಂಭವನೀಯವೂ, ಹೃದಯಂಗಮವೂ. ಹೃದಯ ಸ್ಫೂರ್ತಿಯೂ ಪರಮಾನಂದನಿಷ್ಯಂದಿಯೂ ಆದುದು ಅವರ ಶೃಂಗಾರ ಪದಗಳು ತರುಣ ತರುಣಿಯರನ್ನು ಕುಣಿಸವಿರವು ಸಭ್ಯ ಶೃಂಗಾರಕ್ಕಿಂತ ಬೀಭತ್ಸ ಶೃಂಗಾರವು ಸ್ವಲ್ಪ ಹೆಚ್ಚಾಗಿದ್ದರೂ, ಬಹಳ ಕಡೆಗೆ ಸಹಜ Natural ವಾಗಿರುತ್ತಿದೆ ಅವರ ವೀರರಸದ ಲಾವಣಿಗಳು ಹೆಣದಂಥ ಹೆಣಗಳನ್ನು ಹುರಿಗೊಳಿಸ ಒಲ್ಲವು ಅವರ ಕರುಣದ ಕಣ್ಣೀರುಗಳು ಎದೆಯ ಎಲ್ಲೇ ಕಟ್ಟೆಯನ್ನು ಕ್ಷಣಮಾತ್ರದಲ್ಲಿ ಒಡೆದು ಬಿಡುವವು. ಇವೆಲ್ಲವು ಅವರ ಧೀರೋದಾತ್ತ ಕೋಮಲ ಹೃದಯ ವಿಲಾಸಗುಚ್ಛವಾದವುಗಳು; ಅವರ ಮಾನವ ಸ್ವಭಾವಗಳ ಸೂಕ್ಷ್ಮ ನಿರೀಕ್ಷಣವೂ ಅನುಭವವೂ, ಸರಲವಾದ ಪ್ರಸಂಗವರ್ಣನೆಗಳೂ, ದಿನದ ಬಳಕೆಯಲ್ಲಿದ್ದ ಮಾತುಗಳಲ್ಲಿಯ ಮೃದು ಶಬ್ದ ಪ್ರಯೋಗವೂ, ಒತ್ತಿಲೆಯ ಕೂಡಿಸಂತಿರುವ ಅವರ ಲಾವಣಿಗೆ ಲಾವಣ್ಯವನ್ನು ಪೂಸಿದವು ಸಾಹಿತ್ಯದ ತಳದಲ್ಲಿ ಇಂಥ ಚೊಕ್ಕ ಚಿನ್ನವಿದ್ದಮೇಲೆ ಆ ದೇಶಕ್ಕೇನು ಕಡಿಮೆ? ಆದ್ದರಿಂದ ಲಾವಣಿಗಳನ್ನು ದುರ್ಲಕ್ಷಿಸದೆ, ಕೈ ಕೊಟ್ಟರೆ ಈಗಿನ ಇಂಥ ಸಾಹಿತ್ಯದಲ್ಲಿಯ Modern Ballads ದಂಥ ಉತ್ತಮ ಕಾವ್ಯಭಾಗವನ್ನೆತ್ತಿ ಹಿಡಿಯಲು ಬರಬಹುದಲ್ಲವೆ, ಭಾವಗೀತೆಗಳನ್ನು ಬರೆಯುವ ರೀತಿಗೆ ಹೆಚ್ಚಾಗಿ ಹೆದಸು ದೊರಕೀತು. ಯಾವ ಸಾಹಿತ್ಯವೂ ಈ ಭಾಗವನ್ನು ಮರೆತು ಮುಂದರಿಗಿಲ್ಲ ಶಿಶುನಾಳ ಶರೀಫ ಸಾಹೇಬರಂಥ ಲಾವಣಿಕಾರರು ಪ್ರತಿಯೊಂದು ಹಳ್ಳಿಯಲ್ಲಿರುವರು. ಆ ಕಡೆಗೆ ಲಕ್ಷ್ಯ ಕೊಡಬೇಕೆಂದು ಬೇಡಿಕೆ. ಪ್ರಸಂಗ ಬಂದಾಗ ಕನ್ನಡ ಲಾವಣಿಗಳ ಮಹತ್ವವನ್ನು ಬರೆಯುವೆನಂತೆ.

—ಬಸಂತ

“ಕತ್ತಿಯ ಹೋಳಿ”

ಕನ್ನಡದಲ್ಲಿ ‘ಕತ್ತಿ’ಗೆ ಉತ್ಪತ್ತಿ-ಘಟದಿಂದಲೂ ಆಚಾರಭೇದದಿಂದಲೂ ಅನೇಕಾರ್ಥಗಳು ಇದ್ದದ್ದು ಎಲ್ಲರ ಕಿವಿಗೆ ಬಿದ್ದಿರಬಹುದು. ಒಮ್ಮೊಮ್ಮೆ ಈ ಶಬ್ದ- ಪ್ರಯೋಗವನ್ನು ಮುಂದೆ ಮಾಡಿ ಜೋತುದಂಡ ವೀರ ಪುರುಷನಿಗೆ ‘ಕತ್ತಿ’ಯ ಯಜಮಾನನೆಂಬ ಹೊಬು ಹಾಕಲಿಕ್ಕೆ ಬರುತ್ತದೆ ಇಲ್ಲಿ ಇನ್ನೊಂದು ಹೇಳತಕ್ಕ ವಿಷಯವೇನೆಂದರೆ ಪದ ಪ್ರಯೋಗಾಂತರಗಳನ್ನು ಓದಿದ ಎಂಥ ವ್ಯೈಯಾಕರಣಿ ಪಂಡಿತನಿಗೂ ಈ ‘ಕತ್ತಿ’ ಯನ್ನು ಬೇರೆ ಬೇರೆ ಸಂದರ್ಭಗಳಲ್ಲಿ ಉಪಯೋಗಿಸಲಿಕ್ಕೆ ಬಾರದ ಹೊರತು ‘ಕನ್ನಡಿಗ’ ನೆನ್ನಲಾಗುವದಿಲ್ಲ ಇರಲಿ, ಇಂಥ ಮಹಿಮಾ ಪ್ರಾಪ್ತವಾದ ಈ ಶಬ್ದದ ಸಂಯೋಗವು ನಮ್ಮ ಊರ ಮುಂದೆ ಹಾಯುವ ನದಿಗೆ ಬಂದದ್ದು ಸೌಭಾಗ್ಯವೇ ಸರಿ. ಆದರೆ ಸಾಮಾನ್ಯವಾಗಿ ಜನರಲ್ಲಿ ವದಂತಿಯೊಂದರ ‘ಕತ್ತಿ’ ಮಹಾಪ್ರದಲ್ಲಿ ಉಗಮಹೊಂದಿ ಇಷ್ಟು ಪೂತಿಗಂಧ ಯುಕ್ತವಾದ ವಾಹಿನಿಯಿಂದೊಡಗೂಡಿ ಈ ನದಿಯು ಹರಿಯುವದರಿಂದ ಅಂಥಾ ಪವಿತ್ರವಾದ ನಾಮಧೇಯವೆಂದು. (ಓದೋ ಲೇಖವನ್ನು ಓದಿರಿ) ಇದೆಷ್ಟು ಕಲ್ಪಿತವೋ ಅಷ್ಟೇ ನದಿಯ ಕೀರ್ತಿಗೆ ಕಲಂಕರೂಪವಾದದ್ದೇನರಿ. ಆದುದರಿಂದ ನಮಗೆ ತಿಳಿದಿರುವ ಯಥಾರ್ಥವು ಹೀಗೆ ಬೇರೆಯಾಗಿ ಅನಿಸುತ್ತದೆ

ಕತ್ತಿಯೆಂದರೆ ಇಲ್ಲಿ ಗದಾ-ಭದ್ರಲ್ಲ; ಬಾಯಿಯನ್ನು ಹಿಗ್ಗಿಸಿ ಒದರಿ ಉಚ್ಚರಿಸುವ ಕತ್ತಿಯಲ್ಲಿ [ಕತ್ತಿಯನ್ನು ಉಚ್ಚರಿಸುವವರು ಕತ್ತಿ’ ಯೆಂತೆಯ ಮಾಯವನ್ನು ಮುಕ್ತ-ದ್ವಾರವಾಗಿ ಮಾಡಿ

ಒದರುತ್ತಾರೆ] ಆಸರೆ ಇಲ್ಲಿ ಕತ್ತಿ ಯೆಂದರೆ ವೀರ್ಯ ದಿಂದ ಹೇಸ್ಲು ಕಚ್ಚಿ ನಡಿಯುವ "ಕತ್ತಿ"ಯು ಬಂಟನು ಕೈಯಲ್ಲಿ ಹಿಡಿದು ಬೀಸುವ ಒಡ್ಡವು. ಇನ್ನುಮೇಲೆ "ಕತ್ತಿಯಹೊಳೆ" ಯೆಂಬುದರ ಇಂಗಿತವು ತಿಳಿಯಲಿ ಸುವಾಗುವ ದೆಂದು ನದ್ಮ ಸಂಜಗೆ. ಬಾಗಲಕೋಟೆ ಯೆಂಬ ಹೆಸರು ಮೊದಲು ಐತಿಹಾಸಿಕ ಪಟ್ಟಣಗಳ ಮಾಲಿಕೆಯಲ್ಲಿರುವ ದೊಡ್ಡ ದೊಡ್ಡ ಕೋಟೆ ಕೊತ್ತಳಗಳ ಸ್ಮರಣೆ ಮಾಡುತ್ತದೆ; ಹುಗಿಬಿದ್ದರೂ ಇನ್ನೂ ವೀರ ತೋರಿಸುತ್ತ ನಿಂತಿರ ವ ಹುಡೆಗಳು ಶಾಶ್ವತವಾಗಿ ನಿಂತಿವೆ. ಅದರಲ್ಲಿ ಇವುಗಳ ಸಮೀಪದಲ್ಲಿಯೇ ಸರಿಯ ಹರಿಯುವದು ಅಂದ ಮೇಲೆ 'ಕತ್ತಿಯ ಹೊಳೆ' ಯೆಂಬುದರ ವೈಭವ ಸೂಚಕವಾದರ್ಥವು ಈಗ ಈಗ ಹೊಳೆಯುವದಿಲ್ಲವೇ! ಪ್ರತಿಯೊಂದು ಹುಡುಯಿಂದ ಕೋಟೆಯಿದ್ದ ಸ್ಥಳಕ್ಕೆ ಹಿಂದಿನರ ವೀರರ ರಕ್ತ ಮಿಶ್ರಿತವಾದ ವಣ್ಣಿನ ಗೆಳೆತನ ವಿರುತ್ತದೆ. ಆ ರಕ್ತವು ಬಲ ಹೋಗಿದ್ದರೂ ಕೋಟೆಯು ಒದೆತಟ್ಟಿ ಇತಿಹಾಸವನು ಕಲಿಸಿ ಸ್ಫುರಣವನ್ನು ಕೊಡಲಿಕ್ಕೆ ಆತುರತೆಯಿಂದ ನಿಂತಿರುತ್ತದೆ. ಅಂತೇ ಎಲ್ಲ ಇತಿಹಾಸದ ಸನಾತನ ಸ್ಫೂರ್ತಿ ಬಲವು ಆ ಧರ್ಮೊಂದು ಸ್ಫೂರ್ತಿಗೆ ಈ ನದಿಯ ನಾಮಾ ಭಿಧಾನವು ಸಹಜವಾಗಿ ಕಾರಣವಿರುವದು. 'ಕತ್ತಿ'ಗಳು ಮನುಷ್ಯ ರಕ್ತವನ್ನು ಹೀರಿ ತಮ್ಮ ಪ್ರಭಾವದಿಂದ ನೀರು ನೀರಾಗಿ ಮಾಡಿ ಹೊಳೆಯಾಗುವಂಥ ಧಾರೆ-ಯನ್ನೇ ಸೂಚಿಸಿದ ವೆಂದರ್ಥವು. ಅದೇ ಈ ನದಿಯ ಉಗಮಸ್ಥಾನವು ಅಂತೆಯೇ ಕತ್ತಿಯ ತಾಕಲಾಟದಿಂದ ಹುಟ್ಟಿದ ಹೊಳೆಯ ಘಟಪ್ರಭೆಯು

ಇದಾದರೂ ಕಲ್ಪಿತವಾದದ್ದೆಂಬದು ನಮಗೆ ಗೊತ್ತಿದೆ. ಆದರೆ ಯಾವ ಊರಿನ ಇತಿಹಾಸಕ್ಕೆ ನಾವು ಕೊಟ್ಟಂಥ ಸ್ಫುರಣವುಳ್ಳ ಬೆನ್ನು ಕಟ್ಟಿರುವದೋ ಅದು ಮಣಿಯದೆ ಕಾಲಕಾಲಕ್ಕೆ ಹಿಂದಿನವರನ್ನು ನೆನಿಸಿ ನಗರ ಜ್ಯೋತಿಗೆ ಕಾರಣೀಭೂತವಾಗಿ ತಡೆಯುವ ದೆಂಬದೇ ನಮ್ಮ ಮತವು.

—ರಸಿಕ-ರಂಗ

ವರ್ತಮಾನಸಾರ

ಇಹವೃತ್ತ

ಗುಬ್ಬಿನಾಟಕ ಸಭಾ ಶಾಖೆಯವರು ತಾ॥ ೨೦-೪-೩೬ ನೇ ದಿವಸ ಮಹಾನಂದಾ ನಾಟಕವನ್ನು ವೀರಶೈವ ತರುಣ ಸಂಘಕ್ಕಾಗಿಯೂ, ತಾ॥ ೨೭-೪-೩೬ ನೇ ದಿವಸ ಜೀವದಯಾ ಸಂಸ್ಥೆಗೆ ಚಂದ್ರಗ್ರಹಣ ನಾಟಕದ ಉತ್ಪನ್ನವನ್ನು ಕೊಟ್ಟರು ಅವರು ತಾ॥ ೩೮ ನೇ ಮುಂಜಾನೆ ಗುಳೇದ ಗುಡ್ಡಕ್ಕೆ ಹೋದರು.

ಮುಂಬೈಕರ್ನಾಟಕ

ಧಾರವಾಡದ ಸುಪ್ರಸಿದ್ಧ ವಕೀಲರಾದ ಶ್ರೀ ರಾಮರಾವ ಬಳ್ಳಾರಿಯವರು ತಾ॥ ೩೩-೪-೩೬ ನೇ ದಿನ ರಾತ್ರಿ ವೈಕುಂಠವಾಸಿಗಳಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವಾಗುವದು.

ಮೇ॥ ೧೫-೧೬ ತಾರೀಖುಗಳಲ್ಲಿ ಮುಂಬೈ ಪ್ರಾಂತದ ರಡ್ಡೀ ಸಮಾಜದ ೮ ನೇ ಮಹಾಸಭೆಯು ಎರಡಗಟ್ಟಿ ಗ್ರಾಮದಲ್ಲಿ ರಾವಸಾಹೇಬ ಎಚ್. ಚನ್ನಯ್ಯನವರ ಅಧ್ಯಕ್ಷಸ್ಥಾನದಲ್ಲಿ ಜರಗುವದು. ಇದೇ ಸಮಯದಲ್ಲಿ ರಡ್ಡೀ ಎರಡನೇ ಮಹಿಳಾ ಪರಿಷತ್ತು ಕುಮಾರೀ ಲಕ್ಷ್ಮವ್ವನವರ, ಬಿ. ಎ. ಅಧ್ಯಕ್ಷತೆಯ ಕೆಳಗೆ ಜರಗುವದು.

ಬೆಳಗಾಂವಿ ಸರಕಾರೀ ವಕೀಲರಾದ ಶ್ರೀಯುತ. ಭುಜಂಗರಾವ ದಳವಿ (ಬಿ ಎ) ಎಲ. ಎಲ ಬಿ. ಯವರು ಅಲ್ಲಿಯ ಮ್ಯುನಿಸಿಪಾಲಿಟಿಯ ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ.

ಹುಬ್ಬಳ್ಳಿಯಲ್ಲಿ ಡಾ॥ ಹರ್ಡೀಕರರ ಧುರೀಣತ್ವದಲ್ಲಿ ರಾಷ್ಟ್ರೀಯ ವಾರದಲ್ಲಿ ಕಾಂಗ್ರೆಸ್ ಕೆಲಸಗಾರರು ೧೬೦೦ ರೂ. ಗಳ ಖಾದಿಯನ್ನು ಮಾರಿದರು. ಭಗಿನೀ ಮಂಡಲದವರು ಖಾದಿಯ ಸೀರೆ ಖಣಗಳನ್ನು ಮಾರಿದರು

ಮದ್ರಾಸ ಕರ್ನಾಟಕ

ಬಳ್ಳಾರಿಯಲ್ಲಿ ಕೂಡತಕ್ಕ ಕರ್ನಾಟಕ ಸಾಹಿತ್ಯ ಸಮ್ಮೇಲನದ ಅಧ್ಯಕ್ಷಸ್ಥಾನಕ್ಕೆ ವಿಜಾಪುರದ ವಕೀಲರಾದ ರಾವಸಾಹೇಬ ಹಲಕಟ್ಟಿಯವರನ್ನು ಕೇಳಲಾಗಿದೆ

ಶ್ರೀಮಾನ್ ಎಚ್. ಲಿಂಗರಾಜ ಅರಸರು ಬಳ್ಳಾರಿಯಲ್ಲಿ ಸೇರುವ ಕರ್ನಾಟಕದ ೩ ನೇ ಕೀರ್ತನ ಸಮ್ಮೇಲನಕ್ಕೆ ಅಧ್ಯಕ್ಷರಾಗಲು ಒಪ್ಪಿರುವರೆಂದು ಶ್ರೀ. ರಾಘವೇಂದ್ರರಾವ ಜಾಕಲಪ್ಪಿಯವರು ತಿಳಿಸುತ್ತಾರೆ.

ಮೈಸೂರ ಕರ್ನಾಟಕ

ರಾಜ ಸಭಾ ಭೂಷಣ ದಿವಾಣ ಬಹಾದ್ದೂರ ಕೆ ಪಿ ಪುಟ್ಟಣ್ಣ ಶೆಟ್ಟರಿಗೆ 'ಸರ' ಪ್ರಶಸ್ತಿಯು ಸಿಕ್ಕದ್ದಕಾಗಿ ಬೆಂಗಳೂರ ಪುರವಾಸಿಗಳು ಸರ್ ಎಂ. ವಿಶ್ವೇಶ್ವರಯ್ಯನವರ ಅಧ್ಯಕ್ಷತೆಯ ಕೆಳಗೆ ಸಭೆ ಸೇರಿ ಅವರಿಗೆ ರಜತಪೆಟ್ಟಿಗೆಯಲ್ಲಿ ಒಂದು ಅಭಿನಂದನ ಪತ್ರಿಕೆಯನ್ನು ಒಪ್ಪಿಸಿದರು

ಶ್ರೀ ಮಹಾರಾಜರು ಸೀಮೆಗೆ ಪ್ರಯಾಣ ಮಾಡಿ ೬ ತಿಂಗಳು ಕಾಲ ಅಮೇರಿಕೆ ಜರ್ಮನಿ, ಫ್ರಾನ್ಸ ಮೊದಲಾದ ಪಾಶ್ಚಾತ್ಯದೇಶಗಳಲ್ಲಿ ಸಂಚರಿಸಿ ಕೊಂಡು ಬರುವವರಾಗಿರುವರು.

ನಿಝಾಮ ಕರ್ನಾಟಕ

ಹೈದ್ರಾಬಾದ ಸಂಸ್ಥಾನದ ಕಲಬುರ್ಗಿ ಜಿಲ್ಲೆಯಲ್ಲಿ ೫ ಲಕ್ಷ ವೀರಶೈವರಿರುತ್ತಾರೆ. ಅಲ್ಲಿ ಒಂದು ವೀರಶೈವ ವಿದ್ಯಾಸಂಸ್ಥೆಯನ್ನು ಸ್ಥಾಪಿಸಬೇಕೆಂದು ಶ್ರೀ ಮಂಜಪ್ಪನವರು ಪ್ರಯತ್ನಿಸಿದ್ದು ೯೦ ಸಾವಿರ ರೂಪಾಯಿ ಹಣ ಕೂಡಿದೆ.

ಕೊಡಗು ಕರ್ನಾಟಕ

ಕರ್ನಾಟಕ ಮುಖಂಡರು ಕೊಡಗಿನ ಪ್ರವಾಸವನ್ನು ಮುಗಿಸಿಕೊಂಡು ಮಂಗಳೂರಿಗೆ ಹೋಗಿರುವರು. ಅವರು ತಾ ೩೦ ರಲ್ಲಿ ಮಡಿಕೇರಿಯಲ್ಲಿ ಖಾದಿಯನ್ನು ಮನೆ ಮನೆ ತಿರುಗಿ ಮಾರಿರುವರು. ಸಾಯಂಕಾಲ ಕರ್ನಾಟಕ ಏಕೀಕರಣವಾಗಿ ವಿಷಯ ಭಾಷಣ ಮಾಡಿದರು. ೧೭-೧೮ ರಲ್ಲಿ ನಾಪೋಕ್ಲಿನಲ್ಲಿ ನಡೆದ ಮಹಾಸಭೆಯಲ್ಲಿ ಭಾಷಣಗಳನ್ನು ಮಾಡಿರುವರು. ಕೊಡಗು ತನ್ನ ವ್ಯಕ್ತಿತ್ವವನ್ನು ಕಾಪಾಡಿಕೊಂಡೂ, ಮಡಿಕೇರಿಯು ಕರ್ನಾಟಕ ಪ್ರಾಂತದ ವಸಂತ ಋತುವಿನ ರಾಜಧಾನಿಯಾಗಿರಬೇಕೆಂದೂ ಕೊಡಗು ಜಮೀನುದಾರರು ಬಹು ಮತದಿಂದ ಕರ್ನಾಟಕ ಏಕೀಕರಣಕ್ಕೆ ಒಪ್ಪಿರುವರು.

ಹಿಂದುಸ್ಥಾನ

ಭಡೋಚದಲ್ಲಿ ಭಿಲ್ಲರು ಸಭೆಸೇರಿ ಮದ್ಯಪಾನ ಹಾಗು ಸಮಾಜದೊಳಗಣ ದುರ್ವ್ಯಸನಗಳನ್ನು ಹೋಗಲಾಡಿಸಲು ಉಪಾಯಯೋಜನೆಮಾಡಲಿಕ್ಕೆ ಪಂಚಾಯತು ಸ್ಥಾಪನ ಮಾಡಿದರು.

ಸಂಯುಕ್ತ ಪ್ರಾಂತದ ಪ್ರಯಾಗ ಜಿಲ್ಲೆಯೊಳಗಣ ಕೋಸಮ ಗ್ರಾಮದಲ್ಲಿ ಒಂದು ಶಿಲಾಲೇಖವು ದೊರಕಿದೆ. ಇದರ ಮೇಲಿಂದ ಪ್ರಾಚೀನ ಗ್ರಂಥಗಳಲ್ಲಿ ಉಲ್ಲೇಖಿಸುವ ಕೌಸಂಬಿ ಗ್ರಾಮವೇ ಕೋಸಮ ಗ್ರಾಮವೆಂದು ಹೇಳುತ್ತಾರೆ.

ಪೂರ್ವಖಾನದೇಶ ಪಿಂಪಳಗಾಂವದಲ್ಲಿ ಮಹಿಲಾ ವಿದ್ಯಾಲಯವು ಸ್ಥಾಪನವಾಗಿದೆ. ಬಡ ಹಾಗು ಅನಾಥರಾದ ಹುಡುಗಿಯರಿಗೆ ಊಟ ಹಾಗು ಇಳಕೊಳ್ಳುವ ವ್ಯವಸ್ಥೆಯನ್ನು ಉಚಿತವಾಗಿ ಮಾಡುವ ಯೋಜನೆ ಯಾಗಿದೆ.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಕೇವಲ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ

ವಿಳಾಸ:—
ದಿ ಮೋಟಾರ ಡ್ರಾಯವ್ಹಿಂಗ ಇನ್‌ಸ್ಟಿಟ್ಯೂಟ್
ಜಮಖಂಡಿಕರ ವಾಡೆ ೪೫೬ ರವಿವಾರ ಪೇಟ ಪುಣೆಶಹರ



ಗುಲಕಂದ! ಗುಲಕಂದ! ಗುಲಕಂದ!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳಿಂದ ಪದ್ಧತಿಯನುಸರಿಸಿ ತಯಾರಿಸಿದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಂಸ್ಥಾನಿಕರು ಸಭೆ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ [illegible] ಮಾಲೆಗಳೂ [illegible] ಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಕುಂಚಾ ಕಮಿಶನ್.

ವಿಳಾಸ:— ಧಾಡಗೆ ಪಾಷಾಣಕರ ಕಂಪನಿ
ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮ, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಪುಡಿ ಕಿಂ ರೂ ೦-೦-೬, ಆರು ಕಿಂ ರೂ. ೦-೯-೦ ಶಂಭರ ಕಿಂ ರೂ ೧-೦-೦; ೧೦೦೦ ಪುಡಿಗಳ ಕಿಂ. ರೂ. ೧೭-೦-೦, ಟಪೆ. ಖರ್ಚು ವಗೈರೆ. ಪ್ರತ್ಯೇಕ.

ಸುಗಂಧಿ ನಶ್ಯ— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಪಿತ್ತ್ಯ. ಥಂಡಿ, ಅರಕಲೆ ವಗೈರೆ ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ಖರ್ಚು ೦-೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦. ಟಪೆ ವಗೈರೆ.

ಉತ್ತಮ ಬೀಡಿಗಳು!— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ. ಕಿಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರವಠ್ ನೋಡಿ [illegible] ಆರ್ಡರ ಕೊಡಬಹುದು ಇದರ ಹೊರತು ನಮ್ಮಲ್ಲಿಯು ಬಾಗಲ ದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ ಬೇಕಾದ [illegible] ನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು ಖರೀದಿ ಮಾಡಿ ಕಳಿಸುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್ ಬಿ. ಕಡಂ, ಬೀಡಿ ಮತ್ತು ತಂಬಾಕು ಕಾರ[illegible]ಖಾನ ಮು. ಪೋ. ನಿಪ್ಪಾಣಿ, ಜಿ. ಬೆಳಗಾವ

ಅಪರೋಕ್ಷಜ್ಞಾನಿಗಳಾದ
ಶ್ರೀ ಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿ ಕೀರ್ತನ ಸುಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ
೨ ದ್ವಿತೀಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯ ಪದ ಬೆಲೆ ೮ ಆಣೆ
೩ ತೃತೀಯ ಪುಷ್ಪ ಕನ್ನಡ ಪಾರಿಜಾತ ಬೆಲೆ ೫ ಆಣೆ
ಛಾಪಿಸಲ್ಪಡುತ್ತಿದೆ,

ಶ್ರೀ ಪ್ರಾಣೇಶ ವಿಠಲರ ಅನೇಕ ಪ್ರಮೇಯ ಪ್ರಮಾಣ ಯುಕ್ತ ೩೫೦ ಪದಗಳು ಅಚ್ಚಿನಲ್ಲಿ ಇವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು

ಬಣಮಂತರಾವ ವಕೀಲ ಗೋರಾಬಾಳ
ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

ಕಣ್ಣಿನ ಔಷಧ

ಹೂವು [illegible], [illegible], [illegible], ಕಣ್ಣು ಬರೋಣ, ತಂಬಾಗೋಣ, [illegible] ಇಂತಹ ಕಣ್ಣಿನ ಎಲ್ಲ ರೋಗಗಳಿಗೆ ಈ ಔಷಧವು [illegible] ಶಸ್ತ್ರಕ್ರಿಯೆಯಿಂದಲೂ [illegible] ಅನ್ನುವ [illegible] ಅನೇಕರಿಗೆ ಈ ಔಷಧ [illegible] [illegible] ಎಂಥ [illegible] ಬೇ ಮಾತ್ರ ಹಾಕ್ಕಿಯೊಂದಕ್ಕೆ [illegible] ಬೆಲೆ

[illegible]
[illegible] ಪುಣೆಶಹರ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ

ಇವರು ಎಪ್ರಿಲ ೧ ನೇ ವಾರದಿಂದ ಮಡಕೇರಿಯಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸುವರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಅಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂಯತು:—

(೧) ಬಾಂಡ ನಂ. ೫೬೦೦ ಮಿ. ವಿಠ್ಠಲ ಚಿಮ್ಮಾಜಿ ಸೇಟ ಕಲಾನ್ ಅಲಿಬಾಗ ಜಾಂಬೆ.

(೨) ಬಾಂಡ ನಂ. ೧೩೬೦೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೬ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಹಾ ನಾರ್ಥ ಕ್ಯಾನರಾ.

(೪) L. B. C. ಬಾಂಡ ನಂ ೧೬೭೩ ಮಿ|| ಜಿ. ವೆಂಕಟಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ|| ರಾಮಚಂದ್ರ ವಾಮನ ಕಾಂಕಣ ಕಾಬುಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೭೪೦ ಮಿ|| ಆರ್. ಎಚ್. ನಾಟೆಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎಸ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪ್ರತ್ಯೇಕ

ಟಿಪ್ಪಣಿ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಚೋ ವಾಚ ಕಂ. (India) ಮುಂಬೈ ನಂ. ೪

ಕಾನಡಾಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡಲಿಚ್ಛಿಸುವವರು ಈ ವಾರಪತ್ರಿಕೆಯನ್ನು ಮೊದಲು ಓದಬೇಕು. ವಾರ್ಷಿಕ ಚಂದಾ ೩-೧೨-೦ ಪತ್ತೆ:—

ಸಂಪಾದಕ ಕಾನಡಾಧುರೀಣ- ಕುಮಟಾ, ಜಿ. ಉತ್ತರ ಕನ್ನಡ

ಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೇಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಗಿ .
ಜಿಲ್ಹಾ ವಿಜಾಪೂರ.

ಫೋರವಾಲ ಬ್ಲ್ಯಾಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ- ೫ ಆಣೆ. ಟ. ಖ. ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಫೋರವಾಲ ಆ್ಯಂಡ ಕೊ.(ರಜಿಸ್ಟರ್ಡ) ಮುಜೇಶಹರ

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ
ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮುಂಗಳವೇಢೇ ಬಂಧುಗಳು ಕನ್ನಡಿಗನಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

[illegible] — [illegible]

ಸಂಪಾದಕರು— ಮಂಗಳವೇಢೆ ರಾಜಾರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೯	ಬಾಗಲಕೋಟೆ [illegible] ೧೮೬೯ ತಾ. [illegible]	ಸಂಚಿಕೆ [illegible]

[illegible]

ನನ್ನ [illegible] ಮೋಹ [illegible] ।
[illegible] ।
[illegible] ॥
ನನ್ನ [illegible] ನಿನ್ನ [illegible] ।
ಕನ್ನನನ್ನು ಕಣ್ಣಿಗೆ-[illegible] ।
ನನ್ನ [illegible] ನಿನ್ನ ಗಂಧವನು [illegible] ಗಂಧವನೆಂದು ತಿಳಿಯೋ ॥

— [illegible]

ವಿಜಾಪುರದಲ್ಲಿ ಹೆಣ್ಣುಮಕ್ಕಳಿಗೆ [illegible] ಕಲಿಸಲು ವ್ಹಿಕ್ಟೋರಿಯಾ ಗರ್ಲ ಸ್ಕೂಲ ಎಂಬ ಒಂದು ಶಾಲೆಯಿದೆ. ಇದರ ಕಟ್ಟಡವು ಸುಂದರವಾಗಿದ್ದು, ಸುತ್ತು ಮುತ್ತು [illegible] ರಿಗೆ [illegible] ಸ್ಥಳವಿದೆ [illegible] ದಲ್ಲಿ ಹೂವಿನ ಗಿಡಗಳೂ ತರ ತರದ ಬಳ್ಳಿಗಳೂ, [illegible] ಪದದಿಂದ ಶಾಲೆಗೆ ಬಂದ [illegible] ಗಿದೆ [illegible] ದಿವಸ ಈ ಕಟ್ಟಡವು ಮರಾಠೀ ಶಾಲೆಯ ನಿಮಿತ್ತವಾಗಿ ಇವರ [illegible]. [illegible] ಅಲ್ಲಿಂದ ಮರಾಠೀ ಶಾಲೆಯನ್ನು ತೆಗೆದು ಹಾಗಿ, ಆ ಕಟ್ಟಡವನ್ನು ನಗರ ಸಭೆ (ಮ್ಯುನಿಸಿಪಾಲ್ಟಿ)ಯು ಕನ್ನಡ ಶಾಲೆಗಾಗಿ ಕೊಟ್ಟಿತು. ನಗರ ಸಭೆಯು ಯೋಗ್ಯವಾದದ್ದನ್ನೇ ಮಾಡಿತೆಂದು ಕನ್ನಡಿಗರ ಅಭಿಪ್ರಾಯ. ಕರ್ನಾಟಕವು ಕನ್ನಡಿಗರದಿದ್ದು ಕನ್ನಡಕ್ಕೆ ಎಲ್ಲ ತರದ ಪ್ರಾಶಸ್ತ್ಯವೂ ಅನುಕೂಲತೆಯೂ ದೊರೆಯುವುದು ನ್ಯಾಯಸಿದ್ಧವಿರುವುದು. ಕೆಲವು [illegible] ಹಿಂದೆಯೇ ಅಲ್ಲಿಂದ ಮರಾಠೀ ಶಾಲೆಯನ್ನು ತೆಗೆದು ಹಾಕಿ ಬೇರೊಂದೆಡೆಗೆ ಅದಕ್ಕೆ ಸ್ಥಾನ ಕೊಡಬೇಕೆಂದು ಶ್ರೀ [illegible] ದೇಶಪಾಂಡೆ ಮೊದಲಾದ ಸದ್ಗೃಹಸ್ಥರು ಪ್ರಯತ್ನ ಪಟ್ಟರು. ಆಗ ನಗರ ಸಭೆಯಲ್ಲಿ ಮರಾಠಿಗರದೇ ಪ್ರಾಬಲ್ಯವಿದ್ದುದರಿಂದ ಶ್ರೀ ದೇಶಪಾಂಡೆ ಮೊದಲಾದವರ ಯತ್ನಗಳು [illegible]. [illegible] ಅಷ್ಟೇ ಅಲ್ಲ ಆ ಕನ್ನಡಿಗರಿಗೆ [illegible] ಸಂಬಂಧದಿಂದ ದೊರೆಯುವ ಕರ್ನಾಟಕದ ಜುಟ್ಟಿಂದ ಕನ್ನಡಿಗರನ್ನು ಹಳಿಯುವುದು ಮರಾಟಿಗರ ಜಾತಿಸ್ವಭಾವ ಧರ್ಮವಾಗಿದೆ. ಈ ದೋಷವು ಅವರವರದೆ ಕರ್ನಾಟಕದ [illegible] ದೇವತೆಯೆಂದರೆ ಹೆಚ್ಚು ಒಪ್ಪುವದು. [illegible] ಮೊದಲಿನ ಅಭಿಮಾನಿಗಳು ಊರಿದ, ಕನ್ನಡದ [illegible] ಹೋಗಿಲ್ಲ ಅವರ ಪೊಳಕೆಯು ಈಗ ಪೋಳೆತಿದೆ ಅದು [illegible] [illegible] ಸಣ್ಣ ಸ್ಥಳಗಳಿಗೆ [illegible] ವಿಕೆಗಾದರೂ ಸುತ್ತಲಿಂದ ಗಂಡಾಂತರಗಳನ್ನು [illegible] ಬಗೆಯ ಇದ್ದದ್ದಲ್ಲ, ಈ ದೋಷವು [illegible] ಉದಯಿಸುವದು. ಕೆಲವು ಮರಾಠಿಗರು ಕನ್ನಡಿಗರ [illegible] ಎನ್ನುತ್ತಾರೆ ಆದರೆ ಅದು [illegible] ಅನ್ಯಾಯ ಪ್ರವೃತ್ತಿಯನ್ನೂ ಅಧಿಕಾರಲಾಲಸೆಯನ್ನೂ [illegible] ತೆಯನ್ನೂ ವ್ಯಕ್ತ ಪಡಿಸುತ್ತದೆ ಎಲ್ಲ [illegible] ಸ್ಥಾನಗಳಲ್ಲಿ ಮರಾಠಿಯ ಪ್ರಾಬಲ್ಯವನ್ನು ಬೆಳೆಸಿ, ಕನ್ನಡವನ್ನು ತಗ್ಗಿಸುವ ಇವರ ಹಗ್ಗವು ಹರಿಯ ಹತ್ತಿದೆ. [illegible]. ಕನ್ನಡದ ಕುರುಹಾಗಿ [illegible] ವಿಜಾಪುರದ ನಗರ ಸಭೆಯು [illegible] ತೋರಿಸಿದ್ದರಿಂದಾಗಿ, ಕನ್ನಡಿಗರು ಅದನ್ನು [illegible] ಅಭಿನಂದಿಸುತ್ತಾರೆ. [illegible], ಪ್ರಕಟಣಾಪತ್ರಿಕೆ ಮೊದಲಾದ ಎಲ್ಲ ವಿಷಯಗಳಲ್ಲಿಯೂ ನಗರ ಸಭೆಯು ಕನ್ನಡವನ್ನೇ ಉಪಯೋಗಿಸುತ್ತ ಹೋದರೆ, [illegible] ಕನ್ನಡವು [illegible]. ಕನ್ನಡದ ನಷ್ಟವಾದ ಅಧಿಕಾರವು ಪುನ [illegible] ಗೌರವದಿಂದ ಮೆರೆಯುವದು. ಕರ್ನಾಟಕದಲ್ಲಿ ಎಷ್ಟೋ ನಗರ ಸಭೆಗಳಿವೆ. ಈ ನಗರ ಸಭೆಗಳ [illegible] ವಿದ್ಯಾಭಿವೃದ್ಧಿಯಾದರೂ [illegible] ವಿದ್ಯಾಭಿವೃದ್ಧಿ [illegible]. ನಗರ ಸಭೆಯ ಕರ್ತವ್ಯವಾಗಿದೆ. ಶಾಲೆಗಳನ್ನು [illegible] ನಗರ ಸಭೆಯು ಉತ್ಕೃಷ್ಟವಾದ ಪುಸ್ತಕಾಲಯಗಳ ನಿರ್ಮಾಣ ಮಾಡುವದು ಅತ್ಯಾವಶ್ಯಕವಾದುದು. ಇಂಗ್ಲಂಡದಲ್ಲಿಯ ಅನೇಕ ಪಟ್ಟಣಗಳಲ್ಲಿ ನಗರಸಭೆಗಳ (ಮುನಸಿಪಾಲ್ಟಿ) ಉತ್ಕೃಷ್ಟವಾದ ಪುಸ್ತಕಾಲಯಗಳನ್ನು [illegible] ಪುಸ್ತಕಾಲಯಗಳ [illegible] ಪುಸ್ತಕಾಲಯದವರ ವಶಿಯು [illegible], ಪುಸ್ತಕಾಲಯಗಳಿಗೂ, [illegible] ಬೆಳೆಯುವಂತೆ, ಪುಸ್ತಕಾಲಯಗಳ [illegible] ಪುಸ್ತಕಾಲಯಗಳ [illegible] ಮಹತ್ವವು [illegible]. [illegible] ನಗರಸಭೆಯು ಹುಡುಗರ [illegible] ಹುಡುಗರ ಹಿತಕ್ಕಾಗಿ ಪುಸ್ತಕಾಲಯಗಳು ನಗರ ಸಭೆಗಳಿಂದ

ನಿರ್ಮಿತವಾಗಿವೆ. ನಮ್ಮಲ್ಲಿ ಆ ತರದ ಪ್ರಯತ್ನಗಳು ಇನ್ನೂ ಕಂಡು ಬಂದಿಲ್ಲ. ಕರ್ನಾಟಕದ ಇತಿಹಾಸ, ಸಾಹಿತ್ಯ, ಭೂಗೋಲ, ಶಿಲ್ಪಕಲೆ ಜನಜೀವನ, ನಡಿನಡಾವಳಿ, ಮೊದಲಾದ ವಿಷಯಗಳ ಬಗ್ಗೆ ಇರುವ ಎಲ್ಲ ಗ್ರಂಥಗಳನ್ನು ನಗರ ಸಭೆಗಳು ಸಂಗ್ರಹಿಸಬೇಕಾಗಿ ಸೂಚನೆ ಸಣ್ಣ ಹುಡುಗರ ಸಲುವಾಗಿಯಾದರೂ ಕೆಲವು ಚಿಕ್ಕ ಬೋಧಪ್ರದವಾದ ಗ್ರಂಥಗಳನ್ನು ಸಂಗ್ರಹಿಸಿ ಇಡಬೇಕು. ಇದರಿಂದ ವಿದ್ಯಾಪ್ರಸಾರದ ಕೆಲಸವು ಭರದಿಂದ ಸಾಗುವುದು. ನಗರ ಸಭೆಯ ಅಸ್ತಿತ್ವವು ಸಾರ್ಥಕವಾಗುವುದು. ಜ್ಞಾನಕ್ಕೆ ಸದೃಶ್ಯವಾದ ವಸ್ತುವು ಈ ಜಗತ್ತಿನಲ್ಲಿ ಮತ್ತೊಂದಿಲ್ಲ. ಜ್ಞಾನವನ್ನು ಹರಡಿದಲ್ಲಿ, ಸುಖ ಸಂಪತ್ತು ಹೆಚ್ಚುವುದು. ಸುಖಗಳಿಸುವುದೇ ಮಾನವಜನ್ಮದ ಇತಿಕರ್ತವ್ಯ. ಅಂದ ಮೇಲೆ ಇಂತಹ ಕಾರ್ಯಗಳಿಗೆ ನಗರ ಸಭೆಗಳು ಏಕೆ ಪ್ರವೃತ್ತರಾಗಬಾರದು?

ಬಳ್ಳಾರಿಯಲ್ಲಿ ಶೀಘ್ರವೇ ಕೂಡಲಿರುವ ಸಾಹಿತ್ಯ ಸಮ್ಮೇಳನಕ್ಕೆ ಶ್ರೀ ಹಳಕಟ್ಟಿ ಫಕೀರಪ್ಪನವರು ಅಧ್ಯಕ್ಷರಾಗಲು ಸಮ್ಮತಿಸಿರುವರು. ಕರ್ನಾಟಕ ಸಾಹಿತ್ಯ ಸಮ್ಮೇಳನದ ಅಧ್ಯಕ್ಷ ಸ್ಥಾನಕ್ಕೆ ಅವರು ಎಲ್ಲರೀತಿಯಿಂದಲೂ ಯೋಗ್ಯರಿರುವರು. ಅವರ ಹೊಟ್ಟೆಯ ವ್ಯವಸಾಯವು ವಕೀಲಿಯಿರುವದು. ಆದರೆ ಹಳಕಟ್ಟಿಯವರಿಗೆ ವಕೀಲಿವೃತ್ತಿಗಿಂತಲೂ ಸಾಹಿತ್ಯವೇ ಹೆಚ್ಚು ಸೇರುತ್ತದೆ. ತಾಳಪಾಲಿಯನ್ನು ಓದೋಣ, ಪ್ರಾಚೀನ ವಚನ ಸಂಗ್ರಹ ಮಾಡೋಣ, ಹೊಸ ಹೊಸ ಗ್ರಂಥಗಳ ಮುದ್ರಣಕ್ಕೆ ಸಹಾಯಮಾಡೋಣ ಇವೇ ಮೊದಲಾದ ಸಾಹಿತ್ಯದ ಕೆಲಸಗಳಲ್ಲಿಯೇ ಅವರ ಎಲ್ಲ ವೇಳೆಯು ವೆಚ್ಚವಾಗುತ್ತಿದೆ. ಅವರು ಜನ್ಮತಃ ಸಾಹಿತ್ಯ ಪ್ರೇಮಿಗಳು. ಗೌರವದ ಆಶೆಯಿಂದ ಸಾಹಿತ್ಯ ಸೇವೆಯನ್ನು ಮಾಡುವವರಲ್ಲ. ಇಂತಹ ನಿಸ್ಪೃಹ ಸಾಹಿತ್ಯ ಸೇವಕರೇ ನಮ್ಮ ಕನ್ನಡ ನಾಡಿಗೆ ಬೇಕಿರುವರು ಇಂಥವರಿಂದಲೇ ಗಟ್ಟಿಮುಟ್ಟಿಯಾದ ಕಾರ್ಯವು ನೆರವೇರುವದು. ಹಳಕಟ್ಟಿಯವರು ಸಾಹಿತ್ಯದಲ್ಲಿ ನಿಷ್ಣಾತರಿರುವಂತೆ ವಿನಯ ಸಂಪನ್ನರಿರುವರು ಇವರು ಸೌಜನ್ಯ ಶೀಲರೂ, ಸತತೋದ್ಯೋಗಿಗಳೂ, ಲೋಕಪ್ರಿಯರೂ ಇರುವರು. ಕನ್ನಡಿಗರಿಗೆ ಇವರು ಆದರ್ಶರಾಗಿರುವರು. ಇಂಥವರನ್ನು ಅಧ್ಯಕ್ಷರಾಗಲು ಸಮ್ಮೇಲನದವರು ಕೇಳಿದ್ದು ಯಥಾಯೋಗ್ಯವೇ ಸರಿ ಇವರ ಅಧ್ಯಕ್ಷತೆಯಲ್ಲಿ ಸಮ್ಮೇಳನವು ಸುಸೂತ್ರವಾಗಿ ಸಾಗಿ, ಕನ್ನಡಿಗರಿಗೆ ಶ್ರೇಯವನ್ನು ಮಾಡಲೆಂದು ಕನ್ನಡಿಗನ ಕನವರಿಕೆಯ ಕೋರಿಕೆಯು.

ಹಿಂದೀ ಸ್ವಯಂ ಸೇವಕರಿಗೆ

ಸಂದೇಶವು.

(ಅಮೇರಿಕೆಯ ಶ್ರೀಮತಿ ಮೀರಿಯಮ್‌ಲಸ ಇವರಿಂದ)

ಗಾಂಧಿಯವರ ತತ್ವಗಳಂತೆ ಆಚರಿಸಿ ಹಿಂದೀ ಜನರು ಮಾನವೇತಿಹಾಸದಲ್ಲಿ ಒಂದು ವಿಶಿಷ್ಟ ಧ್ಯೇಯವನ್ನು ಸಾಧಿಸುವರೆಂದು ಸರ್ವ ಪ್ರಪಂಚದ ತರುಣರು ಹಿಂದೀ ತರುಣರ ಕಡೆಗೆ ನೋಡುತ್ತಿದ್ದಾರೆ. ಕ್ರಿಸ್ತ ಧರ್ಮ ಸ್ಥಾಪಕನಾದ ಜೀಸಸನು ಸಂಬಂಧಿಕರಲ್ಲಿ ದಯೆ ಹಾಗೂ ಪ್ರೀತಿಗಳ ಉಪಯೋಗವನ್ನು ಕಲಿಸಿದನು. ೨೦೦೦ ವರ್ಷಗಳಿಂದ ಕ್ರಿಸ್ತರು ಪ್ರೀತಿ ಪಾಠವನ್ನು ಕಲಿಯಲು ಪ್ರಯತ್ನ ಮಾಡುತ್ತಿದ್ದಾರೆ. ಹಾಗೂ ಕ್ರಿಸ್ತರಾಷ್ಟ್ರಗಳು ಶಕ್ತಿಯಿಂದ ತಮ್ಮ ಇಚ್ಛಿತ (ನ್ಯಾಯವಾದದ್ದಿರಲಿ ಅಥವಾ ಅನ್ಯಾಯವಾದದ್ದಿರಲಿ) ವನ್ನು ಸಾಧಿಸಲು ಹೋರಾಡಿದರು. ಅಲ್ಲಲ್ಲಿಗೆ ಅನೇಕ ವಿರೋಧಿಸುವವರು ಕಂಡುಬಂದರೂ ಅವರ ಆಟವು ಸಾಗಲಿಲ್ಲ. ಗಾಂಧಿಯವರಾದರೂ ತಮ್ಮ ಲಕ್ಷೋಪಲಕ್ಷ ಅನುಯಾಯಿಗಳ ಸಹಾಯದಿಂದ ರಾಷ್ಟ್ರಕಾರ್ಯಗಳಲ್ಲಿ ಪ್ರೀತಿ ಹಾಗೂ ದಯೆ ಇವುಗಳ ಉಪಯೋಗವನ್ನು ತೋರಿಸಿಕೊಟ್ಟರು.

ಅಮೇರಿಕೆಯಲ್ಲಿ ತಾರಣ್ಯವು ಬಲು ಭರದಿಂದ ಸಾಗುವದು. ಹಿಂದುಸ್ಥಾನದವರಾದರೂ ಇದಕ್ಕೆ ವಿರುದ್ಧವಿರಲಿಕ್ಕಿಲ್ಲ. ನಾವು ಪ್ರೀತಿ ತತ್ವಗಳನ್ನು ವಹಿಸಿದರೆ ನಮ್ಮ ಬಾಂಧವರು ಸಾಯುವರು ಮೊದಲು ಸ್ವಾತಂತ್ರ್ಯ ಸಂಪಾದಿಸೋಣ ಆಮೇಲೆ ಅಂತರ ರಾಷ್ಟ್ರಗಳಲ್ಲಿರಬೇಕಾದ ಪ್ರೀತಿಯ ಮಾರ್ಗವನ್ನು ತುಳಿಯೋಣ ಎಂದು ಕೆಲವರು ಪ್ರತಿಪಾದಿಸುವರು ಆದರೆ ನವ ಚೈತನ್ಯವನ್ನು ಕಂಡು ಹಿಡಿದವರಾದ ನೀವು ಹಳೆಯದಾದ ಹಿಂಸಾ ಮಾರ್ಗದ ಕಡೆಗೆ ಬೆನ್ನು ತಿರುವದೇ ಇರಲಾರಿರಿ. ಆ ಹೊಸ ತತ್ವವನ್ನು ಆಚರಣೆಯಲ್ಲಿ ತರುವದಕ್ಕೆ ಯೋಗ್ಯವಾದ ಸಮಯವು ಇದೆ. ಅದು ನಾಳೆ ನಾಡದು ಬರಲಾರದು.

ಬಾಂಧವರ ವಿಷಯದಲ್ಲಿ ಪಾಪ ಬುದ್ಧಿಯುವರಾದ ತರುಣರ ಎರಡು ಕತೆಗಳು 'ಹೆಬ್ರು ಬಾಯಿಬಲದಲ್ಲಿ' ಕಂಡುಬರುವವು. ಇಜಿಪ್ತದಲ್ಲಿ ಜೋಸೆಫನು ಮಾರಲ್ಪಟ್ಟಿದ್ದನು. ಅವನು ಅಲ್ಲಿಯೇ ಘನತೆಗೇರಿದನು. ರಾಜನಿಗೆ ಸಮಾನವಾದ ಬೆಲೆಬಾಳುವ ಉಡಿಗೆಯನ್ನು ಧರಿಸಿದ ಅವನು ರೊಟ್ಟಿಯನ್ನು ಕೊಳ್ಳಲು ಹಕ್ಕನ್ನು ಬೇಡುವ ದೀನರಾದ ಬಾಂಧವರನ್ನು ನೋಡಿ ಅವರನ್ನು ಕ್ಷಮಿಸಿದನು. ಇದಕ್ಕೂ ಕಡಿಮೆಮಾಡಲು ಅವನು ಶಕ್ತನಿದ್ದನೋ? ಹಸಿವೆಯಿಂದ ಬಳಲುವ ಅವರನ್ನು ಹಾಗೆಯೇ ಅಟ್ಟಲು ಪಾಷಾಣ ರಾಕ್ಷಸನು ಮಾತ್ರ ಉದ್ಯುಕ್ತನಾಗುವನು! ಪಂಚಕನಾದ ಜೇಕಬನು ಮೋಸದಿಂದ ತಮ್ಮ ಅಣ್ಣನ ಸ್ವಾತಂತ್ರ್ಯವನ್ನು ಗಳಿಸಿದನು. ಅವನು ದೇಶಬಿಟ್ಟು ಓಡಿಹೋದನು. ಮತ್ತು ಎಷ್ಟೋ ವರ್ಷಗಳಮೇಲೆ ಕುರಿ ಹಿಂಡಿನೊಡೆಯನಾಗಿ ಹೆಂಡರು ಮಕ್ಕಳೊಡನೆ ತಿರುಗಿ ಬಂದನು. ಸಂಗಡ ಸೇವಕರಾದರೂ ಇದ್ದರು. ಮತ್ತು ಈಸೂನು ತನ್ನ ಬೆಲೆಯುಳ್ಳ ಪಾರಿತೋಷಕಗಳನ್ನು ಸ್ವೀಕರಿಸದೆ ಅವನನ್ನು ಬರಮಾಡಲು ಧಾವಿಸಿದನು. ಹಾಗೂ ಅವನನ್ನಾಲಿಂಗಿಸಿ, ಬಿಗಿದಪ್ಪಿ ಮುದ್ದಿಟ್ಟನು. ನಾವು ಶಕ್ತರಿದ್ದು ವೈರಿಗಳು ಅಶಕ್ತ ಹಾಗೂ ಪರಾಜಿತರಿದ್ದರೆ, ಅವರನ್ನು ಕ್ಷಮಿಸುವದು ಅಷ್ಟೇನು ಮಹತ್ವದ್ದಲ್ಲ. ಆದರೆ ನಾವು ಅಶಕ್ತರಿದ್ದು ವೈರಿಗಳು ಶಕ್ತ ಹಾಗೂ ಊರ್ಜಿತಾವಸ್ಥೆಯಲ್ಲಿದ್ದರೆ, ಅವರನ್ನು ಕ್ಷಮಿಸುವದು ಭೂಷಣಾಸ್ಪದವು.

ಪ್ರೀತಿಮಾರ್ಗವನ್ನು ತುಳಿಯಬೇಕಾದರೆ, ಬೇಕಾಗುವ ನೈತಿಕ ಧೈರ್ಯ ಹಾಗೂ ಆಧ್ಯಾತ್ಮಜ್ಞಾನಗಳನ್ನು ಸಂಪಾದಿಸುವದು ಕಠಿಣವಾದದ್ದು. ಅವಕ್ಕಾಗಿ ಗಾಂಧಿಯವರಂತೆ ಬಲವಾದ ಅಭ್ಯಾಸ, ಶಿಸ್ತು, ಹಾಗೂ ಸ್ವಾರ್ಥತ್ಯಾಗ ಇವುಗಳನ್ನು ಮಾಡಬೇಕಾಗುವದು. ಹಿಂದೀ ತರುಣರೆಲ್ಲ ಒಟ್ಟಾಗಿ ಸೇರಿ ಶಿಕ್ಷಣ ಪಡೆಯಲು ಹುರಿದುಂಬಿಸಲಿಕ್ಕೆ ಹುಬ್ಬಳ್ಳಿಯಲ್ಲಿ ಪ್ರಕಟಿತವಾಗುವ 'ವ್ಹೋಲಂಟೀಅರ' ಮಾಸಿಕವು ಯೋಗ್ಯವಾದ ಮಾರ್ಗವನ್ನು ಹಿಡಿದದೆ. ಈ ಶಿಕ್ಷಣವು ಯಾವ ಗುಣಗಳನ್ನು ಬೆಳಿಸಬೇಕು? ಮೊದಲನೇದು ಮುಖಂಡತ ಹಿಂಬಾಲಿಸುವರನೇಕರಿರುವರು. ಅಮೇರಿಕೆಯ ತರುಣಸಂಘ (Fellowship of youth in Amerika) ದಂತೆ ನಿಮ್ಮ ಸಂಘವಾದರೂ ಸಣ್ಣದಿರುತ್ತದೆ, ಸಾಧನ ಸಾಮಗ್ರಿಯಾದರೂ ಅಷ್ಟಕಷ್ಟೇ ಇರುವದು. ಪ್ರತ್ಯಕ್ಷರೀತಿಯಿಂದ, ಬಹಳಾದರೆ ಕೆಲವು ಸಾವಿರ ತರುಣರನ್ನು ಸಂಪಾದಿಸಲು ಅದು ಬೆಳಿಸಬಹುದು. ಹಳ್ಳಿಗಳಲ್ಲಿ ಹರಿದಾಡಿ ಸಾಮಾನ್ಯ ಜನತೆಯಲ್ಲಿ ಜಾಗೃತಿಯನ್ನು ಹುಟ್ಟಿಸಲು ಯೋಗ್ಯರಾದ ಮುಖಂಡರನ್ನು ತಯಾರಿಸುವದೇ ನಮ್ಮ ಹಿರಿಯ ಗುರಿಯಾಗಿರಬೇಕು.

ಎರಡನೇದು ಪರಸಂಗದ ಕೂಡಿನಡೆಯಬೇಕಾಗುವ ಶಕ್ತಿ ಯು ಅವಶ್ಯವಾದದ್ದು. ಕೆಲಸ ಮಾಡಲು ಬ್ಬಲನ್ನ ಸನ್ನು ಉತ್ಸಾಹ ವು ಅವಶ್ಯಕವಾದವುಗಳು ಅವಿಲ್ಲದಿದ್ದರೆ ಸಾಗದು. ಶಕ್ತಿಹಾಗೂ ಒತ್ತಾಯದಿಂದಾಗ ನಿಜವಾದ ಕಾರ್ಯವು ಆಗಲಾರದು; ವೇದಾಂತಿಗ ಳು ಇದನ್ನು ಕಂಡು ಹಿಡಿದಿರುವರು. ಮನಸ್ಸಿನಿಂದ ಕೆಲಸ ಮಾಡದಿದ್ದ ಸ್ವಯಂಸೇವಕರು ಅನುಪಯುಕ್ತ ಸ್ವಯಂಸೇವಕರು. ಒತ್ತಾ ಯದಿಂದ ಸ್ವಯಂಸೇವಕರಾಗ ಬಹುದೆಂದು ನಿಮಗನ್ನಿಸುವದೋ? ಅವು ಪರಸ್ಪರ ವಿರೋಧಾತ್ಮಕ ಶಬ್ದಗಳು ಒತ್ತಾಯದಿಂದವಾಯಿತೆಂದರೆ ಕೇವಲ ದೀನರು. ಎತ್ತಿಕೊಂಡವರ ಕೈಯೊಳಗಿನ ಕೂಸು.

ಯಾವುದಾದರೊಂದು ಧಂದೆ ಹಾಗೂ ವ್ಯಾಸಾಂಗಗಳಲ್ಲಿ ಪ್ರಾವೀಣ್ಯತೆಯನ್ನು ಸಂಪಾದಿಸುವದು. ಎರಡನೇದು ಉಪಯುಕ್ತ ಕಾರ್ಯಗಳನ್ನು ಮಾಡಿ ಜೀವನವನ್ನು ಸಾಗಿಸುವದು ಅವಶ್ಯವಾದದ್ದು. ನೂಲುವದು, ಶಿಕ್ಷಣ, ಬಡಗಿ ಮುಂತಾದವುಗಳಿಂದಲೂ ಕಾರ್ಯವನ್ನು ಮಾಡಬಹುದು. ಸ್ವಾಭಿಮಾನ, ಸ್ವಾವಲಂಬನ ಹಾಗೂ ಸ್ವಾತಂತ್ರ್ಯ ಗಳಿಸಲು ಇದೊಳ್ಳೇ ದಾರಿಯು

ಅಮೇರಿಕೆಯಲ್ಲಿ ತರುಣರ ಶಿಕ್ಷಣ ವಿಷಯದಲ್ಲಿ ನಮಗೆ ಎಷ್ಟೋ ಅನುಭವವುಂಟು. ಮೊತ್ತಮೊದಲು ಸೈನ್ಯ ಶಿಕ್ಷಣವು. ಲಹ ಕಾಲೇಜ, ವಿಶ್ವವಿದ್ಯಾಲಯ, ಹಾಗೂ ಎಷ್ಟೋ ಸಾರ್ವಜನಿಕ ಶಾಲೆಗಳಲ್ಲಿ ಈ ಶಿಕ್ಷಣವು ಒತ್ತಾಯದಿಂದ ಕೊಡಲ್ಪಡುವದು ಶರೀರ ಸಾಮರ್ಥ್ಯವನ್ನು ಬೆಳೆಸಲು ಈ ಶಿಕ್ಷಣದಿಂದ ಏನೂ ಸಹಾಯ ವಾಗುವದಿಲ್ಲ. ಹಾರವರ್ಡ ವಿಶ್ವವಿದ್ಯಾಲಯದ ತಾಲೀಮು ಡಾಯರೆಕ್ಟರುಗಳು ಈ ವಿಷಯದಲ್ಲಿ ಹೀಗೆ ಅಭಿಪ್ರಾಯ ಪಡುತ್ತಾರೆ. "ಸೈನಿಕರ ತಾಲೀಮು ಶಾರೀರಿಕ ಪ್ರಮುಕ್ತಿ ಬೇಕಾದಷ್ಟೆಂಬ ಮತವನ್ನು ಒಪ್ಪಿದರೂ, ತಾಲೀಮಿನಲ್ಲಿಯ ನಿಶ್ಚಿತ ಸ್ಥಿತಿಯೂ ಚಲನವಲನಗಳೂ ಸ್ನಾಯುಗಳನ್ನು ಬೆಳೆಸಲಿಕ್ಕೆ ಯಾವ ರೀತಿಯಿಂದಲೂ ಸಹಾಯಕವಾಗುವದಿಲ್ಲ ಮತ್ತು ಶ್ವಾಸೋಚ್ಛ್ವಾಸರುಧಿರಾಭಿಸರಣಗಳನ್ನು ಸರಿಪಡಿಸಿ ಆರೋಗ್ಯವನ್ನು ಸಂವರ್ಧಿಸಲು ಬೇಕಾಗುವ ಸಾಧನಗಳನ್ನು ಒದಗಿಸಿಕೊಡಲು 'ಮಿಲಿಟರಿ ಡ್ರಿಲ್ಲು' ಸಮರ್ಥವಾಗಲಾರದೆಂದು ನಿರ್ಧಾರವಾಗಿ ಹೇಳಬೇಕಾಗುವದು." ಇದು ಬಹುತರ ಎಲ್ಲ ತಜ್ಞರ ಮತವು.

ಹಾಗಾದರೆ ಮಿಲಿಟರಿ ಶಿಕ್ಷಣದಿಂದ ಆಗುವದೇನು, ಅದು ವಿಚಾರಮಾಡದೆ ಅಪ್ಪಣೆಗಳನ್ನು ಕೇಳಲು ಕಲಿಸುವದು, ಹಿಂಸೆಗೆ ಮನವನ್ನು ತಯಾರಮಾಡುವದು. ವಿಚಾರ ಮಾಡದೆ ಅಪ್ಪಣೆ ಪಾಲಿಸುವದು, ಕೊಡಿ ನಡೆಯಲು ಬೇಕಾದ ಶಕ್ತಿಯಿಂದ, ಭಿನ್ನವಾದದ್ದು ಅಪ್ಪಣೆಗಳ ವಿಷಯಕ್ಕೆ ವಿಚಾರ ಮಾಡದೆ ಮನ್ನಿಸುವದೇ ಅದರ ಅರ್ಥವು ಈ ಸ್ಥಿತಿಯಲ್ಲಿ ಜನರು, ಹೆಚ್ಚಿಗೆ ಪಗಾರ ಕೊಟ್ಟು ಒತ್ತಿ ಮಾತಾಡುವವರ (ನೀವಿರಲಿ ಅಥವಾ ನಿಮ್ಮ ವೈರಿಗಳಿರಲಿ) ಮಾತು ಕೇಳುವರು. ಈ ಮಾದರಿಯ ಶಿಕ್ಷಣವು ನಮ್ಮ ತರುಣರಿಗೆ ಬೇಕಿಲ್ಲ. "ಮಿಲಿಟರಿ ಡ್ರಿಲ್ಲು ಹುಡುಗರಲ್ಲಿಯ ಉತ್ಸಾಹ ಹಾಗೂ ಶಕ್ತಿಯನ್ನು ಕೊಲ್ಲುವದು ಅದು ತ್ರಾಸದಾಯಕವಾಗುವದು" ಹೀಗೆಂದು ಒಂದು ಮಿಲಿಟರಿ ಸಮಿತಿಯ ಅಭಿಪ್ರಾಯವು. ಯಾವನೊಬ್ಬನು ಹೇಳಿದರೂ ಡರೆಉಡುಗೆಯನ್ನು ಧರಿಸಿ, ಯುದ್ಧದಲ್ಲಿ ಇತರ ತರುಣರನ್ನು ಕೊಲ್ಲಲು ದ್ಯುಕ್ತರಾಗಬೇಕೆಂಬ ಅಭಿಪ್ರಾಯ ಪಡುವ ತರುಣರು ನಮಗೆ ಬೇಕಾಗಿಲ್ಲ. ಅಮೇರಿಕೆಯಲ್ಲಿ ಇಂಥ ತರಹದ ತರುಣರಿರಬೇಕೆಂದು ಕೆಲವು ಮಿಲಿಟರಿ ಜನರ ಅಭಿಪ್ರಾಯವಿದೆ. ಇದನ್ನು ಹೋಗಲಾಡಿಸಲು ನಾವು ತರುಣರನ್ನು ಮಿಲಿಟರಿ ಶಿಕ್ಷಣಕ್ಕೆ ಪರಾಙ್ಮುಖರನ್ನಾಗಿ ಮಾಡಲು ಪ್ರಯತ್ನಪಡುತ್ತೇವೆ. ನೀವು ಮಾತ್ರ ಹಿಂಸಾತ್ಮಕದಲ್ಲಿ ಹಿಂಸೆವಿರುದ್ಧವಾದ ಬೇರೆ ರೀತಿಯ ಮಾರ್ಗವನ್ನು ಹಿಡಿಯಿರುವಿರಿ, ಯುದ್ಧದ ಸಲುವಾಗಿ ಮನವನ್ನು ತಯಾರ ಮಾಡಲು ನೀವು ಇಚ್ಛಿಸುವದಿಲ್ಲ. ಮಿಲಿಟರಿ ಶಿಕ್ಷಣವು ಕಲಿಸುವ, ದೀನ ಆಜ್ಞಾಪಾಲನಕ್ಕೆ ಅಮೇರಿಕೆಯ ತರುಣರು ವಿರೋಧ ಮಾಡ ಹತ್ತಿದ್ದಾರೆ. ಕಾಲೇಜುಗಳಲ್ಲಿ ಮಿಲಿಟರಿ ಡ್ರಿಲ್ಲಿನ ವಿರುದ್ಧ ಸಭೆಯ ಹತ್ತಿದ್ದಾರೆ. ಲೇಖಗಳನ್ನು ಬರೆಯುವರು, ಅದನ್ನು ತೆಗೆದು ಹಾಕಲು ಮತಗಳನ್ನು ಕೊಡುವರು. ದೃಶ್ಯಗಳನ್ನು ಮಾಡಿ ತೋರಿಸುವರು ಹಾಗು ಹಲವೆಡೆಯಲ್ಲಿ ಇದರಲ್ಲಿ ಭಾಗ ತೆಗೆದುಕೊಳ್ಳಲು ಒಪ್ಪುವದಿಲ್ಲ

ಅಂದಮೇಲೆ ತರುಣರ ಶಿಕ್ಷಣವು ಎಂಥದಿರಬೇಕು? ಒಂದಕ್ಕೊಂದು ಸಹಾಯಕವಾದ, ನಮ್ಮೆಲ್ಲರ ಇಚ್ಛಿತವನ್ನು ಪೂರೈಸುವ, ಎರಡು ಪದ್ಧತಿಗಳಿಂದ ನಾವು ಶಿಕ್ಷಣ ಕೊಡಬಹುದು. ಮೊದಲನೇದು ಶಾರೀರಿಕ ಶಿಕ್ಷಣ ಶರೀರ ಸಾಮರ್ಥ್ಯವನ್ನು ಬೆಳೆಸಲು ಬೇಕಾಗುವ ಪದ್ಧತಿಯುಕ್ತವಾದ ಶಿಕ್ಷಣವು ಅವಶ್ಯವಾದದ್ದು. ಇದರಿಂದ ಸ್ನಾಯುಗಳು ಬೆಳೆದು ಇಂದ್ರಿಯಗಳು ವಿಕಾಸ ಹೊಂದಿ ಶರೀರವು ನಿರೋಗಿಯಾಗುತ್ತದೆ. ಇದರ ಜೊತೆಗೆ ಆರೋಗ್ಯದ ವಿಷಯವಾಗಿ ಪಾಠಗಳಾದರೂ ಅವಶ್ಯವಾದವುಗಳು.

ಎರಡನೇದು ಶಕ್ತಿವರ್ಧಕ ಆಟಗಳು. ಇವುಗಳಲ್ಲಿ ಎರಡು ವರ್ಗಗಳುಂಟು. ಮೊದಲನೇದರಲ್ಲಿ ಕೇವಲ ವೈಯಕ್ತಿಕ ಶ್ರೇಷ್ಠತೆಯೇ ಒಳಗೊಂಡಿರುವದು. ಓಡುವದು, ಜಿಗಿಯುವದು, ಈಸುವದು ಇವೇ ಆ ಆಟಗಳು. ಇವುಗಳಲ್ಲಿ ಹಿಂದೀ ಜನರು ವಿಶೇಷಪ್ರಿಯ ಪಡುವರೆಂಬುದು ಈಸುವ ಸ್ಪರ್ಧೆಗಳಿಂದಲೇ ನನಗೆ ಕಂಡುಬಂದಿದೆ. ಎರಡನೇ ವರ್ಗದಲ್ಲಿ ಉಳಿದ ಎಲ್ಲ ಆಟಗಳು ಸೇರುತ್ತವೆ. 'ಬೇಸಬಾಲ ಫುಟಬಾಲ, ಬಾಸ್ಕೆಟಬಾಲ, ಫೀಲ್ಡಹಾಕೀ, ಟೆನಿಸ' ಮುಂತಾದ ಆಟಗಳೇ ಮುಖ್ಯವಾದವುಗಳು ಶಾರೀರಿಕ ಶಕ್ತಿಯನ್ನೊಳಗೊಂಡ ಘಟನೆಗಳನ್ನುಳಿದು ಉಳಿದವುಗಳು ಅನ್ಯೋನ್ಯವಾದವುಗಳು. ಪ್ರಾರಂಭಿಸಲಿಕ್ಕೆ ಇವು ಒಳ್ಳೇ ಯೋಜನವು. ಈ ಆಟಗಳನ್ನಾಡಲು ಬಾಲಬಾಲಿಕೆಯರಿಗೆ ಎರಡನೆಯವರ ಒತ್ತಾಯವು ಕಾರಣವಿಲ್ಲ. ಅವರು ಅವುಗಳಲ್ಲಿ ನೈಪುಣ್ಯ ಪಡೆಯಲು ಯೋಗ್ಯ ಆಹಾರ ಮತ್ತು ನಿದ್ರೆಗಳ ಬಗ್ಗೆ ಒಳ್ಳೇ ದಕ್ಷತೆಯಿಂದಿರಬೇಕು. ಅಮೇರಿಕೆಯ ಹಲವು ಕಾಲೇಜುಗಳಲ್ಲಿ ಈ ಆಟಗಳ ಕಪ್ತಾನರು ಕಾಲೇಜದಲ್ಲಿ ಒಳ್ಳೇ ಪ್ರತಿಷ್ಠಿತರು. ನಮಗೆ ಬೇಕಾಗುವ ಗುಣಗಳ ಬೆಳವಣಿಗೆಗಾದರೂ ಈ ಆಟಗಳಿಂದ ಬಹಳ ಉಪಯೋಗವಾಗುವದು. ಗುಂಪು ಶಕ್ತಿಯು ಸಂಘಶಕ್ತಿಯು ಎರಡನೇ ವಿಷಯ. ಪ್ರತಿಯೊಬ್ಬನು ತನ್ನ ಯೋಗ್ಯತೆಯನ್ನು ತಿಳಿಯುವನು. ಹಾಗೂ ಮುಂದೊರೆಯುವನು. ಅವನು ತನ್ನ ಸ್ವಂತ ಲಾಭವನ್ನು ನೋಡದೆ ಗುಂಪಿನ ಹಿತವನ್ನು ಬಯಸುವನು. ಎರಡನೆಯವರಿಗೆ ಕೂಡಲೇ ಸಹಾಯಮಾಡುವದು, ಸ್ವತ್ವವನ್ನು ಪೂರ್ಣವಾಗಿ ಮರೆಯುವದು ಹಾಗೂ ಶಾರೀರಿಕ ಕೌಶಲ್ಯವು, ಜಯ ಸಂಪಾದನೆಗೆ ಅತ್ಯವಶ್ಯವಾದವುಗಳು. ಅಲ್ಲಿಯಾದರೂ ಶಿಸ್ತಿನಪಾಲನೆ ಇರುವದು. ಆದರೆ ಒಪ್ಪಿನ ಮನಸ್ಸಿನೊತೆ ಇರುವದಲ್ಲ ಅವು ಆಟದ ನಿಯಮಗಳಿಗೆ ಅನುಸರಿಸಿರುವವು. ಸ್ವಾಭಿಮಾನವು ಬಹಳಗಳಲ್ಲಿ ಅತ್ಯವಶ್ಯವಾದುದು. ಯಾವದೇ ಒಳ್ಳೇ ಗುಂಪು ಮೋಸದಿಂದ ಅಥವಾ ಅಸತ್ಯ ಸೋಗುಗಳಿಂದ ಆಟವನ್ನು ಗೆಲ್ಲಲಾರದು. ವಿರುದ್ಧಗುಂಪು ಕೇವಲ ವಿರೋಧಿಯಾದದ್ದು, ಅದರೆ ಶತ್ರುವಲ್ಲ. ಗುಂಪು ಗೆಲ್ಲಯುಬಹುದು. ಆದರೆ ಅದು ಸೋತರೆ ಯಾಗಾದರೂ ಎರಡನೇ ಗುಂಪನ್ನು ಉತ್ಸಾಹಗೊಳಿಸುತ್ತದೆ ಅಮೇ

ಒನೇ ಪಾನಿನಲ್ಲ ನೋಡಿರಿ

ಮಲೆನಾಡಿನ ಕನ್ನಡಿಗರು.

(ಗೆಳೆಯರ ಗುಂಪಿನಿಂದ)

(೧) ಮಲೆನಾಡಿನಲ್ಲಿ ಅಲೆದಾಡುವ ನನ್ನೊಬ್ಬ ಸ್ನೇಹಿತ, ಬೆಳವಲನಾಡಿನ ಅಣ್ಣಯ್ಯಗಳಿಗೆ ಮಲೆನಾಡಿನ ಗುರುತು ಮಾಡಿಕೊಡಬೇಕೆಂಬುದೇ ಈ ಬರಹದ ಗುರಿ. ಮಲ್ನಾಡ ಎಂದ ಕೂಡಲೇ ಛಳಿಜ್ವರವೆಂಬ ಶಬ್ದವು ಎರಡನೇ ಉಸುರಿನಲ್ಲಿಯೇ ಹೊರಬೀಳುವದು. ಅಣ್ಣಯ್ಯಗಳಿರಾ! ಬೆದರಬೇಡಿರಿ ನಾನು ಮಲ್ನಾಡದ ಕನ್ನಡಿಗರ ಕಥೆಯನ್ನು ಹೇಳುವೆನು. ಮಲ್ನಾಡಿನಲ್ಲಿ ವಾಸಿಸುವ ಜನರಿಗೆ ಮಾತ್ರ ಛಳಿಜ್ವರ ಬರುವ ವಾಡಿಕೆಯುಂಟು. ಹೆದರಬೇಡಿರಿ. ಸಾವಧಾನದಿಂದ ಕೇಳಿರಿ.

(೨) ಮಲೆನಾಡಿನ ಜನರ ಪರಿಚಯವು ಬೆಳವಲ ಸೀಮೆಯವರಿಗಾಗಬೇಕೆಂದು ಸರಕಾರದವರು ಶಾಲೆಪಾವಟಿಗಳಿಗೆ ಕೊಟ್ಟ ಚಿತ್ರಪಟದಲ್ಲಿ ಹೊಟ್ಟೆ ಡುಮ್ಮಣ್ಣನ ಚಿತ್ರವನ್ನು ತೋರಿಸಿರುವಿರಷ್ಟೇ? ಅದು ಮಲೆನಾಡಿನ ಜನರ ಯಥಾರ್ಥ ಚಿತ್ರವೆಂದು ಹೇಳಬಹುದು. ೧೦೦ಕ್ಕೆ ೯೯ರಂತೆ ಜನರು ಇದೇ ಪ್ರಕಾರದವರು ನಮ್ಮ ನಾಡಿನಲ್ಲಿ ಹೊಟ್ಟೆಡುಮ್ಮ ಕೈಕಾಲು ಸಣ್ಣ ಎಂದು ಬೇನೆಯಿಂದ ನರಳುವ ಚಿಕ್ಕ ಮಕ್ಕಳಿಗೆ ಚೇಷ್ಟೆಯನ್ನು ಮಾಡುವ ವಾಡಿಕೆಯುಂಟು. ಆದರೆ ಈ ನಾಡಿನಲ್ಲಿ ಯಾವ ವಿನೋದ ವಿಷಯವೋ ದೇವರೇ ಬಲ್ಲ. ಯಾಕೆಂದರೆ ಎಲ್ಲಿಯೂ ಅವರೇ ಮೈತುಂಬಿ ದುಂಡಗಾಗಿ ಥಳಥಳ ಹೊಳೆಯುವ ಒಬ್ಬ ತರೆಯದ ಹುಡುಗನನ್ನಾದರೂ ನಾನು ನೋಡಲಿಲ್ಲ. ಎಲ್ಲರ ಮೋರೆಯು ಮೇಲಿನಂತೂ ಸಪ್ಪಗಿನ ಕಳೆ, ಇಲ್ಲವೆ ಬೇನೆಯ ಕಳೆ, ಹೊಟ್ಟೆಯು ದೊಡ್ಡದು ಕೈಕಾಲುಗಳು ಸಣ್ಣವಾಗಿ, ಅದರಲ್ಲಿಯೂ ಒಣಗಿದಂಥವು. ಅದರಲ್ಲಿಯೂ ಬಹು ಜನರು ಬೇನೆಯವರು. ತಲೆಗೆ ಒಂದು ಅರಿವೆಯ ಪಟ್ಟಿ ಹೀಗೆ ಅವರ ವರ್ಣನೆಯನ್ನು ಮಾಡಬೇಕಾದರೆ ಸರಕಾರದ ಚಿತ್ರವೇ ಯೋಗ್ಯವಾದದ್ದು ಶಬ್ದಗಳಿಗಸಾಧ್ಯ.

(೩) ಆಹಾರ ವಿಹಾರ

ಮೇಲಿನ ವರ್ಣನೆಯಿಂದಲೇ ಅವರ ಆಹಾರದ ವಿಚಾರವೂ ಹೊಳೆಯಬಹುದು. **ಅಕ್ಕಿ ತಿಂದವನು ಹಕ್ಕಿ ಜೋಳ ತಿಂದವನು ತೋಳ** ಎಂಬ ನಾಣ್ಣುಡಿಯು ಪ್ರಸಿದ್ಧವಷ್ಟೇ ಇಲ್ಲಿಯ ಆಹಾರವೇ ಅಕ್ಕಿ, ಬಡವನಿಂದ ಶ್ರೀಮಂತರ ವರೆಗೂ ಅದೇ, ಈಗೀಗ ಕೆಲವು ರೈತರಲ್ಲಿ ರೊಟ್ಟಿ ತಿನ್ನುವ ರೂಢಿಯು ಬೀಳತೊಡಗಿದೆ. ಅದರಲ್ಲಿ ಅರ್ಧ ತಿನ್ನುವದರಲ್ಲಿ ಮೂರುಗಿರ್ಧಾ ತಿಂದ ಕೂಡಲೇ ಅಜೀರ್ಣದ ಮರೆ ಹೋಗಬೇಕಾಗುವದು. ಇಂಥ ಉತ್ತಮವಾದ ಹವೆ! ಜೋಳಕ್ಕೆ ಈ ಪರಿಯಾದ ಮೇಲೆ ಗೋಧಿಯ ಕ್ಷೇಳಿ ನವಂತೂ ಕೇಳುವದೇ ಬೇಡ. ಅನ್ನವೇ ಆಹಾರ ಅದಕ್ಕೆ ಸಾಧನಗಳೆಂದರೆ ಉಪ್ಪುಕಾರ, ಅನ್ನವನ್ನೇ ರಾಶಿಯಾಗಿ ಮಾಡಿ ಅದರಲ್ಲಿ ಉಪ್ಪು ಕಾರಗಳನ್ನು ಬೆರಸಿ ತಿನ್ನುವರು. ಇಲ್ಲವೇ ಹುಣಸೇ ಹಣ್ಣನ್ನು ಕಿವುಚಿ ಅದರಲ್ಲಿ ಉಪ್ಪು ಕಾರಗಳನ್ನು ಹಾಕಿ **ತಂಬುಳಿ ಎಂದು** ಮಾಡಿ ಅದರ ಸಂಗಡ ಉಣ್ಣುವರು. ಬೆಲ್ಲವನ್ನು ಹಬ್ಬಕೊಮ್ಮೆ ಗೊಮ್ಮೆ! ಎಂಥಾದ ಊ ಟಳಿಯನ್ನು ಬೆಳೆಸುವರು. ಇದೇ ಸಾಧಾರಣ ಜನರ ಸ್ಥಿತಿಯು. ಇದೇ ಜನವೇ ಬಹಳ. ಶ್ರೀಮಂತರ ಮನೆಯಲ್ಲಿ ಮಾತ್ರ ಚಲೋ ಊಟವನ್ನು ಕಾಣಬಹುದು. ಹಾಲು ಮೊಸರು ಬೆಣ್ಣೆಗಳಂತೂ ಈ ಜನರಿಗೆ ಅಪರೂಪ, ದನಗಳಿಲ್ಲವೆನಬೇಕೆ? ಪ್ರತಿಯೊಬ್ಬನ ಮನೆಯಲ್ಲಿಯೂ ಕುರಿಹಿಂಡಿನಷ್ಟು; ಹಸರು ಹಾಕಿಪ್ಪ ಕುಡಿಯಲಿಕ್ಕೆ ಮಜ್ಜಿಗೆ ಯಿಲ್ಲವೆಂಬಾತೆ ಇವರಸ್ಥಿತಿ ಮಳೆಗಾಲದಲ್ಲಿ ಮಾತ್ರ ಹಾಲು ಮೊಸರುಗಳಿಗೆ ಕೊರತೆಯಿಲ್ಲವೆಂದು ಹೇಳುವರು ಅಂತೂ ವರ್ಷದಲ್ಲಿ ೮ ತಿಂಗಳು ಈ ಜನರಿಗೆ ಹಾಲು ಮೊಸರುಗಳ ದರ್ಶನವಿಲ್ಲ. ಮೇಲಿನ ಸಂಗತಿಗಳಲ್ಲಿ ಎಳ್ಳಷ್ಟಾದರೂ ಅತಿಶಯೋಕ್ತಿಯಿಲ್ಲ ನಾನು ಕಡೆಗೆ ಈ ತಂಬುಳಿ, ಹಾಗು ಅನ್ನ ಉಪ್ಪುಗಳ ಸಂಗಡ ಉಂಡಿದ್ದೇನೆ ಈ ಊಟವೇ ಈ ಬರಹಕ್ಕೆ ಕಾರಣ ವೆಂದರೂ ಸಲ್ಲುವದು. ಇರಲಿ. ಇದಲ್ಲದೆ ಅಕ್ಕಡಿ ಕಾಳುಗಳು ಬೆಳೆಯುವದಿಲ್ಲ. ಅದರಲ್ಲಿ ಅವರಿಯೇ ಹೆಚ್ಚು ಅದೇ ಹೊಟ್ಟೆಗೆ ಒಣಗಿ ನೀರಿನ ಬೇಗೆಯನ್ನಂತೂ ಹೇಳಲಾಗಲಿಲ್ಲ. ಮಳೆಗಾಲದಲ್ಲಿ ಕೆರೆಯ ನೀರು ಕುಡಿಯುವರು ಅದರಲ್ಲಿಯೇ ದನಗಳನ್ನು ತೊಳೆಯುವದರಿಂದಲೂ, ಗಿಡದ ತಪ್ಪಲುಗಳು ಉದುರಿ ಕೊಳೆಯುವದರಿಂದಲೂ ನೀರು ಮಲಿತು ರೋಗಗಳು ಆಗದಿರಲಿಲ್ಲ; ಸಾಗುತ್ತವೆ. ಬೇಸಿಗೆಯಲ್ಲಿ ಯಂತೂ ಬತ್ತಿ ಹೋಗುತ್ತವೆ. ಆಗ ಗುಂಡಿಗಳನ್ನು ತೆಗೆಯುತ್ತಾರೆ. ರಾಮ, ರಾಮ, ಈ ನೀರಿನ ನೆನಪಾದರೆ ಮೈಮೇಲೆ ಮುಳ್ಳು ಬರುತ್ತವೆ. ನಿರ್ವಾಹವಿಲ್ಲದೆ ಎಲ್ಲರೂ ಅದೇ ನೀರನ್ನು ಕುಡಿಯಬೇಕಾಗುತ್ತದೆ. ಇಲ್ಲಿಯ ಲೋಕಲ ಬೋರ್ಡುಗಳು ಇವರ ಕಷ್ಟಕ್ಕೆ ಯಾಕೆ ಕಣ್ಣುಮುಚ್ಚಿರುವವೋ ಕಾಣೆವು. ಅದರಂತೆಯೇ ಮನೆಗಳೂ, ಎರಡು ಗೋಡೆಗಳನ್ನು ಕಟ್ಟಿ, ಅದರ ಮೇಲೆ ಎರಡು ಜಂತಿಗೆಗಳನ್ನು ಹಾಕಿ ಬಿದುರುಗಳನ್ನು ಬಿಗಿದು ಹುಲ್ಲು ಹೊದಿಸಿದರೆ ಮುಗಿದು ಹೋಯಿತು. ಮನೆಯೇ ಮನೆ. ಬಡವರ ಮನೆಗಳ ಗೋಡೆಗಳಂತೂ ಬಿದುರಿನವು, ಮನೆಯಲ್ಲಿಯೇ ದನದ ಹಕ್ಕಿ, ಅಲ್ಲಿಯೇ ಊಟ ಉಡಿಗೆ ಹತ್ತಿರದಲ್ಲಿಯೇ ತಿಪ್ಪೆ ಗುಂಡಿ, ಬಡವರಿದ್ದರಂತೂ ತೀರಿ ಹೋಯಿತು. ಮತ್ತಿಷ್ಟು ಹೊಲಸು. ಊರಲ್ಲಿ ಎಲ್ಲಿ ನೋಡಿದರೂ ತಿಪ್ಪೆ ಗುಂಡಿ ಹೊಲಸುಗಳ ಹೊರತು ಏನೂ ಕಣ್ಣಿಗೆ ಬೀಳುವದಿಲ್ಲ. ಆದರೆ ಮನೆಗಳು ಮಾತ್ರ ಸದಾ ವ್ಯವಸ್ಥಿತವಾಗಿ ಕಟ್ಟಲ್ಪಟ್ಟಿರುತ್ತವೆ.

(೪) ವ್ಯವಸಾಯ

ಒಕ್ಕಲತನವೇ ಮುಖ್ಯವಾದರೆ ಭತ್ತವೇ ಮುಖ್ಯಪೈರು. ಕೆಲವು ಕಡೆಗೆ ಕಬ್ಬುಗಳನ್ನು ಬೆಳೆಯುವರು ನೀರಿನ ಆಶ್ರಯವಿದ್ದಲ್ಲಿ ಎರಡು ಬೆಳೆಗಳನ್ನು ಬೆಳೆಯುವರು. ಎರಡನೇ ಪೈರು ಅಕ್ಕಡಿಕಾಳುಗಳು. ಇಲ್ಲಿ ಚೈತ್ರಮಾಸದಲ್ಲಿಯೇ ಬಿತ್ತುವ ಉದ್ಯೋಗವು ಪ್ರಾರಂಭವಾಗುವದು. ಕೋಣಗಳನ್ನು ಒಕ್ಕಲತನಕ್ಕೆ ಉಪಯೋಗಿಸುವರು. ಇವುಗಳು ಚನ್ನಾಗಿ ಇರುತ್ತವೆ. ಇಲ್ಲಿ ದನಗಳು ಮಾತ್ರ ಚನ್ನಾಗಿರುವದಿಲ್ಲ ಜಾತಿಯ ಎತ್ತುಗಳಂತೂ ಇಲ್ಲವೇ ಇಲ್ಲ. ಬೈಲುಸೀಮೆಯಿಂದ ಎತ್ತುಗಳನ್ನು ತರುತ್ತಾರೆ. ತಂದ ಕೆಲವು ದಿವಸಗಳಲ್ಲಿ ಅವೂ ಸಂಪುಷ್ಟಕ್ಕೆ ಬರುತ್ತವೆ. ಅವುಗಳ ಆಹಾರವು ಬತ್ತದ ಹುಲ್ಲು ಅವಡು ಹತ್ತಿಕಾಳುಗಳನ್ನು ಕಂಡ ದಿವಸವು ಅವುಗಳಿಗೆ ಹಬ್ಬವೆಂಬಂತೆ ಕಾಣುತ್ತದೆ ಎಲ್ಲ ದನಗಳ ಎಲುವುಗಳು ತೆಗೆದಿರುತ್ತವೆ. ಮಳೆಗಾಲದಲ್ಲಿ ಮಾತ್ರ ಹಸರು ಮೇದು ಚನ್ನಾಗಿ ಆಗುತ್ತವೆ. ಪ್ರತಿಯೊಬ್ಬರ ಮನೆಯಲ್ಲಿಯೂ ದನಗಳು ಬಹಳ ಇರುತ್ತವೆ. ಪ್ರತಿವರ್ಷ ಹೊಲಕ್ಕೆ ಗೊಬ್ಬರವನ್ನು ಹಾಕಬೇಕಾಗುವದೇ ಇದಕ್ಕೆ ಕಾರಣವು. ಇಲ್ಲಿ ಛಕ್ಕಡಿಗಳು ಕಡಿಮೆ. (ಒಕ್ಕಲತನದಲ್ಲಿ) ಒಡ್ಡರ ಭಂಡಿಯಂಥ ಬಂಡಿಗಳನ್ನು ಉಪಯೋಗಿಸುತ್ತಾರೆ. ಇದಲ್ಲದೆ ಇಲ್ಲಿ ಕಂಬಾರ ಕೋರೆಯು ಚನ್ನಾಗಿ ಸಾಗುತ್ತದೆ, ಬಡಿಗರೂ ಕಮ್ಮಾರರೂ ಪ್ರತಿಯೊಂದು ಹಳ್ಳಿಗೆ ಇರುವದಿಲ್ಲ ಆದರಿಂದ ರೈತರಿಗೆ ತೊಂದರೆ ಯಾಗುತ್ತದೆ ಅಡಿವಿಗಳಲ್ಲಿಯ ಕಟ್ಟಿಗೆಗಳನ್ನು ಕಡಿದು ಶಹರಕ್ಕೆ ಒಯ್ಯುವದೊಂದು ಉದ್ಯೋಗವೇ ಆಗಿರುತ್ತದೆ. ಆದರಿಂದ ಎಷ್ಟೋ ಜನರು

ಹೊಟ್ಟೆ ತುಂಬಿಕೊಳ್ಳುವರು. ಹೆಣ್ಣುಮಕ್ಕಳು ಮಳೆಗಾಲದಲ್ಲಿ ಕೆಲಸವನ್ನು ಮಾಡುತ್ತಾರೆ ಉಳಿದ ದಿವಸಗಳಲ್ಲಿ ಕೊಟ್ಟು ಮಾಡು ವರು. ಆದರೆ ಇತ್ತೀಚಾಗಿ ಕೆಲವು ಪುಣ್ಯವಂತರು ಛಕ್ಕಡ ಗಿರಣಿ ಗಳನ್ನು ತಂದುಹಾಕಿ ಅವರ ಹೊಟ್ಟೆಯಮೇಲೆ ಕಾಲುಕೊಟ್ಟಿ ದ್ದಾರೆ—

(೫) ಸ್ವಭಾವ

ಜನರಲ್ಲಿ ನಂಬಿಕೆಯು ದೊಡ್ಡ, ಮೈಯಲ್ಲಿ ಸೊಂದ್ದವರು ಕಡಿ ಮೆ ಇರುವದರಿಂದ ಕೊಲೆ ಸುಲಿಗೆ ಒಡೆದಾಟಗಳು ಕಡಿಮೆ ಬುದ್ಧಿ ಯೂ ಅಷ್ಟಕಷ್ಟೇ? ಗಂಡಸರು ಸತತ ದುಡಿಯುವರು. ಆದರೆ ಆಗಬೇಕಾದಷ್ಟು ಕೆಲಸವು ಆಗುವದಿಲ್ಲ ಯಾಕಂದರೆ ಶೈನಾಗದ ವರು; ಉದ್ಯೋಗಿಗಳೆಂದು ಮಾತ್ರ ಹೇಳಬಹುದು. ಚಾಕವಂತರಿಲ್ಲ ಅಲ್ಪಸಂತುಷ್ಟಿಗಳು, ದೀರ್ಘೋದ್ಯೋಗಿಗಳಲ್ಲ. ಮಹತ್ವಾಕಾಂ ಕ್ಷೆ ಇಲ್ಲ. ಸುಖೋಪಭೋಗವೂ ಅಲ್ಲ. ಬಡತನವು ಎಲ್ಲ ಕಡೆಗೆ ಮನೆಮಾಡಿ ಕೊಂಡಿದೆ. ಸಾಲಗಾರರೇ ಬಹಳ. ತಂಬಾಕಚುಟ್ಟಿಗಳ ಪ್ರಾಬಲ್ಯ ಯಥಾ ಪ್ರಕಾರವಿದೆ. ಶರೆ ಸಿಂದಿಗಳ ಕುಡಿತ್ಯಕಡಿಮೆ ಜನರು ಪುಕ್ಕರು ಬಹಳ ಇದರಿಂದ ಪೋಲಿಸರದೂ ಘಾಶೆಷ್ಟಚಾತೆ ಯ ಅಗುಳದಾರರೂ ಜೀಳಿಯು ಇಲ್ಲಿ ಚನ್ನಾಗಿ ಬೆಯ್ಯುವಂತೆ ಕಾಣುತ್ತದೆ. ಜನರಲ್ಲಿ ಧರ್ಮಬುದ್ಧಿಯು ಸ್ವಲ್ಪ ಹೆಚ್ಚು. ಹೀಗೆ ಹೇಳುತ್ತಾ ಹೋದರೆ ಹನುಮಪ್ಪನ ಬಾಲದಂತೆ ನಮ್ಮ ಕತೆಯು ಬೆಳೆಯುತ್ತಹೋಗುವದು. ಆದ್ದರಿಂದ ಇಲ್ಲಿಗೆ ಇದನ್ನು ನಿಲ್ಲಿಸುತ್ತೇವೆ. ನಮ್ಮ ಕತೆಗೆ ಹುಂ, ಅನ್ನುವವರು ದೊರೆತರೆ ಮುಂದೆ ನಾಡು ಹಾಳಾ ಗಲು ಕಾರಣಗಳನ್ನು ಆ ನಾಡಿನ ಇತಿಹಾಸವನ್ನೂ ಸುಧಾರಿಸುವ ಉಪಾಯಗಳನ್ನೂ ಹೇಳಬೇಕೆಂದು ಮಾಡಿದ್ದೇವೆ.

ಮರಾಠಿಗರ ಗೊಂದಲ

(ವಿಜಾಪುರದ ಸ್ವಂತ ಸುದ್ದಿಗಾರನಿಂದ)

ಮೊನ್ನೆ ಇಲ್ಲಿಯ ಮುನಸಿ ಪಾಲಿಟಿಯವರು ಮರಾಠಿಯ ಹೆಣ್ಣು ಸಾಲೆಯ ಸ್ಥಳದಲ್ಲಿ ಕನ್ನಡಹೆಣ್ಣು ಸಾಲೆಯನ್ನು ಹಾಕಿ, ಕನ್ನಡ ಹೆಣ್ಣುಸಾಲೆಯ ಸ್ಥಳವನ್ನು ಮರಾಠಿಗರಿಗೆ ಕೊಟ್ಟದ್ದ ರಿಂದ ಹೇಳಬಾರದಂಥ ಕಿಚ್ಚು ಮರಾಠಿಗರ ಹೊಟ್ಟೆಯಲ್ಲಿ ಬಿದ್ದಿದೆ. ಊರೊಳಗೆ ಹಸ್ತಪತ್ರಿಕೆಗಳ ಓಡಾಟ ನಡೆದಿದೆ. ಸತ್ಯಾಗ್ರಹದ ಅಂಜಿಕೆ ತೋರಿಸತೊಡಗಿದ್ದಾರೆ; ಓಣಿ ಓಣಿಗಳಲ್ಲಿ ಸಲ್ಲದ ಮಾತು ಗಳ ಸೂರಿಯೇ ಸೂರಿ. ಇನ್ನೆಷ್ಟೋ ಮರ್ಕಟ ಚೇಷ್ಟೆಗಳು ನಡೆದೇ ಇವೆ. ಆದರೆ ಅವು ಮರ್ಕಟನವೇ; ಮನುಷ್ಯನವಲ್ಲ.

ಈ ವರೆಗೆ ಮರಾಠಿಗರ ಕೈ ಸಾಗಿತ್ತು. ಅವರೂ ಒಂಟಿತನ ದಿಂದ ಸಾಗಿಸಿಕೊಂಡೇ ತೋರಿಸಿದರು ತಾವಿರುವ ದೇಶವನ್ನು ನೋ ಡಲಿಲ್ಲ. ಉಂಡು ಬದುಕಿದ ಅನ್ನದ ಉಪಕಾರ ತೀರಿಸದಂಥ ಕೃತ ಘ್ನರ ಕಾಲವು ಕಡೆಗೊಂಡಿತೆಂದು ಇನ್ನಾದರೂ ತಿಳಿಯಬೇಕು. ಇಲ್ಲದಿದ್ದರೆ ಹುಚ್ಚರೆನಿಸಿ ಕೊಂಡಾರು ಒಂಭತ್ತು ಹತ್ತು ಶತ ಗಳಿಂದಲೂ ಕನ್ನಡಿಗರ ಕಂಬು ಕಟ್ಟಿದ ಮರಾಠಿಗರು ಈಗೂ ತಲೆ ಜಜ್ಜಿದ ಹಾವಿನಂತೆ ಬಾಲ ಅಲ್ಲಾಡಿಸುವ ಮೋಹಕ್ಕೆ ಬಿದ್ದಿರು ವರು. ನಿಜವಾಗಿಯೂ ಇದು ಅವರ ಸ್ವಭಾವಗುಣವಾದ ಆತ್ಮಾಸ ಯು; ರಾಕ್ಷಸೀ ಮಹತ್ವಾಕಾಂಕ್ಷೆಯು; ರಾಕ್ಷಸೀ ವೃತ್ತಿಯನ್ನು ಬಿಡು ಮನುಷ್ಯರಾಗಿ ಬಾಳುವದು ನೆಟ್ಟಗಲ್ಲವೆ?

ನಿಜ, ನಿಮ್ಮ ಭಾಷೆ ನಿಮಗೆ ಪ್ರಿಯವಿದ್ದದ್ದು ಅಮೃತದಂಥ ವಿದ್ದದ್ದೂ ಹೆತ್ತವರಿಗೆ ಹೆಗ್ಗಣಮುದ್ದು. ನಿಮ್ಮಂತೆ ಪರರನ್ನೂ ಬಗೆ ಯು ಬಾರದೆ? ನಮಗೂ ಸ್ವರ್ಣಮಯವಾದ ಭಾಷೆ ಇರುವುಂಟು. ನಿಮ್ಮಷ್ಟೇ- ನಿಮ್ಮಗಿಂತಲೂ- ಅಪಾರವಾದ ದಾಕ್ಷಿಣ್ಯವುಂಟು. ನಮ್ಮ ರಾಷ್ಟ್ರದ ಇತಿಹಾಸದ ಗಾಂಭೀರ್ಯವೂ ಗೌರವವೂ ಯಾವ ದೇಶಕ್ಕಿಂತಲೂ ಕಡಿಮೆತರವಿಲ್ಲ ನಮ್ಮ [illegible] ಕೌಶಲ್ಯ ಗಳು ಜಕ್ಕಣ್ಣ ಮಹಾರಾಷ್ಟ್ರಗಳನ್ನು [illegible] ಕನ್ನಾಗಿಸಬಹುದು. ಇವೆಲ್ಲವೂ ನಮ್ಮ ಕೆಚ್ಚೆದೆಯ [illegible] ದ ಪ್ರಭಾವವಲ್ಲವೆ! ಅವಿನಾಶಿಯಾದ ಕರ್ನಾಟಕದ ಸುಸಂಸ್ಕೃ ತಿಯ ಪ್ರತಿಮೆಗಳಲ್ಲವೆ? ಇಷ್ಟಿದ್ದರೂ ಕುರುಡ ಮರಾಠಿಗರ ಕುಹಕ ಕ್ಕೆನೇನು ಕಡಿಮೆ ಇಲ್ಲ.

ಮಾತೃಭಾಷೆಯ ಅಭಿಮಾನವು ಎಲ್ಲರಿಗೂ ಅತ್ಯವ ಶ್ಯ ಆದರೆ ಅದಾ ರಾಷ್ಟ್ರಭಾಷೆಗೆ ಪ್ರಸಂಗಬಿದ್ದರೆ ಅಂಕಿತರಾಗಿರು ವದೇ ಜಾಣತನದ ಮಾತು. ಮತ್ತು ಅದು ಅವರ ಕರ್ತವ್ಯ. ಮಾ ತೃಭಾಷೆಯು ಅಂಥ ಕೆಲವು ವ್ಯಕ್ತಿಗಳಿಗೆ ಬೇಕಾಗಿದ್ದರೂ ಆ ಇಡೀ ರಾಷ್ಟ್ರಕ್ಕೆ ಅದರ ಅವಶ್ಯಕತೆ ಇಲ್ಲವೆಂಬುದನ್ನು ಚೆನ್ನಾಗಿ ಲಕ್ಷ್ಯದಲ್ಲಿ ಡಿರಿ. ಉಸಹ ರಿಗೇಡಿಗಳೆಂದೆನಿಸಿಕೊಳ್ಳುವದರಲ್ಲೇನರ್ಥ?

ಒಂದು ವಸ್ತು ಪತ್ರಿಕೆಯಲ್ಲಿ "आपला महाराष्ट्र देश तुमच्या भाषेच्या प्रांतांत पसरल्यामुळे"—ಎಂದಿದೆ. ಅಂದರೆ ನಮ್ಮ ನಿಜಾ ಪುರವೂ ಮಹಾರಾಷ್ಟ್ರದ ಒಂದು ಭಾಗವಂತೆ. ಸರಿಗೆ ಕೊಟ್ಟ ನಾಯಿ ತಲೆಗೇರಿತಂತೆ. ಕಾವೇರಿಯಿಂದ ಗೋದಾವರಿಯವರೆಗೆ ಕರ್ನಾಟಕ ವಿದೆಯೆಂದರೆ ಈಗ್ಗೆ ಜನರು ನಗಲಿಕ್ಕಿಲ್ಲ? ಮರಾಠಿ ಗರ ಈ ಪೋಪದ — ಮತಿಭ್ರಮೆಯ — ಪರೆಯು ಎಂದು ಹರಿ ಯುವದೋ ದೇವರೇ ಬಲ್ಲ!

कर्नाटकी संस्थेच्या मनांत शाळेची भाषेविषयी नोकरोची क्षेत्र सहज राहिलः आहे. ಎಂಥ ಸುಳಿಯು ಪಿರಾಪವಿದು? ಹೀಗೆ ಬಡಬಡಿಸಲು ಏನು ಆಧಾರವೋ ಇವರಿಗೆ. ಕೇವಲ ವಜ್ರ್ರ ತನದ ಮದದ ಮಾತುಗಳಿವು 'ಸಂಶಯಾತ್ಮಾ ವಿನಶ್ಯತಿ.' ಅವರಿಗೆ ತ್ರಾಸ ಕೊಡುವದು ನಮಗೆ ಪುರುಷಾರ್ಥವೆನಿಸುವದಂತೆ. ಊಸರಾ ಡುವ ಮಾತುಗಳಿವು. ನಮ್ಮ ಉದ್ಧಾರ ಮಾಡಿ ಕೊಳ್ಳುವದರಲ್ಲಿ ಅನ್ಯರಿಗೆ ಸ್ವಲ್ಪು ತೊಂದರೆ ಯಾದರೆ ಅದು ಅನಿವಾರ್ಯ ಗತ್ಯಂತರವಿಲ್ಲ. ಮೊದಲು ಸಲ್ಲದ ಕೆಲಸಗಳನ್ನು ಮಾಡಿದ ಮೇಲೆ ಪ್ರತಿಫಲವನ್ನನುಭವಿಸುವದು ತಪ್ಪದು ಟೊಂಗೆಯನ್ನು ಕೆಳಕ್ಕೆ ಜಗ್ಗಿದ ಆ ಬಲವಾಗಿ, ನಿಮ್ಮನ್ನೂ ಕೂಡ ಎತ್ತಿ ಒಗೆಯುವದು.

ಬಂಗಾಲೀ ಉರ್ದು ಭಾಷೆಗಳನ್ನು ದ್ವೇಷಿಸದೆ ಮರಾಠಿಯ ನ್ನೇ ಹೇರಯಾಳಿಸುವದೇಕೆಂದು ಅವರ ಕೇಳಿಕೆ. ಮರಾಠಿಯ ಪೂ ರ್ವ ಉಳಿದ ಭಾಷೆಗಳು ನಮ್ಮನ್ನು ಕೆಡಿಸಿಲ್ಲ. ಹಿಂದಿನ ಮಾತು ಹೋಯಿತು ಬಿಡಿರಿ. ಇಂಗ್ಲೀಷರ ಆಳಿಕೆಯಿಂದೀಚೆಗೆ ಮರಾಠಿ ಗರ ಕಾಲ್ಕೆಳಗಿದ್ದ ಉತ್ತರ ಕರ್ನಾಟಕಕ್ಕೆ ಮರಾಠಿಯನ್ನುಳಿದ ಮ ತ್ತಾವ ಭಾಷೆಯನ್ನು ಹಿಡುಕುವದು ಬೇಕಾಗಿದೆ. ಮಾಡಿದ್ದುಣ್ಣು ಉಣ್ಣುವರು. ಬಿತ್ತಿದ್ದನ್ನು ಬೆಳೆಯುವರು.

ಕೆಲವು ಮರಾಠಿಗರು ವಿಜಾಪುರವು ಪೂರ್ವದಿಂದಲೂ ಮ ರಾಠೀ ನಾಡೆಂದೂ, ಅದ್ದರಿಂದ ಅದು ತಮಗೇ ಸಲ್ಲಬೇಕೆಂದೂ ಹುಚ್ಚರಂತೆ ಬಡಬಡಿಸುವರು. ಮರಾಠಿಗರೇ, ಕಣ್ಣುಗಳವೆಯೋ ನಿಮಗೆ? ಅಭಿನವಪಂಪ ಕುಮಾರವ್ಯಾಸ [illegible] ಕರ್ನಾಟ ಕದ ಕಣ್ಣುಗಳೆನಿಸಿಕೊಳ್ಳಲರ್ಹರಾದ [illegible] ವಿಜಯ

ದ. ಕರ್ನಾಟಕ ಪ್ರೊವ್ಹಿನ್ಸಿಯಲ್ ವ್ಹಾಲಂಟಿಯರ ಬೋರ್ಡ ಬಾಗಲಕೋಟ ಕಚೇರಿಯ
ಲೆಖ್ಖದ ತಖ್ತೆ — ತಾ ೨೫—೧—೨೬ ಇಸ್ವಿ ಹಿಡಿದು ತಾ| ೪—೫—೨೬ ವರೆಗೆ

ಜಮಾ					ಖರ್ಚು				
ಅನು ಕ್ರಮ ನಂ.	ಖಾತೆಯ ಹೆಸರು	ರಕಮು ರು.	ಆ.	ಪೈ.	ಅನು ಕ್ರಮ ನಂ.	ಖಾತೆಯ ಹೆಸರು	ರಕಮು ರು.	ಆ.	ಪೈ.
						ಪ್ರವಾಸ	೪೭	೧೪	೬
೧	ಜಬ್ಬಿವಸೂಲಖಂಡ	೬	೫	೬	೧	ಪೋಸ್ಟ	೬	೮	೬
೨	ವ್ಹಾಲಂಟಿಯರ ಬೋರ್ಡ ಗದಗ	೫೦	—	—	೨	ಸ್ಟೇಶನರಿ	—	೧೨	೩
೩	ಸಭಾಸದ	೫	೪	—	೩	ಆಫೀಸ	೬	೯	—
೪	ಸಹಾಯಕ	೧೬	—	—	೪	ಡೆಡ್‌ಸ್ಟಾಕ	೩	—	—
೫	ಡೊನೇಶನ್	—	೮	—	೫	ಪಗಾರ	೧	೮	—
೬	ನಾರಾಯಣರಾವ ವೈದ್ಯ ಗದಗ	೧೭	—	—	೬	ಪ್ರಿಂಟಿಂಗ	೫	—	—
		೯೫	೧	೬			೭೧	೪	೩
						ಸದ್ಯದಶಿಲ್ಕು—	೨೩	೧೩	೩
							೯೫	೧	೬

ಎಸ್ ಪಿ ಕುಲಕರ್ಣಿ, ಬಾಗಲಕೋಟ

ಪ್ರುತ'ದಲ್ಲಿ ಜನ್ಮಿಸಿ ಜಗತ್ಪ್ರಸಿದ್ಧರಾದದ್ದು ನಿಮಗೆ ಹೇಗೆ ತಿಳಿದೀತು? ಅಮರವಾದ ಕನ್ನಡ ಸಂಸ್ಕೃತಿಯ ಸುಳಿವು ಕಾಣದಿರುವಿರೋ? ನಿನ್ನೆ ಹುಟ್ಟಿ ಇಂದು ಕಂಣು ತೆರೆದವರಂತೆ ಹೀಗೇಕೆ ಮಾಡುವಿರಿ.

ಇರಲಿ; ಈ ಮೇಲಿನ ಮಾತುಗಳನ್ನು ಲಕ್ಷಿಸಿ ಬುದ್ಧಿವಂತರಾದ ಮರಾಠಿಗರು ತಿದ್ದಿಕೊಳ್ಳುವರೆಂದು ಆಶಿಸುವೆ. ಆದರೆ ಕನ್ನಡಿಗರೆ! ನೀವು ಮಾತ್ರ ಇನ್ನು ಸುಮ್ಮನಿರಬೇಡಿರಿ. ಒಳ್ಳೆ ಭರದಿಂದ ಸಾಗಿರಿ ಆನೆಯಂತೆ ಶ್ವಾನನ ಬೊಗಳಿಕೆಗೆ ಕಿವಿಗೊಡಬೇಡಿರಿ. ಆದರೆ ಕುಶಲತನದಿಂದ ಸಾಗಿರಿ. ಇನ್ನುಮೇಲೆ ಕನ್ನಡ ವಿಷಯದಲ್ಲಿ ಕರ್ತವ್ಯವೆಂದು ತಿಳಿದು ಜೀವದ ಹಂಗುದೊರೆದು ಕಾರ್ಯ ಸಾಧಿಸುವ ಪ್ರಯತ್ನ ಮಾಡಿರಿ. ಮುನಸಿಪಾಲಟಿಯಲ್ಲಿಯ ಲೆಖ್ಖಪತ್ರಗಳನ್ನು ಕನ್ನಡದಲ್ಲಿಯೇ ಇಡಲು ಪ್ರಾರಂಭಿಸಿರಿ. ಶಕ್ಯವಾದರೆ "ಕರ್ನಾಟಕ ಸಾಹಿತ್ಯ ಸಂಘ"ವನ್ನು ಸ್ಥಾಪಿಸಿರಿ. ಕನ್ನಡ ಶಾಲೆಯ ಮಾಸ್ತರರು ಹೆಚ್ಚಾಗಿ ಭಾಷೆಯ ಕಡೆಗೆ ಲಕ್ಷಕೊಡಬೇಕು. ವ್ಯಾಪಾರಸ್ಥರು ಧನ ಸಹಾಯ ಮಾಡಬೇಕು. ಕನ್ನಡಿಗರಾದ ನೀವು ಕರ್ನಾಟಕದ ಅನ್ನವನ್ನುಂಡು ಉಪಕಾರಗೇಡಿಗಳಾಗಬೇಡಿರಿ. ಏಳಿರಿ! ಎಚ್ಚರಾಗಿರಿ!! ಮರಾಠಿಗರ ದಾಳಿಯಿಂದ ಪಾರಾಗಿರಿ!!!

—ಕನ್ನಡ ತರುಣ

೩ ನೇ ಪಾನದಿಂದ ಮುಂದುವರಿದುದು

ಲ್ಕೆಯಲ್ಲಿ ಕೆಲವು ವಿಶ್ವವಿದ್ಯಾಲಯಗಳಂತೆ ಅಟಗಳನ್ನು ಹೆಚ್ಚಾಗಿ ಬೆಳೆಸದೆ ಅಧವಾ ಆಟಗಳು ಧಂಧೆಯೆಂದು ತಿಳಿಯದೆ, ಹಿಂದೀ ತರುಣರು ತಮ್ಮ ಸಹಾಯಕ್ಕಾಗಿ ಅವುಗಳನ್ನು ಬೇಕಾದಹಾಗೆ ಉಪಯೋಗ ಮಾಡಿಕೊಳ್ಳಬಲ್ಲರು.

ಇವಲ್ಲದೆ ಯೋಗ್ಯ ಮಾರ್ಗದಿಂದ ಶಿಕ್ಷಣಕೊಡಲು ಇನ್ನೂ ಅನೇಕ ಪದ್ಧತಿಗಳನ್ನು ನೀವು ಕಾಣಬಹುದು. ಆದರೆ ಮಿಲಿಟರಿ ಶಿಕ್ಷಣ ಮಬ್ಬಿಗೆ ಮಾತ್ರ ಬಲಿಬೀಳತಕ್ಕದ್ದಲ್ಲ. ಅಖಿಲ ಪ್ರಪಂಚವು ಶಾಂತತೆ ಸಾಮ್ರಾಜ್ಯವನ್ನು ಸ್ಥಾಪಿಸಲಿಕ್ಕೆ ಹಿಂದು ಸ್ಥಾನದ ಕಡೆಗೆ ನೋಡಹತ್ತಿದೆ. ಈ ಮಹತ್ವದ ಧ್ಯೇಯವನ್ನು ಸಾಧಿಸಿದ ನಂತರ ನಿಮ್ಮನ್ನನುಸರಿಸುವರನೇಕರಿರುವರು.

--Volunteer.

ವರ್ತಮಾನಸಾರ

ಮುಂಬೈಕರ್ನಾಟಕ

ಇಂಡೀ ತಾಲೂಕ ಬಳ್ಳೊಳ್ಳಿ ಗ್ರಾಮದ ಮುಖ್ಯ ಖಾತೇದಾರರಾದ ಶ್ರೀ|| ರಾ|| ರಾ|| ಬಾಬಾಚಾರ್ಯ ಕೃಷ್ಣಸ್ವಾಮಿ ಯಸಾಚಾರ್ಯ (ಅಗ್ಯಿ)ಅ ಹಾಗೀರದಾರ ಇವರು ಇದೇ ಚೈತ್ರ ಬಹುಳ ಪ್ರತಿಪದ(೩—೪—೨೬)ದಿವಸಾ ಬಳ್ಳೊಳ್ಳಿ ಗ್ರಾಮದಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದ ಎನಿಸುತ್ತದೆ ಪರಮಾತ್ಮನು ಇವರ ಆತ್ಮಕ್ಕೆ ಶಾಂತಿ ಯನ್ನೀಯಲಿ!

ಮುದ್ದೇಬಿಹಾಳದಲ್ಲಿ ಹನುಮಜ್ಜಯಂತ್ಯುತ್ಸವವು ಬಹು ವಿಜೃಂಭಣೆಯಿಂದ ಸಾಂಗವಾಯಿತು ದೇವರಿಗೆ ಅಭಿಷೇಕ, ಪುರಾಣ ದೀಪೋತ್ಸವಗಳು ವಿಧಿಪ್ರಕಾರ ನಡೆದವು ಮುಖ್ಯ ಗೃಹಸ್ಥರು ವಕೀಲರು ದೇವರ ದರ್ಶನಕ್ಕೆ ಬಂದಿರಲಿಲ್ಲೆಂದು ಹಬ್ಬಭಕ್ತರು ತಿಳಿಸುತ್ತಾರೆ.

ಮದ್ರಾಸ ಕರ್ನಾಟಕ

ಇದೇ ಮೇ ತಿಂಗಳು ಬಳ್ಳಾರಿಯಲ್ಲಿ ಸಾಹಿತ್ಯ ಸಮ್ಮೇಳನದೊಂದಿಗೆ ಕರ್ನಾಟಕ ವಿಶ್ವವಿದ್ಯಾಪೀಠದ ಬಗ್ಗೆ ಸಮ್ಮೇಳನವೊಂದು ನಡೆಯಲಿರುವದು. ಆ ಸಮ್ಮೇಳನದಲ್ಲಿ ವಿದ್ಯಾಪೀಠದ ಕೇಂದ್ರ ಎಲ್ಲಿರಬೇಕು. ಮತ್ತು ಸ್ಥಾಪನೆಯ ಮಾರ್ಗಗಳು ಯಾವವು? ಎಂಬ ವಿಷಯಗಳು ಚರ್ಚಿಸಲ್ಪಡುವವು ಈ ವಿಷಯದಲ್ಲಿ ಕಪ್ರಾಂತಿಕ ಕಮಿಟಿಯವರು ಒಂದು ಪ್ರಶ್ನಮಾಲೆಯನ್ನು ಪ್ರಕಟಿಸಿರುವರು. ಆ ಪ್ರಶ್ನಮಾಲೆಯನ್ನು ಮೇಲ್ಕಂಡ ಉಪಸಭೆಯವರು ಅಂಗೀಕರಿಸಿರುವರು. ಕಪ್ರಾಂತಿಕ ಕಾಂಗ್ರೆಸ ಕಮಿಟಿಗೆ ತಮ್ಮ ಉತ್ತರಗಳನ್ನು ಕಳಿಸದಿರುವವರು ದಯೆಯಿಟ್ಟು ತಮ್ಮ ಉತ್ತರಗಳನ್ನು ಕೆಳಗಿನ ವಿಳಾಸಕ್ಕೆ ಮೇ ತಿಂಗಳು ೧೧ನೆಯ ತಾರೀಖಿನೊಳಗಾಗಿ ಕಳುಹಿಸಬೇಕೆಂದು ಕರ್ನಾಟಕ ವಿಶ್ವವಿದ್ಯಾಲಯದ ಉಪಸಭೆಯ ಕಾರ್ಯದರ್ಶಿಗಳು ತಿಳಿಸುತ್ತಾರೆ.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು. ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:— ದಿ ಮೋಟರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್
ಜಮಖಂಡಿಕರ ವಾಡೇ ೪೯೫ ಶನಿವಾರ ಪುಣೆಶಹರ.

ಗುಲಕಂದ! ಗುಲಕಂದ!! ಗುಲಕಂದ!!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು. ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತಯಾರಿಗಳೂ ದೊರೆಯುತ್ತವೆ. ವ್ಯಾಪಾರಸ್ತರಿಗೆ ತುಂಬಾ ಕಮೀಶನ್.

ವಿಳಾಸ:— ಧೂಡಗೆ ಪಾಷಾಣಕರ ಕಂಪನಿ
ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯಾಗಿ ಅನುಭವ ಕೊಳ್ಳಬೇಕು. ೧ ಪ ಡಿ ಕಿಂ ರೂ ೦-೦-೬, ೨೫ರ ಕಿಂ ರೂ. ೦-೯-೦ ೫೦ರ ಕಿಂ ರೂ ೧-೮-೦; ೧೦೦೦ ಪುಡಿಗಳ ಕಿಂ. ರೂ. ೧೭-೦-೦, ಟ ಪೆ. ಖರ್ಚುವಗೈರೆ. ಪ್ರತ್ಯೇಕ.

ಸುಗಂಧಿ ನಶ್ಯ— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ. ಥಂಡಿ, ಅರತಲೆವಡಕ ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ಖರ್ಚು ೦-೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦ ಟ ಪೆ ಪೋ ಬೇರೆ.

ಉತ್ತಮ ಬೀಡಿಗಳು— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ. ಕಿಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರವತ್ ನೋಡಿ ವ್ಹಾಲಿ ಆರ್ಡರ ಕೊಡಬಹುದು ಇದರ ಹೊರತು ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತುಂಬಾಕು ಬರುತ್ತದೆ. ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು ಖರೀದಿ ಮಾಡಿ ಕಳಿಸುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ— **ಎಸ್ ಬಿ. ಕದಂ,** ಬೀಡಿ ಮತ್ತು ತಂಬಾಕು ಜರ್ದಾ ಕಾರ್ಖಾನೆ. ಮು. ಪೋ. ನಿಪ್ಪಾಣಿ, ಜಿ. ಬೆಳಗಾವ.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಯ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಭಾವಿ ಷಟ್ಪದಿ ರೂಪವಾಗಿ,

ಶ್ರೀ ಪಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣ ಯುಕ್ತ ೨೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ
ಲಿಂಗಸೂಗೂರ ಪೋಷ್ಟ ಜಿ. ರಾಯಚೂರ, ನಿಜಾಂ

ಕಣ್ಣಿನ ಔಷಧ

ಹೂವು, ಮೋತಿಬಿಂದು, ದೃಷ್ಟಿ ಮಾಂದ್ಯ, ಕಣ್ಣುಬೇನೆ, ಕಣ್ಣು ಬರೋಣ, ಕೆಂಪಾಗೋಣ, ಮತ್ತು ಗುಡ್ಡಿ ರೆಪ್ಪಿ ಬಕ್ಕಿಗಳ ವಿಕಾರ ಇಂತಹ ಕಣ್ಣಿನ ಎಲ್ಲ ಬೇನೆ ಗಳಿಗೆ ಈ ಔಷಧವು ಸಂಜೀವಿನಿಯು ಶಸ್ತ್ರಕ್ರಿಯೆಗಿಂತಲೂ ಮೇಲು! ರಾ ಬ. ಪಂಡಿತ ಡಿ. ಡಿ. ಕಲೆಕ್ಟರ ಆಸ್ಪತ್ರೆ. "ಅನೇಕರಿಗೆ ಈ ಔಷಧ ಕೊಟ್ಟ ಗುಣದ ಬಗ್ಗೆ ಖಾತ್ರಿಯಾಯಿತು ಮಗಳ ಕಣ್ಣುಗಳು ನೆಟ್ಟಗಾದವು" ಎಂಥ ರೋಗಕ್ಕೂ ಎಕದೇ ಮಾತ್ರೆ ಮಾತ್ರೆಯೊಂದಕ್ಕೆ ರು. ೧॥ ಟ ಖ ಬೇರೆ.

ಸೂಚನೆ:—ಪತ್ರವ್ಯವಹಾರ ಇಂಗ್ಲಿಷ ಅಥವಾ ಮರಾಠಿಯಲ್ಲಿ
ವಾ. ವಿ. ಕರಮರಕರ ೫೫೦ ಶನಿವಾರ ಪುಣೆಶಹರ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ

ಇವರು ಏಪ್ರಿಲ ೧ ನೇ ವಾರದಿಂದ ಮಡಕೇರಿಯಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್ ವೀರಣ್ಣಾ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೮ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಆ ಕಂಪನಿಯ ಹೆಡ್ ಆಫೀಸಿನ ... ನೇಮಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ... ರಾದ ರಾವಸಾಹೇಬ ಡಾಕ್ಟರ, ಕೆ ಎಸ್ ... L R C P M R C S ಇವರ ಅಧ್ಯಕ್ಷತೆಯಲ್ಲಿ ನಡೆದು ಬಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ... ೧೦೦೦ ರೂ. ಗಳ ಸಾಲವು ದೊರೆಯಬೇಕೆಂಬ ಮುಕ—

(೧) ಬಾಂಡ ನಂ. ೫೬೦೦ ಮಿ ... ಚಿಪ್ಳೂಣಿ ಸೇಟ ಕಲಾನ್ ಅಲಿಬಾಗ ಬಾಂಬೆ,

(೨) ಬಾಂಡ ನಂ ೧೩೬೭೬ ... ರಂಗಪ್ಪ ಶ್ಯಾನಭೋಗ ಹುಳಿಕುಂಟೆ ಪೋ ಸ್ಟ ಸಿರಾ ತಾಲ್ಲೂಕ ಸಿರಾ (ಜಿ ತುಮಕೂರು)

(೩) ಬಾಂಡ ನಂ. ೧೪೯೯೭ ಮಿ|| ವೆಂಕಟರಮಣ. ವೆಂಕಟರ ಮಣ ಹೆಗಡೆ, ಸೀತಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಹಾ ನಾರ್ಥ ಕ್ಯಾನರಾ

(೪) L. R. O. ಬಾಂಡ ನಂ ... ಮಿ|| ಜಿ ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರೂಸಪೇಟ ಬಳ್ಳಾರಿ

(೫) ಬಾಂಡ ನಂ ... ಮಿ|| ರಾಮಚಂದ್ರ ವಾಮನ ಕಾಂ ... ಭಾಸ್ಕರ ವಾಡಾ ಪ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೯೦ ಮಿ| ಆರ್. ಎಚ್. ನಾಟೆಸ್ ಮಾಸ್ತರ ಗವರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡಕ್ಕನ)

ಬಿ. ಎನ್. ಆರಾಧ್ಯ
ಚೀಫ ಏಜಂಟ (...)

ಪೋರವಾಲ ಬ್ಯಾಂಕ ಟೂಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿರುವುದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ- ೫ ಆಣೆ ಟ ಖ ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು

ಪೋರವಾಲ ಬ್ಯಾಂಕ ಕೊ (ರಜಿಸ್ಟರ್ಡ) ಪುಣೇ ಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ
ರಿಸ್ಟವಾಚ



ಬೆಲೆ ೭-೮ ೦ ಪಟ್ಟಿ ಸಹಿತ, ಟ ಖ ಪ್ರತ್ಯೇಕ
ಟಿಪ್ಪಣೀ— ಗಡಿಯಾರವನ್ನು ಕಳಿಸುವಾಗ್ಗೆ ಕಾಳಜಿ ... ಮತ್ತು ಬಾ ... ಪತ್ರ ... ಸಹಿತ
ಲಿಬರ್ಟಿ ವಾಚ ಕಂ. (...) ಮುಂಬೈ ನಂ. ೪

ಕರ್ನಾಟಕಧುರೀಣ.

ಉತ್ತಮ ವರ್ಗದ ವಾರಪತ್ರಿಕೆ

ಮನಃಪೂರ್ವಕ ... ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನು ... ಶುದ್ಧವಾದ ಕನ್ನಡದಲ್ಲಿ ... ಈ ವಾರಪತ್ರಿಕೆಯನ್ನು ... ಓದಬೇಕು. ವಾರ್ಷಿಕ ಚಂದಾ ... ಪತ್ತೆ—

ಸಂಪಾದಕ ಕರ್ನಾಟಕ ಧುರೀಣ ಕುಮಟಾ, ಜಿ ಉತ್ತರ ಕನ್ನಡ

ಈ ತಾಲಿಪಿಗಳನ್ನು ಓದಬೇಕೆನ್ನುವಿರೋ?

ಒಂದಾಣೆಯದು ನಮ್ಮ ಕಡೆಗೆ ೭ ಬಿಲ್ಲೆಯ ಪೋಸ್ಟ ಟಿಕೀಟು ಕಳುಹಿಸಿ, ವಿದಾ ಲಿಪಿಯ ... ಕಲಿತು ಕೊಳ ಬಹುದು ಇಂಥ ಸಂಧಿಯನ್ನು ಕಳೆದುಕೊಳ್ಳಬೇಡಿರಿ

ವಿಳಾಸ— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಹಾ ವಿಜಾಪೂರ.

ಹಳೇ ಮೋಟಾರ

ಸೋವಿಯದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ

ಮಾಧವಾಶ್ರಮ ಮುಂಬೈ ನಂಬರ ೪
ಬಾಗಲಕೋಟೆಯ ಏಜಂಟರು ಮಂಗಳವೇಢೆ ಬಂಧುಗಳು
ಕನ್ನಡಿಗ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಜೇರಾವ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರ್ಯಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ವೆಂದ್ಹಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರ್ಯಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇರ್ಡ ಪ್ರೆಸಿಡೆನ್ಸಿ ಸರ್ಕಾರದ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರ್ಯಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ದಾನಿ ವಖಾರಗಲ್ಲಿ, ಪುಣೆ ಸಿಟಿ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ವ ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕವು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ್‌ಗೋಲ್ಡ್ ಏಂಟ್ರೀ ಮಾಲೆ ಕೈಗಡಿಯಾರ

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾದ ಕರಾರು ಗಂಟೆಯನ್ನು ತೋರಿಸುವುದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ಒಂದಕ್ಕೆ ರೂ 7 2-0.

12 ರೋಲ್ಡ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಪದಗಳ ವರಿವಿಗೂ ಬರೆಯುವದು 14 ಕ್ಯಾರೆಟ್ಟ ಬಂಗಾರದ ಮುಳ್ಳು ಇರುವದು ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಲ್ಡ ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು. ಕ್ರಯ ಪೆನ್ 1ಕ್ಕೆ 2-0-0

ವಿಳಾಸ:— ಎಸ್. ಪಾಲ್ ಅಂಡ್ ಕೊ,

ಪಿ. ಬಿ ನಂಬರ್. 542,

ಪಾರ್ಕ್‌ಟೌನ್ ಮದ್ರಾಸು.

ಸಾಧ್ವೀ ಮತ್ತು ಸಂಪದಭ್ಯುದಯ

ಶ್ರೇಷ್ಠವಾದ ಕನ್ನಡದ ಪತ್ರಿಕೆ ವಾರಕ್ಕೆ ಮೂರು ದಿನಚರಿ ಪತ್ರಿಕೆ ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಕಟವಾಗುತ್ತಲಿರುವವು. ಇವುಗಳಲ್ಲಿ ತಾತ್ವಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೩-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಇನ್ನು ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯಂ. ಮೈಸೂರು.

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to—

N. K. Kulkarni. Agent Bagalkot.

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೩-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.





The Cheapest House.

1 For quick. Ecconomical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the wellknown Michelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcanising by a specalist to give satisf'ctory work,

6 For Building Motor bodies of Various types by workers on uptodate line.

7 For all kinds of Motor repairs,

Aply to:-
Messrs Royal motor service
Automobile Engineers
Bagalkot.

Sub dealers in
Chevrolet cars
for the Bijapur Dist.

ಅಲಭ್ಯ ಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಸಗಳನ್ನು ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ,

೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೋಲೆಟ ಡಾಜ, ಫೋರ್ಡ, ಓವ್ಹರಲೆಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಕ ಟಾಯರ ಟ್ಯುಬುಗಳು ಮುಖ್ಯವಾಗಿ ಮಿಚೆಲಿನ ಪ್ರಾಡಕ್ಟುಗಳು ಖರೀದಿಗಾಗಿ,

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಎಣ್ಣೆ ಮತ್ತು ಗ್ರೀಜ ಖರೀದಿಗಾಗಿ,

೫ ಎಲ್ಲ ತರಹದ ಟ್ಯೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೋಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವೀಸ.
ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ
ಮೋಟಾರುಗಳಿಗೆ ಸಬ ಏಜಂಟರು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೩—೦ಮಾತ್ರ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಶುದ್ಧ ೩ ಶಕೆ ೧೮೪೪ ತಾ|| ೧೪.. ೧೯೨೭. | ಸಂಚಿಕೆ ೮

ಸಂಪಾದಕರ ಭೂಮಿ

(*)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ!
ಚಿನ್ನದಾದರು ಚಿನ್ನ ಮೇಣಬತ್ತಿಯು ಸೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯು

—ಅಂಬಿಕಾ ತನಯ ದತ್ತ

ಕರ್ನಾಟಕದ ಏಳ್ಗೆಯಾಗಬೇಕಾದರೆ ಭಗೀರಥ ಪ್ರಯತ್ನ ವಾಗಬೇಕಾಗುವುದು. ಮಾತಿನ ಮಲ್ಲರಿಂದ ಭವಿಷ್ಯವು ಮತ್ತಷ್ಟು ಕೆಡುವುದು. ಆಳವಾಗಿ ಶೋಧಿಸಿ ನೋಡಿದರೆ, ಗಡ್ಡದಂಥ ಕೆಲಸ ಗಳೇ ಕನ್ನಡಿಗರ ಕಣ್ಣುಮುಂದೆ ' ದತ್ತ ' ಎಂದು ನಿಲ್ಲುವವು. ಕರ್ನಾಟಕದ ಇತಿಹಾಸವು ಎಲ್ಲರಿಗೂ ಗೊತ್ತಿಲ್ಲ ಕರ್ನಾಟಕದ ಭೂಗೋಲವನ್ನು ಅರಿಯುವವರು ತೀರ ಕಡಿಮೆ ಆದದರಿಂದ ಇತಿಹಾಸ ಭೂಗೋಲಗಳ ವಿಷಯದಲ್ಲಿ ಉತ್ತಮೋತ್ತಮವಾದ ಗ್ರಂಥಗಳು ಬೇಕು. ಅಲ್ಲಿಯೊಂದು ಇಲ್ಲಿ ಒಂದು ಇತಿಹಾಸ ಗ್ರಂಥಗಳು ಎಂದಾದರೊಮ್ಮೆ ಹೊರಬೀಳುತ್ತಲಿವೆ. ಅವು ಸಂಪೂರ್ಣವಾದವುಗಳಿರುತ್ತವೆ. ಅದರಲ್ಲಿ ವಿಶೇಷ ಸಂಗತಿಗಳಿಗಿಂತ, ಅಭಿಮಾನಾವೇಶದ ಸೊಲ್ಲುಗಳಿರುತ್ತವೆ. ಆವೇಶದ ದಿನಗಳು ಕಳೆದು ಹೋದವು. ನಿಜಾಂಶಗಳನ್ನು ತಿಳಿದು ಕೊಳ್ಳುವ ಯುಗವು ಸಂಪ್ರಾಪ್ತವಾಗಿದೆ. ಆದ್ದರಿಂದ ಕೆಲಸಗಾರರು—ತ್ಯಾಗ ಬುದ್ಧಿ ಯಿಂದ ಅವಿರತವಾಗಿ ದುಡಿಯುವ ಕೆಲಸಗಾರರು—ಬೇಕಾಗಿದ್ದಾರೆ ಇಂಗ್ಲಭಾಷೆಯಲ್ಲಿಯ ಐತಿಹಾಸಿಕ ಗ್ರಂಥಭಾಂಡಾರವನ್ನು ನೋಡಿ ದರೆ ಮನಸ್ಸು ಬೆರಗಾಗಿ ಹೋಗುತ್ತದೆ. ಪದ್ಧತಿಪೂರ್ವಕವಾಗಿ ಹೃದಯಂಗಮ ಶೈಲಿಯಿಂದ ಬರೆದ ಭೂಗೋಲದ ಗ್ರಂಥಗಳನ್ನು ನೋಡಿದರೆ ಚಿತ್ತವು ಆನಂದದಲ್ಲಿ ಲೀನವಾಗುತ್ತದೆ. ಬೇರೆ ಬೇರೆ ದೇಶಗಳಿಗೆ ತಜ್ಞರನ್ನು ಕಳುಹಿಸಿ ಇಂಗ್ಲೀಷರು ಗ್ರಂಥಗಳನ್ನು ಬರೆಯಿಸುತ್ತಾರೆ. ಹೀಗೆ ಅವರು ಜಗತ್ತಿನ ಎಲ್ಲ ಇತಿಹಾಸ ವನ್ನೇ ಬರೆಯಿಸಿಟ್ಟಿದ್ದಾರೆ. ಈಗ ಸದ್ಯಕ್ಕೆ ಜಗತ್ತಿನ ಎಲ್ಲ ಇತಿ ಹಾಸವೂ ಭೂಗೋಲವೂ ನಮಗೆ ಬೇಕಿಲ್ಲ ಅದರ ಕಾಲವು ಮುಂದೆ ಬರುವದೆಂಬುದು ನಿಶ್ಚಿತ ನಮಗೆ ಬೇಕಾದುದು ಕರ್ನಾಟ ಕದ ಇತಿಹಾಸ ಕರ್ನಾಟಕದ ಭೂಗೋಲ- ಕನ್ನಡದಲ್ಲಿ ಪ್ರವಾ ಸದ ಪುಸ್ತಕಗಳಿಲ್ಲ. ಕನ್ನಡನಾಡಿನಲ್ಲಿ ವಾಸವಾಗುತ್ತಲಿರುವ ಬೇರೆ ಬೇರೆ ಜನರ ನಡಾವಳಿ, ಮಾತು ಕತೆ, ಉಡುಪು ಆಟ ನೋಟ ಇವುಗಳವಿಷಯದಲ್ಲಿ ಗ್ರಂಥಗಳಿಲ್ಲ. ಕನ್ನಡನಾಡಿನಲ್ಲಿಯ ನದಿ,ಕೆರೆ, ತಾಲೂಕು, ಬೆಟ್ಟ, ಬಂದರ, ನೋಡತಕ್ಕಸ್ಥಳ, ಯಾತ್ರೆಯ ಸ್ಥಳ, ಇವೇ ಮೊದಲಾದವುಗಳ ಸಂಬಂಧವಾಗಿ ಹೊತ್ತಿಗೆಗಳಿಲ್ಲ ಕನ್ನಡ ನಾಡೊಳಗಿರುವ ಬೇರೆ ಬೇರೆ ಪ್ರಾಂತಗಳಲ್ಲಿಯ ಮಳೆ, ಬೆಳೆ, ವ್ಯಾಪ ರೋದ್ಯೋಗ, ಮೊದಲಾದವುಗಳನ್ನು ತಿಳಿದು ಕೊಳ್ಳಲು ಸಾಧ ನ ಸೌಕರ್ಯಗಳಿರುವದಿಲ್ಲ. ಒಟ್ಟಿನ ಮೇಲೆ ಹೇಳ ಬೇಕಾದರೆ, ಕರ್ನಾಟಕದ ವಿಷಯದಲ್ಲಿ ಅಭಿಮಾನವನ್ನು ಹುಟ್ಟಿಸುವಂತಹ ಸಾಮಗ್ರಿಯೇ ಇರುವದಿಲ್ಲ ಇದಕ್ಕೆಲ್ಲ ಕರ್ನಾಟಕಕ್ಕೆ ಒದಗಿಸಿ ಕೊಡುವವರು ಬೇಕಿವೆ. ಈ ಕಾರ್ಯವು ಕೇವಲ ದಕ್ಷಿಣೆಯ ಬಲದಿಂದಾಗತಕ್ಕದ್ದಲ್ಲ; ದೃಢನಿಶ್ಚಯ, ಸತತ ಉದ್ಯೋಗ, ಕರ್ತವ್ಯ ಬುದ್ಧಿ ಇವೇ ಮೊದಲಾದ ಗುಣಗಳುಳ್ಳ ತರುಣರ ಬೆಂಬ ಲದಿಂದ ಕೊನೆಗಾಣ ತಕ್ಕದ್ದು ಇರುತ್ತದೆ. ತರುಣರಿಗೆ ಗುಡ್ಡ ಗಾಡಿನಲ್ಲಿ ತಿರುಗಬೇಕಾಗುವುದು; ಹಳ್ಳಕೊಳ್ಳಗಳನ್ನು ಸುತ್ತ ಬೇಕಾಗುವದು. ಹಳ್ಳಿಯ ಗುಡಿಸಲಿನಲ್ಲಿ ಮಲಗಬೇಕಾಗುವದು. ಮಳೆಗಾಳಿಗಳಲ್ಲಿ ಹೋಗಬೇಕಾಗುವದು. ಬಿಸಿಲಝಳವನ್ನು ತಿನ್ನ ಬೇಕಾಗುವದು. ಕಾಡಮನುಷ್ಯರೊಡನೆ ಒಳಿತು ಮಾಡಬೇಕಾಗು ವುದು ಅನೇಕಸಾರೆ ಸಾವಿನ ದವಡೆಯಿಂದ ಪಾರಾಗಬೇಕಾಗುವದು ಇಂತಹ ಕಠಿಣ ಕಾರ್ಯಗಳು ಕನ್ನಡಿಗರಿಂದ ಜರಗಬೇಕಾಗಿರು ವವು ಮಹಾರಾಷ್ಟ್ರದಲ್ಲಿ ಶ್ರೀ. ರಾಜವಾಡೆಯವರು, ಒಂದು ಗುಟುಕು ನೀರು, ಒಣ ರೊಟ್ಟಿಯ ತುಣುಕು ಇಷ್ಟರಿಂದಲೇ ತೃಪ್ತ ರಾಗಿ, ಇತಿಹಾಸ ಸಂಶೋಧನೆಯ ಕಾರ್ಯವನ್ನು ನಡೆಯಿಸಿದ ವರು. ಅದರಂತೆಯೇ ನಮ್ಮಲ್ಲಿಯ ತರುಣರು ಸಿದ್ಧರಾಗಿ, ಪ್ರವಾ ಸದಕೆಲಸವನ್ನು ಕೈಕೊಂಡು, ಬೇರೆ ಬೇರೆ ಪ್ರಾಂತಗಳನ್ನು ಚೆನ್ನಾಗಿ ಸರಿಕ್ಷಿಸಿ, ಇತಿಹಾಸ ಭೂಗೋಲಗಳ ವಿಷಯದಲ್ಲಿ ಬರೆಯಬೇಕಾಗಿ ಆಶೆ.

ಕನ್ನಡನುಡಿಯಲ್ಲಿ ಉತ್ಕೃಷ್ಟವಾದ ಓದುವಂತಾದ ವೃತ್ತಪತ್ರಗಳೂ ಮಾಸಪತ್ರಿಕೆಗಳೂ ಇಲ್ಲವೆಂದು ಅನ್ನುವರಾದ ಲರು ಇನ್ನೂ ನಮ್ಮ ಸಮಾಜದಲ್ಲಿರುವರು. ನಿಷ್ಪಕ್ಷಪಾತವಾಗಿ ಎಣಿಸ ಬಹುದು. ನಿಷ್ಠೆಯ ಸೋಗು ಧಿಕ್ಕರಿಸುವ ವುದು ಬಿಗಿಯಾದುದು. ಬೆಂಗಳೂರಿನ ವೃತ್ತ ಕರ್ನಾ ಟಕವನ್ನು, ದೇಶೀಯ ವಿದ್ಯಾಶಾಲಾ ಪತ್ರಿಕೆಯನ್ನು ಪ್ರಬುದ್ಧ ಕರ್ನಾಟಕವನ್ನೂ ಸಾಹಿತ್ಯಪರಿಷತ್ಪತ್ರಿಕೆಯನ್ನು ಇವರು ನೋಡ

ಲ್ಲವೆಂದು ತೋರುತ್ತದೆ. ನೋಡಿಲ್ಲವೇಕೆ ಹೆಸರನ್ನೂ ಕೂಡಾ ಇವರು ಕೇಳಿರುವದಿಲ್ಲ. ನೋಡಲು ಕೇಳಲು ಆಸೆಯಿಲ್ಲ; ಪ್ರಯತ್ನವಿಲ್ಲ; ವಿಶ್ವಕರ್ನಾಟಕದಲ್ಲಿಯೂ ದೇಶೀಯ ವಿದ್ಯಾಶಾಲಾ ಪತ್ರಿಕೆಯಲ್ಲಿಯೂ ಸಾಮಾಜಿಕ ಶೈಕ್ಷಣಿಕ ಮತ್ತು ಸಾಹಿತ್ಯವಿಷಯಕ ಲೇಖಗಳು ಪ್ರಕಟವಾಗುತ್ತವೆ ಭಾಷೆಯ ದೃಷ್ಟಿಯಿಂದಲೂ ವಿವೇಚನೆಯ ದೃಷ್ಟಿಯಿಂದಲೂ ಅರ್ಥಪೂರ್ಣವಲ್ಲವೆ ಶಬ್ದಸೌಷ್ಟವಗಳ ದೃಷ್ಟಿಯಿಂದ ಉಚ್ಚವೆನಿಸುತ್ತವೆಂಬುದು ಅನುಭವಕ ವೇದ್ಯವಾಗುವದು. ಹಾಸ್ಯದ ಲಹರಿಗಳಾದರೂ ವಾಚಕರ ಅಂತಃಕರಣದಲ್ಲಿ ನವನವೀನ ಊರ್ಮಿಗಳನ್ನು ಉಂಟುಮಾಡುವವು. ಪ್ರಬುದ್ಧಕರ್ನಾಟಕ ಪಂಕ್ತಿ ಪ್ರದರ್ಶನಾಗಿವೆ. ಹೃದಯದೊಳಗಿನ ಭಾವಗರ್ಭಿತವಾದ ಸರಳ ಪದಪುಂಜ ಸಂಕೀರ್ತನದ ಕವಿತೆಗಳು ಜಾಣ ರಸಿಕನನ್ನು ತಲೆದೂಗಿಸಲಿಕ್ಕಿಲ್ಲ. ಅದರೊಳಗಿನ ಚಿಕ್ಕಕತೆಗಳು ಕನ್ನಡವಾಙ್ಮಯಕ್ಕೆ ಹೊಸದಾರಿಯನ್ನು ತೋರಿಸುತ್ತವೆ. ಶಿಲ್ಪಶಾಸ್ತ್ರದ ವಿಷಯದಲ್ಲಿಯೂ ಲೇಖಗಳು ತಜ್ಞರಿಂದ ಬರೆಯಲ್ಪಡುತ್ತವೆ. ಕರ್ನಾಟಕದ ಕಟ್ಟಡಗಳ ಚಿತ್ರಗಳು ಮನೋಹರವಾಗಿರುವವು. ಕನ್ನಡಿಗರ ಕಲಾ ವೈಭವವನ್ನು ನಿಚ್ಚಳವಾಗಿ ತೋರಿಸುತ್ತವೆ ಕನ್ನಡ ಕಲ್ಪಶಕ್ತಿಯನ್ನೂ ಕೌಶಲ್ಯವನ್ನೂ ವ್ಯಕ್ತಮಾಡುತ್ತಿವೆ. ಕನ್ನಡದ ಮುತ್ತಿನಂಥ ಅಕ್ಷರಗಳನ್ನು ನೋಡಬೇಕಾದರೆ ಪ್ರಬುದ್ಧಕರ್ನಾಟಕದ ಕಡೆಗೆ ತೆರಳಬೇಕಾಗುವದು ವಿಶ್ವಕರ್ನಾಟಕವು ವಾರಪತ್ರಿಕೆ ಇದ್ದು ಕೇಸರಿಯಷ್ಟೇ ಚಲುವಾಗಿರುವದು. ನಾವು ಇದನ್ನೆಲ್ಲ ಬರೆಯಲಿಕ್ಕೆ ಬೇಕಾಗಿದೆ. ಯಾಕಂದರೆ ಕನ್ನಡಿಗರಲ್ಲಿ ಇನ್ನೂ ಅರಿವು (ಜಾಗೃತಿಯು) ಉಂಟಾಗಿಲ್ಲ ಕರತಲದಲ್ಲಿದ್ದರೂ ಅವರಿಗೆ ಕನ್ನಡಿಯ ಸಹಾಯವು ಬೇಕಿದೆ. ಮನೆಯ ದೀವಿಗೆಯಿಂದ ನಾವು ಮುದ್ದು ಕೊಡಲು ಎಣಿಸುತ್ತೇವೆಂದು ಯಾರೂ ಭಾವಿಸಕೂಡದು. ದಿಟವಾದದ್ದನ್ನು ನುಡಿಯಲು ದೇವರ ಅಂಜಿಕೆ ಇಲ್ಲ ನಿಮಿತ್ತಮಾತ್ರೋಭವ ಸವ್ಯಸಾಚಿನ್ ಎಂಬಂತೆ ಒಬ್ಬರು ಅದಾಗಿದ್ದನ್ನು ಬಯಲಿಗೆ ತರುವವರು ಬೇಕಾಗುವರು. ಕನ್ನಡಿಗನು ಆ ಭಾರವನ್ನು ತನ್ನ ಮೇಲೆ ಹೊತ್ತುಕೊಂಡಿದ್ದಾನೆ ಕೈಲಾದ ಮಟ್ಟಿಗೆ ತನ್ನ ಮನಸ್ಸಿಗೆ ತೃಪ್ತಿಯಾಗುವಂತೆ ಧೈರ್ಯದಿಂದ ನುಡಿಯುತಲಿದ್ದಾನೆ. ಆ ಅವನ ಪ್ರಯತ್ನಗಳಿಗೆ ಫಲವು ದೊರೆತರೇ ದೊರೆಯುವದು. ಒಂದು ವೇಳೆ ದೊರೆಯದಿದ್ದರೂ ಕೂಡ ಅವನು 'ಕರ್ಮಣ್ಯೇ ವಾಧಿಕಾರಸ್ತೇ ಮಾ ಫಲೇಷು ಕದಾಚನ' ಎಂಬ ಭಗವಂತನ ನುಡಿಯಿಂದ ಸಂತುಷ್ಟನಾಗುವನು. ಫಲದ ಆಶೆಯಿಲ್ಲದೆ ಕಾರ್ಯವನ್ನು ಸಾಗುವ ತನಕ ನಡೆಯಿಸುವನು. ಅವನಿಗೆ ದ್ವೇಷದ ಗಾಳಿಯು ಸೋಂಕಿಲ್ಲ. ತನ್ನ ಭಾಷೆಯು — ತನ್ನ ನಾಡಿನ ಪೂರ್ಣ ಅಭಿಮಾನವಿದೆ. ಈ ಅಭಿಮಾನಕ್ಕೆ ಕೆಲವರು ದ್ವೇಷವೆಂದು ಅನ್ನುವರು. ಕಾಮಣಿಯಾದವನಿಗೆ ಎಲ್ಲವೂ ಹಳದಿ ಕಾಣುವದು. ಅವರ ದೃಷ್ಟಿದೋಷದಿಂದ ಅವರಿಗೆ ವಸ್ತುಸ್ಥಿತಿಯು ವಿಪರ್ಯಸ್ತವಾಗಿ ಪರಿಣಮಿಸುವದು. ಅನ್ಯರ ಅಂಜಿಕೆಯಿಲ್ಲದೆ ನನ್ನಿಯ ಆದರವನ್ನು ಹೊಂದಿ ತನ್ನ ನಾಡಿನೇಳ್ಗೆಯನ್ನು ಮಾಡುವದರಲ್ಲೇನು ಅಪರಾಧ? ಇದರಲ್ಲೇನೂ ತಪ್ಪಿಲ್ಲ; ಪಾಪವಿಲ್ಲ; ಪುಣ್ಯವಿದೆಯೆಂದು ಭುವನೇಶ್ವರಿಯು—ನಾಡಿನಧಿದೇವತೆಯು—ಒಳಗಿನಿಂದ ಉಸುರುತ್ತಿದ್ದಾಳೆ. ಕನ್ನಡಿಗರೇ! ಆಕೆಯ ಮೊರೆಯು — ಆರ್ತಸ್ವರವು — ನಿಮಗೆ ಕೇಳಬರುವುದೋ? ಅದನ್ನು ಕೇಳಲು ನಿಮ್ಮ ಕಿವಿಗಳು ಉತ್ಸುಕವಾಗಿರುವವೋ?

ಗಾಡಿಯ ಸೀಮೆ ಚೆಲ್ವಾಗಿವ ತಾಣ ನಲಂಪಿನ
ಸಂತೆ ಸಂಪು ಸಾರ್ದಾಡುವ ಭೂಮಿ ಸೌಖ್ಯದೆಡೆ
ಪುಣ್ಯದ ಗೊತ್ತು ವಿನೋದದಾಗರಂ|| **ಮೋಡಿಯ**
ನಂಟಪ **ಸಿರಿಯ ಪೆರ್ಚುಗೆಗೊಳ್ಕನೆ** ಮುಕ್ತಿ
ಕಾಂತೆ ಕೈಗೂಡುವ ಬೀಡು ಕನ್ನಡದ ನಾಡು ವಿರಾ
ಜಿಪುದೆಂತು ಬಣ್ಣಿಪೆಂ||

ಹೀಗೆ ಕನ್ನಡನಾಡನ್ನು ವರ್ಣಿಸುವಾಗ ಒಬ್ಬ ಕನ್ನಡ ಕವಿಯು 'ಸಿರಿಯ ಪೆರ್ಚುಗೆಗೊಳ್ಕನೆ' (ಸಂಪತ್ತು ಒಟ್ಟುಗೂಡುವ ಸುಂದರವಾದ ಮಂದಿರವು) ಅದನ್ನು ಕೊಂಡಾಡಿದ್ದಾನೆ. ಪ್ರಾಚೀನ ಕಾಲದಲ್ಲಿ ಸಾಹಿತ್ಯ ಶಿಲ್ಪ ಮೊದಲಾದವುಗಳಿಂದ ಕೀರ್ತಿಯನ್ನು ಪಡೆದಂತೆ, ವ್ಯಾಪಾರ ಉದ್ಯಮ ಮೊದಲಾದವುಗಳಿಂದಾದರೂ ಕನ್ನಡನಾಡು ಖ್ಯಾತಿಯನ್ನು ಪಡೆದಿದ್ದಿತು. ಬರಬರುತ್ತ ಅದರ ಅರಸೊತ್ತಿಗೆಯು ನಷ್ಟವಾಯಿತು. ಅದರೊಡನೆ ಎಲ್ಲವೂ ಕಣ್ಣುಕಟ್ಟು ಆದಂತಾಯಿತು. ಈಗಂತೂ ವ್ಯಾಪಾರದ ದೃಷ್ಟಿಯಿಂದನೂ ಡಿದರೆ ಕರ್ನಾಟಕವು ತೀರ ಹಿಂದಬಿದ್ದಿದೆ. ನಮ್ಮಲ್ಲಿ ವ್ಯಾಪಾರೋಪಜೀವಿಗಳೆಂದರೆ ವೀರಶೈವರು ಮತ್ತು ವೈಶ್ಯರು ಅಥವಾ ಕೋಮಟಿಗರು. ಇವರ ವ್ಯಾಪಾರವು ಸಂಕುಚಿತ ದೃಷ್ಟಿಯಿಂದ ಸಾಗಿದೆಯೆಂದು ಹೇಳಲು ಏನೂ ಅಭ್ಯಂತರವಿಲ್ಲ. ಇವರಿಗೆ ವ್ಯಾಪಾರ ಮಾಡುವದಕ್ಕಿಂತ ದಲಾಲಿ ಎಂದರೆ ಹೆಚ್ಚು ಸರಿ ಹೋಗುವದು. ಕರ್ನಾಟಕದ ವ್ಯಾಪಾರವೆಲ್ಲ ಮಾರವಾಡಿ ಭಾಟಿಯಾ ಜನರ **ಕೈಯಲ್ಲಿಯೂ ಬ್ಯಾಲೆ ಪಟೇಲ** ಮೊದಲಾದ ಅನ್ಯ ದೇಶಿಯರ ಕೈಯಲ್ಲಿಯೂ ಇದೆ. ನಮ್ಮ ವೀರಶೈವ ಬಂಧುಗಳು ಇವರ ಸೇವಾವೃತ್ತಿಯನ್ನು ಮಾಡಿ ಹೊಟ್ಟೆ ತುಂಬಿಕೊಂಡು, ಹೇಗಾದರೂ ಜೀವನವನ್ನು ಸಾಗಿಸುತ್ತಿರುವರು. ಬಹುಶಃ ಸ್ವತಂತ್ರ ವೃತ್ತಿಯಿಂದ ಬಂಡವಲವನ್ನು ಹಾಕಿ, ಧೈರ್ಯದಿಂದ ವ್ಯಾಪಾರವನ್ನು ಸಾಗಿಸುವವರು ಇಲ್ಲವೇ ಇಲ್ಲ. ಕರ್ನಾಟಕದಲ್ಲಿ ಇನ್ನೂ ಸಂಪತ್ತುಂಟು. ಬೆಳೆಯುವ ಹೊಲಗಳುಂಟು; ಹತ್ತಿ ಬೆಳೆಯುತ್ತದೆ. ಕುಸುಬಿ, ಅಗಸಿಗಳು ಬೆಳೆಯುತ್ತವೆ. ಮುತ್ತಿನಂತಹ ಜೋಳ ಹವಳದಂತಹ ಗೋದಿ, ಜೇನಿನಂತಹ ತುಪ್ಪ ಇವೇ ಮೊದಲಾದವುಗಳು ವಿಪುಲವಾಗಿ ದೊರೆಯುತ್ತವೆ. ಯಾವ ತರದ ತೊಂದರೆಗಳು ಇರುವದಿಲ್ಲ. ಹೀಗಿರಲು, ಲಿಂಗಾಯತ ಬಾಂಧವರು ಅನ್ಯರ ಆಶೆಯನ್ನು ಏಕೆ ಮಾಡಬೇಕು? ಇಷ್ಟಲ್ಲದೆ ಅವರಿಗೆ ಈಗಿನ ಕಾಲಕ್ಕೆ ತಕ್ಕಂತ ಅನುಕೂಲತೆಗಳುಂಟು. ಅವರಲ್ಲಿ ದುಡ್ಡಿದೆ. ಸಂಘಟನಾ ಶಕ್ತಿಯಿದೆ; ಐಕ್ಯವಿದೆ; ಸಮಾಜೋನ್ನತಿಯ ಜಾಗೃತಿಯಿದೆ. ಇಷ್ಟೆಲ್ಲ ಸಜ್ಜಾಗಿರಲು, ಏಕೆ ಅವರು ವ್ಯಾಪಾರವನ್ನು ತಮ್ಮ ಕೈಯೊಳಗೆ ತೆಗೆದುಕೊಳ್ಳಬಾರದು. ದಲಾಲಿ ವೃತ್ತಿಯಿಂದ ಒಂದೆರಡು ತಿಂಗಳುಗಳ ವರೆಗೆ ವ್ಯವಸಾಯವು ಸಾಗಬಹುದು. ಮುಂದೆ ಸಾಗುವದು. ಕಷ್ಟವಾಗುವದು. ನಾಡಿನ ಹಣವೆಲ್ಲ ತೊಳೆದು ಹೋಗುವುದು ವರ್ಷಕ್ಕೆ ೫೦೦ ರೂ. ಸಂಬಳ ದೊರೆಯುತ್ತಿದ್ದರೆ, ಮುಂದೆ ೩೦೦ ಆಗಬಹುದು. ಕಾಲಪರಿಸ್ಥಿತಿಗನುಸರಿಸಿ, ಅದಕ್ಕೂ ಕಡಿಮೆಯಾಗಬಹುದು. ಅದರಿಂದ ವ್ಯಕ್ತಿಯ ಸಾಂಪತ್ತಿಕ ಸ್ಥಿತಿಯು ಕೆಟ್ಟುಹೋಗಿ ಕೌಟುಂಬಿಕ ಸುಖವು ಇಲ್ಲವಂತಾಗುವದು. ಸಂಸಾರವು ಅಸಾರವೆನಿಸುವುದು. ವ್ಯಕ್ತಿಯ ಸಂಪತ್ತು ಕಡಿಯುತ್ತ ಹೋದಂತೆ, ರಾಷ್ಟ್ರದ ಸಂಪತ್ತೂ ಕಡಿಯುವದು. ಆದ್ದರಿಂದ ಈಗಾಗಲೇ ಎಚ್ಚತ್ತು ಪ್ರಯತ್ನ ಪಟ್ಟಲ್ಲಿ ಸ್ಥಿತಿಯು ಮಾರ್ಪಡುವುದು. ಕೈಮೀರಿ ಹೋದ ಮೇಲೆ ಕಳವಳಗೊಂಡರೆ ಏನಾಗುವುದು? ಇದೊಂದು ವಿಚಾರಾರ್ಹವಾದ ಮಾತು. ವ್ಯಕ್ತಿಯ ಮತ್ತು ನಾಡಿನ ಸಂಪತ್ತು ವ್ಯಾಪಾರದಲ್ಲಿಯೇ ಇರುವುದು. ವ್ಯಾಪಾರದ ಸೂತ್ರಗಳನ್ನು ಕೈಯೊಳಗೆ ತೆಗೆದುಕೊಂಡರೆ, ಲಕ್ಷ್ಮಿಯು ತಾನಾಗಿಯೇ ಹೇಳಿದಂತೆ ಕುಣಿಯುವಳು. ನಲಿಯುವಳು ಆ ಮೇಲೆ ಕನ್ನಡದ ನಾಡು ಮೊದಲಿನಂತೆ 'ಸೌಖ್ಯದೆಡೆ' ಯಾಗುವುದು. '**ಅಲಂಪಿನ ಸಂತೆ**' ಯಾಗುವುದು.

ಕಣಿಯರ ದ್ವಿತೀಯ ಸಮ್ಮೇಳನ

ಈ ಸಮ್ಮೇಳನವು ಎಪ್ರಿಲ ೨೮ನೇ ತಾರೀಖು ಬುಧವಾರ ದಿವಸ ಬಿಳಿಗಿರಿ ರಂಗನ ಬೆಟ್ಟದಲ್ಲಿ ನಡೆಯಿತು ಈ ಸಭೆಗೆ ಮ|| ತಗಡೂರು ರಾಮಚಂದ್ರರಾಯರು ಅಧ್ಯಕ್ಷತೆಯನ್ನು ವಹಿಸಿದ್ದರು ಈ ಸಭೆಯಲ್ಲಿ ಇದುವರೆಗೆ ಆಗಿರುವ ನಡತೆಗಳ ವರದಿಯನ್ನು ಒಪ್ಪಿಸಿ ಮುಂದಿನ ವರ್ಷ ಕ್ರಮವನ್ನು ನಿರ್ಣಯಿಸಲಾಯಿತು ಕಣಿ ಮಹಾಜನರ ಫಿರ್ಯಾದು ತಗಡೂರು ಗ್ರಾಮಸಂರಕ್ಷಣಸಭೆಗೆ ಹೋಗಿ ಒಂದು ವರ್ಷ ಎರಡು ತಿಂಗಳು ಕಳೆಯಿತು ಅಂದಿನಿಂದ ಬೆಂಗಳೂರಿನ ಬಿಸ್ಸಮಿಲ್ಲಿನಲ್ಲಿ ಕಣಿಯರಿಗೂ ಇತರರಿಗೂ ನಡೆದ ವ್ಯಾಜ್ಯವು ಫೈಸಲಾಯಿತು ಕಣಿಯರ ತರ್ಣ ವ್ಯವಸ್ಥೆ ಮಾಡಲು ತಿರುಪತಿ ತಿರುತ್ತೋವಿಲೂ[illegible]ಂಭಕೋಣ, ತಂಜಾವೂರು, ತ[illegible], ಶ್ರೀರಂಗ, ಚಿಂ[illegible]ರ ಮೊದಲಾದ ಪ್ರಾಂತಗಳಿಗೆ ಹೋಗಿ ಕಣಿಯರುಗಳಿಗೆ ಇರತಕ್ಕ ಹಕ್ಕುಗಳನ್ನು ಸ್ವತಃ ಪರೀಕ್ಷಿಸಲಾಯಿತು ಅಲ್ಲದೆ ತಿರುಪತಿಯಲ್ಲಿ ವಾಸವಾಗಿರುವ ಕಣಿಯರ ಗುರುಗಳಾದ ಅಷ್ಟದಿಗ್ಗಜ ಪ್ರತಿವಾದಿ ಭಯಂಕರ ಅಣ್ಣಂ[illegible] ರಂಗಾಚಾರ್ಯರವರ ಮಕ್ಕಳು ಕೃಷ್ಣಮಾಚಾರ್ಯರವರು ಕುಂಭಕೋಣದ ಕುಮಕೋಟಿ ಪೀಠಾಧೀಶ್ವರರಾದ ಶ್ರೀ ಜಗದ್ಗುರು ಶಂಕರಾಚಾರ್ಯರವರು ಕೊಟೆಯೂರು ಮುಕ್ಕಾಮಿನಲ್ಲಿ ಕಂಡ ಶ್ರೀ ಶೃಂಗೇರಿ ಜಗದ್ಗುರು ಶ್ರೀ ಚಂದ್ರಶೇಖರ ಭಾರತೀ ಸ್ವಾಮಿಗಳವರು ಇವರೇ ಮುಂತಾದ ಜಗದ್ಗುರುಗಳವಲ್ಲಿ ಕಣಿಯರ ವಿಷಯವಾಗಿ ಚರ್ಚೆ ಮಾಡಿಕೊಂಡು ಬಂದು ಕಣಿಯರು ಶೂದ್ರ ಪಂಗಡದವರೆಂದು ತೀರ್ಮಾನಿಸಲಾಯಿತು. ಆನಂತರ ನರಸೀಪುರದಲ್ಲಿ ಕಣಿಯರ ಮಹಾಸಭೆಯು ನಡೆಯಿತು ಆ ಮಹಾಸಭೆಯಲ್ಲಿ ಪಾಸಾದಂತೆ ಅವರು ದೇವಾಲಯ ಪ್ರವೇಶದ ಹಕ್ಕನ್ನು ಪಡೆಯಲು ಸುಲಭರೀತಿಯಲ್ಲಿ ಸಾಧ್ಯವಾಗದೆ ಇರಲು ಸತ್ಯಾಗ್ರಹವ್ರತವನ್ನು ಪ್ರಾರಂಭ ಮಾಡಬೇಕಾಯಿತು ಆ ಕಾಲದಲ್ಲಿ ಕಣಿಯರ ಅಧಿಕಾರಿಗಳ ಮಾತಿನ ಪ್ರಕಾರ ಎರಡಾವರ್ತಿಯೂ ಸಕಾರಣಗಳಿಂದ ನಿಲ್ಲಿಸಲಾಯಿತು ಸತ್ಯಾಗ್ರಹಕ್ಕೆ ಜನರನ್ನು ಸಿದ್ಧಗೊಳಿಸಲು ಗ್ರಾಮಾಂತರಗಳಿಗೆ ಹೋಗಿ ಸುಮಾರು ೬೦—೭೦— ಮಿಟಿಂಗುಗಳನ್ನು ನಡೆಸಲಾಯಿತು ಇದಕ್ಕಾಗಿ ಹಲವು ಪ್ರಸಿದ್ಧ ಪತ್ರಿಕೆಗಳನ್ನು ಪ್ರಿಂಟು ಮಾಡಿ ಹರಡಿತು. ಆ ಕಾಲದಲ್ಲಿ ನಡೆದ ನಡವಳಿಕೆಗಳನ್ನು ಪುಸ್ತಕ ರೂಪವಾಗಿ ಪ್ರಿಂಟು ಮಾಡಿ ನಮ್ಮ ಶ್ರೀಮನ್ಮಹಾರಾಜರವರಿಗೂ ಅವರ ಸರ್ಕಾರಕ್ಕೂ ಮತ್ತು ಮಹಾಜನಗಳಿಗೂ ಕಳುಹಿಸಲಾಯಿತು. ನಂತರ ಶ್ರೀಮನ್ಮ ಗೋವಿಂದಾಚಾರ್ಯ ಸ್ವಾಮಿಗಳವರು ಬೆಂಗಳೂರು, ಚಾಮರಾಜನಗರ, ಯಳಂದೂರು, ಬಿಳಿಗಿರಿ ರಂಗನಬೆಟ್ಟ, ಕೊಳ್ಳೇಗಾಲ, ಮಳವಳ್ಳಿ ಸುಗ್ಗಾದ ದೊಡ್ಡಿ, ಮೈಸೂರು, ಮುಂತಾದ ಪ್ರದೇಶಗಳಿಗೆ ದಯಮಾಡಿಸಿ ಮುದ್ರಾಧಾರಣೆ ಮಾಡಿಸಿಕೊಳ್ಳದೆ ಇರತಕ್ಕಂಥ ಕಣಿಯರುಗಳಿಗೆ ಮುದ್ರಾಧಾರಣೆಯನ್ನು ಮಾಡಿ ಪ್ರಸಾದಗಳನ್ನು ದಯಪಾಲಿಸಿದರು ಆ ಕಾಲದಲ್ಲಿ ಬೆಂಗಳೂರು, ಮೈಸೂರು, ಮೇಲುಕೋಟೆ, ಚನ್ನ[illegible] ಪಟ್ಟಣ ಮುಂತಾದ ಕಡೆಗಳಲ್ಲಿ ಕಣಿಯರು ದೇವಾಲಯಕ್ಕೆ ಹೋಗಿ ತೀರ್ಥ ಪ್ರಸಾದಗಳನ್ನು ಪಡೆಯುವ ಪದ್ಧತಿಯನ್ನು ಸ್ಥಿರಪಡಿಸಲಾಯಿತು. ಅಲ್ಲದೆ ಈ ವಿಚಾರದಲ್ಲಿ ಮಹಾಜನಗಳ ತಿಳುವಳಿಕೆಯ ಬಗ್ಗೆ ಬೆಂಗಳೂರು, ಮೈಸೂರು ಪಟ್ಟಣಗಳಲ್ಲಿ ಸಾರ್ವಜನಿಕ ಸಭೆಯನ್ನು ಕರೆದು ಕಣಿಯರುಗಳಿಗೆ ಈ ಪ್ರದೇಶದಲ್ಲಿ ದೇವಾಲಯಕ್ಕೆ ಹೋಗುವ ಹಕ್ಕಿರುವಂತೆ ಗ್ರಾಮಾಂತರಗಳಲ್ಲಿಯೂ ಕೊಡುವುದು ಯುಕ್ತವೆಂದು ಅಭಿಪ್ರಾಯಗಳನ್ನು ಸೂಚಿಸಲಾಯಿತು. ಈ ವಿಷಯಗಳನ್ನು ಕುರಿತು ಒಂದು ಪುಸ್ತಕವನ್ನು ಬರೆದು ಅದನ್ನು ಶ್ರೀಮನ್ಮಹಾರಾಜರವರಿಗೂ ಅವರ ಸರಕಾರಕ್ಕೂ ಮತ್ತು ಮಹಾಜನಗಳಿಗೂ ಕಳುಹಿಸಲಾಯಿತು ಇಷ್ಟು ಕೆಲಸಕಾರ್ಯಗಳೂ ಒಂದು ವರ್ಷ ಎರಡು ತಿಂಗಳು ಕಾಲದಲ್ಲೇ ನಡೆಯಿತು ಅಲ್ಲದೆ ಇದುವರೆಗೆ ನಡೆದಿರುವ ಕೆಲಸ ಕಾರ್ಯಗಳಿಗೆಲ್ಲಾ ೭೭೪ ರೂಪಾಯಿಗಳು ಮಾತ್ರ ಖರ್ಚು ಮಾಡಲ್ಪಟ್ಟಿದೆ ನಮ್ಮ ಜನಾಂಗಕ್ಕೆ ಇಷ್ಟು ಜಾಗ್ರತೆಯಾಗಿ ಹಲವು ಸ್ಥಿರವಾದ ಸೌಕರ್ಯಗಳನ್ನು ಕಲ್ಪಿಸಿಕೊಟ್ಟು ಬಡವರಲ್ಲಿ ಬಡವರಾಗಿ ಇಷ್ಟೊಂದು ಮಹತ್ಕಾರ್ಯವನ್ನು ಕೇವಲ ಅಲ್ಪವಾದ ೭೭೪ ರೂಪಾಯಿಗಳ ಖರ್ಚಿನಿಂದಲೇ ಸಾಧಿಸಿದ್ದಾಗ್ಯೂ ಕೆಲವು ಅಧಿಕಾರಿಗಳು ಮುಖಂಡರುಗಳು ಮ|| ತಗಡೂರು ರಾಮಚಂದ್ರರಾಯರ ಮೇಲೆ ಇಲ್ಲದ ಸಲ್ಲದ ಆರೋಪಣೆಯನ್ನು ಹೊರಿಸಿ ಪ್ರಚಾರ ಮಾಡಿದ್ದಕ್ಕಾಗಿ ಬಹಳ ವಿಷಾದ ಪಡಬೇಕಾಗಿದೆ ಇನ್ನು ಮುಂದೆ ಸತ್ಯಾಗ್ರಹ ಪ್ರಾರಂಭ ಮಾಡಿದ ಸ್ಥಳದಲ್ಲಿ ನಮ್ಮ ಪ್ರಾರ್ಥನೆಯು ಪೂರೈಸಬೇಕಾದ ಕೆಲಸ ಮಾತ್ರ ಉಳಿಯುದೆ ಅದನ್ನು ಎಲ್ಲರೂ ಒಂದೇ ಮನಸ್ಸಿನಿಂದ ಸಾಗಿಸುವುದು ನಮ್ಮೆಲ್ಲರ ಕೆಲಸವಾಗಿದೆ ಅದಕ್ಕಾಗಿ ಮೇ ತಿಂಗಳು| ಅನೇಕ ತಾರೀಖು ನಡೆಯುವ ಸತ್ಯಾಗ್ರಹಕ್ಕೆ ಎಲ್ಲರೂ ತಯಾರಾಗಿ ಬರಬೇಕು. ಅಲ್ಲದೆ ಅದಕ್ಕೆ ಜನಧನ ಸಹಾಯ ಮಾಡುವುದಾಗಿ ಭರವಸೆ ಕೊಟ್ಟವರೆಲ್ಲರೂ ತಮ್ಮ ಮಾತನ್ನು ಉಳಿಸಿಕೊಂಡು ಸಹಾಯ ಮಾಡಬೇಕೆಂದು ತಿಳಿಸಲಾಯಿತು ಅಧ್ಯಕ್ಷರು ನಿಮ್ಮ ಕೆಲಸ ಕಾರ್ಯಗಳು ಪೂರೈಸುವವರೆಗೆ ಒಕ್ಕಟ್ಟಿನಿಂದ ಕೆಲಸ ಕಾರ್ಯಗಳನ್ನು ಮಾಡಬೇಕು ಎಂಬದಾಗಿ ಅಪ್ಪಣೆಕೊಡಿಸಿದರು. ನಂತರ ಮಹಾತ್ಮಾ ಗಾಂಧಿಯವರಿಗೂ ಮತ್ತು ಶ್ರೀಮನ್ಮಹಾರಾಜರವರಿಗೂ ಶ್ರೇಯಃ ಪ್ರಾರ್ಥನೆಯನ್ನು ಬಯಸಿ ಸಭೆಯು ಬರಖಾಸ್ತಾಯಿತು

ಇರಸವಾಡಿ ಪುಟ್ಟಯ್ಯ ಕಾರ್ಯದರ್ಶಿ

ವಿಜಾಪುರದ ಸಭೆಯು

(ನಮ್ಮ ಸ್ವಂತ ಸುದ್ದಿಗಾರರಿಂದ)

ಕಳೆದ ಗುರುವಾರ (೭-೫-೨೬) ಸಾಯಂಕಾಲದಲ್ಲಿ ಛತ್ರೀಯವರ ಥಿಯೇಟರದಲ್ಲಿ ಮುರಾರೀ [illegible] ಸಭೆ ಕರೆದಿದ್ದರು [illegible] ವ್ಯಾಖ್ಯಾನವಾದ್ದರಿಂದ ಎಲ್ಲರೂ [illegible] ಹಚ್ಚಿರುವ ಕಟ್ಟಡದೊಳಗಿಂದ [illegible] ಶಾಲೆಯನ್ನು ತೆಗೆದು ಕನ್ನಡ ಹೆಣ್ಣು ಹುಡುಗರ ಶಾಲೆಯನ್ನು ಹಾಕಿದ್ದಕ್ಕಾಗಿ ಮ್ಯುನಿಸಿಪಾಲಿಟಿಯವರು ಮಾಡಿದ 'ಅಪಮಾನ' ಮತ್ತು "ಭಯಂಕರ ಅನ್ಯಾಯ" ದ ಬಗ್ಗೆ ಯೋಚಿಸುವದೇ ಸಭೆಯ ವಿಷಯವಾಗಿತ್ತು ಸಭೆಯು ಪೂರ್ವದಲ್ಲಿ "ಕರ್ನಾಟಕೀ [illegible] ದಿಗ್ವಿಜಯ [illegible]" ಎಂಬ ಶಿರೋಲೇಖದ [illegible] ಒಂದು ಹಸ್ತಪತ್ರಿಕೆಯನ್ನು ಮಹಾರಾಷ್ಟ್ರ ಮಂಡಳದವರು ಹಂಚಿದರು.

ಸಭೆಯ ಅಧ್ಯಕ್ಷರು ಮಿ|| ನಾಯಕ ವಕೀಲರಾಗಿದ್ದರು ಅವರು ಮ್ಯುನಿಸಿಪಾಲಿಟಿಯ ಅಧ್ಯಕ್ಷರಾದ [illegible] ಕೇವಲ ತಮ್ಮ "ಅಧಿಕಾರದ ಜೋರಿ" ನಿಂದ ಈ ಕೆಲಸ ಮಾಡಿರುವದರಿಂದ ಸದ್ಯದ ಪ್ರಶ್ನೆಯು "ನ್ಯಾಯಾನ್ಯಾಯ ಸ್ವರೂಪ" ದ್ದಾಗಿರುವದೆಂತ [illegible] ಇದೇ ಪ್ರಶ್ನೆಯು [illegible] ಸರಕಾರದಿಂದ [illegible] ಸಾವಿರ ಗ್ರಾಂಟು ದೊರೆತ ಕೂಡಲೆ ಹೊಸ ಕಟ್ಟಡವನ್ನು ಕನ್ನಡ ಶಾಲೆಗೆ ಕಟ್ಟಿಸಬೇಕೆಂಬ '[illegible]' [illegible] 'ಆಗಿನ' ಅಧ್ಯಕ್ಷರು ಸಮ್ಮತಿಸಿದ್ದು ಈಗಿನ [illegible] ಅನ್ಯಾಯವೆಂದು ಒತ್ತಿ ಹೇಳಿದರು

ಆ ಮೇಲೆ ಮಿ|| [illegible] ಮ್ಯುನಿಸಿಪಾಲಿಟಿಯ [illegible]

೬ ನೇ ಪಾನಿನಲ್ಲಿ ನೋಡಿರಿ

ಉತ್ತರ ಕರ್ನಾಟಕಕ್ಕೆ ಟೊಳ್ಳು ಗಟ್ಟಿಯ ಪರಿಚಯ.

ಹೆಸರು ಕೇಳಿದ ಕೂಡಲೆ ಸಿಂಧೂರ ಲಕ್ಷ್ಮಣನಂಥ ಯಾವನೊ ಮಲ್ಲನೆಂದು ಯಾರಾದರೂ ತಿಳಕೊಳ್ಳಬಹುದು; ಆದರೆ ಇದೊಂದು ಗ್ರಂಥವೆಂದು ಮೊದಲೇ ಹೇಳಿ ಬಿಡುತ್ತೇನೆ ಈ ಗ್ರಂಥದ ಕರ್ತೃಗಳು 'ಗುಂಡೂ' ಅಥವಾ ಕೈಲಾಸಂರು ಅಂದರೆ ಕೈಲಾಸಮ್ಮನವರಲ್ಲ! ಇಷ್ಟಾದ ಮೇಲೆ ಸಕೃದ್ದರ್ಶನಕ್ಕೆ ಈ ಗ್ರಂಥವು ಕುಸ್ತಿಯ ಮೇಲೆ ಬರೆದ ಸಪ್ರಯೋಗಿಕವಾದ ವಿವೇಚನೆಯೆಂದು ಯಾರಾದರೂ ತಿಳಿದಾರು. ಯಾಕಂದರೆ, ಯಾರು ಟೊಳ್ಳು ಯಾರು ಗಟ್ಟಿಯನ್ನುವದೊದರೆ ಕುಸ್ತಿಯ ಪೇಚುಗಳ ಪುಸ್ತಕವಿರಬೇಕು; ಆದರೆ ಹಾಗಲ್ಲವೆಂದು ಸ್ಪಷ್ಟವಾಗಿ ತಲೆಯಲ್ಲಿ ಹೊಗಿಸಿ ಕೊಳ್ಳಬೇಕು ಇಲ್ಲಿಯೊಂದು ಮಾನಸಿಕ ಕುಸ್ತಿಯೇನೂ, ಇದೆ; ಗ್ರಂಥ ಕರ್ತೃಗಳ ದೃಷ್ಟಿಯಿಂದ ಪುಟ್ಟೂನು ಬೀಳುತ್ತಾನೆ, ಹಿರಿಯಣ್ಣಯ್ಯನ ದೃಷ್ಟಿಯಿಂದ ಮಾಧೂನು ಬೀಳುತ್ತಾನೆ ಆದರೆ ಶಾರೀರಕ ಕುಸ್ತಿಯ ಮೇಲೆ ಬರೆದ ಆದ್ಯಗ್ರಂಥವೆಂದು ಈ ಸಾಮ್ಯಕ್ಕಾಗಿ ಗುಂಡೂ ಇವರನ್ನು ಯಾರೂ ಹಾಡಿ ಹರಿಸ ಕೂಡದು. ಬೇರೆ ಕುಸ್ತಿಯದೆ, ಬೇರೆ ಸಾಮ್ಯವಿದೆ. ಅದಕ್ಕಾಗಿ ಅವರನ್ನು ಅಭಿನಂದಿಸಬೇಕೆಂದು ಬಿನ್ನಹ.

ಹೀಗೆ ಧೂಳಿದರ್ಶನದಿಂದ ಇತ್ತಕಡೆಯ ಜನರಲ್ಲಿ ಹುಟ್ಟುವ ಅನ್ಯಥಾ ಕಲ್ಪನೆಗಳನ್ನು ಇಲ್ಲಿಯ ವರೆಗೆ ಸರಿಪಡಿಸಿದೆವು. ಇನ್ನು ಇದೊಂದು ನಾಟಕವೆಂದು ಹೇಳಿಬಿಡೋಣ; ಬಹಳೇ ವಿಚಿತ್ರವಾಗಿ ತೋರಬಹುದು ಆದರೆ ಈ ವೈಚಿತ್ರ್ಯವು ಈಗ ಗ್ರಂಥದ ಅಥವಾ ಮುಂದೆ ಚಿರಂಜೀವಿಯಾಗತಕ್ಕಿಸಿ ಹುಟ್ಟುವ ವಿದಗ್ಧ ವಾಙ್ಮಯದ ಲಕ್ಷಣವು. ಈ ನಾಟಕದ ವಿಮರ್ಶೆಯನ್ನು ತತ್ವತಃ ಮಾಡಬೇಕೆಂದರೆ ಸಾಂಪ್ರತದಲ್ಲಿ ನಮಗೆ ಅಗತ್ಯವೆನಿಸುವದಿಲ್ಲ. ಅಲ್ಲಲ್ಲಿ ಒಂದೆರಡು ವಿಮರ್ಶೆಗಳು ಬಂದು ಹಳೆಯ ಮಾತಾಗಿದೆ. ಆದರೆ ಈ ಗ್ರಂಥವು ಇನ್ನೂ ಹೊಸದಾಗಿಯೇ ಉತ್ತರ ಕರ್ನಾಟಕದಲ್ಲಿ ಉಳಿದಿದೆ. ಬಹಳ ಜನರ ಬಾಯಲ್ಲಿ ಇಲ್ಲ, ಇದರ ಕಾರಣವೆನಂದರೆ ಗ್ರಂಥ ವಿಮರ್ಶೆಯನ್ನು ಮಾಡುವದಕ್ಕೆ ಪೂರ್ವದಲ್ಲಿ ಗ್ರಂಥದ ಪೂರ್ಣ ಪರಿಚಯವಾಗಬೇಕಾಗಿದೆ. ಈ ಭಾಗದವರಿಗೆ ಟೊಳ್ಳು ಗಟ್ಟಿಯು ಅಂತೇ ತಿಳಿದಿಲ್ಲ. ಮುಚ್ಚಿಡದೆ ಹೇಳಬೇಕಾದರೆ ಮೊದಲಿನಿಂದ ಕುದಿಯವರೆಗೆ ಅನೇಕರಿಗೆ ಇದರ ಹಾಸ್ಯವೂ ರುಚಿಯೂ ಹೊಳೆದಿಲ್ಲ. ಎರಡು ನೂರು ಪಾನುಗಳನ್ನು ತಿರುವಿ ಹಾಕಿ ಎಷ್ಟೋ ವಿದ್ವಜ್ಜನರು ನಗೆಬರದೆ-ಅದಕ್ಕೇನಕ್ಕ ಸಿಟ್ಟಿಗರು. 'ಏನೋ ನೋಡಿದ' ಎಂದು ಅಲ್ಪ ವಯಸ್ಸಿನಲ್ಲಿ ಸಂಧ್ಯಾವಂದನೆಯ ಮಂತ್ರವನ್ನು ಕಲಿತುಕೊಂಡಂತೆ ಮಾಡಿದರು ಅರ್ಥವಾಗುವದು ಮೊದಲು ದುಸ್ತರವೆನಿಸಿತು ಅದರಲ್ಲಿ ಕೈಲಾಸಂರ ವಿಷಯಕ್ಕೆ ಪರಸ್ತುತಿಯನ್ನು ಓದಿ, ಆ ಮೇಲೆ ಸ್ವತಂತ್ರ ಬುದ್ಧಿಯಿಂದ ಗ್ರಂಥಕ್ಕೆ ಕೈಹಚ್ಚಿದವರು 'ಇದರಲ್ಲಿ ಏನು ಸುಡುಗಾಡಿದೆ. ಏಕಿಷ್ಟು ಹೊಗಳುತ್ತಾರೊ! ಗೊತ್ತಿದೆ ಈ ಮೈಸೂರಿಯವರ ಮಾತಿನ ವಿನೋದ' ವೆಂದು ಮುಂದಾಗಲೇ ಇಲ್ಲ. ನಿಜವಾಗಿ ಹೀಗೆ ನೀರಸವಾಗ ಹತ್ತಿದರೆ ಉಪಯೋಗವಿಲ್ಲೆಂಬ ಸದಿಚ್ಛೆಯಿಂದ ನಾವು ಕೇವಲ- ಪರಿಚಯ- ಪುರಃಸರವಾಗಿ ಉತ್ತರ ಕರ್ನಾಟಕಕ್ಕೆ, ಈ ನಾಟಕವನ್ನು ಗುರುತಿಸಿ ಕೊಡಬೇಕೆಂದು ಹೊರಟಿದ್ದೇವೆ.

ಇದೊಂದು ಸಾಮಾಜಿಕ ನಾಟಕವು. ಲಕ್ಷ್ಯರು ಕೊಡಬೇಕೆಂಬ ವಿಷಯವನ್ನು ಗ್ರಂಥಕರ್ತರು ಸಂಸಾರ- ಚಿತ್ರದಿಂದ ರೂಪಿಸಿದ್ದಾರೆ. ಇದರ ತತ್ವವು ಈಗಷ್ಟು ವಾದಗ್ರಸ್ತವಾದದ್ದಲ್ಲ. ಆದರೆ ಭಾಷೆಯೂ, ವಿನೋದವೂ, ರಚನಾ ಚಾತುರ್ಯವೂ ವಾದಗ್ರಸ್ತವಾದವುಗಳು ಭಾಷೆಯು ವ್ಯವಹಾರಿಕವಾದದ್ದು ಯುಕ್ತವಾಯಿತೆ? ಮತ್ತು ವಿನೋದಾದಿ ಕಲಾಯುತನ ಗುಣಗಳು ಗ್ರಂಥಕರ್ತೃಗಳಲ್ಲಿ ಇರುವವೋ ಹೇಗೆ? ಇವೇ ಪ್ರಶ್ನೆಗಳನ್ನು ಕೇಳಲಾಗುತ್ತದೆ. ಪರಿಚಯಕ್ಕೆ ಇವುಗಳ ಸಮಾಧಾನವಾಗಬೇಕು ಅಂತೇ ಮೊದಲನೇಯ ಪ್ರಶ್ನೆಯ ಪರಾಮರಿಕೆಯನ್ನು ಉತ್ತರದವರ ಸಲುವಾಗಿ ಹೆಚ್ಚು ಮಾಡುವದು ಅವಶ್ಯವಿದೆ. ವ್ಯವಹಾರಿಕ ಭಾಷೆಯೆಂದರೆ ಮಾತಾಡುವ ಭಾಷೆಯು. ಮಾತಾಡುವ ಭಾಷೆಯ ಸಹವಾಸವು ಜನಸಮಾಜಕ್ಕೆ ಸತತವಾಗಿದ್ದ ಕಾರಣ, ನಾಟಕದಲ್ಲಿ ಅದನ್ನು ತಕ್ಕ ಪ್ರಸಂಗದಲ್ಲಿ ಬಳಿಸಿದರೆ ಅದು ಬೇರಿದ ಪರಿಣಾಮವನ್ನು ಜಾಸ್ತಿಯಾಗಿ ಉಂಟು ಮಾಡುತ್ತದೆ. ಅಂತೇ ನಾಟಕವು ತನ್ನ ನಡೆನುಡಿಯಲ್ಲಿ ಸಮಾಜಕ್ಕೆ ಹತ್ತಿರ ಇದ್ದಂತೆ ಹೆಚ್ಚೆಚ್ಚು ಫಲಕಾರಿಯಾಗುತ್ತದೆ. ಜನರ ಸಲುವಾಗಿ ಬರೆದ ನಾಟಕವು ಜನರ ಭಾಷೆಯುಳ್ಳದ್ದಿರಬೇಕು ಜನರ ಭಾವವುಳ್ಳದ್ದಿರಬೇಕು. ಇನ್ನೇನು ವಾಙ್ಮಯಕ್ಕೆ ಶೋಭಿಸುವಂತೆ ಮಾಡುವದು ಕರ್ತೃವಿನ ಹಸ್ತಗುಣವು. ಅಂದಮೇಲೆ ಈ ನಾಟಕವು ವ್ಯವಹಾರಿಕ ಭಾಷೆಯಲ್ಲಿ ಪ್ರಚುರವಾದದ್ದು ಯೋಗ್ಯವೆ! ಆದರೆ ನಮ್ಮ ಕನ್ನಡ ಭಾಷೆಯಲ್ಲಿ ಕೆಲವು ನ್ಯೂನತೆಗಳಿವೆ. ಪೂರ್ವದ ಗ್ರಾಂಥಿಕ ಭಾಷೆಗೂ ಪ್ರಾಪಂಚಿಕ ಭಾಷೆಗೂ ಬಹಳವಾಗಿ ಬಿರಿಸುತ್ತದೆ ಅದರಲ್ಲಿ ಪ್ರಾಪಂಚಿಕ ಭಾಷೆಯು ಬೇರೆಬೇರೆ ದಿಕ್ಕಿನಲ್ಲಿ ವಿವಿಧಸ್ವರೂಪವನ್ನು ಹೊಂದಿದೆ. ಮೈಸೂರು ಬಿಜಾಪೂರಿಗಂತೂ ಅತಿಶಯ ವಾದೂ ಅಂತರವಾಗಿಬಿಟ್ಟಿದೆ! ಹೀಗಾಗಿ ಯಾವದರಲ್ಲಿ ಮಹೀಶೂರರಿಗೆ ಸ್ವಾರಸ್ಯವೋ ಅದು ನಮಗೆ ಸೊಗಯಿಪುದಿಲ್ಲ. ಊಟ ಉಡಿಗೆಯಲ್ಲಿ ಕೆಲವು ವ್ಯತ್ಯಾಸಗಳು, ಮಾತಿನಲ್ಲಂತೂ ಮಾತಾಡುವಂತಿಲ್ಲ? ಇಂಗ್ಲೀಷರು ಇಬ್ಬರ ತಲೆಯ ಮೇಲೆಯೂ ಕೈ ಇಟ್ಟಿದ್ದರೆ ನಮ್ಮ ಭಾಷೆಯ ಮೇಲೆ ಮರಾಟಿಗರ ದಾಳಿ; ಅವರ ಭಾಷೆಯ ಮೇಲೆ ಮರಾಟಿಗರನ್ನು ಬಿಟ್ಟುಳಿದವರ ಹಾವಳಿ. ಇದು ನಾಟಕಕಾರರ ದೋಷವಲ್ಲೆಂಬುದು ನಿಜವು. ಆದರೇ ಸಂಪೂರ್ಣವಾಗಿ ವ್ಯವಹಾರವನ್ನು ಪುಸ್ತಕದಲ್ಲಿ ತರಬೇಕೆಂದು ಅವರು ಸಮಾಸ ಸಂಧಿಗಳಿಂದೊಡಗೂಡಿದ ಭಾಷೆಯನ್ನಿಟ್ಟು ಒಂದು ಸಂಸ್ಕೃತ ಸ್ವರೂಪವನ್ನು ಕೊಟ್ಟದ್ದು ಮತ್ತಿಷ್ಟು ಗಡಚಾಗಿದೆ. ಓದುವಾಗ ಕೆಲವು ಬಿರುಸು ಬಾಡಿಗಳಂಥ ಶಬ್ದಗಳಿಗೆ ಗಾಡಿಯು ನಿಂತು ಬಿಡುತ್ತದೆ. ಉದಾಹರಣಾರ್ಥವಾಗಿ-ಹೊತ್ತಿಂಗ್ಳು 'ಹಾಳ್ಹೋನ್ಮನೆಗೆ, ಅಲ್ಲಿಂ, ಮಧ್ಯೇಲಿ ನಾಯಿಗ್ಹಾಕಿನ್ನದು ಚ್ಛಾಪ್ಪಾನ್ನ ರೀಗ್ಹಾಕಾ' ವೆಂಬ ಸಮಾಸವಂತೂ ಬಾಣನಿಗೂ ಬಾಣಬಿಟ್ಟಿದೆ. ಕೆಲವು ಕಡೆ ಹಾಸ್ಯದ ಪಕ್ಕಾಗಿ ಸಮಾಜವನ್ನು ಮೀರಿ ಹೆಚ್ಚು ಹತ್ತಿಕ್ಕಿ ಪ್ರಯೋಗಗಳು ಬಂದಿವೆ, ಇದನ್ನೆಲ್ಲ ತಿಳಿದುಕೊಳ್ಳಬೇಕು ನಿಜ. ಆದರೆ ತಿಳಿಯಬೇಕು ಹೇಗೆ? ಇಷ್ಟಿದ್ದು ಅದರಲ್ಲಿ ಗುಂಡೂ ಇವರ ಹಾಸ್ಯವೂ ಧ್ವನಿಯೂ ತುಂಬಿದೆ ಸ್ವಲ್ಪ ಹೇಳಿಚಿಮ್ಮಿಕೊಟ್ಟಿ (ನೀರು ಚಿಮ್ಮಿದಂತೆ ಮಾಡಿ) ಅನ್ಯಕ್ತವಾಗಿ ಇಟ್ಟುಬಿಟ್ಟಿದ್ದಾರೆ. ಮೈಸೂರ ಸಂಸ್ಕೃತಿಯಂತೂ ಭಾಷೆಯ ಬಲಗೈಯಾಗಿದೆ ಅಂತೇ ನಮ್ಮ ಬಾಂಧವರಿಗೆ 'ಸರ್ಹೋಯ್ತು' ನೆಗೆದು ಬಿದ್ಹೋಯ್ತು ಇವುಗಳ ಬೈಯುವ ಸಾಮರ್ಥ್ಯವೇ ಅರಿಕೆಯಾಗುವದಿಲ್ಲ, ಸರ್ಹೋಯ್ತು ಇದನ್ನು ನಾವು ಸರ್ ಹೋಯ್ತು ಎಂದಾಗಲಿ ಸರಿಯಾಯಿತು ಎಂಬರ್ಥದಿಂದಾಗಲಿ ತಿಳಕೊಳ್ಳುತ್ತೇವೆ. ಸತ್ಯಭೂತವಾದರ್ಥವೆಂದರೆ 'ತಲೆ ಬೋಳಿಸಿತು,' ಎಂದು, ಆದುದರಿಂದ ನಾವು ಮಾಡಿಕೊಡುವ ಪರಿಚಯವೆಂದರೆ ಮೈಸೂರ ಸೀಮೆಯನ್ನೇ! ಅಂದರೆ ಓದುಗರು ಕೆಲವು ದಿವಸ ಮೈಸೂರಲ್ಲಿ ಪ್ರವಾಸ ಮಾಡಿ ಬರಬೇಕು ಏಕೀಕರಣಕ್ಕಾದರೂ ಉತ್ತಮ ಸಾಧನವಿದು. ಅಥವಾ ಕೈಲಾಸಂರ ಗೆಳೆಯರಿಂದ ಆ ಆ ಭಾವಗಳನ್ನು ಕೇಳಿ

ಪಿಸುವಾಕೆ ಓದಿಸಿ ಕೇಳಬೇಕು. ಧಾರವಾಡದಲ್ಲಿ ಒಮ್ಮೆ ಒಬ್ಬ ಮಹೀಶೂರರು- ತಾತಾಚಾರ್ಯ ಶರ್ಮಾ- ಅವರು ತೋರುತ್ತದೆ. ಇದನ್ನು ಓದಿ ಕಲಿಸಿದರು. ಆಗ ನಾಟಕವು ನಮಗೆಲ್ಲ ಬಹಳೇ ರಸವತ್ತಾಯಿತು ಕಡೆಯ ಸೂಚನೆಯೆಂದರೆ ಪ್ರಯೋಗವನ್ನು ರಂಗಭೂಮಿಯ ಮೇಲೆ ನೋಡಬೇಕು. ಯಾಕೆಂದರೆ ಪ್ರಯೋಗದಲ್ಲಿಯೇ ಈ ನಾಟಕದ ಸೊಗಸು. ಹಾಗೆಯೇ ನಾವು ಓದಬೇಕಾದರೆ ಈ ನಾಟಕವು ಅಷ್ಟು ರುಚಿಕರವಾಗಿಲ್ಲವೆಂಬುದು ನಿಜವು ಹೀಗೆನ್ನುವ ಕಾರಣವೇನೆಂದರೆ ಮೈಸೂರಿಯವರ ಸರಸ್ವತಿಯು ನಮ್ಮ ನಾಲಿಗೆಯ ಮೇಲೆ ಆಡುವದಿಲ್ಲ ಕೆಲವು ಅವರ ಉಚ್ಚಾರಗಳಂತೂ ವೇದಪಾಠದಂತೆಯೇ! 'ಅತ್ಕಾಣಯ್ಯಾ ಸುಬ್ಬು ಅಯ್ಯಾ' ಇವೆ ಮುಂತಾದವುಗಳಲ್ಲಿಯ ಉಕ್ತಿ ರಸವು ನಮಗೆ ತಿಳಿಯದು. ಆದಾಗ್ಯೂ ನಾವು ಕೈಬಿಡುವೆವೆಂದು ಯಾರೂ ಬಗೆಯತಕ್ಕದ್ದಲ್ಲ. ಭಾಷೆಯಿಂದ ಹೊರಬೀಳುವ ಕರ್ತೃವಿನ ಕೃತಿಗಾದರೂ ನಾವು ಮೆಚ್ಚಬೇಕು. ಆದುದರಿಂದ ಮುಂದಿನ ಭಾಗದಲ್ಲಿ ಆಕತೆಯನ್ನು ಅರಿತುಕೊಳ್ಳಲಿಕ್ಕೆ ನಾವು ಹವಣಿಸುತ್ತೇವೆ. ಈ ಪರಿಚಯದ ಸಂದರ್ಭದಲ್ಲಿ ನಾಟಕಕ್ಕೆ ಒಂದೇ ಸಂಗತಿಯೆಂದರೆ ಗ್ರಂಥಕರ್ತೃಗಳಿಂದ ಮುನ್ನುಡಿಯು ಬಹಳ ಬೇಕಾಗಿದೆ. ಅವರು ದಯವಿಟ್ಟು ತಮ್ಮ ಮೈಸೂರ ವಿಶಿಷ್ಟ ವಚನಗಳನ್ನೂ ನವೀನ ಶಬ್ದಕೋಶವನ್ನೂ ಅಡಕಮಾಡಿ ಇದಕ್ಕೆ ಜೋಡಿಸಬೇಕೆಂದು ನಮ್ಮ ನಮ್ರ ಸೂಚನೆ. ಅಂದರೆ ನಾಲ್ಕು ಇಯತ್ತೆ ಕಲಿತ ಸಾಮಾನ್ಯ ಸುಶಿಕ್ಷಿತರಿಗೂ ಇವರ ನಾಟಕವು ಸವಿಯಾಗುತ್ತ ಹೋಗುವದೆಂದು ನನ್ನ ನಂಬಿಗೆಯಿದೆ. ಇಲ್ಲವಾದರೆ ಕೆಲವು ವಾಙ್ಮಯ ಭಕ್ತರಿಗಿಷ್ಟೇ ಇದು ಪ್ರಿಯವಾಗಿ ಪರಿಣಮಿಸಬಹುದೆಂದು ಅಂಜುತ್ತೇವೆ. ಇಷ್ಟೇ—

—ರಸಿಕರಂಗ

ಹಿಂದೀ ಸಂಸ್ಥಾನಗಳಲ್ಲಿ ವಾಸಿಸುವ

ಜನರ ಹೀನ ಸ್ಥಿತಿಯು

ಹಿಂದಿ ಸಂಸ್ಥಾನಗಳಲ್ಲಿಯ ಬಿಕ್ಕಟ್ಟಾದ ರಾಜಕೀಯ ಸಮಸ್ಯೆಗಳ ಬಗ್ಗೆ ಬ್ರಿಟಿಶ ಹಿಂದುಸ್ಥಾನದಲ್ಲಿಯ ರಾಜಕೀಯ ಮುಖಂಡರು ವಿಚಾರಮಾಡುವದಿಲ್ಲೆಂಬುದು, ೭೦೦ ಹಿಂದೀ ಸಂಸ್ಥಾನಗಳಲ್ಲಿ ವಾಸಿಸುವ ೭ ಕೋಟಿ ಜನರ ದುರ್ದೈವವೇ ಸರಿ. ಇಂಥ ನಿಷ್ಕಾಳಜಿತನವು ದುಃಖದಾಯಕವಾದದ್ದು. ೧೯೨೦ನೇ ಇಸ್ವಿಯಿಂದ ಹಿಂದೀ ಸಂಸ್ಥಾನಗಳ ವಿಷಯವಾಗಿ, ರಾಷ್ಟ್ರೀಯ ಸಭೆಯು ಅಷ್ಟೊಂದು ಚನ್ನಾಗಿ ಗಮನಕೊಟ್ಟಿರುವದಿಲ್ಲ. ಹಿಂದೀ ರಾಷ್ಟ್ರೀಯ ಸಭೆಯಲ್ಲಿ ಹಿಂದೀ ಸಂಸ್ಥಾನಗಳು ಅಡಕವಾಗಿವೆ. ಬ್ರಿಟಿಶ ಸರಕಾರದವರಂತೆ, ಒಳಗಿನ ಕಾರಭಾರದಲ್ಲಿ ಕೈಹಾಕದೆ ಹಿಂದೀ ಸಂಸ್ಥಾನಗಳಿಂದ ರಾಷ್ಟ್ರೀಯ ಸಭೆಗೆ ಪ್ರತಿನಿಧಿಗಳನ್ನು ಬರಮಾಡಬೇಕೆಂಬದಾಗಿ ನಾಗಪೂರ ರಾಷ್ಟ್ರೀಯ ಸಭೆಯಲ್ಲಿ ನಿರ್ಣಯವಾಗಿತ್ತು. ಭವಿಷ್ಯದ ಪರಿಸ್ಥಿತಿಯನ್ನು ವಿಚಾರಿಸಿ, ಹಿಂದೀ ಸಂಸ್ಥಾನಿಕರು, ಹಿಂದೀ ರಾಷ್ಟ್ರಘಟನೆಯಲ್ಲಿ ತಮ್ಮ ಅಸ್ತಿತ್ವವನ್ನು ಭದ್ರಮಾಡಿಕೊಳ್ಳಲು ಈಗಿನಿಂದಲೇ ಒಡಿದಾಟ ನಡಿಸಿದ್ದಾರೆ ಲಾರ್ಡ ರೀಡಿಂಗರ ಆಳಿಕೆಯಲ್ಲಿ ಅವರು ರಾಜಪುತ್ರರ ಸಂರಕ್ಷಣೆಯ ಬಿಲ್ಲ ಪಾಸು ಮಾಡಿಕೊಂಡಿರುವರು ಬ್ರಿಟಿಶ ಸರಕಾರದವರು, ಪ್ರೆಸ್ ಎಕ್ಟ ರದ್ದುಮಾಡಿದ್ದರೂ ಹಿಂದಿಸಂಸ್ಥಾನಿಕರು ಅದನ್ನು ಇನ್ನೂ ಹಾಗೆಯೇ ಇಟ್ಟಿರುವರು. ತಮ್ಮ ಪ್ರಜೆಗಳಿಗೆ ಸ್ಥಾನಿಕ ಸ್ವರಾಜ್ಯವನ್ನು ಕೊಟ್ಟು ತಾವಾದರೂ ಕಾಲಕ್ಕನುಸಾರವಾಗಿ ಸುಧಾರಣೆಗಳನ್ನು ಕೊಡುತ್ತ ಹೋಗಿರುವೆವೆಂಬದನ್ನು ಬ್ರಿಟಿಶ ಹಿಂದುಸ್ಥಾನದ ಜನರಿಗೆ ಹಾಗೂ ಬ್ರಿಟಿಶ ಸರಕಾರಕ್ಕೆ ತೋರಿಸುವದಕ್ಕಾಗಿ, ಎಷ್ಟೋ ಸಂಸ್ಥಾನಿಕರು ತಮ್ಮ ಪ್ರಜೆಗಳಿಗೆ ಕೆಲವು ಸುಧಾರಣೆಗಳನ್ನು ಕೊಟ್ಟಿರುವರು. ಆದರೆ ನಿಜವಾಗಿ ವಿಚಾರಮಾಡಿದರೆ ರಾಜ್ಯಕಾರಭಾರದಲ್ಲಿ ಸಂಸ್ಥಾನದ ಜನರಿಗೆ ಯಾವ ತರಹದ ಅಧಿಕಾರವಿರುವದಿಲ್ಲ 'ಪ್ರೆಸ್ ಆಕ್ಟ' ಇದ್ದುದರಿಂದ ಲೇಖನದ್ವಾರ ಅವರಿಗೆ ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಬರುವಂತಿಲ್ಲ; ಮತ್ತು ಅಂಜಿಕೆಯ ಮೂಲಕ ಪ್ಲಾಟಫಾರ್ಮಿನ ಮೇಲೆ ನಿಂತು ಭಾಷಣಮಾಡುವ ಧಾರ್ಷ್ಟ್ಯವು ಅವರಲ್ಲಿರುವದಿಲ್ಲ. ಹಿಂದೀ ಸಂಸ್ಥಾನದಲ್ಲಿಯ ಜನರ ಸಲುವಾಗಿ ಅಖಿಲ ಭಾರತ ರಾಷ್ಟ್ರೀಯ ಸಭೆಯಲ್ಲಿ, ಒಂದು ಮೂರಾಂತ ಜಾಗೆಗಳನ್ನು ಕಾಯಿಡಲು ಹೇಳುವದಕ್ಕಾಗಿ, ಮಹಾತ್ಮಾಜೀ ಹಾಗೂ ಉಳಿದ ರಾಷ್ಟ್ರೀಯ ಮುಖಂಡರ ಕಡೆಗೆ ಶಿಷ್ಟಮಂಡಳವೊಂದನ್ನು, ಬೆಂಗಳೂರ ರಾಷ್ಟ್ರೀಯಸಭೆಯವರು ಕಳೆದ ಡಿಶೆಂಬರದಲ್ಲಿ ಕಳಿಸಿದ್ದರು. ಇದು ಅವರ ನ್ಯಾಯಸಿದ್ಧವಾದ ಬೇಡಿಕೆಯು. ಹಿಂದೀರಾಷ್ಟ್ರೀಯ ಸಭೆಯು ಅಖಿಲ ಹಿಂದೀ ಜನರ ಹಿತದ ಸಲುವಾಗಿದೆ. ಆದ್ದರಿಂದ ಸಂಸ್ಥಾನದ ಜನರು ಒಟ್ಟಾರೆ ಸೇರಿ ಅಖಿಲಭಾರತ ರಾಷ್ಟ್ರೀಯ ಸಭೆಗೆ ತಮ್ಮ ಪ್ರತಿನಿಧಿಗಳನ್ನು ಕಳಿಸಿ ರಾಷ್ಟ್ರೀಯ ಸಭೆಯನ್ನು ಸ್ವಾಧೀನಪಡಿಸಿಕೊಳ್ಳಬೇಕೆಂದು ಮಹಾತ್ಮಾಜೀಯವರು ಹೇಳಿದರು. ಇದು ಹೀಗೆ ಸಾಧ್ಯವೆಂಬುದು ನನಗೆ ತಿಳಿಯದಾಗಿದೆ! ನಮ್ಮಲ್ಲಿ ಹೇಳಿಕೊಳ್ಳುವಂಥ ಪತ್ರಗಳು ಇರುವದಿಲ್ಲ. ಬಹುತರ ಸಂಸ್ಥಾನಗಳಲ್ಲಿ 'ಪ್ರೆಸ್ ಲಾ' ಬಹು ಭಿಕರವಾಗಿದೆ ಹೊರಗಿನ ವರ್ತಮಾನಪತ್ರಗಳು 'ರಾಜಪುತ್ರ ಸಂರಕ್ಷಣೆ' ಕಾನೂನಿಗೆ ಅಂಜಿ ನಮಗೆ ವಿಶೇಷ ಸಹಾಯಮಾಡುವದಿಲ್ಲ. ಆದ್ದರಿಂದ ಸಾಮಾನ್ಯ ಜನತೆಯನ್ನು ಜಾಗೃತಗೊಳಿಸಲು ಇನ್ನಾವ ಯೋಜನೆಗಳೂ ಕಂಡುಬರುವದಿಲ್ಲ ನಿಜಾಮರಿಗೆ ಲಾರ್ಡ ರೀಡಿಂಗರು ಕೊಟ್ಟ ಉತ್ತರದಿಂದಾದರೂ ನಮ್ಮ ಮುಖಂಡರು ಸಂಸ್ಥಾನಗಳ ಪ್ರಶ್ನವನ್ನು ವಿಚಾರಮಾಡುವರೆಂದು ನನಗನಿಸಿತ್ತು. ಆದರೆ ಮುಂಬಯಿಯಲ್ಲಿ ಹೊಸದಾಗಿ ಸ್ಥಾಪಿತವಾದ ರಾಷ್ಟ್ರೀಯ ಪಕ್ಷವು ಅಥವಾ ನಮ್ಮ ಸ್ವರಾಜ್ಯಪಕ್ಷದ ಮಿತ್ರರು ಇದರ ಬಗ್ಗೆ ಏನೂ ಮಾಡಿರುವದಿಲ್ಲೆಂಬುದನ್ನು ನೋಡಿ ನನಗೆ ಆಶ್ಚರ್ಯವಾಗುತ್ತದೆ. ಹಿಂದೀ ಸಂಸ್ಥಾನಗಳ ಪ್ರಶ್ನೆಯನ್ನು ವಿಚಾರಮಾಡಲು ನಮ್ಮ ಮುಖಂಡರಿಗೆ ಇದು ಯೋಗ್ಯವಾದ ಸಮಯವು.

ನಮ್ಮ ರಾಜರ ಕೆಳಗೆ ಸ್ವರಾಜ್ಯಗಳಿಸುವದಕ್ಕಾಗಿ ಕಾರ್‍ಯ ಏನು ಮಾಡುವವರಿರುವರೆಂಬುದನ್ನು ಹೇಳುವದಕ್ಕಾಗಿ, 'ಲೆಜಿಸ್ಲೇಟಿವ್ಹ ಕೌನ್ಸಿಲ, ಅಸೆಂಬ್ಲಿ ಹಾಗೂ ಕೌನ್ಸಿಲ ಆಫ ಸ್ಟೇಟ' ಗಳಿಗೆ ನಿಲ್ಲುವ ಉಮೇದವಾರರಿಗೆ ಪ್ರಶ್ನೆ ಮಾಡಬೇಕು. ಹಿಂದೀ ಸಂಸ್ಥಾನಗಳ ಅಂತಃಕಾರಭಾರದಲ್ಲಿ ಕೈಹಾಕಲು ಬ್ರಿಟಿಶ ಸರಕಾರದವರಿಗೆ ಅಧಿಕಾರವಿರುವದೆಂಬದಾಗಿ ಲಾರ್ಡ ರೀಡಿಂಗರ [illegible] ಅಭಿಪ್ರಾಯವಿರುವದರಿಂದ, ಬ್ರಿಟಿಶ ಹಿಂದುಸ್ಥಾನ ಅಸೆಂಬ್ಲಿ ಹಾಗೂ ಕೌನ್ಸಿಲುಗಳಲ್ಲಿಯ ಸಭಾಸದರೂ ಅದರಂತೆ ಏಕೆ ಮಾಡಬಾರದೆಂಬುದಾಗಿ ನನಗೆ ತಿಳಿಯುತ್ತಿಲ್ಲದಾಗಿದೆ. ಸಂಸ್ಥಾನದ ಜನರು ಕೊಡುವ ತೆರಿಗೆಯಿಂದ ಸಂಸ್ಥಾನಿಕರು ಬ್ರಿಟಿಶ ಸರಕಾರಕ್ಕೆ ತೆರಿಗೆಯನ್ನು ಕೊಡುತ್ತಾರೆ. ಸಂಸ್ಥಾನ ಜನರ ಹಣವು ಬ್ರಿಟಿಶ ಸರಕಾರಕ್ಕೆ ಮುಟ್ಟುವದರಿಂದ, ಬ್ರಿಟಿಶ ಹಿಂದುಸ್ಥಾನ ಕೌನ್ಸಿಲುಗಳಲ್ಲಿ ಅವರ ಪ್ರತಿನಿಧಿಗಳು ಏಕೆ ಇರಬಾರದೆಂಬುದು ತಿಳಿಯದಾಗಿದೆ. ಮಹಾರಾಷ್ಟ್ರ ಬಂಧುಗಳು ಸಂಸ್ಥಾನ ಪ್ರಜೆಗಳಲ್ಲಿ ಜಾಗೃತಿ ಹುಟ್ಟಿಸಲು ಪ್ರಯತ್ನಮಾಡುವರೆಂಬುದು ನಿಜವಾಗಿ ಪ್ರಶಂಸನೀಯವಾದದ್ದು.

ಶ್ರೀಯುತರುಗಳಾದ ಎನ್. ಸಿ. ಕೇಳಕರ ಹಾಗೂ ಸರ್ವೆಂಟ್ಸ್ ಆಫ್ ಇಂಡಿಯಾ ಸೊಸಾಯಿಟಿಯ ಎ. ವ್ಹಿ. ಪಟವರ್ಧನ ಇವರ ಮುಖಂಡತ್ವದ ಕೆಳಗೆ ಅವರು 'ಸಂಸ್ಥಾನ ಸ್ವರಾಜ್ಯ' ಹೊರಡಿಸಿದ್ದಲ್ಲದೆ, ಸಂಸ್ಥಾನ ಹಿತವರ್ಧಕ ಸಭೆಯನ್ನು ಸ್ಥಾಪಿಸಿದ್ದಾರೆ. ಇದು ನಿಜವಾದ ಪ್ರಾರಂಭವು ಆದರೆದುರ್ದೈವದಿಂದ ಈ ವರ್ತಮಾನಪತ್ರವು ಮರಾಠಿಯಲ್ಲಿದ್ದುದರಿಂದ "ದಕ್ಷಿಣ ಮರಾಠಾ ಸಂಸ್ಥಾನಗಳ"ಲ್ಲಿಯ ಜನರಿಗೆ ಉಪಯುಕ್ತವಿದೆ. ಉಳಿದ ಸಂಸ್ಥಾನಗಳ, ಪಿಧಾನ ಪ್ರಮುಖ ಸಂಸ್ಥಾನಗಳು ತಮ್ಮ ಮಾತೃಭಾಷೆಯಲ್ಲಿ ತಮ್ಮ ಪರಿಸ್ಥಿತಿಯನ್ನು ನಿದರ್ಶಿಸುವಂಥ ವರ್ತಮಾನಪತ್ರಗಳನ್ನು ತೆಗೆದರೆ ನಿಜವಾಗಿಯೂ ಅದು ಲಾಭಕರವಾದದ್ದು. ಈ ವಿಷಯದಲ್ಲಿ ಪ್ರಯತ್ನ ಮಾಡುವುದು ಹಿಂದೀ ಸಂಸ್ಥಾನದ ಜನರಿಗೆ ಅತ್ಯವಶ್ಯವಾದದು. ಇವರಿಂದ ಬ್ರಿಟಿಶ ಹಿಂದುಸ್ಥಾನದಲ್ಲಿಯ ಮುಖಂಡರಾದರೂ ತಮ್ಮ ಸಹಾನುಭೂತಿಯನ್ನು ತೋರಿಸುವದಲ್ಲದೆ ಸಹಾಯವನ್ನಾದರೂ ಮಾಡಬಲ್ಲರು. ಬಳ್ಳಾರಿಯಲ್ಲಿ ೨೦—೨೧ ನೇ ತಾರೀಖುಗಳಲ್ಲಿ ಕೂಡಲಿರುವ ಕರ್ನಾಟಕ ಪ್ರಾಂತಿಕ ಪರಿಷತ್ತಿನಲ್ಲಿ (ಕರ್ನಾಟಕ ಪ್ರಾಂತದಲ್ಲಿಯ ಸಂಸ್ಥಾನಗಳ ಬಗ್ಗೆಯಾದರೂ) ಈ ಪ್ರಶ್ನೆಯನ್ನು ವಿಚಾರಮಾಡಲು ಏನೂ ಅಭ್ಯಂತರವಿಲ್ಲ

"ಜಮಖಂಡೀ ಹೌಸ"
ಚಿಕ್ಕಪೇಟೆ
ಬೆಂಗಳೂರ. —ಜೀ. ಭೀಮರಾವ.

(೩ ಪಾನಿನಿಂದ ಒಂದಿದ್ದು)

ಮನಸ್ಸು ನೋಯುವದೆಂಬ ಆತಯದ ನಿಷೇಧ ಪ್ರದರ್ಶನ ನಿರ್ಣಯ ತರುವಾಗ್ಗೆ ಬಹಳ ಮಾದರಿಯ ಭಾಷಣವನ್ನು ಮಾಡಿದರು

ಇದಕ್ಕೆ ಅನುಮೋದನ ಕೊಡುವಾಗ್ಗೆ ಮಿ। ಪ್ರಭು ಎಂಬೊಬ್ಬ ಮುಸಲ್ಮಾನರು ಪಿಜಾಪೂರವು ಕರ್ನಾಟಕವಲ್ಲವೆಂತಲೂ 'ಸದರ್ನ ಮರಾಠಾ' ದೇಶವೆಂತಲೂ ಹೇಳಿದರು. ಸಭಿಕರು ಕೂಡಲೇ ಇದನ್ನು ನಿಷೇಧಿಸಿದರು

ಇವೆಲ್ಲವುಗಳಿಗೆ ಮಿ। ಹುಬ್ಬಳ್ಳಿಕರೂರ ವಾಮನರಾವವರು ಸಮರ್ಪಕವಾದ ಉತ್ತರವನ್ನು ಕೊಟ್ಟರು ಕಡೆಗೆ ಮುಸಲ್ಮಾನರು ಕೊಳ್ಳುವ ಕಾಲಕ್ಕೆ ವಿಶೇಷ ಗಲಾಟೆಯೆದ್ದಿತ್ತು 'ಗಲಾಟೆ' ಬಹಳವಾಗಿರುವದರಿಂದ ಶಾಂತತೆಯು ಭಂಗವಾಗಬಹುದೆಂದು ಹೇಳಿ ನಾಟಕದಲ್ಲಿಯ ನಾಯಕನಂತೆ ನಟನೆ ಮಾಡಿ ಅಧ್ಯಕ್ಷರಾದ ಮಿ॥ ನಾಯಕ ವಕೀಲರು ಹೊರಟು ಹೋದರು

ಮೈಸೂರಿನ ಪತ್ರ

(ನಮ್ಮ ಬಾತ್ಮಿದಾರರಿಂದ)

ಸರ್ ಬ್ಯಾನರ್ಜೀಯವರು

ಎಪ್ರಿಲ ೩೦ ನೆಯ ತಾರೀಖಿನ ದಿವಸ ಸರ್ ಬ್ಯಾನರ್ಜಿಯವರು ಶ್ರೀಮನ್ ಮಹಾರಾಜರಿಗೆ ಚಾರ್ಜನ್ನು ವಹಿಸಿ ದಿವಾನಗಿರಿಯಿಂದ ನಿವೃತ್ತರಾದರು ಈ ತಿಂಗಳು ಮೊದಲನೆಯ ತಾರೀಖಿನ ದಿವಸ ಮಿ॥ ಮಿರಜಾ ಇಸ್ಮಾಯಿಲ್ ಸಾಹೇಬರು ಮಹಾರಾಜರಿಂದ ದಿವಾನಗಿರಿಯನ್ನು ವಹಿಸಿದರು. ಸಂಸ್ಥಾನದ ಭವಿಷ್ಯವನ್ನು ಕುರಿತು ಪ್ರಜೆಗಳು ನಾನಾ ವಿಧವಾಗಿ ತರ್ಕಿಸುತ್ತಿರುವರು

ದಿವಾನರ ಕಛೇರಿಯು ಬೆಂಗಳೂರಿನಿಂದ ಮೈಸೂರಿಗೆ ಬದಲಾಯಿಸಲ್ಪಡುವದೆಂಬ ವರ್ತಮಾನವು ಹುಟ್ಟಿರುವದು

೧೦ ವರುಷಗಳಿಂದಲೂ, ಬಹಳ ಶ್ರದ್ಧೆಯಿಂದ ಮಾತ್ರ ಮುಂದಕ್ಕಿನಿಂದ ಕೆಲಸಮಾಡಿ, ಸಂಸ್ಥಾನದ ಆದಾಯ ವೆಚ್ಚಗಳನ್ನು ಸರಿಪಡಿಸಿ, ತಮ್ಮ ಹೆಸರು ನಿಲ್ಲುವಂತೆ ಮಾಡಿದ ಸರ್ ಬ್ಯಾನರ್ಜಿಯವರ ವಿಷಯದಲ್ಲಿ ಶ್ರೀಮನ್ಮಹಾರಾಜರು ತಮ್ಮ ಮೆಚ್ಚಿಕೆಯನ್ನು ವ್ಯಕ್ತಪಡಿಸಿರುವದಲ್ಲದೆ ಮೇ ಮೊದಲನೇ ತಾರೀಖಿನಿಂದ ನವಂಬರು ಮೊದಲನೇ ತಾರೀಖಿನ ವರೆಗೆ ಪೂರ್ಣ ಸಂಬಳವನ್ನು ನವಂಬರದಿಂದ ವರುಷ ಯಾನ ೫೦೦ ರೂಪಾಯಿಗಳ ವಿಶ್ರಾಂತಿ ವೇತನವನ್ನು ಮಂಜೂರ ಮಾಡಿರುತ್ತಾರೆ ಸರ್ ಬ್ಯಾನರ್ಜಿಯವರಿಗೆ ಔತಣಗಳ ಮೇಲೆ ಔತಣಗಳು ನಡೆಯುತ್ತಿವೆ

ಬಡವರಿಗೆ ಮನೆಗಳು

ಮೈಸೂರ ನಗರದಲ್ಲಿ ಬಡ ಜನಗಳಿಗೆ ವಾಸಕ್ಕೆ ಯೋಗ್ಯವಾದ ಮನೆಗಳಿಲ್ಲದೆ ಅನೇಕ ಸಂಕಟಗಳಿಗೆ ಈಡಾಗುತ್ತಿರುವರು ಇಂಥಾ ಬಡವರಿಗೆ ಮನೆಗಳನ್ನು ಕಟ್ಟಿಸಿಕೊಡಬೇಕೆಂಬ ಯತ್ನವು ತೋರಬಂತೆ ಕಾಣ ಬರುತ್ತದೆ. ನಮ್ಮ ಶ್ರೀಮಾನ್ ಮಹಾರಾಜರೂ ಶ್ರೀಮನ್ಯುವರಾಜರೂ ೩೫೦೦೦ ರೂಪಾಯಿಗಳನ್ನು ಈ ಸತ್ಕಾರ್ಯಕ್ಕೆ ಕೊಟ್ಟಿರುವರೆಂದು ತಿಳಿಸಲು ಆನಂದವೆನಿಸುತ್ತದೆ.

ಸರ್ ಕೆ ಪಿ ಪುಟ್ಟಣ್ಣ ಶೆಟ್ಟರು.

ಸರ್ ಕೆ ಪಿ ಪುಟ್ಟಣ್ಣಶೆಟ್ಟರಿಗೆ 'ಸರ್' ಎಂಬ ಬಿರುದು ದೊರೆತದ್ದಕ್ಕೋಸ್ಕರ ಬೆಂಗಳೂರ ನಗರವಾಸಿಗಳು ಹೋದ ತಿಂಗಳ ೨೪ ನೇಯ ತಾರೀಖಿನಲ್ಲಿ ಒಂದು ದೊಡ್ಡ ಅಭಿನಂದನ ಸಭೆಯನ್ನು ಏರ್ಪಡಿಸಿದ್ದರು ಅದಕ್ಕೆ ಮಾಜಿ ದಿವಾನರಾದ ಸರ್ ಎಂ ವಿಶ್ವೇಶ್ವರಯ್ಯನವರು ಅಧ್ಯಕ್ಷತೆಯನ್ನು ವಹಿಸಿದ್ದರು ಶ್ರೀಮನ್ಮಹಾರಾಜರು ಶ್ರೀಮನ್ಯುವರಾಜರೂ ಶ್ರೀ ಸಿ ಆರ್ ರೆಡ್ಡಿಗಳೂ ಇತರರೂ ತಮ್ಮ ಸಂದೇಶಗಳನ್ನು ಕಳುಹಿಸಿದ್ದರು ಬೆಂಗಳೂರಿನಲ್ಲಿ ಇಂಥ ದೊಡ್ಡ ಮಹೋತ್ಸವವು ನಡೆದದ್ದು ಇದೇ ಮೊದಲನೆಯದೆಂದು ಹೇಳಲು ಅತಿಶಯೋಕ್ತಿಯಾಗಲಾರದು.

ಕೀರ್ತನ ಸಮ್ಮೇಲನ.

ಬಳ್ಳಾರಿಯಲ್ಲಿ ನೆರವೇರಲಿಕ್ಕಿರುವ ಕೀರ್ತನಕಾರರ ಸಮ್ಮೇಳನಕ್ಕೆ ಅರಮನೆ ಮುಜರಾಯಿ ಭಕ್ಷಿಯವರಾದ ರಾಜಸೇವಾ ಭೂಷಣ ಲಿಂಗರಾಜ ಅರಸರವರು ಅಧ್ಯಕ್ಷಸ್ಥಾನವನ್ನು ವಹಿಸಲು ಒಪ್ಪಿಕೊಂಡಿರುವರೆಂತಲೂ ಇವರು ಮೇ ೧೬ನೇಯ ತಾರೀಖಿನ ದಿವಸ ಮೈಸೂರನ್ನು ಬಿಟ್ಟು ಬಳ್ಳಾರಿಗೆ ಪ್ರಯಾಣ ಮಾಡುವರೆಂತಲೂ ತಿಳಿಯಬರುತ್ತದೆ.

ನಂಜನಗೂಡು ಚಾಮರಾಜನಗರದ ರೈಲ್ವೆ

ನಂಜನಗೂಡು ಚಾಮರಾಜನಗರ ರೈಲು ಕೆಲಸವು ಪೂರ್ತಿಯಾಗುತ್ತ ಬಂದಿರುವದು ರೋಡಸಾರ ಮೈಸೂರು ಜಿಲ್ಲಾ ಬೋರ್ಡಿನ ಸದಸ್ಯರುಗಳೆಲ್ಲ ರೈಲು ಕೆಲಸವನ್ನು ನೋಡಿಕೊಂಡು ಬಂದರು ಬರುವ ಜುಲೈ ಮೊದಲನೇಯ ತಾರೀಖಿನಿಂದ ಜನಗಳ ಪ್ರಯಾಣಕ್ಕೆ ರೈಲನ್ನು ಬಿಡುವರೆಂದು ತಿಳಿಯುತ್ತೇನೆ.

ಕಡೂರಿನಿಂದ ಚಿಕ್ಕಮಗಳೂರಿಗೆ ರೈಲು ಹಾಕುವದಕ್ಕೆ ಸರಕಾರದವರು ಮಂಜೂರು ಮಾಡಿರುತ್ತಾರೆ. ಅಳತೆಯು ನಡೆಯುತ್ತಿರುವದು.

ಬರೋಡಾ ಮಹಾರಾಣಿಯವರು

ಬರೋಡಾ ಮಹಾರಾಣಿಯವರು ಮೈಸೂರಿಗೆ ಬಂದು ಅನಂತರ ನಂಜನಗೂಡಿಗೆ ಹೋಗಿ ದೇವರ ದರ್ಶನವನ್ನು ಮಾಡಿಕೊಂಡು, ಉಪರ ಮಂಡಲಕ್ಕೆ ವಾಪಸು ಹೊರಟು ಹೋದರು

ಶ್ರೀಮದ್ಯುವರಾಜರು.

ಶ್ರೀಮದ್ಯುವರಾಜರು ಹೋದತಿಂಗಳು ೨೩ ನೇಯ ತಾರೀಖಿನ ದಿವಸ ಶಿವಮೊಗ್ಗಾದಿಂದ ಬೊಂಬಾಯಿಯ ಮುಖಾಂತರ ಪ್ರಯಾಣ ಮಾಡಿದರು

ಮೈಸೂರು ಮ್ಯುನಿಸಿಪಾಲಿಟಿಯವರು ಹಿಂದೀ ಪ್ರಚಾರಕ ಸಭೆಯವರಿಗೂ, ಅಖಿಲ ಕರ್ನಾಟಕ ವಸ್ತುಪ್ರದರ್ಶನದವರಿಗೂ ಗ್ರಾಂಟುಗಳನ್ನು ಕೊಡಲಾಗುವದಿಲ್ಲವೆಂದು, ಮೇ ಮೊದಲನೆಯ ತಾರೀಖಿನಲ್ಲಿ ನಡೆದ ಮೀಟಿಂಗಿನಲ್ಲಿ ಠರಾವು ಮಾಡಿರುತ್ತಾರೆ.

—ಕೌಲಗಿ ಜೀವಣರಾಯ

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕಲಿಸುವೆವು ಮಾಹಿತೀ ಬಗ್ಗೆ ಬರೆಯಿರಿ

ವಿಳಾಸ:—

ದಿ ಮೋಟರ ಡ್ರಾಯಿವ್ಹಿಂಗ ಇನ್ ಸ್ಟಿಟ್ಯೂಶನ್

ಜಮಖಂಡಿಕರ ನಂ. ೪೬೫ ಶನಿವಾರ ಪುಣೇಶಹರ



ಗುಲಕಂದ. ಗುಲಕಂದ! ಗುಲಕಂದ!!

ನಮ್ಮ ಕಾರಖಾನೆಯಲ್ಲಿ ಹಂಗಾಮಿ ಹೂವುಗಳಿಂದ ಪದ್ಧತಿಶೀರ ಸಿದ್ಧವಾದ ಅತ್ಯುತ್ತಮ

ಮತ್ತು ರುಚಿಕರವಾದ ಗುಲಕಂದವು ನಮ್ಮಲ್ಲಿ ಮಾರಾಟಕ್ಕೆ ದೊರೆಯುತ್ತದೆ

ಅದೇ ಪ್ರಕಾರ ಮೇಲು ಸರದಾರರು ಶಾವರ್ ಜಾತಿ ಸಭೆ ಲಗ್ನ ಸಮಾರಂಭ ಗಳಿಗೆಲ್ಲ

ಬೇಕಾಗುವಂತಹ ಸುವಾಸಿಕ ಹಲವಿಧ ಉತ್ತಮ ಹಾಗೂ ಅಂದವಾದ ಮಾಲೆಗಳೂ ಕುಂಡಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್.

ವಿಳಾಸ:— ಢಾಡಗೆ ಪಾಷಾಣಕರ ಕಂಪನಿ

ಬುಧವಾರ ಪೇಟ ಪುಣೇಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ದುರ್ವಾಸನೆಯು ಹೋಗುವದು. ಹಾಗು ಇವು ಸಾಕಷ್ಟು ಹಲ್ಲುಗಳು ಬಹಳ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಪುಡಿ ಕಿಂ ರೂ ೦-೨-೬, ಅರ್ಧ ಶೇರ ಕಿಂ ರೂ. ೦-೯-೦ ಶೇರ ಕಿಂ ರೂ ೧-೦-೦; ೧೦೦ ಪುಡಿಗಳ ಕಿಂ. ರೂ ೧೬-೦-೦, ಟಪಾ ಖರ್ಚು ಗಿರಾಕಿ ಪ್ರತ್ಯೇಕ.

ಸುಗಂಧಿ ನಶ್ಯ— ಈ ನಶ್ಯವು ಬಹಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ, ನೆಗಡಿ, ಅರ್ಧತಲೆಶೂಲೆ ಮುಂತಾದ ರೋಗಗಳು ಕೂಡಲೆ ಮಾಯವಾಗಿ ತಲೆಯು ಹಗುರವಾಗುವದಲ್ಲದೆ ನಮ್ಮ ವಿಚಾರಶಕ್ತಿಗೆ ಚೇತರಿಕೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ಮಾತ್ರ ೦-೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦. ವಿ ಪೀ ಬೇರೆ.

ಉತ್ತಮ ಬೀಡಿಗಳು— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು ಪುಕ್ಕಟ ಸ್ಯಾಂಪಲ ಮಾಲಿಗೆ ಆರ್ಡರ ಕೊಡಬಹುದು. ಇವರ ಹೊರತು ನಮ್ಮಲ್ಲಿಯು ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದರಾಲಿ ನೋಡಿ ಖರೀದಿ ಮಾಡಿ ಕಳಿಸುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ— ಎಸ್. ಬಿ ಕದಂ, ಬೀಡಿ ಮತ್ತು ತಂಬಾಕು ಜರ್ದಾ ದುಕಾನ. ಮು. ಪೋ. ನಿಪ್ಪಾಣಿ, ಜಿ. ಬೆಳಗಾವ.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತೀಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮಧ್ವ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಛಾಪಿಸಿ ಸಿದ್ಧವಿರುವವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣ ಯುಕ್ತ ೩೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

ಜಾಹೀರಾತಿನ ಸಲುವಾಗಿ.

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ.

ಇವರು ಮೇ ೧ ನೇ ವಾರದಿಂದ ಪುಣಾಸೂರಿನಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟು ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ ಎಸ್ ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಷರ್ತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂಯತು:—

(೧) ಬಾಂಡ ನಂ. ೫೭೦೭ ಮಿ. ಎತ್ತಲ ಚಿಮ್ಮಾಜಿ ಸೇಟ ಕಲಾನ್ ಅಲಿಬಾಗ ಜಾಂಬೆ,

(೨) ಬಾಂಡ ನಂ. ೧೩೭೦೭ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕುರು.)

(೩) ಬಾಂಡ ನಂ. ೧೪೯೪೭ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಹಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ|| ಜಿ. ವೆಂಕಟಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ|| ರಾಮಚಂದ್ರ ವಾಮನ ಕಾಂಕರ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೯೦ ಮಿ|| ಆರ್. ಎಚ್. ನಾಟೆಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಪೋರವಾಲ ಬ್ಲ್ಯಾಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ - ೫ ಆಣೆ ಟ. ಖ ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಆ್ಯಂಡ ಕೊ.(ರಜಿಸ್ಟರ್ಡ) ಪುಣೇಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ ಖ. ಪ್ರತ್ಯೇಕ

ಟಿಪ್ಪಣಿ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ಸರಿ ಹಚ್ಚಿ ಕಳಿಸವೆವು

ಲಿಬರೋ ವಾಚ ಕಂ. (India) ಮುಂಬೈ ನಂ. ೪

ಕಾನಡಾಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡಬಿಚ್ಛಿಸುವವರು ಈ ವಾರಪತ್ರಿಕೆಯನ್ನು ಪೇರದಾಯ ಓದಬೇಕು.

ವಾರ್ಷಿಕ ಚಂದಾ ೩-೧೩-೦ ಪತ್ತೆ:—

ಸಂಪಾದಕ ಕಾನಡಾಧುರಿಣ- ಕುಮಟಾ, ಜಿ ಉತ್ತರ ಕನ್ನಡ

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಲಾ ವಿಜಾಪೂರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೇ ಬಂಧುಗಳು
ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕನ್ನಡಿಗರ ಬಗ್ಗೆ ಸ್ಪೆಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ಜ ಹೆಚ್ಚಿಗೆ… ದ ಕಾರಣ ವಂದ್ಯಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಒಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇದೀ ಬ್ರಿಟಿಷ ಹಿಂದುಸ್ತಾನದ ಸರಕಾರಿ ಲಾಯಸನ್ಸನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ …ತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದು ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:— ದಿ ಬಾಂಬೆ … ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೯೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕೆಲಸವನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ಶೀಘ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು. ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸ ಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ್ ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಕರಾರು ಗಂಟೆಯನ್ನು ತೋರಿಸುತ್ತದೆ. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು. ಕ್ರಯ ಒಂದಕ್ಕೆ ರೂ 7 2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದ್ದು, ಇದಕ್ಕೆ ಒಂದಾವರ್ತಿ ಇಂಕಿಯನ್ನು ತುಂಬಿದರೆ ಸುಮಾರು 1000 ಪದಗಳ ವರೆಗೂ ಬರೆಯಬಹುದು. 14 ಕ್ಯಾರೆಟ್ಟ ಬಂಗಾರದ ಮುಳ್ಳು ಇರುವುದು. ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಜ ಸೆಂಟ ಬಾಟಲ್ ಇನಾಮಾಗಿ ಕೊಡುವೆವು. ಕ್ರಯ ಪೇನಾ 1ಕ್ಕೆ 2-0 0

ವಿಳಾಸ:— ಎಸ್. ಪಾಲ್ ಅಂಡ್ ಕೋ,
ಪಿ. ಬಿ. ನಂಬರ್. 542,
ವಾಶಿಂಗಟನ್ ಮದ್ರಾಸು.

ಸಾಧ್ವೀ ಮತ್ತು ಸಂಪದಭ್ಯುದಯ

ಶ್ರೇಷ್ಠವಾದ ಕನ್ನಡದ ಪತ್ರಿಕೆ ಮತ್ತು … ಪತ್ರಿಕೆ.

ಈ ಪತ್ರಿಕೆಗಳು ಬಹು ದಿನಗಳಿಂದ … ಮೈಸೂರಿನಲ್ಲಿ ಪ್ರಕಟವಾಗುತ್ತಲಿರುವವು. ಇವುಗಳಲ್ಲಿ ಶಾಸ್ತ್ರೀಯ, ರಾಜಕೀಯ, ಸಾಂಪತ್ತಿಕ, ಕೃಷಿ, ವ್ಯಾಪಾರ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ … ಪ್ರತಿಪಾದಿಸಲ್ಪಡುವವು. ಸಾಧ್ವೀ … ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೨-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೮-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೧೦-೦-೦ ತಿಂಗಳಿಗೆ ೧-೧೦-೦ ಇಸ್ತೆಹಾರಾತಿನ ದರವನ್ನು ಅಥವಾ ಮಾದರಿ ಸಂಚಿಕೆಯನ್ನು ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟಕೃಷ್ಣಯ್ಯ, ಮ್ಯಾನೇಜರ
ಸಾಧ್ವೀ ಮತ್ತು ಸಂಪದಭ್ಯುದಯ, ಮೈಸೂರು.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to—
N. K. Kulkarni. Agent Bagalkot.

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೩-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.





The Cheapest House.

For quick. Economical and satisfactory service, please go for the welknown Chevrolet cars, Trucks products in the Decccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the wellknown Michelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specalist to give satisfactory work,

6 For Building Motor bodies of Various types by workers on uptodate line.

7 For all kinds of Motor repairs,

Aply to:-

Messrs Royal motor service

Automobile Engineers

Bagalkot.

Sub dealers in

Chevrolet cars

for the Bijapur Dist

ಅಲಭ್ಯ ಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕುಗಳನ್ನು ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ,

೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೋಲೆಟ ಡಾಜ, ಫೋರ್ಡ, ಓವ್ಹರಲ್ಯಾಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವ ಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟ್ಯೂಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟ್ಯೂಬುಗಳು ಖರೀದಿಗಾಗಿ,

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟ್ಯೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೋಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರ ಸರ್ವೀಸ.

ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ

ಮೋಟಾರುಗಳಿಗೆ ಸಬ ಏಜಂಟರು.

ರ. ನಂ. ಬಿ ೧೯೪೭ ವಾ. ಚಂದಾ ೧—೧೨—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ । — ಮನು

ಸಂಪಾದಕರು—ಮಂಗಳವೇಢೆ ರಾಜೇಶ್ವರರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಶುದ್ಧ ೧೦ ಶಕೆ ೧೮೪೯ ತಾ|| ೨೧-೫-೧೯೨೭. | ಸಂಚಿಕೆ ೯

ಸಂಪಾದಕರ ಭೂಮಿ

ನನ್ನ ಮನಸಿನ ಮೋಹಪಾಶ ಕಟ್ಟುವೆನಾನು ।
ನಿನ್ನ ಬೆಳವಣಿಗೆ ಮಾಡಿದಂಥ ಮಕ್ಕಳ ದೊರೆ ।
ಚಿನ್ನದಾದರು ಚಿನ್ನ ಮೋಹಬಸ್ತಿಯು ನೊಂದು ಚಿನ್ನಯೂರ ಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೊ ॥

—ಅಂಬಿಕಾ ತನಯ ದತ್ತ

ಮಹಾರಾಷ್ಟ್ರ ಸಾಹಿತ್ಯ ಪರಿಷತ್ತು ಮೊನ್ನೆ ಮೊನ್ನೆ ಮುಂಬಯಿಯಲ್ಲಿ ಶ್ರೀ ನರಸಿಂಹ ಚಿ ಕೇಳಕರ ಇವರ ಅಧ್ಯಕ್ಷತೆಯಲ್ಲಿ ಜರುಗಿತು. ಮಹಾರಾಷ್ಟ್ರ ಭಾಷೆಯಲ್ಲಿ ಈಗ ಪ್ರಕಟವಾಗುತ್ತಲಿರುವ ಪುಸ್ತಕಗಳು ತೃಪ್ತಿಕರವಾಗಿರುವದಿಲ್ಲವೆಂದು ಸತ್ಕಾರ ಮಂಡಲದ ಅಧ್ಯಕ್ಷರು ನುಡಿದರು. ಅಧ್ಯಕ್ಷರಾದರೂ ಈಗಿನ ಭಾಷೆಯಲ್ಲಿ ವೈಚಿತ್ರ್ಯವಿಲ್ಲ; ನೀತಿಯು ಎಳೆಸಿರುವದಿಲ್ಲ ಎಂದು ನುಡಿದರು ಇದರ ಮೇಲಿಂದ ನೋಡಲು, ಕೇವಲ ಪುಸ್ತಕಗಳ ಸಂಖ್ಯೆಯ ಮೇಲಿಂದ ಸಾಹಿತ್ಯದ ಅಭಿವೃದ್ಧಿಯನ್ನು ಎಣಿಸುವದು ತಪ್ಪಾಗುವದು. ಸಾಹಿತ್ಯವು ಭಾಷೆಯ ಜೀವನದ ಸಫಲತೆಯನ್ನು ಮಾಡಿಕೊಳ್ಳುವ ಒಂದು ಸಾಧನವು. ಸಾಹಿತ್ಯದಂತೆ ಜೀವನಕ್ಕೆ ಸರಿಯಾದ ಮಾರ್ಗವು ದೊರೆಯಬೇಕು. ಮನುಷ್ಯನ ಜೀವನವು ನೀತಿ ಮಯವಾಗಬೇಕು. ಆತ್ಮನ ಉನ್ನತಿಗೆ ಅದು ಸಹಾಯವಾಗಬೇಕು. ಇಲ್ಲವಿದ್ದರೆ ಅದು ಮನುಷ್ಯನ ಕೇಳಾಟಕ್ಕೆ ಎಡೆಗೊಡುವದು. ಅದರಿಂದ ಸಮಾಜಕ್ಕೆ ಹಾನಿ ತಟ್ಟುವದು. ಮಹಾರಾಷ್ಟ್ರದ ಸಾಹಿತ್ಯವು ಬಹಳ ಬೆಳೆದಿದೆ ಎಂಬುವವರು ಎಚ್ಚರಿರಬೇಕು. ಕಸ ತಿನ್ನುವದಕಿಂತ ತುಸು ತಿನ್ನುವದು ಲೇಸು. ಅನೀತಿಕರವಾದ ವಾಙ್ಮಯವನ್ನೆಲ್ಲ ಕಿತ್ತು ಹಾಕಿ ಸಾಹಿತ್ಯದ ಉತ್ಕರ್ಷ ಮಾಡಬೇಕೆಂದು ಅಧ್ಯಕ್ಷರು ಹೇಳಿದ್ದು ಸಮಂಜಸವು. ನಮ್ಮಲ್ಲಿಯಾದರೂ ಅಲ್ಲಲ್ಲಿ ಪುಸ್ತಕಗಳು ಪ್ರಕಟಿತವಾಗುತ್ತಲಿವೆ. ವಿಮರ್ಶಕಾರರು ಗ್ರಂಥಗಳನ್ನು ಚೆನ್ನಾಗಿ ಪರಿಶೀಲಿಸಿ, ಯೋಗ್ಯವಾದವುಗಳನ್ನಷ್ಟೇ ಜನರ ಮುಂದೆ ಇಡಲು ಯತ್ನಿಸಬೇಕು ಇದರಿಂದ ಸಾಹಿತ್ಯಲೋಕಕ್ಕೆ ಉಪಕಾರವಾಗುವದು.

ವೃತ್ತಪತ್ರಗಳಲ್ಲಿಯ ಭಾಷೆಯು ಸರಳವಾಗಿಯೂ, ಶುದ್ಧವಾಗಿಯೂ ಇರುವದು ಅತ್ಯಾವಶ್ಯಕವು. ವೃತ್ತಪತ್ರಗಳ ಲ್ಲಿಯ ವಿವೇಚನವು ಸುಬೋಧವಾಗಿರಬೇಕು ಅನ್ಯ ದೇಶೀಯ ಶಬ್ದಗಳ ಸುರಿಮಳೆಯು ಇರಕೂಡದು. ಮೈಸೂರ ಸಾಧ್ವಿ ಪತ್ರಿಕೆಯು ಬಹಳ ದಿವಸಗಳಿಂದ ಜನ ಸೇವೆಯನ್ನು ಮಾಡುತ್ತಿರುತ್ತದೆ. ಅದಕ್ಕಾಗಿ ನಾವು ಆ ಪತ್ರಿಕೆಗೆ ಋಣಿಯಾಗಿದ್ದೇವೆ. ಆದರೆ ಅದರಲ್ಲಿಯ ಶೈಲಿಯು ಕ್ಲಿಷ್ಟವಾಗಿಯೂ ದುರ್ಗಮವಾಗಿಯೂ ಇರುತ್ತದೆಂಬುದಕ್ಕೆ ಖೇದ ಪಡುತ್ತೇವೆ. ನಮ್ಮ ವಿಧಾನಗಳ ಸ್ಪಷ್ಟೀಕರಣಕ್ಕಾಗಿ ಒಂದೆರಡು ಅವತರಣಿಕೆಗಳನ್ನು ಕೊಡುವೆವು. "ಅಜಾತ ಶತ್ರುಗಳಾದ ಪುಟ್ಟಣ್ಣ ಶೆಟ್ಟರವರು ಬ್ರಾಹ್ಮಣೇತರರ ಲೀಡರುಗಳೆಂಬುದಾಗಿ ಹೇಳಿದರೆ ಸ್ಟಾರ್ ಪತ್ರಿಕಾ ಕರ್ತರೂ, ಅವರು ಬ್ರಾಹ್ಮಣೇತರರ ಲೀಡರುಗಳಲ್ಲವೆಂಬುದಾಗಿಯೂ, ಬ್ರಾಹ್ಮಣೇತರರು ಲೀಡರೆಂಬುದಾಗಿ ಸರ್ ವಿಶ್ವೇಶ್ವರಯ್ಯನವರು ಹೇಳಿದ್ದು ಕೇವಿಗಹನ ವೆಂಬುದಾಗಿಯೂ, ಬ್ರಾಹ್ಮಣೇತರರ ಕ್ಷೇಮಕ್ಕೆ ಹೀಗೆ ಹೇಳಿದ್ದು ಪ್ರತಿಕೂಲವೆಂಬುದಾಗಿಯೂ, ಡಾ|| ಟಿ. ಎಂ. ನಾಯರವರು, ಸರ್ ಪಿ. ತ್ಯಾಗರಾಜ ಸೆಟ್ಟರವರು, ಮ|| ಒಸಯ್ಯನವರೂ ಬ್ರಾಹ್ಮಣೇತರರ ಲೀಡರುಗಳಾಗಿರುವದಕ್ಕೆ ಅರ್ಹರಾಗಿದ್ದರೆಂಬುದಾಗಿಯೂ, ಸರ್ ಪುಟ್ಟಣ್ಣ ಶೆಟ್ಟರವರು ಲೀಡರಾಗುವದಕ್ಕೆ ಎಂದಿಗೂ ಅರ್ಹರಲ್ಲವೆಂಬುದಾಗಿಯೂ, ಅವರು ಲೀಡರುಗಳೆಂದು ಉಪನ್ಯಾಸ ಹೇಳಿದ್ದು ತಪ್ಪೆಂಬುದಾಗಿಯೂ, ಬ್ರಾಹ್ಮಣೇತರರಿಗೆ ನಿಜವಾದ ಲೀಡರುಗಳು ರಾವ್ ಸಾಹೇಬ ಚನ್ನಯ್ಯನವರು ಮೆ|| ಮಹಮದ್ ಅಬ್ಬಾಸಖಾನರವರೂ ಮೆ|| ಜಿ ಪರಮಶಿವಯ್ಯನವರೂ ಇರುವರೆಂಬುದಾಗಿಯೂ, ಅವರೊಡನೆ ಹೋಲಿಸಲ್ಪಡುವದಕ್ಕೆ ಸರ್ ಪುಟ್ಟಣ್ಣಶೆಟ್ಟರವರು ಎಂದಿಗೂ ಅರ್ಹರಲ್ಲವೆಂಬುದಾಗಿಯೂ ಸ್ಟಾರ್ ಪತ್ರಿಕಾ ಕರ್ತರು ಬರೆದು ಕೊಂಡಿರುವರು" ಹನುಮಂತನ ಬಾಲದಂತೆ ಬೆಳೆಯುತ್ತ ನಡೆದ ಮೇಲಣ ವಾಕ್ಯದ ಅರ್ಥವನ್ನು ತಿಳಿದು ಕೊಳ್ಳಲು ತಾಳ್ಮೆಯುಳ್ಳವನೇ ಬೇಕಾಗುವನು. ಇಂತಹ ಉದ್ದುದ್ದ ವಾಕ್ಯಗಳನ್ನು ಬರೆಯುವದರಿಂದ ಏನೂ ಪ್ರಯೋಜನವಾಗಲಾರದೆಂದು ನಮ್ಮ ಮತ. ಮೇಲಿನ ವಾಕ್ಯವು ಇದೇ ತಿಂಗಳ ೭ ನೇ ತಾರೀಖಿನ "ಶ್ರೀಮನ್ಮಹಾರಾಜರವರ ಮೆಚ್ಚಿಕೆ"ಎಂಬ ಅಗ್ರಲೇಖದಿಂದ ಉದ್ಧೃತವಾಗಿದೆ. "ಸರ್ ಪುಟ್ಟಣ್ಣ ಶೆಟ್ಟರವರಿಗೆ ಕಳೆದ ತಿಂಗಳು ೨೪ ನೇ ತಾ|| ನಲ್ಲಿ ಬೆಂಗಳೂರಿನ ಲಾಲ್ ಬಾಗಿನಲ್ಲಿ ಒಂದು **ಎಂಟರ್ ಟೇನ್ ಮೆಂಟು** ಕೊಡಲ್ಪಟ್ಟಿತು. ಅಲ್ಲಿ ಅವರಿಗೆ ಒಂದು **ಅಡ್ರೆಸ್ಸು** ಒಪ್ಪಿಸಲ್ಪಟ್ಟಿತು" ಇದಾದರೂ ಅದೇ ಸಂಚಿಕೆಯಿಂದ ಉದ್ಧೃತವಾಗಿದೆ. ಹೀಗೆ ವಿಚಾರವಿಲ್ಲದೆ ಅನ್ಯ ದೇಶೀಯ ಶಬ್ದಗಳನ್ನು ಪ್ರಯೋಗಿಸಿದರೆ, ಭಾಷೆಯ ಗತಿಯೇನಾಗಬೇಕು." ಅದರಲ್ಲಿಯ ಸೌಂದರ್ಯ ಸತ್ವ ಮೊದಲಾದವುಗಳು ನಷ್ಟವಾಗಿ ಹೋಗುವವು. ಮೈಸೂರ ಪ್ರಾಂತದ

ರು ಆಂಗ್ಲ ಭಾಷೆಯ ಶಬ್ದಗಳನ್ನು ಹೇರಳವಾಗಿ ಉಪಯೋಗಿಸುತ್ತಾರೆ. ಹೀಗೆ ಮಾಡುವದರಿಂದ ನಾಡಿನ ನುಡಿಗೆ ಹೇಳಕೂಡದಷ್ಟು ಹಾನಿ ತಟ್ಟುತ್ತದೆ. ಆದ್ದರಿಂದ ಇನ್ನು ಮೇಲೆ ವೃತ್ತ ಪತ್ರಕಾರರು ಶಕ್ಯ ಇದ್ದಷ್ಟು ತಿಳಿಗನ್ನಡದ ಶಬ್ದಗಳನ್ನು ಉಪಯೋಗಿಸಬೇಕು. ನಿರುಪಾಯವಾದಾಗ ಮಾತ್ರ ಅನ್ಯ ದೇಶೀಯ ಶಬ್ದಗಳನ್ನು ಉಪಯೋಗಿಸಬಹುದು ಪ್ರಯತ್ನ ಮಾಡುತ್ತ ಹೋದರೆ ಯಾವದು ತಾನೇ ಅಸಾಧ್ಯ! ಕೆಲವು ದಿನಗಳಲ್ಲಿಯೇ ಭಾಷೆಯು ಬೆಡಗಿನಿಂದ ಒಪ್ಪ ತೊಡಗುವದು.

ತಾಯಿ ತಂದೆಯು ಬಂದರಲ್ಲದ ಪರಶಿವನ ಪರಮ
ಪ್ರಸಾದ ಉಂಡು । ಸಾಯು ಗೊಲ್ಲುತ್ತ ಬಂದಿರಿ ಸಂ-
ದಿಕೇಶ್ವರರೆ ಜಗದಿ ಕಹಿಯನ್ನು ಕಂಡು ॥೧॥ ಕೈಲಾ
ಗದೀ ಜಗದ ಜನರು ಅರಡಿಗೊಂಡು ನಿಮ್ಮ ಡಾರ್ಲೈ
ಸುವಾಗ್ಗೆ । ಕೈಬಾಸವನ್ನೆ ಇಳಿಗಿಳಿಸಿ ಅರಡಿಯಿಟ್ಟು
ಒಂದಿರಾರ್ಯೈಸಲಾಗ್ಗೆ ॥೨॥ ಚಿಕ್ಕಂದಿನಿಂದ ಜಂಗಕ್ಕೆ
ಮೆಚ್ಚಿದವಗೇ ಪೂಸಲಿನ ವಚನವ್ವಣಿಸಿ । ಅಕ್ಕರದಿ
ಜಗದಂಗವನ್ನು ಶಿವಲಿಂಗದಲ್ಲಿರಿಸಿ ಜಂಗಮವ ಕಣಿ
ಸಿ ॥೩॥ 'ತಿಳಿವೆ' ಎಂಬಳಿಯ ತಿರುಳಲ್ಲಿರುವ ತಿಳಿವ
ನ್ನು ತಿಳಿದು ನಿಮಗಂಗವೆಲ್ಲಿ? । 'ಉಳಿವೆ' ಎಂದುಳಿ
ವೆ ಗೈತಂದು ಉಳಿದಿರಿ ನೀವು ಪರಮಾತ್ಮ ಲಿಂಗದಲ್ಲಿ॥೪॥

ಮೇಲಣ ಸವಿಯಾದ ಹಾಡನ್ನು ಒಂದು ಕನ್ನಡದ ಕೋಗಿಲೆಯು ಹಾಡಿದೆ. ಅದರಲ್ಲಿ ಶ್ರೀ ಬಸವೇಶ್ವರನ ಎಲ್ಲ ಚರಿತ್ರವು ಒಟ್ಟಾಗಿದೆ. ಬಸವಜಯಂತಿಯ ಪ್ರಸಂಗದಲ್ಲಿ ಇಂತಹ ಆತ್ಮವಿಕಾಸನಘೋಷಕವಾದ ಹಾಡುಗಳನ್ನು ನೆನೆಯುವದು ಸಹಜವಾದುದು. ಮೊನ್ನೆ ೧೩ನೇ ತಾರೀಖಿನ ದಿನ ವಿಜಾಪುರದಲ್ಲಿ ಬಸವಜಯಂತಿಯು ಉತ್ಸವದಿಂದ ನೆರವೇರಿತು. ಅದರಲ್ಲಿ ಸುಶಿಕ್ಷಿತವರ್ಗದವರಗಿಂತಲೂ ಅಶಿಕ್ಷಿತ ವರ್ಗವೇ ಹೆಚ್ಚಾಗಿ ಕಾಣಬರುತಲಿದ್ದಿತು. ಇದೊಂದು ಸುಚಿನ್ಹವು ಜನಸಾಮಾನ್ಯಕ್ಕೆ ಬಸವೇಶನು ಪ್ರಿಯನು. ಅವನು ಸಮಾಜ ಸುಧಾರಕನೂ ನೀತಿವಿಶಾರದನೂ ಸಚ್ಚರಿತ್ರನೂ ಆಗಿದ್ದನು. ರಾಜಕೀಯ ದೃಷ್ಟಿಯಿಂದಲೂ ಸಾಮಾಜಿಕ ದೃಷ್ಟಿಯಿಂದಲೂ, ಧಾರ್ಮಿಕ ದೃಷ್ಟಿಯಿಂದಲೂ ಅವನಿಗೆ ಮಹತ್ವವಿರುವಂತೆ, ಸಾಹಿತ್ಯದೃಷ್ಟಿಯಿಂದಲೂ ಅವನಿಗಿರುವದು. ಅವನ ವಚನಗಳು ಕನ್ನಡ ನುಡಿಗ ಅಲಂಕಾರಗಳಾಗಿವೆ. ಅವನ ವಚನಗಳನ್ನು ಚನ್ನಾಗಿ ಪರಿಶೀಲಿಸಿದರೆ, ಎಲ್ಲ ಜಾತಿಗಳಲ್ಲಿ ಐಕ್ಯವನ್ನುಂಟುಮಾಡಲು ಅವನೆಷ್ಟು ಶ್ರಮಪಟ್ಟನೆಂಬುದು ಗೊತ್ತಾಗುವದು ಅವನು ಸಾಮಾನ್ಯ ಮನುಷ್ಯನಲ್ಲ. ಅವನಿಗೆ ಜಾತಿ ನಿರ್ಬಂಧಗಳ ಕಟ್ಟಿಲ್ಲ. ಅವನು ಕಾಲಾದ್ಯನವಚ್ಛಿನ್ನನು. ಅವನು ರಾಷ್ಟ್ರವಿಭೂತಿಯು; ಅವನು ಪರಮೇಶ್ವರನು.

ಆದ್ದರಿಂದಲೇ ಮತ್ತೊಂದು ಪರಿಗೋಗಿಲೆಯು —
ಎಲ್ಲಿರುವಿ ಬಾ ಬಸವ ನೆಲ್ಲನೆದೆಮುಗುಳನ್ನು ಮಾಡೊ
ಡನೆ ಅರಳುವಂತೆ । ಸಲ್ಲಿಸುವೆ ಪೂಜೆ ಇನು ನಿಲ್ಲಿಸುವೆ
ಎಷ್ಟೊತ್ತು — ಪೂಜಾರಿಯಂತೆ ನಿಂತೆ ॥೧॥ ಪಂಚ
ಪರಣಂಗಳೀ ಪಂಚಾರತಿಯ ಗೂಳ್ಳಿ — ನನಗೇನು
ನಶ್ವರನಿಗೆ । ಪಂಚಭೂತದ ಕಾಯ ಪಂಚಕಜ್ಜಾಯ
ನಿನ್ನಂಥ ಪರಮೇಶ್ವರನಿಗೆ ॥೨॥

ಎಂದು ಹಾಡಿ ನಮಗೆಲ್ಲ ದಾರಿಯನ್ನು ತೋರಿಸುತಿದೆ, ಬನ್ನಿರಿ. ನಾವೆಲ್ಲರೂ ಅಳಿಮನವನ್ನು ದೂಡಿ, ಕಲಹಗಳನ್ನು ಸುಟ್ಟು, ಪಂಚಭೂತಾತ್ಮಕ ದೇಹವನ್ನು ಸಮಾಜ ಸೇವೆಗಾಗಿ ಸೀಣಿಸಾ!

ಮುಂಬಯಿ ವಿಶ್ವವಿದ್ಯಾಲಯದ ಪುಸ್ತಕಾಲಯದಲ್ಲಿ ಎಷ್ಟೋ ದಿವಸಗಳವರೆಗೆ ಕನ್ನಡ ಪುಸ್ತಕಗಳು ಓದಲು ಸಿಕ್ಕುತ್ತಿದ್ದಿಲ್ಲ. ಇದರಿಂದ ಕನ್ನಡಿಗರಿಗೆ ಬಹಳ ತೊಂದರೆಯಾಗುತಲಿದ್ದಿತು ಮುಂಬಯಿಯಲ್ಲಿಯ ಕಲವು ಕನ್ನಡಿಗರು ಕೂಡಿ ವಿಶ್ವವಿದ್ಯಾಲಯದ ಅಧಿಕಾರಿಗಳಿಗೆ ತಮ್ಮ ಕೊರತೆಗಳನ್ನು ದೂರಮಾಡಲು ಕೇಳಿಕೊಂಡರು. ಅಧಿಕಾರಿಗಳು ಅವರ ಬಿನ್ನಹವನ್ನು ಯೋಗ್ಯರೀತಿಯಿಂದ ಮನ್ನಿಸಿ, ೫೦೦ ರೂಪಾಯಿ ಬೆಲೆ ಬಾಳುವ ಕನ್ನಡ ಪುಸ್ತಕಗಳನ್ನು ತರಿಸಿಟ್ಟಿದ್ದಾರೆ ಕನ್ನಡವನ್ನು ಐಚ್ಛಿಕ ವಿಷಯವಾಗಿ ತೆಗೆದುಕೊಂಡ, ಬಿ. ಎ. ಮತ್ತು ಎಮ್. ಎ. ಪರೀಕ್ಷೆಗಳಿಗೆ ಕೂಡುವವರಿಗೆ ಬಹಳೆ ಅನುಕೂಲವಾಗಿರುವದು. ಉಳಿದ ಕನ್ನಡಿಗರಿಗಾದರೂ ಈ ಪುಸ್ತಕಗಳಿಂದ ಉಪಯೋಗ ವಾಗುವದು. ಮನವೊಂದು ಸ್ಥಿರವಿದ್ದರೆ, ಎಲ್ಲ ಕೆಲಸಗಳು ಸಾಧ್ಯವಾಗುವವು. ಮುಂಬಯಿ ವಿಶ್ವವಿದ್ಯಾಲಯದ ಪುಸ್ತಕಾಲಯದಲ್ಲಿ ಕನ್ನಡ ಪುಸ್ತಕಗಳಿಗೆ ಸ್ಥಾನಸಿಗಬಹುದೆಂದು ಕನ್ನಡಿಗರ ಕನಸು ಮನಸುಗಳಲ್ಲಿಯೂ ಕೂಡ ಇದ್ದಿಲ್ಲ. ಕನ್ನಡಿಗರು ತಮ್ಮ ನುಡಿಯ ಏಳ್ಗೆಯನ್ನು ಎಣಿಸಿ, ಕರ್ತವ್ಯಪರಾಙ್ಮುಖರಾಗದೆ ದೀರ್ಘ ಪ್ರಯತ್ನ ಮಾಡಿದರೆ ಎಲ್ಲೆಡೆಯಲ್ಲಿಯೂ ಅವರ ಮುಖವು ಮೇಲಾಗುವದು. ಇರಲಿ ಮುಂಬಯಿ ವಿಶ್ವವಿದ್ಯಾಲಯದಲ್ಲಿಯ ಕನ್ನಡ ಪುಸ್ತಕಗಳ ಉಪಯೋಗವನ್ನು ಕನ್ನಡಾಭಿಮಾನಿಗಳು ಚೆನ್ನಾಗಿ ಮಾಡಿಕೊಂಡು ಅಲ್ಲಿಯ ಕನ್ನಡದ ಗ್ರಂಥಭಾಂಡಾರವು ಭರದಿಂದ ಹೆಚ್ಚುವಂತೆ ಮಾಡಬೇಕು.

ಬ್ರಾಹ್ಮಣ ಬ್ರಾಹ್ಮಣೇತರವಾದದ ವಿಷಯಕ್ಕೆ ಬರೆಯಲು ನಮ್ಮ ಇಚ್ಛೆಯಿಲ್ಲ ಬ್ರಾಹ್ಮಣಬ್ರಾಹ್ಮಣೇತರರ ಐಕ್ಯದಿಂದಲೇ ಕರ್ನಾಟಕದ ಅಭಿವೃದ್ಧಿಯಾಗುವದು. ಬ್ರಾಹ್ಮಣ ಬ್ರಾಹ್ಮಣೇತರರಲ್ಲಿಯ ವೈಮನಸ್ಯವು ಅಳಿಯುತೆಂದರೆ ಎಲ್ಲರಿಗೂ ಕಲ್ಯಾಣವಾಗುವದು. ಆದುದರಿಂದ ಒಬ್ಬರೊಬ್ಬರ ದೋಷಗಳನ್ನು ಎಣಿಸದೆ ಗುಣೈಕಪಕ್ಷಪಾತಿಗಳಾಗಿ, ಬ್ರಾಹ್ಮಣ ಬ್ರಾಹ್ಮಣೇತರರು ಹೆಗಲಿಗೆಹಗಲು ಹಚ್ಚಿ ದುಡಿಯಬೇಕು. ಕರ್ನಾಟಕ ಟಾಯಿಮ್ಸ ಪತ್ರಕಾರರು ಬ್ರಾಹ್ಮಣರ ವಿಷಯದಲ್ಲಿ ಅವಿಶ್ವಾಸವನ್ನು ತೋರಿಸಿದ್ದಾರೆ. ಸರಕಾರದವರಿಗೆ ಬ್ರಾಹ್ಮಣರೇನು ಜೋಜ್ಜಲ ಮಕ್ಕಳಲ್ಲ ಬ್ರಾಹ್ಮಣೇತರರೂ ಬ್ರಾಹ್ಮಣರೂ ಅವರಿಗೆ ಅಷ್ಟೇ ಬ್ರಾಹ್ಮಣರೆ ಎಲ್ಲ ನೌಕರಿಗಳನ್ನು ಸೆಳೆದು ಕೊಂಡಿರುವರೆಂಬುವ ತೀರತಪ್ಪಾದುದು ಏನೊ ಅವರಿಗೆ ದೈವವಶದಿಂದ ದೊರೆತಿರುವವು ಸೆಳೆದು ಕೊಳ್ಳಲು ಅವರಿಗೆ ಅಧಿಕಾರವೇನಿದೆ? ಕೊಡವುದು, ಬಿಡುವುದು ಸರಕಾರದ ಇಷ್ಟ. ಇಷ್ಟು ದಿವಸ ಬ್ರಾಹ್ಮಣರು ಅನುಭವಿಸಿದ್ದಾಯಿತು; ಇನ್ನು ಮೇಲೆ ಬ್ರಾಹ್ಮಣೇತರರು ಅನುಭವಿಸುವರು ಜಗತ್ತಿನ ವ್ಯವಹಾರವು ಚಕ್ರನೇಮಿ ಕ್ರಮೇಣ ನಡೆಯುವದು. ಇದರಲ್ಲಿ ಯಾರ ದೋಷವೂ ಇಲ್ಲವೆಂದು ನಮ್ಮ ನಂಬುಗೆ. ಬ್ರಾಹ್ಮಣ ಬ್ರಾಹ್ಮಣೇತರರು ಒಬ್ಬ ಆಂಗ್ಲ ಕವಿಯು ಹೇಳಿದಂತೆ,

O God ! that men woulp see a little
clearer,
or judge less harshly when they
cannot see;
O God ! that men would draw a little
nearer,
To one another they would be nearer
Thee,
And understood·

ಪರಸ್ಪರರನ್ನು ಚನ್ನಾಗಿ ತಿಳಿದುಕೊಂಡು, ಪರಸ್ಪರರ ವಿಷಯದಲ್ಲಿಯ ಕಠೋರ ಭಾವವನ್ನಳಿದು ಒಬ್ಬರೊಬ್ಬರ ಸಮೀಪಕ್ಕೆ ಬರಲು ಯತ್ನಿಸಬೇಕು. ಮುಕ್ರೊಬ್ಬ ಕವಿಯು ಹೇಳಿದಂತೆ

"And we will meet amid-ships in this
stout old earthly craft,
And then won't be any friction, twixt the
classes fore'n"-aft
We'll be brothers fore'n'-aft
We'll be sisters fore'n'-aft
When the people work together and then
ain't no fore'n'-aft

ಅವರಿಬ್ಬರೂ ಸಂಸಾರದ ಹಡಗಿನಲ್ಲಿ ಕುಳಿತು ಕೊಂಡು, ಅಣ್ಣ ತಮ್ಮಂದಿರಾಗಿ ಅಕ್ಕತಂಗೆಂದಿರಾಗಿ ನಡೆಯಬೇಕು. ಅಂದರೆ ಜಗಳ ತೋಟಗಳೆಲ್ಲ ಇಲ್ಲದಂತಾಗುವವು.

ಬಳ್ಳಾರಿಯ ಸಮಾಚಾರ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಕಳೆದವಾರದಿಂದ ಬಳ್ಳಾರಿಯು ಕರ್ನಾಟಕ ಪ್ರಾಂತದ ಕೇಂದ್ರವೂ ಅನೇಕ ಸಭೆ ಸಮ್ಮೇಲನಗಳ ಕೂಟವೂ ಆಗಿದೆಯಷ್ಟೇ?

ಡಾ|| ಹರ್ಡೀಕರರ ದೀರ್ಘ ಪ್ರಯತ್ನದಿಂದ ಕರ್ನಾಟಕ ವ್ಹಾಲಂಟಿಯರ (ಹಿಂದುಸ್ಥಾನೀ ಸೇವಾದಲ) ಪರಿಷತ್ತು ಬಹಳ ಯಶಸ್ವಿಯಾಗಿ ನೆರವೇರಿತು. ರಾಷ್ಟ್ರೀಯ ಧ್ವಜಾರೋಹಣದ ಸಮಾರಂಭವು ಶ್ರೀಯುತ ಶ್ರೀನಿವಾಸ ಅಯ್ಯಂಗಾರರವರ ಹಸ್ತದಿಂದ ಮಾಡಲ್ಪಟ್ಟಿತು. ಆ ಸಮಯಕ್ಕೆ ಕರ್ನಾಟಕ ಮಾತೆಯ ಸತ್ಪುತ್ರರು ಕಲಿತಿದ್ದರು. ಬಳ್ಳಾರಿಯ ಮುನಿಸಿಪಲ್ ಪ್ರೆಸಿಡೆಂಟರು ಎಂಟು ಜನ ಪ್ರಮುಖ ನಾಗರೀಕರು, ಕರ್ನಾಟಕ ಏಕೀಕರಣ ಸಭೆಯ ಅಧ್ಯಕ್ಷರಾದ ಪಂಡಿತ ರಾಮಸ್ವಾಮಿ ಚಿಕ್ಕೋಡಿಯವರು ರಾ|| ಬ|| ಕಂಬಳಿ ಎಮ್. ಎಲ್. ಸಿ. ಯವರು ದೇ. ಭ. ಮಂಜಪ್ಪಾ ಹರ್ಡೇಕರ, ಗಂಗಾಧರರಾವ ದೇಶಪಾಂಡೆ, ಶ್ರೀನಿವಾಸರಾವ ಕೌಜಲಗಿ ಮೊದಲಾದ ಪ್ರಭೃತಿಗಳು ಹಾಜರ ಇದ್ದರು. ಅಧ್ಯಕ್ಷರಾದ ಶ್ರೀಯುತ ಹೊಸಕೊಪ್ಪ ಕೃಷ್ಣರಾಯರು ಸಭೆಯಲ್ಲಿಯೇ ವ್ಹಾಲಂಟಿಯರ ದೀಕ್ಷೆಯನ್ನು ತಗೆದು ಕೊಂಡು; ಡಾ. ಹರ್ಡಿಕರರು ಸಮರ್ಪಿಸಿದ ವ್ಹಾಲಂಟಿಯರ ಉಡುಪುಗಳನ್ನು ಆದರದಿಂದ ಸ್ವೀಕರಿಸಿ, ಅವುಗಳನ್ನೆ ಧರಿಸಿ, ತಮ್ಮ ಭಾಷಣವನ್ನು ಪ್ರಾರಂಭಿಸಿದರು. ಭಾಷಣವು ಒಳ್ಳೇ ಗಂಭೀರವಾಗಿಯೂ ವಿದ್ವತ್ತಾಪೂರ್ಣವಾದದ್ದು, ಸ್ಫೂರ್ತಿ ದಾಯಕವೂ ಆಯಿತು ಶ್ರೀಯುತ ಶ್ರೀನಿವಾಸ ಅಯ್ಯಂಗಾರರು ೧೫ ನಿಮಿಷಗಳ ವರೆಗೆ ತಮ್ಮ ಅಸ್ಖಲಿತವಾದ ವಾಕ್ಪಾಂಡಿತ್ಯದಿಂದ ಪ್ರೋತ್ಸಾಹವನ್ನು ದಂಗು ಬಡಿಸಿದರು. ವ್ಹಾಲಂಟಿಯರ ವಿಷಯದಲ್ಲಿ ತಮಗಿರುವ ಪ್ರೇಮಾದರವನ್ನು ವ್ಯಕ್ತಗೊಳಿಸಿ, ಸಂಘ ಶಿಸ್ತಿನ ಮಹತಿಯನ್ನು ಚೆನ್ನಾಗಿ ತಿಳಿ ಹೇಳಿದರು. ಕರ್ನಾಟಕ ಪ್ರಾಂತದ ಕಾಂಗ್ರೆಸ್ಸಿನ ಮೇಲಿರುವ ನಿಸ್ಸೀಮ ಭಕ್ತಿಯನ್ನು ಕೊಂಡಾಡಿ ಗೌರವಿಸಿದರು. ಕಾಂಗ್ರೆಸ ವಿರೋಧಿಗಳ ಅಶ್ಲೀಲ ಟೀಕೆಗಳಿಗೆ ಸಮರ್ಪಕ ಉತ್ತರಗಳನ್ನು ಕೊಟ್ಟರು. ಜಾತಿ ಜಾತಿಗಳಲ್ಲಿಯ ದ್ವೇಷ ಮತ್ಸರಗಳನ್ನು ಹೋಗಲಾಡಿಸಿ ಐಕ್ಯ ಭಾವನೆಯನ್ನು ಹುಟ್ಟಿಸಬೇಕೆಂದೂ ಎಲ್ಲ ಪಂಗಡದವರು ಕಾಂಗ್ರೆಸ್ಸಿಗೆ ಬಂದು ಸೇರಬೇಕೆಂದೂ ಕರ್ನಾಟಕದ ಎಲ್ಲ ಮುಂದಾಳು ಗಳಿಗೆ ಕಳಕಳಿಯಿಂದ ಬೇಡಿಕೊಂಡರು. ವ್ಹಾಲಂಟಿಯರ ಸಂಘಕ್ಕೆ ಧನ ಸಹಾಯವನ್ನು ನೀಡಿರೆಂದು ಸ್ವತಃ ಅಧ್ಯಕ್ಷರೇ ಜೋಳಿಗೆ ಹಾಕಿ ಸಭೆಯಲ್ಲಿ ತಿರುಗಾಡಿದರು ಎರಡು ಠರಾವುಗಳು ಪಾಸಾದವು.

(೧) ೧೧ ಘಂಟೆಗೆ ಸರಿಯಾಗಿ ವೀರಶೈವ ಸಮ್ಮೇಲನದ ಕಾರ್ಯಕ್ಕೆ ಪ್ರಾರಂಭವಾಯಿತು. ವಿಜಾಪೂರದ ಸುಪ್ರಸಿದ್ಧ ವಕೀಲರಾದ ರಾ|| ಬ|| ಹಳಕಟ್ಟಿಯವರು ಅಧ್ಯಕ್ಷಸ್ಥಾನದಲ್ಲಿ ವಿರಾಜಮಾನರಾಗಿದ್ದರು. ಶ್ರೀಯುತ ಕಂಬಳಿಯವರೂ ಭಾಷಣ ಮಾಡಿದರು

(೨) ಮಧ್ಯಾನದಲ್ಲಿ ಕರ್ನಾಟಕ ರಾಜಕೀಯ ಪರಿಷತ್ತು ಕೂಡಿತು. ಸ್ವಾಗತಾಧ್ಯಕ್ಷರಾದ ಜೆಲ್ಲದೋಣಿ ಭೀಮರಾಯರು ಅಂದವಾದ ಚಿಕ್ಕ ಭಾಷಣದಲ್ಲಿ ಸಭಿಕರಿಗೆ ಸ್ವಾಗತಬಿತ್ತರು. ನಿಯೋಜಿತಾಧ್ಯಕ್ಷರಾದ ಶ್ರೀ ಶ್ರೀನಿವಾಸ ಅಯ್ಯಂಗಾರವರು ಪೂಮಾಲೆಗಳಿಂದ ಮಂಡಿತರಾಗಿ ಉಚ್ಚಸ್ಥಾನವನ್ನು ಸ್ವೀಕರಿಸಿದರು. ಅಧ್ಯಕ್ಷರ ಭಾಷಣವು ಎಲ್ಲ ರಾಷ್ಟ್ರೀಯ ಪ್ರಶ್ನೆಗಳನ್ನೊಳಕೊಂಡಿದ್ದಲ್ಲದೆ ಬಹಳ ಸುಶ್ರಾವ್ಯವಾಗಿಯೂ ಸ್ಫೂರ್ತಿಜನಕವಾಗಿಯೂ ಪರಿಣಮಿಸಿತು. ಜಾತಿ ದ್ವೇಷವನ್ನು ಮುಗಿಸಿ, ಒಕ್ಕಟ್ಟಿನಿಂದ ಆಳರಸರನ್ನು ಎದುರಾಗದ ಹೊರತು ಸ್ವರಾಜ್ಯವು ಕೈವಶವಾಗಲಾರದೆಂದು ಸಾರಿ ಹೇಳಿದರು.

ಮೆಟ್ಟಿನ ಗುಟ್ಟು

*(ಲೇ:— ಲಿಂಗಪ್ಪ ಸಿಂಪಿ ಜವಳಿ)

ಕನ್ನಡ ನಾಡಿನವರ ಪಾದರಕ್ಷೆಯೆಂದರೆ ಮೆಟ್ಟು ! ಈಗ ಮೆಟ್ಟು ಮೆಡುವರು; ಮೊಜ್ಜೆ ಹಾಕುವರು, ಬೂಟುಗಳನ್ನು ಕಟ್ಟಿಕೊಳ್ಳುವರು ಇವುಗಳಲ್ಲೆಲ್ಲಾ ಮೆಟ್ಟುಗಳೇ ನಮ್ಮ ನಾಡಿಗರಿಗೆ ಒಪ್ಪು ! ಹಿರಿದಿನವು !! ಮೆಟ್ಟುಗಳನ್ನು ಮೆಡುವುದರಲ್ಲೇ ಒಂದು ಗುಟ್ಟಿದೆ; ಮಹತ್ವವಿದೆ. ಆದನ್ನರಿತೇ ಹಿರಿಯರು ಹಾಕಿಕೊಳ್ಳುತ್ತ ಬಂದರು.

ಮೆಡು ಧಾ. (ಕಾಲಿಡು) ಮೆಟ್ಟು ಇದರ ಮೊಜ್ಜೆಯ ಮೂಲವೂ ನಿಜ್ಜವೂ ಕನ್ನಡದಲ್ಲಿ ಕಂಡುಬರುವದಿಲ್ಲ. ಬೂಟುಗಳಂತೂ ನಿನ್ನೆ ನಿನ್ನೆ ಬಂದ ಪರದೇಶಿಗಳು. ಮೆಟ್ಟುಗಳು ಪಾದುಕೆಗಳ ರೀತಿಯಂತೆ ರಚಿಸಲ್ಪಟ್ಟವುಗಳು. ಪಾದುಕೆಗಳನ್ನು ವಿರಕ್ತರೂ, ಸನ್ಯಾಸಿಗಳೂ ಹಾಕಿಕೊಳ್ಳುವರು ಶ್ರೀ ಶಿವಾನಂದ ಸ್ವಾಮಿಗಳು ತಾವು ಬರೆದ 'ಬ್ರಹ್ಮಚರ್ಯ' ಪುಸ್ತಕದಲ್ಲಿ ಹೇಳಿದುದು —

"ಪಾದುಕೆಗಳು ಬ್ರಹ್ಮಚಾರಿಗಳಿಗೆ ಬೇಕೇಬೇಕು. ಪಾದುಕೆಗಳನ್ನು ಮೆಟ್ಟು ಹಿಡಿಯಲ್ಲಿ ತಿರುಗಾಡಲಿಕ್ಕೆ ನಾಚಿಕೆಯೂ, ಅಡ್ಡಿಯೂ ಬರುತ್ತಿದ್ದರೆ. ಮನೆಯಲ್ಲಾದರೂ ಪಾದುಕೆಗಳನ್ನು ಉಪಯೋಗಿಸಬೇಕು. ಅದರಿಂದ ಬ್ರಹ್ಮಚರ್ಯಪಾಲನಕ್ಕೆ ಸಹಾಯವಾಗುವದು."

ಪಾದುಕೆಯ ಮೇಲಿಯನ್ನು ಯಾವ ಕಾಷ್ಠಂಗಳಿಂದ ಮಾಡಿಯಬೇಕಾಗುತ್ತದೆಯೋ, ಆ ಬೆಡಗುಗಳಿಂದಲೇ ಮೆಟ್ಟಿನ ಗುಟ್ಟವನ್ನು ಹಿಡಿಯಬೇಕಾಗುತ್ತದಷ್ಟೇ? ಶಿವಾನಂದ ಸ್ವಾಮಿಗಳು ಪಾದುಕೆಗಳನ್ನು ಮೆಡಲಿಕ್ಕೆ ಬ್ರಹ್ಮಚಾರಿಗಳಿಗೆ ಏಕೆ ಹೇಳಿದರೋ ಅದೇ ಗುಟ್ಟು ಮೆಟ್ಟು ಮೆಡುವವರೆಲ್ಲರಿಗೂ ಅನ್ವಯಿಸಲ್ಪಡುತ್ತದೆ

(೬ ನೇ ಪಾನಿನಲ್ಲಿ ನೋಡಿರಿ.)

ಹಳ್ಳಿಯ ನಾಟಕಗಳು

(ಲೇ:— ಲಿಂಗಪ್ಪ ಸಿಂಪಿ ಚವಡಾಪ)

ಹಳ್ಳಿಗೆ ಮೊದಲಿನಿಂದಲೂ ಬೈಲಾಟಗಳೇ ಅಷ್ಟೇ? ಇದೀಗ ತೆರೆಂಗ ಟೆಂಟು ಗಳನ್ನು ಮೆಚ್ಚಿ, ಹಳ್ಳಿಗರೂ ನಾಟಕಗಳನ್ನು ಮಾಡಹತ್ತಿದ್ದಾರು ಹೀಗೆ ನಾಟಕಗಳು, ಪೊಳಲಿನಿಂದ ಹಳ್ಳಿಯವರೆಗೂ ಹಬ್ಬಿಗೊಂಡಿವೆ. ಹಳ್ಳಿಗರು ನಾಟಕದ ನೈಜವಾದ ಗಟ್ಟನ್ನು ಬಿಟ್ಟುಬಿಟ್ಟಿರಿ (ತಿಳಿದು ಅಲ್ಲ) ಜನಮೆಚ್ಚಿಕೆಗಾಗಿ ಏನೆನೂ ಇಲ್ಲದ ಸಲ್ಲದ ಅನುಚಿತ ನಟನೆಗಳನ್ನು ಬಳಕೆಗೆ ತರಗೊಟ್ಟಿರುವರು ನಾನು ಕಂಡ ದೋಷಗಳನ್ನು ಗಮನಕ್ಕೆ ತಂದು ಕೊಡಬೇಕಾಗಿದೆ.

ಹಳ್ಳಿಯ ನಾಟಕಗಳ ವಿಚಾರವನ್ನು ಒಮ್ಮೆಲೆ ತಿಳಿಸಬೇಕಾದರೆ, "ಪಂಚಕಯಾಪಿ ನಿಸ್ಪಷ್ಟ ಚಮತ್ಕಾರ,, ನಾಟಕದೊಳಗಣ ಹಳ್ಳಿಯ ಹೊರತು ವಿಶಾರದನನ್ನು ಮನದರಬೇಕು ಇದಿರಲಿ ಹಳ್ಳಿಗರಿಗೆ ಸಿಗುವ ಕತೆಗಳಂತೂ ಭೂತಶಾಸ್ತ್ರಜ್ಞರಾದ? ಹಳ್ಳಿಗಾಡದ ಶಾಲೆಯ ಶಿಕ್ಷಕರೇ ರಚಿಸಿದಂತಹವುಗಳು! ನಾಟಕವ ಬರೆಯುವದು, ಸುಲಭವೆಂದು ತೋರಿದಷ್ಟು ಕಠಿಣವಾಗಿರುತ್ತದೆಂಬುದು ಅವರಿಗೆ ಗೊತ್ತಿರುವಂತೆ ತೋರುವದಿಲ್ಲ. ಹತ್ತೆಂಟು ನಾಟಕಗಳನ್ನು ನೋಡಿಯೋ ಓದಿಯೋ ಹಳ್ಳಿಯ ಮಹಾಜನಗಳ ಪ್ರೋತ್ಸಾಹದಿಂದ ಒಂದು ನಾಟಕ ಪುಸ್ತಕವು ಪ್ರಕಟವಾಯ್ತೆಂದೇ ತಿಳಿಯುವದು, ಒಂದ ದೃಷ್ಟಿಯಿಂದ ನಾಟಕದ ವಿಷಯಗಳೆಲ್ಲಾ ಎತ್ತಿ ಹಾಕಿದವುಗಳೇ ಬಳಕೆಯ ಭಾಷೆಯಲ್ಲೂ, ಕೈಗೋಲು ಎನ್ನುವಲ್ಲಿ ಹಸ್ತಕಾಷ್ಠಗಳೆಂದು ಪಯೋಗಿಸಲು, ಹಳ್ಳಿಯವರಿಗೆ ಹಕ್ಕಿ ಮಾತುಗಳೆಂದೇ ಹೊಳೆಸುವದು.

ಹಳ್ಳಿಯಲ್ಲಿ ಹಣ್ಣಾಗುವ ಮುದುಗರೆಂದರೆ, ಮೀಸೆಯಿಲ್ಲದ ಮಣಿಮಕ್ಕಳು! ಹತ್ತು ಹನ್ನೊಂದು ವರುಷ ವಯಸ್ಸು! ಇಂಥವರು ಮುಪ್ಪು ಭೂಮಿಕೆಯನ್ನು ವಹಿಸಿ ದಕ್ಷತೆ ಅನುಭವಿಕರಂತೆ ಅಭಿನಯ ಮಾಡುವುದು, ಬ್ರಹ್ಮಚರ್ಯದ ದೃಷ್ಟಿಯಿಂದ 'ಭೂಮಿಕೆ' ಯೆನಿಸುವೆ, 'ಸೋಗು' ಎನುವದು ಮೊದಲಾದವುಗಳನ್ನೆಲ್ಲಾ ಆ ಎಳೆಯನೇ ಸರಳವಾಗಿಯೂ, ಸುಂದರವಾಗಿಯೂ, ಸಾಗಿಸುವನು.

ಧ್ರುವನಾಟಕದಲ್ಲಿ ಸುನೀತೆಯ ಸೋಗು, ಹುಡುಗಾಟಿಕೆಯ ಹುಡಿಗೆಯಂತೆ ಕಾಣಿಸಿದರೆ, ಧ್ರುವನನ್ನು ಹಡೆದ ಹಡೆದವ್ವನು, ಈಕೆಯೇ ಎಂದು ಹೇಗೆ ಹೇಳಿಕೊಂಡಾರು? ದಾಸಿಗೆ ಅರಸಿಗಿಂತ ಡೌಲು ಬೇಕು. ತಲೆಗೂದಲಿನಿಂದ ಉಡಿಗೆ ತೊಡಿಗೆ ಕಾವಸ್ತ್ರಗಳವರೆಗೂ ಯಾವ ತೆ ದಲ್ಲೂ ಅರಸಿಗಿಂತ ಕಡಿಮೆಯಿದ್ದರೆ ಕೇಡು. ನಾಟಕ ಸಭೆಯ ಯಜಮಾನನು. ಇವರೆಲ್ಲರನ್ನೂ ರಮಿಸಬೇಕಾದರೆ, ಮಾಡಿದ ಕೃತ್ಯಕ್ಕೆ ಪಶ್ಚಾತ್ತಾಪ ಪಡುವನು.

ಸಾಮಾಜಿಕವೆಂದು ಹೇಳಿಕೊಳ್ಳುವ ನಾಟಕದಲ್ಲಿ, ಬಿ. ಎ. ವರೆಗೂ ಕಲಿತ ಹೆಣ್ಮಕ್ಕಳ ಕಣ್ಣಿಗೆ ಕನ್ನಡಕವನ್ನೂ, ಅದರ ಜತೆಗೆ ಮೂಗಿಗೆ ಮೂಗುತಿಯನ್ನೂ ಮರೆಯುತು; ಬಹುಎಚ್ಚರ! ಹಾಡು ಇಲ್ಲದ ಸೋಗು ಆಗುವದೂ ವಿರಳ! ವಸಂತ ಋತುವಿನ ಗಾನದಲ್ಲಿ "ನಾಥನೇತು ಗಾಲಿಬಿದಾಗೀರಿ" ಎಂಬ ಹಿಂದೀ ಹಾಡನ್ನು ಹಾಡಿದ ನಟಿಯು ಹಳ್ಳಿಗರಲ್ಲಿ ದೊರೆಯುವಳು. ವಿಶ್ವಾಮಿತ್ರನಿಗೆ ರುದ್ರಾಕ್ಷಿಬೇಡ ಈ ಸುಧಾರಣೆಯು ಕಾಲದಲ್ಲಿ ಅವನಿಗೆ ಚಸ್ಮದ ಕಡಗದೋಡೆಗಳೇ ಬೇಕು. ನಾಟಕದ ಒಳಮಗ್ಗುಲಿಗಾದರೂ ಕೊಪ್ಪೆಗಳೇ ಬೇಕು. ಹಿಗೆ ಹೆ ... ಳುಗೆಯ ಮರೆಗೂ ಹೊ...

ದರೆ ಹಿಂಗದಂಥ ಸಂಗತಿಗಳುಂಟು ಸಂಘದವರ ಉದ್ದೇಶವೇ ನೊಮೋಜು ಹಳ್ಳಿಗಳಲ್ಲಿ ನಾಟಕವನ್ನು ಮಾಡುವಷ್ಟರಲ್ಲಿ ತಮಾಷಗಳೇ ಆಗುತ್ತಾ ಇವೆ.

ಹಳ್ಳಿಗಳಲ್ಲಿ ಸುಗ್ಗಿಯಾದ ಬಳಿಕ ನಿರುದ್ಯೋಗಿಗಳೇ ಹೆಚ್ಚು ಅಂಥವರು ಹೊತ್ತು ಹಾಕುವದಕ್ಕಾಗಿ ನಾಟಕಗಳನ್ನು ಆಡುತ್ತಿರುವದೂ, ಒಂದು ಹೊಸಉದ್ದೇಶವಾಗಿರುತ್ತದೆ. ನೀತಿನಡಾವಳಿಗಳ ಉದ್ದೇಶವು ಉಳಿದು, ತಲೆಗೂದಲು, ಎಣ್ಣೆ ಸಲಕರಣೆಗಳ ಉಪಯೋಗವು ಮಾತ್ರ ಉಪಭೋಗಕ್ಕೆ ಬರಹತ್ತಿದೆ. ಹಗಲೂ ಇರುಳೂ ನಾಟಕಶಾಲೆಯಲ್ಲಿ ಬಿದ್ದು ಕೊಂಡಿರುವವರೂ ಉಂಟು. ಯಾರಾದರೂ- 'ನೀವು ಈಗ ಏನು ಉದ್ಯೋಗ ಹಿಡಿದಿರುವಿರಿ?' ಎಂದು ಕೇಳಿದರೆ, ನಾಟಕದ ಶೋಕ, ಮತ್ತೇನು ಹೇಳುವರೋ ಹೇಳಿಯದು

ಹೀಗೆ ರಂಗಭೂಮಿಯು ಹಳ್ಳಿಯ ಹೊಕ್ಕು, ಬಹು ಪರಿಯಿಂದ ಬಳಲುತ್ತಿರುವದು. ಹಳ್ಳಿಗರ ಈ ಕುಣಿತಕ್ಕೆ ಹಿರಿಯರು, ನಾಟಕವನ್ನೂ ರಂಗಭೂಮಿಯನ್ನೂ ಜರೆಯುತ್ತಾರೆ. ಸುಶಿಕ್ಷಿತರಂತೂ ನಾಟಕದಿಂದ ದೂರೆಯಾಗುವರು. ಹಾಗೆ ಮಾಡಿದರೆ ಹಳಸಿಹೋಗುವುದು; ಹಳಸಿದರೆ ಹಳಹಳಿಸಬೇಕಾದೀತು.

ನಗೆ ಬರವು!

ಸೋಡಿ ನಗೆಯು ಬರುವದೆಂದು ನಗೆ ಬರವು! ಒಂದಾನೊಂದು ದಿನ್ನ ತಿಂದು. ತಿಮ್ಮವ್ವ ಒಂದು ಮುದುಕಿಯೊಡನೆ ಹರಟೆಗಳನ್ನು ಕುಳಿತಾಗ, ಅವಳು ಸಿಪಾಯಿಗಳ ಬಂಡಿನಿಂದ ಮೊದಲು ಮಾಡಿ ತನಗೆ ಗೊತ್ತಿದ್ದ ಎಲ್ಲ ಇತಿಹಾಸವನ್ನು ಹೇಳ ತೊಡಗಿದಳು. ನನಗನಿಸಿತು- ಎಂಥ ಪ್ರಚಂಡ ಜ್ಞಾನವು ಇವಳದೆಂದು ಅನುಭವಿಕ ಸ್ತ್ರೀಯರ ಕಲ್ಪನಾ ಸಾಮರ್ಥ್ಯಕ್ಕೂ ಸಂಗತಿ ಸಂಚಯಕ್ಕೂ ನಾನು ಬೆರಗಾದೆನು ಎಲ್ಲ ಅವಳ ಕಥಾನಕಗಳಲ್ಲಿ ಬರದ ಬವಣೆಯು ಕೇಳುವವರಿಗೆ ಅತ್ತತ್ತ ಕಣ್ಣೊಡೆಯುವಂತಿತ್ತು. ಅವಳ ಶೈಲಿಯು ಹೃದಯ ಚೂರ್ಣವನ್ನು ಮಾಡುವಂತಹದಿತ್ತು. ರಾಗೀಬರ, ಜೋಳಬರ ಇತ್ಯಾದಿಗಳನ್ನು ವಿವರವಾಗಿ ಅವಳು ಚಿತ್ರಿಸಿದಳು. ಆದರೆ ಹೇಳಹೇಳುತ್ತಲೆ- ಏನು ನೆನಪಾಯಿತೋ ಏನೋ- ಅವಳು ಕಣ್ಣೀರು ತಂದಳು. ಯಾರೋ ತಮ್ಮವರು ಬರದಲ್ಲಿ ಕಾಲವಾದದ್ದು ಅವಳಿಗೆ ತಟ್ಟಿಸಿತೋ ಎಂದು ನಾನು ಮಿಡುಕಿದೆನು ಅದಕ್ಕೇನು ಮಾಡುವದಿದೆ? ಯಾಕೆ ತಾಯಿ ಎಂದು ನಾನು ಕೇಳಿದೆ. 'ತಮ್ಮಾ ಇದು ಆದದ್ದಲ್ಲ; ಇದ್ದದ್ದು ಈಗಿನ ಬರವು! ನನಗೀಗ ತುತ್ತು ಅನ್ನ ಸಿಗದಾಗಿದೆ. ನನ್ನಂಥ ಎಲ್ಲ ಬಡವರ ಗೋಳು ಮುಕ್ಕಿ ಹೋಗಿದೆ. ಅದೇ ಊರಲ್ಲಿ ಹೋದರೆ ಹಬ್ಬಕ್ಕೆ ರುಚಿ ಮಾಡಿಕೊಂಡ ಉಣ್ಣುವವರು ಇದ್ದೇ ಇರುವರು ಇದಕ್ಕಾವ ಬರವೆನ್ನ ಬೇಕೋ? ಬಡವರ ಬರವು" ಎಂದು ಜೋಲು ಮೋರೆಯನ್ನು ಹಾಕಿ ಅವಳು ಮಾತನಾಡಿದಳು. ನಾನು ಮನು 'ಅವ್ವಾ' ನಾನು ಹೇಳಲೆ ಇದು ನಗೆ ಬರವು! ಇದರಲ್ಲಿ ವಿಚಿತ್ರ ಲೀಲೆಗಳು ನಡೆಯುವವು" ಎಂದ ಕೂಡಲೆ ನನ್ನ ಜಾಣತನಕ್ಕೆ ಮೆಚ್ಚಿ ಅಳು ಮೊರೆಯಲ್ಲಿಯೇ ಅವಳು ಕೆಂಪು ಬಚ್ಚಬಾಯಿಯನ್ನು ತೆರೆದು ನಕ್ಕುಬಿಟ್ಟಳು! ಅಂತೂ, ವಾಚಕರೇ ಈಗಿನ ಏನ ನಾನಪ್ರಸನ್ನಿ ಸುಮಧ ಬರವು ನಕ್ಕ ಹೆಚ್ಚ ಕಡಿಮೆ ಸಂಗತಿಯೆಂದರೆ, ಜಾತ್ರೆಯಲ್ಲಿ ಇದ್ದೇ ಬಳ್ಳ ಬೆಕ್ಕು ಜನರ ಹುಚ

ಲವು! ಪಟಪಟ ಬಿದ್ದು ಸಾಯ ಹತ್ತಿದಾಗ ಬರದ ಬರವೆಂದು ನಮಗೆ ಹೇಳುತ್ತಾರೆ. ಆದರೆ ಇರುವಿಕೆಯೋ ಈ ಬರದ ಧರ್ಮವು ಧ್ಯೇಯವಾದರೂ ಅದೇ! ಸಾಯಲಾರೆನೆಂಬುವ ಮಾತಿಗೆ ಮಾತ್ರ ಜನವು ಬಿದ್ದು ಸಾಯುವದು. ಇನ್ನು ರೋಗದಿಂದಾಗಲಿ ಅಪಮೃತ್ಯುವಿನಿಂದಾಗಲಿ ಪಾಶವನ್ನು ಹಾಕಿ ಒಯ್ದರೆ ಉಪಾಯವಿಲ್ಲ. ತಾವೇ ಪಾಶವನ್ನು ಹಾಕಿ ಕೊಳ್ಳುವಂತಿಲ್ಲ. ಹೀಗಾಗಿ ಬರದಿಂದ ಸತ್ತವರು ಕಡಿಮೆ. ಅದೇ ಸಾಯಲಿಕ್ಕೆ ಸಾಹಸ ಮಾಡಿ ಉಳಿದವರು ಬಹಳ. ಅದಕ್ಕೊಂದು ಕಾರಣವೆಂದರೆ, ನೀರಿಲ್ಲದೆ ಊರುಗಳಲ್ಲಿ ಬಾವಿಗಳು ಸಾವಿಗೆ ಅನುಕೂಲವಿಲ್ಲ.

ಆ ಮೇಲೆ ಕೂಳು ನೀರಿನ ಅಭಾವವೇ ಬರದ ಮುಖ್ಯ ಲಕ್ಷಣವು. ಅದರ ಮೇಲೆ ಅದಿದ್ದದೇಶಕ್ಕೆ ಬರಗೆಟ್ಟ ದೇಶವೆನ್ನುವದುಂಟು, ಆದರೆ ಹಾಗಿದ್ದರೂ ನಮ್ಮಲ್ಲಿ ಬರವು ಬಂದಿಲ್ಲ. ಕೂಳಿಲ್ಲವೆನ್ನುವವರಿಗೆ ಹೇಗಾದರೂ ಹೊಟ್ಟೆ ತುಂಬುತ್ತದೆ. ಹುಟ್ಟಿದ ದೇವರು ಹೊಟ್ಟೆನ್ನಾದರೂ ತಿನಿಸುತ್ತಾನೆ. ಎಲ್ಲಿಯಾದರೂ ದುಡಿತವು ಹತ್ತುತ್ತದೆ ಸಂಜೆಯ ವರೆಗೆ ಹತ್ತದಿದ್ದರೆ ರಾತ್ರಿಯಾದರೂ ಹತ್ತುತ್ತದೆ. ಕಡೆಗೆ ಜೇಲಿಗೆ ಕಳಿಸಿಯಾದರೂ ದೇವರು ಸಾಕುತ್ತಾನೆ. ಸಾಯ ಬಿಡುವದಿಲ್ಲ. ಇಷ್ಟೇ ಅಲ್ಲ, ಬಡವರೆನಿಸಿ ಕೊಳ್ಳುವವರೇ ನೂರಾರು ವರ್ಷದ ಮೇಲೆ ಬಾಳುತ್ತಾರೆ. ಬಡವರಿಗೆ ಅನುಕೂಲವಾಗಿ ಉದ್ಯೋಗಗಳಂತೂ ಬೀದಿಗೊಂದು ತೆಗಿವೆ. ಅಂತೇ ಹವಾಲನು ಗಳಿಸಿದಷ್ಟು ದಿನಾಲು ವಕೀಲನ ಸಂಪಾದನೆ ಯಿಲ್ಲ. ಕಿಸೆ ಕತ್ತರಿಸುವವನ ಭಾಗ್ಯವು ಕೋಟ್ಯಾಧೀಶನಿಗೆ ಅಳವಿಲ್ಲ! ಇನ್ನು ಬಿಕ್ಷೆ ಬೇಡುವವರ ಸಂಪತ್ತಿಯನ್ನಂತೂ ಕಲ್ಪಿಸಕೂಡದು. 'ಪಾಪ ಎಷ್ಟು ಬಾಯಿ ತೆಗೆಯ ಬೇಕು! ಎಷ್ಟು ಬಿಗಿಸಿಕೊಳ್ಳಬೇಕು. ಇವರು' ಎಂದು ನಾವು ಕನಿಕರ ಪಟ್ಟರೆ ಅವರೇ ನಾಳೆ ನಮಗೆ ಹೊಟ್ಟೆಗೆ ಹಾಕಲಿಕ್ಕೆ ಮುಂದಾಗುವರು. ಒಬ್ಬರು ಹೇಳಿದರು. ಈ ದೇಶದ ದಾರಿದ್ರ್ಯದ ಚಿತ್ರವು ಕಣ್ಣ ಮುಂದೆ ನಿಲ್ಲಿಸಬೇಕಾದರೆ ತಿರುಪತಿಯ ಬೆಟ್ಟವನ್ನೇರಬೇಕು "ನಾವದರಂತೆ ಮಾಡಿದೆವು. ಏರುವಾಗ ಕಸಿವಿಸಿಯಾಗುವ ನಮ್ಮ ಸ್ಥಿತಿಗೆ ದಾರಿದ್ರ್ಯವೆಂದನೇನೊ ಎನಿಸಿತು! ಯಾಕೆಂದರೆ ಅಲ್ಲಿಯ ಬಿಕ್ಷುಕರೆಂದರೆ ಸರ್ವಥಾ ಸಂಪನ್ನರು! ನಾವು ರೊಕ್ಕವನ್ನು ಮುರಿಸದೆ ಹೋಗಿ! ಏರುತ್ತಿದ್ದೆವು. ಒಬ್ಬ ಬಿಕ್ಷುಕನು ಕೂತಲ್ಲಿಯೇ ಒಕ್ಕೆ ಬೇಡಿದನು. ನಾವು ಅತ್ತಿತ್ತ ಕಾಸುಗಳನ್ನು ಮುರಿಸಬೇಕೆಂದು ನಿಂತಿದ್ದೆವು. ಅವನು ತಾನೇ ಕೈಚಾಚಿ ಲಕ್ಷಾವಧಿ ಕಾಸುಗಳ ಗಂಟನ್ನು ತೋರಿಸಿ ಕರೆದನು. ನಾವೇ ಬಿಕ್ಷುಕರಾದೆವು. "ಧನ್ಯ ತಿರುಪಾ! ನೀನು ತಿರುಪತಿಗೆ ಬಂದದ್ದು ಸಾರ್ಥಕ ವಾಯಿತು," ಎಂದು ಎನ್ನುತ್ತ ನಾವಾದರೂ ಅದೇ ಉದ್ಯೋಗವನ್ನು ಅಂಗೀಕರಿಸಬೇಕೆಂದು ಬಹಳ ಚಿಂತಿಸಿದೆವು ಬಿ. ಎ. ಆಗಿ ಕೆಲಸವಿಲ್ಲದೆ ಬಂದ ಎಷ್ಟೋ ಸ್ನೇಹಿತರಿಗೆ ಹೇಳಿಕೊಂಡೆವು ಸಹಿತ! ಅವರು ನಕ್ಕರು ಹೀಗೆ ನಗೆಯಲ್ಲಿಯೇ ಯಾತ್ರೆಯನ್ನು ಮಾಡಿದೆವು. ಹೊರತು ದಾರಿದ್ರ್ಯವು ನಮಗೆ ದೃಷ್ಟಿಗೋಚರವಾಗಲಿಲ್ಲ. ಅಂತೇ ನಗೆ ಬರವು!

ಅನ್ನದ ಅಭಾವಕ್ಕೆ ಮಳೆ ಬೆಳೆಯಿಲ್ಲವೆಂದು ಹೇಳುವ ರೂಢಿಯುಂಟು. ಯಾಕೆಂದರೆ 'ಪर्जन्यादन्नसंभवः' ಎಂಬುದು ಗೊತ್ತಿದ್ದದ್ದೇ, ಆದರೆ ಮರು- ಭೂಮಿಯಲ್ಲಿ ಯಾದರೂ ಮಳೆಯಾಗದೆ ಬಿಡುವದಿಲ್ಲ. ಪೃಥ್ವಿಯು ತಿರುಗುವಾಗ ತಪ್ಪಿ ಬೇಡಾದ ಭೂಮಿಯ ಮೇಲೆ ಬಿದ್ದರೆ ಮೋಡಗಳ ತಪ್ಪೇನು? ಅಲ್ಲಿಯೇ ಜನರು ಸಾಯುತ್ತ ಬಿತ್ತುವರು, ಬೆಳಕೊಳ್ಳುವರು, ಎಂದೂ ಮಳೆಯು ಈ ದಿನಗಳಲ್ಲಿ ತಪ್ಪುವದಿಲ್ಲ. ತುಂಬಿದ ಕೆರೆಯ ಮೇಲಾದರೂ ಆಗುತ್ತದೆ. ಕೊಳೆಯುವ ಛತ್ರಗೋದಿಗಳ ಮೇಲಾದರೂ ಆಗುತ್ತದೆ. ಒಮ್ಮೊಮ್ಮೆ ವಿನೋದಕ್ಕಾಗಿ ಬೀಸತ್ತು-ಮಲ್ಲಾಡನ್ನು ತಲೆ ಕುಕ್ಕಿ ಕುಕ್ಕಿ ಸಾಕೆನಿಸುತ್ತದೆ, ಇತ್ತ ಹಣಿಕೆ ಹಾಕುವದೇ ಇಲ್ಲ. ಒಮ್ಮೊಮ್ಮೆ ಪೃಥ್ವಿಯ ಕೂಡೆ ಹತ್ತು ಜನ್ಮದ ವೈರ ವಿದ್ದಂತೆ ಅಡ್ಡ ಹೊತ್ತಿನಲ್ಲಿ ಬುದ್ಧಿಪೂರ್ವಕವಾಗಿ ಬಿದ್ದು ಓಡಿ ಹೋಗುತ್ತದೆ. ಇಲ್ಲವೆನ್ನುವಂತಿಲ್ಲ. ಮಳೆಯು ಹೊಲಗಳನ್ನು ಬಿಟ್ಟು ಊರಪೂರ್ತಿಯಾದರೂ ಆಗುತ್ತದೆ. ಇನ್ನು ಅದು ಅಕಸ್ಮಾತ್ ತಪ್ಪಿದರೂ ಜೋಯಿಸರ ಭವಿಷ್ಯ ಕಥನೆಯು ತಪ್ಪುವದಿಲ್ಲ. ನಮ್ಮ ಜನರು ವಿಶ್ವಾಸವನ್ನಿಡುವದನ್ನೂ ಬಿಡುವದಿಲ್ಲ. "ಸಸ್ಯಾಧಿಪನು ರವಿಯು ಮೇಘಾಧಿಪನು ಇಂದ್ರನು; ದಕ್ಷಿಣೆಯಧಿಪರು ನಾವು" ಎಂದು ಯುಗಾದಿಯ ದಿನ್ನ- ಮುಂದೆ ಬರುವದು ಕ್ಷಯನಾಮ ಸಂವತ್ಸರ ವಿರಲಿ- ಭವಿಷ್ಯವಾಗತಕ್ಕದ್ದೆ! ಮಳೆಯಾಗುವದೊತ್ತಟ್ಟಿಗೆ! ಹೀಗೆ ಸದ್ಯಃ ಸಂಸಾರದ ಮೋಜು ನಡೆದಿದೆ. ನಿಜವಾಗಿ ಸೃಷ್ಟಿಯ ಪರಮಾತ್ಮನ ಆಟಿಕೆಯು ನಮ್ಮ ಆದರ ಕೂಡ ಅವನ ಲೀಲೆ ನಡೆದಿದೆ. ಒಂದು ಸಭೆಗೆ ಹೋಗಿದ್ದೆವು. ಆಗ ಹಿಂದುಸ್ಥಾನದಲ್ಲಿ [ಬಡತನವು ಎಷ್ಟು ಹಾಹಾಕಾರ ಮಯವಾಗಿರುವದೆಂಬದನ್ನು ಕುರಿತು ಒಬ್ಬರು ನಾಲಿಗೆ ದಣಿಯುವದೆ, ಭಾಷಣ ಮಾಡಿದರು., ನಾವು ಬಹಳ ದುಃಖಪಟ್ಟೆವು. ಆದರೆ ಮತ್ತೊಬ್ಬರು ಹಿಂದುಸ್ಥಾನವು ಸಕಲ ಸಾಖ್ಯಗಳ ಆಗರವಿರುವದೆಂದು ಸಿದ್ಧ ಮಾಡಿ ಭಯಭೀತರಾದವರ ಮುಖ ಚರ್ಯೆಯನ್ನು ಮೋದಗೊಳಿಸಿದರು. ಎರಡೂ ಸುಳ್ಳಲ್ಲ! ಅಂತೇ ನಗೆ ಬರವು! ಅಂತೇ ಈ ನಗೆ ಬರಹವು! ಇನ್ನು ಹೆಚ್ಚು ಬರೆದರೆ ನಗೆಯ ಬರವಾದೀತೆಂದು ಸಾಕುಮಾಡುವ —ರಸಿಕ ರಂಗ

ಔದ್ಯೋಗಿಕ ನಿಬಂಧಕ್ಕೆ ೧೦ ರೂಪಾಯಿ ಇನಾಮು

ನಿಮ್ಮ ಅಥವಾ ನಿಮ್ಮ ನೆರೆಯ ಊರಲ್ಲಿ ನಡೆದಿರುವ ಒಂದು ಉದ[illegible] ಉದ್ಯೋಗದ ವರ್ಣನೆಯನ್ನು ತಿಳಿಗನ್ನಡದಲ್ಲಿ ವ್ಯವಸ್ಥಿತವಾಗಿಯೂ ಶುದ್ಧವಾಗಿಯೂ, ಸುವಾಚ್ಯವಾಗಿಯೂ ಮನೋರಂಜಕವಾಗಿಯೂ ಬರೆದು ಬರುವ ಮೇ ತಿಂಗಳ ಕೊನೆಯ ಒಳಗಾಗಿ ಕೆಳಗಿನ ವಿಳಾಸಕ್ಕೆ ಕಳಿಸಬೇಕು.

ಆ ಉದ್ಯೋಗವು ಸ್ವಲ್ಪ ಬಂಡವಲದಿಂದ ಬಡವರ ಚರಿತಾರ್ಥವನ್ನು ಸಾಗಿಸುವಂಥಾದ್ದಿರಬೇಕು ಅದರಿಂದ ದೇಶದ ದುಡ್ಡು ದೇಶದಲ್ಲಿ ಉಳಿಯಬೇಕು.

ನಿಬಂಧವು ಫುಲ್ ಸ್ಕೇಪ್ ಆಕಾರದ ೧೦ ಪುಟಗಳು ತುಂಬುವಷ್ಟಿದ್ದು ಕಾಗದದ ಒಂದೇ ಮಗ್ಗುಲಿಗೆ ಬರೆಯಲ್ಪಟ್ಟಿರಬೇಕು.

ಇನಾಮು ಪಡೆದವರ ಹೆಸರೂ ನಿಬಂಧವೂ ಜುಲೈ ತಿಂಗಳ ಪ್ರಾರಂಭಕ್ಕೆ ಕರ್ನಾಟಕ ವೃತ್ತದಲ್ಲಿ ಪ್ರಸಿದ್ಧಿಸಲ್ಪಟ್ಟು ಇನಾಮು ಹಣವು ಅವರ ವಿಳಾಸಕ್ಕೆ ಕೂಡಲೇ ಮನಿ ಆರ್ಡರ್ ಮಾಡಲ್ಪಡುವದು.

ಸಂಪಾದಕ ಕರ್ನಾಟಕವೃತ್ತ, ಧಾರವಾಡ.

ಶ್ರೇಯಃ ಪ್ರಾರ್ಥನೆ.

ನೆರೆ ಮೈಸೂರು ನಿಜಾಮ ಮಹಾರಾಷ್ಟ್ರಾದಿ ಭಾಗಂಗಳ,
ಲ್ಲಿರುವೀನಾಡಿನ ಬಂಧು ವೃಂದ ಕನಿಕಂ ನಾಡಾಂಬೆಯಂ
ಸೇವಿಸಲ್| ಮರ ಕರ್ನಾಟಕ ಪಂಡಿತೌಘ ಬಿಡಿದಾ ಮಾ
ರ್ಮಿಕ ಲೇಖಂಗಳಿಂ| ಪಿರಿದುಂ ಪೇಳಿದ ಕಂದ "ಕನ್ನಡಿಗ"
ನೀ ಯಾವಾಗಲೂ ಜೀವಿಸೈ || ೧ ||
ಪೊಗೆಯಿಂ ಸಾಗುವ ಭಂಡಿಯಿಲ್ಲದೆಸೆಯೊಳ್ ಹಾಕಲ್ಕೆ
ಲೋಕಂಗಳಂ| ನಗೆ ಗೇಡಾಗಿಹ ಮುನ್ನ ರೂಢಿಗಳನಂ ತಿದ್ದ
ಲ್ಕೆ ಮಾರ್ಗಂಗಳಂ| ಸೊಗನಂ ದೂಡಲು ಸಿದ್ಧವಾಗಿಹ
ಮಹಾರಾಷ್ಟ್ರ ಪ್ರಾಂತ್ಯಂಗಳಂ ಮಿಗೆ ಲೇಖಂಗಳ ಕೊಟ್ಟು
ಸೂಚಿಸಿದ [illegible] ಜೀವಿಸೈ || ೨ ||

—ರಿಂತಿಸಂತ

(೩ ನೆಯ ಪುಟದಿಂದ ಒಂದಿದ್ದು)

ಕಾಲ್ಬೆರಳಿಲ್ಲದವರಿಗೆ ನಡೆಯಲಿಕ್ಕೂ, ತಗ್ಗುತವರಗಳನ್ನು ತುಳಿಯಲಿಕ್ಕೂ ಹೇಗೆ ಆತಂಕವೋ' ಹಾಗೆ ಮೊಟ್ಟೆ ಬೂಟುಗಳನ್ನು ಮೆಟ್ಟುವವರಿಗೂ ಆತಂಕವು. ಕಾಲ್ಬೆರಳುಗಳನ್ನು ಕಟ್ಟಿದ್ದಂ ತಾಗುತ್ತದೆ ಅದರಿಂದ ಬೆರಳಿನ ಬೆಳಿಗೆಗೂ ಬಾಧೆಯು. ಆದರೆ ವ್ಹೆಟ್ಟುಗಳಿಗೆ ಈಬಾಧೆಗಳೇನು ಬರುವದಿಲ್ಲ. ಬೊಟ್ಟುಗಳೂ ಕಡೆಗ? ತಗ್ಗುತವರ ಗಳನ್ನು ತುಳಿಯುವಾಗಲೂ' ಜೋಲಿಯನ್ನು ಹಿಡಿಯುವಾಗಲೂ, ಬಸುವ ಭಯದಲ್ಲಿಯೂ ಬೆರಳುಗಳು ತಕ್ಕ ಸಾಹಸವನ್ನು ಮಾಡುತ್ತವೆ.

ಇಂತುಮೆಟ್ಟಿನಗುಟ್ಟು! ಕನ್ನಡಿಗರು ಏನನ್ನು ಮಾಡಿದರೂ ಒಂದೊಂದು ಗುಟ್ಟನ್ನು ಇಟ್ಟುಕೊಂಡಿರುತ್ತಾರೆ. ಇದೇಕನ್ನಡಿಗತನದ ನಾಡಿಗತನದ ಗುಟ್ಟು' ಈಗುಟ್ಟೇಸಂಸ್ಕೃತಿಯಗುಟ್ಟು!

ವರ್ತಮಾನ ಸಾರ

ಮೈಸೂರ ಕರ್ನಾಟಕ

ದಿವಾನ ಬಹಾದ್ದೂರ ಎಮ್. ಎಸ್ ಕೃಷ್ಣರಾಜವಡೆಯರು ಕಾರ್ಯಕಾರಿಮಂಡಳದ ದ್ವಿತೀಯ ಪ್ರಧಾನರಾಗಿ ನೇಮಿಸಲ್ಪಟ್ಟಿದ್ದಾರೆ. ಮುಖ್ಯದಿವಾನರಾದ ಮಿರ್ಝಾಸಾಹೇಬರು ಇನ್ನು ತಮ್ಮ ಕಚೇರಿಯನ್ನು ಬೆಂಗಳೂರಿನಿಂದ ತಿತ್ತಿ ಮೈಸೂರಿಗೆ ವಯ್ಯುವವರಿದ್ದಾರೆ ಕಾರಣ ಬೆಂಗಳೂರ ನಾಗರಿಕರಿಗೆ ಸಹಜವಾಗಿಸಿಟ್ಟು ಬಂದಿದೆ.

ಹಿಂದುಸ್ಥಾನ

ಬಂಗಾಲದಲ್ಲಿ ಪೋಲಿಸರಾಜ್ಯ:- ಕಲಕತ್ತೆಯಲ್ಲಿ ಹಿಂದೂ ಮುಸಲ್ಮಾನರ ಭಯಂಕರ ಗಲಭೆಯಲ್ಲಿ ಪೋಲಿಸ ಅಧಿಕಾರಿಗಳ ಜವಾಬದಾರಿಯು ಎಷ್ಟರಮಟ್ಟಿಗೆ ಇರುವದೆಂಬದನ್ನು ಒಡೆದು ಹೇಳಲು ಕಾರಣವಿಲ್ಲ. ಆದರೂ ಬಂಗಾಲ ಕಾಯಿದೆಮಂಡಲವು ಸೆಕ್ಯುರಿಟಿ ಎಂಬ ಹೊಸ ಕಾನೂನವನ್ನು ಪಾಸಮಾಡಿ ಪೋಲೀಸರ ಕೈಯಲ್ಲಿ ಹೊಸ ಆಯುಧವನ್ನು ಕೊಟ್ಟಿತು. ವ್ಯಕ್ತಿಸ್ವಾತಂತ್ರ್ಯದ ಮೇಲೆ ದೊಡ್ಡ ಸಂಕಟವೇ ಬಂದುಬಿದ್ದಂತಾಗಿದೆ. ಬೇಕಾದ ಸಭ್ಯಮನುಷ್ಯರನ್ನು ಪುಂಡರೆಂದು ಭಾವಿಸಿ ಹಿಡಿದೊಯ್ಯಲಿಕ್ಕೆ ಸಂಪೂರ್ಣ ಅಧಿಕಾರಸಿಕ್ಕಂತಾಯಿತು. ಶ್ರೀಯುತ ಸೇನಗುಪ್ತರು ತಾತ್ಪೂರ್ತಿಕ ಪರವಾನಿಗೆಯನ್ನು ಪಡಕೊಂಡು ತಮ್ಮ ಸ್ವರಾಜ್ಯಪಕ್ಷದವರೊಡನೆ ಕೌನ್ಸಿಲಿಗೆ ಹೋಗಿ ಬಲವಾಗಿ ವಿರೋಧಮಾಡಿದರು ಏನೂ ಪ್ರಯೋಜನವಾಗಲಿಲ್ಲ.

ರಾಜಕೀಯ ಆಂದೋಲನವನ್ನೂ ಕೂಲಿಕಾರರ ಸಂಘಗಳನ್ನೂ ಮುರಿಬಡಿಯಲಿಕ್ಕೆ ಇದೊಂದು ಹೊಸಯುಕ್ತಿ. ಆಳರಸರ ಲೀಲೆಯು ಅಗಾಧವಾದದ್ದು !

ಮಹಾತ್ಮರಿಗೆ:- ಮುಂಬಯಿ ಗವ್ಹರ್ನರ ಸಾಹೇಬರು ಆಮಂತ್ರಣವನ್ನು ಕೊಟ್ಟು ಮಹಾತ್ಮಾ ಗಾಂಧಿಯವರನ್ನು ಮಹಾಬಳೇಶ್ವರಕ್ಕೆ ಬರಮಾಡಿ ಕೊಂಡಿದ್ದಾರೆ. ಸಾರ್ವಭೌಮ ನಿಯುಕ್ತ ವಕ್ಕಲತನ ಶಿಕ್ಷಣಮಂಡಳದ ಕಾರ್ಯತೆಯಬಗ್ಗೆ ಚರ್ಚೆನಡೆದದೆ.

ಶ್ರೀ ಕ್ಷೇತ್ರಕಾಶಿಯಲ್ಲಿದ್ದ ಕರ್ನಾಟಕದ ಸುಪ್ರಸಿದ್ಧ ಉಪಾಧ್ಯರಾದ ವೇದಮೂರ್ತಿ ಚಿಕ್ಕ ಬಾವು ಆಚಾರ್ಯ ಟೊಣಪೀ ಇವರು ವಿಷಮಜ್ವರದಿಂದ ತಾ| ೧೩ನೇದಿನ ವೈಕುಂಠ ವಾಸಿಗಳಾದರೆಂದು ತಿಳಿಸಲು ಅತ್ಯಂತ ವ್ಯಸನವಾಗುತ್ತದೆ. ಇವರು ಕಾಶಿಯಲ್ಲಿ ಎಲ್ಲ ಜನರಿಗೂ ಬಹುಪ್ರಿಯರಾಗಿದ್ದರು.

ಕರ್ನಾಟಕದ ಪಂಡಿತರಾದ ಶ್ರೀ: ಇನಾಮದಾರರು ಹಿಂದೂ ವಿಶ್ವವಿದ್ಯಾಲಯದಲ್ಲಿ "ಪ್ರೊಫೇಸರ" ರಾಗಿದ್ದಾರೆ. ಇವರಿಗೆ ಪರಲೋಕವಿದ್ಯೆಯಲ್ಲಿ ಇತ್ತೀತ್ತ ಹೆಚ್ಚಾಗಿ ಆಸಕ್ತಿಯುಂಟಾಗಿ ಅದರಲ್ಲಿಯೇ ಹೆಚ್ಚಾಗಿ ಕಾಲ ತೆಗೆಯುತ್ತಿದ್ದದರಿಂದ ಕಿಂಚಿತ್ತ ಭ್ರಂಶ್ಟ ರಾಗಿದಾರೆಂದು ಕೇಳುತ್ತೇವೆ.

ಪರದೇಶ

ದಕ್ಷಿಣ ಆಫ್ರಿಕಾ:- ವರ್ಣಭೇದ ಕಾಯಿದೆಯು ಪಾಸಾಯಿತು. ಇನ್ನುಮುಂದೆ ನಮ್ಮ ಹಿಂದೀಬಾಂಧವರು ಹೊಲೆಯರಾಗಿ ಜೀವಿಸಬೇಕಾಯಿತು. ದ್ರವ್ಯಾರ್ಜನೆಯ ಧಂದೆಗಳನ್ನು ಮಾಡಿಕೊಂಡು ಸಮಾಜದಲ್ಲಿ ಘನತೆಗೇರುವ ಮಾರ್ಗವು ಆಫ್ರಿಕೆಯಲ್ಲಿಯ ಹಿಂದೂಜನರಿಗೆ ಬಂದಾಯಿತು. ಬ್ರಿಟಿಶ ಸಾಮ್ರಾಜ್ಯದಲ್ಲಿಯ ಸಮತ್ವನ್ಯಾಯಗಳ ಒಳ್ಳೇಮಾದರಿಯು.

ಕ. ಪ್ರಾಂ. ಕಾ. ಕಮಿಟಿಯ ಕಾರ್ಯಕಾರಿ ಸಭೆ. **ಬಳ್ಳಾರಿ**

ಸಭೆಯಲ್ಲಿ ಮುಖ್ಯಕಾರ್ಯವೇನಂದರೆ ಕೌನ್ಸಿಲು ಹಾಗು ಅಸೆಂಬ್ಲಿಗಳಿಗೆ ಉಮೇದವಾರರನ್ನು ಆರಿಸಿದ್ದು. ಕೆಳಗೆಕಾಣಿಸಿದ ಉಮೇದವಾರರನ್ನು ಆಯಾಭಾಗಗಳಿಗೆ ಕಾಂಗ್ರೆಸ್ಸಿನವರು ನಿಲ್ಲಿಸಬೇಕೆಂದುಗೊತ್ತಾಗಿವೆ.

ಮುಂಬಯಿ ಕೌನ್ಸಿಲಿಗೆ:— ಧಾರವಾಡ — ಶ್ರೀಜೋಗ ವಿಜಾಪೂರ—ಶ್ರೀಕೌಜಲಗಿ ಶ್ರೀನಿವಾಸರಾಯರು.

ಅಸೆಂಬ್ಲಿಗೆ ಮುಂಬೈ ಜಿಲ್ಲೆಗಳಿಂದ—ಶ್ರೀ ಬೆಳವಿ

"ಮದ್ರಾಸ"—ಶ್ರೀಸಾಂಬ್ಯಾಣ ಮದ್ರಾಸ ಕೌನ್ಸಿಲಿಗೆ ಮಂಗಳೂರು ಶ್ರೀ ಕಾರಂತ. ಬಳ್ಳಾರಿಹಾಗೂ ಬೆಳಗಾಂವಿ ಪ್ರಶ್ನೆಗಳು ಮುಂದೆ ಹಾಕಲ್ಪಟ್ಟವು.

ಕರ್ನಾಟಕ ಏಕೀಕರಣ ಪರಿಷತ್ತು. ಅಂದೇ ಮಧ್ಯಾಹ್ನ ೨|| ಗಂಟೆಗೆ ಪರಿಷತ್ತಿನಕಾರ್ಯಕ್ಕೆ ಆರಂಭವಾಯಿತು ಸ್ವಾಗತ ಪತಿಯ ಅಧ್ಯಕ್ಷ ಕೇ. ಗುರುರಾಜರಾವ ಬಿ ಎ ಎಲ್ ಎಲ್ ಬಿ ಇವರು ಸವಿಸ್ತರ ಸ್ವಾಗತ ಮಾಡಿದರು. ಬಳಿಕ ಶ್ರೀ ಕಂಬಳಿಯವರು ಶ್ರೀ ಪಂಡಿತ ರಾಯಪ್ಪಾ ಚಿಕ್ಕೋಡಿಯವರು ಅಧ್ಯಕ್ಷಸ್ಥಾನ ಸ್ವೀಕರಿಸಬೇಕೆಂದು ಮಾಡಿದ ಸೂಚನೆಗೆ ಶ್ರೀ ಕಡಪಾ ಗಂಗಾಧರರಾವ ದೇಶಪಾಂಡೆ ಮುಂತಾದವರು ಎತ್ತಿಹಿಡಿದ ಬಳಿಕ ಶ್ರೀ ಚಿಕ್ಕೋಡಿಯವರು ಆಸನಾರೂಢರಾದರು. ಆಗ ಅವರಿಗೆ ಹೂಮಾಲೆಗಳಿಂದ ಮನ್ನಣೆಯಾಯಿತು.

ಬಳಿಕ ಬಂದ ತಂತಿಗಳನ್ನು ಪ್ರೋತ್ಸಾಹನಪರ ಪತ್ರಗಳನ್ನು ಹೋದ ವರ್ಷದ ವರದಿಯನ್ನೂ ಕಾರ್ಯದರ್ಶಿಗಳು ಓದಿ ತೋರಿಸಿದರು. ಅಧ್ಯಕ್ಷರ ಭಾಷಣವಾದ ತರುವಾಯ ವಿಷಯನಿಯಾಮಕ ಕಮಿಟಿಯು ಏರ್ಪಾಟಾಗಿ ತರತಕ್ಕ ಠರಾವುಗಳ ಚರ್ಚೆಯಾಯಿತು.

ವಿಜಾಪೂರ ಜಿಲ್ಲೆಯ ಕಲೆಕ್ಟರ ಸಾ|| ರ ಪ್ರವಾಸ.

ಇಂಡಿ ೨೫ನೇ ಮೇದಿಂದ — ೨೮ನೇ ಮೇದ ವರೆಗೆ
ಸಿಂದಗಿ ೨೯ನೇ " ೧ನೇ ಜೂನದ ವರೆಗೆ
ವಿಜಾಪೂರ ೨ನೆ ಜೂನದಿಂದ ೪ನೇ ಜೂನದ ವರೆಗೆ
ಬಾಗೇವಾಡಿ ೫ನೇ " ೮ನೇ "
ಮುದ್ದೇಬಿಹಾಳ ೯ನೇ " ೧೩ನೇ "
ವಿಜಾಪೂರ ೧೪ನೇ " ೧೬ನೇ "
ಬಾಗಲಕೋಟ ೧೭ನೇ " ೨೧ನೇ "

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು ಮಾಹಿತೀ ಬಗ್ಗೆ ಬರೆಯಿರಿ

ವಿಳಾಸ:—

ದಿ ಮೋಟರ ಡ್ರಾಯವ್ಹಿಂಗ ಇನ್ ಸ್ಟಿಟೂಶನ್

ಜಮಖಂಡಿಕರ ವಾಡೇ ೪೩೫ ಶನಿವಾರ ಪುಣೇಶಹರ

ಗುಲಕಂದ! ಗುಲಕಂದ!! ಗುಲಕಂದ!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತುರಾಯಿ ಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತುಂಬಾ ಕಮೀಶನ್.

ವಿಳಾಸ:— ಧಾಡಗೆ ಪಾಷಾಣಕರ ಕಂಪನಿ

ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನ ದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಪುಡಿ ಕಿಂ ರೂ ೦-೦-೬, ಪಾವ ಕಿಂ ರೂ. ೦-೯-೦ ಶೇರ ಕಿಂ ರೂ ೧-೦-೦; ೧೦೦ ಪುಡಿಗಳ ಕಿಂ. ರೂ. ೧೨-೦-೦, ಟ ಪೆ. ಖರ್ಚು ವಗೈರೆ. ಪ್ರತ್ಯೇಕ.

ಸುಗಂಧಿ ನಸ್ಯ:— ಈ ನಸ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ, ಥಂಡಿ, ಅಂತಃಶಿರಃಶೂಲ ಮುಂತಾದ ವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದ ರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾ ಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ದಬ್ಬಿ ಕಿಂ ಖರ್ಚು ೦ ೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦. ಪೆ ಪೋ ಬೇರೆ.

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿಯ ತಂಬಾ ಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು, ಪ್ರವತ್ ನೋಡಿ ಮಾಲಿಗೆ ಆರ್ಡರ ಕೊಡಬಹುದು. ಇದರ ಹೊರತು ನಮ್ಮಲ್ಲಿಯ ಬಾಜಾರ ದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇಕಾದ ನಮೂ ನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಡಲು. ಖರೀದಿ ಮಾಡಿ ಕಳಿಸುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್. ಬಿ ಕದಂ, ಬೀಡಿ ಮತ್ತು ತಂಬಾಕು ಜರ್ದಾ ದುಕಾನ. ಮು. ಪೋ. ನಿಪ್ಪಾಣಿ, ಜಿ. ಬೆಳಗಾವ.

ಜಾಹೀರ ನೋಟೀಸು.

ರಾ॥ರಾ॥ ಭೀಮಪ್ಪಾ ಹಣಮಪ್ಪಾ ಗವತ್ರ ಸಾ॥ ಬೆಳಗಲ್ಲ ತಾಲೂಕ ಹುನಗುಂದ ಇವರಿಗೆ—

ಕೆಳಗೆ ಸಹಿ ಮಾಡುವವಳ ಕಡಿಂದಾ ನೋಟೀಸ ಕೊಡುವದೇನಂದರೆ ಬರಾತ್ತದಲ್ಲಾ ನೀನು ನನ್ನ ಲಗ್ನದ ಗಂಡನಿದ್ದು ನಂನ ಗೂಡ ಲಗ್ನ ಆಗಿ ಹತ್ತು ವರ್ಷ ಆಯಿತು ಅಷ್ಟರಲ್ಲಿ ನೀನು ೧-೨ ಸಾರೆ ನನಗೆ ಕರಕೊಂಡು ಹೋಗಿ ಪ್ರಪಂಚ ಮಾಡಿದಿ ಮುಂದೆ ನಂನ ಒಟ್ಟು ರಾಮಪ್ಪಾ ಮಾದಗರ ಅವರ ಮನೆಗೆ ಕರಕೊಂಡು ಬಂದು ಮಾನ ೭ ವರ್ಷ ಆಯಿತು ಬಿಟ್ಟುಹೋಗೀದಿ ನಿನ್ನ ಪತ್ತೇ ಇಲ್ಲಾ ಮತ್ತು ನೀನು ಚ್ಯುತಿ ಭ್ರಷ್ಟ ಆಗಿರತೀದಿ ಅಂತಾ ಕೇಳತಿನಿ ಆವ ತ್ತಿನಿಂದಾ ನಾನು ನಂನ ತವರ ಮನಿ ಹೊಸೂರ ತಾಲೂಕ ಬಾಗಲಕೋಟ ಇಲ್ಲಿ ಒಂದು ಇರತೀನಿ ದಮ್ಮಾಳ ದಿವಸವಿದ್ದು ನಂನ ಹೊಟ್ಟೆ ಆಡಚಣೆಯಿಂದಾ [೨೦೦] ಎರಡ ನೂರು ರುಪಾ ಯಿ ಸಾಲಾ ಮಾಡೀನಿ ನಿಂನ ಆಸಾ ನನಗೆ ಉಳಿಯದಂತೆ ಆಗಿದೆ ಆದರೂ ಈ ನೋಟೀಸಿನ ತಾರೀಖಿನಿಂದಾ ಒಂದು ತಿಂಗಳೊಳ ಗಾಗಿ ಬಂದು ದೇಣೆ ಫೇಡ ಮಾಡಿ ನನ್ನನ್ನು ಕರಕೊಂಡು ಹೋ ಗಬೇಕು ಹೀಂಗೆ ಮಾಡದಿದ್ರೆ ಇನ್ನೇ ಫಾರಖತ್ ಅಂತಾ ತಿಳಿ ಬೇಕು ಮುಂದೆ ನಾನು ಪುನಃ ಉಗಿ ಹೋಗತೀನಿ ಮುಂದೆ ನಿಂನ ಹಕ್ಕು ನಂನ ಮೇಲೆ ಯಾವತ್ತು ಉಳಿಯಲಿಕ್ಕಿಲ್ಲಾ ಈ ನೋ ಟೀಸಿನ ಖರ್ಚು ನಿಂನ ತಲಿಯ ಮೇಲೆ ಅದೆ. ಅಂತಾ ಬರಕೊ ಟ್ಟ ನೋಟೀಸ ಸಹಿ ತಾರೀಖ ೧೩—೫—೧೯೨೩ ಇಸ್ವಿ.

† ಈ ಎಡಗೈ ಹೆಬ್ಬೆಟ್ಟಿನ ಗುರ್ತು ಪಮ್ಮವ್ವಾ ಗಂಡ ಭರಮಪ್ಪ ಗವತ್ರ ಸಾ॥ ಹೊಸೂರ ಇವಳು ಮಾಡಿದ್ದು ದ॥ ಗುರುರಾವ ರಾಮಚಂದ್ರ ಕುಲಕರ್ಣಿ ಹೊಸೂರ.

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಭೆ.

ಇವರು ಮೇ ೧ ನೇ ವಾರದಿಂದ ಮಣನೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ॥ ದಿವಸ ೫—೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎನ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೦೦ ಮಿ. ವಿಠ್ಠಲ ಬಿವಾಜಿ ಸೇಟ ಕಲಾನ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೨೬ ಮಿ॥ ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕು ಸಿರಾ (ಜಿ. ತುಮಕೂರು.)

(೩) ಬಾಂಡ ನಂ. ೧೯೯೪೬ ಮಿ॥ ವೆಂಕಟರಮಣ, ವೆಂಕಟರಮಣ ಹೆಗಡೆ, ನೇಕಕರಿ ತಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೬೨೩ ಮಿ॥ ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರಿಸಾಪೇಟೆ ಒಕ್ಕಾರಿ.

(೫) ಬಾಂಡ ನಂ. ೩೫೦ ಮಿ॥ ರಾಮಚಂದ್ರ, ವಾಮನ ಕಾಂಕನ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೫೦ ಮಿ॥ ಆರ್. ಎಚ್. ನಾಟೇಶ. ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ದೆಕ್ಕನ)

ಬಿ. ಎಸ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ.)

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟಿ ಖ ಪುಕ್ಕಟೆ

ಟಿಪ್ಪಣಿ:— ಗಡಿಯಾಳ ತನ್ನ ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿವ ವಸ್ಥೆರೆ ಹಚ್ಚಿ ಕಳಿಸಲಾಗುವವು

ಲಿಬರ್ಟಿ ವಾಚ ಕಂ. (India) ಮುಂಬೈ ನಂ. ೪

ಕಾನಡಾ ಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಪೂರ್ಣವಾಗಿ ಒರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ಓದ ಧರ್ಮದ ಕನ್ನಡದ ಶೈಲಿಯನ್ನೂ ನೋಡಬಿಚ್ಛಿಸುವವರು ಈ ವಾರಪತ್ರಿಕೆಯನ್ನು ಮೊದಲು ಓದಬೇಕು.
ವಾರ್ಷಿಕ ವರ್ಗಣಿ ೩-೮-೦ ಪತ್ರ:—
ಸಂಪಾದಕ ಕಾನಡಾ ಧುರೀಣ ಕುಮಟಾ, ಜಿ. ಉತ್ತರ ಕನ್ನಡ

ಸಿ ನಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನನ್ನ ಕಡೆಗೆ ೬ ಆಣೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಬಹುದು ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಲಾ ವಿಜಾಪೂರ.

ಪೊರವಾಲ ಬ್ಲ್ಯಾಕ ಟೂಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ— ೫ ಆಣೆ ಟ ೭ ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು

ಪೋರವಾಲ ಕ್ಯಾಂಡ ಕೊ. (ರತಿ ಪೂರ) ಪ್ರೊಪ್ರೈಟರ

ಧಣೀ ಮೋಟಾರ

ಸೋಲಾಪುರದಿಂದ ಮತ್ತು ಹೊಸ ನೋಟಾರ ಉದ್ರಿ ಹಾಗೂ ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರವಾರೆ
ಮೋಟರವಾಲ್ಯಾ ಮುಂಬೈ ನಂಬರ ೪

ಬಾಕಿ ಕೊ ಟೆಮ ಏಜಂಟರು ಬೆಂಗಳೂರ ಬೇರೆ ಊರುಗಳಿ ಕನ್ನಡಿಗರ ಕಾರ್ಯಾಲಯ

ಈ ಪತ್ರಿಕೆಯು ಬಾಗಲಕೋಟೆ ರಾವ್ ಕೊಕ್ಕನ ಕನ್ನಡಿಗ ಕಾರ್ಯಾಲಯದ ವಿದ್ಯಾರಣ್ಯಮುದ್ರಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕನ್ನಡಿಗರ ಬಗ್ಗೆ ಸ್ಪೆಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ವಂದ್ಲಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾಃ—ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.



ಡಾಕ್ಟರ ಬಸಪ್ಪ ಸಂಗಪ್ಪ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಕಟ್ಟ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯು ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ್ ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಸರಿಯಾದ ಗಂಟೆಯನ್ನು ತೋರಿಸುವುದು. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ. 7-2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟೆನ್ ಪೇನಾ

ಈ ಪೇನಾವು ಸೀಮೆಯಲ್ಲಿ ತಯಾರಾದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಮಾತುಗಳ ವರೆವಿಗೂ ಬರೆಯುವದು! 14 ಕ್ಯಾರೆಟ್ಟ ಭಂಗಾರದ ಮುಳ್ಳು ಇರುವದು. ಇದನು ಈ ತಿಂಗಳೊಳಗಾಗಿ ಕರಿಸಿಕೊಡವರಿಗೆ 12 ರೋಜ್ ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು. ಕ್ರಯ ಪೇನಾ 1ಕ್ಕೆ 2-0-0

ವಿಳಾಸಃ—ಎಸ್. **ಪಾಲ್ ಅಂಡ್ ಕೊ,**

ಪಿ. ಬಿ ನಂಬರ್. 542,

ಪಾರ್ಕ್‌ಟೌನ್ ಮದ್ರಾಸು.

ಸಾಧ್ವೀ ಮತ್ತು ಸಂಪದಭ್ಯುದಯ

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ.

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚಸೇರಿ ೩-೧೩-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ ೨೦-೦-೦ ತಿಂಗಳಿಗೆ ೧-೧೦-೦ ಆಣೆ ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯ. ಮೈಸೂರು.

FORSAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to—

N. K. Kulkarni. Agent Bagalkot.

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿಮೋಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.





The Cheapest House.

1. For quick; Economical and satisfactory service, please go for the wellknown Chevrolet cars, Trucks products in the Decccan
2. For all spare parts of the Various cars specially Chevrolet, Ford, Dodge and Overland cars,
3. For the cheapness in tyre tubes especially the wellknown Michelin products,
4. For all kinds of Lubricating oils Grease etc,
5. For undertaking all kinds of tyre tube repairs in Vulcansing by a specalist to give satisfactory work,
6. For Building Motor-bodies of Various types by workers on uptodate line.
7. For all kinds of Motor repairs,

Aply to:-

Messrs Royal motor service
Automobile Engineers
Bagalkot.

Sub dealers in
Chevrolet cars
for the Bijapur Dist

ಅಲಭ್ಯ ಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವಿಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಸಗಳನ್ನು ಸಾಮಾನುಗಳನ್ನು ದಕ್ಷಣದಲ್ಲಿ ಖರೀದಿ ಮಾಡುವ ಸಲುವಾಗಿ,

೨ ಎಲ್ಲ ಗಾಡಿಯು ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ವೊವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟುಬುಗಳು ಖರೀದಿಗಾಗಿ,

೪ ಎಲ್ಲ ನಮೂನೆಯು ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರ ಸರ್ವಿಸ.
ಬಾಗಲಕೋಟೆ

ವಿಜಾಪೂರ ಜಿಲ್ಹೆಯಲ್ಲಿ
ಮೊಟಾರುಗಳಿಗೆ ಸಬ ಏಜಂಟರು,

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ವೈಶಾಖ ಬಹುಳ ೧ ಶಕೆ ೧೮೪೪ ತಾ॥ ೨೮. ೫. ೧೯೨೭. | ಸಂಚಿಕೆ ೧೦

ಸಂಪಾದಕನ ಭೂಮಿ

(*)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾ ತನಯ ದತ್ತ

ಮುಂಬೈ ಪ್ರಾಂತದ ಎರಡನೇಯ ಮಹಿಳೆಯರ ಪರಿಷತ್ತಿಗೆ ಮೈಸೂರ ವಿದ್ಯಾಖಾತೆಯ ಶಿಕ್ಷಿಕೆಯರಾದ **ಕುಮಾರಿ** ಸಿ. ಲಕ್ಷ್ಮಮ್ಮ ಬಿ. ಏ ಇವರು ಅಧ್ಯಕ್ಷರಾಗಿದ್ದರು. ಅವರು ಪರಿಷತ್ತಿನಲ್ಲಿ ಮಾಡಿದ ಭಾಷಣವು ಎಲ್ಲ ರೀತಿಯಿಂದಲೂ ತೃಪ್ತಿಕರವಾದುದೂ ಪರಿಪೂರ್ಣವಾದುದೂ ಎಂದು ಹೇಳಲು ಅಭ್ಯಂತರವಿಲ್ಲ. 'ಹಳೆಯದೆಲ್ಲ ಕೀಳು' ಎಂಬ ಪಂಥದವರೂ ಅವರಲ್ಲ; ಹೊಸದೆಲ್ಲ ಮೇಲು ಎಂದು ಪ್ರತಿಪಾದಿಸುವವರೂ ಅವರಲ್ಲ. ಹಳೆ ಹೊಸತುಗಳ ಮಧುರ ಮೇಳನವೇ ಅವರಿಗಿಷ್ಟವಾದುದು. "ಈಗ ನಾವು ಕಲಿಯುವ ವಿದ್ಯೆಯೊಡನೆ ಪರದೇಶಿಯರ ನಡೆನುಡಿಗಳೂ ಆಚಾರ ವ್ಯವಹಾರಗಳೂ ಸೇರಿಕೊಂಡು, ಎಲ್ಲಿ ನಮ್ಮ ಪೂರ್ವಾಚಾರಗಳನ್ನು ಕೆಡಿಸಿ ಬಿಡುವವೋ ಎಂದು ಕೆಲವರು ಸಂದೇಹಪಡುತ್ತಾರೆ ಹಾಗೆ ಊಹಿಸಲು ಕಾರಣವೇನೂ ಇಲ್ಲವೆಂದು ನಾನು ಖಂಡಿತವಾಗಿಯೂ ಹೇಳಬಲ್ಲೆ. ನಮ್ಮ ಸನಾತನ ಧರ್ಮಗಳು ಇತರರ ಪ್ರೇರಣೆಗೆ ಸುಲಭವಾಗಿ ಬದಲಾಯಿಸತಕ್ಕವಲ್ಲ. ಈಗಿನ ವಿದ್ಯೆಯಿಂದ ಅವು ನೆಲೆ ತಪ್ಪುವುವೆಂದು ಹೇಳುವುದು ಹೇಗೆ? ಈ ಕಾರಣ ಸಂದೇಹದಿಂದ ಶ್ರೇಷ್ಠವಾದ ವಿದ್ಯೆಯನ್ನು ದೂರೀಕರಿಸಬಹುದೇ?" ಎಂದು ಅವರು ಈಗಿನ ವಿದ್ಯೆಯನ್ನು ಎತ್ತಿ ಹಿಡಿದಿದ್ದಾರೆ. ಇಷ್ಟೇ ನುಡಿದು ಅವರು ಬಿಟ್ಟಿದ್ದರೆ ಭಿನ್ನಾಭಿಪ್ರಾಯವಾಗುವ ಸಂಭವವಿದ್ದಿತು. ಆದರೆ ಅವರು ಅನ್ನುವದೇನಂದರೆ:- "ಸ್ತ್ರೀಯರ ವಿದ್ಯಾಭ್ಯಾಸವು ಗೃಹಸ್ಥಾಶ್ರಮದಲ್ಲಿ ಉಪಯೋಗವಾಗುವ ವಿಷಯಗಳಿಂದಲೇ ಕೂಡಿರಬೇಕು. ಅಂದರೆ ಚೆನ್ನಾಗಿ ಭಾಷಾ ಜ್ಞಾನವೂ, ಗಣಿತದ ಮುಖ್ಯ ವಿಷಯಜ್ಞಾನವೂ, ಗೃಹಕೃತ್ಯ ನಿರ್ವಾಹಕ ಕ್ರಮ, ಶಾರೀರ ಧರ್ಮ ಶಾಸ್ತ್ರ, ಸಂಗೀತ, ಹೊಲಿಗೆ, ನೂಲುವುದು ಮೊದಲಾದವುಗಳಿಂದ ಕೂಡಿರಬೇಕು." ಶಾಲೆಯಲ್ಲಿಯ ವಿದ್ಯಾಭ್ಯಾಸದಿಂದಲೇ ನಮ್ಮ ಲಕ್ಷ್ಮಮ್ಮನವರು ತೃಪ್ತರಿರುವದಿಲ್ಲ ಗೃಹ ಶಿಕ್ಷಣವೇ ನಿಜವಾದ ಶಿಕ್ಷಣವೆಂದು ಅವರ ಮತ, "ನಮ್ಮ ಬಾಲಕಿಯರ ಗೃಹಕೃತ್ಯನಿರ್ವಾಹಣೆಗೆ ಅವರ ಪಾಠಶಾಲೆಗಳಲ್ಲಿ ದೊರೆಯುವ ವಿದ್ಯಾಭ್ಯಾಸವು ಎಷ್ಟಾದರೂ ಸಾಲದು. ಸುಗುಣಾಭಿವೃದ್ಧಿ ದೈವಭಕ್ತಿ, ಗುರುಭಕ್ತಿ' ಶುಶ್ರೂಷೆ, ವಿನಯ ದಯೆ, ತಾಳ್ಮೆ, ಮಿತವ್ಯಯ' ಶುಚಿ, ಕ್ರಮವರಿತ ಕೆಲಸ—ಈ ಗುಣಗಳೆಲ್ಲ ಮನೆಯಲ್ಲಿಯೇ ಕಲಿಯಬೇಕು' ಬಾಲಿಕೆಯರ ಹೃದ್ಭೂಮಿಕೆಯಲ್ಲಿ ಸದ್ಗುಣದ ಬಿತ್ತುಗಳನ್ನು ಬಿತ್ತಲು ಮನೆಯೇ ಯೋಗ್ಯವಾದ ಶಿಕ್ಷಣದ ಭುವನವೆಂಬುದು ಇದರಿಂದ ಚೆನ್ನಾಗಿ ವ್ಯಕ್ತವಾಗುತ್ತಿದೆ. ಕುಲದ ಏಳ್ಗೆಯು ಪುರುಷರಿಗಿಂತಲೂ ಸ್ತ್ರೀಯರನ್ನೇ ಹೆಚ್ಚು ಅವಲಂಬಿಸಿರುವದೆಂದೂ, ಪಾತಿವ್ರತ್ಯದ ಮೇಲೆಯೇ ಸ್ತ್ರೀಯರ ಧರ್ಮವು ನೆಲಿಸಿ ನಿಂತಿರುವವೆಂತಲೂ' ಸ್ತ್ರೀಯರು ತಮ್ಮ ಎಲ್ಲ ಸದ್ಗುಣಗಳಿಂದ ಮನೆಯನ್ನು 'ಶಾಂತಿ ನಿಕೇತನ' ವನ್ನಾಗಿ ಮಾಡಬೇಕೆಂತಲೂ ಇವರು ನುಡಿದಿದ್ದಾರೆ. ಇವರ ಕೊನೆಯ ಮಾತುಗಳಂತೂ ಬಹಳೇ ಹೃದಯಂಗವವಾದವುಗಳಿರುತ್ತವೆ. ಅಕಳಂಕವಾದುದಾಗಿಯೂ, ಉದಾರವಾಗಿಯೂ, ಸ್ವಾರ್ಥತ್ಯಾಗದಿಂದಲೂ ನಮ್ಮ ಜೀವನ ಯಾತ್ರೆಯ ನಡಿಸುವ ಸಾಹಸ ಪಡಬೇಕು. ನಮ್ಮ ತಾಯಿ ತಂದೆಗಳಿಗೂ ಕೈ ಹಿಡಿದ ಪತಿಗೂ ತನ್ಮೂಲಕ ಜನಾಂಗಕ್ಕೂ ಜನ್ಮ ಭೂಮಿಗೂ ನಮ್ಮೀ ಜನ್ಮವನ್ನು ಧಾರೆ ಎರೆಯಬೇಕು. ಭಗವಂತನ ಪಾದಾರವಿಂದಗಳಲ್ಲಿ ನಮ್ಮ ಚಿತ್ತವೃತ್ತಿಯನ್ನು ಸ್ಥಿರಗೊಳಿಸಬೇಕು. ನಮಗೆ ಸ್ವಾರ್ಥ ಸುಖವು ದೃಷ್ಟಿಪಥದಲ್ಲಿರಬಾರದು. ನಮ್ಮ ಕುಟುಂಬದ ಕೀರ್ತಿ ಜ್ಯೋತಿಯನ್ನು ಬೆಳಗುವದರಲ್ಲಿ ನಮ್ಮ ದೇಹವನ್ನು ತೇಯಬೇಕು. ನಮ್ಮ ಸೀತಾ **ದಮಯಂತಿಯರು** ಸ್ಥಾಪಿಸಿದ ಭಾರತೀಯರ ಸ್ತ್ರೀಧರ್ಮ ಮಾರ್ಗವು ಕಿಂಚಿತ್ತಾದರೂ ಮಲಿನವಾಗದಂತೆ ಅವರ ಮಾರ್ಗವನ್ನೇ ಹಿಡಿದು ನಡೆಯಲು ಮಾಡು ಪಡಬೇಕು." ಇವರೆಂದುದನ್ನೇ ಹೊನ್ನಮ್ಮನ ಸವಿನುಡಿಗಳಲ್ಲಿ ಹೇಳಿದರೆ ಹೆಚ್ಚು ಸ್ಪಷ್ಟವಾಗುವುದು.

ಪರಮ ಪತಿವ್ರತೆಯಿದ್ದ ಒಳಿಹೊಳಾ।
ಸಿರಿರಾಣಿ ಸೇರಿ ಬಂದಿಹಳು॥

ಸರಸತಿ ಸಾವಿತ್ರಿ ಗಾಯತ್ರಿಯರು ಮಾ।
ಪರಿಸರದೊಳು ಬಳಸಿಹರು॥

ಮಳೆಗರೆವುದು ಬೆಳೆ ಪೆರ್ಚುವುದಿಳೆ ತಳ।
ಕಿಳಿದು ಪೋಗದೆ ನಿಲುವುದು॥
ಪಳಿವಿಲ್ಲದ ಪತಿವ್ರತೆಯರ ನಡತೆಯ।
ಬಳಮೊಳೆಂಬರು ಬಲ್ಲವರು॥

ಒಟ್ಟಿನ ಮೇಲೆ ಕುಮಾರಿ ಲಕ್ಷ್ಮಮ್ಮನವರ ಭಾಷಣವು ಸೊಗಸಾದುದೂ, ಆರ್ಯಸಂಸ್ಕೃತಿಗೆ ಅನುಗುಣವಾದುದೂ, ಹೊಸ ಬೆಳಕನ್ನು ಸ್ವೀಕರಿಸಲು ಅವಕಾಶವುಳ್ಳದೂ ಆಗಿರುತ್ತದೆ. ಅವರ ನುಡಿಗಳು ನಮ್ಮ ಮಹಿಳೆಯರಿಗೆ ದಾರಿಯನ್ನು ತೋರಿಸಲಿ.

ಬಳ್ಳಾರಿಯಲ್ಲಿ ಜರಗಿದ ಮೂರನೆಯ ಕೀರ್ತನ ಸಮ್ಮೇಳನಕ್ಕೆ ಲಿಂಗರಾಜ ಅರಸಿನವರು ಅಧ್ಯಕ್ಷರಾಗಿದ್ದರು. ಇವರು ಮೇಲಾದ ಕನ್ನಡಕವಿಗಳಿರುವರು. ಸಿರಿಸರಸ್ವತಿಯರು ಇವರಲ್ಲಿ ಕೂಡಿ ಕೆಳೆತನದಿಂದ ನಲಿಯುತಿರುವರು. ಇಂತಹ ಪ್ರತಿಭಾಶಾಲಿಗಳು ಸಮ್ಮೇಳನಕ್ಕೆ ಅಧ್ಯಕ್ಷರಾಗಿ ದೊರೆತದ್ದು ಬಳ್ಳಾರಿಯ ಭಾಗ್ಯವೇಸರಿ. ಕನ್ನಡಿಗರಿಗೆ ಅಧ್ಯಕ್ಷರ ಅಲ್ಪಪರಿಚಯವನ್ನು ಕನ್ನಡಿಗನು ಮಾಡಿಕೊಡುವುದು ವಿಹಿತವಲ್ಲವೇ? ಲಿಂಗರಾಜರು ೧೮೬೦ನೇ ಇಸವಿಯಲ್ಲಿ ಜನ್ಮ ತಾಳಿದರು. ಶ್ರೀಮನ್ಮಹಾರಾಜ ಒಡೆಯರವರ ಎದೆಯಲ್ಲಿಯೇ ಅರಮನೆಯಲ್ಲಿ ಬೆಳೆದರು. ಇವರಿಗೆ ಚಿಕ್ಕಂದಿನಿಂದ ಕನ್ನಡದ ಬಗ್ಗೆ ಪ್ರೇಮವೂ ಆದರವೂ ಬಹಳ. ನವನವೋನ್ಮೇಷಶಾಲಿನಿಯಾದ ಪ್ರಜ್ಞೆಯಂತೂ ಇವರಲ್ಲಿದ್ದಿತು. ಅದಕ್ಕೆ ಅಭ್ಯಾಸದ ಜೊತೆಯಾಯಿತು. "ಶಕ್ತಿರ್ನಿಪುಣತಾ ಲೋಕಶಾಸ್ತ್ರಕಾವ್ಯಾದ್ಯವೇಕ್ಷಣಾತ್। ಕಾವ್ಯಜ್ಞಶಿಕ್ಷಯಾಭ್ಯಾಸಃ ಇತಿ ಹೇತುಸ್ತದುದ್ಭವೆ, (ಕಾವ್ಯನಿರ್ಮಾಣಶಕ್ತಿ, ಪ್ರಪಂಚಪರೀಕ್ಷೆ, ಶಾಸ್ತ್ರಪರಿಚಯ, ಕಾವ್ಯಾವಲೋಕನ ಇವೇ ಮೊದಲಾದವುಗಳಿಂದ ಉಂಟಾದ ನಿಪುಣತೆ ಕಾವ್ಯಜ್ಞರೆಡೆಯಲ್ಲಿ ಅಭ್ಯಾಸ—ಇವೆಲ್ಲವುಗಳು ಸಮ್ಮಿಳಿತವಾಗುವದರಿಂದ ಕಾವ್ಯವು ಹುಟ್ಟುತ್ತದೆ) ಎಂಬಂತೆ ಇವರಲ್ಲಿ ಇವೆಲ್ಲವುಗಳು ಒಟ್ಟುಗೂಡಿರುವವು ಆದುದರಿಂದ ಕಾವ್ಯನಿರ್ಮಾಣದಲ್ಲಿ ಇವರು ಶಕ್ತರಾದರು. ರಾಮಾಯಣಸಂಗ್ರಹ, ಮತ್ತು 'ಯದುನೃಪ ವಿಜಯ' ಎಂಬ ಎರಡು ಕಾವ್ಯಗಳನ್ನು ಭಾಮಿನಿಷಟ್ಪದಿಯಲ್ಲಿ ರಚಿಸಿರುವರು. ರಾಮಾಯಣಸಂಗ್ರಹವು ತಿಳಿಗನ್ನಡದ ಸುಲಭವಾದ ಶೈಲಿಯಲ್ಲಿ ಬರೆಯಲ್ಪಟ್ಟಿದೆ. ಅದರಲ್ಲಿ ಪ್ರಸಾದ ಗುಣವು ಎಲ್ಲೆಲ್ಲಿ[illegible] ಒಡೆದು ತೋರುತ್ತಿದೆ. ಈ ಕಾವ್ಯವು ದ್ರಾಕ್ಷಾಪಾಕ ಶೈಲಿಯ ಉದಾಹರಣೆಯಾಗಿರುವದು. ಇದರಲ್ಲಿಯ ಪದ್ಯಗಳು ಎಷ್ಟು ಸುಲಭವಾದವುಗಳೆಂಬುದಕ್ಕೆ ಎರಡು ಪದ್ಯಗಳನ್ನು ಆಯ್ದು ಕೊಡುತ್ತೇವೆ.

ಅಣ್ಣಾ ದೇವನೆ ನಿನ್ನ ನುಳಿದೊಡೆ।
ಚೆಣ್ಣಾಗೀ ಭರತಂಗೆ ಜೀವನ।
ವಿನ್ನು ಬೇರೆಲ್ಲಿಹುದು ಬರ್ಪನು ನಿನ್ನ ಬೆಂಬಿಡಿದು॥
ಕುನ್ನಿಯೀಕೆಯ ಮಾತಿಗತಿ ಸಂ।
ಪನ್ನನೀನಿದನುಳಿದು ನೆಲನನು।
ಬಣ್ಣಗಿಡುವುದೆ ಬನದೆ ಜಾ ಬಾರಿದುವೆ ತರವಲ್ಲ॥

(ರಾಮನು ವನವಾಸಕ್ಕೆ ತೆರಳಿದನೆಂದು ತಾಯಿಯ ಬಾಯಿಂದಹೊರಟೊಡನೆ, ಭರತನ ದುಃಖೋದ್ರೇಕದ ಮಾತುಗಳಿವು)

ಇದರ ತೀರದ ವೃಕ್ಷಗಳೊಳಿಹ।
ವಿಧ ವಿಧದ ಸುಮತತಿಯು ನುದುರಿಸು।
ಕದರ ಕಂಪಿಂದೊಗೆವ ಮರುತನು ಸೊಂಪ ಬೀರುತ್ತೀ॥
ಸುದತಿ ಮಿಗೆ ಸಂತಸವ ತೋರುತೆ।
ಸದಯ ಭಾವದೆ ಚರಿಸುತಿರ್ದಪ।
ನೊದವಲಹುದೇ ಬಯಸಲೀ ಬಗೆ ನಮಗೆ ನಗರಿಯಲಿ॥

(ಮಂದಾಕಿನೀತಟದಲ್ಲಿ ಸೀತೆಯು ಚಿತ್ರಾದ್ರಿದಾಸರ ಕಳೆಯಲೆಂದು ರಾಮನು ನುಡಿದಮಾತುಗಳಿವು) ಬಹುಶಃ ಎಲ್ಲಪದ್ಯಗಳು ಹೀಗೆಯೇ ಸುಬೋಧವಾಗಿರುತ್ತವೆ. ಕರ್ನಾಟಕದಲ್ಲಿಯ ಎಲ್ಲ ಜನರ ಆದರಕ್ಕೆ ಈ ಕಾವ್ಯವು ಪಾತ್ರವಾಗಿರುತ್ತದೆ. ಇದರ ಕವಿತ್ವಶಕ್ತಿಯನ್ನು ನೋಡಿ ಶ್ರೀಕೃಷ್ಣರಾಜ ಒಡೆಯರವರು ಇವರಿಗೆ ೧೯೨೪ನೇ ಇಸವಿಯಲ್ಲಿ ರಾಜಕವಿಭೂಷಣ ಎಂಬ ಬಿರುದನ್ನು ಕೊಟ್ಟರು. ಕರ್ನಾಟಕದ ರಂಗಭೂಮಿಯ ಪರಿಷ್ಕರಣಕ್ಕಾಗಿ ಶ್ರಮಪಡುತ್ತಿರುವವರಲ್ಲಿ ಇವರೊಬ್ಬರು ಅಗ್ರಗಣ್ಯರು. ಇವರು ಅರಮನೆಯಲ್ಲಿ ಭಕ್ಷಿಯವರಾಗಿ ಕೆಲಸ ಮಾಡುತಲಿರುವರು. ಈಗ ಇವರು ೬೦ವರ್ಷವುಳ್ಳವರು. ಮುಪ್ಪಿನಲ್ಲಿಯೂ ಕೂಡಾ ಕನ್ನಡದ ಏಳ್ಗೆಗಾಗಿ ದುಡಿಯುತ್ತಿರುವರು. ಇವರಂತೆ ತರುಣಕನ್ನಡಿಗರು ದುಡಿಯಲು ತೊಡಗಿದರೆ ಹೆಸರಾದರೂ ಕೂಡ ಹೇಳಹೆಸರಿಲ್ಲ' ವೆಂಬ ಸ್ಥಿತಿಯು ತೀವ್ರ, ದೂರಾಗುವದು ನಮ್ಮ ಲಿಂಗರಾಜ ಅರಸಿನವರಿಗೆ ಕರ್ನಾಟಕದ ಸೇವೆಯನ್ನು ಮಾಡಲು ಭುವನೇಶ್ವರಿಯು ಇನ್ನೂ ಆಯುರಾರೋಗ್ಯ ಸಂಪತ್ತುಗಳನ್ನು ವುಂಟುಮಾಡಲಿ

ಏಕೀಕರಣ ಪರಿಷತ್ತು.

೨೦ನೇ ತಾರೀಖು ಸಂಜೆಯ ೬॥ ಘಂಟೆಗೆ ಬೆಳಗಾವಿಯ ಡಿಸ್ಟ್ರಿಕ್ಟ ಲೋಕಲ ಬೋರ್ಡ ಪ್ರೆಸಿಡೆಂಟರಾದ ಶ್ರೀಮಾನ್ ಪಂಡಿತಪ್ಪ ಚಿಕ್ಕೋಡಿ ಬಿ ಎ ಇವರ ಅಧ್ಯಕ್ಷತೆಯಲ್ಲಿ ಏಕೀಕರಣ ಪರಿಷತ್ತಿನ ಕಾರ್ಯಕ್ಕೆ ಪ್ರಾರಂಭವಾಯಿತು. ಪರಿಷತ್ತಿನ ಸ್ವಾಗತ ಸಭೆಯ ಅಧ್ಯಕ್ಷರಾದ ಶ್ರೀ ಗುರುರಾಯರು ಏಕೀಕರಣದ ಮಹತ್ವದ ಆವಶ್ಯಕತೆಯ ಲಾಭಗಳನ್ನು ಕುರಿತು ಭಾಷಣಮಾಡಿ ಸದಸ್ಯರಿಗೆ ಸ್ವಾಗತವನ್ನಿತ್ತರು. ಆಮೇಲೆ ಈ ಕೆಳಗಿನ ವಿಷಯಗಳನ್ನು ಅನುಸರಿಸುವದರಿಂದ, ಏಕೀಕರಣ ಕಾರ್ಯವನ್ನು ಜಾಗ್ರತೆಯಾಗಿ ಮುಂದುವರಿಸಬಹುದೆಂದು ನುಡಿದರು.

[೧] ಒಂದು ಅಖಿಲ ಕರ್ನಾಟಕ ದಿನಪತ್ರಿಕೆಯನ್ನು ಹೊರಡಿಸುವದು.

[೨] ಬಾಲಕ ಬಾಲಕಿಯರಿಗೆ ಕನ್ನಡ ಪಾಠಶಾಲೆಗಳನ್ನು ಪ್ರಾರಂಭಿಸುವದು.

[೩] ಕನ್ನಡ ವಾಚನಾಲಯಗಳನ್ನೂ, ಪುಸ್ತಕ ಭಾಂಡಾರಗಳನ್ನೂ ಸ್ಥಾಪಿಸುವದು

[೪] ಒಂದು ಅಖಿಲ ಕರ್ನಾಟಕ ವಿಶ್ವವಿದ್ಯಾಲಯವನ್ನು ಸ್ಥಾಪಿಸುವದು.

[೫] ಅಖಿಲ ಕರ್ನಾಟಕ ಚರಿತ್ರೆಯ ವಿಷಯದಲ್ಲಿ ಒಂದು ಉತ್ತಮವಾದ ಪಠ್ಯಪುಸ್ತಕವನ್ನು ಬರೆಯಿಸಿ ಪ್ರಕಟಿಸುವುದು.

[೬] ನಿಜವಾದ ಉತ್ಸಾಹದಿಂದ ಕೆಲಸ ಮಾಡುವ, ಏಕೀಕರಣ ಸಭೆಯ ಶಾಖೆಗಳನ್ನು ಸ್ಥಾಪಿಸುವುದು

[೭] ಕಡೆಯಲ್ಲಿ ಏಕೀಕರಣ ತತ್ವದ ಪ್ರಚಾರ ಕಾರ್ಯವನ್ನು, ವೇತನವನ್ನು ತೆಗೆದುಕೊಳ್ಳುವ ಮತ್ತೂ ವೇತನಾಪೇಕ್ಷೆ ಇಲ್ಲದ ಕೆಲಸಗಾರರಿಂದ, ಎಡಬಿಡದೆ ಮಾಡಿಸುವುದು."

ಆ ಮೇಲೆ ಸಭೆಯ ಘಟನೆಯನ್ನು ಗೊತ್ತು ಪಡಿಸುವದಕ್ಕಾಗಿ ನೇಮಿಸಲ್ಪಟ್ಟ ಉಪಸಭೆಯವರು ಪರಿಷತ್ತಿಗೆ ಒಪ್ಪಿಸಿದ ಘಟನೆಯ ನಿಯಮಾವಲಿಯೊಳಗಿನ ಒಂದೊಂದೇ ನಿಯಮವನ್ನು ಓದಿ ಹಲಕೆಲವು ತಿದ್ದುಪಡೆಗಳೊಂದಿಗೆ ಸ್ವೀಕರಿಸಲಾಯಿತು. ಜಿಲ್ಹೆಗೊಂದು ಏಕೀಕರಣ ಸಭೆಯು ಸ್ಥಾಪಿಸಲ್ಪಡಬೇಕು. ಇವೆಲ್ಲವುಗಳು ತಮ್ಮ ತಮ್ಮ ತಾಲೂಕಿನ ಪ್ರಮಾಣದಿಂದ ತಮ್ಮ ಪ್ರತಿನಿಧಿಗಳನ್ನು ಮಧ್ಯವರ್ತಿ ಸಂಸ್ಥೆಗೆ ಆರಿಸಬೇಕು. ಹೀಗೆ ಕರ್ನಾಟಕ

ಏಕೀಕರಣ ಸಭೆಯು ಮಧ್ಯವರ್ತಿ ಸಂಸ್ಥೆಯು ಮುಖ್ಯವಾಗಿ ಪ್ರಾತಿನಿಧಿಕವಾಗಿರಬೇಕೆಂಬುದು ಹೊಸ ಘಟನೆಯ ಮುಖ್ಯ ಸ್ವರೂಪವಾಗಿದೆ ಹೊಸ ಘಟನೆಯ ಮೇರೆಗೆ ಕರ್ನಾಟಕ ದೊಳಗಿನ ಎಲ್ಲ ಜಿಲ್ಲೆಗಳಲ್ಲಿ ಬರುವ ಒಂದೆರಡು ತಿಂಗಳುಗಳಲ್ಲಿ ಏಕೀಕರಣ ಸಭೆಗೆ ಸಭಾಸದರನ್ನು ಕೂಡಿಸಿ ಮಧ್ಯವರ್ತಿ ಸಂಸ್ಥೆಗೆ ಪ್ರತಿನಿಧಿಗಳನ್ನು ಆರಿಸಬೇಕೆಂದೂ ಹೀಗೆ ಹೊಸದಾಗಿ ನಿರ್ಮಾಣವಾದ ಏಕೀಕರಣ ಸಭೆಯು ಅಕ್ಟೋಬರ ತಿಂಗಳಿಂದ ಕಾರ್ಯ ಕ್ರಮವನ್ನಾರಂಭಿಸಬೇಕೆಂದೂ ಅಲ್ಲಿಯ ವರೆಗೆ ತಾತ್ಕಾಲಿಕವಾದ ಕಾರ್ಯಕಾರಿ ಮಂಡಲವನ್ನು ನೇಮಿಸಬೇಕೆಂದೂ ಗೊತ್ತಾಗಿ ಶ್ರೀ. ಪಂಡಿತಪ್ಪ ಚಿಕ್ಕೋಡಿಯವರು ಅಧ್ಯಕ್ಷರಾಗಿಯೂ ಶ್ರೀ ರಾ. ಸಾ. ಹುಕ್ಕೇರಿ ಶ್ರೀ. ಕೌಜಲಗಿಯವರು ಉಪಾಧ್ಯಕ್ಷರಾಗಿಯೂ ಶ್ರೀ. ವಿಶ್ವನಾಥರಾವ ಜೋಗ ಇವರು ಕೋಶಾಧ್ಯಕ್ಷರಾಗಿಯೂ ಶ್ರೀ. ಹಿರೇಮಠ ಹಾಗೂ ಡಾ. ಕಮಲಾಪೂರ ಇವರು ಕಾರ್ಯದರ್ಶಿಗಳಾಗಿಯೂ ಆರಿಸಲ್ಪಟ್ಟರು. ಬಳಿಕ ಪದ್ಧತಿಯ ಪ್ರಕಾರ ಆಭಾರ ಪ್ರದರ್ಶನದ ಠರಾವುಗಳಾಗಿ ಅಧ್ಯಕ್ಷರ ಉಪಸಂಹಾರದ ಭಾಷಣದೊಂದಿಗೆ ಪರಿಷತ್ತಿನ ಕೆಲಸಗಳು ಪರಿಸಮಾಪ್ತವಾದವು.

ಕರ್ನಾಟಕ ಪ್ರಾಂತಿಕ ಪರಿಷತ್ತಿನ

೪ ನೇ ಅಧಿವೇಶನ

(ಬಳ್ಳಾರಿ ತಾ|| ೨೦-೫-೧೯೨೬)

ಠರಾವುಗಳು

—

೧ ಈ ಸಭೆಯು ಶ್ರೀಮತಿ ಪಾರ್ವತಿಬಾಯಿ ಅಂಕಲಿಕರ ಶ್ರೀಮತಿ ಕಮಲಾಬಾಯಿ ಮತ್ತು ಶ್ರೀಯುತ (ಎನ್. ಜಿ.) ಜೋಶಿ (ಎಸ್. ವಿ.) ಶಿರೋಳ ಶಾಸ್ತ್ರಿ ಮತ್ತು ಇಟನಾಳ ಇವರ ಅಕಾಲಿಕ ನಿಧನದ ಬಗ್ಗೆ (ಅತ್ಯಂತ) ದುಃಖಪ್ರದರ್ಶನ ಮಾಡುತ್ತದೆ ಅವರು ದೇಶದೇಳ್ಗೆಗಾಗಿ ತಮ್ಮ ಕೈಲಾದಷ್ಟು ಕೆಲಸ ಮಾಡಿದ್ದಕ್ಕೆ ಅವರಿಗೆ ಅಭಿನಂದೆಯನ್ನೀಯುತ್ತದೆ. ಮತ್ತು ಅವರ ಪರಲೋಕ ಗಮನದಿಂದ ದುಃಖಪಡುತ್ತಿದ್ದ ಅವರ ಬಂಧು ಬಳಗದವರಿಗೆ ಅವರ ದುಃಖದಲ್ಲಿ ಸಹಾನುಭೂತಿಯನ್ನು ತೋರಿಸುತ್ತದೆ.

೨ ರಾವುಂಡ ಟೇಬಲ್ ಕಾನಪರನ್ಸಿನ ಅಧಿವೇಶನ ವೇಳೆಯಲ್ಲಿ ಮಹಾತ್ಮಾ ಗಾಂಧಿ ಸ್ಮಟ್ಸ ಇವರ ಕರಾರು ನಾಮೆಯು ವಿರುದ್ಧ ದಕ್ಷಿಣ ಆಫ್ರಿಕೆಯ ಯೂನಿಯನ್ ಪಾರ್ಲಿಮೆಂಟ ಸಭಾಗೃಹದಲ್ಲಿ ಹಿಂದೂ ಜನರ ವಿರುದ್ಧ "ವರ್ಣ ಪ್ರತಿಬಂಧಕ ಕಾಯದೆಯನ್ನು" ಪಾಸುಮಾಡಿದ್ದಕ್ಕಾಗಿ ದಕ್ಷಿಣ ಆಫ್ರಿಕೆ ಸರಕಾರವನ್ನು ಜೋರಿನಿಂದ ನಿಷೇಧಿಸುತ್ತದೆ.

೩ ಜೀವಿತಾಸ್ತಿ ನಾಶ ಕಾರಕವೂ ಪವಿತ್ರಸ್ಥಾನದ ಪಾವಿತ್ರ್ಯ ಹಾನಿಕರವೂ ಆದ ಹಿಂದೂ ಮುಸಲ್ಮಾನ ಜನರ ದಂಗೆಯ ವಿಷಯಕ್ಕೆ ಅತ್ಯಂತ ಖೇದ ಪ್ರದರ್ಶನ ಮಾಡುತ್ತದೆ. ಮತ್ತು ಮರಣ ಹೊಂದಿದ ಮತ್ತು ಗಾಯಹೊಂದಿದ ಜನರಿಗೆ ಸಮಾನ ಭೂತಿಯನ್ನು ಪ್ರದರ್ಶಿಸಿ ಅಭಿಪ್ರಾಯ ಪಡುವದೇನಂದರೆ ಇಂಥ ದಂಗೆಗಳು ಪರಸ್ಪರ ಸಹನ ಶೀಲತೆಯಿಂದ ಅತ್ಯವಶ್ಯ ಒಂದಾಗ ಬಹುದು.

(೪) ಕಾನಪೂರ ಕಾಂಗ್ರೆಸ್ಸಿನ ೭ನೇ ಠರಾವನ್ನು ದಿಲ್ಲಿಯಲ್ಲಿ ೧೯೨೬ನೆ ಇಸ್ವಿ ಮಾರ್ಚದಲ್ಲಿ ಅಖಿಲ ಹಿಂದುಸ್ಥಾನ ಮಹಾಸಭೆಯ ಕಮಿಟಿಯಲ್ಲಿ ಪಾಸಾದ ೪ನೇ ಠರಾವನ್ನು ಸ್ವೀಕರಿಸುವದಲ್ಲದೆ ಈ ಅಧಿವೇಶನವು ಕಾಯಿದೇ ಮಂಡಳದ ಉಮೇದವಾರರಿಗೆಲ್ಲ ಹಗಲು ಹನ್ನೆರಡು ತಾಸ ಖಾದಿಧರಿಸುವದಕ್ಕೆ ಆಜ್ಞಾಪಿಸುತ್ತದೆ. ಕೆಳಗೆ ಕಾಣಿಸಿದ ಕಾರ್ಯಕ್ರಮಗಳ ಮೇಲೆ ವಿಶೇಷ ಜೋರುಕೊಡಬೇಕೆಂದು ವಿಶಿಷ್ಟ ಆಜ್ಞೆಯನ್ನಿತ್ತಿರುವದು.

[೧] ಕರ್ನಾಟಕದ ಏಕೀಕರಣ.

[೨] ಅಫೂ ಗಾಂಜಾ ಸರಾಯಿಬಡಕತನದ ಸಂಪೂರ್ಣ ತ್ಯಾಗ

[೩] ಖಾದೀ ಮತ್ತು ಸ್ವದೇಶಿಯ ಪ್ರಸಾರ.

[೪] ಬೆಳೆಯ ಬೆಲೆಕಟ್ಟುವಿಕೆಯಲ್ಲಿಯಾಗುವ ಅನ್ಯಾಯವನ್ನು ಸ್ವತಂತ್ರ ಬೇರೆ ವಿಚಾರಣೆ ಮೊದಲಾದ ಉಪಾಯಗಳಿಂದ ದೂರಮಾಡುವದು.

(೫) ಕೈನೂಲು ಕೈಮಗ್ಗಗಳ ಪ್ರಸಾರವೂ, ಪರದೇಶಿ ಅರಿವೆಗಳ ಬಹಿಷ್ಕಾರಾರ್ಥವಾಗಿಯೂ ಬಡಬಗ್ಗರ ಸಂಕಟ ಪರಿಹಾರಾರ್ಥವಾಗಿಯೂ ರಾಮಬಾಣ ಉಪಾಯವೆಂದು ನಂಬುತ್ತದೆ ಮತ್ತು ಖಾದಿಯ ಹುಟ್ಟುವಳಿ ಬಳಕೆಯ ಸಲುವಾಗಿ ಶಕ್ಯವಿದ್ದಷ್ಟು ಪ್ರಯತ್ನ ಮಾಡಬೇಕೆಂದು ವಿಜ್ಞಾಪಿಸುತ್ತದೆ.

(೬) ನಖ ಶಿಖಾಂತ ಕನ್ನಡ ಪ್ರದೇಶವಾದ ಬಳ್ಳಾರಿ ಜಿಲ್ಲೆಯ ಮೇಲೆ ಜೋರಾವರಿಯಿಂದ ಮದ್ರಾಸ ಕೌನ್ಸಿಲಿನವರು ಆಂಧ್ರ ವಿಶ್ವವಿದ್ಯಾಲಯದ ಕಟ್ಟಳೆಯನ್ನು ಹೊರಿಸಿದ್ದಕ್ಕಾಗಿ ಜೋರಿನಿಂದ ನಿಷೇಧಿಸುತ್ತದೆ. ಮತ್ತು ಬಳ್ಳಾರಿ ಜಿಲ್ಹೆಯೂ ಈ ವಿಷಯವಾಗಿ ಜೋರಿನಿಂದ ನಿಷೇಧಿಸಿದ್ದನ್ನು ಪ್ರೋಹಿಸುತ್ತದೆ.

(೭) ಬಳಿಕ ಬರುವ ಕೌನ್ಸಿಲ ಚುನಾವಣೆಯಲ್ಲಿ ಕರ್ನಾಟಕದ ಮತದಾರರೆಲ್ಲರೂ ರಾಷ್ಟ್ರೀಯ ಸಭೆಯ ಪ್ರತಿನಿಧಿಗಳಿಗೇ ಮತಕೊಡಬೇಕಲ್ಲದೆ ಜಾತಿ ಪಂಗಡಗಳನ್ನು ಈ ಪ್ರಸಕ್ತಿಯಲ್ಲಿ ಲಕ್ಷಿಸಕೂಡದೆಂಬ ಗೊತ್ತುವಳಿಯು ಅಧ್ಯಕ್ಷರಿಂದಲೇ ಸೂಚಿತವಾಗಿ, ಅಂಗೀಕೃತವಾಯಿತು.

(೮) ಕಾಂಗ್ರೆಸ ಸಭೆಗಳೆಲ್ಲವೂ ಕರ್ನಾಟಕ ಏಕೀಕರಣ ಕಾರ್ಯಕ್ಕಾಗಿ ಒಂದಾಗಿ ಪ್ರಯತ್ನಿಸ ಬೇಕು.

(೯) ಬಳ್ಳಾರಿಯನ್ನು ಆಂಧ್ರದೊಳಗೆ ಸೇರ್ಪಡಿಸಬೇಕೆಂದು ಕೇಳಲಿಕ್ಕೆ ಮದ್ರಾಸ ನ್ಯಾಯವಿಧಾಯಕ ಸಭೆಯಲ್ಲಿರುವ ಸದಸ್ಯರು ಕರ್ನಾಟಕದಿಂದ ಹೋದ ಶಿಷ್ಟಮಂಡಲಿಯರಿಗೆ ತಮ್ಮ ಬೆಂಬಲ ಕೊಟ್ಟಿದ್ದಕ್ಕಾಗಿ ಕೃತಜ್ಞನಾಗಿರುವದು.

(೧೦) ಕರ್ನಾಟಕ ಪ್ರಾಂತದಲ್ಲಿ ಭಗಿನೀ ಮಂಡಲದ ಶಾಖೆಗಳನ್ನು ಸ್ಥಾಪಿಸಬೇಕು ಅವುಗಳಿಗೆ ಸಾಧ್ಯವಾದ ಸಹಾಯಕೊಡಬೇಕು.

(೧೧) ಸ್ವಯಂಸೇವಕ ಪರಿಷತ್ತಿನವರು ಬರುವ ಸಪ್ಟೆಂಬರದೊಳಗಾಗಿ ೧೦ ಸಾವಿರ ಕಾಂಗ್ರೆಸ ಸಭಾಸದರನ್ನು ಮಾಡುವೆವೆಂದು ಮುಂದೆ ಬಂದುದಕ್ಕಾಗಿ ಅವರ ಅಭಿನಂದನ.

(೧೨) ದೇಶೀಯ ಸಂಸ್ಥಾನದ ಅಂತಃಕಾರ್ಯಗಳಲ್ಲಿ ಕಾಂಗ್ರೆಸದವರು ಕೈಹಾಕಬಾರದೆಂದು ಕಾಂಗ್ರೆಸದವರು ಮಾಡಿದ ಗೊತ್ತುವಳಿಯನ್ನು ತೆಗೆದುಹಾಕಬೇಕೆಂದು ಕಾಂಗ್ರೆಸಕ್ಕೆ ಶಿಫಾರಸು ಮಾಡುವದು.

ಇಹವೃತ್ತ

ಬಿಸಿಲು ದಿನೇ ದಿನೇ ಹೆಚ್ಚುತ್ತಲಿದೆ. ಮಳೆಯ ಲಕ್ಷಣವು ಸ್ವಲ್ಪೂ ಇಲ್ಲ. ಊರ ಭಾವಿಗಳಲ್ಲಿ ನೀರು ಇಲ್ಲದ್ದಕ್ಕೆ ಜನರಿಗೆ ಬಹಳ ತ್ರಾಸವಾಗಿದೆ.

೧೨ ನೇ ಕರ್ನಾಟಕ ಸಾಹಿತ್ಯ

ಸಮ್ಮೇಲನದ ಅಧ್ಯಕ್ಷರಾದ ರಾ. ಸಾ. ಫ. ಗು.

ಹಳಕಟ್ಟಿಯವರ ಭಾಷಣದ ಸಾರಾಂಶವು.

ಮೊದಲು ಸತ್ಕಾರಸಂಘದವರಿಗೆ ತಮ್ಮ ಧನ್ಯವಾದವನ್ನು ಅರ್ಪಿಸಿ, ರಾವಸಾಹೇಬ ಫಕೀರಪ್ಪನವರು ಹೀಗೆ ನುಡಿದರು.

ಕರ್ನಾಟಕತ್ವದ ಅವಶ್ಯಕತೆ

"ಸಭ್ಯಗೃಹಸ್ಥರೇ, ಈಗಿನ ಕಾಲಕ್ಕೆ ಹಿಂದುಸ್ಥಾನದೇಶದ ಬೇರೆಬೇರೆ ವಿಭಾಗಗಳು ಚೈತನ್ಯಗೊಳ್ಳಹತ್ತಿವೆ. ಅನೇಕ ಶತಮಾನಗಳಿಂದಲೂ ಅವು ಘೋರನಿದ್ರೆಯಲ್ಲಿದ್ದು ಈಗ ಮೆಲ್ಲಗೆ ಎಚ್ಚರಿಸಹತ್ತಿವೆ. ರಾಜಕೀಯ, ಸಾಮಾಜಿಕ ಮತ್ತು ವಾಙ್ಮಯಾತ್ಮಕ ಪ್ರಯತ್ನಗಳಲ್ಲಿ ಹೆಸರುವಾಸಿಯಾದ ಮಹಾಜನರು ಅಲ್ಲಲ್ಲಿ ಹೊರಡಹತ್ತಿದ್ದಾರೆ. ಆದರೆ ಇದಕ್ಕೆ ನಮ್ಮ ಕರ್ನಾಟಕ ದೇಶವು ಮಾತ್ರ ಅಪವಾದಾತ್ಮಕವಾಗಿ ಉಳಿದಿದೆಂದು ನಾವು ಅತ್ಯಂತ ಖಿನ್ನತೆಯಿಂದ ಒಪ್ಪಬೇಕಾಗುತ್ತದೆ. ರವೀಂದ್ರನಾಥ ಟಾಗೋರ ಮ. ಗಾಂಧಿ ಚಿತ್ತರಂಜನ ದಾಸ ಅಥವಾ ಪ್ರೋ. ಕರ್ವೆ ಇವರಂಥ ಕಾರ್ಯದಕ್ಷರೂ ಸ್ವಾರ್ಥತ್ಯಾಗಿಗಳೂ ಆದ ಮಹಾತ್ಮರು ನಮ್ಮ ಕರ್ನಾಟಕ ದೇಶದಲ್ಲಿ ಎಷ್ಟು ಜನರು ಇರಬಹುದು? ಈ ಮಹಾತ್ಮರ ಮಾಲಿಕೆಯಲ್ಲಿ ಸೇರುವಷ್ಟು ಯೋಗ್ಯತೆಯುಳ್ಳ ಜನರು ನಮ್ಮ ದೇಶದಲ್ಲಿ ಬಹಳ ಸ್ವಲ್ಪ ಅಥವಾ ಇಲ್ಲವೆಂತಲೇ ಹೇಳಬಹುದು. ನಮ್ಮ ದೇಶದ ಜನರಲ್ಲಿ ಕರ್ನಾಟಕತ್ವದ ತೇಜಃಪುಂಜವಾದ ಭಾವನೆಯು ಇಲ್ಲದೇ ಇದ್ದದ್ದೇ ಇಂಥ ಕನಿಕರ ಸ್ಥಿತಿಗೆ ಕಾರಣವು.

ಕರ್ನಾಟಕತ್ವವೆಂದರೇನು?

ಕರ್ನಾಟಕತ್ವದ ಭಾವನೆಯೆಂದರೆ ಪರನಾಡಿಗರನ್ನು ಪಳಿಯುವದಲ್ಲ. ಈ ಭಾವನೆಯು ಉಚ್ಚತಮವಾಗಿದೆ. ಕರ್ನಾಟಕತ್ವವೆಂದರೆ ತನ್ನ ದೇಶದ ಸಂಸ್ಕೃತಿಯ ಅರಿವು. ಅದನ್ನು ಅರಿತು ಆಚರಿಸುವದು.

ಇಂಥ ಆಚರಣೆಯೇ ದೇಶದ ಪ್ರಗತಿಯ ಕುರುಹು. ಆದರೆ ಈಗಿನ ಕರ್ನಾಟಕಸ್ಥರು ತಮ್ಮದನ್ನು ತಾವು ಮರೆತುಬಿಟ್ಟಿರುವರು ಕರ್ನಾಟಕವು ಪೂರ್ವಕಾಲದಿಂದಲೂ ಪ್ರಸಿದ್ಧವಾದ ದೇಶವು. ಇಲ್ಲಿ ಹುಟ್ಟಿದ ಮಹಾ ವಿಭೂತಿಗಳು ಹಿಂದೂ ಧರ್ಮಜ್ಞಾನ ಮಂದಿರದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಅವರ ಅರಿವು ನಮ್ಮಲ್ಲಿ ಸಂಪೂರ್ಣವಾಗಿ, ಹಾರಿಹೋಗಿದೆ. ಮತ್ತು ಈಗ 'ನಾವು ದುರ್ಬಲರು, ನಮ್ಮಿಂದೇನೂ ಆಗಲಾರದು' ಎಂಬ ಭಾವನೆಯನ್ನು ತಾಳಿಕೊಂಡು ಹತಾಶರಾಗಿ ಉಳಿದಿದ್ದೇವೆ. ಮತ್ತು ಪ್ರಯತ್ನಶೀಲರಾಗುವದನ್ನು ಮರೆತಿದ್ದೇವೆ. ಈ ದುಸ್ಥಿತಿಯನ್ನು ತೊಲಗಿಸುವದರಲ್ಲಿಯೇ ಕರ್ನಾಟಕತ್ವದ ಮಹತ್ವವು ಇದೆ. ಈ ಭಾವನೆಯನ್ನು ಪ್ರಜ್ವಲಿಸುವದರ ಮೇಲೆಯೇ ನಮ್ಮ ಭಾವೀ ಊರ್ಜಿತ ಸ್ಥಿತಿಯು ಅವಲಂಬಿಸಿರುತ್ತದೆ.

ಸಮ್ಮೇಳನದ ಉದ್ದೇಶವು.

ಈ ತೆರನಾದ ಶ್ರೇಷ್ಠ ಭಾವನೆಯನ್ನು ಎಲ್ಲಕಡೆ ಬೀರುವದೇ ಸಾಹಿತ್ಯಸಮ್ಮೇಳನದ ಮುಖ್ಯ ಉದ್ದೇಶವಾಗಿರುತ್ತದೆ. ಆದ್ದರಿಂದ ಈ ಅಧಿವೇಶನಗಳು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಆಗುತ್ತ ಬಂದಿವೆ. ಮತ್ತು ಇವುಗಳ ಸುಪರಿಣಾಮಗಳು ಕನ್ನಡಿಗರ ನಿದರ್ಶನಕ್ಕೆ ಪ್ರತಿವರುಷ ಹೆಚ್ಚೆಚ್ಚಿಗೆ ಬರಹತ್ತಿವೆ. ಬೇರೆಬೇರೆ ಪ್ರಾಂತಗಳ ವಿದ್ವಜ್ಜನರಲ್ಲಿ ಪರಸ್ಪರ ಸಹಾನುಭೂತಿ, ಸೌಹಾರ್ದಗಳು ಹೆಚ್ಚೆಚ್ಚು ಮೂಡತೊಡಗಿವೆ ಇದರಿಂದ ಪ್ರಾಂತಿಕ ಭಾಷೆಯ ಭಿನ್ನತೆಗಳು ಕಡಿಮೆಯಾಗಹತ್ತಿವೆ. ಪ್ರತಿಯೊಬ್ಬ ಕರ್ನಾಟಕಸ್ಥನ ಹೃದಯದಲ್ಲಿ ಕರ್ನಾಟಕದ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ, ಕರ್ನಾಟಕ ಕೀರ್ತನ ಸಮ್ಮೇಳನ, ಕರ್ನಾಟಕದ ಬಾವುಟಗಳು ಎಂಬಿವೇ ಮೊದಲಾದ ವಿಷಯಗಳ ಅವಶ್ಯಕತೆಯು ಹೆಚ್ಚೆಚ್ಚು ಭಾಸವಾಗಹತ್ತಿದೆ. ಇವು ಕರ್ನಾಟಕದ ಆತ್ಮವಿಕಾಸದ ಚಿಹ್ನಗಳಾಗಿವೆ.

ಈ ತೆರದ ಪ್ರಯತ್ನಗಳ ಪ್ರೇರಣೆಗೆ ಸಾಹಿತ್ಯಪರಿಷತ್ತಿನ ಅಧಿವೇಶನಗಳೇ ಪ್ರತ್ಯಕ್ಷವಾಗಿ ಕಾರಣವಾಗಿರುತ್ತವೆ. ಈ ಅಧಿವೇಶನಗಳ ಕಾಲಕ್ಕೆ ನಮ್ಮನಮ್ಮೊಳಗಿನ ನಾನಾವಿಧ ರಾಜಕೀಯ ಜಾತಿವಿಷಯಕ ಭೇದಭಾವಗಳನ್ನು ಮರೆತುಬಿಟ್ಟು ಕರ್ನಾಟಕ ವಾಗ್ದೇವಿಯ ವಿದ್ಯಾಮಂದಿರದ ಶಾಂತ ಮತ್ತು ಸಾತ್ವಿಕ ವಾತಾವರಣದಲ್ಲಿ ಕೆಲಹೊತ್ತಾದರೂ ಆಲೆದಾಡುತ್ತೇವೆ ಆದ್ದರಿಂದ ಈ ಪರಿಷತ್ತಿನ ಕಾರ್ಯಗಳು ಶ್ರೇಷ್ಠತರದವಿದ್ದು ಇವನ್ನು ಪರಿಪೋಷಿಸುವದರಲ್ಲಿಯೇ ಕರ್ನಾಟಕದ ಹೆಚ್ಚುಗಾರಿಕೆ ಇರುತ್ತದೆ.

ಕರ್ನಾಟಕದ ಗತವೈಭವ.

ಕರ್ನಾಟಕಸ್ಥರು ಒಂದು ಕಾಲಕ್ಕೆ ಹಿಂದುಸ್ಥಾನದ ಸಂಸ್ಕೃತಿಯನ್ನೂ ಸ್ವಾತಂತ್ರ್ಯವನ್ನೂ ರಕ್ಷಿಸಲು ಅತ್ಯಂತವಾಗಿ ಪ್ರಯತ್ನಿಸಿದವರಿರುತ್ತಾರೆ. ಈಗ ಹೇಗ ಕರ್ನಾಟಕವು ಒಂದು ಅಲ್ಪದೇಶವೆಂದು ಎಣಿಸಲ್ಪಟ್ಟಿದೆಯೋ ಹಾಗೆ ಮೊದಲಿಗೆ ಇದು ಎಣಿಸಲ್ಪಟ್ಟಿದ್ದಿಲ್ಲ. ಆಗ ನಮ್ಮ ದೇಶದಲ್ಲಿ ಮಹತ್ಕಾರ್ಯಗಳು ಆಗಿವೆ. ಕ್ರಿಸ್ತಶಕದ ಪ್ರಾರಂಭದಲ್ಲಿ ಹೂಣರೂ ಶಕರೂ ಹಿಂದುಸ್ಥಾನವನ್ನು ಅಭಿಯೋಗಿಸಿ, ಕರ್ನಾಟಕವನ್ನು ಒಳನುಗ್ಗುವ ಪ್ರಯತ್ನಮಾಡಲು ಗೋದಾವರಿಯ ವರೆಗೆ ಹಬ್ಬಿದ ಆಗಿನ ನಮ್ಮ ಕನ್ನಡಿಗರು ಅವರ ದಾಳಿಯನ್ನು ಅಲ್ಲಿಯೇ ಹೊಡೆದಟ್ಟಿದರು, ಅಂದಿನಿಂದ ಶಕವರ್ಷವು ಪ್ರಾರಂಭವಾಗಿರುತ್ತದೆ. ಆಮೇಲೆ ಕದಂಬ ರಾಷ್ಟ್ರಕೂಟ ಚಾಲುಕ್ಯರ ಮೂಲಸಂಸ್ಥಾಪಕರು ಏನೋ ಒಂದು ಕಾರಣದಿಂದ ಉತ್ತರ ಹಿಂದುಸ್ಥಾನವನ್ನು ಬಿಟ್ಟು, ದಕ್ಷಿಣದೇಶಕ್ಕೆ ಬರಲು ಅವರಿಗೆ ಆಶ್ರಯ ಕೊಟ್ಟು ಆರ್ಯಸಂಸ್ಕೃತಿಯನ್ನು ಕಾಯ್ದಂಥ ದೇಶವು ಕರ್ನಾಟಕವಾಗಿರುವದು. ಅವರ ಮಹತ್ತಾದ ರಾಜ್ಯಗಳ ರಾಜಧಾನೀ ಪಟ್ಟಣಗಳು ನಮ್ಮದೇಶದಲ್ಲಿಯೇ ಇವೆ. ಈ ರಾಜವಂಶಗಳು ಒಂದು ಸಾವಿರ ವರುಷದ ವರೆಗೂ ಕರ್ನಾಟಕದಲ್ಲಿ ರಾಜ್ಯವಾಳಿದ ಒಳಿಕ ಪಠಾಣ, ಮೊಗಲರ ದಾಳಿಗಳು ಉತ್ತರ ಹಿಂದುಸ್ಥಾನವನ್ನು ಆಕ್ರಮಿಸಿ, ಕರ್ನಾಟಕವನ್ನೂ ಒಳನುಗ್ಗಹತ್ತಿದವು. ಆಗ ಹತ್ತೊಂಬತ್ತು ಶತಮಾನಗಳ ವರೆಗೂ ಶೂರತನದಿಂದ ಕಾದಾಡಿದ ವಿಜಯನಗರ ನರಪತಿಗಳ ರಾಜಧಾನಿಯು ಕರ್ನಾಟಕದ ಮಧ್ಯಪ್ರದೇಶದಲ್ಲಿಯೇ ಇದೆ. ಹೀಗೆ ಕರ್ನಾಟಕಸ್ಥರು ಹಿಂದುಸ್ಥಾನದ ಸ್ವಾತಂತ್ರ್ಯ ರಕ್ಷಣೆಗಾಗಿ ತಮ್ಮ ರಕ್ತವನ್ನು ಸೂರೆಮಾಡಿರುತ್ತಾರೆ. ಇದರಂತೆ ಅವರು ಸಂಸ್ಕೃತಿಯನ್ನು ಕಾಯಲು ಯತ್ನಿಸಿದ್ದಾರೆ. ಆರ್ಯ ಸಂಸ್ಕೃತಿಯು ಬೌದ್ಧಧರ್ಮ ಪ್ರಸಾರದಿಂದ ಉತ್ತರ ದೇಶದಲ್ಲಿ ಮಸುಳಿಸಿ ಹೋಗಲು ಅದಕ್ಕೆ ಆಶ್ರಯಕೊಟ್ಟು ಹಿಂದೂಧರ್ಮದ ಮಹತ್ವವನ್ನು ಎತ್ತಿಹಿಡಿದವರು ಕರ್ನಾಟಕಸ್ಥರಾಗಿರುವರು. ಶ್ರೀ ಶಂಕರಾಚಾರ್ಯರ ಮಹತ್ತರ ಪೀಠಗಳೂ ಶ್ರೀ ರಾಮಾನುಜಾಚಾರ್ಯರು ಉತ್ಕ್ರಾಂತಿಯನ್ನು ಹೊಂದಿದ್ದೂ ಶ್ರೀ ಮಧ್ವಾಚಾರ್ಯರು ಮತ ಪ್ರಸಾರಮಾಡಿದ್ದೂ ನಮ್ಮ ದೇಶದಲ್ಲಿಯೇ ಇರುತ್ತದೆ. ಅದರಂತೆಯೇ ಆಗಮಧರ್ಮದ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!

ರೋಲ್ಡ್ ಗೋಲ್ಡ್ ಎಂಟು ಮೂಲೆ ಕೈಗಡಿಯಾರ.



ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನ ೩೦/ ದಿ. ಕೀಲಿಕೊಡುವ ಗಂಟೆಯನ್ನು ತೋರಿಸುವುದು ಅತ್ಯುತ್ಕೃಷ್ಟವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ಒಕ್ಕೆ ರೂ. 7-2-0.

12 ರೂ[illegible]

ಬಾಗಲಕೋಟೆ ಪುರವಣಿ ಕನ್ನಡಿಗ ವೈಶಾಖ ಬಹುಳ ೧ ಶಕೆ ೧೮೪೮

ನೋಟೀಸು

—

ರಾ॥ ಬಸವ್ವಾ ಗಂಡಾ ಈರಪ್ಪಾ ಗ್ವಾಲಪ್ಪನವರ ಸಾ॥ ಬಾಗಲಕೋಟ ಇವಳಿಗೆ

ಶಿದ್ದಪ್ಪಾ ತಂದಿ ಚನಬಸಪ್ಪಾ ಪಲ್ಲೇದ ಸಾ॥ ಬಾಗಲಕೋಟ ನಾನು ಈ ನೋಟೀಸದಿಂದಾ ತಿಳಿಸುವದೇನಂದರೆ

ಶಿದ್ದವ್ವಾ ತಂದಿ ಶಿವಪ್ಪಾ ಗ್ವಾಲಪ್ಪನವರ ಇವಳು ಅಜ ಮಾಸ ೧೩ ವರ್ಷ ದವಳು ಇದ್ದು ಅಜ್ಞಾನ ಹುಡಗಿ ಇದ್ದಾಳೆ ಆವಳ ಯೋಗ್ಯ ಹಿತ ಸಮಂಧ ನೋಡುವವನು ಮತ್ತು ಕಾಯದೇಶಿರ ಪಾಲನಕರ್ತನು ನಾನೇ ಇದ್ದೇನೆ ನಾನು ಸದರಿ ಯವಳಿಗೆ ನಾನು ಸದರಿ ಹುಡಿಗಿಗೆ ಖಾಸ ಸೋದರ ಮಾವನಾಗಬೇಕು ಆದರೆ ನೀನು ಬಹುದೂರಿನ ಆಪ್ತಳು ಇರುತ್ತೀದಿ ಆದರೆ ಈಗ ನೀನು ಇರಬಸಪ್ಪಾ ಬಿನ್ನ ಚನಬಸಪ್ಪಾ ಗ್ವಾಲಪ್ಪನವರ ಇವನ ಚಿತಾವಣಿ ಇಂದಾ ಸದರಿ ಅಜ್ಞಾನ ಹುಡಗಿಯನ್ನು ಸೂಳೀಭಾವಿಯಲ್ಲಿ ಇರುವ ರಾ॥ ಸಂಗಪ್ಪಾ ತಂದಿ ಯಮನಪ್ಪಾ ಸಬರದ ಇವನಿಗೆ ನಂನ ಸಮ್ಮತಿ ವಿರುದ್ಧ ಮತ್ತು ಅಜ್ಞಾನಹುಡಗಿಯ ಹಿತವಿರುದ್ಧ ಲಗ್ನ ಮಾಡಿ ಕೊಡಬೇಕೆಂದು ದುರಾಲೋಚನೆ ಮಾಡಿರುತ್ತೀ ಅಂತಾ ತಿಳಿದು ಬರುತ್ತದೆ ಸದರಿ ಸಂಗಪ್ಪಾ ಈತನಿಗೆ ಲಗ್ನದ ಹೆಂಡತಿಯು ಇರುತ್ತಾಳೆ ಹೀಗಿದ್ದು ಅಜ್ಞಾನ ಹುಡಗಿಯ ಮಿಳಖತ್ತಿಯನ್ನ ನೀನು ವ ಇರಬಸಪ್ಪಾ ಬಿನ್ನ ಚನಬಸಪ್ಪಾ ಗ್ವಾಲಪ್ಪಗೋಳ ಮತ್ತು ಸದರ ಸಂಗಪ್ಪಾ ನೀವೆಲ್ಲರೂ ಕೂಡಿ ಎತ್ತಿಹಾಕಿ ಅಪರಾತಪರಾ ಮಾಡಬೇಕು ಅಂತಾ ಯತ್ನನಡಿಶಿರುತ್ತೀರಿ ನಿನಗೆ ಸದರಿಯಂತೆ ಲಗ್ನ ಮಾಡಲಿಕ್ಕೆ ಯೇನು ಅಧಿಕಾರವಿಲ್ಲ ನೀನು ನಂನ ಸಮ್ಮತಿ ಹೊರ್ತು ಅಥವಾ ಯೋಗ್ಯ ಕೋರ್ಟಿನ ಪರವಾನಗಿ ಹೊರ್ತು ಸದರಿಯವಳ ಲಗ್ನ ಮಾಡಿದರೆ ನಾನು ಕಾಯದೇಶಿರ ಯಿಲಾಜ ಮಾಡುತ್ತೇನೆ ಎಂದುವೇಳೈ ನೀನು ಲಗ್ನಮಾಡಿದರೆ ಸದರಿ ಲಗ್ನ ಬೇಕಾಯದೇಶಿರ ರದ್ದು ಇ[illegible]ದೆ ತಿಳಿಯೋದು ತಾರೀಖು ೨೨ ಮೇ ಸಂನ್ನ ೧೯೨೬ ಯಿಸ್ವೀ

ಬಾಗಲಕೋಟ } ಸಹಿ ಶಿದ್ದಪ್ಪಾ ಚನಬಸಪ್ಪಾ ಪಲ್ಲೇದ.

ಮುಕ್ಕಾಂ [illegible]



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿಸಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ್ ಜಿ. ರಾಯಚೂರ, ನಿಜಾಂ

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN OF SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to—

N. K. Kulkarni. Agent Bagalkot.

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

೧೨ ನೇ ಕರ್ನಾಟಕ ಸಾಹಿತ್ಯ

ಸಮ್ಮೇಲನದ ಅಧ್ಯಕ್ಷರಾದ ರಾ. ಸಾ. ಫ. ಗು.

ರೆ ಪ್ರಾಂತಗಳ ವಿದ್ವಜ್ಜನರಲ್ಲಿ ಪರಸ್ಪರ ಸಹಾನುಭೂತಿ, ಸೌಹಾರ್ದಗಳು ಹೆಚ್ಚೆಚ್ಚು ಮೂಡತೊಡಗಿವೆ. ಇದರಿಂದ ಪ್ರಾಂತಿಕ ಭಾಷೆಯ ಭಿನ್ನತೆಗಳು ಕಡಿಮೆಯಾಗಹತ್ತಿವೆ. ಪ್ರತಿಯೊಬ್ಬ ಕರ್ನಾ ...

ಲ್ಲದೇ ಇಟ್ಟಿಲ್ಲ ...

ಕರ್ನಾಟಕತ್ವವೆಂದರೇನು ?

ಕರ್ನಾಟಕತ್ವದ ಭಾವನೆಯೆಂದರೆ ಪರನಾಡಿಗರನ್ನು ಹಳಿಯುವದಲ್ಲ. ಈ ಭಾವನೆಯು ಉಚ್ಚತಮವಾಗಿದೆ. 'ಕರ್ನಾಟಕತ್ವವೆಂದರೆ ತನ್ನ ದೇಶದ ಸಂಸ್ಕೃತಿಯ ಅರಿವು. ಅದನ್ನು ಅರಿತು ಆಚರಿಸುವದು.

ಇಂಥ ಆಚರಣೆಯೇ ದೇಶದ ಪ್ರಗತಿಯ ಕುರುಹು. ಆದರೆ ಈಗಿನ ಕರ್ನಾಟಕಸ್ಥರು ತಮ್ಮದನ್ನು ತಾವು ಮರೆತುಬಿಟ್ಟಿರುವರು. ಕರ್ನಾಟಕವು ಪೂರ್ವಕಾಲದಿಂದಲೂ ಪ್ರಸಿದ್ಧವಾದ ದೇಶವು. ಇಲ್ಲಿ ಹುಟ್ಟಿದ ಮಹಾ ವಿಭೂತಿಗಳು ಹಿಂದೂ ಧರ್ಮಜ್ಞಾನ ಮಂದಿರದಲ್ಲಿ ಶ್ರೇಷ್ಠವಾದ ಸ್ಥಾನವನ್ನು ಅಲಂಕರಿಸಿದ್ದಾರೆ. ಆದರೆ ಅವರ ಅರಿವು ನಮ್ಮಲ್ಲಿ ಸಂಪೂರ್ಣವಾಗಿ, ಹಾರಿಹೋಗಿವೆ. ಮತ್ತು ಈಗ 'ನಾವು ದುರ್ಬಲರು, ನಮ್ಮಿಂದೇನೂ ಆಗಲಾರದು' ಎಂಬ ಭಾವನೆಯನ್ನು ತಾಳಿಕೊಂಡು ಹತಾಶರಾಗಿ ಉಳಿದಿದ್ದೇವೆ. ಮತ್ತು ಪ್ರಯತ್ನಶೀಲರಾಗುವದನ್ನು ಮರೆತಿದ್ದೇವೆ. ಈ ದುಸ್ಥಿತಿಯನ್ನು ತೊಲಗಿಸುವದರಲ್ಲಿಯೇ ಕರ್ನಾಟಕತ್ವದ ಮಹತ್ವವು ಇದೆ. ಈ ಭಾವನೆಯನ್ನು ಪ್ರಜ್ವಲಿಸುವದರ ಮೇಲೆಯೇ ನಮ್ಮ ಭಾವೀ ಊರ್ಜಿತ ಸ್ಥಿತಿಯು ಅವಲಂಬಿಸಿರುತ್ತದೆ.

ಸಮ್ಮೇಳನದ ಉದ್ದೇಶವು.

ಈ ತೆರನಾದ ಶ್ರೇಷ್ಠ ಭಾವನೆಯನ್ನು ಎಲ್ಲಕಡೆ ಬೀರುವದೇ ಸಾಹಿತ್ಯಸಮ್ಮೇಳನದ ಮುಖ್ಯ ಉದ್ದೇಶವಾಗಿರುತ್ತದೆ. ಆದ್ದರಿಂದ ಈ ಅಧಿವೇಶನಗಳು ಕರ್ನಾಟಕದ ಬೇರೆಬೇರೆ ಭಾಗಗಳಲ್ಲಿ ಆಗುತ್ತ ಬಂದಿವೆ. ಮತ್ತು ಇವುಗಳ ಸುಪರಿಣಾಮಗಳು ಕನ್ನಡಿಗರ ನಿದರ್ಶನಕ್ಕೆ ಪ್ರತಿವರುಷ ಹೆಚ್ಚೆಚ್ಚಿಗೆ ಬರಹತ್ತಿವೆ. ಬೇರೆಬೇ

ಅಭಿಯೋಗಿಗಳ, ...

ಡಲು ಗೋದಾವರಿಯ ವರೆಗೆ ಹಬ್ಬಿದ ಆಗಿನ ನಮ್ಮ ಕನ್ನಡಿಗರು ಅವರ ದಾಳಿಯನ್ನು ಅಲ್ಲಿಯೇ ಹೊಡೆದಟ್ಟಿದರು. ಅಂದಿನಿಂದ ಶಕ ವರ್ಷವು ಪ್ರಾರಂಭವಾಗಿರುತ್ತದೆ. ಆಮೇಲೆ ಕದಂಬ ರಾಷ್ಟ್ರಕೂಟ ಚಾಲುಕ್ಯರ ಮೂಲಸ್ಥಾಪಕರು ಏನೋ ಒಂದು ಕಾರಣದಿಂದ ಉತ್ತರ ಹಿಂದುಸ್ಥಾನವನ್ನು ಬಿಟ್ಟು, ದಕ್ಷಿಣದೇಶಕ್ಕೆ ಬರಲು ಅವರಿಗೆ ಆಶ್ರಯ ಕೊಟ್ಟು ಆರ್ಯಸಂಸ್ಕೃತಿಯನ್ನು ಕಾಯ್ದಂಥ ದೇಶವು ಕರ್ನಾಟಕವಾಗಿರುವದು. ಅವರ ಮಹತ್ತಾದ ರಾಜ್ಯಗಳ ರಾಜಧಾನೀ ಪಟ್ಟಣಗಳು ನಮ್ಮದೇಶದಲ್ಲಿಯೇ ಇವೆ. ಈ ರಾಜವಂಶಗಳು ಒಂದು ಸಾವಿರ ವರುಷದ ವರೆಗೂ ಕರ್ನಾಟಕದಲ್ಲಿ ರಾಜ್ಯವಾಳಿದ ಒಳಿಕ ಪರಾಣ, ಮೊಗಲರ ದಾಳಿಗಳು ಉತ್ತರ ಹಿಂದುಸ್ಥಾನವನ್ನು ಆಕ್ರಮಿಸಿ, ಕರ್ನಾಟಕವನ್ನೂ ಒಳನುಗ್ಗಹತ್ತಿದವು. ಆಗ ಹತ್ತೊಂಭತ್ತು ಶತಮಾನಗಳ ವರೆಗೂ ಶೂರತನದಿಂದ ಕಾದಾಡಿದ ವಿಜಯನಗರ ನರಪತಿಗಳ ರಾಜಧಾನಿಯು ಕರ್ನಾಟಕದ ಮಧ್ಯಪ್ರದೇಶದಲ್ಲಿಯೇ ಇದೆ. ಹೀಗೆ ಕರ್ನಾಟಕಸ್ಥರು ಹಿಂದುಸ್ಥಾನದ ಸ್ವಾತಂತ್ರ್ಯ ರಕ್ಷಣೆಗಾಗಿ ತಮ್ಮ ರಕ್ತವನ್ನು ಸೂರೆ ಮಾಡಿರುತ್ತಾರೆ. ಇದರಂತೆ ಅವರು ಸಂಸ್ಕೃತಿಯನ್ನು ಕಾಯಲು ಯತ್ನಿಸಿದ್ದಾರೆ. ಆರ್ಯ ಸಂಸ್ಕೃತಿಯು ಬೌದ್ಧಧರ್ಮ ಪ್ರಸಾರದಿಂದ ಉತ್ತರ ದೇಶದಲ್ಲಿ ಮುಸುಳಿಸಿ ಹೋಗಲು ಅದಕ್ಕೆ ಆಶ್ರಯಕೊಟ್ಟು ಹಿಂದೂಧರ್ಮದ ಮಹತ್ವವನ್ನು ಎತ್ತಿಹಿಡಿದವರು ಕರ್ನಾಟಕಸ್ಥರಾಗಿರುವರು. ಶ್ರೀ ಶಂಕರಾಚಾರ್ಯರ ಮಹತ್ತರ ಪೀಠಗಳೂ ಶ್ರೀ ರಾಮಾನುಜಾಚಾರ್ಯರು ಉತ್ಕ್ರಾಂತಿಯನ್ನು ಹೊಂದಿದ್ದೂ ಶ್ರೀ ಮಧ್ವಾಚಾರ್ಯರು ಮತ ಪ್ರಸಾರಮಾಡಿದ್ದೂ ನಮ್ಮ ದೇಶದಲ್ಲಿಯೇ ಇರುತ್ತದೆ. ಅದರಂತೆಯೇ ಆಗಮಧರ್ಮದ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಪಂದ್ಯಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರೋಲ್ಡ್ ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾದೆ. ಸರಿಯಾದ ಗಂಟೆಯನ್ನು ತೋರಿಸುವುದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ. 7-2-0.

12 ರೋಕ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದ [illegible], ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 [illegible] ಪರಿವಿಗೂ ಬರೆಯುವದು! 14 ಕ್ಯಾರೆಟ್ಟ ಭಂಗಾರದ [illegible] ಇದನ್ನು ಈ ತಿಂಗಳೊಳಗಾಗಿ ಖರಿಸಿಕೊಂಡವರಿಗೆ [illegible] ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು ಕ್ರಯ ಪೇನಾ ೧ಕ್ಕೆ 2-0-0

ವಿಳಾಸ:—ಎಸ್. ಪಾಲ್ ಅಂಡ್ ಕೊ,

ಪಿ. ಬಿ ನಂಬರ್. 542,

ಪಾರ್ಕಟೌನ್ ಮದ್ರಾಸು.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೨೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಷ್ಟ ಜಿ. ರಾಯಚೂರ, ನಿಜಾಂ

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN OF SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿಸಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.





The Cheapest House.

1 For quick Economical and satisfactory service, please go for the welknown Chevrolet cars, Trucks products in the Deccan
2 For all spare parts of the Various cars specially Chevrolet, Ford, Dodge and Overland cars,
3 For the cheapness in tyre tubes especially the wellknown Michelin products,
4 For all kinds of Lubricating oils Grease etc,
5 For undertaking all kinds of tyre tube repairs in Vulcansing by a specalist to give satisfactory work,
6 For Building Motor bodies of Various types by workers onin uptodate line.
7 For all kinds of Motor repairs,

Aply to:-
Messrs Royal motor service
Automobile Engineers
Bagalkot.

Sub dealers
Chevrolet car
for the Bijapur

ಅಲಭ್ಯ ಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವಿಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಸುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ,
೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೋಲೆಟ ಡಾಜ, ಫೋರ್ಡ, ಓವ್ಹರಲೆಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,
೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟುಬುಗಳು ಖರೀದಿಗಾಗಿ
೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಜರ್ಬಿ ಖರೀದಿಗಾಗಿ,
೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,
೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,
೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರ ಸರ್ವಿಸ.
ಬಾಗಲಕೋಟೆ.

ವಿಜಾಪೂರ ಜಿಲ್ಹೆಯಲ್ಲಿ
ಮೊಟಾರುಗಳಿಗೆ ಸಬ ಏಜಂಟರು.

ಮಾವಧಿ ಬೆಳವಣಿಗೆಯು ಶ್ರೀ ಬಸವೇಶ್ವರನ ಕಾಲದಲ್ಲಿ ಉದ್ಭವಿಸಿತು. ಆ ಕಾಲಕ್ಕೆ ಅಸಂಖ್ಯ ಮಹಾತ್ಮರು ನಮ್ಮ ದೇಶದಲ್ಲಿ ಉತ್ಪನ್ನರಾಗಿ ಅವರು ರಚಿಸಿದ ಅನೇಕ ಗ್ರಂಥಗಳ ಪ್ರಭಾವವು ಕನ್ನಡನಾಡಿಯನ್ನು ಬೆಳಗುತ್ತಲಿದೆ. ಅದರಂತೆಯೇ ಉತ್ತರ ಹಿಂದುಸ್ಥಾನದಲ್ಲಿ ಪ್ರಖ್ಯಾತಿ ಹೊಂದಿದ್ದ ಜೈನರು ಏನೋ ಒಂದು ಕಾರಣದಿಂ ತಮ್ಮ ದೇಶವನ್ನು ತೊರೆದು ನಮ್ಮ ಕರ್ಣಾಟಕವನ್ನು ಆಶ್ರಯಿಸಿ ಇಲ್ಲಿ ಅನೇಕ ಶತಮಾನಗಳ ವರೆಗೆ ರಾಜ್ಯವಾಳಿದರು. ಅವರಿಂದ ಉದ್ಭವಿಸಿದ ಕನ್ನಡ ವಾಙ್ಮಯವು ಈಗ್ಗೆಯೂ ಎಲ್ಲ ಸಾಹಿತ್ಯ ವಿಶಾರದರನ್ನು ತಲೆದೂಗಿಸುತ್ತಿದೆ. ಗ್ರಾಮಾಂತರಗಳಲ್ಲಿ ಸಹ ಜನಸಮುದಾಯದಲ್ಲಿ ಜ್ಞಾನ ಪ್ರಸಾರಮಾಡುವ ಪ್ರಯತ್ನಗಳೂ ನಮ್ಮ ದೇಶದಲ್ಲಿ ಯಾವಾಗಲೂ ನಡೆಯುತ್ತಬಂದಿವೆ ನಮ್ಮ ದೇಶದಲ್ಲಿ ಅಸಂಖ್ಯ ಧರ್ಮ ಪುರಿಗಳೂ ಅಗ್ರಹಾರಗಳೂ ನೆಲಸಿದ್ದು ಅವುಗಳಲ್ಲಿ ಅನೇಕ ವಿದ್ವಜ್ಜನರು ಸೇರಿಕೊಂಡು ವಿದ್ಯಾವ್ಯಾಸಂಗದಲ್ಲಿಯೇ ತಮ್ಮ ಕಾಲ ಕಳೆಯುತ್ತಿದ್ದರು. ಮತ್ತು ಅವುಗಳಿಗೆ ಅನೇಕ ರಾಜರು ದಾನಕೊಟ್ಟ ಸಂಗತಿಯು ಶಿಲಾ ಲೇಖಗಳಿಂದ ತಿಳಿಯಬರುತ್ತದೆ.

ಅದರಂತೆಯೇ ಅನೇಕಗ್ರಾಮಗಳಲ್ಲಿ ತಮ್ಮ ಗುಡಿಗಳನ್ನು ವೀರಶೈವರು ಪ್ರತಿಗ್ರಾಮದಲ್ಲಿ ಮಠಗಳನ್ನು ಸ್ಥಾಪಿಸಿ, ಅಲ್ಲಿ ವಿದ್ಯಾದಾನಮಾಡುವ ಕಾರ್ಯದಲ್ಲಿ ಅವರು ನಿರತರಾಗಿದ್ದರು. ಹೀಗೆ ವಿದ್ಯಾಪಾಂಡಿತ್ಯ, ಧರ್ಮ ಸುಧಾರಣೆ ಇವುಗಳಿಗೆ ನಮ್ಮ ಕರ್ಣಾಟಕದೇಶವು ಮುಂಚಿನ ಕಾಲಕ್ಕೆ ಪ್ರಸಿದ್ಧಿಯನ್ನು ಹೊಂದಿದ್ದು ಸ್ಪಷ್ಟವಾಗಿರುತ್ತದೆ.

ಇದರಂತೆಯೇ ಕರ್ಣಾಟಕಸ್ಥರು ಲಲಿತಕಲೆಗಳಲ್ಲಿಯೂ ಮುಂದುವರಿದವರಾಗಿದ್ದರು. ಕರ್ಣಾಟಕದ ಗಾಯನ ಕಲೆಯು ಹಿಂದುಸ್ಥಾನದ ಗಾಯನಶಾಸ್ತ್ರದಲ್ಲಿ ಮಹತ್ವದ ಭಾಗವನ್ನು ಅಲಂಕರಿಸಿದೆ. ಅದರ ಶಿಲ್ಪಶಾಸ್ತ್ರವೂ ಚಿತ್ರಗಾರಿಕೆಯ ಕೌಶಲ್ಯವೂ ಬಣ್ಣಗೊಡುವಕಲೆಯೂ ಈಗಿನ ಶಾಸ್ತ್ರಜ್ಞರನ್ನು ಸಹ ತಲೆದೂಗಿಸುತ್ತಲಿವೆ—

(ಅಪೂರ್ಣ)

ಮುಂಬೈ ಪ್ರಾಂತದ ಎರಡನೆಯ

ಮಹಿಳೆಯರ ಪರಿಷತ್ತಿನಲ್ಲಿ ಮೈಸೂರು

ವಿದ್ಯಾಶಾಲೆಯಲ್ಲಿ ಶಿಕ್ಷಕಿಯರಾದ

ಕುಮಾರಿ ಸಿ. ಲಕ್ಷ್ಮಮ್ಮ, ಬಿ. ಎ.

ಯವರು ಮಾಡಿದ ಅಧ್ಯಕ್ಷ ಭಾಷಣದ ಸಾರಾಂಶವು.

ಪ್ರಿಯ ಸಹೋದರಿಯರೆ,

ಮೊದಲು ನಮ್ಮ ಸ್ಥಿತಿಯನ್ನು ಕುರಿತು ಸ್ವಲ್ಪ ವಿಚಾರ ಮಾಡೋಣ. ನಮ್ಮ ಪೂರ್ವದ ವೈಭವವು ಪರದೇಶದಿಂದ ಬಂದು ಜವರಿಸಿಕೊಂಡಿರುವ ನಾಗರಿಕತೆಯಿಂದ ಬಹುಮಟ್ಟಿಗೆ ಮುಚ್ಚಿಹೋಗಿದ್ದರೂ ಅಲ್ಲಲ್ಲಿ ಸ್ವಲ್ಪ ಕುರುಹುಗಳು ಮಾತ್ರ ಕಂಡು ಬರುತ್ತಲೇ ಇವೆ ನಮ್ಮ ಸಾಹಸ ಪ್ರಯತ್ನಗಳಿಂದ ನಮ್ಮ ಪೂರ್ವದ ವೈಭವಗಳನ್ನು ಪುನರುಜ್ಜೀವನಗೊಳಿಸಬೇಕಾಗಿರುವುದು. ನಮ್ಮ ದೇಶಕ್ಕೂ ನಮ್ಮ ಜನಾಂಗಕ್ಕೂ ಸ್ವಭಾವಸಿದ್ಧವಾದ ಗುಣಗಳೇ ಈಗಲೂ ನಮ್ಮಲ್ಲಿ ಬಹುಮಟ್ಟಿಗೆ ನಿಂತಿರುವ ಜನಾನುರಾಗ, ಶಾಂತತೆ, ಸದಾಚಾರನಿಷ್ಠೆ, ಸಹಜವಾದ ಧರ್ಮಬುದ್ಧಿ, ಪರಮಾತ್ಮ ವಿಚಾರ ವ್ಯಗ್ರತೆ ಮುಂತಾದ ಗುಣಗಳು ನಮ್ಮ ನೈತಿಕ, ಪಾರಮಾರ್ಥಿಕ ಮೊದಲಾದ ಶಿಕ್ಷಣಗಳು ಪ್ರತ್ಯೇಕ ಗೌರವ ಸ್ಥಾನವನ್ನು ಪಡೆದು, ಇಂದಿನ ವರೆಗೂ ನೆಲೆಸಿರುವುದು. ನಮ್ಮ ಪೂರ್ವದ ಮಹಿಳೆಯರು ಸ್ಥಿರಗೊಳಿಸಿರುವ ಧರ್ಮದಿಂದಲೇ. ಆದರೂ ನ್ಯಾಯವಾದ ವಿಷಯಗಳಲ್ಲಿ ನಾವು ಕಾಲಕ್ಕೆ ತಕ್ಕಂತೆ ನಡೆದುಕೊಂಡು ಬರದೆ ಬಹಳ ಹಿಂದೆ ಬಿದ್ದಿರುವುದರಿಂದ ನಮ್ಮ ಜನಾಂಗದ ಏಳಿಗೆ ಕಾರ್ಯಕ್ಕೆ ಭಾರವಾಗಿ ಪರಿಣಮಿಸಿರುತ್ತೇವೆ. ಈ ರೀತಿಯಾದ ನಮ್ಮ ದುಸ್ಥಿತಿಗೆ ನಮ್ಮ ವಿದ್ಯಾವಿಹೀನತೆಯೇ ಮುಖ್ಯ ಕಾರಣವಾಗಿರುವುದು. ಇದು ನಮ್ಮ ತಪ್ಪಿಂದಾದುದಲ್ಲ. ಇದಕ್ಕೆ ಅನೇಕ ಕಾರಣಗಳಿವೆ.

ಬಹು ದಿನಗಳಿಂದಲೂ ವಿದ್ಯೆಎಂಬ ಬೆಳಕನ್ನೇ ಅರಿಯದ ನಾವು ಸ್ತ್ರೀವಿದ್ಯಾಭ್ಯಾಸವೆಂಬ ಮಾತನ್ನು ಎತ್ತಿದ ಕೂಡಲೆ ಭ್ರಾಂತರಾಗುತ್ತೇವೆ. ಈಗ ನಾವು ಕಲಿಯುವ ವಿದ್ಯೆಯೊಡನೆ ಪರದೇಶಿಯರ ನಡೆನುಡಿಗಳೂ ಆಚಾರ ವ್ಯವಹಾರಗಳೂ ಸೇರಿಕೊಂಡು, ಎಲ್ಲಿ ನಮ್ಮ ಪೂರ್ವಾಚಾರಗಳನ್ನು ಕೆಡಿಸಿಬಿಡುವವೋ ಎಂದು ಕೆಲವರು ಸಂದೇಹಪಡುತ್ತಾರೆ. ಹಾಗೆ ಊಹಿಸಲು ಕಾರಣವೇನೂ ಇಲ್ಲವೆಂದು ನಾನು ಖಂಡಿತವಾಗಿ ಹೇಳಬಲ್ಲೆ. ನಮ್ಮ ಸನಾತನ ಧರ್ಮಗಳು ಇತರರ ಪ್ರೇರಣೆಗೆ ಸುಲಭವಾಗಿ ಬದಲಾಯಿಸತಕ್ಕವಲ್ಲ. ಬಹುಕಾಲದಿಂದಲೂ ಎಂತೆಂತಹ ಅಡಚಣೆಗಳು ಬಂದರೂ ನೆಲೆಯಾಗಿಯೇ ನಿಂತಿವೆ. ಈಗಿನ ವಿದ್ಯೆಯಿಂದ ಅವು ನೆಲೆ ತಪ್ಪುವವೆಂದು ಹೇಳುವುದು ಹೇಗೆ? ಈ ಅಕಾರಣ ಸಂದೇಹದಿಂದ ಶ್ರೇಷ್ಠವಾದ ವಿದ್ಯೆಯನ್ನು ದೂರೀಕರಿಸಬಹುದೆ? ನಮ್ಮ ಪೂರ್ವಿಕರು ಮಹಿಳೆಯರಿಗೆ ವಿದ್ಯೆಯನ್ನು ಕಲಿಸುತ್ತಿದ್ದರೆಂಬುದಕ್ಕೆ ಅನೇಕ ಆಧಾರಗಳಿವೆ. ಬಾಲಕಿಯರೂ ಬಾಲಕರಂತೆ ಸಮಸ್ತ ವಿದ್ಯೆಗಳಲ್ಲಿ ಪಾರಂಗತರಾಗಿರುತ್ತಿದ್ದರು. ಪ್ರಾಚೀನ ವಿದ್ಯಾಭ್ಯಾಸ ಕ್ರಮವು ಈಗಿನ ವಿದ್ಯಾಭ್ಯಾಸ ಕ್ರಮದಂತಿರದೆ ಸ್ತ್ರೀಯರ ಅನುಕೂಲಕ್ಕೆ ತಕ್ಕಂತೆ ಇದ್ದಿತು. ಅವರ ವಿದ್ಯಾಭ್ಯಾಸ ಪದ್ಧತಿಯು ಶ್ರೇಷ್ಠತರವಾಗಿದ್ದುದರಿಂದ ಆ ಕಾಲದ ಮಹಿಳೆಯರು ನೈಪುಣ್ಯವತಿಯರಾಗಿಯೂ, ಆಚಾರ ವ್ಯವಹಾರಗಳಲ್ಲಿ ಮೇಲ್ಪಙ್ಕ್ತಿಯಾಗಿಯೂ ಪ್ರಸಿದ್ಧಿಯನ್ನು ಪಡೆದಿದ್ದರು. ವೇದ ಶಾಸ್ತ್ರಗಳಲ್ಲಿ ಪಾರಂಗತರಾಗಿದ್ದರು. ಅಕ್ಷಮಾಲ ಅಥವಾ ಅರುಂಧತಿ ಎಂಬ ವಸಿಷ್ಠ ಋಷಿಪತ್ನಿಯು ಮಹಾ ತಪಸ್ವಿನಿಯಾಗಿದ್ದಳು ಯಾಜ್ಞವಲ್ಕ್ಯರ ಪತ್ನಿಯಾದ ಮೈತ್ರೇಯಿಯು ವ್ಯವಹಾರಿಕ ವಿದ್ಯೆಯಲ್ಲಿ ಮಾತ್ರವಲ್ಲದೆ ಪಾರಮಾರ್ಥಿಕ ವಿದ್ಯೆಯಲ್ಲಿಯೂ ನಿಷ್ಣಾತಳಾಗಿದ್ದಳು. ಕೈಕೇಯಿ ಸುಭದ್ರೆ ಮೊದಲಾದವರು ಧನುರ್ವಿದ್ಯೆಯಲ್ಲಿಯೂ ನಿಪುಣೆಯರಾಗಿದ್ದರು. ದ್ರೌಪದಿಯು ಯುಧಿಷ್ಠಿರನ ಗೃಹಕೃತ್ಯವನ್ನು ಬಹಳ ಜಾಣ್ಮೆಯಿಂದ ನಡಿಸಿರುವಳು. ಚರಿತ್ರೆಯ ಉದಾಹರಣೆಗಳಿಂದಲೂ ಪೂರ್ವದ ಸ್ತ್ರೀಯರ ವಿದ್ಯಾಪಾರಂಗತೆಯು ವ್ಯಕ್ತಗೊಳ್ಳುತ್ತದೆ. ರಾಣಿ ಮೀರಾಬಾಯಿಯ ದೈವಭಕ್ತಿಯು ಅಸಮಾನವಾದುದು. ಆಕೆಯು ರಚಿಸಿರುವ ಹಾಡುಗಳು ಸಾಹಿತ್ಯ ಸಮಾಜಗಳಲ್ಲಿ ಮೊದಲು ಭಾವಿಸಲ್ಪಟ್ಟಿವೆ. ಚಿತ್ತೂರಿನ ಪದ್ಮಿನಿಯು ಝಾನ್ಸಿಯ ರಾಣಿಯು ವೀರಪತ್ನಿಯರಾಗಿ ತಮ್ಮ ಧೈರ್ಯ ಸಾಹಸಗಳನ್ನು ಪ್ರದರ್ಶಿಸಿರುವರು. ಲೀಲಾವತಿಯು ಗಣಿತಶಾಸ್ತ್ರದಲ್ಲಿ ಅದ್ವಿತೀಯಳೆನಿಸಿದಳು. ಸಂಚಿಯ ಹೊನ್ನಮ್ಮನೇ ಮೊದಲಾದ ಮಹಿಳೆಯರು ಕನ್ನಡದಲ್ಲಿ ಗ್ರಂಥಗಳನ್ನು ರಚಿಸಿ ಕೀರ್ತಿಯನ್ನು ಪಡೆದಿರುತ್ತಾರೆ. ಇವರಲ್ಲದೆ ಈಚೀಚೆಗೆ ಕೆಲವು ನಾರೀಮಣಿಯರು ತಮ್ಮ ಅದ್ಭುತ ಶಕ್ತಿ ಸಾಮರ್ಥ್ಯಾದಿಗಳನ್ನು ಪ್ರದರ್ಶಿಸಿರುತ್ತಾರೆ.

ಪ್ರಕೃತದಲ್ಲಿ ಇಂಡಿಯಾದ ಮಹಿಳೆಯರ ಸ್ಥಿತಿಯನ್ನು ತಿಳಿಸಿ ಇವರು ಇನ್ನು ಯಾವ ರೀತಿಯಲ್ಲಿ ನಡೆದರೆ ತಮ್ಮ ಪ್ರಾಚೀನ ಮಹತ್ವವನ್ನೂ, ಆಧುನಿಕ ಗೌರವವನ್ನೂ ಪಡೆಯಬಹುದು ಎಂಬುದನ್ನು ಯಥಾಮತಿ ತಿಳಿಸುತ್ತೇನೆ. ಸ್ತ್ರೀಯರಿಗೆ ಗೃಹಕೃತ್ಯ ವ್ಯಾಪಾರವನ್ನು ನಡೆಸುವುದೇ ಬೇಕಾದಷ್ಟು ಕೆಲಸವಾಗಿರುತ್ತಿದೆ. ಮುಂದೆ ಪ್ರಜೆಗಳಾಗತಕ್ಕ ಮಕ್ಕಳನ್ನು ಸರಿಯಾದ ಮಾರ್ಗದಲ್ಲಿ ತರುವದಕ್ಕೆ ಮನೆಯೇ ಮೂಲಸ್ಥಾನವಾಗಿದೆ ಮತ್ತು ಬಾಲಕರ ಪುರೋಭಿವೃದ್ಧಿಯ ಪ್ರವೃತ್ತಿ ಕ್ರಮವು ಅವರ ತಾಯಿಯರ ಪ್ರೇಮಪುರಸ್ಸರವಾದ ಪೋಷಣೆಗೆ ಸೇರಿದೆ ಹೀಗಿರುವಲ್ಲಿ ಇಂಥಾ ಕೆಲಸದ ಜವಾಬ್ದಾರಿಯನ್ನು ಮಹಿಳೆಯಲ್ಲಿ ಎಷ್ಟು ಜನ ತಿಳಿದಿದ್ದಾರೆ? ಧರ್ಮಶಾಸ್ತ್ರವನ್ನು ರಚಿಸಿರುವ ಮನು ಚಕ್ರವರ್ತಿಯು ಈ ವಿಷಯದಲ್ಲಿ ಹೇಳಿರುವುದೇನಂದರೆ:— "ಹತ್ತು ಜನ ಉಪಾಧ್ಯಾಯರಿಗಿಂತಲೂ ಒಬ್ಬ ಆಚಾರ್ಯನಿಗೂ, ನೂರು ಜನ ಆಚಾರ್ಯರಿಗಿಂತ ಒಬ್ಬ ತಂದೆಗೂ ಸಹಸ್ರ ತಂದೆಗಳಿಗಿಂತಲೂ ಒಬ್ಬ ತಾಯಿಗೂ ಹೆಚ್ಚು ಗೌರವವನ್ನು ಕೊಡಬೇಕು" ಇದನ್ನು ನೋಡಿದರೆ ಉಪಾಧ್ಯಾಯರಿಗೆ ವಿದ್ಯೋಪದೇಶದಿಂದಲ್ಲವೆ ಗೌರವವು ಬಂದುದು, ಅದಕ್ಕಿಂತ ಹೆಚ್ಚು ಗೌರವವು ಆಚಾರ್ಯನಿಗೆ ಬಂದುದು. ಹೀಗಿರಲು ಎಲ್ಲರಿಗಿಂತಲೂ ಹೆಚ್ಚಾದ ಗೌರವವು ತಾಯಿಗೆ ಕೊಡಬೇಕಾದಲ್ಲಿ ಮಕ್ಕಳ ವಿದ್ಯಾಭಿವೃದ್ಧಿಯು ತಾಯಿಯ ಮೇಲೆ ಎಷ್ಟರ ಮಟ್ಟಿಗೆ ಬಿದ್ದಿದೆ ಎಂಬುದನ್ನು ತೋರಿಸುವುದು ಆದುದರಿಂದ ಇಂತಹ ಮಹತ್ಕಾರ್ಯವನ್ನು ನಿರ್ವಹಿಸಬೇಕಾದಂಥ ತಾಯಿಯರು ಬಲವಂತರಾಗಿಯೂ ಬುದ್ಧಿವಂತರಾಗಿಯೂ ಇರಬೇಕಲ್ಲವೆ? ಆದರಿಂದಲೇ ಸ್ತ್ರೀಯರು, ಈ ವಿಷಯದಲ್ಲಿ ವಿದ್ಯೆಯ ಸಹಾಯದಿಂದಲೂ ಇತರ ಉಪದೇಶಗಳಿಂದಲೂ ಅನುಭವಶಾಲಿಗಳಾಗಿರಬೇಕು

ಸ್ತ್ರೀಯರ ವಿದ್ಯಾಭ್ಯಾಸ

ಈಗಿನ ಕಾಲದಲ್ಲಿ ಬಾಲಕರ ವಿದ್ಯಾಭ್ಯಾಸವು ಬಹಳವಾಗಿ ಹರಡುತ್ತಿದೆ. ಹೀಗೆ ವಿದ್ಯಾವಂತರಾದ ಯುವಕರ ಸಹಧರ್ಮಿಣಿಗಳಾಗುವವರು ಅವರ ಅಭಿಲಾಷೆಗಳನ್ನೂ, ಅವರು ಮಾಡತಕ್ಕ ಕಾರ್ಯಗಳನ್ನೂ ತಿಳಿದು ಕೊಳ್ಳುವಷ್ಟು ಶಕ್ತರಾಗಿರಬೇಡವೆ? ಒಂದು ಬಂಡಿಯ ಎರಡು ಚಕ್ರಗಳು ಒಂದೇ ಸಮನಾಗಿ ಇಲ್ಲದೆಹೋದ ಪಕ್ಷದಲ್ಲಿ ಹೇಗೆ ಅದನ್ನು ನಡೆಸುವುದಕ್ಕೆ ಆಗುವುದಿಲ್ಲವೋ ಹಾಗೆ ಸಂಸಾರವೆಂಬ ಬಂಡಿಯನ್ನು ಪತಿಪತ್ನಿಯರೆಂಬ ಚಕ್ರಗಳು ಸರಿಯಾಗಿಲ್ಲದೇ ಹೋದರೆ ಚೆನ್ನಾಗಿ ನಡೆಸುವದಕ್ಕಾಗುವದಿಲ್ಲ. ಇದರಿಂದ ಸ್ತ್ರೀಯರಿಗೆ ವಿದ್ಯಾಭ್ಯಾಸವನ್ನು ಕೊಡತಕ್ಕದ್ದು ಎಂದು ನಿಷ್ಕರ್ಷೆಯಾಗುವುದು.

ಆದುದರಿಂದ ಇವರ ವಿದ್ಯಾಭ್ಯಾಸವು ಗೃಹಸ್ಥಾಶ್ರಮದಲ್ಲಿ ಉಪಯೋಗವಾಗುವ ವಿಷಯಗಳಿಂದಲೇ ಕೂಡಿರಬೇಕು. ಅಂದರೆ ಚೆನ್ನಾಗಿ ಭಾಷಾಜ್ಞಾನವೂ, ಗೃಹಕೃತ್ಯ ನಿರ್ವಾಹಕ ಕ್ರಮ ಶಾರೀರ ಧರ್ಮಶಾಸ್ತ್ರ ಸಂಗೀತ, ಹೊಲಿಗೆ ಹಾಕುವುದು ಮೊದಲಾದವುಗಳಿಂದ ಕೂಡಿರಬೇಕು ಹೀಗೆ ಹೀಗೆ ಸ್ತ್ರೀಯರಿಗೆ ಉಚಿತವಾದ ವಿದ್ಯಾಭ್ಯಾಸವನ್ನು ಜಾರಿಗೆ ತರುವದಕ್ಕೆ ಏರ್ಪಾಡು ಮಾಡುವುದು ಮುಖ್ಯ ವಿಷಯವು ಅದಾಗುವವರೆಗೂ ತತ್ಕಾಲದಲ್ಲಿ ಸಿಕ್ಕುವ ವಿದ್ಯಾಭ್ಯಾಸವನ್ನು ಖಂಡಿತವಾಗಿ ಮಾಡಿಸಬೇಕು. ಸ್ತ್ರೀಯರಿಗೆ ಸಾಧಾರಣವಾಗಿ ಎಷ್ಟೋ ವಿರಾಮಕಾಲ ಸಿಕ್ಕುವುದು. ಇವುಗಳನ್ನು ಉಪಯೋಗಿಸದೆ ಸುಮ್ಮನೆ ಇರುವುದಕ್ಕಿಂತ ಯಾವುದಾದರೂ ಕೈಗಾರಿಗೆ ಕೆಲಸಗಳನ್ನು ಮಾಡಬಹುದು, ಒಳ್ಳೇಯ ಗ್ರಂಥಗಳನ್ನು ಓದಬಹುದು.

ಗೃಹಶಿಕ್ಷಣ

ನಮ್ಮ ಬಾಲಕಿಯರ ಗೃಹಕೃತ್ಯ ನಿರ್ವಾಹಣೆಗೆ ಅವರ ಪಾಠಶಾಲೆಗಳಲ್ಲಿ ದೊರೆಯುವ ವಿದ್ಯಾಭ್ಯಾಸವು ಎಷ್ಟಾದರೂ ಸಾಲದು. ಸುಗುಣಾಭಿವೃದ್ಧಿ, ದೈವಭಕ್ತಿ, ಗುರುಭಕ್ತಿ, ಶಿಶ್ರೂಷೆ, ವಿನಯ, ದಯೆ, ತಾಳ್ಮೆ, ಮಿತವ್ಯಯ, ಶುಚಿ, ಕ್ರಮಪೂರಿತ ಕೆಲಸ—ಈಗುಣಗಳೆಲ್ಲ ಮನೆಯಲ್ಲಿಯೇ ಕಲಿಯಬೇಕು. ನೋಡಿದರೆ ಬರಿಯ ವಿಷಯಜ್ಞಾನಕಿಂತಲೂ ಇವು ಮುಖ್ಯವಾದುವು. ಇವುಗಳನ್ನು ಉಪದೇಶದಿಂದ ಕಲಿಯತಕ್ಕವುಗಳಲ್ಲ? ಉದಾಹರಣೆಯಿಂದ ಕಲಿಯತಕ್ಕವು ಆದುದರಿಂದ ತಂದೆ ತಾಯಿಗಳಾದವರು ಇವುಗಳನ್ನು ಅಭಿವೃದ್ಧಿಗೆ ತರುವಂಥ ಸೌಕರ್ಯಗಳನ್ನು ಒದಗಿಸಿಕೊಡಬೇಕು.

ಕರ್ತವ್ಯಗಳು

ಪತ್ನಿಯೂ ಗೃಹಿಣಿಯೂ ಅವರು ನಡೆಸತಕ್ಕ ಕೆಲಸಗಳನ್ನು ಮುಂದೆ ಹೇಳಬೇಕೆಂದಿದ್ದೇನೆ. ಪ್ರತಿಯೊಬ್ಬ ಬಾಲಕಿಯೂ ಸೀತೆ, ಸಾವಿತ್ರಿ, ದಮಯಂತಿಯರಲ್ಲಿ ಒಬ್ಬರನ್ನು ಉದಾಹರಣೆಯಾಗಿಟ್ಟುಕೊಂಡು ತನ್ನ ನಿತ್ಯಕರ್ಮಗಳಲ್ಲಿ ಅವರನ್ನು ಅನುಸರಿಸಬೇಕು. ಅವರಂತಹ ಕರ್ತವ್ಯಪತಿಯವ ಸೇವೆಯು ಸಾಧಾರಣವಾಗಿ ಪತ್ನಿಯನ್ನು ಪತಿಯ ಅರ್ಧಾಂಗಿಯೆಂದು ಕರೆಯುವರು. ಮನು ಧರ್ಮಶಾಸ್ತ್ರದಲ್ಲಿ ಹೇಳುವದೇನಂದರೆ' ಪತಿ ಪತ್ನಿಯರು ಭಿನ್ನ ದೇಹಗಳಾದರೂ ಏಕಜೀವಗಳಾದುದರಿಂದ ಮನೋವಾಕ್ಕಾಯಗಳಲ್ಲಿ ಒಬ್ಬರನ್ನೊಬ್ಬರು ಅನುಸರಿಸಿ ನಡೆಯಬೇಕು. ಪತಿ ಪತ್ನಿಯರಲ್ಲಿ ಒಬ್ಬರಾದರೂ ಸುಗುಣ ಜೀವಿಗಳಾದರೆ ಮತ್ತೊಬ್ಬರನ್ನು ತನ್ನಂತಸ್ತಿಗೆ ತರಬಲ್ಲರು ನಿಮ್ಮ ಮನೆಯು ಸುಖ ಸಂತೋಷಗಳಿಂದ ಬೆಳಗಬೇಕಾದರೂ, ನಿಮ್ಮ ಜೀವನ ರಥವು ಸಾಗವಾಗಿ ನಡೆಯಬೇಕಾದರೂ, ಪುರುಷರ ಪ್ರಯತ್ನಕ್ಕಿಂತಲೂ ಸ್ತ್ರೀಯರ ಪ್ರಯತ್ನವು ಹೆಚ್ಚಾಗಿಬೇಕು. ಪಾತಿವ್ರತ್ಯದ ವಿಷಯದಲ್ಲಿ ಹೆಚ್ಚು ಹೇಳಬೇಕಾದುದಿಲ್ಲ. ಸ್ತ್ರೀಯರ ಧರ್ಮವು ಅದರ ಮೇಲೆಯೇ ನಿಂತಿದೆ. ಗೃಹಿಣಿಯು ತನ್ನ ಅತ್ತೆ ಮಾವಂದಿರ ವಿಷಯದಲ್ಲಿಯೂ ಕುಟುಂಬಕ್ಕೆ ಸೇರಿದ ಇತರರ ವಿಷಯದಲ್ಲಿಯೂ ಅಚ್ಚುಮೆಚ್ಚಾಗಿ ನಡೆದುಕೊಳ್ಳಬೇಕು. ಭಾರತಿಯ ಬಾಲೆಯರಲ್ಲ 'ವಿಧೇಯತ್ವ' ಆಕಳಂತೆ ನಮ್ರತೆ—ಇವುಗಳು ಸರ್ವ ಸಾಧಾರಣವಾದ ಗುಣಗಳಾಗಿವೆ. ಅತಿಥಿ ಸತ್ಕಾರವಿಷಯದಲ್ಲಿ ನಮ್ಮ ಸ್ತ್ರೀ ಸಮಾಜವು ಎಂದಿಗೂ ಹಿಂದೆ ಬೀಳತಕ್ಕದ್ದಲ್ಲ. ಯಾವಾಗಲೂ ಸಂತೋಷ ಹೃದಯದಿಂದಿದ್ದುಕೊಂಡು ನಮ್ಮ ಸುತ್ತು ಮುತ್ತಲಿರತಕ್ಕ ಎಲ್ಲರಿಗೂ ಸಂತೋಷವನ್ನು ಬೀರುವುದು ನಮ್ಮ ಕರ್ತವ್ಯವಾಗಿರುವುದು.

ಬಾಲವಿವಾಹವು ಘಾತಕವೆಂದು ಹೇಳಿದರು. ನಾವು ನಮ್ಮ ಸ್ತ್ರೀಧರ್ಮವ್ಯಾವುದುಂಟೋ ಅದನ್ನು ಚೆನ್ನಾಗಿ ಗ್ರಹಿಸಿ, ಅದನ್ನೇ, ಬಿಡದೆ ಆಶ್ರಯಿಸಬೇಕು. ಅಕಳಂಕವಾದುದಾಗಿಯೂ, ಉದಾರವಾಗಿಯೂ, ಸ್ವಾರ್ಥತ್ಯಾಗದಿಂದಲೂ ನಮ್ಮ ತಂದೆ ತಾಯಿಗಳಿಗೂ ಕೈಹಿಡಿದ ಪತಿಗೂ ತನ್ಮೂಲಕ ಜನಾಂಗಕ್ಕೂ ಜನ್ಮಭೂಮಿಗೂ ನಮ್ಮೀ ಜನ್ಮವನ್ನು ಧಾರೆಯೆರೆಯಬೇಕು. ಭಗವಂತನ ಪಾದಾರವಿಂದದಲ್ಲಿ ನಮ್ಮ ಚಿತ್ತವೃತ್ತಿಯನ್ನು ಸ್ಥಿರಗೊಳಿಸಬೇಕು. ತಾಳ್ಮೆಯಿಂದಲೂ ಶಾಂತಿ ಸ್ವಭಾವದಿಂದಲೂ ನಾವು ಮಾಡುವ ಕಾರ್ಯಗಳೆಲ್ಲವೂ ಜಯವಾಗಿಯೇ ಆಗುತ್ತವೆ ನಮ್ಮ ಉದ್ದೇಶಗಳೆಲ್ಲವೂ ಈಡೇರುತ್ತವೆ. ನಮಗೆ ಸ್ವಾರ್ಥಸುಖವು ದೃಷ್ಟಿಪಥದಲ್ಲಿರಬಾರದು. ನಮ್ಮ ಕುಟುಂಬದ ಕೀರ್ತಿಜ್ಯೋತಿಯನ್ನು ಬೆಳಗುವದರಲ್ಲಿ ನಮ್ಮ ದೇಹವನ್ನು ನೀಡಬೇಕು. ನಮ್ಮ ಸೀತಾ ದಮಯಂತಿಯರು ಸ್ಥಾಪಿಸಿದ ಭಾರತೀಯರ ಸ್ತ್ರೀಧರ್ಮ ಮಾರ್ಗವು ಕಿಂಚಿತ್ತಾದರೂ ಮಲಿನವಾಗದಂತೆ ಅವರ ಮಾರ್ಗವನ್ನೇ ಹಿಡಿದು ನಡೆಯಲು ಪಾಡುಗಡಬೇಕು.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು ಮಾಹಿತೀ ಬಗ್ಗೆ ಬರೆಯಿರಿ

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

ಜಮಖಿಂಡಿಕರ ವಾಡೇ ೪೬೫ ಶನಿವಾರ ಪುಣೇಶಹರ

ಗುಲಕಂದ! ಗುಲಕಂದ!! ಗುಲಕಂದ!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತುರಾಯಿಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತಕ್ಕಷ್ಟು ಕಮೀಶನ್.

ವಿಳಾಸ:— ಧಾಡಗೆ ಪಾಷಾಣಕರ ಕಂಪನಿ

ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ಇರುತ್ತದೆ. ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಪುಡಿ ಕಿಂ ರೂ ೦-೦-೬, ೨೫ರ ಕಿಂ ರೂ. ೦-೯-೦ ೫೦ರ ಕಿಂ ರೂ ೧ ೦-೦; ೧೦೦೦ ಪುಡಿಗಳ ಕಿಂ. ರೂ. ೧೭-೦-೦, ಟಪಾ ಖರ್ಚುವಗೈರೆ ಪ್ರತ್ಯೇಕ.

ಸುಗಂಧಿ ನಶ್ಯ:— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ, ಥಂಡಿ, ಅಂತಲೆವಶಕ ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ಖರ್ಚು ೦ ೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦ ಟಪಾ ಪೋ ಬೇರೆ.

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರವತ್ ನೋಡಿ ಮಾಲಿಗೆ ಆರ್ಡರ ಕೊಡಬಹುದು. ಇವರ ಹೊರತು ನಮ್ಮಲ್ಲಿಯು ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು. ಖರೀದಿ ಮಾಡಿ ಕಳಿಸುವೆವು. ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್. ಬಿ. ಕದಂ, ಬೀಡಿ ಮತ್ತು ತಂಬಾಕು ಜರ್ದಾ ದುಕಾನ. ಮು. ಪೋ. ನಿಪ್ಪಾಣಿ, ಜಿ. ಬೆಳಗಾವ.

ಜಾಹೀರ ನೋಟೀಸು.

ರಾ॥ ರಾ॥ ಈರಪ್ಪ ತಂದಿ ಪರಮಪ್ಪ ಹಂಗರಗಿಯವರ ವ ಉಪ್ಪಲದಿನ್ನಿಯ ವರ ಸಾ॥ ಹೆಬ್ಬಾಳ ತಾಲೂಕ ಬಾಗೇವಾಡಿ ಇವರಿಗೇ —

ಕೆಳಗೆ ಸಹಿಮಾಡುವವರ ಕಡಿಂದಾ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ ನೀನು ನಮ್ಮ ಚಿ॥ ಭೀಮವ್ವಾ ಇವಳನ್ನು ೪ ೫ ವರ್ಷಗಳ ಕೆಳಗೆ ಲಗ್ನಮಾಡಿಕೊಂದೀದಿ. ಆದರೆ ಈವತ್ತಿನ ತನಕ ನಿನ್ನ ಮನೆಗೆ ಕರಕೊಂದುಹೋಗಿ ಪ್ರಪಂಚಮಾಡಲಿಲ್ಲ. ಮತ್ತು ಈಗ ಸದರೀ ಭೀಮವ್ವ ಇವಳು ದೊಡ್ಡಾಕಿ ಆದಳು. ನಾನು ಅವಳನ್ನು ಜೋಪಾನಮಾಡಿಕೊಂತಾ ಬಂದೆ ಸದರೀ ಭೀಮವ್ವ ಇವಳಿಗೆ ಶೀರೀದಸಿಂದಾ ವ ಹೊಟ್ಟೇದಸಿಂದಾ ಎರಡನೇ ಕಡೆ ೨೦೦ ದೇಣೇಮಾಡಿ ಹೊಟ್ಟೆಗೆ ಹಾಕೀನಿ. ಭೀಮವ್ವ ಇವಳ ಜನಕತಾಯಿ ವ ತಂದಿ ಇಬ್ಬರೂ ಇಲ್ಲ. ಅವಳಿಗೆ ನಾನು ಕರ್ತನಾಗಬೇಕು ನನಗೆ ಅಧಿಕಾರ ಇದ್ದದರಿಂದ ನೋಟೀಸುಕೊಟ್ಟಿನಲ್ಲ ಈ ನೋಟೀಸು ಮುಟ್ಟಿದ ೮ ದಿವ್ಸಗಳಲ್ಲಿ ಭೀಮವ್ವ ಇವಳನ್ನು ನಿನ್ನ ಮನೆಗೆ ಕರಕೊಂಡುಹೋಗಬೇಕು ದೇಣೇದ ರುಪಾಯಿನೂ ಕೊಡಬೇಕು. ಜರ ಭೀಮವ್ವನ ಕರಕೊಂಡು ಹೋಗದಿದ್ದರೆ ನಾನು ಅವಳನ್ನು ಎರಡನೇ ಕಡೆ ಉಡಕಿಮಾಡಿಕೊಡುತ್ತೇನೆ. ಉಡಕಿ ಗಂಡನ ಮೇಲೆ ವ ಅವಳಮೇಲೆ ಯಾವ ತರದ ಹಕ್ಕು ನಡಯಲಿಕ್ಕಿಲ್ಲ ೮ ದಿವ್ಸದಲ್ಲಿ ಒಂದು ಕರಕೊಂಡು ಹೋಗದಿದ್ದರೆ ಇದೇ ಫಾರೀಖತ ಅಂತ ತಿಳಿಯಬೇಕು. ಮತ್ತು ನೀನು ಲಗ್ನದ ಕಾಲಕ್ಕೆ ಅವಳ ಮೈಮೇಲೆ ದಾಗೀನೆ ವಗೈರೆ ಏನೂ ಇಟ್ಟಿಲ್ಲ. ತಿಳಿಯುವದು. ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲೆ ಇರುತ್ತದೆ

() ಈ ಹೆಬ್ಬೆಟ್ಟಿನ ಗುರ್ತು ಫಕೀರಪ್ಪ ಭೀಮಪ್ಪ ಗಂಗಪ್ಪನವರ ಸಾ॥ ಬಾಗಲಕೋಟ. ಈತ ಮಾಡಿದ್ದು ಇರುತ್ತದೆ ತಾ॥ ೨೫ - ೫ - ೨೬ ಇಸ್ವಿ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ.

ಇವರು ಮೇ ೧ ನೇ ವಾರದಿಂದ ಹುಣಸೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೫೬೦೦ ಮಿ. ವಿತ್ಠಲ ಚಿಮ್ಮಾಜಿ ಸೇಟ ಕಲಾನ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೬ ಮಿ|| ವೆಂಕಟರಮಣ, ವೆಂಕಟರಮಣ ಹೆಗಡೆ, ಸೇಂಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ|| ಜಿ. ವೆಂಕಟಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ|| ರಾಮಚಂದ್ರ ವಾಮನ ಕಾಂಕರ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬಡೋದಾ)

(೬) ಬಾಂಡ ನಂ. ೧೮೪೦ ಮಿ|| ಆರ್. ಎಚ್. ನಾಟಿಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಪೊರವಾಲ ಬ್ಲ್ಯಾಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ- ೫ ಆಣೆ. ಟ. ಖ. ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಕ್ಯಾಂಡ ಕೊ.(ರೆಜಿಸ್ಟರ್ಡ) ಪುಣೇಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪ್ರತ್ಯೇಕ

ಟಿಪ್ಪಣೀಃ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬರ್ಟೀ ವಾಚ ಕಂ. (In ia) ಮುಂಬೈ ನಂ. ೪

ಕಾನಡಾಧುರೀಣ.

ಉತ್ತಮ ವರ್ಗದ ವಾರಪತ್ರಿಕೆ.

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡ ಲಿಚ್ಛಿಸುವವರು ಈ ವಾರಪತ್ರಿಕೆಯನ್ನು ಮೊದಲು ಓದಬೇಕು.

ವಾರ್ಷಿಕ ಚಂದಾ ೩-೧೩-೦ ಪತ್ತೆಃ—

ಸಂಪಾದಕ ಕಾನಡಾಧುರೀಣ- ಕುಮಠಾ, ಜಿ. ಉತ್ತರ ಕನ್ನಡ

ಸಿನಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿರಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸಃ— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಲಾ ವಿಜಾಪೂರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರವಾರೆ
ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರುಃ ಮಂಗಳವೇಢೇ ಬಂಧುಗಳು
ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧–೧೨–೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ } ಬಾಗಲಕೋಟೆ ಶುಕ್ರವಾರ ವಿ. ತಿ ವೈಶಾಖ ಬಹುಳ ೯ ಶಕೆ ೧೮೫೮ ತಾ|| ೪-೬-೧೯೩೬. { ಸಂಚಿಕೆ ೧೧

ಸಂಪಾದಕನ ಭೂಮಿ

(*)

ನನ್ನ ಮನಸಿನ ಮೌನವಾಗಿ ಕಟ್ಟಿ ಹೆಣೆದು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊರೆ ।
ನನ್ನ ದಾರಿಯು ನನ್ನ ಕಾಣಿಕೆಯು ನೊಂದು ನಿನ್ನ ಯಾಕೆ ಕರೆದೆ ॥
ನನ್ನ ದೇಹವು ನಿನ್ನ ಸೇರಿಕೊಳ್ಳಲೆಂದಾಗಿ ।
ತನ್ನನ್ನು ಸಾಗಿ ನಿಕ್ಕಸಿ ನಿನ್ನ ವಿಡಿ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಲ ಧವಳವೆಂದು ತಿಳಿಯೊ ॥

—ಅಂಬಿಕಾ ತನಯ ದತ್ತ

---

೩ ನೇ ಮೈಸೂರು ಜಿಲ್ಲಾ ಪರಿಷತ್ತು ಹೋದ ಮೇ ತಿಂಗಳಿನ ೨೪ ನೇ ತಾರೀಖಿನಿಂದ ೪ ದಿವಸಗಳ ವರೆಗೆ ನಡೆಯಿತು. ಈ ಪರಿಷತ್ತಿನ ಜೊತೆಗೆ ವ್ಯವಸಾಯ, ಕೈಗಾರಿಕೆ, ವಿದ್ಯಾಭ್ಯಾಸ, ರೇಶ್ಮೆ, ನೀರಾವರಿ, ಗ್ರಾಮಪಂಚಾಯತಿ, ನಗರಸಭೆ ಮೊದಲಾದವುಗಳಿಗೆ ಸಂಬಂಧಪಟ್ಟ ಪರಿಷತ್ತುಗಳಾದರೂ ಜರುಗಿದವು. ಇದರೊಡನೆ ಎರಡನೇ ಮೈಸೂರ ಜಿಲ್ಲಾ ಪ್ರದರ್ಶನವಾದರೂ ಏರ್ಪಟ್ಟಿದ್ದಿತು. ಜಿಲ್ಲಾ ಪರಿಷತ್ತಿಗೆ ಡೆಪ್ಯೂಟಿ ಕಮೀಶನರಾದ ಶ್ರೀ. ಏ. ವ್ಹಿ. ರಾಮನಾಥನ ಎಂಬುವವರು ಅಧ್ಯಕ್ಷರಾಗಿದ್ದರು. ಅವರ ಭಾಷಣವು ವಿದ್ಯಾಭ್ಯಾಸ, ಕೃಷಿಕರ್ಮ (ಒಕ್ಕಲತನ) ರಾಟಿ, ಸಹಕಾರ, ಸಾರ್ವಜನಿಕ ಸ್ವಾಸ್ಥ್ಯ, ಕುಡಿಯುವನೀರು ಮೊದಲಾದವುಗಳನ್ನು ಒಳಕೊಂಡಿತು. ಉದ್ಯೋಗ ವ್ಯವಸಾಯಗಳ ವಿಷಯಕ್ಕೆ ಮಾತಾಡುವಾಗ, ಅವರು ರಾಟಿಯ ಬಗ್ಗೆ ಬಹಳ ಆದರವನ್ನು ತೋರಿಸಿದರು. "ಉದ್ಯೋಗ ವ್ಯವಸಾಯಗಳ ದೃಷ್ಟಿಯಿಂದ ನಾವಿನ್ನೂ ಮುಂದುವರಿದಿರುವದಿಲ್ಲ. ರಾಟಿಯು ಆಗಬೇಕಾದಷ್ಟು ಜನಪ್ರಿಯವಾಗಿರುವದಿಲ್ಲ. ತಾಲೂಕ ಪರಿಷತ್ತಿನಲ್ಲಿ ರಾಟಿಯು ಪ್ರಾಧಾನ್ಯಕ್ಕೆ ಕಂಡು ಬರುತಲಿದ್ದಿತು. ರಾಟಿಯ ಪ್ರದರ್ಶನವಾದರೂ ಅದರಲ್ಲಿ ಮುಖ್ಯಾಂಶವಾಗಿದ್ದಿತು. ಇಲ್ಲಿಯ ಪ್ರದರ್ಶನದಲ್ಲಿಯೂ ಕೂಡ ರಾಟಿಗೆ ಪ್ರಥಮ ಪೀಠವು ಕೊಡಲ್ಪಟ್ಟಿದೆ. ಸ್ಥಾನಿಕ ಸಂಘವಾಗಲಿ, ಸಹಕಾರ ಸಂಘಗಳಾಗಲಿ ಇನ್ನು ವರೆಗೆ ರಾಟಿಯ ಬಗ್ಗೆ ಸುಶ್ಲಿಷ್ಟವಾದ ಪ್ರಯತ್ನಗಳನ್ನು ಮಾಡಿರುವದಿಲ್ಲ. ಸುಗ್ಗಿ ಆಗಿ ಹೋದ ಮೇಲೆ, ನಿರುದ್ಯೋಗದ ವೇಳೆಯಲ್ಲಿ ಒಕ್ಕಲಿಗರಿಗೆ ಅತ್ಯವಶ್ಯಯುಕ್ತವಾದ ಆರ್ಥಿಕ ಸ್ಥಿತಿಯನ್ನು ಸುಧಾರಿಸ ಬಹುದಾದ ವ್ಯವಸಾಯವೆಂದರೆ ರಾಟಿಯು ಶಕ್ತಿ ಹೀನರಿಗೂ, ಮುದುಕರಿಗೂ, ರಾಟಿಯು ಆಟದಂತಿರುವುದಲ್ಲದ ಅಲ್ಪ ಸ್ವಲ್ಪ ಹಣವನ್ನು ತಂದು ಕೊಡುವುದು. ಬಡವರ ಆದಾಯವು ಬಹಳ ಸ್ವಲ್ಪ ಇರುತ್ತದೆ. ಮುಖ್ಯ ಹೋರೆಯನ್ನು ಮುಗಿಸಿಕೊಂಡು ಉಳಿದ ವೇಳೆಯಲ್ಲಿ ಇವನು ನೂತರೆ ಅವರಿಗೆ ಉಪ್ಪು ಮೆಣಸಿನ ಕಾಯಿ ಮೊದಲಾದವುಗಳಿಗೆ ಸಾಕಷ್ಟು ಹಣವು ದೊರೆಯುತ್ತದೆ. ಚಿಕ್ಕ ಮಕ್ಕಳಿಗೂ, ಹೆಣ್ಣು ಮಕ್ಕಳಿಗೂ ನೂಲುವುದು ಸುಲಭವಾದದು. ಹೊತ್ತು ಹೋಗದಿರುವಾಗ, ಮನುಷ್ಯನು ನಿದ್ದೆಯಲ್ಲಾಗಲಿ ಆಲಸ್ಯದಲ್ಲಾಗಲಿ ಕಾಲಕಳೆಯುವನು. ಆಗ ಅವನು ನೂಲು ತೆಗೆದನೆಂದರೆ, ಏನಿಲ್ಲೆಂದರೂ ಅವನಿಗೆ ಧೋತರ ಮಂಜಿ ಯಾಗುವುದು. ರಾಟಿಯು ಎಲ್ಲರಿಗೂ ಪ್ರಿಯಕರವಾಯಿತೆಂದರೆ ಹಳ್ಳಿಗಳ ಆರ್ಥಿಕ ಸ್ಥಿತಿಯು ಒಳಿತಾಗಿ ಸುಧಾರಿಸುವುದು. ರಾಟಿಯ ಪ್ರದರ್ಶನವಷ್ಟೇ ಸಾಕಿಲ್ಲ. ಪ್ರತಿಯೊಬ್ಬನು ತಾನು ನೂತ ನೂಲಿನಿಂದ ನೇಯ್ದ ಅರಿವೆಗಳನ್ನು ಧರಿಸಲು ಯತ್ನಿಸಬೇಕು. ಹೀಗೆ ಅರಿವೆಗಳು ಶ್ರೀಮಂತವೆಂಬುದಕ್ಕೆ ಪ್ರದರ್ಶನ ವಿರಬೇಕು. ದಾರಿದ್ರ್ಯದೇವಿಯನ್ನು-ಅವಿದ್ಯಾದೇವಿಯನ್ನು-ಹೊರದೂಡಿಸಲು, ಎಲ್ಲ ಮುಂದಾಳುಗಳು ತೊಡಗಬೇಕೆಂದು ನಾನು ಬೇಡಿಕೊಳ್ಳುತ್ತೇನೆ. ನಗರ ಸಭೆಗಳಿಗೂ (Municapalties) ಪಂಚಾಯತಿಗಳಿಗೂ, ಗ್ರಾಮ ಸಂಸ್ಥೆಗಳಿಗೂ ಸಹಕಾರ ಸಂಘಗಳಿಗೂ ನನ್ನ ಬಿನ್ನಹ ವೆಂದರೆ ಅಲ್ಲಿಯ ಜನರ ಸಲುವಾಗಿ ರಾಟಿಗಳನ್ನು ವಿತರಲಿಕ್ಕಿಡಬೇಕು. ಮತ್ತು ಪ್ರತಿಯೊಂದು ಊರಿಗೆ ಕೈನೂಲನ್ನು ನೇಯಲು ಒಬ್ಬ ನುರಿತ ನೇಕಾರನನ್ನು ಇಡಬೇಕು. ಅಶಕ್ತರಿಗೂ ಚಿಕ್ಕಮಕ್ಕಳಿಗೂ, ಸ್ತ್ರೀಯರಿಗೂ ಇದರಿಂದ ಉಪಯೋಗ ವಾಗುವುದು. ವ್ಯವಸಾಯವು ಬೆಳೆಯುವುದು. "ಹಳ್ಳಿಯ ಸುಧಾರಣೆಯಾಗುವುದು."- ಹೀಗೆ ಅಧ್ಯಕ್ಷರು ನುಡಿದರು. ರಾಟಿಯಿಂದಲೇ ನಾಡಿನ ಏಳ್ಗೆಯು ಹೇಗೆ ಸಾಧ್ಯವಾಗುವದೆಂಬುದು ಮೇಲಿನಿಂದ ಸ್ಪಷ್ಟವಾಗುವುದು. ಮಹಾತ್ಮರ ನುಡಿಗಳ ಸತ್ಯತೆಯು ಈಗೀಗ ನಮ್ಮ ಜನರ ಮನವರಿಕೆಯಾಗ ಹತ್ತಿದೆ. ಈ ವರ್ಷದ ಫೆಬ್ರುವಾರಿ ತಿಂಗಳದ ಮಾಡರ್ನ ರಿವ್ಯೂದಲ್ಲಿ ಶ್ರೀ. ಕೆ. ನಟರಾಜನ್ ಇವರು ಬರೆದ ವಿಚಾರಗಳಾದರೂ ಓದಲರ್ಹವಾಗಿವೆ. ಆಚರಣೆಯಲ್ಲಿ ತರಲು ಯೋಗ್ಯವಾಗಿವೆ. ಮೈಸೂರ ಸಂಸ್ಥಾನದಲ್ಲಿ ಕೈಗಾರಿಕೆಗಳಿಗೆ ವಿಶೇಷತ: ರಾಟಿಗಳಿಗೆ ಹೆಚ್ಚು ಪ್ರೋತ್ಸಾಹನೆಯು ದೊರೆಯ ಹತ್ತಿದೆ. ನೂಲಿನ ಮತ್ತು ನೇಕಾರಿಕೆಯ ಪ್ರದರ್ಶನಗಳಿಗೆ ತಗಲುವ ಅರ್ಧ ವೆಚ್ಚವನ್ನೂ ಸರಕಾರದವರು ಹೊರಲೊಪ್ಪಿದ್ದಾರೆ. ಪ್ರಜೆಗಳ ಹಿತವನ್ನು ನೋಡುವ ಸರಕಾರವೇ ನಿಜವಾದ ಸರಕಾರವು. ಮೈಸೂರ ದೊರೆಗಳು ಪ್ರಜಾರಂಜನ ತತ್ಪರರೆಂಬ ಕೀರ್ತಿ

ಯು ಎಲ್ಲ ಕಡೆಯಲ್ಲಿಯೂ ಬೆಳಗುವಂತೆ ಆಸ್ಪದ ವಿಹಾರವಾಗ ತೊಡಗಿದೆ. ಉಳಿದ ಎಲ್ಲ ದೇಶದವರೂ ವೈಸರಾಯನ ರೀತಿಯನ್ನು ಅನುಕರಿಸಿ, ರಾಟೆಯ ಪ್ರಚಾರವನ್ನು ಹೆಚ್ಚಾಗಿ ಬೆಳೆಯಿಸಿ, ಪರದೇಶೀ ಅರಿವೆಗಳು ಇಲ್ಲದಂತಾಗಿ ಮಾಡಿದರೆ, ಹಿಂದೀರಾಷ್ಟ್ರದ ಸೌಭಾಗ್ಯದೇವತೆಯು ಕಳೆದುಂಬುವಳು. ಸ್ವಾತಂತ್ರ್ಯ ಲಕ್ಷ್ಮಿಯು ಹಿಂದುಸ್ಥಾನದಲ್ಲಿ ನಲಿದು ಹತ್ತುವಳು; ಕೆಲೆದಾಡುವಳು; ಸುಖವನ್ನು ತರುವಳು.

ಕೊಡಗು ದೇಶವು ನಿದ್ರೆ ತಿಳಿದು ಎದ್ದಿದೆ ಎಂದೆನ್ನಲು ಏನೂ ಅಭ್ಯಂತರವಿಲ್ಲ. ಕೊಡಗಿನವರು ತಮ್ಮ ಉನ್ನತಿಗಾಗಿ ಹರಿದಾಡುತ್ತಿರುವರು. ಲೋಕಜಾಗೃತಿಯನ್ನು ಮಾಡಲಿಕ್ಕೆ ಕನ್ನಡ ವೃತ್ತಪತ್ರಗಳನ್ನು ಪ್ರಕಟಿಸುತಲಿದ್ದಾರೆ. ಕೊಡಗು, ಲೋಕಪಾವನ ಎಂಬ ವಾರಪತ್ರಿಕೆಗಳು ನಿಯಮಿತವಾಗಿ ಜಾಗೃತಿಯ ಕೆಲಸವನ್ನು ಮಾಡತೊಡಗಿವೆ. ಲೋಕರಹಸ್ಯ, ವಿದ್ಯಾರ್ಥಿ ಎಂಬ ಮಾಸ ದ್ವಿಮಾಸ ಪತ್ರಿಕೆಗಳಾದರೂ ಅದೇ ಕೆಲಸದಲ್ಲಿ ಪ್ರವೃತ್ತವಾಗಿವೆ. ಈ ಪತ್ರಿಕೆಗಳಲ್ಲಿ ಸಾಮಾಜಿಕ, ರಾಜಕೀಯ, ಧಾರ್ಮಿಕ, ಔದ್ಯೋಗಿಕ ವಿಷಯಗಳು ವಿವೇಚಿಸಲ್ಪಡುತ್ತಿವೆ. ಕೊಡಗಿನ ಕವಿಗಳ ವಿಷಯದಲ್ಲಿಯೂ, ಕೊಡಗಿನ ತೀರ್ಥಗಳ ವಿಷಯದಲ್ಲಿಯೂ, ಕೊಡಗಿನ ಉದ್ಯೋಗ ವ್ಯವಸಾಯಗಳ ವಿಷಯದಲ್ಲಿಯೂ ಬರಹಗಳನ್ನು ಇವುಗಳಲ್ಲಿ ಓದುಗರು ಕಾಣಬಹುದು. ಕನ್ನಡಿಗರೆಲ್ಲರೂ ಕನ್ನಡ ನುಡಿಯೆಂಬ ಸಾಮಾನ್ಯ ಬಂಧದಿಂದ ಕಟ್ಟಲ್ಪಟ್ಟಿದ್ದಾರೆ. ಕನ್ನಡ ನುಡಿಯ ಪ್ರಚಾರವಾದಂತೆ ಕರ್ನಾಟಕತ್ವದ ಕಲ್ಪನೆಯಾದರೂ ಬರುವದು. ನಾವು ಒಂದು; ನಮ್ಮ ನುಡಿಯು ಒಂದು, ನಮ್ಮ ಸಂಸ್ಕೃತಿಯು ಒಂದು, ನಾವೆಲ್ಲರೂ ಕೂಡಿ ನಡೆದರೆ ಉಳಿಯುತ್ತೇವೆ ಎಂಬ ಭಾವನೆಗಳು ಪ್ರದೀಪ್ತವಾಗುತ್ತ ನಡೆಯುವವು. ಕರ್ನಾಟಕ ಏಕೀಕರಣವಾದರೂ ನುಡಿಯ ಹೆಚ್ಚಳದಿಂದಲೇ ಹಬ್ಬುವಿಕೆಯಿಂದಲೇ ಆಗತಕ್ಕದ್ದು. ಇದನ್ನರಿತು ಕೊಡಗು ದೇಶವು ಸ್ವಲ್ಪಕಾಲದಲ್ಲಿಯೇ ಮುಂದೆ ಬಂದಿದೆ ಎಂಬುದು ಅಭಿನಂದನೀಯವಾದುದು. ಇದರಂತೆಯೇ ಅದರ ಹೆಜ್ಜೆಗಳು ಮುಂದೆ ಮುಂದೆ ಬೀಳುತ್ತ ಸಾಗುವವೆಂದು ನಾವು ಆಶಿಸುತ್ತೇವೆ.

ಬೇಡಿಬಂದವರು ಅವನೆಡೆಗೆ ಚಿಕ್ಕಂದಿನಲ್ಲಿಯೇ ತೆರಳುವರೆಂದು ನಾಣ್ಣುಡಿ. ಹೀಗೆ ನೋಡಿದರೆ **ಭೀಮರಾವ ಕಾರಕೂನರವರು** ಬೇಡಿಬಂದವರು. ಸಂಸಾರದ ತಾಪತ್ರಯವನ್ನು ನೀಗಿ ಸತ್ಯಸಂಕಲ್ಪನ ಸುಖದೂರಿಗೆ ಹೋಗಿರುವರು. ಮತ್ತೊಂದು ದೃಷ್ಟಿನಿಂದ ನೋಡಿದರೆ ಅವರು ಬಾಳುವೆಯನ್ನು ಹಾಳುಗೆಡವಿ ಹೋಗಿರುವರು. ಸಂಸಾರವನ್ನು ಉಪ್ಪಿಲ್ಲದ ಊಟದಂತೆ ಮಾಡಿರುವರು. ಆಟವನ್ನು ಬೇಟವಿಲ್ಲದಂತೆ ಮಾಡಿರುವರು. ಭೀಮರಾಯರೋ? ಅದೊಂದು ಬಿರಿಮೊಗ್ಗೆ. ಗಂಧವು ತುಂಬುತಲಿತ್ತು. ಅಷ್ಟರಲ್ಲಿಯೇ ಕರಾಳಕಾಲನ ದವಡೆಗೆ ತುತ್ತಾಯಿತು. ಜೀವನ ಸುಮನವೇ ಕಮರಿ ಕರಕಾದ ಮೇಲೆ, ಅದರ ಸೌಗಂಧವೆಲ್ಲಿ? ಸಿರಿಯೆಲ್ಲಿ? ಭೀಮರಾಯರು ಎಳೆಯ ಪ್ರಾಯದವರು. ಬಿ. ಎ. ವರ್ಗದಲ್ಲಿ ಅಭ್ಯಾಸಮಾಡುತಲಿದ್ದರು. ಅಗುಳಂಥವರು; ಹುರುಪಿನವರು; ಹುರುಪುಳ್ಳವರು. ಅವರಲ್ಲಿಯ ವ್ಯಕ್ತಿವೈಶಿಷ್ಟ್ಯವು ಅನನ್ಯಸದೃಶವಾದುದು. ಕಾಲೇಜದಲ್ಲಿ ಜನರನ್ನು ತಮ್ಮೆಡೆಗೆ ಒಲಿಸಿಕೊಳ್ಳುತ್ತಿದ್ದರು. ಗೆಳೆಯರಿಗೆಲ್ಲ ಅವರು ಸೂಜಿಗಲ್ಲಿದ್ದಂತೆ. ಅವರ ಮಹತ್ವಾಕಾಂಕ್ಷೆಯು ಬಹಳ. 'ಕನ್ನಡರಂಗಭೂಮಿ'ಯನ್ನು ಸುಧಾರಿಸಬೇಕು, ಅದರ ಹೊಲೆಗಳನ್ನು ತೊಳೆಯಬೇಕು; ನೀತಿಯ ಬರನ್ನಲ್ಲಿ ಊರಬೇಕು ಎಂಬುದೊಂದು ಅವರ ಮನಸಿನಲ್ಲಿ ಕಟೆಯುತಲಿದ್ದಿತು. ಸ್ವತಃ ನಾಟಕದಲ್ಲಿ ಭೂಮಿಕೆಯನ್ನು ವಹಿಸಿ, ರಂಗಭೂಮಿಯು, ಪುಂಡರ ಚೌಕಳಿಯು ಕುಣಿದಾಡುವ ನರಕವಲ್ಲ; ಪ್ರೇಮ ನೀತಿಗಳು ನಲಿದಾಡುವ ಆನಂದಮಂದಿರವೆಂದು ಜಗತ್ತಿಗೆ ತೋರಿಸಬೇಕೆಂದು ಅವರ ಹವಣಿಕೆ. ಕನ್ನಡದ ನುಡಿಯನ್ನು ಅಭಿವೃದ್ಧಿಗೊಳಿಸಬೇಕೆಂದು ಅವರ ಹಂಬಲ. ಮಿಂಚಿಹೋಯಿತು; ಮಳೆ ಬರಲಿಲ್ಲ. ಅವರು ಕೊಂಕನುಡಿಯನ್ನು ಒಲ್ಲರು. ಅವರಲ್ಲಿ ವಿಮರ್ಶನಾಶಕ್ತಿಯು ಚೆನ್ನಾಗಿದ್ದಿತು. ಅವರ ಅಕಾಲಮೃತ್ಯುವಿನಿಂದ ಕನ್ನಡನುಡಿಗೆ ಬಹಳೇ ಹಾನಿತಟ್ಟಿತು. ಅವರ ತಂದೆಗೂ, ತಮ್ಮಂದಿರಿಗೂ, ಆಪ್ತೇಷ್ಟರಿಗೂ ಆದ ಹಾನಿಯನ್ನು ಕಲ್ಪಿಸಲುಶಕ್ಯವಲ್ಲ. ಅವರ ದುಃಖದಲ್ಲಿ ನಾವೂ ಸಮಭಾಗಿಗಳಾಗಿದ್ದೇವೆ. ಅವರ ಗೆಳೆಯರಲ್ಲಿ ಪ್ರತಿಯೊಬ್ಬನೂ ಹೀಗೆ ಶೋಕಮಗ್ನನಾಗಿರಬಹುದಲ್ಲವೇ?

ಬೆಣ್ಣೆ ಸಕ್ಕರೆ ತಿಂದು ಬೆಳೆದ ಎಳೆಗೆಳೆತನದ ।
ಕಣ್ಣೊಳಗಿನ ಬೆಳಕು ಒಮ್ಮೆಗಿಲೇ ಕಳೆಗುಂದಿ
ಎಣ್ಣೆ ತೀರಿದ ದೀಪದಂತೆ ಹೋಯಿತು ಬಿಟ್ಟು ಕತ್ತಲೊಳಗೆಮ್ಮನ್ನೇ ॥
ಕಣ್ಣಾಸರೆಸಿ ಸುಳಿತೆ, ಕಮರಿ ತಳೆದಿವು ಹೂ !
ಮಣ್ಣುಗೂಡಿತು ಮತ್ತೆ ಪ್ರೀತಿ ಮಾಡಿದ ಮೂರ್ತಿ ।
ಸಣ್ಣಾದ ಹೃದಯದೊಳು ಇನ್ನು ಮೇಲಾದರೂ ಬೆಳಗು
ಗೆಳೆತನದ ಬೆಳಕೇ ॥

ಬೆಂಗಳೂರಲ್ಲಿ ಜರಗಿದ ೭ನೇ ಕರ್ನಾಟಕ ಆಯುರ್ವೇದ ಸಮ್ಮೇಲನದ ಕಾಲಕ್ಕೆ ವಿಜಾಪುರ ಜಿಲ್ಲೆಯವರು ೩ನೇಯ ಸಮ್ಮೇಳನವನ್ನು ತಮ್ಮಲ್ಲಿ ಜರಗಿಸಬೇಕೆಂದು ಕೇಳಿಕೊಂಡಿದ್ದರು. ಅದರಂತೆಯೆ ವಿಜಾಪುರ ಜಿಲ್ಲೆಯಲ್ಲಿ ಅದು ಜರಗಬೇಕೆಂದು ಅಲ್ಲಿ ನಿರ್ಣಯವಾದದೂ ಆಯಿತು. ಅದನ್ನು ವಿಜಾಪುರಕ್ಕೆ ಕರೆಯಬೇಕೋ ಬಾಗಲಕೋಟೆಗೆ ಕರೆಯಬೇಕೋ ಎಂಬುದನ್ನು ನಿಶ್ಚಯಿಸಲು ಡಾ. ನವಣೂರ ಹಣಮಂತರಾಯರೂ ವೈದ್ಯ ಬುರ್ಲಿಯವರೂ ಕೂಡಿ ಕಳೆದ ತಿಂಗಳಿನ ೧೭ನೇ ತಾರೀಖಿಗೆ ವಿಜಾಪುರಕ್ಕೆ ಹೋಗಿದ್ದರು. ಅವರು ಅಲ್ಲಿಯ ಮುಂದಾಳುಗಳಾದ ದೇ. ಭ. ಕೌಜಲಗಿ ಶ್ರೀನಿವಾಸರಾಯರನ್ನೂ ಡಾ. ಮಂಗಳವೇಢೆ ಗೋವಿಂದರಾಯರನ್ನೂ ವೈದ್ಯಭೂಷಣ ಅವಧಾನಿ ಕೇಶವಾಚಾರ್ಯರನ್ನೂ ಪಂಡಿತ ಆದ್ಯ ಅನಂತಾಚಾರ್ಯರನ್ನೂ ಡಾ. ರಾನಡೆ, ಕಾರಖಾನಿಸ, ಪಡಬಿದ್ರಿ ಮೊದಲಾದವರನ್ನು ಕಾಣಿಸಿಕೊಂಡರು. ಮಾತುಕತೆಗಳಾಗಿ ಕೊನೆಗೆ ವಿಜಾಪುರದಲ್ಲಿಯೇ ಸಮ್ಮೇಲನವು ಜರಗಬೇಕೆಂದು ನಿರ್ಣಯವಾಯಿತು. ವಿಜಾಪುರದವರು ಅದನ್ನು ಕಾರ್ಯತಃ ಯಶಸ್ವಿಯಾಗುವಂತೆ ಮಾಡುವರೆಂದು ನಾವು ನೆರೆನಂಬಿದ್ದೇವೆ.

ಗೋರಕ್ಷಣ ಪರಿಷತ್ತಿನಲ್ಲಿ ಆಕಳಗಳನ್ನು ಸಂರಕ್ಷಿಸುವ ಉದ್ದೇಶದಿಂದ ಪ್ರತಿಯೊಂದು ಜಿಲ್ಲೆಯಲ್ಲಿಯೂ ತಾಲೂಕಿನಲ್ಲಿಯೂ ಗೋರಕ್ಷಣ ಸಂಸ್ಥೆಯನ್ನು ಸ್ಥಾಪಿಸಬೇಕೆಂದು ನಿರ್ಣಯವಾಗಿದೆ. ಈ ನಿರ್ಣಯಗಳು ಕಾಗದದಲ್ಲಿ ಉಳಿಯುತ್ತವೆಯೇ ಹೊರತು ಕಾರ್ಯದಲ್ಲಿ ಪರಿಣಮಿಸುವದಿಲ್ಲ. ಗೋರಕ್ಷಣದ ಪ್ರಶ್ನೆಯು ಕರ್ನಾಟಕಕ್ಕೆ ಬಹಳೇ ಸಂಬಂಧ ಪಟ್ಟುದಿರುತ್ತದೆ. ಕರ್ನಾಟಕದಲ್ಲಿಯ ಭೂಮಿಗಳು ಬಹು ಫಲವತ್ತಾದವುಗಳು. ಕೃಷಿಕತನವೇ ಜನರ ಮುಖ್ಯ ವ್ಯವಸಾಯ. ಸಾಂಪತ್ತಿಕ ಸ್ಥಿತಿಯು ಸುಧಾರಿಸಬೇಕಾದರೆ ಗೋವುಗಳಿಂದಲೇ. ಆಕಳ ದನಕರುಗಳಿದ್ದರೆ ಮನೆಯು ಚಂದ ಕಾಣುತ್ತದೆ. ಆಕಳುಗಳಿಂದ ಧನವು ಸಿಕ್ಕುತ್ತದೆ.

ಎತ್ತು ಹೋರಿಗಳಿಂದ ಹೊಲದ ಕೆಲಸವು ಅನಾಯಾಸವಾಗಿ ಸಾಗುತ್ತದೆ ಮೊದಲಿನವರ ಮನೆಯಲ್ಲಿ ಆಕಳುಗಳು ಇದ್ದೇ ಇರುತ್ತಿದ್ದವು. ಈಗ ಆಕಳ ಕಟ್ಟುವದನ್ನು ಎಲ್ಲರೂ ಬಿಟ್ಟು ಬಿಟ್ಟಿದ್ದಾರೆ ಆದರಿಂದಲೇ ನಮ್ಮ ಆರ್ಥಿಕಸ್ಥಿತಿಯೂ ಆರೋಗ್ಯವೂ ಹಾಳಾಗಿ ಹೋಗಿವೆ. ಸಂಸ್ಥೆಗಳು ಕಾರ್ಯವಾಡದೆ ಇದ್ದರೊಂದು ಸಮರ್ಥವಾಗಲಾರವು. ನಾಲ್ಕು ಮಂದಿಯು ಕೆಲಸವೆಂದರೆ ಹೊರಟರೆ ಅನಾಸ್ಥೆಯು ಪ್ರಾರಂಭವಾಗುವುದು. ತಲೆಗೊಂದು ಮಾತು ತಲೆಗೊಂದು ಬೆತ್ತ. ಹೀಗಾಗಿ ಎಲ್ಲವೂ ಕೆಟ್ಟು ಹೋಗುವದು. ಆದ್ದರಿಂದ ಪ್ರತಿಯೊಬ್ಬ ಬ್ರಾಹ್ಮಣನು ತನ್ನ ಮನೆಯಲ್ಲಿ ಆಕಳವನ್ನು ಕಟ್ಟತಕ್ಕದು. ಇದರಿಂದ ಅವನಿಗೆ ಆಕಳವನ್ನು ಸಂರಕ್ಷಿಸಿದ ಶ್ರೇಯವು ಬರುವದಲ್ಲದೆ, ಮನೆಯಲ್ಲಿಯ ಹುಡುಗರಿಗೆ ಹಾಲು ದೊರೆತು ಅವು ಆರೋಗ್ಯವುಳ್ಳವುಗಳಾಗುವವು. ಅದರಂತೆಯೇ ಲಿಂಗಾಯತರೂ ವೈಶ್ಯರೂ, ಪ್ರತಿಯೊಬ್ಬ ಹಿಂದುವೂ ಶಕ್ಯವಿದ್ದಲ್ಲಿ ಆಕಳುಗಳನ್ನು ಕಟ್ಟಬೇಕು. ಇದರಿಂದ ತಾನಾಗಿಯೇ ನಾಡಿನ ಸ್ಥಿತಿಯು ಸುಧಾರಿಸುವುದು. ಮೇವು ಸಿಗದೆ ಇಲ್ಲದಾಗ ದನಕರಗಳನ್ನು ಕಟ್ಟಿಕೊಂಡೇನು ಮಾಡಬೇಕೆಂದು ಪ್ರಶ್ನೆ ಬರುವುದು ೧೨ ಆಣೆ ಹತ್ತಿಯನ್ನು ರೈತರು ಬಿತ್ತಿ ೪ ಆಣೆ ಗೋದಿ, ಕಡ್ಲಿ, ಜೋಳ ಮುಂತಾದ ತಿನ್ನುವ ಧಾನ್ಯಗಳನ್ನು ಬಿತ್ತುತ್ತಾರೆ ಹೀಗೆ ಮಾಡದೆ ೧೨ ಆಣೆ ಜೋಳ ಬಿತ್ತಿ ೪ ಆಣೆ ಹತ್ತಿ ಬಿತ್ತಿದರೆ, ಪ್ರಶ್ನವು ಬಿಡುವದೆಂದು ನಮ್ಮ ಅಭಿಪ್ರಾಯ. ಮನೆಯಲ್ಲಿ ರೈತನಿಗೆ ಕಾಳು ಉಳಿಯುವುದು. ಅವನ ಬಾಳುವೆ ನಡೆಯುವುದು. ದನಕರುಗಳಿಗೆ ಮೇವು ಸಿಕ್ಕುವುದು ಹೀಗೆ ಮಾಡದೆ. ಹತ್ತಿಯನ್ನೇ ಎಲ್ಲೆಡೆಯಲ್ಲಿಯೂ ಬಿತ್ತುತ್ತಾರೆ. ಆದರಿಂದ ಕಾಳಿನ ತುಟಾಗ್ರತೆಯೂ, ಮೇವಿನ ತುಟಾಗ್ರತೆಯೂ ಉಂಟಾಗುತ್ತವೆ. ಮನುಷ್ಯನೂ ಸಾಯಬೇಕಾಗುವುದು. ದನಗಳೂ ಸಾಯಬೇಕಾಗುವವು ಆದ್ದರಿಂದ ಅನಿಷ್ಟ ಸ್ಥಿತಿಯು ಬಂದೊದಗುವುದು. ಇದನ್ನು ದೂರಮಾಡಲು ತಿನ್ನುವ ಕಾಳುಗಳನ್ನು ಹೆಚ್ಚಾಗಿ ಬಿತ್ತಬೇಕೆಂದು ನಮಗೆ ತೋರುತ್ತದೆ. ರೈತರಿದನ್ನಷ್ಟು ವಿಚಾರಿಸಬೇಕು.

ಪ್ರಕಟನೆ ನಂಬರ ೧

ಕರ್ನಾಟಕಸ್ಥರೇ ಮುಂದೆ ಸಾಗಿರಿ.

ಶ್ರೀ. ಹೊಸಕೊಪ್ಪ ಕೃಷ್ಣರಾಯರ ಅಧ್ಯಕ್ಷತೆಯ ಕೆಳಗೆ ಮೇ ೨೦ ನೇ ತಾರೀಕಿನಲ್ಲಿ ನಡೆದ ೨ ನೇ ಕರ್ನಾಟಕ ಪ್ರಾಂತಿಕ ಸ್ವಯಂಸೇವಕ ಪರಿಷತ್ತಿನಲ್ಲಿ ೩೦ ನೇ ಸಪ್ಟೆಂಬರದೊಳಗಾಗಿ ೧೦೦೦೦ ರಾಷ್ಟ್ರೀಯ ಸಭೆಯ ಸಭಾಸದರನ್ನೂ, ಹಿಂದುಸ್ಥಾನೀ ಸೇವಾದಲಕ್ಕೆ ೫೦೦ ಸಭಾಸದರನ್ನೂ ಕೂಡಿಸುವದಲ್ಲಗೆ, ಪ್ರಾಂತದಲ್ಲಿಯ ಕೆಲಸಗಳು ಸುವ್ಯವಸ್ಥಿತ ರೀತಿಯಿಂದ ಜರುಗಬೇಕಾಗಿ ತಗಲುವ ವೆಚ್ಚಕ್ಕಾಗಿ ೫೦೦೦ ರೂಪಾಯಿಗಳ ಹಣವನ್ನು ಕೂಡಿಸಬೇಕಾಗಿ ನಿರ್ಣಯಿಸಲ್ಪಟ್ಟಿತು.

ಪರಿಷತ್ತು ತೀರಿದ ನಂತರ ಕೆಲಸಗಾರರ ಸಭೆಯೊಂದು ಜರುಗಿ ಮೇಲೆ ನಿರ್ಣಯಿಸಿದ ಠರಾವನ್ನು ಅಮಲಿನಲ್ಲಿ ತರುವದಕ್ಕಾಗಿ ಕಾರ್ಯಕ್ರಮವನ್ನು ಗೊತ್ತು ಮಾಡಲಾಯಿತು, ಕೆಳಗೆ ಬರೆದಂತೆ ಕೆಲಸಗಾರರು ಆರಿಸಲ್ಪಟ್ಟರು.

ಧಾರವಾಡ ಜಿಲ್ಹೆಗೆ— (೧) ಎನ್. ಆರ್. ವೈದ್ಯ ಗದಗ ೧೦೦೦ ಸಭಾಸದರನ್ನು ೫೦ ಹಿ. ಸೇ. ದ ಸಹಾಯಕರನ್ನು (೨) ಕರಗುದರಿ, ಹಾನಗಲ್ಲ ೧೦೦೦; ೫೦ (೩) ಶಂಭುನಾಥ, ಡಿ ಮತ್ತು ಎಮ್. ಸಿ. ಮಧೂರಾ ೩೦೦ ಸಭಾಸದರನ್ನು ೨೦ ಸಹಾಯಕರನ್ನು (೪) ಹುಬ್ಬಳ್ಳಿ, ಭಗಿನಿ ಮಂಡಳ ೨೦೦ ಸಭಾಸದರನ್ನು

ವಿಜಾಪೂರ ಜಿಲ್ಹೆಗೆ— (೧) ಎಸ್. ಬಿ ಕುಲಕರ್ಣಿ ಬಾಗಲಕೋಟೆ ೧೦೦೦ ಸಭಾಸದರನ್ನು ೫೦ ಸಹಾಯಕರನ್ನು. ಉಳಿದ ಹೆಸರುಗಳನ್ನು ತೀವ್ರವೇ ಪ್ರಸಿದ್ಧಿಸುವದರಲ್ಲಿ ಬರುವದು. ಕೆಲಸಗಾರರು ಯಾರೂ ಸಿಗದಿದ್ದರೆ ಡಾ॥ ಹರ್ಡೀಕರರು ಜಿಲ್ಹೆಯಲ್ಲಿ ತಿರುಗಿ ಬೇಕಾದ ಸಭಾಸದರನ್ನು ಕೂಡಿಸುವರು.

ಬೆಳಗಾವಿ ಜಿಲ್ಹೆಗೆ— [೧] ಜಿ. ಬಿ ಜೆರೆ ಅಥಣಿ ೧೦೦೦. ೫೦. [೨] ಡಿ. ಎಮ್. ಲಿಂಗಡೆ ಶಹಾಪೂರ ೧೦೦೦. ೫೦

ಮೈಸೂರಕ್ಕೆ— [೧] ಕೆ. ಎ ವೆಂಕಟ ರಾಮಯ್ಯ ಬೆಂಗಳೂರ ೫೦೦. ೩೦. ಉಳಿದ ಹೆಸರುಗಳನ್ನು ತೀವ್ರ ಪ್ರಸಿದ್ಧಿಸುವೆವು

ಬಳ್ಳಾರಿಜಿಲ್ಹೆಗೆ— [೧] ಟಿ. ಬಿ ಆಚಾರ. ಹರಪನಹಳ್ಳಿ. ೧೦೦೦ ೫೦.

ಅಖಂಡ ಕರ್ನಾಟಕದಲ್ಲಿ— [೧] ಶ್ರೀ. ಹೊಸಕೊಪ್ಪ ಕೃಷ್ಣರಾಯರು. ೧೫೦೦; ೭೫. [೨] ಶ್ರೀ. ಎನ ಎಸ್ ಹರ್ಡೀಕರ ೧೫೦೦. ೭೫. ಕೆಲಸಗಾರರು ತಮ್ಮ ಜಿಲ್ಹೆಯಲ್ಲಿ ಸಂಚಾರ ಮಾಡುವದಲ್ಲದೆ ಉಳಿದ ಜಿಲ್ಹೆಯಲ್ಲಿಯೂ ಅಷ್ಟಾಡಿ ಸಭಾಸದರನ್ನು ಕೂಡಿಸ ಬಹುದು. ಶ್ರೀ. ಬಜರಂಗ ಕಲ್ಯಾಣಪೂರಕರ ಹಾಗೂ ಗುಳವಾಡಿಯವರು ಉತ್ತರ ಕನ್ನಡ ಜಿಲ್ಹೆಯಿಂದ ೨೦೦೦ ಕಾಂಗ್ರೆಸ ಸಭಾಸದರನ್ನು ಕೂಡಿಸಲು ಒಪ್ಪಿರುವರು. ದಕ್ಷಿಣ ಕನ್ನಡ ಜಿಲ್ಹೆಯಿಂದ ೩೦೦೦ ಸಭಾಸದರನ್ನು ಕೂಡಿಸುವದು ಗೊತ್ತಾಗಿದೆ. ಕೊಡಗಿನಲ್ಲಿ ನಿದಾನ ೫೦೦ ಸಭಾಸದರನ್ನು ಕೂಡಿಸುವದು ಗೊತ್ತಾಗಿದೆ. ಈ ಜಿಲ್ಹೆಗಳಲ್ಲಿ ತೀವ್ರವೇ ನಮ್ಮ ಪ್ರಚಾರಕರನ್ನು ನೇಮಿಸುವದರಲ್ಲಿ ಬರುವದು.

ಹಿಂದುಸ್ಥಾನೀ ಸೇವಾದಲ ಕರ್ನಾಟಕ ಶಾಖೆಯ ಹೆಸರಿನಿಂದ ೧, ೨, ೩, ೪, ೫, ೧೦, ಮತ್ತು ೨೫ ರೂಪಾಯಿಗಳ ಟಿಕೀಟ ಮಾರಿ ೫೦೦೦ ರೂಪಾಯಿಗಳನ್ನು ಕೂಡಿಸವದು ಗೊತ್ತಾಗಿದೆ ಡಾ॥ ಹರ್ಡೀಕರರು ಈ ಟಿಕೀಟುಗಳನ್ನು ಮಾರುವರು. ಮೇಲೆ ನೇಮಿಸಿದ ಕೆಲಸಗಾರರ ಕೈಯಲ್ಲಿಯೂ ಕೆಲವು ಟಿಕೀಟು ಕೊಡುವದರಲ್ಲಿ ಬರುವವು. ಪ್ರಚಾರಕರಿಗೆ ಎಲ್ಲ ರೀತಿಯಿಂದ ಸಹಾಯ ಮಾಡುವದಕ್ಕಾಗಿ ಸ್ಥಾನಿಕ ಪ್ರಚಾರಕನಿಗೆ ಒಂದು 'ಸರ್ಟಿಫೀಕೀಟ' ನನ್ನ ಸಹಿಯಿಂದ ಕೊಡುವೆನು; ಹಾಗೂ ಅದು ಮುಖ್ಯ ಕಚೇರಿಯಿಂದ ಹೊರಡುವದು ಕೆಲಸದ ಪರಿಸ್ಥಿತಿಯ ಬಗ್ಗೆ ಹಾಗೂ ಮಾಡಬೇಕಾದ ಸುಧಾರಣೆಯ ಬಗ್ಗೆ ಪ್ರತಿವಾರ ಪ್ರಕಟಣ ಪತ್ರಿಕೆ ಗಳನ್ನು ತೆಗೆಯುವೆವು ಪ್ರತಿ ಮಂಗಳವಾರದೊಳಗಾಗಿ ಎಲ್ಲ ಕೆಲಸಗಾರರು ತಮ್ಮ ವರದಿಯನ್ನು ಕಳಿಸಬೇಕು.

ಕೆಲಸ ಗಾರರು ತಮ್ಮ ಪಾಲಿಗೆ ಬಂದ ಸಭಾಸದವರನ್ನು ವೇಳೆಗೆ ಸರಿಯಾಗಿ ತಪ್ಪದೇ ಕೂಡಿಸುವರೆಂದು ನಂಬಿದ್ದೇನೆ. ಎಲ್ಲ ಮಹನೀಯರು ಕೆಲಸಗಾರರಿಗೆ ಪೂರ್ಣ ಸಹಾಯ ಮಾಡುವದು ಅವರ ಆದ್ಯ ಕರ್ತವ್ಯವಾಗಿದೆ. ಕಾಂಗ್ರೆಸದ ಮುಖಂಡರು ದಳದ ಕೆಲಸಗಾರರಿಗೆ ಪೂರ್ಣ ಸಹಾಯ ಮಾಡಬೇಕಾಗಿ ವಿನಂತಿ

ಹುಬ್ಬಳ್ಳಿ
ಮೇ ೨೯-೧೯೨೬ } ಎನ್. ಎಸ್. ಹರ್ಡೀಕರ ಸೆಕ್ರೆಟರಿ
ಕರ್ನಾ
ಸ್ವಯಂ ...

ರಾಜ ಸಭಾ ಭೂಷಣ ಲಿಂಗರಾಜ

ಅವರ ಭಾಷಣದ ಸಾರಾಂಶ

೩ ನೇ ಕೀರ್ತನ ಸಮ್ಮೇಲನ ಬಳ್ಳಾರಿ

ಕೀರ್ತನ ಪರಿಸ್ಥಿತಿ.

ವೇದ ಕಾಲ ಮೊದಲ್ಗೊಂಡು ರಾಜರ ಮತ್ತು ವೀರಯೋಧರ ಪರಾಕ್ರಮಾದಿ ಸದ್ಗುಣಗಳನ್ನು ವರ್ಣಿಸಿ ಅವನ್ನು ಅವಲಂಬಿಸುವ ಬಗೆಗೆ ಜನರಿಗೆ ಹುರಿದುಂಬಿಸುವದಕ್ಕಾಗಿಯೂ, ಪ್ರಚಾರದಲ್ಲಿರುತ್ತಿದ್ದ ಅನೇಕವಾದ ಸ್ತ್ರೀಲೋಲುಪತೆ, ದ್ಯೂತ, ಪಾನಾಸಕ್ತಿ ಮುಂತಾದ ದುರಾಚಾರಗಳ ದುರ್ಗುಣಗಳನ್ನು ಹೊರಪಡಿಸಿ ಅವನ್ನು ಜನರಿಂದ ದೂರಗಲಾಡಿಸುವದಕ್ಕಾಗಿಯೂ ಕೀರ್ತನಕಾರರು ವಾದ್ಯಗಳೊಡನೆ ಗಾಥಾರೂಪವಾದ ಕೀರ್ತನೆಗಳನ್ನು ಹಾಡಿ ಜನರ ಮನಸ್ಸನ್ನು ಸಂತೋಷಪಡಿಸುತ್ತಿದ್ದರು. ಕೀರ್ತನಕಾರರಲ್ಲಿ ಧ್ವನಿಮಾಧುರ್ಯ, ವಾಕ್ಚಾತುರ್ಯ, ವಿದ್ಯಾಚಮತ್ಕಾರ, ಪ್ರತಿಭಾಶಕ್ತಿ ಇದ್ದಾಗೆಲ್ಲ ಕೀರ್ತನೆಗಳೂ ಜನರ ಹೃದಯವನ್ನು ಆಕರ್ಷಿಸುತ್ತಿದ್ದವು. ಇದರಂತೆಯೇ ರಾಮಾಯಣ ಭಾರತ ಭಾಗವತಾದಿ ಪುರಾಣೇತಿಹಾಸಗಳ ನಾನಾ ರಾಗರಂಜಿತವಾದ ವರ್ಣನವು ಕೂಡ ಜನರ ಚಿತ್ತವನ್ನು ಕಥಾಶ್ರವಣದಲ್ಲಿ ಲೀನವಾಗುವಂತೆ ಮಾಡುತ್ತಿದ್ದವು. ಇದರಿಂದ ಜನರು ದುರ್ಗುಣಗಳನ್ನು ದೂರಮಾಡಿ ಗುಣಗಳನ್ನು ಅವಲಂಬಿಸಿದಲ್ಲಿ ಮಹತ್ತರವಾದ ಪ್ರಯೋಜನವೇ ಉಂಟೆಂದು ಕಥಾಪ್ರಸಂಗದಿಂದ ತತ್ವಗಳನ್ನು ಗ್ರಹಿಸುವದಕ್ಕೆ ಸಾಧನವಾಯಿತು. ಹೇಡಿಯೆನಿಸಿದವನೂ ಪುರಾಣ ಪ್ರಸಿದ್ಧರಾದ ವೀರ ಪುರುಷರ ಕಥೆಗಳನ್ನು ಕೇಳಿ ಹುರಿದುಂಬಿದವನಾಗುತ್ತಿದ್ದನೆಂದು ಹೇಳುವದೇನೂ ಅತಿಶಯೋಕ್ತಿಯು ಸುದ್ಧಿಯಿಲ್ಲ. ರಾಮಾಯಣ ಭಾರತಗಳೊಳಗಣ ಮಹಾಪುರುಷರ ಚರಿತ್ರೆಗಳನ್ನು ಅಡಿಗಡಿಗೂ ಕೇಳಿ ಕೇಳಿ ಶಿವಾಜಿಯು ಮರಾಠಾ ರಾಜ್ಯವನ್ನು ಸ್ಥಾಪಿಸುವದಕ್ಕೆ ಸಮರ್ಥನಾದನು

ಸತ್ಪಮಾರ್ಗವನ್ನು ಬೋಧನೆಮಾಡಿ ಮನುಷ್ಯನಲ್ಲಿರತಕ್ಕ ಪಶುವೃತ್ತಿಯನ್ನು ದೂರಮಾಡುವದರಲ್ಲಿ ಈ ಕಥಾ ಮಾರ್ಗವು ಅದ್ವಿಯವೇಸರಿ. ಈ ಧಾವಮಾರ್ಗದಿಂದ ಧರ್ಮವು ಜನರ ಹೃದಯದಲ್ಲಿ ನಾಟುವಷ್ಟು ಕೇವಲೋಪನ್ಯಾಸ ಮಾರ್ಗದಿಂದೆಂದಿಗೂ ನಾಟಲಾರದೆಂದು ದೃಢವಾಗಿ ಹೇಳಬಹುದು. ಕೀರ್ತನಕಾರರು ಎಷ್ಟರಮಟ್ಟಿಗೆ ಬೋಧನಾಶಕ್ತಿಯನ್ನು ಪಡೆದು ಕಾರ್ಯಕ್ಷೇತ್ರದಲ್ಲಿ ಸೊಂಟಕಟ್ಟಿ ಮುಂದೆ ಬಂದು ನಿಲ್ಲುವರೋ ಅಷ್ಟರ ಮಟ್ಟಿಗೆ ಧರ್ಮವಿಷಯಗಳು ಜನರಮನವನ್ನು ಮುಟ್ಟುವದರಲ್ಲಿ ಆವ ಸಂಶಯವೂ ಇರುವದಿಲ್ಲ. ಆದುದರಿಂದ ಕೀರ್ತನಕಾರರು ಶ್ಲಾಘ್ಯವಾದ ರೀತಿಯಲ್ಲಿ ಧರ್ಮೋಪದೇಶದ ಕಾರ್ಯಗಳನ್ನು ವಿಶೇಷವಾಗಿ ಕೈಕೊಳ್ಳುವದು ಯುಕ್ತವೇ ಆಗಿರುವದು.

ಈಗ ನಾವು ನವಯುಗದಲ್ಲಿ ಜನ್ಮಗ್ರಹಣ ಮಾಡಿರುವೆವು. ಈಗಿನ ನಮ್ಮ ಜೀವನ ಯಾತ್ರೆಯಲ್ಲಿ ಸ್ವಾವಲಂಬನ ಮತ್ತು ಬುದ್ಧಿಶಕ್ತಿ ಎಂಬ ಇವೆರಡೇ ಸಹಕಾರಿಗಳು. ಪ್ರಕೃತ ಕಾಲಕ್ಕೆ ತಕ್ಕಂತೆ ಪುರುಷ ಪ್ರಯತ್ನವನ್ನು ಉಳಿಸುವಂತಹ ಭಕ್ತಿ ಮಾರ್ಗವನ್ನು ನಾವು ಅವಲಂಬಿಸಬೇಕು. ನಮ್ಮ ವ್ಯವಹಾರಗಳೆಲ್ಲವೂ ದೇಶಸೇವಾವ್ರತಕ್ಕೆ ಸಂಬಂಧಿಸಿ ಕೊಂಡವಾಗಿರಬೇಕು. ಜಾತಿಭೇದವಿರುವದೆಂದು ನಿಮಿತ್ತಕ್ಕಾಗಿ ಭಿನ್ನಾಭಿಪ್ರಾಯಗಳನ್ನು ಕಲ್ಪಿಸಿ ಕೊಂಡು ಪರಸ್ಪರ ದ್ವೇಷಾಸೂಯೆಗಳಿಗೆ ಈಡಾಗುವ ನಾನಾ ಧರ್ಮಗಳಲ್ಲಿಯೂ ಸೌಭ್ರಾತೃಭಾವನೆಯಲ್ಲಿಯೂ ಎಲ್ಲರೂ ಏಕಮತೀಯರಾಗಿರಬೇಕು. ರಾಜಪ್ರಜೆಗಳಿಗೆ ಅನ್ಯೋನ್ಯವಾಗಿ ಪ್ರೀತಿವಿಶ್ವಾಸಗಳಿರುವದೇ ದೇಶೋದ್ಧಾರಕ್ಕೂ ಆಧ್ಯಾತ್ಮಿಕ ಸ್ವಾತಂತ್ರ್ಯಕ್ಕೂ ಆದಿಕಾರಣವೆಂದು ಅರಿತುಕೊಂಡು ಲೌಕಿಕ ವ್ಯವಹಾರಗಳಲ್ಲಿ ಮುಂದುವರಿಯಬೇಕು. ಇದೇ ಮೊದಲಾಗಿ ಸರ್ವಮತಗಳ ಸಾರವಾದ ಧರ್ಮ ತತ್ವಗಳನ್ನು ಹರಿಕಥಾ ರೂಪದಿಂದ ಎಲ್ಲೆಡೆಗಳಲ್ಲಿಯೂ ಬೋಧಿಸುವದೇ ಸಾರ್ವಜನಿಕ ವಿದ್ಯಾಭ್ಯಾಸ (MASS Education) ವೆನ್ನಿಸುವದು. ಇಂತಹ ವಿದ್ಯಾಭ್ಯಾಸವು ಪಾಠಶಾಲೆಗಳ ಚೌಗಡೆಯಲ್ಲಿ ಎಂದಿಗೂ ದೊರೆಯಲಾರದು. ನಾವು ಕೈಕೊಳ್ಳುವ ಕೀರ್ತನಬೋಧ್ಯವಾದ ಸಾರ್ವಜನಿಕ ವಿದ್ಯಾಭ್ಯಾಸದಲ್ಲಿ ವೈಜ್ಞಾನಿಕ ಶಾಸ್ತ್ರಗಳ ತತ್ವಗಳು ತುಂಬಿತುಳುಕಾಡುತ್ತಿರಬೇಕು. ಈ ಶಾಸ್ತ್ರಗಳ ಆಧಾರದ ಮೇಲೆಯೇ ಪೌರಾಣಿಕರೂ ಐತಿಹಾಸಿಕರೂ ಆದ ಮಹಾಪುರುಷರ ಚರಿತ್ರೆಗಳನ್ನು ಎಲ್ಲರಿಗೂ ಒಪ್ಪಿಗೆಯಾಗುವ ರೀತಿಯಲ್ಲಿ ಸಯುಕ್ತಿಕವಾಗಿ ಜನರಿಗೆ ಬೋಧಿಸಬೇಕು. ಅಂತಹ ಬೋಧನಾ ರೀತಿಯಲ್ಲಿ ಆರಿಗೂ ಆವಬಗೆಯ ಭೇದಬುದ್ಧಿಗೂ ವೈಮನಸ್ಯಕ್ಕೂ ಎಡೆಗುಡಬಾರದು.

ದೇಶೋದ್ಧಾರದ ಬಗ್ಗೆ ಜನರು ಒಪ್ಪಿಕೊಂಡಿರುವ ಮಾರ್ಗಗಳಲ್ಲಿ ಕೀರ್ತನ ಮಾರ್ಗವೇ ಶ್ರೇಷ್ಠವಾದ ಸುಲಭೋಪಾಯವೆಂದು ಒಪ್ಪಿಕೊಂಡಿರುವೆನು. ಈ ಆಧಾರದ ಮೇಲೆಯೇ ನಾವು ಈ ಮಾರ್ಗವೊಂದನ್ನೇ ಸರ್ವತೋಮುಖವಾಗಿ ಬಲಪಡಿಸಿ ಕಾರ್ಯವನ್ನು ಸಾಧಿಸಬೇಕು.

ಜನರು ಸ್ವಸ್ವಧರ್ಮಗಳನ್ನು ಅರಿತು ಇಹಸಂಸಾರದಲ್ಲಿ ಸರ್ವರಿಗೂ ಸರ್ವಕಾಲದಲ್ಲಿಯೂ ಸರಿಯಾದ ರೀತಿಯಲ್ಲಿ ನಿತ್ಯ ಸುಖಸಂಪತ್ತುಗಳನ್ನು ಪಡೆಯುವದಕ್ಕೆ ಸಹಕಾರಿಯಾದ ಧರ್ಮ ತತ್ವಗಳನ್ನು ಚನ್ನಾಗಿ ಅಭ್ಯಾಸಮಾಡಿ ದೇಶದ ಸತ್ಪ್ರಜೆಯೆನಿಸಿಕೊಂಡು ಬಾಳುವುದೇ ಜನ್ಮವೆತ್ತಿದ್ದಕ್ಕೆ ಸಾರ್ಥಕವು. ಅನೇಕರಿಗೆ ಈ ತತ್ವವು ಗೋಚರಕ್ಕೆ ಬಾರದಿರುವದರಿಂದ ಈ ತತ್ವಾರ್ಥಗಳನ್ನು ಅಂಥವರ ಮನಮುಟ್ಟುವಂತೆ ಬೋಧಿಸಬೇಕಾದುದೇ ಕೀರ್ತನ ಸಂಮೇಳನದವರ ಪರಮಧ್ಯೇಯವು.

ಭಾಷಾಭಿಮಾನವೇ ದೇಶದ ಏಳಿಗೆಗೆ ಆದಿಕಾರಣವೆಂಬುದು ನಿರ್ವಿಚಾರವಾದ ವಿಷಯವಾಗಿದೆ. ಬೇರೆ ಬೇರೆಯೆಡೆಯಲ್ಲಿರತಕ್ಕ ದೇಶಾಭಿಮಾನಿ ಮಹಾಶಯರು ತಮ್ಮ ತಮ್ಮ ಭಾಷೆಯು ವೃದ್ಧಿಯಾಗುವ ಬಗೆಗೆ ಎಷ್ಟೋ ಕೆಲಸಗಳನ್ನು ಮಾಡಿಯೂ ಇರುವರು! ಇನ್ನೂ ಮಾಡುತಲೂ ಇರುವರು. ಬೇರೆಯೆಡೆಗಳಲ್ಲಿ ಕೀರ್ತನಕಾರರ ಭಾಷಾಭಿವೃದ್ಧಿವಿಷಯದೊಳಗಣ ಚಾಕಚಕ್ಯವನ್ನಂತೂ ಹೇಳಲೇಕೆಲಸವಿಲ್ಲ. ಅಲ್ಲಿಯ ಕೀರ್ತನಕಾರರು ತಮ್ಮ ಕೀರ್ತನ ಪದ್ಧತಿಯು ಸರ್ವಾಂಗ ಸುಂದರವೆನಿಸುವದಕ್ಕೆ ಏನೇನು ಬೇಕೋ ಅದೆಲ್ಲವನ್ನೂ ಬೇರೆಕಡೆಗಳಿಂದ ಭಿಕ್ಷೆಯತ್ತದ ಹಾಗೆ ತಮ್ಮ ಭಾಷೆಯಲ್ಲಿಯೇ ಕಲ್ಪಿಸಿ ಕೊಂಡು ಜನರನ್ನು ಆನಂದಗೊಳಿಸುತ್ತಿರುವರು. ನಮ್ಮ ಕರ್ನಾಟಕ ದೇಶದಲ್ಲಾದರೋ ಕೀರ್ತನಕಾರರು ಭಾಷಾಭಿವೃದ್ಧಿಯ ವಿಷಯದಲ್ಲಿ ಇದರಂತೆ ಗಮನ ಕೊಡದಿರುವದು ಅದೊಂದು ಶೋಚನೀಯವಾದ ವಿಷಯವು. ನಮ್ಮ ಕೀರ್ತನಕಾರರಲ್ಲಿ ಭಾಷಾಭಿಮಾನವಿಲ್ಲ ಇದೆಂತಹ ಪವಾಡವೋ! ಹೀಗಿರುವದು ನಮ್ಮ ಅಭಿವೃದ್ಧಿಗೆ ಕಾ[illegible]ವಾಗುವದು. ಆದುದರಿಂದ ಕರ್ನಾಟಕ ಕೀರ್ತನಕಾರರೆಲ್ಲರೂ ಸಾಧ್ಯವಾದಮಟ್ಟಿಗೂ ತಮ್ಮ ಕೀರ್ತನ ಪದ್ಧತಿಯಲ್ಲಿ ಇತರ ಭಾಷಾ ಸಂಸರ್ಗವನ್ನು ಇಟ್ಟುಕೊಳ್ಳದಂತೆ, ಅಪೂರ್ವವಾದ ಕರ್ನಾಟಕ ಕೀರ್ತನೆಗಳನ್ನೇ ಸಂಗ್ರಹಮಾಡಿಯಾಗಲಿ, ರಚಿಸಿಯಾಗಲಿ ಉಪಯೋಗಕ್ಕೆ ತಂದುಕೊಂಡು ಭಾಷೆಯನ್ನು ಅದರ ಮೂಲಕವಾಗಿ ಧರ್ಮವನ್ನು ಬೆಳೆಸಿ ದೇಶವನ್ನು ಮುಂದಕ್ಕೆ ತರಬೇಕೆಂದು ನನ್ನ ಕೋರಿಕೆಯು.

ಈ ಕೀರ್ತನ ಮಾರ್ಗದ ಮುಖ್ಯೋದ್ದೇಶವಾದರೋ ಸನಾತನಾರ್ಯ ಧರ್ಮವನ್ನು ಉದ್ಧರಿಸುವದೇ ಆಗಿರುವದು. ಆದುದರಿಂದ ಕೀರ್ತನಮಾರ್ಗವು ಜನರಲ್ಲಿ ಧಾರ್ಮಿಕ ಬುದ್ಧಿಯನ್ನುಂಟು ಮಾಡಿಕೊಡುವದು. ನೈತಿಕ ಪ್ರಯೋಜನವನ್ನು ಕಲ್ಪಿಸಿಕೊಡುವುದು, ಆರ್ಥಿಕ ಸಂಪತ್ತನ್ನು ಹೆಚ್ಚಿಸಿಕೊಡುವುದು. ಸಮಾಜದಲ್ಲಿ ಐಕಮತ್ಯಭಾವನೆಯನ್ನು ಬಿತ್ತರಿಸುವದು. ರಾಜಪ್ರಜೆಗಳಲ್ಲಿ ಭಕ್ತಿ ವಿಶ್ವಾಸಗಳನ್ನು ನೆಲೆಗೊಳಿಸುವದು, ಸ್ವಜನರಲ್ಲಿಯೂ ಸ್ವದೇಶದಲ್ಲಿಯೂ ಅಭಿಮಾನವನ್ನು ಹುಟ್ಟಿಸುವದು. ಐಕಮತ್ಯದಿಂದ ದಾರಿದ್ರ್ಯವೂ ರಾಜಭಕ್ತಿಯಿಂದ ಪರೋಪದ್ರವ್ಯಗಳೂ, ದೇಶಾಭಿಮಾನದಿಂದ ಅಜ್ಞಾನಾಂಧಕಾರವೂ ದೂರ ತೊಲಗುವವು. ಈ ಮಾರ್ಗಗಳಿಂದ ದೇಶವು ಅಭಿವೃದ್ಧಿ ಒರುವದಕ್ಕೆ ಅಡ್ಡಿಯೆಲ್ಲಿರುವದು? ಇದನ್ನು ನಾವು ಒಪ್ಪಿಕೊಳ್ಳುವದಾದರೆ, ಇದಕ್ಕೆ ಮೂಲಕಾರಣವು ಧರ್ಮವೆಂದೇ ಒಪ್ಪಬೇಕಾಗಿರುವದು. ಇಂತಹ ಧರ್ಮವು ಕೀರ್ತನಕಾರರಿಂದ ಎಲ್ಲೆಲ್ಲಿಯೂ ಹರಡಲ್ಪಡಬೇಕಾದರೆ, ದೇಶದ ಅಭ್ಯುದಯವು ಕೀರ್ತನಕಾರರ ಕೈಯಲ್ಲಿರುವುದೆಂದು ಆರು ತಾನೇ ಒಪ್ಪಿಕೊಳ್ಳಲಾರರು? ಧರ್ಮಾವತಾರವೆನಿಸಿದ ಕೀರ್ತನಕಾರರಲ್ಲಿ ಅಧರ್ಮಕ್ಕೆ ಕೊಂಚೂ ಸ್ಥಳವಿರಕೂಡದು. ಅರಿಷಡ್ವರ್ಗಗಳ ಸಂಬಂಧವೇ ಇರಕೂಡದು. ದುರಾಶೆಯ ಸ್ಪರ್ಶವೇ ಇರಕೂಡದು. ನಿಷ್ಕಾಮ ಸಂಕಲ್ಪವೇ ಕೀರ್ತನಕಾರರ ಆಕಲ್ಪವು. ಭೂತದಪಶ್ಚಾತ್ತಾಪಾದಿ ಸದ್ಗುಣಗಳೇ ಅಂಗೋಪಾಂಗಗಳು. ಆಸ್ತಿಕ ಬುದ್ಧಿಯೇ ಅವರ ಪ್ರಾಣಸಾರಸರ್ವಸ್ವವು ಈ ಭಾವನೆಯು ಜನರಲ್ಲಿ ಉಂಟಾದಕೂಡಲೇ, ಕೀರ್ತನಕಾರರು ಆಡಿದುದೇ ಮಾತು, ಹೋದುದೇ ದಾರಿ. ಇಂತಹ ಕೀರ್ತನಕಾರರನ್ನೇ ಲೋಕವು ಧರ್ಮೋಪದೇಶಕ್ಕಾಗಿ ಇದಿರುನೋಡುತ್ತಿರುವುದು. ಕೀರ್ತನಮಾರ್ಗವು ಪರಮಾತ್ಮನಂತೆ ಪವಿತ್ರವಾದುದು. ಇಂತಹ ಪವಿತ್ರವಾದ ಮಾರ್ಗವನ್ನು ಅವಲಂಬಿಸಿ ಅಪವಿತ್ರವಾದ ವ್ಯವಹಾರಕ್ಕೆ ಬೋಧಕ ಮಹಾಶಯರು ಬೀಳದಂತೆ ನೋಡಿಕೊಳ್ಳಬೇಕಾದುದು. ಈ ಕೀರ್ತನ ಸಮ್ಮೇಳನದವರ ಕರ್ತವ್ಯವಾಗಿರುವುದು.

ಹಳ್ಳಿಯ ಸಾಹಿತ್ಯ

ಈ ವಿಷಯವನ್ನು ಕೆಲದಿನಗಳ ಹಿಂದೆ ಹಳ್ಳಿಗರಾದ ಚನ್ನಮಲ್ಲಪ್ಪನವರು ಸಾಹಿತ್ಯ ಪರಿಷತ್ ಪತ್ರಿಕೆಯಲ್ಲಿ ಚನ್ನಾಗಿ ದಿಗ್ದರ್ಶನ ರೂಪದಿಂದ ಬರೆದಿದ್ದಾರೆ. ಅದನ್ನೇ ವಿಸ್ತಾರಗೊಳಿಸದಿದ್ದರೂ, ತಿರಿಗಿ ನೆನಪಿಸಿ ಕೊಡಲು ಈಗ ಪ್ರಯತ್ನಿಸುವೆ. ಚಿತ್ತೈಸಬೇಕು.

ಹಳ್ಳಿಯ ಸಾಹಿತ್ಯದಲ್ಲಿ ಮುಖ್ಯ ಭಾಗವಾದ ಲಾವಣಿಗಳ ಬಗ್ಗೆ ಆಚೆಸಾರೆ ಬರೆದೆ ಇನ್ನುಳಿದವುಗಳೆಂದರೆ ದಪ್ಪಿನ ಹಾಡುಗಳು, ಡೊಳ್ಳಿನ ಹಾಡುಗಳು, ಹೆಂಗಸರ ಹಾಡುಗಳು ಹಂತಿಯ ಹಾಡುಗಳು ಏಕದಾರಿಯ ಹಾಡುಗಳೇ ಮೊದಲಾದವುಗಳು. ಇವೆಲ್ಲವುಗಳು ಜನರು ಹಾಡಿದವುಗಳು; ಮಾಡಿದವುಗಳಲ್ಲ

ಆಂತೆಯೇ ಆಲ್ಹಾದ ಜನಕವಾಗುವವು. ಪಟ್ಟಣದ ಹೊಲಸಿಟ್ಟ ಹೊರ ಸುಧಾರಣೆಯಿಂದ ದೂರಿರುವದರಿಂದ ಆನಂದಕ್ಕೂ, ಉಲ್ಹಾಸಕ್ಕೂ, ಆಂತೆಯೇ ಅವ್ಯಾಜ ಸುಖಕ್ಕೂ ಹಳ್ಳಿಯು ತವರು ಮನೆಯಂತಿದೆ. ಸಾಕಷ್ಟು ದುಡಿದು ಹಸಿದಷ್ಟು ಉಂಡು ಅರಸರಂತಿರುವಾಗ ಹಳ್ಳಿಗರ ಸರಳ ದೇವನೋಪಾಯನವೇ ಸೌಂದರ್ಯದ ರೂಪ ತೊಟ್ಟು ಹೃದಯೋರ್ಮಿಗಳ ಮುಖದಿಂದ ಹೊರಬೀಳುವದು ಹಳ್ಳಿಯ ವಾತಾವರಣವು ಬಾಲ್ಯದಂತೆ, ವಿಶುದ್ಧವೂ, ಅವ್ಯಾಜವೂ, ಸ್ನೇಹಮಯವೂ ಆಗಿದೆ. ಇಂಥಲ್ಲಲ್ಲದೆ ಇನ್ನೆಲ್ಲಿ ಹೊರಡಬೇಕು ಕಾವ್ಯದ ಶೆಲೆ? ಅವರ ಕಾವ್ಯದಲ್ಲಿ ಅಮೃತರಸವಿರದಿದ್ದರೂ ತೆಂಗಿನ ತಿಳಿನೀರಿದೆ. ಹೊಟ್ಟೆ ತುಂಬ ಕುಡಿದು ತಣಿಯಲೂ ಆಸ್ಪದವಿದೆ.

ಪ್ರಸ್ತುತಕ್ಕೆ ಡೊಳ್ಳಿನ ಹಾಡುಗಳ ವಿಷಯವನ್ನೇ ತೆಗೆಯೋಣ. ಕರ್ನಾಟಕದ ಸಾಧಾರಣವಾಗಿ ಎಲ್ಲ ಭಾಗಗಳಲ್ಲಿ ಯಲ್ಲವ್ವಾ, ಲಾಯವ್ವಾ, ಲಕ್ಕವ್ವಾ (ಲಕ್ಷ್ಮೀ) ಮೊದಲಾದ ದೇವತೆಗಳ ಪೂಜಕರಾಗಿರುವವರು ಇವರು ಕುರುಬರೇ. ಜಾತ್ರೆಯಲ್ಲಿ ಹಾಡುವದಲ್ಲದೆ ಭಕ್ತರು ವಾಲಗ (ಓಲಗ) ಹಾಕಿಸುವಾಗ ಈ ಹಾಡನ್ನು ಕೇಳುವ ಪ್ರಸಂಗ ಬರುವದು. ಹಳ್ಳಿಯ ಕುರುಬರು ಒಕ್ಕಲಿಗರಾಗಿಯೂ, ಕಂಬಳಿಯ ನೇಕಾರರಾಗಿಯೂ, ಕುರಿಗಳನ್ನು ಕಾಯುವವರಾಗಿಯೂ ಚರಿತಾರ್ಥ ಸಾಗಿಸುವರು. ಸದ್ಭಕ್ತರೂ; ಒಳ್ಳೇ ನಂಬಿಗಸ್ಥರೂ; ಭಾವತುಂಬ ಭಕ್ತಿಯುಳ್ಳವರೂ ಆದ್ದರಿಂದಲೇ ಅವರ ಹಾಡುಗಳಲ್ಲಿ ಇವೆಲ್ಲ ಪ್ರತಿಬಿಂಬಿತವಾಗದಿರವು. ಅವುಗಳನ್ನು ಸಂಗ್ರಹಿಸಿದರೆ ನಮ್ಮ ಸಾಹಿತ್ಯಕ್ಕೂ, ಸಂಸ್ಕೃತಿಯ ಇತಿಹಾಸಕ್ಕೂ ಎಷ್ಟೊಂದು ಸಹಾಯ ವಾದೀತು!

“ ನಮ್ಮ ದ್ಯಾವಾರ ಬಂದಾನ ಬನ್ನೀರೇ
ನಮ್ಮ ದ್ಯಾವಾರ ಬಂದಾನ ಬನ್ನೀರೇ ”

ಎಂಬ ನಲ್ನುಡಿಗಳಿಂದ ಎಲ್ಲ ಭಾವಿಕರನ್ನು ನೆರೆಯಿಸಿಕೊಂಡು ಹಾಡತೊಡಗುವರು. ಅವರ ವಾಙ್ಮಯದ ಅಜ್ಞಾನವೂ ಕೂಡ ಅವರ ಭಾವದ ಬೆಳಗೆಯ ಮೇಲೆ ಬೆಳಕು ಕೆಡಹುವದು. ದಿನದ ಮಾತಗಳನ್ನೇ ಹೃದಯ ನಾದದಲ್ಲಿ ಬೆರಿಸಿ ಬೀರುವರು. ಅವರ ಭಕ್ತಿಯ ಭಾವವು ಬಲು ಕೋಮಲ; ಡೊಳ್ಳಿನ ಧ್ವನಿಯೂ ಗಂಭೀರ. ಮೊದಲೊಬ್ಬಿಬ್ಬರು ಹಾಡಿದಮೇಲೆ ಹಿಮ್ಮೇಳದವರೂ ಹಾಡುವರು. ಹಾಡಿನಲ್ಲಿಯ ಅವರ ತಲ್ಲೀನತೆಗೆ ಸರಿಯಿಲ್ಲ. ಎಲ್ಲವೂ ಗಾನಮಯ, ನಾದಮಯ, ಆಶೆಯೇ ಪರಿಣಾಮದಲ್ಲಿ ರಸಮಯ — ಭಾವವನ್ನರಳಿಸುವ ಭಕ್ತಿರಸಮಯವಾಗಿ, ಜಗದಲ್ಲಿ ಜಗನ್ಮಾತೆಯ ಸುಳಿದಾಟಿನ ಹೆಜ್ಜೆಯ ಸಪ್ಪಳವನ್ನು ಕೇಳಬಹುದಾದಂಥ ಸ್ಥಿತಿಯೊಂದ ಪ್ರಾಪ್ತವಾಗುತ್ತದೆ. ಆಂದಮೇಲೆ ಆಲಕ್ಷವೇಕೆ ಅಕಡೆಗೆ?

ಮೂರಲು ದೇವತೆಗಳ ಪಾವಿತ್ರ್ಯವನ್ನು ಬಣ್ಣಿಸುವ ನಾಲ್ಕಾರು ಪದಗಳಾದಮೇಲೆ ಆಯಾ ದೇವತೆಗಳ ಮಹಾತ್ಮ್ಯವನ್ನೂ, ಶಕ್ತಿಪ್ರಭಾವವನ್ನೂ, ಭಕ್ತಿಪ್ರಿಯತೆಯನ್ನೂ ಸೂರೆಮಾಡುವ ಹಾಡುಗಳನ್ನು ಬೆಳಗಾಗುವವರೆಗೆ ಹಾಡಿಹಾಡಿ ಭಾವಿಕರ ಬಯಕೆಗಳನ್ನು ತೃಪ್ತಿಗೊಳಿಸುವರು. ಆ ಹಾಡುಗಳಲ್ಲಿ ಕೆಲವೆಡೆ ಕಥಾಚಾತುರ್ಯವೂ, ವಸ್ತುವರ್ಣನಾ ಶಕ್ತಿಯೂ ದೃಗ್ಗೋಚರವಾಗುವವು. ಒಟ್ಟಿನಮೇಲೆ ಸಂಗ್ರಾಹ್ಯವೆಂದೇ ಹೇಳದಿರೆನು. ಬೆಳಗಾದಮೇಲೆ ಕರೆಸಿದ ಭಕ್ತನನ್ನು ಹರಿಸಿಹೋಗಬೇಕಾಗುವದು. ಆಗಿನ ಹಾಡುಗಳನ್ನು ಕೇಳಿ ನನಗಂತೂ ಸಾನಂದಾಶ್ಚರ್ಯವಾಯಿತು. ಏನು ಅವರ ಹಾಡಿನ ಬೆಡಗು! “True poetry is simple” ಎಂಬುದರ ಅರ್ಥವಾಯಿತಾಗ. ಹರಕೆಯ ಹಾಡಿನಲ್ಲಿ ಒಕ್ಕಲಿಗರ ಸೌಭಾಗ್ಯವು ಚೆನ್ನಾಗಿ ವರ್ಣಿತವಾಗಿರುವದು. “ನೀಲರತ್ನಂಗಳಾನೆಲೆಗಟ್ಟು ಪಳಕುಗಳ ನಾಟಿಸಿದ ಭಿತ್ತಿ ....” ಎಂಬ ವರ್ಣನೆಯನ್ನೇ ಅವರು ಸರಳಸರಳ ಶಬ್ದಗಳಲ್ಲಿ ಹೆಚ್ಚು ಚನ್ನಾಗಿ ಹಾಡಿದ್ದಾರೆ. ಚೆಳಿಯು ಹೊಡೆಹಾಕುವದನ್ನು ಮೊದಲ್ಗೊಂಡು ಕಾಳು ಹಗೆ ಕಂಡು, ಕಣಿಕೆ ಒಣಿಗೆಗಳ್ಳುವವರೆಗೆ, ಅದನ್ನು ಅತ್ಯಾಶ್ಚರ್ಯಕರವಾಗಿ ಅವರ ಪಕ್ಷವನ್ನೂ ಕಾಪನ್ನೂ ಸ್ಪಾರ್ಶಿಸಿಕರಿಸುವರು. ಮನ

ಸ್ಸು ಆನಂದದಿಂದುಕ್ಕುವದಾಗ ಕಂಡುಬರುವದಾಗ, ಒಕ್ಕಲತನದ ಸೊಬಗಿನ ಸುಗ್ಗಿ. ಎಂಥ ಪಂಡಿತನಾದರೂ, ಯೋಗಿಯಾದರೂ ಒಮ್ಮೆ ಒಕ್ಕಲಿಗನಾಗಬೇಕೆಂಬ ಬಯಕೆ ಒಗೆಯಲ್ಲಿ ಥಳಿಯತೊಡಗುವದು! ಎಲ್ಲವೂ ಅಲ್ಹಾದ್ಯಕರವಾಯವಾಗಿ; ಪರಿಣಮಿಸುವದಾಗ, ಸಾಕು, ಸಾಕು ಬಣ್ಣಿಸೆ. ಪ್ರತ್ಯಕ್ಷ ಅನುಭವಿಸಬೇಕು, ಆ ಆನಂದವನ್ನು. ಕಡೆಗೆ ಭಕ್ತನನ್ನು ಬಗೆತುಂಬ ಹರಿಸಿ ಅವನ ಭಾಗ್ಯವೂ ಸಂತಾನವೂ

ಹಾಗಲ ಬಳ್ಳಾಂಗ ಹಬ್ಬಲೇ

ಕುಂಬಳ ಕುಡಿ ಹಾಂಗ ಸಾಗಲೇ

ಎಂದು ಆತ್ಮಾನಂದದಿಂದ ಹರಿಕೆಗೊಟ್ಟು ಮುಗಿಸುವರು ಹಾಡುಗಳನ್ನು.

ಅಂಥ ಸಾಹಿತ್ಯವನ್ನು ಸಂಗ್ರಹಿಸಬೇಕೆಂದೀಗ ನಿಮಗನಿಸಿರಬಹುದು. ಅವಶ್ಯವಾಗಿ ಆಗಲಿ. ಹಳ್ಳಿಯಲ್ಲಿ ಕಲಿತವರೂ, ಶಾಲೆಯ ಗುರುಗಳೂ ಕೈ ತೆರವಾದಾಗ ಈ ಕಾರ್ಯವನ್ನು ಕೈಕೊಂಡರೆ ಅದೇನು ಆಗದದವಾತಲ್ಲ. ಆದರೆ ಇತ್ತ ಲಕ್ಷ್ಯಗೊಟ್ಟು ಅತ್ತಚಿತ್ತ ತಿರುವುದವೇ ಕಷ್ಟ ನಮ್ಮ ಜನರಿಗೆ. ಇನ್ನಾದರೂ ಸ್ವಲ್ಪು ಕ್ಷ್ಲೇಶಿಯಿರಿ, ಮಹಾಶಯರೇ. ಮುಂದಿನ ಸಾರೆ ಆ ಹಾಡುಗಳನ್ನು ಹೇಗೆ ಸಂಗ್ರಹಿಸಬೇಕೆಂಬುದಾಗಿ ತಿಳಿದಮಟ್ಟಿಗೆ ನಾಲ್ಕು ಮಾತುಗಳನ್ನಾಡುವೆನಂತೆ. —ಬಸಂತ.

ವಿಜಾಪೂರ ಜಿಲ್ಲೆಯ ಕಲೇಕ್ಟರ ಸಾ॥ ರ ಮೇ ತಿಂಗಳ ಪ್ರವಾಸವು (ಬದಲಾದದ್ದು)

ಇಂಡಿ. ೨೭ ಮೇ ದಿಂದ ೩೧ ಮೇ

ಸಿಂದಿಗಿ. ೩೧ ಮೇ ದಿಂದ ೩ ಜೂನ

ವಿಜಾಪೂರ. ೪ ನೇ ಜೂನದಿಂದ ೭ ಜೂನ

ಬಾಗೇವಾಡೀ. ೭ ನೇ ಜೂನದಿಂದ ೧೦ ಜೂನ

ಮುದ್ದೇಬಿಹಾಳ ೧೧ ನೇ ಜೂನ ೧೫ ಜೂನ

ವಿಜಾಪೂರ ೧೬ ನೇ ಜೂನ ೧೮ ಜೂನ

ಬಾಗಲಕೋಟೆ. ೧೯ ನೇ ಜೂನ ೨೩ ಜೂನ

ವಿ. ಎಚ್. ನಾಯಿಕ ಕಲೇಕ್ಟರ

ವರ್ತಮಾನ ಸಾರ

ಇಹವೃತ್ತ

ಶ್ರೀ ಅನಂತರಾವ ಗುಳೇದಗುಡ್ಡ ವಕೀಲ ಇವರ ಮಕ್ಕಳಾದ ಭೀಮರಾಯರು ಪೆಂಷ್ಟನ ಮಂಗಳವಾರ(೧—೬—೨೬)ದಿನ ವಿಷಮಜ್ವರದಿಂದ ವ್ಯರ್ಥವಾದರೆಂದು ತಿಳಿಸಲು ನಮಗೆ ಅತ್ಯಂತ ದುಃಖವಾಗುತ್ತದೆ. ಇವರು ಕನ್ನಡಿಗನ ಹಿತ ಚಿಂತಕರಲ್ಲೊಬ್ಬರಾಗಿದ್ದರು. ಪರಮಾತ್ಮನು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಇಲ್ಲಿಯ ಮ್ಯುನಸಿಪಾಲಿಟಿಯ ಚುನಾವಣೆಯು ಆಗಷ್ಟ ೨ನೇ ತಾರೀಖಿನ ದಿನ ಜರಗುವದು. ಮತದಾರರ ಯಾದಿಯು ತಯಾರಾಗಿದೆ ಚುನಾವಣೆಗೆ ನಿಲ್ಲತಕ್ಕ ಉಮೇದವಾರರು ದಿನಾಲು ಮತದಾರರ ಮನೆಗೆ ಎಡತಾಕುತ್ತಿದ್ದಾರೆ. ಮತದಾರರು ಕೇವಲ ಎರಡನೇ ಯುವರಾಜನಿಗೆ ಬಲಿ ಬೀಳದೆ ತಮಗೆ ಯೋಗ್ಯ ಕಂಡವರಿಗೇ ಮತ ಕೊಡಬೇಕೆಂದು ಬೇಡಿಕೆ.

ಬುಧವಾರ(೨—೬—೨೬ ದಿವಸಕ್ಕೆ ಇಲ್ಲಿಯ ಪೋಸ್ಟ ಪೇಂಟ ಪ್ರಿಸ್ಸಿಂಗ್‌ದಲ್ಲಿ ತಗಲಿತ್ತು. ವಿಶೇಷ ಹಾನಿ ಯಾವಂತ ಕಾಣುವದಿಲ್ಲ. ಬೆಂಕಿಯು ಕೂಡಲೇ ನಂದಿಸಲ್ಪಟ್ಟಿತು.

ಮುಂಬೈ ಕರ್ನಾಟಕ

ನವಲಗುಂದ ದಲ್ಲಿ ೨೦ನೇ ರಿಂದ ೨೭ರ ವರೆಗೆ ಜರುಗಿದ ಶ್ರೀ ರಾಮಲಿಂಗ ಕಾಮಣ್ಣರ ಉತ್ಸವದ ಪ್ರಕಟಣಾ ಪತ್ರಿಕೆಯು ಮಹಾರಾಷ್ಟ್ರ ಬಾಷೆಯಲ್ಲಿ ಮುದ್ರಿಸಿದೆ. ನವಲಗುಂದವೆಂದರೆ ಅಪ್ಪ ಕನ್ನಡ ನಾಡು ಹೀಗಿದ್ದು ಆಮಂತ್ರಣ ಪತ್ರಿಕೆಯು ಮರಾಠಿ ಭಾಷೆಯಲ್ಲೇಕೆಂದು ಓದರ ಕನ್ನ ಡಾಭಿಮಾನಿಯು ಕೇಳುತ್ತಾನೆ.

ಈವರೆಗೆ ಬಾಗಲಕೋಟೆಯಲ್ಲಿದ್ದ ಕರ್ನಾಟಕ ಏಕೀಕರಣ ಕಚೇರಿಯು ಧಾರವಾಡಕ್ಕೆ ಒಯ್ಯಲ್ಪಟ್ಟಿದೆ. ಈ ಸಂಘ ಹಾಗು ಕರ್ನಾಟಕ ವಿಶ್ವವಿದ್ಯಾಲಯ ಸಂಘದ ಕಚೇರಿಗಳನ್ನು ಕರ್ನಾಟಕ ವಿದ್ಯಾವರ್ಧಕ ಸಂಘದಲ್ಲಿ ಮಾಡುವರೆಂದು ಗೊತ್ತಾಗುತ್ತದೆ. ಪತ್ರ ವ್ಯವಹಾರ ಮಾಡುವವರು ಧಾರವಾಡಕ್ಕೆ ಮಾಡಬೇಕಾಗಿ ಕಾರ್ಯದರ್ಶಿಗಳಾದ ಶ್ರೀ ಕಾಮುಲಾಪುರದವರು ತಿಳಿಸುತ್ತಾರೆ.

ಮದ್ರಾಸ ಕರ್ನಾಟಕ

೨೫ನೇ ಮೇ ರಾತ್ರಿಯಲ್ಲಿ ಬಳ್ಳಾರಿ ಸ್ಟೇಶನದಲ್ಲಿ ಅಸಿಸ್ಟೆಂಟ ಎಂಜಿನಿಯರನ ಕಚೇರಿಗೆ ಬೆಂಕಿ ಹತ್ತಿ ಎಲ್ಲ ರಿಕಾರ್ಡ್. ಹಾಗು ಸ್ಟೋರು ಸುಟ್ಟು ಹೋದವು.

ಮೈಸೂರ ಕರ್ನಾಟಕ

ಬೆಂಗಳೂರದ ಹತ್ತಿರಿರುವ ಹೊಸಕೋಟೆ ಹಳ್ಳಿಯಲ್ಲಿ ದಂಗೆಯಾಗಿ ೧೩ ಜನರಿಗೆ ಬಹಳ ಘಾಯವಾಗಿದೆ. ಇದಕ್ಕಾಗಿ ಸಂಸ್ಥಾನದ ಪೋಲೀಸರು ವಿಚಾರಣೆ ಮಾಡಿ ೫ ಜನರನ್ನು ಹಿಡಿದಿರುತ್ತಾರೆ.

ನಿಝಾಮ ಕರ್ನಾಟಕ

ಎಂದಿನಂತೆ(ಗುಲಬರ್ಗಾ ಜಿಲ್ಹಾ) ಸುರಪುರ ನಗರದಲ್ಲಿ ಜಗದ್ಗುರುಗಳಾದ ಅದ್ವೈತ ಮತವನ್ನು ಸ್ಥಾಪಿಸಿದ ಶ್ರೀ ಭಗವತ್ ಪೂಜ್ಯಪಾದ ಶ್ರೀಮತ್ ಶಂಕರಾಚಾರ್ಯರ ಜನನ ಮಹೋತ್ಸವವು ವೈಶಾಖ ಶುಕ್ಲ ಪಂಚಮೀ ಸೋಮವಾರ ದಿವಸದಲ್ಲಿ ಬಹು ವಿಜೃಂಭಣೆ ಇಂದ ಜರಗಿತು. ಈ ಮಹೋತ್ಸವಕ್ಕೆ ಮಹಾತಪಸ್ವಿಗಳಾದ ಶ್ರೀ ಸಹಜಾನಂದ ಸರಸ್ವತಿ ಸ್ವಾಮಿಗಳವರು ಬಂದಿದ್ದರು. ಇದರಿಂದ ಮಹೋತ್ಸವ ಸಭೆಗೆ ವಿಶೇಷ ಶೋಭೆಯುಂಟಾಗಿತ್ತು.

ಹಿಂದುಸ್ಥಾನ

ಪಂಡಿತ ಮೋತೀಲಾಲ ನೆಹರು ಇವರು ೨ ತಿಂಗಳವರೆಗೆ ಮಸೂರಿಯಲ್ಲಿ ವಾಸ ಮಾಡಲು ೩೧ನೇ ಮೇ ದಿವಸ ಅಲಹಾಬಾದ ದಿಂದ ಹೊರಟರು.

ನಾಮದಾರ ಪಟೇಲ ರವರು ಕೆಲವು ತಿಂಗಳವರೆಗೆ ಸಿಮ್ಲೆಯಲ್ಲಿವಾಸ ಮಾಡಬೇಕೆಂದು ಹೋಗಿದ್ದಾರೆ.

ಮದ್ರಾಸದಲ್ಲಿ ೩೧ನೇ ತಾರೀಖಿನ ದಿ: ಸಾಯಂಕಾಲಕ್ಕೆ ಅಖಿಲ ಹಿಂದುಸ್ಥಾನ ಬ್ರಾಹ್ಮಣೇತರ ಕಾಂಗ್ರೆಸ್ ಕಮಿಟಿ, ಜಸ್ಟೀಸ, ಇಂಡಿಯನ್ ಲಿಬರಲ್ ಫೆಡರೇಶನದ, ಪರವಾಗಿ ಸಭೆ ಕೂಡಿ ಇರುವ ಚುನಾವಣೆಯಲ್ಲಿ ಜಸ್ಟಿಸ್, ಪಕ್ಷದ ಜನರೇ ವಿಶೇಷವಾಗಿ ಆರಿಸಿ ಬರುವದಕ್ಕಾಗಿ ಪ್ರಯತ್ನ ಮಾಡಬೇಕೆಂದು ನಿರ್ಣಯವಾಯಿತು.

ಪಂಡಿತ ಸುರೇಶ್ವರಾಚಾರ್ಯ ಪತ್ರ ವಿದ್ಯಾವಿನೋದ ವಕೀಲ ಮುಲನಾರವರನ್ನು ರೊಯಲ್ ಏಶಿಯಾಟಿಕ ಸೊಸಾಯಿಟಿಯವರು ಸಭಾಸದರನ್ನಾಗಿ ಆರಿಸಿದ್ದಾರೆ. ಸಂಸ್ಕೃತ ಸಾಹಿತ್ಯದ ಆಧಾರದ ಮೇಲಿಂದ ಇವರೊಂದು ಪುಸ್ತಕವನ್ನು ಬರೆದಿದ್ದಾರೆ.

ಪರದೇಶ

ಉತ್ತರಧ್ರುವದ ಪರಿ ಶೋಧನೆಗೆ ಹೋಗಿದ್ದ ನೋಬೈಲ ಎಂಬವರು ಅಲ್ಲಿ ಸುತ್ತಲೂ ಮೇಲ್ಗಡೆ ಸ್ವಲ್ಪ ಮಂಜುಗಡ್ಡೆಯೂ ಕೆಳಗೆ ನೀರೂ ಇರುವ ಹಲ್ಲದೆ ಭೂಮಿ ಯಿಲ್ಲವೆಂದು ಕಂಡು ಹಿಡಿದಿರುವರು.

ಜರ್ಮನಿಯ ಭೂಗರ್ಭ ಶೋಧಕರು ಅಟ್ಲಾಂಟಿಕ ಸಾಗರದ ದಕ್ಷಿಣ ಭಾಗವನ್ನು ಪರಿಶೋಧಿಸಿ ಅಲ್ಲಿ ಸುಮಾರು ೪೦೦೦ಅಡಿ ನೀರಿನ ಕೆಳಗೆ ಪರ್ವತಗಳಿರುವ ವೆಂದೂ, ಅವು ಗಳಲ್ಲಿ ಒಂದು ಪರ್ವತವು ೩೦೦೦ ಅಡಿ ಎತ್ತರವದೆಯೆಂದೂ ಕಂಡು ಹಿಡಿದಿರುವರು.

ಪ್ಯಾರೀಸ ನಗರದಲ್ಲಿಯ ಓರ್ವ ಧನಿಕ ಪೇಟ್ಯೆಯು ಪ್ರತಿದಿನವೂ ... ದಕ್ಕಂತೆ ... ಇವನಿಗೆ ಒಂದು ಸ್ನಾನಕ್ಕೆ ೩೦ ... ರೂ. ... ... ಸುಖಾನು ಭವವು!

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

ಜಮಖಂಡಿಕರ ವಾಡೇ ೪೯೫ ಶನಿವಾರ ಪುಣೇಶಹರ



ಗುಲಕಂದ! ಗುಲಕಂದ!! ಗುಲಕಂದ!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತುರಾಯಿಗಳೂ ದೊರೆಯುತ್ತವೆ ವ್ಯಾಪಾರಸ್ಥರಿಗೆ ತುಂಬಾ ಕಮೀಶನ್.

ವಿಳಾಸ:— ಧಾಡಗೆ ಪಾಷಾಣಕರ ಕಂಪನಿ

ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ಕಡಕವಿದ್ದು, ಸುವಾಸಿಕ ವಿರುತ್ತದೆ ಇದರ ಸೇವನದಿಂದ ಬಾಯಿಯ ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಬಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಪುಡಿ ಕಿಂ ರೂ ೦-೦-೬, ೨೫ರ ಕಿಂ ರೂ. ೦-೯-೦ ೫೦ರ ಕಿಂ ರೂ ೧-೦-೦; ೧೦೦೦ ಪುಡಿಗಳ ಕಿಂ. ರೂ. ೧೨-೦-೦, ಟಪಾ ಖರ್ಚುವಗೈರೆ ಪ್ರತ್ಯೇಕ.

ಸುಗಂಧಿ ನಸ್ಯ:— ಈ ನಸ್ಯವು ಬಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ, ಥಂಡಿ, ಅಂತಲೆವತತ ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ಖರ್ಚು ೦-೪ ೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦. ಪೊ ಬೇರೆ.

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು, ಪ್ರಸವತ್ ನೋಡಿ ಮಾಲಿಗೆ ಆರ್ಡರ ಕೊಡಬಹುದು. ಇವರ ಹೊರತು ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು ಖರೀದಿ ಮಾಡಿ ಕಳಿಸುವೆವು ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ದಕ್ಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್. ಜಿ ವಸಂ, ಬೀಡಿ ಮತ್ತು ತಂಬಾಕು ಜರ್ದಾ ಕಾರ. ಮು ಪೊ. ನಿಪ್ಪಾಣಿ, ಜಿ ಬೆಳಗಾವ

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸ್ವತಂತ್ರವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ವಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೨-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೧೮-೦-೦ ತಿಂಗಳಿಗೆ ೧-೧೦-೦ ಆದರೆ ಜಾಹಿರಾತಿನ ದರವನ್ನು ಅಥವಾ ಮಾದರಿ ಸಂಚಿಕೆಯನ್ನು ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯ. ಮೈಸೂರು.

ಜಾಹೀರಾತಿನ ಸಲುವಾಗಿ.

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ.

ಇವರು ಜೂನ ೧ ನೇ ವಾರದಿಂದ ಚಂದ್ರಪಟ್ಟಣದಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೫೭೦೦ ಮಿ. ವಿಠ್ಠಲ ಚಿಮ್ಮಾಜಿ ಸೇಟ ಕಲಾಲ್ ಅಲಿಬಾಗ ಜಂಜಿ,

(೨) ಬಾಂಡ ನಂ. ೧೩೭೦೭ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಕು ಸಿರಾ. (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೭ ಮಿ|| ವೆಂಕಟರಮಣ, ವೆಂಕಟರಮಣ ಹೆಗಡೆ, ಸೇಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೭೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೯೦ ಮಿ|| ರಾಮಚಂದ್ರ ವಾಮನ ಕಾಂಕರ ಕಾಟುಸ್ಕರ ವಾಡಾ ವ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೫೦ ಮಿ|| ಆರ್. ಎಚ್. ನಾಟೆಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ.)

ಪೊರವಾಲ ಬ್ಲ್ಯಾಕ ಟೂಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ—೫ ಆಣೆ. ಟ. ಖ. ಬೇರೆ. ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಬ್ರಂಡ ಕೊ. (ರಜಿಸ್ಟರ್ಡ) ಪುಣೇಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ, ಸಹಿತ; ಟ ಖ ಪ್ರತ್ಯೇಕ

ಟಿಪ್ಪಣಿಃ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ಸರಿ ಹಚ್ಚಿ ಕಳಿಸಲಾಗುವದು

ಲಿಬರ್ಟಿ ವಾಚ ಕಂ. (In in) ಮುಂಬೈ ನಂ. ೪

ಕರ್ನಾಟಕಧುರೀಣ.

ಉತ್ತಮ ವರ್ಗದ ವಾರಪತ್ರಿಕೆ

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡಬಿಚ್ಛಿಸುವವರು ಆ ವಾರಪತ್ರಿಕೆಯನ್ನು ತಪ್ಪದೆ ಓದಬೇಕು.

ವಾರ್ಷಿಕ ಚಂದಾ ೩-೩-೦ ಪತ್ತೆಃ—

ಸಂಪಾದಕ ಕರ್ನಾಟಕಧುರೀಣ ಕುಮಟಾ, ಜಿ ಉತ್ತರ ಕನ್ನಡ

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನನ್ನ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸಃ— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಲಾ ವಿಜಾಪೂರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರವಾರೆ
ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೇ ಬಂಧುಗಳ ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರಾಚಾರ್ಯ ವಾಕ್ಳೂರ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರ್ಣವ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ಮು. ಚಂ. ವಾ ೧—೩-೦ ಪೋ ...

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಜೇಷ್ಠ ಶುದ್ಧ ೧ ಶಕೆ ೧೮೪೮ ತಾ|| ೧೧-೬-೧೯೨೬. | ಸಂಚಿಕೆ ೧೨

ಸಂಪಾದಕರ ಭೂಮಿ

(*)

ನನ್ನ ಮನಸಿನ ಮೋಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಪ್ಪ
ಚಿನ್ನದಾದರು ಚಿನ್ನ ಮೋಣಬಿಸ್ತಿಯ ನೊಂದು ಚಿನ್ಮಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ಪೀಠದಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯಾ॥

—ಅಂಬಿಕಾ ತನಯ ದತ್ತ

ವಿಜಾಪೂರ ಜಿಲ್ಲೆಯೊಳಗಿನ ಬಾಗಲಕೋಟೆ ತಾಲೂಕ ಪಲ್ಲಿಯ ಗಲಗಲಿ (ಗಾಲವ ಕ್ಷೇತ್ರ)ಯಲ್ಲಿ ವೈಶಾಖ ಶುದ್ಧ ತದಿಗೆಯ ಸುಮುಹೂರ್ತದಲ್ಲಿ ಒಂದು ಶಾಲೆಯು ಸ್ಥಾಪಿತವಾಗಿದೆ. ವೇ. ರಾಮಾಚಾರ್ಯ ನರಸಿಂಹಾಚಾರ್ಯ ಗಲಗಲಿ, ರಾಮಾಚಾರ್ಯ ಕಾಖಂಡಕಿ, ಸುಬ್ಬಣ್ಣಾಚಾರ್ಯ ಗೋತೆ ಇವರೇ ಅದರ ಸ್ಥಾಪಕರು. ಆ ಶಾಲೆಯನ್ನು ಮೊದಲಿನ 'ಗುರುಕುಲದಂತೆ ನಡೆಯಿಸಬೇಕೆಂದು ಇವರ ಎಣಿಕೆ; ಪೂರ್ವದ ಶಾಲೆಗಳಿಗೂ ಈಗಿನ ಶಾಲೆಗಳಿಗೂ ಬಹಳ ವ್ಯತ್ಯಾಸವಿದೆಯೆಂಬುದು ಅನುಭವಸಿದ್ಧವಾದ ಮಾತು "ನಮ್ಮ ಈಗಿನ ಶಾಲೆಗಳು ಕಲ್ಲುಮಣ್ಣಿನ ಗೋಡೆಗಳು ಸೃಷ್ಟಿ ಸೌಂದರ್ಯ ರಹಿತವಾದ ಕತ್ತಲೆಯ ಕೋಣೆಗಳು ಋಷ್ಯಾಶ್ರಮಗಳಿದ್ದುದು ಪ್ರಕೃತಿಯಮಧ್ಯದಲ್ಲಿ; ಬಾಲಕರು ಸದಾ ಗಿಡಮರಬಳ್ಳಿಗಳೊಡನೆಯೂ, ಪಶುಪಕ್ಷಿಗಳೊಡನೆಯೂ ನಲಿಯುತ್ತಾ ಜೀವನದ ತಿರುಳನ್ನು ತಿಳಿದು ಆನಂದದಲ್ಲಿರುತ್ತಿದ್ದರು. ಪುಸ್ತಕಗಳಿಂದ ತುಂಬಿದ ಕೋಣೆಗಳನ್ನು ಹಿಂದಿನವರು ಕಂಡರಿಯರು ಅವರ ಗುರುವೇ ಅವರಿಗೆ ಸರ್ವಸ್ವ ಆಗಿದ್ದನು. ಅಂತಹ ಶಾಲೆಗಳೆಲ್ಲಿ? ಎಂಬ ಉದ್ಗಾರವನ್ನು ಒಬ್ಬ ಸದ್ಗೃಹಸ್ಥರು ತೆಗೆದಿದ್ದಾರೆ. ಇಂತಹ ಶಾಲೆಗಳ ಆವಶ್ಯಕತೆಯು ಎಲ್ಲರಿಗೂ ತೋರಹತ್ತಿದೆ. ಎಲ್ಲ ಕಡೆಯಲ್ಲಿಯೂ ಈಗಿನ ಶಾಲೆಗಳಲ್ಲಿ ಸಿಗುತಲಿದ್ದ ಶಿಕ್ಷಣದ ಬಗ್ಗೆ ಅಸಂತುಷ್ಟತೆಯು ವ್ಯಕ್ತವಾಗುತ್ತಿಂದೆ. ಈ ಪರಿಸ್ಥಿತಿಯಲ್ಲಿ ವೇ. ರಾಮಾಚಾರ್ಯರವರು ಶಾಲೆಯನ್ನು ಸ್ಥಾಪಿಸಿದುದು ಏಹಿತವೇ ಆಯಿತು ಶ್ರೀ. ರಾಮಾಚಾರ್ಯರು ಪ್ರಸಿದ್ಧ ನರಸಿಂಹಾಚಾರ್ಯ ಇವರ ಮಕ್ಕಳು. ನ್ಯಾಯ, ವ್ಯಾಕರಣ, ವೇದಾಂತಗಳಲ್ಲಿ ಪಾರಂಗತರು ಇವರಿಗೆ ಬಂಗಾಲಿಯು ತಕ್ಕ ಮಟ್ಟಿಗೆ ಬರುತ್ತಿದೆ. ಇವರು ಕೇವಲ ಪ್ರಾಚೀನ ಪಂಡಿತರ ಹಾದಿಯನ್ನೇ ತುಳಿಯುವವರಲ್ಲ; ಹೊಸಯುಗದ ಹೊಸಬೆಳಕಿನ ಅರಿವನ್ನು ಕಂಡವರಿರುವರು ಶ್ರೀ. ಕಾಖಂಡಕಿಯವರು ಪುರಾಣಪುಣ್ಯಕಥೆಗಳನ್ನು ಓದುವವರಿರುವರಲ್ಲದೆ ಆಂಗ್ಲಭಾಷೆಯನ್ನು ಚೆನ್ನಾಗಿ ಅರಿತವರಿರುವರು. ಇಂಟರಮೀಜಿಯೇಟದ ವರೆಗೆ ಅವರ ಅಭ್ಯಾಸವಾಗಿದೆ ಪ್ರಾಚೀನ ಅರ್ವಾಚೀನಗಳ ಸವಿಯಾದ ಕೂಟವು ಈ ಶಾಲೆಯಲ್ಲಿ ಆಗುವಂತಿದೆ. ಶಾಲೆಯನ್ನು ಪಾವನಳಾದ ಕೃಷ್ಣೆಯ ದಂಡೆಯ ಮೇಲೆ ಸ್ಥಾಪಿಸಿದ್ದಾರೆ ಅದಕ್ಕಾಗಿ ನಾಲ್ಕು ಎಕರೆ ಭೂಮಿಯನ್ನು ೫ ವರ್ಷ ಬಾಡಿಗೆಗೆ ತೆಗೆದು ಕೊಂಡಿದ್ದಾರೆ. ಈಗ ಅಲ್ಲಿ ೨೫ ಹುಡುಗರು ಇರುವರು. ಬೌದ್ಧಿಕ, ಶಾರೀರಿಕ ಧಾರ್ಮಿಕ ಶಿಕ್ಷಣಗಳು ಸರಿಯಾಗಿ ನಡೆಯುವಂತೆ ಏರ್ಪಾಟು ಮಾಡಿರುವರೆಂದು ಕೇಳಿದ್ದೇವೆ. **ಗುರುವೃತ್ತಿಯನ್ನು ಸ್ವೀಕರಿಸಿದವರೆಲ್ಲರು.** ಉದಾರ ಭಾವಪೂರ್ಣರೂ, ಸುಶೀಲರೂ, ಸೌಜನ್ಯಶಾಲಿಗಳೂ, ಓದಿದವರೂ ಇರುವದರಿಂದ, ಶಾಲೆಯು ಏಳ್ಗೆಯನ್ನು ಹೊಂದುವದೆಂದು ನಮಗೆ ಅನಿಸುತ್ತದೆ. 'ಕ್ರಿಯಾಸಿದ್ಧಿಃ ಸತ್ವೇಭವತಿ ಮಹತಾಂನೋಪಕರಣೇ' ಎಂಬುದನ್ನು ನೆನೆದು, ಸ್ಥಾಪಕರು ಕೆಲಸ ಮಾಡಿದಲ್ಲಿ ಉತ್ತರ ಕರ್ನಾಟಕಕ್ಕೆ ಒಂದು ಮಾದರಿಯ ಗುರುಕುಲವು ದೊರೆತಂತಾಗುವುದು. ಮುಂದೆ ಅದನ್ನೇ ಬೆಳೆಯಿಸಿ, 'ವಿಶ್ವಭಾರತಿಯ' ನಮೂನೆಯಂತೆ ಮಾಡಲು ಬರಬಹುದು. ಎಲ್ಲವೂ ಗುರುಗಳನ್ನವಲಂಬಿಸಿದೆ. ಅವರು ಪರೀಕ್ಷೆಯಲ್ಲಿ ನಿಲ್ಲಬೇಕು. ಕನ್ನಡದ ನಾಡಿನ ಶ್ರೇಯವನ್ನು ಮಾಡಬೇಕು. ಜಯಭುವನೇಶ್ವರೀ—

ಪುಣೆಯಲ್ಲಿಯ ಶಿಬಿವಾಡಿಗೆ ಬೆಂಕಿ ಹತ್ತಿ ಜ್ಞಾನಪ್ರಕಾಶ ಮತ್ತು ಆರ್ಯಭೂಷಣ ಇವೆರಡೂ ಮುದ್ರಣಾಲಯಗಳು ಸುಟ್ಟು ಭಸ್ಮವಾದವೆಂದು ತಿಳುಹಿಸಲು ನಮಗೆ ಅತ್ಯಂತ ವಿಷಾದವಾಗುತ್ತದೆ. ಇವೆರಡೂ ಮುದ್ರಣಾಲಯಗಳು ಲೋಕಸೇವೆಯನ್ನು ಎಷ್ಟೋ ವರ್ಷಗಳ ವರೆಗೆ ಅವ್ಯಾಹತವಾಗಿ ಮಾಡಿರುವವೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಮುದ್ರಣಾಲಯದ ಒಡೆಯರಿಗೆ ಹೇರಳವಾದ ಹಾನಿಯಾಗಿರುವದು. **ಅಲ್ಲಿ ಹೊರಡುವ** ಜ್ಞಾನಪ್ರಕಾಶ ಸರ್ವಂಟ ಆಫ್ ಇಂಡಿಯಾ ಎಂಬ ಪತ್ರಗಳಾದರೂ ಕೆಲಕಾಲ ಹೊರಡಲಾರವು. ಒಂದೆಡೆಗೆ ಹಾನಿಯುಂಟಾದ ಮನಸ್ತಾಪ,ಮತ್ತೊಂದೆಡೆಗೆ ಜನಸೇವೆಯ ಹಂಬಲ. ಹೀಗೆ ಎರಡಿಟ್ಟಾಗಿ, ಅವರು ಬಹಳೇ ಗೊಂದಲದಲ್ಲಿ ಬಿದ್ದಾರೆ. ಅವರಿಗೊದಗಿದ ಆಪತ್ತಿನ ಬಗ್ಗೆ ಕರ್ನಾಟಕಕ್ಕಾದರೂ ಖೇದವಾಗಿದೆ ಮತ್ತು ಅವರ ಬಗ್ಗೆ ಕರ್ನಾಟಕದ ಸಹಾನುಭೂತಿಯಾದರೂ ಇದೆ. ತೀವ್ರವೇ, ಅಲ್ಲಿಯ ಕೆಲಸವು ಮೊದಲಿನಂತೆ ಪ್ರಾರಂಭವಾಗಿ, ಹಾನಿಯು ತುಂಬಿ ಬರಲೆಂದು ಕನ್ನಡಿಗನು ಕೋರುತ್ತಾನೆ.

"ರಾಷ್ಟ್ರೀಯ ಶಾಲೆಗಳೆಲ್ಲ ಅಳಿದು ಹೋದವು; ಇದ್ದರೂ ಅಲ್ಲೊಂದು ಇಲ್ಲೊಂದು; ಹುಡುಗರ ಸಂಖ್ಯೆಯಾದರೂ ತೀರ ಕಡಿಮೆ. ಶಿಕ್ಷಕರಾದರೂ ಶಾಲೆಗಳನ್ನು ತೊರೆದು, ಜೀವನಕ್ಕೆ ತೆರಳುತ್ತಲಿದ್ದಾರೆ. ಅಸಹಕಾರದ ಚಳುವಳಿಕೆಯು ಸತ್ವಹೀನವಾಗಿದೆ. ಅದರಲ್ಲಿ ತಡೆದು ನಿಲ್ಲುವ ತ್ರಾಣವಿಲ್ಲ. ಹೀಗಿರಲು ಸ್ವಲ್ಪ ಹುಡುಗರಿಗಾಗಿ ರಾಷ್ಟ್ರೀಯ ಶಾಲೆಗಳನ್ನು ಏಕೆ ಇಡಬೇಕು? ಮತ್ತು ಅವುಗಳ ಸಲುವಾಗಿ ಏಕೆ ವ್ಯರ್ಥವಾಗಿ ಹಣ ವೆಚ್ಚ ಮಾಡಬೇಕೆಂದು, ಎಷ್ಟೋ ಜನರು ಮಹಾತ್ಮರಿಗೆ ಕೇಳುತ್ತಲಿರುವರು. ಮಹಾತ್ಮರು ತಮ್ಮ "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಅವರಿಗೆ ಹೀಗೆ ಉತ್ತರ ಹೇಳುತ್ತಾರೆ. ಸ್ವಾತಂತ್ರ್ಯ ಪ್ರಿಯರಿಗೆ ಸ್ವತಂತ್ರ ಸಂಸ್ಥೆಗಳೇ ಬೇಕು. ಕೆಲವು ಧರ್ಮಕೃತ್ಯಗಳು ಕುಮಾರಿಯರಿಂದಲೇ ಜರುಗತಕ್ಕವುಗಳಿರುವವು. ಕುಮಾರಿಯರು ಸಿಕ್ಕಲಿಲ್ಲವೆಂದರೆ ಉಳಿದವರಿಂದ ಆ ಕಾರ್ಯಗಳನ್ನು ಮಾಡಿಸಲು ಬರುವದಿಲ್ಲ. ಒಬ್ಬ ಕುಮಾರಿಯು ದೊರೆತರೂ ಕಾರ್ಯವು ಸಾಗುವದು. ಅದರಂತೆಯೇ ಒಂದು ಉತ್ಕೃಷ್ಟವಾದ ಸ್ವತಂತ್ರ ಶಾಲೆಯು ಹುಡುಗರ ಸಂಖ್ಯೆ ಕಡಿಮೆ ಇರಲಿ—ಕೆಲಸವು ನಡೆಯುವದು. ಇಂತಹ ಶಾಲೆಗಳು ಸ್ವಾತಂತ್ರ್ಯ ತೃಷ್ಣಾಪೀಡಿತರಿಗೆ ಜೀವನಸ್ಥಾನಗಳಿದ್ದಂತೆ. ಇಂತಹ ಶಾಲೆಗಳಿಗೆ ಹಣವನ್ನು ಕೊಟ್ಟು ಪೋಷಿಸುವದು ಶ್ರೀಮಂತರ ಕರ್ತವ್ಯವು. ಕೆಲವು ಶಿಕ್ಷಕರು ಆತ್ಮಾರ್ಪಣಬುದ್ಧಿಯಿಂದ ಉಚ್ಚ ಧ್ಯೇಯಾಭಿನಿವೇಶವುಳ್ಳವರಾಗಿ ಮನವುಟ್ಟಿ ಕಾರ್ಯಮಾಡಿದರೆ, ಶಾಲೆಗಳು ಊರ್ಜಿತ ಸ್ಥಿತಿಯನ್ನು ಪಡೆಯುವವು. ಶಿಕ್ಷಕರ ಕಾರ್ಯವು ಎಷ್ಟು ಜವಾಬ್ದಾರಿಯುಳ್ಳದ್ದೋ ಅಷ್ಟೇ ಜವಾಬ್ದಾರಿಯುಳ್ಳದು ಶಿಷ್ಯರದಿರುತ್ತದೆ. ಹುಡುಗರಲ್ಲಿದ್ದ ಗುಣಗಳನ್ನೇ ಬಯಲಿಗೆ ತಂದು ಬೆಳೆಸುವದು ಶಿಕ್ಷಕರ ಕರ್ತವ್ಯವು. ಹುಡುಗರಲ್ಲಿ ತ್ಯಾಗಬುದ್ಧಿ, ಜನಸೇವಾಪರಾಯಣತೆ ನಿರಹಂಕಾರ ಉದ್ಯೋಗಶೀಲತೆ; ಸ್ವಾತಂತ್ರ್ಯಪ್ರೀತಿ ಮೊದಲಾದವುಗಳಿದ್ದರೆ ಅವುಗಳು ರಾಷ್ಟ್ರೀಯ ಶಾಲೆಗಳಲ್ಲಿ ವಿಕಾಸಹೊಂದಿ ಪೂರ್ಣ ಉತ್ಕರ್ಷದಲ್ಲಿ ಪರಿಣತವಾಗುವವು. ಇಂತಹ ಹುಡುಗರು ಸ್ವತಂತ್ರ ವಾತಾವರಣದಲ್ಲಿ ಬೆಳೆದರೆಂದರೆ ಆದರ್ಶಪ್ರಾಯರಾಗುವರು. ಉಳಿದವರನ್ನೆಲ್ಲ ತಮ್ಮ ಉಚ್ಚನೀತಿ, ಸುಶೀಲತೆ ಮೊದಲಾದವುಗಳಿಂದ ತಮ್ಮೆಡೆಗೆ ಎಳೆದುಕೊಳ್ಳುವರು. ಜನರ ಒಲುಮೆಯು ಯಾವಾಗಲೂ ಒಳ್ಳೆತನದ ಕಡೆಗೆ ಇರುವುದು. ಒಳ್ಳೆಯ ಸಂಸ್ಥೆಯು ದೊರೆಯಿತೆಂದರೆ, ಜನರು ಆ ಸಂಸ್ಥೆಗೆ ತಮ್ಮ ಹುಡುಗರನ್ನು ಕಳುಹಿಸುವರು. ಒಂದಕ್ಕೆ ನೂರು ಹುಡುಗರು ಆಗುವರು. ಹೀಗೆ ಸಂಸ್ಥೆಯು ಏಳ್ಗೆಹೊಂದಿ, ಸಮಾಜದ ಆಧಾರವಾಗುವುದು. ಅದರಿಂದ ನಾಡಿನ ಸಿರಿಯೇರುವುದು."

ಇದೇ ವಾರದ ಕರ್ನಾಟಕ ಟಾಯಿಮ್ಸ ಪತ್ರದಲ್ಲಿ ರಾಟಿಯ ಮಹಾತ್ಮ್ಯವು ಕೊಂಡಾಡಲ್ಪಟ್ಟಿದೆ. ರಾಟಿಯು ಬಡಬಗ್ಗರ ಕಾಮಧೇನುವೆಂದಾದರೂ ಆ ಪತ್ರಿಕೆಯು ಹೊಗಳಿದೆ. ಆದರೆ ಬ್ರಾಹ್ಮಣೇತರರ ಮುಖಂಡರು ರಾಟಿಯಬಗ್ಗೆ ಇನ್ನೂ ಅನಾದರವನ್ನೇ ತೋರಿಸುತ್ತಲಿದ್ದಾರೆ. ಬ್ರಾಹ್ಮಣೇತರರ ಮುಖಂಡರು ಎಲ್ಲರ ಹಿತವನ್ನೆ ಸಗಲು ಸಿದ್ಧರಾಗಿದ್ದಾರೆ. ತಮ್ಮ ಚಳವಳಿಯು ಮಹಾತ್ಮಾಗಾಂಧಿಯವರ ಚಳವಳಿಗಿಂತಲೂ ಒಂದು ತೂಕ ಶ್ರೇಷ್ಠವಿದೆಯೆಂದು ಹೇಳಿಕೊಳ್ಳುತಲಿದ್ದಾರೆ. ಹೀಗಿದ್ದು ರಾಟಿಯಿಂದ ಹೊರಬೀಳುವ ಬಟ್ಟೆಗಳನ್ನು ಧರಿಸಲು ಏಕೆ ಸಿದ್ಧರಿರುವದಿಲ್ಲ. ಲೋಕಲ್ ಬೋರ್ಡ, ಮುನಸಿಪಾಲ್ಟಿ, ಕಾನ್ಸಿಲ್ ಮೊದಲಾದ ಸ್ಥಾನಗಳಲ್ಲಿ ಬ್ರಾಹ್ಮಣೇತರರು ದೊಡ್ಡ ದೊಡ್ಡ ಅಧಿಕಾರಗಳನ್ನು ಪಡೆದವರಾಗಿದ್ದಾರೆ. ಇವರು ಕೇವಲ ವಿಲಾಯತಿಯಿಂದ ಬಂದ ಅರಿವೆಗಳನ್ನೇ ಧರಿಸುತ್ತಾರೆ. ಇದರಲ್ಲಿಯೇ ತಮ್ಮ ಜೀವನದ ಜೀವಾಳವಿದೆಯೆಂದು ತಿಳಿಯುತ್ತಾರೆ ಅದರಲ್ಲಿಯೇ ತಮ್ಮ ಗೌರವವಿದೆಯೆಂದು ಭಾವಿಸುತ್ತಾರೆ. ಸಮಾಜದಲ್ಲಿಯ ಉಳಿದ ಪ್ರತಿಷ್ಠಿತರ [illegible] 'ಯದ್ಯದಾಚರತಿ ಶ್ರೇಷ್ಠಃ ತತ್ತದೇವೇತರೋ ಜನಾಃ' (ಶ್ರೇಷ್ಠರು ಆಚರಿಸಿದಂತೆ ಇತರರು ಆಚರಿಸುತ್ತಾರೆಂಬುವ ಗೀತೆಯ ವಚನ ನಾಡಿನ ಸುಧಾರಣೆ ಮಾಡುವವರ ಮುಖಂಡರನ್ನು ಕುರಿತಿದೆ. ಅವರೇ ಸಮಾಜದ ಜವಾಬ್ದಾರಿಗಳಾದ ಜನರು. ಆದ್ದರಿಂದ ಅವರೇ ಖಾದಿಯನ್ನು ಧರಿಸಬೇಕು. ಅದರಲ್ಲಿಯೇ ಅವರಿಗೆ ಶೋಭೆಯಿದೆ. ಸ್ವಾಭಿಮಾನದ ಗುರುತು ಖಾದಿಯು [illegible] ಬಡಬಗ್ಗರ ಹೊಟ್ಟೆಗೆ ತುತ್ತು ಅನ್ನ ದೊರೆಯುತ್ತದೆ [illegible] ಬಡಬಗ್ಗರಿಂದಲೇ [illegible] ಅನ್ನ ದೊರೆಯುತ್ತದೆ. ಅನ್ನ ಕೊಡುವವರನ್ನು ಕಾಲ್ಕೆಳಗೆ ಹಾಕಿ ತುಳಿಯುವುದು ಕೃತಘ್ನತೆಯು. ಒಬ್ಬನು ಬ್ರಾಹ್ಮಣನೇ ಇರಲಿ ಅಬ್ರಾಹ್ಮಣನೇ ಇರಲಿ ದುಡಿದು ತನ್ನ ಹೊಟ್ಟೆಯನ್ನು ಕಟ್ಟಿ, ಇಡೀ ಜಗತ್ತಿನ ಹೊಟ್ಟೆ ಹಾಕುವ ರೈತನಿಗೆ ತಿರುಗಿ ಬಿದ್ದರೆ, ಕೃತಘ್ನತೆಯು. [illegible] ಅವನು ಮುಕ್ತನಾಗಲಾರನು. ಆದ್ದರಿಂದ ಬ್ರಾಹ್ಮಣರೂ, ಬ್ರಾಹ್ಮಣೇತರರೂ ಎಲ್ಲರೂ ಕೇವಲ ಸಿಣಿಯಗಳನ್ನೂ ಗೊಂಬೆಗಳನ್ನೂ ಮಾಡದೆ ಆಚರಣೆಯಲ್ಲಿ ಶುದ್ಧರಾದರೆಂದರೆ, ಕಾರ್ಯಗಳು ಯಶಸ್ವಿಯಾಗುವವು. ನುಡಿಯಂತೆ ನಡತೆಯುಳ್ಳವರ ಕಾಲುಗಳನ್ನು ಹಿಡಿಯಬೇಕೆಂದು ಸಂತಶಿಖಾಮಣಿಯಾದ ತುಕಾರಾಮನ ದಿವ್ಯವಾಣಿಯು ಈ ದಿವ್ಯವಾಣಿಯು ಬ್ರಾಹ್ಮಣೇತರರ ಕಿವಿಗಳಲ್ಲಿ ಸುತ್ತಿ ಸುಳಿಯಲೆಂದೂ, ನಾಡಿನ ಏಳ್ಗೆಯು ಅದರಿಂದಲೇ ಆಗಲೆಂದು ಕನ್ನಡಿಗನ ಹಾರೈಕೆ

ದೇ. ಭ. ಶ್ರೀ ಕೌಜಲಗಿ ಶ್ರೀನಿವಾಸರಾಯರು ಒಳವ ಕೌನ್ಸಿಲ ಚುನಾವಣೆಗೆ ಉಮೇದವಾರರಾಗಿ ನಿಂತಿರುವರು. ಇವರಿಗೆ ಕರ್ನಾಟಕ ಪ್ರಾಂತಿಕ ಮಂಡಳದ ಬೆಂಬಲವಾದರೂ ಇದೆ. ಇವರು ಮತದಾರರನ್ನುದ್ದೇಶಿಸಿ ಒಂದು ಪ್ರಕಟನಾ ಪತ್ರಿಕೆಯನ್ನು ಮುದ್ರಿಸಿದ್ದಾರೆ. ಅದನ್ನು ಬೇರೊಂದೆಡೆಯಲ್ಲಿ ಕೊಟ್ಟಿರುವೆವು. ಶ್ರೀನಿವಾಸರಾಯರ ವಿಷಯದಲ್ಲಿ ನಾವು ಹೆಚ್ಚಿಗೆ ಬರೆಯಬೇಕು ಹೀಗೇನಿಲ್ಲ. ಅವರು ಕರ್ತೃತ್ವಶಾಲಿಗಳೂ, ಜನಹಿತ ಸಂರಕ್ಷಕರೂ, ನಿರ್ಭಯವೃತ್ತಿಯವರೂ ಇರುವರು. ನಾಡಿನ ಏಳ್ಗೆಗಾಗಿ ಬಹುಕಾಲದಿಂದ ಹೋರಾಡುತ್ತ ಬಂದಿರುವ ಸ್ವದೇಶಾಭಿಮಾನಿಗಳಲ್ಲಿ ಅವರೊಬ್ಬರು. ಅವರು ಸ್ವಮತಾಭಿಮಾನಿಗಳೂ ಕೆಚ್ಚೆದೆಯುಳ್ಳವರೂ ಎಂಬುದಕ್ಕೆ ಅವರ ಕಾರಾಗೃಹವಾಸವೇ ಸಾಕ್ಷಿ. ಅವರು ಬ್ರಾಹ್ಮಣರೇನೋ ನಿಜ. ಆದರೆ ಬ್ರಾಹ್ಮಣೇತರರಿಗೆ ಅನುಕೂಲತೆಗಳನ್ನು ಕಲ್ಪಿಸಿ ಕೊಡುವದರಲ್ಲಿ ಅವರಿಗೆ ಸರಿಯಾದವರು ಮತ್ತೊಬ್ಬರಿಲ್ಲೆಂದು ಹೇಳಲು ಅಭ್ಯಂತರವಿಲ್ಲ. ಬ್ರಾಹ್ಮಣ–ಬ್ರಾಹ್ಮಣೇತರರಲ್ಲಿ ಐಕ್ಯವನ್ನುಂಟು ಮಾಡುವದೇ ಅವರ ಜೀವನದ ಗುರಿಯೆಂದು ಎದೆ ತಟ್ಟಿ ಹೇಳಬಹುದು. ಅವರ ಈ ಭಾವನೆಗೆ ಬ್ರಾಹ್ಮಣೇತರರು ಮನಸೋತಿರುವರು. ಬ್ರಾಹ್ಮಣೇತರರ ವಿಶ್ವಾಸವನ್ನಾದರೂ ಅವರಲ್ಲಿ ಬಹಳ. ಹೀಗೆ ಜಾತಿಭೇದವಿಲ್ಲದೆ ಎಲ್ಲರನ್ನು ಸಮಭಾವದಿಂದ ನೋಡುವವರು ವಿರಳ. ಎಲ್ಲರೀತಿಯಿಂದ ನೋಡಿದರೂ ಶ್ರೀನಿವಾಸರಾಯರು ಯೋಗ್ಯರಿರುವರು. ಇಂಥವರನ್ನು ಮತದಾರರು ಆರಿಸಬೇಕೆಂದು ನಾವು ಹೇಳಬೇಕೇ? ಮತದಾರರು ತಿಳುವಳಿಕೆಯಿಂದ ನೋಡಿದರೆ ಎಲ್ಲವೂ ತಿಳಿಯುವುದು. ಕೈ ತಪ್ಪಿ ಹೋದ ಮೇಲೆ ಹಳಹಳಿಸಿದರೆ ಏನೂ ಆಗಲಾರದು. ಮುಂದಾಗಿ ಜಾಗೃತರಾಗಿರುವುದು ಜಾಣರ ಲಕ್ಷಣ. ಶ್ರೀನಿವಾಸರಾಯರಂಥ ಜನರು ಆರಿಸಿ ಬಂದರೆ, ಮತದಾರರ ಹಿತವು ಸಹಜ ಸಾಧ್ಯವಾಗುವುದು

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟಿ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತ ಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಲಾಡುವ ಹಲ್ಲುಗಳನ್ನು ಏನೂ ನೋವಾಗ ದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಕಳ್ಳಹಚ್ಚು ಹೊಸಹಲ್ಲು ಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸರಿಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.



ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣ ಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಶಿಕ್ಷಣದಿಂದ 3 ತಿಂಗಳು. ಫೀ [illegible] ವಿಶೇಷ ಮಾಹಿತಿ ಸಮಕ್ಷ ಅಥವಾ ಪತ್ರದ್ವಾರಾ.

ಪತ್ತಾ:—ದಿ ಬಾಸ್ಕೇರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ನಂ. ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಬಾಗಲಕೋಟೆ —ಕನ್ನಡಿಗ

[ಅವರು ನಮ್ಮ ಕಡೆಗೆ ತಮ್ಮ ಜೀವನ ಚರಿತ್ರೆಯನ್ನು ಹಿಸಿ ಆರೆಂಟು ತಿಂಗಳುಗಳಾಗಿರುವವು. ಒಂದಿಲ್ಲೊಂದು ಕಾರಂದ ಅದನ್ನು ಮುದ್ರಿಸುವದಾಗಿಲ್ಲ. ಸಮಯ ದೊರೆತರೆ ಜೀವನ ಚರಿತ್ರವನ್ನು ಕನ್ನಡಿಗರಿಗೆ ಒಪ್ಪಿಸುವೆವು.]

—ಸಂ. ಕ.

ಪತ್ರಿಕಾ ವಿಚಾರ.

ಜಯ:— ಧಾರವಾಡ ಗೆಳೆಯರ ಗುಂಪಿನಿಂದ ಹೊರಡುವ ಪತ್ರಿಕೆಯು. ಇದರ ಇಷ್ಟೋದ್ದೇಶಗಳನ್ನು ಸಂಪಾದಕರು ಬರೆದಿದ್ದಾರೆ, "ಸ್ಪರ್ಧಾರ್ದವು ತನ್ನ ತಾನರಿತು ನಿಲ್ಲಲು ಹವಣಿಸಿದೆ. ಯಾರ ಆಸನವನ್ನು ಆಕ್ರಮಿಸುವ ಇಚ್ಛೆಯೂ ಅದಕ್ಕಿಲ್ಲ. ಮಾಡುವದು ಸ್ಪರ್ಧೆಯೂ ಅಲ್ಲ. ಸ್ಪರ್ಧೆಯಾದ ಹಾದಿಯು ಉಳಿದ ಪತ್ರಿಕೆಗಳಿಗಿಂತ ಬೇರೆ ಯಾದುದು. ಪ್ರಿ ಮನೊಂದೇ ಕ್ಕೆ ಜೊತೆಗಾರ. ಯಾವ ಲೇಖನವನ್ನು ಸಮಾಜದ ಸದ್ಯದ ಮನ್ನು ನುಲಕ್ಷಿಸಿ ಬರೆಯಬೇಕೆಂಬುದು ಅದರ ಉದ್ದೇಶ ಜದ ಸರ್ವಾಂಗೀಣವಾದ ವಿಚಾರವಾಗಬೇಕೆಂಬುದು ಅದರ ಮತ್ತು; ಜನರಲ್ಲಿ ಸಾರಾಸಾರ ವಿವೇಕ ಪ್ರವೃತ್ತಿಯನ್ನುಂಟು ಮಾಡಬೇಕೆಂಬುದು ಅದರ ಬಯಕೆ, ಏಳಿಗೆಯ ಮಾತಿನಲ್ಲಿ ಬರವ ಮಿರಬೇಕೆಂಬುದು ಅದರ ಇಚ್ಛೆ, ಸಮಾಜವೊಂದು ಗೆಳೆಯ ನಾಗಿ, ಅದರ ಶಾಂತಿ ಪುಷ್ಟಿ ತುಷ್ಟಿಗಳು ವೃದ್ಧಿಂಗತ ಗುವಂತೆ ಸ್ವಭಾವ ಶುದ್ಧಿಯನ್ನು ಮಾಡಲು ಹವಣಿಸುವ "ಅದರ ಗುರಿ" ಇದರಲ್ಲಿಯ ಲೇಖಗಳು ಹೊಸ ಸರಣಿ ದ ಬರೆಯಲ್ಪಟ್ಟಿವೆ. ಭಾಷೆಯು ನವೀನವಾಗಿದೆ. ವಿಷಯವಿವೇ ಯು ಹೃದಯಂಗಮವಾಗಿದೆ. ಕನ್ನಡಿಗನ ಅಧ್ಯಕರ್ತವ್ಯ ಶ್ರೀ ನ ಕೃತಿ. ಕನ್ನಡ ಭಾವಗೀತೆಯ ಮಾರ್ಗ ಇನ್ನೇ ಮೊದಲಾದ ಕನ್ನ ಎಲ್ಲವೂ ಓದಿ ಕಾಣ ಕನ್ನಡಿಗನು ತಿಳಿಸುತ್ತಾನೆ. ವಸಂತ ಮೊದಲಿನ ಪುಟ್ಟ ಕೋಗಿಲೆಯ ಹಾಡು ಇರುವುದು. ನ್ನ ಕನ್ನಡಿಗರೆಲ್ಲರೂ ಸಂಪು ಹಾಡಿ ಆನಂದ ಪಡಲೆಂದು ಮ.

ಭಾರ್ಗವ ಗರ್ವಭಂಗ:— ಇದೊಂದು ವಿದ್ಯಾರ್ಥಿಯು ನಾಟಕವು ನಾಟಕದ ಕಥಾವಸ್ತುವು ಪುರಾಣದಿಂದ ಉದ್ಧೃತ ಮದುದು. ಶ್ರೀ ರಾಮನು ಪ್ರಸ, ಪರಶುರಾಮನನ್ನು ಸೋಲಿಸಿ ಗರ್ವಹರಣವನ್ನು ಮಾಡಿದುದೇ ವಿಷಯವು. ಪರಶುರಾ ಪರಾಜಯದ ಅರ್ಥವನ್ನು ಹೇಗೆ ಬರೆದಿದೆ. "ಮಹಾಪರಾ ಕ್ರಮಿಯಾದ ಭಾರ್ಗವನು ಶ್ರೀರಾಮಚಂದ್ರನಿಂದ ಜಿತನಾದ ತಕ್ಕೆ ಭಾರ್ಗವನಿಗೆ ಅದು ಪರಿಭವವೆಂಬಣಿಕೆಯಾಗಲಿಲ್ಲ. ಮ ನಂದವೇ ಆಯಿತು. ತತ್ವವಿದರು ಅಹಂಭಾವವು ಆತ್ಮಜ್ಞಾನ ಪ್ರತಿಬಂಧಕವೆಂದೂ, ಪರಮಾತ್ಮನ ಸನ್ನಿಧಿಯಲ್ಲಿ ಗರ್ವವು ಪ್ರೇಮವು ಉಕ್ಕಿ ಆತ್ಮೀಯಭಾವವು ತಲೆದೋರಿದುದರಿಂದ ಆನಂದವನ್ನು ಪಡೆಯಲಾಯಿತೆಂದೂ ತೇಜೋಮಂಡಲದಲ್ಲಿ ಅವು ಅಡಕವಾಗಿರುವಂತೆ ಪ್ರತಾಪಾಧಿಕ್ಯಕ್ಕೆ ವಿಧೇಯತೆಯು ತೋರಿತೆಂದೂ ಭಾವಿಸುವರು. ಸಾಮಾನ್ಯರಿಗೆ ಮಾತ್ರ ಗನು ಬಾಲಮಾತ್ರನಾದ ರಾಮನಿಂದ ಪರಾಜಿತನಾದ ಕಾಣುವುದು" ಭಾಷೆಯು ಸರಳವಾಗಿ, ಲಲಿತವಾಗಿಯೂ ಢವಾಗಿಯೂ ಇರುವುದು. ಅಲ್ಲಲ್ಲಿ ಉಕ್ಕುಕ್ಕಿ ಬರುವುದು ಚಿಕ್ಕ ಳಿಗೆ ತಕ್ಕ ನಾಟಕವಿದು. ಸನ್ಮಾರ್ಗದರ್ಶಿಯ ಕಾಣಿಕೆಯ ವಿದು. ಬೇಕಾದವರು ಮಾತೃಮಂದಿರ ನಂಜನಗೂಡಿ ಪಡೆಯಬಹುದು.

"ರಾಷ್ಟ್ರೀಯ ಶಾಲೆಗಳಲ್ಲಿ ಅಳಿದು ಹೋದವು; ಇದ್ದ ಅಷ್ಟೊಂದು ಇಲ್ಲೊಂದು; ಹುಡುಗರ ಸಂಖ್ಯೆಯಾದರೂ ತೀರ ಕಮ್ಮಿ. ಶಿಕ್ಷಕರಾದರೂ ಶಾಲೆಗಳನ್ನು ತೊರೆದು, ಜೀವನಕ್ಕೆ ತೆರಳಿದ್ದಾರೆ. ಅಸಹಕಾರದ ಚಳುವಳಿಕೆಯು ಸತ್ವಹೀನವಾಗಿದೆ. ರಲ್ಲಿ ತಡೆದು ನಿಲ್ಲುವ ತ್ರಾಣವಿಲ್ಲ. ಹೀಗಿರಲು ಸ್ವಲ್ಪ ಹುಡುಗರಿಗಾಗಿ ರಾಷ್ಟ್ರೀಯ ಶಾಲೆಗಳನ್ನು ಏಕೆ ಇಡಬೇಕು! ವ್ಯಕ್ತಿಗಳ ಸಲುವಾಗಿ ಏಕೆ ವ್ಯರ್ಥವಾಗಿ ಹಣ ವೆಚ್ಚ ಮಾಡಬೇಕೆ ಎನ್ನುತ್ತೀ ಜನರು ಮಹಾತ್ಮರಿಗೆ ಕೇಳುತ್ತಲಿರುವರು. ಮಹಾತ್ಮರು "ಯಂಗ ಇಂಡಿಯಾ" ಪತ್ರಿಕೆಯಲ್ಲಿ ಅವರಿಗೆ ಹೀಗೆ ಉತ್ತರ ಹೇಳಿದ್ದಾರೆ. ಸ್ವಾತಂತ್ರ್ಯ ಪ್ರೇಮಿಗೆ ಸ್ವತಂತ್ರ ಸಂಸ್ಥೆ ಬೇಕು. ಕೆಲವು ಧರ್ಮಕೃತ್ಯಗಳು ಕುಮಾರಿಯರಿಂದಲೇ ಜರುಗತಕ್ಕವುಗಳಿರುವವು. ಕುಮಾರಿಯರು ಸಿಕ್ಕಲಿಲ್ಲವೆಂದರೆ ಉಳಿದವರಿಂದ ಆ ಕಾರ್ಯಗಳನ್ನು ಮಾಡಿಸಲು ಬರುವದಿಲ್ಲ. ಒಬ್ಬ ಕುಮಾರಿಯು ದೊರೆತರೂ ಕಾರ್ಯವು ಸಾಗುವದು. ಅದರಂತೆಯೇ ಒಂದು ಉತ್ಕೃಷ್ಟವಾದ ಸ್ವತಂತ್ರ ಶಾಲೆಯು ಹುಡುಗರ ಸಹಕಾರದಿಂದ ಇರಲಿ—ಕೆಲಸವು ನಡೆಯುವುದು. ಇಂತಹ ಶಾಲೆಗಳು ಸ್ವಾತಂತ್ರ್ಯ ತೃಷ್ಣಾಪೀಡಿತರಿಗೆ ಜಲವಸತಿಗಳಿದ್ದಂತೆ. ಇಂತಹ ಶಾಲೆಗಳಿಗೆ ಹಣವನ್ನು ಕೊಟ್ಟು ಪೋಷಿಸುವುದು ಶ್ರೀಮಂತರ ಕರ್ತವ್ಯವು. ಕೆಲವು ಶಿಕ್ಷಕರು ಆತ್ಮಾರ್ಪಣಬುದ್ಧಿಯಿಂದ ಉದ್ಧ್ಯೇಯಾಭಿನಿವೇಶವುಳ್ಳವರಾಗಿ ಮನವಿಟ್ಟು ಕಾರ್ಯಮಾಡಿದರೆ ಶಾಲೆಗಳು ಊರ್ಜಿತ ಸ್ಥಿತಿಯನ್ನು ಪಡೆಯುವವು. ಶಿಕ್ಷಕರ ಕಾರ್ಯವು ಎಷ್ಟು ಜವಾಬ್ದಾರಿಯುಳ್ಳದೊ ಅಷ್ಟೇ ಜವಾಬ್ದಾರಿಯುಳ್ಳದು ಶಿಷ್ಯರದಿರುತ್ತದೆ. ಹುಡುಗರಲ್ಲಿದ್ದ ಗುಣಗಳನ್ನೇ ಹೊರಗೆ ತಂದು ಬೆಳಿಸುವುದು ಶಿಕ್ಷಕರ ಕರ್ತವ್ಯವು. ಹುಡುಗರ ತ್ಯಾಗಬುದ್ಧಿ, ಜನಸೇವಾಪರಾಯಣತೆ ನಿರಹಂಕಾರ ಉದ್ಯೋಗಶೀಲತೆ; ಸ್ವಾತಂತ್ರ್ಯಪ್ರೀತಿ ಮೊದಲಾದವುಗಳಿದ್ದರೆ ಅವು ರಾಷ್ಟ್ರೀಯ ಶಾಲೆಗಳಲ್ಲಿ ವಿಕಾಸಹೊಂದಿ ಲೋಕೋಪಕಾರಕ್ಕೆ ಪರಿಣತವಾಗುವವು. ಇಂತಹ ಹುಡುಗರು ಸ್ವತಂತ್ರ ವಾತಾವರಣದಲ್ಲಿ ಬೆಳೆದರೆಂದರೆ ಆದರ್ಶಪ್ರಾಯರಾಗುವರು. ಉಳಿದವರನ್ನೆ ತಮ್ಮ ಉಚ್ಚನೀತಿ, ಸುಶೀಲತೆ ಮೊದಲಾದವುಗಳಿಂದ ತಮ್ಮ ಕಡೆಗೆ ಎಳೆದುಕೊಳ್ಳುವರು. ಜನರ ಒಲುಮೆಯು ಯಾವಾಗಲೂ ಒಳ್ಳೆಯದರ ಕಡೆಗೆ ಇರುವುದು. ಒಳ್ಳೆಯವ ಸಂಸ್ಥೆಯು ದೊರೆಯಿತೆಂದರೆ, ಜನರು ಆ ಸಂಸ್ಥೆಗೆ ತಮ್ಮ ಹುಡುಗನನ್ನು ಕಳುಹಿಸುವರು. ಒಂದಕ್ಕೆ ನೂರು ಹುಡುಗರು ಆಗುವರು. ಹೀಗೆ ಸಂಸ್ಥೆಯು ಬೆಳ್ಳಿಹೋದಿ. ಸಮಾಜದ ಆಧಾರವಾಗುವುದು. ಆದರಿಂದ ನಾಡಿನ ಸೀರೇರುವುದು.'

ಇದೇ ವಾರದ **ಕರ್ನಾಟಕ ಟಾಯಿಮ್ಸ** ಪತ್ರಿಕೆಯಲ್ಲಿ **ರಾಟಿಯ** ಮಹಾತ್ಮ್ಯವು ಕೊಂಡಾಡಲ್ಪಟ್ಟಿದೆ. ರಾಟಿಯು ಬಡವರಿಗ್ಗರ **ಕಾಮಧೇನು** ವೆಂದಾದರೂ ಆ ಪತ್ರಿಕೆಯು ಹೊಗಳಿದೆ. ಆದರೆ ಬ್ರಾಹ್ಮಣೇತರರ ಮುಖಂಡರು ರಾಟಿಯಬಗ್ಗೆ ಇನ್ನೂ ಆದರವನ್ನೇ ತೋರಿಸುತ್ತಲಿದ್ದಾರೆ ಬ್ರಾಹ್ಮಣೇತರರ ಮುಖಂಡರು ಎಲ್ಲರ ಹಿತವನ್ನೆ ಸಗಲು ಸಿದ್ಧರಾಗಿದ್ದಾರೆ. ತಮ್ಮ ಚಳವಳಿಯು ಮಹಾತ್ಮಾಗಾಂಧಿಯವರ ಚಳವಳಿಗಿಂತಲೂ ಒಂದು ಹೆಜ್ಜೆ ಮುಂದುವರಿದಿದೆಯೆಂದು ಹೇಳಿಕೊಳ್ಳುತಲಿದ್ದಾರೆ ಹೀಗಿದ್ದು ರಾಟಿಯು ಹೊರಡಿಸಿದ ಬಟ್ಟೆಗಳನ್ನು ಧರಿಸಲು ಏಕೆ ಸಿದ್ಧರಿರುವದಿಲ್ಲ? ಲೋಕಲ್ ಬೋರ್ಡ, ಮುನಸಿಪಾಲ್ಟಿ, ಕೌನ್ಸಿಲ್ ಮೊದಲಾದ ಸ್ಥಾನಗಳಲ್ಲಿ ಬ್ರಾಹ್ಮಣೇತರರು ದೊಡ್ಡ ದೊಡ್ಡ ಅಧಿಕಾರಗಳನ್ನು ಪಡೆದವರಾಗಿದ್ದಾರೆ. ಇವರು ಕೇವಲ ವಿಲಾಯತಿಯಿಂದ ಬಂದ ಅರಿವೆಗಳನ್ನೇ ಧರಿಸುತ್ತಾರೆ ... ದರಲ್ಲಿಯೇ ತಮ್ಮ ...



ಶೀತ. ಶುದ್ಧ ೧ ಶಕೆ ೧೮೪೮

...y service, please go for the welknown
... Decccan
...specially Chevrolet, Ford, Dodge and Overland
...ally thewellknown Michelin products
... etc,
... repairs in Vulcansing by a specalist to give
...ypes by workers onin uptodate line

Sub dealers
Chevro
... the Bijapur

...ಭವು.

...ಪ್ರಸಿದ್ಧ ಶೆವ್ರೊಲೇಟ ಗಾಡಿ ಮತ್ತು ... ವ ಸಾಮಾ...
...ವಾಗಿ ಶೆವ್ರೊಲೆಟ ಡಾಜ, ಫೋರ್ಡ, ಪೋರ್ಡಲೆಂಡ ಗಾಡಿಯ
...ಮುಖ್ಯವಾಗಿ ಮಿಚೆಲಿನ ...
... ಖರೀದಿಗಾಗಿ,

... ಸುಪ್ರಸಿದ್ಧ,

ವಿಜಾಪೂರ ಜಿಲ್ಲೆಯಲ್ಲಿ
ಮೋಟಾರುಗಳಿಗೆ ಸಬ ಏಜಂಟರು.

ಶ್ರೀ ಜಿ. ಎಸ್. **ವೆಲಿಂಗರವರು** ಕಳೆದ ಮೇ ತಿಂಗಳಿನಲ್ಲಿ ಮುಂಬಯಿಯೊಳಗೆ ಮೃತಪಟ್ಟರೆಂದು ತಿಳಿಸಲು ನಮಗೆ ಬಹಳ ಖೇದವಾಗುತ್ತದೆ. ಇವರು ಶ್ರೀನಿವಾಸ ಮಹಾದೇವ ಎಂಬುವವರ ಮಕ್ಕಳು. ಇವರು ಪ್ರಸಿದ್ಧ ಭಾವಚಿತ್ರಕಾರರು. ಇವರ ತಂದೆಯವರಾದ ಶ್ರೀನಿವಾಸರವರು ೧೮೬೬ ರಲ್ಲಿ ಭಾವಚಿತ್ರ ಮಂದಿರವನ್ನು ಬೆಳಗಾವಿಯಲ್ಲಿ ಪ್ರಾರಂಭಿಸಿದರು. ನಮ್ಮ ಚರಿತ್ರನಾಯಕರು ೧೮೬೧ ರಲ್ಲಿ ಹುಟ್ಟಿದರು. ಇವರು ಚಿಕ್ಕವರಿರುವಾಗಲೇ- ಇವರಿಗೆ ೧೨ ವರ್ಷಗಳಿರುವಾಗಲೇ- ಭಾವಚಿತ್ರಕಲೆಯಲ್ಲಿ ಪ್ರವೃತ್ತರಾಗಿ, ಇವರು ಮಂದಿರದ ಕೆಲಸವನ್ನು ತಾವಾಗಿಯೇ ನೋಡಹತ್ತಿದರು. ಇವರು ತಮ್ಮ ಕೆಲಸವನ್ನು ಮನಮುಟ್ಟಿ ಮಾಡತೊಡಗಿದರು. ಮುಂದೆ ಹಿಂದುಸ್ಥಾನದಲ್ಲೆಲ್ಲ ಪ್ರವಾಸ ಬೆಳೆಯಿಸಿ, ಮುಖ್ಯ ಮುಖ್ಯ ನೋಟಗಳ ಮತ್ತು ಸ್ಥಳಗಳ ಚಿತ್ರವನ್ನು ತೆಗೆದುಕೊಂಡರು. ಭಾವಚಿತ್ರಕ್ಕೆ ಬೇಕಾಗುವ ಸಾಧನಗಳನ್ನು ಮಾಡುವದಕ್ಕೆ ಮುಂಬಯಿಯಲ್ಲಿ ೧೮೮೩ ನೇ ಇಸವಿಯೊಳಗೆ ಒಂದು ಅಂಗಡಿಯನ್ನು ತೆರೆದರು. ೧೯೦೧ ರಲ್ಲಿ ಬೆಂಗಳೂರಲ್ಲಿ ಅಂತಹದೇ ಒಂದು ಅಂಗಡಿಯನ್ನು ಸ್ಥಾಪಿಸಿದರು. ಕೊನೆಗೆ ೧೯೦೨ ರಲ್ಲಿ ಇವರು ಬೆಳಗಾವಿಯೊಳಗೆ "ವೆಲಿಂಗ ಕ್ಯಾಮೆರಾ ವರ್ಕ್ಸ" ಎಂಬ ಭಾವಚಿತ್ರ ತೆಗೆಯುವ ಯಂತ್ರಗಳನ್ನು ತಯಾರಿಸುವ ಕಾರಖಾನೆಯನ್ನು ಪ್ರಾರಂಭಿಸಿದರು. ಹಿಂದುಸ್ಥಾನದಲ್ಲಿ ಭಾವಚಿತ್ರದ ಯಂತ್ರ, ಭಾವಚಿತ್ರದ ಸಾಧನ ಸಾಮಗ್ರಿ ಇವೇ ಮೊದಲಾದವುಗಳನ್ನು ತಯಾರಿಸುವ ಮೊದಲನೇ ಶಾಲೆಯೆಂದರೆ ಇವರದೇ. ಇದು ಇವರಲ್ಲಿಯ ಸಾಹಸ್ಯತೆಯನ್ನೂ ಕುಶಲತೆಯನ್ನೂ ಚೆನ್ನಾಗಿ ವ್ಯಕ್ತ ಮಾಡುತ್ತದೆ. ಭಾವಚಿತ್ರದ ಯಂತ್ರಗಳು (Cameras) ಇಲ್ಲಿ ಸಿದ್ಧವಾಗುತ್ತವೆ, ಇಷ್ಟೇ ಅಲ್ಲ ಜೀರ್ಣವಾದ ಭಾವಚಿತ್ರದ ಯಂತ್ರಗಳ ದುರಸ್ತಿಯಾದರೂ ಇಲ್ಲಿ ಆಗುತ್ತದೆ. ದೇಶದಿಂದ ಬಂದ ಪ್ರಮುಖರೂ ಬೆಳಗಾವಿಗೆ ಬಂದೊಡನೆ, "ವೆಲಿಂಗ ಕ್ಯಾಮೆರಾ ವರ್ಕ್ಸ"ಗಳನ್ನು ನೋಡದೆ ಹೋಗುವದಿಲ್ಲ. ಅವರೆಲ್ಲರೂ ತಪ್ಪದೆ ಅವುಗಳನ್ನು ನೋಡಿಯೇ ಹೋಗುವರು. ಇಲ್ಲಿ ಕೆಲಸ ಮಾಡುವ ಕೂಲಿಕಾರರು ಹಿಂದುಗಳೇ ಇರುವರು. ಇವರು ಮಾಡುವ ಒಡವೆಗಳು ತೃಪ್ತಿಕರವಾಗಿರುವವೆಂದು ಎಲ್ಲರೂ ಸನಸುತ್ತ ಹೋಗುವರು. ಯುದ್ಧದ ಕಾಲದಲ್ಲಿ 'ಎಸ್ ಮಹಾದೇವ ಅಂಡ ಸನ್ಸ' ಅವರು ಸಿಲ್ವರ ನೈಟ್ರೇಟ, ಗೋಲ್ಡ ಕ್ಲೋರಾಯಿಡ್, ಮತ್ತು ಇತರ ಭಾವಚಿತ್ರಕ್ಕೆ ಬೇಕಾಗಿರುವ ಉಳಿದ ರಸಾಯನಗಳನ್ನೂ ಹೇರಳವಾಗಿ ಪೂರೈಸಿಕೊಟ್ಟರು. ಖಂಡಾಂತರದ (ಪರದೇಶದ) ಭಾವಚಿತ್ರಕಾರರು ಇವರಿಗೆ ಕರೆ ಕಳುಹಿಸಿದ್ದರಿಂದ, ತಮ್ಮ ಹಿರಿಯ ಮಕ್ಕಳೊಂದಿಗೆ ಯುರೋಪಕ್ಕೆ ಇವರು ಹೋಗುವವರಿದ್ದರು. ಇವರು ಇನ್ನೂ ಈ ಕೆಲಸದಲ್ಲಿ ಹೆಚ್ಚಿನ ತಿದ್ದುಪಡೆಯನ್ನು ಮಾಡಬೇಕೆಂದಿದ್ದರು. ತಾನೊಂದೆಣಿಸಿದರೆ ದೈವವೊಂದೆಣಿಸಿತೆಂಬಂತೆ ಆಗಿ ಹೋಯಿತು. ಇವರ ಇಹಲೋಕದ ಯಾತ್ರೆಯೇ ಮುಗಿಯಿತು. ಇವರ ಎಣಿಕೆಗಳೆಲ್ಲ ಬರಿಯವಾದವು. ಇವರ ಮರಣದಿಂದ ಕರ್ನಾಟಕಕ್ಕೂ ಹಿಂದುಸ್ಥಾನಕ್ಕೂ ತುಂಬಲಾರದ ಹಾನಿಯಾಗಿದೆ. ಇವರು ತಮ್ಮ ಪ್ರಯತ್ನಗಳಿಂದಲೇ ಮುಂದೆ ಬಂದವರು. ಕಲಾಭಿವೃದ್ಧಿಯನ್ನು ಮಾಡಿದವರು ನೂತನ ಮಾರ್ಗವನ್ನನುಸರಿಸಿದವರು. ಇಂತಹ ಪ್ರತಿಭಾವಂತರಾದ ಕಲಾಕುಶಲರು ಮತ್ತೊಂದು ಉದಯಕ್ಕೆ ಬರುವರೋ ದೇವರೇ ಬಲ್ಲ. ಇವರಿಗೆ ಇಬ್ಬರು ಗಂಡು ಮಕ್ಕಳೂ, ನಾಲ್ಕು ಹೆಣ್ಣುಮಕ್ಕಳೂ ಇರುವರು. ಅವರಿಗೆಲ್ಲ ಆದ ದುಃಖದಲ್ಲಿ ನಾವೆಲ್ಲರೂ ಸಮಭಾಗಿಗಳಾಗಿದ್ದೇವೆ. ದೇವರು ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ!!

[ಅವರು ನಮ್ಮ ಕಡೆಗೆ ತಮ್ಮ ಜೀವನ ಚರಿತ್ರೆಯನ್ನು ಕಳುಹಿಸಿ ಎರಡು ತಿಂಗಳುಗಳಾಗಿರುವವು. ಒಂದಿಲ್ಲೊಂದು ಕಾರಣದಿಂದ ಅದನ್ನು ಮುದ್ರಿಸುವದಾಗಿಲ್ಲ. ಸಮಯ ದೊರೆತರೆ ಅವರ ಜೀವನ ಚರಿತ್ರವನ್ನು ಕನ್ನಡಿಗರಿಗೆ ಒಪ್ಪಿಸುವೆವು.]

—ಸಂ. ಕ

ಸಾಹಿತ್ಯ ವಿಚಾರ.

ಸ್ವಧರ್ಮ:- ಧಾರವಾಡ ಗೆಳೆಯರ ಗುಂಪಿನಿಂದ ಹೊರಡುವ ಮಾಸಪತ್ರಿಕೆಯು. ಇದರ ಉದ್ದೇಶಗಳನ್ನು ಸಂಪಾದಕರು ಹೀಗೆ ಒರೆದಿದ್ದಾರೆ; "ಸ್ವಧರ್ಮವು ತನ್ನ ತಾನರಿತು ಬಿಲ್ಲು ಹದಗೊಳಿಸುತ್ತಿದೆ. ಯಾರ ಹಗೆತನವನ್ನು ಆಕ್ರಮಿಸುವ ಇಚ್ಛೆಯೂ ಅದಕ್ಕಿಲ್ಲ. ಹಾಗೆ ಮಾಡುವದು ಸ್ವಧರ್ಮವೂ ಅಲ್ಲ. ಸ್ವಧರ್ಮದ ಹಾದಿಯು ಉಳಿದ ಪತ್ರಿಕೆಗಳಿಗಿಂತ ಬೇರೆಯಾದುದು. ಪ್ರೇಮವೊಂದೇ ಇದಕ್ಕೆ ಜೊತೆಗಾರ. ಯಾವ ಲೇಖನವನ್ನೂ ಸಮಾಜದ ಸದ್ಯದ ಸ್ಥಿತಿಯನ್ನು ಲಕ್ಷಿಸಿ ಬರೆಯಬೇಕೆಂಬುದು ಅದರ ಉದ್ದೇಶ. ಸಮಾಜದ ಸರ್ವಾಂಗೀಣವಾದ ವಿಚಾರವಾಗಬೇಕೆಂಬುದು ಅದರ ಪ್ರಯತ್ನ; ಜನರಲ್ಲಿ ಸಾರಾಸಾರ ವಿವೇಕ ಪ್ರವೃತ್ತಿಯನ್ನುಂಟು ಮಾಡಬೇಕೆಂಬುದು ಅದರ ಬಯಕೆ; ಬಳಕೆಯ ಮಾತಿನಲ್ಲಿ ಬರವಣಿಗೆಯಿರಬೇಕೆಂಬುದು ಅದರ ಇಚ್ಛೆ; **ಸಮಾಜವೊಂದು ಗೆಳೆಯರ ಗುಂಪಾಗಿ, ಅದರ ಶಾಂತಿ ಪುಷ್ಟಿ ತುಷ್ಟಿಗಳು ವೃದ್ಧಿಂಗತವಾಗುವಂತೆ ಸ್ವಭಾವ ಶುದ್ಧಿಯನ್ನು ಮಾಡಲು ಹವಣಿಸುವದೇ ಅದರ ಗುರಿ.**" ಇದರಲ್ಲಿಯ ಲೇಖಗಳು ಹೊಸ ಸರಣಿಯಿಂದ ಬರೆಯಲ್ಪಟ್ಟಿವೆ. ಭಾಷೆಯು ನವೀನವಾಗಿದೆ. ವಿಷಯವಿವೇಚನೆಯು ಹೃದಯಂಗಮವಾಗಿದೆ. ಕನ್ನಡಿಗನ ಅಧ್ಯಕರ್ತವ್ಯ, ಶ್ರೀ ಬಸವೇಶ್ವರ. ಕನ್ನಡ ಭಾವಗೀತೆಯ ಮಾರ್ಗ ಇವೇ ಮೊದಲಾದವುಗಳನ್ನು ಎಲ್ಲರೂ ಓದಬೇಕಾಗಿ ಕನ್ನಡಿಗನು ತಿಳಿಸುತ್ತಾನೆ. ಸ್ವಧರ್ಮದ ಮೊದಲಿನ ಪುಟಕ್ಕೆ ಕೋಗಿಲೆಯ ಹಾಡು ಇರುವದು. ಅದನ್ನು ಕನ್ನಡಿಗರೆಲ್ಲರೂ ಸವಿದು ಹಾಡಿ ಆನಂದ ಪಡಬೇಕೆಂದು ಬಿನ್ನಹ.

ಭಾರ್ಗವ ಗರ್ವಭಂಗ:— ಇದೊಂದು ವಿದ್ಯಾರ್ಥಿಯು ಬರೆದ ನಾಟಕವು. ನಾಟಕದ ಕಥಾವಸ್ತುವು ಪುರಾಣದಿಂದ ಉದ್ಧೃತವಾದುದು. ಶ್ರೀ ರಾಮಚಂದ್ರನು ಪರಶುರಾಮನನ್ನು ಸೋಲಿಸಿ ಅವನ ಗರ್ವಹರಣವನ್ನು ಮಾಡಿದುದೇ ವಿಷಯವು. ಪರಶುರಾಮನ ಪರಾಜಯದ ಅರ್ಥವನ್ನು ಹೀಗೆ ಬರೆದಿದೆ. "ಮಹಾಪರಾಕ್ರಮಿಯಾದ ಭಾರ್ಗವನು ಶ್ರೀರಾಮಚಂದ್ರನಿಂದ ಜಿತನಾದ ಮಾತ್ರಕ್ಕೆ ಭಾರ್ಗವನಿಗೆ ಅದು ಪರಿಭವವೆಂದೆಣಿಕೆಯಾಗಲಿಲ್ಲ. ಮಹದಾನಂದವೇ ಆಯಿತು. ತತ್ವವಿದರು ಅಹಂಭಾವವು ಆತ್ಮಜ್ಞಾನದಿಂದ ಜಯಿಸಲ್ಪಟ್ಟಿತೆಂದೂ, ಪರಮಾತ್ಮನ ಸನ್ಮುಖದಲ್ಲಿ ಗರ್ವವು ತಗ್ಗಿ, ಪ್ರೇಮವು ಉಕ್ಕಿ ಆತ್ಮೀಯಭಾವವು ತಲೆದೋರಿದುದರಿಂದ ಪರತರಾನಂದವನ್ನು ಪಡೆಯಲಾಯಿತೆಂದೂ ತೇಜೋಮಂಡಲದಲ್ಲಿ ಕಿರಣವು ಅಡಕವಾಗಿರುವಂತೆ ಪ್ರತಾಪಾಧಿಕ್ಯಕ್ಕೆ ವಿಧೇಯತೆಯು ತೋರ್ಪಟ್ಟಿತೆಂದೂ ಭಾವಿಸುವರು. ಸಾಮಾನ್ಯರಿಗೆ ಮಾತ್ರ ಭಾರ್ಗವನು ಬಾಲಮಾತ್ರನಾದ ರಾಮನಿಂದ ಪರಾಜಿತನಾದನೆಂದು ತೋರುವದು" ಭಾಷೆಯು ಸರಳವಾಗಿ, ಲಲಿತವಾಗಿಯೂ ತಿಳಿಯಾಗಿಯೂ ಇರುವದು. ಅಲ್ಲಲ್ಲಿ ಉಕ್ಕುಕ್ಕಿ ಬರುವದು. ಚಿಕ್ಕ ಬಾಲಕರಿಗೆ ತಕ್ಕ ನಾಟಕವಿದು. ಸನ್ಮಾರ್ಗದರ್ಶಿಯ ಕಾಣಿಕೆಯ ಪುಸ್ತಕವಿದು. ಬೇಕಾದವರು ಸಾಹಿತ್ಯಮಂದಿರ ಸಂಜನಗೂಡಿನಿಂದ ಪಡೆಯಬಹುದು.

ವಿಜಾಪೂರ ಜಿಲ್ಲೆಯ ಮತದಾರರಿಗೆ

ಪ್ರಿಯ ಬಂಧುಗಳೇ

ನಾನು ಬರುವ ಕೌನ್ಸಿಲ್ ಚುನಾವಣೆಯಲ್ಲಿ ವಿಜಾಪೂರ ಜಿಲ್ಲೆಯ ಪರವಾಗಿ ಉಮೇದವಾರನಾಗಿ ನಿಂತಿದ್ದೇನೆ. ಕಳೆದ ಮೂವತ್ತು ವರುಷಗಳ ವರೆಗೆ ನಾನು ಮಾಡಿದ ದೇಶಸೇವೆಯು ಮತ್ತು ಈ ಜಿಲ್ಲೆಯ ಬಗ್ಗೆ ವಿಶೇಷವಾಗಿ ಮಾಡಿದ ಕಾರ್ಯಗಳು ತಮ್ಮ ಎದುರಿಗೆ ಇವೆ. ಅವುಗಳನ್ನು ನಾನು ಬಾಯಿಂದ ವರ್ಣಿಸುವ ಕಾರಣವಿಲ್ಲ. ನನ್ನ ಮುಂದಿನ ವರ್ತನದಬಗ್ಗೆ ಮತ್ತು ತಮ್ಮ ಎಲ್ಲರ ನಿಜವಾದ ಹಿತ ಸಂರಕ್ಷಣೆ ನನ್ನಿಂದ ಆದೀತು ಎಂಬುದರ ಬಗ್ಗೆ ನಾನು ಈ ವರೆಗೆ ಮಾಡಿದದೇಶ ಸೇವೆಯೇ ಸಾಕ್ಷಿ. ನಾನು ಆರಿಸಿ ಬಂದರೆ ಕೌನ್ಸಿಲದಲ್ಲಿ ಹೋಗಿ ಏನೇನು ಮಾಡುವೆನು ಎಂಬುದರ ತಪಶೀಲು ಕೊಡುವದು ಈಗ ಸಾಧ್ಯವಿಲ್ಲ.

ಆದರೆ ರೈತರ ಪಕ್ಷ ಮತ್ತು ಹಿತಗಳ ಸಂರಕ್ಷಣೆಗಾಗಿ ಹೋರಾಡುವ ಒಬ್ಬ ಸ್ವಾರ್ಥರಹಿತ ಭಯರಹಿತ ಮತ್ತು ಏಕನಿಷ್ಠನಾದ ಸೇವಕನನ್ನು ನನ್ನಲ್ಲಿ ತಾವು ನಿಸ್ಸಂದೇಹವಾಗಿ ಕಾಣುವಿರೆಂದುಹೇಳಬಿಚ್ಛಿಸುತ್ತೇನೆ.

ಮೇಲ್ಮಟ್ಟದ ರಾಜಕಾರಣದಲ್ಲಿ, ರಾಷ್ಟ್ರೀಯ ಸಭೆಯ ಧೋರಣವನ್ನು ಅನುಸರಿಸುತ್ತಲೇ ಕರ್ನಾಟಕದ ಸಾಂಸ್ಕೃತಿಕ ಮತ್ತುರಾಜಕೀಯ ಏಕೀಕರಣ ವಿಷಯಕ್ಕೆ ಮನಸ್ಸುಟ್ಟಿ ಪ್ರಯತ್ನಿಸುವೆನು. ಮೇಲಾಗಿ, ಶಿಕ್ಷಣವನ್ನು ಸಾರ್ವತ್ರಿಕ ಮಾಡುವದರಲ್ಲಿ ಮದ್ಯಪಾನದ ವ್ಯಸನವನ್ನು ಹೋಗಲಾಡಿಸುವದರಲ್ಲಿ, ಅಸ್ಪೃಶ್ಯತೆಯನ್ನು ಅಳ್ಳಗಳಿಸುವದರಲ್ಲಿ ಸ್ವದೇಶಿಯನ್ನು ವಿಶೇಷತಃ ಖಾದಿಯನ್ನು ಉತ್ತೇಜಿಸುವದರಲ್ಲಿ ಮತ್ತು ನಮ್ಮ ಜಿಲ್ಲೆಯನ್ನು ಆಗಾಗ್ಗೆ ಕಾಡುತ್ತಿರುವ ದುರ್ಭಿಕ್ಷೆಯನ್ನು ಪ್ರತಿಬಂಧಿಸುವದರಲ್ಲಿ ನನ್ನ ಬುದ್ಧಿ ಸರ್ವಸ್ವವನ್ನೆಲ್ಲ ಉಪಯೋಗಿಸಿ ಕೆಲಸ ಮಾಡುವೆನು.

ಇವೆಲ್ಲ ತಮ್ಮ ಸಹಾನುಭೂತಿ, ಬೆಂಬಲ, ಮತ್ತು ಸಹಕಾರದಿಂದಲೇ ನೆರವೇರಿಸುವೆನು.

ಮೇಲಿನ ವಿಜ್ಞಪ್ತಿಯನ್ನು ತಾವು ಆಲೋಚಿಸಿ ದೇಶ ಹಿತ ದೃಷ್ಟಿಯಿಂದಲೇ ಮನವಲಿತವರಾಗಿ ತಮ್ಮ ಮತವನ್ನು ನನಗೆ ನನ್ನಿಂದ ಅನತಕ್ಕ ದೇಶಕಾರ್ಯದಲ್ಲಿ ಭಾಗಿಗಳಾಗಿ ತದ್ವಾರಾ ನನ್ನನ್ನು ಉಪಕೃತನನ್ನಾಗಿ ಮಾಡುವಿರೆಂದು ಕೋರುವ

ತಮ್ಮ ವಿಧೇಯ

ಕೌಜಲಗಿ ಶ್ರೀನಿವಾಸರಾವ

ಮೈಸೂರ ಕರ್ನಾಟಕಸ್ಥರಿಗೆ ಬಿನ್ನಹ.

ಕರ್ನಾಟಕ ಪ್ರಾಂತಿಕ ಮಂಡಲವು ಬರುವ ಆಗಸ್ಟ ತಿಂಗಳ ಕೊನೆಯ ಒಳಗಾಗಿಯೇ ರಾಷ್ಟ್ರೀಯ ಸಭೆಗೆ ಇಪ್ಪತ್ತು ಸಾವಿರ ಸಭಾಸದರನ್ನು ಕೂಡಿಸಬೇಕೆಂದು ನಿಶ್ಚಯಿಸಿದೆ ಪ್ರಾಂತಿಕ ಮಂಡಲದವರು ಮೈಸೂರ ಪ್ರತಿಯೊಂದು ಜಿಲ್ಲೆಗೆ ಅಲ್ಲಿಯ ಕೆಲ ನಗಾರರ ಉತ್ಸುಕತೆಯನ್ನು ಕಂಡು ಸ್ವತಂತ್ರತೆಯನ್ನು ಕೊಟ್ಟಿದ್ದಾರೆ. ತಮಗೆ ಒಪ್ಪಿಸಿದ ಕಾರ್ಯವನ್ನು ಭರದಿಂದ ನೆರವೇರಿಸಿ ಮಂಡಲದವರ ವಿಶ್ವಾಸಕ್ಕೆ ಪಾತ್ರರಿದ್ದೇವೆಂದು ಸಿದ್ಧ ಪಡಿಸುವ ಭಾರವು ಈಗ ತಮ್ಮದೇ ಇದೆ.

ರಾಜಕಾರಣದಲ್ಲಿ ತಮ್ಮ ಕಡೆಯಿಂದ ಸಹಾಯವನ್ನು ಪ್ರಾಂತಿಕ ಮಂಡಲದವರು ಅಪೇಕ್ಷಿಸುವದಿಲ್ಲ. ರಾಟಿ, ಎಲ್ಲ ಜನಾಂಗಗಳಲ್ಲಿ ಐಕ್ಯ, ಅಸ್ಪೃಶ್ಯೋದ್ಧಾರ, ಮದ್ಯ ಸೇವನಕ್ಕೆ ಪ್ರತಿಬಂಧ ಇವೇ ಮೊದಲಾದ ವಿಧಾಯಕ ಕಾರ್ಯಕ್ರಮವನ್ನು ನೆರವೇರಿಸುವದು ತಮ್ಮ ಕೆಲಸವಾಗಿದೆ. ರಾಟಿಗೆ ನಿಮ್ಮ ಸಂಸ್ಥಾನದಲ್ಲಿ ಈ ಮೊದಲೇ ಸ್ಥಾನವು ದೊರಿತಿದೆ. ಹಿಂದು ಮುಸಲ್ಮಾನರ ಐಕ್ಯ ವಿಷಯದಲ್ಲಿ ಮೈಸೂರು ಸರಕಾರದವರು ಭಿನ್ನ ಅಭಿಪ್ರಾಯ ಪಡುವದಕ್ಕೆ ಕಾರಣವಿಲ್ಲ. ಪ್ರಜೆಗಳಿಗೆ ಹಿತಕರವಾದ ಮದ್ಯ ಸೇವನಕ್ಕೆ ಪ್ರತಿಬಂಧವು, ಪ್ರಜಾಹಿತದಕ್ಷರಾದ ಮೈಸೂರೊಡೆಯರಿಗೆ ಬೇಡಾಗುವದು ಹೇಗೆ? ಯಾವ ಬಗೆಯಿಂದಲೂ ರಾಷ್ಟ್ರಸಭೆಯ ಸಭಾಸದರಾಗಲಿಕ್ಕೆ ತಾವು ಹೆದರುವ ಕಾರಣವಿಲ್ಲ.

ಸಂಸ್ಥಾನಿಕರ ಆಳಿಕೆಗೆ ಒಳಪಟ್ಟಂಥ ಪ್ರಜೆಗಳ ಹಿತದ ಕಡೆಗೆ ಲಕ್ಷ್ಯ ಕೊಡಬೇಕೆಂದು ತಾವು ರಾಷ್ಟ್ರೀಯ ಸಭೆಗೆ ಕೇಳಿದ್ದು ತಮ್ಮ ಪ್ರಾಗತಿಕತ್ವವನ್ನು ವ್ಯಕ್ತ ಪಡಿಸುತ್ತದೆ. ಅದರಂತೆ ಕರ್ನಾಟಕದವರು ನಿಖಿಲ ರಾಷ್ಟ್ರೀಯ ಸಭಾ ಮಂಡಲಕ್ಕೆ ತಮ್ಮ ಅಭಿಪ್ರಾಯವನ್ನು ತಿಳಿಸಿ, ಆ ಬಗೆಯಾಗಿ ಘಟನೆಯಲ್ಲಿ ತಿದ್ದುಪಡೆ ಮಾಡುವದಕ್ಕೆ ಕೇಳಿಕೊಂಡಿದ್ದಾರೆ. ತಾವು ಜಾಗೃತರಾಗಿ ಒಳ್ಳೇ ಕಸುವಿನಿಂದ ಕಾರ್ಯ ಮಾಡಿ ರಾಷ್ಟ್ರ ಸಭೆಗೆ ಹೆಚ್ಚು ಸಭಾಸದರನ್ನು ಕೂಡಿಸುವಿರೆಂದು ಕರ್ನಾಟಕ ಪ್ರಾಂತಿಕ ಮಂಡಲದವರ ಪೂರ್ಣ ವಿಶ್ವಾಸವಿದೆ.

ನೂಲುವದಕ್ಕೆ ಅವಕಾಶ ಅಥವಾ ಇಚ್ಛೆ ಇಲ್ಲದವರಿಗೆ ನಾಲ್ಕಾಣೆ ಕೊಟ್ಟು ಧ್ಯೇಯಕ್ಕೆ ಒಪ್ಪಿಕೊಂಡು ಸಭಾಸದರಾಗಲಿಕ್ಕೆ ಬರುವದು.

ಇಡೀಕರ್ನಾಟಕದ ಒಂದು ಮುಖ್ಯಾಂಶದಷ್ಟು ನಾಡು ತಮ್ಮದು; ಸ್ವಾತಂತ್ರ್ಯ ಹೋರಾಟದಲ್ಲಿ ಬ್ರಿಟಿಶ ಕರ್ನಾಟಕದವರಂತೆ ತಾವಾದರೂ ಕಡುಗಲಿಗಳೆಂದು ಸಿದ್ಧ ಮಾಡುವದು ತಮ್ಮ ಕರ್ತವ್ಯವು ಆ ಕಾರಣ ಇನ್ನು ಮೇಲೆ ಕಾಲಹರಣ ಮಾಡದೆ ರಾಷ್ಟ್ರೀಯ ಕೆಲಸಕ್ಕೆ ಸನ್ನದ್ಧರಾಗುವಿರೆಂದು ನಂಬುವ

ತಮ್ಮ

ಕೌಜಲಗಿ ಶ್ರೀನಿವಾಸರಾವ

ಕರ್ನಾಟಕಸ್ಥರಿಗೆ ಬಿನ್ನಹ.

ಬಹು ಜನರು ಸಭಾಸದರಾಗುವದರಿಂದಲೇ ಗೌರವ ಉಂಟಾಗುವದೆಂಬ ಮಾತು ತಮ್ಮೆಲ್ಲರಿಗೂ ತಿಳಿದದ್ದು ಆಗಿದೆ. ಆದ್ದರಿಂದಲೇ ರಾಷ್ಟ್ರಸಭೆಯು ೧೯೨೧ ನೇ ಇಸ್ವಿಯಲ್ಲಿ ಒಂದು ಕೋಟಿ ಜನ ಸಭಾಸದರನ್ನು ಕೂಡಿಸಬೇಕೆಂದು ಗೊತ್ತು ಮಾಡಿಕೊಂಡಿತ್ತು. ಆ ವಿಷಯದಲ್ಲಿ ಕೆಲವಟ್ಟಿಗಾದರೂ ರಾಷ್ಟ್ರ ಸಭೆಗೆ ಯಶ ದೊರೆಯಿತು. ಆದರೆ ಮಹಾತ್ಮಾ ಗಾಂಧಿಯವರು ಸೆರೆಮನೆಯಲ್ಲಿ ಕಾಲಿಟ್ಟಕೂಡಲೇ ನಮ್ಮ ಪ್ರಗತಿಯು ತಡೆದು, ಈ ವರೆಗೂ ಮುಂದಾಗಿಯದೆ ನಿಂತಿದೆ ಹೋದ ವರುಷ ಕಾನಪೂರದ ಕಾಂಗ್ರೆಸ್ಸಿನಲ್ಲಿ ನೂಲುವದಕ್ಕೆ ಅವಕಾಶ ಅಥವಾ ಮನಸ್ಸಿಲ್ಲದವರಿಗೆ ನಾಲ್ಕಾಣೆ ಕೊಟ್ಟು ರಾಷ್ಟ್ರಸಭೆಯ ಧ್ಯೇಯಕ್ಕೆ ಒಪ್ಪಿಕೊಂಡರೆ ಸಭಾಸದರಾಗಲಿಕ್ಕೆ ಬರುವದೆಂದು ಗೊತ್ತುವಳಿಯಾಗಿದೆ.

ಇನ್ನು ರಾಷ್ಟ್ರಸಭೆಯು ಒಂದು ಬಗೆಯಾಗಿ ಅಸಹಕಾರವನ್ನು ಬಿಟ್ಟು ಕಾಯದೆ ಮಂಡಳಗಳಲ್ಲಿಯ ಕೆಲಸವನ್ನು ತನ್ನ ಕಾರ್ಯಕ್ಷೇತ್ರದಲ್ಲಿ ಒಳ ಮಾಡಕೊಂಡಿದೆ. ಈ ಕಾರ್ಯವು ಸನದಶೀರ (ಕಾಯದೇಕ್ಕೆ-ಒಳಪಟ್ಟದ್ದಾದ್ದರಿಂದ) ಎಂಥ ಪುರಾಣ ಮತವಾದಿಗೂ ಕಾಂಗ್ರೇಸದ ಸಭಾಸದನಾಗಲಿಕ್ಕೆ ಅಡ್ಡಿ ಇಲ್ಲ. ರಾಷ್ಟ್ರಸಭೆಯ ಹೊರ್ತ. ರಾಜಕಾರಣದಲ್ಲಿ ನುರಿತಂಥ ಸಂಸ್ಥೆಯು ಭರತಖಂಡದಲ್ಲಿ ಇನ್ನಾವುದಿಲ್ಲ.

ಸ್ವಯಂಸೇವಕರ ಸಹಾಯದಿಂದ (೨೦,೦೦೦) ಇಪ್ಪತ್ತು ಸಾವಿರಸಭಾಸದರನ್ನು ಕೂಡಿಸಬೇಕೆಂದು ಕರ್ನಾಟಕದ ಪ್ರಾಂತ ಮಂಡಲದವರು ನಿರ್ಣಯಿಸಿದ್ದಾರೆ. ಪ್ರತಿಯೊಬ್ಬ ಕನ್ನಡಿಗನು ತನ್ನ ಕೈಲಾದಮಟ್ಟಿಗೆ ಈ ಕಾರ್ಯವನ್ನು ಮಾಡುವನೆಂಗು ಮಂಡಲದವರ ನಂಬಿಗೆ. ಅದನ್ನು ನೆರವೇರಿಸುವದು ತಮ್ಮ ಸಕ್ರಿಯ ಸಹಾನುಭೂತಿಯ ಮೇಲೆಯೇ ಅವಲಂಬಿಸಿರುವದು.

ಕರ್ನಾಟಕದ ಅಭಿಮಾನಿಗಳೇ, ನೀವೆಲ್ಲರೂ ರಾಷ್ಟ್ರಸಭೆಯ ಸಭಾಸದರಾಗಿ, ಸ್ವಾತಂತ್ರ್ಯ-ಸಂಗ್ರಾಮದಲ್ಲಿ ಕಡುಗಲಿ ಎಂದು ಹೆಸರುಗೊಂಡ ಕನ್ನಡ ನಾಡಿನ ಉಜ್ವಲ ಕೀರ್ತಿಯನ್ನು ಕಾಪಾಡುವಿರೆಂದು ದೃಢವಾಗಿ ನಂಬಿದ

ನಿಮ್ಮ

ಕೌಜಲಗಿ ಶ್ರೀನಿವಾಸರಾವ

ವೃತ್ತಪತ್ರಗಳೇನನ್ನುತ್ತವೆ

ಸಮ್ಮೇಳನಗಳಬಳ್ಳಾರಿಯೂ ಬಳ್ಳಾರಿಯಸಮ್ಮೇಳನಗಳೂ

ಕಳೆದ ಕೆಲವು ದಿನಗಳಿಂದ, ಬಳ್ಳಾರಿಯು ದೇಶದಲ್ಲೆಲ್ಲ, ಚಿತ್ತಾಕರ್ಷಕವಾದ ಒಂದು ಪ್ರಾಮುಖ್ಯ ಸ್ಥಾನವಾಗಿ ಪರಿಣಮಿಸಿದೆ ಬಳ್ಳಾರಿಯ ಇತಿಹಾಸದಲ್ಲಿ, ಇಂತಹ ಅಪೂರ್ವ ಸಂಯೋಗವುಹಿಂದೆ ಸಂಘಟಿಸಿದುದೂ ಇಲ್ಲ? ಮುಂದೆ ಪಕ್ಕನೆ ಸಂಘಟಿಸುವಂತೆಯೂ ಇಲ್ಲ. ಒಂದಲ್ಲ—ಎರಡಲ್ಲ? ಹತ್ತು ಹನ್ನೆರಡು ಸಮ್ಮೇಳನ ಗಳನ್ನು ಏಕಕಾಲದಲ್ಲಿಯೇ ಜರಗಿಸುವುದೆಂದರೇನು ಬಾಯ ಮಾತೇ? ಅದರಲ್ಲಿಯೂ ತೆಲುಗರಿಗೆ ಪಾಲಾಗಿಹೋದ ಆ ಬಳ್ಳಾರಿಯಲ್ಲಿ, ತೆಲುಗರ ಕಿರುಕುಳ ವಿಲ್ಲದೆ, ಕನ್ನಡಿಗರ ಇಷ್ಟೊಂದು ಮಹಾಸಭೆಗಳು, ಇಷ್ಟೊಂದು ಯಶಸ್ವಿಯಾಗಿ ಜರುಗಿಯಾವೆಂದು ಯಾರು ತಾನೇ ಊಹಿಸಿದ್ದರು? ಆದರೆ ಶ್ರೀಶಾನುಗ್ರಹದಿಂದ ಎಲ್ಲವೂ ನಿರ್ವಿಘ್ನ ವಾಗಿ ನೆರವೇರಿತು.

ಸ್ವಾಗತಾಧ್ಯಕ್ಷರ ಮತ್ತೂ ಸಭಾಧ್ಯಕ್ಷರುಗಳ ಭಾಷಣಗಳೆಲ್ಲವೂ, ಕಾಲೋಚಿತವೂ, ಅನುಭವಪೂರ್ಣವೂ, ಮಾರ್ಗದರ್ಶಕವೂ ಆಗಿದ್ದಿತೆಂಬುದು, ಈಗಾಗಲೇ ಪ್ರಕಟವಾಗಿರುವ ವಾರ್ತಾದಾಯಕರ ಸಮಾಚಾರ ಪತ್ರಗಳಿಂದ ತಿಳಿದು ಕೊಳ್ಳಬಹುದು. ಬಳ್ಳಾರಿಯಲ್ಲಿ ನಡೆದ ಪ್ರತಿಯೊಂದು ಸಮ್ಮೇಳನದ ಸಭಾಧ್ಯಕ್ಷರ ಯೋಗ್ಯತೆಯ ವಿಷಯದಲ್ಲಿ ಮಾತ್ರ "ದೋಷಗ್ರಾಹಿ" ಎನ್ನಿಸಿದವರು ಕೂಡ ಕೊಂಡಾಡದಿರಲಾರರು.

ಠರಾವುಗಳ ಮಟ್ಟಿಗೂ ಪ್ರತಿಯೊಂದು ಮಹಾಸಭೆಯೂ, ತನಗೆ ಬೇಕಾದ, ಸಂಬಂಧಪಟ್ಟ ಉಪಯುಕ್ತ ಠರಾವುಗಳನ್ನು ಮಂಜೂರು ಮಾಡಿಸಿಕೊಂಡೇ ಇದೆ ಇವುಗಳಲ್ಲಿ ನಮ್ಮ ಪ್ರೀತಿ ಪಾತ್ರವಾದ ಸಾಹಿತ್ಯ ಸಮ್ಮೇಳನದ ಒಂದು ನಿರ್ಣಯವು ಹೀಗಿದೆ:-

'ಬೊಂಬಾಯಿ ಕರ್ಣಾಟಕದ ನಾಲ್ಕು ಜಿಲ್ಲೆಗಳ ಲೋಕಲ್ ಬೋರ್ಡಿನವರು, ಮದ್ರಾಸ ಕರ್ಣಾಟಕದ ಬಳ್ಳಾರಿ ಮತ್ತು ಮಂಗಳೂರು ಜಿಲ್ಲೆಗಳಿಂದ ಒಬ್ಬೊಬ್ಬರು, ಮತ್ತು ಸಾಹಿತ್ಯ ಪರಿಷತ್ತಿನಿಂದ ಮೂವರು ಈಪ್ರಕಾರ ಒಂಭತ್ತು ಜನರು ಸೇರಿ ಕನ್ನಡ ಪಠ್ಯ ಪುಸ್ತಕಗಳನ್ನು ಸಿದ್ಧ ಗೊಳಿಸಬೇಕೆಂತಲೂ, ಈ ಕಾರ್ಯದ ವೆಚ್ಚವನ್ನು ಲೋಕಲ್ ಬೋರ್ಡಿನವರು ವಹಿಸಬೇಕೆಂತಲೂ ಅತ್ಯಂತ ಮಹತ್ವದ ಒಂದು ತೀರ್ಮಾನವು ಈ ಪರಿಷತ್ತಿನಲ್ಲಿ ಗೊತ್ತಾಯಿತು. ಈ ತೀರ್ಮಾನವು ಕಾರ್ಯರೂಪದಲ್ಲಿ ಬರುವದಕ್ಕೆ ಅವಕಾಶ ವಾಗುವಂತೆ ಲೋಕಲ್ ಬೋರ್ಡಿನವರು ಸಹಾಯ ಮಾಡುವರೆಂದು ದೇಶದ ಕ್ಷೇಮಾಭಿಲಾಷಿಗಳು ನಿರೀಕ್ಷಿಸುತ್ತಿದ್ದಾರೆ.'

ಠರಾವು ಇದಾಗಲೀ, ಬೇರೆಯವುಗಳಾಗಲೀ ನಿಷ್ಪ್ರಯೋಜನವೆಂದು ಯಾರೂ ಹೇಳುವದಿಲ್ಲ. ಎಲ್ಲರೂ ಕೇಳುವದೇನಂದರೆ, "ಕಾರ್ಯರೂಪದಲ್ಲಿ ಇವು ಸಾರ್ಥಕಕ್ಕೆ ಬರುವಂತೆ ಸಾಹಸ ಪಡುವವರು ಯಾರು?, ಕನ್ನಡಿಗರೆಲ್ಲರೂ, ಮಂಜೂರಾದ ನಿರ್ಣಯಗಳ ಸಾರ್ಥಕ್ಯತೆಗಾಗಿ ಪ್ರಯತ್ನ ಪಡುವವರೇ? ಪಡುವೆನೆಂದು ಎದೆತಟ್ಟಿಕೊಂಡು ಹೇಳುವವರು ಯಾರು? ಮುಂದೆಬರಲಿ? ಇತರ ಕನ್ನಡಿಗರಿಗೆ ದಾರಿ ತೋರಲಿ. ಇಂದು ಇಷ್ಟೊಂದು ಸಮ್ಮೇಳನಗಳನ್ನು ನಡೆಯಿಸಿದ ಆ ಬಳ್ಳಾರಿ.—ಆ ಬಳ್ಳಾರಿಯೇ ಆದರೂ, ತನ್ನಲ್ಲಿ ಆದ ಈ ನಿರ್ಣಯಗಳ ಪ್ರಚಾರಕಾರ್ಯಕ್ಕಾಗಿ ತಾನೇ ನಿಖಿಲ ಕರ್ಣಾಟಕದಲ್ಲಿ ಮುಂದಾಳುತನವನ್ನು ನಿರ್ವಹಿಸಿದರೂ ವಹಿಸಬಾರದೇಕೇ?

—ಕಂಠೀರವ

ಹಿಂದುಸ್ಥಾನಕ್ಕೆ ರಾಷ್ಟ್ರೀಯಭಾಷೆ

ಸಾಮಾನ್ಯವಾಗಿ ಒಂದು ಜನಾಂಗದ ಜೀವನವು ಅದರ ಸಾಹಿತ್ಯವನ್ನವಲಂಬಿಸುವದು. ಜನಗಳಲ್ಲಿ ಸ್ವದೇಶ ಸ್ವಭಾಷಾಭಿಮಾನವು ಜನಿಸಿದ ಹೊರತು ಜನಾಂಗದ ಜೀವನವು ಸ್ವತಂತ್ರವಾಗಲಾರದು. ಒಬ್ಬ ಬಲಿಷ್ಠನಾದ ರಾಜನು ಬೇರೊಂದು ದೂರದಲ್ಲಿರುವ ರಾಜ್ಯವನ್ನು ಜಯಿಸಿ ಅದನ್ನು ತನ್ನಧೀನದಲ್ಲಿಟ್ಟುಕೊಳ್ಳಲು ಬೇಕಾದಷ್ಟು ದಳವನ್ನು ಸಂಗ್ರಹಿಸಿದರೂ ಆ ದಳದ ಸಹಾಯದಿಂದ ಆ ರಾಜ್ಯವು ಬಹುಕಾಲ ತನ್ನಧೀನದಲ್ಲಿ ಇರಲಾರದು. ಅದಕ್ಕೆ ಬದಲಾಗಿ ತನ್ನ ಮಾತೃಭಾಷೆಯನ್ನು ಆ ದೇಶದಲ್ಲಿ ಹರಡಿ ಆ ಭಾಷೆಯಲ್ಲಿಯೇ ತತ್ವಗಳ ಶಿಕ್ಷಣವನ್ನು ಕೊಡಲಾರಂಭಿಸಿದರೆ ಆ ರಾಜ್ಯದ ಸಂಸ್ಕಾರವೇ ಬದಲಾಗಿ ಅದು ಅವನ ಅಧೀನ ವಾಗುವದು. ಹಾಗೆಯೇ ಆಂಗ್ಲೇಯರ ಭಾಷೆಯು ಭರತಖಂಡದ ಪೂರ್ವ ಸಂಸ್ಕೃತಿಯನ್ನು ಕಿತ್ತುಹಾಕುತ್ತಾ ನೂತನಸಂಸ್ಕಾರದಿಂದ ಪ್ರಭಾವಿಸುತ್ತಿರುವುದು. ನಮ್ಮ ಗಂಟೂ ಸೆಂಟೂ ಆಂಗ್ಲ ಭಾಷೆಯಲ್ಲಿಯೇ ಕುಳಿತಿವೆ. ಕೆಲವು ವಿದ್ಯಾವಂತರು ಆಂಗ್ಲ ಭಾಷೆಯಲ್ಲಿ ಪಾಂಡಿತ್ಯವನ್ನು ಪಡೆದು ಅದರಲ್ಲಿಯೇ ಲೀನರಾಗಿ ಮಾತೃಭಾಷೆಯನ್ನು "ನಿರ್ಜೀವಭಾಷೆ" ಯೆಂದು ಗಣಿಸಿರುವರು. ದೇಶಾಭ್ಯುದಯ ಕಾರ್ಯಗಳು ಸರಳವಾಗಿ ನಡೆಯದಿರುವದಕ್ಕೆ ಇದೊಂದು ಪ್ರಬಲಕಾರಣ.

ನಮ್ಮ ಸಂಸ್ಕಾರವು ಹಾಳಾಗದಂತೆ ಪಾಲಿಸುವುದಕ್ಕೆ ಒಂದು ಮಾರ್ಗವೆಂದರೆ ನಮ್ಮ ಹಿಂದುಸ್ಥಾನದ ಮಾತೃಭಾಷೆಗಳಲ್ಲೊಂದಕ್ಕೆ ರಾಷ್ಟ್ರೀಯತ್ವವನ್ನು ಕೊಡುವುದು. ನೂರಾರು ಭಾಷೆಗಳಿರುವ ಭರತಖಂಡದಲ್ಲಿ ರಾಷ್ಟ್ರೀಯಭಾಷೆಯಾಗುವದಕ್ಕೆ ಅರ್ಹವಾದುದು ಹಿಂದೀ ಭಾಷೆಯೆಂದು ವಿದ್ಯಾವಂತರಾದ ಅನೇಕ ಮುಖಂಡರುಗಳು ಅಭಿಪ್ರಾಯಪಟ್ಟಿರುವರು. ಈ ಅಭಿಪ್ರಾಯವು ಸೂಕ್ತವಾ

ಗಿದೆ. ಭರತಖಂಡದಲ್ಲಿ ಎಂಟುಕೋಟಿ ಜನಗಳಿಗೆ ಹಿಂದೀಭಾಷೆಯು ಮಾತೃಭಾಷೆಯಾಗಿರುವುದು. ಅಲ್ಲದೆ ಇಪ್ಪತ್ತೆರಡುಕೋಟಿಜನರು ಹಿಂದೀಭಾಷೆಯಲ್ಲಿ ಮಾತನಾಡಬಲ್ಲರು ಹೀಗೆಂದಮೇಲೆ ಈ ಭಾಷೆಯನ್ನು ರಾಷ್ಟ್ರೀಯಭಾಷೆಯನ್ನಾಗಿಮಾಡಿದರೆ ಆಗ ಭಾರತೀಯ ಸಂಸ್ಕೃತಿಯು ಪುನರುಜ್ಜೀವಿಸುವುದು ಭರತಖಂಡದ ಬೇರೆಬೇರೆ ದೇಶದ ಜನತೆಯ ಹೃದಯವು ಒಬ್ಬರಿಗೊಬ್ಬರಿಗೆ ಗೊತ್ತಾಗುವುದಕ್ಕೆ ಆ ಒಂದು ವ್ಯಾಪಕ ಭಾಷೆಯು ಪ್ರಬಲಸಹಾಯಕವಾಗಿ ದೇಶಾಭ್ಯುದಯ ಕಾರ್ಯಗಳು ನಿರಾತಂಕವಾಗಿನಡೆಯುವುವು. ಹಿಂದೀ ಭಾಷೆಗೆ ರಾಷ್ಟ್ರೀಯತ್ವವನ್ನು ಕೊಟ್ಟು ಇತರ ಭಾಷೆಗಳ ನಾಮಾವಶೇಷಮಾಡಬೇಕೆಂದು ನಮ್ಮಭಿಪ್ರಾಯವಲ್ಲ ಇತರ ಕೆಲವು ಭಾಷೆಗಳಲ್ಲಿ ಅತುಲಸಾಹಿತ್ಯವಿದೆ ಅದು ಲೋಪವಾಗಬಾರದು. ಆಯಾಭಾಷಾಭಾಷಿಗಳು ತಮ್ಮ ಭಾಷೆಗಳನ್ನು ಉನ್ನತಿಪಥಕ್ಕೊಯ್ಯುತ್ತಿರಲಿ ಅಡಕ್ಕಡ್ಡಿಯಿಲ್ಲ ದೇಶಾಭ್ಯುದಯದೃಷ್ಟಿಯಿಂದ ಬಾಹ್ಯವ್ಯವಹಾರಕ್ಕೆ ಒಂದುವ್ಯಾಪಕಭಾಷೆಯು ಅತ್ಯಾವಶ್ಯಕವಾಗಿದೆ ಆ ಭಾಷೆಯು ಹಿಂದಿಯೇ ಇಂಗ್ಲಭಾಷೆಯನ್ನು ಹತ್ತಾರುವರ್ಷ ಸಾವಿರಾರು ರೂಪಾಯಿಗಳನ್ನು ಖರ್ಚುಮಾಡಿ ಕಷ್ಟದಿಂದ ಕಲಿಯುವಂತೆ ಈ ಭಾಷೆಯನ್ನು ಕಲಿಯಬೇಕಾದುದಿಲ್ಲ ಈ ಭಾಷೆಯನ್ನು ಸ್ವಲ್ಪಕಾಲದಲ್ಲಿ ಬಹುಸುಲಭವಾಗಿ ಕಲಿಯಬಹುದಾಗಿದೆ. ಈ ಕಡೆಗೆ ಜನತೆಯ ದೃಷ್ಟಿಯು ಬೀಳಲೆಂದು ನಮ್ಮ ಹಾರೈಕೆ

—ವಿಶ್ವಬಂಧು

ಒಂದು ಮುತ್ತು

"ದುರ್ದೈವದಿಂದ ಕರ್ಣಾಟಕದಲ್ಲಿ ಹಿಂದುಳಿದವರಿಗೆ ಬ್ರಾಹ್ಮಣರೇ ವಿಶೇಷವಾಗಿ ಕಂಟಕರಾಗಿರುವದರಿಂದ ಹಿಂದುಳಿದ ಸಮಾಜದವರಿಗೆ ಬ್ರಾಹ್ಮಣೇತರ ಚಳವಳಿ ಎಂದು ಹೆಸರು ಒಂದಂತೆ ತೋರುತ್ತಿದೆ"

—ಮುಂದಾಳು

ಸಂಪಾದಕರ ಪರಿಷತ್ತು

ಇದು ಕೇವಲ ಹೆಸರಿಗೆ ಮಾತ್ರ ಪರಿಷತ್ತಾಯಿತು. ಅದಕ್ಕೆ ಇನ್ನು ಪೂರ್ತ ಸ್ವರೂಪವು ಬಂದಿರಲಿಕ್ಕಿಲ್ಲ (೧) ಸರಕಾರದವರು ಸಂಪಾದಕರ ಹಕ್ಕಿನ ಮೇಲೆ ಪುನಃ ಪುನಃ ತರುವ ದಾಳಿಯನ್ನು ಧಿಕ್ಕರಿಸುವದಕ್ಕಾಗಿಯೂ (೨)ಇಡೀ ಕರ್ನಾಟಕಕ್ಕೆ ಅವಶ್ಯವಿದ್ದ ಹಾಗೂ ಯಾವ ಮತಭೇದವು ಇಲ್ಲದ ವಿಷಯ ಗಳನ್ನು ವಿಶೇಷ ಬಲದಿಂದ ಏಕ ಸಮಯಕ್ಕೆ ಮುಂದು ಮಾಡುವದಕ್ಕಾಗಿಯೂ (೩) ಎಲ್ಲ ಪತ್ರಗಳಲ್ಲಿಯೂ ಒಂದೇ ಮಾದರಿಯ ಸರಭಾಷೆಯನ್ನು ಹೊಸ ರಾಜಕೀಯ ಶಬ್ದಗಳನ್ನೂ ಉಪಯೋಗಿಸ ಬೇಕೆಂದು ನಿಶ್ಚಯಮಾಡುವದಕ್ಕಾಗಿಯೂ ಸಂಪಾದಕರ ಸಂಘವೊಂದು ಕರ್ನಾಟಕದಲ್ಲಿ ರಬೇಕು. ಎಂಬವುಗಳು ಚರ್ಚೆಯಿಂದ ನಿಶ್ಚಯಿಸಲ್ಪಟ್ಟವು.

—ಕರ್ಮವೀರ

ವರ್ತಮಾನ ಸಾರ

ಇಹವೃತ್ತ

ಈ ೯ ಎರಡು ಮೂರು ದಿವಸಗಳಿಂದ ಮಳೆಯು ಪ್ರಾರಂಭ ವಾಗಿದೆ. ಬಿತ್ತುವ ಹದಯಾಗಿದುದ ರಿಂದು ಒಕ್ಕಲಿಗರು ಭರದಿಂದ ಬೀಜ ಬಿತ್ತ ಹತ್ತಿರುತ್ತಾರೆ ಈ ಮಳೆಯು ಸರ್ವ ಸಾಧಾರಣ ಎಲ್ಲ ಕಡೆಗೂ ಬಿದ್ದಂತೆ ಇರುತ್ತದೆ

ಮೆ॥ ಕಲೆಕ್ಟರ ಸಾ॥ ರವರು ತಾ॥ ೧೦ನೇ ಜೂನ ದಿಂದ ೧೩ ನೇ ಜೂನ ವರೆಗೆ ಮುದ್ದೇಬಿಹಾಳ ದಲ್ಲಿದ್ದು ಇಳಕಲ್ಲಿಗೆ ತಾ॥ ೧೪ಕ್ಕೆ ಬರುವರು. ಇಲ್ಲಿ ತಾ॥ ೧೭ನೇ ಜೂನ ವರೆಗೆ ಇರುವರು.

ಮದ್ರಾಸ ಕರ್ನಾಟಕ

ಕರ್ನಾಟಕಕ್ಕೆ ಪ್ರತ್ಯೇಕ ವಿಶ್ವವಿದ್ಯಾಲಯವು ಪ್ರತಿಯೊಂದು ರೀತಿಯಲ್ಲಿಯೂ ಅಗತ್ಯವಿದೆಯಾದುದರಿಂದ ಈ ಕಾರ್ಯ ಸಫಲತೆಗೆ ಮುಂಬಯಿ, ಮದರಾಸ, ಕೊಡಗು ಮತ್ತು ಇತರ ದೇಶೀಯ ಸಂಸ್ಥಾನಗಳ ಸರಕಾರಗಳು ಶೀಘ್ರ ಕಾರ್ಯವನ್ನು ಕೈಕೊಳ್ಳಬೇಕೆಂದು ಉತ್ತರ ತಾ॥ ಬೋರ್ಡಿನ ಅಧಿವೇಶನದಲ್ಲಿ ರಿವರೆಂಡ ಫಾದರ ಜಿ ಡಿಸೋಜರವರು ಸೂಚಿಸಿದ ಮತ್ತು ಶ್ರೀ॥ ಸುಬ್ಬಣ್ಣ ಹೆಗ್ಗಡೆಯವರು ಅನುಮೋದಿಸಿದ ಠರಾವು ಮಂಜೂರಾಯಿತು

ಮೈಸೂರ ಕರ್ನಾಟಕ

ಪುಣೆಯಲ್ಲಿ ಜರಗಲಿಕ್ಕಿದ್ದ ಬೇಸಾಯ ಪ್ರದರ್ಶನಕ್ಕೆ ಮೈಸೂರು ಸರಕಾರವು ೧೦೫ ತರದ ಕಬ್ಬಿಗೆಗಳನ್ನು ಕಳುಹಿಸಿರುವದಂತೆ.

ಬೆಂಗಳೂರು ಮ್ಯುನಿಸಿಪಾಲಿಟಿಯವರು ತಮ್ಮ ಸ್ತ್ರೀಯ ನೌಕರರಿಗೆ ಪಾದಿಯ ಉಡಿಗೆಗಳನ್ನು ಹಂಚುವ ವ್ಯವಸ್ಥೆ ಮಾಡಿರುವರು

ಮೈಸೂರಿನಲ್ಲಿ ಜೂನ ೨ನೇ ತಾರೀಖಿಗೆ ಒಂದು ಘಂಟೆಯ ವರೆಗೆ ಬಿರುಗಾಳಿ ಬೀಸಿತು, ವಿಪರೀತ ಮಳೆ ಸುರಿಯಿತು ದೀಪಸ್ತಂಭಗಳೂ ಸಾಲಮರಗಳೂ ನೆಲಕ್ಕುರುಳಿದವು; ಮೋಟಾರು ಗಳ ಹಂಚುಗಳೂ ಹಾರಿಹೋದವು

ಹಿಂದುಸ್ಥಾನ

ಓಂದೂ ಕಾಂಗ್ರೆಸಿನಲ್ಲಿಯ ಸಂಬಂಧವು ತೀರ ಬಯಲಾದಕವಾದ್ದರಿಂದ ದಿಲ್ಲಿಯ ಮ್ಯಾಜಿಸ್ಟ್ರೇಟರು ಶ್ರೀಮಾನ ಸ್ವಾಮಿ ಶ್ರದ್ಧಾನಂದರ ಹೋರಾಟದ ೧೬೪ ಕಲಮುಗಳನ್ನು ಜಾಹೀರ ಮಾಡಿರುವರು. ಇದು ಜೂನ ೭ನೇ ತಾರೀಖಿನಿಂದ ೩ ತಿಂಗಳ ಕಾಲದವರೆಗೆ ಅಮಲಿನಲ್ಲಿರುವದು.

ಗುಜರಾಥದ ರಾಷ್ಟ್ರೀಯ ಶಿಕ್ಷಣಾಲಯದಲ್ಲಿ ಪತ್ರಕಶಾಲೆ, ಒಡಿಗ ಶಾಲೆ, ನೆಯ್ಗೆ, ಬಣ್ಣದ ಶಾಲೆ ಮುಂತಾದ ಕೈಗಾರಿಕೆಗಳ ವರ್ಗಗಳು ಪ್ರಾರಂಭವಾಗುವವು

ಪರದೇಶ

ಫ್ರಾಂಚರ ಸುಪ್ರೀಮ ಕೋರ್ಟಿನ ಪ್ರಾರಂಭವಾಗುವ ಕಾಲಕ್ಕೆ ಪ್ರತಿವರುಷ ದೊಡ್ಡ ಸಮಾರಂಭವು ಜರಗಿ ಒಬ್ಬನೊಬ್ಬ ಬ್ಯಾರಿಸ್ಟರನು ಯಾವ ದಾದರೊಂದು ಕಟ್ಟೆಯ ವಿಷಯದಲ್ಲಿ ಮಾತಾಡುವ ರೂಢಿಯುಂಟು. ಈ ಸಮಾರಂಭಕ್ಕೆ ಇಂಗ್ಲೆಂಡದ ಚೀಫ ಜಸ್ಟಿಸರು ಇನ್ನಿತರ ಮಹನೀಯರು ಆಗಮಿಸುವರು ಈ ಸಲ ಸಮಾರಂಭದಲ್ಲಿ ಮಾತಾಡ ಲಿರುವ ಶ್ರೀ ಜುಲಿಯೆಟ ನೇಲಿಯವರು ಅಹಮದಾಬಾದ ದಲ್ಲಿ ನಡೆದ ಮಹಾತ್ಮಾ ಗಾಂಧಿಯವರ ಕಟ್ಲೆಯ ವಿಷಯದಲ್ಲಿ ಮಾತಾಡುವವರಿದ್ದಾರೆಂದು ಇಂಡಿಯನ್ ಡೇಲೀಮೇಲದಿಂದ ತಿಳಿದು ಬರುತ್ತದೆ.

ಮುಂಬಯಿಯ ರೆನ್ ಎಲ್ ಗನಿ ಎಂಬ ಫಕೀರರೊಬ್ಬರು ಪ್ಯಾರೀಸ್ ಪಟ್ಟಣಕ್ಕೆ ಹೋಗಿರುವರು ಅವರು ಅಲ್ಲಿ ಅದ್ಭುತ ಪ್ರಯೋಗಗಳನ್ನು ಮಾಡಿ ತೋರಿಸಿದರು ಕುದಿಯುವ ಕಾಚಿನ ರಸವನ್ನು ಕುಡಿದರು; ಮೂಗಿನ ಹೊಳ್ಳೆಯಲ್ಲಿ ಮೊಳೆ ಸೇರಿಸಿ ಕೊಂಡರು; ಕುದಿಯುವ ಸರಾಯಿಯನ್ನು ಕುಡಿದರು; ಉರಿಯುವ ಬೆಂಕಿಯೊಳಗಿಂದ ಪಾರಾದರು, ಕೂದಲು ಕೂಡ ಬಾಡಲಿಲ್ಲ ಈ ಪ್ರಯೋಗಗಳನ್ನು ಅಲ್ಲಿಯ ದೊಡ್ಡ ದೊಡ್ಡ ಡಾಕ್ಟರರೂ, ರಸಾಯನ ಶಾಸ್ತ್ರಜ್ಞರೂ ವೃತ್ತಪತ್ರಗಳ ಸುದ್ದಿಗಾರರೂ ಕಣ್ಣಾರೆ ಕಂಡು ಚಕಿತರಾದರು ಫಕೀರರು ಯಾವದೇ ಪ್ರಕಾರದಿಂದ ರಕ್ಷ್ಯತನ ವನ್ನಾಚರಿಸುವದಿಲ್ಲೆಂದು ಎಲ್ಲರ ಹೇಳಿಕೆಇದೆ ಇದು ಹೇಗೆ ಸಾಧ್ಯ ವೆಂಬುದೇ ಗೂಢ!

ಅಟಲಾಂಟಿಕ ಮಹಾಸಾಗರದ ಪಂಚೆಯ ಮೇಲಿಂದ ಒಂದು ದೊಡ್ಡ ಜಾಹೀರಾತು ತಂತಿಇಲ್ಲದ ಸಂದೇಶ ವಾಹಕ ಯಂತ್ರದಿಂದ ಮೂರೂ ಖಂಡಗಳಲ್ಲಿ ಕಳುಹಲಾಯಿತು. ಒಂದು ಚಿತ್ರವೂ ಈ ಸಂದೇಶದಲ್ಲಿ ಕಳುಹಲಾಯಿತು. ಸಂದೇಶವನ್ನು ಕೊಳ್ಳುವ ಸ್ಥಳದೊಳಗಣ ಯಂತ್ರವೊಂದು ಲೆಕ್ಕಣಿಕೆಯಿತ್ತು. ಆ ಲೆಕ್ಕಣಿಕೆಯಿಂದ ೨೦ ನಿಮಿಷ ಗಳಲ್ಲಿ ಚಿತ್ರವು ತಯಾರಾಯಿತು!

ಶಿಕ್ಷಣವನ್ನು

ಬೇಗ ಪಡೆಯಿರಿ

ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಕಲ್ತ

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟೂಶನ್
ಜಮುಖಂಡಿಕರ ವಾಡೇ ೪೩೫ ಶನಿವಾರ ಪುಣೇಶಹರ

ಗುಲಕಂದ!! ಗುಲಕಂದ!!

ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ

ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ

ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭಗಳಿಗೆಲ್ಲ

ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ಸಿ.ರಾಯ

ವರಸ್ತರಿಗೆ ತುಂಬಾ ಕಮೀಶನ್.

ಳಾಸ:— ಧಾಡಗೆ ಸಾಷಾಣಕರ ಕಂಪನಿ.
ಬುಧವಾರ ಪೇಟ ಪುಣೆಶಹರ.

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚಸೇರಿ ೩-೧೨-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ ೨೦-೦-೦ ತಿಂಗಳಿಗೆ ೧-೧೦-೦ ಸಣ್ಣೆ ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟಕೃಷ್ಣಯ್ಯ, ಮ್ಯಾನೇಜರ
ಸಾಧ್ವೀ ಮತ್ತು ಸಂಪದಭ್ಯುದಯ. ಮೈಸೂರು.

ಜಾಹೀರಾತಿನ ಸಲುವಾಗಿ.



The Cheapest House.

1 For quick: Ecconomical and Chevrolet cars, Trucks produ
2 For all spare parts of the Var cars,
3 For the cheapness in tyre tub
4 For all kinds of Lubricating
5 For underlaking all kinds of satisfactory work,
6 For Building Motor bodies of
7 For all kinds of Motor re

Aply to:— Messrs Royal motor
Automobile Engineers
Bagalkot.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ
೨ ಎಲ್ಲ ಬಿಡಿ ಭಾಗಗಳನ್ನು ಖರೀದಿ ಮಾಡುವ
೩ ಎಲ್ಲ ಅಗ್ಗ ವಸ್ತು ಖಾತ್ರೀಲಾಯಕ
೪ ಎಲ್ಲ ನಮೂನೆಯ ಲುಬ್ರಿಕೇಟಿಂಗ
೫ ಎಲ್ಲ ತರಹದ ಟ್ಯೂಬ ಟಾಯರಗಳ
೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳ
೭ ಎಲ್ಲ ತರದ ಮೋಟಾರ ರಿಪೇರಿ

ರಾಯಲ್ ಮೋಟಾರ
ಬಾಗಲಕೋಟೆ

ಗಿದೆ. ಭರತಖಂಡದಲ್ಲಿ ಎಂಟುಕೋಟಿ ಜನಗಳಿಗೆ ಹಿಂದೀಭಾಷೆಯು ಮಾತೃಭಾಷೆಯಾಗಿರುವುದು. ಅಲ್ಲದೆ ಇಪ್ಪತ್ತೆರಡುಕೋಟಿಜನರು ಹಿಂದೀಭಾಷೆಯಲ್ಲಿ ಮಾತನಾಡಬಲ್ಲರು ಹೀಗೆಂದಮೇಲೆ ಈ ಭಾಷೆಯನ್ನು ರಾಷ್ಟ್ರೀಯಭಾಷೆಯನ್ನಾಗಿಮಾಡಿದರೆ ಆಗ ಭಾರತೀಯ ಸಂಸ್ಕೃತಿಯು ಪುನರುಜ್ಜೀವಿಸುವುದು. ಭರತಖಂಡದ ಬೇರೆಬೇರೆ ದೇಶದ ಜನತೆಯ ಹೃದಯವು ಒಬ್ಬರಿಗೊಬ್ಬರಿಗೆ ಗೊತ್ತಾಗುವುದಕ್ಕೆ ಆ ಒಂದು ವ್ಯಾಪಕ ಭಾಷೆಯು ಪ್ರಬಲಸಹಾಯಕವಾಗಿ ದೇಶಾಭ್ಯುದಯ ಕಾರ್ಯಗಳು ನಿರಾತಂಕವಾಗಿನಡೆಯುವುವು. ಹಿಂದೀ ಭಾಷೆಗೆ ರಾಷ್ಟ್ರೀಯತ್ವವನ್ನು ಕೊಟ್ಟು ಇತರ ಭಾಷೆಗಳ ನಾಮಾವಶೇಷಮಾಡಬೇಕೆಂದು ನಮ್ಮಭಿಪ್ರಾಯವಲ್ಲ ಇತರ ಕೆಲವು ಭಾಷೆಗಳಲ್ಲಿ ಅತುಲಸಾಹಿತ್ಯವಿದೆ ಅದು ಲೋಪವಾಗಬಾರದು. ಆಯಾಭಾಷಾಭಾಷಿಗಳು ತಮ್ಮ ಭಾಷೆಗಳನ್ನು ಉನ್ನತಿಪಥಕ್ಕೊಯ್ಯುತ್ತಿರಲಿ ಅಡಕ್ಕಡ್ಡಿಯಿಲ್ಲ. ದೇಶಾಭ್ಯುದಯದೃಷ್ಟಿಯಿಂದ ಬಾಹ್ಯವ್ಯವಹಾರಕ್ಕೆ ಒಂದುವ್ಯಾಪಕಭಾಷೆಯು ಅತ್ಯಾವಶ್ಯಕವಾಗಿದೆ ಆ ಭಾಷೆಯು ಹಿಂದಿಯೇ ಆಂಗ್ಲಭಾಷೆಯನ್ನು ಹತ್ತಾರುವರ್ಷ ಸಾವಿರಾರು ಉಪಾಯಗಳನ್ನು ಖರ್ಚುಮಾಡಿ ದೇಹದಂಡನೆಯಿಂದ ಕಲಿಯುವಂತೆ ಈ ಭಾಷೆಯನ್ನು ಕಲಿಯಬೇಕಾದುದಿಲ್ಲ ಈ ಭಾಷೆಯನ್ನು ಸ್ವಲ್ಪಕಾಲದಲ್ಲಿ ಬಹುಸುಲಭವಾಗಿ ಕಲಿಯಬಹುದಾಗಿದೆ. ಈ ಕಡೆಗೆ ಜನತೆಯ ದೃಷ್ಟಿಯು ಬೀಳಲೆಂದು ನಮ್ಮ ಹಾರೈಕೆ

—ವಿಶ್ವಬಂಧು

ಒಂದು ಮುತ್ತು

"ದುರ್ದೈವದಿಂದ ಕರ್ಣಾಟಕದಲ್ಲಿ ಹಿಂದುಳಿದವರಿಗೆ ಬ್ರಾಹ್ಮಣರೇ ವಿಶೇಷವಾಗಿ ಕಂಟಕರಾಗಿರುವದರಿಂದ ಹಿಂದುಳಿದ ಸಮಾಜದವರಿಗೆ ಬ್ರಾಹ್ಮಣೇತರ ಚಳವಳಿ ಎಂಬ ಹೆಸರು ಒಂದಂತೆ ತೋರುತ್ತಿದೆ"

—ಪಂಡಾಳ

ಸಂಪಾದಕರ ಪರಿಷತ್ತು

ಇದು ಕೇವಲ ಹೆಸರಿಗೆ ಮಾತ್ರ ಪರಿಷತ್ತಾಯಿತು. ಅದಕ್ಕಿನ್ನೂ ಮೂರ್ತ ಸ್ವರೂಪವು ಬಂದಿರಲಿಕ್ಕಿಲ್ಲ (೧) ಸರಕಾರದವರು ಸಂಪಾದಕರ ಹಕ್ಕಿನ ಮೇಲೆ ಪುನಃ ಪುನಃ ತರುವ ದಾಳಿಯನ್ನು ಧಿಕ್ಕರಿಸುವದಕ್ಕಾಗಿಯೂ (೨)ಇಡೀ ಕರ್ನಾಟಕಕ್ಕೆ ಅವಶ್ಯವಿದ್ದ ಹಾಗೂ ಯಾವ ಮತಭೇದವು ಇಲ್ಲದ ವಿಷಯ ಗಳನ್ನು ಏಕೀಕೃತ ಬಲದಿಂದ ಏಕ ಸಮಯಕ್ಕೆ ಮುಂದು ಮಾಡುವದಕ್ಕಾಗಿಯೂ (೩) ಎಲ್ಲ ಪತ್ರಗಳಲ್ಲಿಯೂ ಒಂದೇ ಮಾದರಿಯ ಪರಭಾಷೆಯನ್ನು ಹೊಸ ರಾಜಕೀಯ ಶಬ್ದಗಳನ್ನೂ ಉಪಯೋಗಿಸಬೇಕೆಂದು ನಿಶ್ಚಯಮಾಡುವದಕ್ಕಾಗಿಯೂ ಸಂಪಾದಕರ ಸಂಘವೊಂದು ಕರ್ನಾಟಕದಲ್ಲಿರಬೇಕು. ಎಂಬವುಗಳು ಚರ್ಚೆಯಿಂದ ನಿಶ್ಚಯಿಸಲ್ಪಟ್ಟವು.

—ಕರ್ಮವೀರ

ವರ್ತಮಾನ ಸಾರ

ಇಹವೃತ್ತ

ಈಗ ಎರಡು ಮೂರು ದಿವಸಗಳಿಂದ ಮಳೆಯು ಪ್ರಾರಂಭವಾಗಿದೆ. ಬಿತ್ತುವ ಹದಿಯಾಗಿರುವ ದಿಂದ್ರು ಒಕ್ಕಲಿಗರು ಭರದಿಂದ ಬೀಜ ಬಿತ್ತುತ್ತಿದ್ದಾರೆ ಈ ಮಳೆಯು ಸರ್ವ ಸಾಧಾರಣ ಎಲ್ಲ ಕಡೆಗೂ ಆದಂತೆ ಕಾಣುತ್ತದೆ

ಮೆ॥ ಕಲೆಕ್ಟರ ಸಾ॥ ರವರು ತಾ॥ ೧೦ನೇ ಜೂನ ದಿಂದ ೧೩ನೇ ಜೂನ ವರೆಗೆ ಮುದ್ದೇಬಿಹಾಳ ದಲ್ಲಿದ್ದು ಇಲ್ಲಿಗೆ ತಾ॥ ೧೪ಕ್ಕೆ ಬರುವರು ಇಲ್ಲಿ ತಾ॥ ೧೯ನೇ ಜೂನ ವರೆಗೆ ಇರುವರು.

SAFETY AND GOOD SERVICE
LIFE ASSURANCE
THE ORIENTAL
SIZE AND STRENGTH
GREATEST INDIAN
ASSURANCE COMPANY.
For full particulars to-
Kulkarni, Agent Bagalkot.

ಮೋಟಾರ ಶಿಕ್ಷಣವನ್ನು

ಪುಣೆಯಲ್ಲಿಯೇ ಪಡೆಯಿರಿ

ಎಲ್ಲ ಬಗೆಯ ಮೋಟಾರುಗಳನ್ನು ನಡಿಸುವದು, ದುರಸ್ತ ಮಾಡುವದು, ಮೊದಲಾದ ಎಲ್ಲ ಶಿಕ್ಷಣವನ್ನು ಫಕ್ತ ಒಂದೇ ತಿಂಗಳಲ್ಲಿ ಕೊಡುವೆವು ಮಾಹಿತೀ ಬಗ್ಗೆ ಬರೆಯಿರಿ.

ವಿಳಾಸ:—

ದಿ ಮೋಟಾರ ಡ್ರಾಯವ್ಹಿಂಗ ಇನ್ ಸ್ಟಿಟ್ಯೂಶನ್

ಜಮಖಂಡಿಕರ ವಾಡೇ ೪೬೫ ಶನಿವಾರ ಪುಣೇಶಹರ

ಗುಲಕಂದ! ಗುಲಕಂದ!! ಗುಲಕಂದ!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತುರಾಯಿಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತುಂಬಾ ಕಮೀಶನ್.

ವಿಳಾಸ:— ಧೂಡಗೆ ಪಾಷಾಣಕರ ಕಂಪನಿ.

ಬುಧವಾರ ಪೇಟ ಪುಣೆಶಹರ.

ಸುಗಂಧಿ

ತಾಂಬೂಲೀ ಜರ್ದಾ.

ಈ ಜರ್ದಾ ತಿನ್ನಲಿಕ್ಕೆ ರುಚಿಕರವಿದ್ದು, ಸುವಾಸಿಕ ವಿರುತ್ತದೆ. ಇದರ ಸೇವನದಿಂದ ಬಾಯಿಯು ಹೊಲಸು, ವೇದನೆ, ಹುಳ ಇವು ನಾಶವಾಗಿ ಹಲ್ಲುಗಳು ಒಳ್ಳೇ ಘಟ್ಟಿಯಾಗುತ್ತವೆ. ಇದರ ಸೇವನದಿಂದ ದಮ್ಮು, ಕಫ ಮುಂತಾದ ವಿಕಾರಗಳುಂಟಾಗುವ ಸ್ವಲ್ಪವೂ ಭೀತಿಯಿಲ್ಲ. ಕಾರಣ, ತಂಬಾಕು ಸೇವಿಸುವವರು ಅವಶ್ಯವಾಗಿ ಅನುಭವ ಕೊಳ್ಳಬೇಕು ೧ ಪುಡಿ ಕಿಂ ರೂ ೦-೦-೬, ೨೫ರ ಕಿಂ ರೂ. ೦-೯-೦ ೫೦ರ ಕಿಂ ರೂ ೧-೦-೦; ೧೦೦೦ ಪುಡಿಗಳ ಕಿಂ. ರೂ. ೧೭-೦-೦, ೮ ಪೆ. ಖರ್ಚುವಗೈರೆ. ಪ್ರತ್ಯೇಕ.

ಸುಗಂಧಿ ನಶ್ಯ:— ಈ ನಶ್ಯವು ಒಳ್ಳೇ ತಂಬಾಕಿನಿಂದ ಮಾಡಿದ್ದು, ಇದರಿಂದ ಶೈತ್ಯ, ಥಂಡಿ, ಅರೆತಲೆನೋವು ಮುಂತಾದವುಗಳು ಕೂಡಲೆ ಮಾಯವಾಗಿ ತಲೆಯು ಭಾರವಾಗಿದ್ದರೂ ಹಗುರವಾಗಿ ವಿಚಾರಶಕ್ತಿಗೆ ಚಪಲತೆಯು ಪ್ರಾಪ್ತವಾಗುವದರಿಂದ ಯಾವದೇ ಕೆಲಸವನ್ನು ಕೈಕೊಳ್ಳಲಿಕ್ಕೆ ಸ್ಫೂರ್ತಿಯುಂಟಾಗುತ್ತದೆ. ಒಮ್ಮೆ ಪರೀಕ್ಷಿಸಿ ಖಾತ್ರಿಮಾಡಿಕೊಳ್ಳಿರಿ. ೧ ಡಬ್ಬಿ ಕಿಂ ಖರ್ಚು ೦-೪-೦ ೧ ಡಜನ್ ಡಬ್ಬಿ ಕಿಂ ರೂ. ೨-೦-೦. ವಿ. ಪೊ ಬೇರೆ.

ಉತ್ತಮ ಬೀಡಿಗಳು:— ಅತ್ಯುತ್ತಮ ಪ್ರತಿಯ ತಂಬಾಕಿನಿಂದ ಚನ್ನಾಗಿ ಕಟ್ಟಿದ ಬೀಡಿಗಳು ನಮ್ಮಲ್ಲಿ ತಯಾರಿಸಿರುತ್ತವೆ. ಕಿಮ್ಮತ್ತಿನ ವಿಷಯಕ್ಕೆ ಬರೆದು, ಪುರವತ್ ನೋಡಿ ಮಾಲಿಗೆ ಆರ್ಡರ ಕೊಡಬಹುದು. ಇವರ ಹೊರತು ನಮ್ಮಲ್ಲಿಯ ಬಾಜಾರದಲ್ಲಿ ಎಲ್ಲಾ ಪ್ರಕಾರಗಳ ತಂಬಾಕು ಬರುತ್ತದೆ. ಬೇಕಾದ ನಮೂನೆಯ ತಂಬಾಕನ್ನು ಯೋಗ್ಯ ದಲಾಲಿ ಕೊಂಡು. ಖರೀದಿ ಮಾಡಿ ಕಳಿಸುವೆವು ವಿಶೇಷ ಮಾಹಿತಿ ಬಗ್ಗೆ ಪತ್ರವ್ಯವಹಾರ ಮಾಡಿದರೆ ತಕೂಡಲೆ ಉತ್ತರ ಬರೆಯುವೆವು.

ಪತ್ತೆ:— ಎಸ್. ಬಿ. ಕದಂ, ಬೀಡಿ ಮತ್ತು ತಂಬಾಕು ಜರ್ದಾ ದುಕಾನ. ಮು. ಪೋ. ನಿಪ್ಪಾಣಿ,

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೩-೦. ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಇಣೆ ಜಾಹಿರಾತಿನ ದರಪನ್ನು ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯ. ಮೈಸೂರು.

ಜಾಹೀರಾತಿನ ಸಲುವಾಗಿ.

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ.

ಇವರು ಜೂನ ೧ ನೇ ವಾರದಿಂದ ಚಂದ್ರಪಟ್ಟಣದಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನು ಪ್ರಾರಂಭಿಸಿದರು.

ಜಿ. ಎಚ್ ವೀರಣ್ಣ
ಪ್ರೊಪ್ರಾಯಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಆಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ ಡಾಯರೆಕ್ಟರ್ಸ ಚೇಅರಮನ್ನಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೫೬೦೦ ಮಿ. ವಿಠ್ಠಲ ಚಿಮ್ಣಾಜಿ ಸೇಟ ಕಲಾಸ್ ಆಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೭ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೬ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಡಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೧೦ ಮಿ|| ರಾಮಚಂದ್ರ ವಾಮನ ಕಾಂಕರ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೮೫೦ ಮಿ|| ಆರ್. ಎಚ್. ನಾಟೆಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ.)

ಪೊರವಾಲ ಬ್ಲ್ಯಾಕ ಟುಥ್ ಪಾವಡರ.

ಇದು ಎಲ್ಲ ಬಗೆಯ ಹಲ್ಲಿನ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶಿ ಟೂಥ್ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ ಉಪಯೋಗಿಸಿ, ಖಾತ್ರೀಮಾಡಿಕೊಳ್ಳಿ. ಬಾಟ್ಲಿ– ೫ ಆಣೆ. ಟ. ಖ ಬೇರೆ ಪ್ರತ್ಯೇಕ ಸ್ಥಳದಲ್ಲಿ ಏಜಂಟರು ಬೇಕು.

ಪೋರವಾಲ ಆ್ಯಂಡ ಕೊ.(ರಜಿಸ್ಟರ್ಡ) ಪುಣೇಶಹರ

ಆಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ
ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ ಖ ಪುಕ್ಕಟ

ಟಿಪ್ಪಣೀಃ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಪತ್ತು ಟಾಯಿಮ ವಗೈರೆ ನೋಡಿ ಕಳಿಸವೆವು

ಲಿಬರ್ಟಿ ವಾಚ ಕಂ. (In ia) ಮುಂಬೈ ನಂ. ೪

ಕಾನಡಾವಧುರೀಣ.

ಉತ್ತಮ ವರ್ಗದ ವಾರಪತ್ರಿಕೆ

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡಲಿಚ್ಛಿಸುವವರು ಆ ವಾರಪತ್ರಿಕೆಯನ್ನು ಮೊದಲು ಓದಬೇಕು.

ವಾರ್ಷಿಕ ಚಂದಾ ೩-೧೩-೦ ಪತ್ರಃ—

ಸಂಪಾದಕ ಕಾನಡಾಧುರೀಣ- ಕುಮಟಾ, ಜಿ ಉತ್ತರ ಕನ್ನಡ

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಪೈಸೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸಃ— "ಗೆಳೆಯರ ಗುಂಪು" ಹಲಸಂಗಿ.

ಜಿಲ್ಲಾ ವಿಜಾಪೂರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ
ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಸಂಗಳವೇಷೇ ಬಂಧುಗಳ ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೪—೦ ಮಾತ್ರ

ಜಯ ಕರ್ನಾಟಕ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೭ | ಬಾಗಲಕೋಟೆ ಪ್ರಕಾಶ ಮಿತಿ ಜ್ಯೇಷ್ಠ ಶುದ್ಧ ೮ ಶಕೆ ೧೮೪೮ ತಾ|| ೧೮ ೬-೧೯೨೬. | ಸಂಚಿಕೆ ೧೪

ಸಂಪಾದಕನ ಭಾಷಣ

ನನ್ನ ಮನಸಿನ ಸೋಜಿಗವಾದ ಕಟ್ಟಿದೆನಾನು ।
ನಿನ್ನ ಬೆರಳು ತಾಗಿದಂಥ ಸುಕ್ಕಳ ಜೊತ್ನು।
ಬಿನ್ನದಾಣದ ಚಿನ್ನ ಮಣಿಬದ್ದ ನೊಂದು ಚಿನ್ನಯಾಶಾಸದಕ್ಕೆ ॥
ನನ್ನ ಜೀವವು ನಿನ್ನ ಸಿಂಹಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ನಿಶ್ಚಯಿಸಿದೆ ।
ನನ್ನ ಸ್ತ್ರೀಣವು ನಿನ್ನ ಗಂಧವನು ಹೀರಬಲ್ಲ ಗಂಧವಹವೆಂದು ತಿಳಿದಿಯ॥

—ಅಂಬಿಕಾ ತನಯ ದತ್ತ

ಕರ್ನಾಟಕದ ಸಾಹಿತ್ಯವನ್ನು ಬೆಳೆಸುವ ಮಾರ್ಗಗಳು ಅನೇಕವುಂಟು. ಹೆಣ್ಣುಮಕ್ಕಳ ಬಾಯೊಳಗಿನ ಹಾಡುಗಳನ್ನು ಅಜ್ಜಿಯರು ಹೇಳುವ ಕತೆಗಳನ್ನು ಕೂಡಿ ಹಾಕುವದು ಅವುಗಳೊಳಗಿನದೊಂದು. ನಮ್ಮ ಸಾಹಿತ್ಯವು ಮುಗಿಲಿನಂತೆ ಅನಂತವಾಗಿದೆ. ಭಗವದ್ಗೀತೆ, ಮಹಾಭಾರತದೊಳಗಿನ ಮುಖ್ಯ ಮುಖ್ಯ ಕತೆಗಳು ರಾಮಾಯಣ, ಭಾಗವತ ಮೊದಲಾದವುಗಳು ನಮ್ಮ ಹೆಂಗಳೆಯರಲ್ಲಿ ಹಾಡುಗಳ ರೂಪದಿಂದ ಜೀವಂತವಾಗಿವೆ. ಅವುಗಳ ಭಾಷೆಯು ಬಳಕೆ ಎದಿದ್ದು ಅವುಗಳಲ್ಲಿ ಮಾಧುರ್ಯ ಸೌಕುಮಾರ್ಯಗಳೂ, ರಸಭಾವಗಳೂ, ನಲಿದಾಡುತ್ತಿವೆ ಇಂತಹ ಸಾಹಿತ್ಯತನ್ನು ಕಾಣಬೇಕಾದರೆ ಕೆಲವರಿಗೆ ತಮ್ಮ ಆಯುಷ್ಯವನ್ನೆಲ್ಲ ಇದರಲ್ಲಿ ಕಳೆಯಬೇಕಾಗುವದು. ಪ್ರಾಚೀನ ಸಾಹಿತ್ಯದ ಪುನರುಜ್ಜೀವನದಲ್ಲಿಯೇ ಹೊಸ ಜೀವನದ ಸ್ಫೂರ್ತಿಗಳಿರುವವು. ಹೊಳಕೆಗಳಿರುವವು. 'ಪಿತ್ತಲಗೊಂಬೆ' ಯಂತಹ ಎಷ್ಟೋ ಶಬ್ದಗಳು ಮರೆತು ಹೋಗುವವು. ಶಬ್ದ ಭಾಂಡಾರವೇ ಕೆಟ್ಟು ಹೋಗುವ ಸಮಯವು ಒದಗಬಹುದು, ಕತೆಗಳಾದರೂ ಕೂಡಿಡಲು ಯೋಗ್ಯವಾದಂಥವುಗಳಿರುತ್ತವೆ. ಮುತ್ತಿನ ಸೀರೆಯ ಕತೆಯು ಒಳ್ಳೆ ಹೃದಯದ್ರಾವಕವಾಗಿದೆ. ತಾಯಿ ತಂದೆಗಳಿಲ್ಲದ ಪರದೇಶಿ ಹುಡುಗಿಯು ಅಣ್ಣ ಅತ್ತಿಗೆಯ ಹತ್ತಿರ ಇರುತಲಿದ್ದಿತು. ಮುತ್ತಿನ ಸೀರೆಯ ಬಗ್ಗೆ ಆ ಹುಡುಗಿಯ ಅಣ್ಣನು ತನ್ನ ಹೆಂಡತಿಯ ಮಾತು ಕೇಳಿ ಅವಳನ್ನು ಕೊಂದನು. ಆ ಹುಡುಗಿಯ ಆತ್ಮವು ಹೇಗೋ ತುಳಸಿಯ ವೃಂದಾವನದಲ್ಲಿ ಸೇರಿತು, ಅತ್ತಿಗೆಯು ತುಳಸಿಯ ದಳಗಳನ್ನು ಹರಿಯಹೋಗಲು,

ಮುಟ್ಟ ಮುಟ್ಟ ಅತ್ತಿಗೀ।
ಮುಟ್ಟಿದರ ಕೆಟ್ಟಿ ಅತ್ತಿಗೀ.
ಮುತ್ತಿನ ಸೀರಿ ಕಾಲಾಗ
ಕುತ್ತಿಗಿ ಕೊಯ್ಸಿದ ಅತ್ತಿಗಿ.

ಎಂಬ ಧ್ವನಿಯು ಅವಳ ಕಿವಿಗೆ ಬಿತ್ತು. ಅದನ್ನು ತನ್ನ ಗಂಡನಿಗೆ ಹೇಳಲು, ಅವನು ದಳಗಳನ್ನು ಹರಿಯಹೋದನು ಆಗ—

ಮುಟ್ಟ ಮುಟ್ಟ ಅಣ್ಣಾ!
ಮುಟ್ಟಿದರ ಕೆಟ್ಟಿ ಅಣ್ಣಾ!
ಮುತ್ತಿನ ಸೀರಿ ಕಾಲಾಗ
ಕುತ್ತಿಗಿ ಕೊಯ್ಸಿದ ಅಣ್ಣಾ!

ಇಂತಹ ಕರುಣ ರಸ್ತ್ರವಿಸುವ ನುಡಿಗಳು ಅವನ ಕಿವಿಗೆ ಬಿದ್ದವು. ಈ ಕಥೆಯಲ್ಲಿ ಎಷ್ಟು ವ್ಯಂಗವಿದೆ, ಹೃದಯಸ್ಪರ್ಶಿತ್ವವಿದೆ, ಕರುಣೆಯು ಕೋಮಲಭಾವವಿದೆ ಎಂಬುದನ್ನು ಓದುಗರೇ ಊಹಿಸಲಿ. ನೀತಿಯ ಕಥೆಗಳು, ಸಮಾಜದ ಸ್ಥಿತಿಯನ್ನು ಬಿಚ್ಚಿಸುವ ವಿಧವಿಧವಾದ ಕತೆಗಳು, ಇನ್ನೂ ಮುದುಕಿಯರ ಬಾಯಿಂದ ಕೇಳಬರುತ್ತಲಿವೆ. ಇನ್ನು ಕೆಲವಿನ ಕನ್ನಡಿಗರು ಸುಮ್ಮನೆ ಕುಳಿತರೆ ಅವೆಲ್ಲ ಅವರು ಮಡಿದನಂತರ ಅವರೊಡನೆ ತೆರಳಿ ಹೋಗುವವು. ಇವರಿಂದ ರವೀಂದ್ರನಾಥ ಟಾಗೋರರಂಥ ಪ್ರತಿಭಾಶಾಲಿಗಳು ನಮಗೆ ಬೇಕಿರುವರು. ಈ ಕತೆಗಳಲ್ಲಿಯ ಸೌಂದರ್ಯ ರಹಸ್ಯಗಳನ್ನು ತೋರಿಸತಕ್ಕಂಥ ದಿವ್ಯ ಪುರುಷರು ನಮಗೆ ಬೇಕಾಗಿದ್ದಾರೆ. 'ಹೆಂಗೊಬ್ಬ ಅರಸನಿದ್ದ' ಎಂಬುದರಲ್ಲಿ ಅಡಕವಾಗಿರುವ ಗೂಢವನ್ನು ತಿಳಿಯಿಸುವ ರಸಯೋಗಿಯು ಬೇಕಾಗಿದ್ದಾನೆ. ಒಳಕೆಯ ಸ್ತೋತ್ರಗಳಲ್ಲಿ ಕಾವ್ಯದ ಬೆಲ್ಲದ ಬಣ್ಣಗಳನ್ನು ಒಳಹೊಗಿಸುವವನು ಬೇಕಿರುವನು. ಕಣ್ಣು ಕಾಣುವ ಗಾವಿಲರು ಬೇಕು; ಕ್ಷೇತ್ರಗಳ ಹೆಡಿಗಳು ಬೇಡ.

ಕರ್ನಾಟಕದ ಸ್ತ್ರೀಯರಲ್ಲಿ ಜ್ಞಾನದ ಪ್ರಸಾರವನ್ನು ಮಾಡಲು ಹೆಣಗುವ ಮಾಸಪತ್ರಿಕೆಗಳಲ್ಲಿ **ಸರಸ್ವತಿಯೊಂದಾಗಿದೆ.** ಇದು ಬೆಂಗಳೂರಿಂದ ಹೊರಡಹತ್ತಿ ಆರು ವರ್ಷಗಳಾಗಿರುವವು. ಇದರ ಸಂಪಾದಕಿಯರು ಆರ್. ಕಲ್ಯಾಣಮ್ಮನವರು ಇದರಲ್ಲಿ ಖಂಡಕಾವ್ಯಗಳೂ ನೀತಿಯ ಕಥೆಗಳೂ, ನಾಟಕಗಳೂ, ಕರ್ನಾಟಕ ವಿಭೂತಿಗಳ ಚರಿತ್ರೆಗಳೂ ಪ್ರಕಟವಾಗುತ್ತಲಿವೆ. ಸ್ತ್ರೀಯರಿಗೂ, ಬಾಲಿಕೆಯರಿಗೂ, ಉಪಯುಕ್ತ ವಿರುವ ಲೇಖನಗಳು ಸರಳವಾದ ಭಾಷೆಯಲ್ಲಿ ಬರೆಯಲ್ಪಡುತ್ತವೆ. ಈ ಆರನೇ ವರ್ಷದಿಂದ ಸರಸ್ವತಿಯಲ್ಲಿ "ಪ್ರಸಿದ್ಧ ಲೇಖನಗಳಿಲ್ಲದ ಕುಸುಮ ಕುಂಜ, ಮುತ್ತಿನ ಸರ ಗೃಹವಿಜ್ಞಾನ, ಮತ್ತು ಮನೋರಂಜನೆಯ

ಮೊದಲಾದ ಸ್ಥಿರ ಶೀರ್ಷಿಕೆಗ" ಳನ್ನು ಪ್ರಾರಂಭಿಸಿರುವರು. "ಮುಂದಿನ ಸಂಚಿಕೆಯಿಂದ ಚಾರು ಚರಿತಾವಳಿ, ಸುಮನ ಸಂಚಯ ಸ್ತ್ರೀ ಸಂಸಾರ ಎಂಬೀ ಮೂರು ಹೊಸ ಶೀರ್ಷಿಕೆಗಳನ್ನೂ ಹೆಚ್ಚಿಸು ವೆವಲ್ಲದೆ ಕನ್ಯಾ ಕೈಪಿಡಿ ಎಂಬ ಮತ್ತೊಂದು ವಿಷಯವನ್ನು ಪ್ರಕ ಟಿಸಲಿರುವೆವು. ಇದರಲ್ಲಿ ಕನಿಷ್ಟ ಪಕ್ಷ ಮೂರು ಪುಟಗಳಷ್ಟು ವಿಷಯವು ಕೇವಲ ಹುಡುಗಿಯರ ಸಲುವಾಗಿಯೇ ಬರೆಯಲ್ಪಡು ವುದು.!!" ಎಂದು ನುಡಿಗನ್ನಡಿಯಲ್ಲಿ ತಿಳುಹಿಸಿದೆ ಈ ವರ್ಷದಿಂದ ಇವರು ಬಡವಿದ್ಯಾರ್ಥಿನಿಯರಿಗೆ ಧರ್ಮಾರ್ಥ ಸರಸ್ವತಿಯ ಸಂಚಿಕೆ ಗಳನ್ನು ಕೊಡಬೇಕೆಂದು ಸಂಕಲ್ಪ ಮಾಡಿದ್ದಾರೆ. ಈ ವರ್ಷ ೧೫ ಜನರಿಗೆ ಮಾತ್ರ ಧರ್ಮಾರ್ಥ ಕೊಡುವರು. ಆರ್ಥಿಕಸ್ಥಿತಿಯು ಸುಧಾ ರಿಸಲು ಇನ್ನೂ ಹೆಚ್ಚು ಜನರಿಗೆ ಕೊಡುವರು ಕಲ್ಯಾಣಾಭಿನಿವೇಶಿ ಗಳಾದ ಕಲ್ಯಾಣಮ್ಮನವರ ಸಂಕಲ್ಪವು ಸತ್ಯ ಸಂಕಲ್ಪನ ಅನುಗ್ರ ಹದಿಂದ ಕೈಗೂಡಲಿ. ಔದಾರ್ಯಶಾಲಿಗಳೆಂದು ಖ್ಯಾತಿಗೊಂಡ ಕನ್ನಡಿಗರು, 'ಸರಸ್ವತಿ'ಯನ್ನು ಪೋಷಿಸಿದರೆ, ನಮ್ಮೆಲ್ಲರ ನುಡಿ ಯಲ್ಲಿ ಅವಳು ಒಲಿದು ನೆಲಸುವಳು. 'ಮಲ್ಲಿಗೆ'ಯ ಕೋರಿಕೆಯು ಕೊನೆಗಾಣುವುದು. ಸರಸ್ವತಿಯು ಕನ್ನಡಿಗರ ಕೊರಳ ಹಾರವಾ ಗುವಳು

ವಿಶ್ವವಿದ್ಯಾಲಯದ ಪ್ರವೇಶ ಪರೀಕ್ಷೆ (ಮ್ಯಾಟ್ರಿಕ್) ಗಿರುವ ಮಾತೃಭಾಷೆಗಳನ್ನು (ಕನ್ನಡ ಮರಾಠಿ ಇವೇ ಮೊದ ಲಾದವುಗಳನ್ನು) ಕಾಲೇಜದ ಮೊದಲಿನೆರಡು ಪರೀಕ್ಷೆಗಳಿರುವ ಎರಡನೆಯ ಭಾಷೆಗಳೊಂದಿಗೆ (ಸಂಸ್ಕೃತ, ಪಾರ್ಸಿ, ಫ್ರೆಂಚ ಮೊದ ಲಾದವುಗಳೊಂದಿಗೆ) ಸೇರಿಸಬೇಕೆಂಬ ಸಿಂಡಿಕೇಟಿನ ಸೂಚನೆಯ ಬಗ್ಗೆ ವಿಚಾರ ಮಾಡಲು ಕಳೆದ ಶನಿವಾರ ಮುಂಬಯಿ ವಿಶ್ವವಿದ್ಯಾ ಲಯದ ಸಿನೇಟದ ಸಭೆಯು ಕೂಡಿತ್ತು. ಪ್ರವೇಶ ಪರೀಕ್ಷೆಗೂ ಕಾಲೇಜದ ಮೊದಲಿನೆರಡು ಪರೀಕ್ಷೆಗಳಿಗೂ ಎರಡು ಆವಶ್ಯಕ ಭಾಷೆ ಗಳಿರಬೇಕೋ, ಅಥವಾ ಮೂರಿರಬೇಕೋ,? ಹಾಗಿದ್ದಲ್ಲಿ ಯಾವ ಯಾವ ಭಾಷೆಗಳಿರಬೇಕು. ಎಂಬುದೇ ಅಲ್ಲಿಯ ಮುಖ್ಯವಾದ ಚರ್ಚೆಯ ವಿಷಯವಾಗಿತ್ತು. ಎರಡು ಮೂರು ತಾಸು ಚರ್ಚೆ ಯಾದ ಮೇಲೆ ಪ್ರವೇಶ ಪರೀಕ್ಷೆಯಲ್ಲಿ ಏನೂ ಬದಲಾಗದೆ ಅದು ಇದ್ದಂತೆ ಇರಬೇಕೆಂತಲೂ, ಕಾಲೇಜದ ಮೊದಲಿನೆರಡು ಪರೀಕ್ಷೆ ಗಳಿಗೆ ವಿದ್ಯಾರ್ಥಿಗಳು ತಮ್ಮಿಷ್ಟದಂತೆ ಕ್ಲಾಸಿಕಲ್ ಭಾಷೆ (ಸಂಸ್ಕೃ ತ, ಪಾರ್ಸಿ, ಫ್ರೆಂಚ ಇವೇ ಮೊದಲಾದವುಗಳು) ಯನ್ನಾಗಲಿ ಮಾತೃಭಾಷೆಯನ್ನಾಗಲಿ ಎರಡನೆಯ ಭಾಷೆಯನ್ನಾಗಿ ಅಭ್ಯಾಸ ಮಾಡಬಹುದೆಂದೂ ನಿರ್ಣಯವಾಯಿತು ಮುಂಬಯಿ ವಿಶ್ವವಿದ್ಯಾ ಲಯದ ಈ ನಿರ್ಣಯವು ಯೋಗ್ಯವಾದುದೂ ಸುಸಂಗತವಾದುದೂ ಇರುತ್ತದೆ. ಪ್ರವೇಶಪರೀಕ್ಷೆಗೆ ಮಾತೃಭಾಷೆಯನ್ನು ಐಚ್ಛಿಕ ವಾಗಿ ಕೊಟ್ಟು, ಕಾಲೇಜದ ಮೊದಲಿನೆರಡು ಪರೀಕ್ಷೆಗಳಿಗೆ ಕೂಡ ದಿದ್ದರೆ, ಅದು ವಿಸಂಗತವಾಗುತಲಿದ್ದಿತು. ಕನ್ನಡ ಅಥವಾ ಮರಾಠಿಯನ್ನು ಹೈಸ್ಕೂಲಿನಲ್ಲಿ ಅಭ್ಯಾಸ ಮಾಡಿ, ಕಾಲೇಜದಲ್ಲಿ ಒಮ್ಮೆಲೆ ಸಂಸ್ಕೃತವನ್ನು ಓದುವುದು ಅಶಕ್ಯವಾದ ಮಾತು. ಕೆಲ ಮಟ್ಟಿಗೆ ಅದು ಅಪರಿಹಾರ್ಯವಾದುದು. ಸಂಸ್ಕೃತ ಬಾರದ್ದಕ್ಕಾಗಿ, ಎಷ್ಟೋ ಹುಡುಗರು ಕಾಲೇಜದ ಶಿಕ್ಷಣಕ್ಕೆ ಎರವಾಗುತ್ತಿದ್ದರು. ಸಿನೇಟದ ಯೋಗ್ಯ ನಿರ್ಣಯದಿಂದ ಎಲ್ಲ ತೊಂದರೆಗಳ ಇಲ್ಲದಂತಾ ದವು ಸಿನೇಟವು ತಾನೇ ದೇಶಾ ಲೋತ್ಪಾದನವನ್ನು ಮಾಡಿ, ತಾನೇ ಅದರ ಉಪಶಮನವನ್ನೂ ಮಾಡಿದಂತಾಯಿತು.

× × × ×

ಪ್ರವೇಶ ಪರೀಕ್ಷೆಗೆ ಸಂಸ್ಕೃತ ಆವಶ್ಯಕವಾಗಿ ಮಾ ಡಬೇಕೆಂದು ನಮ್ಮ ಮಿತ್ರ ಪ್ರೊ. ಕಾಂ...ರವರು ತಂದ ಸೂಚ ನೆಯಂತೆ, ಪ್ರವೇಶ ಪರೀಕ್ಷೆಗೆ ಮಾತೃಭಾಷೆ ಸಂಸ್ಕೃತ, ಇಂಗ್ಲೀ ಷ, ಹೀಗೆ ಮೂರು ಭಾಷೆಗಳನ್ನೇಕೆ ಇಡಬಾರದು ? ಸಂಸ್ಕೃತ ಭಾಷೆ ಯ ಜ್ಞಾನವು ಪ್ರತಿಯೊಬ್ಬ ಹುಡಗನಿಗೆ ಅಲ್ಪಸ್ವಲ್ಪ ಇರಲೇ ಬೇಕು. ನಾವು ಹಿಂದುಗಳು ಹಿಂದೂ ಧರ್ಮದ ತತ್ವಗಳೆಲ್ಲ ಸಂಸ್ಕೃತ ಭಾಷೆಯಲ್ಲಿ ಬರೆದಿಡಲ್ಪಟ್ಟಿವೆ ಅದು ನಮ್ಮ ಸಂಸ್ಕೃತಿಯ ಜೀವನ ರಸ. ನಮ್ಮ ಭಾಷೆಗಳ ತಾಯಿ. ನಮ್ಮ ಇಚ್ಛೆಯನ್ನು ಪೂರ್ಣ ಮಾಡುವ ಕಲ್ಪಲತೆಯು. ನಮ್ಮ ಏಳ್ಗೆಯನ್ನುಂಟು ಮಾಡುವ ಅಮೋಘವಾದ ಸಾಧನವು. ವ್ಯವಹಾರಕ್ಕೂ ಅತ್ಯುಪಯುಕ್ತವಾದುದು. ಕನ್ನಡ ಅಥವಾ ಮರಾಠಿಯ ಅಭ್ಯಾಸವನ್ನು ಮಾಡಬೇಕಾದರೆ ಅದರ ಜ್ಞಾ ನವು ಬೇಕೇ ಬೇಕು. ಮೋರೋ ಪಂತನ ಗ್ರಂಥಗಳನ್ನು ತಿಳಿದು ಕೊಳ್ಳಬೇಕಾದರೆ ಸಂಸ್ಕೃತದ ಜ್ಞಾನವು ಆವಶ್ಯಕವಾದುದು. ಪಂಪ ನ ಆದಿಪುರಾಣ, ರುದ್ರಭಟ್ಟನ ಜಗನ್ನಾಥವಿಜಯ ಇವೇ ಮೊದ ಲಾದ ಕನ್ನಡ ಗ್ರಂಥಗಳನ್ನು ಓದಬೇಕಾದರೆ ಸಂಸ್ಕೃತದ ಪರಿಚ ಯವು ಬೇಕು. ಸಾಹೇಬರಾದ ಮ್ಯಾಕ್ಸಮುಲ್ಲರ್ ಲೋರಿ ಮೊದಲಾ ದವರಿಗೆ ಸಂಸ್ಕೃತದ ಮಹತ್ವವು ತಿಳಿದು ನಮ್ಮ ದೇಶಬಾಂಧವರಿಗೆ ತಿಳಿಯಬಾರದೆಂದರೆ ನಮ್ಮ ದುರ್ದೈವ.

× × × ×

ಸಂಸ್ಕೃತದ ಅಭ್ಯಾಸ ಮಾಡುವುದು ಬ್ರಾಹ್ಮಣೇತರರಿಗೆ ಹಗುರಾದ ವಿಷಯವಲ್ಲೆಂದು ಒಬ್ಬರು; ಬ್ರಾಹ್ಮಣರಿಗೆ ಅದರ ಬಳಕೆ ಇರುತ್ತದೆ, ಬ್ರಾಹ್ಮಣೇತರರಿಗೆ ಇರುವದಿಲ್ಲ ಎಂದು ಮತ್ತೊಬ್ಬರು ಸಭೆಯಲ್ಲಿ ನುಡಿದರು ಇಂಗ್ಲೀಷ ಅಭ್ಯಾಸ ಮಾ ಡುವುದು ಹಗುರಾದ ವಿಷಯವೆಂದು ಇವರು ತಿಳಿದಿರುವರೋ? ಇಂಗ್ಲೀಷ ಭಾಷೆಗಿಂತ ಸಂಸ್ಕೃತ ಭಾಷೆಯು ಎಷ್ಟೋ ಹಗುರಾಗಿ ಹೋಗುವುದು. ಅಭ್ಯಾಸಮಾಡುತ್ತ ಹೋದರೆ ಬಳಕೆಯಾಗುತ್ತ ಹೋಗುವುದು. ಈಗ ಸಂಸ್ಕೃತದಲ್ಲಿ ಪಂಡಿತರಾದ ಬ್ರಾಹ್ಮಣೇತ ರರು ಬಹಳ ಜನರಿರುವರು. ಬಿಗಿಯೆಂದು ಸಂಸ್ಕೃತವನ್ನು ಹಾರಿಸಿ ಬಿಡುವುದು ಯೋಗ್ಯವಾಗಲಾರದು. ಸಂಸ್ಕೃತವನ್ನು ಅಭ್ಯಾಸ ಮಾಡಿದರೆ ಮುಂದಿನ ಪ್ರಗತಿಗೆ ಸಹಾಯವಾಗುವುದು. ಆದ್ದ ರಿಂದ ಪ್ರವೇಶ ಪರೀಕ್ಷೆಗೆ ಸಂಸ್ಕೃತವನ್ನು ಆವಶ್ಯಕ ವಿಷಯವಾಗು ವಂತೆ ಎಲ್ಲರೂ ಪ್ರಯತ್ನ ಪಡಬೇಕು.

× × × ×

ಮೈಸೂರಿನ ಜಗನ್ಮೋಹನ ಅರಮನೆಯಲ್ಲಿ ಪ್ರತಿನಿಧಿ ಸಭೆಯ ಅಧಿವೇಶನವು ಇದೇ ತಿಂಗಳಿನ ೧೪ ನೇ ತಾರೀಖಿಗೆ ಜರು ಗಿತು. ಸಭೆಗೆ ಮೈಸೂರ ಸಂಸ್ಥಾನದ ಎಲ್ಲ ಭಾಗಗಳಿಂದಲೂ ಪ್ರತಿ ನಿಧಿಗಳು ಬಂದಿದ್ದರು. ಪ್ರೇಕ್ಷಕರ ಆಸನಗಳೆಲ್ಲ ತುಂಬಿ ಹೋಗಿ ದ್ದವು. ಹೊಸ ದಿವಾಣರಾದ ಅಮೀನ- ಉಲ್ ಮುಲ್ಕ ಮಿರ್ಜಾ ಮಹಮ್ಮದ ಇಸ್ಮಾಯಿಲರವರು ಬಂದೊಡನೆ ಎಲ್ಲರೂ ಅವರನ್ನು ಆದರದಿಂದ ಬರ ಮಾಡಿ ಕೊಂಡರು. ರಾಜಕೀಯ ಪ್ರಗತಿಗೆ ಲೋ ಕಶಿಕ್ಷಣವೇ ಮೂಲವೆಂದೂ, ಶಿಕ್ಷಣದ ಅರ್ಥದ ಬೆಳವಣಿಗೆಯ ದಂತೆ ಅವಾದರೂ ಆಗುವದಿಲ್ಲೆಂದೂ ನುಡಿದು ಮೈಸೂರ ಸಂಸ್ಥಾ ನದ ಪ್ರಗತಿಯು ಸರ್ವತೋಮುಖ ಆಗುವಂತೆ ಯತ್ನಿಸುವೆ ವೆಂದು ಅವರು ಹೇಳಿದರು. ಮನೆಮಾರಿಗೆಯ ವ್ಯವಸಾಯಗಳಿಗೆ ಇವರು ತಮ್ಮ ಭಾಷಣದಲ್ಲಿ ಮಹತ್ವವನ್ನು ಕೊಟ್ಟಿರುವರಲ್ಲದೆ, ಅವುಗಳು ನಾಡಿನ ಏಳ್ಗೆಯ ಮೂಲ ಸಾಧನಗಳೆಂದು ಹೇಳಿರು ವರು. ಕೆರೆ ಕಾಲುವೆ ಆರೋಗ್ಯ, ವಿದ್ಯುತ್ತು ಇವೇ ಮೊದಲಾದ ವುಗಳ ಬಗ್ಗೆ ತಾವೇನು ಕೊಡಬೇಕೆಂದಿರುವದೆಂಬುದನ್ನು ಹೇಳಿ ನಾನು ದಿವಾನ ಪದವಿಯನ್ನು ಅಧಿಕಾರಕ್ಕಾಗಿ ಸ್ವೀಕರಿಸಿಲ್ಲ; ಅದನ್ನು ಅಧಿಕಾರದ ಸ್ಥಾನವೆಂದು ಬಗೆಯುವದಿಲ್ಲ ಆದರೆ ಅದೊಂ

ದು ನಾಡಿನ ವಿಷಯದಲ್ಲಿದ್ದ ಪ್ರೇಮವನ್ನು- ಭಕ್ತಿಯನ್ನು- ತೋರಿಸುವ ಮಾರ್ಗ- ಸೇವೆಯನ್ನು ಮಾಡುವ ಸಾಧನ- ಎಂದು ಸ್ವೀಕರಿಸಿದ್ದೇನೆಂದು ಹೇಳಿ ಭಾಷಣವನ್ನು ಮುಗಿಸಿದರು. ಇದರಮೇಲಿಂದ ದಿವಾಣರ ಉಚ್ಚಧ್ಯೇಯವೂ ಸ್ವದೇಶ ಪ್ರೀತಿಯೂ ಪ್ರಜಾಪಕ್ಷಪಾತವೂ ವ್ಯಕ್ತವಾಗುತ್ತಿವೆ. ನುಡಿಯಂತೆ ನಡೆದು ವಿಚಾರ ಆಚಾರಗಳು ಪರಸ್ಪರ ಹೊಂದಿಕೆಯುಳ್ಳವುಗಳಾಗಿರುವವೆಂದು ತೋರಿಸಿ ದಿವಾಣರು ಧನ್ಯರಾಗಲಿ ಮೈಸೂರ ಸಂಸ್ಥಾನವು ಪ್ರಗತಿಪರ ಸಂಸ್ಥಾನಗಳಿಗೆ ಮೇಲು ಪಂಕ್ತಿಯಾಗಲಿ.

ವೃತ್ತಪತ್ರಗಳೇನನ್ನುತ್ತವೆ?

ಕರ್ತವ್ಯ ಲೋಪ.

"ಬ್ರಿಟಿಶರು ಭರತಖಂಡದ ರೇವನ್ನು ಬಿಟ್ಟರೆ ಭಾರತೀಯರ ಬಂಡೆಗಳು ಬಿದ್ದುಹೋಗುವುವು."

"ಬ್ರಿಟಿಶ್ ಸೈನ್ಯವನ್ನು ಹಿಂತೆಗೆಯಿರಿ. ಕೂಡಲೇ ಹಿಂದೂ ಮಹಮ್ಮದೀಯರು ಒಬ್ಬರನ್ನೊಬ್ಬರು ಹಾರಾಡಿ, ಕಾದಾಡಿ ಕೊನೆಗಾಣುವರು."

ಇವೇ ಪರಂಪರೆಯ ವಾದಿಗಳ, ಪರದಾಸ್ಯದ ಪರಾಕುಗಾರರ ಪಲ್ಲವಿ. "ನಾವಿದ್ದರೆ ಭಾರತೀಯರಿಗೆ ಸ್ವರ್ಗ; ನಾವಿದ್ದರೆ ನರಕ" ವೆಂಬ ಮತದಲ್ಲಿ ತ್ರಿಕರಣಶುದ್ಧಿಯಾದ ನಂಬುಗೆಯನ್ನಿಟ್ಟು, ಅವರಂತೆ ಅಹರ್ನಿಶಿಯೂ ನಡೆಯುವ ಆಳರಸರ ಮೇಲೆ ನಾವು ಯಾವ ಬಗೆಯ ಆಪಾದನೆಯನ್ನು ತರಲಾಗದು. ಈ ಬಗೆಯ ನಂಬುಗೆಗೆ ಅವರ ಸ್ವಾರ್ಥದ ಪರಾಕಾಷ್ಠತೆಯೇ ಕಾರಣವಾಗಿರಬಹುದು. ಆದರೆ ಪರದಾಸ್ಯದಿಂದ ಸರ್ವನಾಶಹೊಂದಿದವನನ್ನೇ ದಾಸ್ಯಕ್ಕೆ ಕಾರಣಭೂತರಾದವರನ್ನು ಪಡೆದೈವವೆಂದು ನಂಬುವಂತೆ ಮಾಡಿ "ನೀನಗಾರು ಸರಿಯಿಲ್ಲ- ಎನಗಾರು ಗತಿಯಿಲ್ಲ" ಎಂಬ ಹಾಡುವ ಹುಚ್ಚನನ್ನಾಗಿ ಮಾಡಿದ ಆ ಆಳರಸರ ರಾಜ್ಯತಂತ್ರನೈಪುಣ್ಯವು ವಿಸ್ಮಯಕಾರಕವಾದುದಲ್ಲವೆ?

ಇವರಿಗೆ ಕಲ್ಕತ್ತೆಯ ದೊಂಬಿಯು ದೇವದತ್ತವಾದ ಪ್ರಸಾದದಂತೆ ಬಂತು. ವರ್ಷಗಟ್ಟಲೆ ಆಳರಸರಬಾಯಲ್ಲಿ ಕಲ್ಕತ್ತೆಯ ದೊಂಬಿಯ ಕಥೆಯು ನಲಿದಾಲಿಯತ್ತಿರುತ್ತದೆ. ಅವರು ಕಲ್ಕತ್ತೆಯ ಕಡೆ ಬೆಟ್ಟು ತೋರಿಸಿ,

"ಕಂಡಿರಾ! 'ಇದರಿಂದ ಹಿಂದುಸ್ಥಾನವು ಸ್ವರಾಜ್ಯಕ್ಕೆ ಅನರ್ಹವಾದುದೆಂಬುದು ಸ್ಪಷ್ಟವಾಗುವುದಿಲ್ಲವೆ?"

ಎಂದು ಹೇಳಿ ಹುರಿಮೀಸೆ ತೀಡುವರು.

ಕಲ್ಕತ್ತೆಯ ಪ್ರಕರಣವು ಹಿಂದೂಸ್ಥಾನದ ಪವಿತ್ರ ಇತಿಹಾಸದಲ್ಲಿ ಕಳಂಕಿತವಾದುದೆಂದು ಒಪ್ಪಲೇಬೇಕು. ಆಗ ಹಿಂದೂ ಮುಸಲ್ಮಾನರು ತಾವು ಸರರಲ್ಲ ಪಿಶಾಚಗಳೆಂಬುದನ್ನು ವ್ಯಕ್ತಪಡಿಸಿದರು. ಅಜ್ಞಾನದಿಂದ ಕೂಡಿದ ಪಶುಬಲ, ಅವಿವೇಕದಿಂದ ಕೂಡಿದ ಮತದ ಮತ್ತು ಇವೆರಡರಿಂದ ಸ್ವರ್ಗದಂತಹ ಭೂಮಿಯನ್ನು ನರಕವನ್ನಾಗಿ ಮಾಡಿದರು- ಇದಕ್ಕಾಗಿ ವ್ಯಸನವಾಗುತ್ತದೆ ಪಶ್ಚಾತ್ತಾಪವಾಗುತ್ತದೆ- ಆದರೆ ಈ ವಿಚಾರವನ್ನು ಪ್ರಧಾನವಾಗಿ ಮುಂದಿಟ್ಟು "ಭಾರತೀಯರೇ! ನೀವು ಸ್ವರಾಜ್ಯಕ್ಕೆ ಅರ್ಹರಲ್ಲ" ಎಂಬದಾಗಿ ಹೇಳುವುದು ಧರ್ಮವಲ್ಲ ನಾವು ಆ ಮಾತನ್ನು ಒಪ್ಪುವದಿಲ್ಲ. ಅದಕ್ಕೆ ಬದಲಾಗಿ ಬ್ರಿಟಿಷ್ ಆಡಳಿತವ್ಯವಸ್ಥೆಯಲ್ಲಿ ನಂಬಿತವರೊಬ್ಬರು ಹೇಳುವಂತೆ

"ಬ್ರಿಟಿಷರೆ! ಕಲ್ಕತ್ತೆಯ ಪ್ರಕರಣವು ಸರ್ವನಿಂದ್ಯವಾದುದೇ ನಿಜ. ಆದರಿಂದ ಬ್ರಿಟಿಷರು ಭರತಖಂಡವನ್ನಾಳಲು ಅನರ್ಹರೆಂಬುದನ್ನು ತೋರಿಸುತ್ತದೆ."

ಎಂಬದಾಗಿ ಹೇಳಬೇಕಾಗುತ್ತದೆ.

ಬ್ರಿಟಿಷರು ಒಂದೂವರೆ ಶತಮಾನಗಳಿಂದ ಈ ದೇಶವನ್ನಾಳುತ್ತಿರುವರು ಜನರ ಮೇಲೆ ಅವರಿಗೆ ಸರ್ವಾಧಿಕಾರವುಂಟು. ಶಿಕ್ಷಣ ಸೂತ್ರಗಳವರಲ್ಲುಂಟು. ಜನರ ಮನಸ್ಸನ್ನು ಬೇಕಾದಂತೆ ಸಿದ್ಧಮಾಡಬಹುದು. ಅವರ ಸ್ಥಿತಿಗಳನ್ನು ತಪ್ಪಿಸ್ಟಬಂದಂತೆ ತಿದ್ದಬಹುದು. ಆದರೆ ಕಲ್ಕತ್ತೆಯ ದೊಂಬಿಯನ್ನು ಕಂಡರೆ ಬ್ರಿಟಿಷರು ಒಹುಜನರ ಶಿಕ್ಷಣವನ್ನು ದುರ್ಲಕ್ಷ್ಯಮಾಡಿರುವರೆಂಬುದೂ, ಶತಮಾನಗಳಿಂದ ಅವರ ಹಣವನ್ನು ಸೆಳೆದು ಶ್ರೀಮಂತರಾಗಿ ಅವರನ್ನು ನಿರಕ್ಷರ ಕುಕ್ಷಿಗಳನ್ನಾಗಿ, ಪ್ರಪಂಚ ಜ್ಞಾನಶೂನ್ಯರನ್ನಾಗಿ, ಪಾಪ ಪುಣ್ಯ ವಿವೇಚನಾಜ್ಞಾನಶೂನ್ಯರನ್ನಾಗಿ ಹೆಚ್ಚೇಕೆ ಕೇವಲ ಕ್ರೂರಪ್ರಾಣಿಗಳನ್ನಾಗಿ ಮಾಡಿರುವರೆಂಬುದೂ ಸ್ಪಷ್ಟವಾಗುವದಿಲ್ಲವೆ? ಮತಭ್ರಾಂತಿಯು, ಮತದ್ವೇಷವು ಯಾರಿಗೂ ರಕ್ತದೊಳಗಿಲ್ಲ. ಪಿತ್ರಾರ್ಜಿತವಲ್ಲ ಬೀಜದೊಳಗಿಲ್ಲ; ಕ್ಷೇತ್ರದೊಳಗಿಲ್ಲ ಇದು ಬೆಳವಣಿಗೆಯಲ್ಲಿ ಮಧ್ಯೆ ಎಲ್ಲರಿಗೂ ಬಂದೊದಗುವ ವ್ಯಾಧಿ. ಶಾಸ್ತ್ರೀಯವಾದ ಸುಲಕ್ಷಣವೇ ಈ ವ್ಯಾಧಿಗೆ ತಕ್ಕ ಚಿಕಿತ್ಸೆ. ಚಿಕ್ಕ ಹುಡುಗನಾಗಲಿ, ದೊಡ್ಡವನಿಗೇ ಆಗಲಿ ಸೃಷ್ಟಿಕರ್ತನ ಸದಾಶಯಗಳನ್ನೂ ಸೃಷ್ಟಿಯ ಸೌಂದರ್ಯವನ್ನೂ ಸೋದರಭಾವ ಸ್ನೇಹಭಾವಗಳ ಸೌಭಾಗ್ಯವನ್ನೂ ತಿಳಿಸಿದರೆ ನರೆ ಹೊರೆಯನ್ನು ಅವನೆಂದಿಗೂ ಕೊಲ್ಲುವ, ಕಾಡುವ ಯೋಚನೆಗಳನ್ನು ಅವನೆಂದಿಗೂ ಮಾಡುವದಿಲ್ಲ. ಬ್ರಿಟಿಷರಿಗೆ ದುಡ್ಡಿರಲಿಲ್ಲವೇ? ಯೋಗ್ಯತೆಯಿರಲಿಲ್ಲವೆ? ತಕ್ಕಷ್ಟು ಕಾಲವಿರಲಿಲ್ಲವೆ? ಇಲ್ಲವಿತ್ತು ಆದರೆ ಭಾರತೀಯರಿಗೆ, ಪಾಮರಕೋಟಿಗೆ ವಿದ್ಯಾದಾನವಮಾಡಬೇಕೆಂಬ ಧರ್ಮಬುದ್ಧಿಯು, ಉದಾರಮನಸ್ಸು ಮಾತ್ರ ಅವರಿಗೆ ಬರಲಿಲ್ಲ. ಈ ಕರ್ತವ್ಯಲೋಪಕ್ಕಾಗಿ ಆಳರಸರು ಇಂದಲ್ಲ ನಾಳೆ ಪಶ್ಚಾತ್ತಾಪ ಪಡಲೇಬೇಕು ಕಲ್ಕತ್ತೆಯ ದೊಂಬಿಯ ಜವಾಬ್ದಾರಿಯನ್ನು ಅಂಧಶ್ರದ್ಧೆಯ ಅವಿವೇಕಾಚಾರದ, ಸರಳಬುದ್ಧಿಯ, ವಿಚಾರಶೂನ್ಯರಾದ ಪಾಮರರ ಹೆಗಲಿನ ಮೇಲೆ ಹೇರಿ ಸುಮ್ಮನಿರುವದಕ್ಕಿಂತ ಅದನ್ನು ಕಷ್ಟದಿಂದ ಪ್ರೇಮದಿಂದ ಪ್ರಜೆಗಳನ್ನು ನೋಡದ, ಕೈಯಿಂದೂ ಔದಾರ್ಯದಿಂದ ಸದ್ವಿದ್ಯೆಯನ್ನು ಜನರಿಗೆ ನೀಡದೆ, ಸರ್ವಶಕ್ತರಾದ ಆಳರಸರು ತಲೆಯ ಮೇಲೆ ಹೇರಿಕೊಳ್ಳುವದು ಧರ್ಮವಾಗಿದೆ.

—ವಿಶ್ವ ಕರ್ನಾಟಕ

"ಗದ್ದಲ ಹೆಚ್ಚು; ಕೆಲಸ ಕಡಿಮೆ"

ಇದೇ ಈಗ ಸ್ವರಾಜಿಸ್ಟ ಪಕ್ಷದ ಒಂದು ಮುಖ್ಯ ಧ್ಯೇಯವಾದಂತೆ ಕಂಡುಬರುತ್ತದೆ. ಕೌನ್ಸಿಲಿನ ಪ್ರವೇಶೋತ್ಸವ ಮತ್ತು ಕೌನ್ಸಿಲಿನ ವಾದವಾಗ್ವಾದ ಇವೆರಡನ್ನು ಬಿಟ್ಟು ಬಿಟ್ಟರೆ, ಸ್ವರಾಜ್ಯವಾದಿಗಳು ತಾವು ಮಾಡಿದೆವೆಂದು ಹೇಳಿಕೊಳ್ಳಲು ಏನೂ ಇಲ್ಲ. ಮಾತ್ರವಲ್ಲ; ಅಸಹಕಾರದ ಫಲವಾಗಿ ಯಾವದು ರಾಷ್ಟ್ರೀಯ ಜೀವನದಲ್ಲಿ ಮೊಳಕೆಗೊಂಡಿದ್ದಿತೋ, ಅದನ್ನು ನೀರು ಹೊಯ್ಯದೆ ಒಣಗಿಸಿದ ದೇಶದ್ರೋಹವು ಇವರ ಭಾಗಕ್ಕೇ ಸೇರಬೇಕಾಗಿದೆ. ಈ ದೋಷಲೋಪವನು, ನಮ್ಮ ಪ್ರಾಂತದವರಲ್ಲದಿದ್ದರೂ ಬಂಗಾಳದ ಸ್ವರಾಜ್ಯಪಾರ್ಟಿಯ ಅನುಭವಕ್ಕೆ ತಂದುಕೊಂಡು ಆ ಕರ್ತವ್ಯವನ್ನು ಚಿಂತಿಸುತ್ತಿರುವುದು ವಾಸ್ತವವಾಗಿಯೂ ಶ್ಲಾಘನೀಯವಾಗಿದೆ- ಅಲ್ಲಿ ಸ್ವರಾಜ್ಯಪಾರ್ಟಿಯ ತರುಣ ಮೆಂಬರರಲ್ಲಿ ಒಂದು ಬಗೆಯ ಅಸಮಾಧಾನವು ತಲೆಯದೋರಿದೆಯಂತೆ ಕಾರಣ? 'ಸ್ವರಾಜ್ಯ ವಾದಿಗಳ ಕಾರ್ಯಕ್ರಮಗಳಲ್ಲಿ ಮುಖ್ಯಾಂಶಗಳನ್ನೂ ಆಚರಣೆಗೆ ತಂದಿಲ್ಲ. ನ್ಯಾಯವಿಧಾಯಕ ಸಭೆಗಳ ಕೆಲಸವು ಎಷ್ಟುಮಟ್ಟಿಗೆ ಚಿತ್ತಾಕರ್ಷವನ್ನು ಮಾಡುವರೆಂದರೆ, ಒಕ್ಕಲಿಗರ, ಶ್ರಮಜೀವಿಗಳ ಸಂಘವೇ ಮೊದಲಾದ ಗ್ರಾಮೋದ್ಧಾರ ಕಾರ್ಯಗಳು,—ನ್ಯಾಯವಿಧಾಯಕ ಸಭೆಯ ಕೆಲಸದಿಂದಲೂ ಮುಖ್ಯವಾದವು- ಕೇಳುವವರೇ ಗತಿ ಇಲ್ಲದೆ, ಮೂಲೆಗೆ ಬಿದ್ದು ಕೊಳೆಯುತ್ತಿವೆ.' ಇಂತಹವರೇ ಏನು ಚುನಾವಣೆಗೆ ಪಾತ್ರರು? ದೇಶದ ಒಳಹೊಕ್ಕು, ಮೈಮುರಿದು ಕೆಲಸಮಾಡಿ, ಚುನಾವಣೆಯ ಯೋಗ್ಯತೆಯನ್ನು ಸಂಪಾದಿಸಿದ ಇವರು, ಬರೀ ಕಾಂಗ್ರೆಸಿನ ಹೆಸರಿನಲ್ಲಿಯೇ ಓಟು ಕೇಳುವುದಾದರೂ ಎಷ್ಟು ಲಜ್ಜಾಸ್ಪದ! ಪಾಂಥಿಕ ವಿದ್ಯೆಯ ಕೆಲವರಿಗೆ, ಮತದಾರರು ಮರುಳಾಗಿ, ಆ ತಮ್ಮ ಕಷ್ಟಾರ್ಜಿತದ ಮತ ಕೊಡುವುದಾದರೂ ಎಷ್ಟು ಲಾಂಛನಾಸ್ಪದ!

—ಕಂಠೀರವ

ಕನ್ನಡಿಗರ ಆದ್ಯ ಕರ್ತವ್ಯವು

ಶ್ರೀ. ದ. ರಾ. ಬೇಂದ್ರೆ.

(೧) ಜಗತ್ತಿನ ಒಂದು ಸಂಕ್ರಾಂತಿ ಕಾಲದಲ್ಲಿ ಹೊಸಮನ್ವಂತರದ ಆರಂಭದಲ್ಲಿ, ನವಯುಗಾರಂಭದ ಹೊತ್ತಿನಲ್ಲಿ ರಕ್ತಪ್ರಳಯ, ಜಲಪ್ರಳಯ, ಅಗ್ನಿಪ್ರಳಯ ನಡೆದಿರುವವು. ರಶಿಯಾದಂಥ ಪ್ರಚಂಡ ರಾಜ್ಯವು ರಾಜರ ಕೈಯೊಳಗಿಂದ ಪಾರಾಗಿ ಪ್ರಜರ ಕೈಸೇರಿ (Bolshevism) ಬೊಲ್ಶೆವಿಝಂ ಎಂಬ ಹೊಸ ತತ್ವವನ್ನು ಸಕಲ ಪರಂಪರೆಗಳನ್ನು ಸಹಿಸಿ ಕೂಡ ಆಚರಿಸಿ ತೋರಿಸುತ್ತಿರುವದು. ಇಂಗ್ಲಂಡವು ಮಂದಗತಿಯಿಂದ ಬದಲಾಗುತ್ತಿರುವದು. ಫ್ರಾನ್ಸವು ದರ್ಪದಿಂದ ಸೊಕ್ಕೇರುತ್ತಿರುವದು. ಜರ್ಮನಿಯು ತನ್ನ ಕರ್ಮಫಲವನ್ನನುಭೋಗಿಸುತ್ತಿರುವದು. ಇಟಲಿಯು ಗರ್ವದ ಉಬ್ಬುಳ್ಳತನದಿಂದ ಸೊಕ್ಕಿ ಜನರನ್ನು ದಾರಿಯುತ್ತಿರುವದು. ಜಪಾನವು ಒಂದು ದಿನದಲ್ಲಿ ೧ ಲಕ್ಷ ಜನರನ್ನು ಕಳಕೊಂಡರೂ ಸ್ಥಿತಪ್ರಜ್ಞನ ಧೈರ್ಯದಿಂದ ಸಾವರಿಸಿಕೊಳ್ಳುತ್ತಿರುವದು. ಚೀನವು ತನ್ನ ಭವಿತವ್ಯವನ್ನು ಗೊತ್ತುಮಾಡಿಕೊಳ್ಳಲು ಅಂತಃಕಲಹದಲ್ಲಿ ತೊಡಗಿರುವದು. ತುರ್ಕಸ್ಥಾನವು ಪಾಶ್ಚಿಮಾತ್ಯರ ಜಯಕದ ಸೂರೆಗುಟ್ಟಿ ಅವರ ಎದೆಯಮೇಲೆ ತನ್ನ ಸ್ವತಂತ್ರತೆಯ ಧ್ವಜವನ್ನು ಊರುವದು. ಐರ್ಲಂಡ ಇಜಿಪ್ತವು ಅಂತಗಳು ಸ್ವತಂತ್ರತೆಯ ಬೆಳೆಯನ್ನು ರಕ್ತದಿಂದ ಕೆಸರಿಟ್ಟು ಅದನ್ನು ದೊರಕಿಸುವ ಉದ್ಯೋಗದಲ್ಲಿ ತೊಡಗಿರುವವು. ಅಫಘಾನಿಸ್ತಾನ ಪರ್ಶಿಯಾ ಅರೆಬಿಯಾ ಎಚ್ಚತ್ತಿರುವವು. ಪಾಶ್ಚಿಮಾತ್ಯರು ತಮ್ಮ ಕರವಿಹಾರದ ಜಾಗೆಯಮೇಲೆ ಇದುವರೆಗೆ ಹೊಟ್ಟೆಕೊಂಡ ಸುಖಕ್ಕೆ ಹಾನಿಯಾಗಿ ಅವರ ಆ ಕರಾಳ ವಿಕರಾಳ ಸ್ವರೂಪವು ಜೈಲಿಗೆ ಹೇಳುತ್ತಿರುವವು. ಅಮೇರಿಕಾ ದೇಶವು ಸಜ್ಜನರಂತೆ ತಟಸ್ಥತೆಯಿಂದ ಸತ್ಯಾಸತ್ಯ ಪರೀಕ್ಷೆಯನ್ನು ನಡೆಸುವದು. ಯುರೋಪದಲ್ಲಿ ಪ್ರಳಯಕಾಲವು ಸಮೀಪಿಸಿತೆಂದು ಅಲ್ಲಿಯ ವಿದ್ವಾಂಸರು ಅರಚಿ ಸಾಯುತ್ತಿರುವರು.

ಹಿಂದುಸ್ಥಾನದಿಂದಲೇ ಜಗತ್ತಿನ ಉದ್ಧಾರವೆಂದು ಕೆಲವರು ಅನುಮಾನದಿಂದಲೂ, ಕೆಲವರು ನಿರಾಶೆಯಿಂದಲೂ, ಕೆಲವರು ಶ್ರದ್ಧೆಯಿಂದಲೂ ಆಡುತ್ತಿರುವರು. ಹಿಂದುಸ್ಥಾನವು ಬ್ರಾಹ್ಮಣ ಬ್ರಾಹ್ಮಣೇತರರ ತೊಡಕು, ಹಿಂದೂ ಮುಸಲ್ಮಾನರ ತೊಡಕು, ಪೌರ್ವಾತ್ಯ ಪಾಶ್ಚಿಮಾತ್ಯ ಸಂಸ್ಕೃತಿಗಳ ತೊಡಕು, ಭಾಷೆಗಳ ತೊಡಕು, ಶಿಕ್ಷಿತಾಶಿಕ್ಷಿತರ ತೊಡಕು, ಸ್ಪೃಶ್ಯಾಸ್ಪೃಶ್ಯರ ತೊಡಕು, ಹಿಂಸಾಹಿಂಸೆಗಳ ತೊಡಕು ಮತಮತಗಳ ತೊಡಕು, ಮೊದಲಾದ ಅನೇಕ ತೊಡಕುಗಳನ್ನು ಅಪೂರ್ವಶಕ್ತಿಯಿಂದ ಬಿಡಿಸಿ ಜಗತ್ತಿನ ಸಂಶಯ ಸಮೂಹದ ಪರಿಹಾರವನ್ನೇ ಮಾಡುವದರಲ್ಲಿ ತೊಡಗಿರುವದು. ಥಿಯಾಸಫಿಯ ಜನರು 'ಜಗದ್ಗುರುವು' ತಿರುಗಿ ಬರುವನೆಂದು ಸಾರುತ್ತಿರುವರು. ಶ್ರೀಮದ್ವಚನಾಂಗಗಳು ಅವತಾರವಾಗಿರುವರೆಂದು ವೀರಶೈವರು ಹೇಳುವರು. ಕ್ರಿಸ್ತನು, ಪಂಜಾಬದ ಸಾಧು ಸಿಂಹರೇ, ಪ್ರತಿಸ್ಪರ್ಧಿಯಾಗಿ ಬಂದಿರುವರೆಂದು ಅನ್ನುವರು. ಕೆಲವರು ಮಹಾತ್ಮಾ ಗಾಂಧಿಯವರೇ ಆ ಅವತಾರವೆನ್ನುವರು; ಕವೀಂದ್ರರು ಆಧ್ಯಾತ್ಮದ ವಿಶ್ವಭಾರತಿಯನ್ನು ಸ್ಥಾಪಿಸಿ ಜಗತ್ತಿನ ಸಂಸ್ಕೃತಿಗಳಿಗೆ ಎರವು ಹಾಕಿಕೊಟ್ಟ ಹಳೆ ಆಶ್ರಮಗಳನ್ನು ಹೊಸ ಹಾಗೆ ತಂದುಕೊಡುತ್ತಿರುವರು. ಜಗದೀಶ ಚಂದ್ರರು ಜಡ ಚೇತನ ಕೃತಿಗಳಲ್ಲಿ ತುಂಬಿರುವ ಜೀವನವನ್ನು ಜಗತ್ತಿಗೆ ತೋರಿಸುತ್ತಿರುವರು; ಅಮೇರಿಕೆಯ ಎಡಿಸನ್ (ಫೋನೋಗ್ರಾಫದ ಜನಕರಾದವರು) ಮರಣಾಂತರ ಜೀವವು ಎಲ್ಲಿ ಹೋಗುವದೆಂಬದನ್ನು ಗೊತ್ತು ಹಚ್ಚಲು ಹೊರಟಿರುವರು; ಇನ್ಸ್ಟಿನ್ ರೆಂಬುವರು ಬ್ರಹ್ಮಾಂಡವನ್ನು ಅಳೆಯಲು ಗಣಿತಶಾಸ್ತ್ರದಲ್ಲಿಯೇ ಕ್ರಾಂತಿಯನ್ನು ಮಾಡುತ್ತಿರುವರು. ಮಹರ್ಷಿಗಳಾದ ಶ್ರೀ ಅರವಿಂದರು ಮಾನವರ ಮನೋಜೀವನವನ್ನು ಮುಗಿಸಿ, ಇಳೆಯಲ್ಲ ದೇವಜಾತಿಯ ವಿಜ್ಞಾನಜೀವನವು ಸಾಗಲೆಂದು ಹಿಂ ದೇವಾಯ ಜನ್ಮನೇ, ಎಂದು ತಪವನ್ನೆಸಗುತ್ತಿರುವರು. ಮಹಾತ್ಮರು ಅಹಿಂಸೆಯಿಂದ ಜಗತ್ತನ್ನು ಗೆಲ್ಲುವ ಮಂತ್ರವನ್ನು ಜಗತ್ತಿಗೆ ಉಪದೇಶಿಸುತ್ತಿರುವರು. ಇವೇ ಮೊದಲಾದ ಸಂಗತಿಗಳೇ ಕಣ್ಣೆದುರಿಗೆ ಬಂದು ರವೀಂದ್ರನಾಥರು ಹೊಸ್ತ ಹೊಕ್ಕು "ಇಂಥ ಕಾಲಕ್ಕೆ ಭರತಖಂಡದಲ್ಲಿ ನಾನು ಹುಟ್ಟಿದೆ. ನಾನೇ ಧನ್ಯ ನಾನೇ ಧನ್ಯ" ಎಂದೆಂದು ಕೊಂಡಿರುವರು. ಸಂಪೂರ್ಣ ವಿಚಾರಪೂರ್ವ ಸದ್ಯಸ್ಥಿತಿಯ ಅವಲೋಕನ ಮಾಡಿದ ಪ್ರತಿಬ್ಬ ಕನ್ನಡಿಗನ ಬಾಯಿಂದ ಈ ಉದ್ಗಾರಗಳು ಹೊರಡಲಿಕ್ಕೆ ಬೇಕು. ಅವನಿಗೆ ಆನಂದ ಬಾಷ್ಪಗಳು ಬರಲಿಕ್ಕೆಬೇಕು. ರೋಮಹರ್ಷಣವಾಗಲಿಕ್ಕೆಬೇಕು. ಕನ್ನಡಿಗರು ಮೊದಲು ಈ ಜಗತ್ತೆಂಬ ಪಟ್ಟಣದ ಪಟ್ಟಣಿಗರು. ಆ ಮೇಲೆ ಕರ್ನಾಟಕದ ಕನ್ನಡಿಗರು. ಪ್ರಾಚೀನಕಾಲವನ್ನು ಮೂರ್ತ ಸೂಚಿ ಮಾಡಬೇಕಂತೆ, ನಾನು ಇದೂವರೆಗೂ ವರ್ತಮಾನಕಾಲ ವರ್ಣನೆಯನ್ನೇ ಮಾಡಿರುವೆನು. ಮುಂದೂ ವರ್ತಮಾನ ಪ್ರಶ್ನೆಯನ್ನೇ ಕೇಳುವೆನು. ನಾವು ಕೂಪಮಂಡೂಕರಾಗಿರಬಾರದು. ವಿಶಾಲವಿಶ್ವದಲ್ಲಿ ಏನು ನಡೆದದೆ ಎಂಬುದನ್ನು ನಾವು ತಿಳಿದುಕೊಳ್ಳಬೇಕು. ಅಂದರೆ ಇಂಥ ಕಾಲಕ್ಕೆ ನಾವು ಕರ್ನಾಟಕದ ಕನ್ನಡಿಗರೆಂದು ಮುಂದೆ ಬಂದು ಧೈರ್ಯದಿಂದ ನಿಲ್ಲಬೇಕಾದರೆ ಎಂಥ ಅಪೂರ್ವ ಉದ್ಯೋಗವನ್ನು ಮಾಡಿ ತೋರಿಸಬೇಕೆಂಬುದು ಹೊಳೆಯುವಂತಿದೆ. ಕಾಲಮಾಹಾತ್ಮ್ಯವನ್ನು ತಿಳಿದುಕೊಳ್ಳುವದು ನಮ್ಮ ಆದ್ಯಕರ್ತವ್ಯ.

ಕಾಲಮಾಹಾತ್ಮ್ಯವನ್ನು ತಿಳಿದುಕೊಂಡ ಮೇಲೆ ಅಂತರ್ಮುಖರಾಗಿ ನಾವಾರೆಂಬದನ್ನು ತಿಳಿದುಕೊಳ್ಳುವದು ಆ ಮೇಲಿನ ನಮ್ಮ ಆದ್ಯ ಕರ್ತವ್ಯವು. ಸ್ವಧರ್ಮವೂ ಸ್ವಭಾವವು ಮನದಟ್ಟಾಗಿ ತಿಳಿಯದಿದ್ದರೆ ನಾವು ಮಾಡುವದಾದರೂ ಏನು? ಕನ್ನಡಿಗರ ಸ್ವ-ದ ಧರ್ಮವಾವುದು, ಕನ್ನಡಿಗರ ಸ್ವ-ದ ಭಾವವಾವುದು! ಯಾವ ಧರ್ಮಕ್ಕಾಗಿ ಕನ್ನಡಿಗನೆಂಬ ಕುಲಪುರುಷನು ಸಹಸ್ರಾರು ವರ್ಷಗಳಿಂದ ಕರ್ನಾಟಕವೆಂಬ ತನ್ನ ದೇಹದಲ್ಲಿ ತನ್ನ ಚಾರಿತ್ರ್ಯವನ್ನು ಸಾಗಿಸಿರುವನು? ಪ್ರತಿ ಮನುಷ್ಯನಿಗೆ ಒಂದು ಸ್ವ ಅಂದರೆ (ಆತ್ಮ) ಇದ್ದಂತೆ ಪ್ರತಿಕುಲಕ್ಕೂ ಒಂದು ಸ್ವ- ಇರಲಿಕ್ಕೆ ಬೇಕು. ಕನ್ನಡಿಗನೆಂಬದೊಂದು ಕುಲವೆಂದು ಶ್ರೀ. ಚೆನ್ನಬಸವೇಶ್ವರರು ಕರಣ ಹಸಿಗೆಯಲ್ಲಿಯೂ, ಕನ್ನಡಿಗನೆಂಬದೊಂದು ಜಾತಿಯೆಂದು ಶ್ರೀ. ನಿಜಗುಣರು ವಿವೇಕಚಿಂತಾಮಣಿಯಲ್ಲಿಯೂ ಹೇಳಿರುವರು. ಕನ್ನಡಿಗರೆಂಬ ವ್ಯಕ್ತಿ ಪುರುಷರಲ್ಲಿ, ಕನ್ನಡಿಗನೆಂಬ ಸಮಷ್ಟಿಪುರುಷನೊಬ್ಬನು ಇರುತ್ತಿರಲಿಕ್ಕೆ ಬೇಕು. ಕರ್ನಾಟಕವೇ ಅವನ ದೇಹ, ಇಂದಿನ ವರೆಗಿನ ಇತಿಹಾಸವೇ ಅವನ ಚರಿತ್ರೆ, ಇಲ್ಲಿಯ ಜನರೇ ಅವನ ಪ್ರಾಣಶಕ್ತಿ, ಇಲ್ಲಿಯ ಮತ-ಸಮೂಹವೇ ಅವನ ಸಾಧನ ಪ್ರಪಂಚ, ಇಲ್ಲಿಯ ವಾಙ್ಮಯವೇ ಅವನ ಬುದ್ಧಿ ಅಂತಃಕರಣಗಳ ನಿದರ್ಶಕ, ಇಲ್ಲಿಯ ಗುಡಿಗೋಪುರಗಳೂ ಮಹಾ ಮಂದಿರಗಳೂ, ಕೆರೆ ಕಟ್ಟೆಗಳೂ ಕರ್ಮಕೌಶಲದ ಪ್ರದರ್ಶಕ. ಅವನಿಗೆ ಬಾಲ್ಯ ಯೌವನ ವಾರ್ಧಕ್ಯಗಳುಂಟು. ಇದರೆ ನಮ್ಮಂತೆ ಮರಣವನ್ನು ಹೊಂದಿದ ಮೇಲೆ ಅವನು ಹುಟ್ಟಿಬರುವವನಲ್ಲ. ಅವನು ಚಿರಂಜೀವಿ. ಅವನೊಬ್ಬ ಕರ್ಮಯೋಗಿ, ಪ್ರಳಯಕಾಲದಲ್ಲ

ಕನ್ನಡಿಗರ ಬಗ್ಗೆ ಸ್ಪೆಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರ್ಯಿ ಮಾಡುವದನ್ನು ಕಲಿಸಿ ಮೋಟಾರು ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಶಾಷ್ಟ್ಯಲರ ಮೋಟಾರ ಡ್ರಾಯವ್ಹಿಂಗ ಮತ್ತುಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರೋಲ್ಡ ಗೋಲ್ಡ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ ಸರಿಯಾದ ಗಂಟೆಯನ್ನು ತೋರಿಸುವದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ. 7-2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ ಫೌನ್‌ಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 [illegible] ಗಳ ವರೆವಿಗೂ ಬರೆಯುವದು! 14 ಕ್ಯಾರೆಟ್ಟ ಭಂಗಾರದ [illegible] ಇದನು ಈ ತಿಂಗಳೊಳಗಾಗಿ ತರಿಸಿಕೊಂಡವರಿಗೆ 12 [illegible] ಬಾಟಿಲ್ ಇನಾಮಾಗಿ ಕೊಡುವೆವು ಕ್ರಯ ಪೇನಾ ೧ಕ್ಕೆ 2-0-0

ವಿಳಾಸ:—**ಎಸ್. ಪಾಲ್ ಅಂಡ್ ಕೋ,**

ಪಿ. ಬಿ ನಂಬರ್. 542,

ಪಾರ್ಕಟೌನ್ ಮದ್ರಾಸು.

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೩-೦ ಸಂಪದಭ್ಯುದಯ ಸ್ಥಳದವರಿಗೆವರ್ಷಕ್ಕೆ ರೂ. ೧೪-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಆಣೆ. ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯಂ. ಮೈಸೂರು.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟಿ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾದುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಜಾಹೀರಾತಿನ ಸಲುವಾಗಿ.





The Cheapest House.

For quick: Ecconomical and satisfactory service, please go for the welknown Chevrolet cars, Trucks products in the Decccan

2 For all spare parts of the Various cars specially Chevrolet, Ford, Dodge and **Overland** cars,

3 For the cheapness in tyre tubes especially thewellknown Michelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specalist to **give** satisfactory, work,

6 For Building Motor bodies of Various types by workers onin uptodate line.

7 For all kinds of Motor repairs,

Aply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur.

ಅಲಭ್ಯಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವಿಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕು ವ ಸಾಮಾನು ಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುಗಿ,

೨ (ಗಾಡಿಯ ಸ್ಪೇರ ಪಾರ್ಟ್ಸ ಭಾಗಗಳು) ಮುಖ್ಯವಾಗಿ ಶೆವ್ಹರೋಲೆಟ ಡಾಜ, ಫೋರ್ಡ, ವೋಪ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಶೆಲಿನ ಟ್ರಾಯ್ಟುಗಳು ಖರೀದಿಗಾಗಿ

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೋಟಾರ ರಿಪೇರಿಗಾಗಿ ಯೋಗ್ಯರಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರ ಸರ್ವೀಸ.

ಬಾಗಲಕೋಟೆ

ವಿಜಾಪೂರ ಜಿಲ್ಹೆಯಲ್ಲಿ

ಮೋಟಾರುಗಳಿಗೆ ಸಬ ಏಜಂಟರು.

ಮಹಾರಾಜ, ವೀರವಿಕ್ರಮ ನೃಪತುಂಗ, ಬುಕ್ಕಭೂಪಾಲ, ಚಿಕ್ಕದೇವರಾಯ ಮೊದಲಾದ ಜ್ಞಾನಿಗಳಾದ ಕ್ಷತ್ರಿಯ ಪುಂಗವರು ಕನ್ನಡಿಗನೆಂಬ ಸಮಷ್ಟಿಜಾತಿಪುರುಷನ ಉಜ್ವಲ ಕರ್ಮಗಳು, ವಿದ್ಯಾರಣ್ಯರು, ನಿಜಗುಣರು, ಮಧ್ವಾಚಾರ್ಯರು, ಬಸವೇಶ್ವರರು, ಪುರಂದರದಾಸರು, ಅವನ ಬುದ್ಧಿಯ ಜ್ಯೋತಿಗಳು, ಪಂಪ, ರನ್ನ, ಕುಮಾರ ವ್ಯಾಸ ಲಕ್ಷ್ಮೀಶ, ಹರಿಹರ, ರಾಘವಾಂಕರು ಅವನ ರಸತರಂಗಗಳು. ನೃಪತುಂಗನ ಪೂರ್ವಕಾಲವು ಅವನ ಬಾಲ್ಯವು, ಚಿಕ್ಕದೇವರಾಯನ ವರೆಗಿನ ಕಾಲವು ಅವನ ತಾರುಣ್ಯ, ಇತ್ತೀಚಿನದು ವಾರ್ಧಕ್ಯ, ಈಗ ಮತ್ತೆ ಹಸುತನ ಉಂಟಾಗಿದೆ. ಈ ಬಗೆಯ ಈ ಕನ್ನಡ ಕುಲಪುರುಷನ ಜೀವಜ್ಯೋತಿಯ ಸಾಕ್ಷಾತ್ಕಾರ ಮಾಡಿಕೊಳ್ಳುವದೇ ನಮ್ಮ ಆದ್ಯ ಕರ್ತವ್ಯ.

सर्वभूतेषु येनैकं भावमव्ययमीक्षते
अविभक्तं विभक्तेषु तज्ज्ञानं सात्विकं स्मृतं·

ಅನೇಕವನ್ನು ಏಕದಲ್ಲಿ ಸಮನ್ವಯಿಸುತ್ತ ಹೋಗುವದೇ ಆತ್ಮೋನ್ನತಿಯ ದಾರಿ. ಅಂತೆಯೇ ಎಲ್ಲದಂತೆಯೂ ನಮ್ಮದೂ, ಎಲ್ಲ ಕಡೆ ಇದ್ದಂತೆ ಇಲ್ಲಿಯೂ ಇದೇ ನಮ್ಮ ಆದ್ಯ ಕರ್ತವ್ಯ. ನಮ್ಮ ಇತಿಹಾಸದ ಬಗ್ಗೆ ಸಾಮಾನ್ಯವಾಗಿ ನಮಗೆಲ್ಲರಿಗಿರುವ ಜ್ಞಾನವು ತಾಮಸವಾಗಿದೆ. ಸುಂಟರಗಾಳಿಯಲ್ಲಿ ಹಾರಿಹೋಗುತ್ತಿರುವ ಹಣ್ಣೆಲೆಗಳಂತೆ ನಮ್ಮ ಚರಿತ್ರೆಯ ಪ್ರಸಂಗವು ನಮ್ಮ ಕಣ್ಣೆದುರಿಗೆ ಒಂದು ಬಳಿಯೋ ಮಾಯವಾಗುತ್ತದೆ. ಇತಿಹಾಸವು ನಮಗೆ ಶೃಂಗಾರ ವೀರ ಕರುಣಾದ್ಭುತಾದಿ ನವರಸಗಳ ನವೋನವ ಅವತಾರ ಲೀಲಾನುಭೂತಿಯ ಕಂಗೊಳಿಸುವದಿಲ್ಲ. ಶರೀರ ರಚನಾ ಶಾಸ್ತ್ರವನ್ನು ತಿಳಿಯಲು ತಂದ ಎಲುಬಿನ ಪೆಟ್ಟಿಗೆಯಂತೆ ನಮ್ಮ ಇತಿಹಾಸವಾಗಿದೆ. ಕನ್ನಡಕುಲಪುರುಷನು ಕನಸಿನೊಳಗಿನ ಮಹಾಪುರುಷನಲ್ಲ, ಸೆರೆಯೊಳಗಿನ ಸೆರೆಯಲ್ಲ, ಚಿತ್ರದೊಳಗಿನ ಗೊಂಬೆಯಲ್ಲ, ಕಲ್ಲಿನ ಬರೆದ ಚಿತ್ರವಲ್ಲ, ಪ್ರಸಂಗಗಳೆಂಬ ಎಲುಬಿನ ಹಂದರವಲ್ಲ. ಅವನ ಸನ್ನಿಧಿಯ ಚಿತ್ತಗಳೊಳಗೆ ಜೀವವಾಗಿರುವ ಬೇಕು. ನಮ್ಮ ಕನ್ನಡನಾಡಿನಲ್ಲಿ ಜೈನ, ಲಿಂಗವಂತ, ದ್ವೈತ, ವಿಶಿಷ್ಟಾದ್ವೈತ ಮತಗಳು ಪರಸ್ಪರ ವೈರವನ್ನುಂಟುಮಾಡಲಿಕ್ಕೆ ಹುಟ್ಟಿದವೆಂದು ಮತಿಸುವದು, ಪರಸ್ಪರ ಸಂಬಂಧವಿಲ್ಲದವುಗಳೆಂಬದು ಅಜ್ಞಾನ. ಈ ಭಿನ್ನ ಮತಗಳ ಹಿಂದೆ, ಒಂದೇ ಒಂದು ಬುದ್ಧಿಯನ್ನು ಕಂಡು ಹಿಡಿಯುವದೇ ಜ್ಞಾನ. ಸಾತ್ವಿಕಜ್ಞಾನ.

ಅವಿಭಕ್ತಂ ವಿಭಕ್ತೇಷು ತಜ್ಜ್ಞಾನಂ ವಿದ್ಧಿಸಾತ್ವಿಕಂ । ಈ ಸಾತ್ವಿಕ ಜ್ಞಾನದ ಸೂತ್ರದಿಂದ ಎಲ್ಲ ಬೇರೆ ತೋರುವ ಮಾತುಗಳನ್ನು ಗುಂಪಿಸುವದು ನಮ್ಮ ಆದ್ಯಕರ್ತವ್ಯವು. ಆ ಮೇಲೆ ಆ ಬುದ್ಧಿಯಿಂದ ನಡೆಯುವದು ನಮ್ಮ ಅನ್ಯಕರ್ತವ್ಯವು.

ಕಾಲಮಹಾತ್ಮ್ಯವನ್ನು ಅರಿತುಕೊಳ್ಳಬೇಕೆಂಬುದಾಯಿತು. ಕನ್ನಡ ಕುಲಪುರುಷನ ಮನಸ್ಸನ್ನು ತಿಳಿದುಕೊಳ್ಳಬೇಕೆಂಬುದಾಯಿತು. ಅವನ ವಾಕ್ಯವನ್ನು ಸಂಪೂರ್ಣಸಿದ್ಧಪಡಿಸಿಕೊಳ್ಳಬೇಕೆಂಬುದು ಮೂರನೇ ಮಾತು. ಅಂದರೆ ಉಪನಿಷದದ ಶಾಂತಿ ಪಾಠದೊಡನೆ ಕನ್ನಡ ಕಾಲ ಪುರುಷನಲ್ಲಿ ಲೀನನಾದ ಪ್ರತಿಯೊಬ್ಬ ಕನ್ನಡಿಗನು.

वाङ्मे मनसि प्रतिष्ठिता । मनो मे वाचि प्रतिष्ठितं । आविरावीर्म एधि· ಎಂದು ಹಾಡುವನು

ಕನ್ನಡ ಮಾತಿನಿಂದಲೇ ಕನ್ನಡಿಗನೆಂಬ ಮಾತು. ಕನ್ನಡವು ಹೆಚ್ಚಾದಂತೆ ಕನ್ನಡಿಗನಿಗೆ ಭೂಷಣ, ಕನ್ನಡಿಗನು ಹೆಚ್ಚಿನವನಾದಂತೆ ಕನ್ನಡಕ್ಕೆ ಗೌರವ. ಹೆಚ್ಚಿನ ಕನ್ನಡಿಗರ ಗೌರವದ ಕನ್ನಡದಿಂದ ನಿನದಿಸುವ ಕರ್ನಾಟಕವು ಧನ್ಯಭೂಮಿ! ಇಲ್ಲದಿದ್ದರೇನು ಕನ್ನಡನಾಡು ನೆಲಮಣ್ಣು! ಕನ್ನಡಿಗ ಪಶುಪ್ರಾಣಿ! ಕನ್ನಡ ಶಬ್ದ ಗಾಳಿ!

देवा दैवीं नरा नारीशबराश्चापि शाश्वताः ।
तिर्यञ्चोपि च तैरश्चीं मेनिरे भगवद्धियम् ॥

ನಮ್ಮ ಕನ್ನಡವು ಭಗವದ್ಗಿರವಾಗಬೇಕು. ಅಪೌರುಷೇಯ ವಾಣಿಯಾಗಬೇಕು, ವೇದಮಂತ್ರಗರ್ಭವನ್ನು ಧರಿಸಲು ತಕ್ಕ ಬಸಿರುಳ್ಳ ನುಡಿಯಾಗಬೇಕು. ಇದಕ್ಕಾಗಿ ಸಾಮಾನ್ಯ ಕನ್ನಡಿಗನು ಕೂಡ ಕನ್ನಡದ ಬಗ್ಗೆ ಈಗ ಧರಿಸಿರುವ ದುರ್ಲಕ್ಷ್ಯವನ್ನು ದೂರ ಮಾಡಲಿಕ್ಕೆ ಬೇಕು. ಪಂಡಿತರು ಜ್ಞಾನಿಗಳೂ, ಕವಿಗಳೂ, ಬುದ್ಧಿವಂತರೂ ತಮ್ಮ ತಮ್ಮ ಪ್ರಾಣವನ್ನು ಇದರಲ್ಲಿ ಊದಿ ಅಭೂತಪೂರ್ವ ಸಾಮರ್ಥ್ಯವುಳ್ಳ ಪ್ರಾಣಿಯನ್ನಾಗಿ ಇದನ್ನು ಮಾಡಲು ಎಸಗಬೇಕು. ಅದ್ವಿತೀಯಗಳಾದ ವಚನಗಳು ಜಗತ್ತಿನಲ್ಲಿ ಪ್ರಕಟವಾದವೇನೂ, ದಾಸಕೂಟವು ಉಗಾಭೋಗಾದಿಗಳಿಗಾಗಿ ಕನ್ನಡವನ್ನು ಸ್ವೀಕರಿಸಿದರೇನೂ ಕಾಲಿದಾಸನನ್ನೊಬ್ಬನನ್ನು ಬಿಟ್ಟು ಉಳಿದ ಯಾವ ಸಂಸ್ಕೃತ ಮಹಾಕವಿಯ ಮಹಾಕಾವ್ಯಗಳಿಗೆ ಹೋಲಿಸಿಕೊಳ್ಳಲು ಅರ್ಹವಾದ, ಪಂಪ, ಜನ್ನ, ರನ್ನ, ನೇಮಿ ಹರಿಹರರ ಕೃತಿಗಳು ಕನ್ನಡದಲ್ಲಿಯೇ ಅವತರಿಸಿದರೂ, ಜಗನ್ನಾಥರಾಯರಿಗೆ ಹರಿಕಥಾಮೃತಸಾರದಲ್ಲಿ

"ಸಂಸ್ಕೃತವು ಎಲ್ಲೆಂದು ಕುಹಕ ತಿರಸ್ಕರಿಸಬೇಕೆನುಹೆಂದು" ನಿರ್ಭರ್ತ್ಸಿಸಿ ಹೇಳಬೇಕಾಯಿತು.

ಮಹಲಿಂಗ ರಂಗನಿಗೆ ಅನುಭವಾಮೃತದಲ್ಲಿ
ಸುಲಿದ ಬಾಳೆಯ ಹಣ್ಣಿನಂದದಿ।
ಕಳೆದ ಸಿಗುರಿನ ಕಬ್ಬಿನಂದದಿ।
ಅಳಿದ ಉಷ್ಣದ ಹಾಲಿನಂದದಿ ಸುಲಭವಾಗಿರ್ದ॥
ಲಲಿತವಹ ಕನ್ನಡದ ನುಡಿಯಲಿ।
ತಿಳಿದು ತನ್ನೊಳು [illegible]।
ಗಳಿಸಿಕೊಂಡರೆ ಸಾಲದೇ ಸಂಸ್ಕೃತದಲ್ಲಿನ್ನೇನ ?॥

ಎಂದು ಮುಮುಕ್ಷು ಮಾತಿನಿಂದ ಹೇಳಬೇಕಾಯಿತು.

ಚಿದಾನಂದಾವಧೂತರಿಗೆ— ಜ್ಞಾನಸಿಂಧುವಿನಲ್ಲಿ.

'ತನ್ನ ಭಾವವ ಪಾಮರರಿಗೆಯು ತಿಳಿಸುವದೆ ಭಾಷೆ!' ಎಂದು ಭಾಷೆಯ ಲಕ್ಷಣವನ್ನು ಕಟ್ಟಿ,

ಕನ್ನಡ ನುಡಿಯಲ್ಲಿ ಹೇಳಿಹೆ।
ಬಿನ್ನ ದಾಗಿಗೇನಲು ಸಲ್ಲದು।
ತನ್ನ ಮುಂದೆಯು ಎದೆಯು ಬಡಿಸಿಟ್ಟಂತೆ ಅನುಭೂತಿ॥
ತನ್ನ ತಿಳಿಯರು ಪನ್ನ ನರಮಾಲು।
ತನ್ನಕಾಣಲು ಕನ್ನಡಿಯು ಮುದ।
ಸನ್ನಿಧಿಯು ಪ್ರತ್ಯಕ್ಷವಾದಂತಿದನು ಮನವಲಿದು

ಎಂದು ಯುಕ್ತಿಯಿಂದ ಹೇಳಬೇಕಾಯಿತು.

ಇನ್ನು ಇದು ಹಾಗಲ್ಲ ಪ್ರತಿಯೊಬ್ಬನು ವಿಧದಿಂದಲೂ ಇದನ್ನು ನಾವು ಬೆಳೆಸಬೇಕು!

ಅಡಿಗೆಯ ಮನೆಯ ಮುತ್ತೈದೆಯ ಮಾತಿನಲ್ಲಿಯೇ ಎಲ್ಲ ಪ್ರಾಜ್ಞಮಯವು ಅವತರಿಸಬೇಕೆಂದು, ಕೆಲವು ದೈವಗಳ ಕನ್ನಡಿಗರು ಹೊಸಕನ್ನಡದ ಮೇಲೆ [illegible] ಇದನ್ನು ಹಾಕಲು

ಬಯಸುವರು. ಆದರೆ ಹೊಳೆಯು ಹೊಂಡವಾಗದೆ, ತನ್ನ ಸೆಳವಿನಲ್ಲಿ ಈ ವೈರಿಗಳನ್ನು ಸೆಳೆದುಕೊಂಡು ಹೋಗಿ ಅವರಿಗೆ ವೈಮರವು ಉಂಟಾಗುವಂತೆ ಮಾಡಲಿಕ್ಕೇ ಬೇಕು. ನಮ್ಮ ನುಡಿಯು, ಒಡವೆ ಒಡವೆಯ ಜೀವದ ನೆರಳನ್ನು ತೋರಿಸುವ ನೀರಾಗಬೇಕು. ನಮ್ಮ ನುಡಿಯು, ಜೀವ ಜೀವದ ಜೀವಾಳವನ್ನು ತೋರಿಸುವ ಕನ್ನಡಿ ಹರಳಾಗಬೇಕು ಕನ್ನಡವನ್ನು ಕನ್ನಡಿಯಾಗಿ ಮಾಡಬೇಕು. ಸಚ್ಚಿದಾನಂದನ ಅಂಗುಷ್ಟದಿಂದ ಹರಿಯುವ ತರಂಗ ತರಂಗವನ್ನು ನಮಗೆ ಮುಟ್ಟುವಂತೆ ಮಾಡಲು ನಮ್ಮ ನುಡಿಯು ಸಮರ್ಥವಾಗಬೇಕು. ಚಿತ್ತದ ಚಿತ್ರಗಳನ್ನೂ, ಅಹಂಕಾರದ ಉದ್ಗಾರಗಳನ್ನೂ ಬುದ್ಧಿಯ ಭೇದಗಳನ್ನೂ, ಅಂತಃಕರಣದ ಕಿರಣಗಳನ್ನೂ ಮನಸ್ಸಿನ ಹೊಯ್ದಾಟಗಳನ್ನೂ, ಪ್ರತಿಬಿಂಬಿಸಲು ನಮ್ಮ ಭಾಷೆಯು ಸಮರ್ಥವಾಗಲುಬೇಕು. ನಮ್ಮ ನುಡಿಯು ಜಗತ್ತಿನ ತಿರುಳನ್ನೂ ಜಗದೀಶನ ಮುರುಳನ್ನೂ ತೋರಿಸುವ ಕನ್ನಡಿಯಾಗಬೇಕು. ಜಗತ್ತಿನ ಸೊಸನ್ನೂ ಜಗದೀಶನ ಸೊಬಗನ್ನೂ ಸವಿಸವಿದು ನಲಿಯುವ ನಾಲಿಗೆಯಾಗಬೇಕು. ಕುಲಪುರುಷನ ಮನಸ್ಸಿನಿಂದಲೂ ಇಂಥ ಸಂಸ್ಕೃತ ಕನ್ನಡಿಯಂಥ ವಾಕ್ಕಿನಿಂದಲೂ ಸಿದ್ಧರಾಗಿ ನಾವು

॥ ಅವಿರಾವೀರ್ಮ ಏಧಿ ॥

ಎಂದು ಜಗದೀಶನನ್ನು ಕರೆಯಬಹುದು.

ಇದೆಲ್ಲ ಆಗಲಿಕ್ಕೆ ನಾವು ಮೊದಲು ಅಂಥ ಆದ್ಯ ಕರ್ತವ್ಯಗಳನ್ನು ಆರಂಭ ಮಾಡುವ ಆದಿಯಲ್ಲಿಯೂ, ಒಂದೆರಡು ಮಾತುಗಳನ್ನು ಹೇಳಬೇಕಾಗಿದೆ. ನಮ್ಮ ಈ ನಾಡು ದುರ್ಬಲ ದೈವವಾದಿಗಳಿಂದಲೂ ಬಾಳಲು ಬೇಡಾದ ಹೇಡಿಗಳಿಂದಲೂ, ತುಂಬಿರುವದು. ಚಂಡಿಕೆಗೆ ಬೆಂಕಿಹತ್ತಿದರೂ ಆರಿಸಲಾರದ ವೈರಿಗಳು ಎಲ್ಲಿ ನೋಡಿದಲ್ಲಿ ಕಾಣುತ್ತಿರುವರು. ನಾವು ಮೈಮುರಿದು ಪುರುಷಾರ್ಥವನ್ನು ಮಾಡಲಿಕ್ಕೆ ಬೇಕು. ಹೇಡಿಗಳಂತೆ ಹಿಂದೆಗೆಯಬಾರದು. ಅದೇ ಪ್ರಕಾರ ನಮ್ಮ ನಾಡು ವಿಚಾರ ಮಾಡಲೊಲ್ಲದ ಅಂಧ ಶ್ರದ್ಧಾಲುಗಳಿಂದಲೂ ವಿಚಾರ ಮಾಡಲಾರದ ಮಂದಮತಿಗಳಿಂದಲೂ ಬುದ್ಧಿ ಹೀನರಿಂದಲೂ ತುಂಬಿಕೊಂಡಿರುವದು. ಇಂಥ ವೈರಿಗಳಿರುವವರೆಗೆ ನಾಡಿಗೆ ಲೇಸಾಗದು. ಇವರು ಮನಮುರಿದು ವಿಚಾರ ಮಾಡಲಿಕ್ಕೇ ಬೇಕು. ನಾಸ್ತಿಕರ ಯುಕ್ತಿವಾದಕ್ಕೂ ಬಗ್ಗದ ಸ್ಥಿತಪ್ರಜ್ಞೆಯಿಂದ ಪಾಮರರಿಗೂ ಬೋಧವುಂಟಾಗುವಂಥ ವಿಚಾರಗಳನ್ನು ಮಾಡಲು ನಾವು ಹವಣಿಸಬೇಕು. ನಮ್ಮಯ ಧರ್ಮಗಳ ಬಗ್ಗೆ ಸಾಮಾನ್ಯವಾಗಿ ನಮ್ಮ ಜನರ ಜ್ಞಾನವು ಅಗಾಧವಾಗಿದೆ. ಅದ್ವೈತವೆಂದರೆ, ಭಸ್ಮ ಹಚ್ಚಿಕೊಳ್ಳುವವರು, ಜಗತ್ತು ಸುಳ್ಳೆನ್ನುವವರೆಂದೂ, ದ್ವೈತರೆಂದರೆ, ದೊಡ್ಡ ದೊಡ್ಡ ಮುದ್ರೆಗಳನ್ನು ಹಚ್ಚಿಕೊಳ್ಳುವವರಾಗಿಯೂ ಪ್ರತಿಯೊಂದರಲ್ಲಿ ಭೇದ ಎಣಿಸುವವರಾಗಿರುವವೆಂದೂ, ಜೈನರೆಂದರೆ ರಾತ್ರಿಯುಣ್ಣದವರೂ, ಹಿಂಸೆ ಮಾಡಬಾರದೆನ್ನುವವರೆಂದೂ, ಲಿಂಗವಂತರೆಂದರೆ ತತ್ವಬಿತ್ವವನ್ನರಿಯದ ಬ್ರಾಹ್ಮಣರಿಗೆ ತಿರಸ್ಕಾರ ಮಾಡುವ ಶೂದ್ರರೆಂದೂ, ಮುಸಲ್ಮಾನರೆಂದರೆ, ಹೆಂಡಕುಡ ಸೇವಿಸುವವರೂ ಅಲ್ಲಾಹಬ್ಬವನ್ನು ಮಾಡುವವರೆಂದೂ ನಮ್ಮ ಜನರ ನಂಬಿಗೆ ನಾವು ಮನಗಳ್ಳತನವನ್ನು ಬಿಟ್ಟು ವಿಚಾರ ಮಾಡಲಿಕ್ಕೆ ಬೇಕು. ವೈರಿಗಳ್ಳತನವನ್ನು ತೀರಿಸು ದುಡಿಯಲಿಕ್ಕೆ ಬೇಕು. ಆಂದರೇ ನಮ್ಮ ಕುಲಪುರುಷನ ಮನಸ್ಸು ತಿಳಿದೀತು. ನಮ್ಮ ನ ವಿ ... ಕಾಲಕ್ಕೆ ... ರಾಷ್ಟ್ರಗಳ ಪ್ರಭಾವ... ಲ್ಲಿ ನಮ್ಮ ನಾಡೂ ...

ಪ್ರಕಟಣೇ ೧.

ಮತದಾರರಿಗೆ ಪ್ರಾರ್ಥನೆ

ಕಳೆದ ನಾಲ್ವತ್ತು ವರುಷಗಳಿಂದ ನಮ್ಮ ದೇಶಕ್ಕೆ ಸ್ವರಾಜ್ಯವನ್ನು ದೊರಕಿಸುವ ಸಲುವಾಗಿ ವಿಶೇಷ ಪ್ರಯತ್ನಗಳು ನಡೆದಿರುತ್ತವೆಂಬ ಮಾತು ತಮ್ಮೆಲ್ಲರಿಗೂ ಗೊತ್ತೇ ಇದೆ. ಆದರೆ ಸ್ವರಾಜ್ಯವು ಗಿಡದಿಂದ ಹಣ್ಣು ಬಿದ್ದಂತೆ ಬೀಳುವ ಪದಾರ್ಥವಲ್ಲ. ಮತ್ತು ಎರಡನೇಯವರು ಅದನ್ನು ಕೈಎತ್ತಿ ಕೊಡಲಾರರು. ಕೇವಲ ನಮ್ಮ ಪ್ರಯತ್ನದಿಂದಲೇ ದೊರಕಿಸತಕ್ಕದ್ದು. ಸುಸಂಘಟಿತವಾಗಿ ಪ್ರಯತ್ನಮಾಡಿ ಸ್ವಾತಂತ್ರವನ್ನು ದೊರಕಿಸಬೇಕೆಂದು ೪೦ ವರುಷಗಳ ಹಿಂದೆ ರಾಷ್ಟ್ರೀಯ ಮಹಾಸಭೆಯು ಅಥವಾ ನ್ಯಾಶನಲ್ ಕಾಂಗರೆಸ್ಸು ಸ್ಥಾಪಿಸಲ್ಪಟ್ಟಿತು. ಮುಂದೆ ಲೋಕಮಾನ್ಯ ಟಿಳಕ, ಗೋಖಲೆ, ಮೆಹತಾ, ಚಿತ್ತರಂಜನದಾಸ, ಮಹಾತ್ಮಾ ಗಾಂಧಿ ಮೊದಲಾದ ಮಹಾವಿಭೂತಿಗಳು ಈ ಕಾಂಗರೆಸ್ಸನ್ನು ಪರಿಪೋಷಣೆ ಮಾಡಿ ಅದರ ಮುಖಾಂತರವಾಗಿ ಸ್ವರಾಜ್ಯ ಚಳವಳಿಯನ್ನು ಸಾಗಿಸಿದರು ಅನೇಕ ಕಾಂಗರೆಸ್ಸ ಭಕ್ತರು ತಮ್ಮ ಸ್ವಾರ್ಥಕ್ಕೂ ಶಾರೀರಕ ಸುಖಕ್ಕೂ ತಿಲಾಂಜಲಿಯನ್ನು ಕೊಟ್ಟು ನವಕರ ಶಾಹಿಯ ಕೂಡ ಘನ ಘೋರ ಯುದ್ಧ ಮಾಡಿ ಕಾರಾಗೃಹವನ್ನು ಸೇರಿದರೆಂಬ ಸಂಗತಿಯಾದರೂ ತಮಗೆ ಗೊತ್ತಿದೆ ಇಂಥವರು ರಾಷ್ಟ್ರೀಯ ಸಭೆಯ ಪರವಾಗಿ ಕಾಯಿದೆಮಂಡಳಿಗಳಿಗೆ ಪ್ರತಿನಿಧಿಗಳಾಗಿ ನಿಲ್ಲುವರು ಇವರು ನಿಸ್ಸ್ವಾರ್ಥಿಗಳೂ, ಗಟ್ಟಿಗರೂ. ಇರುವರಲ್ಲದೆ ರಾಷ್ಟ್ರೀಯ ಸಭೆಯ ಆಜ್ಞೆಯನ್ನು ಪಾಲಿಸುತ್ತ ಹೋಗುವೆವೆಂದು ಪ್ರತಿಜ್ಞಾಪತ್ರವನ್ನು ಬರೆದು ಕೊಟ್ಟಿರುತ್ತಾರೆ ಅಂದಮೇಲೆ ಅವರು ಯಾವ ಮೋಹಕ್ಕೂ ಬಲಿ ಬೀಳುವ ಸಂಭವವಿಲ್ಲ. ಆದ್ದರಿಂದ ನೀವೆಲ್ಲರೂ ನಿಮ್ಮ ಮತಗಳನ್ನು ಕಾಂಗರೆಸ್ಸ ಪರವಾಗಿ ನಿಂತ ಉಮೇದವಾರರಿಗೆ ಕೊಟ್ಟು ನಿಮ್ಮ ಮತಗಳು ಸದುಪಯೋಗ ಮಾಡಿಕೊಳ್ಳಿರಿ. ಜಾತಿ, ಪಂಗಡಗಳಗಿಂತ ದೇಶವು ಹೆಚ್ಚಿನದೆಂಬ ಮಾತನ್ನು ಮರೆಯಬೇಡಿರಿ.

ನಮ್ಮ ಪ್ರಾಂತದ ಸಲುವಾಗಿ ಮಾಡತಕ್ಕ ಕಾರ್ಯವು.

ನಮ್ಮ ಪ್ರಾಂತದಿಂದ ಕಾಯಿದೇ ಮಂಡಲಗಳಿಗೆ ಹೋದ ಸಭಾಸದರು ಈ ಕೆಳಗಿನ ಕಾರ್ಯವನ್ನು ಮಾಡಿಯೇ ತೀರಬೇಕೆಂದು ಮೊನ್ನೆ ಬಳ್ಳಾರಿಯಲ್ಲಿ ಕೂಡಿದ ಕರ್ನಾಟಕ ಪ್ರಾಂತಿಕ ಪರಿಷತ್ತಿನವರು ಆಜ್ಞಾಪಿಸಿರುತ್ತಾರೆ. (೧) ತೆರಿಗೆಯನ್ನು ಕೊಡುವಷ್ಟು ಬೆಳೆಗಳು ಬಾರದಿದ್ದ ಕಾಲದಲ್ಲಿ ಕೂಡ ಬೆಳೆಗಳು ಸಾಕಷ್ಟು ಬಂದಿರುತ್ತವೆಂದು ಪೂರ್ಣ ತೆರಿಗೆಯನ್ನು ವಸೂಲ ಮಾಡುತ್ತಾರೆ. ಈ ಅನ್ಯಾಯವನ್ನು ಹೋಗಲಾಡಿಸುವದಕ್ಕೆ ಪ್ರಯತ್ನ ಮಾಡುವದು (೨) ಖಾದಿಯ ಪ್ರಸಾರ. (೩) ಮದ್ಯಪಾನವನ್ನು ನಿಲ್ಲಿಸುವದು. (೪) ಕರ್ನಾಟಕದ ಏಕೀಕರಣ. [೫] ಜಂಗಲ ಖಾತೆಯಿಂದಾಗುವ ದುಃಖಗಳ ನಿವಾರಣೆ. [೬] ಉಂಬಳಿಗಳ ಕಾಯಿದೆಯನ್ನು ರದ್ದುಪಡಿಸುವದು. [೭] ಬರಗಾಲ ನಿವಾರಣೆಯಾಗುವಂತೆ ಯತ್ನಿಸುವದು. [೮] ಅಸ್ಪೃಶ್ಯತೆಯ ನಿವಾರಣೆ ಮಾಡುವದು. (೯) ಸಾರ್ವತ್ರಿಕ ಶಿಕ್ಷಣ ಪ್ರಸಾರ ಮಾಡುವದು, ಇದರ ಹೊರ್ತು ಅನೇಕ ಲೋಕ ಹಿತ ಕಾರ್ಯಗಳನ್ನು ಕೈಕೊಳ್ಳಬೇಕೆಂದು ಗೊತ್ತಾಗಿದೆ.

ಉಮೇದ್ವಾರರು

ಪ್ರಾಂತಿಕ ಕಾಂಗ್ರೆಸ್ಸ ಕಮೀಟಿಯವರು ಕೆಳಗೆ ಬರೆದ ಸದ್ಗೃಹಸ್ಥರನ್ನು ಉಮೇದವಾರರನ್ನಾಗಿ ನೇಮಿಸಿರುತ್ತಾರೆ.

ಲೇಜಿಸ್‌ಲೇಟಿವ್ಹ ಅಸೆಂಬ್ಲಿಗೆ

ಮುಂಬಯಿ ಇಲಾಖೆಯ ದಕ್ಷಿಣಭಾಗದಿಂದ ಮಂಗಳೂರ ಮತಕ್ಷೇತ್ರದಿಂದ ೧ ದತ್ತಾತ್ರೇಯ ವೆಂಕಟೇಶ ಬೆಳವಿ. ವಕೀಲ ಬೆಳಗಾಂವಿ. ೨ ಶ್ರೀ. ಜೆ. ಎ. ಸಾಲ್ಡಾನಾ ಮಂಗಳೂರ.

ಮುಂಬಯಿಕೌನ್ಸಿಲಕ್ಕೆ

ಧಾರವಾಡ ಜಿಲ್ಹೆಯಿಂದಾ ೧ ಶ್ರೀ. ವಿಶ್ವನಾಥರಾವ ಜೋಗ ವಕೀಲ ಧಾರವಾಡ.

ವಿಜಾಪೂರ ಜಿ. ೧ ಶ್ರೀ. ಶ್ರೀನಿವಾಸರಾವ ಕೌಜಲಗಿ ವಕೀಲ

ಮುಂಬಯಿ ವಿಶ್ವವಿದ್ಯಾಲಯದ ಪರವಾಗಿ ೧ ಡಾ. ಗೋಪಾಳರಾವ ದ್ಯೆಶಮುಖ ಮುಂಬಯಿ.

ಮದ್ರಾಸ ಕೌನ್ಸಿಲಕ್ಕೆ

ಮಂಗಳೂರ ಬಳ್ಳಾರಿ ೧ ಶ್ರೀ. ಕೆ. ಆರ್. ಕಾರಂತ ಮಂಗಳೂರ ಬೆಳ್ಳೋಣಿ ಭೀಮರಾವ ವಕೀಲ ಬಳ್ಳಾರಿ.

ಮಧ್ವರಾವ ಕೆಂಭಾವಿ.

ಕಾರ್ಯದರ್ಶಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿ.

ಮೆ|| ಡಿ. ಡಿ ಕಲಕೋಟಿ ಪ. ಭಾಗ ಇವರ ಜೂನ ತಿಂಗಳಿನ ಪ್ರವಾಸವು. ತಾ|| ೧೧ರಿಂದ ೨೦ರವರೆಗೆ ಬಾಗಲಕೋಟೆ. ತಾ|| ೨೩ರಿಂದ ೩೦ರವರೆಗೆ ಹುಲ್ಲೂರ ತಾಲೂಕ ಮುದ್ದೇಬಿಹಾಳ.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ

ಭಾವಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೨೫೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN (IE SIZE AND STRENGTH

THE GREATEST INDIAN

LIFE ASSURANCE COMPANY

Apply for full particulars to-

N. K. Kulkarni. Agent Bagalkot.

ರಕ್ತಶುದ್ಧಿ

ಮತ್ತು

ಧಾತುವೃದ್ಧಿಕಾರಕ

'ಬಲವಂತಗುಟಿಕಾ'

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶೀಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗ್ಯೆರೆ ವಿಕಾರಗಳೂ. ಜಾಗ್ರತೆಯಿಂದ ವಾಸಿಯಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತುಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವ್ಯೆಯಕ್ತಿಕರ ಗರಮಿಯು ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೬-೦-೦, ಇದಲ್ಲದೆ ೧ ಡಬ್ಬಿಯು ಕಮಿಶನ್ನು ಸಿಗುವದು.

ವಿಳಾಸ:—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೋಸ್ಟ-ನಿಪ್ಪಾಣಿ, (ಬೆಳಗಾಂವ್)

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಪ್ರಾಮಾಣಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮ್ಯೆಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.



ಗುಲಕಂದ! ಗುಲಕಂದ.! ಗುಲಕಂದ!!

ನಮ್ಮ ತೋಟದಲ್ಲಿಯ ಹೆಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತುರಾಯಿಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತುಂಬಾ ಕಮೀಶನ್.

ವಿಳಾಸ — ಫಂಡಗೆ ಇನಾಮಕರ ಕಂಪನಿ

ಗುಬ್ಬಿ ಶ್ರೀಚನ್ನಬಸವೇಶ್ವರ ನಾಟಕ ಸಭೆ.

ಇವರು ಜೂನ ೧೨ ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯುರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಜುನಾಯಿಟೆಡ್ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎನ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಒಬ್ಬೊ ಬ್ಬರಿಗೆ ಪತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೭೦ ಮಿ. ವಿಠ್ಠಲ ಜಿವಾಜಿ ಸೇಟ ಕಲಾಸ್ ಅಲಿಬಾಗ ಬಾಂಬೆ,

(೨) ಬಾಂಡ ನಂ ೧೩೬೦೭ ಮಿ॥ ರಂಗಪ್ಪಾ ಶ್ಯಾನಭೋಗ ಮುಳಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ (ಜಿ. ತುಮಕೂರು.)

(೩) ಬಾಂಡ ನಂ. ೧೪೯೬೭ ಮಿ, ವೆಂಕಟರಮಣ, ವೆಂಕಟರಮಣ ಹೆಗಡೆ, ಸೇಕರಿ ಮಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ॥ ಜಿ. ವೆಂಕಟರಾವ ವ್ಯಾಪಾರಿ ಮತ್ತು ಜಮೀನದಾರ ಬ್ರಹ್ಮಾಪೇಟ [illegible]

(೫) ಬಾಂಡ ನಂ. ೨೯೦ ಮಿ॥ ರಾಮಚಂದ್ರ ವಾಮನ [illegible] ಕಾಲಬಸ್ಕರ ವಾಡಾ ವ್ಯಾಸಕಠೋಡ (ಬಡೋದಾ)

(೬) ಬಾಂಡ ನಂ. ೧೪೯೦ ಮಿ॥ ಆರ್. ಎಮ್. ನಾಟೆಸನ್ ಮಾಸ್ತರ ಗವರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ)

ಫೋರವಾಲ ಬ್ಲ್ಯಾಕ ಟೂಥ್ ಪಾವಡರ.

ಇದು ಹಲ್ಲು ಒಸಡುಗಳ ರೋಗಗಳನ್ನು ನಾಶಪಡಿಸಿ ಹಲ್ಲನ್ನು ಸ್ವಚ್ಛ ಮತ್ತು ಗಟ್ಟಿಯಾಗಿಡುವದು. ದೇಶೀ ವಿದೇಶೀ ಟೂಥ ಪಾವಡರಗಳಿಗಿಂತ ಶ್ರೇಷ್ಠವಾದುದಿದೊಂದೇ. ಒಂದೇ ಸಲ [illegible] ಬಾಟ್ಲಿ—೫ ಆಣೆ. [illegible] ಜೆರಿ ಫಾರ್ಮೆಸಿಗಳಲ್ಲಿ ದೊರೆಯುತ್ತದೆ.

[illegible] ಕಂ. (ರಜಿಸ್ಟರ್ಡ) ಪುಣೇ ಶಹರ

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ೬ ವರ್ಷ ಗ್ಯಾರಂಟಿ

ಟಿಪ್ಪಣಿ:— ಗಡಿಯಾಳ ವನ್ನು ಕಳಿಸುವಾಗ್ಗೆ ಕಾಳಜಿ ಯಿಂದ ತಪಾಸಿಸಿ ಮತ್ತು ಟಾ [illegible] ಕಳಿಸಲಾಗುವದು.

[illegible] ವಾಚ ಕಂ. (India) ಮುಂಬೈ ನಂ. ೪

ಕನ್ನಡಧುರೀಣ.

ಉತ್ತಮ ವರ್ಗದ ವಾರಪತ್ರಿಕೆ

ಮನಃಪೂರ್ವಕವಾಗಿ [illegible] ಸಾಂಪ್ರತದ ರಾಜಕೀಯ [illegible] ಕನ್ನಡ [illegible] ನೋಡ ಲಿಚ್ಛಿಸುವವರು ಈ ವಾರಪತ್ರಿಕೆಯನ್ನು ತಪ್ಪದೆ ಓದಬೇಕು. ವಾರ್ಷಿಕ ವರ್ಗಣಿ ೩-೧೨-೦ ಪತ್ತೆ:—

ಸಂಪಾದಕ ಕನ್ನಡ ಧುರೀಣ- ಕುಮಟಾ, ಜಿ ಉತ್ತರ ಕನ್ನಡ

ಶಿಲಾಲಿಪಿಗಳನ್ನು ಓದಬೆ ಕೆನ್ನುವಿರೋ?

ಜಿ ಕಾರಣದು ನಮ್ಮ ಕಡೆಗೆ ೬ ಒಣ್ಣೆಯ ಪೋಸ್ಟ ಟಿಕೀ ಟು ಕಳುಹಿ, ಅದಕ್ಕೆ [illegible] ಕಲಿತು ಕೊಳ್ಳಬಹುದು [illegible] ಕಳೆದುಕೊಳ್ಳಬಾರದು

ವಿಳಾಸ:— "[illegible]" ಜಲಸಂಗಿ.

ಜಿಲ್ಲಾ ವಿಜಾಪೂರ.

ಹಳೇ ಮೋಟಾರ

ಸೋಪೀವರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ವಿ. ಗರೆವಾಲೆ
ವಡಾವನಾಶ್ರಮ ಮುಂಬೈ ನಂಬರ ೪
[illegible]

ಈ ಪತ್ರಿಕೆಯು ಬಂಗಳಪೇಠ ರಾಜ್ಯಾಡರ [illegible] ವಿದ್ಯಾಗ್ಯಮುದ್ರಾಲಯದಲ್ಲಿ ಮುದ್ರಿತವಾಗಿ [illegible]

ರ. ನಂ. ಬಿ. ೧೯೪೭ ವಾ. ಚಂದಾ ೧—೧೪-೦ ಮಾತ್ರ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟಿ ಶುಕ್ರವಾರ ಮಿತಿ ಜೇಷ್ಠ ಶುದ್ಧ ೧೫ ಶಕೆ ೧೮೪೮ ತಾ|| ೨೫ ೬-೧೯೨೬. | ಸಂಚಿಕೆ ೧೪

ಸಂಪಾದಕರ ಭೂಮಿ

(*)

ನನ್ನ ಮನಸಿನ ಮೋಣವಮಾಡಿ ಕಟ್ಟುವೆನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾದರು ಚಿನ್ನ ಮೋಣಬಸ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೊ॥

— ಅಂಜಿಕಾ ತನಯ ದತ್ತ

ದೇಶಬಂಧು ದಾಸರ ದಿವ್ಯ ಜ್ಯೋತಿಯು ಪರಂಧಾಮವನ್ನು ಸೇರಿ ಒಂದು ವರ್ಷವಾಗಿ ಹೋಯಿತು. ಅವರ ಸಂಸಾರವು ಮೊದಲು ವಿಷದ ಹಾಸಿಗೆಯಂತಿದ್ದಿತು. ಅವರ ಸುಖಗಳಿಗೆ ಸೀಮೆ ಯಿದ್ದಿಲ್ಲ; ಭೋಗಗಳಿಗೆ ಕೊನೆಯಿದ್ದಿಲ್ಲ. ಮುಳ್ಳಿನ ಮೊನೆಯೆಂದರೇನು? ಎಂಬುದರ ಅರಿವು ಕೂಡ ಅವರಿಗಿದ್ದಿಲ್ಲ. ಇಂತಹ ಅಮೃತ ಸುಖದ ಮಳೆಯು ಅವರ ಮೇಲೆ ಧಾರಾಳವಾಗಿ ಸುರಿಯುತ್ತಿರುವಾಗ 'ನಿನ್ನ ಭೋಗಗಳಿಂದ ಹಿಂಸೆಯಾಗುತ್ತಿದೆ. ನೀನು ಅಮೃತವೆಂದು ಭಾವಿಸಿದ ಒಡವೆಯು ಅಮೃತವಲ್ಲ, ವಿಷದ ಬಟ್ಟು. ಅಹಿಂಸೆಯೇ ಉಪಾಸನೆ; ಪ್ರೀತಿಯೇ ಸಾಕ್ಷಾತ್ಕಾರ, ಪ್ರೀತಿ ದೇವತೆಯ ಪ್ರಸಾದವನ್ನು ದೊರಕಿಸಲು ತ್ಯಾಗವೇ ಸಾಧನ' ವೆಂದು ಶ್ರೀಮದೂರ್ಜಿತರಾದ ಮಹಾತ್ಮರ ಕೋಮಲ ಭಾವದ ನುಡಿಯು ದಾಸರ ಕಿವಿಗೆ ಬಿದ್ದೊಡನೆ, ಅವರಲ್ಲಿ ಬೆಳಕುಂಟಾಯಿತು. 'ಜಡದ ಹಡದಿ' ಯ ತುಳಿದು ಮುಂದೆ ಸಾಗುವದೇ ತಮ್ಮ ಕರ್ತವ್ಯವೆಂದು ಅವರಲ್ಲಿ ಅರಿವು ಉತ್ಪನ್ನವಾಯಿತು. ಚೈತನ್ಯ ರಸದ ಹರಿದಾಟದಿಂದ ನೇತ್ರಗಳು ಕಳೆಗೊಂಡವು ಹಗಲಿನ ಮುಗಿಲಿನಲ್ಲಿ ಕೂಡ ಚಿಕ್ಕೆಗಳು ಜೊಕ್ಕಾಗಿ ಕಾಣಹತ್ತಿದವು. ಭೋಗದ ಯುಗವು ಕಳೆದು ತ್ಯಾಗದ ಯುಗವು ಪ್ರಾರಂಭವಾಯಿತು "ಲೋಕದಲ್ಲಿ ಹಸಿದವರೆನಿಬರಿರ್ಪರು" ಎಂಬ ಮಂತ್ರವನ್ನು ಜಪಿಸತೊಡಗಿದರು. ನಾಡಿಗಾಗಿ ತಮ್ಮ ಪಂಚಪ್ರಾಣಗಳನ್ನು ಅರ್ಪಿಸಿದರು. ತ್ಯಾಗದ ದಾರಿಯೇ ಪ್ರೀತಿಯ ದಾರಿ; ತ್ಯಾಗದ ಬೀದಿಯೇ ಮಮತೆಯ ಬೀದಿ, ತ್ಯಾಗದ ಬೀದಿಯೇ ಸಮತೆಯ ಬೀದಿ, ಎಂದು ನಮಗೆ ತಮ್ಮ ಕೃತಿಗಳಿಂದ ಉಸುರಿ, ಉಸುರಿನಾಡಿಯ ಬೆಳಕಿನೊಡನೆ ಬೆರತು ಹೋದರು. 'ತ್ಯಾಗದಲಿ ನಿಜವಾಗಿ ನಿಲಲು ಅರಿವು ಬಹುದು' ಎಂದು ಚಿಕ್ಕೆಗಳ ತಾಳದಲಿ ಇನ್ನೂ ಹಾಡುತ್ತಿರುವರು. ಕಿವಿಯಿದ್ದವರಿಗೆಲ್ಲ ಆ ಹಾಡು! ಇರಲಿ. ಇಂತಹ ಮಹಾತ್ಮರ ಪುಣ್ಯ ಸ್ಮರಣವನ್ನು ಮಾಡುವದು ನಮ್ಮ ಧರ್ಮವು. ಕರ್ತವ್ಯವು. ದಿನಾಲು ಮಾಡುವದಾಗದಿದ್ದರೆ, ವರ್ಷಕೊಮ್ಮೆಯಾದರೂ ಮಾಡಬೇಕು. ಇವರು ರಾಷ್ಟ್ರ ಪುರುಷನಿಗೆ ಆತ್ಮವಿದ್ದಂತೆ. ಇವರು ಮೃತವಾದ ರಾಷ್ಟ್ರದಲ್ಲಿ ಜೀವನದ ಎರಕವನ್ನು ಎರೆಯುವರು. ಇಂಥವರ ಕೀರ್ತಿಯನ್ನು ಹೊಗಳುವದರಿಂದಲೇ ನಮ್ಮ ನಾಲಿಗೆಯು ಪವಿತ್ರವಾಗುವದು. ಇಂಥವರ ಪೂಜೆಯಿಂದಲೇ ನಮ್ಮ ಜೀವನವು ವಿಕಸಿತವಾಗುವದು. ಜಗತ್ತಿಗೆ ಸತ್ಪುರುಷರ ಸದಂಶವೇ ಆಧಾರವು. ಇವರು ಈ ಲೋಕವನ್ನು ಅಮರ ಲೋಕವನ್ನಾಗಿ ಮಾಡುವರು, ದೊಡ್ಡವರಲ್ಲಿ ನಂಬುಗೆಯನ್ನಿರಿಸಿ ಅವರ ಅಡಿಯಲ್ಲಿ ಅಡಿಯನ್ನಿಟ್ಟು ನಾವು ಮುಂದೆ ಸಾಗೋಣ.

ವಿಜಾಪೂರದಲ್ಲಿ ಇದೇ ತಿಂಗಳಿನ ೧೨ ನೇ ತಾರೀಖಿಗೆ ಲೋಕಲ್ ಬೋರ್ಡಿನ ಸಭೆಯು ಸೇರಿತ್ತು ಅದರಲ್ಲಾದ ಹಲವು ಗೊತ್ತುವಳಿಗಳೊಂದಿಗೆ ೧೨೫ ರೂ. ವೆಚ್ಚ ಮಾಡಿ 'ಲೋಕಲ್ ಬೋರ್ಡಿನ ಹಿಂದಿನ ಅಧ್ಯಕ್ಷರಾದ ರಾ|| ಬ|| ಕೆಂಭಾವಿ ರಾಘವೇಂದ್ರ ರಾಯರ ತೈಲ ಚಿತ್ರವನ್ನು ಸಭಾ ಮಂಟಪದಲ್ಲಿರಿಸಬೇಕೆಂದು ಗೊತ್ತಾಯಿತು. ಇದು ನಮ್ಮ ಮುಂದಾಳು ಪತ್ರಿಕೆಗೆ ಸರಿಯಾಗಿ ಕಂಡಿಲ್ಲವೆಂದು ಅದರಲ್ಲಿಯ ಸ್ಫುಟ ಲೇಖದಿಂದ ಕಂಡು ಬರುತ್ತದೆ. "ಇದರಂತೆಯೇ ಇನ್ನೂ ಎಷ್ಟೆಷ್ಟು ಭಾವಚಿತ್ರಗಳು ಸಭಾ ಗೃಹದಲ್ಲಿ ಮೆರೆಯುವವೋ ನೋಡಬೇಕಾಗಿದೆ. ಜನರಿಗೆ ಈ ಬಗ್ಗೆ ತಿಳಿಗೆ ಬೇಳದಿದ್ದರೆ ಸಾಕು" ಈ ಶಬ್ದಗಳಿಂದ ಅದರ ಆಶಯವು ವ್ಯಕ್ತವಾಗುತ್ತಿದೆ. ಭಾವಚಿತ್ರಗಳನ್ನು ಸಾರ್ವಜನಿಕ ಸ್ಥಳಗಳಲ್ಲಿ ಏಕೆ ಇಡುತ್ತಾರೆಂಬುದರ ಮರ್ಮವು ಬೇರೆಯಾಗಿದೆ. ಶ್ರೀ ರಾಘವೇಂದ್ರರಾಯರ ಲೋಕಪ್ರಿಯತೆಗೂ, ಕರ್ತವ್ಯದಕ್ಷತೆಗೂ ಆ ಭಾವಚಿತ್ರವು ಸಾಕ್ಷಿಯು. ಶಿಕ್ಷಣಕ್ಕೆ ವೆಚ್ಚ ಮಾಡಿದ ಹಣವು ಹೇಗೆ ಅಸಾರ್ಥಕವಲ್ಲವೋ ಹಾಗೆಯೇ ದೊಡ್ಡ ದೊಡ್ಡ ಜನರ ಚಿತ್ರಗಳಿಗಾಗಿ ಸಾರ್ವಜನಿಕ ಸಂಸ್ಥೆಗಳು ವೆಚ್ಚ ಮಾಡಿದ್ದಲ್ಲಿ ಅಕಿಂಚನ ಕಾರಿತ್ವದ ದೋಷವು ತಗಲಲಾರದು. ದೊಡ್ಡವರ ಚಿತ್ರಗಳಾದರೂ ಶಿಕ್ಷಣದ ಸಾಧನಗಳಾಗಿರುವವು. ದೊಡ್ಡವರ ಚರಿತ್ರವೇ ನಾಡಿನ ಇತಿಹಾಸವೆಂದು ಒಬ್ಬ ಗ್ರಂಥಕಾರನು ನುಡಿದಿದ್ದಾನೆ. ಅವರಿಂದಲೇ ಜಗತ್ತಿನ ಮಹತ್ಕಾರ್ಯಗಳು ಜರಗಿರುತ್ತವೆ. ಅವರ ಚಿತ್ರಗಳ ನಿರೂಪಣದಿಂದ ಅವರಲ್ಲಿಯ ಗುಣಗಳೆಲ್ಲ ನಮ್ಮ ಮುಂದೆ ಜೀವಂತವಾಗಿ ನಿಂತು ಉಚ್ಚ ಧ್ಯೇಯಗಳ ಸ್ಫುರಣವನ್ನು ನಮ್ಮಲ್ಲುಂಟು ಮಾಡುತ್ತವೆ. ಅವರ ಕರ್ತವ್ಯದಕ್ಷತೆ, ಅವರ ಜನಹಿತ ಪ್ರವೀಣತೆ, ಅವರ ವ್ಯಕ್ತಿವೈಶಿಷ್ಟ್ಯ, ಅವರ ಉದ್ಯೋಗಶೀಲತೆ, ಅವರ ದೀರ್ಘಪ್ರಯತ್ನ ಇವೇ ಮೊದಲಾದವುಗಳು ನಮ್ಮ ಮನೋಭಿತ್ತಿಯಲ್ಲಿ ಮೂಡಿ,

ಕಾರ್ಯರಜಗತ್ತಿನಲ್ಲಿ ಪರಿಣತಿಗೊಳ್ಳುವವು ಜಗತ್ತಿನಲ್ಲಿ ರೊಕ್ಕವು ಸಾಧನವು; ಅವರೆ ಸಾಧ್ಯವಲ್ಲ. ಸಾಧ್ಯವು ಮಾನಸಿಕ ಮತ್ತು ಆಧ್ಯಾತ್ಮಿಕ ಉನ್ನತಿಯಾಗಿರುವುದು ಎರಡು ಸುದ್ದಿಗಾಗಿ ಚಾರಿತ್ರ್ಯದ ಜಾಜ್ವಲ್ಯವನ್ನು ಕಳೆದುಕೊಳ್ಳುವುದು ಆತ್ಮಘಾತಕವಾದ ಮಾರ್ಗವು.

ಬಿ ರಂಗನಾಥರಾಯರು ಬೆಂಗಳೂರಿನ ಸ್ವಯಂಸೇವಕರು. ದೇಶಸೇವೆಯನ್ನು ಮಾಡಬೇಕೆಂಬ ವ್ರತ ತೊಟ್ಟವರು. ಅವರು ನಾಗಪುರದ ಪತಾಕಾ ಯುದ್ಧದಲ್ಲಿ ಕೂಡಿಕೊಂಡಿದರು. ಆದ್ದರಿಂದ ೬ ತಿಂಗಳ ಶಿಕ್ಷೆಯನ್ನು ಭೋಗಿಸಬೇಕಾಯಿತು ಅವಧಿಯು ಮುಗಿಯಲು ಅವರಿಗೆ ಬಿಡುಗಡೆಯಾಯಿತು. ಸ್ವಸ್ಥಾನಕ್ಕೆ ಅವರು ಮರಳಿ ಬಂದರು. ಸೊಸೆ ...ವರ ಮದುವೆಯ ಪ್ರಶ್ನೆಯು ಉಪಸ್ಥಿತವಾಗಲು, ಮದುವೆಗಳ ಅಣ್ಣನು ಬಿ ರಂಗನಾಥರಾಯರಿಗೆ ಕಾರಾಗ್ರಹವಾಸ ವಾದುದರಿಂದ ಅವರಿಗೆ ಹೆಣ್ಣು ಕೊಡುವುದು ವಿಹಿತವಲ್ಲ; ಅದರಿಂದ ಸಮಾಜಕ್ಕೆ ಕಳಂಕ ತಗಲುತ್ತದೆಂದು ಆರಂಭಿಸಿದನು. ಆ ಮೇಲೆ ಈ ಪ್ರಶ್ನೆಯು ನ್ಯಾಯಾಸನದ ಮುಂದೆ ಬಂದಿತು. ಉದಾರಿಗಳಾದ ನ್ಯಾಯಾಧಿಶರು "ನಾಡಿನ ಸಲುವಾಗಿಯೂ, ನಾಡಗುಡಿಯ ಸಂರಕ್ಷಣೆಯ ಸಲುವಾಗಿಯೂ ಕಾರಾಗೃಹವಾಸವನ್ನು ಅಂಗೀಕರಿಸುವುದು ಪವಿತ್ರವಾದ ಕೆಲಸವು. ಇಂತಹ ಸ್ವದೇಶಪ್ರೀತಿ ವ್ಯಂಜಕವಾದ ಕೃತಿಗಳಿಂದ ಸಮಾಜಕ್ಕೆ ಕುಂದು ತಗಲುವದಿಲ್ಲ; ಆದರೆ ಅದರ ಕೀರ್ತಿಯು ಬೆಳೆದು ವಿಶ್ವವನ್ನೆಲ್ಲ ಬೆಳಗುವದೆಂ"ದು ತೀರ್ಪು ಕೊಟ್ಟರು. ನ್ಯಾಯಾಧೀಶರು ನ್ಯಾಯ್ಯವಾದುದನ್ನೇ ನುಡಿದರು. ರಾಷ್ಟ್ರದ ಗೌರವವನ್ನು ಕಾಯಲು ಸಜ್ಜನರು ಕಾಯದೆ ಭಂಗಮಾಡಿದರೆ, ಅದು ತಪ್ಪಾಗಲಾರದು; ಒಪ್ಪೇ ಆಗುವುದು ರಾಷ್ಟ್ರಕ್ಕೆ ಆಪತ್ತು ಬಂದಾಗ, ತನ್ನ ಜಾತಿಗೆ ವಿಪತ್ತು ಬಂದಾಗ, ಸದಸದ್ವಿವೇಕ ಬುದ್ಧಿಯ ಬೆಳಕಿನಲ್ಲಿ ಹೆಜ್ಜೆಯಿಟ್ಟರೆ, ಮೈಲಿಗೆಯ ಗಾಳಿಯೇ ಸೋಂಕಲಾರದು

ಧಾರವಾಡ ಕರ್ನಾಟಕ ಕಾಲೇಜಿಗೆ ಒಬ್ಬ ಸಂಸ್ಕೃತ ಶಾಸ್ತ್ರಿಗಳು ಬೇಕಿರುವರು. ಈಗಿರುವವರು ತೀವ್ರವೆ ನಿವೃತ್ತರಾಗಲಿರುವರು ಧಾರವಾಡವು ತಿರುಳ್ಗನ್ನಡದ ನಾಡು. ಇಂತಲ್ಲಿ ಕನ್ನಡಬಲ್ಲ ಸಂಸ್ಕೃತ ಶಾಸ್ತ್ರಿಗಳಿರುವುದೇ ಸರ್ವಥಾ ಯೋಗ್ಯವಾದುದು. ಕನ್ನಡನಾಡಿನಲ್ಲಿ ಉಭಯ ಭಾಷಾ ಕೋವಿದರು ಅನೇಕರಿರುವರು. ಹೀಗಿದ್ದು ಎರಡನೆಯ ಕಡೆಯಿಂದ ಕನ್ನಡವನ್ನರಿಯದ ಪಂಡಿತರನ್ನು ತಂದು ಕುದುಕುವುದು ಅನ್ಯಾಯದ ಮಾತಾಗವುದು. ಇದರಿಂದ ವಿದ್ಯಾರ್ಥಿಗಳಿಗಾದರೂ ತೊಂದರೆಯಾಗುವುದು. ವಿಷಯವನ್ನು ಕನ್ನಡದಲ್ಲಿ ಹೇಳಿದರೆ ಅವರಿಗೆಷ್ಟು ಸುಲಭವಾಗಿ ತಿಳಿಯುವುದೋ ಅಷ್ಟು ಮತ್ತೊಂದು ಭಾಷೆಯಲ್ಲಿ ಹೇಳಿದರೆ ತಿಳಿಯುವದಿಲ್ಲ ಆದ್ದರಿಂದ ನ್ಯಾಯತಃ ವ್ಯವಹಾರತಃ ಯೋಗ್ಯವಾದುದನ್ನು ಏಕೆ ಮಾಡಬಾರದು. 'ಕರ್ಮವೀರ' 'ಕರ್ನಾಟಕ ಟಾಯಿಮ್ಸ್' ಇವುಗಳ ಕೂಗು ಅಧಿಕಾರಿಗಳ ಕಿವಿಗೆ ಬಿದ್ದು, ಅವರನ್ನು ಕರ್ತವ್ಯ ಜಾಗೃತರನ್ನಾಗಿ ಮಾಡಲೆಂದು ಕನ್ನಡಿಗನ ಹಾರೈಕೆ.

ಹಿಂದುಸ್ಥಾನವು ಸ್ವರಾಜ್ಯವನ್ನು ಸಂಪಾದಿಸಬೇಕೆಂದು ಕಳೆದ ೪೦ ವರ್ಷಗಳಿಂದ ಹೆಣಗಾಡ ಹತ್ತಿದೆ. ಆದರೂ ಎಲ್ಲ ಕಡೆಯಲ್ಲಿ ನಿರಾಶೆಯ ಕಾರ್ಮೋಡಗಳೇ ಕಾಣುತ್ತವೆ; ಆಶೆಯ ಬೆಳಕಿನ ಕಿರಣಗಳ ಸುಳುವಿಲ್ಲ, ದಿನದಿನಕ್ಕೆ ಪರಿಸ್ಥಿತಿಯು ಕೆಡುತ್ತ ನಡೆದಿದೆ ರಾಷ್ಟ್ರದಲ್ಲಿ ಒಕ್ಕಟ್ಟಿಲ್ಲ; ಒಂದೇ ಕಾರ್ಯಕ್ರಮವಿಲ್ಲ. ಹಿಂದೂ ಮುಸಲ್ಮಾನರ ಜಗಳಗಳಂತೂ ನಡದೇ ಇವೆ. ದಕ್ಷಿಣದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಕಲಹಗಳು ಅನಿಷ್ಟಸ್ವರೂಪವನ್ನು ಧರಿಸಿವೆ, ಪಂಗಡ ಪಂಗಡಗಳಲ್ಲಿಯ ಒಳಜಗಳಗಳಿಗಂತೂ ಮರ್ಯಾದೆಯೇ ಇಲ್ಲ ರಾಜಕಾರಣದಲ್ಲಿ ನುರಿತವರಿಗೂ ಕೂಡ ಸ್ಥಿತಿಯು ಹಣಿಯಬೊಲ್ಲದಾಗಿದೆ. ಲಾಲಾ ಲಜಪತರಾಯರು ಧರ್ಮ ಧರ್ಮಗಳಲ್ಲಿಯ ವಿರೋಧದ ಸಲುವಾಗಿ ಹೀಗೆ ನುಡಿದಿದ್ದಾರೆ. "ಹಿಂದುಸ್ಥಾನದ ರಾಜಕೀಯ ಪಾರತಂತ್ರ್ಯಕಷ್ಟ, ಆರ್ಥಿಕ ಪರಾಯತ್ತತೆಗೂ ಭಿನ್ನ ಭಿನ್ನ ಧರ್ಮಗಳ ವಿರೋಧವೇ ಮೂಲವು ಈ ಅಡ್ಡಕಟ್ಟೆಗೆಯನ್ನು ದೂಡಿದರೆ, ಹಿಂದುಸ್ಥಾನದ ತೊಡಕು ಅನಾಯಾಸವಾಗಿ ಬಿಡುವುದು ಇದರಿಂದ ಜಗತ್ತಿನ ತೊಡಕಾದರೂ ಸುಲಭವಾಗಿ ಇಲ್ಲದಂತಾಗುವುದು. ಈಗ ಹಿಂದೂ ಮುಸಲ್ಮಾನರ ಕಲಹಗಳು ಘೋರಸ್ವರೂಪವನ್ನು ತಾಳಿರುವದರಿಂದ, ನಮಗೆ ಅಡಿಗಡಿಗೆ ಎಡರುಗಳು ಬಂದೊದಗುತ್ತಿವೆ. ಅವರಿಬ್ಬರೂ ಪರಸ್ಪರರಲ್ಲಿ ಅವಿಶ್ವಾಸವುಳ್ಳವರಿದ್ದಾರೆ. ಅವರಿಬ್ಬರೂ ತಮ್ಮ ಸಂಖ್ಯೆಯನ್ನು ಬೆಳಿಯಿಸುವ ಪ್ರಯತ್ನ ನಡಿಸಿದ್ದಾರೆ. ಒಬ್ಬರು ಶುದ್ಧಿ ಯೆಂದರೆ ಇನ್ನೊಬ್ಬರು ತಾಬ್ಲೀಗ ಅನ್ನುತ್ತಾರೆ. ರಾಜಕೀಯ ಲಾಭಗಳನ್ನು ಮಾಡಿಕೊಳ್ಳುವುದೇ ಇವರ ಮುಖ್ಯ ಧ್ಯೇಯವಾಗಿದೆ. ಧರ್ಮವು ಈಗ ರಾಜಕಾರಣದ ಕೈಯಾಳಾಗಿದೆ, ಇವರ ಪರಿಣಾಮವೇನಾಗುವದೆಂಬದನ್ನು ಯಾರೂ ಅರಿಯರು. ಈಗಿನ ಪರಿಸ್ಥಿತಿಯ ಮೇಲಿಂದ ಮುಂದಿನದನ್ನು ಎಣಿಸಿದರೆ, ಹಿಂದುಸ್ಥಾನವು ಮತಮತಗಳು ಪಂಥ ಪಂಥಗಳು ಹೋರಾಡುವ ಯುದ್ಧರಂಗವಾಗುವದೆಂದು ತೋರುತ್ತದೆ. ಧಾರ್ಮಿಕ ಸ್ವಾತಂತ್ರ್ಯವು ಎಲ್ಲರಿಗೂ ಉಂಟು, ಆದರೆ ಈ ತರದ ಹುರುಡು ಅಥವಾ ಮೇಲಾಟವು ಅಭೂತಪೂರ್ವವಾಗಿದ್ದು, ಹಿಂದುಸ್ಥಾನದ ರಾಜಕೀಯ ಸ್ವಾತಂತ್ರ್ಯಕ್ಕೆ ಘಾತಕವಾದುದಿರುತ್ತದೆ ಇಬ್ಬರ ಜಗಳದಿಂದ ಮೂರನೆಯವನಿಗೆ ಲಾಭವಾಗುತ್ತಿದೆ. ನಮ್ಮ ಬಡಿದಾಟದ ಮೇಲೆ ತಮ್ಮ ಶಾಸನ ಮಂದಿರವನ್ನು ನಮ್ಮರಸರು ಭದ್ರವಾಗಿ ಕಟ್ಟಿಕೊಂಡಿರುವರು. ಹೀಗೆಯೇ ನಾವು ಬಡಿದಾಡುತ್ತ ಹೋದರೆ, ಅದು ಮತ್ತಷ್ಟು ಭದ್ರವಾಗುವದು. ಹೇಗಾದರೂ ಈ ಪಂಥಗಳ ವಿರೋಧಕ್ಕೆ ಕಡೆಹಾಕದಿದ್ದರೆ, ನಮ್ಮ ರಾಷ್ಟ್ರವು ರಸಾತಳಕ್ಕೆ ಇಳಿಯುವದು, ಸ್ವತಂತ್ರ್ಯದ ಸ್ವಪ್ನವು ಕೂಡ ನಮಗೆ ದುರ್ಲಭವಾಗುವುದು. ನಾವೆಷ್ಟು ಒದ್ದಾಡಿದರೂ ರಾಜಕೀಯ ಪ್ರಗತಿಯು ಅಶಕ್ಯವಾಗುವುದು. ನಮಗೆ ಸ್ವಾತಂತ್ರ್ಯವು ಸಿಕ್ಕದಿದ್ದರೆ, ಏಶಿಯಾದ ಉಳಿದ ಭಾಗಕ್ಕೂ ಆಫ್ರಿಕೆಗೂ ಅದು ದೊರೆಯುವದಿಲ್ಲ ನಾವು ನಮ್ಮಲ್ಲಿಯ ಭಿನ್ನ ಭಿನ್ನ ಧರ್ಮಗಳ ವಿರೋಧದಿಂದ ನಮ್ಮ ನಾಡಿನ ಹಾನಿಮಾಡಿ, ಅದನ್ನು ಪಾರತಂತ್ರ್ಯದಲ್ಲಿ ಕೊಳೆಯಿಸುವಂತೆ, ಕರೆದೊಗಲಿನ ಎಲ್ಲ ನಾಡುಗಳು ಪಾರತಂತ್ರ್ಯದಲ್ಲುಳಿಯಲು ಪ್ರತ್ಯಕ್ಷ ಕಾರಣವಾಗುವವು." ಲಜಪತರಾಯರ ಮೇಲಿನ ನುಡಿಗಳು ಸ್ಪಷ್ಟವಾಗಿವೆ, ಹಿಂದುಸ್ಥಾನದ ಮೇಲೆಯೇ ಜಗತ್ತಿನ ಹಿತವು ಅವಲಂಬಿಸಿದೆ ಯೆಂಬ ಮಾತು ಒಡೆದು ಕಾಣುತ್ತಿದೆ. ಹಿಂದುಸ್ಥಾನವು ಪೌರ್ವಾತ್ಯದ ಜೀವನ ನಾಡಿಯು. ಹಿಂದುಸ್ಥಾನವು ಪಾರತಂತ್ರ್ಯದಲ್ಲಿರುವವರೆಗೆ ಉಳಿದವುಗಳಾದರೂ ಬಿಳಿದೊಗಲಿನವರ ಅಧೀನವಾಗಿರುವವು. ಆದ್ದರಿಂದ ಎಲ್ಲ ಮತದವರೂ ಎಚ್ಚತ್ತು, ಪ್ರೇಮದ ಮಾರ್ಗವನ್ನು ಹಿಡಿದು, ಕೂಡಿ ಕೆಲಸವನ್ನು ಮಾಡಬೇಕು. 'ಕೂಡಿ ಕೆಲಸಮಾಡಿ ಕೂಡಿ ನಲಿಯುವಾ ಕೂಡಿ ಸುಖದ ಸಗ್ಗವನ್ನು ಸೂರೆಮಾಡುವಾ' ಎಂದು ಹಾಡುತ್ತ ಹಿಂದೀ ಜನರು ಮುಂದೆ ಸಾಗಲಿ.

ವೃತ್ತಪತ್ರಗಳೇನನ್ನುತ್ತವೆ?

ಸಾರ್ವಜನಿಕ ಸಂಸ್ಥೆಗಳ ಕರ್ತವ್ಯ

"(೧) ಮುಂಬಯಿ, ಮದ್ರಾಸ, ಕೊಡಗು ಮತ್ತು ಅನೇಕ ಸಂಸ್ಥಾನಗಳಲ್ಲಿರುವ ಕರ್ನಾಟಕಸ್ಥರ ಸಂಸ್ಕೃತಿಕ ಹಾಗೂ ಆರ್ಥಿಕ ಪ್ರಗತಿಗಾಗಿ ಕರ್ನಾಟಕ ವಿಶ್ವವಿದ್ಯಾಲಯವು ಅವಶ್ಯವಿರುವದರಿಂದ ಈ ಸಭೆಯು ಆಯಾ ಸರಕಾರದವರಿಗೆ ವಿಶ್ವವಿದ್ಯಾಲಯವು ಅಸ್ತಿತ್ವದಲ್ಲಿ ಬರುವಂತೆ ಯತ್ನಮಾಡಬೇಕೆಂದು ಹೇಳಿಕೊಳ್ಳುತ್ತದೆ.

(೨) ಕರ್ನಾಟಕಸ್ಥರ ಪ್ರಗತಿಗಾಗಿ ಕರ್ನಾಟಕದ ಏಕೀಕರಣವಾಗಿ ಒಂದೇ ಪ್ರಾಂತವಾಗುವದು ಅತ್ಯವಶ್ಯವಿರುವದು. ಆದುದರಿಂದ ಮುಂಬಯಿ, ಮದ್ರಾಸ, ಕೊಡಗು ಮುಂತಾದ ಭಾಗಗಳ ಸರಕಾರಕ್ಕೆ ಏಕೀಕರಣವಾಗುವಂತೆ ಪ್ರಯತ್ನಗಳನ್ನು ಕೂಡಲೇ ಆರಂಭಿಸಬೇಕೆಂದು ಈ ಸಭೆಯು ಹೇಳಿಕೊಳ್ಳುತ್ತದೆ."

ಎಂಬೆರಡು ತೀರ್ಮಾನಗಳನ್ನು ಮಂಗಳೂರು ನಗರಸಭೆಯವರು (Municipalty) ಮಾಡಿರುವುದನ್ನು ನೋಡಿದರೆ ಕನ್ನಡ ಮಾತೆಯ ಕೂಗು ಎಲ್ಲರಿಗೂ ಕೇಳಬಂದಿರುವುದೆಂದೂ, ಆ ಕೂಗಿಗೆ ಕಿವಿಗೊಡುವುದು ಮಾತ್ರವಲ್ಲದೆ ಒಗ್ಗಟ್ಟು ಎಲ್ಲರೂ ಕಾರ್ಯೋನ್ಮುಖರಾಗಿರುವರೆಂದೂ ಇತ್ತೀಚಿನ ಚಲನವಲನಗಳಿಂದ ಕಂಡುಬರುತ್ತಿದೆ. ಮೊಟ್ಟಮೊದಲು ಉಡಪಿಯ ತಾಲ್ಲೂಕು ಬೋರ್ಡಿನವರು ಈ ದಾರಿಯನ್ನು ಹಿಡಿದರು. ಈಗ ದಕ್ಷಿಣ ಕನ್ನಡಜಿಲ್ಲೆಯ ಮುಖ್ಯ ಪಟ್ಟಣವಾದ ಮಂಗಳೂರಿನ ನಗರಸಭೆಯವರು ಅದೇ ದಾರಿಯನ್ನು ಹಿಡಿದು ಇತರ ಕನ್ನಡ ಜಿಲ್ಲೆಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು.

ಕನ್ನಡನಾಡಿನ ಸಾರ್ವಜನಿಕ ಸಂಸ್ಥೆಗಳೆಲ್ಲವೂ ಕೂಡಲೇ ಉಚಿತ ತೀರ್ಮಾನಗಳನ್ನು ಮಾಡಿ, ಕರ್ನಾಟಕದ ಆಶಯ ಸಾಧನೆಗೆ ಬೇಕಾದ ಶಕ್ತಿಸಂಗ್ರಹಮಾಡುವರೆಂದು ನಂಬುತ್ತೇವೆ.

—ವಿಶ್ವಕರ್ನಾಟಕ

ಒತ್ತಾಯದ ಪ್ರಾಥಮಿಕ ಶಿಕ್ಷಣ ವಿಚಾರ.

ಲೋಕಲ ಬೋರ್ಡಿನವರು ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಜಿಲ್ಲೆಯಲ್ಲಿ ಹೇಗೆ ರೂಢಿಯಲ್ಲಿ ತರಬೇಕು ಎಂಬದರ ಬಗ್ಗೆ ಶ್ರೀ. ಹುಲಕೋಟಿಯವರು ಒಂದು ವಿಚಾರವನ್ನು ಪ್ರಕಟಮಾಡಿದ್ದಾರೆ. ಅದು ಎಲ್ಲ ಜಿಲ್ಲೆಯವರಿಗೂ ಉಪಯುಕ್ತವಿರುವದರಿಂದ ಅದರ ಸಾರಾಂಶವನ್ನು ಇಲ್ಲಿ ಕೊಟ್ಟಿರುತ್ತೇವೆ.

ಒತ್ತಾಯದ ಪ್ರಾಥಮಿಕ ಶಿಕ್ಷಣವನ್ನು ಪ್ರಾರಂಭ ಮಾಡಬೇಕೋ ಮಾಡಬಾರದೋ ಮಾಡಿದರೆ ಹಣದ ವ್ಯವಸ್ಥೆ ಏನು ಮಾಡಬೇಕು ಈ ಬಗ್ಗೆ ಎಲ್ಲ ತಾಲೂಕ ಲೋಕಲ ಬೋರ್ಡುಗಳಿಗೆ ಹುಲಕೋಟಿಯವರು ಬರೆದು ಕಳಿಸಿದ್ದರು. ಶಿಕ್ಷಣವನ್ನು ಆರಂಭಿಸಬೇಕು ಹಾಗೂ ಲೋಕಲ ಬೋರ್ಡಿನ ಕರವನ್ನು ಹೆಚ್ಚಿಸಬೇಕು ಎಂಬ ಬಗ್ಗೆ ಎಲ್ಲ ತಾ|| ಲೊ. ಬೋರ್ಡುಗಳ ಬಹುಮತವಿರುವದು. ರೂಪಾಯಿಕ್ಕೆ ಒಂದಾಣೆ ಇದ್ದುದನ್ನು ಎರಡಾಣೆ ಮಾಡಬೇಕೆಂದು ಎಲ್ಲರ ಅಭಿಪ್ರಾಯವು.

ಸರಕಾರೀ ಠರಾವಿನಂತೆ ಪ್ರಾಥಮಿಕ ಶಿಕ್ಷಣವನ್ನು ಯಾವ ಯಾವ ಭಾಗದಲ್ಲಿ ಆರಂಭಿಸಬೇಕಾದರೆ ಒಂದು ನಿಶ್ಚಿತ ಕ್ರಮವಿರುವದು [illegible] ಆರಂಭ ಮಾಡುತ್ತೇವೆಂದು ಪ್ರಕಟಿಸಿ ೧೦ ವರ್ಷದ ಒತ್ತಾಯ ಶಿಕ್ಷಣದ ಕ್ರಮವನ್ನು ಒಂದು ವರ್ಷ ಮುಂಚಿತವಾಗಿಯೇ ಸರಕಾರಕ್ಕೆ ತಿಳಿಸಬೇಕು. ಅದೇ ಕ್ರಮವನ್ನು ಧಾ. ಜಿ. ಲೋ. ಅನುಸರಿಸಲಿಕ್ಕೆಬೇಕು. ಈಗ ನಾಲ್ಕು ಮುಖ್ಯ ಪ್ರಶ್ನೆಗಳಿರುವವು. (೧) ಒತ್ತಾಯದ ಶಿಕ್ಷಣವನ್ನು ಆರಂಭಿಸಬೇಕೋ ಬಾರದೋ? (೨) ಹುಡುಗ ಹುಡುಗಿಯರಿಗೆ ಒಮ್ಮೆಲೇ ಆರಂಭಿಸಬೇಕೋ ಅಥವಾ ಮೊದಲು ಹುಡುಗರಿಗಷ್ಟೇ ಆರಂಭಿಸಬೇಕೋ? (೩) ಎಷ್ಟು ವರ್ಷದಲ್ಲಿ ಇಡೀ ಜಿಲ್ಲೆಯಲ್ಲಿ ಈ ಶಿಕ್ಷಣವು ಪಸರಿಸುವಂತೆ ಮಾಡಬೇಕು (೪) ಹೆಚ್ಚಿನ ಹಣದ ವ್ಯವಸ್ಥೆ ಹೇಗೆ?

ಒತ್ತಾಯದ ಶಿಕ್ಷಣವು ಬೇಕು ಎಂಬುದರ ಬಗ್ಗೆ ಮತಭೇದವಿಲ್ಲ. ಹತ್ತು ವರ್ಷದಲ್ಲಿ ಹುಡುಗ ಹುಡುಗಿಯರಿಗೆ ಇಬ್ಬರಿಗೂ ಒತ್ತಾಯದ ಶಿಕ್ಷಣವನ್ನು ಆರಂಭಿಸಬೇಕು. ಆದರೆ ಮೊದಲನೇ ೫ ವರ್ಷ ಹುಡುಗರ ಒತ್ತಾಯದ ಶಿಕ್ಷಣವನ್ನೇ ಪೂರ್ಣ ಮಾಡಿಕೊಳ್ಳಬೇಕು ಎಂದು ಹುಲಕೋಟಿಯವರ ಅಭಿಪ್ರಾಯವು.

ಈ ಪ್ರಕಾರ ಶ್ರೀ ಹುಲಕೋಟಿಯವರ ಸೂಚನೆಗಳಿರುವವು. (೧) ಹತ್ತು ವರ್ಷದಲ್ಲಿ ಒತ್ತಾಯದ ಶಿಕ್ಷಣವನ್ನು ಇಡೀ ಜಿಲ್ಲೆಯಲ್ಲಿ ಹರಡಬೇಕು. (೨) ಗಂಡು ಹೆಣ್ಣು ವಿದ್ಯಾರ್ಥಿಗಳಿಗೂ ಈ ತರದ ಶಿಕ್ಷಣ ಕೊಡಬೇಕು. ಆದರೆ ಮೊದಲನೇ ೫ ವರ್ಷ ಗಂಡು ಹುಡುಗರನ್ನು ಮುಗಿಸಿ ಆ ಮೇಲೆ ಮುಂದಿನ ೫ ವರ್ಷಗಳಲ್ಲಿ ಹುಡುಗಿಯರಿಗೆ ಶಿಕ್ಷಣಪ್ರಾರಂಭ ಮಾಡಬೇಕ. (೩) ಲೋ. ಫಂಡನ್ನು ಇಮ್ಮಡಿ ಮಾಡಿಯೇ ಹಣವನ್ನು ಕೂಡಿಸಬೇಕು.

—ಕರ್ನಾಟಕ ವೃತ್ತ

ವಾಙ್ಮಯ ವಿಚಾರ

ಮಹಾಕೂಟ ಮಹಾತ್ಮ್ಯವು- ಇದನ್ನು ಮಹಾಲಿಂಗಯ್ಯ ವೀರಯ್ಯ ಹಿರೇಮಠ ದ್ಯಾಂಪುರ ಇವರು ರಚಿಸಿ ಶ್ರೀ ಶಿವಯೋಗ ಮಂದಿರದಲ್ಲಿ ಪ್ರಸಿದ್ಧ ಮಾಡಿರುವರು. 'ಈ ಚಿಕ್ಕ ಪುಸ್ತಕದಲ್ಲಿ ಶ್ರೀ ಮಹಾಕೂಟ ಕ್ಷೇತ್ರ ಮಹಿಮೆಯೂ, ಅದರ ವರ್ಣನೆಯೂ ಸಂದರ್ಭಾನುಸಾರವಾಗಿ ಅಲ್ಲಲ್ಲಿ ಜೋಡಿಸಿದ ಧಾರ್ಮಿಕ ಸಾಮಾಜಿಕ ವ್ಯವಹಾರಿಕಾದಿ ವಿಷಯಗಳ ಯೋಜನೆಯು ಆಸ್ತಿಕರ ಮನಸ್ಸನ್ನು ಸೆಳೆಯದಿರಲಾರವೆಂಬ ನಂಬುಗೆಯಿದೆ' ಯೆಂದು ಗ್ರಂಥಕಾರರು ಮುನ್ನುಡಿಯಲ್ಲಿ ಬರೆದಿದ್ದಾರೆ ಇದು ಮೂಲ ಪದ್ಯಾತ್ಮಕ ಗ್ರಂಥದ ಗದ್ಯಾನುವಾದವು. ಮಹಾಕೂಟವು ಬದಾಮಿಯ ಹತ್ತರವಿದೆ. ಶಿವಯೋಗಮಂದಿರವು ಮಹಾಕೂಟದ ಸನ್ನಿಧಿಯಲ್ಲಿಯೇ ಇದೆ. ಇದಕ್ಕೆ ಮಹಾಕೂಟ ವೆಂಬ ಹೆಸರು ಏಕೆ ಪ್ರಾಪ್ತವಾಯಿತೆಂದು ಪಾರ್ವತಿಯು ಶಿವನನ್ನು ಕೇಳಲು "ಶ್ರೇಷ್ಠವಾದ ಗಂಗಾ, ಯಮುನಾ, ಸರಸ್ವತೀ ನದಿಗಳ ಪ್ರವಾಹಗಳು ಕೂಡಿ ಪುಷ್ಕರಿಣಿಯಲ್ಲಿ ಸಂಗಮವಾಗಿರುವದರಿಂದಲೂ, ವಿಷ್ಣು, ಬ್ರಹ್ಮ, ರುದ್ರ ಈಶ್ವರ, ಸದಾಶಿವರೆಂಬ ಪಂಚಮಹಾ ಮೂರ್ತಿಗಳು ಸರ್ವದಾ ಇಲ್ಲಿ ಕೂಡಿರುವದರಿಂದಲೂ ಈ ಕ್ಷೇತ್ರಕ್ಕೆ ಮಹಾಕೂಟವೆಂಬ ನಾಮವಾಗಿರುತ್ತದೆ." ಎಂದು ಆವನು ಹೇಳಿದನು ಸುತ್ತುಮುತ್ತಲಿದ್ದ ಆಶ್ರಮಗಳ ವರ್ಣನೆಗಳೂ ತಪಸ್ವಿಗಳ ಕಥೆಗಳೂ ಇದರಲ್ಲಿ ಬಂದಿವೆ ತೀರ್ಥ ಕ್ಷೇತ್ರಗಳ ಪುಸ್ತಕಗಳು ನಮಗೆ ಬೇಕಿವೆ ಇದೊಂದು ಈ ಜಾತಿಗೆ ಸೇರಿದ ಪುಸ್ತಕವು. ಮುದ್ರಣವು ಚಂದವಾಗಿದೆ. ಬೆಲೆ ೭ ಆಣೆ.

‘ಟೊಳ್ಳುಗಟ್ಟಿ’ಯ ಹಾಸ್ಯ.

ಹಿಂದಿನ ಲೇಖಾಂಕದಲ್ಲಿ ‘ಟೊಳ್ಳುಗಟ್ಟಿ’ಯ ಗೆಳೆತನವಾಯಿತು. ಗೆಳೆತನವಾಗಿ ಬಹಳ ದಿನಗಳೂ ಆದವು. ನಾನಾ ಜನರು ನಾನಾ ತರದಿಂದ ಗೆಳೆಯನ ವಿಷಯವಾಗಿ ಆಡಿಕೊಳ್ಳಹತ್ತಿದರು. ಪುರದಲ್ಲಿ ಹೊಸ ವೇಷರೆಯು ಕಂಡಿತೆಂದರೆ ನಾವು ಕೇಳುತ್ತೇವೆ “ಇವರ್ಯಾರು” ಎಂದು; ಒಳ್ಳೇ ನಾಮಾಂಕಿತರಾದ ಗೃಹಸ್ಥರೆಂದು ತಿಳಿಗೊಡನೆ ನಾವು ಗುರುತು ಮಾಡಿಕೊಳ್ಳುತ್ತೇವೆ. ಆದರೆ ಅವರ ಯೋಗ್ಯತೆಯು ನಮ್ಮ ಕಣ್ಣುಗಳಿಗೆ ತಿಳಿಯದೆ ಹೋಗುತ್ತದೆ. ಆಗ “ಎಷ್ಟು ಹೇಳುತ್ತಿದ್ದರಲ್ಲ ಇವರ ಪ್ರಖ್ಯಾತಿಯನ್ನ” ಎಂದು ಖೇದ ಪಡುವಂತೆ ‘ಟೊಳ್ಳುಗಟ್ಟಿ’ಯ ಗೆಳೆಯನನೇಕರು ಅದರು “ಇದರಲ್ಲಿ ಎಲ್ಲಿ ವಿನೋದವಿದೆ? ನಮಗೇನೂ ಎಡಿಸಲಾರದಷ್ಟು ನಗೆಯು ಬರಲಿಲ್ಲ. ಹೇಳಿಕೊಳ್ಳುವಂಥ ನಾಟಕವಲ್ಲ” ಇದಕ್ಕೆ ಉತ್ತರವಾಗಿ ಈ ಲೇಖಾಂಕದಲ್ಲಿ ಸಮಾಧಾನಗಳನು ಕೊಡಬೇಕೆಂದು ನಾನು ಕೂತಿದ್ದೇನೆ.

ಹಾಸ್ಯಕ್ಕೆ ಮೊದಲು ಉಲ್ಹಸಿತ ವೃತ್ತಿಯುಬೇಕು. ಅದೊಂದಿದ್ದರೆ ಆ ಉಲ್ಲಾಸಿಯು ಸಣ್ಣ ಸಂಗತಿಗಳನ್ನು ಸಹ ನಗಿಸುವಂತೆ ಕಥಿಸುವನು. ಹೊಸ ಹೊಸ ಹಾದಿಯನ್ನು ಹುಡುಕಿ ಹೊಸಮಾತುಗಳನ್ನಾದರೂ ಕಟ್ಟಿ ಕ್ಷಣಕ್ಕೊಮ್ಮೆ ನಮಯ ಚತುರನಾದ ಅಂಥವನು ನಗಿಸಬಲ್ಲನು. ಎಷ್ಟೋ ಸಾರೆ ಕೇವಲವಾಗಿ ಅಭಿನಯದಿಂದ ಅಣುಕಿಸಿ ನಗೆಯನ್ನು ಕೂಡ ನಗಿಸುವನು ಸಮನಸಮವೆ ವಿನೋದವೂ ಎಪ್ಪುವಾಗಿರುವದು. ಇದೆಲ್ಲಕ್ಕೆ ನಗಿಸುವ ಅನಂತ ಶಕ್ತಿಯು ಮಾತ್ರ ಅಂತರಂಗವಾಗಿರಬೇಕು. ಇಂಥ ಹಾಸ್ಯವು ಟೊಳ್ಳುಗಟ್ಟಿಯ ಸ್ಥಿರಸ್ವಭಾವವು. ಆದರಲ್ಲಿಯು ವಸ್ತು ರಚನೆಯಾಗಲೀ ವಾಕ್ಯರಚನೆಯಾಗಲೀ ನೂತನವಾಗಿ ಇದ್ದುದರಿಂದ ನಗೆಯು ಹೇಳಿಕೊಳ್ಳದೆ ಒರುತ್ತದೆ. ವಾಙ್ಮಯದಲ್ಲಿ ಹೊಸದು ಎಂಬದಕ್ಕೆ ಅಷ್ಟು ಆದರವಿದೆ. ಬೆರಸಾವಿನ್ಯವಿದೆ ಎಂದು ನಾವು ಹಿಂದೆ ಹೇಳಿದ್ದೆವಲ್ಲ ಅದೇ ಸಾರ್ಥಕವಾಗಿ ಈ ದೃಶ್ಯವನ್ನು ಆಕ್ರಮಿಸಿಬಿಟ್ಟಿದೆ. ಉದಾಹರಣೆಯನ್ನು ಕೊಡಬೇಕೆಂದರೆ ಈ ನಾವಿನ್ಯ ಸಂಗ್ರಹಾಲಯವು ವಿಚಿತ್ರವಾಗಿ ಬೆಳೆಯುವದು. ನಾಟಕಕಾರನಾದ ‘ಗುಂಡೂ’ನೇ ‘ಸ್ಟೇಜ’ನ ಮೇಲೆ ಒಂದು ‘ನಮೋಸ್ತುಮೇ’ ಎಂದು ಕನ್ನಡಿಯಲ್ಲಿಯ ಭಾವ ಚಿತ್ರಕ್ಕೆ ಹಾರ ಹಾಕಿ ಪೂಜಿಸುವದು; ವಿಧವೆಯನ್ನು ರಂಗಭೂಮಿಯ ಮೇಲೆ ಮೊದಲನೇ ಸಾರೆ ಒರಮಾಡಿದ್ದು; ಸುಟ್ಟಮನೆಯ ನೋಟವನ್ನು ಕೊನೆಗೆ ಕಾಣಿಸುವದು ಇವೇ ಮುಂತಾದ್ದು ನೋಡಿ ಸುಬ್ಬರಾಯನು “ಇದೇನ್ನೋಟ್ಯಾ”! ಒಂದ್ಕಂವಾ ಇಲ್ಲ, ಒಂದ್ಪದ್ಯಾ ಇಲ್ಲ, ಒಂದ್ಹಾಡ ಇಲ್ಲ, ಏನೋ ಹೊಸ ನಮೂನೆಯಾಗಿ ಬರದ್ಹಾಗೆ ಕಾಣುತ್ತಲ್ಲಾ” ಎಂದು ಮೊದಲೇ ಒಡನುಡಿದದ್ದು ವಸ್ತು ರಚನೆಯಲ್ಲಿಯ ನವತೆಯನ್ನು ತೋರಿಸುತ್ತದೆ. ಇನ್ನು ವಾಕ್ಯ ರಚನೆಯ ನಾವಿನ್ಯವು ಇದರಲ್ಲಿ ನವ- ಶಿಖಾಂತವಾಗಿದ್ದು ಅದಕ್ಕೆ ಒಂದು ಕಾರಣವೆಂದರೆ ಮಾತಾಡುವ ಭಾಷೆಯನ್ನು ಒರಹದಲ್ಲಿ ತಂದು ಹೊಸಕೋಶವನ್ನೊಂದು ಸಿದ್ಧಪಡಿಸಿದ ‘ಗುಂಡೂನ’ ವ್ಯಕ್ತಿ-ವೈಚಿತ್ರ್ಯವು. ಅಥ್ವಾ ಎಂದು ಓದಿದೋ ಈ ವೈಚಿತ್ರ್ಯವು ಮೊದಲು ಹೊಳೆಯುತ್ತದೆ. ಆದರೆ ಟೊಳ್ಗಟ್ಟಿಯೆಂದು ಯಾಕೆ ಆರಂಭಿಸಲಿಲ್ಲವೋ ಎಂದು ಅಸಮಾಧಾನವಾಗುತ್ತದೆ. ಮುಂದೆ ಸಾಗದಂತೆ ಕೆಲವು ಶಬ್ದಗಳು ಜಡವಾಗಿದ್ದರೂ ತಿಳಿದ ಮೇಲೆ ಒಂದು ಕೂಟ ಪ್ರಶ್ನೆಯನ್ನು ಒಡಿಸಿದಷ್ಟು ಹರ್ಷವಾಗುತ್ತದೆ. ಕಿರೀಕಷ್ಟ್, ಹವಿಡ್ಗಿಳಿ ಇವೇ ಮುಂತಾದ ಶಬ್ದಗಳು ಕ್ರಿಕೆಟ್, ಟಿ.ಟಾಬಾಲ ಎಂದು ಇಟ್ಟರೆ ಬಾರದೆ! ನಗೆಯನ್ನು ತರಿಸುವವು. ಆದರೆ ಈ ವೈಚಿತ್ರ್ಯದಿಂದ ಸಮಗ್ರವಾಗಿ ಸುಖಬಡಲಿಕ್ಕೆ ಒಂದು ಅನಾನುಕೂಲವೆಂದರೆ ನಮ್ಮ ಮಾತಾಡುವ ಭಾಷೆಯಲ್ಲಿದ್ದ ಸಮಾಸ—ಸಮಸ್ಯೆಗಳು ಮೈಸೂರಿಯವರ ಭಾಷೆಯಲ್ಲಿ ಸಮವಾಗಿಇಲ್ಲ. ಅಂತೇ ಅಷ್ಟು ಸಹಜವಾದ ರುಚಿಯು ಹುಟ್ಟುವದಿಲ್ಲ. ಉದಾಹರಣಾರ್ಥವಾಗಿ ‘ಹಾಗಾದರೆ’ ಎಂಬದನ್ನು ನಾವು ‘ಹಂಗಾರ’ ಎನ್ನುತ್ತೇವೆ. ಅವರು ‘ಹಾಗಂದ್ರೆ’ ಎನ್ನುವದುಂಟು. ಹೀಗಾಗಿ ಎಷ್ಟೋ ವ್ಯತ್ಯಾಸಗಳು. ಇನ್ನು ಮಾತಿನ ಒಗೆಯನ್ನು ಬೇರೆ ಮಾಡಿ ಹಾಸ್ಯವನ್ನು ಹಡಿಸುವ ಪ್ರಯೋಗಗಳೂ ತುಂಬಾ ಇವೆ. ಈಗ ‘ಒಬ್ಬ ಕವಿಗಳು ಹೇಳುತ್ತಾರಲ್ಲ’ ಇದರ ಪ್ರತಿಯಾಗಿ ‘ಇಂಗ್ಲಿಷನಲ್ಲಿ Poet ಅಂಬೋ ಕವಿ ಹೇಳುತ್ತಾನಲ್ಲ’ ಎನ್ನುವದರಲ್ಲಿ ಹಾಸ್ಯವಿದೆ. ಯಾಕೆಂದರೆ ಹೊಸದು. ಇದರಲ್ಲಿ ಇಂಗ್ಲೀಷು ಮಾತಾಡಿ ಅಪ್ಪಜ್ಜರನ್ನು ಮರಳು ಮಾಡುವವರ ಮೇಲಂತೂ ಅಸ್ತ್ರವನ್ನೆ ಬಿಟ್ಟಂತಾಯಿತು. ಆದರೆ ಈ ದೀರ್ಘವಿಚಾರವನ್ನು ಮಾಡುವದಕ್ಕಿಂತ ಪೂರ್ವದಲ್ಲಿ ನಾವು ನಗುವದೇಕೆ? ಕರ್ನಾಟಕ ಪ್ರಹಸನ ಪ್ರಪಿತಾಮಹನ ನಾವಿನ್ಯಕ್ಕೆ. ಇದರಂತೆ ನಾಟಕವನ್ನು ಓದುವಕ್ಕಿಂತ ನಟಿಸಿದ್ದನ್ನು ನೋಡುವದರಲ್ಲಿ ಹೆಚ್ಚು ಹಾಸ್ಯೋತ್ಪತ್ತಿಯಿದೆ. ಇದಕ್ಕೆ ಸ್ಪಷ್ಟವಾಗಿ ಮೈಸೂರಿಯವರ ಮಾತಿನ ಹಾಸ್ಯವೇ ಕಾರಣವು. ‘ಏನು ಸಾರ್’ ಎಂದು ಅವರು ಅಂದರಾಯಿತು ಆ ‘ಸಾರಿ’ಗೆ ಅವರ ಬಾಯಿಯಂತೂ ತೆರೆಯುತ್ತದೆ. ನಮ್ಮ ಬಾಯಿಯಲ್ಲಿಯೂ ನಗೆಯ ನೀರು ಒಡುತ್ತದೆ. ಈ ಪ್ರಕಾರವಾಗಿ ಸುಬ್ಬೊಸುಬ್ಬೊ ಎಂದು ಆಗಾಗ್ಗೆ ಕೂಗುವದರಲ್ಲಿ “ಇದೇನು ಅನಾಹುತ ಸ್ವಾಮಿ! ಗುಂಡೂರಾಯ್ರೇ!! ದೇವ್ರೇಗತಿ”!!! ಎಂಬ ಅಭಿನಯವಾದ ಭಾಗಗಳಲ್ಲಿಯೂ ನಗೆಯುಸ್ಥಾನವಿದೆ.

ಇಷ್ಟಂತೂ ‘ಗುಂಡೂ’ನ ಹಾಸ್ಯ ರಾಜ್ಯದ ಮೇರೆಗಳನ್ನು ಕಾಣಿಸಿದೆವು. ಇನ್ನು ನಮ್ಮ ಗೆಳೆಯರ ಬಯ್ಯುವ ಗುರಿಗೀಡಾದ ವಿನೋದಾ ಭಾವವು ನಿಜವೇ ಏನೆಂಬದನ್ನು ಒಳಹೊಕ್ಕು ನೋಡೋಣ. ಹಾಸ್ಯಕಾರನಿಗೆ ತಕ್ಕ ಪ್ರಸಂಗವು ಬಂದರೆ ವಿನೋದವೂ ಅವನಿಗೆ ಮೀರಿದ್ದಿಲ್ಲ. ಅದನ್ನು ವಿವರವಾಗಿ ಅವನು ನಗೆಯನ್ನು ಹೊತ್ತಿಸುವಂತೆ ಊದೇ ಊದುವನು. ಪೂರ್ವ ರಂಗದಲ್ಲಿ ‘ಈ ಗ್ರಮಾಫೋನು ತಸ್ಪೀರ್ವೆಟ್ಗಿ’ ಎಂದು ಮಾತು ಮಾತಿನಲ್ಲಿ ನೆನಪಾದಷ್ಟೊಂದೇ ತಡ; ನಮ್ಮ ಗುಂಡೂನು ವಿಸಂಗತವಾಗಿದ್ದರೂ ವಿನೋದಕ್ಕಾಗಿ ಒಂದು ಪುಟವನ್ನೆಲ್ಲ ಅವೆರಡರ ವಿಚಿತ್ರ ವರ್ಣನೆಯಲ್ಲಿ ಕಳೆಯುತ್ತಾನೆ. ತಸ್ಪೀರ್ವೆಟ್ಗಿಯ Record ಕರೀದೋಸೆಯೆಂದು ಹೇಳುತ್ತಾನೆ. ಕ್ಯಾಮರಾದ Camera ವರ್ಣನೆಯನ್ನು ಮಾಡುವಾಗ ‘ಏಕಾಕ್ಷೀ, ಕಣ್ಣೊಂದೇ ಇದರೆದುರಿಗೆ ಜನಗಳು ನಿಂತ್ಕೊಂಡು ಸ್ವರೂಪ-ನಾಶ್ನೆ ಮಾಡಿಕೊಳ್ಳುವದು!’ ಎಂದು ಹೇಳಿ ಕ್ಯಾಮರಾ ಅಂದರೆ ಕಾಗಿಯೇನೋ ಅನಿಸುವಂತೆ ಹೇಳಿ ನಗಿಸುತ್ತಾನೆ. ಮತ್ತೆ ಜನೊಪಸ್ಕಾರಿಗೇಟನಲ್ಲಿ ಲೆಕ್ಚರ್ರು ಕೊಡಬೇಕೆಂದು ಜನರನ್ನು ಕೂಡಿಸಲಿಕ್ಕೆ ಹೂಡಿದ ಕಾಫಿ- ತಾಂಬೂಲದ ಹಿಕ್ಮತ್ತನ್ನು ವಿಸ್ತಾರವಾಗಿ ಬಿದ್ದು ಬಿದ್ದು ಹೇಳುತ್ತಾನೆ. ಈ ವಿಸ್ತೃತ ವಿನೋದಗಳನ್ನು ತೀರಿಸಿದ ಮೇಲೆ ಚಿಕ್ಕ ಚಿಕ್ಕ ಧ್ವನಿತವಾದ ವಿನೋದಗಳೂ ನಮ್ಮ ಅರಿಸುವಿಕೆಯಲ್ಲಿ ಸಾಕಷ್ಟು ಬಂದಿವೆ.

(೧) ಕಾಫೀ ಎಂಬೋ ಬಾಷ್ಪೇ ಇಲ್ಲ. (ಆತ್ಮ) ಇಪ್ರಿಗೂ ಆನ್ಸರ್ ಗೊತ್ತಿಲ್ಲ.

(೨) ಪಾತು:— ದುಷ್ಟ ನಷ್ಟತ್ರೀ.

ನಾಗೂ:— ರಾಜ್ಯ ಲಕ್ಷ್ಮೀ ನೀನು. ನಿನ್ನತ್ರ ಎಲ್ಲಾ





The Cheapest House.

1 For quick Economical and satisfactory service, please go for the wellknown Chevrolet cars, Trucks products in the Deccan
2 For all spare parts of the Various cars specially Chevrolet, Ford, Dodge and Overland cars,
3 For the cheapness in tyre tubes especially thewellknown Michelin products,
4 For all kinds of Lubricating oils Grease etc,
5 For undertaking all kinds of tyre tube repairs in Vulcansing by a specalist to give satisfactory work,
6 For Building Motor bodies of Various types by workers onin uptodate line.
7 For all kinds of Motor repairs,

ly to:-
lessrs Royal motor service
Automobile Engineers
Bagalkot.

Sub dealers
Chevrolet car
for the Bijapur

ಅಲಭ್ಯಲಾಭವು.

ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕ ವ ಸಾಮಾನು ಈನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುಗಿ,
ಸ್ಪಿಯರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೋಲೆಟ ಡಾಜ, ಫೋರ್ಡ, ವೋವ್ಹರಲಂಡ ಗಾಡಿಯ
ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,
ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರ ಟ್ಯೂಬುಗಳ ಖರೀದಿಗಾಗಿ
ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಜಬಿಶ ಖರೀದಿಗಾಗಿ,
ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,
ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,
ಎಲ್ಲ ತರಹದ ಮೋಟಾರದ ರಿಪೇರಿಗಾಗಿ ಯೋಗ್ಯತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.
ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ
...ಟಾರುಗಳಿಗೆ ಸಬ ಏಜಂಟರು.

ರಕ್ತ ಶುದ್ಧಿ

ಮತ್ತು

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶೀಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ ಜಾಗ್ರತೆಯಿಂದ ವಾಸಿಯಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತುಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವ್ಯಾಯಾಮದ ಗರಮಿಯು ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಆರೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೬-೧೪-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೭-೧೪-೦, ೩ ಡಬ್ಬಿಗಳಿಗೆ ೨೦-೪-೬, ೧೨ ಡಬ್ಬಿಗಳಿಗೆ ೭೦-೦-೦, ಇದಲ್ಲದೆ ೧ ಡಬ್ಬಿಯು ಕಮೀಶನ್ನು ಸಿಗುವದು.

ವಿಳಾಸ—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ-ನಿಪ್ಪಾಣಿ, (ಬೆಳಗಾಂವ).



ಡಾಕ್ಟರ ಒ ಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಕಟ್ಟಪ್ಪ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಸ್ಥಿತಿಯು ನಿಲ್ಲುವಂತೆ ಮಾಡುವೆವು. ಹಲ್ಲುಗಳ ಸರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ್ ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾದ ಸರಿಯಾದ ಗಂಟೆಯನ್ನು ತೋರಿಸುವುದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ. 7-2-0.

1? ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟೆನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 [illegible] ತುಂಗಳ ತನಕವೂ ಬರೆಯುವದು! 14 ಕ್ಯಾರೆಟ್ಟ ಬಂಗಾರದ [illegible] ದು. ಇದನು ಈ ತಿಂಗಳೊಳಗಾಗಿ ತರಿಸಿಕೊಂಡ [illegible] 14 [illegible] ಟ್ ಬಾಟಲ್ ಇನಾಮವಾಗಿ ಕೊಡುವೆವು ಕ್ರಯ ಪೇನಾ ೧ಕ್ಕೆ 2-0-0

ವಿಳಾಸ— ಎಸ್. ಪಾಲ್ ಆಂಡ್ ಕೊ,

ಪಿ. ಬಿ ನಂಬರ್. 542,

ಪಾರ್ಕ್‌ಟೌನ್ ಮದ್ರಾಸು.

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೨-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಆಗ. ಜಾಹಿರಾತಿನ ದರವನ್ನು ಅಥವಾ ಮಾದರಿ ಸಂಚಿಕೆಯನ್ನು ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯ, ಮೈಸೂರು.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತೀಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೨೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

ಇದೆ ಗೊತ್ತು ಮಾನ ಮರ್ಯಾದೆ ಮಟ್ಗಿಲ್ಲಾ.

(೩) **ಮಾಧೂಃ**— High position ಗೆ ಬಂದ್ರಿ! ನಮ್ಮಾಗತ್ತಿಗೆ ಏಣಿ ಬಂದ್ರಿ!

(೪) ಅಪ್ಪತಲ್ರಿ ಸಾಯ್ಲಿ ತಿಥೀಗೆ ವಡೇ ಸಿಕ್ಕೀತು ಅನ್ನೋ ಹಾಗೆ

(೫) **ನಾಗೂಃ**— ಅರಾಣಿ ನನ್ನೋ ತಲೆ ಸಾರ್ಸಿ, ಗುಡ್ಸಿ, ರಂಗೋಲೆ ಹಾಕಿ, ಕೆಂಮಣ್ಣೀರ ಉಡಿಸಿ ಬಿಟ್ಟ.

ಇದರ ಮೇಲೆ 'ಗುಂಡೂ' ನ ಇನ್ನೊಂದು ವೈಶಿಷ್ಟ್ಯವೆಂದರೆ ಬಯ್ಗಳಲ್ಲ ಸೇಕ್ಸಪಿಯರನು ತನ್ನ ನಾಟಕಗಳಲ್ಲಿ ಬಯ್ಗಳ ಸುಗ್ಗಿ ಗೇ ಹೆಸರಾದಂತೆ 'ಗುಂಡೂ' ನು ಹೊಸ ಹೊಸ ಬೈಗಳನ್ನು ಶೋಧಿಸಲಿಕ್ಕೆ ಇದ್ದಾನೆ ಮೂದೇವಿ-ಗೂಬೆ ಎಂದು ಬಯ್ಯುವದು. ಗಿಣಿ ಹಾಗೆ ಸಾಕಿದ್ದಾಯ್ತು, ಈ ಬೆಕ್ಕಿನ ಬಾಯ್ಗೆ ಕೊಟ್ಟದ್ದಾಯ್ತು ಎಂದು ಹೀಗೆ ಬಯ್ಗಳನ್ನು ನಡುವಂತೆ ತೆಗೆತೆಗೆದು ಬಿಡಬೇಕಾದರೆ ಸಮಾಜ-ಟೀಕೆಯನ್ನು ಮಾಡಲಿಕ್ಕೆ ಬೇಕಾಗುವ ಸಾಮರ್ಥ್ಯವು ಇವನಲ್ಲಿ ಮೂಲತಃ ಇದೆ ಅದಕ್ಕಾಗಿಯೇ ಈ ನಾಟಕವು ಬರೆದದ್ದಾಗಿದೆ. 'ಮಕ್ಕಳಿಸ್ಕೂಲ ಮನೇಲಲ್ವೇ' ಇದರಿಂದಲೇ ಅವನ ಟೀಕಾಫಲವು ಉಕ್ತವಾಗಿದೆ. ಇದಕ್ಕೆ ಇನ್ನೊಂದು ಪ್ರತ್ಯಯವೆಂದರೆ 'ಇವಳ್ಮನೇ ಗ್ರಂಥ್ಯಯೋಜ್ನ ಮಾಧು ವರದಕ್ಷಿಣೆ-ವರದಕ್ಷಿಣೆ ಪ್ರಯೋಜ್ನ ಪುಟ್ಟು ಕಾಲೇಜ ಫೀಜು' ಎಂಬ ಹಿರಿಯಣ್ಣಯ್ಯನ ಹಿರಿದಾದ ಲಿಗ್ನತ್ವ.

ಈ ರೀತಿಯಲ್ಲಿ ನಮ್ಮ ಗೆಳೆಯರ ಸಮಾಧಾನಕ್ಕಾಗಿ ಟೊಳ್ಳು, ಗಟ್ಟಿಯು ಒಳಗೆ ಟೊಳ್ಳಿದ್ದು ಹೊರಗೆ ಗಟ್ಟಿಯಾಗಿರದೆ ಸಾಮ್ಯವುಳ್ಳವಾಗಿ ಗಟ್ಟಿಯೇ ಇರುವದೆಂದು ಉದಾಹರಣೆಗಳಿಂದ ಸಹ ತೋರಿಸಿದೆವು ಇದನ್ನು ಓದಿ ಹೇಳಿದ್ದು ಹೌದಲ್ಲವೋ ಎಂದು ಪರೀಕ್ಷಿಸುವ ಉತ್ಸುಕತೆಯಿಂದಲಾದರೂ ಉಳಿದವರು 'ಗುಂಡೂ' ನ ದರ್ಶನಕ್ಕೆ ತೆರಳಲಿ ಎಂದು ಹಾರೈಸುವ

ರಸಿಕ ರಂಗ.

ಲಗ್ನದ ಸಾಹಿತ್ಯ.

ಲಗ್ನಕ್ಕೆಂದು ಸೇರಿಸಿನ ಸ್ತ್ರೀಯರು ಊಟವಾಟಗಳ ಸಾಹಿತ್ಯವನ್ನು ಮಾಡುವರು. ನಾಲ್ಕು ಜನರನ್ನು ನೆರೆಯಿಸಿ ಆ ಸಾಹಿತ್ಯದ ಸೊಗಸು ಮಾಡುವರು. ಆದರೆ ನನಗೆ ಬೇಕಾದ ಸಾಹಿತ್ಯವು ಅದಲ್ಲ— ಯಾಕೆಂದರೆ ಅದು ಬರಹಕ್ಕೆ ಸಿಗುವ ಸಾಹಿತ್ಯವಲ್ಲ; ಕುಳಿತು ತಿನ್ನುವ ಸಾಹಿತ್ಯವು ಅದು ಕಾರಣ ನನಗೆ ಮೆಚ್ಚುವ ಸಾಹಿತ್ಯವೆಂದರೆ ಮದುಮಕ್ಕಳ ಒಗಟುಗಳು, ಭೂಮದ ಹಾಡುಗಳು ಇತ್ಯಾದಿ, ಹೆಣ್ಣು ಮಕ್ಕಳ ಹಾಡುಗಳೇ ಮೊದಲು ಸಂಸಾರವಾಗಿ ಕುತ್ತವೆ. ಅಂದರೆ ಸರಳವಾಗಿ ಸರಸವಿರುತ್ತವೆ ಅವೊಂದು ವಾಙ್ಮಯದಲ್ಲಿ ತಮ್ಮ ವ್ಯಕ್ತಿತ್ವವನ್ನೇ ಹೊಂದಿ ಸ್ತ್ರೀಹೃದಯಕ್ಕೆ ಸಲ್ಲುವ ಸೌಭಾಗ್ಯ—ಮಣಿಗಳಾಗಿ ಬಾಳುತ್ತವೆ. ಅವುಗಳಲ್ಲಿ ಭೂಮದ ಹಾಡುಗಳು ಹಸೆಕರೆಯುವ ಹಾಡುಗಳು ಆರತಿಯ ಹಾಡುಗಳು ಮುಯ್ಯದಹಾಡುಗಳು ಇವೇ ಅನೇಕಾಂಶದಿಂದ ನಮ್ಮ ಕನ್ನಡದಲ್ಲಿ ಹಳಿಸದೆ ಇರುತ್ತಿದ್ದ ವಿಷಯವು ಮಾನಾರ್ಹವೇನೋ ಸರಿ. ಆದರೆ ಅಡ್ಡಿತಪ್ಪಿ ಕುರಿಮರಿಗಳ ಹಿಂಡಿನಲ್ಲಿ ಸೇರಿದ ತೋಳದಂತೆ ಈ ಊಟ್ಟಿಯ ಒಗಟಗಳು ಮಾತ್ರ ಮರಾಠಿ ಸ್ವರೂಪದಲ್ಲಿ ನಮ್ಮ ಹೆಣ್ಣುಮಕ್ಕಳ ಬಾಯುಸುಡಿಯನ್ನು ಕೆಡಿಸುತ್ತ ಆ ಭಾಷೆಯನ್ನು ಸಹ ದೂಷಿಸುತ್ತ ಇದ್ದು ಬಿಟ್ಟಿವೆ. ಈ ಶೋಚ್ಯವಾದ ಸ್ಥಿತಿಯನ್ನು ಹೋಂಡಿಸಬೇಕೆಂದರೆ ನಾವು ವರ್ಮದಿಂದ ಹೀಗೆ ಮಾಡುವೆವೆಂದು ಮರಾಟಿಗರು ಬಗೆಯುತ್ತಾರೆ. ಯಾಕೆಂದರೆ ಕನ್ನಡ ಶಾಲೆಗೆ ಹೋಗೋ ಬಾಳಾ ಎಂದರೆ ಮರಾಠಿಯ ಶಾಲೆಯ ದ್ವೇಷಮಾಡಿದಂತಾಯ್ತು ಎಂದು ಇವರ ಭಾವನೆ. ಆದರೆ ಇದರ ಮೂಲದಲ್ಲಿ ದ್ವೇಷವು ಯಾರಲ್ಲಿದೆ ತಿಳಿದುಕೊಳ್ಳಬೇಕು. ಇನ್ನೊಂದು ಮಾತೆಂದರೆ ಆ ಭಾಷೆಯ ಸವಿಯನ್ನೇ ಕಾಣದೆ ಒಗಟುಗಳ ಪೂರ್ತಿಯಾಗಿ ಅದನ್ನು ಓದುವ ನಮ್ಮ ಮದುಮಕ್ಕಳು ಎಷ್ಟು ಅಶುದ್ಧವಾಗಿ ಚ್ಯಾಚ್ಯಾ ಮಾಡುವರೆಂಬದನ್ನು ಹೇಳಲಾಸವಲ್ಲ. ಆದುದರಿಂದ ಕನ್ನಡ ಒಗಟಗಳು ಪ್ರಚಾರದಲ್ಲಿ ಬರಲಿ ಎಂಬ ಸದ್ವಿಚಾರದಿಂದ ಕೆಲವು ಒಗಟಗಳನ್ನು ಕೆಳಗೆ ಪೋಲ್ ಪಂಕ್ತಿಗಾಗಿ ಕೊಡುತ್ತೇವೆ.

ಇನ್ನು ವಗಟಗಳ ಪದ್ಧತಿಯೇ ನಮ್ಮದಲ್ಲ ಅದು ಮಹಾರಾಷ್ಟ್ರದ ಪರಿಪಾಠವಿದ್ದು ಅದನ್ನು ಕದ್ದವರು ಅದರ ಭಾಷೆಯನ್ನಾದರೂ ಯಾಕೆ ಒಪ್ಪಿಕೊಳ್ಳಬಾರದು ಎಂದು ಕೆಲವರ ಆಕ್ಷೇಪಣೆ, ಆದರೆ ಹೀಗೆ ಒಪ್ಪುತ್ತ ಕುಳಿತರೆ ಈ ಒಪ್ಪಂದದ ಪರಿಣಾಮವು ಮೆಲ್ಲನೆ ಕನ್ನಡಿಗನ ವೃದ್ಧಿಂಗತವಾಗುವ ವ್ಯಕ್ತಿ ವಿನಾಶಕ್ಕೇ ಒಯ್ದು ಮುಟ್ಟಿಸುವದಿಲ್ಲವೇ? ಅಂತೇ ನಮ್ಮ ಅಭಿಪ್ರಾಯವೆಂದರೆ ಮರಾಠಿಯ ಸ್ವರೂಪದಲ್ಲಿ ಈಗ ಇದ್ದ ತಪ್ಪಿಗೆ ಈ ಪದ್ಧತಿಯು ಪರಾನ್ನವಲ್ಲ- ಅದು ಹಿಂದಿನಿಂದ ನಮ್ಮದೇ ಇದ್ದು ಅದನ್ನು ಒಂಟೆಗಾಲನ ಮೇಲೆ ನಿಂತು ಕಾಯುವದು ನಮ್ಮ ಕರ್ತವ್ಯ.

ಎಷ್ಟರ ಮಟ್ಟಿಗೆ ಈ ಹೊಸ ಒಗಟಗಳನ್ನು ಹೆಣ್ಣು ಮಕ್ಕಳು ಪ್ರೀತಿಸಿ ಮದುವೆಯಲ್ಲಿ ರೂಢಿಸುವರೆಂಬದು ಕಾಲನ ಹೊಣೆಯು. ಅದಕ್ಕೆ ನಾವು ಹೆದರಿ ಹಿಂಜರಿಯ ಕೂಡದು. ಒಂದು ರೀತಿಯಿಂದ ಸ್ವಾರಸ್ಯವನ್ನು ಹುಟ್ಟಿಸುವಂತೆ ಒಗಟಗಳ ಸ್ವತಂತ್ರ ಪುಸ್ತಕಗಳನ್ನು ರಸಿಕರು ಬರೆದು ತೊಟ್ಟಿಲದಲ್ಲಿ ಹಾಕಿದರೆ ಅವು ತಾವೇ ಹೆಸರುಗೊಳ್ಳುವವು. ಆದರೆ ಇದೆಲ್ಲ ರಸಕಾರ್ಯಕ್ಕೆ ಮುನ್ನುಡಿಯೆಂದು ಏಳೆಂಟು ಚಿಕ್ಕ ಒಗಟಗಳನ್ನು ಕನ್ನಡವೊಂದು ಮೊದಲು ಓದಲಿ ಎಂದು ಆಶಿಸುತ್ತೇವೆ.

೧ ಕಂಗಾಲ ತನಕೆ ಕಸ್ತೂರಿ ಪೆಯೀ ನೆಟ್ಟ	ರಾಯರಿಗೆ ನಾನಿಡುವೆ ಕುಂಕುಮದ ಒಟ್ಟು
೨ ಮನೆಗೆದ್ದು ಮಾರು ಗೆದೆಯುವದೇ ಹೆಚ್ಚು	ರಾಯರಿಗೆ ನಾ ಮಚ್ಚುವೆ ಅರಿಷಿಣದ ಅಚ್ಚು
೩ ದೆ ಶಸ್ತ್ರವೆಗೆ ಸಿದ್ಧರು ದಾಸಬಂಧ ವೀರರು ...	ರಾಯರಿಗೆ ನಾ ಸಿಡಿಸುವೆ ಗುಲಾಬಿ ಪನ್ನೀರು
೪ ಭಾರತದಲ್ಲಿ ಕರ್ನಾಟಕವೇ ಅತಿ ಉದಾರ ...	ರಾಯರಿಗೆ ನಾ ಪಚ್ಚುವೆ ಅತ್ತರದ ದಿಲ್ ಬಹಾರ
೫ ದೇಶ ಸೇವೆಗೆ ಧರ್ಮವೇ ಮೂಲ	ರಾಯರಿಗೆ ನಾನರ್ಪಿಸುವೆ ಸರಸ ತಾಂಬೂಲ
೬ ವಿದ್ಯೆಗೆ ವಿನಯವೇ ಆಧಾರ...	ರಾಯರಿಗೆ ನಾ ಹಾಕುವೆ ಸುರ ಪುಷ್ಪಹಾರ
೭ ಪತಿವ್ರತೆಯಾಗುವದೇ ಸತಿಯ ಧರ್ಮಸಾರ ...	ರಾಯರಿಗೆ ನಾ ಮಾಡುವೆ ಸಪ್ರೇಮ ನಮಸ್ಕಾರ

ಇವೆಲ್ಲ ಊಟ್ಟಿಯ ವಿಧಾನವನ್ನನುಸರಿಸಿ ಇವೆ. ಈ ವಗಟುಗಳಲ್ಲಿ ಮೊದಲಿನ ವಚನಕ್ಕೂ ಮುಂದಿನ ವಿಧಾನಕ್ಕೂ ಇರವ ಪೂರ್ವಾಪರ ಸಮ್ಮಂಧವೇ ಒಂದುವಿನೋದ. ಇನ್ನು ಬೇರೆ ಮಾಸಲೆಗಳಿವೆ. ಆದರೆ ಅವಕ್ಕಿಲ್ಲಿ ಎಡೆಇಲ್ಲ. ಒಂದು ಪುಸ್ತಕವನ್ನು ಮಾಡಬೇಕಾದರೆ ಮೊದಲಿನಿಂದ ಒಗಟಗಳನ್ನು ಕಲಿಸಿಕೊಳ್ಳುವದು ಒಂದು ದೊಡ್ಡ ಕೆಲಸವಿದೆ. ಹಾಗಾದಲ್ಲಿ ಕನ್ನಡ ಸಾಂಪ್ರದಾಯವು ಇದ್ದ ಬಗೆಯು ನನಗೆ ತಿಳಿಯದೆ ಹೋಗಲಿಕ್ಕಿಲ್ಲ.

ರಸಿಕ ರಂಗ.

ಭದ್ರಾ ಅಣೆಕಟ್ಟು ನಾಲೆಗಳ ಉಪಯೋಗಾರಂಭ ಮಹೋತ್ಸವದಲ್ಲಿ ಶ್ರೀಮನ್ಮಹಾರಾಜರವರು ಅಪ್ಪಣೆ ಕೊಡಿಸಿದ ಭಾಷಣ.

(೧೨ನೆಯ ಜೂನ್ ೧೯೨೨)

ಸಭಿಕರೆ,

ಭದ್ರಾ ಅಣೆಕಟ್ಟು ನಾಲೆಗಳ ವಿನಿಯೋಗ ಕಾರ್ಯದ ಸಮಾರಂಭೋತ್ಸವವನ್ನು ಆಗಮಾಡಿಸಿ, ಆ ಮೂಲಕ ಮಲೆನಾಡಿನ ಪುರೋಭಿವೃದ್ಧಿಗಾಗಿ ಆಗಿರುವ ಈ ಹೊಸ ಪ್ರಯತ್ನದ ವಿಷಯದಲ್ಲಿ ನಮ್ಮ ಅಭಿಮಾನವನ್ನು ಸೂಚಿಸುವುದಕ್ಕಾಗಿ ನಾವು ಇಲ್ಲಿಗೆ ಬಂದಿದ್ದೇವೆ ಈ ಸಂದರ್ಭದಲ್ಲಿ ಮಲೆನಾಡಿಗೆ ಸೇರಿದ ಕಡೂರ ಶಿವಮೊಗ್ಗ ಡಿಸ್ಟ್ರಿಕ್ಟುಗಳ ಪ್ರತಿನಿಧಿಗಳನ್ನು ಅವರ ರಮಣೀಯವಾದ ಕಾನನ ಪ್ರಾಂತದಲ್ಲಿಯೇ ನೋಡುವ ಅವಕಾಶವು ದೊರೆತಿರುವುದು ನಮಗೆ ಮತ್ತಷ್ಟು ಸಂತೋಷಕರವಾಗಿದೆ,

ತುಂಗಾ ಭದ್ರಾ ನದಿಗಳೆರಡೂ ಸೇರಿ ೩,೫೦೦ ಚದರ ಮೈಲಿಗಳಷ್ಟು ಪ್ರದೇಶದ ನೀರನ್ನು ಆಕರ್ಷಿಸಿಕೊಳ್ಳುತ್ತಿದ್ದರೂ, ಇದುವರೆಗೂ ಅವುಗಳೊಳ್ಳೊಂದರ ಕಣಿವೆಯಲ್ಲಾದರೂ ಕೂಡ ಯಾವ ಭಾರೀ ನೀರಾವರಿಯ ಕೆಲಸವನ್ನೂ ಕೈಗೊಂಡಿಲ್ಲ. ಈಗ ನಾವು ಪ್ರಾರಂಭಿಸಿರುವ ಅಣೆಕಟ್ಟೇ ಈ ಕಣಿವೆಯ ನೀರನ್ನು ನಮ್ಮ ಸಂಸ್ಥಾನದಲ್ಲಿ ಉಪಯೋಗಿಸಿಕೊಳ್ಳಲು ಮಾಡಿರುವ ಮೊದಲನೆಯ ಪ್ರಯತ್ನ.

ಈ ಪ್ರದೇಶಕ್ಕೆ ದುರ್ಭಿಕ್ಷ ನಿವಾರಣೆಗೋಸ್ಕರ ಜಲಪಸತಿಯನ್ನುಂಟುಮಾಡಿಕೊಡಬೇಕೆಂಬ ಉದ್ದೇಶದಿಂದ, ಭದ್ರಾ ಅಣೆಕಟ್ಟು ನಾಲೆಗಳ ಕೆಲಸದ ಅಂದಾಜು ೧೮೯೭ನೆಯ ಇಸ್ವಿಯಷ್ಟು ಹಿಂದೆಯೇ ತಯಾರಾಯಿತು ನಾನಾ ಕಾರಣಗಳಿಂದ ಆ ಕೆಲಸವು ೧೯೧೭ರ ವರೆಗೂ ತಡವಾಗಲು, ಆಗ ನಮ್ಮ ಸರ್ಕಾರದವರು ಆ ವಿಷಯವನ್ನು ಪುನಃ ವಿಚಾರಮಾಡಿ, ಹಿಂದಿನ ಸಂಕಲ್ಪವನ್ನು ಊರ್ಜಿತಪಡಿಸಿ, ೧೯೧೮ನೆಯ ಏಪ್ರಿಲ್ ತಿಂಗಳಲ್ಲಿ ಕೆಲಸದ ಪ್ರಾರಂಭಕ್ಕೆ ಅನುಮತಿಕೊಟ್ಟರು. ಈ ಏರ್ಪಾಟು ಸಂಪೂರ್ಣವಾಗಿ ನೆರವೇರುವುದಕ್ಕೆ ೧೬ ಲಕ್ಷ ರೂಪಾಯಿಗಳವೆಚ್ಚವು ಹಿಡಿಯುತ್ತದೆಂದು ಅಂದಾಜಾಗಿದೆ; ಹಾಗೆ ಅದು ನೆರವೇರಿದಬಳಿಕ, ಅದರಿಂದ ೧೧೬ ಗ್ರಾಮಗಳಿಗೆ ಜಲಾನುಕೂಲ ಉಂಟಾಗುವುದಲ್ಲದೆ, ಆ ಮೂಲಕ, ಸಂಸ್ಥಾನಕ್ಕೆ ಇದು ಒಂದು ಲಾಭಕರವಾದ ಏರ್ಪಾಟು ಎನ್ನಿಸುವಷ್ಟರಮಟ್ಟಿನ ಒಳ್ಳೆಯ ಪ್ರತಿಫಲವೂ ದೊರೆತೀತೆಂಬ ನಿರೀಕ್ಷಣೆ ಇದೆ.

ಮಲೆನಾಡು ಭಾರೀ ಮಳೆಯ ಪ್ರದೇಶವೆಂದು ಪ್ರಸಿದ್ಧವಾಗಿರುವುದರಿಂದ, ಇಲ್ಲಿ ನೀರಾವರಿಯ ಕೆಲಸಗಳನ್ನು ನಡಿಸುವುದು ಅನವಶ್ಯಕವೆಂದು ಬಹುಕಾಲ ಅಭಿಪ್ರಾಯವಿತ್ತು ಆದರೆ ಈ ಭೂಮಿಯು ಬಂಡೆ ನೊರಜು ಕಲ್ಲುಗಳಿಂದ ತುಂಬಿದ್ದಾಗಿಯೂ ಇದರ ಇಳಿಮೇಡುಗಳು ಕಡಿದಾಗಿಯೂ ಇರುವುದರಿಂದ, ಇಲ್ಲಿ ಬಿದ್ದ ಮಳೆಯನೀರು ನೆಲದೊಳಕ್ಕೆ ಸ್ವಲ್ಪ ಮಾತ್ರವೂ ಇಳಿದು ನಿಲ್ಲದೆ ಬೇಗನೆ ಹರಿದು ತಪ್ಪಿಸಿಕೊಂಡು ಹೋಗುತ್ತದೆ ಕೆಲವೆಡೆಗಳಲ್ಲಿ ಜನರಿಗೂ ದನಕರುಗಳಿಗೂ ಬೇಸಗೆಯಲ್ಲಿ ಕುಡಿಯುವುದಕ್ಕಾದರೂ ನೀರು ಸಿಕ್ಕುವುದು ಕಷ್ಟವಾಗಿದೆ. ಇಲ್ಲಿ ಭಾರೀ ಮಳೆ ಬೀಳುತ್ತಿದ್ದಾಗ್ಯೂ, ಬೇಸಗೆಯು ಸಾಗುವಳಿಗೆ ಮೈದಾನದಲ್ಲಿರುವುದಕ್ಕಿಂತ ಇಲ್ಲಿ ಜಲಾನುಕೂಲ್ಯವು ಕಡಿಮೆಯಾಗಿದೆ ಆದುದರಿಂದ ಈ ಪ್ರಾಂತದಲ್ಲಿ ಮೇಲ್ತರದ ಸಾಗುವಳಿಗೂ, ಅಲ್ಲಲ್ಲಿ ಗೃಹೋಪಯೋಗಕ್ಕೂ ಸಹ, ಕೆರೆ ಕಾಲುವೆಗಳು ಅವಶ್ಯಕವೆಂದು ತೋರುತ್ತದೆ

ಇದೂ ಅಲ್ಲದೆ, ಮಲೆನಾಡಿಗೆ ಅನಾರೋಗ್ಯದ ಪ್ರದೇಶವೆಂಬ ಅಪಖ್ಯಾತಿಯುಂಟಾಗಿದೆ. ಈ ಕೊರತೆಯನ್ನು ಹೋಗಲಾಡಿಸಲು ವಿದ್ಯಾಪ್ರಚಾರವನ್ನು ಹೆಚ್ಚಿಸಿ, ಜನರಿಗೆ ಅವರ ವಾಯುಗುಣಕ್ಕೆ ತಕ್ಕ ಊಟ ಉಪುಪ್ಪಗಳ ಉಪಯೋಗವನ್ನು ಕಲಿಸಬೇಕು—ಎಂದರೆ ಅವರ ಜೀವನ ರೀತಿಯನ್ನು ಉತ್ತಮಗೊಳಿಸಬೇಕು. ಇದು ಆರ್ಥವಿಚಾರಕ್ಕೆ ಸೇರಿದ ವಿಷಯ. ಇದನ್ನು ಸಾಧಿಸುವುದಕ್ಕೆ ವ್ಯವಸಾಯಕ್ರಮವನ್ನು ಉತ್ತಮಪಡಿಸಿ, ಭೂಮಿಯಿಂದ ಹೆಚ್ಚು ಬೆಳೆಯನ್ನು ತೆಗೆಯುವುದೇ ಮೊದಲನೆಯ ಪ್ರಯತ್ನವಾಗಿರುತ್ತದೆ. ಜನರು ಶಾಸ್ತ್ರೀಯವಾದ ಕೃಷಿ ಪದ್ಧತಿಗಳನ್ನು ಅವಲಂಬಿಸಿ, ಒಳ್ಳೆಯ ಜಲವೃದ್ಧಿಯಿಂದ ಸಾಧ್ಯವೂ ಹೆಚ್ಚುಬೆಲೆ ಬಾಳತಕ್ಕವೂ ಆದ ಕಬ್ಬಿನಂಥಾ ಬೆಳೆಗಳನ್ನು ಬೆಳೆಸಲು ಕಲಿತುಕೊಂಡರೆ ಆಗ ಈ ಪ್ರದೇಶವು ಈಗಿಗಿಂತ ಬಹಳ ಹೆಚ್ಚಾದ ಪ್ರಜಾವರ್ಗಕ್ಕೆ ಆರೋಗ್ಯವನ್ನೂ ಸೌಖ್ಯವನ್ನೂ ದೊರಕಿಸಿ ಕೊಡಲಾಗುವುದು.

ಈ ಡಿಸ್ಟ್ರಿಕ್ಟುಗಳ ಜನರ ಸಂಪತ್ಸಮೃದ್ಧಿಗಾಗಿಯೂ ಸಾಮಾಜಿಕ ಹಿತಕ್ಕಾಗಿಯೂ ನಡೆಯುವ ಕಾರ್ಯಗಳು ನಮಗೆ ಅತ್ಯಂತ ಪ್ರಿಯವಾದುವೆಂದೂ, ಅವು ನಮ್ಮ ಸರ್ಕಾರದ ತೀವ್ರ ಗಮನಕ್ಕೆ ಎಂದಿನಂತೆ ಪಾತ್ರವಾಗಿರುವುವೆಂದೂ ಜನರಿಗೆ ನಾವು ಈ ಸಂದರ್ಭದಲ್ಲಿ ಭರವಸೆ ಕೊಡುತ್ತೇವೆ ಈ ಭದ್ರಾ ಏರ್ಪಾಟಿನಿಂದ ಆಗುವ ಜಲಸೌಕರ್ಯದ ದೆಸೆಯಿಂದ ಈ ಪ್ರದೇಶದ ಉತ್ಪತ್ತಿಯು ತಕ್ಕಮಟ್ಟಿಗೆ ಹೆಚ್ಚಾಗುವದು ಜನರು ಸಹಾಯಕ್ಕೆ ಬಂದು ಇದನ್ನು ಜಯಪ್ರದವನ್ನಾಗಿ ಮಾಡಿದರೆ, ಕಾಲಕ್ರಮದಲ್ಲಿ ಈ ನದಿಯಿಂದ ಒಂದು ಭಾರೀ ಜಲಾಶಯವೂ ನಿರ್ಮಿತವಾಗಿ, ಅದು ಹೆಚ್ಚು ಸಾಗುವಳಿಗೂ, ವಿದ್ಯುಚ್ಛಕ್ತಿಯ ಉತ್ಪತ್ತಿಗೂ ಸಾಧಕವಾಗುವದು. ಹಿರಿಯೂರಿನ ತಾಲ್ಲೂಕಿನ ಅಂಜನಾಪುರದ ಬಳಿ ಕುಮುದ್ವತೀನದಿಗೆ ಅಣೆಹಾಕಿ ಒಂದು ಜಲಾಶಯವನ್ನು ನಿರ್ಮಾಣಗೊಳಿಸಬೇಕೆಂಬ ಸಂಕಲ್ಪವು ಕಾರ್ಯೋನ್ಮುಖವಾದ ಆಲೋಚನೆಯಲ್ಲಿದೆ. ಸೂಳೆಕೆರೆಗೆ ಸಂಬಂಧಪಟ್ಟ ಏರ್ಪಾಟನ್ನು ತಿದ್ದಿ ಇನ್ನೂ ಒಳ್ಳೆಯ ಪ್ರತಿಫಲವನ್ನು ಪಡೆಯಬಹುದೆಂಬ ನಿರೀಕ್ಷಣೆಯೂ ಇದೆ

ಸಂಸ್ಥಾನದ ಯಂತ್ರಕರ್ಮಾಭಿವೃದ್ಧಿಯ ಒಂದು ಭಾಗವಾಗಿ ಭದ್ರಾವತಿಯ ಕಬ್ಬಿಣದ ಕಾರ್ಖಾನೆಯನ್ನು ಇತ್ತಲಾಗೆ ಸಮೀಪದಲ್ಲಿಯೆ ಉಪಕ್ರಮಿಸಿದ್ದೇವೆ ಈ ಕಾರ್ಖಾನೆಯ ಉಪಯೋಗಕ್ಕೋಸ್ಕರ ಈಗಾಗಲೇ ಸುಮಾರು ೫೬ ಮೈಲಿಗಳ ದೂರ ಟ್ರಾಂವೇ ಬಂಡಿ ನಡಿಯುತ್ತಿದೆ. ಇಷ್ಟರಲ್ಲಿಯೇ ರೈಲ್ವೇ ಕೆಲಸವನ್ನು ಶಿವಮೊಗ್ಗ ಡಿಸ್ಟ್ರಿಕ್ಟಿನಲ್ಲಿ ಪುನಃ ಪ್ರಾರಂಭಿಸುವವರಾಗಿದ್ದೇವೆ. ಗ್ರಾಮಾಂತರ ಪ್ರದೇಶಗಳ ಪರಿಶುದ್ಧಿಯನ್ನು ಹೆಚ್ಚಿಸುವುದಕ್ಕಾಗಿ ಕೆಲವು ಕೆಲಸಗಳನ್ನು ಮಾಡಿಸುತ್ತಿದ್ದೇವೆ; ಹಳ್ಳಿಗಳ ದಾರಿಗಳನ್ನು ಹೆಚ್ಚು ಮಾಡುವುದಕ್ಕಾಗಿ ಬೇರೆ ಒಂದು ಸಿಬ್ಬಂದಿಯನ್ನು ನಿಯಮಿಸಿದೆ. ಈಚೆಗೆ ಕೊಪ್ಪ, ಮೂಡಿಗೆರೆ ಕಳಸ, ಕಡೂರು—ಈ ಊರುಗಳಿಗೆ ನಲ್ಲಿಗಳಿಂದ ನೀರನ್ನೊದಗಿಸುವ ಏರ್ಪಾಡುಗಳನ್ನು ಮಂಜೂರ್ ಮಾಡಲಾಗಿದೆ ಶಿವಮೊಗ್ಗಿಯ ದಲಪತಿಯನ್ನು ದೊಡ್ಡದು ಮಾಡುವುದಕ್ಕಾಗಿ ಹಣವನ್ನು ಬೇರೆ ಒದಗಿಸಿದೆ. ವೈದ್ಯ ಸಹಾಯದ ಏರ್ಪಾಡುಗಳನ್ನು ವಿಸ್ತಾರಪಡಿಸುತ್ತಿದೆ. ವಿದ್ಯಾಪ್ರಸಾರವನ್ನು ಹೆಚ್ಚಿಸಿ, ಜಮೀನದಾರರಿಗೂ, ರೈತರಿಗೂ, ಕೈಕೆಲಸದವರಿಗೂ, ವರ್ತಕರಿಗೂ, ಅವರವರ ಕಸುಬುಗಳಲ್ಲಿ ಕುಶಲತೆಯನ್ನೂ, ಸಂಪಾದನೆಯನ್ನೂ ಅವರವರು ಹೆಚ್ಚಿಸಿಕೊಳ್ಳುವಂತೆ ಮಾಡಲು ಸರ್ಕಾರವು ಕೊಡಬಹುದಾದ ಎಲ್ಲ ಬಗೆಯ ಸಹಾಯವನ್ನೂ ಒದಗಿಸಬೇಕೆಂಬುದು ನಮ್ಮ ಅಭಿಲಾಷೆ ಮಲೆನಾಡಿನ ಅಭ್ಯುದಯವನ್ನು ಪುನರುಜ್ಜೀವನಗೊಳಿಸುವ ಮಾರ್ಗಗಳಲ್ಲಿ ಯಾವ ಒಂದನ್ನೂ ಪರೀಕ್ಷಿಸದೆ ಬಿಡಲಾರದೆಂದೂ ಸಂಕಲ್ಪಿಸಿರುವ ಅನೇಕ ಏರ್ಪಾಟುಗಳನ್ನು ಸಾಧಿಸುವುದರಲ್ಲಿ ಈ ಪ್ರಾಂತದ ಪ್ರಜಾಪ್ರಮುಖರು ಉತ್ಸಾಹದಿಂದ ಸರ್ಕಾರದೊಡನೆ ಸೇರಿ ಕೆಲಸ ಮಾಡಬೇಕೆಂದೂ ನಮಗೆ ತೀವ್ರವಾದ ಆಶೆ ಇದೆ.

ಈ ಕೆಲಸವು ಮುಂದೆ ಮಲೆನಾಡಿನಲ್ಲೆಲ್ಲಾ ತತ್ತಾಪಿ ತುಂಗಾ, ಪ್ರಕೃತ ಭದ್ರಾ ಕಣಿವೆಗಳಲ್ಲಿ ವಿಶೇಷವಾಗಿ—ನಡೆಯಬೇಕಾಗಿರುವ ಜಲಪಸತಿಯ ಏರ್ಪಾಟುಗಳಿಗೆ ಶುಭಸೂಚಕವಾದ ಆಂಕುರಾರ್ಪಣೆಯಾಗಲೆಂದು ನಾವು ಹಾರೈಸೋಣ

ಇನ್ನು ಈ ಭದ್ರಾ ... ಉಪಯೋಗಾರ್ಥವಾಗಿ
ಬೇಂದು ...

ವಿಜಾಪೂರ ಜಿಲ್ಹೆಯ ಶಿಶು ಸಪ್ತಾಹ.

ತಾರೀಖು ೨೯-೩೦ ಜೂನ ಮತ್ತು ೧ನೇ ಜುಲೈ ೧೯೨೬

ಜಾಗಾ— ಸರಕಾರಿ ಹಾಯಸ್ಕೂಲ ಇಮಾರತ ವಿಜಾಪೂರ.

ವಿಜಾಪೂರ ಜಿಲ್ಹೆಯ ಬೇಬಿ ವೀಕ ಅಂದರೆ ಶಿಶು ಸಪ್ತಾಹದ ಪ್ರದರ್ಶನವು ನಾಮದಾರ ಜಾಧವರಾವ ವಿದ್ಯಾಖಾತೆಯ ಮಿನಿಸ್ಟರ ಸಾಹೇಬ ಇವರ ಹಸ್ತದಿಂದ ತಾರೀಖು ೨೯ನೇ ಜೂನ ೧೯೨೬ನೇ ದಿವಸ ಸಂಜೆಯ ೫ ಘಂಟೆಗೆ ತೆರೆಯಲ್ಪಡುವದು ಸದರ ಪ್ರದರ್ಶನದಲ್ಲಿ ಬಾಲಾಂತನ ಶಿಶುಸಂಗೋಪನ ಮೊದಲಾದ ವಿಷಯಗಳ ಬಗ್ಗೆ ಪ್ರಾತ್ಯಕ್ಷಿಕೆಗಳೂ ದೊಡ್ಡ ದೊಡ್ಡ ವಿದ್ವಾಂಸರ ವ್ಯಾಖ್ಯಾನಗಳೂ ಆಗುವವು, ಸಿನೆಮಾ ಮತ್ತು ಮ್ಯಾಜಿಕಲ್ಯಾಂಟರ್ನ ಚಿತ್ರಗಳೂ ತೋರಿಸಲ್ಪಡುವವು. ಅವುಗಳ ಮತ್ತು ಪ್ರದರ್ಶನದಲ್ಲಿ ಇಡಲ್ಪಡುವ ಬೇರೆ ಬೇರೆ ಉಪಕರಣಗಳ ದ್ವಾರಾ ಬಾಲಾಂತನ ಮತ್ತು ಶಿಶುಸಂಗೋಪನಗಳಲ್ಲಿ ಈಗಿರುವ ದೋಷಗಳನ್ನು ಹೋಗಲಾಡಿಸಿ ಸುಧಾರಿಸಿದ ಪದ್ಧತಿಗಳ ಜ್ಞಾನವು ಸ್ತ್ರೀಯರೆಲ್ಲರಿಗೂ ಆಗುವಂತೆ ವ್ಯವಸ್ಥೆ ಮಾಡಲ್ಪಡುವದು. ಇದಲ್ಲದೆ ಬೇರೆ ಬೇರೆ ಬೇನೆಗಳ ಕಾರಣಗಳನ್ನು ಅವುಗಳಿಂದ ತಪ್ಪಿಸಿಕೊಳ್ಳುವ ಉಪಾಯಗಳನ್ನು ವ್ಯಕ್ತಿಶಃ ಆರೋಗ್ಯತೆಯನ್ನು ಯಾವಾಗಲೂ ಚನ್ನಾಗಿ ಕಾದುಕೊಳ್ಳುವಗೋಸುಗ ಸುಲಭ ಸಾಧನಗಳನ್ನು ತಿಳಿಸಿಹೇಳುವದಲ್ಲಿ ಬರುವದು

ಕಾರಣ ಈ ಜಿಲ್ಹೆಯೊಳಗಿನ ಮತ್ತು ವಿಜಾಪೂರ ಶಹರದೊಳಗಿನ ನಾಗರೀಕರಾದ ತಾವೆಲ್ಲ ಸ್ತ್ರೀಪುರುಷರೂ ಚಿಕ್ಕಮಕ್ಕಳೂ ಈ ಪ್ರದರ್ಶನಕ್ಕೆ ಬಂದು ಯೋಗ್ಯಫಾಯದೆ ತೆಕೊಳ್ಳಬೇಕಾಗಿ ವಿನಂತಿ ಇದೆ.

ವಿಜಾಪೂರ
ತಾ|| ೧೬-೬-೨೬

V. H NAIK.
ಕಲೆಕ್ಟರ ಮತ್ತು ಪ್ರೆಸಿಡೆಂಟ
ಬೇಬಿವೀಕ ಕಮಿಟಿ

FOR SAFETY AND GOOD SERVICE
IN LIFE ASSURANCE
GO TO THE ORIENTAL
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!
ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಶೀ ಬ್ರಿಟಿಶ ಹಿಂದುಸ್ತಾನದ ಸರಕಾರದ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಮನಾಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ— ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೩೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ

ಗೆಳೆಯರ ಗುಂಪಿನ
ಕನ್ನಡ **ಸ್ವಧರ್ಮ.** ಮಾಸ ಪತ್ರಿಕೆ.
ಸಂಪಾದಕರು:— ದ ರಾ ಬೇಂದ್ರೆ ಬಿ ಎ

ಸಮಾಜದಲ್ಲಿ ಶಾಂತಿ ಪುಷ್ಟಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ದಾರಿ ಸದಾಚಾರದ ಬೆಳಗಿಗೆ ಸುವಿಚಾರವೇ ಸಮರ್ಥವಾದ ಸಾಧನ ಇಂತಹ ಸುವಿಚಾರಗಳನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ. ೩-೦-೦

ಕಾರ್ಯದರ್ಶಿ. ಸ್ವಧರ್ಮ ಕಾರ್ಯಾಲಯ
ಮಾಳಮಡ್ಡಿ ಧಾರವಾಡ.

ಗುಲಕಂದ! ಗುಲಕಂದ.! ಗುಲಕಂದ!!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸಾರ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸುವಾಸಿಕ ಹೂವಿನ ಉತ್ತಮ ಹಾಗೂ ಚಂದವಾದ ಹಾರಗಳೂ ತುರಾಯಿಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತಕ್ಕಷ್ಟು ಕಮಿಶನ್.

ವಿಳಾಸ:— ಧಾಡ ಪಾಸಾಣಕರ ಕಂಪನಿ.

ಗುಬ್ಬಿಶ್ರೀಚನ್ನಬಸವೇಶ್ವರನಾಟಕಸಭೆ.

ಇವರು ಜೂನ ೧೫ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್ ವೀರಣ್ಣ.
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೩ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೫೬೦೦ ಮಿ. ಏರ್ಕಲ ಚಿಮ್ಮಾಜಿ ಸೇಟ ಕಲಾಸ್ ಅಲಿಬಾಗ ಜಾಂಬೆ,

(೨) ಬಾಂಡ ನಂ. ೧೩೬೦೭ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ (ಜಿ. ತುಮಕುರು.)

(೩) ಬಾಂಡ ನಂ. ೧೯೯೪೬ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರೂಸಪೇಟ ಬಳ್ಳಾರಿ.

(೫) ಬಾಂಡ ನಂ. ೨೯೦ ಮಿ|| ರಾಮಚಂದ್ರ ವಾಮನ ಕಾಂಕನ ಕಾಲುಸ್ಕರ ವಾಡಾ ವ್ಯಾಸರೋಡ (ಬರೋಡಾ)

(೬) ಬಾಂಡ ನಂ. ೧೮೯೦ ಮಿ|| ಆರ್. ಎಚ್. ನಾಟೆಸನ್ ಮಾಸ್ತರ ಗವರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟೆ ಸಹಿತ; ಟ. ಖ. ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

ಕಾನಡಾಧುರೀಣ.

ಉತ್ತಮ ವರ್ಗದ ವಾರಪತ್ರಿಕೆ

ಮನಃಪೂರ್ವಕವಾಗಿ ಬರೆಯುತ್ತಿರುವ ಸಾಂಪ್ರತದ ರಾಜಕೀಯ ವಿಚಾರಗಳನ್ನೂ ವಿಶುದ್ಧವಾದ ಕನ್ನಡದ ಶೈಲಿಯನ್ನೂ ನೋಡಲಿಚ್ಛಿಸುವವರು ಈ ವಾರಪತ್ರಿಕೆಯನ್ನು ಮೊದಲು ಓದಬೇಕು.

ವಾರ್ಷಿಕ ಚಂದಾ ೩-೧೨-೦ ಪತ್ತೆಃ—

ಸಂಪಾದಕ ಕಾನಡಾಧುರೀಣ- ಕುಮಟಾ, ಜಿ. ಉತ್ತರ ಕನ್ನಡ

ಸಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಪಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳ್ಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸಃ— "**ಗೆಳೆಯರ ಗುಂಪು**" ಹಲಸಂಗಿ.
ಜಿಲ್ಹಾ ವಿಜಾಪುರ.

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಿನ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ

ಹಳೇ ಮೋಟಾರ

ಸೋವಿದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಸಂಗಣ್ಣ ಶೆಟ್ಟಿ ಬಂಧುಗಳು
ಕನ್ನಡಿಗನ ಕಾರ್ಯಾಲಯ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ಬಿ. ೧೯೪೭ ವಾ. ಚಂದಾ ೧–೧೪-೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಜ್ಯೇಷ್ಠ ವದ್ಯ ೭ ಶಕೆ ೧೮೫೮ ತಾ|| ೨ ೭-೧೯೩೬. | ಸಂಚಿಕೆ ೧೫

ಸಂಪಾದಕರ ಭೂಮಿ

( )

ನನ್ನ ಮನಸಿನ ಮೋಣವಮಾಡಿ ಕಟ್ಟಿ ನೆನಾಸು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ಜೊತೆ।
ಚಿನ್ನದಾರದ ಚೆನ್ನ ಮೋಣಬನ್ನಿಯ ಸೊಂಪು ಚಿನ್ನಯಾಕಾಶದಲ್ಲಿ ||

ನನ್ನ ದೇಹವು ನಿನ್ನ ಪೀಠಶಾಸನಕಾಗಿ
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧಪಾತ್ರವೆಂದು ತಿಳಿಯಾ

—ಅಂದಕಾ ಕನಯ ದತ್ತ

'ಮುಂದಾಳು ಪತ್ರಿಕೆಯು' ಸಮಾಜದ ಸುಧಾರಣೆಯನ್ನು ಮಾಡಲು ಹುಟ್ಟಿದ ಬೇರೆ ಬೇರೆ ಜಾತಿಗಳಲ್ಲಿ ಇರುವ ವೈಷಮ್ಯದ ವಿಷವನ್ನು ಅಗಿದೊಗೆಯಲು ಜನ್ಮ ತಾಳಿದೆ, ಒಕ್ಕಟ್ಟಿನ ಗುಟ್ಟನ್ನು ಅರುಹಲು ಪ್ರತತೊಟ್ಟಿದೆ. ನಮತೆಯ ತೂಕವನ್ನು ಹಿಡಿದಿದೆ. ನಾಡಿನ ಕಲ್ಯಾಣ ಮಾಡಲು ಕಂಕಣಬದ್ಧವಾಗಿದೆ ಎಂದು ಅಭಿಮಾನವನ್ನು ತಾಳಲು ಕನ್ನಡಿಗರಿಗೆ ಆಸ್ಪದವಿಲ್ಲೆಂದು ನಮಗೆ ಬಹಳ ಖೇದದಿಂದ ಬರೆಯಬೇಕಾಗಿದೆ. '**ಇದೇನು ರಾಜಕಾರಣವೋ ಲುಚ್ಚೆಗಿರಿಯೋ**' ಎಂಬ ಲೇಖನವನ್ನು ಓದಿದೊಡನೆ, ಮನಸಿಗೆ ನೋವುಂಟಾಗುತ್ತದೆ. ಸಂಪಾದಕರ ವಿಷಯದಲ್ಲಿ ಒಂದು ಬಗೆಯ ಕನಿಕರವುಂಟಾಗುತ್ತದೆ. ಶ್ರೀ ಕೌಜಲಗಿಯವರು ಲುಚ್ಚೇರು ಎಂಬ ಮಾತು ಆ ಲೇಖದಲ್ಲಿ ಎಲ್ಲೆಲ್ಲಿಯೂ ಎದ್ದು ಕಾಣುತ್ತದೆ. ಶ್ರೀ ಕೌಜಲಗಿಯವರು ನ್ಯಾಯ ಸಭೆಗೆ ನಿಲ್ಲಬಾರದೆಂದು ಇವರ ಇಚ್ಛೆ. ಶ್ರೀ. ಕೌಜಲಗಿಯವರಿಗೆ ಕಾರ್ಯ ಮಾಡಬೇಕೆಂದು ಲವಲವಿಕೆ. ದೇಶದ ಸೇವೆಯನ್ನು ಕೈಲಾದಷ್ಟು ಮಾಡಿಯೇ ತೀರಬೇಕೆಂದು ಹಂಬಲ. ನ್ಯಾಯ ಸಭೆಯಲ್ಲಿ ಸೇರಿದರೆ, ಏನಾದರೂ ಮಾಡಬಹುದೆಂದು ಅವರ ಮನೋ— ದೇವತೆಯು ಅವರಿಗೆ ಹೇಳುತ್ತಿರಬಹುದು. ಆದುದರಿಂದ ಅವರು 'ಊರೂರಿಗೆ ಹೋಗಿ' ಶ್ರಮಪಟ್ಟು ಹರಿಕೆ ಹಾಕುತ್ತಿರುವರು. ರಾಜಕಾರಣದಲ್ಲಿ ಕಾಲ ಪರಿಸ್ಥಿತಿಗನುಸರಿಸಿ ಮಾರ್ಪಾಟುಗಳು ಆಗುವವು. ಆದಕ್ಕೆ ಶ್ರೀನಿವಾಸರಾಯರದೇನು ತಪ್ಪು. ಅಸಹಕಾರದ ಚಳುವಳಿಯು ಪ್ರಾರಂಭವಾದೊಡನೆ, ಅವರು ತಮ್ಮ ವಕೀಲ ವೃತ್ತಿಗೆ ಶರಣು ಹೊಡೆಯಲಿಲ್ಲವೆ? ನಾಲ್ಕಾರು ವರ್ಷಗಳ ವರೆಗೆ, ನಾನಾ ವಿಧವಾದ ಕಷ್ಟಗಳನ್ನನುಭವಿಸಲಿಲ್ಲವೇ? ಕಾರಾಗೃಹದ ಘೋರ ಯಾತನೆಗಳನ್ನು ಭೋಗಿಸುತ್ತ ಒಂದು ವರ್ಷದ ವರೆಗೆ ಅಲ್ಲಿಯೇ ಕೊಳೆಯಲಿಲ್ಲವೇ? ಹಂಸ ತುಪ್ಪಳದ ಹಾಸಿಗೆಯ ಮೇಲೆ ಮೆತ್ತಗಾಗಿ ಮಲಗುವದನ್ನು ಬಿಟ್ಟು, ಒರಟಾದ ಚಾಪೆಯ ಮೇಲೆ ಹೊರಳಾಡಲು ಯಾರಿಗೆ ತಾನೇ ಬೇಕಾಗುವದು. ಜನರ ಹಿತಕ್ಕಾಗಿ ಅವರು ಹೀಗೆ ಮಾಡಲಿಲ್ಲವೇ? ಇದಲ್ಲದೆ ಅವರು ಬ್ರಾಹ್ಮಣ ಬ್ರಾಹ್ಮಣೇತರ ಎಂಬ ಗೊಂದಲಕ್ಕೆ ಬೀಳುವವರಲ್ಲ. ಮಹಾ ಸಭೆಯ ಕಾರ್ಯವನ್ನು ನಿರ್ವಹಿಸಲು ಬ್ರಾಹ್ಮಣೇತರ ಬಂಧುಗಳನ್ನೇ ನಿಯಮಿಸಿದ್ದರು. ಅವರಿಗೆ ಶ್ರೀ ನೀಲಕಂಠಪ್ಪಾ ಸುಗಂಧಿ, ಚನಮಲ್ಲಪ್ಪಾ ಕುರ್ಲೆ, ಶ್ರೀ. ಅಂಗಡಿ, ಇವರೇ ಮೊದಲಾದವರು, ಅವರ ಬಲಗೈಯಂತಿದ್ದರು. ಅವರ ಆಲೋಚನೆಯನ್ನು ಕೇಳದೆ ಯಾವ ಕೆಲಸಕ್ಕೂ ಪ್ರವೃತ್ತರಾಗುತ್ತಿದ್ದಿಲ್ಲ. ಬ್ರಾಹ್ಮಣ ಬ್ರಾಹ್ಮಣೇತರರಲ್ಲಿಯ ಕಲಹಗಳನ್ನು ಮುರಿದು, ಅವರಲ್ಲಿ ಪ್ರೇಮಭಾವವನ್ನು ಬೆಳಿಸುವದೇ ಅವರ ಹೆಗ್ಗುರಿಯಾಗಿದ್ದಿತು. ಈಗಾದರೂ ಇದೆ. ಇದೊಂದು ದೃಷ್ಟಿಯಿಂದಾಯಿತು. ಮತ್ತೊಂದು ದೃಷ್ಟಿಯಿಂದ ನೋಡಿದರೂ 'ಮುಂದಾಳು' ಪತ್ರಿಕೆಯ ಭೀತಿಯು ಪೊಳ್ಳೆಂದು ತೋರುವದು. ಕೌಜಲಗಿಯವರು ವಿಶ್ವಾಸಕ್ಕೆ ಪಾತ್ರರಿರದಿದ್ದರೆ ಜನಹಿತ ಪರಾಯಣರಿಲ್ಲದಿದ್ದರೆ ಕರ್ತವ್ಯದಕ್ಷರಿಲ್ಲದಿದ್ದರೆ, ಜನರು ಅವರಿಗೆ ಮತಗಳನ್ನೇ ಕೊಡುವದಿಲ್ಲ. ಆರಿಸಿ ಬರುವದೂ ಇಲ್ಲ. ಆ ಮೇಲೆ ಅವರಿಂದ ಬ್ರಾಹ್ಮಣೇತರ ಸಮಾಜಕ್ಕೆ ಆಗುವ ಹಾನಿಯಾದರೂ ಏನು? ಇವರೊಬ್ಬರು ನ್ಯಾಯ ಸಭೆಯನ್ನು ಸೇರುವದರಿಂದ ಬ್ರಾಹ್ಮಣರ ಕಲ್ಯಾಣವಾದರೂ ಆಗುವದೇನು? ನಿಜವಾಗಿ ನೋಡಿದರೆ, ಈಗ ಬ್ರಾಹ್ಮಣರೇ ಅಲ್ಪ ಸಂಖ್ಯಾಕರಿದ್ದು, ಅವರ ಹಿತವನ್ನೇ ನೋಡುವ ಭಾರವು ಬ್ರಾಹ್ಮಣೇತರರ ಮೇಲೆ ಬಿದ್ದದೆ. ಇದರ ಬಗ್ಗೆ ಬ್ರಾಹ್ಮಣೇತರ ಮುಂದಾಳುಗಳು ಕೂಡ ಜರಾಗಬಾರದು. ಈಗ ರಾಜ್ಯಶಾಸನದ ಎಲ್ಲ ಸಂಸ್ಥೆಗಳಲ್ಲಿಯೂ ಬ್ರಾಹ್ಮಣೇತರರೇ ಅಗ್ರಸ್ಥಾನವನ್ನು ವಹಿಸಿರುವರು. ಇವರು ಎಲ್ಲ ಸಮಾಜವನ್ನು ಸರಿಯಾಗಿ ನೋಡಬೇಕೆಂದು ಮುಂದಾಳು ಪತ್ರಿಕೆಯು ಬರೆದಿದ್ದರೆ, ಸಮಂಜಸವಾಗುತಲಿದ್ದಿತು. ಮುಂದಾಳು ಪತ್ರಿಕೆಯನ್ನು ಎಲ್ಲರೂ ಮುಂಡಾಡುತ್ತಿದ್ದರು. ಕೊಂಡಾಡುತ್ತಿದ್ದರು. ವೃತ್ತಪತ್ರಗಳ ಉಚ್ಚವಾದ ಧ್ಯೇಯವನ್ನು ನೆನೆದು, ಸಮಾಜದ ಹಿತವು ಪರಸ್ಪರರ ಪ್ರೇಮದಲ್ಲಿಯೇ ಇದೆಂಬುದನ್ನು ಬಗೆದು ಮುಂದಾಳು ಪತ್ರಿಕೆಯು ಕೆಲಸ ಮಾಡಬೇಕೆಂದು ನಮ್ಮದೊಂದು ಸಪ್ರೇಮದ ಬಿನ್ನಹ.

ಮೈಸೂರ ಸಂಸ್ಥಾನವು ಅಚ್ಚಕನ್ನಡಗಿದ್ದು ಅಲ್ಲಿಯ ಸರಕಾರದವರು ರಾಜತಂತ್ರಕ್ಕೆ ಕನ್ನಡ ಬರಹಗಳೆಲ್ಲೆಲ್ಲ ಇಂಗ್ಲೀಷ ಇಲ್ಲವೆ ...

ಕಮಯಾ ಸಮಯಗಳನ್ನು ಔಚಿತ್ಯಾನೌಚಿತ್ಯಗಳನ್ನೂ ಲೆಕ್ಕಿಸದೆ ಉಪಯೋಗಿಸುತ್ತಿರುವರೆಂಬುದು ಕಂಡುಂಡ ಮಾತು. ಇದರಿಂದ ಭಾಷೆಗೆ ಕುಂದುಂಟಾಗುವದಲ್ಲದೆ, ಅವರ ಏಳ್ಗೆಗೆ ಅಡ್ಡಿಯಾಗುತ್ತಿದೆ. ಕನ್ನಡದಲ್ಲಿ ಬರಹಗಳನ್ನು ಬರೆಯುವ ಉದ್ದೇಶವು ಸಾಮಾನ್ಯ ಜನರ ತಿಳುವಳಿಕೆಗಾಗಿ ಇಂಗ್ಲೀಷ ಇಲ್ಲವೆ ಉರ್ದೂ ಶಬ್ದಗಳನ್ನು ಹೇರಳವಾಗಿ ಉಪಯೋಗಿಸಿದಲ್ಲಿ, ಬರಹಗಳ ಉದ್ದೇಶವಾದರೂ ಈಡೇರುವದಿಲ್ಲ. ಮೈಸೂರ **ಬೂಬುಕ್ ಮತ್ತು ಪಬ್ಲಿಸಿಟಿ ಜರ್ನಲ್** (ಡಿಸೆಂಬರ ೧೯೨೫) ಎಂಬ ಪುಸ್ತಕದೊಳಗಿಂದ ನಾವಂದುದನ್ನು ಸ್ಪಷ್ಟೀಕರಿಸಲು ಕೆಲವು ಅವತರಣಿಕೆಗಳನ್ನು ಕೊಡುವೆವು. "ಪಬ್ಲಿಸಿಟಿ ಜರ್ನಲಿನ ಪ್ರತಿಗಳನ್ನು ಲೈಬ್ರರಿಗಳಿಗೂ ರೀಡಿಂಗ ರೂಮುಗಳಿಗೂ **ಮುಫತ್ತಾಗಿಯಾಗಲಿ**, ರಿಯಾಯತಿ ಚಂದಾದಾರಗಳ ಮೇಲಾಗಲೀ ಸರಬರಾಯಿ ಮಾಡಬೇಕೆಂಬುದಾಗಿ ಈಚೆಗೆ ಅನೇಕ ಅರ್ಜಿಗಳು ಸರ್ಕಾರದವರಲ್ಲಿಗೆ ಬಂದಿರುತ್ತವೆ."

"ಕೇಸು **ವರ್ಕರಗಳು** ಮಾಡತಕ್ಕ ಕೆಲಸವು ಸರಿಯಾಗಿರುತ್ತದೆಯೋ ಇಲ್ಲವೇ ಎಂಬುದನ್ನು ತಾಳೆ ನೋಡಿ ಪರಿಶೀಲಿಸಿ ಮಾಡತಕ್ಕದ್ದು"

"ಪ್ರಾಮುಖ್ಯವಾದ ಕೇಸುಗಳನ್ನು ವ್ಯವಸ್ಥೆ ಮಾಡುವದರಲ್ಲಿ ಆಫೀಸರವರಿಗೆ ಸಹಾಯ ಮಾಡತಕ್ಕದ್ದು"

"ಜನರಲ್ ಡೈರಿಯನ್ನು ಇಡುವದು."

ಇನ್ನೂ ಎಷ್ಟೋ ಅವತರಣಿಕೆಗಳನ್ನು ಕೊಡಬಹುದು. ಇವುಗಳಿಂದ ಜನರಿಗೆ ಯಾವಂಥ ಮಾತಿನ ಸತ್ಯಾಂಶವು ಹೊಳೆಯುವಂತಿದೆ. ಮೈಸೂರಸರಕಾರದಲ್ಲಿ ಅನೇಕ ಪಂಡಿತರು ಸಿಕ್ಕುವರು. ಅಂಥವರದೊಂದು ವಿಶಿಷ್ಟ ಮಂಡಲವನ್ನೇರ್ಪಡಿಸಿ, ರಾಜತಂತ್ರದ ಪರಭಾಷೆಯ ಕೆಲವು ಶಬ್ದಗಳಿಗೆ ಯೋಗ್ಯವಾದ ಕನ್ನಡ ಪ್ರತಿಶಬ್ದಗಳನ್ನು ಕಲ್ಪಿಸಬಹುದು. ಯೋಗ್ಯವಾದ ಶಬ್ದಗಳು ಸಿಕ್ಕದೆ ಹೋದರೆ ಆ ಶಬ್ದಗಳನ್ನು ಉಪಯೋಗಿಸಲು ಅಡ್ಡಿಯಿಲ್ಲ ಯೋಗ್ಯವಾದ ಶಬ್ದಗಳು ಸಿಕ್ಕುತ್ತಿದ್ದರೂ ಕೂಡ, ಅವುಗಳನ್ನು ಉಪಯೋಗಿಸದೆ ಪರಭಾಷೆಯ ಶಬ್ದಗಳನ್ನು ಉಪಯೋಗಿಸುವರು ಇದರಿಂದ ಆ ಭಾಷೆಗೂ ಮರ್ಯಾದೆ ಉಳಿಯುವದಿಲ್ಲ. ನಮ್ಮ ಕನ್ನಡ ಭಾಷೆಯಂತೂ ಹೇಳಕೂಡದಷ್ಟು ಅಂದಗೇಡಿಯಾಗುತ್ತದೆ. ಆದ್ದರಿಂದ ಮೈಸೂರ ಸರಕಾರದವರು, ಭಾಷೆಯು ಶುದ್ಧವಾಗುವಂತೆಯೂ ಊರ್ಜಿತವಾಗುವಂತೆಯೂ ಪ್ರಯತ್ನ ಪಡವೇಕಾಗಿ ಕೋರಿಕೆ.

ಹಿಂದುಸ್ಥಾನದ ಪ್ರತಿಗತಿಯು ಕುಂಠಿತವಾಗಿರುವದಕ್ಕೆ ಹಿಂದೂ ಮುಸಲ್ಮಾನ ಬಡಿದಾಟವು ಬಹ್ವಂಶದಿಂದ ಕಾರಣವಾಗಿದೆ. ಎಲ್ಲಿಯ ವರೆಗೆ ಈ ಬಡಿದಾಟಗಳು ನಡೆಯುವವೋ ಅಲ್ಲಿಯ ವರೆಗೆ ಸ್ವರಾಜ್ಯದ ಆಶೆಯೇ ಇಲ್ಲ. ಈ ಮಾತು ಬುದ್ಧಿವಂತರಾದ ಹಿಂದುಗಳಿಗೂ, ವಿಚಾರಶೀಲರಾದ ಮುಸಲ್ಮಾನರಿಗೂ ಹೊಳೆದಿದೆ. ಡಾ. ಕೈಪುಜ್ಲಿನ ಕಿಚಲು ಇವರು ಕಲಕತ್ತೆಯಲ್ಲಿ ಜೂನ ೨೭ ನೇ ತಾರೀಖಿನ ತಮ್ಮ ಭಾಷಣದಲ್ಲಿ ಇದರಬಗ್ಗೆ ಸ್ಪಷ್ಟವಾಗಿ ಹೇಳಿಬಿಟ್ಟಿದ್ದಾರೆ. ಹಿಂದುಗಳಿಗೂ ಪಾರತಂತ್ರ್ಯಬೇಡ; ಒಂದು ಕ್ಷಣಹೊತ್ತು ಕೂಡ, ಪಾರತಂತ್ರ್ಯದಲ್ಲಿರುವುದು ಅಸಹ್ಯವು. ಮುಸಲ್ಮಾನರಿಗೂ ಅದು ಬೇಕಿಲ್ಲ. ಹಿಂದುಸ್ಥಾನದ ಮುಸಲ್ಮಾನರು ಪಾರತಂತ್ರ್ಯದಲ್ಲಿಳಿದರೆ, ಹೊರಗಿನ ಮುಸಲ್ಮಾನರಿಗಾದರೂ ಆ ಸ್ಥಿತಿಯು ಬಂದೊದಗುವುದೆಂಬದನ್ನು ಲಕ್ಷದಲ್ಲಿಡಬೇಕು. ಇದಕ್ಕೆ ಹಿಂದು ಮುಸಲ್ಮಾನರ ಐಕ್ಯಬೇಕು. ಐಕ್ಯವು ಸ್ವರಾಜ್ಯದ ತಳಹದಿಯು. **ಯಾವ** ಮುಸಲ್ಮಾನನು **ಹಿಂದುವಿನೊಡನೆ ಪ್ರೇಮದಿಂದ** ಬಾಳ ಮಾಡುವದಿಲ್ಲವೋ ಅವನು **ದೇಶದ್ರೋಹಿಯು ಮತ್ತು ಧರ್ಮದ್ರೋಹಿಯು** ಹಿಂದುಮುಸಲ್ಮಾನರು ತಮ್ಮ ತಮ್ಮ ಧರ್ಮದಂತೆ ನಡೆದು, ಒಕ್ಕಟ್ಟಿನ ಹಿಗಿಯಾದ ಬಲದ ಮೇಲೆ ಗಟ್ಟಿಯಾಗಿ ನಿಲ್ಲಬೇಕು ಈಗ ಪರಸ್ಪರರಲ್ಲಿ ವಿರೋಧ ನೆಲೆಸಿರುವುದು ನಿಜ ಆದರೆ ಅದು ಧರ್ಮಮೂಲಕವಲ್ಲ; ರಾಜಕೀಯ ಕಾರಣ ಜನ್ಯವಾದುದು. ಹಿಂದೂ ಜನರು. ತಮ್ಮ ಶುದ್ಧಿ ಮತ್ತು ಸಂಘಟನ ಚಟುವಟಿಕೆಗಳನ್ನು ನಿರಾತಂಕವಾಗಿ ಸಾಗಿಸಬಹುದು. ಅವುಗಳಿಗೆ ರಾಜಕೀಯ ಸ್ವರೂಪವನ್ನು ಕೊಡದೆ, ಸಮಾಜ ಸಂಘಟನೆಯ ವಿಧಾಯಕ ಕಾರ್ಯಕ್ರಮವೆಂದು ಮಾಡಬೇಕು. ಸಂಘಟನದ ಇದೇನು ಹೊಸದಲ್ಲ ಯೋಗ್ಯ ರೀತಿಯಿಂದ ನಡೆಸಿದಲ್ಲಿ ಮುಸಲ್ಮಾನರೇನೂ ಅದಕ್ಕೆ ಅಡ್ಡಿಯನ್ನು ತರುವದಿಲ್ಲ. ಮಹಾತ್ಮರ ಪ್ರೇಮದ ರೀತಿಯು ಎಷ್ಟೋ ಅಂಶದಿಂದ ಆಕಳುಗಳ ಕೊಲೆಯನ್ನು ನಿಲ್ಲಿಸಿದೆ. ಅದರಂತೆ, ನೀವು ಒಬ್ಬರಿಗೊಬ್ಬರ ಅನುಮತಿಯಿಂದ ನಡೆಯಿರಿ. ನನ್ನ ಜೀವು ಚಟುವಟಿಕೆಯಾದರೂ ಸಾಮಾಜಿಕ ವಿದೆ. ತಿಳಿದವರ ಮಾತಿನಂತೆ ನಡೆಯುವದು ಎರಡೂ ಜಾತಿಗಳ ಕರ್ತವ್ಯವು. ಪರಸ್ಪರರ ಸುಖದುಃಖಗಳನ್ನು ನೋಡಿಕೊಂಡು ನಡೆದು, ತಮ್ಮ ಹಿತವನ್ನು ನಾಡಿನ ಹಿತವನ್ನು ಮಾಡುವದು ಜಾಣರಲಕ್ಷಣ

ಮಲ್ನಾಡು ವೀರಶೈವ ಸಭೆಯ ಅಧ್ಯಕ್ಷರಾಗಿದ್ದ ಮ|| ಎಚ್. ಕೆ. ವೀರಬಸಯ್ಯ ಬಿ. ಎ. ಬಿ. ಎಲ್. ಇವರ ಭಾಷಣವು ಎಲ್ಲ ಸಮಾಜದವರಿಗೂ ಹಿತಕರವಿರುವದರಿಂದ ಅದರ ಸಾರವಾದ ಭಾಗವನ್ನು ಇಲ್ಲಿ ಕೊಡುತ್ತೇವೆ.

ನಮ್ಮಲ್ಲಿ ಇತ್ತೀಚಿಗೆ ಕನ್ನಡ ವಿದ್ಯೆಯು ಸಹಾ ಕಮ್ಮಿಯಾಗುತ್ತಾ ಇದೆ. ಇದರ ಅಭಿವೃದ್ಧಿಯಲ್ಲಿ ನಮ್ಮ ಪೂರ್ವಜರು ಎಷ್ಟು ಶ್ರಮಪಟ್ಟು ವೇದೋಪನಿಷತ್ತುಗಳ ಸಾರವನ್ನು ಜನಸಾಮಾನ್ಯಕ್ಕೆ ಸುಲಭವಾಗಿ ತಿಳಿಯುವಂತೆ ತಿಳಿಗನ್ನಡದಲ್ಲಿ ನೂರಾರು ಗ್ರಂಥಗಳನ್ನು ಬರೆದಿರುವದು. ಎಲ್ಲರಿಗೂ ಗೊತ್ತೇ ಇದೆ. ಅದರಲ್ಲಿಯೂ ವಚನಗ್ರಂಥಗಳು ಎಂಥಾ ಅಮೂಲ್ಯವಾದ ವೇದಾಂತರಹಸ್ಯಗಳನ್ನು ಗರ್ಭೀಕರಿಸಿ ಬಹು ರಸಭರಿತವಾಗಿಯೂ ಲಲಿತವಾಗಿಯೂ ಇರುವ ಶಬ್ದಗಳಿಂದ ಬರೆಯಲ್ಪಟ್ಟಿರುತ್ತವೆಂಬುದನ್ನು ಇತರ ಮತಾನುಯಾಯಿಗಳು ಈಗತಾನೇ ಕಣ್ದೆರೆದು ನೋಡಿ ವಿಸ್ಮಯವನ್ನು ಹೊಂದುತ್ತಿರುತ್ತಾರೆ. ಇದರ ಹಬ್ಬುವಿಕೆಯು ಜನ ಸಾಮಾನ್ಯಕ್ಕೆ ಎಷ್ಟು ಅವಶ್ಯಕವೆಂಬುದನ್ನು ಈ ಸಮಾಜಕ್ಕೆ ಮಾತ್ರವೇ ಅಲ್ಲದೆ ಇತರ ಮತಾನುಯಾಯಿಗಳಿಗೂ ಸಹಾ ಅನ್ವಯಿಸುವಷ್ಟು ಉದಾರ ಧರ್ಮದಿಂದ ಬರೆಯಲ್ಪಟ್ಟಿರುತ್ತವೆಂದು ವಿದ್ವಾಂಸರೆಲ್ಲರೂ ಕೊಂಡಾಡುತ್ತಾ ಇರುತ್ತಾರೆ. ಆದ್ದರಿಂದ ಮಾತೃ **ಭಾಷೆಯನ್ನು** ನಮ್ಮಲ್ಲಿ ಹೆಚ್ಚಿಸಿಕೊಂಡು ಇದಕ್ಕೆ ಮೂಲಾಧಾರವಾದ ಸಂಸ್ಕೃತವಿದ್ಯೆಯನ್ನು ನಾವು ಖಂಡಿತವಾಗಿ ಮರೆಯಬಾರದು. ಸರ್ಕಾರಿಯ ನೌಕರಿಗಳನ್ನೇ ಮುಖ್ಯ ಗುರಿಯನ್ನಾಗಿಟ್ಟುಕೊಂಡು ನಮ್ಮವರು ವಿದ್ಯಾಭ್ಯಾಸಮಾಡುವುದಾದರೆ ಇವರ ಕೋರಿಕೆಗಳು ಸಫಲವಾಗುವಷ್ಟು ಸರ್ಕಾರಿಯ ಹುದ್ದೆಗಳು ಇಲ್ಲದೆ ಇದರಿಂದ ಭಗ್ನಮನೋರಥರಾಗಿ ಉತ್ತೇಜನ ಭಂಗವಾಳುವದು ಈ ದುಸ್ಥಿತಿಯು ನಮ್ಮ ತರುಣರಿಗೆ ಒದಗಿದರೆ ಇದರಿಂದ ನಮ್ಮ ಅಭಿವೃದ್ಧಿಗೆ ಎಷ್ಟು ಅನರ್ಥವೆಂದು ನಾನು ಹೇಳಬೇಕಾಗಿಲ್ಲ. ನಮ್ಮಲ್ಲಿ ವಿದ್ಯಾವಂತರಾದವರು ವ್ಯಾಪಾರ, ಕೃಷಿ, ಕೈಗಾರಿಕೆ ಮುಂತಾದ ಕಸಬುಗಳನ್ನು ಕೈಕೊಳ್ಳದಿದ್ದರೆ ಬಹಳ ಜಾಗ್ರತೆಯಾಗಿ ಬಡಬಗ್ಗರಾಗಿ ಯಾವ ಕೌಶಲವನ್ನೂ ಪಡೆಯಲು ಅಸಮರ್ಥರಾಗುವುದಲ್ಲದೆ ಜನವರ್ಗದಲ್ಲಿ ತುಂಬಾ ಹಿಂದುಳಿದು ಅಗಣ್ಯರಾಗುತ್ತಾರೆ.

ಧಾರವಾಡ ಜಿಲ್ಲಾ

ಕುರುಬರ ೧ನೇ ಪರಿಷತ್ತು.

ದೇವಿಹೊಸೂರ.

— ❧ —

ಸಭಾಧ್ಯಕ್ಷರಾದ ಶ್ರೀ. ಕೃಷ್ಣರಡ್ಡಿ ಬಿ ಭದ್ರಾಪುರ, ಎಮ್. ಎ. ಇವರು ತಾ|| ೧೨-೬-೧೯೩೬ ನೇ ದಿವಸ ಮಾಡಿದ ಭಾಷಣವು.

ಸಭ್ಯಗೃಹಸ್ಥರೇ! ಹಾಲುಮತದ ಬಂಧುಭಗಿನಿಯರೇ!!

ಹಿಂದುಳಿದ ಮತ್ತು ಮುಂದಾದ ಸಮಾಜಗಳು

ಈಗಿನ ರಾಜಕೀಯ ಕಾರಣಗಳಿಂದ ಹಿಂದುಳಿದ ಮತ್ತು ಮುಂದೊರೆದ ಸಮಾಜಗಳೆಂದು ಭೇದ ಮಾಡುವದೂ ಒತ್ತಿ ಹೇಳುವದೂ ಹಗಲಿರಳು ನಮ್ಮ ದೃಷ್ಟಿಗೆ ಬೀಳುತ್ತದೆ ಇವು ನಮ್ಮಲ್ಲಿ ಬಹು ದಿವಸದಿಂದ ನಡೆದುಬಂದ ಮತ್ತು ನಮ್ಮ ರಕ್ತ ಮಾಂಸಗಳಲ್ಲಿ ಭೇದಿಸಿಕೊಂಡ ಜಾತಿಯೆಂಬ ಕೃತ್ರಿಮ ಮತ್ತು ಅನ್ಯಾಯದ ಸಂಸ್ಥೆಯ ಪರಿಣಾಮಗಳಾಗಿ ಕೆಲವು ಸಮಾಜಗಳು ವಿದ್ಯಾ ಬುದ್ಧಿಗಳಲ್ಲಿಯೂ, ಸುಖ ಸೌಕರ್ಯಗಳಲ್ಲಿಯೂ ಕೀಲಾ ಇತ್ತಿರುತ್ತವೆ. ಬಹು ಸಂಖ್ಯಾಕ ಜನಗಳು ಅಜ್ಞಾನ, ಮೌಢ್ಯ ದಾರಿದ್ರ್ಯ ಮೊದಲಾದ ಹೀನ ಸ್ಥಿತಿಯಲ್ಲಿ ಬಿದ್ದುಕೊಂಡು ಬಳಲುತ್ತಲಿವೆ. ಈ ಬಹುಜನ ಸಮಾಜಗಳು ಮುಂದೊರೆಯದ ಹೊರತು ನಮ್ಮ ದೇಶದ ಭಾಗ್ಯವು ಎಂದೂ ತೆರೆಯಲಾರದು ಪ್ರತಿಯೊಂದು ರಾಷ್ಟ್ರದ ಆಧಾರ ಸ್ತಂಭಗಳು ಅದರ ಜನತೆಯೇ ಆಗಿರುವದರಿಂದ ಎಲ್ಲಿಯ ವರೆಗೆ ಆ ಜನತೆಯು ನಿರಕ್ಷರಿಯೂ, ಅಜ್ಞಾನಿಯೂ, ಮೂಢವೂ ಆಗಿ ಉಳಿಯುವದೋ ಅಲ್ಲಿಯ ವರೆಗೆ ಆ ರಾಷ್ಟ್ರವು ಕೊಳೆತ ಮತ್ತು ಹುಳಹತ್ತಿದ ಕಟ್ಟಿಗೆಯ ಸ್ತಂಭಗಳ ಮೇಲೆ ಕಟ್ಟಿದ ಮನೆಯಂತಾಗಿರುವದು. ಯಾವಾಗ್ಗೆ ಆ ಮನೆಯು ಕಳಚಿ ಬೀಳಬಹುದೆಂಬದರ ನೇಮವೇ ಇಲ್ಲ ಅದು ಬಿದ್ದಾಗ ಅದರಲ್ಲಿ ಸುಖ ಸಂಪತ್ತುಗಳಿಂದ ಮೆರೆಯುವ ಮುಂದೊರೆದ ಸಮಾಜಗಳಿಗೆ ಸಹ ಘಾತವನ್ನು ಮಾಡದೆ ಬಿಡಲಾರದು ಇದನ್ನರಿತುಕೊಂಡು ಪ್ರತಿಯೊಂದು ಮುಂದೊರೆದ ಸಮಾಜದವನು ಹಿಂದುಳಿದ ಸಮಾಜಗಳನ್ನು ಬಲಪಡಿಸಲಿಕ್ಕೆ ಪ್ರಯತ್ನಿಸತಕ್ಕದ್ದು. ಮತ್ತು ಇದರಲ್ಲಿ ಅವನ ಹಿತವೇ ಅದೆಯೆಂದು ಒಡೆದು ಹೇಳಬೇಕಾಗಿಲ್ಲ. ಬಹು ಜನಗಳ ರೋಗಗಳು ಮಹಾ ಅಂಟುರೋಗಗಳಾಗಿರುವವು. ಅವರ ಹೆಡ್ಡತನವೂ, ವಿದ್ಯಾವಿಹೀನತೆಯೂ, ಮುಂದೊರೆದವರ ಮೇಲೆ ಅನರ್ಥವಾಗಿ ಪರಿಣಮಿಸದೆ ಹೋಗಲಾರವು ಹೊಲಗೇರಿ ಇರುವ ವರೆಗೆ ಹೊಲಗೇರಿಯ ರೋಗ ಬೇಡೆಂದರೆ ನಡೆಯಲಾರದು ಹೊಲಗೇರಿಯನ್ನು ಬಿಟ್ಟ ಹಾಗೆ ಮಾಡುವದೇ ಉತ್ತಮ ಉಪಾಯವು ಹಿಂದುಳಿದ ಸಮಾಜಗಳು ಮುಂದೊರೆಯಲಿಕ್ಕೆ ಸ್ವಾವಲಂಬನ ಮಂತ್ರವನ್ನು ಜಪಿಸತಕ್ಕದ್ದು ಅವರ ಕ್ಷೇಮವು ಅವರ ಪ್ರಯತ್ನದ ಮೇಲೆ ಅವಲಂಬಿಸಿರುವದು ಮುಂದೊರೆದ ಸಮಾಜಗಳು ಅವರಿಗೆ ಕೈಕೊಟ್ಟು ಮೇಲೆ ಎಬ್ಬಿಸಿಕೊಳ್ಳುವಾಗ್ಗೆ ಹಿಂದುಳಿದ ಸಮಾಜಗಳು ಹಿಂದಕ್ಕೆ ಎಳೆಯ ಹತ್ತಿದಲ್ಲಿ ಹೀಗೆ ಮಾಡಿದರೆ ಅವರೀರ್ವರೂ ತಪ್ಪಿಯ ಮಗ್ಗುಲಲ್ಲಿ ಬಿದ್ದು ಕೊಳೆಯುವರೆಂಬದಕ್ಕೆ ಸಂದೇಹವಿಲ್ಲ ಹಿಂದುಳಿದ ಸಮಾಜಗಳು ಸಂಕೋಚವನ್ನು ಕೊಟ್ಟು ಚಟ್ಟನೆ ಎರಿ ಮೇಲೆ ಬರಲಿಕ್ಕೆ ಸ್ಫೂರ್ತಿಯಿಂದ ಪ್ರಯತ್ನಿಸಬೇಕು. ಹೀಗೆ ಮಾಡುವದರಿಂದ ಇಬ್ಬರೂ ಪರಸ್ಪರರು ನೀವ ಸಲ್ಲಿಯನ್ನು ಮಾಡಿಕೊಳ್ಳುವದರಲ್ಲಿ ಎರಡನೆಯ ಎಲ್ಲ ಸಮಾಜಗಳ ಕೂಡ ಬಂಧುತ್ವದಿಂದಲೂ ಪ್ರೇಮದಿಂದಲೂ ನಡೆದುಕೊಳ್ಳಬೇಕು ಯಾರ ಸಂಗಡಲೂ ವೈಮನಸ್ಸನ್ನೂ ಕಲಹವನ್ನೂ ಬೆಳಸತಕ್ಕದ್ದಲ್ಲ ನಿಮ್ಮ ಹಿತಾಹಿತಗಳು ಎರಡನೇ ಸಮಾಜಗಳ ಹಿತಾಹಿತಗಳ ಮೇಲೆ ಅವಲಂಬಿಸಿರುವವೆಂಬದನ್ನು ಮರೆಯತಕ್ಕದ್ದಲ್ಲ.

ಸಮಾಜ ಪರಿಷ್ಕರಣವು.

ನಿಮ್ಮ ಸಮಾಜದಲ್ಲಿ ನೆಲೆಗೊಂಡ ದುರ್ನಡತೆಗಳನ್ನೂ ಅಶುದ್ಧ ಆಚಾರ ವಿಚಾರಗಳನ್ನೂ ತೆಗೆದು ಹಾಕಲಿಕ್ಕೆಬೇಕು ಬಾಲವಿವಾಹ, ಧಾರ್ಮಿಕ ಮೂಢತನ, ಮದ್ಯಪಾನ, ಮಾಂಸಾಹಾರ, ಕದವು ಮೊದಲಾದ ಹುಳಗಳು ನಿಮ್ಮ ಸಮಾಜಕ್ಕೆ ಉಳಿದ ಎಲ್ಲ ಹಿಂದುಳಿದ ಸಮಾಜಗಳಂತೆ ಅಂಟಿಕೊಂಡಿರುವವು. ಅವು ಅದರ ರಕ್ತವನ್ನು ಹೀರುತ್ತವೆ. ಇವುಗಳನ್ನು ಕಿತ್ತಿ ಹಾಕಲಿಕ್ಕೇಬೇಕು.

ವಿದ್ಯಾ ಬುದ್ಧಿಗಳು.

“ಕುರುಬ” ಈ ಶಬ್ದವನ್ನು ಹೆಡ್ಡತನ ಅರ್ಥದಲ್ಲಿ ಉಪಯೋಗಿಸುವ ಪರಿಪಾಠವುಂಟು. ಇದರ ಮೇಲಿಂದ ನಿಮ್ಮ ಸಮಾಜದಲ್ಲಿ ಹೆಡ್ಡತನವು ಎಷ್ಟು ನಿಬಿಡವಾಗಿ ಮನೆ ಮಾಡಿಕೊಂಡಿರುವದೆಂಬದು ಕಂಡು ಬರುವದು ಹೆಡ್ಡತನವನ್ನು ದೂಡಿ ಬುದ್ಧಿಯ ಕಾಸಕ್ಕೆ ವಿದ್ಯೆಯು ಮೊದಲನೇ ಸಾಧನವು ಈಗಿನ ಪರಿಸ್ಥಿತಿಯಲ್ಲಿ ವಿದ್ಯೆಯನ್ನು ಸಂಪಾದಿಸಬೇಕಾದರೆ ಅದಕ್ಕೆ ಹಣವನ್ನು ವೆಚ್ಚ ಮಾಡಬೇಕಾಗುವದು. ಇದರಿಂದ ಬಡಮಕ್ಕಳಿಗೆ ವಿದ್ಯೆ ದೊರೆಯುವದು ಕಠಿಣವಾಗಿದೆ. ಇಂಥ ಮಕ್ಕಳ ವಿದ್ಯಾಬೆಳೆಯ ಸಲುವಾಗಿ ಶ್ರೀಮಂತರು ಉದಾರ ಹಸ್ತದಿಂದ ಸಹಾಯ ಮಾಡಿ ವಿದ್ಯಾವರ್ಧಕ ನಿಧಿಗಳನ್ನು ಸ್ಥಾಪಿಸತಕ್ಕದ್ದು. ಧಾರವಾಡ ಮೊದಲಾದ ವಿದ್ಯಾವರ್ಧಕ ಕೇಂದ್ರ ಸ್ಥಾನಗಳಲ್ಲಿ ನಿಮ್ಮ ವಿದ್ಯಾರ್ಥಿಗಳ ಗೋಸ್ಕರ ವಸತಿ ಗೃಹಗಳನ್ನು ಏರ್ಪಡಿಸತಕ್ಕದ್ದು. ಇವೇ ಮೊದಲಾದ ಉಪಾಯಗಳಿಂದ ನಿಮ್ಮ ಸಮಾಜದ ವಿದ್ಯಾಭಿವೃದ್ಧಿಯನ್ನು ಪ್ರೋತ್ಸಾಹಿಸತಕ್ಕದ್ದು. ನಿಮ್ಮ ಸಮಾಜದ ಉತ್ಕರ್ಷಕ್ಕೆ ಮಾಡಬೇಕಾದ ಅನೇಕ ಉಪಾಯಗಳಲ್ಲಿ ವಿದ್ಯಾಭಿವೃದ್ಧಿಯು ಮೊದಲನೇ ಸ್ಥಾನವನ್ನು ಆಕ್ರಮಿಸುತ್ತದೆ.

ಕೆ. ಬಿ ಭದ್ರಾಪುರ ಎಮ್. ಎ.

ಬಾಗಲಕೋಟೆಯ ಮ್ಯುನಿಸಿಪಾಲಿಟಿಯ ೧ ನೇ ವಾರ್ಡಿನ ಎಲ್ಲ ಮತದಾರರಿಗೆ ವಿಜ್ಞಾಪನೆಯು

ಸ್ವಾಮೀ,

ಇದೇ ಅಗಸ್ಟ ತಿಂಗಳ ೨ನೇ ತಾರೀಖಿನ ದಿವಸ ತಿರುಗತಕ್ಕ ಮ್ಯುನಿಸಿಪಾಲಿಟಿಯ ಚುನಾವಣಿಗೆ ೧ ನೇ ವಾರ್ಡಿನ ಪತಿಯಿಂದ ನಾನೊಬ್ಬ ಉಮೇದವಾರನಿದ್ದೇನೆ ಈಗಿನ ಚುನಾವಣಿಯ ಪದ್ಧತಿ ಎಂದರೆ ಉಮೆದವಾರರು ಮತದಾರರ ಮನೆ ಮನೆಗೆ ಮುಟ್ಟಿ ಜರಿಯುವಂತೆ ಓಡಾಡುವದು, ಹಣ ಮೊದಲಾದ ಆಶೆಯನ್ನು ತೋರಿಸುವದು. ಗುಡಿ ಗುಂಡಾರಗಳನ್ನು ಕಟ್ಟಿಸಿಕೊಡುವೆವೆಂದು ಹೇಳುವರು ಚುನಾವಣೆಯ ದಿವಸ ಟಾಂಗಾ ಮೋಟರ ಗಾಡಿಗಳನ್ನು ಓಡಾಡಿಸುವದು, ಚಹಾ, ಕಾಫಿ ಫರಾಳ, ಮೊದಲಾದವುಗಳಲ್ಲಿ ಹಣವನ್ನು ಹಾಳುಮಾಡುವದು, ಮುಂತಾದದ್ದು ಇರುವದು. ಆದರೆ ಸಾರ್ವಜನಿಕ ಸೇವೆಯಲ್ಲಿ ಸದಾ ತತ್ಪರರಾಗಿ ಮ್ಯುನಿಸಿಪಾಲಿಟಿಯ ಕಾರ್ಯವನ್ನು ನಿರ್ಭಿಡೆಯಿಂದಲೂ, ನಿಷ್ಪಕ್ಷಪಾತದಿಂದಲೂ ಮಾಡುವಂಥ ಉಮೇದವಾರರನ್ನು ಆರಿಸುವದೇ ನಿಜವಾದ ಚುನಾವಣೆಯು ಈ ಮಾದರಿಯ ಚುನಾವಣಿಯನ್ನು ಪ್ರಚಾರದಲ್ಲಿ ತರುವ ಉದ್ದೇಶದಿಂದ ನಾನು ಉಮೇದವಾರನಾಗಿ ನಿಂತಿರುವೆನು. ನನ್ನಿಂದ ಈ ಕಾರ್ಯವು ಆಗುವದೆಂದು ತಮಗೆ ಕಂಡು ಬಂದಲ್ಲಿ ತಾವು ತಮ್ಮ ಮತಗಳನ್ನು ನನಗೆ ಕೊಟ್ಟು ನನ್ನನ್ನು ಆರಿಸಿ ಕೊಟ್ಟರೆ ನನ್ನ ಕೈಲಾದ ಮಟ್ಟಿಗೆ ತಮ್ಮ ಸೇವೆಯನ್ನು ಮೇಲಿನ ತತ್ವಕ್ಕನುಸರಿಸಿ ಮಾಡಲು ಸಿದ್ಧನಿರುವೆನು.

ತಮ್ಮ,

ತಮಣಾಚಾರ್ಯ ಬಂಡಾಚಾರ್ಯ

ಪುರೋಹಿತ.

ರಂಗಭೂಮಿ.

ನಾನು ರಂಗಭೂಮಿಯ ಬಗ್ಗೆ ಬರೆದುದಕ್ಕೆ ಸಮಾಧಾನವನ್ನು ಶ್ರೀ ಶ್ರೀನಿವಾಸರಾಯರು ಹೇಳಿ ಬಹಳ ದಿನಗಳಾದವು. ಅಷ್ಟರಲ್ಲೇ ಬೆಂಗಳೂರಿನ ಯಾರೋ ಕೃಷ್ಣರಾಯರು ಇದೇ ಮಾತಿಗಾಗಿ ತಮ್ಮ ಅಭಿಪ್ರಾಯ ತಿಳಿಸುವ ಒಂದು ಲೇಖನವನ್ನು ಬರೆದಿದ್ದಾರೆ. ಇರಲಿ

ಶ್ರೀನಿವಾಸರಾಯರ ಬರಹದಲ್ಲಿ— ನಮ್ಮ ಅನುಭವಕ್ಕೆ ನಮ್ಮ ಮನಸ್ಸಿನ ದೌರ್ಬಲ್ಯವೇ ಕಾರಣ ಎನಬಹುದೆಂಬುದನ್ನು ಬಿಟ್ಟರೆ ಉಳಿದಷ್ಟೆಲ್ಲ ಹಾಡಿದ ಹಾಡೇ. ಈ ಅನುಭವವು ಕೇವಲ ನನ್ನ ದೊಬ್ಬನದಲ್ಲದೆ ಅನೇಕ ಮಂದಿಯದು ಎಂಬುದನ್ನು ಗಮನಿಸಿದ್ದರೆ ಈ ಸಾಹಸದ ನಿರ್ಧಾರಕ್ಕೆ ಅವರು ಎಡೆ ಮಾಡುತ್ತಿರಲಿಲ್ಲವೆಂದು ನನ್ನ ನಂಬಿಗೆ

ಇನ್ನು ಅವರ ಸಮಾಧಾನಗಳೆಂದರೆ ಎರಡು ಒಂದು ಹಿರಿಯರ ನುಡಿ; ಇನ್ನೊಂದು ಇಂದಿನವರ ಬಯಕೆ ಹಿರಿಯರ ನುಡಿಯೆಂದ ಮಾತ್ರಕ್ಕೇ ಸಮರ್ಥನ ಮಾಡಿದಂತಾಗುವದಿಲ್ಲ. ಹಿರಿಯರ ಹಾದಿ ಸಮಾಗೆ ಈಗ ಯಾವ ಕಾರಣದಿಂದಲೇ ಆಗಲಿ ಪ್ರಗತಿ ಪ್ರತಿಬಂಧಕವಾದರೆ ಆ ಹಾದಿಯನ್ನು ಅನುಸರಿಸದಿರುವುದೇ ಒಳ್ಳೆಯದೆಂಬುದು ನನ್ನ ಮತ. ಅಲ್ಲದೆ ಶ್ರೀನಿವಾಸರಾಯರು ಉದಹರಿಸಿರುವ ಸಂಸ್ಕೃತ ವಾಕ್ಯವು ಅವರು ಬರೆದಿರುವ ಅರ್ಥವನ್ನು ಕೊಡದೆ, ಸ್ವಲ್ಪ ಭಿನ್ನ ತತ್ತ್ವ ಅವಿರೋಧವಾದ ಅರ್ಥವನ್ನು ಕೊಡುತ್ತದೆಂದು ಸಂಸ್ಕೃತ ಪಂಡಿತರು ಹೇಳಿದರು. ನನಗೆ ಸಂಸ್ಕೃತ ತಿಳಿಯದುದರಿಂದ ಯಾವ ಅರ್ಥವು ಸರಿಯೋ ತಿಳಿಯದು. ನಾಟಕ ಸಂಸ್ಥೆಯು ಪುರಾತನವಿದ್ದಂತೆಯೇ ನಾಟಕದ ಅಪಪ್ರಥೆಯೂ ಪುರಾತನವಿದ್ದಂತಿದೆ. ನಟರೊಡನೆ ಒಂದೇ ಪಂಕ್ತಿಯಲ್ಲಿ ಊಟ ಮಾಡಬಾರದೆಂದು ಕೂಡ ಒಂದು ಶಾಸ್ತ್ರವಿದೆಯಂತೆ! ಇನ್ನು ಇಂದಿನ ಬಯಕೆ ಬರಿಯ ಕನಸು ಭಾವನೆಯ ಗಗನದಲ್ಲಿ ಕಟ್ಟಿದ ಮಾಟಾದ ಮೂರ್ತಿ ಅಂತೇ ಅದನ್ನು ಸತ್ಯವೆನ್ನಲಿಕ್ಕೆ ಈಗಲೇ ಬರುವಂತಿಲ್ಲ, ಎಲ್ಲವೂ ಸುಧಾರಿಸಿದರೆ, ಸಾತ್ವಿಕಭಾವ ಪ್ರೇರಿತರಾಗಿ ನಟರು ಸತ್ಯಸಂಧರಾದರೆ, ನಟರೂ ನಾಟಕಗಳೂ ಉಚ್ಚ ತರಗತಿಯವರಾದರೆ ಎಂಬವೆಲ್ಲದೆಗಳು ನಾನು ಹೀಗೆ ಒಮ್ಮೆ ಹೆಚ್ಚು ಕಡಿಮೆ ಇದೇ ಪ್ರಶ್ನೆಯನ್ನು 'ಟೊಣ್ಣಗಟ್ಟಿಯ' ಗುಂಡೂರಾಯರನ್ನು ಕೇಳಿದ್ದೆ. ಆತನ ಉತ್ತರ ಇನ್ನೂ ನೆನಪಿದೆ. 'ರೆ-ರೆ-ನಮ್ಮಾಗತ್ತೆಗೆ ಮೀಸೆ ಬಂದರೆ ಚಿಕ್ಕಪ್ಪ ಎಂತ ಕರೆಯಬಹುದು', ಎಂದ ಆ ಉತ್ತರವು ಆಗ ನನ್ನ ಮನಸಿಗೆ ಎಷ್ಟೋ ಸಮಾಧಾನವೆನಿಸಿತ್ತು.

ಇದಕ್ಕೆಂದೇ ಅವರು ಚೀನಾದೇಶದ ಉದಾಹರಣೆ ಕೊಟ್ಟಿದ್ದಾರೆ. ಮಾಡರ್ನರಿವ್ಯೂ ದೊರೆತಾಗ (ಹಳ್ಳಿಯಲ್ಲಿರುವುದರಿಂದ ನನಗೆ ಅನುಕೂಲವಿಲ್ಲ) ಶಿರಸಾವಹಿಸಿ ಓದುತ್ತೇನೆ. ಆದರೆ, ದೂರದ ಬೆಟ್ಟ ಕಣ್ಣಿಗೆ ನುಣ್ಣಗೆ ಎಂಬುದು ನನ್ನ ನಂಬಿಗೆ. ಪಶುಹತ್ಯೆಯನ್ನು ನಿಷೇಧಿಸಿ ರಾಜರ್ಷಿಯೆಂಬ ನಾಮವೆಲ್ಲನ್ನ Sacrifice (ಪಶುಬಲಿ) ಎಂಬ ನಾಟಕವನ್ನೂ ಬರೆದು, ರಾಜರ್ಷಿಯೊಳಗಿನ ಹಾಸಿ, ಧ್ರುವ, ಮಹಾರಾಜರಂಥ ಕರುಣ ಮೂರ್ತಿಗಳನ್ನು ಜಗತ್ತಿಗೆ ಕೊಟ್ಟ ರವೀಂದ್ರನಾಥನೂ ಮಾಂಸಾಹಾರಿಯೆಂದು ಮೊನ್ನೆ ಮೊನ್ನೆ ಶಾಂತಿನಿಕೇತನದಲ್ಲಿರುವ ನಮ್ಮವರಿಂದ ನನಗೆ ಸುದ್ದಿ ಬಂದ ಮೇಲಂತೂ ನನ್ನ ನಂಬಿಗೆಯು ಮತ್ತಷ್ಟು ದೃಢವಾಗಿದೆ. ಇದು ಹೇಗಾದರೂ ಇರಲಿ. ನಮ್ಮ ಪಟ್ಟ ಮಂದಿ ನಟರಿದ್ದ ಚೀನಾ ದೇಶದವನ್ನು ಉದಾಹರಣೆಗಾಗಿ ಹೇಳಬೇಕಾಗಿ ಬಂದದು ಶ್ರೀನಿವಾಸರಾಯರಿಗೆ ಸಂಕಟವೆನಿಸಿರಲಿಕ್ಕಿಲ್ಲವೇನು ?

ನನ್ನ ಅನುಭವವೇ ಸತ್ಯವೆಂದಾಗಲಿ, ಅದೇ ಸಿದ್ಧಾಂತವೆಂದಾಗಲಿ ಹಠಹಿಡಿಯುವುದು ನನ್ನ ಮತವಲ್ಲ ಶ್ರೀನಿವಾಸರಾಯರ ಅಭಿಪ್ರಾಯವು ತಪ್ಪೆನ್ನುವದೂ ನನ್ನ ಮತವಲ್ಲ. ಆದರೆ ಇಷ್ಟು ಮಾತ್ರ ನನ್ನ ವಿಶ್ವಾಸ— ರಂಗಭೂಮಿಯನ್ನು ಬಹಿಷ್ಕರಿಸುವುದೇ ನಮ್ಮೆಲ್ಲರಿಗೆ ಕ್ಷೇಮವುಂಟು ಮಾಡಿತೆಂದು

ಇನ್ನು ಕೃಷ್ಣರಾಯರ ಲೇಖನದಲ್ಲಿರುವುದಾದರೂ ಇಷ್ಟೇ ; ಹೆಚ್ಚೇನೂ ಇಲ್ಲ. ಆದರೆ ಅವರು ಹಾವಿನ ಹಲ್ಲನ್ನಾದರೂ ಕಳಚಬಲ್ಲ ಧೀರರಾದುದರಿಂದ ಉರಿಗಣ್ಣಿನಿಂದಲೇ ನನ್ನನ್ನು ನೋಡಿದ್ದಾರೆ. ಸಾಲದುದಕ್ಕೆ ಅವರ ಲೇಖನದಲ್ಲಿ ಅಶ್ಲೀಲತೆಯೂ ಅಸಹನೆಯೂ ತಲೆ ಹಾಕಿವೆ ಭಿನ್ನರುಚಿಗೆ ಭಿನ್ನತ್ವವು ಎಂದೂ ಮನಸಿಗೆ ಸಂದೋದಲಾರದು. ಅಂತೇ ಕೃಷ್ಣರಾಯರ ಲೇಖಕ್ಕೆ ಬದಲು ಬರೆಯುವ ಚಪಲವನ್ನು ತಡೆದಿದ್ದೇನೆ. ಅಲ್ಲದೆ ಇಂಥ ಇಕ್ಕಟ್ಟಿನ ವಾದಕ್ಕೆ ಸಲ್ಪ ವ್ಯಕ್ತಿಪರಿಚಯವೂ ಅವಶ್ಯಕವೆಂದೇ ನನಗನಿಸುತ್ತದೆ.

ಆದರೆ ಕೃಷ್ಣರಾಯರ ಒಂದು ಪ್ರಶ್ನೆಗೆ ಮಾತ್ರ ಉತ್ತರ ಹೇಳುವೆನಂತೆ ಅದೇ ಬಹಳ ದಿನ ನನ್ನ ಪ್ರಶ್ನೆಯೂ ಆಗಿತ್ತು; ನನ್ನ ವಾದದ ತಳಹದಿಯಾಗಿತ್ತು. ಅದಕ್ಕೆ ಉತ್ತರ ಬಹಳ ದಿನದ ಮೇಲೆ ತಿಳಿಯಿತು ನಾಟ್ಯರಂಗದಿಂದ ವಿಕಾರವು ಜೀವನ ರಂಗಕ್ಕೆ ಹಾರಿದರೆ, ಹಾಗೆಯೇ ಭಕ್ತಿ ವೈರಾಗ್ಯಗಳು ಹಾರಬಾರದೇ ? ನಿಜ; ಹಾರಬಹುದು ಆದರೆ ಜನಸಾಮಾನ್ಯಕ್ಕೆ ಇಂದ್ರಿಯಗಳೂ ಇಂದ್ರಿಯೇಚ್ಛೆಯೂ ಸಹಜ, ಭಕ್ತಿಜ್ಞಾನಾದಿಗಳು ಅಭ್ಯಾಸಜನ್ಯ. ಮನಸ್ಸಿಗೆ ಚಂಚಲತೆಯೇ ಪ್ರಿಯವಲ್ಲದೆ, ಸ್ವಭಾವತಃ ಸ್ಥಿರವಾದ ಭಕ್ತಿ ವೈರಾಗ್ಯಾದಿಗಳಂಥವಲ್ಲ. ಸಹಜದಲ್ಲಿ ಆಸಕ್ತಿಯನ್ನು ತುಂಬಿದರೆ ಅದೇ ಸ್ವಭಾವವಾಗುತ್ತದೆ. ಆದುದರಿಂದ ಸಹಜ ದೌರ್ಬಲ್ಯಗಳನ್ನು ತಿರಸ್ಕರಿಸಿ, ಸುಗುಣವನ್ನು ಹೆಚ್ಚಿಸುವದರಲ್ಲಿ ಆಸಕ್ತಿ ತುಂಬುವುದೇ ಉತ್ತಮ ಸ್ವಭಾವ ಸಾಧನೆಯ ಹಾದಿ.

ಕಾಮಏಷಃ ಕ್ರೋಧಏಷಃ ರಜೋಗುಣ ಸಮುದ್ಭವಃ ।
ಮಹಾಶನೋ ಮಹಾಪಾಪ್ಮಾ ವಿದ್ಧ್ಯೇನ ಮಿಹವೈರಿಣಮ್ ॥
ಧೂಮೇನಾವ್ರಿಯತೇ ವಹ್ನಿರ್ಯಥಾದರ್ಶೋ ಮಲೇನ ಚ ।
ಯಥೋಲ್ಬೇನಾವೃತೋಗರ್ಭಸ್ತಥಾ ತೇನೇದ ಮಾವೃತಂ ॥
ವಿಷಯಾ ವಿನಿವರ್ತಂತೇ ನಿರಾಹಾರಸ್ಯ ದೇಹಿನಃ ।
ರಸವರ್ಜಂ ರಸೋಽಪ್ಯಸ್ಯ ಪರಂದೃಷ್ಟ್ವಾ ನಿವರ್ತತೇ ॥

ಈ ಶ್ಲೋಕಗಳೇ ನನಗೆ ಉತ್ತರ ಕೊಟ್ಟವು. ಅಂತೇ ಅವನ್ನು ಬರೆದಿರುವೆ.

ಮನಸ್ಸು ಬಿಳೀ ಬಟ್ಟೆಯಿದ್ದಂತೆ. ಬಣ್ಣ ಹಾಕಿದರೆ ಕೆಲವು ಬಣ್ಣಗಳು ನಿಲ್ಲುತ್ತವೆ. ಕೆಲವು ಹೋಗುತ್ತವೆ. ನಿಲ್ಲುವ ಬಣ್ಣಗಳಲ್ಲಿ ಹೆಸರಾದದು ಕರಿಯಬಣ್ಣ— ಹಾಗೇ ಕುಸಂಸ್ಕಾರವು ನಾಟಿಕೊಳ್ಳುವಂತೆ ಸುಗುಣವು ನಾಟುವದಿಲ್ಲೆಂದು ಹಿರಿಯರು ಹೇಳುವ ರೂಢಿ

ಇನ್ನುಳಿದುದು ಒಂದು ಮಾತು ನೋಡುವ ಜನರ ಮೇಲೆ ನಾಟಕದ ಪರಿಣಾಮವೆಂಥದು ಎಂದು ಮೊನ್ನೆ ಶ್ರೀ ಹಣಮಂತಗೌಡರನ್ನು ಹೊಸಪೇಟೆಯಲ್ಲಿ, ಭೆಟ್ಟಿಯಾದಾಗ ಕೇಳಿದೆ. ನೋಡುವವರ ಮೇಲಿನ ಪರಿಣಾಮದ ಸುದ್ದಿ ಹೇಳಲಿಕ್ಕೆ ನನಗೆ ಶಕ್ಯವಿಲ್ಲ. ಆದರೆ ಆಡುವವರ ಪರಿಣಾಮ ಮಾತ್ರ ಶೋಚನೀಯ ಎಂದರು ಯಾಕೆ ಹಾಗೆ ಎಂದು ಕೇಳುವಷ್ಟು ವೇಳೆ ನನಗೆ ಆಗ ಉಳಿದಿರಲಿಲ್ಲ. ಆದರೂ ಶ್ರೀ. ಗೌಡರ ಮಾತಿನಲ್ಲಿ ತಥ್ಯವಿದೆ ಅವರೂ ಬಹಳಕಾಲ ನಾಟಕದಲ್ಲಿ ದುಡಿದು ನುಚ್ಚಾದವರು.

ನನ್ನ ಕಡೆಯ ಮಾತೆಂದರೆ, ರಂಗಭೂಮಿಯಿಂದ ಜನ ಜೀವಿತಕ್ಕೆ ಸುಖವೇ, ದುಃಖವೇ ಎಂಬ ಪ್ರಶ್ನೆಯ ಉತ್ತರಾನ್ವೇಷಣೆಯಲ್ಲಿ ನನ್ನದೂ ಒಂದು ಉತ್ತರ. ಆದರೆ ನನ್ನ ಉತ್ತರಕ್ಕೆ ಮನೋದೌರ್ಬಲ್ಯವು ಕಾರಣವಿರದೆ ನಿದಾನ, ನಿರೀಕ್ಷಣೆಗಳು ಕಾರಣವೆಂಬುದನ್ನು ಮಾತ್ರ ಬಿನ್ನವಿಸಿ ವಿರಮಿಸುತ್ತೇನೆ.

This is a confession; hence an appeal and So a protest.

ಕನ್ನಡಿಗರಡಿಯಾಳು
ಕೃಷ್ಣಶರ್ಮ

ಧಾರವಾಡ ಜಿಲ್ಲಾ
ಕುರುಬರ ೧ನೇ ಪರಿಷತ್ತು.
ದೇವೀಹೊಸೂರ.

ಸ್ವಾಗತ ಮಂಡಲದ ಅಧ್ಯಕ್ಷರಾದ ಶ್ರೀಯುತ ಭರಮಗೌಡ ನೀಲನಗೌಡ ಮುದಿಗೌಡರ ಇವರು ತಾ॥ ೧೨-೬-೨೬ ನೇ ದಿವಸ ಮಾಡಿದ ಸ್ವಾಗತಪರ ಭಾಷಣವು.

ನನ್ನ ಪ್ರಿಯ ಹಾಲುಮತ ಬಂಧುಭಗಿನಿಯರೇ ಮತ್ತು ಸಭ್ಯಗೃಹಸ್ಥರೇ!,

ನಮ್ಮ ಅಧ್ಯಕ್ಷರು

ಸಭಾಸದರೇ! ಮೇಹರ್ಬಾನ ಭದ್ರಾಪೂರ ಸಾಹೇಬರು ನಮ್ಮ ಸಮಾಜಕ್ಕಾಗಿ ಕಲ್ಯಾಣ ಮಾಡಿದ ಸಂಗತಿಯು ಹಾಲುಮತ ಇತಿಹಾಸದಲ್ಲಿ ಸುವರ್ಣಾಕ್ಷರಗಳಿಂದ ಬರೆಯುವಷ್ಟು ಮಹತ್ವದ್ದಾಗಿದೆ ಸಾಹೇಬರು ತಮ್ಮ ಭಾಗದಲ್ಲಿ ನಮ್ಮ ಜನರಿಗೆ ವಿದ್ಯಾಭಿವೃದ್ಧಿಗಾಗಿ ವ್ಯಾಖ್ಯಾನ ಭಾಷಣಗಳ ದ್ವಾರ ಪ್ರೋತ್ಸಾಹ ಕೊಟ್ಟು ಕರ್ನಾಟಕ ಕುರುಬರ ಸಂಘಕ್ಕೆ ಬಹಳ ಫಂಡು ಕೂಡಿಸಿ ಕೊಟ್ಟಿರುವಿರಲ್ಲದೆ ನಮ್ಮ ಜನರಿಗೆ ಕೆಲವು ಕಡೆಯಲ್ಲಿ ಕುರಿಗಳಿಗೆ ಅಡವಿ ಹಾಗು ಪಂಜವಿಶನಗಳನ್ನು ಕೊಟ್ಟಿರುವರು. ಈ ಪ್ರಕಾರ ನಮ್ಮ ಸಮಾಜವನ್ನು ಮುಂದೆ ಒಯ್ಯುವ ಕಾರ್ಯಕ್ಕಾಗಿ ವಿಶೇಷ ಪ್ರಯತ್ನ ಮಾಡುತ್ತಿರುವ ಈ ಮಹನೀಯರು ನಮ್ಮ ಪರಿಷತ್ತಿಗೆ ಅಧ್ಯಕ್ಷರಾದದ್ದು ರತ್ನಕ್ಕೆ ಕುಂದಣ ಹಾಕಿದಂತೆಯೇ ಸರಿ.

ದೇವೀಹೊಸೂರ ಗ್ರಾಮವು

ನಾವು ಸಭೆಗೂಡಿರುವ ಈ ಗ್ರಾಮವು ಪುರಾತನದ್ದು. ಧಾರ್ಮಿಕ ಐತಿಹಾಸಿಕದೃಷ್ಟಿಯಿಂದ ಪ್ರಸಿದ್ಧಿಯನ್ನು ಪಡೆದಿರುವದು. ಇಲ್ಲಿರುವ ಶ್ರೀದೇವೀ ಬನಶಂಕರಿಯ ದೇವಾಲಯವು ಬಹು ಪುರಾತನದ್ದು. ಪೂರ್ವದಲ್ಲಿ ಈ ಊರು ಇವರ ಕೆಳಭಾಗದಲ್ಲಿತ್ತು. ವರದರ ಹಾವಳಿಯಿಂದ ಜನರಿಗೆ ಬಹಳ ತೊಂದರೆಯಾಗುತ್ತಿತ್ತು ಇದರಿಂದ ಊರು ದೇವೀಯ ಮಂದಿರಕ್ಕೆ ದೂರವಾಗಿತ್ತು. ಭಕ್ತರು ಸಮೀಪದಲ್ಲಿರಬೇಕೆಂದೂ, ಅವರ ಕಲ್ಯಾಣವಾಗಬೇಕೆಂದೂ ಶ್ರೀದೇವಿಯ ಆಜ್ಞೆಯಾಗಲು ಊರು ದೇವಿಯ ಸಮೀಪದಲ್ಲಿ ಹೊಸದಾಗಿ ಕಟ್ಟಲ್ಪಟ್ಟಿತು. "ದೇವಿಯ" ಅನುಗ್ರಹದಂತೆ "ಹೊಸ ಊರು (ಹೊಸೂರು)" ಕಟ್ಟಿದ್ದರಿಂದ ಈ ಗ್ರಾಮಕ್ಕೆ 'ದೇವೀಹೊಸೂರ' ಎಂಬ ಅನ್ವರ್ಥಕ ಹೆಸರು ಬಂತೆಂದು ತಿಳಿಯಬರುತ್ತದೆ. ಇಲ್ಲಿ ಸಮೀಪದಲ್ಲಿರುವ ಕೂಡಲ ಶ್ರೀ ಸಂಗಮೇಶ್ವರ, ಕಾಗಿನೆಲ್ಲಿಯ ಶ್ರೀ ಆದಿಕೇಶವ ದೇವಾಲಯಗಳಿಂದಲೂ, ತೀರ್ಥ, ಕ್ಷೇತ್ರಗಳಿಂದಲೂ ಶ್ರೀಆದಿಕೇಶವನ ಪರಮ ಶಿಷ್ಯನಾದ ನಮ್ಮ ಸಮಾಜದ ಶ್ರೀಕನಕದಾಸನ ವಾಸದಿಂದಲೂ ಧಾರ್ಮಿಕ ತೇಜಸ್ಸು ಇನ್ನೂ ಬೆಳಗುವದು.

ನಮ್ಮ ಸಮಾಜವು.

ಬಾಂಧವರೇ, ನಮ್ಮ ಸಮಾಜವು ಪುರಾತನದ್ದು ಮತ್ತು ದೊಡ್ಡದು. ಭರತ ಭೂಮಿಯಲ್ಲಿ ನಾವು ಒಂದು ಕೋಟಿಗಿಂತ ಹೆಚ್ಚಾಗಿರುವೆವು. ಕರ್ನಾಟಕದ ಹಳ್ಳಿಪಳ್ಳಿಗಳಲ್ಲಂತೂ ನಮ್ಮ ಜನರು ಇದ್ದೇ ಇರುವರು. ನಮ್ಮ ಇತಿಹಾಸವು ನಮ್ಮಲ್ಲಿ ಅಭಿಮಾನವನ್ನೂ ಉತ್ಸಾಹವನ್ನು ಹುಟ್ಟಿಸುವಂಥಾದ್ದಾಗಿದೆ. ಕವಿಕುಲ ಸಾರ್ವಭೌಮನಾದ ಕಾಲಿದಾಸನೂ, ಇಂದೂರ ಸಂಸ್ಥಾನ ಸ್ಥಾಪಕನಾದ ಮಹಾವೀರ ಮಲ್ಹಾರರಾವ ಹೋಳಕರನೂ, ಪುಣ್ಯಶ್ಲೋಕಿ ಶ್ರೀದೇವೀ ಅಹಲ್ಯಾಬಾಯಿಯೂ, ವಿಜಯನಗರದಲ್ಲಿ ಕರ್ನಾಟಕ ಸಿಂಹಾಸನ ಸ್ಥಾಪಿಸಿದ ಹಕ್ಕ (ಹರಿಹರ) ನೂ, ಇದೇ ಜಿಲ್ಹೆಯವನಾದ ಕನಕದಾಸನೂ ಈ ಮೊದಲಾದ ಸ್ತ್ರೀ ಪುರುಷರು ನಮ್ಮ ಸಮಾಜದಲ್ಲಿ ಹುಟ್ಟಿ ತಮ್ಮ ಅಲೌಕಿಕ ಬುದ್ಧಿ, ಶೌರ್ಯ, ಸಾಹಸಾದಿಗುಣಗಳಿಂದ ಕೀರ್ತಿಶೇಷರಾಗಿರುವರು. ನಾವು ಕ್ಷಾತ್ರಕುಲೋತ್ಪನ್ನರೂ, ಸುಸಂಸ್ಕೃತರಕ್ತದಿಂದುಂಟಾದವರೂ ಇರುವೆವೆಂಬದಕ್ಕೆ ಸಂಶಯವಿಲ್ಲ. ಬಾಂಧವರೇ ನೋಡಿರಿ ನಮ್ಮ ಸಮಾಜದಲ್ಲಿ ಎಂಥೆಂಥ ಮಹನೀಯರು ಉದಯಿಸಿರುವರೆಂಬದನ್ನು ತಿಳಿದು ನೋಡಿರಿ.

ಸದ್ಯದ ಪರಿಸ್ಥಿತಿಯು.

ನಾವು ಇಷ್ಟುದೊಡ್ಡ ಸಮಾಜದವರಿದ್ದರೂ ನಮ್ಮ ಸದ್ದೇ ಅಡಗಿ ಶೋಚನೀಯವಾದ ಸ್ಥಿತಿಯು ಬಂದೊದಗಿರುವದು. ನಮಲ್ಲಿ ಶಿಕ್ಷಣವಿಲ್ಲ ಅದಿಲ್ಲದ್ದರಿಂದ ಜ್ಞಾನವಿಲ್ಲವಾಗಿರುವದು. ಮನುಷ್ಯನ ಉನ್ನತಿಯ ಸಾಧನವಾದ ಜ್ಞಾನವು ನಮ್ಮಲ್ಲಿ ಇಲ್ಲದಿರುವದರಿಂದ ನಾವು ಪರಿಪರಿಯಿಂದ ಕಷ್ಟಕ್ಕೊಳಗಾಗಿರುವೆವು. ಹಾಲುಮತವು ಸಾಮಾಜಿಕ, ಧಾರ್ಮಿಕ, ನೈತಿಕ, ಸಾಂಪತ್ತಿಕ, ಔದ್ಯೋಗಿಕ ರಾಜಕೀಯ ದೃಷ್ಟಿಯಿಂದ ಅವನತಿ ಹೊಂದಿರುವದು

ನಮ್ಮ ಸಮಾಜದಲ್ಲಿ ಅನೇಕ ದುಷ್ಟ ಪರಿಪಾಠಗಳು ನೆಲೆಗೊಂಡಿರುವವು. ಬಾಲ ಹಾಗೂ ವಿಷಮ ವಿವಾಹ, ತೆರವು, ಲಗ್ನದಲ್ಲಿ ದುಂದುಗಾರಿಕೆ ಮೊದಲಾದವುಗಳಿಂದ ಹೀನಾವಸ್ಥೆಗೀಡಾಗಿದೆ ಇವುಗಳನ್ನೆಲ್ಲ ಬಿಟ್ಟು ಪ್ರೌಢವಿವಾಹವನ್ನು ಯೋಗ್ಯ ರೀತಿಯಿಂದ ಮಾಡುವದನ್ನು ಅಮಲಿನಲ್ಲಿ ತರಬೇಕು. ಪ್ರತಿಯೊಬ್ಬರು ತಮ್ಮ ಮಕ್ಕಳಿಗೆ ವಿದ್ಯೆಕಲಿಸಬೇಕು. ನಮಗೇನು ವಿದ್ಯೆಬರುವದೆಂದು ಶಂಕಿಸಿದರೆ ನಮ್ಮ ವಂಶದವರಾದ ಕನಕದಾಸ, ಕಾಳಿದಾಸರಂಥ ವಿದ್ಯಾವಂತರೇ ಸಾಕ್ಷಿ. ದೇವರು ಕೊಟ್ಟ ಅಮೌಲ್ಯವಾದ ಬುದ್ಧಿ ಶಕ್ತಿಯನ್ನು ಉಪಯೋಗ ಮಾಡಿಕೊಳ್ಳಬೇಕು, ವಿದ್ಯೆಕಲಿಸುವದೊಂದು ಜನ್ಮ ಸಿದ್ಧ ಹಕ್ಕು. ಸ್ತ್ರೀಯರಿಗೆ ಹೇಗೆ ವಿದ್ಯೆ ಬರುವದೆಂದು ಶಂಕಿಸಿದರೆ ವಿದ್ಯಾವತಿಯರಾದ ನಮ್ಮ ಸಮಾಜದ **ಶ್ರೀ ಅಹಿಲ್ಯಾದೇವಿ, ಗಂಗಾದೇವಿಯರೇ** ಸಾಕ್ಷಿ. ನಮ್ಮ ಸಮಾಜದೊಳಗಿನ ಯಾವತ್ತೂ ಪಂಗಡಗಳು ಒಟ್ಟಾಗಬೇಕು ಇದರಿಂದ ಸಮಾಜವು ಒಂದೇ ಕ್ಷೇತ್ರದಲ್ಲಿ ಬಂದು ಸಂಘಟನೆಗೆ ಅನುಕೂಲವಾಗುವದು.

ನಮ್ಮ ಚಟವಟಿಕೆಗಳು.

ನಮ್ಮ ಸಮಾಜದ ಸುಧಾರಣೆಯ ಕಾರ್ಯವು ಕಳೆದ ೧೫-೧೬ ವರ್ಷಗಳಿಂದ ಸಾವಕಾಶ ನಡೆದಿರುವದು. ಲಕ್ಷ್ಮೇಶ್ವರ, ನಲವಡಿ, ಜೇಜೂರಿ, ಅಮಳನೇರ, ಹುಲ್ಲೂರ, ದೇವಗಿರಿ, ಬಂಕಾಪೂರ, ಗೇನಾಳ, ವಿಜಾಪೂರ ಮೊದಲಾದ ಸ್ಥಳಗಳಲ್ಲಿ ಮಹಾಸಭೆಗಳು, ಪರಿಷತ್ತುಗಳು ನೆರವೇರಿರುವವು. ನಲವಡಿ ಸಭೆಯಾದಂದಿನಿಂದ ಕರ್ನಾಟಕ ಕುರುಬರ ಸಂಘ ಮುಂಬಯಿ ಕರ್ನಾಟಕ ಹಾಲುಮತ

ಸಹಕಾರಿ ಸಂಘಗಳು ಸ್ಥಾಪಿಸಲ್ಪಟ್ಟವು. ಇದರಿಂದ ಸಮಾಜ ಕಾರ್ಯಕ್ಕೆ ಮೂರ್ತ ಸ್ವರೂಪವು ಬಂತು. ಕಳೆದ ವರ್ಷ ಲಿಂಗಾಪೂರದಲ್ಲಿ ಶ್ರೀ ಆರೋಗಿಸಿದ್ಧಾರ್ಯ ಕುರುಬರ ಬೋರ್ಡಿಂಗ ಸ್ಥಾಪಿಸಲ್ಪಟ್ಟಿದೆ. ಜಾಗೃತಿಯ ಕಾರ್ಯವು ಇನ್ನೂ ಹೆಚ್ಚಾಗಿ ನಡೆಯಬೇಕು. ಈ ಜಿಲ್ಲೆಯಲ್ಲಿಯ ರೋಣ, ರಾಣೆಬಿನ್ನೂರ, ಧಾರವಾಡ ತಾಲೂಕುಗಳಲ್ಲಿ ಪರಿಷತ್ತುಗಳು ಆಗಬೇಕು. ಉಳಿದ ಜಿಲ್ಲೆಯಲ್ಲಿ ಜಿಲ್ಹಾ ಹಾಗು ಪ್ರಾಂತಿಕ ಪರಿಷತ್ತುಗಳು ಆಗಬೇಕು. ಉಣ್ಣೆ ಕಂಬಳಿಗಳ ಸಂಘಗಳನ್ನು ಸ್ಥಾಪಿಸಬೇಕು. ನಮ್ಮ ಜನರು ಬಾಯ್ಸ್ ಸ್ಕೌಟಿನಲ್ಲಿಯೂ ಇಂಡಿಯನ್ ಟೆರಿಟೋರಿಯಲ್ ಫೋರ್ಸಿನ (ಹಿಂದುಸ್ಥಾನ ಸಂರಕ್ಷಕ ಸೈನ್ಯದ) ಲ್ಲಿಯೂ ಸೇರಬೇಕು. ಸಮಾಜವು ಮುಂದುವರಿಯಬೇಕಾದರೆ ಕಳಕಳಿಯುಳ್ಳವರೂ, ಸ್ವಾರ್ಥತ್ಯಾಗಿಗಳೂ ಆದ ಜನರೇ ಬೇಕು. ಸಮಾಜದಲ್ಲಿ ನೆಲೆಗೊಂಡಿರುವ ಅಜ್ಞಾನ, ದಾರಿದ್ರ್ಯ ಮೂಢತನ ಮೊದಲಾದವುಗಳು ದೂರಾಗುವಂತೆ ವ್ಯಾಖ್ಯಾನ-ಕೀರ್ತನಗಳ ಮುಖಾಂತರವಾಗಿಯೂ ಕರ್ತೃತ್ವಶಕ್ತಿಯಿಂದಲೂ ಕಾರ್ಯ ಮಾಡುವ ಘಟ್ಟಿಗರಾದ ಸ್ವಯಂಸೇವಕರೇ ಅವಶ್ಯವಾಗಿ ಬೇಕಾಗಿದೆ. ಸಮಾಜೋನ್ನತಿಯ ತಳಹದಿಯಾದ ಪ್ರಾಥಮಿಕ ಶಿಕ್ಷಣವು ಅವಶ್ಯವಾಗಿದೆ.

ಎಚ್ಚತ್ತ ಕರ್ನಾಟಕವು.

ಕರ್ನಾಟಕದಲ್ಲಿ ಸ್ವಾಭಿಮಾನದ ಸುಳಿಗಾಳಿಯು ಮೆಲ್ಲಗೆ ಸುಳಿಯಹತ್ತಿದೆ. ಪ್ರತಿವರ್ಷ ಸಮಾಜ ಸಭೆಗಳು ಸಾಹಿತ್ಯ, ಪ್ರಾಂತಿಕ, ಸಹಕಾರ ಪರಿಷತ್ತುಗಳು ನಡೆಯುವವು. ಕಳೆದ ತಿಂಗಳಲ್ಲಿ ಬಳ್ಳಾರಿಯಲ್ಲಿ ಕನ್ನಡನಾಡಿನ ಏಳ್ಗೆಯ ಬಗ್ಗೆ ಬೇರೆ ಬೇರೆ ಪರಿಷತ್ತುಗಳು ಕೂಡಿದ್ದವು. ಸದ್ಯಕ್ಕೆ ಕರ್ನಾಟಕ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ ಈ ಪ್ರಶ್ನೆಗಳು ಎಲ್ಲರ ಮುಂದೆ ನಿಂತಿರುವವು. ಸಧ್ಯಕ್ಕೆ ಮುಂಬಯಿ, ಮದ್ರಾಸ, ಮೈಸೂರು ನಾಡಿನ ಕನ್ನಡಿಗರು ಕೊಡಗನಾಡಿನವರ ಏಕೀಕರಣಕ್ಕೆ ಅನುಕೂಲವಿರುವರು. ನೈಜಾಮಪ್ರಾಂತ ದಕ್ಷಿಣಮಹಾರಾಷ್ಟ್ರ ಸಂಸ್ಥಾನಿಕರು ನಾಡಿನ ಕನ್ನಡಿಗರಿಗೆ ಅನುಕೂಲವಿಲ್ಲದಾಗಿದೆ. ಈ ಬಗ್ಗೆ ಜನತೆಯಲ್ಲಿ ಏಕೀಕರಣದ ಅವಶ್ಯಕತೆಯನ್ನೂ, ಸಂಸ್ಥಾನಿಕರಲ್ಲಿ ಜನರ ಮತವನ್ನೂ ಪ್ರಸಾರ ಮಾಡಬೇಕು. ಮಹಾರಾಷ್ಟ್ರ ಆಂಧ್ರರ ಆಕ್ರಮಣಕ್ಕೆ ಎದೆಗೊಟ್ಟು ನಿಲ್ಲಬೇಕು. ಇನ್ನು ಸದ್ಯದಲ್ಲಿ ಅಖಿಲ ಕರ್ನಾಟಕಕ್ಕೆ ಒಂದು ವಿಶ್ವವಿದ್ಯಾಲಯದ ಅವಶ್ಯಕತೆಯಿದೆ. ಕರ್ನಾಟಕಸ್ಥರಿಗೆ ಸೂಚಿಸುವ ಇನ್ನೊಂದು ಮಹತ್ವದ ಸಂಗತಿಯೇನೆಂದರೆ ವಿಜಯನಗರದ ಹರಿಹರರಾಯನ ಸ್ಮಾರಕವು. ಹರಿಹರರಾಯನ ಸ್ಮಾರಕವನ್ನು ಕೈಕೊಂಡರೆ ಏಕೀಕರಣ ವಿಶ್ವವಿದ್ಯಾಲಯಗಳ ಕಾರ್ಯಕ್ಕೆ ಪೋಷಕವೂ ಆಗುವದು. ಉದಾಹರಣಾರ್ಥ ಶಿವಾಜಿಯು ಮಹಾರಾಷ್ಟ್ರ ರಾಜ್ಯ ಸ್ಥಾಪಿಸಿದನು. ಹರಿಹರನು ಕರ್ನಾಟಕ ರಾಜ್ಯ ಸ್ಥಾಪಿಸಿದನು. ಸದ್ಯದ ಮಹಾರಾಷ್ಟ್ರ ಸಂಸ್ಥಾನಿಕರು ಶಿವಾಜಿಯ ಮಾಂಡಲೀಕರಾಗಿದ್ದರಂತೆ ಈಗಿನ ಕನ್ನಡ ನಾಡಿನ ಸಂಸ್ಥಾನಿಕರು ವಿಜಯನಗರದ ಮಾಂಡಲೀಕರಾಗಿದ್ದರು. ಸಾರಾಂಶ ಹರಿಹರನು ಕರ್ನಾಟಕ ಶಿವಾಜಿಯೂ ಶಿವಾಜಿಯು ಮಹಾರಾಷ್ಟ್ರ ಹರಿಹರನೂ ಆಗಿದ್ದನೆಂದು ಹೇಳಲಿಕ್ಕೆ ಏನೂ ಅಡ್ಡಿಯಿಲ್ಲ. ಸದ್ಯಕ್ಕೆ ಮಹಾರಾಷ್ಟ್ರದಲ್ಲಿ ಶಿವಾಜಿಯ ಜಯಂತ್ಯುತ್ಸವ ಸ್ಮಾರಕಗಳು ನಡೆದಿರುವವು. ಈ ಕಾರ್ಯಕ್ಕೆ ಮಹಾರಾಷ್ಟ್ರ ಸಂಸ್ಥಾನಿಕರೆಲ್ಲ ಕೂಡಿರುವರು. ಹರಿಹರನ ಜಯಂತ್ಯುತ್ಸವ ಸ್ಮಾರಕಗಳು ನಡೆದರೆ ಕನ್ನಡನಾಡಿನ ಸಂಸ್ಥಾನಿಕರೂ ಕೂಡುವರೆಂದು ನಾನು ವಿಶ್ವಾಸದಿಂದ ಹೇಳುವೆನು. ಎಲ್ಲ ಕರ್ನಾಟಕಸ್ಥರು ಹರಿಹರನ ಜಯಂತ್ಯುತ್ಸವವನ್ನು ಮಾಡಬೇಕು, ಇದರಿಂದ ಹಿಂದುಳಿದ ನಮ್ಮ ಸಮಾಜಕ್ಕೂ ಉತ್ತೇಜನಕೊಟ್ಟಂತಾಗುವದು. ಹರಿಹರನ ಸ್ಮಾರಕವನ್ನು ಕರ್ನಾಟಕದ ವಿಶ್ವವಿದ್ಯಾಲಯದಲ್ಲಾಗಲಿ ಅಥವಾ ಅಖಿಲ ಕರ್ನಾಟಕಸ್ಥರು ಮೇಲಿಂದ ಮೇಲೆ ಕೂಡುವ ಮಧ್ಯವರ್ತಿ ಸ್ಥಳದಲ್ಲಾಗಲಿ ನಿಲ್ಲಿಸಬೇಕು. ಏಕೀಕರಣ, ವಿಶ್ವವಿದ್ಯಾಲಯ, ಸ್ಮಾರಕಗಳಿಗಾಗಿ ಅಖಿಲ ಕರ್ನಾಟಕ ಎಲ್ಲ ಸಮಾಜಗಳ ಮುಖಂಡರನ್ನು ಕೂಡಿಸಿಕೊಂಡೇ ಮಾಡಬೇಕು. ಇದರಿಂದ ಹೆಚ್ಚು ಬಲವೂ ಆಗುವದೆಂದು ನಾನು ಸಾರಿಹೇಳುತ್ತೇನೆ.

ಸರಕಾರದ ಸಹಾಯ

ಹಿಂದುಳಿದ ನಮ್ಮ ಸಮಾಜದ ನ್ಯಾಯವಾದ ಬೇಡಿಕೆಗಳನ್ನು ಸರಕಾರದವರು ಮಾನ್ಯಮಾಡಬೇಕೆಂದು ಆಗ್ರಹದ ವಿನಂತಿ. ನಮ್ಮ ಸಮಾಜದ ಕನ್ನಡ ಮುಲ್ಕೀ ಪರೀಕ್ಷೆ ಪಾಸಾದವರಿಗೆ ಟ್ರೇ. ಕಾಲೇಜದಲ್ಲಿ ಹಾಗು ಆ ಖಾತೆಗಳಲ್ಲಿ ಎಲ್ಲಕ್ಕೂ ಮೊದಲು ಸೇರಿಸಬೇಕು. ಇಂಗ್ರೇಜಿ ಕಲಿಯುವ ಹುಡುಗರಿಗೆ ಮಾಫಿ, ಸ್ಕಾಲರ್ ಶಿಪ್ ಮೊದಲಾದವುಗಳಿಂದ ಪ್ರೋತ್ಸಾಹ ಕೊಡಬೇಕು. ಮುಂದೆ ಪಾಸಾದ ವಿದ್ಯಾರ್ಥಿಗಳಿಗೆ ಮೊದಲು ನೌಕರಿ ಕೊಟ್ಟು ಮುಂದಕ್ಕೆ ತರಬೇಕು. ನಮ್ಮ ಸಮಾಜದ ಜನರಿಗೆ ಹೊಲಜಮೀನು [illegible] ಅಡವಿ ಜೀವಜಿಂದಗಿಗಳ ಸಂರಕ್ಷಣಾರ್ಥವಾಗಿ ಬಂದೂಕ ಲಾಯಸೆನ್ಸ ಕೊಡಬೇಕು.

ತಮ್ಮ ವಿಧೇಯ,

ಭರಮಗೌಡ ನೀಲನಗೌಡ ಮುದಿಗೌಡರ.

ವರ್ತಮಾನ ಸಾರ

ಇಹವೃತ್ತ.

ಕನ್ನಡಿಗನ ಸಂಪಾದಕರಾದ ಶ್ರೀನಿವಾಸರಾಯರ ತಂದೆಯವರಾದ ಶ್ರೀ. ರಾಜೇರಾಯರು ಹರಿದ್ವಾರದಲ್ಲಿ ತೀರಿಕೊಂಡರೆಂದು ತಿಳಿಸಲು ವಿಷಾದವೆನಿಸುತ್ತದೆ.

ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯರಾದ ಶ್ರೀ ವಿದ್ಯಾರಣ್ಯರ ಪುಣ್ಯತಿಥಿಯು ಇದೇ ಜೇಷ್ಠ ವಧ ೧೩ ಇರುತ್ತದೆ ಅದ್ದರಿಂದ ಕನ್ನಡಿಗರೆಲ್ಲರೂ ಪುಣ್ಯದಿನವನ್ನು ಆಚರಿಸಬೇಕೆಂದು ಪ್ರಾರ್ಥನೆ.

ಮೈಸೂರ ಕರ್ನಾಟಕ

ಶ್ರೀ ಅಂಬಾಪ್ರಸಾದಿಕ ನಾಟಕ ಮಂಡಳಿಯವರು, ಚಾಮರಾಜನಗರದ ಟೌನ್ ಹಾಲಿಗೆ ಒಂದು ನಾಟಕದ (೨೫೦ ರೂ) ಉತ್ಪನ್ನವನ್ನು ಕೊಟ್ಟರು. ನಾಟಕದಲ್ಲಿ ಕಾದಂಬರೀ ಸಂಗ್ರಹದ ಸಂಪಾದಕರೂ, ಕಾರಂತರೂ "ಕನ್ನಡ ನಾಡಿಯ ಏಕೀಕರಣ" ದ ಮೇಲೆ ವ್ಯಾಖ್ಯಾನಮಾಡಿದರು

ಮುಂಬೈಕರ್ನಾಟಕ

ತಾ॥ ೩-೬-೧೯೨೬ನೇ ದಿವಸ ಗುಬ್ಬಿಕಂಪನಿಯ ಮಾಲಕರಾದ ವಿನೋದ ರತ್ನಾಕರ ಜಿ. ಎಚ್. ವೀರಣ್ಣನವರು ವಿಜಾಪುರದ ಕರ್ನಾಟಕ ಸಾಹಿತ್ಯ ಸೇವಾಮಂಡಲಕ್ಕೆ, ದಯಮಾಡಿಸಿ ಅಲ್ಲಿಯ ವ್ಯವಸ್ಥೆಗಳನ್ನು ನೋಡಿ ಆ ಮಂಡಲಕ್ಕೆ ೫೦ ರೂ ಕೊಟ್ಟು; ಆ ಮಂಡಲದ ಸಭಾಸದರಾದರು. ಇವರ ಅನುಕರಣವನ್ನು ನಾಟ್ಯಕಲಾಭಿಮಾನಿಗಳು ಕೈಕೊಂಡರೆ ಕರ್ನಾಟಕ ರಂಗಭೂಮಿಯ ದುರವಸ್ಥೆಯು ದೂರಾಗುವದಕ್ಕೆ ಕೊರತೆಯುಂಟೇ?

ಹಿಂದೂದೇಶ.

ಪಂಡಿತ ಮದನ ಮೋಹನ ಮಾಲವೀಯರು ಶೀಘ್ರವೇ ಬಂಗಾಲದಲ್ಲೆಲ್ಲ ತಿರುಗಾಡಲು ಹೋಗುವವರು. ಪ್ರತಿಯೋಗಿ ಸಹಕಾರದ ವಿಷಯಕ್ಕೂ ಹಿಂದೂ ಮಹಾಸಭೆಯ ಮುಂದಿನ ಕಾರ್ಯಕ್ರಮದ ವಿಷಯಕ್ಕೂ ವ್ಯಾಖ್ಯಾನ ಮಾಲೆಯನ್ನು ಪ್ರಾರಂಭಿಸುವರು.

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡುವವರ ಕಡೆಯಿಂದಾ ಜಾಹೀರ ನೋಟೀಸು ಕೊಡುವದರಲ್ಲಿ ಬರುತ್ತದಲ್ಲಾ:– ನಮ್ಮ ಪೈಕಿ ರಾಮಾಚಾರ್ಯ ಇವರ ಅಣ್ಣನಮಗಾ ಮತ್ತು ವೇದವ್ಯಾಸಾಚಾರ್ಯ ಇವರ ತಮ್ಮನಾದ ಬಂಡಾಚಾರ್ಯ ಶಿದ್ದಾಚಾರ್ಯ ಮಳಗಿ ಈತನು ಈಗ ಎಡ್ರ್ಯ ವರ್ಷದ ಲಾಗಾಯಿತ ನಮ್ಮಿಂದ ಬೇರೆನೇ ಇರತಿದ್ದು ಬೇರೆ ಊಟವಗೈರೆ ಮಾಡುತ್ತಾನೆ. ಮತ್ತು ಹರಾಳಿಆಗಿ ತಿರಗ್ಯಾಡುತ್ತಾನೆ ಅವನು ಮನೆತನದ ವ್ಯವಸ್ಥಕ್ಕೆ ಏನೂ ಸಂಬಂಧವಿಲ್ಲ. ಸದರಿ ಬಂಡಾಚಾರ್ಯ ಇವನು ತನ್ನ ಹಿಸ್ಸಾದ ಮಿಳಕತಿ ಕಿಮ್ಮತ್ತು ತೆಗೆದುಕೊಂಡು ಅವನು ಬೇರೆಯಾಗಿರುತ್ತಾನೆ ನಮ್ಮ ಮಿಳಕತ್ತಿನ ಮೇಲೆ ಅವನದು ಏನೂ ಸಮ್ಮಂಧವಿಲ್ಲ. ಆದ್ದರಿಂದ ಸದರಿ ಬಂಡಾಚಾರ್ಯ ಈತನಿಗೆ ಯಾರೂ ದೇಣೆವಗೈರೆ ಕೊಡತಕ್ಕದ್ದಲ್ಲ. ಯಾರಾದರೂ ಕೊಟ್ಟರೆ ಅದರ ಜವಾಬ್ದಾರಿ ನಮ್ಮ ಮೇಲೆ ಆಗರ ನಮ್ಮ ಮನೆತನದಮೇಲೆ ಇರುವದಿಲ್ಲಾ. ತಿಳಿಯುವದು ಅಂತಾಕೊಟ್ಟ ನೋಟೀಸು. ತಾ|| ೨೮-೬-೨೬

ರಾಮಾಚಾರ್ಯ ಮಳಗಿ ವೇದವ್ಯಾಸಾಚಾರ್ಯ ಮಳಗಿ
ಹಣಮಂತಾಚಾರ್ಯ ಮಳಗಿ

ಜಾಹೀರ ನೋಟೀಸು.

ಎಲ್ಲಾ ಜನರಿಗೆ ತಿಳಿಸುವದೇನಂದರೆ:— ನಮ್ಮ ಕಡಿಗೆ ಈರಪ್ಪಾ ಹಾದಿಮನಿ, ಸಾಕೀನ ಕೊಪ್ಪ ಇವರ ಭಂಗಾರ ದಾಗೀನಗಳು ವತ್ತೀ ಇಟ್ಟಿದ್ದವು. ಸದರೀ ದಾಗೀನಗಳು ಸದರಿ ಈರಪ್ಪಾ ಇವರಿಗೆ ನಮಗೆ ಬರತಕ್ಕ ರೂಪಾಯಿ ಕೊಟ್ಟು ಬಿಡಿಸಿ ಕೊಂಡು ಹೋಗುವ ಸಂಬಂಧಿ ತೋಂಡಿಯಿಂದ ಪುಷ್ಕಳ ಸಾರೆ ತಿಳ್ಸಿದಿವಿ ಮತ್ತು ಪೋಷ್ಟ ಮಾರ್ಫತ ನೋಟೀಸ ಆದರೂ ಕೊಟ್ಟಿವಿ. ಆದರೆ ಇನ್ನೂವರೆಗೆ ಆ ದಾಗೀನ ಬಿಡಿಸಿ ಕೊಂಡು ಹೋಗಿಲ್ಲ. ಆದ್ದರಿಂದ ಸದರೀ ಭಂಗಾರ ಸಾಮಾನಗಳು ಜಾಹೀರ ರೀತಿಯಿಂದ ಗುಳೇದಗುಡ್ಡ ಗ್ರಾಮದಲ್ಲಿ ನಮ್ಮ ಮನೆಯಲ್ಲಿ ತಾರೀಖು ೨೦-೭-೨೬ ಇಶ್ವಿ ದಿವಸ ಮುಂಜಾನೆ ೧೦ ಘಂಟೆಗ ಲಿಲಾವು ಮಾಡತಕ್ಕ ವರಿದ್ದೇವೆ. ಆದರೆ ಸದರೀ ಸಾಮಾನಗಳು ಬೇಕಾಗಿದ್ದವರು ಲಿಲಾವದಲ್ಲಿ ಬಂದು ಬೇಡಬೇಕು. ತಾ||೨೭-೬-೧೯೨೬.

ಶಿವಲಿಂಗಪ್ಪಾ ಲಿಂಗಪ್ಪಾ ತಿಪ್ಪಾ ದ. ಖು.||
ಸಾ|| ಗುಳೇದಗುಡ್ಡ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಗಳಿಯುಂ ಗುಂಪಿನ.

ಕನ್ನಡ **ಸ್ವಧರ್ಮ.** ಮಾಸ ಪತ್ರಿಕೆ

ಸಂಪಾದಕ —ದ ರಾ ಬೇಂದ್ರೆ, ಬಿ ಏ

ಸಮಾಜದಲ್ಲಿ ಶಾಂತಿ ಪುಷ್ಟಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ. ೩-೦-೦

ಕಾರ್ಯದರ್ಶಿ. **ಸ್ವಧರ್ಮ ಕಾರ್ಯಾಲಯ**
ಮಾಳಮಡ್ಡಿ ಧಾರವಾಡ

ಗುಲಕಂದ! ಗುಲಕಂದ!! ಗುಲಕಂದ!

ನಮ್ಮ ತೋಟದಲ್ಲಿಯ ಹಂಗಾಮಿ ಹೂವುಗಳ ಪದ್ಧತಿಗನುಸರಿಸಿ ಸಿದ್ಧವಾದ ಅತ್ಯುತ್ತಮ ಮತ್ತು ರುಚಿಕರವಾದ ಹಳೇ ಗುಲಕಂದವು ನಮ್ಮಲ್ಲಿ ಮಾರಲಿಕ್ಕೆ ದೊರೆಯುತ್ತದೆ.

ಅದೇ ಪ್ರಕಾರ ರಾಜರು ಸರದಾರರು ಸಾರ್ವಜನಿಕ ಸಭೆ ಲಗ್ನ ಸಮಾರಂಭ ಗಳಿಗೆಲ್ಲ ಬೇಕಾಗುವಂತಹ ಸ ನಾಸಿಕ ಹೂವಿನ ಉತ್ತಮ ಹಾಗೂ ಅಂದವಾದ ಮಾಲೆಗಳೂ ತುರಾಯಿಗಳೂ ದೊರೆಯುತ್ತವೆ. ವ್ಯಾಪಾರಸ್ಥರಿಗೆ ತುಂಬಾ ಕಮೀಶನ್.

ವಿಳಾಸ:— ಥಾಡಗೆ ಪಾಷಾಣಕರ ಕಂಪನಿ ಬುಧವಾರಪೇಟೆ ಪುಣೆಸಿಟಿ.

ಗುಬ್ಬಿಶ್ರೀಚನ್ನಬಸವೇಶ್ವರನಾಟಕಸಭೆ.

ಇವರು ಜೂನ ೧೨ ನೆ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕಪ್ರಿಯರಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣಾ.
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೭೦ ಮಿ ವಿಠ್ಠಲ ಚಿಮ್ಮಾಜಿ ಸೇಟ ಕಲಾಸ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೭ ಮಿ॥ ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ (ಜಿ. ತುಮಕೂರು.)

(೩) ಬಾಂಡ ನಂ ೧೪೯೪೭ ಮಿ॥ ವೆಂಕಟರಮಣ. ವೆಂಕಟರಮಣ ಹೆಗಡೆ, ಸೇತಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಹಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೭೩ ಮಿ॥ ಜಿ. ವೆಂಕಟಷಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ॥ ರಾಮಚಂದ್ರ ವಾಮನ ಕಾಂಕರ ಕಾಲೂಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೮೫೦ ಮಿ॥, ಆರ್. ಎಚ್. ನಾಟೆಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ವಿಶ್ವಕರ್ಣಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿಮೋಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಪೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ

ಅಸ್ಸಲ, ಗ್ಯಾರಂಟೀಡ, ಸ್ಪ್ರಿಂಗ್ ಮ್ಯಾನ್ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟೆ ಸಹಿತ; ಟ ಖ. ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸುವೆವು

ಲಿಚೋ ವಾಚ ಕಂ. (India) ಮುಂಬೈ ನಂ. ೪

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to-
N. K. Kulkarni. Agent Bagalkot.

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಹಾ ವಿಜಾಪೂರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ
ಪಾಥವಾತ್ರವು ಮುಂಬೈ, ನಂಬರ ೪

ಬಾಗಲಕೋಟೆಯ ಏಜಂಟರು ಸಂಗಳವೇಢೆ ಬಂಧುಗಳು

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ... ಇವರು
ವಿದ್ಯಾರಣ್ಯಮುದ್ರಾಸುಂದಿರದಲ್ಲಿ ಮುದ್ರಿತವಾಗಿ ... ಪ್ರಸಿದ್ಧಪಡಿಸಲ್ಪಟ್ಟಿತು.





The Cheapest House.

1 For quick, Ecconomical and satisfactory service, please go for the welknown Chevrolet cars, Trucks products in the Decccan
2 For all spare parts of the Various cars specially Chevrolet, Ford, Dodge and Overland cars,
3 For the cheapness in tyre tubes especially thewellknown Michelin products,
4 For all kinds of Lubricating oils Grease etc,
5 For undertaking all kinds of tyre tube repairs in Vulcansing by a specalist to give satisfactory work,
6 For Building Motor bodies of Various types by workers onin uptodate line.
7 For all kinds of Motor repairs,

Apply to:-
Messrs Royal motor service
Automobile Engineers
Bagalkot.

Sub dealers
Chevrolet car
for the Bijapur

ಅಲಭ್ಯಲಾಭವು.

೧ ಶೀವ್ರಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ
೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ವೋವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,
೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚಿಲಿನ ಟಾಯರಟುಬುಗಳು ಖರೀದಿಗಾಗಿ
೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣಿ ಮತ್ತು ಚರ್ಬಿ ಖರೀದಿಗಾಗಿ,
೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ.
೬ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಿಸಲಿಕ್ಕೆ,
೭ ಎಲ್ಲ ಕದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.
ಬಾಗಲಕೋಟೆ

ವಿಜಾಪೂರ ಜಿಲ್ಹೆಯಲ್ಲಿ
ಮೊಟಾರುಗಳಿಗೆ ಸಬ ಏಜಂಟರು.

ರಕ್ತ ಶುದ್ಧಿ
ಮತ್ತು
ಬಲವಂತ
ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶೀಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ ಜಾಗ್ರತೆಯಿಂದ ನಾಸಿಯಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಮೈಯ್ಯೊಳಗಿನ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿ ಹೊಂದಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನ್ನು ಸಿಗುವದು.

ವಿಳಾಸಃ—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ-ನಿಪ್ಪಾಣಿ, (ಬೆಳಗಾಂವ್)



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ ಗೋಲ್ಡ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ ಕರಾರು ಗಂಟೆಯನ್ನು ತೋರಿಸುವುದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಅವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು ಕ್ರಯ ೧ಕ್ಕೆ ರೂ. 7-2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಸಾಲುಗಳ ವರಿವಿಗೂ ಬರೆಯುವದು! 14 ಕ್ಯಾರೆಟ್ಟ ಭಂಗಾರದ ಮೊಳೆ ಇರುವದು ಇದನು ಈ ತಿಂಗಳೊಳಗಾಗಿ ಕರಿಸಿಕೊವವರಿಗೆ 12 ರೋಜ್ ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು ಕ್ರಯ ಪೇನಾ ೧ಕ್ಕೆ 2-0-0

ವಿಳಾಸಃ—**ಎಸ್. ಪಾಲ್ ಆಂಡ್ ಕೊ,**

ಪಿ. ಬಿ ನಂಬರ್. 542,

ಜಾರ್ಜ್‌ಟೌನ್ ಮದ್ರಾಸು.

ಜಾಹೀರ ನೋಟೀಸು.

ಕೆಳಗೆ ಸಹಿ ಮಾಡುವವಳ ಕಡೆಯಿಂದ ನೋಟೀಸು ಕೊಡುವದರಲ್ಲಿಬರುತ್ತದಲ್ಲಾ ಏನಂದ್ರೆ— ಹುನಗುಂದ ತಾಲೂಕ ಪೈಕಿ ಇಲಕಲ್ಲ ಗ್ರಾಮದಲ್ಲಿ ಇರೋ ಮನಿ ಚಕಬಂದಿ ಪೂರ್ವಕ್ಕೆ ಅಕಬರಸಾ ಬಿಳೇಕುದರಿ ಇವರ ಮಳಗಿ ; ಪಶ್ಚಿಮಕ್ಕೆ ರಂಗಪ್ಪಾ ಜೀನಗಾರ ಇವರ ಮನಿ ದಕ್ಷಿಣಕ್ಕೆ ಇಟಸಂಗಪ್ಪಾ ಪತ್ತಾರ ಇವರ ಮನಿ ಉತ್ತರಕ್ಕೆ ರಸ್ತಾ ಈ ಪ್ರಕಾರ ಚಕಬಂದಿ ಮಧ್ಯದಲ್ಲಿ ಇರೋ ಮನಿಗೆ ನನ್ನ ಗಂಡಾ ಗಣಪತಿ ತಂದಿ ರ‍್ಯಾವಪ್ಪಾ ಪತ್ತಾರ ಈತನ ಮಾಲ್ಕೀದು ಇದ್ದು ಆತನ ಕಣ್ಣುಗಳು ಮುಂದವಾಗಿಭ್ರಾಂತಿಷ್ಟ ಆಗಿರತಾನೆ ಕಾರಣಾ ಆತನ ಕಡಿಯಿಂದ ಯಾರೂ ಸದ್ರಿ ಮಿಳಕತ್ತು ಬರಿಸಿಕೊಳ್ಳಬಾರದು ಬರಸಿಕೊಂಡರೆ ಅವರಿಗೆ ಏನು ಹಕ್ಕು ಪ್ರಾಪ್ತಿಲಿಕ್ಕಿಲ್ಲ. ಕಾರಣಾ ಸದ್ರಿ ಮನಿ ಬರಿಸಿ ಕೊಳ್ಳಬಾರದು. ಮೇಲಾಗಿ ಮನಿ ಖರೀದಿಕೊಡಲಿಕ್ಕೆ ಏನು ಕಾರಣ ಇಲ್ಲ. ಅಂತಾ ಕೊಟ್ಟ ಜಾಹೀರ ನೋಟಿಸು ಸಹಿ ತಾರೀಖು ೩೦-೬-೧೯೨೭. ಇಶ್ವಿ

( ) ಈ ಯಡಗೈ ಹೆಬ್ಬಟ್ಟಿನಗುರ್ತು ಹಣಮವ್ವಾ ಕೋಂ ಗಣಪತೆಪ್ಪಾ ಪತ್ತಾರ ಈಕೀದು ಅದೆ.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತಿಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಯ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣ ಯುಕ್ತ ೩೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

ರ. ನಂ. ಬಿ. ೧೯೪೭ ವಾ. ಚಂದಾ ೧-೮-೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ಸಂಜೀವನವು [illegible])

[illegible]

ಸಂಪಾದಕರು— ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೩ } ಬಾಗಲಕೋಟಿ ಶುಕ್ರವಾರ ಮಿತಿ ಜ್ಯೇಷ್ಠ ವದ್ಯ ೩೦ ಶಕೆ ೧೮೫೮ ತಾ॥ ೧೯-೬-೧೯೩೬. { ಸಂ. ೬೮

ಸಂಪಾದಕರ ಭೂಮಿ

(*)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ನದಾಕಾರದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ಕಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂಬು ತಿಳಿಯಿ।
—ಅಂಬಿಕಾ ತನಯ ದತ್ತ

ಕನ್ನಡ ನಾಡಿನ ಏಳ್ಗೆಯಾಗಬೇಕಾದರೆ, ಕನ್ನಡ ನುಡಿಯು ಏಳ್ಗೆಯಾಗಬೇಕು. ನುಡಿಯು ಎಲ್ಲ ಒಳಜಾತಿಗಳನ್ನು ಕಟ್ಟುವ ಬಲವಾದ ಸಾಧನವು. ಅದರಲ್ಲಿ ಒಂದು ಬಗೆಯ ದಿವ್ಯಶಕ್ತಿಯಿರುವುದು. ಕನ್ನಡ ನುಡಿಯೆಂದೊಡನೆ, ಕರ್ನಾಟಕದಲ್ಲಿರುವ, ಲಿಂಗಾಯತ, ಜೈನ, ಬ್ರಾಹ್ಮಣ, ಕುರುಬ ಮೊದಲಾದ ಜಾತಿಗಳಲ್ಲಿಯ ಭೇದ ಭಾವವು ಒಂದುಕ್ಷಣದಲ್ಲಿ ಇಲ್ಲದಂತಾಗುತ್ತದೆ. 'ನಾವೆಲ್ಲರೂ ಒಂದು' 'ಹೊಂದಿಕೆಯಲ್ಲಿದ್ದರೆ ನಾವು ಬಾಳುವೆವು.' ನಮ್ಮ 'ಅಳಿವು ಉಳಿವುಗಳು,' 'ನಮ್ಮ ನುಡಿಯನ್ನವಲಂಬಿಸಿವೆ' ಎಂಬ ವಿಚಾರಗಳು ಅವರಿಗೆ ಹೊಳೆಯುತ್ತವೆ. ಎರಡನೆಯವರ ಆಕ್ರಮಣವು ಅವರಿಗೆ ಅಸಹ್ಯವೆನಿಸುತ್ತದೆ. ಅವರು ಕನ್ನಡದ ಹೆಚ್ಚಳಕ್ಕಾಗಿ ಹಬ್ಬುಗೆಗಾಗಿ, ಒಮ್ಮನಸ್ಸಿನಿಂದ ದುಡಿಯಲು ಸಿದ್ಧರಾಗುವರು. ರಾಜಕೀಯ ಕಲಹಗಳ ಗಾಳಿಯು ಕೂಡ ನುಡಿಯ ಬಂಧುರ ಮಂದಿರವನ್ನು ಸೋಕಲಾರದು. ನುಡಿಯು ಪವಿತ್ರವಾದ ಒಡವೆಯು. ಅದೆಲ್ಲರಿಗೂ ಪೂಜ್ಯವಾದುದು. ಎಲ್ಲರೂ ಅದನ್ನು ಹೃದಯದ ಗದ್ದುಗೆಯ ಮೇಲಿಟ್ಟು ಗೌರವಿಸುವರು. ಕೊರಲೊಳಗೆ ಧರಿಸಿ ನಲಿಯುವರು. ಅದು ಹೃದಯದಲ್ಲಿ ಹುರುಪಿನ ಹೊಂದೆರೆಗಳನ್ನು ಹುಟ್ಟಿಸುವದು, ಪವಿತ್ರವಾದ ಭಾವನೆಗಳನ್ನು ರೂಪುಗೊಳಿಸುವದು. ಉಚ್ಚತತ್ವಗಳ ಕಿಡಿಗಳನ್ನು ಜನರಲ್ಲಿ ಹೊತ್ತಿಸುವುದು. ಸ್ವಜನ ಪ್ರೀತಿಯ ಬಳ್ಳಿಯನ್ನು ಪಲ್ಲವಿಸುವುದು. ಜಗತ್ತನ್ನೇ ಬೆಳಗುವದು. ನುಡಿಯ ಶಕ್ತಿಯ ಅರಿವು ಪಾಶ್ಚಾತ್ಯರಿಗಿದೆ. ಅದರಿಂದಲೇ ಅವರು ಸಂಘಶಕ್ತಿಯುಳ್ಳವರಾಗಿದ್ದಾರೆ. ಸ್ವಾತಂತ್ರ್ಯಶಾಲಿಗಳಾಗಿದ್ದಾರೆ. ತೇಜಃಪುಂಜರಾಗಿದ್ದಾರೆ. ಸಾಹಸಿಗಳಾಗಿದ್ದಾರೆ ವಿಕ್ರಾಂತರಾಗಿದ್ದಾರೆ ಸುಖದ ಸ್ವರ್ಗದಲ್ಲಿ ವಿಹರಿಸುತಲಿದ್ದಾರೆ. ನಮ್ಮಲ್ಲಿಯ ಜನರ ಕಣ್ಣುಗಳು ಈಗ ಸ್ವಲ್ಪ ಸ್ವಲ್ಪ ತೆರೆಯ ಹತ್ತಿವೆ. ಇನ್ನೂ ಪೂರ್ಣವಾಗಿ ಬೆಳಕಿನ ಕಿರಣಗಳು ತಗಲಿರುವದಿಲ್ಲ. ಇದಾಗಬೇಕಾದರೆ ಜ್ಞಾನವುಬೇಕು. ಜ್ಞಾನದಾನದ ಕೆಲಸವನ್ನು ಮಾಡುವ ಸಂಸ್ಥೆಗಳಲ್ಲಿ ಶಾಲೆಗಳೂ ಪುಸ್ತಕಾಲಯಗಳೂ ಬರುವವು. ಶಾಲೆಗಳಂತೂ ಬೆಳೆಯ ಹತ್ತಿವೆ. ಅವುಗಳ ವಿಷಯದಲ್ಲಿ ಬರೆಯುವುದು ನಮ್ಮಗುರಿಯಿಲ್ಲ. ಕನ್ನಡ ಪುಸ್ತಕಾಲಯಗಳ ಕೊರತೆಯು ಕನ್ನಡ ನಾಡಿನಲ್ಲಿ ಬಹಳವಿದೆ. ಕನ್ನಡ ನಾಡಿನಲ್ಲಿ ಹೇಳಿಕೊಳ್ಳುವಂಥ ಕನ್ನಡ ಪುಸ್ತಕ ಸಂಗ್ರಹದ ಆಲಯವು ಒಂದಾದರೂ ಇಲ್ಲೆಂದು ನಮಗೆ ತೋರುತ್ತದೆ. ಪುಸ್ತಕಾಲಯಗಳ ಮಹತ್ವವೇ ನಮ್ಮ ಜನರಿಗೆ ತಿಳಿದಿಲ್ಲ; ಅದರ ಉಪಯುಕ್ತತೆಯ ಕಲ್ಪನೆಯು ಬಂದಿಲ್ಲ. ಪುಸ್ತಕಾಲಯವೇ ಈಗಿನ ಕಾಲದ ನಿಜವಾದ ವಿಶ್ವವಿದ್ಯಾಲಯವೆಂದು ಸಲ್ಲುವುದು. ನಾಡಿಗೆ ಜ್ಞಾನಾಮೃತವನ್ನುಣಿಸಿ ಮನಸಿನ ಉತ್ಕರ್ಷವನ್ನುಂಟು ಮಾಡುವ ಸಾಧನವಿದಿರುವುದು ಅನಿಸ್ಸವಾದುದಲ್ಲವೋ? ನಾವು ಹೇಳುವ ವಿಷಯವೇನೂ ಹೊಸದಲ್ಲ, ಎಷ್ಟೋ ವೃತ್ತಪತ್ರಗಳಲ್ಲಿ ಪುಸ್ತಕಾಲಯಗಳ ಬಗ್ಗೆ ಚರ್ಚೆಯಾಗಿದೆ ಆದರೂ ಕೂಡ ಪುಸ್ತಕಾಲಯಗಳ ಸ್ಥಾಪನೆಯಾಗಿಲ್ಲ. ಜ್ಞಾನದ ದೀವಟಿಗೆಯ ಸಂಚಾರವು ಇನ್ನೂ ಹಳ್ಳಿಯೊಳಗಾಗಿರುವದಿಲ್ಲ. ಕತ್ತಲೆಯ ಕೋಣೆಗಳಲ್ಲಿಯೇ ನಮ್ಮ ಹಳ್ಳಿಗಳು ಕೈಯಾಡಿಸುತ್ತಿರುತ್ತಿವೆ ಇರುಳಿನ ಕತ್ತಲೆಗಿಂತಲೂ, ಈ ಕತ್ತಲೆಯು ಕಷ್ಟಾದುದು. ಇದನ್ನು ಭೇದಿಸಿದ ಹೊರತು ಗತಿಯಿಲ್ಲ ಇದನ್ನಿಟ್ಟರೆ ನಮಗೆ ದೊರೆಯುವುದು ಶೂನ್ಯ. ಅದ್ದರಿಂದ ಕನ್ನಡ ನಾಡಿನ ಏಳ್ಗೆಯನ್ನು ಬಗೆಯುವವರೆಲ್ಲರೂ– ಬಯಸುವವರೆಲ್ಲರೂ– ಅಲ್ಲಲ್ಲಿಗೆ ಪುಸ್ತಕಗಳ ಆಲಯಗಳನ್ನು ಸ್ಥಾಪಿಸಲು ಉದ್ಯುಕ್ತರಾಗಬೇಕು. ಹೀಗೆಂದೊಡನೆ, ಇಷ್ಟು ಪರಿಶ್ರಮದ ಕೆಲಸವನ್ನು ಯಾರು ಮಾಡಬೇಕು ಹಣವಿಲ್ಲ; ಹಣವಿಲ್ಲದೆ ದುಡಿತ ಮಾತ್ರ; ದುಡಿದರೂ ಫಲ ಬರುವದಿಲ್ಲ ಎಂದು ಗೊಣಗುವವರು ಬಹು ಮಂದಿ. ಆದರೆ ನಾವು ಈ ಪರಿಸ್ಥಿತಿಯ ಬಿಕ್ಕಟ್ಟನ್ನು ದೂರ ಮಾಡಲು ಒಂದು ಉಪಾಯವನ್ನು ಹೇಳುತ್ತೇವೆ. ದೊಡ್ಡ ದೊಡ್ಡ ಹಳ್ಳಿಗಳಲ್ಲೆಲ್ಲ ಕನ್ನಡ ಶಾಲೆಗಳಿರುವವು. ಅಲ್ಲಿಯ ಶಿಕ್ಷಕರೆಲ್ಲ ಮನಸಿನ ಮೇಲೆ ತೆಗೆದು ಕೊಂಡರೆ, ನಾಡಿನಲ್ಲೆಲ್ಲ ಪುಸ್ತಕಾಲಯಗಳ ಸರವೇ ಸರವಾಗಬಹುದು. ಶಿಕ್ಷಕರಿಗೆ ಜ್ಞಾನದ ಬೆಲೆಯು ಗೊತ್ತಿರುತ್ತದೆ. ಶಿಕ್ಷಕರಲ್ಲಿ ಪವಿತ್ರಭಾವನೆಗಳು ಮನೆ ಮಾಡಿಕೊಂಡಿರಲು ಆಸ್ಪದವಿರುತ್ತದೆ. ಹಳ್ಳಿಗಳಲ್ಲಿ ಅವರೇ ಪ್ರತಿಷ್ಠಿತರಿರುವರು. ಜನರಾದರೂ ಅವರನ್ನು ಪೂಜ್ಯ ಭಾವದಿಂದ ಕಾಣುವರು ಅವರಿಗೆ ಹಣದ ಸಹಾಯವು ಸುಲಭವಾಗಿ ಸಿಕ್ಕುವುದು. ಅದ್ದರಿಂದ ಪ್ರಾಥಮಿಕ ಶಾಲೆಯ ಶಿಕ್ಷಕರು ಪುಸ್ತಕಾ

ಲಯಗಳ ಸ್ಥಾಪನೆಯ ಕೆಲಸವನ್ನು ತಮ್ಮ ಕೈಯೊಳಗೆ ತೆಗೆದುಕೊಳ್ಳಬೇಕೆಂದು ನಮ್ಮ ಬಿನ್ನಹವಿರುವದು. ಪುಸ್ತಕಾಲಯಗಳು ಸ್ಥಾಪಿತವಾದನಂತರ ದಿನಾಲು ಹುಟ್ಟಿ ಸಾಯುತ್ತಿರುವ ಮತ್ತು ಕ್ಷಯರೋಗ ಪೀಡಿತವಾಗಿ ನರಳುತ್ತಿರುವ ವೃತ್ತಪತ್ರಗಳಿಗೆ ಪಥ್ಯಾನ್ನವು ದೊರೆಯುವುದು. ಅವು ಹೃಷ್ಟಪುಷ್ಟವಾಗುವವು. ಗ್ರಂಥಕಾರರಿಗೂ ಊಟ ದೊರೆಯುವದು. ಸಂಘಟನೆಯು ಬೆಳೆಯುವದು. ಗ್ರಂಥಭಾಂಡಾರವು ಹಿಗ್ಗುವದು. "ನೀವು ವೃತ್ತಪತ್ರಗಳನ್ನು ಕೊಳ್ಳಿರಿ. ಚಂದಾದಾರರಾಗಿರಿ." ಎಂಬ ದೀನಾವಸ್ಥೆಯು ದೂರಾಗುವದು. ದೈನ್ಯಭಾವವು ಅದೃಶ್ಯವಾಗುವದು. ಪುಸ್ತಕಾಲಯಗಳ ಸ್ಥಾಪನೆಯ ಕೆಲಸವನ್ನು ಮನಮುಟ್ಟಿ ಮಾಡಿದರೆ ಶಿಕ್ಷಕರಿಗೆ ಜನಸೇವೆ ಮಾಡಿದ ಶ್ರೇಯವು ದೊರೆಯುವದು. ತಾವು ಕರ್ತವ್ಯವಾಡಿದೆವೆಂಬ ಸಮಾಧಾನವಾದರೂ ಅವರಿಗೆ ಆಗುವವು. ಗುರಿಯಿಲ್ಲದ ಸಂಸಾರವು ಸಂಸಾರವಲ್ಲ. ತಮ್ಮ ಪ್ರಗತಿಯನ್ನು ಮಾಡಿಕೊಂಡು, ಅನ್ಯರ ಪ್ರಗತಿಗಾಗಿ ಹೆಣಗುವುದೇ ಜೀವನದ ಸಾರವು. ನೀರು ನಿಂತಲ್ಲಿಯೇ ನಿಂತರೆ, ಹೇಗೆ ಕೊಳೆಯುವದೋ ನಾವಾದರೂ ನಿಂತಲ್ಲಿಯೇ ನಿಂತರೆ, ಜೀರ್ಣಾವಸ್ಥೆಯನ್ನು ಹೊಂದುವದು. ಶಿಕ್ಷಕರೆಲ್ಲರು ಒಂದು ಸ್ವಲ್ಪ ತ್ಯಾಗಬುದ್ಧಿಯಿಂದ ಜನಸೇವಾದೀಕ್ಷೆಯನ್ನು ಕೈಕೊಂಡರೆ, ರಾಷ್ಟ್ರವು ಸ್ವಾತಂತ್ರ್ಯದ ಸವಿಯಾದ ಮಾರ್ಗದಲ್ಲಿ ಅಡಿಯಿಡುವುದು.

ಹೋದ ಬುಧವಾರ ಶ್ರೀಮದ್ವಿದ್ಯಾರಣ್ಯ ಮುನೀಶ್ವರರ ಪುಣ್ಯತಿಥಿಯು. ಶ್ರೀಮದ್ವಿದ್ಯಾರಣ್ಯರ ಪುಣ್ಯಸ್ಮರಣೆಯ ಮಹೋತ್ಸವಗಳಾದರೂ ಅಲ್ಲಲ್ಲಿ ಜರಗಿದವು. ಇನ್ನೂ ಈ ಉತ್ಸವದಲ್ಲಿ ಕಳೆತುಂಬಿರುವದಿಲ್ಲೆಂಬುದನ್ನು ಎಲ್ಲರೂ ಒಪ್ಪಬೇಕಾಗುವುದು. ಕನ್ನಡಿಗರ ದುರ್ದೈವ. ಭರತ ಖಂಡದ ದುರ್ದೈವ. ವಿದ್ಯಾರಣ್ಯರಂಥ "ಕರ್ಮವೀರ'ರೂ 'ತ್ಯಾಗಯೋಗಿ'ಗಳೂ ಈಗಿನ ಕರ್ನಾಟಕಕ್ಕೂ ಭರತಖಂಡಕ್ಕೂ ಬೇಕಿರುವದು. ಭರತಖಂಡದಲ್ಲಿ ಭರದಿಂದ ಪರಧರ್ಮದ ಪ್ರಾಬಲ್ಯವು ಆಗುತ್ತ ನಡೆದಾಗ, ಸ್ವಧರ್ಮವನ್ನು ರಕ್ಷಿಸಿ, ಪರಧರ್ಮದ ಪ್ರವಾಹವನ್ನು ತಡೆದು ನಿಲ್ಲಿಸಿದ ವಿಕ್ರಾಂತ ಪುರುಷರೇ ವಿದ್ಯಾರಣ್ಯರು. ಸ್ವಧರ್ಮದ ಸಂರಕ್ಷಣೆಯು ಸ್ವರಾಜ್ಯದಿಂದಲೇ ಸಾಧ್ಯವೆಂಬ ಮಾತನ್ನು ಭರತ ಖಂಡದ ನಿದರ್ಶನಕ್ಕೆ ತಂದು ಕೊಟ್ಟ ಮಾರ್ಗದರ್ಶಕರೇ ಅವರು. ಇವರ ಅಡಿಗಳಲ್ಲಿ ಅಡಿಇಟ್ಟು ರಾಮದಾಸರು ಶಿವಾಜಿಗೆ ಸ್ವರಾಜ್ಯ ದೀಕ್ಷೆಯನ್ನು ಕೊಟ್ಟರು. ಇಂತಹ ಮಹಿಮಾಶಾಲಿಗಳಾದ ವಿದ್ಯಾರಣ್ಯರ ಸ್ಮರಣೆಯನ್ನು ಅಖಿಲ ಕರ್ನಾಟಕವೇಕೆ? ಎಲ್ಲ ಹಿಂದುಸ್ಥಾನವೇ, ಅಲ್ಲ ಅಲ್ಲ ವಿಶ್ವವೇ ಮಾಡತಕ್ಕದ್ದು. ಉಳಿದವರು ಮಾಡಲೊಲ್ಲರೇಕೆ ಬಿಡಲೊಲ್ಲರೇಕೆ. ಕನ್ನಡನಾಡು ತನ್ನ ವಿಭೂತಿಯ ಪೂಜೆಯನ್ನು ಮಾಡಬೇಕಲ್ಲವೇ? ಮಾಡುವುದು ನಾಡಿನ ಹಿತಕ್ಕಲ್ಲವೇ? ಕನ್ನಡಿಗರ ಈಗಿನ ಸ್ಥಿತಿಯು ಹೀನವಾಗಿದೆ. ಕನ್ನಡಿಗರ ಕನ್ನಡತನವು ಹಾಳಾಗಿದೆ. ಕನ್ನಡನಾಡು ಮಸಣದಂತೆ ಕಳೆಯಿಲ್ಲದಂತಾಗಿದೆ. ಕನ್ನಡಿಗರಲ್ಲಿ ಅಭಿಮಾನದ ಜ್ಯೋತಿಯಿಲ್ಲ. ಕನ್ನಡಿಗರಲ್ಲಿ ಕೆಲಸ ಮಾಡುವ ಹುರುಪಿಲ್ಲ, ತಮ್ಮ ಮೊದಲಿನ ಐಶ್ವರ್ಯದ ಹೆಚ್ಚಳದ ನೆನಪನ್ನು ಮಾಡಿಕೊಳ್ಳಲು ಬಯಕೆಯಿಲ್ಲ. ತಮ್ಮ ಜೀವವು ಜ್ವಲಂತವಾಗುವಂತೆ ನೋಡಿಕೊಳ್ಳುವ ಹಂಬಲವಿಲ್ಲ. ಎಲ್ಲಿ ನೋಡಿದರೂ ಶಾಬ್ದಿಕರೂ ತಾರ್ಕಿಕರೂ ಹೆಚ್ಚಾಗಿದ್ದಾರೆ. ಷಂಡರೂ ಮನೆಮುರುಕರೂ ಉಂಡಾಡಿಗಳೂ ಹೇರಳವಾಗಿದ್ದಾರೆ. ಇಂತಹ ಕನಿಕರದ ಅವಸ್ಥೆಯು ನಮ್ಮ ಪ್ರಿಯವಾದ ಕನ್ನಡ ನಾಡಿಗೆ ಬಂದೊದಗಿದೆ. ಜೀವನದ ಜೀವಾಳವೇ ಇಲ್ಲದಂತಾಗಿದೆ. ಭಾವದ ಜ್ಯೋತಿಯೇ ಬತ್ತಿಹೋಗಿದೆ. ಜ್ವಲಂತವೃತ್ತಿಯ ಝರಿಯು ಒಣಗಿಹೋಗಿದೆ. ಐಕ್ಯದ ಕಳಸವು ಕಳಚಿ ಕೆಳಗ ಬಿದ್ದಿದೆ. ಎಲ್ಲೆಡೆಯಲ್ಲಿಯೂ ಶಿಥಿಲತೆಯೂ ಉದಾಸೀನತೆಯೂ ನಿರ್ಜೀವತೆಯೂ ಕಂಗೊಳಿಸುತ್ತಿವೆ. ನಾಲ್ಕೂ ಕಡೆಯಿಂದಲೂ ನಮ್ಮನ್ನು ಎರಡನೆಯವರು ಹತ್ತೊತ್ತಿರುವರು. "ವಿದ್ಯಾರಣ್ಯ ಮಹಾಮುನಿಗಳೇ ನೀವು ಈ ಹೊತ್ತಿಗೆ ಬೇಕಾಗಿತ್ತು. ಹೇಡಿತನವನ್ನು ಈಡಾಡಿ ಹುರುಪಿನ ಹುಮ್ಮಸ್ಸನ್ನು ಉಂಟುಮಾಡುವ ಉಸುರು ಬೇಕಾಗಿತ್ತು. ನಿಮ್ಮೊಲವಿನ ಸಂಪಿನಿಂದ ಸಂಜೀವಿನೀ ರಸವನ್ನು ಸುರಿಯುವುದು ಬೇಕಾಗಿತ್ತು" ಇವೇ ಮೊದಲಾದ ಉದ್ಗಾರಗಳು ಕೆಲವು ಕನ್ನಡದ ಹಿತಚಿಂತಕರ ಹೃದಯದಿಂದ ಹೊರಹೊಮ್ಮುತ್ತಿವೆ. ಕತ್ತಲೆಯ ಸುತ್ತಿನಲ್ಲಿ ಇನೊಂದು ಕಿರಣವು ಅಸ್ಪಷ್ಟ ಭಾವದ ಬೆಳಕ ಬೀರುತ್ತಿದೆ. ಇದೇ ಬೆಳಕು ಬೆಳೆದು, ಕನ್ನಡ ನಾಡನ್ನು ಬೆಳಗಿಸಲಿ.

ದೇಶಬಂಧು ದಾಸರ ಪ್ರಿಯ ಪುತ್ರರಾದ ಚಿರರಂಜನರು ತಮ್ಮ ಇಹಲೋಕಯಾತ್ರೆಯನ್ನು ತೀರಿಸಿ ಚಿತ್ತರಂಜನರನ್ನು ಕಾಣಲು ಪರಲೋಕಕ್ಕೆ ತೆರಳಿದರೆಂದು ತಿಳಿಸಲು ನಮಗೆ ಅತ್ಯಂತ ದುಃಖವಾಗುತ್ತಿದೆ. ಇವರು ದೇಶಬಂಧುಗಳಿಗೆ ಯೋಗ್ಯರಾದ ಮಕ್ಕಳಾಗಿದ್ದರು. ಖರೇ ಸಿಂಹನ ಮರಿಯು. ಅಸಹಕಾರದ ಜಯಭೇರಿಯ ನಾದವು ಇವರ ಕಿವಿಯಲ್ಲಿ ಬಿದ್ದ ಕೂಡಲೇ ತಾವಾದರೂ ತಮ್ಮ ಶಿಕ್ಷಣ ವ್ಯವಸಾಯವನ್ನು ಬಿಟ್ಟುಕೊಟ್ಟು ತಂದೆಯವರ ಸಂಗಡಲೇ ಕೆಲಸಮಾಡಹತ್ತಿದರು. ಇಂಥ ಎಳೆತನದಲ್ಲಿಯೂ ಇವರು ಸರಕಾರದವರ ಕೃಪಾಕಟಾಕ್ಷಕ್ಕೆ ಪಾತ್ರರಾಗಿ ಕಾರಾಗೃಹವಾಸವನ್ನು ಅನುಭವಿಸಿದರು. ದೇಶಬಂಧುಗಳು ತಮ್ಮ ಸರ್ವಸ್ವವನ್ನು ದಾನಮಾಡಿ, ಪರ್ಣಕುಟೀರದಲ್ಲಿ ವಾಸಮಾಡಹತ್ತಿದೊಡನೆ, ಇವರಾದರೂ ಸ್ವಲ್ಪವಾದರೂ ಹಿಂದೆ ಮುಂದೆ ನೋಡದೆ ತಂದೆಗಳ ಸಂಗಡಲೇ ವಾಸಮಾಡಹತ್ತಿದರು. ಇವರು ಖರೇ ತ್ಯಾಗಿಗಳು. ದೇಶಬಂಧುವಿನ ವಿರಹದುಃಖದಲ್ಲಿ ಬೇಯುತ್ತಿದ್ದ ವಾಸಂತೀದೇವಿಯವರಿಗೆ ಒಂದು ವರ್ಷದಲ್ಲಿಯೇ ಪುನಃ ಪುತ್ರಶೋಕವಾದುದು ಅತ್ಯಂತ ತಾಪದಾಯಕವು. ಆದರೆ ಬಂದುದನ್ನೆಲ್ಲ ಭೋಗಿಸಬೇಕಲ್ಲವೆ! ಜಗತ್ಪಾಲಕನು ಚಿರರಂಜನನ ಆತ್ಮಕ್ಕೆ ಶಾಂತಿಯನ್ನೀಯಲಿ!

ಶ್ರೀಯುತ ರಾಜೇರಾಯರು.

ಶ್ರೀ. ಮಂಗಳವೇಢೆ ರಾಜೇರಾಯರು ತೀರಿಕೊಂಡ ಸುದ್ದಿಯು ಕನ್ನಡಿಗರಿಗೆ ಈ ಮೊದಲೇ ಗೊತ್ತಿದೆ. ಅವರು ಬದರೀಯಾತ್ರೆಯನ್ನು ಮುಗಿಸಿಕೊಂಡು ತಿರುಗಿ ಹರಿದ್ವಾರಕ್ಕೆ ಬರುತ್ತಿದ್ದರು. ಹರಿದ್ವಾರವು ಇನ್ನೂ ಮೂರುದಿವಸದ ಹಾದಿಯಾಗಿತ್ತು. ಅವರು ತಪೋವನದ ಭೂಮಿಯನ್ನು ಸೇರಿ, ಇನ್ನು ಮುಂದೆ ಸಾಗುವವರಿದ್ದರು. ಅಷ್ಟರಲ್ಲಿಯೇ ಅವರಿಗೆ ದಮ್ಮಿನ ವಿಕಾರವು ಹೆಚ್ಚಾಗಿ ಅದೇ ಪುಣ್ಯಭೂಮಿಯಲ್ಲಿಯೇ ಜೂನ ೩೦ ನೇ ತಾರೀಖಿನ ದಿನ ಮೃತರಾದರು. ಅವರಿಗೆ ಸಾಯುವ ಕಾಲಕ್ಕೆ ಸುಮಾರು ೭೮ ವರ್ಷಗಳಿದ್ದವು. ಶ್ರೀ ರಾಜೇರಾಯರು ಹುಟ್ಟಿದ ಯೋಗವು ರಾಜಯೋಗ. ಹುಟ್ಟಿದೊಡನೆ 'ಈ ಕೂಸು ರಾಜಸುಖವನ್ನು ಆಜನ್ಮ ಅನುಭವಿಸುವನೆಂದು' ಜ್ಯೋತಿಷ್ಕರು ಹೇಳಿದ್ದರಂತೆ. ಅವರು ಹೇಳಿದ ಭವಿಷ್ಯವು ಎಲ್ಲ ರೀತಿಯಿಂದಲೂ ನಿಜವಾಯಿತೆಂಬುದು ರಾಜೇರಾಯರ ಜೀವನದಿಂದ ಕಂಡು ಬರುತ್ತದೆ. ರಾಜೇರಾಯರು

ವಿಶ್ವವಿದ್ಯಾಲಯದ ಪದವೀಧರರು. ಅವರು ಸಾಹಿತ್ಯದಲ್ಲಿ ಪ್ರಾವೀಣ್ಯವನ್ನು ಪಡೆದವರಿದ್ದರು ಆಂಗ್ಲಭಾಷೆ ಮತ್ತು ಸಂಸ್ಕೃತ ಇವೆರಡು ವಿಷಯಗಳಲ್ಲಿಯು ಅವರ ಜ್ಞಾನವು ಒಳಿತಾಗಿದ್ದಿತು. ಅವರು ಉದ್ಯೋಗಶೀಲರೂ, ವಿದ್ಯಾಸಕ್ತ ಪಾತಿಗಳೂ, ಜಾಣರೂ, ಕರ್ತೃತ್ವಶಾಲಿಗಳೂ, ನಿರ್ಭಯವೃತ್ತಿಯವರೂ, ಆಗಿದ್ದರು. ಅವರಿಗೆ 'ಚರಣ'ವು ಜೀವವಾಗಿದ್ದಿತು. ಇವರು ಸರಕಾರೀ ಕೆಲಸವನ್ನು ಮಾಡಿ,ನಿವೃತ್ತರಾಗಿ, ಸವಣೂರಿಗೆ ದಿವಾಣರಾಗಿ ಕೆಲವು ವರ್ಷ ಕೆಲಸ ಮಾಡಿದರು. ಆ ಸಂಸ್ಥಾನವು ಇವರ ಮುತ್ಸದ್ದಿತನದ ಕೆಲಸದಿಂದ ಎಲ್ಲ ಬಗೆಯಿಂದಲೂ ಏಳ್ಗೆಯನ್ನು ಹೊಂದಿತು. ಇವರ ಮರಣದ ಸುದ್ದಿಯು ತಿಳಿದೊಡನೆ, ನವಾಬರು ಎರಡು ದಿನ ಇವರ ಸ್ಮರಣಾರ್ಥವಾಗಿ ಕಚೇರಿಗಳನ್ನೆಲ್ಲ ಬಂದಿಟ್ಟಿದ್ದರು. ಮತ್ತು ಅವರ ಮನೆಗೆ ಸಹಾನುಭೂತಿಪರವಾದ ತಂತಿಯನ್ನಾದರೂ ಕಳುಹಿಸಿದರು. ಇದರಿಂದ ಇವರ ರಾಜ್ಯಭಾರ ನಡೆಯಿಸುವ ದಕ್ಷತೆಯು ವ್ಯಕ್ತವಾಗುತ್ತಿದೆ. ಬಾಗಲಕೋಟೆಯಲ್ಲಿ ಮೊದಲು ಬೆಂಚ ಕಚೇರಿಯಿತ್ತು. ಆವರೆ, ಶ್ರೀ. ರಾಜೇರಾಯರು ಈ ಊರಿಗೆ ಬಂದನಂತರ ಸರಕಾರದವರು ಇವರನ್ನು ಮೂರನೇ ವರ್ಗದ 'ಆನರರಿ ಮ್ಯಾಜಿಸ್ಟ್ರೇಟ' ರನ್ನಾಗಿ ಮಾಡಿ ಇವರೊಬ್ಬರ ಕೈಯಲ್ಲಿಯೇ ಎಲ್ಲ ಅಧಿಕಾರವನ್ನು ಕೊಟ್ಟರು. ಆ ಮೇಲೆ ಕ್ರಮವಾಗಿ ೨ ನೇ ವರ್ಗ ೧ ನೇ ವರ್ಗದ ಅಧಿಕಾರಗಳನ್ನು ಕೊಟ್ಟದ್ದಲ್ಲದೆ ಹೋದ ವರ್ಷ ಇವರಿಗೆ 'ಸಮರೀ ಪಾವರ್ಸ' ಸಹ ಕೊಟ್ಟಿದ್ದರು ಇಂಥ ಇಳಿವಯಸ್ಸಿನಲ್ಲಿಯೂ ಇಷ್ಟು ಜವಾಬ್ದಾರೀ ಕೆಲಸವನ್ನು ಸಾಗಿಸಿದ್ದು ಅನುಕರಣೀಯವೇ ಸರಿ

ರಾಜೇರಾಯರು ಬಹಳ ಪುಣ್ಯವಂತರೆಂದೇ ಹೇಳಬಹುದು. ಇವರು ಇದ್ದವರ ಋಣವನ್ನು ತೀರಿಸಿರುವರು (ಮಕ್ಕಳು ಮರಿಗಳಿಗೆ ತೊಂದರೆಯಾಗದಂತೆ ಆಸ್ತಿಯನ್ನು ಮಾಡಿಟ್ಟಿರುವರು. ಇವರ ಮಕ್ಕಳಲ್ಲೊಬ್ಬರಾದ ಶ್ರೀ. ವಿಠ್ಠಲರಾಯರು ಮುನಸೋಪರಿದ್ದವರು. ಮತ್ತೊಬ್ಬರು ಕನ್ನಡಿಗನ ಸಂಪಾದಕರಿರುವರು) ಸತ್ತವರ ಋಣವನ್ನಾದರೂ ಪ್ರಯಾಗ, ಕಾಶೀ, ಗಯಾ, ಬದರೀ ಮೊದಲಾದ ಯಾತ್ರಾಸ್ಥಾನಗಳಿಗೆ ಹೋಗಿ ಅಲ್ಲಿ ಅವರ ಪ್ರೀತ್ಯರ್ಥವಾಗಿ ದಾನ ಮೊದಲಾದ ಧರ್ಮವಿಹಿತ ಕರ್ಮಗಳನ್ನು ಮಾಡಿ ತೀರಿಸಿದರು. ಸಂಸಾರದ ಸುಖವನ್ನೆಲ್ಲ ಸೊಗಸಿನಿಂದ ಅನುಭವಿಸಿ, ಯಾತ್ರೆ ತೀರ್ಥಗಳನ್ನು ಮುಗಿಸಿ, ಸುಖವಾಗಿ ತಪೋಭೂಮಿಯಲ್ಲಿ ತಮ್ಮ ಇಹಲೋಕಯಾತ್ರೆಯನ್ನು ಮುಗಿಸಿದರು. ನಮ್ಮ ಧರ್ಮದಂತೆ, ಅವರಿಗೆ ವೈಕುಂಠವಾಸವಾಗಿರುವುದು ನಿಜ

ಪುರೋಹಿತ ಹಣಮಂತಾಚಾರ್ಯರು.

ಬಾಗಲಕೋಟೆಯ ನಗರ ಸಭೆಯ ಉಮೇದವಾರರಿಗೂ ಮತದಾರರಿಗೂ ಬಿನ್ನಹ.

ನಾನೊಬ್ಬ ನಗರ ಸಭೆಯ ಮತದಾರ ನಾನು ಈಗ ಬಾಗಲಕೋಟೆಯಲ್ಲಿ ಇಲ್ಲದ್ದರಿಂದ ಉಮೇದವಾರರಿಂದ ನಾನಿದ್ದೆಡೆಗೆ ಒಂದರಮೇಲೊಂದು ಓಲೆಗಳು ಬರತೊಡಗಿರುವವು. ಇವರ ಮತ ದೊರಕಿಸುವ ಉಪಾಯಗಳು ವಿಲಕ್ಷಣವಾಗಿ ಕಂಡದ್ದರಿಂದ ಅವುಗಳನ್ನು ಮತದಾರರ ಮುಂದಿಡಬೇಕೆಂದು ಮಾಡಿದ್ದೇನೆ.

ಒಬ್ಬರು ನೀವು ನಮ್ಮ ಒಡೆಯರಿರುವಿರಿ, ನೋಡಿರಿ, ನಮಗೆ ಮತಕೊಡಿರೆಂದೂ; ಇನ್ನೊಬ್ಬರು ನಾವು ನಗರ ಸಭೆಗೆ ಉಮೇದವಾರರಾಗಿ ನಿಂತಿರುತ್ತೇವೆ, ನಿಮ್ಮ ತಂದೆಯವರು ನಮ್ಮ ಪಕ್ಷದವರು, ಅವರು ಬದುಕಿದ್ದರೆ ನಿಶ್ಚಯವಾಗಿ ನಮಗೇ ಮತಗಳನ್ನು ಕೊಡುತ್ತಿದ್ದರು, ನೀವು ನಮ್ಮನ್ನು ಬಿಟ್ಟು ಹೋಗಲಿಕ್ಕಿಲ್ಲವೆಂದು ನಂಬಿದ್ದೇವೆ, ಎಂದೂ; ಮತ್ತೊಬ್ಬರು ನಾನು ಈಸಲ ನಗರ ಸಭೆಗೆ ಉಮೇದವಾರನಾಗಿ ನಿಂತಿರುವೆನು ನೀವು ನನ್ನ ಗೆಳೆಯರಿದ್ದು, ನನಗೇ ಮತ ಕೊಡಬೇಕು, ನೀವು ಗೆಳೆತನದ ಜನರನ್ನು ಬಿಟ್ಟು ಹೋಗಲಿಕ್ಕಿಲ್ಲೆಂದು ನಾವು ಆಶಿಸುವೆವು ಎಂದೂ; ಬೇರೊಬ್ಬರು ನಾನು ಬ್ರಾಹ್ಮಣೇತರನಿರುವೆನು. ಜಾತಿ ದ್ವೇಷಗಳನ್ನು ಮುರಿಯ ಬಯಸುವ ನೀವು ನನಗೇ ಮತಕೊಡಬೇಕೆಂದು ವಿನಂತಿಯದೆ. ಎಂದೂ, ಹಾಗೆಯೇ ಅನೇಕ ವಿಧವಾಗಿ ಓಲೆಗಳು ಬಂದಿರುವವು

ಉಮೇದವಾರರ ಮತದೊರಕಿಸುವ ಈ ರೀತಿಯನ್ನು ಕಂಡು ಮನಸ್ಸಿಗೆ ವ್ಯಸನವಾಯಿತು. ಇದರಲ್ಲಿ ಒಬ್ಬರೂ ತಾತ್ವಿಕ ಜೀವಿಗಳಲ್ಲದ್ದು ಕಂಡು ಮತ್ತಿಷ್ಟು ವ್ಯಸನವಾಯಿತು. ಈ ಉಮೇದವಾರರಿಗೆ ಧ್ಯೇಯವೇ ಯಿಲ್ಲ, ತಾವು ನಗರ ಸಭೆಯಲ್ಲಿ ಮಾಡಬೇಕಾದ ಕಾರ್ಯಗಳೇನೆಂಬುದರ ಪರಿವೆಯಿಲ್ಲ. ಕಾರ್ಯಕ್ರಮವಿಲ್ಲ. ಇಂಥ ಪರಿಯಿಂದ ಇವರು ಹೋಗಿ ಮಾಡುವದೇನೋ ನಾನರಿಯೆ! ನನಗೆ ಬರೆದ ಉಮೇದವಾರರಲ್ಲಿ ಬಹು ಜನರು ನಗರ ಸಭೆಯಲ್ಲಿದ್ದವರೇ ಇರುವರು. ಇಷ್ಟು ದಿವಸ ನೀವಿದ್ದು ಯಾವ ದೇಶ ಹಿತವನ್ನು ಸಾಧಿಸಿರುವಿರಿ ಎಂಬುದೇ ನಮ್ಮ ಪ್ರಶ್ನೆ. ಊರಿಗೆ 'ಹಾಯ ಸ್ಕೂಲ' ಅವಶ್ಯಕತೆಯಿದ್ದು, ವಿದ್ಯಾರ್ಥಿಗಳು ಪರಸ್ಥಳಕ್ಕೆ ಹೋಗುತ್ತಿರಲು ನಗರ ಸಭೆಯವರು ಯೋಗ್ಯ ವ್ಯವಸ್ಥೆಯನ್ನು ಮಾಡಲಿಲ್ಲ! ಎಷ್ಟೋ ಮುನಸೀಪಾಲ್ಟಿಗಳು ಖಾದೀಯ ಕಾರ್ಯವನ್ನು ಕೈಕೊಂಡಿರಲು ನೀವೇನಾದರೂ ಈ ಕಾರ್ಯದಲ್ಲಿ ಮನಸ್ಸು ಹಾಕಿರುವಿರೋ? ಅಸ್ಪೃಶ್ಯರು ಸರೆ ತಿಂದಿಗಳಿಂದ ಹಾಳಾಗುತ್ತಿರಲು. ಅವರ ವಿಷಯವಾಗಿ ಏನಾದರೂ ಆಲೋಚಿಸಿರುವಿರೋ? ಗೋರಕ್ಷಣೆಯನ್ನು ನಿಲ್ಲಿಸಲು ಪ್ರಯತ್ನಿಸಿರುವಿರೋ? ಎಂದು ಕೇಳಿದರೆ ಇದಕ್ಕೆಲ್ಲಕ್ಕೂ ಒಂದೇ "ಇಲ್ಲ" ಎಂಬ ಉತ್ತರವು. ಇದಷ್ಟು ಆಗಿಹೋಯಿತು. ಇನ್ನು ಮುಂದಾದರೂ ಉಮೇದವಾರರು, ತಮ್ಮ ಧ್ಯೇಯ ಗಳನ್ನು ನಿರ್ಣಯಿಸಿ ಅವುಗಳ ಸಲುವಾಗಿ ತಾವು ಹೋರಾಡುವೆವೆಂದು ಪ್ರಕಟಿಸಿ ಮತದಾರರು ತಮಗೆ ಯಾಕೆ ಮತಗಳನ್ನು ಕೊಡಬೇಕೆಂಬುದನ್ನು ಸ್ಪಷ್ಟವಾಗಿ ಹೇಳಬೇಕು. ಮತದಾರರಿಗೂ ತಮ್ಮ ಧ್ಯೇಯಗಳು ಯಾರಿಂದ ಕೈಗೂಡುವವೋ ಅವರಿಗೆ ಮಾತ್ರ ಮತಕೊಡಲು ಅನುಕೂಲವಾಗುವದು. ಭಿಡೆ ಮುರುವತ್ತುಗಳಿಂದ ಮತ ದೊರಕಿಸುವದು ಯೋಗ್ಯವಲ್ಲ. ಯೋಗ್ಯ ಉಮೇದವಾರರನ್ನು ನೋಡಿ ತಮ್ಮ ಹಿತವು ಯಾರಿಂದ ಸಾಧಿಸುವದೋ ಅವರಿಗೆ ಮತಗಳನ್ನು ಕೊಡಬೇಕು. ಇದರಲ್ಲಿ ಜಾತಿ ಪಂಥಗಳನ್ನು ತರಬಾರದು. ಒಬ್ಬರ ಭಿಡೆಗೆ ಒಳಗಾಗಬಾರದು ಯಾವ ಜಾತಿಯವನೇ ಯಿರಲಿ, ಯಾವ ಪಂಥದವನೇ ಯಿರಲಿ, ಯೋಗ್ಯರೂ ಉದಾತ್ತ ಧ್ಯೇಯವುಳ್ಳವರೂ ಕರ್ತೃತ್ವ ಶಾಲಿಗಳೂ ಆದವರಿಗೆ ಮತ ಕೊಡುವದು ಪ್ರತಿಯೊಬ್ಬ ನಾಗರಿಕನ ಕರ್ತವ್ಯವಾಗಿದೆ. ಜಾತಿಗಳ ಮೇಲೆ ಮತಗಳನ್ನು ದೊರಕಿಸುವದು ದೇಶಕ್ಕೆ ಘಾತಕವಾಗಿದೆ, ಎಂಬುದು ಎಲ್ಲರಿಗೂ ಅನುಭವಕ್ಕೆ ಬಂದು ಸಂಗತಿಯಾಗಿದೆ. ಆದ್ದರಿಂದ ಉಮೇದವಾರರು ಜಾತಿ ಪಂಥಗಳನ್ನು ಹಿಡಿಯದೆ ವಿಶಿಷ್ಟ ಹಾಗೂ ಉದಾತ್ತಧ್ಯೇಯಗಳಿಂದ ನಿಲ್ಲಬೇಕೆಂದೂ ಮತದಾರರು ಜಾತಿ ಪಂಥ, ಭಿಡೆ ಮುರುವತ್ತುಗಳಿಗೆ ಒಳಗಾಗದೆ ಯಾರಿಂದ ತಮಗೆ ಹಿತವಾಗುವದೋ ಅವರಿಗೇ ಮತ ಕೊಡಬೇಕೆಂದೂ ಕರಗೊಡ್ಡಿ ಬೇಡಿಕೊಂಡು ಈ ಬಿನ್ನಹವನ್ನು ಇಲ್ಲಿಗೇ ಮುಗಿಸುತ್ತೇನೆ. — **ಓರ್ವಮತದಾರ.**

ಸಂಪಾದಕರ ಪರಿಷತ್ತು.

—⁂—

ಒಳ್ಳಾರಿಯಲ್ಲಿ ವೃತ್ತಪತ್ರ ಸಂಪಾದಕರ ಪರಿಷತ್ತು ಕೂಡಿದ ಮಾತು. ಎಲ್ಲರಿಗೂ ಗೊತ್ತಿದೆ. ಅಲ್ಲಿಯ ಪರಿಷತ್ತು ಪೂರಣವಿಲ್ಲದ ಹೋಳಿಗೆಯಂತಾಯ್ತೆಂದರೆ ತಪ್ಪಿಲ್ಲ. ಎರಡು ಮೂರು ಗೊತ್ತುವಳಿಗಳು ಮಾತ್ರ ಆದವು. ಎಲ್ಲರೂ ತಮ್ಮ ತಮ್ಮ ಊರಿಗೆ ಹೊರಟಿದ್ದು ಹೋದರು. ಇಷ್ಟರಿಂದ ಕಾರ್ಯಭಾಗವು ಸಾಧ್ಯವಾಗದು; ವೃತ್ತಪತ್ರಗಳನ್ನು ನಡೆಯಿಸುವುದು ಹೊಣೆಗಾರಿಕೆಯ ಕೆಲಸವಿದೆ. ಈಗ ವಿಜಾಪೂರದಲ್ಲೊಂದು ಸಂಪಾದಕರ ಪರಿಷತ್ತು ತೀವ್ರವೇ ಕೂಡುವುದೆಂಬ ಸುದ್ದಿ ಬಂದಿದೆ. ವೃತ್ತ ಪತ್ರವು ಆಪಾರದ ಒಡವೆಗಳಂತೆ, ದಿವಾಳಿ ಬೆಳಗುವ ಒಡವೆಯಾಗಿದೆ. ರಾಜಕಾರಣಕ್ಕೆ ಅದು ಸೆರೆಮಾಳಾಗಿದೆ. ಸಮಾಜದ ಹುಳುಕುಗಳನ್ನು ಹೊರಗೆಡವಲು ಪಿರಿಯುದ್ಧರಿಯಾಗಿದೆ. ನೀತಿಯ ತತ್ವಗಳನ್ನು ಬೀರಲು ಬೇಕಾಗಿದೆ ಧರ್ಮದ ಗುಟ್ಟನ್ನು ತಿಳುಹಿಸಲು ಅವಶ್ಯಕವಾಗಿದೆ. ಲೋಕ ಶಿಕ್ಷಣಕ್ಕೆ ಅದನ್ನುಳಿದು ಗತಿಯಿಲ್ಲ. ಹೊಸ ಹೊಸ ಶೋಧಗಳ ಅರಿವಾದರೂ ಅದರಿಂದಲೇ ಆಗುವುದು. ಈಗಿನ ಯುಗವು ಲೋಕಸತ್ತೆಯ ಯುಗವಾದುದರಿಂದ, ಸಂಸಾರ ಸುಖದುಃಖಗಳು ಸತ್ತೆಯನ್ನವಲಂಬಿಸಿರುವದರಿಂದ, ವೃತ್ತಪತ್ರವು ಜೀವನದ ಎಳೆಯಾಗಿದೆ. ಜನಜನರನ್ನು ಕಳೆದುಂಬಿಸುವ ಚೈತನ್ಯರಸವಾಗಿದೆ. ಎಲ್ಲ ಪ್ರಪಂಚದ ಭಾರವು ಅದರ ಮೇಲೆ ನಿಂತಿದೆ ಅದು ಹೊರಳಿದತ್ತ ಜಗತ್ತಿನ ಜೋಲಿಯು ತೂಗುಡುತ್ತಿದೆ. ಇಂತಹ ಅದ್ಭುತ ಶಕ್ತಿಯು ಅನಿಲ್ಲಪಗಿರುವುದು. ಜಗತ್ತಿನ ಆಗುಹೋಗುಗಳೇ ಅದನ್ನಾಶ್ರಯಿಸಿರುವದರಿಂದ, ವೃತ್ತಪತ್ರ ಸಂಪಾದಕರ ಮೇಲಿನ ಹೊಣೆಯು ಎಷ್ಟಿದೆಂಬುದರ ಕಲ್ಪನೆಯು ಓದುಗರಿಗೆ ಸಹಜವಾಗಿ ಬರಬಹುದು. ಸಂಪಾದಕರ ಪರಿಷತ್ತು ಕೂಡಾಟ ಆಗಲಾಟಗಳ ಪರಿಷತ್ತಾಗಕೂಡದು. ಪರಿಷತ್ತನ್ನು ಕೂಡಿಸುವವರು ಕಾರ್ಯದ ಮಹತ್ವವನ್ನರಿತು, ಎಲ್ಲರ ಒಳಿತನ್ನು ತಿಳಿದು ಕೆಲಸ ಮಾಡಬೇಕು. ಕರ್ನಾಟಕದಲ್ಲಿಯ ವೃತ್ತಪತ್ರಗಳ ದುರವಸ್ಥೆಯ ಕತೆಯನ್ನು ಹೇಳತೊಡಗಿದರೆ ಒಂದು ದೊಡ್ಡ ಪುರಾಣವೇ ಆಗುವುದು. ಎಷ್ಟೋ ಪತ್ರಿಕೆಗಳ ಸಂಪಾದಕರು ನಾಕಷ್ಟು ಶಿಕ್ಷಣವಿಲ್ಲದವರೂ ಸಂಕುಚಿತ ದೃಷ್ಟಿಯುಳ್ಳವರೂ ಇರುವರು. ಪಕ್ಷಪಾತವೇ ಅವರ ಆರಾಧ್ಯದೇವತೆಯು. ಜನರನ್ನು ಬೈಯ್ದು, ತಮ್ಮ ಲೆಕ್ಕಣಿಕೆಯನ್ನು ದೂಷಿಸಿಕೊಳ್ಳುವುದೇ ಅವರ ಪವಿತ್ರವಾದ ಶೀಲವು ಜನಜನರಲ್ಲಿ ವೈಮನಸ್ಯವನ್ನು ಹುಟ್ಟಿಸಿ, ಅದನ್ನು ಬೆಳೆಯಿಸುವದೇ ಅವರ ಶ್ರೇಯಃಸಾಧನವು. ಹೆಚ್ಚೇನು, ಗೌರವದ ಆಶೆಯಿಂದಲೋ ಹೊಟ್ಟೆ ಹೊರಕೊಳ್ಳುವ ಉದ್ದೇಶದಿಂದಲೋ? ಅವರು ಪತ್ರಿಕೆಗಳನ್ನು ನಡೆಯಿಸುತ್ತಿರುವರು. ಅವರ ಮುಂದೆ ನಿಶ್ಚಳವಾದ ಉಚ್ಚವಾದ ಗುರಿಯಿರುವದಿಲ್ಲ. ಗುರಿಯಿಲ್ಲದೆ ಹೊಡೆಯುವದರಿಂದ ಎಲ್ಲವು ಹುಸಿಯುವುದು. ಅದರಿಂದ ಪ್ರಯೋಜನವಂತೂ ಇಲ್ಲ, ಆದರೆ ಅನಿಷ್ಟ ಪರಂಪರೆಯು ಮಾತ್ರ ಉಂಟಾಗುವದು. ಇಂತಹ ಅನರ್ಥಗಳಿಗೆ ಎಡೆಗೊಡದಂತೆ ಏರ್ಪಾಟು ಮಾಡುವದು ಪರಿಷತ್ತು ಕೂಡಿಸುವವರ ಆದ್ಯಕರ್ತವ್ಯವು. ಕೀಳಾದ ದಾರಿಯನ್ನು ತೊರೆದು, ಮೇಲಾದ ದಾರಿಯನ್ನು ಹಿಡಿಯುವುದು ಸಂಪಾದಕರ ಶ್ರೇಯದ ಮಾರ್ಗವು.

ವೃತ್ತಪತ್ರಗಳು ನಾಡಿನ ಹಿತವನೆಸಗಬೇಕಾದರೆ, ಸಂಪಾದಕರು ಸುಶಿಕ್ಷಿತರೂ-ಸುಸಂಸ್ಕೃತರೂ, ನಿಷ್ಪಕ್ಷಪಾತಿಗಳೂ, ವಿಶಾಲ ದೃಷ್ಟಿಯುಳ್ಳವರೂ ಇರಬೇಕಾಗುವದು. ಸಾಹಿತ್ಯಶಾಸ್ತ್ರ, ಸಮಾಜಶಾಸ್ತ್ರ, ಆರೋಗ್ಯಶಾಸ್ತ್ರ, ಧರ್ಮಶಾಸ್ತ್ರ, ಜ್ಯೋತಿಷ್ಯಶಾಸ್ತ್ರ ವೈದ್ಯಶಾಸ್ತ್ರ, ರಾಜನೀತಿ ಇವೇ ಮೊದಲಾದವುಗಳ ಪರಿಚಯವು ಅವರಿಗೆ ಚನ್ನಾಗಿ ಇರಬೇಕಾಗುವದು. ಪ್ರಪಂಚದ ಜ್ಞಾನ, ನಿರೀಕ್ಷಣಶಕ್ತಿ, ವಿಷಯನಿರೂಪಣಶಕ್ತಿ ಇವೇ ಮೊದಲಾದವುಗಳಾದರೂ ಅವರಿಗೆ ಬೇಕೇ ಬೇಕು. ಉಚ್ಚವಾದ ಭಾವನೆಯುಳ್ಳವನೇ ಉತ್ತಮವಾದ ಕಲ್ಪಕನೇ ಉದಾರವಾದ ಆಶಯವುಳ್ಳವನೇ ಸಂಪಾದಕನಾಗಬಲ್ಲನು. ಬ್ರಹ್ಮನ ಸೃಷ್ಟಿಗಿಂತಲೂ ಅವನ ಸೃಷ್ಟಿಯು ವಿಚಿತ್ರವಾಗಿರುವದು. ಹೊಸ ಸೃಷ್ಟಿಯನ್ನು ನಿರ್ಮಿಸುವ ಸಾಮರ್ಥ್ಯವಿರಬೇಕಾದರೆ, ಅವನೆಂತಹ ದಿವ್ಯ ಪುರುಷನಾಗಿರಬೇಕು? ಈಗಿನ ಪರಿಸ್ಥಿತಿಯ ಕಡೆಗೆ ನೋಟವನ್ನು ನೀಡಿರಿ ಎರಡು ಮೂರು ಹೊತ್ತಿಗೆಗಳನ್ನು ಓದಿದವನು ಸಂಪಾದಕನಾಗಬಲ್ಲನು. ಜಗತ್ತೆಂದರೇನು, ಅದನ್ನು ಎತ್ತ ಜೀವತೆಯಲ್ಲಿ ಸಾಗಿಸಿಕೊಳ್ಳಬೇಕೆಂಬುದು ಕೂಡ ಅವನಿಗೆ ಗೊತ್ತಿರುವದಿಲ್ಲ. ಇಂಥವರು ಸಂಪಾದಕರಾದರೆ ಗದ್ದಿಗೆಯ ಮೇಲಿಂದ ಲಕ್ಕವ್ವನನ್ನು ತಳ್ಳಿ (ಲಕ್ಷ್ಮೀದೇವಿಯನ್ನು ತಳ್ಳಿ) ಅಕ್ಕವ್ವನನ್ನು (ಅಧಿಮಾಯೆಯನ್ನು) ಕೂಡಿಸಿದಂತೆಯೇ ಸರಿ. ಮೋದದ ಸಾಮ್ರಾಜ್ಯವಡಗಿ, ಖೇದದ ಖ್ಯಾತಿಯು ಎಲ್ಲೆಡೆಯಲ್ಲಿಯೂ ಹಬ್ಬುವದು. ಸುಖದ ಸುಮಗಳು ಬಾಡಿ, ಸಂಕಟದ ಕಂಟಕಗಳು ಕಂಗೊಳಿಸುವವು. ಇದರ ಕಡೆಗೆ ಪರಿಷತ್ತಿನ ಲಕ್ಷ್ಯವು ಹರಿಯ ಬೇಕಲ್ಲವೇ. ಇಂತಹ ಪರಿಸ್ಥಿತಿಯು ಪರಿಹಾರವಾದ ಹೊರತು ಆಶೆಯಿಲ್ಲ. ಉದಾರ ಚರಿತರಲ್ಲದ ಜನರು ಸಂಪಾದಕತ್ವದ ಸಿಂಹಾಸನವನ್ನು ಏರಿದರೆ, ಕೀಟಕಗಳು ಹೂಗಳನ್ನು ತಿನ್ನುವಂತೆ, ಅವರು ಸಮಾಜವನ್ನು ಭಕ್ಷಿಸಿ ಬಿಡುವರು. ಇಂತಹ ಕೀಟಕಗಳನ್ನು ಇಲ್ಲದಂತೆ, ಮಾಡುವುದು ಪರಿಷತ್ತಿನ ಕೆಲಸವು.

ಪರಿಷತ್ತಿನ ಮುಂದೆ ನಮಗೆ ಸರಿ ತೋರುವ ಕೆಲವು ಸೂಚನೆಗಳನ್ನು ಇಡಬೇಕೆನ್ನುವೆವು. ಸಂಪಾದಕರ ಶಿಕ್ಷಣದ ಸಲುವಾಗಿ ಒಂದು ಮಧ್ಯವರ್ತಿ ಶಾಲೆಯನ್ನಾಗಲಿ ವಿದ್ಯಾಲಯವನ್ನಾಗಲಿ ಸ್ಥಾಪಿಸುವುದು ಅತ್ಯಾವಶ್ಯಕವು. ಅದರಲ್ಲಿಯ ಅಭ್ಯಾಸ ಕ್ರಮವು ವಿಸ್ತೃತವಾದುದೂ, ಉದಾರವಾದುದೂ ಇರತಕ್ಕದ್ದು. ಬೇರೆ ಬೇರೆ ಧರ್ಮಗಳ ಜ್ಞಾನವನ್ನಾದರೂ ಚನ್ನಾಗಿ ಮಾಡಿ ಕೊಟ್ಟು, ವಿದ್ಯಾರ್ಥಿಗಳಿಗೆ ಎಲ್ಲ ಧರ್ಮಗಳ ತಿರುಳು ಒಂದೇ ಇರುವದೆಂಬುದನ್ನು ಮನಗಾಣಿಸಿ ಕೊಡಬೇಕು. ವೃತ್ತಪತ್ರಗಳ ಧ್ಯೇಯವು ಮನುಷ್ಯನ ಮಾನವಕೋಟಿಯ ಸಂಸಾರವು ಸುಖಮಯವಾಗಬೇಕೆಂಬುದೇ ಇರುತ್ತದೆಂದು ಅವರಲ್ಲಿ ದೃಢನಂಬಿಗೆಯನ್ನುಂಟು ಮಾಡಬೇಕು. ಜ್ಞಾನದ ಭಾಂಡಾರಕ್ಕೆ ಸಾಧನವಾದ ಒಂದು ಮಧ್ಯವರ್ತಿ ಪುಸ್ತಕಾಲಯವನ್ನಾದರೂ ಏರ್ಪಡಿಸಬೇಕು. ಪುಸ್ತಕಾಲಯಗಳಲ್ಲಿ ಬೇರೆ ಬೇರೆ ವಿಷಯಗಳ ಮೇಲಿನ ಪುಸ್ತಕಗಳು ಹೇರಳವಾಗಿರಬೇಕು. ವ್ಯಾಪಾರ, ಕಲಾಕೌಶಲ್ಯ, ಗಾಯನಶಾಸ್ತ್ರ ಇವುಗಳ ಮೇಲಿನ ಪುಸ್ತಕಗಳಾದರೂ ಬೇಕು. ಹೀಗೆ ಏರ್ಪಾಡು ಮಾಡಿದರೆ, ಕರ್ನಾಟಕದ ಕಲ್ಯಾಣವಾಗುವುದು. ಇದರ ಬಗ್ಗೆ ತಜ್ಞರೆಲ್ಲರೂ ಕೂಡಿ, ವಿಚಾರ ಮಾಡಿ, ಮಾಡಬೇಕಾದುದನ್ನು ತೀವ್ರವಾಗಿ ಮಾಡಬೇಕೆಂದು ಪ್ರಾರ್ಥನೆ.

"ದೇವರು ನಿನ್ನ ಮೇಲೆ ಕೃಪೆ ಮಾಡಬೇಕೆಂಬ ಇಚ್ಛೆಯಿದ್ದರೆ ಆತನಿಂದುತ್ಪನ್ನವಾದ ಪ್ರಾಣಿಮಾತ್ರಕ್ಕೂ ಉಪಕಾರ ಮಾಡು; ಮತ್ತು ಅವರ ಕೂಡ ಉದಾರತನದಿಂದ ನಡೆದುಕೋ. ಅರಸಾಳುಗಳ ಸ್ನೇಹದ ಮೇಲೂ, ಹುಡುಗರ ಮಧುರವಾದ ಧ್ವನಿಯ ಮೇಲೂ, ವಿಶ್ವಾಸವಿಡಬೇಡ. ಅವು ಸ್ವಲ್ಪ ದಿವಸ ಹೋಗುವದರೊಳಗೆ ಒಡೆದು ಕೆಡುತ್ತವೆ"

ಕರ್ನಾಟಕ ನಾಟಕಗಳು.

ಕರ್ನಾಟಕ ಸಾಹಿತ್ಯದ ಮೆಲ್ಲಡಿಯ ಮೃದುಗತಿಯಂತೆ ಸಾಹಿತ್ಯಾಂಗವಾದ ಕರ್ನಾಟಕ ನಾಟಕ ಗ್ರಂಥಗಳೂ ಒಂದೊಂದಾಗಿ ಮುಂದೆ ಬರುತ್ತಿವೆ. ಗ್ರಂಥಕರ್ತರಿಗೆ ಭಾಷಾಜ್ಞಾನವಿರಲಿ; ಇಲ್ಲದಿರಲಿ; ಕರ್ನಾಟಕ ನಟರ ಯೋಗ್ಯತೆಯು ತಿಳಿಯಲಿ; ತಿಳಿಯದಿರಲಿ; ಅಂತೂ ಗ್ರಂಥಗಳು ನಮ್ಮಲ್ಲಿ ಆಗುತ್ತಿವೆ; ಕಂಪನಿಗಳು ಅವುಗಳನ್ನು ಬಿಡದೆ ಆಡತೊಡಗಿ ಆಡುತ್ತಿವೆ. ಮುಖ್ಯವಾಗಿ, ಗ್ರಂಥಕಾರರ ದೃಷ್ಟಿಯಿರುವುದು,— 'ಕಂಪನಿಗಳು ಇವುಗಳನ್ನು ಆಡಿಯಾವೇ?' ಎಂಬುದಷ್ಟೇ ಅಷ್ಟೇ. ಕಂಪನಿಗಳೂ, 'ಜನರು ಈ ನಾಟಕಕ್ಕೆ ದುರುಳಾಪರೇ!' ಎಂಬುದಷ್ಟೇ ಅಷ್ಟೇ. ಹೊರತಾಗಿ ಶುದ್ಧವಾದ ಭಾಷೆ, ಲಕ್ಷಣ ಯುಕ್ತವಾದ ಕವಿತೆಗಳ ಕಡೆಗೆ ದೃಷ್ಟಿ ಇಟ್ಟು, ಇವನ್ನು ಒಂದು ಸಾಹಿತ್ಯರತ್ನವನ್ನಾಗಿ ಮಾಡಬೇಕೆನ್ನುವ ಕವಿಗಳು ಕಡಿಮೆ. ಕತ್ತಲಿಸಿ, ಉತ್ತರ ಕರ್ನಾಟಕದ ಕೆಲಕೆಲವು ನಾಟಕ ಗ್ರಂಥಗಳನ್ನು ಓದಿ ನೋಡಿದರಂತೂ,—ಹಾಡುಗಳಲ್ಲಿ;—ರಾಗದ ಮಾತುಗಳೂ; ಪುರಾಣ ಕಥೆಯಲ್ಲಿ;—ನವೀನ ಕಥಾಸಂವಿಧಾನವೂ ಕುಂದಿಕೊಂಡಿರುವಂತೆ ಭಾಸವಾಗುತ್ತಿದೆ. ಉದಾಹರಣೆಗಾಗಿ,— 'ಪಾದುಕಪಟ್ಟಾಭಿಷೇಕ'. ಇದು ರಾಮಾಯಣದ ಒಂದು ಭಾಗ. ರಾಮಾಯಣವನ್ನು ಓದದವರೂ, ತಿಳಿಯದವರೂ ಎಲ್ಲಿಯಾದರೂ ತೀರ ಅಪೂರ್ವವೇ ಅಷ್ಟೇ. ಹಾಗಿದ್ದರೂ ಈ 'ಪಟ್ಟಾಭಿಷೇಕ' ದಲ್ಲಿ, ಕವಿಯ ಕಲ್ಪನಾ ಚಾತುರ್ಯದಿಂದ ಎಂತೆಂತಹದೋ ಅಪೂರ್ವ ಘಟನಾವಳಿಗಳಾಗಿ ಹೋಗಿವೆ 'ಸೂರ್ಯವಂಶದಲ್ಲಿ ಹುಟ್ಟಿದ ದಶರಥ ಮಹಾರಾಜ, ಕೊನೆಗಾಲದಲ್ಲಿ, ವಚನಭ್ರಷ್ಟ!' 'ರಥದ ಗಾಲಿಗೆ ಕೈ ಹಚ್ಚಿ, ಪತಿಯ ಪ್ರಾಣವನ್ನು ಉಳುಹಿದರ ಮೂಲಕ, 'ಸತಿ' 'ಸಾಧ್ವಿ' ಎಂದು ಕೀರ್ತಿಗೊಂಡ ಕೈಕೆಯೀದೇವಿಯ ಬಾಯಿಯಲ್ಲಿ, ಕೊನೆಗೆ ಪತಿಯ ವಿಷಯದಲ್ಲಿಯೇ 'ಛೀ! ಥೂ!' ಎಂಬ ಕಠೋರ ಅಪಶಬ್ದ. ಇವೂ ಹಾಗಿರಲಿ! ಸಾಮಾನ್ಯ ಪಾತ್ರ ವರ್ಗಕ್ಕೆ ಸೇರಿದ ಮಾರ್ವಾಡೀ ಸೇಟನೊಬ್ಬನು, ಶ್ರೀ ರಾಮನ ಪಟ್ಟಾಭಿಷೇಕಕ್ಕೆ ಅಡ್ಡವಾಗಿ ನಿಂತುದನ್ನು ಕಂಡು, ಕ್ರುದ್ಧನಾಗಿ, ಕವಿ ಹೇಳಿಸಿರುವಂತೆಯೇ, ಒಂದು ವೇಳೆ, ವಾಚಾಮಗೋಚರವಾಗಿ ಬೈದೆ ಇರಬಹುದಾದರೂ, ಅಂತಹ ಬೈಗಳನ್ನು ಬಹಿರಂಗವಾಗಿ, ನೂರಾರು ಮಂದಿ ಸಭ್ಯಸ್ತ್ರೀಯರ ಮುಂದೆ, ಪದೇ ಪದೇ, ಅಸಹ್ಯ ಬರುವಂತೆ, ನಟವರ್ಗದವರಾಡುವದು, ಹೇಗೆ ನೋಡಿದರೂ ಯುಕ್ತವೆಂದು ನಮಗೆ ತೋರುವದಿಲ್ಲ. ನಮ್ಮ ಕವಿಗಳೇನು? ಅಭಿನಯಪೂರ್ವಕವಾದ 'ರಕಾರ', 'ಮ'ಕಾರದ ಬೈಗಳನ್ನು, ನಮ್ಮ ಸ್ತ್ರೀಯರು, ದುಡ್ಡು ಕೊಟ್ಟು 'ರಂಗಭೂಮಿ'ಯಿಂದ ಕಲಿಯಲೆನ್ನುವರೇ? ನಿಜವಾದ ನೀತಿಯನ್ನು, ರಂಗಭೂಮಿಯ ಮೂಲಕ, ಅವರಿಗೂ, ಇತರರಿಗೂ ತಿಳಿಸಬೇಕೆನ್ನುವರೇ?

ಮನುಷ್ಯ ಜೀವಕ್ಕೆ ಮುಖ್ಯವಾಗಿ ಬೇಕಾದುದು "ನೀತಿ" "ರಂಗಭೂಮಿ"ಯು ಹುಟ್ಟಿರುವುದು "ನೀತಿ"ಯ ಪ್ರಚಾರಕ್ಕೆ, "ನೀತಿ"ಯ ಪ್ರಚಾರವು ಒಳ್ಳೆಯ ನಿದರ್ಶನಗಳಿಂದಲೂ ಆಗುತ್ತದೆ; ಕೆಟ್ಟ ನಿದರ್ಶನಗಳಿಂದಲೂ ಆಗುತ್ತದೆ. ಕೀಚಕಾದಿ ಕಾಮುಕರ ನಿದರ್ಶನಗಳು ಕೆಟ್ಟವೇ ಆದರೂ, "ಪರಸ್ತ್ರೀಲಾಂಪಟ್ಯ"ದ ದುಷ್ಪರಿಣಾಮವು ಅಂತಹವುಗಳಿಂದಲೂ ಸ್ಪಷ್ಟವಾಗುತ್ತಿದೆ. ಆದರೆ, "ಸಾರಂಗಧರ" "ವಿಷಮ ವಿವಾಹ" ಇಂತಹವುಗಳನ್ನೂ ಈ ಸಾಲಿಗೇ ಸೇರಿಸಬಹುದೇ? ಸುಜ್ಞರಿಗೆ ಈ ಕಥಾನಕಗಳಲ್ಲಿರುವ ನೀತಿಯ ರಹಸ್ಯವು ಕನ್ನಂತೆ ವೇದ್ಯವಾಗಬಹುದೇನೋ ನಿಜ; ಆದರೆ ಇವೇ ಕಥಾನಕಗಳ ಬಗೆ ಬಗೆಯ ದೃಶ್ಯಗಳು ಸಮಾಜದಲ್ಲಿರುವ ಅಜ್ಞರನ್ನು ಅನೀತಿ ಮಾರ್ಗಕ್ಕೆ ಎಳೆಯವೆಂದು ಪಾಪಾದರೂ ಹೇಗೆ ಹೇಳುವ? ಅಷ್ಟೇ ಅಲ್ಲ; ವೃದ್ಧರಾಜನೊಬ್ಬನ ಪಶುವೃತ್ತಿಯ ಮನೋಧರ್ಮವನ್ನು, ಪ್ರೇಕ್ಷಕ ವರ್ಗದ ಮುಂದ ತಂದು ತೋರುವುದಾಗಲೀ; ಯಾರನ್ನು ನಾವು ಹೆತ್ತ ತಾಯೆಂದೇ ತಿಳಿಯುತ್ತೇವೆಯೋ, ಅಂತಹ ಚಿಕ್ಕ ತಾಯಿಯೊಬ್ಬಳನ್ನು "ಕಾಮಾಂಧತೆ"ಯ ಕಲ್ಲಿಷ್ಟಲಿನಿಂದ ಉಂಟು ಮಾಡಿ; ಅದಕ್ಕೆ ಬಗೆ ಬಗೆಯ ಬಣ್ಣವನ್ನು ಕೊಟ್ಟು, ಕೇವಲ ಪ್ರೇಕ್ಷಕರ ಸಂತೋಷಾರ್ಥವಾಗಿಯೇ ಅಭಿನಯಿಸುವುದಾಗಲೀ; ಸಭ್ಯತೆಯ ಅಭಿರುಚಿಗೆ ಎಂದಿಗೂ ಒಪ್ಪತಕ್ಕದ್ದಲ್ಲ. ಲೋಕವ್ಯವಹಾರದಲ್ಲಿ ಪ್ರೇಮ-ಸಂಘಟನೆಗಳೆಷ್ಟೋ ನಡೆಯುವವಾದರೂ, ಕಿರುಮನೆಯ ಹೂದೋಟದ ಅಂತರಂಗದ ಘಟನೆಗಳನ್ನು, ಯಾರಾದರೂ ಹತ್ತು ಜನರ ಮುಂದೆ ಎಂದಾದರೂ ಬಹಿರಂಗಪಡಿಸಲು ಇಚ್ಛಿಸುವುದುಂಟೇ? ಅಂತಹದರಲ್ಲಿ "ಕಾಮಾಂಧತೆ"ಯ ಈ ದೃಶ್ಯ! ಪ್ರದರ್ಶನಕ್ಕಾಗಲೀ,—ಕೊನೆಗೆ ಪ್ರಚಾರಕ್ಕೆ ಕೂಡ,— ಅಸ್ಪದವನ್ನೀಯುವುದೆಲ್ಲಿ?

ನಮ್ಮ ನಾಟಕ ಗ್ರಂಥಕರ್ತೃಗಳು, ಇಂತಹ ನಾಟಕಗಳನ್ನು ಬಿಟ್ಟು ಬಿಡುವದೇ ಒಳ್ಳಿದು; ಅಷ್ಟೇ ಅಲ್ಲ; ಪುರಾಣೋಕ್ತ ಮಹಾ ಪುರುಷರನ್ನೂ, ಅವರ ನಡೆವಳಿಯನ್ನೂ, ತಮ್ಮ ಅಧಿಕ ಪ್ರಸಂಗದಿಂದ, ದೂರಿಗೂ, ಅಪವಾದಕ್ಕೂ ಗುರಿ ಮಾಡದೆ, ಇದ್ದಂತೆಯೇ ಇಡುವುದೂ ಒಳ್ಳಿದು. ಮತ್ತೇನೆಂದರೆ,—ಕೆಲವು ಗ್ರಂಥಕಾರರಲ್ಲಿ ಇನ್ನೊಂದು ದೊಡ್ಡ ದೋಷವುಂಟು. ಯಾವದು? ಸಂವಿಧಾನದಲ್ಲಿ ಪರಸ್ಪರವಿರೋಧ. ಉದಾಹರಣೆಗಾಗಿ "ವಿಷಮ ವಿವಾಹ" ವನ್ನೇ ತೆಗೆದುಕೊಳ್ಳುವ. ಇದರಲ್ಲಿ ಎಲ್ಲವೂ "ನವೀನ ಶತಮಾನ" ದ ಕತೆ "ಸೈಕಲ್," "ಲಾಯರ್‌ಬ್ರೀಫ್," "ಕರೆಯುವ ಗಂಟೆ," ಹ್ಯಾಟ್ ಬೂಟಿನ "ಇಂಗ್ಲಿಷ್ ವಿದೂಷಕ!" ಇತ್ಯಾದಿ. ಹಾಗದರಿದು "ಆಂಗ್ಲರಾಜ್ಯಭಾರ" ಕಾಲದ ಮಾತೇ? ಆದರೆ, ರಾಜಸ್ಥಾನದಲ್ಲಿ, ಈ ಶತಮಾನದಲ್ಲಿ "ವಿದೂಷಕ"ನೆಂಬವನೊಬ್ಬನೂ ಇರುವುದುಂಟೇ? ವನಪಾಲಕರು ಬಂದು, ನೂರೆಯಲ್ಲಿ ಮೊರೆ ಇಟ್ಟು, ದೊರೆಗಳು "ಶಿಕಾರಿ"ಗೆ ಹೊರಡುವುದುಂಟೇ? ಮೇಲಾಗಿ ಬಹಿರಂಗವಾದ ವಿಚಾರಣೆಗಿಚಾರಣೆಯೊಂದೂ ಇಲ್ಲದೆ, ಏಕಾಏಕಿ ಮಗನ ತಲೆ ಕಡಿಯುವದಕ್ಕೋ, ಅಥವಾ ಇತರ ಯಾವುದೋ ಒಂದು ಕಠಿನ ದಂಡನೆಗೆ ಗುರಿಪಡಿಸುವದಕ್ಕೋ ಅಪ್ಪಣೆಕೊಟ್ಟ ಆ ದೊರೆ ಅವನೇನು ಬ್ರಿಟಿಶರ ಆಶ್ರಿತನೇ? ಸ್ನೇಹಿತನೇ? ಸ್ವತಂತ್ರನೇ ಅಥವಾ ಕಾಡಿಗೆ, ಕೊಲೆಗಾರರೊಡನೆ ಅಟ್ಟುವ ಈ ಪದ್ಧತಿ ಯಾವದೂ ಯಾವ ಶತಮಾನದ್ದು? ಎಂಬೀ ಸಂದಿಗ್ಧಗಳು ಇರತಕ್ಕದ್ದಲ್ಲ.

ಮೈಸೂರಿನ ಕೆಲವು ನಾಟಕ ಗ್ರಂಥಕರ್ತೃಗಳು, ಅನೇಕ ನಾಟಕಗಳನ್ನು ಬರೆದಿದ್ದಾರೆ. ರಾಮಾಯಣ, ಭಾರತ, ಭಾಗವತಾದಿಗಳಿಂದೆತ್ತಿ ಬರೆದ ನಾಟಕಗಳೂ ಇವುಗಳಲ್ಲಿ ಹಲವುಂಟು. ಆದರೆ ಇವರು, ಕಥಾಸಂವಿಧಾನವನ್ನು ಕೆಡಿಸಿಲ್ಲ; ಪಾತ್ರವರ್ಗದ ರೀತಿನೀತಿಯನ್ನು, ತಮಗೆ ಬೇಕಾದಂತೆ, ಹೆಚ್ಚು ಕಡಿಮೆ ಮಾಡಿಲ್ಲ. ಕವಿತೆಯೂ ಭಾಷಾಶುದ್ಧಿಯೂ ಮೇಲೆನ್ನಬಹುದಾಗಿದೆ. ಉತ್ತರ ಕರ್ನಾಟಕದ ನಾಟಕಕರ್ತೃಗಳು, ಇವರಲ್ಲಿ ಕಂಡುಬರುವ ಈ ಗುಣಗಳನ್ನು ಗ್ರಹಿಸಿ, ತಮ್ಮ ಕಲ್ಪನಾಚಾತುರ್ಯವನ್ನೂ ಸೇರಿಸಿ, ಕರ್ನಾಟಕ ಸಾಹಿತ್ಯಸೇವೆಯನ್ನೂ, ರಂಗಭೂಮಿಯ ಸೇವೆಯನ್ನು ಮಾಡಲೆಂದು ನಮ್ಮ ಹಾರೈಕೆ.

(ಕುಮುದ.)

ತಾರೀಖು ೧ ಜೂನ ೧೯೨೬ ದಿಂದಾ ೧ ಜುಲೈ ೧೯೨೬ ವರೆಗೆ ಆದ ಕಾಂಗ್ರೆಸ ಮೆಂಬರ ಜಾತಿವಾರ ಪತ್ರಿಕೆ.

ಬಾಗಲಕೋಟೆ ಮತ್ತು ಮುದ್ದೇಬಿಹಾಳದಲ್ಲಿ ನನಗೆ ಸಹಾಯ ಮಾಡಿದ ಜನರಿಗೆ ನನ್ನ ಕೃತಜ್ಞತೆಯನ್ನು ವ್ಯಕ್ತ ಮಾಡುತ್ತೇನೆ. ಇದರಂತೆ ಉಳಿದ ತಾಲೂಕಿನ ಜನರಾದರೂ ಸಹಾಯ ಮಾಡುವರೆಂದು ನೆರೆನಂಬಿದ್ದೇನೆ.

ಕಾಂಗ್ರೆಸ್ ಮೆಂಬರ ಆದ ಸಂಖ್ಯೆ ಬಾಗಲಕೋಟೆ.

ಬ್ರಾಹ್ಮಣ, ೨೮೦ ವೈಶ್ಯ ೧೨ ಜೈನ ೩ ಲಿಂಗಾಯತ ೨ ಗುಜ್ಜರ ೧೩ ಮಾರವಾಡಿ ೧೪ ಸಾಳಿ ೧೦ ಮರಾಠ ೩ ಪತ್ತಾರ ೨ ಭಾವಸಾರಕ್ಷತ್ರಿಯ ಮುಸಲ್ಮಾನ ೩ ಅಂತು ೩೪೫.

ಮುದ್ದೇಬಿಹಾಳ: ಬ್ರಾ. ೫೭ ಲಿಂಗಾಯತ ೧೭ ಮಾರವಾಡಿ ೧ ಕುಂಬಿ ೧ ಮರಾಠ ೧ ಪತ್ತಾರ ೨ ೨ ಅಯ್ಯರ ೧ ಜ್ಯಾಲಿಗಾರ ೧ ಮುಸಲ್ಮಾನ ೮ ಅಂತು ೯೦.

ಶ್ರೀನಿವಾಸ ನಿರಲಕೇರಿ.

ವರ್ತಮಾನ ಸಾರ

ಇಹವೃತ್ತ.

ಈ ತಾಲೂಕಿನಲ್ಲಿ ಚಿತ್ತಲಿಕ್ಕೆ ಸಾಕಷ್ಟು ಮಳೆಯಾಗಿದೆಂದು ವಾರ್ತೆ ಬಂದಿದೆ. ಹವೆಯಲ್ಲಿ ತಂಪಾದರೂ ಹುಟ್ಟಿರುವದು. ಒಕ್ಕಲಿಗರು ಭರದಿಂದ ಬೀಜ ಬಿತ್ತಹತ್ತಿದ್ದಾರೆ

ನಗರಸಭೆಯ ಚುನಾವಣೆಯು ಸಮೀಪಿಸಿದ್ದರಿಂದ, ಉಮೇದಾರರು ಮತದಾರರನ್ನು ಕೂಡಿಸುವದರಲ್ಲಿ ದಕ್ಷರಾಗಿದ್ದಾರೆ. ಆದರೆ ಬೇರೆಡೆ ಪ್ರಸಿದ್ಧವಾದ ಮತದಾರರ ಪತ್ರದಂತೆ ಉಮೇದಾರರು ಮತದಾರರನ್ನು ಯಾವರೀತಿಯಿಂದಲೂ ಭಿಡೆಯುರವತ್ತು ಗಳಗೀಡು ಮಾಡಬಾರದೆಂದೂ, ಮತದಾರರೂ ಉಮೇದವಾರರಿಗೆ ಯೋಗ್ಯರೀತಿಯಿಂದ ಸಂಭಾವನೆ ಮಾಡಬೇಕೆಂತಲೂ ಸೂಚಿಸುತ್ತೇವೆ

ಶಾಸ್ತ್ರೀಯ ವಿಷಯದ ಮೇಲ್ವಿಚಾರಕರು (ಸಾಯಿನ್ಸ ಇನಸ್ಪೆಕ್ಟರ) ಇಲ್ಲಿಗೆ ದಯಮಾಡಿಸಿ ಬಸವೇಶ್ವರ ಹಾಗೂ ನಗರಸಭೆಗಂಕಿತವಾದ ಆಂಗ್ಲಶಾಲೆಗಳನ್ನು ಸಂದರ್ಶಿಸಿದರು

ಹಳಪೇಟೆಯಲ್ಲಿ ತಮ್ಮ ಮನೆಯಾಮುಂದೆ ಗಟಾರನೀರು ನಿಂತು ಕೊಳಸುನಾರುತ್ತದೆ ಮತ್ತು ರೋಗದ ಉಪದ್ರವವಾಗುತ್ತದೆ; ಎಂದು ನಗರಸಭೆಗೆ ೨-೩ ಸಾರೆ ಕೇಳಿಕೊಂಡರೂ ಪ್ರಯೋಜನವಾಗಲಿಲ್ಲ, ಕಡೆಗೆ ಅರ್ಜಿಮಾಡಲು, ನಗರಸಭೆಯ ಅಧಿಕಾರಸ್ಥರು ಬಂದು ಹೀಗೆ ಮೋಲಿನವರಿಗೆ “ಅರ್ಜಿಕೊಟ್ಟರೆ ನಮಗೇನೂ ಅಂಜಿಕೆಯಿಲ್ಲ” ಎಂದು ಮುಂತಾಗಿ ಶ್ರೀ ಸರಸಪ್ಪ ಮಾಸಪ್ಪಾ ಕಲಾದಗಿಯವರು ನಮಗೆ ಪತ್ರಬರೆದಾರೆ ನಗರಸಭೆಯವರು ಇತ್ತಕಡೆಗೆ ಲಕ್ಷಕೊಡುವರೋ?

ಮುಂಬೈ ಕರ್ನಾಟಕ

ಶಿಶು ಸಂ...ರ್ಗನ್ನು ತೆರೆಯುವದಕ್ಕೆ ಆಗಮಿಸಿದ ನಾಮದಾರ ಜಾಧವ ರಾವಯರಿಗೆ ಜಿಲ್ಲೆ ಲೋಕಲಬೋರ್ಡಿನವರೂ, ಲಿಂಗಾಯತ ವಿದ್ಯಾ ಸಂಘದವರೂ, ನಗರ ಸಭೆಯವರೂ, ಮರಾಠಾ ಸಮಾಜದವರೂ, ಅಸ್ಪೃಶ್ಯರೂ ಮಾನ ಪತ್ರಗಳನ್ನರ್ಪಿಸಿದರು. ಜಾಧವರಾಯರ ಉತ್ತರವು ಆಸ್ಥೆಯಿಂದು ಸಮಾಧಾನಕರವಾಗಿದ್ದಿತ್ತೆಂದು ತಿಳಿದು ಬರುತ್ತದೆ.

ಧಾರವಾಡದಲ್ಲಿ ಶ್ರೀ ವಿದ್ಯಾರಣ್ಯ ಪುಣ್ಯತಿಥಿಯು ಆಚರಿಸಲ್ಪಟ್ಟಿತು ಪ್ರಾತಃ ಉದಕ್ಕೆ ಶ್ರೀ ನಾಗೇಶ ಶಾಸ್ತ್ರಿಗಳವರ ಪ್ರವಚನ ಸಾಯಂಕಾಲದಲ್ಲಿ ಶ್ರೀ ಮಧ್ವದೇಶಪಾಂಡೆಯವರ ಕೀರ್ತನ ಹಾಗೂ ನಿಬಂಧ ವಾಚನ ಮುಂತಾದವುಗಳಾದವು

ಬೆಳಗಾವಿಯ ವಕೀಲರಾದ ಶ್ರೀಯುತ ಪುಂಡಲಿಕಪ್ಪಾ ಅಂಗಡಿ ಎಮ್. ಎಲ್. ಸಿ. ಯವರಿಗೆ ಸರಕಾರದವರು ರಾವಬಹಾದ್ದೂರ ಪದವಿಯನ್ನರ್ಪಿಸಿದ್ದಾರೆ

ಮೈಸೂರು ಕರ್ನಾಟಕ

ಮೈಸೂರ ಸೀಮೆಯಲ್ಲಿ ಗೋವಧಾ ಪ್ರತಿಬಂಧಕ ಶಾಸನಗಳನ್ನು ಮಾಡಬೇಕೆಂಬ ವಿಚಾರವು ನ್ಯಾಯವಿಧಾಯಕ ಸಭೆಯಲ್ಲಿ ಚರ್ಚೆಗೆ ಬಂದಾಗ್ಗೆ “ನಾನು ಮಹಮ್ಮದೀಯನಾದಾಗ್ಯೂ, ಗೋ ಸಂರಕ್ಷಣೆಯಲ್ಲಿ ಪೂರ್ಣ ಸಹಾನುಭೂತಿಯುಳ್ಳವನಾಗಿದ್ದೇನೆ ಆದರೆ ದಿವಾನನಾಗಿದ್ದ ಮಾತ್ರ ಯಾವುದನ್ನ ಮಾಡಲು ಬಹಳ ಕಷ್ಟವಿರುವದರಿಂದ ಈ ನಿರೋಧಕ ಶಾಸನದ ಅವಶ್ಯಕತೆಯನ್ನೂ ಅನಾವಶ್ಯಕತೆಯನ್ನು ಕುರಿತು ಪರ್ಯಾಲೋಚಿಸುವದಕ್ಕಾಗಿ ಒಂದು ಕಮೀಟಿಯೋರ್ಪಡಿಸಲ್ಪಡುತ್ತಿದೆ” ಎಂದು ಸಭಾಧ್ಯಕ್ಷರಾದ ಶ್ರೀಯುತ ಮಿರ್ಜಾಯವರು ಅಪ್ಪಣೆ ಕೊಡಿಸಿದರು

ಮೈಸೂರಿನ ಹಿಂದಿನ ದಿವಾನರಾಗಿದ್ದ ಸರ್. ಬಾನರ್ಜಿಯವರು ಸಿಂಗಾಪೂರಕ್ಕೆ ತಲುಪಿದರು. ಅವರು ಇನ್ನು ಮೇಲೆ ಜಪಾನ ಅಮೇರಿಕೆಗಳಿಗೆ ಹೋಗಿ ಅಲ್ಲಿಯ ರಾಜಕಾರಣವನ್ನು ಅಭ್ಯಾಸ ಮಾಡುವವರು ದಿಲ್ಲಿಯ ಬ್ರಿಟಿಶ ಪಾರ್ಲಿಮೆಂಟಿನ' ಬರುವ ಚುನಾವಣೆಯಲ್ಲಿ 'ಕಾಮನ್ಸ' ಸಭೆಗೆ ಉಮೇದವಾರರಾಗಿ ನಿಲ್ಲಬೇಕೆಂದು ಅವರ ವಿಚಾರವಿದೆ.

ಪರದೇಶ ಶಿಷ್ಯವೃತ್ತಿಗಳ ಸಂಬಂಧವಾಗಿ ಮೈಸೂರು ದಿವಾನರು ಲೆ. ಕೌನ್ಸಿಲಿನಲ್ಲಿ ಹೇಳಿದು ದೇನಂದರೆ, ನಿರುದ್ಯೋಗವು ಬ್ರಾಹ್ಮಣರಿಗೂ ಬ್ರಾಹ್ಮಣೇತರರಿಗೂ ಸಮನಾಗಿದೆ. ಶಿಷ್ಯವೃತ್ತಿಗಳನ್ನಾಗಲೀ, ನೌಕರಿಯನ್ನಾಗಲೀ ಕೊಡುವ ಸಂಬಂಧದಲ್ಲಿ ಗುಣ ಮತ್ತು ಯೋಗ್ಯತೆಗಳ ಕಡೆಗೆ ಮಾತ್ರ ಗಮನಿಸುವದು ಅವಶ್ಯವಾಗಿದೆ.

ಹಿಂದುಸ್ಥಾನ.

ಕಲಿಕತ್ತೆಯಲ್ಲಿ ಎಲ್ಲ ಜಾತಿಯ ಹಿಂದುಗಳ ಒಂದು ಸಭೆಯು ಬೇಗನೇ ಜರುಗುವದು ಹಿಂದೂ ಸಮಾಜಕ್ಕೆ ಬಂದಿರುವ ಕಷ್ಟಗಳನ್ನು ನಿವಾರಿಸುವದೇ ಈ ಸಭೆಯ ಉದ್ದೇಶವಾಗಿದೆ.

ಸರೋಜಿನಿ ದೇವಿಯವರು ಬಂಗಾಳದಲ್ಲಿ ಸಂಚರಿಸಿ ಗ್ರಾಮಗಳಲ್ಲೆಲ್ಲಾ ಚರಕವನ್ನು ಪ್ರಚಾರಕ್ಕೆ ತರಬೇಕೆಂದು ಎಲ್ಲಾ ಸ್ತ್ರೀಯರಿಗೂ ಭೋಧಿಸುತ್ತಿರುವರು.

ಮುಂಬೈ ಇಲಾಖೆಯ ಒಕ್ಕಲತನದ ಪ್ರದರ್ಶನವು ಪುಣೆಯ ಬೇಸಾಯದ ವಿದ್ಯಾಲಯದ ಹೊಲಗಳಲ್ಲಿ ಅಕ್ಟೋಬರ ೧೦ ನೇ ತಾರೀಖಿನ ತೆರೆಯಲ್ಪಡುವದು. ಅದರಲ್ಲಿ ಪೈರಿನ ಪಟಾಂಗಣ ಉಪದ್ರವ ಪಟಾಂಗಣ, ನೀರಸುಧಾರಣೆಯ ಪಟಾಂಗಣ, ಹೀಗೆ ಬೇರೆ ಬೇರೆ ಪಟಾಂಗಣಗಳ ಏರ್ಪಾಟು ಆಗುವವು.

ಡಾ. ಪರಾಂಜಪೆಯವರ ಮಗಳಾದ ಕುಮಾರೀ ಶಕುಂತಲಾದೇವಿಗೆ ಸರಕಾರದವರು ಇಂಗ್ಲಂಡದಲ್ಲಿ ಅಭ್ಯಾಸ ಮಾಡಲು ಪ್ರತಿವರುಷ ೨೦೦ ಪೌಂಡು ಶಿಷ್ಯವೇತನವನ್ನು ಕೊಡುವದಾಗಿ ಗೊತ್ತು ಪಡಿಸಿದ್ದಾರೆ ಇದು ಮೂರು ವರ್ಷಗಳವರೆಗೆ ನಡೆಯುವದು ಇದಲ್ಲದೆ ಇಂಗ್ಲಂಡಕ್ಕೆ ಹೋಗಬರಲು ತಗಲುವ ೧ ನೇ ವರ್ಗದ ಖರ್ಚನ್ನು ಕೊಡುವರು. ಶಕುಂತಲೆಯು ತಂದೆಯಂತೆ ರ್‍ಯಾಂಗ್ಲರ ಳಾಗಿ ಬರುವಳು.

ಮುಂಬೈ ವಿಶ್ವವಿದ್ಯಾಲಯದ “ಸಿನೇಟ” ಸಭೆಯು ಕಾಲೇಜದಲ್ಲಿ ಮಾತೃಭಾಷೆಯ ಪ್ರವೇಶದ ವಿಷಯವಾಗಿ ವಿಚಾರ ಮಾಡಿ, ಕೆಳಗೆ ಬರೆದಂತೆ ನಿರ್ಣಯವಾಯಿತು ಪ್ರೀವಿಯಸ್ ವರ್ಗಕ್ಕೆ ಇಂಗ್ಲಿಶ, ಸಂಸ್ಕೃತ ಮಾತೃಭಾಷೆ ಈ ಮೂರು ವಿಷಯಗಳನ್ನು ಮುಖ್ಯವಾಗಿಟ್ಟಿದ್ದಲ್ಲದೆ ೪ ನೇ ವಿಷಯದಲ್ಲಿ (೧) ಗಣಿತ ಮತ್ತು ಶಾಸ್ತ್ರೀಯ ವಿಷಯ (೨) ಗಣಿತ ಮತ್ತು ಮಾತೃಭಾಷೆ (೩) ಮಾತೃ ಭಾಷೆ ಮತ್ತು ಇತಿಹಾಸ, ಈ ಮೂರುಗಳ ಪೈಕಿ ಯಾವದಾದರೊಂದು ಭಾಗವನ್ನು ತೆಗೆದುಕೊಳ್ಳತಕ್ಕದ್ದು. ಇಂಟರಮೀಜಿಯೇಟ ಪರೀಕ್ಷೆಗೆ, ಉಪಸಭೆಯವರು ಮಾಡಿದ ಠರಾವನ್ನೇ ಪಾಸುಮಾಡಿದರು

ಪ್ರಸಿದ್ಧ ಅಸಹಕಾರಿಗಳೂ ಮುಂಬಯಿ ವ್ಯಾಪಾರಸ್ಥರೂ ಆದ ಶ್ರೀ ಉಮರ ಸೋಭಾನಿಯವರು ಮೃತರಾದರೆಂದು ತಿಳಿಸಲು ನಮಗೆ ವಿಷಾದವೆನಿಸುತ್ತದೆ

ಪುಣೆಯಲ್ಲಿ ಸ್ಥಾನಿಕ ಸ್ವರಾಜ್ಯವೆಂಬ ನಾಟಕವಾಡುತ್ತಿದಾರೆ. ಮುಂಬರದಲ್ಲಿ ಬಹುಜನರು ಸ್ವಾರ್ಥಸಾಧಕರು; ನಾಗರಿಕರ ಮುಖಕ್ಕೊಡೆದ ಪಕ್ಕವನ್ನ ತೀರ ಕನಿಷ್ಠ ಮಾಡಿದ್ದರಿಂದ. ಅನೇಕ ಅಶಿಕ್ಷಿತರು ಮುಂಬರರಾಗುತ್ತಾರೆ. ಮ್ಯುನಸಿಪಾಲಿಟಿಯ ಕಾರಭಾರವು ಮಂದ ಮತ್ತು ಲಂಚತಿನ್ನುವದರಿಂದ ದೋಷ ಪೂರ್ಣವಾಗಿರುತ್ತದೆಂದು ನಾಟಕದಲ್ಲಿ ತೋರಿಸುವರು ಬಾಗಲಕೋಟೆಯ ಮ್ಯುನಸಿಪಾಲಿಟಿಯು ಹೀಗಾಗಲಿಕ್ಕಿಲ್ಲವಷ್ಟೇ.

ಪರದೇಶ.

ಮೊರೊಕ್ಕೊದಲ್ಲಿ ನಡೆದ ಯುದ್ಧದಲ್ಲಿ ರೀಫರ ಮುಖ್ಯಸ್ಥನಾದ ಅಬ್ದುಲ ಕರೀಮನನ್ನು ಫ್ರೆಂಚರು ಸೆರೆಹಿಡಿದರೂ ತಾಜರೂ, ರೀಫರೂ ವೆಜಾನ ಎಂಬಲ್ಲಿ ಇನ್ನೂ ಯುದ್ಧ ಮಾಡುತ್ತಿರುವರು. ಫ್ರೆಂಚರು ಸೆರೆಹಿಡಿದ ಅಬ್ದುಲ ಕರೀಮನು ನಿಜವಾದವನಲ್ಲವೆಂದು ಹೇಳುತ್ತಿರುವರು. ಇವರಿಗೆ ಬಹಳ ಗುಟ್ಟಿನಿಂದ ಯುದ್ಧ ಸಾಮುಗ್ರಿಗಳು ದೊರೆಯುತ್ತಿರುವವು.

ತುರ್ಕೀ ದೇಶದಪ್ರೆಸಿಡೆಂಟರಾದ ಕೆಮಾಲ ಪಾಶನನ್ನು ಕೊಲ್ಲಬೇಕೆಂದು ಒಳಸಂಚು ನಡೆಸಿದವರಲ್ಲಿ ೨೦೦ ಮಂದಿಯನ್ನು ಸೆರೆಹಿಡಿದಿರುವರು.

ಕೇವಲ ಕನ್ನಡಿಗರ ಸಲುವಾಗಿ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡತಕ್ಕಂಥ—

ಕನ್ನಡಿಗರ ಸಲುವಾಗಿ

ಮೋಟರವರ್ಗ.

ನಮ್ಮಲ್ಲಿ ಮೋಟರ ನಡೆಸುವದು, ಬಿಚ್ಚಿ ಕೂಡಿಸುವದು ಮತ್ತು ಒಳಗಿನ ಯಂತ್ರಗಳನ್ನು ದುರಸ್ತ ಮಾಡುವದು ಮುಂತಾದ ಎಲ್ಲ ಮಾಹಿತಿಯನ್ನು ಕನ್ನಡನುಡಿಯಲ್ಲಿಯೇ ಕೊಡುವದರಲ್ಲಿ ಬರುವದು. ಆದ್ದರಿಂದ ಕನ್ನಡಿಗರಿಗೆ ನಮ್ಮ ವರ್ಗದಿಂದ ಬಹಳೇ ಲಾಭವಾಗುವದು.

ಕೋರ್ಸ:— ಕೇವಲ ಒಂದೇ ತಿಂಗಳ. **" ಫೋರ್ಡ "** ಕಲಿಯಲಿಕ್ಕೆ ಫೀ ೭೦ ರು.

" ಫೋರ್ಡ " ಮತ್ತು " ಇಂಗ್ಲೀಶ " ಕೂಡಿ ಫೀ ೮೦ ರು. **ಮಾಹಿತಿ ತರಿಸಿಕೊಳ್ಳಿರಿ.**

ವಿಳಾಸ:— ಮ್ಯಾನೇಜರ ಕುಲಕರ್ಣಿ ಮೋಟರ ಸ್ಕೂಲ.

೪೯೫ ಶನಿವಾರ ಪೇಟ ಜಮುಖಂಡಿಕರವಾಡೆ. ಪುಣೆಶಹರ.

ಕನ್ನಡಿಗರ ಬಗ್ಗೆ ಸ್ಪೆಶಲ್ ವ್ಯವಸ್ಥೆ !!

ತ್ವರೆಮಾಡಿರಿ ! ತ್ವರೆಮಾಡಿರಿ !!



ಮೋಟಾರ ಡ್ರ್ರಾಯ್ವಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ಜ ಪೂರೈಸುವ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ವ್ಯವಸ್ಥೆಯು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣ ಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೆ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ **ಮೈಸೂರಿನಲ್ಲಿ** ಪ್ರಚುರವಾಗುತ್ತಲಿರುವವು. ಇವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ. ೩-೦-೦ ಪರಸ್ಥಳದವರಿಗೆ ಅಂಚೆವೆಚ್ಚ ಸೇರಿ ೩-೧೩-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ. ೧೫-೦-೦ ತಿಂಗಳಿಗೆ ೧-೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಯ್ಯ, ಮ್ಯಾನೇಜರ

ಸಾಧ್ವೀ ಮತ್ತು ಸಂಪದಭ್ಯುದಯಂ. ಮೈಸೂರು.

ಗೆಳೆಯರ ಗುಂಪಿನ.

ಕನ್ನಡ **ಸ್ವಧರ್ಮ.** ಮಾಸ ಪತ್ರಿಕೆ

ಸಂಪಾದಕ —ದ. ರಾ. ಬೇಂದ್ರೆ. ಬಿ. ಎ.

ಸಮಾಜದಲ್ಲಿ ಶಾಂತಿ ಪುಷ್ಟಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ. ೩-೦-೦

ಕಾರ್ಯದರ್ಶಿ. ಸ್ವಧರ್ಮ ಕಾರ್ಯಾಲಯ

ಮಾಳಮಡ್ಡಿ ಧಾರವಾಡ

ಕನ್ನಡಿಗನ ವಾರ್ಷಿಕ ಚಂದಾ ನಿರ್ಣಯ.

ಪೋಷಕರಿಗೆ ವಾ. ೫ ರೂ. ಉಪಕಾರಕರ್ತೃಗಳಿಗೆ ವಾ. ೧೦ ರೂ. ಒಮ್ಮೆಲೇ ೫೦ ರೂ. ಕೊಡುವವರು ಆಶ್ರಯದಾತರು.

ಸ್ಥಳದ ಚಂದಾದಾರರಿಗೆ.	೧ ರೂ. ಇಲ್ಲವೇ, ೧೫ ನಂಬರಿಗೆ ಕಡಿಮೆಯಾಗದಂಥ ೯೦೦೦ ಯಾರ್ಡ ಕೈ ನೂಲು
ಪರಸ್ಥಳದ ,,	ಮನಿಯಾರ್ಡರದಿಂದ ೧-೧೩-೦ ಎ. ಪಿ. ಯಿಂದ ೨-೧-೦ ಇಲ್ಲವೇ ೧೫ ನಂಬರಿಗೆ ಕಡಿಮೆಯಾಗದ ೧೬೦೦೦ ಯಾರ್ಡ ಕೈನೂಲು.
ವಾಚನಾಲಯ ಸಭೆ, ಸಮಿತಿ ಇತ್ಯಾದಿ ಸಾರ್ವಜನಿಕ ಸಂಸ್ಥೆಗಳಿಗೆ—	ಸ್ಥಳದವರಿಗೆ ೨-೦-೦ ಪರಸ್ಥಳಕ್ಕೆ ಮನಿಯಾರ್ಡರದಿಂದ ೩-೧೩-೦ ,, ಎ. ಪಿ. ಯಿಂದ ೩-೧-೦
ಸರಕಾರ, ಮುನಸೀಪಾಲಿಟಿ ಲೋಕಲ್ ಬೋರ್ಡ ಇತ್ಯಾದಿ.	ಸ್ಥಳದವರಿಗೆ ४-೦-೦ ಪರಸ್ಥಳದಲ್ಲಿ ಮನಿಯಾರ್ಡರದಿಂದ ४-೧೩-೦ ಎ. ಪಿ. ಯಿಂದ ೫-೧-೦

ಬಿಡಿ ಸಂಚಿಕೆಗೆ ೧೪. ಹಿಂದಿನ ಸಂಚಿಕೆಯೊಂದಕ್ಕೆ ೨ ಆಣೆ. ಧರ್ಮಾರ್ಥವಾಗಿಯಾಗಲೀ ವರ್ಷದ ಕಡಿಮೆಯ ಮುದ್ದತಿಗಾಗಲೀ ನಾವು ಸಂಚಿಕೆಗಳನ್ನು ಕಳಿಸುವದಿಲ್ಲ.

ವ್ಯವಸ್ಥಾಪಕ

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ.
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೭ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೩೬೭೦೦ ಮಿ. ವಿಠ್ಠಲ ಬಿಮ್ಮಾಜಿ ಸೇಟ ಕಲಾಸ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೭ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ (ಜಿ. ತುಮಕೂರು.)

(೩) ಬಾಂಡ ನಂ. ೧೪೯೪೭ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. B. C. ಬಾಂಡ ನಂ ೧೮೭೩ ಮಿ|| ಜಿ. ವೆಂಕಟಸಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೪೦ ಮಿ|| ರಾಮಚಂದ್ರ ವಾಮನ ಕಾಂಬಳೆ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೮೪೦ ಮಿ|| ಆರ್. ಎಚ್. ನಾಟಿಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ದೆಕ್ಕನ)

ಬಿ. ಎಸ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ವಿಶ್ವಕರ್ಣಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿವೇಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ಮೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ ಖ. ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೆರೋ ವಾಚ ಕಂ. (India) ಮುಂಬೈ ನಂ. ೪

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY.

Apply for full particulars to—

N. K. Kulkarni. Agent Bagalkot.

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಪೈಲ್ಲಿಯ ಪೋಷ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲೆತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ— "ಗೆಳೆಯರ ಗುಂಪು" ಹಲಸಂಗಿ.

ಜಿಲ್ಹಾ ವಿಜಾಪುರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು: ಮಂಗಳವೇಢೇ ಬಂಧುಗಳು

ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ

ಕನ್ನಡನಾಡು.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ } ಬಾಗಲಕೋಟೆ ಶುಕ್ರವಾರ ಮಿತಿ ಆಷಾಢ ಶುದ್ಧ ೬ ಶಕೆ ೧೮೪೯ ತಾ॥ ೧೬-೭-೧೯೨೭. { ಸಂಚಿಕೆ ೧೭

ಸಂಪಾದಕರ ಭೂಮಿ

(*)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ಚಿನ್ನದಾದರು ಚೆನ್ನ ಮೇಣಬತ್ತಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥
—ಅಂಬಿಕಾ ತನಯ ದತ್ತ

ಕರ್ನಾಟಕದ ದೊಡ್ಡ ದೊಡ್ಡ ಊರುಗಳಲ್ಲಿ ಅಂದರೆ ವಿಜಾಪುರ ಬಾಗಲಕೋಟ, ಬೆಳಗಾವಿ ಮೊದಲಾದವುಗಳಲ್ಲಿ ಗಂಡು ಹುಡುಗರ ಸಲುವಾಗಿ ಮರಾಠೀಶಾಲೆಗಳಿವೆ. ಈ ಶಾಲೆಗಳು ನಿಜವಾಗಿ ಅಚ್ಚ ಮರಾಠಿಗರ ಸಲುವಾಗಿ ಆದರೆ ನಮ್ಮ ಅಭಿಮಾನಶೂನ್ಯರಾದ ಕನ್ನಡಿಗರು ತಮ್ಮ ಹುಡುಗರನ್ನು ಒಳ್ಳೆ ಉಬ್ಬಿನಿಂದ ಮರಾಠೀಶಾಲೆಗಳಿಗೆ ಕಳುಹಿಸುತ್ತಾರೆ. ತಾವೇ ತಿಳಿದವರು; ಉಳಿದವರೆಲ್ಲರೂ ತುಚ್ಛರೆಂದು ಮೆರೆಯುತ್ತ ಉಚ್ಚರಂತೆ ಕಾಣಿಸಿಕೊಳ್ಳಲು ಯತ್ನಿಸುವರು. ಇವರ ಕಣ್ಣುಗಳು ಕೆಟ್ಟಿವೆಯೆಂಬುದೇ ನಮ್ಮ ಮತ. ಇತರ ನೇತ್ರಗಳಿಗೆ ಅಂಜನವನ್ನು ಹಚ್ಚಿದಹೊರತು ಗತಿಯಿಲ್ಲ. ಇವರಿಗೆ ವಸ್ತುಸ್ಥಿತಿಯ ಜ್ಞಾನವೇ ಇಲ್ಲವೆಂದು ಹೇಳಬಹುದು. ಕನ್ನಡವು ಮನೆಯ ಭಾಷೆ, ಹುಟ್ಟಿದೊಡನೆ ತಾಯಿಯಾಡಿದ ಭಾಷೆ. ಸುತ್ತಲಿನ ವಾತಾವರಣವು ಕನ್ನಡದ್ದು. ಹೀಗಿದ್ದು ಮಕ್ಕಳನ್ನು ಮರಾಠೀಶಾಲೆಗೆ ಕಳುಹಿಸುವುದು ಅನಿಷ್ಟಕರವಾದುದು. ಮಕ್ಕಳು ಶಾಲೆಯಲ್ಲಿಮಾತ್ರ ಮರಾಠೀ ಪೊತ್ತಿಗೆಗಳನ್ನು ಓದುತ್ತಾರೆ; ಅಲ್ಪಸ್ವಲ್ಪ ಮಾತಾಡುತ್ತಾರೆ ಹೊರಗೆ ಬಂದೊಡನೆ ಕನ್ನಡದ ಆಧಿಪತ್ಯ. ಮನೆಯಲ್ಲಯಂತು, ಅವಳೇ ಮುದ್ದಾಡುವತಾಯಿ. ಹೀಗಿರಲು ಮರಾಠಿಯು ಚೈತನ್ಯಗೊಳ್ಳುವದೆಂತು ಮರಾಠಿಯ ವಾತಾವರಣವೇ ಇಲ್ಲದಾಗ, ಅದರ ಜೀವಾಳದ ಎಳೆಯು ನಮ್ಮ ಕನ್ನಡ ಮಗುಗಳಿಗೆ ದೊರೆಯುವದಾದರೂ ಹೇಗೆ? ಮಕ್ಕಳು ಹಿರಿಯರ ಒತ್ತಾಯದಿಂದ ಮರಾಠಿ ಶಾಲೆಗೆ ಹೋಗುತ್ತಾರೆ. ಅಲ್ಲಿ ಅವರಿಗನುಭವಿಸಬೇಕಾದ ತೊಂದರೆಗಳನ್ನು ದೇವರೇಬಲ್ಲ ಬಹಳ ಪರಿಶ್ರಮ ಮಾಡಿ ದರೂ ಚೆನ್ನಾಗಿ ಲಿಂಗಗಳ ಜ್ಞಾನವಾಗುವದಿಲ್ಲ. ಲಿಂಗಜ್ಞಾನವಾದರ, ಶಬ್ದಗಳನ್ನು ಸರಿಯಾಗಿ ಉಚ್ಚರಿಸಲು ಬರುವದಿಲ್ಲ. ಉಚ್ಚರಿಸ ಬಂದರೆ ಆಘಾತದ ಅಡಚಣೆಯು ಮುಂದೆ ಬಂದು ನಿಲ್ಲುತ್ತದೆ. ಅಂತೂ ಮರಾಠಿಯು ಚನ್ನಾಗಿ ಬರುವದಿಲ್ಲ; ಕನ್ನಡವನ್ನಂತೂ ಕಲಿಯುವದೇ ಇಲ್ಲ. ಹೀಗಾಗಿ ಇತೋಭ್ರಷ್ಟ ತತೋಭ್ರಷ್ಟರಾಗಿ ಕಥೆಯೊಳಗಣ ತೊಗಲಬಾವಲಿಯಂತೆ ಮೋರೆ ಕಪ್ಪು ಮಾಡಿಕೊಂಡು ತಿರುಗಬೇಕಾಗುವದು. ಕನ್ನಡವು ಯಾರ ತಾಯ್ನುಡಿಯಾಗಿರುತ್ತದೆಯೋ, ಯಾರು ತೊದಲ್ನುಡಿಗಳನ್ನು ಕನ್ನಡದಲ್ಲಿ ನುಡಿದರೋ, ಅಂಥವರಿಗೆ ಮರಾಠಿಯನ್ನು ಕಲಿಸುವದರಿಂದ, ಏನು ಪರಿಣಾಮವಾಗುತ್ತದೆಂಬುದನ್ನು ತಿಳಿದುಕೊಳ್ಳಬೇಕಾದರೆ, ಇಂಗ್ಲೀಷ ಶಾಲೆಯ ಶಿಕ್ಷಕರ ಕಡೆಗೆ ಹೋಗಬೇಕು. ಅಂದರೆ ಎಲ್ಲವೂ ಥಟ್ಟನೆ ಹೊಳೆಯುವುದು. “ಮಾಂಜರ ಪಳಾಲಾ” “ಕೋಮಡಿ ಪಳಾಲಾ” ಎಂಬ ಪ್ರಯೋಗಗಳನ್ನು ಬಹುಶಃ ಮರಾಠೀ ಕಲಿತ ಕನ್ನಡವಿದ್ಯಾರ್ಥಿಯು ಉಪಯೋಗಿಸುವನು ಬರೆಯಲಿಕ್ಕಂತೂ ಅವನಿಗೆ ಬರುತ್ತಿರುವದಿಲ್ಲ. ಇಂಥ ಹುಡುಗನು ಪರೀಕ್ಷೆಯಲ್ಲಾದರೂ ಉತ್ತೀರ್ಣನಾಗುವದೆಂತು? ಮರಾಠಿಯು ಶಾಲೆಯಲ್ಲಿ ಉಪಯೋಗ ಬೀಳುವದಿಲ್ಲ; ಬಳಕೆಗೆ ಉಪಯೋಗ ಬೀಳುವದಿಲ್ಲ. ಆದರಿಂದ ಆ ಹುಡುಗನಿಗೆ ಬಂದ ಸೌಭಾಗ್ಯವಾದರೂ ಏನು? ಮರಾಠೀ ಜನರು ಅವನ ಹಂಕು ಮುಂಕು ಮಾತುಗಳನ್ನು ಕೇಳಿದೊಡನೆ, “ಕಾನಡಿ ಆಹೇ” ಎಂದು ನಗುವರು ಹಳಿಯುವರು. ಇದಕ್ಕಾಗಿಯೇ ಕನ್ನಡವನ್ನು ಬಿಟ್ಟು ಮರಾಠಿಯನ್ನು ಕಲಿಯುವುದು. ಇಂತಹ ವಿದ್ಯಾರ್ಥಿಗಳ ಪಾಲಿಗೆ ಮರಾಠೀಭಾಷೆಯು ಕೊಲೆಯನ್ನು ಮಾಡಿದ ದ್ರೋಹವು ತಪ್ಪದ; ಮತ್ತು ಕನ್ನಡವನ್ನು ತಗ್ಗಿಸಿದ ಕಳಂಕವು ತಗಲದೆ ಇರದು ನಾವು ಬರೆದುದರಲ್ಲಿ ವಸ್ತುಸ್ಥಿತಿಯ ಯಥಾರ್ಥವರ್ಣನೆಯಿದೆ ಬೇಕಾದವರು ಇಂಗ್ಲೀಷ ಶಾಲೆಗಳಿಗೆ ಹೋಗಿ ನಮ್ಮ ಮಾತಿನ ಸತ್ಯತೆಯನ್ನು ಪರೀಕ್ಷಿಸಬಹುದು. ಮರಾಠೀ ಶಾಲೆಗಳು ಅಚ್ಚ ಮರಾಠಿಗರ ಸಲುವಾಗಿ. ಕನ್ನಡಿಗರ ಸಲುವಾಗಿಯಲ್ಲ. ಆ ಭಾಷೆಯ ಜ್ಞಾನವನ್ನು ಮಾಡಿಕೊಳ್ಳಬೇಕಾದರೆ, ಕನ್ನಡವನ್ನು ಕಲಿಯುತ್ತ ಮಾಡಿಕೊಳ್ಳಲು ಬರುತ್ತದೆ ಹೀಗೆ ಮಾಡುವುದು ವ್ಯವಹಾರಕ್ಕನುಗುಣವಾಗುತ್ತದೆ. ಇದರಲ್ಲಿ ಮತಭೇದ ವಿರಲಾರದೆಂದು ನಮ್ಮ ನಂಬುಗೆ ಇನ್ನೂ “ಗತಾನುಗತಿಕತ್ವವು” ನಮ್ಮ ಜನರಲ್ಲಿ ದೃಢಮೂಲವಾಗಿದೆ. ಕಾಲ ಪರಿಸ್ಥಿತಿಗನುಸರಿಸಿ ಹೊಸದಾರಿಯನ್ನು ಹಿಡಿಯುವುದು ವಿವೇಕಿಗಳ ರೀತಿ “ಅಂಧಾನುಕರಣವು” ನಮ್ಮನ್ನು ಕೊಳಚೆಯಲ್ಲಿ ಕೆಡುವುತ್ತದೆಂಬುದಕ್ಕೆ ತಿಲಮಾತ್ರ ಸಂಶಯವಿಲ್ಲ ಎಚ್ಚತ್ತು ನೋ

ಡಿ, ಕನ್ನಡದ ಕೈಯನ್ನು ಹಿಡಿಯಿರಿ. ಯಾವ ಪ್ರಕಾರದ ಮುಳ್ಳು ಕಲ್ಲುಗಳಿಲ್ಲದೆ ನಿಮ್ಮ ಮಾರ್ಗವು ಸುಗಮವಾಗುವದು. ಐಹಿಕ ಪಾರತ್ರಿಕ ಗಳೆರಡೂ ನಿಮಗೆ ಸಾಧ್ಯವಾಗುವವು. ಇದರಲ್ಲಿ ದ್ವೇಷ ವಿಲ್ಲ; ಅಸೂಯೆಯಿಲ್ಲ. ಹಿತವಿದೆ; ಸತ್ಯವಿದೆ. ತಿಳಿದು ನೋಡಿ. ಒಗೆದು ನೋಡಿ ಮೋಹನವಳಿದು ಸ್ನೇಹ ಬೆಳೆವುದು. ಮಮತೆಯೇರಿ ಸಮತೆಯಾಗುವುದು

ಕವಿಯೇ ನಾಡಿನ ತಾಯಿ, ಅವನೇ ನಾಡಿನ ಬಾಯಿ. ಅವನ ನುಡಿಯಲ್ಲಿ ಅಮೃತಜೀವ ವಿರುವುದು; ಅವನ ಕಂಬನಿಯಲ್ಲಿ ನಾಡಿನ ಪಂಚಪ್ರಾಣವಿರುವುದು; ಚಿತ್ಕಳೆಯು ಮನೆಮಾಡಿಕೊಂಡಿರುವುದು. ಅವನ ಕಣ್ಣೀರು ಸುರಿದು ಮಡುವುಗಟ್ಟಿ ಮಡಲಾಗಿ ಹರಿಯುತೊರೆಗಳು, ಅವನ ನುಡಿಯು ಅಮೃತದ ಹೊನಲಾಗಿ ಹೊರಡುವದು. ನಾಡನ್ನು ಪ್ರಾಣಮಯವಾಗಿ ಮಾಡುವುದು. ಈಗ ಕನ್ನಡದ ಕೆಲವು ಕವಿಗಳು ಕಂಬನಿಗಳನ್ನು ಸುರಿಸುತ್ತಲಿದ್ದಾರೆ. ಇದು ಕನ್ನಡ ನಾಡಿನ ಉದಯವನ್ನು ಸೂಚಿಸುತ್ತಲಿರುವದು ‘ ಮಾಗಿ ಯಡಗಿತು ’ ‘ ಸುಗ್ಗಿ ತಲೆದೋರಿತು ’ ಎಂದು ಕೋಕಿಲಗಳು ಕಲಧ್ವನಿಯಿಂದ ಎಚ್ಚರಿಸುವಂತೆ, ಈ ಕವಿಗಳು ‘ ನಾಡಿನ ಬರವು ಹಿಂಗಿತು ’ ‘ ಹಬ್ಬದ ಸುಗ್ಗಿಯು ಎದ್ದಿತು ’ ಎಂಬುದನ್ನು ತಮ್ಮ ಕಂಬನಿಗಳಿಂದ ಸೂಚಿಸುತಲಿದ್ದಾರೆ. ಇವರ ಕಂಬನಿಗಳು ಎಲ್ಲ ಕನ್ನಡಿಗರ ಕಂಬನಿಗಳಾಗಿವೆ. ಅವರೆ ಎಲ್ಲರಿಗೂ ನುಡಿಯಲು ಬಾಯಿಯಿಲ್ಲ ಎಲ್ಲರಲ್ಲಿ ಅವ್ಯಕ್ತವಾಗಿ ಅಲೆದಾಡುವ ಬಾಯಿಯಿಲ್ಲದ ಭಾವಗಳನ್ನು ಬಯಕೆಗಳನ್ನು ಕವಿಗಳು ಹೇಗೆ ವ್ಯಕ್ತಮಾಡುತ್ತಾರೆಂಬುದಕ್ಕೆ ಎರಡು ಹಾಡುಗಳನ್ನು ಇಲ್ಲಿ ಕೊಡುವೆವು

ಮಾಧವ ಮುನಿ !

ಹಾಳು ಹಂಪೆಯಲ್ಲಿ ಕತ್ತಲೆ ಮುಸಕಿದ ಕಿರಿಗುಡಿಯಲ್ಲಿರುವ ವಿದ್ಯಾರಣ್ಯರ ಮೂರ್ತಿಯನ್ನು ಹೊರಗಣ್ಣಿಂದೆ ನೋಡುವ ಭಾವಿಕ ಜೀವಿಗೆ, ಒಗೆಯಲ್ಲಿಂತು ಭಾವನೆಗಳು ಬರುವುದರಲ್ಲಿ ಅರಿದಾದರೂ ಏನು !

ಕಲ್ಲಾಗಿ ಕುಳಿತಯೇಕಯ್ಯ ! ಮಾಧವ ಮುನಿಯೆ !
ಕಲ್ಲಾಗಿ ಕುಳಿತೆಯೇಕೆ ?
ಹಿಂದೆ ಗೌತಮನು ಹೆಂಡತಿ ಗೈದ ತಪ್ಪಿತಕೆ
ನೊಂದು “ ಕಲ್ಲಾಗಿ ಬೀಳೆ ” ನುತೆ ಶಪಿಸಿದನಂತೆ,
ಘನತೆ ವೆತ್ತಿಹ ನಿನ್ನ ನೋಟದಿಂ ಕಲ್ಲನೂ
ಕನಕನು ಮಾಡಿದ ಮಹಾಮಹಿಮ ! ನೀನಿಂದು
ಕಲ್ಲಾದೆಯೇಕೆ ಯಾರನು ಶಾಪವಿಹುದೆ ?
ಅಲ್ಲದೆಯು ನನ್ನ ಕಣ್ಗಳ ಪಾಪವಹುದೋ ? ||೧||
“ ಬಂಗಾರ ಮಳೆಸುರಿಸಿ, ರಾಜ್ಯವನು ನೆಲೆಗೊಳಿಸಿ
“ ಹಿಂಗಿಹೋದದು ಹಿಂದೆ ಗೈದ ತಪಸಿನ ತಿರುಳು
“ ಇನು, ಮುಂದಿನ ನನ್ನ ಗುರಿಯನ್ನು ಸಾಧಿಸಲು
“ ಉನ್ನತದ ತಪಗೈದು ಬಲವ ಬೆಳೆಸುವೆನೆ ” ಂದು
ಇಲ್ಲಿ ಕುಳಿತಿರುವಿಯೇನೈ ? ಸಮಾಧಿಯಲಿ
ಕಲ್ಲಿನೊಲು ಕದಲದಲೆ ಕಠಿನ ತಪಸಿನಲಿ ||೨||
“ ನನ್ನ ಕಷ್ಟಗಳನೆಲ್ಲವ ಕಳೆದು ಸಾಗಲಿತ್ತು
“ ನಿನ್ನ ಕರ್ತವ್ಯ ಮಾಡಿದೆ ! ಋಣವ ತೀರಿಸಿದೆ !
“ ಇನ್ನುಳಿದ ನನ್ನ ಮಕ್ಕಳು ತಮ್ಮ ಕರ್ತವ್ಯ !
ವನ್ನೆಂತು ಮಾಡುವರೊ ! ನೋಡು ಕೆಮ್ಮನೆ ಕುಳಿತು ”
ಇಂತು ಕನ್ನಡ ತಾಯಿ ನಿನಗೆ ಹೇಳಿಹಳೆ ?
ಎಂತಲೇ ಕುಳಿತಿಹೆಯ ? ನೀನು ಕದಲದಲೆ ||೩||
ಕನ್ನಡದ ನಾಡಿನಾ ಕಲ್ಲುಗಳಿಗೂ ಕೂಡ
ಚೆನ್ನಾಗಿ ಜೀವಕಳೆಯನ್ನು ತುಂಬಿಸಿಯಂದು
ಕರ್ನಾಟಕ ಕೀರ್ತಿಕೇತುವನಖಿಲ ಲೋಕದಲಿ
ಮುನ್ನ ಮೆರೆಯಿಸಿದೆ ! ನೀನೇ ಇಂದು ಕಲ್ಲಾದೆ !
ಇದರಿಂದೆ ನಿನ್ನ ನೆನೆಯುವ ಕನ್ನಡಿಗರ
ಎದೆಯದೂ ತಳೆದಿಹುದು ಕಲ್ಲಿನಾಕಾರ. ||೪||
ಹಿಂದೆ ನೀ ನಮ್ಮವರನೊಳುದಾರಿಗೊಂದಿಸುತೆ
ಹೊಂದಿಕೊಂಡಿರುವ ಸದ್ಧರ್ಮವನು ಬೋಧಿಸುತೆ
ಸಂದ ಸ್ವಾತಂತ್ರ್ಯದಾ ಹಸಿವನ್ನು ಹೆಚ್ಚಿಸುತೆ
ಒಂದಾಗೆ ವೈಭವಕೆ ವೈರಾಗ್ಯ ಬೆರೆಯಿಸುತೆ
ಅಂದು ಎಡೆಯಾಡಿದೆಯೊ ಭರತಭೂಮಿಯಲಿ
ಇಂದೇಕೆ ಕುಳಿತಿಹೆಯೊ ? ಗೇಣು ಗುಡಿಯಲ್ಲಿ ||೫||

* * *

ಇನಿತು ನಾಚಿಂತಿಸುತೆ ನಿಂತುಕೊಂಡಿರಲು
ಇನಿದಾದ ದನಿಯೊಂದು ಜನಿಸಿ ಹೃದಯದೊಳು
ನನ್ನ ಒಳಗಿವಿ ತಣಿಯೆ ಇಂತು ಕೇಳಿಸಿತ
ನನ್ನನೊಂದರೆಗಳಿಗೆ ಮೈಯ್ಯ ಮರೆಯಿಸಿತು

* * *

ಕೊನೆಯಿಲ್ಲದನಿತು ನಾ ಜನುಮಗಳ ತಳೆದರೂ
ತುಣುಕಾದರೂ ತಪದ ತಿರುಳು ತೀರದೊ ! ಮರುಳೆ
ಬಣಗು ಬಂಗಾರ ಮಳೆಗರೆದ ಕಾರಣದಿಂದೆ
ಘನತಪೋಬಲವಿಂದು ತೊಲಗಿ ಪೋಗುವುದೆಂತು
ವನನಿಧಿಯ ನೀರನ್ನು ಅಳೆಯೆ ಸೆರಿನಲಿ
ಅನುಗೊಂಡ ನಿನ್ನ ಹಿರಿ ಹುಚ್ಚಿಗೇನೆನಲಿ ? ||೬||
ಕಲ್ಲು ಗೊಂಬೆಯು ಆಗಿ ಇಲ್ಲಿಯೂ ಕುಳಿತಿರುವೆ !
ಕಲ್ಲಿನಂತಾದ ನಿನ್ನೆದೆಯಲ್ಲಿಯೂ ಇರುವೆ !
ನನ್ನ ಮೂರ್ತಿಯ ಕಲ್ಗೆ ನಿನ್ನೆದೆಯ ಕಲ್ಲನ್ನು
ಚೆನ್ನಾಗಿ ಒಡೆಒಡೆದು ಒಡೆದು ಹಾಕೈ ನೀನು !
ಎರಡು ಕಲ್ಲುಗಳ ಹೊಡತಕೆ ಹೊರಡುತಿರುವ
ಮೆರುಗು ಮಿಂಚಿನಲಿ ನೋಡುವೆ ನನ್ನ ಮೊಗವ ||೭||
ಗೇಣು ಗುಡಿಯಲ್ಲಿಯೇ ಕುಳಿತಿರುವಿಯೇಕೆಂದು
ನಾನಿರುವ ನೆಲೆಯನ್ನು ಕಾಣದಲೆ ನುಡಿಯುವಿಯೋ !
ಒಳಗಣ್ಣಿನಲ್ಲಿ ನೋಡ ಮರ ತಿಳಿನೋಟಕ್ಕೆ
ಕಳೆವೆತ್ತು ಕರ್ನಾಟಕದ ಕಣಕಣಗಳಲಿ.
ನನ್ನ ಮೂರ್ತಿಗಳನಂತವಿ ಕಾಣುತಿಪವು
ಕನ್ನಡಿಗರಿಗೆ ಕೈಯನಿತ್ತೆಬ್ಬಿಸುವವು. ||೮||

ತಾಯೇ ಭುವನೇಶ್ವರೀ ?

(ಖಂಡ ವಾರ್ಧಿಕ ಷಟ್ಪದಿ)

ದೇವಿ ! ಕಲ್ಗುಡ್ಡಗಳ ಕಾಡಿನೊಳು ನಿನ್ನ ಗುಡಿ ।
ಸಾವಿಗಂಜದ ನಿನ್ನ ಸೇವಕರೇ ಕಂಚಕಡಿ ।
ಕಾವಿ ಬಟ್ಟೆಯನುಟ್ಟು ಭಯಭೀತಿಯನು ಸುಟ್ಟು ತಮ್ಮ ಮೇಲ್ ನೀರು ಬಿಟ್ಟು ।
ಸೇವಿಸುವ ಭಾವಿಕರ ಬಳಗಗಳ ಬಳಿಗೆ ಬಾ ಮನವುಟ್ಟಿ ಪಂಥ ತೊಟ್ಟು ||೧||

ಒಪ್ಪು ನಿನ್ನೀ ನಾಮಮಂತ್ರದಿಂದೆದ್ದಿತೌ ।
ಒಪ್ಪಿಲೆ ಮುಗಿಲು ಮುದ್ದಿಸುವಂಥ ಮುಗಿಲೀದ ।
ಹಸ್ಮುಳ್ಳ ಜಯನಗರವು ದಿವ್ಯನಿಂದೊಮ್ಮೆ ಮಾಡು ಮತ್ತೊಂಥ ಮಂತ್ರ ।
ತಮ್ಮ ದೇಹದ ಕೋಟೆಗಟ್ಟಿ ಕಾದಾಡುವವರನ್ನು ಹುಟ್ಟಿಸುವ ತಂತ್ರ ॥೨॥

ಮಾಧವನ ಮನದಲ್ಲಿ ನೆಟ್ಟಿಸಿದಿನೀ, ರಾಷ್ಟ್ರ !
ಸಾಧಕನ ಸಸಿಯನ್ನು ಹುಟ್ಟಿಸಿದಿ, ಸಲೆ ಧರ್ಮ ।
ಬಾಧಕರ ಹಿಂಡ ಹಿಮ್ಮೆಟ್ಟಿಸಿದಿ, ಈಶ್ವರೀ ಒಂದೇ ಕಟಾಕ್ಷದಿಂದ ।
ಸಾಧನವನರಿಯಲೇ ಹಾದಿತೋರುವಳಾಗ ಇಂದಾ ಕಟಾಕ್ಷದಿಂದ ॥೩॥

ಹೀರ ಬಂಟರ ತಳಿಯು ಕೆಟ್ಟು ಹೋಗಿಹುದಿಲ್ಲಿ ।
ತೀರ ಬಡತನದ ಕಳೆ ಸುರಿಯ ಹತ್ತಿರುವುದೌ ।
ಧೀರ ಬೆಳವಲಕೊಮ್ಮೆ ನಿನ್ನ ಚಿನ್ನದ ಮಳೆಯ ಒಂದೆ ಸೆಳಕನು ಕಳಿಸಿ
ಹೀರು ಹೆಸರಿನ ಕಂಪ ಕಲ್ಲನರಳಿಸಿ ಮತ್ತೆ ಕನ್ನಡದ ಬಳ್ಳಿ ಬೆಳೆಸಿ ॥೪॥

ತಾಯೆ ! ಭುವನೇಶ್ವರೀ ! ಪ್ರೀತಿಯಿಂದಲಿ ನೋಡೆ ।
ಸಾಯಲಾಗಿರುವಂಥ ನಿನ್ನ ನಾಡನು ! ನಾಡೆ ।
ಬಾಯಬಿಡುತಿರುವುದೌ ದಯೆಯ ಭಿಕ್ಷೆಯ ನೀಡೆ ಕಾರುಣ್ಯವಿರುವ ಗೂಡೆ
ಕಾಯುವವರಾರಾರು ಇಲ್ಲ ನೊಡಲಿನ ಹಾಗೆ ಕಾವಲದ ಕೆಲಸ ಮಾಡೆ ॥೫॥

ಮಲೆನಾಡಿನ ಕನ್ನಡಿಗರು.

೨ ನೇ ಬರಹ

[ಗೆಳೆಯರ ಗುಂಪಿನಿಂದ]

ಮಲೆನಾಡಿನ ಕನ್ನಡಿಗರು (೭-೫-೨೬) ಎಂಬ ಹಣೆಕಟ್ಟಿನ ಬರಹದ ಕೂಗನ್ನು ಕೇಳಿ, ಮಲೆನಾಡಿನ ಹೆಬ್ಬುಲಿಯೊಂದು ಕೆರಳಿ, ಗುಡುಗುಹಾಕುತ್ತ ಇದೆ ಗವಿಯಿಂದ ಹೊರಬಿದ್ದಿರುವದು (೬-೬-೨೬ ನೇ ಕರ್ನಾಟಕವೃತ್ತ) ಬಾ. ಬಾರಣ್ಣ ಹುಲಿರಾಜಾ, ನಿನಗೆ ಸ್ವಾಗತವನ್ನೀಯುವೆನು. ನಿನ್ನಿಂದ ಇಂಥ ಕೂಗೇ ನನಗೆ ಬೇಕಾದುದು. ಓಹೋ! ನಾನು ಬೇಟೆಗಾರನೂ ಅಲ್ಲ. ಬಲೆಗಾರನೂ ಅಲ್ಲ ನಿನ್ನ ಜೊತೆಗಾರ. ಇದನ್ನು ಬರೆಯುವವನು ಹಿರಿಯನೂ ಅಲ್ಲ ಕಿರಿಯನೂ ಅಲ್ಲ. ಮಲೆನಾಡಿನಲ್ಲಿ ಅಲೆದಾಡುತ್ತಿರುವವನು. ಹುಲಿರಾಯಾ ನೀವು ಮಲೆನಾಡಿನಲ್ಲಿ ವಾಸಿಸುವವರಾದರೂ ಇದೇ ಈಗ ಗವಿಯಿಂದ ಹೊರಬಿದ್ದಂತೆ ಕಾಣುತ್ತದೆ. ನಿಮ್ಮ ಊರಲ್ಲಿಯ ರೈತರಸ್ಥಿತಿಯನ್ನು ನೀವು ನೋಡಿರುವಿರೋ ಬನ್ನಿ ಹಾಗೇ ನನ್ನ ಸಂಗಡ ಬನ್ನಿ! ಸಾಗರ, ಸೊರಬ ತಾಲೂಕುಗಳನ್ನು ತಿರುಗಾಡಿರಿ ಅಂದರೆ ನಮ್ಮ ವರ್ಣನೆಯ ಕಲ್ಪನೆಯು ತಮಗೆ ಯಥಾರ್ಥವಾಗಿರಬಹುದು. ನಿಮ್ಮೂರಲ್ಲಿಯೇ ಛಳಿಜ್ವರದಿಂದ ಎಷ್ಟು ಜನರು ಪೀಡಿತರಾಗುವರೆಂಬುದು ನಿಮ್ಮ ಅನುಭವದಲ್ಲಿಯೇ ಇರಬಹುದು. ನಡೆಯಿರಿ, ಹಾಗೇ ಮುಂಡಗದ್ದೆ, ಮಿರ್ಜಿ, ಉತ್ತರಕನ್ನಡ ಮೊದಲಾದ ಸ್ಥಳಗಳಿಗೆ ನೋಡಿರಿ ಜನರನ್ನು. ತಮ್ಮ ಲೇಖವು ಪ್ರಸಿದ್ಧವಾದ ವೃತ್ತವನ್ನೇ ನೋಡಿರಿ. ಅದರಲ್ಲಿ ನಿಮ್ಮ ನಾಡಿನ ರೈತರಿಂದ ಬರೆದುಬಂದದ್ದನ್ನು. ಸುಮ್ಮನೆ ಕೋಪಗೊಳ್ಳಬಾರದೆಂದು ನಿಮ್ಮ ಬಂಧು (ಬರಹಗಾರ) ವಿನಯ ಬೇಡಿಕೆ, ನಿಮ್ಮನ್ನು ಹಿಂದುಳಿಸಬೇಕೆಂದು ಬರೆದುದಲ್ಲವೆಂದು ನಮ್ರವಾಗಿಯೂ ಗಟ್ಟಿಯಾಗಿಯೂ ಹೇಳುವೆನು. ಉಳಿದ ಕನ್ನಡಿಗರಿಗೆ ಜನರಸ್ಥಿತಿಯು, ಚನ್ನಾಗಿ ತಿಳಿದು ಸುಧಾರಣೆಗೆ ಅನುವಾಗಬೇಕೆಂಬುದೇ ನಮ್ಮ ಬಯಕೆ. ಚಿತ್ರದ ಉಪಮೆಯಿಂದ ಅಲ್ಲಿರುವ ಜನರು ಅಶಕ್ತರಿರುವದು ಹೆಚ್ಚಿಂದೇ ತೋರತು, ನಿಂದಿಸುವದರ ಸಲುವಾಗಿಯಲ್ಲ. ನೀವು ಸ್ವಲ್ಪು ಶಾಂತ ರೀತಿಯಿಂದ ವಿಚಾರಿಸಿದರೆ ಅದೇ ಉದಾಹರಣೆಯೇ ಮಲೆನಾಡಿನ ಜನರಿಗೆ ಅನ್ವಯಿಸುವದೆಂದು ತಮಗೆ ತೋಳೆಯಬಹುದು. ಮಲೆನಾಡಿನ ಜನರು ಬಳಕತಾಗಿರಬಹುದು. ಆದರೆ ಬಹುಸಂಖ್ಯಾಕರು ಇದೇ ಮಾದರಿಯ ಜನರೆಂದು ಹೇಳಬಲ್ಲೆನು. ನೀನು ಎಲ್ಲಿಯೋ ಬೆಳವಲಿನಲ್ಲಿ ಕೂತು ಬರೆಯುತ್ತಿರಬಹುದೆಂದು ತಾವು ತಿಳಿಯುತ್ತಿರಬಹುದು. ಇಲ್ಲ ಇಲ್ಲ. ನಾನು ಮಲೆನಾಡಿನಲ್ಲಿ ತಿರುಗಾಡುತ್ತಿರುವೆನು. ಬಹಳ ಮಾತಿನಿಂದೇನು? ಮಲೆನಾಡನ್ನು ಹಳಿಯುವದಕ್ಕಾಗಿ ಬರೆದುದಲ್ಲ, ಉಳಿಸುವದಕ್ಕಾಗಿ. **ಕಂಡದ್ದನ್ನಾಡಿದರೆ ಕೆಂಡದಂತಾಗುವ ಯುಗವು ಇದಲ್ಲ. ತನ್ನನ್ನು ತಾನರಿದು ಮುನ್ನಡೆಯುವ ಯುಗವು.** ಪುಟ್ಟೂರಾಯರೇ ನಿಮ್ಮ ನಾಡಿನ ಇತಿಹಾಸವನ್ನು ನೀವೇ ಬರೆದು ಉಳಿದ ಕನ್ನಡಿಗರಿಗೆ ಅರುಹಬೇಕೆಂದು ಬೇಡಿಕೊಳ್ಳುತ್ತೇನೆ. ಇರಲಿ. ಇನ್ನು ಮಲೆನಾಡಿನ ಕಡೆಗೆ ತಿರುಗುವ.

ಮಲೆನಾಡು ಹಾಳಾಗಲು ಕಾರಣವೇನು?

ಪಂಪ ಮಹಾಕವಿಯು ಅಭಿಮಾನದಿಂದ ವರ್ಣಿಸುವ ಮಲೆನಾಡು ಮಾಯವಾಗಿದೆ. ಸಂಪತ್ತಿನ ನೆಲೆವೀಡು ಹೋಗಿ, ಸಾಲಗಾರರ ಬೀಡಾಗಿದೆ. ರೈತರು ಬಡತನದಿಂದ ಬಳಲತೊಡಗಿದ್ದಾರೆ. ಒಬ್ಬನ ಮನೆಯಲ್ಲಿ ಕಾಳುಗಳಿದ್ದರೆ ಇನ್ನೊಬ್ಬನ ಮನೆಯಲ್ಲಿ ಬಿತ್ತಲು ಬೀಜವಿಲ್ಲ. ದುಡಿಯಲು ತ್ರಾಣವಿಲ್ಲ. ಹೀಗಾಗಿ ರೈತರು ಬಲುಹಣ್ಣಾಗಿದ್ದಾರೆ. ಜನಸಂಖ್ಯೆಯು ದಿನದಿನಕ್ಕೆ ಕಡಿಮೆಯಾಗತೊಡಗಿದೆ. ಹಳ್ಳಿಗಳೆಲ್ಲವೂ ಹಾಳಾಗತೊಡಗಿವೆ. ಭೂಮಿಗಳೆಲ್ಲವೂ ಬೀಳುಬೀಳತೊಡಗಿವೆ. ಈ ಮಾತು ಸುಳ್ಳಲ್ಲ. ಕಲಘಟಗಿ ತಾಲೂಕಿನಲ್ಲಿಯ ಹಳ್ಳಿಗಳನ್ನು ನೋಡಿದರೆ. ಈ ಮಾತು ಚನ್ನಾಗಿ ತಿಳಿಯುವದು. ಇಲ್ಲಿ ತಂಬೂರು ಎಂಬುದೊಂದು ಗ್ರಾಮ. ಅದು ಕೂಡಲಗೀ ದೇಸಾಯಿಯವರ ಕೈಯಲ್ಲಿತ್ತು. ಈಗ ಮೂವತ್ತು ನಾಲ್ವತ್ತು ವರ್ಷಗಳ ಹಿಂದೆ ಆ ಊರ ಜನಸಂಖ್ಯೆಯು ಸುಮಾರು ೧೫೦೦ ಸಾವಿರವಿತ್ತಂತೆ, ಆದರೆ ಈಗ ೨೦೦ ಅಥವಾ ೩೦೦ ಜನರನ್ನು ಕಾಣುವದು ಅಪರೂಪವಾಗಿದೆ. ಅದಕ್ಕೂ ಮೊದಲು ಇದು ದೊಡ್ಡ ಪಟ್ಟಣವಾಗಿರಬೇಕೆಂದು ನಮ್ಮ ತರ್ಕವಿದೆ. ಯಾಕೆಂದರೆ ಇಲ್ಲಿ ಹಳೇ ದೇವಸ್ಥಾನಗಳು ಅನೇಕವಿದ್ದು ಅನೇಕ ಶಿಲಾಲೇಖಗಳು ಉರುಳಾಡುತ್ತವೆ. ಅಲ್ಲದೆ ಅಲ್ಲಿ ಅನೇಕ ಹಳೇ ರಾಜಮಾರ್ಗಗಳನ್ನು ಕಾಣಬಹುದು. ಇದು ಮೊದಲು ವ್ಯಾಪಾರಸ್ಥಳವಾಗಿತ್ತೆಂದು ಅಲ್ಲಿಯ ಜನರು ಹೇಳುವರು. ಅದರ ಗತಿಯನ್ನು ನೋಡಿದರೆ ಕಣ್ಣಲ್ಲಿ ನೀರು ಬರುವದು. ಅದರಂತೆಯೇ ಅನೇಕ ಪಟ್ಟಣಗಳ ಗತಿಯಾಗಿದೆ. ಈ ತಾಲೂಕಿನ ಜನಸಂಖ್ಯೆಯಂತೂ ಈ ನಾಲ್ವತ್ತು ವರ್ಷಗಳಲ್ಲಿ 1/5 ಆಗಿರುವದು. ಹೀಗೆಯೇ ಹಾಳಾಗುತ್ತ ನಡೆದರೆ ಕನ್ನಡಿಗರ ಒಂದು ದೊಡ್ಡ ಭಾಗವು ಹಾಳಾದಂತಾಗುವದು ಎಚ್ಚರಿಕೆ! ಎಚ್ಚರಿಕೆ!! ಹಾಳಾಗಲು ಕಾರಣಗಳನ್ನು ಒಂದೊಂದಾಗಿ ಇನ್ನು ಮುಂದೆ ಹೇಳುತ್ತಾ ಹೋಗುವೆನು. ಕನ್ನಡಿಗರು ಸಾವಧಾನದಿಂದ ಕೇಳಬೇಕಾಗಿ ಬಿನ್ನಹ.

ಹಿಂದುಸ್ಥಾನೀ ಸೇವಾದಳ.

ಪತ್ರಿಕೆ, ೪

"ಇದುವರೆಗೆ ನಡೆದಿರುವ ಕೆಲಸ"

ಹಿಂದುಸ್ಥಾನಿ ಸೇವಾದಳದ ಅರ್ಗನೈಜರು ತಾವು ಮಾತುಕೊಟ್ಟಂತೆ ಜೂನ್ ೧ನೇ ಯ ತಾರೀಖಿನಿಂದ ಕೆಲಸವನ್ನು ಆರಂಭಿಸಿದರು. ಇದುವರೆಗೆ ಎಂದರೆ ೪ ವಾರದೊಳಗೆ (೨೫ನೇಯ ಜೂನ್

(೬ ನೇ ಪಾನಿಗೆ ಮುಂದೆ ಸಾಗಿದ್ದು)

ಸಂಗೀತ.

ಸಾಹಿತ್ಯ ಸಂಗೀತ ಕಲಾಹೀನನು ಬಾಲಕೊಂಬುಗಳಿಲ್ಲದ ಸಾಕ್ಷಾತ್ ಪಶುವೆಂದು ಒಬ್ಬ ಸಂಸ್ಕೃತ ಕವಿಯು ನುಡಿದಿದ್ದಾನೆ. ಕವಿಯೆಂದರೆ ಕಂಡವನಿರುವನು. ಉಂಡವನಿರುವನು. ಅವನಿಗೆ ಪ್ರಪಂಚದ ಪರಿಚಯವು ಚನ್ನಾಗಿರುವುದು. ಕಂಡದ್ದನ್ನು ಹೃದಯಂಗಮವಾಗಿ ಬಣ್ಣಿಸುವನು. ಉಂಡು ಸವಿಯಾಗಿ ಎನಿಸಿದ್ದನ್ನು ಸಕಲರಿಗೂ ನೀಡುವನು. ಆದುದರಿಂದಲೇ ಅವನು, ಆಪ್ತನು. ಸಾಹಿತ್ಯ ಸಂಗೀತಗಳಲ್ಲಿ ಜೀವನದ ಜೀವಣವು ಅಡಗಿದೆ ಎಂಬ ಮಾತನ್ನು ಮೇಲಿನ ನುಡಿಗಳಿಂದ ಕವಿಯು ಎಲ್ಲರಿಗೂ ತಿಳಿಸಿದ್ದಾನೆ. ಸಾಹಿತ್ಯ ಸಂಗೀತಗಳು ಗಂಡ ಹೆಂಡರಂತೆ ಒಂದು ಜೀವ; ಮತ್ತೊಂದು ದೇಹ. ಎರಡೂ ಒಂದನ್ನೊಂದು ಬಿಟ್ಟಿರಲಾರವು. ಒಂದನ್ನೊಂದು ಅಗಲಿದರ ಜೀವನವು ಜೀರ್ಣಾರಣ್ಯವಾಗುತ್ತದೆ. ಜಗವು ಶೂನ್ಯವಾಗುತ್ತದೆ. ಭಾವದ ಬೇರು ಕಿತ್ತಿ ಬೀಳುತ್ತದೆ. ಆದುದರಿಂದ ಪ್ರಪಂಚಕ್ಕೆ ಇವೆರಡೂ ಅತ್ಯಾವಶ್ಯಕವಾದವುಗಳು ಇದನ್ನರಿತೇ ನಮ್ಮ ಪೂರ್ವಜರು ಎಲ್ಲ ಕಥೆ ಪುರಾಣಗಳನ್ನು ಹಾಡುಗಳಲ್ಲಿಯೇ ರಚಿಸಿದರು. ಆ ಹಾಡುಗಳಿಲ್ಲದಿದ್ದರೆ, ನಮ್ಮ ನಾಡು ಏನು ಆಗುತ್ತಿತ್ತೋ ದೇವರೇ ಬಲ್ಲ. ಆ ಹಾಡುಗಳೇ ಇಲ್ಲಿಯ ವರೆಗೆ ನಮ್ಮನ್ನು ರಕ್ಷಿಸಿರುವವು. ಆ ಹಾಡುಗಳೇ ಇಲ್ಲಿಯ ವರೆಗೆ ನಮ್ಮ ಸಮಾಜವನ್ನು ಕಾಯ್ದಿರುವವು. ಆ ಹಾಡುಗಳೇ ಇಲ್ಲಿಯ ವರೆಗೆ ನಮಗೆ ಅಧ್ಯಾತ್ಮದ ಮಾರ್ಗವನ್ನು ತೋರಿಸಿರುವವು. ಆ ಹಾಡುಗಳ ಬೆಳಕು ಈಗಿನ ಶಿಕ್ಷಣದಿಂದ ಮಾಯವಾಗಹತ್ತಿದೆ. ಆದುದರಿಂದ ಕಾಲಕ್ಕೆ ಎಚ್ಚತ್ತು ಉಪಾಯಗಳನ್ನು ಮಾಡುವದು ವಿಹಿತ. ಹೊತ್ತು ಹೋದರೆ ಮತ್ತೆ ಬಾರದು.

ಈಗಿನ ಶಿಕ್ಷಣ ಸಂಸ್ಥೆಗಳಲ್ಲಿ ಸಂಗೀತಕ್ಕೆ ಎಡೆಯಿಲ್ಲ. ಸಾಹಿತ್ಯಕ್ಕೆ ಸ್ಥಾನವೇನೋ ದೊರೆತಿದೆ. ಸಂಗೀತದ ಬಲವಿಲ್ಲದುದರಿಂದ, ಸಾಹಿತ್ಯವಾದರೂ ಸಿಡಿಯಿಲ್ಲದ ಕಂಠಮಾತ್ರವಾಗಿದೆ. ಬುದ್ಧಿಯ ಬೆಳವಣಿಗೆಗೆ ಸಾಹಿತ್ಯವು ಅವಶ್ಯಕವಾಗಿರುವಂತೆ ಭಾವದ ಬೆಳವಣಿಗೆಗೆ ಸಂಗೀತವು ಅತ್ಯಾವಶ್ಯಕ. ಶಿಕ್ಷಣವೆಂದರೆ ಬುದ್ಧಿ ಜೀವ ಭಾವಗಳ ಬೆಳವಣಿಗೆ. ಬುದ್ಧಿಯೊಂದಿದ್ದರೆ ಸಾಗದು. ಬುದ್ಧಿಗೆ— ಭಾವದ ಜೋಡು ಬೇಕು. ಬುದ್ಧಿ ಭಾವಗಳ ಜೊತೆಯಿಂದಲೇ ವಿಶ್ವದ ಮರ್ಮವು ಗೊತ್ತಾಗುವದು. ವಿಶ್ವವೆ ಸಂಗೀತಮಯವಾಗಿರುವುದು. ಗಾನಲೋಲನ ಪ್ರೇಮದ ಮುರಲಿಯ ಮಧುರನಿನಾದದಿಂದ ವಿಶ್ವದ ಜೀವನವು. ಅದೇ ಅದರ ಆತ್ಮವು. ಎದೆಯ ಒಳಗಣ ಹಾಡೇ ಕಾವ್ಯವೆಂದು ಒಬ್ಬ ಇಂಗ್ಲಿಷ ಕವಿಯು ನುಡಿದಿದ್ದಾನೆ. ಎಂದ ಮೇಲೆ ಸಾಹಿತ್ಯದ ಉಗಮವಾದರೂ ಸಂಗೀತದಿಂದಲೇ. ಸಂಗೀತವಿಲ್ಲದಿದ್ದರೆ, ಜಗತ್ತಿಗೆ ಎಷ್ಟೊಂದು ಕೇಡಾಗುವುದೆಂಬ ಮಾತು ಇನ್ನು ಓದುಗರಿಗೆ ಹೊಳೆಯದೆ ಇರದು. ಯಾವನಲ್ಲಿ ಸಂಗೀತ ಪ್ರೇಮವಿರುವದಿಲ್ಲವೋ, ಯಾವನ ಎದೆಯು ಸಂಗೀತದ ಮಾಧುರ್ಯಕ್ಕೆ ಸೋತು ಕರಗುವದಿಲ್ಲವೋ, ಅವನು ಮನುಷ್ಯನೇ ಅಲ್ಲ; ದ್ರೋಹಿಯು, ಪಾತಕಿಯು, ರಾಕ್ಷಸನು ಎಂದು ಶೇಕ್ಸ್‌ಪಿಯರನು ನುಡಿದಿರುವನು. ಜಗತ್ತಿಗೆ ಆಧಾರವಾದ ಸಂಗೀತವನ್ನು ಶಿಕ್ಷಣ ಕ್ರಮದಲ್ಲಿ ಸೇರಿಸುವದು ಶಿಕ್ಷಣಾಧಿಕಾರಿಗಳ ಆದ್ಯ ಕರ್ತವ್ಯವು.

ಸಂಗೀತ ಶಿಕ್ಷಣವಿಲ್ಲದ್ದರಿಂದಲೇ ನಮ್ಮ ನಾಡು ಪಾಳಾಗಿದೆ; ಪಾರತಂತ್ರ್ಯದಲ್ಲಿ ಮುಳುಗಿದೆ. ಎದ್ದು ಬೇಕನ್ನರಿಯುವಾಗಿದೆಯೆಂದು ಆಲೋಚಿಸುವರು, ನುಡಿಯುವರು. ಪಾಶ್ಚಿಮಾತ್ಯ ರಾಷ್ಟ್ರಗಳಲ್ಲೆಲ್ಲ, ರಾಷ್ಟ್ರೀಯ ಪದ್ಯಗಳ ಮುಖಾಂತರವಾಗಿಯೇ ಸ್ವದೇಶ ಪ್ರೇಮದ ಜ್ವಾಲೆಯು ಪ್ರಜ್ವಲಿತವಾಗಿ ಇಡಲ್ಪಟ್ಟಿದೆ. ನಮ್ಮಲ್ಲಿಯು ವಿಶ್ವವಿದ್ಯಾಲಯದ ಪದವೀಧರರಿಗೆ ತಮ್ಮ ಪ್ರಾಚೀನ ಕಾಲದ ಸಾಧುಸಂತರಿಂದ ರಚಿತವಾದ ಒಂದು ಭಾವ ಭಕುತಿಯ ಹಾಡನ್ನಾದರೂ ಹಾಡಲು ಬರುವದಿಲ್ಲ ಹೀಗಿದ್ದ ಮೇಲೆ ಅವರಲ್ಲಿ ತಮ್ಮ ದೇಶದ ಬಗ್ಗೆ ಅಭಿಮಾನವಿರುವದಾದರೂ ಎಂತು! ಆದುದರಿಂದಲೇ ನಮ್ಮ ಅವನತಿಯು ಸಂಪೂರ್ಣವಾಗಿದೆ. ನಾವು ಕುದಲಿನಲ್ಲಿ ಸಿಕ್ಕಿ ತೊಳಲುತ್ತಿರುವೆವು. ಉದ್ಧಾರವಾಗಬೇಕಾದರೆ, ಸಂಗೀತ ದೇವಿಯೇ ಬೇಕು. ಅವಳ ಅನುಗ್ರಹದಿಂದಲೇ ನಮ್ಮ ಮುಕ್ತಿಯು. ನಮಗಾದರೂ ಜಗತ್ತಿನ ಉತ್ಸವಗಳಲ್ಲಿ ಪಾಲುಗಾರರಾಗಲು ಬೇಕಿರುವದಿಲ್ಲವೇ? ಎಲ್ಲ ಉತ್ಸವಗಳಿಗಿಂತಲೂ ಜ್ಞಾನೋತ್ಸವವು ಶ್ರೇಷ್ಠವಲ್ಲವೇ? ಎಲ್ಲರೂ ತಮ್ಮ ತಮ್ಮ ದೀಪಗಳನ್ನು ಹೊತ್ತಿಸಿ ಸಾಲಾಗಿ ಇಟ್ಟಿರುವಾಗ ನಾವು ಹಾಗೆಯೇ ಕುಳಿತರೆ ನಮಗೆ ಮರ್ಯಾದೆಯಾಗುವುದೇ? ನಮ್ಮ ದೀವಿಗೆಯು ಸಾಲಾದರೂ ಅಲ್ಲಿ ಬೆಳಗತೊಡಗಿತೆಂದರೆ, ನಮ್ಮ ಕರ್ತವ್ಯವು ಮುಗಿದಂತಾಗುವುದು. ಜನ್ಮ ಹೊತ್ತದ್ದಕ್ಕೆ ಸಾರ್ಥಕವಾಗುವುದು. ಇಲ್ಲದಿದ್ದರೆ, ಹುಟ್ಟಿ ಸಾಯುತ್ತಲಿರುವ ಅಸಂಖ್ಯರಾದ ಅಜಾಗಲ ಸ್ವರೂಪರನ್ನು ಕಟ್ಟಿಕೊಂಡು ಮಾಡುವದೇನು?

ಒಟ್ಟಿನಲ್ಲಿ ಹೇಳುವದೇನೆಂದರೆ ಸಂಗೀತದಲ್ಲಿ ನಾಡಿನ ಸಂಸ್ಕೃತಿಯಡಗಿದೆ. ಅದರಲ್ಲಿಯೇ ನಾಡಿನ ಪ್ರಾಣನಾಡಿಯಿದೆ. ಅದರೊಳಗೆಯೇ ಉಚ್ಚ ಭಾವಗಳ ಬೀಜವಿದೆ. ಸ್ವಾಭಿಮಾನದ ಉಜ್ವಲವಾದ ಜ್ಯೋತಿಯಿದೆ; ನಂಬುಗೆಯ ಹುಟ್ಟಿದೆ. ಕಲ್ಯಾಣದ ಶಾಂತಿಯಿದೆ; ಭಕ್ತಿಮುಕ್ತಿಗಳ ನೆಲೆಯಿದೆ. ಸುಖದ ಸೆಲೆಯಿದೆ. ಹೀಗಿರುವದರಿಂದ, ಶಿಕ್ಷಣ ಸಂಸ್ಥೆಗಳಲ್ಲಿ ಸಂಗೀತಕ್ಕೆ ಅಭ್ಯಾಸ ಕ್ರಮದಲ್ಲಿ ಎಡೆಗೊಡಬೇಕು. ಮುಂಬಯಿ ವಿಶ್ವವಿದ್ಯಾಲಯದವರು ಲಲಿತ ಕಲೆಗಳನ್ನೆಲ್ಲ ಪೋಷಿಸಬೇಕೆಂದು ಮಾಡಿರುವರು. ವಿಶ್ವವಿದ್ಯಾಲಯದ ಸುಧಾರಣೆಯ ಬಗ್ಗೆ ಒಂದು ಮಂಡಲವು ೧೯೨೪-೨೫ ರಲ್ಲಿ ಕೆಲಸ ಮಾಡುತಲಿದ್ದಿತು. ಆ ಮಂಡಲವು ತನ್ನ ವರದಿಯಲ್ಲಿ ಸಂಗೀತ ಶಾಸ್ತ್ರವನ್ನು ವಿಶ್ವವಿದ್ಯಾಲಯದ ಅಭ್ಯಾಸ ಕ್ರಮದಲ್ಲಿ ಸೇರುವುದು ಅತ್ಯಾವಶ್ಯಕವೆಂದು ಹೇಳಿದೆ. ಸಂಗೀತ ಶಾಸ್ತ್ರದ ಅಭ್ಯಾಸವನ್ನು ಕ್ರಮಪಡಿಸುತ್ತ ಹೋಗಿ, ಅದಕ್ಕಾದರೂ ಪದವಿಯನ್ನು ಕೊಡಬೇಕೆಂದು ಸೂಚಿಸಿರುವುದು. ವಿದ್ಯಾಲಯದವರು ಎಂದು ವ್ಯವಸ್ಥೆ ಮಾಡುವರೋ ನೋಡುವಾ. ನಮ್ಮಲ್ಲಿ ಎಷ್ಟೋ ಖಾಸಗೀ ಸಂಸ್ಥೆಗಳಿರುವವು. ಅವು ತೀವ್ರವಾಗಿಯೇ ಅಭ್ಯಾಸಕ್ರಮದಲ್ಲಿ ಸಂಗೀತವನ್ನು ಸೇರಿಸಿದರೆ ಒಳಿತಾಗುವುದು. ಚಿಕ್ಕ ಮಕ್ಕಳ ಅಂತಃಕರಣವು ಬಲು ಎಳೆಯದಿರುವುದು. ಅವರ ಹೃದಯವಾದರೂ ಸಂಗೀತಮಯವಾಗಿರುವುದು ಆದ್ದರಿಂದ ಎಳೆತನದಲ್ಲಿಯೇ ಅವರಿಗೆ ಸಂಗೀತದ ರುಚಿಯನ್ನು ಹಚ್ಚಿದರೆ, ಹೆಚ್ಚು ಚನ್ನಾಗಿ ಆಗುವುದು. ಅದು ಒಂದು ಸೌಂದರ್ಯ ಸಾಕ್ಷಾತ್ಕಾರದ ಮಾರ್ಗ. ಸತ್ಯ ಸಾಕ್ಷಾತ್ಕಾರದ ಮಾರ್ಗ. ದೇವ ಭಾವನನ್ನು ಹೊಂದುವ ಮಾರ್ಗ.

ವಿಭೂತಿಯ ಪ್ರಸಾದ.

ಕನ್ನಡಿಗರೆಂದರೆ ಒಂದೇ ಜಾತಿ ಒಂದೇ ಜನಾಂಗ ಎಂದು ಸ್ಫೂರ್ತಿ ಅನಿಸಹತ್ತಿ ಬಹಳ ದಿವಸಗಳಾಗಿಲ್ಲ. ಈ ಬಗೆಯ ಜಾತಿಯ ಜಾಗ್ರತಿಯು (National awakening) ಹೊಸದಲ್ಲ ಹೊಸದು. ಬಂ

ದೇ ಭೂತ ಒಂದೇ ವರ್ತಮಾನ ಒಂದೇ ಭವಿಷ್ಯವುಳ್ಳ ಅಖಂಡವಾದ ಜಾತಿ ತಮ್ಮದು ಎಂದು ಇತಿಹಾಸದ ಸಂಸ್ಕಾರವುಳ್ಳವರಿಗೂ ಸಂಸ್ಕೃತಿಯ ಇತಿಹಾಸ ಬಲ್ಲವರಿಗೂ ಮೊದಲು ಭಾವನೆಯುಂಟಾಗುವದು. ಈ ಭಾವನೆಯೇ ಮುಂದೆ ಬರಬರುತ್ತ ಸಾಮಾನ್ಯರಲ್ಲಿಯೂ ನೆಲೆಗೊಂಡು ಹೊಸ ನಾಡ ಕಟ್ಟಡಕ್ಕೊಂದು ತಳಹದಿಯಾಗಿರುವದು. ಈ ಭಾವನೆಯಲ್ಲಿ ತಮ್ಮ ನಾಡಿನ ವಿಭೂತಿಗಳ ಬಗ್ಗೆ ಉಂಟಾಗುವ ಆದರವು ಒಂದು ಮಹತ್ವದ ಭಾವಾಗಿದೆ

ಮೊದಮೊದಲು ಸಾಮಾನ್ಯ ಜನರಿಗೆ ಈ ವಿಭೂತಿಗಳು ಕೇವಲ ನಾಮಮಾತ್ರ ಜ್ಞೇಯವುಳ್ಳವರಾಗಿ ತೋರುವರು. ಈ ನಾಮಸ್ಮರಣದಿಂದಾದ ಜಿಜ್ಞಾಸೆಯಿಂದ ಅವರು ಇಂಥವರ ಜೀವನ ಚರಿತೆಯಲ್ಲಿಯ ಬೆರಗಾಗಿ [illegible] ಕೇಳಿ ಪೂಜ್ಯಭಾವವು ಸ್ಥಿರವಾಗುವಂಥ ಒಂದೇ ಎರಡೆ ಸಂಗತಿಗಳನ್ನು ತಿಳಿದುಕೊಳ್ಳುತ್ತಾರೆ. ಈ ಒಂದೆರಡು ಸಂಗತಿಗಳ ಸತ್ವಸಾರದಿಂದ ನಿರ್ಮಿತವಾದೊಂದು ದಿವ್ಯ ಮೂರ್ತಿಯು ಆ ನಾಮಸ್ಮರಣದೊಂದಿಗೆ ಅವರ ಕಣ್ಣೆದಿರು ಮಿಂಚಿನಂತೆ ಹೊಳೆದು ಹೋಗುವದು. ಆದರೆ ಜಿಜ್ಞಾಸೆಯು ಒಮ್ಮೆ ಎಚ್ಚತ್ತಿತೆಂದರೆ ಅಲ್ಲಿಯೇ ನಿಲ್ಲುವದು ಅದರ ಸ್ವಭಾವವಲ್ಲ. ಆದಕಾರಣ ಆ ಜಿಜ್ಞಾಸೆಯಿಂದ ಪ್ರೇರಿತರಾಗಿ ಜನರು ಆಯಾ ವಿಭೂತಿಗಳ ಸಮಗ್ರ ಜೀವನವನ್ನೇ ತಿಳಿದುಕೊಳ್ಳಲು ಯತ್ನಿಸುವರು ಅವರು ಮಾಡಿದ್ದೇನು ಬಿಟ್ಟದ್ದೇನು? ಅವರಿಗೆ ತಿಳಿದದ್ದೇನು? ಅವರ ಜೀವನವೆಂಬ ಕಾವ್ಯದ ಧ್ವನಿತಾರ್ಥವಾದರೂ ಯಾವದು? ಇವೇ ಮೊದಲಾದ ಮಾತುಗಳ ನಿರ್ಣಯಕ್ಕಾಗಿ ಅವರ ಕಾರ್ಯಗಳ ಪರ್ಯಾಲೋಚನಕ್ಕೂ ಅವರ ಗ್ರಂಥಗಳ ಶ್ರವಣ ಮನನಕ್ಕೂ ಅವರ ಪೂರ್ವಾಪರ ಪರಿಸ್ಥಿತಿಯ ಸಮಾಲೋಚನಕ್ಕೂ ಆರಂಭವಾಗುವದು ಆದರೆ ಜ್ಞಾನಕ್ಕೆ ಕ್ರಿಯೆಯೇ ಮಧುರ ಫಲವಾಗಿದ್ದರಿಂದ ವಿಭೂತಿಗಳ ಚರಿತೆಯ ಸತತಾಭ್ಯಾಸದಿಂದ ಶ್ರವಣ ಮನನ ನಿದಿಧ್ಯಾಸದಿಂದ ಭಾರತದಲ್ಲಿ ಹೇಳಿದಂತೆ ‘ಮಹಾಜನೋ ಯೇನಗತಃಸಪಂಥಾಃ’ ಎಂದರೆ ದೊಡ್ಡವರು ಹಿಡಿದದ್ದೇ ಹಾದಿ ಎಂದು ಆಗಲಿ, ಭಾಗವತದಲ್ಲಿ ಹೇಳಿದಂತೆ “ನದೇವಚರಿತಂ ಚರೇತ್” ಎಂದರೆ ಅಸಾಮಾನ್ಯ ಪುರುಷರು ಮಾಡಿದಂತೆ ಮಾಡಬಾರದು ಆದರೆ ಅವರು ಹೇಳಿದಂತೆ ಮಾಡಬೇಕು ಎಂದು ಆಗಲಿ ಯಾವುದೇ ರೀತಿಯಲ್ಲಾಗಲಿ ಜನರು ತಂತಮ್ಮ ಪರಿಯಿಂದ ಇಂಥ ವಿಭೂತಿಗಳು ಹೇಳಿದಂತೆ ಯಥಾಶಕ್ತಿ ಯಥಾಭಕ್ತಿ ಆಚರಿಸಲಾರಂಭಿಸಿದರೆ ಭಾಗ್ಯೋದಯವಾಯಿತೆಂದು ತಿಳಿಯಬೇಕು.

ಶ್ರೀ ವಿದ್ಯಾರಣ್ಯರು ನಾಮ ಮಾತ್ರ ಜೀವನವನ್ನು ದಾಟಿ ಈಗ ಕನ್ನಡಿಗರ ಜ್ಞಾನದ ವಿಷಯವಾಗಿದ್ದಾರೆ. ಕೆಲವರು ಅವರನ್ನು ಕುರಿತು ಕಥೆಗಳನ್ನೂ ಕಾದಂಬರಿಗಳನ್ನೂ ನಾಟಕಗಳನ್ನೂ ಬರೆದಿದ್ದಾರೆ; ಕೆಲವರು ಅವರ ಚರಿತ್ರಗಳನ್ನೂ ಕೀರ್ತನಗಳನ್ನೂ ಬರೆದಿದ್ದಾರೆ; ಕೆಲವರು ಅವರ ಚಿತ್ರವನ್ನು ಚಿತ್ರಿಸಲು ಪ್ರಯತ್ನ ಮಾಡಿದ್ದಾರೆ, ಕೆಲವರ ಕಾವ್ಯಕ್ಕೂ ಕವಿತೆಗಳಿಗೂ ವಿದ್ಯಾರಣ್ಯರು ವಿಷಯವಾಗಿದ್ದಾರೆ. ಶ್ರೀ ವಿದ್ಯಾರಣ್ಯರ ತತ್ವಜ್ಞಾನದ ಮಂಥನವನ್ನು ಮಾಡಿ ಅವರ ನವನೀತವನ್ನೆತ್ತಿ ಕೊಡುವ ಕೆಲಸವನ್ನು ಇನ್ನೂ ಯಾರೂ ಕೈಕೊಂಡಂತೆ ಕಾಣುವದಿಲ್ಲ. ಮೂರ್ತಿ ಶಿಲ್ಪಕಾರರಿನ್ನೂ ಅವರ ಮೂರ್ತಿಗಳನ್ನು ನಿರ್ಮಿಸಿಲ್ಲ ಸಂಗ್ರಹಾಭಿಲಾಷಿಗಳಾದವರೂ ಅವರ ಗ್ರಂಥಗಳನ್ನು ಸಮಗ್ರವಾಗಿ ಸಂಗ್ರಹಿಸಿಲ್ಲ. ಹೀಗೆ ಇನ್ನೂ ಎಷ್ಟೋ ಜಿಜ್ಞಾಸೆಯ ಕೆಲಸಗಳಾಗಬೇಕಾಗಿವೆ ಆದರೂ ಜ್ಞಾನ ಕಾರ್ಯಾರಂಭವಾಗಿದೆ ಎನ್ನಲು ಅಡ್ಡಿಯಿಲ್ಲ.

ಆದರೆ ಅವರ ತತ್ವದಂತೆ ಆಚರಿಸಿ ಜಗದ್ರಕ್ಷಣೆಯನ್ನೂ ಜಗದುದ್ಧಾರವನ್ನೂ ಮಾಡುವ ವ್ಯಕ್ತಿಗಳು ಕನ್ನಡಿಗರ ಸಮಾಜದಲ್ಲಿಂದು ಕಂಗೊಳಿಸ ಹತ್ತುವವೋ ಅಂದೇ ಅವರ ಭಾಗ್ಯಕಾಲ ಬಂತೆನ್ನ ಬಹುದು. ಅಲ್ಲಿಯವರೆಗಿಲ್ಲ. ಶ್ರೀ ವಿದ್ಯಾರಣ್ಯರ ತತ್ವಾನುಸರಣವೆಂದರೆ ಅವರ ಮತಪಂಥಾನುಸರಣವಲ್ಲ— ಮಾಯಾದ್ವೈತದ ಪ್ರಚಾರವಲ್ಲ. ಶ್ರೀ ವಿದ್ಯಾರಣ್ಯರಿಗೂ ಮಾಯಾ ದ್ವೈತಕ್ಕೂ ಸಾಯುಜ್ಯ ಸಂಬಂಧವಿದೆ— ಅದಕ್ಕೂ ಇವರಿಗೂ ಬಿಡುಗಡೆಯೇ ಆಗುವಂತಿಲ್ಲವೆಂದರೆ, ಹಾಗೆ ತಿಳಿದರೆ, ಅನ್ಯಮತೀಯರು ಅವರ ತತ್ವಾನುಸಾರವಾಗಿ ನಡೆಯುವದಶಕ್ಯ. ಆದರೆ ಈಗಿನ ನವೀನ ಜಾತೀಯ ಯುಗದಲ್ಲಿ ಕನ್ನಡಿಗರೆಲ್ಲರು ತಮ್ಮವರೆಂದು ತಿಳಿಯಬೇಕಾದ ಕಾಲದಲ್ಲಿ ಈ ಭೇದ ಭಾವನೆಯಿಂದ ಕಾರ್ಯ ಸಾಧನೆಯಾಗುವಂತಿಲ್ಲ. ಅಂತೆಯೇ ಅವರ ಮತವಾವುದು ಪಂಥವಾವುದು ಎಂಬ ಮಾತನ್ನು ಮುಖ್ಯವಾಗಿ ಎಣಿಸದೆ ಅವರು ಹೇಗೆ ಮಹಾ ರಾಜ್ಯವಿಪ್ಲವದ ಕಾಲಕ್ಕೆ ಎಲ್ಲ ಮತದವರನ್ನೂ ಎಲ್ಲ ಪಂಥದವರನ್ನೂ ರಕ್ಷಿಸುವದಕ್ಕಾಗಿ ಕರ್ನಾಟಕ ಸಿಂಹಾಸನವನ್ನು ಸ್ಥಾಪಿಸಲು ಉಜ್ಜುಗಿಸಿದರೋ ಆ ಉದ್ಯೋಗದ ಬೆಂಬಲಿಕ್ಕಿದ್ದ ಅಂತಃಕರಣದ ಸ್ಫೂರ್ತಿ ತರಂಗವಾವುದು ಎಂಬದನ್ನು ತಿಳಿದುಕೊಂಡು ಹಾಗೆ ನಾವೂ ಯಥಾನುಶಕ್ತಿ ವರ್ತಿಸಬೇಕು.

ಏನಾಯಂ ನಟನೇನಾತ್ರ ಬುಧ್ಯತೇಕಾರ್ಯಮೇವತತ್ ||
ಅಜ್ಞಪ್ರಭೋದಾನ್ನ್ಯಾನ್ಯತ್ಕಾರ್ಯಮಸ್ತ್ಯತ್ರ
ತದ್ವಿದಃ ||

ಪಂಚದಶಿ.

ಆದರೆ ಯಾವ ರೀತಿಯಿಂದ ಅಜ್ಞನಿಗೆ ಬೋಧವಾದೀತೋ ಅಂಥಾ ರೀತಿಯನ್ನೇ ತತ್ವಜ್ಞನು ಆಡಬೇಕು. ಯಾಕೆಂದರೆ ತತ್ವಜ್ಞನಿಗೆ ಮೂಢೋಪದೇಶದ ಹೊರ್ತು ಮತ್ತೊಂದು ಕಾರ್ಯವೇ ಇಲ್ಲ ಹೀಗೆ ತಮ್ಮ ಚರಿತ್ರದ ಹುರುಳು ತಿರುಳನ್ನು ತಾವೇ ಹೇಳಿರುವರು. ಈ ಮಾತಿನಲ್ಲಿ ಮತಪಂಥದ ಅಭಿಮಾನವಿಲ್ಲ ಅಹಂಕಾರವಿಲ್ಲ ಅಧಿಕಾರ ಗೌರವದ ಮದವಿಲ್ಲ ದರ್ಪವಿಲ್ಲ ಕೇವಲ ಲೋಕಕಲ್ಯಾಣೇಚ್ಛೆಯನ್ನು ಬಿಟ್ಟು ಮತ್ತೊಂದಿಲ್ಲ. ಹೀಗೆಯೇ ಈಗಲೂ ಕಿರಿಯರಿಗೆ ಬುದ್ಧಿಯುಂಟಾಗುವಂತೆ ಹಿರಿಯರು ನಡೆದರೆ, ಹಿಂದುಳಿದವರಿಗೆ ಹಿತವಾಗುವಂತೆ ಮುಂದಾದವರು ವರ್ತಿಸಿದರೆ ಅವರ ಮಾರ್ಗವನ್ನೇ ನಾವು ಅನುಸರಿಸಿದಂತಾಗುವದು. ಅವರ ಸ್ಮರಣದ ದಿನದಲ್ಲಿ ಅವರ ಹೊಗಳಿಕೆಯ ನೂರು ನುಡಿಗಳಿಗಿಂತ ಅವರಂತೆ ನಡೆಸುವ ಅಲ್ಪ ನಿಶ್ಚಯವು ಕೂಡ ಅಭ್ಯುದಯಕರವಾಗಿದೆ.

[ವ. ರಾ. ಬೇಂದ್ರೆ ಗೆಳೆಯರ ಗುಂಪು.]

ಪತ್ರವ್ಯವಹಾರ.

ಮ|| ಪೋಸ್ಟ್ ಸುಪರಿಂಟೆಂಡೆಂಟ
ಜಿಲ್ಲಾ ಬೆಳಗಾಂವಿ ಇವರ ಕಡೆಗೆ—

ಅರ್ಜದಾರಃ— ವೆ. ರಾ. ನಗರ ಸಾಕೀನ ಮಾರ್ತಾಂಡ ಈತನ ವಿನಂತಿ:- ನಾನು ತಮ್ಮ ಕಡೆಗೆ ಒಂದು ಅರ್ಜಿಯನ್ನು ಪಾರ್ಸಲಕ್ಕೆ ಪೋಸ್ಟ್ ಕೊಡುವ ಕುರಿತು ಮಾಡಿದ್ದೆ; ಅದಕ್ಕೆ ತಮ್ಮ ಕಡೆಯಿಂದ (೪—೦—೯) ಇಷ್ಟು ಉತ್ಪನ್ನ ನನ್ನಲ್ಲಿ ಕಮ್ಮಿಯಾಗುವದು. ಕಮ್ಮಿಯಾದ ಉತ್ಪನ್ನವನ್ನು ಕೊಟ್ಟರೆ ಕೊಡು

ವೆಂದು ಉತ್ತರ ಬಂದಿತ್ತು. ಆದರೆ, ಅದರಂತೆ ಕಡಿಮೆಯಾದ ಹಣವನ್ನು ಕೊಡುವೆವೆಂದು ಬರೆದು ೨೦, ೨೫ ದಿವಸವಾದರೂ ಅದಕ್ಕೆ ಉತ್ತರ ಸಹ ಇಲ್ಲ. ಹೀಗೆಕೆ ಟಪಾಲು ಖಾತೆಯಲ್ಲಿ ಅತಿ ತೀವ್ರವಾಗಿ ದಾದು ಮುಟ್ಟುವದಂತೆ; ಹೀಗಿದ್ದರೂ ನಮ್ಮಲ್ಲಿ ಪೋಷ್ಟ ಸುರುವಾಗಿಲ್ಲ. ಯಾವಾಗ ಸುರು ಮಾಡುವೆವೆಂಬುದನ್ನು ತಿಳಿಸಿಲ್ಲ

ಆದ್ದರಿಂದ ಹೀಗೆ ಮಾಡದೆ ತೀವ್ರವಾಗಿ ನಮ್ಮ (ಪಾಶ್ಚಾಪೂರದಲ್ಲಿ) ಪೋಷ್ಟ ಸುರುಮಾಡಬೇಕು. ಎಂದು ಸುರು ಮಾಡುವಿರಿ ತಿಳಿಸ ಬೇಕು.

ಪಾಶ್ಚಾಪೂರ
೧೦-೭-೩೬

ತಮ್ಮ,
ವೆ. ರಾ. ನಗರ.

ಶ್ರೀ. ಕಾರ್ಯದರ್ಶಿ ರೇಲ್ವೆ ಮಂಡಳ ಬೆಳಗಾಂವಿ,
ಇವರ ಸನ್ನಿಧಿಯಲ್ಲಿ—

ವೆ ರಾ. ನಗರ ಈತನ ವಿನಂತಿ, ಸವದತ್ತಿ ವರೆಗೆ ಬೆಳಗಾಂವಿಯಿಂದ ಹೊಸ ರೇಲ್ವೆ ಲಾಯಿನ್ ಹಾಕುವದಾಗಿ ಕೇಳಿಕೆಯಲ್ಲಿದೆ. ಆದರೆ ಬೆಳಗಾಂವಿಯಿಂದ ಹೊರಟಲಾಯಿನ್‌ದ ಸಂಪಗಾಂವಿ ವರೆಗೆ ಆಗುವ ಸ್ಟೇಶನಗಳಾವವು ? ಬೆಳಗಾಂವಿಯಿಂದ ಹೊರಟದ್ದು ಬಾಗೇವಾಡಿಯ ಉತ್ತರಕ್ಕೆ ಹಾಯ್ದು ಸಂಪಗಾಂವಿಯ ಕಡೆಗೆ ಹೋಗುವದೆಂದು ಸುದ್ದಿಯದೆ. ಆದರ ಹೀಗಾಗುವದರಿಂದ ಬಾಗೇವಾಡಿಯ ದಕ್ಷಿಣ ಕಡೆಯ ಜನರಿಗೂ ವ್ಯಾಪಾರಕ್ಕೂ ಬಹಳೇ ಹಾನಿಯಾಗುವದು. ಆದ್ದರಿಂದ ಹೀಗಾಗಬಾರದಾಗಿ ಕೋರುತ್ತೇನೆ. ಬೆಳಗಾಂವಿಯಿಂದ ಹೊರಟದ್ದು ಬಾಗೇವಾಡಿ ಮುಗುಟಖಾನ ಹುಬ್ಬಳ್ಳಿ ನಡುವೆ ಹಾಯುವಂತೆ ಪ್ರಯತ್ನ ಮಾಡಬೇಕಾಗಿ ವಿನಂತಿ ಇದೆ ಮತ್ತು ಅದರ ಸಂಬಂಧಿ ನಕಾಶ ಮೊದಲಾದ ಮಾಹಿತಿ ಏನಾದರೂ ಸಿಕ್ಕರೆ, ತಿಳಿಸಿರಿ, ಉತ್ತರವನ್ನು ಬರೆಯಿರಿ. ರೇಲ್ವೇ ಮಂಡಳ ಸಲುವಾಗಿ ಜನರಲ್ಲಿ ಆದರ ಹುಟ್ಟಹತ್ತಿದೆ. ಹಳ್ಳಿಯ ಜನರಿಗೆ ಇದರ ಲಾಭಮಾಡಿಕೊಡಬೇಕಾಗಿ ಪ್ರಾರ್ಥನೆ.

ಪಾಶ್ಚಾಪೂರ
ಪೋ. ಖಾನಾಪೂರ.

ತಮ್ಮ ಬಂಧು
ವೆ. ರಾ ನಗರ.

(೩ ನೇ ಪಾನದಿಂದ ಬಂದದ್ದು.)

ವರೆಗೆ) ೧೭೦೩ ರಾಷ್ಟ್ರೀಯ ಮಹಾಸಭೆಯ ಸದಸ್ಯರನ್ನೂ ೬೭ ಹಿಂದುಸ್ಥಾನೀ ಸೇವಾದಳದ ಸದಸ್ಯರನ್ನೂ ಕೂಡಿಸುವರು ಇನ್ನು ಉಳಿದ ವ ೧೫ ವಾರಗಳಲ್ಲಿ ೮೫೯೭ ರಾಷ್ಟ್ರೀಯಮಹಾಸಭೆಯ ಸದಸ್ಯರನ್ನು ೪೩೩ ಹಿಂದುಸ್ಥಾನಿ ಸೇವಾದಳದ ಸದಸ್ಯರನ್ನೂ ಸೇರಿಸಬೇಕಾಗಿದೆ. ಕೆಲಸವು ತೃಪ್ತಿಕರವಾಗುವಷ್ಟು ಜೋರಾಗಿ ನಡೆದಿಲ್ಲ ಆದ್ದರಿಂದ ನಾನು ಕರ್ನಾಟಕದ ದೇಶಾಭಿಮಾನಿಗಳನ್ನು ನಮ್ಮ ಈ ಕಾರ್ಯದಲ್ಲಿ ಮುಂದೆ ಬಂದು ಸಹಾಯಮಾಡಬೇಕೆಂದು ಪ್ರಾರ್ಥಿಸುತ್ತೇನೆ. ಕೊಡಗು, ಮಂಗಳೂರ ಮತ್ತು ಕಾರವಾರ ಜಿಲ್ಹೆಗಳು ತಟಸ್ಥವಾಗಿವೆ. ಅಲ್ಲಿಯವರು ಈ ಸದಸ್ಯರನ್ನು ಕೂಡಿಸುವ ಕೆಲಸದಲ್ಲಿ ನಮಗೂ ಪ್ರಾಂತಿಕ ಕಾಂಗ್ರೆಸ್ ಕಮಿಟಿಗೂ ಸಹಾಯ ಮಾಡುವರೆ?

ನಾ. ಸು. ಹರಡೀಕರ.
ಜನರಲ್ ಸೆಕೆಟ್ರರಿ.

ವರ್ತಮಾನ ಸಾರ

ಇಹವೃತ್ತ.

ಹಿಂದುಸ್ಥಾನೀ ಸೇವಾದಳದ ಕಾರ್ಯದರ್ಶಿಗಳಾದ ಡಾಕ್ಟರ ಹರ್ಡೀಕರರವರು ಇಲ್ಲಿಗೆ ದಯಮಾಡಿಸಿರುವರು ಅವರು ಸಪ್ಟಂಬರ ೩೦ ನೇ ತಾರೀಖಿನೊಳಗಾಗಿ ಕೂಡಿಸಬೇಕಾದ ೫೦೦೦ ರೂಪಾಯಿಗಳಿಗಾಗಿ ಇಲ್ಲಿಗೆ ಬಂದಿರುವರು ಈಗಾಗಲೆ ಅವರಿಗೆ ೨೫೨ ರೂಗಳು ಕೊಡಿದವು ಈಹೊತ್ತು ರಾತ್ರಿ ಅವರು ಬಿಜಾಪುರಕ್ಕೆ ಪ್ರಯಾಣ ಬೆಳೆಸುವರು.

ಮುಂಬೈಕರ್ನಾಟಕ

ಶ್ರೀಮದ್ರಾಘವೇಂದ್ರ ಸ್ವಾಮಿಗಳವರ ಮಠಾಧೀಶರಾದ ಶ್ರೀಮತ್ಸುಶೀಲೇಂದ್ರ ಸ್ವಾಮಿಗಳವರು ಶ್ರೀಮತ್ಪೂಜ್ಯ ದುರ್ಗದ ಕೃಷ್ಣಾಚಾರ್ಯರಿಗೆ ಸಂಸ್ಥಾನವನ್ನು ಕೊಟ್ಟು ಆಷಾಢ ಶುದ್ಧ ೩ ಮಂಗಳವಾರ ದಿವಸ ವೈಕುಂಠವಾಸಿಗಳಾದರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವಾಗುತ್ತದೆ.

ಧಾರವಾಡ ನಗರಸಭೆಯವರ ಸಭಿಕರು, ಪದವೀಧರರಲ್ಲದ ಈಗಿನ ಚೀಫಆಫೀಸರರಾದ ಶ್ರೀ ಲಿಂಗನಗೌಡ ಪಾಟೀಲ ಇವರನ್ನು ತೆಗೆದು, ಇವರ ಜಾಗೆಯಲ್ಲಿ ಒಬ್ಬ ಬಿ. ಇ ಅಥವಾ ಎಲ್. ಸಿ. ಇ. ಪಾಸಾದವರನ್ನು ನೇಮಿಸಬೇಕೆಂದು ಗೊತ್ತುಮಾಡಿತು

ಮದ್ರಾಸಕರ್ನಾಟಕ

ಆಂಧ್ರ ವಿದ್ಯಾಪೀಠದ ಸಂಗಡ ಇವರಕ್ಕೆ ಸಂಬಂಧವನ್ನು ನಿಶ್ಚಯಿಸುವದಕ್ಕಾಗಿ ಆಂಧ್ರಮುಸಲ್ಮಾನರು ಬಳ್ಳಾರಿಯಲ್ಲಿ ೨೫ನೇ ತಾರೀಖಿನ ದಿವಸಪರಿಷತ್ತು ಕೂಡಿಸುವವರಿದ್ದಾರೆ ಡಾ॥ ಸಯ್ಯದ ಅಬ್ದುಲ್ಲ ಬತೀಫರವರೇ ಈ ಪರಿಷತ್ತಿಗೆ ಅಧ್ಯಕ್ಷರು

ಮಂಗಳೂರುಜಿಲ್ಹಾ ಸಮಿತಿಯವರ ಸಭಿಕರು, ಕರ್ನಾಟಕಕ್ಕೆ ಸ್ವತಂತ್ರ ವಿಶ್ವವಿದ್ಯಾಲಯ ಹಾಗೂ ಸ್ವತಂತ್ರಪ್ರಾಂತ ಸ್ಥಾಪಿಸಬೇಕೆಂದು ಮುಂಬಯಿ, ಮದ್ರಾಸ ಮತ್ತು ಕೊಡಗುಸರಕಾರಗಳಿಗೆ ವಿನಂತಿಸುವ ಸೂಚನೆಗಳು ಮಂಜೂರಾದವು.

ಬಳ್ಳಾರಿ ನಗರಸಭೆಯವರ ಸಭಿಕರು, ಅಲ್ಲಿಯ ವಿದ್ಯುಚ್ಛಕ್ತಿಯ ಕಂಪನಿಯನ್ನು ಕೊಂಡುಕೊಳ್ಳಬೇಕೆಂದೂ, ಇದಕ್ಕಾಗಿ ಸರಕಾರದವರಿಂದ ಸಾಲ ಪಡೆಯಬೇಕೆಂಬದಾಗಿಯೂ ಗೊತ್ತಾಯಿತು.

ಮೈಸೂರ ಕರ್ನಾಟಕ

ಗ್ರಂಥಕರ್ತರಿಗೆ ಮನ್ನಣೆ ಮಾಡಲು ಗೊತ್ತುಪಡಿಸಿದ ದೇವರಾಜ ಬಹಾದ್ದೂರರವರ ಫಂಡಿನಿಂದ ಶ್ರೀಕೃಷ್ಣರಾಜೇಂದ್ರ ಚರಿತ್ರೆ ಬರೆದದ್ದಕ್ಕಾಗಿ ಆಸ್ಥಾನವಿದ್ವಾನ್ ಶ್ರೀಕಂಠಶಾಸ್ತ್ರಿಗಳಿಗೆ ೨೦೦ ರೂಪಾಯಿ ಬಹುಮಾನವೂ, "ಮಹಾಲಿಂಗ ರಂಗಕವಿ ಅನುಭವಾಮೃತ" ಎಂಬ ಗ್ರಂಥಕ್ಕಾಗಿ ಶ್ರೀ ಹೊಸಕೆರೆ ಚಿದಂಬರಯ್ಯನವರಿಗೆ ೨೦೦ ರೂಗಳ ಬಹುಮಾನವೂ ಕೊಡಲ್ಪಟ್ಟಿರುವದು.

ಡಾಕ್ಟರ. ಆರ್ ಎಲ್ ಮೋಹನ್. ಎಮ್. ಎ. ಪಿ ಎಚ್. ಡಿ. ಬಾರ ಅಟಲ್ ರವರು ಪ್ರೀವ್ಹಿಕೌನ್ಸಿಲನಲ್ಲಿ ವಕೀಲಿ ಮಾಡಲು ಮೊನ್ನೆ ನ೧೧ನೇತಾರೀಖಿನದಿನ ಮೈಸೂರಿಂದ ಲಂಡನಕ್ಕೆ ಪ್ರಯಾಣ ಬೆಳಸಿದರು ಮೈಸೂರಿಂದ ವಿಲಾಯತಿಗೆ ಹೋಗುವವರಲ್ಲಿ ಇವರೇ ಮೊದಲನೇಯವರು.

ಬೆಂಗಳೂರು ಮಿಥಿಕಸಮಾಜದ ಸ್ಥಾಪಕರಾದ, ರೆ. ಫಾ. ಅಂಟೋನಿ. ಎಂ ಟಬಾರ್ಡರವರು ತಮ್ಮ ೬೫ನೇ ವಯಸ್ಸಿನಲ್ಲಿ ಬೆಂಗಳೂರಿನಲ್ಲಿ ಮರಣಹೊಂದಿದರು

ಕೊಡಗು ಕರ್ನಾಟಕ.

ಕೊಡಗಿನಲ್ಲಿ ಮಳೆಗಾಲವು ಪ್ರಾರಂಭವಾಗಿ ಕೆಲವು ದಿನಗಳಾದರೂ ಮಳೆಯು ಸಾಕಷ್ಟು ಆಗಿರುವದಿಲ್ಲ. ಇದರಿಂದ ಬಿತ್ತಿಗೆಯ ಕೆಲಸವು ಸಾಗಿರುವದಿಲ್ಲ ಒಕ್ಕಲಿಗರು ಬಾಯಿಬಿಡಹತ್ತಿದ್ದಾರೆ.

ಹಿಂದುಸ್ಥಾನ.

ವೃತ್ತಪತ್ರಗಳ ಕಾಯದೇಯನ್ನು ರದ್ದುಮಾಡಬೇಕೆಂಬಾಶಯದ ಬಿಲ್ಲು ಕಾನೂನಮಂಡಳಗಳಲ್ಲಿ ತರಲು ಬರುವದಿಲ್ಲೆಂದು, ಪ್ರಾವಿಂಶಿಯಲ್ ಸರಕಾರದ ದಿವಾಣರು ವೃತ್ತಪತ್ರಕಾರರ ಶಿಷ್ಟಮಂಡಳಕ್ಕೆ ಉತ್ತರಕೊಟ್ಟರುವರು

ಹೆಣ್ಣುಮಕ್ಕಳ ಶಾಲೆಗಳಲ್ಲಿ ನೂಲಿನವರ್ಗಗಳನ್ನು ಪ್ರಸಾರ ಮಾಡುವಕುರಿತು ಬಿಜಾಪುರದ ನಗರಸಭೆಯವರು ೧೦೦೦ರು ಗಳನ್ನು ಮಂಜೂರಮಾಡಿದರು.

ಕೇವಲ ಕನ್ನಡಿಗರ ಸಲುವಾಗಿ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡತಕ್ಕಂಥ—

ಕನ್ನಡಿಗರ ಸಲುವಾಗಿ

ಮೋಟರವರ್ಗ.

ನಮ್ಮಲ್ಲಿ ಮೋಟರ ನಡೆಸುವದು, ಬಿಚ್ಚಿ ಕೂಡಿಸುವದು ಮತ್ತು ಒಳಗಿನ ಯಂತ್ರಗಳನ್ನು ದುರಸ್ತ ಮಾಡುವದು ಮುಂತಾದ ಎಲ್ಲ ಮಾಹಿತಿಯನ್ನು ಕನ್ನಡನುಡಿಯಲ್ಲಿಯೇ ಕೊಡುವದರಲ್ಲಿ ಬರುವದು. ಆದ್ದರಿಂದ ಕನ್ನಡಿಗರಿಗೆ ನಮ್ಮ ವರ್ಗದಿಂದ ಬಹಳೇ ಲಾಭವಾಗುವದು.

ಕೊರ್ಸ:— ಕೇವಲ ಒಂದೇ ತಿಂಗಳ. "ಫೋರ್ಡ" ಕಲಿಯಲಿಕ್ಕೆ ಫೀ ೭೦ ರು.

"ಫೋರ್ಡ" ಮತ್ತು "ಇಂಗ್ಲೀಶ" ಕೂಡಿ ಫೀ ೮೦ ರು. **ಮಾಹಿತಿ ತರಿಸಿಕೊಳ್ಳಿರಿ.**

ವಿಳಾಸ:— ಮ್ಯಾನೇಜರ ಕುಲಕರ್ಣಿ ಮೋಟರ ಸ್ಕೂಲ.

೪೯೫ ಶನಿವಾರ ಪೇಟ ಜಮಖಂಡಿಕರವಾಡೆ. ಪುಣೆ ಶಹರ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡು ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇರ್ಡಿ ಬ್ರಿಟಿಷ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣ ಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ. ಪುಣೆ ಸಿಟಿ.

ಸಾಧ್ವಿ ಮತ್ತು ಸಂಪದಭ್ಯುದಯ.

ಶ್ರೇಷ್ಠವಾದ ಕನ್ನಡ ವಾರ ಪತ್ರಿಕೆ ಮತ್ತು ದಿನಚರಿ ಪತ್ರಿಕೆ

ಈ ಪತ್ರಿಕೆಗಳು ಬಹು ದಿನಗಳಿಂದ ರಾಜಧಾನಿಯಾದ ಮೈಸೂರಿನಲ್ಲಿ ಪ್ರಚುರವಾಗುತ್ತಲಿರುವವು. ಅವುಗಳಲ್ಲಿ ತಾತ್ಕಾಲಿಕ, ರಾಜಕೀಯ, ಸಾಂಪತ್ತಿಕ, ಕೃಷಿ, ಕೈಗಾರಿಕೆ, ಆರೋಗ್ಯ, ದೇಶವಿದೇಶಗಳ ಮತ್ತು ಸಾಮಾಜಿಕ ವಿಷಯಗಳು ಸರ್ವಸಮ್ಮತವಾದ ಶೈಲಿಯಿಂದ ನಿರ್ಭಯವಾಗಿ ನಿಷ್ಪಕ್ಷಪಾತವಾಗಿ ಪ್ರತಿಪಾದಿಸಲ್ಪಡುವವು. ಸಾಧ್ವೀ ಚಂದಾ ವರ್ಷ ಒಂದಕ್ಕೆ ಸ್ಥಳದವರಿಗೆ ರೂ, ೩-೦-೦ ಪರಸ್ಥಳದವರಿಗೆ ಅಂಚೆ ವೆಚ್ಚ ಸೇರಿ ೩-೧೩-೦ ಸಂಪದಭ್ಯುದಯ ಸ್ಥಳದವರಿಗೆ ವರ್ಷಕ್ಕೆ ರೂ ೧೫-೦-೦ ತಿಂಗಳಿಗೆ ೧ ೪-೦ ಪರಸ್ಥಳದವರಿಗೆ ವರ್ಷಕ್ಕೆ ರೂ. ೨೦-೦-೦ ತಿಂಗಳಿಗೆ ೧-೧೦-೦ ಜಾಹಿರಾತಿನ ದರವನ್ನೂ ಅಥವಾ ಮಾದರಿ ಸಂಚಿಕೆಯನ್ನೂ ಅಪೇಕ್ಷಿಸುವವರು ಈ ವಿಳಾಸಕ್ಕೆ ಬರೆದು ತಿಳಕೊಳ್ಳಬಹುದು.

ಎಂ. ವೆಂಕಟ ಕೃಷ್ಣಪ್ಪಯ್ಯ, ಮ್ಯಾನೇಜರ

ಸಾಧ್ವಿ ಮತ್ತು ಸಂಪದಭ್ಯುದಯ ಮೈಸೂರ.

ಗೆಳೆಯರ ಗುಂಪಿನ

ಕನ್ನಡ ಮಾಸ ಪತ್ರಿಕೆ

ಸ್ವಧರ್ಮ.

ಸಂಪಾದಕ:— **ದ. ರಾ. ಬೇಂದ್ರೆ.** ಬಿ. ಎ.

ಸಮಾಜದಲ್ಲಿ ಶಾಂತಿ ತೃಪ್ತಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ ವಾರ್ಷಿಕ ವರ್ಗಣಿ. ೩-೦-೦

ಕಾರ್ಯದರ್ಶಿ. **ಸ್ವಧರ್ಮ** ಕಾರ್ಯಾಲಯ

ಮಾಳಮಡ್ಡಿ ಧಾರವಾಡ

ಅಮೌಲ್ಯ ಸಂಧಿ.



S.U.N.& CO.
BENARESCITY.

ನಮ್ಮಲ್ಲಿ ಉತ್ತಮೋತ್ತಮ ಎಲ್ಲಾ ವಿಧವಾದ ರೇಷ್ಮೆ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೊತೆ ೧ಕ್ಕೆ ರೂ. ೨೫ ರಿಂದ ೩೦-೫೦-೧೦೦ರ ವರೆಗೆ. ಉಡುವ ಮೊಗಟ ಮೊಳ ೬-೭-೮-೧೦-೧೬ ೧೮ ಮೊಳಗಳು; ಇದು ಮೊಳ ೧ಕ್ಕೆ ೨ರೂ. ಯಿಂದ 2½ರೂ. ವರೆಗೆ. ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಕಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಕಾಳುಗಳು, ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೨ ರವರೆಗೆ ೧೧-೧೨-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೩೦ ರವರೆಗೆ ೧೪ ಮುಖದ ಕಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪-೮-೦ ನಾಲ್ಕು ಕೋಟಿಗೆ ಸಾಕಾಗುವಷ್ಟು ರೇಷ್ಮೆ ಕೋಟಿಂಗ ಶಿಲ್ಕು ಥಾನು ೭ ಗಜಾಉದ್ದ ೩ ಗಜಾ ಅಗಲುಳ್ಳ ಥಾನುಗಳಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಬೀಳುವದು.

ವಿಳಾಸ — ಶಿರೋಮಣಿ ನಾರಾಯಣಾಚಾರ್ಯ ಕಂಪನಿ,

ಕಾಶೀ ಬನಾರಸ್.

ಗುಬ್ಬಿಶ್ರೀಚನ್ನಬಸವೇಶ್ವರನಾಟಕಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣಾ.
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೦೦ ಮಿ. ವಿಠ್ಠಲ ಚಿಮ್ಮಾಜಿ ಸೇಟ ಕಲಾಸ್ ಆಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಕು ಸಿರಾ. (ಜಿ. ತುಮಕುರು.)

(೩) ಬಾಂಡ ನಂ. ೧೪೯೪೬ ಮಿ|| ವೆಂಕಟರಮಣ, ವೆಂಕಟರಮಣ ಹೆಗಡೆ, ನೇಕಳರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ ೧೮೨೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ|| ರಾಮಚಂದ್ರ ವಾಮನ ಕಾಂಗನೆ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೮೪೦ ಮಿ|| ಆರ್. ಎಚ್. ನಾಟಿಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ)

ವಿಶ್ವಕರ್ನಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿಮೋಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ವೈಸೂರಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೬-೮-೦ ಪಟ್ಟಿ ಸಹಿತ; ಟ ಖ. ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೆರೊ ವಾಚ ಕಂ. (India) ಮುಂಬೈ ನಂ. ೪

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY.

Apply for full particulars to–

N. K. Kulkarni. Agent Bagalkot.

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲಿಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತು ಕೊಳಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಲಾ ವಿಜಾಪುರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೇ ಬಂಧುಗಳು

ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಕ್ತ ಶುದ್ಧಿ

ಮತ್ತು

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶೀಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ಜಾಗ್ರತೆಯಿಂದ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸೋರುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತೆಗೆದುಕೊಂಡು ಖಾತ್ರಿ ಮಾಡಿಕೊಳ್ಳಬಹುದು) ಇದರಿಂದ ಮೈಯಲ್ಲಿರುವ ಗರಮಿಯು ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦ ೧೦-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೬-೦-೦, ಇದಲ್ಲದೆ ೧ ಡಬ್ಬಿಯು ಕಮಿಶನ್ನು ಸಿಗುವದು.

ವಿಳಾಸ—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ-ನಿಪ್ಪಾಣಿ, (ಬೆಳಗಾಂವ್)



ಡಾಕ್ಟರ್ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ, ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ ಗೋಲ್ಡ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸಂಸಮಾನವಾಗಿದೆ. ಸರಿಯಾದ ಗಂಟೆಯನ್ನು ತೋರಿಸುತ್ತದೆ. ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಇದಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು.

ಕ್ರಯ ಒಕ್ಕೆ ರೂ. 7-2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌಂಟನ್ ಪೆನ್ನಾ.

ಈ ಪೆನ್ನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಅಕ್ಷರಗಳ ವರೆಗೂ ಬರೆಯುವದು. 14 ಕ್ಯಾರೆಟ್ಟ ಬಂಗಾರದ ಮುಳ್ಳು ಇರುವದು. ಇದನ್ನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಜ ಸೆಂಟ್ ಬಾಟಲ್ ಇನಾಮಾಗಿ ಕೊಡುವೆವು ಕ್ರಯ ಪೆನ್ನಾ ಒಕ್ಕೆ 2-0-0

ವಿಳಾಸ—ಎಸ್. ಪಾಲ್ ಅಂಡ್ ಕೋ,

ಪಿ. ಬಿ ನಂಬರ್. 542,

ಪಾರ್ಕಟೌನ್ ಮದ್ರಾಸು.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ

೨ ದ್ವಿತೀಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಯ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣಯುಕ್ತ ೨೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರೇಬಾಳ

ಲಿಂಗಸೂಗೂರ ಪೋಸ್ಟ, ಜಿ. ರಾಯಚೂರ, ನಿಜಾಂ

ಜಾಹೀರಾತಿನ ಸಲುವಾಗಿ.





The Cheapest House.

1 For quick, Ecconomical and satisfactory service, please go for the welknown Chevrolet cars, Trucks products in the Deccan
2 For all spare parts of the Various cars specially Chevrolet, Ford, Dodge and Overland cars,
3 For the cheapness in tyre tubes especially thewellknown Michelin products,
4 For all kinds of Lubricating oils Grease etc,
5 For undertaking all kinds of tyre tube repairs in Vulcansing by a specalist to give satisfactory work,
6 For Building Motor bodies of various types by workers onin uptodate line.
7 For all kinds of Motor repairs,

Apply to:-
Messrs Royal motor service
Automobile Engineers
Bagalkot.

Sub dealers
Chevrolet car
for the Bijapur

ಅಲಭ್ಯಲಾಭವು.

೧ ಶೀಘ್ರಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕ ಪ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ
೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ಓವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,
೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಕ ಟಾಯರ ಟ್ಯುಬುಗಳು ಮುಖ್ಯವಾಗಿ ಮಿಚಲಿನ ಟಾಯರ ಟ್ಯುಬುಗಳ ಖರೀದಿಗಾಗಿ
೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯೆಣ್ಣೆ ಮತ್ತು ಗ್ರೀಸ ಖರೀದಿಗಾಗಿ,
೫ ಎಲ್ಲ ತರಹದ ಟ್ಯುಬು ಟಾಯರಗಳ ರಿಪೇರಿಗಾಗಿ,
೬ ಎಲ್ಲ ಪ್ರಕಾರದ ಮೋಟಾರ ಬಾಡಿಗಳನ್ನು ಕಟ್ಟಿಸಲಿಕ್ಕೆ,
೭ ಎಲ್ಲ ತರದ ಮೋಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.
ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ
ಮೋಟಾರುಗಳಿಗೆ ಸಬ ಏಜಂಟರು.

ರ. ನಂ. ಬಿ. ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಆಷಾಢ ಶುದ್ಧ ೧೩ ಶಕೆ ೧೮೫೮ ತಾ|| ೩.೭-೧೯೩೬. | ಸಂಚಿಕೆ ೧೮

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೋಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮು!
ಚಿನ್ನದಾದರು ಚಿನ್ನ ಮೋಣಬಸ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೋ
—ಅಂಬಿಕಾ ತನಯ ದತ್ತ

ಕನ್ನಡ ನುಡಿಯ ಬೆಳವಣಿಗೆಯ ಸಲುವಾಗಿ ನಾವು ಈ ಮೊದಲೆ ಹಲವು ಉಪಾಯಗಳನ್ನು ಸೂಚಿಸಿದ್ದೇವೆ. ಈಹೊತ್ತು ಮತ್ತೊಂದು ಫಲಕಾರಿಯಾದ ಉಪಾಯವನ್ನು ಸೂಚಿಸಲಿರುವೆವು. "ಕನ್ನಡಂ ಕತ್ತುರಿಯಲ್ತೆ" ಎಂಬುದು ತಿಳಿದವರ ಮಾತು. ಕನ್ನಡದ ಏಳ್ಗೆಯು ನಷ್ಟವಾಗಿ, ಅದಕ್ಕೆ ಕುಂದುಂಟಾದುದು ಸುಶಿಕ್ಷಿತರೆಂದು ಕರೆಯಿಸಿಕೊಳ್ಳುವ ಅಭಿಮಾನ ಶೂನ್ಯರಾದ ಪದವೀಧರರಿಂದಲೇ ಎಂದು ಹೇಳಲೇನೂ ಅಭ್ಯಂತರವಿಲ್ಲ. ಕನ್ನಡದಲ್ಲಿ ಶಬ್ದ ಭಾಂಡಾರವಿಲ್ಲ ; ಕನ್ನಡಕ್ಕೆ ಸಾಹಿತ್ಯವಿಲ್ಲ; ಕನ್ನಡದಲ್ಲಿ ಮೇಲಾದ ಗ್ರಂಥಗಳಿಲ್ಲ; ಕನ್ನಡನುಡಿಯಲ್ಲಿ ಮಾಧುರ್ಯ ಮಾರ್ದವಗಳಿಲ್ಲ. ಅದು ಭಾಷಣಕ್ಕೆ ತಕ್ಕ ಭಾಷೆಯಲ್ಲ; ಅದರಲ್ಲಿ ಮಾತಾಡಿದರೆ ಜನರ ಮನಕ್ಕೆ ರಂಜನೆಯಾಗುವದಿಲ್ಲ; ಮತ್ತು ಅದರಿಂದ ಚೆನ್ನಾದ ಪರಿಣಾಮವಾಗುವದಿಲ್ಲ ಎಂದು ಕನ್ನಡದ ಮೇಲೆ ನಿರಾಧಾರವಾದ ಆರೋಪಗಳನ್ನು ಹೇರುತ್ತ, ನಿರರ್ಗಲವಾಗಿ ಅವರು ಪ್ರಲಾಪ ಮಾಡುತ್ತಾರೆ. ಪ್ರತಿಷ್ಠಿತರೆನ್ನುವವರು ತಮ್ಮನ್ನು ತಾವು ಮರೆತು ತಮ್ಮ ಮೇಲಿನ ಹೊಣೆಯನ್ನು ಬಗೆಯದೆ ಗಳಪುತ್ತ ನಡೆದರೆ ನುಡಿಯ ಅವಸ್ಥೆಯೇನಾಗಬೇಕು? "ನಿಮ್ಮ ನುಡಿಕೆಟ್ಟದೆಂದು" ಎರಡನೆಯವರು ಜರೆದರೆ, ಇವರಿಗೆ ಗೌರವವಾದಂತಾಯಿತೇ? ಇವರ ನಾಡಿನಕೀರ್ತಿ ಬೆಳಗಿತೇ? ನುಡಿಯನ್ನು ಕೀಳಾದ ಅವಸ್ಥೆಗೆ ತಂದ ಪಾತಕವು ಇವರಿಗೆ ತಗಲದೇ ಬಿಟ್ಟೀತೆ; ಅನ್ಯಭಾಷೆಯಲ್ಲಿ ಎಷ್ಟು ಪ್ರಾವೀಣ್ಯತೆಯನ್ನು ಪಡೆದರೂ, ತಾಯ್ನುಡಿಯಲ್ಲಿಯ ಸೊಬಗು ಬಂದೀತೇ? ಮನುಷ್ಯನಿಗೆ ತನ್ನ ವಿಚಾರಗಳನ್ನು ಚೆನ್ನಾಗಿ ವ್ಯಕ್ತಪಡಿಸಬೇಕಾದರೆ, ಮಾತೃಭಾಷೆಯಷ್ಟು ಹುರುಳುಳ್ಳ ಸಾಧನವು ಮತ್ತೊಂದಾಗಲಾರದು. ಈಗೀಗ ವಸ್ತುಸ್ಥಿತಿಯು ಅನುಕೂಲವಾಗಹತ್ತಿದೆ. ಕನ್ನಡಕ್ಕೆ ಎಲ್ಲೆಲ್ಲಿಯೂ ಪ್ರಾಶಸ್ತ್ಯ ದೊರಕಹೊಡಗಿದೆ. ಕನ್ನಡ ಕೀರ್ತಿ ಚಂದ್ರಮನ ಬೆಳಕು ಕನ್ನಡಿಗನ ಎದೆಯಲ್ಲಿ ಕವಿದಿರುವ ಕತ್ತಲೆಯನ್ನು ಈಡಾಡಲೆಳಸುತ್ತಿದೆ. ಪ್ರತಿಷ್ಠಿತರೆನ್ನುವವರ ಮನದಲ್ಲಿಯ ಹಸಿಹಸಿ ವಿಚಾರಗಳಡಿಗಿ ಪಕ್ವವಾದ ವಿಚಾರಗಳು ತಲೆಯೆತ್ತಹತ್ತಿವೆ. ಆಂಗ್ಲಭಾಷಾ ಪ್ರವಾಹದ ಬಲವಾದ ಸೆಳೆತಕ್ಕೆಸಿಕ್ಕು ಗತಿಗಾಣದ ಮೈಸೂರ ಪ್ರಾಂತವಾದರೂ ನಿದ್ದೆಯಿಂದ ಎಚ್ಚತ್ತಿದೆ ದೊಡ್ಡವರು ಕನ್ನಡವನ್ನು ನುಡಿಯಲ್ಲಿಯೂ ಬರಹದಲ್ಲಿಯೂ ಬಳಸಿದರೆ ಅದು ಬೆಳೆದು ಬಲಿಯುವುದು ಎಂಬ ಭಾವನೆಯು ದೃಢವಾಗ ತೊಡಗಿದೆ ಕನ್ನಡಕ್ಕೆ ಯೋಗ್ಯವಾದ ಮನ್ನಣೆಯು ಸಿಗುವ ನವೀನಯುಗವು ಪ್ರಾರಂಭವಾಗಿದೆ. ಭದ್ರಾವತೀ ಆಣೆಕಟ್ಟಿನ ಪ್ರಾರಂಭದ ಸಮಾರಂಭ ಕಾಲಕ್ಕೆ ಮೈಸೂರ ಮಹಾರಾಜರು ಕನ್ನಡದಲ್ಲಿಯೇ ತಮ್ಮ ಭಾಷಣವನ್ನು ಮಾಡಿದರು. ಮಾತಾಡುವವರು ಮಹಾರಾಜರು ಶೈಲಿಯೋ ಉದಾರವಾದುದು. ಹೀಗಿದ್ದ ಮೇಲೆ ಅವರ ಮಾತುಗಳು ಬೋಧಪ್ರದವಾದವುಗಳೂ ಮನಸ್ಸಿನಲ್ಲಿ ಮೂಡುವಂತವುಗಳೂ ಆದುದರಲ್ಲಿ ಏನು ಸೋಜಿಗವು. ನೆರೆದವರೆಲ್ಲರೂ ಅವರ ಸೊಬಗು ಸೂರೆ ಮಾಡುವ ಮಾತಿಗೆ ಮರುಳಾದರಂತೆ, ಅರ್ವಾಚೀನ ವಿಷಯಗಳ ವಿವೇಚನೆಯನ್ನು ಕನ್ನಡದಲ್ಲಿ ಚೆನ್ನಾಗಿ ಪರಿಣಾಮಕರವಾಗುವಂತೆ ಮಾಡಲು ಬರುತ್ತದೆಂಬದನ್ನು ಮಹಾರಾಜರು ತಮ್ಮ ಭಾಷಣದಿಂದ ಮನಗಾಣಿಸಿ ಕೊಟ್ಟರಂತೆ. ಸರಸವಾದ ಭಾವಗಳನ್ನು ಕೂಡ ಕನ್ನಡದಲ್ಲಿ ನಿರೂಪಿಸಲು ಬರುತ್ತದೆಂಬುದು ಅಲ್ಲಿಯವರಿಗೆ ಹೊಳೆಯಿತಂತೆ! ಅಯ್ಯೋ ಪಾಪ! ಈಗ ಗಾಢ ನಿದ್ರೆಯಿಂದ ಎಚ್ಚರಾಯಿತೇ ನಿಮಗೆ! ಕನ್ನಡ ಭಾಷೆಯೇನೂ ಅರ್ವಾಚೀನ ಭಾಷೆಯಲ್ಲ. ಬಹಳ ಪ್ರಾಚೀನ ಕಾಲದಿಂದ ಬಂದ ಭಾಷೆಯು; ಇಂತಹದರಲ್ಲಿ ಶಕ್ತಿಯಿಲ್ಲವೆಂಬುದು ಅಜ್ಞಾನಮೂಲಕ ವಾದುದೇ ಸರಿ. ಕನ್ನಡಿಗರೆಲ್ಲರೂ ತಮ್ಮ ನಿಜಸ್ವರೂಪವನ್ನೇ ಮರೆತು ಬಿಟ್ಟಿದ್ದಾರೆ. ಕನ್ನಡದಲ್ಲಿ ಸಾವಿರಗಟ್ಟಲೆ ಗ್ರಂಥಗಳಿರುವವು. ಸಾವಿರಾರು ಕವಿಗಳಿರುವರು. ಇ[illegible]ರೂ ಭಾಷೆಯ ಶಕ್ತಿಯನ್ನರಿಯದೆ ಕೃತಿಗಳನ್ನು ರಚಿಸಿದರೇ? ಇರಲಿ. ಪ್ರತಿಷ್ಠಿತರೆನ್ನುವವರಿಗೆ ಮಹಾರಾಜರ ಅನುಗ್ರಹದಿಂದ ಈಗಲೊಲ್ಲದೇಕೆ ಕಣ್ಣುಗಳು ಬಂದವೆಂದೋಣ, ಪುನಃ ಪುನಃ ಕನ್ನಡವನ್ನು ಹಳಿಯುವ ಗೊಂದಲಕ್ಕೆ ಹೋಗದೆ, ಇವರು ಎಚ್ಚರಿಕೆಯಿಂದ ಮುಂದಕ್ಕೆ ಹೆಜ್ಜೆಯನ್ನಿಡುತ್ತ ಹೋಗಲಿ. ಶ್ರೀ. ಮಂಜಪ್ಪ ಹರ್ಡೇಕರ, ತಾರಾನಾಥ ಇವರು ಕನ್ನಡದಲ್ಲಿಯೇ ಭಾಷಣ ಮಾಡುತ್ತಾರೆಂಬುದನ್ನು ಕನ್ನಡಿಗರಲ್ಲಿಯ ಪ್ರತಿಷ್ಠಿತರು ಮರೆಯದಿರಲಿ. ಹರ್ಡೇಕರವರ ಸ್ಫೂರ್ತಿಯಿಂದ ತುಂಬಿದ ಭಾಷಣಗಳೂ, ತಾರಾನಾಥರ

ತರ್ಕಸಮ್ಮತವಾದ ಭಾಷಣಗಳೂ ಎಲ್ಲರ ಮನಸ್ಸನ್ನು ಸೆರೆಹಿಡಿಯಲು ಸಾಮರ್ಥ್ಯವುಳ್ಳವುಗಳು. ಶ್ರೀ ವೆಂಕಟೇಶಯ್ಯಂಗರ, ಗುಂಡಪ್ಪ, ವೆಂಕಣ್ಣಯ್ಯ, ಶೇಷಾಚಾರ್ಯರ, ಶ್ರೀನಿವಾಸಮೂರ್ತಿ, ಕೃಷ್ಣಶಾಸ್ತ್ರಿ, ಗೆಳೆಯರಗುಂಪು ಇವರೇ ಮೊದಲಾದವರ ಬರಹಗಳನ್ನು ಓದಿದರೆ, ಕನ್ನಡದಲ್ಲಿಯ ತಿರುಳು ಬಿಣ್ಪು ಇಂಪು, ಸೊಂಪುಗಳು ಒಡೆದು ಕಾಣುವವು. ಆದುದರಿಂದ 'ರೂಢಿ' ಯ ಎಳೆತಕ್ಕೆ ಸೋತು, ಕನ್ನಡವನ್ನು ಮರೆಯದೆ, ಪ್ರತಿಷ್ಠಿತರು ಅದನ್ನು ಬೆಳೆಯಿಸಬೇಕು. ಮೈಸೂರ ಮಹಾರಾಜರು ಇದಕ್ಕೆ ಮೇಲುಪಂಕ್ತಿಯನ್ನು ಹಾಕಿಕೊಟ್ಟಿದ್ದಕ್ಕಾಗಿ ನಾವು ಅವರನ್ನು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಮಹಾರಾಜರ ಮೇಲ್ಪಂಕ್ತಿಯನ್ನು ದಿವಾಣರಂದ ಮಿರ್ಜಾರವರು ತೀಡಿ? ಕನ್ನಡದಲ್ಲಿಯೇ ಮಾತನಾಡಿದಂತೆ ಮೈಸೂರಿನ ವುಳಿದ "ಆಫೀಸರರೂ" ಪ್ರತಿಷ್ಠಿತ ಗೃಹಸ್ಥರೂ ಇವರ ಅನುಕರಣವನ್ನು ಮಾಡುವರೋ?

ಇಲ್ಲಿಯ ನಗರ ಸಭೆಯ ಆರಿಸುವಿಕೆಯು ತೀರ ಸಮೀಪಬರುತ್ತಿದೆ; ಬಂದಿತೆಂದರೂ ಸಲ್ಲುವುದು. ಉಮೇದವಾರರು 'ನಾ ಮೇಲು' 'ನೀಮೇಲು' ಎಂದು ಮತದಾರರ ಮನೆಗಳಿಗೆ ಕಾಲ ಆಕಾಲಗಳನ್ನು ನೋಡದೆ ಒಂದೇ ಸವನೆ ಎಡತಾಕತೊಡಗಿದ್ದಾರೆ. ಮತದಾರರು ಮುಂದೆ ತಾವು ಹಿಂದೆ ಮಾಡಿದ ಕೆಲಸಗಳ ಲೆಕ್ಕವನ್ನು ಒಪ್ಪಿಸುತ್ತಲಿದ್ದಾರೆ; ಮುಂದೆ ಮಾಡಲಿರುವ ಕಾರ್ಯಕ್ರಮದ ರೂಪರೇಷೆಯನ್ನು ಅವರೆದುರಿಗೆ ತೋರಿಸುತ್ತಿದ್ದಾರೆ. ಸರ್ವಜನ ಹಿತಕ್ಕಾಗಿಯೇ ತಾವು ಹೆಣಗುವವರೆಂದು ಒಡೆದು ತಿಳಿಹಿಸುತಲಿದ್ದಾರೆ. 'ನುರಿತ'ವರನ್ನು ಬಿಟ್ಟು ನಗರ ಸಭೆಯು ಹೊಸಬರ ಕೈ ಸೇರಿತೆಂದರೆ, ಘಾತವಾಗುವದೆಂಬ ಅಂಜಿಕೆಯನ್ನು ವ್ಯಕ್ತಪಡಿಸುತಲಿದ್ದಾರೆ. ಯಾವದೇ ರೀತಿಯಿಂದಾಗಲಿ, ಜನರ ಮನಸುಗಳನ್ನು ತಮ್ಮ ಕಡೆಗೆ ಸೆಳೆದುಕೊಳ್ಳಲು ನೋಡುತಲಿದ್ದಾರೆ. ಅವರು ಹಾಗೆ ಮಾಡುವುದು ಏಹಿತವಾದುದು. ತಮ್ಮ ಹೊರತು ಮತ್ತೊಬ್ಬರಾರೂ ನಗರ ಸಭೆಯನ್ನು ನಡೆಯಿಸಲು ಸಮರ್ಥರಲ್ಲೆಂದು ಅವರ ಮನಸಿನ ತಿಳುವಳಿಕೆ; ಪ್ರಾಮಾಣಿಕತನದ ತಿಳುವಳಿಕೆ; ಹಾಗೆ ತಿಳುವಳಿಕೆ ಮಾಡಿಕೊಳ್ಳಲು ಕಾರಣಗಳಿವೆ. ಎಷ್ಟು ಆರಿಸುವಿಕೆಗಳಾದರೂ ಅವುಗಳಲ್ಲಿ ಅವರೇ ಆರಸಿ ಬಂದಿರುವರು. ಇದರಿಂದ 'ತಾವು ಲೋಕಪ್ರಿಯರೆಂದೂ' ಕರ್ತೃತ್ವಶಾಲಿಗಳೆಂದೂ, ನಗರಹಿತ ರಕ್ಷಣ ದೀಕ್ಷಾಬದ್ಧರೆಂದೂ ಅವರು ತಿಳಿದುಕೊಂಡಲ್ಲಿ ತಪ್ಪೇನು? ನಾವನ್ನುವದೆಂದರೆ ಎಷ್ಟೋ ಮಹತ್ವ ಕೆಲಸಗಳು ಹಿಂದಿನವರಿಂದಾಗಲಿಲ್ಲ ಬಾಗಲಕೋಟೆಗೆ ಒಂದು ಮಾಧ್ಯಮಿಕ ಶಿಕ್ಷಣವನ್ನು ಕೊಡುವ ಹೈಸ್ಕೂಲು ಅತ್ಯವಶ್ಯವಾಗಿ ಬೇಕಾಗಿತ್ತು. ನಗರ ಸಭೆಯ ಕೆಳಗೆ ಆರನೇ ಈಯತ್ತೆಗಳ ವರೆಗೆ ಇಂಗ್ಲಿಷ ಶಾಲೆಯು ಅನೇಕ ವರ್ಷಗಳ ವರೆಗೆ ನಡೆಯುತ್ತ ಬಂದಿದೆ. ಅದನ್ನು ಹೈಸ್ಕೂಲ ಮಾಡುವ ಗಂಡಸತನವು ಒಬ್ಬರಲ್ಲಾದರೂ ಬಂದಿತೇ? ಇಲ್ಲ. ಹುಡುಗರಿಗೆ ಊರು ಬಿಟ್ಟು ಪರಊರಿಗೆ ಹೋಗಿ, ನೆಚ್ಚವನ್ನು ಸಹಿಸಿ, ಅನ್ನಪೂರ್ಣಾಗೃಹದ ಆಶ್ರಯವನ್ನು ಮಾಡಬೇಕಾಯಿತು. ಶಿಕ್ಷಣದಂತಹ ಸಾರ್ವಜನಿಕ ಕಾರ್ಯವನ್ನು ಮಾಡದ ಸಭಾಸದರು ಉಳಿದ ಕಾರ್ಯಗಳನ್ನೇನು ಮಾಡುವರು ಹಳೆಯವರ ಹುಳುಕುಗಳನ್ನು ಹೊರಗೆಡುವುದು ನಮ್ಮ ಇಷ್ಟವಲ್ಲ. ಅವರೊಡನೆ ಹೋರಾಡಲೂ ನಾವು ಹೊರಟಿಲ್ಲ. ಅವರು ನಗರ ಸಭೆಯ ಕೆಲಸವನ್ನು ಮಾಡಿ ಮಾಡಿ ದಣಿದಿರಬಹುದು. ಶಕ್ತಿಯಾದರೂ ದಿನ ದಿನ ಕ್ಷೀಣವಾಗುತ್ತ ನಡೆದಿರಬಹುದು. ಆದ್ದರಿಂದ, ಹೊಸ ಜನರಿಗೆ ಅವರು ಸ್ವತಃ ನಿಂತು ಸಹಾಯ ಮಾಡಬೇಕಾಗಿದೆ. ಇದರಿಂದ ನಿವ್ವ ಔದಾರ್ಯ ಕಾರ್ಯ ಪಕ್ಷಪಾತಿತ್ವ ಮೊದಲಾದವುಗಳು ವ್ಯಕ್ತವಾಗುವವಲ್ಲದೇ ತರುಣರಿಗೆ ಶಾಸನದ ಪಾಠಗಳನ್ನು ಕಲಿಸಿದಂತಾಗುವದು. ಆದ್ದರಿಂದ ವೃಥಾಭಿಮಾನವನ್ನು ತೊರೆದು, ಹಳಬರು ಹೊಸಬರಿಗೆ ಹಾದಿಯನ್ನು ಮಾಡಿಕೊಡಬೇಕು. ತಮ್ಮ ಅನುಭವದ ಲಾಭವನ್ನು ಅವರಿಗೆ ನೀಡಬೇಕು. ಮುಳ್ಳು ಕಲ್ಲುಳ್ಳ ದಾರಿಯನ್ನು ತುಳಿಯದಂತೆ ಅವರಿಗೆ ಎಚ್ಚರ ಕೊಡಬೇಕು. ತಮ್ಮ ತಪ್ಪುಗಳನ್ನು ಬಚ್ಚಿಡದೆ, ಅವರಿಗೆ ಹೇಳಿ ಒಪ್ಪಿನಿಂದ ನಡೆಯಲು ತರುಣರನ್ನು ಪ್ರೋತ್ಸಾಹಿಸಬೇಕು. ಹೀಗೆ ಮಾಡುವದರಿಂದ ನಗರ ಸಭೆಗೆ ವಯಸ್ಸಿನ ಅನುಭವವೂ ತಾರುಣ್ಯದ ಉತ್ಸಾಹವೂ ದೊರೆತು, ಅದರ ಭರಭರಾಟೆಯಾಗುವುದು. ಬಹು ಕಾಲದಿಂದ ನಡೆದು ಬಂದ ವೈಮನಸ್ಯವು ಅಳಿದು, ನಗರ ಸಭೆಯಲ್ಲಿಯ ಜಗಳಗಳು ಇಲ್ಲದಂತಾಗುವವು. ಇಂತಹ ಪರಿಸ್ಥಿತಿಯನ್ನುಂಟು ಮಾಡುವುದು ಎಲ್ಲ ರೀತಿಯಿಂದಲೂ ಶ್ರೇಯಸ್ಕರವಲ್ಲವೇ?

ಚಿತ್ತನಿರಂಜನ ದಾಸರವರ ಪುಣ್ಯತಿಥಿಯ ದಿವಸ ಡಾ. ಅನ್ಸಾರಿಯವರು ಒಳ್ಳೇ ಉದಾರರಾದ ಕೆಲಸವನ್ನು ಮಾಡಿದರು. 'ನಾನು' ಮೊದಲು ಭಾರತೀಯನು; ಆಮೇಲೆ ಮುಸಲ್ಮಾನನು ಎಂದು ಸಾರಿಸಾರಿ ಹೇಳಿದರು. ಹಿಂದೂ ಮುಸಲ್ಮಾನರಲ್ಲಿ ಐಕ್ಯವಾಗದ ಹೊರತು ಸ್ವರಾಜ್ಯವಿಲ್ಲ. ಹಿಂದೂ ಮುಸಲ್ಮಾನರಲ್ಲಿ ಪ್ರೇಮಭಾವವು ಬೆಳದ ಹೊರತು ಸುಖವಿಲ್ಲವೆಂದು ಭಾರನಿರ್ಭರಾಂತಃಕರಣರಾಗಿ ನುಡಿದು, ಕೇವಲ ಮುಸಲ್ಮಾನರ ಹಿತಕ್ಕಾಗಿ ಸ್ಥಾಪಿತವಾದ ಮುಸ್ಲೀಮ ಸಂಘದ ಮತ್ತು ಖಿಲಾಫತ ಸಂಸ್ಥೆಯ ಸಭಾಸದತ್ವಕ್ಕೆ ರಾಜೀನಾಮೆಯನ್ನು ಕೊಟ್ಟಿರುವೆನೆಂದು ಹೇಳಿದರು. ದೊಡ್ಡವರ ವೃತ್ತಿಯೇ ಬೇರೆ. ಅನ್ಸಾರಿಯವರು ಮುಸಲ್ಮಾನರಿದ್ದು, ವಿಶಾಲವಾದ ದೃಷ್ಟಿಯುಳ್ಳವರಿರುವರು. ಹಿಂದುಸ್ಥಾನಕ್ಕಾಗಿ ಎಲ್ಲ ಜಾತಿಯವರೂ ಭೇದ ಭಾವವನ್ನು ಬಿಸುಟಬೇಕೆಂದು ತಾವೇ ಮೊದಲು ದಾರಿಯನ್ನು ತೋರಿಸಿಕೊಟ್ಟರು. ನುಡಿಯಂತೆ ನಡೆಯುವವನು ಯಾವಾಗಲೂ ವಂದ್ಯನೇ. ಅನ್ಸಾರಿಯವರ ಉದಾಹರಣವು ಈಗಿನ ಕಾಲಕ್ಕೆ ಅನುಕರಣೀಯವದೆ. ಉತ್ತರದಲ್ಲಿ ಹಿಂದೂ ಮುಸಲ್ಮಾನರ ಒಡಿಪಾಟವು ಹೆಚ್ಚುತ್ತಲಿದೆ. ದಕ್ಷಿಣದಲ್ಲಿ ಬ್ರಾಹ್ಮಣ ಬ್ರಾಹ್ಮಣೇತರರ ಜಗಳವು ಸಣ್ಣಾಗಿ ಸಮಾಜದ ಕಟ್ಟನ್ನು ಸಡಿಲಿಸುತ್ತಿದೆ. ಅನ್ಸಾರಿಯಂಥವರು ನಿಸ್ಪೃಹತೆಯಿಂದಲೂ, ಸಮಭಾವದಿಂದಲೂ ಜಗಳಗಳ ಮೂಲವನ್ನು ಕಿತ್ತೊಗೆಯಲು ಪ್ರಯತ್ನಿಸಿದರೆ, ತೀವ್ರವೇ ಪೂರ್ವದ ಶಾಂತಿಮಯವಾದ ವಾತಾವರಣವು ಪ್ರಾಪ್ತವಾಗುವದು. ನಾಡಿನ ಹಿತದ ಕೆಲಸವು ಮೆಲ್ಲನೆ ಏಕಾಗಲೊಲ್ಲದು ಮುಂದೆ ಸಾಗುವುದು. ಮುಸಲ್ಮಾನರೂ, ಹಿಂದುಗಳೂ ಅನ್ಸಾರಿಯವರ ಕಾರ್ಯಕ್ಕೆ, ನೆರವಾಗಬಾರದೆ?

ಪುಣೆಯು ಮಹಾರಾಷ್ಟ್ರದ ತಿರುಳೆಂದು ಹೆಸರು ಪಡೆದಂತೆ ಮೈಸೂರ ಅಚ್ಚಗನ್ನಡದ ತಿರುಳ್ನಾಡೆಂದು ಖ್ಯಾತಿ ಹೊಂದಿದೆ. ಆದರೆ ಅಲ್ಲಿಯ ಪರಿಸ್ಥಿತಿಯು ಬಹಳೇ ವಿಲಕ್ಷಣವಾಗಿದೆಯೆಂದು ನಮಗೆ ಸುದಿಗಾರನಾದ 'ತಿರುಗಲ'ನಿಂದ ತಿಳಿದು ಬಂದಿದೆ. ಅಲ್ಲಿಯ ಯಥಾರ್ಥ ಸ್ಥಿತಿಯ ಚಿತ್ರವು ನಮ್ಮ ವಾಚಕರೆದುರಿಗೆ ನಿಲ್ಲಲೆಂದು, ಅವನ ಶಬ್ದಗಳನ್ನೇ ಇಲ್ಲಿ ಕೊಡುತ್ತೇವೆ. "ಮೈಸೂರ ಸಂಸ್ಥಾನದಲ್ಲಿ ಅಚ್ಚಕನ್ನಡಿಗರ ಸಂಖ್ಯೆಯು ಇಲ್ಲವೇ ಇಲ್ಲ. ಎಲ್ಲಿ ಹೋದರೂ ಮೈಸೂರ ನಾಡಿನ ಕನ್ನಡವೆಂದರೆ, ೪ ಆಣೆ ಇಂಗ್ಲೀಷು, ೪ ಆಣೆ ತೆಲಗು, ೨ ಆಣೆ ಮುಸಲ್ಮಾನೀ ೧ ಆ. ತಮಿಳು ೧ ಆಣೆ ಕನ್ನಡ, ಇವುಗಳನ್ನೆಲ್ಲ ಕಲಿಸಿ ಮಾತಾಡುವ ಭಾಷೆಗೆ ಇಲ್ಲಿಯವರು ಕನ್ನಡವೆಂದು ಕರೆಯುವರು ಇದೇ ರೂಢಿಯು ಎಲ್ಲ ನಾಡಿನಲ್ಲಿದೆ. ಈ ಜನರು ನುಡಿಯುವ ಕನ್ನಡ ಭಾಷೆಯಲ್ಲಿ ಬಾಂದ ಶಬ್ದಗಳೇ ಇಲ್ಲ" ಉತ್ತರ ಕರ್ನಾಟಕದ ಭಾಷೆಗಿಂತಲೂ, ನಮ್ಮ ಭಾಷೆ ಶ್ರೇಷ್ಠವೆಂದು ಮೆರೆಯುವ ಮೈಸೂರ ನಾಡಿನವರು ಇದರ ಕಡೆಗೆ ನೋಡಬೇಕು. ಮೈಸೂರಿನವರು ತಮ್ಮ ಸಂಸ್ಕೃತಿಯನ್ನು ಮರೆತು, ಎರವಿನವರ ಗುಲಾಮರಾಗತೊಡಗಿದ್ದಾರೆ; ಏಕೆ? ಗುಲಾಮರಾಗಿದ್ದಾರೆ. ಮೈಸೂರು ಕನ್ನಡ ನಾಡಿದ್ದು ಅಲ್ಲಿ ಕನ್ನಡ ಆಧಿಪತ್ಯವಿದ್ದು

ಹೀಗೆ ದುರವಸ್ಥೆಯಾಗಬೇಕಾದರೆ, ಮೈಸೂರಿನವರು ಅರಿವುಗೇಡಿಗಳೆಂದೇಕೆಂದೇ ಕಲ್ಪನೆಯಾಗುವುದು. ಇದಕ್ಕೆ ಮೈಸೂರಿನ ಕನ್ನಡಿಗರು ಏನು ಉತ್ತರವನ್ನು ಕೊಡುವರು? ಕನ್ನಡದ ಶುದ್ಧೀಕರಣಕ್ಕೆ ಏನು ಯೋಜನೆಗಳನ್ನು ಮಾಡುವರು? ಕನ್ನಡದ ಉತ್ತಮವಾದ ಕುಲವನ್ನು ಬಿಟ್ಟು, ಅರೆಕುಲದವರ, ಮಾರ್ಗವನ್ನನುಸರಿಸುವದಾದರೂ ಏಕೆ?

(೫ ನೇ ಪುಟದಿಂದ ಬಂದದ್ದು)

ಶ್ರಯದಲ್ಲಿ ಬಂದು, ಈಗಿನ ಕಾಲದಲ್ಲಿ ನಿಂತಂತೆ ಸೂಚಿಸಿದ ಅತಿ ಮಧುರ ವಾಕ್ಯವೊಂದು ಕಾಣುತ್ತಿರುವದು. ದಕ್ಷಿಣ ದೇಶದಲ್ಲಿ ವಿಜಯನಗರದ ತರುವಾಯದಲ್ಲಿ ವಿಖ್ಯಾತ ಪರಾಕ್ರಮಶಾಲಿಗಳಾದ ಮೈಸೂರಿನ ಕಂಠೀರವರಾಜ, ಚಿಕ್ಕ ದೇವರಾಜ, ಕೃಷ್ಣರಾಜ ಮೊದಲಾದ ಮಹಾ ಪ್ರಭುಗಳೇ ಕನ್ನಡಕ್ಕೆ ಆಶ್ರಯವನ್ನು ಕೊಟ್ಟಿರುವರು. ಪ್ರಸ್ತುತದ ಶ್ರೀಕೃಷ್ಣ ನಾಮಾಂಕಿತ ಮಹಾಪ್ರಭುಗಳ ದಿವ್ಯ ಚಿತ್ತದಲ್ಲಿ ಮಾತೃಭಾಷೆಯಾದ ಕರ್ನಾಟಕ ಸಾರಸ್ವತದ ವಿಚಾರದಲ್ಲಿ ಅತಿ ಗೌರವವಿರುವದನ್ನು ಪ. ವಾಸಿಗಳಾದ ಎಚ್. ವಿ. ನಂಜುಂಡಯ್ಯನವರು ತಮ್ಮ ಸಾಹಿತ್ಯ ಪರಿಷತ್ ಸ್ಥಾಪನಾಧ್ಯಕ್ಷಪದದ ಸ್ಮರಣೀಯವಾದ ಭಾಷಣದಲ್ಲಿ ಸೂಚಿಸಿರುವರು. ಇವೆಲ್ಲ ಮಾತುಗಳನ್ನು ಸ್ಮರಿಸುವಲ್ಲಿ ಕನ್ನಡಿಗರೆಲ್ಲ ಮೈಸೂರಿನ ಮಹಾಪ್ರಭುಗಳ ವಿಷಯದಲ್ಲಿ ಅತಿಶಯ ಕೃತಜ್ಞರೆಂದು ಹೇಳುವದು, ದ್ವಿರುಕ್ತಿಯಂತೆ ತೋರಿದರೂ ಅಗತ್ಯವೇ ಆಗಿರುವದು.

ಮೈಸೂರಿನ ಪ್ರಭುವರ್ಯರು ತಮ್ಮ ಕರ್ತವ್ಯವನ್ನಿಂತು ಮಾಡುತ್ತಲೇ ಬಂದಿರುವದು ಅವರಿಗೆ ವಿಶೇಷ ಗೌರವವನ್ನು ತರುತ್ತಿರುವದು ಹೀಗೆಂದು ಉಳಿದ ಕನ್ನಡಿಗರೆಲ್ಲ ಅವರನ್ನೇ ಅಲ್ಲಲ್ಲಿ ಅವಲಂಬಿಸುವದು ಅಷ್ಟು ಉಚಿತವಾಗಿ ತೋರಲಿಕ್ಕಿಲ್ಲ. ಕರ್ನಾಟಕ ವಿಶ್ವವಿದ್ಯಾಲಯದ ಭಾರವನ್ನೂ ಅವರೇ ಹೊರಬೇಕು. ಹೆಜ್ಜೆಹೆಜ್ಜೆಗಳಿಗೆ ಕನ್ನಡದ ಪಾಠಗಳನ್ನೂ ಅವರೇ ನಮಗೆಲ್ಲ ಹೇಳಿ ಕೊಡಬೇಕೆಂಬೀ ಮಾತುಗಳು ನಮ್ಮವರ ದಾಸ್ಯವನ್ನೇ ಎತ್ತಿ ತೋರಿಸುತ್ತಿರುವವು. ಹಾನೆ ಮಾಡುವದರಿಂದ ವಿಶಿಷ್ಟ ಮಂಡಳಿಗೆ ಅಲ್ಲದ ಪ್ರತಿಷ್ಠೆಯೂ ಬರುತ್ತ, ಆದರಿಂದ ಏಳಿಗೆಗೆ ಕುಂದುಬರುತ್ತಿರುವದೆಂದು ನಮ್ಮ ನಮ್ರ ಮತವಿರುವದು. ಮೈಸೂರಿನ ಜನರಾದರೂ ಹೋದಲ್ಲಿ, ಬಂದಲ್ಲಿ ಸರಕಾರದ ಆಶ್ರಯವನ್ನೇ ಅಪೇಕ್ಷಿಸುತ್ತ ನಡೆಯುವದು ವಿಹಿತವಾಗಲಿಕ್ಕಿಲ್ಲ. ರಾಯನಿಂದ ರಂಕನ ವರೆಗೆ ಮನುಷ್ಯ ಮಾತ್ರದವರಾದ ಅಖಿಲ ಕನ್ನಡ ದೇಶದ ನಿವಾಸಿಗಳಲ್ಲಿಯ ಪ್ರತಿಯೊಬ್ಬನೂ ಕನ್ನಡಿಗರಲ್ಲದವರಲ್ಲಿಯವನು ಸಹ ದೇಶಭಾಷೆಯಾದ ಕನ್ನಡದ ವಿಷಯದಲ್ಲಿ ಪರಮ ಪೂಜ್ಯ ವಿಭುವಿನಂತೆ 'ನಾನು ಕನ್ನಡಿಗನೆ'ಂದು ಅಭಿಮಾನದಿಂದ ಹೇಳಿಕೊಳ್ಳುವ ಅಧಿಕಾರ. ಹಕ್ಕು ಅಥವಾ ಬಾಧ್ಯತೆಗಳು ಆತನಿಗಿರುವವು ಎಂದು ಮಾತೃಭಾಷೆಯ ಉದ್ಧಾರದ ವಿಷಯದಲ್ಲಿ ಕೈಲಾದ ಮಟ್ಟಿಗೆ ಕೆಲಸ ಮಾಡೇನೆಂಬ ಕೃತನಿಶ್ಚಯವನ್ನು ತಾಳದೆ ಇನ್ನು ಗತಿಇಲ್ಲ. ಮತ್ತು, ಜನರು ಉದ್ಯೋಗ ಮಾಡದಿದ್ದರೆ ಪರಮ ಪೂಜ್ಯರಾದ, ಆಶ್ರಿತಜನಾಭಿಮಾನಿಗಳಾದ ಆ ಪ್ರಭುವರ್ಯರಾದರೂ ಅವರನ್ನು ಬೆನ್ನು ತಟ್ಟಿ ಪ್ರೋತ್ಸಾಹಿಸುವದು? ಪ್ರೋತ್ಸಾಹವನ್ನೆ ಅಪೇಕ್ಷಿಸುತ್ತ ನಡೆದ ಪ್ರಯತ್ನದಲ್ಲಿ ಗಂಡುತನದ ಶೌರ್ಯವಾದರೂ ಏನು ಉಳಿಯಿತು? 'ಸರಕಾರ, ಸರಕಾರ' ವೆನ್ನುವ ಆ ಮಂಡಳಿಯಾದರೂ ಅನೇಕ 'ಜನರ'ನ್ನೇ ಒಳಗೊಂಡಿಲ್ಲವೇ? ಲೋಕಮಾನ್ಯರ ಕೇಸರಿಯು ಮಾಡಿರುವಷ್ಟು ಭಾಷಾಸೇವೆಯನ್ನು ಸರಕಾರವೂ ಮಾಡಲಿಲ್ಲವೆಂದು ಅನುಭಾವವು ಹೇಳುತ್ತಿರುವವು.

« ಸುವಾಸಿನಿ. »

ತಿಬೇಟದೊಳಗಿನ ವಿವಾಹ ಪದ್ಧತಿಯು ಮಹಾ ಭಾರತದಲ್ಲಿಯ ದ್ರೌಪದಿಯನ್ನು ಸ್ಮರಣೆಗೆ ತಂದು ಕೊಡುತ್ತದೆ. ಬಹು ಪತಿತ್ವವು ಇನ್ನೂ ವರೆಗೆ ಅಲ್ಲಿ ಪ್ರಚಲಿತವಿದೆ. ತಿಬೇಟದಲ್ಲಿಯ ಕಾಯಿದೆಗನುಸಾರವಾಗಿ ಹಿರಿಯ ಮಗನೇ ಆಸ್ತಿಗೆ ಒಡೆಯನಾಗುವನು. ಉಳಿದ ಮಕ್ಕಳಿಗೆ ಸೊತ್ತಿನೊಳಗೆ ಪಾಲಿರುವದಿಲ್ಲ. ಮದುವೆ ಮಾಡಿಕೊಳ್ಳುವ ಹಕ್ಕಾದರೂ ಹಿರಿಯನೊಬ್ಬನಿಗೇ ಇರುತ್ತದೆ. ಅವನ ಹೆಂಡತಿಯೇ ಎಲ್ಲ ತಮ್ಮಂದಿರ ಹೆಂಡತಿಯು. ಹುಟ್ಟುವ ಮಕ್ಕಳೆಲ್ಲ ಹಿರಿಯನ ಮಕ್ಕಳೆಂದೇ ಭಾವಿಸಲ್ಪಡುವರು. ಆ ತಿಬೇಟದಲ್ಲಿ ಮನೆಯ ಒಡತಿಯೆಂದರೆ ಪತ್ನಿಯು. ಅವಳು ಹೇಳಿದಂತೆ ಗಂಡನು ಕೇಳತಕ್ಕದ್ದು. ಗಂಡನು ಕೆಲಸ ಮಾಡದೆ, ಸುಮ್ಮನೆ ಕುಳಿತರೆ, ಹೆಂಡತಿಯು ಅವನಿಗೆ ತಿಳಿಹೇಳುವಳು. ಅಲ್ಲಿಯ ಸ್ತ್ರೀಯರು ಗ್ರಹಕಾರ್ಯದಲ್ಲಿ ದಕ್ಷರಿರುತ್ತಾರೆ. ಸಂಸಾರವನ್ನು ಜಾಣತನದಿಂದ ಸಾಗಿಸುತ್ತಾರೆ. ಗಂಡಸರು ಗಳಿಸಿದ ಹಣವನ್ನು ಹೆಂಗಸರಿಗೆ ತಂದೊಪ್ಪಿಸಬೇಕಾಗುವದು. ಹೆಂಗಸರಿಗೆ ವಿಧೇಯರಾಗಿ ಗಂಡಸರಿಗೆ ನಡೆಯಬೇಕಾಗುವುದು. ಇದೊಂದು ತೆರನಾದ ಚಿತ್ರವು! ಈಶ್ವರನ ಸೃಷ್ಟಿಯಲ್ಲಿ ಎಂಥೆಂಥ ಚಮತ್ಕಾರಗಳಿರುವವೋ ಏನೋ?

ವಾಙ್ಮಯ ವಿಚಾರ.

ಶ್ರೀ. ರಂಗರಾವ ಹಿರೇಕೆರೂರ ಇವರು ಮುಂಬಯಿ ವಿಶ್ವವಿದ್ಯಾಲಯದ ೧೯೨೭ನೇ ಇಸವಿಯ ಪ್ರವೇಶ ಪರೀಕ್ಷೆಗೆ ಇರುವ ಕವಿತೆಗಳನ್ನು ಒಟ್ಟುಗೂಡಿಸಿ, ಟೀಕೆ ಟಿಪ್ಪಣಿಗಳೊಂದಿಗೆ ಅದನ್ನು ಮುದ್ರಿಸಿದ್ದಾರೆ. ಒಂದು ಪ್ರತಿಯನ್ನು ನಮ್ಮೆಡೆಗೆ ಅಭಿಪ್ರಾಯಕ್ಕೆಂದು ಕಳುಹಿಸಿರುವರು. ಇವರು ತಮ್ಮ ಉದ್ದೇಶವನ್ನು, ಮುನ್ನುಡಿಯಲ್ಲಿ ಹೀಗೆ ಬರೆದಿದ್ದಾರೆ. "ಈ ಪುಸ್ತಕವು ವಿದ್ಯಾರ್ಥಿಗಳಿಗೆ ಪರೀಕ್ಷೆಯ ಸಲುವಾಗಿಯೂ, ಉಳಿದವರಿಗೆ ಸಾಮಾನ್ಯ ಜ್ಞಾನದ ಸಲುವಾಗಿಯೂ ಬಹಳ ಉಪಯೋಗವಾಗುವಂತೆ' ಬರೆದದೆ! ಇವರು ಕೇವಲ ಪರೀಕ್ಷೆಯ ದೃಷ್ಟಿಯಿಂದಲೇ ಬರೆದಿಲ್ಲವೆಂಬುದು ಅವರ ವಿಸ್ತೃತವಾದ ಟೀಕೆ ಟಿಪ್ಪಣಿಗಳಿಂದ ಗೊತ್ತಾಗುವಂತಿದೆ. ಕೆಲವೆಡೆಯಲ್ಲಿ ಅವರ ಟಿಪ್ಪಣಿಗಳು ಬಹಳ ಉದ್ದವಾಗಿವೆ. ಆದರಿಂದ ಓದಲು ಒಂದುಸ್ವಲ್ಪ ಬೇಸರ ಬರುವದು. ಟಿಪ್ಪಣಿಗಳನ್ನು ಬಹಳ ಬರೆಯುವದರಿಂದ ಹುಡುಗರ ಸ್ವತಂತ್ರ ವಿಚಾರಕ್ಕೆ ಅನುವು ದೊರೆಯುವದಿಲ್ಲ. ಗಡಚಾದ ಭಾಗಗಳಿಗಷ್ಟೇ ವಿವರಣೆಯನ್ನು ಬರೆದು, ಹುಡುಗರಲ್ಲಿ ರಸಿಕತನವನ್ನು ಹೆಚ್ಚಿಸುವುದು. ಒಳ್ಳೇಯದೆಂದು ನಮ್ಮ ಮತ. ಉಳಿದ ರೀತಿಯಿಂದ ಪುಸ್ತಕವು ಉಪಯುಕ್ತವಾಗಿದೆ. ಕವಿಚರಿತ್ರಗಳಾದರೂ ಕೊನೆಯಲ್ಲಿ ಕೊಡಲ್ಪಟ್ಟಿವೆ. ವಿದ್ಯಾರ್ಥಿಗಳು ಈ ಪುಸ್ತಕವನ್ನು ಕೊಂಡು, ಓದಿದಲ್ಲಿ ಪರೀಕ್ಷೆಯನ್ನು ಪಾಸಾಗುವರಲ್ಲದೆ ಸಾಹಿತ್ಯದಲ್ಲಿ ಕೆಲಮಟ್ಟಿಗೆ ಗತಿಯನ್ನು ದೊರಕಿಸಲು ಸಮರ್ಥರಾಗುವರು. ಪುಸ್ತಕ ಬೇಕೆನ್ನುವವರು ರಂಗರಾವ ಹಿರೇಕೆರೂರ ಬಿ. ಎ. ಡಿಸೋಜಾ ಕಟ್ಟಡ ಹೊಸಬಾಜಾರ ವಿಜಾಪುರ ಎಂಬಲ್ಲಿಗೆ ಬರೆದು ಪಡಕೊಳ್ಳಬಹುದು. ಬೆಲೆ. ೧ರೂ. ೮ಆಣೆ.

ಡಿ. ಡಿ. ಕಲೆಕ್ಟರರ ಪ್ರವಾಸವು.

ವಿಜಾಪೂರ ಜಿಲ್ಲೆಯ ದಕ್ಷಿಣ ಭಾಗದ ಡೆಪ್ಯೂಟೀ ಕಲೆಕ್ಟರ ಸಾಹೇಬರವರ, ಪ್ರವಾಸದ ಕಾರ್ಯ ಕ್ರಮವು:— ಜುಲೈ ೩-೯, ಕಮತಗಿ; ೧೦, ಐಹೊಳ್ಳಿ; ಗುಡೂರು ಪುನಃ ಕಮತಗಿ; ೨೫ ಬದಾಮಿ ಪುನಃ ಕಮತಗಿ; ೨೬ ಕಮತಗಿ; ೨೭ ವಿಜಾಪೂರ.

ರಂಗಭೂಮಿಯ ಚೇಷ್ಟೆಗಳು.

ನಾಟಕವನ್ನು ನೋಡಿಬಂದ ನಿದ್ರೆಗಣ್ಣಿನಲ್ಲಿ ಯಾರೋ ಒಬ್ಬರು ಹೇಳಿದರು "ಎನ್ರಿ, ಏನು ಕೆಟ್ಟನಗೆ ನಗಿಸುತ್ತದೆ ಈನಾಟಕವು." ಹಾಗಾದರೆ ನಾಟಕ ಕರ್ತೃವಿನ ವಿನೋದವು ಇದ್ದೀತು ಎಂದು ನಮಗೆ ನಮ್ಮವರ ಹೆಮ್ಮೆಯುಂಟಾಯಿತು. ಆದರೆ ಇನ್ನೊಂದು ಕ್ಷಣದಲ್ಲಿ ತಾವು ನೋಡಿದ್ದು ಕಣ್ಣೀರಿನ ನಾಟಕವೆಂದು ಏನೋ ಅವರ ಧ್ಯಾನಕ್ಕೆ ಬಂದಿತು. ಎಲಾ! ಕಣ್ಣೀರಿನಲ್ಲಿ ಕೆಟ್ಟನಗೆಯೇಕೆ ಎಂದು ನಾವು ಆಶ್ಚರ್ಯಪಟ್ಟೆವು. ಅಂದ ಅಭಿನಯ! ಅಂಥ ನಟನೆ! ಎಂದು ನಮ್ಮವರೊಬ್ಬರು ಅರ್ಜಿಮಾಡಿದರು. ಯಾಕಂದರೆ ಇಡೀ ನಾಟಕವು ನಡೆದಾಗ್ಗೆ ಅಳಬೇಕೋ ನಗಬೇಕೋ ತಿಳಿಯದೆ ಸತ್ತವರನ್ನು ಕಂಡಶರ್ಮಗೊಮ್ಮೆ ಅವರು ನಕ್ಕು ನಕ್ಕು ಕಣ್ಣೀರು ತಂದರಂತೆ! ಅಂತು ಕಣ್ಣೀರು ಸುಳ್ಳಲ್ಲ. ನಕ್ಕು ನಗಿಸುತ್ತ ಸಾಯುವ ಆಟವಾದರು ಸುಳ್ಳಲ್ಲ. ಪೂರ್ಣಪೂರಾ ದುಃಖದಲ್ಲಿ ಮುಗಿಯಲೆಂದು ನಾಟಕದವರೆಲ್ಲರು ಬಂದು ಪ್ರಾಣತ್ಯಾಗಾರವಾಗಿ ಸತ್ತವರಂತೆ ಮಲಗಿದರಂತೆ! ಮುಂದೆ ಸ್ವಲ್ಪಹೊತ್ತಿನಲ್ಲಿ ಮಲಗಲೇಬೇಕಾಗಿತ್ತು ನಿಜ. ಆದರೆ ಪುಣ್ಯಕ್ಕೆ ಈ ದುಃಖಸಾಗರವು ಏರುತ್ತ ಏರುತ್ತ ಪ್ರೇಕ್ಷಕರ ಮೇಲೆ ಸಾಗಿಬರಲಿಲ್ಲ ವೆಂಬದಿಷ್ಟೇ ಸಂತೋಷ. ಈ ಪ್ರಕಾರವು ಇಂಥ ಅಳಿಸುವ ನಾಟಕಗಳಿದ್ದರೂ ಆಡುವವರ ಅಲ್ಪದಕ್ಷತನಕ್ಕೆ ಹೆಚ್ಚಿನ ಹಾಸ್ಯವನ್ನು ಹುಟ್ಟಿಸಿ ತಂಪುಹೊತ್ತಿನಲ್ಲಿ ನೆನಿಸಿ ನಗುವ ಸಂಗತಿಯಾಗಿ ನಿಲಿಸುತ್ತದೆ. ಇಂಥ ಅಭಿನಯ ದೋಷಗಳನ್ನು ಕೇಳಿದರೆ ಹೊಟ್ಟೆಯೊಳಗಿನ ನಿಜವಾದ ನಗೆಯು ಉಕ್ಕಿಬರುತ್ತದೆ. ಇವುಗಳ ಸಂಗ್ರಹಕಾರನ ಸಹವಾಸದಲ್ಲಿ ಕಾಲಕಳೆಯಬೇಕೆಂದಾದರೂ ಮನಸ್ಸು ಎಳೆಯುತ್ತದೆ. ಆದುದರಿಂದ ನಮಗೆ ಗೊತ್ತಿದ್ದ ಇಂಥ ಕೆಲವು ರಂಗಭೂಮಿಯ ಮಂಗಚೇಷ್ಟೆಗಳನ್ನು ಯಾರನ್ನು ನೋಯಿಸುವ ಮನಸ್ಸಿಲ್ಲದೆ ಕೆಳಗೆ ಉದಹರಿಸುತ್ತೇವೆ.

(೧) ಸೌಭದ್ರ ನಾಟಕವು ಎಲ್ಲರಿಗೂ ಗೊತ್ತಿದ್ದುದೇ. ಅಲ್ಲಿ ಸುಭದ್ರೆಯು ಒಮ್ಮೆ ದಾಸಿಯೊಡನೆ ಸುಖದುಃಖದ ಸಂಗತಿಗಳನ್ನು ಹೇಳುತ್ತನಿಂತಿದ್ದಳು. "ಇತ್ತೀಚಿಗೆ ನಿಮ್ಮನ್ನು ನೋಡುತ್ತೇನೆ; ದೇವಿಯರೇ, ಎಷ್ಟು ಸೊರಗಿರುವಿರಲ್ಲ, ಮೋರೆಯಮೇಲೆ ಕಳೆಯೇ ಇಲ್ಲ. ಯಾಕಂತೆ?" ಎಂದು ದಾಸಿಯು ಕೇಳಿದಳು. ನೋಡಲಿಕ್ಕೆ ಕುಳಿತವರಲ್ಲಿ ಯಾರೋ ಒಬ್ಬರು ದಿಟ್ಟರು ಗಟ್ಟಿಸಿ ಅಂದರು "ಮಹಾದೇವಿಯೇ, ಮೊದಲು ನಿನ್ನ ಮೋರೆಯಮೇಲೆ ಕಳೆಯಿಲ್ಲ. ದೇವಿಯವನ್ನೇನು ಕೇಳುತ್ತೀ? ದಷ್ಟಪುಷ್ಟವಾಗಿದ್ದರೆ" ಆದು ಕೇಳಿಸಿತೋ ಏನೋ ಚಿಂತಾಕುಲರಾದ ದೇವಿಯವರು ಕುಲುಕುಲುನಗುತ್ತ ಒಳಗೆ ಹೋಗಿಬಿಟ್ಟರು! ದಾಸಿಗೆ ಮಾತ್ರ ಆಜನ್ಮಚಿಂತೆ ಇದ್ದವರಂತೆ ಅಳುಮೋರೆಯು!!

(೨) ರಾಮ-ಲಕ್ಷ್ಮಣ-ಸೀತೆಯರು ಪಿರ್ಯ್ಯೋ ಎಂದು ಗುಡ್ಡಗಾಡಿನಲ್ಲಿ ತಿರುಗಾಡಿ ರಂಗಸ್ಥಳದಮೇಲೆ ಬಂದರು. ಸೀತೆಯನ್ನು ನೋಡಿ ಕನಿಕರಪಟ್ಟು ಲಕ್ಷ್ಮಣನಂದನು "ತಾಯೀ! ನುಣ್ಣನೆ ಎಷ್ಟು ಭಾವತಿಯುಳ್ಳ ನಿನಗೆ! ಮುಳ್ಳುಗಳು ಎಷ್ಟು ನಟ್ಟುಹೋಗಿವೆ! ರಕ್ತವೆಲ್ಲ ಕಾಲೆಲ್ಲ ಹೇಗೆಹರಿಯುತ್ತದೆ ಕೆಂಪಾಗಹತ್ತಿದೆ! ಹೇಗೆ ಸಹನಮಾಡುವಿ-ಹಿಂದಿರುಗಬಾರದೆ ?" ಎಂದಕೂಡಲೆ ಸಹೃದಯ-ಪ್ರೇಕ್ಷಕನೊಬ್ಬನು ಸೀತೆಯ ಕಾಲುಗಳ ಕಡೆಗೆ ನೋಡಿದನು. ಅಲ್ಲಿ ಯೇನಿದೆ? ರಕ್ತವೇನೋ ಹರಿಯುತ್ತಿತ್ತು ನರಗಳಲ್ಲಿ! ಆದರೆ ಪ್ರವಾಸದ ಧೂಳಿನ ಸಹಿತ ಇಲ್ಲ!! ಸ್ವಚ್ಛವಾದ ಪಾದ ಪಂಕಜಗಳು!!!

(೩) ಒಂದು ನಾಟಕದ ನಡುವೆ ಒಬ್ಬಸ್ತ್ರೀಯು ಸತ್ತು ಸಮಾಧಿ ಹೊಂದಿದಳೆಂದು ಪಡದೆಯನ್ನು ಬಿಟ್ಟರು. ಒಳಗೆ ಅವಳ ಸಮಾಧಿಯ ಸಿದ್ಧತೆಯು ನಡೆದಿತ್ತು. ಆಸ್ತ್ರೀಯು ಸಾಧ್ವಿಯೆಂದು ಸಮಾಧಿಯ ಎದುರಿನಲ್ಲಿ ನಿಂತ ಎಲ್ಲರೂ ಪೂಜೆಮಾಡಬೇಕಾಗಿದ್ದಿತು. ಇನ್ನು ಸಮಾಧಿಯು ಒಂದುಕಟ್ಟು ಕಡಿಮೆಯಿದ್ದಿದೆ ಎಂದು ಆ ಸಾಧ್ವಿಯೇ ತರಲಿಕ್ಕೆ ಎದ್ದಳು. ಅಷ್ಟರಲ್ಲಿ ಪಡದೆಯನ್ನು ಮತ್ತೆ ಎತ್ತಿದರು. ಸತ್ತವಳು ಎದ್ದಳಲ್ಲ ಎನ್ನುವದರಲ್ಲಿ ಗಾಬರಿಯಾಗಿ ಪಡದೆಯ ಕೊಡ್ಡವನ್ನು ಧಪ್ಪನೆ ಕೆಡವಿಬಿಟ್ಟರು. ಆದು ಆ ಸಾಧ್ವಿಯ ಬೆನ್ನಮೇಲೆ ಬಿದ್ದು ನಿಜವಾದ ಸಮಾಧಿಯಾಗುವ ವೇಳೆ! ಆದರೆ "ಸತ್ತೆನಪೋ" ಎಂದು ಒದರಿ ಆ ಸೋಗಿನ ಸಾಧ್ವಿಯು ಉಳಕೊಂಡಳು!!

(೪) ರಂಗಭೂಮಿಯ ರಾಜ್ಯದಲ್ಲಿ ಎಲ್ಲರೂ ಬೆಳ್ಳಗಿನ ಬಣ್ಣದವರೇ ಎಂದು ಒಬ್ಬರ ಸಿದ್ಧಾಂತ. ಆದರೆ ಇಷ್ಟೇ ಏಕೆ ಎಲ್ಲರೂ ಅಲ್ಲಿ ದೈವವುಳ್ಳವರೆಂದು ನಾವು ಅನ್ನುತ್ತೇವೆ. ಯಾಕಂದರೆ ಯಾರ ಅರಿವೆಗಳೂ ಅಲ್ಲಿ ಮಾಸುವದಿಲ್ಲ; ಎಲ್ಲವೂ ಅದೇ ಹೊಲಿಸಿದಂತೆ ಕಾಣುತ್ತಿವೆ! ಹಾಗೂ ಅಲ್ಲಿಯ ಶ್ರೀಮಂತಿಕೆಯ ಇನ್ನೊಂದು ಲಕ್ಷಣವೆಂದರೆ, ಎಲ್ಲರ ತುಟಿಗಳೂ ಕೆಂಪು! ದೈವವಂತರ ಮನೆಯಲ್ಲಿದ್ದು ತಾಂಬೂಲವನ್ನು ತಾಸಿಗೊಮ್ಮೆ ಮೆಲ್ಲುವಂತೆ ದಾಸಿಗೂ ತುಟಿಗೆಂಪು. ಯಾವನೋ ಒಬ್ಬ ಗರ್ಭ ಶ್ರೀಮಂತನಿಗೆ ಸಿರದಲ್ಲಿ ತಾಂಬೂಲದ ರಕ್ತಿಮೆಯು ಇಳಿದಿದ್ದು ಕಾಣುತ್ತಿತ್ತಂತೆ. ಆದರೆ ಈ ನಾಟ್ಯ ಶ್ರೀಮಂತರಿಗೆ ಒಮ್ಮೊಮ್ಮೆ ಮೈತುಂಬ ತಾಂಬೂಲದ ರಕ್ತ ರಸವು ಹರಿದಾಡುತ್ತಿರುತ್ತದೆ.

(೫) ಒಬ್ಬ ಬ್ರಾಹ್ಮಣ ಭಿಕ್ಷುಕನು ದೊಡ್ಡ ಗಂಟನ್ನು ಹೊತ್ತುಕೊಂಡು ಆ ಹೊತ್ತಿನ ಗೋಪಾಳವನ್ನು ಹೆಂಡತಿಗೆ ತೋರಿಸಲೆಂದ ಗಡಿಬಿಡಿಯಿಂದ ಮಚ್ಚಿ ಸಹಿತವಾಗಿ ಮನೆಯನ್ನು ಹೊಕ್ಕನು. ಪವಿತ್ರವಾದ ರಂಗಸ್ಥಳವೆಂದು ಅವನಿಗೇನು ಗೊತ್ತು? ಆದರೆ ಹೆಂಡತಿಯು ಮಹಾ ಭಾವಿಕಳು, ಪಾದರಕ್ಷೆಯನ್ನು ಎರಡೂ ಕೈಗಳಿಂದ ಕಿತ್ತಿ ಬಿಸಟಿದಳು! ಈ ಸಂಕಟದಲ್ಲಿ ತನ್ನ ಮಗನನ್ನು ಕಂಡು ಹಾದಿಯಲ್ಲಿ ದುಃಖಿಸುತ್ತ ಬ್ರಾಹ್ಮಣನು ಕುಳಿತನು. ಹಾದಿಯಮೇಲೆ ಕುಳಿತಿಯಲ್ಲೋ ಬ್ರಾಹ್ಮಣನೇ ಎಂದು ಎಲ್ಲರೂ ನಗಹತ್ತಿದರು. ಅವನು ಮಾತ್ರ ತನ್ನ ಗಂಟನ್ನು ಬೆನ್ನಿಂದೆ ಇಟ್ಟುಕೊಂಡು ಅವನಿಗೆ ದುಃಖವನ್ನು ತೋಡಿಕೊಳ್ಳ ಹತ್ತಿದನು. ಒಬ್ಬ ಹಾದಿಗಳ್ಳನು ಆ ಗಂಟನ್ನು ಹೊತ್ತನು. ಹಿಂದುಗಡೆಯಲ್ಲಿ ಬ್ರಾಹ್ಮಣನು ಗಾಬರಿಯಾಗಿ ಎದೆ ಎದೆ ಬಡಕೊಳ್ಳಲು ಆ ಕಳ್ಳನು ಓಡಿಬಂದು ಹೇಳುತ್ತಾನೆ. "ಮಹಾರಾಯಾ" ಇದು ನನ್ನ ಗಂಟು!! ಗುಬ್ಬಿ ತಗೊಂಡ ಹೋಯಿತು ನೋಡು ನಿನ್ನ ಗಂಟು. ಎಂದಕೂಡಲೇ ಹುಚ್ಚರೊಳಗೆ ಹಿಡಿಮುಷ್ಟಿನವ. ಮಗನಿಗೆ ಕಲ್ಲು ಒಗಿಯಲಿಕ್ಕೆ ಹೇಳಿ ಕ್ಯಾಪ ಬತ್ತಿಗಳನ್ನು ಒಡೆದು ಆರಿಸಿಬಿಟ್ಟನು!!

(೬) ಒಂದು ಕಡೆತನಕ ಕೊಲ್ಲುವ ಆಟದಲ್ಲಿ ಪೋಲೀಸ ಸಾಹೇಬನು ಇನ್ನೊಂದಿಬ್ಬರನ್ನು ಕೊಲ್ಲಲಿಕ್ಕೆ ಬೇಕಾದನು. ಆಗ ಒಬ್ಬ ಟೊಣಪನು ನಿಂತಕಾಲಿನ ಮೇಲೆ ವೇಷವನ್ನು ಹಾಕಿಕೊಂಡು ಏಟಾಗಿ ಬಂದನು. ಎಂದು ರಂಗಭೂಮಿಯೆಂದರೆ ಗೊತ್ತಿಲ್ಲ! ರಣಭೂಮಿಯೆಂದರೆ ಗೊತ್ತಿಲ್ಲ. ಇಷ್ಟಾಗಿ ಮಾತುಗಳನ್ನು ಕಲಿತಿಲ್ಲ-ಮತ್ತೇನಿದೆ? ಅಪರಾಧಿಯ ಮುಂದೆ ನಿಂತು ಕಮಕಮ ಮಾಡಹತ್ತಿದನು. ಒಂದು ಮುಂದೆ ನೋಡಿದನು ಯಾರು ಕೊಲ್ಲಿಸಿಕೊಳ್ಳುವವರೆಂಬದು ತಿಳಿಯಲಿಲ್ಲ. ಪ್ರೇಕ್ಷಕರಿಗೆ ಅವನನ್ನೇ ಕೊಲ್ಲುವಂಥ ಸಿಟ್ಟು ಬಂದಿತು! ಕಡೆಗೆ ಅಪರಾಧಿಯಾದವನು ನಾಟಕದ ಮ್ಯಾನೇಜರನಂತೆ "ಇದರಲ್ಲಿ ನಿನ್ನದೇನೂ ತಪ್ಪಿಲ್ಲ ಹೋಗು" ಎಂದು ಪೋಲೀಸಸಾಹೇಬನನ್ನು ಮನೆಗೆ ಅಟ್ಟಿದನು!!

(೭) ಒಮ್ಮೆ ಕಬೀರದಾಸನ ಮನೆಗೆ ಅತಿಥಿಗಳು ಬಂದರು. ಅವನಂತೂ ಉಂಡರೆ ಉಂಡ, ಉಣದಿದ್ದರೆ ಉಪವಾಸವೆಂದು ಎಲ್ಲರಿಗೂ ಗೊತ್ತು. ಆದರೂ ಬಂದವರನ್ನು ತಿರುಗಿ ಕಳಿಸುವಂತಿಲ್ಲ. ಸ್ನಾನ ಮಾಡಿ ಬರ್ರೆಂದು ಅವರಿಗೆ ಹೇಳಿ, ತಾನು ಅಳಹತ್ತಿದನು. "ನಾನೆಷ್ಟು ದಿನಸು? ತುಡುಗು ಮಾಡಿದ ಹೊರತು ನನ್ನಲ್ಲಿ ಒಂದು ಕಾಳು ಜೋಳವಿಲ್ಲ, ಒಂದು ಕಾಸುಯಿಲ್ಲ, ಎನ್ನಲು ತುಂಟನೊಬ್ಬನು ಕೇಳಿದನು. "ಎಲಾ ಈ ಸಜ್ಜನನಿಗೆ ತುಡುಗು ಮಾಡುವ ಬುದ್ಧಿ ಯಾಕಪ್ಪಾ! ನಿನ್ನೇ ಇನಾಮು ಕೊಟ್ಟ ಬಾದರ ಬಿಲ್ಲಿಯನ್ನು ಸಿಗಿಸಿಕೊಂಡಿದ್ದಾನೆ. ಕೊರಳಲ್ಲಿ ಕಂಠೀಹಾರವಿದೆ. ಬೆರಳಲ್ಲಿ ವಜ್ರದುಂಗುರವಿದೆ. ಮಾರಿ ಊಟಕ್ಕೆ ಹಾಕಬಾರದೇ?" ಎನ್ನಲು ಮತ್ತೊಬ್ಬನೆಂದನು "ಅವನೆಲ್ಲಿಯ ಸಜ್ಜನನೋ? ನನಗೆ ಗೊತ್ತಿದೆ. ತುಡುಗು ಮಾಡಿ ಮಾಡಿ ಸಾಕಾಗಿ ಈಗ ಕಬೀರದಾಸನ ಸೋಗು ಹಾಕುತ್ತಾನೆ."

(೮) ಶಿವನು ಒಮ್ಮೆ ಮಹಾನಂದೆಯ ಸತ್ವ ಪರೀಕ್ಷೆಯನ್ನು ಮಾಡಲಿಕ್ಕೆಂದು ತಿರುಕನಾಗಿ ತಿಳಿಯದಂತೆ ಬರುತ್ತಾನೆ. ಮಹಾನಂದೆಯ ಬಳಗವೆಲ್ಲ 'ಬಡವ, ಬಡವ' ಎಂದು ಶಿವನನ್ನು ಹಂಗಿಸಲು ಒಳ್ಳೇ ದರ್ಪದಿಂದ ಅಮೂಲ್ಯವಾದ ರತ್ನದುಂಗರವನ್ನು ತೋರಿಸಿ 'ಜಗತ್ತಿನಲ್ಲಿ ಇದಕ್ಕೆ ಸರಿಯಾವುದು' ಎಂದು ಕೇಳುತ್ತಾನೆ. 'ಅದಮೇಲೆ ಭಿಕ್ಷೆಯನ್ನು ಬೇಡಲಿಕ್ಕೆ ಏನಾಗಿದೆಯೋ ನಿನಗೆ' ಎಂದು ಯಾರೋ ಕದ್ದು ಕೇಳಿದರು. ಅದು ತಿಳಿದವರಂತೆ ತನ್ನ ಮಾತಿನಲ್ಲಿ ಅವನು "ಪ್ರತ್ಯಕ್ಷ ಶಿವನಿಗೆ ತಪ್ಪು ಹಚ್ಚುತ್ತೀರಾ, ಎಲಾ ಮೂರ್ಖರೇ" ಎಂದು ಒದರುತ್ತಾನೆ. "ನಿನ್ನ ಸೋಗು ಇನ್ನೂ ಹೊರಗೆಡವಿನೆಯಲ್ಲ! ಯಾರ ತಪ್ಪು! ನಾಟಕದಲ್ಲಿ ಶಿವನಾದರೆ, ಹೊರಗೆ ಮನುಷ್ಯನೇ" ಎಂದು ಎಲ್ಲರೂ ನಕ್ಕರು. ಆಯಿತು!

(೯) ಒಂದುದಿನ ಪ್ರಹ್ಲಾದ ನಾಟಕವಿತ್ತು. ಮ್ಯಾನೇಜರನೂ ಒಬ್ಬ ಪಾರ್ಟಿನವನು ಯಾವದೋ ಮೂಳಕ ಬಾಯಿಗೆ ಬಾಯಿಹತ್ತಿ ಕಡಿದಾಡಿದರು. 'ನೋಡೋಣ ಬಾ' ಎಂದು ಇಬ್ಬರೂ ಆಹೊತ್ತು ಹುರುಪಿನಿಂದ ಪಾರ್ಟು ತಕ್ಕೊಂಡರು. ಕಟ್ಟ ಕಡೆಯ ಭಾಗ. ಹಿರಣ್ಯಕಶ್ಯಪನು ಉರಿದು ಉರಿದು ತನ್ನ ವೈರಿಯು ಸಿಗಲಿಲ್ಲವೆಂದು ಅಬ್ಬರದಿಂದ ಕಂಬವನ್ನು ಒದೆಯಲಾಗಿ ನರಸಿಂಹ ಮೂರ್ತಿಯು ಹೊರಬಿದ್ದಿತು. ಇಬ್ಬರ ಪ್ರಚಂಡ ಕೋಪವನ್ನು ನೋಡಿದರೆ ಎಷ್ಟು ಮನಸ್ಸಿಗೆ ಹಚ್ಚಿಕೊಂಡು ಅಭಿನಯಿಸುವರೆಂದು ಎಲ್ಲರಿಗೂ ದಿಂಗು ಬಡದಿತ್ತು! ಕಡೆಗೆ ಗುದ್ಯಾಡಿ ವ್ಯಾಘ್ರ ನಖಗಳಿಂದ ನರಸಿಂಹನು ಹಿರಣ್ಯಕಶ್ಯಪನ ಕರುಳನ್ನೇ ಕಿತ್ತಿ ತೆಗೆದು ಕೊರಳಲ್ಲಿ ಹಾಕಿಕೊಂಡನು. ನಾಟಕವು ಭಯಂಕರವಾಯಿತು ಎಂದು ಎಲ್ಲರೂ ಅನ್ನುತ್ತಿದ್ದರು. ಮರುದಿನ ನೋಡಲಾಗಿ ಹಾಗೆಯೇ ಆಗಿಬಿಟ್ಟಿತ್ತು. ಎಲ್ಲಿ ಹೋದರು ಸಿಟ್ಟು ಪಿಟ್ಟು ಮುಕ್ಕಿಸದೆ ಬಿಡುವದಿಲ್ಲ?

(೧೦) ಕೊಲೆಗಡಕರಿಗೆ ನಾಟಕದಲ್ಲಿ ಚಿಕ್ಕ ಚಿಕ್ಕ ಹುಡುಗರನ್ನು ಕೊಲ್ಲಿರೆಂದು ಆಜ್ಞೆಯಾದರೆ ಬಹಳೇ ಹೃದಯ ನೀರಾಗುವದು. ಅವರೆಂದೂ ನಾಟಕದಲ್ಲಿ ಇಂಥ ಕೆಲಸವನ್ನು ಮಾಡಿದವರಲ್ಲ. ಒಮ್ಮೆ ಕಮಲಾಕರನನ್ನು ಕರಕೊಂಡು ಒಲ್ಲೆ ಒಲ್ಲೆನ್ನುತ್ತಲೆ ಕಟಕರು ಅಡವಿಗೆ ಹೋದರು. ನಾಟಕದ ಕೊನೆಯ ಭಾಗ ಎಲ್ಲರಿಗೂ ನಿದ್ದೆಯೂ ಕಣ್ಣಿನ ತುದಿಯವರೆಗೆ ಬಂದಿತ್ತು. ಅದರಲ್ಲಿ ಕಮಲಾಕರನ ಮಧುರಕಂಠ ಅಂತ್ಯಕಾಲದ ದೇವಸ್ತವನೆಯನ್ನು ಮಾಡಲಿಕ್ಕೆ ಹತ್ತಿದನು. ಕೊಲೆಗಡಕರು ಕತ್ತಿಗಳನ್ನು ಹಿರಿದು ನಿಂತಿದ್ದರು. ಹಾಡನ್ನು ಕೇಳುತ್ತಲೆ ಆವೇ ಪ್ರೇಕ್ಷಕರಿಗೆ ನಿದ್ದೆ ಹತ್ತಿತು. ಅಷ್ಟರಲ್ಲಿ ಕಟಕರೂ ನೆಲಕ್ಕುರುಳಿದರು. ಎಲ್ಲರ ಕಣ್ಣು ತಪ್ಪಿಸಿ ಕಮಲಾಕರನು ಒಳಗೆ ಹೋಗಿ ಬಿಟ್ಟನು. ಅಂತು ಕೊಲೆಯಾಗಲಿಲ್ಲ. ಇಂತಿದು ಸಂಗೀತ ಮಹಾತ್ಮೆ?

ರಸಿಕ ರಂಗ.

ವಾಙ್ಮಯಸೇವೆ.

ಕ್ಷಣಭಂಗುರವಾದ ಈ ಲೋಕದಲ್ಲಿ ಮನುಷ್ಯ ಮಾತ್ರದವರು ತಮ್ಮ ಪರಾಕ್ರಮದ, ವಿದ್ವತ್ತೆಯ, ಐಶ್ವರ್ಯದ ಗುರುತನ್ನು ನಿಲ್ಲಿಸಿ ಹೋಗಲು ವಾಙ್ಮಯವೇ ಪ್ರಬಲವಾದ ಸಾಧನವಾಗಿರುವದು. ಶುದ್ಧ ಮನಸ್ಸಿನಿಂದಲೂ, ಚಿಕ್ಕವರು, ದೊಡ್ಡವರೆನ್ನದೆ, ಅವ್ಯಾಹತವಾಗಿ ಎಲ್ಲರೂ ಒಂದು ಮನಸ್ಸಿನಿಂದಲೂ ಕೆಲಸ ಮಾಡುತ್ತ ಬಂದಲ್ಲಿ, ಅತಿ ಸಮರ್ಥರಾದ ನೃಪತುಂಗ, ಅರಿಕೇಸರಿ, ಚಿಕ್ಕದೇವರಾಜ, ಪಂಪ, ರನ್ನ, ಲಕ್ಷ್ಮೀಶ ಪ್ರಭೃತಿ ಕರ್ಣಾಟಕ ಮಹಾಪುರುಷರಾದ ನಮ್ಮ ಪೂರ್ವಜರ ಕೀರ್ತಿಗೆ ತಕ್ಕ ವಾಙ್ಮಯ ಸೇವೆಯು ಕಾಲಕ್ರಮದಲ್ಲಿ ನಮ್ಮಿಂದ ಆಗಬಹುದು. 'ವಾಙ್ಮಯೇತಿಹಾಸದಲ್ಲಿ ನನ್ನ ಹೆಸರು ಮೊದಲು ಮುದ್ರಿತವಾಗಲೆಂ'ಬ ಆಶೆಯನ್ನು ಹಿಡಿದು ನಡೆಯುವದು ನ್ಯಾಯವಾಗಲಿಕ್ಕಿಲ್ಲ. ಅದು ಈಶಾನುಗ್ರಹದಿಂದ ಆರ ಪಾಲಿಗೆ ಬರುವದೋ? ಆ ಮಹದ್ಭಾಗ್ಯವು ಆರ ಹಣೆಯಲ್ಲಿ ಲಿಖಿತವಾಗಿದೆಯೋ? ಆದರೆ, 'ಫಲವು ಲಭಿಸಲಿ, ಲಭಿಸದಿರಲಿ, ನನ್ನ ಕರ್ತವ್ಯವನ್ನು ನಾನು ಮಾಡಿದೆನೆಂ'ಬ ಭಾರತಮಲ್ಲನೂ, ಶ್ರೇಷ್ಠ ಜ್ಞಾನಿಯೂ ಆದ ಶ್ರೀಕೃಷ್ಣ ಪ್ರಭುವಿನ ವಚನದಂತೆ ವಾಙ್ಮಯವನ್ನು ಪುರಸ್ಕರಿಸುವವನೇ ನಮಗೆ ವಾಙ್ಮಯ ಚರಿತ್ರದಲ್ಲಿ ಪ್ರಥಮ ಸ್ಥಾನದಲ್ಲಿ ನಿಲ್ಲುವವನಾದ ವಿಭುವಿಗಿಂತಲೂ ಹೆಚ್ಚು ಯೋಗ್ಯತೆಯುಳ್ಳವನೆಂದು ತೋರುತ್ತಿರುವದು. ಅಂಥ ಅನೇಕ ಪ್ರಯತ್ನಗಳಲ್ಲಿ ಒಬ್ಬ ಪಂಪನು ಮುಂದಾಗುವನು. 'ಹೃದಯಸ್ಥನಾದ ನಾರಾಯಣನಿಗೆ, ಅಖಂಡ ಸೂರ್ಯಮಾಲೆಯೋ ಕಣವೆನ್ನುವ ಪ್ರಚಂಡ ವಿಶ್ವದ ಎಲ್ಲ ಮಾತುಗಳೂ ಅವಗತವಾಗುತ್ತಿರುವಲ್ಲಿ, ಕೀಟಕಸದೃಶನಾದ ನನ್ನ ಶುದ್ಧ ಮನೋವೃತ್ತಿಯು ಆತನಿಗೆ ತಿಳಿಯಲಿಕ್ಕಿಲ್ಲವೇ? ಅಂತರಾತ್ಮನಾದ ಆತನು ಅಮುದೆನ್ನುವಲ್ಲಿ, ಅಂಧಾನುಕರಣದಿಂದ ಕೀರ್ತಿಯ ಜಂಭಕ್ಕೆ ಮರುಳಾಗುತ್ತಿರುವ ಅಲ್ಪರು ನನ್ನನ್ನು ಹೊಗಳಿದರೂ ಸರಿಯೆ! ಬಿಟ್ಟರೂ ಸರಿಯೆ! ತ್ರಿಖಂಡ ಪಂಡಿತನೂ, ಬಿ. ಎ. ಎಮ್. ಎ. ಮೊದಲಾದ ಪದವಿಗಳಿಂದ ಅಲಂಕೃತನಾದ ಚತುಃಶೃಂಗ (ಅಗ್ನಿದೇವ!) ವೀರನೂ ಆದವನೇ ನಿಷ್ಪ್ರಭನಾಗಿ ಹೋಗುತ್ತಿರುವಲ್ಲಿ, ಸರಸ್ವತಿಯು ಆತನನ್ನೂ ಒಂದೊಂದು ಸಮಯದಲ್ಲಿ ಮುಂದೆ ಕರೆಯದೆ ಹೋಗುವಲ್ಲಿ ಇದೇನು ನನ್ನ ಬಡಿವಾರ ಅಹಂಕಾರಗಳಷ್ಟು!—ಎಂಬ ನಿರಹಂಕಾರದಿಂದ, ಅಖಿಲ ಜನತೆಯು ವಾಙ್ಮಯವನ್ನು ಯಥಾಶಕ್ತಿ ಸೇವಿಸುತ್ತ ತಮ್ಮನ್ನೂ, ತಮ್ಮ ಜನತೆಯನ್ನೂ ಪ್ರಗತಿ ಪಥದಲ್ಲಿ ಮುಂದಕ್ಕೆ ನೂಕುತ್ತಿರುವದೇ ಶ್ಲಾಘ್ಯವಾಗಿರುವದು.

ನಮ್ಮ ಕರ್ನಾಟಕ ವಾಙ್ಮಯವೀಗ ಹೊಸ ಹುರುಪಿನಿಂದ ಮುಂದಕ್ಕೆ ಹೆಜ್ಜೆಗಳನ್ನಿಕ್ಕುವಲ್ಲಿ, ಮೇಲಿನ ಉಪಕ್ರಮವು ತಾನಾಗಿಯೇ ಉದ್ಭವಿಸಿರುವದು! ಕವಿಚರಿತ್ರ ಕೃತಿಯ ಪ್ರಥಮ ಭಾಗದ ಪೀಠಿಕೆಯಲ್ಲಿ 'ಕರ್ನಾಟಕ ಸರಸ್ವತಿಯು ಕದಂಬ, ಚಲುಕ್ಯ, ರಾಷ್ಟ್ರಕೂಟ, ವಿಜಯನಗರ ಮೊದಲಾದ ಸಾಮ್ರಾಜ್ಯಗಳ ಆಶ್ರಯದಿಂದ ಅತಿ ವೈಭವದೊಡನೆ ಲೋಕದಲ್ಲಿ ಮೆರೆದು, ತದನಂತರ ಉತ್ತರ ಗೋದಾವರೀ ತೀರದಿಂದ ದಕ್ಷಿಣಾಭಿಮುಖವಾಗಿ ಹೊರಟು, ಕಾವೇರೀ ತೀರದಲ್ಲಿಯ ಮೈಸೂರಿನ ಮಹಾಪ್ರಭುಗಳ ಉದಾರಾ

(ಮುಂದಿನ ಪಾನಿಗೆ ನೋಡಿರಿ)

ವರ್ತಮಾನ ಸಾರ

ಇಹವೃತ್ತ.

ಊರಲ್ಲಲ್ಲ ಮುನಸಿಪಾಲ್ಟಿ ಚುನಾವಣೆಯ ಗೊಂದಲವೇ ಗೊಂದಲ. ಮೊಹರಮ್ಮ ಹಬ್ಬದಲ್ಲಿ ಸೋಗುಗಳು ಸಹ "ನನಗೆ ಚೀಟಿ ಹಾಕಿರಿ, ನಾನೂ ಮೆಂಬರನಾಗುವೆ ನೆಂಬದಾಗಿ ಮೋಜಿನಿಂದ ಉಬ್ಬುಬ್ಬಿ ತಿರುಗುತ್ತಲಿದ್ದವು!"

ನಿನ್ನೆ ಮಳೆಯು ಈ ಊರಲ್ಲಿಯೂ ಸುತ್ತಲಿನ ಹಳ್ಳಿಗಳಲ್ಲಿಯೂ ಚೆನ್ನಾಗಿ ಆಗಿದೆ. ಆದರೆ, ಈ ಜಿಲ್ಹೆಗೆ ಬರಗಾಲವು ತಪ್ಪಿದ್ದಿಲ್ಲವಾದ್ದರಿಂದ, ಕೈಗೆ ಬಂದ ತುತ್ತು ಬಾಯಲ್ಲಿ ಬೀಳುವವರೆಗೆ ಏನೂ ಹೇಳಲಿಕ್ಕಾಗದು

ಮುಂಬೈಕರ್ನಾಟಕ

ವಿಜಾಪೂರದ "ನ್ಯೂ ಇಂಗ್ಲೀಷ" ಶಾಲೆಯಮೇಲೆ ಶ್ರೀ. ಗುಡಗುಂಟಿಯವರು ತಮ್ಮ "ಮುಂದಾಳು" ಪತ್ರಿಕೆಯಲ್ಲಿ ವಿಪರೀತ ಕಲ್ಪನೆಯಿಂದ ಟೀಕೆ ಮಾಡಿದ್ದಕ್ಕಾಗಿ, ಆ ಶಾಲೆಯ ಶಿಕ್ಷಕರಾದ ಶ್ರೀ. ಆಲಬಾಳರವರು ಗುಡಗುಂಟಿಯವರ ಮೇಲೆ ಪ್ರತಿ ಟೀಕಾಸ್ತ್ರವನ್ನು ಬಿಟ್ಟಿದ್ದು, ಆ ಬಗ್ಗೆ ಹಸ್ತಪತ್ರಿಕೆಗಳನ್ನು ಪ್ರಸಿದ್ಧ ಮಾಡಿದ್ದಾರೆ. ಸಾರ್ವಜನಿಕವಾಗಿ ವೈಯ್ಯಕ್ತಿಕ ಟೀಕೆಗಳಿಗೆ ಆಸ್ಪದವಿರಬಾರದಾಗಿ ನಮ್ಮ ಸೂಚನೆ.

ನವಲಗುಂದದಲ್ಲಿ ಮುನಸುಫಕೋರ್ಟ ಸ್ಥಾಪಿಸಲ್ಪಡಬೇಕಾಗಿ, ಆ ತಾಲೂಕಿನ ಮಹಾ ಜನಗಳು, ತಮ್ಮ ಸಹಿಗಳೊಂದಿಗೆ, ಹಾಯಕೋರ್ಟಿಗೆ ಅರ್ಜಿ ಕಳಿಸಿರುವರು. ಜನರ ಬೇಡಿಕೆಯಿಲ್ಲವೆಂಬುದಾಗಿ ಉತ್ತರಕೊಟ್ಟು ಜವಾಬ್ದಾರಿಯನ್ನು ಜಾರಿಸಿಕೊಳ್ಳುವ ಸರಕಾರವು ಇನ್ನೇನಾದರೂ ಹೊಸ ಹಂಚಿಕೆ ತೆಗೆದು ಸರಕಾರದ ಉತ್ತರ ಕೊಡುವರೋ ಅಥವಾ ಜನರ ಬೇಡಿಕೆಗಳನ್ನು ಪೂರೈಸುವರೋ ನೋಡಬೇಕು.

ದಿಲ್ಲಿಯ ಭಾರತೀಯ ಕಾಯದೇ ಮಂಡಲಕ್ಕೆ ಉತ್ತರ ಕರ್ನಾಟಕದ ಪತಿಯಿಂದ ಶ್ರೀ ಬೆಳವೀಯವರು ಪುನಃ ಉಮೇದವಾರರಾಗಿ ನಿಲ್ಲುವರೆಂದು ಕೇಳುತ್ತೇವೆ. ಕರ್ನಾಟಕಕ್ಕೆ ಅವಶ್ಯಕವಾದ ಸಂಗತಿಗಳ ಬಗ್ಗೆ ಈಗಿನ ೩ ವರ್ಷದ ಅವಧಿಯಲ್ಲಿ ಏನು ಮಾಡಿದರು, ಮತ್ತು ಮುಂದಿನ ೩ ವರ್ಷಗಳಲ್ಲಿ ಏನು ಮಾಡುವರೆಂಬದನ್ನಿಷ್ಟು ಶ್ರೀ ಬೆಳವೀಯವರು ಕರ್ನಾಟಕಸ್ಥರಿಗೆ ತಿಳಿಸುವರೋ?

ಹಾವೇರಿ ಶ್ರೀ ಸಿದ್ಧಲಿಂಗೇಶ್ವರ ವಾಚನಾಲಯದ ವಾರ್ಷಿಕೋತ್ಸವವು, ಧಾರವಾಡದ ವಕೀಲರಾದ ಹಂಡೇಕಾರ ಚನ್ನಪ್ಪನವರ ಅಧ್ಯಕ್ಷತೆಯಲ್ಲಿ ೧೧ ನೇ ತಾ॥ ದಿನ ನೆರವೇರಿತು. ವಾಚನಾಲಯದ ಸಾಂಪತ್ತಿಕ ಸ್ಥಿತಿಯು ಚೆನ್ನಾಗಿದೆ. ಕರ್ನಾಟಕದಲ್ಲಿ ಹೀಗೆ ಸಾಂಪತ್ತಿಕ ಸ್ಥಿತಿಯು ಒಳಿತಾಗಿದ್ದ ವಾಚನಾಲಯಗಳು ವಿರಳ,

ಮದ್ರಾಸಕರ್ನಾಟಕ.

ಉಡುಪಿ ತಾಲೂಕಿನಲ್ಲಿ ೧೦೦೦ ಜನ ಸ್ವಯಂ ಸೇವಕರು ಹಿಂದುಸ್ಥಾನ ಸೇವಾದಲದ ವ್ರತವನ್ನು ಸ್ವೀಕರಿಸಿದ್ದಾರೆ. ಉಡುಪಿಯು ಕರ್ನಾಟಕಕ್ಕೆ ಮೇಲ್ಪಂಕ್ತಿಯನ್ನು ಹಾಕಲಿ!

ಮಂಗಳೂರ ಜಿಲ್ಹೆಯ ಕಾಂಗ್ರೆಸ ಪಕ್ಷದ ಪತಿಯಿಂದ ಮದ್ರಾಸ ನ್ಯಾಯವಿಧಾಯಕ ಸಭೆಗೆ ಶ್ರೀ ಕೆ. ಆರ್. ಕಾರಂತರವರು ಉಮೇದವಾರರಾಗಿ ನಿಂತಿರುತ್ತಾರೆ.

ಸ್ತ್ರೀಯರು ಮತ್ತು ಮಹಮ್ಮದೀಯರು ವಿದ್ಯೆಯಲ್ಲಿ ಹಿಂದುಳಿದಿರುವುದರಿಂದ ಮಂಗಳೂರು ತಾಲೂಕ ಬೋರ್ಡಿನವರು ಎರಡು ಕನ್ಯಾಶಾಲೆ ಹಾಗೂ ೫ ಮುಸಲ್ಮಾನ ಶಾಲೆಗಳನ್ನು ಸ್ಥಾಪಿಸಬೇಕೆಂದು ನಿರ್ಣಯಿಸಿರುವರು

ಕೋಯಿಮತ್ತೂರ ಮುನಸಿಪಾಲಿಟಿಯ ಅಗ್ರಹದಂತೆ, ಮದ್ರಾಸ ಸರಕಾರವು, ಭೂಕಂದಾಯವನ್ನು ನೂರಕ್ಕೆ ೩ ರಂತೆ ಇಳಿಸಿರುವರು.!

ಕೊಸಪೇಟೆಯ ಬ್ರಾಹ್ಮಣರಿಗೂ, ವೈಶ್ಯರಿಗೂ, ಕಲಹವುಂಟಾಗಿದೆ. ವೇದ ಪ್ರಮಾಣದಂತೆ ಲಗ್ನ, ಮುಂಜಿವೆ ಮೊದಲಾದ ಕಾರ್ಯಗಳನ್ನು ಮಾಡಿಸಬೇಕೆಂದು ವೈಶ್ಯರು ಕೇಳಿದರು. ಆದರೆ ಬ್ರಾಹ್ಮಣರು ಇದಕ್ಕೆ ಒಪ್ಪಲಿಲ್ಲ. ಪುರಾಣ ಪ್ರಮಾಣದಂತೆ ಮಾಡುವೆವೆಂದು ಹೇಳಿದರು ಅದಕ್ಕೆ ವೈಶ್ಯರು ಸಭೆ ಸೇರಿಸಿ, ಯಾರೂ ಬ್ರಾಹ್ಮಣರನ್ನು ಯಾವ ಕಾರ್ಯಕ್ಕೂ ಕರೆಯಬಾರದೆಂದು ನಿರ್ಣಯ ಮಾಡಿದರು. ಬ್ರಾಹ್ಮಣರೂ ಕೂಡ ಸ್ಮಾರ್ತರೂ, ವೈಷ್ಣವರೂ ಸೇರಿ ಸಭೆ ಮಾಡಿ, ಯಾರೂ ವೈಶ್ಯರ ಮನೆಗಳಿಗೆ ಯಾವ ಕೆಲಸಗಳಿಗೂ ಹೋಗಬಾರದೆಂದು ನಿರ್ಧಾರ ಮಾಡಿಕೊಂಡಿರುವರು.

ಮೈಸೂರ ಕರ್ನಾಟಕ

ಸರ ಚಾರ್ಲಸ ಟಾಡಹಂಟರವರು ಮೈಸೂರ ಮಹಾರಾಜರವರ ಸ್ವಂತ ಮಂತ್ರಿಗಳಾಗಿದ್ದಾರೆ. ಕನ್ನಡಿಗರು ಈ ಸ್ಥಳಕ್ಕೆ ಅರು ದೊರೆಯಲಿಲ್ಲವೆ ? ಕರ್ನಾಟಕವು ಬಂಜೆಯಾಯಿತೇ ?

ಈ ವರ್ಷದಲ್ಲಿ ಮೈಸೂರ ಸಂಸ್ಥಾನದ ರೇಲ್ವೆಗಳಿಂದ ೩೫ ಲಕ್ಷ ರೂಪಾಯಿ ಯ ಲಾಭವಾಗಿದೆ ಕಳೆದ ವರ್ಷಕ್ಕಿಂತ ೭೩ ಸಾವಿರ ರೂ. ಹೆಚ್ಚು ಲಾಭವಾದಂತಾಯಿತು.

ರತ್ನಗಳನ್ನ ಕದಿಯುವದರಲ್ಲಿ ಹೆಸರಾದ ಬೆಂಗಳೂರಿನ ಅಬುದಲ್ ಸತ್ತಾರನಿಗೆ ೧॥ ವರ್ಷದ ಕಠಿಣ ಶಿಕ್ಷೆಯಾಗಿದೆ.

ಶಿವಮೊಗ್ಗದಲ್ಲಿ ಹೊಸದಾಗಿ ಒಂದು ಮಸೂತಿಯನ್ನು ಕಟ್ಟುವದಕ್ಕೆ ಮುನಸಿಪಾಲ್ಟಿಯವರು ಅಪ್ಪಣೆ ಕೊಟ್ಟಿರುವದರಿಂದ ಅಲ್ಲಿಯ ಜನಗಳೆಲ್ಲಾ ಅಡ್ವೊಕೇಟ್ ಮ॥ ಬಿ. ಗರುಡಾಚಾರ್ಯರ ಅಧ್ಯಕ್ಷತೆಯಲ್ಲಿ ಸಭೆ ಸೇರಿ, ಅಲ್ಲಿ ಮಸೂದಿಯನ್ನು ಕಟ್ಟಿಸುವದರಿಂದ ಮುಂದೆ ಜಗಳಕ್ಕೆ ಕಾರಣವಾಗುತ್ತದೆಯಾದಕಾರಣ ಅಪ್ಪಣೆಯನ್ನು ಕೊಡಕೂಡದಾಗಿ ಶ್ರೀಮ.. ಮಹಾರಾಜರವರನ್ನು ತಾರಿನ ಮೂಲಕ ಪ್ರಾರ್ಥಿಸಿಕೊಂಡಿದ್ದಾರೆ

ನಿಝಾಮ ಕ.. ..ರ್ಟಕ

ನ.. ..ೂ. ಕೇಶವರಾಯರು ಮಧು ಮೇಹದಿಂದ ಪೀಡಿತರಾಗಿದ್ದರು. ೬ ..ದರಾಬಾದಿನಲ್ಲಿ ಇವರಿಗೆ ಶಸ್ತ್ರಕ್ರಿಯೆಯು ಮಾಡಲ್ಪಟ್ಟಿ..ರು. ಈಗ್ಗೆ ಗುಣವಾಗಿದೆ.

ನಿಝಾಂ ಸಾಹೇಬರಿಗೆ ಇಷ್ಟುದಿನ ವೃತ್ತ ಪತ್ರಗಳದೊಂದೇ ಅಂಜಿಕೆಯಿದ್ದಿತು. ಆದರೆ ಈಗ್ಗೆ ಗ್ರಂಥಗಳನ್ನು ಸಹ ಜಪ್ತ ಮಾಡ ಹತ್ತಿರುವರು. ವಿಚಿತ್ರ ಜೀವನ ಮತ್ತು ಮಹಾರಾಷ್ಟ್ರ ಜ್ಞಾನಕೋಶಗಳು ಸಹ ಸರಕಾರದಿಂದ ಜಪ್ತಮಾಡಲ್ಪಟ್ಟಿವೆ.

ನಿಝಾಮರು ಸಾಹೇಬರು ಗುಲಬುರ್ಗಿಗೆ ಬಂದು ಸಾಂಪ್ರದಾಯದಂತೆ ನಜರಾಣೆಯನ್ನು ಎತ್ತಿಕೊಂಡು ಹೋದರಂತೆ !

ಹಿಂದುಸ್ತಾನ.

ಶ್ರೀ ವಿಶ್ವೇಶ್ವರಯ್ಯನವರು ಮುಂಬಯಿಯ ಸಮುದ್ರ ಹುಗಿಯುವ ಚೌಕಸಿ ಮಂಡಳದ ಸಭಾಸದರಾಗಿ ನೇಮಿಸಲ್ಪಟ್ಟಿದ್ದಾರೆ.

ಪುಣೆಯ ಮುನಸಿಪಾಲ್ಟಿಯವರು ವಾಯಿಸರಾಯರಿಗೆ ಮಾನಪತ್ರವನ್ನು ಕೊಡಬಾರದಾಗಿ ನಿರ್ಣಯಿಸಿದ್ದಾರೆ.

ಗೋಳೀ ಬಾಂಬ ಪ್ರಕರಣದ ಬಗ್ಗೆ ೧೨ ಜನರು ಕೈದು ಮಾಡಲ್ಪಟ್ಟಿರುವರು.

ಹಿಂದೂ ಮುಸಲ್ಮಾನರು ಬಡಿದಾಡಬಾರದೆಂದು ವಾಯಿಸರಾಯರು, ಲೋಕನಾಯಕರಿಗೆ ಉಪದೇಶ ಮಾಡಿದ್ದಾರೆ. ಹಿಂದುಸ್ಥಾನದ ರಾಜಕಾರಣದ ಹಣೇ ಬರಹವು !

ಪರದೇಶ.

ರಸಿಯಾದವರು ಹಿಂದುಸ್ಥಾನದ ಮೇಲೆ ದಾಳಿ ಮಾಡಬೇಕೆಂದು ವಿಚಾರಿಸುತ್ತಲಿದ್ದಾರೆ.

ಜಪಾನದ ಗವರ್ನರರ : ಬೋರಿಯೋದ ಜನರು ಸಾಗಿ ಹೋಗಿ, ಅವರನ್ನು ಘಾಯ ಪಡಿಸಿದರು.

ಕೇವಲ ಕನ್ನಡಿಗರ ಸಲುವಾಗಿ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡತಕ್ಕಂಥ—

ಕನ್ನಡಿಗರ ಸಲುವಾಗಿ

ಮೋಟರವರ್ಗ.

ನಮ್ಮಲ್ಲಿ ಮೋಟರ ನಡೆಸುವದು, ಬಿಚ್ಚಿ ಕೂಡಿಸುವದು ಮತ್ತು ಒಳಗಿನ ಯಂತ್ರಗಳನ್ನು ದುರಸ್ತ ಮಾಡುವದು ಮುಂತಾದ ಎಲ್ಲ ಮಾಹಿತಿಯನ್ನು ಕನ್ನಡನುಡಿಯಲ್ಲಿಯೇ ಕೊಡುವದರಲ್ಲಿ ಬರುವದು. ಆದ್ದರಿಂದ ಕನ್ನಡಿಗರಿಗೆ ನಮ್ಮ ವರ್ಗದಿಂದ ಬಹಳೇ ಲಾಭ ವಾಗುವದು.

ಕೋರ್ಸ:— ಕೇವಲ ಒಂದೇ ತಿಂಗಳ. "ಡ್ರೈವರ್" ಕಲಿಯಲಿಕ್ಕೆ ಫೀ ೭೦ ರು.

"ಡ್ರೈವರ್" ಮತ್ತು "ಇಂಗ್ಲೀಶ" ಕೂಡಿ ಫೀ ೮೦ ರು. **ಮಾಹಿತಿ ತರಿಸಿಕೊಳ್ಳಿರಿ.**

ವಿಳಾಸ:— ಮ್ಯಾನೇಜರ ಕುಲಕರ್ಣಿ ಮೋಟರ ಸ್ಕೂಲ.

೪೫೫ ಶನಿವಾರ ಪೇಟೆ ಜಮಖಂಡಿಕರವಾಡೆ. ಪುಣೆಶಹರ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರ್ಯಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಕನ್ನಡ ಗೆಳೆಯರ ಗುಂಪಿನ ಮಾಸ ಪತ್ರಿಕೆ

ಸ್ವಧರ್ಮ.

ಸಂಪಾದಕ:— ದ. ರಾ. ಬೇಂದ್ರೆ. ಬಿ ಎ.

ಸಮಾಜದಲ್ಲಿ ಶಾಂತಿ ಪುಷ್ಟಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳಗಿಗೆ ಸುವಿಚಾರವೇ ಸರಿಯಾದ ಸಾಧನ. ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ಹೆಣಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೆಕೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ. ವಾರ್ಷಿಕ ವರ್ಗಣಿ. ೩.೦-೦

ಕಾರ್ಯದರ್ಶಿ. ಸ್ವಧರ್ಮ ಕಾರ್ಯಾಲಯ

ಮಾಳಮಡ್ಡಿ ಧಾರವಾಡ

AWAKE ! AWAKE ! AWAKE !

GOLDEN CHANCE.

IMITATION WHITE DIAMONDS.

14 Sample set 6 Kanats.	Rs. 10/-
14 Sample Cut Rubies 8 Kanats.	Rs. 4/-
Silky Muslins with fine borders yards 12, sufficient for 6 Shirts	Rs. 7/8/-
Sample Shirts 3	Rs. 5/-

Apply to English correspondence of:—

A. S. M. Chetty, & Co.

CHICACOLE. Ganjam Dist

Price List Free.

ಅಪೂರ್ವ ಸಂಧಿ.

S.U.N.&CO. BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೆ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೋಡಿ ೧ಕ್ಕೆ ರೂ. ೨೫ ರಿಂದ ೩೦-೫೦-೧೦೦ರ ವರೆಗೆ. ಉಡುವ ಮೊಗಟ ಮೊಳ ೬-೭-೮-೧೦-೧೨ ೧೮ ಮೊಳಗಳು; ಇದು ಮೊಳ ೧ಕ್ಕೆ ೨ರೂ. ಯಿಂದ 2½ರೂ. ವರೆಗೆ. ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಕಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಕಾಳುಗಳು, ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೦ ರವರೆಗೆ ೧೧-೧೨-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೩೦ ರವರೆಗೆ ೧೪ ಮುಖದ ಕಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪-೮-೦ ನಾಲ್ಕು ಕೋಟಿಗೆ ಸಾಕಾಗುವಷ್ಟು ರೇಶ್ಮೆ ಕೋಟಿಂಗ ಶಿಲ್ಕು ಥಾನು ೬ ಗಜ ಉದ್ದ ೩ ಗಜ ಅಗಲುಳ್ಳ ಥಾನುಗಳಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಬೀಳುವದು.

ವಿಳಾಸ:– ಶಿರೋಮಣಿ ನಾರಾಯಣಾಚಾರ್ಯ ಕಂಪನಿ,

ಕಾಶೀ ಬನಾರಸ್.

ಗುಬ್ಬಿಶ್ರೀಚನ್ನಬಸವೇಶ್ವರನಾಟಕಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ.
ಪ್ರೊಪ್ರಾಯಿಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ. ೫೬೦ ಮಿ. ವಿಠ್ಠಲ ಚಿಮ್ಮಾಜಿ ಸೇಟ ಕಲಾನ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೬೦೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕುರು.)

(೩) ಬಾಂಡ ನಂ. ೧೯೯೪೬ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. R. C. ಬಾಂಡ ನಂ. ೧೮೭೩ ಮಿ|| ಜಿ. ವೆಂಕಟಪ್ಪಾ ವ್ಯಾಪಾರಿ ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ. ೨೫೦ ಮಿ|| ರಾಮಚಂದ್ರ ವಾಮನ ಶಾಂಕರ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋದಾ)

(೬) ಬಾಂಡ ನಂ. ೧೨೪೦ ಮಿ|| ಆರ್. ಎಚ್. ನಾಟಿಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎನ್. ಆರಾಧ್ಯ
ಚೀಫಏಜಂಟ (ಮುಂಬಯಿ ಇಲಾಖಾ.)

ವಿಶ್ವಕರ್ಣಾಟಕ.

ಬೆಂಗಳೂರ ಸಿಟಿ

ಅಂದವಾದ ಮುದ್ರಣ, ಮಾರ್ಮಿಕ ವಿಷಯ ವಿಮೋಚನೆ, ಹಾಗೂ ಸುಲಭ ಬೆಲೆಯುಳ್ಳ ಕನ್ನಡ ವಾರಪತ್ರಿಕೆ.

ವರ್ಷಕ್ಕೆ ರೂ. ೨-೮-೦

ಕನ್ನಡಿಗರೇ ಚಂದಾದಾರರಾಗಿ

ವೈಸೂರಿಲ್ಲಿಯ ಒಂದೇ ಒಂದಾದ ಕರ್ನಾಟಕ ರಾಷ್ಟ್ರೀಯ ವಾರಪತ್ರಿಕೆಗೆ ಪ್ರೋತ್ಸಾಹ ಕೊಡಿ.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪ್ರತ್ಯೇಕ

ಟಿಪ್ಪಣಿ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COMPANY.

Apply for full particulars to-

N. K. Kulkarni. Agent Bagalkot.

ಶಿಲಾಲಿಪಿಗಳನ್ನು ಓದಬೇಕೆನ್ನುವಿರೋ?

ಬೇಕಾದವರು ನಮ್ಮ ಕಡೆಗೆ ೬ ಬಿಲ್ಲೆಯ ಪೋಸ್ಟ ಟಿಕೀಟು ಕಳುಹಿಸಿ, ಶಿಲಾ ಲಿಪಿಯ ಅಕ್ಷರಗಳನ್ನು ಕಲಿತುಕೊಳ ಬಹುದು. ಇಂಥ ಸುಸಂಧಿಯನ್ನು ಕಳೆದುಕೊಳ್ಳಬಾರದು

ವಿಳಾಸ:— "ಗೆಳೆಯರ ಗುಂಪು" ಹಲಸಂಗಿ.
ಜಿಲ್ಲಾ ವಿಜಾಪೂರ.

ಹಳೇ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ದಿ. ಗರೆವಾರೆ

ಮಾಧವಾಶ್ರಮ ಮುಂಬೈ ನಂಬರ ೪

ಬಾಗಲಕೋಟೆಯ ಏಜಂಟರು ಮಂಗಳವೇಢೆ ಬಂಧುಗಳು
ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಕ್ತ ಶುದ್ಧಿ

ಮತ್ತು

ಬಲವಂತ

ಗುಟಿಕಾ.

ಈ ಬಲವಂತ ಗುಟಿಕೆಯು ಉತ್ತಮ ವನಸ್ಪತಿ ಚೂರ್ಣ ದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿಸಿ ದೇಶೀಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮ ಮತ್ತು ಕೆಮ್ಮು ವಗೈರೆ ವಿಕಾರಗಳೂ ಜಾಗ್ರತೆಯಿಂದ ನಾಶಿಯಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಮೈಯ್ಯೊಳಗಿನ ಗರಮಿಯು ಎಲ್ಲಾತರದ ವಿಕಾರಗಳು ನಾಶವಾಗುವದಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಉಪಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೬-೦-೦; ಇದಲ್ಲದೆ ೧ ಡಬ್ಬಿಯ ಕಮಿಶನ್ನು ಸಿಗುವದು.

ವಿಳಾಸ—

ಎಸ್. ಬಿ. ಕದಮ್ ಮತ್ತು ಸನ್ಸ್,

ಮು. ಪೋಸ್ಟ-ನಿಪ್ಪಾಣಿ, (ಬೆಳಗಾಂವ್)



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸ ಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ತೊಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ರೋಲ್ಡ್ ಗೋಲ್ಡ್ ಎಂಟು ಮೂಲೆ ಕೈಗಡಿಯಾರ.

ಈ ಕೈಗಡಿಯಾರವು ಬಂಗಾರಕ್ಕೆ ಸರಿಸಮಾನವಾಗಿದೆ. ಸರಿಯಾದ ಗಂಟೆಯನ್ನು ತೋರಿಸುವದು ಅತ್ಯುತ್ತಮವಾದ ಗಟ್ಟಿ ಸಾಮಾನುಗಳಿಂದ ತಯಾರಿಸಿದ್ದು ಅವಕ್ಕೆ ೩ ವರ್ಷಗಳ ಗ್ಯಾರಂಟಿ ಕೊಡುವೆವು

ಕ್ರಯ ೧ಕ್ಕೆ ರೂ. 7-2-0.

12 ರೋಜ ಸೆಂಟ್ ಬಾಟಲ್‌ಗಳು ಇನಾಂ.

ಬೆಸ್ಟ್ ಫೌನ್‌ಟನ್ ಪೇನಾ.

ಈ ಪೇನಾವು ಸೀಮೆಯಲ್ಲಿ ತಯಾರಾದದ್ದು. ಇದಕ್ಕೆ ಒಂದಾವರ್ತಿ ಇಂಕಿಯನ್ನು ಹಾಕಿದರೆ ಸುಮಾರು 1000 ಶಬ್ದಗಳ ವರೆವಿಗೂ ಬರೆಯುವದು. 14 ಕ್ಯಾರೆಟ್ಟ ಬಂಗಾರದ ಪಾಯಿಂಟ್ ಇರುತ್ತದೆ. ಇದನು ಈ ತಿಂಗಳೊಳಗಾಗಿ ತರಿಸಿಕೊಳ್ಳುವವರಿಗೆ 12 ರೋಜ್ ಸೆಂಟ್ ಬಾಟಲ್ ಇನಾಮವಾಗಿ ಕೊಡುವೆವು ಕ್ರಯ ಪೇನಾ ೧ಕ್ಕೆ 2-0-0

ವಿಳಾಸ— ಎಸ್. ಪಾಲ್ ಅಂಡ್ ಕೊ,

ಪಿ. ಬಿ ನಂಬರ್. 542,

ಪಾರ್ಕ್‌ಟೌನ್ ಮದ್ರಾಸು.

ಅಪರೋಕ್ಷಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣಲೀಲಾಮೃತ ಬೆಲೆ ೮ ಆಣೆ
೨ ದ್ವಿತೀಯ ಪುಷ್ಪ, ತಾರತಮ್ಯಸ್ತೋತ್ರಯುಕ್ತ ಮುಖ್ಯದ ಪದ ಬೆಲೆ ೮ ಆಣೆ
೩ ತೃತೀಯ ಪುಷ್ಪ ಕನ್ನಡ ವಾಯುಸ್ತುತಿ ಬೆಲೆ ೫ ಆಣೆ ಭಾಮಿನಿ ಷಟ್ಪದಿ ರೂಪವಾಗಿ,

ಶ್ರೀ ಪ್ರಾಣೇಶ ವಿಠ್ಠಲರ ಅನೇಕ ಪ್ರಮೇಯ ಪ್ರಮಾಣ ಯುಕ್ತ ೩೪೦ ಪದಗಳು ಅಚ್ಚಿನಲ್ಲಿ ಅವೆ. ಹೆಚ್ಚಿನ ಸಂಗತಿಗಳಿಗಾಗಿ ಪತ್ರ ಬರೆಯಬೇಕು.

ಹಣಮಂತರಾವ ವಕೀಲ ಗೋರಾಬಾಳ

ಲಿಂಗಸೂಗೂರ ಪೋಸ್ಟ ಜಿ. ರಾಯಚೂರ, ನಿಜಾಂ

॥ ಶ್ರೀ ॥

ತ್ವರೆಮಾಡಿರಿ! ಅಡಚಣಿಯು ದೂರಾಯಿತು!!

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಯು ಈ ಊರಲ್ಲಿ ದೊರೆಕಡೆಗೆ ತಿಗರಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಗಲ ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಲಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟೆ ೨೧-೬-೨೬ } **ಬಿಂದುರಾವ ಟಂಕಸಾಲಿ** ಡಾಕ್ಟರ,





The Cheapest House.

1 For quick, Economical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the welknown Michelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specialist to give satisfactory work,

6 For Building motor bodies of various types by workers onin uptodate line·

7 For all kinds of motor repairs,

Apply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ

ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ವ್ಹೋವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟ್ಯುಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟ್ಯುಬುಗಳ ಖರೀದಿಗಾಗಿ

ಎಲ್ಲ ಸಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

ಎಲ್ಲ ತರಹದ ಟ್ಯೂಬು ಟಾಯರಗಳ ರಿಪೇರಿಗಾಗಿ.

ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಿಸಲಿಕ್ಕೆ,

ಎಲ್ಲ ತರಕದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.

ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ

ಮೋಟಾರುಗಳಿಗೆ ಸಬ್ ಏಜಂಟರು.

[illegible]

([illegible])
ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು
ಸಂಪಾದಕರು— ಮಂಗಳವೇಢೆ ರಾಜೇಂದ್ರರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ [illegible] ಬಹುಳ ೬ ಶಕೆ ೧೮೬೮ ತಾ|| ೨೦ ೬-೧೯೪೭. | [illegible]

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೋಡವನಿಡಿ ಕಟ್ಟುವೆನಾನು।
ನಿನ್ನ ಬೆಸನದ ವನಾಡಿದಂತ ಮಕ್ಕಳ ದೊರೆ।
ಚಿನ್ನದಾದರು ಚಿನ್ನ ಮಣಿಬಿತ್ತಿಯು ನೋಡದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಶೀಲದಾಸನಕಾಗಿ।
ತನ್ನನ್ನು ಕಲ್ಲಾಗಿ [illegible] ಸಿದ್ಧಪಡಿ।
ನನ್ನ ಪ್ರಾಣವು ನಿನ್ನ ಗಂಧವನು [illegible] ಗಂಧವನವೆಂದು [illegible].

— [illegible]

ಕರ್ನಾಟಕ ವಿಶ್ವವಿದ್ಯಾಲಯದ ಒಗ್ಗೆ [illegible] ಮತ್ತೆ ಸ್ವಲ್ಪ [illegible] ತೋರುತ್ತದೆ ದಕ್ಷಿಣ [illegible] ಸ್ಥಾನದಲ್ಲಿಯ ಪ್ರತಿಯೊಂದು ದೇಶಭಾಷೆಯವರಿಗೆ ಸ್ವತಂತ್ರ ವಿಶ್ವವಿದ್ಯಾಲಯವು ದೊರೆತಂತಾಗಿದೆ. ಅಥವಾ ದೊರೆಯುವ ದಿನಗಳು ಸಮೀಪಿಸಿವೆ. ಆಂಧ್ರಕ್ಕೆ ದೊರೆತದ್ದು ಹಳೆಯ ಮಾತಾಯಿತು. ಇತ್ತ ಮಹಾರಾಷ್ಟ್ರ [illegible] ಸ್ಥಾಪನೆ ರಚನೆಗಳ ಬಗ್ಗೆ ಚರ್ಚಿಸುತ್ತಲಿದ್ದಾರೆ. ಗುಜರಾತಿನಲ್ಲಿಯು ಶ್ರೀಮಂತರು, ಮುಂದಾಳುಗಳು, [illegible], ಮಹಾರಾಜರು ಕೂಡಿಕೊಂಡು, ಗುಜರಾತ ವಿಶ್ವವಿದ್ಯಾಲಯ [illegible] ಸ್ಥಾಪಿಸಿಯೇ ತೀರುವೆವೆಂದು ಪಣತೊಟ್ಟಿದ್ದಾರೆ. [illegible] ದಕ್ಷಿಣದಲ್ಲಿಯ ತಮಿಳರ ಚಳವಳವು ಸರಕಾರಕ್ಕೆ ಸಹ ಗೊತ್ತಾಗಿ, ಈಗ್ಗೆ ತಮಿಳ ದೇಶದಲ್ಲಿಯು [illegible] ಜನರ ಅಭಿಪ್ರಾಯವನ್ನು ತಿಳಿದುಕೊಳ್ಳುವದಕ್ಕಾಗಿ, ಸರಕಾರದವರು ತಾವೇ ಪ್ರಶ್ನೆ ಮಾಲಿಕೆಯನ್ನು ಹೊರಡಿಸಿ, ತಮಿಳ ದೇಶದಲ್ಲಿ ಎಲ್ಲರ ಕಡೆಗೂ ಕಳಿಸಿದ್ದಾರೆ. ಹೀಗೆ ಕರ್ನಾಟಕದ ಸುತ್ತಲೆಲ್ಲ ಎಲ್ಲಿ ನೋಡಿದರೂ, [illegible] ಜನಕವಾದ ಪ್ರಯತ್ನಗಳು ತಲೆದೋರುತ್ತಿದ್ದು ಸ್ಪಷ್ಟವಿದೆ. ಆದರೆ ಕರ್ನಾಟಕದವರಿಗೆ ಈ ಗಾಳಿಯು ಸೋಂಕದಿರುವದು ಆಶ್ಚರ್ಯಕರವಾದುದು. ಸಾಹಿತ್ಯ ಪರಿಷತ್ತು ಈ ವಿಷಯದಲ್ಲಿ ಹೇಗೆ ಮುಂದೊರೆಯುತ್ತಿದೆಂಬುದು ಅರಿಗೂ ತಿಳಿಯದು. ಈ ಒಗ್ಗೆ [illegible] ಕವಾದ ಮಂಡಲವು ಏನು ಮಾಡುತ್ತಲಿದೆ? ಅವರು ಮಾತನಾಡುವರೋ? ಇನ್ನು, ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳು ಅನೇಕ ಕಡೆ [illegible] ಬದ್ಧವಾಗಿವೆ. ಆದರೆ ಈ ಸಂಸ್ಥೆಗಳು, ತಮಗೆ [illegible] ವಿಶ್ವವಿದ್ಯಾಲಯದ ಬಗ್ಗೆ ಸಮ್ಮಂಧಪಟ್ಟ ಪ್ರಸಂಗದಲ್ಲಿ [illegible] ಪ್ರಯತ್ನ ಮಾಡಬಾರದೆಂದರೆ ಈ ಸಂಸ್ಥೆಗಳ [illegible] ಸಿದ್ಧನಾಗುತ್ತದೆ. ಗುಜರಾಥದಲ್ಲಿ [illegible] ಮಹಾರಾಜ[illegible]ರಿಂದ, ಹಾಯಸ್ಕೂಲಿನ ಶಿಕ್ಷಕರ ವರೆಗೆ ಎಲ್ಲರೂ ಈ ಕಾರ್ಯದಲ್ಲಿ ಪ್ರಯತ್ನಿಸುತ್ತಿರುವರು. ಕರ್ನಾಟಕದಲ್ಲಿ ಮಾತ್ರ [illegible] ನಾಲ್ಕಾರು ಜನ ಮುಂದಾಳುಗಳೂ [illegible], [illegible] ಪತ್ರಿಕಾಕಾರರೂ [illegible] ಮಾತನಾಡುವರು, ಅಥವಾ ಲೇಖ ಬರೆಯುವದು ಕಂಡು ಬರುವದು. ಅಂತೂ [illegible] ಮಾತ್ರ [illegible] ತಲ್ಲಿಯೇ ನಿಂತಿದೆ. ಈಗಲಾದರೂ ಶಿಕ್ಷಣ ಸಂಸ್ಥೆಗಳು ಎಚ್ಚರಿಯಬೇಕು.

ಕರ್ನಾಟಕ ಏಕೀಕರಣದ ಚಳವಳದ [illegible] ಸ್ಥಿತಿಯಾದರೂ ಸಮಾಧಾನಕರವಾಗಿಲ್ಲ. ಈ ಸಂಸ್ಥೆಯು ಸ್ಥಾಪನೆಯಾಗಿ ಎರಡು ವರ್ಷಗಳಾಗುತ್ತ ಬಂದವು. ಆದರೂ ಕಾರ್ಯವು [illegible] ಗಿ ಸಾಗಲೊಲ್ಲದು. ಏಕೀಕರಣದ ಕಾರ್ಯವು ಹೀಗೆ ಸಡಿಲಾಗಿ ನಡೆದರೆ ಕರ್ನಾಟಕದ ಭಾಗ್ಯೋದಯದ ದಿನಗಳು ಬಹು ದೂರವೆಂದೇ ಎನ್ನಬೇಕಾಗುತ್ತದೆ. ಈಗ್ಗೆ ನಾಗಿದ ಹಾಗೆಯೇ ಏಕೀಕರಣದ ಕಾರ್ಯವು ಕುಂಟುತ್ತ ನಡದರೆ ಕರ್ನಾಟಕವು [illegible] ಕಾಲದವರೆಗೆ [illegible] ಉಳಿದಂತೆ, [illegible] ಮಾಡುವ ಹಿಡಿತವು, ಅದರಲ್ಲಿ [illegible] ಉಂಟಾಗುವದು. ಯಾಕಂದರೆ, ಕರ್ನಾಟಕದಲ್ಲಿದ್ದ [illegible] ಚಳವಳಿಗೂ, ಏಕೀಕರಣದ ಚಳವಳಿಗೂ [illegible] ಕಾಂಗ್ರೆಸ ಚಳವಳಿಯಲ್ಲಿ ಲಂಚಕೊಳ್ಳುವ ಭಾಗ [illegible] ಕರ್ನಾಟಕದಲ್ಲಿದ್ದಾರೆ. ಕಾಂಗ್ರೆಸದ ಧೋರಣೆಯನ್ನು [illegible] ರೆ ಸ್ವಯಂ ಸೇವಕರ ಚಳವಳಕ್ಕೆ [illegible] ಸಾಹಿತ್ಯ ಪರಿಷತ್ತಿನವರ [illegible] ಮನಸ್ಸು ಮಾಡಲಿಕ್ಕೆ ಸಿದ್ಧರಿಲ್ಲ; ಎನ್ನುವವರು [illegible], ಕನ್ನಡದವರಿಂದ ಆ ಚಳವಳದ [illegible] ಬೇಕೆಂದೂ ಹೇಳುವವರು [illegible] ವಿಶ್ವವಿದ್ಯಾಲಯದ ಮಾತಿನಲ್ಲಿಯಂತೂ [illegible] ಏಕೀಕರಣದ ಪ್ರಶ್ನೆಯು ಹಾಗಲ್ಲ. [illegible] ಬ್ರಾಹ್ಮಣ ಬ್ರಾಹ್ಮಣೇತರ ಒಡೆದಾಟದ ಪ್ರಶ್ನೆಯು [illegible]. [illegible] ಕಾರಣವೂ ಇದರಲ್ಲಿಲ್ಲ. ಇದು ಎಲ್ಲರಿಗೂ [illegible] ವಾಗಿದೆ. ಇಂತಹ ಪ್ರಶ್ನೆಯನ್ನು ಕನ್ನಡಿಗರು ಸಮ್ಮತಿ[illegible]ಗಿ ಬಿಡಿಸಲು ಪ್ರಯತ್ನಿಸದಿದ್ದರೆ, ಕರ್ನಾಟಕವು ಸಜೀವವಾದ [illegible] ವು ಸುಳ್ಳಾದುದೆನ್ನಬೇಕಾಗುತ್ತದೆ. ಏಕೀಕರಣ ಸಭೆಯವರು ಕೂಡ ಜಾಗ್ರತರಾಗಬೇಕು. ಸನ್ಮಾನಿತ ಕಾರ್ಯಕರ್ತರಿಂದ ಈ ಕೆಲಸವು ಸಾಗದು. ಯಾಕಂದರೆ ಬೇರೊಂದು ವ್ಯವಸಾಯದಲ್ಲಿ

ರೊಡಕೊಂಡಿದ್ದವರಿಗೆ, ಮೊದಲು ತಮ್ಮ ಮುಖ್ಯ ಕರ್ತವ್ಯವಾದ ಹೊಟ್ಟೆಯ ಉದ್ಯೋಗವನ್ನು ಸಾಗಿಸಬೇಕಾಗುವದು. ಆದರಲ್ಲಿಯೇ ಅವರ ಉತ್ಸಾಹ, ವೇಳೆಗಳು ಹೆಚ್ಚಾಗಿ ಹೋಗುವವು. ಈಗ್ಗೆ ಏಕೀಕರಣದ ಚಳವಳವನ್ನು ರಭಸದಿಂದ ಸಾಗಿಬೇಕಾಗಿದ್ದರಿಂದ, ಸನ್ಮಾನಿತ ಕಾರ್ಯದರ್ಶಿಗಳ ಹೊರತಾಗಿ, ವೇತನದ ಒಬ್ಬಿಬ್ಬ ಪ್ರಚಾರಕರನ್ನು ನೇಮಿಸಬೇಕು. ಆದುದರಿಂದ ಏಕೀಕರಣ ಸಭೆಯವರು ಕೂಡಲೇ ಕಾರ್ಯಕಾರಿ ಮಂಡಲವನ್ನು ಕರೆದು ಈ ಬಗ್ಗೆ ಯೋಗ್ಯ ಏರ್ಪಾಡು ಮಾಡಬೇಕಾಗಿ ಆಗ್ರಹಪಡುತ್ತೇವೆ.

ಸರಕಾರವೆಂದರೆ ಜನರ ಹಿತಾಹಿತಗಳನ್ನು ವಿಚಾರಿಸಿ, ಆ ಬಗ್ಗೆ ಯೋಗ್ಯ ವ್ಯವಸ್ಥೆ ಮಾಡತಕ್ಕ ಸಂಸ್ಥೆಯು. ಇದಕ್ಕಾಗಿಯೇ ಪ್ರಜೆಗಳೆಲ್ಲ ಕಂದಾಯ, ತೆರಿಗೆಗಳ ಮೂಲಕ ಸರಕಾರದ ಬೊಕ್ಕಸವನ್ನು ತುಂಬುವರು. ರಾಜನೆಂದರೆ ಪ್ರಜೆಗಳ ಪ್ರತಿಬಿಂಬನಾಗಿರತಕ್ಕವನು. ಆದರೆ ನಮ್ಮ ಈಗಿನ ದಯಾಳು ಬ್ರಿಟಿಶ ಸರಕಾರಕ್ಕೆ ಈ ಬಗೆಯ ತಾತ್ವಿಕ ವಿವೇಚನೆಗಳ ವಿಚಾರಗಳು ಬೇಕಿಲ್ಲವೆಂಬುದು ಪ್ರತಿಕ್ಷಣದಲ್ಲಿಯೂ ಕಂಡು ಬರುತ್ತಲಿದೆ. ಇದಕ್ಕೆ ಮತ್ತೆ ಹೊಸದೊಂದು ಉದಾಹರಣೆಯು ಬೇಕಾಗಿದ್ದರೆ ಸಿದ್ಧವಿದೆ. ಕರ್ನಾಟಕ ಏಕೀಕರಣ ಚಳವಳವು ಪ್ರಾರಂಭವಾಗಿ ೧೦—೧೨ ವರ್ಷಗಳಾದವು. ಈ ೨ ೩ ವರ್ಷಗಳಲ್ಲಿಯಂತೂ ಈ ವಿಷಯವು ಚರ್ಚಾಚರ್ವಣವಾಗಿದೆ. ಮುಂಬೈ ಕೌನ್ಸಿಲ್ಲದಲ್ಲಿ ಸಹ ಪ್ರಶ್ನೆಗಳು ಹೊರಟಿವೆ. ಆದರೂ ಮುಂಬೈ ಸರಕಾರಕ್ಕೆ ಕರ್ನಾಟಕ ಏಕೀಕರಣದ ವಿಷಯದ ಸುದ್ದಿ ಹತ್ತಿಲ್ಲವಂತೆ! ಯಾವದರೊಂದು ಕ್ಷುದ್ರಪತ್ರವು ಆವುದೋ ಒಂದು ಮೂಲೆಯಲ್ಲಿ ಕುಳಿತು, ಸರಕಾರದ ವಿಷಯಕ್ಕೆ ಬಲವತ್ತರವಾದ ಟೀಕೆಗಳನು ಬರೆದರೆ, ಅದು ಮಾತ್ರ, ಕೂಡಲೇ ಸರಕಾರಕ್ಕೆ ಗೊತ್ತಾಗುತ್ತದೆ; ಆ ಪತ್ರಿಕೆಯ ಸಲುವಾಗಿ ಕಲಮು ೧೨೪ (ಅ) ಸಿದ್ಧವಾಗುತ್ತದೆ. ಆದರೆ ಕರ್ನಾಟಕದ—ಮುಂಬೈ ಕರ್ನಾಟಕವಿಷ್ಟೇ ಅಲ್ಲ; ಮದ್ರಾಸ, ಮೈಸೂರ, ಕೊಡಗು, ನಿಜಾಮ ಕರ್ನಾಟಕಗಳಲ್ಲಿಯ—ಮುಖಂಡರೂ, ಪತ್ರಿಕೆಗಳೂ ಈ ಏಕೀಕರಣದ ಬಗ್ಗೆ, ಬ್ರಾಹ್ಮಣ-ಬ್ರಾಹ್ಮಣೇತರ, ಉಗ್ರಪಕ್ಷ-ಸೌಮ್ಯಪಕ್ಷ ವೆಂಬ ಯಾವ ಬಗೆಯ ಭೇದವನ್ನಿಡದೇ, ಏಕಕಂಠದಿಂದ ಒತ್ತಿ ಒತ್ತಿ ಸರಕಾರಕ್ಕೂ ಜನತೆಗೂ ಹೇಳುತ್ತ ಬಂದಿದ್ದರೂ, ಈ ಚಳವಳದ ಸದ್ದು ತಮಗಿಲ್ಲವೆನ್ನುವದು ನಗೆ ಬರುವಂತಹದಾಗಿದೆ. **ಪ್ರಾಂತಿಕ** ಸರಕಾರಗಳ ರಾಜಧಾನಿಯಲ್ಲಿ ತಿಂಗಳೊಂದಕ್ಕೆ ಯಥೇಷ್ಟವಾದ ಸಂಬಳನ್ನು ಸಲ್ಲಿಸಿ, ವೃತ್ತಪತ್ರಿಕೆಗಳಲ್ಲಿಯ ಮತವನ್ನು ಸರಕಾರಕ್ಕೆ ಅರುಹಬೇಕೆಂದು ನಿಯೋಜಿತವಾದ ಭಾಷಾಂತರ ಶಾಖೆಯವರಿಗೆ, “ನೀವು ಕಲಮು ೧೨೪ (ಅ) ಕ್ಕೆ ಒಳಪಡುವಂತಹ ಲೇಖಗಳನ್ನು ಮಾತ್ರ ನಮಗೆ ತಿಳಿಸಿರಿ; ಏಕೀಕರಣ-ಪಾಕೀಕರಣದಂತಹ ವಿಷಯಗಳನ್ನು ನಮ್ಮ ಕಿವಿಯ ವರೆಗೆ ತರಬೇಡಿ” ಎಂಬದಾಗಿ ಗುಪ್ತವಾದ ಹುಕುಮನ್ನು ಹೊರಡಿಸಿದ್ದರೆ, ಹೊರಗಿನವರಾದ ನಮಗೆ ತಿಳಿಯದು; ಹೀಗೆ ಹುಕುಮು ಹೊರಡದೇಯಿದ್ದರೆ ಕರ್ನಾಟಕ ಏಕೀಕರಣದ ಪ್ರಶ್ನೆಯ ಗಂಧವು ಕೂಡ ಮುಂಬೈ ಸರಕಾರಕ್ಕೆ ತಿಳಿಯದೇ ಹೇಗೆ ಹೋಯಿತೆಂಬುದನ್ನು ಅವರೇ ಅರುಹಬೇಕು. ಇತ್ತ ಏಕೀಕರಣ ಸಭೆಯವರು ನಾವು ಮೇಲಿನ ಸ್ಫುಟ ಸೂಚನೆಯಲ್ಲಿ ಉಲ್ಲೇಖಿಸಿದಂತೆ, ಈಗಲಾದರೂ ಎಚ್ಚತ್ತು, ಸರಕಾರವು ತನ್ನ ಕರ್ತವ್ಯವನ್ನು ತಪ್ಪಿಸುವ ಧೋರಣವನ್ನು ಕಂಡು ಹಿಡಿದು, ಕೂಡಲೇ ಒಬ್ಬಿಬ್ಬ ಉತ್ಸಾಹೀ ತರುಣರನ್ನು ವೇತನದೊಂದಿಗೆ ಏಕೀಕರಣ ಪ್ರಚಾರದ ಕಾರ್ಯಕ್ಕಾಗಿ ನಿಯಮಿಸಿ, ಮುಂಬೈ, ಮದ್ರಾಸ, ಕೊಡಗು, ಸರಕಾರಗಳ ಹಾಗೂ, ಹಿಂದುಸ್ಥಾನ ಸರಕಾರದ ಕಿವಿಗಳು ಗಡಚಿಕ್ಕುವಂತೆ ಮಹಾ ಆಂದೋಲನವನ್ನು ಹೂಡುವ ಹಾಗೆ ಏರ್ಪಾಡು ಮಾಡಬೇಕು.

ಹಿಂದುಳಿದ ಜಾತಿಯವರು ತಮ್ಮ ತಮ್ಮ ಮತೀಯರ ಉದ್ಧಾರಕ್ಕಾಗಿ ಪ್ರಯತ್ನಿಸುತ್ತಿರುವದು. ಕರ್ನಾಟಕದ ಜಾಗೃತಿಯ ಚಿನ್ಹವು. ಹೀಗೆ ಕುರುಬರು, ಕಣಿಯರು, ಸಹ ಈಗ್ಗೆ ಪ್ರಯತ್ನಿಸುತ್ತಿರುವರು. ಪ್ರಸ್ತುತದಲ್ಲಿ, ನರಗುಂದ ಪೇಠೆಯ ರಡ್ಡೀ ಜನರು ಮೊನ್ನಿನ ೧೨ ನೇ ತಾರೀಖು ದಿನ ಅರಿಷಣಗೋಡೆಯಲ್ಲಿ ಬಾಗಲಕೋಟೆಯ ಬಿ. ಎ. ಎಲ್. ಎಲ್. ಬಿ. ವಕೀಲರಾದ ಶ್ರೀ. ಬಸವನಗೌಡಾ ಪಾಟೀಲರ ಅಧ್ಯಕ್ಷತೆಯಲ್ಲಿ ತಮ್ಮ ಪೇಠೆಯ ೧ ನೇ ಪರಿಷತ್ತನ್ನು ವಿಜೃಂಭಣೆಯಿಂದ ನೆರವೇರಿಸಿದ ವರದಿಯು ನಮ್ಮ ಹಸ್ತಗತವಾಗಿದೆ. ಪರಿಷತ್ತಿಗಾಗಿ ಸ್ವತಂತ್ರವಾದ ಮಂಡಪವು ವಿಶಾಲವಾಗಿ ಕಟ್ಟಲ್ಪಟ್ಟಿದ್ದರೂ ಜನರ ದಟ್ಟಣೆಯು ವಿಶೇಷವಾಗಿದ್ದುದೂ, ರಡ್ಡೀ ಮತದ ಹಾಗೂ, ಇತರ ಮತದ ಪ್ರತಿಷ್ಠಿತರನೇಕರೂ, ಅಧಿಕಾರಿಗಳೂ ಸಭೆಗೆ ದಯಮಾಡಿಸಿದ್ದೂ, ಈ ಪರಿಷತ್ತಿನ ಮಹತ್ವವನ್ನು ಸೂಚಿಸುತ್ತವೆ. ಕರ್ನಾಟಕದಲ್ಲಿಯ ಹಿಂದುಳಿದ ಜಾತಿಯವರೆಲ್ಲ ಹೀಗೆ ಪ್ರಯತ್ನಿಸಹತ್ತಿದರೆ, ಕರ್ನಾಟಕವು ಬೇಗನೇ ಜಾಗ್ರತವಾಗುವದರಲ್ಲಿ ಸಂದೇಹವಿಲ್ಲ. ಈ ಪರಿಷತ್ತಿನಲ್ಲಿ ೧೩ ಠರಾವುಗಳು ನಿರ್ಣಯಿಸಲ್ಪಟ್ಟಿದ್ದು, ಅವುಗಳಲ್ಲಿ ಮೂರು ಹೆಚ್ಚು ಮಹತ್ವದವಿವೆ. (೧) ನರಗುಂದ ಪೇಠೆಯಲ್ಲಿ ಮಳೆಯು ವಿಶೇಷವಾಗಿ ಬೀಳುವದಿಲ್ಲವಾದ್ದರಿಂದ, ನೀರಿನ ಕಾಲಿವೆಗಳನ್ನು ಬೇಗನೇ ಪೂರೈಸಿಕೊಡಬೇಕೆಂದೂ; (೨) ಕರ್ನಾಟಕದಲ್ಲಿ ಔದ್ಯೋಗಿಕ ಶಾಲೆಗಳನ್ನು ಸ್ಥಾಪಿಸಬೇಕೆಂದೂ, (೩) ರಡ್ಡೀ ಮತೀಯರನ್ನು ಲಿಂಗಾಯತರ ಒಳಭಾಗದವರೆಂದು ಈಗ್ಗೆ ಮುಂಬೈ ಸರಕಾರವು ಗಣಿಸುವದು, ತಪ್ಪಾದುದಾದ್ದರಿಂದ, ನಮ್ಮನ್ನು ಸ್ವತಂತ್ರಮತದವರೆಂದು ಎಣಿಸಿರೆಂದೂ ಮುಂಬೈ ಸರಕಾರಕ್ಕೆ ವಿನಂತಿ. ಈಗಿನ ಸರಕಾರವು ವಿನಂತಿ ಮಾತ್ರದಿಂದ ಆವುದಕ್ಕೂ ಮನ್ನಣೆಯನ್ನೀಯದಾದ್ದರಿಂದ, ಇದಕ್ಕೂ ಹೆಚ್ಚಿನ ಚಳವಳವನ್ನು ಹೂಡಬೇಕಾಗಿ ಈ ಸಮಾಜಕ್ಕೆ ನಮ್ಮ ಸೂಚನೆಯಿದೆ. ಕರ್ನಾಟಕ ಏಕೀಕರಣ ವಿಶ್ವವಿದ್ಯಾಲಯಗಳ ಬಗ್ಗೆ ಈ ಪರಿಷತ್ತಿನವರೂ ತೀರ್ಮಾನುಗಳನ್ನು ಮಾಡಬೇಕಾಗಿತ್ತು. ವ್ಯವಸ್ಥಾಪಕ ಮಂಡಲದವರಾದರೂ ಈ ಬಗ್ಗೆ ಬೇಗನೇ ನಿರ್ಣಯಗಳನ್ನು ಮಾಡಬೇಕು.

ಮೈಸೂರ ಸರಕಾರದ ರೇಲ್ವೇಯವರು ನಂಜನಗೂಡಿನಿಂದ ಚಾಮರಾಜ ನಗರದವರೆಗೆ ಹೊಸ ರೇಲ್ವೇ ಹಾಕಿದ್ದು, ಇದರ ಪ್ರಾರಂಭ ಮಹೋತ್ಸವವು ಶ್ರೀಮನ್ಮಹಾರಾಜರಿಂದ ಬೇಗನೇ ಆಗತಕ್ಕದ್ದಿದೆ. ಹೀಗೆ ಪ್ರಜೆಗಳ ಸೌಕರ್ಯಕ್ಕಾಗಿ ಹೊಸ ರೇಲ್ವೆಗಳನ್ನು ಪ್ರಾರಂಭಿಸುತ್ತಿರುವದು, ಮೈಸೂರಿನಂತಹ ಪ್ರಗತಿಪರವಾದ ಸಂಸ್ಥಾನಕ್ಕೆ ಭೂಷಣವಾದುದೇ. ಆದರೆ, ಈ ಪ್ರಸಂಗದಲ್ಲಿ ಒಂದು ಗಲಭೆಯುಂಟಾದುದು ವಿಹಿತವಾಗಲಿಲ್ಲ. ಈ ರೇಲ್ವೇ ಹಾಕಲು ಬೇಕಾಗಿರುವ ಭೂಮಿಯನ್ನು ರೈತರಿಂದ ಸರಕಾರವು ತೆಗೆದುಕೊಂಡಿತು. ನಿಜವಾಗಿ ಅದೇ ಕಾಲಕ್ಕೆ ಈ ಭೂಮಿಯ ಯೋಗ್ಯವಾದ ಬೆಲೆಯನ್ನು ಗೊತ್ತುಪಡಿಸಿ, ನಗದು ಹಣವನ್ನು ರೈತರಿಗೆ ಸಲ್ಲಿಸಿ, ಈ ಕಾರ್ಯವನ್ನು ಪ್ರಾರಂಭಿಸಬೇಕಿತ್ತು. ಆದರೆ ಆಗಿನ ಅಲ್ಲಿಯ ‘ಡೆಪೂಟೀ ಕಮೀಶನರು’ ನೀವು ಗಾಬರಿಯಾಗಬೇಡಿ; ನಿಮ್ಮ ಭೂಮಿಗೆ ತಕ್ಕದಾದ ಬೆಲೆಯನ್ನು ಸರಕಾರವು ಕೊಟ್ಟೇ ತೀರುವದೆಂದು ರೈತರಿಗೆ ವಚನವನ್ನಿತ್ತು, ಭೂಮಿಯನ್ನು

ವಶದಲ್ಲಿ ತೆಗೆದುಕೊಂಡರಂತೆ. ಈಗ್ಗೆ ರೇಲ್ವೇ ಸಿದ್ಧವಾಗಿದ್ದರೂ, ಬಡ ರೈತರಿಗೆ ಅವರ ಭೂಮಿಯ ಬೆಲೆ ತಲ್ಪಿಲ್ಲವೆಂದೂ, ಯೋಗ್ಯವಾದ ಬೆಲೆ ಕಟ್ಟಲ್ಪಟ್ಟಿಲ್ಲವೆಂದೂ, ರೈತರು ತಕರಾರು ಮಾಡುತ್ತಲಿರುವರು. ಭೂಮಿಯು ಸರಕಾರದ ಕೈಸೇರಿದಂದಿನಿಂದ ರೈತರು ಅಲ್ಲಿ ಸಾಗುವಳಿ ಮಾಡದ್ದರಿಂದ, ಅಲ್ಲಿಯೂ ಅವರಿಗೆ ಹಾನಿ; ಇತ್ತ ಭೂಮಿಯ ಬೆಲೆಯಿಲ್ಲದಿರುವದೂ ಹಾನಿ. ಈ ಬಗೆಯ ಅವ್ಯವಸ್ಥೆಯು ನಿಝಾಂ ಕರ್ನಾಟಕದಲ್ಲುಂಟಾಗಿದ್ದರೆ ನಮಗೆ ಆಶ್ಚರ್ಯವೆನಿಸುತ್ತಿರಲಿಲ್ಲ. ಆದರೆ ಮೈಸೂರ ಕರ್ನಾಟಕದಲ್ಲಾದುದು ನಮಗೆ ಆಶ್ಚರ್ಯವನ್ನುಂಟು ಮಾಡಿದೆ. ಶ್ರೀಮನ್ಮಹಾರಾಜರು, ಈ ವಿಷಯದಲ್ಲಿ ಸ್ವತಃ ಮನಸ್ಸು ಹಾಕಿ, ಬಡ ರೈತರ ಗೋಳನ್ನು ದೂರ ಮಾಡಬೇಕಾಗಿ ಪ್ರಾರ್ಥಿಸುತ್ತೇವೆ.

ನಮ್ಮ ಭಾವೀ ನಗರ ಪಿತಾಮಹರು.

ಬಾಗಲಕೋಟೆಯ ತ್ರೈವಾರ್ಷಿಕ ಮುನಸಿಪಾಲ್ಟಿಯ ಚುನಾವಣೆಯು ಸೋಮವಾರ ಅಗಸ್ಟ ೨ ನೇ ತಾ॥ ದಿವ ಆಗತಕ್ಕದ್ದಿದ್ದು, ಆ ಬಗ್ಗೆ ನಿಂತ ಉಮೇದವಾರರ ಸಚಿನ್ಹನಾದ ಗೋತ್ರಾವಳಿಯು ಪ್ರಸಿದ್ಧವಾಗಿದೆ. "ಕನ್ನಡಿಗ"ನ ವಾಚಕರಿಗೆ ಅವರ ಸಂಕ್ಷಿಪ್ತ ಪರಿಚಯವನ್ನು ಮಾಡಿಕೊಡಬೇಕೆಂದಿರುವೆವು. ಹಿಂದಕ್ಕೆ ಒಂದು ಪ್ರಸಂಗದಲ್ಲಿ ಓರ್ವ ನಗರ ಪಿತಾಮಹನಿಗೆ, ಒಂದು ಕೋರ್ಟಿಗೆ ಹೋಗಿ ಸಾಕ್ಷಿ ಹೇಳುವ ಪ್ರಸಂಗ ಬಂದಿತ್ತು. ಆಗ್ಗೆ 'ನಿನ್ನ ಧಂದೇ' ಅದೇನೆಂದು ಕೋರ್ಟಿನವರು ಕೇಳಲು "ಮುನಸಿಪಾಲ್ಟಿಯ ಸಭಾಸದತ." ಎಂಬದಾಗಿ ಉತ್ತರಕೊಟ್ಟನು. 'ಇದು ಹೇಗೆ ಧಂದೆ ಯಾಗುವದು?' ಎಂಬ ಕೋರ್ಟಿನ ಸವಾಲಿಗೆ 'ನಾನು ೨೦—೩೦ ವರ್ಷಗಳಿಂದಲೂ ಇದೇ ಧಂದೆ ಮಾಡುತ್ತಲಿರುವೆನೆಂ'ದು, ಅವನು ಹೇಳಲು, ಜಡ್ಜರು ಅವನಿಗೆ ಸಿಟ್ಟಿಗೆದ್ದು ನೀನು ಹೀಗೇ ಹಟಹಿಡಿದದ್ದಾದರೆ, ನಿನ್ನಮೇಲೆ ಫೌಜದಾರೀ ಮೊಕದ್ದಮ್ಮೆ ಮಾಡಲು ಮೇಲಿನ ಕೋರ್ಟಿನವರಿಗೆ ಅಪ್ಪಣೆ ಬೇಡಬೇಕಾಗುವದೆಂದು ಗದ್ದರಿಸಲು, ಅವನು 'ಸಾವಕಾರಿ' ಎಂಬದಾಗಿ ನುಡಿದನು! ಈ ಸಾವುಕಾರನು ನಿಜವಾಗಿಯೂ ಮುನಸಿಪಾಲ್ಟಿಯ ಸಭಾಸದತ್ವವೆಂದರೆ ೨೦—೩೦ ವರ್ಷಗಳವರೆಗೆ ಧಂದೆ ಮಾಡಿಕೊಂಡಿದ್ದನು. ಚುನಾವಣೆಯಲ್ಲಿ ಶಕ್ತಿದಷ್ಟು ಹಣ ವೆಚ್ಚಮಾಡಿ ಮತದಾರರಿಗೆ ಲಂಚಕೊಟ್ಟು, ಮತಗಳನ್ನು ಮಾರಲಿಕ್ಕೆ ತೆಗೆದುಕೊಂಡು, ಆರಿಸಿಬಂದಮೇಲೆ ಚುನಾವಣೆಯಲ್ಲಿ ವೆಚ್ಚಮಾಡಿದ ಹಣವನ್ನು ಬಡ್ಡಿಸಹಿತವಾಗಿ, ಮುನಸಿಪಾಲ್ಟಿಯಲ್ಲಿ ಎತ್ತಿಬಡಿಯುವ ಮಾರ್ಗವನ್ನು ಕಂಡು ಹಿಡಿದಿದ್ದನು. ಬಾಗಲಕೋಟೆಯಲ್ಲಿಯೂ ಈ ಚುನಾವಣೆಯಲ್ಲಿ ಲಂಚದ ಮಾತುಕತೆಗಳು ಕಲೆಯುತ್ತಿವೆಯಾದ್ದರಿಂದ ಈ ಕತೆಯು ನೆನಪಾಯಿತು. ಸುದ್ದಿಯ ಸೂರಕ್ಷನ ಬಾಯಿಬಡಕತನದ ಹರಟೆಯ ವಿಧಾನಗಳಿಗೆ ಮಹತ್ವವಿರದಿದ್ದರೂ, ಹಣವೆಚ್ಚ ಮಾಡಿ ಆರಿಸಿ ಬಂದದ್ದಾದರೆ, ನಮ್ಮ ಭಾವೀ ನಗರ ಪಿತಾಮಹರು, ಕೋರ್ಟಿನಲ್ಲಿ ಮೇಲಿನ ಸಾವುಕಾರನಂತೆ ಸಾಕ್ಷಿ ಹೇಳಬಾರದಾಗಿ ಎಚ್ಚರಕೊಡುವೆವು! "ಅಂದರಕೆ ಬಾತ ಕೋನ ಜಾನೇ!!

೧ ನೇ ವಾರ್ಡಿನಲ್ಲಿ ೧ ನೇ ನಂಬರಿನ ಉಮೇದವಾರರು, ಸಾಕಿದ ಪಶುಗಳಲ್ಲಿ ೧ ನೇ (ಹೆಚ್ಚಿನ)ದು ಎಂಬದಾಗಿ ಪ್ರಸಿದ್ಧವಾಗಿದ್ದ, ಆನೆಯ ಚಿನ್ಹವನ್ನು ಆರಿಸಿದ್ದಾರೆ. ಸಂಸಾರದಲ್ಲಿ ಹೆಚ್ಚಿನ ವೆಚ್ಚದ್ದೊಂದು ಏನಾದರೂ ಇದ್ದರೆ "ಇದೇನಪ್ಪಾ! ಆನಿಯನ್ನು ಕಟ್ಟಿದಂತಾಗಿದೆಂ"ಬದಾಗಿ ಗಾದೆಯ ಮಾತನ್ನು ಆಡುವರು. ನಾಡಗವಡಾ ಅಪ್ಪಾಸಾಹೇಬರು ಹೊಸದಾಗಿ ಆನೆಯನ್ನಂತೂ ಕಟ್ಟಿರುವರು. ಇದು ದೊಡ್ಡ ಪ್ರಾಣಿ. ಹೊಟ್ಟೆಗೆಷ್ಟು ಬೇಕಾಗುವದೋ ತಿಳಿಯದು. ಹೊಟ್ಟೆಗೆ ಹಾಕಿ ಅದನ್ನು ಸಂರಕ್ಷಿಸಿದಮೇಲೆ ಸಹ, ಅದರಮೇಲೆ ಕುಳಿತುಕೊಳ್ಳುವ ಹಿಡಿತವು ಇವರಿಗಿದೆಯೋ ಇಲ್ಲವೋ ಗೊತ್ತಾಗದು. ಆನೆಯಮೇಲೆ ಏರುವರೋ ಅಥವಾ ಬೀಳುವರೋ ಸೋಮವಾರ ತಿಳಿಯುವದು. ೨ ನೇ ನಂಬರಿನವರು ಪರವತಿ ಗುರುರಾಯರು. ಉಮೇದ್ವಾರಿಗೆ ಹೊಸ ಕುರುಪಿನಿಂದ ಹೊರಟವರು. ಸಾಕಿದ ಪಶುಗಳಲ್ಲಿ ೨ ನೇ ನಂಬರದ ಕುದುರೆಯನ್ನು ಕಟ್ಟಿದ್ದಾರೆ. ಕಟ್ಟೊ ಕುದುರೆಯಾಗಿದ್ದರೆ ವೆಚ್ಚದ ಚಿಂತೆಯು ಉಳಿಸುತ್ತಿರಲಿಲ್ಲ. ಆದರೆ ಸರ್ಕಸ್ಸಿನವರ ಅರಬ್ಬಿ ಕುದುರೆಯಂತೆ ಕುದುರೆಯು ಮುಂದಿನ ಶ್ರಾವಣ ಕ್ರೀ, ಸ್ಪರ್ಧೆಯಲ್ಲಿ ಜಯಶೀಲನಾಗುವೆನೆಂದು ಉತ್ಸಾಹದಿಂದ ನಿಂತಿದೆಯಾದ್ದರಿಂದ, ಅದರ ಹೊಟ್ಟೆಯ ವೆಚ್ಚದ ಕಡೆಗೆ ಅವರು ನೋಡಲಿಕ್ಕಿಲ್ಲ. ಮುರಿಗೆಪ್ಪನವರು ಕೋಲ್ಹಾರ ಕ್ಷೇತ್ರದವರು; ಲಿಂಗವನ್ನು ತಮ್ಮ ಚಿನ್ಹವಾಗಿ ಮಾಡಿಕೊಂಡು ೩ ನೇ ಉಮೇದ್ವಾರರಾಗಿದ್ದಾರೆ. ೧ ನೇ ವಾರ್ಡಿಗೆ ಹೊಸಬರಿರುವರು. ಅಪವಿತ್ರ ಸ್ಥಾನದಲ್ಲಿ ಹೊಸಬರಿಗೆ ಹಾದಿಯು ದೊರೆಯುವದು ಎಂತಹ ಮಾತೋ! ೪ ನೇ ಯವರು ಸೊಲ್ಲಾಪೂರಕರ' ರಾಮಣ್ಣನವರು. ನಾಯಕರು ಶ್ರೀಮಂತರು, ಅಂತೆಯೇ ತಮ್ಮ ಚಿನ್ಹವಾದ ಹಣುಮಪ್ಪನ ಕೈಯಲ್ಲಿ ಸಂಜೀವಿನೀ ಪರ್ವತವನ್ನು ಕೊಟ್ಟು, ಮತದಾರರು ಅತ್ತ ದೃಷ್ಟಿಯನ್ನಿಡಬೇಕೆಂದು ಸೂಚಿಸಿರಬಹುದು. ಕಲಿಯುಗದಲ್ಲಿ ಸಂಜೀವಿನಿಯು ದೊರೆಯುವದು ದುರ್ಲಭ. ಆರಿಸಿಬಂದ ಕೂಡಲೇ, "ನಾನು ಮತದಾರರ ಹಿತಗಳ ಕಡೆಗೆ ದೃಷ್ಟಿಯಿಟ್ಟು ಅವನ್ನು ಪೂರೈಸಿಕೊಟ್ಟು, ಸಂಜೀವಿನಿಯಂತೆ ಮತದಾರರ ಕಷ್ಟಗಳನ್ನು ದೂರಮಾಡುವೆನೆಂ"ದು ವಚನಕೊಟ್ಟರೆ, ನಾಯಕರಿಗೆ ಅರು ತಮ್ಮ ಮತವನ್ನು ಕೊಡಲಿಕ್ಕಿಲ್ಲ! ಸ್ವಾಮಿರಾಚಾರ್ಯ ಕಿರಸೂರರು ೫ ನೇ ಉಮೇದ್ವಾರರು; ವಕೀಲರು ಮತ್ತು ಅವರ ಹೆಸರೇ ಹೇಳುವಂತೆ ಆಚಾರ್ಯರೇ. ೮ ನೇ ವಾರ್ಡಿನಲ್ಲಿ ಆಚಾರ್ಯರೂ ವಕೀಲರೂ ಮತದಾರರಾಗಿದ್ದಾರೆ. ಮೇಲಾಗಿ ಅನೇಕ ವರ್ಷಗಳಿಂದ ನಗರ ಪಿತಾಮಹರಾಗಿದ್ದಾರೆ. ಮುನಸಿಪಾಲ್ಟಿಯು ಅವರನ್ನು ಸೂಚಿಸಲ್ಲಿನಂತೆ ತನ್ನೊಡನೆ ಎಳೆಯುತ್ತಿರುವದು ಮತ್ತು ಗಜಾನನ ಆರಾಧಕರು. ಅಂದಮೇಲೆ ಜಯಪತಾಕೆಯು ಕಟ್ಟಿಟ್ಟದೇ ಸರಿ. ಮೂರಕಲಿಯ ತಮ್ಮಣಾಚಾರ್ಯರು ೬ ನೇ ಉಮೇದ್ವಾರರು. ಇವರು ಗಾಂಧಿಯ ಶಿಷ್ಯರು. ಆದ್ದರಿಂದ ಮತಗಳನ್ನು ದೊರಕಿಸಲು, ಹೊಟ್ಟೆ ಹರಿಯುವಹಾಗೆ ಮತದಾರರ ಕಾವಿಮನೆಗೆ ಪಿರಿಪಿರಿ ತಿರುಗಲಾರೆನೆಂದು ಪ್ರಕಟಿಸಿದ್ದಾರೆ. ಪ್ರಯತ್ನವೇನೋ ಸ್ತುತ್ಯ! ಆದರೆ ಈ ವರ್ತಮಾನದಲ್ಲಿ ಆದುಚ್ಚನಾದ ಗಾಂಧಿಯನ್ನು ಅವನ ಶಿಷ್ಯರನ್ನು ಕೇಳುವರಾರು? ತಮ್ಮ ಚಿನ್ಹವಾದ ರಾಟಿಯನ್ನು ತಿರುವುತ್ತ ಕೊನೆಯಲ್ಲಿ ಕುಳಿತುಕೊಳ್ಳಬೇಕಾಗುವದು. ಇನ್ನೂ ಮೂರುತಲೆಯವರಿಗೆ ಈ ರೀತಿಯಿಂದ ಪ್ರಯತ್ನಿಸಿದರೂ, ಮೂರಕಲಿಯ ಆಚಾರ್ಯರಿಗೆ ಜಯದೊರೆಯದು. "ಲಾಸ್ಟ ಬಟ್ ನಾಟ ದಿ ಲೀಸ್ಟ" ಎಂದು ಇಂಗ್ಲೀಷನಲ್ಲಿ ಅನ್ನುವಂತೆ ಕಡೆಯವರಾದರೂ ಕಡಿಮೆಯವರಲ್ಲದ ಧಾರವಾಡಕರ' ಯಲಗುರ್ದರಾಯರು ೭ ನೇ ಯವರು. ಚುನಾವಣೇ ಶಾಸ್ತ್ರದ ಹಿಡಿತವನ್ನು ಚನ್ನಾಗಿ ಬಲ್ಲವರಿವರು. ಮುನಸಿಪಾಲಿಟಿಯಲ್ಲಿ ಅನೇಕ ವರುಷಗಳಿಂದ ಇದ್ದವರು. ಸಭಾಸದತ್ವವು ಒಂದು ಚಟವಾದಂತೆ ಆಗಿರಬಹುದು. ಆರಿಸಿ ಬಾರದಿದ್ದರೆ ಸಮಾಧಾನವಾಗಲಿಕ್ಕಿಲ್ಲ. ಇವರ ಚಿನ್ಹವು ಆಕಳು; ಇದು ಹೆಣ್ಣು; ಹೋರಿಯಾಗಿದ್ದರೆ ಚನ್ನಾಗಿತ್ತು! ಧಾರವಾಡಕರ' ಕಿರಸೂರ, ಸೊಲ್ಲಾಪೂರಕರ'ರು ಮಿತ್ರತ್ರಯರು. ಆದರೆ ಕಿರಸೂರರು,' 'ಕರ'ವನ್ನು ಹಚ್ಚಿಕೊಂಡಿಲ್ಲವಾದ್ದರಿಂದ, ನಡುವೆ ಎಡವಿದಂತಾಗುವದು. ಹೀಗಾಗಬಾರದೆಂಬದಾಗಿ ಚಿಂತಿಸಿ, ಪರವತೀ ಗುರುರಾಯರು ಪರವತೀಕರ,ರಾಗಿ ಆ ತ್ರಯದಲ್ಲಿ ಸೇರಬೇಕೆಂದಿರುವರೋ!

೨ ನೇ ವಾರ್ಡಿನಲ್ಲಿ, ಬ್ಯಾಳಿ ಅಯ್ಯಪ್ಪನವರು ೧ ನೇ ಉಮೇದವಾರರು. ಈಗ್ಗೆ ಸಭಾಸದರಿದ್ದಾರೆ. ಮುಂದೆ ಸಹ ತಮ್ಮ ಬೇಳೆಯನ್ನು ಬೇಯಿಸದೆ ಬಿಡಲಿಕ್ಕಿಲ್ಲ. ಈಗಿನ ಅಧ್ಯಕ್ಷರಾದ ನಾಗರಹಾಳ ಬಸವಂತರಾಯರು ೨ ನೇ ಯವರು. ಸ್ವಭಾವದಿಂದ ಸೌಮ್ಯರಾಗಿದ್ದರೂ ಹಾವಿನ (ನಾಗರ) ಹೆಸರನ್ನು ಧರಿಸಿದ್ದರಿಂದ, ನಾಗರಹಾವಿನ ಜಗಟ್ಟು ಚಾತುರ್ಯಗಳು ಇವರಲ್ಲಿವೆ ಎನ್ನಬಹುದು. ಆದ್ದರಿಂದ ಇವರೂ ಆರಿಸಿಬರತಕ್ಕವರೇ. ೪ ನೇ ಉಮೇದವಾರರು ಬಲು ಹುರುಪಿನವರು. ವೈಮೇಲೆ ಅನೇಕ ಬಗೆಯ ನಂತೆಂಟು ಕೆಲಸದ ಭಾರವಿದ್ದರೇ ಇವರಿಗೆ ಸಮಾಧಾನ. ವೀರಶೈವ ಸಂಗಡ ದ್ವಯಗಳಲ್ಲಿ ಒಂದು ಕಂತ

(೯ ನೇ ಪುಟಕ್ಕೆ ಮುಂದೆ ಸಾಗಿದ್ದು)

ಹಿಂದುಸ್ಥಾನಿ ಸೇವಾದಳ ಪತ್ರಿಕೆ ೫.

" ಜುಲೈ ೨೧ ರ ವರೆಗೆ ನಡೆದಿರುವ ಕೆಲಸದ ವರದಿ. "

ಈ ೬ ವಾರಗಳಲ್ಲಿ ಕೆಳಗೆ ಕಂಡಂತೆ ಒಟ್ಟು ೩೨೪೨ ರಾ. ಸಭೆಯ ಸದಸ್ಯರನ್ನೂ ೧೯೬ ದಳದ ಸದಸ್ಯರನ್ನೂ ಕೂಡಿಸಲಾಯಿತು.

	ಜಿಲ್ಲಾ	ರಾ. ಸಭೆಯ ಸದಸ್ಯರು	ದಳದ ಸದಸ್ಯರು
೧	ವಿಜಾಪೂರ	೪೯೩	೧೮
೨	ಧಾರವಾಡ	೬೬೨	೭೨
೩	ಬೆಳಗಾವಿ	೯೭೮	೨೨
೪	ದ. ಕನ್ನಡ	೯೧೩	೨೯
೫	ಮೈಸೂರು	೬೬	೪೦
೬	[illegible]	[illegible]	೧೮

ನಮ್ಮ ಪ್ರತಿಜ್ಞೆಯಂತೆ ... ವಾರಗಳಲ್ಲಿ ೬೭೫೦ ರಾ. ಸಭೆಯ ಸದಸ್ಯರನ್ನೂ ... ದಳದ ಸದಸ್ಯರನ್ನೂ ಕೂಡಿಸಬೇಕಾಗಿರುವದು.

ಕಾರವಾರ ಮತ್ತು ಕೊಡಗು ಜಿಲ್ಲೆಗಳು ಮುಂದೆ ಬರಲಿಲ್ಲ. ಒಳ್ಳೇದು. ನಮ್ಮ ಸಂಘದ ಶ್ರೀ ಟಿ. ಡಿ. ... ಅಸ್ವಸ್ಥರಾದುದರಿಂದ ಅಲ್ಲಿನ ಕೆಲಸಗಳು ಸಮರ್ಪಕವಾಗಿ ನಡೆಯಲಿಲ್ಲ. ಮೈಸೂರಿನ ಕೆಲಸವೂ ತೃಪ್ತಿಕರವಾಗಿಲ್ಲ. ಇನ್ನೂ ಕೆಲಸಕ್ಕಾರಂಭಿಸದಿರುವವರು ಕೂಡಲೆ ಮೊದಲು ಮಾಡಬೇಕೆಂದೂ, ಆಗಲೆ ಆರಂಭಿಸಿರುವವರು ಇನ್ನೂ ಉತ್ಸಾಹದಿಂದ ಕೆಲಸ ಮಾಡಬೇಕೆಂದೂ ನಮ್ಮ ವಿಜ್ಞಾಪನೆಯು.

ಸ್ಥಾನಿಕ ಮುಖಂಡರು ಮುಂದೆ ಬಂದಲ್ಲದೆ ನಮ್ಮ ತರುಣ ಸ್ವಯಂಸೇವಕರಿಗೆ ಯಾವ ಕೆಲಸವೂ ಸಾಧ್ಯವಿಲ್ಲವೆಂಬುದು ಸರ್ವಶ್ರುತವಾದ ವಿಷಯವಾಗಿದೆ. ಆದ್ದರಿಂದ ಅಭಿಮಾನಿಗಳೆಲ್ಲರೂ ಹೆಚ್ಚು ಪ್ರೋತ್ಸಾಹವನ್ನು ಕೊಡುವರೆಂದು ಕೋರಿಕೆ.

ಅಖಿಲ ಭಾರತೀಯ ರಾಷ್ಟ್ರೀಯ ಮಹಾ ಸಭೆಗೆ ಕರ್ನಾಟಕದ ಸಹಾನುಭೂತಿಯು ಸಂಪೂರ್ಣವಾಗಿರುವದೆಂಬುದನ್ನೂ ಮಹಾ ಸಭೆಯ ಆಜ್ಞೆಯನ್ನು ಪರಿಪಾಲಿಸಲು ಕರ್ನಾಟಕವು ಸಿದ್ಧವಾಗಿರುವುದೆಂಬುದನ್ನೂ ಎಲ್ಲರೂ ಮನಸ್ಸಿನಲ್ಲಿಟ್ಟು ಮುಂದರಿಯಬೇಕು.

ಹುಬ್ಬಳ್ಳಿ.
೨೪—೭—೨೬ } ವರ್ತಕರ ನಾರಾಯಣರಾಯರು.

ಪಂಪ ಭಾರತ ವಿಚಾರ.

ನಮ್ಮ ರಾಷ್ಟ್ರದಲ್ಲಿ ತೇಜಸ್ವಿತೆಯೂ ಸ್ವಾತಂತ್ರ್ಯಾಭಿರತೆಯೂ ತಲೆದೋರುತ್ತಿದ್ದಾಗ, ನಮ್ಮ ವಾಙ್ಮಯವು ಅಭ್ಯುದಯ ಶಿಖರವನ್ನು ಮುಟ್ಟಿದಾಗ ಕವಿವರ್ಯನಾದ ಪಂಪನು ತನ್ನ ಅದ್ಭುತ ಪರಾಕ್ರಮವನ್ನೂ ಭಾಷಾಪ್ರೌಢಿಮೆಯನ್ನೂ ತನ್ನ ಚಾತುರ್ಯ ಪಾಂಡಿತ್ಯ ಕವಿತ್ವಗಳನ್ನೂ ತೋರುವ ಕನ್ನಡದ ಪರಿಣತವನ್ನು ... ವಿಕ್ರಮಾರ್ಜುನವಿಜಯವು, ಸಾಮಾನ್ಯವಾದ ಆ ಕಾವ್ಯ ಮಹಾತ್ಮ್ಯವು, ಇತ್ತೀಚಿನ ಸಾಹಿತ್ಯ ಸಭೆಯಲ್ಲಿ ಪ್ರಕಟವಾಗುತ್ತಿರುವದು ಎಲ್ಲ ಕನ್ನಡಿಗರಿಗೂ ವಿದಿತವಾಗಿರಬಹುದಷ್ಟೆ.

ಪುಣೆಯ ಜಿನ... ಶ್ರೀ ವೈದ್ಯರ ಭಾರತೋಪಸಂಹಾರವೆಂಬ ಕೃತಿ ... ಭಾರತದ ಸಂಸ್ಕೃತ ಭಾಗವೆಂದು ... ಪ್ರಕಟಿಸಿದಾಗ, " ಮಹಾಭಾರತಗ್ರಂಥದ ಪ್ರಚಂಡ ಕೃತಿಯ ವಿಷಯದಲ್ಲಿ ಶ್ರೀ. ಹರಿನಾರಾಯಣ ಆಪಟೆಯವರೊಬ್ಬರೇ ಏಕೆ ? ಇನ್ನೂ ಹತ್ತು ಮಂದಿ ಬರೆದರೂ ನಾವದನ್ನು ಪ್ರಕಟಿಸುವೆವು. ವಾಚಕರದನ್ನು ಸಂತೋಷದಿಂದ ಓದುವರು " ಎಂದು ಬರೆದಿದ್ದರು. ಹಾಗೆ, ಪಂಪಭಾರತ ವಿಚಾರದಲ್ಲಿ ಶ್ರೀ. ನರಸಿಂಹಾಚಾರ್ಯರು, ಡಾ. ಶ್ಯಾಮಶಾಸ್ತ್ರಿಗಳು, ಶ್ರೀ. ವೆಂಕಟಸುಬ್ಬಯ್ಯನವರು, ಶ್ರೀ. ಬಿ. ಎಮ್. ಶ್ರೀಕಂಠಯ್ಯನವರು, ಶ್ರೀ. ಬಸವನಾಳರು, ಶ್ರೀ. ವೆಂಕಣ್ಣಯ್ಯನವರು ಮೊದಲಾದ, ಕನ್ನಡವನ್ನು ಆಮೂಲಾಗ್ರವಾಗಿ ಓದಿದ ಅನೇಕ ಪಂಡಿತರು ಬರೆಯಬಹುದು. ಟೀಕೆ ಟಿಪ್ಪಣಿಗಳುಳ್ಳ ಒಳ್ಳೆಯ ಕೃತಿಗಳು ನಮ್ಮಲ್ಲಿಲ್ಲ. ಅಷ್ಟಷ್ಟಕ್ಕೆ ಉಪಯುಕ್ತವಾದ ಕೆಲವು ಸಣ್ಣ ಸಣ್ಣ ವಿದ್ಯಾರ್ಥಿಗಳಿಗೆ ಬೇಕಾದ ಗ್ರಂಥಗಳು ತಯಾರಾಗುತ್ತ ಹಿಂದೆ ಬೀಳುತ್ತ ನಡೆದಿರುವವು.

ಈ ಮೊದಲು ಸಾಹಿತ್ಯ ಪರಿಷತ್ತಿನವರು ಪಂಪರಾಮಾಯಣಕ್ಕೆ ಉಪೋದ್ಘಾತ ಬರೆದಿರುವಲ್ಲಿ ' ಸಂಪಾದಕರೆಂ 'ಬ ಲೇಖಕರು ಸ್ವತಃ ಪಂಪರಾಮಾಯಣವನ್ನು ಆಮೂಲಾಗ್ರವಾಗಿ ನೋಡಲಿಲ್ಲವೆಂದು ಕಂಡು ಬರುತ್ತಿರುವದು. " ಕವಿಯಾದ ನಾಗಚಂದ್ರನು ರಾಮಕಥೆಯನ್ನು ಹಾಳುಮಾಡಿದನೆಂ"ದು ಬರೆದುದು ದೊಡ್ಡದಾದ ತಪ್ಪಾಗಿರುವದು. " ವಿಗತಾಖ್ಯಾದರ್ಪೋತ್ಸರಪ್ಪ ಜಿನರು, ಗಣಧರರು, ಆಚಾರ್ಯರು ಮೊದಲಾದವರು ಹೇಳಿದ್ದನ್ನು ಕೇವಲ ಆತ್ಮೋನ್ನತಿಗಾಗಿ ಹೇಳುತ್ತೇನೆ. ಮತ್ತಾವುದೂ ನನಗೆ ಬೇಕಾಗಿಲ್ಲ " ಎಂದು ಸ್ಪಷ್ಟವಾಗಿ ಸೂಚಿಸುವ ಕವಿಯು ವಾಲ್ಮೀಕಿ ರಾಮಾಯಣಕ್ಕೂ (ಸಂಪ್ರದಾಯಾತೀತನಾದ) ಜೈನ ರಾಮಾಯಣಕ್ಕೂ ಹಚ್ಚಿ ಕಥೆಮಾಡುವದಕ್ಕೆ ಅದು ಹೇಗ ಜವಾಬದಾರನಾದಾನು ?

ಪಂಪ ಭಾರತದ ವಿಚಾರವು ಕನ್ನಡದಲ್ಲಿ ಅತಿ ಗಹನವಾಗಿರುವದು. ಅದರ ಪುರಸ್ಕಾರ ಮಾಡಬೇಕಾದರೆ ಮೇಲು ಮೇಲಿನ ಓದುವಿಕೆಯು ಸಾಲದು. ಪಂಪಭಾರತಕ್ಕೆ ಹೇಗಾದರೂ ಒಂದು ಸಾಮಾನ್ಯವಾದ ಉಪೋದ್ಘಾತವನ್ನು ಸಾಹಿತ್ಯ ಸಭೆಯವರು ಹಾಕಿಸಬಾರದು. ನಾವು ಮೇಲೆ ಸೂಚಿಸಿದ ಅನೇಕ ಪರಿಣತ ಜ್ಞಾನವನ್ನು ಸಂಪಾದಿಸಿದ ವಾಙ್ಮಯ ಸೇವಕರು ಅಚ್ಚುಕಟ್ಟಾದ ಉಪೋದ್ಘಾತವನ್ನು ಬರೆಯಲು ಪೂರ್ಣ ಸಮರ್ಥರೆಂಬ ಮಾತಿನಲ್ಲಿ ಸಂದೇಹವಿಲ್ಲ.

ಈಗಿನ ಪರಿಸ್ಥಿತಿಯಲ್ಲಿ, ಕವಿಚರಿತ್ರ ಕರ್ತರಾದ ಶ್ರೀ ನರಸಿಂಹಾಚಾರ್ಯರೇ ಪಂಪಭಾರತಕ್ಕೆ ಉತ್ತಮವಾದ ಪ್ರಸ್ತಾವನೆಯೊಂದನ್ನು ಬರೆಯಲು ಸರ್ವಥೈವವಾಗಿ ಪಾತ್ರರಿರುವರು. ಪರಿಷತ್ತಿನ ಕಾರ್ಯನಿರ್ವಾಹಕರು ಅವರಿಂದಲೇ ಆ ಬರೆಹವನ್ನು ಬರೆಯಿಸಬೇಕು. ಸಂಪಾದಕರೆಂದರೆ, ಸಮರ್ಥರಾದ ಬರೆಹಗಾರರನ್ನು ದೂರಕಿಸಿಕೊಳ್ಳುವವರು. ಅವರೀಗ ಎಷ್ಟು ಮುಪ್ಪಿನಿಂದ ಪಂ. ಭಾ. ಕೃತಿಗೆ ಉಪೋದ್ಘಾತವನ್ನು ಬರೆದರೂ ಅದು ಶ್ರೀ ನರಸಿಂಹಾಚಾರ್ಯರ ಬರೆಹದಂತೆ ಉತ್ತಮವಾಗಲಿಕ್ಕಿಲ್ಲವೆಂದು ನಮಗೆ ತೋರುತ್ತಿರುವದು.

ಪಂಪಭಾರತಕ್ಕೆ ಉಪೋದ್ಘಾತ ಬರೆಯಲು ಪರಿಯರಾದ ಆಚಾರ್ಯರಿಗೆ ಅಧಿಕಾರವಿದ್ದು, ಎಲ್ಲ ಕನ್ನಡಿಗರ ವಾಂಛಿತವೂ ಅದೇ ಆಗಿರುವದು. ಉಳಿದ ಅನೇಕ ವಾಙ್ಮಯ ಕ್ಷೇತ್ರದಲ್ಲಿ ಆದರಿಂದ ಬೆಳಕು ಬೀಳುತ್ತಿರುವದು ನಮ್ಮವರ ಪ್ರಗತಿಯ ಲಕ್ಷಣವೆಂದು ತೋರುತ್ತಿರುವದು. ಅದಕ್ಕಾಗಿ ನಾವು ಬಹಳ ಸಂತೋಷವನ್ನು ತಳೆದಿದ್ದೇವೆ. ನಮ್ಮ ವಾಙ್ಮಯ ಕ್ಷೇತ್ರವು ಬಹಳ ವಿ

ಸ್ವೃತವಾಗಬೇಕಾಗಿರುವುದು. ಹಾಗಾದಲ್ಲಿ ಅವರೆಲ್ಲರಿಗೆ ಒಳ್ಳೆಯ ಅವಕಾಶವಾಗಬಹುದು ಈಗಾಗಲೇ ವಾಙ್ಮಯದ ಅನೇಕ ಕ್ಷೇತ್ರಗಳಲ್ಲಿ ನಮ್ಮವರು ಮುಂದಾಗಿರುವರು. ಪ್ರಸ್ತುತದಲ್ಲಿ, ಕವಿಚರಿತ್ರ ಕರ್ತರಾದ ಶ್ರೀ ನ. ಸಿಂಹಾಚಾರ್ಯರು ಪಂಪಭಾರತಕ್ಕೆ ಉಪೋದ್ಘಾತವನ್ನು ಬರೆಯಬೇಕಾಗಿರುವದು.

ಪರಿಷತ್ತು ಒಂದು ಸರಕಾರದ ಆಫೀಸಾಗಿದ್ದರೆ ನಮ್ಮ ಈ ಸೂಚನೆಗೆ ಅವಕಾಶವಿದ್ದಿಲ್ಲ. ಅದೊಂದು ಜನರು ಮಾಡಿಕೊಂಡ ಸಂಸ್ಥೆ. ಅಲ್ಲಿ ಎಲ್ಲರ ಮತದಿಂದ ಕೆಲಸ ನಡೆಯಬೇಕಾಗಿರುವದು. ಎಂತಲೇ ನಮ್ಮವರಾದ ಅನೇಕರ ಮನಸ್ಸಿನಲ್ಲಿ ಸೂಚಿಸಲು ಧೈರ್ಯಗೊಂಡಿದ್ದೇವೆ

ಆದುದರಿಂದ ರಾಜಕೀಯ ಸಾಮಾಜಿಕ, ಧಾರ್ಮಿಕ ವಿಷಯಗಳನ್ನು ಮರೆಯದೆ, ನನಗೆ ಅನುಭವಿಸಿದ ಎಲ್ಲ ಸಂಗತಿಗಳನ್ನು ಎಲ್ಲ ಬಗೆಯ ಜನರಲ್ಲಿ ಅಭಿರುಚಿಯುತ್ಪನ್ನವಾಗುವ ಹಾಗೆ, ಬರೆಯಬೇಕೆಂದು ನನ್ನ ಪ್ರಯತ್ನವಿದೆ.

ನಾವು ಬಾಗಲಕೋಟೆಯಿಂದ ಹೊರಟು ಸೀತೀಮನೆ, ಪುಣತಾಂಬೆ, ಹುಶಿಂಗಾಬಾದ, ಪ್ರಯಾಗ, ಕಾಶಿ, ಗಯಾ, ಪುನಃ ಕಾಶಿ, ಅಯೋಧ್ಯೆ, ಹರಿದ್ವಾರ, ದೇವಪ್ರಯಾಗ, ರುದ್ರಪ್ರಯಾಗ, ಕರ್ಣಪ್ರಯಾಗ, ನಂದಪ್ರಯಾಗ, ವಿಷ್ಣುಪ್ರಯಾಗ, ಕಡೆಗೆ ಶ್ರೀಕ್ಷೇತ್ರ ಬದರಿ ಇಷ್ಟು ಸ್ಥಾನಗಳನ್ನು ಸಂದರ್ಶಿಸಿ ಮರಳಿ ಮೂರು ತಿಂಗಳಲ್ಲಿ ಬಾಗಲಕೋಟೆಗೆ ಬಂದೆವು. ನಮ್ಮ ಸಂಗಡ ಹತ್ತು ಜನರಿದ್ದರು.

ಪಂಪಭಾರತ ವಿಚಾರದಲ್ಲಿ ಮೇಲೆ ಹೇಳಿದ ಅನೇಕರ ಲೇಖಗಳುಳ್ಳ, ಚಿಕ್ಕ ಪುಸ್ತಕವನ್ನು ಹಾಕಿಸಬಹುದು. ಪಂಪಭಾರತ ಗದಾಯುದ್ಧಗಳ ಮೇಲೆ, ಕಥೆಯ ಬಿಗುವು, ಅಲಂಕಾರ, ಕವಿತೆಯ ಯೋಗ್ಯತೆ, ಕವಿಯ ಸ್ಥಾನ ಮೊದಲಾದ ವಿಚಾರಗಳಲ್ಲಿ ಸಟೀಕ ಪುಸ್ತಕಗಳನ್ನು ಪ್ರಕಟಿಸಿದಲ್ಲಿ ವಿದ್ಯಾರ್ಥಿಗಳಿಗೆ ಉಪಯೋಗವಾಗಿ [illegible]ನ ಗೌರವವು [illegible]ತ್ಯಾಗ ಬಹುದು.

'ಶ್ರೀ ಬಿ.ಕೆ'

ಉತ್ತರಹಿಂದುಸ್ಥಾನದಲ್ಲಿಯ ಪುಣ್ಯಕ್ಷೇತ್ರಗಳ ಪರಿಚಯ.

(ಲೇಖಾಂಕ ೧)

ಪ್ರವಾಸಗಳ ವರ್ಣನೆ; ಕ್ಷೇತ್ರಗಳ ಪರಿಚಯ; ದಾರಿಗಳಲ್ಲಿ ಪ್ರವಾಸಿಗಳಿಗೆ ಒದಗಿದ ಅನುಭವಗಳ ಉಲ್ಲೇಖ; ಇವುಗಳೆಲ್ಲ ನವ ವಾಙ್ಮಯದ ನೂತನ ಅಂಗಗಳು. ಧಂತಖಂಡದ ಅನೇಕ ದೇಶಭಾಷೆಗಳಲ್ಲಿ ಪ್ರವಾಸ ವರ್ಣನೆಗಳು ಸಚಿತ್ರವಾಗಿ ವೃತ್ತಪತ್ರಿಕೆಗಳಲ್ಲಿ ಮೇಲಿಂದ ಮೇಲೆ ಪ್ರಕಟವಾಗುವವು. ಆದರೆ ಕನ್ನಡಿಗರಲ್ಲಿ ವೃತ್ತಪತ್ರಿಕೆಗಳಲ್ಲಿ ಪ್ರವಾಸ ವರ್ಣನೆಗಳನ್ನು ಬರೆಯುವವರೂ ಇಲ್ಲ; ಬರೆದರೆ ಓದುವವರೂ ಇಲ್ಲ. ಬರೆಯುವವರಿಗೆ ಹೊಟ್ಟೆಗಿಲ್ಲ; ಹೊಟ್ಟೆಗಿದ್ದವರಿಗೆ ಕನ್ನಡವನ್ನು ಓದುಬರೆಯಲು ಮನಸ್ಸಿಲ್ಲ. ಮೇಲೆ ಇಷ್ಟಕ್ಕೆಯೂ [illegible] ಹೊಸ ಕಲ್ಪನೆಗಳ ಕೇಳಾಟವು. ಸುಧಾರಣೆಯು (?) [illegible] ಎಲ್ಲ ಕಡೆಗೂ ಬೀಸುತ್ತಲಿದೆ. ಇಂತಹ ಪ್ರಸಂಗದಲ್ಲಿ [illegible]ದರೊಂದು ಸಂಕ್ಷಿಪ್ತ ಕೊಟ್ಟರೆ ತಮ್ಮ ಬಿಡುವಿನ [illegible]ವರ್ಣನೆಯನ್ನು ಸಚಿತ್ರವಾಗಿ ಹುಡುಗಾಟಿಕೆಯಿಂದ ಬರೆದವ್ಯಾ[illegible]ದರೂ ಓದಲು ಪ್ರವೃತ್ತರಾಗಬಹುದು. ಕೇವಲ ಧರ್ಮಕ್ಷೇತ್ರಗಳ ಪರಿಚಯ ಮಾಡಿಕೊಳ್ಳಲು ಎಷ್ಟು ಜನರು ಉತ್ಸುಕರಾಗಿರುವರೋ ನಾನರಿಯೆ.

ಚಂದಾದಾರರಲ್ಲಿ ಬಿನ್ನಹ.

"ಕನ್ನಡಿಗನ" ಏಳನೇ ವರ್ಷವು ಪ್ರಾರಂಭವಾಗಿ ೫ ತಿಂಗಳುಗಳಾಗುತ್ತ ಬಂದವು. ಆದರೂ ಅನೇಕರು ಈ ವರೆಗೆ ಗ್ರಾಹಕರಿಂದ ವಾರ್ಷಿಕ ಚಂದಾ ೧—೧೪—೦ ಕಳಿಸಿಲ್ಲ. ಮತ್ತು ಈ ವರ್ಷದ ಸಂಚಿಕೆಗಳು ಬೇಕಾಗಿಲ್ಲವೆಂದೂ ತಿಳಿಸಿಲ್ಲ. ಈ ಐದು ತಿಂಗಳುಗಳಲ್ಲಿ ಸಂಚಿಕೆಗಳನ್ನು ಸ್ವೀಕರಿಸುತ್ತಲೇ ಬಂದಿದ್ದರಿಂದ ಅರ್ಥಾತ್ ಅವರಿಗೆಲ್ಲ 'ಕನ್ನಡಿಗನ' ಭೆಟ್ಟಿಯ ಅವಶ್ಯಕತೆಇದೆ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಯಾರಿಂದ ಚಂದಾ ಹಣ ಮನಿಯಾರ್ಡರಾಗಿ ಬಂದಿರುವದಿಲ್ಲವೋ ಅವರಿಗೆಲ್ಲ ಈಗ್ಗೆ ವಿ. ಪಿ. ಕಳಿಸಲ್ಪಟ್ಟಿವೆ. ಈ ಸದಯಾಂತಃಕರಣಿಗಳಾದ 'ಕನ್ನಡಿಗನ" ಪ್ರೇಮಿಗಳು ಕೂಡಲೇ ವಿ. ಪಿ. ಸ್ವೀಕಾರ ಮಾಡಿ, 'ಕನ್ನಡಿಗ' ನಿಗೆ ಆಶ್ರಯ ಕೊಡಬೇಕಾಗಿ ಬಿನ್ನವಿಸಿದೆ. ಈ ಐದು ತಿಂಗಳು "ಕನ್ನಡಿಗ"ನನ್ನು ಸ್ವೀಕಾರ ಮಾಡಿ, ವಿ. ಪಿ. ಬಂದಾಗ್ಗೆ ಅದನ್ನು ನಿರಾಕರಿಸಿ, ನಮಗೆ ಈ ಐದು ತಿಂಗಳುಗಳ ಅಂಚೆ, ಕಾಗದ, ಮುದ್ರಣಗಳ ಹಾಗೂ ವಿ. ಪಿ. ರಜಿಸ್ಟರದ ಹಾನಿಗೆ [illegible] ಮಾಡುವಂತಹ ಮಾನನೀಯರು ಆರೂ ಇರಲಿಕ್ಕಿಲ್ಲವೆಂದು ನಮ್ಮ ವಿಶ್ವಾಸವಿದೆ.

ವ್ಯವಸ್ಥಾಪಕ.

ಮನೆಯವರೆಂದರೆ ನನ್ನ ಮಾತಾಪಿತೃಗಳು; ಮತ್ತು ಸಾವಿರ ದಂಪತಿಗಳು. ಸುದೋಷಿಕರು ಐದೇ ಜನರು; ಅಡಿಗೆ ಸೇರಿಗಾಗಿ ಈ ವರು. ಇನ್ನು ಉಳಿದ ಮೂವರು ನಮಗೆ ಬಹು ದಿನಗಳಿಂದ ಪರಿಚಿತರಾದ ನಮ್ಮೂರಿನ ನೆರೆಹೊರೆಯವರು. ಹೀಗೆ ಸಜ್ಜಿತರಾಗಿ ಇದೇ ವರ್ಷದ ನಿಜ ಜ್ಯೇಷ್ಠ ಶುದ್ಧ ಪ್ರತಿಪದೆಯ ಸಮುಹೂರ್ತದಲ್ಲಿ ಬಾಗಲಕೋಟೆಯಿಂದ ಹೊರಟೆವು.

ಉತ್ತರ ಕರ್ನಾಟಕದಿಂದ ಕಾಶೀ ಯಾತ್ರೆಗಾಗಿ ಹೊರಡುವವರು ಮೊದಲು ಸ್ನಾನವಿಯಲ್ಲಿ ಕ್ಷೇತ್ರವಿಧಿಗಾಗಿ ಇಳಿದುಕೊಂಡು, ಮಹಾಯಾತ್ರೆಯ ಮೊದಲನೇ ದಿಕ್ಕೆಯನ್ನು ಪ್ರಾರಂಭಿಸುವದುಂಟು. ಇತ್ತೀಚೆ ಕ್ಷೇತ್ರಗಳಲ್ಲಿ ಗಣನೆಯಾಗ

ಹತ್ತಿದ ಸೀತೀಮನೆಗೆ ನಾವೆಲ್ಲ ಹೋದೆವು. ಕರ್ನಾಟಕದ ಎಲ್ಲ ಭಾಗಗಳಿಗೂ ಸೀತೀಮನೆಯು ಈಗ್ಗೆ ಪರಿಚಿತವಾಗಿದೆ. ವಿಜಾಪೂರ, ಧಾರವಾಡ, ಬೆಳಗಾವಿ, ಬಳ್ಳಾರಿ, ಮೈಸೂರ ಪ್ರಾಂತಗಳ ಕನ್ನಡಿಗರು ಕನ್ಯಾಗತದಲ್ಲಿ ಇಲ್ಲಿಗೆ ಬರುವರು. ಸಮೀಪದ ಜಿಲ್ಹೆಗಳ ಜನರಂತೂ ಸಣ್ಣ ಪುಟ್ಟ ಪರ್ವಣಿಗಳಲ್ಲಿಯೂ, ಗ್ರಹಣಗಳಲ್ಲಿಯೂ, ಕ್ರಿಯಾಕರ್ಮಗಳಿಗಾಗಿ ಬಿಡಿದಿನಗಳಲ್ಲಿಯೂ ಇಲ್ಲಿಗೆ ಬರುವದುಂಟು. ಈ ಬಗೆಯ ಧರ್ಮದ ಭಾವನೆಯು ಸ್ವಲ್ಪವಿದ್ದರೆ, ರೋಗಗ್ರಸ್ತರಾದ ಜನರು ಆರೋಗ್ಯಕರವಾದ ಕೃಷ್ಣಾ[illegible]ನ ಪಾನಗಳಿಂದ ತಮ್ಮ ರೋಗಗಳನ್ನು ನಾಶಮಾಡಿಕೊಳ್ಳಲಿಕ್ಕೆ ಬರುವದುಂಟು. ಕರ್ನಾಟಕದಿಂದಷ್ಟೇ ಅಲ್ಲದೆ ಮುಂಬಯಿಯಿಂದ ಸಹ ಆರೋಗ್ಯವನ್ನು ಸಂಪಾದಿಸುವದಕ್ಕಾಗಿ ಜನರು ಇಲ್ಲಿಗೆ ಬರುವದುಂಟು. ಆದುದರಿಂದ ಸೀತೀಮನೆಗೆ ಇಂಗ್ಲೀಷಿನಲ್ಲಿ ಕರೆಯುವ "ಹೆಲ್ತ್ ರಿಜಾರ್ಟ್" ಅಂದರೆ 'ಆರೋಗ್ಯ ನಿವಾಸ' ವೆಂಬ ಹೆಸರು ಒಪ್ಪುವದು. ಹೀಗೆ ಕರ್ನಾಟಕಕ್ಕೆಲ್ಲ ಪರಿಚಿತವಾದ ಸೀತೀಮನೆಯು ಈಗ್ಗೆ ೩ ವರ್ಷಗ

ಕಿಂದಲೂ ಅಖಂಡ ಭರತಖಂಡದವರಿಗೂ ಪರಿಚಿತವಾಗಿದೆ. ಭರತಖಂಡಕ್ಕೆ ಸೀತೀಮನೆಯ ಪರಿಚಯ ಮಾಡಿಕೊಟ್ಟ ಶ್ರೇಯವು, ಭರತಖಂಡದಲ್ಲಿ ಸ್ವಯಂ ಸೇವಕರ ಆದ್ಯ ಉತ್ಪಾದಕರಾದ ಹುಬ್ಬಳ್ಳಿಯ ನಮ್ಮ ಡಾ. ಹರ್ಡೀಕರ ನಾರಾಯಣರಾಯರಿಗೆ ಹೋಗುತ್ತದೆ. ತಮ್ಮ ಕರ್ನಾಟಕ ಸ್ವಯಂಸೇವಕರ ಶಿಕ್ಷಣವನ್ನೂ, ಅಖಿಲ ಭರತಖಂಡದ ಸ್ವಯಂಸೇವಕರ ಶಿಕ್ಷಣವನ್ನೂ ಡಾಕ್ಟರರು ಸೀತೀಮನೆಯಲ್ಲಿ ನಿವಾಸಮಾಡಿಕೊಂಡು ಕೊಟ್ಟಿದ್ದನ್ನು ಎಲ್ಲರೂ ಬಲ್ಲರು. ಆದುದರಿಂದ ಸೀತೀಮನೆಯು ಧಾರ್ಮಿಕ, ಆರೋಗ್ಯಕರ ಹಾಗೂ ರಾಜಕೀಯ ದೃಷ್ಟಿಯಿಂದ ಪ್ರಸಿದ್ಧವಾಗಹತ್ತಿದೆಂಬದು ಸ್ಪಷ್ಟವಿದೆ. "ಸೀತೀಮನೆ" ಎಂದರೆ ಸೀತಾದೇವಿಯ ಮನೆ. ದಂಡಕಾರಣ್ಯದಲ್ಲಿ ರಾಮದೇವರು ವನವಾಸಿಗಳಾದಾಗ್ಗೆ ಇಲ್ಲಿಗೆ ಬಂದಿದ್ದರೆಂದೂ, ಸೀತಾಮಾತೆಯು ಅಗ್ಗೆ ಮನೆಮಾಡಿಕೊಂಡಿದ್ದರಿಂದ ಇದಕ್ಕೆ ಸೀತೀಮನೆ ಎಂಬ ಹೆಸರು ಬಂದಿದೆಯೆಂತಲೂ ಆಖ್ಯಾಯಿಕೆಯಿದೆ. ಈಗಲೂ ಊರ ಹತ್ತರದಲ್ಲಿ ಸೀತಾಗುಡ್ಡ ವೆಂಬ ಗುಡ್ಡವೂ ಅದರಲ್ಲಿ ಸೀತಾದೇವಿಯ ಗುಡಿಯೂ ಅವೆ.

ಶ್ರೀನಿವಾಸ ರಾಜೇರಾವ ಮಂಗಳವೇಢೆ.

ವರ್ತಮಾನ ಸಾರ

ಇಹವೃತ್ತ.

ಈ ವಾರದಲ್ಲಿ ಮಳೆಯಿಲ್ಲ.

ಈ ಊರಲ್ಲಿ "ಶ್ರೀ ಗುರು ಬಸವ ವಾಚನಾಲಯ"ವೆಂಬದೊಂದು ಸಾರ್ವಜನಿಕ ಓದುಮನೆ ಇರುವುದಷ್ಟೇ! ಅಲ್ಲಿ ಈಗ ಕನ್ನಡಿಗರ ಮತ್ತು ಮರಾಠರ ನಡುವೆ ಬಲವಾದ ತಂಟೆಬಂದಿದೆ. ಅಲ್ಲಿ ಕನ್ನಡ ವೃತ್ತಪತ್ರಿಕೆಗಳು ಸಾಕಷ್ಟಿಲ್ಲ. ನಿಝಾಂ ಮತ್ತು ಕೊಡಗು ಕರ್ನಾಟಕಗಳ ಪತ್ರಿಕೆಗಳನ್ನೇ ತರಿಸಿಲ್ಲ. ಇನ್ನೂ ಎಷ್ಟೋ ಕನ್ನಡ ಪತ್ರಿಕೆಗಳ ಅವಶ್ಯವಿದ್ದರೂ ಮರಾಠಿ ವೃತ್ತಪತ್ರಿಕೆಗಳು ಬರುತ್ತವೆ. 'ನವಾಕಾಳ' ಎಂಬ ದೈನಿಕವನ್ನು ಹೆಚ್ಚುಹಣಕೊಟ್ಟು ತರಿಸುತ್ತಿದ್ದರು. ಈಗ ಅದನ್ನು ಬಂದುಮಾಡಿದ್ದಾರೆ. ಆದರೆ, ಒಬ್ಬಿಬ್ಬ ಮರಾಠರು ಅದನ್ನು ಮತ್ತೆ ತರಿಸಿಯೇ ತೀರುವೆವೆಂಬದಾಗಿ, ಒತ್ತಾಯದಿಂದ ಕಮೀಟಿಯವರಿಗೆ ತಿಳಿಸಹತ್ತಿದ್ದಾರೆ. ಈ ಒತ್ತಾಯದ ಕಾಯಿದೆಯನ್ನು ಕಮೀಟಿಯವರು ರದ್ದುಪಡಿಸಿ, ಕನ್ನಡ ದೈನಿಕಗಳಾದ 'ಸಂಯುಕ್ತಕರ್ನಾಟಕ, ಪ್ರಜಾಮಿತ್ರ, ವಿಜಯ, ರಾಜಹಂಸ' ಇಲ್ಲವೆ ಮತ್ತಾವ ಕನ್ನಡ ವೃತ್ತಪತ್ರಿಕೆಗಳನ್ನು ತರಿಸಬಹುದು.

ಇಲ್ಲಿಯ ಸಬ್ ಜಜ್ಜರಾದ ಶ್ರೀ ಬಾಲಸೇಯವರಿಗೆ ಮುಜ್ಜಫರಪುರಕ್ಕೆ ವರ್ಗವಾಗಿದ್ದರಿಂದ ಅವರು ಕಳೆದ ವಾರದಲ್ಲಿ ಅಲ್ಲಿಗೆ ಹೋದರು. ಇವರ ಬದಲು ಹುಬ್ಬಳ್ಳಿಯ ಶ್ರೀ ವೇದಧರರು ಬರುವರು.

ತಾಲೂಕ ಕಚೇರಿಯಲ್ಲಿಯ ಶಿರಸ್ತೇದಾರರಾದ ಶ್ರೀ ಮುಂಡೆವಾಡಿಯವರಿಗೆ ಶಿಂದಿಗಿಗೆ ವರ್ಗವಾಗಿದ್ದು ಅವರ ಬದಲು ಶ್ರೀ ದಾರೂಕಾರರು ಬಂದಿರುವರು.

ಮುಂಬೈಕರ್ನಾಟಕ

ಧಾರವಾಡದ ಕರ್ನಾಟಕ ಹೈಸ್ಕೂಲಿನ ಟ್ರೇನಿಂಗ ಡೀನರಾದ ದೇಶಪಾಂಡೆಯೆನ್ನುವವರು ವಿದ್ಯಾರ್ಥಿಗಳ ಫೈಕ ೫೦ ರೂ. ಎತ್ತಿ ಹಾಕಿದ್ದಕ್ಕಾಗಿ ೧ ತಿಂಗಳ ಕಠಿಣ ಶಿಕ್ಷೆ ಅನುಭವಿಸಬೇಕು ೨೦೦ ರೂ. ದಂಡ ಕೊಡಬೇಕಾಗಿ "ಮ್ಯಾಜಿಸ್ಟ್ರೇಟರು" ವಿಧಿಸಿದ್ದಾರೆ ಅಪೀಲಾಗಿದೆ.

ಮಸೀದಿಗಳ ಮುಂದೆ ವಾದ್ಯ ಬಾರಿಸಲು ಹಿಂದೂ ಜನರಿಗೆ ಕಲೆಕ್ಟರರು ಅಪ್ಪಣೆಕೊಟ್ಟಿದ್ದನ್ನು ವಿರೋಧಿಸುವದಕ್ಕಾಗಿ, ಕೊಲ್ಹಾಪುರದ ಮುಸಲ್ಮಾನರು ಮೊಹರಮ್ಮಿನಲ್ಲಿ ತಾಬೂತಗಳನ್ನು ಎಬ್ಬಿಸಿಲ್ಲ.

ಕುಮಾರ ವ್ಯಾಸನ ಕೈ ಬರಹದ ೧೮ ಪರ್ವ ಭಾರತವು ಕಿರಿಟ್ಟಿಯ ಫಕೀರಸ್ವಾಮಿಯ ಮಠದಲ್ಲಿದೆಯಂತೆ! ವೀರಶೈವ ಮಠದ ಸಾಕಿದಾತು ತಾಬಬಾಲಿಗಳು ಇದೇ ಮಠದಿಂದ, ತೊರದಿದ್ದು ದೈವರಾಜಾದಿನ ಓರ್ವ ಮುಸಲ್ಮಾನನ ಕೈಸೇರಿ, ಅಲ್ಲಿಂದ ಜರ್ಮನಿಗೆ ಹೋದವಂತೆ! ಕನ್ನಡಿಗರ ದೈನ್ಯಾವಸ್ಥೆಯು ಎಂದು ಮಾಯುವದೋ!

ಸವಣೂರ ನವಾಬ ಸಾಹೇಬರ ಮಗನು ತೀರಿಕೊಂಡನೆಂಬ ದುಃಖದಾಯಕವಾದ ಸುದ್ದಿಯನ್ನು ಅರುಹಲು ನಾವು ವಿಷಾದ ಪಡುತ್ತೇವೆ, ಇವನೇ ಗಾದಿಯ ಮಾಲಕನಾಗತಕ್ಕವನಿದ್ದನು. ಇವನ ಹೊರ್ತಾಗಿ ನವಾಬರಿಗೆ ಗಂಡು ಸಂತಾನವಿಲ್ಲ.

ಮದ್ರಾಸಕರ್ನಾಟಕ.

ದಕ್ಷಿಣ ಕನ್ನಡ ಕ್ಷತ್ರಿಯರ ಸಂಘವೊಂದು ಸ್ಥಾಪಿಸಲ್ಪಟ್ಟಿದ್ದು, ಅದರ ಮುಖ್ಯ ಕಾರ್ಯಾಲಯವು ಕಾಸರಕೋಡಿನಲ್ಲಿದೆ.

ಬ್ರಹ್ಮದೇಶದಲ್ಲಿರುವ ಮಂಗಳೂರಿನ ಶ್ರೀ ಕಾರ್ನಾಡ ವಿಶ್ವೇಶ್ವರ ರಾಯರಿಗೆ, ಅಲ್ಲಿಯ ಗವರ್ನರರು, ಅವರು ಮಾಡಿರುವ ಸಹಾಯದ ಸಲುವಾಗಿ ಒಂದು ಬಹುಮಾನ ಪತ್ರವನ್ನೂ, ಬೆಳ್ಳಿಯ ಗಡಿಯಾರವನ್ನೂ ದಯಪಾಲಿಸಿರುವರು.

ಮಂಗಳೂರಿನ ನವಸುಧಾರಕ ನಾಟಕ ಮಂಡಳಿಯವರು ಕಲಿಯುಗದ ಸತಿ ಎಂಬ ನವ ರಸಭರಿತವಾದ ಸಾಮಾಜಿಕ ನಾಟಕವನ್ನು ಕಾಸರ್‌ಕೋಡಿನಲ್ಲಿ ಅಭಿನಯಿಸಿದರು. ಅಭಿನಯವು ಮೇಲ್ತರದಾಗಿದ್ದಿತು. ಸಭಿಕರು ನಾಟಕಾಂತ್ಯದಲ್ಲಿ ಕಂಪನಿಯವರನ್ನು ಬಹು ಕೊಂಡಾಡಿದರು.

ಮೈಸೂರ ಕರ್ನಾಟಕ

"ವೀರಶೈವರ ಇತಿಹಾಸ" ವೆಂಬ ವಿಷಯದ ಮೇಲೆ ನಿಬಂಧವನ್ನು ಬರೆದು ೧೯೨೭ ಇಸ್ವಿ ಜೂನ ತಿಂಗಳೊಳಗಾಗಿ ಮೈಸೂರ ವಿಶ್ವವಿದ್ಯಾಲಯದ 'ರಜಿಸ್ಟರ'ರಿಗೆ ಕಳಿಸಿದವರಲ್ಲಿ, ಉತ್ತಮವಾದ ನಿಬಂಧಕ್ಕೆ ೧೦೦ ರೂ ಸುವರ್ಣ ಪದಕವು ದೊರೆಯುವದು. ಹೆಚ್ಚಿನ ಸಂಗತಿಗಳನ್ನು ಇಚ್ಛಿಸುವವರು ಮೈಸೂರ ವಿಶ್ವವಿದ್ಯಾಲಯದ ರಜಿಸ್ಟರರಿಂದ ತಿಳಿದುಕೊಳ್ಳಬಹುದು.

ಜುಲೈ ತಿಂಗಳಲ್ಲಿ ಕೋಲಾರ ಚಿನ್ನದ ಕಣಿಯಿಂದ ೮। ಲಕ್ಷ ರೂಪಾಯಿ ಬೆಲೆಯ ಬಂಗಾರವು ಮುಂಬೈ ಟಂಕಸಾಲೆಗೆ ಹೋಗಿದೆ.

ಕೊಡಗು ಕರ್ನಾಟಕ

ಮಡಿಕೇರಿಯ ಮುನಸಿಪಾಲ್ಟಿಯ ಚುನಾವಣೆಯು ಅತ್ಯಂತ ಉತ್ಸಾಹದಿಂದ ಕಳೆದ ವಾರದಲ್ಲಿ ಕೊನೆಗಂಡಿತು.

ಮುಂಬೈ ಇಲಾಖೆಗೆ ಅರಣ್ಯ ಖಾತೆಯಲ್ಲಿ ಕೆಲಸ ಮಾಡಲು 'ರೇಂಜರರು' ಬೇಕಾಗಿರುವರೆಂದೂ, ಕೊಡಗಿನ ಕನ್ನಡಿಗರು, ಇಚ್ಛಿಸಿದ್ದರೆ, ಮುಂಬೈ "ಪ್ರಾಂತದ ಫಾರೆಸ್ಟ ಚೀಫ್ ಕನ್‌ಸರ್ವೆಟರ" ವರಿಗೆ ಸಪ್ಟಂಬರ ೧ ರೊಳಗೆ ಅರ್ಜಿ ಮಾಡಬೇಕೆಂದೂ. ಉಮೇದವಾರರು, ಕೊಯಮತ್ತೂರಿನ ಕಾಲೇಜಿನಲ್ಲಿ ಶಿಕ್ಷಣ ಪಡೆಯಬೇಕೆಂದೂ, ಕೊಡಗಿನಲ್ಲಿಯೂ ಪ್ರಕಟವಾಗಿದೆ. ಕೊಡಗು, ಮದ್ರಾಸ, ಹಾಗೂ ಮುಂಬೈ ಕರ್ನಾಟಕಗಳು ಅರಣ್ಯ ಖಾತೆಯಲ್ಲಿ ಯಾದರೂ ಏಕೀಕರಣದ ಕಲ್ಪನೆಯನ್ನು ವೃದ್ಧಿ ಪಡಿಸಲಿ! ಕೊಡಗಿನ ಕನ್ನಡಿಗರು ಅವಶ್ಯವಾಗಿ ಅರ್ಜಿ ಕೊಡಬೇಕು.

ನಿಝಾಂ ಕರ್ನಾಟಕ

ಧೀರ ಜಿಲ್ಲೆಯಲ್ಲಿ ಬೀದಿಗಳನ್ನು ನಿರ್ಮಿಸುವದಕ್ಕಾಗಿ ನಿಝಾಂ ಸರಕಾರದವರು ೩೯ ಸಾವಿರ ರೂಪಾಯಿಗಳನ್ನು ಮಂಜೂರ ಮಾಡಿರುವರಂತೆ! ನಿಝಾಂ ಸಾಹೇಬರಲ್ಲಿ ಕೊಂಚವಾದರೂ ಕಲ್ಯಾಣ-ಬುದ್ಧಿಯಿದೆನ್ನಬೇಕಾಗುವದು.

ಹಿಂದುಸ್ಥಾನ.

ಮದ್ರಾಸ ಗವರ್ನರರು ರಾಮೇಶ್ವರಕ್ಕೆ ಹೋಗಿ, ಅಲ್ಲಿಯ ರಾಮಲಿಂಗ ಮಂದಿರದ ದರ್ಶನ ತೆಗೆದುಕೊಂಡು ಬಂದರಂತೆ!

ಪರದೇಶ.

ಬ್ರೇಝಿಲದ ಅರಣ್ಯಗಳಲ್ಲಿ ಇಜಿಪ್ತದಕ್ಕಿಂತಲೂ ಹಳೆಯ ಸಂಸ್ಕೃತಿಯ ಕುರುಹುಗಳಿವೆಯಾದ್ದರಿಂದ ಅವನ್ನು ಶೋಧಿಸಲು ಇಂಗ್ಲಂಡದ ಕರ್ನಲ್ ಫಾವಸೆಟ್ ಮತ್ತು ಅವನ ಸಂಗಡಿಗರು ಹೋಗಿದ್ದು ಅವರ ಒಗ್ಗೆ ಯಾವ ಸುದ್ದಿಯೂ ಹತ್ತದೆ ಬಹು ದಿನಗಳಾದವು. ಈ ಪ್ರದೇಶಕ್ಕೆ ಹಿಂದಕ್ಕೆ ಹೋದವರಾರೂ ಜೀವಂತರಾಗಿ ಬಂದಿಲ್ಲ. ಅರಣ್ಯವಾಸಿಗಳು, ಮನುಷ್ಯರನ್ನು ತಿನ್ನುವುದುಂಟು; ವಿಷಕಾರಿಯಾದ ಗಿಡಗಳೂ ಹೆಚ್ಚಾಗಿವೆ. ಆದ್ದರಿಂದ ಅವರ ಬಗ್ಗೆ ಜನರು ಚಿಂತಿಸುತ್ತಲಿದ್ದಾರೆ.

ಕೇವಲ ಕನ್ನಡಿಗರ ಸಲುವಾಗಿ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡತಕ್ಕಂಥ—

ಕನ್ನಡಿಗರ ಸಲುವಾಗಿ

ಮೋಟರವರ್ಗ.

ನಮ್ಮಲ್ಲಿ ಮೋಟರ ನಡೆಸುವದು, ಬಿಚ್ಚಿಕೂಡಿಸುವದು ಮತ್ತು ಒಳಗಿನ ಯಂತ್ರಗಳನ್ನು ದುರಸ್ತ ಮಾಡುವದು ಮುಂತಾದ ಎಲ್ಲ ಮಾಹಿತಿಯನ್ನು ಕನ್ನಡನುಡಿಯಲ್ಲಿಯೇ ಕೊಡುವದರಲ್ಲಿ ಬರುವದು. ಆದ್ದರಿಂದ ಕನ್ನಡಿಗರಿಗೆ ನಮ್ಮ ವರ್ಗದಿಂದ ಬಹಳೇ ಲಾಭವಾಗುವದು.

ಕೋರ್ಸ:— ಕೇವಲ ಒಂದೇ ತಿಂಗಳ. "ಫೋರ್ಡ" ಕಲಿಯಲಿಕ್ಕೆ ಫೀ ೭೦ ರು.

"ಫೋರ್ಡ" ಮತ್ತು "ಇಂಗ್ಲೀಶ" ಕೂಡಿ ಫೀ ೮೦ ರು. **ಮಾಹಿತಿ ತರಿಸಿಕೊಳ್ಳಿರಿ.**

ವಿಳಾಸ:— ಮ್ಯಾನೇಜರ ಕುಲಕರ್ಣಿ ಮೋಟರ ಸ್ಕೂಲ.

೪೯೫ ಶನಿವಾರ ಪೇಟೆ ಜಮಖಂಡಿಕರವಾಡೆ. ಪುಣೆಶಹರ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರ್ಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ.—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

AWAKE! AWAKE! AWAKE!

GOLD[illegible] CHANCE.

IMITATION [illegible] DIAMONDS.

14 Sample set 6 K[illegible]	Rs. 10/-
14 Sample Cut Rubies 8 Karats.	Rs. 1/-
Silky Muslins [illegible] fine borders	yards 12,
sufficient for 6 [illegible]	Rs. 7/8/-
Sample Shirts 3	Rs 5/

Apply to English correspondence of

A. S. M. Chetty & Co

CHICACOLE. Ganjam Dist.

Price List Free.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟಿ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು, ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

॥ ಶ್ರೀ ॥

ತ್ವರೆಮಾಡಿರಿ! ಅಡಚಣೆಯು ದೂರಾಯಿತು!!

ಮನಿ, ವಖಾರ, ಮೋಟಾರ ಶೆಡ್ ಮುಂತಾದ

ಇಮಾರತ ಕಟ್ಟಿಸುವವರಿಗೆ

ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನು ಖರೇದಿಗೆ ಕೊಡತಕ್ಕದ್ದಿರುತ್ತದೆ.

ಸಾಹುಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೆ ಅನುಕೂಲವಾಗಿರುವ ಸ್ಥಳವು ಮತ್ತು ಆರೋಗ್ಯಕರವಾದದ್ದು. ಇದಕ್ಕೆ ಬೇಕಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವಿಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನುಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಬೇಕೆನ್ನುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟಿ	**ಬಿಂದುರಾವ ಟಂಕಸಾಲಿ**
೨೧-೬-೨೬	**ಡಾಕ್ಟರ,**

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ ಎಚ್ ವೀರಣ್ಣ
ಪ್ರೊಪ್ರೈಟರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು [illegible] ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R C P. M. R. C S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ಶರ್ತಿ ಇಲ್ಲದೆ ೧೦೦೦ ರೂ. [illegible] ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಬಾಂಡ ನಂ [illegible] ಮಿ|| ವಿಠ್ಠಲ [illegible] ಕಲ್ಯಾಣ ಅಲಿಬಾಗ ಕೊಲಾಬಾ,

(೨) ಬಾಂಡ ನಂ [illegible] ಮಿ|| ರಂಗಪ್ಪಾ ಶ್ಯಾನಭೋಗ [illegible] ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ ತುಮಕೂರು)

(೩) ಬಾಂಡ ನಂ [illegible] ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, [illegible] ಹೆಬ್ಬಣಕೇರಿ ಹೊನ್ನಾವರ ಪೋಸ್ಟ [illegible] ಕ್ಯಾನರಾ.

(೪) L. R. C. ಬಾಂಡ ನಂ [illegible] ಮಿ|| ಜಿ. ವೆಂಕಟಪ್ಪಾ [illegible] ಮತ್ತು ಜಮೀನದಾರ ಬ್ರುಸಾಪೇಟ ಬಳ್ಳಾರಿ.

(೫) ಬಾಂಡ ನಂ [illegible] ಮಿ|| ರಾಮಚಂದ್ರ ವಾಮನ ಕಾಂ[illegible] ಕಾಲುಸ್ಕರ ವಾಡಾ ಪ್ಯಾಲೇಸರೋಡ (ಬರೋಡಾ)

(೬) ಬಾಂಡ ನಂ. [illegible] ಮಿ|| ಆರ್ ಎಚ್. [illegible] ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ದಕ್ಷಿಣ)

ಬಿ. ಎನ್ ಆರಾಧ್ಯ
ಜೇನರಲ ಏಜಂಟ ([illegible])

ಪಕ್ಕೀ ಮೋಟಾರ

ಸೋವೀದರದಿಂದ ಮತ್ತು ಹೊಸ ಮೋಟಾರ ಉದ್ದಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

[illegible] ಗರೆವಾರೆ
ಮಹಾಲಕ್ಷ್ಮೀ ಮುಂಬೈ ನಂಬರ ೪

[illegible]

[illegible]

ಅಸಲ, [illegible], ಸ್ವಿಸ್ ಮೇಡ ಗೋಲ್ಡ ಗಿಲ್ಟ
ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ ಖ ಪ್ರತ್ಯೇಕ

ಟಿಪ್ಪಣಿ:— ಗಡಿಯಾಳವನ್ನು ಕೇಳುವಾಗ್ಗೆ ಕಾಳಜಿಯಿಂದ ತಿಳಿಸಿಸಿ ಮತ್ತು ಟಾಯಿಮ. ಪಸ್ಯೆ ಹಚ್ಚಿ ಕಳಿಸವೆವು

[illegible] ವಾಚ ಕಂ. (India) ಮುಂಬೈ ನಂ. ೪

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN [illegible] SIZE AND STRENGTH
THE GREATEST INDIAN
LIFE ASSURANCE COMPANY
Apply for full particulars to—
[illegible] Kulkarni Agent Bagalkot

ಅನುಪಾಲ್ಯ ಸಂಧಿ.

ನಮ್ಮಲ್ಲಿ ಉತ್ತಮ ತರದ ಎಲ್ಲಾ ವಿಧವಾದ ರೇಶ್ಮಿ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು [illegible]

[illegible]

ಕಂಪನಿ,

ಈ ಪತ್ರಿಕೆಯು [illegible]
ವಿದ್ಯಾರ್ಣ್ಯಮುದ್ರಣಾಲಯದಲ್ಲಿ ಮುದ್ರಿ[illegible] ಪ್ರಸಿದ್ಧಿಸಲ್ಪಟ್ಟಿತು.

(೩ ನೇ ಪುಟದಿಂದ ಬಂದದ್ದು)
ಡದ ದಂಡವನ್ನು ಎತ್ತಿಹಿಡಿದವರೆಂದರೆ ದಂಡಾವತೀ ಬಸಯ್ಯನವರೇ. ರುದ್ರಾವತಾರದ ಚಿನ್ಹವನ್ನು ಧರಿಸಿರುವರಾದ್ದರಿಂದ ಆರಿಸಿಬಾರದೇ ಉಳಿಯರು. ಕಾಮ ಧ್ವಂಸವಾದ ನಂತರ ಶಿವನು ತನ್ನ ತೃತೀಯ ನೇತ್ರವನ್ನು ಮುಚ್ಚಿದಂತೆ, ದಂಡಾವತಿಯವರು ಇನ್ನು ಪುನಃ ಆರಿಸಿ ಬಂದಮೇಲೆ, ತಮ್ಮ ತೃತೀಯ ನೇತ್ರವನ್ನು ಮುಚ್ಚಿ, ಶಾಂತಸ್ವಭಾವದಿಂದ ಮುನಸಿಪಾಲ್ಟಿಯ ಸಭಾಸದತ್ವವನ್ನು ಸಾಗಿಸುವರಾಗಿ ಆಶೆಯಿದೆ.

ಶಂಕರನ ಲಯದ ಕಾರ್ಯವು ಮುಗಿದದ್ದರಿಂದ ಈಗ್ಗೆ ಮುನಸಿಪಾಲ್ಟಿಯ ಪುನರ್ನಿರ್ಮಾಣ ಕಾರ್ಯ ನಡೆದಿದೆ. ಇಂತಹ ಸಮಯದಲ್ಲಿ ೪ ನೇ ನಂಬರಿನಲ್ಲಿ ನಗರ ಸಂರಕ್ಷಣಾರ್ಥವಾಗಿ ಬಾಲಕೃಷ್ಣರು ಬಂದುದು ಸಯುಕ್ತವು. ಸಿದ್ಧಿವಿನಾಯಕನ ಮೊರೆಹೊಕ್ಕವರಾದ ವೆಂಕಟದಾಸರ ಬಾಳಕೃಷ್ಣರಿಗೆ ಜಯವು ಕಟ್ಟಿಟ್ಟದ್ದು. ಅದರೆ ಜಯದ ನಂತರ, ಶ್ರೀಕೃಷ್ಣನು ಅರ್ಜುನನ ಸಾರಥಿಯಾಗಿದ್ದಂತೆ ತೋರಿಸಿದರೂ, ಎಲ್ಲರನ್ನು ತನ್ನ ಅಧೀನದಲ್ಲಿಟ್ಟುಕೊಂಡು, ಚಾತುರ್ಯದಿಂದ ಕಾರ್ಯ ಸಾಧಿಸಿಕೊಳ್ಳುತ್ತಿದ್ದಂತೆ, ಬಾಲಕೃಷ್ಣರು ಅವಶ್ಯವಿದ್ದಂತಹ ಮೋಹನಾಸ್ತ್ರವನ್ನು ಪ್ರಯೋಗಿಸಿ, ಸ್ವತಃ ತಾವು ಯಾರ ವಶರಾಗದೇ, ಮುನಸಿಪಾಲ್ಟಿಯ ಸಭಾಸದರನ್ನೇ ತಮ್ಮ ವಶದಲ್ಲಿಟ್ಟುಕೊಂಡು, ನಗರ ಸಂರಕ್ಷಣೆಯ ಕಾರ್ಯವನ್ನು ಕೈಕೊಂಡರೆ ಭೂಷಣವಾಗುವದು. ೫ ನೇಯವರು ಸುಪ್ರಸಿದ್ಧ ವ್ಯಾಪಾರಸ್ಥರಾದ ವೀರಶೆಟ್ಟಿ ಗುರುಸಂಗಪ್ಪನವರು. ಬ್ರಾಹ್ಮಣ- ಬ್ರಾಹ್ಮಣೇತರ ಪ್ರೀತಿಯ ಸಂಗಮಸ್ಥಾನವು (ಗುರು) ಸಂಗಪ್ಪನವರಲ್ಲಿದೆ. ಧರ್ಮಭಾವನೆ ಯುಳ್ಳವರಿವರು. ಇಂಥವರು ಅರಿಗೆ ಬೇಡ? ಚೊಕ್ಕ ಭಂಗಾರಕ್ಕೆ ಚುನಾವಣೆಯ ಪೇಟೆಯಲ್ಲಾಗಲೀ ಅವದೇ ಪೇಟೆಯಲ್ಲಾಗಲೀ ಬೆಲೆ ಬಂತಕ್ಕದ್ದೇ. ೬ ನೇಯವರು ಜಂಗಿನ ಮುರಗಯ್ಯನವರು. ಹೆಸರಿನಂತೆ ಯಾವದೇ ಕೆಲಸವಾಗಲಿ ಜಂಗೀ ಇದ್ದರೆ ಇವರಿಗೆ ಸಮಾಧಾನವಾಗುತ್ತದೆ. ವಿರೋಧಿಗಳಿಗೆ ಮುರಿಗೆಯ್ಯನವರು ಮುರಿಗೆ ಹಾಕದೇ ಇರರು. ಆರಿಸಿ ಬಂದ ಮೇಲೆ ಮುನಸಿಪಾಲ್ಟಿಯನ್ನೆಲ್ಲ "ಜಂಗೀ" ಕನ್ನಡ ಮಾಡಬೇಕೆಂದು ಯೋಚಿಸಿದ್ದಾರೆ. ಕರ್ನಾಟಕದಲ್ಲಿ ಕನ್ನಡಶಾಲೆಗಳ ಹೊರ್ತಾಗಿ ಉಳಿದ ಶಾಲೆಗಳೇಕೆಂದು ಇವರು ಸಾಧಿಸುತ್ತಿರುವರು. ಸರಸ್ವತಿಯ (ಹಣ್ಣವಿಡೆ) ಭಕ್ತರು. ಇಂಥವರಿಗೆ ಜಯವಾಗಬೇಕೆಂದ್ದೇಕೆ? ಸಹಣೂರ ಶ್ರೀನಿವಾಸರಾಯರು ೭ ನೇ ಉಮೇದ್ವಾರು. ಶ್ರೀನಿವಾಸರಾಯರು ಜನುಮಪ್ಪನ ಗದೆಯನ್ನು ಚಿಹ್ನವಾಗಿಟ್ಟುಕೊಂಡಿದ್ದಾರೆ. ಅದರಿಂದ ಸಹಣೂರಿನ ಹತ್ತಿರುವ ಬಂಕಾಪುರದ ಸ್ವಾಮಿಗೆ ತಮ್ಮ ಪ್ರತಿಸ್ಪರ್ಧಿಗಳನ್ನು ಚಿಮ್ಮದೇ ಬಿಡಲಿಕ್ಕಿಲ್ಲ.

ವಾರ್ಡ ನಂ. ೩ ರಲ್ಲಿ ಬ್ಯಾಳಿ ಅಯ್ಯಪ್ಪನವರೂ ದಂಡಾವತಿ ಬಸಯ್ಯನವರೂ ಪುನಃ ಹಣಿಕೆ ಹಾಕಿರುವರು. ಅಯ್ಯಪ್ಪನವರು ಚಿನ್ಹವನ್ನು ಮಾತ್ರ ಬದಲಿಸಿದ್ದಾರೆ. ಮೊದಲಿನ ಚಿನ್ಹವಾದ ನಂದಿಯ ಬದಲು ಆನೆಯನ್ನೇಕೆ ಇಟ್ಟು ಕೊಂಡಿರುವರೋ ತಿಳಿಯದು. ೩ ನೇ ಉಮೇದವಾರರು ಕಣಬೂರ ಗೋವಿಂದರಾಯರು ೧ನೇ ವಾರ್ಡಿನಿಂದ ನೆಟ್ಟಗೆ ೩ ನೇ ವಾರ್ಡಿಗೆ ಜಿಗಿದಿದ್ದಾರೆ. ತೀರ ಪಶ್ಚಿಮ ಭಾಗವಾದ ವಂಕಟಪೇಟೆಯಿಂದ ತೀರ ಪೂರ್ವದ ಭಾಗವಾದ ಕೌಲಪೇಟೆಗೆ ಓಡುವ ಪ್ರಸಂಗವು ಒಂದಿರಬಹುದು. (ಲಕ್ಷ್ಮೀರಮಣ) ಗೋವಿಂದನು ವೆಂಕಟ (ಗಿರಿ) ಪೇಟೆಯಲ್ಲಿರುವದು ಯೋಗ್ಯವು. ಕೌಲೆತ್ತಿನಂತೆ ಕೌಲಪೇಟೆಯಲ್ಲಿ ಗೋಣನ್ನ ಗಳಾಡಿಸಿದರೆ, ಅದು ಯಶಸ್ಸನ್ನು ತಂದು ಕೊಡಬಹುದೇ? ಈರಶೆಟ್ಟಿ ಗುರುಸಂಗಪ್ಪನವರೂ, ಜೊಗಿನ ಮುರಗೆಯ್ಯನವರೂ ಸಹ ಈ ವಾರ್ಡಿನಲ್ಲಿ ನಿಂತು ಟೋಪಿ ಹಾಕಿರುವರು. ಚಿನ್ಹಗಳನ್ನು "ಅದಲು ಬದಲು ಕಂಚೀ ಬದಲು" ಮಾಡಿ, "ಇವರನ್ನ ಬಿಟ್ಟು ಇವರಾರು" ಎಂಬವಾಗಿ ಗೊಂದಲ ಹಾಕಬೇಕೆಂದಿರುವರೋ ಏನೋ? ಮಹಾಂತಪ್ಪಾ ತಪಶೆಟ್ಟಿಯವರು ಶಿವಲಿಂಗಚಿನ್ಹವನ್ನು ಧರಿಸಿ, ತಪಸ್ಸನ್ನು ಮಾಡುತ್ತಿಲಿರುವರು. ಇವರು 'ಅಪ್ಪ' ರುದ್ರನ ಮಕ್ಕಳು ಮೇಲೆ 'ಮಹಾಂತಪ್ಪನವರು; ಪ್ರಸಾದವನ್ನು ಕೊಡದೇ ಇರಲಿಕ್ಕಿಲ್ಲ ೭ ನೇ ಯವರಾದ ಮುಗಳಿಕ್ಕಿ ಪ್ರಭಪ್ಪನವರಿಗೆ ಗಡಿಯಾಳದ ಮೇಲೆ ಪ್ರೀತಿಯಾಗಿದೆ. ವ್ಯಾಪಾರಿಗಳು ಗಡಿಯಾಳದಂತೆ ನಿಯಮಿತ ತನದಿಂದ ನಡೆದರೆ ಮಾತ್ರ, ಯಾವದೇ ವ್ಯಾಪಾರದಲ್ಲಿ ಲಾಭವಾಗುವದು. ೮ ನೇಯವರಾದ ಬಾಗೋಡಿ ಶಿದ್ದಪ್ಪನವರನ್ನು "ಕನ್ನಡಿಗ"ನು ಅರಿಯನು.

೪ ನೇ ವಾರ್ಡಿನಲ್ಲಿ ಬಣ್ಣಗಾರ ಬಸಪ್ಪನವರು ಸಹ ಸರ್ಕಸ್ಸಿನ ಅರಬ್ಬಿ ಕುದುರೆಯನ್ನೇರಿ ಬಂದಿರುವರು. ಅಂದಮೇಲೆ ಚುನಾವಣೆಯ ಸರ್ಕಸ್ಸಿನ ಜಗಿದಾಟದಲ್ಲಿ ತಮ್ಮ ಬಣ್ಣ ತೋರಿಸದೇ ಬಿಡರು. ವೀರಶೆಟ್ಟರಿಗೆ ಚಾಂಚಲ್ಯವು ಹೆಚ್ಚಾಗಿದೆಯಂತೆ. ತಮ್ಮ ಹಿಂದಿನ ಎರಡೂ ಚಿಹ್ನಗಳನ್ನು ಬದಲಿಸಿ ಗಡಿಯಾರ ಚಿಹ್ನವನ್ನು ಧರಿಸಿ ಪುನಃ ಈ ವಾರ್ಡಿನಲ್ಲಿಯೂ ತಮ್ಮ ಬೇಟೆಯ ನಾಯಿಯನ್ನು ಛೂ ಬಿಟ್ಟಿರುವರು! ಹುಚ್ಚಪ್ಪಾ ವೈಜಾಪೂರ ಹಾಗೂ ಮೊಕಾಶಿ ಇರಬಸಪ್ಪನವರು ಜೋಡಿಯಿಂದ ನಿಂತಿರುವರು. ಈಗ್ಗೆ ಇವರು ಸಭಾಸದರಿದ್ದಾರೆ. ಮತ್ತೆ ಆಗಬಹುದು. ೫ ನೇಯವರಾದ ಕರಬಸಪ್ಪನವರಿಗೆ ಇಂಡಿಯವರೆಂಬ ಅಡ್ಡ ಹೆಸರು. ಇಂಡಿಯು ಬಾಗಲಕೋಟೆಗೆ ದೂರಾಗಿರುವದು. ಇವರ ಚಿನ್ಹವಾದ ಆಕಳವಾದರೂ ತನ್ನ ಗೋಣನ್ನು ದೂರದ ವರೆಗೆ ಚಾಚಿರುವದು. ಮತದಾರರು ಇರಕಳ ಆಕಳವೆಂದು ದೂರಸರಿದು ನಿಂತರೆ.........? ಕೋಲ್ಹಾರ ಮುರಿಗೆಪ್ಪನವರು ೧ ನೇ ವಾರ್ಡಿನಲ್ಲಿದ್ದ ಲಿಂಗವನ್ನು ತ್ಯಜಿಸಿ ಆನೆಯನ್ನು ಹಿಡಿದುಕೊಂಡು ಬಂದಿರುವರು. ಇಲ್ಲಿ ವೈಭವದ ಆಶೆಯಾಯಿತೋ! ೭ ನೇಯವರಾದ ಝಂಗಾಡೆ ನಾರಾಯಣರು ಗಜಾನನ ಪೂಜೆ ಮಾಡಿ ತಮ್ಮ ಜಯಸೂಚಕವಾದ ಘಂಟೆಯನ್ನು ಚುನಾವಣೆಯ ಘೋಷಣಾವಾತದಲ್ಲಿ ಘೋಷಿಸಬೇಕೆಂದು ನಿಶ್ಚಯಿಸಿರುವರಂತೆ! ಅಂದಮೇಲೆ ಅವರ ವಿಷಯವೇ ಮುಗಿದಂತಾಯಿತು! ೮ ನೇಯವರಾದ ಕೋಕಾ ರಾಮಚಂದ್ರರು ಕೃಷ್ಣನ ಮಕ್ಕಳು. ರಾಜಕಾರಣದ ಕಾರಸ್ಥಾನವನ್ನೆಲ್ಲ ಬಲ್ಲವರು. ಆದ್ದರಿಂದ ಅವರ ವರ್ಣನೆ ಮಾಡುವದೇ ಅನಾವಶ್ಯಕವು.

ಮುಸಲ್ಮಾನ ವಾರ್ಡದಲ್ಲಿ ಮೊದಲು ಜಂತಾರಗಾರ ಅಹಮ್ಮದ ಸಾ|| ರು ಒಂಟಿಯ ಡುಬ್ಬದ ಮೇಲೆ ಸಾಗಿ ನಿಂತಿರುವರು. ಅದೊಳ್ಳೇ ಉಚ್ಚಸ್ಥಾನವಲ್ಲವೇ? ಒಂಟಿಯ ಮೋರೆಯ ಕಡೆಗೆ ನೋಡಿ ಮತದಾರರು ಅಂಜಬಾರದು ಮಾತ್ರ! ೨ನೇ ಉಮೇದವಾರರಾದ ದಾದೇಭಾಯಿಯವರು ಕೊತ್ವಾಲರು; ಕೈಯಲ್ಲಿ ಕತ್ತಿಯಿರತಕ್ಕದ್ದಿತ್ತು. ಕುದುರೆಯನ್ನು ಹಿಡಿದಿದ್ದಾರೆ. ಕೊತ್ವಾಲರು ಏನು ಹಿಡಿದರೂ ಸರಿ. ಊರಲ್ಲಿ ಪ್ರತಿಷ್ಠೆಯಿದ್ದೇಯಿರುತ್ತದೆ. ೩ ನೇಯರಾದ ಸೋನಾರ ಗವಸು ಸಾ|| ರು ವಿಲಾಯತ ಪ್ರಿಯರು. ಚಂದ್ರನನ್ನು ಚಿನ್ಹವಾಗಿಟ್ಟುಕೊಂಡಿರುವರು. ಚಂದ್ರಮನು ಅರಿಗೆಬೇಡ! ವಕೀಲ ಹಜರತಸಾ|| ರು ತಮ್ಮ ವಾರ್ಧಕ್ಯಕ್ಕೆ ಹೋಲುವಂತೆ ಟಾಕೀಸನ್ನು ಚಿನ್ಹವಾಗಿಟ್ಟುಕೊಂಡು, ಅನುಭವಿಕರೂ ವೃದ್ಧರೂ ಆದ ನನಗೆ ಮತಕೊಡಿರೆಂದು ಕೇಳುತ್ತಿರಲು, ಇಲ್ಲೆಂದು ಅರು ಅನ್ನುವರು! ೫ನೇಯವರಾದ ಜಮಾದಾರರೆಂದರೆ ಸರಕಾರದ ಪಕ್ಷದವರು, ಆದರೆ ಈ ಸಲ ಲೋಕ ಪಕ್ಷಕ್ಕೆ ಬರಬೇಕೆಂಬ ಆಶೆಯಾಯಿತೇ? ೬ನೇ ಯವರಾದ ಗಬ್ಬೂರ ಮಿರಾಸಾಹೇಬರು ಆನೆಯನ್ನು ಹತ್ತಿರುವರು. ಗಿಡ್ಡರಿಗೆ ಆನೆಹತ್ತುವದು ಪ್ರಯಾಸವಾದರೂ ಇವರು ಶ್ರಮಬಟ್ಟು ಹತ್ತದೇ ಬಿಡರು. ಕಡೆಯವರಾದ ಹಾಕ್ರಿ ಶೇಖಮಹಮ್ಮದ ಸಾ|| ರನ್ನು "ಕನ್ನಡಿಗ"ನು ಅರಿಯನು.





The Cheapest House.

For quick: Economical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the welknown Richelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specialist to give satisfactory work,

6 For Building motor bodies of various types by workers onin uptodate line.

7 For all kinds of motor repairs,

Apply to:-

Messrs Royal motor service

Automobile Engineers

Bagatkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕು ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ

೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ಓವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟುಬುಗಳು ಖರೀದಿಗಾಗಿ

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಜರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟೂಟು ಟಾಯರಗಳ ರಿಪೇರಿಗಾಗಿ.

೬ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.

ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ

ಮೋಟಾರುಗಳಗೆ ಸಬ್ ಏಜಂಟರು.

ಶೃಯಿಯಿಂದಲೇ ನೂತು ತಯಾರಿಸಿದ

ಪವಿತ್ರವಾದ

ಬ್ರಾಹ್ಮಣೀ ಯಜ್ಞೋಪವೀತಗಳು.

ಗೋಕರ್ಣದವರೆಂದು ಕೆಲವರು ಅಲ್ಲಲ್ಲಿಗೆ ಹೋಗಿ ಉಪವೀತಗಳನ್ನು ಮಾರುವರು. ಅದೊಂದು ಅವರ ಧಂದೆಯೇ ಆಗಿದೆ. ಆದರೆ ಆ ಉಪವೀತಗಳು ಅಪವಿತ್ರವಾದ ಮಿಲ್ಲನೂಲಿನಿಂದ ತಯಾರಾದವೆಂದೂ, ವ್ಯರ್ಥವಾಗಿ ಗೋಕರ್ಣವನ್ನು ಕಲಂಕಿಸುವರೆಂದೂ ಅನೇಕರು ದೂರುವರು. ಇಷ್ಟೇ ಅಲ್ಲ ೩ನೇ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಸಭಾಮಂಟಪದಲ್ಲಿ ಶ್ರೀ ಕೌಜಲಗಿ ಶ್ರೀನಿವಾಸರಾಯರು ಇದನ್ನು ಪ್ರತ್ಯಕ್ಷ ಆಕ್ಷೇಪಿಸಿದರು. ಇವೆಲ್ಲ ಕಾರಣಗಳಿಂದ ನಿರುಪಾಯವಾಗಿ ಜನರಿಗೆ ಮೋಸವಾಗಬಾರದೆಂಬದೊಂದೇ ಹೇತುವಿನಿಂದ ಇಲ್ಲಿಯ ಕೆಲವು ಜನರಿಗೆ ಉಪವೀತ ತಯಾರಿಸುವಬಗ್ಗೆ ಪ್ರೋತ್ಸಾಹಕೊಟ್ಟು ನಂದಿನಿಯ ಕಾರ್ಯಾಲಯದ ಮುಖಾಂತರ ಅಂಥ ಶುದ್ಧವಾದ ಉಪವೀತಗಳನ್ನು ಜನರಿಗೆ ಪೂರೈಸುವ ವ್ಯವಸ್ಥೆ ಮಾಡಿದೆ. ಬೇಕಾದವರು ಈ ಕೆಳಗಿನ ಪತ್ತೆಗೆ ಬರೆಯಬೇಕು. ಕ್ರಯ ಜೋಡಿ ೧ಕ್ಕೆ ೧ ಆಣೆ. ಜೊಡಿ ೧೦೦ಕ್ಕೆ ೬ ರೂಪಾಯಿ ಟಪಾಲ ಖರ್ಚು ಪ್ರತ್ಯೇಕ ಬೀಳುವದು.

ನಂದಿನಿ ಕಾರ್ಯಾಲಯ, ಗೋಕರ್ಣ.

ರ. ನಂ. ಬಿ. ೧೯೪೭ ವಾ॥ ಚಂದಾ ೧—೧೩—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟ ಶುಕ್ರವಾರ ಮಿತಿ ಆಷಾಢ ವದ್ಯ ೧೩ ಶಕೆ ೧೮೪೮ ತಾ॥ ೬-೮-೧೯೨೬. | ಸಂಚಿಕೆ ೨೦

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣಮಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ದೊಮ್ಮು।
ಚಿನ್ನದಾಗರು ಚಿನ್ನ ಮೇಣಬತ್ತಿಯು ನೊಂದು ಚಿನ್ನ ಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ।
ತನ್ನನ್ನು ಕಲ್ಲಾಗಿ ಪಿಳ್ಳಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೀರಬಹ ಗಂಧವಹವೆಂದು ತಿಳಿಯು

—ಅಂಜಲಾ ತನಯ ದತ್ತ

ಸರಸ್ವತಿಯೇ ನಿನ್ನ ಮುತ್ತೈದೆತನವು ಸೂರೆಯಾಯಿತು; ಸಂಸಾರವೇ, ನಿನ್ನಲ್ಲಿ ಆನಂದದ ಜೀವವಿಲ್ಲದಂತಾಯಿತು ಎಂದು ಕವಿಂಜಬನು ಪುಂಡರೀಕನ ನಿಧನದ ಬಗ್ಗೆ ಶೋಕ ಮಾಡುವಾಗ ನುಡಿದ ನುಡಿಗಳು, ವೈಣಿಕ ಶಿಖಾಮಣಿಗಳಾದ ಶೇಷಣ್ಣನವರ ಮರಣದ ಸುದ್ದಿಯನ್ನು ಓದಿದೊಡನೆ ನಮ್ಮ ನೆನಪಿಗೆ ಬಂದವು. ಕರ್ನಾಟಕದ ಕಲಾಧಿ ದೇವತೆಯೇ, ನಿನ್ನ ಕೈಯು ಮುರಿದಂತಾಯಿತು. ಹಿಂದೀ ಸಂಸ್ಕೃತಿಯೇ, ನಿನ್ನ ಮುಕುಟದೊಳಗಿನ ಜೂಡಾ ರತ್ನಗಳಲ್ಲೊಂದು ರತ್ನವು ಉದುರಿ ಹೋಯಿತು. ಶೇಷಣ್ಣನವರು ಜುಲೈ ತಿಂಗಳಿನ ೨೬ ನೇ ತಾರೀಖಿನ ದಿವಸ ಪರಲೋಕಕ್ಕೆ ತೆರಳಿದರು. ಇವರಿಗೆ ಸಾಯುವ ಕಾಲಕ್ಕೆ ೭೪ ವರ್ಷಗಳಿದ್ದವು. ಕರ್ನಾಟಕದ ಇತಿಹಾಸದಲ್ಲಿ ಇವರ ಹೆಸರು ಸ್ಥಿರವಾಗಿ ಉಳಿಯುವದು. ಹಿಂದಿನ ಪ್ರಭುಗಳಾದ ಮುಮ್ಮಡಿ ಕೃಷ್ಣರಾಜ ಒಡೆಯವರ ಕಾಲದಲ್ಲಿ ವೈಣಿಕ ಶಿಖಾಮಣಿ ಚಿಕ್ಕ ರಾಮಪ್ಪ ನೆಂಬುವರು ಆಸ್ಥಾನದ ಗಾಯಕರಾಗಿದ್ದರು. ಇವರ ಮಕ್ಕಳೇ ಶೇಷಣ್ಣನವರು. ವೀಣೆಯನ್ನು ಬಾರಿಸುವದರಲ್ಲಿ ಇವರು ಅನ್ಯಾದೃಶವಾದ ಪ್ರಾವೀಣ್ಯತೆಯನ್ನು ಪಡೆದಿದ್ದರು. ಆದುದರಿಂದಲೇ ಇವರ ಕೀರ್ತಿಯು ನಾಡಿನಲ್ಲೆಲ್ಲಿ ಜಗತ್ತಿನಲ್ಲೆಲ್ಲ ಬೆಳಗುತ್ತಿದೆ. ಹಿಂದುಸ್ಥಾನದ ೭೦೦ ರಾಜಮನೆತನಗಳಲ್ಲಿಯೂ ಇವರ ವೀಣೆಯ ನುಣ್ಣನಿಯು ಸುತ್ತಿ ಸುಳಿಯುತ್ತಿರುವುದು. ರಾಮನಾಡು ರಾಜರು ಇವರ ಗಾಯನಕ್ಕೆ ಮುಗ್ಧರಾಗಿ ೧೦೦೦೦ ರೂಪಾಯಿಗಳನ್ನು ಕಾಣಿಕೆಯಾಗಿ ಕೊಟ್ಟರು. ಗಾಯಕವಾಡ ಮಹಾರಾಜರೂ ಮೈಸೂರ ಮಹಾರಾಜರೂ ಇವರ ಜ್ಞಾನಕ್ಕೆ ಮೆಚ್ಚಿ ಪಲ್ಲಕ್ಕಿಯಲ್ಲಿ ಕೂಡ್ರಿಸಿ, ಇವರನ್ನು ಮೆರೆಯಿಸಿದರು. ಭೋಪಾಳದ ಬೇಗಮರು ಇವರ ವೀಣಾಗಾನಕ್ಕೆ ಮನಸೋತು, ಸ್ವರ್ಗ ಸುಖವೂ ಕೂಡ ದರದೆಯಲ್ಲಿ ತುಚ್ಛವೆಂದು ನುಡಿದರಂತೆ. ಯುರೋಪ ಅಮೇರಿಕೆಗಳಲ್ಲಿಯೂ ಇವರ ಕೀರ್ತಿಯು ಹರಡಿದೆ. ಇಂತಹ ಅದ್ಭುತವಾದ ಶಕ್ತಿಯನ್ನು ಇಟ್ಟುಕೊಳ್ಳುವ ಯೋಗವು ನಮಗಿಲ್ಲವೆಂದು ವಿಷಾದ ಪಡುತ್ತೇವೆ. ಇರಲಿ. ಇವರು ಮೈಸೂರ, ಸೀಮೆಗೂ ಕರ್ನಾಟಕಕ್ಕೂ, ಹಿಂದುಸ್ಥಾನಕ್ಕೂ ತಿಲಕಪ್ರಾಯರಾಗಿದ್ದರು. ಇವರ ಮರಣದಿಂದ ಇವರ ಕುಟುಂಬಕ್ಕೆ ಹೇಳತೀರದಷ್ಟು ಹಾನಿ ತಟ್ಟಿದೆ. ಇವರಿಗೆ ಮಕ್ಕಳೂ ಮೊಮ್ಮಕ್ಕಳೂ ಇರುವರು. ಇವರ ಮೊಮ್ಮಗನಿಗೆ ಈಗ ಸುಮಾರು ೧೦-೧೨ ವರ್ಷಗಳಿರುವವು. ಇವನಾದರೂ ಗಾಯನದಲ್ಲಿ ಚತುರನಿರುವದರಿಂದ ನಾಲ್ಕು ವರ್ಷಗಳಿಗೆ ಮುಂಚೆಯೇ ಇವನಿಗೆ ಸ್ವರಮೂರ್ತಿಯೆಂಬ ಬಿರುದು ದೊರೆತಿದೆ. ಇವನು ಶೇಷಣ್ಣನವರ ಕೀರ್ತಿಯನ್ನು ಮತ್ತಷ್ಟು ಹೆಚ್ಚಿ... ...ದ ಮೆಚ್ಚುಗೆಗೆ ಪಾತ್ರನಾಗಲೆಂದು ನಾವು ಹಾರೈಸುವೆವು. ಶೇಷಣ್ಣನವರ ಕುಟುಂಬದ ದುಃಖದಲ್ಲಿ ನಾವೂ ಪಾಲುಗಾರರಿರುವೆವು. ದೇವರು, ಅವರ ಆತ್ಮಕ್ಕೆ ಶಾಂತಿಯನ್ನು ಕೊಡಲಿ.

ಪ್ರೊ. ವಿಷ್ಣು ಗೋವಿಂದ ವಿಜಾಪೂರಕರ ಇವರು ಆಗಸ್ಟ ಒಂದನೇ ತಾರೀಖಿನ ದಿವಸ ತೀರಿಕೊಂಡರೆಂದು ತಿಳಿಸಲು ನಮಗೆ ಅತ್ಯಂತ ವಿಷಾದವಾಗುತ್ತದೆ. ಇವರು ಎಮ್. ಎ. ಪರೀಕ್ಷೆಯನ್ನು ಪಾಸಾದವರಿದ್ದು, ಸಂಸ್ಕೃತದಲ್ಲಿ ಪಂಡಿತರಿದ್ದರು. ರಾಷ್ಟ್ರೀಯ ಶಿಕ್ಷಣವನ್ನು ಪ್ರಾರಂಭಿಸಿದ ಅಗ್ರಣಿಗಳಲ್ಲಿ ಇವರೊಬ್ಬರು, ಇವರು ೧೯೦೭ ರಲ್ಲಿಯೇ ರಾಷ್ಟ್ರೀಯ ಶಿಕ್ಷಣದ ಏರ್ಪಾಟು ಮಾಡಲು ಹೆಣಗಿದರು. ಜನಪದಹಿತ ಕಾರ್ಯಗಳಿದ್ದುದರಿಂದ ಇವರಿಗೆ ಕಾರಾಗೃಹವಾಸವನ್ನು ಭೋಗಿಸಬೇಕಾಯಿತು. ಸ್ವತಂತ್ರ ವಿಚಾರದವರಿದ್ದುದರಿಂದ ಇವರು ಹೊರಗೆ ಬಂದೊಡನೆ ತಳೆಗಾವಿನಲ್ಲಿ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯನ್ನು ಸ್ಥಾಪಿಸಿದರು. ಅದು ಈಗ ಚನ್ನಾಗಿ ನಡೆದಿರುವುದು. ವಿಜಾಪೂರಕರವರ ಮರಣದಿಂದ ಸಂಸ್ಥೆಗೆ ಹೇಳತೀರದಷ್ಟು ಹಾನಿಯು ತಟ್ಟಿದಂತಾಯಿತು. ಹಾನಿಯು ತುಂಬಿ ಬರುವದು ಶಕ್ಯವಿಲ್ಲವೆಂದು ನಮ್ಮ ಮತ, ಅವರ ವಿದ್ವತ್ತಿಗೆ ತಕ್ಕ ವಿನಯವು ಅವರಲ್ಲಿದ್ದಿತು. ಅವರು ಸರಳ ಸ್ವಭಾವವುಳ್ಳವರೂ, ನಿರ್ವ್ಯಾಜ ಶಾಲಿಗಳೂ, ವಿನೀತ ವೇಷವುಳ್ಳವರೂ ಆಗಿದ್ದರು. ಮಹಾರಾಷ್ಟ್ರ ಪ್ರಾಂತದವರು ಮರಾಠಿ ಅಭಿಮಾನವನ್ನು ಹಿಡಿದು... ...ನ್ನಡಿಗರು ಕನ್ನಡದ ಅಭಿಮಾನವನ್ನು ತಾಳಬೇಕೆಂದೂ, ... ಬೆಳವಣಿಗೆಗಾಗಿ, ಎಲ್ಲ ರೀತಿಯಿಂದ ... ರು 'ಬಿಮ್ಮೆ' ವಿಜಾಪೂರದಲ್ಲಿ ... ...

ಪುಸ್ತಕಾಲಯದಲ್ಲಿ ಮರಾಠೀ ಪುಸ್ತಕಗಳ ಭರತಿಯನ್ನೇ ನೋಡಿ ಅವರಿಗೆ ಖೇದವಾಯಿತು. ಕನ್ನಡ ನಾಡಿನಲ್ಲಿ ಕನ್ನಡಕ್ಕೆ ಪ್ರಾಶಸ್ತ್ಯವಿಲ್ಲವೇ ಎಂದು ವ್ಯಾಕುಲರಾಗಿ ನುಡಿದರು. ಇಂತಹ ಔದಾರ್ಯಶಾಲಿಗಳನ್ನು ಕಾಣುವುದು ವಿರಳ. ಇರಲಿ ಅವರ ಮುಖಭಾವದಲ್ಲಿ ಅವರ ಶುದ್ಧಾಂತಃಕರಣವು ಒಡೆದು ಕಾಣುತಲಿದ್ದಿತು. ಇಂತಹ ಸಜ್ಜನರು ಹೋದುದಕ್ಕಾಗಿ ನಾಡೆಲ್ಲ ಮರುಗಿದರೆ ಏನಾಶ್ಚರ್ಯ. ದೇವರು ಅವರ ಶಾಂತವಾದ ಆತ್ಮಕ್ಕೆ ಇನ್ನಿಷ್ಟು ಶಾಂತಿಯನ್ನು ಕೊಡಲಿ

ಲೋಕಮಾನ್ಯರು.

ದಟ್ಟವಾದ ಕತ್ತಲೆಯು ನಾಡನ್ನೆಲ್ಲ ಮುಸುಕಿರುವಾಗಲೇ ದೊಡ್ಡವರ ಅವತಾರವು. ಅಂತಹ ಸಮಯದಲ್ಲಿಯೇ ಭೂತದಯಾವಿಷ್ಟನಾದ ಕ್ರಿಸ್ತನು ಅವತರಿಸಿದನು. ಅಂತಹ ಕಾಲದಲ್ಲಿಯೇ ಶಾಂತಿಮೂರ್ತಿಯಾದ ಬುದ್ಧನು ಪ್ರಕಟನಾದನು. ಹಿಂದುಸ್ಥಾನವು ಧೃತಿಗೆಟ್ಟು ಹೇಡಿತನದ ಬೆನ್ನು ಕಟ್ಟಿರುವಾಗ, ನಿರ್ವೀರ್ಯತೆಯು ನೆರಗನ್ನು ಹಿಡಿದು, ಕಂಗಾಲಾಗಿರುವಾಗ, ದಾಸ್ಯತ್ವದ ನೊಗದ ಕೆಳಗೆ ಅವರ ಗೋಣು ಬಗ್ಗಿರುವಾಗ, ಲೋಕಮಾನ್ಯ ಟಿಳಕರು ಜನ್ಮ ತಾಳಿದರು. ಮನದಲ್ಲಿ ನಟ್ಟ ದಾಸ್ಯದ ಶೃಂಖಲೆಗಳನ್ನು ಕಡಿದೊಗೆದ ವೀರರೇ ಅವರು " ಮನ ಏವ ಮನುಷ್ಯಾಣಾಂ ಕಾರಣಾಂ ಬಂಧ ಮೋಕ್ಷಯೋಃ " (ಮನುಷ್ಯನ ಬಂಧಮೋಕ್ಷಗಳೆರಡೂ ಅವನ ಮನದ ಸ್ಥಿತಿಯನ್ನವಲಂಬಿಸಿರುತ್ತವೆ) ಎಂಬುದನ್ನು ತಮ್ಮ ಕೃತಿಗಳಿಂದ ತೋರಿಸಿದವರೇ ಅವರು ಹೇಡಿತನವನ್ನು ಹಿಮ್ಮೆಟ್ಟಿಸಿ, ಧೈರ್ಯದ ಸಸಿಯನ್ನು ನಾಡಿನಲ್ಲಿ ಬಿತ್ತಿದವರೇ ಅವರು. ಸ್ವಾತಂತ್ರ್ಯದ ದೀವಟಿಗೆಯನ್ನು ಹೊತ್ತಿಸಿದ ಶ್ರೇಯವು ಅವರಿಗೇ ಸಲ್ಲತಕ್ಕದು. ಧರ್ಮದ ಬೆಳೆಗೆ ಕರ್ಮದ ಮಳೆಯು ಬೇಕೆಂದು ಮನದಟ್ಟಾಗುವಂತೆ ತಿಳಿಸಿದವರೇ ಅವರು. ಜಗತ್ತೆಂದರೆ ಕರ್ಮಭೂಮಿಯು ದೊಡ್ಡವರು ಮಾಡಿದ ಕರ್ಮಗಳನ್ನಾಶ್ರಯಿಸಿಯೇ ಜಗತ್ತು ನಡೆಯುವುದು 'ಅನಂತ ಕರ್ಮವೇ ವಿಶ್ವದ ಜೀವ' ಎಂಬ ನುಡಿಯು ಎಷ್ಟು ದಿಟವಾದುದೆಂಬುದನ್ನು ನೋಡಬಹುದು. ದೊಡ್ಡವರಲ್ಲಿ ನಂಬುಗೆಯನ್ನಿಡುವುದು ಸ್ವಾಭಾವಿಕವಾದುದು. ದೊಡ್ಡವರಿಂದಲೇ ಜಗತ್ತಿನ ಸಂಸ್ಥಿತಿ. ಅವರ ನನ್ನಿಯಲ್ಲಿಯೇ ಜೀವನದ ಜೇನು ಒಟ್ಟಿರುವುದು. ಜೀವಲೋಕದಲ್ಲಿಯೂ ಭಾವಲೋಕದಲ್ಲಿಯೂ ನಾವು ದೊಡ್ಡವರೊಡನೆ ಬಳಕೆ ಮಾಡುತ್ತಿರುವೆವು. ನಮ್ಮ ಮಕ್ಕಳು ಮರಿಮಕ್ಕಳಿಗೆ ಅವರ ಹೆಸರನ್ನಿಟ್ಟು ಕರೆಯುತ್ತಿರುವೆವು. ಅವರ ಚಿತ್ರಪಟಗಳನ್ನು ಮನೆಗಳಲ್ಲಿ ತೂಗಹಾಕಿ ಕೃತಕೃತ್ಯತೆಯನ್ನು ಹೊಂದುವೆವು. ಅವರನ್ನು ಭಕ್ತಿಭಾವದಿಂದ ನೆನೆಯುವೆವು ಅವರ ಮೂರ್ತಿಗಳನ್ನು ಭಾವಸಿಂಹಾಸನದಲ್ಲಿ ಇರಿಸುವೆವು. ಒಟ್ಟಿನಲ್ಲಿ ಹೇಳುವದಾದರೆ ಅವರ ನೆನಪಿನಲ್ಲಿಯೇ ನಮ್ಮ ಧರ್ಮವಿರುವುದು. ಅಂತೆಯೇ ನಮ್ಮ ಪೂರ್ವಜರು ರಾಮನವಮಿ, ಗೋಕುಲಾಷ್ಟಮಿ ಹನುಮಜ್ಜಯಂತಿ, ನೃಸಿಂಹ ಜಯಂತಿ ಮೊದಲಾದವುಗಳನ್ನು ಉತ್ಸವದಿಂದ ಜರುಗಿಸುವ ಪದ್ಧತಿಯನ್ನು ನೆಲಸಿ ಬಿಟ್ಟಿದ್ದಾರೆ. ನಮ್ಮಲ್ಲಿ ಸಂಸ್ಕೃತಿಯು ಪರಂಪರೆಯಿದ್ದರೂ ಮೋಹದ ಮುಸುಕಿನಿಂದ ಅದರ ಅರ್ಥವು ಮರೆಯಾಗಿದೆ. ಈ ಉತ್ಸವಗಳೇಕೆ? ಇವುಗಳ ಮರ್ಮವೇನು? ಎಂಬುದರ ಕಡೆಗೆ ನಮ್ಮ ಲಕ್ಷ್ಯವೇ ಇಲ್ಲ. ಪೂರ್ವಜರು ಮಾಡುತ್ತ ಬಂದಿರುವರು ಎಂದು ಅವರ ಹಾದಿಯನ್ನು ನಾವು ಅಂಧತನದಿಂದ ತುಳಿಯುತ್ತಿರುವೆವು. ತನ್ಮೂಲಕವಾಗಿಯೇ ನಮ್ಮ ಕೃತಿಗಳು ಬಂಜೆಯಾಗಿ ಪರಿಣಮಿಸುತ್ತವೆ. ದೊಡ್ಡವರ ನೋಟಕ್ಕೆ ಅವುಗಳ ಅರ್ಥವು ಕೂಡಲೇ ಹೊಳೆಯುವದು. ಆದುದರಿಂದಲೇ ಲೋಕಮಾನ್ಯರು ಗಣೇಶೋತ್ಸವ, ಶಿವಾಜಿಯ ಉತ್ಸವ ಮೊದಲಾದವುಗಳನ್ನು ಪ್ರಾರಂಭಿಸಿದರು ಜನರಲ್ಲಿ ಪ್ರಾಚೀನತೆಯ ಬಗ್ಗೆ ಪ್ರೀತಿಯನ್ನೂ ಆದರವನ್ನೂ ಹುಟ್ಟಿಸಿ, ಆ ದೃಷ್ಟಿಯಿಂದ ತಮಗೆ ಮಾಡಬೇಕಾದ ಕರ್ತವ್ಯವನ್ನು ಅಡಿ ಮಾಡಬೇಕೆಂದೂ, ಮುಂದಿನ ಭವಿತವ್ಯತೆಯು ಬಂಗಾರದ್ದಾಗಬೇಕಾದರೆ, ಕರ್ಮಯೋಗವನ್ನು ಕೈಕೊಳ್ಳಬೇಕೆಂತಲೂ ಉಪದೇಶಿಸಿದರು. 'ಎಲ್ಲಿ ಕರ್ಮವೋ ಅಲ್ಲಿ ಧರ್ಮವು' 'ಎಲ್ಲಿ ಕರ್ಮವೋ ಅಲ್ಲಿ ಸಿರಿಯು' 'ಎಲ್ಲಿ ಕರ್ಮವೋ ಅಲ್ಲಿ ಜಯವು' ಎಂಬ ವಾಣಿಯನ್ನು ಇನ್ನೂ ಉಸುರುತ್ತಿರುತ್ತಾರೆ. ಪುಣ್ಯತಿಥಿಯ ವಾಣಿಗೆ ನಾವೆಲ್ಲರೂ ಶರಣು ಹೋಗೋಣ ಬನ್ನಿ.

ಕರ್ನಾಟಕದಲ್ಲಿಯ ಸ್ತ್ರೀಯರು ಸಾರ್ವಜನಿಕ ಕೆಲಸಗಳಿಗಾಗಿ ಮುಂದೊರೆಯ ಹತ್ತಿರುವದು ಅಭಿಮಾನಪಡತಕ್ಕ ವಿಷಯ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯಲ್ಲಿಯೂ, ಹಿಂದುಸ್ಥಾನೀ ಸೇವಾದಲ (ಕರ್ನಾಟಕ ಶಾಖೆ) ದಲ್ಲಿಯೂ, ಮೈಸೂರಿನ ಶಿಕ್ಷಣ ಸಂಸ್ಥೆಗಳಲ್ಲಿಯೂ ಸ್ತ್ರೀಯರು ಉತ್ಸಾಹದಿಂದ ಕಾರ್ಯಮಾಡುತ್ತಿರುವದನ್ನು ಎಲ್ಲರೂ ಬಲ್ಲರು. ಈಗ್ಗೆ ನಮ್ಮ ಮಂಗಳೂರ ಜಿಲ್ಹೆಯಲ್ಲಿ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯ ಇವರು ಮದ್ರಾಸ ನ್ಯಾಯ ವಿಧಾಯಕ ಸಭೆಗೆ ಮಂಗಳೂರ ಜಿಲ್ಹೆಯ ಪರವಾಗಿ ಉಮೇದವಾರರಾಗಿ ನಿಂತಿರುವರೆಂಬದಾಗಿ ಪ್ರಸಿದ್ಧವಾಗಿದೆ. ಮದ್ರಾಸ ನ್ಯಾಯವಿಧಾಯಕ ಸಭೆಯಲ್ಲಿ ಸ್ತ್ರೀಯರು ಸೇರುವದೆಂದರೆ ಇದೇ ಮೊದಲು. ಈ ಮೊದಲನೇ ಬಹುಮಾನವನ್ನು ದೊರಕಿಸಲು ನಮ್ಮ ಕರ್ನಾಟಕದ ಸ್ತ್ರೀಯೋರ್ವಳು ಹಾತೊರೆಯುವದು ಅಭಿನಂದನೀಯವು. ಹಿಂದೀ ರಾಜಕರಣದಲ್ಲಿಯೂ ಕರ್ನಾಟಕದ ಪ್ರಶ್ನೆಗಳಲ್ಲಿಯೂ ಶ್ರೀಮತಿ ಕಮಲಾದೇವಿಯವರು ಎಷ್ಟರ ಮಟ್ಟಿಗೆ ನುರಿತವರಿದ್ದಾರೆಂಬುದನ್ನು ಮಾತ್ರ ನಾವು ಅರಿಯೆವು. ಅವರು ನುರಿತವರಾಗಿದ್ದರೆ ಅವಶ್ಯವಾಗಿ ಮಂಗಳೂರಿನ ಮತದಾರರು ಅವರಿಗೆ ತಮ್ಮ ಮತ ಕೊಡಬೇಕು. ಇವರು ಸ್ವರಾಜ್ಯಪಕ್ಷೀಯರೆಂದೂ ನಾವು ಕೇಳುತ್ತೇವೆ. ಕಾಂಗ್ರೆಸದವರು ಇವರನ್ನು ಆರಿಸುವದಿದ್ದರೆ, ಮೊದಲು ಶ್ರೀಮತಿ ಕಮಲಾದೇವಿಯವರು, ಕರ್ನಾಟಕದ ಏಕೀಕರಣ ವಿಶ್ವವಿದ್ಯಾಲಯಗಳಂತಹ ಮಹತ್ವದ ಪ್ರಶ್ನೆಗಳಬಗ್ಗೆ ಅವರು ಆವ ಮತವನ್ನು ತಿಳಿದಿರುವರೆಂಬುದನ್ನು ವಿಚಾರಿಸಬೇಕು. ಮತದಾರರಿಗಾದರೂ ಈ ವಿಷಯಗಳಲ್ಲಿ ಶ್ರೀಮತಿ ಕಮಲಾದೇವಿಯವರ ಮತವೇನಿದೆಂಬುದನ್ನು ಅರಿತುಕೊಳ್ಳುವದು ಅತ್ಯಾವಶ್ಯಕ. ಆದುದರಿಂದ ಶ್ರೀ. ಕಮಲಾದೇವಿಯವರು ಕರ್ನಾಟಕದ ಈ ಮಹತ್ವದ ಪ್ರಶ್ನೆಗಳ ಬಗ್ಗೆ ತಮಗಿರುವ ಅಭಿಪ್ರಾಯವನ್ನು ಬೇಗನೇ ಪ್ರಕಟಿಸುವದು ವಿಹಿತ.

ನ್ಯಾಯ ವಿಧಾಯಕ ಸಭೆಯ ಚುನಾವಣೆಯ ವಿಷಯವನ್ನು ಈಗ್ಗೆ ಸ್ವಲ್ಪ ಚರ್ಚಿಸಬೇಕಾಗಿದೆ ಕರ್ನಾಟಕದಲ್ಲಿ ಚುನಾವಣೆಗೆ ನಿಲ್ಲುವ ಉಮೇದವಾರರೆಲ್ಲರೂ, ಕರ್ನಾಟಕ ಏಕೀಕರಣ ವಿಶ್ವವಿದ್ಯಾಲಯಗಳ ಬಗ್ಗೆ ತಮ್ಮ ವಿಚಾರಗಳೇನಿವೆಂಬುವನ್ನು ಮೊದಲಿಗೆ ಪ್ರಕಟಿಸಬೇಕು. ಇಂತಹ ಮಹತ್ವದ ಪ್ರಶ್ನೆಗಳಿಗೆ ಸಂಪೂರ್ಣವಾಗಿ ಬೆಂಬಲವಿರುವವರನ್ನೇ ಕನ್ನಡಿಗರು ನ್ಯಾಯವಿಧಾಯಕ ಸಭೆಗೆ ಕಳಿಸ ತಕ್ಕದ್ದು. ಮುಂಬೈ ಕರ್ನಾಟಕದಲ್ಲಿ ಈಗ್ಗೆ ಉಮೇದವಾರ ಯಾದಿಯಲ್ಲಿ ಬರುತ್ತಿರುವ ಜನರಲ್ಲಿ ಬೆಳಗಾಯ ಶ್ರೀ. ಫಾಟಕಫೇಕರ ಬಗ್ಗೆ ನಮಗೆ ಏನೂ ಗೊತ್ತಿಲ್ಲ, ಅವರು

ಮರಾಟಾ ಜಾತಿಯವರೆಂಬ ಕಾರಣದಿಂದ ಮಾತ್ರ ಬೆಳಗಾವಿಯ ಕಾಂಗ್ರೆಸ ಕಮೀಟಿಯವರು ಅವರನ್ನು ನಿಲ್ಲಿಸುವ ಹವಣಿಕೆಯಲ್ಲಿದ್ದರೆ, ಅದು ಶುದ್ಧವಾಗಿ ತಪ್ಪು. ಕಳೆದ ಸಲ ಶ್ರೀ. ದೇಶಪಾಂಡೆ ಗಂಗಾಧರರಾಯರ ಸಹಾಯದಿಂದ ಆರಿಸಿ ಬಂದ ಶ್ರೀ ದಳವೀಯವರು, ಕರ್ನಾಟಕ ಏಕೀಕರಣದಂತಹ ಪ್ರಶ್ನೆಯಲ್ಲಿ ಸಹ ಮನಸ್ಸನ್ನು ಹಾಕಿರಲಿಲ್ಲ. ಅಲ್ಲದೇ ಈ ಪ್ರಶ್ನೆಗೆ ಅವರು ವಿರುದ್ಧವಾಗಿದ್ದರೆಂದೂ ಕೇಳುತ್ತೇವೆ. ಇಂತಹ ಜನರನ್ನು ನಮ್ಮ ಪ್ರತಿನಿಧಿಗಳೆಂದು ಅಟ್ಟುವದರಲ್ಲಿ ಏನು ಫಲವಿದೆ? ಬೆಳಗಾವಿಯವರೂ ಪ್ರಾಂತಿಕ ಕಾಂಗ್ರೆಸ ಕಮೀಟಿಯವರೂ ಪುನಃ ವಿಚಾರಿಸಿ ಶ್ರೀ. ಘಾತಗೆಫೇಕರ ಇವರನ್ನು ನಿಲ್ಲಿಸಬೇಕು. ಇವರಿಗೆ ಕನ್ನಡ ಮಾತ ನಾಡಲಿಕ್ಕೆ ಬರುವದೋ ಇಲ್ಲವೋ ಮೊದಲು ನಾವರಿಯೆವು. ಶ್ರೀ. ಘಾತಗೆಫೇಕರರು, ಕರ್ನಾಟಕದ ಸೇವೆ ಮಾಡಲಿಕ್ಕೆ ಸಿದ್ಧರಾಗಿ ಹೊರಬಿದ್ದಿದ್ದರೆ, ಮೊದಲು ಕರ್ನಾಟಕ ಕನ್ನಡ ನುಡಿಗಳ ಬಗ್ಗೆ ತಮ್ಮ ಮತವೇನಿದೆಂಬುದನ್ನು ಪ್ರಕಟಿಸಬೇಕಾಗಿ ಸೂಚನೆಯಿದೆ. ಇತ್ತ ಮತದಾರರು ಈ ಬಗ್ಗೆ ಹೆಚ್ಚಾಗಿ ಜಾಗೃತರಾಗಿರತಕ್ಕದ್ದು ಕರ್ನಾಟಕದ ಪ್ರಶ್ನೆಗಳಿಗೆ ವಿರುದ್ಧಮತವಿದ್ದವರಿಗೆ ತಮ್ಮ ಮತ ಕೊಟ್ಟು, ಅವರನ್ನು ನ್ಯಾಯವಿಧಾಯಕ ಸಭೆಗೆ ಸೇರಿಸಿ, ಕೊರಳಲ್ಲಿ ದೊಡ್ಡದೊಂದು ಗುಪ್ಪಿಯನ್ನು ಮಾತ್ರ ಕಟ್ಟಿಕೊಳ್ಳಬಾರದು.

ಬಳ್ಳಾರಿ ಜಿಲ್ಲೆಯಿಂದ ಮದ್ರಾಸ ನ್ಯಾಯವಿಧಾಯಕ ಸಭೆಯ ಚುನಾವಣೆಯಲ್ಲಿ ಶ್ರೀ. ಭೀಮರಾಮರಾಯರು ಸ್ವರಾಜ್ಯಪಕ್ಷದಿಂದ ನಿಲ್ಲಬೇಕಾಗಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಮಂಡಳದವರು ನಿರ್ಣಯಿಸಿದ್ದರು. ಆದರೆ, ಅಖಿಲ ಭಾರತೀಯ ಕಾಂಗ್ರೆಸ್ಸ ಸಭೆಯವರು ಶ್ರೀ. ಭೀಮರಾಯರ ಹೆಸರನ್ನು ತೆಗೆದುಹಾಕಿ ಶ್ರೀ. ಪಿ. ಶಿವರಾಯರ ಹೆಸರನ್ನು ಮಂಜೂರ ಮಾಡಿದ್ದನ್ನು ಕರ್ನಾಟಕಸ್ಥರು ನಿಷೇಧಿಸದೇಯಿರರು. ಬಳ್ಳಾರಿಯು ಕಾಂಗ್ರೆಸ್ಸದವರಿಂದಲೇ, ಕರ್ನಾಟಕಕ್ಕೆ ಕೊಡಲ್ಪಟ್ಟಿದೆ. ಹೀಗಿದ್ದು ಕರ್ನಾಟಕ ಪ್ರಾಂತದವರ ನಿರ್ಣಯವನ್ನು ಅಮಾನ್ಯಮಾಡಿ, ತಮಗೆ ಅಧಿಕಾರವಿಲ್ಲದಿದ್ದರೂ, ಆಂಧ್ರರು ಸೂಚಿಸಿದ ಶ್ರೀ. ಶಿವರಾಯರನ್ನೇ ಕಾರ್ಯಕಾರಿ ಮಂಡಲದವರು ಕಡೆಗೆ ಆರಿಸಬೇಕೆಂದರೆ, ತಾವು ನಿರ್ಣಯಿಸಿದ್ದನ್ನು ತಾವೇ ಮಾನ್ಯಮಾಡದಂತಹ ಹಾಸ್ಯಾಸ್ಪದವಾದ ಕೃತಿಯಾಗುವದು. ಇತ್ತ ಆಂಧ್ರರು ಒಳಗಿಂದೊಳಗೆ ಕನ್ನಡಿಗರನ್ನು ಒತ್ತಿ ಒತ್ತಿ ಹೇಗೆ ಸಾಗಿಬರುತ್ತಿರುವರೆಂಬದನ್ನು, ಕನ್ನಡಿಗರು ಆಲೋಚಿಸತಕ್ಕಂತಹದಾಗಿದೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ತಮಗಾದ ಅಪಮಾನವನ್ನು ಸಹಿಸಿ ಸುಮ್ಮನೆ ಕುಳಿತುಕೊಳ್ಳುವರೋ, ಅಥವಾ ಅಖಿಲ ಭಾರತ ರಾಷ್ಟ್ರೀಯ ಸಭೆಯವರಿಗೆ ಬರೆದು ತಮ್ಮ ಹಕ್ಕನ್ನು ಸ್ಥಾಪಿಸಿಕೊಳ್ಳುವರೋ ನೋಡಬೇಕು.

ಶಿವಯೋಗ ಮಂದಿರದ ವ್ಯಾಜ್ಯವು

ತೀರಿದಂತಾಯಿತು!

ಈಗ್ಗೆ ಕೆಲವು ವರ್ಷಗಳಿಂದ ಶಿವಯೋಗಮಂದಿರದ ಒಡೆತನದಬಗ್ಗೆ ವೀರಶೈವ ಬಂಧುಗಳಲ್ಲಿ ಜಗಳಾಟವು ಒಂದೇಸವನೆ ನಡೆದದ್ದು ಎಲ್ಲರಿಗೂ ಗೊತ್ತಿದ್ದಮಾತು: ಈ ಜಗಳವು ಬಾಗಲಕೋಟೆ, ವಿಜಾಪೂರ ಮುಂಬೈ ಕೋರ್ಟುಗಳಲ್ಲಿ ಬಹುದಿನಗಳಿಂದ ನಡೆದು ಮುಖಂಡ-ಮುಖಂಡರಲ್ಲಿ ವೈಮನಸ್ಸನ್ನುಂಟು ಮಾಡಿತ್ತು. ಇದರಿಂದ ಅತ್ತ ಅವರಿಂದ ಹಾನಿ; ಇತ್ತ ಸಮಾಜಕ್ಕೆ ದೊಡ್ಡ ಹಾನಿ. ಆದರೆ ಈಗ್ಗೆ ಈ ವ್ಯಾಜ್ಯವು ಕೊನೆಗಂಡಿತೆಂದು ತಿಳಿಸಲು ನಮಗೆ ಸಂತೋಷವಾಗುತ್ತದೆ ೬ ಆಣೆಯ ಪಾಲುಗಾರರು ಮೂವರುಕೂಡಿ ೮೪ ಸಾವಿರ ರೂಪಾಯಿ ನಗದು ತೆಗೆದುಕೊಂಡು, ಮಂದಿರದ ಸಂಪೂರ್ಣ ಒಡೆತನವನ್ನು ಸ್ವಾಮಿಯವರಿಗೆ ಬಿಟ್ಟುಕೊಟ್ಟರು.. ಇದರಿಂದ ಇನ್ನು ಮೇಲೆ ಸಮಾಜದಲ್ಲಿ ಸಂಪೂರ್ಣವಾದ ಶಾಂತಿಯು ನೆಲೆಗೊಂಡು ಮೊದಲಿನಂತೆ, ಮಂದಿರದ ಉತ್ಕರ್ಷವು ದಿನೇ ದಿನೇ ಅಭಿವೃದ್ಧಿ ಹೊಂದುತ್ತ ನಡೆಯುವದಾಗಿ ನಾವು ಆಶಿಸುತ್ತೇವೆ.

ನಿಝಾಮ ಸಾಹೇಬರಮೇಲೆ ಗದೆ!

ಹಿಂದುಸ್ಥಾನ ಸರಕಾರದವರ ಪತ್ರ.

ಅನೇಕ ದಿವಸಗಳಿಂದ ನಿಝಾಂ ಸಾಹೇಬರು ತಮ್ಮ ರಾಜ್ಯದಾಡಳಿತೆಯಲ್ಲಿ ಅವ್ಯವಸ್ಥೆ ಯುಂಟಾಗಿದ್ದರೂ ಅದನ್ನು ಸರಿಪಡಿಸಿಕೊಂಡಿಲ್ಲವಾದ್ದರಿಂದಲೂ, ಲಂಚಗಳಿಗೆ ಉತ್ತೇಜನ ಕೊಡುತ್ತಿದ್ದದರಿಂದಲೂ, ನಿರ್ಬಂಧನೆಗಳಿಂದ ಪ್ರಜೆಗಳಿಗೆ ಪೀಡಿಸುತ್ತಿದ್ದದರಿಂದಲೂ, ಸಣ್ಣಪುಟ್ಟ ಜಹಗೀರಿಗಳನ್ನು ಸೆಳೆದುಕೊಂಡದ್ದರಿಂದಲೂ, ಹಿಂದುಗಳ ವಿರುದ್ಧವಾದ ಮುಸಲ್ಮಾನರ ಚಳವಳಿಗಳಿಗೆ ಸಹಾಯ ಮಾಡುತ್ತಿದ್ದದರಿಂದಲೂ, ಅವರ ರಾಜ್ಯದಾಡಳಿತೆಯ ಸುಧಾರಣೆಗಾಗಿ ಹಿಂದುಸ್ಥಾನ ಸರಕಾರದವರು ಲಕ್ಷ್ಯಕೊಟ್ಟಿರುವರು. ಈಗ್ಗೆ ಮೇಲಿನ ದೋಷಗಳೆಲ್ಲ ಹೋಗುವಂತೆ ನಿಝಾಂರವರು ಪ್ರಯತ್ನಿಸಬೇಕು; ಮುಖ್ಯ ಮುಖ್ಯ ಅಧಿಕಾರಗಳ ಸ್ಥಾನಕ್ಕೆ ಬ್ರಿಟಿಶರನ್ನು ನೇಮಿಸಬೇಕು. ಇದಕ್ಕೆ ೨೦ ನೇ ತಾ॥ ನೊಳಗಾಗಿ ಉತ್ತರ ಬರೆಯಬೇಕು; ಇಲ್ಲವಾದರೆ, ಸರಕಾರದವರು ಚೌಕಶೀ ಮಂಡಳವನ್ನು ನೇಮಿಸುವರೆಂದು ಹಿಂದುಸ್ಥಾನ ಸರಕಾರದವರು ನಿಝಾಂ ಸಾಹೇಬರಿಗೆ ತಿಳಿಸಿದ್ದಾರೆಂಬ ಸುದ್ದಿಯದೆಂದು ಮುಂಬಯಿಯ "ಇಂಡಿಯನ್ ಡೇಲೀ ಮೇಲ್" ನಲ್ಲಿ ಪ್ರಸಿದ್ಧವಾಗಿದೆ. ಮುಂದೇನಾಗುವದೋ ನೋಡಬೇಕು

[ನಾಲ್ಕನೇ ಪುಟದಿಂದ ಬಂದದ್ದು]

ಆದರೆ ಅದರಲ್ಲಿ ಇಂಪಿಲ್ಲ ಮಾಧುರ್ಯವಿಲ್ಲ; ಎಂದು ಅದನ್ನು ಕಾಳುಗೆಡಹುತ್ತಾರೆ. ಹೀಗಿದ್ದ ಪಕ್ಷದಲ್ಲಿ, ಅದರಲ್ಲಿ ಹಿಂದಿನ ಸಂಸ್ಕೃತಿಗೆ ಬಾಧೆ ತಟ್ಟದಂತೆ, ಹೊಸದಾಗಿ, ಸುಧಾರಣೆ ಮಾಡಿ, ಈಗಿನ ಸಮಾಜಕ್ಕೆ ರುಚಿಯಾಗುವಂತೆ ಏರ್ಪಾಟು ಮಾಡಬೇಕು. ಪ್ರತಿವರ್ಷ ನಿಖಿಲ ಭಾರತೀಯ ಗಾಯನ ಪರಿಷತ್ತುಗಳು ಹಿಂದುಸ್ಥಾನದ ಬೇರೆ ಬೇರೆ ಭಾಗಗಳಲ್ಲಿ ಜರಗುತ್ತವೆ. ಅಲ್ಲಿಗೆ ಕರ್ನಾಟಕದ ಮುಖ್ಯ ಮುಖ್ಯ ಗವಯಿ [illegible] ಪದ್ಧತಿಯ ವಿಷಯಕ್ಕಿದ್ದ ತಪ್ಪು ತಿಳುವಳಿ [illegible] ಹಿಂದುಸ್ಥಾನ ಪದ್ಧತಿ ಕರ್ನಾಟಕ [illegible] ದವೆಂದರೆ, ಗಾಯನವು ಪೂರ್ಣ [illegible]

ಪ್ರಾಥಮಿಕ ಶಾಲೆಗಳೂ, ಕನ್ನಡ ಶಿಕ್ಷಣವೂ.

ಕನ್ನಡ ನುಡಿಯು ಬಿದಿಗೆಯ ಚಂದ್ರನಂತೆ ಬೆಳೆದು ಹುಣ್ಣಿಮೆಯ ತಿಂಗಳನಂತೆ ಸಕಲ ಕಲಾಪರಿಪೂರ್ಣವಾಗಬೇಕೆಂದು ಹಲವು ನಿಟ್ಟಿನಿಂದ ಪ್ರಯತ್ನಗಳು ನಡೆದಿವೆ. ನಮ್ಮ ನಿಟ್ಟುಗಳು ಬೇರೆಯಿದ್ದರೂ, ಗುರಿಯೊಂದೇ ಇರುವುದು. ನಾವು ಹೇಳುವ ದಾರಿಯೊಂದರೆ, ನುಡಿಯ ಹುಟ್ಟಳವೂ ಬೆಳಗೆಯೂ ಎಲ್ಲ ಬಗೆಯಿಂದಲೂ ಚಿಕ್ಕ ಮಕ್ಕಳನ್ನೇ ಕೂಡಿಯಿದೆ. ಎಳೆತನದಲ್ಲಿದ್ದ ಒಲವು ಹಿರಿತನಕ್ಕೂ ಮುಪ್ಪಿಗೂ ಬಾರದು. ನುಡಿಯ ಸೊಬಗು ಎಳೆಯರ ಮಾತುಗಳಲ್ಲಿ. ಅದರ ಬೆಡಗು ಅವರ ಬಳಕೆಯಲ್ಲಿ. ಎದೆಮುಗುಳನ್ನು ಅರಳಿಸುವ ಬಲವು ಅದಕ್ಕಿದ್ದುದು ಎಳೆತನದಿಂದಲೇ, ಶುದ್ಧ ಭಾವದ ಬಣ್ಣವು ಅದರಲ್ಲಿ ಎದ್ದು ಕಾಣುತ್ತಿರುವುದು. ಜೀವಕಳೆಯು ಉಕ್ಕುತ್ತಿರುವುದು. ಜೀವ ದೇವರ ಸಾನ್ನಿಧ್ಯವು ಅದಕ್ಕಿರುವದರಿಂದ, ಪಾವಿತ್ರ್ಯದ ಬೆಳಗಾದರೂ ಅದಕ್ಕಿರುವುದು. ಇಂತಹ ಎಳೆತನವನ್ನು ಬಿಟ್ಟು ನುಡಿಯು ಮತ್ತಾವುದನ್ನು ಆಧಾರವಾಗಿ ಹಿಡಿಯಬಹುದು! ಚಿಕ್ಕಮಕ್ಕಳ ನುಡಿಯು ಹಿಗ್ಗಿ ಹಣ್ಣಾಗದಿರುವದಕ್ಕೆ, ಪ್ರಾಥಮಿಕ ಶಾಲೆಗಳಲ್ಲಿಯ ಶಿಕ್ಷಣವೇ ಕಾರಣವು. ಅಲ್ಲಿ ನುಡಿಯ ಬೇರಿಗೆ ನೀರು ದೊರೆಯುವದಿಲ್ಲ. ನುಡಿಯ ಬೆಳವಣಿಗೆಗೆ ತಕ್ಕ ಅನ್ನವು ದೊರೆಯುವದಿಲ್ಲ. ಪರಿಸ್ಥಿತಿಯು ಪ್ರತಿಕೂಲವಿದ್ದ ಮೇಲೆ ಅದರ ಬೆಳೆಗೆಯು ನಿಂತು ಹೋಗುವುದು. ಸ್ವಾಭಾವಿಕವು. ಆದ್ದರಿಂದ ನಾವು ಬುಡದಿಂದ ಮನೆಕಟ್ಟಲು ತೊಡಗಿದರೆ, ಅದು ಬಾಳುವುದು; ಬದುಕುವುದು. ಇಲ್ಲದಿದ್ದರೆ, ಉರಳಿಬಿದ್ದು, ಇದ್ದುದಕ್ಕಿಂತ ಹೆಚ್ಚು ಹಾನಿಯನ್ನುಂಟು ಮಾಡುವುದು. ಇದರ ಮೇಲಿಂದ ಪ್ರಾಥಮಿಕ ಶಾಲೆಗಳ ಶಿಕ್ಷಕರ ಮೇಲೆ ಎಷ್ಟೊಂದು ಹೊರೆಯಿರುವುದೆಂಬುದರ ಕಲ್ಪನೆಯು ಯಥಾವತ್ತಾಗಿ ಬರುವಂತಿದೆ. ಚಿಕ್ಕ ಮಕ್ಕಳಲ್ಲಿ ನೈಸರ್ಗಿಕವಾಗಿ ನೆಲೆಸಿರುವ ಒಲವಿಗೆ ಯೋಗ್ಯ ರೀತಿಯಿಂದ ಪುಷ್ಟಿಯನ್ನು ಕೊಡುವುದು ಅವರ ಪ್ರಥಮ ಕರ್ತವ್ಯವು. ಪ್ರಾಥಮಿಕ ಶಾಲೆಯ ಶಿಕ್ಷಕರಿಗೆ ಕರ್ನಾಟಕದ ಸಾಹಿತ್ಯದ ಪರಿಚಯವು ಚನ್ನಾಗಿರಬೇಕಾಗುವುದು. ಕರ್ನಾಟಕದ ಇತಿಹಾಸ, ಕರ್ನಾಟಕದ ಭೂಗೋಲ, ಕರ್ನಾಟಕದ ಸಾಧು ಶರಣರು ಕರ್ನಾಟಕದ ಜೀವಜ್ಯೋತಿಗಳು ಕರ್ನಾಟಕದ ಕಲಾಕೌಶಲ್ಯ ಕರ್ನಾಟಕ ಸಂಗೀತ ಸಂಸ್ಕೃತಿ ಇವೇ ಮೊದಲಾದವುಗಳ ಬಗ್ಗೆ ಅವರಿಗೆ ಜ್ಞಾನವಿರುವುದು ಅತ್ಯಾವಶ್ಯಕವಾದುದು. ಚಿಕ್ಕ ಮಕ್ಕಳಿಗೆ ಕಥೆ ಕೇಳುವದರ ಮೇಲೆ ಬಹಳ ಪ್ರೀತಿಯಿರುವುದು. ಅವರಲ್ಲಿ ಕಲ್ಪನಾಶಕ್ತಿಯೂ [illegible] ಹೆಚ್ಚಿರುವುದು. ಅವರ ಕಲ್ಪನಾಶಕ್ತಿಯನ್ನು ಬೆಳೆಯಿಸಲು, ನೀತಿ ಬೋಧಕವಾದ, ಮತ್ತು ರಸಾಳವಾದ ಕಥೆಗಳನ್ನು ಚಿಕ್ಕವರಿಗೆ ಶಿಕ್ಷಕರು ತಪ್ಪದೆ ಹೇಳುತ್ತಿರಬೇಕು. ಶಿಕ್ಷಕರು ತಾವು ಸ್ವತಃ ವಾಚನಾಭಿರುಚಿಯುಳ್ಳವರಾಗಿ, ಹುಡುಗರಲ್ಲಿ ಆ ಅಭಿರುಚಿಯನ್ನು ಹುಟ್ಟಿಸಬೇಕು. ಚಿಕ್ಕಮಕ್ಕಳಿಗೆ ತಕ್ಕಂತಹ ಭಾಷೆಯಲ್ಲಿ ಚಿಕ್ಕ ಚಿಕ್ಕ ಹೊತ್ತಿಗೆಗಳನ್ನು ಬರೆಯಬೇಕು. ಕನ್ನಡ ನಾಡಿನ, ಪಶುಪಕ್ಷಿ, ವನಸ್ಪತಿ, ಖನಿಜದ್ರವ್ಯ, ಜನಜೀವನ, ಆಚಾರವಿಚಾರ ಮೊದಲಾದವುಗಳ ಬಗ್ಗೆ ಚಿಕ್ಕವರ ಮನಸ್ಸು ಹೊಗುವಂತೆ ವಿವೇಚಿಸಬೇಕು. ಮಕ್ಕಳಿಗೆ ಆಗಾಗ್ಗೆ ಕನ್ನಡ ನಾಡನ್ನು ಬಣ್ಣಿಸುವ ಪದ್ಯಗಳನ್ನು ಸುಸ್ವರದಿಂದ ಹಾಡಲು ಕಲಿಸಬೇಕು. ಆಧುನಿಕ ಕವಿಯೊಬ್ಬನು ತನ್ನ ಬಗೆಯ ಹಂಬಲವನ್ನು ಹೀಗೆ ಬಣ್ಣಿಸಿದ್ದಾನೆ.

ನನ್ನ ನಾಡಿದು! ನನ್ನ ಕನ್ನಡದ ನಾಡು! ನನ್ನೆದೆಗೆ ಸವಿಯಾದ ನಾಡು | ನನ್ನ ಕರ್ನಾಟಕವು! ನನ್ನ ರಾಜ್ಯವು ನೋಡು! ನನ್ನ ಸಂತಸದಬೀಡು || ೧ ||

ಕರ್ನಾಟನಾಡ ನುಡಿ ಕರ್ನಾಟನಾಡಿಸಿರಿ! ಎಲ್ಲಿಯೂ ಜಗದಿಕಾಣೆ, ಕರ್ನಾಟಕೋ[illegible]ಯ ಕಮನೀಯ ಗಾನವನು ಪೇಳುವೆನು ದೇವರಾಣೆ || ೨ ||

ಮುತ್ತಿನಂತಹ ಜೋಳ, ಹವಳದಂತಹ ಗೋದಿ, ತಿಂದು ಸೊಗಸಾದ ತಿನಸು | ಹೊತ್ತು ಹೊತ್ತಿಗೆ ಜೇನಿನಂಥ ತುಪ್ಪವ ಸುರಿದು ಮಾಡಿದೆನು ಜೀವ ಸೊಗಸು || ೩ ||

ನನ್ನ ರಕ್ತದ ನೀರಿನಿಂದ ನಿನ್ನಂಗಣದ ಧಳಿಯನ್ನು ಹೊಡೆಯುವೆನು ನಾನು | ನನ್ನ ಶಿರಳಿನ ಮಾಲೆ ನಿನ್ನ ಕೊರಳೊಳು ಹಾಕಿ ಮೋದದಿಂ ಕುಣಿಯುವೆನು ನಾ || ೪ ||

ಚೆಲ್ವಚೈತನ್ಯ ರಸದಿಂದ ಆನಂದದಿಂ ನಿನ್ನೆರದು ಹೂಸಿ ಹಾಡಿ | ಮೆಲ್ಲ ಹೃದಯದ ಕುಂಕುಮದ ತಿಲಕವನ್ನಿಟ್ಟು ತಾಯೆ ಜೋಗುಳವ ಪಾಡಿ || ೫ ||

ಪಂಪಲಕ್ಷ್ಮೀಶ ಕವಿ ಕಾಳಿದಾಸರ ಕಾವ್ಯದಿಂದರಳಿ ಒಡೆದು ಒಡೆದು | ಸೊಂಪಿನಿಂದಿಂಪಿಡಿದು ನನ್ನಾತ್ಮ ಕುಸುಮವನು ಪಾದದಲ್ಲಿಟ್ಟು ಕುಣಿದು || ೬ ||

ಹುಟ್ಟಿ ಮುಂಜಾವಿನಿಂದೆದ್ದು ಸಂಜೆಯ ತನಕ ಕರ್ನಾಟನಾಡಿನಲ್ಲಿ | ಕಟ್ಟಿ ಹಾಡುಗಳನ್ನು ನನ್ನ ತಾಯಿಯ ಮೇಲೆ ಹಾಡುವೆನು ಕಾಡಿನಲ್ಲಿ || ೭ ||

ಇಂತಹ ಸರಲವಾದ, ಸಾತ್ವಿಕ ಅಭಿಮಾನವನ್ನು ಹುಟ್ಟಿಸುವ ಪದ್ಯಗಳನ್ನು ಸಂಗ್ರಹಿಸಿ ಬಾಲಕರಿಂದ ಹೇಳಿಸ ಹತ್ತಿದರೆ, ವಾತಾವರಣವೇ ಸ್ವಾತಂತ್ರ್ಯಮಯವಾಗುವದು. ಬಾಲಕರಲ್ಲಿ ನಾಡಿನ ವಿಷಯಕ್ಕೆ ಅಭಿಮಾನ ಹುಟ್ಟುವುದು. ನಾಡಿನ ವಿಭೂತಿಗಳ ಚರಿತ್ರಗಳಲ್ಲಿ ಅವರ ಮನಸ್ಸು ಲೀನವಾಗುವುದು. ಜೀವನದ ಸಾಫಲ್ಯವು ತಿನಿಸು ಉಣಿಸುಗಳಲ್ಲಿರದೆ, ಜನಸೇವೆಯಲ್ಲಿಯೂ ನಾಡಿನ ಹಿತಕ್ಕಾಗಿ ಹೆಣಗುವದರಲ್ಲಿಯೂ ಇರುತ್ತದೆಂಬುದು ಅವರಿಗೆ ತಿಳಿಯದೆ, ರಕ್ತದ ಕಣ ಕಣಗಳಲ್ಲಿ ತುಂಬುವದು. ಇಂತಹ ಉಚ್ಚವಾದ ಶಿಕ್ಷಣವನ್ನು ಕೊಡುವ ಭಾಗ್ಯವು ಪ್ರಾಥಮಿಕ ಶಿಕ್ಷಕರದಿದ್ದು, ರತ, ಈಕಗಳಲ್ಲಿಯೇ ಹುಡುಗರನ್ನು ಕೊಳೆಯಿಸುವುದು, ನರಕ ಸಾಧನದ ಮಾರ್ಗವಲ್ಲವೆ? ಶಿಕ್ಷಕರು, ಎಚ್ಚತ್ತರೆ, ಎಲ್ಲವೂ ಎಚ್ಚತ್ತು ಚೈತನ್ಯದಿಂದ ತುಂಬಿ ತುಳುಕುವುದು. ಚಿಕ್ಕ ಮಕ್ಕಳು "ತಮಸೋ ಮಾ ಜ್ಯೋತಿರ್ಗಮಯ' ಎಂದು ನಿಮ್ಮಡಿಯಲ್ಲಿ ಕೂಗುತ್ತಿವೆ ಏನೆಂದು ಉತ್ತರ ಕೊಡುವಿರಿ?

ಕರ್ನಾಟಕ ಗಾಯನದ ವಿಷಯದಲ್ಲಿ ನಮ್ಮ ಕನ್ನಡಿಗರಿಗೆ ಅಭಿರುಚಿಯಿಲ್ಲ. ಹೀಗಾಗಲು ಏನು ಕಾರಣವೋ ನಮಗಂತೂ ತಿಳಿಯದು. ಜೀವನನ್ನು ದೇವನಲ್ಲಿ ಬೆರೆಯಿಸಿ ಸಮರಸ ಮಾಡುವ ಧರ್ಮವು ಕರ್ನಾಟಕದ ಹಾಡುಗಳಲ್ಲಿ ಇರುವುದೆಂದು ಎಷ್ಟೋ ಮರಾಠಿಗರು, ವಿಶೇಷತಃ ಮಹಾರಾಷ್ಟ್ರದ ಸಾಧು ಸಂತರು ನಮ್ಮೆಡೆಯಲ್ಲಿ ನುಡಿದಿದ್ದಾರೆ ಹೀಗೆ ಪರಿಸ್ಥಿತಿಯಿರಲು, ಕರ್ನಾಟಕ ಪದ್ಧತಿಯ ರಾಗಗಳಿಗೆ ಬಾಜಾರದಲ್ಲಿ ಬೆಲೆಯಿಲ್ಲದಂತಾಗಿದೆ. ಇದಕ್ಕೆ ಕಾರಣವು ಗಾಯನ ಪಂಡಿತರ ದುರ್ಲಕ್ಷ್ಯವೇ ಆಗಿರಬಹುದು. ಬಿಡಾರ ಕೃಷ್ಣಪ್ಪ ಮೊದಲಾದ ಹಾಡುಗಾರರು ಹಿಂದುಸ್ಥಾನದ ಬೇರೆ ಬೇರೆ ಭಾಗಗಳಿಗೆ ಸಂಚರಿಸಿ, ಕರ್ನಾಟಕ ಪದ್ಧತಿಯ ಪ್ರಚಾರವನ್ನು ಮಾಡಿಲ್ಲವೆಂದೇ ಅದಕ್ಕೆ ಹೀನ ಸ್ಥಿತಿಯು ಬಂದೊದಗಿದೆ ಕರ್ನಾಟಕ ಗಾಯನವು ತಾಲಬದ್ಧ ಲಯಬದ್ಧವಿರುತ್ತವೆ.

(ಮುಂದಿನ ಪುಟಕ್ಕೆ ನೋಡು.)

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ.

[ಲೇಖಾಂಕ ೨]

ಸೀತೀಮನೆಗೆ ಧರ್ಮ, ಆರೋಗ್ಯ ಹಾಗೂ ರಾಜಕೀಯ ದೃಷ್ಟಿಯಿಂದ ಮಹತ್ವವಿದ್ದುದನ್ನು ಕಳೆದ ಸಂಚಿಕೆಯಲ್ಲಿ ಹೇಳಿದ್ದಾಯಿತು. ಸರಕಾರ ಹಾಗೂ ಅರೆ—ಸರಕಾರ (ಲೋಕಲ್ ಬೋರ್ಡ, ಕೋ—ಆಪರೇಟಿವ ಸೋಸಾಯಿಟಿ ಇತ್ಯಾದಿ) ಗಳ ಅಧಿಕಾರಿಗಳೂ, ಸೀತಿಮನೆಯಲ್ಲಿಳಿದು ಸುತ್ತ ಹಳ್ಳಿಗಳಿಗೆ ತಮ್ಮ ತಿರುಗಾಟದ ಸಲುವಾಗಿ ಹೋಗುವದುಂಟು. ಸೀತೀಮನೆಗೆ ರೇಲ್ವೇ ಸ್ಟೇಶನ್‌ಯಿದ್ದ ಮೂಲಕ ಈ ಅಧಿಕಾರಿಗಳಿಗೆ ಅಲ್ಲಿಳಿಯುವದು ಅನುಕೂಲವಾಗುವದು. ಅಲ್ಲಿಳಿದರೆಂದರೆ ಇತ್ತ ಸರಕಾರೀ ಕೆಲಸವೂ ಸರಿ, ಕೃಷ್ಣಾಸ್ನಾನವೂ ಸರಿ. ಒಂದರಲ್ಲಿ ಎರಡು ಕೆಲಸಗಳಾಗುವವು. ಆದ್ದರಿಂದ ಅವರು ಆದಷ್ಟು ಪ್ರಯತ್ನ ಮಾಡಿ ಸೀತೀಮನೆಯ ಮುಕ್ಕಾಂಮನ್ನು ಹುಡುಕಿ ತೆಗೆಯಲು ತಲೆ ಕೆದರದೇ ಬಿಡರು. ಹೀಗಾಗಿ ಸೀತೀಮನೆಯಲ್ಲಿ ಯಾವಾಗಲೂ ಹೋಗು—ಬರುವ ಜನರು ಇರುವದುಂಟು. ಬೇರೆ ಬೇರೆ ದೃಷ್ಟಿಯಿಂದ ಬರತಕ್ಕ ಜನರಿಗೆಲ್ಲ ಇಳಿದುಕೊಳ್ಳಲು ಇಲ್ಲಿ ಮೂರು ಬಗೆಯ ಸ್ಥಾನಗಳಿವೆ. (೧) ಬಾಗಲಕೋಟೆಯ ಶ್ರೀಮಂತರಾದ ಶ್ರೀ. ದರ್ಬಾರ ರಾಮದಾಸರ ಬಂಗಲೆಯು (೨) ಲೋಕಲ್ ಬೋರ್ಡ ಧರ್ಮಶಾಲೆಯು. (೩) ಶಿವನಾಥರ ಧರ್ಮಶಾಲೆಯು. ಈ ಧರ್ಮಶಾಲೆಯು ಸೊಲ್ಲಾಪೂರದ ಶ್ರೀಮಂತರೂ ಧರ್ಮ ಭಾವನೆಯುಳ್ಳವರೂ ಆದ ಶ್ರೀ. ಓರ್ವ ಮಾರವಾಡಿಯವರಿಂದ ಕೇವಲ ಯಾತ್ರಿಕರ ಅನುಕೂಲತೆಗಾಗಿಯೇ ವಿಶಾಲವಾಗಿ ಕಟ್ಟಿಸಲ್ಪಟ್ಟಿದೆ. ಆದರೆ ಇದರ ವ್ಯವಸ್ಥೆಯಲ್ಲಿ ಬಾಗಲಕೋಟೆಯ ಅವರ ಮಿತ್ರರಾದ ಶಿವನಾಥ ಶೇಟಜಿಯವರ ಕಡೆಗಿದ್ದುದರಿಂದ ಜನರು ಇದಕ್ಕೆ ಶಿವನಾಥರ ಧರ್ಮಶಾಲೆಯೆಂದು ಕರೆಯುತ್ತಿರುವರು.) ಶ್ರೀ. ದರ್ಬಾರರವರ ಬಂಗ್ಲೆಯು ಅವರ ಸ್ವಂತದ ಉಪಯೋಗಕ್ಕಾಗಿದ್ದರೂ, ಅವರದನ್ನು ಸಾರ್ವಜನಿಕ ಕಲ್ಯಾಣಕ್ಕಾಗಿ ಸಂತೋಷದಿಂದ ಎಲ್ಲರಿಗೂ ಉಪಯೋಗಿಸಲು ಕೊಡುತ್ತಿರುವರು. ಆದರೆ ಮೊದಲು ಅವರಿಗೆ ತಿಳಿಸಿ, ಅವರ ಅಪ್ಪಣೆ ಪಡೆದು ಹೋಗತಕ್ಕದ್ದು. ಕೆಲವು ಪ್ರಸಂಗಗಳಲ್ಲಿ ಅವರು ಯಾತ್ರಿಕರಿಗೆ ತೊಂದರೆಯಾಗುವದೆಂದು ತಾವು ಹೊರಗೆ ಅಡಿಗೆ ಮಾಡಿಕೊಂಡು ಅಡಿಗೆಯಮನೆಯಲ್ಲಿ ಅಡಿಗೆ ಮಾಡಲು ಯಾತ್ರಿಕರಿಗೆ ಅನುವು ಮಾಡಿಕೊಟ್ಟಿರುವರು. ಅವರ ಬಂಗಲೆಯಲ್ಲಿ ಬಾವಿಯಿದೆ. ಅಂಗಳವು ಸುತ್ತಲೂ ವಿಶಾಲವಾಗಿದೆ. ಆದರೆ ಲೋಕಲ್ ಬೋರ್ಡ ಧರ್ಮಶಾಲೆಯಲ್ಲಿ ಬಾವಿಯಿಲ್ಲ. ಸುತ್ತಲೂ ಅಂಗಳವಿಲ್ಲ; ಇದ್ದ ಕಡೆಗೆ ಗೋಡೆಗಳಿಲ್ಲ; ಇದರಿಂದ ಆಕಳು, ಕುದುರೆ, ಕತ್ತೆ, ನಾಯಿಗಳೆಲ್ಲ ಬಂದು ತೊಂದರೆ ಕೊಡುತ್ತಿರುವವು. ಸರಕಾರೀ ಅಥವಾ ಅರೆ—ಸರಕಾರೀ ಅಮಲದವರು ಬಂದರೆ ಯಾತ್ರಿಕರಿಗೆ ಇಲ್ಲಿಳಿಯಲು ಸ್ಥಳವು ಸಹ ದೊರೆಯದು. ಅನೇಕ ಪ್ರಸಂಗಗಳಲ್ಲಿ ಮೊದಲು ಇಳಿದವರನ್ನು ಸಹ, ಅಮಲದಾರರು ಬಂದಕೂಡಲೆ ಎಬ್ಬಿಸುವರು. ಇರಲಿ ಯಾತ್ರಿಕರು ಹೊರಟುಹೋದ ಕೂಡಲೇ, ಧರ್ಮಶಾಲೆಯ ಸುತ್ತಲಿದ್ದ ಹೊಲಸನ್ನೆಲ್ಲ ಅನೇಕ ದಿನಗಳವರೆಗೆ ಬಳಿದು ಸ್ವಚ್ಛಮಾಡುವದೂಯಿಲ್ಲ. ಮೇಲಧಿಕಾರಿಗಳು ಬರುವರೆಂಬ ಸುದ್ದಿ ತಿಳಿದರೆ ಮಾತ್ರ ಲಗಬಗೆಯಿಂದ ಸ್ವಚ್ಛಮಾಡುವರು. ಧರ್ಮಶಾಲೆಯು ಹಳೇ ಮಾದರಿಯದು. ಸದ್ಯದು ಪ್ರವಾಸಿಕರಿಗೆ ಹೆಚ್ಚಾಗಿ ಉಪಯೋಗವಾಗಬೇಕೆಂಬ ಸದಿಚ್ಛೆಯಿದ್ದರೆ ಹೆಚ್ಚಾಗಿ ಕೋಣೆಗಳನ್ನೂ ಕಟ್ಟಿಸಬೇಕು. ಸುತ್ತಲೂ ಕಂಪಾವುಂಡ ಕಟ್ಟಿಸಬೇಕು. ಅಧಿಕಾರಿಗಳ ತೊಂದರೆಯು ಯಾತ್ರಿಕರಿಗೆ ಆಗದಂತೆ ಏರ್ಪಾಡಿರಬೇಕು. ಸುತ್ತಲೂ ದಿನಾಲು ಬಳಿಗಿ ಮೇಲಿಂದ ಮೇಲೆ ' ಫಿನಾಯಲ್ ' ಹಾಕಿಸುತ್ತಿರಬೇಕು. ಧರ್ಮಶಾಲೆಯ ಏರ್ಪಾಡು ಹೇಗಿರಬೇಕೆಂದನ್ನು ತಿಳಿದುಕೊಳ್ಳಬೇಕಾಗಿದ್ದರೆ, ವಿಜಾಪೂರ ಜಿಲ್ಹೆಗೆ ಹತ್ತಿರದಲ್ಲಿದ್ದ, ಸೊಲ್ಲಾಪೂರಕ್ಕೆ ಹೋಗಿ ಸ್ಟೇಶನದ ಹತ್ತಿರದಲ್ಲಿರುವ ಮುನಶಿವಾಲ್ಟಿ ಧರ್ಮಶಾಲೆಯ ಕಟ್ಟಡ, ಅಲ್ಲಿಯ ಏರ್ಪಾಡುಗಳನ್ನು ಅಧ್ಯಕ್ಷರೂ ಸಭಾಸದರೂ ಕಲಿತುಕೊಂಡು ಬರಬೇಕು. ಬಾಗಲಕೋಟೆಯ ತಾಲೂಕ ಲೋಕಲ್ ಬೋರ್ಡಿನ ಹಳೆಯ ಸುರಿತ ಅಧ್ಯಕ್ಷರೂ, ವಿಜಾಪೂರಜಿಲ್ಹೆಯ ಬೋರ್ಡಿನ ಹೊಸ ಹುರುಪಿನ ಹರೆಯದ ಅಧ್ಯಕ್ಷರೂ, ಈಗ್ಗೆ ಸೀತಿಮನೆಗೆ ಪ್ರಾಪ್ತವಾದ ಮಹತ್ವವನ್ನು ಅರಿತು ಇತ್ತ ಮನಸ್ಸು ಹಾಕಿದ್ದರೆ, ಇಲ್ಲಿಯ ಅನಾನುಕೂಲತೆಗಳಲ್ಲಿಯ ಬಹು ಭಾಗವನ್ನು ಅತಿ ರಕ್ಷಣದಲ್ಲಿ ದೂರ ಮಾಡಬಹುದು. ಆದರೆ ಅವರು ಮನಸನ್ನು ಹಾಕಬೇಕು ಮಾತ್ರ! ಇನ್ನು ಮೂರನೇ ಸ್ಥಾನವಾದ ಶಿವನಾಥರ ಧರ್ಮಶಾಲೆಯೂ ಚನ್ನಾಗಿದೆ. ಬಾವಿ ಇದೆ; ಮುಖ್ಯವಾಗಿ ನದಿಯ ಸಮೀಪಕ್ಕಿದೆ. ಸ್ವಚ್ಛವಾಗಿರುತ್ತದೆ. ಅಟ್ಟದ ಮೇಲಿನ ಕೋಣೆಗಳಂತೂ ರಮ್ಯವಾಗಿವೆ. ಇತ್ತಿತ್ತ ಅನೇಕರು ' ನಮಗೆ ಲೋಕಲ್ ಬೋರ್ಡಿನ ಧರ್ಮಶಾಲೆಯೂ ಬೇಡ. ಅಲ್ಲಿಯ ಅಧಿಕಾರಿಗಳ ಗೊಂದಲವೂ ಬೇಡ'ವೆಂದು ಶಿವನಾಥರ ಧರ್ಮಶಾಲೆಗೂ ಹೋಗುವದುಂಟು.

ಚಂದಾದಾರರಲ್ಲಿ ಬಿನ್ನಹ.

" ಕನ್ನಡಿಗನ " ೫ನೇ ವರ್ಷವು ಪ್ರಾರಂಭವಾಗಿ ೫ ತಿಂಗಳುಗಳಾಗುತ್ತ ಬಂದವು. ಆದರೂ ಅನೇಕರು ಈ ವರೆಗೆ ಮನಿಯಾರ್ಡರದಿಂದ ವಾರ್ಷಿಕ ಚಂದಾ ೧—೧೪—೦ ಕಳಿಸಿಲ್ಲ. ಮತ್ತೂ ಈ ವರ್ಷದ ಸಂಚಿಕೆಗಳು ಬೇಕಾಗಿಲ್ಲವೆಂದೂ ತಿಳಿಸಿಲ್ಲ. ಈ ಐದು ತಿಂಗಳುಗಳಲ್ಲಿ ಸಂಚಿಕೆಗಳನ್ನು ಸ್ವೀಕರಿಸುತ್ತಲೇ ಬಂದಿದ್ದರಿಂದ ಅರ್ಥಾತ್ ಅವರಿಗೆಲ್ಲ ' ಕನ್ನಡಿಗನ ' ಭೆಟ್ಟಿಯ ಅವಶ್ಯಕತೆಇದೆ ಎಂಬುದು ಸ್ಪಷ್ಟವಾಗುತ್ತದೆ. ಆದುದರಿಂದ ಯಾರಿಂದ ಚಂದಾ ಹಣ ಮನಿಯಾರ್ಡರಾಗಿ ಬಂದಿರುವದಿಲ್ಲವೋ ಅವರಿಗೆಲ್ಲ ಈಗ್ಗೆ ವಿ. ಪಿ. ಕಳಿಸಲ್ಪಟ್ಟಿವೆ. ಈ ಸದಯಾಂತಃಕರಣಿಗಳಾದ " ಕನ್ನಡಿಗನ "ಪ್ರೇಮಿಗಳು ಕೂಡಲೇ ವಿ. ಪಿ. ಸ್ವೀಕಾರ ಮಾಡಿ, ' ಕನ್ನಡಿಗ ' ನಿಗೆ ಆಶ್ರಯ ಕೊಡಬೇಕಾಗಿ ಬಿನ್ನವಿಸುತ್ತೇವೆ. ಈ ಐದು ತಿಂಗಳು ' ಕನ್ನಡಿಗ "ನನ್ನು ಸ್ವೀಕಾರ ಮಾಡಿ, ವಿ. ಪಿ. ಒಂದಾಗ್ಗೆ ಅದನ್ನು ನಿರಾಕರಿಸಿ, ನಮಗೆ ಈ ಐದು ತಿಂಗಳುಗಳ ಅಂಚೆ, ಕಾಗದ, ಮುದ್ರಣಗಳ ಹಾಗೂ ವಿ. ಪಿ. ರಜಿಸ್ಟರದ ಹಾನಿಗೆ ಗುರಿಮಾಡುವಂತಹ ಮಹನೀಯರು ಆರೂ ಇಲ್ಲವೆಂದು ನಮ್ಮ ವಿಶ್ವಾಸವಿದೆ.

ವ್ಯವಸ್ಥಾಪಕ.

ವರ್ತಮಾನ ಸಾರ

ಇಹವೃತ್ತ.

ಮಳೆಯು ವಿಶೇಶ ವಿಲ್ಲ.

ಮುನಸಿಪಾಲ್ಟಿಯ ಚುನಾವಣೆಯು ಗೊಂದಲವು ತೀರಿತು. ಇನ್ನಾದರೂ ಊರಲ್ಲಿ ಶಾಂತತೆಯು ಅಗಲಿ. ಕೆಳಗೆ ಕಾಣಿಸಿದವರು ಆರಿಸಿ ಬಂದರು. (೧) ಅಪ್ಪಾಸಾಹೇಬ ನಾಡಗೌಡಾ (೨) ಕರವತಿ ಗುರುರಾವ (೩) ಧಾರವಾಡ ಯಲಗುರ್ದರಾವ (೪) ಶಿರಸೂರ ವಕೀಲ (೫) ಬಾಳಕೃಷ್ಣದಾಸ ವೆಂಕಟದಾಸ (೬) ನಾಗರಯಾಳ ಬಸವಂತರಾವ (೭) ತಮ್ಮಣ್ಣಾ ನಾಯಿಕ ಸವನೂರ (೮) ಅಯ್ಯಪ್ಪಾ ಜ್ಯಾಳಿ (೯) ದಂಡಾವತಿ ಬಸಯ್ಯಾ (೧೦) ತಪಶೆಟ್ಟಿ ಮಹಾಂತಪ್ಪಾ (೧೧) ವೀರಶೆಟ್ಟಿ ಗುರುಸಂಗಪ್ಪಾ (೧೨) ಝಂಗಾಡೆ ನಾರಾಯಣರಾವ (೧೩) ಇರಬಸಪ್ಪಾ ಮೊಕಾಶಿ (೧೪) ಬಣಗಾರ ಬಸಪ್ಪಾ (೧೫) ವೈಜಾಪೂರ ಹುಚ್ಚಪ್ಪಾ (೧೬) ಡಾ. ಮಹಮ್ಮದ ಸಾಹೇಬ (೧೭) ಮೀರಾಸಾಹೇಬ ಗಬ್ಬೂರ (೧೮) ಜರತಾರಗಾರ (೧೯) ಪಟ್ಟದಕಲ್ಲ ಹಜರತಸಾಹೇಬ (೨೦) ದಾದೇಸಾಹೇಬ ಕೊತವಾಲ.

ಸೆರೆ ಶಿಂದಿಗಳನ್ನು ವೈಭವದೊಂದಿಗೆ ಊದಿಸುತ್ತ ಬಾರಿಸುತ್ತ ಹೋಗುವ ಹೊಸದೊಂದು ನೋಟವು ಚುನಾವಣೆಯ ದಿನ ಬಾಗಲಕೋಟೆಯವರಿಗೆ ನೋಡಲು ದೊರೆಯಿತು ! ಹೊಸ ಮಕ್ತೆದಾರರು, ಅದಿನ ಚಕ್ಕಡಿಯಲ್ಲಿ ಸೆರೆ ಶಿಂದಿ ತುಂಬಿದ ಶೀಪುಗಳನ್ನಿಟ್ಟು, ಅವನ್ನು ಶೃಂಗರಿಸಿ, ಊರಲ್ಲೆಲ್ಲ ಮೆರೆಸಿದರು. ವೇಶ್ಯೆಯರೂ ಹೀಗೇ ಮಾಡಬಹುದು ! ಸ್ವಾತಂತ್ರ್ಯದ ಯುಗವಿದು! ರಾಜರ ಬೆಂಬಲವು ಇದಕ್ಕಿದೆಯೋ? ಇಲ್ಲಿಯ ಅಧಿಕಾರಿಗಳು ಉತ್ತರ ಕೊಡ ಬಲ್ಲರೋ ?

✓ ಶಿರಹಟ್ಟಿ ನಾಟಕ ಮಂಡಳಿಯು (ಶ್ರೀ. ವೆಂಕೋಬರಾಯರದು) ಬಂದಿದೆ ಪ್ರಯೋಗಗಳು ನಡೆದಿವೆ ಪಡದೇ, ನೋಟ, ಪೋಷಾಕುಗಳು ನೋಡತಕ್ಕಂತಹವು ಶ್ರೀ ಅಸುಂಡಿಯವರ ಗಾಯನಕ್ಕೆ ಪಾದುಕಾ ಪಟ್ಟಾಭಿಷೇಕದಲ್ಲಿ ಒಳ್ಳೇ ಕಳೆ ಬಂದಿತು.

ವೇ. ಮುಳಗೀ ವೇದವ್ಯಾಸಾಚಾರ್ಯರ ವಾಣೀವಿಲಾಸ ಸಂಸ್ಕೃತ ಪಾಠ ಶಾಲೆಗೆ ಶ್ರೀಮದುತ್ತರಾದಿ ಮಠಾಧೀಶರು ೪೦೦ ರೂ ಇನಾಮ ಕೊಟ್ಟಿದ್ದಾರೆ. ಬಹು ಸ್ತುತ್ಯವಾದ ಕೆಲಸವು! ಕರ್ನಾಟಕದಲ್ಲಿರುವ ಸಂಸ್ಕೃತ ಪಾಠಶಾಲೆಗಳಿಗೆಲ್ಲ ಇದೇ ಪ್ರಕಾರವಾಗಿ ಅಲ್ಲಲ್ಲಿಯ ಮಠಾಧೀಶರು ಸಹಾಯ ಮಾಡುತ್ತ ಹೋದರೆ ಆರ್ಯರ ಪ್ರಾಚೀನ ಜ್ಞಾನವೂ ನಮ್ಮ ದೇಶದಲ್ಲಿ ಹರಡಲು ಅನುಕೂಲವಾಗುವದು.

'ಕನ್ನಡಿಗ'ನ ೪ನೇ ಸಂಚಿಕೆಯಲ್ಲಿ (೧೬—೪—೨೬) ವಿಜಾಪೂರ ಮುನಸಿಪಾಲ್ಟಿಯ ಬಗ್ಗೆ ಪ್ರಸಿದ್ಧವಾದ ಸಂಬಾದಕೀಯ ಟಿಪ್ಪಣಿಯ ದ ಕುಮ್ಮ ಮಾನಹಾನಿಯಾಯಿತೆಂದು ಅಲ್ಲಿಯ ಶ್ರೀ ದಿ[illegible] ವೇಕರರು ಡಿ. ಡಿ ಕಲೆಕ್ಟರರ ಮುಂದೆ ಫೌಜದಾ[illegible] ನಡಿಸಿರುವರು. ಇದಕ್ಕಾಗಿ ಕನ್ನಡಿಗನ ಸಂಪಾದಕರು ವಿಜಾಪೂರಕ್ಕೆ ಹೋಗಿ ಬಂದರು ೨೦ ನೇ ತಾ॥ ವರೆಗೆ [illegible] ದ್ದತು ಬೇಡಲು, ಅದು ಕೊಡಲ್ಪಟ್ಟಿತು

ಮುಂಬೈಕರ್ನಾಟಕ

ವಿಜಾಪೂರದ ಅನಾಥ ಬಾಲಕಾಶ್ರಮದಲ್ಲಿ ೪ ತಾ॥ ದಿನ ವಾಲ್ಕೀ ಎಂಬ ೧೫ ವರ್ಷದ ಲಮಾಣಿ ಕುಮಾರಿಕೆಯನ್ನು, ಲೋನಾವಳದ ಮುನಸಿಪಾಲ್ಟಿಯ ಚೌಕೀದಾರನಾದ ಅಂಬಾದಾಸ ಕಾಳೀ ಜಾತಿಯಿಂದ ಮರಾಠಾಯಿದ್ದು (ರಜಿಸ್ಟ್ರೇಶನ್ ಪ್ರಕಾರ) ಮಿಶ್ರವಿವಾಹವನ್ನು ಸಂತೋಷದಿಂದ ಮಾಡಿಕೊಂಡನು ಈ ಆಶ್ರಮದಲ್ಲಿ ವಿವಾಹವಾಗತಕ್ಕ ೩-೪ ಕನ್ಯೆಯರಿದ್ದಾರೆಂದೂ, ಅನಾಥರ ಮೇಲೆ ದಯೆಯಿದ್ದ ಲಗ್ನವಾಗತಕ್ಕವರು ಮುಂದೊರೆದು ಬರಬೇಕೆಂದೂ ಈ ಸಂಸ್ಥೆಯ ಸನ್ಮಾನಿತ ಕಾರ್ಯದರ್ಶಿಗಳಾದ ಶ್ರೀ ಕಂಭಾವಿ ಬಾಬೂರಾಯರು ತಿಳಿಸುತ್ತಾರೆ. ಈ ಆಶ್ರಮದ ಹುಡಿಗೆಗಳು ಮರಾಟೆಯಲ್ಲೇಕೆಂಬುದನ್ನು ಕಾರ್ಯದರ್ಶಿಗಳು ಹೇಳಬಲ್ಲರೋ ? ವಿಜಾಪೂರವು ಮಹಾರಾಷ್ಟ್ರವೆಂಬುದಾಗಿ ಅವರ ಕಲ್ಪನೆಯೋ ?

' ಮುಂದಾಳು ' ಪತ್ರಿಕೆಯು ಕಳೆದ ಎರಡು ವಾರಗಳಿಂದ, ಮುದ್ರಾಲಯದ ಅನಾನುಕೂಲತೆಗಾಗಿ ಹೊರಬಿರುವದಿಲ್ಲ.

ಲಂಡನ್‌ದ 'ರಾಯಲ್ ಮೆಡಿಕಲ್ ಕಾಲೇಜ'ದಲ್ಲಿ ಹೆಚ್ಚಿನ ತರಗತಿಯ ವೈದ್ಯಕಿ ಅಭ್ಯಾಸ ಮಾಡಲು, ಪಚ್ಚಾಪೂರದಿಂದ ಶ್ರೀ ಚಿದಂಬರ ನಾರಾಯಣ ಖಟಿಹೀಸ ಎಂಬವರು ಇದೇ ೭ ತಾರೀಖಿಗೆ ಮುಂಬೈಯಿಂದ ಲಂಡನ್ನಕ್ಕೆ ಹೋಗುವರು.

ಮೈಸೂರ ಕರ್ನಾಟಕ

ಮೈಸೂರ ದೇಶದಲ್ಲಿ ಮೋಟರುಗಳು ಹೆಚ್ಚಿದ್ದರಿಂದ, ಅವುಗಳ ಒಡೆಯರು ದರಗಳನ್ನು ಇಳಿಸ ಹತ್ತಿರುವರು. ಕೆಲವಡೆಯಲ್ಲಿ ಮೈಲಿಗೆ ೬ ಪೈ ಬೀಳುವದಿಲ್ಲ.

ಮೈಸೂರ ಪಟ್ಟಣದಲ್ಲಿ ಕಟ್ಟಬೇಕೆಂದಿರುವ ಕಿವುಡ ಮೂಕರ ಶಾಲೆಯ ನಿಧಿಗೆ ಮಿ॥ ಪ್ರಿಟ್ಲಿ ಎಂಬುವರು ೨ ಸಾವಿರ ರೂ. ದಾನ ಮಾಡಿದ್ದಾರೆ.

ಕೊಡಗು ಕರ್ನಾಟಕ

ಕೊಡಗಿನಲ್ಲಿ ಈ ಸಲ ಮಳೆಯಿರಲಿಲ್ಲ. ಆದರೆ ಕಳೆದವಾರದಲ್ಲಿ ಎಲ್ಲ ಕಡೆಗೂ ಚನ್ನಾಗಿ ಮಳೆಯಾಗಿದೆ.

ಕೊಡಗಿನಲ್ಲಿ ಚಹದ ಅಂಗಡಿಗಳ ಪ್ರವೇಶವಿರಲಿಲ್ಲ ಆದರೆ ಈಗ್ಗೆ ಸೋಮವಾರ ಪೇಟೆ, ಫ್ರೇಜರ ಪೇಟೆಗಳಲ್ಲಿ ಈ ಅಂಗಡಿಗಳು ಜೋಂಡು ಹಾಕಿವೆ.

ಒಂದು ಕೋಳಿಯು ಮೊಟ್ಟೆ ಹಾಕುತ್ತಿದ್ದಂತೆಯೇ ನಿಜೀವ ಮರಿಯನ್ನೂ ನಾಪೊಕ್ಲು ವಿನಲ್ಲಿ ಹಾಕಿತಂತೆ ಇದನ್ನು ಅಲ್ಲಿಯ ಡಾಕ್ಟರ ಕೋದಂಡ ಕಾರ್ಯಪ್ಪನವರು ಪ್ರತ್ಯಕ್ಷವಾಗಿ ನೋಡಿದರಂತೆ.

ನಿಝಾಂ ಕರ್ನಾಟಕ

ಕೊಪ್ಪಳ ಜಿಲ್ಲೆಯ [illegible] ಡಿ ಎಂಬು ಹಳ್ಳಿಯಲ್ಲಿ ಮನೆ ಕಟ್ಟಿಸುವಾಗ್ಗೆ ನೆಲ ಅಗಿಯುತ್ತಿರಲು, ಒಂದು ತಗಡು ಸಿಕ್ಕಿದೆ. ಅದರಲ್ಲಿ ಹುಕ್ಕ [illegible] ವಿಸರಿನ ಬರಹಗಳು ತುಂಬಿವೆ ಆ ದಪ್ಪಿಯನ್ನು ಕುಕನೂರ [illegible] ಕಳಿಸಿದ್ದಾರಂತೆ.

ಹಿಂದುಸ್ಥಾನ.

ಜಪಾನದೇಶದಲ್ಲಿ ಒಂದು ಸ್ವತಂತ್ರವಾದ ವಿಶ್ವ ವಿದ್ಯಾಲಯವನ್ನು

' ಕನ್ನಡಿಗ 'ನ ರಜೆ.

ವಿದ್ಯಾರಣ್ಯ ಮುದ್ರಾ ಮಂದಿರದ ಯಂತ್ರಗಳಲ್ಲಿ ಕೆಟ್ಟ ಭಾಗಗಳನ್ನು ಸುಧಾರಿಸತಕ್ಕದ್ದಿರುವದರಿಂದ ಮುಂದಿನ ವಾರದಲ್ಲಿ " ಕನ್ನಡಿಗ"ನಿಗೆ ರಜೆ ತೆಗೆದುಕೊಳ್ಳಬೇಕಾಗಿದೆ. ವಿದ್ಯಾರಣ್ಯರ ಪುಣ್ಯತಿಥಿಗಾಗಿ ' ಕನ್ನಡಿಗ 'ನು ರಜೆ ತೆಗೆದುಕೊಳ್ಳುವ ರೂಢಿಯಿದ್ದುದನ್ನು ವಾಚಕರು ಮರೆತಿರಲಿಕ್ಕಿಲ್ಲ. ಆದರೆ ಈ ಯಂತ್ರ ಸುಧಾರಣೆಯು ಬೇಗನೇ ಆಗತಕ್ಕದ್ದಿದ್ದದರಿಂದ ನಾವು ಆಗ್ಗೆ ರಜೆ ತೆಗೆದುಕೊಳ್ಳದೇ ಹಾಗೇ ಅದನ್ನು ಕಾದಿಟ್ಟಿದ್ದೆವು. ಈಗ್ಗೆ ತೆಗೆದುಕೊಂಡಿದೆ. ಮುಂದಿನ ಸಂಚಿಕೆಯು ಅಗಸ್ಟ ೧೩ ನೇ ತಾ. ದಿನ ಹೊರಡದೇ ತಾ. ೨೦ ಶುಕ್ರವಾರ ಹೊರಡುವದು.—

ವ್ಯವಸ್ಥಾಪಕ,

ಸ್ಥಾಪಿಸುವ ಬಗ್ಗೆ ಅಲ್ಲಿಯ ಸರಕಾರವು ವಿಚಾರಿಸುತ್ತಲಿದೆ.

ಆಸಾಮು ಕಾಂಗ್ರೆಸ್ಸಿನ ಕಾರ್ಯವು ತ್ವರೆಯಿಂದ ಸಾಗಿದೆ. ಸ್ವಾಗತ ಮಂಡಳದ ಏರ್ಪಾಡು ಸಂಪೂರ್ಣವಾಗಿದೆ.

ಮಧ್ಯ ಪ್ರಾಂತದಲ್ಲಿ ಹಳೇ ನಾಣ್ಯಗಳು ವಿಪುಲವಾಗಿ ದೊರೆತಿದ್ದು ಅವು ಪುರಾತನವಸ್ತು ಸಂಶೋಧಕರಿಗೆ ಅನುಕೂಲ್ಯವಾಗಿವೆಯಂತೆ, !

ದಿಲ್ಲಿ ಮುನಸಿಪಾಲ್ಟಿಯಲ್ಲಿದ್ದ ಹಿಂದೂ ಮುಸಲ್ಮಾನರ ಜಗಳಾಟವನ್ನು ನಿಲ್ಲಿಸುವದಕ್ಕಾಗಿ, ಅಲ್ಲಿಯ ೯೩ ಜನ ಸಭಾಸದರಲ್ಲಿ ೧೫ ಜನರು ಹೊಂಕ ಕಟ್ಟಿ ನಿಂತಿದ್ದಾರೆ. ಉಳಿದವರೂ ಈ ಪಂಗಡಕ್ಕೆ ಬೇಗನೇ ಸೇರಬಹುದಾಗಿ ತೋರುತ್ತದೆ. ಅಬ್ದುಲ್ ರಹಿಮಾನ ಹಾಗೂ ಶ್ರೀರಾಮರೇ ಈ ಕಾರ್ಯದಲ್ಲಿ ಮುಖಂಡರು.

[ನಮ್ಮ ಬಡೋದೆಯ ಪತ್ರ.]

ಇಲ್ಲಿಗೆ ಕೆಲವು ದಿನಗಳ ಹಿಂದೆ ಬಂದು ಇಲ್ಲಿಯವರನ್ನು ತಮ್ಮ ಅಮೋಘವಾದ ಗಾಯನ ವಾದನಗಳಿಂದ ಸಂತೋಷ ಪಡಿಸುತ್ತಿರುವ ಮೈಸೂರಿನ ಬಾಲ ಸರಸ್ವತಿ ಮುಂತಾದ ಬಿರುದು ಪಡೆದ "ಮನಮೋಹನಚಂದ್ರ" ರವರ ಕಚೇರಿಗಳು ನಡೆಯುತ್ತಿರುವವು. ದಿವಾನರ ಪರ ಮನೆಯಲ್ಲಿಯೂ ಹುಕ್ಕೆ ರಾಜಮಾತ್ರ ಪ್ರತಾಪ ಶಿವರಾವರವರ ಸಮ್ಮುಖದಲ್ಲಿಯೂ ಕಚೇರಿಗಳು ಪಡೆದವು. ಹೋದ ತಿಂಗಳು ೨೦ ನೇ ತಾರೀಖಿನಲ್ಲಿ ಆದ ಉತ್ಪತ್ತಿಯಲ್ಲಿ ಅರ್ಧ ಭಾಗವನ್ನು ಈ ಊರಿನ ಸಾಹಿತ್ಯ ಸಭೆಗೆ ಕೊಟ್ಟರು. ಇನ್ನೂ ಕೆಲವು ಕಚೇರಿಗಳಾಗಬಹುದು. ಇವರು ಇಲ್ಲೇ ಅಲ್ಲದೆ ಅಹಮುದಾಬಾದ, ಸುರತ, ಬ್ರೋಚ, ಮತ್ತು ಮುಂಬಯಿ ಮುಂತಾದ ದೇಶಗಳಲ್ಲಿ ಪ್ರಖ್ಯಾತಿ ಹೊಂದಿರುವುದು ಕನ್ನಡಿಗರೆಲ್ಲರಿಗೂ ಸಂತೋಷದ ಸಂಗತಿ ಯಲ್ಲವೇ?

ಪರದೇಶ.

ಟೋಕಿಯೋದಲ್ಲಿ ಒಂದು ಭಯಂಕರವಾದ ಭೂಕಂಪ ವಾಗಿದೆ. ಜೀವ ಹಾನಿಯ ಸುದ್ದಿಯೇನೂ ಇಲ್ಲ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪೇರಗಲ್ಲಿ, ಪುಣೆ ಸಿಟಿ.

AWAKE ! AWAKE ! AWAKE !

GOLDEN CHANCE.

IMITATION WHITE DIAMONDS.

14 Samp[illegible] t 6 Kanats.	Rs. 10/-
14 Sample Cut Rubies 8 Kanats.	Rs. 4/-
Silky Muslins with fine borders sufficient for 6 Shirts	yards 12, Rs. 7/8/-
Sample Shirts 3	Rs 5/-

Apply to English correspondence of:—

A. S. M. Chetty & Co.

CHICACOLE Ganjam Dist

Price List Free.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರಾಕ್ಟೀಶನರ ಮತ್ತು ಡೆಂಟಿಸ್ಟ: ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತ ಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು. ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

॥ ಶ್ರೀ ॥

ತ್ವರೆಮಾಡಿರಿ! ಅಡಚಣೆಯು ದೂರಾಯಿತು!!

ಮನಿ, ವಖಾರ, ಮೋಟಾರ ಶೆಡ್ ಮುಂತಾದ
ಇಮಾರತ ಕಟ್ಟಿಸುವವರಿಗೆ
ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟುಗಳ ಹಾದಿಯು ಮತ್ತು [illegible] ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ [illegible] [illegible] ಪ್ಲಾಟುಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ವ್ಯಾಪಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಬಹಳೇ ಅನುಕೂಲವಾಗಿರುವ ಸ್ಥಳವು. ಜಮೀಯು ಆರೋಗ್ಯಕರವಾದದ್ದು. ಇದಕ್ಕೆ [illegible] ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವಿಲ್ಲ. ಒಂದೊಂದೇ ಪ್ಲಾಟ ಅಗ್ದಿ ಪಟ್ಟಿಗೆ ತಮ್ಮ ತಮ್ಮ ಅನುಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊ [illegible] ಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟೆ	ಭೀಮರಾವ ಟಂಕಸಾಲಿ
[illegible]	ಡಾಕ್ಟರ,

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ !!

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ಸುರಿತರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸರಿಯಾಗಿ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ: [illegible] ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ [illegible] ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲ [illegible]

ಕಲಿಸುವ ಅವಧಿಯು (ಕೋರ್ಸ) ಒಂದು [illegible] ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಗುಬ್ಬಿಶ್ರೀಚನ್ನಬಸವೇಶ್ವರ ನಾಟಕಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ. ಪ್ರೊಪ್ರಾಯಿಟರ.

ಕನ್ನಡ ಗೆಳೆಯರ ಗುಂಪಿನ ವಾರ ಪತ್ರಿಕೆ

ಸ್ವಧರ್ಮ.

ಸಂಪಾದಕ:— ದ. ರಾ. ಬೇಂದ್ರೆ ಬಿ. ಏ.

ಸಮಾಜದಲ್ಲಿ ಶಾಂತಿ ತೃಪ್ತಿ ತುಷ್ಟಿಗಳು ನೆಲೆಗೊಳ್ಳಬೇಕಾದರೆ ಸದಾಚಾರವೇ ಸರಳವಾದ ಹಾದಿ. ಸದಾಚಾರದ ಬೆಳೆಗೆ ಸುವಿಚಾರವೇ ಸರಿಯಾದ ಸಾಧನ ಇಂತಹ ಸುವಿಚಾರಗಳನ್ನು ಸಮಾಜದ ಮುಂದಿಡಲು ತೊಡಗುವದೇ ಸ್ವಧರ್ಮದ ಗುರಿ. ಕನ್ನಡಿಗರು ಕೈಗೊಟ್ಟು ಸ್ವಧರ್ಮವನ್ನು ಪ್ರೋತ್ಸಾಹಿಸಬೇಕಾಗಿ ಕೋರಿಕೆ ವಾರ್ಷಿಕ ವರ್ಗಣಿ. ರು ೨-೦

ಕಾರ್ಯದರ್ಶಿ. ಸ್ವಧರ್ಮ ಕಾರ್ಯಾಲಯ
ಮಾಳಮಡ್ಡಿ ಧಾರವಾಡ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
ASSURANCE COPANY
[illegible] full particulars to-
Kulkarni. agent Bagalkot.

ಈ ಪತ್ರಿಕೆಯು ಮಂಗಳವೇಢೆ ರಾಜೇಂದ್ರಾಯರ [illegible] ಪ್ರೆಸಿನ [illegible] ದಿಂದ ಬಾಗಲಕೋಟೆಯಲ್ಲಿಯು ವಿದ್ಯಾರತ್ನಮುದ್ರಾ[illegible] [illegible] ಮುದ್ರಿತವಾಗಿ [illegible] ಪ್ರಸಿದ್ಧಿಸಲ್ಪಟ್ಟಿತು.

ದಿ ಪೆಟ್ರಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ

ಈ ಕಂಪನಿಯ ಬಾಂಡು ಪೋಲ್ಸುಗಳ ಚೀಟಿ ಎತ್ತುವ ಕ್ರಮವು ೧೯೨೨ ನೇ ಇಸ್ವಿಯ ಜನವರಿ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್‌ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಗಳ ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಬಾಂಡ ನಂ. ೫೬೦ ಮಿ. ವಿಠ್ಠಲ ಚಿಮ್ಮಾಜಿ ಸೇಟ ಕಲಾನ್ ಅಲಿಬಾಗ ಬಾಂಬೆ,

(೨) ಬಾಂಡ ನಂ. ೧೩೭೮೬ ಮಿ|| ರಂಗಪ್ಪಾ ಶ್ಯಾನಭೋಗ ಹುಲಿಕುಂಟೆ ಪೋಸ್ಟ ಸಿರಾ ತಾಲ್ಲೂಕ ಸಿರಾ. (ಜಿ. ತುಮಕುರು.)

(೩) ಬಾಂಡ ನಂ. ೧೪೯೪೬ ಮಿ|| ವೆಂಕಟರಮಣ. ವೆಂಕಟರಮಣ ಹೆಗಡೆ, ಸೇಕರಿ ಹೆಬ್ಬಣಕೇರಿ ಹೊನ್ನಾವರ ಪೋಸ್ಟ ಜಿಲ್ಲಾ ನಾರ್ಥ ಕ್ಯಾನರಾ.

(೪) L. B. C. ಬಾಂಡ ನಂ. ೧೨೭೩ ಮಿ|| ಜಿ. ವೆಂಕಟಪಾ ವ್ಯಾಪಾರ ಮತ್ತು ಜಮೀನದಾರ ಬ್ರೂಸಪೇಟೆ ಬಳ್ಳಾರಿ.

(೫) ಬಾಂಡ ನಂ- ೨೫೧ ಮಿ|| ರಾಮಚಂದ್ರ ವಾಮನ ಕಾಂಕರ ಕಾಲುಸ್ಕರ ವಾಡಾ ಪ್ಯಾಲೆಸರೋಡ (ಬರೋಡಾ)

(೬) ಬಾಂಡ ನಂ. ೧೮೫೦ ಮಿ|| ಆರ್. ಎಚ್. ನಾಟೆಸನ್ ಮಾಸ್ತರ ಗವ್ಹರ್ನಮೆಂಟ ಸಿಟಿ ಹಾಯಸ್ಕೂಲ ಹೈದರಾಬಾದ, (ಡೆಕ್ಕನ)

ಬಿ. ಎಸ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ.)

ಅಪೂರ್ವಸಂಧಿ.

S.U.N.&CO.
BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮಿ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೊತೆ ೧ಕ್ಕೆ ರೂ. ೨೫ ರಿಂದ ೩೦-೫೦-೧೦೦ರ ವರೆಗೆ. ಉಡುವ ಮೊಗಟ ಮೊಳ ೬-೭-೮-೧೧-೧೩-೧೮ ಮೊಳಗಳು; ಇದು ಮೊಳ ೧ಕ್ಕೆ ೨ರೂ. ಯಿಂದ 2½ ರೂ. ವರೆಗೆ. ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಕಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಕಾಳುಗಳು, ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೦ ರವರೆಗೆ ೧೧-೧೨-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೧೦ ರವರೆಗೆ ೧೪ ಮುಖದ ಕಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪-೮-೦ ನಾಲ್ಕು ಕೋಟಿಗೆ ಸಾಕಾಗುವಷ್ಟು ರೇಶ್ಮಿ ಕೋಟಿಂಗ ಶಿಲ್ಕು ಥಾನು ೭ ಗಜಾ ಉದ್ದ ೩ ಗಜಾ ಅಗಲುಳ್ಳದ್ದು ಥಾನುಗಳಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಬೀಳುವದು

ವಿಳಾಸಃ— ಶಿರೋಮಣಿ ನಾರಾಯಣಾಚಾರ್ಯ ಕಂಪನಿ,
ಕಾಶೀ ಬನಾರಸ್

ಹಳೇ ಮೋಟಾರ

ಸೋವಿಯದರದಿಂದ ಮತ್ತು ಹೊಸ ಮೋಟಾರ ಉದ್ರಿ ಹಾಗು ಕಂತಿನಿಂದ ಪೂರೈಸಿಕೊಡುವ ಒಂದೇ ಸ್ಥಳವೆಂದರೆ:—

ಭಾ. ಡಿ. ಗರವಾರೆ
ಪ್ರಾರ್ಥನಾಸಮಾಜ ಮುಂಬೈ ನಂಬರ ೪
ಬಾಗಲಕೋಟೆಯ ಏಜಂಟರು ಬಂಗಳವೇಢೇ ಬಂಧುಗಳು
ಕನ್ನಡಿಗನ ಕಾರ್ಯಾಲಯ ಬಾಗಲಕೋಟೆ

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬರ್ಟೀ ವಾಚ ಕಂ. (India) ಮುಂಬೈ ನಂ. ೪

ನೋಟೀಸ.

ರಾ. ಸಂಗಪ್ಪಾ ತಂದಿ ಬಸಪ್ಪಾ ಪಿಂಗಿ ಸಾ|| ಯತ್ತಿನಹಟ್ಟಿ ತಾಲೂಕ ಬಾಗಲಕೋಟ ಇವರಿಗೆ—

ಕೆಳಗೆ ಸಹಿ ಮಾಡುವವಳ ಕಡಿಂದಾ ನೋಟೀಸ ಕೊಡುವದರಲ್ಲಿ ಬರುತ್ತದಲ್ಲಾ. ನನ್ನನ್ನು ಲಗ್ನ ಮಾಡಿಕೊಂಡು ಬಹಳ ದಿವಸವಾಯಿತು. ಈಗ ನಾನು ಪ್ರೈಸರನು ೪-೫ ವರ್ಷ ಆಗಲಿಕ್ಕೆ ಬಂತು ನನ್ನನ್ನು ಇವತ್ತಿನ ವರೆಗೂ ನಿನ್ನ ಮನಿಗೆ ಕರಕೊಂಡು ಹೋಗಿ ನನ್ನ ಸಂಗಡ ಪ್ರಪಂಚ ವಗೈರೆ ಮಾಡಲಿಲ್ಲಾ. ನೀನು ನನ್ನ ಕಿಂತಾ ಮೊದಲಿಗೆ ಸಂಗನಬಸವ್ವಾ ಇವಳನ್ನು ಲಗ್ನ ಮಾಡಿಕೊಂಡಿ(ದಿ ಈಗ ಅವಳನ್ನು ಕರಕೊಂಡು ಬಂದು ಆಕೆಯ ಸಂಗಡ ಪ್ರಪಂಚ ಮಾಡಲಿಕ್ಕೆ ಹತ್ತಿದಿ ಹದರೀವಳ ಮಾತು ಕೇಳಕೊಂಡು ನೀನು ನನ್ನ ಕರಕೊಂಡು ಹೋಗಿ ನನಗೆ ಹೊಟ್ಟಿಗೆ ವ ಅರವಿ ಅಂದರೆ ಸೀರಿ ವಗೈರೆ ಕೊಡುವದು ಈವತ್ತಿಗೂ ಮಾಡಿಲ್ಲ. ನಾನು ಈಗ ನನ್ನ ತಂದಿ ಮದಪ್ಪಾ ತಳಗಿಹಾಳ ಇವನು ನನ್ನನ್ನು ಜೋಪಾನ ಮಾಡಿಕೋತಾ ಬಂದಾನೆ. ಅವನು ಬಡವನಿರುತ್ತಾನೆ. ನನ್ನ ತಂದಿಯು ನನ್ನ ಹೊಟ್ಟಿಯಿಂದಾ ವ ಅರವಿ ... ಯರ್ಚನೆ ಕಡಿಗೆ ದೇಣೆ ನನ್ನ ದರಿಂದಾ ಮಾಡಿರುತ್ತಾನೆ. ಈ ದೇಣೆದವರ ವ್ರುಪದ್ರ ಬಹಳ ಆಗಿ ... ರೂಪಾಯಿ ೩೦೦ ಆಗಿರುತ್ತದೆ ಕಾರಣ ನೀನು ಈ ನೋಟೀಸ ಮುಟ್ಟಿದ ೮ ದಿವಸಗಳಲ್ಲಿ ... ನನ್ನನ್ನು ಕರಕೊಂಡು ಹೋಗಬೇಕು ... ಹಾಗೆ ಮಾಡದಿದ್ದರೆ ನಾನು ಎರಡನೇ ಕಡಿಗೆ ವ್ರುಡಕಿ ಮಾಡಿಕೊಂಡು ... ಮಾಡುತ್ತೇನೆ. ವ್ರುಡಕಿ ಆದಮೇಲೆ ನನ್ನ ಮೇಲೆ ವ ನನ್ನ ವ್ರುಡಕಿ ಗಂಡನ ಮೇಲೆ ಯಾವ ತಂಟೆ ... ತಿಳಿಯಲಿ. ಈ ನೋಟಿಸಿನ ... ನಿನ್ನ ತಲೆಯ ಮೇಲೆ ಆದೆ.

ತಾರೀಖು ೨೫—೭—೧೯೨೨ ಇಸ್ವಿ

ಈ ಗುರ್ತಾ ಸಂಗನಬಸವ್ವಾ ಗಂಡಾ ಸಂಗಪ್ಪಾ ಪಿಂಗಿ ಸಾಕೀನ ತಳಗಿಹಾಳ ... ಬಾಗಲಕೋಟ





The Cheapest House.

For quick: Economical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the welknown Richelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specialist to give satisfactory work,

6 For Building motor bodies of various types by workers onin uptodate line.

7 For all kinds of motor repairs,

Apply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಸ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ

೨ ಎ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ವೋವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟುಬುಗಳು ಖರೀದಿಗಾಗಿ

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಸಲಿಕ್ಕೆ,

೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವೀಸ.

ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ

ಮೋಟಾರುಗಳಿಗೆ ಸಬ್ ಏಜಂಟರು.

ಕೈಯಿಂದಲೇ ನೂತು ತಯಾರಿಸಿದ

ಪವಿತ್ರವಾದ

ಬ್ರಾಹ್ಮಣೀ ಯಜ್ಞೋಪವೀತಗಳು.

ಗೋಕರ್ಣದವರೆಂದು ಕೆಲವರು ಅಲ್ಲಲ್ಲಿಗೆ ಹೋಗಿ ಉಪವೀತಗಳನ್ನು ಮಾರುವರು. ಅದೊಂದು ಅವರ ಧಂದೆಯೇ ಆಗಿದೆ. ಆದರೆ ಆ ಉಪವೀತಗಳು ಅಪವಿತ್ರವಾದ ಮಿಲ್ಲನೂಲಿನಿಂದ ತಯಾರಾದವೆಂದೂ ವ್ಯರ್ಥವಾಗಿ ಗೋಕರ್ಣವನ್ನು ಕಲಂಕಿಸುವರೆಂದೂ ಅನೇಕರು ದೂರುವರು. ಇಷ್ಟೇ ಅಲ್ಲ ೩ನೇ ಕರ್ನಾಟಕ ಪ್ರಾಂತಿಕ ಪರಿಷತ್ತಿನ ಸಭಾಮಂಟಪದಲ್ಲಿ ಶ್ರೀ. ಕೌಜಲಗಿ ಶ್ರೀನಿವಾಸರಾಯರು ಇದನ್ನು ಪ್ರತ್ಯಕ್ಷ ಆಕ್ಷೇಪಿಸಿದರು. ಇವೆಲ್ಲ ಕಾರಣಗಳಿಂದ ನಿರುಪಾಯವಾಗಿ ಜನರಿಗೆ ಮೋಸವಾಗಬಾರದೆಂಬದೊಂದೇ ಹೇತುವಿನಿಂದ ಇಲ್ಲಿಯ ಕೆಲವು ಜನರಿಗೆ ಉಪವೀತ ತಯಾರಿಸುವಬಗ್ಗೆ ಪ್ರೋತ್ಸಾಹಕೊಟ್ಟು ನಂದಿನಿಯ ಕಾರ್ಯಾಲಯದ ಮುಖಾಂತರ ಅಂಥ ಶುದ್ಧವಾದ ಉಪವೀತಗಳನ್ನು ಜನರಿಗೆ ಪೂರೈಸುವ ವ್ಯವಸ್ಥೆ ಮಾಡಿದೆ. ಬೇಕಾದವರು ಈ ಕೆಳಗಿನ ಪತ್ತೆಗೆ ಬರೆಯಬೇಕು. ಕ್ರಯ ಜೋಡಿ ೧ಕ್ಕೆ ೧ ಆಣೆ. ಜೊಡಿ ೧೦೦ಕ್ಕೆ ೬ ರೂಪಾಯಿ ಟಪಾಲ ಖರ್ಚು ಪ್ರತ್ಯೇಕ ಬೀಳುವದು.

ನಂದಿನಿ ಕಾರ್ಯಾಲಯ, ಗೋಕರ್ಣ.

ರ. ನಂ. ಬಿ. ೧೯೪೭ ವಾ. ಚಂದಾ ೧—೧೩—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಶ್ರಾವಣ ಶುದ್ಧ ೧೩ ಶಕೆ ೧೮೬೮ ತಾ॥೨೦-೮-೧೯೪೬ | ಸಂಚಿಕೆ ೩೧

ಸಂಪಾದಕರ ಭೂಮಿ

(೬೨)

ನನ್ನ ಮನಸಿನ ಮೋಣವಮಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮೆ!
ಚಿನ್ನದಾದರು ಚಿನ್ನ ಮೋಣಬಿಸ್ತ್ರಿಯು ನೋಡು ಚಿನ್ಮಯಾಕಾಶದಲ್ಲಿ॥

ನನ್ನ ದೇಹವು ನಿನ್ನ ಶೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಸ್ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾ ತನಯ ದತ್ತ

ಕರ್ನಾಟಕ ಏಕೀಕರಣದ ಬಗ್ಗೆ ವಿಜಾಪೂರ ಜಿಲ್ಹಾ ಲೋಕಲ್ ಬೋರ್ಡ್, ಹಾಗೂ ಇಂಡಿ ತಾಲೂಕಾ ಲೋಕಲ್ ಬೋರ್ಡಿನವರು ವಿಜಾಪೂರ ಮುನಿಸಿಪಾಲ್ಟಿಯವರೂ ಠರಾವುಗಳನ್ನು ತೀರ್ಮಾನಿಸಿ, ಕರ್ನಾಟಕದ ಉಳಿದ ಸಂಸ್ಥೆಗಳಿಗೆ ಮೇಲ್ಪಂಕ್ತಿಯನ್ನು ಹಾಕಿಕೊಟ್ಟಿರುವರು. ಇವರನ್ನು ಕರ್ನಾಟಕದಲ್ಲಿರುವ ಪ್ರತಿಯೊಂದು ಬೋರ್ಡಿನವರೂ ಆದಷ್ಟು ಬೇಗನೇ ಅನುಕರಿಸಿ, ತಾವು ನಿರ್ಣಯಿಸಿದ ಠರಾವುಪತ್ರಿಕೆಗಳನ್ನು, ಮುಂಬೈ, ಮದ್ರಾಸ, ಕೊಡುಗು ಮತ್ತು ನಿಜಾಮ ಸರಕಾರಗಳಿಗೆ ಕಳಿಸಿಕೊಡಬೇಕಾಗಿ ಎಚ್ಚರಕೊಡುತ್ತೇವೆ. ಈ ಏಕೀಕರಣದ ಗಾಳಿಯನ್ನು ಇನ್ನು ಹೆಚ್ಚಾಗಿ ಹಬ್ಬಿಸಬೇಕೇ ಹೊರತು ಅದಾಗಿ ಶಾಂತವಾಗಲು ಅನುವುಕೊಡತಕ್ಕದ್ದಲ್ಲ. ಅಂದರೆ ಮುಂಬೈ ಸರಕಾರದವರು ಕೇಳಿದ ಪ್ರಶ್ನೆಗೆ ತಕ್ಕದಾದ ಉತ್ತರವು ದೊರೆಯುವದು. ಮುಂಬೈ ಸರಕಾರಕ್ಕೆ ಉತ್ತರ ಕೊಡುವಾಗ, ಉತ್ತರ ಕರ್ನಾಟಕದ ನಾಲ್ಕೂ ಜಿಲ್ಹೆಗಳ ಕಲೆಕ್ಟರರೂ, ದಕ್ಷಿಣ ಭಾಗದ 'ಕಮೀಶನ'ರರೂ ಯಾವ ಬಗೆಯಿಂದ ಈ ವಿಷಯದ ಕಲ್ಪನೆಯನ್ನು ಸರಕಾರಕ್ಕೆ ಕೊಟ್ಟಿರುವರೋ ತಿಳಿಯದು. ಇದ್ದುದರಲ್ಲಿ ನಮಗೆ ಸಮಾಧಾನ ಹೊಂದಲು ಒಂದು ಮಾರ್ಗವಿದೆ. ನಮ್ಮ ಜಿಲ್ಹೆಯ ಕಲೆಕ್ಟರರಾದ ಶ್ರೀ. ನಾಯಿಕರು ಅಚ್ಚ ಕನ್ನಡಿಗರು ಕರ್ನಾಟಕದ ಅಭಿಮಾನವು ಅವರಲ್ಲಿ ತುಂಬಿತುಳುಕುತ್ತಲಿದೆ. ಆದ್ದರಿಂದ ಇವರು ಮುಂಬೈ ಸರಕಾರಕ್ಕೆ ಏಕೀಕರಣದ ಕಲ್ಪನೆಯನ್ನು ಒಳ್ಳೇ ರೀತಿಯಿಂದ ಮಾಡಿಕೊಡುವೆಂಬದಾಗಿ ಊಹಿಸಬಹುದಾಗಿದೆ. ಅದೇ ಪ್ರಕಾರವಾಗಿ, ಈಗಿನ ಕಮೀಶನರಾದ ಮಾಂಟೆಫರ್ ಸಾಹೇಬರು ಕಾರವಾರದಲ್ಲಿ ಹುಟ್ಟಿದವರು ಕನ್ನಡವನ್ನು ಬಲ್ಲವರು. ಕನ್ನಡಿಗರ ಅನಾನುಕೂಲತೆಗಳನ್ನೂ, ನಮ್ಮ ಸವಾದ ಆಕಾಂಕ್ಷೆಗಳನ್ನೂ, ಮುಂಬೈ ಸರಕಾರದ ಮುಂದೆ ಸಮರ್ಪಕವಾಗಿ ಮಂಡಿಸದೇ ಇರಲಿಕ್ಕಿಲ್ಲ. "ಗಾಳಿ ಬಂದಾಗ ತೂರಿಕೋ" ಎಂಬಂತೆ, ಕರ್ನಾಟಕದ ಜನರೆಲ್ಲ ಎಚ್ಚತ್ತು, ಠರಾವುಗಳನ್ನು ನಿರ್ಣಯಿಸಿ, ಎಲ್ಲರಕಡೆಗೂ ಕಳಿಸಿ, ಹೊಂದತಕ್ಕ ಲಾಭವನ್ನು ಹೊಂದತಕ್ಕದ್ದು. ಏಕೀಕರಣ ಸಭೆಯ ಕಾರ್ಯದರ್ಶಿಗಳು ಈ ಸಮಯದಲ್ಲಿ ಮುಂದೊರೆದು ಒಂದು ಕರ್ನಾಟಕದಲ್ಲಿಯ ಮುಖ್ಯ ಮುಖ್ಯ ನಗರಗಳನ್ನು ಸಂದರ್ಶಿಸಿ ಅಲ್ಲಲ್ಲಿ ಈ ಬಗ್ಗೆ ಠರಾವುಗಳ ನಿರ್ಣಯವಾಗುವಹಾಗೆ ಉತ್ಸಾಹದಿಂದ ಪ್ರಯತ್ನಿಸಬೇಕು. ವೃತ್ತಪತ್ರಿಕೆಗಳಲ್ಲಿ ಇಂತಿಂತಹ ನಿರ್ಣಯಗಳನ್ನು ಮಾಡಿರೆಂದು ಬರೆದ ಮಾತ್ರಕ್ಕೆ ಜನರು ಮಾಡರು. ಏಕೀಕರಣ ಸಭೆಯು ಸ್ಥಾನಿಕ ಮಂಡಳದ ಸಭೆಯನ್ನು ಬೇಗನೇ ಕರೆದು, ಅಲ್ಲಿ ಈ ಮುಂದೆ ಮಾಡತಕ್ಕ ಕಾರ್ಯಕ್ರಮವನ್ನೂ ಗೊತ್ತುಪಡಿಸತಕ್ಕದ್ದು.

ಬಾಗಲಕೋಟೆಯ ಮ್ಯುನಸಿಪಾಲ್ಟಿಯ ಚುನಾವಣೆಯು ಮುಗಿಯಿತೆಂಬುವದರಲ್ಲಿ ಈ ಚುನಾವಣೆಯನ್ನು ರದ್ದುಪಡಿಸಬೇಕೆಂಬದಾಗಿ, ಹಳೇಪೇಟೆ ಹಾಗೂ ವೆಂಕಟಪೇಟೆಯ ಕೆಲವು ಮತದಾರರು ಕೋರ್ಟಿಗೆ ಹೋಗಿರುವದಾಗಿ ತಿಳಿದು ಬರುತ್ತದೆ. ಬಾಗಲಕೋಟೆಯ ಈ ನ್ಯಾಯದ ಬಗ್ಗೆ ಕೋರ್ಟಿನ ವಿಚಾರಣೆಯಾಗುವವರೆಗೆ ನಮಗೆ ವಿಶದವಾಗಿ ಬರೆಯಲು ಮಾರ್ಗವಿಲ್ಲ. ಆದುದರಿಂದ ಹಿಂದುಸ್ಥಾನಕ್ಕೆಲ್ಲ ಸಂಬಂಧಿಸಿದ ಈ ರೋಗದ ಬಗ್ಗೆ ಸ್ವಲ್ಪ ಬರೆಯಬೇಕಾಗಿದೆ. ಮೋಹರಮ್ಮ ಹಬ್ಬವು ಮುಗಿದ ಕೂಡಲೇ, ಕವಡೀಪೀರಗಳು ಹುಡುಗರ ಆಟದಿಂದ ಏಳುವಂತೆ ಎಲ್ಲಿ ನೋಡಿದರೂ ಮುನಸಿಪಾಲ್ಟಿಗಳ ಚುನಾವಣೆಗಳು ಮುಗಿದ ಕೂಡಲೇ, ಚುನಾವಣೆಯ ಪೀರಗಳು ಹುಡುಗಾಟಿಕೆಯಂತೆ ಏಳುತ್ತಲಿವೆ. ಬಾಗಲಕೋಟೆಗೆ ಮಾತ್ರ ಇದು ಸಂಬಂಧಿಸಿದೆ. ಹೀಗೇನಿಲ್ಲ. ಆದರೆ, ಕರ್ನಾಟಕ-ಮಹಾರಾಷ್ಟ್ರ-ಆದೇಕೆ?- ಅಖಂಡ ಭರತಖಂಡದಲ್ಲಿಯೂ ಈ ಬಗೆಯ ನ್ಯಾಯಗಳು ಉದ್ಭವವಾಗುವದುಂಟು. ಬಹುತರವಾಗಿ ಆರಿಸಿಬಾರದ ಉಮೇದವಾರರ ಪಕ್ಷಪಾತಿಗಳು ಈ ನ್ಯಾಯವನ್ನು ಹೂಡುವದುಂಟು. ಕೆಲವು ಪ್ರಸಂಗಗಳಲ್ಲಿ ಉಮೇದವಾರರ ಸಹಾಯವೂ ಒಳಗಿನಿಂದ ಇದಕ್ಕಿರುವದು. ಈ ಬಗೆಯ ವ್ಯಾಜ್ಯಕ್ಕೆ, ಉಮೇದವಾರ-ಉಮೇದವಾರರಲ್ಲಿಯ ಪ್ರತಿಸ್ಪರ್ಧೆಯಿಂದುಂಟಾದ ವೈಮನಸ್ಸೇ ಕಾರಣವು. ವ್ಯಾಜ್ಯವ್ಯಾಜ್ಯರಿಂದ ನಾವು ಹೊಸ ಸಂಸ್ಥೆಗಳ ಲಾಭವನ್ನು ಪಡೆಯುವದರ ಬದಲು, ಹಾನಿಯನ್ನೇ ಹೊಂದುತ್ತಲಿರುವದು ಸ್ಪಷ್ಟವಿದೆ. ಕೈಯೊಳಗಿನ ಹಣವು ನೀರಿನಂತೆ ಹರಿದುಹೋಗುವದು. ಊರಲ್ಲಿ ಪ್ರಮು

ಖುಲ್ಲಿಯೇ ಅಸಂತೋಷ, ವೈಮನಸ್ಸುಗಳು ಉದ್ಭವವಾಗುವವು. ಪಂಗಡಗಳು ಬೆಳೆಯುವವು ಇವೆಲ್ಲಕ್ಕೂ ಮುಕುಟದಂತೆ ನೈತಿಕ ಭಾವನೆಯು ಅಳಿದು ಹೋಗಿ ಮನುಷ್ಯನು ಅನೇಕ ಪ್ರಸಂಗಗಳಲ್ಲಿ ಪಶುವಿನಂತೆ ಆಚರಿಸ ತೊಡಗುವನು. ಇದು ಕಾಲ್ಪನಿಕ ವರ್ಣನೆಯಲ್ಲ. ಆದರೆ ಪ್ರತ್ಯಕ್ಷವಾಗಿ ಕಂಡುಬಂದ ಅನುಭವದ ಮಾತು ಆದುದರಿಂದ ಪಾಶ್ಚಾತ್ಯ ಸಂಸ್ಥೆಗಳು ಭರತಖಂಡಕ್ಕೆ ವಿಷ್ಟರಮುಟ್ಟಿಗೆ ಒಪ್ಪುವವೆಂಬವನ್ನು, ವಿಚಾರಮಾಡಿ, ಮುಖಂಡರು ಮುಂದೆ ಸಾಗುವದು ಹಿತಕರವು.

ಬಾಗಲಕೋಟೆಯ ಮುನಸಿಪಾಲ್ಟಿಯು ವೆಂಕಟಪೇಟಿಯಲ್ಲಿದೆ. ವೆಂಕಟಪೇಟೆಯಲ್ಲಿ ಬಹಳ ಸೊಳ್ಳೆಗಳ ಪೀಡೆಯು ಹೆಚ್ಚು ಹಿ ನಿಸ್ಸರಾ ಮುನಸೀಪಾಲ್ಟಿಯವರು ಇತ್ತ ಲಕ್ಷ್ಯಕೊಡದಿರುವದು ಉಚಿತವಲ್ಲ ಈಗಲಂತೂ ಈ ಗುಂಗಾಡುಗಳು ಅನೇಕವಾಗಿ ಹೆಚ್ಚಿದ್ದು, ಜನರಿಗೆ ಹೇಳಲಾರದಷ್ಟು ತೊಂದರೆಯಾಗುತ್ತಲಿದೆ. ಈ ಸೊಳ್ಳೆಗಳು ವೆಂಕಟಪೇಟೆಯಲ್ಲಿಯೇ ಯಾಕೆ ಹೆಚ್ಚಾಗಿ ಇವೆ? ಅವನ್ನು ನಿರ್ಮೂಲಮಾಡುವ ಬಗೆಯಾವುದೆಂಬುದನ್ನು ಮುನಸೀಪಾಲ್ಟಿಯವರು ತಜ್ಞರಿಂದ ಪರಿಶೋಧಿಸಿ, ಆ ಬಗ್ಗೆ ಯೋಗ್ಯ ನಿರ್ಣಯ ಮಾಡಬೇಕು. ವೆಂಕಟಪೇಟೆಯು ಇಳಕಲಿನಲ್ಲಿದೆ ಅದಕ್ಕಾಗಿಯೇ ಸೊಳ್ಳೆಗಳು ಉದ್ಭವವಾಗುವವೆಂಬದಿಷ್ಟೇ ಕಾರಣದಿಂದ ಸುಮ್ಮನಿರುವದು ಯುಕ್ತವಲ್ಲ. ಊರೊಳಗಿನ ಹೊಲಸು ವೆಂಕಟಪೇಟೆಯ ಹಿಂದಿನ ಭಾಗದಲ್ಲಿ ಹರಿಯುವದುಂಟು. ಅದು ಅಲ್ಲಿ ಕೊಳೆತು ನಿಲ್ಲಲು ಮಾರ್ಗವಿಲ್ಲದಂತೆಯೂ, ದಿನಾಲು ತಪ್ಪದೆ ಜಂತುನಾಶಕವಾದ ಔಷಧವನ್ನು ಕಾಲುವೆಯಲ್ಲಿ ಹಾಕುವಂತೆಯೂ ನಿರ್ಣಯ. ಮಾಡುವದು ಅತ್ಯಾವಶ್ಯಕ. ಹಿಂದಕ್ಕೆ ಕಲಕತ್ತೆಯಲ್ಲಿ ಹೀಗೆ ಸೊಳ್ಳೆಗಳು ಹೆಚ್ಚಾದ ಸಮಯದಲ್ಲಿ ಆರೂ ಲಕ್ಷಿಸಲಿಲ್ಲ. ಈಗೂ, ಕಲಕತ್ತೆಯಲ್ಲಿ ಎಲ್ಲಿ ಹೋದರೂ 'ಮಲೇರಿಯಾ' ಜ್ವರವು ತುಂಬಿಕೊಂಡು ಬಿಟ್ಟಿದೆ. ಬಂಗಾಲದಲ್ಲಿ ತುಂಬಿಲ್ಲ 'ಮಲೇರಿಯಾ' ಹಬ್ಬಿಹೋಗಿದೆ ಈ ಬಾಧೆಯನ್ನು ದೂರಪಡಿಸಲಿಕ್ಕೆ ಬಂಗಾಲ ಸರಕಾರವು ಪ್ರಯತ್ನಿಸುವದು ಸರ್ವಸಂಸ್ಕೃತವಿದೆ ಇದೇ ಬಗೆಯ ಅನಾರೋಗಕರವಾದ ಸ್ಥಿತಿಯು ಬಾಗಲಕೋಟೆಗೆ ತಟ್ಟದಂತೆ ನಗರ ಸಭೆಯವರು ಜಾಗರೂಕರಾಗಿರುವದು ಅವರ ಆದ್ಯ ಕರ್ತವ್ಯವಾಗಿದೆ. ಒಂದಾವರ್ತಿ 'ಮಲೇರಿಯಾ' ಜ್ವರವು ವೆಂಕಟಪೇಟೆಯಲ್ಲಿ ಹಬ್ಬಿಕೊಂಡಿತೆಂದರೆ, ಹಿಂದುಗಡೆಗೆ ಪಶ್ಚಾತ್ತಾಪ ಪಡುವ ಪ್ರಸಂಗವು ನಗರ ಹಿತಾಸಕ್ತರಿಗೆ ಬರಬಾರದೆಂಬದಾಗಿ ಈಗ್ಗೆ ನಾವು ಎಚ್ಚರ ಕೊಟ್ಟಿರುವೆವು

ಕರ್ನಾಟಕದಲ್ಲಿ ಸಂಸ್ಕೃತ ಪಂಡಿತರಿಲ್ಲ ವೆಂಬದೊಂದು ಬಹು ಹೆಮ್ಮೆಯ ಮಾತನ್ನು ಈಗಿನ ಮುಂಬೈ ಮಂತ್ರಿಗಳು ನುಡಿದಿದ್ದಾರೆ. ಅದಕ್ಕಾಗಿ ಕುಗ್ಗುತ್ತ ಕನ್ನಡ ಮಾತನಾಡುವ ಓರ್ವ ಮಹಾರಾಷ್ಟ್ರೀಯನನ್ನು ಕರ್ನಾಟಕ ಕಾಲೇಜಿಯ ಸಂಸ್ಕೃತಪಂಡಿತರ ಕೆಲಸಕ್ಕೆ ಬಾಧಕರಾಯರು ನೇಮಿಸಿದ್ದಾರೆ. ಕನ್ನಡ ವಿದ್ಯಾರ್ಥಿಗಳಿಗೆ ಮರಾಟಿಯಲ್ಲಿ ಕಲಿಸುವ ಉಪಯೋಗವಾದರೂ ಏನೆಂಬದನ್ನು ಶಿಕ್ಷಣಮಂತ್ರಿಗಳು ವಿಚಾರಿಸದಿದ್ದುದು ಆಶ್ಚರ್ಯಾಸ್ಪದವು. ಶಿಕ್ಷಣವು ಯಾವ ಭಾಷೆಯಲ್ಲಿ ಯಾರಿಂದ ಹೇಗೆ ಕೊಡಲ್ಪಡಬೇಕೆಂಬುದನ್ನು ವಿಚಾರಿಸದೇ, ಕೈಯಿಗೆ ಸಿಕ್ಕವರನ್ನು ಪಂಡಿತರನ್ನಾಗಿ ಮಾಡಿದರೆ, ಶಿಕ್ಷಣಮಂತ್ರಿಗಳು ತಮ್ಮ ಕಾರ್ಯಮಾಡಿದಂತಾಯಿತೇ? ಕನ್ನಡ ಬಲ್ಲ ಸಂಸ್ಕೃತ ಪಂಡಿತರು ಕರ್ನಾಟಕದಲ್ಲಿ ಇಲ್ಲವಂತೆ! ಅಬ್ಬಬ್ಬಾ ಶಿಕ್ಷಣ ಮಂತ್ರಿಗಳಲ್ಲಿ ಕರ್ನಾಟಕದ ಬಗ್ಗೆ ಈ ಬಗೆಯ ಜ್ಞಾನವಿದೆಂಬುದನ್ನು ನಾವು ತಿಳಿದಿರಲಿಲ್ಲ. ಇವರು ಅರನ್ನು ವಿಚಾರಿಸಿದರು? ಅಲ್ಲಿ ಪಂಡಿತರಿಲ್ಲವೆಂಬುದು ಇವರಿಗೆ ಹೇಗೆ ಗೊತ್ತಾಯಿತು? ತಮ್ಮ ಮಿತ್ರರಾದ ಮಹಾರಾಷ್ಟ್ರ ಪಂಡಿತರನ್ನು ವಿಚಾರಿಸಿದರೆ ಸರಿ. ಅವರು ತಮಗೆ ಒಂದು ಹೆಚ್ಚಿನ ಸ್ಥಾನ ದೊರೆಯಬೇಕೆಂದು ಅಲ್ಲಿ ಪಂಡಿತರಿಲ್ಲವೆಂದು ಹೇಳಿರಬಹುದು. ಶಿಕ್ಷಣಮಂತ್ರಿಗಳು ಬಾಗಲಕೋಟೆಗೆ ಬಂದಿದ್ದರೆ ಇದೇ ಒಂದೇ ಊರಲ್ಲಿ ಕರ್ನಾಟಕಕ್ಕೆ ಮಾತ್ರ ಅಲ್ಲ; ಆದರೆ ಮುಂಬೈ ಇಲಾಖೆ ಕಾಲೇಜುಗಳಿಗೆ ಪೂರೈಕೆಯಾಗುವಷ್ಟು ಪಂಡಿತರು ದೊರೆಯುತ್ತಿದ್ದರು. ಇನ್ನು ಧಾರವಾಡ ಸಂಸ್ಕೃತ ಪಾಠಶಾಲೆಗೆ ಮೈಸೂರಲ್ಲಿಯ ವಿಚಾರವು ಬೇರೆ ಉಳಿಯಿತು. ತಮಗೆ ಇಷ್ಟೆಲ್ಲ ವಿಚಾರ ಮಾಡುವ ಅವಕಾಶವಿರದಿದ್ದರೆ ಹಾಗೆ ಸ್ಪಷ್ಟವಾಗಿ ಹೇಳಬೇಕಿತ್ತು. ಅದನ್ನೆಲ್ಲ ಅಖಿಲ ಕರ್ನಾಟಕದಲ್ಲಿ ಕನ್ನಡ ಬಲ್ಲ ಸಂಸ್ಕೃತ ಪಂಡಿತರಿಲ್ಲವೆಂಬುದು ಶುದ್ಧವಾಗಿಯೂ ತಪ್ಪು. ಈಗಲಾದರೂ ಶಿಕ್ಷಣ ಮಂತ್ರಿಗಳ, ಬುದ್ಧಿ ಕಲಿಯಲಿ.

ವಿಜಾಪೂರ ಮುನಸೀಪಾಲಿಟಿಯಲ್ಲಿ ಇನ್ನು ಮೇಲೆ ಎಲ್ಲ ಕೆಲಸವೂ ಕನ್ನಡದಲ್ಲಿ ನಡೆಯಬೇಕೆಂಬದಾಗಿ ತೀರ್ಮಾನವಾಗಿದೆ. ಮರಾಟಿಯ ವಾತಾವರಣದಲ್ಲಿ ಕುಣಿಯುತ್ತಲಿದ್ದ ವಿಜಾಪೂರದವರು ಹೀಗೆ ಎಚ್ಚತ್ತುದನ್ನು ಕಂಡು ನಮಗೆ ಆನಂದವಾಗುತ್ತದೆ. ವಿಜಾಪೂರವು ಕರ್ನಾಟಕದ ಭಾಗವೆನ್ನುವದು ಅಲ್ಲಿಯ ಜನರಿಗೆ ಹೆಚ್ಚಾಗಿ ತಿಳಿಯುತ್ತಿದೆಂಬದಾಗಿ ತೋರುತ್ತದೆ. ಕನ್ನಡ ಹೆಣ್ಣು ಹುಡಿಗಿಯರ ಶಾಲೆಯನ್ನು ಯಾವ ಕಟ್ಟಡದಲ್ಲಿ ಇರಿಸತಕ್ಕದ್ದು ಅಲ್ಲಿ ಇರಿಸಿದರು. ಈಗ್ಗೆ ಎಲ್ಲ ಕೆಲಸವೂ ಕನ್ನಡದಲ್ಲಿ ನಡೆಯಬೇಕೆಂಬದಾಗಿ ನಿರ್ಣಯಿಸಿದರು. ಹೀಗೆ ದಿನಾಲು ವಿಜಾಪೂರಸ್ಥರ ಹೆಜ್ಜೆಯು ಮುಂದೆ ಮುಂದೆ ಸಾಗಹತ್ತಿದ್ದು ಶುಭಚಿನ್ಹವು. "ಕರ್ನಾಟಕ ವೈಭವ"ವು ಸೂಚಿಸಿದಂತೆ ಅಲ್ಲಿಯ ಎಲ್ಲ ಕಾಗದ ಪತ್ರಗಳು ತೀವ್ರವಾಗಿ ಕನ್ನಡದಲ್ಲಿಯೇ ಸಾಗುವಂತೆ ವ್ಯವಸ್ಥೆ ಮಾಡಬೇಕು. ಮತ್ತು ಊರಲ್ಲಿ ನಗರ ಸಭೆಯವತಿಯಿಂದ ಇದ್ದ ಹಲಿಗೆಗಳನ್ನೂ ಕನ್ನಡದಲ್ಲಿಯೇ ಬರೆಸಬೇಕಾಗಿ ಸೂಚನೆಯಿದೆ.

ಶ್ರೀಮಾನ್ ಗಂಗಾಧರರಾವ್ ದೇಶಪಾಂಡೆಯವರೂ ಉಡುಪಿಯಲ್ಲಿ ಖಾದಿಕಾರ್ಯವೂ:—

ಶ್ರೀಮಾನ್ ದೇಶಪಾಂಡೆಯವರು ನಿಖಿಲ ಕರ್ನಾಟಕದಲ್ಲಿ ಖಾದಿಯ ಅಚ್ಚಳ ಉಪಾಸಕರೆಂದೂ, ರಾಜಕೀಯ ಕ್ಷೇತ್ರದಲ್ಲಿ ಅಗ್ರಣೀಯ ವೀರರೆಂದೂ, ಗಾಂಧೀ ತತ್ವಗಳನ್ನು ಉಪದೇಶಮಾಡುವದರಲ್ಲಿ ನುರಿತ ಉಪನ್ಯಾಸಕರೆಂದೂ ಹೇಳುವರೆ ಏನೂ ಆಕ್ಷೇಪವಿಲ್ಲ. ಎಲ್ಲರಿಗೂ ಗೊತ್ತಿದ್ದ ಸಂಗತಿ. ಪರಂತು ಕರ್ನಾಟಕದ ಖಾದೀ ಏಜಂಟರಾದ ಬಳಿಕ ನಮ್ಮ ಜಿಲ್ಲೆಯ ಖಾದೀ ಕಾರ್ಯದಲ್ಲಿ ಹೆಚ್ಚಿನ ಶ್ರದ್ಧೆಯನ್ನು ವಹಿಸದಿರುವದನ್ನು ನೋಡಿದರೆ ತುಂಬಾ ವಿಷಾದವಾಗುತ್ತದೆ. ತುಳು ದೇಶವಾದ ನಮ್ಮ ಜಿಲ್ಲೆಯು ಕರ್ನಾಟಕಕ್ಕೆ ಸೇರಲಿಕ್ಕೆ ಯೋಗ್ಯವಲ್ಲವೆಂಬ ಕಾರಣದಿಂದಲೋ, ಸ್ವಯಂ ಮಹಾರಾಷ್ಟ್ರೀಯರಾದ ತಮಗೆ ಮಹಾರಾಷ್ಟ್ರ ಕರ್ನಾಟಕವು ಮಾತ್ರ ಸಾಕೆಂಬ ಕಾರಣದಿಂದಲೋ ಯಾ. ಮುಖಂಡರ ಕಾರ್ಯಕ್ಷೇತ್ರಕ್ಕೂ ಒಳಪಡದಿರುವ ಕಾರಣ ನಮಗೇಕೆ? ಎಂಬದರಿಂದಲೋ. ಮೆಲ್ಲ ಮೆಲ್ಲಕ್ಕೆ ತಮ್ಮ ಕಾರ್ಯಕ್ಷೇತ್ರದಿಂದ ದಕ್ಷಿಣಕನ್ನಡ ಜಿಲ್ಲೆಯನ್ನು ಹೊರತಳ್ಳುವರೆಂಬ ವದಂತಿಯು ಹಬ್ಬಿದೆ. ಈ ವಿಷಯವನ್ನು "ಅಖಿಲ ಭಾರತ ನೂಲುವವರ ಸಂಘ"ಕ್ಕೆ ತಿಳಿಸಿರುವರೆಂದೂ ತಿಳಿದುಬಂದಿದೆ. ಕೆಲ

ಮಹನೀಯರು ಅಂದ ಸುದರ್ಶನದಲ್ಲಿ ನಮ್ಮ ಜಿಲ್ಲೆಯನ್ನು ಪ್ರತ್ಯೇಕಿಸಿ "ಅಖಿಲ ಭಾರತ ಸೊಲ್ಲಾಪುರ ಸಂಘ"ದ ಸೇವಾ ಕ್ಷೇತ್ರಕ್ಕೆ ಇರಿಸಬೇಕೆಂದು ಪ್ರಯತ್ನ ನಡುತ್ತಿದ್ದಾರೆಯೆಂಬ ಒಂದು ವದಂತಿಯುಂಟು. ತುಳುನಾಡು ಶಾಖೆ ಎಂದು ಹಸರಿಟ್ಟು ಬೇರೆಯೊಂದು ಶಾಖೆಯನ್ನೇರ್ಪಡಿಸಿದರೆ ಒಳ್ಳೇದಿತ್ತು. ಅಂದರೆ ಕರ್ನಾಟಕವು ಪ್ರತ್ಯೇಕವಾಗುತ್ತಿತ್ತು. ಆದರೆ ರಾಷ್ಟ್ರಾಭಿಮಾನವೇ ಇಲ್ಲದಿರುವ ತುಳುವರಿಗೆ ತಮ್ಮ ಸಂಸ್ಕೃತಿ ಮತ್ತು ಭಾಷೆಗಳನ್ನು ಜೀರ್ಣೋದ್ಧಾರ ಮಾಡುವ ಎಚ್ಚರಿಕೆಯು ಬರುವದು ಕಠಿಣ. ಯಾರ ಕೈಯಿಂದಲೇ ಆಗಲಿ. "ನೀಲೇಶ್ವರ" ದಲ್ಲಿ ಯೋಗ್ಯರೀತಿಯಲ್ಲಿ ಸಾಧಿಸಲ್ಪಟ್ಟ ರೀತಿಯನ್ನು ಮಾಡಿಸಿದರೆ "ತಿರುಪು" ಕ್ಕಿಂತಲೂ ಕಮ್ಮಿ ಕ್ರಮಕ್ಕೆ ಖಾದಿಯನ್ನು ಮಾರಾಟ ಮಾಡಬಹುದು. ಬಾರ್ ಪತ್ರರು ಇಂಥಾ ಸುಸಂದರ್ಭವನ್ನ ನಮ್ಮ ಜಿಲ್ಲೆಯಲ್ಲಿ ಬಿಡಲಿಕ್ಕಿಲ್ಲವೆಂದು ನಂಬಿಗೆ ಕಾಣಾ ಘಟ್ಟ

ವಾಙ್ಮಯ ವಿಚಾರ.

ಜೀವನ—ರಹಸ್ಯ.

(ಬರದಗಾರರು ಶಿವರಾಮ ಕಾರಂತ ಕೋಟೆ ಕುಂದಾಪುರ)

ಶ್ರೀ ಶಿವರಾಮ ಕಾರಂತರು "ವಸಂತ"ದ ಸಂಪಾದಕರು ಇವರ ಕರ್ನಾಟಕದಲ್ಲೆಲ್ಲ ಪ್ರವಾಸ ಮಾಡಲು ಹೋದಾಗ, ಅಲ್ಲಿ ಬ್ರಹ್ಮಚರ್ಯದ ಬಗ್ಗೆ ಉಪನ್ಯಾಸಗಳನ್ನು ಮಾಡಿದರು. ಕೊನೆಗೆ ತಮ್ಮ ಉಪನ್ಯಾಸದ ಸಂಗ್ರಹವನ್ನು ಈ ಪುಸ್ತಕದಲ್ಲಿ ಮಾಡಿದ್ದಾರೆ. ತಮ್ಮ ಜೀವನದ [illegible] ಗಳನ್ನು ಬಿಚ್ಚಿಡುವಾಗ ಒಂದು ತಮ್ಮ ಅನುಭವಗಳನ್ನು ಅವರು ಇಲ್ಲಿ ಕೊಟ್ಟಿದ್ದಾರೆ. ತರುಣಜನರ ಜೀವನದ ತೊಡಕುಗಳು ಬಿಡಬೇಕಾದರೆ, ಬ್ರಹ್ಮಚರ್ಯವೊಂದೇ ಸಾಧನವೆಂದು ಈ ಚಿಕ್ಕದಾದ ಹೊತ್ತಿಗೆಯಲ್ಲಿ ಹೇಳಿದ್ದಾರೆ. ಆಧ್ಯಾತ್ಮಿಕ ವೈಭವದ ತುದಿಯ ಮೇಲಿದ್ದ ಭರತ ಖಂಡವು ಕಳಗುರುಳಿದ್ದದಕ್ಕೆ ಬ್ರಹ್ಮಚರ್ಯದ ನಾಶವೇ ಕಾರಣವೆಂದು ಅಧಿಕಾರದಿಂದ ನುಡಿದಿದ್ದಾರೆ. ಪ್ರಾರಂಭಕ್ಕೆ, ಭರತ ಖಂಡದ ಮೊದಲಿನ ವೈಭವದ ಬಗ್ಗೆ ಋಷಿಗಳ ಬಗ್ಗೆ ಪಾಶ್ಚಿಮಾತ್ಯರು ಆಡಿದ ಗೌರವದ ನುಡಿಗಳನ್ನು ಕೊಟ್ಟಿದ್ದಾರೆ. ಆಮೇಲೆ ಬ್ರಹ್ಮಚರ್ಯದ ಮೀಮಾಂಸೆಯನ್ನು ಬರೆದಿದ್ದಾರೆ, ಬ್ರಹ್ಮಚರ್ಯದಿಂದ ಆರೋಗ್ಯರಕ್ಷಣವಾಗಿ, ಆತ್ಮೋನ್ನತಿಯು ಹೇಗಾಗುವದೆಂಬದನ್ನು, ಬ್ರಹ್ಮಚರ್ಯವನ್ನು ಕಾಯ್ದಿಡಲು ಆಸನಮೊದಲಾದವುಗಳು ಹೇಗೆ ಉಪಯುಕ್ತವಾಗಿರುವವೆಂಬುದನ್ನೂ ಸ್ಪಷ್ಟವಾಗಿ ಹೇಳಿದ್ದಾರೆ. ಈ ಚಿಕ್ಕ ಹೊತ್ತಿಗೆಯನ್ನು ಓದಿ ಅದರಂತೆ ಕನ್ನಡ ತರುಣರು ನಡೆದರೆ, ಕಾರಂತರ ತಳಮಳವು ಶಾಂತವಾಗಿ, ನಾಡು ಕೃತಾರ್ಥವಾಗುವುದು. ಬೆಲೆ ೪ ಆಣೆ ಹೊತ್ತಿಗೆಯಲ್ಲಿ ಅಂಕಿಗಳು 'ಪರ್ಶಿಯನ್'ಯಾಗಿವೆ ವಿಷಾದ ಪಡತಕ್ಕ ಸಂಗತಿಯು.

ಮೊದಲು ದೇಶ ಆಮೇಲೆ ಧರ್ಮ.

ಶ್ರೀಮತಿ ಜಕೆಯೂ ಸುಲೇಮಾನಬೇ ಎಂಬಾಕೆಯು ಸಪ್ರಸಿದ್ಧ ಐಗುಪ್ತ (Egypt) ಸ್ತ್ರೀ. ಈಕೆಯು ಐಗುಪ್ತ ದೇಶದ ವಿಮೆಯ ಕಿಂಡರ್ ಗಾರ್ಟನ್ ಶಾಖೆಯ ಮುಖ್ಯ ಅಧಿಕಾರಿಣಿ. ಹಿಂದುಸ್ಥಾನದ ಶಿಕ್ಷಣ ವ್ಯವಸ್ಥೆ ಮತ್ತು ವಿಶಿಕ್ಷಣೆಯನ್ನು ಮತ್ತು ಸಾಮಾಜಿಕ ಪರಿಸ್ಥಿತಿಯನ್ನು ಕಂಡು, ತಿಳಿದುಕೊಂಡು ಹೋಗಲು ಈಕೆಯು ಭರತಖಂಡಕ್ಕೆ ಬಂದಿರುವರು. ಸದ್ಯಕ್ಕೆ ಈಕೆಯು ಅಲಹಾಬಾದಿನಲ್ಲಿರುವಳು. ಇಷ್ಟರಲ್ಲಿ ಕಾಶಿ, ಲಕ್ನೋ, ದಿಲ್ಲಿ, ಲಾಹೋರ, ಮುಂತಾದ ಸ್ಥಳಗಳಿಗೂ ಹೋಗಲಿರುವಳು.

'ಲೀಡರ್' ಪತ್ರಿಕಾ ಪ್ರತಿನಿಧಿಗಳಾದವರು ಆಕೆಯನ್ನು ನೋಡಲು ಹೋಗಿದ್ದಾಗ

"ಇಜಿಪ್ತಿನಲ್ಲಿ ನಮ್ಮಲ್ಲಿ ಜನರ ಧರ್ಮಕ್ಕಿಂತಲೂ ದೇಶಕ್ಕೆ ಅಗ್ರಸ್ಥಾನವನ್ನು ಕೊಟ್ಟಿರುವರು. ರಾಷ್ಟ್ರ ಜಾಗೃತಿಯ ಕಾಲದಲ್ಲಿ ಮಹಮ್ಮದೀಯರು ಈಸಾಯಿಗಳು ಒಂದೇ ಧ್ವಜದಡಿಯಲ್ಲಿ ಧರ್ಮಕ್ಕಿಂತ ದೇಶವೇ ಮೊದಲು ಎಂದು ಹಾಡುತ್ತ ಸೇವೆಗೆ ಸಿದ್ಧರಾದರು."

ಎಂಬದಾಗಿ ಹೇಳಿದರು, ಪ್ರಸ್ತುತ ಹಿಂದುಸ್ಥಾನದ ಪರಿಸ್ಥಿತಿಯನ್ನು ಕುರಿತು ಆಕೆಯು

"ಹಿಂದುಸ್ಥಾನದ ಮಹಮ್ಮದೀಯರು ಇಸ್ಲಾಂ ಧರ್ಮ ಗ್ರಂಥಗಳನ್ನು ಶ್ರದ್ಧೆಯಿಂದ ಅಭ್ಯಾಸ ಮಾಡಿದರೆ ಧರ್ಮದ ಹೆಸರಿನಲ್ಲಿ ಧಾಂದಲೆಯನ್ನು ನಡೆಸುವದು ಅನ್ಯಾಯವೆಂಬುದು ಅವರಿಗೇ ಚನ್ನಾಗಿ ತಿಳಿದು ಬರುತ್ತದೆ. ಇಸ್ಲಾಂ ಧರ್ಮವು ಪ್ರಧಾನವಾಗಿ ಶಾಂತಿ ಮತ್ತು ಪ್ರಗತಿ ಮಾರ್ಗವನ್ನು ತೋರಿಸುತ್ತದೆ. ಅವರು ಕುರಾನವನ್ನು ಸರಿಯಾಗಿ ತಿಳಿದುಕೊಂಡರೆ ಯಾವ ತೊಂದರೆಗೂ ಅವಕಾಶವಿಲ್ಲ"

ಎಂಬದಾಗಿ ಹೇಳಿದಳು. ಪ್ರತಿಯೊಬ್ಬರೂ ಶ್ರೀಮತಿಯವರ ಸಲಹೆಗೆ ಕಿವಿಗೊಡುವದು ಅತ್ಯವಶ್ಯಕ 'ಧರ್ಮಕ್ಕಿಂತಲೂ ದೇಶಕ್ಕೆ ಅಗ್ರಸ್ಥಾನವನ್ನು ಕೊಡುವುದೆ? ಇದು ಎಂಥಾ ಕಲಹ' ಎಂದು ಹಲವರು ಕೇಳಬಹುದು. ಇದರಿಂದ ಯಾರೂ ಭಯಪಡಬೇಕಾಗಿಲ್ಲ. ಇದನ್ನು ಅರ್ಥವನ್ನು ಯಾರೂ ಮಾಡಬಹುದು. ಇಹ ಸುಖ ಸಾಧನಕ್ಕಿಂತಲೂ ಪರ ಸಾಧನವೇ ಅನುಲ್ಲಂಘ್ಯವೆನ್ನುವದು ನಿಜ. ಆದರೆ ಧರ್ಮಸಾಧನೆಗೆ ಶರೀರವು ಹೇಗೆ ಅವಶ್ಯಕವೋ ಹಾಗೆಯೇ ದೇಶವೂ ಅತ್ಯವಶ್ಯಕ. ಹಿಂದುಗಳೂ, ಮಹಮ್ಮದೀಯರೂ, ಈಸಾಯಿಗಳೂ, ಎಹೂದ್ಯರೂ, ಪಾರ್ಸಿಯರೂ ಕಾರಣಾಂತರಗಳಿಂದ ದೈವದ ಸಂಕಲ್ಪದಿಂದ, ಭರತ ಭೂಮಿಯಲ್ಲಿ ನೆರೆದಿರುವರು, ನಿವಾಸಿಗಳಾಗಿರುವರು ಭಾರತ ಮಾತೆಯನ್ನು ತಾಯನ್ನಾಗಿ ಸ್ವೀಕರಿಸಿರುವರು. ಇವರೆಲ್ಲರಿಗೂ ಪರಸುಖ ಸಾಧನಕ್ಕೆ ಕಾರಣ ಭೂತವಾದ ದೇಶವು ಒಂದೇ, ಧರ್ಮಾರ್ಜನೆಗೆ ಕಾರಣ ಭೂತವಾದ ಮುಖ್ಯಾಂಗವು, ದೇಶವೆಂಬ ಮೇಲೆ ಮೊದಲು ಆ ಅಂಗವು ಸ್ವತಂತ್ರವಾಗಬೇಕು ಶಾಶ್ವತವಾಗಬೇಕು. ಅನಂತರ ಧರ್ಮವು ದೇಶವನ್ನು ತನ್ನ ಹೊಟ್ಟೆಯೊಳಗಿಟ್ಟುಕೊಂಡು ಕಾಪಾಡುತ್ತದೆ.

ಧರ್ಮ, ದೇಶಗಳೆಂಬುವು ಹಾಸು ಹೊಕ್ಕುಗಳಂತೆ, ಸತೀಪತಿಗಳಂತೆ, ವಾಗರ್ಥಗಳಂತೆ ಒಂದಾಗಿರುವವು. ಆದಮೇಲೆ ಅದು ಮೊದಲು ಇದು ಮೊದಲೆಂಬ ಭಾವನೆಂಬ ತಪ್ಪು. ಕಾಲದೇಶ ಸ್ಥಿತಿಗಳನ್ನು ಅನುಸರಿಸಿ [illegible]ದೊಂದಕ್ಕು ಸ್ಥಾನನಿರ್ದೇಶ ಮಾಡಬೇಕಾಗಿ ಬರುತ್ತದೆ. ಈ ದೃಷ್ಟಿಯಿಂದ, ಭರತ ಖಂಡದ ಸ್ವಾತಂತ್ರ್ಯ ಸಾಧನೆಯ ದೃಷ್ಟಿಯಿಂದ 'ಧರ್ಮಕ್ಕೆ ಮೊದಲು ದೇಶ' ವೆಂಬ ಮಾತು ಉಚಿತವಾಗಿಯೇ ಇರುವುದು

ಜನನೀ ಜನ್ಮ ಭೂಮಿಶ್ಚ |
ಸ್ವರ್ಗಾದಪಿ ಗರೀಯಸಿ ||

ಎಂಬ ಸವಿಗಾನ ಮಾಡಿ ಸರಿವರದಾದ ಭಾರತೀಯರು 'ಮೊದಲು ದೇಶ ಆ ಮೇಲೆ ಧರ್ಮ' ವೆಂಬ ಮಾತಿಗೆ ಅಪಾರ್ಥ ಮಾಡುವರೆ? ಎಂದಿಗೂ ಇಲ್ಲ

ಉತ್ತರ ಹಿಂದುಸ್ಥಾನದಲ್ಲಿಯ ಕ್ಷೇತ್ರಗಳ ಪರಿಚಯ.

(ಲೇಖಾಂಕ ೨ ಪುಣತಾಂಬೆ.)

ಸೀತೀಮನೆಯಲ್ಲಿ ಯಾತ್ರಿಕರಿಗೆ ಬೇಕಾಗುವ ಅನುಕೂಲತೆಗಳಿವೆ. ಕಿರಾಣಿಸಾಮಾನುಗಳ ಎರಡು ಅಂಗಡಿಗಳಿವೆ. ಮುಂಜಾನೆ ಹಾಲು ಮೊಸರು ಬೆಣ್ಣೆ ದೊರೆಯುವವು. ಪಾತ್ರೆಗಳೂ, ಹೆಚ್ಚಿನ ಅನುಕೂಲತೆಗಳೂ ಬೇಕಾಗಿದ್ದರೆ, ಸೀತೀಮನೆಯ ಹತ್ತರದಲ್ಲಿರುವ ಆಲೂರಿನ ಪುರೋಹಿತರು ಏರ್ಪಾಡು ಮಾಡುವರು. ನಾವು ಮೂರು ದಿನಗಳವರೆಗೆ ಸೀತೀಮನೆಯಲ್ಲಿದ್ದು, ೪ ನೇ ದಿನ ಅಲ್ಲಿಂದ ಹೊರಟೆವು. ಮೊದಲನೇ ದಿನ ಉಪವಾಸ, ಎರಡನೇ ದಿನ ತೀರ್ಥಶ್ರಾದ್ಧ; ಮೂರನೇ ದಿನ ಗಂಗಾರಾಧನೆ; ಹೀಗೆ ಎಲ್ಲ ಕ್ಷೇತ್ರಗಳಲ್ಲಿಯೂ ಯಾತ್ರಿಕರು ಮೂರು ದಿನ ಇರಬೇಕಾಗುವದು.

ಸೀತೀಮನೆಯಿಂದ ಪುಣತಾಂಬೆಯು ರೇಲ್ವೇಯಿಂದ ೨೪ ತಾಸಿನ ದಾರಿಯು ೩೨೯ ಮೈಲು ದೂರವಿದೆ. ಗೋದಾನದಿಯಲ್ಲಿ ತೀರ್ಥಶ್ರಾದ್ಧಮಾಡಲು ನಾಶಿಕಕ್ಕೆ ಹೋಗುವದರ ಬದಲು ಇಲ್ಲಿಗೆ ಅನೇಕರು ಹೋಗುವರು. ಯಾಕೆಂದರೆ ಇದು ಕಾಶಿಗೆ ಹೋಗುವ (ಧೋಂಡ ಮನಮಾಡಗಳ) ದಾರಿಯಲ್ಲಿ ಹತ್ತುವದು. ನಾಶಿಕಕ್ಕೆ ಸ್ವಲ್ಪ ಅಡ್ಡ ಹೋಗಬೇಕಾಗುವದು. ಕಾಶೀಯಾತ್ರೆಯಿಂದ ಮರಳಿ ಬರುವಾಗ್ಗೆ ನಾಶಿಕಕ್ಷೇತ್ರಕ್ಕೆ ಹೋಗಿ ಗಂಗಾ-ಗೋದೆಯರ ಭೆಟ್ಟಿಮಾಡಿಕೊಂಡು ಬರುವರು. ನಾವು ಪುಣತಾಂಬೆಗೆ ಬೆಳಗಿನ ೧೦ ಗಂಟೆಯ ಸುಮಾರಕ್ಕೆ ತಲುಪಿದೆವು. ಇಲ್ಲಿ ಉಳಿದ ಕ್ಷೇತ್ರಗಳಲ್ಲಿಯಂತೆ ಪುರೋಹಿತರ ತೊಂದರೆಯಿಲ್ಲವೆಂದು ಹೆಚ್ಚಿನ ಸಂಗತಿ. ಒಟ್ಟಿಗೆ ೯೧ ಜನರು ಪುರೋಹಿತರಿದ್ದು, ಅವರು ದಿನಾಲು ೧೨ ಜನರಂತೆ ವಾರಗಳನ್ನು ಹಂಚಿಕೊಂಡಿದ್ದಾರೆ. ಆ ವಾರದ ದಿನ ಇಳಿದ ಯಾತ್ರಿಕರು ಆ ಆ ದಿನ ಅವರ ಯಜಮಾನರಾಗುವರು. ಇದರಿಂದ ಲೇಖ, ಪುಸ್ತಕಗಳು ಯಾವೂ ಆಚರಣೆಯಲ್ಲಿಲ್ಲ. ಪುಣತಾಂಬೆಯು ಅಹಮ್ಮದನಗರ ಜಿಲ್ಹೆಯಲ್ಲಿದೆ. ಐತಿಹಾಸಿಕ ಕಟ್ಟಡಗಳ ಪ್ರಿಯರು ಇಷ್ಟವಿದ್ದರೆ, ದಾರಿಯಲ್ಲಿ ಅಹಮ್ಮದನಗರದಲ್ಲಿಳಿದು, ಮುಂದೆ ಹೋಗಬಹುದು.

ಪುಣತಾಂಬೆಗೆ ಪ್ರಾಚೀನ ಕಾಲದಲ್ಲಿ ಪುಣ್ಯಸ್ತಂಭವೆಂಬದಾಗಿ ಕರೆಯುತ್ತಿದ್ದರು. ಹರಿಶ್ಚಂದ್ರರಾಜನು ಇಲ್ಲಿ ಯಜ್ಞಮಾಡಿದ್ದನಂತೆ. ಆ ಸ್ಥಾನದಲ್ಲಿ ಈಗ್ಗೆ ಒಂದು ಅಶ್ವತ್ಥ ವೃಕ್ಷವಿದೆ. ಹರಿಶ್ಚಂದ್ರನು ಮಾಡಿದ ಯಜ್ಞದಲ್ಲಿ ಒಂದು ನರಬಲಿಯನ್ನು ಕೊಡುವ ಪ್ರಸಂಗವು ಬಂದಿತ್ತಂತೆ. ಆಗ್ಗೆ ಓರ್ವ ಬ್ರಾಹ್ಮಣನು ತನ್ನ ಮಗನನ್ನು ಕೂಡಲೇ ಅರ್ಪಿಸಿದನು. ಆ ನರಬಲಿಯನ್ನು ಕೊಟ್ಟ ಕೂಡಲೇ ಯಜ್ಞಕುಂಡದಲ್ಲಿಂದ ಓರ್ವ ದೇವತೆಯು ಎದ್ದುಬಂದು, ತಾನು ಸಂಪೂರ್ಣವಾಗಿ ಸಂತುಷ್ಟಳಾಗಿರುವೆನೆಂದು ಹೇಳಿ, ಆ ಮನುಷ್ಯನನ್ನು ಪುನಃ ಎಲ್ಲರಿಗೂ ಸಜೀವನಾಗಿ ತೋರಿಸಿ, ಅವನನ್ನು ದೇಹಸಹಿತವಾಗಿ ಸ್ವರ್ಗಕ್ಕೆ ವಿಮಾನದಲ್ಲಿ ಕುಳ್ಳಿರಿಸಿಕೊಂಡು ಹೋದಳಂತೆ. ಹೀಗಾಗಿ ಪ್ರಾಚೀನತ್ವದ ಐತಿಹ್ಯವೂ ಈ ಊರಿಗಿದೆ. ಗುಡಿ, ಘಾಟ, ಬಾವಿಗಳನ್ನು ಕಟ್ಟಿಸಿ ಹಿಂದುಸ್ಥಾನದಲ್ಲೆಲ್ಲ ಪ್ರಸಿದ್ಧಿಯನ್ನು ಹೊಂದಿದ ಶ್ರೀಮತಿ ಹೋಳಕರ ಅಹಲ್ಯಾದೇವಿಯು ಈ ಯಜ್ಞಸ್ಥಾನದಲ್ಲಿ ಬಹು ದೊಡ್ಡದಾದ ಘಾಟನ್ನು ಕಟ್ಟಿಸಿರುವಳು.

ಪುಣತಾಂಬೆಯಲ್ಲಿ ಚಾಂಗದೇವನ ಸಮಾಧಿಯಿದ್ದದರಿಂದ ಈಗಿನಕಾಲದಲ್ಲಿಯೂ ಅನೇಕ ಭಕ್ತರು ಅಲ್ಲಿಗೆ ಹೋಗುವರಂತೆ. ಇಲ್ಲಿ ವಿಠೋಬನ ದೇವಾಲಯವಿದೆ. ಇದರ ಹತ್ತಿರದಲ್ಲಿಯೇ ಅಗಸ್ತ್ಯಕುಂಡವೂ ಇದೆ. ಅಗಸ್ತ್ಯಮುನಿಗಳು ಇಲ್ಲಿ ತಪಸ್ಸಿಗಾಗಿ ಕುಳಿತಿದ್ದರಂತೆ. ಪುಣತಾಂಬೆಯು ಸಣ್ಣ ಊರು. ಪ್ರಾಚೀನ ಕಾಲದಲ್ಲಿ ಇದು ಬಹು ದೊಡ್ಡದಾಗಿದ್ದಿತೆಂಬುದು ಊರಲ್ಲಿಯ ಹಾಳುಬಿದ್ದ, ಕೋಟೆ, ಕಟ್ಟಡಗಳನ್ನು ನೋಡಿದರೆ ಸ್ವಾಭಾವಿಕವಾಗಿ ಹೊಳೆಯುವಂತಿದೆ.

ಯಾತ್ರಿಕರಿಗೆ ಇಳಿದುಕೊಳ್ಳಲು ಎರಡು ಲೋಕಲ್ ಬೋರ್ಡ್ ಧರ್ಮಶಾಲೆಗಳಿವೆ. ಒಂದು ಸ್ಟೇಶನ್ನಿನ ಹತ್ತರವಿದೆ ಮತ್ತೊಂದು ಗೋದೆಯ ದಂಡೆಯ ಮೇಲಿದೆ. ಸ್ಟೇಶನ್ನಿನಿಂದ ನದಿಯು ದೂರವಿದ್ದದರಿಂದ ಯಾತ್ರಿಕರೆಲ್ಲ ನದಿಯ ಪಕ್ಕದಲ್ಲಿದ್ದ ಧರ್ಮಶಾಲೆಯಲ್ಲಿಯೇ ಇಳಿದುಕೊಳ್ಳುವರು. ಪೇಟೆಯಾದರೂ ಈ ಧರ್ಮಶಾಲೆಗೆ ಸಮೀಪದಲ್ಲಿದೆ. ಲೋಕಲ್ ಬೋರ್ಡ ಧರ್ಮಶಾಲೆಗಳೆರಡೂ ಒಳ್ಳೇ ಸ್ಥಿತಿಯಲ್ಲಿವೆ. ಸುತ್ತಲೂ ಸ್ವಚ್ಛವಾಗಿರುತ್ತವೆ (ಸೀತೀಮನೆಯ ಧರ್ಮಶಾಲೆಯಂತೆ ಮಾತ್ರ ಇಲ್ಲ.)

ಪುರೋಹಿತರು, ಜೋಯಿಸರು ತಮ್ಮ ತಮ್ಮ "ಬಾಬು"ಗಳ ಬಗ್ಗೆ ಬಡಿದಾಡುವದನ್ನು ಎಲ್ಲರೂ ಕೇಳಿರುವರು. ಅದರಂತೆ ಪುಣತಾಂಬೆಯಲ್ಲಿ ಹಜಾಮರೂ ತಮ್ಮ "ಬಾಬು"ಗಳ ಬಗ್ಗೆ ಬಡಿದಾಡಿದ ಕತೆಯನ್ನು ನಾವು ಕೇಳಿದೆವು. ಕ್ಷೌರವಿಧಿ, 'ಮಹಾವಿಧಿ (ಸಕೇಶಿಯರು ಮುಡಿಯಾಗುವದು) ಗಳಲ್ಲಿ ತಮಗೆ ಬರುವ ಹಕ್ಕಿನ ಸಲುವಾಗಿ ಬಡಿದಾಡಿ, ಹಾಯಕೋರ್ಟಿನ ವರೆಗೆ ಹೋಗಿದ್ದರು. ಕಡೆಗೆ ಇವರೂ ಸಹ ಉಪಾಧ್ಯರಂತೆ ವಾರಗಳನ್ನು ಹಂಚಿಕೊಂಡಿರುವರು.

ಪುಣತಾಂಬೆಯಲ್ಲಿ ಅವಗಾಹನೆಗಾಗಿ ಬೇಕಾದಷ್ಟು ನೀರು ಬೇಸಿಗೆಯಲ್ಲಿಯೂ ಗೋದೆಯಲ್ಲಿರುವದು. ಕಿಲ್ಲೆಯ ಹತ್ತರದ ಬ್ರಾಹ್ಮಣರ ಘಾಟು (ಅಹಲ್ಯಾದೇವಿಯದಲ್ಲ) ಪ್ರಾಚೀನಕಾಲದ್ದಿದೆ. ಏಕಕಾಲಕ್ಕೆ ಅನೇಕರು ಒಗೆಯಲಿಕ್ಕೆ ಸ್ನಾನಮಾಡಲಿಕ್ಕೆ ಬೇರೆ ಬೇರೆ ಕಟ್ಟೆಗಳನ್ನು ಮಾಡಿರುವರು. ಆದರೆ ಈಗ್ಗೆ ಬಹು ದೊಡ್ಡಭಾಗವು ಉಸುಕಿನಿಂದ ಮುಚ್ಚಿದೆ. ಅದನ್ನು ಸರಿಪಡಿಸಲು ಉಪಾಧ್ಯೆಯರು ಮನಸ್ಸು ಹಾಕಿಲ್ಲ. ಹಾಕುವ ಲಕ್ಷಣವೂ ತೋರಲಿಲ್ಲ. ಅವರಿಗೆ ದಕ್ಷಿಣೆಯೊಂದು ದೊರಕಿದರೆ ಆಯಿತು.

ಇಲ್ಲಿಯೂ ನಾವು ಮೂರು ದಿನಗಳವರೆಗಿದ್ದು, ನರ್ಮದೆಗಾಗಿ ಹುಸಿಂಗಾಬಾದಿಗೆ ಹೋದೆವು. ಹುಸಿಂಗಾಬಾದು ಪುಣತಾಂಬೆಯಿಂದ ೧೮ ತಾಸಿನ ದಾರಿಯಿದೆ. ೩೫೫ ಮೈಲು ದೂರವಿದೆ. ಗಾಡಿ ಬದಲು ಮಾಡಲು ಮನಮಾಡ ಸ್ಟೇಶನ್‌ದಲ್ಲಿಳಿದ ಕೂಡಲೇ ಯಾತ್ರಿಕರನ್ನು ಕಾಯ್ದುಕುಳಿತಿರುವ, ಕಾಶಿ, ಪ್ರಯಾಗಗಳಲ್ಲಿಯ ಪುರೋಹಿತರ ದಲಾಲರು ಯಾತ್ರಿಕರಿಗೆ ಭೆಟ್ಟಿಯಾಗುವರು. ಇವರು ನೀವು ಎಲ್ಲಿಯವರು? ಎಲ್ಲಿಗೆ ಹೋಗತಕ್ಕವರೆಂದು ಯಾತ್ರಿಕರಿಗೆ ಕೇಳತೊಡಗುವರು. ಇಂಥವರ ಕಡೆಗೆ ಹೋಗತಕ್ಕವರೆಂದು ನಾವು ನಿಶ್ಚಯಮಾಡಿಕೊಂಡಿದ್ದರೆ, ಅವರ ಹೆಸರನ್ನು ಹೇಳಿದರಾಯಿತು. ಅವರ ದಲಾಲರು ಬಂದು ನಮ್ಮ ಅನುಕೂಲತೆಗಳನ್ನು ಒದಗಿಸಿಕೊಡುವರು. ನಿಶ್ಚಯವಿಲ್ಲದಿದ್ದರೆ, "ನಮ್ಮ [illegible] ನಮ್ಮ ಕಡೆ ಬನ್ನಿ" ಎಂದು ದಲಾಲರು ತೊಂದರೆ ಕೊಡುವರು. ಬೇಸಿಗೆಯಲ್ಲಿ ಕಾಶಿಗೆ ಹೊರಟ ಯಾತ್ರಿಕರಿಗೆ ಬದರಿಯ ಪಂಡ (ಪುರೋಹಿತರ) ಗಳ ದಲಾಲರೂ ಇಲ್ಲಿಂದ ಗಂಟುಬೀಳುವರಂತೆ.

ಶ್ರೀ. ರಾ. ಮು.

ಕರ್ನಾಟಕ ಏಕೀಕರಣ ಸಂಘದ ಪ್ರಾರ್ಥನೆ.

ಭರತಖಂಡದಲ್ಲಿಯ ಬೇರೆ ಬೇರೆ ರಾಷ್ಟ್ರಗಳನ್ನು ಭಾಷಾನು ಸಾರವಾಗಿ ರಚಿಸಬೇಕೆಂಬ ತತ್ತ್ವವು ಪ್ರಭುತ್ವದವರಿಂದಲೂ, ಪ್ರಜೆಗಳಿಂದಲೂ ಮನ್ನಿಸಲ್ಪಟ್ಟಿದೆಯಷ್ಟೇ. ಕರ್ನಾಟಕವು ಮುಂಬೈ ಮದ್ರಾಸ, ಹೈದ್ರಾಬಾದ, ಮೈಸೂರು ಕೊಡುಗು ಮುಂತಾಗಿ ಅನೇಕ ವಿಭಾಗವಾಗಿ ಕತ್ತರಿಸಲ್ಪಟ್ಟು ಚೈತನ್ಯರಹಿತವಾಗಿದೆ. ಕಾರಣ ಬ್ರಿಟಿಶ್ ಆಡಳಿತಕ್ಕೆ ಒಳಪಟ್ಟಿರುವ ಉತ್ತರಕರ್ನಾಟಕ ಜಿಲ್ಹೆಗಳನ್ನೂ ಮದ್ರಾಸ ಕರ್ನಾಟಕ ಕೊಡುಗು ಪ್ರಾಂತಗಳನ್ನೂ ಏಕೀಕರಿಸಿ, ಒಂದು ಸ್ವತಂತ್ರ ಕರ್ನಾಟಕ ಪ್ರಾಂತವನ್ನೇರ್ಪಡಿಸಿ, ಅದರ ಆಡಳಿತವನ್ನು ಸಹ ಸ್ವತಂತ್ರವಾಗಿ ಮಾಡದ ಹೊರತು ನಮ್ಮ ಕರ್ನಾಟಕದ ವೈಶಿಷ್ಟ್ಯದ ಪ್ರಾಚುರ್ಯಕ್ಕೆ ಮಾರ್ಗವಿಲ್ಲೆಂಬುದನ್ನು ಕರ್ನಾಟಕದ ಮುಂದಾಳುಗಳು ಮನಗಂಡು ಅದರಂತೆ ಪ್ರಯತ್ನಿಸಿರುವರು. ಮತ್ತು ಕರ್ನಾಟಕ ಏಕೀಕರಣ ಸಂಘದದ್ವಾರಾ ಕೆಲಸ ನಡೆಯಿಸಿರುವರು. ಮೊನ್ನೆ ಡಾ. ಯು. ರಾಮರಾಯರು ಕೌನ್ಸಿಲ್ ಆಫ್ ಸ್ಟೇಟನಲ್ಲಿ ಇದೇ ರೀತಿಯಾದ ಒಂದು ಪ್ರಶ್ನೆಯನ್ನು ತಂದಾಗ ಇದಕ್ಕೆ ಜನರ ಬೇಡಿಕೆಯು ಇಲ್ಲವೆಂದು ಸರಕಾರದವರಿಂದ ಉತ್ತರವು ದೊರೆಯಿತು. ಈಗ ಎಮ್. ಸರದೇಸಾಯಿ, ರಾ. ಬ ಕಂಬಳಿ, ಎಮ್. ಜೋಗ ಮೊದಲಾದ ಕರ್ನಾಟಕಾಭಿಮಾನಿಗಳು ಸ್ವತಂತ್ರ ಪ್ರಾಂತದ ವಿಚಾರವನ್ನು ಈಡೇರಿಸಲೋಸುಗ ಮುಂಬೈ ಕೌನ್ಸಿಲಿನಲ್ಲಿ ಹೊಡೆದಾಡಲು ಬದ್ಧಕಂಕಣರಾಗಿರುವರು. ಈ ಸಂದರ್ಭದಲ್ಲಿ ಪ್ರಜರಿಗೆ ಈ ವಿಷಯದ ಆತುರತೆ ಎಷ್ಟಿದೆಯೆಂಬುದನ್ನು ತೋರಿಸಿಕೊಟ್ಟ ಹೊರತು ಸರಕಾರದವರು ಗಮನಿಸುವದು ವಿರಳ. ಕರ್ನಾಟಕ ಪ್ರಾಂತವು ಸ್ವತಂತ್ರವಾದರೆ ವಾಙ್ಮಯ ಸಾಂಪತ್ತಿಕ ವಿಚಾರದಿಂದಲೂ ಕನ್ನಡಿಗರಿಗೆ ಭಾಗ್ಯೋದಯವಿದೆ. ಕಾರಣ, ಕೆಳಗೆ ಕೊಟ್ಟಿರುವ ನಿರ್ಣಯದ ಪ್ರಕಾರ ತಮ್ಮ ಪರವಾಗಿ ಪ್ರಾಂತದ ಗವ್ಹರ್ನರ ಸಾಹೇಬರ ಪ್ರಾಯವ್ಹೇಟ ಸೆಕ್ರೆಟರಿಯವರಿಗೂ, ದಕ್ಷಿಣಭಾಗದ ಕಮೀಶನರರಿಗೂ, ತಮ್ಮ ಜಿಲ್ಲಾ ಕಲೆಕ್ಟರರಿಗೂ ತೀವ್ರವೇ ಬಿನ್ನಹವನ್ನು ಕಳುಹಿಸಬೇಕಾಗಿ ಪ್ರಾರ್ಥನೆ.

(೧) ಪಂಡಿತಪ್ಪಾ ಚಿಕ್ಕೋಡಿ, ಬಿ. ಎ. ಅಧ್ಯಕ್ಷರು.
(೨) ಎಸ್. ಬಿ. ಹಿರೇಮಠ, ಬಿ. ಎ. ಎಲ್. ಎಲ್ ಬಿ.
(೩) ಕೆ. ಎಸ್. ಕಾಮಲಾಪುರ, ಎಂ. ಬಿ. ಬಿ. ಎಸ್.
ಕಾರ್ಯದರ್ಶಿಗಳು.

ಸರಕಾರಕ್ಕೆ ಕಳಿಸಬೇಕಾದ ಗೊತ್ತುವಳಿಯ ಮಾದರಿ.

ಸರಕಾರದ ಸದ್ಯದ ಆಡಳಿತದ ವಿಭಾಗಗಳು ಭಾಷಾನ್ವಯವಾಗಿ ವಿಭಾಗಿಸಲ್ಪಡದೆ ಇರುವದರಿಂದ ಈಗ ಕರ್ನಾಟಕ ಪ್ರಾಂತವು ಮುಂಬಯಿ, ಮದ್ರಾಸ ಮತ್ತು ಕೊಡಗು ಹೀಗೆ ಮೂರು ಬೇರೆ ಬೇರೆ ಸರಕಾರಗಳ ಆಡಳಿತಕ್ಕೆ ಒಳಪಟ್ಟಿದೆ. ಈ ಮೂಲಕ ಕನ್ನಡ ನಾಡಿನ ಭಾಷೆಯ ಐಕ್ಯಕ್ಕೂ ಸಾಂಸ್ಕೃತಿಕ ಐಕ್ಯಕ್ಕೂ ಕನ್ನಡಿಗರ ಉನ್ನತಿಗೂ ಅತ್ಯಂತ ಹಾನಿಯು ಸಂಭವಿಸುತ್ತಿರುವದರಿಂದ ಇವೆಲ್ಲ ವಿಭಾಗಗಳನ್ನು ಒಂದೇ ಆಡಳಿತದ ಕೆಳಗೆ ಬಲು ತೀವ್ರವಾಗಿ ತರಬೇಕೆಂದು ಈ ಸಭೆಯು ನಿರ್ಣಯಿಸುತ್ತದೆ.

ಮತ್ತು ಮುಂಬಯಿ ಸರಕಾರದವರು ಈ ವಿಷಯವನ್ನು ಹಿಂದುಸ್ಥಾನ ಸರಕಾರದವರ ಮತ್ತು ವಿಲಾಯತೀ ಸರಕಾರದವರ ಲಕ್ಷ್ಯಕ್ಕೆತಂದು ತೀವ್ರ ಉಪಾಯಗಳನ್ನು ಕೈಕೊಳ್ಳಲು ಸೂಚಿಸಬೇಕೆಂದು ಈ ಸಭೆಯು ನಮ್ರತೆಯಿಂದ ಪ್ರಾರ್ಥಿಸಿಕೊಳ್ಳುತ್ತದೆ.

ಸ್ವೀಕಾರ.

೧ **ಭಾರತೀಯರ ಇತಿಹಾಸ**- ಲೇ.- ಶ್ರೀ. ನಾರಾಯಣ ಶರ್ಮಾ. ಪರಿಶೋಧಕರು ಆಲೂರ ವೆಂಕಟರಾಯರು. ಧಾರವಾಡ ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಮಿತಿಯಿಂದ ಶ್ರೀ. ದೇಸಾಯಿರವರಿಂದ ಪ್ರಕಟವಾದುದು. ಬೆಲೆ ೨—೮—೦ ವಿಮರ್ಶೆಯು ಸ್ವಲ್ಪದಿನಗಳಮೇಲೆ ಪ್ರಕಟಿಸಲ್ಪಡುವದು.

೨ **ಶಿರಹಟ್ಟಿಯ ಲೋಕಮಾನ್ಯ ವಾಚನಾಲಯದ** ೫ ನೇ ವಾರ್ಷಿಕ ವರದಿಯು. ಒಳ್ಳೇ ಸುವ್ಯವಸ್ಥೆಯಿಂದ ನಡೆದ ವಾಚನಾಲಯಗಳು ಕರ್ನಾಟಕದಲ್ಲಿ ತೀರ ಅಪರೂಪ. ಈ ಲೋಕಮಾನ್ಯ ವಾಚನಾಲಯವು ಊರ್ಜಿತಸ್ಥಿತಿಗೆ ಬರುತ್ತಿರುವದನ್ನು ಕಂಡು ನಮಗೆ ಆನಂದವಾಗುತ್ತದೆ. ಶಿರಹಟ್ಟಿಯ ಮುಂದಾಳುಗಳಾದ ಶ್ರೀ. ಮಹಿಷೀ ಮತ್ತು ಮಂಗಸೂಳಿಯವರ ಸತತ ಪ್ರಯತ್ನದ ಫಲವಿದು. ಉಳಿದ ಕಡೆಯಲ್ಲಾದರೂ ಒಬ್ಬಿಬ್ಬರು ಮನಸ್ಸಿನ ಮೇಲೆ ತೆಗೆದುಕೊಂಡರೆ, ಕರ್ನಾಟಕದ ಊರುಗಳಲ್ಲಿ ವಾಚನಾಲಯಗಳು ಉದ್ಭವವಾಗಲು ಮಾರ್ಗವಾಗುವದು. ಆದರೆ ಸಾರ್ವಜನಿಕ ಕಾರ್ಯಗಳಲ್ಲಿ ಒಳ್ಳೇ ಕಳಕಳಿಯಿಂದ ಕೆಲಸಮಾಡುವವರು ಕ್ವಚಿತ್ತಾಗಿ ದೊರೆಯುವರು. ಇರಲಿ. ಶಿರಹಟ್ಟಿಯು ಒಂದು ಕಾಲಕ್ಕೆ ಮರಾಟಿಯ ವರ್ಚಸ್ಸಿನಲ್ಲಿ ಸಿಲುಕಿತ್ತು. ಈಗ್ಗೆ ಅಲ್ಲಿಯ ಕನ್ನಡಾಭಿಮಾನಿಗಳು, ಕನ್ನಡ ಪತ್ರಿಕೆಗಳಿಗೂ, ಗ್ರಂಥಗಳಿಗೂ, ಆಶ್ರಯವನ್ನಿತ್ತು, ವರದಿಯನ್ನು ಸಹ ಕನ್ನಡದಲ್ಲಿಯೇ ಮುದ್ರಿಸಿದ್ದು 'ಕನ್ನಡಿಗ'ನಿಗೆ ವಿಶೇಷ ಸಂತೋಷದ ವಿಷಯ. 'ಉತಾರ' 'ವೇಣಗಿ' 'ಲ್ಯಾಂಪ' ಮೊದಲಾದ ಅನಾವಶ್ಯಕವಾದ ಪಾರಿಭಾಷಿಕ ಶಬ್ದಗಳು ಈ ವರದಿಯಲ್ಲಿರದಿದ್ದರೆ ಹೆಚ್ಚು ಶೋಭೆಯುಂಟಾಗುತ್ತಲಿದ್ದಿತು.

೩ **ಶ್ರೀ ರಾಮಚರಿತ್ರದ ಮಹಿಮೆ** ಕರ್ನಾಟಕ ಗ್ರಂಥಮಾಲೆಯ ೭೮ ಪುಷ್ಪ, ಆಲಿಕಪುರಿಯ ಶಾ|| ವೆಂಕಟರಮಣಯ್ಯನವರಿಂದ ಬರೆಯಲ್ಪಟ್ಟಿದ್ದು.

೪ ಮದುವೆಯಲ್ಲ; **ಮಾರಿಗೆ ಬಲಿ.** ಮತ್ತು (೫) **ಪತಿವ್ರತಾ** ಪ್ರಭಾವ. ಇವು ಗೆಳೆಯರ ಗುಂಪಿನವು

ಇವೆಲ್ಲವುಗಳ ವಿಮರ್ಶೆಯು ಮುಂದಿನ ಸಾರೆ.

"ಕನ್ನಡಿಗ"ನಿಗೆ ಜನರು ಏನೆನ್ನುವರು ?

ನಿಜವಾಗಿಯೂ ಭಾಷಾಸೇವೆಯನ್ನು ಮಾಡಲು **ಹೊರಟ**ರುವ ಪತ್ರಿಕೆಯೆಂದರೆ ಇದೊಂದೇ ಸರಿಯೆಂದು ನಮ್ಮ ಮನಸ್ಸಿಗೆ ತೋಚುತ್ತಲಿದೆ. ಓ ಕನ್ನಡಿಗರೇ ! ಕನ್ನಡಿಗನನ್ನು **ನೋಡಿ** ನಿಮ್ಮ ಕಣ್ಣುಗಳನ್ನು ಸಫಲಮಾಡಿಕೊಳ್ಳಿರಿ, ಅವನ **ಬೋಧನೆ**ಗಳನ್ನು ನೋಡಿ ಎಚ್ಚತ್ತುಕೊಳ್ಳಿರಿ. ಕನ್ನಡಿಗರು ಕನ್ನಡಿಗನನ್ನು ನೋಡದಿರುವದು ಮಹಾ ಪಾಪವೆಂದು ಭಾವಿಸಿರಿ.

—ಕಾದಂಬರೀ ಸಂಗ್ರಹ.

ವರ್ತಮಾನ ಸಾರ

ಇಹವೃತ್ತ.

ಮಳೆಯು ಬೇಕಾಗಿದೆ

ಶ್ರೀ. ಸುಬ್ರಹ್ಮಣ್ಯ ಮಠದ ಶ್ರೀ. ವಿದ್ಯಾಸಿಂಧು ಮೇ ಸ್ವಾಮಿಗಳವರು ಚಾತುರ್ಮಾಸಕ್ಕಾಗಿ ಇಲ್ಲಿಯೇ ಕುಳಿತಿದ್ದಾರೆ.

ಈ ಪತ್ರದ ಸಂಗಡ ಧರಪನಹಳ್ಳಿಯ ಜೋತಿಷ್ಯ ವಿದ್ಯಾಲಯದ ಪಂಚಾಂಗದ ಹಸ್ತಪತ್ರಿಕೆಗಳೂ, ಘೋರಾಜಿಯ ಸೊತ್ತಿಯ ತಿಕೀಟ ಪುಸ್ತಕಗಳೂ ಹಂಚಲ್ಪಟ್ಟಿವೆ.

'ಕನ್ನಡಿಗ'ನ ಮೂಲ ಮಾಸಿಕ ಪ್ರಕಟದೊಮ್ಮೆಯು ಈದಿನ ವಿಜಾಪೂರದಲ್ಲಿ ನಡೆಯುವದು.

ಶಿರಹಟ್ಟಿ ನಾಟಕ ಮಂಡಳಿಯವರ ನಾಟಕಗಳು ನಡೆದಿವೆ. ಧ್ರುವ ಚರಿತ್ರೆ, ಅನಸೂಯಾ, ಮಹಾಶಿವಲೀಲಾ ಮೊದಲಾದ ಹೊಸ ಹೊಸ ನಾಟಕಗಳೂ ಆದವು. ಆದರೆ ರಂಗಭೂಮಿಯ ಅಭಿವೃದ್ಧಿಗೆ ಒಪ್ಪುವಂತಹ ಸಂವಿಧಾನತೆಗಳು ಅವುಗಳಲ್ಲಿಲ್ಲ. ಧರ್ಮ ಪ್ರಚಾರವಾಗುವ ನಾಟಕಗಳಲ್ಲಿ, ನೀತಿ ವಿಚಾರಣಾ ಎವ ವಾಕ್ಯಗಳು ಇದ್ದದನ್ನು ಕಂಡು, ಬಹು ವಿಷಾದವಾಯಿತು. ಕರ್ನಾಟಕದ ರಂಗಭೂಮಿಯು ಉದ್ಧಾರವಾಗಬೇಕಾದರೆ, ಈಗಿನ ನಾಟಕಗಳ ಲೇಖಕರನ್ನೂ, ಕಂಪನಿಗಳನ್ನೂ, ನಟರನ್ನೂ ಹಾಗೆಯೇ ಪ್ರೇಕ್ಷಕರನ್ನೂ, ಸಮುದ್ರದಲ್ಲಿ ಒಯ್ದು ಒಗೆಯಬೇಕಾಗುವದು.

ಮೊನ್ನಿನ ದಿವಸ ಗ್ರಾಮದೇವತೆಯ ಜತ್ತರಿದ್ದ ಮೂರು ಮನೆಗಳಿಗೆ ಭಿಂತಿ ಹತ್ತಿತು. ಇಲ್ಲಿಯ 'ಜೀವದಯಾ ಸಂಘ'ದ ಸಂಸ್ಥಾಪಕರಾದ ಡಾ॥ ಕೃಷ್ಣರಾವ ಮುತಾಲೀಕ, ನರಗುಂದಕರ, ಮಂಕಾರ, ಇವರೆಲ್ಲರೂ ಕೂಡಿ ಭಿಂತಿಯನ್ನು ನಂದಿಸಿದರು. ಸ್ತುತ್ಯವು. 'ಜೀವದಯಾ' ಸಂಸ್ಥೆಯು ತನ್ನ ಉದ್ದೇಶಕ್ಕನುಸಾರವಾಗಿ ಸಹಾಯಮಾಡುತ್ತಿರುವದು. ಈ ಸಂಸ್ಥೆಗೆ ಧನದ ಅಭಾವದ ಮೂಲಕ ಹೆಚ್ಚಿನ ಕಾರ್ಯವು ಮಾಡಲಾಗುವದಿಲ್ಲ. ಇಂಥ ಸಂಸ್ಥೆಗೆ ಜನರು ಪ್ರೋತ್ಸಾಹನ ಕೊಡುವದಾಗಿ ಬೇಡಿಕೆ.

ಮುಂಬೈ ಕರ್ನಾಟಕ

ಅಖಿಲ ಕರ್ನಾಟಕದಲ್ಲಿ ಶಿಕ್ಷಣ ಸಂಸ್ಥೆಗಳು ಈ ಕೆಳಗಿನಂತೆ ಇವೆ

ಮದ್ರಾಸ ಕರ್ನಾಟಕದಲ್ಲಿ ೩ ಕಾಲೇಜುಗಳೂ, ೧೨ ಹಾಯಸ್ಕೂಲುಗಳೂ ಇವೆ

ಮೈಸೂರ ಸಂಸ್ಥಾನದಲ್ಲಿ ೩ ಆರ್ಟ್ಸ ಕಾಲೇಜುಗಳು ಒಂದು ಇಂಜಿನಿಯರಿಂಗ ಕಾಲೇಜು, ಒಂದು ಮೆಡಿಕಲ್ ಕಾಲೇಜು, ಒಂದು ಟೀಚರ್ಸ ಟ್ರೇನಿಂಗ ಕಾಲೇಜು, ಹೀಗೆ ೬ ಕಾಲೇಜುಗಳೂ, ೨ ಹಾಯಸ್ಕೂಲುಗಳು ಇರುತ್ತವೆ.

ಕೊಡಗಿನಲ್ಲಿ ೨ ಹಾಯಸ್ಕೂಲುಗಳಿವೆ. ಒಟ್ಟಿಗೆ ೯ ಕಾಲೇಜುಗಳೂ, ೬೧ ಹಾಯಸ್ಕೂಲುಗಳೂ ಇರುತ್ತವೆ.

'[illegible]' ಅಖಿಲ ಕರ್ನಾಟಕದಲ್ಲಿ ಮುಂಬೈ ಕರ್ನಾಟಕವನ್ನು ಮರೆತಿರುವನೇಕೆ? ಸ. ಕ.

'ಸದರ್ನ ಮರಾಠಾ ರೇಲವೇ' ಯವರು ಅಕ್ಟೋಬರ ೧ನೇ ತಾ॥ ನಿಂದ ರೇಲ್ವೇ ದರಗಳನ್ನು ಕಡಿಮೆ ಮಾಡುವದನ್ನು ನಿಶ್ಚಯಿಸಿದ್ದಾರೆ. ಮೊದಲ ೨ ನೇ ವರ್ಗದ ಮತ್ತು 'ಇಂಟರ' ವರ್ಗದ ದರಗಳನ್ನು ಮಾತ್ರ ಕಡಿಮೆ ಮಾಡಿಲ್ಲ.

ಮದ್ರಾಸ ಕರ್ನಾಟಕ

[illegible] ಮಂಗಳೂರ [illegible] ಕೆಲಸವನ್ನು [illegible] ವರ್ಷ ಒಂದಕ್ಕೆ ೨,೫೦೦ ರೂಪಾಯಿಗಳ ವೇತನವು ಕೊಡಲ್ಪಡುತ್ತಿರುವದು.

ಕರ್ನಾಟಕ [illegible]! [illegible] ತನ್ನ [illegible]ಗಳನ್ನು [illegible]ದಲ್ಲಿ ಅಭಿವೃದ್ಧಿಪಡಿಸುತ್ತಿರುವದು

ಶಿವಮೊಗ್ಗದಲ್ಲಿ ನಡೆದ ಅಖಿಲ ಕರ್ನಾಟಕ ಆಯುರ್ವೇದ ವಿದ್ಯಾಪೀಠದ ವೈದ್ಯಪರೀಕ್ಷೆಗೆ ಮಂಗಳೂರಿನಿಂದ ಉಮೇದವಾರರಾಗಿದ್ದ ಶ್ರೀಯುತ ಟಿ. ಅನಂತರಾಮ ಅಂಚ್ಯತಾಯರು ಪ್ರಥಮ ಸ್ಥಾನದಲ್ಲಿ ಉತ್ತೀರ್ಣರಾಗಿರುವರು

ಮೈಸೂರ ಕರ್ನಾಟಕ

ಕಳೆದ ಗುರುವಾರ ಶ್ರೀಮನ್ ಮಹಾರಾಣಿಯವರು ಮೈಸೂರಿನ ಉತ್ತರಾದಿ ಮಠದ ಬೀದಿಯಲ್ಲಿರುವ ಪುಂಡರೀಕ ಯಾಗಶಾಲೆಗೆ ಹೋಗಿ ಅಲ್ಲಿಯ ಕೆಲಸಕಾರ್ಯಗಳನ್ನು ನೋಡಿಕೊಂಡು ಬಂದರು.

ಭದ್ರಾವತೀ ಹತ್ತರ ಸುಮಾರು ೫೦೦ ಎಕರೆ ಕಾಡು ಜಮೀನನ್ನು ಒಂದು ವಿಲಾಯತಿಯ ಕಂಪನಿಗೆ ಚಹಾ ತೋಟವನ್ನು ಮಾಡಲು ೩೦ ವರ್ಷಗಳವರೆಗೆ ಕೊಟ್ಟಿರುವರು

ಮಹಾರಾಜರು ೧,೦೦೦ ರೂಪಾಯಿಗಳನ್ನು ಖರ್ಚುಮಾಡಿ ವಿಲಾಯತಿಯಿಂದ ಕಪ್ಪು ಬಣ್ಣದ ನಾಲ್ಕು ಹಂಸಗಳನ್ನು ತರಿಸಿ, ಮೈಸೂರಿನಲ್ಲಿರುವ ಪ್ರಾಣಿಗಳ ಪ್ರದರ್ಶನಾಲಯದಲ್ಲಿ ಇಡುತ್ತಾರೆ.

ಬೆಂಗಳೂರಿನಲ್ಲಿರುವ ಕಿವುಡ ಮತ್ತು ಮೂಕರ ಶಾಲೆಯ ಖರ್ಚು ಹೆಚ್ಚಾಗಿರುವುದರಿಂದ, ಅಲ್ಲಿನ ಮುನಿಸಿಪಾಲಿಟಿಯವರು ಮುಚ್ಚಿ ಬಿಡಬೇಕೆಂದು ತೀರ್ಮಾನ ಮಾಡಿದ್ದಾರೆ.

ಮೈಸೂರ ವಿಶ್ವವಿದ್ಯಾಲಯದ ಪ್ರತಿನಿಧಿಯೆಂದು ಡಾ. ಎಮ್. ವಿ. ಗೋಪಾಳಸ್ವಾಮಿಯವರು ಹಾಲಂಡದಲ್ಲಿ ನೆರೆಯುವ ಅಂತರ್‌ರಾಷ್ಟ್ರೀಯ ತತ್ತ್ವಜ್ಞಾನ ಪರಿಷತ್ತಿಗೆ ಕಳಿಸಲ್ಪಟ್ಟಿರುವರು. ಹಾಸ್ಯ ಮತ್ತೂ "ಪ್ರಾಣಿಗಳ ಜೀವತತ್ವ" ಎಂಬ ವಿಷಯಗಳ ಮೇಲೆ ಅವರು ಅಲ್ಲಿ ನಿಬಂಧಗಳನ್ನು ಓದುವರಂತೆ!

ಗೋಹತ್ಯವನ್ನು ನಿಲ್ಲಿಸುವ ಬಗ್ಗೆ ವಿಚಾರಿಸಲು, ಮೈಸೂರ ಸರಕಾರದವರು ಅಲ್ಲಿನ ಜನರದೊಂದು ಮಂಡಳವನ್ನು ನೇಮಿಸಿದ್ದಾರೆ. ಇದರಲ್ಲಿ ೨ ಮುಸಲ್ಮಾನರು, ೩ ಕ್ರಿಶ್ಚನರು, ೫ ಹಿಂದೂ ಜನರಿದ್ದಾರೆ. ಶ್ರೀ ಪುಟ್ಟಣಶೆಟ್ಟರು ಇದರ ಅಧ್ಯಕ್ಷರು.

ಶ್ರೀಮನ್ಮಹಾರಾಜರು ಪಟ್ಟವನ್ನೇರಿ ೨೫ ವರ್ಷಗಳಾದವು. ೮ ನೇ ತಾ॥ ದಿನ ಈ ಬಗ್ಗೆ ಮೈಸೂರಿನಲ್ಲಿ [illegible] ಉತ್ಸವವೂ ನಡೆಯಿತು.

ಕಳೆದ ಜನೇವರಿ ತಿಂಗಳಿಂದ ಹಣದ ಅಭಾವದಿಂದ ನಿಂತು ಹೋಗಿದ್ದ 'ಸತ್ಯಾಗ್ರಹೀ' ವಾರಪತ್ರಿಕೆಯು ಪುನಃ ಈ ತಿಂಗಳ ಅಂತ್ಯದೊಳಗೆ ಹೊರಡುವದಾಗಿ ತಿಳಿಯಬರುತ್ತದೆ. ಇದಕ್ಕಾಗಿ ೫೦,೦೦೦ ರೂಪಾಯಿಗಳ ಭಾಂಡವಲದಿಂದ 'ಸತ್ಯಾಗ್ರಹೀ ಪ್ರೆಸ್ ಲಿಮಿಟೆಡ್' ಎಂಬ ಕಂಪನಿಯು ಜೂನ ತಿಂಗಳ ೭ನೇ ತಾರೀಖಿನಲ್ಲಿ ರಜಿಸ್ಟರಾಗಿ ಬಹಳ ಜನರ ಆಶ್ರಯವನ್ನು ನಿರೀಕ್ಷಿಸುತ್ತಲಿದೆ

ಕೊಡಗು ಕರ್ನಾಟಕ

ಕೊಡಗಿನಲ್ಲಿ ಅನೇಕ ವರ್ಷಗಳಿಂದ ಇದ್ದ ಜಿಲ್ಹಾ ಲೋಕಲ್ ಬೋರ್ಡ ಕಳೆದ ಎರಡು ವರ್ಷಗಳಿಂದ ನಿಂತುಹೋಗಿತ್ತು. ಅಲ್ಲಿಯ ಕಮೀಶನರರು, ಇದನ್ನು ಮತ್ತೆ ಪುನಃ ಸ್ಥಾಪಿಸಿರುವರು.

ಕಾವೇರಿ ಹೊಳೆಗೆ ವಿಪರೀತ ನೀರು ಬಂದಿರುವದಂತೆ.

ಶನಿವಾರ ಸಂತೆಯಲ್ಲಿ ಬೇಕಾದಷ್ಟು ಮಳೆಯಾಯಿತು. ಹೊರಗೆ ಹೊರಡುವದೇ ಕಷ್ಟವಾಯಿತು.

ಸಂತೇದಿನ ಆಸ್ಪತ್ರೆಯೂ ಇದ್ದಿಲ್ಲ ಅಲ್ಲಿಯ ಜನರ ಕಷ್ಟ ಹೇಳತೀರದು ಇದಕ್ಕೆ ಕೊಡಗಿನವರು ಏನನ್ನುವರು?

ನಿಜಾಂ ಕರ್ನಾಟಕ

ನಿಜಾಮ ಕರ್ನಾಟಕದ ಶಿಕ್ಷಣ ಖಾತೆಯಲ್ಲಿ ಕೆಲಸ ಮಾಡಿದ ಶ್ರೀ ಜೀ. ಡಿ. ಪರ್ವರರವರು ಅನೇಗುಂದಿ ಸಂಸ್ಥಾನದ ದಿವಾಣರಿಗೆ ನೇಮಿಸಲ್ಪಟ್ಟಿದ್ದಾರೆ. ಗುಲಬುರ್ಗೆಯ ಉಸ್ಮಾನಿಯಾ ಹಾಯಸ್ಕೂಲಿನಲ್ಲಿ ಇವರಿಗೋಸ್ಕರ ತಾಂಬೂಲ ಸಮಾರಂಭವು ನೆರವೇರಿತು.

ಹಿಂದುಸ್ಥಾನ.

[illegible] ೧೫೦೦ ಶ್ರೀ [illegible] ಸಹ [illegible]ಯನ್ನು [illegible] ಸಹಿತ [illegible] ಇದಕ್ಕೆ ಭಂಗವಾದ [illegible] ಕೇಳಲು, [illegible] ಮಾಡುವದಿಲ್ಲವೆಂದು ಅದನ್ನು [illegible]

ಸಿಮ್ಲಾದಲ್ಲಿ ...ಗಳು ಹೆಚ್ಚುತ್ತಲಿವೆ. ಮೊನ್ನೆ ಫ್ರೇಮಾಜಿ ಎಂಬವರ ...ಯನ್ನು ಹೊಕ್ಕು, ಹಣವನ್ನು ಎಬ್ಬಿಸದ್ದಿಲ್ಲದೇ, ಶಿಗರೇಟ ಸೇದಿ, ಬ್ರ್ಯಾಂಡಿಯ ಬಾಟಲಿಗಳನ್ನು ಹಾರಿಸಿ, ಆರಿಗೂ ಗೊತ್ತಿಲ್ಲದಂತೆ ಓಡಿಹೋದರು. ಹಿಂದುಸ್ಥಾನ ಸರಕಾರದ ಚಪ್ರವಾಸ ಸ್ಥಾನದಲ್ಲಿ ಈ ಹಾಡು!

ಅಖಿಲ ಭಾರತೀಯ ಕಾಂಗ್ರೆಸ ಕಮೀಟಿಯ ಕಾರ್ಯಕಾರೀ ಮಂಡಲವು ೨೪ ನೇ ತಾ|| ದಿನ ಸಿಮ್ಲಾದಲ್ಲಿ ಸೇರುವದು.

...ಲ್ಲಿಯ ಸಿಂದಿ ಅಂಗಡಿಗಳ ಮಕ್ತೇದಾರರು ನಮಗೆ ಒಂದು ಪತ್ರ ಬರೆದಿದ್ದರು. ೨ ನೇ ತಾ|| ದಿನ ತಮ್ಮ ಸೇವಕರು ಬೀದಿಗಳಲ್ಲಿ ಶೃಂಗರಿಸಿದ ಪೀಪುಗಳನ್ನು ಮುರಿದದ್ದಕ್ಕಾಗಿ ವಿಷಾದ ಪಡುವೆವೆಂದೂ, ಆ ಬಗ್ಗೆ ತಮ್ಮ ಸೇವಕರನ್ನು ಶಿಕ್ಷಿಸುವೆವೆಂದೂ ತಿಳಿಸಿದ್ದಾರೆ. ಕಲೆಕ್ಟರ ಸಾಹೇಬರು ಈ ವಿಷಯವನ್ನು ಮನಸ್ಸಿನ ಮೇಲೆ ತೆಗೆದುಕೊಂಡು ಕೆಲಸ ನಡಿಸಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುವೆವು.

ಪರದೇಶ.

ಶಬ್ದಗಳನ್ನು ತೂಕಮಾಡುವ ಹೊಸಮಾದರಿಯ ಯಂತ್ರವೊಂದು ನಿರ್ಮಿಸಲ್ಪಟ್ಟಿದೆಯಂತೆ. ಪೆನ್ಸಿಲಿನಿಂದ ಶಬ್ದಗಳನ್ನು ಬರೆದರೆ ವಂದು ತೊಲಿಗೆ ಲಕ್ಷಗಟ್ಟಲೆ ಶಬ್ದಗಳು ತೂಗುವವು. ಒಂದು ಕೂದಲಿನಷ್ಟು ತೂಕವು ಹೆಚ್ಚಾಗಬೇಕಾದರೂ ತಕ್ಕಡಿಯ ಇನ್ನೊಂದು ತಟ್ಟೆಯಲ್ಲಿ ೧೦ ಲಕ್ಷಗಟ್ಟಲೆ ಶಬ್ದಗಳನ್ನು ಹಾಕಬೇಕಾಗುವದು. ಈ ಯಂತ್ರವು ಇಂಗ್ಲಂಡಿನ ವೆಸ್ಟ ಮಿನಿಸ್ಟರದಲ್ಲಿ ಶೋಧಿಸಲ್ಪಟ್ಟಿದೆ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡು ವ್ಯವಸ್ಥೆ ಮಾಡಿರು... ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು, ಇದೀ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೬೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಡ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೬-೮-೦ ಪಟ್ಟಿ ಸಹಿತ; ... ಖ ಫ್ರೆಸ್ಕೆಟಿ ಟೆಸ್ಟ... — ಗಡಿಯಾಳವನ್ನು ...ವಾಗ್ಗೆ ಕಾಳಜಿಯಿಂದ ತಯಾರಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸುವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳಿಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತಪ್ಪಿಸಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು. ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ... ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

|| ಶ್ರೀ ||

ತ್ವರೆಮಾಡಿರಿ! ಅಡಚಣೆಯು ದೂರವಾಯಿತು!!

ಮನಿ, ವಖಾರ, ವ್ಯಾಪಾರ ಶೆಡ್ ಮುಂತಾದ

ಇಮಾರತ ಕಟ್ಟಿಸುವವರಿಗೆ

ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟುಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟುಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ವ್ಯಾಪಾರದವರಿಗೆ, ವಕೀಲರಿಗೆ, ಡಾಕ್ಟರರಿಗೆ ಬಳ್ಳೇ ... ವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ... ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವಿಲ್ಲ. ಒಂದೊಂದೇ ಪ್ಲಾಟ ಆಥವಾ ಹೆಚ್ಚಿಗೆ ತಮ್ಮ ತಮ್ಮ ಅನುಕೂಲದ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ಬೇಗನೆ ... ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟ ... | ... ರಾವ ಟಂಕಸಾಳಿ ಡಾಕ್ಟರ.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ!!
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟ ಪಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕನ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಹೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.
ಜಿ. ಎಚ್. ವೀರಣ್ಣ. ಪ್ರೊಪ್ರಾಯಿಟರ

ಪ್ರಕಟನೆ.

ಅಪೂರ್ವವಾದ ಹೊಸ ಪುಸ್ತಕಗಳು.
ಆಸ್ತಿಕರಾದವರು ತರಿಸಿ ಓದಿರಿ

(೧) ಗುರುಕಥಾಕಲ್ಪತರು ವೆಂಬ ಸಚಿತ್ರ ಗುರುಚರಿತ್ರೆ ಪೂರ್ವಾರ್ಧ ಬೆಲೆ ರೂ. ೨-೦-೦
(೨) ಚಿತ್ತೂರು ಜೋಹರು ೧ (ಪುಸ್ತಕ) ಬೆಲೆ ರೂ. ೧-೪-೦

ಸಿಕ್ಕುವ ಸ್ಥಳ:— ಕೆ. ಲಕ್ಷ್ಮೀನಾರಾಯಣ ಭಟ್ಟ
ಸ್ಕೂಲ್ ಅಸಿಸ್ಟೆಂಟ್ ಕೊಣನೂರ. ಶಿವಮೊಗ್ಗಾ ಡಿಸ್ಟ್ರಿಕ್ಟ.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to—
N. K. Kulkarni. Agent Bagalkot.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಣಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ. ನಂ. ೮೨. ೧೯೪೭ ವಾ. ಚಂದಾ ೧-೧೪-೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ಸನಾತನವನ್ನು ಸಮಾವಿಷ್ಟವಾಗಿದೆ)

ಯತ್ರ ಯತ್ರ ... ... — ...

ಸಂಪಾದಕರು— ಮಂಗಳವೇಢೇ ರಾಜೇರಾಯರ ಮುಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಬುಧವಾರ ವಿ.ತಿ ಶ್ರಾವಣ ಬಹುಳ ೪ ಶಕೆ ೧೮೫೯ ತಾ||೨೫-೮-೧೯೩೭ | ಸಂಚಿಕೆ ೩೨

ಸಂಪಾದಕರ ಭೂಮಿ

(ಓಂ)

ನನ್ನ ಪ ನಗಿನ ಮೋಹವಾದ ಕಟ್ಟುವೆನಾನು।
ನಿನ್ನ ಪ್ರೇಮದ ಮಾತಿನಂಥ ಸುಕ್ಕಿಲ ದೂಮ।
ಚಿನ್ನದಾದರು ಚಿನ್ನ ಮೋಹ ಸ್ತ್ರೀಯು ನೊಂದು ಚಿನ್ನಯಾಚಕದಲ್ಲೆ॥
ನನ್ನ ದೇಹವು ನಿನ್ನ ಪೀಠಾಸನಕಾಗಿ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ವಸ್ತ್ರವು ನಿನ್ನ ಗಂಧವನು ಹೀರಬಹ ಗಂಧವಹನೆಂದು ತಿಳಿದೆ॥

—ಅಂಜಲಿ ಕವಿಯ ಪತ್ರ

ಲೋಕರಹಸ್ಯ ಕಾರರು 'ಕನ್ನಡಿಗ' ನ ಕೆಲವು ವಿಧಾನಗಳಿಗೆ ಆಕ್ಷೇಪಿಸಿದ್ದಾರೆ. ಇದೇ ವಾರದ ಸಂಚಿಕೆಯಲ್ಲಿ ಬೇರೆ ಕಡೆಗೆ 'ಲೋಕರಹಸ್ಯ'ದ ಸಂಪಾದಕೀಯ ಲೇಖವು ಪ್ರಕಟಿಸಲ್ಪಟ್ಟಿದೆ. ಅದನ್ನು ಓದಿ, 'ರಹಸ್ಯ' ಕಾರರು ಒಳ್ಳೇ ಅಟ್ಟಹಾಸದಿಂದ ಬರೆದ ಟೀಕೆಯ ರಹಸ್ಯವನ್ನು ವಾಚಕರು ತಿಳಿದುಕೊಳ್ಳಬಹುದು. ದಕ್ಷಿಣ ಕರ್ನಾಟಕರು ಕನ್ನಡ ಪತ್ರಿಕೆಗಳಲ್ಲಿಯೂ, ಗ್ರಂಥಗಳಲ್ಲಿಯೂ ಇಂಗ್ಲೀಷ ಅಂಕೆಗಳನ್ನು ಹಾಕುವದು ಸರಿಯಲ್ಲವೆಂಬುದನ್ನು "ಕನ್ನಡಿಗ" ನು ತೋರಿಸಿಕೊಟ್ಟಂತೆ 'ರಹಸ್ಯ' ಕಾರರು ಒಪ್ಪಿದ್ದಾರೆ. ತಮ್ಮ ತಪ್ಪನ್ನು ಒಪ್ಪಿದಂತೆ, ಅದನ್ನು ತಿದ್ದಕೊಂಡರೆ ಆ ಸವೇ ಮುಗಿಯುವದು. ಆದರೆ ನಮಗೆ ಉತ್ತರ ಕೊಡಹೋಗಿ 'ರಹಸ್ಯ' ಕಾರರು ಹಾಸ್ಯಕ್ಕೆ ಗುರಿಯಾಗಿದ್ದಾರೆ. ನಮ್ಮ ಪೂರ್ವದ ಕನ್ನಡಿಗರು ಆರ್ಯರ ಸಂಸ್ಕೃತಿಯನ್ನು ಸ್ವೀಕರಿಸಿದರಂತೆ ಆದ್ದರಿಂದ ನಮ್ಮ ಈಗಿನ ಕನ್ನಡಿಗರಾದ ರಹಸ್ಯಕಾರರು ಇಂಗ್ಲೀಷರ ಸಂಸ್ಕೃತಿಯನ್ನು ಸ್ವೀಕರಿಸಲು ಹಾತೊರೆಯುವರಂತೆ! ಇಂಗ್ಲೀಷ ಅಂಕೆಗಳನ್ನು ಕನ್ನಡ ಗ್ರಂಥಗಳಲ್ಲಿ ಸೇರಿಸಿದರೆ ಇಂಗ್ಲೀಷರ ಸಂಸ್ಕೃತಿಯನ್ನು ಸ್ವೀಕರಿಸಿದಂತಾಯಿತೆಂದು ಇವರು ವಿಧಾನಿಸಿದ್ದು, ಕೊಬ್ಬರಿಯನ್ನು ಬಿಟ್ಟು ಜುಟ್ಟವನ್ನು ಸ್ವೀಕರಿಸಿದಂತೆಯೇ ಸರಿ. ಪೂರ್ವದ ಕನ್ನಡಿಗರು ಹೇಡಿಗಳಂತೆ ತಮ್ಮ ಆಚಾರಂಗಳನ್ನು ಬಿಟ್ಟರೆಂದು, ಅವರನ್ನು ಹಳಿದು, ಈಗಿನ ಗಂಡುಗಳಿಗಳಾದ ದಕ್ಷಿಣ ಕನ್ನಡಿಗರು, ತಮ್ಮ ವಿಚಾರಂಗಳನ್ನು ಬಿಟ್ಟಿಲ್ಲವೆಂದು ತಮ್ಮ ಬೆನ್ನನ್ನು ತಾವೇ 'ರಹಸ್ಯ' ಕಾರರು ಚಪ್ಪರಿಸಿಕೊಳ್ಳುತ್ತಿರುವರು. ಆರ್ಯರ ಹೋಮ ನೇಮ (ನೇಮ ಶಬ್ದವೆಲ್ಲಿಯದೋ?) ಗಳನ್ನು ದ್ರಾವಿಡರು ಆಚರಣೆಮಾಡಿಕೊಟ್ಟು ಹೋದರಂತೆ! ಅಬ್ಬಬ್ಬ ಎಂತಹ ಅವಮಾನಕರವಾದ ಪ್ರಸವಿದು? ಆದರೆ ಕ್ರಿಸ್ತನರ ಬೂಟು, ಚೊಣ್ಣ, 'ಕಾಲರ್' 'ನೆಕ್‌ಟೈ' ಗಳನ್ನು ಧರಿಸಿ, ಸಿಗರೇಟ್ ಸೇದುತ್ತ, ನಮ್ಮ ಪೂರ್ವಜರ ಆಧ್ಯಾತ್ಮಿಕ ಸಂಸ್ಕೃತಿಯನ್ನೆಲ್ಲ ಮರೆತು, ಆಚಾರ ವಿಚಾರಂಗಳಿಂದ ಭ್ರಷ್ಟರಾಗಿ, ನೈತಿಕ, ಮಾನಸಿಕ ಸ್ಥೈರ್ಯಗಳನ್ನೂ ಸಹ ಕಳೆದುಕೊಂಡು, ಅವನತಿ ಹೊಂದುತ್ತಲಿದ್ದ ಈಗಿನ ಕನ್ನಡಿಗರು ಮಾತ್ರ 'ಲೋಕರಹಸ್ಯ' ಕಾರರ ಮತದಂತೆ ಕೆಟ್ಟುಹೋಗಿಲ್ಲ. ಇವರೇ 'ರಹಸ್ಯ' ಕಾರರಿಗೆ ವಂದ್ಯರಾಗಿದ್ದಾರೆ. ಕವೀಂದ್ರರಾದ ರವೀಂದ್ರರಂತಹ ವಿದ್ವನ್ಮಣಿಗಳು ಜಗತ್ತಿನ ಸಂಸ್ಕೃತಿಯ ಏಕೀಕರಣಕ್ಕಾಗಿ ಪ್ರಯತ್ನಿಸುವಾಗ, ನಾವು ಕನ್ನಡ ಅಂಕೆಗಳಂತಹ ಕ್ಷುದ್ರವಾದ ವಾದವನ್ನು ಹೂಡುವದೇಕೆಂದು 'ರಹಸ್ಯ' ಕಾರರು ಕೇಳುವ ಬದಲು, ಕನ್ನಡ ಅಂಕೆಗಳನ್ನು ಉಪಯೋಗಿಸಿದ್ದರೆ ತಾವೇ ಈ ಕ್ಷುದ್ರವಾದವನ್ನು ನೊಂದಿಸಿದಂತಾಗುತ್ತಲಿದ್ದಿತು. ಕನ್ನಡದಲ್ಲಿ ಅಂಕೆಗಳಿದ್ದದರಿಂದ ಇಂಗ್ಲೀಷ ಅಂಕೆಗಳು ಅನಾವಶ್ಯಕವೆಂಬುವದು ಬಾಲಕರಿಗೆ ಸಹ ತಿಳಿಯುವದು. ಕನ್ನಡ ಅಂಕೆಗಳು ಇದ್ದರೂ ಸಹ ಅವನ್ನು ಬಿಸಾಟಬಿಡಿ; ಇಂಗ್ಲೀಷ ಅಂಕೆಗಳನ್ನೇ ಉಪಯೋಗಿಸಿ, ಜಗತ್ತಿನ ಸಾಂಸ್ಕೃತಿಕ ಏಕೀಕರಣವನ್ನು ಮಾಡಿ ಎಂದು ರವೀಂದ್ರರು 'ರಹಸ್ಯ ಕಾರರಿಗೆ ಮಾತ್ರ ಉಪದೇಶಿಸಿದ್ದರೆ, ನಾವು ಅರಿಯೆವು. ಪೂರ್ವದ ಕನ್ನಡ ಭಾಷೆಗೂ ಈಗಿನ ಕನ್ನಡ ಭಾಷೆಗೂ ಉಂಟಾದ ಭೇದವನ್ನರಿಯದೇ, ಈಗಿನ ಗದ್ಯದ ಶೈಲಿಯು ನಮ್ಮ ಭಾಷೆಯಲ್ಲಿ ಹೇಗೆ ಬಂತೆಂಬುದನ್ನು ವಿಚಾರಿಸದೇ, ಅಲ್ಪವಿರಾಮ, ಅರ್ಧವಿರಾಮ, ಉದ್ಗಾರವಾಚಕ, ಪ್ರಶ್ನಾರ್ಥಕ ಚಿನ್ಹಗಳನ್ನು ನಾವು ಉಪಯೋಗಿಸುವದೇಕೆಂದು ಪ್ರಶ್ನೆಮಾಡಿ, ಮೊದಲಿನಂತೆ ।!! ಈ ಗೆರೆಗಳನ್ನು ಹಾಕದೇ ಯಿರುವದೇಕೆಂದು ಕೇಳಿದ 'ರಹಸ್ಯ' ಕಾರರಿಗೆ ಉತ್ತರವು ಬೇಕಾಗಿದ್ದರೆ, ರವೀಂದ್ರರೇ ಹೇಳಬಲ್ಲರು. ತಮ್ಮ ಬಂಗಾಲೀ ಲೇಖಗಳಲ್ಲಿ ರವೀಂದ್ರರು ಅಲ್ಪವಿರಾಮ, ಉದ್ಗಾರವಾಚಕ, ಮೊದಲಾದ ಚಿನ್ಹಗಳನ್ನು ಉಪಯೋಗಿಸಿ, ಬಂಗಾಲೀ ಅಂಕೆಗಳ ಬದಲು ಇಂಗ್ಲೀಷ ಅಂಕೆಗಳನ್ನು ಮಾತ್ರ ಉಪಯೋಗಿಸಿಲ್ಲವೆನ್ನುವದನ್ನು 'ರಹಸ್ಯ' ಕಾರರು ತಿಳಿದುಕೊಳ್ಳಲಿ.

ಚಿಕ್ಕ ಬಾಲಕರಿಗೆ ತಕ್ಕವುಗಳಾದ ಅಧಿಕಪಾಠಪುಸ್ತಕಗಳು ಬೇಕೆಂಬುವದರ ಬಗ್ಗೆ ಮತಭೇದವಿಲ್ಲ. ಕನ್ನಡದಲ್ಲಿ ಸಣ್ಣ ಹುಡುಗರ ಸಲುವಾಗಿ ಬರೆದ ಪುಸ್ತಕಗಳು ಇಲ್ಲವೆಂದೇ ಹೇಳಬ

ಒಹುದು. ಆದರಿಂದ ಭಾಷಾಭಿವೃದ್ಧಿಗೆ ಬಹಳೇ ತಡೆಯುಂಟಾಗಿದೆ. ಇಂಗ್ಲಿಷ ಭಾಷೆಯಲ್ಲಿ ಹುಡುಗರ ಸಲುವಾಗಿ ಎಷ್ಟೋ ಸಚಿತ್ರ ಮಾಸಪತ್ರಿಕೆಗಳೂ ವಾರಪತ್ರಿಕೆಗಳೂ, ಹೊರಡುತ್ತಿವೆ. 'ಬಾಯ್ಸ ಮ್ಯಾಗಜೀನ, ಚಿಲ್ಡ್ರನ್ಸ ನ್ಯೂಜ ಪೇಪರ' ಮೊದಲಾದವುಗಳನ್ನು ಓದಿನೋಡಲು, ಮನಸಿಗೆ ಮೋದವೂ ಬೋಧವೂ ಏಕಕಾಲಕ್ಕೆ ಉಂಟಾಗುತ್ತವೆ. ಅವುಗಳಲ್ಲಿಯ ಭಾಷೆಯು, ಅವುಗಳಲ್ಲಿಯ ವಿಷಯಗಳು, ಅವುಗಳಲ್ಲಿಯ ಚಿತ್ರಗಳು ಅವುಗಳ ನುಣುಪಾದ ಕಾಗದ ಇವೆಲ್ಲವುಗಳು ಕೌತುಕಗೊಳಿಸುವಂತಹವುಗಳು ಇರುತ್ತವೆ. ಅಂತಹ ಪರಿಸ್ಥಿತಿಯು ನಮ್ಮಲ್ಲಿರುವದಿಲ್ಲವೆಂಬುದನ್ನು ನಾವು ಒಪ್ಪುತ್ತೇವೆ. ಆದರೆ ಆ ದೃಷ್ಟಿಯಿಂದ ಪ್ರಯತ್ನಮಾಡದೆ ಸುಮ್ಮನೆ ಕೂಡುವದು ಮಾತ್ರ ಒಳಿತಲ್ಲ. ಈಗಿನಿಂದ ಪ್ರಯತ್ನ ಮಾಡುತ್ತ ನಡೆದರೆ, ಮುಂದಿನ ಕಾರ್ಯವು ಹಗುರಾಗುವದು. ವಿಜಾಪುರದಲ್ಲಿ ಸಾಹಿತ್ಯಸಮ್ಮೇಲನವು ಜರುಗಿದಾಗ, ಅಧಿಕ ಬಾಲಪುಸ್ತಕಗಳ ಬಗ್ಗೆ ಒಂದು ನಿರ್ಣಯವಾದುದು ನಮ್ಮ ಸ್ಮರಣೆಗೆ ಬರುತ್ತಿದೆ. ಶ್ರೀ. ಕೆಂಭಾವಿ ರಾಘವೇಂದ್ರರಾಯರು ತಾವು ದ್ರವ್ಯದ ಸಹಾಯವನ್ನು ಮಾಡುವೆವೆಂದು ಒಪ್ಪಿದಂತೆಯೂ ನಮ್ಮ ನೆನಪಿಗೆ ಬರುತ್ತದೆ. ಸಾಹಿತ್ಯಪರಿಷತ್ತಿನವರು ಅದಕ್ಕಾಗಿ ಒಂದು ವಿಶೇಷ ಮಂಡಲವನ್ನಾದರೂ ಏರ್ಪಡಿಸಬಹುದು. ಆದರೆ ಕಾರ್ಯವು ಎಲ್ಲಿಗೆ ಬಂದಿರುವದೋ ನಮಗೆ ಗೊತ್ತಿಲ್ಲ. ಸಾಹಿತ್ಯಪರಿಷತ್ತು ಒಂದು ಸುಸಂಘಟಿತವಾದ ಸಂಸ್ಥೆಯು. ಇದರ ಮುಖ್ಯವಾದ ಗುರಿಯು ಭಾಷೆಯನ್ನು ಬೆಳೆಯಿಸುವದು. ಅದು ಬೆಳೆಯುವಂತೆ ಏರ್ಪಾಟುಗಳನ್ನು ಮಾಡುವದಾದರೂ ಅವರ ಕರ್ತವ್ಯವು. ಆ ಸಂಸ್ಥೆಯೇ ಮರವಿನ ಸೆರೆಯಲ್ಲಿ ಸಿಕ್ಕಿತೆಂದರೆ, ಕೆಲಸವೆಲ್ಲ ಕೆಟ್ಟುಹೋಗುವದು. ಆದ್ದರಿಂದ ಪರಿಷತ್ತು ಚಿಕ್ಕಮಕ್ಕಳ ಸಲುವಾಗಿ ಪುಸ್ತಕಗಳನ್ನು ಬರೆಯಿಸಿ, ಅಚ್ಚುಹಾಕುವ ಕೆಲಸವನ್ನು ತೀವ್ರ ಮಾಡಬೇಕಾಗಿ ಬೇಡಿಕೆ. ಸಾಹಿತ್ಯಪರಿಷತ್ತಿನ ಮೇಲೆಯೇ ಎಲ್ಲ ಭಾರವನ್ನು ಹಾಕಿ, ಪ್ರಮುಖರು ಕುಳಿತರೆ ಕಾರ್ಯವು ಜರುಗಲಾರದು. ಸಾಹಿತ್ಯಪರಿಷತ್ತು ನಮ್ಮೆಲ್ಲರ ನೆರವಿನಿಂದಲೇ ಕಾರ್ಯ ಮಾಡಲು ಸಮರ್ಥವಾಗುವದು. ಲೇಖಕರೂ, ಸಾಹಿತ್ಯಭಕ್ತರೂ, ದಾನಶೂರರೂ ಮುಂದೆ ಬಂದು ಪರಿಷತ್ತಿಗೆ ಎಲ್ಲ ರೀತಿಯಿಂದಲೂ ಮನಮುಟ್ಟಿ ಸಹಾಯಮಾಡಬೇಕು. ಪರಿಷತ್ತು ನಮ್ಮದು; ನಮ್ಮೆಲ್ಲರ ಬೆಂಬಲವಿದ್ದರೆ ಅದು ಪುಷ್ಟವಾಗುವದು. ಇಲ್ಲದಿದ್ದರೆ ಅದು ಕೊರಗುವದು. ಈ ಮಾತನ್ನು ಕನ್ನಡಿಗರು ಮರೆಯಕೂಡದು. ಕೆಲವು ಚಿಕ್ಕ ಹೊತ್ತಿಗೆಗಳನ್ನು ಚಿತ್ರಗಳೊಡನೆ ಮುದ್ರಿಸುವ ಕೆಲಸವನ್ನು ತೀವ್ರವಾಗಿ ಯಾರಾದರೂ ಕೈಕೊಳ್ಳಬೇಕು. ನಮ್ಮಲ್ಲಿ ಅಂಥ [illegible] ಬಹಳೇ. ಮಹಾರಾಷ್ಟ್ರದವರು ಆನಂದ, ಉದ್ಯಾನ, ಮೊದಲಾದವುಗಳನ್ನು ಹೊರಡಿಸುತಲಿದ್ದಾರೆ. ಶ್ರೀ. ಸಾನೆಯವರು ಎಷ್ಟೋ ಪುಸ್ತಕಗಳನ್ನು ಹುಡುಗರಿಗಾಗಿ ಬರೆದಿದ್ದಾರೆ. ಮಹಾರಾಷ್ಟ್ರದವರಲ್ಲಿಯ ಉತ್ತಮವಾದ ಗುಣಗಳನ್ನು ನಮ್ಮ ಕನ್ನಡಿಗರು ಕಲಿಯಬಾರದೇ !

ಉಡುಪಿಯ ಹತ್ತಿರ ಮೂಡಬಿದ್ರಿಯಲ್ಲಿ ನಮ್ಮ ಜೈನಸಮಾಜದವರ ಹತ್ತಿರ ಸುಮಾರು ಒಂದು ಲಕ್ಷರೂಪಾಯಿ ಬೆಲೆಬಾಳುವ ಕನ್ನಡ ಪುಸ್ತಕಗಳ ಸಂಗ್ರಹವಿರುವದೆಂದು ಅತ್ತಕಡೆಗೆ ತಿರುಗಾಡುತ್ತಿರುವ ನಮ್ಮ ಸುದ್ದಿಗಾರರೊಬ್ಬರು ನಮಗೆ ತಿಳಿಸಿರುವರು. ಆದರೆ ಅಲ್ಲಿಯ ಜೈನಸಮಾಜದವರು ಧರ್ಮಭಾವನೆಯಿಂದಲೋ ಮತ್ತಾವ ಭೀತಿಯಿಂದಲೋ ಆ ಗ್ರಂಥಗಳನ್ನು ಯಾರಿಗೂ ನೋಡಗೊಡುವದಿಲ್ಲವಂತೆ. ವಿಜ್ಞಾನಯುಗದಲ್ಲಿ ಇದೊಂದು ಮನಸಿಗೆ ಖೇದವನ್ನುಂಟುಮಾಡುವ ಸುದ್ದಿಯು. ಪ್ರಾಚೀನಕಾಲದಲ್ಲಿ ಮತಮತಸ್ಥರಲ್ಲಿ ತೀವ್ರವಾದ ವೈಮನಸವು ಇರುತ್ತಿದ್ದಿತು. ಒಬ್ಬರನ್ನೊಬ್ಬರು ನಂಬುತ್ತಿದ್ದಿಲ್ಲ. ಒಬ್ಬರ ಹೊತ್ತಿಗೆಗಳನ್ನು ಮತ್ತೊಬ್ಬರು ಸುಡುತ್ತಲಿದ್ದರು. ಆದ್ದರಿಂದ ಬೇರೆಬೇರೆ ಮತದವರು ತಮ್ಮ ಗ್ರಂಥಗಳನ್ನು ಪಂಚಪ್ರಾಣಗಳಂತೆ ಭದ್ರವಾದ ಸ್ಥಳಗಳಲ್ಲಿಟ್ಟು ಕಾಯ್ದುಕೊಳ್ಳುತ್ತಿದ್ದರೆ, ಆಗಿನ ಕಾಲಕ್ಕೆ ಹಾಗೆ ಮಾಡುವದು ಉಚಿತವೇ ಆಗಿದ್ದಿತು. ಮುದ್ರಣಾಲಯಗಳು ಇನ್ನೂ ಜನ್ಮತಾಳಿದ್ದಿಲ್ಲ. ಹೊತ್ತಿಗೆಗಳು ಅನ್ಯರ ಕೈಸೇರಿ, ಅಗ್ನಿನಾರಾಯಣನಿಗೆ ಒಮ್ಮೆ ಆಹುತಿಯಾದವೆಂದರೆ, ಚಿರಕಾಲದಿಂದ ಪರಿಶ್ರಮಮಾಡಿ ಕೂಡಿಟ್ಟ ಜ್ಞಾನರಾಶಿಯೇ ನಷ್ಟವಾಗಿ ಹೋಗುತಲಿದ್ದಿತು. ಈಗಿನ ಕಾಲದ ಪರಿಸ್ಥಿತಿಯೇ ಬೇರೆಯಾಗಿದೆ. ಮತಮತಸ್ಥರಲ್ಲಿ ಪರಧರ್ಮಸಹಿಷ್ಣುತೆಯು ಹೆಚ್ಚಿದೆ. ಒಬ್ಬರ ಹೊತ್ತಿಗೆಗಳನ್ನೊಬ್ಬರು ಸುಡಲು ಪ್ರಯತ್ನವಿಲ್ಲ. ಎಲ್ಲ ಜಾತಿಯವರ ಧರ್ಮತತ್ವಗಳನ್ನು ನಿರ್ವಿಕಾರ ಚಿತ್ತದಿಂದ ತಿಳಿದುಕೊಳ್ಳುವ ಕುತೂಹಲವಾದರೂ ಈಗ ನಮ್ಮಲ್ಲಿದೆ. ಹೀಗಿರಲು ಜೈನಸಮಾಜದವರು ಹೊತ್ತಿಗೆಗಳನ್ನು ತೋರಿಸಲು ಏಕೆ ಹೆದರಬೇಕು? ಆ ಪುಸ್ತಕಗಳ ಮೇಲಿನ ಹುಡಿಯನ್ನು ಹಾರಿಸದೆ, ಹಾಗೆ ಅವುಗಳನ್ನಿಟ್ಟರೆ ಅವು ಗೆದ್ದಲುಗಳ ಪಾಲಾಗಿ ಹೋಗುವವಲ್ಲವೇ? ಅವುಗಳಲ್ಲಿಯ ಜ್ಞಾನವು ಕೂಡಿಯು ಬೇಗನೆ ಅಸ್ತಂಗತದಲ್ಲಿಯೇ ಸೇರಿ ಹೋಗುವದಿಲ್ಲವೇ? ನಿಮ್ಮ ಪೂರ್ವಜರು ಎಲ್ಲರಿಗೂ ಜ್ಞಾನವನ್ನು ನೀಡಬೇಕೆಂದೇ ತಾವು ಪರಿಶ್ರಮಪಟ್ಟು ಗಳಿಸಿದ ಜ್ಞಾನದ ಸಂಗ್ರಹವನ್ನು ಆ ಹೊತ್ತಿಗೆಗಳಲ್ಲಿ ಮಾಡಿಟ್ಟಿಲ್ಲವೆ? ಪೂರ್ವಜರ ವಿಷಯದಲ್ಲಿ ಕೃತಜ್ಞತೆಯನ್ನು ತಾಳಿ, ಅವರ ಬಯಕೆಯನ್ನು ಸಲ್ಲಿಸುವದು ನಿಮ್ಮ ಕರ್ತವ್ಯವಲ್ಲವೇ? ಅವುಗಳನ್ನು ಮಣ್ಣುಪಾಲು ಮಾಡಿದರೆ ನಿಮಗಾದ ಲಾಭವೇನು? ನಿಮ್ಮ ಸಮಾಜಕ್ಕಾದರೂ ಏನು ಲಾಭವು? ಜೈನರು ಕನ್ನಡ ತಾಯಿಯ ಕಿರೀಟದಲ್ಲಿಯ ಮಣಿಗಳು. ಕನ್ನಡ ತಾಯಿಗೆ ಬಂದ ಕೀರ್ತಿಯು ಜೈನಕವಿವರ್ಯರಿಂದ..! ಪಂಪನ ಹೆಸರು ಕೇಳಿದೊಡನೆ ಕನ್ನಡಿಗನ ಎದೆಯು ಅರಳುವದು. 'ರನ್ನ' ನೆಂದೊಡನೆ, ಅವನೊಬ್ಬನು 'ರನ್ನನೇ ಸರಿ' ಎಂದು ಅಭಿಮಾನಾವೇಶದ ನುಡಿಗಳು ತಮ್ಮಿಂದ ತಾವೇ ಹೊರಡುವವು. ಇಂತಹ ಜೈನರ ಕುಲದಲ್ಲಿ ಹುಟ್ಟಿ ಪುನೀತರಾದ ನಮ್ಮ ಬಂಧುಗಳು ಆ ಹೊತ್ತಿಗೆಗಳನ್ನು ಪ್ರಕಟಿಸಿ, ತಮ್ಮ ಜೀವನದ ಸಾರ್ಥಕತೆಯನ್ನು ಮಾಡಿಕೊಳ್ಳಬೇಕಲ್ಲದೆ, ಸುಮ್ಮನೆ ಸಂಕುಚಿತಭಾವನೆ ತಾಳಿ, ಅಪಾರವಾದ ಜ್ಞಾನಸಂಪತ್ತನ್ನು ಕತ್ತಲೆಯ ಕೋಣೆಯಲ್ಲಿ ಬಚ್ಚಿಟ್ಟು ಅಲ್ಲಿಂದಲ್ಲಿಯೇ ನಾಶಗೊಳಿಸಬಾರದು. ಕನ್ನಡದಲ್ಲಿ ಜೈನಸಂಘಗಳು ಕೆಲವು ಇವೆ. [illegible] ಜೈನಯುವಕಸಂಘದವರು ಜೈನಕವಿಗಳು ಬರೆದ ಕಾವ್ಯಗಳನ್ನೂ ಇತರ ಗ್ರಂಥಗಳನ್ನೂ ಪ್ರಕಟಿಸುವ ಕೆಲಸವನ್ನು ಮಾಡುತಲಿದ್ದಾರೆ. ಅವರು ಇತ್ತಕಡೆಗೆ ಒಲಿಯುವರೋ? ಈ ಕೆಲಸವು ಜೈನಸಮಾಜಕ್ಕೆ ಗೌರವವನ್ನೂ ಕೀರ್ತಿಯನ್ನೂ ತಂದು ಕೊಡುವದಲ್ಲದೆ, ನಾಡಿನ ಕೀರ್ತಿಯೂ ಹೆಚ್ಚುಹೆಚ್ಚು ಬೆಳಗದೆ ಹೋಗದು. ಜೈನರ ಸೇವೆಯು ದಿವ್ಯವಾದ ಸೇವೆಯಾಗಿ ಪರಿಣಮಿಸುವದು.

ವಾಙ್ಮಯ ವಿಚಾರ.

ಮುಂಬಯಿಯಲ್ಲಿ ಮಾರಿಗೆ ಬಳಿ [illegible] ಸ್ಪರ್ಧೆ [illegible] ವ ಲೇಖ ಒಂದು ಚಿಕ್ಕದಾದ ಕಥೆಯು. ಸ್ಪರ್ಧೆಯು ಈಗ

ಗೆಳೆಯರ ಗುಂಪಿನಿಂದ ನಡೆಯಿಸಲ್ಪಡುತ್ತಿದೆಂಬುದು ಎಲ್ಲರಿಗೂ ಗೊತ್ತಿದ್ದ ಮಾತೇ ಆಗಿರುವುದು. ಗುಂಪು ಸಾಹಿತ್ಯ ಸೇವೆಯನ್ನೂ ಸಮಾಜಸೇವೆಯನ್ನೂ ಮಾಡಲು ಸೊಂಟ ಕಟ್ಟಿ ನಿಂತಿರುವುದು. ಎಷ್ಟು ಎಡರುಗಳು ಬಂದರೂ ತೊಡಕುಗಳು ತಡೆಹಾಯ್ದರೂ ಅವರು ತಮ್ಮ ಗುರಿಯನ್ನು ಬಿಡಬಾರದೆಂದು ನಿಶ್ಚಯಿಸಿ ಮುಂದೆ ನಡೆದಿದ್ದಾರೆ. ಗುಂಪಿನವರ ಕಡೆಯಿಂದ ಸೇವೆಯನ್ನು ತೆಗೆದುಕೊಳ್ಳುವುದು ಕನ್ನಡಿಗರದಾಗಿದೆ. ಇರಲಿ. ಕನ್ನಡದಲ್ಲಿ ಸಣ್ಣ ಸಣ್ಣ ಕಥೆಗಳು ಹಣಿಕೆಹಾಕತೊಡಗಿವೆ. ಶ್ರೀ. ಶ್ರೀನಿವಾಸರು 'ಸಣ್ಣ ಕತೆಗಳ ಎರಡು ಭಾಗಗಳನ್ನು ಬರೆದು ಮುದ್ರಿಸಿ ಕನ್ನಡಿಗರಿಗೆ ಮಾರ್ಗ ತೋರಿಸಿ ಬಿಟ್ಟಿದ್ದಾರೆ. ಶ್ರೀನಿವಾಸರ ಸಣ್ಣ ಕತೆಗಳಲ್ಲಿ ಕೆಲವು ಬಹಳೇ ಹೃದಯಂಗಮವಾಗಿವೆ. ಈ ತೆರದ ಕಥೆಗಳನ್ನು ಬರೆಯುವದರಿಂದ ಕನ್ನಡಿಗರಲ್ಲಿ ವಾಚನಾಭಿರುಚಿಯು ನಿಜವಾಗಿ ಹೆಚ್ಚುವುದು. ಅಂತಹ ಮಾರ್ಗವನ್ನೇ ಕೈಕೊಂಡು ಸಾಹಿತ್ಯದ ವಿಷಯದಲ್ಲಿ ಎಚ್ಚರಿಕೆಯನ್ನೂ ಆದರವನ್ನೂ ಹುಟ್ಟಿಸಲು ಹೊರಟ ಗೆಳೆಯರ ಗುಂಪಿನ ಸ್ವಧರ್ಮಕಥಾಮಾಲೆಯ ಸಂಪಾದಕರಿಗೆ ನಾವು ಅಭಿನಂದನವನ್ನು ಮಾಡುವೆವು. ಇದೇನೋ ವಿಷಯಾಂತರವಾಯಿತು. ಪ್ರಸ್ತುತದ ಕಥೆಯ ವಿಷಯದಲ್ಲಿಷ್ಟು ನಮ್ಮ ಅಭಿಪ್ರಾಯವನ್ನು ಹೇಳುವ. ಕಥೆಯು ಚಿಕ್ಕದಾಗಿದೆ; ದುಃಖ ಪರ್ಯವಸಾಯಿ. ಸಮಾಜದಲ್ಲಿ ದಿನಾಲು ಕಣ್ಣಿಗೆ ಬೀಳುವಂತಹ ಸಂಗತಿಗಳನ್ನು ಆರಿಸಿ ಬರಹಗಾರರು ಕತೆಯನ್ನು ಕಟ್ಟಿದ್ದಾರೆ. 'ಚಿನ್ನ ಕೆರೆಯೆಂಬ ಹಳ್ಳಿ.' ಜಂಬುಖಂಡಿ ಸಂಸ್ಥಾನಕ್ಕೆ ಸೇರಿದ್ದು. ಅಲ್ಲಿಯೊಬ್ಬ ಸದ್ಗೃಹಸ್ಥನು ಉಂಡುಟ್ಟು ಸುಖದಿಂದ ಇರುತ್ತಲಿದ್ದ. ಅವನಿಗೆ ಇಬ್ಬರು ಮಕ್ಕಳು. ಹಿರಿಯವ ರಂಗಣ್ಣ; ಚಿಕ್ಕವ ಶಾಮು; ರಂಗಣ್ಣನ ಹೃದಯವು ಕೋಮಲ ಹೆಣ್ಣುಗರುಳಿನವ; ಬೇರೆಯವರ ದುಃಖವನ್ನು ಕೈಗಡ ತಂದು, ಅದಕ್ಕಾಗಿ ಮರುಗುವ; ನಿರ್ಧೇಯ; ಎರಡನೇಯವನು ತುಂಟ, ಕಿಡಿಗೇಡಿ; ಆದರೆ ಕೆಡಕು ಮಾಡತಕ್ಕವನಲ್ಲ; ಪ್ರೇಮಲ ಸ್ವಭಾವದವ. ಆದರೆ ಅಣ್ಣತಮ್ಮಂದಿರಲ್ಲಿ ಪ್ರೇಮವು ಬಹಳ. ಮನೆಯಲ್ಲಿಯಾದರೂ ಸುಖಸಮಾಧಾನಗಳು ನೆಲಸಿದ್ದವು. ರಂಗಣ್ಣನು ಚಿಕ್ಕನ ಕಾಲೇಜದಲ್ಲಿ ಓದುತಲಿದ್ದನು. ಅವನ ದೇಹಾರೋಗ್ಯವು ಚಿಕ್ಕಂದಿನಿಂದ ಸರಿಯಾಗಿರಲಿಲ್ಲ. ಹಾಗೆಯೇ ಸೊರಗುತ್ತ ನಡೆದಿದ್ದ. ಒಮ್ಮೆ ಚಳಿಗಾಲದ ಬಿಡುವಿನಲ್ಲಿ ಅವನು ಊರಿಗೆ ಬಂದಾಗ ತಮ್ಮ ಪುರೋಹಿತರ ಚಿಕ್ಕ ಮಗಳಾದ ಸೀತಮ್ಮನ ಗಂಡನು ತೀರಿಕೊಂಡ ಸುದ್ದಿಯನ್ನು ಕೇಳಿದ. ಅಂದು ಅವನು ನೊಂದುಕೊಂಡು ತನ್ನ ದಿನಚರಿಯಲ್ಲಿ 'ಈಗಲೊ. ಇನ್ನಾವಾಗಲೋ **ಈತನು ಪೋಪುದು**' 'ಪುರೋಹಿತರಳಿಯ, ಅದೆಷ್ಟೋ ಆರೋಗ್ಯವಂತನಿದ್ದ, ಅವನ ಹಾಡು ಹೀಗಾಯಿತು; ನಾನೊ ಮೊದಲಿಂದಲೊ ಬೇನೆಗೊಳಕ; ಅಶಕ್ತ ಆದುದರಿಂದ ಸುಮ್ಮನೇ ಮದುವೆಯ ಮೋಹಕ್ಕೆ ಬಿದ್ದು ಹೆಣ್ಣಿನ ಕೊರಳು ಕೊಯ್ಯಲಾಗದು.' ಎಂದು ಬರೆದಿಟ್ಟಿದ್ದ. ಇದೆಲ್ಲ ಸಂಗತಿಯು ಮನೆಯವರಿಗೆ ಕಿಡಗೇಡಿ 'ಶಾಮ' ನಿಂದ ತಿಳಿಯಿತು. ಅವರು ಅವನಿಗೆ 'ಛೀ' ಎಂದು ಬುದ್ಧೀ ಹೇಳಿದರು. ರಂಗಣ್ಣನು ಪುನಃ ಕಾಲೇಜಕ್ಕೆ ಹೋದ. 'ನನ್ನ ದೇಹವು ಕ್ಷೀಣವಾಗುತ್ತ ನಡೆದಿದೆ. ವೈದ್ಯರು ಕ್ಷಯರೋಗವೆಂದೆನ್ನುತ್ತಾರೆಂದು ಒಂದು ಓಲೆ ಬರೆದ. ಇತ್ತ ಕಡೆಗೆ ಅವನ ಮದುವೆಯ ಸಿದ್ಧತೆ. ಹುಚ್ಚ ಹುಡುಗ! ಡಾಕ್ಟರರೇನು ಹೇಳುತ್ತಾರೆಂದು ಅವನ ತಂದೆಯವರು ನುಡಿದುದಾಯಿತು. ರಂಗಣ್ಣನ ಇಚ್ಛೆಯ ವಿರುದ್ಧ ಮದುವೆಯಾಯಿತು. ರಂಗಣ್ಣನ ಪರೀಕ್ಷೆ ಪಾಸಾಯಿತು. ಗೃಹಲಕ್ಷ್ಮಿಯು ಕೆಲವು ದಿನ ಮನೆಗೆ ಬಂದಳು. ಇವರಿಬ್ಬರೂ ಒಬ್ಬರ ಜೊತೆಯಲಿಬ್ಬರು ನಗುತ್ತ ಕೆಲೆಯುತ್ತ ಮನೆಯಲ್ಲಿದ್ದದಾಯಿತು. ಮುಂದಿನ ಅಭ್ಯಾಸಕ್ಕಾಗಿ ರಂಗಣ್ಣನು ಪುಣೆಗೆ ಹೋದ. ಅವನ ಹೆಂಡತಿಯು ತವರೂರಿಗೆ ಹೋದಳು. ರಂಗಣ್ಣನಿಗೆ ಜ್ವರ ಹೆಚ್ಚಿ ಮನೆಗೆ ಬಂದು ಮಲಗಿಬಿಟ್ಟ. ಸೊಸೆಯನ್ನು ಕರೆಯಲು ರಂಗಣ್ಣನ ತಂದೆಯವರು ಶ್ಯಾಮನನ್ನು ಕಳುಹಿಸಿದರು. ಅವನು ಅಲ್ಲಿ ಮುಟ್ಟಿದ ದಿನವೇ ಅವನತ್ತಿಗೆ ಜ್ವರಿಸಿದ್ದಳು. ಒಂದೆಡೆಯಲ್ಲಿ ಗಂಡ; ಮತ್ತೊಂದೆಡೆಯಲ್ಲಿ ಪೇಟ. ದೇವರ ಲೀಲೆಯು ಅಗಾಧವಾದದು; ಕಹಿಸಿಹಿಗಳ ಚಿತ್ರಗಳೆರಡೂ ಒಳ್ಳೇ ಪರಿಣಾಮಕಾರಿಯಾಗಿರುತ್ತವೆ. ರಂಗಣ್ಣನ ಪಾವನವಾದ ಗೋಪಾಳರಾಯನು ಸುದ್ದಿಯನ್ನು ತಿಳಿದುಕೊಂಡು ಖಿನ್ನನಾದ. ಮಾಡುವದೇನು? ಶಾಮೂ, ಇನ್ನೆರಡು ಮೂರು ದಿನಗಳಲ್ಲಿ ಅವಳನ್ನು ಕರೆದುಕೊಂಡು ಬರುವೆನೆಂದು ಅವನನ್ನು ತಿರಿಗಿ ಕಳುಹಿಸಿದನು. ಗೋಪಾಳರಾಯನು ಐದನೇಯ ದಿನ ರಂಗಣ್ಣನ ಹೆಂಡತಿಯನ್ನು ಕರೆದುಕೊಂಡು ಬಂದು ಬಿಟ್ಟ; ರಂಗಣ್ಣನಿಗೆ ತನ್ನ ಲಕ್ಷ್ಮಿಯ ದರ್ಶನವಾಯಿತು. ಕಣ್ಣೊಳಗಿಂದ ನೀರು ಹರಿದವು. 'ನಾನು ನಿನ್ನ ಕುತ್ತಿಗೆಯನ್ನು ಕೊಯ್ದೆನೆಂ'ದು ಕೈಯಿಂದ ಸೊನ್ನೆಮಾಡಿ ತಿಳುಹಿಸಿ, ರಂಗಣ್ಣನು ಪ್ರಾಣಬಿಟ್ಟನು. ಇಬ್ಬರು ಪ್ರೀತಿಯ ದಂಪತಿಗಳ ವಿಯೋಗವಾಯಿತು. ಅವರ ಇಹಲೋಕದ ಋಣವು ತೀರಿತು. ಮನೆಯಲ್ಲಿಯ ಜೀವಕಳೆಯು ಕಂದಿ ಹೋಯಿತು. ರಂಗಣ್ಣನಲ್ಲಿ 'ನ್ಯಾಯಕ್ಕಾಗಿ ಬಡಿದಾಡುವ' ಸಾಮರ್ಥ್ಯವಿಲ್ಲದ್ದರಿಂದಲೂ, ತಂದೆಯವರ ಹಟಮಾರಿತನದಿಂದಲೂ ಇಂತಹ ದುಃಖದಸಂಗತಿಯು ಜರಗಿತು. ಪಾಪ! ಒಬ್ಬ ಹುಡುಗೆಯು ಅನಾಥೆಯಾದಳು. ಆನಂದಕ್ಕೆ ಎರವಾದಳು. ಇಂತಹ ಸೌಭಾಗ್ಯಹೀನರಾದ ಕನ್ಯೆಯರು ನಾಡಿನಲ್ಲಿ ಎಷ್ಟು ಮರುಗುತ್ತಿರುವರಯ್ಯೋ!

ಈ ಕಥೆಯಲ್ಲಿಯ ಭಾಷೆಯು ಬಹಳ ಸರಳವಾದುದು. ದಿನಾಲು ನಾವು ಮಾತಾಡುವ ಭಾಷೆಯೇ ಇದೆ. ಆದರೂ ಹಳಿಸುದುದಲ್ಲ. ಈ ಕಥೆಯನ್ನು ಓದಿದೊಡನೆ, ಸ್ವತಂತ್ರವಾದ ಕನ್ನಡ ವಾತಾವರಣದಲ್ಲಿ ಸಂಚರಿಸುವಂತೆ ಭಾಸವಾಗುತ್ತಿದೆ. ಓದುಗರಿಗೆ ಇದರಲ್ಲಿಯ ಭಾಷೆಯ ಬಗ್ಗೆ ಕಲ್ಪನೆಯಾಗಬೇಕೆಂದು ಇದರಡಿಯಲ್ಲಿ ಕೆಲವು ಭಾಗಗಳನ್ನು ಕೆಳಗೆ ಕೊಡುವೆವು.

ನಡುಮನೆಯಲ್ಲಿ ಕನ್ನಡಿಯ ಮಂಟಪ ಕಟ್ಟಿದ್ದರು. ಬಾಳೆಯ ಕಂಬ ತಳಿರು ತೋರಣ ಜುಮುರು ಮೇಲ್ಕಾಪು (ಛತ್ತು)ಗಳಿಂದ ಆ ಭಾಗವೆಲ್ಲ ಅಲಂಕೃತವಾಗಿತ್ತು. ಅರಳಿದ ಕಮಲದಂತಹ ಮೋರೆಯಿಂದೊಪ್ಪುವ ಅತ್ತಿಗೆಯು ಸಿಂಗಾರವಾಗಿ ಮಂಟಪದಲ್ಲಿ ಕುಳಿತಿದ್ದಳು. ಮದುವೆಗೆ ಬಂದಾಗಿನಕಿಂತಲೂ ಈಗ ಹೆಚ್ಚು ಚಲುವೆಯಾಗಿ ಕಂಡಳು. ಆಗ ಸೊರಗಿದಂತಿದ್ದ ಮೋರೆಯು **ಈಗ ದುಂಡ ದುಂಡಾಗಿ–ನುಣುಪಾಗಿ– ತುಂಬಿದ ಮೋರೆಯಾಗಿದ್ದಿತು. ಆಗ ಬಡವಾಗಿದ್ದ ಅವಳ ಮೈಕೈಗಳು ಈಗ ಪುಷ್ಟವಾಗಿ ಬೆಳೆದಿದ್ದವು. ಮೈಬಣ್ಣವು ಕೇತಕೀ ಕುಸುಮದಂತೆ ಹೊಳೆಯುತಿದ್ದಿತು, ಕಣ್ಣೋಟದಲ್ಲಿ ಅಂದು ಇಲ್ಲದ ಅದೆಂತಹದೋ ಒಂದು ಸಾತ್ವಿಕ ಸೌಂದರ್ಯವು ಇಂದು ಶೋಭಿಸುತಲಿದ್ದಿತು ಆ ಕಪ್ಪಾದ ಕುರುಳುಗಳೂ, ಮೂಗಿನಲ್ಲಿ ಮಿನುಗುತ್ತಿರುವ ವಜ್ರದ ಮೂಗಬೊಟ್ಟೂ, ಹಣೆಯ ನಡುವೆ ತಿದ್ದಿಟ್ಟ ಕುಂಕುಮದ ಬೊಟ್ಟೂ, ಕಿವಿಯಲ್ಲಿಯ ದೊಡ್ಡ ದೊಡ್ಡ ಮುತ್ತಿನ ಬೆಂಡೋಲೆಗಳೂ, ಕೊರಳ ಸರಗಳೂ ಬೆರಳ ಬಂಗಾರವೂ, ಅತ್ತಿಗೆಗೊಳ್ಳೆ ಒಪ್ಪುತಿದ್ದವು.** ನೋಡಿದೆನು.

(ಬೆಲೆ ೧ಆಣೆ)

ಪುಣೆಯ ಪತ್ರವು.

(ನಮ್ಮ ಸ್ವಂತ ಬಾತ್ಮಿಗಾರರಿಂದ)

ಜೂನ ತಿಂಗಳಿಂದ ಅಕ್ಟೋಬರ ವರೆಗೆ ಪುಣೆಯು ಚಳವಳಿಗಳ ಮುಖ್ಯಸ್ಥಾನವಾಗುತ್ತದೆ. ಮುಂಬಯಿ ಗವ್ಹರ್ನರರು ತಂಪು ತಂಪಿಗಾಗಿ ಇಲ್ಲಿರುವದರಿಂದಾ ಹಾಗೂ ಪ್ರಾಂತಿಕ ಕಾಯದೆ ಮಂಡಳವು ಇಲ್ಲಿಯೇ ಕೂಡುವದರಿಂದಾ ಪುಣೆಯು ಒಂದು ಬಗೆಯಿಂದ ಪ್ರಾಂತದ ಮುಖ್ಯ ಪಟ್ಟಣವೆಂದೂ ಸಲ್ಲುವದು. ಈ ತಿಂಗಳುಗಳಲ್ಲಿ ಯಲ್ಲ ಶಾಲೆ ಕಾಲೇಜಗಳಲ್ಲಿಯ ವಿದ್ಯಾರ್ಥಿಗಳು ಪರೀಕ್ಷೆಯ ಕುತ್ತಿನಿಂದ ಪಾರಾಗಿ ಹೊಸ ಹುರುಪಿನಿಂದ ಬಂದವರಾದ್ದರಿಂದ ಅವರಲ್ಲಿಯ ಉತ್ಸಾಹವು ಇಮ್ಮಡಿಯಾಗಿ ಹಲವೊಂದು ಬಗೆಯ ಚಳವಳಿಯಲ್ಲಿ ಮನ ಹಾಕುತ್ತಾರೆ. ಬೇರೆ ಬೇರೆ ಪ್ರಾಂತದ ಹಾಗೂ ಹಲವೊಂದು ವಿಶಿಷ್ಟ ಸಂಗಡಗಳೂ ವಾರ್ಷಿಕ ಸಮಾರಂಭಗಳು, ಆ ಸಮಯದಲ್ಲಿ ವಿದ್ಯಾರ್ಥಿಗಳು ಏರ್ಪಡಿಸಿದ ಗಾಯನ ವಾದನ ಸಮಾರಂಭವು ಪ್ರಶಂಸನೀಯವಿರುತ್ತದೆ. ಕರ್ನಾಟಕ ಸಂಘ, ಸೈಪರಾಬಾದ ಸಂಘ ಮರಾಠವಾಡ ಸಂಘ, ಆ ಸಂಘ, ಈ ಸಂಘ, ಮುಂತಾದ ಸಂಘಗಳ ಸೂಚನಾ ಪತ್ರಗಳು ಕಾಲೇಜಗಳಲ್ಲಿಯ ನೋಟೀಸ ಬೋರ್ಡುಗಳನ್ನು ಅಲಂಕರಿಸುತ್ತವೆ. ಇವುಗಳಿಂದ ವಿದ್ಯಾರ್ಥಿಗಳಲ್ಲಿ ತಮ್ಮ ಪ್ರಾಂತದ ವಿಷಯವಾಗಿದ್ದ ಅಭಿಮಾನವು ವ್ಯಕ್ತವಾಗುತ್ತದೆ. ಆದರೆ ಹಲವು ಸಾರೆ ಈ ಅಭಿಮಾನವು ದುರಭಿಮಾನದಲ್ಲಿ ಪರಿಣಮಿಸಿ ಪರಸ್ಪರದಲ್ಲಿ ದ್ವೇಷವನ್ನು ಹುಟ್ಟಿಸುವದಕ್ಕೆ ಕಾರಣೀಭೂತವಾಗುತ್ತದೆ. ವಿದ್ಯಾರ್ಥಿಗಳು ಇದರ ಬಗ್ಗೆ ಎಚ್ಚರಿರತಕ್ಕದ್ದು. ಕನ್ನಡಿಗರಾದರೂ ಪುಣೆಯಲ್ಲಿ ಒಟ್ಟುಗೂಡಿ ಕರ್ನಾಟಕ ವಿದ್ಯಾರ್ಥಿಗಳ ಸಂಘವೆಂಬವೊಂದು ಸಂಘವನ್ನು ಸ್ಥಾಪಿಸಿರುತ್ತಾರೆ. ಈ ಸಂಘದಲ್ಲಿ ಪುಣೆಯಲ್ಲಿಯ ಎಲ್ಲ ಕಾಲೇಜಗಳ ವಿದ್ಯಾರ್ಥಿಗಳು ಸೇರಿರುತ್ತಾರೆ. ಹೋದ ವರ್ಷದಿಂದ ಈ ಸಂಘದ ವಾರ್ಷಿಕ ದಿನ ಏನಾದರೂ ಆಚರಿಸುವದಲ್ಲಿ ಬರಹತ್ತಿದೆ. ಇದು ನಿಜವಾಗಿ ಕನ್ನಡಿಗರಿಗೆ ಅಭಿಮಾನಾಸ್ಪದವಾದ ಸಂಗತಿಯು. ಈ ಸಂಘದ ಪತಿಯಿಂದ ಮೊನ್ನೆ ಫರ್ಗ್ಯುಸನ್ ಕಾಲೇಜದಲ್ಲಿ ಜಯ ಕರ್ನಾಟಕದ ಸಂಪಾದಕರಾದ ಶ್ರೀ. ವೆಂಕಟರಾಯರ ಉಪನ್ಯಾಸವಾಯಿತು. ಅವರ ವಿಷಯವು ಕರ್ನಾಟಕ ವಿಶ್ವವಿದ್ಯಾಲಯವೆಂಬವಾಗಿತ್ತೆಂಬುದನ್ನು ಬೇರೆ ಹೇಳಬೇಕಿಲ್ಲ. ಅವರು ವಿಶ್ವವಿದ್ಯಾಲಯ ಮಂಡಳದ ಕಾರ್ಯದರ್ಶಿಗಳಾಗಿದ್ದಾರೆ. ಈ ಸಭೆಗೆ ರಾವಬಹಾದ್ದೂರ ಚಿನ್ನಮುಳಗುಂದ ಇವರು ಅಧ್ಯಕ್ಷರಾಗಿದ್ದರು. ರಾವಬಹಾದ್ದೂರರು ಅಚ್ಚಗನ್ನಡಿಗರಾಗಿದ್ದರೂ, ಪೆನಶನ್ನು ತಗೊಂಡಂದಿನಿಂದ ಪುಣೆಯಲ್ಲಿಯೇ ವಾಸವಾಗಿರುವದರಿಂದ ಕನ್ನಡಿಗರಲ್ಲಿರಬೇಕಾದ ಕನ್ನಡತ್ವವು ಅವರಲ್ಲಿಲ್ಲವೆಂದು ಬಹು ದುಃಖದಿಂದ ಹೇಳಬೇಕಾಗುತ್ತದೆ. ಇದು ಸಂಗತಿಯ ಪರಿಣಾಮವು. ನಮ್ಮ ಈ ಮೇಲಿನ ವಿಧಾನದ ಸತ್ಯತೆಯು ಆದಿನ ಅವರ ಭಾಷಣ ಕೇಳಿದವರಿಗೆ ಚನ್ನಾಗಿ ಹೊಳೆಯುತ್ತದೆ. ರಾವಬಹಾದ್ದೂರರು ನುರಿತವರು, ವಯೋವೃದ್ಧರು ಸಂಸಾರದಲ್ಲಿ ... ಸುಖದುಃಖಗಳನ್ನು ಚನ್ನಾಗಿ ಅರಿತವರು. ಆದಕ್ಕಾಗಿಯೇ ನಮಗೆ ಉಪದೇಶಿಸಲು ಅವರು ಮುಂದೊರೆದರು. ಅವರು ನಮಗೆ ನಿಜವಾದ ಮಾರ್ಗವನ್ನು ತಿಳಿಸೋದರ ಹೊರತಲ್ಲದೆ ಕೇವಲ ಪ್ರಾಂತಿಕ ಅಭಿಮಾನದ ... ಗರ್ಜಿಸಿದರು. (ಕರ್ನಾಟಕವು ... ವಿದ್ಯಾಸುಲ್ಲಿ ... ಕನ್ನಡಿಗರು ಹಿಂದುಳಿದವೆ. ಮುಂದೊರೆದ ಮಹಾರಾಷ್ಟ್ರವು ವಿಶ್ವವಿದ್ಯಾಲಯವನ್ನು ಸ್ಥಾಪಿಸಲು ಸಾಹಸ್ತ ಪಡುತ್ತದೆ. ಮುಂತಾಗಿ ರಾವಬಹಾದ್ದೂರರು ಮಾತಾಡಿದರು. ಇದಕ್ಕೆ ನಾವಾದರೂ ಒಪ್ಪುತ್ತೇವೆ. ಆದರೆ ಆತಂಕಗಳನ್ನು ದಾಟಿ ಪಾರಾಗುವ ಮಾರ್ಗವನ್ನು ವೃದ್ಧರು ತೋರಿಸಬೇಕಲ್ಲದೆ, ಉತ್ಸಾಹಯುಕ್ತರಾದ ತರುಣರಿಗೆ ಹಾದಿಯು ಮುಳ್ಳಿನದಾಗಿದೆ. ತುಳಿಯಬೇಡಿರಿ ಎಂದು ಹೇಳುವದು ಸಮಂಜಸವಲ್ಲ. ಇರಲಿ. ಇವೆಲ್ಲಕ್ಕೆ ಶ್ರೀ ವೆಂಕಟರಾಯರು ಸಮರ್ಪಕವಾದ ಉತ್ತರವನ್ನು ಕೊಟ್ಟರಲ್ಲದೆ, ಕರ್ನಾಟಕ ವಿಶ್ವವಿದ್ಯಾಲಯದ ಅವಶ್ಯಕತೆಯ ಬಗ್ಗೆ ಬಲವಾದ ಕಾರಣಗಳನ್ನು ತಿಳಿಹೇಳಿದರು. ಆ ವೇಳೆ ಇಲ್ಲಿಯ ಒಕ್ಕಲತನದ ಕಾಲೇಜದಲ್ಲಿ ಶಿಕ್ಷಕರಾದ ಶ್ರೀ ಕುಲಕರ್ಣಿಯವರಾದರೂ ಕನ್ನಡಿಗರು ಈ ಸಮಯದಲ್ಲಿ ಪ್ರಯತ್ನ ಮಾಡದಿದ್ದರೆ ಮುಂದೆ ಬಹು ಕಠಿಣವಾಗುವದೆಂದು ಹೇಳಿದರು. ಕರ್ನಾಟಕಕ್ಕೆ ಸ್ವತಂತ್ರ ಪ್ರಾಂತ ಹಾಗೂ ವಿಶ್ವವಿದ್ಯಾಲಯಗಳು ಎಷ್ಟು ಮಹತ್ವವಾಗಿರುತ್ತದೆಂಬುದನ್ನು ವನಸ್ಪತಿ ಶಾಸ್ತ್ರದಲ್ಲಿಯ ವನಸ್ಪತಿಗಳಲ್ಲಿ ತೋರಿಬರುವ ಸ್ವಾತಂತ್ರ್ಯ ಪ್ರೇಮದಿಂದ ಸಿದ್ಧ ಮಾಡಿದರು. ವನಸ್ಪತಿಗಳಲ್ಲಿರುವ ಸ್ವಾತಂತ್ರ್ಯವೇ ಮಾತ್ರ ಕನ್ನಡಿಗರ ನೀತಿ ಮಾಡುವದು. ಈಗೀಗ ಬೇಕಾದದ್ದು. ಆ ಮೇಲೆ ಸಂಪಾದಕರು ಸಹಾನುಭೂತಿಪರ ಠರಾವನ್ನು ಪಾಸು ಮಾಡಿದರು. ಧಾರವಾಡ ಪ್ರಾಂತದವರು ಸೂಚನೆ ಮಂಡಿಸಿದರು. ಮಂಗಳೂರಿನವರು, ಅನುಮೋದಿಸಿದರು. ಮೈಸೂರಿನವರು ಇದನ್ನು ಸ್ವೀಕರಿಸಿದರು. ಆ ಮೇಲೆ ಎಲ್ಲರೂ ಈ ಸೂಚನೆಗೆ ಒಪ್ಪಿದನಂತರ ಪ್ರೊಫೆಸರ ಕೇಳಕರವರು ಅಧ್ಯಕ್ಷ ಹಾಗೂ ವ್ಯಾಖ್ಯಾತರ ಆಭಾರ ಪ್ರದರ್ಶಿಸಿದ್ದಲ್ಲದೆ, ಕೆಲವು ಉಪಯುಕ್ತ ಸೂಚನೆ ಮಾಡಿದರು. ವಿಶ್ವವಿದ್ಯಾಲಯ ಸಂಸ್ಥಾಪನೆಯು ಬಹು ಕಠಿಣವಾದದ್ದು. ನಮಗ (ಮಹಾರಾಷ್ಟ್ರೀಯರಿಗೆ) ಆ ಪ್ರಶ್ನವನ್ನು ಬಿಡಿಸುವದು ಬಹು ಕಷ್ಟವಾಗಿದೆ. ಆದಕ್ಕಾಗಿ ಕನ್ನಡಿಗರು ಈ ಪ್ರಶ್ನೆವನ್ನು ಚನ್ನಾಗಿ ಅಭ್ಯಾಸಿಸಿ ಕಾರ್ಯಕ್ಕೆ ಪ್ರವೃತ್ತರಾಗಬೇಕೆಂಬವಾಗಿ ಹೇಳಿದರು. ಬಂದ ಅತಿಥಿಗಳಿಗೆ ಕರ್ನಾಟಕ ಕ್ಲಬ್ಬಿನಲ್ಲಿ ಫಲಾಹಾರ ಕೊಟ್ಟ ಬಳಿಕ ಆದಿನದ ಕೆಲಸವು ಮುಗಿಯಿತು. ಶ್ರೀ ಆಲೂರವರಿಗೆ ಪುಣೆಯಲ್ಲಿಯ ಕನ್ನಡಿಗರ ಸಂಪೂರ್ಣ ಸಹಾನುಭೂತಿಯು ದೊರೆಯಿತೆಂಬುವದು ನಿರ್ವಿವಾದ ಹೇಳಬಹುದು.

“ ಕನ್ನಡಿಗನೂ ” “ ಲೋಕರಹಸ್ಯವೂ ”

ಇಂಗ್ಲೀಷ್ ಅಂಕೆಗಳನ್ನು ದಕ್ಷಿಣ ಕರ್ನಾಟಕದ ಮುದ್ರಾಲಯಗಳು ಉಪಯೋಗಿಸುವುದಕ್ಕೆ ಹಾಸ್ಯಮಾಡುವುದು ಉತ್ತರ ಕರ್ನಾಟಕದ ಕೆಲವು ಪತ್ರಿಕೆಗಳ ಒಂದು ಅತ್ಯಂತ ಪ್ರಿಯ ವಿಷಯವಾಗಿದೆ. ‘ ಕನ್ನಡಿಗ ’ ಪತ್ರಿಕೆಯು ಅನೇಕವೇಳೆ ಈ ವಿಷಯದಲ್ಲಿ ಬರೆದಿದೆ. ಅದನ್ನು ‘ವೃತ್ತ’ ವೂ ಹಿಂಬಾಲಿಸಿದೆ. ‘ವೃತ್ತ’ ಕ್ಕೆ “ ಲೋಕರಹಸ್ಯ ” ದಲ್ಲಿನ ಇಂಗ್ಲಿಷ್ ಅಂಕೆಗಳನ್ನು ನೋಡಿ, ಓಕರಿಕೆಯೇ ಬಂದಿತಂತೆ !

ಈ ಪತ್ರಿಕೆಗಳಿಗೆ ಇಂತಹ ಶಾರೀರಿಕ ಮತ್ತು ಮಾನಸಿಕ ವೇದನೆಗಳನ್ನು ಕೊಡುವುದರಲ್ಲಿ ದಕ್ಷಿಣ ಕರ್ನಾಟಕದ ಮುದ್ರಣಾಲಯಗಳಿಗೆ ಸ್ವಲ್ಪವೂ ಸಂತೋಷವಿಲ್ಲ. ಮತ್ತು ನಮ್ಮ ಭಾಷಾಭಿಮಾನದ ಈ ಕೊರತೆಯನ್ನು ಅವುಗಳು ಪುನಃ ಪುನಃ ತೋರಿಸಿದ್ದಕ್ಕೆ ನಾವು ಕೃತಜ್ಞರಾಗಿದ್ದೇವೆ. ಆದರೆ ಆ ಪತ್ರಿಕೆಗಳಲ್ಲಿನ , ; ! ? — ಎಂಬ ಮುಂತಾದ ಗುರುತುಗಳನ್ನು ನೋಡಿ ಕಷ್ಟವಾಗಿ ಬಿಟ್ಟಿವೆ. ಕನ್ನಡದಲ್ಲಿ ದೀರ್ಘವಿರಾಮ ...

ಇಲ್ಲವೆ— ಅಲ್ಪವಿರಾಮಕ್ಕೆ | ಗುರ್ತು ಇಲ್ಲವೇ? ಪೂರ್ವದ ಕನ್ನಡಿಗರಿಗೆ ಆಶ್ಚರ್ಯಾತಿಶಯಗಳೇ ಇರಲಿಲ್ಲವೇ ?— ಅಥವಾ ಅವರ ಆಗಿನ ಪ್ರಶ್ನಾಶ್ಚರ್ಯಾತಿಶಯಗಳು ಈಗಿನ "ಕನ್ನಡಿಗ" "ವೃತ್ತ" ಪತ್ರಿಕೆಗಳ ವಾಚಕ ವರ್ಗದವರ ಪ್ರಶ್ನಾಶ್ಚರ್ಯಾತಿಶಯಗಳಿಗಿಂತಲೂ ರಭಸದಲ್ಲಿ ಕಡಿಮೆಯಾಗಿದ್ದವೇ ? ಎಂಬ ಮುಂತಾದ ನೂರಾರು ಯೋಚನೆಗಳು ಒಂದೇ ಸಲ ಬಂದುಬಿಟ್ಟವು. ಹಾಗಾದರೆ ಈ ಚಿಕ್ಕ ಒಂದು ವಿನಂತಿಯನ್ನು ಅವರ ಮುಂದೆ ಇಡೋಣವೇ ?— ಅವರು ಮುಂದಿನ ವಾರದಿಂದಲೇ ತಮ್ಮ ಪತ್ರಿಕೆಗಳಲ್ಲಿ ಪೂರ್ವದ ಸಂಜ್ಞೆಗಳನ್ನೇ ಹಾಕುವರೇ ? ಮತ್ತು "ನಂಬರ" "ಪಾಸ ಮಾಡಿದರು" "14—15—16 ಶತಮಾನಗಳು" 'ತಲೆಬಾಪ" "ರಹಿತ ಮಾಡಿದರು" "ಗಂಟೆ" "ಪತ್ರೆ" 'ಕಿಮ್ಮತ" ಎಂಬ ಮುಂತಾದ ಅನೇಕ ಎಡಬಿಡಂಗಿ ಶಬ್ದಗಳ 'ಉಪಯೋಗವನ್ನು ನಿಲ್ಲಿಸುವರೇ? ಈ ವಿಷಯವನ್ನು ಅವರಿಂದ 'ಸರಿಪಡಿಸಲಾಗದಿದ್ದರೆ ನಾವು ಕನ್ನಡ ಅಂಕೆಗಳನ್ನು ಹಾಕುವುದು ಹೇಗೆ ಸಾಧ್ಯವಾದೀತು? ದಕ್ಷಿಣ ಕರ್ನಾಟಕದ ಓದುಬರಹವು ಕ್ರಿಶ್ಚಿಯನ್ ಮಿಶನರಿಗಳಿಂದ ಪ್ರಚುರಕ್ಕೆ ತಂದದ್ದಾಗಿದೆ ನಮ್ಮ ದುರಾದೃಷ್ಟದಿಂದಲೋ ಎಂಬಂತೆ ಅವರು ಕನ್ನಡ ಅಂಕೆಗಳ ಅಭ್ಯಾಸವನ್ನು ಶಾಲಾಪಠ್ಯಪುಸ್ತಕಗಳಲ್ಲಿ ತರಲಿಲ್ಲ. ಇದರಿಂದ ದಕ್ಷಿಣ ಕರ್ನಾಟಕದಲ್ಲಿ ಓದ ಬರಹ ಕಲಿತ ಪ್ರತಿ ೧೦೦೦ ಜನರಲ್ಲಿ ೯೯೫ ಜನರಿಗೆ ಕನ್ನಡ ಅಂಕೆಗಳು ಉರ್ದು ಅಂಕೆಗಳಂತಾಗಿವೆ. ಹಾಗಿದ್ದ ಪಕ್ಷ ಅದನ್ನು ಅಭ್ಯಾಸಕ್ಕೆ ನಾವು ತರಕೂಡದೇ ಎಂದು ಅವರು ಕೇಳಬಹುದು. ಕಳೆದ ಮೂವತ್ತೈದು ವರ್ಷಗಳಿಂದಲೂ "ವೃತ್ತ" ಪತ್ರಿಕೆಯು ಹಿಂದೂ ಮಾಸ ತಿಥಿಗಳನ್ನು ಜನರ ಆಚರಣೆಗೆ ತರಲು ಪ್ರಯತ್ನಿಸಿ ಕಡೆಗೂ ಜ್ಯೇಷ್ಠ ಬಹುಳ ೧೩ ಬುಧವಾರ ೭ ನೇ ತಾ॥ ಎಂದು ಹೇಳಬೇಕಾಗಿ ಒಂದಾಗ ನಾವು ಈ ಸಂದರ್ಭದಲ್ಲಿ ಏನು ತಾನೇ ಮಾಡಲು ಸಾಧ್ಯವಾದೀತು ? ಇಲ್ಲಿಯ ಜನರಿಗೆ ಅದು ಬೇಡ. ವಿಷಯವು ಅಷ್ಟುಮಾತ್ರಕ್ಕೆ ನಿಂತೀತು. ನಾವು ಈ ವಿಷಯದಲ್ಲಿ ದುರ್ಬಲರೂ ವ್ಯರ್ಥಾಡಂಬರಿಗಳೂ ಆಗಿದ್ದೇವೆಂಬುದು ನಮಗೆ ಗೊತ್ತಿದೆ ಯಾವ ರೀತಿಯಲ್ಲಿ ಪೂರ್ವದ ಕನ್ನಡಿಗರು ತಮ್ಮ ಶುದ್ಧ ಕನ್ನಡವನ್ನೂ ಕನ್ನಡ ಆಚಾರವಿಚಾರಗಳನ್ನೂ ಬಿಟ್ಟು ತಮ್ಮನ್ನು ಜಯಿಸಿದ ಉತ್ತರ ದೇಶದ ಆರ್ಯರ ಭಾಷೆಯಾದ ಸಂಸ್ಕೃತವನ್ನೂ ಅವರ ಮಂತ್ರ ಆಚಾರವಿಚಾರ ಹೋಮನೇಮಾದಿಗಳನ್ನೂ ಅನುಸರಿಸಿದರೋ ಅದೇ ರೀತಿಯಲ್ಲಿ ನಮ್ಮನ್ನು ಜಯಿಸಿರುವ ಪಾಶ್ಚಿಮಾತ್ಯರ ನಾಗರೀಕತೆಗೆ ಬೆರಗಾಗಿ ಅವರ ಅಂಕೆಗಳನ್ನಾದರೂ ಹಾಕುತ್ತಿದ್ದೇವೆ. ಪೂರ್ವದ ಕನ್ನಡಿಗರಾದ ದ್ರಾವಿಡರು ತಮ್ಮ ಸ್ವಂತ ಆಚಾರವಿಚಾರಗಳನ್ನು ಬಿಟ್ಟಂತೆ ನಾವು ನಮ್ಮ ಆಚಾರಗಳನ್ನು ಬಿಟ್ಟರೂ ವಿಚಾರಗಳನ್ನು ಬಿಟ್ಟಿಲ್ಲ,— ಕ್ರಿಶ್ಚನ್ ವಿಧಿಗಳನ್ನು ಅನುಸರಿಸುತ್ತಿಲ್ಲ. ಮಂತ್ರಗಳನ್ನು ಮರೆತರೂ "ಮಾಸ್"ಗಳನ್ನು ಹೇಳುವುದಿಲ್ಲ. ಪೂಜೆಮಾಡದಿದ್ದರೂ ಕ್ರಿಸ್ಮಸನ್ನು ಆಚರಿಸುವುದಿಲ್ಲ ನಮ್ಮ ಮಾತಿಗೆ "ವೃತ್ತ" ಕಾರರು ನಗಬಹುದು. 'ಕೆ' ನಾರಾಯಣರಾವ್', 'ಜಿ' ರಾಮರಾವ್' ಎಂದು ಮುಂತಾಗಿ ಬರೆದುಕೊಂಡು ಯುರೋಪಿಯನ್ ಕೆಲವು ಉಡಿಗೆಗಳನ್ನಾದರೂ ಧರಿಸಿಕೊಳ್ಳುವುದಕ್ಕೂ ಪೂರ್ಣ ಕ್ರಿಶ್ಚಿಯನ್ ಆಗುವುದಕ್ಕೂ ವ್ಯತ್ಯಾಸವು ಎಳ್ಳಷ್ಟು ಮಾತ್ರವಾಗಿದೆಯೆಂದು ಹೇಳಬಹುದು. ಉತ್ತರವಾಗಿ, ನಾವು ಎರಡಕ್ಕೂ ಮಧ್ಯವರ್ತಿಯಾಗಿರುವೆವೆಂದು ಹೇಳುವೆವು. ರವೀಂದ್ರನಾಥರೂ ಗಳೇ ಅದಿಯಾಗಿ ಅನೇಕರು ಸಾರ್ವತ್ರಿಕ ಜನಾಂಗ ಸಂಪರ್ಕವನ್ನು ವಾದಿಸಿ ಶಾಂತಿನಿಕೇತನವನ್ನು ಸ್ಥಾಪಿಸಿರುವುದು "ವೃತ್ತ" ಕರ್ತರಿಗೆ ಗೊತ್ತಿದ್ದ ವಿಷಯವಾಗಿದೆ. ಶಾಂತಿನಿಕೇತನದಂತಹ ಸಂಸ್ಥಾಪನೆಗಳಿಗೆ ಹೇರಳ ಹಣವು ಬೇಕು. ಹಣವಿಲ್ಲದೆಯೇ ಸಾರ್ವತ್ರಿಕ ಜನಾಂಗಸಂಪರ್ಕದ ಚಿಹ್ನೆಗಳನ್ನು ನಾವು ನಮ್ಮ ಶರೀರ ನಾಲಿಗೆಗಳಲ್ಲಿ ಉಳ್ಳವರಾಗಿರುವುದು ಅದಕ್ಕಿಂತಲೂ ಶ್ರೇಷ್ಠವಲ್ಲವೇ ? ಇನ್ನೇನು ಹೇಳಲಾದೀತು? ಈ ವಾದವು ಈ ಹಾಸ್ಯಜನಕವಾಗಿದ್ದರೂ ನಾವು ಕಣ್ಣು ಮುಚ್ಚಿ ಸುಮ್ಮನಿರಬೇಕಾಗಿದೆ. ಪಾಶ್ಚಿಮಾತ್ಯ ರೀತಿನಡತೆಗಳು ಸ್ವದೇಶಿವಾದಿಗಳಲ್ಲಿ ಅವರಿಗೆ ತಿಳಿಯದೆಯೇ ಹೇಗೆ ಅವರ ಅನುಸರಣೆಗೆ ಬಂದಿವೆಯೋ ಅದೇ ರೀತಿಯಲ್ಲಿ ಸ್ವಲ್ಪು ಹೆಚ್ಚು ಕಡಿಮೆ ತರದಲ್ಲಿ, ದಕ್ಷಿಣಕರ್ನಾಟಕಸ್ಥರಿಗೂ ಬಂದಿದೆ. ಈ ನಮ್ಮ ನಾಚಿಕೆಯ ಕಾರಣವನ್ನು ಇಂತಹ ಕುತರ್ಕಗಳಿಂದ ಮಾತ್ರ ಕ್ಷಮ್ಯವಾಗಿ ಭಾವಿಸಬಹುದು— ಏಕೆಂದರೆ ಅವು ಈ ದೇಶದ ಆಚರಣೆಗೆ ಬಂದಿವೆ

ಆದರೆ ಕನ್ನಡ ಅಂಕೆಗಳನ್ನು ಹಾಕಬೇಕೆಂಬ ವಾದಕ್ಕಿಂತಲೂ ಹೆಚ್ಚಿನ ಶ್ರೇಷ್ಠತ್ವಕ್ಕೆ ನಮ್ಮ ಸ್ವದೇಶಾಭಿಮಾನವು ಹೋಗಬೇಕೆಂಬುದೇ ನಮ್ಮ ಸ್ವಂತ ಅಭಿಪ್ರಾಯವಾಗಿದೆ.

ಕನ್ನಡದಲ್ಲಿ ಗ್ರಂಥಗಳನ್ನು ಬರೆದರೆ ಕೇಳುವವರಾರು ಎಂಬದೊಂದು ಕೂಗು ಅಲ್ಲಲ್ಲಿ ಕೇಳಬರುತ್ತಿದೆ. ಈ ಕೂಗಿನಲ್ಲಿ ಏನೂ ಅರ್ಥವಿಲ್ಲೆಂದು ಹೇಳಬಹುದು. ಗ್ರಂಥಗಳಲ್ಲಿ ಸತ್ವವಿದ್ದರೆ ಆದರೆ ಅವಕ್ಕೆ ಯೋಗ್ಯ ಮನ್ನಣೆಯಾಗುವುದರಲ್ಲಿ ತಿಲಮಾತ್ರ ಸಂಶಯವಿಲ್ಲ ಕಥೆ ಕಾದಂಬರಿಗಳಿಗೂ ನಾಟಕಗಳಿಗೂ ಯಾವಾಗಲೂ ಆಶ್ರಯವು ಸಿಕ್ಕೇ ಸಿಗುವದು ಉತ್ಕೃಷ್ಟ ನಾಟಕಗಳನ್ನು ಬರೆದರೆ ಪ್ರಯೋಗವನ್ನು ಮಾಡಲು ನಾಟಕ ಮಂಡಳಿದವರು ಸಿದ್ಧರಿರುವರು ಕನ್ನಡದಲ್ಲಿ ಉತ್ತಮವಾದ ಸಮಾಜಚಿತ್ರದರ್ಶಕವಾದ ನಾಟಕಗಳೇ ಇಲ್ಲವೆಂಬುದು ಎಲ್ಲರಿಗೂ ಗೊತ್ತಿದ್ದಮಾತು. ನಾಟಕಗಳಿಲ್ಲದಕ್ಕಾಗಿಯೇ ಲಂಕಾದಹನ ಶಿವಲೀಲಾ ಮುಂತಾದ ನಾಟಕಗಳು ರಂಗಭೂಮಿಯ ಮೇಲೆ ಅಧಿಪತ್ಯ ನಡೆಸುತ್ತವೆ. ಅವುಗಳನ್ನು ನೋಡಿದೊಡನೆ ನಗಬೇಕೋ ಅಳಬೇಕೋ ಎಂಬುದು ತಿಳಿಯದಂತಾಗುತ್ತದೆ. ಕಲೆಯ ದೃಷ್ಟಿಯಿಂದಲೂ, ನೀತಿಯ ದೃಷ್ಟಿಯಿಂದಲೂ, ಹಾಡುಗಳ ಮಟ್ಟಿಗೂ ಅವುಗಳು ಹೀನವಾದವುಗಳೆಂದೇ ಹೇಳಬೇಕಾಗುವದು. ಎಲ್ಲ ನಾಟಕ ಮಂಡಳಿದವರೂ ಪುನಃ ಪುನಃ ಅವೇ ನಾಟಕಗಳನ್ನು ಆಡಿ ಕನ್ನಡ ನಾಟಕಗಳ ವಿಷಯದಲ್ಲಿಯೇ ಅನಾದರ ಭಾವವನ್ನುಂಟು ಮಾಡಿಬಿಟ್ಟಿದ್ದಾರೆ. ನವೀನ ನಾಟಕಗಳನ್ನು ಬರೆಯುವವರು ಅವುಗಳು ಕಾವ್ಯದೃಷ್ಟಿಯಿಂದಲೂ, ನಾಟ್ಯಕಲೆಯ ದೃಷ್ಟಿಯಿಂದಲೂ, ಸ್ವಭಾವನಿರೂಪಣದೃಷ್ಟಿಯಿಂದಲೂ ಉತ್ತಮವಾಗುವಂತೆ ಬರೆಯಬೇಕು ಹೊಸ ನಾಟಕಗಳು ರಂಗಭೂಮಿಯ ಮೇಲೆ ಬರುತ್ತಿರವೆಂದರೆ, ನಾಟಕ ಮಂಡಳಿದವರಿಗೆ ದುಡ್ಡಿನ ಸುರಿಮಳೆಯಾಗುವುದು ಆ ದುಡ್ಡಿನಿಂದ ನಾಟಕ ಬರೆಯುವವರಿಗೆ ಆಶ್ರಯವು ದೊರೆಯುವುದು; ಸಮಾಜಸುಧಾರಣೆಯಾಗುವುದಲ್ಲದೆ, ನಾಡಿನ ಉದ್ಯೋಗವೂ ನಡೆಯುವುದು. ಅದ್ದರಿಂದ ಪ್ರತಿಭಸಂಪನ್ನರು ಮೂಲೆಯಲ್ಲಿ ಮರೆಯಾಗಿ ಕೂಡದೆ, ನಾಟಕಗಳನ್ನು ಬರೆದು ಪ್ರಕಾಶಕ್ಕೆ ಬರಬೇಕು. ವ್ಯರ್ಥವಾಗಿ ಆಯುಷ್ಯವನ್ನು ಕಳೆಯುವುದು. ಆತ್ಮಘಾತದ ಮಾರ್ಗವು. ಕನ್ನಡ ನಾಟಕ ಕೃತಿದೇವಿ ಇನ್ನೆಷ್ಟು ದಿವಸ ಅಡಗಿ ಕೂಡುವೆ!

ವರ್ತಮಾನ ಸಾರ

ಇಹವೃತ್ತ.

ಮಳೆಯಿಲ್ಲ.

ಧೋರಾಜದ ಸೋಡ್ತ್ರಿಯ ಟಿಕೀಟ ಪುಸ್ತಕಗಳನ್ನು ಈ ಸಂಚಿಕೆಯಲ್ಲಿ ಹಂಚಿದೆಂಬದಾಗಿ ಕಳೆದ ವಾರದಲ್ಲಿ ಬರೆದಿದ್ದೆವು ಆದರೆ ಅವು ಹಾಗೆ ಹಂಚಲ್ಪಡಲಿಲ್ಲ.

✓ ಶಿರಹಟ್ಟಿ ನಾಟಕ ಮಂಡಳದ ಬಗ್ಗೆ ಬರೆಯುವಾಗ್ಗೆ ಕಳೆದ ವಾರದಲ್ಲಿ ಧರ್ಮ ಪ್ರಚುರವಾಗುವ ನಾಟಕಗಳಲ್ಲಿ ಅನೀತಿ ಸ್ವೈರಚಾರವಾದ ವಾಕ್ಯಗನುಸೇರಿದ್ದನ್ನು ಕಂಡು ವಿಷಾದ ವಾಗುತ್ತದೆಂಬದಾಗಿ ಇರಬೇಕಿತ್ತು. ತಪ್ಪಿ 'ನೀತಿ ವಿಚಾರವಾದ' ಎಂಬದಾಗಿ ಅಚ್ಚಾಗಿದೆ.

ನಂಜನಗುಡ್ಡ- ಚಾಮರಾಜ ನಗರ- ರೇಲ್ವೆಯ ಪ್ರಾರಂಭ ಮಹೋತ್ಸವವು ಮೈಸೂರಿನ ಶ್ರೀಮನ್ಮಹಾರಾಜರಿಂದ ಈದಿನ ನೆರವೇರಿಸಲ್ಪಡತಕ್ಕದ್ದಿರುವದರಿಂದ, ಮಹಾರಾಜರ ಸರಕಾರದವರಿಂದ ಬಂದ ಆಮಂತ್ರಣದ ಮೇರೆಗೆ ಶ್ರೀ ಮಂಗಳವೇಢೇ ಶ್ರೀನಿವಾಸರಾಯರು ಮೈಸೂರಿಗೆ ಹೋಗಿದ್ದಾರೆ.

ಉತ್ತರಾದಿ ಮಠದ ಶ್ರೀಗಳವರು ಒಂದೇ ಏಕಾದಶಿ ಎಂದು ನಿರ್ಣಯಿಸಿರುವರೆಂದು ಕರ್ನಾಟಕ ವೈಭವದಿಂದ ತಿಳಿಯುತ್ತದೆ

ಮುಂಬೈ ಕರ್ನಾಟಕ

ಕಾಯದೇ ಮಂಡಳಗಳ ಚುನಾವಣೆಯ ತಾರೀಖುಗಳ ವಿವರ:- ಉಮೇದವಾರರು ನವ್ಹೆಂಬರ ೧೪ ರೊಳಗಾಗಿ ತಮ್ಮ ಹೆಸರನ್ನು ನಮೂದ ಮಾಡಿಸಿಕೊಳ್ಳತಕ್ಕದ್ದು. ೨೦ ನೇ ತಾ॥ ದಿನ ಅವರ ಹೆಸರುಗಳು ಪ್ರಕಟವಾಗುವವು ನವಂಬರ ೯ ನೇ ತಾರೀಖು ದಿನ ಮತಗಳು ನಮೂದ ಮಾಡಲ್ಪಡಬೇಕು. ೨೨ ನೇ ತಾ॥ ದಿನ ಪರಿಣಾಮವು ಪ್ರಕಟಿಸಲ್ಪಡುವದು.

ವಿಜಾಪೂರ ಜಿಲ್ಲೆಯಿಂದ ಕರ್ನಾಟಕ ಭೂಷಣ ಕಾಜಲಗಿ ಶ್ರೀನಿವಾಸರಾಯರಂತೂ ನಿಲ್ಲುವರು ಆದರೆ ಬ್ರಾಹ್ಮಣೇತರ ಪಕ್ಷದಿಂದ ಯಾರು ನಿಲ್ಲತಕ್ಕವರೆನ್ನುವದು ಇನ್ನೂ ನಿಶ್ಚಯವಾಗಿಲ್ಲ. ಶ್ರೀ ರಕ್ಕಸಗಿ ದೇಸಾಯರೋ ಅಥವಾ ಶ್ರೀ ಪಾಟೀಲ ಶಂಕರ ಗೌಡರೋ ಎಂಬುದು ತೀರ್ಮಾನವಾಗಿಲ್ಲ

ಬೆಳಗಾಂವಿಯ ಸುತ್ತಲಿನ ಹಳ್ಳಿಗಳಲ್ಲಿ ಕಳ್ಳರ ಸುಳಿದಾಟವು ಹೆಚ್ಚಿದೆ; ಮತ್ತು ನಿಪ್ಪಾಣಿ ಸಂಕೇಶ್ವರ ದಾರಿಯಲ್ಲಿ ಗಾಡಿಗಳ ಲೂಟಿಯೂ ಆಗಹತ್ತಿದೆಂಬದಾಗಿ ತಿಳಿಯುತ್ತಿದೆ

ಹುಬ್ಬಳ್ಳಿಯಿಂದ ದಿಲ್ಲಿಯ ಜುಮ್ಮಾ ಮಸೀದಿ ವ್ಯಾಯಾಮ ಸಂಘದಿರಕ್ಕೆ ಬಂದಿದ್ದ ಮುಸಲ್ಮಾನ ಸ್ವಯಂ ಸೇವಕರು ತಮ್ಮ ಅಭ್ಯಾಸವನ್ನು ಮುಗಿಸಿಕೊಂಡು ಮುಂದಿನ ತಿಂಗಳು ಮೊದಲನೆಯ ತಾರೀಖಿಗೆ ಹುಬ್ಬಳ್ಳಿಗೆ ಹೊರಡಲಿಕ್ಕಿರುವರು

ಗುಜರಾಥ ಪ್ರಾಂತದ ಮೊದಲನೆಯ ರಾಜಕೀಯ ಪರಿಷತ್ತು ನವಂಬರ ತಿಂಗಳ ಮೊದಲನೆಯ ವಾರದಲ್ಲಿ ಅಹಮದಾಬಾದಿನಲ್ಲಿ ಮಹಾತ್ಮರ ಅಧ್ಯಕ್ಷತೆಯಲ್ಲಿ ಜರುಗಲಿಕ್ಕಿರುವುದು.

ಮದ್ರಾಸ ಕರ್ನಾಟಕ

ಮಂಗಳೂರಲ್ಲಿ ಕರ್ನಾಟಕ ನಾಟಕ ಮಂಡಳಿಯವರು 'ವಿಮಲಾ ಪ್ರತಾಪ' ನಾಟಕವನ್ನಾಡಿದರು ಹಾಸ್ಯ, ನರ್ತನ, ಸಂಗೀತಾದಿಗಳಿಂದ ನಾಟಕವು ಮನೋಹರವಾಯಿತು 'ಕರ್ನಾಟಕ ಗ್ರಂಥಾಲಯ'ದ ಸಹಾಯಾರ್ಥವಾಗಿ ಇದೇ ನಾಟಕವನ್ನು ೪ ನೇ ತಾ॥ ದಿನ ಪುನಃ ಆಡುವರು.

ಬಡ ಕೂಲಿಕಾರರ ಸಲುವಾಗಿ ಶ್ರೀ. ಪ್ರೋ. ಲಕ್ಷ್ಮಣರಾಯರು ಒಂದು ರಾತ್ರಿ ಶಾಲೆಯನ್ನು ತೆರೆದಿರುವರು

ಯಕ್ಷಗಾನಸೇವಾ ಪ್ರೋತ್ಸಾಹಕ ಸಭೆಯ ವಾರ್ಷಿಕೋತ್ಸವವು ಮಂಗಳೂರಲ್ಲಿ ೨೧ ನೇ ತಾ॥ ದಿನ ಜರಗಿತು. 'ಸಂಧಾನ ಭೀಷ್ಮಪರ್ವವು' ತಾಳ ಮದ್ದಲೆಯಲ್ಲಿ ಹೇಳಲ್ಪಟ್ಟಿತು.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯರ ಹೆಸರು ಮದ್ರಾಸ ನ್ಯಾಯ ವಿಧಾಯಕ ಸಭೆಯ ಮತದಾರರ ಯಾದಿಯಲ್ಲಿಲ್ಲವಾದ್ದರಿಂದ ಅವರು, ಉಮೇದವಾರರಾಗುವದು ಶಕ್ಯವಿಲ್ಲ.

ಉಡಪಿಯ ಅಧಮಾರಸೋದ, ಪೇಜಾವರ ಮತ್ತು ಕಾಣೂರು ಸ್ವಾಮಿಯವರು ಧರ್ಮಸ್ಥಾನ ಉತ್ಪನ್ನದ ಕಾಯದೆಯ ಪುನರಾಲೋಚನೆಯಲ್ಲಿ ತಮ್ಮ ಅಸಮ್ಮತಿಯನ್ನು ವೈಸರಾಯರಿಗೆ ತಿಳಿಸಿದ್ದಾರೆ.

ಮೈಸೂರ ಕರ್ನಾಟಕ

(ನಮ್ಮ ಸ್ವಂತ ಪ್ರತಿನಿಧಿಗಳಿಂದ)

ಆಸ್ಥಾನ ವಿದ್ವಾನ್ ವೇ॥ ನಂಜನಗೂಡು ಶ್ರೀಕಂಠ ಶಾಸ್ತ್ರಿಗಳು ಕನ್ನಡದಲ್ಲಿ ಪಾಂಡಿತ್ಯವನ್ನು ಪಡೆದಿರುವರು. ಇವರು ಕನ್ನಡ ಭಾಷೆಗೆ ಮಾಡಿದ ಸೇವೆ ಗೋಸ್ಕರ ಬಹುಮಾನವನ್ನು ಮಾಡಬೇಕೆಂಬ ಉದ್ದೇಶದಿಂದ ಕಳೆದ ಭಾನುವಾರ ಸಾಯಂಕಾಲ ಮೈಸೂರು ನಾಗರೀಕರು ಒಂದು ಸನ್ಮಾನ ಸಭೆಯನ್ನು ಏರ್ಪಡಿಸಿದ್ದರು. ಮೇಲ್ಕಂಡ ಸಭೆಗೆ, ರಾಜಕವಿಭೂಷಣ ಲಿಂಗರಾಜೇ ಅರಿಸಿನವರು ಅಧ್ಯಕ್ಷತೆಯನ್ನು ಸ್ವೀಕರಿಸಿದ್ದರು. ವೇ॥ ಶ್ರೀಕಂಠ ಶಾಸ್ತ್ರಿಗಳ ಗುಣ ಕಥನನಾದ ನಂತರ ಅವರಿಗೆ ರತ್ನಖಚಿತವಾದ ಒಂದು ಕೊಡವು ಅರ್ಪಿಸಲ್ಪಟ್ಟಿತು ಬಹುಮಾನವನ್ನು ಸ್ವೀಕರಿಸಿ, ವೇ॥ ಶಾಸ್ತ್ರಿಗಳು ಕನ್ನಡದಲ್ಲಿ ಚಿಕ್ಕದಾದರೂ, ಸ್ವಾರಸ್ಯವಾದ ಭಾಷಣವನ್ನು ಮಾಡಿದರು.

ಮೈಸೂರ ಸಂಸ್ಥಾನದ ಎಲ್ಲಾ ವಿದ್ಯಾರ್ಥಿಗಳ ಸಮ್ಮೇಳನವೊಂದನ್ನು ಜರಗಿಸಬೇಕೆಂಬ ಪ್ರಯತ್ನವು ನಡೆಯುತ್ತಿರುವದು ಇದಕ್ಕೋಸ್ಕರ ಬೆಂಗಳೂರಿನಲ್ಲಿ ಕಳೆದ ವಾರ ಒಂದು ಸಾಮಾನ್ಯ ಸಭೆಯು ನೆರೆದಿತ್ತು

ಪ್ರೇಮಾಯತನ ಆಶ್ರಮದ ಪಂಡಿತ ತಾರಾನಾಥರು ಹೋದ ವಾರ ಮೈಸೂರಿಗೆ ಬಂದಿದ್ದು ೩ ವ್ಯಾಖ್ಯಾನಗಳನ್ನು ಮಾಡಿದರು ಮೊದಲನೆಯ ದಿವಸ ಲೋಕಮಾನ್ಯ ತಿಲಕರ ವಿಷಯವಾಗಿ ಮಾತನಾಡಿದರು. ೨ ನೇ ಮತ್ತು ೩ ನೇ ದಿವಸಗಳಲ್ಲಿ ಕಬೀರದಾಸ ಚರಿತ್ರೆಯನ್ನು ಕುರಿತು ಉಪನ್ಯಾಸ ಮಾಡಿದರು ಸಾವಿರಾರು ಜನರು ಅವರ ಭಾಷಣಗಳನ್ನು ಕೇಳಿ ಆನಂದ ಪಟ್ಟರು. ಆದರೆ ಅವರ ಬಗ್ಗೆ ಜನರಲ್ಲಿ ನಾನಾ ವಿಧವಾದ ಸಂದೇಹಗಳು ಉತ್ಪನ್ನವಾಗಿ ಮನಸ್ಸಿನಲ್ಲಿ ಉಳಿಕೊಳ್ಳುತ್ತಿರುವ ಕಾರಣ ತಿಳಿಯದು

ಆಂಧ್ರ ಪ್ರಾಂತದ ಕಾಂಗ್ರೆಸ್ ಮುಖಂಡರಾದ ದೇಶಭಕ್ತ ಕೊಂಡಾ ವೆಂಕಟಪ್ಪಯ್ಯನವರು ಸಂಸಾರ ಸಮೇತ ಕಳೆದವಾರ ಮೈಸೂರಿಗೆ ಬಂದಿದ್ದರು ಕಾಂಗ್ರೆಸ ಕಮೀಟಿಯವರ ಪ್ರಾರ್ಥನೆಯನ್ನು ಅಂಗೀಕರಿಸಿ ಸದ್ಯದ ಪರಿಸ್ಥಿತಿ ಎಂಬ ದರ ಮೇಲೆ ಆಂಗ್ಲ ಭಾಷೆಯಲ್ಲಿಯೂ ಮತ್ತು ತೆಲುಗಿನಲ್ಲಿಯೂ ಉಪನ್ಯಾಸ ಮಾಡಿದರು.

ಕಾವೇರಿ ನದಿ ಉಪ್ಪಿನಕಟ್ಟೆ ಇವುಗಳು ನದಿಗಳಲ್ಲಿಯೂ ಪ್ರವಾಹವು ಹೆಚ್ಚುತ್ತಿರುವದು ... ಬಹಳ ದುಃಖಕರವಾದ ವಾರ್ತೆಗಳು ಜನರು ಪ್ರತಿನಿತ್ಯವೂ ... ಬರುತ್ತಿರುವರು

ಕೊಡಗು ಕರ್ನಾಟಕ

ಕೆಲವು ಭಾಗಗಳಲ್ಲಿ ದನಗಳ ಬೇನೆಯು ಪ್ರಾರಂಭವಾಗಿದೆ. ದನದ ದವಾಖಾನೆಗಳು ಎಲ್ಲ ಕಡೆಗೂ ಇಲ್ಲದ್ದರಿಂದ ರೈತರಿಗೆ ತೊಂದರೆಯಾಗಿದೆ.

ಶಿರಂಗಾಲುವಿನಲ್ಲಿ ಪ್ಲೇಗು ಪ್ರಾರಂಭವಾಗಿದೆ ಅಧಿಕಾರಿಗಳು ಈ ಬಗ್ಗೆ ಜಾಗ್ರತರಾಗಿದ್ದುದು ಸಂತೋಷದ ಮಾತು

ಕೊಡವ ಸಭೆಯ ಅವಶ್ಯಕತೆಯನ್ನು ಕುರಿತು ನಿಬಂಧ ಬರೆದವರಿಗೆ ಲೋಕಪಾವನದ ಒಂದು ಬೆಳ್ಳಿಯ ಪದಕವನ್ನು ಕೊಡುವದು.

ಹಿಂದುಸ್ಥಾನ.

ಲಾರ್ಡ ಸಿಂಹರವರು ವಿಲಾಯತಿಯಲ್ಲಿದ್ದ 'ಪ್ರಿವೀ ಕೌನ್ಸಿಲ'ದ ಮೆಂಬರರಾಗಿ ನೇಮಿಸಲ್ಪಟ್ಟಿದ್ದಾರೆ.

ರಂಗೂನದಲ್ಲಿ ಭೂಕಂಪವಾಗಿ ೫೦೦ ಫೂಟು ಎತ್ತರವುಳ್ಳ ಒಂದು ದಿಬ್ಬವು ಸಿದ್ಧವಾಗಿದೆ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಸಾಸ್ವೆಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೨ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

॥ ಶ್ರೀ ॥

ತ್ವರೆಮಾಡಿರಿ! ಅಪಚಣಿಯು ದೂರಾಯಿತು!!

ಮುನಿ ಪಲಿಟಿ, ಮೋಟಾರ ರೋಡ ಮುಂತಾದ

ಇಮಾರತ ಕಟ್ಟಿಸುವವರಿಗೆ

ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನ ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನ ಪಡೆಯಬಹುದು. ತೊಗೊಳ್ಳಬಯಸುವವರು ತ್ವರೆಮಾಡಬೇಕು.

ಕಿಲ್ಲಾ, ಬಾಗಲಕೋಟೆ ೨೧-೭-೨೬ } ಬಿಂದುರಾವ ಟೆಂಕಸಾಲಿ ಡಾಕ್ಟರ,



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರಾಕ್ಟಿಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಕರ್ನಾಟಕದಲ್ಲಿ ಬಾಲಗಂಧರ್ವ

ಈ ಹಾರ್ಮೋನಿಯಂ ಶಿಕ್ಷಕ ಎಂಬ ಪುಸ್ತಕದ ಸಹಾಯದಿಂದ ಎಲ್ಲರಿಗೂ ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಹಾರ್ಮೋನಿಯಂ ಬಾರಿಸುವದು ಸಾಧ್ಯವಾಗುವದು. ಈ ಪುಸ್ತಕದಲ್ಲಿ ಗಾಯನ ಪ್ರಸಿದ್ಧರಾದ ಬಾಲಗಂಧರ್ವ, ಗೋಹರಜಾನ್, ಮಾಸ್ತರ ಕೃಷ್ಣಾ ಮತ್ತು ಜಾನಕಿಬಾಯಿ ಮುಂತಾದವರು ಗ್ರಾಮೋಫೋನಿನಲ್ಲಿ ಹಾಡಿದ ಪದಗಳನ್ನು ಸುಲಭವಾದ ನೋಟೇಶನ್ ರೂಪದಿಂದ ಬರೆದಿರುತ್ತದೆ ಇವರಿಂದ ಈ ಗಾಯಕ ಗಾಯಿಕೆಯರು ಹಾಡಿದಂತೆಯೇ ಆಯಾ ಪದಗಳನ್ನು ಹಾರ್ಮೋನಿಯಂದಲ್ಲಿ ಬಾರಿಸುವದು ಸಾಧ್ಯವಾಗುವದು. ಇದಲ್ಲದೆ ಕನ್ನಡ ಕಾಳಿದಾಸ, ಪಾದುಕಾ ಪಟ್ಟಾಭಿಷೇಕ ನಾಟಕಗಳಲ್ಲಿಯ ಕಲವು ಲೋಕಪ್ರಿಯ ಪದಗಳೂ ಬರೆಯಲ್ಪಟ್ಟಿವೆ

ಮಾನಾಪಮಾನ, ಏಕಚ್ಯಾಲಾ, ರುಕ್ಮಿಣಿಸ್ವಯಂವರ, ದ್ರೌಪದಿ ಇವುಗಳೊಳಗಿನ ಬಾಲಗಂಧರ್ವರ ಲೋಕಪ್ರಿಯ ಪದಗಳನ್ನು ಸುಲಭವಾಗಿ ನೋಟೇಶನ್ ರೂಪದಿಂದ ಬರೆದಿರುತ್ತದೆ. ಹಿಂದುಸ್ಥಾನೀ ಸಂಗೀತ ಪದ್ಧತಿಯ ಪುಸ್ತಕವು ಕನ್ನಡ ಲಿಪಿಯೊಳಗೆ ಬರೆದ ಪುಸ್ತಕವೆಂದರೆ ಇದೇ ಮೊದಲನೇದು. ಈ ಪುಸ್ತಕದ ವಿಷಯಕ್ಕೆ ಹಿಂದುಸ್ಥಾನಿ, ಕರ್ನಾಟಕಿ ಗಾಯನ ಬಲ್ಲವರು ಗವೆಯರು ಮತ್ತು ಪಂಡಿತರು ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಈ ಎರಡು ಭಾಗಗಳಲ್ಲಿ ೩೫ ರಾಗಗಳ ಪರ್ಜನ್ಯ ಮತ್ತು ಶಾಸ್ತ್ರೋಕ್ತ ಮಾಹಿತಿ ಕೊಟ್ಟಿರುತ್ತದೆ ಇದೇ ಪುಸ್ತಕವನ್ನು ಮರಾಠಿ ಲಿಪಿಯಲ್ಲಿ ಛಾಪಿಸಿರುತ್ತದೆ ಕಿಮ್ಮತ್ತು ೧ ರೂ.

ಮೊದಲನೇ ಭಾಗ ಪ್ರತಿಯೊಂದರ ಕ್ರಯ ೧ ರೂ ೨ನೇ ಭಾಗ ೧॥ ಆಣೆ.

ವಿಳಾಸ - ವತ್ಸ ಕೇಶವ ಹಾರ್ಮೋನಿಯಂ ಕ್ಲಾಸ,
ದ ವ ಟೌನ್ ಗಲ್ಲಿ - ಧಾರವಾಡ.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ!!
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟು-ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ।

ವಿಳಾಸಃ— ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಗುಬ್ಬಿಶ್ರೀಚನ್ನಬಸವೇಶ್ವರ ನಾಟಕಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕ ಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ. ಪ್ರೊಪ್ರಾಯಿಟರ

ಪ್ರಕಟನೆ.

ಅಪೂರ್ವವಾದ ಹೊಸ ಪುಸ್ತಕಗಳು.
ಆಸ್ತಿಕರಾದವರು ತರಿಸಿ ಓದಿರಿ

(೧) ಗುರುಕಥಾಕಲ್ಪತರು ಎಂಬ ಸಚಿತ್ರ ಗುರುಚರಿತ್ರೆ ಪೂರ್ವಾರ್ಧ ಬೆಲೆ ರೂ. ೨-೦-೦

(೨) ಚಿತ್ತೂರು ಜೋಹರು ೧ (ಪದ್ಮಿನಿ) ಬೆಲೆ ರೂ. ೧-೪-೦

ಸಿಕ್ಕುವ ಸ್ಥಳಃ— ಕೆ. ಲಕ್ಷ್ಮೀನಾರಾಯಣ ಭಟ್ಟ
ಸ್ಕೂಲ್ ಮಾಸ್ಟರ್ ಹೊನ್ನಾಳಿ. ಶಿವಮೊಗಾ ಡಿಸ್ಟ್ರಿಕ್ಟ್.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY

Apply for full particulars to—

N. K. Kulkarni. Agent Bagalkot.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ.

ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ ಸಿ. ನಂ. ೫೧೨ ಮಿ. ಸೈಯದ್ ಜಹೂರಅಲಿ, ಬಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್ಸ್ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮು ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೭೯ ಮಿ. ದೇವನ ವಾಸುದೇವನ ನಂ: ಐದ್ರಿವಾದ ಚಪಾತಿನದಾರ ಏಡಪಲ್ಲಿ ಆಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲೆ ಬೆಡಿಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಷೇಕ ಬಾಪುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೩ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ)

ಅನವೌಲ್ಯ ಸಂಧಿ.


S.U.N. & CO.
BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮಿ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೊತೆ ೧ಕ್ಕೆ ರೂ. ೨೫ ರಿಂದ ೩೦-೫೦-೧೦೦ರ ವರೆಗೆ. ಉಡುವ ಮೊಗಟ ಮೊಳ ೬-೭-೮-೧೦-೧೬ ೧೮ ಮೊಳಗಳು; ಇದು ಮೊಳ ೧ಕ್ಕೆ ೨ರೂ. ಯಿಂದ 2½ ರೂ. ವರೆಗೆ. ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಕಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಕಾಳುಗಳು; ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೦ ರವರೆಗೆ ೧೧-೧೬-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೧೦ ರವರೆಗೆ ೧೪ ಮುಖದ ಕಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪-೮-೦ ನಾಲ್ಕು ಕೋಟಿಗೆ ಸಾಕಾಗುವಷ್ಟು ರೇಶ್ಮಿ ಕೋಟಿಂಗ ಶಿಲ್ಕು ಥಾನು ೭ ಗಜಾ ಉದ್ದ ೩ ಗಜಾ ಅಗಲುಳ್ಳ ಥಾನುಗಳಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಬೀಳುವದು

ವಿಳಾಸ:—ಶಿರೋಮಣಿ ನಾರಾಯಣಾಚಾರ್ಯ ಕಂಪನಿ,
ಕಾಶೀ ಬನಾರಸ್.

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯಬಿಂದು

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ.

ಇದು ಅರ್ಕವಿದ್ದು ಇದರಲ್ಲಿ ನೀಚ ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಇವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಮಾಡಿಸಿಕೊಟ್ಟದ್ದವರಿಗೆ (೫೦೦) ಐದನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಜಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಬಾಣಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಡಗೈ, ಕಾಲರಾ (ಮಾರಿಕಾ), ಪ್ಲೇಗ, ಇನ್ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕೆಂಗಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟಿದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ಕೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಬೇಳುವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶ್ಯ ೫ ಆಣೆ ರೊಕ್ಕದ ಬಾಟ್ಲಿ ಒಂದಕ್ಕೆ ೮ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದಿತು. ಅದರ ಖರ್ಚ ೭ ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರು-ಕಮಿಶನ್ ಇಲ್ಲ. ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮೀಶನ್ ಸಿಗಲಿಕ್ಕಿಲ್ಲಾ. ಖರ್ಚ ಏಳು ಆಣೆ. ತಕ್ಕೊಳ್ಳುವ ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿ ಗೂಡ ಸಿಗುವದು. ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಪಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಜಿಲ್ಹಾ ವಗೈರೆ ಸ್ವಚ್ಛವಾಗಿ ಬರಿಯಿರಿ. ನಮ್ಮ ವಿಳಾಸ **ಎಚ್. ಎಮ್. ಮುಲ್ಲಾ**

ಸಂಪಾದಕ ಅರ್ಕಶಫಾ ಹೆಡ್ಆಫೀಸ ಪೋಸ್ಟ ಉಪೂರ (ಬೆಳಗಾವ)

ರ. ನಂ. ಬಿ. ೧೯೪೭ ವಾ. ಚಂದಾ ೧–೧೪–೦ ಮಾತ್ರ.

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ, ಮಿತಿ ಶ್ರಾವಣ ಬಹುಳ ೧೨ ಶಕೆ ೧೮೪೮ ತಾ|| ೩-೯-೧೯೨೬. | ಸಂಚಿಕೆ ೨೩

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ಬೊಮ್ಮ!
ಚಿನ್ನ ಬಾಡದು ಚೆನ್ನ ಮೇಣಬತ್ತಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಜೀರಬಹ ಗಂಧವಹವೆಂದು ತಿಳಿಯೊ॥

—ಅಂಬಿಕಾ ತನಯ ದತ್ತ

ಅಖಿಲ ಕರ್ನಾಟಕ ವಿಶ್ವವಿದ್ಯಾಲಯ ಸಂಘವು ಎಚ್ಚತ್ತು ತನ್ನ ಕಾರ್ಯದಲ್ಲಿ ತೊಡಗಿದೆ. ಅದರ ಚಟುವಟಿಕೆಗಳು ಬೆಳಕನ್ನು ಕಾಣಹತ್ತಿವೆ. ಕರ್ನಾಟಕಕ್ಕೆ ತನ್ನದೊಂದು ಬೇರೆ ವಿಶ್ವವಿದ್ಯಾಲಯವುಬೇಕೆಂಬುದು ಎಲ್ಲರಿಗೂ ಗೊತ್ತಿದ್ದ ಮಾತು. ಅದು ಅತ್ಯಾವಶ್ಯಕವಾಗಿರುವದೆಂಬದನ್ನು ಎಲ್ಲರೂ ಮನಗಂಡಿರುವರು. ಆದರೆ ಆ ವಿಶ್ವವಿದ್ಯಾಲಯವು ತೀವ್ರವಾಗಿ ಸ್ಥಾಪಿತವಾಗಬೇಕೆಂಬ ಉದ್ದೇಶದಿಂದ ಈ ಮಂಡಲವು ಏರ್ಪಟ್ಟಿದೆ. ಮಂಡಲದ ಅಧ್ಯಕ್ಷರು ಮುಂಬಯಿಯ ಸರಕಾರೀವೈದ್ಯವಿದ್ಯಾಲಯದ ಮುಖ್ಯಾಧ್ಯಾಪಕರಾದ ಶ್ರೀ. ನಾತಗೀರ ಯಶವಂತರಾಯರು, ಶ್ರೀ. ಆಲೂರ ವೆಂಕಟರಾಯರೂ, ಧಾರವಾಡದಲ್ಲಿಯ ಲಿಂಗಾಯತ ಮಾಧ್ಯಮಿಕ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ. ಬಸವನಾಳರು ಕಾರ್ಯದರ್ಶಿಗಳಿರುವರು. ಈಗ ಮಂಡಲದವರು ಎಲ್ಲ ಶಾಲೆಗಳಿಗೂ ಮಹಾವಿದ್ಯಾಲಯ (ಕಾಲೇಜ)ಗಳಿಗೂ ತುಂಬಿ ಕಳುಹಿಸಲು ಒಂದು ಪತ್ರಿಕೆಯನ್ನು ಕಳುಹಿಸಿರುವರೆಂದು ತಿಳಿದು ಬಂದಿದೆ ಆ ಪತ್ರಿಕೆಯಿಂದ ಕರ್ನಾಟಕದಲ್ಲಿಯ ಮಾಧ್ಯಮಿಕ ಶಾಲೆ ಕಾಲೇಜುಗಳಲ್ಲಿರುವ ವಿದ್ಯಾರ್ಥಿಗಳ ಸಂಖ್ಯೆಯು ತಿಳಿದು, ವಿಶ್ವವಿದ್ಯಾಲಯಕ್ಕೆ ಅವರಿಂದ ಎಷ್ಟು ಸಹಾಯವಾಗುವದೆಂಬ ಮಾತಾದರೂ ತಿಳಿಯುವುದು. ಉತ್ತರ ಕರ್ನಾಟಕದಲ್ಲಿಯೇ ಸುಮಾರು ೪೦ ಮಾಧ್ಯಮಿಕ ಶಾಲೆಗಳಿರುವವು. ಇವುಗಳಿಂದ ಸಾಕಷ್ಟು ವಿದ್ಯಾರ್ಥಿಗಳು ದೊರೆಯುವರೆಂದು ನಮ್ಮ ನಂಬುಗೆ. ಅದೇನೇ ಇರಲಿ ಸಂಘದವರು ಆದರ ವಿಚಾರವನ್ನೆಲ್ಲ ಈಗ ನಡೆಯಿಸುರುವರು. ಎಲ್ಲ ಶಾಲೆಗಳೂ, ಮಹಾವಿದ್ಯಾಲಯಗಳೂ ಸಂಘದವರ ಕೆಲಸದಲ್ಲಿ ಸಹಾಯಮಾಡಿ, ವಿಶ್ವವಿದ್ಯಾಲಯದ ಸ್ಥಾಪನೆಯ ಕೆಲಸವನ್ನು ತೀವ್ರವಾಗಿ ಸಫಲಗೊಳಿಸಬೇಕೆಂದು ಕೋರುತ್ತೇವೆ. ಈ ಕೆಲಸವು ಒಬ್ಬಿಬ್ಬರಿಂದ ಆಗತಕ್ಕದ್ದಲ್ಲ; ಎಲ್ಲರ ಸಹಾಯವೂ ಸಹಾನುಭೂತಿಯೂ ಇದಕ್ಕೆ ಬೇಕು. ಆದುದರಿಂದ ಎಲ್ಲ ಕನ್ನಡಿಗರೂ ಆಲಸ್ಯವನ್ನು ದೂಡಿ ಆಸಕ್ತಿಯಿಂದ ಸಂಘಕ್ಕೆ ನೆರವಾಗುವರೆಂದು ಹಾರೈಸುತ್ತೇವೆ

ನಾವು **ಇಪ್ಪತ್ತನೆಯ ಸಂಚಿಕೆಯಲ್ಲಿ** ಬರೆದ ' ಪ್ರಾಥಮಿಕ ' ಶಾಲೆಗಳೂ **ಕನ್ನಡ** ಶಿಕ್ಷಣವೂ ' ಎಂಬ ಬರಹಕ್ಕೆ ಉತ್ತರವೆಂದು ಗದಗ ತಾಲೂಕಿನಲ್ಲಿರುವ ಚಿಂಚಲಿಯ ಶಾಲೆಯ ಶಿಕ್ಷಕರಾದ ಶ್ರೀ. **ಶಂಕರಭಟ್ಟ ಕಲ್ಲಂಭಟ್ಟ ಕೋಳಿವಾಡ** ಎಂಬುವರು " ನಮ್ಮದೇನು ತಪ್ಪು " ಎಂಬ ತಲೆಕಟ್ಟಿನ ಬರಹವೊಂದನ್ನು ಕಳುಹಿಸಿದ್ದಾರೆ. ನಾವು ತಪ್ಪನ್ನು ಶಿಕ್ಷಕರ ಉಡಿಯಲ್ಲಿ ಹಾಕಲು ಹೊರಟಿಲ್ಲೆಂಬಮಾತನ್ನು ಎಲ್ಲ ಶಿಕ್ಷಕರೂ ನೆನೆಯಲಿ. ಮೊದಲಿನ ನಿಸ್ಪೃಹವೃತ್ತಿಯ ಗುರುಗಳ ಹೆಜ್ಜೆಯಲ್ಲಿ ಹೆಜ್ಜೆಯನ್ನಿಡಲು ಎಲ್ಲ ಶಿಕ್ಷಕರೂ ಪ್ರವೃತ್ತರಾಗಬೇಕೆಂಬ ಉದ್ದೇಶದಿಂದಲೇ ಆ ಬರಹವು ಬರೆಯಲ್ಪಟ್ಟಿತು. " ಶಿಕ್ಷಕರೆಂದರೆ, ಹುಡುಗರಲ್ಲಿ ಭಾಷಾಜ್ಞಾನ ಕಳೆಯನ್ನು ತುಂಬತಕ್ಕವರೆಂಬ ಮಾತು ಒಪ್ಪತಕ್ಕದ್ದು. ಅಲ್ಲದೇ ಭಾವೀ ರಾಷ್ಟ್ರಸುಧಾರಕರೆಂದರೆ ಶಿಕ್ಷಕರೇ ಎಂಬ ಮಾತನ್ನಾದರೂ ಶಿಕ್ಷಕರು ಸರ್ವಥಾ ಅಲ್ಲಗಳೆಯಲಾರರು. ಇಷ್ಟು ಕರ್ತವ್ಯಭಾರವು ತಮ್ಮ ಮೇಲೆ ಸದಾ ಇರುವದೆಂಬುದನ್ನು ಶಿಕ್ಷಕರು ಚನ್ನಾಗಿ ಬಲ್ಲರು. ಅದರಂತೆ ಅವರು ತಮ್ಮ ಕೈಲಾದ ಮನಮುಟ್ಟಿ ಕೆಲಸವನ್ನು ಮಾಡುತ್ತಿರುವರು " ಎಂದು ಬರಹಗಾರರು ಬರೆದಿದ್ದಾರೆ. ಮೊದಲಿನ ಭಾಗದ ವಿಷಯದಲ್ಲಿ ಮತಭೇದವೇ ಇಲ್ಲ. ಕೊನೆಯ ಮಾತಿನ ಸತ್ಯತೆಯ ಬಗ್ಗೆ ನಮಗೆ ಹೆದರಿಕೆ ಬರುತ್ತಿದೆ. ಕರ್ತವ್ಯಬುದ್ಧಿಯಿಂದ ಕೆಲಸ ಮಾಡುವ ಶಿಕ್ಷಕರು ವಿರಳವೆಂದು ನಮ್ಮ ನಂಬುಗೆ. ಅಲ್ಲೊಬ್ಬ ಇಲ್ಲೊಬ್ಬ ಕರ್ತವ್ಯನಿಷ್ಠ ಶಿಕ್ಷಕನು ದೊರೆಯುವದೇನೋ ನಿಜ. ಆದರೆ ಅದು ಅಪವಾದ. ನಾವು ಯಾರ ಮನಸ್ಸನ್ನು ನೋಯಿಸಲು ಹೀಗೆ ಬರೆಯುವದಿಲ್ಲ. ವಸ್ತುಸ್ಥಿತಿಯನ್ನು ಇದ್ದಕ್ಕಿದ್ದ ಹಾಗೆ ಚಿತ್ರಿಸಿದ್ದೇವೆ. ಪರಿಸ್ಥಿತಿಯ ಪ್ರತಿಕೂಲತೆಯಿಂದಲೂ, ಸಹಾನುಭೂತಿಯ ಅಭಾವದಿಂದಲೂ, ಪಾಲಕರ ಎಚ್ಚರಗೇಡಿತನದಿಂದಲೂ, ಶಿಕ್ಷಕರ ದಾರಿದ್ರ್ಯತನದಿಂದಲೂ, ಆಗಬೇಕಷ್ಟು ಕೆಲಸವು ಆಗುವದಿಲ್ಲೆಂದು ಬರಹಗಾರರು ಬರೆದು ತಾವು ಅದಕ್ಕೆ ಹೊಣೆಗಾರರು ಹೇಗೆಂದು ಕೇಳಿದ್ದಾರೆ. ಎಲ್ಲ ಪುಸ್ತಕಗಳನ್ನು ಶಿಕ್ಷಕರೇ ತರಿಸಕೊಳ್ಳಬೇಕೆಂದು ನಮ್ಮ ಆಗ್ರಹವಿಲ್ಲ. ಶಾಲೆಗಾಗಿ ಕೆಲವು ಹೊತ್ತಿಗೆಗಳನ್ನು ತರಿಸಬೇಕು. ಊರಲ್ಲಿ ಒಂದು ಸಣ್ಣ ಪುಸ್ತಕಾಲಯವನ್ನು ಸ್ಥಾಪಿಸಬೇಕು. ಎಷ್ಟು ಪ್ರತಿಕೂಲ

ಸ್ಥಿತಿಯಿದ್ದರೂ ಪುಸ್ತಕಾಲಯಗಳನ್ನು ಸ್ಥಾಪಿಸುವುದು ಶಕ್ಯವಿದೆಂಬುದನ್ನು ಇಂಡಿ ತಾಲೂಕಿನ ಹಲಸಂಗಿಯವರು ಸಿದ್ಧಮಾಡಿ ತೋರಿಸಿದ್ದಾರೆ. '**ಕ್ರಿಯಾಸಿದ್ಧಿಃ ಸತ್ತ್ವೇ ಭವತಿ ಮಹತಾಂ ನೋಪಕರಣೇ**' ಎಂಬ ಮಾತನ್ನು ನೆನಸಿನಲ್ಲಿಟ್ಟರಾಯಿತು. ಪ್ರಯತ್ನಮಾಡಿ ಫಲದೊರೆಯಲಿಲ್ಲವೆಂದರೆ ದೋಷವಿಲ್ಲ. ಇದು ಶಿಕ್ಷಕರ ಮಾತಾಯಿತು. ಎಷ್ಟೋ ಶಿಕ್ಷಕರು ಸಂಪನ್ನರಿರುವರು. ಬುದ್ಧಿವಂತರಿರುವರು. ಆದರೆ ಹಳ್ಳಿಯ ರಾಜಕಾರಣದಲ್ಲಿ ಸೇರಿ, ತಮ್ಮ ಆಯುಷ್ಯವನ್ನೆಲ್ಲ ಕಳೆಯುವರು. ಗೌಡ ಕುಲಕರ್ಣಿಯರಲ್ಲಿ ಪ್ರತಿಷ್ಠೆಯನ್ನು ಹೊಂದಿ 'ಶಾಲೆಯು ತನ್ನ ಗತಿಯನ್ನು ತಾನು ಕಂಡುಕೊಳ್ಳಲಿ'ಎಂದು ಗೊತ್ತುಗೇಡಿಗಳಾಗಿ ತಿರುಗುವರು. ಇವರ ಕ್ಕಾಗಿ ಯಾರನ್ನು ಹೊಣೆಹಿಡಿಯಬೇಕು ? ಇರಲಿ. ಪಠ್ಯಪುಸ್ತಕಗಳ ಸ್ಥಿತಿಯನ್ನು ಸುಧಾರಿಸುವುದು ಅತಿ ಸುಲಭವಾದ ಮಾತು. ಪ್ರಾಥಮಿಕ ಶಾಲೆಯ ಶಿಕ್ಷಕರಲ್ಲಿಯ ಕೆಲವು ಜನರು ಸೇರಿ ಪುಸ್ತಕಗಳನ್ನು ಬರೆದರೆ, ಸಾಹುಕಾರರು ತಿಂಗಳುಗಳಲ್ಲಿ ಪುಸ್ತಕಗಳ ರಾಶಿಯೇ ಹೊರಬೀಳುವುದು, ನಿಶ್ಚಯಕ್ಕೆ ತಾನೇ ದಾರಿ ಸಿಗುವುದು. ಪ್ರಾಥಮಿಕ ಶಾಲೆಯು ಜ್ಞಾನದ ಅಡಿಗಲ್ಲು. ಅಲ್ಲಿ ಹುಡುಗರಿಗೆ ತಕ್ಕಂತೆ ಶಿಕ್ಷಣವು ದೊರೆತು, ವಾಚನಾಭಿರುಚಿಯು ಹುಟ್ಟಿತೆಂದರೆ, ಮುಂದೆ ಬಾಲಕರು ತಾವೇ ಓದಿಕೊಂಡು, ಕರ್ತವ್ಯಶಾಲಿಗಳಾಗುವರು. ಯಾವ ಶಿಕ್ಷಕರು ತಮ್ಮ ಪ್ರತಿಕೂಲ ಸ್ಥಿತಿಯನ್ನು ಬದಿಗೊತ್ತಿ ಫಲಾಪೇಕ್ಷೆಯಿಲ್ಲದೆ ಹುಡುಗರ ಹಿತಕ್ಕಾಗಿ ದುಡಿಯುತ್ತಿರುವರೋ, ನಾಡಿನ ಮುಂದಿನ ಹಿತವನ್ನು ನೆನೆಯುತ್ತಿರುವರೋ, ಅಂಥವರಿಗೆ ನಮ್ಮ ವಂದನೆಗಳು. ಅಂಥವರಿಗೆ ನಮ್ಮ ಅಭಿನಂದನೆಗಳು. (ಈ ವಿಷಯದಲ್ಲಿ ಬುಕರ ಟಿ. ವಾಶಿಂಗಟನ್ನನ ಚರಿತ್ರೆಯನ್ನು ಓದಬೇಕಾಗಿ ಪ್ರಾರ್ಥನೆ. ಅಷ್ಟು ತೊಂದರೆಗಳು ನಮಗೆ ಒದಗಿರುವವೋ ?)

ಕರ್ನಾಟಕ ಏಕೀಕರಣವೋ? ದ್ವೈತೀಕರಣವೋ ?

ಮೈಸೂರ ನಂಜನಗುಡ್ಡ ಚಾಮರಾಜ ನಗರ ರೈಲ್ವೆಯ ಪ್ರಾರಂಭೋತ್ಸವವು.

ಅಧಿಕಾರಿಗಳ ಮಂದ ದೃಷ್ಟಿಯು.

'ಕನ್ನಡಿಗ' 'ಕರ್ಮವೀರ' ಗಳಿಗೆ ಬಹಿಷ್ಕಾರ !!

ದಿವಾಣ ಸಾಹೇಬರವರ ಭೆಟ್ಟಿ !

(ನಮ್ಮ ಪ್ರೇಷಿತ ಪ್ರತಿನಿಧಿಯಿಂದ)

ಮೈಸೂರ ಸರ್ಕಾರದಿಂದ ಆಮಂತ್ರಣವು ಬಂದುದರಿಂದ ನಂಜನಗುಡ್ಡ ಚಾಮರಾಜ ನಗರಗಳ ರೈಲ್ವೇ ಪ್ರಾರಂಭ ಮಹೋತ್ಸವಕ್ಕಾಗಿ 'ಕನ್ನಡಿಗ' ಮತ್ತು 'ಕರ್ಮವೀರ' ಪತ್ರಿಕೆಗಳ ಪ್ರತಿನಿಧಿಗಳು ಚಾಮರಾಜ ನಗರಕ್ಕೆ ಹೋಗಿದ್ದರು. ಮೈಸೂರ ಸರಕಾರದ ಚೀಫ ಸೆಕ್ರೆಟರಿಗಳಿಂದಲೇ ಆಮಂತ್ರಣವು (೨ ನೇ ವರ್ಗದ ರೇಲ್ವೇ ಪಾಸಿನೊಂದಿಗೆ) ಬಂದುದರಿಂದಲೂ, ಮೈಸೂರ ಹೊರಗಿನ ಕನ್ನಡ ಪತ್ರಿಕೆಗಳಿಗೆ ಹೀಗೆ ಆಮಂತ್ರಣವು ಬಂದುದು ಇದೇ ಮೊದಲನೇಸಲವಾದ್ದರಿಂದಲೂ, ಮೈಸೂರ ಕರ್ನಾಟಕ ಉತ್ತರ ಕರ್ನಾಟಕಗಳ ಈ ನೂತನ ಪ್ರೇಮಾಭಿವೃದ್ಧಿಯ ಪ್ರಸಂಗವನ್ನು ಹೋಗಗೊಡಬಾರದೆಂತಲೂ ಈ ಪತ್ರಿಕೆಗಳ ಪ್ರತಿನಿಧಿಗಳು ಚಾಮರಾಜ ನಗರಕ್ಕೆ ಹೋದದ್ದಾಯಿತು. ಸ್ಪೇಶಲ್ ಟ್ರೇನಿನಿಂದ ಚಾಮರಾಜ ನಗರವನ್ನು ಎಲ್ಲ ಅತಿಥಿಗಳ ಸಂಗಡ ಸೇರಿದ್ದಾಯಿತು. ಅಲ್ಲಿ ತಿಂಡಿತಿನಸುಗಳೂ ಆದರಾತಿಥ್ಯವೂ ಆಯಿತು. ಆದರೆ ಮಂಡಪದ ಕಡೆಗೆ ಹೋದ ಕೂಡಲೆ 'ದರ್ಬಾರ ಪೋಷಾಕಿನಲ್ಲಿರದವರನ್ನು ಒಳಕ್ಕೆ ಬಿಡೆವು' ಎಂದು ಪೋಲೀಸ ಸಾಹೇಬರು ನುಡಿದರು. ನಮ್ಮೊಡನೆ ಜೊತೆಯಲ್ಲಿ 'ವಿಶ್ವಕರ್ನಾಟಕ'ದ ಪ್ರತಿನಿಧಿಗಳೂ ಇದ್ದರು. ಅವರನ್ನು ಒಳಕ್ಕೆ ಬಿಡಲಿಲ್ಲ. ಕೂಡಲೇ ನಾವೆಲ್ಲ ಚೀಫ ಸೆಕ್ರೆಟರಿಯವರಿಂದ ಬಂದ ಆಮಂತ್ರಣ ಪತ್ರಿಕೆಯನ್ನು ತೋರಿಸಿದೆವು. ಆ ಮೇಲೆ ಡೆಪ್ಯೂಟೀ ಕಮೀಶನರರು ಬರುವವರೆಗೆ ಒಳಕ್ಕೆ ಒಂದು ಕಡೆಯಲ್ಲಿ ಕೂಡ್ರಲು ಅಪ್ಪಣೆ ದೊರೆಯಿತು. ಚೀಫ ಕಮೀಶನರ ಸಾ|| ಬಂದ ಕೂಡಲೇ 'ನನಗೆ ನಿಮ್ಮ ಕೂಡ ವಾದ ವಿವಾದ ಮಾಡುವ ಇಚ್ಛೆಯಿಲ್ಲ. ನೀವು ಹೇಳುವದನ್ನು ನಾನು ಕೇಳಲಿಕ್ಕೆ ಒಲ್ಲೆನು. ಮಹಾರಾಜರು ಬರತಕ್ಕವರು, ದರ್ಬಾರ ಪೋಷಾಕವನ್ನು ಹಾಕಿ ಬನ್ನಿರಿ. ಇಲ್ಲವಾದರೆ ಎಲ್ಲಿಯಾದರೂ ಒಂದು ಮೂಲೆಯಲ್ಲಿ ಆರಿಗೂ ಕಾಣದಂತೆ ನಿಲ್ಲಿರಿ. ಪತ್ರಿಕಾ ಕರ್ತರುಗಳ ಸ್ಥಾನಕ್ಕೆ ನಿಮ್ಮನ್ನು ಬಿಡಲಾಗುವದಿಲ್ಲ'ವೆಂದು ನುಡಿದರು. 'ಈ ರೀತಿಯಾಗಿ ಎಲ್ಲಿಯಾದರೂ ಹೇಗಾದರೂ ನಿಂತು ನೋಡುವ ಕಂಗಾಲತನದಿಂದ ನಾವು ಇಲ್ಲಿಗೆ ಬಂದಿಲ್ಲವಾದ್ದರಿಂದ ನಾವು ಹೊರಕ್ಕೇ ಹೋಗುವೆವೆ'ಂದು ನಾವು ಮೊದಲು ಹೇಳಲು ಇದಕ್ಕೆ ನನ್ನದೇನೂ ಅಡ್ಡಿಯಿಲ್ಲವೆಂದು ಉಚ್ಚಸ್ಥಾನದಲ್ಲಿದ್ದ ಮಹಾಸ್ವಾಮಿಗಳು ಉತ್ತರ ಕೊಟ್ಟರು. ಕೂಡಲೇ ನಾವು ಮೂವರು ಹೊರಕ್ಕೆ ಬಂದೆವು. 'ಸ್ವದೇಶಿಮಿತ್ರನ್' 'ಹಿಂದೂ' ಮೊದಲಾದ ಪತ್ರಿಕೆಗಳ ಪ್ರತಿನಿಧಿಗಳು ಸಹ ನಮ್ಮಂತೆ ಸಾದಾ ಉಡುಪನ್ನು ಧರಿಸಿ ಬಂದಿದ್ದರು. ಆದರೆ ಅವರನ್ನು ಒಳಕ್ಕೆ ಬಿಟ್ಟಿದ್ದರು. ಹೀಗೆ ಪಕ್ಷಪಾತತನವನ್ನು ತೋರಿಸಿದ್ದು ಡೆಪ್ಯೂಟೀ ಕಮಿಶನರಿಗೆ ಭೂಷಣವಲ್ಲ. ಇತ್ತ ಮೈಸೂರ ಸರಕಾರದ ಹಿರಿಯ ಅಧಿಕಾರಿಗಳು ಆಮಂತ್ರಣ ಕೊಡುವದು, ಅತ್ತ ಅದೇ ಸರಕಾರದ ಇನ್ನೊಬ್ಬ ಅಧಿಕಾರಿಗಳು ಅದನ್ನು ಅವಮಾನಿಸುವದು. ಮಹಾರಾಜರ ಸರಕಾರಕ್ಕೆ ಒಪ್ಪುವಂತಹದಲ್ಲ. ಆಮಂತ್ರಣ ಪತ್ರಿಕೆಯ ಸಂಗಡಲೇ "ಎಲ್ಲರೂ ದರಬಾರ ಉಡುಪಿನಲ್ಲಿ ಬರಬೇಕು," ಎಂಬದಾಗಿ ಸ್ಪಷ್ಟವಾಗಿ ತಿಳಿಸಿದ್ದರೆ, ಈ ಪ್ರತಿನಿಧಿಗಳು ಆ ಬಗ್ಗೆ ತಕ್ಕ ಏರ್ಪಾಡನ್ನಾದರೂ ಮಾಡುತ್ತಲಿದ್ದರು. ಅಥವಾ ಹೋಗುವದನ್ನಾದರೂ ಬಿಡುತ್ತಲಿದ್ದರು. ಕರ್ನಾಟಕದ ಏಕೀಕರಣ, ಕನ್ನಡಿಗರೆಲ್ಲರೂ ಒಂದೇ ಎಂಬ ಭಾವನೆ, ಕರ್ನಾಟಕ ವಿಶ್ವವಿದ್ಯಾಲಯ, ಇವುಗಳ ಪ್ರಸ್ತಾಪವು ನಡೆದ ಕಾಲದಲ್ಲಿ, ಕರ್ನಾಟಕದ ಹೊರಗಿನ ಪತ್ರಿಕೆಗಳಿಗೆ ಪೋಷಾಕಯಿಲ್ಲದಿದ್ದರೂ ಸಹ ಒಳಕ್ಕೆ ಹೋಗಲು ಅಪ್ಪಣೆಕೊಟ್ಟು, ಕೇವಲ ಅಖಂಡ ಕರ್ನಾಟಕದ ದೃಷ್ಟಿಯಿಂದಲೇ, ಪರಸ್ಪರರ ಪ್ರೀತಿಯು ಹೆಚ್ಚಾಗಿ ಬೆಳೆಯಬೇಕೆಂದು ವಿಚಾರಮಾಡಿ ಬಂದ ಕನ್ನಡ ಪತ್ರಿಕೆಗಳ ಪ್ರತಿನಿಧಿಗಳಿಗೆ ಅಪ್ಪಣೆ ಕೊಡಬಾರದೆಂಬ ಸರ್ವಸಾಧಾರಣ ವಿಚಾರವೂ ಕೂಡ ಡೆಪ್ಯುಟಿ ಕಮಿಶನರ ಸಾಹೇಬರ ದಿವ್ಯದೃಷ್ಟಿಗೆ ಹೊಳೆಯದಿದ್ದುದು ವಿಷಾದದ ವಿಷಯ. ಅಧಿಕಾರವಿದ್ದುದ್ದನ್ನು ದುರುಪಯೋಗ ಮಾಡಿಕೊಳ್ಳುವದು ಆರಿಗೂ ಉಚಿತವಲ್ಲ. ಅದರಲ್ಲಿಯೂ ಡೆಪ್ಯುಟಿ ಕಮಿಶನರರಂತಹ ಜವಾಬ್ದಾರಿಯ ಅಧಿಕಾರಿಗಳಿಗೆ ಸರ್ವಥಾ ಉಚಿತವಲ್ಲ. ಇರಲಿ.

ಚಾಮರಾಜ ನಗರದಿಂದ ಬೆಂಗಳೂರಿಗೆ ಹೋಗಿ ಅಲ್ಲಿ 'ಕನ್ನಡಿಗ' ಹಾಗೂ 'ಕರ್ಮವೀರ' ಗಳ ಪ್ರತಿನಿಧಿಗಳು ದಿವಾಣ ಸಾಹೇಬರನ್ನು ಕಂಡು ಅವರಿಗೆ ಎಲ್ಲ ವಿಷಯವನ್ನು ತಿಳಿಸಲು, ಅವರು ಶಾಂತಚಿತ್ತದಿಂದ ಕೇಳಿಕೊಂಡು, ಈ ಅನುಚಿತವಾದ ಸಂಗತಿಯಿಂದ ತಮಗೆ ವಿಷಾದವಾಗುತ್ತದೆಂದೂ, ಅದನ್ನು ನಾವು ಲಕ್ಷಿಸದೇ, ಮೈಸೂರ-ಮೈಸೂರ ಹೊರಗಿನ ಕನ್ನಡಿಗರ

ಸ್ನೇಹವು ಮೊದಲಿನಂತೆಯೇ ಬೆಳೆಯುವಹಾಗೆ ನಾವು ಪ್ರಯತ್ನಿಸ ಬೇಕೆಂದೂ, ಮುಂದೆ ಹೀಗೆ ಆಗದಂತೆ ತಾವು ಯೋಗ್ಯ ಏರ್ಪಾಡು ಮಾಡುವೆವೆಂದೂ, ಸ್ಥಾನಿಕ ಅಧಿಕಾರಿಗಳ (Over zealous-ness) ಇಲ್ಲದ ಉತ್ಸಾಹದಿಂದ ಹೀಗಾಗುದರಿಂದ ನಾವದನ್ನು ಮರೆಯಬೇಕೆಂದೂ, ಹೇಳಿದರು ಆ ಮೇಲೆ ಕರ್ನಾಟಕ ಏಕೀಕರಣ, ವಿಶ್ವವಿದ್ಯಾಲಯಗಳ ವಿಷಯಗಳಬಗ್ಗೆ ಮಾತನಾಡಿ, ದಿವಾಣರವರ ಅಪ್ಪಣೆಪಡೆದು, ನಮ್ಮ ನಮ್ಮ ಸ್ವಸ್ಥಾನಗಳಿಗೆ ಹೊರಟು ಬಂದೆವು.

ಚಾಮರಾಜ ನಗರ ರೇಲ್ವೇಯ ಆರಂಭ

೨೭ ನೇ ತಾ|| ದಿನ ಶ್ರೀಮನ್ ಮಹಾರಾಜರು ಸಾಯಂಕಾಲದಲ್ಲಿ ಈ ರೇಲ್ವೆಯನ್ನು ಪ್ರಾರಂಭಿಸಿದರು. ಮುನಸಿಪಾಲ್ಟಿ, ಜಿಲ್ಹಾ ಲೋಕಲ್ ಬೋರ್ಡ್, ರೇಲ್ವೇ ಇಲಾಖೆಯ ವರದಿ ಇವೆಲ್ಲ ಮಹಾರಾಜರಿಗೆ ಅರ್ಪಿಸಲ್ಪಟ್ಟ ನಂತರ, ಅವರು ಕನ್ನಡದಲ್ಲಿ ಸಮಯೋಚಿತವಾದ ಉತ್ತರವನ್ನಿತ್ತು ರೇಲ್ವೇ ಹಳಿಯ ಕಂಬಿಯನ್ನು ಕೂಡಿಸುವ ಕೊನೆಯ ಮೊಳೆಯನ್ನು, ಬೆಳ್ಳಿಯ ಬಲ್ಮುಡಿಕೆ (Shanner) ಯಿಂದ ಭದ್ರಪಡಿಸಿದರು ಆ ಮೇಲೆ ಜಯ ಜಯಕಾರದೊಂದಿಗೆ ಮೊದಲನೇ ಸ್ಪೆಶಲ್ ಗಾಡಿಯಲ್ಲಿ ಕುಳಿತು ಮಹಾರಾಜರು ಮೈಸೂರಿಗೆ ಪ್ರಯಾಣ ಬೆಳಸಿದರು. ಆದಿನ ಅಲ್ಲಿ ಜನದಟ್ಟಣೆಯು ವಿಶೇಷವಾಗಿದ್ದಿತು. ಮಹಾರಾಜರು ತಮ್ಮ ಸಹ ಕುಟುಂಬ ಸಹಪರಿವಾರದೊಂದಿಗೆ ಬಂದವರಾಗಿದ್ದರು ಗಾಡಿಯಲ್ಲಿ ತಮ್ಮ ಡಬ್ಬಿಯ ಬಾಗಿಲಿಗೆ ನಿಂತು, ಪ್ರಜೆಗಳ ಕಡೆಗೆ ಪ್ರೇಮಾಂತಃಕರಣದಿಂದ ನೋಡುತ್ತ, ಕೈ ಮುಗಿದುಕೊಂಡು ಪ್ರಯಾಣ ಬೆಳೆಸುತ್ತಿರುವ ರಾಜನನ್ನು ಕಂಡು ಪ್ರಜೆಗಳೆಲ್ಲ ಆನಂದ ಪಡುತ್ತಲಿದ್ದರು. ರಾಜ ಪ್ರಜೆಗಳಲ್ಲಿರುವ ಈ ಬಗೆಯ ಪ್ರೀತಿಯನ್ನೂ ನಿಕಟ ಸಂಬಂಧವನ್ನೂ ಬ್ರಿಟಿಶ್ ಪ್ರಜೆಗಳು ಅನುಭವಿಸುವ ಪ್ರಸಂಗವು ಬರುವದೇ ಇಲ್ಲ. ಶ್ರೀ ಮುಕ್ತಕರ್ನಾಟಕ ಸಿಂಹಾಸನಾಧೀಶ್ವರ ಶ್ರೀಮನ್ಮಹಿಸೂರು ಮಹಾರಾಜರೆಂಬ ಬಿರುದಾವಳಿಯನ್ನು ಮಾನಪತ್ರದಲ್ಲಿ ಓದಿ ಕರ್ನಾಟಕ ಜನಾಂಗಕ್ಕೆ ಈಗಲಾದರೂ ಒರ್ವನಾದರೂ ದೊಡ್ಡ ರಾಜನಿರುವನೆಂಬುದು ನೆನಪಾಗಿ ನಮಗೆ ಬಹು ಆನಂದವಾಯಿತು.

ನಂಜನಗುಡ್ಡ — ಚಾಮರಾಜ ನಗರ ರೇಲ್ವೇಯು ೨೩ ಮೈಲಿವೆ. ಇದು ಮೈಸೂರ ಜಿಲ್ಹಾ ಲೋಕಲ್ ಬೋರ್ಡಿನವರಿಂದ ಕೊನೆಗಾಣಿತು. ಒಂದು ಮೈಲಿಗೆ ೫೨ ಸಾವಿರ ರೂಪಾಯಿಯಂತೆ ವೆಚ್ಚವಾಗಿದೆ. ಜಿಲ್ಹಾ ಬೋರ್ಡಿನವರು ಸಾಲವನ್ನು ತೆಗೆದಿರುವರು. ರೇಲ್ವೇ ತೆರಿಗೆಯನ್ನೂ ವಸೂಲ ಮಾಡಿರುವರು ಮೈಸೂರ ಸರಕಾರದವರು ನೂರಕ್ಕೆ ೮ ರಂತೆ ಬಡ್ಡಿ ಕೊಡಲು ಭರವಸೆ ಕೊಟ್ಟಿರುವರು ಒಟ್ಟಿಗೆ ೨೧೭ ಜನರು ಸಾಲಕೊಟ್ಟಿದ್ದಾರೆ. ೧೧ ಲಕ್ಷ ರೂಪಾಯಿಗಳು ಈಗಾಗಲೇ ವೆಚ್ಚವಾಗಿವೆ. ಇನ್ನೂ ಅರ್ಧ ಲಕ್ಷ ರೂಪಾಯಿ ಕಾರ್ಯವು ಆಗಬೇಕಾಗಿದೆ ಮೈಸೂರಿನಲ್ಲಿಯ ಉಳಿದ ಜಿಲ್ಹಾ ಬೋರ್ಡಿನವರು ಮುಂದೆ ಬಂದರೆ ಅವರಿಗೆ ಸಹ ಬಡ್ಡಿಯ ಭರವಸೆಯನ್ನು ಕೊಡಲು ಮೈಸೂರ ಸರಕಾರವು ಸಿದ್ಧವಿದೆಂದು ಮಹಾರಾಜರು ಹೇಳಿದರು. ಈ ರೇಲವೆಯನ್ನು ಕೊಯಿಮುತ್ತೂರ ಜಿಲ್ಹೆಯ ಕೊಳ್ಳೇಗಾಲ ತಾಲೂಕಿನೊಳಗಿಂದ ಹಾಯಿಸಿ, ಗೋಪಿಚೆಟ್ಟಿಪಾಳ್ಯದ ಮೆಟ್ಟೂಪಾಲದವರೆಗೆ ಒಯ್ಯುವ ವಿಚಾರವಿದೆ. ಹೀಗೆ ಏರ್ಪಟ್ಟಾದ ಕೂಡಲೇ ಮದರಾಸದ ಪ್ರಾಂತದವರಿಗೆ ತೀರ ದಕ್ಷಿಣದ ಕಡೆಗೆ ಹೋಗಲು ಮೈಸೂರ ಪ್ರಾಂತದೊಳಗಿಂದ ನೇರವಾದ ಮಾರ್ಗವು ದೊರೆತಂತಾಗುವದೆಂದು ಮಹಾರಾಜರು ಹೇಳಿದರು. ಉತ್ತರ ಹಿಂದುಸ್ಥಾನದಿಂದ ಕೊಲಂಬೋಕ್ಕೆ ಹೋಗುವವರಿಗೆ ಇದೇ ಮಾರ್ಗವು ಸಮೀಪವಾಗುವದು. ಮಂಗಳೂರ, ನೀಲಗಿರಿ, ಕೊಯಿಮುತ್ತೂರಿನ ಕನ್ನಡಿಗರು ಉತ್ತರ ಹಾಗೂ ಮೈಸೂರ ಕನ್ನಡಿಗರ ಸಂಗಡ ಸ್ನೇಹಾಭಿವೃದ್ಧಿಗೊಳಿಸಲಿಕ್ಕೂ ಇದು ಉಪಯೋಗವಾಗುವದು.

(೫ ನೇ ಪುಟದಿಂದ ಬಂದಿದ್ದು.)

ಲಕ್ಷ ಹನ್ನೆರಡು ಸಾವಿರ ರೂಪಾಯಿಗಳನ್ನು ತಕ್ಕೊಂಡು ನಾಲ್ವರೂ ತಮ್ಮ ಬಾಧ್ಯತೆಯನ್ನು ಬಿಟ್ಟರು. ಟಾಯಿಮ್ಸದಲ್ಲಿ ಎಂಭತ್ತು ನಾಲ್ಕು ಸಾವಿರ ರೂಪಾಯಿ ತಕ್ಕೊಂಡು ಬಿಟ್ಟರೆಂದು ಪ್ರಸಿದ್ಧವಾಗಿರುತ್ತದೆ. ಆ ಪತ್ರಿಕಕಾರರಿಗೆ ಯೋಗ್ಯವಾದ ಸುದ್ದಿಯನ್ನು ತಿಳಿಸದ್ದರಿಂದ ಅವರು ಹೀಗೆ ಪ್ರಸಿದ್ಧಿಸಿರಬಹುದು ಇರಲಿ. ಇಲ್ಲಿಯವರೆಗೆ ಸಂಕ್ಷಿಪ್ತ ಚರಿತ್ರೆಯನ್ನು ಬರೆದಂತಾಯಿತು. ಆದರೆ ಇದರ ನಿಜ ಸಂಗತಿಯನ್ನು ವಿಚಾರಿಸಲು ಜಗಳಕ್ಕೆ ಮೂಲ ಕಾರಣರಾದ ದಂಡಾವತಿಯವರನ್ನು ಆ ಕೆಲಸದಿಂದ ತೆಗೆದು ಮತ್ತೊಬ್ಬರನ್ನು ನಿಯಮಿಸಿದ್ದರೆ ಇಷ್ಟು ದೂರ ವರೆಗೆ ಬೆಳೆಯುತ್ತಿರಲಿಲ್ಲ. ಒಬ್ಬನ ಸಲುವಾಗಿ ಸಮಾಜದಲ್ಲಿಯ ಕೆಲವು ಮುಖಂಡ ಜನರ ಅಪ್ರೀತಿಯನ್ನು ಸಂಪಾದಿಸಿದ್ದು ಶ್ರೀ ಶಿವಯೋಗ ಮಂದಿರದ ಸಂಸ್ಥೆಯವರಿಗೆ ಭೂಷಣವಲ್ಲ. ದಂಡಾವತಿಯವರು ಬೇಕಾದಷ್ಟು ಉತ್ತಮ ರೀತಿಯಿಂದ ಕೆಲಸ ಮಾಡಿದರೂ ಅವರ ಇತರ ವರ್ತನದಿಂದ ಸಂಸ್ಥೆಯ ಅಭಿವೃದ್ಧಿಗೆ ಬಾಧೆಯು ಬರಲಿಕ್ಕೆ ಹತ್ತಿರುತ್ತದೆ. ಸಂಸ್ಥೆಯ ಟ್ರಸ್ಟೀ ಜನರಲ್ಲಿಯೂ ಹಲವು ಹಟಮಾರಿಗಳಾದ ಪ್ರಮುಖರು ಇದ್ದಾರೆ. ಅವರ ಹಟವೂ ಈ ಜಗಳ ಬೆಳೆಯಲಿಕ್ಕೆ ಕಾರಣವಾಯಿತು. ಇನ್ನು ಮೇಲೆ ಯಾದರೂ ಟ್ರಸ್ಟೀ ಜನರು ತಮ್ಮ ಸಂಸ್ಥೆಗೆ ಬಂದ ಈ ಕಲಂಕವನ್ನು ಕಳೆದುಕೊಳ್ಳುವದಕ್ಕಾಗಿ ದಂಡಾವತಿಯವರನ್ನು ಆ ಕೆಲಸದಿಂದ ತೆಗೆದರೆ ಬಿಟ್ಟು ಹೋದ ಪಾಲುಕಾರರು ಮತ್ತೆ ಮೊದಲಿನಂತೆ ಈ ಪವಿತ್ರ ಕಾರ್ಯದಲ್ಲಿ ಮನಸು ಹಾಕುತ್ತಾ ನಡೆಯಬಹುದು. ಇದು ಹಾಗೇ ಇರಲಿ ಹೀಗೆ ಮಾಡಿದರೆ ಕೇವಲ ದಂಡಾವತಿಯವರ ಪಕ್ಷದಿಂದಲೇ ಜಗಳವನ್ನು ಬೆಳಸಿದ್ದರೆಂಬುವ ಲೋಕಾಪವಾದವು ದೂರವಾಗಿ ಶ್ರೀ ಸಂಸ್ಥೆಯು ಪಕ್ಷಪಾತವಿಲ್ಲದೆ ನಡೆಯುವದೆಂತ ತಿಳಿಯುತ್ತದೆ. ಹೀಗೆ ಮಾಡುವದನ್ನು ಬಿಟ್ಟು ಇಂಥ ನೂರಾರು ಪ್ರಶ್ನೆಗಳನ್ನು ಹಾಕಿ ಉತ್ತರ ಬೆಳಸಿದರೂ ಸಮಾಜದ ಅವಿಶ್ವಾಸವು ಹೆಚ್ಚಾಗಿ ಸಂಸ್ಥೆಯ ಧ್ಯೇಯಕ್ಕೆ ಭಂಗ ಬಂದು ಇದು ಕೆಲ ಸ್ವಾರ್ಥಾಭಿಮಾನಿ ಶ್ರೀಮಂತ ಸಂಸ್ಥೆಯಾಗುವದು. ಇದನ್ನು ಟ್ರಸ್ಟೀ ಜನರು ಅಗತ್ಯವಾಗಿ ವಿಚಾರ ಮಾಡತಕ್ಕದ್ದು. ಅಂತ ನನ್ನ ವಿನಯಪೂರ್ವಕ ಪ್ರಾರ್ಥನಾ ಅದೆ.

ಸಮಾಜ ಹಿತೈಷಿ ಗದಗ

(ಶ್ರೀ ದಂಡಾವತಿಯವರು ಉತ್ತಮ ಕೆಲಸ ಮಾಡಿರುವರೆಂದು ಬರಹದಿಂದ ಸೂಚಿತವಾಗುತ್ತಲಿದೆ. ಹೀಗಿದ್ದು ಅವರನ್ನು ಏಕೆ ತೆಗೆಯಬೇಕು? ಬಹು ಜನರು ಒಮ್ಮೊಮ್ಮೆ ತಪ್ಪು ದಾರಿಯನ್ನು ಹಿಡಿಯುವದಿಲ್ಲವೋ?

"ಸಂಪಾದಕ ಕನ್ನಡಿಗ."

ವ್ಯವಹಾರದಲ್ಲಿ ವಿಮರ್ಶೆ.

ವಿಮರ್ಶೆ ಏನೆಂಬುದು ಎಲ್ಲರಿಗೂ ಗೊತ್ತಿದೆ. ಆದರೆ ವಿಮರ್ಶೆ ಮಾಡಬೇಕು ಹೇಗೆ? ನಿತ್ಯ ವ್ಯವಹಾರದಲ್ಲಿ ವಿಮರ್ಶೆಯ ಉಪಯೋಗವನ್ನಾದರೂ ಹೇಗೆ ಮಾಡಬೇಕು ಎಂಬುದು ಎಲ್ಲರಿಗೂ ಗೊತ್ತಿದ್ದಲ್ಲ. ನಮ್ಮ ಕರ್ನಾಟಕ ಸಮಾಜದಲ್ಲಿ ಅಥವಾ ವಿಶೇಷವಾಗಿ ವಿನೀತ ಸಮಾಜದಲ್ಲಿ ವಿಮರ್ಶೆಗೆ ಎರಡೇ ಎರಡು ವೈಗಳಿರುತ್ತವೆ. ಒಂದು ಚಲೋದು ಇಲ್ಲವಾದರೆ ಕೆಟ್ಟದು. ಬರೆಯುವಾಗ್ಗೆ ವಿಮರ್ಶಕರು ಬಿಡಿಬಿಡಿಸಿ ಸುಲಭವಾಗಿ ಬರೆಯಬಹುದು ಆದರೆ ಮಾತಾಡುವಾಗ್ಗೆ ಮಾಡುವ ವಿಮರ್ಶೆಯು ಸಂಕ್ಷೇಪವಿರುತ್ತದೆ. ಅಂತೇ ಸರಿಯಾಗಿ ಮಾಡುವದಕ್ಕೆ ನುರಿತ ಬಾಯಿಯು ಬೇಕು. ಆದರೆ ನಾವು ಮೇಲೆ ಹೇಳಿದಂತೆ ಯಾವದೇ ವಿಷಯಕವಾಗಲಿ 'ಇದ್ದರೆ ದೇವರು ಇಲ್ಲದಿದ್ದರೆ ದಾನವರು' ಎಂಬ ವಿಮರ್ಶೆಗಳು ಜನದಲ್ಲಿ ಬಹಳ. ಯಾವದೇ ಮಾತನ್ನು ಕುರಿತು ಕೇಳಲಿ ಸ್ವಚ್ಛಂದಾನುಸಾರವಾಗಿ ಹೌದು ಎಂದಾದರೂ ಅಲ್ಲವೆಂದಾಗಲೀ ಗೋಣು ಹಾಕಿದರೆ ಆ ಮಾತಿನ ಬೆಲೆಯನ್ನು ಕಟ್ಟಿ ಒಗೆದಂತಾಯಿತೆಂದು ಸರ್ವ ಸಾಮಾನ್ಯವಾದ ತಿಳುವಳಿಕೆ, ಇನ್ನೇನು ಬಹಳ ಚಲೋದಾದರೆ "ಭಯಂಕರ" ವೆಂದೂ, ಬಹಳ ಕೆಟ್ಟದಾದರೆ 'ಹೊಲಸ'ಂದು ಹೇಳುವ ಸೂತ್ರ ರೂಢಿಯು ಕನ್ನಡಿಗರಲ್ಲಿ ಕಂಠಸ್ಥಿತವಾಗಿದೆ! ಈ ಸಾಂಪ್ರದಾಯಕ್ಕೆ ಯೋಗ್ಯವೆನ್ನುವ ಅನುಭವಿಕರೂ ಉಂಟು. ಅವರ ಮತವೇನು? ಹಾದಿಯಲ್ಲಿ ಹೋಗುವಾಗ ಅಭಿಪ್ರಾಯವನ್ನು ಕೇಳಿದಂತೆ ಕೇಳಿದರೆ ಮಿತಾಕ್ಷರಗಳಿಂದ ಮಾಡುವ ವಿಮರ್ಶೆಯೇ ತಕ್ಕದು. ಹೆಚ್ಚೆಚ್ಚು ಹೇಳುತ್ತ ನಿಂತರೆ, ಸಣ್ಣ ಪುಟ್ಟ ವಿಷಯಗಳಿಗೆ ಎಷ್ಟು ಕೊಚ್ಚುವರೆಂದು ಯಾರಾದರೂ ಅನ್ನಬಹುದು. ಇದೇನೋ ಸತ್ಯ; ಆದರೆ ಸಂಕ್ಷೇಪವಾಗಿಯೂ ತಕ್ಕ ವಿಮರ್ಶೆಯನ್ನು ಮಾಡಬೇಕೆಂಬುದು ಇಲ್ಲಿ ಹೇಳತಕ್ಕ ಮಾತು. ವಿಮರ್ಶೆಗೆ ಯೋಗ್ಯವಾದ ವಸ್ತುಗಳು ಬರಿಯ ಚಲೋದಾಗಲಿ ಅಥವಾ ಕೆಟ್ಟದಾಗಲಿ ಇರುವದಿಲ್ಲ. ಬೇರೆ ಬೇರೆ ಗುಣಗಳಿವೆ. ಅಲ್ಲಿ ತಕ್ಕ ಗುಣವನ್ನು ಅರಿಸಿ ಆಯಾ ವಸ್ತುವಿಗೆ ನಾವು ಬೆಲೆ ಕಟ್ಟಬೇಕು. ಬೆಣ್ಣೆಯವರು ಸರಿಯಾದ ತೂಕವನ್ನು ಮಾಡಬೇಕೆಂದು ಹೇಗೆ ನಮ್ಮಿಚ್ಛೆಯೋ, ಅಂಗಡಿಯವರು ಬದಕು ನೋಡಿ ಬೆಲೆ ಕಟ್ಟಬೇಕೆಂದು ಹೇಗೆ ನಮ್ಮ ಯತ್ನವೋ, ಹಾಗೆಯೇ ಈ ವ್ಯವಹಾರ ವಿಮರ್ಶೆಯಲ್ಲಿ ಇರಲಿಕ್ಕೆಬೇಕು. ಒಂದು ನಾಟಕವನ್ನು ನೋಡಿದ ಮೇಲಾಗಲಿ, ಪುಸ್ತಕವನ್ನು ಓದಿದ ಕೂಡಲಾಗಲಿ, ಹಾಡುಗಾರನನ್ನು ಕೇಳಿದ ನಂತರವಾಗಲಿ, ನಾವು ಸಹಜವಾಗಿ ಒಬ್ಬರಿಗೊಬ್ಬರು ಅಭಿಪ್ರಾಯವನ್ನು ಕೇಳುವದುಂಟು. ಆಗಿನ ವಿಮರ್ಶೆಯು ಬಹುತರವಾಗಿ ನಮ್ಮ ಮನಸ್ಸಿನ ತಾತ್ಕಾಲಿಕ ಸ್ಥಿತಿಯನ್ನಾಗಲಿ ಅಥವಾ ನಮ್ಮ ಮೂಲ ಸ್ವಭಾವವನ್ನಾಗಲಿ ಅನುಸರಿಸಿ ಇದ್ದುಬಿಡುತ್ತದೆ. ಅಂತೇ ಆ ಕಲೆಯ ತಕ್ಕ ಗುಣದೋಷಗಳನ್ನು ನಾವು ಹುಡುಕಿ ತಿಳಿಸುವದಿಲ್ಲ. ಬಹಳಾದರೆ 'ಸಾಧಾರಣ' ವೆನ್ನುವದು. ಎರಡೂ ದಂಡೆಯ ಮೇಲೆ ಕೈಯಿಡುವ ಕೆಲವರ ಬೇಸತ್ತ ಮಾತು. ಹೀಗಾಗಿ ನಮಗೆ ತಲೆಶೂಲೆ ಎದ್ದಿದ್ದರೆ, ಹಾಡು ಕೆಟ್ಟೆ ನಮಗೆ ನಿದ್ದೆ ಬಂದಿದ್ದರೆ ಕೆಟ್ಟ ನಾಟಕ ಅಥವಾ ನಾವು ಸಂತೋಷ ಮನಸ್ಕರಾಗಿದ್ದರೆ ಎಂಥ ಜಗದಯ್ಯನ ಆಟವೇ ಆಗಲಿ ನಾವೂ ಕುಣಿಯುತ್ತೇವೆ. ಇನ್ನು ನಾವು ಸಂಗೀತ ಶತ್ರುಗಳೆಂದು ನಮ್ಮ ಗ್ರಹವನ್ನೇ ಹುಟ್ಟಿಸಿಕೊಂಡಿದ್ದೆವೆಂದರೆ ಅದೊಂದು ನಮ್ಮ ಸ್ವಭಾವವಾಗಿ ಆದರ ಕಚ್ಚಿನಿಂದ ಮಧುರವಾದ ಹಾಡುಗಳನ್ನು ಸಹ ಕೇಳದಷ್ಟು ನಮ್ಮ ಕಿವಿಯು ಗಡಚಾಗುತ್ತದೆ. ಹೀಗೆ ವಿಮರ್ಶೆಯು ವಿಪರೀತವಾದ ಮನೋಲಹರಿಗಳಗುಂಟ ಹರಿದರೆ ವ್ಯವಹಾರದಲ್ಲಿ ಬೇಕಾದ ತಕ್ಕ ವಿಮರ್ಶೆಯು ಉಂಟಾಗುವದಿಲ್ಲ. ಇನ್ನು ವ್ಯವಹಾರಕ್ಕಾಗಿಯೇ ಕೆಲವರು ಗಾಯಕರ ಮೋರೆಯ ಮುಂದೆ ಹೇಗೆ ಅನ್ನಬೇಕೆಂದು ಅಂಜಿ ವಾಹವಾ ಮಾಡುತ್ತಾರೆ. ಆವಾಗ ನಮಗೆ ಸಂಗೀತದಲ್ಲಿ ಸಂಪೂರ್ಣ ಜ್ಞಾನವಿಲ್ಲವಿದ್ದರೆ, ಗಾಯಕರನ್ನು ಏರಿಸಿ ಕೂಡ್ರಿಸುವದಕ್ಕೋಸ್ಕರ ಖಾಶೀ ಖಾಶೀ ಎನ್ನಲಿಕ್ಕೆ ಅಡ್ಡಿಯಿಲ್ಲ. ಆದರೆ ನಮ್ಮದೆಂದು ಹಿಂಜರಿಯದೆ ಅಭಿಪ್ರಾಯ ಕೊಡುವಷ್ಟು ಸರಿಸಮಾನ ಯೋಗ್ಯತೆಯಿದ್ದಲ್ಲಿ ಅಲ್ಲಿಯೇ ಖಂಡಿಸಲಿಕ್ಕೆ ಯಾರದೂ ಅಡ್ಡಿಯಿರಕೂಡದು. ಇನ್ನು ವಿಮರ್ಶಿಸುವ ಯೋಗ್ಯತೆಯಿದ್ದರೂ ಇದುರಿಗೆನ್ನುವಂಥ ಪಾತಕವು ಬೇರೊಂದಿಲ್ಲ ಎಂದು ಎಷ್ಟೋ ಮಾನವಂತರ ಅಂಬೋಣ. 'ಪಾಪಾ ಮನುಷ್ಯನಲ್ಲಿ ದೋಷಗಳಿರತಕ್ಕವೆ? ನಾವು ಯಾಕೆ ಕೇಡನ್ನು ಬಗೆಯಬೇಕು' ಎಂದು ಅವರ ಆಕ್ಷೇಪಣೆ. ಅದಕ್ಕೆ ನಮ್ಮ ಉತ್ತರವಿಷ್ಟೇ! ಇಂಥಿಂಥ ದೋಷಗಳಿವೆ ಎಂದು ಅಂತಃಕರುಣದಿಂದ ಹೇಳಲಿಕ್ಕೆ ಯಾರೂ ಹೆದರುವ ಕಾರಣವಿಲ್ಲ. ಅದರಿಂದ ಹೇಳುವವನೇನು ದೋಷಮುಕ್ತನೆಂದು ಸಿದ್ಧವಾಗುವದಿಲ್ಲ. ಆದರೆ ನಮ್ಮ ಮೋರೆಯನ್ನು ನಮಗೇ ನೋಡಲಿಕ್ಕೆ ಬರುವದಿಲ್ಲ. ಅಂತೇ ಇಷ್ಟಮಿತ್ರರು ನಮಗೆ ಕನ್ನಡಿಯಿದ್ದಂತೆ ಬೇಕಾದರೆ ಒಬ್ಬೊಬ್ಬರ ಮೃದುಲವಾದ ಮನಸ್ಸನ್ನು ಅರಿತುಕೊಂಡು, 'ನಾನು ಸ್ವಚ್ಛವಾಗಿ ಹೇಳುವದಕ್ಕೆ ಕ್ಷಮಿಸಿರಿ' ಎಂದು ಬೇಡಿಕೊಂಡರೆ ಯಾವ ಅನರ್ಥ ಪರಂಪರೆಗಳೂ ಸಂಭವಿಸುವದಿಲ್ಲ. ಇಲ್ಲಿ ಲಕ್ಷ್ಯದಲ್ಲಿಡತಕ್ಕ ಇನ್ನೊಂದು ಮಾತೆಂದರೆ, ಸ್ಪಷ್ಟವಾಗಿ ಇದುರಿನಲ್ಲಿ ಹೇಳುವ ವಿಮರ್ಶೆಯಲ್ಲಿ ಕೇವಲ ಟೀಕೆಯೇ ಇರಕೂಡದು. ದೋಷರಹಿತವಾದ ಗುಣಗಳನ್ನು ಹೇಳಿ ಅವರವರ ಜೀವನ ಯೋಗ್ಯತೆಯನ್ನು ಅವರಿಗೆ ಕಾಣಿಸಿ, ದೋಷಗಳನ್ನು ಹೇಗೆ ನಾಶಿಸಬೇಕೆಂಬುದರ ಉಪಾಯಗಳನ್ನು ಸೂಚಿಸಬೇಕು. ಅಂದರೆ ನಿಜವಾದ ತಕ್ಕ ವಿಮರ್ಶೆ.

ಈಗಿನ ಕನ್ನಡ ನುಡಿಯ ಒಲವುಗಳು.

(ಬರಹ ೧)

ಕನ್ನಡನಾಡು ಒಮ್ಮೆ ವೈಭವದ ಬೀಡಾಗಿದ್ದಿತು. ಆಗ ಅದರ ನುಡಿಯು ಒಳ್ಳೆ ಬೆಡಗಿನಿಂದ ಮೆರೆಯುತಲಿದ್ದಿತು. ಮೊದಲಿನ ಮಹಾಕವಿಗಳಾದ ಪಂಪ ರನ್ನ, ಪೊನ್ನ, ಮೊದಲಾದವರು ಸಾಹಿತ್ಯದ ಮುಗಿಲಿನಲ್ಲಿ ಚಿಕ್ಕೆಗಳಂತೆ ಇನ್ನೂ ಬೆಳಗುತ್ತಲಿರುವರು. ಇನ್ನು ಮುಂದಾದರೂ ಬೆಳಗುವವರೇ ಎಂಬಿವೇ ಮೊದಲಾದ ಅಭಿಮಾನದ ಉಕ್ತಿಗಳನು ಕೇಳಿಕೇಳಿ ಎಲ್ಲರಿಗೂ ಸಾಕಾಗಿರಬಹುದು. ಹಾಡಿದ್ದನ್ನೇ ಹಾಡಿ ಮನಸ್ಸಿಗೆ ಎಂದೂ ಸೊಗಸುವದಿಲ್ಲ. ತುಂಬಿಯು ಹೇಗೆ ಅಭಿನವ ಮಧುಲೋಲುಪವಾಗಿರುವುದೋ ಹಾಗೆಯೇ ಜನರಾದರೂ ನವರಸರಾಗವುಳ್ಳವರಿರುವರು. ಆದುದರಿಂದ ನಾವು ಹಿಂದಣ ಕಾಲದ ವೈಭವದ ಗೊಡವೆಗೆ ಹೋಗದೆ, ಈಗಿನ ಕಾಲದಲ್ಲಿಯ ಕನ್ನಡದಲ್ಲಿಯ ನಾವೀನ್ಯವನ್ನೂ ರುಚಿಯನ್ನೂ ಜನರಿಗೆ ತೋರಿಸುವೆವು. ಹೀಗೆ ಮಾಡುವದಕ್ಕಿಂತ ಮೊದಲು ಕನ್ನಡವು ಏಕೆ ಪ್ರಗತಿ ಹೀನವಾಯಿತೆಂಬುದನ್ನು ಮೊದಲು ನೋಡಿ ಮುಂದೆ ಸಾಗುವಾ!

ಕನ್ನಡ ನಾಡಿನ ಸ್ವಾತಂತ್ರ್ಯವು ನಷ್ಟವಾದೊಡನೆ, ಅದರ ಬೆಳಗೆಯು ಕುಗ್ಗಿತು. ನುಡಿಯ ಬೆಳವಣಿಗೆಯಾದರೂ ಹಿಮ್ಮೆಟ್ಟಿತು. ಅದಕ್ಕೆ ರಾಜಾಶ್ರಯವಿಲ್ಲದಂತಾಯಿತು. ಕವಿಗಳಿಗೂ, ಬರಹಗಾರರಿಗೂ ನಿರಾಧಾರತೆಯು ಪ್ರಾಪ್ತವಾಯಿತು. ನಾಡು ಪರಭಾಷೆ

ಯವರ ಕೈಸೇರಿತೆಂದೊಡನೆ ಆರ್ಥಿಕ ಹಾನಿಯಂತೂ ಕಟ್ಟಿಟ್ಟದ್ದೇ ಅದರೊಡನೆ ಸಾಂಸ್ಕೃತಿಕ ಹಾನಿಯಾದರೂ ತಟ್ಟುವುದೆ? ಇದಕ್ಕೆ ಒಂದೇ ಉದಾಹರಣೆಯನ್ನು ಕೊಡುವೆವು. ದೇಶವು ಮರಾಠಿಗರ ಕೈ ವಶವಾದೊಡನೆ, ಮರಾಠಿಯೇ ಓಲಗದ ಭಾಷೆಯಾಯಿತು. ಕಾಗದ ಪತ್ರಗಳೆಲ್ಲ ಮರಾಠಿಯಲ್ಲಿ ಪ್ರಾರಂಭವಾದುವು. ಅಧಿಕಾರಿಗಳೊಡನೆ ಮಾತಾಡಬೇಕಾದರೆ, ಮರಾಠಿ ಭಾಷೆಯ ಜ್ಞಾನವು ಬೇಕಾಗುತ್ತಿತ್ತು. ಆದುದರಿಂದ ಮರಾಠೀ ಶಾಲೆಗಳ ಅವಶ್ಯಕತೆಯು ಉಂಟಾಯಿತು. ಹೀಗಾಗಿ ಎಲ್ಲ ರೀತಿಯಿಂದಲೂ ಕನ್ನಡ ನುಡಿಗೆ ಅಡ್ಡಿಗಳುಂಟಾದುವು. ಕನ್ನಡದ ಕುಗ್ಗಿಗೆ ಅನ್ಯಭಾಷೆಯವರ ಆಧಿಪತ್ಯವೇ ಕಾರಣವು. ಕನ್ನಡದ ಪ್ರತಿಭೆಯು ಅಲ್ಲಿಂದಲ್ಲೇ ತನ್ನನ್ನು ಹಿಡುಕಿಕೊಂಡು ಸತ್ತು ಹೋಯಿತು. ನಾಡಿನ ಸಂತೆಯು ಮುಗಿಯಿತು.

ಈಗ ಆಂಗ್ಲರ ಆಳಿಕೆಯಿರುವುದು. ರಾಜಕೀಯ ಕಾರಣಗಳನ್ನು ಮುಂದಿಟ್ಟುಕೊಂಡು ಅವರು ನಮ್ಮ ನಾಡನ್ನು ಹರಿದು ಹಂಚಿ ಬೇರೆ ಬೇರೆ ಜನರಿಗೆ ಕೊಟ್ಟು ಬಿಟ್ಟಿದ್ದಾರೆ. ತೆಲುಗರಿಗೊಂದು ತುಣುಕು ತಮಿಳರಿಗೊಂದು ಮರಾಠಿಗರಿಗೊಂದು ತುಣುಕು. ಹೀಗೆ ತುಣುಕು ತುಣುಕಾಗಿ ಹೋಗಿರುವಲ್ಲಿ ನಾಡಿಗರಲ್ಲಿ ಐಕ್ಯದ ಭಾವನೆಯು ಬರುವದಾದರೂ ಎಂತು? ಜನರಿಗೆ ತಮ್ಮ ತಾಯಿನುಡಿ ಯಾವದೆಂಬುದರ ಬಗ್ಗೆ ಅರಿವು ಇಲ್ಲದಿರಲು, ಅದರ ವಿಷಯದಲ್ಲಿ ಅಭಿಮಾನವಿರುವದಾದರೂ ಹೇಗೆ? ಇಂತಹ ಪರಿಸ್ಥಿತಿಯಲ್ಲಿ ಹೆಚ್ಚಳದ ಮಾತೆತ್ತುವುದು ಮೂರ್ಖತನವೇ ಸರಿ! ಇದ್ದುದನ್ನು ಕೂಡ ಕಾಯುವದು ಕಷ್ಟವಾಗಿ ಹೋಗಿದೆ. ನುಡಿಗೆ ಹೀನಾವಸ್ಥೆಯು ಒಂದೊದಗಿದೆ

ಈಗೇನೋ ಒಂದು ಸ್ವಲ್ಪ ಎಚ್ಚರಿಕೆಯಾಗಿದೆ. 'ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯ' ಮೊದಲಾದವುಗಳ ಬಗ್ಗೆ ನಾಡಿನಲ್ಲೆಲ್ಲ ಎಲ್ಲ ಬಗೆಯ ಜನರೂ ಮಾತಾಡುತ್ತಲಿರುವರು. ಅವುಗಳನ್ನು ಸಾಧ್ಯ ಮಾಡಿಕೊಳ್ಳುವ ಭರದಿಂದ ಚಟುವಟಿಕೆಗಳನ್ನು ನಡೆಯಿಸಿರುವರು. ಏಕೀಕರಣದ ಪ್ರಶ್ನೆಯು ಮುಂದಕ್ಕೆ ಬರಲು ರಾಷ್ಟ್ರೀಯ ಮಹಾ ಸಭೆಯಲ್ಲಿಯ ಭಾಷಾವಾರ ಪ್ರಾಂತರಚನೆಯ ಗೊತ್ತುವಳಿಯೇ ಕಾರಣವು ಒಂದೇ ಭಾಷೆಯನ್ನಾಡುವವರು ಒಂದೇ ಪ್ರಾಂತದಲ್ಲಿದ್ದು, ಒಂದೇ ಅಧಿಪತ್ಯಕ್ಕೊಳಪಟ್ಟರೆ, ಎಲ್ಲ ರೀತಿಯಿಂದಲೂ ಅವರ ಉನ್ನತಿಯಾಗುವುದು. ತಮ್ಮ ಉನ್ನತಿಯನ್ನು ಮಾಡಿಕೊಂಡು, ಜಗತ್ತಿಗೆ ನೆರವಾಗಲು ಅವರು ಸಿದ್ಧರಾಗುವರು. ಈ ಭಾರತ ದೇಶದ ಉನ್ನತಿಯು, ಅದರೊಳಗಣ ಬೇರೆ ಬೇರೆ ಪ್ರಾಂತಗಳ ಉನ್ನತಿಯನ್ನವಲಂಬಿಸಿದೆಂಬ ತತ್ವವು ಮಹಾಸಭೆಗೆ ತಿಳಿದಿರುವದರಿಂದಲೆ, ಅದು ಆಯಾ ಪ್ರಾಂತಗಳ ಹಿತಕ್ಕಾಗಿ ಅನುಕೂಲವಾಗುವಂತೆ ಗೊತ್ತುವಳಿಗಳನ್ನು ಮಾಡಿರುವುದು.

ಇದು ರಾಜಕಾರಣದ ದೃಷ್ಟಿಯಿಂದಾಯಿತು. ಕ್ಷಾತ್ರತೇಜಕ್ಕಿಂತಲೂ ಬ್ರಹ್ಮ ತೇಜವು ಹೇಗೆ ಮಿಗಿಲಾದುದೋ ಹಾಗೆಯೇ ಲೆಕ್ಕಣಿಕೆಯ ಬಲವು ಶಸ್ತ್ರಾಸ್ತ್ರ ಬಲಕ್ಕಿಂತಲೂ ಸಾವಿರಪಾಲು ಮೇಲು. ಅಧಿಕಾರದ ಬಲದಿಂದ ಕೆಲಸವಾಗುವದೇನೋ ನಿಜ! ಆದರೆ ಅದಕ್ಕಿಂತ ತೀವ್ರ ಲೆಕ್ಕಣಿಕೆಯಿಂದ ಆಗುವುದು. ಬರಹಗಾರರು ಎಚ್ಚತ್ತು ನೋಡಿದರೆಂದರೆ ಸಾಕು. ಹೊಸ ಸೃಷ್ಟಿಯು ಮೂಡುವದು, ಹೊಸ ಯುಗವು ತಲೆದೋರುವುದು, ಅವರು ಒಂದು ಈ ರೀತಿಯಿಂದ ದ್ರಷ್ಟಗಳಿರುವರು. ಸಾಮಾನ್ಯ ಜನರಿಗೆ ಕಾಣದ ನೋಟಗಳು ಅವರಿಗೆ ಕಾಣುವವು. ಮುಂದಿನ ಸ್ವಪ್ನಗಳು ಅವರಿಗೆ ಬೀಳುವವು. ತಾವು ಕಂಡದ್ದನ್ನು ಜನರಿಗೆ ಹೇಳಲು ವಾಣಿಯ ಬಲವಿರುವುದು. ಲೆಕ್ಕಣಿಕೆಯ ಬೆಂಬಲವಿರುವುದು. ಎಲ್ಲ ನಾಡುಗಳ ಇತಿಹಾಸವು ಇದನ್ನೇ ಸಾರುತ್ತಿದೆ. ಫ್ರಾನ್ಸದೇಶದಲ್ಲಿ ಕ್ರಾಂತಿಯನ್ನುಂಟು ಮಾಡಿದವರೇ ಬರಹಗಾರರು. ಇಂಗ್ಲಂಡ ದೇಶವನ್ನು ಆಳುವವರಾದರೂ ಬರಹಗಾರರೇ! ಎಲ್ಲಿ ನೋಡಿದಲ್ಲಿಯೂ ಬರಹಗಾರರಿಗೆಯೇ ಬಲವಿರುವುದು. ನಿಜವಾಗಿ ಆಳುವವರೆಂದರೆ ಅವರೇ. ಇದಕ್ಕೆ ನಮ್ಮ ಕನ್ನಡ ನಾಡೇನು ಅಪವಾದವಾದುದಲ್ಲ. ಕನ್ನಡ ನಾಡಿನಲ್ಲಿಯಾದರೂ ಬರಹಗಾರರು ಮೆಲ್ಲ ಮೆಲ್ಲನೆ ತಮ್ಮ ಪ್ರಭಾವವನ್ನು ತೋರಿಸ ತೊಡಗಿದರು. ಬರಹಗಾರರು ನಾಡಿನ ಹಾಡುಗಳನ್ನು ಕಟ್ಟಿ ಜನರಿಗೆ ಅವುಗಳನ್ನೊಪ್ಪಿಸುವರು. ಹಿಂದಣ ವಿಭೂತಿಗಳ ಚರಿತ್ರಗಳನ್ನು ಬರೆದು ಜನರ ಮುಂದೆ ಇಡುವರು. ಪ್ರಾಚೀನಕಾಲದ ವೈಭವವನ್ನು ಎಲ್ಲರಲ್ಲಿಯೂ ಹುರುಪು ಹುರುಡುಗಳು ಹುಟ್ಟುವಂತೆ ವರ್ಣಿಸುವರು. ಕೀರ್ತನಗಳನ್ನು ರಸಾಲವಾದ ವಾಣಿಯಲ್ಲಿ ರಚಿಸಿ ಅಭಿನವ ಚೈತನ್ಯವನ್ನು ತುಂಬುವರು. ಚೈತನ್ಯ ರಸವು ತುಂಬುವದೊಂದೇ ತಡ, ತುಂಬಿ, ತುಳುಕ ತೊಡಗಿತೆಂದರೆ 'ಅಚ್ಛೇದ್ಯೋ'ಯಂ ಅದಾಹ್ಯೋಯಂ, ಅಭೇದ್ಯೋಯಂ ಎಂಬಂತೆ ಸ್ಥಿತಿಯಾಗುತ್ತದೆ.

(ಮುಂದೆ ಸಾಗುವದು)

ಶಿವಯೋಗ ಮಂದಿರದ ಸಂಸ್ಥೆಯವರ ಕರ್ತವ್ಯ.

ಶ್ರೀ ಶಿವಯೋಗ ಮಂದಿರದ ವ್ಯವಸ್ಥೆಯು ಚನ್ನಾಗಿ ಸಾಗಬೇಕಾದರೆ ಕೆಲವು ನಿಶ್ಚಿತ ಉತ್ಪನ್ನ ಬರುವಂಥ ಸ್ಥಾವರ ಆಸ್ತಿಗಳನ್ನು ಮಾಡಬೇಕೆಂದು ನಿರ್ಣಯವಾದಪ್ರಕಾರ ಅಲ್ಲಲ್ಲಿ ಹೊಲಗಳನ್ನು ಹಿಡಿದು ಸಂಸ್ಥೆಯ ಹೆಸರಿನಿಂದ ಮಾಡೋಣಾಯಿತು. ಕೆಲವು ಸದ್ಭಕ್ತರು ಶ್ರೀಮಹಾ ಸ್ವಾಮಿಗಳವರು ನಡಿಸಿರುವಂಥ ಪವಿತ್ರವಾದ ಈ ಕಾರ್ಯದಲ್ಲಿ ತಮ್ಮ ಸೇವೆಯು ಅಲ್ಪ ಸ್ವಲ್ಪವಾದರೂ ಮುಟ್ಟಲೆಂದು ಭೂದಾನ ಮಾಡಿ ಪುಣ್ಯ ಭಾಗಿಗಳಾದರು. ಇದಲ್ಲದೆ ಬಾಗಲಕೋಟೆಯಲ್ಲಿ ಒಂದು ಅರಳೀ ಗಂಟು ಕಟ್ಟುವ ಕಾರ್ಯಾಲಯವನ್ನು ಮಾಡಿದರೆ ಬಹಳೇ ನೆಟ್ಟಗಾಗುತ್ತದೆಂದು ತಿಳಿದು ಕೆಲವು ಸದ್ಭಕ್ತರು ವಿನಯ ಪೂರ್ವಕ ಪ್ರಾರ್ಥಿಸಿದ ಮೇರೆಗೆ ಶ್ರೀ ಹಾನಗಲ್ಲ ಕುಮಾರ ಸ್ವಾಮಿಗಳವರೂ ಶ್ರೀ ಹಾವೇರಿ ಮಹಾಸ್ವಾಮಿಗಳವರೂ ಟ್ರಸ್ಟೀಜನರ ಎದುರಿಗೆ ಈ ಸಂಗತಿಯನ್ನು ಇಡಲು ಶ್ರೀ ಸಂಸ್ಥೆಯ ವತಿಯಿಂದ ಅರ್ಧ ಹಣವನ್ನು, ಹಾಗೂ ಉಳಿದ ಅರ್ಧ ಹಣದಲ್ಲಿ ನಾಲ್ಕು ಪಾಲು ಮಾಡಿ ಒಂದೊಂದು ಪಾಲಿಗೆ ಬಂದ ಹಣವನ್ನು ಒಬ್ಬೊಬ್ಬರು ಕೊಡಬೇಕೆಂದು ಗೊತ್ತಾಗಿ ಸದ್ಭಕ್ತಿ ಪ್ರೇರಣೆಯಿಂದ ನಾಲ್ವರು ತಮ್ಮ ಹಣವನ್ನು ಕೊಟ್ಟರು. ಈ ಹಣದಿಂದ ಶ್ರೀ ಶಿವಾನಂದ ಪ್ರೆಸ್ಸ ಎಂಬುವ ಕಾರ್ಯಾಲಯವು ಬಾಗಲಕೋಟೆಯಲ್ಲಿ ಸ್ಥಾಪನವಾಯಿತು. ಈ ಪ್ರಕಾರ ಪವಿತ್ರ ಉದ್ದೇಶದಿಂದ ಸ್ಥಾಪಿಸಿದ ಇದರ ವ್ಯವಸ್ಥೆಯು ಕೆಲವು ದಿವಸಗಳ ವರೆಗೆ ಯಾವ ವಿಘ್ನವೂ ಇಲ್ಲದೆ ಸಾಗಿತು. ಬಸಯ್ಯಾ ದಂಡಾವತಿ ಎಂಬುವ ಮ್ಯಾನೇಜರಿಗೂ ನಾಲ್ವರು ಪಾಲುಗಾರರಿಗೂ ಯಾವ ಕಾರಣದಿಂದಲೋ ಏನೋ ಮನಸ್ತಾಪವುಂಟಾಗಿ ಜಗಳ ಹುಟ್ಟಿತು. ಕೇವಲ ಪವಿತ್ರ ಉದ್ದೇಶದಿಂದ ಹಣಕೊಟ್ಟ ಪಾಲುಗಾರರಾಗಿ ಒಮ್ಮೆಲೆ ಈ ವಿಘ್ನವನ್ನುಂಟು ಮಾಡಿದ್ದಕ್ಕೆ ಶ್ರೀಮಂತ ನಾಗರಾಳ ಮೊದಲಾದವರ ಮೇಲೆ ಸಮಾಜದವರು ದೋಷಾರೋಪಣೆ ಮಾಡಹತ್ತಿದರು. ಮುಂದೆ ಬಹು ದಿವಸಗಳ ವರೆಗೆ ಈ ತಿಕ್ಕಾಟವು ಸಾಗಿ ಕಡೆಗೆ ಶಿವ ಪ್ರೇರಣೆಯಿಂದ ಒಡಂಬಡಿಕೆಯಾಗಿ ಒಂದು

(ಮೂರನೇ ಪುಟಕ್ಕೆ ಸಾಗಿದ್ದು.)

ವರ್ತಮಾನ ಸಾರ

ಇಹವೃತ್ತ.

ಮೊನ್ನಿನ ದಿವಸ ಏನೋ ಸ್ವಲ್ಪ ಮಳೆ ಆದಂತಾಯಿತು; ಆದರೆ ಪೈರಿಗೆ ಸಾಕಾಗುವಷ್ಟು ಮಳೆಯು ಆಗಲಿಲ್ಲ

ಶಿರಹಟ್ಟಿ ನಾಟಕ ಮಂಡಳಿಯವರು ಬುಧವಾರ ತಾ॥ ೧-೯-೩೬ ನೇ ದಿವಸ "ಶ್ರೀ ರಾಮಪಾದುಕಾ ಪಟ್ಟಾಭಿಷೇಕ" ಎಂಬ ಕಡೇ ನಾಟಕವನ್ನು ಪ್ರಯೋಗಿಸಿ, ಮುಂದೆ ಗದಗಿಗೆ ಹೋದರು.

ಮುಂಬೈ ಕರ್ನಾಟಕ

ಧಾರವಾಡ ಜಿಲ್ಹಾ ಕಾಂಗ್ರೆಸ್ ಕಮೀಟಿಯವರು ಮಿ ಜೋಗ ಇವರನ್ನು ಬರುವ ಚುನಾವಣೆಯಲ್ಲಿ ಉಮೇದವಾರರನ್ನಾಗಿ ನಿಲ್ಲಿಸಲು ಠರಾವ ಮಾಡಿದ್ದಾರಂತೆ

ರಾ. ಬ. ಕಂಬಳೀಯವರು ಬ್ರಾಹ್ಮಣೇತರ ಪಕ್ಷದಿಂದ ಉಮೇದವಾರರಾಗಲು ಪ್ರಕಟಣಾ ಪತ್ರಿಕೆಯನ್ನು ಹೊರಡಿಸುವರೆಂದು ಸುದ್ದಿ

ಅಖಿಲ ಭಾರತೀಯ ವೀರಶೈವ ಮಹ ಸಭೆಯನ್ನು ಬರುವ ಡಿಸೆಂಬರ ತಿಂಗಳಲ್ಲಿ ಹುಬ್ಬಳ್ಳಿಯಲ್ಲಿ ಜರುಗಿಸಬೇಕೆಂದು ಠರಾವು ಪಾಸ ಮಾಡಿದ್ದಾರೆ.

ನಾಳಿನ ಗಣೇಶೋತ್ಸವ ಕಾಲದಲ್ಲಿ ಧಾರವಾಡಕ್ಕೆ ಬಂಗಾಲದ ಶ್ರೀ ಗೋಸ್ವಾಮಿಯವರೂ ಆಧುನಿಕ ಭೀಮಸೇನ ಪ್ರೊ. ರಾಮಮೂರ್ತಿಯವರೂ ದೇ ಭ ಲಾಲಾ ಲಜಪತರಾಯರೂ ಬರುವದಾಗಿ ತಿಳಿಯಬರುತ್ತದೆ

ಸಪ್ಟಂಬರ ತಿಂಗಳ ಕೊನೆಯ ವರೆಗಾಗಿ ೩೦ ೦೦೦ ರಾಷ್ಟ್ರೀಯ ಸಭೆಯ ಸಭಾಸದರನ್ನು ಮಾಡಬೇಕೆಂದು ಕ ಪ್ರಾ ಕಾ ಕಮೀಟಿಯು ನಿರ್ಧಾರ ಮಾಡಿದ್ದು, ಆ ಪ್ರಕಾರ ಇನ್ನೂ ಸಮಾಧಾನಕರವಾಗಿ ಆ ಕೆಲಸವು ಆಗಿಲ್ಲ; ಮತ್ತು ಹಿಂದುಸ್ತಾನಿ ಸೇವಾದಲದವರು ಕೂಡಿಸಬೇಕಾದ ೫೦೬೦ ರೂಪಾಯಿಗಳಲ್ಲಿ ಸಾಧಾರಣ ಅರ್ಧ ಹಣ ಕೂಡಿರುತ್ತದೆ ಕಾರಣ ಈ ಕಾರ್ಯಕ್ಕೆ ಎಲ್ಲ ಕರ್ನಾಟಕಸ್ಥರು ತೀವ್ರ ಸಹಾಯ ಮಾಡಬೇಕೆಂಬದಾಗಿ ಕ. ಪ್ರಾ. ಕಾ ಕ ಅಧ್ಯಕ್ಷರಾದ ದೇ. ಭ ಕೌಜಲಗಿ ಶ್ರೀನಿವಾಸರಾಯರು ತಿಳಿಸುತ್ತಾರೆ.

ದಾವಣಗೇರಿಯ ಪ್ರಾಣಿದಯಾ ಸಂಘದ ಪ್ರವರ್ತಕರೂ ಚಾಲಕರೂ ಆದ ದೇ ಭ ಮಂಜಪ್ಪಾ ಹಾರ್ಡೇಕರ ಇವರು ಸಿಂದಗಿ ತಾಲೂಕಿನ ಮುಖ್ಯಾಣದಲ್ಲಿ ಪ್ರಾಣಿಮಾಂಸ ಕೊನೆಯವರೆಗೂ ಪ್ರವಚನಗಳನ್ನು ನಡಿಸುವರಾಗಿ ತಿಳಿಯಬರುತ್ತದೆ,

ಧಾರವಾಡದಲ್ಲಿರುವ ಆರ್ಟ್ಸ ಕಾಲೇಜಿಗೆ ಕರ್ನಾಟಕ ಕಾಲೇಜೆಂದು ಅಭಿಮಾನದಿಂದ ಕರೆಯುತ್ತೇವೆ. ಆದರೆ ಕನ್ನಡ ಬಲ್ಲ ಪ್ರೊಫೇಸರರ ಸಂಖ್ಯೆಯೋ ವಿರಳ ಕಾಲೇಜಿನ ವಾಚನಾಲಯಕ್ಕೆ ಪರದೇಶದ ಪರಭಾಷೆಯ ೨೦೦ ೩೦೦ ರೂಪಾಯಿಗಳ ವರ್ತಮಾನಪತ್ರಿಕೆ ತರಿಸುತ್ತಿದ್ದರೂ ಒಂದೂ ಕನ್ನಡ ಪತ್ರಿಕೆ ತರಿಸುವದಿಲ್ಲೆಂದು ಕರ್ಮವೀರವು ಹೇಳುತ್ತಿದೆ. ಕರ್ನಾಟಕ ದೇಶದವರಂತೆ ತರುಣ ವಿದ್ಯಾರ್ಥಿ ವರ್ಗವೂ ಅಭಿಮಾನಶೂನ್ಯವಾಗಿ ಸ್ವಪ್ರಾಂತ ಸ್ವಭಾಷೆಗೆ ನೀರು ಬಿಡುತ್ತಿದ್ದಮೇಲೆ ಕನ್ನಡ ಭಾಷೆಯ ಉದ್ಧಾರದ ಕಾಲವು ಬೇಗನೇ ಬರಬಹುದೇ? ಇಂತಹ ಭಾಷಾಭಿಮಾನವಿಲ್ಲದ ಕರ್ನಾಟಕ ಕಾಲೇಜಿಗೆ ನಮ್ಮದೊಂದು ಶರಣು!

ಮದ್ರಾಸ ಕರ್ನಾಟಕ

ಕರ್ನಾಟಕ ಹಿಂದುಸ್ತಾನೀ ಸೇವಾದಲ ಪರವಾಗಿ ಕಾಂಗ್ರೆಸ್ಸಿನ ಒಬ್ಬರನ್ನು ಕಳುಹಿ ಹೊರಟ ಹೊಸಕೋಟೆ ಕೃಷ್ಣ [illegible] ತಾ॥ ೩೩ ನೇ ದಿವಸ ಮಂಗಳೂರಿಗೆ ಹೋಗಿ ೧೫೦ [illegible] ಮಾಡಿ ಮುಂದೆ ಪ್ರಯಾಣ ಬೆಳಿಸಿರೆಂಬದಾಗಿ ಸ್ವದೇಶಾಭಿಮಾನ [illegible] ತ್ತಿದೆ

ಅಂಬಾ ಪ್ರಾಸಾದಿಕ ನಾಟಕಮಂಡಳಿಯವರು "ಪತಿತೋದ್ಧಾರ" ವೆಂಬ ಪೌರಾಣಿಕ ನಾಟಕವನ್ನು ಚನ್ನಪಟ್ಟಣದಲ್ಲಿ ಪ್ರಯೋಗ ಮಾಡಿದರು.

ಮೈಸೂರ ಕರ್ನಾಟಕ

ನಂಜನಗೂಡು ಚಾಮರಾಜನಗರದ ರೇಲ್ವೆಯ ಆರಂಭೋತ್ಸವವು ಮೊನ್ನೆ ತಾ॥ ೩೬ ನೇ ದಿವಸ ಮಧ್ಯಾಹ್ನದ ೪॥ ಘಂಟೆಗೆ ಶ್ರೀಮಾನ್ ಮಹಾರಾಜರವರ ಅಮೃತ ಹಸ್ತದಿಂದ ನೆರವೇರಿಸಲ್ಪಟ್ಟಿತು.

ಮೈಸೂರಿನ ವೃದ್ಧ ಪಿತಾಮಹರಾದ ಶ್ರೀಯುತ ವೆಂಕಟಕೃಷ್ಣಯ್ಯನವರ ೮೧ ನೇ ವಾರ್ಷಿಕೋತ್ಸವವು ಬಹು ವಿಜೃಂಭಣೆಯಿಂದ ನೆರವೇರಿಸಲ್ಪಟ್ಟಿತು.

ಸಾಧ್ವೀ, ಸಂಪದಭ್ಯುದಯ, ಮತ್ತು ವೆಲ್ಥ ಆಫ್ ಮೈಸೂರ ಎಂಬ ಪತ್ರಿಕೆಗಳನ್ನು ಶಾಶ್ವತವಾಗಿ ನಡೆಯಿಸಲು ಶ್ರೀ ವೆಂಕಟಕೃಷ್ಣಯ್ಯನವರು ಒಪ್ಪಿರುವರೆಂದು ತಿಳಿಯುತ್ತಿದೆ. ಬಹು ಸ್ತುತ್ಯ ಕಾರ್ಯವಿದು

ನಿಝಾಂ ಕರ್ನಾಟಕ

ನಿಜಾಮರು ತಾ॥ ೩೦ ರೊಳಗಾಗಿ ಬ್ರಿಟಿಶ್ ಸರಕಾರಕ್ಕೆ ತಮ್ಮ ರಾಜ್ಯವ್ಯವಸ್ಥೆಯ ಬಗ್ಗೆ ಬರೆದು ತಿಳಿಸಬೇಕೆಂದು ಕೇಳಿದ ಪ್ರಶ್ನೆಗೆ ನಿಜಾಮರಿಂದ ಏನೂ ಉತ್ತರ ಬಂದಿರುವದಿಲ್ಲವೆಂಬದಾಗಿ ತಿಳಿಯುತ್ತಿದೆ.

ಕೊಡಗು ಕರ್ನಾಟಕ

ಕೊಡಗು ಪ್ರಾಂತವು ಉಳಿದ ಎಲ್ಲ ಪ್ರಾಂತಗಳಕ್ಕಿಂತ ವಿದ್ಯೆಯಲ್ಲಿ ಹಿಂದೆ ಉಳಿದಿದೆ ಎಂದೂ ಹುಡುಗಿಯರಿಗೆ ಸ್ವಲ್ಪ ವಿದ್ಯೆ ಕಲಿಸುವ ಶಾಲೆಗಳಿಲ್ಲೆಂದೂ ಕೊಡಗು ಪತ್ರಿಕೆಯಿಂದ ತಿಳಿದಿರುತ್ತದೆ.

ಹಿಂದುಸ್ಥಾನ.

ಮುಂಬಯಿ [illegible] ಲೋಕಮಾನ್ಯರ ಕಲೇವರವನ್ನು ದಹನ ಮಾಡಿದ ಜಾಗೆಯಲ್ಲಿ ತಿಲಕರ ಒಂದು [illegible] ಪ್ರತಿಮೆಯನ್ನು ಸ್ಥಾಪಿಸಲು ಸರಕಾರದವರು ಒಪ್ಪಿದ್ದಾರಂತೆ

ಟಿಸಾಲು [illegible] ಗಳನ್ನು ಇನ್ನು ಮುಂದೆ [illegible] ಯಲ್ಲಿ ಭಾಷಿಸದೆ ನಾಸಿಕದಲ್ಲಿ ಛಾಪಿಸಬೇಕೆಂದು ಗೊತ್ತಾದಂತೆ ಕೃತಿಯಲ್ಲಿ ಬಂದಿದೆ.

ಹಿಂದುಸ್ಥಾನದ ವೃದ್ಧ ಪಿತಾಮಹರಾದ ದಾದಾಭಾಯಿ ನವರೋಜಿಯವರ ಕಂಚಿನ ಪ್ರತಿಮೆಯನ್ನು ಇಡಲಿಕ್ಕೆ ಮುಂಬೈ ನಗರ ಸಭೆಯವರು [illegible] ದಲ್ಲಿ ಬಾಜುಗೆಯಲ್ಲಿರುವ ಒಂದು ಸ್ಥಳವನ್ನು ಕೊಟ್ಟಿರುತ್ತಾರಂತೆ.

ಮುಂಬೈ ಬಂದರದಲ್ಲಿ ಬಂದು ನಿಂತಿದ್ದ "ಗಜಾನನ್" ಎಂಬ ಬ್ರಿಟಿಶ್ ಇಂಡಿಯಾ ಸ್ಟೀಮರಿಗೆ ಬೆಂಕಿ ಹತ್ತಿ ಒಂದು ಲಕ್ಷ ಬೆಲೆಬಾಳುವ ಸರಕುಗಳು ಹಾನಿಯಾಯಿತು

ಕಳೆದ ೩ ವರ್ಷಗಳಲ್ಲಿ ಹಿಂದುಸ್ಥಾನದಲ್ಲಿ ೭೩ ಸ್ಥಳಗಳಲ್ಲಿ ದಂಗೆಗಳಾದವು ಈ ದಂಗೆಗಳಿಂದ ೬೬೦ ಜನರು ಸತ್ತರು. ೩೦೦೦ ಜನರು ಗಾಯಪಟ್ಟರು ಮೊನ್ನೆ ಕಲಕತ್ತೆಯಲ್ಲಾದ ದಂಗೆಯಲ್ಲೇ ೧೩೦ ಜನರು ಮೃತಪಟ್ಟರು ೧೫೦೦ ಜನರು ಗಾಯಪಟ್ಟರು ಅಂದರೆ ಕಲಕತ್ತೆಯ ಹೊರಗಾದ ದಂಗೆಗಳಲ್ಲಿ ೧೩೦ ಜನರು ಮಾತ್ರ ಸತ್ತಂತಾಯಿತು ಅದೂ ಮೂರು ವರ್ಷಗಳಲ್ಲಿ ೭ ಲಕ್ಷ ಹಳ್ಳಿಗಳೂ ೩೩ ಕೋಟಿ ಜನರೂ ಉಳ್ಳ ವಿಸ್ತಾರ ದೇಶದಲ್ಲಿ ೩ ವರ್ಷಗಳಲ್ಲಿ ೭೩ ದಂಗೆಗಳಾದವೆಂದು ಸತ್ತಾಧಾರಿಗಳು [illegible] ಹಿಂದಿಗಳು ಸ್ವರಾಜ್ಯಕ್ಕೆ ಅಪಾತ್ರರೆಂದು ಬರೆಯಬಹುದೆ [illegible] ಕೇವಲ [illegible]

ಪರದೇಶ.

ಬರ್ಲಿನ್ ಪಟ್ಟಣದಿಂದ ಹೊರಟ ಒಂದು ಪೈಲುಗಾಡಿಯು [illegible] ಗಳ ಮಧ್ಯದಲ್ಲಿ [illegible] ದ್ದು, ಇಂಜಿನ್ [illegible] ಜನ ಎ ಮರಣ ಹೊಂದಿದರೆಂದು [illegible] ಇದರ ಕಾರಣ [illegible] ವನ್ನು ಹುಡಿಕಿಕೊಟ್ಟವರಿಗೆ ೧,೨೫೦ ಪೌ ಬಹುಮಾನ ಕೊಡುವರಂತೆ

ಇಸ್ಪಾನದ [illegible] ಕಾರಿಕರು [illegible] ಹತ್ತು ವಾರಗಳವರೆಗೆ [illegible] ನಿಷ್ಠೆಯ [illegible] ಮಾಡಿದ್ದಾರಂತೆ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇದೇ ಬ್ರಿಟಿಶ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೨ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

॥ ಶ್ರೀ ॥

ತ್ವರೆಮಾಡಿರಿ! ಅಡಚಣೆಯು ದೂರಾಯಿತು!!

ಮನಿ, ವಖಾರ, ಮೋಟಾರ ಶೆಡ್ ಮುಂತಾದ

ಇಮಾರತ ಕಟ್ಟಿಸುವವರಿಗೆ

ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಲಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲಾ, ಬಾಗಲಕೋಟೆ } ಬಿಂದುರಾವ ಟಂಕಸಾಲಿ
೩೧-೭-೨೬ } ಡಾಕ್ಟರ,



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಕಕ್ಕಸ್ಸು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಕರ್ನಾಟಕದಲ್ಲಿ ಬಾಲಗಂಧರ್ವ.

ಈ ಹಾರ್ಮೋನಿಯಂ ಶಿಕ್ಷಕ ಎಂಬ ಪುಸ್ತಕದ ಸಹಾಯದಿಂದ ಎಲ್ಲರಿಗೂ ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಹಾರ್ಮೋನಿಯಂ ಬಾರಿಸುವದು ಸಾಧ್ಯವಾಗುವದು. ಈ ಪುಸ್ತಕದಲ್ಲಿ ಗಾಯನ ಪ್ರಸಿದ್ಧರಾದ ಬಾಲಗಂಧರ್ವ, ಗೋಹರಜಾನ್, ಮಾಸ್ತರ ಕೃಷ್ಣಾ ಮತ್ತು ಜಾನಕಿಬಾಯಿ ಮುಂತಾದವರು ಗ್ರಾಮೋಫೋನಿನಲ್ಲಿ ಹಾಡಿದ ಪದಗಳನ್ನು ಸುಲಭವಾದ ನೋಟೇಶನ್ ರೂಪದಿಂದ ಬರೆದಿರುತ್ತದೆ. ಆದದರಿಂದ ಈ ಗಾಯಕ ಗಾಯಕರೆಲ್ಲರು ಹಾಡಿದಂತೆಯೇ ಆಯಾ ಪದಗಳನ್ನು ಹಾರ್ಮೋನಿಯಂದಲ್ಲಿ ಬಾರಿಸುವದು ಸಾಧ್ಯವಾಗುವದು. ಅದರಂತೆ ಕನ್ನಡ ಕಂಟಕಾಕ, ವ ದುಕಾ ಪಟ್ಟಾಭಿಷೇಕ ನಾಟಕಗಳಲ್ಲಿಯ ಕೆಲವು ಲೋಕಪ್ರಿಯ ಪದಗಳೂ ಬರೆಯಲ್ಪಟ್ಟವೆ.

ಮಾನಾಪಮಾನ, ಏಕಚಪ್ಯಾಲಾ, ರುಕ್ಮಿಣಿಸ್ವಯಂವರ ದ್ರೌಪದಿ ಇವುಗಳೊಳಗಿನ ಬಾಲಗಂಧರ್ವರ ಲೋಕಪ್ರಿಯ ಪದಗಳನ್ನು ಸುಲಭವಾಗಿ ನೊಟೇಶನ್ ರೂಪದಿಂದ ಬರೆದಿರುತ್ತದೆ ಹಿಂದುಸ್ಥಾನೀ ಸಂಗೀತ ಪದ್ಧತಿಯ ಪುಸ್ತಕವು ಕನ್ನಡ ಲಿಪಿಯೊಳಗೆ ಬರೆದ ಪುಸ್ತಕವೆಂದರೆ ಇದೇ ಮೊದಲನೇದು. ಈ ಪುಸ್ತಕದ ವಿಷಯಕ್ಕೆ ಹಿಂದುಸ್ಥಾನಿ, ಕರ್ನಾಟಕಿ ಗಾಯನ ಬಲ್ಲವರು ಗವೆಯರು ಮತ್ತು ಪಂಡಿತರು ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಈ ಎರಡು ಭಾಗಗಳಲ್ಲಿ ೩೫ ರಾಗಗಳ ವರ್ಜಾವರ್ಜ ಮತ್ತು ಶಾಸ್ತ್ರೋಕ್ತ ಮಾಹಿತಿ ಕೊಟ್ಟಿರುತ್ತದೆ. ಇದೇ ಪುಸ್ತಕವನ್ನು ಮರಾಠಿ ಲಿಪಿಯಲ್ಲಿ ಛಾಪಿಸಿರುತ್ತಾರೆ. ಕಿಮ್ಮತ್ತು ೧ ರೂ.

ಮೊದಲನೇ ಭಾಗ ಪುಸ್ತಕದ ಕ್ರಯ ೧ ರೂ ೨ನೇ ಭಾಗ ೧೫ ಆಣೆ.

ವಿಳಾಸ—ಮ್ಯಾನೇಜರ ಹಾರ್ಮೋನಿಯಂ ಕ್ಲಾಸ,
ರಾಯಟರಗಲ್ಲಿ—ಧಾರವಾಡ

ಗುಬ್ಬಿಶ್ರೀಚನ್ನಬಸವೇಶ್ವರನಾಟಕಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ. ಪ್ರೊಪ್ರಾಯಿಟರ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ !!

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಊರಿದಕಡೆ ಎಲ್ಲಿಯೂ ಇಷ್ಟು ಕಡಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ !

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಪ್ರಕಟನೆ.

ಅಪೂರ್ವವಾದ ಹೊಸ ಪುಸ್ತಕಗಳು.

ಆಸ್ತಿಕರಾದವರು ತರಿಸಿ ಓದಿರಿ

(೧) ಗುರುಕಥಾಕಲ್ಪತರು ವೆಂಬ ಸಚಿತ್ರ ಗುರುಚರಿತ್ರೆ ಪೂರ್ವಾರ್ಧ ಬೆಲೆ ರೂ. ೨-೦-೦

(೨) ಚಿತ್ತೂರ. ಜೋಹರು ೧ (ಪದ್ಮಿನಿ) ಬೆಲೆ ರೂ. ೧-೪-೦

ಸಿಕ್ಕುವ ಸ್ಥಳ— ಕೆ. ಲಕ್ಷ್ಮೀನಾರಾಯಣ ಭಟ್ಟ

ಸ್ಕೂಲ ಮಾಸ್ತರ ಹೊನ್ನಾಳಿ. ಶಿವಮೊಗ್ಗಾ ಡಿಸ್ಟ್ರಿಕ್ಟ.

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COPANY

Apply for full particulars to—

N. K. Kulkarni. Agent Bagalkot.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರೆನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಹುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಪಧ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯುಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೬೪೪. ಮಿ. ಮಹಮ್ಮದ ಯುಸೂಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ ಜಹೂರಅಲಿ, ಜಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್ ಸ್ಪೆಕ್ಟರ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೭೯ ಮಿ. ದೇವನ ವಾಸುದೇವನ ಸಂಬೂದ್ರಿಪಾದ ಜಮೀನದಾರ ಏಡಲ್ಲಿ ಅಲ್ವಾಯಿ ರೂ ೬೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಒನಪ್ಪಾ ದೇವನಕೊಂಡ, ಅಕ್ಕಸಾಲೆ ಜಡಿಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೪೩೨೬ ಮಿ ಶೇಕ ಬಾವುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ಏಗು ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ)

ಅಮೌಲ್ಯ ಸಂಧಿ.

S.U.N.&CO.
BENARES CITY.

ನಮ್ಮಲ್ಲಿ ಉತ್ತಮೋತ್ತಮ ಎಲ್ಲಾ ವಿಧವಾದ ರೇಶ್ಮೆ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳಿಸಲ್ಪಡುವುದು. ಕಾಶ್ಮೀರ ಶಾಲು ಜೋಡೆ ೧ಕ್ಕೆ ರೂ. ೨೫ ರಿಂದ ೩೦-೫೦-೧೦೦ರ ವರೆಗೆ. ಉಡುವ ಮೊಗಟ ಪೊಳ್ಳೆ ೬-೭-೮-೧೦-೧೬ ೧೮ ಮೊಳಗಳು; ಇದು ಪೊಳ್ಳೆ ೧ಕ್ಕೆ ೨ರೂ. ಯಿಂ 2½ ರೂ. ವರೆಗೆ ಎಲ್ಲಾ ರಂಗು ಇರುವವು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦-೮ ಯಿಂದ ರೂಪಾಯಿ ೧, ೨,-೧೦ರ ವರೆಗೆ. ಗೌರೀಶಂಕರ ಶಾಲು ೧ಕ್ಕೆ ರೂ. ೫ಯಿಂದ ೩೦ರ ವರೆಗೆ; ೩೨ ಶಾಲುಗಳ ಕಂಬಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಶಾಲುಗಳ, ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೦ ರವರೆಗೆ ೧೧-೧೨-೧೩ ಮುಖಗಳ ಶಾಲು ೧ಕ್ಕೆ ರೂ. ೨ ರಿಂದ ೧೦ ರವರೆಗೆ ೧೪ ಮುಖದ ಶಾಲು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು, ೫೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪ ೮ ೦ ನಾಲ್ಕಕೋಟಿಗೆ ಸಾಕಾಗುವಷ್ಟು ರೇಶ್ಮೆ ಕೋಟಿಂಗ ಎಲ್ಲಾ ಥಾನು ೭ ಗಜಾ ಉದ್ದ ೩ಗಜಾ ಅಗಲುಳ್ಳದ್ದು ಥಾನುಗಳಿಗೆ ೨೫ ಏಂದ ೩೦ ರೂಪಾಯಿಗಳವರೆಗೆ ಬೀಳುವದು

ವಿಳಾಸ: – ಶಿರೋಮಣಿ ನಾರಾಯಣಾಚಾರ್ಯ ಕಂಪನಿ,
ಕಾಶೀ ಬನಾರಸ್.

ಗವ್ಹರ್ನಮೆಂಟಿನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರಣಾಶಿಮಿತ್ರ. ಮೂರ್ತಿಪಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀಚ ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗ ತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳ ವರೆಗೆ ಬಾಟಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಕಾದ ಪತ್ರಗಳು ವ್ಹಿ ಪಿ ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಜಾರಿಸಿದ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಕಲಿಂಯುದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಒಳ್ಳೆ ಎಷ್ಟೋ ಸರಟೀಫೀಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ ಇವನ್ನು ಬರೆಯುವದಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳು:—ಕ್ಷಯರೋಗ, ಬಾಣಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಡಗ್ಯ, ಕಾಲರಾ (ಮಾರಿಕಾ), ಪ್ಲೇಗ, ಇನ್ ಫ್ಲುಯಂಜಾ ಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣಿನೊಳು ವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ನೋವು ದಾಗೋಣ, ಕೂದಲು ಹೋಗೋಣ, ಮೈ ಬಿಳುಪು ರೋಗ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದ ಕಕ್ಕೆ ತತ್ಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕೆ ೨ ರೂಪಾಯಿ ನವಹೋಪೆ ಉದ್ದಿಕ್ಕ ೫ ಆಣೆ ಕೂಡಿದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲ ಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾಗುವು ಆದರ ಖರ್ಚು ೭ ಆ. ಬಾಟ್ಲಿಗಳು ಕಮಿಶನ್ ಸಿಗ್ತ ನ್ನಿದೆ ಖರ್ಚ ೯ ಆಣೆ ವಜನದ ಒಳಗಾಗಿ ವನ್ನೊಂದು ಬಾಟ್ಲಿ ತಕ್ಕೊಂಡರೆ –ಕಮಿಶನ್ ಇಲ್ಲ ಫೋಷ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮೀಶನ್ ಸಿಗುತ್ತದೆ. ಖರ್ಚ ೯ ಆಣೆ,ಮೂರು ಎರಡು ತಕ್ಕೊಂಡರೆ ಕಮೀಶನಇಲ್ಲ ಖ.೭ ಆ.ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಬಾಟ್ಲಿಗೆ ಪಸಂದಿ ಪ್ರಕಾರ ಬೇಕಾದ್ದಾಗುವ ರೀತಿ ಇದು ಈ ಔಷಧವು ಬಾಟ್ಲಿ ಹೊರಟರೆ ಲಿಕ್ಕ ಇಲ್ಲದಾಗಲು. ಪರತ ತಕ್ಕೊಂಡು ಆದರ ಪೈಕಿ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಲಾ ಸಹಿತ ಸ್ಪಷ್ಟವಾಗಿ ಬರೆಯಿರಿ. ನಮ್ಮ ವಿಳಾಸ **ಎಚ್. ಎಮ್. ಮುಲ್ಲಾ**
ಸಂಪಾದಕ ಅರ್ಕಶಫಾ ಹೆಡ್ ಆಫೀಸ **ಪೊಷ್ಟ ಶಾಹೂರ** (**ಬೆಳಗಾವ**)

ಗುಬ್ಬಿ ಶ್ರೀ ಚನ್ನಬಸವೇಶ್ವರ ನಾಟಕ ಸಭೆ.

ಇವರು ಜೂನ ೧೨ನೇ ತಾರೀಖಿನಿಂದ ಬೆಂಗಳೂರಿನಲ್ಲಿ ತಮ್ಮ ಲೋಕಪ್ರಿಯವಾದ ನಾಟಕಗಳನ್ನು ಪ್ರಾರಂಭಿಸಿದರು.

ಜಿ. ಎಚ್. ವೀರಣ್ಣ. ಪ್ರೊಪ್ರಾಯಿಟರ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ!!

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪು! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೨ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಪ್ರಕಟನೆ.

ಅಪೂರ್ವವಾದ ಹೊಸ ಪುಸ್ತಕಗಳು.

ಆಸ್ತಿಕರಾದವರು ತರಿಸಿ ಓದಿರಿ

(೧) ಗುರುಕಥಾಕಲ್ಪತರು ವಾ ಸಚಿತ್ರ ಗುರುಚರಿತ್ರೆ ಪೂರ್ವಾರ್ಧ ಬೆಲೆ ರೂ. ೨-೦-೦

(೨) ಚಿತ್ತೂರ. ಜೋಹರು ೧ (ಪದ್ಮಿನಿ) ಬೆಲೆ ರೂ. ೧-೪-೦

ಸಿಕ್ಕುವ ಸ್ಥಳ:— ಕೆ. ಲಕ್ಷ್ಮೀನಾರಾಯಣ ಭಟ್ಟ ಸ್ಕೂಲ್ ಮಾಸ್ತರ್ ಹೊನ್ನಾಳಿ. ಶಿವಮೊಗ್ಗಾ ಡಿಸ್ಟ್ರಿಕ್ಟ್.

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COPANY

Apply for full particulars to—

N. K. Kulkarni. Agent Bagalkot.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಣಾಲಯದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿನ್ನ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇಅರ್‍ಮನ್ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P. M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೬೪೪ ಮಿ. ಮಹಮ್ಮದ ಯುಸೂಫ ಓವ್ಹರಸೀಯರ್, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ, ಪಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೭೪ ಮಿ. ದೇವಪ್ಪ ವಾಸುದೇವಪ್ಪ ಸಂಬೂರ್ಗಿ ವಾದ ಜಮೀನದಾರ ಐಹೊಳೆಯಲ್ಲಿ ಅಲ್ಪಾಯು ರೂ ೬೦೦

(೪) ಬಾಂಡ ನಂಬರು ೯೩೦೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲಿ ಪೇಟೆಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೪೨೨೬ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೮ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ (ಮುಂಬಯಿ ಇಲಾಖಾ)

ಅಮೂಲ್ಯ ಸಂಧಿ.

S.U.N.& CO.
BENARESCITY.

ನಮ್ಮಲ್ಲಿ ಉತ್ತಮೋತ್ತಮ ಎಲ್ಲಾ ವಿಧವಾದ ರೇಶ್ಮೆ ಮಾಲುಗಳನ್ನು ಕೇಳುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೋತೆ ೧ಕ್ಕೆ ರೂ. ೫೦ ರಿಂದ ೩೦-೫೦-೧೦೦ರ ವರೆಗೆ. ಉಡುವ ಮೊಗಟ ಪೊಳೆ ೬-೭-೮-೧೦-೧೫ ೧೮ ಪೊಳೆಗಳು; ಇದು ಪೊಳೆ ೧ಕ್ಕೆ ೨ರೂ. ಯಿಂ 2½ ರೂ. ವರೆಗೆ ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಶಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಶಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಶಾಳುಗಳ, ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೦ ರವರೆಗೆ ೧೧-೧೨-೧೩ ಮುಖಗಳ ಶಾಳು ೧ಕ್ಕೆ ರೂ. ೨ ರಿಂದ ೧೦ ರವರೆಗೆ ೧೪ ಮುಖದ ಶಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨ ೬-೦ ದೊಡ್ಡದು ೪ ೮ ೦ ಸಾಲಿಗ್ರಾಮಗಳು ಸಾಕಾಗುವಷ್ಟು ರೀತಿ ಕೊಟಿಂಗ ವಿಷ್ಣು ಧ್ಯಾನು ೩ ಗಜಾಕಾರದ್ದು ೩ಗಜಾ ಅಗಲುಳ್ಳದ್ದು ಧ್ಯಾನುಗಳಿಗೆ ೭೦ ರಿಂದ ೫೦ ರೂಪಾಯಿಗಳವರೆಗೆ ಬೀಳುವದು

ವಿಳಾಸ:- ಶಿರೋಮಣಿ ನಾರಾಯಣಾಚಾರ್ಯ ಕಂಪನಿ,

ಕಾಶೀ ಬನಾರಸ್.

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಶಿಮಿತ್ರ. ಮೂರ್ತಿವಂತ ವೈದ್ಯ.

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗ ತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ವಾವತಿಗಳು ಬಾರಿಸಿ ಬುಕ್ಕಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ನಟಿಂಯಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದು ನೂರು ರೂಪಾಯಿಗಳು ಇನಾಮು ಕೊಡಲ್ಪಡುವವು ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟೆಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ ಇದನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಜಾನಾಂತಿರೋಗ, ಹಡೆದನಂಬು, ದಮ್ಮು, ಕೆಮ್ಮು, ಅಜೀರ್ಣ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯಂಜಾ ಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಳೆ, ನಾರುಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣುನೋವು ಕಣ್ಣಿನೊಳಗೆ ಮೂರು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೂಡಿ ... ಹೊಂಚೀಳೋಣ, ಮತ್ತು ಹೆಂಗಸರಿಗೆ ವೈದ್ಯರಿಗೂ ಗೊತ್ತು ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನ ಮಾತ್ರೆಯಿಂದ ಗುಣಬರುವದು. ... ಸರ್ವ ... ಶಕ್ತೆ ತತ್ಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕೆ ೨ ರೂಪಾಯಿ ನವ ಹೊಸೆ ಉದ್ದಿಶ್ಯ ೫ ಆಣೆ ತೊಲದ ಬಾಟ್ಲಿ ಒಂದಕ್ಕೆ ೮ ಆ ಪೋಸ್ಟ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೭ ರೂಪಾಯಿ ಆರ್ಡರ ಬಂದರೆ ಕಳಿಸಲಾಗುತ್ತಿತ್ತು ಅದರ ಖರ್ಚು ೭ ಆ ಬಾಟ್ಲಿಗಳು ಕಮಿಶನ್ ಸಿಗು. ಸ್ವಪ ಖರ್ಚ ೯ ಆಣೆ ರಜಿಸದ ಒಳಗಾಗಿ ಪಸ್ತೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ ಪೋಸ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಹೂ ೨ ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ.ಮುಂದು ಎರಡುತಕ್ಕೊಂಡರೆ ಕಮಿಶನಇಲ್ಲ ಮಿ. ... ಪ್ರಮಾಣಾನುಸಾರ ಪತ್ರಿಕೆ ಕನ್ನಡನುತ್ತು. ಮರಾಠಿಭಾಷೆಯಲ್ಲಿ ... ಪಸಂದಿ ಪ್ರಕಾರ ಬಾಟ್ಲಿ ಗೂಡ ಸಿಗುವದು. ಈ ಔಷಧವು ಸೊಟ್ಟೆ ಹೊರಟರೆ ಶಿಕ್ಷಕ ಬಳಿಯಾಲು. ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇದೀ ಕನಾ ಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಲಾ ಸ್ಪಷ್ಟವಾಗಿ ಬರಿಯಿರಿ. ನಮ್ಮ ವಿಳಾಸ ಎಚ್. ಎಮ್. ಮುಲ್ಲಾ ಸಂಪಾದಕ ಅರ್ಕಶಫಾ ಹೆಡ್‌ಆಫೀಸ ಪೋಷ್ಟ ರಾಯಭಾಗ (ಬೆಳಗಾವ)





The Cheapest House.

For quick: Economical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the welknown Kichelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specialist to give satisfactory work,

6 For Building motor bodies of Various types by workers onin uptodate line.

7 For all kinds of motor repairs,

Apply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

೧ ಶೀಘ್ರ ಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಸ್ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ

೨ ಎ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೋಲೆಟ ಡಾಜ, ಫೋರ್ಡ, ಓವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರ ಟುಬುಗಳು ಖರೀದಿಗಾಗಿ

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯೆಣ್ಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.

ಬಾಗಲಕೋಟೆ

ವಿಜಾಪೂರ ಜಿಲ್ಹೆಯಲ್ಲಿ

ಶೆವ್ಹರಲೆಟ ಮೋಟಾರುಗಳಿಗೆ ಸಬ್ ಏಜಂಟರು.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪ್ರತ್ಯೇಕ

ಟಿಪ್ಪಣಿ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

ಜಾಹೀರಾತಿನ ಸಲುವಾಗಿ.

ರ. ನಂ. ಬಿ ೧೯೪೭ ವಾ. ಚಂದಾ ೧—೧—೦ ಸಪೋಸ್ಟ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)
यद्यत् परवशं दुःखं । यद्यदात्मवशं सुखं ॥ — मनु
ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಭಾದ್ರಪದ ಶು|| ೪ ಶಕೆ ೧೮೫೮ ತಾ|| ೨೦-೯-೧೯೩೬. | ಸಂಚಿಕೆ ೨೪

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ವೀಣವಾಡಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ!
ಚಿನ್ನದಾದರು ಚಿನ್ನ ವೀಣಾಸ್ತ್ರಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಮೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ದೇಂಬಾಗ ಗಂಧವಹವೆಂದು ತಿಳಿಯು॥

—ಅಂಬಿಕಾ ತನಯ ದತ್ತ

ವಿಜಾಪುರದ ಪ್ರಸಿದ್ಧ ಡಾಕ್ಟರರಾದ ಶ್ರೀ ಕಾರಖಾನೀಸ ರವರು ಹೋದ ತಿಂಗಳಿನ ೩೧ ನೇ ತಾರೀಖಿನೆ ತೀರಿಕೊಂಡರೆಂದು ತಿಳುಹಿಸಲು ನಮಗೆ ಬಹಳ ವಿಷಾದವೆನಿಸುತ್ತದೆ. ಕಾರಖಾನೀಸ ರವರು ಕೇವಲ ಹೊಟ್ಟೆಯನ್ನು ಹೊರಕೊಳ್ಳುವ ಉದ್ದೇಶದಿಂದಲೇ ವೈದ್ಯಕೀಯ ಕೆಲಸವನ್ನು ಮಾಡುತ್ತಿದ್ದಿಲ್ಲ. ಅವರಿಗೆ ವೈದ್ಯನ ದಿವ್ಯ ಕಾರ್ಯದ ಬಗ್ಗೆ ಚನ್ನಾಗಿ ಅರಿವು ಇದ್ದಿತು. ಬಡಬಗ್ಗರಿಗೆ ಉಚಿತವಾಗಿ ಔಷಧವನ್ನು ಕೊಡುತ್ತಿದ್ದರಲ್ಲದೆ, ಅವರನ್ನು ಚೆನ್ನಾಗಿ ಪ್ರೀತಿಸುತ್ತಿದ್ದರು. ಅವರು ಸ್ವಭಾವತಃ ಪರೋಪಕಾರಿಗಳು, ಲೋಕಸೇವೆಯ ಕೆಲಸದಲ್ಲಿ ತತ್ಪರರು. ಜನಹಿತಕ್ಕಾಗಿ ಸಹಾಯ ಮಾಡಲು ಅವರು ಯಾವಾಗಲೂ ಸಿದ್ಧರಿರುತ್ತಿದ್ದರು. ದ್ರವ್ಯದಾನಮಾಡುವದರಲ್ಲಿಯೂ ಅವರು ಹಿಂದುಮುಂದೆ ನೋಡುತ್ತಿದ್ದಿಲ್ಲ. ಅವರಿಗೆ ಅನ್ಯಾಯವು ಸೇರುತ್ತಿದ್ದಿಲ್ಲ. ಮಾತಿನ ಸ್ಪಷ್ಟತೆಯು ಅವರಲ್ಲಿಯ ಮುಖ್ಯಗುಣವಾಗಿತ್ತು. ಕಾರಖಾನೀಸರವರ ಮರಣದಿಂದ ವಿಜಾಪುರಕ್ಕೆ ಬಹಳ ಹಾನಿತಟ್ಟಿತೆಂದರೆ ಅತ್ಯುಕ್ತಿಯಾಗಲಿಕ್ಕಿಲ್ಲ. ಅವರ ಬಂಧುಬಳಗದವರಿಗೆ ಹೇಳಕೊಡದಷ್ಟು ದುಃಖವಾಗಿರುವುದು ಸಹಜ. ಅವರ ದುಃಖದಲ್ಲಿ 'ಕನ್ನಡಿಗ'ನಾದರೂ ಪಾಲುಗಾರನಿರುತ್ತಾನೆ. ಡಾಕ್ಟರರವರ ಆತ್ಮಕ್ಕೆ ದೇವರು ಶಾಂತಿಯನ್ನು ಕೊಡಲಿ.

ಪ್ರಾಥಮಿಕ ಶಾಲಾ ಶಿಕ್ಷಕರ ಗೋಳನ್ನು ಮುಂಬೈ ಸರಕಾರದಲ್ಲಿ ಕೇಳುವರು ಯಾರೂ ಇಲ್ಲದಂತೆ ತೋರುತ್ತದೆ. ಇವರ ಪಗಾರದ ಪ್ರಶ್ನೆಯು ಬಹು ದಿನಗಳಿಂದ ಹಾಗೇ ಹೊಯ್ದಾಡುತ್ತಿದೆ. ಆದರೂ ನಮ್ಮವರಾದ ಶಿಕ್ಷಣ ಮಂತ್ರಿಗಳಿಗೆ ಕರುಣೆ ಬರಲೊಲ್ಲದು. ಕಾಯದೇ ಮಂಡಲದಲ್ಲಿ ಪ್ರಶ್ನೆಗಳ ಸುರಿಮಳೆಯಾಯಿತು; ಅನೇಕ ಠರಾವುಗಳಾದವು. ಕಮೀಟಿಗಳಾದವು. ವಾದವಿವಾದಕ್ಕಂತೂ ಎಣಿಕೆಯೇ ಇಲ್ಲ. ಶಿಕ್ಷಕರಾದರೂ ಸುಮ್ಮನೇ ಕುಳಿತಿಲ್ಲ. ತಮ್ಮ ಕಾರ್ಯದಲ್ಲಿ ದಕ್ಷರಾಗಿದ್ದು, ಸಭೆ, ಪರಿಷತ್ತು, ಮಾನಪತ್ರ, ಅರ್ಜಿ, ಸಾರ್ವಜನಿಕ ಭೆಟ್ಟಿಗಳ ಮುಖಾಂತರ ಸರಕಾರಕ್ಕೆ ತಮ್ಮ ಮತವನ್ನು ಅರುಹುತ್ತಲೇ ಇರುವರು. ಬಾಗಲಕೋಟೆಯ ಮುನಸಿಪಾಲ್ಟಿಯ ಶಾಲೆಗಳ ಶಿಕ್ಷಕರೂ ಒಂದು ಠರಾವನ್ನುಮಾಡಿರುವರು ಅದು ಹೀಗಿದೆ:—

" ಬಾಗಲಕೋಟೆಯ ಮುನಸಿಪಾಲ್ಟಿಯ ಪ್ರಾಥಮಿಕ ಶಿಕ್ಷಕ ಸಂಘವು ತಾರೀಖು ೨—೯—೧೯೩೬ ನೇ ಗುರುವಾರ ಸಾಯಂಕಾಲದ ೬ ಗಂಟೆಗೆ ಮ್ಯು—ಸೆಂಟ್ರಲ್ ಸ್ಕೂಲಿನಲ್ಲಿ ಕೂಡಿ " ಈಗ ಸರಕಾರದವರು ಮಂಜೂರು ಮಾಡಿದ ಸುವರ್ ಕಮೀಟಿಯವರ (ಡ್ಯೂಟಿಅಲವನ್ಸ) ಕಾರ್ಯದ ವೇತನವು ಹಿಡೋಷ ವಿದ್ದಸ್ಥಿಲ್ಲದೆ ಇದರಿಂದ ತೀರ ಸ್ವಲ್ಪ ಜನರಿಗೆ ಲಾಭವಾಗುವದರಿಂದ, ೧೯೩೬ ನೇ ಎಪ್ರೀಲದಿಂದ ಸಾರೆ ಪಗಾರವಾಢ ಯೋಜನೆಯನ್ನು ಕೃತಿಯಲ್ಲಿ ತರಬೇಕೆಂದು ಕೌನ್ಸಿಲದಲ್ಲಿ ಠರಾವ ಆದಂತೆ, ನಮ್ಮ ಪಗಾರ ಕೊಡುವ ಬಗ್ಗೆ ಬೇಗನೆ ವ್ಯವಸ್ಥೆಯಾಗಬೇಕೆಂದು ನೆ. ನಾ. ಗವ್ಹರ್ನರ ಸಾಹೇಬರಿಗೂ, ಶಿಕ್ಷಣ ಮಂತ್ರಿಗಳಿಗೂ, ಮ್ಯು—ಪ್ರೆಸಿಡೆಂಟಸಾಹೇಬರಿಗೂ ವಿನಂತಿ ಮಾಡಿಕೊಂಡಿರುತ್ತದೆ "

ವೃತ್ತಪತ್ರಗಳೂ ಕಾಯದೇ ಮಂಡಲಗಳ ಸಭಾಸದರೂ ಇತರ ಅಧಿಕಾರಿಗಳೂ ಈ ಬಗ್ಗೆ ಶಿಕ್ಷಕರಿಗೆ ತಮ್ಮ ಬೆಂಬಲವನ್ನು ಕೊಡುತ್ತಲೇ ಇರುವರು. ನಿಯಮಗಳಿಗೆ ವಿರುದ್ಧವಾಗದಂತೆ ಶಿಕ್ಷಕರು ತಮ್ಮ ಚಳವಳಿಯನ್ನ ಸನದಶೀರವಾಗಿ ನಡೆಸುವದರಲ್ಲಿ ಜಾಗ್ರತರಾಗಿದ್ದಾರೆ. ಯಾವ ರೀತಿಯಿಂದ ನೋಡಿದರೂ ಇವರ ಬೇಡಿಕೆಗಳಲ್ಲಿ ಅನ್ಯಾಯವಿಲ್ಲ; ಚಳವಳಿಯಲ್ಲಿ ದೋಷವಿಲ್ಲ; ತಮ್ಮ ಕರ್ತವ್ಯದ ಭಾರವನ್ನು ಹೊರಲು ಇವರುಅಪಾತ್ರರಿಲ್ಲ. ಆದರೂ ಇವರ ದಾದು ಬೇಗನೇ ಹತ್ತಲೊಲ್ಲದೆಂದಮೇಲೆ, ಸರಕಾರಕ್ಕೆ ಈ ಮಾತಿನಲ್ಲಿ ಮನಸ್ಸಿಲ್ಲವೆನ್ನಬೇಕಾಗುವದು. ಸರಕಾರವು ಈ ಅಪವಾದಕ್ಕೆ ಒಪ್ಪುವದೋ?

ಕರ್ನಾಟಕದ ಸರದಾರರು ಈಗ ಎಚ್ಚರಿಯಬೇಕು. ಕಾಯದೇ ಮಂಡಲಕ್ಕೆ ಹಿರ್ವ ಪ್ರತಿನಿಧಿಯನ್ನು ಕಳಿಸುವ ಹಕ್ಕು ಹೊಸ ಸುಧಾರಣೆಯಿಂದ ಇವರಿಗೆ ಕೊಡಲ್ಪಟ್ಟಿದೆ. ಮುಂಬೈ ಇಲಾಖೆಯಲ್ಲಿ ಗುಜರಾತದ ಇನಾಮದಾರರಿಗೆ ಸ್ವಂತ [illegible] ಮಹಾರಾಷ್ಟ್ರಿಗೂ ಅದೇ ಪ್ರಕಾರವಾಗಿದೆ. [illegible] ಕನ್ನಡ

ಸರದಾರರಿಗೆ ಮಾತ್ರ ಸ್ವತಂತ್ರವಾದ ಪಕ್ಷವಿಲ್ಲ ಮಹಾರಾಷ್ಟ್ರದ ಸರದಾರರ ಜೊತೆಯಲ್ಲಿ ಇವರ ಗಣನೆಯಾಗಿದೆ ಇದರಿಂದ ಸರದಾರರಿಗೆ ದೊರೆಯಬೇಕಾದ ಸೌಕರ್ಯಗಳೂ, ಮಾನಗಳೂ ಹೆಚ್ಚಾಗಿ ಮಹಾರಾಷ್ಟ್ರದ ಸರದಾರರಿಗೆ ದೊರೆಯುವದು. ಕನ್ನಡ ಸರದಾರರು ಹಿಂದೆ ಸರಿದುನಿಂತು ತಥಾಸ್ತು ಎಂಬ ಪಲ್ಲವನ್ನು ಮಾತ್ರ ಜಪಿಸುತ್ತ ನಿಲ್ಲಬೇಕಾಗಿದೆ. ಈಗ್ಗೆ ಸುಧಾರಣೆಯು ಕೃತಿಯಲ್ಲಿ ಬಂದಂದಿನಿಂದ ಮಹಾರಾಷ್ಟ್ರದ ಸರದಾರರೇ ಮುಂಬೈ ಕಾಯದೆಮಂಡಲಕ್ಕೆ ಪ್ರತಿನಿಧಿಗಳಾಗಿದ್ದಾರೆ ಕನ್ನಡಿಗರಾದ ಶ್ರೀ ದೇಸಾಯಿ ಹಣಮಂತರಾಯರು ಕಳೆದವರ್ಷ ನಿಲ್ಲಬೇಕೆಂದು ಪ್ರಯತ್ನಿಸಿದಾಗ್ಗೆ ಈ ಸಲ ನೀವು ನಿಲ್ಲಬೇಡಿ; ಮಹಾರಾಷ್ಟ್ರದ ಸರದಾರರಿಗೆ ಅವಕಾಶ ಕೊಡಿ; ಮುಂದಿನ ಸಲ ಕರ್ನಾಟಕದ ಸರದಾರರನ್ನೇ ನಾವೆಲ್ಲ ನಿಲ್ಲಿಸುವೆನೆಂದು ಮಹಾರಾಷ್ಟ್ರದ ಸರದಾರರು ಕರ್ನಾಟಕದ ಸರದಾರರಿಗೆ ಅಭಿವಚನಕೊಟ್ಟರು. ಆದರೆ ಅದು ಮೂರು ವರ್ಷದ ಹಿಂದೆ ಕೊಟ್ಟ ಆಶೀರ್ವಾದ ವಚನವು. ಅದನ್ನು ನಾವೇನು ನೆನಪಿನಲ್ಲಿಟ್ಟಿಲ್ಲವೆಂದು ಹೇಳುಹಾಗ, ಈ ಸಲ ಪುನಃ ಮಹಾರಾಷ್ಟ್ರದ ಸರದಾರರು ತಾವೇ ಉಮೇದವಾರರಾಗಿ ನಿಲ್ಲುವ ಪ್ರಯತ್ನದಲ್ಲಿರುವರು ಇದು ಮಹಾರಾಷ್ಟ್ರದ ರಾಜಕಾರಣ ಪಟುಗಳಿಗೆ ನಿತ್ಯದ ಆಟ. ಆದುದರಿಂದ ಅವರ ಕಡೆಗೆ ದೃಷ್ಟಿಯನ್ನಿಟ್ಟು, ಕಾಲವನ್ನು ಆಗಳಾಡಿಸುವದರಲ್ಲಿ ಅರ್ಥವಿಲ್ಲೆಂಬದನ್ನು ಕರ್ನಾಟಕದ ಸರದಾರರು ಈಗಲಾದರೂ ಕಂಡುಹಿಡಿದು, ಈ ಸಲ ಕನ್ನಡ ಸರದಾರರನ್ನೇ ಮುಂಬೈ ಕಾಯದೇಮಂಡಲಕ್ಕೆ ಉಮೇದವಾರರನ್ನಾಗಿ ನಿಲ್ಲಿಸಿ, ಅವನು ಯಶಸ್ವಿಯಾಗುವಂತೆ ಎಲ್ಲರೂ ಒಗ್ಗಟ್ಟಿನಿಂದ ಯತ್ನಪಡಬೇಕು. ಮುಂದ ಮಹಾರಾಷ್ಟ್ರದ ಸಂಬಂಧವಿಲ್ಲದೇ ಕರ್ನಾಟಕ ಸರದಾರ ಜಹಾಗೀರದಾರರೆಲ್ಲ ಕೂಡಿ, ಒಟ್ಟಾಗಿ ಚಳವಳಮಾಡಿ, ಸ್ವತಂತ್ರವಾದ ಪ್ರತಿನಿಧಿಯ ಹಕ್ಕನ್ನು ಪಡೆದುಕೊಳ್ಳಬೇಕು.

ಹಿಂದುಸ್ಥಾನದ ರಾಜಕೀಯ ಪರಿಸ್ಥಿತಿಯು ಈಗ್ಗೆ ಬಹುನಿರಾಶೆ ಜನಕವಾಗಿದೆ. ಮುಂದಾಳುಗಳು ಪಂಗಡಗಳನ್ನು ಬದಲಿಸುವದು, ಅವೋ ಳಿ, ತಮ್ಮ ತಮ್ಮ ಸಂಗಡದ ಬಗ್ಗೆ ಪರರ ಕೂಡ ವಾದವಿವಾದ ಬೆಳಿಸುವದು, ಇವೇ ಈಗಿನ ರಾಜಕಾರಣದ ಧೋರಣಗಳಾಗಿವೆ. ರಾಷ್ಟ್ರೀಯ ಸಭೆಯೂ, ಅದರ ನಿರ್ಣಯಗಳೂ, ಪ್ರಮುಖರೂ ವಯೋವೃದ್ಧರೂ ಆದ ಮುಖಂಡರಿಗೆಸಹ ಮಾನ್ಯವಿಲ್ಲ. ಒಳಭೇದ, ಪಂಗಡಗಳನ್ನು ಎಣಿಸಹತ್ತಿದರೆ, ಕೊನೆಯನ್ನು ಮುಟ್ಟುವದು ಕಠಿಣವಾಗಬಹುದು. ಇಷ್ಟೇ ಸಾಕಿಲ್ಲವೆಂಬುವ ಹಾಗೆ, ಜಾತಿಜಾತಿಗಳಲ್ಲಿಯು ಕಲಹಕ್ಕೆ ಇತ್ತ ಹೆಚ್ಚಾಗಿ ಸ್ಫೂರ್ತಿಯು ಬಂದಂತೆ ತೋರುತ್ತದೆ. ಹಿಂದೂ-ಮುಸಲ್ಮಾನರಲ್ಲಿ ಬಡಿದಾಟ; ಬ್ರಾಹ್ಮಣ-ಬ್ರಾಹ್ಮಣೇತರಲ್ಲಿ ತಿಕ್ಕಾಟ ಚುನಾವಣೆಗಾಗಿ ಬ್ರಾಹ್ಮಣ-ಬ್ರಾಹ್ಮಣರಲ್ಲಿ ಮೇಲಾಟ. ಬ್ರಾಹ್ಮಣೇತರ-ಬ್ರಾಹ್ಮಣೇತರಲ್ಲಿಯು ಹೊಯ್ದಾಟ. ಇವೆಲ್ಲವುಗಳಿಂದ ರಾಜಕೀಯ ವಾತಾವರಣವು ಬಹುಪರಿಯಿಂದ ದೂಷಿತವಾಗಿರುವದು ಸ್ಪಷ್ಟವಿದೆ. ಹಿಂದೀಯರಾದ ನಾವು ನಮ್ಮ ನಮ್ಮ ಈ ಬಗೆಯ ಒಳಜಗಳಗಳಿಂದ ದುರ್ಬಲರಾಗಿದ್ದುದು ಸರಕಾರಕ್ಕೆ ಒಳ್ಳೇ ಬಲಕೊಟ್ಟಂತಾಗಿದೆ. ಆದುದರಿಂದ ಹಿಂದೀಜನರ ಆಕಾಂಕ್ಷೆಗಳನ್ನೆಲ್ಲ ಹಿಂದೊತ್ತಲು ಸರಕಾರಕ್ಕೆ ಸುಸಮಯ ಪ್ರಾಪ್ತವಾಗಿದೆ. ಹಿಂದುಸ್ಥಾನಕ್ಕೆ ಪಂಗಡಗಳ ರಾಜಕಾರಣವು (Party Politics) ಸರಿಯಾದುದಲ್ಲವೆಂಬುದನ್ನು ಈಗಲಾದರೂ ಮುಖಂಡರು ಕಂಡುಹಿಡಿಯಬೇಕು —ಇಂಗ್ಲಂಡದ-ಸರಕಾರವು ಈ ಪಂಗಡಗಳಿಂದ ನಡೆಗಿದ್ದರೂ, ಅಲ್ಲಿಸಹ ರಾಮರಾಜ್ಯದಂತಹ ನಿಜವಾದ ಸೌಖ್ಯವಿಲ್ಲ ಪರರಾಷ್ಟ್ರದ ಆಡಳಿತೆಯಲ್ಲಿ ಸಿಕ್ಕ ಹಿಂದುಸ್ಥಾನವು ಒಗ್ಗಟ್ಟನಿಂದ ಯಾವದೊಂದೇ ಧೋರಣವನ್ನು ಗೊತ್ತುಪಡಿಸಿ, ಸರಕಾರದ ಸಂಗಡ ಬಡಿದಾಡಲು ಬದ್ಧಕಂಕಣವಾಗದಿದ್ದರೆ, ಸ್ವಾತಂತ್ರ್ಯದ ದಿನಗಳು ತೀರ ದೂರವಾಗಿವೆಂಬದನ್ನು ಮನದಟ್ಟಾಗಿ ಮಾಡಿಕೊಳ್ಳಬೇಕು.

ಗುಪ್ತ ಪೋಲೀಸರು ಹುಬ್ಬಳ್ಳಿಯ ಡಾ. ಹರ್ಡೀಕರರ ಬೆನ್ನು ಹತ್ತಿರುವರಾಗಿ "ವಾಲಂಟಿಯರ" ಮಾಸಪತ್ರಿಕೆಯಿಂದ ತಿಳಿಯುತ್ತದೆ ರಾಜಕಾರಣಕ್ಕೆ ಸಂಬಂಧಿಸಿದ ವಿಷಯವೆಂದೊಡನೆ ಸರಕಾರದಲ್ಲಿ ಬಹುಬೇಗ ದಕ್ಷತೆಯುಂಟಾಗುವದು. ಅದರಲ್ಲಿಯೂ ಶ್ರೀ ಹರ್ಡೀಕರರು ಅಮೇರಿಕೆಯಿಂದ ಬಂದವರು. ಸ್ವಯಂಸೇವಕರ ಚಳವಳಿಯನ್ನು ಮುಂದಕ್ಕೆ ತಂದವರು. ಹಿಂದುಸ್ಥಾನದಲ್ಲೆಲ್ಲ ಈ ಚಳವಳಿಯು ಬೇರೂರುತ್ತಿದೆ. ಅಂದಮೇಲೆ ನಮ್ಮ ಸರಕಾರಕ್ಕೆ ಅತ್ತ ಲಕ್ಷ್ಯಹೋದದ್ದು ಆಶ್ಚರ್ಯವಲ್ಲ. ಈ ಸೇವಾದಲವು ಪ್ರಾರಂಭವಾದುದಿನಿಂದ, ಈ ವರೆಗೆ ದಲದವರು ಮಾಡಿದ ಕಾರ್ಯವನ್ನು ಸರಕಾರದವರು ಗೊತ್ತುಮಾಡಿಕೊಳ್ಳಬೇಕು. ಇವರು ರಾಜಕೀಯ ಸಂಸ್ಥೆಯಾದ ಕಾಂಗ್ರೆಸಕ್ಕೆ ಸಂಬಂಧಪಟ್ಟವರೆಂಬ ಮಾತ್ರದಿಂದ ಸರಕಾರವು ಅಂಜುವಕಾರಣವಿಲ್ಲ ಅರಾಜಕೀಯ ವಿಚಾರಗಳಿಗೆ ಅಷ್ಟಾಗ ಕೊಟ್ಟಿಲ್ಲವೆಂದಮೇಲೆ ಆದರ ಮರಿಯಾದ ಸೇವಾದಲಕ್ಕೆ ಯಾಗೆ ಜೆಚ್ಚಿಯನ್ನಿಡಲು ಹಾದಿಯಿಲ್ಲ. ರಾಜಕೀಯ ಸೇವೆಯಲ್ಲದೆ, ಸಾರ್ವಜನಿಕ ಸೇವೆಯಲ್ಲಿಯೂ ಸೇವಾದಲವು ನಿರತವಾಗಿದೆ ಹುಬ್ಬಳ್ಳಿಯಲ್ಲಿ ಆರೂಢ ಜಾತ್ರೆಯ ಸೇವೆ; ಗೋಮಟೇಶ್ವರದಲ್ಲಿಯ ಮಹಾಮಸ್ತಕಾಭಿಷೇಕದ ಸೇವೆ; ಬಾಗಲಕೋಟೆಯಲ್ಲಿಯ ಮಹಾಸಮಾರಾಧನೆಯ ಸೇವೆ; ಇವುಗಳಲ್ಲಿ ಸೇವಾದಲವು ನಿರತವಾಗಿ ನಿಜವಾದ ಸಮಾಜಸೇವೆಯನ್ನು ಮಾಡಿರುವದು ಇವೇನು ರಾಜಕೀಯ ಸಂಸ್ಥೆಗಳಲ್ಲ ಕೇವಲ ಧಾರ್ಮಿಕ ಜಾತ್ರೆಗಳು. ಅಲ್ಲಿ ಸಹ ಅವರು ಸೇವೆಗಾಗಿ ಬದ್ಧಕಂಕಣರಾಗಿದ್ದಾರೆ. ಸಾಶಂಕದೃಷ್ಟಿಯಿಲ್ಲದೇ ಸರಕಾರವು ತನಗೆ ಸ್ವಯಂಸೇವಕರು ಬೇಕಾದಾಗ್ಗೆ ಅವಶ್ಯವಾಗಿ ಸೇವಾದಲದವರಿಗೆ ಆಮಂತ್ರಣಕೊಡಬಹುದು. ಅದಕ್ಕೂ ಅವರು ಸಿದ್ಧರಿರುವರು ಇಷ್ಟರಲ್ಲಿಯೆ ನಾಳೆ ಪುಣೆಯಲ್ಲಿ ನೆರೆಯುವ ಒಕ್ಕಲತನದ ಪ್ರದರ್ಶನಕ್ಕೆ ಕರೆದು ಪರೀಕ್ಷಿಸಿ ನೋಡಬಹುದು. ಜನಸಮೂಹದಲ್ಲಿಯೇ ನಿರತವಾದ ಸೇವಾದಲಕ್ಕೆ ನಿಜವಾದ ಸಾರ್ವಜನಿಕ ಸೇವೆಯ ಹೊರತಾಗಿ ಅನ್ಯವಿಚಾರವಿಲ್ಲ. ಸೇವೆಯೇ ಅವರ ಪ್ರೇಮ. ಸೇವೆಯೇ ಅವರ ಕರ್ತವ್ಯ; ಸೇವೆಯೇ ಅವರ ಸರ್ವಸ್ವವು. ಆದರೆ ಆ ಸೇವೆಯು ಸಮಯದಲ್ಲಿ ನಮ್ಮ ರಾಷ್ಟ್ರದ ಪಾಡನಹಾನಿಮಾತ್ರ ಆಗಕೂಡದು ಇಷ್ಟೇ.

ಹೊಸ ರೇಲ್ವೆಗಳನ್ನು ಜಿಲ್ಹಾ ಬೋರ್ಡಿನವರು ಧರಿಸಬೇಕೆಂದು ಈ ವರೆಗೆ ಎಲ್ಲಿಯೂ ಕೈಕೊಂಡಿಲ್ಲವೆಂದು 'ಕರ್ಮವೀರ'ನ ಮತ. ಆದರೆ ಇದು ವಸ್ತುಸ್ಥಿತಿಯಲ್ಲ ಮದ್ರಾಸ ಇಲಾಖೆಯಲ್ಲಿ ಜಿಲ್ಹಾ ಬೋರ್ಡುಗಳು ತಮ್ಮ ತಮ್ಮ ಹದ್ದಿನಲ್ಲಿ ಹೊಸ ರೇಲ್ವೆಗಳನ್ನು ಹಾಕಿ ಅನೇಕ ವರ್ಷಗಳಾಗಿವೆ ಮದ್ರಾಸ ಸರಕಾರದವರು ಅಲ್ಲಿಯ ಬೋರ್ಡುಗಳಿಗೆ ಅಪ್ಪಣೆ ಕೊಟ್ಟಂತೆ, ಮುಂಬೈ ಸರಕಾರದವರಾದರೂ ಈ ಇಲಾಖೆಯ ಬೋರ್ಡುಗಳಿಗೆ ಅಪ್ಪಣೆ ಕೊಡಬೇಕೆಂದು, ಕರ್ನಾಟಕದ ಒಂದು ಜಿಲ್ಹಾಬೋರ್ಡಿನವರು, ಗವರ್ನರರಿಗೆ, ಹಿಂದಕ್ಕೆ ಅವರಿಗೆ ಮಾನಪತ್ರ ಕೊಟ್ಟಾಗ್ಗೆ, ಕೇಳಿಯೂ ಕೊಂಡಿದ್ದರು. ಸರಕಾರದಿಂದ ಅಷ್ಟೊಂದು ಉತ್ತೇಜನಕವಾದ ಉತ್ತರವು ಆಗ್ಗೆ ಬರಲಿಲ್ಲ. ಮುಂದೆ ಈ ಬೋರ್ಡಿನವರೂ ಆ ವಿಷಯದ ಕಡೆಗೆ ಹೆಚ್ಚಾಗಿ ಮನಸ್ಸನ್ನು ಹಾಕಲಿಲ್ಲ. ಈಗಲಾದರೂ ಎಳ್ಳಾರಿ ವಿಜಾಪೂರ, ವಿಜಾಪೂರ-ಬೆಳಗಾವಿ, ಬೆಳಗಾವಿ-ಧಾರವಾಡ, ಧಾರವಾಡ-ಕಾರವಾರ, ಕಾರವಾರ-ಮಂಗಳೂರ, ಮಂಗಳೂರ-ಕೊಡಗು, ಕೊಡಗು-ಮೈಸೂರು, ಮೈಸೂರು-ಕೊಯಿಮತ್ತೂರ ಜಿಲ್ಹಾ

ಬೋರ್ಡಿನವರು ಒಮ್ಮನಸ್ಸಿನಿಂದ ಪ್ರಯತ್ನಿಸಿ, ಸರಕಾರದ ಅನುಮತಿಯನ್ನು ಸಂಪಾದಿಸಿ, ಹೊಸರೇಲ್ವೆಗಳ ಯೋಜನೆಯನ್ನು ಸಿದ್ಧಪಡಿಸಿದರೆ, ಕರ್ನಾಟಕ ಏಕೀಕರಣಕ್ಕೆ ಒಳ್ಳೇ ಸಹಾಯವಾಗುವದು.

ಸ್ವೀಕಾರ.

“ ಸತೀ ಹಿತೈಷಿಣಿ ” ಗ್ರಂಥ ಮಾಲಾ ನಂಜನಗೂಡ ಇವರಿಂದ ಕೆಳಗಿನ ಪುಸ್ತಕಗಳು ಅಭಿಪ್ರಾಯಕ್ಕಾಗಿ ಬಂದಿದ್ದು ಅವುಗಳಲ್ಲಿ “ ರಮಾನಂದ ” ವೆಂಬ ಪುಸ್ತಕದ ವಿಮರ್ಶೆಯನ್ನು ಇದೇ ಸಂಚಿಕೆಯಲ್ಲಿ ಪ್ರಸಿದ್ಧ ಮಾಡಿರುವೆವು. ಉಳಿದ ಪುಸ್ತಕಗಳ ವಿಮರ್ಶೆಯನ್ನು ಕ್ರಮವಾಗಿ ಕೊಡುತ್ತ ಹೋಗುವೆವು

(೧) ರಮಾನಂದ (೨) ವಿರಾಗಿಣೀ (೩) ಸಭಾ, (ಭಾ. ೨) (೪) ಸುಶೀಲೆ (೫) ಸಭಾ (ಭಾ. ೧) (೬) ವಿವೇಕೋದಯ (೭) ಪಾತ್ಯನಂದಿನಿ.

“ ಬಸವಚರಿತ್ರ ” ಲೇ:— ಚನ್ನಪ್ಪಾ ಫಕೀರಪ್ಪಾ ಪಾಟೀಲ.
ಅ ಮಾಸ್ತರ, ಚಚಡಿ

ವಾಙ್ಮಯ ವಿಚಾರ.

ರಮಾನಂದ.

ಲೇ:— “ ವಿದ್ಯಾರ್ಥಿನೀ ” ಗ್ರಂಥಮಾಲಿ;

ನಂಜನಗೂಡ. (ಪುಟ ೧೧೦;)

(ಬೆಲೆ- ೦-೧೦-೦)

ಈ ಮಾಲೆಯು ಪರಿಚಯವು ಈ ಭಾಗದ ಜನರಿಗೆ ವಿಶೇಷವಾಗಿಲ್ಲ; ಹರಿದು ಹಂಚಿಹೋದ ಕರ್ನಾಟಕದ ಭಾಗಗಳಲ್ಲಿ ಪರಸ್ಪರರೊಂದಿಗೆ ವಿಶೇಷವಾಗಿ ಬಳಿಕೆಯಿಲ್ಲದಿರುವದೇ ಇದಕ್ಕೆ ಬಹ್ವಂಶದಿಂದ ಕಾರಣವಾಗಿರುವದು. ಈ ಮಾಲೆಯ ಮುಖ್ಯ ಸಂಪಾದಕರಾದ ಶ್ರೀಮತಿ ತಿರುಮಲಮ್ಮನವರು ಮಹಿಳಾ ವರ್ಗಕ್ಕೆ-ವಿಶೇಷವಾಗಿ ಕರ್ನಾಟಕದ ಮಹಿಳಾವರ್ಗಕ್ಕೆ ಆದರ್ಶಭೂತರಾಗಿರುವರು. ಸ್ತ್ರೀಯರೆಂದರೆ ಮನೆಗೆಲಸಮಾಡುವ ಆಳಿಗಳು ಎಂಬ ಕಲ್ಪನೆಯು ಕಲಿತವರಲ್ಲಿಯೂ ಕಂಡು ಬರುವದು. ಈ ಕಲ್ಪನೆಯನ್ನು ಬೇರೊರಿಸಿ ಕಿತ್ತುಹಾಕಿ, ಸುಶಿಕ್ಷಿತಳಾದ ಸ್ತ್ರೀಯು ಸ್ವದೇಶಸ್ವಭಾಷೆಗಳ ಸೇವೆಯಲ್ಲಿ ಹೇಗೆ ಸಹಾಯಕಳಾಗಬಹುದೆಂಬದನ್ನು ಇವರು ಸಿದ್ಧಪಡಿಸಿ, ತೋರಿಸಿರುವರು. ಇದೇ ಇವರ ಜೀವನದ ಉದ್ದೇಶ. ಅದೊಂದೇ ಉದ್ದೇಶವನ್ನು ಮುಂದಿಟ್ಟುಕೊಂಡು ಇವರು ತಮ್ಮ ಗ್ರಂಥಗಳನ್ನು ಬರೆದಿರುವರು. ತಾಯಿಯು ಮಗನಿಗೆ ಬಾಲ್ಯದಲ್ಲಿ ಮಾಡುವ ಅತಿ ಮಮತೆಯಿಂದ, ಮುಂದೆ ಹೇಗೆ ಅನರ್ಥಪರಂಪರೆಯು ಒದಗುವದೆಂಬದನ್ನು ಲೇಖಕಿಯರು ಈ ಗ್ರಂಥದಲ್ಲಿ ಉತ್ಕೃಷ್ಟವಾಗಿ ಚಿತ್ರಿಸಿದ್ದಾರೆ. ‘ ಸಂಗತಿಯಂತೆ ಫಲ ’ ಸತ್ಯಸಂಧನಿಗೆ ಕೆಲಕಾಲ ಕಷ್ಟ ಒದಗಿದರೂ ಕಡೆಯಲ್ಲಿ ಸತ್ಯಸದ್ಗುಣಗಳಿಗೆ ಜಯವು ದೊರೆಯುವದು. ಇವೇ ಮೊದಲಾದ ತತ್ವಗಳು ಈ ರೂಪಕಾವಲ್ಲಿ ಅಡಕವಾಗಿರುತ್ತವೆ. ತತ್ವಗಳು ಸಾಮಾನ್ಯವೆನಿಸಿದರೂ ಜೀವನಪಟದಲ್ಲಿ ಜೋಡಿಸಿದವುಗಳಾದ್ದರಿಂದ ಜಡವು ತಕ್ಕವುಗಳಲ್ಲ. ಇವುಗಳಿಗೆ ಅನುರೂಪವಾದ ‘ ನೀತಿ ಮಣಿ ’-ಗಳನ್ನು ಆರಿಸಿ, ಅಲ್ಲಲ್ಲಿ ಜೋಡಿಸಿರುತ್ತಾರೆ.

ಇನ್ನು ಆಕ್ಷೇಪಗಳಿಗೆ ಅವಕಾಶಕೊಡದಂತೆ ಗ್ರಂಥಕರ್ತರು ತಮ್ಮ ಮನಸ್ಸಿನಲ್ಲಿ ತಾವೇ ಅವುಗಳನ್ನು ಕಲ್ಪಿಸಿ ಅವುಗಳಿಗೆ ಉತ್ತರ ಬರೆದಿರುವರು. ಆ ರೂಪಕಕ್ಕೆ ಶೋಭಿಸದ ಒಂದೆರಡು ಸಂಗತಿಗಳನ್ನು ಹೇಳದಿರಲಾರೆವು. ಆತ್ಮಾನುಗುಣ... ಗಳಿಂದ ಕೂಡಿದ ಪೌರಾಣಿಕ ಪರಿಸ್ಥಿತಿಯುಳ್ಳ ಕಥಾನಕವನ್ನು ಕಲ್ಪಿಸುವದಕ್ಕಿಂತ ಸದ್ಯದ ವಿದ್ಯಾಸಿಲಯಗಳ ಗಣಪೂಜೆಗಳ ಚಿತ್ರವನ್ನು ಮುಂದಿಡುವದರಿಂದ, ಓದುಗರ ಮನಸ್ಸಿನ ಮೇಲೆ ಹೆಚ್ಚು ಪರಿಣಾಮವಾಗಬಹುದೆಂದು ನಮ್ಮ ಭಾವನೆ. ಭಾಷೆಯು ಲಲಿತವಾಗಿಯೂ ಸಾರವತ್ತಾಗಿಯೂ, ಅದೆ. ಆದರೂ ‘ ಇಹ ಜೀವನ ಸಂರಕ್ಷಾ ’ ಅಭಿನ್ನೋದರ, ಮೊದಲಾದ ಪ್ರತಿಪುಟದಲ್ಲಿಯೂ ಕಂಡುಬರುವ ಅನೇಕ ಸುಸಂಸ್ಕೃತ ಶಬ್ದಗಳು ಸಂಸ್ಕೃತವನ್ನರಿಯದ ಹೆಣ್ಣುಮಕ್ಕಳಿಗೂ ಹುಡುಗರಿಗೂ ಗಡಚಾಗಬಹುದೆಂದೆನಿಸುತ್ತದೆ. ಅದರಿಂದ ಭಾಷೆಯು ಜೀವಾಳವೂ ಬಿಡಗೂ ನಷ್ಟವಾಗುತ್ತಿದೆ. ಹೊತ್ತಿಗೆಯು ಹೊರಮೈಯು ಅಂದವಾಗಿದೆ. ಮುದ್ರಣದ ದೋಷಗಳು ಕಡಿಮೆ.

ಒಟ್ಟಿನ ಮೇಲೆ ನಮ್ಮ ಬಂಧು ಭಗಿನಿಯರು ಶ್ರೀಮತಿ ತಿರುಮಲಮ್ಮನವರ ನಿಸ್ವಾರ್ಥ ಸೇವೆಯನ್ನು ಸ್ವೀಕರಿಸಿ, ಅವರ ಕಳಕಳಿಯ ಉಪದೇಶದ ಬೆಳಕಿನಲ್ಲಿ ತಮ್ಮ ಮುಂದಣ ಮಾರ್ಗವನ್ನು ಸುಧಾರಿಸಲೆಂದು ನಾವು ಕೋರುತ್ತೇವೆ

—ಶ್ಯಾಮ.

“ ಏಕೆ ಕಾಂಗ್ರೆಸ್ ಮೆಂಬರರಾಗಬೇಕು ? ”

ಎಂಬ ಬಾ ಹರ್ಡೀಕರರ ಇಂಗ್ಲೀಷ ಲೇಖನ ಅನುವಾದವನ್ನು ರಾ|| ಹೊಸಕೊಪ್ಪ ಕೃಷ್ಣರಾಯರು ಪ್ರಕಟಿಸಿದ್ದಾರೆ. ಅದನು ನಾವು ಇಲ್ಲಿ ಪ್ರಸಿದ್ಧಮಾಡಿದ್ದೇವೆ.

(೧) ಹಿಂದುಸ್ಥಾನದ ಈಗಿನ ಆರ್ಥಿಕ ದಸ್ಥಿತಿಯ ನಿವಾರಣೆಯೂ, ಸಂಪೂರ್ಣ ಸ್ವಾತಂತ್ರ್ಯವೂ, ಆಗಬೇಕಾದರೆ ಸಾಹಸಿಕರೂ, ಧೈರ್ಯಶಾಲಿಗಳೂ, ಸ್ವಾರ್ಥತ್ಯಾಗಿಗಳೂ ಆದ ಕೆಲಸಗಾರರಿಂದ ಕೂಡಿದ ಒಂದು ಯೋಗ್ಯ ಸಂಸ್ಥೆಯ ಪ್ರಯತ್ನದಿಂದಲೇ ಶಿಕ್ಷಿತೇತರ ಅನ್ಯರಿಂದ ಆಗಲಾರದು. ಅಂಥ ಒಗ್ಗಟ್ಟಿನ ಸಂಸ್ಥೆಗೆ ರಾಷ್ಟ್ರೀಯ ಮಹಾಸಭೆಯೆಂದು ಅನ್ನುವರು.

(೨) ಇದು ಕಳೆದ ೪೦ ವರ್ಷಗಳಿಂದಲೂ ಹಿಂದುಸ್ಥಾನದ ಸ್ವಾತಂತ್ರ್ಯಕ್ಕಾಗಿ ಎಡಬಿಡದೆ ಕಾದಾಡುತ್ತ ಇರುತ್ತದೆ ಇದರ ಒಲವು ಜನಸಾಮಾನ್ಯದ ಏಳಿಗೆಯ ಕಡೆಗೇನೇ ಇದೆಯಲ್ಲದೆ, ಯಾವದಾದರೊಂದು ಜಾತಿ, ಮತಗಳ ಕಡೆಗೆ ಇರುವದಿಲ್ಲ.

(೩) ಇದು ಪ್ರಜಾಸತ್ತಾತ್ಮಕ ಸಂಸ್ಥೆಯಾಗಿರುತ್ತಾ ಕೇವಲ ಬಡ ಜನಗಳ ಹಿತಚಿಂತಕ ಸಂಸ್ಥೆಯಾಗಿರುತ್ತದೆ. ಇದರ ಕಾರ್ಯಕ್ರಮವನ್ನು ಜನತೆಯು ಜಾರಿಗೆತಂದರೆ “ ಸ್ವರಾಜ್ಯವು ” ಜಾಗ್ರತೆಯಾಗಿ ಸಾಧ್ಯವಾಗುವದೆಂದು ಹೇಳಬಹುದು.

(೪) ಈ ಸಂಸ್ಥೆಯ ಕಾರ್ಯಕ್ಷೇತ್ರವು ವಿಶಾಲವಿದ್ದು ಒಬ್ಬ ಮಾನವ ವ್ಯಕ್ತಿಯು (ಸ್ತ್ರೀ ಮತ್ತು ಪುರುಷ) ಜನಾಂಗೋದ್ಧಾರ ಕಾರ್ಯವನ್ನು ತನ್ನ ಕೈಲಾದ ಮಟ್ಟಿಗೆ ಮಾಡುವದು ಒಳ್ಳೇದು.

ಉತ್ತರ ಹಿಂದುಸ್ಥಾನದಲ್ಲಿಯ ಕ್ಷೇತ್ರಗಳ ಪರಿಚಯ.

(ಲೇಖಾಂಕ ೪)

ಹುಸಿಂಗಾಬಾದವು ಪುಣತಾಂಬೆಯಿಂದ (ಪ್ಯಾಸಿಂಜರ ಗಾಡಿಯಿಂದ) ೨೦ ತಾಸುಗಳ ಹಾದಿಯು. ಮನಮಾಡದಲ್ಲಿ ಗಾಡಿ ಬದಲು ಮಾಡಿದರಾಯಿತು. ಮುಂದೆ ಯಾವ ಕಡೆಗೂ ಬದಲಿಸುವ ಅವಶ್ಯಕತೆಯಿಲ್ಲ. ನಮ್ಮ ಮನೆತನದ ಪುರೋಹಿತರಾದ ಚಿಕ್ಕಭಾವೂ ಆಚಾರ್ಯರಲ್ಲಿಯೇ ನಾವು ಕಾಶಿಯಲ್ಲಿಳಿದುಕೊಳ್ಳತಕ್ಕವರಿದ್ದುದರಿಂದ, ಅವರ ವತಿಯಿಂದ ಇಟಾರ್ಶಿಯಲ್ಲಿರುವ ದಲಾಲನು ನಮ್ಮ ಜೊತೆಯಲ್ಲಿ ಹುಸಿಂಗಾಬಾದಿಗೆ ಬಂದನು. ನರ್ಮದೆಯ ದಂಡೆಯ ಮೇಲೆಯೇ ಇರುವ ಸತ್ಯನಾರಾಯಣ ಮಂದಿರದಲ್ಲಿ ನಾವಿಳಿದುಕೊಂಡೆವು. ದಂಡೆಯ ಮೇಲೆ ನದಿಯ ಕಡೆಗೆ ಮೋರೆಯಾಗಿ ಒಂದು ಭವ್ಯವಾದ ಧರ್ಮಶಾಲೆಯಿದೆ. ಇದಕ್ಕೆ ಅಂತಸ್ತು ಸಹ ಇದೆ. ಇಲ್ಲಿಯೂ ಅನೇಕರು ಇಳಿದುಕೊಳ್ಳುವರು. ಸತ್ಯನಾರಾಯಣ ಮಂದಿರದ ಒಡೆಯನ ಹೆಸರು ಗದಾಧರಪ್ರಸಾದ. ಇಲ್ಲಿಂದ ಜನರ ಹೆಸರು ಬದಲಾಗುವದು. 'ರಾಯರ'ನ್ನೂ, 'ಬಾಯಿಯ'ನ್ನೂ ಮುಂದೆ ಕಾಣೆವು. 'ಪ್ರಸಾದ' 'ಪಂಡಿತ' 'ರಾಮ' 'ದೇವಿ'ಯರು ಮಾತ್ರ ಕೇಳಬರುವರು. ಹುಸಿಂಗಾಬಾದವು ಜಿಲ್ಹೆಯ ಮುಖ್ಯ ಸ್ಥಳವು. ಕಮೀಶನರರು ಸಹ ಇಲ್ಲಿರುವರು. ಊರು ದೊಡ್ಡದಿದೆ. ಆರ್ಯಸಮಾಜದ ಒಂದು ಗುರುಕುಲವೂ ಬಹುದಿನಗಳಿಂದ ಇಲ್ಲಿದೆ. ಈ ಗುರುಕುಲವು ರಮ್ಯವಾಗಿದೆ. ಗಿಡಗಳ ನೆರಳಿನಲ್ಲಿ ಉಸುಕಿನ ಪ್ರದೇಶಗಳನ್ನು ಗೋಲಾಕಾರವಾಗಿ ನಿರ್ಮಿಸಿ, ಅಲ್ಲಿಯೇ ವಿದ್ಯಾರ್ಥಿಗಳಿಗೆ ಓದು ಕಲಿಸುವರು. ಬ್ರಹ್ಮಚಾರಿಗಳಾದ ಬಾಲಕರು ಮಾತ್ರ ಇಲ್ಲಿಗೆ ಬರತಕ್ಕದ್ದು. ವಿದ್ಯಾಭ್ಯಾಸವು ಹನ್ನೆರಡು ವರ್ಷ ನಡೆಯುವದು. ಸಂಸ್ಕೃತದಲ್ಲಿ ವಿದ್ಯಾರ್ಥಿಗಳು ಪಾರಂಗತರಾಗುವಹಾಗೆ ವಿಷಯಾನುಕ್ರಮವು ಗೊತ್ತು ಮಾಡಲ್ಪಟ್ಟಿದೆ. ಇಂಗ್ಲೀಷದ ಜ್ಞಾನವು ಚನ್ನಾಗಿ ಕೊಡಲ್ಪಡುತ್ತೆ. ಆಯುರ್ವೇದ ಶಿಕ್ಷಣವೂ ಕೊಡಲ್ಪಡುತ್ತದೆ. ಮುಖ್ಯವಾಗಿ ಸಮಾಜಸೇವೆಗೆ ವಿದ್ಯಾರ್ಥಿಗಳು ಕಂಕಣಬದ್ಧರಾಗುವಹಾಗೆ ಶಿಕ್ಷಣವು ಕೊಡಲ್ಪಡುತ್ತದೆ.

ಹುಸಿಂಗಾಬಾದಿನಲ್ಲಿ ನರ್ಮದೆಯ ಘಾಟು ಬಹು ವಿಶಾಲವಾಗಿದ್ದು, ಅತ್ಯಂತ ರಮಣೀಯವಿದೆ. ಇಂತಹ ಸುಂದರವಾದ ಘಾಟನ್ನು ನಾವೆಲ್ಲಿಯೂ ಈವರೆಗೆ ನೋಡಿಲ್ಲ. ಕಾಶಿಯಲ್ಲಿ ಒಂದೆ ಸವನೆ ೩—೪ ಮೈಲುಗಳವರೆಗೆ ಘಾಟುಗಳಿದ್ದರೂ, ಹುಸಿಂಗಾಬಾದಿನಂತೆ ರಮಣೀಯವಾಗಿಲ್ಲ. ಅಲ್ಲಿ ಏಕಕಾಲಕ್ಕೆ ಎರಡು ಸಾವಿರ ಜನರು ಸ್ನಾನಮಾಡಬಹುದು. ಸಾಯಂಕಾಲದಲ್ಲಿ ಅಲ್ಲಿ ವ್ಯಾಖ್ಯಾನಗಳು ಆಗುವವು. ಘಾಟಿನ ಮೇಲೆಯೇ ೧೫ ಸಾವಿರ ಜನರು ಕುಳಿತುಕೊಳ್ಳುವಹಾಗೆ ಅವಕಾಶವಿದೆ. ಯಾವಾಗಲೂ ಘಾಟು ಸ್ವಚ್ಛವಾಗಿಡಲ್ಪಡುತ್ತದೆ. ದಿನಾಲು ಎಲ್ಲಕಡೆಗೂ ಉಡುಗುವರು. ಹೊಲಸು ತೆಗೆಯುವರು. ಮಲಮೂತ್ರ ವಿಸರ್ಜನೆಯನ್ನು ಯಾರೂ ಮಾಡದಂತೆ ನಿರ್ಬಂಧವಿದೆ. ಹೆಂಗಸರಿಗೆ ಸ್ನಾನ ಮಾಡುವ ಸ್ಥಾನ ಬೇರೆ. ಬೇಸಿಗೆಯಲ್ಲಿ ಸಹ ನದಿಯಲ್ಲಿ ೨ ಆಳುದ್ದ ನೀರಿದ್ದವು. ನದಿಯ ಪಾತ್ರವೂ ಇಲ್ಲಿ ಹೆಚ್ಚಾಗಿದೆ. ಇದರಿಂದ ಘಾಟಿಗೆ ವಿಶೇಷ ಸೌಂದರ್ಯವಿದೆ. ಮುನಸೀಪಾಲ್ಟಿಯವರು ಅಲ್ಲಲ್ಲಿ ಬಾಕುಗಳನ್ನು ಇಟ್ಟಿರುವರು. ಇದರಿಂದ ಸಾಯಂಕಾಲದಲ್ಲಿ ತಿರುಗಾಡಲು ಬಂದ ನಗರವಾಸಿಗಳಿಗೆ ಕುಳಿತುಕೊಳ್ಳಲಿಕ್ಕೂ ವಿಲಾಸಿಗಳಾದ ವಿದ್ಯಾರ್ಥಿಗಳಿಗೆ ಹಾಡಲಿಕ್ಕೂ, ನಿರುದ್ಯೋಗಿಗಳಿಗೆ ಹರಟೆಕೊಚ್ಚಲಿಕ್ಕೂ! ಉತ್ಸಾಹ ಬರುವದು. ದಂಡೆಯ ಮೇಲೆ ನರ್ಮದಾದೇವಿಯ ಗುಡಿಯಿದೆ. ದಿನಾಲು ಸಾಯಂಕಾಲದ ಮಂಗಳಾರುತಿಗಾಗಿ ಹೆಚ್ಚಾಗಿ ಭಾವಿಕಜನರು ನೆರೆಯುವರು. ಮುಂಜಾನೆ ಹಳ್ಳಿಗಳಿಂದ ಗೌಳಿಗರು ಘಾಟಿಗೆ ಬಂದು ನರ್ಮದೆಗೆ ಹಾಲು ಮೊಸರನ್ನು ಅರ್ಪಿಸಿ ಪೇಟೆಗೆ ಹೋಗುವರು. ಊರಜನರು ಪ್ರಾತಃಕಾಲದಲ್ಲಿಯೇ ಹೆಚ್ಚಾಗಿ ಸ್ನಾನಕ್ಕಾಗಿ ಬರುವದುಂಟು. ದಂಡೆಯ ಮೇಲೆ ಬಕುಳ ವೃಕ್ಷಗಳೂ ಇವೆ. ಇದರಿಂದ ಘಾಟಿನ ತುಂಬೆಲ್ಲ ಸುವಾಸನೆಯೂ ಅಡಗಿರುತ್ತದೆ. ಹುಸಿಂಗಾಬಾದದಲ್ಲಿ ಬಕುಳ ವೃಕ್ಷಗಳು ವಿಶೇಷವಾಗಿವೆ. ಮುಂದೆ ನಾವು ಹೋದ ಹೋದ ಸ್ಥಳಗಳಲ್ಲಿಯೂ ಸಹ ಇವನ್ನು ಹೆಚ್ಚಾಗಿ ಕಂಡೆವು. ಉತ್ತರ ಹಿಂದುಸ್ಥಾನದಲ್ಲಿ ಬಕುಳವೃಕ್ಷಗಳು ಹೆಚ್ಚಾಗಿವೆ. ಹುಸಿಂಗಾಬಾದದ ಈ ರಮಣೀಯವೂ ಅತ್ಯಂತ ಆನಂದದಾಯಕವೂ ಆದ ಘಾಟನ್ನು ಓರ್ವ ಮಾರವಾಡಿಯ ಹೆಂಡತಿಯು ಕಟ್ಟಿಸಿರುವಳು. ಜಾನಕೀದೇವಿಗೆ ಮಕ್ಕಳಿರಲಿಲ್ಲ. ಗಂಡನು ಸಾಯುವಾಗ್ಗೆ ವಿಪುಲವಾದ ಹಣವನ್ನು ಸಂಪಾದಿಸಿದ್ದನು. ಆದ್ದರಿಂದ ಬಹು ಜನರಿಗೆ ಉಪಯೋಗವಾಗುವಂತಹ ಪುಣ್ಯಕರವಾದ ಕಾರ್ಯವನ್ನು ಮಾಡಬೇಕೆಂದು ವಿಚಾರಿಸಿ, ಒಂದು ಲಕ್ಷ ರೂಪಾಯಿ ವೆಚ್ಚಮಾಡಿ, ಘಾಟನ್ನು ಕಟ್ಟಿಸಿರುವಳು. ಪಾಠಶಾಲೆಯನ್ನೂ ಸ್ಥಾಪಿಸಿದ್ದಾಳೆ. ನರ್ಮದಾದೇವಿಯ ಗುಡಿಯನ್ನೂ ಸ್ಥಾಪಿಸಿದ್ದಾಳೆ. ಅಪುತ್ರವತಿಯಾದ ಜಾನಕೀದೇವಿಯು, ಯಾತ್ರಿಕರ ಸ್ತುತಿಗಳಿಂದ ಪರಲೋಕದಲ್ಲಿ ಸುಖಿಯಾಗಿರಲಿಕ್ಕೆ ಸಾಕು. ಕೀರ್ತಿಯಂತೂ ಶಾಶ್ವತವಾಗಿದೆ. ಶ್ರೀಮಂತನ ಹೆಂಡತಿಯಾದುದಕ್ಕೆ ಜನ್ಮವನ್ನು ಸಾರ್ಥಕಮಾಡಿಕೊಂಡಳು. ಇಂತಹ ಪುಣ್ಯಕಾರ್ಯಗಳನ್ನು ಮಾಡಿದರೆ ಮಾತ್ರ ಶ್ರೀಮಂತರ ಹಣಕ್ಕೆ ಬೆಲೆಯಿದೆ. ತನ್ನಲ್ಲಿ ದ್ರವ್ಯವಿದೆಂಬ ಹೆಮ್ಮೆಯಿಂದ, ಆವನು ಪರರ ಕಲ್ಯಾಣದ ಕಡೆಗೆ ಲಕ್ಷವನ್ನಿಡದೇ, ತನ್ನ ಸ್ವಂತಕ್ಕಾಗಿ ಮಾತ್ರ ಅದನ್ನು ವೆಚ್ಚಮಾಡುತ್ತ ಪ್ರಪಂಚವನ್ನು ಸಾಗಿಸುವನೋ ಅವನಿಗೆ ಪರಲೋಕದಲ್ಲಿ ಸಿದ್ಧವಾದ ಸ್ಥಾನವೆಂದರೆ..................

ನರ್ಮದೆಯ ದಂಡೆಯಲ್ಲಿ ಅನೇಕ ಗುಡಿಗಳಿವೆ. ನಾವು ಘಾಟಿಗೆ ಹೋದ ಕೂಡಲೇ ಘಾಟಿನ ಮತ್ತು ನದಿಯ ಸೌಂದರ್ಯಗಳನ್ನು ಕಂಡು ಆನಂದವನ್ನು ಹೊಂದುತ್ತಿರಲು, ಈ ಗುಡಿಗಳ ಸಾಲುಗಳು ಕಣ್ಣಿಗೆ ಬಿದ್ದವು ಕೂಡಲೇ ಆ ಆನಂದದ ಭಾವನೆಗಳೆಲ್ಲ ಮಾಯವಾಗಿ, ಸಿಡಿಲು ಬಡಿದಂತಾಯಿತು. ಮನಸ್ಸಿನಲ್ಲಿ ಬಹು ವ್ಯಥೆಯಾಯಿತು ಆ ಗುಡಿಗಳ ಸಾಲುಗಳನ್ನು ನೋಡಿದಾಕ್ಷಣವೇ ಅವುಗಳ ಬಹಿರ್ದೃಷ್ಟಿಯಿಂದ ಅವು ಮಸೀದಿಗಳಂತೆ ಕಂಡವು! ನರ್ಮದೆಯಂತಹ ಪುಣ್ಯಕ್ಷೇತ್ರಕ್ಕೆ ಬಂದು, ರಮಣೀಯವಾದ ಈ ಘಾಟಿನಲ್ಲಿ ಮಸೀದಿಗಳನ್ನು ನೋಡುವದೇಕೆ? ಎಂಬ ವಿಚಾರವು ಆ ಆನಂದಕ್ಕೆ ಭಂಗವನ್ನುಂಟು ಮಾಡಿತು. ಊರಿನ ಹೆಸರೇ ಹುಸಿಂಗಾಬಾದ ಎಂದ ಮೇಲೆ ಹಿಂದೂ ಜನರು ಸ್ನಾನಮಾಡುವ ಸ್ಥಾನದಲ್ಲಿಯೇ ಅವೇಕಿರಬಾರದೆಂಬ ಸಂಶಯವೂ ಬಂದಿತು. ಆದರೆ ಮನಸ್ಸನ್ನು ಶಾಂತಗೊಳಿಸಲು ದಂಡೆಯಲ್ಲಿರುವ ಕೆಲವು ಬೈರಾಗಿಗಳನ್ನು ವಿಚಾರಿಸಿದೆ ಅವೆಲ್ಲ ಸರ್ವಥಾ ಮಸೀದಿಗಳಲ್ಲ ಎಲ್ಲವೂ

ದೇವಾಲಯಗಳೆಂದು ಹೇಳಿದರು. ಇದನ್ನು ಕೇಳಿ ನನಗೆ ಬೇರೆ ಭಾವನೆಗಳು ಉದ್ಭವವಾದವು. ಇಲ್ಲಿ ಹಿಂದೂ ಜನರಿಗೆ ತಮ್ಮ ಸಂಸ್ಕೃತಿಯ ಜ್ಞಾನವಿಲ್ಲವೇನು ? ಗುಡಿಗಳನ್ನೆಲ್ಲ ಮಶೀದಿಗಳಂತೆ ಕಟ್ಟಿಸುವಷ್ಟು ಅವನತಿಯಾಗಿದೆ? ಹೀಗೆ ಕೆ ಮಶೀದಿಗಿರುವ ಮೇಲೆ ಗುಮ್ಮಟವನ್ನೂ ಹೊರಗಿನ ಮೈಯ್ಯಿಗೆ ಮಶೀದೆಯ ಆಕಾರವನ್ನೂ ನಿರ್ಮಿಸಿರುವರೆಂದು ಕೇಳಲು, "ಹಾಗಾದರೆ ಗುಡಿಗಳನ್ನು ಹೇಗೆ ನಿರ್ಮಿಸಬೇಕೆಂ"ದು ನನಗೆ ಪ್ರಶ್ನೆ ಮಾಡಿದರು. "ಸರಿ ತಿಳಿದಂತಾಯಿತು. ಉತ್ತರ ಹಿಂದುಸ್ಥಾನದವರಾದ ನೀವು ಬಹು ದಿನಗಳಿಂದ ಮುಸಲ್ಮಾನರ ವಶದಲ್ಲಿದ್ದುದರಿಂದ ಹಿಂದೂ ದೇವಾಲಯಗಳ ಕಟ್ಟಡದ ಕಲ್ಪನೆಯು ನಿಮಗಿಲ್ಲ. ಬನ್ನಿ; ನಮ್ಮ ಕರ್ನಾಟಕಕ್ಕೆ ಬನ್ನಿ; ಅಥವಾ ದಕ್ಷಿಣ ದೇಶದಲ್ಲಿಯ ಯಾವದಾದರೂ ಒಂದು ಕ್ಷೇತ್ರಕ್ಕೆ ಬನ್ನಿ; ಎಂದರೆ ಹಿಂದೂ ದೇವಾಲಯಗಳ ಕಲ್ಪನೆಯು ನಿಮಗೆ ಬರುವದೆಂ"ದು ಹೇಳಿದೆನು. ಉತ್ತರ ಹಿಂದುಸ್ಥಾನದಲ್ಲಿ ಮಶೀದಿಗಳಿಗಿರುವಂತಹ ಗುಮ್ಮಟಗಳನ್ನೇ ಗುಡಿಗೆ ಹೆಚ್ಚಾಗಿ ನಿರ್ಮಿಸಿರುವರೆಂಬದು ಮುಂದೆ ನಾವು ಮಾಡಿದ ಪ್ರವಾಸದಿಂದ ತಿಳಿಯಿತು.

ಉತ್ತರ ಹಿಂದುಸ್ಥಾನದಲ್ಲಿ ರಾಮನವಮಿಯ ದಿನ ರಾಮದೇವರ ಉತ್ಸವವು ನಮ್ಮಲ್ಲಿಗಿಂತಲೂ ಹೆಚ್ಚು ವೈಭವದಿಂದ ಜರುಗಿಸಲ್ಪಡುತ್ತದೆ. ನಾವು ರಾಮನವಮಿಯ ದಿನ ಹುಸಿಂಗಾಬಾದಿನಲ್ಲಿದ್ದೆವು. ನಮ್ಮಲ್ಲಿ ನವರಾತ್ರಿಯಲ್ಲಿ ಘಟ್ಟವನ್ನು ಹಾಕುವಂತೆ, ಇಲ್ಲಿ ಚೈತ್ರ ಶುದ್ಧ ಪ್ರತಿಪದೆಯ ದಿನ ಘಟ್ಟ ಹಾಕಿ, ನವಮಿಯ ದಿನ ಅದನ್ನು ಭಕ್ತ ಗೋದಿಗಳ ಚಂದ ಚಂದದ ಸೂಸೆಗಳೊಂದಿಗೆ ಊದಿಸುತ್ತ, ಬಾರಿಸುತ್ತ, ನರ್ಮದೆಗೆ ಒಯ್ಯುವರು. ಈ ಉತ್ಸವದಲ್ಲಿ ಸೋಗುಗಳನ್ನೂ ಹಾಕುವದುಂಟು. ಈ ಸೋಗುಗಳನ್ನೇ ಮೋಹರಮ್ಮದಲ್ಲಿ ಅನುಕರಿಸುತ್ತಿರುವರೋ, ಅಥವಾ ಮೋಹರಮ್ಮದ ಅನುಕರಣವನ್ನೇ ಹಿಂದುಗಳು ಮಾಡುತ್ತಿರುವರೋ ತಿಳಿಯದು.

ಘಾಟಿನ ದಂಡೆಯ ಮೇಲೆ ತಮ್ಮ ಕಚೇರಿಗಾಗಿ ವಕೀಲ ಸಾಹೇಬರು ಕಟ್ಟಿಸಿದ ತಿಲಕ ಮಂದಿರವು ನೋಡುವಂತಹದು. ಅಲ್ಲಿ ವಾಚನಾಲಯವೂ ಇದೆ. ಇದು ಮುನಸಿಪಾಲಿಟಿಯವರಿಂದ ಧರ್ಮಾರ್ಥವಾಗಿ ಇಡಲ್ಪಟ್ಟಿದೆ.

ಎಲ್ಲ ಕನ್ನಡ ಕವಿಗಳಿಗೆ.

(ಇಂಗ್ಲೀಷದಲ್ಲಿ ಇದು ೧೨ ನೇ ಅಗಸ್ಟದ ನ್ಯೂ ಇಂಡಿಯಾದಲ್ಲಿ ಪ್ರಸಿದ್ಧವಾಗಿರುವದೆಂದೂ ಇದನ್ನು ಎಲ್ಲ ಪತ್ರಿಕಾಕರ್ತರೂ ಪ್ರಸಿದ್ಧ ಮಾಡಬೇಕೆಂದೂ ಶ್ರೀ. ಬೇಂದ್ರೆ ಬಿ. ಎ. ಇವರು ತಿಳಿಸುತ್ತಾರೆ.

ಮದ್ರಾಸ ಇಲಾಖೆಯಲ್ಲಿದ್ದ ಅಡ್ಯಾರದಲ್ಲಿಯ ಬ್ರಹ್ಮವಿದ್ಯಾಶ್ರಮದ ಮುಖ್ಯಾಧ್ಯಾಪಕರಾದ ಡಾ. ಜೆ. ಎಚ್. ಕಝಿನ್ಸರವರ ವಿಜ್ಞಾಪನೆಯು.)

ಹಿಂದುಸ್ಥಾನದಲ್ಲಿಯ ಎಲ್ಲ ಭಾಷೆಗಳಲ್ಲಿ ಆಗಿ ಹೋದ ಮತ್ತು ಸದ್ಯಕ್ಕೆ ಇರುವ ಕವಿಗಳ ಕಾವ್ಯಗಳ ಸವಿಯನ್ನು ಎಲ್ಲ ಇಂಗ್ಲೀಯರಿಗೆ ಕೊಟ್ಟು, ಹಿಂದುಸ್ಥಾನದ ಬಗ್ಗೆ ಇದ್ದ ಅವರ ಪ್ರೇಮವನ್ನೂ ಪೂಜ್ಯಭಾವವನ್ನೂ ಹೆಚ್ಚಿಸಬೇಕೆಂಬದೊಂದು ಅವಲವಿಕೆಯು ನನ್ನ ಮನಸ್ಸಿನಲ್ಲಿ ಬಹಳ ದಿನಗಳಿಂದ ಮನೆಮಾಡಿಕೊಂಡಿತ್ತು; ಹಿಂದ ಪ್ರೇಮಿಗಳ ಮನಸ್ಸನ್ನು, ಅವಳ ತತ್ವಜ್ಞಾನ, ಮತ್ತು ಕಲೆಗಳ ಮುಖಾಂತರವಾಗಿ ಎಳಕೊಂಡು, ಅವಳಲ್ಲಿದ್ದ ಪ್ರತಿಭೆಯ ಪ್ರಭಾವವನ್ನು ಕೃತಪಡಿಸಿ ಅವರ ಮನೋಭಾವನೆಗಳ ತಳಹದಿಯನ್ನು ಹೆಚ್ಚು ಗಟ್ಟಿಮುಟ್ಟಿಯಾಗಿ ಮಾಡಬೇಕಾದರೆ ಇದೊಂದೇ ಹಾದಿಯೆಂದು ಪದೇ ಪದೇ ನನಗನಿಸುತ್ತಿದೆ. ಪೂರ್ವ ಪಶ್ಚಿಮ ಸಂಸ್ಕೃತಿಗಳ ಏಕಜೀವವಾದರೂ ಪರಸ್ಪರರ ರಸಾಸ್ವಾದನದಿಂದಲೇ ಉಂಟಾಗುತ್ತದೆಂದು ನನ್ನದೊಂದು ದೃಢನಂಬಿಗೆ. ಈ ನನ್ನ ವಿಚಾರಗಳು ಮೂರ್ತಸ್ವರೂಪಗೊಳ್ಳುವ ಕಾಲವು ಬಂದೊದಗಿದೆ. ಆಯರ್ಲಂಡದ ಕವಿಯಾದ A, E. ಯೂ. ಕೂಡ ಈ ನನ್ನ ಪ್ರಯತ್ನಗಳನ್ನು ಎಷ್ಟೋ ಸಲ ಪ್ರೋತ್ಸಾಹಿಸಿದ್ದಾನೆ. ಎಲ್ಲ ತರದ ಶಿಕ್ಷಣವು ಒಂದೇ ಸ್ಥಳದಲ್ಲಿ ಸಿಗುವಂಥ ಒಂದು ವಿಶ್ವವಿದ್ಯಾಲಯದ ಸ್ಥಾಪನೆಯನ್ನೂ ಮತ್ತು ಆಯಾ ಶಿಕ್ಷಣ ಕ್ರಮಕ್ಕೆ ಅವಶ್ಯವಿದ್ದ ಪಠ್ಯ ಪುಸ್ತಕಗಳನ್ನೂ ಸಿದ್ಧಪಡಿಸುವ ಕೆಲಸವು ನನ್ನ ಕಡೆಗೆ ಬಂದದ್ದರಿಂದ ನನ್ನ ಮನೀಷೆಗಳು ದ್ವಿಗುಣಿತ ಭಾವವನ್ನು ಹೊಂದಿರುವವು. ಆದ್ದರಿಂದ ಎಲ್ಲ ಆಧುನಿಕ ಕವಿಗಳೂ ಮತ್ತು ಕನ್ನಡ ಭಾಷಾ ಭಕ್ತರು ತಮ್ಮ ಭಾಷೆಯೊಳಗಿನ ಕವಿಗಳ ಕವಿತೆ ಮತ್ತು ಕಾವ್ಯಗಳ ಇಂಗ್ಲೀಷ ಭಾಷಾಂತರವನ್ನು ಮಾಡಿ, ಕಳಿಸಿಕೊಟ್ಟು ಈ ನನ್ನ ಪ್ರಯತ್ನದಲ್ಲಿ ಪಾಲುಗಾರರಾಗುವರೆಂದು ನಂಬುತ್ತೇನೆ. ಭಾಷಾಂತರಗಾರರು ಕೆಳಗಿನ ಮಾತುಗಳನ್ನು ಲಕ್ಷ್ಯದಲ್ಲಿಡತಕ್ಕದ್ದು.

(೧) ಭಾಷಾಂತರದಲ್ಲಿ, ಕವಿತೆಯ ಸಂಪೂರ್ಣ ಅರ್ಥವು ಅವತರಿಸಬೇಕು. ಅದು ಶಬ್ದಶಃ ಇರದೆ ಕವಿಯ ಭಾವಗಳನ್ನು ವ್ಯಕ್ತಗೊಳಿಸುತ್ತಿರಬೇಕು. ಭಾಷಾಂತರಕಾರರು ಇಂಗ್ಲೀಷ ಭಾಷೆಯ ಗೌರವದ ಕಡೆಗೆ ಹೆಚ್ಚು ಲಕ್ಷ್ಯಗೊಡುವ ಕಾರಣವಿಲ್ಲ. ಭಾಷಾಂತರವು ಶುದ್ಧೀಕರಿಸಲ್ಪಟ್ಟು, ಪ್ರಸಿದ್ಧ ಪಡಿಸುವದು ನನ್ನನ್ನು ಕೂಡಿದೆ. ಆರಿಸಿದ ಕವಿತೆಗಳು ಕವಿಯ ಬೇರೆ ಬೇರೆ ಭಾವಗಳನ್ನೇ ವ್ಯಕ್ತಗೊಳಿಸುತ್ತಿರಬೇಕು.

(೨) ಮೂಲ ಭಾಷೆ ಮತ್ತು ಲಿಪಿಯಲ್ಲಿದ್ದ, ಕವಿತೆಯ ಶುದ್ಧಪ್ರತಿಯೂ, ಆ ಕವಿತೆಯು ಪ್ರಸಿದ್ಧವಾದ ಪುಸ್ತಕದ ಸಂಪೂರ್ಣ ಸಂಗತಿಯೂ ಭಾಷಾಂತರದೊಂದಿಗೆ ಕಳಿಸಿಕೊಡಬೇಕು. ಅರ್ವಾಚೀನ ಕವಿಗಳ, ಇದೂ ವರೆಗೂ ಪ್ರಸಿದ್ಧವಾಗದ ಕವಿತೆಗಳನ್ನೂ ಕೂಡ ಆರಿಸಬಹುದು.

(೩) ಪ್ರತಿಬಂದು ನುಡಿಯಲ್ಲಿಯ ಮೂಲ ಸಾಲುಗಳ ಧ್ವನಿಯನ್ನೂ, ಶಬ್ದ ಮತ್ತು ರಸದ ಗಾಂಭೀರ್ಯವನ್ನು ಕಾಯತಕ್ಕದ್ದು. ಇದರಿಂದ, ಭಾಷಾಂತರವನ್ನು ಸಮವೃತ್ತ ಸಮಶ್ಲೋಕದಲ್ಲಿ ಮಾಡಿದರೆ ಒಳ್ಳೆಯದಾಗುವದೋ ಅಥವಾ ಬರೀ ಗದ್ಯದಲ್ಲಿಟ್ಟರೆ ಸುಂದರವಾಗುವದೋ ಎಂಬದನ್ನು ನಿರ್ಣಯಿಸಲು ನನಗೆ ಬರುವದು.

(೪) ಮೂಲ ಕವಿತೆಯ ಭಾಷಾಂತರವು, ಸಂಪೂರ್ಣ ಮತ್ತು ಸರಸವಿರುವದೆಂಬ ಬಗ್ಗೆ ಯಾವನಾದರೊಬ್ಬ ವಾಙ್ಮಯ ವಿಶಾರದನ ಸರ್ಟಿಫಿಕೇಟನ್ನು ಕಳಿಸಬೇಕು.

(೫) ಆಯಾ ಕವಿಯ ಚರಿತ್ರೆಯನ್ನು, ಸ್ವಲ್ಪದರಲ್ಲಿ ಇಂಗ್ಲೀಷಿನಲ್ಲಿ ಬರೆದು ಕಳಿಸಬೇಕು. ಕಳಿಸಿದ ಎಲ್ಲ ಕವಿತೆಗಳ ಭಾಷಾಂತ

ರಗಳನ್ನು ಪ್ರಸಿದ್ಧ ಪಡಿಸುವೆನೆಂದು ಹೇಳಲಾರೆ. ಭಾಷಾಂತರಗಳು ಗ್ರಂಥದ ಉದ್ದೇಶವನ್ನು ಅನುಸರಿಸಿವೆಯೋ ಇಲ್ಲವೋ ಎಂಬುದರ ನಿರ್ಣಯವು ನನ್ನನ್ನು ಕೂಡಿದೆ. ಪ್ರೀತಿಯಿಂದ ಪ್ರೇರಿತನಾಗಿ ಈ ಜಗತ್ತಿನ ಕಲ್ಯಾಣದ ಸಲುವಾಗಿ ಈ ಕಾರ್ಯವನ್ನು ನಾನು ಕೈಗೊಂಡಿರುತ್ತೇನೆ. ಇದರಲ್ಲೇನೂ ನನ್ನ ಸ್ವಾರ್ಥವಿಲ್ಲ. ಗ್ರಂಥಗಳ ಮಾರಾಟವು ಬಹುಶಃ ಮಂದವಿರುವದರಿಂದ ಹಿಂದುಸ್ಥಾನದ ಎಲ್ಲ ಧನಿಕರು ಇದಕ್ಕೆ ಸಹಾಯ ಮಾಡಬಹುದೆಂದು ಪೂರ್ಣವಾಗಿ ನಂಬಿದ್ದೇನೆ. ಖರ್ಚು ಹೋಗಿ ಉಳಿದ ಹಣವೆಲ್ಲವನ್ನೂ ಭಾಷಾಂತರಕಾರರ ನಡುವೆ ಅವರವರ ಸಹಾಯದ ಪ್ರಕಾರ ಹಂಚಲಾಗುವದು. ೧೯೨೭ನೇ ಆಗಷ್ಟಕ್ಕೆ ಈ ಪುಸ್ತಕವು ಪ್ರಸಿದ್ಧಿಸಲ್ಪಡುವದು. ಅದೇ ವರ್ಷದ ಎಪ್ರಿಲ ತಿಂಗಳದೊಳಗಾಗಿಯೇ ಎಲ್ಲ ಭಾಷಾಂತರಕಾರರನ್ನು ನನ್ನ ಕಡೆಗೆ ಕಳಿಸಬೇಕು. ವಿಶೇಷ ಸಂಗತಿ ಬೇಕಾದವರು ನನ್ನ ಕೂಡ ಇಂಗ್ಲೀಷಿನಲ್ಲಿ ಪತ್ರವ್ಯವಹಾರ ಮಾಡಿ ತರಿಸಿಕೊಳ್ಳಬಹುದು.

ಪತ್ರೀ—ಡಾ ಜೆ. ಎಚ್ ಕಝಿನ್ಸ
ಪ್ರಿನ್ಸಿಪಾಲ ಬ್ರಹ್ಮವಿದ್ಯಾಶ್ರಮ
ಆಡ್ಯಾರ ಮದ್ರಾಸ.

ವರ್ತಮಾನ ಸಾರ

ಇಹವೃತ್ತ.

ಈ ವಾರದಲ್ಲಿ ಸ್ವಲ್ಪ ಮಳೆ ಆಯಿತು. ಇನ್ನೂ ಹೆಚ್ಚು ಮಳೆ ಆಗಬಹುದೆಂದು ಈಗಿರುವ ಚಿನ್ಹಗಳಿಂದ ತೋರಬರುತ್ತದೆ.

ಡಾ ಜರಾರ ಶಂಕರರಾಯರು ಗುಣಹೊಂದಿ ಮುಂಬಯಿಯಿಂದ ಮರಳಿ ಬಂದಿದ್ದಾರೆ. ಮೊದಲಿನಂತೆ ತಮ್ಮ ವ್ಯವಸಾಯದಲ್ಲಿಯೂ ಸಾರ್ವಜನಿಕ ಕೆಲಸಗಳಲ್ಲಿಯೂ ಪುನಃ ನಿರತರಾಗಿರುವರೆಂದು ತಿಳಿಸಲು ಸಂತೋಷವಾಗುತ್ತದೆ.

ಮೈ. ಮಂಗಳವೇಢೆ ರಾಜೇರಾಯರ ಸ್ಥಾನಕ್ಕೆ ಅರ್ಹರಾದ ಆನರರೀ ಮ್ಯಾಜಿಸ್ಟ್ರೇಟರು ದೊರೆಯದ್ದರಿಂದಲೂ, ಬಾಗಲಕೋಟೆಗೆ ಬೇಂಚು ಯೋಗ್ಯವಾಗುವದಿಲ್ಲವಾದ್ದರಿಂದಲೂ, ಸಂಬಳದ ಮ್ಯಾಜಿಸ್ಟ್ರೇಟರನ್ನು ನೇಮಿಸುವದು ಸರಕಾರಕ್ಕೆ ಇಷ್ಟವಿಲ್ಲದ್ದರಿಂದಲೂ, ಆನರರಿ ಮ್ಯಾಜಿಸ್ಟ್ರೇಟರ ಕೋರ್ಟಿನ ಕಾರಕೂನ ಶಿಪಾಯರನ್ನು ತೆಗೆಯಬೇಕೆಂದೂ ಕಮೀಶನರರ ಅಪ್ಪಣೆಯಾಗಿದೆ.

ಮುಂಬೈ ಕರ್ನಾಟಕ

ಅಜೆಯ ರವಿವಾರ ಸಂಜೆಯ ಆರು ಘಂಟೆಗೆ ಶ್ರೀ ಶಿವಲಿಂಗಶಾಸ್ತ್ರಿ ಸಂಪಾದಕ "ಕರ್ನಾಟಕ ಟಾಯಿಮ್ಸ" ಇವರ ಅಧ್ಯಕ್ಷತೆಯ ಕೆಳಗೆ ಧಾರವಾಡ ನಾಗರಿಕರ ಜಾಹೀರ ಸಭೆಯು ಶ್ರೀ ವಿಠ್ಠಲ ಮಂದಿರದಲ್ಲಿ ಕೂಡಿತ್ತು. ಧಾರವಾಡದಲ್ಲಿ 'ಧರ್ಮಾರ್ಥ ಆಯುರ್ವೇದ ದವಾಖಾನೆಯ ಅವಶ್ಯಕತೆ'ಯ ಬಗ್ಗೆ ಶ್ರೀಯುತ ಕೃಷ್ಣರಾವ ಮುದವೇಡಕರವರ ಒಳ್ಳೇ ಪರಿಣಾಮಕಾರಕವಾದ ಭಾಷಣವಾಯಿತು. ಆನಂತರ ಆಯುರ್ವೇದ ದವಾಖಾನೆಯನ್ನು ಸ್ಥಾಪಿಸಲು ಗೊತ್ತುವಳಿಯು ತೀರ್ಮಾನವಾಯಿತು.

ಸಾಂಗಲಿಯ ವಿಲಿಂಗ್ಡನ್ ಕಾಲೇಜನಲ್ಲಿ ಕರ್ನಾಟಕ ಸಂಘವು ಸ್ಥಾಪಿಸಲ್ಪಟ್ಟಿದೆ.

ಕರಜಗಿ [ಜಿ। ಧಾರವಾಡ] ಯಲ್ಲಿ ತಾ॥ ೨೩-೮-೨೬ ನೆಯ ದಿವಸ ಅಲ್ಲಿಯ ತರುಣ ಸೇವಾಸಂಘದ ಪರವಾಗಿ ಸಭೆ ಸೇರಿ, 'ಕರ್ನಾಟಕ ಏಕೀಕರಣ'ವನ್ನು ಕುರಿತು ಗೊತ್ತುವಳಿಯು ಮಾಡಲ್ಪಟ್ಟಿತು.

ಮೈಸೂರ ಕರ್ನಾಟಕ

"ಪ್ರಜಾಮಿತ್ರ" ವೆಂಬ ದೈನಿಕವು ಬೆಂಗಳೂರಲ್ಲಿ ಪ್ರಕಟವಾಗಹತ್ತಿದೆ. ಆಕಾರ ರಾಯಲ್ ೪ ಪುಟ ವಾರ್ಷಿಕ ಚಂದಾ ಸ್ಥಳದವರಿಗೆ ೫ರೂ ಪರಸ್ಥಳದವರಿಗೆ ೧೦ರೂ. ಈಗ್ಗೆ ಮುದ್ರಣವು ಮಾತ್ರ ಚನ್ನಾಗಿದೆ.

'ಕರ್ನಾಟಕ' ಪತ್ರಿಕೆಯ ಸಂಪಾದಕರಾದ ಶ್ರೀ ಡಿ. ವಿ. ಗುಂಡಪ್ಪನವರನ್ನು ಮೈಸೂರ ಸರಕಾರದ ಭಾಷಾಂತರಕರ್ತೃಗಳನ್ನಾಗಿ (ಓರಿಯಂಟಲ್ ಟ್ರಾನ್ಸಲೇಟರ) ನೇಮಿಸುವರೆಂಬ ಸುದ್ದಿ ಹಬ್ಬುತ್ತಿದೆ? ಆದರೆ ಇದು ಸಂಪೂರ್ಣವಾಗಿ ಸುಳ್ಳೆಂದೂ ತಿಳಿಸುತ್ತಾರೆ.

ಇಂದೂರಿನ ಮಹಾದೇವ ಸರಂದ ಶ್ರೀ. ಸದಸಿಂಗರಾಯರು ಪ್ರಯಾಗದಲ್ಲಿ ದೇಹವನ್ನಿಟ್ಟರೆಂದು ತಿಳಿಸಲು ವಿಷಾದಪಡುತ್ತೇವೆ.

ಮೈಸೂರಿನ ಪ್ರಸಿದ್ಧ ಜೈನಪಂಡಿತರಾದ ಶ್ರೀ ವರ್ಧಮಾನಯ್ಯನವರು ತೀರಿಕೊಂಡರೆಂದು ತಿಳಿಸಲು ದುಃಖಿಸುತ್ತೇವೆ.

ಮದ್ರಾಸ ಕರ್ನಾಟಕ

ಮದ್ರಾಸ ಲೆಜಿಸ್ಲೇಟಿವ್ ಕೌನ್ಸಿಲಿನ ಮುಂದೆ ಇರಿಗೇಶನ್ ಬಿಲ್ಲು ಮುಂದೆ ಬಂದು ಅದು ಪಾಸಾಯಿತು.

ಮದ್ರಾಸ ಪ್ರೆಸಿಡೆನ್ಸಿಯಲ್ಲಿ ಮಾಸಲಾಯಿತೊಂದರಲ್ಲಿ ಒಬ್ಬ ಮುಸ್ಲಿಮ ಜಾತಿಯ ೫೦ ವರ್ಷದ ಹೆಣ್ಣುಮಗಳು ಪುನಃ ಯೌವನದಲ್ಲಿ ಕಾಲಿಟ್ಟು ದಾರಿಯಿಂದ ದಾಂಪತ್ಯದೊಂದ ಸಮುದ್ರಮಧ್ಯೆ ಮುಳುಗಿಸುತ್ತಳಂತೆ!

ಬರುವ ಮಂಗಳೂರು ಮ್ಯುನಸಿಪಾಲ್ಟಿಯ ಚುನಾವಣೆಯಲ್ಲಿ ಕಾಂಗ್ರೆಸ ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ಮಂಗಳೂರು ತಾಲೂಕು ಕಾಂಗ್ರೆಸ ಕಮಿಟಿಯ ಸಭೆಯು ಮೊನ್ನೆ ನೆರೆದಿತ್ತು.

ನಿಝಾಮ ಕರ್ನಾಟಕ

ಹೈದರಾಬಾದ ನಿಜಾಮರ ರಾಜ್ಯಕಾರಭಾರದಲ್ಲಿರುವ ಕುಂದುಕೊರತೆಗಳನ್ನು ಸರಿಪಡಿಸಬೇಕೆಂದು ಇಂಡಿಯಾ ಸರಕಾರದವರು ಬರೆದ ಪತ್ರದ ಪ್ರಕಾರ ಅನೇಕ ಬದಲಾವಣೆಗಳು ಆಗಲಿಕ್ಕೆ ಹತ್ತಿವೆಯಂತೆ.

ಕೊಡಗು ಕರ್ನಾಟಕ

ಬೆಂಗಳೂರಲ್ಲಿ ಸ್ಪೋರ್ಟ್ಸ ಸಂಘವಾದ (ವಾಯ ಎಮ್ ಸಿ ಎ) ಹಾಕಿ ಪಾರ್ಲಮೆಂಟಿಗೆ ಕೊಡಗಿನ ಒಂದು ಟೀಮನ್ನು ಕೂಡಿಸಿರುವರು. ಪರವೂರಲ್ಲಿ [ಎ] ಟೀಮ್, ಪಾರ್ಲಮೆಂಟಿಗೆ ಕೊಡಗರು ಆಡುವದು ಇದೇ ಮೊದಲು.

ಹಿಂದುಸ್ಥಾನ.

ತಮ್ಮ ತಮ್ಮ ಮುನಿಸಿಪಾಲಿಟಿ ಆವರಣದಲ್ಲಿರುವ ಕೈಗಾರಿಕೆಗೆ ಮತ್ತು ಕುಶಲವಿದ್ಯೆಗೆ ಪ್ರೋತ್ಸಾಹ ಕೊಟ್ಟು ಅವುಗಳನ್ನು ಅಭಿವೃದ್ಧಿಗೆ ತರುವದು ಮುನಸಿಪಾಲಿಟಿಗಳ ಕರ್ತವ್ಯವೆಂದು ಅಭಿಪ್ರಾಯದಿಂದ ಅಹಮ್ಮದಾಬಾದ ಮುನಸಿಪಾಲಿಟಿಯವರು ಅವುಗಳಿಗಾಗಿ ಒಂದು ಪ್ರದರ್ಶನ ಶಾಲೆಯನ್ನು ಕಟ್ಟಿಸಲು ನಿರ್ಧಾರ ಮಾಡಿರುವರೆಂದು ತಿಳಿಯಬರುತ್ತದೆ.

ಹಿಂದುಸ್ಥಾನದ ಎಲ್ಲ ಸಂಸ್ಕೃತ ಕಾಲೇಜಗಳ ಪ್ರತಿನಿಧಿಗಳ ಒಂದು ಸಭೆಯು ಕಲಕತ್ತೆಯ ವಿಶ್ವವಿದ್ಯಾಲಯದ ಮಂದಿರದಲ್ಲಿ ಪ್ರೊ. ಕುಮಾರಸ್ವಾಮಿ ಶಾಸ್ತ್ರಿಗಳ ಅಧ್ಯಕ್ಷತೆಯ ಕೆಳಗೆ ಜರುಗಿತು.

ಸಂಸ್ಕೃತ ಭಾಷಾಶೋಧನೆ, ಸಂಸ್ಕೃತ ಭಾಷೆಯನ್ನು ಕಲಿಸುವ ಪದ್ಧತಿ ಸುಧಾರಿಸುವದು ಮತ್ತು ಹಿಂದೂದೇಶದ ಎಲ್ಲ ಭಾಗಗಳಲ್ಲಿಯೂ ಸಂಸ್ಕೃತ ಭಾಷೆಯನ್ನು ಪ್ರಚಾರಗೊಳಿಸುವ ಸೂಚನೆಗಳು ಮಂಜೂರಾದವು.

ಪರದೇಶ.

ಒಬ್ಬ ಫ್ರೆಂಚ ವೈಮಾನಿಕನು ಏಳು ಮುಕ್ಕಾಲು ಮೈಲು ಎತ್ತರ ಹಾರಿದನು. ಇಷ್ಟು ಎತ್ತರದ ವರೆಗೆ ಯಾರೂ ಹಾರಿದ್ದಿಲ್ಲವಂತೆ. ಅವನು ಆಕಾಶದಲ್ಲಿ ೨॥ ಘಂಟೆಯ ವರೆಗೆ ಇದ್ದು ಇಳಿಯುವಾಗ ಬಿದ್ದು ಘೋರ ತಪ್ಪಿದ್ದರಿಂದ ಅವನನ್ನು ಆಸ್ಪತ್ರೆಗೆ ಒಯ್ದರಂತೆ.

ದಕ್ಷಿಣ ಆಫ್ರಿಕೆಯಿಂದ ಹಿಂದುಸ್ಥಾನಕ್ಕೆ ಬರುವ ಶಿಷ್ಟ ಮಂಡಲವು ಹೊರಟಿದೆ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ಜ ಹುಟ್ಟಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತೆವೆ ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇದೀ ಬ್ರಿಟಿಶ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇನೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ ಕೊರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ಇರಾಣಿ ಬಂಗಲಿಯ ಹತ್ತರ ಪವನಿ ತವಕಿರಗಲ್ಲಿ ಮ. ಪಿ ಸಿಟಿ.

ನೋಟೀಸು.

ಕಟ್ಟೆಪ್ಪ ತಂದಿ ತಿಮ್ಮಪ್ಪ ಗಾಡಿವಡ್ಡರ, ಸಾ॥ ಕೋಣನ್ನೂರ ಹಲ್ಲಿ ಮುಕ್ಕಾಮು ಯತ್ತಿನಗುಡ್ಡ ತಾಲೂಕ ಹುಬ್ಬಳ್ಳಿ ಜಿಲ್ಲಾ ಧಾರವಾಡ ಇವನಿಗೆ—

ಕೆಳಗೆ ಸಹಿ ಮಾಡುವವಳು ನೋಟೀಸು ಕೊಡುವದೇನಂದರೆ— ನೀನು ನನ್ನ ಉಡ್ಕಿ ಗಂಡನಿದ್ದು ನೀನು ನಾನು ಆಜಮಾಸ ವಂದುವರ್ಷ ಎರಡುವರ್ಷ ಕೂಡಿ ಪ್ರಪಂಚ ಮಾಡಿಕೊಂಡು ಇದ್ದಿವಿ. ಈಗ ಆರು ವರ್ಷದ ಹಿಂದೆ ನನ್ನನ್ನು ಬಿಟ್ಟುಕೊಟ್ಟು ಹೋದಿ. ನಾನು ನನ್ನ ತವರ ಮನಿಯಲ್ಲಿ ಇದ್ದೇನಿ. ನನ್ನ ಹೊಟ್ಟಿ ಖರ್ಚಿನ ಸಲುವಾಗಿ (೬೦೦) ಆರು ನೂರು ರೂಪಾಯಿ ಬೇಡಿಕೆಮಾಡೇನಿ ನೀನು ಸದರ ಬೇಡಿಕೆ ಕೊಟ್ಟು ನನ್ನನ್ನು ಕರಕೊಂಡು ಹೋಗಬೇಕು ಈ ನೋಟೀಸು ಮುಟ್ಟಿದ ವಂದು ತಿಂಗಳಲ್ಲಿ ಕರಕೊಂಡು ಹೋಗದಿದ್ದರೆ ಇದೇ ನೋಡ ಚೀಟಿ ಅಂತಾ ತಿಳಿ ತೀನಿ. ನನ್ನ ಹೊಟ್ಟಿ ಖರ್ಚಿನ ಸಲುವಾಗಿ ನಿನ್ನ ಮೇಲೆ ಕೋರ್ಟನಲ್ಲಿ ಇಲಾಜ ಮಾಡಲಾದೀತು ೬೦೦ ರೂಪಾಯಿ ಕೋರ್ಟನಲ್ಲಿ ದಾವೆ ಹಾಕಿ ನಿನ್ನ ಕಡಿಂದ ವಸೂಲ ಮಾಡಲಾದೀತು. ಅಂತಾ ಬರಕೊಂಡ ನೋಟೀಸ ಸಹಿ ತಾರೀಖು ೨೮-ಜುಲೈ— ೧೯೨೨.

† ಈ ಎಡಗೈ ಹೆಬ್ಬಟ್ಟಿನ ಗುರ್ತ ನಾಗವ್ವಾ ಗಂಡ ಕಟ್ಟೆಪ್ಪ ವಡ್ಡರ ಸಾ॥ ಗಣಿ ತಾಲ್ಲೂಕ ಬಾಗಲಕೋಟೆ ಇವಳು ಮಾಡಿದ್ದು



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳಿಯುವೆವು. ಹಲ್ಲಿನಲ್ಲಿಯಾಗುವ, ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು, ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಬೇಕಾದಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಕರ್ನಾಟಕದಲ್ಲಿ ಬಾಲಗಂಧರ್ವ

ಈ ಹಾರ್ಮೋನಿಯಂ ಶಿಕ್ಷಕ ಎಂಬ ಪುಸ್ತಕದ ಸಹಾಯದಿಂದ ಎಲ್ಲರಿಗೂ ಶಿಕ್ಷಕನ ಸಹಾಯವಿಲ್ಲದೆ ಸ್ವತಃ ಹಾರ್ಮೋನಿಯಂ ಬಾರಿಸುವದು ಸಾಧ್ಯವಾಗುವದು. ಈ ಪುಸ್ತಕದಲ್ಲಿ ಗಾಯನ ಪ್ರಸಿದ್ಧರಾದ ಬಾಲಗಂಧರ್ವ, ಗೋವರ್ಧನ್, ಮಾಸ್ತರ ಕೃಷ್ಣಾ ಮತ್ತು ಜಾನಕಿಬಾಯಿ ಮುಂತಾದವರು ಗ್ರಾಮೋಫೋನಿನಲ್ಲಿ ಹಾಡಿದ ಪದಗಳನ್ನು ಸುಲಭವಾದ ನೊಟೇಶನ್ ರೂಪದಿಂದ ಬರೆದಿರುತ್ತದೆ. ಅದರಿಂದ ಈ ಗಾಯಕ ಗಾಯಿಕೆಯರು ಹಾಡಿದಂತೆಯೇ ಆಯಾ ಪದಗಳನ್ನು ಹಾರ್ಮೋನಿಯಂದಲ್ಲಿ ಬಾರಿಸುವದು ಸಾಧ್ಯವಾಗುವದು. ಅದರಂತೆ ಕನ್ನಡ ಶಕಾರಿನಾಶ, ಮಾದುಕಾ ಪಟ್ಟಾಭಿಷೇಕ ನಾಟಕಗಳಲ್ಲಿಯ ಕೆಲವು ಲೋಕಪ್ರಿಯ ಪದಗಳೂ ಬರೆಯಲ್ಪಟ್ಟಿವೆ.

ಮಾನಾಪಮಾನ, ಏಕಚಪ್ಯಾಲಾ, ರುಕ್ಮಿಣಿಸ್ವಯಂವರ ದ್ರೌಪದಿ ಇವುಗಳೊಳಗಿನ ಬಾಲಗಂಧರ್ವರ ಲೋಕಪ್ರಿಯ ಪದಗಳನ್ನು ಸುಲಭವಾಗಿ ನೊಟೇಶನ್ ರೂಪದಿಂದ ಬರೆದಿರುತ್ತದೆ ಹಿಂದುಸ್ಥಾನೀ ಸಂಗೀತ ಪದ್ಧತಿಯ ಪುಸ್ತಕವು ಕನ್ನಡ ಲಿಪಿಯೊಳಗೆ ಬರೆದ ಪುಸ್ತಕವೆಂದರೆ ಇದೇ ಮೊದಲನೇದು. ಈ ಪುಸ್ತಕದ ವಿಷಯಕ್ಕೆ ಹಿಂದುಸ್ಥಾನಿ, ಕರ್ನಾಟಕಿ ಗಾಯನ ಬಲ್ಲವರು ಗವೆಯರು ಮತ್ತು ಪಂಡಿತರು ಅಭಿಪ್ರಾಯವನ್ನು ಕೊಟ್ಟಿರುತ್ತಾರೆ. ಈ ಎರಡು ಭಾಗಗಳಲ್ಲಿ ೩೪ ರಾಗಗಳ ವರ್ಜಾವರ್ಜ ಮತ್ತು ಶಾಸ್ತ್ರೋಕ್ತ ಮಾಹಿತಿಕೊಟ್ಟಿರುತ್ತದೆ. ಇದೇ ಪುಸ್ತಕವನ್ನು ಮರಾಠಿ ಲಿಪಿಯಲ್ಲಿ ಛಾಪಿಸಿರುತ್ತೇವೆ. ಕಿಮ್ಮತ್ತು ೧ ರೂ.

ಮೊದಲನೇ ಭಾಗ ಪುಸ್ತಕದ ಕ್ರಯ ೧ ರೂ. ೨ನೇ ಭಾಗ ೧೩ ಆಣೆ.

ವಿಳಾಸ—ಮ್ಯಾನೇಜರ ಹಾರ್ಮೋನಿಯಂ ಕ್ಲಾಸ, ದಾಯಿಟರಗಲ್ಲಿ—ಧಾರವಾಡ.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ !!

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಹಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಅದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಅದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ತಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆದುಕೊಳ್ಳಿರಿ।

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೫೫ ಸನವಾರ ಪೇಠ ಜಮುಖಂಡಿಕರ ವಾಡೆ ಪುಣೆ ಶಹರ.

ಇದೋ ನೋಡಿ!

ಜಾಹೀರಾತ ಕೊಡತಕ್ಕವರೆ!

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ಕಳಿಸಿಯೇ ಬಂದ ಈ ಪತ್ರವನ್ನು ಓದಿರಿ; ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದ್ದೆಂಬುದನ್ನು ನೀವೇ ನಿಶ್ಚಯಿಸಿರಿ.

ಶ್ರೀಯುತ ಕುಲಕರ್ಣಿ ಬ್ರದರ್ಸ, ಮೋಟಾರ ಡ್ರಾಯ್ವಿಂಗ ಇನ್‌ಸ್ಟಿಟ್ಯೂಶನ್ ೪೫೫ ಶನವಾರ ಪೇಠ ಪುಣೆಶಹರ.

ತಾರೀಖು ೨೮ ಜುಲೈ ೧೯೨೬.

ರಾ. ರಾ ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟೆ ಇವರಿಗೆ—ಸಾ. ವಿ. ನಾನು ನಿಮಗೆ ಮುದ್ದಾಂ ಪತ್ರಬರೆಯಲು ಉದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನಮ್ಮ ಜಾಹೀರಾತಿನ ಪರಿಣಾಮವು ಒಳ್ಳೇ ಚನ್ನಾಗಿ ಆಗಿದೆಂಬುದು ನಮಗೆ ಕಂಡು ಬರುತ್ತಿದೆ ಅದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹೀರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ. ಅದರ ಬೆಲೆ ಏನಾಗುವದು ಅದನ್ನು ತಿಳುಹಿಸಬೇಕು.

ಕಾಂಕ್ಷಿಸುವೆನು   ಜಿ. ಎಚ್. ಕುಲಕರ್ಣಿ ಮ್ಯಾನೇಜರ,

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭ ಹೊಂದಿರಿ. ತಪ್ಪದೇ ಈ ದಿನವೇ ಪತ್ರ ಬರೆಯಿರಿ.

—ವ್ಯವಸ್ಥಾಪಕ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COPANY

Apply for full particulars to-

N. K. Kulkarni. Agent Bagalkot.

ಪ್ರಕಟನೆ.

ಅಪೂರ್ವವಾದ ಹೊಸ ಪುಸ್ತಕಗಳು.

ಆಸ್ತಿಕರಾದವರು ತರಿಸಿ ಓದಿರಿ

(೧) ಗುರುಕಥಾಕಲ್ಪತರು ವೆಂಬ ಸಚಿತ್ರ ಗುರುಚರಿತ್ರ ಪೂರ್ವಾರ್ಧ ಬೆಲೆ ರೂ. ೨-೦-೦

(೨) ಚಿತ್ತೂರು ಜೋಹರು ೧ (ಪದ್ಮಿನಿ) ಬೆಲೆ ರೂ. ೧-೪-೦

ಸಿಕ್ಕುವ ಸ್ಥಳ:— **ಕೆ. ಲಕ್ಷ್ಮೀನಾರಾಯಣ ಭಟ್ಟ ಸ್ಕೂಲ್ ಮಾಸ್ತರ್ ಹೊನ್ನಾಳಿ. ಶಿವಮೊಗಾ ಡಿಸ್ಟ್ರಿಕ್ಟ.**

ಅಪೂರ್ವಸಂಧಿ.

S.U.N.&CO. BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೆ ಮಾಲುಗಳನ್ನು ಕೇಳುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೊತೆ ೧ಕ್ಕೆ ರೂ. ೨೫ ರಿಂದ ೩೦-೫೦ ೧೦೦ರ ವರೆಗೆ. ಉಡುವ ಮೊಗಟ ಮೊಳ ೬-೭-೮-೧೦-೧೨ ೧೮ ಮೊಳಗಳು; ಇದು ಮೊಳ ೧ಕ್ಕೆ ೨ರೂ. ಯಿಂ 2½ ರೂ. ವರೆಗೆ ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಕಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿವರೆಗೆ ೮-೯-೧೦ ಮುಖಗಳ ಕಾಳುಗಳು, ರುದ್ರಾಕ್ಷಿ ೧ಕ್ಕೆ ರೂ ೧ ರಿಂದ ೧೦ ರವರೆಗೆ ೧೧-೧೨-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೧೦ ರವರೆಗೆ ೧೪ ಮುಖದ ಕಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪-೮-೦ ನಾಲ್ಕುಕೋಟಿಗೆ ಸಾಕಾಗುವಷ್ಟು ರೇಶ್ಮಿ ಕೋಟಿಂಗ ಶಿಲ್ಕು ಥಾನು ೭ ಗಜಾ ಉದ್ದ ೩ ಗಜಾ ಅಗಲುಉಳ್ಳ ಥಾನುಗಳಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಬೀಳುವದು

ವಿಳಾಸ:— ಶಿರೋಮಣಿ ನಾರಾಯಣಾಚಾರ್ಯ ಕಂಪನಿ,

ಕಾಶೀ ಬನಾರಸ್.

ಜಾಹೀರಾತಿನ ಸಲ. ವಾಗಿ

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ.

ಇದು ಅರ್ಕವಿದ್ದು ಇದರಲ್ಲಿ ನೀಡು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳ ವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇವರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರನಿಸಿ ಟಿಕ್ಕಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದು ನೂರು ರೂಪಾಯಿಗಳು ನಾವು ಕೊಡಲ್ಪಡುವವು ಈ ಔಷಧವು ಅಮೃತಸರಿಯುಳ್ಳದ್ದಾಗಿರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳು:— ಕ್ಷಯರೋಗ, ಪಾಣಾಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಡಗ್ಗಿ, ಕಾಲರಾ (ಮಾರಿಕಾ), ಪ್ಲೇಗ, ಇನ್ ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣುನೋವು ಕಣ್ಣೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಆಲಿ ವಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿನೆಮ್ಮು, ನ್ಯ ಹೊಂಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶ್ಯ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ. ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಆದರ ಖರ್ಚ ೭ ಆ. ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ ಪೆಕ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮೀಶನ್ ಸಿಗುತ್ತದೆ. ಖರ್ಚ ೯ ಆಣೆ.ಮಾದ. ಎರಡುತಕ್ಕೊಂಡರೆ ಕಮಿಶನ ಇಲ್ಲ ಖ.೭ ಆ.ಪ್ರಮಾಣಅನುಪಾನ ಪತ್ರಿಕೆ ಕನ್ನಡ ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಆದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಪಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ **ಎಚ್. ಎಮ್. ಮುಲ್ಲಾ ಸಂಪಾದಕ ಅರ್ಕಶಫಾ ಹೆಡ್ ಆಫೀಸ ಪೋಸ್ಟ ಕಾಕೂರ (ಬೆಳಗಾವ)**





The Cheapest House.

1 For quick: Economical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the welknown Kichelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specialist to give satisfactory work,

6 For Building motor bodies of Various types by workers onin uptodate line.

7 For all kinds of motor repairs,

Apply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

೧ ಶೀಘ್ರಮಿತವ್ಯಯ ಮತ್ತು ತೃಪ್ತಿದಾಯಕ ಸರ್ವಿಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಸ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ

೨ ಎ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ವೋವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚೆಲಿನ ಟಾಯರ ಟ್ಯೂಬುಗಳು ಖರೀದಿಗಾಗಿ

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ.

೬ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಸಲಿಕ್ಕೆ,

೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವಿಸ.

ಬಾಗಲಕೋಟೆ

ವಿಜಾಪೂರ ಜಿಲ್ಲೆಯಲ್ಲಿ

ಶೆವ್ಹರಲೆಟ ಮೋಟಾರುಗಳಿಗೆ ಸಬ್ ಏಜಂಟರು.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪುಕ್ಕಟ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

ಶಾವಿಗೆ! ಗುಲಕಂದ!! ಹಪ್ಪಳ!!!

ಸುಗಂಧ ದ್ರವ್ಯಗಳು.

ಊದಿನ ಕಡ್ಡಿ, ಕಸ್ತೂರಿ ಬಿಲ್ಲೆ, ಅತ್ತರ, ಶೀಗೆಕಾಯಿ ಪುಡಿ, ಭೃಂಗಾಮಲಕ ತೈಲ, ರೋಜವಾಟರ, ಮಡ್ಡಿ, ಹಾಲಮಡ್ಡಿ ಇವೆ ಮೊದಲಾದ ಬೆಂಗಳೂರಿನ ಸುಪ್ರಸಿದ್ಧವಾದ ಎಲ್ಲ ಬಗೆಯ ಸುಗಂಧ ದ್ರವ್ಯಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತಿವೆ. ಅಲ್ಲದೆ ಗುಲಕಂದ, ಬೆಂಗಳೂರಿನ ರಸಭರಿತವಾದ ಮೂವಿನ ಹಣ್ಣುಗಳ ಮುರಬ್ಬಾ, ಬಹು ರುಚಿಕಟ್ಟಾಗಿರುವ ಸಾರಿನ ಪುಡಿ, ಮಸಾಲೆ, ಚಟ್ನಿ, ಶಾವಿಗೆ, ಹಪ್ಪಳಗಳೂ ದೊರೆಯುವವು ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್. ಕ್ಯಾಟಲಾಗಿಗಾಗಿ ಬರೆಯಿರಿ.

ವಿಳಾಸ:- ಸುಗಂಧಿ c/o "ಕನ್ನಡಿಗ" ಬಾಗಲಕೋಟೆ.

ರ. ನಂ. ಬಿ. ೧೯೪೭ ವಾ. ವರ್ಗಣಿ ೧-೪-೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಬುಧವಾರ ಮಿತಿ ಭಾದ್ರಪದ ಶುದ್ಧ ೧೦ ಶಕೆ ೧೮೫೮ ತಾ. ೨೬-೯-೧೯೩೬. | ಸಂಚಿಕೆ ೨೫

ಸಂಪಾದಕರ ಬಿನ್ನವಿ

(೩೦)

ನನ್ನ ಮನಸಿನ ಮೌನವಾತಿ ಆಟ್ಟಿಗೊಳಿಸು ।
ನಿನ್ನ ಜೀವನದ ಸ್ಪರ್ಶದಿಂದ ಸಾರ್ಥಕಗೊಳಿಸು।
ನಿನ್ನ ಆನಂದದ ಕೆನ್ನೆ ಎರಡು ಸ್ಪರ್ಶ ಸೋಂಕಿನಿಂದ ಸ್ವರೂಪ ತಿಳಿದಿದ್ದಕ್ಕೆ ॥
ನನ್ನ ದೇಹವು ನಿನ್ನ ಸಿಂಹಾಸನವಾಗಿ।
ಕನ್ನಡಿಯ ಕಳ್ಳಾಗಿ ನಿಲ್ಲಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹನೆಂದು ತಿಳಿಯೆ

—ಅಂಬಿಕಾ ತನಯ ದತ್ತ

ಮುಂಬಯಿ ಇಲಾಖೆಯ ಒಕ್ಕಲತನದ ಪ್ರದರ್ಶನವು ಪುಣೆಯ ಒಕ್ಕಲತನದ ವಿದ್ಯಾಲಯದ ಹರವಾದ ಪಟಾಂಗಣದಲ್ಲಿ ಬರುವ ಅಕ್ಟೋಬರ ತಿಂಗಳಿನ ೨೦ನೇ ತಾರೀಖಿಗೆ ಪ್ರಾರಂಭವಾಗಿ ಮೂವತ್ತನೇಯ ತಾರೀಖಿನ ವರೆಗೆ ಸಾಗುವದು. ಒಕ್ಕಲಿಗರಿಗೆ ಹುರಪನ್ನುಂಟು ಮಾಡುವದೇ ಈ ಪ್ರದರ್ಶನದ ಮುಖ್ಯವಾದ ಉದ್ದೇಶವು. ಒಕ್ಕಲಿಗರಿಗೆ ಇದರಿಂದ ಹೊಸದನ್ನು ಕಲಿತುಕೊಳ್ಳಲು ಅನುವಾಗ ಬೇಕೆಂದು ಹೊಸತರದ ವಿಚಾರಗಳಾದರೂ ಅವರ ತಲೆಯಲ್ಲಿ ಬರಬೇಕೆಂದೂ ಈ ಪ್ರದರ್ಶನದ ಏರ್ಪಾಡಾಗಿರುವದೆಂದು ತಿಳಿಯುತ್ತದೆ. ಇದು ಹೊಸಯುಗವು; ಹೊಸಯುಗಕ್ಕನುಗುಣವಾಗಿ ತಿದ್ದುಪಡೆಗಳಾಗುವದು ಅವಶ್ಯ. ಶಾಸ್ತ್ರೀಯ ಪ್ರಯೋಗಗಳನ್ನು ಮಾಡಿ ಹಿತಕರವೆಂದು ಕಂಡು ಹಿಡಿದ ಸಂಗತಿಗಳನ್ನು ಅನುಸರಿಸಲು ಏನೂ ಅಡ್ಡಿ ಇಲ್ಲ. ಸುಲಭವಾದ ವೆಚ್ಚದಲ್ಲಿ ಬೆಳೆಗಳು ಹೆಚ್ಚು ಬರುವಂತಿದ್ದರೆ, ನಾವು ಅದರಲಾಭವನ್ನು ಏಕೆ ಪಡೆಕೊಳ್ಳಬಾರದು? ಪ್ರದರ್ಶನವು ಹೊರಗಣ ನೋಟಕ್ಕಷ್ಟೇ ಸೊಬಗಾಗಿ ಪರದೇಶದ ಯಂತ್ರ ತಂತ್ರಗಳ ಪ್ರದರ್ಶನವು ಮಾತ್ರವಾಗಕೂಡದು. ಪರದೇಶದ ಸಾಧನ ಸಾಹಿತ್ಯಗಳೇ ಹೆಚ್ಚು ಸೌಕರ್ಯಗಳನ್ನುಂಟು ಮಾಡಿಕೊಡುತ್ತವೆಂಬ ಕಲ್ಪನೆಗೆ ಎಡೆಯನ್ನು ಇಡಬಾರದು. ನಮ್ಮಲ್ಲಿಯ ನೇಕಾರರಿಗೂ, ಬಡಿಗರಿಗೂ, ಒಕ್ಕಲಿಗರಿಗೂ ಸ್ವತಂತ್ರರೀತಿಯಿಂದ ಸ್ವಾವಲಂಬನ ಮಾರ್ಗದಿಂದ ಸಾಧನ ಸಾಹಿತ್ಯಗಳನ್ನು ಕಲ್ಪಿಸಲು ಬರುವಂತೆ ಶಿಕ್ಷಣದ ಏರ್ಪಾಟಾದರೆ ಒಳಿತು. ಇರಲಿ ಪ್ರದರ್ಶನದಲ್ಲಿ ಪೈರಿನ ಪಟಾಂಗಣ ಹೂದೋಟದ ಪಟಾಂಗಣ, ದನ ಹಂದಿಗಳ ಪಟಾಂಗಣ ಇವೇ ಮೊದಲಾದ ಬೇರೆ ಬೇರೆ ಪಟಾಂಗಣಗಳು ನಿರ್ಮಿಸಲ್ಪಟ್ಟಿವೆ ದನಗಳನ್ನು ಹೇಗೆ ಸಾಕಬೇಕು, ಬೆಳೆಗಳಿಗೆ ರೋಗಗಳು ತಗಲದಂತೆ ಹೇಗೆ ಜಪ್ಪಿಸಬೇಕು ಸ್ವಲ್ಪ ಭೂಮಿಯಲ್ಲಿ ಹೆಚ್ಚಿಗೆ ಆದಾಯ ಮಾಡಲು ಏನು ಮಾಡಬೇಕು ಇವೇ ಮೊದಲಾದವುಗಳಿಗೆ ಉಪಯುಕ್ತ ಶಿಕ್ಷಣವು ಪ್ರದರ್ಶನದಲ್ಲಿ ದೊರೆಯುವದು. ಉಗಿಬಂಡಿಯು ಸವಲತ್ತಿನ ದರಗಳನ್ನು ಕಲ್ಪಿಸಿ ಕೊಟ್ಟಿರುವದರಿಂದ ಒಕ್ಕಲಿಗರೂ ಕೂಡ ಪ್ರದರ್ಶನಕ್ಕೆ ಹೋಗಲು ಅನುಕೂಲವಿದೆ. ಸಂಚಾಲಕರು ವೃತ್ತಪತ್ರಕಾರರಿಗೆ ಆಮಂತ್ರಣಗಳನ್ನು ಕೊಟ್ಟು, ಮೈಸೂರ ಸರಕಾರದವರಂತೆ ಫ್ರೀ ಪಾಸುಗಳನ್ನು ಅವರಿಗೆ ಕಳುಹಬೇಕಾಗಿ ಸೂಚನೆ.

"ಕರ್ನಾಟಕ ವಿದ್ಯಾ ವರ್ಧಕ ಸಂಘವು ನಮ್ಮಲ್ಲಿಯ ಒಳ್ಳೇ ಹಿರಿಯ ಸಾರ್ವಜನಿಕ ಸಂಸ್ಥೆಯು ಕನ್ನಡಿಗರಲ್ಲಿ ಎಲ್ಲಕ್ಕೂ ಮೊದಲು ಕನ್ನಡದ ಅಭಿಮಾನವನ್ನು ಹುಟ್ಟಿಸಲು ಪ್ರಯತ್ನಪಟ್ಟ ಸಂಸ್ಥೆಯಂದರೆ ಇದೇ. ಅಗ್ಗ ಅದು ಮಾಡಿದ ಕಾರ್ಯದಿಂದ ಪರಪ್ರಾಂತಗಳ ಜನರು ಬೆರಗಾದರು. ಸಂಘವು ಅನ್ಯಪ್ರಾಂತೀಯರಿಗೆ ಆದರ್ಶಭೂತವಾದ ಸಂಸ್ಥೆಯಾಯಿತು. ಆದರೆ ಇದು ಹಿಂದಿನ ವೈಭವದ ನಿಜವಾದ ಚಿತ್ರವು ಈಗಿನ ವೈಧವ್ಯದ ಸತ್ಯವಾದ ಚಿತ್ರವು ಹೀಗಿದೆ ಸಂಘದಲ್ಲಿ ಒಳ್ಳೇ ಕಳಕಳಿಯಿಂದ ಕಾರ್ಯ ಮಾಡುವವರಿಲ್ಲ. ಕಟ್ಟಡವು ಪೂರ್ತಿಯಿಲ್ಲದ ಕಾರಣ ಸೋರಿ ಸೋರಿ ಶಿಥಿಲವಾಗುತ್ತಿದೆ. ಪುಸ್ತಕಾಲಯದಲ್ಲಿಯ ಗ್ರಂಥಗಳು ಎಷ್ಟೋ ಮಾಯವಾಗಿವೆಯಂತೆ ವಾಗ್ಭೂಷಣವು ನಿಂತು ಹೋಯಿತು. ಈ ಸಂದರ್ಭದಲ್ಲಿ ನನ್ನ ಓರ್ವ ಮಿತ್ರರು ಬರೆಯುವದೇನಂದರೆ "ಸಂಘ ದವೋಲೆ ನನ್ನ ಪ್ರೇಮಬಳ, ವಾಗ್ಭೂಷಣ ವೆಂದರೆ ನನ್ನ ಪ್ರಾಣ ಕೊಡುತ್ತಿದ್ದೆನು ನಾನು ಎಲ್ಲಿದ್ದರೂ ನನ್ನ ಜೀವವೆಲ್ಲ ಧಾರವಾಡದಲ್ಲಿ ಇರುತ್ತಲಿದ್ದಿತು ಈಗೀಗ ಧಾರವಾಡದವರಲ್ಲಿ ಅಕ್ಕರಿಲ್ಲ. ಸಂಘದವರು ಭಿಕ್ಷೆಬೇಡಿಯಾದರೂ ವಾಗ್ಭೂಷಣವನ್ನು ನಡೆಯಿಸಬಹುದಾಗಿತ್ತು. ಧಾರವಾಡದವರ ದಾಂಭಿಕತನವು, ವಾಙ್ಮಯ ಸೇವಕರೆಂಬ ಅವರ ಡೌಲು ಎಲ್ಲ ವೃಥಾ ಅಲ್ಲವೇ? ಇವರಿಗೆ ವಾಙ್ಮಯ ಪ್ರೀತಿಯಿಲ್ಲ. ಆತ್ಮಪ್ರತಿಷ್ಠೆ ಬೇಕಾಗಿದೆ. ಇದು ಹೇಯವಾದದು ಇದು ನಿಜವೆಂದೇ ನಮ್ಮ ಮತ ನಿಜವಿಲ್ಲದಿದ್ದರೆ, ಧಾರವಾಡದ ವೀರ ಭಟರು ಮುಂದಕ್ಕೆ ಬಂದು ಉತ್ತರಕೊಡಲಿ! ಕಳೆದಾಜೆಯ ವಾರದಲ್ಲಿ ವಿಜಾಪೂರದ ಶ್ರೀ. ಪಾಟೀಲ ಶಂಕರಗೌಡರ ಅಧ್ಯಕ್ಷತೆಯಲ್ಲಿ ಸಂಘದ ವಾರ್ಷಿಕ ಸಮಾರಂಭವು ಧಾರವಾಡದಲ್ಲಿ ಜರಗಿತು ಅಗ್ಗ ಅವರು ಒಳ್ಳೇ ಕಳಕಳಿಯಿಂದ ಸೂಚಿಸಿದಂತೆ ಅಖಂಡ ಕರ್ನಾಟಕಕ್ಕೆಲ್ಲ ಒಂದೇ

ಬಗೆಯ ಪತ್ರವ್ಯವಹಾರಗಳನ್ನು ರಚಿಸುವ ಕಾರ್ಯದಲ್ಲಿಯಾದರೂ ಕೊಡಕಿ, ಮುಂಬೈ ಮದ್ರಾಸ, ಮೈಸೂರ ಕೊಡಗು, ಪ್ರಾಂತಗಳ ಸರಕಾರಕ್ಕೆ ಬರೆದು ಎಲ್ಲರ ಸಹಾಯ ಸಹಾನುಭೂತಿಗಳನ್ನು ದೊರಕಿಸಿ ಇದೊಂದೇ ಕಾರ್ಯವಾದರೂ ಯಶಸ್ವಿಯಾಗುವಂತೆ ಮಾಡಿದರೆ, ಸಂಘವು ಅಖಂಡ ಕರ್ನಾಟಕದ ನಿಜವಾದ ಸೇವೆಯನ್ನು ಮಾಡಿದಂತಾಗುವದು. ವಿಜಾಪೂರ ಜಿಲ್ಹಾ ಲೋಕಲ್ ಬೋರ್ಡಿನ ಅಧ್ಯಕ್ಷರಿಗೆ ಸಂಘದ ಸಂಬಂಧವನ್ನುಂಟು ಮಾಡಿಕೊಟ್ಟಂತೆ ಕರ್ನಾಟಕದ ಎಲ್ಲ ಭಾಗಗಳಲ್ಲಿಯ ಜಿಲ್ಹಾ ಬೋರ್ಡಿನ ಹಾಗೂ ಮುನಸಿಪಾಲ್ಟಿಗಳ ಅಧ್ಯಕ್ಷರಿಗೂ ಒಂದಿಲ್ಲೊಂದು ರೀತಿಯಿಂದ ಸಂಘದ ಸಂಬಂಧವನ್ನುಂಟುಮಾಡಿ, ಅವರೆಲ್ಲ ಕನ್ನಡದ ಚಳವಳಿಯಲ್ಲಿ ಭಾಗ ತಗೆದುಕೊಳ್ಳಲು ಅವಕಾಶವನ್ನುಂಟು ಮಾಡಿಕೊಟ್ಟು ಮುಂದೆ ಅವರಿಂದ ಅವರವರ ಬೋರ್ಡುಗಳ ಮುಖಾಂತರ ಸಂಘದ ಕಟ್ಟಡಕ್ಕಾಗಿಯೂ, ಸಂಘದ ಕಾರ್ಯವನ್ನು ವಿಸ್ತರಿಸುವದಕ್ಕೂ ವಾರ್ಷಿಕ ಹಣದ ಸಹಾಯವನ್ನು ಕೇಳಿಕೊಳ್ಳಬೇಕು. ಅಂದರೆ ಸಂಘದ ಆರ್ಥಿಕಸ್ಥಿತಿಯು ಬೇಗನೆ ಸುಧಾರಿಸುವದು.

ಕರ್ನಾಟಕ ಏಕೀಕರಣದ ಬಗ್ಗೆ ಲೋಕಲ್ ಬೋರ್ಡ ಮುನಸಿಪಾಲ್ಟಿಗಳು ಈಗ್ಗೆ ಅಲ್ಲಲ್ಲಿ ಗೊತ್ತುವಳಿಗಳನ್ನು ತೀರ್ಮಾನಿಸುತ್ತಿರುವದರಿಂದ ಏಕೀಕರಣದ ಹಟವು ಹೆಚ್ಚಿ ಹೋಗುತ್ತಿದೆನ್ನಬಹುದು. ಕರ್ನಾಟಕದ ಎಲ್ಲಕಡೆಯಲ್ಲಿಯ ಈ ಸಂಸ್ಥೆಗಳು ಈಬಗ್ಗೆ ಬೇಗನೇ ಎಚ್ಚರಿಯಬೇಕು. ಈ ಠರಾವುಗಳನ್ನು ತೀರ್ಮಾನಿಸಿ ಅವುಗಳ ಪ್ರತಿಗಳನ್ನು ಮಾತ್ರ ದಿಲ್ಲಿ, ಮುಂಬಯಿ, ಮದ್ರಾಸ, ಕೊಡಗು ಸರಕಾರಗಳಿಗೂ, ಮೈಸೂರ, ಹೈದರಾಬಾದ, ಕೊಲ್ಹಾಪೂರ, ಸಾಂಗಲಿ, ಮಿರಜಿ, ಜಮಖಂಡಿ, ಮುಧೋಳ, ರಾಮದುರ್ಗ, ಜತ್ತ, ಅಕ್ಕಲಕೋಟೆ, ಸವಣೂರ, ಬದಗಾವಿ, ಕುರಂದವಾಡ, ಸೊಂಡೂರ ಮೊದಲಾದ ಕರ್ನಾಟಕದ ಎಲ್ಲ ಸಂಸ್ಥಾನಗಳ ದಿವಾನರಿಗೂ ಕಳಿಸಲು ಮರೆಯಕೂಡದು. ಕರ್ನಾಟಕ ಏಕೀಕರಣ ಸಭೆಯವರಾದರೂ ಈ ಠರಾವುಗಳನ್ನೆಲ್ಲ ಪ್ರಕಟವಾದಂತೆ ಈ ಎಲ್ಲ ಸರಕಾರಗಳಿಗೂ ಕಳಿಸಬೇಕು.

ಕರ್ನಾಟಕದಲ್ಲಿ ಒಕ್ಕಲತನದ ಬಾಬತಿನ ಚೌಕಶಿ ಮಂಡಲವು (ರಾಯಲ್ ಕಮೀಶನ್ ವು) ನವಂಬರದಲ್ಲಿ ಸಂಚರಿಸುವದಾಗಿ ಪ್ರಕಟವಾಗಿದೆ. ಧಾರವಾಡ ಬೆಂಗಳೂರ ಹಾಗೂ ಕೊಯಿಮತ್ತೂರ ಈ ಮೂರು ಸ್ಥಳಗಳು ಕರ್ನಾಟಕದಲ್ಲಿ ಆರಿಸಲ್ಪಟ್ಟಿವೆ. ಈ ಬಗ್ಗೆ ಕರ್ನಾಟಕಸ್ಥರೆಲ್ಲ ಮುಂಜಾಗ್ರತವಾಗಿ ವಿಚಾರಣೆಮಾಡುವದು ಅವಶ್ಯಕ. ಈ ಚೌಕಶಿ ಮಂಡಲಕ್ಕೆ ಅಖಂಡ ಕರ್ನಾಟಕದಿಂದ ಶಿಷ್ಟಮಂಡಲವೊಂದು ಕಳಿಸಲ್ಪಡಬೇಕು. ಇದರ ಹೊತಾಗಿ ಚಳುವಳಿಯು ಬೇರೆಬೇಕು. ಅಖಂಡ ಕರ್ನಾಟಕ ದೃಷ್ಟಿಯಿಂದ ನೋಡಿ ಯಾವಭಾಗದಲ್ಲಿ ಮಳೆ ಕಡಿಮೆಯಿದೆಯೋ ಅಲ್ಲಿ ಕಾಲುವೆಗಳಾಗಬೇಕೆಂತಲೂ, ಎಲ್ಲಿ ವಿಶೇಷ ಪಡಬಿದ್ದ ಭೂಮಿಗಳಿವೆಯೋ ಅಲ್ಲಿ ಸಾಗುವಳಿಯಾಗುವಂತೆಯೂ ಕರ್ನಾಟಕದಲ್ಲಿ ಹುಟ್ಟುವ ಸರಕುಗಳು, ಹೋಗಿ ಹೋಗಿ ನಮ್ಮ ಆರ್ಥಿಕ ಪರಿಸ್ಥಿತಿಯು ಸುಧಾರಿಸಲು, ಕರ್ನಾಟಕಕ್ಕೆ ಒಂದು ಬಂದರವು ಏರ್ಪಾಡುವಾಗುವಂತೆಯೂ ಹಳ್ಳಿಯಿಂದ ಪೇಟೆಗೆ ಸರಕುಗಳು ಹೋಗಲು ರೇಲ್ವೆ ಅನಕೂಲತೆಗಳು ಬೇಗನೇ ಆಗುವಂತೆಯೂ, ಒಕ್ಕಲಿಗರ ಸ್ಥಿತಿಯು ಬೆಳೆಯುವಂತೆಯೂ ಜನಗಳು ಮುಂದೆಬರುವಂತೆಯೂ ಪ್ರಯತ್ನಗಳಾಗಬೇಕು. ಆದ್ದರಿಂದ ಕರ್ನಾಟಕದ ಎಲ್ಲ ಭಾಗಗಳಲ್ಲಿರುವ ವೃತ್ತಪತ್ರಿಕೆಗಳೂ, ಒಕ್ಕಲಿಗರ ಸಂಘಗಳೂ, ಮುನಸಿಪಾಲ್ಟಿ ಲೋಕಲ್ ಬೋರ್ಡುಗಳೂ ಸಹಕಾರಿ ಸಂಘಗಳೂ, ಮುಖಂಡರೂ ಈ ವಿಷಯವನ್ನು ವಿಳಂಬವಿಲ್ಲದಂತೆ ಚರ್ಚಿಸಲು ಪ್ರಾರಂಭಿಸಿ ಶಕ್ಯವಿದ್ದರೆ ಅಖಂಡ ಕರ್ನಾಟಕದ ಒಂದು ಪರಿಷತ್ತನ್ನು ಕರೆಯುವ ಏರ್ಪಾಡು ಮಾಡುವದು ಇದೀಗ ಸಯುಕ್ತಿಕವು

ಮುನಿಸಿಪಾಲ್ಟಿಯ ಕಾರ್ಯವೆಲ್ಲ ಕನ್ನಡದಲ್ಲಿಯೇ ನಿವರಿಸಲ್ಪಡಬೇಕೆಂಬದಾಗಿ ಬಾಗಲಕೋಟೆಯ ನಗರಸಭೆಯಲ್ಲಿ ಬಂದ ಸೂಚನೆಯು ಸ್ವೀಕೃತವಾಗದಿದ್ದಕ್ಕಾಗಿ ನಮಗೆ ಬಹು ವಿಷಾದವಾಗುತ್ತದೆ. ಈ ವಿಷಯದಲ್ಲಿ ನಗರ ಪಿತಾಮಹರು ಜನರ ಇಚ್ಛೆಯ ವಿರುದ್ಧವಾಗಿ ನಡೆದು ಅಪವಾದಕ್ಕೆ ಮಾತ್ರ ಗುರಿಯಾದರು. ಕಾರ್ಯವೆಲ್ಲ ಇಂಗ್ಲೀಷಿನಲ್ಲಿ ನಡೆಯದೇ, ಕನ್ನಡದಲ್ಲಿಯೇ ನಡೆಯಬೇಕೆಂಬ ಠರಾವಿಗೆ ಪ್ರತಿಕೂಲವಾಗಿ ಮತವನ್ನು ನಮ್ಮ ಅಚ್ಚಗನ್ನಡಿಗರೇ ಕೊಟ್ಟದ್ದು ಆಶ್ಚರ್ಯ. ಕನ್ನಡದ ಅಭಿಮಾನಿಗಳೂ, ಕರ್ನಾಟಕದ ಆಕಾಂಕ್ಷೆಗಳ ಬಗ್ಗೆ ಒಳ್ಳೇ ಕಳವಳ ತೋರಿಸುವವರೂ ಆದ ಶ್ರೀ. ಧಾರವಾಡ ವಕೀಲರೂ, ಮಾತೃಭಾಷೆಯು ಕನ್ನಡವಿದ್ದು ದಿನಾಲು ಮನೆಯಲ್ಲಿ ವ್ಯವಹಾರದಲ್ಲಿ, ಎದ್ದರೆ ಕಳಿತರೆ ನಿಂತರೆ ಕನ್ನಡ ಮಾತನಾಡುವ ಶ್ರೀ. ಬಣಗಾರ ಸವಣೂರ ನಾಗರಾಳ ಪ್ರಭೃತಿಗಳೂ ತಮ್ಮ ಮಾತೃಭಾಷೆಯನ್ನು ಈಪರಿಯಾಗಿ ತಿರಸ್ಕರಿಸುವರೆಂಬ ಕಲ್ಪನೆಯು ನಮ್ಮ ಕನಸು ಮನಸುಗಳಲ್ಲಿಯೂ ಇರಲಿಲ್ಲ. ಇವರ ಈ ಕೃತಿಯನ್ನು ಕನ್ನಡಿಗರು ಬಹು ಆಶ್ಚರ್ಯದಿಂದ ನೋಡಬೇಕಾಗಿದೆ ಈ ಠರಾವಿಗೆ ಅನುಕೂಲವಾಗಿ ಶ್ರೀ ಸೊಲ್ಲಾಪೂರ, ತಪಶೆಟ್ಟಿ ಬ್ಯಾಳಿ, ಮತ್ತು ನಮ್ಮ ಮುಸಲ್ಮಾನ ಬಾಂಧವರಾದ ಶ್ರೀ. ಗಬ್ಬೂರವರು ಪ್ರಯತ್ನಿಸಿದ್ದಕ್ಕಾಗಿ ಅವರನ್ನು ನಾವು ಅಭಿನಂದಿಸುವೆವು ಈ ತೀರ್ಮಾನವು ಅಪಯಶಸ್ಸನ್ನು ಹೊಂದಲು ಮೊದಲು ಅನುಕೂಲವಾಗಿ ಇಡಿಗೆ ಸಭೆಯ ಕಾರ್ಯಗಳೆಲ್ಲ ಇಂಗ್ಲೀಷ ಹಾಗೂ ಕನ್ನಡದಲ್ಲಿ ಕೂಡಿಯೇ ನಡೆಯಬೇಕೆಂದು ಶ್ರೀ. ಧಾರವಾಡ ವಕೀಲರು ತಂದ ಉಪಸೂಚನೆಯ ಗುಟ್ಟು ನಮಗೆ ತಿಳಿಯದು. ಈ ಸೂಚನೆಯಾದರೂ ಯಶಸ್ವಿಯಾಗಲಿಲ್ಲ. ಇತ್ತ ಬಲಗೈಯಿಂದ ಗೋಣು ಹಿಚುಕಿ ಅತ್ತ ಅದಕ್ಕೆ ಜೀವನಕಳೆ ತುಂಬಬೇಕೆಂದು ಎಡಗೈಯಿಂದ ಗಾಳಿ ಹಾಕಲು ಪ್ರಯತ್ನಿಸುವದರ ಅರ್ಥವು ನಮಗೆ ತಿಳಿಯದು. ಶ್ರೀ. ಧಾರವಾಡ ವಕೀಲರೂ ಅವರಂತೆ ಮತ ಕೊಟ್ಟ (ನಮ್ಮ?) ಅಚ್ಚಗನ್ನಡಿಗರೂ ತಾವೇ ಇದರ ಅರ್ಥವನ್ನು ಹೇಳಲಿ!

ಶ್ರೀ ಗಜಾನನ ಪೂಜಾ ಮಂಟಪವನ್ನು ಇಲ್ಲಿಯ ಶೇಟ ಬಾಳಕೃಷ್ಣದಾಸರು ಬಹು ಪರಿಯಿಂದ ಅಲಂಕರಿಸಿದ್ದು ಒಳ್ಳೇ ಪ್ರೇಕ್ಷಣೀಯವಾದ ನೋಟವಾಗಿದೆ, ಈ ರಮಣೀಯತೆಯಿಂದ ತಮ್ಮ ಕಣ್ಣುಗಳನ್ನು ತಣಿಸಬೇಕೆಂದು ಸಂಜೆಯ ಸಮಯದಲ್ಲಿ ದಿನಾಲು ಸಾವಿರಾರು ಜನರು ಅಲ್ಲಿ ಕಿಕ್ಕಿರಿದಿರುವರು. ಅದೆಲ್ಲ ರಚನೆಯು ಒಂದು ಪ್ರತಿಸೃಷ್ಟಿಯಾಗಿಯೇ ಕಂಗೊಳಿಸುತ್ತಿರುವದು. ಆಧುನಿಕ ಸುಧಾರಣೆಯ ಸೊಬಗನ್ನೂ ಸೌಕರ್ಯವನ್ನೂ, ಮುಂಬಯಿಯಂಥ ರಾಜಧಾನಿಗಳಲ್ಲಿಯ ಜನರ ವಿಲಾಸ ವೈಭವಗಳನ್ನೂ ನೋಡದವರು ಇಲ್ಲಿ ಕಂಣಾರೆ ಕಂಡು ಕೊಳ್ಳಬೇಕಾಗಿದೆ. ರೇಲಗಾಡಿಗಳ ಓಡಾಟವನ್ನೂ ಮನುಷ್ಯರೂ ಪಶು ಪಕ್ಷಿಗಳೂ ಜೀವಕಳೆಯಿಂದ ಕೂಡಿಕೊಂಡಂತೆ ಚೇಷ್ಟೆಮಾಡುವದನ್ನೂ ಅನೇಕರು ಒಳ್ಳೇ ಕೌತುಕದಿಂದ ನೋಡುತ್ತಿರುವರು, ಕೌತುಕಗಳಿಂದಲೂ ಆಯಾ ಗೊಂಬೆಗಳ ಅಚ್ಚಳಿಯದ ಸೌಂದರ್ಯದಿಂದಲೂ ರಚನಾಚಾತುರ್ಯದಿಂದಲೂ ನೇತ್ರಾನಂದವನ್ನು ಹೊಂದಿ, ಶೇಟಜಿಯವರ ಕಲಾಕುಶಲತೆಯನ್ನೂ ಸೌಂದರ್ಯದಭಿರುಚಿಯನ್ನೂ ರಚನಾ ಚಾತುರ್ಯವನ್ನೂ ಕೊಂಡಾಡುತ್ತ ಇಂಥ ನೇತ್ರೋತ್ಸವನ್ನು ಒದಗಿಸಿ ಕೊಟ

ದ್ದಕ್ಕೆ " ಶ್ರೀಮಂತಿಕೆ ಇದ್ದದ್ದಕ್ಕೆ ಸಾರ್ಥಕವು " ಎಂದು ಶೇಡಜೀಯವರ ಧನ್ಯವಾದ ಮಾಡುತ್ತ ಜನರೆ ಹಿಂತಿರುಗಿ ಬರುತ್ತಿರುವರು. ಶ್ರೀಗಜಾನನ ಪೂಜೆಗಾಗಿ ಇಷ್ಟೊಂದು ದ್ರವ್ಯ, ಕೌಶಲ್ಯ, ಉತ್ಸಾಹವನ್ನು ವೆಚ್ಚಮಾಡಿ ದರ್ಶನೀಯವಾದ ನೋಟವನ್ನುಂಟು ಮಾಡಿದ್ದು, ಬಾಳಕೃಷ್ಣ ದಾಸರು ಶ್ರೇಷ್ಠರಾದ ಕಲಾಭಿಮಾನಿಗಳೆಂದೂ ಧರ್ಮಬುದ್ಧಿಯುಳ್ಳವರೆಂದೂ ಹೇಳಿಕೊಡುತ್ತದೆ. ಆದರೆ ಅವರಿಗೆ ನನ್ನದೊಂದು ಸೂಚನೆ. ಇದೇ ಸಮಾರಂಭದ ಸಮಯದಲ್ಲಿ, ಕರ್ನಾಟಕದೊಳಗಿನ ಉತ್ತಮೋತ್ತಮರಾದ ಗಾಯಕರಿಗೂ ಪುರಾಣ, ಭಜನೆ ಕೀರ್ತನಕಾರರಿಗೂ ಆಮಂತ್ರಣಕೊಟ್ಟು ಕರೆಸಿ, ಗಣಪತಿಯು ಕುಳಿತಿರುವಾಗ ನಿತ್ಯವೂ ನಿಯಮಿತ ವೇಳೆಗೆ ಅವರವರ ಗಾಯನ ಪುರಾಣ ಕೀರ್ತನೆಗಳು ನಡೆಯುವಂತೆ ವ್ಯವಸ್ಥೆಮಾಡಿ, ಅದು ಜನರಿಗೆ ತಿಳಿಯುವಂತೆ ಜಾಹೀರ ಮಾಡಿದರೆ ಶೇಡಜಿಯವರು ಆರಂಭಿಸಿದ ಉತ್ಸವಕ್ಕೆ ದೊಡ್ಡ ಗೌರವವೂ ಗಾಂಭೀರ್ಯವೂ ಮಹಾಜನರ ಕೃತಜ್ಞತೆಯೂ ಸಿಕ್ಕುವದಲ್ಲದೇ ಕರ್ನಾಟಕದೊಳಗಿನ ಗಾಯನ ಕೀರ್ತನ ಕಲೆಗಳನ್ನು ಪ್ರೋತ್ಸಾಹಿಸಿದ ಶ್ರೇಯಕ್ಕೂ ಕಲಾಭಿಮಾನಿಗಳ ಅನುರಾಗಕ್ಕೂ ಪಾತ್ರರಾಗುವರು. ಸಾಂಗಲಿ ಕೊಲ್ಹಾಪೂರ ಮೊದಲಾದ ಸಂಸ್ಥಾನಗಳಲ್ಲಿಯ ಶ್ರೀಮಂತರು ಇದೇ ಮಾದರಿಯ ಉತ್ಸವವನ್ನು ನೆರವೇರಿಸಿ ಶ್ರೀಗಜಾನನ ಕೃಪೆಗೆ ಪಾತ್ರರಾಗುತ್ತಿರುವದನ್ನು ಶೇಡಜಿಯವರು ಅರಿತಿರಬಹುದು.

ವಾಙ್ಮಯ ಪರಿಚಯ.

ಸ್ವೀಕಾರ.

(೧) ಗಜರಾ ನಾಟಕವು:— ಲೇಖಕರು - ನಾರಾಯಣ. ಕೃಷ್ಣ ಹಂಪಿಹೊಳ್ಳಿ. ಬಿ. ಎ. ಧಾರವಾಡ ವಿಮರ್ಶೆಯು ಸ್ವಲ್ಪ ದಿನಗಳಲ್ಲಿ ಪ್ರಕಟಿಸಲ್ಪಡುವದು. ನಾಟಕದ ಬೆಲೆ ಒಂದು ರೂಪಾಯಿ.

(೨) **ಸುಶೀಲೆ**—ಇದೊಂದು ಸತಿ ಹಿತೈಷಿಣಿ ಗ್ರಂಥಮಾಲೆಯೊಳಗಿನ ಸಾಮಾಜಿಕ ಕಾದಂಬರಿಯು. ಮದ್ರಾಸು, ಮೈಸೂರ ಸೀಮೆಗಳ ಶಾಲೆಗಳಲ್ಲಿ ಪಠ್ಯಪುಸ್ತಕವಾಗಿ ಇದನ್ನು ಆರಿಸಿದ್ದಾರಂತೆ; ಆಗಳೆ ಇದು ಈ ಗ್ರಂಥದ ಮೂರನೇ ಮುದ್ರಣವು. ಅಂದಮೇಲೆ ಇದು ಶಿಕ್ಷಣ ಖಾತೆಯವರ ಮನ್ನಣೆಗೂ ಲೋಕಾಶ್ರಯಕ್ಕೂ ಪಾತ್ರವಾಗಿದೆಯೆಂದು ಒಡೆದು ಬರೆಯಬೇಕಾಗಿಲ್ಲ.

ಆದಾಗ್ಯೂ ನಾವಿರುವ ಈಗಿನ ಮನ್ವಂತರದಲ್ಲಿ ಸ್ವಾತಂತ್ರ್ಯಪ್ರೀತಿಯಿಂದಲೂ ನವನಾಗರಿಕತೆಯು ಮತ್ತು ಸಮಾಜ ಸೇವೆಯ ಉದಾತ್ತ ವಿಚಾರಗಳಿಂದಲೂ ಮಂಡಿತರಾದ ನಮ್ಮ ಆಧುನಿಕ ವಿದುಷಿಯರಿಗೆ ಈ ಸುಶೀಲೆಯ ಸ್ವಭಾವವು ಆದರ್ಶವಾಗಿ ಉಳಿಯುವದೆಂತು! ಎಂದು ಸಂಶಯ ಪಡಹತ್ತಿರುವೆವು. ಹೆಂಣುಮಕ್ಕಳು ಪುರಾಣ ಕಥೆಗಳಿಗೂ ಕೂಡ ಹೊಸ್ತಿಲದ ಹೊರಗೆ ಹೋಗಬಾರದೆಂದು ಸುಶೀಲೆಯ ಅಭಿಪ್ರಾಯವು. ದೇವರ ಮನೆಯಲ್ಲಿ ಕುಳಿತುಕೊಂಡೇ ಪುಸ್ತಕಗಳ ಪರಿಚಯದಿಂದ ಎಲ್ಲವನ್ನೂ ಕಲಿಯಬಹುದೆಂದು ಇವಳ ಭರವಸೆ. ಪುರುಷರ ಕಣ್ಣಿಗೆ ಬೀಳುವದೇ ಅಬಲೆಯರಾದ ಮಾನಿನಿಯರಿಗೆ ಮಾನಭಂಗದ ಪ್ರಸಂಗವೆಂದು ಇವಳ ನಂಬಿಗೆ (ಆದೇಕೊ? ಪುರುಷರೆಂದರೆ ವಿವೇಕ ಶೂನ್ಯರಾದ ಕಾಮಾಂಧರೆಂದು ಇವಳ ಭಾವನೆಯೋ ಏನು!!) ಇವೇ ಮೊದಲಾದ ಪುರಾಣ ಕಲ್ಪನೆಗಳಿಂದ ಪರಿಪ್ಲುತಳಾದ ಸುಶೀಲೆಯು, ರಾಷ್ಟ್ರಘಟನೆಯ ಕಾರ್ಯದಲ್ಲಿ ತಮ್ಮ ಕರ್ತವ್ಯ ಭಾರವನ್ನೆಲ್ಲ ಹೊರಲುದ್ಯುಕ್ತರಾದ ಈಗಿನ ಮಹಿಳಾವರ್ಗಕ್ಕೆ ಮಾರ್ಗದರ್ಶಿಯಾದಾಳೆಂದು ನಾವು ನಂಬಲಾರೆವು; ಮತ್ತೂ ಕೊಂಚ ಹೆಚ್ಚಾಗಿ ಎಳೆದ ಇವಳ ಪತಿಪರಾಯಣತೆಯ ಚಿತ್ರವು ಆನಂದಾಶ್ಚರ್ಯವನ್ನು ಹುಟ್ಟಿಸುವಂಥದಾದರೂ ಓದುಗರ ನ್ಯಾಯ-ಬುದ್ಧಿಗೆ ಅಷ್ಟೊಂದು ರುಚಿಸದು.

ಸುಶೀಲೆ ಆಡುವ ಭಾಷೆ ಸಾಮಾನ್ಯ ಸ್ತ್ರೀಸಾಮಾನ್ಯರು ಸುಗಮವಾಗಿ ತಿಳಿಯುತಕ್ಕ ಬಳಕೆಯೊಳಗಿದ್ದ ಭಾಷೆಯಲ್ಲ; ಅವರಿಗೆ ಸರಿಬರದ ಸಂಸ್ಕೃತ ಶಬ್ದಗಳೆಂಬ ಕಲ್ಲುಮುಳ್ಳುಗಳನ್ನು ತುಳಿತುಳಿದು ಕೋಮಲವಾದ ಅವರ ಕಾಲುಗಳು ಹುಣ್ಣುಗಳಾಗಿ ಹೋಗುವವು. ಇದನ್ನು ಹೇಗಾದರೂ ನುಂಗಿಕೊಂಡಾರೆಂದರೆ ಅಲ್ಲಲ್ಲಿಗೆ ಬಾಯಾರಿಸುವಂಥ ಉದ್ದುದ್ದ ಸಮಾಸಗಳ ಹಾವಳಿ. ಸುಶೀಲೆಯು ತಾನು ಕಲಿತವಳಾದರೇನು? ಅಬಲೆಯರನ್ನು ಇಷ್ಟು ಬಳಲಿಸಬೇಕೆ!

ಮಿಕ್ಕುಳಿದ ಪಾತ್ರಗಳು-ಗಿರಿಯಮ್ಮ, ಚಪಲೆ, ತಂತ್ರನಾದ ವಿನೋದ-ಇವರು ಈ ಪ್ರಪಂಚದಲ್ಲಿ ನಮಗೆ ಪ್ರತಿನಿತ್ಯವೂ ಭೆಟ್ಟಿಯಾಗುತ್ತಿರುವರು. ಅವರನ್ನು ನಾವು ಗುರ್ತಿಸುವದೂ ಉಂಟು.——ಗು.

(೩) **ಸಚಿತ್ರ ಪಶುಪಕ್ಷಿಗಳ ವರ್ಣನೆ** ಇದನ್ನು ನೋಡಿದೊಡನೆ ಯಾರು ಮುದ್ರಿಸಿರುವರು; ಏತಕ್ಕೆ ಮುದ್ರಿಸಿರುವರು ಎಂಬುದರ ಕಲ್ಪನೆಯೇ ಆಗುವಂತಿಲ್ಲ. ಎಲ್ಲಿ ಹುಡುಕಿದರೂ ಮುದ್ರಣಾಲಯದ ಹೆಸರು ಸಿಕ್ಕುವಂತಿಲ್ಲ; ಉದ್ದೇಶವಾದರೂ ತಿಳಿಯುವಂತಿಲ್ಲ. ಪ್ರಸ್ತಾವನೆಯಿಲ್ಲ; ಹಿಂದಿಲ್ಲ; ಮುಂದಿಲ್ಲ. ಚಿಕ್ಕ ಮಕ್ಕಳಿಗಾಗಿ ಇದನ್ನು ಮುದ್ರಿಸಿರುವರೆಂದು ತಿಳಿಯೋಣ. ಕಾಗೆ, ಗುಬ್ಬಿ, ಗಿಳಿ, ನಾಯಿ, ಇವೇ ಮೊದಲಾದ ದಿನಾಲು ಕಣ್ಣಿಗೆ ಬೀಳುವ ಪಶುಪಕ್ಷಿಗಳನ್ನು ಬಿಟ್ಟು, ವನ್ಯಪಶುಗಳ ಚಿತ್ರಗಳನ್ನು ಹೇರಳವಾಗಿ ಸೇರಿಸಿದ್ದರೆ ಚಿಕ್ಕಮಕ್ಕಳಿಗೆ ಇದು ಹೆಚ್ಚು ಪ್ರಯೋಜನಕಾರಿಯಾಗುತ್ತಿತ್ತು. 'ವರ್ಣನೆ'ಯ ನುಡಿಯ ಕಡೆಗೆ ನೋಡಿದರೆ, (ಇದೇನು ಸಾಹಿತ್ಯದ ಗ್ರಂಥವಲ್ಲ; ಆದರೂ) ಒಂದು ಸ್ವಲ್ಪ ಕೆಡಕೆನಿಸುತ್ತದೆ. " ಕೊಡುಗಳು-ಎತ್ತರ ಅಥವಾ ಡೊಂಕು " ಎಂಬಲ್ಲಿ " ಕೋಡುಗಳು-ನೆಟ್ಟಗೆ ಅಥವಾ ಡೊಂಕು " ಎಂದಿದ್ದರೆ ಚೆನ್ನಾಗುತ್ತಿತ್ತು. " ಎತ್ತರ "ಕ್ಕೆ " ಡೊಂಕು " ವಿರೋಧವಾಚಿಯಲ್ಲ 'ಸ' ಕಾರದ ಬದಲು 'ಶ' ಕಾರದ ಪ್ರಯೋಗವೇ ಬಹಳೆಡೆಯಲ್ಲಿ ಕಂಡು ಬರುತ್ತಿದೆ (ಕಲಶ) ಅಕ್ಷಮ್ಯವಾದ ವಾಕ್ಯದೋಷಗಳಾದರೂ ಇವೆ. ಉದಾ:- " ಸರ್ತಿಗೆ ಒಂದೇ ಮರಿಯು-ಈಯುವುದು " ಬರಹದಲ್ಲಿ ಒಂದೇ ತೆರನಾದ ಪದ್ಧತಿಯನ್ನನುಸರಿಸಿದ್ದರೆ ಹೆಚ್ಚು ಒಳಿತಾಗುತ್ತಿತ್ತು. ಪುಣೆಯ ಚಿತ್ರಶಾಲೆಯ ಮುದ್ರಣಾಲಯದವರು ಈ ಸಚಿತ್ರ ಪಶುಪಕ್ಷಿಗಳ ವರ್ಣನೆಯನ್ನು ಶ್ರಮಪಟ್ಟು ಕನ್ನಡದಲ್ಲಿ ಪ್ರಕಟಿಸಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಮಹಾರಾಷ್ಟ್ರದ ಉದ್ಯೋಗಶೀಲತೆಯು ಸ್ತುತ್ಯವಾದುದು; ಅವರ ವ್ಯವಸಾಯದ ಧೋರಣವು ಅನುಕರಣೀಯವಾದುದು. ಕನ್ನಡಿಗರಿಗೆ ಮಾಡಲು ಎಷ್ಟೋ ಕೆಲಸಗಳಿವೆ; ಆದರೂ ಅವರು ಆಲಸ್ಯವುಳ್ಳವರಾಗಿ ಮನೆಯಲ್ಲಿ ಹೊರಳಾಡುವರು; ತಮ್ಮನ್ನು ತಾವೇ ಅಪಹಾಸ್ಯಕ್ಕೆಗುರಿಮಾಡಿಕೊಳ್ಳುವರು. ಇರಲಿ 'ದಪ್ಪ' ವಾದ ಪ್ರತಿಯ ಬೆಲೆಯು ೧ ರೂ ತೆಳ್ಳಗಿನ ಪ್ರತಿಯ ಬೆಲೆ ೦-೧೨-೦.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to–
N. K. Kulkarni. Agent Bagalkot.

ಉತ್ತರ ಹಿಂದುಸ್ಥಾನದಲ್ಲಿಯ ಪುಣ್ಯಕ್ಷೇತ್ರಗಳ ಪರಿಚಯ.

(ಲೇಖಾಂಕ ೫)

ಹುಶಿಂಗಾಬಾದಿನಿಂದ ೧೨ ಮೈಲುಗಳ ಅಂತರದಲ್ಲಿ ಇಟಾರ್ಶಿ ಎಂಬ ದೊಡ್ಡ ಸ್ಟೇಶನ್ನಿದೆ. ಉತ್ತರ ಹಿಂದುಸ್ಥಾನ, ದಕ್ಷಿಣ ಹಿಂದುಸ್ಥಾನ, ಪೂರ್ವ ಹಿಂದುಸ್ಥಾನ, ಗಳಿಗೆಲ್ಲ ಇದು ಮಧ್ಯದಲ್ಲಿದ್ದದರಿಂದ ಇದು ಉಗಿಬಂಡಿಗಳ ಬಹುದೊಡ್ಡ ಕೂಟ (ಜಂಕಶನ್) ವಾಗಿದೆ. ಹುಶಿಂಗಾಬಾದಿನಿಂದ ಇಟಾರ್ಶಿಗೆ ಬಾಡಿಗೆಯ ಮೋಟಾರುಗಳೂ ಓಡಾಡುತ್ತವೆ. ನಾವು ಮರಳಿಬರುವಾಗ್ಗೆ ಮೊಟಾರಿನಿಂದ ಇಟಾರ್ಶಿಗೆ ಬಂದು ಅಲ್ಲಿಂದ ಪ್ರಯಾಗದ ಗಾಡಿಯನ್ನು ಹತ್ತಿ, ನಡುವೆ, ನರ್ಮದೆಯ "ಬೇಡಾಘಾಟ" (ಇದಕ್ಕೆ ಇಂಗ್ಲೀಷಿನಲ್ಲಿ "ಮಾರ್ಬಲ್ ರಾಕ್ಸ" ಎನ್ನುವರು)ನ್ನು ನೋಡಲು ಮೀರಗಂಜ ಸ್ಟೇಶನ್ನಿನಲ್ಲಿಳಿದೆವು. ಇಲ್ಲಿಂದ ಬೇಡಾಘಾಟವು ಮೂರುಮೈಲಿದೆ. ಘಾಟಿನವರೆಗೆ ಒಳ್ಳೇ ಮಾರ್ಗವಿದೆ. ಮೋಟಾರುಗಳು ಸಹ ಘಟ್ಟದವರೆಗೆ ಹೋಗುವವು. ಗಾಡಿಗಳು ಮೀರಗಂಜಿನಲ್ಲಿ ದೊರೆಯುವದಿಲ್ಲ. ಸಮೀಪದ ಹಳ್ಳಿಗಳಿಗೆ ಹೋಗಿ ಚಕ್ಕಡಿಗಳನ್ನು ತಂದರೆ ಅವರು ೩ ರೂ. ವರೆಗೆ ಬಾಡಿಗೆ ಬೇಡುವರು. ಸಶಕ್ತರು ಕಾಲಿನಿಂದ ನಡೆದು ಹೋಗಬಹುದು. ಬೇಡಾಘಾಟಿನಲ್ಲಿ ಒಂದು ಹಳ್ಳಿಯಿದೆ. ಧರ್ಮಶಾಲೆಗಳಿವೆ. ಪ್ರವಾಸಿಕರ ಬಂಗಲೆ (Travellers' Bunglow) ಇದೆ. ಪುರಾತನ ಪದ್ಧತಿಯ ಹಿಂದೂಜನರು ಇಳಿದುಕೊಳ್ಳಲು ಘಾಟಿನದಂಡೆಯಲ್ಲಿಯ ಧರ್ಮಶಾಲೆಯು ಹೆಚ್ಚು ಅನುಕೂಲವಿದೆ. ನರ್ಮದೆಯ ಕ್ಷೇತ್ರವಿಧಿಗಾಗಿ ಹುಶಿಂಗಾಬಾದಿಗೆ ಹೋಗದೆ, ಇಲ್ಲಿಯೂ ಅನೇಕರು ಒರುವರು. ಜಬ್ಬಲಪೂರದ ಹತ್ತರ ಗೌರೀಘಾಟ ಎಂಬಲ್ಲಿಯೂ ನರ್ಮದೆಯಿದ್ದು ಅಲ್ಲಿಗೆ ಸಹ ಅನೇಕರು ಹೋಗುವರು. ಆದರೆ ಹುಶಿಂಗಾಬಾದಿನಲ್ಲಿ ಕ್ಷೇತ್ರದ ಅನುಕೂಲತೆಗಳು ಹೆಚ್ಚು. ಆದ್ದರಿಂದ ಯಾತ್ರಿಕರು ಹೆಚ್ಚಾಗಿ ಅಲ್ಲಿಯೇ ಹೋಗುವರು. ಬೇಡಾಘಾಟಿನಲ್ಲಿ ಸಂಗಮರವರೀಕಲ್ಲುಗಳ ಗುಡ್ಡಗಳಿವೆ. ಈ ಗುಡ್ಡಗಳ ಒಂದು ಭಾಗದ ಮಧ್ಯದಲ್ಲಿ ನರ್ಮದೆಯು ಗುಡ್ಡದ ಹೊಟ್ಟೆಯನ್ನು ಸೀಳಿ, ಹರಿಯುತ್ತಿರುವಳು. ಗುಡ್ಡದ ಮೇಲ್ಭಾಗದಲ್ಲಿ ದಬದಭೆಯಿದೆ. ಅಲ್ಲಿಂದ ಬೇಡಾಘಾಟದ ಹಳ್ಳಿಯು ೩ ಮೈಲಿದೆ. ಈ ಮೂರು ಮೈಲುಗಳವರೆಗೂ ೧೦೦ ರಿಂದ ೩೦೦ ಫೂಟುಗಳ ವರೆಗೆ ನೀರು ಆಳವಾಗಿ ಬೇಸಿಗೆಯಲ್ಲಿ ಸಹ ಹರಿಯುತ್ತದೆ. ಈ ಸ್ಥಾನದಲ್ಲಿ ಪ್ರವಾಹದ ಕಸುವು ಮುರಿದುಹೋಗಿದೆ. ನೀರು ಶಾಂತವಾಗಿ ಸರೋವರದಂತೆ ನಿಂತಿರುತ್ತದೆ. ಮತ್ತು ಅತಿಶಯ ಸ್ವಚ್ಛವಾಗಿರುತ್ತದೆ. ಜಬಲಪೂರ ಜಿಲ್ಹಾ ಬೋರ್ಡಿನವರು ವಿಹಾರ ನೌಕೆಗಳನ್ನು (Pleasure Boats) ಇಟ್ಟಿರುವರು. ದೊಡ್ಡ ನೌಕೆಗಳಿಗೆ ೩ ರೂ. ವರೆಗೆ ಬಾಡಿಗೆ ಕೊಟ್ಟು, ಬೇಕಾದವರು ನದಿಯಲ್ಲಿ ಮೂರೂ ಮೈಲುಗಳವರೆಗೆ ಸಂಚರಿಸಿ ಬರಬಹುದು. ದೊಡ್ಡ ನೌಕೆಯಲ್ಲಿ ೧೫ ಜನರು ಸಹ ಕೂಡ್ರಬಹುದು. ಈ ನೌಕೆಯವರು ಅಲ್ಲಿ ನೋಡತಕ್ಕದ್ದನ್ನೆಲ್ಲ ಹಿಂದೀ ಭಾಷೆಯಲ್ಲಿ ಸ್ಪಷ್ಟವಾಗಿ ಹೇಳುವರು. ಸಂಗಮರವರೀಬಂಡೆಗಳಲ್ಲಿ ಅಲ್ಲಲ್ಲಿ ದೇವರ ಕ್ರೀಡಾ ಸ್ಥಳಗಳನ್ನು ತೋರಿಸುವರು. ನದಿಯ ಎರಡೂ ದಡಿಗಳಲ್ಲಿ ೩೦೦ ಫೂಟುಗಳವರೆಗೆ ಸಂಗಮರವರೀ ಕಲ್ಲುಗಳು ಎತ್ತರವಾಗಿ ಮುಖವನ್ನೆತ್ತಿಕೊಂಡು ನಿಂತಿದ್ದು, ಆ ಕಲ್ಲುಗಳ ಮೇಲೆ ಸೂರ್ಯನ ಪ್ರಕಾಶವು ಬಿದ್ದು, ನೋಡುವವರಿಗೆ ಅತ್ಯಂತ ಆಹ್ಲಾದವನ್ನುಂಟು ಮಾಡುವವು. ಬಿಳಿ, ಕರಿ, ನೀಲಿ, ಬಣ್ಣಗಳ ಸಂಗಮರವರೀ ಕಲ್ಲುಗಳಿವೆ. ಇದರಿಂದ ಅಲ್ಲಲ್ಲಿಗೆ ಬೇರೆ ಬೇರೆ ಸೌಂದರ್ಯವು ಗೋಚರವಾಗುವದು. ಕಲ್ಲು ಬಂಡೆಗಳು ಹೆಜ್ಜೆಜ್ಜೆಗೆ ಬೇರೆ ಬೇರೆ ಆಕಾರಗಳನ್ನು ಹೊಂದುತ್ತ, ಆಶ್ಚರ್ಯವನ್ನುಂಟುಮಾಡುತ್ತವೆ. ಆ ಸರೋವರದ ಸೃಷ್ಟಿ ಸೌಂದರ್ಯವೂ ನರ್ಮದೆಯ ಬಹು ರಮಣೀಯವೂ, ವಿಶಾಲವೂ, ನಿರ್ಮಲವೂ ಆದ ನೀರೂ ವಿಲಾಸಿಗಳಿಗೆ ವಿಪುಲವಾದ ವಿಲಾಸವನ್ನೂ, ಭಾವಿಕರಿಗೆ ಒಗೆ ಬಗೆಯ ಭಾಗ್ಯಯುಕ್ತವಾದ ಭಾವನೆಗಳನ್ನೂ, ಧರ್ಮಪ್ರಿಯರಿಗೆ ಪ್ರೇರಣೆಯಾಗುವಂತಹ ಶುದ್ಧವಾದಶ್ರದ್ಧೆಯನ್ನೂ, ಸೃಷ್ಟಿ ಸೌಂದರ್ಯಪ್ರಿಯರಿಗೆ ಸಂಪೂರ್ಣವಾದ ಸಂತೋಷವನ್ನೂ ಶಾಂತಿಪ್ರಿಯರಿಗಂತೂ ಸುಲಭವಾಗಿ ಶಾಂತಿಸಾಮ್ರಾಜ್ಯವನ್ನೂ ಕಲ್ಪಿಸಿ ಕೊಡುತ್ತಲಿವೆ. ಇಂತಹ ರಮಣೀಯವಾದ ಸ್ಥಾನಕ್ಕೆ ಬೆಳದಿಂಗಳಿನ ಸಮಯ ಸಾಧಿಸಿ ಹೋಗಿ ನರ್ಮದೆಯ ಶಾಂತವಾದ ಸರೋವರದಲ್ಲಿ ಚಂದ್ರನ ಆಲ್ಹಾದಕರವಾದ ಆಶ್ರಯದಿಂದ ನೌಕಾ ವಿಹಾರವನ್ನು ಮಾಡಿದ್ದಾದರೆ, ಶಾಂತತಾದೇವಿಯು, ತನ್ನ ಅಕ್ಕ, ಸೃಷ್ಟಿಸುಂದರಿಯೊಡನೆ, ಪ್ರತ್ಯಕ್ಷವಾದ ದರ್ಶನಕೊಡುವದರಲ್ಲಿ ಸಂದೇಹವಿಲ್ಲ.

ಮೀರಗಂಜಿನಿಂದ ಎರಡನೇ ಸ್ಟೇಶನ್ನೆಂದರೆ ಜಬ್ಬಲಪೂರು. ಇದು ದೊಡ್ಡ ಪಟ್ಟಣ. ಬಸ್ಸುಗಳಿ ಬೇಡಾಘಾಟಿಗೆ ಇಲ್ಲಿಂದ ಮೋಟಾರ ಅಥವಾ ಟಾಂಗಾಗಳು ಬಾಡಿಗೆಯಿಂದ ದೊರೆಯುತ್ತವೆ. ಗೌರೀಘಾಟಿಗೆ ಹೋಗತಕ್ಕವರು ಇಲ್ಲಿ ಸಣ್ಣ ಉಗಿಬಂಡಿಯಲ್ಲಿ ಕುಳಿತು ಹೋಗುವರು. ಚಿತ್ರಕೂಟಪರ್ವತಕ್ಕೆ ಹೋಗುವವರು ಮಾಣಿಕಪೂರ 'ಜಂಕಶನ್ನಿನ' ಲ್ಲಿಳಿಯಬೇಕಾಗುವದು.

ನಾವು ಮೀರಗಂಜಿನಿಂದ ಪ್ರಯಾಗ ಕ್ಷೇತ್ರಕ್ಕೆ ಹೋದೆವು. ಇಟಾರ್ಶಿಯಿಂದ ಪ್ರಯಾಗ ೩೮೦ ಮೈಲಿದೆ. ಈಗ್ಗೆ ಪ್ರಯಾಗಕ್ಕೆ ಅಲಹಾಬಾದೆಂಬ ಹೆಸರು ಬಂದಿದೆಯಾದರೂ, ಅಲಹಾಬಾದವು ಹೊಸನಗರವೆಂಬುದೂ, ಪ್ರಯಾಗವು ಪುರಾತನ ಹಳ್ಳಿಯಂತಹದೆಂಬದೂ, ಕೂಡಲೆ ಗೊತ್ತಾಗುವದು. ಅಲಹಾಬಾದಿನಿಂದ ಪ್ರಯಾಗವು ೩ ಮೈಲಿದೆ. ಅಲಹಾಬಾದ ಸ್ಟೇಶನ್ನಿನಿಂದ ಪ್ರಯಾಗಕ್ಕೆ ಹೋಗಲು ಕುದುರೆಯ ರಥದಂಥ (ವಿಕ್ಟೋರಿಯಾ) ರಥವೊಂದಕ್ಕೆ ವರೂಪು ರೂಪಾಯಿ ತೆಗೆದುಕೊಂಡರು. ನಾವು ಅಲ್ಲಿ ತಲ್ಪಿದ್ದು ರಾತ್ರಿಸಮಯ. ಹಗಲಿನಲ್ಲಿ ೨ ರೂ. ತೆಗೆದುಕೊಳ್ಳುವರಂತೆ. ಇಲ್ಲಿ ಕುದುರೆಯ ಎಕ್ಕಾ ಎಂಬ ವಾಹನಗಳಿವೆ. ಇವು ನಾವು ಪುರಾಣದಲ್ಲಿ ಓದುವ ರಥದಂತಿವೆ. ಅರ್ಜುನನಿಗೆ ಶ್ರೀ ಕೃಷ್ಣನು ಭಗವದ್ಗೀತೆಯ ಉಪದೇಶಮಾಡುವಾಗ್ಗೆ ತೆಗೆದಂತಹ ರಥದ ಚಿತ್ರಗಳನ್ನು ಎಲ್ಲರೂ ನೋಡಿರಲಿಕ್ಕೆ ಸಾಕು. ಇಂಥ ರಥದ ಆಕಾರವೇ ಈ ಕುದುರೆಯ ಎಕ್ಕಾಗಳಿಗಿದೆ. ಈ ಎಕ್ಕಾವನ್ನು ನೋಡಿದಕೂಡಲೆ ನಮ್ಮ ಆರ್ಯರ ಪ್ರಾಚೀನ ಪದ್ಧತಿಯ ವಾಹನವು ಉತ್ತರದಿಂದ ಸ್ಥಾನದಲ್ಲಿ ಈವರೆಗೂ ಇದೆಂಬದು ಹೊಳೆದು ಮನಸ್ಸಿಗೆ ಒಂದು ಬಗೆಯ ಸಮಾಧಾನವಾಯಿತು. ಈಗಿನ ಟಾಂಗಾಗಳೂ ಝಟಕಾಗಳೂ ಘಮಣಿಗಳೂ ಕೇವಲ ಪರದೇಶದ ವಾಹನಗಳೋ ಅಥವಾ ಪ್ರಾಚೀನ ಕಾಲದಲ್ಲಿಯೂ ನಮ್ಮಲ್ಲಿಇದ್ದವೋ ತಿಳಿಯದು. ತೀರ ದಕ್ಷಿಣ ಹಿಂದುಸ್ಥಾನದಲ್ಲಿಯೂ ಉತ್ತರ ಹಿಂದುಸ್ಥಾನದಲ್ಲಿಯೂ ಟಾಂಗಾಗಳ ಮಾಟವು ಬೇರಿದೆ. ಆದರೆ ಕರ್ನಾಟಕ ಮಹಾರಾಷ್ಟ್ರಗಳಲ್ಲಿಯ ಮಾಟವು ಬೇರೆ. ಇರಲಿ.

ಅಲಹಾಬಾದವು ಸಂಯುಕ್ತ ಪ್ರಾಂತದ ರಾಜಧಾನಿ ರಾಜಧಾನಿಗೆ ತಕ್ಕಂತೆ ಪಟ್ಟಣವು ವಿಶಾಲವಾಗಿದೆ. ವ್ಯಾಪಾರವು ಜೋರಿನದಾಗಿದೆ. ಕಟ್ಟಡಗಳೂ ಭವ್ಯವಾಗಿವೆ. ಬೀದಿಗಳು ವಿಶಾಲವಾಗಿ

ವೆ, ಲಷ್ಕರಿದೆ, ಪಟ್ಟಣದ ಮುಖ್ಯವ್ಯಾಪಾರದ ಭಾಗವೆಂದರೆ "ಚೌಕಿ" ಈ "ಚೌಕಿ" ಶಬ್ದವು ಅನೇಕ ಸ್ಥಳಗಳಲ್ಲಿ ರೂಢಿಯಲ್ಲಿದೆ. ಪುಣೆಯಲ್ಲಿ "ಬುಧವಾರ ಚೌಕು" ಇದೆ. ಕಾಶಿಯಲ್ಲಿ "ಚೌಕಿ" "ಚೌಕಾಂಬಾ"ಗಳಿವೆ. "ಚೌಕು" ಶಬ್ದವು ಮೂಲತಃ ಕನ್ನಡದ್ದು ಇದು ಕೇವಲ ಅಚ್ಚಗನ್ನಡ ಶಬ್ದವು. ಮುಂಬೈಯಲ್ಲಿ ಸಹ "ಚೌಕ ಪಟ್ಟಿ" (ಚೌಪಾಟಿ) ಯಿದೆ. ಮುಂಬೈ ಪ್ರಾಂತಗಳಲ್ಲಿ ಮೊದಲು ಕನ್ನಡವೇ ಪ್ರಚಲಿತವಾಗಿದ್ದರಿಂದಲೂ, ಮರಾಠಿ ಭಾಷೆಯಲ್ಲಿ ಕನ್ನಡ ಶಬ್ದಗಳು ಹೇರಳವಾಗಿ ತುಂಬಿದ್ದರಿಂದಲೂ, ಮುಂಬೈ ಪ್ರಾಂತಗಳಲ್ಲಿ ಚೌಕುಶಬ್ದವು ರೂಢವಾಗಿದ್ದುದು ಆಶ್ಚರ್ಯವಲ್ಲ. ಆದರೆ, ಉತ್ತರ ಹಿಂದುಸ್ಥಾನದ ಪ್ರಯಾಗ ಕಾಶಿಗಳಲ್ಲಿಯೂ ನಾವು ಮುಂದೆ ತೋರಿಸುವಂತೆ ತೀರ ಉತ್ತರದ ದೇಶವಾದ ಹಿಮಾಲಯದಲ್ಲಿಯೂ ಕನ್ನಡ ಶಬ್ದಗಳು ಪ್ರಚಾರದಲ್ಲಿದ್ದುದು ಆಶ್ಚರ್ಯಕರವಾಗಿದೆ. ಸಂಶೋಧಕರ ಲಕ್ಷ್ಯವು ಇತ್ತಕಡೆಗಿರಬೇಕು.

ಅಲಹಾಬಾದಿನಲ್ಲಿ ನಾಲ್ಕು ರೇಲವೇ ಕಂಪನಿಗಳ ಬೇರೆ ಬೇರೆ ಸ್ಟೇಶನ್ನುಗಳಿವೆ. ಜಿ. ಆಯ್. ಪಿ; ಈಸ್ಟ ಇಂಡಿಯನ್; ಬೆಂಗಾಲ ಅಂಡ ನಾರ್ಥ ವೆಸ್ಟರ್ನ; ಮತ್ತು ಅವುಧ ಎಂಡ ರೋಹಿಲಖಂಡ ಈ ಎಲ್ಲ ರೇಲವೆಗಳ ಸ್ಟೇಶನ್ನುಗಳು ಪಟ್ಟಣದ ಬೇರೆ ಬೇರೆ ಸ್ಥಾನಗಳಲ್ಲಿವೆ. ಪ್ರಯಾಗದಿಂದ ಕಾಶಿಗೆ ಹೋಗಲಿಕ್ಕೆ ಬಿ. ಎನ್. ಡಬ್ಲ್ಯು. ಮತ್ತು ಈ. ಆಯ್. ಆರ್ ಈ ಎರಡೂ ಕಂಪನಿಗಳ ಬೇರೆ ಬೇರೆ ಮಾರ್ಗಗಳಿವೆ. ಬಿ. ಎನ್. ಡಬ್ಲ್ಯು ಎಂದರೆ ಸಣ್ಣ ಹಳಿಯುಳ್ಳದ್ದು. ಇಲ್ಲಿಯ ವ್ಯವಸ್ಥೆಗೂ, ನಮ್ಮ ಬಹು ಪ್ರಸಿದ್ಧವಾದ ಎಮ್. ಎಸ್. ಎಮ್ ಕಂಪನಿಯ ಗದಗ-ಹುಟಗಿ ಮಾರ್ಗದ ವ್ಯವಸ್ಥೆಗೂ ಏನೂ ಅಂತರವಿಲ್ಲ. ಅಂತೂ ಜಗತ್ತಿನಲ್ಲಿ ಗದಗ-ಹುಟಗೀ ಮಾರ್ಗಕ್ಕೆ ತನ್ನ ತಮ್ಮನೊಬ್ಬನಾದರೂ ಇರುವನೆಂಬುದನ್ನು ಕೇಳಿ ಸಂತೋಷವಾಗಬಹುದು

ಅಲಹಾಬಾದಿನಲ್ಲಿ ಖುಸ್ರೂ ಬಾಗವೆನ್ನುವದೊಂದು ಖುಸ್ರೂ ಬಾದಶಹನ ಕಬರಸ್ಥಾನವಿದೆ. ಇಲ್ಲಿ ಮೂರು ಗೋರಿಗಳಿದ್ದು, ಒಂದು ನಾಸ್ತಿ ಅದರಲ್ಲಿ ಪ್ರೇಕ್ಷಣೀಯವಿದೆ. ಇಲ್ಲಿ ಸರಕಾರದವರು ಹೂದೋಟವನ್ನು ನಿರ್ಮಿಸಿರುವರು. ಟೆನ್ನಿಸ್ ಮೊದಲಾದ ಆಟಗಳೂ ಇಲ್ಲಿ ನಡೆಯುವವು ಸಾಯಂಕಾಲದಲ್ಲಿ ತಿರುಗಾಡಲು ಜನರೂ ಇತ್ತಕಡೆಗೆ ಬರುವದುಂಟು. ಟೆನ್ನಿಸ್ ಆಡುವವರು ಇಲ್ಲಿ ಒಂದುತರದ ಹುಲ್ಲನ್ನು 'ಕೊರ್ಟ'ನ ತುಂಬೆಲ್ಲ ಹಚ್ಚಿದ್ದು ಆ ಹುಲ್ಲಿನ ಮೇಲೆಯೇ ಆಟಆಡುವರು. ಒಟ್ಟು ನಾಲ್ಕು ಕೋರ್ಟುಗಳಿದ್ದು ಎರಡು ಯಾವಾಗಲೂ ಆಟದ ಉಪಯೋಗಕ್ಕೆ ಎರಡು ಸರತಿಯಿಂದ ಹುಲ್ಲನ್ನು ಬೆಳಿಸುವದಕ್ಕೆ ಕಾಯಿಡಲ್ಪಡುವವು. ಸುಣ್ಣದ ಗೆರೆಗಳನ್ನು ಹುಲ್ಲಿನ ಮೇಲೆಯೇ ಹಾಕುವರು. ಈ ಮಾದರಿಯ 'ಕೋರ್ಟು'ಗಳಿಗೆ ವೆಚ್ಚ ಕಡಿಮೆಯಿರುವದೆಂದೂ ಆಟಕ್ಕೆ ಸೊಗಸಾಗಿರುವದೆಂದೂ ಅಲ್ಲಿಯ ಕಾರ್ಯದರ್ಶಿಗಳು ಹೇಳಿದರು.

ಈ ಖುಸ್ರೂಬಾಗದ ಹಿಮ್ಮಗ್ಗಲಿನಲ್ಲಿ ಈಶ್ವರ ದೇವಾಲಯವೊಂದಿದೆ. ಕೆತ್ತುಗೆಯ ಕೆಲಸವು ಬಹು ಅಂದವಾಗಿರುವದು.

ಹಿಂದೂಜನರಲ್ಲಿ ಮುಸಲ್ಮಾನರ ಅನುಕರಣವೇ ಹೆಚ್ಚಾಗಿದೆ. ಹಿಂದೂ ಸ್ತ್ರೀಯರು ಸಹ ಮುಸಲ್ಮಾನರಂತೆ ಇಜಾರವನ್ನು ತೊಡುವರು. ಘೋಷಾಪದ್ಧತಿಯಂತೂ ಸಾರ್ವತ್ರಿಕವಾಗಿ ಹೋಗಿದೆ. ಆಭರಣಗಳು ಮುಸಲ್ಮಾನ ಧರ್ತಿಯನ್ನು ಹೋಲುವವು. ವಿವಾಹದ ಪದ್ಧತಿಯಲ್ಲಿಸಹ ಮುಸಲ್ಮಾನರ ಆಚರಣೆಗಳು ರೂಢವಾಗಿರುವವೆನ್ನುವದು ತಿಳಿಯಿತು. ಗಂಡಿಗಳಿಗಂತೂ ಮತಿಯರ ಗೋಜಾಬಗೆ ಉತ್ತಿಲ್ಲ

ಮಹಾತ್ಮರೂ ಲೌಕಿಕರೂ

ಕಳೆದವಾರ ಮಹಾತ್ಮಾಗಾಂಧಿಯವರಿಗೆ ದೇಶದ ಮುಖಂಡರಲ್ಲಿ ಕೆಲವರು ಒಂದು ವಿಜ್ಞಾಪನಾ ಪತ್ರವನ್ನು ವೃತ್ತಪತ್ರಗಳ ದ್ವಾರ ಬರೆದುಕೊಂಡಿದ್ದರು; ಅದು ಇಂತು- ದೇಶದಲ್ಲಿ ಜಾತಿಜಾತಿಗಳೊಳಗಿನ ಮತ್ಸರವು ವಿಕೋಪಕ್ಕೆ ಹೋಗಿದೆ; ರಾಷ್ಟ್ರಕ್ಕೆ ಕೇಡು ನಿಶ್ಚಯ. ಬೇರೊಂದು ಉಪಾಯಗಾಣದವರಾಗಿ ತಮ್ಮ ಮಧ್ಯಸ್ಥಿಕೆಯನ್ನೇ ಅಸಂಖ್ಯ ಜನರು ಬಯಸುತ್ತಿರುವರು. ಆದ್ದರಿಂದ ಈ ವಿಜ್ಞಪ್ತಿಯನ್ನು ಮಾಡಿರುವೆವು. ಈ ಬಿನ್ನಹವನ್ನೂ ಮುಖಂಡರೊಳಗಿನ ಅರಾಜಕತೆಯನ್ನೂ ಅನುಲಕ್ಷಿಸಿ, ತಾವು ತಮ್ಮ ಪ್ರೇಕ್ಷಕವೃತ್ತಿಯನ್ನು ಬಿಟ್ಟು ತಮ್ಮ ಕೋಮಲಾಂತಃಕರಣಕ್ಕೆ ಒಪ್ಪುವಂತೆ ದೇಶಕ್ಕೊದಗಬಹುದಾದ ಆಪನ್ನಿವಾರಣೆಗೆ ಹೆಣಗಬೇಕು. ಮತ್ತು ತಮಗೆ ಸಹಜವಾದ ಲೋಕನಾಯಕತ್ವವನ್ನು ಸ್ವೀಕರಿಸಿ ತಮ್ಮ ಜನ್ಮಭೂಮಿಯನ್ನು ಉದ್ಧರಿಸಬೇಕು.—

ಈ ಬಿನ್ನಪಕ್ಕೆ ಮಹಾತ್ಮರು ತಮಗೆ ಶೋಭಿಸುವಂತಹ ಒಂದು ಉತ್ತರ ಬರೆದು ಕಳಿಸಿರುವರು. ಲೌಕಿಕರು ಇಂಥ ಲೋಕೋತ್ತರರ ಬೆನ್ನು ಬೀಳುವದೇ ತಪ್ಪು; ಇಂಥವರ ವಿಚಾರಸರಣಿಯೇ ಬೇರೆ, ವಿಶ್ವಾಸವೇ ಬೇರೆ, ಪದ್ಧತಿ, ಸಾಧನ ಸಾಮಗ್ರಿಗಳೇ ಬೇರೆ. ಕುಳಿತು ಮಾಲಗಲಾರದ ಪ್ರಪಂಚಕರಿಗೆ ಇದೆಲ್ಲ ಅವರ ವ್ಯಾಪಾರವು ವಿಪರೀತವಾಗಿಯೂ ವಿಚಿತ್ರವಾಗಿಯೂ ತೋರುವದು ವಿಸಜ್ಞರಿಯು! ಮಹಾತ್ಮರ ಉತ್ತರದಲ್ಲಿ ಈ ಮಾತಿನ ಅನುಭವವು ಚನ್ನಾಗಿ ಆಗುವಂತಿದೆ. ಜಾತಿ ಮತ್ಸರದ ಬೇಗೆಯಿಂದ ಕುದಿಯುತ್ತಿರುವ ದೇಶದ ದುಃಸ್ಥಿತಿಯನ್ನು ನೋಡಿದರೆ ಎದೆಯೊಡೆದು ನೀರಾಗುವಂತಿದೆ. ಆಸೂಯೆಯಿಂದ,ಜಗಳಗಳ ಬಗ್ಗೆಯಿಂದ ಸ್ವರಾಜ್ಯ,ಸ್ವಾತಂತ್ರ್ಯಗಳ ಮುಂಬೆಳಗು ನಿಸ್ತೇಜಗೊಳ್ಳುತ್ತಿದೆ ಇದೆಲ್ಲವನ್ನು ನೋಡಿ ನೋಡಿ ಖತಿಗೊಂಡ ರಾಷ್ಟ್ರಹಿತೈಷಿಗಳು 'ಮುಂದೇನು ಗತಿ' ಯೆಂದು ಚಿಂತಿಸಿ ಎದೆಕಳಕೊಳ್ಳುತ್ತಿರುವದನ್ನು ಎಲ್ಲರೂ ಕಂಡಿರುವರಷ್ಟೆ! ಆದರೆ ಇಲ್ಲಿ ನೋಡಿ! ಈ ಸ್ಥಿತಪ್ರಜ್ಞರಾದ ಮಹಾತ್ಮರ ಬಗೆಯನ್ನು; - ಈ ಜಗಳಗಳು ಸ್ವರಾಜ್ಯಕ್ಕೆ ಕಾರಣಗಳಲ್ಲದೆ, ಆಯಾ ಜಾತಿಗಳು ಸ್ವರಾಜ್ಯಕ್ಕೆ ಸಿದ್ಧರಾಗುತ್ತಿರುವ ಸುಚಿಹ್ನಗಳೆಂದೇ ತಾವು ಬಗೆದಿರುವರಂತೆ! 'ಅತ ಏವ ನತ್ವಂ ಶೋಚಿತುಮರ್ಹಸಿ' ಎಂಬ ಕೂಗನ್ನು ಎಬ್ಬಿಸಿರುವರು. (ಸಾಬರಮತಿ ಯೋಗೀಶ್ವರರ ಈ ಕೂಗು ಜಾತಿಮತ್ಸರದ ಅತ್ಯಾಚಾರಗಳಿಂದ ತ್ರಸ್ತರಾದ ಜನರಿಗೆ ಅರ್ಥವಾಗದಾಗಿದೆ.) ಈ ಜಗಳಗಳು ಅಡಗುವವರೆಗೆ ಸ್ವರಾಜ್ಯಕ್ಕಾಗಿ ತಾವು ಏನೂ ಮಾಡಲಿಕ್ಕೆ ಬರುವಂತಿಲ್ಲವೆಂದೂ, ಕೌನ್ಸಿಲಗಳಲ್ಲಿಯ ಕಾರ್ಯದಬಗ್ಗೆ ತಮಗೆ ನಂಬಿಗೆ ಇಲ್ಲವಾದ್ದರಿಂದ, ಚುನಾವಣೆಯ ತಿಕ್ಕಾಟದಲ್ಲಿ ತಾವು ಹೇಳಲಾರರೆಂದೂ ತಿಳಿಸಿರುವರು. ನೂಲುವ ರಾಟಿಯೊಂದರಿಂದಲೇ ಹಿಂದವಾಸಿಗಳ ಗೋಳನ್ನು ಬಹುಮಟ್ಟಿಗೆ ನೀಗಿಸುವುದಕ್ಕೆ ಬರುವಂತಿರುವುದರಿಂದ ಆ ಕಾರ್ಯದಲ್ಲಿಯೇ ತಾವು ಹಗಲಿರುಳು ತತ್ಪರರಾಗಿದ್ದರಂತೆ. ಗಳಿಸಬೇಕಾದದ್ದು ಸ್ವರಾಜ್ಯ! ಸಾಧನ ಸಾಮಗ್ರಿಯೆಂದರೆ ಒಂದು ನೂಲುವ ರಾಟಿ!! ಏನನ್ನ ಬೇಕು? "ಕ್ರಿಯಾಸಿದ್ಧಿಃಸತ್ವೇ ಭವತಿ ಮಹತಾಂ ನೋಪಕರಣೇ" ಎಂದು ಅಂದುಕೊಂಡು, ಅವರ ಆಶೀರ್ವಾದವನ್ನು ಪಡೆದು ಮುಸ್ಲೀಮ ನಮಗೆ ತಿಳಿದದ್ದನ್ನು -ಮಹಾಸಭೆಯು ನಿರ್ಣಯಿಸಿದ್ದನ್ನು ಕೊನೆಗಾಣಿಸಲು ಸರ್ವತೋಮುಖದಿಂದ ಹವಣಿಸಬೇಕು.

ನೋಟೀಸು.

ದಿ ಬಾಗಲಕೋಟ ಕೋ- ಅರ್ಬನ್ ಬ್ಯಾಂಕ ತಾ॥ ಬಾಗಲಕೋಟದ ಯಾವತ್ತು ಮೆಂಬರ ಜನರಿಗೆ :—

ತಾ|| ೩-೧೦ ೨೬ ರವಿವಾರ ದಿವಸ ಸಂಜೆಯ ೫॥ ಘಂಟೆಗೆ ಬ್ಯಾಂಕದ ಆಫೀಸಿನಲ್ಲಿ ೧೯೨೫-೨೬ ದಿಂದ ವಾರ್ಷಿಕ ಸಭೆಯನ್ನು ಕರೆಯುವದು ಗೊತ್ತಾಗಿರುತ್ತದೆ. ಸದರ ಸಭೆಯಲ್ಲಿ ಈ ವರ್ಷದ ಚೇರಮನ್ ಮತ್ತು ಮ್ಯಾನೇಜಿಂಗ ಕಮೀಟಿಯ ಮೆಂಬರರನ್ನು ಆರಿಸುವದೂ ಡೆವ್ಹಿಡೆಂಡ ಎಷ್ಟು ಕೊಡಬೇಕೆಂಬುವದೂ ಇವೆ ಮುಂತಾದವುಗಳ ಬಗೆ ಗೊತ್ತುಮಾಡತಕ್ಕದ್ದಿರುತ್ತದೆ. ಆದ್ದರಿಂದ ಯಾವತ್ತು ಮೆಂಬರ ಜನರು ಸದರ ಮೀಟಿಂಗಕ್ಕೆ ತಪ್ಪದೇ ಹಜರ ಇರಬೇಕೆಂದು ವಿನಂತಿ ಅದೆ. ತಿಳಿಯುವದು. ತಾ|| ೧೧-೯-೨೬ ಇಸ್ವಿ

D. R. Huddar. S. D. Jathar.
Secretary Chairman Co-op. Urban Bank

ವರ್ತಮಾನ ಸಾರ

ಇಹವೃತ್ತ.

ಮಳೆಯು ಎಲ್ಲ ಕಡೆಗೂ ಚನ್ನಾಗಿ ಆಗಿದೆ. ಬಿತ್ತಿಗಿಯ ಕೆಲಸವು ಜೋರಿನಿಂದ ನಡೆದಿರುವುದು. ಮುಂಗಾರಿಗೆ ಜೀವಬಂದಂತಾಯಿತು. ' ಹೇ ದೇವಾ! ಮಾದೇವಾ! ಈಗಾದರೂ ಕಣ್ದೆರೆದಿಯಾ ' ಎಂಬದಾಗಿ ಬರಗಾಲದ ಭವಣೆಗಳಿಂದ ಬೇಸತ್ತ ಒಕ್ಕಲಿಗರು ದೇವರ ಧನ್ಯವಾದವನ್ನು ಮಾಡುತ್ತಿರುವರು

ರವಿವಾರ ದಿನ ಮುನಸೀಪಾಲ್ಟಿಯ ಸಭಾಮಂದಿರದಲ್ಲಿ ಶ್ರೀಮಂತ ಶಂಕರಪ್ಪ ಅಣ್ಣಾ ಸಕ್ರಿಯವರ ಅಧ್ಯಕ್ಷತೆಯಲ್ಲಿ ಬಾಗಲಕೋಟೆಯ ನಾಗರಿಕರ ಸಾರ್ವಜನಿಕ ಸಭೆಯಾಗಿ, ಕರ್ನಾಟಕ ಏಕೀಕರಣ ವಿಶ್ವವಿದ್ಯಾಲಯಗಳ ಬಗ್ಗೆ ನಿರ್ಣಯಗಳಾದವು.

ಇಲ್ಲಿಯ ಮುನಸೀಪಾಲ್ಟಿಯವರೂ ಏಕೀಕರಣ, ವಿಶ್ವವಿದ್ಯಾಲಯಗಳ ಬಗ್ಗೆ ಠರಾವುಗಳನ್ನು ಗೊತ್ತುಮಾಡಿದ್ದಾರೆ ತಾಲೂಕ ಲೋಕಲ್ ಬೋರ್ಡಿನವರು ಕಣ್ದೆರೆಯುವರೋ?

ವಿಜಾಪೂರ ಜಿಲ್ಹಾ ಶಿಕ್ಷಕರ ಪರಿಷತ್ತಿನ ವಿಶೇಷ ಅಧಿವೇಶನವು ರವಿವಾರ ೧೯ನೇ ತಾರೀಖಿನಲ್ಲಿ ಈ ಊರಲ್ಲಿ ನೆರೆಯುವದು

ಮುಂಬೈ ಕರ್ನಾಟಕ

ರೆಡ್ಡೀ ಸಮಾಜದ ಪತಿಯಿಂದ ರಾ. ರಾ ದೇವನಗೌಡಾ ಲಿಂಗನಗೌಡಾ ಪಾಟೀಲ ಬಿ. ಎ ಎಲ್. ಎಲ್. ಬಿ. ಹಾಯಕೋರ್ಟ ವಕೀಲ ಧಾರವಾಡ ಇವರು ನಾಳೆ ಬರುವ ಮುಂಬೈ ಕಾಯಿದೇ ಮಂಡಳಕ್ಕೆ ಉಮೇದವಾರರಾಗಿ ನಿಲ್ಲುವರೆಂದೂ ಎಲ್ಲ ರಡ್ಡೀ ಸಮಾಜದವರು ಸದರಿಯವರು ಚುನಾಯಿಸಿ ಬರುವಂತೆ ಯತ್ನ ಮಾಡಬೇಕೆ ನ್ದು ಧಾರವಾಡದಲ್ಲಿ ನಡೆದ ರಡ್ಡೀ ಸಭೆಯಲ್ಲಿ ಠರಾವು ಪಾಸಾಗಿರುವದು ಕಾವೇರಿಯ ಶ್ರೀ ಹೊಸಮನಿಯವರೂ ನಿಲ್ಲುವರು ಅಂತೂ ಧಾರವಾಡ ಪ್ರಾಂತಗಳ ಮಂದಿ ಬ್ರಾಹ್ಮಣೇತರರಾದರು. ತಿಕ್ಕಾಟವೂ ಇದರಿಂದ ಹೆಚ್ಚಾಗುವದು

ದೇವಾಂಗ ಸಮಾಜದ ಪ್ರಚಾರಕರಾದ ರಾ. ರಾ ಫಕ್ಕೀರಪ್ಪಾ ಬರದವಾಡದ ಇವರು ಶ್ರೀ ಬನಶಂಕರಿಯ ದರ್ಶನವನ್ನು ತಗೆದುಕೊಳ್ಳುವ ಅಪೇಕ್ಷೆಯಿಂದ ದೇವಾಂಗ ಮಂದಿರದ ವ್ಯವಸ್ಥಾಪಕರಾದ ಶ್ರೀ ಸೂಲಬನಗೌಡರ ಸಂಗಡ ದೇವಸ್ಥಾನಕ್ಕೆ ಹೋದರು. ದೇವರ ದರುಶನಕ್ಕೆಂದು ಸಂಬಿಭೂರ್ತರಾದ ಫಕೀರಪ್ಪನವರನ್ನು ಪೂಜಾರಿಗಳು ಗುಡಿಯೊಳಗೆ ಬಿಡಲಿಲ್ಲವಂತೆ; ದೇವಾಂಗ ಸಮಾಜದವರನ್ನು ಒಳಗೆ ಬಿಡುವ ರೂಢಿಯಿದ್ದ ಪಕ್ಷದಲ್ಲಿ ಪೂಜಾರಿಗಳು ಹೀಗೆ ನಡೆದದ್ದು ಬಹಳ ಅನ್ಯಾಯವು.

ಬೆಳಗಾವಿಯ ಶ್ರೀ ಬೆಳವಿಯವರು ದಿಲ್ಲಿಯ ವರಿಷ್ಠ ಕಾಯದೇ ಮಂಡಳಕ್ಕೆ ನಿಲ್ಲುವರಾಗಿ ಪ್ರಕಟನೆಗಳನ್ನು ತೆಗೆದಿದ್ದಾರೆ. ಇವರು ಕಾಯದೇ ಮಂಡಲಗಳಲ್ಲಿ ಕೆಲಸಮಾಡಿದವರಾದ್ದರಿಂದ ಇವರಿಗೇ ಹೆಚ್ಚು ಮತಗಳು ದೊರೆಯುವದರಲ್ಲಿ ಸಂದೇಹವಿಲ್ಲ, ಆದರೆ, ಇನ್ನು ಮೇಲಾದರೂ, ಕರ್ನಾಟಕದ ಬಗ್ಗೆ ಹೆಚ್ಚು ಕಳವಳದಿಂದ ಕೆಲಸಮಾಡಿದರೆ, ಕನ್ನಡಿಗರ ಆದರಕ್ಕೆ ಹೆಚ್ಚು ಪಾತ್ರರಾಗುವರು

ವಿಜಾಪುರದ ಶ್ರೀ ದಿವಾಣ ಸಾಹೇಬ ಜಾವನೇಕರರು 'ಕನ್ನಡಿಗ' ನ ಮೇಲೆಯೂ ವಿಜಾಪುರದ ರಹವಾಸಿಗಳೂ ಮತದಾರರೂ ಆದ ಮುಂಡಪ್ಪ ಎನ್ನುವರ ಮೇಲೆಯೂ ಮಾನಹಾನಿಯ ಫೌಜದಾರಿ ಕಟ್ಲೆ ಮಾಡಿದ್ದರು. ಮುಂಡಪ್ಪನು ನಿರಪರಾಧಿಯೆಂದು ನಿರ್ಣಯವಾಯಿತು ಮ್ಯಾಜಿಸ್ಟ್ರೇಟರು ತಮ್ಮ ತೀರ್ಪನ್ನು ಬಹು ಉದ್ದವಾಗಿ ಬರೆದಿರುವರೆಂದೂ, ದಿವಾಣ ಸಾಹೇಬರಿಗೆ ಅನನುಕೂಲವಾದ ಸಂಗತಿಗಳನ್ನು ಠರಾವಿನಲ್ಲಿ ನಮೂದಿಸಿರುವರೆಂದೂ ತಿಳಿಯುತ್ತದೆ. ೨೫ನೇ ತಾ|| ನಿಂದ "ಕನ್ನಡಿಗ"ನ ಕಟ್ಲೆ ಪ್ರಾರಂಭವಾಗುವದು.

ಮದ್ರಾಸ ಕರ್ನಾಟಕ

ಇದೇ ತಿಂಗಳ ೧೨ನೇ ತಾರೀಖಿನಲ್ಲಿ ಮಂಗಳೂರ ಬ್ರಹ್ಮಸಮಾಜದ ಮಂದಿರದಲ್ಲಿ ಶ್ರೀಯುತ ಕುದ್ಮುಲ ರಂಗರಾಯರು ಕನ್ನಡದಲ್ಲಿ ದೇವಾರಾಧನೆ, ಮತ್ತು ಉಪನ್ಯಾಸ ನಡಿಸಿದರು. ವಿಷಯ:- ಭೃಗುವಲ್ಲಿ ತಿತ್ತಿರಿಯ ಉಪನಿಷತ್.

ಕಳೆದ ತಿಂಗಳಲ್ಲಿ ಉಡುಪಿಯಲ್ಲಿ ಆದ ಶ್ರೀಮಧ್ವಮುನಿ ಸೇವಾಸಂಘದ ಪ್ರಥಮ ಸಾಮಾನ್ಯ ಸಭೆಗೆ ಶ್ರೀಮಾನ್ ಕಪೂರದ ಶ್ರೀನಿವಾಸರಾಯರು ಅಗ್ರಸ್ಥಾನವನ್ನು ವಹಿಸಿ, ಶ್ರೀಮಧ್ವಮತಸ್ಥಾಪಕರಾದ ಮಧ್ವಾಚಾರ್ಯರ ಸರ್ವಮೂಲ ಗ್ರಂಥಗಳನ್ನು ಕನ್ನಡ ಭಾಷೆಗೆ ಪರಿವರ್ತಿಸಬೇಕೆಂದು ನಿರ್ಧರಿಸಿದರು. ಮುಂದೆ ಸದರಿಯವರು ಕರ್ನಾಟಕ ಸಾಹಿತ್ಯ ಪರಿಷತ್ತಿನ ಉದ್ದೇಶದಿಂದ ಮಂಗಳೂರಿಗೆ ಹೋಗಿ ಸಾಹಿತ್ಯಪರಿಷತ್ತನ್ನು ಮಂಗಳೂರಲ್ಲಿಯೇ ಜರಗಿಸಬೇಕೆಂಬದಾಗಿ ಹೇಳಿದರು ಇದಕ್ಕೆ ಮಂಗಳೂರವರು ಒಪ್ಪುವರೋ?

ಮೈಸೂರ ಕರ್ನಾಟಕ

ಮೈಸೂರ ಮಹಾರಾಜರು ದಿವಾನರೊಂದಿಗೆ ಬೆಂಗಳೂರಿಗೆ ಬಂದು ಅಲ್ಲಿಯ ನ್ಯಾಯಸ್ಥಾನಗಳನ್ನು ಛಾಪಖಾನೆಯನ್ನು ಸಂದರ್ಶಿಸಿದರು.

ಮೈಸೂರ ಸರಕಾರದವರು ಮೈಸೂರ ಜಿಲ್ಹೆಯಲ್ಲಿ ೫೭ ಹೊಸ ಶಾಲೆಗಳನ್ನು ತೆರೆಯಲು ಮಂಜೂರ ಮಾಡಿರುವರು.

ಕೊಡಗು ಕರ್ನಾಟಕ

ಕಳೆದ ಜನೇವರಿ ತಿಂಗಳಿಂದ ಕೊಡಗಿನಲ್ಲಿ ಉಚ್ಚುವ ಬೇನೆಯಿಂದ ಸಾವಿರಗಟ್ಲೆ ದನಗಳು ಸತ್ತುಹೋದವು; ಈಗಲೂ ಸಾಯುತ್ತಲಿವೆ ಯಂತೆ, ಅಮ್ಮತ್ತಿನಾಡು ಬಳಗುಂದ ಎಂಬ ಒಂದೇ ಒಂದು ಗ್ರಾಮದಲ್ಲಿ ಕಳೆದ ಏಪ್ರಿಲ ತಿಂಗಳಿಂದ ಈ ವರೆಗೆ ೯೪ ದನಗಳು ಸತ್ತು ೭೬ ಹೂಡುವ ಎತ್ತುಗಳು ಇನ್ನೂ ೧೫ ದನಗಳು ಬೇನೆಯಿಂದ ನರಳುತ್ತಿವೆಯಂತೆ. ಇತ್ತ ಸರಕಾರದವರು ಲಕ್ಷ್ಯಗೊಡುವರೇನು ?

ಕೊಡಗಿನ ಲೆಜಿಸ್ಲೇಟಿವ್ಹ ಕೌನ್ಸಿಲಿನ ಅಧಿವೇಶನವು ತಾ ೨೦ ನೇ ದಿನ ಕೂಡುವದೆಂದು ಗೊತ್ತಾಗಿದೆ.

ಹಿಂದುಸ್ಥಾನ.

ವೃತ್ತಪತ್ರಗಳ ಬಗ್ಗೆ ಮಹಾತ್ಮಾ ಗಾಂಧಿಯವರ ಅಭಿಪ್ರಾಯ:—

ಜಗತ್ತಿನೊಳಗಿನ ಎಲ್ಲ ವೃತ್ತಪತ್ರಗಳು ನಿಂತು ಹೋದರೂ ಅದರಿಂದ ಜಗತ್ತಿಗೆ ಏನೂ ಹಾನಿ ತಟ್ಟುವದಿಲ್ಲ; ಬಹಳವಾದರೆ ಅದು ತನ್ನ ಪ್ರಕೃತಿ ಪರಿಹಾರವಾಯಿತೆಂದು ಉಸುರ್ಗರೆಯುವದು. ಯಾಕೆಂದರೆ ವೃತ್ತಪತ್ರಗಳು ಸಾಧಾರಣವಾಗಿ ನಿಜವಾದ ಸುದ್ದಿಗಳನ್ನು ಪ್ರಸಿದ್ಧಿಸದೆ ಬರೇ ಹಾರು ಸುದ್ದಿಗಳನ್ನು ಕೊಡುತ್ತವೆ."

ಪರದೇಶ.

ತುರ್ಕಿಯ ಮಾಜಿ ಸುಲ್ತಾನರ ಪತ್ನಿಯವರು ಇಜಿಪ್ತದಲ್ಲಿದ್ದರು. ಖರ್ಚಿಗೆ ಹಣವಿಲ್ಲದೆ ನೈಲನದಿ ಹಾರಿದರು, ಆದರೆ ನಾಯಿದಪ್ಪರಲ್ಲಿ ಎಳೆದು ಮೇಲೆ ಹಾಕಿದರು. ಇವರಿಗೆ ಕಳೆದ ೩ ತಿಂಗಳಿಂದ ಅಂಗೋರ ಸರಕಾರದವರು ಪೆನ್‌ಶನ್ ಕೊಟ್ಟು ಕಳುಹಿಸಲಿಲ್ಲವಂತೆ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !!

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೊರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರಾಕ್ಟೀಶನರ ಮತ್ತು ಡೆಂಟಿಸ್ಟ-ಬಾಗಲಕೋಟಿ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರಸಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ಜಾಹೀರ ನೋಟೀಸು.

ಕೆಳಗೆ ಸಹಿಮಾಡುವವರ ಕಡೆಯಿಂದಾ ಜಾಹೀರನೋಟೀಸಿನಿಂದ ತಿಳಿಸುವದೇನಂದರೆ—

ಚಿ. ನಿಂಗನಗೌಡಾ ಚಿನ್ನನಗೌಡಾ ಸಾ|| ಗೋರಬಾಳ ಈತನು ನನ್ನ ಪಡಹುಟ್ಟಿದ ತಮ್ಮನಿದ್ದು ತನ್ನಹಿಶೇಪ್ರಕಾರ ಸ್ಥಾವರ ಜಂಗಮವಗೈರೆ ಯಾವತ್ತಕೂಡಿ ಆರುನೂರು ರೂಪಾಯಿ ೬೦೦ ರೋಖುತಗೊಂಡು ಸದರಿ ಯಾವನು ತನ್ನ ಹಿಶೆಯಮೇಲಿನ ಮಾಲಕೀಯನ್ನು ಬಿಟ್ಟುಕೊಟ್ಟಿರುತ್ತಾನೆ ಕಾರಣಾ ಆತನುಮಾಡಿದ ಸಾಲಕ್ಕೂ ಅಪಾಯಕ್ಕೂ ಆತನೇ ಬಾಧ್ಯನು ಹೊರ್ತಾಗಿ ನಮಗೇನೂ ಸಮಂಧಇಲ್ಲಾ ತಾ|| ೨೭—೮—೨೬ ಇಸ್ವಿ

ಹಣಮನಗೌಡಾ ದ|| ಖು.

ನೋಟೀಸು.

ಸಿದ್ದಪ್ಪಾ ತಂದಿ ರಾಮಣ್ಣಾ ಕುರಿಯವರ ಸಾ|| ಹಂಡರಗಲ್ಲ ತಾಲೂಕ ಬಾಗಲಕೋಟ ಇವರಿಗೆ— ಕೆಳಗೆ ಹೆಬ್ಬಟ್ಟಿನ ಗುರ್ತಮಾಡಿದವಳ ಕಡಿಯಿಂದ ನೋಟೀಸು ಕೊಡುವದೇನಂದರೆ ನಿನ್ನ ಹೆಂಡತಿ ಇದ್ದು ಮಕ್ಕಳು ಆಗುವದಿಲ್ಲ ಅಂತ ನನಗೆ ಲಗ್ನಮಾಡಿಕೊಂಡಿ. ಲಗ್ನ ಆಗಿ (೧೨) ವರ್ಷದ ಮೇಲೆ ಆಗಿರುತ್ತವೆ. ನೀನು ನನ್ನ ಕೂಡ ಕೆಲವು ವರ್ಷ ಪ್ರಪಂಚ ಮಾಡಿ ನೀನು ನನ್ನ ಸವತಿ ಮಾತು ಕೇಳಿ ತಪ್ಪಿಲ್ಲದೆ ಹೊಡಿಯೋದು ಮಾಡಿ ನನ್ನಮೈ ಮೇಲೆ ಇದ್ದ ದಾಗೀನೆ ವ ಶೀರಿ ವಗೈರೆ ಇದ್ದದ್ದು ಕಸಗೊಂಡು ಹರಕ ಸೀರಿ ಮೆಲೆ ಹೊರಗೆ ಹಾಕಿ ಈವತ್ತಿಗೆ (೭) ವರ್ಷ ಆಯಿತು. ನನ್ನ ತಾಯಿತಂದಿ ಅತಿಶಯ ಬಡವರು ಇದ್ದು ನನಗೆ ಕೆಲವು ತಿಂಗಳ ಹಿಡದರು. ಅನಂತರಾ ನನಗು ಜೋಪಾನ ಮಾಡೋದು ಆಗಲಿಲ್ಲಾ ಈಗ ನನ್ನ ಹೊಟ್ಟೆದಸಿಂದ ಮುನ್ನೂರು (೩೦೦) ರೂಪಾಯಿ ಸಾಲಾ ಮಾಡೀನಿ. ಸಾಲಗಾರರ ಉಪದ್ರ ಬಹಳ ಇರುತ್ತದೆ ಮತ್ತು ನಾನು ಹೊಟ್ಟೆ ಅಡಚಣೆ ಒಂದು ಕುಲಾನು ಕಟ್ಟೇನಿ. ನಿನ್ನ ಕುಲದೊಳಗೆ ನಾನುಇಲ್ಲ ಆದ್ದರಿಂದ ನಿನಗೆ ಈ ನೋಟೆಸಿನಿಂದಾ ತಿಳಿಸುವದೆನಂದರೆ ಈ ನೋಟಿಸ ಮುಟ್ಟಿದ ಹತ್ತು (೧೦) ದಿವಸದಲ್ಲಿ ನೀನು ನನ್ನ ಕೂಡ ಬಾಳ್ವೆ ಮಾಡುವ ಇಛ್ಛಾ ಇದ್ದರೆ ನನ್ನನ್ನ ನೀನು ಕುಲದೊಳಗೆ ತಗೊಂಡು ನನಗೆ ಹೊಡಿಯೋದಿಲ್ಲಾ ಅಂಬೋ ಬಗ್ಗೆ ಯೋಗ್ಯ ಲಾಯಖ ಜಾಮೀನು ಕೊಟ್ಟು ನಾನು ಮಾಡಿದ ಋಣ ತೀರಿಸಿ ವ ನನ್ನ ದಾಗೀನೆ ವ ಶೀರಿ ತಂದು ನನ್ನನ್ನು ಕರಕೊಂಡು ಹೋಗಿ ಚಲೋ ರೀತಿಯಿಂದ ಬಾಳ್ವೆ ಮಾಡಬೇಕು ಒಲ್ಲದಿದ್ದರೆ ಮಹಮ್ಮದಿ ಕುಲದೊಳಗೆ ಹೋಗಿ ಮಹಮ್ಮದಿ ಜನರಿಗೆ ವೃದ್ಧಿ ಮಾಡಿಕೊಂಡು ನಾನು ಮಾಡಿದ ದೇಣೆ ಹರಿತೇನೆ ಆ ಮೇಲೆ ನಂನ ಮೇಲೆ ವ ನಂನ ವೃದ್ಧಿ ಮಾಡಿಕೊಂಡ ಗಂಡನಮೇಲೆನಿಂನದು ಯಾವಪ್ರಕಾರದ ಹಕ್ಕು ಇರವದಿಲ್ಲಾ ಇದೇ ನೋಟಿಸ ಬಿಟ್ಟೆ ಅಂತಾ ತಿಳಿಬೇಕು. ಈನೊಟೀಸಿನ ಖರ್ಚು ನಿಂನ ತಲಿಮೇಲೆ. ಅಂತಾ ಕೊಟ್ಟೆ

† ಈ ಯಡಗೈ ಹೆಬ್ಬಟ್ಟಿನ ಗುರ್ತ ಯಲ್ಲವ್ವಾ ಕೋಮ ಸಿದ್ದಪ್ಪಾ ಕುರಿಯವರ ಸಾಕೀನ ಹಂಡರಗಲ್ಲ ತಾ|| ಬಾಗ-ಕೋಟಿ ಹಾಲಿವಸ್ತಿ ಸದರ ಇವರೀಗೆ, ೧೯೨೬ ೧೧—೮—೨೬

ತ್ವರೆಮಾಡಿರಿ! ಅಡಚಣಿಯು ದೂರಾಯಿತು!!

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನ ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ಡ್ಯಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಶಿಗಲಿಕ್ಕೆ ಶಕ್ಯವೇಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನೆ ಪಡೆಯಬಹುದು. ತೊಗೊಳ್ಳಬೇಕೆನ್ನುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟಿ ೨೧—೭—೨೬ } ಬಿಂದುರಾವ ಟಂಕಸಾಲಿ ಡಾಕ್ಟರ,

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗಿ ಉಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲಿಕ್ಕೆ ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿ ಇರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೫೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಇದೋ ನೋಡಿ!

ಜಾಹೀರಾತ ಕೊಡತಕ್ಕವರೆ!

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ತಾನಾಗಿಯೇ ಬಂದ ಈ ಪತ್ರವನ್ನು ಓದಿರಿ; ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದ್ದೆಂಬುದನ್ನು ನೀವೇ ನಿಶ್ಚಯಿಸಿರಿ.

ಶ್ರೀಯುತ ಕುಲಕರ್ಣಿ ಬ್ರದರ್ಸ, ಮೋಟಾರ ಡ್ರಾಯಿವ್ಹಿಂಗ ಇನ್‌ಸ್ಟಿಟ್ಯೂಶನ್ ೪೫೫ ಶನವಾರ ಪೇಠ ಪುಣೆಶಹರ.

ತಾರೀಖು ೨೮ ಜುಲೈ ೧೯೨೬.

ರಾ. ರಾ. ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟೆ ಇವರಿಗೆ— ವಿ. ವಿ. ಸಾ. ನ. ನಿಮಗೆ ವಂದನಪೂರ್ವಕ ಪತ್ರಬರೆಯಲು ಉದ್ಯುಕ್ತನಾಗಿದ್ದೇನೆ ಯಾಕಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನಮ್ಮ ಜಾಹೀರಾತಿನ ಪರಿಣಾಮವು ಒಳ್ಳೇ ಚನ್ನಾಗಿ ಆಗಿದೆಂಬುದು ನನಗೆ ಕಂಡುಬರುತ್ತಿದೆ ಆದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹೀರಾತನ್ನು ನಿಮ್ಮ ಪತ್ರದ ಅರ್ಧ ಪುಟದಲ್ಲಿ ಪ್ರಕಟಿಸಬೇಕೆಂದು ಬೇಡಿಕೆ. ಅದರ ಬೆಲೆ ಎಷ್ಟಾಗುವದು ಅದನ್ನು ತಿಳಿಸಬೇಕು. ಕೇಳುವೆನು.

ಜಿ. ಎಚ್. ಕುಲಕರ್ಣಿ ಮ್ಯಾನೇಜರ,

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭ ಹೊಂದಿರಿ. ತಡಮಾಡದೆ ಈ ದಿನವೇ ಪತ್ರ ಬರೆಯಿರಿ.

—ವ್ಯವಸ್ಥಾಪಕ.

ಈ ಪತ್ರಿಕೆಯು ಮಂಗಳವೇಢೆ ರಾಘವೇಂದ್ರಾಚಾರ್ಯರ ಮಕ್ಕಳಾದ ಶ್ರೀನಿವಾಸ ಇವರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

ಅಮೂಲ್ಯ ಸಂಧಿ.

S.U.N. & CO.
BENARESCITY.

ನಮ್ಮಲ್ಲಿ ಉತ್ತಮೋತ್ತಮದ ಎಲ್ಲಾ ವಿಧವಾದ ರೇಶ್ಮೆ ಮಾಲುಗಳನ್ನು ಕೇಳುವವರಿಗೆ V. P. ಮೂಲಕ ಕಳುಹಿಸಲ್ಪಡುವುದು. ಕಾಶ್ಮೀರ ಶಾಲು ಜೋತೆ ೧ಕ್ಕೆ ರೂ. ೨೫ ರಿಂದ ೩೦-೫೦ ೧೦೦ರ ವರೆಗೆ. ಉಡುವ ಮೊಗಟ ಮೊಳ ೬-೭-೮-೧೦-೧೬ ೧೮ ಮೊಳಗಳು; ಇದು ಮೊಳ ೧ಕ್ಕೆ ೨ರೂ. ಯಿಂ 2½ ರೂ. ವರೆಗೆ ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ರದ್ದು ೧ಕ್ಕೆ ೦-೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. 3½ಯಿಂದ ೨೫ರ ವರೆಗೆ; ೩೨ ಕಾಳುಗಳ ಕಂಠಿಸರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿ ರೆಗೆ ೮-೯-೧೦ ಮುಖಗಳ ಕಾಳುಗಳ, ರುದ್ರಾಕ್ಷಿ ೧ಕ್ಕೆ ರೂ ೧ರಿಂದ ೧೦ ರವರೆಗೆ ೧೧-೧೨-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೧೦ ರವರೆಗೆ ೧೪ ಮುಖದ ಕಾಳು ೧ಕ್ಕೆ ರೂ. ೫ ರಿಂದ ೪೦ ರವರೆಗೆ. ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪ ೮ ೦ ಸಾಲ್ಯಕೋಟಿಗೆ ಸಾಕಾಗುವಷ್ಟು ರೇಶ್ಮೆ ಕೋಟಿಂಗ ಶಿಲ್ಕು ಥಾನು ೭ ಗಜಾ ಉದ್ದು ೩೬ ಗಜಾ ಅಗಲುಉಳ್ಳ ಥಾನುಗಳಿಗೆ ೨೫ ರಿಂದ ೩೦ ರೂಪಾಯಿಗಳವರೆಗೆ ಬೀಳುವದು

ವಿಳಾಸ: **ಶಿರೋಮಣಿ ನಾರಾಯಣಾಚಾರ್ಯ ಕಂಪನಿ,**
ಕಾಶೀ ಬನಾರಸ್.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಒಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕನ್ನ ರೂ ೧೦೦೦

(೨) ಎಲ್. ಬಿ. ಸಿ ನಂ ೫೧೨ ಮಿ. ಸೈಯದ್ ಜಹೂರಅಲೀ ಪಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನಸ್ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ ನಂ. ೨೭೮ ಮಿ. ದೇವನ ವಾಸುದೇವನ ನಂಬೂದ್ರಿಪಾದ ಪಟ್ಟೂರ ನದರ ಪಡ ಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ ಶಂಕರಪ್ಪಾ ಬಸಪ್ಪಾ ಪೆ. ಷನಕೊಂಡ, ಅಕ್ಕಸಾಲೆ ಪೆಡಿ ಗಾಂಧಿಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೯೭ ೬ ಮಿ ಶೇಕ ಬಾಪುಮಿಯಾ ಶೇಕ ಮಹಮ್ಮದ ನಕ ತಯಾರ ಮಾಡುವ ೨೯೮ ಭವಾನಿಪೇಟ ಪುನಾ ೧೦೦೦

ಬಿ. ಎಸ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ)
ಹುಬ್ಬಳ್ಳಿ

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಔಷಧ



ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯಬಿಂದು.

ಪ್ರಜಾಹಿತಮಿತ್ರ. ಮೂರ್ತಿಮಂತವೈದ್ಯ.

ಇದು ಅರ್ಕವಿದ್ದು ಇದರಲ್ಲಿ ಸೀಸ ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರೆಗೆ ಎರಡು ಲಕ್ಷಗಳವರೆಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾಂಧಿಸಿದ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ನಾವು ಕೊಡಲ್ಪಡುವವು ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಾವಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾವುಗಳು:— ಕ್ಷಯರೋಗ, ಬಾಣಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಡಗ್ಗೈ, ಕಾಲರಾ (ಮಹಾಮಾರಿ), ಪ್ಲೇಗ, ಇನ್‌ಪ್ಲುಯಂಜಾ ಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ನೈ ಹೊಂಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶ್ಯ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು. ಆದರ ಖರ್ಚ ೭. ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ ಪೆಷ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಹದು ಬಾಟ್ಲಿ ಕಮೀಶನ್ ಸಿಗುತ್ತದೆ. ಖರ್ಚ ೯ ಆಣೆ ಮಂದಿ ಎರಡುತಕ್ಕೊಂಡರೆ ಕಮೀಶನಿಲ್ಲ ಮಿ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಲ್ಲಿ ಛಾಪಿಸಿದ್ದವೆ ಪಸಂದಿ ಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಹೊಟ್ಟೆ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಾವುಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಹಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ **ಎಚ್ ಎಸ್ ಪಾಟೀಲ** **ಸಂಪಾದಕ ಅರ್ಕಶಫಾ ಹೆಡ್‌ಆಫೀಸ ಪೋಷ್ಟ ಶಹಾಪೂರ (ಬೆಳಗಾವ)**





The Cheapest House.

1 For quick: Economical and satisfactory service, please go for the welknown Chevrolet cars, Trucks products in the Deccan

2 For all spare parts of the Various cars specially Chevrolet, Ford, Dodge and Overland cars,

3 For the cheapness in tyre tubes especially the welknown Richelin products,

4 For all kinds of Lubricating oils Grease etc,

5 For undertaking all kinds of tyre tube repairs in Vulcansing by a specialist to give satisfactory work,

6 For Building motor bodies of various types by workers onin uptodate line.

7 For all kinds of motor repairs,

Apply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

೧ ಶೀಘ್ರಮಿತವ್ಯಯ ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶೆವ್ಹರೋಲೆಟ ಗಾಡಿ ಮತ್ತು ಟ್ರಕ್ಕ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ

೨ ಎಲ್ಲ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶೆವ್ಹರೊಲೆಟ ಡಾಜ, ಫೋರ್ಡ, ವೋವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,

೩ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟ್ಯುಬುಗಳು ಮುಖ್ಯವಾಗಿ ಮಿಚೆಲಿನ ಟಾಯರಟ್ಯುಬುಗಳು ಖರೀದಿಗಾಗಿ

೪ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,

೫ ಎಲ್ಲ ತರಹದ ಟ್ಯೂಬು ಟಾಯರಗಳ ರಿಪೇರಿಗಾಗಿ,

೬ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಿಸಲಿಕ್ಕೆ,

೭ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,

ರಾಯಲ್ ಮೋಟಾರಸರ್ವೀಸ.

ಬಾಗಲಕೋಟೆ

ವಿಜಾಪೂರ ಜಿಲ್ಹೆಯಲ್ಲಿ

ಶೆವ್ಹರಲೆಟ ಮೋಟಾರುಗಳಿಗೆ ಸಬ್ ಏಜಂಟರು.

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟಿ. ಖ. ಪ್ರತ್ಯೇಕ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

ಶಾವಿಗೆ! ಗುಲಕಂದ!! ಹಪ್ಪಳ!!!

ಸುಗಂಧ ದ್ರವ್ಯಗಳು.

ಊದಿನ ಕಡ್ಡಿ, ಕಸ್ತೂರಿ ಬಿಲ್ಲೆ, ಅತ್ತರ, ಶೀಗೆಕಾಯಿ ಪುಡಿ, ಭೃಂಗಾಮಲಕ ತೈಲ, ರೋಜವಾಟರ, ಮಡ್ಡಿ, ಹಾಲವಡ್ಡಿ ಇವೆ ಮೊದಲಾದ ಬೆಂಗಳೂರಿನ ಸುಪ್ರಸಿದ್ಧವಾದ ಎಲ್ಲ ಬಗೆಯ ಸುಗಂಧ ದ್ರವ್ಯಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತಿವೆ. ಅಲ್ಲದೆ ಗುಲಕಂದ, ಬೆಂಗಳೂರಿನ ರಸಭರಿತವಾದ ಹೂವಿನ ಹಣ್ಣುಗಳ ಮುರಬ್ಬಾ, ಬಹು ರುಚಿಕಟ್ಟಾಗಿರುವ ಸಾರಿನ ಪುಡಿ, ಮಸಾಲೆ, ಚಟ್ನಿ, ಶಾವಿಗೆ, ಹಪ್ಪಳಗಳೂ ದೊರೆಯುವವು ವ್ಯಾಪಾರಸ್ಥರಿಗೆ ಯೋಗ್ಯ ಕಮೀಶನ್. ಕ್ಯಾಟಲಾಗಿಗಾಗಿ ಬರೆಯಿರಿ.

ವಿಳಾಸ:- ಸುಗಂಧಿ c/o "ಕನ್ನಡಿಗ" ಬಾಗಲಕೋಟೆ.

Th

Apply

Mess

ಅಸ್ಸಲ,

ನೋಟೀಸು.

ಮಕ್ತುಂಬಿ ಕೋಂ ಇಮಾಮ ಸಾಹೇಬ ಅತ್ತಾರ. ಸಾ|| ಹೊಸ ಹುಬ್ಬಳ್ಳಿ ಪೈಕಿ ಗಾರ್ಡಿನ ಪ್ಯಾಟಿಯ ಹತ್ತಿರ ಎಲಿಪ್ಯಾಟಿಯಲ್ಲಿ ಇವಳಿಗೆ — ಕೆಳಗೆ ಸಹಿಮಾಡುವವನ ಕಡಿಂದ ಜಾಹೀರ ನೋಟೀಸು ಕೊಡುವದೇನಂದರೆ- ನೀನು ತಾರೀಖು ೬ನೇ ಸಪ್ಟೆಂಬರ ಸನ್ ೧೯೩೭ಇಸ್ವಿ ದಿವಸ ನೋಟೀಸ ಕೊಟ್ಟದ್ದು ತಿಳಿಯಿತು. ಸದರ ನೋಟೀಸಿನಲ್ಲಿ ಬರೆದ ಯಾವತ್ತು ಮಜಕೂರು ಸುಳ್ಳು ಇರುತ್ತದೆ. ನೀನು ನನ್ನ ಲಗ್ನದ ಹೆಂಡತಿ ಇದ್ದು ನಿನ್ನ ಕೂಡ ಛಲೋ ರೀತಿಯಿಂದ ಪ್ರಪಂಚಮಾಡಿ ಒಂದು ಗಂಡುಕೂಸನ್ನು ಹಡದಿ. ಸದರ ಕೂಸು ಮೂರು ವರ್ಷದಾಗುವತನಕ ಗಲಗಲಿಯಲ್ಲಿ ನನ್ನಲ್ಲಿ ಇದ್ದು ಸಂರಕ್ಷಣೆ ಆದಿ. ಈಗ ಕಳೆದ ೭-೮ ತಿಂಗಳ ಹಿಂದೆ ನನ್ನ ಆಪ್ತರ ಕಟ್ಟಿಬದ್ದಾಗ್ಗೆ ನಿನ್ನನ್ನು ಕರಕೊಂಡುಬಂದು ಕೇರೂರಲ್ಲಿ ಇರಲಿಕ್ಕೆ ಹತ್ತಿದೆನು. ಕೇರೂರಿಗೆ ಬಂದ ಒಂದು ತಿಂಗಳದಲ್ಲಿಸೇ ನಾನು ಕೇರೂರಲ್ಲಿ ಇಲ್ಲದಾಗ್ಗೆ ನನ್ನ ಗೈರಹಾಜರಿ ಸಾಧಿಸಿ ಕೂಸನ್ನು ಬಿಟ್ಟು ಹೇಳದೆ ಕೇಳದೆ ೪೦ ರೂಪಾಯಿಗಳ ಕಿಮ್ಮತ್ತಿನ ಮೂರು ಬೆಳ್ಳಿಯ ಡಾಬಗಳನ್ನೂ ವ ೭೫ ರೂಪಾಯಿಗಳ ಕಿಮ್ಮತ್ತಿನ ೫ ಶೀರಿ ವ ಕುಪ್ಪಸಗಳನ್ನ ವ ೬ ರೂಪಾಯದ ಕಿಮ್ಮತ್ತಿನ ಭಂಗಾರದ ಹೂವುಳ್ಳ ಕುಲಾಯನ್ನೂ ತಗೊಂಡು ಓಡಿಹೋದಿ. ನಿನ್ನ ದಶಿಯಿಂದ ಪುಷ್ಕಳ ತಪಾಸಮಾಡಿ ಆಖೈರಕ್ಕೆ ನೀನು ಹಳೆ ಹುಬ್ಬಳ್ಳಿಯಲ್ಲಿ ಇದ್ದದ್ದು ತಿಳದಕೂಡಲೇ ಅಲ್ಲಿಯತನಕಬಂದು ನಿನ್ನ ತವರಮನೆಯವರಿಗೆ ವ ಅಲ್ಲಿಯ ದೈವದವರಿಗೆ ತಿಳಿಸಿ ನಿನಗೆ ಸಮಜೂತ ಹೇಳಿಕಳ್ಸರಿ ಅಂತ ಹೇಳಿಬಂದೆ. ನೀನು ಈವರೆಗೂ ಬರಲಿಲ್ಲ. ಇದನ್ನೆಲ್ಲ ಹಕೀಕತ ಬಚ್ಚಿಟ್ಟು ಭಲ್ತೆ ಭಲ್ತ ಮಜಕೂರಿನ ನೋಟೀಸುಕೊಟ್ಟೇದಿ. ೨೦೦ರೂಪಾಯಿಗಳ ಸಾಲಮಾಡಲಿಕ್ಕೆ ಕಾರಣವಿಲ್ಲ. ಅದಕ್ಕೆ ನಾನು ಜವಾಬದಾರನಲ್ಲ. ನಿನ್ನ ಮಹಾರ ೨೫| ರೂಪಾಯಿ ಅದೆ. ನೀನು ತಗೊಂಡುಹೋದ ಶೀರಿ ಕುಪ್ಪಸ ವ ದಾಗೀಣಗಳನ್ನು ಈ ನೋಟೀಸ ಮುಟ್ಟಿದ ಮೂರು ದಿವಸದಲ್ಲಿ ತಗೊಂಡು ನಾನು ಇದ್ದ ಕೇರೂರ ಗ್ರಾಮಕ್ಕೆ ಹೊರಟುಬರಬೇಕು. ನಿನ್ನ ಕೂಡ ಬಾಳ್ವೆಮಾಡಲಿಕ್ಕೆ ನನ್ನ ಕಬೂಲಿ ಅದೆ. ಇದಕ್ಕೆ ತಪ್ಪಿ ನೀನು ದುರ್ನಡತೆಯಿಂದ ನಡೆದರೆ ಅಗರ ಉಡಕಿಮಾಡಿಕೊಂಡುಹೋದರೆ ನಿನ್ನಮೇಲೆ ವ ನಿನ್ನನ್ನು ಉಡಕಿಮಾಡಿಕೊಂಡವನ ಮೇಲೆ ಫೌಜ್ದಾರಿಯಲ್ಲಿ ಕೆಲಸನಡೆಸೇನು. ಇಷ್ಟೇ ಅಲ್ಲ ನೀನು ಒಳ್ಳೇರೀತಿಯಿಂದ ನನ್ನ ಕಡಿಗೆ ಬಾರದಿದ್ದರೆ ನಿನ್ನ ಕಬ್ಜಾದಸಿಂದಾ ಕೋರ್ಟಿನಲ್ಲಿ ಇಲಾಜುಮಾಡೇನು. ನಿನ್ನ ನೋಟೀಸಿನಿಂದ ನನ್ನ ನಿನ್ನ ನಡುವೆ ಇದ್ದ ಗಂಡಹೆಂಡರನಾತೆವ ಹಕ್ಕು ಎಂದು ಹೋಗಲಿಕ್ಕಿಲ್ಲ. ನೀನು ಈಗ ಮಾಡಿದ ದೇಣೆಕ್ಕೆ ವ ಮುಂದ ಮಾಡಿದ ದೇಣೆಕ್ಕೆ ನಾನು ಜವಾಬದಾರನಲ್ಲ. ತಿಳಿಯುವದು. ವ ಈ ನೋಟೀಸಿನ ಖರ್ಚು ನಿನ್ನ ತಲೆಯ ಮೇಲೆ ಅದೆ. ತಾ|| ೧೧-೯-೩೭ಇಸ್ವಿ ಇಮಾಮಸಾಹೇಬ ಸೌದುಸಾಹೇಬ ಅತ್ತಾರ. ದ|| ಖು||

ಜಾಹೀರ ನೋಟೀಸು.

ಯಾವತ್ತು ಜನರಿಗೆ ಈ ಮೂಲಕ ತಿಳಿಸುವದೇನಂದರೆ - ನನ್ನ ತಂದೆಯಾದ ಫಣಿಯಪ್ಪ ತಂದಿ ಗಿರಿಯಪ್ಪ ಬೀಳಗಿ ಸಾ|| ಸೊಕನಾದಿಗಿ ಇವನು ಏಲಿಕಡೆಗೆತನ್ನ ಹೆಂಡತಿ(ನನ್ನ ಮಲತಾಯಿ) ಯಾದಪಾರತೆವ್ವಾ ಇವಳಿಗೆ ಮಸಿಯಿಂದ ಭ್ರಾಂತಿಷ್ಟನಾಗಿ ನನ್ನನ್ನು ವ ನನ್ನ ಇಬ್ಬರು ತಂಗಿಂದರನ್ನು ವ ನನ್ನ ಮಾತೃಶ್ರೀಯನ್ನು ಬರೊಬರ ರಿತಿಯಿಂದ ಸಂರಕ್ಷಣೆ ಮಾಡುವದಿಲ್ಲಾ. ಅವನು ನನ್ನ ಮಲತಾಯಿಯ ದುರ್ಬೋಧನೆಯಿಂದಾ ಮತ್ತು ಎರಡನೇ ಅಣ್ಣಾ ತಂಮಂದಿರ ಶಿಕವಣಿಯಿಂದ ನಮ್ಮನ್ನು ಮುಳಗಿಸಬೇಕಂತಾ ದೇಣೆ ವಗೈರೆ ಮಾಡಿದಂತೆ ಕಾಗದಪತ್ರ ಮಾಡತಕ್ಕವನು ಇದ್ದಾನೆ. ಮತ್ತು ಮಿಳಕತ ಗೈರರೀತಿಯಿಂದ ವಿಲೇವಾಟ ಮಾಡತಕ್ಕವನು ಇದ್ದಾನೆ ಅಂತಾ ತಿಳಿಯುತ್ತದೆ. ಕಾರಣಾ ಸದರಿಯವನಿಗೆ ಯಾರೂ ದೇಣೆ ವಗೈರೆ ಕೊಡತಕ್ಕದ್ದಿಲ್ಲಾ ಮತ್ತು ಮಿಳಕತ ವಗೈರೆ ವಕ್ತಿಯಿಂದ ಬರಿಸಕೊಳ್ಳತಕ್ಕದ್ದಲ್ಲಾ ಜರ ಬರಿಸಿಕೊಂಡರೆ ಅದು ಪೊಕಳಅಂತಾ ತಿಳಿಯಲ್ಪಟ್ಟು ನಮ್ಮ ಮೇಲೆ ಮತ್ತು ನಮ್ಮ ಮಿಳಕತ ಮೇಲೆ ಬದ ಆಗಲಾರದು. ತಾ|| [illegible]

ರ. ನಂ. ಬಿ ೧೮೪೭ ವಾ ೩೦೦... ೧—೧೩ ೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನಾಡಿನ ವಿಷಯವು ಹೆಚ್ಚಾಗಿ)

ಯದ್ಯತ್ ಪರವಶಂ ದುಃಖಂ। ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು—ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಭಾದ್ರಪದ ಬಹುಳ ೩ ಶಕೆ ೧೮೪೪ ತಾ॥ ೨೨-೯-೧೯೨೭. | ಸಂಚಿಕೆ ೨೬

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಾಡಿ ಇಟ್ಟಿರುವೆನಾನು।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊನ್ನೆ।
ಚಿನ್ನದಾದರು ಚಿನ್ನ ನಾಣ್ಯವಿಲ್ಲಿಯು ನೋಂದು ಚಿನ್ನದ ಮಾಹಿತರಕ್ಷೆ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಕತ್ತಲವು ನಿನ್ನ ಗಂಧಕನು ದೀಪದ ಗಂಧವಹಿಸಿದು ಕೆಳಯಿ

—ಅಂಜಲಿ ಕವಿಯು ದತ್ತ

ವಿಜಾಪೂರ ಜಿಲ್ಲೆಯಿಂದ ಚುನಾವಣೆಗೆ ಇಬ್ಬರೇ ಉಮೇದವಾರರೆಂಬುದು ಈಗ ಎಲ್ಲರಿಗೂ ತಿಳಿದದ್ದಾಗಿದೆ ಅನೇಕ ವರ್ಷಗಳಿಂದ ಕಾಯದೇ ಮಂಡಳದಲ್ಲಿದ್ದರೂ ಶ್ರೀಮಂತ ದೆಸಾಯಿ ದೇಸಾಯರು ಮಾಡಿದ ಕಾರ್ಯವು ಅತ್ಯಲ್ಪವೆಂಬುದನ್ನು ಜನರು ಬಲ್ಲರು. ಅಥವಾ ಜನರಿಗೆ ಕಲ್ಯಾಣವಾಗುವಂತಹ ಕಾರ್ಯವನ್ನು ಎಷ್ಟೆಷ್ಟು ಮಾಡಿರುವರೆಂಬುದನ್ನು ಶ್ರೀ. ದೇಸಾಯರೇ ಹೇಳಲಿ ಅವರು ಕೆಲಸ ಮಾಡಿದ ಈ ಅವಧಿಯಲ್ಲಿ ವಿಜಾಪೂರ ಜಿಲ್ಲೆಗೆ ಲಾಭವೇನಾಗಿದೆ? ಕರ್ನಾಟಕಕ್ಕೆ ಲಾಭವೇನಾಗಿದೆ? ಮುಂಬಯಿ ಇಲಾಖೆಗೆ ಏನು ಲಾಭವಾಗಿದೆ? ಹಲವು ಪ್ರಸಂಗಗಳಲ್ಲಿ ಮಾಡಿದ ಭಾಷಣ ಹಾಗೂ ಅವರು ಕೇಳಿದ ಕೆಲವು ಪ್ರಶ್ನೆಗಳ ಹೊರತಾಗಿ ಯಾವ ಕಾರ್ಯವೂ ಶ್ರೀ. ದೇಸಾಯರಿಂದಾಗಿಲ್ಲ. ಆರು ವರ್ಷಗಳ ಅವಧಿಯಲ್ಲಿ ಮಾಡಿದ ಮಹಾಕಾರ್ಯವೆಂದರೆ ಇಷ್ಟೇಯಲ್ಲವೇ? ಆದರೆ ಕರ್ನಾಟಕ ಭೂಷಣ ಕೌಜಲಗೀ ಶ್ರೀನಿವಾಸರಾಯರು ಮಾಡಿದ, ಮಾಡುತ್ತಿರುವ ಜನರ ಸೇವೆಯು ಕಣ್ಣ ಮುಂದಿನಲ್ಲಿದೆ. ಮೊದಲಿನಿಂದಲೂ ಇವರು ದೇಶಸೇವೆಯನ್ನು ಮಾಡುತ್ತಿರುವರು. ಸರಕಾರದ ವಿರುದ್ಧ ಬಹಿರಂಗದಲ್ಲಿ ನಿಂತಿದ್ದಾರು. ಯಾವದೇ ವಿಷಯವನ್ನು ತೆಗೆದುಕೊಂಡರೂ ಅದನ್ನು ಚನ್ನಾಗಿ ಪ್ರತಿಪಾದಿಸುವರು. ರಾಜಕಾರಣ ಪಟುಗಳು. ಕರ್ನಾಟಕತ್ವದ ಸಂಪೂರ್ಣ ಕಲ್ಪನೆಯುಳ್ಳವರು. ವಿಜಾಪೂರ ಜಿಲ್ಲೆಯ ಕುಂದು ಕೊರತೆಗಳನ್ನೆಲ್ಲ ಬಲ್ಲವರು. ಆದುದರಿಂದ ಮತದಾರರು ಶ್ರೀನಿವಾಸರಾಯರಿಗೇ ತಮ್ಮ ಮತವನ್ನು ಕೊಡತಕ್ಕದ್ದೆಂಬುದು ಸ್ಪಷ್ಟವಿದೆ. ಶ್ರೀ. ದೇಸಾಯರಾದರೂ ಇದನ್ನು ಕಂಡುಹಿಡಿದು, ಶ್ರೀನಿವಾಸರಾಯರೇ ಆರಿಸುವಂತೆ ತಮ್ಮ ಉಮೇದವಾರಿಯನ್ನು ಹಿಂದಕ್ಕೆ ತೆಗೆದುಕೊಂಡರೆ, ಮತದಾರರ ಆದರಕ್ಕೆ ಪಾತ್ರರಾಗುವರು. ತಮ್ಮ ಹುಮ್ಮಸ್ಸಿನ ವಣೆಯ ಕಷ್ಟಗಳನ್ನೂ ಉಳಿಸಿಕೊಳ್ಳುವರು.

ರೇಲವೇ ಕಂಪನಿಗಳ ಬಗ್ಗೆ ಎಷ್ಟು ಬರೆದರೂ ಕಡಿಮೆಯೆಂದು ತೋರುವದು. ಎಷ್ಟೇ ತೀಕ್ಷ್ಣತೆಯಿಂದ ಬರೆದರೂ, ಅವರ ದೃಷ್ಟಿಯೂ ಅತ್ತ ಹೋಗದು. ಹುಬ್ಬಳ್ಳಿ ಗದಗುಗಳಂತಹ ದೊಡ್ಡ ಜಂಕಶನ್ ಸ್ಟೇಶನಗಳಲ್ಲಿ ಪ್ರವಾಸಿಕರಿಗೆ ತೊಂದರೆಯಾಗಬಾರದೆಂದು "ಪ್ಲ್ಯಾಟಫಾರ್ಮ" ಗಳ ಎರಡೂ ತುದಿಗಳಲ್ಲಿ ನಳಗಳನ್ನು ಕಲ್ಪಿಸಿದ್ದರೂ, ಅವುಗಳಲ್ಲಿ ನೀರನ್ನೇ ಬಿಡುವದಿಲ್ಲ. ಒಂದರಲ್ಲಿ ಮಾತ್ರ ನೀರನ್ನು ಬಿಡುವದರಿಂದ ಪ್ರವಾಸಿಕರು ಬಹು ಕಾಲದವರೆಗೆ ಕಾಯ್ದುಕೊಂಡು ನಿಲ್ಲಬೇಕಾಗುವದು. ಹೀಗೆ ಕೆಲಕಾಲದವರೆಗೆ ನಿಂತರೆ ಅತ್ತ ಗಾಡಿಯು ಹೊರಟು ಹೋಗುವದು. ಇದರಿಂದ ಪ್ರವಾಸಿಕರಿಗೆ ನೀರು ಸಹ ದೊರೆಯದೆ ಹೋಗುವದು ಹುಬ್ಬಳ್ಳಿ ಗದಗುಗಳಲ್ಲಿ ನಳಗಳ ಬುಡದಲ್ಲಿ ಹೀಪು ಗಳನ್ನಾಗಲಿ ಡಬ್ಬಿಗಳನ್ನಾಗಲೀ ನೌಕರರು ಇಟ್ಟು ಬಿಡುವರು. ಪ್ರವಾಸಿಕರು ಉಗುಳಿದ ನೀರೆಲ್ಲ ಅವುಗಳಲ್ಲಿ ಸೇರುತ್ತದೆ. ಅದನ್ನೇ ನೌಕರರು ಗಾಡಿಯಲ್ಲಿದ್ದ ಪಾಯಖಾನೆಗಳ ನೀರಿನ ಸಂಗ್ರಹಾಲಯದಲ್ಲಿ ಒಯ್ದು ಸುರುವುವರು. ಇದನ್ನು ನಾವು ಕಣ್ಣಾರೆ ಕಂಡಿರುವೆವು. ಇದರಿಂದ ಜನರ ಆರೋಗ್ಯತೆಗೆ ಎಂತಹ ಬಾಧೆ ತಟ್ಟುವದೆಂಬುದನ್ನು ಕಲ್ಪಿಸುವಷ್ಟು ಸದ್ಬುದ್ಧಿಯು ಕಂಪನಿಗಳ ನೌಕರರಿಗೆ ಇರಬಾರದವೆ? ಗದಗ ಹುಬ್ಬಳ್ಳಿಗಳಲ್ಲಿ ಅನೇಕ ಗಾಡಿಗಳು ಬರುವವು; ಹೋಗುವವು. ಇಂತಂಥ ಗಾಡಿಗಳು ಇಂತಿಂಥ ಸ್ಥಳಗಳಲ್ಲಿಯೇ ನಿಲ್ಲಬೇಕೆಂಬ ಬಗ್ಗೆ ನಿರ್ಧಾರವೂ ಇಲ್ಲ; ಇತ್ತ ಹಲಿಗೆಗಳಂತೂ (Sign boards) ಇಲ್ಲವೇ ಇಲ್ಲ. ಇದರಿಂದ ಸುಶಿಕ್ಷಿತರಿಗೆ ಸಹ ತೊಂದರೆಯಾಗುತ್ತದೆ ಅಂದಮೇಲೆ ಅಶಿಕ್ಷಿತರ ಗೋಳನ್ನು ಕೇಳುವವರೇ ಇಲ್ಲ. ಹಳ್ಳಿಗಾಡಿನವರು ರೇಲ್ವೆ ನೌಕರರನ್ನು ಕೇಳಿದರೆ ಅದಕ್ಕೆ ಉತ್ತರ ದೊರೆಯುವದಿಲ್ಲ ... ಬಂದವರಿಗೆ ಕೇಳಿದರೆ ಅವರಿಗೂ ಈ ವಿಷಯವು ತಿಳಿಯದು. ಆದ್ದರಿಂದ ಇಂತಿಂಥ ಸಮಯಕ್ಕೆ ಇಂತಿಂಥ ಸ್ಥಾನಗಳಿಂದಲೇ ಈ ಗಾಡಿಗಳು ಹೊರಡುವವೆಂಬುದಾಗಿ ಹಲಿಗೆಗಳ ಮೇಲೆ ಬರೆದು ಅವನ್ನು ತೂಗ ಬಿಟ್ಟರೆ ಎಷ್ಟೋ ಸಹಾಯವಾಗುವದು. ಹುಬ್ಬಳ್ಳಿಯಂತಹ ದೊಡ್ಡ ಸ್ಟೇಶನದಲ್ಲಿ ಕೂಡ ಗಾಡಿಗಳನ್ನು ಹಿಂದಿನ ಸಾಲಿನಲ್ಲಿ (Second line) ನಿಲ್ಲಿಸುವರು. ರಾತ್ರಿ ಕಾಲದಲ್ಲಿ 'ಪ್ಲ್ಯಾಟಫಾರ್ಮ'ನಲ್ಲಿ ದೀಪ ಸಹ ಇರದೇ, ಹಿಂದಿನ ಸಾಲಿನಲ್ಲಿ ನಿಲ್ಲಿಸಿದ ಗಾಡಿಗಳನ್ನೂ ಅದರಿಂದ ಪ್ರವಾಸಿಕರಿಗಾಗುವ ತೊಂದರೆಗಳನ್ನೂ ನಾವು ಹುಬ್ಬಳ್ಳಿಯಲ್ಲಿ ಇದೇ ತಾ॥ ೨೨ನೇ ಪ್ರತ್ಯಕ್ಷವಾಗಿ ಕಂಡಿರುವೆವು. ಧಾರವಾಡ ಜಿಲ್ಲೆಯ ತಾಲೂಕಗಳು

ಗದಗ ಹುಟಗಿ ಮಾರ್ಗದಲ್ಲಿರುವುದರಿಂದ ಜಿಲ್ಲೆಯ ಮುಖ್ಯಸ್ಥಳವಾದ ಧಾರವಾಡದಿಂದ ಈಮಾರ್ಗಗಳಲ್ಲಿರುವ ಸ್ಟೇಶನ್ನಗಳಿಗೆ ಬರಹೋಗುವ ಜನರು ವಿಶೇಷವಾಗಿರುವರು. ಇಂತಹ ಪ್ರವಾಸಿಕರೆಲ್ಲ ಗದಗ ಹಾಗೂ ಹುಬ್ಬಳ್ಳಿಗಳಲ್ಲಿ ಗಾಡಿಗಳನ್ನು ಬದಲು ಮಾಡಬೇಕಾಗುವದು. ಒಂದೇ ಗಾಡಿಯು ಮಾತ್ರ ಹುಬ್ಬಳ್ಳಿಯಲ್ಲಿ ಬದಲಾಗದಿದ್ದರೂ ಪ್ರವಾಸಿಕರ ಕಷ್ಟಗಳು ತಪ್ಪುವದಿಲ್ಲ. ಯಾಕೆಂದರೆ ಎಲ್ಲರೂ ಅದೊಂದೇ ಗಾಡಿಗೆ ಹೋಗುವದು ಹೇಗೆ? ಇದಲ್ಲದೆ ಗದಗಿನಲ್ಲಿಯಂತೂ ಬದಲು ಮಾಡಲೇ ಬೇಕಾಗುವದು. ಈ ಕಷ್ಟಗಳನ್ನು ತಪ್ಪಿಸುವದು ಸುಲಭವಾಗಿದ್ದರೂ ಕಂಪನಿಯ ದೇವತೆಗಳು ಸಂತುಷ್ಟರಾಗಲೊಲ್ಲರು. ಹುಟಗಿಯಿಂದ ಹೊರಡುವ ಎರಡು ಗಾಡಿಗಳೂ, ಬಾಗಲಕೋಟೆಯಿಂದ ಹೊರಡುವ ಗಾಡಿಯೂ, ಗದಗಿನಲ್ಲಿ ನಿಲ್ಲಿಸಲ್ಪಡುವವು. ಆ ಡಬ್ಬಿಗಳು ಮುಂದೆ ಪ್ರಯಾಣವನ್ನೂ ಮಾಡುವಂತಿಲ್ಲ. ಸುಮ್ಮನೇ ಗದಗು ಸ್ಟೇಶನ್ನಗಳಲ್ಲಿ ಅವನ್ನು ನಿಲ್ಲಿಸುವದರ ಬದಲು, ಅವನ್ನೇ ಹುಬ್ಬಳ್ಳಿಯಲ್ಲಿ ಸಹ ಬದಲುಮಾಡದಂತೆ ಧಾರವಾಡದ ವರೆಗೆ ಒಯ್ದರೆ, ಕಂಪನಿಗೆ ಯಾವರೀತಿಯಿಂದಲೂ ಹಾನಿಯಿಲ್ಲ. ಇತ್ತ ಜನರಿಗೂ ಅನುಕೂಲವಾಗುವದು. ಆದರೆ ಇಷ್ಟೆಲ್ಲ ಸೌಕರ್ಯಗಳು ಪ್ರವಾಸಿಕರಿಗುಂಟಾದರೆ ಜನರಿಗೆ ಸುಖವಾಗುವದನ್ನು ರೇಲವೇ ಕಂಪನಿಯವರು ಸಹಿಸುವದು ಹೇಗೆ?

ಧಾರವಾಡದ ಪತ್ರವು

[ನಮ್ಮ ಸುದ್ದಿಗಾರನಿಂದ]

ಧಾರವಾಡದಲ್ಲಿ ಒಂದಿಲ್ಲೊಂದು ಚಟುವಟಿಕೆಯು ಇದ್ದೇ ಇರುವುದು. ಆದುದರಿಂದ ಅದಕ್ಕೆ ಚಟುವಟಿಕೆಗಳ ಕೇಂದ್ರವೆಂದೆನ್ನಲು ಏನೂ ಪ್ರತ್ಯವಾಯವಿಲ್ಲ. ಬಳ್ಳಾರಿಯಿಂದ ಕೆ. ಗುರುರಾಜರವರು ಬಂದು ಮೊನ್ನಿನ ಶನಿವಾರ ಕುಮಾರವ್ಯಾಸನ ಮಹಾಭಾರತದಲ್ಲಿಯ ದ್ರೌಪದಿಯ ಸ್ವಭಾವ ನಿರೂಪಣದ ಬಗ್ಗೆ ನುಡಿದರು. ಮರುದಿವಸ ರವಿವಾರ ಅವರೇ ಕಟ್ಟಿ ಕಾಲೇಜಿನಲ್ಲಿ ಮಹಾಭಾರತದೊಳಗಣ ಕೀಚಕವಧವನ್ನೊಳಗೊಂಡ ಭಾಗವನ್ನು ಓದಿ ತೋರಿಸಿದರು. ಅರ್ಥವಾಗುವಂತೆ ಲಲಿತವಾಗುವಂತೆ ಹೇಗೆ ಪದ್ಯಗಳನ್ನು ಹೇಳಬೇಕೆಂಬುದು ಅವರ ಓದುವಿಕೆಯಿಂದ ಗೊತ್ತಾಗುವಂತಿದ್ದಿತು. ಅದೇದಿವಸ ಸಾಯಂಕಾಲಕ್ಕೆ ಬ್ಯಾಂಕಿನ ಸುಂದರವಾದ ಕಟ್ಟಡದಲ್ಲಿ ಬೆಂಗಳೂರಿನ ರಾಷ್ಟ್ರೀಯ ಶಾಲೆಯ ಮುಖ್ಯಾಧ್ಯಾಪಕರಾದ ಶ್ರೀ. ಸಂಪದ್ಗಿರಿರಾಯರು 'ಕರ್ನಾಟಕತ್ವ' ವೆಂಬ ವಿಷಯದ ಬಗ್ಗೆ ಉಪನ್ಯಾಸವನ್ನು ಮಾಡಿದರು. 'ಕರ್ನಾಟಕ' 'ಕರ್ನಾಟಕ' ಎಂದು ಕೂಗಿದರೆ, ಭಾರತದ ಗತಿಯೇನು? ನಿಮ್ಮ ವಿಚಾರಗಳು ಸಂಕುಚಿತವಾದವುಗಳು; ನಿಮ್ಮಲ್ಲಿ ದೂರದೃಷ್ಟಿಯಿಲ್ಲ ಔದಾರ್ಯವಿಲ್ಲ ಎಂದು ಹಲವರು ಕನ್ನಡಿಗರನ್ನು ಹಳಿಯುವರು. ಸ್ವರಾಜ್ಯಕ್ಕೆ ಅಡ್ಡಿಯನ್ನುಂಟುಮಾಡುವವರಲ್ಲಿ ಕನ್ನಡಿಗರ ಹೆಸರು ಮುಂದೆಬರುವುದೆಂದು ಪ್ರತಿಪಾದಿಸುವರು ಇದೆಲ್ಲ ತಪ್ಪೆಂದು ವ್ಯಾಖ್ಯಾನಕಾರರು ಯುಕ್ತಿ ಯುಕ್ತವಾಗಿ ನುಡಿದರು. 'ನಾವು ಸ್ವಾವಲಂಬಿಗಳಾಗಿ, ಸಂಸ್ಕೃತಿಯನ್ನು ಕಾಯ್ದುಕೊಂಡು ನಮ್ಮ ನೆರೆಹೊರೆಯವರನ್ನು ರಕ್ಷಿಸಿಕೊಂಡರೆ, ನಮ್ಮಲ್ಲಿ ಶಕ್ತಿಯುಳಿಯುವುದು. ನೆರೆಹೊರೆಯವರ ಸೇವೆಮಾಡುವುದರಿಂದ ಎಲ್ಲ ಭರತಖಂಡದ ಸೇವೆಯು ತಾನಾಗಿಯೇ ಆಗುವುದು. ಭರತಖಂಡದ ಸೇವೆಮಾಡಿರಿ ಎಂದೊಡನೆ ಮನಸ್ಸು ದಿಙ್ಮೂಢವಾಗುತ್ತದೆ. ಅದರ ಸೇವೆಯನ್ನು ಹೇಗೆ ಮಾಡಬೇಕು? ಎಲ್ಲಿ ಮಾಡಬೇಕು? ಎಷ್ಟುಮಟ್ಟಿಗೆ ಮಾಡಬೇಕು?' ಎಂಬುದರ ಎಲ್ಲಿಯೂ ತಿಳಿಯದಂತಾಗುವುದು. ಒಂದು ಸ್ಥಾನಕ್ಕೆ ಒಂದು ಕೇಂದ್ರ ಶಾಸನವು ಬೇಕು. ಅವಕ್ಕೆ ಅಧೀನವಾಗಿ ಪ್ರಾಂತಿಕ ಶಾಸನ ಸಂಸ್ಥೆಗಳು ಬೇಕು. ಇವೆಲ್ಲ ಪೋಷಕ ಸಂಸ್ಥೆಗಳು ಹೀಗೆ ನೋಡಿಯೇ ಅಖಿಲ ಭಾರತ ಮಹಾಸಭೆಯು ಭಾಷೆಗನುಗುಣವಾಗಿ ಪ್ರಾಂತರಚನೆಗಳನ್ನೇರ್ಪಡಿಸಿತು. ಇಂತಹ ಪ್ರಾಂತಗಳಲ್ಲಿ ಕರ್ನಾಟಕವು ಒಂದಾಗಿದೆ. ಕರ್ನಾಟಕದ, ತನ್ನ ಕರ್ನಾಟಕತ್ವವನ್ನು ಎಂದರೆ ತನ್ನ ಸಂಸ್ಕೃತಿ, ತನ್ನ ಧರ್ಮ, ತನ್ನ ಕಲೆ, ತನ್ನ ವ್ಯವಸಾಯ, ತನ್ನ ಶಿಲ್ಪ, ತನ್ನ ರಾಜಕೀಯ ಸ್ಥಿತಿ ಮೊದಲಾದವುಗಳನ್ನು ರಕ್ಷಿಸಿಕೊಂಡು ಬೆಳೆಯಲಿಲ್ಲವೆಂದರೆ, ಭಾರತದ ಪ್ರಗತಿಗೆ ಅದೊಂದು ಅಡ್ಡ ಕೋಲಾಗುವುದು ಆದ್ದರಿಂದ ಕನ್ನಡಿಗರು 'ಕರ್ನಾಟಕ' 'ಕರ್ನಾಟಕ'ವೆಂದು ಅಭಿಮಾನತೊಟ್ಟು ಕೆಲಸಮಾಡುವುದು ಯಥಾಯೋಗ್ಯವಾದುದೂ, ಎಲ್ಲ ಪ್ರಾಂತಗಳಿಗೂ ಹಿತಕರವಾದುದೂ ಇರುವದೆಂಬ ಮಾತನ್ನು ಯಾರೂ ಮರೆಯಕೂಡದು. ಎರಡನೆಯವರಲ್ಲಿ ನಮಗೇನೂ ದ್ವೇಷವಿಲ್ಲ. ನಮ್ಮಲ್ಲಿ ಭ್ರಾತೃತ್ವವನ್ನು ಬೆಳೆಯಿಸಿ, ಅನ್ಯರೊಡನೆ ಭ್ರಾತೃಭಾವದಿಂದಿರುವುದೇ ನಮ್ಮ ಗುರಿ. ಈ ತೆರದಿಂದ ಅವರು ಭಾಷಣ ಮಾಡಿದರು.

ಕರ್ನಾಟಕ ಕಾಲೇಜದ ತರುಣರು ಮಾಸ್ತಿ ವೆಂಕಟೇಶ ಯ್ಯಂಗಾರರು ಬರೆದ ತಾಳೀಕೋಟೆ ಎಂಬ ಐತಿಹಾಸಿಕ ನಾಟಕವನ್ನು ಅದೇದಿವಸ ರಾತ್ರಿಯಲ್ಲಿ ಅನ್ನಪೂರ್ಣಾ ನಾಟಕ ಗೃಹದಲ್ಲಿ ಆಡಿ ತೋರಿಸಿದರು. ಶ್ರೀ ರೊದ್ದ ಪ್ರಿನ್ಸಿಪಾಲ ಹ್ಯಾಂಪ್ಟನ್ ಪ್ರೋ. ಘೋಪೇಶ್ವರ ಮೊದಲಾದವರು ನಾಟಕಗೃಹದಲ್ಲಿ ಮಂಡಿತರಾಗಿದ್ದರು. ನಾಟಕವು ಹೊಸದಿದ್ದು, ಎಲ್ಲ ಜನರಿಗೂ ಪ್ರಿಯವಾಯಿತು. ನಾಟಕದಲ್ಲಿ ಜೀವವಿದೆ; ಹೊಸ ದೃಷ್ಟಿಯಿದೆ ವಕ್ರೋಕ್ತಿಗಳು ಇರುವದರಿಂದ ಸಾಮಾನ್ಯಜನರಿಗೆ ಇದು ರುಚಿಸಲಾರದೆಂದು ಕೆಲವರ ಮತ. ಎಲ್ಲ ತರುಣರು ತಮ್ಮ ತಮ್ಮ ಪಾತ್ರಗಳನ್ನು ಒಳಿತಾಗಿ ಮಾಡಿದರು. ವಿಶೇಷತಃ ರುಸ್ತುಮನ ಪಾತ್ರವನ್ನು ವಹಿಸಿದ ಕುಲಕರ್ಣಿಯವರು ಪ್ರೇಕ್ಷಕರ ಮನಸೆಳೆಯುವಂತೆ ನಟಿಸಿದರು. ತಮ್ಮ ಅಭ್ಯಾಸದಲ್ಲಿ ಬಿಡುವನ್ನುಂಟುಮಾಡಿಕೊಂಡು, ಕಾಲೇಜದತರುಣರು ಸಂಘಸೇವೆಯನ್ನೂ ಸಮಾಜ ಸೇವೆಯನ್ನೂ ಮಾಡುತ್ತಿರುವದು ಆದರ್ಶಭೂತವಾದ ಮಾರ್ಗ. ನಾಟಕವು ಕರ್ನಾಟಕ ಸಂಘದ ಸೇವೆಗಾಗಿ ಇದ್ದಿತು. ಅದರ ಉತ್ಪನ್ನವು ಸುಮಾರು ೫೦೦ ಆಗಿರಬಹುದು. ಇನ್ನೊಂದು ಹೊಸನಾಟಕವನ್ನು ಕಾಲೇಜಿನ ಸಮ್ಮೇಳನಕ್ಕಾಗಿ ಮಾಡಲಿರುವರು.

ಡಾ. ಹಾರ್ಡಿಕರರು ಬಳ್ಳಾರಿಯಲ್ಲಿ ಪ್ರತಿಜ್ಞೆ ತೊಟ್ಟಂತೆ ತಮ್ಮ ಕಾರ್ಯವನ್ನು ಜರಗಿಸಿರುವರು ಹೇಳಿದಷ್ಟು ಸ್ವಯಂಸೇವಕರನ್ನೂ ದ್ರವ್ಯವನ್ನು ಕೂಡಿಸಿರುವರೆಂದು ಹೇಳಲು ಏನೂ ಅಭ್ಯಂತರವಿಲ್ಲ ಮನಮುಟ್ಟಿ ಸೇವೆ ಮಾಡಿದ್ದಕ್ಕಾಗಿ ನಾವು ಹಾರ್ಡಿಕರರನ್ನು ಅಭಿನಯಿಸುವೆವು. "ಜನರಲ್ಲಿ ಉತ್ಸಾಹವಿಲ್ಲ. ಸ್ವಯಂಸೇವಕರು ದೊರಕುವದು ದುರ್ಲಭ. ಹಣವು ಸಿಕ್ಕುವದಂತೂ ದೂರವೇ" ಎಂದು ಕೆಲಸ ಮಾಡಲೆದಲ್ಲದವರೇ ನುಡಿಯುವರು. ಸಾಹಸಕ್ಕೆ ಸಿರಿಯೊಲಿಯುವಳು. ಜನರು ತಮ್ಮ ಹೇಡಿತನದಿಂದ ನಾಡಿನ ಹಿತವನ್ನೇ ಹಾಳು ಮಾಡುವರು. ಇನ್ನು ಮೇಲೆ ಬುದ್ಧಿಯ ಬಂಡನ್ನೆಬ್ಬಿಸದೆ, ಆಲಸ್ಯಕ್ಕೆ ಎಡೆಗೊಡದೆ, ದೊಡ್ಡವರೆನ್ನುವರು ಕೆಲಸದಲ್ಲಿ ತೊಡಗಬೇಕು. "ಕರ್ತವ್ಯ ಮಾಡುವುದೇ ನಿಜವಾದ ಧರ್ಮವು" ಎಂದು ನಂಬಿ ನಡೆಯಬೇಕು. ಅದರಲ್ಲಿ ಸಿದ್ಧಿಯಿರುವದು. ಮಂಗಳೂರು ಎಲ್ಲ ರೀತಿಯಿಂದಲೂ ಚೆನ್ನಾಗಿ ಕೆಲಸ ಮಾಡಿದೆ. ವಿಜಾಪೂರವು ಬಹಳ ಹಿಂದುಳಿದಿದೆ. ಒಮ್ಮೆ ವಿಜಾಪುರಕ್ಕೆ ಅಗ್ರಸ್ಥಾನವಿದ್ದಿತು. ಈಗ ಹೀಗಾಗಲು ಏನು ಕಾರಣ

ಸಿಗಬಹುದು? ಅಲ್ಲಷ್ಟು ಇಲ್ಲೊಬ್ಬ ವೀರನು ಮಾತ್ರ ಪರಿಸ್ಥಿತಿಯ ಪ್ರತಿಕೂಲತೆಗಳೊಡನೆ ಹೋರಾಡುತ್ತಿರುವ. ಉಳಿದವರೆಲ್ಲರೂ ಎಲ್ಲಿ ಹೋಗಿರುವರೋ ಏನೋ? ಮಾತಾಡುವ ವಲ್ಲರೇ ನಿಮಗೆ ದೂರಿನಿಂದ ಶರಣು. ಕರ್ಮವೀರರೇ ನಿಮಗೆ ಆದರದ ಕಂಬನಿಗಳು

(೫ ನೇ ಪುಟದಿಂದ ಬಂದುದು)

ರುಗಳು ಬಂದರೆ ಲಗ್ನ ಸಮಾರಂಭದ ಖರ್ಚು ಹ್ಯಾಗೆ ತುಂಬಿ ಬರುವದಿಲ್ಲವೋ ಹಾಗೆ ವರ್ಗಣಿದಾರರ ಕಡೆಯಿಂದ ವ್ಹಿ ಪಿ ಮನಿಆರ್ಡರದ್ವಾರ ಬರುವ ಹಣದಿಂದ ವರ್ತಮಾನಪತ್ರ ಹೊರಡಿಸುವ ಖರ್ಚು ತುಂಬಿ ಬರುವದಿಲ್ಲ. ಬಂಗಳೂರಿನ ರಂಗಭೂಮಿ ಮಾಸಿಕ ಪುಸ್ತಕಕರ್ತರು ಒಮ್ಮೆ ಸಂಪಾದಕರ ಕಷ್ಟಗಳನ್ನು ವರ್ಣಿಸುವಾಗ್ಗೆ "ಪಾಪರ (ಬಡವ) ನಾಗಬೇಕಾದರೆ ಪೇಪರ (ವರ್ತಮಾನಪತ್ರ) ಹೊರಡಿಸಬೇಕು " ಎಂದು ಬರೆದಿದ್ದರು ಇದು ಸರ್ವಶಃ ನಿಜವಿರುತ್ತದೆಂದು ಎಲ್ಲ ವರ್ತಮಾನಪತ್ರ ಸಂಪಾದಕರು ಒಪ್ಪಂಬಡದೆ ಇರಲಾರರು. ವರ್ತಮಾನಪತ್ರಕಾರರು ದೇಶಸೇವೆ, ಸಮಾಜಸೇವೆ ಮತ್ತು ಭಾಷಾಸೇವೆ ಎಂಬ ತಮ್ಮ ಹುರುಪಿನ ದೆಸೆಯಿಂದ ಅಥವಾ ಹುಚ್ಚುತನದ ದೆಸೆಯಿಂದ ವರ್ತಮಾನಪತ್ರ ತೆಗೆಯಬೇಕಲ್ಲದೆ ಅದರಿಂದ ನಾಲ್ಕು ದುಡ್ಡು ಗಳಿಸಬಹುದೆಂಬದನ್ನು ಯಾರೂ ಕನಸುಮನಸಿನಲ್ಲಿ ಸಹ ತರಬಾರದು ತಾವು ಕೈಯಿಂದ ಹಾಕಿದ ದುಡ್ಡು ತಿರುಗಿ ಬಂದರೆ ಅವರಷ್ಟು ಧೈವಶಾಲಿಗಳು ಯಾರೂ ಇಲ್ಲವೆಂತಲೇ ತಿಳಿಯಬೇಕು. ಯಾರಿಗ ಹೆಚ್ಚು ಸಾಲ ಕಡಿಮೆ ಸಾಲ ಈ ಪ್ರಕಾರ ಬೆನ್ನುಹತ್ತಿದ್ದೇ ಇರುವದು. ಅದನ್ನು ಯಾರಿಗೂ ಬಿಡಿಸಲಿಕ್ಕೆ ಆಗಲಾರದು. ಇಂಥ ಸ್ಥಿತಿಯಲ್ಲಿ ಯಾವ ವರ್ತಮಾನ ಪತ್ರಗಳಿಗೇ ಆಗಲಿ, ಯಾವ ಮಾಸಿಕ ಪುಸ್ತಕಗಳಿಗೇ ಆಗಲಿ, ದೀರ್ಘಾಯುಷ್ಯವನ್ನು ಬಯಸುವದೆಂದರೆ ಅವರ ಮನೆಮಾರು ಹಾಳಾಗಲೆಂದು ಬಯಸಿದಂತೆ ಎಂದು ಯಾವನೊಬ್ಬ ವಿನೋದಿ ಮಿತ್ರನು ಚೇಷ್ಟೆಯನ್ನು ಮಾಡಿದರೆ ಅದು ತಪ್ಪಾಗಲಾರದು. ಆದ್ದರಿಂದ ವರ್ತಮಾನ ಪತ್ರಗಳನ್ನು ತರಿಸಿಕೊಳ್ಳುವವರು "ನಿಮ್ಮ ವರ್ತಮಾನಪತ್ರವು ಎಷ್ಟು ವರ್ಷ ನಡೆಯುವದು? " ಎಂದು ಪ್ರಶ್ನೆ ಕೇಳಿ ತರಿಸಿಕೊಳ್ಳಬಾರದು. ಲಗ್ನ ಸಮಾರಂಭವು ನಡೆದಷ್ಟು ದಿವಸ ಹೋಳಿಗೆ ತುಪ್ಪದಲ್ಲಿ ಕೈತೊಳಕೊಂಡಂತೆ ವರ್ತಮಾನಪತ್ರ ಹೊರಡುವಷ್ಟು ದಿವಸ ವರ್ತಮಾನ ಪತ್ರವನ್ನು ತರಿಸಿಕೊಂಡು ಅದರಲ್ಲಿ ಓದತಕ್ಕಂಥ ವಿಷಯಗಳಿದ್ದರೆ ಅವುಗಳನ್ನು ಓದಿ ಆನಂದಪಡಬೇಕು. ಯಾವಾಗ್ಗೆ ವರ್ತಮಾನಪತ್ರವು ನಿಂತು ಹೋಗುವದೋ ಆಗ್ಗೆ ಆ ವರ್ತಮಾನಪತ್ರವು ಚನ್ನಾಗಿ ಹೊರಡುತ್ತಿದ್ದ ಪಕ್ಷದಲ್ಲಿ ಕಂಬನಿಗಳನ್ನು ಸುರಿಸಬೇಕು ಅದು ಕೆಟ್ಟ ವರ್ತಮಾನಪತ್ರವಿದ್ದರೆ ಮತ್ತು ಅದು ತಮಗೆ ಬೇಡಾಗಿದ್ದರೆ ನಕ್ಕು ಚಪ್ಪಾಳೀ ಹೊಡಿಯಬೇಕು. ಜಗತ್ತೇ ಈ ರೀತಿಯಿಂದ ನಿರ್ಮಾಣವಾಗಿರವಾಗ ಜಗತ್ತನ್ನು ಯಾರು ತಿದ್ದಲು ಸಮರ್ಥರು?

——ಚಂದ್ರೋದಯ

ರಾಜಮಾನ್ಯ ರಾಜಶ್ರೀ ಸಂಪಾದಕ ಕನ್ನಡಿಗ ಇವರಿಗೆ—

ತಾವು ಮೊನ್ನಿನ 'ಕನ್ನಡಿಗ' ದ ಸಂಚಿಕೆಯಲ್ಲಿದ್ದ 'ಪುಣ್ಯಕ್ಷೇತ್ರ' ಪರಿಚಯ ವೆಂಬ ಲೇಖದಲ್ಲಿ ಚೌಕ ಶಬ್ದವು ಅಚ್ಚಗನ್ನಡ ವಿದೆಯೆಂದು ವಿಧಾನವನ್ನು ಮಾಡಿರುವಿರಿ. ಆದರೆ ಅದು ನಿರಾಧಾರವಾಗಿರುತ್ತದೆ. ಚೌಕಎಂಬಶಬ್ದವು ಸಂಸ್ಕೃತ ಚತುಷ್ಕ ಎಂಬ ಶಬ್ದದ ತದ್ಭವವಿದ್ದು ಅದನ್ನು ಮರಾಠಿಯಲ್ಲಿಯೂ ಕನ್ನಡದಲ್ಲಿಯೂ ಮತ್ತು ಎರಡನೇ ಹಲವು ಭಾಷೆಗಳಲ್ಲಿಯೂ ಉಪಯೋಗಿಸುತ್ತಾರೆ. ಆದ್ದರಿಂದ ಅದು ಅಚ್ಚಗನ್ನಡ ಶಬ್ದ ಅಲ್ಲೆಂಬುದು ತಮಗೆ ತಿಳಿಯಬಹುದು

ಬಾಗಲಕೋಟೆ.
೨೦-೮-೧೯೨೬

ವಿನಾಯಕ ಪಟವರ್ಧನ

('ಚತುಷ್ಕದ ತದ್ಭವವೇ ಚೌಕಿ' ಎಂಬುವದು ಸರಿಯಿದೆ. ತದ್ಭವ ರೂಪವನ್ನು ಹೊಂದಿ ಕನ್ನಡಕ್ಕೆ ಬಂದು ಆಮೇಲೆ ಮರಾಟೀ ಮೊದಲಾದವುಗಳಲ್ಲಿ ಸೇರಿರಬೇಕೆಂದೂ ಆಮೇಲೆ ಉಳಿದ ಭಾಷೆಗಳಲ್ಲಿಯೂ ಪ್ರಚಾರ ಪಟ್ಟಿರಬಹುದೆಂದೂ ನಂಬೂಣ. ಯಾಕೆಂದರೆ ಚೌಕಿ ಚೌಕ, ಚೌಕಟ್ಟು, ಚೌಕದಕುಪ್ಪ, ಚೌಕಳಿಸೀರೆ ಹೀಗೆ ಅನೇಕ ಬಗೆಯಿಂದ ಈ ಚೌಕಶಬ್ದವು ಕನ್ನಡದಲ್ಲಿ ವ್ಯಾಪಕವಾಗಿದೆ. ಇದೇ ಬಗೆಯ ವ್ಯಾಪಕತ್ವವು ಉಳಿದ ದೇಶಭಾಷೆಗಳಲ್ಲಿ ಕಂಡು ಬರುವದಿಲ್ಲ. ಬಸವ ಪುರಾಣದಲ್ಲಿಯೂ 'ಚೌಕ' ಶಬ್ದವು ಉಪಯೋಗಿಸಲ್ಪಟ್ಟಿದೆ ಆದರಿಂದ ಬಹುದಿನಗಳಿಂದ ಈ ಶಬ್ದವು ಕನ್ನಡದಲ್ಲಿ ಸೇರಿಕೊಂಡದ್ದು ಸಿದ್ಧವಾಗುತ್ತದೆ — ಸಂ ಕ)

ವಾಙ್ಮಯ ಪರಿಚಯ.

ಮುಂಬೈ ಇಲಾಖೆಯ ತ್ರೈಮಾಸಿಕ ಗ್ರಂಥ ಪ್ರಕಟನೆಗಳ ಯಾದಿಯು ಪ್ರಸಿದ್ಧವಾಗಿದೆ. ಈ ಅವಧಿಯಲ್ಲಿ ಒಟ್ಟು ೯೪೬ ಪ್ರಕಟನೆಗಳಿದ್ದು ಕನ್ನಡದ ಪಾಲಿಗೆ ಒಟ್ಟು ೧೬ ಮಾತ್ರ ಬಂದಿವೆ. ಬಾಲಕರಿಗಾಗಿ ಬರೆದ ಚಿಬಿಚಕ್ರವರ್ತಿಯೆಂಬುದೊಂದು ೨ ಆಣೆ ಬೆಲೆಯುಳ್ಳ ಚಿಕ್ಕ ಪುಸ್ತಕವು ನಾಟಕ ಶಾಖೆಯಲ್ಲಿ ಮಹಾ ನಾಟಕವೆಂದು ಪ್ರಕಟವಾಗಿದೆ. ಮರಾಟೀ ಚಿತ್ರಮಯ ಜಗತ್ತಿನಲ್ಲಿ ಪ್ರಕಟವಾಗಿ ಕನ್ನಡಿಸಲ್ಪಟ್ಟ ಶ್ರೀ ಬಸವೇಶ್ವರ ಎಂಬುದು ಚರಿತ್ರೆಯ ಭಾಗದಲ್ಲಿ (೩ಆಣೆ ಬೆಲೆಯುಳ್ಳದ್ದು) ಮಹಾಚರಿತ್ರೆಯಾಗಿದೆ. ಉಳಿದವು "ಅವ್ಯಕ್ತಗ"ಳಾಗಿವೆ; ಇಲ್ಲವೇ ದಾಸರ ಅಥವಾ ಶರಣರ ಪದಗಳಿವೆ. ಅವುಗಳಲ್ಲಿ 'ಭಾವಗೀತೆ'ಯು ಮಾತ್ರ ಮಹತ್ವದ್ದಾಗಿದೆ. ಒಟ್ಟಿಗೆ ಮುಂಬೈ ಕರ್ನಾಟಕದಲ್ಲಿ ವಾಙ್ಮಯದ ಓಟವು ಎಷ್ಟು ರಭಸದಿಂದ ಸಾಗಿದೆನ್ನುವುದನ್ನು ಎಲ್ಲರೂ ತಿಳಿದುಕೊಂಡು ಆಶ್ಚರ್ಯಗೊಳ್ಳಬೇಕು. ಮರಾಟೀ, ಗುಜರಾಥೀ, ಸಿಂಧೀ, ಇಂಗ್ಲೀಷ ಭಾಷೆಗಳಲ್ಲಿ ಪ್ರಕಟವಾದ ಮಾಸಿಕ ಪುಸ್ತಕಗಳು ಪ್ರತಿ ತ್ರೈಮಾಸಿಕದಲ್ಲಿಯೂ ಈ ಯಾದಿಯಲ್ಲಿ ಸರಕಾರದಿಂದ ಪ್ರಕಟಿಸಲ್ಪಡುತ್ತವೆ. ಆದರೆ ಕನ್ನಡವು ಮಾತ್ರ ಈ ನಿಯಮಕ್ಕೆ ಅಪವಾದವಾಗಿರಲೆಂದು ನಮ್ಮ ಮುಂಬೈ ಸರಕಾರದ ಶಿಕ್ಷಣಖಾತೆಯವರು ನಿರ್ಣಯಿಸಿದಂತೆ ತೋರುತ್ತದೆ. ಈ ಬಗ್ಗೆ ನಾವು ಹಿಂದಕ್ಕೆ ಒಂದೆರಡು ಸಲ ಬರೆದಿದ್ದರೂ ಸರಕಾರದ ಲಕ್ಷ್ಯವು ಅತ್ತ ಹೋಗಿಲ್ಲ. ಕನ್ನಡವೆಂದರೆ ಸರಕಾರಕ್ಕೆ ಕಾಲು ಕಸ. ಕನ್ನಡಿಗರೆಂದರೆ ಹಿಂದುಳಿದವರು ಅಂದಮೇಲೆ ಸರಕಾರವು ಇತ್ತ ತನ್ನ ಅಮೌಲ್ಯವಾದ ವೇಳೆಯನ್ನು ಏಕೆ ವ್ಯರ್ಥವಾಗಿ ವ್ಯಯಮಾಡಬೇಕು? ಶಿಕ್ಷಣ ಮಂತ್ರಿಗಳ ಉತ್ತರವು ಇಷ್ಟೇ. ಅದೂ ಸರಿಯಿದೆ.

ಸ್ವೀಕಾರ.

(೧) **ಸ್ತ್ರೀ ವಿಷಪ್ರಕಾಶ** :- ಲೇಖಕರು ಡಾ. ಸ್ವಾಮಿ ಚಂದ್ರಶೇಖರ ಶಾಸ್ತ್ರಿ ಇಲಕಲ್ಲ. ಬೆಲೆ ೫ ಆಣೆ

(೨) **ಭಾರತ ಪೃಥ್ವಿಯ ನಕಾಶವು**:- ಬೀಳಗಿಯ ಬಿ. ಆರ್ ದೇಶಪಾಂಡೆಯವರಿಂದ ಪ್ರಕಟವಾದುದು. ಬೆಲೆ ೧ ರೂಪಾಯಿ.

(೩) **ಕಾಣದ ಕೈ** :- ಆನಂದ ಕಂದನು ಬರೆದುದು. ಗೆಳೆಯರ ಗುಂಪಿನಿಂದ ಧಾರವಾಡದಲ್ಲಿ ಪ್ರಕಟವಾಗಿರುವುದು. ಬೆಲೆ ೦-೧-೬

(೪) **ಉಪನಿಷತ್ ಪ್ರಕಾಶವು** ಭಾಗ ೧ ಧಾರವಾಡದ ಕರ್ಮವೀರರಾದ ಶ್ರೀ ದಿವಾಕರ ರಂಗರಾಯರಿಂದ ಕನ್ನಡಕ್ಕೆ ಪರಿವರ್ತಿಸಲ್ಪಟ್ಟಿದೆ ಬೆಲೆ ೦-೧೨-೦

ವಿಮರ್ಶೆಯು ಬೇಗನೇ ಪ್ರಕಟಿಸಲ್ಪಡುವುದು.

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ

(ಪುಟ ೧೪೬)

ಪ್ರಯಾಗದಲ್ಲಿ ಬರುವ ಸಂಸಾರಕ್ಕೆ ಬೇಕಾಗುವ ಅತ್ಯಾವಶ್ಯಕವಾದ ಸಲಕರಣೆ ಸಾಮಾನುಗಳು ಮಾತ್ರ ದೊರೆಯುವವು. ಉಳಿದ ಯಾವ ಪದಾರ್ಥವು ಬೇಕಾದರೂ ಅಲಹಾಬಾದಿನ ಚೌಕಿಗೆ ಓಡಬೇಕಾಗುವದು. ಪ್ರಯಾಗದಲ್ಲಿ ಹೊಸ ಮಾದರಿಯ ಕಟ್ಟಡ ಸಂಸ್ಥೆ ಮೊದಲಾದವು ಅಷ್ಟು ನೋಡತಕ್ಕಂಥವಿಲ್ಲ. ಆದರೆ ಪ್ರಯಾಗಕ್ಕೆ ಮುಖ್ಯವಾಗಿ ಹೋಗುವದು ಕ್ಷೇತ್ರ ವಿಧಿಗಾಗಿ. ಯಾತ್ರಿಕರಿಗೆ ಆವಶ್ಯವಿರುವ ಎಲ್ಲ ಧರ್ಮಸ್ಥಾನಗಳೂ, ತ್ರಿವೇಣಿ ಸಂಗಮವೂ, ಶುದ್ಧಗಂಗೆಯೂ, ಶುದ್ಧ ಯಮುನೆಯೂ ಪ್ರಯಾಗಕ್ಕೆ ಸಮೀಪದಲ್ಲಿರುವದರಿಂದ ಯಾತ್ರಿಕರೆಲ್ಲರೂ, ಪ್ರಯಾಗದಲ್ಲಿಯೇ ಇಳಿಯುವದುಂಟು.

ಶ್ರೀ ಕ್ಷೇತ್ರ ಪ್ರಯಾಗದಲ್ಲಿ ತ್ರಿವೇಣೀ ಸ್ನಾನ, ಮತ್ತೂ ಕ್ಷೇತ್ರ ವಿಧಿಗಳು ಎಲ್ಲ ಶಾಸ್ತ್ರೋಕ್ತರೀತಿಯೂ ಉಂಟು. ಆದರೆ, ಬಾಲಕರು, ಬಾಲಿಕೆಯರು, ಮುದುಕರು, ತರುಣರು, ಗೃಹಸ್ಥಾಶ್ರಮಿಗಳು, ಮುತ್ತೈದೆಯರು, ಸನ್ಯಾಸಿಗಳು, ವಿಧವೆಯರು ಹೀಗೆ ಹಿಂದೂ ಧರ್ಮದಲ್ಲಿಯ ಪ್ರತಿಯೊಬ್ಬ ವ್ಯಕ್ತಿಯೂ ತನ್ನ ಕೇಶಗಳನ್ನು ತ್ರಿವೇಣೀ ಸಂಗಮಕ್ಕೆ ಅರ್ಪಿಸಬೇಕೆಂಬುದು ಇಲ್ಲಿಯ ವಿಶೇಷ ಮಹಾತ್ಮ್ಯೆ. ಮುತ್ತೈದೆಯರ ವೇಣೀದಾನದ ಸಮಾರಂಭವು ಬಹು ವಿಜೃಂಭಣೆಯಿಂದ ನಡೆಯುತ್ತದೆ. ಇವರು ಹಳದಿಯ ಪತ್ತೇಲವನ್ನುಟ್ಟು ತಲೆಯಲ್ಲಿ ಗಂಡೆಯನ್ನು, ಹಣೆಯ ತುಂಬೆಲ್ಲ ಕುಂಕುಮವನ್ನು ಇಟ್ಟುಕೊಂಡು ಮನೆಯಲ್ಲಿ ಪುರೋಹಿತರ ಮುಖಾಂತರ ಪುಣ್ಯಾಹವಾಚನ ಮೊದಲಾದ ಕಾರ್ಯಗಳನ್ನು ತೀರಿಸಿಕೊಂಡು ವಾದ್ಯದೊಂದಿಗೆ ತ್ರಿವೇಣಿ ಸಂಗಮಕ್ಕೆ ಹೋಗುವರು. ಯಮುನೆಯಲ್ಲಿ ನೌಕೆಯನ್ನು ಹತ್ತಿ, ತ್ರಿವೇಣಿಗೆ ಹೋಗಬೇಕಾಗುವದರಿಂದ, ಮುಂದಿನ ನೌಕೆಯಲ್ಲಿ ವಾದ್ಯದವರೂ (ಪ್ರಯಾಗದಲ್ಲಿ [illegible] ಭಜಂತ್ರಿ ಬಾರಿಸುವರು) ಹಿಂದಿನ ನೌಕೆಯಲ್ಲಿ ತನ್ನ ಪತಿ ಆಪ್ತರೊಡನೆ ವೇಣೀದಾನಕೊಡತಕ್ಕ ಮುತ್ತೈದೆಯೂ ಕುಳಿತು ಹೋಗುವರು. ನೌಕೆಯಲ್ಲಿ ಕುಳಿತುಕೊಂಡೇ, ತ್ರಿವೇಣೀ ಸಂಗಮದಲ್ಲಿ ವೈದಿಕ ಮಂತ್ರ ತಂತ್ರಗಳೊಡನೆ ಪತಿಯು ತನ್ನ ಭಾರ್ಯೆಯ ಹೆರಳಿನ ತುದಿಯನ್ನು (ಅಜಮಾಸು ೨ ಇಂಚಿನಷ್ಟು) ಕತ್ತರಿಯಿಂದ ಛಿನ್ನಮಾಡುವನು. ಅದನ್ನು ಪ್ರಯಾಗವಾಳರು ತಮ್ಮ ಕೈಯಲ್ಲಿ ತೆಗೆದುಕೊಂಡು, ಅದಕ್ಕೇರಿಸಿದ, ಬಂಗಾರದ ಹೂವು ಮೊದಲಾದ್ದನ್ನು ತೆಗೆದುಕೊಂಡು, ತ್ರಿವೇಣಿಯಲ್ಲಿ ಒಗೆಯುವರು. ಕೂಡಲೆ ಆ ಕೇಶಗಳು ಮುಳುಗಿ ಹೋಗುವವು. ಸ್ತ್ರೀಯು ಪತಿವ್ರತೆಯು ಇಲ್ಲದಿದ್ದರೆ, ಕೇಶಗಳು ಮುಳುಗದೇ ತೇಲಿಹೋಗುವವಂತೆ! ಪತಿವ್ರತೆಯರಾದ ಮುತ್ತೈದೆಯರ ವೇಣೀದಾನದ ಕೇಶಗಳು ಪಾತ್ರತಳಕ್ಕೆ ಹೋಗುವವು. ಉಳಿದವರ ಕೂದಲುಗಳೆಲ್ಲ, ಕೂದಲುಗಳು ಸ್ವಾಭಾವಿಕವಾಗಿ ತೇಲುವಂತೆ, ತೇಲಿಹೋಗುವವು. ಇದೇ ಪ್ರಯಾಗ ಕ್ಷೇತ್ರದಲ್ಲಿಯ ತ್ರಿವೇಣೀ [illegible] ಐಶ್ವರ್ಯಕರವಾದ ಮಹಾತ್ಮೆಯು. ದಿನಾಲು ಅಸಂಖ್ಯ ಜನರು ತ್ರಿವೇಣಿಯಲ್ಲಿ ಹೀಗೆ ದಾನಕೊಡುವವರಾದ್ದರಿಂದ ನದಿಯ ದಂಡೆಯಲ್ಲಿ ಮುಂಜಾವಿನಿಂದ ಮಧ್ಯಾಹ್ನದವರೆಗೆ ವಾದ್ಯಗಳ ಸಪ್ಪಳವೂ, ನೌಕೆಗಳ [illegible]ವೂ, ದಕ್ಷಿಣೆಗಾಗಿ ಗಲಭೆಮಾಡುವ ಬ್ರಾಹ್ಮಣರ ಗುಂಪುಗಳೂ, ಹೂವು, ಕಾಯಿ, ಹಣ್ಣು ಕಂಪಲವನ್ನು ಮಾರುವ ಜನರ ಗೊಂದಲವೂ ಒಂದೇ ಸಮನೆ ಸಾಗಿರುತ್ತವೆ. ಇವು ಮುಂತಾದಾಗಿ, ಸ್ನಾನ, ಕ್ಷೇತ್ರವಿಧಿ, ಕ್ರಿಯಾಕರ್ಮ, ಶ್ರಾದ್ಧಗಳ ಸಲುವಾಗಿ, ಬಂದ ಸ್ತ್ರೀ ಪುರುಷರ ಪಂಗಡಗಳೂ, [illegible] (ಯಾಕೆಂದರೆ ಜೀವತ್ ಪಿತೃಗಳಾದವರಿಗೂ [illegible]) ಹಾರಾಟವೂ, [illegible] ದಂಡೆಯಲ್ಲಿ [illegible] ಮಾಡುತ್ತವೆ. ಪ್ರತಿಯೊಬ್ಬ ಪ್ರಯಾಗವಾಳನು ದಂಡೆಯಲ್ಲಿ ತನ್ನ ಧ್ವಜ ಪತಾಕೆಗಳೊಡನೆ ಒಂದು ಸ್ಥಾನವನ್ನು ಕಟ್ಟಿಕೊಂಡು, ಸುತ್ತಲೂ ಎತ್ತರವಾಗಿ ಚೌಕಿಗಳನ್ನು ಹಾಕಿಸಿ, ಅದರ ಮೇಲೆ ನೆರಳಿನ ಸಲುವಾಗಿ ಛತ್ರವ ಹಾಕಿ, ತನ್ನ ಸಹಾಯಕರೊಂದಿಗೆ ಕುಳಿತಿರುವನು. [illegible] ಈ ಪ್ರಯಾಗವಾಳರು ([illegible]; ಮೇಲಾಗಿ ಕಲಿಯುಗದ ೨೦ನೆ ಶತಮಾನ) ತಮ್ಮ ಸ್ವಾರ್ಥ [illegible] ಒಡಹುತ್ತಿರುವರು. ತಮ್ಮ [illegible] ದಲಾಲರನ್ನು ಕಳಿಸುವರು. ಈ ದಲಾಲನೂ ಪ್ರಯಾಗವಾಳನೂ, ಪುರೋಹಿತನೂ, ತನ್ನ ತನ್ನ ಬಾಬುಗಳನ್ನು ಮುಂದೆ [illegible] ಹೊಂದಿಸುತ್ತಾನೆ. ವೇಣೀದಾನದ ಸಮಯ ಶ್ರೀಮಂತ ಪ್ರಯಾಗವಾಳರು ಹೆಚ್ಚಾಗಿ [illegible] ಸುವರ್ಣ ಸಹಿತವಾದ ವೇಣಿಯ ತುದಿಯನ್ನು ಅವರಿಗೆ ಕೊಡಬೇಕಾಗುವದು. ಅಲ್ಲದೇ ವಸ್ತ್ರ ಧ್ವಜ [illegible] ದಕ್ಷಿಣೆ ಸಂಭಾವನೆ ಮೊದಲಾಗಿ ಅನೇಕ ಬಗೆಯ ದಾನಗಳಿಂದ ಯಾತ್ರಿಕರನ್ನು ಹಣ್ಣುಮಾಡುವರು. ಯಾತ್ರಿಕರಾದರೂ ಈ ಬಗೆಯ ತೊಂದರೆಗಳನ್ನು ದೂರಮಾಡಲಿಕ್ಕೆ, ಮೊದಲೆ, ಒಟ್ಟಾಗಿ ಇಷ್ಟು ಹಣವನ್ನು ನಾವು ಕೊಡತಕ್ಕವರು, ಅದರಲ್ಲಿ ಎಲ್ಲದಾನಗಳೂ, ದಕ್ಷಿಣೆಯೂ ಸಂಭಾವನೆಯೂ ಸೇರಿದಂತಾಯಿತೆಂದು ಕರಾರುಮಾಡಿಕೊಳ್ಳುವರು. ಈ ಕರಾರಕ್ಕೆ ಅವನೊಪ್ಪದಿದ್ದರೆ, ಬೇರೊಬ್ಬ ಪ್ರಯಾಗವಾಳನ ಕಡೆಗೆ ಹೋಗುವ ಅಂಜಿಕೆ ತೋರಿಸಿದ ಕೂಡಲೇ ಅವನು ಮೆತ್ತಗಾಗಬೇಕಾಗುವದು. ಮೊದಲೇ ಕರಾರು ಮಾಡದ ಪಕ್ಷದಲ್ಲಿ ತ್ರಿವೇಣೀ ದಾನದ ಸಮಯದಲ್ಲಿ ಕಾರ್ಯಕ್ಕೆ ಭಂಗವನ್ನುಂಟು ಮಾಡುವೆವೆಂಬ ಬೆದರಿಕೆ ಹಾಕಿ ಹೆಚ್ಚು ಹಣವನ್ನು ಎತ್ತಲು ಬಹು ವಿಧದಿಂದ ಕಾಡುವರು. ಇವರಿಗೆಲ್ಲ ಲಾಭವು ಹೆಚ್ಚಾಗಿರುವದರಿಂದಲೇ ತಮ್ಮ ದಲಾಲರನ್ನು ಜಬ್ಬಲಪೂರ, ಇಟಾರ್ಶಿ, ಭುಸಾವಳ, ಮನಮಾಡದವರೆಗೂ ಕಳಿಸಿ, ಯಾತ್ರಿಕರನ್ನು "ಕ್ಯಾನವಾಸ್" ಮಾಡುವರು. ಈ ಸ್ಟೇಶನ್ನುಗಳಿಂದ ಪ್ರಾರಂಭಮಾಡಿ, ಪ್ರಯಾಗಕ್ಕೆ ತಲ್ಪುವವರೆಗೆ ದಲಾಲರ "ಕ್ಯಾನವಾಸ"ದ ಹೋರಾಟವು ನೋಡತಕ್ಕಂಥದಿರುವದು. ಅಜ್ಞಾನವ ಯಾತ್ರಿಕರಿದ್ದರೆ ಅವರಿಗೆ ಬಹು ತೊಂದರೆಯಾಗುತ್ತದೆ. ಅಂಥ ದಲಾಲ-ದಲಾಲರ ಪ್ರತಿಸ್ಪರ್ಧೆಯ ಹೊಡೆದಾಟ, ಪುರೋಹಿತರ ಕಿತ್ತಾಟ, ಪ್ರಯಾಗವಾಳರ ಜಗ್ಗಾಟ, ಈ ತ್ರಿಕೂಟಗಳ ತೊಂದರೆಗಳ ನಿವಾರಣಾರ್ಥವಾಗಿ ಯಾತ್ರಿಕರು ಲೌಕಿಕದೃಷ್ಟಿಯಿಂದ ಮಾಡಬೇಕಾದ ಕರಾರುಗಳ ಹೊಯ್ದಾಟಗಳೆಲ್ಲ ಭಾವಿಕರಲ್ಲಿದ್ದ ಭಕ್ತಿ ಭಾವನೆಗಳಿಗೆ ಬೇಸರವನ್ನುಂಟುಮಾಡುವವು. ಇಷ್ಟು ದೂರದವರೆಗೆ ಧರ್ಮಬುದ್ಧಿಯಿಂದ ಬಂದರೂ, ನಮ್ಮ ಧರ್ಮ ಭಾವನೆಗಳಿಗೆ ತೃಪ್ತಿಯುಂಟಾಗದು. ಕ್ಷೇತ್ರ ಪುರೋಹಿತರ ಹೇಯವಾದ ಕೃತಿಗಳಿಂದ, ಭಕ್ತಿ ಭಾವನೆಗಳುಳ್ಳವರ ಮನಸ್ಸಿಗೆ ಬಹು ವ್ಯಥೆಯಾಗುವದು. ಯಾವಬಗೆಯ ಧರ್ಮ ಭಾವನೆಗಳಿಲ್ಲದೇ ಅನ್ಯರ ಆಗ್ರಹದಿಂದ, ಅಥವಾ ಸಮಾಜದ ಭಯದಿಂದ, "ಪಿತೃಗಳಿಗೇನೋ ಪಿಂಡವನ್ನೇನು ಒಪ್ಪಿಸಬೇಕಂತೆ, ಕಾಶಿಗೆ ಹೋಗಿ ಬಂದರಾಯಿತು; ದೂರದೇಶಗಳನ್ನು ನೋಡಲಿಕ್ಕಾದರೂ ಅವಕಾಶವಾಗುವದೆಂಬ" ವಿಚಾರಗಳಿಂದ ಹೊರಟ ೨೦ನೆಯ ಶತಮಾನದ "ಅರ್ಧ

ರ್ದ ಧರ್ಮಲಂಡ, ಪಿತ್ರುಲಂಡರಾದ" ಯಾತ್ರಿಕರಂತೂ ಇಂತಹ ಸಂಗತಿಗಳನ್ನು ನೋಡಿ, ಸಂಪೂರ್ಣವಾಗಿ ಧರ್ಮಲಂಡ ಪಿತ್ರುಲಂಡರೇ ಆಗುವರು. ಸ್ವೇಚ್ಛಾಚಾರಿಗಳೂ, ವಿಲಾಸಿಗಳೂ ವ್ಯಸನಿಗಳೂ ಆದ ಈಗಿನ ಜನರ ಕೃತಿಗಳಿಂದ ಅಂಜಿ ಅತಿತ್ರಸ್ತ ಬೆದರಿಕೊಂಡು, ಎಲ್ಲಿಯಾದರೂ ಹೃದಯದ ಮೂಲೆಯಲ್ಲಿ ಅಡಗಿಕೊಂಡು ಕುಳಿತಿದ್ದ, ಭಕ್ತಿ ವಿಶ್ವಾಸಗಳೆಲ್ಲ, ಯಾರ ಕಣ್ಣಿಗೂ ಕಾಣದಂತೆ ಹಾರಿಹೋಗಬೇಕಾಗುವದು. ಹಿಂದೂ ಧರ್ಮವು ಇಷ್ಟು ಅವನತಿಯ ಸ್ಥಿತಿಗೆ ಬಂದಿದ್ದರೂ, ಧರ್ಮದ ಮೂಲಸ್ತಂಭಗಳಾಗಿದ್ದಂತಹ ವೈದಿಕರು ಎಚ್ಚರಿಯರು; ಗೃಹಸ್ಥರೂ ಅವರನ್ನು ವಿಚಾರಿಸರು. ಧರ್ಮ ಗುರುಗಳಿಗಂತೂ ಇತ್ತ ಮನಸ್ಸೇ ಇಲ್ಲ. "ಕಲಿಯುಗದ ಮಹಿಮೆಯಯ್ಯಾ" ಎಂದುಸುರ್ಗರೆದು ಸುಮ್ಮನೇ ಕೂಡ್ರಬೇಕಷ್ಟೇ!

ತ್ರಿವೇಣೀ ಸಂಗಮದ ಸೃಷ್ಟಿಸೌಂದರ್ಯವು ಅತ್ಯಂತ ಪ್ರೇಕ್ಷಣೀಯವಿದೆ. ಇತ್ತ ಗಂಗೆಯ ಶೀಘ್ರಗತಿಯುಳ್ಳ ಶುದ್ಧವಾದ ಶುಭ್ರ ಪ್ರವಾಹವೂ, ಅತ್ತ ಯಮುನೆಯ ಅತ್ಯಂತ ಆಲ್ಹಾದಕರವಾದ (ಆಳವಾಗಿದ್ದರಿಂದ) ಮಂದಗತಿಯ, ಶ್ಯಾಮವರ್ಣದ ಪ್ರವಾಹವೂ, ಸಮ್ಮಿಲನವಾಗುವ ಸ್ಥಾನದ ರಮಣೀಯತೆಯನ್ನು ಪ್ರತ್ಯಕ್ಷವಾಗಿ ಅವಲೋಕಿಸಿಯೇ ನೇತ್ರಾನಂದ, ಹೃದಯಾನಂದಗಳನ್ನು ಹೊಂದಬೇಕಲ್ಲದೇ, ವರ್ಣನೆಗಳಿಂದೊದಗುವದಿಲ್ಲ. ಶ್ಯಾಮ ಶುಭ್ರ ವರ್ಣಗಳು ಭಿನ್ನವಾಗಿದ್ದ ನೋಟವು ಒಂದೆಡೆಯಲ್ಲಿ; ಎರಡೂ ವರ್ಣಗಳು ಕೂಡಿದ ಮಾತ್ರಕ್ಕೆ ಉಂಟಾದ "ಗಂಗಾ—ಜಮುನಾ" ಬಣ್ಣದ ನೋಟವು ಇನ್ನೊಂದೆಡೆಯಲ್ಲಿ; ಅವು ಸಮ್ಮಿಲಿತವಾಗುತ್ತಲಿರುವ ನೋಟವು ಮತ್ತೊಂದೆಡೆಯಲ್ಲಿ; ಸಂಪೂರ್ಣವಾಗಿಯೂ ಶ್ಯಾಮಶುಭ್ರವರ್ಣಗಳು ಮಿಶ್ರವಾಗಿದ್ದುದು ಸೊಗಸೊಂದೆಡೆಯಲ್ಲಿ; ನೌಕೆಯಲ್ಲಿ ಕುಳಿತು ಸಂಚರಿಸುತ್ತ ಹೋದಂತೆ ಈ ಭಿನ್ನಭಿನ್ನವಾದ ಸೌಂದರ್ಯಗಳು ಆನಂದವನ್ನೀಯುತ್ತ ಹೋಗುವವು; ಸಂಗಮವಾಣೆಯ ದಂಡೆಯಲ್ಲಿ ಸೋಮೇಶ್ವರ ದಿಬ್ಬವನ್ನು ಹತ್ತಿ ಎತ್ತರದಿಂದ ನೋಡಿದಲ್ಲಿ ಎಲ್ಲ ಸೌಂದರ್ಯಗಳು, ಏಕಕಾಲಕ್ಕೆ ಕಣ್ಣಿಗೆ ಬಿದ್ದು, ಅದೊಂದು ಬಗೆಯಿಂದ ಆನಂದವನ್ನುಂಟುಮಾಡುವವು. ಸಂಗಮದ ಸ್ಥಾನದಿಂದ ಒಂದು ಮೈಲಿನ ಅಂತರದವರೆಗೆ, ಶುಭ್ರ ಹಾಗೂ ಶ್ಯಾಮವರ್ಣಗಳ ಸಂಪೂರ್ಣವಾಗಿ ಸಮ್ಮಿಲಿತವಾಗಿವೆ. ಈ ಒಂದು ಮೈಲಿನ ಪ್ರವಾಹವು ಬಹುವಿಧವಾಗಿದ್ದು, ನೀರಿನಿಂದುಂಟಾಗುವ ಎಲ್ಲನದಿಗಳ ಹರ್ಷವನ್ನೆಲ್ಲ ಗಂಗಾ-ಯಮುನೆಯರು ತಮ್ಮ ಮೈಯಲ್ಲಿಯೇ ಸೆಳೆದುಕೊಂಡಿರುವರೋ ಎನೋ ಎಂಬಂತೆ ಭಾಸವಾಗುವದ. ಶುದ್ಧಗಂಗಾ ಶುದ್ಧಯಮುನಾ ಹಾಗೂ ತ್ರಿವೇಣಿ ಸಂಗಮ ಇವುಗಳ ಸ್ನಾನದ, ಪಾನದ, ನೋಟದ ಉಲ್ಲಾಸಗಳು ಬೇರೆ ಬೇರೆಯಾಗಿವೆ. ಈ ಸಂಗಮ ಸ್ಥಾನದ ಕ್ಷೇತ್ರ ಫಲವು ೮-೧೦ ಮೈಲುಗಳುಳ್ಳದ್ದಿದೆ. ಮಳೆಗಾಲದಲ್ಲಿ ನೆರೆ ಬಂದಾಗ್ಯೆ ಈ ಸ್ಥಾನವೆಂದರೆ ಪ್ರತಿ ಸಮುದ್ರವೆನ್ನುವ ಹಾಗಿರುವದಂತೆ. ಭರತಖಂಡದಲ್ಲಿ ಎಲ್ಲೆಲ್ಲಿ ರಮಣೀಯವಾದ ಸೃಷ್ಟಿ ಸೌಂದರ್ಯಗಳಿವೆಯೋ ಅಲ್ಲಲ್ಲಿ ಪ್ರಾಚೀನ ಋಷಿಗಳು ಗುಡಿ ಆಶ್ರಮಗಳನ್ನು ನಿರ್ಮಿಸಿದ್ದು ಸರ್ವಶ್ರುತವದೆ. ಅದೇ ಪ್ರಕಾರವಾಗಿ ಇಂತಹ ಪ್ರಯಾಗದಲ್ಲಿ ಕ್ಷೇತ್ರವನ್ನು ಕಲ್ಪಿಸಿ ಅದನ್ನು ಪುಣ್ಯ ಭೂಮಿಯಾಗುವಂತೆ ಮಾಡಿದ್ದು ಸಮುಚಿತವೇ ಸರಿ.

(ಮುಂದೆ ಸಾಗುವದು)

ವರ್ತಮಾನಪತ್ರ ಹೊರಡಿಸುವದೂ ಲಗ್ನ ಸಮಾರಂಭಮಾಡುವದೂ ಒಂದೇ!

"ಮನೆ ಕಟ್ಟಿ ನೋಡು ಮತ್ತು ಮದುವೆಮಾಡಿನೋಡು" ಎಂಬದೊಂದು ನಾಣ್ಣುಡಿಯು ಕನ್ನಡದಲ್ಲಿ ಇರುತ್ತದಷ್ಟೇ. ಇದರ ತಾತ್ಪರ್ಯವು ಮನೆ ಕಟ್ಟುವದು ಮತ್ತು ಲಗ್ನ ಮಾಡುವದು ಬಹಳ ತಾಪದಾಯಕ ಕೆಲಸವು ಎಂಬುವದನ್ನು ಎಲ್ಲರೂ ಸ್ವಂತಅನುಭವದಿಂದ ಮನಗಂಡ ಸಂಗತಿಯಾಗಿದೆ. ಈಚೆಗೆ ಮೇಲಿನ ಎರಡೂ ಕೆಲಸಗಳಿಗೆ "ವರ್ತಮಾನಪತ್ರ ಹೊರಡಿಸಿ ನೋಡು" ಎಂಬದೊಂದು ಮೂರನೇ ಕೆಲಸವನ್ನು ಮೇಲಿನ ನಾಣ್ಣುಡಿಯಲ್ಲಿ ಜೋಡಿಸುವದು ಯೋಗ್ಯವೆಂದು ಎಲ್ಲ ವರ್ತಮಾನಪತ್ರಿಕಕರರು ಒಪ್ಪಿಕೊಳ್ಳದಿರಲಾರರು. ವರ್ತಮಾನಪತ್ರ ಹೊರಡಿಸುವವರಿಗೆ ಛಾಪಿಸುವ ಕಾಗದ, ಛಾಪಿಸುವ ಮಸಿ, ಛಾಪಖಾನೆಯ ಖರ್ಚು, ಟಪಾಲ ಟಿಕೀಟು ಮುಂತಾದ ಅನೇಕ ಖರ್ಚಿನ ಬಾಬುಗಳಿರುತ್ತವೆ. ಖರ್ಚು ಬೇಕಾದದ್ದು ಮಾಡಿದರೂ ಹೊತ್ತಿಗೆ ಮೊಳೆ ಜೋಡಿಸುವವರು ಬಾರದಿದ್ದರೆ, ಛಾಪಿಸುವವರು ಬಾರದಿದ್ದರೆ, ಅಥವಾ ಛಾಪಿಸುವ ರೂಲುಗಳು ಕೆಟ್ಟರೆ ಅಥವಾ ಛಾಪಿಸುವ ಯಂತ್ರವು ಕೆಟ್ಟರೆ ವರ್ತಮಾನಪತ್ರ ಛಾಪಿಸುವದು ಹೊತ್ತಿಗೆ ಆಗುವದಿಲ್ಲ. ಇದರಿಂದ ವರ್ತಮಾನಪತ್ರ ಸಂಪಾದಕರಿಗೆ ಆಗುವ ನಿರುತ್ಸಾಹವನ್ನೆಷ್ಟು ವರ್ಣಿಸಬೇಕು? ತಾವು ಬರೆದದ್ದನ್ನು ಜನರು ಶೀಘ್ರವಾಗಿ ಓದಲೆಂಬ ಉತ್ಸಾಹವು ಛಾಪಖಾನೆಯ ಆಳುಗಳ ಆಲಸ್ಯದಿಂದ ಕಡಿಮೆಯಾಗುತ್ತದೆ. ವರ್ತಮಾನ ಪತ್ರದೊಳಗಿನ ಬರಹಗಳನ್ನು ಓದಿ ಆನಂದಪಡುವವರು ಹತ್ತುಮಂದಿ ಹೊರಟರೆ ಕಾಕದೃಷ್ಟಿಯಿಂದ ದೋಷಗಳನ್ನು ತೆಗೆಯುವ ಪಂಡಿತರು ನೂರು ಮಂದಿ ಹೊರಡುವರು. ಇಷ್ಟಾದರೂ ವರ್ತಮಾನಪತ್ರದಿಂದ ಲಾಭವೇನದೆ? ತಮ್ಮ ಕೈಯಿಂದ ಒಂದು ಕಾಸ ಸಹ ಖರ್ಚು ಮಾಡದೆ ವರ್ತಮಾನ ಪತ್ರಗಳನ್ನು ಓದಬೇಕೆನ್ನುವವರೇ ಅನೇಕಮಂದಿ ಇರುತ್ತಾರೆ. ಕೆಲವರು ತಾವು ದೊಡ್ಡವರಿದ್ದು ತಮ್ಮ ಕಡೆಯಿಂದ ವರ್ತಮಾನ ಪತ್ರಕಾರರು ಎಂದೂ ವರ್ಗಣಿಯನ್ನು ಬೇಡಬಾರದೆಂದು ಅನ್ನುವರು. ಕೆಲವರು ತಾವು ಬಡವರು ಮತ್ತು ಧರ್ಮಾರ್ಥ ಕೆಲಸ ಮಾಡುವವರು ಇರುವದರಿಂದ ತಮಗೆ ವರ್ತಮಾನ ಪತ್ರಕಾರರು ವರ್ಗಣಿಯನ್ನು ಕೇಳುವದು ಬಹಳ ತಪ್ಪೆಂದು ಅನ್ನುವರು. ಕೆಲವರು ಲೈಬ್ರರಿ ಮೊದಲಾದ ತಮ್ಮ ಸಂಸ್ಥೆಗಳಿಗೆ ಟಪಾಲ ಖರ್ಚು ಮಾತ್ರ ತೆಗೆದುಕೊಂಡು ವರ್ತಮಾನಪತ್ರಕಾರರು ವರ್ತಮಾನಪತ್ರಗಳನ್ನು ಕಳಿಸಬೇಕೆಂದು ಅನ್ನುವರು. ಅಂತೂ ಮುಕ್ಕಾಲು ಮೂರುಪಾಲು ಜನರು ವರ್ತಮಾನಪತ್ರಗಳಿಗೆ ವರ್ಗಣಿಯನ್ನು ಕೊಡಬಾರದೆಂದೇ ಪ್ರತಿಪಾದಿಸುವರು. ಕೆಲವರು ತಪ್ಪಿನಿಂದ ಅಥವಾ ಉದಾರತನದಿಂದ ತಮ್ಮ ವರ್ಗಣಿಯನ್ನು ಮನಿಆರ್ಡರ ಮಾಡಿ ಕಳಿಸುವರು. ಇಲ್ಲವೆ ವ್ಹಿ.ಪಿ. ಸ್ವೀಕಾರ ಮಾಡುವರು. ಅವರೆ ವರ್ತಮಾನಪತ್ರ ಹೊರಡಿಸುವವರ ಛಾಪಖಾನೆಯಲ್ಲಿ ಲಗ್ನ ಸಮಾರಂಭದಂತೆಯೇ ತ್ವರೆಯೂ ಉತ್ಸುಕತೆಯೂ ಒಂದೇಸಮನೇ ನಡೆಯುವವು. ವರ್ತಮಾನಪತ್ರವು ಒಮ್ಮೆ ಛಾಪಿಸಿ ಪ್ರಸಿದ್ಧವಾಗಿ ಸ್ಥಳದ ವರ್ಗಣೀದಾರರಿಗೆ ಟಪಾಲ ಪೆಟ್ಟಿಗೆಯಲ್ಲಿ ಬಿದ್ದರೆ ಲಗ್ನ ಸಮಾರಂಭವು ಮುಗಿದಬಳಿಕ ಲಗ್ನ ಸಮಾರಂಭಕ್ಕೆ ಬಂದಿದ್ದ ಬೀಗರು ಬಿಜ್ಜರನ್ನು ಅವರವರ ಊರಿಗೆ ಕಳಿಸಿಕೊಟ್ಟಷ್ಟು ಆನಂದವೆನಿಸುವದು. ಲಗ್ನ ಸಮಾರಂಭದಲ್ಲಿ ಮದುಮಕ್ಕಳಿಗೆ ಆಹೇ

(೩ನೇ ಪುಟಕ್ಕೆ ಸಾಗಿದೆ)

ವರ್ತಮಾನ ಸಾರ

ಇಹವೃತ್ತ.

ಇನ್ನೂ ಮೋಡಗಳು ಆಕಾಶದಲ್ಲಿ ಅಲೆದಾಡುತ್ತಲಿವೆ.

ಬೆಂಗಳೂರಿನಲ್ಲಾದ ಕರ್ನಾಟಕಆಯುರ್ವೇದ ೨ ನೇ ಪರಿಷತ್ತಿನ ಪದಕ, ಭಸ್ಮಾದಿಗಳನ್ನು ಸಿದ್ಧಗೊಳಿಸಿದ್ದಕ್ಕಾಗಿ ವೈದ್ಯ ಕೊರ್ತಿ ರಾಮರಾಯರಿಗೆ ಸುವರ್ಣ ಪದಕ ಹಾಗೂ ೧ ನೇ ತರಗತಿಯ ಪ್ರಶಸ್ತಪತ್ರಿಕೆಯನ್ನು, ಶ್ರೀ. ದೇಶಪಾಂಡೆ ವಿಠ್ಠಲರಾಯರಿಗೆ ಶಕ್ತಿವರ್ಧಕ ಮೊದಲಾದ ಔಷಧಿಗಳನ್ನು ಸಿದ್ಧಗೊಳಿಸಿದ್ದಕ್ಕಾಗಿ, ಬೆಳ್ಳಿಯ ಪದಕ ಹಾಗೂ ೨ ನೇ ತರಗತಿಯ ಪ್ರಶಸ್ತಪತ್ರಿಕೆಯನ್ನೂ ಅರ್ಪಿಸಿರುವರು. ಆಯುರ್ವೇದ ಕಾರ್ಯದಲ್ಲಿ ಬಾಗಲಕೋಟೆಯ ಹೆಸರು ಮುಂದೆ ಬರುವಹಾಗೆ ಪ್ರಯತ್ನಪಡುತ್ತಿರುವ ಈ ವೈದ್ಯದ್ವಯರನ್ನು ನಾವು ಅಭಿನಂದಿಸುತ್ತೇವೆ

ಕಳೆದ ವಾರದಲ್ಲಿ ವೀರಶೈವರ ಒಂದು ಮಂಗಳ, ಹಾಗೂ ಬ್ರಾಹ್ಮಣರ ಎರಡು ಮಂಗಳಗಳು ವಿಜೃಂಭಣೆಯಿಂದ ಜರುಗಿದವು. ಸಾವಿರಾರು ಜನರ ಭೋಜನವೂ ಆಯಿತು.

ಶ್ರೀ. ಪರಾಂಜಪೆಯವರು ರವಿವಾರ ಇಲ್ಲಿಗೆ ಬಂದು ತಮಗೆ ಮತಗಳು ದೊರೆಯುವ ಹಾಗೆ ಪ್ರಯತ್ನ ಪಟ್ಟರು. ಈ ಪಂಡಿತರ್‍ರು ಕರ್ನಾಟಕಕ್ಕೆ ಯಾವ ಬಗೆಯಿಂದ ಹಿಂದಕ್ಕೆ ಸಹಾನುಭೂತಿಯನ್ನು ತೋರಿಸಿರುವರೆಂಬದು ಗೊತ್ತಿದೆ. ಮತದಾರರು ಇದನ್ನು ಮರೆಯ್ಕಾರದು

ಇಲಕಲ್ಲಿನಿಂದ ಟಪಾಲಚೀಲಗಳನ್ನು “ ರಾಯಲ್ ಮೋಟಾರಿ”ನಲ್ಲಿ ತರುವಾಗ್ಗೆ ೧ ಚೀಲವು ಕಳವಾಗಿ ಹೋಗಿದೆ. ಪೋಲೀಸರಿಗೆ ಇನ್ನೂ ಕಳ್ಳರ ಸುಳವು ಗೊತ್ತಾಗಿಲ್ಲ.

ಮುಂಬೈ ಕರ್ನಾಟಕ

ವಿಜಾಪೂರ ಜಿಲ್ಹಾ ಬದಾಮೀ ತಾಲೂಕಾ ಲೋಕಲ್ ಬೋರ್ಡಿನವರು ತಾ॥ ೧—೯—೨೬ ನೇ ದಿವಸ ಸಭೆಗೂಡಿ “ಕರ್ನಾಟಕ”ದ ಏಕೀಕರಣ ಮತ್ತು ವಿಶ್ವವಿದ್ಯಾಲಯದ ಅವಶ್ಯಕತೆ” ಇದರ ಬಗೆ ಅಭಿಪ್ರಾಯಪರವಾದ ಠರಾವು ಮಾಡಿ, ಸರಕಾರವು ಈ ಕಾರ್ಯವನ್ನು ಬೇಗನೇ ಕೈಕೊಳ್ಳುವಂತೆ ವಿನಂತಿ ಮಾಡಿಕೊಂಡಿದ್ದಾರೆ.

ಬೆಳಗಾಂವಿಯ ಜಿಲ್ಹಾ ಲೋಕಲ್ ಬೋರ್ಡದ ವಾದಿ ಪ್ರತಿವಾದಿಯರ ಸಾಕ್ಷಿಗಳು ಮುಗಿದು ಮುಂದಿನ ವಿಚಾರಣೆಯ ಕಡೆಗೆ ಜನರ ಲಕ್ಷ್ಯವು ಹತ್ತಿರುತ್ತದೆ.

ಪಾರ್ಶೀಟಗಣಪತಿಯ ಮುಂದೆ ತಾ॥ ೧೪—೯—೨೬ ನೇ ದಿವಸ ಶ್ರೀ. ಗಂಗಾಧರರಾವ ದೇಶಪಾಂಡೆಯವರ ಅಧ್ಯಕ್ಷತೆಯ ಕೆಳಗೆ ಪ್ರೋ. ಶ್ರೀ ವೀರವಾಮನರಾವ ಜೋಶಿ ಇವರ “ ಸದ್ವೃತ್ತಿ ” ಈ ವಿಷಯದ ಮೇಲೆ ವ್ಯಾಖ್ಯಾನವಾಯಿತು. ಪ್ರೊ. ದಿವಾಕರ ಇವರು ಹುದಲಿಗೆ ಹೋಗುವ ದೆಸೆಯಿಂದ ಇಲ್ಲಿ ಮರಾಠಿಯ ಇರಲಾಗಿ ಅವರಿಗಾದರೂ “ ಸದ್ವೃತ್ತಿ ” ಈ ವಿಷಯದ ದೆಸೆಯಿಂದ ಹೇಳಬೇಕಾಯಿತು. ಅವರು ತಮ್ಮ ಮಾತೃಭಾಷೆಯಾದ ಕನ್ನಡದಲ್ಲಿ ಮಾತಾಡುವಾಗ್ಗೆ ದೇ. ಭ. ಗಂಗಾಧರರಾಯರು ಮರಾಠಿಯಲ್ಲಿ ಮಾತಾಡಿರೆಂದು ಹೇಳಿದರೆ ಅವರ ಪ್ರೊ. ದಿವಾಕರರು ನಾನು ಕನ್ನಡವನ್ನೇ ಮಾತಾಡುತ್ತೇನೆಂದು ಹೇಳಿ ಕನ್ನಡದಲ್ಲಿಯೇ ವ್ಯಾಖ್ಯಾನವನ್ನು ಕೊಟ್ಟರು

ಕಂಪಲಿ ಶಾಲಾಕ ಬೆಳಗಾಂವ ಇಲ್ಲಿ ೧೫—೯—೨೬ ನೇ ದಿನ ಪ್ರೊ. ದಿವಾಕರ ಮತ್ತು ದೇ. ಭ. ಗಂಗಾಧರರಾವ ಇವರು “ ಹಳ್ಳಿಗಳ ಸಂಸ್ಕೃತಿ ” ನೂಲುವ ಕಾರ್ಯ, ಈ ವಿಷಯಗಳ ಮೇಲೆ ವ್ಯಾಖ್ಯಾನ ಕೊಟ್ಟರು. ಸುಮಾರು ೪—೫ ನೂರು ಜನರು ಕೂಡಿದ್ದರು. ತಾ॥ ೧೬—೯—೨೬ ನೇ ದಿವಸ ರವಿವಾರ ಪೇಟೆ ಬೆಳಗಾಂವ ಗಣಪತಿಯ ಮುಂದೆ [illegible] ರಾಯರು ಚಿಕ್ಕೋಡಿ ಇವರ ಅಧ್ಯಕ್ಷತೆಯ ಕೆಳಗೆ ಪ್ರೊ. ದಿವಾಕರ ಇವರ “ ಕರ್ನಾಟಕ ಏಕೀಕರಣ ” ಈ ವಿಷಯ [illegible] ಮುಂದೆ [illegible] ಜನರು ಸ್ಥಳವಿಲ್ಲ[illegible]ದೆ ಹಾಗೇ ಕುಳಿತಿದ್ದರು

ಕರ್ನಾಟಕದ ಏಕೀಕರಣದ ವಿಷಯಕ್ಕೆ ಬೆಳಗಾಂವಿಯಲ್ಲಿ ಇದೊಂದೇ ವ್ಯಾಖ್ಯಾನವೆಂದು ಜನರಲ್ಲಿ ಕಂಡು ಬರುತ್ತಿತ್ತು.

ಮದ್ರಾಸ ಕರ್ನಾಟಕ

ಮದ್ರಾಸ ಪಟ್ಟಣದಲ್ಲಿ ವಾಸಮಾಡಿರುವ ಮಾರವಾಡಿ ಜನರೂ ಮತ್ತು ಗುಜರಾಥಿ ಜನರೂ ತಮ್ಮ ತಮ್ಮ ಭಜನೆ ಮಂದಿರದಲ್ಲಿ ಸ್ವಮತದ ಬಾಲಕರಿಗೆ ಮತದ ವಿಚಾರದಲ್ಲಿಯೂ ಹಿಂದೀ ಭಾಷೆಯಲ್ಲಿಯೂ ಜ್ಞಾನೋದಯವನ್ನುಂಟು ಮಾಡಲು ಒಂದು ಶಾಲೆಯನ್ನು ಪ್ರಾರಂಭಿಸಿರುವರು.

ಹಾಲು, ಮಜ್ಜಿಗೆ, ಬೆಣ್ಣೆ, ತುಪ್ಪ, ಮುಂತಾದ ಆಹಾರ ಪದಾರ್ಥಗಳಿಗೆ ಅನಾರೋಗ್ಯ ಪದಾರ್ಥಗಳನ್ನು ಕೂಡಿಸಿ, ಹಣದಾಸೆಯಿಂದ ಮಾರಾಟಮಾಡುವರು ಜನರ ಆರೋಗ್ಯ ಕೆಡಿಸದಂತೆ ಮಾಡುವದಕ್ಕಾಗಿ ಮದ್ರಾಸ ನ್ಯಾಯವಿಧಾಯಕ ಸಭೆಯಲ್ಲಿ ಕಾನೂನ ತಯಾರಿಸುವರು.

ಕರ್ನೂಲ ಸೆಶನ್ ಕೋರ್ಟಿನಲ್ಲಿ ಈ ಸಾರೆ ಕ್ರಿಮಿನಲ್ ನಂಬರುಗಳೇ ಇಲ್ಲದ್ದರಿಂದ ಪಬ್ಲಿಕ್ ಪ್ರಾಸಿಕ್ಯೂಟರರು ಜಡ್ಜರ ಕೈಗೆ ಹಾಕಲಿಕ್ಕೆ ಬಿಳಿ ಚೀಲಗಳನ್ನು ಕೊಟ್ಟರಂತೆ ಅದೇಕೋ?

ಮೈಸೂರ ಕರ್ನಾಟಕ

ಮೆ॥ ಎಸ್ ವೆಂಕಟ ಸುಬ್ರಾಯರು ಕನ್ನಡ ಭಾಷೆಯಲ್ಲಿ ಶಾರ್ಟ ಹ್ಯಾಂಡನ್ನೂ, ಟಾಯಿಪರಾಯಿಟರನ್ನೂ, ಟಾಯಿಪಿಂಗ ಆರ್ಟನ್ನೂ ಕಂಡುಹಿಡಿದು ತಮ್ಮ ಸರಕಾರಕೆ ಪ್ರೋತ್ಸಾಹಿಸಬೇಕಾಗಿ ಕೇಳಿದರೆಂದೂ ಅದಕ್ಕೆ ಸರಕಾರವು ವಿಚಾರಮಾಡುವವೆಂದು ಉತ್ತರ ಬಂದಿರುವದಾಗಿ ಸುದ್ದಿ ಬಂದಿದೆಯಂತೆ

ಶ್ರೀಮನ್ ಮಹಾರಾಜರು ಪುಣೆಯಲ್ಲಿ ನಡೆಯುತ್ತಿರುವ ಕುದುರೆಯ ಶರ್ಯತ್ತನ್ನು ಪರಾಮರ್ಶಿಸುವದಕ್ಕಾಗಿ ಸರದಾರರೊಂದಿಗೆ ಸ್ಪೇಶಲ್ ಗಾಡಿಯಿಂದ ಹೋಗಿದ್ದಾರೆ. ದಿವಾನರು ಸಂಚಾರದ ಮೇಲೆ ಹೊರಟದ್ದು ಅವರು ಮಧುಗಿರಿಯಲ್ಲಿರುವದಾಗಿ ತಿಳಿಯ ಬರುತ್ತದೆ ಬೆಂಗಳೂರ ಮಹಾರಾಜಾ ಮಿಲ್ಲಿನಲ್ಲಿ ನಡೆದ ಕೂಲಿಕಾರರ ಸಂಪುಮಾಡಲಿಕ್ಕೆ ಪ್ರೇರೇಪಿಸಿದರೆಂದು ೩ ಮಂದಿ ಮುಖಂಡರನ್ನೂ ಹಿಡಿಯುತ್ತಾಗಿ ತಿಳಿಯುತ್ತದೆ.

ಕೊಡಗು ಕರ್ನಾಟಕ

ಕೊಡಗು ಕೌನ್ಸಿಲ್‌ದ ಸಭೆಯು ಅಕ್ಟೋಬರ ತಿಂಗಳ ಕಡೆಯ ಭಾಗದಲ್ಲಿ ನಡೆಯುವದು

ಮಡಿಕೇರಿಯಲ್ಲಿ ತಾ॥ ೧೧ ರಿಂದ ಇದುವರೆಗೆ ೩.೬೫ ಇಂಚು ಮಳೆ ಆಗಿದೆ

ನಿಜಾಮ ಕರ್ನಾಟಕ

ಹೈದರಾಬಾದಿನಲ್ಲಿರುವ ದೊಡ್ಡ ಜಹಗೀರದಾರರೂ ಶ್ರೀಮಂತರೂ ಆದ ಶ್ರೀ ರಾಧಾಕೃಷ್ಣಪ್ರಸಾದರ ಮಕ್ಕಳಾದ ಶ್ರೀ. ಭೂಪತರಾಜರು ತಮ್ಮ ಪತ್ನಿಸಹಿತ ಉಚ್ಚ ಶಿಕ್ಷಣವನ್ನು ಪಡೆಯಲು ವಿಲಾಯತಿಗೆ ತೆರಳಿದರು, ಅವರ ವಿದ್ಯಾಭ್ಯಾಸಕ್ಕಾಗಿ ನಿಜಾಮರು ೪೦ ಸಾವಿರ ರೂಪಾಯಿಗಳನ್ನು ಕೊಡುವರಂತೆ.

ಹಿಂದುಸ್ಥಾನ.

ರಂಗೂನಿನ ಹತ್ತಿರ ವಿಪರೀತ ಮಳೆಆಗಿ ಅನೇಕ ಹಳ್ಳಿಗಳೂ ತೇಲಿ ಹೋಗಿರುವವು. ಕರಾಚಿಯಲ್ಲಿಯೂ ಪ್ರಚಂಡ ಬಿರುಗಾಳಿ ಬೀಸಿದ್ದರಿಂದ ಅತಿವೃಷ್ಟಿಯು ಪ್ರಾಪ್ತವಾಗಿ ವಿಶೇಷ ಕೋಲಾಹಲ ಎದ್ದಿತು.

ಸಾಂಗಲಿ ಸಂಸ್ಥಾನಿಕರು ಈ ಮೊದಲು ಜಾಹೀರ ಮಾಡಿದ ಸಭಾಬಂದಿ ಹುಕುಮನ್ನು ರದ್ದುಪಡಿಸಿದ್ದಾರೆ

ಪರದೇಶ.

ಅಮೇರಿಕೆಯಲ್ಲಿ ಒಂದೆಡೆಗೆ ರೈಲುಗಾಡಿಯು ಹಳಿ ತಪ್ಪಿ ಹಾಗೆ ನದಿಯಲ್ಲಿ ಬಿದ್ದಿತು

ಇಂದೂರ ಮಹಾರಾಜರು ಫ್ರಾನ್ಸದಿಂದ ಅಮೇರಿಕಾಕ್ಕೆ ತೆರಳುವರು.

ಇಂಗ್ಲಂಡಿನಲ್ಲಿ ಹೋದ ಸೋಮವಾರ ಭಯಂಕರ ಉಲ್ಕಾಪಾತವಾಗಿದ್ದರಿಂದ ಜನರು ಭಯಗ್ರಸ್ತರಾದರಂತೆ.

ಜಾಹೀರ ನೋಟೀಸು.

ಈ ಕೆಳಗಿನ ಜನರು ಮುಂಬೈ ಕಾಯದೇ ಕೌನ್ಸಿಲಕ್ಕೆ ವಿಜಾಪುರ ಜಿಲ್ಲೆಗೆ ಮುಸಲ್ಮಾನೇತರ ಪಕ್ಷದ ಪರವಾಗಿ ಉಮೇದವಾರರಾಗಿ ಆರಿಸಲ್ಪಟ್ಟಿದ್ದಾರೆ.

ಹೆಸರು	ಚಿನ್ಹ
೧ ಕೌಜಲಗಿ ಶ್ರೀನಿವಾಸ ವೆಂಕಟೇಶ.	ಕತ್ತಿ
೨ ಸಂದೇಸಾಯಿ ಸಂಗಪ್ಪ ಅಮೀನಗೌಡ.	ಆನೆ

ಸಹಿ

ವಿಜಾಪೂರ ತಾ॥ ೨೦-೯-೨೬ | ಶ್ರೀ ಎಚ್. ನಾಯಿಕ. ಕಲೆಕ್ಟರ ವಿಜಾಪೂರ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡು ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಹಾಪ್ಕಿನ್ಸ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ. ಪುಣೆ ಸಿಟಿ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ತ್ವರೆಮಾಡಿರಿ! ಅಡಚಣೆಯು ದೂರಾಯಿತು!

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇಕಾದರೆ ಸಿಗಲಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಥವಾ ಹೆಚ್ಚಿಗೆ ತಮ್ಮ ತಮ್ಮ ಅನುಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಥವಾ ಸಮಕ್ಷಮ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಲಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟೆ ೨೧-೭-೨೬ | ಬಿಂದುರಾವ ಟೆಂಕಳಕರ ಡಾಕ್ಟರ,

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COPANY

Apply for full particulars to-

N. K. Kulkarni. , Agent Bagalkot.

ಜಾಹೀರಾತಿನ ಸಲುವಾಗಿ.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದು ಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ಮುಖಾಂತರ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟುಹೋದ ಮುರಿದುಹೋದ ಭಾಗಗಳ ದುರಸ್ತಿಯನ್ನು ಮಾಡುವುದ ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಅದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಿಂಜರಿಯುವುದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಶಾಸ್ತ್ರಶುದ್ಧ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿ ಎತ್ತರದ ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹು ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ— ಕುಲಕರ್ಣಿ ಮೋಟಾರ ಸ್ಕೂಲ.

ಠಿಕಾಣಿ : ನಿವ್ಹಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಇದೋ ನೋಡಿ!

ಜಾಹೀರಾತ ಹೊಡತಕ್ಕಾಗದೆ!

ಮೊದಲು " ಕನ್ನಡಿಗ "ನ ವ್ಯವಸ್ಥಾಪಕರಿಗೆ ಕೆಳಗಿನಂತೆ ಬರೆದ ಪತ್ರವನ್ನು ಓದಿರಿ ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತು ಕೊಡತಕ್ಕದ್ದೆಂಬುವದನ್ನು ನೀವೇ ನಿಶ್ಚಯಿಸಿರಿ.

ಶ್ರೀಯುತ ಕುಲಕರ್ಣಿ ಬ್ರದರ್ಸ, ಮೋಟಾರ ಡ್ರಾಯ್ವಿಂಗ ಇನ್‌ಸ್ಟಿಟ್ಯೂಶನ್ ... ನಿವ್ಹಾರ ಪೇಠ ಪುಣೆ ಶಹರ.

ತಾ ... ಜುಲೈ ೧೯೩೩.

ರಾ. ರಾ. ವ್ಯವಸ್ಥಾಪಕರು ಕನ್ನಡಿಗ ... ಉತ್ಸುಕರಾಗಿದ್ದೇವೆ ಯಾಕೆಂದರೆ ನಿಮ್ಮ ಕನ್ನಡಿಗದಲ್ಲಿ ಪ್ರಸಿದ್ಧವಾದ ನಮ್ಮ ಜಾಹೀರಾತಿನ ಪರಿಣಾಮವು ಒಳ್ಳೇ ಚನ್ನಾಗಿ ... ಕಂಡು ಬರುತ್ತಿದೆ ಆದ್ದರಿಂದ ನಮ್ಮ ಮೊದಲಿನ ಜಾಹೀರಾತನ್ನು ತೆಗೆದ, ಅದರ ಬದಲಾಗಿ ಈ ಪತ್ರದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹೀರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ ಅದರ ಬೆಲೆ ಏನಾಗುವದು ಅದನ್ನು ತಿಳುಹಿಸಬೇಕು ಕೇಳುವೆನು

ಜಿ. ಎಚ್. ಕುಲಕರ್ಣಿ ಮ್ಯಾನೇಜರ,

ಕನ್ನಡಿಗ "ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು, ಲಾಭ ಹೊಂದಿರಿ. ತಡಬೇಡ. ಈ ದಿನವೇ ಪತ್ರ ಬರೆಯಿರಿ.

—ವ್ಯವಸ್ಥಾಪಕ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಮರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧ ಪಡಿಸಲ್ಪಟ್ಟಿತು.

ಪ್ರಸಿದ್ಧ್ಯಸಂಧಿ.

S.U.N & CO.
BENARES CITY.

ನಮ್ಮಲ್ಲಿ ಉತ್ತಮತರದ ಎಲ್ಲಾ ವಿಧವಾದ ರೇಶ್ಮೆ ಮಾಲುಗಳನ್ನು ಕೋರುವವರಿಗೆ V. P. ಮೂಲಕ ಕಳಿಸಲ್ಪಡುವುದು. ಕಾಶ್ಮೀರ ಶಾಲು ಜೊತೆ ೧ಕ್ಕೆ ರೂ. ೩೦ ರಿಂದ ೩೦-೫೦-೧೦೦ರ ವರೆಗೆ ಉಡವ ಪೋಗಟೆ ಮೊಳಕೆ-೭-೮-೧೦-೧೬ ೧೮ ಮೋಳಗಳು; ಇದು ಮೊಳ೧ಕ್ಕೆ ೨ರೂ. ೧೦ ೨½ ೧೬ ವರೆಗೆ ಎಲ್ಲಾ ರಂಗು ಇರುವದು. ರುದ್ರಾಕ್ಷಿ ಸರ ೧೦೮ದು ೧ಕ್ಕೆ ೦ ೬-೦ ಆ. ಯಿಂದ ರೂಪಾಯಿ ೧, ೨, ೧೦ರ ವರೆಗೆ. ಗೌರೀಶಂಕರ ಕಾಳು ೧ಕ್ಕೆ ರೂ. ೩½ಯಿಂದ ೩೦ರ ವರೆಗೆ; ೩೨ ಕಾಳಗಳ ಕಂಠೀರ ೧ಕ್ಕೆ ಆಣೆ ೮ ಯಿಂದ ೧೦ ರೂಪಾಯಿ ರೆ ೧೧೧ ಮುಖಗಳ ಕಾಳುಗಳು; ರುದ್ರಾಕ್ಷಿ ೧ಕ್ಕೆ ರೂ ೧೦ ವರೆಗೆ ೧೧ ೧೨-೧೩ ಮುಖಗಳ ಕಾಳು ೧ಕ್ಕೆ ರೂ. ೨ ರಿಂದ ೧೦ ವರೆಗೆ ೧೪ ಮುಖದ ಕಾಳು ೧ಕ್ಕೆ ರೂ ೫ ರಿಂದ ೪೦ ರವರೆಗೆ ಇನ್ನೂ ಬೇರೆ ಎಲ್ಲಾ ವಿಧವಾದ ಮಾಲುಗಳ ಕ್ಯಾಟಲಾಗು ಇನಾಂ. ಮಕ್ಕಳ ಆಟದ ಸಾಮಾನು ೩೨ ಸಾಮಾನಿನ ಸೆಟ್ಟು ೧ಕ್ಕೆ ರೂ. ೧-೩-೦ ಮಧ್ಯಮ ತರದ್ದು ೨-೮-೦ ದೊಡ್ಡದು ೪-೮ ೦ ಸಾಲ್ಕಕೊಟಿಗೆ ಸಾಕಾಗುವಷ್ಟು ರೇಶ್ಮೆ ಕೊಟಿಂಗ ಶಿಲ್ಕು ಥಾನು ೭ ಗಜದ್ದು ೩ಗಜಾ ಅಗಲವುಳ್ಳ ಥಾನುಗಳಿಗೆ ೩೦ ರಿಂದ ೩೦ ರೂಪಾಯಿಗಳವರೆಗೆ ಬೀಳುವದು

ವಿಳಾಸಃ ಶಿರೋಮಣಿ ನಾರಾಯಣಾಚಾರ್ಯ ಕಂಪನಿ,

ಕಾಶೀ ಬನಾರಸ್.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ನೇ ಇಸ್ವಿಯ ಜುಲೈ ೩೧ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಚೇರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ.

ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಎಲ್. ಬಿ ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ ದ್ಖಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೫೫೮ ಮಿ. ಸೈಯದ್ ಜಹೂರಅಲೀ ಪಿ ಎ ಬಿ. ಟಿ ಶಾಖಾಗಳ ಡಿವಿಜನಲ್ ಇನ್ಸ್‌ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ ಸಿ ನಂ. ೫೮೭ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಐಡ ಲ್ಲಿ ಅಲ್ವಾಯಿ ರೂ ೬೦೦

(೪) ಬಾಂಡ ನಂಬರು ೯೬೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲೆ ಪಡಿಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೧೧೨೬ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೧ ಭವಾನಿಪೇಟ ಪುಣಾ ೧೦೦೦

ಬಿ. ಎಸ್. ಆರಾಧ್ಯ

ಚೀಫ ಏಜಂಟ (ಮುಂಬಯಿ ಇಲಾಖಾ)

ಹುಬ್ಬಳ್ಳಿ

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾಅಥವಾಆರೋಗ್ಯ ಬಿಂದು

ಪ್ರಾಣಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳ ವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಕಾದ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರಿನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ ಮಾಡಿಕೊಟ್ಟ ವರಿಗೆ (೫೦೦) ಐದುನೂರು ರೂಪಾಯಿಗಳು ನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟೆಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳು:— ಕ್ಷಯರೋಗ, ಬಾಣಂತಿರೋಗ, ಹಡೆದನಂಜು, ದಮ್ಮ, ಕೆಮ್ಮು, ಅಡಗ್ಯ, ಕಾಲರಾ(ಮಾರಿಕಾ), ಪ್ಲೇಗ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣುನೊವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೊ ಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ವೈ ಹೊಂಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಬೇಳು ವ ಸರ್ಪದಂಶಕ್ಕೆ ತತ್ಕ್ಷಣ ಗುಣಬರುವದು ೧ ಕಾಲುಶೇರಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದೇಶ್ಯ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ. ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು. ಅದರ ಖರ್ಚು ೭. ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ ವೆಚ್ಚ ೭ ಆಣೆ. ೧ ಕಾಲುಶೇರಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಮೇರು ಬಾಟ್ಲಿ ಕಮೀಶನ್ ಸಿಗುತ್ತದೆ. ಖರ್ಚು ೯ ಆಣೆ.ಮೂರು ಎರಡುತಕ್ಕೊಂಡರೆ ಕಮಿಶನಇಲ್ಲ ಖ.೭ ಆ.ಪ್ರಮಾಣಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಲ್ಲಿಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಹೊಟ್ಟೆ ಹೋದರೆ ಶಿಕ್ಷಕ ಖಳೀ ಮಾಲ. ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲಿಷದಲ್ಲಿ ಪೋಸ್ಟ ಜಿಲ್ಹಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮವಿಳಾಸ ಎಚ್ ಏಮ್ ಮುಲ್ಲಾ

ಸಂಪಾದಕ ಅರ್ಕಶಫಾ ಹೆಡ್ಆಫೀಸಸೋಸ್ಟ ಶಹಾಪೂರ(ಬೆಳಗಾವ)





1 For chevrolet new Cars & Trucks on hire purchage system
2 For quick: Economical and satisfactory service, please go for the welknno Chevrolet cars, Trucks products in the Deccan
3 For all spare parts of the Various cars specially Chevrolet, Ford, Dodge and Overland cars,
4 For the cheapness in tyre tubes of all manufactares,
5 For all kinds of Lubricating oils Grease etc,
6 For undertaking all kinds of tyre tube repairs in Vulcansing by a specialist to give satisfactory work,
7 For Building motor bodies of various types by workers onin uptodate line.
8 For all kinds of motor repairs,
9 For second hand Motot Cars and lossies at cheap rates.

Apply to:-

Messrs Royal motor service

Automobile Engineers

Bagatkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

೧ ಶಿವ್ಹರ್ ಲೆಟ್ ಹೊಸ ಗಾಡಿಗಳನ್ನು ಮತ್ತು ಟ್ರಕ್ಸಗಳನ್ನು ಬಾಡಿಗಿಯಿಂದ ಅಥವಾ ಖರೇದಿಗಾಗಿ ಕೊಂಡುಕೊಳ್ಳುವ ಕ್ರಮಸಲುವಾಗಿ ಕೆಳಗಿನ ವಿಳಾಸಕ್ಕೆ ಬರೆಯಿರಿ
೨ ಶೀವ್ರಮಿತವ್ಯಯು ಮತ್ತು ತೃಪ್ತಿದಾಯಕ ಸರ್ವೀಸಿಗೆ ಸುಪ್ರಸಿದ್ಧ ಶಿವ್ಹರೋಲೆಟ ಗಾಡಿ ಮತ್ತು ಟ್ರಕ್ಕ ವ ಸಾಮಾನುಗಳನ್ನು ದಕ್ಷಿಣದಲ್ಲಿ ಖರೀದಿ ಮಾಡುವ ಸಲುವಾಗಿ
೩ ಎ ಗಾಡಿಯ ಸ್ಪೇರ ಪಾರ್ಟ್ಸ (ಭಾಗಗಳು) ಮುಖ್ಯವಾಗಿ ಶಿವ್ಹರೋಲೆಟ ಡಾಜ, ಫೋರ್ಡ, ವೋವ್ಹರಲಂಡ ಗಾಡಿಯ ಎಲ್ಲ ಭಾಗಗಳನ್ನು ಖರೀದಿ ಮಾಡುವಸಲುವಾಗಿ,
೪ ಎಲ್ಲ ಅಗ್ಗ ಮತ್ತು ಖಾತ್ರಿಲಾಯಖ ಟಾಯರ ಟುಬುಗಳು ಮುಖ್ಯವಾಗಿ ಮಿಚಿಲಿನ ಟಾಯರಟುಬುಗಳು ಖರೀದಿಗಾಗಿ
೫ ಎಲ್ಲ ನಮೂನೆಯ ಲುಬ್ರಿಕೇಟಿಂಗ ಯಂಣೆ ಮತ್ತು ಚರ್ಬಿ ಖರೀದಿಗಾಗಿ,
೬ ಎಲ್ಲ ತರಹದ ಟೂಬು ಟಾಯರಗಳ ರಿಪೇರಿಗಾಗಿ,
೭ ಎಲ್ಲ ಪ್ರಕಾರದ ಮೋಟಾರ ಬೊಡಿಗಳನ್ನು ಕಟ್ಟಸಲಿಕ್ಕೆ,
೮ ಎಲ್ಲ ತರಹದ ಮೊಟಾರ ರಿಪೇರಿಗಾಗಿ ಹೋಗತಕ್ಕವರು ಸುಪ್ರಸಿದ್ಧ,
೯ ಉಪಯೋಗಿಸಿದ ಮೋಟಾರಬಂಡಿಗಳೂ ಲಾರಿಗಳೂ ಬಹು ಅಗ್ಗವಾಗಿ ಶಿಕ್ಕುತ್ತವೆ.

ರಾಯಲ್ ಮೋಟಾರಸರ್ವಿಸ.

ಬಾಗಲಕೋಟೆ

ವಿಜಾಪೂರ ಜಿಲ್ಹೆಯಲ್ಲಿ

ಶಿವ್ಹರಲೆಟ ಮೋಟಾರುಗಳಿಗೆ ಸಬ್ ಏಜಂಟರು.

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟಿ

ಸಹಿತ:- ಟಿ. ಖ. ಪುಕ್ಕಟ

ಟಿಪ್ಪಣೀ:— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ವಗೈರೆ ಹಚ್ಚಿ ಕಳಿಸವೆವು

ಲಿಚೋ ವಾಚ ಕಂ. (India) ಮುಂಬೈ ನಂ. ೪

ಶಾವಿಗೆ! ಗುಲಕಂದ!! ಹಪ್ಪಳ!!!

ಸುಗಂಧ ದ್ರವ್ಯಗಳು.

ಊದಿನ ಕಡ್ಡಿ, ಕಸ್ತೂರಿ ಬಿಲ್ಲೆ, ಅತ್ತರ, ಶೀಗೆಕಾಯಿ ಪುಡಿ, ಭೃಂಗಾಮಲಕ ತೈಲ, ರೋಜವಾಟರ, ಮಡ್ಡಿ, ಹಾಲಮಡ್ಡಿ ಇವೆ ಮೊದಲಾದ ಬೆಂಗಳೂರಿನ ಸುಪ್ರಸಿದ್ಧವಾದ ಎಲ್ಲ ಬಗೆಯ ಸುಗಂಧ ದ್ರವ್ಯಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತಿವೆ. ಅಲ್ಲದೆ ಗುಲಕಂದ, ಬೆಂಗಳೂರಿನ ರಸಭರಿತವಾದ ಮೂವಿನ ಹಣ್ಣುಗಳ ಮುರಬ್ಬಾ, ಬಹು ರುಚಿಕಟ್ಟಾಗಿರುವ ಸಾರಿನ ಪುಡಿ, ಮಸಾಲೆ, ಚಟ್ನಿ, ಶಾವಿಗೆ, ಹಪ್ಪಳಗಳೂ ದೊರೆಯುವವು ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್. ಕ್ಯಾಟಲಾಗಿಗಾಗಿ ಬರೆಯಿರಿ.

ವಿಳಾಸ:- ಸುಗಂಧಿ c/o "ಕನ್ನಡಿಗ" ಬಾಗಲಕೋಟೆ

ರ. ನಂ. ಬಿ. ೧೯೪೭

ವಾ ಕಂ ವಾ ೧-೧೪-೦ ಮಾತ್ರ

ಕನ್ನಡಿಗ.

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ } ಬಾಗಲಕೋಟೆ ಮಂಗಳವಾರ ಮಿತಿ ಭಾದ್ರಪದ ಬಹು. ೧೦ ಶಕೆ ೧೮೬೮ ತಾ|| ೧ ೧೦-೧೯೪೬. { ಸಂಚಿಕೆ ೩೭

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೋಹಪಾಶದಿ ಕಟ್ಟುವೆನಾನು ।
ನಿನ್ನ ಬೆಳಸುವ ಮಾಡಿದಂಥ ಮುಕ್ಕಳ ದೊಸ್ತು ।
ಚಿನ್ನದಂದದ ಚಿನ್ನ ಕರಣಕಸ್ತುರಿಯ ಗೂಂಡು ಚಿನ್ನಯಾಶಾಪದಕ್ಕೆ ।
ನನ್ನ ದೇಶವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಕ್ಕಸಲು ಸಿದ್ಧವಿದೆ ।
ನನ್ನ ಸ್ತ್ರೀಯು ನಿನ್ನ ಗಂಧವನು ಕೇಳಲು ಗಂಧವಹನೆಂದು ಕೀಳರು
—ಅಂಜಲಾ ತನಯ ದತ್ತ

ಉತ್ತರ ಕರ್ನಾಟಕದಲ್ಲಿ ಇಟ್ಟಂಗಿಯ ವ್ಯವಸಾಯವು ಹೊಸದಲ್ಲ. ಆದರೆ ಆಧುನಿಕ ಪದ್ಧತಿಯ ಮೇಲೆ ದೊಡ್ಡ ಪ್ರಮಾಣದಿಂದ ಬೆಳಗಾವಿ ಜಿಲ್ಲೆಯಲ್ಲಿ ಖಾನಾಪುರದ ಹತ್ತಿರ ಶ್ರೀ ನಾಯಿಕ ನಾರಾಯಣರಾಯರು ಪ್ರಾರಂಭಿಸಿದ್ದು ಅಭಿಮಾನಪಡತಕ್ಕ ಸಂಗತಿಯು. ಅಲ್ಲಿಯ ಕೆಲಸ, ಸ್ಥಿತಿಗತಿ, ಉದ್ಯೋಗದ ಭವಿತವ್ಯತೆ ಇವೇ ಮೊದಲಾದವುಗಳಬಗ್ಗೆ ಒಂದು ಪತ್ರಿಕೆಯನ್ನು ಹೊರಡಿಸಿದ್ದಾರೆ. ಕಾರಖಾನೆಯು ಬೆಳೆದು ದೊಡ್ಡದಾಗಲು ಒಳ್ಳೆ ಅನುಕೂಲತೆಗಳಿರುವವೆಂದು ಅವರ ಪತ್ರಿಕೆಯಿಂದ ಸ್ಪಷ್ಟವಾಗಿ ಕಂಡು ಬರುತ್ತಿದೆ. ಸುತ್ತಲೆಲ್ಲ ಹತ್ತರದಲ್ಲಿ ಉಗಿಬಂಡಿಯದಾರಿಗಳಾಗುವವು ಮಣ್ಣು ಸಮೀಪದಲ್ಲಿ ಸಿಗುವುದು. ಚಿನೀಮಣ್ಣು ಹೇರಳವಾಗಿ ಸಿಕ್ಕುವುದು. ಕಾಡು ಸಮೀಪದಲ್ಲಿರುವದರಿಂದ ಉರುವಲಕ್ಕೇನೂ ತೊಂದರೆಯಿಲ್ಲ. ಹವೆಯು ಚನ್ನಾಗಿರುವುದು. ನೀರಿನ ವಿಪುಲತೆ ಇರುವುದು. ಪುಣೆ, ಬೆಂಗಳೂರ ಹುಬ್ಬಳ್ಳಿ, ಗುಂಟಕಲ್ಲ, ಬಳ್ಳಾರಿ, ಸೊಲ್ಲಾಪೂರ, ವಿಜಾಪೂರ, ಗದಗ ಮೊದಲಾದವುಗಳೊಡನೆ ವ್ಯಾಪಾರವು ಸಹಜವಾಗಿ ಸಾಗುವುದು. ಈಗ ಕಾರಖಾನೆಯಲ್ಲಿ ಸಣ್ಣದೊಡ್ಡ ಹಂಚುಗಳು (ಮಂಗಳೂರ ಹಂಚಿನ ಮಾದರಿಯಮೇಲೆ) ಹೊರಡುವವು. ಮಾಳಿಗೆಹಂಚು ಚಿನ್ನಹಂಚು ಒಳಮಾಳಿಗೆ ಹಂಚು, ನೆಲ್ಲಕ್ಕಿ ಹಂಚು ಇವೇ ಮೊದಲಾದವುಗಳು ತಯಾರಾಗುತ್ತಿರುವವು. ಒಡವೆಗಳಿಗೆ ಬೇಡಿಕೆಯಾದರೂ ಇದೆ ಮೇಲೆ ಹೇಳಿದಂತೆ ಚಿನೀಮಣ್ಣುಬೇಕಾದಷ್ಟು ಸಿಕ್ಕುತ್ತಿರುವದರಿಂದ, ಈ ಕಾರಖಾನೆಯನ್ನು ಬೆಳೆಯಿಸಿ ದೊಡ್ಡ ಕುಂಬಾರ ಶಾಲೆಯನ್ನು ಮಾಡಬೇಕೆಂದು ನಾಯಿಕರವರ ಉದ್ದೇಶವಿರುವುದು. ದೊಡ್ಡ ಊರುಗಳಲ್ಲಿ ಹೊಲಸುನೀರು ಹರಿದು ಹೋಗುವದಿಲ್ಲ. ಅದಕ್ಕಾಗಿ ನೀರು ಹರಿದು ಹೋಗಲು ವ್ಯವಸ್ಥೆ ಮಾಡಲಿಕ್ಕೆ ದೊಡ್ಡ ದೊಡ್ಡ ಮಣ್ಣಿನ ಪಾಯಿಪುಗಳು ಬೇಕಾಗುವವು. ಅವುಗಳನ್ನು ಬಚ್ಚಲಕುಣಿಗೆ ಬೇಕಾಗುವ ಸಣ್ಣ ಸಣ್ಣ ಪಾಯಿಪುಗಳನ್ನು ಮಾಡಲು ಅವರ ಹವಣಿಕೆಯಿರುವುದು. ಈಗ ಸದ್ಯಕ್ಕೆ ಕಾರಖಾನೆಗೆ ೧೦ ಎಕರೆ ನೆಲಗಳಿಗಿಂತ ಹೆಚ್ಚು ಸ್ಥಳವಿದೆ. ಹೊರಗಿನಿಂದ ಬಂದ ಕೂಲಿಕಾರರಿಗೆ ಇರಲು ಸಾಕಷ್ಟು ಅನುವಿದೆ. ಅವರ ಕುಟುಂಬಗಳಿರುವಷ್ಟು ವ್ಯವಸ್ಥೆಯಿದೆ. ೩೦ ದನಗಳದೊಂದು ಹಕ್ಕಿಯಿದೆ (ದನದ ಹಕ್ಕಿ) ಒಡಿಗ ಕಮ್ಮಾರರಿಗೆ ಬೇಕಾಗುವ ಎಲ್ಲ ಆಯುಧಗಳಿವೆ. ಎರಡು ಉತ್ಕೃಷ್ಟವಾದ ಬಾವಿಗಳಿಗೆ ಒಂದು ಆವಿಗೆಯಿದೆ. ದಿನಾಲು ೮೦೦೦ ಹಂಚುಗಳು ಸುಡುವವು. ಬಂಡವಲು ಸುಮಾರು ೧ ೦೦೦ ಈ ವ್ಯಾಪಾರದಿಂದ ಏನೂ ಹಾನಿ ಬರುವದಿಲ್ಲೆಂದು ಲೆಕ್ಕ ಹಾಕಿ ಸ್ಥಾಪಕರು ತೋರಿಸಿದ್ದಾರೆ. ಆದರೆ ಈ ವ್ಯವಸಾಯವನ್ನು ಬೆಳೆಯಿಸಲು ಇನ್ನು ಹಣ ಬೇಕಿದೆ ಆದ್ದರಿಂದ ಈ ಉದ್ಯೋಗಕ್ಕೆ ಹಣ ಕೊಡಕೊಳ್ಳುವವರು ನಾಯಿಕರವರೊಡನೆ ಪತ್ರವ್ಯವಹಾರ ಮಾಡಬೇಕು. ಕರ್ನಾಟಕಕ್ಕೆ ಸ್ವಾವಲಂಬನವು ಬೇಕಿದೆ. ಹೊಸ ಹೊಸ ಉದ್ಯೋಗಗಳನ್ನು ಕೈಕೊಂಡು ಸಾಹಸವನ್ನು ಮಾಡಿ ಅವರ ಆರ್ಥಿಕ ಸ್ಥಿತಿಯನ್ನು ಸುಧಾರಿಸುವುದು ಅತ್ಯವಶ್ಯಕ. ಇಂತಹ ಸಾಹಸವನ್ನು ಕೈಕೊಂಡ ನಾಯಿಕರನ್ನು ನಾವು ಮನಃಪೂರ್ವಕವಾಗಿ ಅಭಿನಂದಿಸುತ್ತೇವೆ. ಇವರ ಕೆಲಸದಲ್ಲಿ ಇವರಿಗೆ ಯಶಸ್ಸು ದೊರೆಯಲೆಂದು ಹಾರೈಸುತ್ತೇವೆ. ಇವರಂತೆ ಕನ್ನಡನಾಡಿನ ತರುಣರು ಉತ್ಸುಕರಾಗಿ ಕಾಜಿನ ಕಾರಖಾನೆ, ಕಾಗದಕಾರಖಾನೆ ಮೊದಲಾದವುಗಳನ್ನು ಪ್ರವರ್ತಿಸಿ ಕನ್ನಡಿಗರಂದೈವ ತೆರೆಯಬೇಕಾಗಿ ಬೇಡಿಕೆ. ಇನ್ನು, ಈ ಕಾರಖಾನೆಯು ಬೆಳಗಾವಿ ಜಿಲ್ಲೆಯಲ್ಲಿರುವದರಿಂದ ಮರಾಠಿಗೆ ಮನಸೋತು, ಕನ್ನಡವನ್ನು ಮರೆಯಬಾರದಾಗಿ ಶ್ರೀ ನಾಯಿಕರಿಗೆ ಸೂಚಿಸುತ್ತೇವೆ. ಇದರ ಲೆಕ್ಕ ಪತ್ರಗಳೂ, ಪ್ರಕಟನೆಗಳೂ ಕನ್ನಡದಲ್ಲಿಯೇ ಇರತಕ್ಕದ್ದೆಂಬುದು ಚಾಲಕರ ಲಕ್ಷ್ಯದಲ್ಲಿರಲಿ.

ಕರ್ನಾಟಕ ವೈಭವ ಹಾಗೂ ಸತ್ಯಾಗ್ರಹಿಗಳ ಭೆಟ್ಟಿಯು ಅನೇಕ ದಿನಗಳವರೆಗೆ ಇರಲಿಲ್ಲವಾದ್ದರಿಂದ ಕನ್ನಡ ವೃತ್ತಪತ್ರಿಕೆಗಳ ಮಾಲೆಯಲ್ಲಿಯ ಎರಡು ಮಣಿಗಳು ಇಲ್ಲದಂತಾಗಿದ್ದವು. ಈಗ್ಗೆ ಎರಡೂ ಮಣಿಗಳು ಪುನಃ ತಮ್ಮ ತಮ್ಮ ಸ್ಥಾನಗಳಲ್ಲಿ ಒಂದದ್ದು ಆನಂದದ ವಿಷಯ ಅತ್ತ ಸತ್ಯಾಗ್ರಹಿಯು ದೊಡ್ಡ ಬಂಡವಾಳದ ಆಶ್ರಯದಲ್ಲಿ ಹೋಗಿದ್ದರಿಂದ ಆದಕ್ಕೆ ಹೊಸ ಹುರುಪು ಹಾಗೂ ಸ್ವರೂಪಗಳು ಬರುವವಾಗಿ ವಿಶ್ವಾಸವಿದೆ. ಅದೇ ಪ್ರಕಾರವಾಗಿ ೩೦ ವರ್ಷಗಳಿಂದಲೂ ನಡೆದು ಬಂದು ಈಗ್ಗೆಯೂ ಕರ್ನಾಟಕದ ಸೇವೆಯಲ್ಲಿ ಬದ್ಧಕಂಕಣವಾದ "ವೈಭವ" ಕನ್ನು ಈ ಬಗೆ

ಯ ಸಹಾಯವು ದೊರೆಯುವ ಹಾಗೆ ಉಡುಪಿಯ ಮಹಾಜನಗಳು ಪ್ರಯತ್ನಿಸುವದು ವಿಜಾಪೂರಸ್ಥರ ಕರ್ತವ್ಯವಲ್ಲವೆ?

ಬ್ರಿಟಿಷರ ಚಿತ್ರಪಟ (ಸಿನೇಮಾ ಫಿಲ್ಮ)ಗಳು ಹಿಂದುಸ್ಥಾನದಲ್ಲಿ, ಪೇಟ್ರದ ಆಶ್ರಯ ದೊರೆಯಬೇಕೆಂದು ಒಂದು ದೊಡ್ಡ ಭಾಂಡವಲದ "ಸಿನೇಮಾ" ಕಂಪನಿಯನ್ನು ಹೊರಡಿಸಿ ಅದರ ಶಾಖೆಗಳನ್ನು, ಹಿಂದುಸ್ಥಾನದ ತುಂಬೆಲ್ಲ ಸ್ಥಾಪಿಸುವದು ಗೊತ್ತಾಗಿದೆ. ಬಿಕಾನೇರ, ಅಲ್ವಾರ, ಪತಿಯಾಲ, ಕಾಶ್ಮೀರದ ಮಹಾರಾಜರೂ, ಆಗಾಖಾನರೂ, ಈ ಕಂಪನಿಯಲ್ಲಿ ಪಾಲುಗಳನ್ನು ಕೊಂಡಿರುವರು ಹಿಂದುಸ್ಥಾನದ ಚಿತ್ರಪಟಗಳ ಮಂಡಳಿಗಳು ಭಾಂಡವಲವಿಲ್ಲೆಂದು ಗೋಳಾಡುತ್ತಿದ್ದರೂ ಅವರಿಗೆ ಸಹಾಯವಿಲ್ಲ. ಇನ್ನು ಈಗಿನ ಹಿಂದೀ ಚಿತ್ರಪಟಗಳು ಸಮಾಧಾನಕರವಾಗಿರುವದಿಲ್ಲೆಂಬುದೂ, ಕಲೆಯ ದೃಷ್ಟಿಯಿಂದಲೂ, ನೀತಿಯ ದೃಷ್ಟಿಯಿಂದಲೂ, ಅವುಗಳಲ್ಲಿ ಹೇರಳವಾದ ದೋಷಗಳಿವೆಂಬುದೂ, ನಿಜವಿದೆ ಆದರೆ ಇವನ್ನು ಸುಧಾರಿಸುವಂದರಲ್ಲಿಯೇ ರಾಜರೂ, ಮಹಾರಾಜರೂ, ಹಣವೆಚ್ಚ ಮಾಡುವದನ್ನು ಬಿಟ್ಟು ಪರದೇಶದ ವ್ಯಾಪಾರಕ್ಕೆ ಹಿಂದುಸ್ಥಾನದ ಹಣವನ್ನು ಕೊಡುವದು ಎಂಥ ದೇಶಭಕ್ತಿಯೆಂಬುದನ್ನು ಅವರೇ ಹೇಳಬೇಕು. ಬಡವರಿಂದ ಹಣ ಸೆಳೆದುಕೊಂಡು ಅದನ್ನುಪಯೋಗಿಸುವದು ಹೀಗೆಯೋ?

ಅನೇಕ ಸರಕಾರೀ ನಮೂನೆಗಳಲ್ಲಿ ಕನ್ನಡಿಗರಿಗೆ "ನೀನು" ಎಂಬದಾಗಿ ಸಂಬೋಧಿಸುತ್ತಿರುವದನ್ನು ಕಂಡು ನಮಗೆ ಬಹು ವಿಷಾದವಾಗುತ್ತದೆ. ವಿಶೇಷತಃ ದಿವಾಣಿ ಹಾಗೂ ಮುಲಕೀ ಖಾತೆಗಳಲ್ಲಿಯ ನಮೂನೆಗಳಲ್ಲಿ "ನೀನು" ಎಂಬದೇ ಮುದ್ರಿತವಾಗಿದೆ. ಈ ನಮೂನೆಗಳು ಯಾರಿಗೆ ಹೋದರೂ ಸಹ "ನೀನು" ಎಂಬದಾಗಿಯೇ ಅವರಿಗೆಲ್ಲ ಸಂಬೋಧಿಸುವದು. ಒಕ್ಕಲಿಗನಿಂದ ರಾಜರು ಮಹಾರಾಜರವರಿಗೆ ಎಲ್ಲರಿಗೂ ಇದೇ ಬಗೆಯ ಮಾನವನ್ನು ಕೊಡುವದು ಸರಿಯಲ್ಲ. ಬಡವನೇ ಇರಲಿ ಶ್ರೀಮಂತನೇ ಇರಲಿ ಅದನ್ನು ಲೆಕ್ಕಿಸದೇ ಎಲ್ಲರಿಗೂ "ನೀವು" ಎಂಬದಾಗಿ ನಮೂನೆಗಳಲ್ಲಿ ಕಾಣಿಸುವದು ಯೋಗ್ಯವಾದುದು. ತನ್ನ ಎಲ್ಲ ಖಾತೆಯ ನಮೂನೆಗಳನ್ನು ಸರಕಾರವು ಕನ್ನಡದಲ್ಲಿ ಮುದ್ರಿಸಲು ಮೊದಲು ಒಪ್ಪದು. ಎಲ್ಲಿಯಾದರೂ ತಪ್ಪಿಸಿಂದ ಕನ್ನಡದಲ್ಲಿ ಮುದ್ರಿತವಾದರೆ, ಅವುಗಳಲ್ಲಿ ಇಂತಹ ಮಂಗಳಾರತಿ. ಆಕಸ್ಮಾತ್ತಾಗಿ ತಪ್ಪುತಡೆಗಳಿಲ್ಲವಿದ್ದರೆ ಕನ್ನಡದಲ್ಲಿದ್ದ ನಮೂನೆಗಳನ್ನು ಮುಂಬೈ ಕರ್ನಾಟಕಕ್ಕೆ ಕಳಿಸದಂತೆ ಏರ್ಪಾಟ ಮಾಡುವದರಲ್ಲಿ ನಮ್ಮ ಮುಂಬೈ ಸರಕಾರವು ದಕ್ಷತೆಯನ್ನು ತೋರಿದೆ. ಅಂತೆಯೇ ಅಂಚೆಯ ನಮೂನೆಗಳೂ, ತಾಲೂಕ ಕಚೇರಿಗಳಲ್ಲಿ "ನಕಲಿನ, ಅರ್ಜಿಗಳೂ" "ಇನ್‌ಕಮ್ ಟ್ಯಾಕ್ಸ" ನಮೂನೆಗಳೂ, ಕನ್ನಡದಲ್ಲಿದ್ದರೂ ನಮ್ಮ ಪಾಲಿಗೆ ಮರಾಠೀಯವೇ! ಕರ್ನಾಟಕದ ಮೇಲೆಯೂ, ಕನ್ನಡದ ಮೇಲೆಯೂ ನಮ್ಮ ಮುಂಬೈ ಸರಕಾರಕ್ಕೆ ಅಷ್ಟೊಂದು ಪ್ರೀತಿಯಿದೆ. ಅವರಾದರೂ ಏನು ಮಾಡಬೇಕು?

ಶ್ರೀ ಬೆಳವಿಯವರು ಕರ್ನಾಟಕದ ಸೇವೆಮಾಡಲಿಕ್ಕೆ ದಿಲ್ಲಿಯ ಕಾಯ್ದೇ ಮಂಡಲದಲ್ಲಿ ಅವಕಾಶವಿಲ್ಲೆಂದು ಕೆಲವರ ಮತ. ನಿಜವಾಗಿ ಕರ್ನಾಟಕದ ಕಳವಳವು ಅಂತಃಕರಣದಲ್ಲಿದ್ದರೆ, ದಿಲ್ಲಿಯಲ್ಲವೆ ಲಂಡನ್ನದಲ್ಲಿದ್ದರೂ, ಕರ್ನಾಟಕದ ಸೇವೆ ಮಾಡಬಹುದು. ಶ್ರೀ ಬೆಳವಿಯವರಿಗೆ, ಕರ್ನಾಟಕತ್ವದ ಕಲ್ಪನೆಯೇ ಇಲ್ಲವೆಂದರೆ ಒಪ್ಪಬಹುದು ಆದರೆ ದಿಲ್ಲಿಯ ಮಂಡಲದಲ್ಲಿ ಕರ್ನಾಟಕದ ಸೇವೆ ಮಾಡುವದು ಶಕ್ಯವಿಲ್ಲೆನ್ನುವದು, ಸಮಂಜಸವಲ್ಲ. ಉದಾಹರಣೆಗಾಗಿ ಹುಬ್ಬಳ್ಳಿಯಿಂದ ಕಾರವಾರ ಮಾರ್ಗವಾಗಿ ಮಂಗಳೂರಿಗೆ ಉಗಿಬಂಡಿಯ ಮಾರ್ಗವನ್ನು ನಿರ್ಮಿಸುವದು ಎಷ್ಟು ಅವಶ್ಯಕವೆನ್ನುವದನ್ನು ಕನ್ನಡಿಗರೆನುಬಲ್ಲರು! ಈ ಪ್ರಶ್ನೆಯನ್ನು ಮದ್ರಾಸ ಅಥವಾ ಮುಂಬೈ ಕಾಯ್ದೇ ಮಂಡಲಗಳಲ್ಲಿ ಚರ್ಚಿಸಿದರೆ ಇದು ಮದ್ರಾಸ ಮುಂಬೈಗಳೆರಡಕ್ಕೂ ಸಂಬಂಧಪಟ್ಟಿದ್ದರಿಂದ ದಿಲ್ಲಿಯ ಮಂಡಲದ ಕೆಲಸವೆಂದು ಇಲ್ಲಿ ಈ ಪ್ರಶ್ನೆಗೆ ಅರ್ಧಚಂದ್ರವು ದೊರೆಯುವದು. ಇದು ದಿಲ್ಲಿಯ ಮಂಡಲದ ಕರ್ನಾಟಕ ಪ್ರತಿನಿಧಿಯ ಕೆಲಸವಲ್ಲವೋ? ಅದೇ ಪ್ರಕಾರವಾಗಿ ಕನ್ನಡ ಶಿಲಾ ಲೇಖಗಳ ಪ್ರಶ್ನೆಯಿದೆ. ಫ್ಲೀಟ ಸಾಹೇಬರ ನಂತರ ಈ ಶಿಲಾ ಲೇಖಗಳನ್ನು ಯಾರೂ ಶೋಧಿಸಿಲ್ಲ. ಶಿಲಾಲೇಖದ ಖಾತೆಯು ಪ್ರಾಂತಿಕ ಸರಕಾರದ್ದಲ್ಲ. ಆದರೆ ವರಿಷ್ಠ ಸರಕಾರಕ್ಕೆ ಸಂಬಂಧ ಪಟ್ಟದ್ದು. ಈ ಬಗ್ಗೆ ದಿಲ್ಲಿಯ ಮಂಡಲದಲ್ಲಿ ಕೆಲಸ ನಡಿಸುವದು ಕರ್ನಾಟಕ ಪ್ರತಿನಿಧಿಯ ಕೆಲಸವಲ್ಲವೆ? ಕರ್ನಾಟಕ ಪ್ರಾಂತದ ವಿಷಯವನ್ನು ಚರ್ಚೆಗೆ ತಂದು ಮುಂಬೈ ಸರಕಾರದ ಲಕ್ಷ್ಯವನ್ನು ಏಕೀಕರಣದ ಪ್ರಶ್ನೆಗೆ ಎಳೆಯುವದು ಹಾ ದಿ ರಾಮರಾಯರಿಗೆ "ಕೌನ್ಸಿಲ್ ಆಫ ಸ್ಟೇಟದಲ್ಲಿ" ಸಹ ಶಕ್ಯವಾಯಿತು, "ಅಸೆಂಬ್ಲಿಗಿಂತ" ಹೆಚ್ಚಿನ ಮಂಡಲದಲ್ಲಿ ಕರ್ನಾಟಕದ ಸೇವೆ ಮಾಡಲು ಅವಕಾಶವಾಯಿತು. ಆದರೆ ನಮ್ಮ ಬೆಳವೀಸಾಹೇಬರಿಗೆ 'ಕೌನ್ಸಿಲ್ ಆಫ್‌ಸ್ಟೇಟ'ದ ಕಿಂತ ಚಿಕ್ಕದಾದ "ಅಸೆಂಬ್ಲಿಯಲ್ಲಿ" ಕರ್ನಾಟಕದ ಪ್ರಶ್ನೆಯನ್ನು ತರಲು ಅವಕಾಶವಿಲ್ಲಂತೆ. ಇದೊಳ್ಳೇ ಅವರ ವಿಧಾನ! ಹಾಗೂ ಈ ವಿಧಾನಕ್ಕೆ ಕರ್ನಾಟಕಾಭಿವೃದ್ಧಿ[illegible]ದ ಕರ್ನಾಟಕ ವೃತ್ತವು ಐಕ್ಯವಾರಿಯಾಗಿ ನಿಂತುದು ನಮಗೆ ಆಶ್ಚರ್ಯವನ್ನುಂಟುಮಾಡಿದೆ. ಮೂಲತಃ ಶ್ರೀ ಬೆಳವೀಯವರಿಗೆ ಕರ್ನಾಟಕತ್ವದ ಕಲ್ಪನೆಯಿಲ್ಲ. ಕರ್ನಾಟಕದಲ್ಲಿ ಎಷ್ಟು ಜಿಲ್ಹೆಗಳಿವೆಂಬದಾದರೂ ಗೊತ್ತಿದೆಯೊ ಇಲ್ಲವೋ ಸಂಶಯವಿದೆ. ಇಂಥವರಿಗೆ ಕರ್ನಾಟಕದ ಹಾಗೂ ಕನ್ನಡಿಗರ ಕಷ್ಟಗಳ ಸ್ವರೂಪವು ಹೊಳೆಯದಿದ್ದರೆ ಆಶ್ಚರ್ಯವಲ್ಲ. ಕರ್ನಾಟಕತ್ವವನ್ನು ಚನ್ನಾಗಿ ತಿಳಿದುಕೊಳ್ಳಬೇಕು. ಕರ್ನಾಟಕದ ಸೇವೆಯಲ್ಲಿ ನಿರತರಾಗಿ ತನ್ಮಯಾಂತರವಾಗಿಯೂ ಧಂತಖಂಡದ ಸೇವೆ ಮಾಡಬೇಕು, ಎಂಬದಾಗಿ ನಿಶ್ಚಿತ ಮನಸ್ಕರಾದರೆ ಶ್ರೀ ಬೆಳವೀಯವರಿಗೆ ಕನ್ನಡಿಗರ, ಕನ್ನಡನುಡಿಯ, ಕನ್ನಡ ನಾಡಿನ, ಕುಂದು ಕೊರತೆಗಳನ್ನು ಅಭ್ಯಾಸಿಸಲು ವೇಳೆಹತ್ತದು. ಬೇಕಾದಂತಹ ಕಠಿಣ ಕಟ್ಲೆಗಳನ್ನು ಗೆಲಿಯುವ ಕುಶಾಗ್ರ ಬುದ್ಧಿಯ ಶ್ರೀ ಬೆಳವೀಯವರಿಗೆ ಇದು ಯಾವರೀತಿಯಿಂದಲೂ ಕಠಿಣವಲ್ಲ. ಆದರೆ ಕರ್ನಾಟಕದ ಸೇವೆಯು ಅವರ ದಿವ್ಯ ದೃಷ್ಟಿಗೆ ಹೊಳೆಯಬೇಕು. ಇಷ್ಟೇ

ಕನ್ನಡಿಗರು ಕನ್ನಡದಲ್ಲಿ ಸಹಿಮಾಡಬೇಕೆಂಬುದನ್ನು ಲೋಕರಹಸ್ಯವು ವಿರೋಧಿಸಲು ಹೋಗಿ "ವಿನಾಯಕಂ ಕುರುವಾಣಃ ರಚಯಾಮಾಸವಾನರಂ" ಎಂಬಂತಾಗಿದೆ. 'ರಹಸ್ಯ'ಕಾರರು ಅನ್ನುವದೇನಂದರೆ:—

'ಇಂಗ್ಲೀಷ ತಿಳಿದ ಕನ್ನಡಿಗರು ತಮ್ಮ ಸಹಿಗಳನ್ನು ಇಂಗ್ಲೀಷಿನಲ್ಲಿ ಹಾಕದಿದ್ದರೆ ಅವರು ಸ್ವಾಭಿಮಾನಿಗಳೂ ಸ್ವದೇಶಾಭಿಮಾನಿಗಳು ಆಗುವರೆಂದು ಹೇಳುವದು "ಕನ್ನಡಿಗ" ಪತ್ರಿಕೆಯ ಪ್ರಿಯ ವಿಷಯಗಳಲ್ಲಿ ಒಂದಾಗಿದೆ."

"ಇಂಗ್ಲೀಷಿನಲ್ಲಿ ಹಾಕದಿದ್ದರೆ" ಎಂಬದಾಗಿ ರಹಸ್ಯಕಾರರು ಮೇಲೆ ಬರೆದದ್ದರ ಅರ್ಥವೇ ನಮಗಾಗದು. ಆದಾಗಾದರೂ ಅವರ ಅರ್ಥವು ತಿಳಿಯುವದೊ! ಕನ್ನಡಿಗರು ಇಂಗ್ಲೀಷ ಸಹಿ ನಹಾಕಿದರೆ ನಾವು ಅವರಿಗೆ ದೋಷ ಕೊಡುವದು

ನಿಜವಿದೆ. ಆದರೆ ಇಂಗ್ಲೀಷಿನಲ್ಲಾಗಲಿ, ತಮ್ಮ ಮಾತೃಭಾಷೆಯಲ್ಲಿದ ಇನ್ನಿತರ ನುಡಿಗಳಲ್ಲಾಗಲೀ ತಮ್ಮ **ಸಹಿಗಳನ್ನು ಹಾಕಬಿಡ್ಡರೆ** ನಾವು ಅವರನ್ನು, ಅಭಿನಂದಿಸುವೆವು. ಕನ್ನಡಿಗರು ಕನ್ನಡದಲ್ಲಿಯೇ ಸಹಿಮಾಡಬೇಕೆಂಬಿದಿಷ್ಟೇ ನಮ್ಮ ಮತ, ಈ ಮತವನ್ನು ಇಷ್ಟವಿದ್ದರೆ ರಹಸ್ಯಕಾರರು ಖಂಡಿಸ ಬಹುದಾಗಿತ್ತು. ಆದರೆ ಅವನ್ನು ಬಿಟ್ಟು, ಹೆಬ್ಬಟ್ಟಿನ ಗುರ್ತುಗಳ ಆಧುನಿಕ ಶೋಧದ ಬಗ್ಗೆ ವಿವೇಚಿಸಿದ್ದು, ವಿಸಂಗತವಾಗಿದೆ. ಎರಡು ಪುಟಗಳಲ್ಲಿ ಈ ವಿವೇಚನೆಮಾಡಿ ಕಡೆಗೆ ತಾವೇ ಬರೆಯುವದೇನಂದರೆ:— ಇವುಗಳ ವಿವರಣೆ ಇಲ್ಲಿನ್ಹವು ಅನುಕೂಲತೆಯೂ, ಅವಶ್ಯಕತೆಯೂ ಇಲ್ಲದ್ದರಿಂದ ವಿವರಿಸುವದಿಲ್ಲ. ಸರಿ. ಎರಡೂ ಪುಟಗಳವರೆಗೆ "ಸ್ಥಳವೂ ಅನುಕೂಲತೆಯೂ ಅವಶ್ಯಕತೆಯೂ" ಉಂಟಾಗಿ ಮುಂದಾದರೂ ಉಂಟಾಗಲಿಲ್ಲವಾದ್ದರಿಂದ ವಾಚಕರಿಗೆ ಸಮಾಧಾನವಾಗಿರಲಿಕ್ಕೆಸಾಕು. ಎಲ್ಲಕ್ಕೂ ಕೊನೆಗೆ ಬರೆದ ಈ ವಾಕ್ಯಗಳಿಗೆ "ಬುದ್ಧಿನಾಥ"ನು ಟೀಕೆ ಬರೆದರೂ ಅರ್ಥವಾಗುವದೋ ಇಲ್ಲವೋ ಸಂಶಯವಿದೆ.— ಬರೆಯು ಇಂಗ್ಲೀಷ ಅಕ್ಷರಗಳ ಅಭ್ಯಾಸ ಮಾಡಿದ ವಿದ್ಯಾವಂತರು ಕನ್ನಡ ಅಕ್ಷರಗಳ ಜ್ಞಾನವು ತಿಳಿಯದಿರುವುದು ಇದ್ದರೆ ಅಭಿಪ್ರಾಯ ಕೊಡುವಾಗ ತಮ್ಮ ಮನಸ್ಸಿಗೆ ಸಮರ್ಪಕವಾಗಿಯೂ ತಪ್ಪಾಗಿಯೂ ಅನೇಕ ಸಂದರ್ಭಗಳಲ್ಲಿ ಇತ್ಯರ್ಥ ಕೊಡಲಿಕ್ಕೆ ಸಾಧ್ಯವಿದೆ. ಆದರೂ ವಿದ್ಯಾವಂತರು ಸಹಿಗಳನ್ನಲ್ಲದೆ ಹೆಬ್ಬೆಟ್ಟಿನ ಗುರುತುಗಳನ್ನು ಹಾಕುತ್ತ ಹೋದರೆ ಹಾಸ್ಯಕ್ಕೆ ಕಾರಣವಾಗುವದು. ಆದುದರಿಂದ ಕೆಲವರಿಂದ ತಪ್ಪಿಸಿಕೊಳ್ಳಲಿಕ್ಕೆಂದು ವಿದ್ಯಾವಂತರು ಇಂಗ್ಲೀಷ ಸಹಿಗಳನ್ನೇ ಹಾಕಬೇಕು— ಹಾಗಾದರೆ ಅಭಿಪ್ರಾಯ ಕೊಡುವವರು ಇಂಗ್ಲೀಷನ್ನಲ್ಲದೆ ಬೇರೆ ಯಾವುದನ್ನೂ ತಿಳಿದವರಲ್ಲ— ಅವರಿಗೆ ತಿಳಿದ ಇಂಗ್ಲೀಷಿನ ರೀತಿಯನ್ನು ತಿಳಿಸಬೇಕು ಅನೇಕರಿಗೆ, ಹೆಬ್ಬೆಟ್ಟಿನ ಗುರ್ತುಗಳನ್ನು ಹಾಕಿ ಹಾಸ್ಯಕ್ಕೆ ಗುರಿಯಾಗಬಾರದೆಂದು ಮಾಡಬೇಕೆಂಬುದು ನಿಜವಾದರೆ ಕನ್ನಡಬಲ್ಲ ಕನ್ನಡಿಗರು ಸಹಿ ಮಾಡಿದರೆ ಏನು ಅನರ್ಥವಾಗುವದು? ಇಂಗ್ಲಿಷ ಸಹಿಯೇ ಇದಕ್ಕೆ ಬೇಕೆ? ಕನ್ನಡದಲ್ಲಿ ಅಭಿಪ್ರಾಯ ಕೊಡುವ ಬುದ್ಧಿವಂತರಿಗೆ ಇಂಗ್ಲೀಷಿನ ಹೊರತು ಯಾವದೂ ತಿಳಿಯುವದಿಲ್ಲವಂತೆ! ವಾಹವ್ವಾ ಕನ್ನಡ "ಬುದ್ಧಿವಂತರೇ" ನಿಮಗೆ ಶರಣು! ಶರಣು!!

ರಾಷ್ಟ್ರೀಯ ರಂಗಭೂಮಿ.

(ನಮ್ಮ ಸ್ವಂತ ಸುದ್ದಿಗಾರರಿಂದ)

ಮುಂಬೈ ತಾ|| ೨೭-೯-೫೬

ಮೂಲತಃ ಬಂಗಾಲದ ಆದರೆ ಈಗ್ಗೆ ನಮ್ಮ ಮಂಗಳೂರಿನ ಕವಿಗಳಾದ ಹರೀಂದ್ರನಾಥ ಚಟ್ಟೋಪಾಧ್ಯರು ಮುಂಬೈಯಲ್ಲಿ ಕೊಟ್ಟ ವ್ಯಾಖ್ಯಾನದ ಸಾರಾಂಶವು:—

ಮುಂಬೈ ನಗರವಾಸಿಗಳು ನನಗೆ ಸ್ವಲ್ಪೇಕಾಲದಲ್ಲಿ ಕೊಟ್ಟ ಆಶ್ರಯಕ್ಕಾಗಿ ನಾನು ಅವರಿಗೆ ಉಪಕೃತನಾಗಿದ್ದೇನೆ. ಈ ಆಶ್ರಯದ ಬೆಂಬಲದಿಂದ ಭರತಖಂಡದ ಆಧ್ಯಾತ್ಮಿಕ ಹಾಗೂ ನೈತಿಕ ತತ್ವಗಳಿಗೆ ಅನುಗುಣವಾಗುವಂತೆ ರಾಷ್ಟ್ರೀಯ ರಂಗಭೂಮಿಯನ್ನು ಸಿದ್ಧಗೊಳಿಸಬೇಕೆಂದಿರುವೆನು. ಈ ಬಗೆಯ ನಾಟಕ ಮಂಡಳವನ್ನೇರ್ಪಡಿಸಲು ಮುಂಬಾಪುರದಲ್ಲಿಯ ಕೆಲವು ಶ್ರೀಮಂತರು ಮುಂದೊರೆದಿದ್ದಾರೆ. ಹಿಂದೀ ನಾಟಕಗಳನ್ನು ಪ್ರಯೋಗಿಸಬೇಕೆಂದು ನಿಶ್ಚಯಿಸಿರುವೆನು. ಇರಲಿ.

ಸ್ತ್ರೀಯರ ಭೂಮಿಕೆಯನ್ನು ನಾಟಕದಲ್ಲಿ ಸ್ತ್ರೀಯರೇ ವಹಿಸತಕ್ಕದ್ದು. ಪುರುಷರು ಸ್ತ್ರೀಯರ ಭೂಮಿಕೆಯನ್ನು ವಹಿಸುವದು ನಾಟ್ಯಕಲೆಯ ಅಭಿವೃದ್ಧಿಗೆ ವಿರೋಧವಾಗುವದು. ಮತ್ತು ಸ್ತ್ರೀ ಭೂಮಿಕೆಯ ನಟನಮೇಲೆಯೂ, ಅವನ ಹೆಂಡತಿಯ ಮೇಲೆಯೂ, ಪ್ರೇಕ್ಷಕರ ಮೇಲೆಯೂ ನೈತಿಕ ದೃಷ್ಟಿಯಿಂದ ಬಹು ಕೆಟ್ಟ ಪರಿಣಾಮವಾಗುತ್ತದೆ. ಆದರೆ ಪತಿವ್ರತಾ ಸ್ತ್ರೀಯರೇ ಸ್ತ್ರೀಯರ ಭೂಮಿಕೆಯನ್ನು ವಹಿಸುವದರಿಂದ, ರಂಗಭೂಮಿಯು ಉನ್ನತಸ್ಥಿತಿಗೇರುವದು. ಅದಕ್ಕೆ ಧಾರ್ಮಿಕ ಸ್ವರೂಪವು ಬರುವದು; ಅದು ಪವಿತ್ರವಾಗುವದು ಆ ಪತಿವ್ರತಾ ಸ್ತ್ರೀಯಳ ಪತಿಯೇ ನಾಸ್ಯ ರಂಗಭೂಮಿಯಲ್ಲಿಯೂ ಅವಳ ಪತಿಯಾಗಿರಬೇಕು; ಈ ಪದ್ಧತಿಯಿಂದುಂಟಾದ ಫಲಾಫಲಾಭವನ್ನು ನಾನು ನನ್ನ ಸ್ವಂತ ಅನುಭವದಿಂದ ಹೇಳಬಲ್ಲೆನು ರಂಗಭೂಮಿಯಿಂದರೆ ಅದೊಂದು ಗವಾಕ್ಷಿಯು ಅದರಿಂದ ಮನುಷ್ಯ ಪ್ರಾಣಿಯ ಗುಣಗಳು ಹೆಚ್ಚು ಶುದ್ಧತೆಯನ್ನು ಹೊಂದುವವು. ಪತ್ನಿ ಸಹಚಾರಿಣಿಯ ಸಹಾಯವಿಲ್ಲದೇ ಮನುಷ್ಯನಿಗೆ ಯಾವ ವಿಷಯದಲ್ಲಿಯೂ ಈ ಪ್ರಪಂಚದಲ್ಲಿ ಜಯವು ದೊರೆಯದು. ಅದೇಪ್ರಕಾರವಾಗಿ ರಂಗಭೂಮಿಯು ಉದ್ಧಾರವಾಗಬೇಕಿದ್ದರೆ, ಪತಿವ್ರತಾ ಸ್ತ್ರೀ ಹಾಗೂ ಅವಳ ಪತಿ ಇವರ ಪ್ರತ್ಯಕ್ಷವಾದ ಸಹಾಯವು ಅತ್ಯವಶ್ಯವಾದುದು.

ನಾವು ರಂಗಭೂಮಿಯಲ್ಲಿ ಖಾದಿಯನ್ನೇ ಧರಿಸುವದರಿಂದ ಪಾವಿತ್ರ್ಯತೆಯುಂಟಾಗುವದು. ಕಲೆಯು ಅಭಿವೃದ್ಧಿ ಹೊಂದುವದು. ನಾನು ನನ್ನ ನಾಟಕ ಮಂಡಳದಲ್ಲಿ ಖಾದಿಯನ್ನೇ ಉಪಯೋಗಿಸುವೆನು. ರಂಗಭೂಮಿಯಿಂದ ಹಾರ್ಮೋನಿಯಮ್‌ನ್ನು ಕಿತ್ತಿ ಬೀಸಾಡಲೇಬೇಕ. ಹಾರ್ಮೋನಿಯಮ್ಮವು ಪೂರ್ಣತೆಯನ್ನು ಹೊಂದಿದ ರಾಗದ ಸಾಧನವಲ್ಲ. ಬಾಲಕ ಬಾಲಿಕೆಯರಲ್ಲಿರುವ ಮಧುರವೂ ಸ್ವಾಭಾವಿಕವೂ ಆದ ಗಾಯನ ಪ್ರೀತಿಯು ಹಾರ್ಮೋನಿಯಮ್‌ದಿಂದ ಕೆಡುವದು. ನನ್ನ ನಾಟಕ ಮಂಡಳದಲ್ಲಿ ೧೦-೧೫ ತಂಬೂರಿಗಳನ್ನೂ, ಸಾರಂಗ ಪಿಟೀಲುಗಳನ್ನೂ ಸಿದ್ಧಪಡಿಸುವೆನು.

"ಫೇಸ ಪಾವಡರ"ನ್ನು ಕಸದ ಬುಟ್ಟಿಯಲ್ಲಿ ಎಸೆಯ ಬೇಕೆಂದು ಬಳ್ಳೀ ಗಂಭೀರ ವಾಣಿಯಿಂದ ಕವಿಗಳು ನುಡಿದ ಕೂಡಲೇ ಸಭಿಕರೆಲ್ಲ ಆಶ್ಚರ್ಯ ಚಕಿತರಾದರು ಭಾರತೀಯರಿಗೆ ಹೊನ್ನಿನ ಬಣ್ಣದ ತೊಗಲನ್ನು ದೇವರು ದಯಪಾಲಿಸಿದ್ದಾನೆ. ಇದೇ ಬಣ್ಣವು ನಮಗೆ ಸುಶೋಭಿತವಾದುದು. "ಫೇಸ ಪಾವಡರ"ದ ಬಿಳಿಯ ಬಣ್ಣವು ಸರ್ವಥಾ ಅಯೋಗ್ಯವು. "ಫೇಸ ಪಾವಡರ"ವೆ "ಗನ್ ಪಾವಡರ" (ಫಿರಂಗಿಮದ್ದು). ಅದನ್ನು ರಂಗಭೂಮಿಯಲ್ಲಿ ನೋಡಿದಕೂಡಲೆ ತುಬಾಕಿಯ ಧಡಲ್ ಎಂಬ ಶಬ್ದದಂತೆ ನಾನು ಹಾರಿಬೀಳುತ್ತೇನೆ.

---

(೧) ಮೈಸೂರ ಪೆಟ್ರಿಯಟ್ ಮೈಸೂರಿನಲ್ಲಿ ಕಳೆದ ೨೦ ವರ್ಷಗಳಿಂದ ಸಾಗಿದ ಇಂಗ್ಲೀಷ ವಾರಪತ್ರಿಕೆ. ಹೊಸಯುಗದ ಹೊಸ ಚೈತನ್ಯಕ್ಕೆ ಅನುಗುಣವಾಗಬೇಕೆಂದು ಇದರಲ್ಲಿಡಯಾದ ಮೈಸೂರಿನ ವೃದ್ಧಪಿತಾಮಹ ಶ್ರೀ ವೆಂಕಟಕೃಷ್ಣಯ್ಯನವರು. ಬಳ್ಳೀ ಕಳವಳದ ಕನ್ನಡ ಸಾಹಸೀ ತರುಣರೂ, ವೃತ್ತಪತ್ರಿಕಾ ವ್ಯವಸಾಯದಲ್ಲಿ ನುರಿತವರೂ ಆದ ಶ್ರೀ. ಪಿ. ಆರ್ ರಾಮಯ್ಯನವರಿಗೆ ಇದರ ಸಂಪಾದಕತ್ವವನ್ನು ಅರ್ಪಿಸಿದ್ದಾರೆ. ಇನ್ನುಮೇಲೆ ಇವರ ಸಂಪಾದಕತ್ವದಲ್ಲಿ ಕರ್ನಾಟಕದ ಈಗಿನ ಬಿಕ್ಕಟ್ಟಿನ ಪ್ರಶ್ನೆಗಳಾದ ಏಕೀಕರಣ ವಿಶ್ವವಿದ್ಯಾಲಯಗಳ ಪ್ರಶ್ನೆಗಳೂ, ಕನ್ನಡಿಗರ ಇನ್ನಿತರ ಆಕಾಂಕ್ಷೆಗಳೂಹೆಚ್ಚಾಗಿ ವಿವೇಚಿಸಲ್ಪಡುವವೆಂಬುದಾಗಿ ನಾವು ಹೇಳಬಲ್ಲೆವು. ವಾ. ಚಂದಾ. ೭-೮-೦

ಉತ್ತರ ಹಿಂದೂಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ

(ಲೇಖಾಂಕ ೭)

ಪ್ರಯಾಗವು ಬ್ರಹ್ಮದೇವರ ಯಾಗಸ್ಥಾನವು. ಭಾರದ್ವಾಜ ಋಷಿಗಳ ಆಶ್ರಮವೂ ಇಲ್ಲಿದೆ. ಅದನ್ನು ಈಗಲೂ ಕಾದಿಟ್ಟಿದ್ದಾರೆ. ಮಕರರಾಶಿಯಲ್ಲಿ ಸೂರ್ಯ ಮತ್ತು ಗುರುಗಳಿರುವಾಗ ಇಲ್ಲಿ ಸ್ನಾನಕ್ಕಾಗಿ ಲಕ್ಷಾವಧಿ ಜನರು ಕೂಡುವರು. ಅದಕ್ಕೆ ಕುಂಭಮೇಳವೆಂಬ ಬಹುದೊಡ್ಡ ಜಾತ್ರೆಯಾಗುತ್ತದೆ. ಈ ಜಾತ್ರೆಯ ಸಿದ್ಧತೆಯನ್ನು ಮುನಸೀಪಾಲ್ಟಿಯವರು ೮-೧೦ ತಿಂಗಳಿಂದ ಮಾಡತೊಡಗುವರು. ಈ ಕುಂಭಮೇಳವು ಒಂದು ಸಲ ಪ್ರಯಾಗದಲ್ಲಿ, ಎರಡನೇ ಸಲ ಹರಿದ್ವಾರದಲ್ಲಿ, ಮೂರನೇ ಸಲ ನಾಶಿಕದಲ್ಲಿ, ಹೀಗೆ ಸರ್ತಿಯಿಂದ ಜರಗುವದು. ಇದು ಬಹು ಪ್ರಾಚೀನ ಕಾಲದಿಂದ ಬಂದ ಸಂಪ್ರದಾಯವಿದೆ. ಈ ಸಲ ಹರಿದ್ವಾರದಲ್ಲಿದ್ದು, ಆ ಬಗ್ಗೆ ಪೂರ್ವ ಸಿದ್ಧತೆಯು ಈಗಲೇ ಪ್ರಾರಂಭವಾಗಿದೆ. ಪ್ರಯಾಗ ಮಹಾತ್ಮೆಯಲ್ಲಿ ಹೀಗೆ ವರ್ಣಿತವಾಗಿದೆ:—

ಮಕರಸ್ಥೇ ಗುರೌ ಮೇಷೇ ಮಕರಸ್ಥೇ ದಿವಾಕರೇ।
ಅತಿ ಪ್ರಶಸ್ತೋ ಯೋಗೋಯಂ ಬಹು ಪುಣ್ಯಕರಃ ಸ್ಮೃತಃ॥
ವೇಣ್ಯಾಂ ಸ್ನಾತ್ವಾ ಶುಚಿರ್ಭೂತ್ವಾ ಕೃತ್ವಾ ಮಾಧವ ದರ್ಶನಮ್।
ಭುಕ್ತ್ವಾ ಪುಣ್ಯವತಾನ್ ಭೋಗಾನಿತೋ ಮಾಧವಕಾಂ ವ್ರಜೇತ್
॥ ೧ ॥

ಪ್ರಯಾಗದಲ್ಲಿ ಪ್ರತಿಯೊಬ್ಬ ಯಾತ್ರಿಕನು ಕೆಳಗಿನ ಈ ಸ್ಥಾನಗಳನ್ನು ಸಂದರ್ಶಿಸದಿದ್ದರೆ ಸಂಪೂರ್ಣ ಯಾತ್ರೆಯ ಫಲವು ಲಭಿಸದು:—

ತ್ರಿವೇಣೀಂ ಮಾಧವಂ ಸೋಮಂ ಭಾರದ್ವಾಜಂ ಚ ವಾಸುಕೀಂ।
ವಂದೇ ಅಕ್ಷಯವಟಂ ಶೇಷಂ ಪ್ರಯಾಗಂ ತೀರ್ಥನಾಯಕಂ॥

ಅಕ್ಷಯ ವಟವ ಶೇಷವು ಪ್ರಯಾಗ, ಕಾಶಿ, ಗಯಾ, ಈ ಮೂರೂ ಸ್ಥಾನಗಳಲ್ಲಿದೆ. ಈ ಬಗ್ಗೆ ಹೆಚ್ಚಾಗಿ ಗಯಾ ವರ್ಣನೆಯಲ್ಲಿ ಬರೆಯುವೆವು. ಪ್ರಯಾಗದಲ್ಲಿ ಅಕ್ಷಯವಟವು ತ್ರಿವೇಣಿ ದಂಡೆಯಲ್ಲಿದ್ದ ಕಿಲ್ಲೆಯಲ್ಲಿದೆ. ಈ ಕಿಲ್ಲೆಯು ಸಂಪೂರ್ಣವಾಗಿ ದಂಡಿನ ವಶದಲ್ಲಿದೆ. ಬ್ರಿಟಿಶರು ಹಿಂದುಸ್ಥಾನದಲ್ಲಿ ಕಿಲ್ಲೆಗಳನ್ನೆಲ್ಲ ನಾಶಪಡಿಸಿದ್ದು ಎಲ್ಲರಿಗೂ ಗೊತ್ತಿದ್ದ ಮಾತಾಗಿದೆ. ಆದರೆ ಪ್ರಯಾಗದಲ್ಲಿ ಮಾತ್ರ ಮೊಗಲರ ಕಾಲದಲ್ಲಿ ಕಟ್ಟಿಸಲ್ಪಟ್ಟ ಕಿಲ್ಲೆಯು ಈಗ್ಗೆಯೂ ಇದೆ. ಅಕ್ಷಯವಟದ ದರ್ಶನಕ್ಕೆ ಬೆಳಗ್ಗೆ ೮ ರಿಂದ ಸಾಯಂಕಾಲದ ೫ರ ವರೆಗೆ ಮಾತ್ರ ಯಾತ್ರಿಕರನ್ನು ಒಳಕ್ಕೆ ಬಿಡುವರು. ಪೂಜಾರಿಗಳು ಸಹ ೫ರ ನಂತರ ಹೊರಗೆ ಬರಬೇಕಾಗುವದು. ಈ ವಟದ ಸ್ಥಾನದಲ್ಲಿ ಹಿಂದೂ ದೇವರ ಮೂರ್ತಿಗಳಿವೆ. ಇವೆಲ್ಲ ಕತ್ತಲೆಗೆಯಲ್ಲಿ ಬಹು ಅಂದವಾಗಿದ್ದು, ಪ್ರೇಕ್ಷಣೀಯವಾಗಿವೆ. ಇವನ್ನು ನೋಡಲಿಕ್ಕೆಂದು ಹೋಗಿ ನಾವು ಮರಳಿ ಬರುವಾಗ, ಯುರೋಪಿಯನ್ನ ದಂಡಿನವರು ಪ್ರತಿ ದೇವಾಲಯವನ್ನು ತಮ್ಮ ಬೂಟುಸಹ ಹಾಕಿಕೊಂಡು ಪ್ರವೇಶಿಸಿದ್ದನ್ನು ಕಂಡು ನಾವು ಅತ್ಯಂತ ರೋಷಾವಿಷ್ಟರಾದೆವು. ಆದರೆ 'ಜೂಟ್ಟಿಯ ಸ್ಥಿತಿ ಶಿಟ್ಟು ಬಟ್ಟೆಗಳಲ್ಲಿಲ್ಲ" ವೆಂಬ ನಾಣ್ಣುಡಿಯಂತೆ ಕ್ಷಮಾ ತೀರಿಸು ದುರ್ಬಲರಿದ್ದು ... ಕೂಡಲೇ ನೆನಪಾಯಿತು. ... ಅವರನ್ನು ಒಳಕ್ಕೇಕೆ ಬಿಡುವರೆಂದು ಪೂಜಾರಿಗೆ ಕೇಳಲು ... ಒಡದಕೂಡಲೇ ಹೊರಕ್ಕಟ್ಟುವರು; ... ನಮ್ಮ ಮಾತನ್ನು ... ನೈರ್ಮಲ್ಯ ... ನುಡಿದರು! ಇದಕ್ಕಾಗಿ ಹಿಂದೂಜನರ ವಿರೋಧವು ಅಲ್ಲಿಇಲ್ಲದ್ದನ್ನು ತಿಳಿದು ಬಹು ವ್ಯಥೆಯಾಯಿತು. ಅದೇ ದಿನ ಸಾಯಂಕಾಲದಲ್ಲಿ ಸರಸ್ವತೀ ಕುಂಡವನ್ನು ನೋಡಲಿಕ್ಕೆ ಹೋದೆವು. ಅಲ್ಲಿ ಆ ಕುಂಡದ ಹತ್ತರದಲ್ಲಿಯೇ ಈ ದಂಡಿನವರು ಕಿಲ್ಲೆಯ ಗೋಡೆಯಲ್ಲಿ ಬೀಡು ಮಾಡಿ ದುರ್ಗಂಧವುಳ್ಳ ಕೊಳಚಿ ನೀರನ್ನು ಬಿಡುವದನ್ನು ನೋಡಿ, ಪಿತ್ತವು ತಲೆಗೇರಿತು! ಹಿಂದೂ ಜನರು ಪವಿತ್ರವಾದ ತಮ್ಮ ಧರ್ಮಸ್ಥಾನಗಳನ್ನು ಸಂದರ್ಶಿಸಲು ಬರುವ ಸ್ಥಾನಗಳಲ್ಲಿ ಈ ಯುರೋಪಿಯರ ಚಲ್ಲಾಟವು ಸ್ವೇಚ್ಛೆಯಿಂದ ನಡೆದದ್ದು ಎಂಥಹ ಅನ್ಯಾಯಕರವೆಂಬುದನ್ನು ಜನರೇ ತಿಳಿದು ನೋಡಬೇಕು. ಅಧಿಕಾರದ ಮದವಿರುವ ಸರಕಾರಕ್ಕೆ ನಮ್ಮ ಧರ್ಮಭಾವನೆಯು ಎಷ್ಟು ಪರಿಯಿಂದ ವ್ಯಥೆಪಟ್ಟರೂ ಅದರ 'ದಾಡು' ಮುಟ್ಟುವದಿಲ್ಲ. ಮುಟ್ಟಿದರೂ ಸರಕಾರದವರು ಅದನ್ನು ಲೆಕ್ಕಿಸುವದಿಲ್ಲ. ಇತ್ತ ನಮ್ಮ ಧರ್ಮಬಾಂಧವರೂ ಕುರಿಗಳಂತೆ ಸುಮ್ಮನೆ ತಲೆಯನ್ನಲ್ಲಾಡಿಸುತ್ತ ಮುಂದಕ್ಕೆ ಸಾಗುವರು. ಅಂತೆಯೇ ಹಿಂದೂ ಧರ್ಮದ ಅವನತಿಯು ರಸಾತಳದವರೆಗೆ ಮುಟ್ಟಿದೆನ್ನಬೇಕಾಗಿದೆ.

ವಾಸುಕಿ, ವೇಣೀಮಾಧವ, ಸೋಮೇಶ್ವರ, ನಾರಸಿಂಹ, ಆದಿಮಾಧವ, ಭಾರದ್ವಾಜಾಶ್ರಮ, ಸರಸ್ವತೀ ಕುಂಡ, ಸಗರ ಕೂಪ ಈ ಸ್ಥಾನಗಳನ್ನು ಸಂದರ್ಶಿಸಿ ಬಂದೆವು. ಸಗರಕೂಪವೆಂದರೆ ಸಗರ ರಾಜನು ತನ್ನ ವಂಶಸ್ಥರನ್ನು ಉದ್ಧಾರಮಾಡಲು ಜಾಹ್ನವಿಯನ್ನು ಭೂಲೋಕಕ್ಕೆ ತರಲು ಕಾರಣವಾಗಿದ್ದ ಸ್ಥಾನವು. ಇದು ಗಂಗಾ ತಟಾಕದ ಆಚೆಯ ದಂಡೆಯಲ್ಲಿದೆ.

ಬೆಳ್ಳಿಯ "ಸುವರ್ಣನ ಪಾತ್ರೆ"ಯ ಬಹುಮಾನ

ಬೆಂಗಳೂರು ನೂಲುವವರ

ಸಂಘದ ಕೈನೂಲಿನ ಪಂದ್ಯಾಟ.

ನೂರು ರೂಪಾಯಿ ಬೆಲೆ ಬಾಳುವ ಮೇಲೆಹೇಳಿದ ಬೆಳ್ಳಿಯ ಬಟ್ಟಲವನ್ನು ಕೈನೂಲಿನ ಕೈಗಾರಿಕೆಯ ಉತ್ತೇಜನಕ್ಕಾಗಿ ಒಬ್ಬ ಉದಾರಹೃದಯರಾದ ಮಹನೀಯರು ಕೊಡಲೊಪ್ಪಿರುವರು.

ಮೂರು ಪಂದ್ಯಾಟಗಳಲ್ಲಿ ಅನುಕ್ರಮವಾಗಿ ತಪ್ಪದೆ ಗೆಲ್ಲುವವರಿಗೇ ಈ ಬಟ್ಟಲನ್ನು ಬಹುಮಾನವಾಗಿ ಕೊಡಲಾಗುವುದು.

ಈ ಪಂದ್ಯಾಟಕ್ಕೆ ಸಮಗ್ರಕರ್ನಾಟಕದವರೂ ಬರಬಹುದು. ಈ ಪಂದ್ಯವನ್ನು ಬೆಂಗಳೂರು ಶಹರಿನಲ್ಲಿ ಬೆಂಗಳೂರು ನೂಲುವವರ ಸಂಘದವರು ನಡೆಸುವರು. ಮೊದಲನೆಯ ಪಂದ್ಯಾಟವು ಬರುವ ನವಂಬರ (೧೯೨೬) ತಿಂಗಳ ಬಲಿಪಾಡ್ಯಮಿಯ ದಿನ ನಡೆಯುವುದು. ಮುಂದಿನ ಎರಡು ಪಂದ್ಯಾಟಗಳು ನಾಲ್ಕು ತಿಂಗಳಿಗೊಂದು ಸಾರಿ ನಡೆಯುವವು. ಅವುಗಳು ನಡೆಯುವುದಕ್ಕೆ ಒಂದು ತಿಂಗಳು ಮುಂಚಿತವಾಗಿ ಎಲ್ಲರಿಗೂ ತಿಳಿಸಲಾಗುವದು.

ಪರಊರಿನಿಂದ ಪಂದ್ಯಕ್ಕಾಗಿ ಬರುವವರು ಮೊದಲೇ ತಿಳಿಸಿದ ಸಂದರ್ಭದಲ್ಲಿ ಅವರ ವಾಸಸ್ಥಳಕ್ಕೂ ಮತ್ತು ಭೋಜನಕ್ಕೂ ಏರ್ಪಾಡು ಮಾಡಲಾಗುವುದು. ಸ್ತ್ರೀಯರಿಗೂ ಪ್ರತ್ಯೇಕ ಏರ್ಪಾಡು ಮಾಡಲಾಗುವುದು.

ಹೆಚ್ಚಿನ ಮಾಹಿತಿಯನ್ನು ಪಡೆಯಬಯಸುವವರು "ಸೆಕ್ರೆಟರಿ, ಬೆಂಗಳೂರು ನೂಲುವವರ ಸಂಘ, ಖಾದಿ ವಸ್ತ್ರಾಲಯ, ಕೋಟೆ, ಬೆಂಗಳೂರು ಸಿಟಿ" ಇವರಿಗೆ ಬರೆದು ತಿಳಿದುಕೊಳ್ಳಬಹುದು.

ಬೆಂಗಳೂರು ೧೯-೯-೨೬	ಸೂ. ರಾಜಾರಾಮಯ್ಯಂಗಾರ್ಯ. ಸೆಕ್ರೆಟರಿ ಬೆಂಗಳೂರು ನೂಲುವವರ ಸಂಘ ಬೆಂಗಳೂರು ನಗರ.

ಕಿರ್ಲೋಸ್ಕರ ಕಾರಖಾನೆಯೂ ಕರ್ನಾಟಕವೂ

ಕಿರ್ಲೋಸ್ಕರ ಬಂಧುಗಳ ಕಾರ್ಖಾನೆಯ ಬಗ್ಗೆ ಕನ್ನಡಿಗರಿಗೆ ಹೊಸದಾಗಿ ತಿಳುಹಿಸಬೇಕಾಗಿಲ್ಲ ಈ ಕಾರ್ಖಾನೆಯು ಪ್ರಾರಂಭದಲ್ಲಿ ಬೆಳಗಾವಿಯಲ್ಲಿಯೇ ಇದ್ದದರಿಂದ ಇದನ್ನು ಕನ್ನಡಿಗರು ಬಲ್ಲರು. ಇದು ಬೆಳಗಾಂವಿಯಿಂದ ಕಿರ್ಲೋಸ್ಕರವಾಡಿಗೆ ಬರಲಿಕ್ಕೆ ಉಂಟಾದ ಕಾರಣವು ಬಹುಜನರಿಗೆ ಗೊತ್ತಿರುವದು. ಅದನ್ನೇ ಪುನಃ ಪುನಃ ತಿಳುಹಿಸಿ ಓದುಗರಿಗೆ ಬೇಸರವನ್ನುಂಟುಮಾಡುವದಕ್ಕೆ ನಾವು ಒಲ್ಲೆವು ಇನ್ನು ಬೆಳಗಾವಿಯನ್ನು ಬಿಟ್ಟು ಕಿರ್ಲೋಸ್ಕರವಾಡಿಗೆ ಕಾರ್ಖಾನೆಯು ಒಂದ ಮಾತ್ರದಿಂದ ಅದು ಕರ್ನಾಟಕಕ್ಕೆ ಎರವಾಯಿತೆಂದು ಮಾತ್ರ ತಿಳಿಯಕೂಡದು. ಕಾರ್ಖಾನೆಗೆ ಮಿಕ್ಕ ಪ್ರಾಂತಗಳಕಿಂತ ಕರ್ನಾಟಕವು ಹೆಚ್ಚಾಗಿ ಅವಶ್ಯವದೆ.

ಸದ್ಯಕ್ಕೆ ಟಾಚಣಿಯಂಥ ಅತ್ಯಲ್ಪ ಸಾಮಾನುಗಳನ್ನು ಮೊದಲು ಮಾಡಿಕೊಂಡು ಸಂಸಾರೋಪಯೋಗಿಯಾದ ಯಾವತ್ತೂ ಸಾಮಾನುಗಳು ಪರದೇಶದಿಂದ ಬರುತ್ತಲಿರುವವು. ಈ ಪರಾವಲಂಬಿ ಪರಿಸ್ಥಿತಿಯು ಹಿಂದುಸ್ಥಾನದ ಸಂಪತ್ತನ್ನು ಬಂದಿಲ್ಲೊಂದು ರೀತಿಯಿಂದ ಪರದೇಶಕ್ಕೆ ಸಳೆದೊಯ್ದು ಸ್ವಜನರನ್ನು ನಿರುದ್ಯೋಗಿ, ಸೋಮಾರಿ, ಪರಾವಲಂಬಿಗಳನ್ನಾಗಿ ಮಾಡುತ್ತಿರುವದು ಎಲ್ಲರಿಗೂ ಗೊತ್ತುಂಟು. ಈ ಸ್ಥಿತಿಯನ್ನು ಹೋಗಲಾಡಿಸುವದಕ್ಕೆ ಶಕ್ಯವಿದ್ದಷ್ಟು ಸರಕುಗಳನ್ನು ಸ್ವದೇಶದಲ್ಲಿಮಾಡಿ ಹೊರಗೆ ಹೋಗುತ್ತಿರುವ ಅಪಾರಸಂಪತ್ತಿಯನ್ನು ಅಲ್ಪಮಟ್ಟಿಗಾದರೂ ತಡವಿ, ಅದರಿಂದ ಸ್ವದೇಶಿಯ ಉದ್ಯೋಗಗಳನ್ನು ಬೆಳಸಿ, ಅರ್ಧಹೊಟ್ಟೆಯಿಂದ ಪ್ರಾಣಬಿಡುತ್ತಿರುವ ಬಡಬಗ್ಗರನ್ನು ಉಳಿಸಿಕೊಳ್ಳುವದು ಅವಶ್ಯವದೆ.

ಈ ದೃಷ್ಟಿಯಿಂದ ಹಿಂದುಸ್ಥಾನದಲ್ಲಿ ಸದ್ಯಕ್ಕೆ ಎಷ್ಟು ಕಾರ್ಖಾನೆಗಳೂ ಹೊರಟರೂ ಅವು ಬೇಕೇಬೇಕು. ಹಾಗು ಈ ಎಲ್ಲ ಕಾರ್ಖಾನೆಗಳಿಗೆ ಸ್ವಜನರ ಸಹಾನುಭೂತಿಯು ಅವಶ್ಯವದೆ ಆದ್ದರಿಂದ ಹಿಂದುಸ್ಥಾನದಲ್ಲಿಯ ಸ್ವದೇಶೀ ಕಾರ್ಖಾನೆಯು ತನ್ನದೆಂದು ತಿಳಿದು ಪ್ರತಿಯೊಬ್ಬ ಭಾರತೀಯನು ತನು, ಮನ, ಧನಗಳಿಂದ ಸಹಾಯ ಮಾಡಿದಲ್ಲಿ ಈ ಕಾರ್ಖಾನೆಗಳು ಬಲಗೊಂಡು ತಮ್ಮ ಧ್ಯೇಯವನ್ನು ಸಾಧಿಸುವವು.

ಇಲ್ಲಿ ಕರ್ನಾಟಕ, ಮಹಾರಾಷ್ಟ್ರ ವಾದಗಳಿಗೆ ಇಂಬು ಇಲ್ಲ. ಇಲ್ಲಿ ಪರಕೀಯ ಭಾವನೆಯಿಲ್ಲ. ಧರ್ಮದ ಪ್ರತಿಬಂಧವಿಲ್ಲ. ಸ್ವದೇಶೋದ್ಧಾರವೆಂಬ ಒಂದೇ ಒಂದು ಸಾತ್ವಿಕ ಭಾವನೆಯಿರುವದು. ಈ ದೃಷ್ಟಿಯಿಂದಲೇ ಕಿರ್ಲೋಸ್ಕರ ಕಾರ್ಖಾನೆಯ ಕಡೆಗೆ ಯಾವತ್ತರೂ ನೋಡಬೇಕೆಂದು ನಮ್ಮ ಬಿನ್ನಹವಿದೆ.

ಕಿರ್ಲೋಸ್ಕರ ಕಾರ್ಖಾನೆಗೆ ಯಾವತ್ತು ಪ್ರಾಂತಗಳು ಸಮಾನ್ಯವಾದಾಗ್ಯೂ ಇದು ತನ್ನ ಮಾತೃಸ್ಥಾನವಾದ ಕರ್ನಾಟಕವನ್ನು ಸರಿಯಾಗಿ ಭಕ್ತಿ ಭಾವನೆಯಿಂದ ನೋಡುವದು.

ಕರ್ನಾಟಕದಲ್ಲಿ ಸದ್ಯಕ್ಕೆ ಜಾಗ್ರತಿಯುತ್ಪನ್ನವಾಗಿ ಎಲ್ಲಿ ನೋಡಿದರೂ ಎಲ್ಲಿ ಕೇಳಿದರೂ ಏಕೀಕರಣದ ಬಗ್ಗೆ ಪ್ರತಿಯೊಬ್ಬರು ಮನಃಪೂರ್ವಕವಾಗಿ ಪ್ರಯತ್ನ ಮಾಡುತ್ತಿರುವದೇ ಕಂಡುಬಂದಿದೆ. ಈ ಪ್ರಯತ್ನದಲ್ಲಿ ಕಿರ್ಲೋಸ್ಕರ ಬಂಧುಗಳು ಸಹಕಾರಿಯಾಗಿರುವರು. ಸದ್ಯಕ್ಕೆ ಕಾರ್ಖಾನೆಯಲ್ಲಿ ದೊಡ್ಡ ಹುದ್ದೆಗಳಮೇಲೆ ಕನ್ನಡ ಜನರೇ ಇರುವರು. ಅದಲ್ಲದೆ ಕಿರ್ಲೋಸ್ಕರವಾಡಿ ಮತ್ತು ಸ್ಟೇಶನ್‌ಗಳಮೇಲೆ ಕನ್ನಡ ಸಮಾಜವು ಚನ್ನಾಗಿ ಕಲೆತಿರುವದು. ಕರ್ನಾಟಕದಲ್ಲಿ ಕಿರ್ಲೋಸ್ಕರರ ವ್ಯಾಪಾರವು ಚನ್ನಾಗಿ ಬೆಳದಂತೆ ಕರ್ನಾಟಕಕ್ಕೂ ಕಾರ್ಖಾನೆಗೂ ಹೆಚ್ಚು ನಿಕಟ ಸಂಬಂಧವುಂಟಾಗುವದರಲ್ಲಿ ಸಂದೇಹವಿಲ್ಲ. ವ್ಯಾಪಾರವು ಬೆಳೆಯುವದಕ್ಕೆ ಕಾರ್ಖಾನೆಯು ತನ್ನ ಕರ್ತವ್ಯವನ್ನು ಮಾಡೇಮಾಡುವದು. ಈ ಪ್ರಯತ್ನಕ್ಕೆ ಕರ್ನಾಟಕದ ಮುಂದಾಳುಗಳೂ ವರ್ತಕರೂ ಕೈಕೊಟ್ಟಲ್ಲಿ ಹಾಲಿನಲ್ಲಿ ಸಕ್ಕರಿಯನ್ನು ಕೂಡಿಸಿದಷ್ಟು ಸವಿಯಾಗಿ, ಏಕೀಕರಣಕ್ಕೆಹೆಚ್ಚು ಬೆಂಬಲ ದೊರೆಯುವದು. ರಾಜಕಾರಣದಲ್ಲಿ ಏಕೀಕರಣವನ್ನು ಮಾಡುವಂತೆ ಔದ್ಯೋಗಿಕ ದೃಷ್ಟಿಯಿಂದ ಏಕೀಕರಣ ಮಾಡುವದು, ಕರ್ನಾಟಕದ ಉನ್ನತಿಗ—ತದ್ ಮುಖಾಂತರವಾಗಿ ಹಿಂದುಸ್ಥಾನದ ಭಾವೀ ಉನ್ನತಿಗೆ-ಸಹಾಯವಾಗುವದು. ಆದ್ದರಿಂದ ಕಿರ್ಲೋಸ್ಕರ ಕಾರ್ಖಾನೆಯ ಕಡೆಗೆ ಕರ್ನಾಟಕಸ್ಥರು ಹೆಚ್ಚು ಲಕ್ಷ್ಯಗೊಟ್ಟುಅದನ್ನು ಪ್ರೋತ್ಸಾಹಿಸಬೇಕು. ಅಂದರೆ ಕಾರ್ಖಾನೆಯು ಕರ್ನಾಟಕದ್ದೇ ಆಗುವದರಲ್ಲಿ ಸಂದೇಹದಲ್ಲಿ.

—ಸಂಪಾದಕ. ಕಿರ್ಲೋಸ್ಕರವಾರ್ತೆ

(ಸೂಚನೆ)-ಕಿರ್ಲೋಸ್ಕರ ವಾಡಿಯಲ್ಲಿದ್ದ ಕನ್ನಡ ನೌಕರರ ಬಾಲಕರಿಗಾಗಿ ಕನ್ನಡ ಶಾಲೆಗಳನ್ನು ತೆರೆಯುವದು, ಕನ್ನಡ ಗ್ರಂಥಗಳನ್ನು ಪುಸ್ತಕಾಲಯದಲ್ಲಿರಿಸುವದು, ಕನ್ನಡ ಮಾಸಪತ್ರಿಕೆ ಹಾಗು ವೃತ್ತ ಪತ್ರಿಕೆಗಳನ್ನು ಅಲ್ಲಿಯ ಕನ್ನಡಿಗರಿಗಾಗಿ ಕೊಳ್ಳುವದು, ಕನ್ನಡ ವೃತ್ತ ಪತ್ರಗಳಲ್ಲಿ ತಮ್ಮ ಜಾಹೀರಾತನ್ನಿಡುವದು, ಕರ್ನಾಟಕ ವಿಶ್ವವಿದ್ಯಾಲಯ, ಏಕೀಕರಣಗಳಿಗಾಗಿ ಠರಾವುಗಳನ್ನು ಸಿದ್ಧಮಾಡಿ ಸರಕಾರಕ್ಕೆ ಕಳಿಸುವದು, ಇವೇ ಮೊದಲಾದ ಕೃತಿಗಳಿಂದ ಕಿರ್ಲೋಸ್ಕರ ಕಾರ್ಖಾನೆಯವರು ಕನ್ನಡಿಗರ ಹೃದಯವನ್ನು ಎಳೆದುಕೊಳ್ಳಬೇಕು. ಅಂದರೆ ಇವರ ಜೊತೆಯಲ್ಲಿ ಅವರ ಉದ್ಯೋಗವು ಕರ್ನಾಟಕದಲ್ಲಿ ತಾನಾಗಿಯೇ ಹೆಚ್ಚು ಉತ್ಸಹದಿಂದ ಬಲಿಯುವದು ಸಂ. ಕ)

ಬಯಲು ಭ್ರಾಂತಿಯು.

(ರಾಮ ಭಕ್ತಸಿಂದ)

ಮನುಷ್ಯನು ಆಶಾವಾದಿಯು. ತನ್ನ ಕಲ್ಪನಾಸೃಷ್ಟಿಯಲ್ಲಿ ಬೇಕಾದುದನ್ನು ಸೃಷ್ಟಿಸಿ ತನ್ನಷ್ಟಕ್ಕೆ ತಾನೇ ಆನಂದಿಸುವನು. ಒಮ್ಮೊಮ್ಮೆ ಈ ಆನಂದವು ಅತಿರೇಕದಲ್ಲಿ ಪರಿಣಮಿಸಿ ಅವನಿಗೆ ಸುತ್ತಲಿನ ವಾತಾವರಣವು ಕೇವಲ ದಾರ್ಥವಾಗಿ ಕಾಣಹತ್ತುತ್ತದೆ. ಈಗ್ಗೆ ಅವನಿಗೆ ತಾನು ದುರ್ಬಲನೆಂಬ ಪರಿವೆಯೇ ಉಳಿಯುವದಿಲ್ಲ ತನ್ನ ವಿಚಾರಗಳು ಕೇವಲ ಕಲ್ಪನಾ ಸೃಷ್ಟಿಯವು; ಅವು ಪೊಳ್ಳು, ಜೊಳ್ಳು, ಅನಿತ್ಯವಾದುವುಗಳು; ನಡುವೇ ಆ ವಿಚಾರಗಳಿಗೆ ಒಡ್ಡು ಬಿದ್ದು, ಅವು ಕಾರ್ಯರೂಪದಲ್ಲಿ ಪರಿಣಮಿಸಲಾರವು; ಎಂಬುದು ಅವನಿಗೆ ತಿಳಿಯದಾಗುತ್ತದೆ. ಇದು ಸ್ವಾಭಾವಿಕವು. ಹೀಗೆ ಮನುಷ್ಯನು ಆಶಾವಾದಿಯಾಗದಿದ್ದರೆ, ಅಥವಾ ತಾನು ದೊಡ್ಡವನು, ಬೇಕಾದುದನ್ನು ಮಾಡಲು ಶಕ್ತನು, ಎಂಬುದಾಗಿ ಅವನಿಗೆ ತಿಳಿವ ದಿದ್ದರೆ, ಪ್ರಪಂಚವು ನಿಂತುಹೊಗಬಹುದು ಏಕೆಂದರೆ ಹುಟ್ಟಿದವನು ಸಾಯತಕ್ಕವನೇ ಎಂದು ಎಲ್ಲರಿಗೂ ಗೊತ್ತಿದೆ. ಆದುದರಿಂದ ಸಾಯತಕ್ಕ ವಸ್ತುವಿಗೆ ಇಷ್ಟೇಕೆ ಮಹತ್ವಕೊಡುವದು ಎಂದು ಎಲ್ಲರೂ ಸಂಸಾರದಲ್ಲಿ ಅನಾಸ್ಥೆಯನ್ನು ತಾಳಬಹುದು. ಹೀಗಾಗಬಾರದೆಂದೇ ಈಶ್ವರೀ ಮಾಯೆಯು ನಮ್ಮನ್ನಾವರಿಸಿ ನಮ್ಮನ್ನು ಭ್ರಮಿಸುತ್ತದೆ. ಭಗವನ್ ಶ್ರೀಕೃಷ್ಣನು ಅರ್ಜುನನಿಗೆ **भ्रामयन् सर्व भूतानि यन्त्रारूढानि मायया** ಎಂಬ ದಾಗಿ ಹೇಳಿದ ಗುಟ್ಟಾದರೂ ಇದೇ.

ಇಹವೃತ್ತ.

ವೀರಶೈವ ಧರ್ಮ ಪ್ರವಚನಗಳು ನಡೆದಿದೆ. ಶ್ರೀ ಹರ್ಡೇಕರ ಮಂಜಪ್ಪನವರೂ ಬಂದಿದ್ದಾರೆ. ಪುರಾಣ ಮಂಗಳೋತ್ಸವವು ವೈಭವದಿಂದಸಾಗಿದೆ.

ಮುನಸೀಪಾಲ್ಟಿಯು ಸರಕಾರ ನಿಯುಕ್ತಸಭಾಸದರೈವರೂ ಈ ಸಲ ಬಿನ್ ಸರಕಾರೀ ನೌಕರರೇ ಇದ್ದುದು ವಿಶೇಷ. ಪೂಮಲೇಕಾರ ಡಾಕ್ಟರರು ಸಹ ಹಿಂದಕ್ಕೆ ಸರಿಸಲ್ಪಟ್ಟವ್ದಾರೆ. ಹೀಗೆ ಮಾಡಿದ್ದು ಜನರಿಗೆ ಸ್ಥಾನಿಕ ಸ್ವರಾಜ್ಯದಲ್ಲಿ ಹೆಚ್ಚು ಹಕ್ಕನ್ನು ಕೊಡುವದಕ್ಕಾಗಿಯೋ ಅಥವಾ ಮಾತ್ರಾನದಾದರೂ ಒಳಗಿನ ಸರಕಾರದ ಧೋರಣಕ್ಕಾಗಿಯೋ ತಿಳಿಯದು. ಶ್ರೀಯುತರುಗಳಾದ, ಕಲಬುರ್ಗಿ ಹಾಗೂ ಚೌಧರಿ ವಕೀಲರು; ರಘೂಜಿ ಧರ್ವೆ (ಮರಾಠಾ) ಕಲ್ಲಪ್ಪಾ ಸವಂಗಾರ (ಅಸ್ಪೃಶ್ಯ); ಮಲ್ಲನಗೌಡ ಪಾಟೀಲ ಇವರೇ ಆ ಐದು ಜನ ಸಭಾಸದರು.

ಇಲ್ಲಿಯ ವರ್ತಕರೂ ಸಾರ್ವಜನಿಕ ಕಾರ್ಯಗಳಲ್ಲಿ ಅತ್ಯಂತ ಕಳಕಳಿಯಿಂದ ನಿರತರಾಗಿರುವವರೂ ಆದ ಶ್ರೀ ಶಿವಸಾಧ ಕೋಡಜಿಯವರು ವಿಷಮಜ್ವರದಿಂದ ನಿನ್ನೆ ಸಾಯಂಕಾಲದಲ್ಲಿ. ಪರಲೋಕವಾಸಿಗಳಾದರೆಂದು ತಿಳಿಸಲು ನಮಗೆ ಬಹು ವ್ಯಥೆಯಾಗಿದೆ

ಇಲ್ಲಿಯ ರಹಿವಾಸಿಗಳೂ ಪೆನ್‌ಶನ್ ಮಾಮಲೇದಾರರೂ ಆದ ಶ್ರೀ. ಅವಟಿಯ ಗುರುರಾಯರು ರವಿವಾರ ದಿವಸ ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಪಡುತ್ತೇವೆ

ಮುಂಬೈ ಕರ್ನಾಟಕ

ಮುಂಬೈ ಕಾಯದೇ ಮಂಡಳದ ಚುನಾವಣೆಯು ೯ ನೇ ತಾ॥ ದಿನ ಹಾಗೂ ದಿಕ್ಷಣ ಮಂಡಳದ್ದು ೧೫ ನೇ ತಾರೀಖಿನ ದಿನ ನಡೆಯುವದು. ಸ್ವರಾಜ್ಯಪಕ್ಷದವರಿಗೆ ತಮ್ಮ ಮತಗಳನ್ನು ಕೊಡಲು ಕನ್ನಡಿಗರು ಮರೆಯಕೂಡದು.

ಹಿಂದುಸ್ಥಾನೀ ಸೇವಾದಲದ ಕರ್ನಾಟಕ ಶಾಖೆಯವರು ೪ ದಿನ ಹುಂಚಿತವಾಗಿಯೇ ತಮ್ಮ ಪ್ರತಿಜ್ಞೆಯಂತೆ ೧೦ ಸಾವಿರ ಕಾಂಗ್ರೆಸ ಸಭಾಸದರನ್ನು ಕೂಡಿಸಿದರೆಂದು ಅರುಹಲು ನಮಗೆ ಸಂತೋಷವಾಗುತ್ತದೆ. ದಲದ ಕರ್ತೃತ್ವಶಕ್ತಿಯು ಚಿತ್ರವಿದು. ಆದರೆ ಪ್ರಾಂತಿಕ ಕಾಂಗ್ರೆಸ ಕಮೀಟಿಯು ಚಿತ್ರವೇನಿದೆ ? ಅವರ ಸಭಾಸದರ ಸಂಖ್ಯೆಯು ಎಷ್ಟಾಗಿದೆ ? ಒಕ್ಕೊರಲಿನಿಂದ ಹೇಳಿದರೆ ಸರಿ!

೧೨ ನೇ ವೀರಶೈವ ಮಹಾಸಭೆಯ ಸ್ವಾಗತ ಸಂಘದ ಕಾರ್ಯಕಾರಿ ಮಂಡಲವು ಹುಬ್ಬಳ್ಳಿಯಲ್ಲಿ ಸ್ಥಾಪನೆಯಾಗಿದ್ದು, ಅದರ ಕಾರ್ಯವು ಬಹು ರಭಸದಿಂದ ಸಾಗಿದೆ. ಡಾ ಪಾಟೀಲ ಚನ್ನಬಸಪ್ಪನವರು ಅಧ್ಯಕ್ಷರಾಗಿ ಆರಿಸಲ್ಪಟ್ಟಿದ್ದಾರೆ. ಬೇರೆ ಬೇರೆ ಶಾಖೆಗಳ ವ್ಯವಸ್ಥೆಗಾಗಿ ೬ ಜನ ಕಾರ್ಯದರ್ಶಿಗಳಿದ್ದಾರೆ. ಕಾರ್ಯದರ್ಶಿಗಳು ತಮ್ಮ ಸಹಿಗಳನ್ನು ಇಂಗ್ಲೀಷಿನಲ್ಲಿ ಮಾಡದೇ ಕನ್ನಡದಲ್ಲಿಯೇ ಮಾಡಬೇಕಾಗಿ 'ಕನ್ನಡಿಗ'ನ ಸೂಚನೆ.

ಒಂದು ತಗಡನ್ನು ಅಪಸ್ವಯಮಾಡಿದ್ದಕ್ಕಾಗಿ ಕೊಲ್ಹಾಪೂರ ಮುನಸೀಪಾಲ್ಟಿಯ ಚೀಫ್ ಆಫೀಸರರಿಗೆ ೨೦ ರೂ. ದಂಡವಾಗಿದೆ. ಉಳಿದಲ್ಲಿಯ ಚೀಫ್ ಆಫೀಸರರೂ ಎಚ್ಚರದಲ್ಲಿರಬೇಕು.

ಮದ್ರಾಸ ಕರ್ನಾಟಕ

ಮಂಗಳೂರಿನ ಶ್ರೀಮತಿ ಕಮಲಾದೇವಿ ಹಾಗೂ ಅವರ ಪತಿಗಳಾದ ಹರೀಂದ್ರನಾಥ ಚಟ್ಟೋಪಾಧ್ಯಗಳ ಮುಂಬೈಯಲ್ಲಿ ನಾಟಕವನ್ನಾಡುತ್ತ, ಅಲ್ಲಿಯ ಜನರನ್ನು ಸಂತೋಷಗೊಳಿಸುತ್ತಿರುವರು. ಪತಿಪತ್ನಿಯರಿಬ್ಬರೂ ರಂಗಭೂಮಿಯಲ್ಲಿ ಕೆಲಸಮಾಡುವರು; ನೃತ್ಯಗಾಯನಗಳಿಂದ ಪ್ರೇಕ್ಷಕರನ್ನು ಸಂತುಷ್ಟಗೊಳಿಸುವರು. "ರಾಷ್ಟ್ರೀಯ ರಂಗಭೂಮಿ" ಯೆಂಬ ವಿಷಯವನ್ನು ಕುರಿತು ಮುಂಬೈಯಲ್ಲಿ ಶ್ರೀ. ಚಟ್ಟೋಪಾಧ್ಯಾಯ ವ್ಯಾಖ್ಯಾನವನ್ನು ಕೊಟ್ಟರು. ಇದರ ಸಾರ ಅವತ್ತು ಇದೇ ಸಂಚಿಕೆಯಲ್ಲಿ ಬೇರೆ ಕಡೆಗೆ ಪ್ರಕಟವಾಗಿದೆ.

ಬಳ್ಳಾರಿ ಹಾಗೂ ಹೊಸಪೇಟೆಗಳ ಮುನಸೀಪಾಲ್ಟಿಗಳಲ್ಲಿ ಒತ್ತಾಯದ ಹಾಗೂ ಪುಕ್ಕಟೆಯ ಪ್ರಾಥಮಿಕ ಶಿಕ್ಷಣವು ಪ್ರಾರಂಭವಾಗಿದೆಯಷ್ಟೇ ? ಆದರೆ ಹಾಜರಿದ್ದ ವಿದ್ಯಾರ್ಥಿಗಳ ಸಂಖ್ಯೆಯು ಸಮಾಧಾನಕರವಾಗಿಲ್ಲೆಂದೂ, ಚುನಾವಣೆಯ ಕಾಲದಲ್ಲಿ ನೂರಕ್ಕೆ ೭೦ ರಷ್ಟು ಭಾಗ ತೆಗೆದುಕೊಂಡ ಮತದಾರರ ಉತ್ಸಾಹಕ್ಕೆ ಅಲ್ಲಿಯ ಉತ್ಪನ್ನಗಳು ಕುಂದುತಟ್ಟುವಂತಹವೆಂದೂ, ಇದೀಗ ಪ್ರಕಟವಾದ ವರದಿಗಳಿಂದ ಗೊತ್ತಾಗುತ್ತದೆ. ಕನ್ನಡ ಶಾಲೆಗಳ ಅಭಿವೃದ್ಧಿಯ ಬಗ್ಗೆ ವರದಿಗಳಲ್ಲಿ ಉಲ್ಲೇಖವಿಲ್ಲದಿರುವದು ವಿಷಾದದ ವಿಷಯ.

"ಸದ್ಗುರು ಪಾದಸೇವೆ" ಎಂಬ ಮಾಸಿಕವು ಬೇಗನೆ ಉಡುಪಿಯಲ್ಲಿ ಹೊರಡುವದು.

ಮೈಸೂರ ಕರ್ನಾಟಕ

'ಸ್ತ್ರೀಯರ ಭವಿತವ್ಯತೆಯನ್ನು ಕುರಿತು ಶ್ರೀಮತಿ ಕಮ್ಮಿನ್ಸರವರು ಬೆಂಗಳೂರಲ್ಲಿ ಶ್ರೀ ನಾಡುದಾದ ಶ್ರೀನಿವಾಸಶಾಸ್ತ್ರಿಗಳ ಅಧ್ಯಕ್ಷತೆಯಲ್ಲಿ ವ್ಯಾಖ್ಯಾನಕೊಟ್ಟರು. ಬಾಲವಿವಾಹಪ್ರತಿಬಂಧ, ಸ್ತ್ರೀಶಿಕ್ಷಣಗಳ ಬಗ್ಗೆ ಬಹು ಪತ್ರರವಾಗಿ ಪ್ರತಿಪಾದಿಸಿದರು

ದೇವರಾಜ ಬಹದ್ದೂರ ಧರ್ಮ—ನಿಧಿಯ ಸಾಹಿತ್ಯಶಾಖೆಯಿಂದ ಕೊಡತಕ್ಕ ೫೦೦ ರೂ ಹಾಗೂ ೨೦೦ ರೂ ಗಳ ಪಾರಿತೋಷಿಕ ಸ್ಪರ್ಧೆಗಾಗಿ ಕಳಿಸತಕ್ಕ ಮುದ್ರಿಸಿದ ಅಥವಾ ಕೈಬರಹದ ಪುಸ್ತಕಗಳನ್ನು ೧೯೨೭ ನೇ ಇಸ್ವಿಯ ಜನೇವರೀ ೧೫ ನೇ ತಾ॥ ಒಳಗಾಗಿ ಕಳಿಸಬೇಕೆಂದು ಮೈಸೂರ ವಿದ್ಯಾಭ್ಯಾಸದ ಇಲಾಖೆಯ ಇನ್‌ಸ್ಪೇಕ್ಟರ ಜನರಲ್‌ರವರು ನಮಗೆ ತಿಳಿಸುತ್ತಾರೆ.

ಕೊಡಗು ಕರ್ನಾಟಕ

ಮುಂಬೈ ನಗರದ ಕೊಡವರ ಸಂಘದ ಪ್ರಥಮ ವಾರ್ಷಿಕೋತ್ಸವವು ವಿಜೃಂಭಣೆಯಿಂದ ಕೊನೆಗಂಡಿತು. ಕೊಡವ ಪದ್ಧತಿಯ ಪ್ರಕಾರ ಆಯುಧಗಳನ್ನು ಪೂಜಿಸಿದ ಮೇಲೆ ಸಭಾಕಾರ್ಯವು ಪ್ರಾರಂಭವಾಯಿತು.

ಬೆಂಗಳೂರಿನ ಕೊಡವರು ತಮ್ಮ ಸಂಘದ ೧೫ ನೇ ವಾರ್ಷಿಕೋತ್ಸವವನ್ನೂ, ಕೈಲುಮುಹೂರ್ತ ಹಬ್ಬವನ್ನೂ ಲಾಲಬಾಗಿನಲ್ಲಿ ವೈಭವದಿಂದ ಜರುಗಿಸಿದರು.

ಕೊಡಗಿನ ದನಗಳ ಬೇನೆಯ ಬಗ್ಗೆ ಕೊಡಗಿನ ಪ್ರಾಂತ ಚೌಕಶೀ ಮಂಡಲದ ರು ರ ಬಗ್ಗೆ ಪ್ರಶ್ನೆಮಾಡಿ ತೆಗೆದಿದ್ದ.

ನಿಜಾಮ ಕರ್ನಾಟಕ

ಕಲಕೇರಿ ಸ್ವಾಮಿಗಳ ಲಿಂಗಪೂಜೆಗಾಗಿ ಬಾಹ್ಯಲಿಂಗಾಯತರಲ್ಲಿ ವ್ಯಾಜ್ಯವು ನಡೆದು ಬಹಳ ದಿವಸವಾಗಿದೆಯಷ್ಟೇ ? ಈಗ ಶುದ್ಧ ಭಾಷೆಯಿಂದ ಯಾವ ಪಕ್ಷವನ್ನೂ ಒಳಿಯದೇ, ಈ ಎರಡೂ ಪಕ್ಷ ಸೇರದೇಯಿದ್ದ ಸಭ್ಯಗೃಹಸ್ಥರು ಸಂಕ್ಷಿಪ್ತವಾಗಿ, ಈಗಿನ ಅಲ್ಲಿಯ ಪರಿಸ್ಥಿತಿಯ ಬಗ್ಗೆ ಲೇಖ ಬರೆದು ಕಳಿಸಿದರೆ "ಕನ್ನಡಿಗ"ನು ಅದನ್ನು ಆದರದಿಂದ ಪ್ರಕಟಿಸುವನು

ಹಿಂದುಸ್ಥಾನ.

ಭಗವದ್ಗೀತೆಯನ್ನು ಹಿಂದುಸ್ಥಾನದ ಎಲ್ಲ ದೇಶಭಾಷೆಗಳಲ್ಲಿಯೂ ಮುದ್ರಿಸಿ, ಪುಕ್ಕಟೆಯಾಗಿ ಬಡವರಿಗೆ ಹಂಚಲಿಕ್ಕೆಂದು ಪರಿವ್ರಾಜಕ ಶಿವನಚಂದ ಮಾರವಾಡಿಯವರು ೫೦ ಸಾವಿರ ರೂ. ದಾನಮಾಡಿದ್ದಾರೆ. ಈ ಬಗ್ಗೆ ಒಂದು ದೊಡ್ಡ ಮುದ್ರಣಾಲಯವು ಮುಂಬೈಯಲ್ಲಿ ಬೇಗನೇ ಸ್ಥಾಪಿಸಲ್ಪಡುವದು.

ಬಂಗಾಲದಲ್ಲಿರುವ ಇಶಾಪೂರ "ರಾಯಫಲ್ ಫ್ಯಾಕ್ಟರಿ"ಯಲ್ಲಿ 'ಮೆಕ್ಯಾನಿಕಲ್ ಇಂಜಿನೀಯರಿಂಗ' ಕೆಲಸಕ್ಕೆ ೧೦ ಜನರು ಬೇಕಾಗಿದ್ದಾರೆ. ಮುಂಬೈ ಮದ್ರಾಸ ಪ್ರಾಂತಗಳಿಂದ ಪ್ರಾಂತಕ್ಕೆ ಇಬ್ಬಿಬ್ಬರಂತೆ ನಾಲ್ವರನ್ನು ಆರಿಸುವರು. 'ಇಂಟರಮೀಡಿಯಟ್' ಸಾಯನ್ಸ ಪರೀಕ್ಷೆಯವರೆಗಾದರೂ ಕನಿಷ್ಠಪಕ್ಷಕ್ಕೆ ವಿದ್ಯಾಭ್ಯಾಸ ಮಾಡಿರಬೇಕು. ಹೆಚ್ಚಿನ ಸಂಗತಿಗಳಿಗಾಗಿ "ಫ್ಯಾಕ್ಟರಿಯ" ಸುಪರಿಂಟೆಂಡೆಂಟರಿಗೆ ಬರೆಯಬೇಕು. ಕನ್ನಡ ತರುಣರು ವಿಶೇಷತ: ಕೊಡಗಿನವರು ಇದಕ್ಕೆ ಸಾಹಸಪಡಬೇಕು.

|| ಶ್ರೀ ದತ್ತರಾಜ ಸಮರ್ಥ. ||

ಅಖಿಲ ಕನ್ನಡನಾಡಿನ ಸುಪ್ರಸಿದ್ಧವಾದ

ಗದಗ ಶ್ರೀ ದತ್ತಾತ್ರೇಯ ನಾಟಕ ಮಂಡಲದವರು

ಬೇಗನೇ ಬಾಗಲಕೋಟೆಗೆ ಬರುವರು.

ಪ್ರೊಪ್ರಾಯಿಟರ ಸದಾಶಿವರಾವ ಗರುಡ

ನೋಟೀಸು.

೧ ರಂಗಭಟ್ಟ ರಾಮಚಂದ್ರಭಟ್ಟ ಜೋಶಿ ಹೆಡಮಾಸ್ತರ ಮಣಸಾಗರ ತಾ|| ಬದಾಮಿ—

೨ ಕಲ್ಲಂಭಟ್ಟ ಶಿವಭಟ್ಟ ಜೋಸಿ ಸಾ|| ಕೆರೂರ ತಾ" ಬದಾಮಿ

೩ ದತ್ತುಭಟ್ಟ ಬಿನ ಶಂಕರಭಟ್ಟ ಜೋಸಿ ಸಾ, ಕೆರೂರ ತಾಲ್ಲೂಕು ಬದಾಮಿ.

೪ ವೆಂಕಟಭಟ್ಟ ರಾಮಭಟ್ಟ ಜೋಸಿ ಸಾ|| ಕೊಣ್ಣೂರ ಪೇಠಾ ನರಗುಂದ.

೫ ಬಾಬಾಜಿ ಭೀಮಾಜಿ ಕುಲಕರ್ಣಿ ಸಾ|| ಕೆರೂರ ತಾಲ್ಲೂಕು ಬದಾಮಿ

೬ ಗೋಪಾಳ ರಾಮಚಂದ್ರ ಕೀಡಬಾಳ ಹೆಡ್‌ಮಾಸ್ತರ ಸಾಕಿನ ಕೆರೂರ ತಾಲ್ಲೂಕ ಬದಾಮಿ

ಮೇಲೆ ನಮೂದ ಮಾಡಿದ ಜನರಿಗೆ ಯಿಲ್ಲಿಂದ ನೋಟೀಸು ಯೇನಂದರೇ—

ನಾನು ಗಂಗಾಧರಭಟ್ಟ ಬಿನ್ ದಾಸಂಭಟ್ಟ ಜೋಸಿ ಸಾ|| ಕಟಗೇರಿ ತಾಲ್ಲೂಕು ಬದಾಮಿ ಸದರ ತಾಲ್ಲೂಕು ಪೈಕಿ ಕೆರೂರ ಮುಕ್ಕಾಮಿನಲ್ಲಿ ತಾ|| ೪ ನೇ ಜಾನೇವಾರಿ ಸನ್ನ ೧೯೨೪ ಯಿಸ್ವೀ ದಿವಸಾ ಯಿದ್ದಾಗ್ಯೆ ಮೇಲೆ ನಮೂದ ಮಾಡಿದ ಜನರು ನನಗೆ ಈಗ ನಮ್ಮ ನಮ್ಮ ಕಡೆಗೆ ಯಿದ್ದ ಜ್ಯೋತಿಷ್ಯ ಗ್ರಾಮಗಳಲ್ಲಿ ಒಬ್ಬರಿಗೊಬ್ಬರು ತಂಟೆ ಮಾಡಬಾರದೆಂದು ಹೇಳಿದ್ದರಿಂದ ಸದರಿ ಮೇಲೆ ಬರೆದ ಜನರು ತಯಾರಿಸಿದ ಕರಾರ ಪತ್ರಕ್ಕೆ ತಾ|| ೪—೧—೧೯೨೪ ಯಿಸ್ವಿ ದಿವಸಾ ಸಹಿ ಮಾಡಿದೆ. ನನಗೆ ಕನ್ನಡಭಾಷಾ ಓದಲಿಕ್ಕೆ ಬರಯಲಿಕ್ಕೆ ಬರುವದಿಲ್ಲಾ ಸಹಿ ಪೂರ್ತಿ ಮಾತ್ರ ಬರುತ್ತದೆ. ಮೇಲಾಗಿ ಆ ವತ್ತಿನ ದಿವಸಾ ನಮ್ಮ ಅಣ್ಣಾ ಶಿವಭಟ್ಟ ದಾಸಂಭಟ್ಟ ಜೋಶಿ ಯಿವರು ತೀರಿಕೊಂಡಿದ್ದ ಹನ್ನೆರಡನೇ ದಿವಸ ಯಿದ್ದದರಿಂದ ನಾನು ದುಃಖದಲ್ಲಿ ಯಿದ್ದೆ. ಮೇಲೆಬರೆದ ಜನರು ಹೇಳಿಕೆಯ ಮೇಲೆ ವಿಶ್ವಾಸಯಿಟ್ಟು ಸಹಿ ಮಾಡಿದೆ. ಆದರೆ ಈಗ ಅವರು ನನ್ನನ್ನು ಪೂರ್ಣ ಫಸಾಯಿಸಿರುತ್ತಾರೆಂದು ಅವರು ತಯಾರಿಸಿದ ಹಾಪಿ ಕರಾರದ ಪತ್ರ ಈಗ೫-೬ ದಿವಸಗಳ ಹಿಂದೆ ನಾನು ಛಾಪಿ ಕರಾರ ಪತ್ರ ಓದಿಸಿ ನೋಡಲಾಗಿ ಜಮೀನಗಳ ಪೈಕಿ ಸವನಾಗಿ ಅಂತಾ ಸುಳ್ಳು ಮಾಡಿದ್ದು ತಿಳಿತು ಆ ಮೇಲೆ ಪೂರ್ಣ ಖಾತ್ರಿಯಾಗಿರುತ್ತದೆ. ಯಾಕಂದ್ರೆ ಸದರಿ ಕರಾರಪತ್ರದಲ್ಲಿ ನಾನು ಮತ್ತು ಕಲ್ಲಂಭಟ್ಟ ಯಿವರಿಬ್ಬರು ಸಮಾಟಿಕ ಅಂತಾ ನಮೂದ ಮಾಡಿರುತ್ತಾರೆ. ಯಿದಿಕ್ಕೆ ನನ್ನ ಪೂರ್ಣ ಯಿನಕಾರ ಇರುತ್ತದೆ. ವಾಸ್ತವಿಕ ಹಕೀಕತು ಅಂದ್ರೆ ಕಟಗೇರಿ ಗ್ರಾಮದ ಶ್ರೀಯೋಗ ನಾರಾಯಣ ದೇವರ ಪೂಜಾರಿಕಿ ಸಂಬಂಧಿ ಯರ್ಷು ಜಮೀನುಗಳು ಯಿದ್ದು ಅವು ಪುಷ್ಕಳದಿವಸ ನನ್ನ ತಾಬೇದಲ್ಲಿ ಇದ್ದವು. ಮುಂದೆ ಅಜಮಾಸ ಯಂಟು ವರ್ಷದ ಕೆಳಗೆ ನನ್ನ ವ ನನ್ನ ಅಣ್ಣಾ ಶಿವಭಟ್ಟ ಯಿವರ ನಡುವೆ ವಾಟಣಿಯಾಗಿ ಕೆರೂರಲ್ಲಿ ಜಮೀನಗಳನ್ನು ಸವನಾಗಿ ಹಂಚಿಕೊಂಡು ಕಟಗೇರೀ ಗ್ರಾಮದಲ್ಲಿ ಯಿದ್ದ ಜಮೀನುಗಳಲ್ಲಿ ಮರ್ಧಹಿಸಾ ನನಗೆ ವಂದುಹಿಸಾ ನನ್ನ ಅಣ್ಣಾ ಶಿವಭಟ್ಟರಿಗೆ ಯಿಪ್ರಕಾರಾ ವಾಟಣಿ ಮಾಡಿಕೊಂಡು ಅದರಂತೆ ಆಯಾ ಗ್ರಾಮಗಳ ಹಕ್ಕರಜಿಸ್ತ್ರದಲ್ಲಿ ನಮ್ಮ ನಮ್ಮ ಹೆಸರು ದಾಖಲ ಆಗಿರುತ್ತವೆ. ಆದರೆ ನನ್ನನ್ನು ಮುಳಗಿಸುವ ಇರಾದೆಯಿಂದಾ ನನ್ನನ್ನು ಫಸಾಯಿಸಿ ಮೇಲೆ ಬರೆದ ಜನರು ಸದರಿ ತಯಾರಿಸಿದ ಕರಾರಪತ್ರಕ್ಕೆ ನನ್ನ ಸಹಿ ತಗೆದುಕೊಂಡಿರುತ್ತಾರೆ ಅದಕ್ಕೆ ನನ್ನ ಪೂರ್ಣ ಯಿನಕಾರಯಿದ್ದು ಅದರಿಂದಾ ನಾನು ಯಾವರೀತಿಯಿಂದಾದರು ಬದ್ಧನಿರುವದಿಲ್ಲಾ. ಕಸಬಾ ಕಟಗೇರಿ ಶ್ರೀ ಯೋಗನಾರಾಯಣ ದೇವರ ಸಗ್ಗಿವಾಡ ಬೇಚರಾಖ ಗ್ರಾಮದಲ್ಲಿ ಯಿದ್ದ ಸಂಪಾದೀಪದ ಜಮಿನುಗಳು ದೇಸಾಯರ ಚಾವರಾತ ರಿ|| ಸರ್ವೆ ನಂಬರ ೨೮-೫೯-೨೯ ಯಿಪ್ರಕಾರ ಮೂರು ನಂಬರಗಳು ಶ್ರೀಪಾದ ಯಲಗುರ್ದ ಭಟ್ಟ ಜ್ಯೋಸಿ ಸಾ|| ಕೆರೂರ ಇವನ ಮಸಿತನಕ್ಕೆ ಪೂರ್ವಿ ಲಾಗಾಯತ ಯಿದ್ದು ಇವುಗಳಿಗೆ ಎರಡನೆ ಮೂರದು ಹರಕತ ಯಿರುವದಿಲ್ಲಾ. ಈ ವರೆಗೆ ಅವನೆ ಯಣ್ಣಿಕೊಟಗೊತಾ ಬರತಿದ್ದು ಅವರ ಸಂಬಂಧ ಯೇನೂ ಜಿಪರ ಇರುವದಿಲ್ಲಾ ಕೆರೂರ ಗಾಮದ ಶ್ರೀ ನಗರೇಶ್ವರ ದೇವರ ಪೂಜಾರಿಕಿ ಸದರಿ ದೇವರ ಯಿನಾಮು ಜಮಿನುಗಳು ರಿ|| ಸರ್ವೆನಂಬರ ೩೩೭ ೩೩೭ ಈ ಪ್ರಕಾರ ಯಿದ್ದು ಯರಡು ನಂಬರಗಳು ಸದರ ಶ್ರೀಪಾದಭಟ್ಟಿನ ಹಿರಿರ ದಾನಪತ್ರ ನಾತೆಯಿಂದಾ ಬಂದದ್ದು ಅವನ ಮಾಲ್ಕಿ ವಹಿವಾಟಿಯಲ್ಲಿ ಇರುತ್ತವೆ. ಸದರಿ ಜಮೀನುಗಳಮೇಲೆ ಯಾರದೂ ಯಾವತರದ್ದ ಹಕ್ಕ ಇರುವದಿಲ್ಲಾ. ಸದರಿಬಗ್ಗೆ ಕರಾರ ಪತ್ರದಲ್ಲಿ ನಮೂದ ಮಾಡಿದ್ದು ಸುಳ್ಳು ಇರುತ್ತದೆ. ನಮ್ಮ ಮಸಿ ತನದ ಬಗ್ಗೆ ತಿಪಿ ವ ಅಸ್ತಿಬಾಬತು ಛಾಪಿ ನಮೂನೆಯಲ್ಲಿ ಬರೆದ ನಾಜ ಕೂರ ಮಾಡಿದ್ದು ಸುಳ್ಳ ಇರುತ್ತದೆ. ವ ಕತ್ತು ಛಾಪಿ ಕರಾರ ಪತ್ರಕ್ಕೆ ಯಾವರೀತಿಯಿಂದಾನು ಬದ್ಧನಿರುವದಿಲ್ಲಾ. ಮೇಲೆ ಬರೆದ ಜನರು ತಮ್ಮ ಸಾಗುಕಿದಕೆಯಿಂದ ನನಗೆ ಫಕ್ತ ಜ್ಯೋತಿಷ್ಯ ಗ್ರಾಮಗಳಲ್ಲಿ ಜ್ಯೋತಿಷ್ಯ ಬಾಳಿಗಳ ವಿಷಯಕ್ಕೆ ವಾಟಾ ಘಾಟನಡು ಸದರಿ ಬಗ್ಗೆ ಒಬ್ಬರಿಗೂ ಬರು ಜ್ಯೋತಿಷ್ಯ ಬಾಳಿಗಳ ಹಳ್ಳಿಗಳಲ್ಲಿ ಇನ್ನೊಬ್ಬರು ಕೈಹಾಕಬಾರದು ಅಂತಾ ವಗೈರೆ ವ್ಯವಸ್ಥಾ ಮಾಡಿದೀವಿ ಯಿದಕ್ಕೆ ಸಹಿಮಾಡ ಅಂದರು ಫಕ್ತ ಜ್ಯೋತಿಷ್ಯ ಕಲಸದ ವಿಷಯಕ್ಕೆನೆ ಅದೆ ಅಂತಾ ಸಮಜೂತ ಹೇಳಿದ್ದರಿಂದ ನನಗೆ ಕನ್ನಡ ಬರೆಯಲಿಕ್ಕೆ ಓದಲಿಕ್ಕೆ ಬಾರದ್ದರಿಂದ ಅವರು ನನ್ನ ಗೈರ ಆಥಿವಾರ್ಯ ತೆಗೆದುಕೊಂಡು ಫಸಾಯಿಸಿ ಕೆಳಗೆ ಬರೆದ ಮಜಕೂರು ತಮ್ಮ ತಮ್ಮ ಸಾದಣೂಕಿಬಗ್ಗೆ ನನ್ನ ಕಡೆಗೆ ಯಿದ್ದ ಪೂರಾ ಜಮೀನುಗಳಿಗೆ ಸನಾಯಿಕ ಅಂತಾ ಮತ್ತು ಉಳಿದ ಜನರಕಡೆಗೆ ಯಿದ್ದ ನಿಳಕತಗಳಲ್ಲಿ ತಮಗೆ ಯಾವರೀತಿ ಸಂಬಂಧ ಇಲ್ಲದೆ ಯೇನುಹಕ್ಕು ಯಿಲ್ಲದೆ ತಮ್ಮ ಹಕ್ಕುಗಳು ನಮೂದ ಮಾಡಿಕೊಂಡು ಛಿಕಾಗದ ಛಾಪಿಸಿರುತ್ತಾರೆ ಸದರಿ ಕರಾರಪತ್ರ ಅಂತಾ ನಮೂದ ಇದ್ದ ಬುಕ್ಕಿನಲ್ಲಿ ಬರೆದ ಮಜಕೂರು ಅಗದಿ ಸುಳ್ಳು. ಮತ್ತು ಮತಲಬದು ಯಿರುತ್ತದೆ. ಈ ಮಜಕೂರು ನನಗೆ ಯಾವರು ಹೇಳಿಲ್ಲ ಮತ್ತು ಸದರಿ ಮಜಕೂರು ನನಗೆ ಓದಿ ತಿಳಿಸಿಲ್ಲಾ ಮೇಲೆ ಕರಾರಗಳನ್ನು ತಿಳಿದುಕೊಂಡು ಸಹಿಮಾಡಿಲ್ಲಾ. ಕೇವಲ ಫಸಾಯಿಸಿ ವ ಖೊಟ್ಟಿ ನವ ಜೂತಿಕೊಟ್ಟು ಸುಳ್ಳು ಸಹಿ ತೆಗೆದುಕೊಂಡಿರುತ್ತಾರೆ. ಕೂಸದಾಗಿ ತಾವು ಬರೆದ ಕರಾರ ವಗೈರೆ ನನಗೆ ಓದಿ ತೋರಿಸಿಲ್ಲಾ ವ ತಿಳಿಸಿಲ್ಲಾ ಅಂತಾ ಬರೆದುಕೊಟ್ಟ ನೋಟೀಸು ಸಹಿ ತಾರೀಖ ೨೮—೭—೧೯೨೬ ಯಿಸ್ವಿ ದಸ್ತೂರ ರಂಗನಾಥ ಅಪ್ಪಾಸ್ವಾಮಿ ರಘುವೀರ

ಗಂಗಾಧರಭಟ್ಟ ಜೋಶಿ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟಕೆಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ತಬ್ಬಿಬ್ಬುಗೊಳ್ಳುವದಿಲ್ಲ. ನಿರಿಶ್ರವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಿಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳು! ಫೀ ಬಹು ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ— ಕುಲಕರ್ಣಿ ಮೋಟಾರ ಸ್ಕೂಲ.
೪೨೫ ಸದಾಶಿವ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳಿಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು. ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ತ್ವರೆಮಾಡಿರಿ! ಅಡಚಣೆಯು ದೂರಾಯಿತು!

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೇಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವುಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ಮ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನುಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಲಪೇಕ್ಷಿಸುವವರು ತ್ವರೆಮಾಡಬೇಕು

ಕಿಲ್ಲೆ, ಬಾಗಲಕೋಟೆ } ಬಿಂದುರಾವ ಟಂಕಸಾಲಿ
೨೧-೭-೨೬ } ಡಾಕ್ಟರ,

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to-
N. K. Kulkarni. Agent Bagalkot.

ಜಾಹೀರ ನೋಟೀಸು.

ಈ ಕೆಳಗಿನ ಜನರು ಮುಂಬೈಕಾಯದೇ ಕೌನ್ಸಿಲಕ್ಕೆ ವಿಜಾಪೂರ ಜಿಲ್ಹೆಗೆ ಮುಸಲ್ಮಾನೇತರ ಪಕ್ಷದ ಪರವಾಗಿ ಉಮೇದವಾರರಾಗಿ ಆರಿಸಲ್ಪಟ್ಟಿದ್ದಾರೆ.

ಹೆಸರು	ಚಿನ್ಹ
೧ ಕೌಜಲಗಿ ಶ್ರೀನಿವಾಸ ವೆಂಕಟೇಶ.	ಕತ್ತಿ
೨ ಸರದೇಸಾಯಿ ಸಂಗಪ್ಪ ಅಮೀನಗೌಡ.	ಆನೆ

ಸಹಿ

ವಿಜಾಪೂರ } ಡಿ. ಎಚ್. ನಾಯಿಕ.
ತಾ॥ ೨೦-೯-೨೬ } ಕಲೆಕ್ಟರ ವಿಜಾಪೂರ

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವಸ ೩-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರ್ಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಒಡ್ಡಿ ಮತ್ತು ವಂತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ ಡೆಕ್ಕನ್ನರೂ ೧೦೦೦

(೨) ಎಲ್. ಬಿ. ಸಿ ನಂ ೫೧೨ ಮಿ. ಸೈಯದ್ ಜಹೂರಅಲೀ ಬಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್ಸ್‌ಪೆಕ್ಟರ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ ನಂ. ೨೦೭೬ ಮಿ. ದೇವನ ವಾಸುದೇವನ ನಂಬೂದ್ರಿವಾದ ಜಮೀನದಾರ ಐಡಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲೆ ಪಡಿಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೩೨೭ ಮಿ. ಶೇಕ ಬಾವುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೧ ಭವಾನಿಪೇಟ ಪುನಾ ೧೦೦೦

ಬಿ. ಎಸ್. ಆರಾಧ್ಯ
ಚೀಫ ಏಜಂಟ (ಮುಂಬಯಿ ಇಲಾಖಾ)
ಹುಬ್ಬಳ್ಳಿ

ಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಫಾ ಅಥವಾ ಆರೋಗ್ಯ ಬಿಂದು

ಪ್ರನಾಶಿಮಿತ್ರ, ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗ ತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಕಾದ ಪತ್ರಗಳು ಪ್ರಿ. ಪ್ರಿ. ಮಾಡಿದ ದಾಖಲೆಗಳು ಮೋಷ್ಟವಾವತಿಗಳು ಬಾರಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳ ಸಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಚಾಣಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಜೀರ್ಣ, ಕಾಲರಾ (ಮಾರಿಕಾ), ಪ್ಲೇಗ, ಇನ್ಫ್ಲುಯಂಜಾ ಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮೂಲರೋಗ, ಗಂಡಮಾಲೆ, ನಾರುಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣು ನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ದೊಡ್ಡ ರೋಗ ಬಾಲಗ್ರಹ, ಅರಿವೆ ಮುಟ್ಟಿದೊಡನೆ ಹೊಟ್ಟೆ ದೊಡ್ಡದಾಗೋಣ, ಕೋಡಿಕೆಮ್ಮು, ಪ್ಲೈ ಹೊಂಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ತಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನನೂರ ಉದ್ದಿಷ್ಟ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲ ಗದು. ೬ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು. ಅದರ ಹೆಚ್ಚು ೬ ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ ಇಲ್ಲ ಪೆಕ್ಷ ೭ ಆಣೆ. ೧ ತಾಲುತೊಲಿ ಬಾಟ್ಲಿ ಒಂದುಸಾರೆ ನೂರು ತಕ್ಕೊಳ್ಳುವವರಿಗೆ ನಂದು ಬಾಟ್ಲಿ ಕಮಿಶನ ಸಿಗುತ್ತದೆ. ಖರ್ಚ ೪ ಆಣೆ. ಮಂದು ಎರಡುತಕ್ಕೊಂಡರೆ ಕಮಿಶನಇಲ್ಲ ಖ ೭ ಆ. ಪ್ರಮಾಣಅನುಪಾನ ಪತ್ರಿಕೆ ಕನ್ನಡ ಮುಕ್ತಾ ಮರಾಠಿ ಭಾಷೆಲ್ಲಿಛಾಪಿಸಿರುತ್ತವೆ ಪಸಂದಿ ಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದ ಮಾಲ ಪರತ ತಕ್ಕೊಂಡು ಆದರ ಪೈಸೆ ವಾಪಸ ಕೊಡುವೆವು. ಈ ಲಕ್ಷಣ ಇಡೀ ಕನಾ ಟಕದಲ್ಲಿ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ವಿಚಾರಣ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಹಾ ಸಹಿತ ಸ್ಪಷ್ಟವಾಗಿ ಬರೆಯಬೇಕು ನಮ್ಮ ವಿಳಾಸ ಎಚ್ ಎಮ್ ಮುಲ್ಲಾ

ಸಂಪಾದಕ ಅರ್ಕಫಾ ಹೆಡ್ಆಫೀಸಪೋಷ್ಟ ರಬಕವಿ ಬೆಳಗಾವ

 

1 For chevrolet new Cars & Trucks on hire purchage system
2 For quick: Economical and satisfactory service, please go for the welknno Chevrolet cars, Trucks products in the Deccan
3 For all spare parts of the Various cars specially Chevrolet, Ford, Dodge and Overland cars,
4 For the cheapness in tyre tubes of all manufactares,
5 For all kinds of Lubricating oils Grease etc,
6 For undertaking all kinds of tyre tube repairs in Vulcansing by a specialist to give satisfactory work,
7 For Building motor bodies of various types by workers onin uptodate line.
8 For all kinds of motor repairs,
9 For second hand Motot Cars and lossies at cheap rates.

Apply to:-

Messrs Royal motor service
Automobile Engineers
Bagatkol.

Sub dealers
Chevrolet car
for the Bijapur Dist.

ಅಲಭ್ಯಲಾಭವು.

(೧) ಶೆವ್ಹರ್‌ಲೆಟ್ ಹೊಸಗಾಡಿಗಳನ್ನು ಮತ್ತು ಟ್ರಕ್ಸಗಳನ್ನು ಖಾಸಗಿಯಿಂದಾಗಲೀ ಹಾರಲೆಕ್ಕಾಗಲೀ ತೆಗೆದುಕೊಳ್ಳುವದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
(೨) ವೇಗವಾಗಿ, ನಿಯಮಿತವಾಗಿ, ಮತ್ತು ಚನ್ನಾಗಿ ನಡೆಯುವಂಥ ಶೆವ್ಹರ್‌ಲೆಟ್ ಗಾಡಿಗಳೂ, ಟ್ರಕ್ಸಗಳೂ ದಕ್ಷಿಣಪ್ರಾಂತದಲ್ಲಿ ಬಹು ಪ್ರಸಿದ್ಧಿಯಾಗಿವೆ.
(೩) ಶೆವ್ಹರ್‌ಲೆಟ್, ಫೋರ್ಡ್ ಡಾಜ ಮತ್ತು ಓವ್ಹರಲಂಡ, ಎಲ್ಲತರದ ಗಾಡಿಗಳ ಬೇರೆ ಬೇರೆ ಭಾಗಗಳು ನಮ್ಮಲ್ಲಿದೊರೆಯುತ್ತವೆ
(೪) ಎಲ್ಲತರದ ಕಂಪನಿಗಳಿಂದ ವಿಶೇಷತಃ ರಿಜೇಲಿನ್ ಕಂಪನಿಯಿಂದ ಟ್ಯೂಬ್ ಮತ್ತು ಟಾಯರುಗಳುಸುಲಭ ಕ್ರಯಕ್ಕೆದೊರೆಯುತ್ತವೆ.
(೫) ಮೋಟಾರು ಬಂಡಿಗಳಿಗೆ ಉಪಯೋಗಿಸುವಂಥ ಎಲ್ಲ ತರದ ಎಣ್ಣೆಯು ಸಿಗುವದು.
(೬) ಟ್ಯೂಬ್ ಮತ್ತು ಟಾಯರುಗಳನ್ನು ರಿಪೇರಿಯನ್ನು (ವಲ್ಕನಾಯಜಿಂಗ) ಆ ಕೆಲಸದಲ್ಲಿ ನಿಷ್ಣಾತರಾದವರಿಂದ ಮಾಡಿಸಿ ಯೋಗ್ಯ ವೇಳೆಗೆ ಕೊಡುವೆವು.
(೭) ನಾನಾ ತರದ ಬಂಡಿಗಳ ಭಾಗಗಳನ್ನು ಉತ್ತಮ ರೀತಿ ರಿಪೇರಿ ಮಾಡುವವರಿಂದ ಮಾಡಿಸಿ ಕೊಡುತ್ತೇವೆ
(೮) ಎಲ್ಲಬಗೆಯ ಮೋಟಾರುಗಳ ದುರಸ್ತಿ ಕೆಲಸವು ಮಾಡಲ್ಪಡುವದು
(೯) ಹೊಸ ಮತ್ತು ಸೆಕಂಡ ಹ್ಯಾಂಡ ಮೋಟಾರಗಳೂ ಲಾರಿಗಳೂ ಬೇಕಾದ ವೇಳೆಗೆ ಯೋಗ್ಯ ದರದಿಂದ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸಃ—
ವಿಜಾಪೂರ ಜಿಲ್ಲೆಯಲ್ಲಿ ಚವರೋಲೆಟ್ಟ ಮೋಟಾರಗಳಿಗೆ ಸಬ್‌ಏಜಂಟರು
ಮೇಸರ್ಸ ದಿ. ರಾಯಲ್ ಮೋಟಾರ ಸರ್ವ್ಹಿಸ ಬ್ಯಾಗಲಕೋಟ.

ಅಸ್ಸಲ, ಗ್ಯಾರಂಟೇಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟೆ
ಸಹಿತ; ಟ. ಖ. ಪ್ರತ್ಯೇಕ
ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮವಗೈರೆ ಹಚ್ಚಿ ಕಳಿಸುವೆವು

ಲಿಚೋ ವಾಚ ಕಂ. (India) ಮುಂಬೈ ನಂ. ೪

ಶಾವಿಗೆ! ಗುಲಕಂದ!! ಹಪ್ಪಳ!!!

ಸುಗಂಧ ದ್ರವ್ಯಗಳು.

ಊದಿನ ಕಡ್ಡಿ, ಕಸ್ತೂರಿ ಬಿಲ್ಲೆ, ಅತ್ತರ, ಶೀಗೆಕಾಯಿ ಪುಡಿ, ಭೃಂಗಾಮಲಕ ತೈಲ, ರೋಜವಾಟರ, ಮಡ್ಡಿ, ಹಾಲಮಡ್ಡಿ ಇವೆ ಮೊದಲಾದ ಬೆಂಗಳೂರಿನ ಸುಪ್ರಸಿದ್ಧವಾದ ಎಲ್ಲ ಬಗೆಯ ಸುಗಂಧ ದ್ರವ್ಯಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತಿವೆ. ಅಲ್ಲದೆ ಗುಲಕಂದ, ಬೆಂಗಳೂರಿನ ರಸಭರಿತವಾದ ಮಾವಿನ ಹಣ್ಣುಗಳ ಮುರಬ್ಬಾ, ಬಹು ರುಚಿಕಟ್ಟಾಗಿರುವ ಸಾರಿನ ಪುಡಿ, ಮಸಾಲೆ, ಚಟ್ನಿ, ಶಾವಿಗೆ, ಹಪ್ಪಳಗಳೂ ದೊರೆಯುವವು ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್. ಕ್ಯಾಟಲಾಗಿಗಾಗಿ ಬರೆಯಿರಿ.

ವಿಳಾಸಃ— ಸುಗಂಧಿ c/o "ಕನ್ನಡಿಗ" ಬಾಗಲಕೋಟೆ

ರ ನಂ. ಬಿ ೯೫೪೭ ವಾ ಚಂದಾ ೧–೧೨–೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಆಶ್ವಿನ ಶುದ್ಧ ೩ ಶಕೆ ೧೮೬೮ ತಾ|| ೧೦-೧೯೪೬. | ಸಂಚಿಕೆ ೨೮

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೋಣವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಕ್ಕಳ ದೊಮ್ಮ।
ನ್ನದಾದರು ಚೆನ್ನ ಮೋಣಬಸ್ತ್ರಯ ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಕ್ಷಿಸಲು ಸಿದ್ಧವಿದೆ ।
ನ್ನ ಘ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂಬು ತಿಳಿಯೋ

—ಅಂಬಿಕಾ ತನಯ ದತ್ತ

ಅಂಜುಮಾನ-ಇಸ್ಲಾಂ- ಹುಬ್ಬಳ್ಳಿ ಈ ಸಂಘದವರು ನ್ನು ಕೆಲವು ಪ್ರಕಟನೆಗಳನ್ನು ನಮ್ಮ ಕಡೆಗೆ ಕಳುಹಿಸಿರುವರು. ಈ ಸಂಸ್ಥೆಯು ಮುಸಲ್ಮಾನಜನರ ಅಭಿವೃದ್ಧಿಯನ್ನು ಬಯಸುವ ಸಾರ್ವಜನಿಕ ಸಂಸ್ಥೆಯಾಗಿದೆ. ಇವರು ತಮ್ಮ ತರುಣರ ಅಭಿವೃದ್ಧಿಗಾಗಿ ವಿಶೇಷ ಯತ್ನಿಸುತ್ತಿರುವರು. ಎಲ್ಲಾ ಸಾರ್ವಜನಿಕ ಸಂಸ್ಥೆಗಳ ಅಸ್ತಿತ್ವಕ್ಕೆ ದ್ರವ್ಯವೇ ಇಂದು ಜೀವನಕಳೆಯಾಗಿದೆ ಎಂಬುದು ಎಲ್ಲರೂ ಮರೆಯಲಾರದವಿಷಯ. ಕೆಲಸವಾಗಬೇಕೆಂದರೆ ಹಣವಿಲ್ಲದೆ ಸಾಧ್ಯವಿಲ್ಲವೆಂಬ ನುಡಿಯು ಈ ಸಂಸ್ಥೆಯ ಕುರಿತು ಅಪವಾದ ವಾಗಲಾರದು. ಅದನ್ನು ಕೂಡಿಸುವ ಸಲುವಾಗಿ ಅವರು, "ಹುಬ್ಬಳ್ಳಿ ಅಂಜುಮಾನ ಕಾಟನ್ ಜಿನಿಂಗ, ಪ್ರೆಸ್ಸಿಂಗ ಅಂಡ ಇಲೆಕ್ಟ್ರಿಕ ಲೈಟಿಂಗ" ಸಂಸ್ಥೆಯನ್ನು ತೆರೆದು ಮುಂದೆ ಅದರ ಉತ್ಪತ್ತಿಯನ್ನು ತಮ್ಮ ಸಾರ್ವಜನಿಕ ಸಂಸ್ಥೆಗೆ ಉಪಯೋಗಿಸುವ ಹಂಚಿಕೆಮಾಡಿರುವರು. ಈಗ ಆ ಸಂಸ್ಥೆಗೆ, ಪಾಲಿಗೆ ೫ ರೂಪಾಯಿಯಂತೆ ಕೊಟ್ಟುಕೊಂಡ ಪಾಲುಕಾರರಿಗೆ ೧೦ ವರ್ಷಗಳ ಅವಧಿಯಲ್ಲಿ ಅವರಿಗೆ ನೂ ೧೦ ರಂತೆ ಲಾಭ ಸೇರಿ ಮರಳಿಸಿಗುವುದು. ಅಲ್ಲಿಗೆ ಅವರ ಪಾಲಿನ ಹಕ್ಕು ಮುಗಿಯಿತು. ಇತ್ತ ಸಂಸ್ಥೆಯು ಸ್ವತಂತ್ರವಾಯಿತು. ಈಗಿನಕಾಲದಲ್ಲಿ ಆಗಾಗ ವರ್ಗಣಿ ಕೇಳಿದರೆ ಕೊಡುವರಿಲ್ಲ. ಹಾಗಿರುವಲ್ಲಿ ಈ ಸಂಸ್ಥೆಗೆ ಸಹಾಯ ಮಾಡುವುದರಿಂದ ಏನೊಂದು ಕಷ್ಟವಿಲ್ಲದೆ ಸ್ವಾರ್ಥ ಪರಾರ್ಥವೆರಡನ್ನೂ ಸಾಧಿಸಿದಂತಾಗುವುದು. ಶ್ರೇಯೋಭಿಲಾಷಿಗಳು ಈ ಕುರಿತು ಕಾರ್ಯತತ್ಪರರಾಗಲೆಂದೇ ನಮ್ಮ ಹಾರೈಕೆ.

ಸಾರ್ವಜನಿಕ ಸಂಸ್ಥೆಗಳೂ ಹಣವೂ ಹತ್ತು ಜನರ ದುಡ್ಡು ಹಾಸಗಂಟಿ ದು ತಿಳಿಯುವ ಕಾಲವು ಹೋಗಿ ಇಂದು 'ಹೋಕಿಲ್ಲದ ಗಂಟೀದು' ಕಂಡವರು ತಿನ್ನುವ ದಿನಗಳು ಬಂದಿವೆ. ನೂರಾರು ಕಷ್ಟಪಟ್ಟು ರಕ್ತಸುರಿಸಿ ಗಳಿಸಿ, ನೀಡಿದ ಹಣವು ಅದರಮೇಲೆ ಅಧಿಕಾರಿಗಳಾಗಿ ಕುಳಿತುಕೊಳ್ಳುವ ದುಡ್ಡಿನ ದೆವ್ವಗಳು ಕೆಲವರಿಗೆ 'ಮನೆಯೊಡತಿಗೆ ನಗಮಾಡಿಸುವ' ಸ್ಥಿತಿಯೆಂದು ತೋರತೊಡಗಿದೆ. ಅಂತೆಯೇ ಇಂದಿನ ಸಾರ್ವಜನಿಕ ಸಂಸ್ಥೆಗಳ ಈ ಅವಸ್ಥೆಗಳು. ಪರಿಶುದ್ಧತೆಯು ಇರಬೇಕಾದರೆ ತಪ್ಪಿಲ್ಲದ ಲೆಕ್ಕಪತ್ರಗಳು ಪ್ರಮುಖ್ಯ. ಇದಕ್ಕಾಗಿಯೇ ಮಹಾತ್ಮಾಜಿಯವರು ತಮ್ಮ ಆತ್ಮ ವೃತ್ತದಲ್ಲಿ ನೇಟಾಲ ಕಾಂಗ್ರೆಸ್ಸಿನ ಲೆಕ್ಕಪತ್ರಗಳ ಕುರಿತು ಮಾತನಾಡ ವಾಗ ಸತ್ಯದ ಸಂಪೂರ್ಣತ್ವವನ್ನು ಕಾಯಲು (Truth in its prestine purity) ಸರಿಯಾದ ಲೆಕ್ಕಪತ್ರಗಳು ಬೇಕೆಂದಿರುವರು- ಹೀಗಿರುವಲ್ಲಿ ಮನಬಂದಂತೆ ಸಾರ್ವಜನಿಕ ಸಂಸ್ಥೆಗಳ ಹಣವನ್ನು ದುರ್ವಿನಿಯೋಗ ಮಾಡುವವರಿಗೆ ಏನೆನ್ನಬೇಕು? ಈ ರೋಗವನ್ನು ಇಷ್ಟರಲ್ಲೇ ಕೆಲವು ಮಹಾನುಭಾವರು ನಮ್ಮ ಜಿಲ್ಲೆಗೂ ಆಮಂತ್ರಣ ವಿತ್ತು ತಂದಿರುವರು. ನಮ್ಮ ತಿಳುವಳಿಕೆಗೆ ಬಂದಿರುವುದು ಸಂಬಂಧಿಸಿದ ಮಹಾನುಭಾವರು ಜನತೆಯ ದುಡ್ಡು ಜನಾರ್ದನನ ರೂಪವೆಂದು ಸರಿಯಾಗಿ ತಿಳಿದುಕೊಂಡು ತಮ್ಮ ಮಾರ್ಗವನ್ನು ಬೇಗನೆ ಬದಲಿಸದೆ ಹೋದಲ್ಲಿ, ಇನ್ನುಮುಂದೆ ಅವರ ಕೃತಿಯ ಅನಾದರದ ಮೆರವಣಿಗೆಯನ್ನು ಮಾಡಿಸುವ ಪ್ರಸಂಗವನ್ನು ನಾವು ಕೈಕೊಳ್ಳಬೇಕಾಗುವುದು.

ಮಂಗಳಕಾರ್ಯಗಳಲ್ಲಿ ರಣವಾದ್ಯಗಳು ಬೇಕೆ? ನಾವು ಹಬ್ಬ-ಹುಣ್ಣಿವೆಗಳನ್ನು, ಮದಿವೆ-ಮುಂಜಿವೆಗಳನ್ನು ಶುಭಕಾರ್ಯಗಳೆಂದು ತಿಳಿದಿರುವೆವು ಉಪವಾಸದಿಂದ ಕಳೆದ ದಿನಗಳನ್ನು ಆನಂದದಿಂದ ಮರೆತು ಸಂತೋಷದಲ್ಲಿ ಬೆರೆತು ಒಂದಾಗುವ ಶುಭದಿನಗಳೆಂದು ತಿಳಿದಿದ್ದೆವು. ಇಂದು ಕಾಲಗತಿಯು ಈ ವಿಷಯದಲ್ಲಿ ಒದಲಾಯಿಸಿ ಹೋಗಿದೆ. ಪ್ರತಿಯೊಂದು ಆರ್ಯ ಸಂಸ್ಕೃತಿಯನ್ನು ಒತ್ತೆಯಿರಿಸಿ, ಪರಸಂಸ್ಕೃತಿಯನ್ನು ಹಿಂಬಾಲಿಸುವ ಈ ನವಯುಗವನ್ನು ಕಂಡು ನಗಬೇಕೋ ಅಳಬೇಕೋ ನಮಗೆ ತಿಳಿಯದಾಗಿದೆ. ಅಷ್ಟಕ್ಕೆ, ಕನ್ನಡಿಗನಿಗೆ ಪರರನ್ನು ಕಂಡರೆ ಆಗದು ಎಂಬುವ ಅಪವಾದವು ನಮಗೆ ಬಾರದಿರದು. ನಮ್ಮಲ್ಲಿಗಿಂತಲೂ ಶ್ರೇಷ್ಠವಿರುವ ಪರಸಂಸ್ಕೃತಿಯ ಅನುಸರಣೆಯನ್ನು ಮಾಡಬಾರದೆನ್ನುವ ಕೂಪಮಂಡೂಕನು ಕನ್ನಡಿಗನಲ್ಲ. ಆದರೆ, ನಮ್ಮಲ್ಲಿರುವ ಹಿಟ್ಟು ಕೊಟ್ಟು ಬೂದಿತರುವ ಸುಧಾರಣೆಯನ್ನು ಮಾತ್ರ ಅವನು ಬಯಸಲಾರನು. ಅಂತೆಯೇ ಈ ರಣವಾದ್ಯ' ಇಲ್ಲವೇ' ಬೇಂಡು' ಗಳ ವಿಚಾರ. ನಮ್ಮಲ್ಲಿರುವ ಕೊಳಲು, ನಾಗಸ್ವರ, ಶ್ರುತಿ ಮೊ

ರಿಗೆಳಿಂದಲೂ ... ಪ್ರತಿಷ್ಠೆಯ ... ಲ್ಲಿಯೂ ಸಂತೋಷಾನಂದಗಳನ್ನು ಬೀಸಿ ಹುಂಬುವ ಪಥರಗಾಯ ನವ್ರ ಇರುವ ... ಬಟ್ಟೆ 'ಬ್ಯಾಂಡ್' ಎಂದೊಡನೆಯೇ ಚಿಕ್ಕ ಬಾಲಕರು ಅಜಿ ... ಒಳ ಬರುವ ಈ ವಾದ್ಯವು ನಮ್ಮ ನಾಡಿನ ಸಂಸ್ಕೃತಿಯಲ್ಲಿ ಕಲ್ಪಿನ ನಮ್ಮ ಜೀವನಕ್ರಮದ ಜಿಜ್ಞೆಯನ್ನು ಪೋಣಿಸ ... ಲ್ಲ. ಇದನ್ನು ... ವೊ ... ಬಂತೆಯೋ! ಪಾಶ್ಚಾತ್ಯ ಜೀವನಚಿತ್ರಕ್ಕೆ ಒಗ್ಗಿನ ಸ್ವಭಾವದ ಸಾಧನವು ಅದು. ಒಮ್ಮೆಗೇ ಅದನ್ನು ನಮ್ಮ ಶಾಂತಜೀವನದ ಎಡೆಯಲ್ಲಿ ನುಗ್ಗಿದರೆ ಪಾಶ್ಚಾತ್ಯ ವಿಧಿಗೆಯರ ಉಡಿಗೆಯುಳ್ಳವನು ನಮ್ಮ ತಾಯಿಂದಿರಿಗೆ ಸೀರೆ ಕುಪ್ಪಸಗಳ ಬದಲು ಕಿರಗಣಿ (Gown) ತೊಡುವಂತೆ ಹೇಳಿದಷ್ಟೇ ಹಾಸ್ಯಾಸ್ಪದವಾಗಬಹುದು. ಇನ್ನು ಒರುವ್ರ ದ... ಹಬ್ಬಗಳ ಮಂಗಳ ಕಾರ್ಯಗಳ ದಿನಗಳು. ಅದಕ್ಕಾಗಿ ನಮ್ಮ ಬಂಧುಗಳಿಗೆ ಒಂದು ಸೂಚನೆಯನ್ನು ಕೊಟ್ಟಿರುವೆವು. ರಣದಲ್ಲಿ ಉನ್ಮತ್ತರಾದ ಯೋದ್ಧರು ತಮ್ಮನ್ನು ತಾವು ಮರೆಯುವಂತೆ ಪ್ರೇರಿಸುವ ಈ ವಾದ್ಯಕಿಂತಲೂ ತಮ್ಮನ್ನು ತವು ಅರಿಯುವಂತೆ ಬೋಧಿಸುವ ಭಾರತೀಯ ಪದ್ಧತಿಯು ನಮಗೆ ತಕ್ಕದ್ದೆಂದು ಬಿನ್ನವಿಸಿಕೊಳುವೆವು.

ಕನ್ನಡಿಗರು ಕನ್ನಡದಲ್ಲಿ ಸಹಿಮಾಡಬೇಕೆ? ಈ ಪ್ರಶ್ನೆಯು ಕೆಲವರಲ್ಲಿ ಕುತೂಹಲವನ್ನುಂಟು ಮಾಡಿರವುದು ಆನಂದ ಯುವವು. ಕಾಸುಗಳ ಎಚ್ಚರವನ್ನು ನೀನು ತೆಗೆದುಕೊಂಡೆಯಾದರೆ, ರೂಪಾಯಿಗಳು ತಮ್ಮ ಎಚ್ಚರವನ್ನು ತಾವೇ ತೆಗೆದುಕೊಳ್ಳುವವಂತೆ!

ಆ (೨) ಕನ್ನಡದಲ್ಲಿ ಬರೆಯದಿದ್ದರೆ ಏನು ತಪ್ಪು?

ಉ. ಪೆತ್ತಾಕೆಯನ್ನು "ಅವ್ವಾ-ಅಮ್ಮಾ-ತಾಯಿ" ಎಂದು ಕರೆಯದಿದ್ದರೇನು ತಪ್ಪು? ಕರೆಯದಿದ್ದರೆ ಮತ್ತೆ ದಂಡಿಸಬಹುದು ಮೂರ್ಖರಲ್ಲ. ಆದರೆ, ಮಾತೃಪ್ರೇಮವು, ನಮ್ಮ ನಡೆ ನುಡಿ, ಆಚಾರ, ವ್ಯವಹಾರಗಳ ಮೂಲಕ ಪ್ರಕಾಶವನ್ನು ಹೊಂದುವುದು ಸ್ವಭಾವ.

ಆ (೩) ಅದು ಭಾಷಾವರ್ಧನಕ್ಕೆ ಮಹತ್ವದ ವಿಷಯವೇ?

ಉ. ಸಹಿಯೆಂದರೆ, ನಾವು ಒಂದು ವಿಷಯದಕುರಿತು ನಮಗಿರುವ ಒಪ್ಪಿಗೆಯನ್ನು ಬರಹದ ಮೂಲಕ ಕೊಡುವ ಸಾಧನ. ಮಾತಿನ ವೇಳೆಯಲ್ಲಿ ವ್ಯಕ್ತಿಯು ಇರುವನು. ಬರಹದಲ್ಲಿ ವ್ಯಕ್ತಿಯು ಇಲ್ಲದಿದ್ದರೂ ವ್ಯಕ್ತಿತ್ವವು ಸಹಿಯ ರೂಪದಿಂದ ಉಳಿಯುವುದು. ನಿಮ್ಮ ನಾಡು, ಕನ್ನಡವಾದರೆ, ನಿಮ್ಮ ನುಡಿಯು ಕನ್ನಡವಾದರೆ, ನಿಮ್ಮ ವ್ಯಕ್ತಿತ್ವದ ಆ ಚಿತ್ರವು ಕನ್ನಡದಲ್ಲಿರುವುದು ಭೂಷಣವಲ್ಲವೇ?

ಆ. (೪) ಸಾಹಿತ್ಯ ಪರಿಷದಿನವರಿಗೂ, ವಿದ್ಯಾವರ್ಧಕ ಸಂಘದವರಿಗೂ ತಿಳಿಯದ ವಿಷಯವೊಂದು ನೀವು ಹೇಳುತ್ತಿರುವಿರೇನು

ಉ. ಅಪ್ಪನು ಅವಸರದಿಂದಲೂ ಕಾರ್ಯವಿಶೇಷದಿಂದಲೂ ಮನೆಗೆ ಬರುವಲ್ಲಿ ಕಾಲನ್ನು ತೊಳೆಯಲು ಮರೆತಿದ್ದರೆ, ಮಗನು ನೆನಪನ್ನು ತಂದುಕೊಡುವದರಿಂದ ಅಪರಾಧಿಯಾಗಲಾರನು ಇಲ್ಲವೆ ಅವನ ಸೂಚನೆಯು ಮಾನ್ಯವಲ್ಲವೆಂದೂ ಆಗಲಾರದು.

"ಕನ್ನಡಿಗ"ನ ರಜೆ

ದಸರೆಯ ಹಬ್ಬದ ನಿಮಿತ್ತವಾಗಿ ಮುಂದಿನ ವಾರದಲ್ಲಿ "ಕನ್ನಡಿಗ" ನಿಗೆ ರಜೆಯಿದ್ದುದರಿಂದ ೩೯ನೇ ಸಂಚಿಕೆಯು ೧೫ನೇ ತಾ|| ದಿನ ಹೊರಡದೇ, ತಾ|| ... ಕ್ಕೆ ಪ್ರಕಟವಾಗುವದು. ——ವ್ಯವಸ್ಥಾಪಕ.

ಕರವೇ— ಅದನ್ನು ತಿರುಗಿ ತಿರುಗಿ ಹೇಳುವುದರಲ್ಲಿ 'ಕನ್ನಡಿಗ' ನಿಗೆ ಬೇಸರವಾಗದು. ಇಲ್ಲಿನ ರಹಸ್ಯ, ಕಾರಣ ಇದು 'ಕನ್ನಡಿಗನ' ಪ್ರಿಯ ವಿಷಯಗಳಲ್ಲೊಂದು ಎಂಬವನಾತ್ರಕ್ಕೆ ನಮಗೆ ಸಮಾಧಾನವಾಗುತ್ತೆಯೂ ನಾವು ಕಿಯೆವು 'ಕನ್ನಡಿಗ'ನಿಗೆ, ಕನ್ನಡಿಗತ್ವದ, ಮಹತ್ವವನ್ನು ತಿಳಿಸುವ ಯತ್ನಮಾಡುವದು ಪ್ರಿಯವಿಷಯಗಳಲ್ಲೊಂದಾಗಿರುವುದು, ಮಾತ್ರವಲ್ಲ ಧ್ಯೇಯವೆ ಆಗಿದೆ "ನಿಮ್ಮ ಮನೆಯಲ್ಲಿ ಕಳ್ಳರು ಬಂದರೆ ಇದನ್ನು ಪತ್ತೇ ಮಾಡುವವರು ಪೋಲೀಸು ಅಧಿಕಾರಿಗಳು— ಅವರಿಂದ ಕೆಲಸವು ಸುಲಭವಾಗುವಂತೆ ಇನ್ನು ಮುಂದಕ್ಕೆ ನಿಮ್ಮ ಮನೆಯ ನಗ, ನಾಣ್ಯಗಳನ್ನು ಪೋಲೀಸ ಕಚೇರಿಯಲ್ಲಿರಿಸಿ—" (ಏಕೆಂದರೆ ಅಭಿಪ್ರಾಯ ಕೊಡುವವರು ಇಂಗ್ಲೀಷನ್ನಲ್ಲದೆ ಬೇರೆ ಯಾವದನ್ನೂ ತಿಳಿದವರಲ್ಲ.) ಎನ್ನುವ 'ಲೋಕರಹಸ್ಯ'ಕಾರರ ತರ್ಕದಂತೆ ಅನೇಕರು ಆಕ್ಷೇಪಗಳನ್ನು ತೆಗೆದಿರುವರು. ಕೆಲವರು ಸತ್ಯಸಂಶೋಧನೆಗಾಗಿ ಪ್ರಶ್ನೆ ಕೇಳುತ್ತಲಿದ್ದರೂ ಅನೇಕರದು, ತಿರುಳಿಲ್ಲದ ಮರುಳುತನವೆಂದೇ ಕಾಣುವದು. ಅಂತೆಯೇ ಕೆಲವು ಪ್ರಶ್ನೆಗಳಕುರಿತು ನಾವು ಕೆಳಗೆ ವಾದಮಾಡುವೆವು.

ಆಕ್ಷೇಪ (೧) ಇಂಗ್ಲೀಷಭಾಷೆಯು ಸಾರ್ವತ್ರಿಕವಾದುದರಿಂದ ... ನೀವು ಮಾಡಿ ... ಆಮೇಲೆ ನಾವು ಕನ್ನಡದಲ್ಲಿ ಹೆಸರು ಬರೆಯುವೆನೆಂದು.

ಉತ್ತರ:- ಅಂದರೆ, ಆ ವೇಳಾದರೂ ಬರೆಯುವ ಆವಶ್ಯಕತೆಯಿದೆಯೆಂದಾಯಿತು ಹಾಗಾದರೆ ಇಂದಿನಿಂದಲು ಅನುಕೂಲವಿರುವಕಾರ್ಯವನ್ನು ನಾಳೆ ಮಾಡಬೇಕೆನ್ನುವದೇತಕ್ಕೆ? ಯುದ್ಧವಾದಬಳಿಕ ಸೈನಿಕರ ಅಗತ್ಯವಿಲ್ಲ. ಭಾಷಾ ಸ್ವೀಕರಣದ ಸೆಣಸಾಟವು, ಕನ್ನಡಿಗತ್ವವನ್ನು ಪ್ರತಿಯೊಂದುವಿಚಾರದಲ್ಲಿಯೂ ಮರೆಸುತ್ತಿರುವಾಗ ಕನ್ನಡಿಗರೆಲ್ಲ ಸೈನಿಕರಿಂದಾಗಬೇಕು. ಈ ಸೈನಿಕರು ವಾಸ್ತವವಾಗಿರುವ ಅಲ್ಪವಸ್ತುಗಳ ಆರೈಕೆಯನ್ನು ಮಾಡಹೋದರೆ, ಮಹತ್ವದ ವಿಷಯಗಳು ತನ್ನಂತೆಯೇ ನಡೆ

ಆ. (೫) ಪರಭಾಷೆಯಲ್ಲಿ, ಓದಲು ಕಲಿಯಲು ಅಡ್ಡಿಯಿಲ್ಲೆನ್ನುವಿರಿ, ಅಂದಬಳಿಕ ಹೆಸರು ಬರೆಯಲು ಅಡ್ಡಿಯೇನು?

ಉ. ಸ್ವಭಾಷೆಯನ್ನು ಅರಿತು ಪರಭಾಷೆಯನ್ನು ಕಲಿಯುವದು, ಮರೆತಲ್ಲ. ಸ್ವಭಾಷೆಯ ಉನ್ನತಿಗಾಗಿ ಪರಭಾಷೆಯ ಸಾರ ಸಂಗ್ರಹವನ್ನು ಮಾಡುವೆವು. ಪರರಲ್ಲಿನ ಉತ್ತಮ ಸಂಸ್ಕೃತಿಯನ್ನು ಕಲೆತರುವವೆಂದ ಮಾತ್ರಕ್ಕೆ ತನ್ನಲ್ಲಿರುವುದನ್ನು ಬಿಡಬೇಕೆಂದೇನಿಲ್ಲ.

ಆ (೬) ಯಾವನೊಬ್ಬ ಪಂಡಿತನ, ಉತ್ಕೃಷ್ಟ ಕನ್ನಡದಲ್ಲಿ ಬರೆದು ಅದರ ಕೆಳಗೆ ಪರಭಾಷೆಯಲ್ಲಿ ಸಹಿಮಾಡಿದರೇನು?

ಉ. ದಕ್ಷಿಣ ಕನ್ನಡಿಗರಲ್ಲಿ "ನೊಣ ತಿಂದು ಜಾತಿಕೆಟ್ಟಂತೆ" ಎಂದು ಒಂದು ನುಡಿಯಿದೆ. ವನಸ್ಪತಿ ಆಹಾರಿಯಾದವನು, ಹಸಿವನ್ನು ಏನೇನೂ ಅಡಗಿಸಲಾರದ ಪ್ರಾಣಿ ವರ್ಗಕ್ಕೆ ಸೇರಿದ ಆ ಚಿಕ್ಕ ಹುಳುವನ್ನು ತಿಂದು, ಪಂಥಕ್ಕೆ ಅಪವಾದವನ್ನೇಕೆ ತಂದುಕೊಳ್ಳಬೇಕು

ಆ. (೭) ಪರಭಾಷೆಯಲ್ಲಿ ಬರೆದ ಕಾಗದಗಳಿಗೆ ಕನ್ನಡದಲ್ಲಿ ಸಹಿ ಹಾಕಿದರೆ ಅದು ಹಂಡ ಬಂಡತನವಾಗುವದಿಲ್ಲವೆ?

ಉ. ಕನ್ನಡದಲ್ಲಿ ಬರೆದು, ಪರಭಾಷೆಯಲ್ಲಿ ಸಹಿ ಮಾಡಿದರೆ ಅದೂ "ಹಂಡ ಬಂಡತನದ" ಮಾರ್ಗವಾಗದೇನು? ಮುಖ್ಯವಾಗಿ ನಾವು ಕನ್ನಡಿಗರು. ನಮ್ಮ ವ್ಯವಹಾರವು ಹಲವಂಶ ಕನ್ನಡಿಗರಲ್ಲಿ. ಕನ್ನಡಿಗರೊಡನೆ ಪರಭಾಷೆಯು ಅವಶ್ಯವಿದ್ದಷ್ಟೇ? ಅನೇಕ ರೀತಿಯಲ್ಲಿ ನಡೆಯುವ ಕನ್ನಡ ಭಾಷೆಯ ವ್ಯವಹಾರಗಳಿಗೆ ಕನ್ನಡ ಸಹಿಯೇ ಉತ್ತಮವು. ಸಹಿ

ಯು ಒಂದೊಂದು ಭಾಷೆಯು [illegible] ಒಂದೊಂದು ರೀತಿ ಇ ರಬಾರದೆಂಬ ಕಾರಣದಿಂದ, ಒಂದೇ ಭಾಷೆ [illegible]. [illegible]? ಇದು ನಮ್ಮ ಪೆಟ್ಟಿನ ವ್ಯವಹಾರ ನಡೆಯುವ ಕನ್ನಡಭಾಷೆಯಲ್ಲಿಯಾದೇ ನವಪತ್ರ [illegible]ಟ್ಟಿನ ವ್ಯವಹಾರಕ್ಕೆ ಸುಯೋಗ ನಡೆಯು ಕನ್ನಡಿಗರಿಗೆ ಕನ್ನಡವಲ್ಲದೆ [illegible]. [illegible] ಇರಬಹುದಾದ ಆಕ್ಷೇಪದ ಪ್ರಸಂಗದಲ್ಲಿ- ಎಂದರೆ ಬೇರೆ ಭಾಷೆಯ [illegible]ರಾಗದಗಳನ್ನ ಬರೆಯುವಾಗ, ಅವಕ್ಕೆ ಕನ್ನಡದಲ್ಲಿ ಸಹಿ ಮಾಡಿರಿ— ಅವುಗಳನ್ನು ಓದುವ ಪರಭಾಷೆಯ ಮಿತ್ರರಿಗೆ ಯಾರಿಂದ ಬಂದಿತೆಂದು ತಿಳಿಯಲಾರದ ಭೀತಿಯಿದ್ದರೆ- ಕೆಳಗಡೆ ನಿಮ್ಮ ವಿಳಾಸವನ್ನು ಪರಭಾಷೆಯಲ್ಲಿ ನಮೂದಿಸುವ ಅಲ್ಪ ಶ್ರಮವನ್ನು ವಹಿಸದರಾಯಿತು.

ಇನ್ನುಳಿದ ಅನೇಕ ಪ್ರಶ್ನೆಗಳನ್ನು- "ನಾವು ಹಾಕದಿದ್ದರೆ ನೀನೆ ನಮೂದಿಸುವಿರಿ." ಎಂಬ ಮಾದರಿಯವುಗಳು. ಇವಕ್ಕೆ ಉತ್ತರ ಕೊಡುವದರಲ್ಲಿ ನಮಗೆ ಸಮಯವನ್ನು ಕಳೆಯಲು ಇಷ್ಟವಿಲ್ಲ.

ಮುಖ್ಯವಾಗಿ, 'ಸಹಿ' ಯೆಂದರೆ ವ್ಯಕ್ತಿಯ ಪರೋಕ್ಷದಲ್ಲಿ ಆ ಸ ವ್ಯಕ್ತಿತ್ವದ ಸಾಕ್ಷಿಯಿರುವುದು. ನೀವು ಕನ್ನಡಿಗರೆಂದು ಹೇಳಿಕೊಳ್ಳಲು ಹಿಗ್ಗುವಿರಾದರೆ ನಿಮ್ಮ ವ್ಯಕ್ತಿತ್ವವನ್ನು ಪ್ರಕಟಿಸುವ ಆ ಸ ಧನವೂ ಕನ್ನಡದಲ್ಲಿರಬೇಕೆಂಬುದು ಎಷ್ಟೊಂ ಉಚಿತವಾದದು. ಈ ವಿಷಯದಲ್ಲಿ ಕನ್ನಡ ಸ ಸ್ಕೃತಿಯ ಪಾಲಕರಾಗಿ ಹೊರಟ ಪತ್ರಿಕೆಗಳೇ ವಿರುದ್ಧಾಭಿಪ್ರಾಯವುಳ್ಳವುಗಳೆಂದು ಕಂಡು ನಮಗೆ ಆಶ್ಚರ್ಯವಾಗುತ್ತದೆ- ಅಂತಹ ಚಿತ್ತವೃತ್ತಿಯನ್ನು 'ಕನ್ನಡ ಸೇವೆ' ಯೆಂದು ಕರೆಯಬೇಕೋ "ಕನ್ನಡದ ಸೇವೆಯ ಸೋಗೆಂದು' ಕರೆಯಬೇಕೋ?

"ಕನ್ನಡಿಗ" ನ ಸಹಾಯಕರಾಗಾಗಿ ಬೆಂಗಳೂರಿನ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರೂ, ಹುಬ್ಬಳ್ಳಿಯ ನರಸಿಂಹ ರಾಬ ಅಬ್ದುಲ್ಲಾ ಸಾಹೇಬರವರ [illegible], ನಂಬಯಿಯ "ಪ್ರಿನ್ಸಿಪಲ್" ಶಿಷ್ಟೀ ಪಾಂಡುರಂಗರಾಯರೂ. ಅದೇ ಪ್ರಕಾರ ಉಪಕಾರ ಕರ್ತ್ರಗಳಾಗಿ, **ಚಿಕ್ಕೋಡಿಯ ಶ್ರೀ ಬೆಳವೀ ವೆಂಕಟ** ರಾಯರೂ, **ಸೋಟೂರ** ನ **ಶ್ರೀ** ಇನಾಮದಾರ ರಾಮರಾಯರೂ, ಮುಂಬಯಿಯ ಶ್ರೀ ಜಹಾಗೀರದಾರ ರಂಗಾಚಾರ್ಯರ, ಮತ್ತು ಶ್ರೀ ದೇಶಪಾಂಡೆ ರಂಗನಾಗನರಾಯರೂ, **ಧಾರವಾಡದ** ಶ್ರೀ ವೇದವಾಂತಿ ಭಿ ಮರಾಯರೂ, **ಕರ್ನಾಟಕದ ಅಭಿಮಾನಿಶಾ** ಲಿಗಳೂ ಶ್ರೀಮಂತರೂ ಕನ್ನಡ ವಾಙ್ಮಯ ಭಕ್ತರೂ ಆದ ಇನ್ನಿತರ ಕನ್ನಡಿಗರಿಗೆ ಪೋಷ್ಪಂಕ್ತಿಯನ್ನು ಹಾಕಿಕೊಟ್ಟಿದ್ದಾರೆ. ಎರಡನೇ ವರ್ಷದಲ್ಲಿಯೂ ಹೀಗೆ "ಕನ್ನಡಿಗ" ನ ಸಂಸಾರವನ್ನು **ಎತ್ತಿಹಿಡಿ**ದದ್ದಕ್ಕಾಗಿ ನಾವು **ಈ** ಮಹಾನುಭಾವರಿಗೆ ತುಂಬಾ ಋಣಿಯಾಗಿರುವೆವು. ಕರ್ನಾಟಕದ **ಅಭಿಮಾನಿಶಾಲಿಗಳೆಲ್ಲ ಇದೇ ಬಗೆಯಾಗಿ** ಸಹಾಯವನ್ನಿತ್ತು, ವಾರ್ಷಿಕ ಚಂದಾ **ಒಂದೇ ರೂಪಾಯಿಯನ್ನಿಟ್ಟು**ಕೊಂಡು ಕನ್ನಡಿಗರ ಸೇವೆಯಲ್ಲಿ ನಿರತರಾಗಿರುವ "ಕನ್ನಡಿಗ" ನನ್ನು ಎತ್ತಿಹಿಡಿಯುವವರಾಗಿ **ಕೇಳಿರುತ್ತೇನೆ.**

ಶಿವನಾಥ ಶೆಟ್ಟಿಯವರು ಸ್ವರ್ಗಸ್ಥರಾದುದನ್ನು ಕಳೆದ ವಾರದಲ್ಲಿ ಪ್ರಕಟಿಸಿದ್ದಾಗಿದೆ. ಇವರು ಇಲ್ಲಿಯ ದೊಡ್ಡ ವರ್ತಕರು. ಹಳ್ಳಿ ಜನರಿಗೂ [illegible]. ಉದಾರ ಬುದ್ಧಿಯವರು. ಊರಲ್ಲಿ ವರ್ಜನಿಷ್ಠವರು ಧರ್ಮದಲ್ಲಿ ವಿಶ್ವಾಸವುಳ್ಳವರು. ಇಲ್ಲಿಯ **ಕೊ**ತ್ತಲದ ಹನುಮಂತದೇವರ ಗುಡಿಯ ಜೀರ್ಣೋದ್ಧಾರದ ಕೆಲಸವನ್ನಂತೂ ಒಳ್ಳೇ ಆಸಕ್ತಿಯಿಂದ ಇವರು ಮಾಡುತ್ತಲಿದ್ದರು. **ಈ** ಕಾರ್ಯದ ಯಶಸ್ವಿಯಾಗಲು ಶಿವನಾಥಶೆಟ್ಟಿ-ಶವಿಂದ ಕಾಣ [illegible]. [illegible] ಸಾಯಂಕಾಲದವರೆಗೆ **ಈ** ಕಟ್ಟಡದ [illegible] ಇವರು ಇತ್ತಿತ್ತ ತಮ್ಮ ಬುದ್ಧಿಕಾಲಉತ್ಸಾ

ಹಗಳನ್ನು ತೋರಿಸುತ್ತಿದ್ದರೆಂಬುದು ಎಲ್ಲರೂ [illegible] ಮಾತಾಗಿದೆ. ಇಂತಹ ಭಕ್ತನಿಗೆ ಪರಲೋಕದಲ್ಲಿ ಶಾಶ್ವತವಾದ ಸುಖವನ್ನು ಕೊಡಬೇಕೆಂದೇ ಹನುಮಪ್ಪನು ಅವನನ್ನು ತನ್ನೆಡೆಗೆ ಕರೆದುಕೊಂಡು ಹೋಗಿರಲಿಕ್ಕೆ ಸಾಕು. ಅದೇಪ್ರಕಾರ [illegible]ಯ ಭಕ್ತಿಯು ಬಾಗಲಕೋಟೆಯ ಇನ್ನಿತರ ಭಕ್ತರ ಪಾಸ್ಥೆಯನ್ನು ಇನ್ನು ಮೇಲೆ ಮಾಡಿನೋಡಬೇಕೆಂದೂ, ಹನುಮಪ್ಪನ [illegible] ಯಿರಬಹುದು ಈ ಗುಡಿಗಳಿಗೆ ಬಾಗಲಕೋಟೆಯ ಭಕ್ತರು ಇನ್ನು ಮೇಲೆ ಎಷ್ಟರಮಟ್ಟಿಗೆ ಲಕ್ಷ್ಯವಹಿಸಿ ನೋಡಬೇಕು. ಇರಲಿ, ಶಿವನಾಥಶೆಟ್ಟಿಗಳ ನಿಧನದಿಂದ ತಮಗಾದ ದುಃಖವನ್ನು ಪ್ರಕಟಗೊಳಿಸಲು ಬಾಗಲಕೋಟೆಯ ನಾಗರಿಕರು ಕಳೆದ ವಾರದಲ್ಲಿ ಸಾರ್ವಜನಿಕ ಸಭೆಗೂಡಿ, ದುಃಖಪ್ರದರ್ಶಕ ಠರಾವುಗಳನ್ನು ಮಾಡಿದಂತೆ "ಕನ್ನಡಿಗ" ನಾದವನೂ ತನ್ನ ಅತ್ಯಂತ ಖೇದವನ್ನು ಪ್ರಕಟಿಸುತ್ತಾನೆ. [illegible] ಆತ್ಮಕ್ಕೆ ಶಾಂತಿಯನ್ನೀಯಲೆಂದು ಭಗವಂತನಲ್ಲಿ [illegible]

ಪತ್ರ ವ್ಯವಹಾರ.

[illegible]ಯುತ ಸಂಪಾದಕ ಕನ್ನಡಿಗ ಇವರಿಗೆ—

ಕಳೆದ ವಾರ ಕನ್ನಡಿಗದ ಸಂಚಿಕೆಯಲ್ಲಿ ಚಾಕ ಶಬ್ದವು ಪ್ರಥಮತಃ ಕನ್ನಡದಲ್ಲಿ ತದ್ಭವವಾಗಿ ಹೋಗಿ, ಅನಂತರ ಮರಾಠಿ ಮೊದಲಾದ ಭಾಷೆಗಳಲ್ಲಿ ಅದರ ಪ್ರಚಾರವಾಗಿರಬಹುದೆಂದು ಊಹಿಸುವಿರಿ. **ಈ** ತಮ್ಮ ತರ್ಕವಾದರೂ ನಿರಾಧಾರವಾದದ್ದು ಯಾಕೆಂದರೆ: —

'ಚೌಕ' ಶಬ್ದವು ಕನ್ನಡದಲ್ಲಿ ಪ್ರಚಲಿತವಾಗಿದ್ದರೆ ಮರಾಠಿ ಮೊದಲಾದ ಭಾಷೆಗಳಲ್ಲಿ ಅದರ ವ್ಯಾಪವು ವಿಶೇಷವಾಗಿ ಕಂಡುಬರುವದು. ನಾವೇ ಸ್ವತಃ ಚೌಕ, ಚೌಕಟ್ ಚೌಕಡಾ, ಚೌಕೋನಿ ಚೌಕಡೀ, ಚೌಕೀ, ಚೌಕರ, ಚೌಕರಿ, ಚೌಕೆಬಾರ, ಚೌಕಸ್, ಚೌಕಸನೀಸ ಮುಂತಾದ ಅನೇಕಶಬ್ದಗಳನ್ನು ಬಲ್ಲೆವು "ಚೌಕ" ಶಬ್ದದಲ್ಲಿ ಮುಖ್ಯ ಶಬ್ದವು "**ಚೌ**" ಇರುತ್ತದೆ ಚೌ ದಿಂದ ಹೊರಟ ಸಂಖ್ಯಾವಾಚಕ ಶಬ್ದಗಳು ಮರಾಠಿ ಮೊದಲಾದ ಭಾಷೆಗಳಲ್ಲಿ ಸಾಕಷ್ಟು ಇರುತ್ತದೆ.

ನೀವು ತೋರಿಸಿದ ಬಸವ ಪುರಾಣದ ಆಧಾರದಲ್ಲಿಂದೂ ಏನೂ ಅರ್ಥವಿಲ್ಲ. ಪ್ರಾಕೃತ ಭಾಷೆಗಳು ಸಂಸ್ಕೃತಭಾಷೆಯು **ತ**ದ್ಭವ ಭಾಷೆಗಳೇ ಇರಲಿ, ಅಥವಾ ಕೆಲವರೆಂಬುವಂತೆ ಸಂಸ್ಕೃತ ಭಾಷೆಯು ಪ್ರಾಕೃತ ಭಾಷೆಗಳ ಸಾರಭೂತವಾದ ಭಾಷೆಯೇ ಇರಲಿ, ಮರಾಠಿ ಮೊದಲಾದ ಭಾಷೆಗಳ ಉತ್ಪತ್ತಿಯು ಮಹಾರಾಷ್ಟ್ರೀ ಮಾಗಧೀ, ಶೌರಸೇನೀ, ಪೈಶಾಚೀ ಎಂಬ ಪ್ರಾಕೃತ ಭಾಷೆಗಳಲ್ಲಿ ಎಂಬುದರೊಳಗೆ ಏನೂ ಸಂದೇಹವಿಲ್ಲ. ಮಹಾರಾಷ್ಟ್ರೀಯಂತೂ ಮರಾಠಿಭಾಷೆಯ ಮೂಲಸ್ವರೂಪವು. ಬಸವ ಪುರಾಣಕ್ಕಿಂತ ಪ್ರಾಚೀನತರವಾದ ಭಾಸಕಾಲಿದಾಸರ ನಾಟಕ ಗಳಲ್ಲಿ ಪ್ರಾಕೃತ ಉಪಯೋಗಿಸಲ್ಪಟ್ಟಿದೆ. ಆ ಪ್ರಾಕೃತ ಭಾಷೆಗಳಲ್ಲಿಯೇ ಸಂಸ್ಕೃತ ಚತುಸ್ ಇದರ ರೂಪವು 'ಚಉ' ಎಂದು ಆಗುತ್ತದೆ- ಆಭಾಷೆಯಲ್ಲಿಯ ನಿಯಮದ ಪ್ರಕಾರವೇ 'ಷ' ದೊಳಗಿನ 'ಷ' ದ ಲೋಪವು ಮಾಡಲಿಕ್ಕೆ ಬರುತ್ತದೆ. **ಈ** ಪ್ರಕಾರ ಚತುರದಿಂದ "ಚಊಕ್" ಆದ ಬಳಿಕ "ಚಉಕ್" ಮತ್ತು ಇವುಗಳ ಉಚ್ಚಾರದ ಸಾಮ್ಯವು ಲಕ್ಷದಲ್ಲಿ ಬರುವಂತಿದೆ.

ಚೌಕ ಆದ್ದರಿಂದ ಚಾಕಶಬ್ದವು ಕನ್ನಡದಿಂದ ಮರಾಠಿಯಲ್ಲಿ ಬಂದಿತೆಂಬುವದು ನಿರಾಧಾರವಾಗಿ ಕಾಣುತ್ತದೆ.

ಬಾಗಲಕೋಟೆ } ತಮ್ಮ
೪-೧೦-೨೬ } ವಿನಾಯಕ ಗಣೇಶ ಪಟವರ್ಧನ

ಉತ್ತರ ಹಿಂದುಸ್ಥಾನದಲ್ಲಿಯ
ಪುಣ್ಯಕ್ಷೇತ್ರಗಳ ಪರಿಚಯ.
(ಲೇಖಾಂಕ ೮)

ಪ್ರಯಾಗದಿಂದ ಶ್ರೀ ಕ್ಷೇತ್ರ ಕಾಶಿಯು (ಮೀಟರಗೇಜಿನಿಂದ) ೭೪ ಮೈಲಿದೆ. ಕಾಶಿಯಲ್ಲಿ ನಾಲ್ಕು ಸ್ಟೇಶನ್ನಗಳಿವೆ. ಊರಲ್ಲಿ ಕಟ್ಟಡಗಳೂ, ಓಣಿಗಳೂ ಪ್ರಾಚೀನ ಪದ್ಧತಿಯವು. ಈಗಿನ ಅರ್ವಾಚೀನ ಶಾಸ್ತ್ರೀಯ ಪದ್ಧತಿಯಪ್ರಕಾರ ಇಕ್ಕಟ್ಟಿನ ಸಂದಿಗಳಲ್ಲಿ ಸಹ ನೆಲದಲ್ಲಿ 'ಡೆಸಿಜ'ದ ಕಪ್ಪಿಣದ ಕೊಳವಿಗಳನ್ನು ಹಾಕಿ, ಅವನ್ನು ಗಂಗೆಯಲ್ಲಿ ಬಿಟ್ಟಿರುವರು. ಇದರಿಂದ ಕೆಲವೆಡೆಯ ಘಾಟುಗಳಲ್ಲಿ ದುರ್ಗಂಧ ನಾಶವು ಯಾವಾಗಲೂ ಹೇಡಿಕೊಂಡಿರುತ್ತದೆ ಊರಲ್ಲಿಯ ಮುಖ್ಯ ಕೊಳವಿಗಳು (Main pipes) ಕಾಶಿಯ ಕಡೆಯಭಾಗವಾದ ಹನುಮಾನ್ ಘಾಟಿನ ಆಚೆಯ ತುದಿಗಿದ್ದು, ಅಲ್ಲಿಯೇ ಗಂಗಾಕ್ಕೆ ಆ ಹೊಲಸನ್ನು ಸೇರಿಸುವರು. ಗಂಗಾಪ್ರವಾಹವು ಅತ್ತಿಂದಲೇ ಹೊರಟು ಒಂದು ಊರಿನ ಉಳಿದ ಭಾಗಗಳ ಘಾಟುಗಳಲ್ಲಿ ಹಾಯುವದರಿಂದ, ಊರಲ್ಲಿಯ ಹೊಲಸೆಲ್ಲ ನೀರಿನಲ್ಲಿ ಬೆರೆತು, ಕಾಶಿಯ ನಗರವಾಸಿಗಳಿಗೆ ಬಹು ಹೊಲಸುನೀರನ್ನು ಪೂರೈಸುತ್ತದೆ. ಮುನಸೀಪಾಲ್ಟಿಯವರು ಇತ್ತಿತ್ತ ಈ ಸ್ಥಾನವನ್ನು ಬಿಡಿಸಿ, ಊರ ಕೆಳಗಿನ ಕಡೆಯಭಾಗದಲ್ಲಿ ಈ ಹೊಲಸನ್ನು ಬಿಡುವ ವಿಚಾರಮಾಡುತ್ತಲಿರುವರೆಂದು ಕೇಳಿದೆವು. ಮುನಸೀಪಾಲ್ಟಿಯ ಕಾರ್ಯಭಾರವದು! ಈ ಯೋಜನೆಯು ಎಂದು ಸಿದ್ಧಿಯಾಗುವದೋ ವಿಶ್ವೇಶ್ವರನೇ ಬಲ್ಲ.

ಕಾಶಿಯ ಪಟ್ಟಣವು ವಿಶಾಲವಾದದ್ದು. ಗಂಗೆಯ ಗುಂಟ ೩/೪ ಮೈಲುಗಳ ವರೆಗೆ ಪಟ್ಟಣವು ಹಬ್ಬಿದೆ. ಪಟ್ಟಣದ ಉದ್ದಳತೆಯೇ ಹೆಚ್ಚಾಗಿದೆ ಅನೇಕ ಘಾಟುಗಳಿವೆ. ಈ ಎಲ್ಲ ಘಾಟುಗಳಲ್ಲಿಯೂ ದಿನಾಲು ಅನೇಕ ಬಗೆಯಿಂದ ಗಂಗಾರಾಧನೆಯು ನಡೆದೇಯಿರುತ್ತದೆ. ದೀಪಹಚ್ಚಿದ ಮೇಲೆ ರಾತ್ರಿಸಮಯದಲ್ಲಿ ಪಟ್ಟಣವು ವಕ್ರನಾಗಿರುವದೆಂಬದು ಕಂಡು ಬರುತ್ತದೆ. ಆ ಸಮಯದಲ್ಲಿ ನೋಟವೂ ಬಹು ಚಂದವಾಗಿರುತ್ತದೆ. ಸಾಯಂಕಾಲದಲ್ಲಿ ಘಾಟಿನಲ್ಲಿ ಇತ್ತ ಗಂಗಾರಾಧನೆಯು ವೈಭವದಿಂದ ನಡೆದಿರುತ್ತದೆ. ಅತ್ತ ವಿಲಾಸಿಗಳು ನಾವಿನಲ್ಲಿ ಕುಳಿತು ಈ ಆರಾಧನೆಯ ಸೌದರ್ಯವನ್ನು ನೋಡುತ್ತ ಗಂಗೆಯಲ್ಲಿ ನೌಕಾರೂಢರಾಗಿ ವಿಹಾರಮಾಡುತ್ತ ದಂಡೆಯಗುಂಟ ಹೋಗುವರು. ಅನೇಕರು ನೌಕೆಯಲ್ಲಿ ಗಂಗಾರಾಧನೆಯ ಸಾಮಗ್ರಿಯೊಂದಿಗೆ ಕುಳಿತು, ಅಲ್ಲಿಯೇ ಪೂಜೆಮಾಡುವರು. ಶ್ರೀಮಂತರ ಕೆಲವು ನೌಕೆಗಳು ನೋಡತಕ್ಕಂಥವಿರುತ್ತವೆ. ಪ್ರಯಾಗದಂತೆ ಕಾಶಿಯಲ್ಲಿ ಗಂಗಾಪ್ರವಾಹವು ತೀವ್ರಗಾಮಿನಿಯಾಗಿಲ್ಲವಾದ್ದರಿಂದಲೂ, ನೀರು ಬೇಸಿಗೆಯಲ್ಲಿ ಸಹ ಆಳವಾಗಿರುವದರಿಂದಲೂ, ಗಂಗಾ ಯಮುನೆಯರ ಸಂಗಮದಿಂದ ನೀಲವರ್ಣವಾಗಿರುವದರಿಂದಲೂ ಈಸುವದಕ್ಕೂ ನೌಕಾವಿಹಾರಕ್ಕೂ ಬಹು ಅನುಕೂಲವಿದೆ. ಗಂಗೆಯ ಪಾತ್ರವು ಕಾಶಿಯಲ್ಲಿ ವಿಶಾಲವಾಗಿದ್ದರಿಂದ ರಮಣೀಯತೆಯು ಇಲ್ಲಿ ಹೆಚ್ಚಾಗಿದೆ. ಕಾಶಿಗೆ ನಮ್ಮ ಪ್ರಾಚೀನ ಋಷಿಗಳು ಇಷ್ಟೊಂದು ಮಹತ್ವವನ್ನು ಕೊಟ್ಟದ್ದು ಯಥಾರ್ಥವಾಗಿದೆಂಬದೂ ಕಂಡುಬರುತ್ತದೆ. ಕಾಶೀಪಟ್ಟಣದಲ್ಲಿ ಹಿಂದೂ ರಾಜರು ಬಹುತರವಾಗಿ ತಮ್ಮ ತಮ್ಮ ನಿವಾಸಗಳನ್ನು ಕಟ್ಟಿಸಿಯೇ ಇದ್ದಾರೆ. ಭರತಖಂಡದಲ್ಲಿಯ ಎಲ್ಲ ಭಾಗದ ಶ್ರೀಮಂತರು ಸಹ ತಮ್ಮ ತಮ್ಮ 'ವಾಡೆ'ಗಳನ್ನು ನಿರ್ಮಿಸಿರುವರು. ಆದರೆ ಈ ರಾಜಭುವನಗಳಲ್ಲಿಯೂ ವಾಡೇಗಳಲ್ಲಿಯೂ ಯಾವಾಗಲೂ ಜನವಸತಿಯು ಇರುವದಿಲ್ಲ. ವಸತಿಯಿರದೇ ಇದ್ದಾಗ್ಗೆ ಮನೆಗಳಿಗೆಲ್ಲ ಬೀಗಗಳೇ ಆ ಇಕ್ಕಟ್ಟಾದ ಸಂದಿಗಳಲ್ಲಿ ತಿರುಗುವಾಗ್ಗೆ ಬೀಗದ ಮನೆಗಳು ಹೆಚ್ಚಾಗಿ ಕಣ್ಣಿಗೆ ಬೀಳುವವು. ಒಳಗಿನ ನಳಗಳಲ್ಲಿಯ ನೀರು ಹಾಗೇ ಸುರಿಯುತ್ತಿರುವದೆಂದೂ, ಇದರಿಂದ ಮುನಸೀಪಾಲ್ಟಿಯ ನೀರಿನ ನೆಚ್ಚಿದ ಪ್ರಮಾಣವು ವಿಪರೀತವಾಗಿ ಬೆಳೆದಿರುವದೆಂದೂ ಕೇಳಿದೆವು

ಪಟ್ಟಣದ ಹೊಸಭಾಗಗಳಲ್ಲಿ ಬೀದಿಗಳು ವಿಶಾಲವಾಗಿವೆ. ಇಲ್ಲಿ ಲಕ್ಷ್ಕರಿದೆ ಪೇಟೆಯೂ ದೊಡ್ಡದು. ವ್ಯಾಪಾರವಂತೂ ಹೇರಳವಾಗಿದೆ. ದಿನಾಲು ಅಸಂಖ್ಯರಾದ ಯಾತ್ರಿಕರು ಬರುವರು. ಇದುದರಿಂದ ವ್ಯಾಪಾರಸ್ಥರಿಗೆ ಗಿರಾಕಿಗಳು ಹೆಚ್ಚು. ಲಾಭವೂ ಹೆಚ್ಚು.

ಸ್ವಚ್ಛತೆಯ ದೃಷ್ಟಿಯಿಂದ ಪಟ್ಟಣದ ಪಿತಾಮಹರನ್ನು ಷ್ಟು ಹಳಿದರೂ ಕಡಿಮೆಯೇ. ಘಾಟಿನಮೇಲೆ ಯಾವಾಗಲೂ ಹೊಲಸು. ಊರಲ್ಲಿಯ ಸಂದಿಗಳಲ್ಲಿ ಹೊಲಸು. ದೇವಸ್ಥಾನಗಳ ದಾರಿಯಲ್ಲಿ ಹೊಲಸು. ಈ ಹೊಲಸಿನಿಂದ ಬಹಳ ಬೇಸರ ಬರುವದು. ದೊಡ್ಡ ಬೀದಿಗಳಲ್ಲಿ ಹೊಲಸಿನ ಪ್ರತಾಪ ಕಡಿಮೆಯಿದೆ.

ಗಂಗೆಯ ಆಚೆಯ ದಂಡೆಯಲ್ಲಿ ಕಾಶೀರಾಜನು ಇರುತ್ತಾನೆ. ಅದಕ್ಕೆ* ರಾಮನಗರವೆಂಬ ಹೆಸರು. ಇದಕ್ಕೆ ವ್ಯಾಸಕಾಶಿಯೆಂಬ ಪ್ರಾಚೀನ ಹೆಸರಿದೆ ವ್ಯಾಸಮಹರ್ಷಿಗಳ ದೇವಾಲಯವಿದೆ. ಕಾಶೀಕ್ಷೇತ್ರಕ್ಕೆ ವ್ಯಾಸಋಷಿಗಳು ಬಂದಾಗ್ಗೆ ಇದೇ ಸ್ಥಾನದಲ್ಲಿ ಇದ್ದುದರಿಂದ ಅದಕ್ಕೆ ವ್ಯಾಸಕಾಶಿಯೆಂಬ ಹೆಸರು ದೇವಾಲಯದ ಸುತ್ತಲಿನ ಪ್ರದೇಶದಲ್ಲಿ ಕಾಶಿ ರಾಜನ ಭವ್ಯವಾದ ಅರಮನೆಯಿದೆ. ಅರಮನೆಯನ್ನು ನೋಡಲಿಕ್ಕೆ ಯಾತ್ರಿಕರಿಗೆ ಅರಸನ ಅಪ್ಪಣೆಯು ಯಾವಾಗಲೂ ದೊರೆಯುವದು. ಆದರೆ ನೌಕರಜನರ ಸಮಾಚಾರವನ್ನು ಕೊಂಚ ತೆಗೆದುಕೊಂಡರೆ ಅರಮನೆಯ ಎಲ್ಲ ಭಾಗಗಳನ್ನು ಚನ್ನಾಗಿ ನೋಡಲಿಕ್ಕೆ ಅವಕಾಶವಾಗುವದು.

ಕಾಶಿಯಲ್ಲಿ ಅನೇಕ ದೇವಾಲಯಗಳಿವೆ. ಇವೆಲ್ಲ ದೂರದೂರದಲ್ಲಿರುವದರಿಂದ ಇವುಗಳ ದರ್ಶನಕ್ಕಾಗಿಯೇ ೨।೩ ದಿನ ಬೇಕಾಗುವದು. ದುರ್ಗಾದೇವಿ, ಕಪರ್ದೀಬಾಯಿ, ಸಂಕಟವಿಮೋಚನ ಮಾರುತಿ, ರಾಘವೇಂದ್ರಸ್ವಾಮಿಗಳ ವೃಂದಾವನ, ವೇದವ್ಯಾಸ, ಪಿಶಾಚ ವಿಮೋಚನ, ಶನೇಶ್ವರ, ಅನ್ನಪೂರ್ಣಾದೇವಿ, ಧುಂಡಿರಾಜ, ಅಕ್ಷಯ್ಯವಟ, ಸಂಕಟಕಾಶಿ, ಆದಿಗಂಗಾ ಕಾಳಭೈರವ, ದಂಡಪಾಣಿ, ಮೋಕ್ಷೇಶ, ಬಿಂದುಮಾಧವ, ವಿಶ್ವೇಶ್ವರ ದೇವಾಲಯಗಳನ್ನು ಎಲ್ಲರೂ ಸಂದರ್ಶಿಸಬೇಕು. ಅನೇಕ ತೀರ್ಥಗಳಿವೆ. ಅವುಗಳಲ್ಲಿ ಮಣಿಕರ್ಣಿಕಾ ತೀರ್ಥವು ಅತ್ಯಂತ ಪಾವನವಾದುದು. ಇಲ್ಲಿ ಯಾತ್ರಿಕರೆಲ್ಲರೂ ಸ್ನಾನವನ್ನು ಮೊದಲು ತೀರಿಸುವರು.

ನಿನ್ನ ನಗೆಯನ್ನು ಕಂಡು ಅಸೂಯೆಗೊಳ್ಳುವೆ.

ಎಷ್ಟೋ ಎಷ್ಟೋ ದಿನಗಳ ಬಳಿಕ ಮನದ ಬಯಕೆಯು ಪೂರ್ಣವಾಗುವ ವೇಳೆಯು ಬಂದಿತು. ಅಂತೆಯೇ, ಬಿ ಬಿ ಸಿ. ಐ. ಉಗಿಬಂಡಿಯು ನನ್ನನ್ನು ಅಹಮ್ಮದಾಬಾದ ನಿಲ್ದಾಣದ ಜಗಲಿಯ ಬಳಿಯಲ್ಲಿ ತಂದುಬಿಟ್ಟಿತು. ಆಗ ಮಧ್ಯಾಹ್ನ ಒಂದುತಾಸಿನ ಸುಮಾರಿರಬಹುದು. ಜನರ ಗದ್ದಲ ಬಹಳ. ಆದರಿಂದ ನುಗ್ಗಿ ಹೊರಕ್ಕೆ ಬಂದೆ. ಹೊರಗೆ ಅನೇಕ ಅಗ್ಗದ ಮೋಟಾರುಗಳು ಕಾದಿದ್ದುವು. ಒಂದು ಬಂಡಿಯನ್ನೇರಿದೆ. 'ಬಂದಾಣೆಯ ಸೇವೆಯನ್ನು, ಅದು ಶಹರಿನ ಮೂಲಕ ಹಾದು' ಬದ್ರದಕ್ಕೆ ಒಯ್ಯುವದರಲ್ಲಿ ಮುಗಿಯಿಸಿತು. ಅಲ್ಲಿಂದ ಆಶ್ರಮಕ್ಕೆ ೩ ಮೈಲು ದೂರವಿದೆಯಂತೆ.

ತಿಳಿಯಿತು. ದೈವಗತಿಯಿಂದ, ಒಳಿಯಲ್ಲಿ, ಒಡೋದಯ ಕಲಾಭವನದ ಕೆಲವು ತರುಣರು ಅಲ್ಲಿಗೇ ಹೋಗಲುದ್ಯುಕ್ತರಾಗಿದ್ದರು. ಅವರ ಜತೆಯಲ್ಲಿ ನಾನೂ, ಸೇರಿ ಹೋದೆ. ಸಾಧಾರಣ ಮೂರು ತಾಸಿಗೆ ಸರಿಯಾಗಿ ಊರಹೊರಗಿನ ಒಂದು ಬಯಲು ಪ್ರದೇಶವನ್ನು ದಾಟಿ ಆಶ್ರಮದ, ಒಳಿಯನ್ನು ಸೇರಿದೆವು ನನ್ನ ಜತೆಗಾರರು ಒಮ್ಮೆಗೆ ಮಹಾತ್ಮಾಜೀಯವರ ಸಂದರ್ಶನಕ್ಕಾಗಿ ಹೋದರು, ಕಾರಣ ಅವರು ಅಂದೇ ಮರಳಿ ಹಿಂದಿರಿಗುವವರು ನಾನು ಹಾಗೆ ಮಾಡದೆ, ಶ್ರೀ॥ ಮಗನಲಾಲ ಗಾಂಧಿಯವರ ಒಳಿಗೆ ಹೋಗಿ ನನಗೆ ಅಲ್ಲಿ ಕೆಲವು ದಿವಸಗಳತನಕ ನಿಲ್ಲಲು ಅಪ್ಪಣೆ ಕೇಳಿದೆ. "ಎರಡುದಿವಸಗಳತನಕ" ಎಂದು ಉತ್ತರ ಬಂದಿತು. ಹೆಚ್ಚಿನ ವಿಚಾರವನ್ನು ಆ ಒಳಿಕ ನೋಡೋಣವೆಂದು ಅಲ್ಲಿಗೇ ತೃಪ್ತನಾಗಿ, ನಾನು ಆ ಮೂರ್ತಿಯನ್ನು ಕಾಣಹೋದೆ. ಆಗ ಅವರು ರಾಟಿಯನ್ನು ತಿರುವುತ್ತಿದ್ದರು. ಆಗಾಗ ಒಳಿಯಲ್ಲಿದ್ದ ಒಬ್ಬಿಬ್ಬರು ಮಿತ್ರರೊಡನೆ ಮಾತನಾಡುತ್ತಿದ್ದರು. ಮುಖದಿಂದ ನಗೆಯು ಎಡೆಬಿಡದೆ ಹೊರಸೂಸುತ್ತಿದ್ದಿತು. ೪॥ ತಾಸಾದೊಡನೆ ರಾಟಿಯು ನಿಂತಿತು. ಜತೆಯಲ್ಲಿ ನೂಲುಹೂರಡುವದೂ ಸ್ವಭಾವಿಕವಾಗಿ ನಿಂತಿತು. ಆದರೆ- ಆ ನಗೆಯು- ಅರ್ಥಾತ್ ಆನಂದವು-ಅದು ನಿಲ್ಲಲಿಲ್ಲ

ಸಾಬರ್ಮತಿ ನದಿದಂಡೆಯಲ್ಲಿರುವ ಈ ಆಶ್ರಮವು ನಮ್ಮ ದೇಶದ ಪ್ರಾಚೀನಕಾಲದ ಆಶ್ರಮಗಳ ಜ್ಞಾಪಕವನ್ನು ನನ್ನ ಮನಸ್ಸಿನಲ್ಲಿ ಉಂಟುಮಾಡಿತು. ಆಶ್ರಮದಲ್ಲಿ ಸ್ತ್ರೀ ಪುರುಷರೆಂದು ೨೦೦ ಜನರಿರಬಹುದು. ಹೆಚ್ಚಿನವರೆಲ್ಲರು ಬೇರೆ ಬೇರೆಯಾಗಿ ವಾಸಿಸುತ್ತಿದ್ದರು. ಆಶ್ರಮದ ಕೈ ಕೆಳಗೆ ೧೦೦ ಎಕರೆಯಷ್ಟು ವಿಸ್ತಾರವಾದ ಜಮೀನು ಇದೆ. ಅದರಲ್ಲಿ ಎಪ್ಪತ್ತು ಎಕರೆಯಷ್ಟು ಭೂಮಿಯಲ್ಲಿ ಆಶ್ರಮವಾಸಿಗಳು ಹತ್ತಿ ವ್ಯವಸಾಯವನ್ನು ಮಾಡುವರು. ವ್ಯವಸಾಯದ ಎಲ್ಲಾ ಅನುಭವಗಳನ್ನು ಕೊಡುವ ವ್ಯವಸ್ಥೆಯು ಅಲ್ಲಿರುವುದಲ್ಲದೆ ಹತ್ತಿಯು ಗಿಡದಿಂದ ತಪ್ಪಿ ನೂಲಾಗಿ, ಒಟ್ಟೆಯಾಗಿ, ನಮ್ಮ ಅಂಗರಕ್ಷಣೆಗೆ ನ್ನವಾಗುವವರೆಗಿನ ಎಲ್ಲಾ ಉದ್ಯೋಗಗಳ ಭವನೆಯನ್ನು ಅಲ್ಲಿ ಕಾಣಬಹುದು.

ಅಲ್ಲಿನ ದಿನಚರಿಕಾರ್ಯಕ್ರಮವನ್ನು ವಾಚಕರ ಬಗ್ಗೆ ಮುಂದಿರಿಸುವೆವು ಆದಿನ ರಾತ್ರಿಯೆಲ್ಲಾ ಪ್ರಯಾಣದ ಆಯಾಸದಿಂದ. ದೀರ್ಘನಿದ್ರೆ ಹೋಗಿರಲು, ಒಂದು ಘಂಟಾನಾದವು ನನ್ನನ್ನು ಎಚ್ಚರಿಸಿತು. ಆಗ ನಾಲ್ಕುತಾಸಿರಬಹುದು. ಆಶ್ರಮವಾಸಿಗಳೆಲ್ಲರೂ ಎದ್ದು ಮೋರೆ ತೊಳೆದುಕೊಂಡು ಗಾಂಧೀಜೀಯವರ ನಿವಾಸದ ಮನೆಯ ಒಂದು ಜಗುಲಿಯಲ್ಲಿ ಸೇರಿದರು. ಗೀತಾ, ಉಪನಿಷತ್ತು ಮೊದಲಾದವುಗಳಿಂದ ಆರಿಸಿತೆಗೆದ ಪ್ರಾರ್ಥನಾ ಶ್ಲೋಕಗಳಿಂದಲೂ, ಭಜನೆಗಳಿಂದಲೂ ಪ್ರಾರ್ಥನಾಕಾರ್ಯಕ್ರಮವು ಆರಂಭವಾಯಿತು. ಅದು ಮುಗಿದೊಡನೆಯೇ, ಗಾಂಧಿಜೀಯವರು— ಭಗವದ್ಗೀತೆಯನ್ನು ತೆರೆದು ಓದಿ ವಿವರಿಸತೊಡಗಿದರು. ಶಿಶುಗಳಿಗೊಂದಲ-ಸಾಮ್ರಾಜ್ಯದವರಿಗೆ, ಗಾಂಧಿಯವರನುಡಿಯು ಗಟ್ಟಿಯಾಗಿ ಕೇಳಿಸಲಾರದುದರಿಂದ ಅವರ ಬಳಿಯಲ್ಲಿದ್ದವರೊಡನೆ ಆತ್ಮಿಕ ಭಾಷಣವನ್ನು ಮಾಡುತ್ತಿರುವಂತೆ ಕಾಣಬಹುದು. ನಿಜವಾಗಿಯೂ ಅದು ಆತ್ಮಿಕ ಭಾಷಣವೇ! ಹೀಗೊಂದು ತಾಸು ಕಳೆಯಲು ಅವರು ತಮ್ಮ ತಮ್ಮ ಕೆಲಸಗಳಿಗಾಗಿ ತೆರಳಿದರು- ಪ್ರಾತಃಕಾಲ ೬ಕ್ಕೆ ಸರಿಯಾಗಿ ತಿರುಗಿ ಘಂಟೆ ಬಾರಿಸುವರು. ಎಲ್ಲರೂ ಉದ್ಯೋಗಕ್ಕುದ್ಯುಕ್ತರಾಗುವರು. ಕೆಲವರು ನೆಲವನ್ನಗಿಯುವರು, ಕೆಲವರು 'ಭಂಗಿ' ವೃತ್ತಿಮಾಡುವರು, ಕೆಲವರು ನೂಲುವರು, ಕೆಲವರು ನೇಯುವರು- ಅಂತು ನಿರುದ್ಯೋಗಿಗಳನ್ನು ನೀವು ಅಲ್ಲಿ ಕಾಣಲಾರಿರಿ. ೧೦॥ ತನಕ ಉದ್ಯೋಗವುನಡೆದು- ಬಳಿಕ ಎಲ್ಲರು ತಮ್ಮ ತಮ್ಮ ಗೃಹಕೃತ್ಯಕ್ಕಾಗಿ ತೆರಳುವರು. ಅಂದರೆ ೧೨ ತಾಸಿನೊಳಗಾಗಿ ಎಲ್ಲರೂ ತಮ್ಮ ಭೋಜನ ಕಾರ್ಯಕ್ರಮವನ್ನು ಮುಗಿಸಿ ತಿರುಗಿ ಉದ್ಯೋಗಪರವಶರಾಗುವರು. ೪॥ ತಾಸಾದೊಡನೆಯೇ ಅದನ್ನು ಬಿಟ್ಟು ಭೋಜನಕ್ಕೆ ತೆರಳುವರು. ಬಳಿಕ ಸಂಜೆ ೬ಕ್ಕೆ ಸರಿಯಾಗಿ ಪಾರ್ಥನೆಗಾಗಿ ಸೇರುವರು- ಆಗ ಇನ್ನೂ ಹೆಚ್ಚು ಮೋರೆಗಳನ್ನು ಕಾಣುವಿರಿ. ಕಾರಣ ಉಷಃಕಾಲದಲ್ಲಿ ನಿದ್ರೆಯಿಂದ ಏಳಲಾರದ ಚಿಕ್ಕಬಾಲಕರೂ ಸಹ ಆಗಬರುವರು. ಒಂದೇಮನೆಯವರಲ್ಲಿ ಕಾಣ, ಐಕ್ಯ, ಪ್ರೇಮ ಇವುಗಳ ಸ್ವರೂಪವನ್ನು ನೀವು ಅಲ್ಲಿ ಕಾಣುವಿರಿ. ತಿರುಗಿ ಭಜನೆಯು ಆರಂಭವಾಗಿ ಸ್ವಲ್ಪಹೊತ್ತಿನಲ್ಲಿ ಮುಗಿಯಲು, ಒಬ್ಬೊಬ್ಬರ ಹೆಸರನ್ನೆತ್ತಿ ಕರೆಯಲು ತೊಡಗುವರು. ನಾನು 'ಹಾಜರಿ' ಯೆಂದು ತಿಳಿದಿದ್ದೆ. ಅಲ್ಲ- ಕಾರಣ ಪ್ರತ್ಯುತ್ತರವು. "೧೨೦ವಾರು, ೨೨೦ವಾರು, ೧೦೦೦ವಾರು" (ನೂಲು) ಎಂದು ಅತಿ ಚಿಕ್ಕಮಕ್ಕಳಿಂದಲೂ ಸಹ ಬರುತ್ತಿತ್ತು. ಅವರವರು ಆಯಾಯದಿನ ವಿರಾಮದಲ್ಲಿ ಮಾಡಿದ ನೂಲಿನ ಆಳತೆ! ಬಳಿಕ ಗಾಂಧಿಜೆಯವರು "ಆಶ್ರಮಸಮಾಚಾರ" ವೆಂಬ ಅಲ್ಲಿನ ವಾರ್ತಾ ತಿಳಿಸುವ ದಿನಚರಿ ಕೈಬರಹದ ಪತ್ರವನ್ನೋದುವರು- ಪ್ರತಿದಿನವೂ 'ಭಂಗಿ' ಕೆಲಸಮಾಡಿದ ಬಂಧುಗಳಿಗೆ ಧನ್ಯವಾದಗಳ ಹೊರೆಯೇ ಸಿಗುತ್ತಿತ್ತು! ಹೊಲಸನ್ನು ತೆಗೆಯುವವರೆಲ್ಲಾ ಹೊಲೆಯರೆಂದಾದರೆ, ಇವರಂತಹ ಹೊಲೆಯರನ್ನು ನಾನು ಕಾಣೆ! ಇದಾದ ಬಳಿಕ ಗಾಂಧಿಯವರು ತುಲಸೀದಾಸ ರಾಮಾಯಣವನ್ನೋದುವರು.' ಕ್ಲಿಷ್ಟ ಪದಗಳ ಅರ್ಥಗಳನ್ನು ನೆರೆದಿದ್ದ ಬಾಲಕರಲ್ಲಿ ಕೇಳುವರು. ಒಡನೇ ಅವರು ಉತ್ತರವೀಯುವರು! ಎಂಟು ತಾಸಾದೊಡನೆಯೇ ಎಲ್ಲರೂ ತಮ್ಮ ತಮ್ಮ ನಿವಾಸವನ್ನು ಸೇರುವರು- ೯ಕ್ಕೆ ಹಾಸಿಗೆಯನ್ನು!

ಈ ಸತ್ಯಾಗ್ರಹಾಶ್ರಮವು, ನಿಜವಾದ "ಶಾಂತಿನಿಕೇತನ" ವಾಗಿದೆ- ಸತ್ಯ ಅಹಿಂಸೆಗಳಿಂದಲ್ಲದೆ ಇನ್ನೆಲ್ಲಿಂದ ಶಾಂತಿಯು ದೊರೆಯುವದು? ಆಶ್ರಮದಲ್ಲಿ ಭರತಖಂಡದ ಎಲ್ಲಾ ನಾಡಿನಜನರೂ ಇರುವರು. ಹೆಚ್ಚೇನು? ಚೀನಾ, ಫ್ರಾನ್ಸಿನವರೂ ಇರುವರು- ಆಷ್ಟೊಂದು ವೈವಿಧ್ಯರೂಪುಗಳಲ್ಲಿ ಎಲ್ಲಿ ಕಂಡರೂ ಭ್ರಾತೃಭಗಿನಿ ಭಾವವನ್ನೇ ಕಾಣುವಿರಿ.

ಆಶ್ರಮದಲ್ಲಿ ನನ್ನ ಮನಸ್ಸನ್ನು ಆಕರ್ಷಿಸಿದ ಅತಿ ಹೆಚ್ಚಿನ ಸಂಗತಿಯೆಂದರೆ- 'ನಗೆ'- ಆ ಶಾಂತಮೂರ್ತಿಯ, ಮಂದಹಾಸ, ಸಂಸಾರದ ಕಡ್ಡಿಯು ಭಾರವನ್ನು ಹೊತ್ತನಮಗೆ ನಗುವಿನ ಅರ್ಥವೇ ತಿಳಿಯದು. ಆದರೆ ಮಹಾತ್ಮಾ, ನೀನು ಜನಾಂಗದ ಭಾರವನ್ನೇ ಹೊತ್ತಿರುವೆ. ಇಲ್ಲದ ರಗಳೆಯನ್ನು ತಲೆಗೆ ಸುತ್ತಿಕೊಂಡಿರುವೆ! ಆ ಗೊಂದಲದಲ್ಲಿ ನೀನು ಹೇಗಿರುವೆಯೆಂದು ನೋಡಲು ನನ್ನ ಕುತೂಹಲವಿತ್ತು ಇಲ್ಲ-ನೀನು ನಾನೂಹಿಸಿದಂತಿಲ್ಲ. ನೀನು ನಗುತ್ತಿರುವೆ. ನಿನ್ನ ಮುಂದಿರುವ ಪ್ರಸಂಗಗಳು ನಿನ್ನ ನಗೆಯನ್ನು ಕಂಡು ಅಂಜುತ್ತಿವೆ—ಅಹುದು. ಅಹೋರಾತ್ರಿ ನೀನು ನಗುವೆ! ಹರ್ಷದಿಂದ ಸರಸವಾಡುವಾಗ-ಆಗಲೂ ನಗೆ! ವಿಶೇಷ ಕಾರುಭಾರದ ಕಾಗದಗಳನ್ನು ಬರೆಯುವಾಗಲೂ ನಗೆ! ನೂಲುವಾಗಲೂ ನಗೆ. ಸಂಜೆ ನಿನ್ನಾಶ್ರಮದಿಂದ, ಗಡಿಯಾರವನ್ನು ಕತ್ತಿನಲ್ಲಿ ತೂಗಿಸಿಕೊಂಡು, ಒಂದು ಮೈಲದೂರದಲ್ಲಿರುವ ಆ ಇನ್ನೊಂದಾಶ್ರಮ (ಸಾಬರ್ಮತಿ ಜೈಲು) ದ ಒಳಿ ವಿಹಾರಕ್ಕಾಗಿ ಹೋಗಿ ಬರುವಾಗಲೂ ನಗೆ! ನಿಂತರೂ ನಗು! ಕುಳಿತರೂ ನಗು! **ನಿಜವಾಗಿಯೂ ನಿನ್ನ ನಗೆಯನ್ನು ಕಂಡು ನನಗೆ ಅಸೂಯೆಯಾಗುತ್ತಿದೆ.** ನಮ್ಮೆಲ್ಲರ ನಗುವನ್ನು ನೀನೊಬ್ಬನೇ ಕದ್ದು ನಿನ್ನಲ್ಲಿ ಬಚ್ಚಿಟ್ಟಿರುವೆಯೇನು?

ವಿನಂತಿ.

ಪ್ರತಿವರ್ಷದಂತೆ ಶ್ರೀಮನ್ಮಧ್ವಾಚಾರ್ಯರವರ ಜಯಂತಿಯು ತ್ಸವಹೋತ್ಸವವು ಇದೇ ಅಕ್ಷಯ ಸಂವತ್ಸರ ವಿಜಯಾ ದಶಮೀ ಪ್ರಾರಂಭಮಾಡಿ ತ್ರಯೋದಶೀ ವರೆಗೂ ನಡೆಯುತ್ತಿದ್ದದೆ. ವೇದ ಘೋಷ, ಪುರಾಣ, ಪ್ರವಚನ, ಉಪನ್ಯಾಸ ಕೀರ್ತನ, ಸಂಗೀತಾದಿಗಳಿಂದಲೂ, ಬಾಲವಿದ್ಯಾರ್ಥಿಗಳನ್ನು ಸಂಸ್ಕೃತಾದಿಗಳಲ್ಲಿ ಪರೀಕ್ಷಿಸಿ ಪಾರಿತೋಷಿಕ ಪ್ರದಾನದಿಂದಲೂ ಜರಗತಕ್ಕದ್ದದೆ. ಆದ್ದರಿಂದ ಧರ್ಮಾಭಿಮಾನಿಗಳಾದ ಸದ್ವೈಷ್ಣವ ಬಾಂಧವರು ಸರ್ವರೀತಿಯಿಂದಲೂ ಸಹಾಯಮಾಡಬೇಕಾಗಿ ಬಿನ್ನಹ.

ಕಾರ್ಯದರ್ಶಿ

ಸುಬ್ಬಣಾಚಾರ್ಯ ನಾಗಸಂಪಿಗಿ

ಬಿಂದಾಚಾರ್ಯ ಜಮದಗ್ನಿ

ವರ್ತಮಾನ ಸಾರ

ಮಳೆಯು ಅವಶ್ಯವಾಗಿ ಬೇಕಾಗಿದೆ

ದಕ್ಷಿಣ ಭಾಗದ ಇಲಾಖೆಸಾಹೇಬರಾದ ಶ್ರೀ ಭಸಸಾಲೆಯು ವರ ಮುಕ್ಕಾಮು ಇಲ್ಲಿಗೆ ಬಂದಿದೆ. ೧೭ ನೇ ತಾ|| ಕಿಗೆ ಇಲ್ಲಿಂದ ನಾಲವತ್ತವಾಡಕ್ಕೆ ಹೋಗಿ, ೧೮ ಕ್ಕ ವಿಜಾಪೂರಕ್ಕೆ ತಲ್ಪುವರು

ಇಲ್ಲಿ ಕೂಡಿದ ವೀರಶೈವ ಸಜ್ಜನ ಸಮಾಜದಲ್ಲಿ ಕೆಳಗೆ ಕಾಣಿಸಿದಂತೆ ಠರಾವುಗಳಾಗಿವೆ.— ೧ ಹೆಣ್ಣು ಮಕ್ಕಳ ಲಗ್ನವನ್ನು ಹತ್ತು ವರ್ಷಗಳ ಪೂರ್ವದಲ್ಲಿ ಮಾಡಬಾರದು. ೨ ನಮ್ಮ ಸಮಾಜದಲ್ಲಿರುವ ಕನ್ಯೆಗಳನ್ನು ಲಗ್ನಮಾಡಿಕೊಡುವಾಗ್ಗೆ ಭೂಮಿ, ಬಂಗಾರ ಅಥವಾ ದ್ರವ್ಯ ಮೊದಲಾದ ಯಾವ ರೀತಿಯಿಂದಲೂ ತೆಗೆದುಕೊಳ್ಳಬಾರದು. ೩ ಬಾಲ್ಯವಿವಾಹ ಮತ್ತು ತೆರವು ಇವುಗಳ ನಿಷೇಧವನ್ನು ಕುರಿತು ಕಾರ್ಯಕಾರೀ ಮಂಡಲದವರು ಒಂದ ಪುಸ್ತಕವನ್ನು ಅಚ್ಚು ಮಾಡಿಸಿ ಇದೇ ಡಿಶಂಬರ ತಿಂಗಳೊಳಗಾಗಿ ಪ್ರಸಿದ್ಧ ಮಾಡತಕ್ಕದ್ದು ೪ 'ಧರ್ಮವೀರ' ಶಂಕರಣ್ಣನವರು ಸಜ್ಜನಶೆಟ್ರು ಯಾತಗಿರಿ, ಇವರು ಸಂಸ್ಕೃತ ಕಾಲೇಜ ಸ್ಥಾಪಿಸುವದಕ್ಕಾಗಿ ಒಂದು ಲಕ್ಷ ರೂಪಾಯಿಗಳನ್ನು ಕೊಟ್ಟಿದ್ದಕ್ಕಾಗಿ ಈ ಸಭೆಯು ಆ ಮಹನೀಯರನ್ನು ಅಭಿನಂದಿಸುತ್ತದೆ

<u>ಮುಂಬೈ ಕರ್ನಾಟಕ</u>

ಕುಮಟೆಯು ೧೨ ವರ್ಷದ ಕುಮಾರೀ ಜಾನಕೀದೇವಿಯವರು ನವದಲ್ಲಿ ಎರಡು ಕೀರ್ತನಗಳನ್ನು ಮಾಡಿದಳು. ಈ ಕೋಮಲ ಬಾಲೆಯ ಸುಶ್ರಾವ್ಯ ಗಾಯನ, ಶುದ್ಧ ಭಾಷಾಶೈಲಿ, ತಾಳಗಳಿಂದ ಯುಕ್ತವಾದ ಕೀರ್ತನೆಯು ಅತ್ಯಂತ ಉತ್ಸಾಹಜನಕವಾಗಿದೆ. ಕರ್ನಾಟಕ ಭೂಷಣವಾದ ಈ ರತ್ನವು ಬಹು ದಿನ ಬಾಳಲಿ!

ಮುಸಲ್ಮಾನರ ಪಕ್ಷದಿಂದ ಮುಂಬೈ ಕಾಯದೇ ಮಂಡಲಕ್ಕೆ ಶ್ರೀ. ದಿವಾಣಸಾಹೇಬರನ್ನು ಆರಿಸಬೇಕೆಂದು ಒಬ್ಬ ಜನರೊಂದು ವಿನಂತಿ ಪತ್ರಿಕೆಯು ನಮ್ಮೆಡೆಗೆ ಬಂದಿದೆ. ಕರ್ನಾಟಕ ಏಕೀಕರಣಕ್ಕಾಗಿ ಈ ಪ್ರಕಟನೆಯಲ್ಲಿ ಏನೂ ಉಲ್ಲೇಖವಿರದಿದ್ದರೂ, ದಿವಾಣಸಾಹೇಬರು ಅನುಕೂಲಕೂಡದವರಿರುವರೆಂದು ಅವರೇ ಹಮಗೆ ತಿಳಿಸುತ್ತಾರೆ.

(ಬೆಳಗಾಂವಿಯ ವರ್ತಮಾನ)

ತಾ॥ ೨೮—೯—೨೬ ನೇ ದಿವಸ ಇತಿಹಾಸ ಸಂಶೋಧನ ಕಾರ್ಯಧುರೀಣರಾದ ಶ್ರೀ ನಾರಾಯಣ ಶ್ರೀನಿವಾಸ ರಾಜಪುರೋಹಿತ ಇವರು ಬಿ. ಗೆಣ್ಣು ವಕೀಲರ ಅಧ್ಯಕ್ಷತೆಯು ಕೆಳಗೆ ಕನ್ನಡ ಶಾಲೆಯಲ್ಲಿ ಹಾಗೂ ತಾರೀಖು ೨೯—೯—೨೬ ನೇ ದಿವಸ ವಿ॥ ಜೋಶಿಯವರ ಅಧ್ಯಕ್ಷತೆಯ ಕೆಳಗೆ ಸೋಶಲ ಕ್ಲಬ್ಬಿನಲ್ಲಿ "ಕರ್ನಾಟಕ ಇತಿಹಾಸ ಸಂಶೋಧನ" ಈ ವಿಷಯದ ಮೇಲೆ ಭಾಷಣ ಮಾಡಿದರು

ಈ ಮ ಬೆಳಗಾಂವಿಯ ವ್ಯಾಪಾರ [illegible]

ಳದ ಸಹಾಯಮಾಡಬಹುದಾಗಿ ೧೦೦ ರೂ [illegible] ಮತ್ತು ನಿಷ್ಪಕ್ಷಪಾತಿ ಮಂಡಳಿಯ [illegible]

ಸುಲಭ [illegible] ಈಗ ಎರಡು ವರ್ಷಗಳಿಂದ [illegible] ಗ [illegible] ದತಿಯಿಂದ, [illegible] ಯಿಂದ, ಹಾಗೂ [illegible] ತಕ್ಕ [illegible] ಕನ್ನಡ [illegible] ಉಕ್ಕು [illegible] ನಿಶ್ಚಯಿಸಿದ [illegible] ಗಳನ್ನು ದೂರ [illegible]?

<u>ಮದ್ರಾಸ ಕರ್ನಾಟಕ</u>

ಉದಕಮಂಡಲದ [illegible] ವಾಗಿ, ಮೈಸೂರಿನಿಂದ ಮೋಟಾರ [illegible] ಅಗುವದು. [illegible] ಬೈ [illegible] ಟಿಕಾಲು ಕೊಡುವದು

<u>ಮೈಸೂರು ಕರ್ನಾಟಕ</u>

ಮೈಸೂರಿನಲ್ಲಿ ದಸರೆಯು ವಿಜೃಂಭಣೆಯಿಂದ ನಡೆದಿದೆ. ಅರಮನೆಯ ದರ್ಬಾರು ಹಾಲಿನ ಭಾಗದಲ್ಲಿ [illegible] ಹ ಕಲ್ಪಿಟ್ಟ ಅವುಗಳ [illegible] ಸಿಂಹಾಸನವನ್ನಿಡ ಲೂ ಅದರ ಉಭಯ [illegible] ತಕ್ಕ ಸ್ಥಳಗಳೂ [illegible] ವಿದ್ಯುದ್ದೀಪಗಳಿಂದ ಸಿಂಗರಿಸಲ್ಪಟ್ಟಿರುತ್ತದೆ

<u>ಕೊಡಗು ಕರ್ನಾಟಕ</u>

ಕೊಡಗು ನ್ಯಾಯ [illegible] ನಾಡಿನ ಸಭಾಸದರಾದ ಶ್ರೀ [illegible] ಕಾರ್ಯಾಧೀಶರಾದರೆಂದು ತಿಳಿಸಲು ವಿಷಾದಿಸುತ್ತೇವೆ. [illegible] ಚನ್ನಾಗಿದ್ದಿತು. ಇಂಗ್ಲೀಷ ಬಾರದಿದ್ದರೂ ಬೇರೆ ಸೇವೆಯನ್ನು ಚನ್ನಾಗಿ ಮಾಡಬಹುದೆಂಬುದನ್ನು ಇವರ ಜೀವನ ಚರಿತ್ರೆಯಿಂದ ಇಂಗ್ಲೀಷ ಮೋಹಕರು ತಿಳಿದುಕೊಳ್ಳಬಹುದಾಗಿದೆ

ಹಿಂದುಸ್ಥಾನ.

[illegible] ನೆಂಬುವನು ಪೋಲೀಸರ ವೇಷವನ್ನು ಧರಿಸಿ, ತಾನು ಮದ್ರಾಸ ಶಹರದ ಪೋಲೀಸನೆಂದು ಹೇಳಿಕೊಳ್ಳುತ್ತ ಬೀದಿಯಲ್ಲಿ ಕುಳಿತಿರುವ, [illegible] ದಿನಾಲು ಹಣ ಎತ್ತಿ, ಅದರಿಂದ [illegible] ಮಾಡಿಕೊಳ್ಳುತ್ತಿದ್ದನು. ಈಗ್ಗೆ ಇವನ [illegible] ಬಂಧಿಸಲ್ಪಟ್ಟಿರುವನು

ಪ್ರೆಸಿಡೆನ್ಸಿಯಿಂದ ಬಂದ ಒಂದು [illegible] ಎಂಬಲ್ಲಿ ಶಕ್ತಿಹೀನವಾಗಿ [illegible] ಬಿದ್ದು [illegible] ಹೋಯಿತು. ಓವ. [illegible] ಇನ್ನೊರ್ವನು ಗಾಯ ಹೊಂದಿದ್ದರೂ ಬದುಕಿದ್ದಾನೆ

ಪರದೇಶ.

ಕುಂಭಕರ್ಣನು ಆರು ತಿಂಗಳು ಕಾಲ ನಿದ್ರಿಸುತ್ತಿದ್ದನೆಂಬುದು ನಮ್ಮೆಲ್ಲರಿಗೂ ಆಶ್ಚರ್ಯವೇ. ಟ್ರಾನ್ಸವಾಲಿನಲ್ಲಿ ಒಬ್ಬ ಹೆಂಗಸು ತನ್ನ ಪ್ರಿಯನ ಮರಣ ವಾರ್ತೆಯನ್ನು ಕೇಳಿ ಸಹಿಸಲಾರದೇ ಮೂರ್ಛಿತಳಾಗಿ ೧೭ ವರ್ಷಗಳಾಯಿತು. [illegible] ಆಕೆಗೆ ಎಚ್ಚರವೇ ಇಲ್ಲ. ಪತ್ರಿಕೆಗಳಲ್ಲಿ ಪ್ರಕಟವಾದ ಈ ವಿಷಯವನ್ನು ನೋಡಿ ವಿವಿಧ ಪ್ರಾಂತಗಳಿಂದ ಸುಪ್ರಸಿದ್ಧ [illegible] ಆ ಸ್ಥಳಕ್ಕೆ ಹೋಗಿ ಎಷ್ಟು ಚಿಕಿತ್ಸೆ ಮಾಡಿದರೂ [illegible] ಬರಲೇ ಇಲ್ಲ. ಈಗ ಆ ಹೆಂಗಸು ಬದುಕ [illegible] ಈ ವಿಷಯದಲ್ಲಿ ಏನು ಹೇಳುವರೋ ನೋಡಬೇಕು.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ ಬೆಂಗಳೂರು.

ಅತ್ಯುತ್ತಮವಾದ ಸಾಬೋನುಗಳನ್ನು ತಯಾರು ಮಾಡುತ್ತಾರೆ.

೧೯೨೬ ನೇ ಇಸವಿ ಆಕ್ಟೋಬರ ೧ ನೇ ತಾರೀಖಿನಿಂದ ಜಾಲ್ತಿಯಲ್ಲಿರುವ ಕ್ರಯಪಟ್ಟಿ

“ ಟಾಯ್‌ಲೆಟ್ ಸೋಪ್ ” ಮೈಯಿಗೆ ಹಾಕಿಕೊಳ್ಳುವ ಸುಗಂಧದ್ರವ್ಯ ಮಿಶ್ರಿತವಾದ ಸಾಬೋನುಗಳು, ಸ್ಯಾಂಡಲ್ (ಶ್ರೀಗಂಧಪರಿಮಳ) ಜ್ಯಾಸ್‌ಮಿನ್ (ಜಾಜಿ) ಗುಲಾಬ್, ನ್ಯೂ ಲ್ಯಾವೆಂಡರ್ ಕ್ರಯ ಡಜನ್ ೧ ಕ್ಕೆ ರೂ. ೩—೮—೦ ಮಾತ್ರ.

ಬಟ್ಟೆ ಸಾಬೋನು ಎಂಟು ಔಂಸ್ ತೂಕದ್ದು ಪೆಟ್ಟಿ ೧ ಕ್ಕೆ (೧ ಗ್ರೋಸ್) ರೂ. ೨೮

ಏಳು ,, ,, ,, ,, (,,) ರೂ. ೨೬

ನಾಲ್ಕು ,, ,, ,, ,, (೨ ಗ್ರೋಸ್) ರೂ. ೩೧

“ ಕ್ಯಾರ್‌ಬಾಲಿಕ್ ” ಸೋಪ್ ನಾಲ್ಕು ಔಂಸ್ ತೂಕದ್ದು ಡಜನ್ನಿಗೆ ರೂ. ೨—೪—೦. ಮೇಲೆ ಹೇಳಿದ ಕ್ರಯಗಳು ಖಂಡಿತವಾದವುಗಳು. ಆರ್ಡರ ಜೊತೆಯಲ್ಲಿ ಶೇಕಡಾ ೨೫ ಮುಂಗಡವಾಗಿ ಅಡ್ವಾನ್ಸ್ ಕಳುಹಿಸಬೇಕು. ಬಾಕಿ ಮೊಬಲಗನ್ನು ವ್ಹಿ.ಪಿ. ದ್ವಾರ ಅಥವಾ ಬ್ಯಾಂಕಿನ ಮುಖಾಂತರ ವಸೂಲು ಮಾಡಲ್ಪಡುತ್ತದೆ.

ನಮ್ಮ ಸಾಬೂನುಗಳನ್ನು ಬಿಕರಿ ಮಾಡುವವರು:—

(೧) ದಿ. ಶಾಂತವನ್ ಡಿಪೋ, ಮಾರ್ಕೇಟ, ಬೆಳಗಾಂವ.

(೨) ಮರಾಠಾ ಗ್ಲಾಸ್ ಸ್ಟೋರ್ಸ್ ಸಾಂಗ್ಲಿ.

(೩) ಮಿ. ದೇವೇಂದ್ರ ಚಿಂತಾಮಣಿ ಕೊಲ್ಹಾಪುರೆ. ಮರ್ಚಂಟ, ಬೆಳಗಾಂವ.

(೪) ಮಿ. ಗೋವಿಂದ್ ವಾಸುದೇವ್ ನಾಯಿಕ್ ಕಡೇಬಜಾರ್ ಬೆಳಗಾಂವ

(೫) ಮೇಸರ್ಸ್ ಆ. ಸಿ. ಚವನ್ ಅಂಡ್ ಸನ್ಸ್, ಜನರಲ್ ಮರ್ಚಂಟ್ಸ್, ಬೆಳಗಾಂವ

(೬) ಮಿ. ರಾಮಚಂದ್ರ ಮಹದೇವ್ ಮುರ್‌ಕುಂಬಿಕರ್, ಬೆಳಗಾಂವ

ಎಸ್. ಜಿ ಶಾಸ್ತ್ರಿ,

ಇಂಡಸ್ಟ್ರಿಯಲ್ ಕೆಮಿಸ್ಟ್ ಮತ್ತು ಕೆಮಿಕಲ್ ಇಂಜಿನಿಯರ್.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡು ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೬೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ತ್ವರೆಮಾಡಿರಿ! ಅಡಚಣಿಯು ದೂರಾಯಿತು!

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವ ನಮ್ಮ ಮಾಲಕೀಯ ಪ್ಲಾಟಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಲಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟೆ } ಬಿಂದುರಾವ ಟಂಕಸಾಲಿ
೨೧-೬-೨೬ } ಡಾಕ್ಟರ,

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿಯವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕವುಗಳ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕೆಲಸವು ಆಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು. ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯದಲ್ಲ. ಸುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದು. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಇದೋ ನೋಡಿ!

ಜಾಹೀರಾತ ಕೊಡತಕ್ಕವರೆ!

ಮೊದಲು "ಕನ್ನಡಿಗ"ನ ವ್ಯವಸ್ಥಾಪಕರಿಗೆ ಈಗಾಗಿಯೇ ಬಂದ ಈ ಪತ್ರವನ್ನು ಓದಿರಿ; ಆ ಮೇಲೆ ಯಾವ ಪತ್ರಿಕೆಯಲ್ಲಿ ನಿಮ್ಮ ಜಾಹೀರಾತನ್ನು ಕೊಡತಕ್ಕದ್ದೆಂಬುದನ್ನು ನೀವೇ ನಿಶ್ಚಯಿಸರಿ.

ಶ್ರೀಯುತ ಕುಲಕರ್ಣಿ ಬ್ರದರ್ಸ, ಮೋಟಾರ ಡ್ರಾಯಿವ್ಹಿಂಗ ಇನ್‌ಸ್ಟಿಟ್ಯೂಶನ್ ೪೯೫ ಶನವಾರ ಪೇಠ ಪುಣೆಶಹರ.

ತಾರೀಖು ೭೮ ಜುಲೈ ೧೯೨೬.

ರಾ. ರಾ. ವ್ಯವಸ್ಥಾಪಕ 'ಕನ್ನಡಿಗ' ಬಾಗಲಕೋಟ ಇವರಿಗೆ—ವಿ. ವಿ. ನಾನು ನಿಮಗೆ ಸಂತೋಷದಿಂದ ಪತ್ರಬರೆಯಲು ಉದ್ಯುಕ್ತನಾಗಿದ್ದೇನೆ. ಯಾಕೆಂದರೆ ನಿಮ್ಮ 'ಕನ್ನಡಿಗ'ನಲ್ಲಿ ಪ್ರಸಿದ್ಧವಾದ ನನ್ನ ಜಾಹೀರಾತಿನ ಪರಿಣಾಮವು ಒಳ್ಳೇ ಚನ್ನಾಗಿ ಆಗಿದೆಂಬುದು ನಮಗೆ ಕಂಡು ಬರುತ್ತಿದೆ ಅದ್ದರಿಂದ ನಮ್ಮ ಮೊದಲಿನ ಸಣ್ಣ ಜಾಹೀರಾತನ್ನು ತೆಗೆದು, ಅದರ ಬದಲಾಗಿ ಈ ಕಾಗದ ಜೊತೆಯಲ್ಲಿ ಕಳುಹಿಸಿದ ದೊಡ್ಡ ಜಾಹೀರಾತನ್ನು ನಿಮ್ಮ ಪತ್ರದ ಅರ್ಧಪುಟದಲ್ಲಿ ಹಾಕಬೇಕಾಗಿ ಬೇಡಿಕೆ. ಅದರ ಬೆಲೆ ಏನಾಗುವದು ಅದನ್ನು ತಿಳಿಸಬೇಕು

ಕೇಳುವೆನು

ಜಿ. ಎಚ್. ಕುಲಕರ್ಣಿ ಮ್ಯಾನೇಜರ,

—ವ್ಯವಸ್ಥಾಪಕ

"ಕನ್ನಡಿಗ"ದಲ್ಲಿ ನಿಮ್ಮ ಜಾಹೀರಾತನ್ನು ಕೊಟ್ಟು ಗಿರಾಕಿಗಳನ್ನು ಪಡೆದು ಲಾಭ ಹೊಂದಿರಿ. ಇದೊಂದೇ ಕನ್ನಡದ ಈ ತನದೇ ಪತ್ರಿಕೆ

ಈ ಪತ್ರಿಕೆಯು ಮಂಗಳವೇಢ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರ ನಂ. ಬಿ ೧೯೪೭ [illegible]

ಕನ್ನಡಿಗ.

ಜಯತು ಕನ್ನಡ

(ಇದರಲ್ಲಿ ಕನ್ನಡ ನವಜೀವನವು ಸ್ಫುರಿಸುತ್ತಿದೆ)

[illegible]

ಸಂಪಾದಕರು— ಮಂಗಳವೇಢೆ ರಾಜೇರಾಂಯರ ಮುಕ್ಕಾಂ ಶ್ರೀನಿವಾಸರಾಯರು.

ವರ್ಷ ೨	ಬಾಗಲಕೋಟೆ ಶುಕ್ರವಾರ ಮಿತಿ ಆಶ್ವಿನ ಬಹುಳ ೧ ಶಕ ೧೮೫೯ ತಾ||೨೨ ೧೦ ೧೯೩೭.	ಸಂಚಿಕೆ ೨೯

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಾಗಿ ಕಟ್ಟುವೆನಾಸು।
ನಿನ್ನ ಬೆಸನವ ಮಾಡಿ ಬಂಧ ಮುಕ್ಕಳ ಜೊತ್ತು।
ಚಿನ್ನವಾದರು ಚಿನ್ನ ಮೇಣದಚ್ಚಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಶ್ವಾಸವು ನಿನ್ನ ಗಂಧವನು ಜೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾ ತನಯ ದತ್ತ

'ಕನ್ನಡಿಗ'ನ ಸಹಾಯಕರಾಗಿ ಈ ವಾರದಲ್ಲಿ ಹೈದ್ರಾಬಾದಿನ ರಾಜಾ ಶ್ರೀನಿವಾಸರಾವ ಕರಮಾನಕರರು ತಮ್ಮ ವಾರ್ಷಿಕ ವರ್ಗಣಿಯನ್ನು ಸಲ್ಲಿಸಿದ್ದಾರೆ. ಅದೇ ಪ್ರಕಾರವಾಗಿ ಜಳಗಾಂವಿಯ ಜಜ್ಜರಾದ ಶ್ರೀ. ನಾರಾಯಣರಾವ ಲೋಕೂರರವರೂ, [illegible]ಹಳ್ಳಿಯ ಭಾವನೀಕಟ್ಟಿ ನಾಗಭಟ್ಟರೂ, ಹುಬ್ಬಳ್ಳಿಯ ವಕೀಲರಾದ ಜೊ ಸೀ ವಿಶ್ವನಾಥರಾಯರೂ ಉಪಕಾರ ಕರ್ತೃಗಳಾಗಿದ್ದಾರೆ ಈ ಮಹನೀಯರು ಕಳೆದ ವರ್ಷದಂತೆ ಈ ವರ್ಷದಲ್ಲಿಯೂ 'ಕನ್ನಡಿಗ' ನನ್ನು ಮುದ್ದಾಡಿ ಬರಮಾಡಿಕೊಂಡದ್ದಕ್ಕಾಗಿ ನಾವು ಇವರಿಗೆ ಆಭಾರಿಯಾಗಿರುವೆವು ಕರ್ನಾಟಕದ ಶ್ರೀಮಂತರು ಇದೇ ಬಗೆಯಾಗಿ ಸಹಾಯಮಾಡಿದರೆ ನಾವು ಒಂದೇ ರೂಪಾಯದಲ್ಲಿ ೧೬ ಪುಟಗಳನ್ನು ಸಹ ಕೊಡುವವಿಚಾರ ಮಾಡಿದ್ದೇವೆ. ಇದಕ್ಕೆ ಎಷ್ಟು ಜನರ ಸಹಾಯವು ಇನ್ನೂ ಹೆಚ್ಚಾಗಿ ದೊರೆಯುವದೋ ನೋಡಬೇಕು.

ಮೊನ್ನೆ ಮಹಾತ್ಮರ ಹುಟ್ಟಿದ ದಿವಸವು ನಿಪ್ಪಾಣಿಯಲ್ಲಿ ಒಳ್ಳೇ ವೈಭವದಿಂದ ಜರುಗಿತು. ಹೊರಗಣ ಆಡಂಬರಕ್ಕೆ ಹೊರಗಣ ಬೆಡಗಿಗೆ ನಾವು 'ವೈಭವ' ವೆನ್ನುವದಿಲ್ಲ. ಒಳಗಣ ಸೌಂದರ್ಯಕ್ಕೆ ಒಳಗಣ ಹೊಂದಿಕೆಗೆ ನಾವು ವೈಭವವೆಂದೆನ್ನುವೆವು ಮಹಾತ್ಮರ ಚಳವಳಿಯು ಫಲದ್ರೂಪವಾಗಬೇಕಾದರೆ ಹೃದಯ ಹೃದಯಗಳ ಹೊಂದಿಕೆಯಾಗಬೇಕು; ಮನದ ಮಾಲಿನ್ಯವಳಿದು, ಎಲ್ಲೆಡೆಯಲ್ಲಿಯೂ ಮಡಿಯ ಹೆಚ್ಚಳವಾಗಬೇಕು. ಖಾದಿಯನ್ನು ಕೇವಲ ಆರ್ಥಿಕ ಸ್ವರೂಪದಿಂದ ನೋಡುವವರೇ ಬಹಳ. ಖಾದಿಯಲ್ಲಿ ಇದಕ್ಕಿಂತಲೂ ಹೆಚ್ಚಿನ ತತ್ವವವ್ರಡಕವಾಗಿರುವದು. ಖಾದಿಯು ಐಕ್ಯದಚಿನ್ಹ; ಖಾದಿಯು ಸಂಘಟನೆಗೆ ಸಾಧನ. ಖಾದಿಯು ಗೌರವದ ಬಟ್ಟೆ. ಖಾದಿಯು ಪ್ರೇಮದ ಕಣಿಯು ಖಾದಿಯು ಸಮಿದ ಸಾಮ್ರಾಜ್ಯ ಈ ದೃಷ್ಟಿಯಿಂದ ನೋಡಿದರೆ ಮಹಾತ್ಮರ ಚಳವಳಿಯ ಸೌಂದರ್ಯವು ಸಾಕ್ಷಾತ್ಕಾರವಾಗುವದು. ನಿಪ್ಪಾಣಿಯ ಬ್ರಾಹ್ಮಣೇತರರಿಗೆ ಮಹಾತ್ಮರ ತತ್ವಗಳ ಮರ್ಮವು ಮನದಟ್ಟಾಗಿದೆ ಅವರು ಘಾತಕವಾದ ಭೇದಭಾವವನ್ನಳಿದು, ಎಲ್ಲರಿಗೂ ಹಿತಕರವಾದ ಪ್ರೇಮ ಭಾವವನ್ನು ಬೆಳೆಯಿಸಲು ಮಹಾತ್ಮರ ಹುಟ್ಟಿದ ದಿವಸ ಪ್ರತಿಜ್ಞೆಯನ್ನು ತೊಟ್ಟಿದ್ದಾರೆ. ಒಬ್ಬ ಸದ್ಗೃಹಸ್ಥರು ಏನೂ ಲಾಭ ತೆಗೆದುಕೊಳ್ಳದೆ ಖಾದಿಯನ್ನು ಮಾರುತ್ತಲಿರುವರು. ಇದರಿಂದ ನಾಡಿನ ಏಳ್ಗೆಯು ತೀವ್ರವಾಗುವುದು ಬಡಬಗ್ಗರ ಮೊರೆಗೆ ಸಿರಿವಂತರು ಎಚ್ಚತ್ತಿರುವುದು, ಆತ್ಮೋನ್ನತಿಯ ಮಾರ್ಗ. ತಮಗೆ ಕೇಳುವವರಿರುವರೆಂದು ಬಡವರಿಗೆ ತಿಳಿದೊಡನೆ ಅವರು ತಮ್ಮ ರಕ್ಷಣಮಾಡುವವರ ಸಲುವಾಗಿ ಪ್ರಾಣವನ್ನರ್ಪಿಸಲು ಸಿದ್ಧರಾಗುವರು. ಸಮಾಜವು ಸುಖದ ಬೀಡಾಗುವುದು. ಹಸಿದವರಿಗೆ ಅನ್ನಕೊಡುವುದು ಬಟ್ಟೆಯಿಲ್ಲದವರಿಗೆ ವಸ್ತ್ರಗಳನ್ನು ಕೊಡುವುದು, ಮನೆಯಿಲ್ಲದವರಿಗೆ ಆಶ್ರಯಕೊಡುವುದು. ಇವು ಎಲ್ಲ ದೇಶಗಳಲ್ಲಿಯೂ ಧರ್ಮದ ಕೃತ್ಯಗಳಾಗಿವೆ. ಖಾದಿಯನ್ನು ಎತ್ತಿ ಹಿಡಿದರೆ ಇವೆಲ್ಲ ಧರ್ಮದ ಕೃತಿಗಳು ತಮ್ಮಿಂದ ತಾವೇ ಜರುಗುವವು

ಕನ್ನಡಕ್ಕೆ ಒಂದು ವಿಶಿಷ್ಟ ಪ್ರಕಾರದ ಸಂಸ್ಕೃತಿಯುಂಟು. ಈ ಸಂಸ್ಕೃತಿಯನ್ನು ಸಂರಕ್ಷಿಸುವುದು ಕನ್ನಡಿಗರ ಕರ್ತವ್ಯವೆಂದು ನಾವು ಆಗಾಗ್ಗೆ ಹೇಳುತ್ತ ಬಂದಿರುವೆವು. ಇದರ ಬಗ್ಗೆ ಮೈಸೂರಿನ ವಿಶ್ವವಿದ್ಯಾಲಯವು ಪ್ರಯತ್ನ ಮಾಡಲಿರುವುದೆಂಬುದು ಸಂತೋಷದ ಸುದ್ದಿ. ರಡವನಾಡಿಯಾಕಾಗಲೊಬ್ಬದು ಮೈಸೂರು ನಲ್ಲಿ ಎಚ್ಚರಿಕೆಯುಂಟಾಗಿದೆ ಅಲ್ಲಿಯ ವಿಶ್ವವಿದ್ಯಾಲಯವು ಸಂಸ್ಕೃತಿಯ ವಿಷಯದಲ್ಲಿ ವ್ಯಾಖ್ಯಾನ ಮಾಲೆಯನ್ನು ಏರ್ಪಡಿಸುವ ಹಂಚಿಕೆಯಲ್ಲಿದೆ. ಈ ಕೆಲಸದ ಮಹತ್ವದ ಬಗ್ಗೆ ಎಷ್ಟು ಬರೆದರೂ ಕಡಿಮೆಯೆ. ಕನ್ನಡದ ಸಂಸ್ಕೃತಿಯ ಬಗ್ಗೆ ಕನ್ನಡಿಗರಲ್ಲಿಯೇ ಅರಿವು ಇರುವದಿಲ್ಲ 'ನಿಮ್ಮ ಸಂಸ್ಕೃತಿ' ಎಂದರೇನು ಎಂದು ಯಾರಾದರೂ ಕೇಳಿದರೆ, ಕನ್ನಡಿಗರಿಗೆ ನಿರುತ್ತರರಾಗಿ ಕೆಳಗೆ ತಲೆ ಹಾಕಬೇಕಾಗುತ್ತದೆ ನಮ್ಮಲ್ಲಿಯ ಅಜ್ಞಾನದಿಂದಲೇ ನಾವು ನಮ್ಮ ನಾಡಿನ ಅಹಿತವನ್ನು ಮಾಡುತಲಿದ್ದೇವೆ. ಒಬ್ಬಿಬ್ಬರು [illegible] ಸಿಕ್ಕುವರು. ಆದರೆ ಅವರಿಗೆ ಸಾಕಷ್ಟು ಬೆಂಬಲವಿರುವದಿಲ್ಲ [illegible] ವಣ ಹೊಟ್ಟೆಗೆ ಕಾಸಿನ ಕುಂಚಿ ಎಂಬಂತೆ ಅವರ ಪ್ರಯತ್ನ [illegible] ನಿಷ್ಫಲವಾಗಿ ಹೋಗುವವು. ಸರಕಾರದ ಆಶ್ರಯದಿಂದ ಸಂಸ್ಕೃ

ತಿಯು ಸಂರಕ್ಷಣೆಯು ಸುಲಭವಾಗಿ ಸಾಗುವುದು. ಕನ್ನಡನುಡಿ, ಕನ್ನಡ ಸಂಸ್ಕೃತಿ ಕನ್ನಡ ಸಾಹಿತ್ಯ ಮೊದಲಾದವುಗಳ ಏಳ್ಗೆಯ ಬಗ್ಗೆ ಎಲ್ಲ ಕನ್ನಡಿಗರಿಗೂ ವೈಸರ್ಗಿಕ ಕಳಕಳಿ ಇರಬೇಕಾಗುತ್ತದೆ. ಇನ್ನೊಂದು ಸುಸ್ಪಷ್ಟವೆಂದೇ ತಿಳಿಯಬೇಕು. ಕನ್ನಡದ ರಾಜ್ಯವೊಂದು ನಮ್ಮ ಹಿಂದಿರುವದೆಂಬ ಭಾವನೆಯಿಂದ ನಮ್ಮಲ್ಲಿ ಉತ್ಸಾಹವುಂಟಾಗುತ್ತದೆ. ಇಕೋ ಹಿಂದಿರುವದೆಂದರೆ ಆಸರೆಯುಂಟಾದ ಹಾಗಾಗುತ್ತದೆ. ನಮ್ಮ ಸಂಸ್ಕೃತಿಯಲ್ಲಿಯೇ ನಮ್ಮ ಜೀವನ ಇರುವುದು. ಸಂಸ್ಕೃತಿಯನ್ನು ಕಳೆದರೆ, ನಾವು ಒದೆಗೆ ಕುಳಿವು. ಮೈಸೂರಿನ ವಿಶ್ವವಿದ್ಯಾಲಯದ ಪ್ರಯತ್ನದಿಂದ ನಮ್ಮ ಒದೆಗೆ ಭದ್ರವಾಗಿ ಉಳಿಯುವದೆಂದು ನಮ್ಮ ನಂಬಿಗೆ.

ಕರ್ನಾಟಕದ ಸ್ವಯಂಸೇವಕರು ತಾವು ಕರ್ನಾಟಕದ ಸಾಲಿಗರು, ಬಾಯಿಭಟರಲ್ಲ, ಎಂಬುದನ್ನು ತೋರಿಸಿ ಕೊಟ್ಟಿದ್ದಾರೆ. ಈಗ್ಗೆ ಮತ್ತೊಂದು ಹೊಸ ಕಾರ್ಯಕ್ರಮವನ್ನು ಗೊತ್ತು ಪಡಿಸಿದ್ದಾರೆ (೧)ಕರ್ನಾಟಕ ಏಕೀಕರಣವು ಜನರಿಗೆ ಸವಿ ಆಗಿ ಮಂದು ತೋರಿಸಲು, ಸರಕಾರಕ್ಕೆ ಕಳಿಸುವ ಅರ್ಜಿಗೆ ೧ ಲಕ್ಷ ಜನರ ಸಹಿ ದೊರಕಿಸುವದು. (೨) ವರುಷದ ಫೆಬ್ರುವರಿ ೧ ರಿಂದ ಏಪ್ರೀಲ ೧೫ ರವರೆಗೆ ಕರ್ನಾಟಕದಲ್ಲಿ ೪೦ ಸಾವಿರ ರೂ. ಗಳ ಖಾದಿಯನ್ನು ಮಾರುವದು. ತರುಣರೂ, ಧೀರರೂ, ಕಾರ್ಯದಲ್ಲಿ ಪ್ರೇಮ ಭಕ್ತಿಗಳಿದ್ದವರೂ ಆದ ಕನ್ನಡನಾಡಿನ ಸ್ವಯಂಸೇವಕರಿಗೆ ಶ್ರೀ ರಘುನಾಥಕೃಷ್ಣ ಕೃಷ್ಣರಾಯರು ಮಾರ್ಗದರ್ಶಕರೆಂತಹ ಆದರ್ಶ ಭೂತರಾದ ಮುಂದಾಳುಗಳು ದೊರೆತದ್ದೇ ಈ ಕರ್ನಾಟಕ ದಳದವರ ಯಶಸ್ಸಿನ ಕಾರಣವೆಂಬದು ಸ್ಪಷ್ಟವಿದೆ. ಶ್ರೀ ನಾರಾಯಣರಾಯರು ಬಿನ್ನವಿಸಿದಂತೆ ಕರ್ನಾಟಕ ಕಾಂಗ್ರೆಸ್ಸಕಮೀಟಿಯವರು ದಳದವರಿಗೆ ೧೦೦೦ ರೂ ಗಳ ಸಹಾಯವನ್ನು ಕೊಡುವರಾಗಿ ನಾವು ನಂಬುತ್ತೇವೆ. ಅದೇ ಪ್ರಕಾರವಾಗಿ ಮೈಸೂರ ಸರಕಾರದವರು ತಮ್ಮಲ್ಲಿ ಖಾದಿಯ ಮಾರಾಟವು ಬೆಳೆಯುವಂತೆಯೂ ಕರ್ನಾಟಕದಲ್ಲಿಯ ಮುಂದಾಳುಗಳೂ ಮಹಾಜನಗಳೂ ತಮ್ಮ ಪ್ರತ್ಯಕ್ಷವಾದ ಸಹಾಯವು ದೊರೆಯುವಂತೆಯೂ, ಈ ತರುಣ ಕನ್ನಡಿಗರಿಗೆ ಸಹಾಯಮಾಡುವರಾಗಿ ವಿಶ್ವಾಸವಿದೆ.

ಶ್ರೀ. ಬೆಳವೀಯವರು ಕರ್ನಾಟಕಾಭಿಮಾನವನ್ನು ಮಿರಿಯುತಕ್ಕದ್ದೆಂದು 'ಕನ್ನಡಿಗ'ನು ಹೇಳಿದ್ದರಿಂದ 'ವಿಜಯ' ಕಾರರಿಗೆ ಕೋಪಬಂದಿದೆ. ಕಂಡದ್ದಾಡಿದರೆ ಕೆಂಡದಂತಹ ಸಿಟ್ಟಲ್ಲವೇ? ಅವರು ನಮ್ಮ ವಿಧಾನಗಳನ್ನು ಬೇಕಾಗಿದ್ದರೆ ಖಂಡಿಸಬಹುದಾಗಿತ್ತು. ಆ ಮಾರ್ಗವನ್ನು ಬಿಟ್ಟು 'ಲೋಕಮತ'ವು ನಮ್ಮ ಲೇಖದ ಲಾಭ ಪಡೆಯಿತೆಂದು 'ವಿಜಯ'ಕಾರರಿಗೆ ವ್ಯಸನವಾಯಿತು. ಅಷ್ಟೇ ಅದರೆ ಶ್ರೀ.ಬೆಳವೀಯವರು ಕರ್ನಾಟಕವನ್ನು ಮರೆತದ್ದಕ್ಕಾಗಿ ವ್ಯಸನವಾಗಲಿಲ್ಲ! ಶ್ರೀ ಬೆಳವೀಯವರಿಗೆ 'ಲೋಕಮತದ' ಟೀಕೆಯಿಂದ ಏನೂ ಹಾನಿಯಾಗದು. ಶ್ರೀ ಬೆಳವೀಯವರು ಯೋಗ್ಯ ಬುದ್ಧಿವಂತರಾದರೆಂಬುದನ್ನೂ ಅವರೇ ಐಕ್ಯದ ಪ್ರಯತ್ನರೆಂಬುದನ್ನೂ ನಾವು ಒಂದು ಸೂಚನೆಯಲ್ಲಿ ಉಲ್ಲೇಖಿಸಿ, ಮುಂದಿನ ಪ್ರಸಂಗದಲ್ಲಿ ಶ್ರೀ ಬೆಳವೀಯವರು ಕರ್ನಾಟಕವನ್ನು ಮರೆಯಬಾರದೆಂದು ಮತ್ತೆ ಸೂಚಿಸಿರುವೆವು. ಹೋಗಿದ್ದ ಪಕ್ಷಕ್ಕೆ ಸ್ವರಾಜ್ಯ ಪತ್ರವಾದಿಗಳಿಗೆ ಮತಕೊಡಬೇಡಿರೆಂದು ಹೇಳಿದಂತಾಗಲಿಲ್ಲ. ಆದರೆ ಬೆಳವೀಯವರು ಕರ್ನಾಟಕವನ್ನು ಅಲಕ್ಷ್ಯ ಮಾಡಬಾರದೆಂದು ನಾವು ಒತ್ತಿ ಒತ್ತಿ ಈ ಮಾತನ್ನು ಅವರಿಗೆ ಮತ್ತೆ ಮತ್ತೆ ಹೇಳುತ್ತಿರುವೆವು. ಶ್ರೀ ಬೆಳವೀಯವರ ಹೋರಾಟದ ಚಳವಳಿ ಮತ್ತು ಅವರ ಹಿಂದಿನ ಕೆಲಸದ ಕಲ್ಪನೆಯು ನಮಗೆ ಸಂಪೂರ್ಣವಿದೆ. ಆ ಬಗ್ಗೆ ನಾವು ಆಗಲೂ ಅಜ್ಞಾನಸ್ಥಿತಿಯಲ್ಲಿರಲಿಲ್ಲ. ಈಗಲೂ ಅಜ್ಞಾನಸ್ಥಿತಿಯಲ್ಲಿಲ್ಲ ಅವರ 'ವಿಜಯ'ಕಾರರೇ ಕರ್ನಾಟಕತ್ವದ ಅಜ್ಞಾನಸ್ಥಿತಿಯಲ್ಲಿರುವರೆಂಬುದನ್ನು ದುಃಖದಿಂದ ಹೇಳುತ್ತೇವೆ.

ಕಾಂಗ್ರೆಸ್ಸವೂ ಚುನಾವಣೆಯೂ.

ಕಾಯಿದೇ ಮಂಡಲಗಳಲ್ಲಿ ಸೇರಬೇಕೆಂದು ರಾಷ್ಟ್ರೀಯ ಸಭೆಯು ಯಾಕೆ ನಿಶ್ಚಯಿಸಿರುತ್ತದೆ?

---

೧ ಕಾಂಗ್ರೆಸ್ಸದ ಪ್ರತಿನಿಧಿಗಳು ಇಲ್ಲದಿದ್ದರೆ ಆಳರಸರು ಈ ವು ಸ್ಥಳಗಳನ್ನು ಲೋಕ ಹಿತದ ವಿರುದ್ಧವಾಗಿ ಉಪಯೋಗಿಸುತ್ತಾರೆ. ಇದನ್ನು ನಿಲ್ಲಿಸುವದಕ್ಕಾಗಿ

೨ ಅಧಿಕಾರ ಸ್ಥಳಗಳನ್ನು ಹೊಂದದೆ ಮತ್ತು ವೆಚ್ಚಕ್ಕೆ ಸಮ್ಮತಿಕೊಡದೆ ಈಗಿನ ತೋರಿಕೆಯ ಸುಧಾರಣೆಗಳನ್ನು ನಾಶಮಾಡುವ ಸಲುವಾಗಿ.

೩ "ಕಷ್ಟನಿವಾರಣೆಯಾಗದಿದ್ದರೆ ಹಣದ ನಿರಾಕರಣೆ" ಎಂಬ ತತ್ವವನ್ನು ಒಳಿಕೆಯಲ್ಲಿ ತರುವ ಸಲುವಾಗಿ. ರಾಷ್ಟ್ರದ ಬೇಡಿಕೆಯನ್ನು ಪೂರೈಸಿಕೊಳ್ಳುವ ಸಲುವಾಗಿ ಸ್ವರಾಜ್ಯದ ತಳಹದಿಯನ್ನು ಹಾಕುವ ಸಲುವಾಗಿ

೪ ಮತದಾರರೂ ಸಾಮಾನ್ಯ ಜನರೂ ಕಾಂಗ್ರೆಸಕ್ಕೆ ಬೆಂಬಲವಾಗಿರುವರೆಂದು ಅದರ ಕಾರ್ಯಕ್ರಮವನ್ನು ಅನುಸರಿಸುವರೆಂದೂ ತೋರಿಸುವ ಸಲುವಾಗಿ.

೫ ಭಾರತ ರಾಷ್ಟ್ರವನ್ನುದ್ಧರಿಸುವದಕ್ಕೆ ಟೊಂಕಕಟ್ಟಿದ ರಾಜಕೀಯ ಸಂಘವೆಂದರೆ ರಾಷ್ಟ್ರೀಯ ಸಭೆಯೇ ಆದುದರಿಂದ ಸರಕಾರದ ಮತ್ತು ಬೇರೆ ಸಂಸ್ಥೆಗಳಲ್ಲಿ ಕಾಂಗ್ರೆಸ್ ಪಕ್ಷದ ಪ್ರಾಬಲ್ಯವನ್ನು ಕಾಂಗ್ರೆಸ್ಸದ ಗೌರವವನ್ನು ಸ್ಥಿರವಾಗಿ ಉಳಿಸುವ ಸಲುವಾಗಿ

೬ ಸ್ಥಾನಿಕ ಸಂಸ್ಥೆಗಳ ಮುಖಾಂತರ ಕಾಂಗ್ರೆಸ್‌ದ ವಿಧಾಯಕ ಕಾರ್ಯಕ್ರಮವನ್ನು ಮುಂದರಿಸುವ ಸಲುವಾಗಿ.

೭ ಕೌನ್ಸಿಲುಗಳನ್ನೂ ಸ್ಥಾನಿಕ ಸಂಸ್ಥೆಗಳನ್ನೂ ಕಾಂಗ್ರೆಸದ ಅಧಿಕಾರಕ್ಕೆ ಒಳಪಡಿಸಿ ಅವುಗಳು ಕಾಂಗ್ರೆಸದ ಧೋರಣವನ್ನು ಅನುಸರಿಸುವಂತೆ ಮಾಡುವ ಸಲುವಾಗಿ.

ನೀವು ಕಾಂಗ್ರೆಸನ್ನು ಯಾಕೆ, ಎತ್ತಿ ಹಿಡಿಯಬೇಕು?

ಯಾಕಂದರೆ ೧ ಇದು ಒಂದು ಮುಖ್ಯ ರಾಷ್ಟ್ರೀಯ ಸಂಸ್ಥೆಯಾಗಿರುತ್ತದೆ.

೨ ರಾಷ್ಟ್ರದ ಆಕಾಂಕ್ಷೆಗಳೆಲ್ಲ ಇದರಲ್ಲಿ ಒಡಮೂಡಿರುತ್ತವೆ.

೩ ಇದು ಒಡು ಪುರಾತನ ಮತ್ತು ಅತ್ಯಂತ ಸುಸಂಘಟಿತ ರಾಷ್ಟ್ರೀಯಸಂಸ್ಥೆ ಇರುತ್ತದೆ. ಯಾಕಂದರೆ ರಾಷ್ಟ್ರದ ಸಲುವಾಗಿ ಸ್ವಾರ್ಥತ್ಯಾಗಮಾಡಿದ ಮತ್ತು ಯಾತನೆಗಳನ್ನು ಸಹಿಸಿದ ಅನೇಕ ದೊಡ್ಡ ದೊಡ್ಡ ದೇಶಾಭಿಮಾನಿಗಳು ಇದರ ಧೋರಣವನ್ನು ನಿಶ್ಚಯಿಸಿರುತ್ತಾರೆ. ಕಾಂಗ್ರೆಸ್ಸು ದಬ್ಬಾಳಿಕೆಗೂ ಕೊನೆಕಾಣವನ್ನು ಹೇಳುವದಕ್ಕಾಗಿ ಸ್ವರಾಜ್ಯ ಪದ್ಧತಿಗೂ ವಿರುದ್ಧವಿರುತ್ತದೆ.

೪ ನಮ್ಮೆಲ್ಲರಿಗೆ ಅತ್ಯಂತ ಪ್ರಿಯವಾಗಿರುವ ಪ್ರಥಮ ಸ್ವರಾಜ್ಯದ ಸಲುವಾಗಿ ಹೆಣಗಾಡುತ್ತದೆ.

೫ ದ್ವಿದಲ ರಾಜ್ಯ ಪದ್ಧತಿಯು ಪ್ರಚಾರದಲ್ಲಿರುವವರೆಗೆ ಅಧಿಕಾರ ಸ್ಥಳಗಳನ್ನು ಸ್ವೀಕರಿಸಲಿಕ್ಕಿಲ್ಲವೆಂದು ಈ ಪಕ್ಷವು ನಿಶ್ಚಯ ಮಾಡಿರುತ್ತದೆ.

೬ ಈಗಿನ ಜೊಳ್ಳು ಸುಧಾರಣೆಗಳನ್ನು ಕಿತ್ತೊಗೆದು ಸ್ವರಾಜ್ಯ ಸ್ಥಾಪನೆಯ ಮಾರ್ಗವನ್ನು ಸುಗಮ ಮಾಡುವದು ಈ ಪಕ್ಷದ ಕರ್ತವ್ಯವಾಗಿರುತ್ತದೆ.

೭ ದಬ್ಬಾಳಿಕೆಗೆ ಎಡೆಕೊಟ್ಟ ಕಾಯಿದೇಮಂಡಲಗಳಲ್ಲಿಯೂ ಹೊರಗೂ ಎಷ್ಟೋಸಾರೆ ಸರಕಾರವನ್ನು ಈ ಪಕ್ಷವು ಸೋಲಿಸಿರುತ್ತದೆ.

೮ ಜಗತ್ತಿನೊಳಗಿನ ಎಲ್ಲ ಸ್ವಾತಂತ್ರ್ಯಪ್ರಿಯ ಜನರು ಕಾಂಗ್ರೆಸ್ಸನ್ನು ಗೌರವಿಸುತ್ತಾರೆ.

೯ ಉಳಿದ ಪಕ್ಷಗಳು ಸರಕಾರದೊಡನೆ ಸಹಕಾರಮಾಡಲು ಸಿದ್ಧವಾಗಿವೆ ಇದೊಂದೇ ಪಕ್ಷವು ಸರಕಾರವನ್ನು ಎದುರಿಸಲಿಕ್ಕೆ ಸಿದ್ಧವಾಗಿದೆ.

ಮಧ್ವರಾವ ಕಂಭಾವಿ. ಕಾರ್ಯದರ್ಶಿ ಕ. ಪ್ರಾ. ಕಾ. ಕ.

ಬಸವೇಶ್ವರ ಹಾಯಸ್ಕೂಲಿನ ಓರ್ವ
ಶಿಕ್ಷಕರ ಶಿಕ್ಷಣದ ಮಾದರಿ!

ಈ ಶಾಲೆಯ ಅಂತರ್ವ್ಯವಸ್ಥೆಯಬಗ್ಗೆ ಹಿಂದಕ್ಕೊಮ್ಮೆ 'ಕನ್ನಡಿಗನ'ಲ್ಲಿ ಬರೆಯಲಾಗಿತ್ತು. ಇತ್ತಿತ್ತಲಾಗಿ ಹೊಸ ಹೊಸ ಪದವೀಧರರು ಶಾಲೆಗೆ ಸೇರಿದ್ದರಿಂದ ಶಾಲೆಯಸ್ಥಿತಿಯು ಚನ್ನಾಗಿರಬಹುದೆಂದು ನಂಬಿದ್ದೆವು. ಆದರೆ ಶಿಕ್ಷಕರ ಕಲಿಸುವ ಪದ್ಧತಿ ಹಾಗೂ ಅವರ ಐತಿಹಾಸಿಕ ಜ್ಞಾನ ಇವುಗಳನ್ನು ಕಂಡು ಯಾರಿಗೆ ತಾನೇ ಕೆಡಕೆನಿಸಲಿಕ್ಕಿಲ್ಲ? ಕೆಳಗಿನ ವಿಧಾನಗಳಬಗ್ಗೆ ಸಂಬಂಧಿಸಿದ ಶಿಕ್ಷಕರು ಉತ್ತರವನ್ನೀಯಬಲ್ಲರೋ?

ಪಾಶ್ಚಾತ್ಯ ಸಂಸ್ಕೃತಿಯ ವಿಷಯದಲ್ಲಿ ಈ ಶಿಕ್ಷಕರಿಗೆ ಅಭಿಮಾನವು ಬಹಳ. ಪಾಶ್ಚಾತ್ಯ ಸಂಸ್ಕೃತಿಯೇ ಮಿಗಿಲಾದದ್ದೆಂಬ ಹೆಮ್ಮೆ. ಪೌರ್ವಾತ್ಯ ಸಂಸ್ಕೃತಿಯು ಸದೋಷವಾದದ್ದು ಹಿಂದೀ ಜನರೆಲ್ಲರು ಅಂಜುಬುರುಕರು, ಹೇಡಿಗಳು, ಆದರೆ ಪಾಶ್ಚಾತ್ಯರು ಮಾತ್ರ ಬಲು ಶೂರರು ಧೀರರು ಬೇಕಾದುದನ್ನು ಮಾಡಬಲ್ಲರು ಹೀಗೆಂದು ಚಿಕ್ಕಮಕ್ಕಳಮುಂದೆ ಹೇಳಿ ಅವರ ಎಳೆಮನಸ್ಸಿನ ಮೇಲೆ ನಮ್ಮ ನಾಡಿನ ವಿಷಯವಾಗಿ ತಿರಸ್ಕಾರ ಬುದ್ಧಿಯನ್ನು ಹುಟ್ಟಿಸುವದುಚಿತವೊ? ಪಾಶ್ಚಾತ್ಯ ಸಂಸ್ಕೃತಿಯೇ ಮಿಗಿಲಾದದ್ದೆಂಬದಾಗಿ ಅವರಿಗನಿಸುತ್ತಿದ್ದರೆ ಏನೂ ತಿಳಿಯದ ಬಾಲಕರ ಮುಂದೆ ಆ ವಿಧಾನವನ್ನು ಮಂಡಿಸದೇ ಸಾರ್ವಜನಿಕ ರೀತಿಯಿಂದ ಸಿದ್ಧ ಮಾಡಲು ಅವರು ಪ್ರಯತ್ನಿಸಲಿ!

ಇನ್ನೊಂದು ಅವರ ವಿಧಾನವೆಂದರೆ ಜಾತಿಭೇದವು ಸದೋಷವಾದದ್ದು! ಜಗತ್ತಿನಲ್ಲಿ ಹೆಣ್ಣುಗಂಡೆಂಬ ಎರಡೇ ಜಾತಿಗಳು. ಹಿಂದೂಜನರಲ್ಲಿದ್ದ ಜಾತಿ ವಿಭಾಗವು ತೀರ ನಿಂದಾಸ್ಪದವಾದದ್ದು. ಇದರಿಂದ ಹಿಂದುಸ್ಥಾನಕ್ಕೆ ಯಾವತರಹದ ಲಾಭವು ಆಗದೆ ಕೇವಲ ಹಾನಿಯೇ ಆಗಿದೆ. ಹೀಗೆಂದು ಬಾಲಕರಿಗೆ ಪದೇಶ! ಅಯ್ಯೋ! ಈ ಶಿಕ್ಷಕರಿಗೆ ಜಾತಿಭೇದವು ಸದೋಷವಾದದ್ದೆಂಬ ವಿಷಯದಲ್ಲಿ ಇಷ್ಟು ಪ್ರಬಲವಾದ ಮನೋಧೈರ್ಯವಿದ್ದರೆ ಬಾಗಲಕೋಟೆಯಲ್ಲಿ ವ್ಯಾಖ್ಯಾನಮಾಲೆಯನ್ನು ತೆರೆದಿಸಿ ತದ್ವಾರಾ ತಮ್ಮ ವಿಧಾನಗಳನ್ನು ಮಂಡಿಸಲಿ! ಅವರ ವಿಧಾನವನ್ನು ಖಂಡಿಸಲು ಇಲ್ಲಿ ಎಷ್ಟೋ ಜನರು ಮುಂದೆ ಬರಬಹುದು.

ಮೊತ್ತೊಂದು ಅವರ ವಿಧಾನವೆಂದರೆ ಕರ್ನಾಟಕ ಏಕೀಕರಣದ ನಿಷ್ಫಲತೆ ಅಥವಾ ಅಶಕ್ಯತೆ. ಕರ್ನಾಟಕವು ಹಿಂದಕ್ಕೆಂದೂ ಅಖಂಡರಾಜ್ಯ ವಿದ್ದಿಲ್ಲಂತೆ! ಅಹಹಾ! ಏನು ಇವರ ಇತಿಹಾಸಜ್ಞಾನವು!! ಚಾಲುಕ್ಯ, ರಾಷ್ಟ್ರಕೂಟ, ವಿಜಯನಗರದ ರಾಜ್ಯಗಳು ಕನ್ನಡಿಗರ ರಾಜ್ಯಗಳಲ್ಲವಂತೆ!! ಈ ಶಿಕ್ಷಕರು ಇತಿಹಾಸದ ಪದವೀಧರರು!!! ಕನ್ನಡ ಭಾಷೆಯು ಸದೋಷವಾದದ್ದು; ತಿರಗಿ ಕೇಳಿದಲ್ಲಿ ಕನ್ನಡ ಭಾಷೆಯು ಅಭ್ಯಾಸಿಸಲಿಕ್ಕೆ ಅನರ್ಹವಾದ ಭಾಷೆ ಈ ಪ್ರಕಾರ ಸದೋಷವಾದ ಕರ್ನಾಟಕದಬಗ್ಗೆ ವ್ಯರ್ಥವಾದ ಅಭಿಮಾನವನ್ನು ತಾಳಿ ಈ ಜನರು ಸುಳ್ಳೇ ಬಡಿದಾಡಹತ್ತಿದ್ದಾರೆ. ಇದರಿಂದ ಯಾವಪ್ರಯೋಜನವು ಆಗುವದಿಲ್ಲ. ಹೀಗೆಂದು ಕರ್ನಾಟಕ ಏಕೀಕರಣದ ವಿಷಯದಲ್ಲಿದ್ದ ತಮ್ಮ ಆದರವನ್ನು ವ್ಯಕ್ತಪಡಿಸಿದ್ದಾರೆ!

ಇನ್ನೊಂದು ವಿಷಯವು ಈ ಶಿಕ್ಷಕರಿಗೆ ಪ್ರಿಯಕರವಾದದ್ದು: ವೈಷ್ಣವರನ್ನು ಚಾಮಸ್ತುಂಬ ಬೈದು ಸರ್ವಮತಗಳಲ್ಲಿ ಅದ್ವೈತ ಮತವೇ ಶ್ರೇಷ್ಠವಾದದ್ದೆಂದು ಹೇಳುವದು. ಇದು ಒಂದುವೇಳೆ ಈ ಶಿಕ್ಷಕರಿಗೆ ಸ್ವಮತದ ವಿಷಯದಲ್ಲಿದ್ದ ಪ್ರೀತಿಯ ಹೆಚ್ಚಳದ ಮೂಲಕವೆಂದು ಕಲ್ಪಿಸೋಣ! ಆದರೆ ಈ ವಿಧಾನವಾದರೂ ಜಾತಿಭೇದವನ್ನು ಮುರಿಬಡಿಯಬೇಕೆಂದು ಹೇಳುವ ಈ ಶಿಕ್ಷಕರಿಗೆ ಸಮ್ಮತವಾದದ್ದೋ? ಅದ್ವೈತ ಮತದಲ್ಲಿ ಜಾತಿಭೇದವನ್ನು ಹೇಳಿರುವದಿಲ್ಲವೋ?

ಈ ತರಹದ ವಿಧಾನಗಳನ್ನು ಚಿಕ್ಕಮಕ್ಕಳ ಎಳೆಮನಸ್ಸಿನ ಮೇಲೆ ಪರಿಣಾಮವಾಗುವಂತೆ ತುಂಬುವದು ಶಿಕ್ಷಕರ ಕರ್ತವ್ಯವೋ? ಇಂಗ್ಲೀಷ ಕಲಿಸುವಂಥ ಶಿಕ್ಷಕರಿಗೆ ಧಾರ್ಮಿಕ ಶಿಕ್ಷಣವನ್ನು ಕೊಡಲು ಶಿಕ್ಷಣಖಾತೆಯು ಕಟ್ಟಪ್ಪಣೆಯೋ? ಶೇಕ್ಸಪೀಯರನ 'ಟೆಂಪೆಸ್ಟ' ದೊಳಗಿನ ದೃಶ್ಯವನ್ನು ಹೇಳಬೇಕಾದರೆ ವೈಷ್ಣವರನ್ನು ಮನದಣಿ ನಿಂದಿಸಬೇಕಾಗುವದೋ! ಅಥವಾ ಜನರಲ್ ಇಂಗ್ಲೀಷ ಕಲಿಸಬೇಕಾದರೆ ವಿಜಯನಗರ ಸಾಮ್ರಾಜ್ಯವು ಕನ್ನಡಿಗರದಲ್ಲವೆಂದು ವಿಧಾನಿಸುವದು ಯೋಗ್ಯವೊ? ಶಿಕ್ಷಕರಿಗೆ ತಮ್ಮ ವಿಧಾನಗಳೇ ಸತ್ಯವೆಂದೆನಿಸುತ್ತಿದ್ದರೆ ಸಾರ್ವಜನಿಕ ಸಭೆ ಸೇರಿಸಿ ನಿರ್ಣಯಿಸಬಹುದು. ಬಾಲಕರ ಎಳೆಹೃದಯದಮೇಲೆ ಈತರಹದ ಕುವಿಚಾರಗಳನ್ನು ತುಂಬುವದು ಶಿಕ್ಷಕರಿಗೆ ಯಾವ ರೀತಿಯಿಂದಲೂ ಯೋಗ್ಯವಾದದ್ದಲ್ಲ. ಪಾಲಕರಾದರೂ ತಮ್ಮ ಮಕ್ಕಳಿಗೆ ಯಾವತರಹದ ಶಿಕ್ಷಣವು ದೊರೆಯುವದೆಂಬುದರ ಬಗ್ಗೆ ವಿಚಾರಿಸತಕ್ಕದ್ದು. ನಮ್ಮ ನಾಡು, ನಮ್ಮ ಧರ್ಮ, ನಮ್ಮ ಸಂಸ್ಕೃತಿಗಳಬಗ್ಗೆ ತಿರಸ್ಕಾರ ಬುದ್ಧಿಯನ್ನು ಸಂಪಾದಿಸುವದಕ್ಕಾಗಿ ನಮ್ಮ ಮಕ್ಕಳನ್ನು ನಾವು ಶಾಲೆಗೆ ಕಳಿಸುವದಿಲ್ಲೆಂಬುದನ್ನು ಈ ಶಿಕ್ಷಕರು ಚನ್ನಾಗಿ ತಿಳಿಯತಕ್ಕದ್ದು.

—ರಾಮಭಕ್ತ

ವಿಜಾಪೂರ ಜಿಲ್ಲಾ ದಕ್ಷಿಣ ಭಾಗದ ಇಲಾಖಾ ಸಾಹೇಬರ ಮುಕ್ಕಾಮು—ತಂದಿರುವ ೨೪ ಕಟಿಗೇರಿ ತಾರೀಖಿನ ೩೦ ಕರೂರ.

"ಸಭಾಸದರಾದ ಶಿವಲಿಂಗಯ್ಯಾ ಗಟ್ಟಿನಮಠ ಇವರು ವಿಜಾಪೂರ ಮುನ್ಸಿಪಾಲ್ಟಿಗೆ ಶ್ರೀ ದಿವಾನಸಾಹೇಬರ ಮೇಲೆ ಆರೋಪ ಹೊರಿಸಿ ಬರೆದ ಅರ್ಜಿಯ ಮೇಲಿಂದ ಕನ್ನಡಿಗನಲ್ಲಿ ಶ್ರೀ ದಿವಾನಸಾಹೇಬರ ಮೇಲೆ ಟೀಕೆ ಮಾಡಿ ಅವರು ಮುನ್ಸಿಪಾಲ್ಟಿಯ ಹಣ ಮನೆಗಾಗಿ ಉಪಯೋಗ ಮಾಡಿದ್ದರಿಂದಾಗಲಿ ವಿಶ್ವಾಸಕ್ಕೆ ಅಪಾತ್ರರಿದ್ದಾರೆಂದು ನಾವು ಉಲ್ಲೇಖಿಸಿದ್ದೆವು ಆದರೆ ಈಗ ಆ ಶ್ರೀ ಶಿವಲಿಂಗಯ್ಯನವರೇ ತಮ್ಮ ಮೂಲ ಅರ್ಜಿಯನ್ನು ಮರಳಿ ತೆಗೆದು ಕೊಂಡದ್ದನ್ನು ಕಂಡು ನಮಗೆ ಆನಂದವಾಗುತ್ತದೆ" ಎಂಬದಾಗಿ ಕನ್ನಡಿಗನ ಸಂಪಾದಕರು ಕೋರ್ಟಿಗೆ ತಿಳಿಸಿದರು. ಕೂಡಲೇ ಶ್ರೀ ದಿವಾನಸಾಹೇಬರು ತಮ್ಮ ಮಾನಹಾನಿಯ ಫಿರ್ಯಾದಿಯನ್ನು ಮರಳಿ ತೆಗೆದುಕೊಂಡರು.

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ.

(ಲೇಖಾಂಕ ೯)

ಮಣಿಕರ್ಣಿಕಾತೀರ್ಥದಲ್ಲಿ ಎಲ್ಲ ದೇವತೆಗಳೂ ಸ್ನಾನ ಮಾಡುತ್ತಿರುವರಂತೆ. ಇದಕ್ಕೆ ಪಾವಿತ್ರ್ಯತೆಯ ಭಾವನೆಯು ಉಚ್ಚತಮವಾಗಿದೆನ್ನಬಹುದು. ಆದರೆ ಇದರಲ್ಲಿಯ ನೀರನ್ನು ಸ್ವಚ್ಛವಾಗಿಡಲು ಯಾವಾಗಲೂ ದಕ್ಷತೆಯಿಂದ ಯಾರೂ ಪ್ರಯತ್ನಿಸುವದಿಲ್ಲ. ಇದರಿಂದ ಹೊಲಸುನೀರಿನಲ್ಲಿಯೇ ಸ್ನಾನಮಾಡಬೇಕಾಗುತ್ತದೆ.

ಅಸೀವರುಣಯೋರ್ಮಧ್ಯೇ ಪಂಚಕ್ರೋಶಂ ಮಹತ್ತರಂ

ಅಮರಾ ಮುಕ್ತಿಮಿಚ್ಛಂತಿ ನರಾಣಾಂ ತತ್ರ ಕಾ ಕಥಾ।

ಎಂಬದಾಗಿ ಕಾಶೀಮಹಾತ್ಮೆಯಲ್ಲಿ ಹೇಳಲ್ಪಟ್ಟಿದೆ.

ಕಾಶಿಯಲ್ಲಿ ೨೦೦ ಘಾಟುಗಳಿವೆ. ೧೧೦೦೦ ಪ್ರಾಚೀನ ದೇವಾಲಯಗಳಿವೆ. ಹೊಸದಾಗಿ ಕಟ್ಟಲ್ಪಟ್ಟ ಗುಡಿಗಳನ್ನು ಎಣಿಸಿದರೆ, ಪಂಚಕ್ರೋಶಿಯಲ್ಲಿ ೩ ಲಕ್ಷಕ್ಕಿಂತಲೂ ಹೆಚ್ಚಾಗುವವು

ಪಂಚತೀರ್ಥ ಹಾಗೂ ಪಂಚಕ್ರೋಶ ಹೆಂಬೆರಡು ಕ್ಷೇತ್ರ ವಿಧಿಗಳನ್ನು ಇಲ್ಲಿ ಯಾತ್ರಿಕರು ಮಾಡುವರು ಪಂಚತೀರ್ಥವೆಂದರೆ- (೧) ಅಸಿ ಸಂಗಮತೀರ್ಥ ಅಥವಾ ಹರಿದ್ವಾರ ತೀರ್ಥ (೨) ದಶಾಶ್ವಮೇಧ ತೀರ್ಥ ಅಥವಾ ರುದ್ರಸರೋವರ (೩) ಮಣಿಕರ್ಣಿಕಾ ತೀರ್ಥ (೪) ಪಂಚಗಂಗಾ ತೀರ್ಥ (೫) ಗಂಗಾವರುಣ ಸಂಗಮ ಅಥವಾ ಪಾದೋದಕ ತೀರ್ಥ, ಇವು ದೂರ ದೂರದಲ್ಲಿವೆ. ಕೆಲವರು ನಾವಿನಲ್ಲಿ ಕುಳಿತುಕೊಂಡು ಹೋಗಿ ಇವೆಲ್ಲ ತೀರ್ಥಗಳನ್ನು ಒಂದೇ ದಿವಸದಲ್ಲಿ ತೀರಿಸುವರು. ಕೆಲವರು ಕಾಲಿನಿಂದ ನಡೆದು ೨ ದಿನಗಳಲ್ಲಿ ತೀರಿಸುವರು. ಪಂಚಕ್ರೋಶಯೆಂದರೆ- (೧) ಕರ್ದಮ ತೀರ್ಥ. (೨) ಭೀಮಚಂಡಿ (೩) ರಾಮೇಶ್ವರ (೪) ಕಪಿಲಧಾರಾ (೫) ಕಾಶಿ. ಕಾಶಿಯಿಂದ ಕರ್ದಮೇಶ್ವರ ೬ ಮೈಲು; ಇಲ್ಲಿಂದ ಭೀಮಚಂಡಿ ೧೫ ಮೈಲು; ಮುಂದೆ ರಾಮೇಶ್ವರ ೧೪ ಮೈಲು. ಅಲ್ಲಿಂದ ಕಪಿಲಧಾರಾ ೧೫ ಮೈಲು ಕಪಿಲಧಾರಾದಿಂದ ಕಾಶಿಯು ೫ ಮೈಲು. ಈ ೫೫ ಮೈಲುಪ್ರದೇಶಕ್ಕೆ ಪಂಚಕ್ರೋಶ ಯೆಂಬ ಹೆಸರಿದೆ. ಇದಕ್ಕೆ ಪಂಚಕ್ರೋಶ ಎಂಬ ಹೆಸರು ಹೇಗೆ ಬಂದಿತೋ ನಮಗೆ ತಿಳಿಯಲಿಲ್ಲ ಅಲ್ಲಿ ಅನೇಕರಿಗೆ ವಿಚಾರಿಸಿದರೂ ನಮಗೆ ಸಮಾಧಾನಕರವಾದ ಉತ್ತರ ದೊರೆಯಲಿಲ್ಲ. ಈ ಪ್ರದೇಶದಲ್ಲಿಯ ತೀರ್ಥಗಳೆಲ್ಲ ಹೊಲಸು. ನೀರು ಸ್ವಚ್ಛವಾಗಿರುವದೇ ಇಲ್ಲ. ಅಸಂಖ್ಯರಾದ ಯಾತ್ರಿಕರು ದಿನಾಲು ಇವುಗಳಲ್ಲಿ ಸ್ನಾನಮಾಡುತ್ತಲಿದ್ದರೂ, ಅವನ್ನು ಸ್ವಚ್ಛವಾಗಿಡುವದರ ಕಡೆಗೆ ಯಾರೊಬ್ಬರೂ ವಿಶೇಷವಾಗಿ ಲಕ್ಷಿಸಿಲ್ಲ. ಶ್ರೀಮಂತರಾದ ಧರ್ಮಭಾವನೆಯುಳ್ಳವರಾದ ಜನರಾಗಲಿ, ಸರಕಾರದವರಾಗಲಿ, ಕಾಶಿಯ ಮುನಸಿಪಾಲ್ಟಿಯವರಾಗಲಿ, ಈ ಬಗ್ಗೆ ಯೋಗ್ಯವಾದ ವ್ಯವಸ್ಥೆಯನ್ನು ಮಾಡುವದು ಅತ್ಯಾವಶ್ಯಕವು. ಭೀಮಚಂಡಿ ಎಂಬ ಆ ದೇವತೆಯು ಹೆಸರು ಈ ದೇವಿಯ ದರ್ಶನವನ್ನು ತೆಗೆದುಕೊಂಡರೆ, ಮಕ್ಕಳಾಗದ ಸ್ತ್ರೀಯರಿಗೆ ಬೇಗನೇ ಮಕ್ಕಳಾಗುವವಂತೆ! ಇದಕ್ಕಾಗಿ ಅನೇಕ ಸ್ತ್ರೀಯರು ಈ ದೇವಿಯ ದರ್ಶನಕ್ಕೆ ಹೋಗುವದೇಯಿಲ್ಲ! ರಾಮೇಶ್ವರವೆಂದರೆ ವರುಣಾನದಿಯಲ್ಲಿದ್ದ ರಾಮಲಿಂಗಸ್ಥಾನವು. ಇಲ್ಲಿಯ ಘಾಟ ಹಾಗೂ ಗುಡಿಗಳು ಬಹು ಅಂದವಾಗಿವೆ. ಈ ೫೫ ಮೈಲಿನ ಪ್ರವಾಸವನ್ನು ಚಕ್ಕಡಿಯಲ್ಲಿ ಸಾಗಿಸಬೇಕಾಗುವದು. ಕೆಲವರು ಎರಡು ದಿನಗಳಲ್ಲಿ ಮುಗಿಸುತ್ತಾರೆ ಕೆಲವರು ಮೂರು ದಿನ ತೆಗೆದುಕೊಳ್ಳುವರು. ಕಾಶಿಯಲ್ಲಿಯ ಚಕ್ಕಡಿಗಳಿಗೆ ಮೂರು ಎತ್ತುಗಳನ್ನು ಹೂಡುವದನ್ನು ನೋಡಿ ನಮಗೆ ಆಶ್ಚರ್ಯವಾಯಿತು. ಎರಡು ಎತ್ತುಗಳು ಜೋಡಿಯಿಂದ ಹೂಡಲ್ಪಟ್ಟು, ಅವುಗಳ ಮುಂದೆ ಒಂಟಿ ಎತ್ತನ್ನು ಹೂಡುವರು. ಅಥವಾ ಎರಡೇ ಎತ್ತುಗಳನ್ನು ಹೂಡಿದರೆ, ನಮ್ಮಲ್ಲಿಯಂತೆ ಎಡಬಲಗಳಲ್ಲಿ ಜೋಡಿಯಿಂದ ಹೂಡದೆ , ಒಂದರ ಮುಂದೆ ಇನ್ನೊಂದನ್ನು ಹೂಡುವರು; ಇದಂತೂ ನಮಗೆ ಬಹಳೇ 'ತಮಾಷ'ಯಾಗಿ ತೋರಿತು. ಚಕ್ಕಡಿಗಳ ಕಟ್ಟುವಿಕೆಯಾದರೂ ಒಂದು ವಿಚಿತ್ರತರದ್ದಾಗಿರುತ್ತದೆ. ಇರಲಿ ಈ ಪಂಚಕ್ರೋಶದ ಯಾತ್ರೆಯಿಂದ ಕಾಶಿಯ ಪ್ರದಕ್ಷಿಣೆಯಾಗಿ ಪ್ರದಕ್ಷಿಣೆಯ ಸಂಪೂರ್ಣ ಪುಣ್ಯವು ಲಭಿಸುವದು.

ಒಟ್ಟಿಗೆ ಇಲ್ಲಿ ಪಂಚತೀರ್ಥದವುಹಿ, ಪಂಚಕ್ರೋಶದವುಹಿ ಹೀಗೆ ೧೦ ಪ್ರದಕ್ಷಿಣೆಯಾದಮೇಲೆ, ಪಿಶಾಚ ವಿಮೋಚನದಲ್ಲಿ ೧೧ ನೆಯ ಶ್ರಾದ್ಧವಾಗುವದು. ಈ ದೇವಾಲಯದಲ್ಲಿ, ಒಂದು ಬಹು ದೊಡ್ಡವಾದ ಕುಂಡವಿದೆ ಅದರ ತಲೆಯಲ್ಲಿ ಎರಡು ಪಾದಗಳಿವೆ. ಪಿಶಾಚ ಬಾಧೆಯಿದ್ದವರು ತ್ರಿಪಿಂಡಿಶ್ರಾದ್ಧವನ್ನು ಮಾಡಿದರೆ, ಆ ಬಾಧೆಯಿಂದ ಮುಕ್ತರಾಗುವರೆಂದು ಹೇಳುತ್ತಾರೆ

ಈ ಶ್ರಾದ್ಧವಿಧಿಯೆಲ್ಲ ಮುಗಿದಮೇಲೆ, ವಿಶ್ವೇಶ್ವರ ಬಿಂದುಮಾಧವರ ಆರಾಧನೆ, ಗಂಗಾಪೂಜೆ, ತೀರ್ಥ ಪುರೋಹಿತರ ಪೂಜೆ, ಕಾಲಾಷ್ಟಕ ಪ್ರಸಾದ ಗ್ರಹಣ ಮೊದಲಾದ ಮಂಗಲಕಾರ್ಯಗಳನ್ನು ತೀರಿಸಿಕೊಂಡು ಕಾಶಿಯಿಂದ ಹೊರಡುವರು. ಶಕ್ಯವಿದ್ದರೆ ನವಮಾಸ, ಕಡೆಗೆ ನವದಿನ ಕನಿಷ್ಠಪಕ್ಷಕ್ಕೆ ತ್ರಿರಾತ್ರಿಗಳನ್ನಾದರೂ ಕಾಶಿಯಲ್ಲಿ ಕಳೆಯಬೇಕೆಂದು ಆಖ್ಯಾಯಿಕೆಯಿದೆ. ವಿಧಿಪೂರ್ವಕವಾಗಿ ಕಾಶೀಯಾತ್ರೆಯನ್ನು ಮಾಡುವವರಾದರೆ ೧೫ ದಿನಗಳು ಬೇಕಾಗುವವು.

ಕಾಶಿಯಲ್ಲಿ ವ್ಯಾಪಾರಮಾಡುವದು ಪ್ರವಾಸಿಕರಿಗೆ ತೊಂದರೆಯೇ. ದಲ್ಲಾಳಿಗಳಾದ ಭಯ್ಯಾ ಜನರು ಸವಿಮಾತುಗಳಿಂದ ಯಾತ್ರಿಕರ ಮನಸ್ಸನ್ನು ಒಲಿಸಿ, ಅವರಿಗೆ ಅನೇಕ ರೀತಿಯಿಂದ ವ್ಯಾಪಾರದಲ್ಲಿ ಟೊಪ್ಪಿಗೆಯನ್ನು ಹಾಕುವರು. ಒಂದಾವರ್ತಿ ಈ ಭಯ್ಯಾಜನರ ಕೈಯಲ್ಲಿ ಸಿಕ್ಕರೆ, ತಿರುಗಣೀ ಮಡುವಿನಲ್ಲಿ ಸಿಕ್ಕಂತೆಯೇ ಆಗುವದು. ನಿಮ್ಮ ಸಹಾಯವು ನಮಗೆ ಬೇಡವೆಂದರೂ ಅವರು ನಮ್ಮನ್ನು ಬಿಡರು. ನೆರಳಿನಂತೆ ಅವರು ನಮ್ಮ ಬೆನ್ನು ಹತ್ತೇ ಬರುವರು. ಅವರು ಹಿಂದೆಯಿದ್ದರೆ, ಅವರ ಕಮಿಶನಿಗಾಗಿ ವ್ಯಾಪಾರಸ್ಥರು ನಮ್ಮಕೂಡ ವ್ಯವಹಾರಮಾಡುವದಿಲ್ಲ. ಸ್ವಲ್ಪದರಲ್ಲಿ ಹೇಳಬೇಕೆಂದರೆ, ಕಾಶಿಯ ತುಂಬೆಲ್ಲ ತಕ್ಕರ ವ್ಯಾಪಾರ ಕ್ಷೇತ್ರ ಪುರೋಹಿತರಿಂದ ಹಮಾಲರವರೆಗೆ ಎಲ್ಲರೂ ಯಾತ್ರಿಕರ ದುಡ್ಡನ್ನು ಸೆಳೆಯುವದರಲ್ಲಿಯೇ ಇರುವರು. ಈ ಯಾತ್ರೆಯಲ್ಲಿ ಕೆಳಗಿನ ಶ್ಲೋಕವು ನನಗೆ ಯಾವಾಗಲೂ ನೆನಪಾಗುತ್ತಲಿದ್ದಿತು:—

ಅನ್ಯಕ್ಷೇತ್ರೇ ಕೃತಂ ಪಾಪಂ ಪುಣ್ಯಕ್ಷೇತ್ರೇ ವಿನಶ್ಯತಿ।

ಪುಣ್ಯಕ್ಷೇತ್ರೇ ಕೃತಂ ಪಾಪಂ ವಜ್ರಲೇಪೋ ಭವಿಷ್ಯತಿ॥





1 For chevrolet new Cars & Trucks on hire purchage system
2 For quick: Economical and satisfactory service, please go for the welknno Chevrolet cars, Trucks products in the Deccan
3 For all spare parts of the Various cars specially Chevrolet, Ford, Dodge and Overland cars,
4 For the cheapness in tyre tubes of all manufactares,
5 For all kinds of Lubricating oils Grease etc,
6 For undertaking all kinds of tyre tube repairs in Vulcansing by a specialist to give satisfactory work,
7 For Building motor bodies of various types by workers onin uptodate line.
8 For all kinds of motor repairs.
9 For second hand otot Cars and lossies at cheap rates.

Apply to:-

Messrs Royal motor service
Automobile Engineers
Bagalkot.

Sub dealers
Chevrolet car
for the Bijapur Dist.

ಅಲಭ್ಯಲಾಭವು.

(೧) ಶೆವ್ಹರ್‌ಲೆಟ್ ಹೊಸಗಾಡಿಗಳನ್ನು ಮತ್ತು ಟ್ರಕ್ಸಗಳನ್ನು ಬಾಡಿಗೆಯಿಂದಾಗಲೀ ಮಾರಲಿಕ್ಕಾಗಲೀ ತೆಗೆದುಕೊಳ್ಳುವದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
(೨) ವೇಗವಾಗಿ, ನಿಯಮಿತವಾಗಿ, ಮತ್ತು ಚನ್ನಾಗಿ ನಡೆಯುವಂಥ ಶೆವ್ಹರ್‌ಲೆಟ್ ಗಾಡಿಗಳೂ, ಟ್ರಕ್ಸಗಳೂ ದಕ್ಷಿಣಪ್ರಾಂತದಲ್ಲಿ ಬಹು ಪ್ರಸಿದ್ಧವಾಗಿವೆ
(೩) ಶೆವ್ಹರ್‌ಲೆಟ್, ಫೋರ್ಡ, ಡ ಜ್, ಓವ್ಹರಲೆಂಡ ಎಲ್ಲಕಾರಗಳ ಬೇರೆ ಬೇರೆ ಭಾಗಗಳು ನಮ್ಮಲ್ಲಿ ದೊರೆಯುತ್ತವೆ
(೪) ಎಲ್ಲತರದ ಕಂಪನಿಗಳಿಂದ ವಿಶೇಷತಃ ಡನ್‌ಲೊಪ ಕಂಪನಿಯಿಂದ ಟ್ಯೂಬ ಮತ್ತು ಟಾಯರಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ.
(೫) ಮೊಟಾರ ಬಂಡಿಗಳಿಗೆ ಬೇಕಾಗುವಂಥ ಎಲ್ಲ ತರದ ಎಣ್ಣೆಯು ಸಿಗುವದು
ಟ್ಯೂಬ್ ಮತ್ತು ಟಾಯರಗಳನ್ನು ರಿಪೇರಿಯನ್ನು (ವಲ್ಕನಾಯಜಿಂಗ) ಆ ಕೆಲಸದಲ್ಲಿ ನಿಷ್ಣಾತರಾದವರಿಂದ ಮಾಡಿಸಿ
(೬) ಯೋಗ್ಯ ವೇಳೆಗೆ ಕೊಡುವೆವು
(೭) ನಾನಾತರದ ಬಂಡಿಗಳ ಭಾಗಗಳನ್ನು ಉತ್ತಮ ರೀತಿ ರಿಪೇರಿ ಮಾಡುವವರಿಂದ ಮಾಡಿಸಿ ಕೊಡುತ್ತೇವೆ.
(೮) ಎಲ್ಲ ಬಗೆಯ ಮೊಟಾರುಗಳ ದುರಸ್ತಿ ಕೆಲಸವು ಮಾಡಲ್ಪಡುವದು
(೯) ಹೊಸ ಮತ್ತು ಸೆಕಂಡ ಹ್ಯಾಂಡ ಮೋಟಾರಗಳೂ ಲಾರಿಗಳೂ ಬೇಕಾದ ವೇಳೆಗೆ ಯೋಗ್ಯ ದರದಿಂದ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸ:—
ವಿಜಾಪೂರ ಜಿಲ್ಲೆಯಲ್ಲಿ ಶೆವರೋಲೆಟ್ಟ ಮೋಟಾರಗಳಿಗೆ ಸಬ್‌ಏಜಂಟರು
ಮೆಸೆರ್ಸ ದಿ. ರಾಯಲ್ ಮೋಟಾರ ಸರ್ವ್ಹಿಸ ಬಾಗಲಕೋಟೆ

ಅಸಲು, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ
ರಿಸ್ಟವಾಚ



ಬೆಲೆ ೭-೮-೦ ಪಟ್ಟಿ,
ಸಹಿತ; ಟಿ ಖ ಪುಕ್ಕಟೆ
ಟಿಪ್ಪಣಿ:— ಗಡಿಯಾರ
ವನ್ನು ಕಳಿಸುವಾಗ್ಗೆ ಕಾಳಜಿ
ಯಿಂದ ಪರಿಶೋಧಿಸಿ ಮತ್ತು ಟಾ
ಯಿಮನ್ನಿಟ್ಟು ಕಳಿಸುವೆವು
ಲಿಬರೋ ವಾಚ ಕಂ. (India) ಮುಂಬೈ ನಂ. ೪

ಶಾವಿಗೆ! ಗಂಧ! ಹಪ್ಪಳ!!!

ಸುಗಂಧ ದ್ರವ್ಯಗಳು.

ಊದಿನ ಕಡ್ಡಿ, ಕಸ್ತೂರಿ ಬಿಲ್ಲೆ, ಅತ್ತರ, ಸೀಗೆಕಾಯಿ ಪುಡಿ, ಭೃಂಗಾಮಲಕ ತೈಲ, ರೋಜವಾಟರ, ವಡ್ಡಿ, ಹಾಲವಡ್ಡಿ ಇವೇ ಮೊದಲಾದ ಬೆಂಗಳೂರಿನ ಪ್ರಸಿದ್ಧವಾದ ಎಲ್ಲ ಬಗೆಯ ಸುಗಂಧ ದ್ರವ್ಯಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತವೆ. ಅಲ್ಲದೆ ಗುಳೇದಗುಡ್ಡ, ಬೆಂಗಳೂರಿನ ರಸಭರಿತವಾದ ಹೂವಿನ ಕನ್ಯಾಗರಿ ಮತ್ತು ಬಹುರುಚಿಕಟ್ಟಾಗಿರುವ ಹುರಿದ ಪುಡಿ, ಮಸಾಲೆ, ಚಟ್ನಿ, ಶಾವಿಗೆ, ಹಪ್ಪಳಗಳೂ ದೊರೆಯುವವು. ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್. ಕ್ಯಾಟಲಾಗಿಗಾಗಿ ಬರೆಯಿರಿ.

ವಿಳಾಸ:- ಸುಗಂಧ c/o "ಕನ್ನಡಿಗ" ಬಾಗಲಕೋಟೆ

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to-
N. K. Kulkarni. Agent Bagalkot.

ತ್ವರೆಮಾಡಿರಿ! ಅಡಚಣಿಯು ದೂರಾಯಿತು!

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವನಮ್ಮ ಮಾಲಕೀಯ ಪ್ಲಾಟಗಳನ್ನು ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗಗಳು ಈ ಊರಲ್ಲಿ ಬೇರೆಕಡೆಗೆ ಸಿಗಲಿಕ್ಕೆ ಶಕ್ಯವೇ ಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನುಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನು ಪಡೆಯಬಹುದು. ತೊಗೊಳ್ಳಬಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟೆ } ಬಿಂದುರಾವ ಟಂಕಸಾಲಿ
೨೧-೭ ೨೬ } ಡಾಕ್ಟರ,

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನರದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೨ ಮಿ. ಸೈಯದ್ ಜಹೂರಅಲೀ ಬಿ ಎ ಬಿ. ಟಿ. ಶಾಳಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ ನಂ. ೨೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಎಡಪಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೆ. ವನಕೊಂಡ, ಅಕ್ಕಸಾಲೆ ಬೆಡೀಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಶೇಕ ಬಾವುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೪ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ



ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಸಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಪ್ರಾಣಾಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಡಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರವು ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ಮೈ ಹೊಂಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶ್ಯ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ ಇಲ್ಲ ಪೇಷ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮೀಶನ್ ಸಿಗುತ್ತದೆ. ಖರ್ಚು ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನ ಇಲ್ಲ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಲಾ ವಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:— **ಎಚ್. ಎಮ್. ಮುಲ್ಲಾ.**

ಸಂಪಾದಕ ಅರ್ಕಶಫಾ ಹೆಡ್ ಆಫೀಸ ಪೋಷ್ಟ ಶಹಾಪೂರ ಬೆಳಗಾವ

ಪಕ್ಷಸಾಧಕವಾದ ಪ್ರಮಾಣಗಳನ್ನೂ
ವ ಇ ಪತ್ರಾದಿ ವಚನಗಳನ್ನೂ ಶ್ರೀಗ
ರೆ. ಆವಶ್ಯಕರು ಶ್ರೀ, ಜೇರೆಯವರಿಂದ
ಮಾಣಗಳಿದ್ದರೆ ಅವರ ಕಡೆಗೆ ಕಳಿಸ
ೕ.

ವಾಹ ನಿಷೇಧ.

ರಾಜ ಸುಧಾರಣೆಯ ಸಂಘದವರಿಂದ)

ಕತ್ರೆಯನ್ನು ಸುಖಕರವಾಗಿ ಸಾಗಿಸಿ ು ಪರಸ್ಪರ ಸಹಾಯವಾಗಲೆಂಬ ರೇ ವಿವಾಹ ಪದ್ಧತಿಯು ಏರ್ಪಟ್ಟಿದೆ. ಾಗಕಕ್ಕೆ ಸ್ತ್ರೀ ಪುರುಷರಲ್ಲಿ ತಕ್ಕಷ್ಟು ಿದ್ಧಿಕ ಸಾಮರ್ಥ್ಯಗಳು ಇರಬೇಕಾ ಬೇಗಿರುವಾಗ ಚಿಕ್ಕಮಕ್ಕಳಿಗೆ ವಿವಾಹ ಾಹದ ಉದ್ದೇಶ ಮತ್ತು ಮಹತ್ವಗ ಆಚರಿಸುವದು ಸಾಧ್ಯವೇ? ಎಂದಾ ಸ ಲಗ್ನವಾಗಲೇಬೇಕಾಗಿದೆಯೆಂದು ಮಕ್ಕಳಿಗೆ ಬಾಸಿಂಗವನ್ನು ಕಟ್ಟಿದರೆ ುಂದೆ ಆ ದಂಪತಿಗಳು ಈ ಕಠಿಣತರ ಯನ್ನು ಸುಖಕರವಾಗಿ ಸಾಗಿಸಲು ಅನೇಕ ತಾಯಿತಂದೆಗಳು ತಮ್ಮ ತಿಯಮೇಲೆ ಕುಳ್ಳಿರಿಸಿಕೊಂಡು ಆ ವರಿಗೆ ತಿನ್ನಲಿಕ್ಕೆ ಕೊಟ್ಟು ಲಗ್ನಮಾ ರು ಮೊಮ್ಮಕ್ಕಳನ್ನುನೋಡಿ ಕೃತ ರ್ಥಕವಾಯಿತೆಂದು ಭಾವಿಸಿ ತಮ್ಮ ಾಡುತ್ತಿರುವರು. ಅವರು ದುಷ್ಟಿನ ಲಗ್ನಕ್ಕೆ ಹಣವೆಚ್ಚವಾಗುವದೆಂದು ುವ ಲಗ್ನಗಳಿಗಡ ಚಿಕ್ಕಮಕ್ಕಳ ುತ್ತಾರೆ. ಈ ವಿಧವಾದ ಅನೇಕ ನಡೆಯುತ್ತಿರುವ ಬಾಲ್ಯವಿವಾಹವು ದೆಶೊ ು ಜನಾಂಗದ ಾರಿರಕ ತಿಗೆಯು ಸರಿಯಾಗಿ ಆಗಲಾರದು.

ಲಗ್ನಮಾಡುವದರಿಂದ ಮಕ್ಕಳ ಬಲವಾದ ಪ್ರತಿಬಂಧ ಉಂಟಾಗು ತ್ಪತ್ತಿಯಂಥ ಅತ್ಯಂತ ಮಹತ್ವವಾದ ು ಈಡಾಗಬೇಕಾಗುತ್ತದೆ. ಇವ ಮಾನಸಿಕ ಶಕ್ತಿಗಳು ಕ್ಷೀಣವಾಗಿ ಜಾಗ್ರತೆ ನಿರ್ಬಲರಾಗಿ ಅನೇಕ ಎತ್ತಾರೆ. ಆದಕಾರಣ ಪಾಶ್ಚಾತ್ಯ ಬಾಲ್ಯವಿವಾಹವು ಭಯಂಕರವಾದ ೃಷ್ಟಿದೆ ಜಪಾನದಲ್ಲಿಯೂಕೂಡ ುವರೆಯಾಗಲಿ ೧೭ ವರ್ಷಗಳೊಳ ಾಹವಾಗುವದು ಅಪರಾಧವೆಂದು ಮ್ಮ ದೇಶದಲ್ಲಿ ಸುಪ್ರಸಿದ್ಧ ಸಂಸ್ಥಾ ದಲ್ಲಿಯೂ ಕೂಡ ಹನ್ನೆರಡುವರ್ಷ ಳಿ ಹದಿನಾರುವರ್ಷಗಳ ಪೂರ್ವ ಗ್ನವಾಗಬಾರದೆಂದು ರಾಜಶಾಸ

[ಮುಂದೆ ಸಾಗುವದು]

IN LIFE ASSURANCE
GO TO **THE ORIENTAL**
IN AGE SIZE AND
THE GREATEST
LIFE ASSURANCE C
Apply for full particula
N. K. Kulkarni.

ತ್ವರೆಮಾಡಿರಿ! ಅಡ

ಮನಿ, ವಖಾರ, ಮೋಟಾರ
ಇಮಾರತ ಕಟ್ಟಿಸ
ಸುಸಂಧಿಯ

ರೇಲ್ವೆ ಸ್ಟೇಶನದಿಂದ ಒಂದೇಡ ತ್ತು ಮುನಸಫ ಕೋರ್ಟಿನಿಂದಾ ತೀರ ವ್ಮ ಮಾಲಕೀಯ ಪ್ಲಾಟಗಳನ್ನ ಖರ ಸಾವಕಾರರಿಗೆ, ಮೋಟಾರದ ಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಗ್ಯಕರವಾದದ್ದು. ಇದಕ್ಕೆ ಮೇಲಾ ಬೇರೆಕಡೆಗೆ ಶಿಗಲಿಕ್ಕೆ ಶಕ್ಯವೇಇಲ್ಲ. ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಸ ಮು. ಪತ್ರದ್ವಾರಾ ಅಗರ ಸಮಕ್ಷವ ಪಡೆಯಬಹುದು. ತೊಗೊ ಬಪೇಕ್ಷಿ

ಕಿಲ್ಲೆ, ಬಾಗಲಕೋಟೆ
೩೧-೭ ೨೬

ದಿ ಏಶಿಯಾಟಿಕ್ ಗೌರ್ನ
ಲಾಯಿಫ ಅಶ್ಯೂರನ್ಸ ಕಂ
ಪ್ರಕಟ

ಈ ಕಂಪನಿಯ ಬಾಂಡು ಹೊ ಕ್ರಮವು ೧೯೩೬ ನೇ ಇಸ್ವಿಯ ೫-೩೦ ಗಂಟೆಗೆ ಈ ಕಂಪನಿಯ ಹೆ ಜುನಾಯಿಸಲ್ಪಟ್ಟ ...

ಗಿಸ್ಟನ್ ಮಂಡಲದಲ್ಲಿ ರಿಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಬಾಗಲಕೋಟೆ ಪ್ರಕರಣ ಕನ್ನಡಿಗ ಆಶ್ರೀನ ಒಹಳ ೧ ಶಕೆ ೧೮೫೮

ಕನ್ನಡಿಗರ ಬಗ್ಗೆ ಸ್ಪೇಶಲ್ ವವಸ್ಥೆ !!

ತ್ವರೆ ಮಾಡಿರಿ! ತ್ವರೆ ಮಾಡಿರಿ!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿದ್ದೇವೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ. ಪುಣೆ ಸಿಟಿ.

ಉಚಿತ! ಉಚಿತ!! ಉಚಿತ!!!

ಜಗದೀಶನು ಎಲ್ಲರಿಗೂ ಸುಖಕೊಡಲಿ.

೧ ಥಿಸ್ಕರ, ಚಾತುರ್ಥಿಕ ಥಳಿ. ಇನ್ ಫ್ಲುಯಂಜಾ. ಹೊಟ್ಟೆ ಕಡಿತ, ಕೆಮ್ಮು ಈ ರೋಗಗಳ ಮೇಲೆ ಉತ್ತಮ ಗುಣಕಾರಿಯಾದ ಒಂದೇ ಔಷಧವು.

೨ ಹೇಳಿನ ಕಡತಕ್ಕೆ ತೀವ್ರ ಗುಣಕಾರಿಯಾದ ಔಷಧವು.

ಈ ಹೊತ್ತೇ ಬೇಕಾದವರು ಎರಡಾಣೆಯ ಅಂಚೇ ಟಿಕೇಟುಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಉಚಿತವಾಗಿ ಕಳುಹಿಸುವೆವು. ತ್ವರೆಮಾಡಿರಿ! ತ್ವರೆಮಾಡಿರಿ!!

ವಿಳಾಸ:— ಕಾರ್ಯದರ್ಶಿ ಶ್ರೀ ಹರಿಹರ ವಾಚನಾಲಯ ಪಾರ್ಶ್ವವಾಡ. ಬೀಡು ಮತ್ತು ಅಂಬೇಕಟ್ಟಿ ಪಾರ್ಶ್ವವಾಡ. ಜಿಲ್ಲೆ— ಬೆಳಗಾಂವ.

ಕನ್ನಡಿಯಲ್ಲಿ ...
ಬರೀಯಾರಿ ನಮ್ಮ ವಿಳಾಸ:—ಎಚ್. ಎಮ್. ಮುಲ್ಲಾ.
ಸಂಪಾದಕ ಆರ್ಟ ಶಿಕ್ಷಾ ಹೆಡ್ ಅಫೀಸಪೋಷ್ಟ ಶಹಾಪೂರ ಬೆಳಗಾವ

ಯಾವ ಪಂಚಾಂಗವು ಗ್ರಾಹ್ಯವು?

ಶ್ರೀ ರಾಮಚಂದ್ರೋ ವಿಜಯತೆ

ಶ್ರೀ ಮತ್ಪರಮಹಂಸ ಪರಿವ್ರಾಜಕಾಚಾರ್ಯ ಇತ್ಯಾದ್ಯನೇಕ ಗುಣಸಂಪನ್ನ ಶ್ರೀ ಮದುತ್ತರಾದಿ ಮಠಾಧೀಶ ಶ್ರೀಮತ್ಸತ್ಯಜ್ಞಾನ ತೀರ್ಥ ಕರಕಮಲ ಸಂಜಾತ ಶ್ರೀಮತ್ಸತ್ಯಧ್ಯಾನತೀರ್ಥ ಶ್ರೀಪಾದಂಗಳವರ ಕಡೆಯಿಂದ ೩—

ಅಶೇಷಜ್ಯೋತಿರ್ವಿದರಿಗೂ ನಿಖಿಲಧರ್ಮಶಾಸ್ತ್ರಪಂಡಿತರಿಗೂ.

ಸಾಂಪ್ರತ

ಸೂರ್ಯಚಂದ್ರಾದಿ ಗ್ರಹಗಳಿಗೆ ದೃಕ್ತುಲ್ಯತಾ ಸಂಪಾದಕವಾದ ಬೀಜ ಸಂಸ್ಕಾರಕೊಟ್ಟು ಆಗಾಗ್ಗೆ ಹೊಸದಾಗಿ ರಚಿತವಾದ ಕರಣಗ್ರಂಥಗಳ ಗಣಿತದಿಂದ ಪ್ರಾಪ್ತರಾದ ಸೂರ್ಯಚಂದ್ರರಮೇಲಿಂದ ಸಿದ್ಧವಾದ ತಿಥ್ಯಾದಿಗಳನ್ನು ಸಕಲ ಧರ್ಮಕಾರ್ಯಕ್ಕಾಗಿ ಉಪಯೋಗಿಸಬೇಕೆಂದೂ ಗ್ರಹಣಾದಿಗಳನ್ನೂ ಸಹ ಆ ರವಿಚಂದ್ರರ ಮೇಲಿಂದಲೇ ಆಚರಿಸತಕ್ಕದ್ದೆಂದೂ ಎಷ್ಟೋ ಜನರ ಅಂಬೋಣವಿದೆ

ಗ್ರಹಣ, ಶೃಂಗೋನ್ನತಿ ಉದಯಾಸ್ತಾದಿಗಳನ್ನು ಆಚರಿಸುವದಕ್ಕಾಗಿ ಮಾತ್ರ ಸೂರ್ಯ ಚಂದ್ರರಿಗೆ ದೃಕ್‌ತುಲ್ಯತಾ ಸಂಪಾದಕ ಬೀಜ ಸಂಸ್ಕಾರ ಕೊಡತಕ್ಕದ್ದು. ಮತ್ತು ಬೀಜ ಸಂಸ್ಕಾರ ಕೊಡದಲೆ ಸಿದ್ಧಾಂತ ಗ್ರಂಥೋಕ್ತ ಗಣಿತದಿಂದ ಪ್ರಾಪ್ತವಾದ ಅಂದರೆ ಕೇವಲ ಖಂಡ ಫಲ ಸಂಸ್ಕಾರ ಕೊಡಲ್ಪಟ್ಟ ಸೂರ್ಯಚಂದ್ರರಿಂದ ಸಿದ್ಧವಾದ, ಯುಗಾದಿ, ಮನ್ವಾದಿ, ಕೃಷ್ಣಜಯಂತಿ ವಿಜಯಾದಶಮಿ, ಮೊದಲಾದ ತಿಥಿಗಳನ್ನು ಧರ್ಮಕಾರ್ಯಕ್ಕೂ ವ್ರತಶ್ರಾದ್ಧಾದಿಗಳಿಗೂ ಉಪಯೋಗಿಸಬೇಕೆಂದು ಬೇರೆ ಹಲವರ ವಾದವಿದೆ.

ಈರೀತಿ ಮತಭೇದವಿರುವದರಿಂದ ಆ ಆ ಪಕ್ಷವನ್ನವಲಂಬಿಸಿ ಅನೇಕ ಪಂಚಾಂಗಗಳೂ ಹೊರಡುತ್ತಲಿವೆ. ಆಕಾರಣ, ಯಾವಪಂಚಾಂಗದ ಮೇಲಿಂದ ಧರ್ಮಕಾರ್ಯವನ್ನಾಚರಿಸಬೇಕೆಂಬ ಸಂಶಯದಿಂದ, ಅನೇಕ ಜನರು ನಮ್ಮೆಡೆಗೆ ಒಂದು "ನಿರ್ಣಯಮಾಡಿ ಕೊಡಬೇಕೆಂದು" ಬಿನ್ನವಿಸಿದ್ದಾರೆ. ಅದ್ದರಿಂದ ಉಭಯ ಪಕ್ಷದ ಜ್ಯೋತಿಶ್ಶಾಸ್ತ್ರಸಿದ್ಧಾಂತ ಮತ್ತು ಧರ್ಮ ಶಾಸ್ತ್ರ ಪಂಡಿತರ ಸಭೆಯನ್ನು ಸ್ವಲ್ಪದಿನಗಳಲ್ಲಿ ಕೂಡಿಸಿ, ಅಲ್ಲಿ, ಆ ಆ ಪಕ್ಷದವರು ಮಂಡಿಸಿದ ಪ್ರಮಾಣಗಳ ಬಲಾಬಲ ವಿಚಾರಮಾಡಿ ಇಂತಹ ಪಂಚಾಂಗಗಳು ಗ್ರಾಹ್ಯವೆಂದು ನಿರ್ಣಯಮಾಡಬೇಕೆಂದು ನಿಶ್ಚಯಿಸಿದ್ದೇವೆ.

ತಮಗೆ ಸಮ್ಮತವಿರುವ ಪಕ್ಷಕ್ಕೆ ಅನುಕೂಲವಿರುವ ಪ್ರಮಾಣಗಳನ್ನೂ ತಮ್ಮ ಪಕ್ಷಕ್ಕೆ ವಿರುದ್ಧವಿರುವ ವಚನಗಳಿಗೆ ಇರತಕ್ಕ ಆಕ್ಷೇಪಗಳನ್ನೂ ಸಹ ೨ ತಿಂಗಳೊಳಗಾಗಿ ಕೆಳಗಿನ ಪತ್ರೆಗೆ ತಾವು ಕಳಿಸಬೇಕು.

ರಾ|| ರಾ|| ಅಪ್ಪರಾವ ಜೇರೆ ಬಿ.ಎ. ಶಾಲಾಮಾಸ್ತರ
ಪೋಷ್ಟ ಅಥಣೀ ಜಿಲ್ಹಾ ಬೆಳಗಾಂವ.

ಅನಂತರ ಸಭೆಗೂಡಿಸುವ ಕಾಲಸ್ಥಲಗಳನ್ನು ಗೊತ್ತುಪಡಿಸಿ ತಮಗೆ ತಿಳಿಸುವದರಲ್ಲಿ ಬರುವದು. ಪ್ರವಾಸದ ವೆಚ್ಚವನ್ನೂ ಯೋಗ್ಯತೆಗೆ ತಕ್ಕ ಸಂಭಾವನೆಯನ್ನೂ ಕೊಡುವದರಲ್ಲಿ ಬರುವದು.

ಅದೇ ಸಮಯಕ್ಕೆ ಈ ವಿಷಯಕ್ಕೆ ಸಂಬಂಧಿಸಿದ ಇತರವಾದ ಗ್ರಸ್ತ ವಿಧಾನಗಳನ್ನೂ ನಿರ್ಣಯಿಸುವದರಲ್ಲಿ ಬರುವದು. ಇತಿ ನಿರೂಪಣಂ.

ಸೂಚನೆ ಪ್ರಥಮ ಪಕ್ಷ ಸಾಧಕವಾದ ಪ್ರಮಾಣಗಳನ್ನೂ ದ್ವಿತಿಯ ಪಕ್ಷ ಸಾಧಕವಾದ ೩ ಪತ್ತಾರು ವಚನಗಳನ್ನೂ ಶ್ರೀಗಳವರು ಅಚ್ಚು ಹಾಕಿಸಿದ್ದಾರೆ. ಆವಶ್ಯಕರು ಶ್ರೀ, ಜೇರೆಯವರಿಂದ ತರಿಸಿಕೊಂಡು, ಹೊಸ ಪ್ರಮಾಣಗಳಿದ್ದರೆ ಅವರ ಕಡೆಗೆ ಕಳಿಸಬೇಕು. ೩—ಸಂ. ಕ.

ಬಾಲ್ಯವಿವಾಹ ನಿಷೇಧ.

(ವೀರಶೈವ ಸಜ್ಜನ ಸಮಾಜ ಸುಧಾರಣೆಯ ಸಂಘದವರಿಂದ)

ಈ ಸಂಸಾರಯಾತ್ರೆಯನ್ನು ಸುಖಕರವಾಗಿ ಸಾಗಿಸಿಕೊಂಡು ಹೋಗಲು ಪರಸ್ಪರ ಸಹಾಯವಾಗಲೆಂಬ ಮುಖ್ಯೋದ್ದೇಶದಿಂದಲೇ ವಿವಾಹ ಪದ್ಧತಿಯು ಏರ್ಪಟ್ಟಿದೆ. ಆದಕಾರಣ ವಿವಾಹ ವಾಗತಕ್ಕ ಸ್ತ್ರೀ ಪುರುಷರಲ್ಲಿ ತಕ್ಕಷ್ಟು ಶಾರೀರಿಕ ಮತ್ತು ಬೌದ್ಧಿಕ ಸಾಮರ್ಥ್ಯಗಳು ಇರಬೇಕಾದುದು ಆವಶ್ಯಕವು. ಹೀಗಿರುವಾಗ ಚಿಕ್ಕಮಕ್ಕಳಿಗೆ ವಿವಾಹ ಮಾಡಿದರೆ ಅವರು ವಿವಾಹದ ಉದ್ದೇಶ ಮತ್ತು ಮಹತ್ವಗಳನ್ನು ಅರಿತುಕೊಂಡು ಆಚರಿಸುವದು ಸಾಧ್ಯವೇ? ಎಂದಾದರೂ ಒಂದು ದಿವಸ ಲಗ್ನವಾಗಲೇಬೇಕಾಗಿದೆಯೆಂದು ತೊಟ್ಟಿಲಲ್ಲಿ ಇರುವ ಮಕ್ಕಳಿಗೆ ಬಾಸಿಂಗವನ್ನು ಕಟ್ಟಿದರೆ ಅಂತಹ ಲಗ್ನದಿಂದ ಮುಂದೆ ಆ ದಂಪತಿಗಳು ಈ ಕಠಿಣತರವಾದ ಸಂಸಾರಯಾತ್ರೆಯನ್ನು ಸುಖಕರವಾಗಿ ಸಾಗಿಸಲು ಸಮರ್ಥರಾಗುವರೇ? ಅನೇಕ ತಾಯಿತಂದೆಗಳು ತಮ್ಮ ಹಸುಮಕ್ಕಳನ್ನು ತೊಡೆಯಮೇಲೆ ಕುಳ್ಳಿರಿಸಿಕೊಂಡು ಆ ಮಕ್ಕಳು ಅಳುವಾಗ ಅವರಿಗೆ ತಿನ್ನಲಿಕ್ಕೆ ಕೊಟ್ಟು ಲಗ್ನಮಾಡುತ್ತಿರುವರು. ಕೆಲವರು ಮೊಮ್ಮಕ್ಕಳನ್ನುನೋಡಿ ಮೃತಪಟ್ಟರೆ ತಮ್ಮ ಜನ್ಮಸಾರ್ಥಕವಾಯಿತೆಂದು ಭಾವಿಸಿ ತಮ್ಮ ಚಿಕ್ಕಮಕ್ಕಳಿಗೆ ಲಗ್ನಮಾಡುತ್ತಿರುವರು. ಅವರು ದುಡ್ಡಿನ ಆಶೆಯಿಂದ ಮತ್ತೊಮ್ಮೆ ಲಗ್ನಕ್ಕೆ ಹಣವೆಚ್ಚವಾಗುವದೆಂದು ಮನೆಯಲ್ಲಿ ಜರಗುತ್ತಿರುವ ಲಗ್ನಗಳಸಂಗಡ ಚಿಕ್ಕಮಕ್ಕಳ ಲಗ್ನವನ್ನು ಮಾಡಿಬಿಡುತ್ತಾರೆ. ಈ ವಿಧವಾದ ಅನೇಕ ತಪ್ಪುತಿಳುವಳಿಕೆಗಳಿಂದ ನಡೆಯುತ್ತಿರುವ ಬಾಲ್ಯವಿವಾಹವು ಸಂಪೂರ್ಣವಾಗಿ ನಿಂತಹೊರತು ಜನಾಂಗದ ಶಾರೀರಕ ಮತ್ತು ಬೌದ್ಧಿಕ ಬೆಳವಣಿಗೆಯು ಸರಿಯಾಗಿ ಆಗಲಾರದು.

ಚಿಕ್ಕಂದಿನಲ್ಲಿಯೇ ಲಗ್ನಮಾಡುವದರಿಂದ ಮಕ್ಕಳ ವಿದ್ಯಾಭ್ಯಾಸಕ್ಕೆ ಒಂದು ಬಲವಾದ ಪ್ರತಿಬಂಧ ಉಂಟಾಗುತ್ತದೆ. ಮತ್ತು ಸಂತಾನೋತ್ಪತ್ತಿಯಂಥ ಅತ್ಯಂತ ಮಹತ್ವವಾದ ಕಾರ್ಯಕ್ಕೆ ಬಾಲ್ಯದಲ್ಲಿಯೇ ಈಡಾಗಬೇಕಾಗುತ್ತದೆ. ಇದರಿಂದ ಶಾರೀರಕ ಮತ್ತು ಮಾನಸಿಕ ಶಕ್ತಿಗಳು ಕ್ಷೀಣವಾಗಿ ಆ ದಂಪತಿಗಳು ಬಹು ಜಾಗ್ರತೆ ನಿರ್ಬಲರಾಗಿ ಅನೇಕ ದುಃಖಗಳಿಗೆ ಗುರಿಯಾಗುತ್ತಾರೆ. ಆದಕಾರಣ ಪಾಶ್ಚಾತ ನಾಗರೀಕ ದೇಶಗಳಲ್ಲಿ ಈ ಬಾಲ್ಯವಿವಾಹವು ಭಯಂಕರವಾದ ಅಪರಾಧವೆಂದು ಎಣಿಸಲ್ಪಟ್ಟಿದೆ. ಜಪಾನದಲ್ಲಿಯೂ ಕೂಡ ೧೫ ವರ್ಷಗಳೊಳಗಿನ ಕುವರಿಯಾಗಲಿ ೧೭ ವರ್ಷಗಳೊಳಗಿನ ಕುವರನಾಗಲಿ ವಿವಾಹವಾಗುವದು ಅಪರಾಧವೆಂದು ರಾಜಶಾಸನವಿದೆ. ಈ ನಮ್ಮ ದೇಶದಲ್ಲಿ ಸುಪ್ರಸಿದ್ಧ ಸಂಸ್ಥಾನವಾದ ಬಡೋದಾ ರಾಜ್ಯದಲ್ಲಿಯೂ ಕೂಡ ಹನ್ನೆರಡುವರ್ಷಗಳೊಳಗಿನ ಬಾಲಿಕೆಯಾಗಲಿ ಹದಿನಾರುವರ್ಷಗಳ ಪೂರ್ವದಲ್ಲಿಯ ಬಾಲಕನಾಗಲಿ ಲಗ್ನವಾಗಬಾರದೆಂದು ರಾಜಶಾಸನವಿದೆ.

[ಮುಂದೆ ಸಾಗುವದು.]

ಶ್ರೀ ಪಂಡಿತಪ್ಪಾ ಚಿಕ್ಕೋಡಿಯವರಿಗೆ.

ಮಾನಪತ್ರ ಕೊಡುವಾಗ ನಾರಸವಾಡದ ಉತ್ಕಟ ಕನ್ನಡಾಭಿಮಾನಿಗಳು ಅದರಲ್ಲಿ ಹೀಗೆ ಕಾಣಿಸಿದ್ದಾರೆ.

ಅಖಿಲಭಾರತ ಗೋರಕ್ಷಣ ಸಭೆಯ ಸ್ವಾಗತ ಸಂಘಾಧ್ಯಕ್ಷರಾಗಿಯೂ ಮಹಾತರಾದ ಗಾಂಧಿಯವರಿಗೆ ಅಚಲ ಮಾನಪತ್ರಕೊಡುವ ಅಚಲಧೈರ್ಯ ತೋರಿಸಿದ ಕರ್ನಾಟಕದ ಮೊದಲನೇ ಲೋಕಲ್‌ಬೋರ್ಡ ಪ್ರೆಸಿಡೆಂಟರಾಗಿಯೂ ಅಖಿಲಭಾರತ ದಿಲ್ಲಿಯ ಐಕ್ಯಪರಿಷತ್ತಿನ ಮೆಂಬರರಾಗಿಯೂ ಇಡೀ ಭಾರತೀಯರಿಗೆ ಪರಿಚಯದವರಾಗಿರುವಿರಿ.

ಜಗತ್ತಿನಲ್ಲಿ ಪ್ರತಿಯೊಂದು ವಸ್ತುವು, ದೋಷಯುಕ್ತವಾಗಿರುವದು ಸ್ವಾಭಾವಿಕವು. ಅದರಂತೆ ತಾವೂ ಅದಕ್ಕೆ ಒಳಗಾಗಿರುವದು ಸಹಜವು ಯಾಕಂದರೆ ಕರ್ನಾಟಕದ ಕಟ್ಟಾಭಿಮಾನಿಗಳಾದ ತಾವು ಕೌನ್ಸಿಲರರಾಗಿದ್ದರೂ ನಮ್ಮ ದುರ್ದೈವದಿಂದ ಕರ್ನಾಟಕದ ಮೋಷ್ಟ ಖಾತೆಯೊಳಗಿನ ಕಾಗದ ಪತ್ರಗಳು ಕನ್ನಡಲಿಪಿಯನ್ನು ಧರಿಸಲಿಲ್ಲ ಲೋಕಲ್ ಬೋರ್ಡಪ್ರೆಸಿಡೆಂಟರಾಗಿದ್ದರೂ ಮೈಲುಗಲ್ಲುಗಳ ಮೇಲಿನ ಮರಾಠಿ ಲಿಪಿಯು ಹೋಗಲಿಲ್ಲ ಸದ್ಯಕ್ಕೆ ಸ್ಕೂಲಬೋರ್ಡ ಚೇರಮನ್‌ರಾಗಿದ್ದರೂ ಕನ್ನಡಶಾಲೆಗಳಲ್ಲಿ ಮರಾಠಿಯಿಂದ ಅಂಕೆ ಮೊಗ್ಗಿಗಳನ್ನು ಕಲಿಸುವ ಪದ್ಧತಿಯು ಅಡಗಲಿಲ್ಲ. ಹಾಗು ಕನ್ನಡದೇಶದಲ್ಲಿ ಹುಟ್ಟಿ ಕನ್ನಡದಿಂದಲೇ ಉಪಜೀವಿಸುವ ಕನ್ನಡ ಶಿಕ್ಷಕರಲ್ಲಿ ಬಹುಜನರು ಮರಾಠಿಸಹಿಮಾಡುವ ದುಷ್ಟಪದ್ಧತಿಯ ನಾಮಶೇಷ ಮಾಡುವ ಧೋರಣದ ಸರಕ್ಯೂಲರಗಳು ಹೊರಡಲಿಲ್ಲಾ ಇವುಗಳಿಗಾಗಿ ನಮಗಾದ ವಿಷಾದವನ್ನು ತಮ್ಮಮುಂದೆ ಈ ಹೊತ್ತು ಸ್ಪಷ್ಟವಾಗಿ ವಿವರಿಸದಿರಲಾರೆವು.

ಈದೋಷಗಳು ಎತ್ತರವಾದ ಗೋಪುರಗಳಲ್ಲಿಟ್ಟ ಅಸಹ್ಯದ ಗೊಂಬೆಗಳಂತೆ ಯುಕ್ತವೆಂದೇ ನಾವು ಸಂಪೂರ್ಣ ಗ್ರಹಿಸಿರುವೆವು.

ಸ್ಕೂಲ ಬೋರ್ಡ ಚೇಅರಮನ್‌ರಾಗಿ ಶಾಲೆಯ ಫೀತೆಗೆದು ಹಾಕಿದ್ದಕ್ಕಾಗಿಯೂ ನೂಲುವ, ನೇಯುವ, ಕಮ್ಮಾರಿಕೆ, ಬಡಿಗತನ, ಮೊದಲಾದ ಉದ್ಯೋಗಗಳಿಗೆ ಶಾಲೆಯಲ್ಲಿ ಆಶ್ರಯಕೊಟ್ಟದ್ದಕ್ಕಾಗಿಯೂ ಕರ್ನಾಟಕದ ಏಕೀಕರಣ ಕಾರ್ಯಕೈಕೊಂಡದ್ದಕ್ಕಾಗಿಯೂ ನಾವು ನಿಮಗೆ ಚಿರಕಾಲ ಋಣಿಯಾಗಿರುವೆವು.

ಇಹವೃತ್ತ

ಮಳೆಯಿಲ್ಲ. ಬೆಳೆಗಳು ಒಣಗಹತ್ತಿವೆ. ಸಧ್ಯದಲ್ಲಿ ಮಳೆಯಾಗದಿದ್ದರೆ ಬರಗಾಲವು ಮತ್ತೆ ಕಾಣಿಕೊಳ್ಳದೇ ಬಿಡದು

ಶ್ರೀ ಮನ್ಮಧ್ವಜಯಂತ್ಯುತ್ಸವವು ಅದಿನವಿಜೃಂಭಣೆಯಿಂದ ಜರುಗಿತು ಶ್ರೀ ಸುಬ್ರಹ್ಮಣ್ಯ ಸ್ವಾಮಿಯವರು ಇಕ್ಕಸ್ತುದರಿಂದ ಉತ್ಸವಕ್ಕೆ ಹೆಚ್ಚಾಗಿ ಕಳೆಬಂದಿತು ಕಡೆಯ ದಿವ ಊರಲ್ಲಿ ಮಧ್ವಾಚಾರ್ಯರ ಪ್ರತಿಕೃತಿಯ ಮೆರವಣಿಗೆಯೂ ಆಯಿತು ವಿದ್ಯಾರ್ಥಿಗಳಿಗೆ ಪಾರಿತೋಷಕಗಳೂ ಹಂಚಲ್ಪಟ್ಟವು.

ಶ್ರೀ. ಸುಬ್ರಹ್ಮಣ್ಯ ಶ್ರೀಗಳು ಬಾಗಲಕೋಟೆಯಲ್ಲಿ ಚಾತುರ್ಮಾಸ್ಯ ಸಂಕಲ್ಪವನ್ನು ಮುಗಿಸಿದರು. ಇನ್ನು ಗದಗ ಹುಬ್ಬಳ್ಳಿ ಕಡೆಗೆ ಸಂಚಾರಮಾಡಲಿಕ್ಕವರಿದ್ದಾರೆ.

ಶೇಟ ಬಾಳಕೃಷ್ಣದಾಸರು ಮುನಸೀಪಾಲ್ಟಿಯ ಅಧ್ಯಕ್ಷರಾಗಿ ಸರ್ವಾನುಮತದಿಂದ ಆರಿಸಲ್ಪಟ್ಟರೆಂದು ಅರುಹಲು ನಮಗೆ ಸಂತೋಷವಾಗುತ್ತದೆ. ಮುಂದೆ ಇದೇ ಪ್ರಕಾರವಾಗಿ ನಗರ ಸಭೆಯ ಕಾರ್ಯಗಳೆಲ್ಲ ಸರ್ವಾನುಮತದಿಂದ ನಡೆದರೆ, ನಗರ ಸಭೆಯಿಂದ ನಾಗರಿಕರ ನಿಜವಾದ ಕಲ್ಯಾಣವಾಗದೆಯಿರದೆಂದಿಕ್ಕಿಲ್ಲ. ಬಾಳಕೃಷ್ಣದಾಸರಿಗೆ ಅಧ್ಯಕ್ಷಪದವಿಯು ದೊರೆತದ್ದಕ್ಕೆ ಊರಲ್ಲಿ ತಾಂಬೂಲ ಸಮಾರಂಭಗಳೂ ಆದವು! ೨೮ನೇ ತಾ॥ ದಿನ ಮುನಸೀಪಾಲ್ಟಿಯ ಉಳಿದ ಅಧಿಕಾರಿಗಳ ನಿಯೋಜನೆಯು ನಡೆಯುವದು

ಹುಬ್ಬಳ್ಳಿಯಿಂದ ಪ್ಲೇಗಿನಿಂದ ಪೀಡಿತನಾದ ಒರ್ವನು ಇಲ್ಲಿಗೆ ಬಂದಿದ್ದನು. ಸರಕಾರೀ ದವಾಖಾನೆಗೆ ಅವನನ್ನು ಚಿಕಿತ್ಸೆಗಾಗಿ ಒಯ್ದರು. ಮುನಸಿಪಾಲಟಿಯವರು ಪ್ಲೇಗುಹುಟ್ಟದಂತೆ ಜಾಗ್ರತರಾಗಿದ್ದುದು ಅನಂದಕರವಾಗಿದೆ.

ಮುಂಬೈ ಕರ್ನಾಟಕ

ಬಾಗಲಕೊಟೆ ಇಳಕಲ್ಲ ರೇಲ್ವೆಯ ಗೊತ್ತುಪಡಿಸಿದ ಹಾದಿಯಲ್ಲಿ ಚಿನ್ಹಗಳನ್ನು ಹಾಕುವ ಕೆಲಸ ನಡೆದಿದೆ ಇಲಕಲ್ಲ-ನಿಜಾಮ ಸ್ಟೇಟಿನ ಕಾರ್ಯವು ೧೯೩೦ನೇ ಇಸವಿಯಲ್ಲಿ ಮುಗಿಯಬೇಕೆಂದು ಗೊತ್ತಾಗಿದೆ. ಕಡೆದಿಗನು ಪ್ರಯತ್ನಪಟ್ಟದ್ದರಲಿ ಒಂದು ಹಾದಿಯದು ಸಫಲವಾಯಿತು.

ಕರ್ನಾಟಕ ಸೇವಾದಲದಲ್ಲಿ ಒಳ್ಳೇ ದಕ್ಷತೆಯಿಂದ ಕಾರ್ಯಮಾಡಿದ್ದಕ್ಕಾಗಿ ಹೀಗೆ ಪಾರಿತೋಷಕಗಳು ಹಂಚಲ್ಪಟ್ಟವೆ:- [೧] ಹೊಸಕೊಪ್ಪ ಕೃಷ್ಣರಾಯ ರು ೩೫ ರೂ (೨) ಲಿಂಗಡೆ ೨೫ ರೂ [೩] ಕೆರೆಗುದರಿ ೨೫ [೪] ಜೇರೆ ೨೫ [೫] ವೈದ್ಯ ೨೫ [೬] ಕುಲಕರ್ಣಿ ೧೦ [೭] ಹುಬ್ಬಳ್ಳಿ ಭಗಿನಿ ಮಂಡಳ ೧೦ [೮] ವೆಂಕಟರಮಣಯ್ಯಾ ೫ ರೂ (೯) ಜೋಶೀ ೫ ರೂ ತಮ್ಮ ಹೆಸರಿನಿಂದ ಬೆಳ್ಳಿಯ ಕರಂಡಕವನ್ನು ಪ್ರತಿ ವರ್ಷ ಸ್ಪರ್ಧೆಗಾಗಿಡಲು ಶ್ರೀ ಹೊಸಕೊಪ್ಪ ಕೃಷ್ಣರಾಯರು ೩೫ ರೂ ಸೇವಾದಲಕ್ಕೆ ಬಿಟ್ಟಿರುವರು ಕಾಂಗ್ರೆಸ್ಸಿನ ಅಧ್ಯಕ್ಷರಾದ ಶ್ರೀನಿವಾಸ ಅಯ್ಯಂಗಾರರು ಪಾರಿತೋಷಕಗಳನ್ನು ಹಂಚಲು ಒಪ್ಪಿರುವರು

ಬಾಗೇವಾಡಿಯ ತೋಟಪ್ಪ ಕಿಣಗಿ ಎಂಬಾತನು ತನ್ನ ಊರಿನಿಂದ ಹೆಂಡರು ಮಕ್ಕಳನ್ನು ಕರೆದುಕೊಂಡು ಸೀತಿಮನೆಗೆ ಬಂದು ಅಲ್ಲಿಕಸ್ನಾನಸ್ನಾನ ಭೋಜನಗಳನ್ನು ತೀರಿಸಿ ಸಾಯಂಕಾಲದಲ್ಲಿ ಆಚೆಯ ಮಂಡೆಯ ಅಲಮಟ್ಟಿ ಸ್ಟೇಶನ್ನದಲ್ಲಿ ಹೋಗಿ ಮಲಗುವಾ ಬನ್ನಿ ಎಂದು ಹೆಂಡತಿ, ತಮ್ಮ ಹಾಗೂ ಈರ್ವ ಮಕ್ಕಳನ್ನು ಕರೆದುಕೊಂಡು ಹೋಗುವಾಗ್ಗೆ ಸ್ವತಃ ತಾನೇ ಮಧ್ಯದಲ್ಲಿ ಆ ನಾಲ್ವರನ್ನೂ ಕೃಷ್ಣೆಯಲ್ಲಿ ನೂಕಿಬಿಟ್ಟನು ತಮ್ಮನು [ವರ್ಷ ೧೨) ಈಸು ಬಾರದಿದ್ದರೂ ಹೇಗೋ ದಂಡೆಗೆ ಹತ್ತಿ ಅಂಜಿಕೊಂಡ ಆ ಬಾಲಕನು ರಾತ್ರಿಯನ್ನು ಹೇಗೋ ಆ ಅಡವಿಯಲ್ಲಿ ಕಳೆದನು ಬೆಳಿಗ್ಗೆ ಜನರು ಅಲ್ಲಿಗೆ ಬಂದಾಗ್ಯೆ ತನ್ನ ಇತಿಹಾಸವನ್ನೆಲ್ಲಹೇಳಿದನು ಇತ್ತ ತೋಟಪ್ಪನು ಅಲಮಟ್ಟಿ ಯಲ್ಲಿರಾತ್ರಿಯೆಲ್ಲ ಇಸ್ಪೇಟ ಆಡುತ್ತ ಆನಂದದಿಂದಿದ್ದನು ಎಂತಹ ಮಾನಸಿಕ ಶಕ್ತಿಯಿದು! ರೊಕ್ಕದ ಹೊರೆ ಕೊಡದ ಹುಡುಗಿಯಿಂದ ಹೀಗೆ ಎಲ್ಲರನ್ನೂ ಕೊಂದನೆಂದು ವದಂತಿಯಿದೆ ಪೋಲಿಸರ ಚೌಕಶಿ ನಡೆದಿರುವದು ಅಪರಾಧಿಯು ಎಲ್ಲಿಯೋ ಅಡಗಿದ್ದಾನೆ.

ಮೈಸೂರ ಕರ್ನಾಟಕ

ಶ್ರೀಕೃಷ್ಣ ತುಲಾಭಾರವೆಂಬ ಶೃಂಗಾರ ಪರಿಪೂರ್ಣವಾದ ನಾಟಕವನ್ನು, ಮೈಸೂರಿನದೇವರಾಜ ಮೊಹಲ್ಲಾ ಬಾಲಿಕಾಪಾಠಶಾಲೆಯವರಿಂದ ಸಾರ್ವಜನಿಕವಾಗಿ ನಾಟಕಶಾಲೆಯಲ್ಲಿ ಹೆಡ್ ಮಿಸ್ಟ್ರೆಸ್‌ರವರು ಆಡಿಸಿದರು! ಈ ಹುಡುಗಿಯರ ಒರ್ವಪಾಲಕರಾದ ಶ್ರೀ ಜನಾರ್ಧನರಾಯರು ಈ ಬಗ್ಗೆ ಆಕ್ಷೇಪಿಸಿ, ವಿದ್ಯಾಖಾತೆಯ ಅಧಿಕಾರಿಗಳಿಗೆ ತಿಳಿಸಿದ್ದಾರೆ ಅಧಿಕಾರಿಗಳು ಇನ್ನು ಮುಂದೆಯಾದರೂ ಹೀಗಾಗದಂತೆ ಏರ್ಪಾಟು ಮಾಡುವರಾಗಿ ನಂಬುತ್ತೇವೆ.

ದಸರೆಯ ಮಹೋತ್ಸವವು ಮೈಸೂರಲ್ಲಿ ವಿಜೃಂಭಣೆಯಿಂದ ಜರಗಿತು ಹೊಸದ ನಗರ ಭವನದ ಪ್ರಾರಂಭೋತ್ಸವವೂ ಆಯಿತು. ಈ ಭವನಕ್ಕೆ ೩॥ ಲಕ್ಷರೂಪಾಯಿಗಳು ವೆಚ್ಚವಾಗಿವೆ ೧೦೦೦ ಜನರು ಕೂಳಿತುಕೊಳ್ಳಲು ಅನುಕೂಲವಿದೆ. ಸಿಂಹಾಸನವು ಬಹು ಅಂದವಾಗಿದೆ ಮನೋಹರವಾದ ಕೆತ್ತಿಗೆಯ ಕೆಲಸದ ಕಟ್ಟಿಗೆಯ ನೆಲವು ಅಂದವಾಗಿದೆ ಮಹಾರಾಜರು ಕೂಡ್ರುವ ಎದುರಿನಲ್ಲಿ ಕೆತ್ತಲ್ಪಟ್ಟ ಪಶುಪಕ್ಷಿಗಳ ಕೆಲಸವೂ ಪ್ರೇಕ್ಷಣೀಯವಿದೆ ಇದರ ಈ ಎಲ್ಲ ಕೆಲಸವೂ ಮೈಸೂರಿನ ಜನರಿಂದಾಗದೇ ವಿಲಾಯತಿಯಲ್ಲಿ ಸಿದ್ಧವಾದದ್ದು ಬಹು ಶೋಚನಿಯವು! ಭರತಖಂಡದಲ್ಲಿ ಈ ಬಗೆಯ ಕಲಾಕುಶಲರಿಲ್ಲವೇ?

ಮದ್ರಾಸ ಕರ್ನಾಟಕ

ಬೈಂದೂರಿನಲ್ಲಿ ಬರಗಾಲದಿಂದ ಬಡವರ ಹೊಟ್ಟೆ ತುಂಬುವದಿಲ್ಲ, ಈ ಬಗ್ಗೆ ಸದಯಾಂತಃಕರಣಿಗಳಾದ ರಾ॥ ಬಾ॥ ಯಡ್ತರೆ ಅಣ್ಣಯಪ್ಪ ಶೆಟ್ಟರು ಬಡಬಾಯಿಗಳಿಗೆ ಒಪ್ಪತ್ತು ಗಂಜಿಯನ್ನು ಧರ್ಮಾರ್ಥವಾಗಿ ಹಾಕುತ್ತಿರುವರು

ಕೊಡಗು ಕರ್ನಾಟಕ

ಶನಿವಾರ ಸಂತೆಯಲ್ಲಿ ಹುಳಿ ಎಳ್ಳಿಷ್ಟಾದರು ಇಲ್ಲ. ಗದ್ದೆಗಳು ಒಣಗುತ್ತಲಿವೆ.

ಪೆರೂರ ಗ್ರಾಮದಲ್ಲಿ ಪಂಚ್ಯಾಡ ಪೊಂದಂಣನೆಂಬವರು ಒಂದು ಹೆಬ್ಬುಲಿಯನ್ನು ಒಂದೇ ಗುಂಡಿನಿಂದ ಕೊಂದರು. ಇದರಿಂದ ಸುತ್ತಲಿನ ದನ ಕರುಗಳಿಗೆ ಸ್ವಲ್ಪ ಕ್ಷೇಮವಾಗಿದೆ.

ಕನ್ನಡಿಗರು ಕರ್ನಾಟಕ ದೇಶದಲ್ಲಿ ತಯಾರಾದ ಮಾಲುಗಳನ್ನು ಕೊಳ್ಳಬೇಕಾಗಿದ್ದು ಸಹಜವಲ್ಲವೆ?

ಮೈಸೂರು.

ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ.

ಅತ್ಯುತ್ತಮವಾದ ಸಾಬೋನುಗಳು ತಯಾರು ಮಾಡಲ್ಪಡತ್ತವೆ.

ಚಾಲ್ತಿ ಕ್ರಯಪಟ್ಟಿ ವಿವರ.

" ಟಾಯ್‌ಲೆಟ್ ಸೋಪ್ " ಮೈಯಿಗೆ ಹಾಕಿಕೊಳ್ಳುವ ಸುಗಂಧದ್ರವ್ಯ ಮಿಶ್ರಿತವಾದ ಸಾಬೋನುಗಳು, ಸ್ಯಾಂಡಲ್ (ಶ್ರೀಗಂಧಪರಿಮಳ) ಜ್ಯಾಸ್‌ಮಿನ್(ಜಾಜಿ)ಗುಲಾಬ್, ನ್ಯೂ ಲ್ಯಾವೆಂಡರ್ ಕ್ರಯ ಡಜನ್ ೧ ಕ್ಕೆ ರೂ ೩—೮—೦ಮಾತ್ರ ಬಟ್ಟೆಸಾಬೋನು

ಎಂಟು ಔನ್ಸ್ ತೂಕದ್ದು ಪೆಟ್ಟಿ ೧ ಕ್ಕೆ (೧ ಗ್ರೋಸ್) ರೂ. ೨೮
ಆರು ,, ,, ,, ,, (,,) ರೂ. ೨೬
ನಾಲ್ಕು ,, ,, ,, ,, (೨ ಗ್ರೋಸ್) ರೂ. ೩೧

" ಕ್ಯಾರ್‌ಬಾಲಿಕ್ " ಸೋಪ್ ನಾಲ್ಕು ಔನ್ಸ್ ತೂಕದ್ದು ಡಜನ್ನಿಗೆ ರೂ. ೨—೪—೦. ಮೇಲೆ ಹೇಳಿದ ಕ್ರಯಗಳು ಖಂಡಿತವಾದವುಗಳು. ಆರ್ಡರ ಜೊತೆಯಲ್ಲಿ ಶೇಕಡಾ ೨೫ ಮುಂಗಡವಾಗಿ ಅಡ್ವಾನ್ಸ ಕಳುಹಿಸಬೇಕು. ಬಾಕಿ ಮೊಬಲಗನ್ನು ವ್ಹಿ.ಪಿ. ದ್ವಾರ ಅಥವಾ ಬ್ಯಾಂಕಿನ ಮುಖಾಂತರ ವಸೂಲು ಮಾಡಲ್ಪಡುತ್ತದೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು

ಜಾಹೀರ ನೋಟೀಸು

ರಾ|| ರಾ|| ಕೆಂಚಪ್ಪಾ ನಿಂಗಾಕವ್ವ್ರಪ್ಪಾ ಮೂಲೀಮನಿ ಸಾ|| ಚಿಕ್ಕ ಮಾಗಿ ತಾಲ್ಲೂಕು ಹುನಗುಂದ ಜಿಲ್ಹಾ ವಿಜಾಪುರ ಇವರಿಗೆ

ನಾನು ಕೆಳಗೆ ಸಹಿ ಮಾಡುವ ದ್ಯಾಮವ್ವಾ ಗಂಡಾ ಕೆಂಚಪ್ಪಾ ಮೂಲೀಮನಿ ಸಾ|| ಬದಾಮಿ ಇವಳು ನೋಟೀಸಿನಿಂದಾ ತಿಳಿಸೋದೇನಂದರೆ ನೀನು ನನ್ನ ಪುಡಕಿ ಗಂಡನು ಇದ್ದು ಲಗ್ನ ಆದಬಳಿಕ ಯಿತ ೨|೩ ವರ್ಷ ವರೆಗೆ ಸುರಳೀತ ಪ್ರಪಂಚ ಮಾಡುತ್ತಾ ಬಂದಿ ನೀನು ಎರಡನೇ ವ್ಯಭಿಚಾರಿ ಹೆಂಗಸಿನ ಸಹವಾಸಕ್ಕೆ ಬಿದ್ದು ನನ್ನನ್ನು ಹೊಡಿಯುವದು ಬೈಯುವದು ಮಾಡಿ ೪ ೫ ವರ್ಷಗಳ ಹಿಂದೆ ನನ್ನ ಮನೆ ಬಿಟ್ಟು ಹೊರಗೆ ಹಾಕಿದಿ ನಾನು ಪ್ರಸ್ಥಳ ಜನರ ಕಡಿಂದಾ ಭರೋ ರೀತಿಯಿಂದಾ ನನ್ನ ಇಟ್ಟು ಕೊಂಡು ಪ್ರಪಂಚ ಮಾಡಲಿಕ್ಕೆ ತಿಳಿಸಿದರೂ ನೀನು ಅದಕ್ಕೆ ಕಬೂಲ ಆಗಲಲ್ಲಾ ನಾನು ೪/೫ ವರ್ಷಗಳಿಂದಾ ಬೇರೆ ಇದ್ದು ಹೊಟ್ಟೆತುಂಬಿ ಕೊಂಡ ಬಗ್ಗೆ ಯರಡನೇದವರ ಕಡಿಗೆ ರುಪಾಯಿ ೩೦೦ ದೇಣೇ ಆಗಿರತ್ತದೆ. ಈಗ ದೇಣಿಗಾರರ ತಗಾದೀ ಬಹಳ ಆದ್ದರಿಂದಾ ನಿನಗೆ ಇ ನೋಟಿಸ ಮಾಡೋ ಪ್ರಸಂಗ ಬಿತ್ತು ಈ ನೋಟಿಸ ಮುಟ್ಟಿದ ೧೦ ದಿವಸದಲ್ಲಿ ನನ್ನ ಸಾಲಗಾರರ ದೇಣೆ ಕೊಟ್ಟು ನನ್ನನ್ನು ಕರಕೊಂಡು ನಿನ್ನ ಮನೆಯಲ್ಲಿ ಇಟ್ಟಕೊಂಡು ಭರೋ ರೀತಿಯಿಂದಾ ಪ್ರಪಂಚ ಮಾಡಬೇಕು ಇಲ್ಲವಾದರೆ ನನ್ನ ಹೊಟ್ಟೆ ಖರ್ಚಿಗೆ ವ ಅರಿವೆ ವಗೈರೆ ಬಗ್ಗೆ ದರ ವರ್ಷಕ್ಕೆ ರುಪಾಯಿ ೫೦ ದಂತೆ ನೋಟಗಿ ಕೊಡುವ ವ್ಯವಸ್ಥಾ ಮಾಡಿಕೊಡಬೇಕು ಇವೆರಡಕ್ಕೂ ನಿನ್ನ ಕಬೂಲಿ ಇಲ್ಲದಿದ್ದರೆ ಮೇಲೆ ಬರೆದ ೧೦ ದಿವಸ ಮುದ್ದತಿಯಲ್ಲಿ ನಾನು ಹೊಟ್ಟೆ ಖರ್ಚಿನ ಸಲುವಾಗಿ ಮಾಡಿದ ರೂ|| ೩೦೦ ದ ದೇಣೇ ತೀರಿಸಿ ಪಾವತಿ ತಗೊಳ್ಳಬೇಕು ಈ ಪ್ರಕಾರ ನೀನು ಮಾಡಲಿಕ್ಕೆ ತಪ್ಪಿದರೆ ನನಗೆ ಮುದಕೀ ವರೆಗೆ ನಿನ್ನ ವೃತ್ತಾಂತ ಹಾದೀ ನೋಡಿ ಅನಂತರಾ ಇದೇ ನೀನು ಸೋಡಚೀಟಿ ಕೊಟ್ಟೇದಿ ಅಂತಾ ತಿಳಿದು ಯರಡನೇದವನನ್ನು ಪುನರ್ ಕೀ ಮಾಡಿಕೊಂಡು ಹೋಗತ್ತೇನೆ ಪರಂತು ನನ್ನ ಮೇಲೆ ನಿನ್ನ ಹಕ್ಕು ಏನೂ ಉಳಿಯಲಿಕ್ಕಿಲ್ಲಾ ಮತ್ತು ನನ್ನ ಸಾಲದ ಹಣದ ಬಗ್ಗೆ ಕಾಯದೇಶೀರ ನಿನ್ನ ಮೇಲೆ ಇಲಾಜ ಮಾಡಿ ವಸೂಲ ಮಾಡಿಕೊಳ್ಳತ್ತೇನೆ ಇ ಮಜಕೂರ ನಿನಗೆ ತಿಳದಿರಬೇಕು ಅಂತಾ ಕೊಟ್ಟ ನೋಟಿಸ ಸಹಿ ತಾ|| ೧೭|೧೦|೨೬

() ಇ ಯಡಗೈ ಹೆಬ್ಬೆಟ್ಟಿನ ಗುರತಾ ದ್ಯಾಮವ್ವಾ ಗಂಡಾ ಕೆಂಚಪ್ಪಾ ಮೂಲೀಮನಿ ಸಾ|| ಬದಾಮಿ ಇಕಿ ಮಾಡಿದ್ದದ||

H. G. Dambal

ಗೃಹ ಕೃತ್ಯದ ನೋಟೀಸು

ಗಲಗಲಿ ಪಾಂಡುರಂಗಾಚಾರ್ರ ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಕಿನಲ್ಲಿ ಬಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ ಇವರಿಗೆ ಕೆಳಗೆ ರುಜು ಮಾಡುವ ಕಮಲಾಬಾಯಿ ಆದ ನಾನು ೨ನೆ. ಹೆಂಡತಿ ಆಗಿಯು ವೆಂಕುಬಾಯಿ ಎಂಬವರು ೧ನೇ ಹೆಂಡತಿ ಆಗಿಯು ಇರುತ್ತೇವೆ ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯತ ವಿಶ್ವಾಸವಿಲ್ಲದವರಾಗಿಯು ನನಗೆ ಎಲ್ಲಾ ಭಾಗದಲ್ಲಿಯು ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟಪಡಿಸಲು ಅನೇಕ ಜನಗಳ ಸಲಹೆಯಿಂದ ನನಗೆ ಮೋಸ ಪಡಿಸಬೇಕೆಂದು ಇರುತಾರೆ

ಅಲ್ಲದೇ ಇವರು ನನ್ನ ಸಮಕ್ಷಮ ಬಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ರ ಸಮಕ್ಷಮಾ ಪಬ್ಬು ಹುಡಗನ್ನ ದತ್ತ ಮಾಡಿಕೊಂಡು ನನ ಸ್ನು ಹಾಳು ಮಾಡತೇನೆಂದು ಹೇಳಿ ಇರುತ್ತಾರೆ ೧ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೇ ದತ್ತ ತೆಗೆದು ಕೊಳ್ಳೋಡದು ಯಜಮಾನರ ಆಸ್ತಿ ಪೈಕಿ (೨) ಜಮಿನಗಳು ಜ್ಯಾಪ್ತಿನಲ್ಲಿ ಇದ್ದು ಇಥೆ ಇದೆಲ್ಲಾ ಹೋಗಲಾಗಿ ೮|೧೦ ವರಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತ ಮಾಡಿ ಕೊಳ್ಳಬಹುದು ಶಿವಾಇ ಈಗ ಮಾಡಿಕೊಂಡದ್ದು ಆಗಲಿ ಅಥವಾ ದತ್ತಗೆ ಆಗಿ ಬಂದದ್ದು ಆಗಲಿ ಇದ. ನಿಸ್ವಿಸುವದಿಲ್ಲಾ ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗರಯರಾಗುತ್ತಾರೆ ಖಂಡಿತ ತಿಳಿಯುವದು,

ಕಮಲಾಬಾಯಿ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪು! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಕಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಮಂಗಳೂರ, ಬೆಂಗಳೂರ ಕಡೆಯ

ನುರಿತಂಥಹ

ಪ್ರಿಂಟರರೂ ಕಂಪೋಜಿಟರರೂ

ಬೇಕಾಗಿದ್ದಾರೆ.

ಯೋಗ್ಯತೆಯ ಪ್ರಕಾರ ಪಗಾರವು ದೊರೆಯುವದು.

ಮ್ಯಾನೇಜರ.

ವಿದ್ಯಾರಣ್ಯ ಮುದ್ರಣಾಲಯ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯ ...
ವಿದ್ಯಾರಣ್ಯಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧವಾಯಿತು.

ರ ನಂ. ಬಿ. ೧೫೪೭ ವಾ. ಚಂದಾ ೧-೧೪-೦ ಪೋಸ್ಟ್.

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಆಶ್ವಿನ ಬಹುಳ ೯ ಶಕೆ ೧೮೫೮ ತಾ|| ೯-೧೦-೧೯೩೬. | ಸಂಚಿಕೆ ೩೦

ಸಂಪಾದಕರ ಭೂಮಿ

(೬೦)

ನಿನ್ನ ಜನಿಸಿದ ಮಣ್ಣವಾದ ಕಟ್ಟುವೆನಾನು ।
ನಿನ್ನ ಬೆಳಸಿದ ತಾಯಿಯಂಥ ಮಕ್ಕಳ ದೊರೆ ।
ನಿನ್ನ ದಾಸರು ನಿನ್ನ ಸೇವೆಯಲ್ಲಿಯ ನೊಂದು ನಿನ್ನಯಾಳ್ಕೆ ಕರದೆ ॥
ನಿನ್ನ ಜೀವವು ನಿನ್ನ ಬೀರಶಾಸನಕಾಗಿ ।
ನಿನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನಿನ್ನ ಶಸ್ತ್ರವು ನಿನ್ನ ಗಂಧವನು ಜೀವಿಸುವ ಗಂಧವಹನೆಂದು ತಿಳಿಯೆ

—ಅಂಕಿತಾ ಕನಯಾ ದತ್ತ

ಉತ್ತರಾದಿ ಮಠಾಧೀಶರು ಇಲ್ಲಿಗೆ ಬಂದಾಗ್ಗೆ ಪಾಣಿನಿ ವಿಲಾಸ ಸಂಸ್ಕೃತ ಪಾಠಶಾಲೆಗೆ ದಿನಾಲು ಒಂದು ರೂಪಾಯಿಯಂತೆ ಕಾಯಂವಾಗಿ ಸಹಾಯ ಮಾಡಲು ಅಭಿವಚನವನ್ನಿತ್ತು, ಆ ಪ್ರಕಾರವಾಗಿ, ಕೆಲವು ತಿಂಗಳು ಪ್ರತ್ಯಕ್ಷವಾಗಿ ದ್ರವ್ಯವನ್ನು ಕಳುಹಿಸಿಯೂ ಕೊಟ್ಟರು. ಈ ಬಗ್ಗೆ 'ಕನ್ನಡಿಗ'ನಲ್ಲಿ ಹಿಂದಕ್ಕೆ ಅಭಿನಂದನವೂ ಪ್ರಕಟವಾಯಿತು. ಆದರೆ ಈಗ್ಗೆ ಏನೂ ಕಾರಣ ತೋರಿಸದೇ, ಒಮ್ಮಿಂದೊಮ್ಮೆ ಶ್ರೀಗಳವರು ಈ ಸಹಾಯವನ್ನು ನಿಲ್ಲಿಸಿ ಬಿಟ್ಟದ್ದನ್ನು ಕಂಡು ಎಲ್ಲರಿಗೂ ಆಶ್ಚರ್ಯವಾಗಿದೆ. ಧಾರ್ಮಿಕ ಸಂಸ್ಥೆಗಳು ಈ ದಿನದಲ್ಲಿ ಹುಟ್ಟುವದು ಅಪರೂಪ. ಹುಟ್ಟಿದರೆ ಜೀವಂತವಾಗಿ ಉಳಿಯುವದು ಬಹು ಕಠಿಣ. ಹಾಗೆ ಅಕಸ್ಮಾತ್ತಾಗಿ ಉಳಿದರೆ, ಹಣದ ಕೊರತೆಯಿಂದ ಒದ್ದಾಡಬೇಕಾಗುತ್ತದೆ. ಇಂತಹ ಕಠಿಣ ಪರಿಸ್ಥಿತಿಯಲ್ಲಿ ಧರ್ಮ ಪೀಠಾಲಂಕೃತರಾದ ಶ್ರೀಗಳವರು ಧಾರ್ಮಿಕ ಸಂಸ್ಥೆಗಳನ್ನು ಎತ್ತಿ ಹಿಡಿಯದಿದ್ದರೆ ಮತ್ತಾರು ಹಿಡಿಯಬೇಕು? ಆದರಲ್ಲಿಯೂ ಒಂದಾವರ್ತಿ ಸಹಾಯದ ಅಭಿವಚನವನ್ನಿತ್ತು, ಒಮ್ಮಿಂದೊಮ್ಮೆ ನಿಲ್ಲಿಸುವದರಿಂದ ಶಾಲೆಗೆ ಬಹು ತೊಂದರೆಯಾಗುತ್ತದೆ. ಶ್ರೀಗಳವರು ಈ ಬಗ್ಗೆ ಪುನಃ ವಿಚಾರ ಮಾಡಿ ಸಹಾಯವನ್ನು ಮತ್ತೆ ಪ್ರಾರಂಭಿಸಬೇಕಾಗಿ ಬಿನ್ನಹವಿದೆ.

ಕಾರವಾರ ಜಿಲ್ಲೆಯ ಹಿಂದುಳಿದ ಸಮಾಜದವರ ವಿದ್ಯಾಭಿವೃದ್ಧಿಗಾಗಿ ಒಂದು ಸಂಘವು ಸ್ಥಾಪಿಸಲ್ಪಟ್ಟಿದ್ದು ಯಥಾಯೋಗ್ಯವಾಗಿದೆ. ಜ್ಞಾನದಾನವು ಅವಶ್ಯವಾಗಿಬೇಕು. ಅದರಲ್ಲಿಯೂ ಹಿಂದುಳಿದ ಸಮಾಜದವರಲ್ಲಿ ಶಿಕ್ಷಣ ಪ್ರಸಾರದ ಪ್ರಯತ್ನವು ವಿಶೇಷ ಉತ್ಸಾಹ ಜಾಗರೂಕತನದಿಂದ ಮಾಡಲ್ಪಡಬೇಕಾಗಿದೆ. ವಿಜಾಪುರ, ಧಾರವಾಡ, ಬೆಳಗಾಂವಿ, ಜಿಲ್ಲೆಗಳಲ್ಲಿಯೂ, ಮೈಸೂರಲ್ಲಿಯೂ ಈ ಬಗೆಯ ಸಂಸ್ಥೆಗಳೂ ಇವೆ. ಆದರೆ ಕಾರವಾರ ಜಿಲ್ಲೆಯಲ್ಲಿ ಇಲ್ಲವಾದ್ದರಿಂದ, ಈಗ್ಗೆ ಆ ಕೊರತೆಯು ದೂರಾದಂತಾಗಿದೆ. ಈ ಸಂಘದ ಅಧ್ಯಕ್ಷಸ್ಥಾನವು ನಮ್ಮ ಜಿಲ್ಲೆಯ ಕಲೆಕ್ಟರರಾದ ಶ್ರೀ ನಾಯಕರವರಿಗೆ ಒಪ್ಪಿಸಲ್ಪಟ್ಟಿದೆ. ಅವರೂ ಆನಂದದಿಂದ ಅದನ್ನು ಸ್ವೀಕರಿಸಿದ್ದಾರೆ. ಆದುದರಿಂದ ಈ ಸಂಸ್ಥೆಯು ಬೇಗನೇ ಊರ್ಜಿತಸ್ಥಿತಿಗೆ ಬರುವದಾಗಿ ನಾವು ಕೋರುತ್ತೇವೆ.

'ಕನ್ನಡಿಗ'ನಿಗೆ ಈ ವಾರದಲ್ಲಿ ನಾಗಪುರದ ಪೋಸ್ಟ್ ಮಾಸ್ತರ ಜನರಲ್‌ರಾದ ಬೇವೂರ ಗುರುರಾಯರು **ಸಹಾಯಕ**ರಾಗಿಯೂ ವಿಜಾಪುರದ ದೇ. ಭ. ಕೌಜಲಗಿ ಶ್ರೀನಿವಾಸರಾಯರೂ ಹಾವೇರಿಯ ತರುಣ ವಕೀಲರಾದ ಶ್ರೀ ಹಿರೇಮಠರೂ, ಉತ್ಸಾಹಿ ಸಮಾಜಸೇವಕರಾದ ರಾ ಮ ನಾ ಗ ರ ದ ಶ್ರೀನಿವಾಸರಾಯರೂ **ಉ ಪ ಕಾ ರ ಕ ರ್ತ ರು ಗ ಳಾ ಗಿ ಯೂ ತ ಮ್ಮ ಈ** ವರ್ಷದ ವಂದಾ ಹಣವನ್ನು ಸಲ್ಲಿಸಿದ್ದಾರೆ. ಈ ಅಭಿಮಾನಿಗಳನ್ನು ನಾವು ಮತಃಪೂರ್ವಕವಾಗಿ ಅಭಿನಂದಿಸುತ್ತೇವೆ. ಈ ಬಗೆಯಾಗಿ ಪರಸ್ಥಳದಿಂದ ದಿನಾಲು ಸಹಾಯವು ದೊರೆಯುತ್ತಿರುವಾಗ್ಗೆ ನಮ್ಮ ಬಾಗಲಕೋಟೆಯ ಕನ್ನಡಾಭಿಮಾನಿಗಳು 'ಕನ್ನಡಿಗ'ನನ್ನು ಮರೆಯಬಾರದಾಗಿ ನಮ್ಮ ಬೇಡಿಕೆಯಿದೆ. ಮುಂದಿನ ವಾರದಿಂದ ಬಾಗಲಕೋಟೆಯ ಕರ್ನಾಟಕ ಭಕ್ತರೂ ತಮ್ಮ ತಮ್ಮ ಕಾಣಿಕೆಗಳನ್ನು ಈ ಕನ್ನಡ ಬಾಲಕನಿಗಿತ್ತು, ದೀಪಾವಳಿಯ ಹಬ್ಬದಿಂದ ಅವನಿಗೆ ಹೊಸ ಜೀವಕಳೆ ತುಂಬುವರೆಂದು ಕೋರುತ್ತೇವೆ.

ವೀರಶೈವ ಮಹಾಸಭೆಯ ಅಧ್ಯಕ್ಷಸ್ಥಾನದ ವಿಚಾರವು ಈಗ್ಗೆ ನಡೆದಿದೆ. ನಾವು ವೀರಶೈವ ಮತಕ್ಕೆ ಒಳಪಟ್ಟವರಾದವರಲ್ಲವಾದರೂ, ಕರ್ನಾಟಕದ ಮುಖ್ಯಾಂಗವಾದ ಈ ಸಮಾಜದ ಚಟುವಟಿಕೆಗಳನ್ನು ನಿರೀಕ್ಷಿಸುವದು, ಕರ್ನಾಟಕ ದೃಷ್ಟಿಯಿಂದ ಅವಶ್ಯವಾದುದು. ಆದುದರಿಂದಲೇ ಈ ಬಗ್ಗೆ ನಾವು ಬರೆಯಹತ್ತಿದಗಿರುವೆವು. ಸೊಲ್ಲಾಪೂರದಲ್ಲಿದ್ದ ವೀರಶೈವರು ಕರ್ನಾಟಕವನ್ನು ಮರೆತು ಬಿಟ್ಟಿರುವರೆಂಬುದು, ಎಲ್ಲರಿಗೂ ತಿಳಿದವಿಷಯವಾಗಿದೆ. ಅವರು ಕರ್ನಾಟಕದ ಬಗ್ಗೆ ಜಾಗೃತರಾಗಬೇಕಾದರೆ, ಅವರಲ್ಲಿಯ ಅವರ ಮತದ ಜಾಗೃತಿಯಾಗಬೇಕು. ಧರ್ಮಜಾಗೃತಿಯಿಂದಲೇ ನಮ್ಮ ಸೊಲ್ಲಾಪೂರದ ವೀರಶೈವರಲ್ಲಿ ಕರ್ನಾಟಕ, ಕನ್ನಡ ನುಡಿಗಳ ಭಾವನೆಯುಂಟಾಗಬೇಕೇ ಹೊರತು, ಬೇರೆ ಮಾರ್ಗವಿಲ್ಲ. ವೀರಶೈವರಿಗೂ ಕನ್ನಡ ನುಡಿಗೂ ಎಂತಹ ನಿಕಟ ಸಂಬಂಧವಿದೆಂಬುದರ ಜ್ಞಾನವು ಅವರಿಗುಂಟಾಗಬೇಕು. ಈ ದೃಷ್ಟಿಯಿಂದ ನೋಡಿದರೆ, ಕನ್ನಡನಾಡಿನ ವೀರಶೈವರೆಲ್ಲ ಸೊಲ್ಲಾ

ಪೂರದ ತಮ್ಮ ಜ್ಞಾತಿಬಾಂಧವರನ್ನು ಮರೆಯಲಿಕ್ಕಾಗದು. ಧಾರ್ಮಿಕ ಸಭೆಗಳಿಗೆ ಮೊದಲು ಅವರನ್ನು ಬರಮಾಡಿಕೊಳ್ಳಬೇಕು. ಸೊಲ್ಲಾಪೂರದಲ್ಲಿ ವೀರಶೈವರು ಶ್ರೀಮಂತರಿದ್ದಾರೆ. ಸುಶಿಕ್ಷಿತರಿದ್ದಾರೆ ಒಳ್ಳೇ ವರ್ಚಸ್ವಿಗಳಿದ್ದಾರೆ. ಕಾರ್ಯದೆಮಂಡಲದಲ್ಲಿದ್ದ ಶ್ರೀ ಅಬುದುಲಫರಕರ ನಾಗಪ್ಪನವರ ಹೆಸರೂ ಮುಂದೆ ಬಂದಿದೆ. ಹುಬ್ಬಳ್ಳಿಯಲ್ಲಿ ಮಹಾಸಭೆ ಯಿರುವದರಿಂದ, ಸೊಲ್ಲಾಪೂರದ ವೀರಶೈವರಿಗೆ ತಮ್ಮ ಸಮೀಪದಲ್ಲಿಯೂ, ವ್ಯಾಪಾರದಲ್ಲಿ ತಮಗೆ ಪ್ರಿಯವೂ ಆದ ಹುಬ್ಬಳ್ಳಿಗೆ ತಂಡತಂಡವಾಗಿ ಹೋಗಲು ಅನುಕೂಲವಿದೆ. ಸೊಲ್ಲಾಪೂರದವರು ಹುಬ್ಬಳ್ಳಿಗೆ ಬಂದಬಾದರೆ, ತಮ್ಮ ತಮ್ಮಂದಿರಾದ ಹುಬ್ಬಳ್ಳಿಯ ಶೆಟ್ಟರು, ಮಹಾಸಭೆಯನ್ನು ಕರೆದು, ಒಳ್ಳೇ ಯಶಸ್ವಿಯಾಗುವಂತೆ ಏರ್ಪಡಿಸಿದ್ದನ್ನು ಕಂಡು, ಉತ್ಸಾಹಿತರಾಗಿ, ಹುಬ್ಬಳ್ಳಿಯವರ ಅಣ್ಣಂದಿರಾದ ನಾವು ಅವರಿಗಿಂತಲೂ ಯಶಸ್ವಿಯಾಗಿ ಮುಂದಿನ ಸಭೆ ಕೂಡಿಸುವೆವೆಂದು ಟೊಂಕಕಟ್ಟದೇ ಬಿಡಲಿಕ್ಕಿಲ್ಲ. ಹೀಗಾದಲ್ಲಿ ಕರ್ನಾಟಕದ ಅಭಿಮಾನದ ಬೀಜವನ್ನು ಸೊಲ್ಲಾಪೂರದಲ್ಲಿ ಊರಿದಂತಾಗುವದು ಮತ್ತೂ ಈ ಬೀಜ ಊರಿದ ಬಹುಮಾನವು ಹುಬ್ಬಳ್ಳಿಯವರಿಗೇ ಹೋಗುವದು ಈ ಬಗ್ಗೆ ಅಖಂಡ ಕರ್ನಾಟಕದ ಎಲ್ಲ ಮತದವರೂ ಹುಬ್ಬಳ್ಳಿಯವರನ್ನು ಅಭಿನಂದಿಸದೇ ಇರಲಿಕ್ಕಿಲ್ಲ. ಆದುದರಿಂದ ಈ ಸಲ ಮಹಾಸಭೆಯ ಅಧ್ಯಕ್ಷಸ್ಥಾನಕ್ಕೆ ಸೊಲ್ಲಾಪೂರದ ಶ್ರೀ ನಾಗಪ್ಪಣ್ಣನವರನ್ನೇ ನಿಯೋಜಿಸಬೇಕಾಗಿ ನಾವು ಹುಬ್ಬಳ್ಳಿಯ ನಮ್ಮ ವೀರಶೈವ ಬಾಂಧವರಿಗೆ ಸೂಚಿಸುತ್ತೇವೆ. ಮತ್ತೂ, ಮಹಾಸಭೆಯ ತರುಣರೂ ಉತ್ಸಾಹಿಗಳೂ ಆದ ಕಾರ್ಯದರ್ಶಿಗಳು ನಮಿಶಿವಾಂತ ಕರ್ನಾಟಕಾಭಿಮಾನಿಗಳಾಗಿದ್ದದರಿಂದ, ಈ ಸೂಚನೆಗೆ ಬೆಂಬಲ ದೊರೆತೆ ಪ್ರಯತ್ನಿಸುವವರಾಗಿ ನಮ್ಮ ನಂಬುಗೆಯಿದೆ. ಕರ್ನಾಟಕ ಏಕೀಕರಣ, ಕರ್ನಾಟಕ ವಿಶ್ವವಿದ್ಯಾಲಯಗಳ ಗಾಳಿಯಿಂದ ಕರ್ನಾಟಕದ ಚಿಂತೆಯು ಎಲ್ಲರಿಗೂ ಹತ್ತಿದ ಸಮಯದಲ್ಲಿ ಹುಬ್ಬಳ್ಳಿಯವರೂ, ಮಹಾಸಭಾ ಸ್ವಾಗತ ಸಂಘದವರೂ, ಕಳೆದವರ್ಷ ಏಕೀಕರಣಸಭೆಯ ಅಧ್ಯಕ್ಷರಾಗಿದ್ದ ಮತ್ತು ಈಗ ಸ್ವಾಗತ ಸಂಘದ ಅಧ್ಯಕ್ಷರಾಗಿದ್ದ ಶ್ರೀ ಕಂಬಳಿಯವರೂ ಈ ವಿಷಯವನ್ನು ಮರೆಯಲಾರರೆಂದು ನಾವು ದೃಢವಾಗಿ ನಂಬಿದ್ದೇವೆ.

ಬಸವೇಶ್ವರ ಹಾಯಸ್ಕೂಲಿನ ಅಂತರ್ವ್ಯವಸ್ಥೆಯಬಗ್ಗೆ ಹಿಂದಕ್ಕೆ ನಾವು ಒಂದು ಲೇಖವನ್ನು ಬರೆದಿದ್ದೆವು. ನಂತರ ಶಾಲೆಯಲ್ಲಿ ಸುಧಾರಣೆಯ ಲಕ್ಷಣಗಳು ತೋರ ಹತ್ತಿದವು. ಇನ್ನು ಈ ಶಾಲೆಯ ಕಾರ್ಯವೆಲ್ಲ ಸೊಗಸಾಗಿ ಸಾಗುವದೆಂದು ನಾವು ನಂಬಿದೆವು. ಈಗ್ಗೆ ನಮ್ಮ ಕಡೆಗೆ ಬಂದ ೫ ಪತ್ರಗಳಲ್ಲಿ ೩ ಪತ್ರಗಳು ಪ್ರಕಟವಾಗಿವೆ. ಅಪ್ರಕಾಶಿತವಾದ ಇನ್ನೆರಡು ಪತ್ರಗಳಲ್ಲಿ ಬಸವೇಶ್ವರ . ಶಾಲೆಯಲ್ಲಿ ಇವೆಲ್ಲ ಕೆಲಸಮಾಡಿದ ಓರ್ವ ವೀರಶೈವ ಶಿಕ್ಷಕರದೇ ಒಂದು ಪತ್ರವಿದೆ. ಇವೆಲ್ಲವುಗಳಿಂದ ನೋಡಲು ಈ ಶಾಲೆಯ ಆಡಳಿತವು ಸಮಾಧಾನಕರವಾಗಿಲ್ಲವೆಂಬದು ಸಿದ್ಧವಾಗುತ್ತದೆ. ಬ್ರಾಹ್ಮಣರೇಯಿರಲಿ, ಬ್ರಾಹ್ಮಣೇತರರೇಯಿರಲಿ, ಶಿಕ್ಷಕರು ಶಾಲೆಗೆ ಅಂಟಿಕೊಂಡು ನಿಲ್ಲುವ ಹಾಗೆ ಈ ಶಾಲೆಯ ವ್ಯವಸ್ಥಾಪಕ ಮಂಡಲದವರು ಅವಕಾಶವನ್ನುಂಟುಮಾಡದಿರುವದು ಒಳಿತಲ್ಲ. ಬಾಗಲಕೋಟೆಯಂಥ ಪಟ್ಟಣದಲ್ಲಿ ಮಾಧ್ಯಮಿಕ ಶಿಕ್ಷಣದ ಕೊರತೆಯನ್ನು ಪೂರ್ಣಮಾಡಿದ ಈ ಶಾಲೆಯವರೇ ಆದ್ದರಿಂದ ಪಟ್ಟಣಿಗರಿಗೆ ಇವರು ಮಹದುಪಕಾರ ಮಾಡಿರುವರೆಂದು ನಾವು ಆನಂದಭರಿತರಾಗಿರುವೆವು. ಆದರೆ ಈ ಶಾಲೆಯ ಅಂತರ್ವ್ಯವಸ್ಥೆಯು ಸುಸ್ವರೂಪವು ಈ ವರೆಗೂ ಉಂಟಾಗದಿರುವದು ನಮಗೆ ಆಶ್ಚರ್ಯವನ್ನುಂಟುಮಾಡಿದೆ. ನಿಶ್ಚಿತ ಸ್ವರೂಪವೆಂದರೆ, ಪುಣೆಯ 'ಡೆಕ್ಕನ್ ಎಜ್ಯುಕೇಶನ್ ಸೊಸಾಯಿಟಿ'ಯ ಮಾದರಿಯಂತೆ ಶಿಕ್ಷಕರನ್ನು ಆಜೀವ ಸಭಾಸದರನ್ನಾಗಿ ಮಾಡಿಕೊಂಡು, ಅವರಲ್ಲಿ ಶಾಲೆಯ ಆಡಳಿತದ ಜವಾಬ್ದಾರಿಯನ್ನು ಹೊರಿಸಿ, ಪಟ್ಟಣದಲ್ಲಿಯ ಶಿಕ್ಷಣದಲ್ಲಿ ಅನುರಾಗ ವಿದ್ದಂತಹ ಸುಶಿಕ್ಷಿತ ಜನರ ಮಂಡಲವನ್ನು ನಿಯಮಿಸಿ ಎಲ್ಲ ಕಾರ್ಯವೂ ಚೊಕ್ಕಟವಾಗಿ ನಡೆಯುವಂತೆ ಏರ್ಪಾಟು ಮಾಡುವದು. ಬೆಳಗಾವಿ, ಧಾರವಾಡ, ವಿಜಾಪುರಗಳಲ್ಲಿ ನಮ್ಮ ವೀರಶೈವ ಬಾಂಧವರಿಂದ ನಡೆಸಲ್ಪಟ್ಟ ಶಾಲೆಗಳು ಈ ಪದ್ಧತಿಯಲ್ಲಿಯೇ ನಡೆದವರಿಂದ ಅವೆಲ್ಲ ಜನರ ಪ್ರೀತಿಗೆ ಪಾತ್ರವಾಗಿವೆ. ಅದೇಪ್ರಕಾರವಾಗಿ ಅಥವಾ ಬಸವೇಶ್ವರರ ದಿವ್ಯ ನಾಮವನ್ನು ಧರಿಸಿದ್ದರಿಂದ ಅವೆಲ್ಲ ಸಂಸ್ಥೆಗಳೂ ಶ್ರೇಷ್ಠವೆಂದೆನಿಸಿ ಇಲ್ಲಿಯ ಶಾಲೆಯು ನಡೆಯಬೇಕಾಗಿ ನಮ್ಮ ಸಾತ್ವಿಕ ಅಭಿಲಾಷೆಯಿದೆ. ಆದುದರಿಂದಲೇ ನಾವು ಈ ಶಾಲೆಯ ಬಗ್ಗೆ ಹಿಂದಕ್ಕೆ ಬರೆದುದು, ಈಗ್ಗೆ ಮತ್ತೆ ಬರೆಯ ಹತ್ತಿದುದು ಇದೇ ಸಾತ್ವಿಕದೃಷ್ಟಿಯಿಂದಲೇ, ಶಾಲೆಯ ಅಧಿಕಾರಿಗಳು ಈ ಮಾತನ್ನು ವಿಚಾರಿಸಿ ಇಲ್ಲಿ ನವಜೀವನದ ಬೇರುಗಳು ನೆಲಿಸುವಂತೆ ಪ್ರಯತ್ನಿಸಬೇಕಾಗಿ ನಮ್ಮ ಬೇಡಿಕೆಯುಂಟು.

ಪುಣೆ ಪ್ರದರ್ಶನದಿಂದ ಬಂದ ವೈಕಾತಜನರಭಿಪ್ರಾಯವು ಪ್ರತಿನಿಧಿಯೂ ಹೇಳುವದೆಂದರೆ:- ಬಡರೈತರಿಗೆ ಈ ಪ್ರದರ್ಶನದಿಂದ ಏನೂ ಲಾಭವಾಗದು. ಯುರೋಪಿಯ ಯಂತ್ರ ಸಾಧನಗಳ ವ್ಯಾಪಾರವು ಬೆಳೆಯಬೇಕೆಂದು ಇದು ನಿರ್ಮಿಸಲ್ಪಟ್ಟರೆ, ಅದೂ ಸಫಲವಾಗದು. ಹಿಂದೀ ರೈತರಿಗೆ ಆಡಂಬರವಿಲ್ಲದ ವಿಶೇಷ ಜಾಣತನ ಬೇಕಾದ ಸಾಧನಗಳು ಬೇಕು. ಈ ಯಂತ್ರಗಳು ಕೆಟ್ಟರೆ ಅವನ್ನು ನೆಟ್ಟಗೆ ಮಾಡುವವರಾರು? ಈ ಯಂತ್ರಗಳಿಗಾಗಿ ಮೊದಲು ಸಾವಿರಾರು ರೂಪಾಯಿಗಳ ಬಂಡವಲು ಹಾಕುವ ಶಕ್ತಿ ಯಾವ ರೈತನಿಗಿದೆ? ಭಾರತೀಯರ ಸಂಸ್ಕೃತಿ ಭಾರತೀಯರ ಒಕ್ಕಲತನದ ಪದ್ಧತಿಗಳನ್ನು ಮನದಟ್ಟಾಗಿ ಮಾಡಿಕೊಂಡು, ಅವುಗಳಿಗೆ ಅನುಗುಣವಾಗುವಂತೆ ಸರಕಾರದ ಒಕ್ಕಲತನದ ಶಾಖೆಯವರು ಪ್ರಯತ್ನಿಸಿದ ಹೊರತು, ಈ ಶಾಖೆಯಿಂದ ರೈತರಿಗೇನೂ ಉಪಯೋಗವಾಗದು

ಪತ್ರವ್ಯವಹಾರ.

ಚುನಾವಣೆಯೂ ಬ್ರಾಹ್ಮಣೇತರರೂ.

ರಾ|| ರಾ| ಸಂಪಾದಕ "ಕನ್ನಡಿಗ" ಇವರಿಗೆ-

ಚುನಾವಣೆಯ ಗಾಳಿಯು ಬೀಸುತ್ತಲಿದೆ. ಬ್ರಾಹ್ಮಣೇತರರು ಬ್ರಾಹ್ಮಣೇತರರಿಗೇ ತಮ್ಮ ಮತಕೊಡಬೇಕೆಂಬದಾಗಿ ಎಲ್ಲ ಕಡೆಗೂ ಕಂಠಶೋಷ ನಡೆದಿದೆ. ಆದರೆ ಬ್ರಾಹ್ಮಣೇತರರೆನ್ನುವ ಮುಂದಾಳುಗಳೂ ಸರಕಾರೀ ಅಧಿಕಾರಿಗಳೂ, "ಬ್ರಾಹ್ಮಣೇತರರಿಗೆ ಮತಕೊಟ್ಟರೆ ಬ್ರಾಹ್ಮಣೇತರ ಇಡೀ ಸಮಾಜಕ್ಕೆ ಲಾಭವಾಗುವದೆಂದು" ಹೇಳುತ್ತಿರುವದು ಪೂರಾ ಸುಳ್ಳು ಇದೆ. ನಾನೂ ಬ್ರಾಹ್ಮಣೇತರನು ಹಾಲ್ಮತ (ಕುರುಬರ) ಸಮಾಜದವನು: ನನಗೆ ಸಹಾಯಮಾಡಿರೆಂದು ಕೆಲವು ವಿಷಯಗಳಲ್ಲಿ ನಾನು "ಬ್ರಾಹ್ಮಣೇತರ" 'ಬ್ರಾಹ್ಮಣೇತರ' ಎಂಬದಾಗಿ ಮಂತ್ರ ಜಪಿಸುವ ಕೆಲವು ಅಧಿಕಾರಿಗಳ ಹಾಗೂ ಮುಂದಾಳುಗಳ ಕಡೆಗೆ ಹೋದಾಗ್ಗೆ ನನ್ನನ್ನು ಯಾರೂ ಹಚ್ಚಿಕೊಳ್ಳಲಿಲ್ಲ. ಆದರೆ ಅದೇ ಕೆಲಸಕ್ಕೆಂದು ರಡ್ಡಿ ಸಮಾಜದ ಬೇರೆ ಕೆಲವು ಜನರು ಅವರಿಗೆ ಮೊರೆಯಿಟ್ಟಕೂಡಲೇ ಅವರ ಕೆಲಸವು ಕೈಗೂಡಿತು! ಪ್ರತಿಯೊಬ್ಬನು ತನ್ನ ಆತ್ಮ ಪ್ರತಿಷ್ಠೆ ಅಥವಾ ತನಗೆ ಬೇಕಾದ ತನ್ನ ಚೇಲಾ ಜನರು ಇವರಿಗಾಗಿಯೇ ಪ್ರಯತ್ನಿಸುವನು. ಇಡೀ ಬ್ರಾಹ್ಮಣೇತರ ಸಮಾಜಕ್ಕೆ

ಸಹಾಯಮಾಡುವನೆಂಬುದು ಪೂರಾ ಸುಳ್ಳು. ಆದ್ದರಿಂದ ಬ್ರಾಹ್ಮಣೇತರ ನೆಂಬ ದೊಡ್ಡ ಹೆಸರಿನ ಸವಿ ಸೂಕಿನ ಬಲಿಗೆ ಯಾವ ಬ್ರಾಹ್ಮಣೇತರರೂ ಸಿಕ್ಕಬಾರದೆಂದು ನಾನು ಈ ಮೂಲಕ ಎಚ್ಚರ ಕೊಡುವೆನು. ಕೆಲಸಮಾಡಲು ಧೈರ್ಯ, ವಿಚಾರ, ಸಾರ್ವಜನಿಕ ಕಳಕಳಿಯಿದ್ದ ಯೋಗ್ಯ ಉಮೇದವಾರರಿಗೇನೇ ಬ್ರಾಹ್ಮಣೇತರರೆಲ್ಲ-ವಿಶೇಷತಃ ನಮ್ಮ ಹಾಲ್ಮತದ ಸಮಾಜದವರು ತಮ್ಮ ಮತಕೊಡಬೇಕು. ಅವರು ಬ್ರಾಹ್ಮಣರಿರಲಿ; ಲಿಂಗವಂತರಿರಲಿ. ಆ ಬಗ್ಗೆ ಏನೂ ಅಡ್ಡಿಯಿಲ್ಲ. ಆದರೆ ರಡ್ಡೀ ಸಮಾಜದವರಿಗೆ ಮತ ಸರ್ವಥಾ ಕೊಡಬೇಡಿರಿ. ಈ ಸಮಾಜದ ಮೋಹಗೊಳಿಸುವ, ಆತ್ಮಪ್ರತಿಷ್ಠೆಯ ಮಾತಿಗೆ ಬಲಿಬೀಳಬೇಡಿರಿ ಇಷ್ಟೇ ನನ್ನ ವಿಜ್ಞಾಪನೆ. ಇತಿ ಶ್ರೀ ರೇಣುಕಾಚಾರ್ಯರ ವಿಜಯತು! ತಮ್ಮ

ಓರ್ವ ಹಾಲ್ಮತ ಹಿತಚಿಂತಕ

[ಟಿಪ್ಪಣಿ. ರಡ್ಡೀ ಜನರಿಗೆ ಮತಕೊಡಬೇಡಿರೆಂಬುದರಲ್ಲಿಯೂ ಅರ್ಥವಿಲ್ಲ. ಜಾತಿಗಳ ಮೇಲೆ ಪ್ರತಿನಿಧಿಗಳನ್ನಾರಿಸುವ ಪದ್ಧತಿಯು ಸದೋಷವಾಗಿದೆಯೆನ್ನುವದು ಜನರಿಗೆ ತಿಳಿಯಬೇಕೆಂದು ನಾವದನ್ನು ಪ್ರಸಿದ್ಧಿಸಿರುವೆವು. ಶಿಕ್ಷಣವೂ, ಚುನಾವಣೆಯ ಅನುಭವವೂ ಹೆಚ್ಚಾದಂತೆ ಈ ಲೋಪಯುಕ್ತವಾದ ಪದ್ಧತಿಯು ತಾನಾಗಿಯೇ ಹಾಳಾಗುವದು -ಸಂ. ಕ.]

ಬಾಲ್ಯವಿವಾಹ ನಿಷೇಧ.

([illegible] ಸಜ್ಜನ ಸಮಾಜ ಸುಧಾರಣೆಯ ಸಂಘದವರಿಂದ)
ಕಳೆದವಾರದಿಂದ ಬಂದಿದ್ದು

ಈ ಪ್ರಕಾರ ಬಾಲ್ಯವಿವಾಹವು ತ್ಯಾಜ್ಯವಾದುದಾಗಿರುವದರಿಂದಲೇ ನಮ್ಮ ಶಾಸ್ತ್ರಕಾರರುಕೂಡ ಇದನ್ನು ನಿಷಿದ್ಧಿಸಿದ್ದಾರೆ. ನಾವು ಶಾಸ್ತ್ರವಿರೋಧವಾದ ಬಾಲ್ಯವಿವಾಹವನ್ನು ಆಚರಣೆಯಲ್ಲಿಟ್ಟುಕೊಂಡದ್ದರಿಂದ ಅನೇಕ ಕಷ್ಟ ನಷ್ಟಗಳಿಗೀಡಾಗಿದ್ದೇವೆ. ಕ್ರಿ. ಶ. ೧೯೧೧ ನೆಯ ಖಾನೇಸುಮಾರಿಯಿಂದ ತಿಳಿಯುವದೇನಂದರೆ ಈ ನಮ್ಮ ಹಿಂದುಸ್ಥಾನದಲ್ಲಿ ಒಂದು ವರ್ಷದಿಂದ ಹತ್ತು ವರ್ಷಗಳೊಳಗಿನ ೨೨೫೦೦೪೫೫ ಬಾಲಿಕೆಯರಿಗೆ ವಿವಾಹವಾಗಿದೆ. ಇವರಲ್ಲಿ ಕೇವಲ ೧ ರಿಂದ ೫ ವರ್ಷಗಳೊಳಗಿನವರೇ ೩೦ ಲಕ್ಷ ಬಾಲಿಕೆಯರಿದ್ದಾರೆ. ಈ ಬಾಲ್ಯವಿವಾಹವನ್ನು ಮಾಡದೆ ಇದ್ದಿದ್ದರೆ ೧ ರಿಂದ ೧೦ ವರ್ಷಗಳೊಳಗಿನ ೧೭೩೯೭೬೩ ಬಾಲಿಕೆಯರು ವಿಧವೆಯರಾಗಿ ದುರವಸ್ಥೆಗೆ ಪಾತ್ರರಾಗುತ್ತಿದ್ದರೆ? ತಾಯಿತಂದೆಗಳ ಅಪರಾಧದಿಂದ ಮಕ್ಕಳು ಮರಣಾಂತ್ಯದವರೆಗೂ ಈ ಶಿಕ್ಷೆಯನ್ನು ಅನುಭವಿಸಬೇಕಾದುದು ಯಾವನ್ಯಾಯ? ಅಜ್ಞರಾದ ಬಾಲಿಕೆಯರ ಮೇಲೆ ಇದು ಭಯಂಕರವಾದ ಬಲಾತ್ಕಾರ ವಲ್ಲವೇ? ಬಾಲವಿಧವೆಯರಲ್ಲಿ ಅನೇಕರು ಮುಂದೆ ವ್ಯಭಿಚಾರಕ್ಕೆ ವಶರಾಗಿ ಶಿಶುಹತ್ಯಾದಿ ಪಾಪಕಾರ್ಯಗಳನ್ನು ಮಾಡುತ್ತಿರುವದಕ್ಕೆ ಚಿಕ್ಕಂದಿನಲ್ಲಿಯೇ ಲಗ್ನಮಾಡಿಕೊಟ್ಟ ತಾಯಿತಂದೆಗಳೇ ಕಾರಣರಲ್ಲವೆ? ಚಿಕ್ಕಮಕ್ಕಳಿಗೆ ಅಕ್ಕಿಯಕಾಳನ್ನು ಹಾಕಿ ಕಣ್ಣು ತುಂಬ ನೋಡಬೇಕೆಂಬ ಮರುಳ ಜನರೇ ಈ ವಿಧವಾಸ್ತ್ರೀಯರ ಅನೇಕ ದುಃಖಗಳಿಗೆ ಕಾರಣರಾಗಿದ್ದಾರೆ. ನಮ್ಮ ದೇಶದಲ್ಲಿ ಎರಡು ವರ್ಷದೊಳಗಿನ ಶಿಶುಗಳು ನೂರಕ್ಕೆ ೪೭ ರಂತೆ ಮೃತಪಡುತ್ತಿರುವದಕ್ಕೂ ಅಲ್ಪಾಯುಗಳೂ ಬಹುರೋಗಿಗಳೂ ಆದ ಸಂತಾನವನ್ನು ಉಂಟು ಮಾಡುವದಕ್ಕೂ ಈ ಅತ್ಯಂತ ನಿಂದ್ಯವಾದ ಬಾಲ್ಯವಿವಾಹವೇ ಮುಖ್ಯ ಕಾರಣವಾಗಿದೆ. ಆದಕಾರಣ ನಮ್ಮ ಸಜ್ಜನ ಸಮಾಜದಲ್ಲಿರತಕ್ಕ ಬಾಲ್ಯವಿವಾಹವನ್ನು ನಿಲ್ಲಿಸಬೇಕೆಂಬ ಉದ್ದೇಶದಿಂದ ಹತ್ತು ವರ್ಷಗಳೊಳಗಿನ ಬಾಲಿಕೆಯರನ್ನಾರೂ ಲಗ್ನಮಾಡಿಕೊಡಬಾರದೆಂದು, ಸಜ್ಜನ ಸಮಾಜ ಸುಧಾರಣೆಯ ಮೊದಲನೆಯ ಸಭೆಯಲ್ಲಿ ನಿರ್ಣಯಿಸಲ್ಪಟ್ಟಿದೆ. ನಮ್ಮ ಸಮಾಜ ಬಾಂಧವರು ಬಾಲ್ಯವಿವಾಹದಿಂದಾಗತಕ್ಕ ಈ ಅನರ್ಥಗಳನ್ನು ಲಕ್ಷ್ಯಕ್ಕೆ ತಂದು ಈ ಪರಿಷತ್ತಿನ ನಿರ್ಣಯವನ್ನು ಆಚರಣೆಯಲ್ಲಿ ತರಬೇಕೆಂದು ಅಪೇಕ್ಷಿಸುತ್ತೇವೆ.

ವಿಜಾಪೂರ ಜಿಲ್ಹೆಯ

ಮತದಾರರೇ!

ಮುಂಬೈ ಕಾಯದೇ ಮಂಡಲದ ಚುನಾವಣೆಯು ನವಂಬರ ೯ ನೇ ತಾ। ದಿನ! ನೆನಪಿರಲಿ!

[illegible] ಕರ್ನಾಟಕ ಭಕ್ತರೂ, ತಮ್ಮ ಪ್ರಾವೀಣ್ಯದಿಂದ ಪರಪ್ರಾಂತಗಳಲ್ಲಿ ಸಹ ಹೆಸರಾದವರೂ, ಅಖಿಲ ಭರತಖಂಡಕ್ಕೆಲ್ಲ ಪರಿಚಿತರೂ, ಸುಶಿಕ್ಷಿತರ ಪ್ರಿಯರೂ, ರೈತರಿಗೆ ಕೈವಾರಿಗಳೂ ಸರಕಾರದ ಕೂಡ ಕುಸ್ತಿ ಹಿಡಿಯಲು ಯೋಗ್ಯತೆಯುಳ್ಳವರೂ ಸ್ವರಾಜ್ಯ ಪಕ್ಷದವರೂ, ಕಾಂಗ್ರೆಸ್ಸಿನಿಂದ ಆಜ್ಞೆ ಪಡೆದುಕೊಂಡವರೂ ಆದ **ಕರ್ನಾಟಕ ಭೂಷಣ ಕೌಜಲಗೀ ಶ್ರೀನಿವಾಸರಾಯರಿಗೇ ನಿಮ್ಮ ಮತಕೊಡಿರಿ.!!**

ಇವರ ಚಿನ್ಹವು ಖಡ್ಗವಿದೆ.
ಲಕ್ಷದಲ್ಲಿರಲಿ!!

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ

(ಲೇಖಾಂಕ ೧೦)

ಶ್ರೀ ಕಾಶಿಯಲ್ಲಿಯ ಮೂಲವಿಶ್ವೇಶ್ವರನ ಗುಡಿಯನ್ನು ಔರಂಗಜೇಬನು ತನ್ನ ವಶವಲ್ಲಿ ತೆಗೆದುಕೊಂಡು, ಅಲ್ಲಿಯ ಲಿಂಗವನ್ನು ಭಿನ್ನ ಮಾಡಿದನಂತೆ. ಕೂಡಲೇ ಒಂದು ಜ್ಯೋತಿಯು ಫಕ್ಕನೇ ಆ ಲಿಂಗದೊಳಗಿಂದ ಹೊರಬಿದ್ದು, ಗುಡಿಯ ಹಿಂಭಾಗದಲ್ಲಿರುವ ಒಂದು ಬಾವಿಯಲ್ಲಿ ಮಾಯವಾಯಿತಂತೆ! ಈ ಬಾವಿಗೆ ಈಗಲೂ ಜ್ಞಾನವಾಪಿಯೆಂಬ ಹೆಸರಿದೆ. ಯಾತ್ರಿಕರೆಲ್ಲರೂ ಈ ಬಾವಿಗೆ ಪೂಜೆಪ್ರದಕ್ಷಿಣೆಗಳನ್ನರ್ಪಿಸಿ, ಅದರಲ್ಲಿಯ ನೀರನ್ನು ಪ್ರೋಕ್ಷಣೆಮಾಡಿಕೊಳ್ಳುವರು. ಈ ಬಾವಿಯ ಎಡಭಾಗದಲ್ಲಿ ಹಳೇಮಂದಿರವಿದೆ. ಅದನ್ನೇ ಔರಂಗಜೇಬನು ಮಶೀದಿಯನ್ನಾಗಿ ಮಾಡಿರುವನು. ಈಗಲೂ ಅಲ್ಲಿ ಮಶೀದಿಯಿದೆ. ಅದೇಪ್ರಕಾರವಾಗಿ ಬಿಂದುಮಾಧವನ ದೇವಾಲಯದ ಪಕ್ಕದಲ್ಲಿ ಔರಂಗಜೇಬನು ನದಿಯ ದಂಡೆಯಲ್ಲಿ ಭವ್ಯವಾದ ಮಿನಾರವನ್ನೂ ಕಟ್ಟಿಸಿದನು. ಹಿಂದೂ ಜನರಿಗೆ ಅತ್ಯಂತವಾದ ಪವಿತ್ರಸ್ಥಾನವೆಂದರೆ ಕಾಶೀಕ್ಷೇತ್ರವು. ಈ ಕ್ಷೇತ್ರದಲ್ಲಿ ಬಂದೊಡನೆ ಮಿನಾರವೇ ಮೊದಲು ಕಂಣಿಗೆ ಬೀಳುವಹಾಗೆ ಎತ್ತರವಾಗಿ ಕಟ್ಟಿಸಲ್ಪಟ್ಟಿದೆ. ಕಾಶಿಯಲ್ಲಿ ಅತ್ಯಂತ ಮಹತ್ವದ ದೇವರೆಂದರೆ ವಿಶ್ವೇಶ್ವರ. ಆತನನ್ನೇ ಭಂಗಮಾಡಿ ಆ ಸ್ಥಾನದಲ್ಲಿಯೇ ಮಶೀದೆಯನ್ನು ನಿರ್ಮಿಸಿದರೆ, ಹಿಂದೂ ಜನರನ್ನು ಸಂಪೂರ್ಣವಾಗಿ ಒಗ್ಗಿ ಬಡಿದಂತಾಯಿತೆಂದೂ, ಹಿಂದುಸ್ಥಾನದಲ್ಲಿ ತನ್ನ ಪರಾಕ್ರಮದ ಮಹಿಮೆಯನ್ನು ಚನ್ನಾಗಿ ಕೂತ್ರಿಸಿದಂತಾಯಿತೆಂದೂ, ಔರಂಗಜೇಬನು ಭಾವಿಸಿದ್ದನಂತೆ! ಭಾವನೆಯಂತೆ ಕೃತಿಯೂ ಆಯಿತು. ಆಗ್ಗೆ ಹಿಂದೂ ಮಹಾಜನರು ಮೌನ್ಯರಾಗಿ ಸುಮ್ಮನೇ ಕುಳಿತರು. ಇದು ಯಾವಾಗಲೂ ಅಲ್ಲಿಯ ಕೆಲವು ಹಿಂದೂ ಜನರ ಮನದಲ್ಲಿ ಈಗಲೂ ಕಟಿಯುತ್ತಿರುತ್ತದೆಯಂತೆ. ಈ ಒಗ್ಗೆ ದಂಗೆಗಳಾಗದಂತೆ ಹಿಂದೂ ಮುಸಲ್ಮಾನರ ಮುಂದಾಳುಗಳೂ ಸರಕಾರದವರೂ ಜಾಗೃತರಾಗಿದ್ದಾರೆಂದು ತಿಳಿಯಿತು ಇರಲಿ. ಆ ಜ್ಞಾನವಾಪಿಯ ಬಲಭಾಗದಲ್ಲಿ ಈಗಿನ ಹೊಸ ದೇವಾಲಯವಿದೆ. ಇದನ್ನು ಇಂದೂರಿನ ಅಹಲ್ಯಾದೇವಿಯು ಕಟ್ಟಿಸಿ, ಅಲ್ಲಿ ವಿಶ್ವೇಶ್ವರನ ಲಿಂಗವನ್ನು ಸ್ಥಾಪಿಸಿದ್ದಾಳೆ. ಈ ಹೊಸ ಗುಡಿಯು ಹೊಸ ಮಾದರಿಯದಿದ್ದು, ಇಂತಹ ದಿನ ಇಂತಹ ಕಾಲಕ್ಕೆ ನಾನು ಜ್ಞಾನವಾಪಿಯಿಂದ ಎದ್ದುಬಂದು, ಈ ಹೊಸ ಗುಡಿಯ ಲಿಂಗದಲ್ಲಿ ಸೇರುವೆನೆಂದು ವಿಶ್ವೇಶ್ವರನ ಸ್ವಪ್ನ ರೂಪೀ ಅಪ್ಪಣೆಯಾಯಿತಂತೆ. ಆ ಪ್ರಕಾರ ಆ ದಿನ ಲಿಂಗಸ್ಥಾಪನೆಯ ಮಹೋತ್ಸವ ಮಾಡುವದನ್ನು ಜನರು ನಿಶ್ಚಯಿಸಿದರು. ಗರ್ಭಗುಡಿಯ ಮಧ್ಯದಲ್ಲಿ ಲಿಂಗಸ್ಥಾಪನೆ ಮಾಡತಕ್ಕದ್ದೆಂದು, ಗರ್ಭಗುಡಿಯ ಒಂದು ಮೂಲೆಯಲ್ಲಿ ಲಿಂಗವನ್ನಿಟ್ಟಿದರು. ಆದರೆ ಸ್ವಪ್ನದಲ್ಲಿ ತಿಳಿಸಿದ ಕಾಲದಲ್ಲಿ ಪ್ರತಿಷ್ಠಾಪನೆಯನ್ನು ಮಾಡುವದು ಕೆಲಂತ ವಿಲಂಬವಾಯಿತಂತೆ! ಆದರೂ ಸ್ವಪ್ನದಲ್ಲಿ ತಿಳಿಸಿದ ಸರಿಯಾದ ಕಾಲಕ್ಕೆ ಮೂಲೆಯಲ್ಲಿಟ್ಟ ಲಿಂಗದಲ್ಲಿ ಆ ಜ್ಞಾನ ಕೂಪದಿಂದ ಜ್ಯೋತಿಯು ಹೊರಬಿದ್ದು, ಲಿಂಗದಲ್ಲಿ ಸೇರಿತಂತೆ! ಮುಂದೆ ಅದೇ ಸ್ಥಾನದಲ್ಲಿ ಲಿಂಗಪ್ರತಿಷ್ಠಾಪನೆಯಾಯಿತು. ಹೀಗಾಗಿ ಗರ್ಭಗುಡಿಯ ಮಧ್ಯದಲ್ಲಿ ಲಿಂಗವಿರದೇ, ಒಂದು ಮೂಲೆಯಲ್ಲಿ ಲಿಂಗವು ಸ್ಥಾಪನೆಯಾಗಿದೆ. ಕಾಶಿಯಲ್ಲಿ ಅದಲ್ಲಿಯೂ ವಿಶ್ವೇಶ್ವರನ ದೇವಾಲಯದಲ್ಲಿ ಕಲ್ಪನಾತೀತವಾದ ಲಿಂಗಗಳಿವೆ. ಹೊಸದಾಗಿ ಕಾಶಿಗೆ ಹೋದ ಯಾತ್ರಿಕರೆಲ್ಲ ಒಂದೊಂದು ಲಿಂಗವನ್ನು ಕಾಶಿಯಲ್ಲಿ ಪ್ರತಿಷ್ಠಾಪನೆ ಮಾಡಿಯೇ ಬರಬೇಕಂತೆ. ಆದ್ದರಿಂದ ಪ್ರತಿದಿನವೂ ಅಸಂಖ್ಯವಾದ ಲಿಂಗಗಳು ಪ್ರತಿಷ್ಠಾಪನೆಯಾಗುತ್ತಲೇಯಿದೆ.

ಕಾಶಿಯಲ್ಲಿ ಕಾಶೀವಿದ್ಯಾಪೀಠವೆಂಬ ರಾಷ್ಟ್ರೀಯ (ಪಕ್ಷದ) ಪದ್ಧತಿಯ ಶಿಕ್ಷಣವನ್ನು ಕೊಡುವ ವಿದ್ಯಾಲಯವಿದೆ. ಅಸಹಕಾರದ ಚಳವಳದಲ್ಲಿ ಇದು ಸ್ಥಾಪಿಸಲ್ಪಟ್ಟಿತು. ಅಲ್ಲಿಯ ಸುಪ್ರಸಿದ್ಧ ಮುಂದಾಳುಗಳೂ ಕೋಟ್ಯಾಧೀಶರೂ ಆದ ಬಾಬೂ ಶಿವ ಶಿವಪ್ರಸಾದಗುಪ್ತರು ಈ ಶಾಲೆಗಾಗಿ ೧೦ ಲಕ್ಷರೂಪಾಯಿಗಳನ್ನು ದಾನಮಾಡಿದ್ದಾರೆ. ಈ ವಿದ್ಯಾಲಯದಲ್ಲಿ ಕನ್ನಡವಿದ್ಯಾರ್ಥಿಗಳಿದ್ದದ್ದನ್ನು ಕಂಡು ನಮಗೆ ಆನಂದವಾಯಿತು. ಧಾರವಾಡದ ರಾಷ್ಟ್ರೀಯ ಶಾಲೆಯಲ್ಲಿ ತಮ್ಮ ಅಧ್ಯಯನ ತೀರಿಸಿಕೊಂಡು ಮುಂದಿನ ಕಾಲೇಜದ ಅಭ್ಯಾಸಕ್ಕಾಗಿ ಇವರು ಕಾಶಿಗೆ ಹೋಗಿದ್ದಾರೆ.

ಕಾಶಿಯಲ್ಲಿ ಹಿಂದೂಧರ್ಮದ ಎಲ್ಲ ಜಾತಿಯ ಎಲ್ಲ ಭಾಷೆಗಳನ್ನಾಡುವ ಜನರಿದ್ದಾರೆ. ಹನುಮಾನ ಘಾಟಿನಲ್ಲಿ ಅಂದರೆ ನಾವಿಳಿದ ಭಾಗದಲ್ಲಿ ಕನ್ನಡ ತಮಿಳ ತೆಲಗು ಹಾಗು ಬಂಗಾಲೀ ಮಾತನಾಡುವ ಜನರು ಹೆಚ್ಚಾಗಿದ್ದರು. ಕನ್ನಡಮಾತನಾಡುವವರಲ್ಲಿ ಸ್ಮಾರ್ತ, ವೈಷ್ಣವ, ಶ್ರೀವೈಷ್ಣವರ ದೇವಾಲಯಗಳು ಬೇರೆ ಬೇರೆ ಇವೆ ಲಿಂಗಾಯತರ ಮಠವೂ ಇದೆ. ಇಲ್ಲ ದೊಡ್ಡ ಕನ್ನಡ ಅಕ್ಷರಗಳಿಂದ ಹಲಿಗೆಯನ್ನು ಬರೆದಿದ್ದಾರೆ. ಕನ್ನಡ ಹಲಗೆಗಳು ಅಲ್ಲಲ್ಲಿ ಕಣ್ಣಿಗೆ ಬೀಳುತ್ತಲಿದ್ದವು.

ಪಂಡಿತ ಮದನ ಮೋಹನ ಮಾಲವಿಯವರಿಂದ ಸ್ಥಾಪಿಸಲ್ಪಟ್ಟ ಹಿಂದೂ ವಿಶ್ವವಿದ್ಯಾಲಯವನ್ನು ಕಾಶಿಗೆ ಹೋದವರೆಲ್ಲ ನೋಡಿಯೇ ಬರತಕ್ಕದ್ದು. ಪಂಡಿತರು ಎಷ್ಟು ಕಷ್ಟಪಟ್ಟಿದ್ದಾರೆ. ಪಾಶ್ಚಾತ್ಯ ಹಾಗು ಹಿಂದೂ ಸಂಸ್ಕೃತಿಗಳು ಮಿಶ್ರಲಿನವಾಗುವದಕ್ಕೆ ಹೇಗೆ ಪ್ರಯತ್ನಿಸಿದ್ದಾರೆಂಬದರ ಕಲ್ಪನೆಯು ಅದನ್ನು ನೋಡದಿದ್ದರೆ ತಿಳಿಯದು. ಕಟ್ಟಡಗಳು ಅರ್ವಾಚೀನ ಪಾಶ್ಚಾತ್ಯರ ಪದ್ಧತಿಯಪ್ರಕಾರ ಅತ್ಯಂತ ಭವ್ಯವಾಗಿವೆ. ಕಟ್ಟಡಗಳ ಕಟ್ಟುವಿಕೆಯ ಪದ್ಧತಿಯು ಪ್ರಾಚೀನ ಹಿಂದೂ ದೇವಾಲಯಗಳನ್ನು ಹೋಲುತ್ತದೆ. ಆಟನೋಟಗಳು ಹೊಸ ಪದ್ಧತಿಯವು. ಪ್ರಾರ್ಥನಾಮಂದಿರದ ಕಲ್ಪನೆ, ಪ್ರಾರ್ಥನಾಪದ್ಧತಿಗಳು ಹಳೆಪದ್ಧತಿಯವು. ಉಳಿದ ಎಲ್ಲ ವಿಷಯದಲ್ಲಿಯೂ ಪಾಶ್ಚಾತ್ಯ ಪದ್ಧತಿಯೇ ಅನುಸರಿಸಲ್ಪಟ್ಟಿರುತ್ತದೆ. ನಾವು ಮೇ ತಿಂಗಳಲ್ಲಿ ಕಾಶಿಗೆ ಹೋಗಿದ್ದರಿಂದ ಕಾಲೇಜಿಯು ಬಂದಾಗಿದ್ದಿತು. ಆದ್ದರಿಂದ ವಿದ್ಯಾರ್ಥಿಗಳನ್ನೂ, ಅವರ ಶಿಕ್ಷಣ ಪದ್ಧತಿಯನ್ನೂ ನಿರೀಕ್ಷಿಸುವದಾಗಲಿಲ್ಲ. ವಿದ್ಯಾರ್ಥಿಗಳ ಹಾಗೂ ಶಿಕ್ಷಕರ ಉಡಪುಗಳ ಕಲ್ಪನೆಯೂ ನಮಗೆ ಬರಲಿಲ್ಲ. ವಿದ್ಯಾರ್ಥಿಗಳ ವಸತಿಗೃಹದ ಕೋಣೆಗಳು ಸಮಾಧಾನಕರವಾಗಿಲ್ಲ. ಕಟ್ಟಡಗಳಲ್ಲಿ ಹೇರಳವಾದ ಹಣ ವೆಚ್ಚಮಾಡಿ, ಮುಖ್ಯವಾಗಿ ವಿದ್ಯಾರ್ಥಿಗಳ ಕೋಣೆಗಳಲ್ಲಿ ಸಾಕಷ್ಟು ಅನುಕೂಲತೆಗಳನ್ನು ಮಾಡದೇ ಇದ್ದದ್ದನ್ನು ಕಂಡು ಬಹು ಖೇದವಾಯಿತು! ಕೋಣೆಗಳಲ್ಲಿ ಬೆಳಕು ಸಾಕಷ್ಟಿದ್ದರೂ, ಹವೆಯು ಚನ್ನಾಗಿ ಬರುವಂತೆ ಏರ್ಪಾಡಿಲ್ಲ. ಒರ್ವ ವಿದ್ಯಾರ್ಥಿಯು ಗಟ್ಟಿಯಾಗಿ ಓದಹತ್ತಿದರೆ. ಇತರರಿಗೆ ತೊಂದರೆಯಾಗುವಂತೆ ಕೋಣೆಗಳು ಕಟ್ಟಲ್ಪಟ್ಟಿವೆ. ಈ ಬಗ್ಗೆ ಹೆಚ್ಚಾದ ಸಂಗತಿಗಳನ್ನು ನಮ್ಮ ಕನ್ನಡನಾಡಿನ ಪ್ರೊಫೆಸರುಗಳಾದ, ಶ್ರೀ ಗೋಡಬೋಲೆ ಹಾಗು ಇನಾಮದಾರರಿಂದ ತಿಳಿದುಕೊಳ್ಳಬೇಕೆಂದಿದ್ದೆವು. ಆದರೆ ರಜೆಯ ಮೂಲಕ ಅವರೂ ಅಲ್ಲಿರಲಿಲ್ಲ. ಕನ್ನಡ ವಿದ್ಯಾರ್ಥಿಗಳು

ಈ ವಿದ್ಯಾಲಯದಲ್ಲಿ ಬಹು ಸ್ವಲ್ಪ ಜನರಿದ್ದಾರೆಂದೂ, ಅವರಲ್ಲಿ ಕರ್ನಾಟಕದ ಅಭಿಮಾನವು ಅಷ್ಟೊಂದು ಜಾಗ್ರತವಾಗಿಲ್ಲವೆಂದೂ ತಿಳಿಯಿತು. ಇರಲಿ.

ಈ ವಿಶ್ವವಿದ್ಯಾಲಯದಲ್ಲಿ ಶಾಸ್ತ್ರೀಯ ವಿಷಯದ ಬಗ್ಗೆ ಎಲ್ಲ ಏರ್ಪಾಡನ್ನು ಮಾಡಿರುವರು. ಈ ಬಗ್ಗೆಯ ಶಾಸ್ತ್ರೀಯ ಶಿಕ್ಷಣದ ಏರ್ಪಾಡು ಹಿಂದುಸ್ಥಾನದ ಯಾವ ವಿಶ್ವವಿದ್ಯಾಲಯದಲ್ಲಿಯೂ ಇಲ್ಲವಂತೆ. ಹಣದ ಕೊರತೆಯು ಈ ವಿಶ್ವವಿದ್ಯಾಲಯಕ್ಕೆ ಬಹಳೇಯಿದೆ. ಆದ್ದರಿಂದ ಇನ್ನೂ ಅನೇಕ ವಿಷಯಗಳಿಗೆ ಗಮನ ಕೊಡುವದು ಚಾಲಕರಿಗೆ ಶಕ್ಯವಾಗಿಲ್ಲ

ಹಿಂದೀ ಭಾಷೆಯ ನಾಟ್ಯಕಲೆಯು ಹೇಗಾಗಿದೆಂಬದನ್ನು ನೋಡುವದಕ್ಕೆ ನಾವು ಅಲ್ಲಿ ಎರಡು ನಾಟಕಗಳನ್ನು ನೋಡಿದೆವು ಒಂದು ಧಾರ್ಮಿಕ ನಾಟಕ ಮತ್ತೊಂದು ಸಾಮಾಜಿಕ ಹಿಂದೀ ನಾಟಕದಲ್ಲಿ ಒಳ್ಳೇ ಪ್ರಸಿದ್ಧಿಯನ್ನು ಹೊಂದಿದ "ದಿ ಕಾರಂಥಿಯನ್ ಥಿಯೇಟ್ರಿಕಲ್ ಕಂಪನಿಯು" ಅಲ್ಲಿದ್ದಿತು. ನಾಟಕ ಮಂಡಳಿಯ ಹೆಸರನ್ನು ತಿಳಿದುಕೊಂಡಕೂಡಲೇ, ಹೆಸರಿನಿಂದಂತೂ ಇಂಗ್ಲೀಷಿನಿಂದ ಕುಲಗೆಟ್ಟಿದ್ದೆಂಬದು ಹೊಳೆಯಿತು. ನಾಟಕವನ್ನು ನೋಡಿದಮೇಲೆ ಸಂಗೀತ ಕುಂದಿ ಕಥಾಸಂವಿಧಾನಕದಲ್ಲಿ ಚಾತುರ್ಯವೆಲ್ಲಿ? ಎಂಬದಾಗಿ ತೋರಿತು. ಬ್ಬಹುಷ್ಟು ಅಭಿನಯಕಾರರು ಚನ್ನಾಗಿದ್ದರು, ಸ್ತ್ರೀಯರು ವೇಷಧರಿಸುತ್ತಿದ್ದರು. ಉಡಿಗೆತೊಡಿಗೆಗಳು ಬಹು ಬೆಲೆಯುಳ್ಳವು ಸೀನರಿಗಳೂ, ಪಡದೆಗಳೂ, ಚನ್ನಾಗಿದ್ದವು

ಈಗ ರಂಗಭೂಮಿಗೆ ತಟ್ಟಿರುವ ಕೊರತೆಗಳಾವುವು, ಅವುಗಳ ನಿವಾರಣೆಯು ಯಾರಿಂದ ನಡೆಯಬೇಕು ಎಂದು ವಿಚಾರಮಾಡೋಣ. ಅವುಗಳು ಮುಖ್ಯವಾಗಿ ಎರಡೆನ್ನಬಹುದು (೧) ಕಲಾದೃಷ್ಟಿಯಿಂದ (೨) ನೈತಿಕದೃಷ್ಟಿಯಿಂದ. ಕಲೆಯು ನೀತಿಯನ್ನು ಬಿಟ್ಟಿಲ್ಲವೆಂಬುದು ನಿಜವಾದರೂ, ಈ ಭಿನ್ನಪದಗಳನ್ನು ಇಂದಿನ ವ್ಯವಹಾರಿಕ ಅರ್ಥದಲ್ಲಿ ಮಾತ್ರ ಉಪಯೋಗಿಸಿರುವೆವು.

೧. ಕಲಾದೃಷ್ಟಿಯ ಸುಧಾರಣೆಯು—ಭಾಷೆ, ಅಭಿನಯ, ಸಂಗೀತ, ಉಡಿಗೆ, ದೃಶ್ಯವ್ಯವಸ್ಥೆ, ಪದ್ಧತಿ ಇವೇ ಮೊದಲಾದುವುಗಳ ಕುರಿತಿದೆ.

೨. ನೈತಿಕ ದೃಷ್ಟಿಯ ಸುಧಾರಣೆಯು—ನಾಟಕಗಳು, ನೀತಿಬೋಧಕವಿರಬೇಕು ಮಾತ್ರವಲ್ಲ, ಅವುಗಳು ಬೋಧಿಸುವ ನೀತಿಯ ಪರಿಣಾಮವು ಸಮಾಜದ ಮೇಲಾಗಬೇಕೆಂದರೆ, ಅವುಗಳು ನೀತಿವಂತರಹಸ್ತದಿಂದ ಬರಬೇಕೆಂಬುದರಿಂದಲೂ, ಅನೀತಿವಂತರಿಂದ, ನೀತಿಪ್ರದ ಸ್ವರೂಪವು ನಾಟಕಗಳಿಗೆ ಬರಲಾರದೆಂಬುದರಿಂದಲೂ.

ಇಂದಿನ ರಂಗಭೂಮಿಯ ಸ್ಥಿತಿಯು-ಹೀಗಿದೆಯೆಂದು ಮೊದಲು ಚಿತ್ರಿಸಿ ಉಳಿದ ವಿಷಯಗಳನ್ನು ನಿಮ್ಮ ಮುಂದಿಡುವೆವು.

ಕಲಾದೃಷ್ಟಿಯಿಂದ, ಜೀವನವನ್ನು ಕಳೆದುಕೊಂಡ ಮೃತಕಳೇಬರ—ನಾಟಕವೆಂಬದೇಹ. ಅದರಲ್ಲಿ ಕಲೆಯ ಜೀವವೂ ಇಲ್ಲ, ರಕ್ತವೂ ಇಲ್ಲ, ಶ್ವಾಸೋಚ್ಛ್ವಾಸವು ಕೂಡ ಇಲ್ಲ. ಸಾಹಿತ್ಯದ ಕೊಲೆಯೇ

"ಕನ್ನಡಿಗ"ನ ರಜೆ.

ಮುಂದಿನ ವಾರದಲ್ಲಿ ದೀಪಾವಳಿ ಹಬ್ಬಕ್ಕಾಗಿ "ಕನ್ನಡಿಗ" ನಿಗೆ ರಜೆಯಿದೆ. ಆದ್ದರಿಂದ ೩೦ ನೇ ಸಂಚಿಕೆಯು ನವಂಬರ ೧೨ ನೇ ತಾ|| ದಿನ ಹೊರಡುವದು.

—ವ್ಯವಸ್ಥಾಪಕ.

ನೃತ್ಯವು ಸಮೃದ್ಧಿಯಾಗಿದ್ದಿತು. ಅಂದಮೇಲೆ ನಾಟಕದವರ ಉತ್ಸಾಹಕ್ಕೆ ಭಂಗಬರುವಂತಿದ್ದಿಲ್ಲ. ಅಂತೂ ಕರ್ನಾಟಕ ರಂಗಭೂಮಿಯನ್ನು ಹಿಂದೀ ರಂಗಭೂಮಿಯು ಅಷ್ಟೊಂದು ಹಿಂದೆ ಬಿಟ್ಟು ಓಡಿಲ್ಲವೆಂಬದು ಗೊತ್ತಾಯಿತು.

ರಂಗಭೂಮಿಯ ಸುಧಾರಣೆ. (೧)

ಯಾರಿಂದಾಗಬೇಕು?

(ಕೌಶಿಕನು ಬರೆದುದು)

ಈ ವಿಷಯದ ಕುರಿತು ಇಂದು ಕನ್ನಡನಾಡಿನ ಎಲ್ಲ ಕಡೆಗಳಲ್ಲಿಯೂ ವಿಶೇಷವಾಗಿ ವಾಗ್ವಾದಗಳು ಆಗತೊಡಗಿವೆ. ಪತ್ರಿಕೆಗಳಲ್ಲಿ ಲೇಖನಗಳ ಮೇಲೆ ಲೇಖಗಳು, ಅಲ್ಲಲ್ಲಿ ಉಪನ್ಯಾಸಗಳು, "ನುಡಿಪೂರ್ಣ-ನಡೆಶೂನ್ಯ" ಗುಂಪುಗಳಲ್ಲಿಂತೂ ಅನಂತ ಟೀಕೆ ಟಿಪ್ಪಣಿಗಳು. ಅಂತು "ರಂಗಭೂಮಿ" ಯೆಂದರೆ ಅದೊಂದು 'ಚರವಿದ್ಯಾಲಯವು,' ಆದುದರಿಂದ, ಇಂದು ಹಾಳಾಗಿ ಕೆಲವು ವ್ಯವಸಾಯಿಗಳ ಕರದಲ್ಲಿ ಸಿಲುಕಿ ಅದು ಕೆಟ್ಟಿರಲು, ಅದನ್ನು ತಿರುಗಿ ಪರಿಶುದ್ಧವನ್ನಾಗಿ ಮಾಡಿ, ತದ್ ಮುಖಾಂತರ ಸಮಾಜಸೇವೆಯನ್ನು ಮಾಡಿ, ಅದನ್ನು ಸಾಮುದಾಯಿಕ ವಿದ್ಯಾವರ್ಧಕ ಸಾಧನವನ್ನಾಗಿ ಮಾಡಬೇಕೆಂಬುವುದರಲ್ಲಿ ಎಲ್ಲರೂ ಒಂದೇ ಅಭಿಪ್ರಾಯವುಳ್ಳವರೇ ಆಗಿದೆ. ನಾಟಕದ ಪುಸ್ತಕಗಳಲ್ಲಿರುವ ಸಾಹಿತ್ಯವನ್ನು ಕಂಠಪಾಠ ಮಾಡದೆ ಮನಬಂದಂತೆ ಬೊಗಳಿ ಸೇವೆಮುಗಿಯಿಸುವದು-ಇದು ಹಿರೇನಟರ ಕೆಲಸ. ಕಿರಿಯರಿಗೆ ಅಷ್ಟು ಶಕ್ತಿಇಲ್ಲದುದರಿಂದ, ಅರ್ಥ ಕಲಿತು, ಎಡೆಮ ತಡದು, ಶಬ್ದ ಬಾರದಿದ್ದಲ್ಲಿ ಕೆಮ್ಮಿ, ಹಿಂದಿನವ "ಪ್ರಾಂಪ್ಟರ್" (ಸಹಾಯಕ) ನಿಂದ ಕೇಳಿಕೊಂಡು ಸಾಗುವುದು. ಇದರಿಂದ ಕನ್ನಡ ವ್ಯಾಕರಣ ಮತ್ತು ಶಬ್ದಕೋಶದ ಹೊಸ ಉತ್ಪತ್ತಿಯೇ ಆಗಿದೆ. ಅಭಿನಯವು ಶಿಲಾಪ್ರತಿಮೆಗಳ ಮಾದರಿಯಲ್ಲಿ. ಇಲ್ಲದಿದ್ದರೆ, ಅರ್ಥವಿಲ್ಲದ ಅತಿರೇಕತನವಲ್ಲಿ. ಸಂಗೀತ ಬಾರದಿದ್ದದರಿಂದ ಅಪಸ್ವರ ತಾಳಶೂನ್ಯತೆ! ಒಲ್ಲಿದವರಿಂದ ಪ್ರಳಯವಾಲದ ಆಲಾಪನೆಯ ತೆರೆಗಳಲ್ಲಿ ಸಂಗೀತ! ಉಡಿಗೆತೊಡಿಗೆಗಳ ವಿಚಾರ-ಸೇವಕನಭೂಮಿಕೆಯಿಂದ ಹಿಡಿದು, ಸನ್ಯಾಸಿಯತನಕ- "ಜರಿಯ ಕೋಟಿಲ್ಲದೆ ಪಟ್ಟೇಕೆಟ್ಟಿತು" ಎನ್ನತಕ್ಕವರು. ದೃಶ್ಯ ವ್ಯವಸ್ಥೆ-ಇದಂತೂ, ಧಾರಾಳವಿದೆ-ಕನ್ನಡ ಭೂಮಿಕೆಯಲ್ಲಿ ಅದರ ಕೊರತೆಯಿಲ್ಲ ನಿಂತು ಎದ್ದರೆ 'ಧಡಲ್' 'ಧಡಲ್' 'ಟ್ರಾನ್ಸಫರ' ಬೇಕು ಚಿತ್ರಕಲೆಯ ಗಂಧವು ಅದರಲ್ಲಿಲ್ಲದಿದ್ದರೂ, ಜಗತ್ತಿನ ಎಲ್ಲ ಬಣ್ಣಗಳನ್ನು ಕಾಣಬಹುದು—ಇನ್ನು ಮೈಸೂರಿನ ಚಾಮುಂಡೇಶ್ವರಿ ಕಂಪನಿಯಂತೆ, ವಿದ್ಯುತ್ ದೀಪ ಸಲಕರಣೆಯಿದ್ದವರು, ಅದರ ಬಲದಿಂದ, ಬಿಳೇಮನುಷ್ಯನನ್ನು ಕೆಂಪುಮನುಷ್ಯನನ್ನಾಗಿಯೂ, ಕೆಂಪಾದವನನ್ನು ನೀಲ, ನೀಲದಿಂದ, ಹಳದಿ, ಹಳದಿಯಿಂದ ಹಸರು, ಇಷ್ಟೆಲ್ಲ ಬಣ್ಣದಲ್ಲಿ ನಿಮಿಷಮಾತ್ರದಲ್ಲಿ ಪರಿವರ್ತಿಸಿ ತೋರಿಸಿಬಿಡುವರು..

ಆರಿಸಿ ತೆಗೆಯುವನಾಟಕಗಳಲ್ಲಿ ಹುರುಳುಬೇಕೆಂದಿಲ್ಲ. 'ಶೃಂಗಾರ' 'ಹಾಸ್ಯ' ಇವೆರಡು ಮನಬಂದಂತಿದ್ದರಾಯಿತು. ಈ ನಾಟಕೀ ಪ್ರಪಂಚದಲ್ಲಿ, ದೇವ, ದಾನವ ಎಂಬ ಪರಿಭೇದವಿಲ್ಲದೆ. ಎಲ್ಲರೂ, ಮತಿಭ್ರಂಶರಾದ ಹಾಸ್ಯಕಾರರು, ಉತ್ತಾನ ಶೃಂಗಾರ ಸಾಮ್ರಾಜ್ಯದಲ್ಲಿ ಮುಳಿಗೇಳುವ, ಕಾಮಾಂಧ, ಪಶುಗಳು-ಹೂಂ-ಇಷ್ಟಾದರೇ ದುಡ್ಡು ಬರುತ್ತದೆ!

ನೈತಿಕ ದೃಷ್ಟಿ. ಇದರ ಹೆಸರನ್ನೆತ್ತದಿದ್ದರೆ ಎಷ್ಟೋ ಸುಲಭವಾಗುವದು. ನಟರ ಜೀವನವು, ತಮ್ಮ ಉದ್ಯೋಗ ಹಿಂ[illegible]ಮದಲ್ಲಿರುವುದಕ್ಕಿಂತಲೂ, ಹೆಚ್ಚಾಗಿ ವೇಶ್ಯೆಯರ ಮನೆಯಲ್ಲಿ. ಸಾರಾಯಿ ಸಭೆಯಲ್ಲಿ. ಜುಗಾರಿಯ ಐಂದ್ರ ಜಾಲಿಕರಲ್ಲಿ, ಇನ್ನು ತಪ್ಪಿ ಸಮಯ ಉಳಿದರೆ, ತೃತೀಯ ಪುರುಷಾರ್ಥದ ವಾದ ವಿವಾದಗಳಲ್ಲಿ. ಊರಿನಲ್ಲಿ ಎಷ್ಟುಮಂದಿ ತುಂಟರಿರುವರೋ ಅವರಿಗೂ ನಟರಿಗೂ ಪ್ರಾಣಪ್ರಾಣ—ಕಾಫಿ, ಚಹಾ, ಸಿಗರೇಟ್ ಬೀಡಿ, ಹೊಸಕೋಟು, ಹಳೆ ರುಮಾಲು, ಇವುಗಳನ್ನು ಸೊಗಸಿನ ನುಡಿಗಳಿಂದ ಎತ್ತಿ ಹಾಕುವವರಲ್ಲಿ, ನಟರ ಮುಂದೆ ವೇಶ್ಯಾ ಜನರ ದಲ್ಲಾಳಿಗಳೂ ಸಹ ನಿಲ್ಲಲಾರರು, ಅಂದರೆ ಇವರುಗಳಿಗೆ ಅಕ್ಷೇಪಗಳಿಲ್ಲವೆಂದಲ್ಲ—ಇರಬಹುದು. ಇವುಗಳ ಸಂಖ್ಯೆ-ಕೈಯಲ್ಲೆಣಿಸುವಷ್ಟು ಅಲ್ಪವಿದೆ.

ಈ ವಿಪರೀತ ಸ್ಥಿತಿಯನ್ನು ಕಂಡು ಇಂದು ಅನೇಕ ತರುಣ ಉತ್ಸಾಹಿಗಳ ಹೃದಯವು ತಳಮಳಗೊಳ್ಳುತ್ತಲಿದೆ. ಅಂತಹರ ಸಲುವಾಗಿಯೇ ಪ್ರಕೃತ ಲೇಖನದ ಉದ್ದೇಶವಿರುತ್ತದೆ.

ರಂಗಭೂಮಿಯ ಸುಧಾರಣೆಯೆಂದು ಹಲುಬುತ್ತಿರುವ ಸುಧಾರಕರು—ಇವರಲ್ಲಿ ನಾಟಕದ ಒಡೆಯರ ವರ್ಗದವರಲ್ಲಿ ಕೆಲವರು. ಇನ್ನು ಹೊರಗಿನಿಂದ "ಅಮೆಚೂರ" ರಲ್ಲಿ ಹಲವರು, ಶ್ರೀಯುತ, ಸದಾಶಿವರಾವ ಗರೂಡ (ಈ ಉದ್ದವಾಗಿನ 'ಊ' ಕಾರವೆಲ್ಲಿಯದೋ ಕಾಣೆ!) ರವರು ಪ್ರಥಮವರ್ಗದವರು. ಅವರು 'ರಂಗಭೂಮಿಯ ಸೇವೆ.' ಯೆಂದು ಅನೇಕ ರೀತಿಯಿಂದ ಹೇಳತಕ್ಕವರು. "ನಮ್ಮಲ್ಲಿ ಶೃಂಗಾರಾತಿರೇಕದಿಂದ ಜನರನ್ನು ಮರುಳುಮಾಡತಕ್ಕ ಪದ್ಧತಿಯಿಲ್ಲ' ಎಂದು ಅವರು ಪರಿಪರಿಯಿಂದ ಆಡಿದುದನ್ನು ಅನೇಕರು ಅನೇಕಬಾರಿ ಕೇಳಿರಬಹುದು. ನಿಷ್ಪಕ್ಷಪಾತಬುದ್ಧಿಯಿಂದ ನುಡಿಯುವದಾದರೆ, ಕಲಾದೃಷ್ಟಿಯಿಂದ ಶ್ರೀ ಮಾನ್ ಗರೂಡ ಸದಾಶಿವರಾಯರ ಸಂಸ್ಥೆಯು—ಇತರ ಸಂಸ್ಥೆಗಳಿಗಿಂತ ಮುಂದರಿದಂತೆ ಕಾಣದು. [illegible] ಗಳು ಸಂದಂತೆಯೇ ಇಲ್ಲ. ನೈತಿಕ ದೃಷ್ಟಿಯಿಂದ (ಶ್ರೀಮಾನ್ ಗರೂಡರ ವ್ಯಕ್ತಿತ್ವದಲ್ಲಿ ನಮ್ಮ ದೋಷಾರೋಪಣೆಯಿಲ್ಲ) ಸುಧಾರಣೆಯು ಇದೆಯೇ ಎಂಬುದೂ ಪರಿಶೋಧಕರಿಗೆ ತಿಳಿಯದೆ ಇರಲಾರದು. 'ಶೃಂಗಾರದಿಂದ ನಾವು ಮಂಕುಮಾಡುವ ಹವ್ಯಾಸದವರಲ್ಲ' ವೆನ್ನುವ ಶ್ರೀ ಸದಾಶಿವರಾಯರಲ್ಲಿ 'ಕೃಷ್ಣಲೀಲಾ ನಾಟಕ'ದ ಸಂಪೂರ್ಣ ಅಶ್ಲೀಲ ಸ್ವರೂಪಗವು ಇರುವದು ಮಾತ್ರವಲ್ಲ. ಅವರ ಸ್ವಂತಕೃತಿ 'ವಿಷಮವಿವಾಹ' ಪ್ರದರ್ಶನದಲ್ಲಿ ರಜನಿ ಚಂದ್ರಿಕೆಯೊಡನೆ ಎದೆಯುಷ್ಟನು ನಡೆಯಿಸುವ ಪೈಶಾಚಿಕ ಶೃಂಗಾರದ ಚಿತ್ರವು ನಾಗರಿಕ ಹೃದಯದಮೇಲೆ ವಜ್ರಘಾತವನ್ನು ಮಾಡಲಿರಲಾರವು. ಇದು ಒಂದು ಸಂಸ್ಥೆಯಕುರಿತಾಯಿತು.

ಇದ[illegible] ಮಂಗಳೂರಿನ ಅಂಬಾಪ್ರಸಾದಿಕ ನಾಟಕ ಸಂಸ್ಥೆಯವರಿಗೆ ಅವರ ರಂಗಭೂಮಿಯ ಮೇಲಿಂದ ಇತ್ತೀಚೆಗೆ [illegible] 'ಭಾಷಾಸೇವೆ, ಸಮಾಜಸೇವೆ' ಎಂ[illegible] ಕುರಿತು ತೆಂತರದ ಉಪನ್ಯಾಸಗಳು ಹೊರಟವೆ. ಅಲ್ಲಲ್ಲಿಯೂ ಅದನ್ನು ವೆ[illegible] (ಅಂದರೆ ಒಂದೇ ಉಪನ್ಯಾಸಕ್ಕೆ ವೇಷ[illegible] ಹೋಗಿ)- ಪತ್ರಿಕೆಗಳಲ್ಲಿಯೂ ಅವರ ಪ್ರಶಂಸೆಯು ಬರುತ್ತಿದೆ. ಆದರೆ ನಿಜವಾದ ಸುಧಾರಣೆಯು ಯಾವದೃಷ್ಟಿಯಿಂದಲೂ ಸುಳಿದಂತಿಲ್ಲ—ದತ್ತಾತ್ರೇಯ ಸಂಸ್ಥೆಯ ಸುಧಾರಣೆಯು ಪ್ರಸ್ಥದ ಸಲಕರಣೆಯಿಂದ ತೋರಿಬಂದಿರುವುದಾದರೆ, ಇವರದು 'ವಾಗ್ವಿಜೃಂಭಣೆಯಿಂದ'- ಕಲಾದೃಷ್ಟಿಯ ದೋಷಗಳಲ್ಲಿ ಇವರ ಸ್ಪರ್ಧಿಗಳಂತಿರುವರು. ಇನ್ನು ನೈತಿಕದೃಷ್ಟಿಯಿಂದ ಇವರಾಡುವ, ಕೃಷ್ಣಲೀಲಾ—ಇದಕ್ಕೂ ಹಿಗ್ಗಿಲಿಸಿ, ಮಂಡಳಿಯ ಚಾಲಕ ಮಹಾಶಯರು ಅಭಿನಯದಲ್ಲಿ ಪಾತ್ರ ಭಾಗಿಗಳಾಗುವ- 'ವಿಕ್ರಮ ಶಶಿಕಲಾ' ನಾಟಕದಲ್ಲಿನ, ನಾಯಕ ನಾಯಿಕರ ಒಂದು ದೃಶ್ಯವು ಉತ್ತಾನ ಶೃಂಗಾರದಿಂದ ಚೆನ್ನಾಗಿ ಪ್ರದರ್ಶಿಸಲ್ಪಟ್ಟಿರುವುದು ಇದರಂತೆ ಇವರ ಸಮಾಜ ಸೇವೆಯು ದೇಶದ ಬ್ರಹ್ಮಚರ್ಯದ ಹೆಸರನ್ನಡಗಿಸುವ ಸ್ವಭಾವದ ಪ್ರದರ್ಶನಗಳಿಂದಲೇ ತೋರುತ್ತಿದೆ. ಇವರೂ ಹಾಸ್ಯ ಶೃಂಗಾರ ದೇವತೆಯ ಅತಿ ಲೀನ ಭಕ್ತರು. ಪಾಪ! ಉತ್ತಮ ಹಾಸ್ಯಕಾರರಿಲ್ಲದೆ ಬಳಲುತ್ತಿರುವರು. ಇವರು "ವೇಶ್ಯಾಸ್ತ್ರೀ" ನಟರನ್ನು ತರುವ ಲವಲವಿಕೆಯನ್ನು ಪ್ರಕಟಿಸುವರೆಂಬ ಅಂಜಿಕೆಯಿದೆ. ಪಾಪ! ಕಾಂಚನಕ್ಕಾಗಿ ಏನುಮಾಡಿದರೇನು.?

ಇನ್ನು ಇತರ ಸಂಸ್ಥೆಗಳಲ್ಲಿ 'ವಿಶ್ವಗುಣಾದರ್ಶ'ದವರು ಹಲಗೇರಿ 'ಲೋಕಸೇವಕ'ರು 'ಆದರ್ಶಗುಣಾಪ್ತ' 'ಲೋಕದಸೇವೆಯ' ಕ್ಷೀರಸಾಗರ ಛತ್ರಿರ ನಾಮಾಂಕಿತದಲ್ಲಿಯೇ?

ಹಾಗೆ ನೋಡಹೋದರೆ ನವ[illegible]ರಪಟ್ಟಿ ಸಂಗೀತ ನಾಟಕ ಮಂಡಳಿಯವರೇ ಬೇಕು. ಇವರು ಹೆಸರಿನಲ್ಲಿಯೇ ತಮ್ಮ ಧ್ಯೇಯವನ್ನು ಸೂಚಿಸಿರುವರು 'ಮಹಾಲಕ್ಷ್ಮೀಪ್ರಸಾದಿಕ' ಅರ್ಥಾತ್ 'ದುಡ್ಡಿನದೊಡ್ಡಿಸ್ತನ'ದ ಆಶ್ರಯದವರೆಂದು ಸ್ಪಷ್ಟನುಡಿದೇ ಬಿಟ್ಟಿರುವರು. ಇನ್ನು ಗುಬ್ಬಿ ಚನ್ನಬಸವೇಶ್ವರ ನಾಟಕ ಸಂಸ್ಥೆಯವರು ಯಾವಪಂಥದವರೆಂದು ಆಡಿಸುದುದಲ್ಲಿ ನಮಗೆ ತಿಳಿದು ಬರಲಿಲ್ಲವಾದರೂ, ಮಾಡುವುದರಿಂದ ಇವರು 'ಲಕ್ಷ್ಮೀಪ್ರಸಾದಕ್ಕಾಗಿ' ಹೋರಡುವ ಸ್ಪರ್ಧಿಗಳೇ—

ಇನ್ನು ಅಮೇಚ್ಯೂರರನ್ನು ಕಾಣುವೆವು. ಅವರಲ್ಲಿ ಹಲವರು 'ಶೋಕಿಗಾಗಿ' ಕೆಲವರು ಕಲಾಸುಧಾರಣೆಗಾಗಿ ಕಲೆಯ ಹೆಸರಿನಲ್ಲಿ ನೀತಿಯನ್ನು ಘೋಷಿಸಿರುವರು. ಆದರೆ ಆಚರಣೆಯಲ್ಲಿ, ನೀತಿಯ ಹೆಸರನ್ನಡಗಿಸಿರುವ ಉದಾಹರಣೆಗಳು ಅಲ್ಲಲ್ಲಿ ತೋರುತ್ತಿರುವವು.

ಇದಕ್ಕಿದ್ದ ಸ್ಥಿತಿಯನ್ನು ಬರೆಬರೆದು ಸಾಕಾಯಿತು. ಇನ್ನು ಇವುಗಳ ಸುಧಾರಣೆಯು ಯಾರಿಂದಲಾಗಬಹುದು ಎಂಬ ವಿಚಾರ. 'ಕಲಾ' 'ನೀತಿ' ಇವೆರಡರ ಪ್ರಾಮುಖ್ಯತೆಯನ್ನು ಮರೆತ, ಪ್ರಚಲಿತ ಸಂಸ್ಥೆಗಳು, ದುಡ್ಡಿನ ಹೋರಾಟದವರು. ಇವರಿಂದ ಯಾವ ಸುಧಾರಣೆಯು, ಆಗಬಹುದೆಂದು ನಾವೇ ಊಹಿಸಿರಿ ಅವರ 'ಸುಧಾರಣೆಯ' ಮಂಕು ಬೂದಿಯ[illegible] ಇಷ್ಟುದಿನ ಪರಿಣಾಮಕಾರಿ ಯಾಯಿತೆಂದು ಕಂಡು ಬಂದಂತೆ ಇನ್ನು ಬಹಳ ದಿನಗಳ ತನಕ ಆಗಲಾರದು. ಈಗಿರುವ ಸಂಸ್ಥೆಗಳು ಕಠಿಣ ಕಬ್ಬಿಣ ವಸ್ತು ತೀಕ್ಷ್ಣ ವಿಷದ ಒಂದು ವಿಚಿತ್ರ ರೋಗದ ಆ ಸಂಸ್ಥೆಗಳನ್ನು, ಕಾಯಿಸಿ, ಕರಗಿಸಿ ತಿರುಗಿ ಬೇಕಾದ ಆಕೃತಿಗೆ [illegible] ಪರಿವರ್ತಿಸಬೇಕಾದರೆ, ಇವರ ಮಾಲಕ ರಂಗಭೂಮಿಯ ಪಾವಿತ್ರ್ಯವನ್ನುಳಿಸುವುದು ಕಠಿಣ. ಬಿಸ್ಕಿ ತಿರುಗಿ ಏರಕ ವಿಕೃತ ಕಾರ್ಯವು ಯಾರಿಂದಲೂ ಸಾಗದಿದ್ದರೂ ಚಿಂತೆಯಿಲ್ಲ ಸಮಾಜದ ಅವನತಿಯನ್ನು ಸಾಧಿಸುವ ಅವುಗಳನ್ನು ಬಿಟ್ಟು ಪುಡಿಮಾಡುವ ಸಾಹಸವನ್ನು ಮಾಡಿದರೆ—ಅದಷ್ಟು ಲಾಭವಾಯಿತೆಂದೇ ಹೇಳಬೇಕು.ಕಾರಣ, ಅವುಗಳಲ್ಲಿ ಕಲೆಗಳಿಕ್ಕ ಸ್ವಭಾವವು ಲೇಶವಾದರೂ ತೋರುವದಿಲ್ಲ

ಇನ್ನು ಸುಧಾರಣೆಯನ್ನು ಬಯಸುವಿರಾದರೆ, ಈಗಿರುವ ಕೆಲಗಲಾದ [illegible] ನಮ್ಮಲ್ಲಿ ಉತ್ಸಾಹಿಗಳಿದ್ದರೆ, ಅವರೆಲ್ಲ ನೈತಿಕ ಕಲಾದೃಷ್ಟಿಗಳೆರಡಕ್ಕಾಗಿ ಪ್ರಾಣಕೊಡಲು ಸಿದ್ಧರಿರುವ ಉತ್ಸಾಹಿ[illegible] ಒದಿರಬೇಕು. ಈ[illegible] ಈಗಣ ಸಂಸ್ಥೆಗಳ ಸಹಾಯ[illegible] ಯಾವರೀತಿಯಿಂದ[illegible] ಶಕ್ಯವಿಲ್ಲ—ಇದು ಸುಧಾರಣೆಗಾಗಿ [illegible] ಎಂದೆ ಉಳಿದಿರುವ ಒಂದೆ ಮಾರ್ಗ ಇಷ್ಟಾದ ಬಳಿಕವೂ, ಈ[illegible] ನಾಟಕ ಮಂಡಳಿ [illegible] ಕರ್ಮದಂಡದಿಂದ ಹರಿದಾಡಿಗೊಂಡ, [illegible] ರಕ್ತದ ಮೇಲೆ [illegible] ಈ ನವೀನ ವಿಷದ ಪ್ರಯೋಗವು ಬಿಟ್ಟು [illegible] [illegible] ಸಾಧ್ಯವೇ ಎಂದು!

ನೋಟೀಸು.

ರಾ|| ಲಚಮವ್ವಾ ಗಂಡಾ ಗಿರಿಯಪ್ಪಾ ಇರಗಾರ ಸಾ|| ರಫಾಪೂರ ತಾಲ್ಲೂಕ ಬದಾಮಿ. ಇವಳಿಗೆ—

ಗಿರಿಯಪ್ಪಾ ತಂದಿ ಯಲ್ಲಪ್ಪಾ ಇರಗಾರ ಸಾ|| ರಫಾಪೂರ ತಾಲ್ಲೂಕ ಬದಾಮಿ ಇವನ ಕಡಿಂದಾ ನೋಟೀಸ ಕೊಡುವದೇನಂದರೆ, ನೀನು ನನ್ನ ಲಗ್ನದ ಹೆಂಡತಿಇದ್ದು ನನಗೂ ನಿನಗೂ ನೆಟ್ಟಗೆ ಇಲ್ಲದ್ದರಿಂದ ಈಗ ಎಂಟು ವರ್ಷ ದೀಡವರ್ಷವಾಗಾಯಿತ ತವರ ಮನೆಯಲ್ಲಿ ಇರುತ್ತಿದ್ದು ನೀನು ಈಗ ಬಸರು ಆಗಿರತೀದಿ ಅಂತಾ ಕೇಳತೀನಿ ನೀನು ಕೆಟ್ಟನಡತೆಯಿಂದಾ ಯಾವರಕ್ಕೆ ಬಸರು ಆಗಿರತೀದಿ ಕಾರಣ ನಿನ್ನನ್ನು ನಾನು ಇವತ್ತಿನಿಂದಾ ಬಿಟ್ಟಿರುತ್ತೇನೆ. ಇವತ್ತಿನ ಮಹೆದಕೊಂಡು ನೀನು ನನ್ನ ಸ್ಥಾವರ ಜಂಗಮ ಮಿಳಕತ್ತಿಗೆ ಯೇನೂ ಸಂಬಂಧವಿಲ್ಲಾ ಇದೇ ನನ್ನ ಸೋಡಚೀಟಿಅಂತಾ ತಿಳಕೊಬೇಕು ಅಂತಾ ಕೊಟ್ಟ ನೋಟೀಸ ಸಹಿ ತಾರೀಖು ೨೫|೧೦|೧೯೨೬ ಇಸ್ವಿ

() ಈ ಯಡಗೈ ಹೆಬ್ಬಟ್ಟಿನಗುರ್ತು ಗಿರಿಯಪ್ಪಾ ಯಲ್ಲಪ್ಪಾ ಇರಗಾರ ಇವನದು ಇದೆ

ನೋಟೀಸು.

ಶ್ರೀ|| ಹಣಮವ್ವಾ ಗಂಡ ಹಣಮಪ್ಪಾ ಜಲಗೇರಿ ಸಾ|| ಇನಾಂಗ್ರಾಮ ಬೆನ್ನೂರಕಟ್ಟಿ ಹಲ್ಲಿಪತ್ತಿ ಸಾ|| ಇನಾಂಗ್ರಾಮ ಹುಲ್ಲಿಕೇರಿ ತಾಲೂಕ ಬದಾಮಿ ಇವಳಿಗೆ—

ಕೆಳಗೆ ಸಹಿ ಮಾಡುವವರ ಕಡೆಯಿಂದಾ ತಿಳಿಸುವದೇನಂದ್ರೆ ನೀನು ವಿನಾಕಾರಣ ನಮ್ಮ ಮೇಲೆ ಫಸಾಯಿಸಿ ಕಾಗದ ವೈಗ್ಯೆರೆ ಬರಿಸಿಕೊಂಡು ರೂಪಾಯಿ ಕೊಟ್ಟಿರುವದಿಲ್ಲಾ ಅಂತಾ ಧಾರವಾಡ ವಿಜಯದಲ್ಲಿ ೧೦|೧೧|೧೯೨೬ನೇ ಅಂಕಿನಲ್ಲಿ ನೋಟೀಸು ಕೊಟ್ಟಿರುತ್ತೀದಿ. ಅದಕ್ಕೆ ಉತ್ತರ- ನೀನು ವಿನಾಕಾರಣ ನೋಟೀಸು ಕೊಟ್ಟಿರುವದರಿಂದ ಖರ್ಚಿಗೆ ಜವಾಬದಾರರು ನಾವೇನಲ್ಲಾ ಮತ್ತು ನಿನಗೆ ಕೊಡತಕ್ಕ ಒಂದು ನೂರಿನ ರೂಪಾಯಿಗಳನ್ನು ೧೧|೧|೧೯೨೬ ನೇ ದಿವಸ (೧) ಕೃಷ್ಣಾಜಿ ಕುಲಕರ್ಣಿ ಲಕ್ಕನಕೊಪ್ಪ ವ.(೨) ಮಧ್ವರಾಯ ದೇಶಪಾಂಡೆ ಹುಲ್ಲಿಕೇರಿ ಇವರ ಸಮಕ್ಷಮ ರೂಪಾಯಿಗಳನ್ನು ಕೊಟ್ಟಿರುತ್ತದೆ. ಆದ್ದರಿಂದ ಈ ನೋಟೀಸಿಗೆ ಯಾವರೀತಿಯಿಂದ ನಾವು ಜವಾಬದಾರರಲ್ಲಾ ಆದ್ದರಿಂದ ಈ ನೋಟೀಸಿನ ಖರ್ಚು ನಿನ್ನ ತಲೆಯಮೇಲೆ ಅದೆ ತಿಳಿಯುವದು ತಾರೀಖು ೨೮|೧೦|೧೯೨೬ ಇಸ್ವಿ

() ಈ ಯಡಗೈ ಹೆಬ್ಬಟ್ಟಿನಗುರ್ತು ಅಡಿವೆಪ್ಪಾ ತಂದಿ ಯಲ್ಲಪ್ಪಾ ಜಲಗೇರಿ ಈತ ಮಾಡಿದ್ದು ಅದೆ.

() ಈ ಯಡಗೈ ಹೆಬ್ಬಟ್ಟಿನಗುರ್ತು ರಂಗಪ್ಪಾ ತಂದಿ ಬಾಲಪ್ಪಾ ಜಲಗೇರಿ ಈತ ಮಾಡಿದ್ದು ಅದೆ

ಗೃಹ ಕೃತ್ಯದ ನೋಟೀಸು

ಗಲಗಲಿ ಪಾಂಡುರಂಗಾಚಾರ್ರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಖಿನಲ್ಲಿ ಬಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ ಇವರಿಗೆ ಕೆಳಗೆ ರುಜು ಮಾಡುವ ಕಮಲಾಬಾಯಿ ಆದ ನಾನು ೨ನೇ ಹೆಂಡತಿ ಆಗಿಯು ವೆಂಕುಬಾಯಿ ಎಂಬವರು ೧ನೇ ಹೆಂಡತಿ ಆಗಿಯು ಇರುತ್ತೇವೆ ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯಿತ ವಿಶ್ವಾಸವಿಲ್ಲದವರಾಗಿಯು ನನಗೆ ಎಲ್ಲಾ ಭಾಗದಲ್ಲಿಯು ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟಪಡಿಸಲು ಅನೇಕ ಜನಗಳ ಸಲಹೆಯಿಂದ ನನಗೆ ಮೋಸ ಪಡಿಸಬೇಕೆಂದು ಇರುತ್ತಾರೆ

ಅಲ್ಲದೇ ಇವರು ನಂಣ ಸಮಕ್ಷಮ ಬಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ರ್ಯರ ಸಮಕ್ಷಮ ಮಗನನ್ನು ದತ್ತ ಮಾಡಿಕೊಂಡು ನನನ್ನು ಹಾಳು ಮಾಡತೇನೆಂದು ಹೇಳಿ ಇರುತ್ತಾರೆ ೧ನೇ ಹೆಂಡತಿ ವೆಂಕುಬಾಯಿಯುವರು ನನ್ನ ಸಮ್ಮತಿ ಇಲ್ಲದೇ ದತ್ತ ತೆಗೆದುಕೊಳ್ಳಕೂಡದು ಯಜಮಾನರ ಆಸ್ತಿ ಪೈಕಿ (೨) ಜಮೀನಗಳು ಭಾಗ್ಯದಲ್ಲಿ ಬಿದ್ದು ಇದೆ ಇದರಲ್ಲಿ ಹೋಗಲಾಗ ೮|೧೦ ವರುಷ ಆದನಂತರ ತನ್ನ ಭಾಗದ ಆಸ್ತಿಗೆ ದತ್ತ ಮಾಡಿ ಕೊಳ್ಳಬಹುದು ಅಷ್ಟರಲ್ಲಿ ಈಗ ಮಾಡಿಕೊಂಡದನ್ನು ಅಗಲಿ ಅಥವಾ ದತ್ತಕ್ಕೆ ಆಗಿಬಂದದ್ದು ಆಗಲಿ ಇದ, ನಿನ್ನ ಮುಂದಿಲ್ಲಾ ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ ಖಚಿತ ತಿಳಿಯುವದು.

ಕಮಲಾಬಾಯಿ

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನೂ ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ- ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನೂ ತಯಾರು ಮಾಡುತ್ತಾರೆ. ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ ತಾವು ಇಷ್ಟಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿ ಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವುದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವುದು, ಅವುಗಳೊಳಗಿನ ಕೆಟ್ಟ-ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ಸುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಊರಿದರಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ!

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.

೪೫೧ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿಯುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳ್ಳಾಡುವ ಹಲ್ಲುಗಳನ್ನು ನೋವು ಇಲ್ಲದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

ಮಂಗಳೂರ, ಬೆಂಗಳೂರ ಕಡೆಯ

ಸುರಿತಂಥಹ

ಪ್ರಿಂಟರರೂ ಕಂಪೋಜಿಟರರೂ

ಬೇಕಾಗಿದ್ದಾರೆ.

ಯೋಗ್ಯತೆಯ ಪ್ರಕಾರ ಪಗಾರವು ದೊರೆಯುವದು.

ಮ್ಯಾನೆಜರ,
ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಜೇಂದ್ರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಪಡಿಸಲ್ಪಟ್ಟಿತು.

FOR SAFETY AND GOOD SERVICE

IN LIFE ASSURANCE

GO TO **THE ORIENTAL**

IN AGE SIZE AND STRENGTH

THE GREATEST INDIAN

LIFE ASSURANCE COPANY

Apply for full particulars to-

N. K. Kulkarni. Agent Bagalkot.

ತ್ವರೆಮಾಡಿರಿ! **ಅಡಚಣೆಯು ದೂರಾಯಿತು!**

ಮನಿ, ವಖಾರ, ಮೋಟಾರ ಶೆಡ್ ಮುಂತಾದ ಇಮಾರತ ಕಟ್ಟಿಸುವವರಿಗೆ ಸುಸಂಧಿಯು.

ರೇಲ್ವೆ ಸ್ಟೇಶನದಿಂದ ಒಂದೆರಡು ಮಿನಿಟಿಗಳ ಹಾದಿಯು ಮತ್ತು ಮುನಸಫ ಕೋರ್ಟಿನಿಂದಾ ತೀರ ಸಮೀಪವಾಗಿಯು ಇರುವನಮ್ಮ ಮಾಲಕೀಯ ಪ್ಲಾಟಗಳನ್ನ ಖರೀದಿಗೆ ಕೊಡತಕ್ಕದ್ದಿರುತ್ತದೆ.

ಸಾವಕಾರರಿಗೆ, ಮೋಟಾರದವರಿಗೆ, ವಕೀಲರಿಗೆ, ವ ಡಾಕ್ಟರರಿಗೆ ಒಳ್ಳೇ ಅನುಕೂಲವಾಗಿರುವ ಸ್ಥಳವು. ಹವೆಯು ಆರೋಗ್ಯಕರವಾದದ್ದು. ಇದಕ್ಕೆ ಮೇಲಾದ ಜಾಗೆಗಳು ಈ ಊರಲ್ಲಿ ಬೇರೆಕಡೆಗೆ ಶಿಗಲಿಕ್ಕೆ ಶಕ್ಯವೇಇಲ್ಲ. ಒಂದೊಂದೇ ಪ್ಲಾಟ ಅಗರ ಹೆಚ್ಚಿಗೆ ತಮ್ಮ ತಮ್ಮ ಅನಕೂಲತೆಯ ಪ್ರಕಾರ ತೊಗೊಳ್ಳಬಹುದು. ಪತ್ರದ್ವಾರಾ ಅಗರ ಸಮಕ್ಷಮಾ ಹೆಚ್ಚಿನ ಮಾಹಿತಿಯನ್ನ ಪಡೆಯಬಹುದು. ತೊಗೊಳ್ಳಲಪೇಕ್ಷಿಸುವವರು ತ್ವರೆಮಾಡಬೇಕು.

ಕಿಲ್ಲೆ, ಬಾಗಲಕೋಟಿ
೨೧-೭-೨೬

ಬಿಂದುರಾವ ಟಂಕಸಾಲಿ
ಡಾಕ್ಟರ,

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಜುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ತರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ ಸಿ. ನಂ ೭೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ ಡೆಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೬ ಮಿ ಸೈಯದ್ ಜಹೂರಅಲೀ ಬಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ ನಂ. ೨೭೭೯ ಮಿ. ದೇವನ ವಾಸುದೇವನ ನಂಬೂದ್ರಿವಾದ ಜಮೀನದಾರ ವಡಕಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೆವನಕೊಂಡ, ಅಕ್ಕಸಾಲಿ ಜಡೀಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೭೬ ಮಿ. ಶೇಕ ಬಾವುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೫ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಗವ್ಹರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ



ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರಮಾಣಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಉತ್ಪತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳು:— ಕ್ಷಯರೋಗ, ಬಾಣಂತಿರೋಗ, ಹಡೆದನಂಜು, ದಮ್ಮು, ಕೆಮ್ಮು, ಅಜಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ, ಮೂಗಿನೊಳಗಿನ ಪಿನಸಿ, ಮೊದಲಾದವುಗಳು ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ವೈ ಹೊಂಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಬುದ್ದಿಕ್ಕೆ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಆದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ನೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮೀಶನ್ ಸಿಗುತ್ತದೆ. ಖರ್ಚ ೯ ಆಣೆ.ಒಂದು ಎರಡುತಕ್ಕೊಂಡರೆಕಮಿಶನಇಲ್ಲ ಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಯಲ್ಲಿಛಾಪಿಸಿರುತ್ತವೆ.ಪಸಂದಿಪ್ರಕಾರ ಬಾಟ್ಲಿ ಗೂಡಶಿಗುವದು ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದಮಾಲ್ಯ ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಹಾ ವಗೈರೆಸ್ಪಷ್ಟವಾಗಿ ಬರೀಯಿರಿ ನಮ್ಮ ವಿಳಾಸ:—**ಎಚ್. ಎಮ್. ಮುಲ್ಲಾ.**

ಸಂಪಾದಕ ಅರ್ಕಶಫಾ ಹೆಡ್ ಆಫೀಸಪೋಷ್ಟ ಶಹಾಪೂರ [ಬೆಳಗಾವ





1 For chevrolet new Cars & Trucks on hire purchage system

2 For quick Economical and satisfactory service, please go for the welknno Chevrolet cars, Trucks products in the Deccan

3 For all spare parts of the Various cars specially Chevrolet, Ford, Dodge and Overland cars,

4 For the cheapness in tyre tubes of all manufactares,

5 For all kinds of Lubricating oils Grease etc,

6 For undertaking all kinds of tyre tube repairs in Vulcansing by a specialist to give satisfactory work,

7 For Building motor bodies of Various types by workers onin uptodate line.

8 For all kinds of motor repairs,

9 For second hand otot Cars and lossies at cheap rates.

Apply to:-

Messrs Royal motor service

Automobile Engineers

Bagalkot.

Sub dealers

Chevrolet car

for the Bijapur Dist.

ಅಲಭ್ಯಲಾಭವು.

(೧) **ಶೆವ್ಹರ್‌ಲೆಟ್ ಹೊಸಗಾಡಿಗಳನ್ನು ಮತ್ತು ಟ್ರಕ್ಸಗಳನ್ನು ಬಾಡಗಿಯಿಂದಾಗಲೀ ಮಾರಲಿಕ್ಕಾಗಲೀ ತೆಗೆದುಕೊಳ್ಳುವದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.**

(೨) ವೇಗವಾಗಿ, ನಿಯಮಿತವಾಗಿ, ಮತ್ತು ಚನ್ನಾಗಿ ನಡೆಯುವಂಥ ಶೆವ್ಹರ್‌ಲೆಟ್ ಗಾಡಿಗಳೂ, ಟ್ರಕ್ಸಗಳೂ ದಕ್ಷಿಣಪ್ರಾಂತದಲ್ಲಿ ಬಹು ಪ್ರಸಿದ್ಧಿಯಾಗಿವೆ

(೩) ಶೆವ್ಹಲೆಟ್, ಫೋರ್ಡ್, ಡಾಜ,ಮತ್ತು ಓವ್ಹರಲಂಡ, ಎಲ್ಲತರಗಳ ಬೇರೆ ಬೇರೆ ಭಾಗಗಳು ನಮ್ಮದೊರೆಯುತ್ತವೆ

(೪) ಎಲ್ಲತರದ ಕಂಪನಿಗಳಿಂದ ವಿಶೇಷತಃ ರಿಜೇಲಿಸ್ ಕಂಪನಿಯಿಂದ ಟ್ಯುಬ್ ಮತ್ತು ಟಾಯರುಗಳು ಸುಲಭ ಕ್ರಯಕ್ಕೆದೊರೆಯುತ್ತವೆ.

(೫) ಮೋಟಾರ ಬಂಡಿಗಳಿಗೆ ಉಪಯೋಗಿಸುವಂಥ ಎಲ್ಲ ತರದ ಎಣ್ಣೆಯು ಸಿಗುವದು.

ಟ್ಯುಬ್ ಮತ್ತು ಟಾಯರಗಳನ್ನು ರಿಪೇರಿಯನ್ನು (ವಲ್ಕನಾಯಜಿಂಗ) ಆ ಕೆಲಸದಲ್ಲಿ ನಿಷ್ಣಾತರಾದವರಿಂದ ಮಾಡಿಸಿ

(೬) ಯೋಗ್ಯ ವೇಳ್ಯಗೆ ಕೊಡುವೆವು

(೭) ನಾನಾತರದ ಬಂಡಿಗಳ ಭಾಗ ಗಳನ್ನ ಉತ್ತಮ ರೀತಿ ರಿಪೇರಿ ಮಾಡುವವರಿಂದ ಮಾಡಿಸಿ ಕೊಡುತ್ತೇವೆ.

(೮) ಎಲ್ಲ ಬಗೆಯ ಮೋಟಾರುಗಳ ದುರಸ್ತು ಕೆಲಸವು ಮಾಡಲ್ಪಡುವದು

(೯) ಹೊಸ ಮತ್ತುಸೆಕಂಡ ಹ್ಯಾಂಡ ಮೋಟಾರಗಳೂ ಲಾರಿಗಳೂ ಬೇಕಾದ ವೇಳೆಗೆ ಯೋಗ್ಯ ದರದಿಂದ ಮಾರಾಟಕೆ ದೊರೆಯುತ್ತವೆ.

ವಿಳಾಸಃ—

ವಿಜಾಪೂರ ಜಿಲ್ಲೆಯಲ್ಲಿ ಶವರೋಲೆಟ್ಟ ಮೋಟಾರಗಳಿಗೆ ಸಬ್‌ಏಜಂಟರು

ಮೆಸರ್ಸ ದಿ ರಾಯಲ್ ಮೋಟಾರ ಸರ್ವ್ಹಿಸ ಬಾಗಲಕೋಟ.

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟಿ

ಸಹಿತ; ಟ ಖ ಪುಕ್ಕಟ

ಟಿಪ್ಪಣೀ— ಗಡಿಯಾಳ

ವನ್ನು ಕಳಿಸುವಾಗ್ಗೆ ಕಾಳಜಿ

ಯಿಂದ ತಪಾಸಿಸಿ ಪತ್ತ ಟಾ

ಯಿಮನಸ್ಸೆರೆ ಪಚ್ಚ ಕಳಿಸುವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

ಉಚಿತ! | ಉಚಿತ!! | ಉಚಿತ!!!

ಜಗದೀಶನು ಎಲ್ಲರಿಗೂ ಸುಖಕೊಡಲಿ.

೧ ಥಳಿಜ್ವರ, ಚಾತುರ್ಥಿಕ ಥಳಿ. ಇನ್ ಫ್ಲುಯಂಜಾ. ಹೊಟ್ಟೆ ಕಡತ, ಕೆಮ್ಮು ಈ ರೋಗಗಳ ಮೇಲೆ ಉತ್ತಮ ಗುಣಕಾರಿಯಾದ ಒಂದೇ ಔಷಧವು.

೨ ಚೇಳಿನ ಕಡತಕ್ಕೆ ತೀವ್ರ ಗುಣಕಾರಿಯಾದ ಔಷಧವು.

ಈ ಹೊತ್ತೇ ಬೇಕಾದವರು ಎರಡಾಣೆಯ ಅಂಚೇ ಟಿಕೀಟ.ಗಳನ್ನು ಕೆಳಗಿನ ವಿಳಾಸಕ್ಕೆ ಕಳುಹಿಸಿದರೆ, ಉಚಿತವಾಗಿ ಕಳುಹಿಸುವೆವು. ತ್ವರೆಮಾಡಿರಿ! ತ್ವರೆಮಾಡಿರಿ!!

ವಿಳಾಸ:- ಕಾರ್ಯದರ್ಶಿ ಶ್ರೀ ಹರಿಹರ ವಾಚನಾಲಯ ಪಾರ್ಶ್ವವಾಡ. ಬೀಡು ಮತ್ತು ಅಂಚೇಕಟ್ಟಿ ಪಾರ್ಶ್ವವಾಡ. ಜಿಲ್ಲೆ-ಬೆಳಗಾಂವಿ.

ಬಸವೇಶ್ವರ ಹಾಯಸ್ಕೂಲ ಬಗ್ಗೆ.

(೧) ರಾ|| ರಾ|| ಸಂಪಾದಕ "ಕನ್ನಡಿಗ" ಇವರಿಗೆ—

"ಕನ್ನಡಿಗಾ" ಅಂತೂ ನೀನು ಒಳ್ಳೇ ಧೈರ್ಯಶಾಲಿ. ಒಳ್ಳೇ ತೀಕ್ಷ್ಣ ಕಣ್ಣುಳ್ಳವನು. ಶಾಲೆ ರೇಲ್ವೆ, ಮುನಸಿಪಾಲ್ಟಿ, ಕನ್ನಡ-ಮರಾಠಿ ಮೊದಲಾದ ಎಲ್ಲ ವಿಷಯಗಳ ಕಡೆಗೂ ಲಕ್ಷವುಳ್ಳವನು. ಅಂತೆಯೇ ಕಳೆದವಾರದಲ್ಲಿ ಬಸವೇಶ್ವರ ಹಾಯಸ್ಕೂಲಿನ ಬಗ್ಗೆ ಒಂದು ಲೇಖವನ್ನು ಪ್ರಕಟಮಾಡಿದಿ. ಪಾಲಕರಾದ ನಮಗೆ ಈಗ್ಗೆ ತುಸು ಧೈರ್ಯಬಂತು. 'ರಾಮಭಕ್ತ'ನು ಪಾಲಕರೇನು ಮಾಡುತ್ತಾರೆಂದು ನಮಗೆಲ್ಲ ಕೇಳುತ್ತಾನೆ. ಆದರೆ ಈ ಬಗ್ಗೆ ಬರೆಯಬೇಕೆಂದರೆ ಯಾರಿಗೆ ಬರೆಯಬೇಕು? ಶಾಲೆಯ ಅಧಿಕಾರಿಗಳಿಗೆ ಬರೆದರೆ ನಾವು ಬ್ರಾಹ್ಮಣರು, ನಮ್ಮ ತಕರಾರುಗಳಿಗೆ ಗಮನಕೊಡುವ ಕಾರಣವಿಲ್ಲವೆಂದು ಚಾಲಕರು ಅಂದುಬಿಡುವರು! ಸಾರ್ವಜನಿಕವಾಗಿ ವೃತ್ತಪತ್ರಗಳಿಗೆ ಬರೆಯಬೇಕೆಂದರೆ ಈಗಿನ ದಿನಗಳು ಬಹುಕಷ್ಟ. ಬ್ರಾಹ್ಮಣೇತರ ಸಂಸ್ಥೆಯ ಬಗ್ಗೆ ಟೀಕೆಗಳಿದ್ದರೆ ಬ್ರಾಹ್ಮಣೇತರ ಪತ್ರಿಕೆಗಳಲ್ಲಿ ಅವು ದೊರೆಯುವದು ಬ್ರಾಹ್ಮಣರಿಂದ ನಡೆಸಲ್ಪಟ್ಟ ಪತ್ರಿಕೆಗಳಲ್ಲಿ ಲೇಖ ಬರೆದರೆ ಕೂಡಲೆ ಜಾತಿದ್ವೇಷವೆಂಬ ಟೊಪ್ಪಿಗೆಯು ಸಿದ್ಧವಾಗುವದು. ಆದರೆ ಈಗ್ಗೆ ನೀನು ಒಂದು ಲೇಖವನ್ನಂತೂ ಪ್ರಕಟಿಸಿದ್ದರಿಂದ ನನಗೆ ಸ್ವಲ್ಪ ಧೈರ್ಯ ಬಂದಿದೆ. ಇನ್ನು ನಮ್ಮ ಹುಡುಗರ ಬಗ್ಗೆ ಮೂರದಲ್ಲಿರುವ ಬಸವೇಶ್ವರ ಹಾಯಸ್ಕೂಲಿಗೆ ನಡೆದು ಹೋದರೆಂದರೆ ನೀರಡಿಕೆಯಾಗುವದು, ಆರಿಗಾದರೂ ಸ್ವಾಭಾವಿಕ. ಆದರೆ ಈ ಹಾಯಸ್ಕೂಲಿನಲ್ಲಿ ನೀರಿನ ವ್ಯವಸ್ಥೆಯೂ ಇರಬಾರದೇ? ನೀರಡಿಸಿದ ವಿದ್ಯಾರ್ಥಿಗಳು ಕೇಳುತ್ತ ಬಂದರೆ ಮನೆಗೆ ಬಗರೋಣ, ಇಲ್ಲವೇ ಗಂಟಲ ಆರಿಸಿಕೊಂಡು ಅಭ್ಯಾಸದ ಕಡೆ ಲಕ್ಷವಿಲ್ಲದೇ ವರ್ಗದಲ್ಲಿ ಕುಳ್ಳಿರಬೇಕು! ಶಿಕ್ಷಕರು ನೀರಡಿಸಿದರೂ ಅದೇ ಹಾಡು! ಆದರೆ ವಿದ್ಯಾರ್ಥಿಗಳನ್ನು ಅಭ್ಯಾಸ ಬಿಡಿಸಿ, ಮನೆಗೆ ಕಳಿಸಿ, ನೀರನ್ನು ತರಿಸುವ ಸೌಕರ್ಯವು ಅವರಿಗಿದೆ. ನೀರಿನ ಮಾತೊಂದೇ ಅಲ್ಲ. ಹೈಸ್ಕೂಲಿನವರು ಪಾಯಖಾನೆಗಳ ಏರ್ಪಾಡನ್ನಾಗಲೀ, ಹೊರಗೆ ಹೋಗುವದಕ್ಕೆ ನೀರು, ತಂಬಿಗೆಗಳ ವ್ಯವಸ್ಥೆಯನ್ನಾಗಲೀ ಮಾಡಿಲ್ಲ! "ಎರಡಕ್ಕೆ ಹೋಗಬೇಕಾದರೂ ವಿದ್ಯಾರ್ಥಿಗಳು ಮತ್ತೆ ಮನೆಗೆ ಓಡಬೇಕು!" ವಿದ್ಯಾರ್ಥಿಗಳ ಮೇಲೆ ಶಾಲೆಯ ಚಾಲಕರ ಪ್ರೇಮವು ಇದೇ ಬಗೆಯದೋ? ನಮ್ಮ ಹುಡುಗರ ದೃಷ್ಟಿಯಿಂದಿದ್ದ ಈ ಅನಾನುಕೂಲತೆಗಳನ್ನು ಶಾಲೆಯವರು ದೂರ ಮಾಡಬೇಕೆಂಬ ಉದ್ದೇಶದಿಂದ ನಾನೀ ಪತ್ರವನ್ನು ಬರೆದಿರುವೆನು. ಚಾಲಕರು ಈ ಬಗ್ಗೆ ಯೋಗ್ಯ ವಿಚಾರವನ್ನು ಮಾಡಿದರೆ ವಿದ್ಯಾರ್ಥಿಗಳಿಗೆ ಉಪಕಾರ ಮಾಡಿದಂತಾಗುವದು! ಇತಿ.

ಓರ್ವ ಪಾಲಕ

(೨) ರಾ|| ರಾ|| ಸಂಪಾದಕ 'ಕನ್ನಡಿಗ' ಇವರಿಗೆ—

ನ ವಿ. ವಿ "ರಾಮಭಕ್ತ" ನೀನೊಬ್ಬ ಸುಚ್ಚಿಸಿದ್ದಂತೆ ತೋರುತ್ತದೆ. ಪಾಪ! ಓರ್ವ ಶಿಕ್ಷಕರ ಮೇಲೆ ಟೀಕೆಯೇಕೆ? ಬಸವೇಶ್ವರ ಹಾಯಸ್ಕೂಲಿನ ಶಿಕ್ಷಕರಿಗೆ ತಮಗೆ ಯೋಗ್ಯ ಕಂಡ ಹಾಗು ಇಷ್ಟವಾದ ಮಾರ್ಗದಿಂದ ನಡೆಯಲು ಅಧಿಕಾರ ಸ್ವಾತಂತ್ರ್ಯಗಳಿವೆಯೋ? ಇದನ್ನು ಮಾಡಬಾರದು ಅದನ್ನು ಮಾಡಬಾರದು; ಹಾಗೆ ಮಾಡಕೂಡದು, ಹೀಗೆ ಮಾಡಕೂಡದು ಎಂಬ ನಿಬಂಧನೆಗಳಿವೆ. ಇಷ್ಟಕ್ಕೆ ತೀರಿ ನಡೆದರೆ ಎಳ ತಾಸುಗಳಲ್ಲಿ "ಹಚ್ಚಿ ಪಾರ!!" ಎಂಬ ಮಹಾ ಶಸ್ತ್ರವೊಂದು ಚಾಲಕರಲ್ಲಿದೆ! ಇದರಿಂದ ಶಿಕ್ಷಕರು ಹೆದರಿಹೋಗಿದ್ದಾರೆ. "ಕನ್ನಡಿಗ"ನಿಗೆ ಎದ್ದರೆ ಕನ್ನಡ, ಕುಳಿತರೆ ಕನ್ನಡ, ನಿಂತರೆ ಕನ್ನಡವೆಂಬ ಹುಚ್ಚು ಹಿಡಿದಂತೆ ಈ ಶಿಕ್ಷಕರಿಗೆ ಎದ್ದರೆ ಎಳ ತಾಸು, ಕುಳಿತರೆ ಎಳ ತಾಸು ನಿಂತರೆ ಎಳ ತಾಸೆಂಬ ಹೆದರಿಕೆಯದೆ. ಚಾಲಕರಿಗೇ—ಶಿಕ್ಷಣ ಭುವನದ ಚಾಲಕರಾದವರ—ಎದ್ದರೆ ವ್ಯಾಪಾರದ ಧೋರಣ, ಕುಳಿತರೆ ವ್ಯಾಪಾರದ ಧೋರಣ, ನಿಂತರೆ ವ್ಯಾಪಾರದ ಧೋರಣಗಳಿವೆ. ಅಂತೆಯೇ ಯಾವ ಶಿಕ್ಷಣ ಸಂಸ್ಥೆಗಳಲ್ಲಿಲ್ಲದ "ಫಿ" ವಸೂಲಾದ ಮೇಲೆ ೧೦ ನೇ ತಾ॥ ನಂತರ ಪಗಾರದ ವಿಚಾರ ಎಂಬದೊಂದು ಶಿಸ್ತಿಯ ಲಿಖಿತದ ಸೂತ್ರವಿದೆ! ೨೫ನೇ ತಾ॥ ವರೆಗೆ ಹಾಯಸ್ಕೂಲ ಅಧಿಕಾರಿಗಳಿಂದ ದೊರೆಯುವ ಫಿ ವೇತನವು (Scholaeshit) ಆ ಆ ವಿದ್ಯಾರ್ಥಿಗಳಿಗೆ ದೊರೆಯುವದಿಲ್ಲ. ಇದಕ್ಕಾಗಿ ಶಾಲೆಯ ಚಾಲಕರ ಮೇಲೆ ಅವಲಂಬಿಸಿದ ವಿದ್ಯಾರ್ಥಿಗಳೇ ೨೫ ನೇ ತಾ॥ ವರೆಗೆ ತಮ್ಮ ಫೀ ಕೊಡುವದಿಲ್ಲ. ವಸ್ತುಸ್ಥಿತಿಯು ಹೀಗಿದ್ದರೂ ೧೦ನೇ ತಾರಿಖಿನಲ್ಲಿಯೇ ಫಿ ವಸೂಲ ಮಾಡಬೇಕೆಂಬ ಅಪ್ಪಣೆ! ಅಶಕ್ಯ ಕೋಟಿಯಲ್ಲಿಯದಾದ ಅದನ್ನೇ ವಸೂಲ ಮಾಡುವದಿಲ್ಲವಾದ್ದರಿಂದ ಶಿಕ್ಷಕರಿಗೆ ಪಗಾರವು ಇಲ್ಲವೆಂದು ಮನ್ನಣೆ!! ಇಂತಹ ಪರಿಸ್ಥಿತಿಯಲ್ಲಿ ಶಿಕ್ಷಕರು ನಿಮ್ಮ ಕಳೆದವಾರದ ಲೇಖದಲ್ಲಿ ಪ್ರಸಿದ್ಧವಾದಂತೆ ವಿದ್ಯಾರ್ಥಿಗಳಿಗೆ ಅಷ್ಟೊಂದು ಸ್ವತಂತ್ರತೆಯಿಂದ ಹಾಗೆ ಹೇಳಬಹುದೇ? ಹೇಳಿದ್ದಾದರೆ ಆ ಶಿಕ್ಷಕರು ಧೈರ್ಯಶಾಲಿಯೇ ಸರಿ.

ಇತಿ ತಮ್ಮ ವಾದಿರಾಜ ಸಂತ.

ಬಾಗಲಕೋಟೆಯ ಚಂದಾದಾರರಲ್ಲಿ ಬಿನ್ನಹ.

'ಕನ್ನಡಿಗ'ನ ೨ನೇ ವರ್ಷವು ಪ್ರಾರಂಭವಾಗಿ ೩ ತಿಂಗಳುಗಳಾದವು. ವಾರ್ಷಿಕ ಚಂದಾ ಒಂದೇ ಒಂದು ರೂಪಾಯಿ ಇದ್ದದರಿಂದ ಚಂದಾ ಹಣವು ಬೇಗನೇ ವಸೂಲಾಗದಿದ್ದರೆ, ಬಹು ತೊಂದರೆಯಾಗುತ್ತದೆ. ಆದ್ದರಿಂದ ಇದನ್ನು ಲಕ್ಷ್ಯದಲ್ಲಿಟ್ಟು ವಸೂಲಿಗೆ ನಮ್ಮ ಜವಾನನು ಬಂದಾಗ್ಯೂ ಇಂದು ಹೋಗು, ನಾಳೆ ಬಾ ಎಂದು ಹೇಳಬಾರದಾಗಿ ಪ್ರಾರ್ಥನೆಯಿದೆ. ಮುಂದೆ ಮುಂದೆ ಹಾಕುತ್ತ ಹೋದರೆ, ವಸೂಲಿಗಾಗಿ ಓರ್ವನನ್ನು ಬೇರೆ ಇಡಬೇಕಾಗುವದು. ಮೊದಲೇ ಹಾನಿಯಲ್ಲಿದ್ದ 'ಕನ್ನಡಿಗ'ನಿಗೆ ವಸೂಲಿಯ ನಿಮಿತ್ತ ಪಗಾರದ ಭಾರವೊಂದು ಬೀಳದಂತೆ ಚಂದಾದಾರರು ಜಾಗ್ರತರಾಗಬೇಕಾಗಿ ವಿನಂತಿಯಿದೆ. ಇನ್ನು ಈ ವಿನಂತಿಯೂ ಅನಾದೃತವಾದಲ್ಲಿ, ಸ್ವತಃ ಸಂಪಾದಕರೇ ವಸೂಲಿಗಾಗಿ ಹೊರಡುವ ಪ್ರಸಂಗಬರುವದು.

—ವ್ಯವಸ್ಥಾಪಕ

ಇತರವೃತ್ತ

ಮಳೆ ಇಲ್ಲ. ಮುಂಗಾರಿ ಬೆಳೆಗಳೆಲ್ಲ ಒಣಗಿದವು. ಮಳೆ ಮಳೆಯೆಂದು ಎಲ್ಲರೂ ಕನವರಿಸುತ್ತಿರುವರು.

ಬಹು ದಿನಗಳಿಂದ ನಡೆದ "ಸಾಬೋಸ್ಪಾರ್" ಗ್ರಂಥದ ವ್ಯಾಜ್ಯದ ನಿರ್ಣಯವು ಹೊರಬಿದ್ದಿದೆ. ಬಾಗಲಕೋಟೆ ಬ್ಯಾಂಕಿನವರ ದಾವೆಯು ವೆಚ್ಚಸಹಿತವಾಗಿ ತೆಗೆದು ಹಾಕಲ್ಪಟ್ಟಿತು. ಈ ಬಗ್ಗೆ ಮುಂದಿನಸಲ ವಿಶದವಾಗಿ ಬರೆಯುವೆವು. ವೈಷ್ಣವರ ಗಂಟುಮೊಟ್ಟೆಯ ಸ್ಥಾನವೆಂದು ಹೆಸರಾದ ಬಾಗಲಕೋಟೆಯಲ್ಲಿ ಈ ವಿಷಯವು ಇಷ್ಟೊಂದು ವಿಕೋಪಕ್ಕೆ ಹೋದದ್ದು ನಿಜವಾಗಿಯೂ ವಿಷಾದಕರ.

ವೇ॥ ಶಾಮಂಡಿಕೇರಿ ಗುರುಭಟ್ಟರ ಕೀರ್ತನೆಗಳು ನಡೆದಿವೆ. ಗೋಡೆಗೆ ಅಂಟಿಸಿದ ಕೀರ್ತನದ ಜಾಹೀರಾತುಗಳು ಕನ್ನಡದಲ್ಲಿದ್ದರೆ ಶ್ರೋತೃವೃಂದವು ದೊರೆಯುತ್ತಿರಲಿಲ್ಲವೆಂಬದಾಗಿ ಕೀರ್ತನಕಾರರಿಗೆ ಭಯವಿದ್ದಿರಬಹುದೇ?

ಪುಣೆಯ ಒಕ್ಕಲತನದ ಪ್ರದರ್ಶನಕ್ಕೆ ಇಲ್ಲಿಂದ ೩೦೦ ಜನರು ಹೋಗಿದ್ದರು.

ಮುನಸಿಪಾಲ್ಟಿಯ ಅಧಿಕಾರಿಗಳು ನಿಯೋಜಿಸಲ್ಪಟ್ಟರು—ಪ್ರವರ್ತಿ ಗುರುರಾಯರು ಉಪಾಧ್ಯಕ್ಷರು; ಕವಣೂರ ಶಮ್ಯೂಗ್ನಾನಾಯಕರು ಸ್ಟ್ಯಾಂಡಿಂಗ್ ಕಮಿಟಿ ಚೇರಮನ್; ಹಜರತ್ ಸಾ॥ ಪಟ್ಟೇಕಲ್ಲ ಮ್ಯಾನೆಜಿಂಗ ಕಮಿಟಿ, ಹಲಗಲಿ ಪಾಟೀಲ ದವಾಖಾನಿ ಕಮಿಟಿ, ಕಲಬುರ್ಗಿ ವಕೀಲ ಟಾವನ್ ಪ್ಲ್ಯಾನಿಂಗ; ಎಚ್ಚಿಕಪ್ಪ ನ್ಯಾಯಾಧೀಶರ ದೀಪದ ಕಮೀಟಿಗಳಿಗೆ ಚೇರಮನ್‌ರು. ಈ ಹೊಸಜನರ ಯೋಜನೆ ಹಿತವಾಗಲಿ!

ಡಿ. ಡಿ. ಕಲೆಕ್ಟರರ ಪ್ರವಾಸ.

ಪಶ್ಚಿಮ ಭಾಗದ ಡಿ. ಕಲೆಕ್ಟರರ ಪ್ರವಾಸ—೩೧ ರಿಂದ ೩ ನೇ ನವಂಬರ ಗೋವನಕೊಪ್ಪ; ೪-೬ ಬದಾಮಿ (ಸೂಟೀ ದಿನಗಳು); ೭-೧೦ ಬಾಗಲಕೋಟೆ; ೧೧-೨೦ ಬದಾಮಿ; ೨೧-೨೫ ಗುಳೇದಗುಡ್ಡ; ೨೬ ರಿಂದ ೧ ನೇ ಡಿಸೆಂಬರ ಕಮತಗಿ; ೨-೪ ಅಮೀನಗಡ, ೫-೬ ಗುಡೂರ ಸಣ್ಣ ಟಕ್ಕಳಕಿ; ೮-೧೦ ಇಲಕಲ್ಲ; ೧೧-೨೨ ಹುನಗುಂದ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !

ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇದೀ ಬ್ರಿಟಿಷ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೬೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ಗಿಡಗಳು ಮತ್ತು ಬೀಜಗಳು.

ತರಹೇವಾರಿ ಕಟ್ಟಿಕಟ್ಟಿದ ಮಾವಿನ ಗಿಡಗಳು ಡಜನ್ ೧ ಕ್ಕೆ ರೂ ೯-೦-೦

ನಿಂಬೆ, ಚಿತ್ರಾಳೆ, ಮಾದಳ, ಸೇವು, ದಾಳಿಂಬ ಚಕ್ಕೋತ್ರೆ, ಪನ್ನೇರಳೆ, ದ್ರಾಕ್ಷಿ, ಪೇರ್, ಹಲಸು ಗಿಡಗಳು ಡಜನ್ ೧ ಕ್ಕೆ ರೂ ೫-೦-೦

ಕಟ್ಟಿದ ಸಂಪಿಗೆ, ಪಾರಿಜಾತ, ಪಾದರಿ ಗಿಡಗಳು ೧ಕ್ಕೆ ,, ೧-೦-೦

ರೋಜಾ ಗಿಡಗಳು ಡಜನ್ ೧ ಕ್ಕೆ ರೂ ೩ ರಿಂದ ೬, ೧೨

೨೫ ತರಹಾ ಹೂವಿನ ಬೀಜಗಳು ೨೫ ಪ್ಯಾಕೆಟ್ ರೂ ೫-೦-೦

೨೫ ತರಹಾ ಇಂಗ್ಲೀಷ ತರಕಾರಿ ಬೀಜಗಳು ೨೫ ಪ್ಯಾಕೆಟ್ ರೂ ೫-೦-೦

೨೫ ತರಹಾ ಇಂಡಿಯನ್ ತರಕಾರಿ ಬೀಜಗಳು ೨೫ ಪ್ಯಾಕೆಟ್ ರೂ ೩-೦-೦

೧೨ ತರಹಾ ಗಡ್ಡೆಗಳಿಂದಾಗತಕ್ಕ ಹೂವಿನ ಗಿಡಗಳ ಗಡ್ಡೆಗಳು ಡಜನ್ ೧ಕ್ಕೆ ರೂ ೬-೦-೦

ನಮ್ಮಲ್ಲಿ ಸಿಗುವ ಬೀಜ, ಗಿಡಗಳ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ.

ಎಸ್. ಜಿ. ಸುಬ್ಬಯ್ಯಾ ಅಂಡ ಬ್ರದರ್ಸ್ ಲಾಲ್‌ಬಾಗ್ ರೋಡ್ ಬೆಂಗಳೂರುಸಿಟಿ

ನೋಟೀಸು.

ರಾ|| ಲಾಲಸಾಹೇಬ ವ|| ಹಸನಸಾಹೇಬ ಪಿಂಜಾರ ಸಾ|| ಹೊನ್ನಿಹಾಳ ಹಲ್ಲಿವಸ್ತಿ ಬಾಗಲಕೋಟೆ ಇವರಿಗೆ—

ಕೆಳಗೆ ಸಹಿ ಮಾಡುವವಳಕಡಿಂದಾ ಈ ನೋಟಿಸಿನ ದ್ವಾರ ತಿಳಿಸುವದೇನಂದರೆ— ನೀನು ನನ್ನ ಲಗ್ನದ ಗಂಡನಿದ್ದು ಲಗ್ನ ಆದಮೇಲೆ ಒಂದೆರಡು ವರ್ಷ ನನ್ನಕೂಡ ಛಲೋರೀತಿ ಬಾಳ್ವೆ ಮಾಡಿದಿ ಈಗ ನೀನು ನನ್ನ ಬಿಟ್ಟು ೩ ವರ್ಷ ಆಯಿತು. ಇವತ್ತಿಗೂ ನೀನು ನನ್ನನ್ನು ಕರಕೊಂಡು ಹೋಗಲಿಲ್ಲಾ. ಈಗ ನಾನು ಬೇರೆಕಡಿಗೆ ಇದ್ದು ನಾನು ನನ್ನ ಹೊಟ್ಟಿದಶಿಂದಾ ೩೦೦ ರೂಪಾಯಿ ದೇಣೆ ಮಾಡಿರತೇನೆ. ನೀನು ಈಗ ಸದರ ದೇಣೇ ಈನೋಟೀಸು ಮುಟ್ಟಿದ ೭ ದಿವಸದಲ್ಲಿ ಕೊಟ್ಟು ನನ್ನ ಕರಕೊಂಡುಹೋಗಿ ಛಲೋ ರೀತಿ ಬಾಳ್ವೆಮಾಡಬೇಕು. ಇಲ್ಲದಿದ್ದರೆ ಇದೇ ನೋಡಚೀಟಿಯಿಂದ ತಿಳಿಸು ನಾನು ಎರಡನೇಯವನನ್ನು ವುಡಕೆ ಮಾಡಿಕೊಂಡು ಹೋಗತೇನೆ. ನನ್ನಮೇಲೆ ವ ನನ್ನ ಮಾಡಿಕೊಂಡ ವುಡಕಿಗಂಡನಮೇಲೆ ನಿನ್ನ ಹಕ್ಕು ಯಾವತರದ್ದು ಇರಲಿಕ್ಕಿಲ್ಲಾ ಅಂತಾ ಕೊಟ್ಟ ನೋಟೀಸು ಸಹಿ ತಾರೀಖು ೧೫ ೯ ೧೯೨೬ ಇಸ್ವಿ

() ಈ ಯಡಗೈ ಹೆಬ್ಬಟ್ಟಿನಗುರ್ತು ಅಲ್ಲಮ್ಮಾ ಕೋಮ ಲಾಲಸಾಹೇಬ ಪಿಂಜಾರ ಸಾ|| ಗಿರಸಾಗರ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂಧ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಚಾರಗಳೂ, ನಾಶ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವದಾ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ಮೈಯ್ಯೊಳಗಿನ ಗರಮಿಯು ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೬-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

ರ ನಂ. ಬಿ. ೧೯೪೭ ನಾ ಚಂದಾ ೧—೧೩—೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ । — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಕಾರ್ತಿಕ ಶುದ್ಧ ೭ ಶಕೆ ೧೮೬೮ ತಾ||೧೨ ೧೧-೧೯೪೬. | ಸಂಚಿಕೆ ೩೧

ಸಂಪಾದಕರ ಭೂಮಿ

(೬೦)

ನನ್ನ ಮನಸಿನ ಮೇಣವಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮುಕ್ಕಳ ದೊಮ್ಮೆ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ಶಿಲ್ಪಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹವೆಂದು ತಿಳಿಯೆ

—ಅಂಬಿಕಾ ತನಯ ದತ್ತ

ಕರ್ನಾಟಕ ಇತಿಹಾಸ ಮಂಡಲವು ಧಾರವಾಡದಲ್ಲಿ ಅನೇಕ ವರ್ಷಗಳಿಂದ ಹಾಗೂ ಹೀಗೂ ಮಾಡಿ ಜೀವ ಹಿಡಿದುಕೊಂಡಿದ್ದರೂ ಕನ್ನಡಿಗರ ದೃಷ್ಟಿಯು ಅತ್ತ ವಿಶೇಷವಾಗಿ ಹೋಗಿದ್ದಿಲ್ಲ. ಈಗ ಕೆಲವು ಇತಿಹಾಸ ಪ್ರೇಮಿಗಳು ಈ ಮಂಡಲಕ್ಕೆ ಆಹಾರವನ್ನಿತ್ತು, ಅದು ಸಶಕ್ತವಾಗುವಹಾಗೆ ಪ್ರಯತ್ನಿಸುತ್ತಿರುವದು ಆನಂದದ ವಿಷಯ. ಕರ್ನಾಟಕದಲ್ಲಿ ಇತಿಹಾಸ ಸಂಶೋಧನದ ಕಾರ್ಯವು ಬಹು ತೊಡಕಿನದಾಗಿದೆ. ಹಾಗೂ ಅತ್ಯಂತ ಕಷ್ಟಸಾಧ್ಯವಾಗಿದೆ. ನಮ್ಮ ನಾಡಿನ ಸಾಧ್ಯಂತವಾದ ಇತಿಹಾಸವಿಲ್ಲ. ಈ ಇತಿಹಾಸವನ್ನು ಬರೆಯಲು ಅವಶ್ಯಕವಾದ ಸಾಕಷ್ಟು ಉಪಕರಣಗಳೂ ನಮ್ಮಲ್ಲಿಲ್ಲ. ಆದುದರಿಂದ ಹಲಕೆಲವು ಇತಿಹಾಸ ಪ್ರೇಮಿಗಳು ತಮ್ಮ ಜೀವಿತವನ್ನೇ ಧಾರೆಯರೆದ ಹೊರತು ಕನ್ನಡಿಗರು ಪ್ರಾಚೀನಕಾಲದಿಂದ ಈಗಿನವರೆಗಿನ ತಮ್ಮ ಇತಿಹಾಸವನ್ನು ಕಾಣರು. ಅಂತೆಯೇ ಕನ್ನಡಿಗರೆಲ್ಲ ಈ ಮಂಡಲದ ಪ್ರಚಾರಕರಿಗೆ ತಮ್ಮ ಬೆಂಬಲವನ್ನಿಯಬೇಕಾಗಿದೆ. ಈಗ್ಗೆ ಶ್ರೀ ರಾಜಪುರೋಹಿತರು ಬೆಳಗಾಂವಿಜಿಲ್ಲೆಯಲ್ಲಿ ಸಂಚರಿಸುತ್ತಿರುವರು. ಧಾರವಾಡದ ಮುಖ್ಯಕಾರ್ಯಾಲಯದಲ್ಲಿ ಶ್ರೀ ಆಲೂರ ವೆಂಕಟರಾಯರ ನೇತೃತ್ವದಲ್ಲಿ ಶ್ರೀಯುತರುಗಳಾದ ಸಾಲೀ ಹಾಗು ಕಾಪಸೀಕರ ಈ ಪದವೀಧರರು ಕನ್ನಡಿಗರ ಸೇವೆಮಾಡುತ್ತಿರುವರು. ಶ್ರೀ ರಾಜಪುರೋಹಿತರು ಕರ್ನಾಟಕದ ಎಲ್ಲ ಜಿಲ್ಲೆಗಳನ್ನು ಸಂದರ್ಶಿಸುವರು. ಆಗ್ಗೆ ಅವರಿಗೆ ಕನ್ನಡಿಗರು ಅವಶ್ಯವಾಗಿ ಸಹಾಯ ಮಾಡತಕ್ಕದ್ದು. ಕರ್ನಾಟಕದ ಇತಿಹಾಸ ಸಂಶೋಧನದ ಕಾರ್ಯವು ಎಂತಹ ತೊಡಕಿನದಿದೆಂಬದನ್ನು ಅರುಹಲು ನಾವು ಮುಂದಿನವಾರದಿಂದ ಲೇಖಾಂಕಗಳನ್ನು ಪ್ರಾರಂಭಿಸುವವು ಕನ್ನಡಿಗರು ಅದರ ಲಾಭವನ್ನು ಹೊಂದಬೇಕು.

ಬಾದಶಹರ ಒಕ್ಕಲತನದ ಚೌಕಶೀ ಮಂಡಲದ (ರಾಯಲ್ ಕಮಿಶನ್) ಬಗ್ಗೆ ನಾವು ಹಿಂದಕ್ಕೆ ಹಿಂದಿನ ಸಂಚಿಕೆಯಲ್ಲಿ ಬರೆದಿದ್ದೆವು. ಆದರೆ ಕರ್ನಾಟಕದ ಮುಕಾಬಿಜನಗಳು ಬಗ್ಗೆ ಅತ್ತ ಗಮನಕೊಟ್ಟಿಲ್ಲ, ಕರ್ನಾಟಕದ ಒಳ್ಳೇ ಅಭ್ಯಾಸಕಾರಿಗಳಾದ ನಮ್ಮ ಜಿಲ್ಹೆಯ ಕಲೆಕ್ಟರರು- ಶ್ರೀ ನಾಯಕರವರು— ಈ ಮಂಡಲದ ಮುಂದೆ ಸಾಕ್ಷಿಕೊಡುವಾಗ್ಗೆ ಕರ್ನಾಟಕದ ದೃಷ್ಟಿಯಿಂದ 'ಕನ್ನಡಿಗ'ನು ಸೂಚಿಸಿದ ಕರ್ನಾಟಕ ಬಂದರ, ಬರಗಾಲದ ಧಪಣೆಗಳ ಪರಿಹಾರ ಇವುಗಳ ಬಗ್ಗೆ ಸರ್ವಮಾನ್ಯವಾಗುವಂತಹ ವಿಧಾನಗಳನ್ನು ಮಂಡಿಸಿದರು. ಅವರ ಈ ಹೊಸ ವಿಚಾರಗಳಿಂದ ಮಂಡಲದ ಸಭಾಸದರಿಗೆ ಒಳ್ಳೇ ಆನಂದವಾಯಿತು. ಭಟಕಳ ಬಂದರವನ್ನು ಬೇಗನೇ ತೆರೆಯಬೇಕೆಂದೂ, ಅದರಿಂದ ಕರ್ನಾಟಕದ ಹಾಗೂ ಕರ್ನಾಟಕದ ಸುತ್ತಲಿನ ಪ್ರದೇಶದ ವ್ಯಾಪಾರ ಉದ್ದಿಮೆಗಳು ಬೆಳೆಯುವವೆಂದೂ ಮುಂಬೈ ಕೋಲೊಂಬೊಗಳ ನಡುವೆ ಬಾದಾ ಬಂದರವಾದರೆ ಕರ್ನಾಟಕದ ಹತ್ತಿ ಹಾಗೂ ಉಳಿದ ಬೇಸಾಯದ ಶ್ರೇಷ್ಠವಾದ ಉತ್ಪತ್ತಿಗಳಿಂದ ಲಾಭವಾಗುವದೆಂದೂ, ಇದೇ ಭಟಕಳವು ವಿಜಯನಗರ ಸಾಮ್ರಾಜ್ಯದಲ್ಲಿ ಒಳ್ಳೇ ಹೆಸರಾದ ಬಂದರವಾಗಿತ್ತೆಂದೂ, ಇವೆಲ್ಲ ಸೌಕರ್ಯಗಳಿಗಾಗಿಯೇ ಮೈಸೂರ ಸರಕಾರದವರು ಭಟಕಳವನ್ನು ಆಧುನಿಕ ಪದ್ಧತಿಯಮೇಲೆ ದೊಡ್ಡ ಬಂದರವನ್ನಾಗಿ ಮಾಡಲು ಹಾತೊರೆಯುತ್ತಿರುವರೆಂದೂ, ಹೇಳಿ, ಈ ಬಗ್ಗೆ ಹೆಚ್ಚಾಗಿ ಈ ಮಂಡಲದವರು ಚೌಕಶೀ ಮಾಡಬೇಕಾಗಿ ಸೂಚಿಸಿದರು. ಅದೇ ಪ್ರಕಾರವಾಗಿ ವಿಜಾಪುರ ಜಿಲ್ಹೆಯಲ್ಲಿ ಬರಗಾಲವು ಯಾವಾಗಲೂ ಇರುವದರಿಂದ, ಇಲ್ಲಿಯ ಕೊರತೆಗಳನ್ನೂ ಅವನ್ನು ದೂರಮಾಡುವ ಉಪಾಯಗಳನ್ನೂ ಶೋಧಿಸುವದಕ್ಕಾಗಿ ಒಂದು ಸಂಶೋಧನ ಸಂಘವನ್ನು ಸ್ಥಾಪಿಸಬೇಕೆಂದೂ ಹೇಳಿದರು. ಕರ್ನಾಟಕತ್ವದ ಸಂಪೂರ್ಣ ಕಲ್ಪನೆಯುಳ್ಳ ಶ್ರೀ ನಾಯಕರಂತಹ ಆರು ಜನರು ಈ ಚೌಕಶೀ ಮಂಡಲದ ಮುಂದೆ ತಮ್ಮ ತಮ್ಮ ವಿಚಾರವನ್ನು ಮಂಡಿಸಿದ್ದರೆ ಕರ್ನಾಟಕಕ್ಕೆ ಅದರಿಂದ ಎಷ್ಟೋ ಲಾಭಗಳವಾಗುತ್ತಲಿದ್ದಿತು. ಬೆಂಗಳೂರಲ್ಲಿ ಸಾಕ್ಷಿಕೊಡುವಾಗ್ಗೆ ಅಲ್ಲಿಯ ಕನ್ನಡಿಗರಾದರೂ ಅಖಂಡ ಕರ್ನಾಟಕದ ದೃಷ್ಟಿಯನ್ನಿಟ್ಟು ತಮ್ಮ ತಮ್ಮ ವಿಚಾರಗಳನ್ನು ಮಂಡಿಸಬೇಕಾಗಿ ಸೂಚಿಸುತ್ತೇವೆ.

ಪಾಶ್ಚಾತ್ಯರ ಕೆಲವು ಸಂಸ್ಥೆಗಳು ಭಾರತೀಯರಿಗೆ ಸುಖದಾಯಕವಾಗಿಲ್ಲ. ಅವುಗಳಲ್ಲಿ ಈಗಿನ ಚುನಾವಣೆಯ ಮೇಲೆ ನಡೆಯತಕ್ಕ ರಾಜ್ಯದಾಡಳಿತವು ಮುಖ್ಯವಾಗಿದೆ. ಈಗ್ಗೆ ೧೫|೨೦ ವರ್ಷಗಳಿಂದ ನಮ್ಮಲ್ಲಿ ಈ ಚುನಾವಣೆಯ ರಾಜ್ಯದಾಡಳಿತವು ವಿಶೇಷವಾಗಿ ಹಬ್ಬಿದೆ. ಮ್ಯುನಿಸಿಪಾಲಿಟಿ ಲೋಕಲ್‌ಬೋರ್ಡ ಕಾಯದೇ ಮಂಡಲಗಳ ಚುನಾವಣೆಗಳ ಅನುಭವದಿಂದ, ಭಾರತೀಯರ ಸಂಸ್ಕೃತಿಗೆ ಈ ಪದ್ಧತಿಯು ಸರಿಯಾಗಿಲ್ಲವೆಂಬುದು ಅನೇಕರಿಗೆ ಮನವರಿಕೆಯಾಗುತ್ತಿದೆ. ಮಾಂಟೇಗೊ ಸಾಹೇಬರ ಹೊಸ ಸುಧಾರಣೆಯ ಒದಗುವಿಕೆಯಿಂದ ನಮ್ಮ ಕೊಡಗು ಕನ್ನಡಿಗರಿಗೂ ಈ ಚುನಾವಣೆಯ ಗೊಂದಲದ ಲಾಭವು (?) ದೊರೆತಿದೆ. ಇವರ ಈ ಸ್ವಲ್ಪಾವಧಿಯ ಅನುಭವವು ಹೇಗಿದೆಂಬುದು 'ಲೋಕಪಾವನ'ದ ಎನೇ ಅಕ್ಟೋಬರದ ಅಗ್ರಲೇಖದಿಂದ ಗೊತ್ತಾಗುವದು. ಅದರ ಕೆಲಭಾಗವನ್ನಿಲ್ಲಿ ಕೂಡುವೆವು—

ಮೈಸೂರು ಸೈನೂರ ದೇಶೀಯರ ಅಭಿವೃದ್ಧಿಯೊಂದೇ ದೃಷ್ಟಿಯುಳ್ಳ ದಾಕ್ಷಿ ದುತ್ತರಿಸುವದು ನ್ಯಾಯವಷ್ಟೆ. ಸಂಸ್ಥಾನವು ಹಿಂದೆ ಇಳ್ಳಿಸ್ಪಷ್ಟ ಮೈಸೂರು ದೇಶದ ಸೇವೆಯನ್ನು ದೇಶೀಯರು ಸಾಕಷ್ಟು ಶ್ರದ್ಧೆಯಿಂದ ಮಾಡುತ್ತಿಲ್ಲವೆಂದು ವಿಚಾರವು ತಿಳಿಯುವದು. ಕೊಡಗಿನ ಸ್ಥಿತಿಗಳನ್ನು ವಿಚಾರಿಸಿದರೆ ಪ್ರತಿಯೊಂದು ಇದಕ್ಕೆ ವ್ಯತಿರಿಕ್ತವಾಗಿಯೇ ಕಂಡು ಬರುವದು. ಕೊಡಗು ಕೊಡಗು ದೇಶಸ್ಥರ ಸಾಮಾನ್ಯರಿಗೆ ಹಿತದೃಷ್ಟಿಯು ದೇಶೀಯರಲ್ಲಿರುತ್ತದೆ ಎಂದು ಹೇಳಿಕೊಳ್ಳುತ್ತೇವೆ! ಕೊನೆಗೆ ಒದಗಿರುವ ಕೊಡಗಿನ ರಾಜ್ಯಾಡಳಿತವು ಲಕ್ಷ್ಯದಿಂದ ಸಮರ್ಪಕವಾಗಿ ನಡೆಯುತ್ತಿಲ್ಲವೆಂಬ ಅಭಿಪ್ರಾಯವು ನಮ್ಮಲ್ಲಿ ಅಲ್ಲಿ ಇಲ್ಲಿ ತಲೆದೋರಿದೆ ಎಂದು ನಮ್ಮ ವಾಚಕರಿಗೆ ತಿಳಿಸಿಗತಿಯಾಗಿದೆ. ಇದಕ್ಕೆ ಸಾಕಷ್ಟು ಕಾರಣವಿರುವದಾದರೂ ಸದ್ಯ ಇದು ನಮ್ಮ ದೇಶದ ದುರ್ಭಾಗ್ಯವೇ ಎನಿಸಿಕೊಂಡಿದೆ. ಕೊಡವರು ತಮ್ಮ ನಾಡನ್ನು ಬಹು ಪ್ರೀತಿಸುವರು. ಅವರು ಯಾವ ದೇಶದಲ್ಲಿದ್ದರೂ ತಮ್ಮ ನಾಡನ್ನು ಮರೆಯುವದಿಲ್ಲ. ಹಾಗು ತಮ್ಮ ವೃದ್ಧಾಪ್ಯದ ಕಾಲವನ್ನು ಕೊಡುವರು ತಮ್ಮ ಜನ್ಮ ದೇಶದ ಸೇವೆಯಲ್ಲಿಯೇ ಕಳೆಯುವರು. ಹೀಗಿದ್ದರೂ ತಮ್ಮ ನಾಡಿನ ಸೇವೆ ಮಾಡಲು ಸಾಕಷ್ಟು ಪ್ರೋತ್ಸಾಹವು ದೊರೆಯುವದಿಲ್ಲವಾಗಿ 'ಲೋಕಪಾವನ'ದಿಂದ ತಿಳಿಯುತ್ತದೆ. **ದೇಶೀಯರ ಸ್ವಂತ ಕೈಗಾರಿಕೆ, ವ್ಯಾಪಾರ ವಾಣಿಜ್ಯಗಳಿಗೆ ಉತ್ತೇಜನವಿಲ್ಲ. ಸಾರ್ವಜನಿಕ ಸಂಸ್ಥೆಗಳಲ್ಲಿ ಅನ್ಯದೇಶೀಯರ ಕೈಯೇ** ಕಂಡು ಬರುತ್ತದೆ. ಸರಕಾರೀ ನೌಕರಿಯಲ್ಲಿ ಸಹ ಅನ್ಯದೇಶೀಯರು ತುಂಬಿರುವರು. ಈ ಬಗೆಯಾಗಿ ತಮ್ಮ ಕಾಯದೇ ಮಂಡಲದ ರಾಜ್ಯದಾಡಳಿತದ ಅನುಭವವನ್ನು 'ಲೋಕಪಾವನ'ವು ಹೇಳುತ್ತಿದೆ. ಈ ಬಗ್ಗೆ ಸರಕಾರಕ್ಕೆ ದೂರುಹೇಳಿದರೆ "ರಾಜ್ಯದ ಸೂತ್ರಗಳು ನಿಮ್ಮಲ್ಲಿವೆ, ನೀವು ಕಾಯದೇ ಮಾಡತಕ್ಕವರು, ನಮ್ಮನ್ನೇಕೆ ಗೋಳಿಡುವಿರೆಂಬ ಒಣ್ಣಾದ ಮಾತುಗಳನ್ನಾಡಿ, ಸರಕಾರವು ನಮ್ಮ ಬೊಟ್ಟನ್ನು ನಮ್ಮ ಕಣ್ಣಲ್ಲಿಯೇ ಚುಚ್ಚುವದು. ಇವೆಲ್ಲವುಗಳಿಂದ ಪಾಶ್ಚಾತ್ಯರ ರಾಜ್ಯಪದ್ಧತಿಯು ನಮ್ಮ ನಾಡಿಗೆ ಸರಿಯಾಗಿಲ್ಲವೆನ್ನುವದನ್ನು ಜನರು ಸ್ಪಷ್ಟವಾಗಿ ತಿಳಿದುಕೊಳ್ಳತಕ್ಕದ್ದು.

ಕಾರವಾರ ಜಿಲ್ಹೆಯ ಕಾರವಾರ, ಅಂಕೋಲೆ, ಕುಮಠಾ, ಹಳಿಯಾಳ **ಕಡೆಗಳಲ್ಲಿ** ಹೆಣ್ಣುಹುಡುಗಿಯರಿಗೆ ಮರಾಟೀ ಶಾಲೆಗಳೂ, ಗಂಡುಹುಡುಗರಿಗೆ ಕನ್ನಡ ಶಾಲೆಗಳೂ, ಇವೆ. ಈ ಪದ್ಧತಿಯು ಯಾವ ದೃಷ್ಟಿಯಿಂದ ನ್ಯಾಯ ಪ್ರದವಾಗಿದೆಯೋ ನಮಗೆ ತಿಳಿಯದು. ಈ ಭಾಗಗಳಲ್ಲಿ ಮರಾಟಿ ಮಾತನಾಡುವವರ ಸಂಖ್ಯೆಯು ವಿಶೇಷವಾಗಿದ್ದರೆ ಗಂಡು ಹೆಣ್ಣುಗಳೆಂಬ ಭೇದವಿಲ್ಲದೇ ಎಲ್ಲ ಬಾಲಬಾಲಿಕೆಯರಿಗೆ ಮರಾಟಿ ಶಾಲೆಗಳಿರತಕ್ಕದ್ದೆಂದನ್ನು ಒಪ್ಪಿದರೂ ಒಪ್ಪಬಹುದು. ಆದರೆ ಮರಾಟೀ ನುಡಿಯನ್ನಾಡುವ ಜನರ ಸಂಖ್ಯೆಯು ತೀರ ಕಡಿಮೆಯಿದೆ. ಈ ಅಲ್ಪ ಸಂಖ್ಯಾಕರರು ತಾವು ನಿವಾಸಿಸುವ ನಾಡಿನ ನುಡಿಯನ್ನೇ ಸಾರ್ವಜನಿಕವಾಗಿ ಉಪಯೋಗಿಸುವದೇ ಸಯುಕ್ತಿಕವು. ತಮ್ಮ ಮಾತೃಭಾಷೆಯನ್ನು ಬೇಕಿದ್ದರೆ ಮನೆಯಲ್ಲಿ ಕಲಿಯಬಹುದು. ಇವರೆ ಮೂಲತಃ ಕಾರವಾರ ಜಿಲ್ಹೆಯಲ್ಲಿ ಮರಾಟೀ ಮಾತನಾಡುವ ಜನರೇಯಿಲ್ಲ. ಕೊಂಕಣೀ ಭಾಷೆಯನ್ನಾಡುವವರು ಅಷ್ಟೊಂದು ಮರಾಟಿಯ ಮೋಹವನ್ನು ಹಚ್ಚಿಕೊಂಡು ಕಾರವಾರ ಜಿಲ್ಹೆಯಲ್ಲಿ ಇಲ್ಲದ ಗಲಭೆಮಾಡುವರು. ಕೊಂಕಣೀ ನುಡಿಗೆ ಕನ್ನಡವೂ ಅಷ್ಟೇ. ಮರಾಟಿಯೂ ಅಷ್ಟೇ ಎರಡೂ ಭಾಷೆಗಳಲ್ಲಿಯ ಶಬ್ದ ವ್ಯಾಕರಣಗಳು ಅದರಲ್ಲಿವೆ. ಆದುದರಿಂದ ಕನ್ನಡನಾಡಿನಲ್ಲಿ ವಾಸವಾಗಿದ್ದ ಕೊಂಕಣೀ ಮಾತೃಭಾಷೆಯವರು ಕನ್ನಡಕ್ಕೆ ಮಾನಕೊಡತಕ್ಕದ್ದೇ ನ್ಯಾಯವಾದುದು. ಉತ್ತರ ಕನ್ನಡ ಜಿಲ್ಹೆಯೆಂದು ಪ್ರಖ್ಯಾತವೊಂದಿದ ಜಿಲ್ಹೆಯಲ್ಲಿ ಕನ್ನಡಕ್ಕೇನೇ ಪ್ರಾಶಸ್ತ್ಯವು ಬರುವಹಾಗೆ ಅಲ್ಲಿಯ ಜಿಲ್ಹಾಬೋರ್ಡಿನ ಕನ್ನಡ ಅಭಿಮಾನದ ಅಧ್ಯಕ್ಷರೂ ಸಭಾಸದರೂ ಪ್ರಯತ್ನಿಸಬೇಕಾಗಿ ಸೂಚಿಸುತ್ತೇವೆ.

ವಾಙ್ಮಯ ವಿಚಾರ

ಸ್ವೀಕಾರ.

(೧) **ಯುಗ್ಮ ಗಾನ ಪಾಂಡವ ರಾಜ್ಯವಿಯೋಗ** ಪುಸ್ತಿಕೆ ಸುಚ್ಚಾಸ್ತ್ರೀ ಜೋತಿಷದ ತನುಜ ಮುಳೆಯಾರ ಶ್ರೀವಿಷ್ಣುಮೂರ್ತಿ ಹೊಳ್ಳರವರು ಬರೆದಿದ್ದಾರೆ. ಬೆಲೆ ೪ ಆಣೆ. ಅಭಿಪ್ರಾಯ ಇನ್ನೊಮ್ಮೆ.

(೨) **ಪಾಕೆಟ್ ಕ್ಯಾಲೆಂಡರ ೧೯೨೭.** ಬೆಲೆ ೧ ಆಣೆ ಮೈಸೂರಿನ ಎಂ. ಎಸ್. ನಿಜಪ್ಪನವರಿಂದ ಪ್ರಕಟವಾಗಿದೆ. ೬೪ ಪುಟಗಳ ಚಿಕ್ಕದಾದ ಕ್ಯಾಲೆಂಡರು. ಸ್ಮರಣಾರ್ಥ ಟಿಪ್ಪಣೆಗಳನ್ನು ಬರೆಯಲು ಸ್ಥಳವನ್ನೂ ಇಟ್ಟಿದ್ದಾರೆ. ಮುದ್ರಣ ಮುದ್ದಾಗಿವೆ ಪ್ರಸ್ತುತದವರಿಗೆ ರೂಢಿಯಲ್ಲಿದ್ದ ಇಂಗ್ಲೀಷ ಅಂಕೆಗಳೂ ಇದರಲ್ಲಿವೆ.

(೩) ಇಂಗ್ಲೀಷ ಗೀತಗಳು ಶ್ರೀಕಂಠಯ್ಯನವರು ಬರೆದು ಬೆಂಗಳೂರು ಕರ್ನಾಟಕ ಸಂಘದವರಿಂದ ಪ್ರಕಟವಾಗಿವೆ. ವಿಮರ್ಶೆ ಮುಂದಿನ ಸಲ.

ವಿಮರ್ಶೆ

(೧) **ವೀರಶೈವ ಮತೋದ್ಧಾರಕ ಶ್ರೀಬಸವೇಶ್ವರ.** ಈ ಚರಿತ್ರೆಯನ್ನು ಮೂಲತಃ ಲಕ್ಷ್ಮಣ ರಘುನಾಥ ಭಿಡೆ. ಸಹಸ್ರಬುದ್ಧೆ ಶಾಸ್ತ್ರಿ ಹರಿಹರ, ಇವರು ಮಹಾರಾಷ್ಟ್ರ ಬಾಂಧವರಿಗೆ ಶ್ರೀಬಸವೇಶ್ವರನ ವಿಷಯವಾಗಿ, ನಿಜವಾದ ಜ್ಞಾನವಾಗಬೇಕೆಂದು 'ಚರಿತ್ರಮಯ ಜಗತ್' ಎಂಬ ಮರಾಠಿ ಮಾಸಿಕಪುಸ್ತಕದಲ್ಲಿ ಪ್ರಸಿದ್ಧಿಸಿದ್ದರು. ಆ ಲೇಖವು ಸಂಕ್ಷಿಪ್ತವಾಗಿಯೂ, ಸರಿಯಾಗಿಯೂ, ಪೂರ್ಣವಾಗಿಯೂ ಬರೆಯಲ್ಪಟ್ಟಿದೆ. ಶ್ರೀಯುತ ಭಿಡೆ ಇವರ ಮರಾಠೀ ಲೇಖವು ದೇ. ಭ. ಮಾದಿಜಪ್ಪ ಹರ್ಡೀಕರ ಇವರಿಂದ ರಚಿತವಾದ "ಬಸವ ಚರಿತ್ರೆ" ಎಂಬ ಕನ್ನಡ ಗ್ರಂಥದ ಆಧಾರದಿಂದ ಬರೆಯಲ್ಪಟ್ಟಿದೆ. 'ಅವರೂ ಆ ಚಿಕ್ಕ ಪುಸ್ತಕದ ...

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to-
N. K. Kulkarni. Agent Bagalkot.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಜುಸಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೭೪೪. ಮಿ. ಮಹಮ್ಮದ ಯುಸಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೨ ಮಿ. ಸೈಯದ್ ಜಹೂರಅಲಿ ಪಿ ಎ ಬಿ. ಟಿ. ಶಾಲಾಗಳ ಡಿವಿಜನಲ್ ಇನ್ಸ್ಪೆಕ್ಟರ್ ಔರಂಗಾಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ ನಂ. ೨೦೭೯ ಮಿ. ದೇವನ ವಾಸುದೇವನ ಸಂಬೂದ್ರಿಪಾದ ಜಮೀನದಾರ ಐಡಪಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲಿ ಬೀಡೀಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೭ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೫ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಗಿಡಗಳು ಮತ್ತು ಬೀಜಗಳು-

ತರಹೇವಾರಿ ಕಟ್ಟುಕಟ್ಟಿದ ಮಾವಿನ ಗಿಡಗಳು ಡಜನ್ ೧ ಕೆ ರೂ ೯-೦-೦

ನಿಂಬೆ, ಕಿತ್ತಳೆ, ಮಾದಳ, ಸೀವು, ದಾಳಿಂಬ
ಚಕ್ಕೋತ್ರೆ, ಪನ್ನೇರಳೆ, ದ್ರಾಕ್ಷಿ, ಪೇರ್, ಹಲಸು
ಗಿಡಗಳು ಡಜನ್ ೧ ಕ್ಕೆ ರೂ ೫-೦-೦
ಕಟ್ಟಿದ ಸಂಪಿಗೆ ನಾರಿಜಾಕ. ಪಾದರಿ ಗಿಡಗಳು ೧ಕ್ಕೆ ,, ೧-೦-೦
ರೋಜಾ ಗಿಡಗಳು ಡಜನ್ ೧ ಕ್ಕೆ ರೂ ೩ ರಿಂದ ೬, ೧೨
೨೫ ತರಹಾ ಹೂವಿನ ಬೀಜಗಳು ೨೫ ಪ್ಯಾಕೆಟ್ ರೂ ೫-೦-೦
೨೫ ತರಹಾ ಇಂಗ್ಲೀಷ ತರಕಾರಿ ಬೀಜಗಳು ೨೫ ಪ್ಯಾಕೆಟ್ ರೂ ೫-೦-೦
೨೫ ತರಹಾ ಇಂಡಿಯನ್ ತರಕಾರಿ ಬೀಜಗಳು ೨೫ ಪ್ಯಾಕೆಟ ರೂ ೩-೦-೦
೧೨ ತರಹಾ ಗಡ್ಡೆಗಳಿಂದಾಗತಕ್ಕ ಹೂವಿನ ಗಿಡಗಳ ಗಡ್ಡೆಗಳು ಡಜನ್ ೧ಕ್ಕೆ ರೂ ೬-೦-೦

ನಮ್ಮಲ್ಲಿ ಸಿಗುವ ಬೀಜ, ಗಿಡಗಳ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ.

ಎಸ್. ವಿ. ಸುಬ್ಬಯ್ಯಾ ಅಂಡ ಬ್ರದರ್ಸ ಲಾಲ್‌ಬಾಗ್ ರೋಡ್ ಬೆಂಗಳೂರುಸಿಟಿ

ಗವರ್ನಮೆಂಟಿನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕ ಶಫಾ ಅಥವಾ ಆರೋಗ್ಯ ಬಿಂದು

ಪ್ರಜಾಹಿತಮಿತ್ರ, ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ಸೀಸ ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗುತ್ತ ಬಂದವು. ಈವತ್ತಿನವರೆಗೆ ಎರಡು ಲಕ್ಷಗಳವರೆಗೆ ಬಾಟಲಿಗಳು ಖರ್ಚಾಗಿರುತ್ತವೆ. ಇದರ ಒಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು, ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾವುಗಳು:— ಕ್ಷಯರೋಗ, ಪ್ರಾಣಾಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಜಗೈ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ದಿಶ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೩ ರೂಪಾಯಿ ಆರ್ಡರ ಬಂದರೆ ಕಳಿಸಲಾಗುತ್ತದೆ ಅದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ ಪೋಸ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ.ಒಂದು ಎರಡುತಕ್ಕೊಂಡರೆ ಕಮಿಶನವಿಲ್ಲ ಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗೂಡ ಶಿಗುವದು ಈ ಔಷಧವು ಬೊಟ್ಟಿ ಹೊರಟರೆ ಶಿಲ್ಲಕ ಉಳಿದಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೂರ್ಣ ಜಿಲ್ಹಾ ಪಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ :- **ಎಚ್. ಎಮ್. ಮುಲ್ಲಾ.**

ಗಂಜಾದಲ ಅರ್ಕ ಶಫಾ ಹೆಡ್ ಆಫೀಸ ಪೋಷ್ಟ ಶಹಾಪೂರ [ಬೆಳಗಾವ]

ಹದಿನೈದು ರೂಪಾಯಿ ಆರು ಆಣೆದ
ಕೋರ್ಟಫಿ ಸ್ಟಾಂಪ

Presented on 9 8-26 Ex. 1
Sd. S. A. Mokashi
Clerk of the Court,

ಅಸಲ ನಂಬರು ೫೧೭ / ೧೯೨೬

ಬಾಗಲಕೋಟೆ ಫಸ್ಟ್ ಕ್ಲಾಸ ಸಬ್ ಜಡ್ಜ ಕೋರ್ಟಿಗೆ.

೧ ಗುರಸಿದ್ದಪ್ಪಾ ತಂದಿ ಶಿವಲಿಂಗಪ್ಪಾ ಬಾಡಗಿ ವಯಾ ೨೬ ಜಾತಿ ಲಿಂಗಾಯತ ಕಸಬು ಸೇವುಗಾರು ವ ವ್ಯವಹಾರ ಸಾಕೀನ ಬೀಳಗಿ ತಾಲ್ಲೂಕ ಬಾಗಲಕೋಟೆ. ೨ ಗುರಪ್ಪಾ ತಂದಿ ಶಿದ್ದಪ್ಪಾ ಬ್ಯಾಕೋ ವಯಾ ೩೩ ಜಾತಿ ಕಸಬು ಸಾಕೀನ ಸದರ	ವಾದಿ ಗಳು	

ವಿರುದ್ಧ

೧ ಶಿದ್ದಪ್ಪಾ ವಯಾ ೬೦ ೨ ಶಿವಲಿಂಗಪ್ಪಾ " ೫೦ ವದು ಸಾಕೀನ ಬೀಳಗಿ ತಾಲ್ಲೂಕ ಬಾಗಲಕೋಟೆ	ತಂದಿ ಶಿವಪ್ಪಾ ಘೋಟ್ಯೆ ಜಾತಿ ಲಿಂಗಾಯತ ಕಸಬು ಸೇವ್ಯು	ಪ್ರತಿ ವಾದಿ ಗಳು

ದಾವಾ ರುಪಾಯಿ
೨೦೫೯

ನಾನು ವಾದಿ ಗುರುಸಿದ್ದಪ್ಪಾ ತಂದಿ ಶಿವಲಿಂಗಪ್ಪಾ ಬಾಡಗಿ ವ ಗುರಪ್ಪಾ ತಂದಿ ಶಿದ್ದಪ್ಪಾ ಬ್ಯಾಕೋ ಸಾಕೀನ ಸದರ ವಾದಿಯರು ಕೋರ್ಟಿಗೆ ತಿಳಿಸೋದೇನಂದರೆ

೧ ಡಿ॥ ವಿಜಾಪೂರ ಸಬ್ ಡಿ॥ ಬಾಗಲಕೋಟೆ ತಾಲ್ಲೂಕ ಪೈಕಿ ಬೀಳಗಿ ಗ್ರಾಮದಲ್ಲಿ ಶ್ರೀ ಶಿದ್ದೇಶ್ವರ ದೇವರ ಗುಡಿ ಇರುತ್ತದೆ. ಆ ದೇವರ ರಥೋತ್ಸವ ದರಸಾಲ ಶ್ರಾವಣಮಾಸದ ಕಡೆ ಸೋಮವಾರ ದಿವ್ಸ ಪುರಾತನ ಲಾಗಾಯತ ಆಗತಾ ಬಂದಿರುತ್ತದೆ. ಈ ಉತ್ಸವವನ್ನು ಸದರ ಬೀಳಗಿ ಗ್ರಾಮದ ಲಿಂಗಾಯತರ ಜನರ ಪೈಕಿ ಬಣಜಿಗತನದವರು ವ ಸೇಕದಾರರು ಈ ಪ್ರಕಾರಾ ಎರಡು ಪಂಗಡದವರು ಮಾಡುವ ವಹಿವಾಟ ಪುರಾತನ ಲಾಗಾಯತ ಇರುತ್ತದೆ.

೨ ಸನ್ ೧೯೧೪ ಸಾಲಿನಲ್ಲಿ ಈ ಎರಡು ಪಕ್ಷದವರ ನಡುವೆ ನ್ಯಾಯಬಂದಿದ್ದು ಆ ನ್ಯಾಯ ಬೀಳಗಿ ಮಾಜಿಸ್ಟ್ರೇಟ ಕೋರ್ಟಿನಲ್ಲಿ ನಡಿದಿದ್ದು ಅಲ್ಲಿ ತಾ॥ ೩/೬/೧೯೧೪ ದಿವ್ಸ ಉಪಸಾತಿನಲ್ಲಿ ಉಭಯ ಪಕ್ಷದವರು ನಿಕಾಲಿಮಾಡಿಕೊಂಡ ಪ್ರಕಾರ ಅದರಂತೆ ಇವತ್ತಿನವರಿಗೆ ಸದರ ದೇವರ ಉತ್ಸವ ನಡಿತಾಬಂದದೆ.

೩ ಸದರ ದೇವರ ಉತ್ಸವದಲ್ಲಿ ಸೇಕದಾರ ಪಕ್ಷದವರು ಕರಡಿಮಜಲು ತೊಗೊಂಡು ಉತ್ಸವದಲ್ಲಿ ಬಾರ್ಸಲಿಕ್ಕೆ ಬರತಕ್ಕದ್ದು ಯಲ್ಲ ಉತ್ಸವದ ಕೆಲಸ ತೀರಿದನಂತರ ಸೇಕದಾರ ದೈವದವರಿಗೆ ಮರಿಯಾದೆ ಬಗ್ಗೆ ಐದುರುಪಾಯಿ ಬಣಜಿಗತನದ ದೈವದವರು ಕೊಡತಕ್ಕದ್ದು ಅಂತಾ ಗೊತ್ತಾಗಿರುತ್ತದೆ.

೪ ಪುರಾತನದ ವಹಿವಾಟ ಪ್ರಕಾರಾ ಮತ್ತು ಮೇಲೆ ವಿವರಿಸಿದಂತೆ ಮ್ಯಾಜಿಸ್ಟ್ರೇಟ ಸನ್ನಿಂದಾ ಗೊತ್ತಾದ ಪ್ರಕಾರಾ ಸೇಕದಾರ ದೈವದವರು ಸನ್ ೧೯೨೧ ನೇ ಇಸ್ವಿವರೆಗೆ ಕರಡಿಮಜಲು ಪೈಕಾ ಬಂದರು. ಸದರ ಕರಡಿ ಮಜಲು ಇಂಥವರನ್ನೇ ಇಂಥವರೇ ಹೊರಡಬೇಕು ಅಂತಾ ಏನೇನು ಗೊತ್ತಾಗಿಲ್ಲಾ ವ ವಹಿವಾಟಳಿಗ ಇಲ್ಲಾ ಆದರೆ ಸದರ ಸೇಕದಾರ ದೈವದವರು ಕರಡಿಮಜಲಿನ ಸಾಹಿತ್ಯ ತೊಗೊಂಡು ಸೇಕದಾರ ಪೇಟೆಯಲ್ಲಿ ಇರುವ ಬಸವಣ್ಣ ದೇವರ ಗುಡಿಯಕಟ್ಟೆಯಮೇಲೆ ಕೂಡ್ರತಕ್ಕದ್ದು ವ ಅಲ್ಲಿ ಇರಲಿಕ್ಕೆ ಬಣಜಿಗತನದ ದೈವದವರು ಸೇಕದಾರ ದೈವದವರನ್ನು ಕರಡಿಮಜಲು ವ ಕಳಸಾ ತೊಗೊಂಡು ಬರಲಿಕ್ಕೆ ಕರಿಯಲಿಕ್ಕೆ ಬಾಜಾ ಬಜಂತ್ರಿ ಸಹಿತಾಗಿ ಬಂದನಂತರ ಸೇಕದಾರ ದೈವದವರು ಕರಡಿ ತೊಗೊಂಡು ಹೋಗುವ ವಹಿವಾಟ ಪುರಾತನ ಲಾಗಾಯತ ಇರುತ್ತದೆ.

೫ ಈ ಪುರಾತನ ವಹಿವಾಟ ಪ್ರಕಾರಾ ಸನ್ ೧೯೨೧ ಸಾಲಿನವರೆಗೆ ಕರಡಿಮಜಲು ಹೊಡೆಯುವ ಉತ್ಸವ ನಡಿತಾಬಂತು ಆದರೆ ಐದುವರ್ಷದ ಹಿಂದೆ ೧೯೨೧ ನೇ ವರ್ಷದ ಲಾಗಾಯತ ಪ್ರತಿವಾದಿಗಳ ಸದರ ಕರಡಿಮಜಲು ತಮ್ಮ ಮನೆಯಿಂದಾನೆ ಹೊಡಿತಕ್ಕದ್ದು ಅಂತಾ ತಕರಾರತೆಗದ ಹಿಂದ ಸದರ ಕರಡಿಮಜಲು ಹೊಡೆಯುವ ಸಲುವಾಗಿ ಪೋಲೀಸರ ಕಡೆಗೆ ಅರ್ಜಿಮಾಡಲು ಗರ್ದಿ ಮಾಡಾವು ದು ಆಗುವ ಸಂಭವ ಇದ್ದಕಾರಣಾ ಕೆಲ್ಲ ನಡೆದು ಅಷ್ಟರಲ್ಲಿ ತಮ್ಮ ತಮ್ಮ ಪಕ್ಷ ನಿವಾರಣೆ ಮಾರ್ಗದಿಂದಾ ಸ್ಥಾಪನಾ ಮಾಡಿಕೊಳ್ಳುವ ಬಗ್ಗೆ ಮೆ॥ ಸಬ್ ಡಿ॥ ಮ್ಯಾಜಿಸ್ಟ್ರೇಟ ಸಾಹೇಬರು ಹೋದ ವರ್ಷದ ನೋಟೀಸಗಳಲ್ಲಿ ಹುಕುಂ ಮಾಡಿದರು.

೬ ಪ್ರತಿವಾದಿಗಳಿಗೆ ಸದರ ಕರಡಿ ಮಜಲಿನಲ್ಲಿ ತಮ್ಮ ಮನೆಯಿಂದಾನೇ ಹೊರಡಬೇಕು ಅಂಬೊ ಬಗ್ಗೆ ಯೇನು ಹಕ್ಕು ಇಲ್ಲಾ ಈ ಪ್ರಕಾರಾ ವಸ್ತುಸ್ಥಿತಿ ಇರತಿರಲಿಕ್ಕಾಗಿ ಪ್ರತಿವಾದಿಗಳ ತರಕತಿಯಿಂದಾ ಈಗ (೬) ವರ್ಷಗ ಲಾಗಾಯತ ಸದರ ಕರಡಿಮಜಲು ಹೊಡೆಯದು ಬಂದ ಇರುತ್ತದೆ. ಇದರಿಂದಾ ಸದರ ಸೇಕದಾರ ದೈವದವರಿಗೆ ದರಸಾಲ ಬಣಜಿಗತನದ ದೈವದವರಕಡಿಂದಾ ಮಾನ ಪಾನದ ಬಗ್ಗೆ ಅಂತಾ ಸಿಗತಕ್ಕ (೫) ರುಪಾಯಿ ಈಗ ಈ ಕರಡಿಮಜಲು ಬಂದ ಆದ ಲಾಗಾಯತ ಶಿಕ್ಕಿಲ್ಲಾ ಈರೀತಿ ಪ್ರತಿವಾದಿಗಳ ಗೈರ ಕೃತ್ಯದಿಂದಾ ಸದರ ಸೇಕದಾರ ದೈವದವರಿಗೆ ಲುಕಸಾನ ಆಗುತ್ತಿರೋದರಿಂದಾ ಈ ದಾವೆಮಾಡುವ ಕಾರಣವಾಗಿದೆ.

೭ ದಾವೇದ ಕಾರಣಾ ಈ ಕೋರ್ಟಿನ ಹದ್ದಿಯಲ್ಲಿ ಅಂದರೆ ಬಾಗಲಕೋಟೆ ತಾಲೂಕ ಪೈಕಿ ಬೀಳಗಿ ಗ್ರಾಮದಲ್ಲಿ ಸನ್ ೧೯೨೪ ಇಸ್ವಿಯ ಶ್ರಾವಣ ಮಾಸದಲ್ಲಿ ಮೊದಲು ದಿವ್ಸ ಘಡಿಯಾಯಿತು

೮ ದಾವೇದ ಆಕಾರ ಕೆಳಗ ಬರೆದಪ್ರಕಾರಾ ಇರುತ್ತದೆ.

ಶಿದ್ದೇಶ್ವರ ರಥೋತ್ಸವದಲ್ಲಿ ಮೇಲೆ ವಿವರಿಸಿದಂತೆ ಸೇಕದಾರ ದೈವದವರು ಕರಡಿಮಜಲು ತೊಗೊಂಡು ಹೋಗುವದು ಪುರಾತನ ಲಾಗಾಯತ ಹಕ್ಕು ಅದೆ ಅಂಬೋದು ಸ್ಥಾಪನಾಬಗ್ಗೆ	೨೦೦
ಸದರ ಉತ್ಸವದಲ್ಲಿ ಕರಡಿಮಜಲು ಸೇಕದಾರ ದೈವದವರು ಮೇಲೆ ವಿವರಿಸಿದಂತೆ ಬಸವಣ್ಣದೇವರ ಗುಡಿ ಕಟ್ಟಿ ಇಂದಾ ಹೈಯೊದಕ್ಕೆ ಪ್ರತಿವಾದಿಗಳು ಹರಕತ ಮಾಡಬಾರದು ಅಂತಾ ಅವರಿಗೆ ನಿರಂತರ ತಾಕೀದಿಬಗ್ಗೆ ಅರ್ಜಿ	೫

ಒಟ್ಟು ದಾವೇದ ರೂಪಾಯಿ ೨೦೫೦

೯ ಈ ಕೋರ್ಟಿನ ಅಧಿಕಾರಬಗ್ಗೆ ವಕೀಲಫೀಗೆ ರೂಪಾಯಿ ೨೦೫

ಷಾಂತರವು ಕನ್ನಡದಲ್ಲಿರುವುದು ಯೋಗ್ಯವೆಂದು ನನಗೆ ತೋರಿದ್ದರಿಂದ ಅದನ್ನು ಕನ್ನಡದಲ್ಲಿ ಭಾಷಾಂತರಿಸಿದೆನು.'' ಎಂಬುದಾಗಿ ಸ್ವತಃ ಈ ಪುಸ್ತಕಕಾರರಾದ ಚನ್ನಪ್ಪ ಫಕೀರಪ್ಪ ಇವರು ತಮ್ಮ ಪ್ರಸ್ತಾವನೆಯಲ್ಲಿ ಉಲ್ಲೇಖಿಸಿದ್ದಾರೆ.

ಈ ಚಿಕ್ಕ ಪುಸ್ತಕದಲ್ಲಿ ಶ್ರೀಬಸವೇಶ್ವರನು ಹುಟ್ಟಿದಂದಿನಿಂದ ಶಿವೈಕ್ಯನಾಗುವವರೆಗೆ ಸಂಕ್ಷಿಪ್ತ ಚರಿತ್ರೆಯು ಬರೆಯಲ್ಪಟ್ಟಿದೆ. ಶೈವಮತವು ಬಹು ಪುರಾತನ ಕಾಲದಲ್ಲಿದ್ದ ಸಂಗತಿಯೂ, ಶ್ರೀ ಬಸವೇಶ್ವರನ ಅನಂತ ಗುಣಗಳೂ, ೧೨ನೆಯ ಶತಮಾನದ ಬಸವೇಶ್ವರನ ಕಾಲದ ಆಗಿನ ಕರ್ನಾಟಕದ ರಾಜಕೀಯ ಸ್ಥಿತಿಯೂ ಈ ಪುಸ್ತಕದಲ್ಲಿ ಅಡಕವಾಗಿವೆ.

ಈ ಪುಸ್ತಕವನ್ನು ತಿಳಿಗನ್ನಡದಲ್ಲಿ ಬರೆದಿದ್ದಾರೆ. ಶ್ರೀಬಸವೇಶ್ವರನ ವಿಷಯವಾಗಿ, ತಿಳಿವಳಿಕೆಯುಳ್ಳ ಕನ್ನಡಿಗರು ತೀರ ವಿರಳ. ಎಲ್ಲ ವೀರಶೈವರಿಗಾದರೂ ಈ ಬಗ್ಗೆ ಹೆಚ್ಚಾಗಿ ಗೊತ್ತಿದೆಯೋ ಇಲ್ಲವೋ ಹೇಳಲಿಕ್ಕಾಗದು. ಶ್ರೀ ಬಸವೇಶ್ವರ ಮತ್ತು ಶ್ರೀ. ಚನ್ನಬಸವೇಶ್ವರ ಇವರ ವಿಷಯವನ್ನು ಎಷ್ಟೋ ಜನಗಳು ಅರಿತಿಲ್ಲ. ಕರ್ನಾಟಕದ ಮಹಾಪುರುಷನಾದ ಶ್ರೀಬಸವೇಶ್ವರನನ್ನು ಈ ಪುಸ್ತಕವು ಕೊಂಚಮಟ್ಟಿಗಾದರೂ ಕನ್ನಡಿಗರ ನೆನಪಿಗೆ ತಂದು ಕೊಡಬಹುದು. ಪುಸ್ತಕದ ಕಡೆಯ ಭಾಗಕ್ಕೆ ಶ್ರೀ ಬಸವೇಶ್ವರನ ೩೦ ವಚನಗಳನ್ನು ಕೊಟ್ಟಿರುತ್ತಾರೆ. ಮುದ್ರಣವು ಅಷ್ಟೊಂದು ಅಂದವಾಗಿಲ್ಲ. ತಪ್ಪುಗಳಾದರೂ ಅಲ್ಲಲ್ಲಿವೆ. ಬೆಲೆ ೩ ಆಣೆಗಳು. ಪುಸ್ತಕಗಳು ದೊರಕುವ ಸ್ಥಳವನ್ನು ತಿಳುಹಿಸಿಲ್ಲ. ಬೇಕಾದವರು ಚನ್ನಪ್ಪ ಫಕೀರಪ್ಪ ಪಾಟೀಲ ಅ ಮಾಸ್ತರ ಸಂಸ್ಥಾನ ಚಚಡಿ (ಮುರಗೋಡ ಮಹಾಲ) ಇವರ ಕಡೆಗೆ ಪತ್ರ ವ್ಯವಹಾರ ಮಾಡಬಹುದು

(೨) ಸ್ತ್ರೀವಿಷ ಪ್ರತಾಪ ತತ್ ಶಾಂತಿ ಎಂಬ ಪುಸ್ತಕವನ್ನು ಓದಿ ಬಹಳೇ ಸಂತೋಷವಾಯಿತು. ತಿಳಿದು ತಿಳಿದು ತೆಗ್ಗಿನಲ್ಲಿ ಬೀಳುತ್ತಿರುವ ಜನರಿಗೆ ಔಷಧಗಳನ್ನು ಹೇಳಿದ್ದಾರೆ. ಆತರದ ಜನರು ಸುಧಾರಿಸಿದರೆ ಅವರಮೇಲೆ ಉಪಕಾರಮಾಡಿದಂತಾಗುವದು. ಪರದೇಶೀಯ ಔಷಧಗಳನ್ನು ಬರೆಯುವದಕ್ಕಿಂತ ದೇಶೀ ಔಷಧಗಳನ್ನೇ ಹೆಚ್ಚು ಬರೆದಿದ್ದರೆ ಹಳ್ಳಿಯ ಜನರಿಗೆ ವಿಶೇಷ ಯೋಗ್ಯವಾಗುತ್ತಿತ್ತು. ತಮ್ಮ ಹೆಸರಿನ ಹಿಂದೆ ''ಡಾ'' ಅಂದರೆ ಡಾಕ್ಟರ ಎಂಬ ಉಪಪದವನ್ನು ಹಚ್ಚಿಕೊಂಡಿರುವ ವಿದ್ವಾನ್ ಚಂದ್ರಶೇಖರ ಶಾಸ್ತ್ರಿಗಳು ಆಯುರ್ವೇದದಲ್ಲಿ ಪಾರಂಗತರಿರುವರೆಂದು ಕೇಳುತ್ತೇವೆ. ಎರಡೂ ಶಾಸ್ತ್ರಗಳಲ್ಲಿ ನಿಷ್ಣಾತರಿದ್ದರೂ 'ಡಾ' ಎಂಬ ಶಬ್ದಕ್ಕೆ ಮೋಹ ಬೀಳದೆ ವೈದ್ಯರೆಂದು ಹೇಳಿಕೊಂಡಿದ್ದರೆ ಏನು ಕುಂದು ಬರುತ್ತಿತ್ತು? ಯುರೋಪಿಯ ಪದ್ಧತಿಯ ಸ್ಕೂಲ ಕಾಲೇಜಗಳಲ್ಲಿ ಕಲಿತವರಲ್ಲಿ ಕೂಡ 'ಡಾಕ್ಟರ' ಎಂದು ಯಾರು ಹಚ್ಚಬೇಕು? ಹಚ್ಚಬಾರದೆಂಬುದೇ ವಿವೇಚಿಸತಕ್ಕ ವಿಷಯವಿದೆ. ಆದರೆ ಇತ್ತೀಚೆ ಕರಿಯುಲಿ ಕಲಿಯದಿರಲಿ ಎಲ್ಲರೂ ಡಾಕ್ಟರರೆ! ಟಾಂಗಾ ಬಡಿಯುವ ನಾವೆಲ್ಲರೂ ರಾವಸಾಹೇಬ ಎಂದೆನಿಸಿಕೊಂಡಂತೆಯೇ ಸರಿ ಇರಲಿ. ವಿದ್ವಾನ್ ಶಾಸ್ತ್ರಿಗಳು ಕನ್ನಡದಲ್ಲಿ ಈತರದ ಪುಸ್ತಕವನ್ನು ಬರೆದಿದ್ದಕ್ಕಾಗಿ ನಾವು ಅವರನ್ನು ಅಭಿನಂದಿಸುತ್ತೇವೆ. ಸ್ತ್ರೀವಿಷ ಪ್ರತಾಪ ಎಂದು ಪುಸ್ತಕಕ್ಕೆ ಹೆಸರು ಇಟ್ಟಿರುವದರಿಂದ ಸಾಮಾನ್ಯ ಜನರು ಸ್ತ್ರೀಯರಿಗನೇ ಹೆಚ್ಚು ದೋಷಕೊಡುವರು. ಈ ವಿಷವು ಉತ್ಪನ್ನವಾಗಲು ಕೇವಲ ಸ್ತ್ರೀಯರೇ ಕಾರಣರಲ್ಲ; ಪುರುಷರು ನಿರ್ದೋಷಿಗಳೆಂದೂ ಶಾಸ್ತ್ರಿಗಳು ಎದೆ ತಟ್ಟಿ ಹೇಳುವರೇನು? ನವತರುಣರಿಗೆ ಉಪದೇಶದಿಂದುಂಟಾಗುವ ಭಯಂಕರ ಅನರ್ಥಗಳನ್ನು ಓದಿ ಅಂಜಿಯಾದರ ನೀತಿಯಿಂದ ನಡೆಯಲು ಈ ಚಿಕ್ಕ ಪುಸ್ತಕದ ಉಪಯೋಗವಾಗುವದು. ಬೆಲೆ ೦-೭-೦ ಆಣೆ ದೊರೆಯುವಸ್ಥಳ— ಡಾ. ಸ್ವಾಮಿ ಚಂದ್ರಶೇಖರ ಇಲ್ಲ

ವಿದ್ಯಾದಾಯಿನಿ

ಮೈಸೂರು ವಿದ್ಯಾಸಂಘದಿಂದ ಹೊರಡಿಸುವ ಮಾಸಪತ್ರಿಕೆ ವಾ. ಚ. ೧-೮-೦ ಮಾತ್ರ. ಕನ್ನಡ ಭಾಷೆಯ ಸೇವೆಯಲ್ಲಿ ಹೆಸರುವಾಸಿಯಾದ ಮ|| ಶ್ರೀ|| ಎಸ್ ರಾಮರಾಯರು ಇದನ್ನು ಮೊದಲು ಸುರುವು ಮಾಡಿದರು. ಆಮೇಲೆ ಮ|| ರಾ|| ಬಾಪು ಸುಬ್ಬರಾಯರು ಇದನ್ನು ತಮ್ಮ ಕೈಯಲ್ಲಿ ತೆಗೆದುಕೊಂಡರು. ಕಾಲನ ಕಡತದಿಂದ ಈ ಆಧಾರಸ್ತಂಭವು ಕಳಚಿ ಬೀಳಲು ಮ. ಬಿ. ಎಮ್. ಶ್ರೀಕಂಠಯ್ಯಾ ಮೊದಲಾದ ಐವರು ಮಹನೀಯರು ಅದಕ್ಕೆ ತಲೆಕೊಟ್ಟು ಪುನಃ ಸುರುವು ಮಾಡಿದ್ದಾರೆ. ಮೈಸೂರ ವಿದ್ಯಾಖಾತೆಯವರ ಪೂರ್ಣ ಬೆಂಬಲವಿದಕ್ಕಿರುವದರಿಂದ ಕನ್ನಡ ವೃತ್ತಪತ್ರಗಳಿಗೆ ಸಾಮಾನ್ಯವಾಗಿರುವ ಆಳಿಯುಕಿನ್ನುಗಳ ಬರಗಾಲವು ಇದಕ್ಕೆ ಬರಲಿಕ್ಕಿಲ್ಲವೆಂಬ ಭರವಸೆ.

ಇದರಲ್ಲಿ ಕಲಿಸುವವರಿಗೂ, ಕಲಿಯುವವರಿಗೂ ಸಂಬಂಧಪಟ್ಟ ಅನೇಕ ವಿಷಯಗಳು ಚರ್ಚಿಸಲ್ಪಡುವವು. ವಿಶೇಷತಃ ಶಿಕ್ಷಣದ ಸುಧಾರಿಸಿದ ವಿಚಾರಗಳೂ ಸಾಧನಗಳೂ ಇಲ್ಲಿ ಕಂಡುಬರುವವು. ಈ ಸಂದರ್ಭದಲ್ಲಿ ನಮಗಿರುವ ಅಂಜಿಕೆಯನ್ನು ಅಡಗಿಸಲಾರೆವು. ವಿದ್ಯೆಯ ವಿಚಾರ ಸಾಧನಗಳನ್ನು ನಮ್ಮ ವೈಶಿಷ್ಟ್ಯಕ್ಕೆ ಬಾಧೆ ಬರುವಂತೆ ಇಲ್ಲಿ ದುಡುಕ ಬಾರದೆಂದು ನಮ್ಮ ಸೂಚನೆಯು. ಭಾರತವು ಭಾವನೆಯ ಭೂಮಿಯು ಗುರು ಭಕ್ತಿಯೇ ನಮ್ಮ ಶಿಕ್ಷಣದ ತಳಹದಿಯು. ವಿಕಾರಗಳನ್ನಡಗಿಸಿ ವಿಚಾರಗಳನ್ನು ಹಬ್ಬಿಸಿ, ವಿವೇಕವನ್ನು ನೆಲೆಗೊಳಿಸಿ, ಬಾಲಕರನ್ನು ಮುಂದಿನ ಸರಳ ಜೀವನಕ್ಕಣಿಮಾಡುವದೇ ನಮ್ಮ ಆರ್ಯರ ಶಿಕ್ಷಣದ ಗುಟ್ಟು. ಇದಕ್ಕೆ ತಕ್ಕಂತೆ ಈ ಮಾಸಪತ್ರಿಕೆಯು ಮುಂದಡಿ ಇಡಬೇಕೆಂದು ಕೊಟ್ಟಿರುವೆವು. **ಶಾ ಮ.**

ಇಹವೃತ್ತ

ಬಾಗಲಕೋಟೆ ಇಲಕಲ್ಲ ಮೋಟಾರ ಸರ್ವೀಸಗಳ ಅವಾಹುತದ ಬಗ್ಗೆ ಈ ಒಳಗಡೆ 'ಕನ್ನಡಿಗ'ನಲ್ಲಿ ಪ್ರಕಟವಾಗಿದ್ದರೂ ಯೋಗ್ಯ ವ್ಯವಸ್ಥೆ ಆಗಿಲ್ಲ. ಪ್ರವಾಸಿಕರಿಗೆ ಹೆಚ್ಚಾಗಿ ತ್ರಾಸವೂ ಅನಾನುಕೂಲತೆಯೂ ಆಗುತ್ತಿರುವದು. ವೇಳೆಗೆ ಸರಿಯಾಗಿ ಮೋಟಾರಗಳು ಹೊರಡುವದಿಲ್ಲ ಮತ್ತು ಹೆಚ್ಚಾಗಿ ಜನರನ್ನು ಹಾಕುವದು ತಪ್ಪಿಲ್ಲ! ಸರಕಾರವು ಇತ್ತಕಡೆಗೆ ನೋಡಬಾರದೇ?

<u>ಮುಂಬೈ ಕರ್ನಾಟಕ.</u>

ಬೆಳಗಾವಿಯಲ್ಲಿ ಪೋಷ್ಟ ತಿಕೀಟಗಳನ್ನು ಅಪವ್ಯಯ ಮಾಡಿದ ಛಪ್ಪೀ ಪ್ರಕರಣದ ನಿಕಾಲೆಯಾಗಿದೆ. ೨೪ ಸಾವಿರ ರೂಪಾಯಿಗಳನ್ನು ಆಗಿನ ಕಾಲದ ಟೊಕ್ಕಸದ ಅಧಿಕಾರಿಗಳು ಕೂಡಿ ಕೊಡಬೇಕೆಂದು ಮುಂಬೈ ಸರಕಾರದ ಅಪ್ಪಣೆಯಾಗಿದೆ. ಶ್ರೀ. ಕುಂಬಳೆ ೫೦೦೦; ಹಿರೇಮಠ ೪೦೦೦; ರಾ. ಸಾ. ಗಜೇಂದ್ರಗಡಕರ ೧೮೦೦; ಶ್ರೀ. ಗೋಖಲೆ ೧೧೦೦; ಕಲಕರ್ಣಿ ೧೨೦೦; ದೇವರಾವ ಭಾಸ್ಕರ ೬೦೦ ಮಾತು ಬೇರೆಕೆಲವರಿಂದ ಬಲ್ಲರ ಹಣ ವಸೂಲ ಮಾಡಬೇಕಾಗಿ. ಅಪ್ಪಣೆಯೂ ಶ್ರೀಗೋಖಲೆಯವರು ಪೆನ್ಶನ್ ತೆಗೆದು ಕೊಳ್ಳಬೇಕೆಂದೂ ತೀರ್ಮಾನವಾಗಿದೆ.

ಉತ್ತರ ಹಿಂದುಸ್ಥಾನದಲ್ಲಿಯ
ಪುಣ್ಯಕ್ಷೇತ್ರಗಳ ಪರಿಚಯ.
(ಲೇಖಾಂಕ ೧೧)

ಶ್ರೀಕ್ಷೇತ್ರ ಕಾಶಿಯಿಂದ ನಾವು ಶ್ರೀಕ್ಷೇತ್ರ ಗಯಾಕ್ಕೆ ಹೋದೆವು ಕಾಶಿಯಿಂದ ಗಯಾ ೧೩೭ ಮೈಲಿದೆ ಗಯಾದಲ್ಲಿ ಸಹ ಕಾಶಿಯಂತೆ ಮನೆಗಳು ಹಳೇತರವವು. ಹಳೇ ಪಟ್ಟಣದಲ್ಲಿ ಸಣ್ಣ ಸಣ್ಣ ಸಂದಿಗಳಿವೆ ಹೊಸ ಭಾಗದಲ್ಲಿ ಮಾತ್ರ ಬೀದಿಗಳು ವಿಶಾಲವಾಗಿವೆ. ಮನೆಗಳೂ ಹೊಸ ಮಾದರಿಯವಿವೆ. ಗಯಾದಲ್ಲಿ ಗಯಾವಾಳರ ಪ್ರತಾಪವು ಅಷ್ಟಿಷ್ಟೆಂದು ಹೇಳುವ ಹಾಗಿಲ್ಲ. ಇವರಿಗೆ ಎಲ್ಲ ಜನರೂ ಊರಲ್ಲಿ ಬೆದರುತ್ತಾರೆ. ಸರಕಾರೀ ಅಮಲದಾರರು ಕೂಡ ಇವರ ವಿರುದ್ಧವಾಗಿ ಹೋಗುವಷ್ಟು ಧೈರ್ಯವಿಲ್ಲ ಮುಸಲ್ಮಾನರು ಮಸೀದೆಯ ಮುಂದೆ ವಾದ್ಯ ಬಾರಿಸುವ ಬಗ್ಗೆ ಭಾರತಖಂಡದಲ್ಲಿ ಎಲ್ಲಿ ನೋಡಿದರೂ ನ್ಯಾಯ ತೆಗೆಯುವರು. ಆದರೆ ಇಲ್ಲಿ ಆ ಬಗ್ಗೆ ಮಾತನ್ನೇ ಎತ್ತುವದಿಲ್ಲ. ಈ ಗಯಾವಾಳರು ಒಳ್ಳೇ ಸಶಕ್ತರಾದ ಭಯ್ಯಾಜನರನ್ನು ಸಾಕುತ್ತಾರೆ. ಯಾವಾಗಲೂ ಈ ಭಯ್ಯಾಜನರು ಕೈಯಲ್ಲಿ "ಲಟ್ಠ"ಯನ್ನು ಹಿಡಿದುಕೊಂಡು ಗುಂಪು ಗುಂಪಾಗಿ ತಿರುಗುವರು. ಇಂತಹ ೮-೧೦ ಭಯ್ಯಾಜನರ ಗುಂಪು ಕಣ್ಣಿಗೆ ಬಿದ್ದೊಡನೇ ಯಾತ್ರಿಕರು ಬೆದರಿಹೋಗುವರು. ಮೊದಲಿಗೆ ಈ ಭಯ್ಯಾಜನರ ಸಹಾಯದಿಂದ ಗಯಾವಾಳರು ಯಾತ್ರಿಕರನ್ನು ಬಹು ರೀತಿಯಾಗಿ ಸುಲಿಯುತ್ತಿದ್ದಾರಂತೆ! ಆದರೆ ಈಬಗ್ಗೆ ಯಾತ್ರಿಕರಲ್ಲಿ ಅತ್ಯಂತ ಭೀತಿಯಾದ್ದರಿಂದ, ಗಯಾವಾಳರ ಉತ್ಪನ್ನವೂ ಕಡಿಮೆಯಾಯಿತಂತೆ! ಈಗೀಗ ಯಾತ್ರಿಕರಿಗೆ ಅಷ್ಟೊಂದು ತೊಂದರೆಕೊಡುವದಿಲ್ಲ. ಈ ಗಯಾವಾಳರು ಬಹು ಶ್ರೀಮಂತರು. ಆನೆ ಕುದುರೆ, ಮೋಟಾರುಗಳನ್ನು ಅನೇಕರು ಇಟ್ಟಿರುವರು ಈ ಜನರು ಹೆಚ್ಚಾಗಿ ಕಲಿತವರಲ್ಲ. ಅಷ್ಟರಿಂದ ಪಾಶ್ಚಾತ್ಯರ ಐಷ ಆರಾಮಿಯ ಸೌಕರ್ಯಗಳನ್ನೆಲ್ಲ ತಮ್ಮಲ್ಲಿ ಬಳಸಾಡಿಕೊಂಡಿದ್ದರೂ ಅವರ ಸಂಸ್ಕೃತಿಯ ಉತ್ತಮ ಲಕ್ಷಣಗಳಕಡೆಗೆ ಗಯಾವಾಳರ ಲಕ್ಷವು ಹೋಗಿಲ್ಲ ಗಯಾವಾಳರು ಬ್ರಹ್ಮನ ಮಾನಸ ಪುತ್ರರೆಂಬ ಮತ್ತು ಪಿತೃಗಳಿಗೆ ಮುಕ್ತಿ ಕೊಡುವ ಅಧಿಕಾರವು ಇವರಲ್ಲಿದೆಯೆಂಬ ಭಾವನೆಯು ಎಲ್ಲ ಹಿಂದೂ ಜನರಲ್ಲಿ ಇದ್ದುದರಿಂದ ನಾವು ಈ ಬಗ್ಗೆ ಹೆಚ್ಚಾಗಿ ಬರೆಯೆವು ಯಾತ್ರಿಕರು ಗಯಾವಾಳರನ್ನು ಮನೆಗೆ ಊಟಕ್ಕೆ ಕರೆದು ಅವರನ್ನು ಸಂತುಷ್ಟ ಮಾಡುವರು ಅವರಿಗೆ ಸಲ್ಲಬೇಕಾದ ಬಾಬುಗಳನ್ನು ಆಪಿರಿಸುವರು

ಗಯಾದಲ್ಲಿ ಕಲ್ಲಿನ ಸಾಮಾನುಗಳು ಅಗ್ಗವಾಗಿಯೂ ಹೇರಳವಾಗಿಯೂ ದೊರೆಯುತ್ತವೆ. ದೇವರ ಮೂರ್ತಿಗಳು ಬೇರೆಬೇರೆ ಕಲ್ಲಿನಲ್ಲಿ ಕೆತ್ತಲ್ಪಡುತ್ತವೆ. ನಮ್ಮಲ್ಲಿಯ ಶಿಲ್ಲೀಕೇರಿ ಕಲ್ಲಿನಂತೆ ಕರೇ ಹೊಳಪುಳ್ಳ ಕಲ್ಲುಗಳು ಗಯಾದಲ್ಲಿದ್ದವು.

ಗಯಾದಲ್ಲಿ ಮೂರು ಬಗೆಯ ವಿಶೇಷಯಾತ್ರೆಯ ಅವಧಿಗಳಿವೆ. ಸಂಕ್ರಮಣದಿಂದ ಚೈತ್ರ ಬಹುಳ ಅಮಾವಾಸ್ಯೆಯವರೆಗೆ (೧) ಮಧುಗಯಾ. ಭಾದ್ರಪದದಲ್ಲಿ ಪಿತೃಪಕ್ಷದಲ್ಲಿ (೨) ಪಿತೃಗಯಾ. ಮಕರಸಂಕ್ರಾಂತಿ ಧನುರ್ಮಾಸದಲ್ಲಿ ಧನುರ್ಗಯಾ. ಪಿತೃಗಯಾ ಮಾಡುವದಕ್ಕಾಗಿ ಯಾತ್ರಿಕರು ಹೆಚ್ಚಾಗಿ ಪಿತೃಪಕ್ಷದಲ್ಲಿ ಗಯಾಕ್ಕೆ ಹೋಗುವರು ಆಗ್ಗೆ ನೂರಾರು ಗಾಡಿ ಯಾತ್ರಿಕರು ಅಲ್ಲಿ ನೆರೆಯುವದರಿಂದ ಊರಲ್ಲಿ ರೋಗರುಜಿನಗಳು ಉತ್ಪನ್ನ ವಾಗುವವಂತೆ ಆದ್ದರಿಂದ ದಕ್ಷಿಣಹಿಂದುಸ್ಥಾನದ ಜನರು ಪಿತೃಗಯಾ ಮಾಡುವದು ಅಪರೂಪ. ಗಯಾದಲ್ಲಿ ವಿಷ್ಣುಪಾದ ದೇವಾಲಯದ ಸಮೀಪದಲ್ಲಿಯೇ ಧರ್ಮಶಾಲೆಗಳಿವೆ. ಗಯಾವಾಳರ ಸ್ವಂತ ಮನೆಗಳೂಯಿವೆ. ಗುಡಿಯ ಹತ್ತರ ಇಳಿಯುವದೇ ಯಾತ್ರಿಕರಿಗೆ ಅನುಕೂಲ ಅಹಿಲ್ಯಾದೇವಿಯ ಧರ್ಮಶಾಲೆಯು ಇಲ್ಲಿಯೂ ಇದೆ ಗಯಾದಲ್ಲಿ ಸಹ ಕಾಶಿಯಂತೆ ಎಲ್ಲಿ ನೋಡಿದರೂ ಹೊಲಸು ಬಹಳ. ಮುನಸಿಪಾಲ್ಟಿಯವರು ಇತ್ತ ಲಕ್ಷಕೊಡುವದೇಯಿಲ್ಲ.

ಕರ್ನಾಟಕವೂ ವೀರಶೈವಸೇನಾಬಲವೂ

ವೀರಶೈವರು ಸ್ಥಾನಿಕ ಸೈನ್ಯದಲ್ಲಿ ಶಿಕ್ಷಣಪಡೆಯಲು ತಕ್ಕ ಪಾವನ ಸಮಯವು ಈಗ ಪ್ರಾಪ್ತವಾಗಿದೆ. ವೀರಶೈವರಲ್ಲಿ ಸಂಘಟನೆಯುಂಟ, ಐಕ್ಯವುಂಟು, ಬಲವುಂಟು, ಈ ಬಲವು ಇನ್ನೂ ಬೆಳೆಯಾಗುವದು ಅತ್ಯಾವಶ್ಯಕವು. ಆದುದರಿಂದ ಸ್ಥಾನಿಕ ಸೈನ್ಯದಲ್ಲಿ ಅವರು ಸೇರುವದು ಸಮಯೋಚಿತವಾದುದು.

ಮನುಷ್ಯನು ಹುಟ್ಟಿದುದು ಉಂಡುತಿಂದು ಸಾಯುವದಕ್ಕಲ್ಲ. ಜಗತ್ತಿನಲ್ಲಿಯ ವಿಶಿಷ್ಟಕಾರ್ಯವನ್ನು ಜರಗಿಸುವದಕ್ಕೆ. ತನ್ನನ್ನು ಬಲಪಡಿಸಿಕೊಂಡು ತನ್ನ ಸಮಾಜದ ಮತ್ತು ನಾಡಿನ ಸೇವೆ ಮಾಡುವದೇ ಆತನ ಜನ್ಮದ ಸಾಫಲ್ಯವು. ಲಷ್ಕರೀ ಶಿಕ್ಷಣವು ಸಮಾಜಸೇವೆಗೆ—ರಾಷ್ಟ್ರಸೇವೆಗೆ- ಅಂಗ ಭೂತವಾದುದು. ಇದು ತಾನಾಗಿಯೇ ನಡೆದು ಬಂದ ಲಕ್ಷ್ಮಿಯಂತಿದೆ. ಆದುದರಿಂದ ವೀರಶೈವರು ಅವಳ ತಿರಸ್ಕಾರವನ್ನು ಮಾಡತಕ್ಕದ್ದಲ್ಲ. ಅದನ್ನು ಸ್ವೀಕರಿಸಿದರೆ ಲಕ್ಷ್ಮಿಯು ಮನೆಯಲ್ಲಿ ನಲಿಯುವಳು. ನಾಡನ್ನು ಸುಖದಲ್ಲಿ ನಲಿದಾಡಿಸುವಳು. ಸರಕಾರದವರು ಒದಗಿಸಿಕೊಟ್ಟ ಈ ಸಂಧಿಯನ್ನು ಕರ್ನಾಟಕದ ಭಾವೀ ಆಧಾರ ಸ್ಥಂಬಗಳೆಂದೆನಿಸಿಕೊಳ್ಳುವ ತರುಣರು ಕಳೆಯಕೊಳ್ಳದೆ ಅದರಿಂದ ತಮ್ಮ ಲಾಭವನ್ನು ಮಾಡಿಕೊಳ್ಳುವರೆಂದು ನನ್ನ ನಂಬಿಗೆ. ನನಗೆ ಈ ಶಿಕ್ಷಣದ ಅನುಭವವಿದೆ. ಅದರಿಂದಾಗುವ ಲಾಭಗಳು ನನಗೆ ಮನದಟ್ಟಾಗಿವೆ. ಆದ್ದರಿಂದ ನಾನು ವೀರಶೈವರಿಗೆ ಬಿನ್ನಯಿಸುತ್ತಲಿದ್ದೇನೆ. ಶಿವಾಜಿಯು ಯುದ್ಧಕಲಾ ನಿಪುಣನಿದ್ದುದರಿಂದಲೇ ಸ್ವರಾಜ್ಯವನ್ನೂ ಸ್ವಾತಂತ್ರ್ಯವನ್ನೂ ಸಂಪಾದಿಸಿದನು. ಸರಕಾರದ ಅಧಿಕಾರಸ್ಥಾನಗಳಲ್ಲಿಯೂ ಸೈನದಲ್ಲಿ ಶಿಕ್ಷಣಹೊಂದಿದವರಿಗೆ ಸ್ಥಾನವಿದೆ. ಈ ಬಗ್ಗೆ ಗೊತ್ತುವಳಿಗಳಾದರೂ ಆಗಿವೆ. ಸೈನ್ಯಶಿಕ್ಷಣವು ಯುದ್ಧಕಲಾ ನಿಪುಣತೆಯ ಸಾಧನ. ಸ್ವಸಂರಕ್ಷಣೆಯ ಮಾರ್ಗ. ಸಮಾಜವನ್ನು ಕಾಯುವ ಬಿಸ್ತ. ನಾಡಿನ ಹಿತವನ್ನೆಸಗುವದಾರಿ. ಶ್ರೀ ಬಸವನ ಕಾಲದ ಲಿಂಗಾಯತರ ವೀರಶ್ರೀಯನ್ನೂ, ಕೊಡಗಿನ ರಾಜರ ಶೌರ್ಯದ ಕೃತಿಗಳನ್ನೂ, ಮಹಿಳೆಯಾದ ಕಿತ್ತೂರ ಚೆನ್ನಮ್ಮನ ಪೊಸ್ನೆಮೊಕ್ಷ ಆಗಿಹೋದ ಲಿಂಗಾಯತರ ಕೆಚ್ಚೆದೆಯ ಪರಾಕ್ರಮವನ್ನೂ, ನೆನೆದು, ಲಿಂಗಾಯತರೆಲ್ಲರೂ ಶೌರ್ಯ ಪ್ರವೃತ್ತರಾಗಬೇಕು. ಸೈನ್ಯ ಶಿಕ್ಷಣವನ್ನು ಪಡೆದು ಕೀರ್ತಿವಂತರಾಗಬೇಕು.

ಅಡಿಯ ಮುಂದಿಡೆ ಸ್ವರ್ಗ ಅಡಿಯ ಹಿಂದಿಡೆ... ಇತ್ಯಾದಿ

ಬಸಪ್ಪಾ ಬ ಳಿಕಾಯಿ ಬಾಗಲಕೋಟೆ

ನಿರ್ಮಾಣ ಕರ್ನಾಟಕ

ಶ್ರೀ. ರಾಘವೇಂದ್ರರಾಯರು ಬರೆದ 'ರಿಬಿಲ್ಡಿಂಗ್ ಕರ್ನಾಟಕ' ಎಂಬ ಪುಸ್ತಕವು ಸರಕಾರದಿಂದ ಈಗ ಪ್ರಕಟಿಸಲ್ಪಟ್ಟಿದೆ

ರಂಗಭೂಮಿಯ ಸುಧಾರಣೆ. [೨]

ನಟವರ್ಗದಲ್ಲಿ ಸ್ತ್ರೀಯರು ಬೇಕೆ?

ಹಿಂದಿನ ಲೇಖಾಂಕದಲ್ಲಿ ನಾವು ರಂಗಭೂಮಿಯ ಸುಧಾರಣೆಯು ಯಾರಿಂದಲಾಗಬೇಕು ಎಂಬ ದರಕುರಿತು ಹೇಳಿದೆವು. ಈಗ, ರಂಗಭೂಮಿಯಲ್ಲಿ ಸ್ತ್ರೀಯರು ಇರಬೇಕೆ ಬೇಡವೆ ಎಂಬ ಪ್ರಶ್ನೆಯನ್ನು ಚರ್ಚಿಸುವೆವು. ಇತ್ತೀಚಗೆ ಶ್ರೀ ಹರೀಂದ್ರನಾಥ ಚಟ್ಟೋಪಾಧ್ಯಾಯರು ಮುಂಬಯಿಯಲ್ಲಿ "ರಂಗಭೂಮಿಯ" ಸುಧಾರಣೆಯ ಕುರಿತು ಮಾತಾಡುವಾಗ 'ರಂಗಭೂಮಿಯಲ್ಲಿ ಸ್ತ್ರೀ ಭೂಮಿಕೆಯನ್ನು ಪುರುಷರು ವಹಿಸುವದೆಂದರೆ ಅದಕ್ಕೂ ಮಿಗಿಲೆನಿಸಿದ ಮೂರ್ಖತನವಿಲ್ಲ' ವೆಂಬರ್ಥವನ್ನು ಸೂಚಿಸಿದರು. ಪುರುಷನು ಎಷ್ಟು ಯತ್ನಿಸಿದರೂ ಸ್ತ್ರೀ ಸ್ವರೂಪದ ಚಿತ್ರವನ್ನು ಕೊಡಲಾರನೆಂದೇ.? ಆದರೆ, ಯತ್ನಿಸಿದರೆ ಈ ನುಡಿಯನ್ನು ಸುಳ್ಳಾಗಿಮಾಡಲು ಶಕ್ಯವಿದೆಯೆಂಬುದು ಮುಂಬಯಿಯ ಶ್ರೀ ಬಾಲಗಂಧರ್ವರಿಂದ ತೋರಿಸಲ್ಪಟ್ಟಿದೆ. ಹಾಗೆಯೇ, ಸ್ತ್ರೀ ಭೂಮಿಕೆಯನ್ನು ವಹಿಸುವ ಪುರುಷ ನಟರು ಅನೇಕರು ನಮ್ಮಲ್ಲಿರುವರು ಇಂದು ಕರ್ನಾಟಕ ರಂಗಭೂಮಿಯಲ್ಲಿ ಅಂತಹ ನಟರ ಕೊರತೆಯನ್ನು ನಾವು ವಿಶೇಷವಾಗಿ ಕಂಡರೂ, ಅದು ಅಸಾಧ್ಯವೆಂದಲ್ಲ ಪುರುಷನು ಸ್ತ್ರೀ ಭೂಮಿಕೆಯನ್ನು ವಹಿಸಿದರೆ ತನ್ನ ಪುರುಷಸ್ವಭಾವವನ್ನು ಕ್ರಮೇಣ ಮರೆಯುವನು, ಇದು ಜನಾಂಗದ ಪುರುಷತ್ವದ ಮೇಲೆ ಪರಿಣಾಮಕಾರಿಯಾಗದೇನು ಎಂದು. ಅಂತಹ ನಟಸ್ವಭಾವವು ಸ್ತ್ರೀತ್ವವನ್ನು ಹೊಂದಿ ಅದು ಒಂದೆರಡು ಕುಂಟುಂಬಗಳ ಮೇಲೆ ಪರಿಣಾಮಕಾರಿಯಾಗಲಾರದು ಎಂದು ಹೇಳುವುದು ಕಠಿಣ. ಆದರೆ ನಾವು ಸ್ತ್ರೀಯರೇ— ಸ್ತ್ರೀಭೂಮಿಕೆಯನ್ನು ವಹಿಸ ವಹಾಗೆ ಯತ್ನಮಾಡುವುದರಲ್ಲಿರುವ ಗಂಡಾಂತರಗಳನ್ನೆಣಿಸಿಕೊಂಡರೆ, ಪುರುಷರು ಸ್ತ್ರೀ ಭೂಮಿಕೆಯನ್ನು ವಹಿಸುವದನ್ನು ಬಯಸಬಹುದು; ಮಾತ್ರವಲ್ಲ. ನಟನು, ತಾನು ಅನೇಕತರದ ಸ್ವಭಾವಚಿತ್ರವನ್ನು ವಹಿಸಬೇಕಾಗುವದರಿಂದ ಅಂತು, ನಟನೆಯಿಂದ ಸ್ವಭಾವ ಪರ್ಯಟನೆಯನ್ನು ಹೊಂದುವದಾದರೆ, ಪುರುಷನಾಗಿದ್ದರೂ ಪುರುಷ ಭೂಮಿಕೆಯ ಅನೇಕ ಸ್ವರೂಪಗಳಿಂದ ಪರ್ಯಟನವನ್ನು ಹೊಂದಲೇಬೇಕಾಗುವದು. ಇದು ಎಷ್ಟರಮಟ್ಟಿಗೆ ಅವನ ಸ್ವಭಾವ ಪರಿವರ್ತನವನ್ನು ಹೊಂದಿಸುವದೆಂದು ನಾವೀಗಲೇ ಹೇಳಲಾರೆವು ಉದಾ:- ರಾವಣನ ಭೂಮಿಕೆಯನ್ನು 'ರಾಮಾಯಣ' ದಲ್ಲಿ ಒಬ್ಬನು ಹೊರಲೇಬೇಕು. ಆ ನಟನೆಯ ದೆಸೆಯಿಂದ ನಟನ ಸ್ವಭಾವವೂ ರಾವಣನಂತಾಗುವುದೇ ಎಂದು. 'ಸೋಗು' ಕೆಲವು ಮಟ್ಟಿಗೆ ಅವನ ಸ್ವಭಾವದಲ್ಲಿ ಪಲ್ಲಟವನ್ನುಂಟು ಮಾಡಬಹುದು. ಆದರೆ, ನಾಟಕವು ಬೇಕಾದರೆ ಹಾಗೆ ಮಾಡದಿರಲು ನಿರ್ವಾಹವಿಲ್ಲ. ಕಾರಣ, ಎಲ್ಲರು ಉತ್ತಮ ಸ್ವಭಾವದ 'ರಾಮನ' ಭೂಮಿಕೆಯನ್ನು ವಹಿಸಿದರಾಗುವುದೇ? ಹಾಗೆಯೇ ಸ್ತ್ರೀಭೂಮಿಕೆಯ ಕುರಿತು ತಿಳಿಯಬೇಕಾಗುವದು.

'ಸ್ತ್ರೀ' ಭೂಮಿಕೆಯನ್ನು ಪುರುಷರು ವಹಿಸುವ ಕೊರತೆಯು ನಾಶವಾಗಬೇಕಾದರೆ ಅದನ್ನು ಸ್ತ್ರೀಯರೇ ವಹಿಸಬೇಕೆಂದಂತಾಯಿತು. ಇದು ಬಯಸತಕ್ಕ ವಿಷಯವೆ ? ಸ್ತ್ರೀ ಪುರುಷರು ಜತೆಯಲ್ಲಿ ಅಂಜಿತನವಿಲ್ಲದಿರಂತೆ ಅನುಕೃತಿ ಸಹಕಾರರಾಗಿ ಪ್ರಪಂಚ ವ್ಯವಹಾರಗಳಲ್ಲಿ ಒದಗುವ ಸುದಿನವನ್ನು ಪ್ರತಿಯೊಬ್ಬನು ಬಯಸತಕ್ಕದ್ದಿರುತ್ತದೆ ಸ್ತ್ರೀ ಪುರುಷ ಸಹ ವಿದ್ಯಾಭ್ಯಾಸದ ಕುರಿತಾಗಲಿ, ಸಮಾಜದಲ್ಲಿ ವರ್ತನೆಯ ಕುರಿತಾಗಲಿ ಹಾಗಿಯೇ ಇದೆ. ಆದರೆ ಇಂದಿನ ವಾತಾವರಣವು ಅಂತಹ ವ್ಯವಹಾರಕ್ಕೆ ಅನುಕೂಲವಾಗಿದೆಯೇ ಎಂಬ ವಿಚಾರವನ್ನು ನಾವು ಮೊದಲು ನೋಡಬೇಕು. ಸಹ ವಿದ್ಯಾಭ್ಯಾಸದ ಕುರಿತು ನಾವು ಮಹಾತ್ಮಾ ಗಾಂಧೀಜಿಯವರನ್ನು ಪ್ರಶ್ನಿಸಿದಾಗ 'ಅದು ಮಾದರಿಯ ಸ್ಥಿತಿಯನ್ನು ಬಯಸತಕ್ಕದ್ದಿದೆ- ಈಗ ನಾನು ಅದರ ಪ್ರಚಾರದ ಪರೀಕ್ಷೆಯನ್ನು ಮಾಡುತ್ತಿರುವೆನಾದರೂ- ಬಹಳ ಎಚ್ಚರದಿಂದ ನನ್ನ ಪರೀಕ್ಷೆಯನ್ನು ಮಾಡಬೇಕೆಂದು ನನಗೆ ಪ್ರತಿಹೆಜ್ಜೆಗೂ ಅನುಭವವಾಗುವದು' ಎಂದರು. ರಂಗಭೂಮಿಯ ಕುರಿತು ಇದೇ ಉದಾಹರಣೆಯನ್ನಿಡುವೆವು. ಈಗ ಆ ಮಾದರಿಯ ಪರಿಸ್ಥಿತಿಯಲ್ಲಿ ಸಮಾಜವು ಬಂದಿಲ್ಲ. ಇಲ್ಲವೆ ಮಹಾತ್ಮರಂಥವರು ನಮ್ಮಲ್ಲಿ ಪರೀಕ್ಷೆಗೆ ಮುಂದುವರಿಯುವಂತೆಯೂ ಇಲ್ಲ. ಕೆಲವರು ಪಾಶ್ಚಾತ್ಯ ದೇಶಗಳಲ್ಲಿ ಸುಳಿದು ಅಲ್ಲಿನ ಸ್ತ್ರೀ ಪುರುಷ ವ್ಯವಹಾರವನ್ನು ಕಂಡು ಅದನ್ನು ಒಮ್ಮೆಗೇ ಹಿಂದೀಯರ ನಡಾವಳಿಯಲ್ಲಿ ತುಂಬಿಸಬೇಕೆಂದು ಬಗೆದಮಾತ್ರಕ್ಕೆ ನಾವು ಒಪ್ಪಲಾರೆವು.

ನಾಟಕ ಶಿರೋಮಣಿ ಕೈ॥ ಕೋಲಾಚಾಲಮ್ ಶ್ರೀನಿವಾಸ ರಾಯರು ತಮ್ಮ "ಜಗತ್ತಿನ ರಂಗಭೂಮಿಯ ಇತಿಹಾಸ" (Dramatic History of the wotld) ಎಂಬ ಗ್ರಂಥದಲ್ಲಿ ತಮ್ಮ ಅಭಿಪ್ರಾಯವನ್ನು ಚೆನ್ನಾಗಿ ಪ್ರಕಟಿಸಿರುವರು. ಪಾಶ್ಚಾತ್ಯ ದೇಶಗಳಲ್ಲಿಯೂ ಸಹ ಸ್ತ್ರೀಯರನ್ನು ರಂಗಭೂಮಿಗೆ ತರಲು ಒಪ್ಪುವಾಗ ವಿಚಾರಮಾಡಬೇಕಾಯಿತು- ಹಿಂದೀ ಪರಿಸ್ಥಿತಿಯಲ್ಲಿ ಅದನ್ನು ಬಯಸತಕ್ಕದ್ದಿಲ್ಲವೆಂದು. ಸ್ತ್ರೀ ಪುರುಷರ ಸಹವರ್ತನವು ನಮ್ಮ ಭಾರತಭೂಮಿಗೆ ಸರಿಹೋಗದು— ಅವರ ಸಂಸ್ಕೃತಿಯು ಪಾಶ್ಚಾತ್ಯ ಸಂಸ್ಕೃತಿಯಂತಿಲ್ಲ ಇಲ್ಲವೆ ಪಾಶ್ಚಾತ್ಯರ ಈ ಸಂಸ್ಕೃತಿಯು ಅಲ್ಲಿನ ನೈತಿಕ ಬೆಳವಣಿಗೆಗೆ ಎಷ್ಟೋ ಸಹಕಾರಿಯಾಗಿದೆಯೆಂದಾಗಲಿ, ಹಾನಿಕಾರಕವಾಗಿದೆ ಎಂಬುದಾಗಲಿ ವಿಚಾರಶೀಲರು ತಾವೆ ಯೋಚಿಸಲಿ.

ಇನ್ನು ಹರೀಂದ್ರನಾಥರು ಹೇಳುವಂತೆ ಗಂಡನು ನಾಯಕನ ಭೂಮಿಕೆಯನ್ನು ವಹಿಸಿದರೆ- ಹೆಂಡತಿಯು ನಾಯಕಿಯ ಭೂಮಿಕೆಯನ್ನು ವಹಿಸಲಿ ಎಂಬ ಕುರಿತು- ಶ್ರೀ ಹರೀಂದ್ರನಾಥರು ತಮ್ಮ ಪತ್ನಿಯವರೊಡನೆ ಅಭಿನಯಿಸುತ್ತಿರುವರು; ಅಲ್ಲಿ ಅವರು ಇಬ್ಬರೇ ಇರುವರು. ಇತರ ನಟರ ಅವಶ್ಯಕತೆಯನ್ನು ತರಲಿಲ್ಲ ನಾಟಕವು ಹಾಗಾಗಲಾರದು- ಮಾತ್ರವಲ್ಲ. ಅವರನ್ನುವಂತೆ ಗಂಡನು ನಾಯಕ ಹೆಂಡತಿಯು ನಾಯಕಿ ಈ ಭೂಮಿಕೆಯನ್ನು ವಹಿಸುವ ಪ್ರಸಂಗವು ಪ್ರತಿಯೊಂದು ಬಾರಿಯೂ ನಮಗೆ ಸಿಗಲಾರದು. ಇವರು ನಟರೊಡನೆ ಕಥಾಪ್ರಸಂಗದ ಪರಿಯನ್ನು ಹೊಂದಿ ವರ್ತಿಸಬೇಕಾಗುವದು ಆ ಇತರರು ಅಂಜಿತನವಿಲ್ಲದಿರೇ ಇರುವರೆ.? ಯಾರೂ ಇರಬಹುದು. ಹಾಗಿದ್ದರೂ, ನೈತಿಕ ಆಚರಣೆಗೆ ಭಂಗಬಾರದಂತೆ ರಂಗಭೂಮಿಯು ಸಾಗಬಲ್ಲದೆ? ಇಲ್ಲವೇ ಒಂದೇ ಕುಟುಂಬದ ಸಹೋದರ ಸಹೋದರಿಯರು ರಂಗಭೂಮಿಯ ಸಂಪೂರ್ಣ ನಟವರ್ಗವನ್ನು ಪೂರ್ಣಗೊಳಿಸಬೇಕೆನ್ನುವಿರಾ? ಯಾವುದು ಶಕ್ಯ? ಸಮಾಜದಲ್ಲಿ ನೀವು ಸ್ತ್ರೀ-ಪುರುಷರ ಸಹವ್ಯವಹಾರವನ್ನು ಇದಿರು ಸಿದ್ಧಗೊಳಿಸಿದ್ದರೆ ಇದು ಶಕ್ಯವಾಗಬಹುದು.

ಹಾಗೆ ಸಮಾಜದ ನೀತಿಗೆ ಕೊರತೆಬಾರದಂತೆ ಸಾಗಬೇಕಾದರೆ, ನಮ್ಮಲ್ಲಿ ಸಾರ್ವಜನಿಕ ದೃಷ್ಟಿಯ ಪರಮಾವಧಿಯು ಬರಬೇಕು; ಈಗಿದ್ದಂತೆ ಸಾಗಲಾಗದು ಇಲ್ಲವೆ ಪಾಶ್ಚಾತ್ಯರ ಮಾದರಿಯು ನಮಗೆ, ಅಲ್ಲಿನ ಸ್ಥಿತಿಯ ಯೋಚಿಸುವಂತೆ ಎಂದೂ ಹಿತಕಾರಿಯೆಂದು ತೋರದು.

ಸ್ತ್ರೀ ಪುರುಷರು ಅಂಣತಮ್ಮಂದಿರಂತೆ ತಮ್ಮ ನೈತಿಕ ಆಚರಣೆಯಲ್ಲಿದ್ದು ಜನರಮುಂದೆ ನಾಟಕಗಳನ್ನಾಡುವುದಾದರೆ, ಅದರಿಂದ 'ಗೌರವದ' ವರ್ತನೆಯೇನೆಂಬುದನ್ನು ಜನರಿಗೆ ತೋರಿಸಬಹುದು; ಮತ್ತೆ ರಂಗಭೂಮಿಯ ಈಗಿನ ನೀಚವೃತ್ತಿಯೂ ಹೋಗಬಹುದು. ಇದಕ್ಕೆ ನಮ್ಮ ಒಪ್ಪಿಗೆಯಿದ್ದರೂ, ಅಂತಹ ಸ್ಥಿತಿಯು ನಮ್ಮಲ್ಲಿ ಬಂದಿಲ್ಲವೆನ್ನುವುದರಿಂದ ನಾವು ಆ ಆಲೋಚನೆಯನ್ನು ಬಿಡಬೇಕಾಗಿದೆ.

ಇನ್ನುಳಿದ ಮಾರ್ಗವೆಂದರೆ, ಈಗಿರುವಂತೆ, ಕುಲವತಿಯುವರಲ್ಲದವರನ್ನು ರಂಗಭೂಮಿಯು ಮೋಹಿತರುವುದು. ಇದು ಎಂತಹ ಅನೀತಿಕಾರಿಯಾದುದು ಎಂಬುದನ್ನು ವಿಚಾರಶೀಲನಾದ ಯಾವನೊಬ್ಬ ಸಮಾಜ ಹಿತಚಿಂತಕನೂ ತಿಳಿದಿದ್ದೇ ಇದೆ. ಇಂದಿನ ರಂಗಭೂಮಿಯ ಅವಸ್ಥೆಯು ಇಂತಹ ನೀಚತ್ವಕ್ಕೆ ಮುಟ್ಟಿರುವುದಾದರೆ, ಅದು ಇಂದಿನ ಬ್ರಹ್ಮಚರ್ಯದ ಕೊಲೆಮಾಡಲು ಯತ್ನಿಸುತ್ತಿರುವುದು ನಿಜವಾದರೆ, ಅದು ಇಂತಹ ಅನೀತಿವಂತರಿಂದಲೇ. ಅನೀತಿವಂತರ ಕೈಗೆ ರಂಗಭೂಮಿಯು ಸಿಕ್ಕು ಹಾಳಾಯಿತೆಂದು ಅಳುವವರು, ವೇಶ್ಯಾಸ್ತ್ರೀಯರನ್ನು ರಂಗಭೂಮಿಗೆ ತರಲು ಎಂದೂ ಒಪ್ಪಲಾರರು. ಬಂದೆರಡು ವರುಷಗಳ ಕೆಳಗೆ "ಮಾಡರ್ನ್‌ರಿವ್ಯೂ" ಪತ್ರಕಾರರು, ಬಂಗಾಳ ರಂಗಭೂಮಿಯಲ್ಲಿ ಪತಿತನಾರಿಯರು ತುಂಬಿರುವುದಕ್ಕಾಗಿ ತಮ್ಮ ವಿಷಾದವನ್ನು ವ್ಯಕ್ತಪಡಿಸಿದ್ದರು! ಮಹಾತ್ಮಾಜೀಯವರಾದರೋ, ಹಾಗಾಗಕೂಡದೆಂದು ಹೇಳಿರುವರು.

ಹೀಗಿರಲು ನಮ್ಮ ಕನ್ನಡ ರಂಗಭೂಮಿಯಲ್ಲಿ ಸ್ತ್ರೀಯರನ್ನು ನಾವು ಬಯಸಬೇಕೆ? ಹಣವಾಗಬೇಕಾದರೆ, ಸ್ತ್ರೀನಟರು ಮಂಡಳಿಯಲ್ಲಿರಬೇಕುಎಂದು ಹೇಳುತ್ತಿರುವ ನಟರಸಂಘದವರಿಗೆ ನಾವು ನಮ್ಮ ಹೆಚ್ಚಿನತಿರಸ್ಕಾರವನ್ನು ತೋರಿಸದೆ ಇರಲಾರೆವು. ಅಂದರೆ ಅವರಮಾತಿನಂತೆ "ಜನರು ಸ್ತ್ರೀನಟರನ್ನು ಬಯಸುವರೆಂದು" ಏತಕ್ಕೆ? ರಂಗಭೂಮಿಯ ಸುಧಾರಣೆಯ ದೃಷ್ಟಿಯಿಂದಲೇ? ಇಲ್ಲವೇ 'ಕಾಮಾತುರತೆ ದೆಸೆಯಿಂದಲೇ?' ಪುರುಷರ ಈ ಮನೋದೌರ್ಬಲ್ಯದ ದುರುಪಯೋಗಮಾಡಿಕೊಳ್ಳುವವರನ್ನು ಸಮಾಜದ ಅತಿ ಹೆಚ್ಚಿನ ದ್ರೋಹಿಗಳೆಂದು ಪರಿಗಣಿಸುವುದರಲ್ಲಿ ಏನು ತಪ್ಪು!

ಈ ವಿಷಯದಲ್ಲಿ 'ರಂಗಭೂಮಿ' ಪತ್ರಕಾರರಿಗೆ ನಮ್ಮ ಕೆಲವು ಪ್ರಶ್ನೆಗಳಿವೆ-ಅವರು ರಂಗಭೂಮಿಯ ಸುಧಾರಣೆಗೆ ಸೊಂಟಕಟ್ಟಿದವರು ನಿಜವಾದರೆ. ಈಪಂಚಿದಲ್ಲಿ ತಮ್ಮ ಉತ್ತರವನ್ನು ಸಂಪಾದಕೀಯ ಲೇಖನಿಯಿಂದ ಪ್ರಕಟಿಸಲಿ.

(೧) 'ರಂಗಭೂಮಿಯ ಸುಧಾರಣೆ' ಯೆಂದರೆ ಅದು ನೈತಿಕ ಸುಧಾರಣೆಯನ್ನು ಬಿಟ್ಟಿರುವುದೇ?

(೨) ನೈತಿಕ ಸುಧಾರಣೆಯನ್ನು ಅವರು ಬಯಸುವುದಾದರೆ-ಇಂದಿನ ಸಮಾಜಪರಿಸ್ಥಿತಿಯಲ್ಲಿ ಸ್ತ್ರೀಯರನ್ನು ರಂಗಭೂಮಿಯಲ್ಲಿ ಸ್ವೀಕರಿಸಲು ಸಿದ್ಧರಿರುವರೋ?

(೩) ಪತಿತನಾರಿಯರು (ವೇಶ್ಯೆಯರು) ರಂಗಭೂಮಿಯನ್ನು ಅಲಂಕರಿಸುವುದು ಅವರಿಗೆ ಸಮ್ಮತವೇ?

(೪) ಹೀಗೆ ಅದರ ಒಪ್ಪಿಗೆಯನ್ನು ಸಂಪಾದಕರು, ಒಂದು ನಾಟಕ ಸಂಘದವರಿಗೆ ತೋರಿಸಿರುವರೆಂಬುದು ನಿಜವೇ? "ಸ್ತ್ರೀಯರಿಲ್ಲದ ನಾಟಕವೆಂದರೇನು" ಎಂಬರ್ಥದ ಮಾತುಗಳಿಂದ ಹೀಗೆ ಉತ್ತರ ಕೊಟ್ಟಿದಿದ್ದರೆ, ಅದು ಆ ಸಂಘಕ್ಕೆ ಕುಲವತಿಯರು ಬರುವರೆಂದು ತಿಳಿದುಹೇಳಿದನಾಕೇ? ಇಲ್ಲವೇ, ವೇಶ್ಯಾಜನರು ಬರುವರೆಂದು ತಿಳಿದೇ ಇದ್ದು ಆ ನುಡಿಯೋ?

(೫) ಅವರ ಪತ್ರಿಕೆಯಲ್ಲಿ ಈ ರೀತಿಯ ಸಹಾನುಭೂತಿಯನ್ನು ಯಾವರೀತಿಯಿಂದ ತೋರಿಸಿದೆಯೋ? ಕನ್ನಡ ರಂಗಭೂಮಿಯ ಏಳಿಗೆಗೆ ಸೊಂಟಕಟ್ಟಿದ 'ರಂಗಭೂಮಿ'ಯ ಸಂಪಾದಕರು ಈ ಪ್ರಶ್ನೆಗಳಿಗೆ ಸಮರ್ಪಕವಾದ ಉತ್ತರವನ್ನು ಪ್ರಕಟಿಸಿ, (ಸಾಧ್ಯವಾದರೆ ಈ [illegible]) ತಮ್ಮ ಉದ್ದೇಶ ಮತ್ತು ಕಾರ್ಯಕ್ರಮಗಳನ್ನು ವಿವರಪಡಿಸಲಿ.

ಇಷ್ಟೊಂದು ವಿಚಾರಗಳನ್ನು ಹೇಳಿ ಈ ಲೇಖಾಂಕವನ್ನು ಮುಗಿಸಿ, ರಂಗಭೂಮಿಗೆ ಸಂಬಂಧಿಸಿದ ಇನ್ನೂ ಅನೇಕ ವಿಷಯಗಳ ಕುರಿತುಹಿಂದಿನಿಂದ ಬರೆಯುವೆವು. ಇತಿ—ಕೌಶಿಕ.

ಜನನ ಮರಣ. (ಅಗಸ್ಟ. ೧೯೩೬)

ಊರು	ಜನನ	ಮರಣ
ಬೆಳಗಾಂವಿ	೧೦೩	೭೭
ಧಾರವಾಡ	೬೬	೬೬
ಹುಬ್ಬಳ್ಳಿ	೨೮೧	೧೧೬
ಗದಗ ಬೆಟಗೇರಿ	೧೩೭	೧೧೮
ವಿಜಾಪುರ	೧೦೦	೬೨
ಬಾಗಲಕೋಟಿ	೬೪	೭೭
ಕಾರವಾರ	೩೫	೧೩

೧೯೩೬ ನೇ ಇಸ್ವಿ ಅಗಸ್ಟ ತಿಂಗಳಲ್ಲಿ ಬೆಳಗಾಂವಿ, ಧಾರವಾಡ ವಿಜಾಪೂರ, ಕಾರವಾರ, ಜಿಲ್ಲೆಗಳ ಮುಖ್ಯ ಪಟ್ಟಣಗಳಲ್ಲಿ ಒಟ್ಟಿಗೆ ೫೪೯ ಮರಣಗಳಾದವು. ಅಂದರೆ ಸಪ್ಟಂಬರ ತಿಂಗಳಗಿಂತ ೪೫ ಜನರು ಹೆಚ್ಚಾಗಿ ಮಡಿದರು. ಪ್ಲೇಗಿನಿಂದ ೧೯ ಜನರು ಮಡಿದರು. ಹುಬ್ಬಳ್ಳಿಯಲ್ಲಿ ೮, ಬೆಳಗಾಂವಿಯಲ್ಲಿ ೫, ಧಾರವಾಡದಲ್ಲಿ ೪, ಗದಗ ಬೆಟಗೇರಿಯಲ್ಲಿ ೨.

ಮದ್ರಾಸ ಕರ್ನಾಟಕ.

ಬೆಂಗಳೂರ ಹಾಸನ ರೇಲ್ವೆಯನ್ನು ಬೇಗನೇ ಪ್ರಾರಂಭಿಸುವಂತೆ ಇನ್ನಾದರೂ ಪ್ರಯತ್ನಿಸಬೇಕೆಂದು ಮಂಗಳೂರ ಜಿಲ್ಲಾ ಬೋರ್ಡಿನಲ್ಲಿ ಪ್ರಯತ್ನ ನಡೆದಿದೆ. ಈ ಬಗ್ಗೆ 'ಎಚ್ಚರಿಸಿದ' ತೆರಿಗೆಯು ಬ್ಯಾಂಕುಗಳಿಗೆ ಮಾತ್ರ ಹೆಚ್ಚಾಗಿ ಸಹಾಯವನ್ನುಂಟು ಮಾಡಿದೆ. ತೆರಿಗೆದಾರರ ಹಣವು ಅಗ್ಗವಾಗಿಯೂ, ಅಲಕ್ಷವಾಗಿಯೂ ಇರುವ ಹಾಗೆ ಪ್ರಯತ್ನಿಸುವದೇ ಸಭಾಸದರ ಕರ್ತವ್ಯವೋ! ಎಂದು 'ಕಂಠೀರವ' ನು ಗರ್ಜಿಸುತ್ತಾನೆ. ಈ ಗರ್ಜನೆಗೆ ಸಭಾಸದರು ಬೆದರುವರೋ?

ಸ್ಪರ್ಧೆಯಿಲ್ಲದೆ ಮದ್ರಾಸು ಕೌನ್ಸಿಲಿಗೆ ಚುನಾವಣೆ ಹೊಂದಿದ ಮಹಮದ ಚನ್ನೂಡ ಸಾಹೇಬರನ್ನು ಕಾಸರಗೋಡಿನಲ್ಲಿ ಮೆರವಣಿಗೆ ಮೊದಲಾದವುಗಳಿಂದ ಸನ್ಮಾನಿಸಿದರು.

ಮೈಸೂರ ಕರ್ನಾಟಕ.

ಕೈರಾಟೆಯ ಪ್ರಚಾರವು ಮೈಸೂರಿನಲ್ಲಿ ರಭಸದಿಂದ ಸಾಗಬೇಕಿದ್ದರೆ, ದಿವಾಣಸಾಹೇಬರಿಂದ ಆಳುಮಗನ ವರೆಗೆ ಮಹಾರಾಜರ ಎಲ್ಲ ನೌಕರರೂ ಪ್ರಜಾಪ್ರತಿನಿಧಿ, ಹಾಗೂ ಬೋರ್ಡುಗಳ ಸಭಾಸದರೂ ಯಾವಾಗಲೂ ಖಾದಿ ಬಟ್ಟೆಯನ್ನೆ ಧರಿಸಬೇಕು ಇತ್ಯಾದಿ ೬ ಸೂಚನೆಗಳನ್ನೊಳಗೊಂಡ ಒಂದು ವಿನಂತಿ ಪತ್ರಿಕೆಯನ್ನು ಶ್ರೀ. ಗುಡೂರು ರಾಮಚಂದ್ರರಾಯರು ಪ್ರಕಟಿಸಿದ್ದಾರೆ. ಮೈಸೂರಿನ ಅಧಿಕಾರಿಗಳೂ ಮಹಾಜನರೂ ಇದಕ್ಕೆ ಗಮನಕೊಡುವರೊ?

ಹುಲ್ಲು ಜೋಪಡಿಗಳ ಬದಲು, ಹಂಚಿನಮನೆ ಕಟ್ಟಿಸುವ ಹಳ್ಳಿಯವರಿಗೆ ತಕಾವಿ ಸಾಲಗಳನ್ನು ಕೊಡುವೆವೆಂದು ಮಹಾರಾಜರ ಸರಕಾರವು ತಿಳಿಸುತ್ತದೆ.

ಶಾರದಾ ಪತ್ರಿಕೆಯು ಅನೇಕ ಪ್ರತಿಗಳನ್ನು ಬಂಗಾಲ ಸರಕಾರದವರು ಕೊಳ್ಳಲು ಒಪ್ಪಿದ್ದಾರೆ. ಕರ್ನಾಟಕದ ವಿದ್ವತ್ತಿಗೆ ಬಂಗಾಲದಲ್ಲಿಯಾದರೂ ಮಾನದೊರೆತಿತು!

ಕರ್ನಾಟಕದ ಮುಖ್ಯ ವ್ಯಾಪಾರದ ಸ್ಥಳವಾದ ದಾವಣಗೇರಿಯಲ್ಲಿ ಕನಿಷ್ಠ ದರ್ಜೆಕ್ಕೆ ಒಂದು "ಇಂಟರ ಮೀಡಿಯಟ್ ಕಾಲೇಜು" ಇರಬೇಕೆಂದು ಪ್ರಯತ್ನ ನಡೆದಿದೆ

ಇದ್ದು ಕೋರ್ಟಫಿ ಬಗ್ಗೆ ಅಷ್ಟೇರಕಂ ಇರುತ್ತದೆ. ಕಾರಣಾ ಈದಾವೇದ ಚಲವಿಶಿವನಾಡಲಿಕ್ಕೆ ಈ ಕೋರ್ಟಿಗೆ ಅಧಿಕಾರವಿಧೆ.

೧೦ ಮೇಲೆ ವಿವರಿಶಿದ ನೇಕಾರ ದೈವದವರ ಮನೆತನಗಳು ೩೫ ಇರತಾವೆ ಅವರಲ್ಲಿ ವಾದಿಗಳ ಸಮಾವೇಶ ಆಗತಕ್ಕದ್ದು ಅವರಿಗೆ ಮೇಲೆ ವಿವರಿಶಿದಂತೆ ಕರಡಿಮಜಲು ವೈಯುವಹಕ್ಕು ಇರತದೆ ಮತ್ತು ಪ್ರತಿವಾದಿಗಳು ಸದರ ನೇಕಾರ ಮನೆತನದಲ್ಲಿ ಇಬ್ಬರು ಇದ್ದು ಮೇಲೆ ವಿವರಿಶಿದಂತೆ ಅವರದು ಸದರ ಕರಡಿಮಜಲು ವೈಯಲಿಕ್ಕೆ ತಕರಾರಇದ್ದ ಮುಲಕಾ ಅವರಮೇಲೆ ವೃಳಿದ ಯಾವತ್ತು ನೇಕಾರ ದೈವದವರಿಗೆ ದಾವೆಮಾಡಲಿಕ್ಕೆ ಅಧಿಕಾರವದೆ ಆದರೆ ಯಲ್ಲರನ್ನು ವಾದಿಗಳಾಗಿ ಮಾಡಲಿಕ್ಕೆ ಅಶಕ್ಯವಿದ್ದಕಾರಣಾ ಅವರ ತರ್ಫೆಯಿಂದ ೧೩ ವಾದಿಗಳಿಗೆ ಈ ದಾವೇದಕೆಲ್ಸನಡಿಶಿದತಾರೆ ಮತ್ತು ಯಾವತ್ತು ದೈವದವರ ತರ್ಫೆ ಕೆಲ್ಸನಡಿಸಲಿಕ್ಕೆ ಪರವಾನಿಗಿ ಶಿಗೋಬಗ್ಗೆ ಆರ್ಡರ್ (೧) ರೂಲ (೮)ನೇ ಪ್ರಕಾರಾ ಅಲಾಯಿದಾ ಅರ್ಜಿಮಾಡಿರತವೆ

೧೧ ವಾದಿ ವಿನಂತಿಅವೆ ಅಲ್ಲಾ

A ದಾವೇದಲ್ಲಿ ೪ ನೇ ಕಲ್ಮಿನಲ್ಲಿ ವಿವರಿಶಿದಂತೆ ಕರಡಿಮಜಲು ಬಸವಂಣ ದೇವರಗುಡಿ ಕಟ್ಟಿಮೇಲಿಂದಲೇ ಹೊರಡಿಸಲಿಕ್ಕೆ ವಾದಿಗಳಿಗೆ ಹಕ್ಕು ಅದೆ ಅಂತಾ ಠರಾಯಿಸಬೇಕು

B ಸದರ ವೃಸ್ನದಲ್ಲಿ ಕರಡಿಮಜಲು ನೇಕಾರ ದೈವದವರು ಹೊರಡಿಸುವ ಕೆಲ್ಸ ಪ್ರತಿವಾದಿಗಳು ಹರಕತ ಮಾಡಬಾರದು ಅಂತಾ ನಿರಂತರ ತಾಕೀದ ಪ್ರತಿವಾದಿಗಳಿಗೆ ಆಗಬೇಕು.

C ಈದಾವೆಕ್ಕ ತಗಲಿದ ಕೋರ್ಟಖರ್ಚ ವಾದಿಗಳಿಗೆ ಪ್ರತಿವಾದಿಗಳ ಕಡಿಂದಾ ಕೊಡಿಸಬೇಕು.

D ಕೋರ್ಟಿಗೆ ಯೋಗ್ಯ ಕಂಡ ದಾದು ಕೊಡಿಸಬೇಕು.

E ಪಕ್ಷಕಾರರೇ ತಕರಾರಗಳ ಮೇಲಿಂದಾ ಯೇನಾದರೂ ಪ್ಲೆಂಟ ದುರಸ್ತ ಮಾಡುವ ಪ್ರಸಂಗಬಂದರೆ ಅದನ್ನು ದುರಸ್ತ ಮಾಡಲಿಕ್ಕೆ ಪರವಾನಿಗಿ ಇರಬೇಕು.

ಈಪ್ರಕಾರಾ ವಾದೆಯರ ಮಾಗಣಿ ಅದೆ ಲಗತ ಅಸಲಅರ್ಜಿ ನಕಲು ಇರತಾವೆ ತಾರೀಖು ೧೩|೭|೧೯೨೬ ಇಸ್ವಿ

(ಸಹಿ) ಗುರಶಿದ್ದಪ್ಪಾ ಶಿವ್ಲಿಂಗಪ್ಪಾ ಬಾಡಗಿ ಬೀಳಗಿ

(ಸಹಿ) ಗುರಪ್ಪಾ ಶಿದ್ದಪ್ಪಾ ಬ್ಯಾಳಿ ಬೀಳಗಿ

Sd. S. G. Datar.

Pleader.

ನಾವು ಗುರಶಿದ್ದಪ್ಪಾ ಶಿವ್ಲಿಂಗಪ್ಪಾ ವ ಗುರಪ್ಪಾ ಶಿದ್ದಪ್ಪಾ ಬ್ಯಾಳಿ ಸಾಕೀನ ಬೀಳಗಿ ಹೀಗೆ ಪ್ರತಿಜ್ಞಾ ಮಾಡುತ್ತೇನಲ್ಲಾ ಮೇಲೆ ಬರೆದ ಮಜಕೂರು ನನ್ನ ಸ್ವತಃ ಮಾಹಿತಿ ಪ್ರಕಾರಾ ಖರೆಅವೆ ಮತ್ತುನಾನು ಬಾಗಲಕೋಟ ಮುಕ್ಕಾಮನಲ್ಲಿ ತಾರೀಖು ೧೩|೭|೧೯೨೬ ದಿವಸ ನನ್ನ ಸಹಿ ಮಾಡಿದ್ದೇನೆ.

(ಸಹಿ) ಗುರಶಿದ್ದಪ್ಪಾ ಶಿವ್ಲಿಂಗಪ್ಪಾ ಬಾಡಗಿ ಬೀಳಗಿ

(ಸಹಿ) ಗುರಶಿದ್ದಪ್ಪಾ ಶಿದ್ದಪ್ಪಾ ಬ್ಯಾಳಿ ಬೀಳಗಿ

ಅಸಲಅರ್ಜಿ ವಾದಿ ಹೇಳಿಕೆಪ್ರಕಾರಾ ಬರೆದದೆ.

ಕೋರ್ಟಿಗೆ ಕೊಟ್ಟ ತಾರೀಖು ೧೩|೭|೧೯೨೬ ಇಸ್ವಿ

Sd. S. G. Datar

Pleader.

Admitted and ordered that the particulars here of be entered in the Register of Civil suits.

Dated 12-8-26.

Sd. S. A. Mokashi.

Clerk of the Court.

Fixed for the Settlement of issues on 22-9-1926.

Sd. S. A. Hattyangadi.

13-8-26. Sub-Judge.

True Copy

S. A. Mokashi.

Clerk of the Court,

ಜಾಹೀರ ನೋಟೀಸು.

ರಾ|| ತಳಗಿಹಾಳ ವ ಇಲಾಳ ವ ಬೆಂಚೂರ ವ ಶಿರಗುಪ್ಪಿ ವ ಗೊಂನಿಹಾಳ ವ ಕಂದಗಲ್ಲ ವ ಬಾದರದಿನ್ನಿ ವ ಯತ್ನಿನಹಟ್ಟಿ ವ ಹೊದಲೂರ ಈ ಪ್ರಕಾರ ಗ್ರಾಮದಲ್ಲಿರುವ ಯಾವತ್ತು, ಶೇಟ ಸಾವುಕಾರರಿಗೆ ಮತ್ತು ಗ್ರಾಮಸ್ಥರಿಗೆ ವ ಇತರ ಸಭ್ಯಗ್ರಹಸ್ಥರಿಗೆ—

ಕೆಳಗೆ ಸಹಿ ಮಾಡುವವನಾದ ರುದ್ರಯ್ಯಾ ತಂದಿ ಬಸಯ್ಯಾ ಮಟಪತಿ ಸಾಕೀನ ತಳಗಿಹಾಳ ಹಲ್ಲಿಮುಕ್ಕಾಮ ಬೀಳೂರ ನಾನು ವಿನಂತಿ ಮಾಡಿಕೊಂಡು ಈ ಜಾಹೀರನೋಟೀಸ ಕೊಡುತ್ತೇನಲ್ಲಾ.

ನನ್ನ ತಂದಿಯಾದ ಬಸಯ್ಯಾ ಈತನು ಅಜಮಾಸ ೬೦ ವರ್ಷದವನಿದ್ದಾನೆ ಆತನು ಇಲಿಕಡೆಗೆ ಪ್ರಪಂಚ ನಮ್ಮ ಗೂಡಾಕ್ಕಿ ಮಾಡುವದು ಬಿಟ್ಟು ಜನರ ದುರ್ಭೋಧೆಯಿಂದಾ ನಮ್ಮ ಕಕ್ಕನ ಮಕ್ಕಳ ಭೋಧದಿಂದಾ ಅಂದರೆ ಈರಬದ್ರಯ್ಯಾ ವಗೈರೆರ ಮನಿಯಲ್ಲಿ ಇರತಾನೆ ಈಗ ನನ್ನ ತಂದಿಯು ನಮ್ಮ ಪಿತ್ರಾರ್ಜಿತ ಸ್ಥಾವರ ಜಂಗಮಆಸ್ತಿ ಯರಡನೇದವರಿಗೆ ನಮ್ಮ ಲುಕಸಾನ ಮಾಡುವ ಇರಾದೆಯಿಂದ ಬರೆಕೊಡುವದು ವ ಮೋಕಳ ದೇಣೆಘೇಣೆ ಕಾಗದ ಬರೆಕೊಡುವದು ಮಾಡತಾನಂತ ವರ್ತಮಾನ ಕೇಳತೀನಿ ಆದರೆ ನಮಗೆ ಯಾವತರದ ಪ್ರಪಂಚದ ಅಡಚಣಿ ಇಲ್ಲಾ. ಮತ್ತು ನಮ್ಮ ತಂದಿ ನಮ್ಮಗೂಡಾ ಇರು ಇರುವವರಿಗೂ ದೇಣೆ ಘೇಣೆ ಮಾಡಿಲ್ಲಾ ಈಗ ಮಾಡಲಿಕ್ಕೆ ಕಾರಣಾ ಇಲ್ಲಾ ಅದ್ದರಿಂದ ನಮ್ಮ ತಂದಿ ಕಡಿಂದಾ ಯಾರಾದರೂ ಸದರ ಆಸ್ತಿ ಹಿಂದೆ ಬರಕೊಂಡಿದ್ದರೆ ವ ಇನ್ನುಮುಂದೆ ಬರಸಿಕೊಂಡರೆ ಅವು ಯಾವತ್ತು ಗೈರಕಾಯದೇಶೀರ ಇರುತ್ತವೆ. ಅವು ನಮ್ಮ ಕುಟುಂಬದ ಹಿತದದಶಿಯಿಂದಾ ಮಾಡಿದ್ದವು ಅಲ್ಲಾ ಅಂತಾ ತಿಳಿಯಬೇಕೆಂದು ಈ ಜಾಹೀರ ನೋಟೀಸು ಕೊಟ್ಟು ಯಾವತ್ತುಜನರಿಗೆ ತಿಳಿಶಿರುತ್ತದೆ. ತಿಳಿಯೋದು ತಾರೀಖು ೪ ನವಂಬರ ೧೯೨೬ ಇಸ್ವಿ

ರುದ್ರಯ್ಯಾ ತಂದಿ ಬಸಯ್ಯಾ ಮಟಪತಿ. ಸಾ|| ತಳಗಿಹಾಳ ಹಲ್ಲಿವಸ್ತಿ ಬೀಳೂರ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ :— ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಪ ಶುಕ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಮೈಯಲ್ಲಿಯ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ಪ್ರಕಾಶಕ—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೊ ಸ್ಟ ನಿಪ್ಪಾಣಿ (ಜಿ ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೆಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನೂ ನಮ್ಮ ದೇಶದಿಂದ ಪರದೇಶಕ್ಕೆ ಕಳಿಸುತ್ತಿದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನೂ ತಯಾರು ಮಾಡುತ್ತಾರೆ ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿ ಕೊಡುತ್ತೇವೆ

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ಮುಂಬಯಿ ಕರ್ನಾಟಕ.

"ವೀರಶೈವರ ಕೈಪಿಡಿ" ಎಂಬ ವೀರಶೈವರ ಸಾದ್ಯಂತ ಸಂಗತಿಗಳನ್ನೆಲ್ಲ ಒಳಗೊಂಡ ಗ್ರಂಥವು ಧಾರವಾಡದ ಶ್ರೀ ಬಸವನಾಳ ಹಾಗೂ ಕಟ್ಟೀಮನಿ ಪ್ರಭೃತಿಗಳ ನೇತೃತ್ವದಲ್ಲಿ ರಚಿಸಲ್ಪಡುತ್ತಿದ್ದು ಮಹಾಸಭೆಯ ಕಾಲಕ್ಕೆ ಪ್ರಸಿದ್ಧವಾಗುವದು.

ಕರ್ನಾಟಕ ಕಾಲೇಜದ ಸಲುವಾಗಿ ಕೂಡಿಸಿದ ಹಣದ ಪೈಕಿ ಉಳಿದ ಸುಮಾರು ಮೂರುಸಾವಿರದಷ್ಟು ಹಣವನ್ನು ಶ್ರೀ ಬೆಳವಿಯವರು ಶ್ರೀ ವಿದ್ಯಾರಣ್ಯ ಪಾರಿತೋಷಕವೆಂಬ ಪಾರಿತೋಷಕವನ್ನು ಬಿ. ಎ ದಲ್ಲಿ ಕನ್ನಡ ಭಾಷೆಯಲ್ಲಿ ೧ ನೇಯ ಸ್ಥಾನವನ್ನು ಪಡೆಯುವವನಿಗೆ ಕೊಡುವ ವ್ಯವಸ್ಥೆ ಮಾಡಿದ್ದಾರೆ. ಹಣವು ಸರಕಾರದ ಕಡೆಗೆ ಅಥವಾ ಡಿ ಲೋ ಬೋರ್ಡಿನಲ್ಲಿಡಲ್ಪಡುವುದು; ಹಾಗೂ ಅದರ ವಾರ್ಷಿಕ ಬಡ್ಡಿ ಸುಮಾರು ನೂರು ರೂಪಾಯಿಗಳಷ್ಟು "ವಿದ್ಯಾರಣ್ಯ ಪ್ರಾಯಿಜ" ಎಂದು ಕೊಡಲ್ಪಡುವುದು ಸ್ತುತ್ಯ!

ಗೋಕಾಕ ತಾಲೂಕಿನ ಇತಿಹಾಸ ಮಂಡಳದ ಪ್ರಚಾರಕೆಲಸವನ್ನು ತೀರಿಸಿಕೊಂಡು ರಾಜಪುರೋಹಿತರು ನಂಟಿಮಾರಿ ಸಂಸ್ಥಾನಕ್ಕೆ ಬಂದು ಇಲ್ಲಿ "ಕರ್ನಾಟಕದ ಇತಿಹಾಸದ ಮಹತ್ವ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡಿದರು. ಶ್ರೀಮಂತರಾದ ಅಪ್ಪುಗೌಡ ಬಸವಪ್ರಭು ಸರದೇಸಾಯಿ ಬ್ಯಾರಿಷ್ಟರ ಅ್ಯಟ್ ಲಾ, ಸಿ. ಆಯ್. ಇ. ಈ ಮಹನೀಯರು ಕರ್ನಾಟಕ ಇತಿಹಾಸಮಂಡಳಕ್ಕೆ (೫೦) ಐವತ್ತು ರೂಪಾಯಿಗಳನ್ನು ಕೊಟ್ಟು ೨ ನೆಯ ವರ್ಗದ ಆಜೀವ ಸಭಾಸದರಾದರು. ಇದಕ್ಕೋಸ್ಕರ ಈ ಮಹಾಶಯರಿಗೆ ಕರ್ನಾಟಕ ಇತಿಹಾಸ ಮಂಡಳದವರು ಅತ್ಯಂತ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸುತ್ತಾರೆ. ಒಬ್ಬರು ಸಹಾಯಕ ಸದಸ್ಯರು, ೧೪ ಜನ ಹಿತಚಿಂತಕ ಸದಸ್ಯರು ಆದರು. ಚಿಕ್ಕ ದೇಸಾಯಿಯವರಾದ ಶ್ರೀಮಂತ ಬಸವಪ್ರಭುಗಳವರೂ ಶ್ರೀಮಂತ ಶಂಕರಗೌಡರವರೂ, ಮತ್ತು ಶ್ರೀಮಾನ್ ಬಾಬಾಸಾಹೇಬ ಪಾಟೀಲ, ಶ್ರೀಮಾನ್ ವಿಠ್ಠಲರಾವ ಕುಲಕರ್ಣಿ ಶ್ರೀಮಾನ್ ಕೃಷ್ಣರಾವ ಕುಲಕರ್ಣಿ ಈ ಕಾರಭಾರಿ ತ್ರಯರೂ ಬಹಳ ಸಹಾಯ ಮಾಡಿದರು.

ಪರದೇಶ.

ಬರ್ಲಿನ ವಿಶ್ವವಿದ್ಯಾಲಯದ ವಸ್ತು ಸಂಗ್ರಹಾಲಯದಿಂದ ೨೦ ಸಾವಿರ ಹುಳಗಳನ್ನು —ವಿಶೇಷತಃ ತಗಣಿಗಳನ್ನು —ಕದ್ದನೆಂದು ಫೌಜದಾರಿಯಲ್ಲಿ ಕಳ್ಳನ ಮೇಲೆ ಕಟ್ಲೆಯಾಗಿದೆ! ಇವನೊಬ್ಬ ತಗಣೆಯ ಕಳ್ಳನು.

ಗ್ರಹ ಕೃತ್ಯದ ನೋಟೀಸು

ಗಲಗಲಿ ಪಾಂಡುರಂಗಾಚಾರ್ರು ಕಟ್ಟಿ ಎಂಬುವರು ಕಳೆದ ಜುಲೈ ೨೮ ನೇ ತಾರೀಖಿನಲ್ಲಿ ಬಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ ಇವರಿಗೆ ಕೆಳಗೆ ರುಜು ಮಾಡುವ ಕಮಲಾಬಾಯಿ ಆದ ನಾನು ನಿನ್ನ ಹೆಂಡತಿ ಆಗಿಯು ವೆಂಕುಬಾಯಿ ಎಂಬವರು ೧ನೇ ಹೆಂಡತಿ ಆಗಿಯು ಇರುತ್ತೇವೆ. ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯಿತ ವಿಶ್ವಾಸವಿಲ್ಲದವರಾಗಿಯು ನನಗೆ ಎಲ್ಲಾ ಭಾಗದಲ್ಲಿಯು ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ನಷ್ಟಪಡಿಸಲು ಅನೇಕ ಜನಗಳ ಸಲಹೆಯಿಂದ ನನಗೆ ಮೋಸಪಡಿಸಬೇಕೆಂದು ಇರುತ್ತಾರೆ ಅಲ್ಲದೇ ಇವರು ನಂನ ಸಮಕ್ಷಮ ಬಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮಾ ಒಬ್ಬ ಹುಡಗನ್ನ ದತ್ತ ಮಾಡಿಕೊಂಡು ನನ್ನನ್ನು ಹಾಳು ಮಾಡತೇನೆಂದು ಹೇಳಿ ಇರುತ್ತಾರೆ ೧ನೇ ಹೆಂಡತಿ ವೆಂಕುಬಾಯಿಯವರು ನನ್ನ ಸಮ್ಮತಿ ಇಲ್ಲದೇ ದತ್ತ ತೆಗೆದುಕೊಳ್ಳಕೂಡದು ಯಜಮಾನರ ಆಸ್ತಿ ಪೈಕಿ (೨) ಜಮಿನಗಳು ಪಾಲ್ಯಬ್ಯವಲ್ಲಿ ಬಿದ್ದು ಇಥೆ ಇದೆಲ್ಲಾ ಹೊಗಲಾಗಲ|೧೦ ವರುಷ ಆದನಂತರ ತನ್ನ ಭಾಗದ ಆಸ್ತಿಗೆ ದತ್ತ ಮಾಡಿ ಕೊಳ್ಳಬಹುದು ಶಿವಾಯಿ ಈಗ ಮಾಡಿಕೊಂಡದ್ದು ಆಗಲಿ ಅಥವಾ ದತ್ತಗೆ ಆಗಿ ಬಂದದ್ದು ಆಗಲಿ ಇದು ನಿರ್ಬಂಧಿಸುವದಿಲ್ಲಾ ಮುಂದೆಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ ಖಂಡಿತ ತಿಳಿಯುವದು

ಕಮಲಾಬಾಯಿ

ನೋಟೀಸು.

ಸಾ॥ ಅಲ್ಲಾಮಾ ಕೋಂ॥ ಲಾಲಸಾ॥ ಪಿಂಜಾರ ಸಾ॥ ಇನಾಂ ಗ್ರಾಮ ಗೀಸಾಗರ ಪೇಠಾ ಬೀಳಗಿ ಇವರಿಗೆ....

ಕೆಳಗೆ ಸಹಿ ಮಾಡುವವನ ಕಡಿಂದಾ ನೋಟೀಸು ಕೊಡೋದರಲ್ಲಿ ಬರುತ್ತದಲ್ಲಾ ನೀನು ನನ್ನ ಲಗ್ನದ ಹೇಡತಿಇದ್ದು ಈಗ ಆಜಮಾಸ ಯಿಂಡುವರ್ಷಗಳ ಕೆಳಗೆ ನಿನ್ನನ್ನು ತಮ್ಮಾಜೋಂಗರಿಸಾ॥ ಅಂಬುವವನು ಅಲ್ಲಾಹಬ್ಬದ ನಿಮಿತ್ಯಮಾಡಿ ತವರಮನೆಗೆ ಕರಕೊಂಡು ಹೋದಾ ನೀನು ಹೋಗುವಮುಂದೆ ನಿನ್ನ ಮೇಲೆ ಇದ್ದ ದಾಗೀನಿಗಳು.

ಬೆಳ್ಳಿಮಂಕಿ ಯುರ್ಡು ತೊಲ ೨೪
ಬೆಳ್ಳಿಡಾಬಾ ಒಂದು ತೊಲಿ ೨೪
ಒಳಿ ಬಂಗಾರವು ತೊಲಿ ೬
ಸರಪಳಿ ಬೆಳ್ಳಿದು ತೊಲಿ ೧೨
ಒಂದು ಭಂಗಾರದ ಗುಂಡಿನಟಿಕ್ಕಿ ತೊಲಿ ೨
ಲಗ್ನದ ಶೀರಿ ರೂ. ೨೫

ಇಷ್ಟು ಸಂಗಾತ ತಗೊಂಡುಹೋದಿ ಆ ನಂತರಾ ನಾನು ನಿನಗೆ ೮|೧೦ ಸಾರೆ ಕರೆಯಲಿಕ್ಕೆ ಬಂದು ನೀನು ನಿನ್ನ ಅಂಣಂದಿರ ವ ತಾಯಿಯ ಮಾತು ಕೇಳಿ ಬರಲಿಲ್ಲಾ ನಾನು ಮುಮ್ಮ ಸಮಜೂತ ಹೇಳಿದರು ಕೇಳಲಿಲ್ಲಾ ಕಾರಣಾ ನಾನು ಎರಡನೇವಳಿಗೆ ಲಗ್ನ ಮಾಡಿಕೊಂಡು ಪ್ರಪಂಚ ನಡಿಸೀನಿ ಈಗ ನೀನು ನನಗೆ ೧೫|೯|೧೯೨೬ ನೇ ನೋಟೀಸು ವಿದ್ಯಾರಣ್ಯ ಛಾಪಗಾನೆಯಿಂದಾ ಕೊಟ್ಟಿದಿ ಅದಕ್ಕೆ ಈ ನೋಟೀಸಿನಿಂದಾ ಉತ್ತರ ಕೊಡೊ ಭಾಗಬಿತ್ತು ನೀನು ನೈದ ದಾಗೀನೆ ವ ಶೀರಿ ಸಹಿತ ಇನ್ನಾದರೂ ಹೊರಟು ಬರಬೇಕು ನಿನ್ನಗೂಡಾ ಚಲೋರೀತಿ ಬಾಳ್ವೆ ಮಾಡೋದು ನಿನ್ನ ಮನಸಿನಲ್ಲಿ ಅದೆ

ನೀನು ಸಾಲಾ (೫೦೦) ರೂ. ಮಾಡಿನಿ ಅಂತಾ ಬರದೀದಿ ಆ ಸಾಲಾ ಯಾತಕ್ಕೆ ಮಾಡಿದಿ ನೆ ಈಗಿನಕಾಲಕ್ಕೋಲಮುನಿ ಬರಸಿಕೊಂಡು ಒಳ್ಳೆ ಚಲೋಮನುಷ್ಯನಿಗೆ ಸಹಾಲ ಸಿಗೋದಿಲ್ಲಾ ನೀನು ಗಂಡನ್ನ ಬಿಟ್ಟವಳು ಪಹೂಲಾಮುನಿ ಏನೂ ಇಲ್ಲದವಳು ಇಂಥವಳಿಗೆ ಸಾಲವನ್ನು ಯಾರುಕೊಟ್ಟರು ಆ ಸಾವಕಾರ ಹೆಸರು ತಿಳಿಸಬೇಕು ಮತ್ತು ತವರಮನಿಯಲ್ಲಿ ಈವರಿಗೆ ಇದ್ದೀದಿ ಅಂದವೇಳೆ ಹೊಟ್ಟಿಬಗ್ಗೆ ಸಾಲಾ ವಗೈರೆ ಕಾರಣವೇನೂ ಇಲ್ಲಾ ನೀನು ಯೆನಾದರೂ ನೆಪ ತೋರಿಸಿ ಸುಳ್ಳ ನೋಟೀಸು ಕೊಟ್ಟು ಅಂಜಿಸಿ ನಿನ್ನ ಸ್ವೇಚ್ಛಾ ಇರಬೇಕು ಅಂತಾಮಾಡಿದಿ ಬರ ನೀನು ಈ ನೋಟೀಸ ಮುಟ್ಟಿದ (೧೫)ದಿವಸದಲ್ಲಿ ದಾಗೀನೇ ಸಹಿತ ನನ್ನಹತ್ತರಾ ಬರದೆ ಹೋದರೆ ವ ನನ್ನ ಪರವಾನಿಗಿ ಇಲ್ಲದೇ ವೃಡಕಿ ಆದರೆ ರೀತಿಪ್ರಕಾರಾ ಫೌಜದಾರಿಯಲ್ಲಿ ಫಿ| ಮಾಡಿ ನಿನಗೆ ವ ನಿನ್ನ ಉಡಕಿ ಆದವನಿಗೆ ಶಿಕ್ಷಾ ಮಾಡಿಸೇನು ವ ನೀನು ಬರದೇ ಹೋದರೆ ನನ್ನ ಮನಸಿಗೆ ಬಂದಾಗೆ ಕಾಯದೇಪ್ರಕಾರ ಕಬ್ಜಾ ಬೇಡಿ ನಿನಗೆ ತರಸತೀನಿ ವ ನೀನು ಪೋಟಗಿ ವಗೈರೆ ಬೇಡಿದರೆ ನಾನು ಕೊಡಲಿಕ್ಕೆ ಪಾತ್ರನಲ್ಲಾ ಯಾಕಂದರೆ ನಿನಗೆ ಚಲೋರೀತಿಯಿಂದಾ ಇಟ್ಟಕೊಳ್ಳಲಿಕ್ಕೆ ನನ್ನ ಕಬೂಲ ಇರತದೆ ಈಗ ನೋಟೀಸಕೊಟ್ಟ ಬಾಬ ನೀನು ಸೊಸಬೇಕು, ತಾ॥೯|೧೧|೧೯೨೬ ಇಸ್ವಿ

ಲಾಲಸಾಹೇಬ ತಂದಿ ಹುಸೇನಸಾಹೇಬ ಪಿಂಜಾರ ಸಾಕಿನ ಬಾಗಲಕೋಟ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟ್ಯಜಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಅದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯಾಗಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, **ಸರಕಾರದ** ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು, ಬಹಳೇ ಸುಲಭವಾಗಿದ್ದು, ಮನಸಿಗೆ ನಾಟಿಸುವಂತಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಉಳಿದಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ !

ವಿಳಾಸಃ—ಕುಲಕರ್ಣಿ ಮೋಟಾರ ಸ್ಕೂಲ.

೪೫೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಲಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಮಿಯು ನಾಶವಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕಟ್ಟಿಸಿ ಮುಖಕ್ಕೆ ಸೌಂದರ್ಯ ತರುವೆವು

ಮಂಗಳೂರ, ಬೆಂಗಳೂರ ಕಡೆಯ

ನುರಿತಂಥಹ

ಪ್ರಿಂಟರರೂ ಕಂಪೋಜಿಟರರೂ

ಬೇಕಾಗಿದ್ದಾರೆ.

ಯೋಗ್ಯತೆಯ ಪ್ರಕಾರ ಪಗಾರವು ದೊರೆಯುವದು.

ಮ್ಯಾನೇಜರ.

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯ ಶ್ರೀಯ
ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ಕೌಶಿಕನೂ ಗರುಡರೂ.

(ರಂಗಭೂಮಿಯ ಸುಧಾರಣೆ ೧ ಇದಕ್ಕೆ ಗರುಡರ ಉತ್ತರ.)

---

(೧) ಈ ಕೌಶಿಕಮಹಾನುಭಾವನು ರಂಗಭೂಮಿಯ ವಿಷಯಕವಾಗಿ ಅದರ ಚಾಲಕ ವರ್ಗದ ಮೇಲೆ "ನುಡಿಪೂರ್ಣ ನಡೆ ಶೂನ್ಯ"ವೆಂಬ ದೋಷವನ್ನು ಕೊಟ್ಟುಬಿಟ್ಟಿದ್ದಾನೆ. ನುಡಿಯುವವರು ನಡೆಯುವ ಅಪೇಕ್ಷೆಯಿಂದಲೇ ನುಡಿಯುವರು. ನಡೆಯಾಗದ್ದರೆ ಅದು ಅನಾನುಕೂಲ ಪರಿಸ್ಥಿತಿಯಿಂದಲೂ, ನಾಟ್ಯ ಸಂಘಗಳ ಮೇಲೆ ಹೆಜ್ಜೆಜ್ಜೆಗೆ ಬರುತ್ತಲಿರುವ ಕಷ್ಟ ನಷ್ಟಾದಿಗಳಿಂದಲೂ, ಮತ್ತು ಈ ಕೌಶಿಕನಂತಹ ಒಂದಿದ್ದರೆ ಸಾವಿರ ದೋಷಾರೋಪಣೆಗಳನ್ನು ಮಾಡಿ ಜನತೆಯ ಕಣ್ಣುಗಳಿಗೆ ನಾಟ್ಯ ಸಂಘಗಳ ಹೇಯವಾದ ಚಿತ್ರವನ್ನು ತೋರಿಸುವದರಿಂದುಂಟಾಗುವ ಔದಾಸೀನ್ಯದಿಂದಲೂ, ಖಂಡಿತವಾಗಿ ಹಾಗಾಗುತ್ತದೆ. ಆ ನಡೆಯಾಗದ ದೋಷವು ಬರೇ ಚಾಲಕ ವರ್ಗದ ಮೇಲೆಯೇ ಇಲ್ಲ.

(೨) ರಂಗಭೂಮಿಯು (ಚರವಿದ್ಯಾಲಯ.) ಕೆಲವು ವ್ಯವಸಾಯಗಳ ಕೈಯಲ್ಲಿ ಸಿಲುಕಿ ಕೆಟ್ಟುಹೋಗಿದೆ, ಅದನ್ನು ಶುದ್ಧೀಕರಿಸಿ ತದ್ವಾರ ಸಮಾಜ ಸೇವೆಯನ್ನು ಮಾಡಬೇಕು. ಈ ಮಾತಿಗೆ ಯಾರು ತಾನೇ ಒಪ್ಪಲಿಕ್ಕಿಲ್ಲ?

(೩) ನಾಟಕಗಳಲ್ಲಿ ನೀನು ಹೇಳುವವಿದ್ಯಾವಂತರಿಲ್ಲದಿದ್ದರೂ, ನೈಸರ್ಗಿಕವಾದ ನಾಟ್ಯಗುಣವಿದ್ದ ವ್ಯಕ್ತಿಗಳೇ, ರಂಗಭೂಮಿಯ ಮೇಲೆ ಬರಲಿಕ್ಕೆ ಸಾಧ್ಯವಿದೆ. ನೀನು ಶಿಲಾಪ್ರತಿಮೆಯ ಅಭಿನಯವನ್ನು ಯಾವದಾದರೊಂದು ಶಾಲೆಯ ಹುಡುಗರ ಗ್ಯಾದರಿಂಗ್ ನಾಟಕದಲ್ಲಿಯಾಗಲಿ; ಅಥವಾ ಹಳ್ಳಿಹಳ್ಳಿಯವರು ತಮ್ಮ ಮನೋರಂಜನಕ್ಕಾಗಿ ಆಡಿವ ನಾಟಕಗಳಲ್ಲಿ ನೋಡಿರಬಹುದು. ವ್ಯವಸಾಯಗಳಿಂದೂ ಹಾಗೆ ಮಾಡಲಾರರು.

(೪) ಮತಿಭ್ರಂಶರಾದ ಹಾಸ್ಯಕಾರರು ಕಾಮಾಂಧ ಪಶುಗಳು ಹೇಗೆಂದು ಬೈಗಳ ಸುರಿಮಳೆಯನ್ನು ನಿನ್ನ ನಾಡ ನಟರ ಮೇಲೆ ಸುರಿಸುವದಕ್ಕೆ ನಿನ್ನ ಮನವು ಹೇಗೆ ಒಪ್ಪಿಕೊಂಡಿತೋ ಕಾಣೆ?

(೫) ರಂಗಭೂಮಿಯನ್ನಾಶ್ರಯಿಸಿದ ನಟರಲ್ಲಿ ನೂರಕ್ಕೆಎಪ್ಪತ್ತೈದರಂತೆ ನಟವೃತ್ತಿಯನ್ನು ತಮ್ಮ ಕುಟುಂಬ ಪೋಷಣೆಗಾಗಿ ಅವಲಂಬಿಸಿದವರಿದ್ದಾರೆ. ಅವನ್ನು ಸಿದ್ಧಮಾಡಿ ಕೊಡುವ ಜಬಾಬ್ದಾರಿಯನ್ನು ನಾನು ವಹಿಸುವೆನು, ನೀನು ಮಾತ್ರ ನಟರ ವಿಷಯವಾಗಿ ನುಡಿದಂತೆ ಸಿದ್ಧಮಾಡಿ ಕೊಡುವ ಜಬಾಬ್ದಾರಿಯನ್ನು ವಹಿಸಲೇ ಬೇಕಾಗುವದು.

೬ ಕೃಷ್ಣಲೀಲೆಯಲ್ಲಿನ ಮತ್ತು ವಿಷಮ ವಿವಾಹದೊಳಗಣ, ರಜನಿ ಚಂದ್ರಿಕೆಯರೊಡನೆ ವಿದೂಷಕನಾಚರಿಸಿದ ಶೃಂಗಾರ ಪರಿಸ್ಕಾರವನ್ನು ನಾನು ಮಾಡಲಾರೆನು. ಮೊದಲು ವರ್ಣಿಸಿದ ದೇಶದಲ್ಲಿ ಆಗಾಗ್ಗೆ ನನಗೆ ತಿರುಗಾಡುವ ಪ್ರಸಂಗವು ಬರುತ್ತಿರುವದರಿಂದ ಅಪದ್ಧರ್ಮವೆಂದು ಹಾಗೆ ಮಾಡಬೇಕಾಯಿತು. ಕರ್ನಾಟಕ ಏಕೀಕರಣದನಂತರದಲ್ಲಿ ಅವೆಲ್ಲವುಗಳನ್ನು ಸುಲಭವಾಗಿ ಬಿಟ್ಟುಬಿಡಬಹುದು.

೭ (ಅಂಬಾ ಪ್ರಸಾದಿಕದವರ ಸುಧಾರಣೆಯು ವಾಗ್ವಿಜೃಂಭಣೆಯಲ್ಲಿ, ಎಂದು ಬರೆದಿರುವಿ.) ನೀನು ಬೇಡುವಷ್ಟು ದಿವಸಗಳ ಮಟ್ಟಿಗೆ ಆ ಸಂಸ್ಥೆಯನ್ನು ನಿನ್ನ ಸ್ವಾಧೀನಕ್ಕೆ ಕೊಡಿಸುವೆನು. ಇದ್ದದ್ದನ್ನು ಹದಗೆಡಿಸದೇ ವಾಗ್ವಿಜೃಂಭಣೆ ಬದಲು ಕೃತಿಯಿಂದ ವಿಜೃಂಭಿಸುವಂತೆ ಮಾಡಿ ಆ ಸಂಸ್ಥೆಯನ್ನು ಅದರ ಚಾಲಕನಿಗೆ ಒಪ್ಪಿಸು. ಹೊರುವಿಯಾ ಈ ಜವಾಬ್ದಾರಿಯನ್ನು?

೮ ದೇಶದ ತರುಣರ ಬ್ರಹ್ಮಚರ್ಯ ವ್ರತವನ್ನು ಸರಿಯಾಗಿ ನಿಲ್ಲಿಸುವದಕ್ಕೆ ಚರವಿದ್ಯಾಲಯಗಳಿಗಿಂತಲೂ ಸ್ಥಿರವಿದ್ಯಾಲಯಗಳು ಎಷ್ಟೋ ಪಾಲು ಹೆಚ್ಚಾಗಿ ಸಾಹಸಮಾಡುವದಕ್ಕೆ ಜವಾಬ್ದಾರ ಇರುತ್ತವೆ. ಅಂತಹ ಲಕ್ಷಾವಧಿ ವಿದ್ಯಾಲಯಗಳನ್ನು ಸಂಪಡಿಸುವ ಶೌರ್ಯವು ನಿನ್ನಲ್ಲಿಲ್ಲದ್ದರಿಂದ ಇಡೀ ಕರ್ನಾಟಕಕ್ಕಿರುವ ಐದಾರು ಚರವಿದ್ಯಾಲಯಗಳ ಮೇಲೆ ಪರಾಕ್ರಮವನ್ನು ತೋರಿಸುವದು, ನಿನ್ನ ಬಾಲಕತನವನ್ನು ಮಾತ್ರ ವ್ಯಕ್ತಪಡಿಸಿತು. ಆ ಕೌಶಿಕನ ಗುಣಗಳ ಅಭಾವವಿದ್ದರೂ ನೀನು ಕೌಶಿಕನೆಂದು ಹೆಸರಿಟ್ಟುಕೊಂಡಂತೆ "ವಿಶ್ವಗುಣಾದರ್ಶದವರೂ" ಹಲಗೇರಿಯ "ಲೋಕಸೇವಕರೂ" ಹೆಸರನ್ನಿಟ್ಟುಕೊಂಡಿರಬಹುದು. ಅದಕ್ಕೆ ಮತ್ಸರವೇಕೆ?

೯ ಇನ್ನು ನಿನ್ನ ಲೇಖನದ ಕೊನೆಯ ಭಾಗಕ್ಕೆ ಉತ್ತರಿಸುವ ಮೊದಲು ನನಗೆ ಕೆಲವು ಸಂಗತಿಗಳ ಪರಿಷ್ಕಾರವು ಬೇಕು.

(ಅ) ನೀನು ಯಾರು? (ಬ) ನಿನ್ನ ಉದ್ಯೋಗವೇನು?

(ಕ) ಜಗದ ಹಿತಾಹಿತಕ್ಕೂ ನಿನ್ನ ಉದ್ಯೋಗಕ್ಕೂ ಏನಾದರೂ ಸಂಬಂಧವಿದೆಯೋ ಅಥವಾ ಇಲ್ಲವೋ ಪರಿಷ್ಕಾರವಾಗಿ ತಿಳಿಸು. ಅಂದರೆ ಪರಿಷ್ಕಾರವಾಗಿಯೇ ಉತ್ತರಿಸುವೆವು. ಹೀಗೆ "ಕೌಶಿಕ" "ಕಂಟಕ" "ಮಂದಾನಿಲ" "ಬಿರುಗಾಳಿ" "ತುಫಾನ" "ಕ್ಷ" "ಲ" "ಫ" ಇತ್ಯಾದಿ ಹೆಸರುಗಳಿಂದ ಮುಂದೆ ಬರುವದು ಬೇಡ ಉತ್ತರವು ಬೇಕಾಗಿದ್ದರೆ ಪರಿಷ್ಕಾರ ಮಾಡು.

[೧೦] ತತ್ಪೂರ್ವದಲ್ಲಿ ಮುಖ್ಯ ಸಂಗತಿಗಳ ವಿಷಯವಾಗಿ ಹೇಳುವೆನು. ಮಿತ್ರಾ! ಕೌಶಿಕ! "ಗೋಡೆಯನ್ನು ಕಟ್ಟಿ ತಟ್ಟೆಯನ್ನೊಡೆಯಬೇಕೆ"ಂದು ಹಿರಿಯರ ಹೇಳಿಕೆ. ಪ್ರಯುಕ್ತ ಈಗಿರುವ ನಾಟ್ಯ ಸಂಘಗಳನ್ನು ಕುಟ್ಟಿ ಪುಡಿಮಾಡುವದಕ್ಕಿಂತ ಮೊದಲು ನೀನು ನಮ್ಮ "ದತ್ತಾತ್ರೇಯ ನಾಟಕ ಸಂಘ" ದ ಸಲುವಾಗಿ ಸುಶಿಕ್ಷಿತರಾಗಿಯೂ, ನೀತಿವಂತರಾಗಿಯೂ, ಕಲಾ ಸೇವೆಯೇ ಧ್ಯೇಯವಾಗಿಟ್ಟುಕೊಂಡ ನಿಸ್ವಾರ್ಥಿಗಳಾಗಿಯೂ ವಿತ್ತದ ಜವಾಬ್ದಾರಿಯನ್ನು ಹೊರಲಿಕ್ಕೆ ಸಿದ್ಧರಾಗಿಯೂ, ಅದನ್ನು ನಾಶಹೊಂದಂತೆ ಭದ್ರಪಡಿಸುವರಾಗಿಯೂ, ಇರುವ ಯುವಕರ ಗುಂಪನ್ನು ಕರೆದುಕೊಂಡು ಬಾ ಅಂದರೆ ಅದೇ ದಿವಸವೇ ನಿನ್ನ ಸ್ವಾಧೀನಕ್ಕೆ ಲೆಕ್ಕಪತ್ರದಂತೆ ಒಪ್ಪಿಸಿಬಿಡುವದಕ್ಕೆ ನಾನು ಸಿದ್ಧನಿದ್ದೇನೆ. ಬರೆ ನಡುಮನೆಯ ಕೂರತ್ವವು ಬೇಡಾ ವೃತ್ತ ಪತ್ರಿಕೆಗಳ ಕಾಗದಗಳನ್ನು ಕಪ್ಪು ಮಾಡುವದೂ ಬೇಡಾ. ಹಾಗಾಗಬೇಕು, ಹೀಗಾಗಬೇಕು, ಎಂದು ಮನೋರಾಜ್ಯಗಳನ್ನು ಮಾಡುವದೂ ಬೇಡಾ. ಮೇಲೆ ಹೇಳಿದಂತಹ ಯುವಕರ ಗುಂಪನ್ನು ಕಟ್ಟಿಕೊಂಡುಬಂದು ಅನಾಯಾಸವಾಗಿ ಸಿದ್ಧವಿರುವ ಸಂಸ್ಥೆಯನ್ನು ಸ್ವಾಧೀನಪಡಿಸಿಕೊ, ನೋಡುವಾ! ಇದರಲ್ಲಿ ನಿನ್ನ ಪರೀಕ್ಷೆಯಾಗಿಯೇ ಹೋಗುವದು. ನೀನು ಕರ್ಮವೀರನೋ ಅಥವಾ ಪರೋಪದೇಶ ಪಾಂಡಿತ್ಯವನ್ನು ತೋರಿಸುವ ಪಂಡಿತನೋ? ಕನ್ನಡ ನಾಡಿಗೆ ಗೊತ್ತಾಗಲಿ ವಿಶೇಷ ಸಂಗತಿ ನಿನ್ನ ಉತ್ತರ ನೋಡಿ.

—ಸದಾಶಿವರಾವ ಗರುಡ.

 

1 For chevrolet new Cars & Trucks on hire purchage system
2 For quick: Economical and satisfactory service, please go for the welknno Chevrolet cars, Trucks products in the Deccan
3 For all spare parts of the Various cars specially Chevrolet, Ford, Dodge and Overland cars,
4 For the cheapness in tyre tubes of all manufactares,
5 For all kinds of Lubricating oils Grease etc,
6 For undertaking all kinds of tyre tube repairs in Vulcansing by a specialist to give satisfactory work,
7 For Building motor bodies of Various types by workers onin uplodate line.
8 For all kinds of motor repairs.
9 For second hand otot Cars and lossies at cheap rates.

Apply to:-

Messrs Royal motor service
Automobile Engineers
Bagalkot.

Sub dealers
Chevrolet car
for the Bijapur Dist,

ಅಲಭ್ಯಲಾಭವು

(೧) ಶೆವ್ಹರ್‌ಲೆಟ್ ಹೊಸಗಾಡಿಗಳನ್ನು ಮತ್ತು **ಟ್ರಕ್ಸ**ಗಳನ್ನು ಬಾಡಗಿಯಿಂದಾಗಲೀ **ಮಾರಲಿಕ್ಕಾಗಲೀ** ತೆಗೆದುಕೊಳ್ಳುವದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
(೨) ವೇಗವಾಗಿ, ನಿಯಮಿತವಾಗಿ, ಮತ್ತು ಚನ್ನಾಗಿ ನಡೆಯುವಂಥ ಶೆವ್ಹರ್‌ಲೆಟ್ ಗಾಡಿಗಳೂ, ಟ್ರಕ್ಸಗಳೂ ದಕ್ಷಿಣಪ್ರಾಂತದಲ್ಲಿ ಬಹು ಪ್ರಸಿದ್ಧಿಯಾಗಿವೆ
(೩) ಶೆವ್ಹಲೆಟ್, ಫೋರ್ಡ, ಡಾಜ,ಮತ್ತು ಒವ್ಹರಲಂಡ. ಎಲ್ಲತರಗಳ ಬೇರೆ ಬೇರೆ ಭಾಗಗಳು ನಮ್ಮಲ್ಲಿದೊರೆಯುತ್ತವೆ
(೪) ಎಲ್ಲತರದ ಕಂಪನಿಗಳಿಂದ ವಿಶೇಷತಃ ರಿಜೇಲಿನ್ ಕಂಪನಿಯಿಂದ ಟ್ಯೂಬ್ ಮತ್ತು ಟಾಯರುಗಳು ಸುಲಭ **ಕ್ರಯಕ್ಕೆದೊರೆ**ಯುತ್ತವೆ.
(೫) ಮೋಟಾರ ಬಂಡಿಗಳಿಗೆಪಯೋಗಿಸುವಂಥ ಎಲ್ಲ ತರದ ಎಣ್ಣೆಯು ಸಿಗುವದು.
(೬) ಟ್ಯೂಬ್ ಮತ್ತು ಟಾಯರಗಳನ್ನು ರಿಪೇರಿಯನ್ನು (ವಲ್ಕನಾಯಜಿಂಗ) ಆ ಕೆಲಸದಲ್ಲಿ ನಿಷ್ಣಾತರಾದವರಿಂದ ಮಾಡಿಸಿ ಯೋಗ್ಯ ವೇಳ್ಯಗೆ ಕೊಡುವೆವು
(೭) ನಾನಾತರದ ಬಂಡಿಗಳ ಭಾಗ.ಗಳನ್ನು ಉತ್ತಮ ರೀತಿ ರಿಪೇರಿ ಮಾಡುವವರಿಂದ ಮಾಡಿಸಿ ಕೊಡುತ್ತೇವೆ.
(೮) ಎಲ್ಲ ಬಗೆಯ ಮೋಟಾರುಗಳ ದುರಸ್ತಿ ಕೆಲಸವು ಮಾಡಲ್ಪಡುವದು
(೯) ಹೊಸ ಮತ್ತುಸೇಕಂಡ ಹ್ಯಾಂಡ ಮೋಟಾರಗಳೂ ಲಾರಿಗಳೂ ಬೇಕಾದ ವೇಳೆಗೆ ಯೋಗ್ಯ ದರದಿಂದ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸಃ—
ವಿಜಾಪೂರ ಜಿಲ್ಲೆಯಲ್ಲಿ ಚವರೋಲೆಟ್ಟ ಮೋಟಾರಗಳಿಗೆ ಸಬ್‌ಎಜಂಟರು
ಮೆಸರ್ಸ ಧಿ. ರಾಯಲ್ ಮೋಟಾರ ಸರ್ವ್ಹಿಸ ಬಾಗಲಕೋಟೆ.

ಅಸ್ಸಲ, ಗ್ಯಾರಂಟೀಡ, ಸ್ವಿಸ್‌ಮೇಕ ಗೋಲ್ಡ ಗಿಲ್ಟ
ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟಿ. ಖ. ಪ್ರತ್ಯೇಕ
ಟಿಪ್ಪಣಿಃ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮವಗ್ಯೆರೆ ಹಚ್ಚಿ ಕಳಿಸುವೆವು
ಲಿಬೆರೋ ವಾಚ ಕಂ. (India) ಮುಂಬೈ ನಂ. ೪

ಶಾವಿಗೆ! ಗುಲಕಂದ!! ಹಪ್ಪಳ!!!

ಸುಗಂಧ ದ್ರವ್ಯಗಳು.

ಊದಿನ **ಕಡ್ಡಿ**, ಕಸ್ತೂರಿ ಬಿಲ್ಲೆ, ಅತ್ತರ, ಸೀಗೆಕಾಯಿ ಪುಡಿ, ಭೃಂಗಾಮಲಕ ತೈಲ, ರೋಜವಾಟರ, ಮಡ್ಡಿ, ಹಾಲಮಡ್ಡಿ ಇವೆ ಮೊದಲಾದ ಬೆಂಗಳೂರಿನ ಸುಪ್ರಸಿದ್ಧವಾದ ಎಲ್ಲ ಬಗೆಯ ಸುಗಂಧ ದ್ರವ್ಯಗಳು ನಮ್ಮಲ್ಲಿ ಅಗ್ಗವಾಗಿ ದೊರೆಯುತ್ತಿವೆ. ಅಲ್ಲದೆ ಗುಲಕಂದ, ಬೆಂಗಳೂರಿನ ರಸಭರಿತವಾದ ಮಾವಿನ ಹಣ್ಣುಗಳ ಮುರಬ್ಬಾ, ಬಹು ರುಚಿಕಟ್ಟಾಗಿರುವ ಸಾರಿನ ಪುಡಿ, ಮಸಾಲೆ, ಚಟ್ನಿ, ಶಾವಿಗೆ, ಹಪ್ಪಳಗಳೂ ದೊರೆಯುವವು ವ್ಯಾಪಾರಸ್ಥರಿಗೆ ಯೋಗ್ಯ ಕಮಿಶನ್. ಕ್ಯಾಟಲಾಗಿಗಾಗಿ ಬರೆಯಿರಿ.
ವಿಳಾಸಃ— ಸ್ವದೇಶಿ ಪರಫ್ಯುಮರಿ ವರ್ಕ್ಸ, ನಂ. ೯೭-೯೮
ಪೂಗಾರ ಬೀದಿ, ಚಿಕ್ಕಪೇಟೆ, ಬೆಂಗಳೂರು ಸಿಟಿ.

ರ ನಂ. ೬೭೭

ವಾ ಚಂದಾ ೧—೧೩—೦ ಮಾತ್ರ

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯಥಾ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಸಾಂಗಲಿಯ ಶ್ರೀ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ವಿ.ತಿ ಕಾರ್ತಿಕ ಶುದ್ಧ ೭ ಶಕ ೧೮೪೮ ತಾ|೧೯-೧೧-೧೯೨೬. | ಸಂಖ್ಯೆ ೩೨

ಸಂಪಾದಕೀಯ ಭೂಮಿ.

(ಓಂ)

ನನ್ನ ಮನಸಿನ ಮೋಹವು ಕಟ್ಟಿದೆ ನಾನು ।
ನಿನ್ನ ಚೇತನದ ಮಹಿಮೆಯಿಂದ ತಾಳ್ಕೆಳ ದೊವು ।
ಒಮ್ಮೆ ಮಾಡಿದ ಚೆನ್ನ ಸೌಂದರ್ಯದ ಸ್ತುತಿಯ ಸೊಂಡು ಚಿನ್ನಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವಿಲಾಸಕ್ಕಾಗಿ ।
ತನ್ನನ್ನು ಕಲ್ಲಾಗಿ ಹಿಡಿಸಲು ಸಿದ್ಧವಿದೆ ।
ನನ್ನ ಕಸ್ತೂರಿಯ ನಿನ್ನ ಗಂಧವನು ಬೀರುವ ಗಂಧವಹನೆಂದು ತಿಳಿಯೊ

ಅಂದೇಶಾ ಶನಯು ವಕ್ತ

ನಿಪ್ಪಾಣಿ ಇಲಕಲ್ಲ ರೇಲ್ವೆಯ ಮಾರ್ಗವು ಹೇಗೆ ಹೋಗುತ್ತದೆ? ಎಲ್ಲೆಲ್ಲಿ ಸ್ಟೇಶನ್ನುಗಳಾಗುತ್ತವೆ? ಎಂಬುವೆಲ್ಲ ಈಗ್ಗೆ ನಿಶ್ಚಯಿಸಲ್ಪಡುತ್ತಲಿವೆ. ಈ ಸಂದರ್ಭದಲ್ಲಿ ನಿಪ್ಪಾಣಿಯಿಂದ ಇಲಕಲ್ಲನ ವರೆಗೆ ಯಾವಯಾವ ಪಟ್ಟಣಗಳಿಗೆ ಸಂಬಂಧವಿದೆಯೋ ಅವರೆಲ್ಲ ತಮ್ಮ ತಮ್ಮ ಊರುಗಳಿಗೆ ಸ್ಟೇಶನ್ನುಗಳು ಎಲ್ಲೆಲ್ಲಿ ಆಗುವುವು, ತಮಗೆ ಅವುಗಳಿಂದ ಅನುಕೂಲವಿದ್ದರೆ ಅದು ಹೇಗೆಂಬುವುಗಳನ್ನೆಲ್ಲ ಪರೀಕ್ಷಿಸಿ, ಆ ಬಗ್ಗೆ ಬೇಗನೆ ಪ್ರಯತ್ನಿಸಬೇಕು. ಗುಳೇದಗುಡ್ಡವು ಪ್ರಸಿದ್ಧವಾದ ವ್ಯಾಪಾರಸ್ಥಳವು. ಅದರ ಈ ಪಟ್ಟಣದಿಂದ ಎರಡು ಮೈಲುಗಳ ಮೇಲಿರುವ 'ಬೂದಿನಾಳ' ಸ್ಟೇಶನ್ ಆಗಬೇಕೆಂದು ರೇಲ್ವೇ ಯವರು ಯೋಚಿಸಿದ್ದರಿಂದ ಗುಳೇದಗುಡ್ಡದ ಜನರು ಆ ಬಗ್ಗೆ ಚಳವಳ ಮಾಡಲು ಪ್ರಾರಂಭಿಸಿದ್ದಾರೆ. ಗುಳೇದಗುಡ್ಡದಂತಹ ವ್ಯಾಪಾರದ ಪಟ್ಟಣಕ್ಕೆ ರೇಲ್ವೇ ಸ್ಟೇಶನ ಸಮೀಪದಲ್ಲಿರುವದೇ ಸಮಂಜಸವಾದುದು. ಇಲ್ಲವಾದರೆ ವ್ಯಾಪಾರಕ್ಕೆ ತೊಂದರೆಯಾಗುತ್ತದೆ. ದಿನಾಲು ಸಾವಿರಗಟ್ಟಲೆ ರೂಪಾಯಿಗಳ ಸರಕು ಗುಳೇದಗುಡ್ಡದಲ್ಲಿ ತಯಾರಾಗುತ್ತಲಿದ್ದು ಅದು ಪರಸ್ಥಳಕ್ಕೆ ಹೋಗುವದು. ಸ್ಟೇಶನ್ನು ದೂರ ಬಿಟ್ಟು ಹೋಗುವದರಿಂದ ಸರಕುಗಳನ್ನು ಕಳುಹಿಸಲು ಖರ್ಚು ಹೆಚ್ಚಾಗುವದು. ಮೇಲಾಗಿ ಪ್ರವಾಸಮಾಡುವ ವ್ಯಾಪಾರಸ್ಥರಿಗಾದರೂ ಅನನುಕೂಲವಾಗುವದು. ಆದುದರಿಂದ ರೇಲ್ವೇಯವರು ಇತ್ತಕಡೆಗೆ ಹೆಚ್ಚಾಗಿ ಲಕ್ಷ್ಯಕೊಟ್ಟು ಯೋಗ್ಯ ವಿಚಾರ ಮಾಡತಕ್ಕದ್ದು. ಗುಳೇದಗುಡ್ಡದ ಜನರು, ಹೆಚ್ಚಿನ ಉತ್ಸಾಹದಿಂದ ಈ ಕೆಲಸವನ್ನು ಕೈಕೊಳ್ಳಬೇಕು. ಮುನಸಿಪಾಲ್ಟಿಯವರೂ, ತಾಲೂಕ ಲೋಕಲ್ ಬೋರ್ಡಿನವರೂ, ಬದಾಮಿ ಮಾಮಲೇದಾರರೂ, ಜಿಲ್ಲಾ ಕಲೆಕ್ಟರರೂ, ಜನರ ಈ ಅನಾನುಕೂಲತೆಗಳ ಕಡೆಗೆ ಈಗಲೇ ಗಮನ ಕೊಡಬೇಕು. ಒಂದು ಸಲ ಬಂಧಲ್ಲಿಯೇ ಸ್ಟೇಶನ್ ಆಗತಕ್ಕದ್ದೆಂದು ನಿಶ್ಚಯವಾಗಿ ಕೆಲಸವು ಪ್ರಾರಂಭವಾದಮೇಲೆ, ಪ್ರಯತ್ನಿಸಿದರೆ ಫಲವಾಗದು.

ಮಹಾತ್ಮಾ ಗಾಂಧಿಯವರು ಕರ್ನಾಟಕ ಸೇವಾದಲದ ೩೦ ಸಾವಿರ ರೂಪಾಯಿಗಳ ಖಾದಿಯ ಮಾರಾಟದ ಕಾರ್ಯಕ್ರಮದ ಬಗ್ಗೆ "ಯಂಗಇಂಡಿಯಾ"ದಲ್ಲಿ ಹೀಗೆ ಬರೆದಿರುವರು:— "ಇದೇ ಸೋಮವಾದಿಯು ಒಳ್ಳೇ ಕಾರ್ಯಕ್ರಮವು. ಅದು ಕೈಕೊಂಡು ಬಂದುದಾದರೆ ದಲ್ಲಿ ಭೂಷಣವೇ. ಈ ಬಗ್ಗೆ ನನ್ನ ಹಾಗೂ ನನ್ನ ಸಂಗಡಿಗರ ಅನುಭವವು ಹೀಗಿದೆ:— ಮುಖ್ಯವಾಗಿ ಕಲಸ ಮಾಡತಕ್ಕವರಿಗೆ, ಅರಳೆ ಹಂಚಿಗಳನ್ನು ಮಾಡುವ, ಹಾಗು ನೂಲುವ ಜ್ಞಾನವು ಚನ್ನಾಗಿರಬೇಕು. ಅದು ಬೇರೆ ಬೇರೆ ಬಗೆಯ ಖಾದಿಯ ಭೇದವನ್ನರಿತವರಾಗಿರಬೇಕು. ಹುತಾತ್ಮ ಹಿಂದೂ ಖಾದಿಯನ್ನು ಸುಳ್ಳು ಖಾದಿಯನ್ನು ಪರೀಕ್ಷಿಸುವದು, ಅವರಿಗೆ ಗೊತ್ತಿರಬೇಕು. ಏನೇ ಆಗಲಿ ಈ ಕಾರ್ಯಕ್ರಮದ ಬೆಳವಣಿಗೆಯನ್ನು ನಾನು ಒಳ್ಳೇ ಕಳವಳದಿಂದ ನಿರೀಕ್ಷಿಸುವೆನು. ಮುಂದಿನ ವರ್ಷ ಮಾರಾಟದ ದಿನಗಳಲ್ಲಿ ನಾನು ಕರ್ನಾಟಕ ಪ್ರಾಂತವನ್ನು ಸಂದರ್ಶಿಸಲು ನನಗೆ ಆಮಂತ್ರಿಸುವ ಇಷ್ಟವಿದೆಯೆಂದು ತಿಳಿಸಿರುವರು. ನಾನೇ ಖಾದಿಯ ವ್ಯಾಪಾರಿಯಾಗಿ ಬಂದಾಗ್ಗೆ ಸಹ ಕೇವಲ ೩೦ ಸಾವಿರ ರೂಪಾಯಿಗಳ ಖಾದಿಯನ್ನು ಮಾರುವದಾಗಿ ಸ್ವಯಂಸೇವಕರಿಗೆ ನಾನು ಆಶ್ವಾಸನೆ ಕೊಡಬೇಕಾಗಿಲ್ಲ. ನಾನು ನನ್ನ ಬರುವಿಕೆಗೆ ಉತ್ತರವಾದ ಬೆಲೆಯನ್ನಿಟ್ಟಿರುವೆನೆಂಬುದನ್ನು ಸಭಾಸದರು ತಿಳಿಯಕೊಳ್ಳಲಿ. ನನ್ನನ್ನು ಅತ್ತಕಡೆಗೆ ಎಳೆಯಬೇಕಾಗಿದ್ದರೆ, ಈಗಿನಗಿಂತಲೂ ಹೆಚ್ಚಾಗಿ ನನ್ನನ್ನು ಆಕರ್ಷಿಸುವಂತಹ ಒಳ್ಳೇ ನೋಟವನ್ನು ಕಾರ್ಯಕ್ರಮವನ್ನು ಗೊತ್ತುಪಡಿಸಬೇಕು. ನನ್ನನ್ನು ಬರುವೆಯಾಗಬೇಕೆಂದು ಹಿಡಿದವರು ಅನೇಕರಿದ್ದಾರೆ. ಆದರೆ ಕನ್ನಯಮಾತ್ರ ಓರ್ವರೇ ಯಾರು ಪದನ್ನು ಅವರು ಮಾಡಿರುತ್ತಾರೆ. ಅನೇಕ ಹಣವನ್ನು ಬರುವೆಯಾಗುವವರಲ್ಲಿ ನನ್ನ ವಿಶ್ವಾಸವಿಲ್ಲದ್ದರಿಂದ, ನನ್ನನ್ನು ಕರೆಸುವದರಲ್ಲಿ ಜಯಶೀಲರಾಗಬೇಕೆನ್ನುವವರು, ಒಳ್ಳೇ ಆಕರ್ಷಿಸುವ ಕನ್ಯಾದಕ್ಷಿಣೆಯನ್ನು ಕೊಡಬೇಕಾಗುವದು. ಆದುದರಿಂದ ನಾನು ಮುಂದಿನ ವರ್ಷದ ಪ್ರಾರಂಭದಲ್ಲಿ ಕರ್ನಾಟಕವನ್ನು ಸಂದರ್ಶಿಸುವೆನೆಂಬುದರ ಮೇಲೆ ಯಾವ ಬಗೆಯ ಆಧಾರವನ್ನಿಡುವದು ಅವರಿಗೆ ಹಿತ!! ಮಹಾತ್ಮರ ಅರ್ಥಗರ್ಭಿತವಾದ ಹಾಗು ಸಲಿಗೆಯ ಈ ಸ್ಪಷ್ಟೋಕ್ತಿಗಳಿಂದ ನಮ್ಮ ಸ್ವಯಂಸೇವಕರ ಉತ್ಸಾಹವು ಎಳ್ಳಷ್ಟಾದರೂ ಕುಂದದೆಂಬುದನ್ನು ನಾವು ಬಲ್ಲೆವು. ಅಖಂಡ ಕರ್ನಾಟಕಕ್ಕೆ ೩೦ ಸಾವಿರ ರೂಪಾಯಿಗಳ ಖಾದಿಯ ಮಾರಾಟದ ವಿಚಾರವು ಹಿಂದಿನಿಂದ ಈ ಮಂಡಲದವರಿಗೆ ಬಂದಿತು. ಮೊದಲು ಕ್ರಿ ಪಲ್ಲಿಯಲ್ಲಿ ೩೦ ಸಾವಿರ ರೂಪಾಯಿಗಳ ಖಾದಿಯ ಮಾರಾಟವನ್ನು ಮಾಡಬೇಕೆಂದು ನಮ್ಮ ತರುಣ ಸ್ವಯಂಸೇವಕರ ವಿ

ಚಾರವಿದ್ದಿತು. ಆದರೆ ಕರ್ನಾಟಕದಲ್ಲಿಯ ಮಹಾಜನಗಳ ಔದಾಸೀನ್ಯವನ್ನು ನೆನೆದು, ಅವರು ತಮ್ಮ ಮೊದಲಿನ ವಿಚಾರವನ್ನು ಬಿಡಬೇಕಾಯಿತು. ಈಗಲೋ ಮಹಾತ್ಮರ ನುಡಿಗಳನ್ನು ತಿಳಿದು, ಮಹಾತ್ಮರ ಪಾದಧೂಳಿಯು ಈ ನಮ್ಮ ಕರ್ನಾಟಕದ ಎಲ್ಲ ಭಾಗಗಳಲ್ಲಿಯೂ ಬೀಳಬೇಕೆಂಬ ಲವಲವಿಕೆಯಿದ್ದ ಕರ್ನಾಟಕದ ಮಹಾಜನಗಳು ಎಚ್ಚತ್ತು, ಪ್ರತಿಜಿಲ್ಲೆಗೆ ೪೦ ಸಾವಿರ ರೂಪಾಯಿಗಳ ಖಾದಿಯ ಮಾರಾಟದ ಬಗ್ಗೆ ವಚನಕೊಟ್ಟರೆ, ನಮ್ಮ ಸ್ವಯಂಸೇವಕರು ಈ ಪ್ರಚಂಡ ಕಾರ್ಯಕ್ಕೆ ಕೈಹಾಕಿ, ಮಹಾತ್ಮರ ದರ್ಶನ ಪಾದಸ್ಪರ್ಶಗಳು ಕನ್ನಡಿಗರಿಗೆ ದೊರೆಯುವಹಾಗೆ ಪ್ರಯತ್ನಿಸಲು ಸಿದ್ಧರಿದ್ದಾರೆ. ಆದರೆ ಮಹಾಜನಗಳು ಇವರಿಗೆ ಏನೆಂದು ಉತ್ತರಕೊಡುವರು?

ವಾಙ್ಮಯ ವಿಚಾರ

ಸ್ವೀಕಾರ

(೧) **ತರುಣ ಕರ್ನಾಟಕ** ಬೆಳಗಾಂವಿ ಜಿಲ್ಲೆಯ ಬೈಲಹೊಂಗಲದಲ್ಲಿ ಪಾಟೀಲ ಬಾಬಾಗೌಡರ ಸಂಪಾದಕತ್ವದಲ್ಲಿ ಹೊರಟ ಹೊಸ ವಾರ ಪತ್ರಿಕೆ. ಬೆಳಗಾಂವಿ ಜಿಲ್ಲೆಯಲ್ಲಿ ಕನ್ನಡ ಪತ್ರಿಕೆಯೊಂದರೆ ಎಲ್ಲರೂ ಸಂತೋಷಪಡುವ ಮಾತು. ಕರ್ನಾಟಕದ ಮುಖ್ಯ ಜಿಲ್ಲೆಗಳಿಗೂ ಕನ್ನಡ ಪತ್ರಿಕೆಗೇನೆ ಆದರೆ ಬೆಳಗಾಂವಿಯಲ್ಲಿರಲಿಲ್ಲ. ಒಂದು ದೊಡ್ಡಕೊರತೆಯು, ಈಗ್ಗೆ ದೂರಾದಂತಾಯಿತು. ಇದೇ ಪ್ರಕಾರವಾಗಿ ಬಳ್ಳಾರಿ ಜಿಲ್ಲೆಯಲ್ಲಿಯೂ ಒಂದು ವಾರಪತ್ರಿಕೆಯು ಪ್ರಕಟವಾದರೆ ಕನ್ನಡನಾಡಿನ ಎಲ್ಲ ಮುಖ್ಯ ಜಿಲ್ಲೆಗೂ ಮುಖ ಪತ್ರಿಕೆಗಳಾದಂತಾದವು. ತರುಣ ಕರ್ನಾಟಕದ ವಾ. ಚಂದಾ ೩೪೦ **ತರುಣ ಕರ್ನಾಟಕವು** ತನ್ನ ಹೆಸರಿಗೆ ತಕ್ಕಂತೆ ತಾರುಣ್ಯದ ಹೊಸ ವಿಚಾರಗಳು ಕನ್ನಡಿಗರಲ್ಲಿ ವಿಶೇಷತಃ ಬೆಳಗಾಂವಿ ಕನ್ನಡಿಗರಲ್ಲಿ ನೆಲೆಗೊಳ್ಳುವಂತೆ ಪ್ರಯತ್ನಿಸಿ ಚಿರಾಯುವಾಗಲೆಂದು ಬಯಸುತ್ತೇವೆ

(೨) **ಸದ್ಗುರು ಪಾದಸೇವೆ.** ಉಡುಪಿಯಲ್ಲಿ ಶ್ರೀ. ಕೆ ಆರ್ ವೆಂಕಟೇಶ ಶರ್ಮರ ಸಂಪಾದಕತ್ವದಲ್ಲಿ ಹೊರಟ ಹೊಸ ಮಾಸಪತ್ರಿಕೆ. ವಾ. ಚಂದಾ ೩-೧೦-೦ ವಿಮರ್ಶೆಯು ಯಥಾವಕಾಶವಾಗಿ.

ಇಂಗ್ಲೀಷ ಗೀತಗಳು.

ವಿಮರ್ಶೆ.

ಪರಿವರ್ತನಕಾರರು ಶ್ರೀ. ಬೆಂ ಗ ಳೂ ರು ಕರ್ನಾಟಕ ಸಂಘದಿಂದ ಇದೀ ಪ್ರ ಕ ಟ ವಾ ದ ಪು ಸ್ತ ಕ ವು ಕಾ ಣಿ ಕೆಯಾಗಿ ಬಂದಿದೆ. ಬಂಧು ಪ್ರೇಮದಿಂದ ಅದನ್ನು ಕಾಣುತ್ತೇವೆ ಕೆಂದು, ಅದರ ಗುಣಪರೀಕ್ಷೆಯನ್ನಾದರೂ ಮಾಡಬಯಸುತ್ತೇವೆ. ಶ್ರೀ. ಎಂಬವರು ತಮಗೆ ಮೆಚ್ಚಿದ ಕೆಲ ಆಂಗ್ಲಕವಿಗಳ ಕವಿತೆಗಳನ್ನೂ ಆರಿಸಿ ಗೀತಗಳನ್ನಾಗಿ ಕನ್ನಡಿಸಿ ಇದರಲ್ಲಿ ಕನ್ನಡ ಜನತೆಗೆ ಕಾಣಿಕೆಯಾಗಿ ಕೊಟ್ಟಿದ್ದಾರೆ. ಶ್ರೀಕಂಠಯ್ಯನವರು ಹೊಸಯುಗದ ವಾಙ್ಮಯ ಭಕ್ತರಿದ್ದು ಇಲ್ಲಿಯವರೆಗೆ ಅಪ್ರಸಿದ್ಧವಾಗಿಯೇ ಇದ್ದಿತು. ಗುಪ್ತಗಾಮಿನಿಯಾಗಿ ಹರಿಯುವ ಅವರ ಸರಸ್ವತಿಯನ್ನು ಬಯಲಿಗೆ ಎಳೆದು ತಂದದ್ದಕ್ಕಾಗಿ ನಾವು ಕರ್ನಾಟಕ ಸಂಘವನ್ನು ಅಭಿನಂದಿಸುತ್ತೇವೆ. ಇನ್ನು ಉಭಯಭಾಷಾ ಕೋವಿದರಾಗಿದ್ದು ಉಚ್ಚತರದ ಕವಿತಾ- ಕಲಾ- ಶಿಕ್ಷಣವನ್ನು ಹೊಂದಿದವರೆಂದಮೇಲೆ ಅವರು ಪರಿವರ್ತಿಸಿದ ಗೀತಗಳು ಕನ್ನಡಕಾವ್ಯದ ಮಹತಿಯನ್ನೂ ಏಳ್ಗೆಯನ್ನೂ ಕರ ಮೊಡಗುವವೆನ್ನುವದು ಭಾಗ್ಯೋದಯವಲ್ಲವೆ?

ಈಗ ಈ ಗೀತಗಳ ಪ್ರತ್ಯಕ್ಷ ಪ್ರಯೋಜನವನ್ನು ಕುರಿತು ಯೋಚಿಸುವಾ. ಒಂದು ಸಾಮಾಜಿಕಿತವಾದ ಭಾಷೆಯಿಂದ ಅಂತಹದೇ ಆಗಲಿಚ್ಛಿಸುವ ಮತ್ತೊಂದು ಭಾಷೆಗೆ ನೆರವು ಸಮೃದ್ಧಿಯಾಗಬೇಕು. ಭಾಷೆಯ ಬೆಳಗಿಗೆ ಸಾಹಿತ್ಯವು ಸೂತ್ರ ವಿಂಲಿಕ್ಕಬೇಕು. ವಾಙ್ಮಯಾಭಿರುಚಿಯು ಹಬ್ಬುತ್ತಿರಬೇಕು. ಅಂತೇ ಆಂಗ್ಲಕವಿಗಳ ಭಾವ ಜಿಜ್ಞಾಸೆಯು ಎಷ್ಟೆಷ್ಟು ಜನರಲ್ಲಿ ಬೆಳೆಯುವದೋ ಅಷ್ಟು ಈ ಗೀತಗಳ ಪ್ರಯೋಜನ ಆಂಗ್ಲಕಾವ್ಯವೆಲ್ಲ ನಮಗೇನು ಅರ್ದವಾಗಲಿಕ್ಕಿಲ್ಲ. ಆದರೆ ನಮ್ಮಲ್ಲಿಯವರ ಕವಿಗಳ ಮಾಲಿಕೆಗೆ ಸೇರಿದಾಗುವ ವರ್ಡ್ಸವರ್ಥ್ಮುಂತಾದ ಕೆಲವು ಕವಿಗಳ ಕಾವ್ಯಜೀವನವನ್ನು ಕಂಡುಹಿಡಿದು ನಾವು ಹಿಂದುಸ್ಥಾನದ ಆಚೆಗೆ ದಯಾಪ್ರೀತಿಯ ದೃಷ್ಟಿಯನ್ನು ಚೆಲ್ಲತೊಡಗುವೆವು ಈ ಸಹಾನುಭೂತಿಯನ್ನು ಅಪೇಕ್ಷಿಸಿಯೇ ಗೀತಗಳು ಸರ್ವಸಾಮಾನ್ಯರಲ್ಲಿ ಪ್ರಸಾರವಾಗಲೆಂದು ನಮ್ಮ ಕೋರಿಕೆ. ಗೀತಗಳನ್ನು ಒಂದೊಂದಾಗಿ ಓದಿದರೆ ಭಾಷೆಯ ಹೊಸತನವೂ ಕನ್ನಡತನವೂ ಅಚಿರವಾಗಿ ಹೇಳಿಸುವದು. ಕನ್ನಡ ಶಬ್ದಗಳನ್ನು ಸರಿಯಾಗಿ ಹೊಂದಿಸಿ ಪರಿವರ್ತನಕಾರರು ಓದುಗರಿಗೆ ಕನ್ನಡವನ್ನು ಅಭ್ಯಾಸಮಾಡುವ ಬೇರೊಂದು ಬಗೆಯ ಪುರಿಶ್ರಮವನ್ನೇ ಬೆನ್ನುಹಚ್ಚಿದ್ದಾರೆ. ಸಂಸ್ಕೃತದ ಅಲಂಕಾರವಿಲ್ಲದೆಯೂ ಮೆರೆಯುವ ಅಚ್ಚಗನ್ನಡದ ಅಂದವನ್ನು ಇಲ್ಲಿ ನಿಂತು ನಿಂತು ನೋಡಬಹುದು. ಆದರೆ ಶ್ರೀ ಇವರ ಕವಿತಾಬಂಧವು ಕೆಲವೆಡೆಯಲ್ಲಿ ಮಿತಾಕ್ಷರಿಯಾಗಿ ಸೂಚಿಸಿಬಿಡುವ ಲಕ್ಷಣವುಳ್ಳದ್ದು. ಮೊದಲೇ ಆಂಗ್ಲಕವಿಗಳ ಪರಿಚಯವು ಬಹು ರಸಿಕರಿಗೆ ಇರುವದಿಲ್ಲ ಅದರಲ್ಲಿ ಷಲ್ಲಿ ಮೊದಲಾದವರ "ಪ್ರೇಮ"ದ ಅತಿಪ್ರಿಯವಾದ ಅನುಭವದ ಭಾವನೆಗಳು ಹೀಗಾಗಿ ಇಂಗ್ಲೀಷವನ್ನರಿಯದ ಕನ್ನಡಿಗರಿಗೆ ಒಮ್ಮೊಮ್ಮೆ ಚಮತ್ಕಾರವೆನಿಸಿ ಕಣ್ಣುಕಟ್ಟಿ ಅಡವಿಯಲ್ಲಿ ಬಿಟ್ಟಂತಾಗುವದು. ಆದರೆ ರಾಷ್ಟ್ರೀಯ ಗೀತಗಳು ಅನೇಕವಾಗಿರುವದರಿಂದ ಭಾಷಾ ಗೀತೆಗಳನ್ನು ಬಲ್ಲವರಾಗದಿದ್ದರೂ ನಡೆಯುವದು. ಪ್ರತಿಯೊಂದು ಪದ್ಯದ ಪರಿವರ್ತನವು ವಿಮರ್ಶೆಗೆ ಯೋಗ್ಯವಾಗಿದ್ದರೂ ವೃತ್ತಪತ್ರದ ವಿಮರ್ಶೆಯಲ್ಲಿ ಸಾಧ್ಯವಿಲ್ಲ. ಪರಿವರ್ತನದಲ್ಲಿ ಕೇವಲ ಭಾಷಾಂತರವಿರದೆ, ಅನುರೂಪವಾದ ರೂಪಾಂತರವೂ ಇದೆ. ಆದರೆ 'Auld Robin Gray' ಎಂಬ ಕವಿತೆಗೆ ಮುದಿ ಯರಾಮಗೌಡ ಎಂದು ಕನ್ನಡಿಸಿ 'Kempontelt' ಎಂಬ ಸೇನಾನೀಯ ಹೆಸರನ್ನು ಹಾಗೆಯೇ ಇಟ್ಟದುದು ನಮಗೆ ಸರಿದೋರಲಿಲ್ಲ '.ಕೆಂಪೆನ್‌ಫೆಲ್ಟ್' 'ಬಾನಾಡಿ' ಬಡವನಹುಡುಗಿ' ಎಂಬವುಗಳು ಉತ್ತಮ ಪರಿವರ್ತನಗಳಲ್ಲಿ ಒಂದೆಂದು.

ಮುಗಳಿ ರಂಗನಾಥ.

ಹಿಂದುಸ್ಥಾನ

ಮದ್ರಾಸದಲ್ಲಿ ಸ್ವರಾಜ್ಯ ವಾದಿಗಳಿಗೆ ಕಾಯದೇಮಂಡಲದ ಚುನಾವಣೆಯಲ್ಲಿ ಹೆಚ್ಚಾಗಿ ಮತದೊರಕಿವೆ.

ಪರದೇಶಕ್ಕೆ ಕಲಿಯಲು ಹೋಗುವ ವಿದ್ಯಾರ್ಥಿಗಳಿಗೆ ಎಲ್ಲ ನಿಜವಾದ ಸಂಗತಿಗಳನ್ನು ಅರುಹುವುದಕ್ಕಾಗಿ, ಮುಂಬೈ ವಿಶ್ವವಿದ್ಯಾಲಯದಿಂದ, ನವಂಬರ ೧ನೇ ತಾರೀಖಿನಿಂದ 'ದಿ ಇಂಡಿಯನ್ ಸ್ಟೂಡಂಟ್ಸ ಇನ್ ಫಾರೇನ ಬ್ಯೂರೋ" ಎಂಬ ಸಂಸ್ಥೆಯು ಸ್ಥಾಪಿಸಲ್ಪಟ್ಟಿದೆ.

ಮದ್ರಾಸಿನಲ್ಲಿ ಈ ಸಾರೆಯ ಕಾಂಗ್ರೆಸ್ಸದ ಅಧ್ಯಕ್ಷರು ಕಾಯದೇ ಮಂಡಲ ಚುನಾವಣೆಯಲ್ಲಿ ಆರಿಸಲ್ಪಟ್ಟಿರು.

ಗರುಡರಿಗೆ ಕೌಶಿಕನ ಉತ್ತರ.

ಕನ್ನಡಿಗನ ಸಂಪಾದಕರಿಗೆ,

ನಿಮ್ಮ ಪತ್ರದಲ್ಲಿ ಪ್ರಕಟವಾದ ನನ್ನ "ರಂಗಭೂಮಿಯ ಸುಧಾರಣೆ (೧) ಎಂಬ ಲೇಖನದ ಕುರಿತು ಶ್ರೀಯುತ ಗರುಡರ ಕೊಟ್ಟ ಉತ್ತರದ ಪ್ರತ್ಯುತ್ತರಕ್ಕೆ ದಯವಿಟ್ಟು "ಕನ್ನಡಿಗ" ನಲ್ಲಿ ಎಡೆಕೊಡು

ಅವರ ಉತ್ತರದಲ್ಲಿರುವ ಮಾತುಗಳಿಗೆ ನಾನು ಅವೇ ಅನುಕ್ರಮ ಸಂಖ್ಯೆಯನ್ನನುಸರಿಸಿ ಪ್ರತ್ಯುತ್ತರ ಕೊಡುತ್ತಿರುವೆನು. ವಾಚಕರು ಅವರ ಉತ್ತರ ಮಾಲಿಕೆಯನ್ನ ಇದೇ ಕಾರ್ತಿಕ ಶು. ೭ ರ ಕನ್ನಡಿಗನಲ್ಲಿ ಕಾಣಬಹುದು.

೧. —ನುಡಿದಂತೆ ನಡೆಯದ್ದು ತಪ್ಪಿಗೆ ಬರೇ ಪರಿಸ್ಥಿತಿಗಳೊಂದನ್ನು ಅವರು ಮುಂದೊತ್ತರಲಿ. ಹೀಗೆ ಪರಿಸ್ಥಿತಿಯ ಆಶ್ರಯವನ್ನು ಹುಡುಕುವದು ಎಲ್ಲಾ ಸಂದರ್ಭಗಳಲ್ಲಿಯೂ ಮಾನ್ಯವಾಗಿಲ್ಲ, ಕನ್ನಡ ರಂಗಭೂಮಿಯ ಮುಂದೆ ಒಂದಿರುವ ಪರಿಸ್ಥಿತಿಯು ಕಠಿಣವೆಂಬುದನ್ನು ನಾವು ಅಲ್ಲಗಳೆಯುವದಿಲ್ಲ ಅವರ ಉತ್ತರ ೬ ರಂತೆ ಅವರೇ ಒಪ್ಪುವ ದೋಷವನ್ನು "ರಂಗಭೂಮಿಯ,, ಸುಧಾರಣೆಗೆ ಹೊರಟವರು ನಾವು ಇತರ ಮಂಡಳಿಗಳಂತೆ ನಮ್ಮಲ್ಲಿ ಪ್ರೇಕ್ಷಕರನ್ನು ಶೃಂಗಾರದಿಂದ ಮಂಕುಗೊಳಿಸುವ ಪದ್ಧತಿಯಿಲ್ಲವೆಂದು ಅವರು, **ಅದೇ ಗಳಿಗೆಯಲ್ಲಿ**, ಉತ್ತರ ೬ ರಲ್ಲಿ ಹೇಳಿದ ಉನ್ಮಾನ ಶೃಂಗಾರ ಚಿತ್ರಗಳನ್ನ ಜನರ ಮುಂದೆ, **ಪ್ರಕಟ**ಸುವಾಗ ಇವರು ನುಡಿದಂತೆ ನಡೆಯುವವರೆಂದು ಹೇಗೆ ತಿಳಿಯಬೇಕು ? ಇದಕ್ಕೂ **ಪರಿಸ್ಥಿತಿಯು** ಆಶ್ರಯವೆ ?

ಶ್ರೀಯುತರಂತೆ, ಲೇಖಕನೂ ರಂಗಭೂಮಿಯ ಅಭಿಮಾನಿಯು, ಅಂದಮಾತ್ರಕ್ಕೆ, ತಮ್ಮವರ ದೋಷಗಳನ್ನು ಪ್ರಕಟಿಸಿದರ ದ್ರೋಹಿಯಾಗುವನೇ ? ಅವನು ೧ ಕ್ಕೆ ೧೦೦ ನ್ನು ನುಡಿದಿಲ್ಲ ಕಂಡವನ್ನು ನುಡಿದರೆ ತಿದ್ದಿಕೊಳ್ಳಲಾಗದಿದ್ದವರಿಗೆ ಹಾಗೆ ತೋರಬಹುದು ಮಾತ್ರವಲ್ಲ—ಹೇಯದೃಶ್ಯಗಳನ್ನು ತೋರಿಸುವುದಾದರೆ, ಅವುಗಳ ವಿಷಯ ಹೇಯ ಚಿತ್ರವನ್ನ ಬರೆದು ಜನರ "ದಾಕ್ಷಿಣ್ಯ" ವೆಂಬ ಔಷಧದಿಂದಲೇ ಕಣ್ಣನ್ನು ತೆರೆಯಿಸುವಂತೆ ಮಾಡಿದರೆ ಅನ್ಯಾಯವಾಗಲಾರದು. ಈ ಎಲ್ಲಾ ವಿಷಯಗಳಲ್ಲಿ ಲೇಖಕನು "ರಂಗಭೂಮಿಯ ನಿಜ ಆರಾಧಕನೇ ಹೊರತು ಲಯಕಾರನಲ್ಲನೆಂದು ಅವರು ತಿಳಿಯಲಿ.

೨. —ಇದಕ್ಕೆ ಉತ್ತರವು ಅವಶ್ಯವಿಲ್ಲ.

೩. —ಕಾಲೇಜಿನ ಬಿರುದು ಹೊತ್ತವರೇ ವಿದ್ಯಾವಂತರೆಂಬುದು ನನ್ನ ತಿಳುವಳಿಕೆಯಲ್ಲಿಲ್ಲ.

ಅಭಿನಯದ ಕುರಿತು ಹೇಳುವುದಾದರೆ, "ಶಾಲಾಬಾಲಕರ" ಅಭಿನಯವು ಹಲವು ಬಾರಿ ವ್ಯವಸಾಯಗಳನ್ನು ನಾಚಿಸುವಂತಿತ್ತೆಂಬುದನ್ನು ಶ್ರೀಯುತರಾದರೂ ಮನಗಂಡಿರಬಹುದು.

ಇನ್ನು ವ್ಯವಸಾಯಿಗಳಲ್ಲಿ ನಾನು ಸೂಚಿಸಿದ ಅಭಿನಯದೋಷವು 'ಇಲ್ಲವೇ ಇಲ್ಲ'' ವೆಂದು ಮಾಡುವ ಪ್ರತಿಪಾದನೆಯ ನಿಜತ್ವವು ರಂಗಭೂಮಿಯ ಪರಿಶೀಲಕರಿಗೆ ವಿದಿತವಾದ ವಿಷಯ. ಈ ಕುರಿತು "ಇಲ್ಲವೇ ಇಲ್ಲ'' ವೆಂದು ಅಲ್ಲಗಳೆಯುವ ಶ್ರೀಯುತರ ನುಡಿಗೆ ಉತ್ತರವನ್ನ. "ತುಂಬಿದ ಕೊಡ ತುಳುಕುವದಿಲ್ಲ'' ಎಂಬ ಗಾದೆಯಿಂದ ತಿಳಿಯಬಹುದು.

೪. —ಈ ನಾಟಕ ಪ್ರಪಂಚದಲ್ಲಿ, **ದೇವ, ದಾನವ**, ಎಂಬ ಪರಿಭೇದವಿಲ್ಲದೆ, ಎಲ್ಲರೂ ಮತಿಭ್ರಂಶರಾದ ಹಾಸ್ಯಕಾರರು, ಉನ್ಮಾನ ಶೃಂಗಾರದ ಸಾಮ್ರಾಜ್ಯದಲ್ಲಿ ಮುಳುಗೇಳುವ ಕಾಮಾಂಧ ಪಶುಗಳು '' ಎಂಬ ನನ್ನ ನುಡಿಯಲ್ಲಿ "ಮತಿಭ್ರಂಶ ಹಾಸ್ಯಕಾರರು'' ಮತ್ತು ಕಾಮಾಂಧ ಪಶುಗಳು' ಈ ಶಬ್ದಗಳು, ನಟರಿಗೆ ಅನ್ವಯಿಸುವುವೋ ಇಲ್ಲವೆ ಭೂಮಿಕೆಗಳಿಗೋ ಎಂಬುದನ್ನು ಶ್ರೀ. ಗರುಡರು ಚೆನ್ನಾಗಿ ವಿಚಾರಿಸಲಿ.

೫. — ಶ್ರೀಯುತರು ೧೯೨೩ ರಲ್ಲಿ. ಎಂದರೆ ಅಸಹಕಾರಿತೆಯ ಉತ್ಸವವು ತುಂಬಿತುಳುಕುತ್ತಿದ್ದ ಕಾಲದಲ್ಲಿ ಈಗ ಇನ್ನುವಂತೆ "ನಟವರ್ಗದವರಿಗೆ ಜೀವನವನ್ನು ಕಲ್ಪಿಸುವುದು. ತಮ್ಮ ಧ್ಯೇಯವೆಂದು ಸಾರಿದ್ದರೇ ಇಲ್ಲವೆ'' ರಂಗಭೂಮಿಯ ಸುಧಾರಣೆ-ಸಮಾಜಸುಧಾರಣೆ' ಎಂದು ಹೇಳಿದ್ದರೇ ? ಈ ತಂತ್ರವೂ ಆಪದ್ಧರ್ಮವೇ ? ಈ ಪ್ರಶ್ನೆಯ ಹೆಚ್ಚಿನ ಉತ್ತರವು ೯-೧೦ ರಲ್ಲಿ ಸೇರಿದೆ.

೬ — ಶ್ರೀಯುತರು ನಾವು ಸೂಚಿಸಿದ, 'ಅಶೃಂಗಾರ'ದ ಪುರಸ್ಕಾರ ಮಾಡದಿದ್ದರೆ, ಹೋಗಲಿ. ಅದು ತಿರಸ್ಕಾರಕ್ಕೂ ಪಾತ್ರ' ವೆಂಬುದನ್ನು ಅವರು ಅರಿಯರೇ ?

ಈ ಮೊದಲು ವರ್ಣಿಸಿದ ದೇಶದಲ್ಲಿ ಆಗಾಗ್ಗೆ ನನಗೆ ತಿರುಗಾಡುವ ಪ್ರಸಂಗವು ಬರುತ್ತಿದ್ದುದರಿಂದ, ಹಾಗೆ ಆಪದ್ಧರ್ಮವೆಂದು ಮಾಡಬೇಕಾಯಿತು ' ಎಂದು ಬರೆಯುವರಷ್ಟೇ. 'ಆ ವರ್ಣಿತವಾದ ಕನ್ನಡ ನಾಡಿನ ಭಾಗವಾವುದು ? ಎಲ್ಲಿ ಇವರು ಆ ಅಶ್ಲೀಲ ಶೃಂಗಾರವನ್ನು ಸ್ವೀಕರಿಸುವ 'ಆಪದ್ಧರ್ಮ'ವನ್ನು ಸ್ವೀಕರಿಸ ಬೇಕಾಯಿತು. ? ಕನ್ನಡ ನಾಡಿನ ಇತರ ಭಾಗಗಳಲ್ಲಿ ಅಪಥ್ಯಬೀಜದ ಆ ಔಷಧವು ಯಾವಭಾಗದಲ್ಲಿ ಅವಶ್ಯವೆನಿಸಿತಂತೆ ? ಆ ರೀತಿಯ. ಪತನವು ಬಂದಿರುವುದಾದರೆ, ಅದು ಈ ನಾಡಿನ, ಒಂದು ಕಡೆಹೆಚ್ಚು, ಇನ್ನೊಂದರಲ್ಲಿ ಕಡಿಮೆ ಯಾಗಿರುವುದೇ ? ಕರ್ನಾಟಕದ ಏಕೀಕರಣಕ್ಕೂ ಇದಕ್ಕೂ, ಏನು ಸಂಬಂಧ ಏಕೀಕರಣದ ಮೊದಲು ಬೇಕಾದ ಈ "ವಿಷಬೀಜವು'' ನಂತರ ಬೇಕಾಗುವುದಾದರೂ ಯಾವ ರೀತಿಯಿಂದ ?

ಇನ್ನು "ಆಪದ್ಧರ್ಮದ'' ಕುರಿತು-ಬ್ರಹ್ಮಚರ್ಯನಾಶಕ ಉನ್ಮಾನ ಶೃಂಗಾರವು, ತಮ್ಮಲ್ಲಿ ಅರೀತಿಯಿಲ್ಲವೆಂದೂ, **ತಾವು ಸುಧಾರಕರೆಂದೂ''** ಹೇಳಿಕೊಂಡ ಇವರು ಇದರ ಅವಶ್ಯಕತೆಯನ್ನು ಯಾವ ನೀತಿ ಶಾಸ್ತ್ರದಲ್ಲಿ ತೋರಿಸುವರು ? ಯಾವುದರಿಂದ ರಂಗಭೂಮಿಯು ಅವನತಿಯಾಯಿತೋ ಅದರಿಂದಲೇ ಇವರು ಸುಧಾರಣೆ ಮಾಡುವರೇ ? 'ಆಪದ್ಧರ್ಮ' ವೆಂಬುದರ ಬದಲು' ದುಡ್ಡಿನ ಕೊರತೆಗಾಗಿ' ಎಂದರೆ, ಉದ್ದೇಶವು ಸ್ಪಷ್ಟವಾಗುತ್ತಿತ್ತು ಪವಿತ್ರ ರಂಗಭೂಮಿಯನ್ನ 'ಆಪದ್ಧರ್ಮ' ವೆಂದು ಈ ರೀತಿ ಅಪಮಾನಿಸುವುದೇ ? "ಆಪದ್ಧರ್ಮ''ವೆಂದು ಸತಿಯು ಪಾತಿವ್ರತ್ಯ ಬಿಕರಿ ಮಾಡುವುದು ನ್ಯಾಯವೆಂದಾದರೆ ಇದು ನ್ಯಾಯವೆಂದು ಒಪ್ಪುವೆವು.

೭. —ಅಡುಗೆ ಮಾಡುವವನಿಗೇನೇ ಅಡುಗೆ ರುಚಿ ಹೇಳುವ ಅಧಿಕಾರ ಇತರರಿಗಿಲ್ಲವೆಂದು (ಉಣ್ಣುವವರಿಗೆ) ಶ್ರೀಯುತರ ಮತವೇ ?

ಶ್ರೀಯುತರು. ಆ ಪ್ರ. ಮಂಡಳಿಯನ್ನು ಸುಧಾರಣೆಯ ನೆಲುವಾಗಿ ಕೊಡಿಸಲು ಸಿದ್ಧರಿರುವುದು ನಿಜವಾದರೆ ನಾವು ಹೋಗಲೂ ಸಿದ್ಧರಿರುವೆವು. ಅದನ್ನು ಮೊದಲು ವಿಚಾರಿಸಿ ತಿಳಿಸಲಿ.

೮. —ಬ್ರಹ್ಮಚರ್ಯವು ಸ್ಥಿರವಿದ್ಯಾಲಯದ ಜವಾಬದಾರಿಯೆಂದ ಮಾತ್ರಕ್ಕೆ—ಚರವಿದ್ಯಾಲಯಗಳಿಗೆ ಅದರ ನಾಶ ಸಾಧಿಸುವ ಅಧಿಕಾರವಿಲ್ಲ. ಚರವಿದ್ಯಾಲಯದ ಕುರಿತು ಪ್ರಕೃತ ಲೇಖಕನು. ಯಥಾನುಶಕ್ತಿ ಸೇವೆಯನ್ನು 'ಬ್ರಹ್ಮಚರ್ಯ'ದ ಕುರಿತು

[ಇನ್ನೂ ಇದೆ ಮುಂದಕ್ಕೆ ಬಿಡಲಾಗಿದೆ]

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯ ಕ್ಷೇತ್ರಗಳ ಪರಿಚಯ.

(ಲೇಖಾಂಕ ೧೨).

ಶ್ರೀ ಕ್ಷೇತ್ರ [illegible] ಯಾದಲ್ಲಿ ವಿಷ್ಣುಪಾದದ ಮಹಾತ್ಮ್ಯೆಯೇ ಹೆಚ್ಚು. ಪಿತೃಋಣ ತೀರಿಸತಕ್ಕವರು ತಮ್ಮ ತಮ್ಮ ಶ್ರದ್ಧೆಗೆ ತಕ್ಕಂತೆ ಇಲ್ಲಿ [illegible] ವಿನಿಯೋಗದ ಕಾರ್ಯದಲ್ಲಿ ತೊಡಗಿಕೊಳ್ಳಬಹುದು. ಫಲ್ಗುಶ್ರಾದ್ಧ, ವಿಷ್ಣುಪದಶ್ರಾದ್ಧ ಮತ್ತು ಅಕ್ಷಯವಟಶ್ರಾದ್ಧ ಇವು ಮೂರು ಬಹಳ ಮಹತ್ವವಾದ ಶ್ರಾದ್ಧಗಳು. ಇವನ್ನು ಎಲ್ಲರೂ ಮಾಡಲೇ ತೀರತಕ್ಕದ್ದು. ಇದಕ್ಕೆ ಪಂಚಗಯಾ ಎಂಬ ಹೆಸರು. ಗಯಾದಲ್ಲಿ ಸ್ನಾನಮಹಾತ್ಮೆಯ ಸ್ಥಳಗಳು ಅತ್ಯಂತವಾಗಿವೆ. ಇಂತಹ ಪ್ರಮುಖವಾದ ಸ್ಥಳಗಳಲ್ಲಿ ಅನೇಕರು ಶ್ರಾದ್ಧಮಾಡುವರು. ಇದಕ್ಕೆ ಅಷ್ಟಗಯಾ ಎಂಬ ಹೆಸರು. ಒಟ್ಟಾರೆ ೩೬೫ ಸ್ನಾನಮಹಾತ್ಮೆಗಳಿದ್ದು, ಈ ೩೬೫ ಶ್ರಾದ್ಧಗಳನ್ನು ಪೂರ್ವದಲ್ಲಿ ಅನೇಕರು ಮಾಡುತ್ತಿದ್ದರಂತೆ. ಆದರೆ ಇದನ್ನು ದಿನಾಲು ಒಂದೇ ಶ್ರಾದ್ಧದಂತೆ ಮಾಡಬೇಕಾದ್ದರಿಂದ ಗಯಾದಲ್ಲಿ ಒಂದು ವರ್ಷ ಸಂಪೂರ್ಣ ಇರಲೇಬೇಕಾಗುವದು. ಇದಕ್ಕೆ ಮಹಾಗಯಾ ಎಂಬ ಹೆಸರಿದೆ. ಆದರೆ ಈ ಕಲಿಯುಗದ ಪ್ರಪಂಚಯಾತ್ರೆಯ ಮಹಾತೊಂದರೆಗಳಲ್ಲಿ ಮಹಾಗಯಾ ಮಾಡುವಂತಹ ಮಹಾನುಭಾವರು ಇಲ್ಲವೇಯಿಲ್ಲ. ಈ ಕಾರಣಕ್ಕಾಗಿ ಆ ೩೬೫ ಸ್ನಾನಗಳನ್ನೂ, ಆ ಬಗ್ಗೆ ಬೇಕಾಗುವ ಮಂತ್ರಾದಿ ಕರ್ಮಗಳನ್ನೂ ಬಲ್ಲಂತಹ ಪುರೋಹಿತ ಮಹಾತ್ಮರೂ ಇಲ್ಲ. ಈಗ್ಗೆ ಇಂತಹ ಅವನತಿಸ್ಥಿತಿಯುಂಟಾಗಿದೆ! [illegible] ಸ್ಥಳಗಳು ಎಂಬುವದು ಸಹ ಈಗ್ಗೆ ಜನರಿಗೆ ಗೊತ್ತಾಗುವಂತಿಲ್ಲ! [illegible] ಪಂಚಗಯಾ ೩ ದಿನಗಳಲ್ಲಿ ತೀರುವದು. ಆ [illegible] ವಿಷ್ಣುಪಾದಪೂಜೆ, ಗಂಗಾರಾಧನೆಗಳನ್ನು ತೀರಿಸಿಕೊಂಡು [illegible] ಯಾತ್ರಿಕರು ಹೊರಡುವರು. ಅಷ್ಟಗಯಾ ತೀರಿಸಬೇಕಾದರೆ ೮-೧೦ ದಿನಗಳು ಬೇಕಾಗುವವು.

ಈ ಅಷ್ಟಗಯಾ ಸ್ನಾನಮಹಾತ್ಮೆಗಳಲ್ಲಿ, ಸೀತಾಕುಂಡವು ನೋಡತಕ್ಕಂತಹದಿದೆ. ಫಲ್ಗುನದಿಯ ಆಚೆಯ ದಂಡೆಯಲ್ಲಿ ಈ ಸ್ಥಾನವಿದೆ. ಶ್ರೀ ರಾಮಚಂದ್ರನು ತನ್ನ ತಂದೆ ದಶರಥನ ಶ್ರಾದ್ಧ ಮಾಡುವದಕ್ಕೆ ಎಲ್ಲ ಸಿದ್ಧತೆಯನ್ನು [illegible] ಶ್ರಾದ್ಧ ಪ್ರಾರಂಭಿಸತಕ್ಕವನಿದ್ದನು. ಆಗ್ಗೆ ಅವನೊಂದು ಸಾಮಾನವನ್ನು ತರಲಿಕ್ಕೆ ಮರೆತಿದ್ದು ಅವನಿಗೆ [illegible] ಕೂಡಲೇ ಅವನು ಅದನ್ನು ತರಲಿಕ್ಕೆ ಹೋದನು. [illegible] ಆಗಿದ್ದದರಿಂದ ಶ್ರೀ ರಾಮಚಂದ್ರನು ಬೇಗನೇ [illegible] ಹಾದಿ ನೋಡಿ, ನೋಡಿ, ಬೇಸತ್ತು, ದಶರಥನು "ನಾನಿನ್ನು ದಾರಿ ನೋಡಲಂತೆ, ಕಾಲವು ಬಹಳವಾಯಿತು. ನಾನು ಮರಳಿ ಪಿತೃಲೋಕಕ್ಕೆ ಹೋಗಬೇಕಾಗಿದೆ, ಅದ್ದರಿಂದ, ಹೇ ಸೀತೆ! ನೀನಿಲ್ಲಿದ್ದ ಉಸುಬಿನಿಂದ ಪಿಂಡಗಳನ್ನು ಮಾಡಿ ನನಗೆ ಅರ್ಪಿಸು. ನಾನದರಿಂದ ಸಂತುಷ್ಟನಾಗುವೆ" ನೆಂದು ಸೀತೆಗೆ ಹೇಳಿದನಂತೆ! ದಶರಥನ ದೇಹವಲ್ಲಿದ್ದಿಲ್ಲ. ಆದರೆ ಅವನ ಸ್ವರವು ಮಾತ್ರ ಕೇಳಬಂದಿತು. ಅಪ್ರಕಾರ ಸೀತಾದೇವಿಯು ಮೊದಲನೇ ಪಿಂಡವನ್ನು ಕೊಡಲು ಕೈಯತ್ತಿ ಇನ್ನು ನಿಲ್ಲಲಿಲ್ಲತಕ್ಕವಳು. [illegible] ಶ್ರೀ ದಶರಥಮಹಾರಾಜನ ಬಲಗೈ ಮಾತ್ರ ನೆಲದಿಂದೆದ್ದು, ಆ ಪಿಂಡವನ್ನು ಸ್ವೀಕರಿಸಿತು! ಮೂರೂ ಪಿಂಡಗಳನ್ನು ತೆಗೆದುಕೊಂಡು ಸಂತುಷ್ಟನಾದೆನೆಂದು ಹೇಳಿದನಂತೆ! ಅದೇ ಸ್ಥಾನದಲ್ಲಿ ಈಗ್ಗೆಯೂ ಪಿಂಡವನ್ನು ಕೊಡುವ ಸೀತೆಯ ಮೂರ್ತಿಯೂ, ಅದನ್ನು ಸ್ವೀಕರಿಸುವ ದಶರಥನ ಕೈಯೂ, ಇವೆ!!

ಪಂಚಗಯಾ ಶ್ರಾದ್ಧದಲ್ಲಿಯ ಮೂರನೇ ಶ್ರಾದ್ಧವಾದ ಅಕ್ಷಯವಟ ಶ್ರಾದ್ಧವು ಬಹಳ ಮಹತ್ವದ್ದಾಗಿದೆ. ಗಯಾವಾಳರು "ಸುಫಲ" ವನ್ನು ಕೊಡತಕ್ಕದ್ದು ಈ ವೃಕ್ಷದ ನೆರಳಿನಲ್ಲಿಯೇ. ಸುಫಲಕೊಡುವಾಗ್ಗೆ, ದಂಪತಿಗಳ ಕೈಗಳನ್ನು ಹೂಮಾಲೆಯಿಂದ ಕಟ್ಟಿ, ತಮಗೆ ಇಷ್ಟವಾದ ದಾನಾದಿಗಳನ್ನು ಆ ದಂಪತಿಗಳು ಕೊಡುವೆನೆಂದು ವಚನವನ್ನೀಯುವವರೆಗೆ ಅವರು ಕೈ ಬಿಚ್ಚುವದಿಲ್ಲ. ಗಯಾವಾಳರು ಕಾಡುವದೆಂದರೆ ಇಲ್ಲಿಯೇ. ಅವರ ಮನಸ್ಸಿನಂತೆ ಆದಕೂಡಲೇ, ಕೈಬಿಚ್ಚಿ, "ನಾನು ಸಂತುಷ್ಟನಾಗಿದ್ದೇನೆಂ" ದು ಹೇಳಿ "ತೀರ್ಥೇ ಪಿತರ ಸ್ವರ್ಗ ಕೂ ಗಯೇ" ಎಂಬದಾಗಿ ಹೇಳುವರು. ಇದಾಯಿತೆಂದರೆ ಪಿತೃಋಣದ ವಿಷಯದಲ್ಲಿ ದೊಡ್ಡದೊಂದು ಭಾರವು ತಲೆಯ ಮೇಲಿಂದ ಕೆಳಗ್ಗಿಳಿದಂತಾಯಿತೆಂದು ಭಾವಿಕರು ತಿಳಿಯುವರು. ಈ ಬಗ್ಗೆ ಹೇಳುವದೆಂದರೆ ಹೀಗಿದೆ:—

> ಕಾಂಕ್ಷಂತಿ ಪಿತರಃ ಪುತ್ರಾನ್ ನರಕಾದ್ಭಯಭೀರವ !
> ಗಯಾಂ ಯಾಸ್ಯತಿ ಯಃ ಪುತ್ರಃ ಸನಸ್ತ್ರಾತಾಭವಿಷ್ಯತಿ ।
> ಗಯಾಪ್ರಾಪ್ತಂ ಸುತಂ ದೃಷ್ಟ್ವಾ ಪಿತೄಣಾಮುತ್ಸವೋ ಭವೇತ್ ।
> ಪದ್ಭ್ಯಾಮಪಿ ಜಲಂ ಸ್ಪೃಷ್ಟ್ವಾ ಸೋऽಸ್ಮಭ್ಯಂ ಕಿಂ ನ ದಾಸ್ಯತಿ ।

ಇನ್ನು ಇದೊಂದು ಮಹಾ ಫಲದ ಕಾರಣವನ್ನು ಕುರಿತು ಬರೆಯುವೆನು. ಗಯಾಸುರನೆಂಬ ಅಸುರನಿದ್ದನು. ಅವನು ಬ್ರಹ್ಮನಿಂದ [illegible] ಘೋರವಾದ [illegible] ದ್ದರಿಂದ ಧರ್ಮರಾಜನು ಒಂದು [illegible] ಒಂದು ಶಿಲೆಯನ್ನಿಟ್ಟನು (ಇದೇ [illegible] ದಲ್ಲಿ [illegible] ಧರ್ಮಶಿಲೆಯು) ಆ ಶಿಲೆಯ ಮೇಲೆ [illegible] ಅಲ್ಲಿ ಆದಿಗದಾಧರ [illegible] ಕಟ್ಟಕೊಂಡು, ಹಗಲು ರಾತ್ರಿ [illegible] ಸಂರಕ್ಷಣೆಗಾಗಿ ನಿಂತುಬಿಟ್ಟನು. [illegible] ಈ ಸ್ಥಾನವು ಅತ್ಯಂತ [illegible] ಗಲು ಶ್ರೀತವಾರಾಹಕಲ್ಪದಲ್ಲಿ ಗಯಾ [illegible] ಕ್ರಿಯೆಗಳನು ಮಾಡಲು, ಅಂದಿನಿಂದ [illegible] ಆಕಾಂಕ್ಷಿತ ಗಯಾ' ಎಂಬ ಹೆಸರಿನಿಂದ ಆಕ್ಷೇ [illegible] ಗೊಳಿಸಿದರು. ಆದುದರಿಂದ ನರಕದಲ್ಲಿದ್ದಂತ [illegible] ತಮ್ಮ ಮಕ್ಕಳಿಂದ ಆ ಧರ್ಮಶಿಲೆಯಲ್ಲಿ ಪಿಂಡಹಾಕಿಸಿಕೊಂಡರೆ, ಉದ್ಧಾರರಾಗುವರು. ಇತ್ತ ಗಯಾಸುರನು ತನ್ನ [illegible] ಪ್ರಭಾವದಿಂದ ಸಂಚಯವಾದ ಪುಣ್ಯಫಲದಿಂದ, ಬೇಕಾದಂತಹ ಪಾಪ ಕರ್ಮಗಳನ್ನಾಚರಿಸಿದ ಪಾಪಿಗಳಿದ್ದರೂ ಅವರ [illegible] ದು, ಅವನಲ್ಲಿ ಮೊರೆಯಿಟ್ಟಕೂಡಲೇ, ಅವರನ್ನು ಉದ್ಧಾರಮಾಡಿ, ಸ್ವರ್ಗಕ್ಕೆ ಕಳುಹಿಸುತ್ತಿದ್ದನು. ಈ ಸುಲಭವಾದ ಸ್ವರ್ಗಾರೋಹಣದಿಂದ ಸ್ವರ್ಗದಲ್ಲಿ ಜನರ ಸಂಖ್ಯೆಯು ವಿಪರೀತ [illegible] ನರಕದಲ್ಲಿಯ ಸಂಖ್ಯೆಯು ಅರ್ಥಾತ್ ಕಡಿಮೆ [illegible] ಗಾಗಿ ಬ್ರಹ್ಮನ ಸೃಷ್ಟಿಕ್ರಮದಲ್ಲಿ ವ್ಯತ್ಯಾಸ [illegible] ವಿಷ್ಣುವಿಗೆ ಮೊರೆಹೋದನು. ಆಗ್ಗೆ ಶ್ರೀ [illegible] ರನ ತಲೆಯಲ್ಲಿದ್ದ ಧರ್ಮಶಿಲೆಯಮೇಲೆ

ತನ್ನ ಬಲಪಾದವನ್ನಿಡಲು, ಗಯಾಸುರನಿಗೆ ಎಂಟಕ್ಕೆ ಬಾರ ದಾಯಿತು. ಹೀಗಾದಕೂಡಲೇ ಗಯಾಸುರನಿಗೆ ಮುಕ್ತಿಯಾಗ ಬೇಕೆಂಬ ಸಂಕಲ್ಪವಿದ್ದಂತೆ ಅವನು ಮುಕ್ತಿಯನ್ನು ಹೊಂದಿದ ನು. ಆದರೆ ಮುಕ್ತಿಯನ್ನು ಪಡೆಯುವ ಪೂರ್ವದಲ್ಲಿ ಗಯಾ ಸುರನು ವಿಷ್ಣುವಿಗೆ "ಹೇಪ್ರಭೋ ನಾನು ಪಾಪಿಗಳನ್ನು ಇಷ್ಟು ದಿನ ರಕ್ಷಿಸುತ್ತಲಿದ್ದೆನು. ಈಗ್ಗೆ ನೀನು ಅದಕ್ಕೆ ಆತಂಕವನ್ನುಂ ಟು ಮಾಡಿದಿಯಲ್ಲ" ಎಂಬದಾಗಿ ಕೇಳಲು, "ನೀನು ಚಿಂತಿಸ ಬೇಡ, ಯಾರು ಈ ನನ್ನ ಪಾದದಲ್ಲಿ ಪಿಂಡವನ್ನು ಹಾಕುವರೋ ಅವರ ಪಿತೃಗಳು ಸ್ವರ್ಗವನ್ನು ಪಡೆಯುವರು. ನಿನ್ನ ಪವಿತ್ರತೆ ಮವಾದ ಭಕ್ತಿಯ ಸಂಸ್ಮರಣೆಗಾಗಿ ಕಲಿಯುಗದಲಿ ಸಹ ಈ ಧವ ಗಿರಿಯ ಮಹಾತ್ಮೆಯು ಉಳಿಯುವದು."ಎಂಬದಾಗಿ ಶ್ರೀಭ ಗವಾನನು ಗಯಾಸುರನಿಗೆ ಅಭಯವನ್ನಿತ್ತನು. ಆದುದರಿಂದಲೇ ಈ ಕಲಿಯುಗದಲ್ಲಿ ಸಹ ಗಯಾದಲ್ಲಿಯ ವಿಷ್ಣುಪಾದದಲ್ಲಿ ಪಿತೃಋಣ ವಿಮೋಚನೆಗಾಗಿ ಪಿಂಡಪ್ರದಾನದ ಮಹಾತ್ಮೆಯು ಇಷ್ಟೊಂದಿದೆ.

ಕರ್ನಾಟಕವೂ ಶಿಲಾಲಿಪಿಗಳೂ

(ಲೇಖಾಂಕ ೧)

'ಜಯಕರ್ನಾಟಕ'ದ ಕಳೆದಾಜಿಯ ಸಂಚಿಕೆಯಲ್ಲಿ 'ಕರ್ನಾ ಟಕವೂ ಶಿಲಾಲಿಪಿಗಳೂ' ಎಂಬ ವಿಷಯದ ಮೇಲೆ ಶ್ರೀಯುತ ಆ ಲೂರ ವೆಂಕಟರಾಯರು ಬರೆದ ಟಿಪ್ಪಣಿಗಳನ್ನು ಎಲ್ಲರೂ ಓದಿರ ಬಹುದು. ಅವರು ಕರ್ನಾಟಕ ಇತಿಹಾಸ ಸಂಶೋಧನದಲ್ಲಿ ಮೊದಲಿನಿಂದಲೇ ಒಳ್ಳೇ ಉತ್ಸಾಹವಂತರೂ, ಅದಕ್ಕೆ ಅನುಕೂ ಲತೆಗಳನ್ನು ಒದಗಿಸಿಕೊಡುವಲ್ಲಿ ಪ್ರಯತ್ನಿಸುವವರೂ ಇರುವ ರೆಂಬದನ್ನು ನಾನು ಬೇರೆ ಹೇಳಬೇಕಾಗಿಲ್ಲ. ಸದ್ಯಕ್ಕೆ ಕರ್ನಾಟಕ ದಲ್ಲಿ ಸ್ವದೇಶಾಭಿಮಾನವು ಹುಟ್ಟಿದ ಹಾಗೆಲ್ಲ, ಅದರ ಪೋಷ ಣೆಗಾಗಿ ಆಂಗ ಗ್ರಂಥಂಗಗಳಲ್ಲಿ ಆ ಆ ವಿಷಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಕನ್ನಡಿಗರಲ್ಲಿ ಹರಡುವದು ಅವಶ್ಯವಾಗಿದೆ. ಆ ದ್ದರಿಂದ ಪ್ರಸ್ತುತ ಶ್ರೀಯುತ ವೆಂಕಟರಾಯರು ಬರೆದ ವಿಷಯ ದಮೇಲೆಯೇ ಕರ್ನಾಟಕದಲ್ಲಿ ಶಿಲಾಲಿಪಿಗಳ ಸಂಗ್ರಹವು ಹೇಗೆ ಪ್ರಾರಂಭವಾಯಿತೆಂಬದನ್ನು ಕುರಿತು ಇದ್ದ ಸಂಗತಿಗಳನ್ನು ಬರೆ ಯಲಿಚ್ಛಿಸುತ್ತೇನೆ.

ಶಿಲಾಶಾಸನ ಖಾತೆಯು ಮೊದಲಿಗೆ ಮದ್ರಾಸದಲ್ಲಿ ೧೮೮೬ ನೆಯ ಇಸ್ವಿ ನವಂಬರ ತಿಂಗಳಲ್ಲಿ ಸ್ಥಾಪಿಸಲ್ಪಟ್ಟಿತು. ಅದಕ್ಕೂ ಪೂರ್ವದಲ್ಲಿ ಫ್ಲೀಟ ಇವರು ಶಾಸನಾಧ್ಯಕ್ಷರಾಗಿದ್ದರೂ ಆ ಖಾತೆ ಯು ಕಾಯಮ ವಾಗಿರಲಿಲ್ಲ. ೧೮೮೩ ರಲ್ಲಿ ಪ್ರಾರಂಭವಾಗಿ ೧೮೮೬ ಜೂನದವರೆಗೆ ಅದು ಬಾಳಿತು. ಸರಕಾರದಿಂದ ಶಿಲಾಲಿಪಿ ಖಾತೆ ಯ ಸ್ಥಾಪನೆಯಾಗುವ ಮುಂಚೆಯೇ ತಿಕ್ಕ ಜನ ವಿಮರ್ಶಜ್ಞರು ಕ ರ್ನಾಟಕ ಲಿಪಿಗಳ ಸಂಗಹ ಪ್ರಕಾಶನಗಳಲ್ಲಿ ಐಚ್ಛಿಕವಾಗಿ ಮ ನಸ್ಸುಹಾಕಿದ್ದರು. ಸರ್ ವಾಲ್ಟರ ಇಲಿಯಟ್‌ರು ಕರ್ನಾಟಕದೇ ಶದಿಂದ ಸುಮಾರು ೬೦೦ ಲಿಪಿಗಳನ್ನು ಸಂಗ್ರಹಿಸಿ 'ಕರ್ನಾ ಟಕ ದೇಶ ಇನ್ಸ್ಕ್ರಿಪ್ಶನ್ಸ್' ಎಂಬ ಪುಸ್ತಕದಲ್ಲಿ ಅವುಗಳ ಪಟ್ಟಿ ಯನ್ನು ಪ್ರಸಿದ್ಧಪಡಿಸಿದರು. ಈ ಪುಸ್ತಕವು ಈಗ ಉಪಲಬ್ಧ ವಿಲ್ಲ. ೧೮೬೬ ರಲ್ಲಿ ಫಿಲ್ಪೊಮೋರ್ ಹೋಪ ಎಂಬವರು 'ಧಾರವಾಡ ಮೈಸೂರು ದೇಶಗಳ ಶಿಲಾಲಿಪಿ'ಗಳೆಂಬ ಗ್ರಂಥಾಲಯದಲ್ಲಿ ಸು ಮಾರು ೩೪ ಶಾಸನಗಳನ್ನು ನಮೂದಿಸಿದರು. ಈ ಪುಸ್ತಕವೂ ಉಪಲಬ್ಧವಿಲ್ಲದ್ದರಿಂದ, ಫ್ಲೀಟರು ಅದಕ್ಕೆ ಪುಷ್ಟಿ ಕೆಲವು ಲಿಪಿ ಗಳನ್ನು ಕೂಡಿಸಿ ಮುಂಬೈ ಮದ್ರಾಸ ಇಲಾಖೆಗಳಲ್ಲಿಯ ಪಾ ಲಿ, ಸಂಸ್ಕೃತ ಹಾಗೂ ಹಳೇಗನ್ನಡ ಶಿಲಾಲಿಪಿಗಳು" (Pali, Sanskrit and old Kanarese inscriptions from the Bombay presidency and parts of the Madras presidency) ಎಂಬ ಪುಸ್ತಕದಲ್ಲಿ ವಿಸ್ತೃತವಾದ ಯಾದಿಯ ನ್ನು ಕೊಟ್ಟರು. ಈ ಪುಸ್ತಕದ ಒಂಭತ್ತೇ (೯) ಪ್ರತಿಗಳು ಪ್ರ ಸಿದ್ಧವಾದ್ದರಿಂದ ಅದೂ ಕೂಡ ಈಗ ಉಪಲಬ್ಧವಿಲ್ಲ. ಅಂತೂ ಕರ್ನಾಟಕದ ಲಿಪಿಗಳ ಅವಸ್ಥೆಯು ಮತ್ತು 'ಯಥಾಪೂರ್ವಮ ಕಲ್ಪಯತ್' ಎಂಬಂತೆ ಮೊದಲಿನಸ್ಥಿತಿಯಲ್ಲಿಯೇ ಉಳಿಯಿತು. ಆದರೆ ೧೮೭೯ ರಲ್ಲಿ ರಾಯಸಾಹೇಬರು ಮೇಜರ್ ಡಿಕ್ಸನ್‌ರು ಕೂಡಿಸಿಟ್ಟ ಶಾಸನಗಳನ್ನು "ಮೈಸೂರ ಶಿಲಾಲೇಖಗಳು" (Mysore Inscription) ಎಂಬ ಪುಸ್ತಕದಲ್ಲಿ ಪ್ರಸಿದ್ಧಗೊಳಿ ಸಿದರು. ಇಲಿಯಟ್ ಫ್ಲೀಟ ರಾಯರ ಮುಂತಾದ ಪಾಶ್ಚಾತ್ಯ ವಿಮ ರ್ಶಕರು "ಇಂಡಿಯನ್ ಎಂಟಿಕ್ವರಿ" "ಜರ್ನಲ್ ಆಫ್ ದಿ ಬಾಂಬೈ ಬ್ರ್ಯಾಂಚ ಆಫದಿ ರಾಯಲ್ ಏಶಿಯಾಟಿಕ್ ಸೊಸಾಯಟಿ" "ಎ ಫಿಗ್ರಾಫಿಕಾ ಇಂಡಿಕಾ" ಎಂಬ ನಿಯತಕಾಲಿಕ ಪತ್ರಿಕೆಗಳಲ್ಲಿ ಆಗಾ ಗ್ಗೆ ಕೆಲವು ಲಿಪಿಗಳನ್ನು ಮಾತ್ರ ಪ್ರಸಿದ್ಧವಾಡಿರುತ್ತಾರೆ. ಇವನ್ನೆಷ್ಟು ಬಿಟ್ಟರೆ ಕರ್ನಾಟಕದ ಲಿಪಿಗಳ ಪ್ರಸಿದ್ಧ ಸಂಗ್ರಹ ಕೆಲಸವು ಯಾವಾಗ್ಯೂ ಒತ್ತಾಯದಿಂದ ನಡೆದಿಲ್ಲ.

ಆದರೆ ಫ್ಲೀಟರೇ ತಾವು "ಎಫಿಗ್ರಾಫಿಸ್ಟ"ರಾಗಿದ್ದ ಅವಧಿ ಯಲ್ಲಿ, ಧಾರವಾಡ, ಬೆಳಗಾಂವಿ ಜಿಲ್ಲೆ ಹಾಗೂ ಕರ್ನಾಟಕ ಸಂಸ್ಥಾನಗಳಲ್ಲಿ ಸುಮಾರು ೨೨೮ ಹಳ್ಳಿಗಳಲ್ಲಿ ಲಿಪಿಗಳನ್ನು ಸ್ಥ ಲಮಾನದಿಂದ ಶೋಧಿಸಿ ಅವುಗಳ ಅಚ್ಚುಗಳನ್ನು ತೆಗೆದುಕೊಂಡ ರು ಅವುಗಳ ಸಂಖ್ಯೆಯು ೧೦೦೦ಕ್ಕೆ ಮೀರಿಲ್ಲ. ಮತ್ತು ಅವೆಲ್ಲ ಬಹುತರವಾಗಿ ಲಂಡನ್ "ಮ್ಯುಜಿಯಮ್" ದಲ್ಲಿರುವದರಿಂದ ನಮ್ಮ ಪಾಲಿಗೆ ಅವು ಇಲ್ಲದಂತೆಯೇ ಸರಿ ಆ ಅಚ್ಚುಗಳನ್ನೇ ಡಾ ಬಾರ್ನೆಟರು ಈಗ "ಎಪಿಗ್ರಾಫಿಕಾ ಇಂಡಿಕಾ" ಪತ್ರಿಕೆಯ ಲ್ಲಿ ಒಂದೊಂದಾಗಿ ಪ್ರಸಿದ್ಧಪಡಿಸುತ್ತಿದ್ದಾರೆ ಅವುಗಳಲ್ಲಿಯ —ಷ್ಟು ತಪ್ಪುಗಳಿಗೆ ಅವರೇ ಬಾಧ್ಯರು—

ಮೈಸೂರು ಕರ್ನಾಟಕವು ನಮ್ಮ ಕನ್ನಡ ರಾಜರ ಆಡಳಿ ತದಲ್ಲಿರು [illegible] ದರಿಂ ಅವರು ತಮ್ಮ ಸಂಸ್ಥಾನದಲ್ಲಿಯ ಲಿ ಪಿಗಳನ್ನೆಲ್ಲ ಸಂ [illegible] ರೈಸ ರಾಯಸಾಹೇಬರ ಸಂಪಾದಕತ್ವ ದಲ್ಲಿ "ಎಫಿಗ್ರಾಫಿಕಾ ಕರ್ನಾಟಿಕ" ಎಂಬ ೧೨ ಸಂಪುಟಗಳಲ್ಲಿ ಪ್ರಸಿದ್ಧಿಸಿದರು. [illegible] ಮೈಸೂರ ಕರ್ನಾಟಕದ ಇತಿಹಾಸ ವನ್ನು ಬರೆ [illegible] ಸಾಷ್ಟ [illegible] ವೆಯನ್ನು ಬರೆದ [illegible] ದರೆ ಬ್ರಿಟಿ 'ಕರ್ನಾಟಕ' ಗತಿಯನ್ನು ಕೇಳುವ ವರಾರು? [illegible] ಖಾತೆಯು ೧೮೮೬ ರಲ್ಲಿ ಹುಟ್ಟಿದರೂ ಕೂಡ ೧೯೦೪ [illegible] ಇಸ್ವಿಯ ವರೆಗೆ ಕರ್ನಾಟಕದ ಕಡೆಗೆ ಯಾರೂ ಕಣ್ಣೆತ್ತಿ ನೋಡಲಿಲ್ಲ ಮಧ್ಯದಲ್ಲಿ ಅಂದರೆ ೧೮೮೯ ರಲ್ಲಿ ಹಂಪಿಯಿಂದ ಸುಮಾರು ೨೫೪ ಅಚ್ಚುಗಳನ್ನೂ, ೧೯೦೧ ರಲ್ಲಿ ದಕ್ಷಿ ಣ ಕನ್ನಡ ಜಿಲ್ಲೆಯಿಂದ ಸುಮಾರು ೧೫೦ ಅಚ್ಚುಗಳನ್ನೂ ೧೯೦೪ ರಲ್ಲಿ ಬಳ್ಳಾರಿ ಜಿಲ್ಲೆಯಿಂದ ೧೦೦ ಅಚ್ಚುಗಳನ್ನೂ ಸಂಗ್ರಹಿ ಸಿದ್ದೇನೋ ನಿಜ. ಆದರೆ ಆ ಸಂಗ್ರಹವು ಪದ್ಧತಿಯಿಂದ ಇರದೆ ಅಲ್ಲಲ್ಲಿ ಕಣ್ಣಿಗೆ ಬಿದ್ದ ಲಿಪಿಗಳನ್ನೇ ಸಂಗ್ರಹಿಸಿದ್ದಿರುತ್ತದೆ. ೧೯೧೩ ನೆಯ ಇಸ್ವಿಯಿಂದ [illegible] ಶೋಧ ನೆಯು ಪ್ರಾರಂಭವಾಗಿ [illegible] ವಾಯಿತು. ಅಂತು ೧ ಜಿಲ್ಲೆಯನ್ನು [illegible] ಕಾಡ ರೆ ಸುಮಾರು ೧೨ [illegible] ಟಿಗೆ ಅಲ್ಲಿ

೧೦೦೦/೧೨೦೦ ಲಿಪಿಗಳು ದೊರೆತವೆ. ಸದ್ಯಕ್ಕೆ ಪ್ರಸಿದ್ಧವಾಗದೇ ಉಳಿದ ಕನ್ನಡಲಿಪಿಗಳು ಸುಮಾರು ೧೫೦೦/೧೬೦೦ ಇರಬಹುದು. ಮೇಲಿನ ಸಂಗ್ರಹದಲ್ಲಿ ಸುಮಾರು ೩೫ ಲಿಪಿಗಳು ಮಾತ್ರ "ಸಾವುಥ ಇಂಡಿಯನ್ ಇನ್ಸ್‌ಕ್ರಿಪ್ಶನ್ಸ ಟೆಕ್ಸ್ಟ್" ಗ್ರಂಥಗಳಲ್ಲಿ ಪ್ರಸಿದ್ಧವಾಗಿವೆ. ಈ ಗ್ರಂಥದ ೪,೫ ಸಂಪುಟಗಳು ಹೊರಬಿದ್ದರೂ ಕರ್ನಾಟಕಕ್ಕೆ ಯಾವ ಪ್ರಯೋಜನವೂ ಸಿಕ್ಕಿಲ್ಲ.

ಇಷ್ಟೆಲ್ಲ ಸಂಗ್ರಹವು ಮದ್ರಾಸ ಇಲಾಖೆಯಲ್ಲಿದ್ದ ಕನ್ನಡ ಜಿಲ್ಹೆಗಳದ್ದೇ. ಅಲ್ಲಿಯೂ ಕೂಡ ದಕ್ಷಿಣಕನ್ನಡ ಜಿಲ್ಹೆಯು ಗೊತ್ತಿಕಯಾಗಿಲ್ಲ. ಸೇಲಮ್ ಕೊಯಿಮುತ್ತೂರು ಜಿಲ್ಹೆಗಳು ಮೊದಲಿಗೆ ಕನ್ನಡ ಜಿಲ್ಹೆಗಳೇ ಇದ್ದದರಿಂದ ಅಲ್ಲಿ ಕನ್ನಡ ಶಾಸನಗಳು ಸಿಗಬಹುದಾಗಿದ್ದರೂ ಅತ್ತಕಡೆಗೆ ಈ ಖಾತೆಯ ಲಕ್ಷ್ಯವೇ ಹೋದಂತೆ ತೋರುವದಿಲ್ಲ. ಯಾವ ಪ್ರಾಂತದಲ್ಲಿ ಶಾಸನ ಖಾತೆಯು ಮೊದಲಿನಿಂದಲೇ ಇರುವದೋ ಅಲ್ಲಿಯ ಕರ್ನಾಟಕದ ಹಾಡೇ ಹೀಗೆ! ಅಂದಮೇಲೆ ಲಿಪಿವಿಮರ್ಶೆಯ ಸೌಕರ್ಯವೇ ಇಲ್ಲದ ಮುಂಬಯಿ ಕರ್ನಾಟಕ, ಹೈದರಾಬಾದ ಕರ್ನಾಟಕ— ನೈಜಾಮರು ಕನ್ನಡ ಲಿಪಿಸಂಗ್ರಹಕ್ಕೆ ಯಾವ ವ್ಯವಸ್ಥೆಯನ್ನೂ ಮಾಡಿಲ್ಲ! ಅಲ್ಲಿ ಒಂದು ಯೋಜನೆ ವಿಮರ್ಶೆಗಳನ್ನು ಪ್ರಸಿದ್ಧಿಸುವದಕ್ಕಾಗಿ ಖಾತೆಯನ್ನು, ಉಂಟು— ಗಳಗ[illegible]ಯನ್ನು ವಾಚಕರೇ ಊಹಿಸಬಹುದು. ಕೊಡಗು ಕರ್ನಾಟಕವು ಮೈಸೂರಿಗೆ ಹೊಂದಿ ಇರುವದರಿಂದ ರಾಯಿಸ ಸಾಹೇಬರು ಬೇಕಾಗಿ ಅಲ್ಲಿಯ ಲಿಪಿಗಳನ್ನೆಲ್ಲ ಸೂಕ್ಷ್ಮರೀತಿಯಿಂದ ಪ್ರಸಿದ್ಧಿಸಿದ್ದಾರೆ. ಇದರಂತೆ ಹೈದರಾಬಾದ ಕರ್ನಾಟಕದ ಲಿಪಿಗಳ ಸಂಗ್ರಹಗಳನ್ನು ಪ್ರಸಿದ್ಧಿಸುವದಕ್ಕಾಗಿ ನೈಜಾಮರು ಬೇಗನೇ ಏರ್ಪಾಡು ಮಾಡುವದು ಅತ್ಯವಶ್ಯವಾಗಿದೆ. ಇನ್ನು ಮುಂಬಯಿ ಕರ್ನಾಟಕವು ಮಾತ್ರ ತ್ರಿಶಂಕುವಿನಂತೆ ಉಳಿಯುವದು. ಇಲ್ಲಿಯ ಇತಿಹಾಸ ಸಂಶೋಧನೆಗೆ ಶ್ರೀ ಆಲೂರ ವೆಂಕಟರಾಯರು ಮೊದಲಿನಿಂದಲೇ ಪ್ರಯತ್ನ ಪಡಹತ್ತಿದ್ದಾರೆ. ಇತಿಹಾಸ ಸಂಶೋಧಕ ಮಂಡಳವನ್ನು ಸ್ಥಾಪಿಸಿದ್ದು ಆಯಿತು. ಆದರೆ ಈ ಕಾರ್ಯವು ಧನದ ಬೆಂಬಲವಿಲ್ಲದೆ ಆಗುವದು ಶಕ್ಯವಿಲ್ಲ. ಸರಕಾರದಿಂದ ಲಿಪಿಶೋಧನಕ್ಕೆ—ಕರ್ನಾಟಕದಲ್ಲಿ ಬೇರೊಂದು ಸ್ವತಂತ್ರ ಶಾಖೆಯು ಸ್ಥಾಪಿಸಲ್ಪಟ್ಟಿದೆ. ಇಂಥ ಮಂಡಳಗಳು ಒಳ್ಳೇ ಉತ್ಸಾಹದಿಂದ ಕೆಲಸಮಾಡಬಹುದು. ಮುಂಬಯಿ ಕರ್ನಾಟಕದಲ್ಲಿ ಅಸಂಖ್ಯವಾದ ಲಿಪಿಗಳು ದೊರೆಯುತ್ತವೆ. ಅವುಗಳನ್ನು ಮುದ್ರಿಸಲಿಕ್ಕೆ ತ್ವರೆ ಮಾಡದಿದ್ದರೆ ಅವು ನಷ್ಟವಾಗಿ ಹೋಗುವದು ನಿಶ್ಚಯ. ಇದರಿಂದ ಕನ್ನಡಿಗರಿಗೆ ಅತ್ಯಂತ ಹಾನಿಯಾಗುವದೆಂಬುದರಲ್ಲಿ ಸಂದೇಹವಿಲ್ಲ. ಇದಕ್ಕಾಗಿ ಮುಂಬಯಿ ಕರ್ನಾಟಕದಲ್ಲಿ ಪ್ರತ್ಯೇಕ ಶಾಸನ ಶಾಖೆಯನ್ನಾಗಲಿ, ಪುಣೆಯ ಕಚೇರಿಯಲ್ಲಿ ಈ ಕೆಲಸವಾಗಲಿಕ್ಕೆ ಬೇರೆ ಯೋಗ್ಯ ವ್ಯವಸ್ಥೆಯನ್ನಾಗಲಿ ಮಾಡಲಿಕ್ಕೆ ಕರ್ನಾಟಕದ ಮುಖಂಡರು ಸರಕಾರವನ್ನು ಕೇಳದೆ ಬಿಟ್ಟಿಲ್ಲ. ೧೯೨೦ ರಲ್ಲಿ ಮುಂಬಯಿಯ ಕಾಯದೇ ಮಂಡಳದಲ್ಲಿ ರಾ. ಸಾ. ಹಳಕಟ್ಟಿಯವರಿಂದ ಈ ಬಗ್ಗೆ ಪ್ರಶ್ನೆಗಳು ಕೇಳಲ್ಪಟ್ಟಿದ್ದವು. ಮತ್ತು ೧೯೨೫ ನೆಯ ಇಸ್ವಿಯ ಸಾಹಿತ್ಯಪರಿಷತ್ತಿನಲ್ಲಿ ಪ್ರತ್ಯೇಕ ಶಾಸನಶಾಖೆಯ ಬಗ್ಗೆ ಠರಾವಾಗಿ ಆ ಬಗ್ಗೆ ರಾಜಸಭಾಭೂಷಣ ಕರ್ಪೂರ ಶ್ರೀನಿವಾಸರಾಯರು ಸರಕಾರಕ್ಕೆ ಅರಿಕೆ ಮಾಡಿಕೊಂಡಿದ್ದರು. ಆದರೂ ಸರಕಾರದವರು ಕರ್ನಾಟಕಕ್ಕೆ ಯೋಗ್ಯವಾದ ಪ್ರತ್ಯೇಕ ವ್ಯವಸ್ಥೆಯನ್ನು ಮಾಡಿಲ್ಲ. ಇದು ಕರ್ನಾಟಕದ ದುರ್ದೈವವೇ ಸರಿ. ಅನೇಕ ಆಡಳಿತೆಗಳಲ್ಲಿ ಹರಿದು ಹಂಚಲ್ಪಟ್ಟಿರುವದರಿಂದ ಅದಕ್ಕೆ ಯಾವ ವಿಷಯದಲ್ಲಿಯೂ ಸೌಕರ್ಯಗಳಿಲ್ಲ. ಉದಾಹರಣೆಗಾಗಿ 'ಕರ್ನಾಟಕ ವಿದ್ಯಾಪೀಠ'ವನ್ನು ಸ್ಥಾಪಿಸಬೇಕೆಂದರೆ ಎಷ್ಟು ಎಡರುಗಳು ಮುಂದೊರೆಯ ಹತ್ತುವವು! ಇವೆಲ್ಲ ದೂರವಾಗಬೇಕಾದರೆ ಕರ್ನಾಟಕ ಏಕೀಕರಣವು ಆವಶ್ಯಕ. ಕನ್ನಡಿಗರಲ್ಲಿ ಕರ್ನಾಟಕತ್ವದ ಅಭಿಮಾನ ಹುಟ್ಟಬೇಕಾದರೆ ಅದರ ಗತವೈಭವವು ಅವರ ಮನಸ್ಸಿನಲ್ಲಿ ಬಿಂಬಿಸಬೇಕು. ಅದಕ್ಕಾಗಿ ಇತಿಹಾಸ ಸಂಶೋಧನವು ಪ್ರಸ್ತುತ ಎಲ್ಲ ಕಾರ್ಯಗಳಿಗೂ ಬೇರಾಗಿದೆಯೆನ್ನಬಹುದು. ಕೌನ್ಸಿಲ್, ಅಸೆಂಬ್ಲಿಗಳ ಕನ್ನಡ ಸಭಾಸದರು ಈ ವಿಷಯಕ್ಕೆ ಸರಕಾರಕ್ಕೆ ಚನ್ನಾಗಿ ತಿಳಿಸಿ ಅನುಕೂಲತೆಗಳನ್ನು ಒದಗಿಸುವದಕ್ಕೆ ಮನಃಪೂರ್ವಕ ಹೆಣಗಾಡಬೇಕು. ಶ್ರೀ ಮಾಳವೀಯರಂಥವರು "ಅಸೆಂಬ್ಲಿಯ"ಲ್ಲಿ ಪ್ರಾಂತಿಕ ಪ್ರಶ್ನೆಗಳನ್ನು ವಿವೇಚಿಸಲು ಅವಕಾಶವಿಲ್ಲವೆಂದೆನ್ನುವದು ಯೋಗ್ಯವಾಗಿಲ್ಲ. ಮುಂಬಯಿ ಕರ್ನಾಟಕದ ಬಗ್ಗೆ ಲಿಪಿಶೋಧನ ಇಲಾಖೆಯನ್ನು ವಿಚಾರಿಸುವದು ಮುಂಬಯಿ ಕರ್ನಾಟಕದ ಪಕ್ಷದಿಂದ ಕಾಯದೇಮಂಡಳಗಳಲ್ಲಿರುವ ಸಭಾಸದರು ಪ್ರಯತ್ನಿಸಬಹುದು. ಆದರೂ ಮೂಲತಃ ಲಿಪಿಶೋಧನ ಇಲಾಖೆಯು ಅಖಿಲ ಭರತಖಂಡಕ್ಕೆ ಸಂಬಂಧಪಟ್ಟದ್ದಾಗಿಷ್ಟರಿಂದಲೂ, ಅಖಂಡ ಕರ್ನಾಟಕದ ಲಿಪಿಶೋಧನೆಗಾಗಿ ಸ್ವತಂತ್ರ ಸಂಶೋಧನ ಮಂಡಳವೊಂದಿರುವದು ಅತ್ಯಾವಶ್ಯವಾಗಿದ್ದದರಿಂದಲೂ, ಈ ಕಾರ್ಯವು "ಅಸೆಂಬ್ಲಿಯ"ಲ್ಲಿಯೇ ವಿವೇಚಿಸಲ್ಪಡತಕ್ಕದ್ದು. ಆದ್ದರಿಂದ, ಶ್ರೀ ಮಾಳವೀಯರಂತಹ ಮಹನೀಯರು ಇತ್ತ ಲಕ್ಷ್ಯ ಕೊಡುವದು ಅತ್ಯಾವಶ್ಯವೆನ್ನುವದು ಈಗಲಾದರೂ ತಿಳಿಯಲಿ!

ಶ್ರೀನಿವಾಸ ರಾಜೇರಾವ ಮಂಗಳವೇಢೆ.

ಮೈಸೂರು ಕರ್ನಾಟಕ.

ಕರ್ನಾಟಕ ಕವಿಚರಿತ್ರದ ೩ನೇ ಸಂಪುಟವನ್ನು ಶ್ರೀ ಆರ್ ನರಸಿಂಹಾಚಾರ್ಯರು ಶೀಘ್ರ ಪ್ರಕಟಿಸುವರಿದ್ದಾರೆ.

ಮುಂಬಯಿ ಕರ್ನಾಟಕ.

[illegible] ಬೇನೆಯಿಂದ ಧಾರವಾಡ ಜಿಲ್ಹೆಯಲ್ಲಿ ಈ ವರ್ಷ ೪,೯೦೦ ದನಗಳು ಮಡಿದವು.

ಸೋಜಿಗದ ಸುದ್ದಿಗಳು.

ಗುಲಾಬಿ ಹೂಗಳಲ್ಲಿ ೭೯೩ ವಿಧಗಳಿವೆ

ಹಸ್ತಿದಂತದ ಒಂದೇ ಜೋಡಿನಿಂದ ೩೦-೪೦ ರಾಗದ ಪೆಟ್ಟಿಗೆಗಳ ಹಲ್ಲನ್ನು ಮಾಡುವರು

ಕೋಳಿಗಳೂ ೧೬ ಮೈಲುಗಳವರೆಗೆ ಹಾರಬಲ್ಲವು.

[illegible] ಕಣ್ಣಿನಲ್ಲಿ ಬೇರೆ ಬೇರೆ ಬಣ್ಣಗಳ ೫೦೦ ಭೂತ ಕನ್ನಡಿಗಳೂ ೫೦,೮೦೦ ನರಗಳೂ ಇರುವವು.

ಪರದೇಶ.

ನ್ಯೂಯಾರ್ಕದಲ್ಲಿ ಒಬ್ಬ ಭಿಕ್ಷುಕಿಗೆ ಹುಚ್ಚು ಹಿಡಿಯಿತು. ಅವಳ ಮನೆಯನ್ನು ಶೋಧಿಸಲು, ಎಲ್ಲ ಬಗೆಯ ಅರ್ಧ ಚಿನ್ನ ನಾಣ್ಯಗಳು ಹೊರಬಿದ್ದವು. ಅನೇಕ ಬಾಂಕುಗಳಿಂದ ಅವಳು ಠೇವಣಿಗಳನ್ನು ಬೇಡುತ್ತಲಿದ್ದಳು. ೩೦೦ ಪೌಂಡುಗಳು ೪೦ ಚೀಲಗಳಲ್ಲಿ ಹಾಕಿ ಇಡಲ್ಪಟ್ಟಿದ್ದವು. ಅವಳ ಹಾಸಿಗೆ ಹೊದ್ದಿಕೆಗಳಲ್ಲಿ ೭೫೦ ಪೌಂಡುಗಳಿದ್ದವು! ಆದರೂ ಸಹ ಅವಳು ಕೇವಲ ಭಿಕ್ಷುಕಿಯಂತೆಯೇ ಅತ್ಯಂತ ದರಿದ್ರತೆಯಿಂದ ಇರುತ್ತಿದ್ದಳು! ಈಗ್ಗೆ ಅವಳು ಹುಚ್ಚರ ಆಸ್ಪತ್ರೆಯಲ್ಲಿದ್ದಾಳೆ

[೭ ನೇ ಪುಟದಿಂದ ಬಂದಿದು]

ಮಾಡುತ್ತಲಿರುವನಾದುದರಿಂದ, ಈ ಖಾಸಿಕಾರಕ ಪರಾರ್ಗವನ್ನು ಅವನು ನಿರೋಧಿಸುವುದಕ್ಕೆ ಒಂದು ಕಾರಣವಾಯಿತು.

'ಕೌಶಿಕ' ಪದವು ಅನ್ವರ್ಥವಾಗಿರದೆ, ಲೇಖಕನ ಹೆಸರಿನ ಪ್ರಥಮಾಕ್ಷರದ ಸಮಾವೇಶವು ಮಾತ್ರ. ವಿಶ್ವಗುಣಾದರ್ಶ ಮತ್ತು 'ಶೋಕಸೆ ವಕೀ' ಮೇಲೆ ಮತ್ಸರವು ಲೇಖಕನಿಗಿಲ್ಲ. ಹೆಸರಿಗೆ ತಕ್ಕಂತೆ ನಡೆಯುವ ಅಮೂಲ್ಯಸಾಧನವು ಕರದಲ್ಲಿದ್ದು ಅದರ ಉಪಯೋಗವನ್ನು ಮಾಡುತ್ತಲಿಲ್ಲೆಂದು ಬರೆಯಬೇಕಾಯಿತು.

೯. —(ಶ್ರೀ. ಬ) ನಿಮ್ಮ ಈ ಪ್ರಶ್ನೆಗಳಿಗೆ ಉತ್ತರ ಕೊಡುವದೊದಲು, ವ್ಯಕ್ತಿಯಾರೆಂಬುದರ ಮೇಲೆ ವಾದವು ನಿಂತಿದೆಯೇ? ಪರಿಚಯವಿಲ್ಲದೆ ಯಾವಕಾರಣದಿಂದ ಉತ್ತರ ಕೊಡಲಾಗದು ಎಂಬುದಕ್ಕೆ ಸಮಂಜಸ ಕಾರಣಗಳನ್ನಿತ್ತರೆ; ಆಗ ಬಹಿರಂಗ ಪಡಿಸುವೆ. ವ್ಯಕ್ತಿಗತ ವಿಚಾರಗಳ ದೆಸೆಯಿಂದ, ಆ ಸಂಕುಚಿತ ಹೆಸರನ್ನು ತಿಳಿಸಬೇಕಾಯಿತು. ಖಾಸಗಿಯಿಂದ ಶ್ರೀಯುತರಿಗೆ ನನ್ನ ಪರಿಚಯವು ಇಷ್ಟರಲ್ಲಿ ತಿಳಿದಿರಬೇಕು. ಶ್ರೀಯುತರ ಉತ್ತರದಿಂದ ನನ್ನ ಹೆಸರು ಪತ್ರ ತಿಳಿಸುವುದು ಅವಶ್ಯವೆಂದು ಕಂಡರೆ, ಆಗ, ಮರೆಯಿಂದ ಮುಂದಕ್ಕೆ ಬರುವುದಾದರೂ ಬರುವೆನು.

ಸತ್ಯವನ್ನು ಹೇಳಬೇಕಾದರೆ, ಆ ಪಾತ್ರವು, ಅಂಥವ ನಿಂಥವನಾಗಬೇಕೆಂಬ ನಿರ್ಬಂಧ ವಿದೆಯೇ?

ಶ್ರೀ ಯುತರು, ಕೆಸರಿಂದ ಕಮಲವು ಹೊರಡುವದನ್ನು ಕಂಡರೆ, ಕೆಸರಿನ ಯೋಗ್ಯತೆಯ ಮೇಲಿಂದ ಕಮಲದ ಯೋಗ್ಯತೆಯನ್ನೂ ನಿರ್ಣಯಿಸುವರೇ?

(ಕ) 'ಜನರ ಹಿತಾಹಿತಕ್ಕೂ ನಿನ್ನ ಉದ್ಯೋಗಕ್ಕೂ ಸಂಬಂಧವಿದೆಯೋ? ಎಂಬ ಅವರ ಪ್ರಶ್ನೆಗೆ—

ನಾನು ಜಗದ ಪ್ರಾಣಿಕೋಟಿಯುಲ್ಲೊಬ್ಬನು. ಅವರನ್ನು ಬಿಟ್ಟಿಲ್ಲ. ಆದುದರಿಂದ, ಅದರ ಹಿತಾಹಿತವು ನನ್ನನ್ನು ಬಾಧಿತವಾಗಲೇಬೇಕು. ಅಂತಹ ಅನೇಕ ಪ್ರೇಕ್ಷಕರಿಂದ ಹಣ ಗಳಿಸುವ ಅಧಿಕಾರವು ಶ್ರೀ ಯುತರ ಮಂಡಳಿಗಿದ್ದರೆ, ಅವರಿಂದ ಕೊಂಡು ಕೊಳ್ಳುವ ಮಾಲಿನ ಪರಿಷ್ಕಾರವನ್ನು ಮಾಡುವ ಅಧಿಕಾರವು ಪ್ರೇಕ್ಷಕನಿಗಿದೆ. ವೈದ್ಯನು ಕೊಟ್ಟ ಔಷಧದಿಂದ ತನಗೆ ಕೇಡಾಗಿದೆ. ಎಂದು ತಿಳಿದ ರೋಗಿಯೂ, ಅವನ ಬಂಧುವಿಗೂ, ಔಷಧ ತಯಾರಿಯ ಇಲ್ಲವೆ ಪ್ರಯೋಗದ ರೀತಿಯು ಅರಿಯದಿದ್ದ ಮಾತ್ರಕ್ಕೆ—ಆ ಔಷಧಿಯನ್ನು ಬೇಡವೆನ್ನುವ ಅಧಿಕಾರವಿದೆ.

೧೦. —'ಗೊಡೆಯನ್ನು ಕಟ್ಟಿ ತಟ್ಟಿಯನ್ನೊಡೆ' ಎಂದು ಶ್ರೀ ಯುತರು, ಹೇಳುವರು. ಎಲ್ಲಾ ವಿಚಾರಗಳಲ್ಲೂ ಆ ಒಂದೇ ನಿಯಮವನ್ನನುಸರಿಸಿದರಾಗದು. ತಟ್ಟಿಯ ಸ್ಥಾನದಲ್ಲಿ ಗೋಡೆಯನ್ನು ಕಟ್ಟುವ ಪ್ರಸಂಗ ಬಂದಾಗ—ಏನು ಮಾಡಬೇಕು?

ಕಲೆಯೇ ಧ್ಯೇಯವಾಗಿರುವ, ಮತ್ತು ಇನ್ನಿತರ ಗುಣವುಳ್ಳ, ತಂಡವು ಈಗಲೇ ಸಿದ್ಧವಿದ್ದರೆ—ಅವರು ಶ್ರೀ ಯುತರ ಉದಾರಾಶ್ರಯದ ಪಾಶಕ್ಕೆ ಬಾಯ್ಬಿಡದೆ, ತಾವೇ ಸ್ವತಂತ್ರವಾಗಿ ನಿಲ್ಲಲು ಶಕ್ತರಾಗುತ್ತಿದ್ದರು. ಅಂತಹ ಲವಲವಿಕೆಯು ಉತ್ಪನ್ನವಾಗಲೆಂಬುದೇ ಈ ಲೇಖನದ ಉದ್ದೇಶವು. ಶ್ರೀಯುತರ ಉದಾಹರಣೆಯನ್ನು ಸ್ವೀಕರಿಸಲಾರದವರಿಗೆ 'ಪುನರ್-ರಾಜ್ಯದ' ಅಧಿಕಾರವಿಲ್ಲವೇ? ಇದಿಲ್ಲವೇ ಶ್ರೀಯುತರ ಸಂಘವು ಅಸ್ತಿತ್ವಕ್ಕೆ ಬಂದಿತೇ?

ಇನ್ನು ಈ ಲೇಖಕನು, ತಾನಾರು ಏನೆಂಬುದನ್ನು ತಿಳಿಸಲಿಚ್ಛಿಸುವುದಿಲ್ಲವಾದರೂ, ಅವನು ರಂಗಭೂಮಿಯ ಸೇವೆಗೆ ಯತ್ನಿಸಿದವನು, ಯತ್ನಿಸುತ್ತಿರುವನು—

ಶ್ರೀ ಯುತರಂತೆ ಮಾಲಿಕನಾಗಿರಲಾರನು. ಆದರೆ ರಂಗಭೂಮಿಯ ಕುರಿತು ಆತನು ಈ ಸ್ಥಿತಿಯೇ ಬೇಕೆಂದಿರುವನೇ? ಅಧಿಕಾರ ನಡೆಯುವ ಶಕ್ತಿಯು ಪರಿಯುವಿಲ್ಲವಿದ್ದ ಮಾತ್ರಕ್ಕೆ ಅಧಿಕಾರಿಯು ತನ್ನ ಹಿತಾಹಿತದ ಸಲುವಾಗಿ ಈ ರೀತಿ ಯಿರಬೇಕೆಂಬುದೂ ಅವನಿಗೆ ತಿಳಿದಿರಬಾರದೇ?

ಇಂತಹ ಒಬ್ಬ ಪ್ರಜೆಗೆ 'ಅಧಿಕಾರತ್ವವನ್ನು ನಡೆಯಿಸಲು ಬಂದರೆ ಮಾತ್ರ ಮಾತನಾಡು. ಇಲ್ಲವಿದ್ದರೆ ಇಲ್ಲ'' ಎನ್ನಲು ಬರುವುದೇ? ತಾನು ತಪ್ಪಿದ್ದಲ್ಲಿ ತಿದ್ದಿಕೊಳ್ಳಬೇಕು ಇಲ್ಲವಿದ್ದರೆ, ತಪ್ಪಲಿಲ್ಲವೆಂದು ತೋರಿಸಿಕೊಡಬೇಕು, ಬದಲು ನೀನಾರು? ನಿನಗಧಿಕಾರವೇನೆಂದು ಕೇಳುವ ಅಧಿಕಾರಿಯು ಆಸೆಯನ್ನು ಯಾರು ಯಾಕೆ ಮಾಡಬೇಕು?

ಇನ್ನು ವೃತ್ತ ಪತ್ರಗಳು ಕಸ್ತಾಗುತ್ತವೆ ಯೆಂಬುದು ನಿಜವಾದರೆ, ಅದನ್ನು ಎದುರಿದ್ದ ಪತ್ರಕರ್ತನು ನೋಡಿಕೊಳ್ಳಲಿ. ಅವನು ಸಿಕ್ಕಿದನ್ನು ಪ್ರಕಟಿಸುವ ಮೂರ್ಖನಲ್ಲನೆಂದು ನನ್ನ ನಂಬುಗೆ. ಇನ್ನು ನನ್ನ ಲೇಖನವು ಬರೆ ಕಾಗದವನ್ನೆ ಕಪ್ಪುಮಾಡುವ ರೀತಿಯದಾದರೆ, ಹೀಗೆ ಶ್ರೀಯುತರು ಅದನ್ನು ಮತ್ತಷ್ಟು ಕಪ್ಪುಮಾಡುವ ಹವ್ಯಾಸಕ್ಕೇಕೆ ಬಿದ್ದರು. ಈತನ ಲೇಖನವು ತಮ್ಮಂತಹ ದೇವಲೋಕವನ್ನು ಕಂಡು ಶ್ವಾನನಂತೆ ಕೂಗುವ ರೀತಿಯೆಂದು ಅರಿತರೆ, ಆ ದೇವಲೋಕವೂ ಶ್ವಾನನಮಾರ್ಗ ಅನುಸರಿಬಾರದಿತ್ತು!!

ಇತಿ ಕೌಶಿಕ.

ಗೃಹ ಕೃತ್ಯದ ನೋಟೀಸು

ಗಲಗಲಿ ಪಾಂಡುರಂಗಾಚಾರ್ಯ ಕಟ್ಟಿ ಎಂಬುವರು ಕಳೆದ ಜುಲೈ ೨೧ನೇ ತಾರೀಖಿನಲ್ಲಿ ಬಿಜಾಪೂರದಲ್ಲಿ ಮೃತಪಟ್ಟಿರುತ್ತಾರೆ ಇವರಿಗೆ ಕೆಳಗೆ ರುಜು ಮಾಡುವ ಕಮಲಾಬಾಯಿ ಆದ ನಾನು ನಿನ್ನ ಹೆಂಡತಿ ಆಗಿಯು ವೆಂಕುಬಾಯಿ ಎಂಬುವರು ೧ನೇ ಹೆಂಡತಿ ಆಗಿಯು ಇದುತ್ತೇವೆ. ೧ನೇ ಹೆಂಡತಿಯಾದ ವೆಂಕುಬಾಯಿ ಎಂಬುವರು ನಮ್ಮ ಯಜಮಾನರು ತೀರಿಕೊಂಡ ಲಾಗಾಯತ ವಿಶ್ವಾಸವಿಲ್ಲದವರಾಗಿಯು ನನಗೆ ಎಲ್ಲಾ ಭಾಗದಲ್ಲಿಯು ನಮ್ಮ ಯಜಮಾನರ ಆಸ್ತಿ ವಿಷಯದಲ್ಲಿ ತಪ್ಪಪಡಿಸಲು ಅನೇಕ ಜನಗಳ ಸಲಹೆಯಿಂದ ನನಗೆ ಮೋಸಪಡಿಸಬೇಕೆಂದು ಇರುತ್ತಾರೆ ಅಲ್ಲದೇ ಇವರು ನಂನ ಸಮಕ್ಷಮ ಬಿಜಾಪೂರದಲ್ಲಿ ನಮ್ಮ ತಂದೆ ಮತ್ತು ಚಿಕ್ಕಪ್ಪನವರು ಇವರ ಸೋದರಮಾವನವರಾದ ಹಣಮಂತಾಚಾರ್ಯರ ಸಮಕ್ಷಮಾ ವಬ್ಬ ಹುಡಗನ್ನ ದತ್ತ ಮಾಡಿಕೊಂಡು ನನ್ನನ್ನು ಹಾಳು ಮಾಡತೇನೆಂದು ಹೇಳಿ ಇರುತ್ತಾರೆ ೧ನೇ ಹೆಂಡತಿ ವೆಂಕುಬಾಯಿಯುವರು ನನ್ನ ಸಮ್ಮತಿ ಇಲ್ಲದೇ ದತ್ತ ತೆಗೆದು ಕೊಳ್ಳಕೂಡದು ಯಜಮಾನರ ಆಸ್ತಿ ಪೈಕಿ (೨) ಜಮಿನಗಳು ವ್ಯಾಜ್ಯದಲ್ಲಿ ಬಿದ್ದು ಇಥೆ ಇದೆಲ್ಲಾ ಹೋಗಲಾಗಿಲ | ೧೦ ವರಷ ಆದ ನಂತರ ತನ್ನ ಭಾಗದ ಆಸ್ತಿಗೆ ದತ್ತ ಮಾಡಿ ಕೊಳ್ಳಬಹುದು ಶಿವಾಇ ಈಗ ಮಾಡಿಕೊಂಡದ್ದು ಆಗಲಿ ಅಥವಾ ದತ್ತಗೆ ಆಗಿ ಬಂದದ್ದು ಆಗಲಿ ಇದು ನಿರ್ಧರಿಸುವದಿಲ್ಲಾ ಮುಂದೆ ಸಂಭವಿಸುವ ಕಷ್ಟ ನಷ್ಟಗಳಿಗೆ ಗುರಿಯಾಗುತ್ತಾರೆ ಖಚಿತ ತಿಳಿಯುವದು.

ಕಮಲಾಬಾಯಿ.

ಕರ್ನಾಟಕ ಬಾಂಧವರೇ! ಈ ಸಂಧಿಯನ್ನು ಕಳೆದುಕೊಳ್ಳಬೇಡಿರಿ.

ನಿಮ್ಮ ಸಲುವಾಗಿಯೆ, ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ವ್ಯವಸ್ಥೆ ಮಾಡಿದ ಪದ್ಧತಿ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಸುಸ್ಥಿತಿಯಲ್ಲಿಡುವದು, ಅವುಗಳೊಳಗಿನ ಕೆಟ್ಟ ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ಬಹಳ ತೇರ್ಗಡೆಯಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸ್ಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆದು ಕೊಳ್ಳಿರಿ !

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮುಮಿತಕರ ವಾಡೆ ಪುಣೆ ಶಹರ.



ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರವಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಲಗಾಡುವ ಹಲ್ಲುಗಳನ್ನು ವಿನಾ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಕೃತ್ರಿಮ ಹೊಸ ಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಮಂಗಳೂರ, ಬೆಂಗಳೂರ ಕಡೆಯ

ಸುರಿತಂಥಹ

ಪ್ರಿಂಟೆರರೂ ಕಂಪೋಜಿಟರರೂ

ಬೇಕಾಗಿದ್ದಾರೆ.

ಯೋಗ್ಯತೆಯ ಪ್ರಕಾರ ಪಗಾರವು ದೊರೆಯುವದು.

ಮ್ಯಾನೇಜರ.

ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to–
N. K. Kulkarni. Agent Bagalkot.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೮ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವಸ ೪-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ್ ಹೇಳಿದಮನ್ನಣೆಯಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ ಬಿ. ಟಿ. ಶಾಲೆಗಳ ಡಿವಿಜನಲ್ ಇನ್‌ಸ್ಪೆಕ್ಟರ್ ವರಂಗಲ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೧೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಪಡಪಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲೆ ಪೆಡಿ, ಗಾರಗಲ್ಲಿ ಹುಬ್ಬಳ್ಳಿ ರೂ ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಷೇಕ ಬಾವುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೪ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಗಿಡಗಳು ಮತ್ತು ಬೀಜಗಳು

ತರಹೇವಾರಿ ಕಟ್ಟಿಕಟ್ಟಿದ ಮಾವಿನ ಗಿಡಗಳು ಡಜನ್ ೧ ಕೆ ರೂ ೯-೦-೦

ನಿಂಬೆ, ಕಿತ್ತಳೆ, ಮಾದಳ, ಸೇವು, ದಾಳಿಂಬ
ಚಕ್ಕೋತ್ರ, ಪನ್ನೇರಳೆ, ದ್ರಾಕ್ಷಿ, ಪೇರು, ಹಲಸು
ಗಿಡಗಳು ಡಜನ್ ೧ ಕ್ಕೆ ರೂ ೫-೦-೦
ಕಟ್ಟಿದ ಸಂಪಿಗೆ, ಪಾರಿಜಾತ, ಪಾದರಿ ಗಿಡಗಳು ೧ಕ್ಕೆ ,, ೧-೦-೦
ರೋಜಾ ಗಿಡಗಳು ಡಜನ್ ೧ ಕ್ಕೆ ರೂ ೩ ರಿಂದ ೧೨
೨೫ ತರಹಾ ಹೂವಿನ ಬೀಜಗಳು ೨೫ ಪ್ಯಾಕಟ್ ರೂ ೫-೦-೦
೨೫ ತರಹಾ ಇಂಗ್ಲೀಷ ತರಕಾರಿ ಬೀಜಗಳು ೨೫ ಪ್ಯಾಕೆಟ್ ರೂ ೫-೦-೦
೨೫ ತರಹಾ ಇಂಡಿಯನ್ ತರಕಾರಿ ಬೀಜಗಳು ೨೫ ಪ್ಯಾಕಟ್ ರೂ ೩-೦-೦
೧೨ ತರಹಾ ಗಡ್ಡೆಗಳಿಂದಾಗತಕ್ಕ ಹೂವಿನ ಗಿಡಗಳ ಗಡ್ಡೆಗಳು ಡಜನ್ ೧ಕ್ಕೆ ರೂ ೬-೦-೦

ನಮ್ಮಲ್ಲಿ ಸಿಗುವ ಬೀಜ, ಗಿಡಗಳ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ.

ಎಸ್. ಜಿ. ಸುಬ್ಬಯ್ಯಾ ಅಂಡ ಬ್ರದರ್ಸ್ ಲಾಲ್‌ಬಾಗ್ ರೋಡ್ ಬೆಂಗಳೂರುಸಿಟಿ

ಗವರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕ ಶಫಾ ಅಥವಾ ಆರೋಗ್ಯ ಬಿಂದು

ಪ್ರಖ್ಯಾತಿಯುಕ್ತ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ಸೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರೆಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರಸಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣವಿಂದ ಒಗ್ಯೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಬಾಣಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ಸಾರಮುಂಡ, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುಸೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಮಕ್ಕಳಿಗೆ ಆದ ರೋಗಗಳು ಬಾಲಗ್ರಹ, ಹಾವು ಮುಟ್ಟಿದ ಹೊಟ್ಟೆ ದೊಡ್ಡದಾಗೋಣ, ಕೂದಲು ... ಮತ್ತು ಡಾಕ್ಟರರಿಗೆ ವೈದ್ಯರಿಗೂ ಸಹ ಅಳವಡದ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣವಾಗುವದು. ಚೇಳು ವಿ ಸರ್ಪದಂಶ ತತ್‌ಕ್ಷಣ ಗುಣವಾಗುವದು. ೧ ತೊಲೆ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಬುದ್ದಿ ೫ ಆಣೆ ತೊಲೆ ಬಾಟ್ಲಿ ಒಂದಕ್ಕ ೮ ಆ. ಪೋಸ್ಟೇಜ್ ವ್ಹಿ. ಪಿ. ೮ ಆಣೆ. ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಒಂದರ ಕಳಿಸಬಾರದು. ಅದರ ಖರ್ಚ ೭ ಆಣೆ ... ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕು ಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ ಡಜನದ ಒಳಗಿನ ಪನ್ನಾಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ. ವಸ್ತ್ರ ೭ ಆಣೆ. ... ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೪ ಆಣೆ. ಮೂರು ತಕ್ಕೊಂಡರೆ ಕಮಿಶನಿಲ್ಲ ... ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸುತ್ತಿವೆ ಪಸಂದಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಹುಟ್ಟಿ ಮಾರಾಟಕ ಶಿಕ್ಕಾ ಉಳ್ಳವಾಗಿರುವ ಪರತ ತಕ್ಕೊಂಡು ಅದರ ಜಪ್ತಿ ಮಾಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದ. ಇದರ ಬಗ್ಗೆ ನಮಗೆ ಬಹಳ ಶಿಫಾರಸ ಮಾಡಬೇಕಾಗಿಲ್ಲ. ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಸ್ಪಷ್ಟ ಅಕ್ಷರದಲ್ಲಿ ಬರೆಯುವದು ನಮ್ಮ ವಿಳಾಸ:— ಎಚ್. ಎಮ್. ಮುಲ್ಲಾ.

ಸಂಪಾದಕ ಅರ್ಕ ಶಫಾ ಹೆಡ್ ಆಫೀಸ ಪೋಸ್ಟ ಕಕ್ಕಳಮೇಲಿ [ಬೆಳಗಾವ]

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ.—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಮೈಯ್ಯುರಿ ಮ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸಃ—

ಎಸ್ ಬಿ ಕವನೂರ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೩,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳ ಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತಮೂರು ಲಕ್ಷ ರೂಪಾಯಿಗಳನ್ನೂ ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನರೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾವೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರವನ್ನು ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳಬೇಕು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನೂ ತಯಾರು ಮಾಡುತ್ತಾರೆ ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದು ತಾವು ಇಷ್ಟಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿ ಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ಕರ್ನಾಟಕ ಇತಿಹಾಸ ಮಂಡಳ, ಧಾರವಾಡ.

ಅಧ್ಯಕ್ಷರು.

ಶ್ರೀ. ಆಲೂರ ವೆಂಕಟರಾಯರು ಬಿ. ಎ., ಎಲ್‌ಎಲ್. ಬಿ.

ಕಾರ್ಯದರ್ಶಿಗಳು.

ಶ್ರೀ. ಸಾಲಿ ರಾಮಚಂದ್ರರಾಯರು ಬಿ. ಎ.

ಶ್ರೀ. ದತ್ತಾತ್ರೇಯ ಕರಮರಕರ ಎಮ್. ಎ., ಎಲ್‌ಎಲ್. ಬಿ.

ಕರ್ನಾಟಕ ಇತಿಹಾಸ ಮಂಡಳ, ಧಾರವಾಡ, ಎಂಬೀ ಸಂಸ್ಥೆಯು ೧೯೧೪ನೆಯ ಇಸ್ವಿಯಲ್ಲಿ ಕರ್ನಾಟಕದಲ್ಲಿ ಇತಿಹಾಸ ಜಾಗ್ರತಿಯನ್ನು ಮಾಡುವ ಉದ್ದೇಶದಿಂದ ಹೊರಟು ಇಲ್ಲಿಯ ವರೆಗೆ ಕೆಲಸಮಾಡುತ್ತ ಬಂದಿರುತ್ತದೆ. ಕರ್ನಾಟಕಸ್ಥರಿಗೆ ಉಜ್ವಲವಾದ ಇತಿಹಾಸವಿರುತ್ತದೆಂದೂ ಈ ಪ್ರಾಂತದಲ್ಲಿ ಅನೇಕ ಚಕ್ರವರ್ತಿಗಳೂ ವೀರಾಧಿವೀರರೂ ಆಗಿ ಹೋದರೆಂದೂ ಕರ್ನಾಟಕವು ವಾಙ್ಮಯ, ವೇದಾಂತ, ತತ್ವಜ್ಞಾನ, ಶಿಲ್ಪಕಲೆ, ಸಂಗೀತ, ಚಿತ್ರಕಲೆ ಮೊದಲಾದುವುಗಳಿಗೆಲ್ಲ ತವರು ಮನೆಯಾಗಿತ್ತೆಂದೂ ಕರ್ನಾಟಕಸ್ಥರಿಗೆಲ್ಲ ಪರಿಚಯಮಾಡಿಕೊಟ್ಟಿರುವುದೇ ಈ ಸಂಸ್ಥೆಯು ಇಂದಿನ ವರೆಗೆ ಮಾಡಿದ ಮುಖ್ಯ ಕೆಲಸ. ಪುಲಕೇಶಿ, ನೃಪತುಂಗ, ಚಾಳುಕ್ಯವಿಕ್ರಮ, ಶ್ರೀ ವಿದ್ಯಾರಣ್ಯ, ಹರಿಹರ, ಕೃಷ್ಣರಾಜ ಮುಂತಾದವರ ಹೆಸರುಗಳು ಈಗ ಕನ್ನಡಿಗರಿಗೆ ಮುಖಪಾಠವಾಗಿವೆ. ಐತಿಹಾಸಿಕ ಪುರುಷರ ಉತ್ಸವಗಳು ಎಲ್ಲೆಡೆಯಲ್ಲಿಯೂ ಜರಗುತ್ತವೆ. ಇವೆಲ್ಲಕ್ಕೂ ಈ ಸಂಸ್ಥೆಯ ಸದಸ್ಯರು ಮಾಡಿದ ಪ್ರಯತ್ನಗಳು ಬಹುಮಟ್ಟಿಗೆ ಕಾರಣವಾಗಿರುವುವು. ಸಂಶೋಧನದಂಥ ಕಾರ್ಯವನ್ನು ಮಾಡುವವರು ಎಲ್ಲಿ ಹೋದರೂ ಸ್ವಲ್ಪ ಜನರೇ ಇರುತ್ತಾರೆ. ಅವರು ಏಕಾಂತದಲ್ಲಿ, ಶಾಂತಚಿತ್ತದಿಂದ ,ಬೇಸರಿಲ್ಲದೆ, ಯಾವ ಫಲಾಪೇಕ್ಷೆಯೂ ಇಲ್ಲದೆ ಮಾಡಿದ ಐತಿಹಾಸಿಕ ಶೋಧನದ ಫಲವು ದೇಶದಲ್ಲಿ ಅಭಿಮಾನವನ್ನು ಹುಟ್ಟಿಸುವುದಕ್ಕೆ ಕಾರಣವಾಗುತ್ತದೆ. ಈ ಮಂಡಳದ ವಿಶೇಷವೇನಂದರೆ ಈ ಮಂಡಳದ ಸದಸ್ಯರು ಇಲ್ಲಿಯ ವರೆಗೆ ಸಾರ್ವಜನಿಕ ಫಂಡನ್ನು ವಿಶೇಷವಾಗಿ ಕೂಡಿಸುವುದಕ್ಕೆ ಹೋಗಲೇ ಇಲ್ಲ. ತಾವೇ ತಮ್ಮ ಹಣ ವೆಚ್ಚಮಾಡಿ ಪ್ರವಾಸಮಾಡಿ ಪರಿಶೋಧನೆಮಾಡಿ ಗ್ರಂಥಗಳನ್ನು ಪ್ರಕಟಿಸಿದರು. ಹಾಗು ಆಗಾಗ್ಗೆ ಲೇಖಗಳನ್ನು ಬರೆದರು.

ಆದರೆ ಈ ಮಂಡಳದ ಕಾರ್ಯದಲ್ಲಿ ಭಾಗವನ್ನು ತೆಗೆದುಕೊಳ್ಳುವ ಉತ್ಕಟೇಚ್ಛೆಯು ಈಗ ಕನ್ನಡಿಗರಲ್ಲಿ ಹುಟ್ಟಿದೆ. ಇತಿಹಾಸ ಸಂಶೋಧನದ ಕಾರ್ಯದಲ್ಲಿ ಕುತೂಹಲವುಳ್ಳವರು ಮಂಡಳಕ್ಕೆ ಆಗಾಗ್ಗೆ ಸಲಹೆಗಳನ್ನು ಕೇಳುತ್ತಿರುವರು. ಕನ್ನಡಿಗರಲ್ಲಿ ಹೊಸ ಹೊಸ ಅಭಿಮಾನದ ಸಂಗತಿಗಳನ್ನು ತಿಳಿದುಕೊಳ್ಳಲಿಚ್ಛಿಸುವ ಜಿಜ್ಞಾಸೆಯುಂಟಾಗಿದೆ ಆದುದರಿಂದ ಅನೇಕ ಮಿತ್ರಜನರ ಆಗ್ರಹದ ಮೇರೆಗೆ ಈಗ ಇದರ ಕಾರ್ಯಕ್ಷೇತ್ರವನ್ನು ಬೆಳಿಸಬೇಕೆಂದು ಗೊತ್ತುಮಾಡಿರುವೆವು. ಹಿಂದುಸ್ಥಾನದಲ್ಲಿ ಮತ್ತು ಪರದೇಶಗಳಲ್ಲಿ ಕರ್ನಾಟಕದ ಬಗ್ಗೆ ಹೊಸ ಸಂಶೋಧನಗಳಾದ ಸಂಗತಿಗಳನ್ನೂ ಮಂಡಳದ ಸದಸ್ಯರು ಸಂಶೋಧಿಸಿದ ನೂತನ ವೃತ್ತಾಂತವನ್ನೂ ಸಂಗ್ರಹಿಸಿ ಚಿಕ್ಕ ಚಿಕ್ಕ ಹೊತ್ತಿಗೆಗಳನ್ನು ಹೊರಡಿಸಿ ಮಂಡಳದ ಸದಸ್ಯರಿಗೆ ಕೊಡಬೇಕೆಂದು ನಿಶ್ಚಯಿಸಿರುವೆವು.

ಹಿತಚಿಂತಕ ಸದಸ್ಯರು ಈ ಮಂಡಳಕ್ಕೆ ಕೊಡಬೇಕಾದುದು, ವರ್ಷಕ್ಕೆ ಒಂದೇ ರೂಪಾಯಿ.

ಮಂಡಳದ ಕಾರ್ಯದಲ್ಲಿಯೂ ವ್ಯವಸ್ಥೆಯಲ್ಲಿಯೂ ಹೆಚ್ಚು ಆಸಕ್ತಿಯಿಂದಲೂ ಉತ್ಸಾಹದಿಂದಲೂ ಭಾಗವನ್ನು ತೆಗೆದುಕೊಳ್ಳಲಿಚ್ಛಿಸುವವರಿಗಾಗಿ ಕೆಳಗೆ ಬರೆದಂತೆ ವರ್ಗೀಕರಣವನ್ನು ಮಾಡಲಾಗಿದೆ.

ಈ ಮಂಡಲಕ್ಕೆ ಸಭಾಸದರಾಗತಕ್ಕವರ ವರ್ಗಗಳು.

(ಅ) ೩೦೦ ರೂಪಾಯಿ ಅಥವಾ ಅದಕ್ಕಿಂತ ಹೆಚ್ಚಿಗೆ ಹಣವನ್ನು ಕೊಡುವವರು ಆಶ್ರಯದಾತ ಸಭಾಸದರು.

(ಆ) ೧೦೦ ರೂ. ಇಲ್ಲವೆ ಅದಕ್ಕಿಂತ ಹೆಚ್ಚಿಗೆ ಕೊಡುವವರು, ೧ನೆಯ ವರ್ಗದ ಆಜೀವ ಸಭಾಸದರು.

(ಇ) ೫೦ ರೂಪಾಯಿ ಇಲ್ಲವೆ ಅದಕ್ಕಿಂತ ಹೆಚ್ಚಿಗೆ ಕೊಡುವವರು ೨ನೇ ವರ್ಗದ ಆಜೀವ ಸಭಾಸದರು.

(ಈ) ವರ್ಷಕ್ಕೆ ೫ ರೂ. ಕೊಡುವವರು ಸಹಾಯಕ ಸದಸ್ಯರು.

ಇತಿಹಾಸ ಮಂಡಳದ ಉತ್ಪಾದಕರಲ್ಲೊಬ್ಬರೂ ಇತಿಹಾಸ ಸಂಶೋಧನದಲ್ಲಿ ನುರಿತವರೂ ಸಂಶೋಧಕರೆಂದು ಕನ್ನಡಿಗರೆಲ್ಲರಿಗೆ ಚಿರಪರಿಚಿತರಾದವರೂ ಶ್ರೀ. ನಾರಾಯಣ ಶ್ರೀನಿವಾಸ ರಾಜಪುರೋಹಿತ ಇವರು ಮಂಡಳಕ್ಕೆ ಸದಸ್ಯರನ್ನು ಕೂಡಿಸುವುದಕ್ಕೂ ಹಸ್ತಲಿಖಿತಪ್ರತಿ, ತಾಮ್ರಶಾಸನ, ಮುಂತಾದ ಐತಿಹಾಸಿಕ ಸಾಮುಗ್ರಿಗಳನ್ನು ಸಂಗ್ರಹಿಸುವುದಕ್ಕೂ ಸಂಚಾರಕ್ಕೆ ಹೊರಟಿರುವರು. ಅವರಿಗೆ ಕನ್ನಡಿಗರೆಲ್ಲರೂ ಎಲ್ಲಬಗೆಯಿಂದಲೂ ಸಹಾಯ ಮಾಡಬೇಕೆಂದು ಸವಿನಯ ಪ್ರಾರ್ಥನೆಯದೆ.

ಧಾರವಾಡ,	**ಆಲೂರ ವೆಂಕಟರಾಯರು,**
೧೮-೯-೧೯೨೬	**ಅಧ್ಯಕ್ಷರು.**

K. P. W. D. 2134,26,1000

ರ. ನಂ. ಬಿ ೧೯೪೭ ವಾ ಚಂದಾ ೧—೧೪—೦ ಮಾತ್ರ

ಕನ್ನಡಿಗ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

सर्वं परवशं दुःखं । सर्वमात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮುಖ್ಯಪ್ರಾಣ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟ ಶುಕ್ರವಾರ ಮಿತಿ ಕಾರ್ತಿಕ ಬಹುಳ ೭ ಶಕೆ ೧೮೫೮ ತಾ|| ೬-೧೧-೧೯೩೬. | ಸಂಚಿಕೆ ೩೩

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೋಹವಾಗಿ ಕಟ್ಟುವೆನಾನು ।
ನಿನ್ನ ಬೆಸನವ ಪಾದಿಡಂಥ ಮಕ್ಕಳ ಜೊಮ್ಮು ।
ಚಿನ್ನದಾದರು ಚಿನ್ನ ಮೋಹಿಸುತ್ತಿಯು ನೊಂದು ಚಿನ್ನಯಾಕಾಶದಲ್ಲಿ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯೆ

—ಅಂಬಿಕಾತನಯದತ್ತ

ಚುನಾವಣೆಯ ಕೋಲಾಹಲವು ಒಂದು ಸಲ ತೀರಿದಂತಾಯಿತು! ಮದ್ರಾಸದಲ್ಲಿ ಕಾಂಗ್ರೆಸ್ ಪಕ್ಷಕ್ಕೆ ಸಂಪೂರ್ಣವಾಗಿ ಜಯದೊರೆತದ್ದು ವಿಶೇಷ. ಯಾಕೆಂದರೆ ಬ್ರಾಹ್ಮಣೇತರ ಚಳವಳಿಗೆ ಮದ್ರಾಸ ಇಲಾಖೆಯೆಂದರೆ ತವರು ಮನೆ ಮೂಲಬೀಜವು ಉದ್ಭವವಾದದು ಅಲ್ಲಿಯೇ. ಅಂತಹ ಸ್ಥಾನದಲ್ಲಿ ಬ್ರಾಹ್ಮಣೇತರ ಪಕ್ಷವು ಹೆಸರಿಗೆ ಮಾತ್ರ ಉಳಿದಂತಾಗಿ, ಅದರ ಬದಲು ಕಾಂಗ್ರೆಸ್ಸ ಪಕ್ಷಕ್ಕೇ ಜನಸಾಮಾನ್ಯರು ಮಾನ ಕೊಟ್ಟಿದ್ದು ವಿಶೇಷವಲ್ಲವೇ? ಹಿಂದುಸ್ಥಾನದ ಎಲ್ಲ ಪ್ರಾಂತಗಳಲ್ಲಿಯೂ ಆರಿಸುವಿಕೆಯ ಕಾರ್ಯಕ್ರಮವು ಮುಗಿದಿಲ್ಲವಾದ್ದರಿಂದ ಕಾಂಗ್ರೆಸ್ಸಕ್ಕೆ ಎಲ್ಲೆಲ್ಲಿ ಎಷ್ಟೆಷ್ಟು ಮಾನದೊರೆತಿದೆಂಬದನ್ನು ಈಗಲೇ ಹೇಳುವದು ಶಕ್ಯವಿಲ್ಲ. ಇನ್ನು ಒಟ್ಟಾರೆ ಕರ್ನಾಟಕದ ಬಗ್ಗೆಯೇ ಹೇಳುವದಾದರೆ, ಇಲ್ಲಿ ಸಹ ಕಾಂಗ್ರೆಸ್ಸಕ್ಕೇ ಗೆಲುವೆಂಬುದು ಸಿದ್ಧವಾಗುತ್ತದೆ. ಕರ್ನಾಟಕದಲ್ಲಿ ಕಾಂಗ್ರೆಸ್ಸದಿಂದ ೭ ಜಿಲ್ಲೆಗಳಿವೆ ಅವುಗಳಲ್ಲಿ ಸಂಸ್ಥಾನದ ಜಿಲ್ಲೆಯನ್ನು ಬಿಟ್ಟರೆ ಬ್ರಿಟಿಶ ಕರ್ನಾಟಕದ ಆರು ಜಿಲ್ಲೆಗಳಲ್ಲಿ, ನಾಲ್ಕು ಜಿಲ್ಲೆಗಳಲ್ಲಿ ಕಾಂಗ್ರೆಸ್ಸಕ್ಕೆ ಮಾನವು ದೊರೆತಿದೆ. ಮಂಗಳೂರ, ಧಾರವಾಡ, ಕಾರವಾರ, ಬಳ್ಳಾರಿ ಜಿಲ್ಲೆಗಳಲ್ಲಿ ಕಾಂಗ್ರೆಸ್ಸದ ಉಮೇದವಾರರೇ ಆರಿಸಿ ಬಂದಿರುವರು. ಶ್ರೀ ಜೋಶಿಯವರೇ ದೊಡ್ಡ ಕಾಯದೇ ಮಂಡಲಕ್ಕೆ ಆರಿಸಲ್ಪಟ್ಟಿದ್ದಾರೆ. ವಿಜಾಪುರ ಜಿಲ್ಲೆಯ ಮತದಾರರು ಮಾತ್ರ ತಮ್ಮ ಮತದ ಅಧಿಕಾರದ ಸದುಪಯೋಗವನ್ನು ಮಾಡಿಕೊಳ್ಳಲಿಲ್ಲವೆಂಬುದನ್ನು ವಿಷಾದದಿಂದ ಹೇಳಬೇಕಾಗುತ್ತದೆ. ಬೆಳಗಾವಿಯು ಕಾಂಗ್ರೆಸ್ಸ ಕಟ್ಟಿಯಿಸುವದು ಬೆಳಗಾವಿ ಜಿಲ್ಲೆಯು ಕನ್ನಡಿಗರದೆಂಬುದನ್ನು ಒಪ್ಪದವರೇ ಕನ್ನಡಿಗರಿಗೆ ಏನೂ ಪರಿಚಯವಿಲ್ಲದ, ಕನ್ನಡ ಮಾತನಾಡಲಿಕ್ಕೆ ಸಹ ಚೆನ್ನಾಗಿ ಬಾರದ ಉಮೇದವಾರನನ್ನು ನಿಲ್ಲಿಸಿದ್ದರಿಂದ ತಮ್ಮ ಜಿಲ್ಲೆಯಲ್ಲಿ ಸೋಲನ್ನು ಕಟ್ಟಿಕೊಳ್ಳಬೇಕಾಯಿತು. ಇದರಿಂದ ಮುಂದೆಯಾದರೂ ಅವರು ಬುದ್ಧಿ ಕಲಿತರೆ ಕಾಂಗ್ರೆಸ್ಸ ಕಾರ್ಯದಲ್ಲಿ ಒಳ್ಳೇ ಮುಂದಾದ ಜಿಲ್ಲೆಯೆಂಬ ಹೆಸರಿಗೆ ಕುಂದು ಬರಲಿಕ್ಕಿಲ್ಲ

ಮಂಗಳೂರ ಜಿಲ್ಲೆಯವರು. ಹೆಂಗಸೋ? ಗಂಡಸೋ? ಎಂಬುದನ್ನು ತಾವು ಕಟ್ಟಿದಂತೆ ಕಟ್ಟಿ ಕಟ್ಟಿ, ಕಡೆಗೆ ಗಂಡಸನ್ನೇ ಆರಿಸಿದರು. ಶ್ರೀ ಕಾರಂತರಿಗೆ ಶ್ರೀಮತಿ ಕಮಲಾದೇವಿಯವರಿಗಿಂತ ೫೦೦ ಮತಗಳು ಹೆಚ್ಚಾಗಿವೆ. ಮಂಗಳೂರಿನವರು ಈ ಸಂದರ್ಭದಲ್ಲಿ ಒಳ್ಳೇ ಜಾಣತನವನ್ನು ತೋರ್ಪಡಿಸಿದ್ದಾರೆ ಇತ್ತ ಕಾಂಗ್ರೆಸ್ಸ ಉಮೇದವಾರರನ್ನೇ ಆರಿಸಿ, ಕಾಂಗ್ರೆಸ್ಸಿನಲ್ಲಿ ತಮ್ಮ ಭಕ್ತಿ ಸಂಪೂರ್ಣವೆಂಬುದನ್ನು ಸಿದ್ಧಪಡಿಸಿದರು. ಅತ್ತ ೫೪೭ ಮತಗಳನ್ನು, ವಿಶೇಷ ಪ್ರಯತ್ನಿಸಲು ಸಾಕಷ್ಟು ಅವಧಿಯಿಂದಿದ್ದರೂ ಶ್ರೀಮತಿ ಕಮಲಾದೇವಿಯರಿಗೆ ಸಲ್ಲಿಸಿ, ಸ್ತ್ರೀಯರಿಗೆ ಮರ್ಯಾದೆಯನ್ನೂ ಕೊಟ್ಟರು

ಮೈಸೂರ ನಗರದ ಅನೇಕ ಬೀದಿಗಳಲ್ಲಿ ದೀಪಗಳಿಲ್ಲವಾದ್ದರಿಂದ ಜನರಿಗೆ ತೊಂದರೆಯಾಗುತ್ತದೆ. ಹೀಗಾಗಬಾರದೆಂದು ನಗರವಾಸಿಗಳು ವಿದ್ಯುತ್ ಖಾತೆಯವರಿಗೆ ಕೇಳಿಕೊಂಡರು. ಆದರೆ ಅದಕ್ಕೆ ಏನೂ ಏರ್ಪಾಡಾಗಿಲ್ಲ. "ವಸ್ತುಸಂಗ್ರಹ ಶಾಖೆಯವರಿಂದ ತಮಗೆ ಬೇಕಾದ ಉಪಕರಣಗಳೇ ಪೂರೈಸಲ್ಪಟ್ಟಿಲ್ಲ; ತಮಗೆ ಸ್ವತಂತ್ರವಾಗಿ ಕೊಳ್ಳಲು ಅಧಿಕಾರವೂ ಇಲ್ಲ" ವೆಂಬದಾಗಿ ಅವರು ಉತ್ತರ ಕೊಟ್ಟಿದ್ದಾರಂತೆ! ಅತ್ತಿಂದಿತ್ತ ಇತ್ತಿಂದತ್ತ ಚಂಡುಗಳನ್ನು ಒಗೆಯುವ ಜಾಣತನವು ಬ್ರಿಟಿಷ್ ರಾಜ್ಯದಲ್ಲಿ ಮಾತ್ರ ಇದೆಂದು ನಾವು ತಿಳಿದಿದ್ದೆವು ಆದರೆ ಈಗೀಗ ಇದು ಮೈಸೂರ ರಾಜ್ಯದಲ್ಲಿಯೂ ಪ್ರವೇಶಮಾಡುತ್ತಲಿರುವುದು ನಮಗೆ ತಿಳಿಯಹತ್ತಿದೆ ಮಾದರಿಯ ರಾಜ್ಯವೆಂಬ ಹೆಸರಿನಿಂದ ಹೆಸರಾದ ಮೈಸೂರಿಗೆ ಚಂಡಾಟದ ಉಪಕ್ರಮವು ಸರಿಯಿಲ್ಲ!

ಪ್ರಫುಲ್ಲ ಚಂದ್ರರಾಯರು ಹೆಸರಾದ ರಸಾಯನ ಶಾಸ್ತ್ರಜ್ಞರು ಅರ್ಥಶಾಸ್ತ್ರಪ್ರವೀಣರು ಪಾಶ್ಚಿಮಾತ್ಯ ಸುಧಾರಣೆಯ ಹೃದಯವನ್ನು ಚೆನ್ನಾಗಿ ಅರಿತವರು. ಇವರಲ್ಲಿ ಜ್ಞಾನಕ್ರಿಯಾ ಸಮುಚ್ಚಯವು ಅಖಂಡವಾಗಿ ಕಂಡು ಬಂದಿದೆ. ಇಂಥವರ ನುಡಿಗಳು ಆದರಕ್ಕೆ ಪಾತ್ರವಾದವುಗಳು, ಆಚರಣೆಯವಾದವುಗಳು ಇವರು ಹೋದವಾರದಲ್ಲಿ ಮೈಸೂರ ಪ್ರಾಂತಕ್ಕೆ ದಯಮಾಡಿಸಿದ್ದಾರೆ. ಅಲ್ಲಿ ಅವರು ಖಾದಿಯ ಮಹಾತ್ಮ್ಯದ ಬಗ್ಗೆ ನುಡಿದರು ಮೈಸೂರ ಕನ್ನಡಿಗರ, ಅವರ ಆಚಾರ ವಿಚಾರಗಳಲ್ಲಿರುವ ಹೊಂದಿಕೆಯನ್ನು ನೋಡಿ ಆನಂದ ಪಟ್ಟುದಲ್ಲದೆ, ಅವರಿಗೆ ಚರಕ

ಋಷಿಗಳೆಂದು ಸಂಭಾವಿಸಿದರು. ಇವರ ವಿಸ್ಮಿತ ವೇಷ (ಸಾದಾ ಉಡುಪು), ಸಾದಾ ಬಾಳ್ವೆ, ಬಡಜನರ ವಿಷಯದಲ್ಲಿಯ ಅನುಕಂಪೆ ಇವೇ ಮೊದಲಾದವುಗಳನ್ನು ನೋಡಿ ಯಾರಿಗೆ ತಾನೇ ಕೌತುಕವಾಗಲಿಕ್ಕಿಲ್ಲ! ರಸಾಯನ ಶಾಸ್ತ್ರದ ಪಂಡಿತರಾಗಿ ಇವರು ಎಷ್ಟೋ ವರ್ಷ ಕೆಲಸ ಮಾಡಿ ಮುದುಕರಾಗಿರುವರು. ಇಳಿ ವಯಸ್ಸು, ಹಣ್ಣಾದ ಕೂದಲು ಅಂದರೂ ಇವರಲ್ಲಿಯ ಕಾರ್ಯಮಾಡುವ ಹುರುಪು ಕುಂದಿಲ್ಲ. ಬಡತನದವರ ಹಿತದ ಕಡೆಗೆ ಲಕ್ಷ್ಯವಿಟ್ಟು ಕೆಲಸ ಮಾಡುವುದೇ ಜೀವನದ ಗುರಿಯೆಂಬುದನ್ನು ಇವರು ತಮ್ಮ ನಡೆಯಿಂದ ಜಗತ್ತಿನ ನಿದರ್ಶನಕ್ಕೆ ತಂದುಕೊಡುತ್ತಲಿದ್ದಾರೆ. ಈಗಿನ ಹಿಂದುಸ್ಥಾನಕ್ಕೆ ಬೇಕಾದುದು ಅನ್ನ. ಈ ಅನ್ನವು ದೊರೆಯಬೇಕಾದರೆ ಪರದೇಶೀಯ ವಸ್ತ್ರಗಳು ಹಿಂದುಸ್ಥಾನಕ್ಕೆ ಬಾರದಂತೆ ಏರ್ಪಾಟಾಗಬೇಕು. ಇದು ಸಾಧ್ಯವಾಗಬೇಕಾದರೆ ಹಿಂದುಸ್ಥಾನದ ಜನರು ಸ್ವಾವಲಂಬಿಗಳಾಗಿ, ತಮ್ಮ ವಸ್ತ್ರಗಳನ್ನು ತಾವೇ ನಿರ್ಮಿಸಬೇಕು. ಈ ತತ್ವವನ್ನು ಮಹಾತ್ಮರು—ಇವರ ತರುವಾಯದಲ್ಲಿ ಪ್ರಫುಲ್ಲಚಂದ್ರರಾಯರು— ಹೇಳುತ್ತಿರುವರು. ಇವರು ಗ್ರಂಥಕಾರರೂ ಅಹುದು; ಕ್ರಿಯಾವಂತರೂ ಅಹುದು. ಇವರ ವೃತ್ತಿಯ ಬೆಳಕಿನಲ್ಲಿ ಹೊಂದಿಕೊಳ್ಳುವದು ವ್ಯಕ್ತಿಗೂ ರಾಷ್ಟ್ರಕ್ಕೂ ಹಿತಕರವಾಗಿರುವದು. ಕಬ್ಬು ಪರಾರ್ಥಕ್ಕಾಗಿ ಹೇಗೆ ಪೀಡೆಯನ್ನು ಅನುಭವಿಸುವದೋ, ಅದರಂತೆ ಸತ್ಪುರುಷರಾದವರೂ ಲೋಕಹಿತಕ್ಕಾಗಿ ತೊಳಲುವರು. ಅವರ ತೊಳಲುವಿಕೆಯಲ್ಲಿಯೇ ನಾಡಿನ ಕಲ್ಯಾಣವಿರುವದು. ಅವರ ಅಂತಃಕರಣದ ನುಡಿಗಳನ್ನು ಮೊದಲು ಜನರು ಅನಾದರದಿಂದ ಹಳಿದರೂ, ಮುಂದೆ ಕಣ್ಣು ತೆರೆದು ಅವುಗಳನ್ನು ಹೃದಯದಲ್ಲಿಟ್ಟುಕೊಳ್ಳುವರು. ಇನ್ನು ಮೈಸೂರ ಮಹಾರಾಜರ ಖಾದಿಯಲ್ಲಿಯ ಅನುರಾಗದಿಂದ ನಮ್ಮ ಮೈಸೂರ ನಾಡಿನಲ್ಲಿ ಖಾದಿಯ ಪ್ರಸಾರವು ಹೆಚ್ಚಾಗುವಂತಹ ಸಮಯದಲ್ಲಿ, ಈ ತರಹ ಋಷಿಗಳು ಮೈಸೂರ ಕರ್ನಾಟಕವನ್ನು ಸಂದರ್ಶಿಸಿದ್ದು ಸಕಾಲದಲ್ಲಿ ಸುವೃಷ್ಟಿಯಾದಂತಾಗಿದೆ. ಇವರ ಫಲವನ್ನನುಭೋಗಿಸುವ ಸುಯೋಗವನ್ನಾದರೂ ಅಖಂಡ ಕರ್ನಾಟಕಕ್ಕೆ ನಮ್ಮ ಮೈಸೂರ ಕನ್ನಡಿಗರೂ ಮೈಸೂರ ನಾಡಿನ ಕನ್ನಡ ರಾಜರೂ, ಕನ್ನಡ ರಾಜರ ಸರಕಾರದವರೂ ತಂದುಕೊಡುವರಾಗಿ ನಾವು ಬಯಸಿದರೆ ತಪ್ಪಾಗದಷ್ಟೇ? ಪ್ರಫುಲ್ಲಚಂದ್ರರ ಕನ್ನಡ ನಾಡಿನ ಆಗಮನದ ಲಾಭವನ್ನು ಉತ್ತರ ಕರ್ನಾಟಕಕ್ಕೆ ತಂದುಕೊಡುವ ಹಾಗೆ. ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮೀಟಿಯವರು ಪ್ರಯತ್ನಿಸಬಹುದಾಗಿತ್ತು. ಆದರೆ ಅಷ್ಟೊಂದು ಕಳವಳದಿಂದ ಪ್ರಯತ್ನಿಸುವವರಾರು! ಈ ಋಷಿಗಳು ೨೨ ನೇ ತಾ|| ದಿನ ಮೈಸೂರ ವಿಶ್ವ ವಿದ್ಯಾನಿಲಯದಲ್ಲಿ ವಾರ್ಷಿಕ ಸಮಾಲೋಚನೆಯ ವ್ಯಾಖ್ಯಾನ ಕೊಡತಕ್ಕವರಿದ್ದಾರೆ ಆದ್ದರಿಂದ ಇವರಿನ್ನೂ ಮೈಸೂರಲ್ಲಿರುವರು. ಹೀಗಾದರೂ ಕಾಂಗ್ರೆಸ್ ಕಮಿಟಿಯವರು ಎಚ್ಚತ್ತು ತಾರಿನಿಂದ ಇತ್ತ ಬರಲು ಅವರಿಗೆ ಆಮಂತ್ರಿಸಬಾರದೇ?

ಕರ್ನಾಟಕವೂ ಶಿಲಾಲಿಪಿಗಳೂ

[ಲೇಖಾಂಕ ೨]

ನಾವು ಹಿಂದಿನ ಲೇಖನದಲ್ಲಿ ಕರ್ನಾಟಕದ ಲಿಪಿಗಳ ಸಂಗ್ರಹ ಪ್ರಸಿದ್ಧಿಗಳ ಬಗ್ಗೆ ಸಾಮಾನ್ಯವಾಗಿ ಬರೆದಿದ್ದೆವು. ಪ್ರಸ್ತುತ, ಆ ಲಿಪಿಗಳ ಸಂಗ್ರಹವನ್ನು ಕುರಿತು ವಿಸ್ತಾರವಾಗಿ ಬರೆಯಲಿಚ್ಛಿಸುತ್ತೇವೆ.

ಶಾಸನಶಾಖೆಯು ಹುಟ್ಟಿದಂದಿನಿಂದ ಅಂದರೆ ಕ್ರಿ. ಶ. ೧೮೬೦ನೇಯ ವರ್ಷದಿಂದ ಕರ್ನಾಟಕದ ಕಡೆಗೆ ಯಾರೂ ಲಕ್ಷ್ಯಕೊಡಲಿಲ್ಲವೆಂದು ಧಾರಾಳವಾಗಿ ಹೇಳಬಹುದು. ಇದು ಚನ್ನಾಗಿ ತಿಳಿಯಬೇಕಾದರೆ, ಮೊದಲು ಲಿಪಿಗಳ ದೃಷ್ಟಿಯಿಂದ ಕರ್ನಾಟಕ ಪ್ರಾಂತದ ಪರಿಚಯವನ್ನು ಮಾಡಿಕೊಟ್ಟು ಅದರ ಯಾವ ಯಾವ ಭಾಗಗಳು ಲಿಪಿಗಳಿಗಾಗಿ ಶೋಧಿಸಲ್ಪಟ್ಟಿರುತ್ತವೆಂಬುದನ್ನು ತೋರಿಸುವದು ಅವಶ್ಯವಿದೆ. ಕರ್ನಾಟಕವು ಮುಂಬಯಿ ಮದ್ರಾಸ ಮೈಸೂರು ಕೊಡಗು ನಿಜಾಮ ಈ ಪ್ರಾಂತಗಳಲ್ಲಿ ಅಡಕವಾಗಿರುತ್ತದೆ. ಮೈಸೂರ ಪ್ರಾಂತವನ್ನು ಇಲ್ಲಿ ನಿರ್ದೇಶಿಸುವದು ಅವಶ್ಯವಿಲ್ಲ. ಯಾಕಂದರೆ ಮೈಸೂರ ಮಹಾರಾಜರು ಅಲ್ಲಿಯ ಶಾಸನಗಳನ್ನು ಪರೀಕ್ಷಿಸಿ ಪ್ರಸಿದ್ಧಪಡಿಸಿರುವರು. ಇನ್ನು ಮುಂಬಯಿ ಕರ್ನಾಟಕದಲ್ಲಿ ಧಾರವಾಡ, ಬೆಳಗಾಂವಿ, ವಿಜಾಪುರ, ಕಾರವಾರ ಮತ್ತು ಸೊಲ್ಲಾಪುರ ಜಿಲ್ಲೆಗಳೂ ಸಾಂಗಲಿ, ಜಮಖಂಡಿ, ಮುಧೋಳ, ಮಿರಜ, ಕೊಲ್ಲಾಪುರ ಮುಂತಾದ ಸಣ್ಣ ದೊಡ್ಡ ಸಂಸ್ಥಾನಗಳೂ ಸೇರುತ್ತವೆ. ಇವೆಲ್ಲ ಸಂಸ್ಥಾನಗಳು ಮತ್ತು ಸೊಲ್ಲಾಪುರ ಜಿಲ್ಲೆಯು ಈಗ ಮಹಾರಾಷ್ಟ್ರಕ್ಕೆ ಸೇರಿದಂತೆ ಕಂಡುಬಂದರೂ ಅವು ೬ನೆಯ ಶತಮಾನದಿಂದ ಸುಮಾರು ೧೬ನೆಯ ಶತಮಾನದವರೆಗೆ ಕರ್ನಾಟಕದ ಅರಸರ ಅಧಿಪತ್ಯಕ್ಕೆ ಒಳಗಾಗಿದ್ದುದರಿಂದ ಅಲ್ಲಿ ಕನ್ನಡ ಲಿಪಿಗಳು ಹೇರಳವಾಗಿ ದೊರೆಯುವವು. ಮತ್ತು ಇಲ್ಲಿಯವರೆಗೆ ಪ್ರಸಿದ್ಧಿಸಲ್ಪಟ್ಟ ಕನ್ನಡ ಶಾಸನಗಳಲ್ಲಿ ಎಷ್ಟೋ ಶಾಸನಗಳು ಈ ಮೇಲ್ಕಂಡ ಪ್ರಾಂತಗಳಲ್ಲಿ ಸಿಕ್ಕಿರುತ್ತವೆ. ಮದ್ರಾಸ ಕರ್ನಾಟಕದಲ್ಲಿ, ಬಳ್ಳಾರಿ ಜಿಲ್ಲೆ, ದಕ್ಷಿಣ ಕನ್ನಡ ಜಿಲ್ಲೆ, ಅನಂತಪೂರ ಜಿಲ್ಲೆಯ ಕೆಲವು ತಾಲೂಕುಗಳು, ಮತ್ತು ಸೇಲಮ್, ಕೊಯಿಮುತ್ತೂರು ಜಿಲ್ಲೆಗಳ ಭಾಗಗಳು. ಹೈದರಾಬಾದ ಸಂಸ್ಥಾನದ ದಕ್ಷಿಣಪಶ್ಚಿಮ ಭಾಗಗಳೂ, ನಿಜಾಮ ಕರ್ನಾಟಕದಲ್ಲಿ ಬರುತ್ತವೆ. ದಕ್ಷಿಣ ಹಿಂದುಸ್ಥಾನದ ರಾಜರುಗಳಲ್ಲಿ ಹೆಸರುಗೊಂಡ ರಾಷ್ಟ್ರಕೂಟರ ರಾಜಧಾನಿಯಾದ ಮಳಖೇಡವೂ, ಪಶ್ಚಿಮ ಚಾಲುಕ್ಯರ ರಾಜಧಾನಿಯಾದ ಕಲ್ಯಾಣವೂ ಮತ್ತು ಯಾದವರಸರ ವಾಸಸ್ಥಾನವಾದ ದೇವಗಿರಿ [ದೌಲತಾಬಾದ] ಯೂ ನಿಜಾಮರಾಜ್ಯದಲ್ಲಿ ಇರುವದರಿಂದ ಲಿಪಿಗಳ ದೃಷ್ಟಿಯಿಂದ ನಿಜಾಮ ಕರ್ನಾಟಕದ ಮಹತ್ವವನ್ನು ಬೇರೆ ವರ್ಣಿಸಬೇಕಾಗಿಲ್ಲ. ವರಂಗಲ್ಲಿನ ಕಾಕತೇಯರು ಚಾಲುಕ್ಯರ ಕೂಡ ವಿವಾಹಸಂಬಂಧಗಳಿಂದ ಹೆಚ್ಚು ಬಳಿಕೆಯುಳ್ಳದ್ದರಿಂದ ಕರ್ನಾಟಕದ ಇತಿಹಾಸಕ್ಕೆ ಮೊಗಲಾಯಿಯ ಲಿಪಿಗಳ ಶೋಧನೆಯು ಎಷ್ಟು ಅವಶ್ಯವೆಂಬುದು ತಾನೇ ಗೊತ್ತಾಗುತ್ತದೆ.

ಅಂತು, ಕರ್ನಾಟಕದ ಪ್ರಮಾಣಭೂತವಾದ ಇತಿಹಾಸವು ನಮಗೆ ತಿಳಿಯಬೇಕಾದರೆ ಮೇಲೆ ಹೇಳಿದ ಎಲ್ಲ ಪ್ರಾಂತಗಳ ಲಿಪಿಶೋಧನೆಯಾಗಬೇಕು. ಇನ್ನು ೧೮೬೦ನೇಯ ವರ್ಷದಿಂದ ಇಲ್ಲಿಯವರೆಗೆ ಸರಕಾರದವರು ಯಾವ ಯಾವ ಭಾಗಗಳನ್ನು ನೋಡಿ ಎಷ್ಟು ಲಿಪಿಗಳ ಅಚ್ಚು* ಗಳನ್ನು ಸಂಗ್ರಹಿಸಿದ್ದಾರೆಂಬುದನ್ನು ನೋಡುವಾ.

ಹಿಂದಿನ ಲೇಖನದಲ್ಲಿ ಹೇಳಿದಂತೆ ಫ್ಲೀಟ್ ಸಾಹೇಬರು ತಾವು ಎಪಿಗ್ರಾಫಿಸ್ಟರಾಗಿದ್ದಾಗ (ಕ್ರಿ. ಶ. ೧೮೮೩) ಮತ್ತು ಅವ

* ಈ ಲೇಖದಲ್ಲಿ ಅಚ್ಚು, ಮುದ್ರಣ ಅಥವಾ ಅದರ ಪರ್ಯಾಯ ಶಬ್ದಗಳನ್ನು ಬ್ರಶ್, ಮಸಿ, ಪ್ಯಾಪರ್ ಮುಂತಾದ ಸಾಮುಗ್ರಿಗಳಿಂದ ಕಾಗದದ ಮೇಲೆ ಲಿಪಿಗಳ ಪ್ರಮಾಣ ಭೂತವಾದ ನಕಲುಗಳನ್ನು ತೆಗೆದುಕೊಳ್ಳುವ ಅರ್ಥದಲ್ಲಿ ಉಪಯೋಗಿಸಿದ್ದೇವೆ.

ಕ್ಕಿಂತ ೧೦೦ ವರ್ಷ ಪೂರ್ವದಲ್ಲಿ ಮುಂಬಯಿ ಕರ್ನಾಟಕದ ಧಾರವಾಡ, ಬೆಳಗಾಂವ, ವಿಜಾಪುರ ಜಿಲ್ಲೆಗಳಲ್ಲಿ ಬದಾಮಿಯಂಥ ಐತಿಹಾಸಿಕ ಪ್ರಸಿದ್ಧ ಸ್ಥಳಗಳಿಗೆ ಹೋಗಿ ಕೆಲವು ಲಿಪಿಗಳ ಅಚ್ಚುಗಳನ್ನು ತಗೊಂಡಿದ್ದರು. ಆಗ್ಗೆ ಸುಮಾರು ೧೦೦೦ ಅಚ್ಚುಗಳು ಇನ್ನೂ ಅವನ್ನೆಲ್ಲ ಲಂಡನ್ನಿನ ಪ್ರಾಚ್ಯವಸ್ತು ಸಂಗ್ರಹಾಲಯದಲ್ಲಿ ಇಟ್ಟಿದೆ. ೧೮೭೮ರಲ್ಲಿ ಫ್ಲೀಟ ಸಾಹೇಬರು ಹಂಪಿಯ ಸುಮಾರು ೨೫ ಲಿಪಿಗಳನ್ನು ಮುದ್ರಿಸಿದರು. ಫ್ಲೀಟ ಸಾಹೇಬರಿಗೆ ಕರ್ನಾಟಕದ ಬಗ್ಗೆ ವಿಶೇಷ ಆದರವಿದ್ದುದರಿಂದ ಅವರು ಸರಕಾರಕ್ಕೆ ಕರ್ನಾಟಕಕ್ಕಾಗಿ ಒಬ್ಬ ಅಸಿಸ್ಟಂಟರನ್ನು ನೇಮಿಸಬೇಕೆಂದು ತಿಸಿಳಿದ ಮೇರೆಗೆ ೧೮೯೧ನೆಯ ವರ್ಷ ಎಚ್. ಕೃಷ್ಣಶಾಸ್ತ್ರಿಗಳ ನೇಮಕವಾಯಿತು. ಕರ್ನಾಟಕಕ್ಕೆಂದು ನೇಮಿಸಲ್ಪಟ್ಟರು. ಅವರ ಕೆಲಸವೆಲ್ಲ ತೆಲುಗುದೇಶದಲ್ಲಿಯೇ ಆದಂತೆ ತೋರುತ್ತದೆ. ಮೈಸೂರು ದೇಶದ ಕೆಲವು ಲಿಪಿಗಳ ಮುದ್ರಣವನ್ನು ಇವರು ಮೊದಲು ತೆಗೆದುಕೊಂಡಿದ್ದೇನೋ ನಿಜ. ಆದರೆ ಆ ಶಾಸನಗಳ ಪ್ರಸಿದ್ಧಿಯ ಅಧಿಕಾರವನ್ನು ಮೈಸೂರು ಸರಕಾರದವರು ತಮ್ಮ ಆಧೀನದಲ್ಲಿಯೇ ಇಟ್ಟುಕೊಂಡದ್ದರಿಂದ ಆ ಸಂಗ್ರಹದ ಉಪಯೋಗವೇನೂ ಆದಂತೆ ಕಾಣುವದಿಲ್ಲ. ತೆಲುಗುದೇಶದಲ್ಲಿ ಮಾತ್ರ ಬಾಪಟ ಲಾ, ಅಮರಾವತಿ (ಗುಂಟೂರು ಜಿಲ್ಲೆ) ದ್ರಾಕ್ಷಾರಾಮ ಸಿಂಹಾಚಲ (ವಿಶಾಖಾಪಟ್ಟಣ ಜಿಲ್ಲೆ) ಮೊದಲಾದ ಪ್ರದೇಶಗಳಿಂದ ಅನೇಕ ಶಾಸನಗಳನ್ನು ಸಂಗ್ರಹಿಸಿದ್ದು ಮದ್ರಾಸದ ರಿಪೋರ್ಟುಗಳ ಮೇಲಿಂದ ತಿಳಿಯುತ್ತದೆ. ೧೮೯೭ರಲ್ಲಿ ಬಳ್ಳಾರಿಜಿಲ್ಲೆಯ ಉಚ್ಚಂಗಿ ದುರ್ಗದಿಂದ ಸುಮಾರು ೧೫ ಲಿಪಿಗಳು ಸಂಗ್ರಹಿಸಲ್ಪಟ್ಟವು. ೧೯೦೧ ರಲ್ಲಿ ಮಂಗಳೂರ ಜಿಲ್ಲೆಯಿಂದ ೧೩೪ ಲಿಪಿಗಳ ಅಚ್ಚು ತೆಗೆಯಲ್ಪಟ್ಟಿತು. ಆದರೆ ಆ ಜಿಲ್ಲೆಯ ವ್ಯವಸ್ಥಿತ ಶೋಧನೆಯು ನಡೆಯಲಿಲ್ಲ. ೧೯೦೪ ರಲ್ಲಿ ಡಬ್ಲ್ಯು ಫ್ರಾನ್ಸಿಸ್‌ರು ಬಳ್ಳಾರಿಜಿಲ್ಲೆಯ ಗ್ಯಾಜಿಟೀರ್ ಬರೆಯುವಾಗ, ಎಪಿಗ್ರಾಫಿಸ್ಟರಾಗಿದ್ದ ಸ್ವ. ರಾ. ರಾವಬಹದ್ದೂರ ವೆಂಕಯ್ಯಾ ಇವರಿಗೆ ಅಲ್ಲಿಯ ಶಾಸನಗಳ ಶೋಧನೆಗೆ ಹೇಳಿಕೊಂಡ ಮೇರೆಗೆ (ಬಳ್ಳಾರಿ ಜಿಲ್ಲೆಯ ಗ್ಯಾಝಿಟೀರ್ ನೋಡಿರಿ) ಆ ವರ್ಷ ಅಲ್ಲಿಂದ ಸುಮಾರು ೧೨೯ ಶಾಸನಗಳ ಮುದ್ರಣೆಯು ತೆಗೆಯಲ್ಪಟ್ಟಿತು. ಇವು ತಾಲೂಕು ಹಳ್ಳಿಗುಂಟ ಪರಿಶೋಧಿಸಲ್ಪಟ್ಟವಿರದೆ ಪ್ರಸಿದ್ಧವೆನಿಸಿದ ಸ್ಥಳಗಳಿಂದ ಆರಿಸಲ್ಪಟ್ಟವಿರುತ್ತವೆ. ಅಂದವೇಳೆ ಮಂಗಳೂರು ಜಿಲ್ಲೆಯಂತೆ ಬಳ್ಳಾರಿ ಜಿಲ್ಲೆಯ ಶಾಸನಗಳ ವ್ಯವಸ್ಥಿತ ಶೋಧನೆಯು ನಡೆದಿಲ್ಲವೆನ್ನಬಹುದು. ಅಂತೂ ಫ್ಲೀಟ್ ಸಾಹೇಬರ ಸಂಗ್ರಹವನ್ನು ಬಿಟ್ಟರೆ ೧೮೭೭ ರಿಂದ ೧೯೧೩ರ ವರೆಗೆ ಕರ್ನಾಟಕದಲ್ಲಿ [ಮೈಸೂರನ್ನು ಬಿಟ್ಟು] ಸುಮಾರು ೩೬೦ ಲಿಪಿಗಳಿಗಿಂತ ಹೆಚ್ಚು ಮುದ್ರಣೆಯಾಗಿಲ್ಲ. ೧೯೦೪ರಿಂದ ೧೯೧೩ರಲ್ಲಿ ಆಕಸ್ಮಿಕವಾಗಿ ಅಲ್ಲಲ್ಲಿ ಕಣ್ಣಿಗೆ ಬಿದ್ದ ಕೆಲ ಕನ್ನಡಶಾಸನಗಳನ್ನು ಸಂಗ್ರಹಿಸಿದ್ದರೂ ಅದೇನು ಹೇಳಿಕೊಳ್ಳುವಂಥದಿಲ್ಲ. ಯಾಕಂದರೆ ತೆಲುಗು, ತಮಿಳು ಶಾಸನಗಳನ್ನು ಸಂಗ್ರಹಿಸುತ್ತಿರುವಾಗ ಅಲ್ಲಲ್ಲಿ ಕನ್ನಡ ಲಿಪಿಗಳು ಸಿಕ್ಕರೆ, ಅವುಗಳನ್ನು ಮುದ್ರಿಸಬೇಕಾಗಿ ಬಂತೇ ಹೊರತು, ಕರ್ನಾಟಕಕ್ಕಾಗಿಯೇ ಯಾರೂ ಪ್ರತ್ಯೇಕ ಪ್ರಯತ್ನವನ್ನು ಮಾಡಿಲ್ಲ. ರಾವಬಹದ್ದೂರ ಕೃಷ್ಣಶಾಸ್ತ್ರಿಗಳು ಮದ್ರಾಸಿನಲ್ಲಿ ಅಸಿಸ್ಟಂಟ ಸುಪರಿಂಟೆಂಡೆಂಟರಾದ ಕೆಲವು ವರ್ಷಗಳಲ್ಲಿಯೇ ಅಂದರೆ ೧೯೧೩ರಲ್ಲಿ ಭಾಷೆಯ ತತ್ವದ ಮೇಲೆ ಲಿಪಿಸಂಗ್ರಹವು ಪ್ರಾರಂಭವಾಗಿ ಆಗ್ಗೆ ಈ ಖಾತೆಯ ದೃಷ್ಟಿಯು ಕರ್ನಾಟಕದ ಮೇಲೆ ಕೊಂಚ ಬಿದ್ದಿತು. ಶ್ರೀ. ಕೃಷ್ಣಶಾಸ್ತ್ರಿಗಳು ಕನ್ನಡಿಗರಾದ್ದರಿಂದ ಅಷ್ಟಾದರೂ ಕರ್ನಾಟಕದ ದೈವವು ತೆರೆಯಿತು. ೧೯೧೩ರಿಂದ ಬಳ್ಳಾರಿ ಜಿಲ್ಲೆಯ ಪ್ರತಿಯೊಂದು ತಾಲೂಕಿನಲ್ಲಿ ಲಿಪಿಗಳ ಅಚ್ಚು ತೆಗೆಯಲಿಕ್ಕೆ ಸುರುವಾಯಿತು. ೧೯೧೨ ರಿಂದ ೧೯೨೫ ರಲ್ಲಿ ಅಂದರೆ ೧೩–೧೪ ವರ್ಷಗಳಲ್ಲಿ ಮದ್ರಾಸ ಪ್ರಾಂತದಲ್ಲಿ ಬಳ್ಳಾರಿಜಿಲ್ಲೆ ಅನಂತಪುರ ಜಿಲ್ಲೆಗಳು ಕೆಲವು ಭಾಗಗಳನ್ನು ಶೋಧಿಸಿ ಸುಮಾರು ೯೦೦ ಲಿಪಿಗಳನ್ನು ಸಂಗ್ರಹಿಸಿದರು. ಆ ಆ ಅವಧಿಯಲ್ಲಿ ಕರ್ನಾಟಕದ ಆ ಆ ಭಾಗದಿಂದ ಎಷ್ಟೆಷ್ಟು ಲಿಪಿಗಳು ಮುದ್ರಣೆಯಾಗಿರುತ್ತವೆಂಬದನ್ನು ಸಾಮಾನ್ಯವಾಗಿ ಕೆಳಗಿನ ಪಟ್ಟಿಯಲ್ಲಿ ನೋಡಬಹುದು

ವರ್ಷ.	ಮದ್ರಾಸ ಕರ್ನಾಟಕ	ಮುಂಬಯಿ ಕರ್ನಾಟಕ.	ನಿಜಾಮ ಕರ್ನಾಟಕ
೧೮೩೦–೧೮೭೬	———	೧೦೦೦ ಅಚ್ಚುಗಳು ಆದರೆ ಅವೆಲ್ಲ ಲಂಡನದಲ್ಲಿವೆ!	——
೧೮೭೭–೧೯೦೪	ಸುಮಾರು ೩೬೦	——	——
೧೯೦೫–೧೯೧೨	———	——	——
೧೯೧೩–೧೯೨೫	ಸು ೯೦೦	೧೯೨೫,೨೬ರಲ್ಲಿ ಧಾರವಾಡ ತಾಲೂಕನ್ನು ಹಿಡಿದಂತೆ ತೋರುತ್ತದೆ.	——

ಈ ಪಟ್ಟಿಯನ್ನು ನೋಡಿದರೆ ಕರ್ನಾಟಕದ ಲಿಪಿಸಂಗ್ರಹಕ್ಕೆ ಸರಕಾರದವರು, ಎಷ್ಟು ಲಕ್ಷ್ಯ ಪೂರೈಸುತ್ತಾರೆಂಬದು ಗೊತ್ತಾಗುತ್ತದೆ. ಹುಲ್ಟ್ಜ್ ಮತ್ತು ರಾ. ವೆಂಕಯ್ಯಾ ಅವರು ಶಾಸನಾಧ್ಯಕ್ಷರಾಗಿದ್ದ ಸಮಯದಲ್ಲಿ ಅಂದರೆ ೧೮೮೭ ರಿಂದ ೧೯೦೪ ರವರೆಗೆ ತಮಿಳು ತೆಲುಗುದೇಶದ ಲಿಪಿಗಳ ಸಂಗ್ರಹಕ್ಕೇ ಪ್ರಾಶಸ್ತ್ಯವಿತ್ತಾಗಿ ಕರ್ನಾಟಕದ ಕಡೆಗೆ ಯಾರೂ ಕಣ್ಣೆತ್ತಿ ನೋಡಲಿಲ್ಲ. 'ಆರ್ಕಿಯಾಲಾಜಿಕಲ್ ಸರ್ವೆ ಆಫ್ ವೆಸ್ಟರ್ನ ಇಂಡಿಯಾ' ಎಂಬ ಹೆಸರನ್ನು ಸಾರ್ಥಕ ಮಾಡುವದಕ್ಕೆ ಬರ್ಜೆಸ್ ಸಾಹೇಬರು ವಿಜಾಪೂರ, ಬೆಳಗಾಂವ ಜಿಲ್ಲೆಯ ೧–೨ ಸ್ಥಳಗಳಿಂದ ಲಿಪಿಗಳನ್ನು ತೆಗೆದು ಪ್ರಸಿದ್ಧಿಸಿದರು. ಇದು ಕೂಡ ೧೮೭೭ ಇಸ್ವಿಯ ಪೂರ್ವದಲ್ಲಿಯೇ ಇನ್ನು ಶ್ರೀ. ಕೃಷ್ಣಶಾಸ್ತ್ರಿಗಳು ಶಾಸನಖಾತೆಯಲ್ಲಿ ಅಧಿಕಾರವನ್ನು ಪಡೆದಮೇಲಿಂದ ಮಾತ್ರ ಏನೋ ಸ್ವಲ್ಪ ಕರ್ನಾಟಕಕ್ಕೆ ಕಳೆಯೇರಿತು. ಆದರೆ ಅವರು ಅವಿಲ ಶಾಸನಖಾತೆಯ ಅಧ್ಯಕ್ಷರಾಗಿ ೩–೪ ವರ್ಷಗಳಾಗಿದ್ದರೂ ಮೊನ್ನೆ ಮೊನ್ನಿನವರೆಗೆ ಮುಂಬೈಕರ್ನಾಟಕದ ಕಡೆಗೆ ದೃಷ್ಟಿಹಾಕಿದಂತೆ ತೋರಲಿಲ್ಲ. ಮದ್ರಾಸ ಕರ್ನಾಟಕವೂ ಕೂಡ ಪೂರ್ತಿಯಾಗಿಲ್ಲ. ದಕ್ಷಿಣ ಕನ್ನಡ ಜಿಲ್ಲೆಯು– ಹಿಂದೆ ಮುದ್ರಿಸಲ್ಪಟ್ಟ ಕೆಲವು ಲಿಪಿಗಳನ್ನು ಬಿಟ್ಟರೆ–– ಇನ್ನೂ ಅಚ್ಚಳಿಯದೆ ಹಾಗೇ ಇರುತ್ತದೆ. ಕೊಯಿಮುತ್ತೂರು, ಸೇಲಮ್ ಜಿಲ್ಲೆಗಳೂ ಹಾಗೇ ಉಳಿದಿವೆ. ಹಿಂದೆ ಸುಮಾರು ೧೯೧೩–೧೯೧೪, ೧೯೧೮–೧೯೧೯ರಲ್ಲಿ ಕೊಯಿಮುತ್ತೂರು ಜಿಲ್ಲೆಯ ಕೊಳ್ಳೇಗಾಲ ತಾಲೂಕಿನ ೭–೮

[೬ನೇಪುಟಕ್ಕೆ ನೋಡಿರಿ]

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ

(ಲೇಖಾಂಕ ೧೨)

ಗಯೆಯಲ್ಲಿಯ ಗಯಾಸುರನ ಬಗ್ಗೆ ಕಳೆದ ಸಂಚಿಕೆಯಲ್ಲಿ ಹೇಳಿದ್ದಾಯಿತು. ಇವನು ಒಬ್ಬ 'ಅತ್ರಾಳ ವಿಕ್ರಾಳ' ಸ್ವರೂಪದವನಾಗಿದ್ದನಂತೆ. ಇವನು ಮಲಗಿದಾಗ ಪ್ರಯಾಗದಲ್ಲಿ ಇವನ ಪಾದವೂ, ಕಾಶಿಯಲ್ಲಿ ಮಧ್ಯ ಭಾಗವೂ, ಗಯಾದಲ್ಲಿ ಶಿರವೂ, ಇದ್ದವಂತೆ! ಶ್ರೀ ವಿಷ್ಣು ಭಗವಾನನು ಇವನ ತಲೆಯಲ್ಲಿದ್ದ ಶಿಲೆಯಮೇಲೆ ತನ್ನ ಪಾದವನ್ನಿಟ್ಟಾಗ್ಗೆ ಗಯಾಸುರನು ಮಲಗಿದ್ದನಂತೆ. ಅವನ ಪಾದ, ಮಧ್ಯಭಾಗ ಹಾಗೂ ಕುತ್ತಿಗೆಯ ಸ್ಥಳಗಳಲ್ಲಿ ಅಕ್ಷಯ್ಯವಟವು ಉತ್ಪನ್ನವಾಗಿದೆ ಎಂದು ಹೇಳುವರು. ಪ್ರಯಾಗದಲ್ಲಿ ಈ ವಟವೃಕ್ಷದ ಬಡ್ಡಿಯನ್ನು ಮಾತ್ರ ಕಾಣುತ್ತೇವೆ. ಅದೇ ಪಾದವನ್ನಿಟ್ಟ ಸ್ಥಾನವಂತೆ. ಕಾಶಿಯಲ್ಲಿ ವಟದ ಮಧ್ಯಭಾಗವೆಂದು ಅನ್ನುವರು. ಪ್ರಯಾಗದಲ್ಲಿ ಬಡ್ಡಿಯು ಸ್ಪಷ್ಟವಾಗಿದ್ದಂತೆ ಕಾಶಿಯಲ್ಲಿ ಮಧ್ಯಭಾಗವು ಅಷ್ಟೊಂದು ಮನಸ್ಸಿಗೆ ತೃಪ್ತಿಯನ್ನುಂಟು ಮಾಡುವಂತಿಲ್ಲ. ಗಯಾದಲ್ಲಿದ್ದುದು ಕುಡಿಯೆಂದು ಹೇಳುವರು. ಇದೂ ಅಷ್ಟೊಂದು ಸಮಾಧಾನಕರವಾಗಿಲ್ಲ. ಗಯಾವಾಳರು ಈ ದಂತಕಥೆಯು ಪೂರ್ಣ ಸುಳ್ಳೆಂದು ಹೇಳುವರು. ಪರಮೇಶ್ವರನ ಕೃಪಾ ಪ್ರಸಾದದಿಂದ ತಮ್ಮ ಪೂರ್ವಜರು ನೆಟ್ಟಿದ ಕಲ್ಪವೃಕ್ಷವೇ ಈ ಅಕ್ಷಯ್ಯವಟವೆಂದು ಅವರು ಹೇಳುವರು. ಬ್ರಹ್ಮನು ತನ್ನ ಮಾನಸ ಪುತ್ರರ ಸಲುವಾಗಿ, ಈ ಕಲ್ಪವೃಕ್ಷವನ್ನೂ ಬೆಳ್ಳಿ ಹಾಗೂ ಬಂಗಾರದ ಪರ್ವತಗಳನ್ನೂ ಗಯಾದಲ್ಲಿ ನಿರ್ಮಿಸಿದನು. ಆದರೆ ಮುಂದೆ ಕಲಿಯುಗ ಪ್ರಾಪ್ತವಾದನಂತರ ಆ ಪರ್ವತಗಳ ಮಹಾತ್ಮೆಯು ಸಂಪೂರ್ಣವಾಗಿ ಲಯವಾಯಿತು. ಕಲ್ಪವೃಕ್ಷವು ಮಾತ್ರ ಈಗ್ಗೆಯೂ ಪಿತೃಗಳ ಸ್ವರ್ಗಾರೋಹಣಕ್ಕೆ ಮಾರ್ಗವಾಗಿ ನಿಂತಿರುವದೆಂದೂ ಗಯಾವಾಳರು ಹೇಳುವರು. ಈ ಅಕ್ಷಯ್ಯವಟದ ಶ್ರಾದ್ಧ ದಿನವೇ ಕಾಮ ಕ್ರೋಧ ಷಡ್ರಿಪುಗಳನ್ನು ಬಿಡಬೇಕೆಂದು ನಿಯಮವಿದೆ. ಆದರೆ ಈಗಿನ ಕಲಿಯುಗದಲ್ಲಿ ಶಕ್ಯವಿಲ್ಲೆಂದು ತಮಗೆ ಪ್ರೀತಿಯುಳ್ಳ ಭಕ್ಷ್ಯಾದಿಗಳನ್ನು ಯಾತ್ರಿಕರು ಬಿಡುವರು.

ಗಯಾದಿಂದ ೭ ಮೈಲಿನ ಮೇಲೆ ಬುದ್ಧಗಯಾ ಇದೆ. ಶ್ರೀ ಬುದ್ಧ ಭಗವಾನನು ತಪಶ್ಚರ್ಯ ಮಾಡಿ ಜ್ಞಾನವನ್ನು ಸಂಪಾದಿಸಿದ ಸ್ಥಾನವೂ, "ಬೋಧಿವೃಕ್ಷವೂ" ಈಗಲೂ ಇವೆ. "ಬೋಧಿವೃಕ್ಷ"ದ ಕಟ್ಟೆಯಮೇಲೆ ಬೌದ್ಧರು ದಿನಾಲು ಮೇಣಬತ್ತಿಯ ದೀಪ ಹಚ್ಚುವರು. ಈ ಮೇಣಬತ್ತಿಗಳು ಮೊಳದಷ್ಟು ಉದ್ದವಾಗಿಯೂ ೧-೧॥ ಇಂಚಿನಷ್ಟು ದಪ್ಪನಾಗಿಯೂ ಇರುತ್ತವೆ. ಈ ವೃಕ್ಷದ ಮುಂಭಾಗದಲ್ಲಿ ಬಹು ವಿಶಾಲವಾದ ಬೌದ್ಧ ಮಂದಿರವಿದೆ. ಈ ಮಂದಿರದಲ್ಲಿ ಬುದ್ಧನ ಮೂರ್ತಿಯಿದ್ದು, ಇದರ ಪೂಜೆಯಬಗ್ಗೆ ಬೌದ್ಧರ ಹಾಗು ವೈಷ್ಣವರ ನಡುವೆ ಜಗಳಗಳಾಗುತ್ತವೆ. ವೈಷ್ಣವರು, ಬುದ್ಧನು ವಿಷ್ಣುವಿನ ಅವತಾರನೆಂದು ಗಣಿಸುತ್ತಿರುವದರಿಂದ ಈ ಮೂರ್ತಿಯ ಪೂಜೆಯು ತಮಗೇ ಸಲ್ಲಬೇಕೆಂದೂ, ವಿಷ್ಣುವಿನ ಆರಾಧನೆಗೆ ತಕ್ಕಂತೆ, ವಸ್ತ್ರ ನಾನಾ ಪುಷ್ಪಗಳಿಂದ ತಾವು ಪೂಜಿಸತಕ್ಕವರೆಂದೂ ಹೇಳುವರು. ಈಗ್ಗೆ ವೈಷ್ಣವರ ವಶದಲ್ಲಿ ಈ ಗುಡಿಯಿದೆ. ಆದರೆ ಬೌದ್ಧರ, ತಮ್ಮ ಧರ್ಮದ ಮೂಲ ಉತ್ಪಾದಕನಾದ ಬುದ್ಧನ ಪೂಜೆಯು ತಮಗೇ ಸಲ್ಲತಕ್ಕದ್ದು ನ್ಯಾಯವಾದುದೆಂದೂ, ತಮ್ಮ ಮತದ ಕಟ್ಟಳೆಗಳಿಗೆ ವಿರುದ್ಧವಾದ ನಾನಾ ವಸ್ತುಗಳನ್ನು ಬುದ್ಧನಿಗೆ ತೊಡಿಸುವದು ತಮಗೆ ಅಸಹ್ಯವಾದುದೆಂದೂ ವಾದಿಸಿ, ಈ ಗುಡಿಯ ಎಲ್ಲ ಹಕ್ಕುಗಳೂ ತಮಗೇ ಸಲ್ಲಬೇಕೆಂದೂ ವಾದಿಸುತ್ತಿರುವರು. ಬ್ರಹ್ಮದೇಶ, ಸಿಲೋನ ಮೊದಲಾದವುಗಳಲ್ಲಿರುವ ಬೌದ್ಧರೆಲ್ಲ ಈ ವಾದದಲ್ಲಿ ಭಾಗತೆಗೆದುಕೊಂಡಿರುವರು. ರಾಷ್ಟ್ರೀಯ ಕಾಂಗ್ರೆಸ್ಸಿನವರು ಈ ಬಗ್ಗೆ ತಮಗೆ ನ್ಯಾಯವನ್ನೀಯಬೇಕೆಂದು ಈ ಜನರೆಲ್ಲ ಆಗ್ರಹಪಟ್ಟಂತೆ, ಕಾಂಗ್ರೆಸ್ಸಿನಿಂದ ಒಂದು ವಿಚಾರಣೆಮಂಡಳವೂ ನಿಯಮಿಸಲ್ಪಟ್ಟಿತ್ತು. ಬೌದ್ಧರ ವಶದಲ್ಲಿ ಆ ಗುಡಿಯಿರಬೇಕು ವೈಷ್ಣವರ ಪೂಜೆಗೂ ಅಲ್ಲಿ ಆಸ್ಪದವಿರಬೇಕೆಂಬುದಾಗಿ ಅವರು ನಿರ್ಣಯಿಸಿದ್ದಾರೆ. ಆದರೆ ಅದು ಕೃತಿಯಲ್ಲಿ ಬಂದಿಲ್ಲ. ಇರಲಿ. ಈ ಬೌದ್ಧ ಮಂದಿರವು ಬಹು ಪ್ರಾಚೀನ ಕಾಲದ್ದಿದೆ. ಕಟ್ಟಡವೂ, ಸುತ್ತಲಿನ ಪ್ರದೇಶವೂ, ಇತರ ಮಂದಿರಗಳೂ ಪ್ರೇಕ್ಷಣೀಯವಾಗಿವೆ. ಈ ಮಂದಿರವು ಸಂಪೂರ್ಣವಾಗಿ ಹುಗಿದು ಹೋಗಿತ್ತು. ಆದರೆ ಲಾರ್ಡ ಕರ್ಜನ್ನರ ಪುರಾಣ ವಸ್ತು-ಶೋಧನ ಖಾತೆಯವರು ಇದನ್ನು ಗೊತ್ತುಪಡಿಸಿ ಹುಗಿದುದನ್ನು ಅಗೆದು ತೆಗೆದಿರುವರು.

ಗಯಾದ ವಿಷ್ಣುಪಾದ ಗುಡಿಯ ಕಟ್ಟಡವು ಪ್ರಾಚೀನಕಾಲದ್ದಲ್ಲ. ಈ ಕಟ್ಟಡದಲ್ಲಿ ಗರ್ಭಗುಡಿಯಲ್ಲಿ ವಿಷ್ಣುಪಾದದ ಮೇಲೆಯೂ, ಗರ್ಭಗುಡಿಯ ಹೊರಗೆ ಎರಡು ಸ್ಥಾನಗಳಲ್ಲಿಯೂ ಮೇಲಿನಿಂದ ನೀರು ಒಂದೊಂದೇ ಹನಿಯಾಗಿ ಮೇಲಿಂದಮೇಲೆ ಬೀಳುತ್ತದೆ. ಗಂಗೆಯು ಇಲ್ಲಿ ಪ್ರತ್ಯಕ್ಷವಾಗಿದ್ದಾಳೆಂದು ಜನರ ಹೇಳಿಕೆ. ಚಿಕಿತ್ಸಕಬುದ್ಧಿಯವರು ಬಹುವಿಧದಿಂದ ಶೋಧಿಸಿ ನೋಡಿದ್ದಾರೆ. ಆದರೆ ಮಾಳಿಗೆಯ ಒಳಮೈ ಹಸಿಯಾಗಿದ್ದು, ಹೊರಮೈ ಒಣಗಿದ್ದು ಸತ್ಯವಾಗಿದೆಯೆಂದೂ, ಈ ನೀರು ಅಲ್ಲಿ ಬರುತ್ತಿರುವದು ಆಶ್ಚರ್ಯಕರವಾದುದೆಂದೂ ಹೇಳಿದ್ದಾರೆ!

ಗಂಡುಮಕ್ಕಳಿಲ್ಲದವರೂ ಅಥವಾ ಮಕ್ಕಳು ತಮಗೆ ಪಿಂಡ ಹಾಕುವರೋ ಇಲ್ಲವೋ ತಿಳಿಯದವರೂ, ತಮ್ಮ ಪಿಂಡವನ್ನು ಮಂತ್ರ ವಿಧಿಯಿಂದ ಗದಾಧರನ ಕೈಯಲ್ಲಿ ಕೊಡುವರು. ಅವರು ಮಡಿದಮೇಲೆ ಗದಾಧರನು ಆ ಪಿಂಡವನ್ನು ವಿಷ್ಣುಪಾದದ ಮೇಲೆ ಹಾಕುವನಂತೆ. ಪಿತೃಪಕ್ಷದಲ್ಲಿ ಪಿಂಡಗಳ ರಾಶಿಯು ವಿಷ್ಣುಪಾದದಲ್ಲಿ ಪರ್ವತಪ್ರಾಯವಾಗಿ ಬೀಳುವದರಿಂದ ಅವನ್ನು ಅಗ್ಗ ಮಾರಿಬಿಡುವರಂತೆ! ಬಡಬಗ್ಗರು ಅದನ್ನು ಕೊಳ್ಳುವರಂತೆ! ಒಳ್ಳೇ ಶ್ರೀಮಂತರಾದ ಗಯಾವಾಳರಿಗೆ ಕಲಿಯುಗದಲ್ಲಿ ಎಂತಹ ಹಣದಆಶೆಯಿದೆ! ಉಳಿದ ದಿನಗಳಲ್ಲಿ ಪಿಂಡಗಳನ್ನು ಆಕಳುಗಳಿಗೆ ಹಾಕುವರು.

ಗಯಾದ ಫಲ್ಗು ನದಿಯಲ್ಲಿ ನೀರು ಮಳೆಗಾಲದಲ್ಲಿ ಮಾತ್ರ ಹರಿಯುತ್ತದೆ. ಉಳಿದ ದಿನಗಳಲ್ಲಿ ಬರೇ ಉಸುಬು ನದಿಯಲ್ಲಿರುವದು. ಆದರೆ ಒಂದಿಷ್ಟು ಉಸುಕನ್ನು ತೆಗೆದ ಕೂಡಲೇ ನೀರು ಬರುವದು. ಸ್ನಾನಕ್ಕಾಗಿ ಗುಂಡಿಗಳನ್ನು ತೆಗೆಯುವರು. ಈ ಗುಂಡಿ ತಗೆಯುವರು ಯಾತ್ರಿಕರಿಂದ ತಲೆಗೆ ಒಂದು ದುಡ್ಡಿನಂತೆ ತಮ್ಮ ಕೂಲಿಯನ್ನು ವಸೂಲು ಮಾಡಿಕೊಳ್ಳುವರು. ಫಲ್ಗುನದಿಯ ಬಗ್ಗೆ ಒಂದು ಆಖ್ಯಾಯಿಕೆಯಿದೆ. ಬ್ರಹ್ಮದೇವರು ಗಯಾಸುರನ ಇಚ್ಛೆಯಂತೆ ಯಜ್ಞಮಾಡುತ್ತಲಿದ್ದನು. ಬ್ರಾಹ್ಮಣರ ವೇದಮಂತ್ರಗಳು ಫಲ್ಗುನದಿಯ ಒಳ್ಳೇ ಆರ್ಭಟೆಯ ಪ,

ವಾದ ಸಪ್ನದಲ್ಲಿ ಬ್ರಹ್ಮನಿಗೆ ಕೇಳಿಸದಾಸವು ಕೂಡಲೇ ಸಿಟ್ಟಿನಿಂದ ಸವಿಯುಸ್ನು ಡಬ್ಬಿ ಹಾಕಿಬಿಟ್ಟನಂತೆ. ಅಂದಿನಿಂದ ಜನು ಕಿನಲ್ಲಿಯೇ ನೀನು ಹರಿಯುತ್ತಿರುವದಂತೆ

ಗಂಗಾಧರನ ಗುಡಿಯಿಂದ ನಲ್ಲುನದಿಗೆ ಇಳಿದು ಹೋಗುವ ಕಮಾನಿನ ಒಳಭಾಗದಲ್ಲಿ ಒಂದು ಕನ್ನಡಶಿಲಾಲೇಖವಿದೆ! ಇದನ್ನು ಗವಿಯಂತಹ ದೂರಪ್ರದೇಶದಲ್ಲಿ ಕಂಡು ನನಗೆ ಬಹು ಆನಂದವೂ ಆಶ್ಚರ್ಯವೂ ಆಯಿತು!! ಅದನ್ನು ಓದಲು ಅಗ್ನಿ ಶಕ್ಯವಿಲ್ಲದ್ದರಿಂದ ಅದರಲ್ಲಿಯ ವಿಷಯವು ಗೊತ್ತಾಗಲಿಲ್ಲ.

ವಾಙ್ಮಯ ವಿಚಾರ

ಶ್ರೀ ಗಣಪತೀಚಾ ಮೇಳಾಂಚೇ ಪದ್ಯೆ

ಎಂಬ ಶ್ರೀ॰ ಗೋಖಲೆಯವರ ಮರಾಠಿ ಶಿರೋಪ ಲೇಖದ ಚಿಕ್ಕ ಪುಸ್ತಕವು ಮುಬ್ಬಳ್ಳಿಯಿಂದ ಅಭಿಪ್ರಾಯಕ್ಕಾಗಿ ಬಂದಿದೆ.

ಈ ಪುಸ್ತಕವು ಪದ್ಯಮಯವಾಗಿರದೆ, ಒಂದೆರಡು ಚುಟುಕು ನಾಟಕಗಳಿಂದೆ ಗದ್ಯವಾಗಿದೆ. ಅದೇಕೆ ನೇರಿತೋ ಹೇಳುವದು ಕಷ್ಟ. ಕಷ್ಟದಿಂದ ಹೇಳಿದರೂ, 'ಪದ್ಯೆ' ಎಂದಿಷ್ಟೇ ಪುಸ್ತಕದ ಹೆಸರೇಕೆ? ಎಂಬುದು ತಿಳಿಯಲಿಲ್ಲ.

ಈ ಪುಸ್ತಕದಲ್ಲಿ ಅಭಿಪ್ರಾಯಕ್ಕೆ ಇಂಬುಕೊಡುವ ಭಾಗವೆಂದರೆ ಕನ್ನಡ ಮರಾಠೀ ಮಿಶ್ರಣದಿಂದ ಬರೆದಿರುವ ಅನಾಮಧೇಯ ನಾಟಕ. ನಾವೇ ಈ ಹೆಸರಿಡಬಹುದು– 'ಕೌನ್ಸಿಲ್ ಚುನಾವಣೆ' ಎಂದು ವಿಶ್ವಾಸರಾಯರೆಂಬುವವರು 'ಕನ್ನಡ ಮರಾಠಿ ಜಗಳವನ್ನು ಬೆಳಸಿ' ತಾವು ಆರಿಸಿಬಂದದ್ದಕ್ಕೆ ಬೆನ್ನು ಚಪ್ಪರಿಸಿಕೊಳ್ಳುತ್ತಾರೆ. ಇವರಲ್ಲಿ ತಥ್ಯವಿರುವದು ನಮ್ಮ ಅನುಭವವೇನು ಹೇಳಲಾಂದು. ಇನ್ನು ಜಾತಿ ಜಾತಿಗಳಲ್ಲಿಯ ವೈಷಮ್ಯವು ಮತಭೇದಕ್ಕೆ ಕಾರಣವಾಗಬಹುದು. ನಿಜವಾಗಿ ಇದು ಕರ್ನಾಟಕದ ಸ್ಥಾನಕ್ಕೆ, ಆದರೆ ಪರಾಂಜಪೆಯಂತಹರಿಗೆ ಇತ್ತಕಡೆಯವರು ಮಹಾರಾಷ್ಟ್ರೀಯರೆಂದು ಬೇರೆ ಬಗೆಯದೆ ಹಿಂದೆ ಮತದಾನವನ್ನು ಮಾಡಲಿಲ್ಲವೇ? ಇನ್ನು ಅಜ್ಞ ಮತದಾರರಿಗೆ ಅವರವರ ತಾಯ್ನುಡಿಯಲ್ಲಿ ಉಮೇದವಾರರು ತಮ್ಮ ಯೋಗ್ಯತೆಯನ್ನೂ ನಿಶ್ಚಿತವಾದ ಕಾರ್ಯ-ಕ್ರಮವನ್ನೂ ಹೇಳದಿದ್ದರೆ ಅವರಾದರೂ ಏನು ಮಾಡಿಯಾರು? ಈ ನಾಟಕದ ಮೊದಲನೆಯ ಪ್ರವೇಶದಲ್ಲಿ ಒಂದು ಮತದಾರರ ಸಭೆಯು ನೆರೆದಿರುತ್ತದೆ. ಅಗ್ಗೆ 'ಇದು ಕರ್ನಾಟಕವಿದ್ದು ಇಲ್ಲಿ ಮರಾಠೀ ಏಕೆ ಮಾತಾಡುವದು ಕನ್ನಡದಲ್ಲಿಯೇ ಮಾತಾಡಬೇಕು' ಎಂದು ಒಬ್ಬ ಕನ್ನಡಿಗನು ಒದರಿದರೆ ಅಂಥ ದೋಷವೇನಾಯಿತು? ಕರ್ನಾಟಕದ ಮತದಾರರನ್ನು ಒಲಿಸಿಕೊಳ್ಳುವ ಹಂಬಲವಿದ್ದ ಉಮೇದವಾರರು ಕನ್ನಡವನ್ನು ಮಾತಾಡಲೇ ಬೇಕೆಂಬುದು ಕಲಿಸಬೇಕಾಗಿಲ್ಲ. ಇದಲ್ಲದೆ ಕನ್ನಡವು ಬರುತ್ತಿದ್ದು ಬಚ್ಚಿಡುವ ಜಾಣರು ಬಹಳ. ನಿಜವಾಗಿ ಕನ್ನಡವು ತಿಳಿಯದೆ ಇರುವವರು ಈ ಕರ್ನಾಟಕದಲ್ಲಿ ಇಲ್ಲವೇಯಿಲ್ಲ ಆದರೆ ಕನ್ನಡವು ನಮಗೆ ತಿಳಿಯದೆಂದು ಇಲ್ಲದ ಸೋಗು ಮಾಡುವವರು ಅನೇಕರಿದ್ದಾರೆ ಒಟ್ಟಾರೆ ನಮ್ಮ ಅಭಿಪ್ರಾಯವೆಂದರೆ ಕನ್ನಡ—ಮರಾಠೀ ಜಗಳವನ್ನು ಹಿಗ್ಗಿಸಲಿಕ್ಕೆ ಈ ಪುಸ್ತಕದ ಇಂಗಿತವು ಇದ್ದಂತೆ ತೋರುತ್ತದೆ ಯಾಕಂದರೆ ಬಾಬಾಸಾಹೇಬ ಎಂಬ ಪಾತ್ರದ ಬಾಯಲ್ಲಿ "ಕರ್ನಾಟಕ ಮುಸಲ್ಮಾನಿ, ಇಂಗ್ಲೀಷ, ಮುಂತಾದ ಮಾನವೇ ಪರಭಾಷೆಗಳಲ್ಲಿ ಭಷಣಮಾಡಲಿಕ್ಕೆ ಆತಂಕವಿಲದೆ ಕೇವಲ ಮರಾಠಿಗೆ ಮಾತ್ರ ಆತಂಕವಿರುವದು. ಈ ರೀತಿಯನ್ನು ನೋಡಿದರೆ ನಿಮ್ಮ ಅಂತಃಕರಣದಲ್ಲಿದ್ದ ಮರಾಠೀ ಭಾಷೆಯ ದ್ವೇಷವು ವ್ಯಕ್ತವಾಗುತ್ತದೆ" ಎಂದು ಹಾಕಿದೆ ಆದರೆ ಈ ರೀತಿಯನ್ನು ನೋಡಿದರೆ ಯಾರ ಅಂತಃಕರಣದ ಅಂತಃಕರಣದಲ್ಲಿದ್ದ ಯಾವ ದ್ವೇಷವು ವ್ಯಕ್ತವಾಗುತ್ತದೆಂಬದು ತಾನೇ ತಿಳಿಯುವಂತಿದೆ. ನಾವೇನೂ ಹೇಳಬೇಕಾಗಿಲ್ಲ. ನಮಗೂ ಈ ಭಾಷೆಗಳ ಕಲಹವು ಬೇಡ. ಆದರೆ ಬೇರೊಂದು ಬುದ್ಧಿ ಕೃತ್ಯವನ್ನಿಟ್ಟುಕೊಂಡು ಸುಮ್ಮ ಸುಮ್ಮನೆ ಅದರಲ್ಲಿ ಈ ಕೆಂಡವನ್ನು ಚೆಲ್ಲುವದೆಂದರೆ ಮತ್ತಿಷ್ಟು ಇಲ್ಲದ ದ್ವೇಷವು ಹೊತ್ತುವದಿಲ್ಲವೇ?

ಇದಾದ ಮೇಲೆ ಪ್ರಹಸನದ ಕನ್ನಡ ಭಾಷೆಯಲ್ಲಿ ಬೇಕೆಂತೋ ಏನೋ ತಪ್ಪುತಡಿಗಳು ಹೊಕ್ಕಿವೆ ಉಮೇದವಾರರ ಭಾಷೆಯೆಂದು ವಿಮರ್ಶಿಸದೆ ಇರಬಹುದು. ಆದರೆ ಲೇಖಕರೇ ಬರೆಯುವಾಗ ಉಮೇದವಾರರ ವೇಷವನ್ನು ತೊಡಬೇಕಲ್ಲವೆ? "ದೇಶಹಿತ, ದೇಶಸೇವೆ ಎಂಬ ಹೆಸರುಗಳ ಕೆಳಗೆ" ಎಂಬ ಅನ್ವಯ ಪ್ರಯೋಗವು ಇಂಗ್ಲೀಷಿನ ಬಲವು. 'ಪರವಾಇಲ್ಲ' ಎಂಬ ವೈಸೂರಿನ ಒಂದೇ ವಾಕ್ಪ್ರಚಾರವನ್ನು ಬಳಸಹೋಗಿ ಲೇಖಕರು 'ಪರಿವೆ ಇಲ್ಲಾ' ಎನ್ನುತ್ತಾರೆ 'ಝುಗಳ ಥಲೋ' ಎಂದು ಮಾತು ಮಾತಿಗೆ ಅನ್ನುವದೂ ಬಿಟ್ಟಿಲ್ಲ. ವ್ಯಾಕರಣ ದೋಷಗಳೂ ಕೆಲವಿವೆ.

—ರಸಿಕ-ರಂಗ.

ಬಹಿಷ್ಕೃತಿ ನಲಿನಿ.

(ಲೇಖಕ ಎನ್. ನಾನಾ. (ಆಣಿಮಾಲೆಯ ೬ನೇ ಪುಷ್ಪ)

ಇದು ಒಂದು ಸಣ್ಣ ಸಾಮಾಜಿಕ ಕಥೆ. ಪತಿಯ ಅಕಾಲಿಕ ನಿಧನ ವಿಲಾಪ ಅನಾಥಳಾದ 'ನಲಿನಿ' ಎಂಬವಳು ಶಿಕ್ಷಕಿಯ ಕೆಲಸವನ್ನು ಕೈಕೊಳ್ಳುವಳು ಆ 'ಸಕೇಸಿ'ಯಾಗಿ ಉಳಿದುದೊಂದು ಅವಳ ದೊಡ್ಡ ತಪ್ಪು. ಅದರಲ್ಲಿಯೂ ಸುಧಾರಕ ಸಂಘವನ್ನು ತೆಗೆಯುವಳು. ರೂಢಿಪ್ರಿಯವಾದ ಸಮಾಜಕ್ಕೆ ಇದು ಸೇರುವ ಬಗೆಯೆಂತು? ಹೋದ ಹೋದಲ್ಲಿ ಅವಳಿಗೆ ಹೆಂಗಸರು ಹೀಯಾಳಿಸಿದರಂತೆ. ಈ 'ಅಸಹ್ಯ' ವೇದನೆಯಲ್ಲಿರಲು ಯಾರೋ ಒಬ್ಬರು ಆತ್ಮಹತ್ಯ ಮಾಡಿಕೊಂಡ ಸುದ್ದಿಯನ್ನು ಕೇಳಿ ತಾನೂ ಆತ್ಮಹತ್ಯ ಮಾಡಿಕೊಳ್ಳುವಳು.

ಕಥೆಯ ವಿಷಯವು ಅಷ್ಟು ಚನ್ನಾಗಿಲ್ಲ. ಅಜ್ಞಜನರು ಮಾಡುವ ಟೀಕೆ ವಿಡಂಬನೆಗಳಿಗೆ ಸರಿಯೆಂದು ಯಾರು ಒಪ್ಪರು ಆದರೂ ಪರಂಪರವಾಗಿ ಬರುವ ರೂಢಿಯ ಮರ್ಮವನ್ನರಿಯದೇ 'ತೂರ ಬಿಂಚಿ ಹೊಲೆ ಮೇಣ್ಣೆ ನೋಲ್ವ' ಎನ್ ನಾನಾ ನಂಥವರು ಅಲ್ಲದ ಮೂಲಿಯನ್ನು ಎಬ್ಬಿಸುವ ಹವ್ಯಾಸಕ್ಕೆ ಹೋಗಬಾರದು ತಮ್ಮ ಅಲ್ಪ-ಸ್ವಲ್ಪ ಬುದ್ಧಿಯನ್ನು ಈ ಬಯಲಿನಲ್ಲಿ ದಿತ್ತಗೊಡದೆ ನಮ್ಮ ಪೂರ್ವಜರ ಚರಿತ್ರೆಯನ್ನು ಬರೆದು ನಮ್ಮ ಬಾಲಕ ಬಾಲಕಿಯರಮುಂದೆ ಇಡಬೇಕೆಂದು ಅವರಿಗೆ ನಮ್ಮ ಸೂಚನೆಯು. ಭಾಷೆಯಲ್ಲ ವಿರಳತೆಗಳು ಬಹಳ. ಪ್ರತಿ ಪುಟದಲ್ಲಿಯೂ ಕಂಡುಬರುವ ಉಪಮೆಗಳೂ ಸಾಧ್ಯವಾಗಿಯೂ ಸಮಂಜಸವಾಗಿಯೂ ಕಾಣುವದಿಲ್ಲ ಭಾಷೆಯನ್ನು ಕೆಟ್ಟ ವ್ಯವಹಾರಿಕವಾಗಿ ಮಾಡಿದರೆ ನೆಟ್ಟಗೆ.

ಶ್ಯಾಮ.

ಕಾಣಿಮೆಕ್ಯ.

(ಆನಂದ ಕಂದನು ಬರೆದುದು.)

ಧಾರವಾಡದ ಗೆಳೆಯರ ಗುಂಪಿನ ಸ್ವಧರ್ಮ ಕಥಾಮಾಲೆಯ ೧ನೇ ಕುಸುಮವು. ಕ್ರಿಮು ೦-೧-೬ ಪುಟ ೨೪

ಮೊದಲು ಈ ಸಣ್ಣ ಕಥೆಗಳನ್ನು ಸುರುಮಾಡಿ ಕನ್ನಡ ಸಾಹಿತ್ಯದ ಸೇವೆಯನ್ನು ಸಾಗಿಸಿದವರಲ್ಲಿ ಶ್ರೀ ಮಾ ಗಳಮೊಡ ಬಾಯರರೂ 'ಶ್ರೀನಿವಾಸ'ರೂ ಪ್ರಮುಖರೆಂದು ಹೇಳಬಹುದು. ಉಳಿದ ಭಾಷೆಗಳಿಂದ ಭಾಷಾಂತರಿಸಿ ಬೇರೆಜನರು ಬರೆದ ಕಥೆಗಳಾದರೂ ಕಂಡುಬರುವವು. ಬರೆ ತನ್ನ ಕಲ್ಪನೆಯ ಕಸುವಿನಿಂದಲೇ ಸ್ವತಂತ್ರವಾಗಿ ಬರೆದ ಕಥೆಗಳು ಕನ್ನಡದಲ್ಲಿ ಕಡಿಮೆ. ಉದಾತ್ತವಾದ ನೈತಿಕ ತತ್ವಗಳನ್ನೂ, ಹರಿಯ್ವಹೃದಯದಿಂದ ಮನುಷ್ಯನ ಸ್ವಭಾವದಲ್ಲಿ ಆಗುವ ಬದಲು ಬೆಳವಣಿಗೆಗಳನ್ನೂ ಕಟ್ಟು ಕಥೆಗಳಿಂದ ಕಣ್ಮುಂದೆ ತಂದಿಡುವವೊಂದು ಕಥೆಗಳು ಸ್ವಲ್ಪವೆ. ಪ್ರಸ್ತುತ ಕಥೆಯಲ್ಲಿಯ ಚನ್ನಪ್ಪ-ನೀಲಮ್ಮ ದಂಪತಿಗಳ ಬಂಗಾರದ ಬಾಳುವೆಗಳಿಷ್ಟು ತೀವ್ರದ ಯಾವುದೇ ಕಾರಣದಿಂದ ಕೆಡುಗೇಡಾಗಿರುವುದನ್ನು ಕಾಣುವದು ಅಪರೂಪವಲ್ಲ. ನಮ್ಮ ಬಾಳುವೆಯಲ್ಲಿ ಕೈಹಾಕಿ ಒಳಿತು-ಕೆಡಕುಗಳನ್ನು ಮಾಡುವದು ವಿಶ್ವಾಸಘಾತಕನಾದ ಆ ಬಂಡುಗಾರನ 'ಕಾಣದ ಕೈ'-ಯಾಗಿರಬಹುದಲ್ಲವೇ? ಪ್ರೇಮ, ಪಾತಿವ್ರತ್ಯ ಮೊದಲಾದ ಉದಾತ್ತಗುಣಗಳ ಪ್ರಖರಿಯು ಶಿಕ್ಷಣದಿಂದ ಸುಸಂಸ್ಕೃತವಾದ ಭೂಮಿಯಲ್ಲಿಯೇ ಮಾತ್ರ ಹರಿಯುವದೆಂಬ ಕಲ್ಪನೆಯು ಕೆಲವರಲ್ಲಿ ಕಂಡುಬರುವದು. ಈ ಚಿಕ್ಕ ಕಥೆಯಲ್ಲಿಯ ಚನ್ನಪ್ಪ-ನೀಲಮ್ಮನವರ ಚಾರಿತ್ರ್ಯಗಳಿಂದ ಅಂಥವರು ಬುದ್ಧಿಗಲಿಯಬೇಕು. ಹಾಗೆಯೇ ನಮ್ಮ ಬಂಧುಗಳು ಸಂಶಯ ಪಿಶಾಚಿಗೆ ಸುಲಭವಾಗಿ ಮನದಲ್ಲಿ ಸ್ಥಳಕೊಟ್ಟು ತಮ್ಮ ಸುಖದ ಸಂಸಾರವನ್ನು ಹೇಗೆ ಹಾಳುಮಾಡಿಕೊಳ್ಳುವರೆಂಬುದು ಇಲ್ಲಿ ಚನ್ನಾಗಿ ತೋರಿಸಲ್ಪಟ್ಟಿದೆ. ಇದರಂತೆಯೇ ಸತ್ಯ ಸರಲತೆಗಳು ಕೋರಿಕೆಯಲ್ಲಿ ಸೇರಿಸುವಂತೆ ತಂದರೂ ಕಡೆಗೆ ಜಯಶಾಲಿಗಳಾಗುವವೆಂಬುದು ರಾಮಸ್ವಾಮಿಯ ಹಾಗು ನೀಲಮ್ಮನ ಚರಿತ್ರೆಯಲ್ಲಿ ಚನ್ನಾಗಿ ಚಿತ್ರಿಸಲ್ಪಟ್ಟಿದೆ.

ಭಾಷೆಯು ಲಲಿತವಾಗಿಯೂ ಸುಲಭವಾಗಿಯೂ ಇದೆ. ನಿಜವಾದ ಕನ್ನಡ ಶೈಲಿಯ ಹಾಗೂ ನಾಡಿನ ಸೊಬಗನ್ನು ಇಲ್ಲಿ ಕಾಣಬಹುದು. ಅರ್ಥಗರ್ಭಿತವಾದ, ಒಳ್ಳೆ ಚಪ್ಪಿ ಹೂದ ಹಳೆಗನ್ನಡ ಶಬ್ದಗಳನ್ನು ತಿರುಗಿ ಬಳಿಕೆಯಲ್ಲಿ ತರಬೇಕೆಂಬುವದು ಗೆಳೆಯರ ಗುಂಪಿನವರ ಹವಣಿಕೆಯು. ಅದರಂತೆಯೆ ಇಲ್ಲಿಯೂ ಕೂಡ 'ಕರಣಿಕ', 'ಜಟ್ಟಿತನದ' ಮೊದಲಾದ ಶಬ್ದಗಳು ಕಂಡುಬರುವವು. ಸಂದರ್ಭದಿಂದ ಅರ್ಥವು ಹೊಳೆಯದ ಕಡೆಯಲ್ಲಿ ತಡೆದು ನಿಲ್ಲಿಸದಂತೆ ಕಂಸಿನಲ್ಲಿ ಅವುಗಳ ಅರ್ಥವನ್ನು ಕೊಟ್ಟಿರುವರು.

ಶ್ಯಾಮ.

ಪತ್ರವ್ಯವಹಾರ.

ಸವದತ್ತಿಯ ರೇಲ್ವೆ.

ಮೋಹಬ್ಬತನ ಕಲೇಕ್ಟರ ಸಾಹೇಬ ಜಿಲ್ಲಾ ಬೆಳಗಾಂವಿ ಖಾವಂದರವರ ಹುಜೂರಿಗೆ:—

ಕೆಳಗೆ ಸಹಿ ಮಾಡುವ ಜನರ ಅರ್ಜಿಯ ವಿನಂತಿ:—

ಬೆಳಗಾವಿಯಿಂದ ಸವದತ್ತಿಯ ಕಡೆಗೆ ಹೊಸ ರೇಲ್ವೆಲಾಯಿನ್ ಆಗುವದೆಂದು ಕೇಳುತ್ತೇವೆ. ಮತ್ತು ಸದರೀ ರೇಲ್ವೆಯು ಬೆಳಗಾವಿಯಿಂದ ಹೊರಟು ಬಾಗೇವಾಡಿಯ ಹತ್ತರ ಹಾಯ್ದು ಸಂಪಗಾವಿಯ ದಿಕ್ಕಿಯನ್ನು ಹಿಡಿಯುತ್ತದೆಂದು ಕೇಳಿಕೆಯುಂಟು. ಇದು ನಿಜವಿದ್ದರೆ ಈ ಅರ್ಜಿದಾರರಿಗೆ ಏನೂ ಉಪಯೋಗವಾಗುವದಿಲ್ಲ. ಯಾಕಂದರೆ ಬೆಳಗಾವಿಯಿಂದ ಕಟಕೋಳಕ್ಕೆ ಹೋಗುವ ರಸ್ತೆಯ ಸುತ್ತಲಿನ ಹಳ್ಳಿಯವರಿಗೆ ಹೊಳೀಭಾವಿ, ಸಂಗೊಳ್ಳಿ ಸ್ಟೇಶನುಗಳು ತೀರ ಹತ್ತರವಿದ್ದು ಆ ಸ್ಟೇಶನುಗಳಿಗೆ ಹೋಗಲಿಕ್ಕೆ ಅವರಿಗೆ ವಿಶೇಷ ಅನುಕೂಲತೆಯುಂಟು. ಆದರೆ ಹಳ್ಳಿಯವರಿಗೆ ಈ ಹೊಸ ರೇಲ್ವೆಯ ಸ್ಟೇಶನಿಗೆ ಬರಲಿಕ್ಕೆ ಸುಸೂತ್ರ ಚಕ್ಕಡಿದಾರಿಗಳು ಕೂಡ ಇಲ್ಲ.

ಬಾಗೇವಾಡಿಯಿಂದ ಸಂಪಗಾಂವಿಗೆ ಹೋಗುವ ರಸ್ತೆಯ ಸುತ್ತಲಿನ ಹಳ್ಳಿಯವರಿಗೆ ಹೊಸರೇಲ್ವೆಯ ಸ್ಟೇಶನವಂತೂ ಏನೂ ಉಪಯೋಗವಾಗುವಂತಿಲ್ಲ. ಯಾಕಂದರೆ— ಬಾಗೇವಾಡಿಯ ಉತ್ತರಕ್ಕೆ ಗುಡ್ಡಗಾಡು ಪ್ರದೇಶವಿದ್ದು ಚಕ್ಕಡಿಗಳು ಓಡ್ಯಾಡುವಹಾಗೆ ಬೆಟ್ಟಗಳ ಮೇಲಿಂದ ಸಹ ಸುಸೂತ್ರ ಹೋಗಬರಲಿಕ್ಕೆ ಬರುವಂತಿಲ್ಲ.

ಆದ್ದರಿಂದ ನಾವು ಬೇಡಿಕೊಳ್ಳುವದೇನಂದರೆ — ಸದರೀ ಹೊಸ ರೇಲ್ವೆಯನ್ನು ಬೆಳಗಾವಿಯಿಂದ ಬಾಗೇವಾಡಿಯ ದಕ್ಷಿಣಕ್ಕೆ ಅಂದರೆ ಬಾಗೇವಾಡಿ ಸಂಗೊಳ್ಳಿ ಹಳ್ಳಿಗಳ ಮೇಲಿಂದ ಧಾರವಾಡಕ್ಕೆ ಹೋಗುವ ರೋಡಿನ ದಕ್ಷಿಣಕ್ಕೆ ಸಮೀಪಿಸಿ ಆಗುವಂತೆ ಬಾಗೇವಾಡಿ ಬೆಂಡಿಗೇರಿಗಳ ನಡುವೆ ಸ್ಟೇಶನವಾಗಿ ಮುಂದೆ ಸಂಪಗಾವಿಗೆ ಕೂಡಿಸಿದಲ್ಲಿ ದಕ್ಷಿಣದ ಎಲ್ಲ ಊರಜನರಿಗೆ ಅದರ ಉಪಯೋಗ ವಿಶೇಷವಾಗುತ್ತದೆ ಮತ್ತು ರೇಲ್ವೆಯವರಿಗೂ ಲಾಭವದೆ. ಕಾರಣ ನಮ್ಮ ಬೇಡಿಕೆಯಂತೆ ಬಾಗೇವಾಡಿಯ ದಕ್ಷಿಣಕ್ಕೆ (ಬಾಗೇವಾಡಿ ಬೆಂಡಿಗೇರಿಗಳ ನಡುವೆ) ಸ್ಟೇಶನವಾಗಬೇಕು ಎಂದು ನಂಬಿಕೊಂಡಿದ್ದೇವೆ. ಅಂತಾ ಬರಕೊಂಡ ಅರ್ಜಿ ಸಹಿ ತಾರೀಖು ೮-೧೧-೩೬

'ಅರ್ಜಿದಾರರ ಅಲ್ಲಾಬಕ್ಷ'

ಸೂಚನೆ: ಇನ್ನ ಕೆಳಗಿನ ಈ ಮೋಕ್ಕದ್ದಮೆಯ ... ಎಲ್ಲ ಕಾಗದಗಳ ಮೇಲೆ ಸಹಿ ಇದ್ದು ಹಿತ್ತಿ ... ಕಿದೆ.

(**ಟಿಪ್ಪಣಿ.** ಮೇಲೆ ಕಾಣಿಸಿದಂತೆ ಜನರಿಗೆ ಅನುಕೂಲವಾಗುವದಾಗಿ ಯೋಜನೆಮಾಡುವದು ಅವಶ್ಯಕವಾದದ್ದರಿಂದ, ಕಲೆಕ್ಟರರೂ ಮುಂತಾದ ಅಧಿಕಾರಿಗಳೂ, ರೇಲ್ವೆ ಕಂಪನಿಯವರೂ ಈ ಬಗ್ಗೆ ಯೋಗ್ಯರೀತಿಯಿಂದ ವಿಚಾರಿಸಿ, ಅನಂತರ ಈ ರೇಲ್ವೆಯ ಹೊಸ ದಾರಿಯನ್ನು ನಿಶ್ಚಯಿಸಬೇಕು. — ಸಂ. ಕ.)

ಪತ್ರಗಳ ಸಾರಾಂಶ.

(೧) **ಪ್ರಾಥಮಿಕ ಶಾಲಾ ಶಿಕ್ಷಕರಲ್ಲಿ ಬಿನ್ನಹ:—** ಈ ಶಿಕ್ಷಕರು ತಮ್ಮ ಮಾತುಗಳಲ್ಲಿಯೂ, ಪಾಠಗಳಲ್ಲಿಯೂ ಇಂಗ್ಲೀಷ ಮರಾಠಿ ಮೊದಲಾದ ಪರಭಾಷೆಗಳ ಶಬ್ದಗಳನ್ನು ಅನಾವಶ್ಯಕವಾಗಿ ಉಪಯೋಗಿಸುತ್ತಿರುವದು ಸಮಂಜಸವಲ್ಲ. ಇಂಗ್ಲೀಷ ಕಲಿತಂಥ ಕನ್ನಡಿಗರು ಮಾತ್ರ ಈ ಬಗೆಯ ಸಂಕರ ಪದ್ಧತಿಯಲ್ಲಿ ಮಾತನಾಡುತ್ತಿರುವರೆಂಬ ನನ್ನ ಕಲ್ಪನೆಯು, ನಾನು ಮೊನ್ನೆ ಧಾರವಾಡದಲ್ಲಿ ನಡೆದ ಪ್ರಾಥಮಿಕ ಶಾಲಾ ಶಿಕ್ಷಕರ ಸಭೆಗೆ ಹೋದಾಗ್ಗೆ ನಿರಾಧಾರವಾದದ್ದೆಂದು ಕಂಡುಬಂದಿತು. ಬಾಲಕರಿಗೆ ಶಿಕ್ಷಣದ ತಳಹದಿಯನ್ನು ಹಾಕಿಕೊಡುವದು ಶಿಕ್ಷಕರ ಕೈಯೊಳಗಿನ ಕೆಲಸ. ಇವರು ಮನಸ್ಸುಗೊಂಡು ಮಾತಾಡಿದರೆ ಎಂಥವ ಉಸಿರು ಕಟ್ಟುವರೂ ಸ್ವಲ್ಪ ಸ್ವಲ್ಪ ಸೊಬಗನ್ನು ಪಡೆಯಬಹುದು. ಆದ್ದರಿಂದ ಇತ್ತಕಡೆಗೆ ಲಕ್ಷ್ಯಕೊಡಬೇಕಾಗಿ "ಬಯಲಾಟದ ಮುತ್ತು" ದು ಶಿಕ್ಷಕರಲ್ಲಿ ಪ್ರಾರ್ಥಿಸುತ್ತಾರೆ. ಇದೇ ಕ್ಷೇತ್ರಕಾರರಾಗಿ, ಇಂಗ್ಲೀಷ ಅಥವಾ ಮರಾಠಿಯಲ್ಲಿ ಸಹಿಯನ್ನು ಮಾಡದೆ, ಕನ್ನಡ ಶಾಲಾಶಿಕ್ಷಕರು ಕನ್ನಡದಲ್ಲಿಯೇ ಮಾಡಬೇಕಾಗಿ 'ಕನ್ನಡಿಗ'ನ ಸೂಚನೆ.

(೨) **ಭೂದಾನ.** ಬಾಗಲಕೋಟೆಯ ವಕೀಲರಾದ ಶ್ರೀ. ನರಗುಂದ ಬಿಂದೂರಾಯರು ಕರ್ನಾಟಕ ಸೇವಾಸಂಘದವರಿಗೆ ೬೦೦ ರೂ ಕಿಂಮತ್ತಿನ ಭೂಮಿಯನ್ನು ದಾನಮಾಡಿ, ದಲಿತ ಮೇಲಿರುವ ... ಶ್ರೀಕಾಂತ ನನ್ನ ... ಅವರಿಗೆ ... ಈ ಕಾರ್ಯಕ್ಕೆ ಬಾಗ

ಬಕೋಟೆಯ ಮಹಾ ಜನಗಳೆಲ್ಲ ಸಹಾಯ ಮಾಡಬೇಕೆಂದು ಕರ್ನಾಟಕ ಸೇವಾದಳದ ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ. ಕರ್ನಾಟಕದ ಪ್ರತಿಯೊಂದು ಜಿಲ್ಲೆಯಲ್ಲಿಯೂ ವಾದರಿಯಾದ ಒಂದು ವ್ಯಾಯಾಮ ಶಾಲೆಯನ್ನು ಕಟ್ಟಿಸಬೇಕೆಂದು ದಳದ ವಿಚಾರವಿದೆ. ಆದ್ದರಿಂದ ದಳದವರು ಮಾಡುವ ಸೇವೆಯನ್ನು ನೆನೆದು, ಕರ್ನಾಟಕದ ಶ್ರೀಮಂತರು ಹಾಗು ಕನ್ನಡಿಗರಾದ ಶ್ರೀ. ದಿಂಡೂರಾಯರ ಮಹೋಲ್ಪಂಕ್ತಿಯನ್ನು ತೀರಬೇಕೆಂದು ಕಾರ್ಯದರ್ಶಿಗಳು ಕನ್ನಡಿಗರಿಗೆ— ವಿಶೇಷತಃ ತರುಣ ಕನ್ನಡಿಗರಿಗೆ ಬಿನ್ನವಿಸುತ್ತಾರೆ.

(೩ ನೇ ಪುಟದಿಂದ ಬಂದದ್ದು.)

ಹಳ್ಳಿಗಳ ಪರೀಕ್ಷೆ ಮಾಡುವಾಗ ೧೯-೨೦ ಕನ್ನಡ ಶಾಸನಗಳು ಸಿಕ್ಕಂತೆ ರಿಪೋರ್ಟಿನಿಂದ ಗೊತ್ತಾಗುತ್ತದೆ. ಇದರಿಂದ ಆ ಜಿಲ್ಹೆಗಳ ಶೋಧನವು ಅವಶ್ಯವಿದ್ದಂತಾಗುವದು. ಅಂತು ಮೊದಲಿನಿಂದ ಲಿಪಿಖಾತೆಯಿದ್ದ ಮದ್ರಾಸ ಕರ್ನಾಟಕದ ಹಾಡೇ ಹೀಗೆ! ಉಳಿದ ಕರ್ನಾಟಕದ ದುರವಸ್ಥೆಯನ್ನೇನು ಹೇಳಬೇಕು! ಮುಂಬಯಿ ಕರ್ನಾಟಕವು ಮೊದಲಿನಿಂದಲೇ ಅಂದರೆ ೬ನೇಯ ಶತಮಾನದಿಂದ ೧೬ನೇಯ ಶತಮಾನದವರೆಗೆ ಕರ್ನಾಟಕದ ಆ ಆ ರಾಜರುಗಳ ತವರಮನೆಯಾಗಿತ್ತು. ಆದ್ದರಿಂದ ಅಲ್ಲಿ ಸಾವಿರಾರು ಲಿಪಿಗಳು ಸಿಗುವ ಸಂಭವದೆ. ಕರ್ನಾಟಕದ ಈ ಭಾಗದ ಇತಿಹಾಸವು ಚನ್ನಾಗಿ ಗೊತ್ತಾಗದಿದ್ದರೆ, ಒಂದು ದೃಷ್ಟಿಯಿಂದ ಹಿಂದುಸ್ಥಾನದ ಇತಿಹಾಸವೇ ಪೂರ್ತಿಯಾಗುವದಿಲ್ಲೆನ್ನಬಹುದು. ೧೯೨೫ ನೇಯ ವರ್ಷದ ಮೇ ತಿಂಗಳದ 'ಜಯಕರ್ನಾಟಕ'ದಲ್ಲಿ ಹೇಳಿದಂತೆ ಶ್ರೀಯುತ ಆಲೂರ ವೆಂಕಟರಾಯರು ಎಫಿಗ್ರಾಫಿಸ್ಟ ಕೃಷ್ಣಶಾಸ್ತ್ರಿಗಳಿಗೆ, ಮುಂಬಯಿ ಕರ್ನಾಟಕದ ಲಿಪಿಸಂಗ್ರಹಕ್ಕೆ ವಿಜ್ಞಾಪನೆ ಮಾಡಿಕೊಳ್ಳಲು ಶ್ರೀ ಕೃಷ್ಣಶಾಸ್ತ್ರಿಗಳು ತಾವು ನಿವೃತ್ತರಾಗುವ ಪೂರ್ವದಲ್ಲಿ ಅದಕ್ಕೆ ಏರ್ಪಾಡು ಮಾಡಿ, ಅದೇ ವರ್ಷ ಲಿಪಿಸಂಗ್ರಹವನ್ನು ಪ್ರಾರಂಭಿಸಿದರು. ೧೯೨೫, ೧೯೨೬ ಈ ಎರಡು ಸಂವತ್ಸರಗಳಲ್ಲಿ ಧಾರವಾಡ ತಾಲೂಕನ್ನು ಮುಗಿಸಿದಂತೆ ತೋರುತ್ತದೆ. ಈಗಿನ ಸಂಗ್ರಹದ ವ್ಯವಸ್ಥೆಯು ಸರ್ವಥಾ ಯೋಗ್ಯವಿಲ್ಲೆಂದು ನಮ್ಮ ಅಭಿಪ್ರಾಯ. ಯಾಕಂದರೆ ಹೀಗೆ ಧಾರವಾಡದಂಥ ಒಂದು ತಾಲೂಕು ಮುಗಿಸಲಿಕ್ಕೆ ೨ ಸಂವತ್ಸರಗಳು ಬೇಕಾದರೆ, ಮೇಲೆಹೇಳಿದಂತೆ ಅನೇಕ ಜಿಲ್ಹೆಗಳೂ, ಸಂಸ್ಥಾನಗಳೂ ಇದ್ದ ಮುಂಬಯಿ ಕರ್ನಾಟಕವನ್ನು ಸಂಪೂರ್ಣವಾಗಿ ಪರೀಕ್ಷಿಸಲಿಕ್ಕೆ ಏನಿಲ್ಲೆಂದರೂ ೨೦-೨೫ ವರ್ಷಗಳು ಬೇಕಾಗುವವು. ಅಂದಮೇಲೆ ಅಲ್ಲಿಯವರೆಗೆ ಕರ್ನಾಟಕವು ಇತಿಹಾಸವಿಲ್ಲದೆ ಸುಮ್ಮನೆ ಕೂಡಬೇಕೇ? ಇತಿಹಾಸ ಸಂಶೋಧನೆಯ ವಿಷಯದಲ್ಲಿ ಇಷ್ಟು ಹಿಂದುಳಿದ ಕರ್ನಾಟಕವು ತನ್ನ ಪಕ್ಕದಲ್ಲಿರುವ ಪ್ರಾಂತಗಳ ಸರಿಜೋಡಿಗೆ ಬರಬೇಕಾದರೆ ಸರಕಾರದವರು ಮುಂಬಯಿ ಕರ್ನಾಟಕದಲ್ಲಿ ಇತಿಹಾಸ ಸಂಶೋಧನೆಗೆ ಪ್ರತ್ಯೇಕ ಯೋಗ್ಯ ವ್ಯವಸ್ಥೆ ಮಾಡುವದು ಅವಶ್ಯವೆಂದು ನಮ್ಮ ಅಭಿಪ್ರಾಯವು. ಖಾಸಗೀ ಸಂಸ್ಥೆಗಳಿಂದ ಈ ವಿಷಯದಲ್ಲಿ ಸಾಕಷ್ಟು ಕಾರ್ಯವು ನೆರವೇರಲಾರದು. ಹಣದ ಕೊರತೆಯಿಂದ ಅವು ನಡುವೇ ಮುಗ್ಗರಿಸಿ ಹೋಗುತ್ತವೆ. ಆದರೆ ಸರಕಾರದವರು ಕರ್ನಾಟಕದಲ್ಲಿ ಬೇರೆ ಲಿಪಿ ಶಾಖೆಯನ್ನು ತೆಗೆದರೆ ಅದಕ್ಕೆ ಈ ಸಂಸ್ಥೆಗಳು ಮುಂದರಿದು ಸಹಾಯ ಮಾಡಬಹುದು.

ಇನ್ನು ಕರ್ನಾಟಕದಲ್ಲಿಯ ಸಂಸ್ಥಾನಗಳ ವಿಷಯದಲ್ಲಿ ಒಂದೆರಡು ಮಾತು ಬರೆಯುತ್ತೇವೆ. ಮೇಲಿನ ಸಂಗ್ರಹದ ಪಟ್ಟಿಯನ್ನು ನೋಡಿದರೆ ನಿಜಾಮರ ರಾಜ್ಯದಲ್ಲಿ ಕನ್ನಡಲಿಪಿಗಳ ಕೆಲಸವೇ ಆಗಿಲ್ಲವೆಂದು ಗೊತ್ತಾಗುತ್ತದೆ. 'ನೈಜಾಮ ಆರ್ಕ್ಯಾಲಾಜಿಕಲ್ ಮೆಮಾಯರ್' ಮುಖವಾಗಿ ೧೦-೧೫ ಲಿಪಿಗಳನ್ನು ಪ್ರಕಟಿಸಿದ್ದರೆ ಬಹಳ ಆಯಿತು. ಮೊಗಲಾಯಿಯಲ್ಲಿ ಒಂದು 'ಆರ್ಕ್ಯಾಲಾಜಿಕಲ್ ಡಿಪಾರ್ಟಮೆಂಟ' ಇದ್ದರೂ ಕನ್ನಡ ಲಿಪಿಗಳ ಸಂಗ್ರಹಪ್ರಕಟನೆಗೆ ಯಾವ ವ್ಯವಸ್ಥೆಯೂ ಇಲ್ಲ. ಆದ್ದರಿಂದ ನಿಜಾಮ ಸರಕಾರದವರು ಜಾಗ್ರತರಾಗಿ ತಮ್ಮ ರಾಜ್ಯದ ಮಹತ್ವದ ಅಂಗವಾಗಿದ್ದ ಕರ್ನಾಟಕದ ಇತಿಹಾಸ ವಿಮರ್ಶೆಗೆ ಅನುಕೂಲತೆಗಳನ್ನು ಒದಗಿಸಿ ಕೊಡಬೇಕೆಂದು ನಮ್ಮ ಅಗತ್ಯವಾದ ಸೂಚನೆಯಿದೆ. ಮೈಸೂರ ಸಂಸ್ಥಾನದ ವಿಷಯದಲ್ಲಿ ಮೈಸೂರು ಮಹಾರಾಜರು ಯಾವಾಗಲೂ ಜಾಗ್ರತರಿರುವರು. ಇನ್ನು ಮುಂಬಯಿ ಕರ್ನಾಟಕದ ಸಂಸ್ಥಾನಗಳು ಮಾತ್ರ ಅಷ್ಟಳಿಯದೇ ಉಳಿದಿರುತ್ತವೆ. ಸಾಂಗಲಿ, ಜಮಖಂಡಿ, ಮಿರಜ, ಕೊಲ್ಹಾಪೂರ, ಮುಂತಾದ ಸಂಸ್ಥಾನಗಳೆಲ್ಲ, ಲಿಪಿ ದೃಷ್ಟಿಯಿಂದ ಮುಂಬಯಿ ಕರ್ನಾಟಕಕ್ಕೆ ಒಳಪಟ್ಟಿದ್ದರಿಂದ ಅಲ್ಲಿ ಲಿಪಿಖಾತೆಯ ಒಂದು ಶಾಖೆಯನ್ನು ಏರ್ಪಡಿಸಿದರೆ ಆ ಎಲ್ಲ ಭಾಗದ ಲಿಪಿಗಳ ಪರೀಕ್ಷೆಯೂ ಪ್ರಕಟನೆಯು ಒತ್ತರದಿಂದ ಸಾಗುತ್ತವೆ. ಈ ವಿಷಯದಲ್ಲಿ ಕರ್ನಾಟಕದ ಎಲ್ಲ ವೃತ್ತಪತ್ರಕಾರರೂ ಕಾಯದೇಮಂಡಳಗಳಲ್ಲಿ ಕರ್ನಾಟಕದ ಹಿತಕ್ಕಾಗಿ ಹೆಣಗಾಡುವ ಮುಂದಾಳುಗಳೂ, ಕರ್ನಾಟಕ ಸಾಹಿತ್ಯಪರಿಷತ್ತು, ಧಾರವಾಡದ ಇತಿಹಾಸ ಸಂಶೋಧಕ ಮಂಡಳ ಮುಂತಾದ ಸಂಸ್ಥೆಗಳೂ ಹೆಚ್ಚು ಶ್ರದ್ಧೆಯನ್ನು ವಹಿಸಿ ಈ ವಿಷಯದ ಮಹತ್ವವನ್ನು ಸರಕಾರದ ಗಮನಕ್ಕೆ ತಂದು ಕೊಟ್ಟು, ಮುಂಬಯಿಗೆ ಪ್ರತ್ಯೇಕ ಯೋಗ್ಯವ್ಯವಸ್ಥೆಯನ್ನು ಮಾಡಿಸುವಂತೆ ಪ್ರಯತ್ನ ಮಾಡಬೇಕೆಂದು ನಮ್ಮ ನಮ್ರವಾದ ಸೂಚನೆಯಿರುತ್ತದೆ.

ಅಂತು ಮೇಲಿನ ವಿವೇಚನೆಯಿಂದ ಕರ್ನಾಟಕದಲ್ಲಿ ಲಿಪಿಸಂಗ್ರಹವು ಎಷ್ಟರಮಟ್ಟಿಗೆ ಆಗಿರುತ್ತದೆಂಬದು ಗೊತ್ತಾಗುತ್ತದೆ. ಈ ಅಲ್ಪಸಂಗ್ರಹದಲ್ಲಿ ಕೂಡ ಎಷ್ಟು ಲಿಪಿಗಳು ಪ್ರಸಿದ್ಧಿಯನ್ನು ಹೊಂದಿರುತ್ತವೆಂಬದನ್ನು ತಿಳಕೊಳ್ಳುವದು ಅವಶ್ಯವಲ್ಲವೇ? ಅದನ್ನು ಮುಂದಿನ ಲೇಖನದಲ್ಲಿ ವಿಸ್ತಾರವಾಗಿ ಬರೆಯುವೆವು.

ಶ್ರೀನಿವಾಸ ರಾಜೇರಾವ ಮಂಗಳವೇಢೆ.

ಬೇಕಾಗಿದ್ದಾರೆ-

ಡಿಸ್ಟ್ರಿಕ್ಟ ರೆಡ್‍ಕ್ರಾಸ್ ಕಮೀಟಿ ವಿಜಾಪೂರ ಇವರಲ್ಲಿ ದಾಸಾದ ಹೆರಿಗೆ ಮಾಡಿಸುವವರು (Mid-wife) ಮತ್ತೂ ಓರ್ವ ಆರೋಗ್ಯ ಪ್ರಚಾರಕರು (Health Visitor) ಬೇಕಾಗಿದ್ದಾರೆ. ಅವರಿಗೆ ರೂ|| ೪೦ ದರ ತಿಂಗಳಿಗೆ ಕೊಡಲ್ಪಡುವದು. ಮತ್ತು ರು|| ೧೦ ಅಲಾವನ್ಸ ಜೇರಿ ದೊರೆಯುವದು. ಪರೀಕ್ಷೆ ಪಾಸಾದವರು ಮಾತ್ರ ಈ ಜಾಗೆಕ್ಕೆ ಅರ್ಜಿ ಮಾಡಬೇಕು. ಕನ್ನಡ ಭಾಷೆಯು ಜ್ಞಾನವುಳ್ಳವರು ಮೊದಲು ಆರಿಸಲ್ಪಡುವರು.

(ಸಹಿ) ವ್ಹಿ. ಎಚ್. ನಾಯಿಕ್.

ಕಲೆಕ್ಟರ ಮತ್ತು ಪ್ರೆಸಿಡೆಂಟ ಡಿಸ್ಟ್ರಿಕ್ಟ ರೆಡ್‍ಕ್ರಾಸ ಕಮೀಟಿ ವಿಜಾಪೂರ.

ಕನ್ನಡ ಬಂಧುಗಳೇ ! ಈ [illegible] ಕಳೆದುಕೊಳ್ಳಬೇಡಿರಿ
ನಮ್ಮ ಸಹಾಯವಾಗಿಯೆ [illegible] ಶಿಕ್ಷಣವನ್ನು ಹೊಂದಿರಿ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. [illegible] ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ತಿಳಿಸುವುದು ಮತ್ತು ಬೇರೆ ಬೇರೆ [illegible] ಒಳಗಿನ ಕೆಟ್ಟ ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವುದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ [illegible] ಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಿಂತಿರುಗಿಯೇ ಇಲ್ಲ. [illegible] ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಬಹಳ ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ [illegible], ಬ್ರಿಟಿಶ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಿಗೆಯನ್ನು ತೆಗೆದುಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸರಾಗ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ [illegible] ಗಿದ್ದು, ಮನಸಿಗೆ ಹೊಗಿಸುವಂತೆ ಆಗುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. [illegible] ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರ ಬರೆದು ಕೇಳಿರಿ !

ವಿಳಾಸ:— ಕುಲಕರ್ಣಿ ಮೋಟಾರ ಸ್ಕೂಲ.

೪೯೮ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ೨.

ವಿದ್ಯಾರಣ್ಯ ಮುದ್ರಾಮಂದಿರದ

ಸ್ಥಳಾಂತರವು.

ವೆಂಕಟಪೇಟೆಯ ವೆಂಕಟೇಶದೇವರ ಗುಡಿಯ ಹತ್ತರ ಶ್ರೀ. ನರಸಾಪೂರದವರ ಮನೆಯಲ್ಲಿದ್ದ ನಮ್ಮ ಮುದ್ರಾಮಂದಿರವನ್ನು ಅದೇ ವೆಂಕಟಪೇಟೆಯ ನಮ್ಮ ಸ್ವಂತ ಮನೆಯ ಅಟ್ಟದ ಮೇಲೆ (ಮೊದಲು ಆನರರೀ ಮ್ಯಾಜಿಸ್ಟ್ರೇಟರ ಕಚೇರಿಯಿದ್ದ ಸ್ಥಳಕ್ಕೆ) ಒಯ್ದಿರುತ್ತದೆ.

ಶ್ರೀನಿವಾಸ ರಾಜೇರಾವ ಮಂಗಳವೇಢೆ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು. ಬಿದ್ದ ಹಲ್ಲುಗಳ ಸ್ಥಳದಲ್ಲಿ ಕೃತ್ರಿಮ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು.

ಮಂಗಳೂರ, ಬೆಂಗಳೂರ ಕಡೆಯ ಸುಶಿಕ್ಷಿತರು

ಪ್ರಿಂಟರರೂ ಕಂಪೋಜಿಟರರೂ

ಬೇಕಾಗಿದ್ದಾರೆ.

ಯೋಗ್ಯತೆಯ ಪ್ರಕಾರ ಪಗಾರವು ದೊರೆಯುವದು.

ಮ್ಯಾನೇಜರ. **ವಿದ್ಯಾರಣ್ಯ ಮುದ್ರಾಮಂದಿರ ಬಾಗಲಕೋಟೆ.**

ಈ ಪತ್ರಿಕೆಯು ಮಂಗಳವೇಢೆ ರಾಜೇರಾವರ ಮುಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

FOR SAFETY AND GOOD SERVICE
IN LIFE ASSURANCE
GO TO **THE ORIENTAL**
IN AGE SIZE AND STRENGTH
THE GREATEST INDIAN
LIFE ASSURANCE COPANY
Apply for full particulars to-
N. K. Kulkarni. Agent Bagalkot.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಜರುಗಿಸಲ್ಪಟ್ಟಿ. ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ನ ರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು—

(೧) ಎಲ್. ಬಿ. ಸಿ. ನಂ ೬೪೪. ಮಿ. ಮಹಮ್ಮದ ಯುಸುಫ ಡಿಸ್ಟ್ರಿಕ್ಟಗಾರ್ಡ್, ನಾರಾಯಣ ಗುಡ ಡಿಸ್ಟ್ರಿಕ್ಟ, ಹೈದರಾಬಾದ್ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ. ಬಿ. ಟಿ. ತಾಲೂಕಗಳ ಡಿವಿಜನಲ್ ಇನ್‌ಸ್ಪೆಕ್ಟರ ವಾರಂಗಲ್ ಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೭೯ ಮಿ. ದೇವನ ವಾಸುದೇವನ ನಂಬೂದ್ರಿವಾದ ಜಮೀನದಾರ [illegible] ಆಲ್ವಾಯಿ ರೂ ೬೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪ ಬಸಪ್ಪ ದೆ. ವನಕೊಂಡ, ಅಕ್ಕಸಾಲೆ ಬೆಡಿಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೭ ಮಿ. ಶೇಕ ಬಾವುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೦೪ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಗಡಗಳು ಮತ್ತು ಬೀಜಗಳು-

ತರಹೇವಾರಿ ಕಟ್ಟಿಕಟ್ಟಿದ ಮಾವಿನ ಗಿಡಗಳು ಡಜನ್ ೧ ರೂ ೯-೦-೦
ನಿಂಬೆ, ಕಿತ್ತಳೆ, ಮಾದಳ, ಸೇವು, ದಾಳಿಂಬ
ಚಕ್ಕೋತ್ರ, ಸನ್ನೇರಳೆ, ದ್ರಾಕ್ಷಿ, ಪೇರ, ಹಲಸು
ಗಿಡಗಳು ಡಜನ್ ೧ ಕ್ಕೆ ರೂ ೫-೦-೦
ಕಟ್ಟಿದ ಸಂಪಿಗೆ, ಪಾರಿಜಾತ, ಪಾದರಿ ಗಿಡಗಳು ೧ಕ್ಕೆ ,, ೧-೦-೦
ರೋಜಾ ಗಿಡಗಳು ಡಜನ್ ೧ ಕ್ಕೆ ರೂ ೩ ರಿಂದ ೧೨
೨೫ ತರಹಾ ಹೂವಿನ ಬೀಜಗಳು ೭೫ ಪ್ಯಾಕೆಟ್ ರೂ ೫-೦-೦
೨೫ ತರಹಾ ಇಂಗ್ಲೀಷ ತರಕಾರಿ ಬೀಜಗಳು
೭೫ ಪ್ಯಾಕೆಟ್ ರೂ ೫-೦-೦
೨೫ ತರಹಾ ಇಂಡಿಯನ್ ತರಕಾರಿ ಬೀಜಗಳು ೨೫
ಪ್ಯಾಕೆಟ್ ರೂ ೩-೨-೦
೧೨ ತರಹಾ ಗಡ್ಡೆಗಳಿಂದಾಗತಕ್ಕ ಹೂವಿನ ಗಿಡಗಳ
ಗಡ್ಡೆಗಳು ಡಜನ್ ೧ಕ್ಕೆ ರೂ ೬-೦-೦

ನಮ್ಮಲ್ಲಿ ಸಿಗುವ ಬೀಜ, ಗಿಡಗಳ ಕನ್ನಡ ಕ್ಯಾಟಲಾಗನ್ನು ಅಪೇಕ್ಷಿಸಿದವರಿಗೆ ಕಳುಹಿಸುತ್ತೇವೆ.

ಎಸ್. ವೈ. ಸುಬ್ಬಯ್ಯಾ ಅಂಡ ಬ್ರದರ್ಸ್ ಲಾಲ್ ಬಾಗ್ ರೋಡ್ ಬೆಂಗಳೂರುಸಿಟಿ

ಗದ್ದನ್ [illegible] ಜಗತ್ಪ್ರಸಿದ್ಧವಾ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರಜಾಮಿತ್ರ ಮೂರ್ತಿ ಮಂತ ವೈದ್ಯ

ಇದು ಅರ್ಕವಿದ್ದು ಇದರಲ್ಲಿ ಸೀಡು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರೆಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಜಾಹೀರು ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸುಳ್ಳೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯಾಗಿರ್ರು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣವಾದ ಬಗ್ಗೆ ಎಷ್ಟೋ ಸರ್ಟಿಫಿಕೇಟುಗಳು ನಮ್ಮ ಹತ್ತಿರ ಹಾಜರ ಇರುತ್ತವೆ. ಇವೆಲ್ಲ ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತರಿಸಿಕೊಂಡು ಅನುಭವ ನೋಡಿರಿ. ರೋಗದ ನಾವುಗಳು— ಕ್ಷಯರೋಗ, ಪ್ರಾಣಾಂತರೋಗ, ಹಡೆದನಂಜು ದಮ್ಮು, ಕೆಮ್ಮು, ಅಪಗ್ಯ, ಕಾಲರಾ (ವಾಂತಿ), ಪ್ಲೇಗ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮೂಲರೋಗ, ಗಂಡಮಾಲೆ, ಸಂಧಿವಾತ, ಶಸ್ತ್ರಗಾಯ, ಕಿವಿಕಣ್ಣು ಮೂಗಿನ ಪಿನಸು, ಹೊದರು ದದ್ದುಗಳು. ಕಣ್ಣು ನೋವು [illegible] ಮಾವು [illegible], ಅಜೀರ್ಣ ಹೊಟ್ಟೆಶೂಲಿ, ಸಣ್ಣ [illegible] ರೋಗಗಳು ಬಾಲಗ್ರಹ, [illegible] ಹೊಟ್ಟೆ ದೊಡ್ಡದಾಗೋಣ, ಕೋಡಗಮ್ಮು, [illegible] ಮತ್ತು [illegible] ವೃದ್ಧರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣವಾಗುವದು. [illegible] ತತ್ಕ್ಷಣ ಗುಣವಾಗುವದು. ೧ ತೊಲೆ ಬಾಟ್ಲಿ ಒಂದಕ್ಕೆ ೨ ರೂಪಾಯಿ [illegible] ೫ ಆಣೆ [illegible] ಬಾಟ್ಲಿ ಒಂದಕ್ಕೆ ೮ ಆ. [illegible] ೭ ಆಣೆ [illegible] ೨ ರೂಪಾಯಿ [illegible] ೭ ಆಣೆ [illegible] ಬಾಟ್ಲಿ [illegible] ತರಿಸಿಕೊಳ್ಳುವವರಿಗೆ [illegible] ಬಾಟ್ಲಿಗಳು ಕಮಿಶನ್ ಸಿಗುತ್ತವೆ. [illegible] ೯ ಆಣೆ ಡಜನದ ಒಳಗಿನ [illegible] ಬಾಟ್ಲಿ ತರಿಸಿಕೊಂಡರೆ ಕಮಿಶನ್ ಇಲ್ಲ [illegible] ೬ ಆಣೆ. ೧ ತೊಲೆಯ ಬಾಟ್ಲಿ ಒಂದೇಸಾರೆ [illegible] ತರಿಸಿಕೊಳ್ಳುವವರಿಗೆ ಹದಿನೈದು ಬಾಟ್ಲಿ ಕಮಿಶನ್ ಸಿಗುತ್ತದೆ. [illegible] ೯ ಆಣೆ. ಎರಡು ತರಿಸಿಕೊಳ್ಳುವವರು [illegible] ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು [illegible] ಈ ಔಷಧವು ಹೊಟ್ಟೆ [illegible] ತರಿಸಿಕೊಂಡು [illegible] ಈ ಅರ್ಕಶಫಾ [illegible] ಇದರ ಬಗ್ಗೆ [illegible] ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ [illegible] ಬರೆಯಬೇಕು. [illegible] ಎಚ್. ಎಮ್. ಮುಲ್ಲಾ.

[illegible] ಅರ್ಕಶಫಾ [illegible] [ದೇಶಗ್ರಾಮ]

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತೇವೆ. ಆದ್ದರಿಂದ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಕೇವಲ ಒಂದೇ ಮಾಸದಲ್ಲಿ ಮೋಟಾರ ಡ್ರಾಯ್ವ್ಹಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡಿಯ ಪ್ರತಿಷ್ಠ ಹಿಂದುಸ್ತಾನದ ಸರಕಾರ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಮಾಹಿತಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವ್ಹಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೨ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ'ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ಪಾಂಡು ಮತ್ತು ಕೆಮ್ಮು ಮೊದಲಾದ ವಿಕಾರಗಳೂ, ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಕೆಲ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವೈಯಕ್ತಿಕ ಅಥವಾ ಮುಪ್ಪಿನ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪುಂಸ್ತ್ವಶಕ್ತಿಯು ಪ್ರಾಪ್ತವಾಗುತ್ತದೆ. ಇದರ ಪಥ್ಯಾಪಥ್ಯಗಳೇನಿಲ್ಲ ಸೇವಿಸಿ ನೋಡಿದರೆ ಖಾತ್ರಿಯಾಗುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲ ಖರ್ಚ ಪ್ರತ್ಯೇಕ ೧ ಡಬ್ಬಿಗೆ ೦-೧೨-೦. ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನ ಸಿಗುವದು. ಪೂರ್ಣಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಕ್ರೇತ—

ಎಲ್. ಬಿ ಕವಠೇಕರ ಮತ್ತು ಸನ್ಸ್.

ಮು ಪೋಸ್ಟ ನಿಪ್ಪಾಣಿ (ಜಿ ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳ ಗೋಸ್ಕರ ಪ್ರತಿವರ್ಷವೂ ಒಂದು ಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳುಹುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿಶ್ವಾಸಘಾತಕನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರವನ್ನೂ ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನೂ ತಯಾರು ಮಾಡುತ್ತಾರೆ. ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯಮಾಡಿ ನಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛಿಸುವ ಸ್ಥಳದಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿ ಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ರ ನಂ. ಬಿ. ೧೯೪೭ ವಾ ಚಂದಾ ೧-೧೪-೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಸರ್ವಂ ಪರವಶಂ ದುಃಖಂ । ಸರ್ವಮಾತ್ಮವಶಂ ಸುಖಂ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಕಾರ್ತಿಕ ಬಹುಳ ೧೪ ಶಕೆ ೧೮೪೮ ತಾ॥ ೩ ೧೨ ೧೯೨೬ | ಸಂಚಿಕೆ ೩೪

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಮಾಡಿ ಕಟ್ಟುವೆನಾನು ।
ನಿನ್ನ ಚಿಕನವ ಮಾಡಿದಂಥ ಮಕ್ಕಳ ದೊಮ್ಮೆ।
ಚಿನ್ನದಾದರು ಚಿನ್ನ ಮೇಣಬತ್ತಿಯು ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಜಿಕಾ ತನಯ ದತ್ತ

ಶ್ರೀ ಗರಳಪುರಿಶಾಸ್ತ್ರಿಗಳ ಸೂಚನೆಯ ಮೇರೆಗೆ ಕನ್ನಡ ಸಂಸ್ಕೃತಿಯ ಬಗ್ಗೆ ವ್ಯಾಖ್ಯಾನಪೀಠವೊಂದು ಸ್ಥಾಪಿತವಾಗಬೇಕೆಂದು ೧೯-೨೦ನೇ ತಾರೀಖುಗಳಲ್ಲಿ ನಡೆದ ಮೈಸೂರ ಸಿನೇಟ ಸಭೆಯಲ್ಲಿ ಗೊತ್ತಾಗಿದೆ. ದುಷ್ಟಗ್ರಹಗಳ ವಕ್ರದೃಷ್ಟಿಯಲ್ಲಿಸಿಕ್ಕು ವಿಪರೀತವಾಗಿ ತಿರಗುವ ಕನ್ನಡನಾಡಿನ ದೈವಚಕ್ರವು ಪುನಃ ಸರಿಯಾಗಿ ತಿರುಗಲಾರಂಭಿಸುವ ಚಿಹ್ನಗಳು ಸ್ಪಷ್ಟವಾಗಿ ತೋರುತ್ತಿವೆ. ನಾಡಿನ ಜೀವವೆಲ್ಲ ಅವರ ವಿಶಿಷ್ಟಧರ್ಮ, ವಿಶಿಷ್ಟಸಂಸ್ಕೃತಿ ಇವೇ ಮುಂತಾದವುಗಳನ್ನು ಆಶ್ರಯಿಸಿರುತ್ತದೆಂದು ನಾವು ಆಗಾಗ್ಗೆ ಬರೆದಿರುವೆವು. ನಮ್ಮ ಸಂಸ್ಕೃತಿಯಲ್ಲಿ ನಮ್ಮ ಪ್ರಾಣ; ನಮ್ಮ ಬಲ. ರಾಜಕೀಯ ಕಲಹಗಳಿಂದ ನಾವು ನಮ್ಮ ಸಂಸ್ಕೃತಿಯನ್ನು ಮರೆತುಬಿಟ್ಟಿರುವೆವು. ಅದರಿಂದ ನಮ್ಮ ನಾಡು ಜರ್ಜರಿತವಾಗಿರುವುದು. ನಮ್ಮ ಶೀಲ, ನಮ್ಮ ಸಭ್ಯತೆ ಇವುಗಳ ರಹಸ್ಯವನ್ನು ತಿಳಿಯಲು ನಮ್ಮ ವೃತ್ತಿಯೇ ಇಲ್ಲ. ನಮ್ಮ ಮುಂದೆ ಸರ್ವಮಾನ್ಯ ಧ್ಯೇಯಗಳಿಲ್ಲ. ನಮ್ಮ ನಾಡಿನ ಪ್ರಗತಿಗಾಗಿ ಕೆಲವೊಂದು ಸರ್ವಮಾನ್ಯ ತತ್ವಗಳು ಬೇಕು. ಅವೂ ನಮ್ಮಲ್ಲಿಲ್ಲ. ಇದಕ್ಕೆ ಕಾರಣವೆಂದರೆ, ನಮ್ಮ ಆತ್ಮಕ್ಕೆ ಸಂಸ್ಕಾರವಿಲ್ಲ; ಮನಸ್ಸು ಮಡಿಯಾಗಿಲ್ಲ; ವಿವೇಕಮಾಡುವ ಬುದ್ಧಿಯಿಲ್ಲ. ವೃತ್ತಪತ್ರಗಳ ಹೊರ್ತು ಮತ್ತೊಂದು ಓದಿಲ್ಲ. ಆರ್ಥಿಕ ಸಾಮಾಜಿಕ ಪ್ರಶ್ನೆಗಳನ್ನು ಬಿಡಿಸುವ ಯೋಗ್ಯತೆಯ ಜನರಿಲ್ಲ. ಆದ್ದರಿಂದ ನಾಡಿನ ಹಾಡು ಹೇಳದಂತಹದಾಗಿದೆ. ಇಂತಹ ಹೀನತೆಯು ಹೋಗಬೇಕಾದರೆ ಸಂಸ್ಕೃತ, ವಿವೇಕಯುಕ್ತ ಜನರುಬೇಕು. ಜನಾಂಗದ ಸ್ವಭಾವನಿಷ್ಠೆ-ಆತ್ಮನಿಷ್ಠವಾದ—ಧರ್ಮಗಳೇ ಸಂಸ್ಕೃತಿಯಲ್ಲಿ ವ್ಯಕ್ತವಾಗುತ್ತವೆ. ಜನಾಂಗದೊಳಗೆ ಆನಂದದ ಜೀವಾಳ, ಪ್ರತಿಭಾಸಂಪತ್ತು, ಸದಿಚ್ಛಾಪ್ರವೃತ್ತಿ, ವಿವೇಕೋನ್ಮುಖತೆಯಿದ್ದಂತೆ ಸಂಸ್ಕೃತಿಯು ಉಜ್ಜ್ವಲವಾಗುವುದು. ರಾಷ್ಟ್ರಪುರುಷನ ಅಂತರಂಗಸೃಷ್ಟಿಯು ವಿಶಾಲವಾದುದೂ, ರಮಣೀಯವಾದುದೂ ಇದ್ದಂತೆ, ಬಹಿರಂಗ ಸೃಷ್ಟಿಯಾದರೂ ಇರುವುದು. ನಾಡು ಸೊಬಗಿನಸುಗ್ಗಿಯಾಗುವುದು; ಎರಡನೆಯವರ ಮೆಚ್ಚುಗೆಗೆ ಪಾತ್ರವಾಗುವುದು. ನಮಗೆ ಈಗ ಆಧ್ಯಾತ್ಮದ ಆಧಾರವೇ ಇಲ್ಲದಂತಾಗಿದೆ. ಎಲ್ಲವೂ ಹೊರಗೆ ಬಾಯಿತೆರೆದುಕೊಂಡು ನಿಂತಿವೆ. ಹೊರಗಣ ಸರಕುಗಳನ್ನು ಹೊಂದಿಸಲು ತವಕಪಟ್ಟರೆ ಆಗುವದೇನು? ರಾಷ್ಟ್ರದ ಮನಸ್ಸು ಹಾಳವಾಡ ಹೊಲವಾಗಿದೆ. ಹಸನಮಾಡಲು ಜನರು ಬೇಕು. ಸಾಹಿತ್ಯವಿಶಾರದರೂ, ಶಾಸ್ತ್ರಜ್ಞರೂ, ಶಿಕ್ಷಣಜ್ಞರೂ, ತತ್ವಾಭಿಮಾನಿಗಳೂ ಬೇಕಿರುವರು. ಇಂಥವರೆಲ್ಲರನ್ನು ನಿರ್ಮಾಣಮಾಡುವುದೇ ಸಂಸ್ಕೃತಿಯ ವಿದ್ಯಾಪೀಠ. ಇಂತಹ ವಿದ್ಯಾಪೀಠದ ಬಗ್ಗೆ ಕಳಕಳಿಯಿಂದ ಪ್ರಯತ್ನ ಮಾಡಿದ ಶಾಸ್ತ್ರಿವರ್ಯರಿಗೂ, ಅವರ ಪ್ರಯತ್ನಕ್ಕೆ ತಕ್ಕಫಲವನ್ನು ಒದಗಿಸಿಕೊಟ್ಟ ಮೈಸೂರಿನ ಕನ್ನಡಿಗರಿಗೂ ನಾವು ಅಭಿನಂದನಗಳನ್ನು ಅರ್ಪಿಸುತ್ತೇವೆ. ಇನ್ನು ಮೈಸೂರ ಸರಕಾರದವರು ಈ ನಿರ್ಣಯವು ಬೇಗನೇ ಕೃತಿಯಲ್ಲಿ ಬರಲು ಬೇಕಾದ ಎಲ್ಲಬಗೆಯ ಸೌಕರ್ಯಗಳನ್ನು ಒದಗಿಸಿಕೊಟ್ಟು, ಅಖಂಡ ಕರ್ನಾಟಕದ ಜ್ಞಾನಪಿಪಾಸುಗಳಾದ ವಿದ್ಯಾರ್ಥಿಗಳು ಮೈಸೂರ ವಿಶ್ವವಿದ್ಯಾಲಯಕ್ಕೆ ಜೇನ್ನೊಣಗಳಂತೆ ಮುಕುರುವಹಾಗೆ ಮಾಡವರಾಗಿ ನಂಬಿದ್ದೇವೆ.

ಕರ್ನಾಟಕದ ಸ್ವಯಂಸೇವಕರಿಗೆ ಮಹಾತ್ಮರು ತಮ್ಮ 'ಯಂಗ ಇಂಡಿಯಾ' ಪತ್ರಿಕೆಯಲ್ಲಿ ಬರೆದ ಉತ್ತರವನ್ನು ನಾವು ಕಳೆದಾಚೆಯವಾರದ 'ಕನ್ನಡಿಗ'ನಲ್ಲಿ ಪ್ರಕಟಿಸಿದ್ದೇವೆ. ಅದಕ್ಕೆ ನಾವು ಸೂಚಿಸಿದಂತೆಯೇ ಕರ್ತೃತ್ವಶಾಲಿಗಳಾದ ಸ್ವಯಂಸೇವಕರ ದಲವು ಮಹಾತ್ಮರಿಗೆ ಪ್ರತ್ಯುತ್ತರವನ್ನಿತ್ತಿದೆ. ಮಹಾತ್ಮರಂತಹ ಕನ್ಯೆಯನ್ನು ವರಿಸಲು ಎಲ್ಲರೂ ಹಾತೊರೆಯುವದು ಸ್ವಾಭಾವಿಕವು. ಈ ಕನ್ಯೆಯ ವರದಕ್ಷಿಣೆಯು ಎಷ್ಟಾದರೂ ಸರಿ, ಅದನ್ನು ಕೊಟ್ಟು, ಕರ್ನಾಟಕಕ್ಕೆ ಆ ಕನ್ಯೆಯ ಸಂಗಡ ಮದುವೆಯಾಗುವ ಪ್ರಸಂಗವನ್ನು ತಂದುಕೊಡಬೇಕೆಂದು ನಮ್ಮ ದಲವು ಪ್ರಯತ್ನಿಸಲು ಸಿದ್ಧವಿದೆ. ಆದರೆ ಆ ಮೋಹಕಳಾದ ಕನ್ಯೆಯ ವರದಕ್ಷಿಣೆಯೆಷ್ಟೆಂಬುದನ್ನು ಅರುಹಬೇಕೆಂದು ಕರ್ನಾಟಕ ಸೇವಾದಲದ ವತಿಯಿಂದ ಡಾ. ಹರ್ಡೀಕರರು ಮಹಾತ್ಮರಿಗೆ ಪ್ರಾರ್ಥಿಸಿದ್ದಾರೆ. ಇನ್ನು ಮಹಾತ್ಮರ ಉತ್ತರವು ಏನು ಬರುವದೋ ನೋಡುವಾ. ಅಷ್ಟರಲ್ಲಿ ಕರ್ನಾಟಕದ ಮಹಾಜನಗಳು ಈ ಬಗ್ಗೆ ಸಹಾಯಮಾಡಲು ತಮ್ಮ ಬೆಂಬಲದ ವಚನಗಳನ್ನು ಸೇವಾದಲಕ್ಕೆ ತಿಳಿಸಬೇಕಾಗಿ ನಮ್ಮ ಸೂಚನೆ.

ಕರ್ನಾಟಕ ರಂಗಭೂಮಿಯ ಏಳಿಗಾಗಿ ಬರೆದರೆ ಶ್ರೀ ಗರುಡ ಸದಾಶಿವರಾಯರಿಗೆ ಬಹು ಕೋಪ. ರಂಗಭೂಮಿಯ ಪ್ರಗತಿಗಾಗಿ ಪ್ರಯತ್ನಿಸುವದು ಬರೀ ಗರುಡರಿಗೆ ಕೊಟ್ಟ ಗುತ್ತಿಗೆಯ ಕೆಲಸವಲ್ಲ. ಅನ್ಯರಿಗೆ ಸಹ ಆ ಬಗ್ಗೆ ಲೇಖ ಬರೆಯುವ ಟೀಕಿಸುವ ಅಧಿಕಾರವಿದೆಂಬವದನ್ನು ಗರುಡರು ಕೊಂಚ ಶಾಂತ ಮನಸ್ಸಿನಿಂದ ಕುಳಿತು ವಿಚಾರಿಸಿದ್ದರೆ ಕೌಶಿಕನ ಲೇಖಗಳಿಂದ ಅವರು ಇಷ್ಟೊಂದು ಕೋಪಾವಿಷ್ಟರಾಗುವ ಪ್ರಸಂಗವೇ ಒದುತ್ತಿರಲಿಲ್ಲ. ಇನ್ನು ಕೌಶಿಕನಿಗೆ ಉತ್ತರ ಕೊಡುವದು ಅವರ ಅಧಿಕಾರದ ಮಾತು. ದಾರಿ ತಾಗಿದಂತೆ ಸೌಜನ್ಯವನ್ನು ಮೀರಿ 'ಕನ್ನಡಿಗ'ನನ್ನೂ 'ರಂಗಭೂಮಿ'ಯನ್ನೂ ಹಳಿಯುತ್ತ ಉತ್ತರ ಬರೆಯುವದು ನಾಟಕಾಲಂಕಾರಿತ್ಯಾದಿ ಬಿರುದಾವಳಿಗಳುಳ್ಳ ಮಹಾನುಭಾವರ ಕೀರ್ತಿಗೆ ಸಮಂಜಸವಾದುದಲ್ಲ. ಸನುಗಿರಲಿ, ಕಳಿಸಿದ ಕೌಶಿಕನಿಗುತ್ತರ ರೂಪವಾದ ಪುರಾಣದ ಸಂಪೂರ್ಣವಾದ ಓಲಿಗಳನ್ನು ಬಿಚ್ಚಿ, ಗರುಡರ ಪುರಾಣದಿಂದ ಜನರಿಗೆ ಬೇಸರವನ್ನುಂಟುಮಾಡುವ ಇಚ್ಛೆ ನಮಗಿದ್ದಿಲ್ಲವಾದ್ದರಿಂದ ನಾವು ಅವರ ಪುರಾಣದಲ್ಲಿಯ ಮುಖ್ಯಾಂಶಗಳನ್ನು ಪ್ರಕಟಿಸಿದ್ದೇವೆ. ಅದನ್ನು ಸಂಪೂರ್ಣವಾಗಿ ಪ್ರಕಟಿಸುವ ಇಚ್ಛೆ ಇದ್ದರೆ ಬೇರೆ ಪತ್ರಿಕೆಗಳ ಮುಖಾಂತರ ಅವರು ಹಾಗೆ ಮಾಡಬಹುದು. ನಮ್ಮ ಕಾರ್ಯಾಲಯದಲ್ಲಿದ್ದ ಮೂಲ ಪ್ರತಿಯು ಇಲ್ಲಿಯೇ ಇರಬೇಕಾಗಿದೆಯಾದ್ದರಿಂದ ಅದನ್ನೇ ಮರಳಿ ಕಳಿಸುವದು ನಮಗೆ ಶಕ್ಯವಿಲ್ಲ. ಇಷ್ಟವಿದ್ದರೆ ಅವರು ಮತ್ತೊಂದು ಪ್ರತಿಯನ್ನು ಸಿದ್ಧಪಡಿಸಿಕೊಳ್ಳಬಹುದು. ಇನ್ನು ವೃತ್ತ ಪತ್ರಿಕಾ ಕರ್ತರಗಳ ಕರ್ತವ್ಯವಾವುದೆಂಬದನ್ನು ನಾವು ಚನ್ನಾಗಿ ಬಲ್ಲೆವು. ಅದನ್ನು ಗರುಡರ ಪುರಾಣದ ಓಲಿಗಳನ್ನೋದಿ ತಿಳಿದುಕೊಳ್ಳುವ ಅಗತ್ಯವಿಲ್ಲ. ಶ್ರೀ ಗರುಡರು ಜವಾಬ್ದಾರಿಯನ್ನು ತಾವು ಚನ್ನಾಗಿ ಬಲ್ಲವರಾಗಿದ್ದೇವೆಂದು ಹೇಳುತ್ತಿರುವದರಿಂದ ಅವರು ದಯವಿಟ್ಟು ನಮ್ಮ ಪ್ರಶ್ನೆಗಳಿಗೆ ಉತ್ತರ ಕೊಡಬೇಕಾಗಿ ಕೇಳುತ್ತೇವೆ:-- (೧) ನಾಟಕಗಳು ಮುಗಿಯುವಾಗ್ಗೆ ತಾವು ತಮ್ಮ ಪುರಾಣವನ್ನು ಬಿಚ್ಚುವ ಪದ್ಧತಿಯನ್ನಿಟ್ಟಿರುವಿರಿ. ಹೀಗೆ ತಪ್ಪದೇ ಪುರಾಣ ಹೇಳುವಾಗ್ಗೆ ತಾವು ದಯಪಾಲಿಸುವ ಮುಕ್ತಾಫಲಗಳು ಫಲಪ್ರದವಾಗಬೇಕೆಂದು ತಮ್ಮ ಇಚ್ಛೆಯಷ್ಟೇ? (೨) ಹುಬ್ಬಳ್ಳಿಯಲ್ಲಿ ಹಿಂದೊಮ್ಮೆ "ನಾನು ಈ ಕರ್ನಾಟಕ ರಂಗಭೂಮಿಯ ಸೇವೆಗಾಗಿ ಒದ್ದ ಕಂಕಣಬದ್ಧನಾಗಿದ್ದೇನೆ. ದತ್ತಾತ್ರಯ ಮಂಡಳದ ಈ ಉತ್ಪನ್ನವನ್ನು ನಾನು ನನ್ನ ಸ್ವಂತ ಉಪಯೋಗಕ್ಕಾಗಿ ಉಪಯೋಗಿಸುವದಿಲ್ಲ. ಆದ್ದರಿಂದ ಈ ಮಂಡಳವನ್ನು ಕರ್ನಾಟಕದ ಸೇವೆಗಾಗಿ ಶಾಶ್ವತವಾದ ಸಾರ್ವಜನಿಕ ಸಂಸ್ಥೆಯನ್ನಾಗಿ ಮಾಡುವೆನು." ಎಂಬುದಾಗಿ ನಾಟಕಶಾಲೆಯಲ್ಲಿ ಸಾರ್ವಜನಿಕವಾಗಿ ಹೇಳಿದ್ದನ್ನು ಎಷ್ಟರಮಟ್ಟಿಗೆ ಕೃತಿಯಲ್ಲಿ ತಂದಿರುವಿರಿ? (೩) ರಂಗಮಂಡಲದ ಬಗ್ಗೆ ಒಂದೇ ಸಮನೆ ಕನಕರಿಸಿ ಕನಕರಿಸಿ ಕಡೆಗೆ ಧಾರವಾಡದಲ್ಲಿ ಅದನ್ನು ತಾವು ಸ್ಥಾಪಿಸಿಯೂ ಬಿಟ್ಟಿರಿ. ಅದರ ಉದರ ನಿರ್ವಾಹಕ್ಕಾಗಿ ತಾವು ಎಷ್ಟು ಸಹಾಯ ಮಾಡಿರುವಿರಿ? ಈಗ್ಯೆ ಅದರ ಯಾವ ಸ್ಥಿತಿ ಆಗಿದೆ? (೪) ಆ ಸಾವಿರ ರೂಪಾಯಿಗಳನ್ನು ರಂಗಮಂಡಲಕ್ಕೆ ವೆಚ್ಚ ಮಾಡುವದನ್ನು ನಿಶ್ಚಯಿಸಿರುವೆಂದು ಅನೇಕಸಲ ಅನೇಕ ಮಹನೀಯರ ಮುಂದೆ ಹೇಳಿದ್ದ(ನಾಯಿ)ತು. (೫) 'ರಂಗಭೂಮಿ'ಯನ್ನು ಒಳ್ಳೇ ಉತ್ಸಾಹದಿಂದ ಹೊರಡಿಸಿದ್ದೇನೋ ನಿಜ. ಆದರೆ ವೆಚ್ಚದ ಪಸಿಯು ಹತ್ತಿದ ಕೂಡಲೇ ಸಂಬಂಧವನ್ನು ಕಡಿದುಕೊಳ್ಳುವದು ರಂಗಭೂಮಿಯ ಸೇವೆಗಾಗಿಯೋ? ಕನ್ನಡ ನಾಡಿನಲ್ಲಿ ವೃತ್ತ ಪತ್ರಿಕೆಗಳು ಮೊದಲೇ ಹಾನಿಯಲ್ಲಿವೆ. ಇಂತಹ ಪರಿಸ್ಥಿತಿಯಲ್ಲಿ ದತ್ತಾತ್ರಯ ನಾಟಕ ಮಂಡಲದ ಆಶ್ರಯವನ್ನು ಕಿತ್ತಿಸಿಬಿಟ್ಟಿರಲ್ಲ! ಇದು ತಮ್ಮ ಹುಬ್ಬಳ್ಳಿಯ ಮುಕ್ತಾಫಲಗಳಿಗೆ ಒಪ್ಪುವದೋ? (೬) ಸ್ತ್ರೀಯರು ರಂಗಭೂಮಿಯಲ್ಲಿ ಬರತಕ್ಕದ್ದಲ್ಲವೆಂದು ತಾವು ಮೊದಲು ಹೇಳುತ್ತಿದ್ದಿರಲ್ಲವೇ? ಈಗೇಕೆ ಆ ತತ್ವವು ಅಮಾನ್ಯವಾಯಿತು? (೭) ದತ್ತಾತ್ರಯ ಮಂಡಳವು ತೆಗೆದುಕೊಂಡ ಹಣಕ್ಕೆ ಪ್ರಕಾಶನ ಸಾರ ಪ್ರತಿಫಲವನ್ನು ಕೊಡುವದು ನಿಶ್ಚಯವೆಂಬ ದೊಡ್ಡದೊಂದು ತತ್ವವನ್ನು ಮುಂಡಿಸಿ ಬಂದರ್ಥ ಶೃಂಗಾರ ರಸವನ್ನು ನಾಟಕದಲ್ಲಿ ಸೇರಿಸಿದರೂ, ಅದು ಬೀಭತ್ಸವಾಗುವದಿಲ್ಲವೆಂದು ಹೇಳಿ. ಬೀಭತ್ಸಮಯವಾದ ಕೃಷ್ಣಲೀಲೆಯಂತಹ ನಾಟಕವನ್ನಾಡುತ್ತಿರುವಿರಲ್ಲ! ಇನ್ನು ತಮ್ಮ ಈ ದೊಡ್ಡ ತತ್ವವನ್ನು ಸೂಳೆಯರು ಸಹ ಜನರ ಮುಂದೆ ಮಂಡಿಸಲಿಕ್ಕೆ ಬಾರದೇ? ಅಂದಮೇಲೆ ತಾವು ಅಂತಹ ತತ್ವಕ್ಕೆ ಆಶ್ರಯ ಕೊಡುವದೇಕೆ? (೮) ಕೌಶಿಕನಿಗೆ ಉತ್ತರ ಕೊಡುವಾಗ ಸುಶಿಕ್ಷಿತರು ಬರಲಿ ದತ್ತಾತ್ರಯ ಮಂಡಳವನ್ನು ಒಪ್ಪಿಸಲು ಸಿದ್ಧನಿರುವೆನೆಂದು ಹೇಳಿದಿರಲ್ಲವೆ? ಅದು ಹುಬ್ಬಳ್ಳಿ ಧಾರವಾಡಗಳ ಮುಕ್ತಾಫಲಗಳಂತಾಗಿರದಿದ್ದರೆ, ಬನ್ನಿ; ನಿಮ್ಮ ಕರಾರುಗಳಾವವೆ ತಿಳಿಸಿರಿ. ಅವೇನು ಸಜ್ಜನರು ಮಾನ್ಯವಾದ ಕರಾರುಗಳೋ ಅಥವಾ ವ್ಯವಹಾರದೃಷ್ಟಿಯಿಂದ ತಲೆಯಮೇಲೆ ದೊಡ್ಡ ಬಂಡೆಗಲ್ಲನ್ನು ಹೇರುವ ಕರಾರುಗಳೊ ತಿಳಿಯಲಿ! ಸುಶಿಕ್ಷಿತರ ಗುಂಪನ್ನು ತಿರುವಿಕೊಂಡುಬರುವ ಜವಾಬ್ದಾರಿಯನ್ನು ಹೊರುವ ಹೊಣೆಗಾರನ ಹೆಸರು ಇದೇ ಸಂಚಿಕೆಯಲ್ಲಿ ನಿಮಗೆ ದೊರೆಕಿದೆ

ಪತ್ರವ್ಯವಹಾರ.

ಗರುಡರಿಗೊಂದು ಮಾತು.

ಅಯ್ಯಾ ಗರುಡರೇ! ಕೌಶಿಕನು ಕಂಡದ್ದು ಕಾಣಿಸಿದಂತೆಯೇ ನುಡಿದನೆಂದು ಅವನ ಮೇಲೆ ನೀವು ರೆಕ್ಕೆದುಡಾಡಿಸಿ ನೆಗೆದಿರುವಿರಾ? ಕೌಶಿಕನೊಡನೆ ಕಾಳಗವಿದ್ದು, ನಮಗೇನು ಸಮಂಜಸವೆನಿಸುವದಿಲ್ಲ. ಇರಲಿ.

ನೀವು ನುಡಿದಂತೆ ನಡೆಯಲು ಪ್ರಯತ್ನ ಮಾಡುವವರೂ ಮಾಡುತ್ತಿರುವವರೂ ಎಂದು ಕೂಗಿಕೊಂಡಿರುವಿರಿ. ಅದರಂತೆ ನಡೆಯುವುದೇ ನಿಶ್ಚಯವಿದ್ದರೆ, ಕೆಳಗಿನ ಎರಡು ಮಾತುಗಳಿಗೆ 'ಕನ್ನಡಿಗ'ನ ಪರವಾಗಿ ಉತ್ತರ ಬರೆಯಿರಿ.

(೧) ನೀವು ಬರೆದಂತೆ ಶ್ರೀ ದ. ಪ್ರ. ನಾಟಕ ಮಂಡಳಿಯನ್ನು ಕೌಶಿಕನಿಗೇಕೆ ನಮಗೇ ಒಂದೆರಡು ವರ್ಷ ಕೊಡಿಸಿದರೆ — ಕೃತಿಯಿಂದಲೇ ವಿಜೃಂಭಿಸುವಂತೆ ಮಾಡಿ, ಗರುಡರು ಈಗ ಹೊತ್ತಿರುವ [?] ಮೊಟ್ಟೆಯನ್ನು ಹಗುರಾಗಿ ಮಾಡಬಹುದು

(೨) ನಿಮ್ಮ ದತ್ತಾತ್ರಯ ನಾಟಕ ಸಂಘವನ್ನು ಇಂದೇ ಸ್ವೀಕರಿಸಲು ಸಿದ್ಧವಿದ್ದೇವೆ. ಕಲಾಸೇವೆಯ ಧ್ಯೇಯವನ್ನಿಟ್ಟುಕೊಂಡವರೂ ನೀತಿವಂತರೂ ಪದವೀಧರರೂ ಉಳ್ಳ ಯುವಕರ ಗುಂಪು ಈಗಲೇ ಸಿದ್ಧವಿದೆ. ನೀವು ಸುಶಿಕ್ಷಿತರು ಬೇಕೆಂದು ಬರೆದಿರುವಿರಿ; ಆದರೆ, ಸುಶಿಕ್ಷಿತರೆಂದರೆ ಯಾರು ಬರೆವಿರಾ?

ಒರೇ ನಿಮ್ಮ ವಿಭಾಗಾಶಂಬಂವು ನಮಗೆ ಬೇಡ ನಿಮ್ಮ ದತ್ತಾತ್ರಯ ಸಂಘವನ್ನು ಒಪ್ಪಿಸುವ ಕಟ್ಟಳೆ[ಶರ್ತು]ಗಳನ್ನೂ ಶ್ರೀ ದ. ಪ್ರ ನಾಟಕ ಮಂಡಳಿಯವರ ನಿಯಮಗಳನ್ನೂ 'ಕನ್ನಡಿಗ'ನ ಮುಖದಿಂದ ಹೊರಕೊಡಿಸಿರಿ

ನಿಮ್ಮಂತೆ ನಾವು ಬಂಬ ಭೇರಿಗಳ ಗರ್ಜನೆಯಿಂದ ದೇಶಸೇವೆ, ಭಾಷಾಸೇವೆ ಮಾಡಲು ಹೋದವರಿಲ್ಲದಿದ್ದರೂ ಅಳಿಲು ಭಕ್ತಿಯಿಂದ ಮಾಡುತ್ತಿರುವೆವು. ಮುಂದಾದರೂ ಮಾಡುವ ಪ್ರೇರಣೆಯನ್ನು ದೇವರು ಸದಾ ಹೆಚ್ಚಿಸುತ್ತಲೂ ಕಾರ್ಯಗಳನ್ನು ಕೈಗೂಡಿಸುತ್ತಲೂ ಹೋಗಲೆಂದು ಅನನ್ಯ ಭಾವನೆಯಿಂದ ಪ್ರಾರ್ಥಿಸುತ್ತಿರುವೆವು. ಅಯ್ಯಾ ಗರುಡರೇ, ನಾನಂತೂ ಪರಿಷ್ಕಾರವಾಗಿ ನನ್ನ ಹೆಸರನ್ನು ಕೊಟ್ಟಿರುವೆನು. ಇನ್ನಾದರೂ ಅಸ್ವಾಧಿಕರು ಏನು ಹೇಳುವರು ?

— ಎಚ್ ಪಟೇಲರು

ಸೂಚನೆ.

ಇನ್ನು ಮೇಲೆ "ಕನ್ನಡಿಗ"ನಿಗಾಗಿ ಕಳುಹಿಸಿದ ಬರಹಗಳಲ್ಲಿ ಪ್ರಕಟವಾಗದೇ ಇರುವ ಬರಹಗಳನ್ನು ತಿರುಗಿ ಪಡೆಯುವ ಇಚ್ಛೆಯಿದ್ದರೆ, ಅಂಚೆಚೀಟು ಕಳುಹಿಸಿ ಪಡೆದುಕೊಳ್ಳಬಹುದು. 'ಕನ್ನಡಿಗ'ನಿಂದ ಉತ್ತರವನ್ನು ಬಯಸುವವರು ಅಂಚೆಚೀಟು ಇಡತಕ್ಕದ್ದು; ಇಲ್ಲವಾದರೆ ಉತ್ತರವು ದೊರೆಯದು. ವ್ಯವಸ್ಥಾಪಕ.

ಲೇಖಕರಿಗೆ "ರಂಗಭೂಮಿ"ಯ ಸಂಪಾದಕರಿಂದ ಬಂದ ಉತ್ತರವು ಮುಂದಿನ ವಾರದಲ್ಲಿ ಪ್ರಕಟಿಸಲ್ಪಡುವದು





1 For chevrolet new Cars & Trucks on hire purchage system
2 For quick Economical and satisfactory service, please go for the wellkno Chevrolet cars, Trucks products in the Deccan
3 For all spare parts of the Various cars specially Chevrolet, Ford, Dodge and Overlanc cars,
4 For the cheapness in tyre tubes of all manufactares,
5 For all kinds of Lubricating oils Grease etc,
6 For undertaking all kinds of tyre tube repairs in Vulcansing by a specialist to give satisfactory work,
7 For Building motor bodies of various types by workers onin uptodate line.
8 For all kinds of motor repairs.
9 For second hand otot Cars and lossies at cheap rates.

Apply to:-

Messrs Royal motor service
Automobile Engineers
Bagalkot.

Sub dealers
Chevrolet car
for the Bijapur Dist,

ಅಲಭ್ಯಲಾಭವು

(೧) ಶೆವ್ರೊಲೆಟ್ ಹೊಸಗಾಡಿಗಳನ್ನು ಮತ್ತು ಟ್ರಕ್ಸಗಳನ್ನು ಬಾಡಿಗೆಯಿಂದಾಗಲೀ ಮಾರಲಿಕ್ಕಾಗಲಿ ತೆಗೆದುಕೊಳ್ಳುವದಿದ್ದರೆ ಕೆಳಗಿನ ವಿಳಾಸಕ್ಕೆ ಬರೆಯಿರಿ.
(೨) ವೇಗವಾಗಿ, ನಿಯಮಿತವಾಗಿ, ಮತ್ತು ಚನ್ನಾಗಿ ನಡೆಯುವಂಥ ಶೆವ್ರೊಲೆಟ್ ಗಾಡಿಗಳೂ, ಟ್ರಕ್ಸಗಳೂ ದಕ್ಷಿಣಪ್ರಾಂತದಲ್ಲಿ ಬಹು ಪ್ರಸಿದ್ಧಿಯಾಗಿವೆ
(೩) ಶೆವ್ರಲೆಟ್, ಫೋರ್ಡ್, ಡಾಜ,ಮತ್ತು ಒವ್ಹರಲಂಡ. ಎಲ್ಲತರಗಳ ಬೇರೆ ಬೇರೆ ಭಾಗಗಳು ನಮ್ಮದೊರೆಯುತ್ತವೆ
(೪) ಎಲ್ಲತರದ ಕಂಪನಿಗಳಿಂದ ವಿಶೇಷತಃ ರಿಜೇಲಿನ್ ಕಂಪನಿಯಿಂದ ಟ್ಯೂಬ್ ಮತ್ತು ಟಾಯರುಗಳು ಸುಲಭ ಕ್ರಯಕ್ಕೆ ದೊರೆಯುತ್ತವೆ.
(೫) ಮೋಟಾರ ಬಂಡಿಗಳಿಗೆ ಉಪಯೋಗಿಸುವಂಥ ಎಲ್ಲ ತರದ ಎಣ್ಣೆಯು ಸಿಗುವದು.
ಟ್ಯೂಬ್ ಮತ್ತು ಟಾಯರುಗಳನ್ನು ದುರಸ್ತಿಯನ್ನು (ವಲ್ಕನಾಯಜಿಂಗ) ಆ ಕೆಲಸದಲ್ಲಿ ನಿಷ್ಣಾತರಾದವರಿಂದ ಮಾಡಿಸಿ
(೬) ಯೋಗ್ಯ ವೇಳ್ಯಗೆ ಕೊಡುವೆವು
(೭) ನಾನಾತರದ ಬಂಡಿಗಳ ಭಾಗ ಗಳನ್ನು ಉತ್ತಮ ರೀತಿ ರಿಪೇರಿ ಮಾಡುವವರಿಂದ ಮಾಡಿಸಿ ಕೊಡುತ್ತೇವೆ.
(೮) ಎಲ್ಲ ಬಗೆಯ ಮೋಟಾರುಗಳ ದುರಸ್ತಿ ಕೆಲಸವು ಮಾಡಲ್ಪಡುವದು
(೯) ಹೊಸ ಮತ್ತು ಸೆಕಂಡ ಹ್ಯಾಂಡ ಮೋಟಾರಗಳೂ ಲಾರಿಗಳೂ ಬೇಕಾದ ವೇಳೆಗೆ ಯೋಗ್ಯ ದರದಿಂದ ಮಾರಾಟಕ್ಕೆ ದೊರೆಯುತ್ತವೆ.

ವಿಳಾಸ:—

ವಿಜಾಪೂರ ಜಿಲ್ಲೆಯಲ್ಲಿ ಶವರೋಲೆಟ್ಟ ಮೋಟಾರಗಳಿಗೆ ಸಬ್ ಏಜಂಟರು
ಮೆಸರ್ಸ ಧಿ. ರಾಯಲ್ ಮೋಟಾರ ಸರ್ವ್ಹಿಸ ಬಾಗಲಕೋಟೆ.

ಉತ್ತರ ಹಿಂದುಸ್ಥಾನದಲ್ಲಿಯ ಪುಣ್ಯಕ್ಷೇತ್ರಗಳ ಪರಿಚಯ.

(ಲೇಖಾಂಕ ೧೪)

ಶ್ರೀಕ್ಷೇತ್ರ ಗಯಾದಿಂದ ನಾವು ಕಾಶಿಗೆ ಪುನಃ ಬಂದೆವು. ದಾರಿಯಲ್ಲಿ ಡೆಹ್ರಿ ಎಂಬ ಸ್ಟೇಶನ್ನಿದೆ. ಇಲ್ಲಿ ಸೋನೀ ನದಿಯಿದ್ದು, ಇದರ ಪೂಲು ೩ ಮೈಲು ಅಗಲವಾಗಿದೆ. ಹಿಂದುಸ್ಥಾನದಲ್ಲಿ ಇದಕ್ಕೂ ಹೆಚ್ಚು ಅಗಲವಾಗಿದ್ದ ರೇಲ್ವೆ ಪೂಲಿಲ್ಲವೇ ಇಲ್ಲ. ಈ ನದಿಯಲ್ಲಿ ನೀರು ಯಾವಾಗಲೂ ಹರಿಯುವುದಿಲ್ಲ. ಮಳೆಗಾಲದಲ್ಲಿ ಹಳ್ಳಗಳಂತೆ ಒಂದು ಕ್ಷಣದಲ್ಲಿ ನೀರು ಏರುತ್ತೇರುತ್ತ ಬಂದೆ ಇಳಿಯುತ್ತ ಪರು, ನದಿಯು ಆಳವಾಗಿಲ್ಲ. ಅಗಲಳತೆಯೇ ಹೆಚ್ಚಾಗಿದೆ. ಅಲ್ಲಿಂದ ಅಯೋಧ್ಯೆಗೆ ಹೋದೆವು. ಕಾಶಿಯಿಂದ ಅಯೋಧ್ಯೆಯು ೧೨೪ ಮೈಲಿದೆ. "ಡೆಹರಾಡೂನ ಎಕ್ಸ್‌ಪ್ರೆಸ್" ಎಂಬುದು ಕಲಕತ್ತೆಯಿಂದ ಹೊರಟು ಗಯಾ, ಕಾಶಿ, ಅಯೋಧ್ಯೆ, ಹರಿದ್ವಾರಗಳ ಮೇಲೆ ಹಾಯ್ದು ಡೆಹರಾಡೂನಿಗೆ ಹೋಗುವದು. ಇದರಲ್ಲಿ ಪ್ರಯಾಣಮಾಡಿದರೆ, ನಡುವೆ ಎಲ್ಲಿಯೂ ಇಳಿಯುವ ಕಾರಣವಿಲ್ಲ. ಮತ್ತೂ ಎಲ್ಲ ಸ್ಟೇಶನ್ನುಗಳಲ್ಲಿಯೂ ಇದು ನಿಲ್ಲುವದಿಲ್ಲವಾದ್ದರಿಂದ, ಹರಿದ್ವಾರಕ್ಕೆ ಬೇಗನೇ ತಲ್ಪುವದು.

ಅಯೋಧ್ಯೆಯು ದೊಡ್ಡ ಪಟ್ಟಣವಾಗಿದೆ. ಬೀದಿಗಳೂ ಸಣ್ಣ ಸಂದಿಗಳೂ ಬಹು ಸ್ವಚ್ಛವಾಗಿವೆ. ವಿಶಾಲವಾದ ಬೀದಿಗಳು ಕಡಿಮೆ. ಸಂದಿಗಳೇ ಹೆಚ್ಚು. ಗಯಾ ಕಾಶಿಗಳಲ್ಲಿದ್ದಂತೆ ಇಲ್ಲಿ ಹೊಲಸು ಎಲ್ಲ ಕಡೆಗೂ ಇಲ್ಲದ್ದನ್ನು ಕಂಡು ಆನಂದವಾಯಿತು.

ಅಯೋಧ್ಯೆಯ ಸ್ಟೇಶನ್ನಿನಲ್ಲಿಳಿದ ಕೂಡಲೇ ಇಲ್ಲಿಯ ಜನರಿಗೆ ಶ್ರೀರಾಮನಲ್ಲಿದ್ದ ಭಕ್ತಿಯ ಭಾವವು ಗೋಚರವಾಗಹತ್ತಿತು. ಹಮಾಲನ ಹೆಸರು ರಾಮಚಂದ್ರ. ಗಾಡಿಯವನ ಹೆಸರು ದಾಶರಥಿ. ಉಪಾಧ್ಯಾಯರ ಹೆಸರು ರಘುರಾಮ. ಇನ್ನೊಬ್ಬನ ಹೆಸರು ಕಾಳೀರಾಮ. ಮತ್ತೊಬ್ಬನ ಹೆಸರು ರಾಮಪ್ರಸಾದ. ಹೀಗೆ ಯಾರ ಹೆಸರು ನೋಡಿದರೂ ಶ್ರೀರಾಮನ ಹೆಸರಿನವೇ. ಶ್ರೀರಾಮಚಂದ್ರನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ಹೀಗೆ ಅವನನ್ನು ಜನರೆಲ್ಲ ಸ್ಮರಿಸುತ್ತಿರುವುದು ನಮಗೆ ಆನಂದವನ್ನುಂಟುಮಾಡಿತು. ಅಯೋಧ್ಯೆಯಲ್ಲಿ ಶ್ರೀರಾಮನ ೫ ಸಾವಿರ ಗುಡಿಗಳಿವೆಯೆಂದು ಜನರು ಹೇಳುವರು. ಇವಲ್ಲದೇ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಶ್ರೀರಾಮ ಸೀತಾ, ಲಕ್ಷ್ಮಣ, ಹನುಮರ ಮೂರ್ತಿಗಳನ್ನು ಸ್ಥಾಪಿಸಿಯೇ ಇದ್ದಾರೆ. ಎಲ್ಲ ಗುಡಿಗಳಲ್ಲಿಯೂ ಮನೆಗಳಲ್ಲಿಯೂ ಶ್ರೀರಾಮನ ಭಜನೆ ಕೀರ್ತನೆಗಳು ನಡದೇ ಇರುತ್ತವೆ. ಅಲ್ಲಿ ಲಕ್ಷ್ಮೀ ವೆಂಕಟೇಶ ನಾರಾಯಣ. ಕೃಷ್ಣ ಮೊದಲಾದ "ಪ್ರಸನ್ನ"ಗಳಿಲ್ಲ. ಶ್ರೀರಾಮ "ಪ್ರಸನ್ನ"ವೇ ಎಲ್ಲ ಕಡೆಗೂ ಇದೆ.

ಊರಲ್ಲಿ ಶ್ರೀರಾಮನ ಸಂಸ್ಮರಣೆಯ ಸ್ಥಾನಗಳೆಲ್ಲ ಚನ್ನಾಗಿ ದಕ್ಷತೆಯಿಂದಲೂ, ನೀಟಾಗಿಯೂ ಕಾದಿಡಲ್ಪಟ್ಟಿವೆ. ಶ್ರೀರಾಮನ ಜನ್ಮಸ್ಥಾನ ಅಂದರೆ (ಜನ್ಮವಾದ ಅರಮನೆಯಿದ್ದ ಸ್ಥಾನ.) ಜನ್ಮಭೂಮಿ (ಅಂದರೆ ಜನ್ಮವಾದ ಕೋಣೆಯ ಭಾಗ.) ಸೀತಾಪಾಕ, ಕೋಪಭವನ, ರತ್ನಸಿಂಹಾಸನ, ಯಜ್ಞಶಾಲೆ, ಭರತನು ತಂದಿಟ್ಟ ರಾಮಪಾದುಕಾಸ್ಥಾನ, ಭರತನಿವಾಸ, ಲಕ್ಷ್ಮಣನಿವಾಸ, ಹನುಮಾನನಿವಾಸ, ಇವೇ ಮೊದಲಾದ ಎಲ್ಲ ಸ್ಥಾನಗಳಿವೆ. ಸೀತಾಪಾಕವೆಂದರೆ ಸೀತಾದೇವಿಯು ಸ್ವತಃ ಅಡಿಗೆ ಮಾಡುತ್ತಿದ್ದ ಸ್ಥಾನವಂತೆ. ಆದರೆ ಸೀತಾಮಾತೆಗೆ ಸ್ವತಃ ಅಡಿಗೆ ಮಾಡುವ ಪ್ರಸಂಗವೇಕೆ ಬಂತೋ ತಿಳಿಯದು. ಕೋಪಭವನವೆಂದರೆ ಕೈಕೆಯಿಯು ಶ್ರೀರಾಮನನ್ನು ಅಡವಿಗೆ ಅಟ್ಟುವದಕ್ಕಾಗಿ ಕೋಪಾವಿಷ್ಟಳಾಗಿ ಮಲಗಿದ್ದ ಸ್ಥಾನ. ರತ್ನಸಿಂಹಾಸನವೆಂದರೆ, ರಾಮಚಂದ್ರನು ಪಟ್ಟವನ್ನೇರಿದ ಸ್ಥಾನ. ಯಜ್ಞಶಾಲೆಯಲ್ಲಿ ದಶರಥನು ಯಜ್ಞಮಾಡಿ ಪುತ್ರಪ್ರಾಪ್ತಿಯ ವರವನ್ನು ಪಡೆದನು. ಇವುಗಳ ಹೊರತಾಗಿ ದಶರಥನ, ಅವನ ರಾಣಿಯರ ಎಲ್ಲ ಮಕ್ಕಳ ಹಾಗೂ ಮಂತ್ರಿಯರ ಸ್ಥಾನಗಳೂ ಇವೆ. ಈ ಸ್ಥಾನಗಳಲ್ಲಿದ್ದ ಕಟ್ಟಡಗಳು ಭವ್ಯವಾಗಿದ್ದು, ಅವೆಲ್ಲ ಈಗಿನ ಕಾಲವವು. ಹಿಂದುಸ್ಥಾನದಲ್ಲಿಯ ರಾಜರು ಅವನ್ನು ಆ ಆ ಸ್ಥಳಗಳಲ್ಲಿ ನಿರ್ಮಿಸಿರುವರಂತೆ. ಅಲ್ಲೆಲ್ಲ ದಿನಾಲು ಪೂಜೆ ನಡೆಯುತ್ತಲಿದೆ. ಎಲ್ಲ ಕಡೆಗೂ ಸನ್ಯಾಸಿಗಳೇ ಹೆಚ್ಚಾಗಿ ಪೂಜೆಯ ಭಾರವನ್ನು ಹೊತ್ತಿದ್ದಾರೆ. ಈ ಸ್ಥಾನಗಳಲ್ಲಿ ಒಂದೊಂದೇ ದುಡ್ಡನ್ನು ಪೆಟ್ಟಿಯಲ್ಲಿ ಹಾಕಿದರೂ ೨ ರೂ, ಗಳ ಚಿಲ್ಲರು ಸಾಲದು. ಇಲ್ಲಿ ಮಂಗಗಳು ವಿಪುಲವಾಗಿವೆ. ಗುಡಿಗಳ ಹೊರಭಾಗದಲ್ಲಿ ಅವು ಯಾತ್ರಿಕರು ಬಂದೊಡನೆ ಸುತ್ತುಗಟ್ಟುವವು. ಅಲ್ಲಿಯೆ ಮಾರಲಿಕ್ಕಿಟ್ಟ ಸೆನೆಗಡ್ಲೆಯನ್ನು ಕೊಂಡು, ಅವಕ್ಕೆ ಹಾಕದಿದ್ದರೆ, ಅವು ಯಾತ್ರಿಕರನ್ನು ಬಿಡವು. ಕೈಯಲ್ಲಿ ಕೊಬ್ಬರಿ ಹಣ್ಣುಗಳಿದ್ದರೆ ಅವನ್ನು ಕಸಿದುಕೊಳ್ಳುವವು. ಅಂತೂ ರಾಮನ ರಾಜ್ಯದಲ್ಲಿ ಹನುಮಂತನ ಜಲ್ಮಾಟವಿರದಿದ್ದರೆ ಹೇಗೆಂದು ತಿಳಿದು ಯಾತ್ರಿಕರು ನಗುತ್ತ ಸಾಗುವರು. ಈ ಶ್ರೀರಾಮನ ಜನ್ಮ ಹಾಗೂ ಕ್ರೀಡಾಸ್ಥಾನಗಳನ್ನು ಸಂದರ್ಶಿಸುತ್ತಿರುವಾಗ್ಗೆ, ಆಗಿನ ಕಾಲದ ವೈಭವ, ಶ್ರೀರಾಮನ ಪಾದಧೂಳಿಯಿಂದ ಪುನೀತವಾದ ಆ ಸ್ಥಾನಗಳ ಮಹಾತ್ಮ್ಯ, ರಾಮಾಯಣದಲ್ಲಿ ವರ್ಣಿತವಾದ ಶ್ರೀರಾಮನ ರಾಜ್ಯವಿಯೋಗ, ರಾಜ್ಯಾರೋಹಣ ಸಮಯಗಳು ನನ್ನ ಮನದಲ್ಲಿ ಮೂಡಿದಂತಾಗಿ, ಆನಂದಾಶ್ರುಗಳುದುರಿದವು. ಮೈಯಲ್ಲಿ ರೋಮಾಂಚಗಳುದ್ಭವವಾದವು. ಇದರಿಂದ ಈ ಸ್ಥಾನಮಹಾತ್ಮ್ಯೆಯು ಎಂತಹದೆಂಬುದು ವಾಚಕರಿಗೆ ತಿಳಿಯದೇ ಇರದು.

ಆದರೆ ಈ ನನ್ನ ಆನಂದದ ಭರದ ಕೊನೆಯು ಕ್ಷಿಪ್ರದಲ್ಲಿಯೇ ಮುಂದಕ್ಕೆ ಸಾಗಿದಾಗ್ಗೆ ಬರುವುದೆಂದು ನನಗೆ ತಿಳಿದಿರಲಿಲ್ಲ. ಮೇಲೆ ನಿರ್ದಿಷ್ಟವಾದ ಶ್ರೀರಾಮ ಜನ್ಮಭೂಮಿಗೆ ಹೋದಕೂಡಲೆ ಅಲ್ಲಿ ನಾನು ಹಿಂದಕ್ಕೆ ಉಲ್ಲೇಖಿಸಿದ ಔರಂಗಜೇಬನ ಹಿಂದುಧರ್ಮನಾಶಕವಾದ ಕೃತಿಯು ತಿಳಿದುಬಂದಿತು. ಶ್ರೀ ಕ್ಷೇತ್ರ ಅಯೋಧ್ಯೆಯಲ್ಲಿ ಶ್ರೀರಾಮ ಜನ್ಮಸ್ಥಾನವೇ ಶ್ರೇಷ್ಠತಮವಾದ ಹಿಂದೂ ಜನರ ಪೂಜೆಯ ಸ್ಥಾನವೆಂಬುದನ್ನರಿತು, ಅಲ್ಲಿದ್ದ ಅರಮನೆಯನ್ನು ನೆಲಸಮಮಾಡಿ ಅಲ್ಲಿಯೇ ಮಶೀದೆಯನ್ನು ಕಟ್ಟಿಸಿದನು; ಮತ್ತೂ ಅಯೋಧ್ಯೆಗೆ ತನ್ನ ಜಯಸೂಚಕವಾಗಿ, ಫತ್ತೇಪೂರ ಎಂಬ ಹೆಸರನ್ನಿಟ್ಟಿದ್ದಾನೆ. (ಆದರೆ ಈ ಹೆಸರು ಪ್ರಚಾರದಲ್ಲಿ ಬರಲಿಲ್ಲ. ಅಯೋಧ್ಯೆಯ ಸಮೀಪದಲ್ಲಿ ಫತ್ತೇಪೂರೆಂಬ ಬೇರೆ ಶಹರವು ಉತ್ಪನ್ನವಾಯಿತು.) ಅಂದಿನಿಂದ ಈಗಿನ ವರೆಗೂ ಈ ಶ್ರೀರಾಮ ಜನ್ಮಸ್ಥಾನದ ಬಗ್ಗೆ ಹಿಂದೂ-ಮುಸಲ್ಮಾನರಲ್ಲಿ ಕಲಹವು ಸಾಗಿಯೇ ಇದೆ. ಬೈರಾಗಿಗಳೇ ಹಿಂದೂ ಜನರ ಪತಿಯಿಂದ ಹೆಚ್ಚಾಗಿ ಕಾದಿ, ಅಲ್ಲಿ ಅನೇಕರು ಪ್ರಾಣವನ್ನು ಸಹ ಕೊಟ್ಟರಂತೆ. ಆದ್ದರಿಂದ ಈ ಮಶೀದೆಯ ಒಳಗೇ ಒಂದು ಸ್ಥಾನವು ಪೂಜೆಗಾಗಿ ಹಿಂದೂ ಜನರಿಗೆ ದೊರೆತಿದ್ದು, ಅಲ್ಲಿ ವಾದ್ಯಗಳೂ ಪೂಜೆ ಮಂತ್ರಗಳೂ ನಡೆಯುವವು. ಬೈರಾಗಿಗಳು ಈ ಸ್ಥಾನವನ್ನೂ ಅಲ್ಲಿಯ ಮೂರ್ತಿಗಳನ್ನೂ ಯಾವಾಗಲೂ ಹಗಲು-ರಾತ್ರಿಯನ್ನದೆ, ಕಾಯ್ದುಕೊಂಡೇ ಇರುವರು. ಈ ಮೂರ್ತಿಗಳನ್ನು ಕಿತ್ತಿಹಾಕಬೇಕೆಂದು ಮುಸಲ್ಮಾನರೂ ಮಶೀ

ಹಡೆದಾಗ್ಗೆ ಬೇರೆ ಮನೆಗೆ ಗರ್ಭಿಣಿಯನ್ನು ತೆಗೆದುಕೊಂಡು ಹೋಗಿ ಪೋಲಿಸರ ಕಾವಲನ್ನು ಬಹು ದಕ್ಷತೆಯಿಂದಿಟ್ಟರು. ಓರ್ವ ಚತುರೆಯಾದ ದಾಯಿಯನ್ನು ಕಾಯಲಿಟ್ಟರು. ಊರಜನರೂ ಸಹಾಯಕ್ಕೆ ಬಂದರು. ಮನೆಯ ಸುತ್ತಲೆಲ್ಲ ಪೋಲೀಸರ ಪಹರೆಯು ಹಗಲು ರಾತ್ರಿ ಕೂಡಿಯೇ ನಡೆಯಿತು. ಆದರೂ ೪ನೇ ದಿನ ರಾತ್ರಿ ಮುಂಚಿನಂತೆಯೇ ಕೂಸು ಮಾಯವಾಯಿತು! ಇದು ಭೂತಚೇಷ್ಟೆಯೆಂದು ಜನರು ನಿರ್ಣಯಿಸಿದ್ದರಿಂದ ಈಗ್ಗೆ ಪೋಲಿಸರ ಕಾವಲಿನ ಬದಲು ಮಂತ್ರಿಕರಿಂದ ಆ ಸ್ತ್ರೀಯು ರಕ್ಷಿಸಲ್ಪಡುತ್ತಿರುವಳು. ಇನ್ನು ೪ನೇ ಸಲ ಗರ್ಭಿಣಿಯಾದರೆ ಏನಾಗುವದೋ ನೋಡಬೇಕು.

ಪರದೇಶ.

ದಕ್ಷಿಣ ಆಫ್ರಿಕೆಯ ಹಿಂದೀಯರ ಆಕಾಂಕ್ಷೆಗಳಿಗೆ ಜಯಬರುವದಾಗಿ ತೋರುತ್ತದೆ. ಈ ಬಗ್ಗೆ ಅಲ್ಲಿಯವರು ಒಂದು ದುಂಡುಮೇಜಿನ ಪರಿಷತ್ತನ್ನು (Round Table Conference) ಕರೆದಿದ್ದು, ಅದಕ್ಕೆ ಪ್ರತಿನಿಧಿಗಳಾಗಿ ಹಿಂದುಸ್ಥಾನದಿಂದ ನಾಮದಾರ ಶ್ರೀನಿವಾಸ ಶಾಸ್ತ್ರಿ, ನಾಮದಾರ ಸೆಟ್ಟಿ ಹಾಗೂ ಸರ ಲಿಂಡ ಸೇಯವರು ಹೋಗಿದ್ದಾರೆ.

ಡೇಲಿ ಕ್ರಾನಿಕಲ್ ' ಎಂಬ ಪತ್ರಿಕೆಯು ಕಂಪನಿಯ ಬೇರವನ್ನು ರಾಗಲು ಲಾರ್ಡ ರೀಡಿಂಗರು ಒಪ್ಪಿದ್ದಾರೆ.

ಹಿಂದುಸ್ಥಾನದ ಕಾಯದೇ ಮಂಡಲಗಳಿಗೆ ಸ್ತ್ರೀಯರನ್ನು ಸರಕಾರ-ನಿಯುಕ್ತ ಸದಸ್ಯರನ್ನಾಗಿ ನಾಮಕಿಸುವದಿಲ್ಲವೋ? ಎಂಬದಾಗಿ ಪಾರ್ಲಮೆಂಟಿನಲ್ಲಿ ಕುಮಾರಿ ರಾತಿಬ್ಬರು ಪ್ರಶ್ನೆ ಕೇಳಿದರು. ಹಿಂದುಸ್ಥಾನದ ಕಡೆಯ ವಾಯಿಸರಾಯರೂ, ಗವರ್ನರರೂ ಈ ಬಗ್ಗೆ ವಿಚಾರಿಸಲು ಅವರು ಈ ಬಗ್ಗೆ ನಮಗೇನೂ ಗೊತ್ತಿಲ್ಲವೆಂದು ಸರಕಾರದಿಂದ ಉತ್ತರ ಬಂದಿತು.

ಜರ್ಮನಿಯ ಕೈಸರರು ಬೇನೆಯಿಂದ ಹಾಸಿಗೆ ಹಿಡಿದಿದ್ದಾರೆ.

ಚಾಪರಸರ ಸಂಗಡ ಆರೆಸರನಿಯಲ್ಲಿ ಉಪಕಾರದ ಸಂತೋಷ ಕೂಟವನ್ನು ತೀರಿಸಿಕೊಂಡು ರವೀಂದ್ರರು ಕಾನಸ್ಟಂಟಿನೋಪಲ್ಲಿಗೆ ತೆರಳಿದರು.

ಬೇಕಾಗಿದ್ದಾರೆ.

ಡಿಸ್ಟ್ರಿಕ್ಟ ರೆಡ್ ಕ್ರಾಸ್ ಕಮೀಟಿ ವಿಜಾಪೂರ ಇವರಲ್ಲಿ ಪಾಸಾದ ಓರ್ವ ದಾದಿಯವರು (Mid-wife) ಮತ್ತೂ ಓರ್ವ ಆರೋಗ್ಯ ಪ್ರಚಾರಕರು (Health Visitor) ಬೇಕಾಗಿದ್ದಾರೆ. ಅವರಿಗೆ ರು|| ೪೧ ದರ ತಿಂಗಳಿಗೆ ಕೊಡಲ್ಪಡುವದು. ಮತ್ತು ರು|| ೧೦ ಅಲಾವನ್ಸ ಬೇರೆ ದೊರೆಯುವದು. ಪರೀಕ್ಷೆ ಪಾಸಾದವರು ಮಾತ್ರ ಈ ಜಾಗೇಕ್ಕೆ ಅರ್ಜಿ ಮಾಡಬೇಕು. ಕನ್ನಡ ಭಾಷೆಯ ಜ್ಞಾನವಿದ್ದವರು ಮೊದಲು ಆರಿಸಲ್ಪಡುವರು.

(ಸಹಿ) ಪ್ಲಿ. ಎಚ್. ನಾಯಿಕ್.
ಕಲೆಕ್ಟರ ಮತ್ತು ಪ್ರೆಸಿಡೆಂಟ ಡಿಸ್ಟ್ರಿಕ್ಟ ರೆಡ್ ಕ್ರಾಸ ಕಮಿಟಿ ವಿಜಾಪುರ

ಅಸ್ಸಲ, ಗ್ಯಾರಂಟೀಡ, ಸ್ವಿಸ್ ಮೇಕ ಗೋಲ್ಡ ಗಿಲ್ಟ

ರಿಸ್ಟವಾಚ



ಬೆಲೆ ೭-೮-೦ ಪಟ್ಟಿ ಸಹಿತ; ಟ. ಖ. ಪುಕ್ಕಟ

ಟಿಪ್ಪಣೀ— ಗಡಿಯಾಳವನ್ನು ಕಳಿಸುವಾಗ್ಗೆ ಕಾಳಜಿಯಿಂದ ತಪಾಸಿಸಿ ಮತ್ತು ಟಾಯಿಮ ನಗ್ಗೆರೆ ಹಚ್ಚಿ ಕಳಿಸುವೆವು

ಲಿಬೋ ವಾಚ ಕಂ. (India) ಮುಂಬೈ ನಂ. ೪

ಮವೆ ನಾವು ಆರಿಸತಕ್ಕಂತಹ ನಾಟಕಗಳು ಸತ್ಯ, ಅಹಿಂಸೆ, ಸಾಮಿನಿಷ್ಠೆ, ಪತಿಭಕ್ತಿ. ಇಂತಹ ಉಚ್ಚತತ್ವಗಳನ್ನು ಬೋಧಿಸತಕ್ಕವಿರಬೇಕು. ಅವನ್ನು ಚಿತ್ರಿಸಲು ಅನುಕೂಲವಾಗುವಂತೆ ಬೇರೆ ಬೇರೆ ರಸಪ್ರಾಧಾನ್ಯವೂ ಇರಬೇಕು. ನವರಸಗಳಲ್ಲಿ ನಾವು, ಹಾಸ್ಯರಸವನ್ನು ಸಮಯವರಿತು, ನಾಟಕದ ಉದ್ದೇಶವು ಕೆಡದಂತೆ ತೋರಬೇಕು. ಇನ್ನು ಶೃಂಗಾರವನ್ನು, ಔಷಧಕ್ಕಾಗಿ ಉಪಯೋಗಿಸುವ ವಿಷವ ಒಂದು ರೂಪವಾದ ಔಷಧವೆಂದು ತಿಳಿದು ಉಪಯೋಗಿಸಬೇಕು. ಅಲ್ಲದೆ ಶೃಂಗಾರವನ್ನು ಜನರನ್ನು ಕರ್ಷಿಸುವ ಉತ್ತಮ ಸಾಧನವೆಂದು ಮಿತಿಗೆಟ್ಟು ಚಿತ್ರಿಸಿದರೆ ಹಲವು ಜನರು ಉಪಯೋಗಿಸುವ ನೀರಿನ ಭಾವಿಗೆ ವಿಷವನ್ನು ಹಾಕಿದಷ್ಟು ಪಾತಕಿಗಳಾಗುವೆವು. ಇಂದು ರಂಗಭೂಮಿಯಲ್ಲಿ ಈ ಶೃಂಗಾರ ಸ್ವೈರತ್ವಗಳನ್ನೂ ನಾವು ಮಿತಿಮೀರಿ ಕಾಣುವೆವು. ಅಂತಹ ನಾಟಕಗಳಿಗೆ ಸೇರತಕ್ಕ ಪ್ರೇಕ್ಷಕರಗಣವೂ ಹೆಚ್ಚು! ಉದಾ— ವಿಕ್ರಮ ಶಶಿಕಲಾ, ಕೃಷ್ಣಲೀಲಾ. ಇತ್ಯಾದಿ.

ಇಂದಿನ ರಂಗಭೂಮಿಯಲ್ಲಿ ಒಂದು ಮಹತ್ತರಸ್ಥಾನವನ್ನು ಹೊಂದಿರುವ ' ಶ್ರೀಕೃಷ್ಣಲೀಲಾ ' ನಾಟಕದ ಕುರಿತು ನಾವು ಕೆಲವು ಮಾತುಗಳನ್ನು ಹೇಳುವೆವು. " ಶ್ರೀಕೃಷ್ಣನು ಧರ್ಮದ ಉದ್ಧಾರವನ್ನು ಮಾಡಲು ಹೊರಟವನು ಜನರ ಮುಂದೆ ಅಧರ್ಮದ ವ್ಯವಹಾರವನ್ನೂ, ಸಜ್ಜನರು ನೀಚವೆಂದು ತಿಳಿಯುವ ಜಾರಚೋರತನಗಳನ್ನೂ ಮಾಡಿರಬಹುದೇ? " ಎಂಬುದನ್ನು ಕುರಿತು ತರ್ಕಿಸಿ ಬರೆಯುವ ಬದಲು, ಅವನ ಪವಿತ್ರ ನಾಮಕ್ಕೆ ಪಾಪಗಳ ಮಸಲೆಯನ್ನು ತೋರಿಸಿಯದು ಈಗಿನ ನಟರಲ್ಲಿ ಈ ಹಾಸ್ಯ ಭೂಮಿಕೆಯನ್ನು ವಹಿಸುವವರು ಬಂದು ಭಾವನೆಗಳನ್ನು ಮೂಡಿಸುವ ಮಾತು ಅಭಿನಯಗಳನ್ನು ಮಾಡಿದರೆಂದರೆ, ಹಾಸ್ಯವೆಂದು ತಿಳಿಯುವರು. ಅಂತಹ ಅಭಿನಯಗಳು ವರೂ ಮೂರ್ಖ ಪ್ರೇಕ್ಷಕರ ಚಪ್ಪಾಳೆಯು ಬಹಳ. ಅಂತು ಜನರು ನಕ್ಕರಾಯಿತು.

ಇನ್ನು ನಾಟಕದ ಕಥಾರಚನೆಯ ಕುರಿತು ಎರಡು ಮಾತುಗಳು ನಾಟಕಕಾರರು ಆದಷ್ಟು ಯತ್ನದಿಂದ ಕನ್ನಡ ನಾಡಿನಲ್ಲಿ. ಇನ್ನು ಸ್ವತಂತ್ರ ನಾಟಕಗಳ ಯತ್ನಮಾಡುವದು ಒಳಿತು. ಈ ಕುರಿತೂ, ಮರಾಠಿ ನಾಟಕಗಳ ಭಾಷಾಂತರಗಳ ಹಾವಳಿಯೇ ಹೆಚ್ಚಿದೆ. ಹೀಗೆಯೇ ನಡೆದರೆ ಕನ್ನಡಿಗರ ನಾಟಕಗಳು ಬೆಳೆಯುವದೆಂತು?

ಇನ್ನು ನಾಟಕದ ಉದ್ದೇಶವನ್ನು ಚಿತ್ರಿಸಲು ಪೌರಾಣಿಕ ಕಥೆಗಳೇ ಬೇಕೆಂದಿಲ್ಲ. ಇಂದಿನ ಕಾಲಕ್ಕನುಸರಿಸಿ, ಕಾಲದಲ್ಲಿ ಪ್ರಚಲಿತವಾದ ದುಷ್ಟಹವ್ಯಾಸಗಳನ್ನು ಹೋಗಲಾಡಿಸುವ ಯತ್ನದಲ್ಲಿ ಇಂದಿನ ಕಾಲದಲ್ಲಿನ ಸಾಮಾಜಿಕ ಕಾಲ್ಪನಿಕ ಚಿತ್ರಗಳೂ ಐತಿಹಾಸಿಕ ಕಥೆಗಳೂ ಸಹಕಾರಿಯಾಗುವವು. ಪೌರಾಣಿಕ ಕಥೆಗಳನ್ನು ಕಂಡು ' ಅದೆಲ್ಲ ಅಂತಹ ದೈವಿಕ ಮನುಷ್ಯರಿಂದಾಯಿತು, ನಮ್ಮಿಂದೆಲ್ಲಾಗುವುದು ' ಎಂಬ ಹೇಡಿತನದ ಭಾವನೆಯನ್ನು ಹೋಗಲಾಡಿಸುವ ಕೆಲಸವನ್ನು ಈ ಸಾಮಾಜಿಕ, ಐತಿಹಾಸಿಕ ಚಿತ್ರಗಳು ಮಾಡುವುವು. ಅಂತೆಯೇ ನಾಟಕದ ನಾಯಕ ನಾಯಕಿಯರು ರಾಜ ರಾಣಿಯರೇ ಆಗಬೇಕೆಂಬ ಭಾವ ಮೂಢ ಬೇಡ.

ಇಹವೃತ್ತ

ಗುರುವಾರ ತಾ|| ೩-೧೨-೩೬ನೆಯ ದಿನ ಇಲ್ಲಿಯ ಬಸವೇಶ್ವರ ಬಾಲಿಕಾಲಯದಲ್ಲಿ ಮಾ| ಕಲಿಕೇಶ್ವರ ಸಾಹೇಬ ವಿಜಾಪೂರ ಇವರು ದಯಮಾಡಿಸಿದ್ದು, ಅಲ್ಲಿಯ ವ್ಯವಸ್ಥೆಗಳನ್ನೆಲ್ಲ ನೋಡಿ ಸಂತೋಷಪಟ್ಟರು ಮತ್ತು ಕನ್ನಡದಲ್ಲಿ ಉಪದೇಶಪರ ಭಾಷಣವನ್ನು ಮಾಡಿದರು. "ಕನ್ನಡ ಭಾಷೆಯು ಬಹು ಪುರಾತನ ಕಾಲದ ಭಾಷೆಯು. ಮೊದಲು ಕರ್ನಾಟಕದಲ್ಲಿ ಸ್ತ್ರೀಯರು ಸಹ ಸುಶಿಕ್ಷಿತರೂ, ಕನ್ನಡದಲ್ಲಿ ಪಾಂಡಿತ್ಯವನ್ನು ಪಡೆದವರೂ ಇದ್ದರು. ಆದರೆ ಈಗಿನ ಕಾಲದಲ್ಲಿ ಕನ್ನಡ ಭಾಷೆಯು ಕಾಡು ಭಾಷೆಯೆಂದೂ ಸ್ತ್ರೀ ಶಿಕ್ಷಣವು ಅಯೋಗ್ಯವೆಂದೂ ಸ್ವತಃ ಕನ್ನಡಿಗರೇ ಹೇಳುತ್ತಿರುವದು ಸರಿಯಲ್ಲ. ಅದುದರಿಂದ ನೀವು ಇಲ್ಲಿಯ ಸ್ತ್ರೀಯರಿಗೆ, ಓದಲು ವರ್ತಮಾನಪತ್ರಗಳೂ ಪುಸ್ತಕಗಳೂ ದೊರೆಯುವಂತೆ ವ್ಯವಸ್ಥೆ ಮಾಡಿರೆಂದು ಸೂಚಿಸುವೆನು. ಇದರಂತೆ ಪ್ರತಿಒಬ್ಬ ಪುರುಷನೂ ಓದುಮನೆಗೆ ಬಂದು ಸ್ವಲ್ಪವದರೂ ಓದಿ ಅದರ ಲಾಭವನ್ನು ತೆಗೆದುಕೊಳ್ಳಬೇಕು; ಎಂದು ಮುಂತಾಗಿ ಭಾಷಣವಾದುದರು." ಆ ಮೇಲೆ ಗೌ. ಕಾರ್ಯದರ್ಶಿ ಶಿಣಗಿಯವರು ಮೆಹರ್ಬಾನರವರಿಗೆ ಹೂ-ಮಾಲೆ ತಾಂಬೂಲ ಸಮರ್ಪಣೆಮಾಡಿ ಆಭಾರಮನ್ನಿಸಿದ ನಂತರ ಕಾರ್ಯಕ್ರಮವು ಮುಗಿಯಿತು. . . ನೋಡಿದವ

ಶ್ರೀ ಕೊತ್ತಲೇಶ ಪ್ರಸನ್ನ

ಶ್ರೀ ಕೊತ್ತಲೇಶನ ಜೀರ್ಣೋದ್ಧಾರದ ಲೆಕ್ಕ ಶಕೆ ೧೮೫೭ ಶ್ರಾವಣ ವದ್ಯ [illegible] ಯಿಂದ ಶಕೆ ೧೮೫೮ ಆಶ್ವಿನ ವದ್ಯ [illegible] ಪೂರಾವರಿಗೆ. ಜಮಾ– ಜೀರ್ಣೋದ್ಧಾರಮಂಡಳಿಯ ಬಾಕಿ [illegible] ಸರಾಫ ಜನರು ಧರ್ಮಾದಾಯ ತೆಗೆದದ್ದು [illegible] ರಾ|| ಮಾರುತಿರಾವ ಮಾಸ್ತರ (ನಾಟಕ ಕಂಪನಿ.) [illegible] ರಾ| ಕಾಂಬಳೆ (ಮ ೩೫) ಮತ್ತು ದಕ್ಷಿಣ ಪ್ರತಿಯ ನಾಟಕ ಕಂಪನಿ ([illegible] [illegible] ಪಾದ ಹಾಕಿದ ಒಪ್ಪಟ್ಟು, [illegible] ಮುಸ್ಲೀಮ ಪಕ್ರಿ ಬಂದಿತು. ಕಲ್ಲು [illegible] ರಾ|| ಹನುಮಂತರಾವ ಕಟಗೇರಿ ಇವರಲ್ಲಿಯ ಕೆಲವು. [illegible] ಅಕ್ಕಿಯು ಕಾರ್ತಿಕದ [illegible] ಶ್ರೀ ಉತ್ತರಾಧಿ ಮಠದವರು ಇರುವ ಪೇಟೆಕ್ಕೆ ಸಕಲ [illegible] ಒಪ್ಪಿಸಲ್ಪಟ್ಟ ಯಂತ್ರದಿಂದ [illegible] ಮಂಗಳೀರಾಮ ಶಿವನಾಥ ಇವರ ಅಂಗಡಿಕಡೆಯಿಂದ ಕೈಗಡಾ [illegible] ಒಟ್ಟು ಜೇಡಿಯು [illegible]

ಖರ್ಚು– ದೇವಸ್ಥಾನ ಖರೀದಿ [illegible] ಕಿವುಟ ಖರೀದಿ [illegible] ಗಚ್ಚು [illegible] ಕಲ್ಲು ಖರೀದಿ [illegible] ಕಟ್ಟಿಗೆ ಖರೀದಿ [illegible] ಕಲ್ಲು ಒಡೆಯುವ [illegible] ಕಟ್ಟಿಸುವ ಮತ್ತು ಕೂಲಿ ಪಗ್ಗಾರ [illegible] ಸಗಾರ [illegible] ([illegible] ಬಾಕಿ ಉಳಿದದೆ) ವೇ|| ರಾ|| ರಾಮಾಚಾರ್ಯ ಮನಗೂಳಿ ಇವರಿಂದ [illegible] ರಾ|| ಹನುಮಂತರಾವ ಕಟಗೇರಿ ಇವರಲ್ಲಿ [illegible] ಅಕ್ಕಿಯು ಪಾತರಕವಿಗೆ ಉಳಿದದ್ದು. [illegible] ಕಥಾವಳಿ ಶಿಕ್ಕಿಲ್ಲ [illegible] ಒಟ್ಟು ಖರ್ಚ ಕಲ್ಲುಗಳ ಜೇಡಿಯು. [illegible]

ಜಯರಾವ, ಶ್ರೀನಿವಾಸರಾವ, ನರಗುಂದ, ಬಾಗಲಕೋಟೆ.

ಸೊಜಿಗದ ಸುದ್ದಿ

ನಾಲಗೊಂಡಾ ಜಿಲ್ಲೆಯ (ನಿಜಾಮ) ಭೊಂಗೀರ ನಗರದಾರನ ಹೆಂಡತಿಯು ೧೯೩೪ ರಲ್ಲಿ ಹಡೆದಳು ನಾಲ್ಕನೇ ದಿನ ಕೂಸು ಎದ್ದುಯೋ ಮಾಡಿಯಾಯಿತು! ಪೋಲೀಸರು ಹುಡುಕಿ ಹುಡುಕಿ ಬೇಸತ್ತರು. ೧|| ವರ್ಷದ ಮೇಲೆ ಮತ್ತೆ ಹೆತ್ತಾಗ್ಗೆ ಮೊದಲೇ ಪೋಲಿಸರಿಗ ತಿಳಿಸಿದ್ದರಿಂದ ಪೋಲಿಸರ ಕಾವಲಿದ್ದಿತು. ಆದರೂ ನಾಲ್ಕನೇ ದಿನ ಕೂಸು ಗಪ್ಪಾಯಿತು! "ನೀನು ಹಡಿಯಬೇಕು; ನಾನು ತೆಗೆದುಕೊಳ್ಳಬೇಕು" ಎಂಬ ಧ್ವನಿಯು ಮಾತ್ರ ಆಕಾಶಾಂತಗಿ ಕೇಳಿಸಿತಂತೆ. ಹೋಲೀಸರು ದಂಗಾಬಡಿದರು ಹೊಸ್ತ ಹೊಸ್ತ ಈ ದ್ರೃಶ್ಯಯು ಮತ್ತು

ರ ಹೆಸರು ನೋಡಿದರೂ ಶ್ರೀರಾಮನ ಹೆಸರಿನವೇ. ಶ್ರೀರಾಮಚಂದ್ರನ ಜನ್ಮಸ್ಥಾನವಾದ ಅಯೋಧ್ಯೆಯಲ್ಲಿ ಹೀಗೆ ಅವನನ್ನು ಜನರೆಲ್ಲ ಸ್ಮರಿಸುತ್ತಿರುವುದು ನಮಗೆ ಆನಂದವನ್ನುಂಟುಮಾಡಿತು. ಅಯೋಧ್ಯೆಯಲ್ಲಿ ಶ್ರೀರಾಮನ ೫ ಸಾವಿರ ಗುಡಿಗಳಿವೆಯೆಂದು ಜನರು ಹೇಳಿದರು. ಇವಲ್ಲದೇ ಎಲ್ಲರೂ ತಮ್ಮ ತಮ್ಮ ಮನೆಗಳಲ್ಲಿ ಶ್ರೀರಾಮ ಸೀತಾ, ಲಕ್ಷ್ಮಣ, ಹನುಮರ ಮೂರ್ತಿಗಳನ್ನು ಸ್ಥಾಪಿಸಿಯೇ ಇದ್ದಾರೆ. ಎಲ್ಲ ಗುಡಿಗಳಲ್ಲಿಯೂ ಮನೆಗಳಲ್ಲಿಯೂ ಶ್ರೀರಾಮನ ಭಜನೆ ಕೀರ್ತನೆಗಳು ನಡೆದೇಯಿರುತ್ತವೆ. ಅಲ್ಲಿ ಲಕ್ಷ್ಮೀವೆಂಕಟೇಶ ನಾರಾಯಣ, ಕೃಷ್ಣ ಮೊದಲಾದ "ಪ್ರಸನ್ನ"ಗಳಿಲ್ಲ. ಶ್ರೀರಾಮ "ಪ್ರಸನ್ನ"ವೇ ಎಲ್ಲ ಕಡೆಗೂಯಿದೆ.

ಊರಲ್ಲಿ ಶ್ರೀರಾಮನ ಸಂಸ್ಮರಣೆಯ ಸ್ಥಾನಗಳೆಲ್ಲ ಚನ್ನಾಗಿ ದಕ್ಷತೆಯಿಂದಲೂ, ನೀಟಾಗಿಯೂ ಕಾಪಿಡಲ್ಪಟ್ಟಿವೆ. ಶ್ರೀರಾಮನ ಜನ್ಮಸ್ಥಾನ ಅಂದರೆ (ಜನ್ಮವಾದ ಅರಮನೆಯಿದ್ದ ಸ್ಥಾನ.) ಜನ್ಮಭೂಮಿ (ಅಂದರೆ ಜನ್ಮವಾದ ಕೋಣೆಯ ಭಾಗ.) ಸೀತಾಪಾಕ, ಕೋಪ ಭವನ, ರತ್ನ ಸಿಂಹಾಸನ, ಯಜ್ಞಶಾಲೆ, ಭರತನು ತಂದಿಟ್ಟ ರಾಮಪಾದುಕಾಸ್ಥಾನ, ಭರತನಿವಾಸ ಲಕ್ಷ್ಮಣನಿವಾಸ,ಹನುಮಾನ ನಿವಾಸ, ಇವೇ ಮೊದಲಾದ ಎಲ್ಲ ಸ್ಥಾನಗಳಿವೆ. ಸೀತಾಪಾಕೆಂದರೆ ಸೀತಾದೇವಿಯು ಸ್ವತಃ ಅಡಿಗೆ ಮಾಡತಕ್ಕ ಸ್ಥಾನವಂತೆ. ಆದರೆ ಸೀತಾಮಾತೆಗೆ ಸ್ವತಃ ಅಡಿಗೆ ಮಾಡುವ ಪ್ರಸಂಗಯೇ ಮುಂದಕ್ಕೆ ಸಾಗಿದಾಗ್ಗೆ ಬರುವುದೆಂದು ನನಗೆ ತಿಳಿದಿರಲಿಲ್ಲ. ಮೇಲೆ ನಿರ್ದಿಷ್ಟವಾದ ಶ್ರೀರಾಮ ಜನ್ಮಭೂಮಿಗೆ ಹೋದಕೂಡಲೆ ಅಲ್ಲಿ ನಾನು ಹಿಂದಕ್ಕೆ ಉಲ್ಲೇಖಿಸಿದ ಔರಂಗಜೇಬನ ಹಿಂದು-ಧರ್ಮನಾಶಕವಾದ ಕೃತಿಯು ತಿಳಿದುಬಂದಿತು. ಶ್ರೀ ಕ್ಷೇತ್ರ ಅಯೋಧ್ಯೆಯಲ್ಲಿ ಶ್ರೀರಾಮ ಜನ್ಮಸ್ಥಾನವೇ ಶ್ರೇಷ್ಠತಮವಾದ ಹಿಂದೂ ಜನರ ಪೂಜೆಯ ಸ್ಥಾನವೆಂಬುದನ್ನರಿತು, ಅಲ್ಲಿದ್ದ ಅರಮನೆಯನ್ನು ನೆಲಸಮಮಾಡಿ ಅಲ್ಲಿಯೇ ಮಸೀದೆಯನ್ನು ಕಟ್ಟಿಸಿದನು; ಮತ್ತೂ ಅಯೋಧ್ಯೆಗೆ ತನ್ನ ಜಯಸೂಚಕವಾಗಿ, ಫತ್ತೇಪೂರ ಎಂಬ ಹೆಸರನ್ನಿಟ್ಟಿದ್ದಾನೆ. (ಆದರೆ ಈ ಹೆಸರು ಪ್ರಚಾರದಲ್ಲಿ ಬರಲಿಲ್ಲ: ಅಯೋಧ್ಯೆಯ ಸಮೀಪದಲ್ಲಿ ಫತ್ತೇಪೂರೆಂಬ ಬೇರೆ ಶಹರವು ಉತ್ಪನ್ನವಾಯಿತು.) ಅಂದಿನಿಂದ ಈಗಿನ ವರೆಗೂ ಈ ಶ್ರೀರಾಮ ಜನ್ಮಸ್ಥಾನದ ಬಗ್ಗೆ ಹಿಂದೂ-ಮುಸಲ್ಮಾನರಲ್ಲಿ ಕಲಹವು ಸಾಗಿಯೇಯಿದೆ. ಬೈರಾಗಿಗಳೇ ಹಿಂದೂ ಜನರ ಪರಿಯಿಂದ ಹೆಚ್ಚಾಗಿ ಕಾದಿ, ಅಲ್ಲಿ ಅನೇಕರು ಪ್ರಾಣವನ್ನು ಸಹ ಕೊಟ್ಟರಂತೆ. ಅದ್ದರಿಂದ ಈ ಮಸೀದೆಯ ಒಳಗೇ ಒಂದು ಸ್ಥಾನವು ಪೂಜೆಗಾಗಿ ಹಿಂದೂ ಜನರಿಗೆ ದೊರೆತಿದ್ದು, ಅಲ್ಲಿ ವಾದ್ಯಗಳೂ ಪೂಜೆ ಮಂತ್ರಗಳೂ ನಡೆಯುವವು. ಬೈರಾಗಿಗಳು ಈ ಸ್ಥಾನವನ್ನೂ ಅಲ್ಲಿಯ ಮೂರ್ತಿಗಳನ್ನೂ ಯಾವಾಗೂ ಹಗಲು-ರಾತ್ರಿಯನ್ನದೆ, ಕಾಯ್ದುಕೊಂಡೆ ಯಿರುವರು. ಈ ಮೂರ್ತಿಗಳನ್ನು ಕಿತ್ತಿಹಾಕಬೇಕೆಂದು ಮುಸಲ್ಮಾನರೂ ಮಸೀ

ವೆಯನ್ನು ನೆಲಸವು ಮಾಡಬೇಕೆಂದು ವೈರಾಗಿಗಳೂ ಹಾತೊರೆಯುತ್ತಿರುವರೆಂದು ಅಲ್ಲಿ ಕೆಲವರು ಹೇಳಿದರು. ಅಂತೂ ಉಭಯ ಧರ್ಮಗಳಿಗೂ ಸಮಾಧಾನವಾಗುವಂತೆ ಈ ವಿಷಯವು ಹೇಗೆ ಕೊನೆಗಾಣುವುದೋ ತಿಳಿಯದು.

ರಂಗಭೂಮಿಯ ಸುಧಾರಣೆ. (೩)

ನಾಟಕಗಳು.

ಈ ಮೊದಲಿನ ಎರಡು ಲೇಖಗಳಲ್ಲಿ ಸುಧಾರಣೆಯು ಯಾರಿಂದಾಗಬೇಕು ಸ್ತ್ರೀಯರ ರಂಗಭೂಮಿಯಲ್ಲಿ ಅವಶ್ಯವೇ ಎಂಬ ಕುರಿತು ಚರ್ಚಿಸಿದ್ದೆವು. ಈ ಗಣಲೇಖದಲ್ಲಿ, ನಾಟಕಗಳು ಅಂದರೆ ಆಡತಕ್ಕಂತಹ ಆಖ್ಯಾನಗಳ ಕುರಿತು ಬರೆಯುವೆವು. ನಾಟಕವು ಸಮಾಜೋನ್ನತಿಯ ಸಾಧನವೆಂಬ ಇಚ್ಛೆಯು ಪೂರೈಸುವುದರ ಸಲುವಾಗಿ ಹೀಗೆ ಬರೆಯುವೆವು. ನಾವು ಎಂತಹ ಗ್ರಂಥಗಳನ್ನು ಆಡಿಸಬೇಕಾಗುವುದು ಎಂಬುದನ್ನೂ ವಿಚಾರಿಸುವೆವು. ಈಗ ನಮ್ಮ ರಂಗಭೂಮಿಯಲ್ಲಿ ಕಾಣಿಸತಕ್ಕ ಅನೇಕ ನಾಟಕಗಳಲ್ಲಿ **ಮುಖ್ಯವಾಗಿ**, ಜನರಂಜನೆ' ಯು ಉದ್ದೇಶವಾಗಿದೆ. ಆದರೆ ನಾಟಕದ ಪ್ರಥಮೋದ್ದೇಶವು 'ಜನಬೋಧನೆ' ಯಾಗಿ ಅದಕ್ಕೆ ಸಹಾಯವಾಗುವಂತೆ ಜನರಂಜನೆ ಯಾಗಿರಬೇಕು. ಇನ್ನು ಜನರಂಜನೆಯ ಕಾರ್ಯವು ನೀತಿಗೆ ವಿರುದ್ಧಕಾರಿಯಾಗುವ ಪಥವನ್ನೆಂದೂ ಅರಿಸಬಾರದೆಂಬದು ಈಗಿನ ನಾಟಕ ಕರ್ತೃಗಳಿಗೆ ತಿಳಿಯದಿರುವದು ಆಶ್ಚರ್ಯ.

ನೀವಾವ ನಾಟಕವನ್ನೇ ಆರಿಸಿರಿ—ಅದಕ್ಕೆ ಒಂದು ಉದ್ದೇಶವಿರಬೇಕು. ಆ ನಾಟಕವು ಜನರಲ್ಲಿ 'ಇಂತಹ' ಸದ್ಭಾವನೆಯನ್ನು ಹುಟ್ಟಿಸಬೇಕೆಂಬ ನಿಶ್ಚಿತ ಗುರಿಯಾರಬೇಕು ಆ ಉದ್ದೇಶದ ಪ್ರಾಶಸ್ತ್ಯವು ನಾಟಕದ ಪ್ರತಿಯೊಂದು ಕಡೆಯಲ್ಲಿಯೂ ಮೂಡಿ ಹೊರಸೂಸಬೇಕು, ಅಪರೆ ಎಷ್ಟೋ ಪ್ರಸಂಗದಲ್ಲಿ ಇಟ್ಟ ಭಾವನೆಯು ಬರೆದ ಲೇಖನಿಯ ವಿಚಿತ್ರಗತಿಯಿಂದ, ಅನೇಕ ಬಾರಿ ನಾಶವಾಗುವುದು. ಹೀಗಾಗಿ ವಿನಾಯಕನನ್ನು ಮಾಡಲುಹೋಗಿ ಮರ್ಕಟವಾಗುವುದು—ಸಾಮಾನ್ಯವಾಗಿ ನಮ್ಮಲ್ಲಿನ ಉದ್ದೇಶ್ಯಶೂನ್ಯವಾದ ನಾಟಕಗಳೆಂದರೆ ಪ್ರಚಾರದಲ್ಲಿರತಕ್ಕವುಗಳಲ್ಲಿ ಕಂಡುಬರುವ ಸದಾರಮೆ, ಬಕಾವಲಿ, ಪ್ರಭಾಮಣಿ ಸೌಭಾಗ್ಯಸುಂದರಿ, ಇವುಗಳಲ್ಲಿ ನಾವು ಕಾಣುವ ಉದ್ದೇಶವೆಂದರೆ ಮದುವೆ ನಾವು ಆರಿಸತಕ್ಕಂತಹ ನಾಟಕಗಳು ಸತ್ಯ, ಅಹಿಂಸೆ, ಸ್ವಾಮಿನಿಷ್ಠೆ, ಪತಿಭಕ್ತಿ. ಇಂತಹ ಉಚ್ಚತತ್ವಗಳನ್ನು ಬೋಧಿಸತಕ್ಕವಿರಬೇಕು. ಅದನ್ನು ಚಿತ್ರಿಸಲು ಅನುಕೂಲವಾಗುವಂತೆ ಬೇರೆ ಬೇರೆ ರಸಪ್ರಾಧಾನ್ಯವೂ ಇರಬೇಕು. ನವರಸಗಳಲ್ಲಿ ನಾವು; ಹಾಸ್ಯರಸವನ್ನು ಸಮಯವರಿತು, ನಾಟಕದ ಉದ್ದೇಶವು ಕೆಡದಂತೆ ತೋರಬೇಕು ಇನ್ನು ಶೃಂಗಾರವನ್ನು, ಔಷಧಕ್ಕಾಗಿ ಉಪಯೋಗಿಸುವ ವಿಷದ ಬಿಂದು ರೂಪವಾದ ಔಷಧವೆಂದು ತಿಳಿದು ಉಪಯೋಗಿಸಬೇಕು. ಅಲ್ಲದೆ ಶೃಂಗಾರವನ್ನು ಜನರನ್ನು ಕರ್ಷಿಸುವ ಉತ್ತಮ ಸಾಧನವೆಂದು ಮಿತಿಗೆಟ್ಟು ಚಿತ್ರಿಸಿದರೆ ಹಲವು ಜನರು ಉಪಯೋಗಿಸುವ ನೀರಿನ ಭಾವಿಗೆ ವಿಷವನ್ನು ಹಾಕಿದಷ್ಟು ಪಾತಕಿಗಳಾಗುವೆವು. ಇಂದು ರಂಗಭೂಮಿಯಲ್ಲಿ ಈ ಶೃಂಗಾರ ವೈಪರೀತ್ಯಗಳನ್ನೂ ನಾವು ಮಿತಿಮೀರಿ ಕಾಣುವೆವು. ಅಂತಹ ನಾಟಕಗಳಿಗೆ ಸೇರತಕ್ಕ ಪ್ರೇಕ್ಷಕಗಣವೂ ಹೆಚ್ಚು! ಉದಾ:- ವಿಕ್ರಮ ಶಶಿಕಲಾ, ಕೃಷ್ಣಲೀಲಾ. ಇತ್ಯಾದಿ.

ಇಂದಿನ ರಂಗಭೂಮಿಯಲ್ಲಿ ಒಂದು ಮಹತ್ತರಸ್ಥಾನವನ್ನು ಹೊಂದಿರುವ 'ಶ್ರೀಕೃಷ್ಣಲೀಲಾ' ನಾಟಕದ ಕುರಿತು ನಾವು ಕೆಲವು ಮಾತುಗಳನ್ನು ಹೇಳುವೆವು. "ಶ್ರೀಕೃಷ್ಣನು ಧರ್ಮದ ಉದ್ಧಾರವನ್ನು ಮಾಡಲು ಹೊರಟವನು ಜನರ ಮುಂದೆ ಅಧರ್ಮದ ವ್ಯವಹಾರವನ್ನು, ಸಜ್ಜನರು ನೀಚವೆಂದು ತಿಳಿಯುವ ಜಾರಚೋರತನಗಳನ್ನು ಮಾಡಿರಬಹುದೇ?" ಎಂಬುದನ್ನು ಕುರಿತು ತರ್ಕಿಸಿ ಬರೆಯುವ ಬದಲು, ಅವನ ಚರಿತ್ರೆ ನಾಮುಕ್ಕಿ ಪಾಪಗಳ ಮಾಲೆಯನ್ನು ತೋರಿಸಿ 'ದೇವರು ಮಾಡಿದುದೆಲ್ಲಾ ಚೆಂದ " ವೆಂಬ ಒಂದು ಮಂಕು ಸಮಾಧಾನವನ್ನು ತಂದುಕೊಂಡಿರುವರು. ಶ್ರೀ ಕೃಷ್ಣನ ಗೋಪಕನ್ಯೆಯರ ಸ್ನೇಹವು, ಪ್ರೇಮಸಾಮ್ರಾಜ್ಯದಲ್ಲಿ ನೆಲೆಸಿತ್ತು ಎಂಬುದನ್ನು ಮರೆತು ಕಾಮಸಾಮ್ರಾಜ್ಯದಲ್ಲಿ ಚಿತ್ರಿಸಿದ್ದಾರೆ. ಈ ನಾಟಕವನ್ನು ಬರೆದವರಾದರೂ, ತಮ್ಮ ಚತುರ ಲೇಖನಿಯು ತಾರುಣ್ಯದ ರಕ್ತದ ಮೇಲೆ ಎಷ್ಟು ಕಾಮಾಂಧತೆಯ ವಿಷವನ್ನು ಪ್ರಯೋಗಿಸಬಹುದೋ, ಅಷ್ಟನ್ನು ತೋರಿಸಿರುವರು. ಅನರ್ಥದ ದಾರಿಯನ್ನು ತೋರುವ, ದ್ವಿಯಾರ್ಥದ ಮಾತುಗಳನ್ನು, ಪ್ರತಿಪಂಕ್ತಿಗೂ ಹೊರಸೂಸುವುದು. ನಾರದರು ಕೃಷ್ಣ ರಾಧಾ ಮೊದಲಾದವರು. ಅವರ ಪಾಲಿಗೆ 'ಚಿತ್ತಾಕರ್ಷಕ' ದವರಾಗಿರುವರು ಅಲ್ಲದೆ 'ಪ್ರೇಮ' 'ಪ್ರೇಮ' ವೆಂದು ಹೇಳಿ ಜನರಿಗೆ ಪ್ರೇಮವೆಂದರೆ ಕಾಮವೆಂದು ಚಿತ್ರಿಸಿರುವರು. ಇವರ ಪ್ರೌಢಲೇಖನಿಯು ತನ್ನ ಶಕ್ತಿಯನ್ನು "ಭಕ್ತಿ"ಯನ್ನು ಚಿತ್ರಿಸುವುದರಲ್ಲಿ ಸುಂದರಿದಿದ್ದರೆ, ಇಂದು ಅಖಿಲ ಕರ್ನಾಟಕವೇ ಇವರನ್ನು ಕೊಂಡಾಡುತ್ತಿತ್ತು.

ಇವರ ಮಾದರಿಯನ್ನನುಸರಿಸಿ, ಶ್ರೀ ನರಹರಿ ಶಾಸ್ತ್ರಿಗಳೊಂದು ಕೃಷ್ಣಲೀಲಾ ವಿನೋದ ' ವನ್ನು ಬರೆದಿರುವರು ಇದರಿಂದ ಉಪಯೋಗವೇನೋ ತಿಳಿಯದು ಮೊದಲನೆಯ ಕವಿಯು ಮಾಡಿದ ದೋಷಗಳನ್ನು ಇವರು ತಿದ್ದಲು ಯತ್ನಿಸಿದ್ದರೆ ಇವರ ಮಾನ್ಯತೆಯು ಶ್ಲಾಘನೆಯಾಗುತ್ತಿತ್ತು. ಈ ಕುರಿತು ಶ್ರೀ ದ ನ ಶಾ. ರವರು ರಂಗಭೂಮಿಯಲ್ಲಿ ತಮ್ಮ ನಿಷ್ಪಕ್ಷಪಾತದ ವಿಮರ್ಶೆಯನ್ನು ಚೆನ್ನಾಗಿ ಬರೆದಿರುವರು

ಇನ್ನು ಸಮಾಜಸುಧಾರಣೆಗೆಂದುದ್ದೇಶಿಸಲ್ಪಟ್ಟ 'ವಿಷಮ ವಿವಾಹ ನಾಟಕ' ವನ್ನು ನೋಡಿರಿ. ಒತ್ತಟ್ಟಿಗೆ ಕಾಮಾಂಧತೆಯು ಮುಪ್ಪಿನವರಲ್ಲಿ ಮಾಡಿದ ವೈಪರೀತ್ಯವನ್ನು ತೋರಿಸುವುದು ಕವಿಗಳ ಉದ್ದೇಶವಿದ್ದರೆ ಜನರಂಜನೆ ಮಾಡುವ ಭರದಲ್ಲಿ ವಿದೂಷಕ, ರಜನಿ. ಚಂದ್ರಿಕೆ ಈ ಪಾತ್ರಗಳ ಮೂಲಕ, 'ಬೀದಿ ಬಸವಿ' ಯರ ವ್ಯವಹಾರವನ್ನು ತೋರಿಸುವರು. ಒತ್ತಟ್ಟಿಗೆ ವಿದೂಷಕನು "ಮುಪ್ಪಿನವರಿಗೆ ಮದುವೆ ಮಾಡಿಸುವವರು" ಎಂದು ತಿರಸ್ಕರಿಸಿ ಹೇಳುವನು, ಇನ್ನೊತ್ತಟ್ಟಿಗೆ, ತಾನೇ ಜ್ಞಾನಹೀನನಾದ ಪಶುವಿನಂತೆ, ರಜನಿ ಚಂದ್ರಿಕೆಯರೊಡನೆ ವರ್ತಿಸುವನು ಈ ಪದ್ಧತಿಯನ್ನು ಕವಿಗಳಾದ ಸದಾಶಿವರಾಯರಂಥವರು ಮಾಡಿದುದು ಬಹು ವಿಷಾದಕರವಾಗಿದೆ.

ಹಾಸ್ಯರಸದ ಸದುಪಯೋಗವೆಂತು ನಮಗೆ ತಿಳಿಯದೇ ತಿಳಿಯದು ಈಗಿನ ನಟರಲ್ಲಿ ಈ ಹಾಸ್ಯ ಭೂಮಿಕೆಯನ್ನು ವಹಿಸುವವರು, ಬಂದ ಭಾವನೆಗಳನ್ನು ಮೂಡಿಸುವ ಮಾತು ಅಭಿನಯಗಳನ್ನು ಮಾಡಿದವೆಂದರೆ, ಹಾಸ್ಯವೆಂದು ತಿಳಿಯುವರು. ಅಂತಹ ಅಭಿನಯಗಳಾದರೂ ಮೂರ್ಖ ಪ್ರೇಕ್ಷಕರ ಚಪ್ಪಾಳೆಯೂ ಬಹಳ. ಅಂತು ಜನರು ನಕ್ಕರಾಯಿತು.

ಇನ್ನು ನಾಟಕದ ಕಥಾರಚನೆಯ ಕುರಿತು ಎರಡು ಮಾತುಗಳು ನಾಟಕಕಾರರು ಅದಷ್ಟು ಯತ್ನದಿಂದ ಕನ್ನಡ ನಾಡಿನಲ್ಲಿ. ಸ್ವಮ್ಮ ಸ್ವಕಪೋಲ ನಾಟಕಗಳ ಯತ್ನಮಾಡುವದು ಒಳಿತು ಈ ಕುರಿತೂ, ಮರಾಠಿ ನಾಟಕಗಳ ಭಾಷಾಂತರಗಳ ಹಾವಳಿಯೇ ಹೆಚ್ಚಿದೆ. ಹೀಗೆಯೇ ನಡೆದರೆ ಕನ್ನಡಿಗರ ಮಿದುಳು ಬೆಳೆಯುವದೆಂದು?

ಇನ್ನು ನಾಟಕದ ಉದ್ದೇಶವನ್ನು ಚಿತ್ರಿಸಲು ಪೌರಾಣಿಕ ಕಥೆಗಳೇ ಬೇಕೆಂದಿಲ್ಲ. ಇಂದಿನ ಕಾಲಕ್ಕನುಸರಿಸಿ, ಕಾಲದಲ್ಲಿ ಪ್ರಚಲಿತವಾದ ದುಷ್ಟವ್ಯಸನಗಳನ್ನು ಹೋಗಲಾಡಿಸುವ ಯತ್ನದಲ್ಲಿ ಇಂದಿನ ಕಾಲದಲ್ಲಿನ ಸಾಮಾಜಿಕ ಕಾಲ್ಪನಿಕ ಚಿತ್ರಗಳೂ ಐತಿಹಾಸಿಕ ಕಥೆಗಳೂ ಸಹಕಾರಿಯಾಗುವವು. ಪೌರಾಣಿಕ ಕಥೆಗಳನ್ನು ಕಂಡು 'ಅದೆಲ್ಲ ಅಂತಹ ದೈವಿಕ ಮನುಷ್ಯರಿಂದಾಯಿತು, ನಮ್ಮಿಂದೆಲ್ಲಾಗುವುದು "ಎಂಬ ಹೇಡಿತನದ ಭಾವನೆಯನ್ನು ಹೋಗಲಾಡಿಸುವ ಕೆಲಸವನ್ನು ಈ ಸಾಮಾಜಿಕ, ಐತಿಹಾಸಿಕ ಚಿತ್ರಗಳು ಮಾಡುವುವು ಅಂತೆಯೇ ನಾಟಕದ ನಾಯಕ ನಾಯಕಿಯರು ರಾಜ ರಾಣಿಯರೇ ಆಗಬೇಕೆಂಬ ಭಾವ ಬೇಡ.

ನಾಟಕದ ಎಲ್ಲ ವ್ಯಕ್ತಿಗಳೂ, ಸ್ವವಸ್ಥಿತ ರೀತಿಯಿಂದ ಹರಿದು ಒಂದಕ್ಕೊಂದಕ್ಕೆ ಕಥಾಬಂಧವು ಚೆನ್ನಾಗಿರಬೇಕು. ನಾಟಕದ ಕೊನೆಯಲ್ಲಿ, ಉದ್ದೇಶದ ಸಾಧಕತೆಯಾಗಿರಬೇಕು. ನಾಟಕಗಳಲ್ಲಿ ಸುಖಪರ್ಯವಸಾಯಿ, ದುಃಖಪರ್ಯವಸಾಯಿ ಇವುಗಳಲ್ಲಿ ಎರಡೂ ಪಂಥಗಳೂ ನಮಗೆ ಒಪ್ಪಿಗೆ ಯಾದುವು. ಏಕೋವೇಳೆ ದುಃಖಪರ್ಯವಸಾಯಿ ನಾಟಕಗಳು ತಮ್ಮ ಉದ್ದೇಶವನ್ನು ಪ್ರೇಕ್ಷಕರ ಮಾನಸ್ಸಿನಮೇಲೆ ಅಚ್ಚೊತ್ತುವಂತೆ ಚಿತ್ರಿಸುವುವು. ನಾಟಕಗಳಲ್ಲಿ ನಾವು ಕರ್ತವ್ಯಗಳ ಅರಿವನ್ನೇ ಬಲವಾಗಿ ಹಬ್ಬಿಸಬೇಕು. ಫಲದ ಆಶೆಯಿಲ್ಲದೆ ಕರ್ತವ್ಯವನ್ನು ಮಾಡತಕ್ಕಂತಹ ಬುದ್ಧಿಯು ನಮಗೆ ಬರಬೇಕು. ಏಕೆಂದರೆ ಅನೇಕಾವೃತ್ತಿ ಸತ್ಯಮಾರ್ಗಿಯು ತನ್ನ ಮರಣದ ತನಕವೂ ಪ್ರತಿಫಲವನ್ನು ಹರಿಶ್ಚಂದ್ರನು ಹೊಂದಿದಂತೆ ಹೊಂದುವದಿಲ್ಲ. ಕರ್ಮಫಲವು ಒಂದೇ ಜನ್ಮದಲ್ಲಿ ದೊರೆಯತಕ್ಕ ಸಂಗತಿಯಲ್ಲ. ಕೆಲವು ಈಗ ಸಿಗುವವು, ಕೆಲವು ಮುಂದೆ ಸಿಗುವುವು.

ಇನ್ನು ಕೊನೆಯದಾಗಿ, ನಾಟಕದ ಭಾಷೆಯು ಕುರಿತು. ಓದತಕ್ಕಂತಹ ನಾಟಕಗಳಿಗೂ, ಅಭಿನಯಕ್ಕೆ ಬರುವ ನಾಟಕಗಳಿಗೂ ವಿಶೇಷ ಅಂತರವನ್ನು ವಿವೆ. ಮೊದಲನೆಯ ವಕ್ಕೆ ಭಾಷಾ ಪ್ರೌಢಿಮೆಯೇ ಉದ್ದೇಶವಿರುತ್ತದೆ. ಎರಡನೆಯದು ಪಂಡಿತಪಾಮರ ಬೋಧನೆ. ಎಲ್ಲರಿಗೂ ತಿಳಿಯುವಂತೆ ಭಾಷೆಯು, ಸುಲಭವೂ ಸುಲಲಿತವೂ ಆಗಿರಬೇಕು. ಕವಿಯು ಸಾಹಿತ್ಯ ಪ್ರದರ್ಶನ ಮಾಡುವ ಭರದಲ್ಲಿ, ನೋಡಲು ಬರುವವರಲ್ಲಿ ಸಾಮಾನ್ಯ ಹಳ್ಳಿಗಾರಿನ ಪ್ರೇಕ್ಷಕರೂ ಇರುವರೆಂಬುದನ್ನು ಮರೆಯಲಾಗದು. ಅಂದರೆ ವ್ಯಾಕರಣ ನಿಯಮಾದಿಗಳನ್ನು ಮುರಿಯಬೇಕೆಂದಲ್ಲ.

ಇಂದು ಕರ್ನಾಟಕ ನಾಟಕಕಾರರ ಕೆಲಸವು ಅತಿ ಕಠಿಣವಿರುವುದು. ಸುಲಭ ಭಾಷೆಯೆಂದು ಸದಾ ಗ್ರಾಮ್ಯವನ್ನು ಪ್ರಯೋಗಿಸುವದೂ ವಿಹಿತವಲ್ಲ. ಶಾಸ್ತ್ರವನ್ನನುಸರಿಸಿ ಗ್ರಾಮ್ಯವು ಸ್ವಲ್ಪಮಟ್ಟಿಗೆ ಬೇಕಾಗುವದೇನೋ ನಿಜ. ಕನ್ನಡ ಕವಿಯು ಇಂದು, ಭಿನ್ನವಾದ ಕರ್ನಾಟಕದ ಎಲ್ಲಾ ಕಡೆಯವರಿಗೂ ರುಚಿಸುವಂತಹ ಶೈಲಿಯ ಮಾದರಿಯನ್ನು ಅರಿಸಬೇಕಾಗಿರುವದು. ಧಾರವಾಡದವರು ಬರೆದದ್ದು ಮೈಸೂರವರಿಗೆ ಅರ್ಥವಾಗದು, ಮೈಸೂರಿನವರದ್ದು ಮಂಗಳೂರವರಿಗೆ ತಿಳಿಯದು ಎಂದಾಗಬಾರದು.

ಮುಖ್ಯವಾಗಿ ಕವಿಯು ತನ್ನ ನಾಟಕಕ್ಕೆ ಪವಿತ್ರವಾದ ಉದ್ದೇಶವನ್ನು ಸಾಧಿಸಿ, ಪ್ರೇಕ್ಷಕರಮೇಲೆ ಅಭಾಸ ಪರಿಣಾಮವಾಗದಂತೆ, ಆ ಚಿತ್ರವು ಪ್ರೇಕ್ಷಕ ವರ್ಗದ ಎಲ್ಲರಿಗೂ ತಿಳಿಯುವಂತೆ ಬರೆಯಬೇಕು.

— ಕೌಶಿಕ.

ವರ್ತಮಾನಸಾರ.

ಇಹವೃತ್ತ

ಮಾ|| ಕಲಿಕ್ಕರ ಸಾಹೇಬರ ಮುಕದ್ದಮೆಯು ೬ನೇ ತಾರೀಖಿನ ವರೆಗೆ ಇದೆ.

ಶ್ರೀಮಂತ ಸಂಗಪ್ಪ ರಸ್ಸನಗಿಯವರು ಕಾಯದೇ ಮಂಡಲಕ್ಕೆ ಆರಿಸಿಬಂದುದರಿಂದಾಗಿ, ವೀರಶೈವ ತರುಣ ಸಂಘದಿಂದ ತಾಂಬೂಲ-ಸಮಾರಂಭವು ನೆರವೇರಿಸಲ್ಪಟ್ಟಿತು.

ಮುಂಬಯಿ ಕರ್ನಾಟಕ

ವೀರಶೈವ ಮಹಾಸಭೆಯ ಅಧ್ಯಕ್ಷ ಸ್ಥಾನಕ್ಕೆ ರಾವಸಾಹೇಬ ಹಲಕಟ್ಟಿಯವರು ನಿಯೋಜಿಸಲ್ಪಟ್ಟರು. ಸಭೆಯು ಜನವರಿ ೧, ೨, ೩, ತಾರೀಖುಗಳಲ್ಲಿ ನಡೆಯುವದು.

ಮೈಸೂರ ಕರ್ನಾಟಕ.

ಪಂಡಿತ ತಾರಾನಾಥರವರ ಜನಪ್ರಿಯ ನಾಟಕಗಳು ಮೈಸೂರಿನಲ್ಲಿ ನಡೆದಿವೆ. ಶ್ರೀ ಕೈಲಾಸಂರವರು ಈ ಕಂಪನಿಯನ್ನು ಸೇರಿದಂದಿನಿಂದ ಈ ಕಂಪನಿಗೆ ಒಳ್ಳೇ ಅಭ್ಯುದಯವಾಗಿದೆ. 'ಅಪ್ಪುಕ್ಕಿಗಂಡ' ಎಂಬ ನಾಟಕವು ಜನಪ್ರಿಯವಾಗಿದೆ. ಶ್ರೀ ಕೈಲಾಸಂರವರ ಕನ್ನಡ, ಇಂಗ್ಲೀಷ ತೆಲಗು ಮೊದಲಾದ ಅನೇಕ ಭಾಷೆಗಳ ಗಾಯನವು ಜನರಿಗೆ ರುಚಿಸುತ್ತಲಿದೆ.

ಮೈಸೂರ ನಗರದ ಸುತ್ತಲೂ ೧೦ ಮೈಲಿನ ಅಂತರದಲ್ಲಿ ಸಂಗಧವುಳ್ಳ ಹೂವಿನಗಿಡಗಳ ತೋಟವನ್ನು ನಿರ್ಮಿಸುವವರಿಗೆ ದ್ರವ್ಯದ ಅನುಕೂಲತೆಯನ್ನು ಒದಗಿಸಿ ಕೊಡಬೇಕೆಂದು ಮೈಸೂರ ಜಿಲ್ಲಾ ಬೋರ್ಡಿನವರು ನಿಶ್ಚಯಿಸಿದ್ದಾರೆ.

ಕಡೂರಿನಿಂದ ಚಿಕ್ಕಮಂಗಳೂರಿಗೆ ರೈಲು ಹಾಕುವ ಯೋಜನೆಯನ್ನು ಹೆಚ್ಚು ವೆಚ್ಚದ ಭಯದಿಂದ ಸರಕಾರದವರು ಬಿಟ್ಟಿರುವರೆಂಬ ವಾರ್ತೆಯಿದೆ.

ಶ್ರೀ ಮನ್ಮಹಾರಾಜರವರು ಗ್ರಾಮಾಭಿವೃದ್ಧಿಗೆ ಮಾರ್ಗದರ್ಶಕವಾಗಿರಲೆಂದು ರಾಜಧಾನಿಗೆ ಅನತಿ ದೂರದಲ್ಲಿ ನೆಲಸಿರುವ ಸಣ್ಣಹಳ್ಳಿಗೆ ಲಲಿತಾದ್ರಿ ಪುರವೆಂಬ ಹೆಸರನ್ನು ಇಟ್ಟಿರುತ್ತಾರೆ. ಇದರಲ್ಲಿ ನಗರವಾಸಿಗಳಿಗಿರುವ ಅನುಕೂಲಗಳೆಲ್ಲಾ ಇರುವವು. ಪ್ರಾರಂಭೋತ್ಸವ ಕಾಲದಲ್ಲಿ ರೈತರು ತಮ್ಮ ಸಾಲಸೋಲಗಳನ್ನು ತೀರಿಸಿಕೊಳ್ಳಲು ಕಡಿಮೆ ಬಡ್ಡಿ ದರದಲ್ಲಿ ಉಂಟಾದ ಸಾಲಗಳನ್ನು ಸರಕಾರದಿಂದ ಕೊಡಿಸಿಕೊಡಬೇಕೆಂದು ಪ್ರಾರ್ಥಿಸಿಕೊಂಡರು.

ಮದ್ರಾಸ ಕರ್ನಾಟಕ.

ಹೊಸಪೇಟೆಯ ಮುನಸಿಪ ಸಭೆಯ ಗುರುಮಯ್ಯನವರ ೧೨ ವರ್ಷದ ಸಿದ್ದಯ್ಯನೆಂಬ ಹುಡುಗನು ಎಲ್ಲಿಯೋ ತಪ್ಪಿಸಿಕೊಂಡಿದ್ದಾನೆ.

ಹೂವಿನಹಡಗಲಿ ತಾಲೂಕಿನ ಹಿರೇಹಡಗಲಿಯಲ್ಲಿ 'ಶ್ರೀ ಗುರುವರ್ಗ, ಧರ್ಮಸುಧಾಕರ' ಪಾಠಶಾಲೆಯು ಹೊಸದಾಗಿ ಪ್ರಾರಂಭವಾಗಿದೆ.

ಕಾಸರಗೋಡಿನಲ್ಲಿ ಪ್ರಯಾಣಿಕರನ್ನು ಸುಲಿಯುತ್ತಿರುವ ಪೋಲಿಸರೇ ಏನು ಮಾಡುತ್ತಿರುವಿರಿ?

ಮಂಗಳೂರಿನ ಕೊಂಕಣೀ ಪತ್ರಿಕೆಯ ಸಂಪಾದಕರಾದ ಶ್ರೀ. ಜೆ. ಪಾಯಸ್‌ರವರು ಕಳೆದವಾರದಲ್ಲಿ ಮೃತಪಟ್ಟರು.

ನಿಜಾಮ ಕರ್ನಾಟಕ.

ಯಾದಗಿರಿಯ ಧರ್ಮವೀರ ಶ್ರೀ ಶಂಕರಪ್ಪನವರು ತಾರೀಖು ೯-೧೧-೩೬ ರಲ್ಲಿ ಕೈಲಾಸವಾಸಿಗಳಾದರೆಂದು ತಿಳಿಸಲು ನಮಗೆ ಬಹಳ ವಿಷಾದವಾಗುತ್ತದೆ. ಈ ಧರ್ಮವೀರರು ಮರಣದ ಪೂರ್ವದಲ್ಲಿ ಸಂಸ್ಕೃತ ಶಾಲೆಗೆ ಪುನಃ ೫೦ ಸಾವಿರ ರೂಪಾಯಿಗಳನ್ನು ಕೊಟ್ಟು ತಮ್ಮ ಉದಾರತನವನ್ನು ತೋರಿಸಿದರು. ದೇವರು ಇವರ ಆತ್ಮಕ್ಕೆ ಶಾಂತಿಯನ್ನೀಯಲಿ.

ಹಿಂದುಸ್ಥಾನ.

ಡಾ. ಪಾರ್ವತೀ ದೇವಿಯವರು ಪಂಜಾಬ ಕಾಯದೇ ಮಂಡಲಕ್ಕೆ ಸರ್ವಾನುಮತದಿಂದ ಆರಿಸಲ್ಪಟ್ಟಿದ್ದಾರೆ. ಸ್ತ್ರೀಯರನ್ನು ಆರಿಸುವ ಮೊದಲನೇ ಬಹುಮಾನವು ಕರ್ನಾಟಕದಿಂದ ಕಸಿದುಕೊಂಡು, ಹಿಂದಮಾತೆಯು ಪಂಜಾಬಕ್ಕೆ ಕೊಟ್ಟಳು.

ಸಿಮ್ಲಾದಲ್ಲಿ ರಾತ್ರಿ ೧೧ ಘಂಟೆಯ ಸುಮಾರಕ್ಕೆ ಕೆಲವು ಸೋಲ್ಜರ್ಸ ಸಿಪಾಯಿಗಳು ಒಂದು ಮನೆಯ ಬಾಗಿಲವನ್ನು ನುಗ್ಗಿ ಸುಮಾರು ೩೦ಕ್ಕೆ ಮೀರಿ ವಯಸ್ಸಾದ ಆ ಮನೆಯ ಮರ್ಯಾದೆ ಭಂಗ ಮಾಡಿದರು. ಆ ಕಾಲಕ್ಕೆ ಆ ಮನೆಯು ಒದರಾಡಲು ಕೆಲವರು ಬಂದರಂತೆ. ಆ ಕಾಲಕ್ಕೆ ಕ್ಯಾಂಟೋನಮೆಂಟಿನಲ್ಲಿ ಸೋಲ್ಜರ್ಸರು ಇಲ್ಲದ್ದರಿಂದ ಅಲ್ಲಿನ ಅಧಿಕಾರಿಗಳು ಕೆಲವು ಮಿಲಿಟ್ರಿ ಪೋಲೀಸರನ್ನು ಹುಡುಕಲಿಕ್ಕೆ ಕಳಿಸಿದರು. ಆಗ ಇದ್ದಷ್ಟು ಸೋಲ್ಜರ್ಸರಲ್ಲಿ ಮೂವರು ಸಿಕ್ಕಿದರು. ಅವರಲ್ಲಿ ಮ್ಯಾಜಿಸ್ಟ್ರೇಟರು ಒಬ್ಬನಿಗೆ ಸಕ್ತ ಮಜೂರಿ ಶಿಕ್ಷೆಯನ್ನು ವಿಧಿಸಿ ಉಳಿದ ಇಬ್ಬರನ್ನು ಬಿಟ್ಟು ಬಿಟ್ಟರು. ಇದೇನಾ ನ್ಯಾಯಸ್ಥಾನದ ಸತ್ಯತೆಯು.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ. ಕಂ. ಬೆಂಗಳೂರ ಸಿಟಿ.

ಪ್ರಕಟಣೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೭ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವ್ಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾ ದ್ದಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ ಬಿ. ಟಿ ಶಾಲಾಗಳ ಡಿವಿಜನಲ್ ಇನ್ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ ನಂ. ೨೦೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಐಡಸಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೩೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೆಂತ, ಅಕ್ಕಸಾಲೆ ಬೆಡಿಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಶೇಕ ಬಾಪುಮಿಯಾ ಶೇಖ ಮಹಮ್ಮದ ನಳ ತಯಾರ ಮಾಡುವವರು ೭೧೪ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಹಂಗಾಮು (ಸುಗ್ಗಿ) ಸಮಿಪಿಸಿತು. ಈ ವರ್ಷ ಮಳೆ ಬೆಳೆ ಚೆನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗ್ತುವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್ | ಕಿರ್ಲೋಸ್ಕರವಾಡಿ (ಜಿಲ್ಲಾ — ಸಾತಾರಾ)

ಗವರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕ ಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ. ಪೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೨ ವರ್ಷಗಳು ಆಗುತ್ತ ಬಂದವು. ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಜಾಣಾಂತಿರೋಗ, ಹಸೆದರಂಜು ದಮ್ಮು, ಕೆಮ್ಮು, ಅಡಗ್ಗೆ, ಕಾಲರಾ (ಮಾರಿಕಾ), ಪ್ಲೇಗ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸ, ನೋದರಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ರಿಕ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ. ಖರ್ಚ ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನಇಲ್ಲ ಖ. ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಯಲ್ಲಿಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗೂಡ ಸಿಗುವದು ಈ ಔಷಧವು ಖೊಟ್ಟಿ ತೋರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕ ಶಫಾ ಇದೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಸ್ಪಷ್ಟದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಲಾ ಸಹಿತ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:—ಎಚ್. ಎಮ್. ಮುಲ್ಲಾ.

ಸ. ಬಾದಳ ಅರ್ಕ ಶಫಾ ಹೆಡ್ ಆಫೀಸ ಪೋಸ್ಟ ಕಣಕೂರ [ಬೆಳಗಾವಿ

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಹೋದ ಮುರಿದು-ಹೋದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸೊಗಸಂತಕವಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರ ಬರೆದುಕೊಳ್ಳಿರಿ!

ವಿಳಾಸಃ— ಕುಲಕರ್ಣಿ ಮೋಟಾರ ಸ್ಕೂಲ.
೪೫೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ನಗರ.

ವಿದ್ಯಾರಣ್ಯ ಮುದ್ರಾಮಂದಿರದ

ಸ್ಥಳಾಂತರವು.

ವೆಂಕಟಪೇಟೆಯ ವೆಂಕಟೇಶದೇವರ ಗುಡಿಯ ಹತ್ತಿರ ಶ್ರೀ. ನರಸಾಪೂರದವರ ಮನೆಯಲ್ಲಿದ್ದ ನಮ್ಮ ಮುದ್ರಾಮಂದಿರವನ್ನು ಅದೇ ವೆಂಕಟಪೇಟೆಯ ನಮ್ಮ ಸ್ವಂತ ಮನೆಯ ಅಟ್ಟದ ಮೇಲೆ (ಮೊದಲು ಆನರರೀ ಮ್ಯಾಜಿಸ್ಟ್ರೇಟರ ಕಚೇರಿಯಿದ್ದ ಸ್ಥಳಕ್ಕೆ) ಒಯ್ದಿರುತ್ತದೆ.
ಶ್ರೀನಿವಾಸ ರಾಜೇರಾವ ಮಂಗಳವೇಢೆ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.
ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕಟ್ಟಿಸಿ ಮುಖಕ್ಕೆ ಸೌಂದರ್ಯ ತರುವೆವು

S. U. Narayanacharya & Co.
Chaukkamba Benares City.

S.U.N & CO.
BENARES CITY.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪಿತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳ ಕ್ಯಾಟಲಾಗ ಕೇಳ್ಕೊಳ್ಳುವವರಿಗೆ ಇನಾಮಾಗಿ ಕಳಿಸಲಾದೀತು.
ವಿಳಾಸ-ಶಿರೋಮಣಿ ನಾರಾಯಣಾಚಾರ್ಯ F. ಕಂಪನಿ ಚೌಕಾಂಬಾ ಕಾಶಿ

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ವಾಙ್ಮಯ ಪರಿಚಯ.

ಸ್ವೀಕಾರ.

(೧) **ವಿಶ್ವಬಂಧುವಿನ ಶ್ರೀ ವರ್ಧಮಾನಯ್ಯನವರ ಸ್ಮಾರಕ ಸಂಚಿಕೆ.** ಇದರಲ್ಲಿ ೮೦ ಪುಟಗಳಿವೆ. ಅಂದವಾದ ಮುದ್ರಣ ಹಾಗೂ ಅನೇಕ ಚಿತ್ರಗಳಿಂದೊಡಗೂಡಿದೆ. ಶ್ರೀ. ವರ್ಧಮಾನಯ್ಯನವರು ಜೈನ ಸಮಾಜಕ್ಕೆ ಮುಕುಟಮಣಿಗಳಾಗಿದ್ದರೆಂಬುದು ಈ ಚರಿತ್ರದಿಂದ ವಿಶದವಾಗಿ ಸರ್ವರಿಗೂ ಗೊತ್ತಾಗುವದು. ಶ್ರೀ ವರ್ಧಮಾನಯ್ಯನವರಿಂದ ಜೈನಸಮಾಜಕ್ಕಾದ ಹಾನಿ, ಅವರಿಂದ ಧರ್ಮಸಮಾಜಕಾರ್ಯಗಳಿಗೆ ದೊರೆಯುತ್ತಿದ್ದ ಸಹಾಯ, ಅವರ ಜೀವನ ಚರಿತ್ರೆಯ ಪರಿಚಯಗಳು ಇದರಿಂದ ಚನ್ನಾಗಿ ಗೊತ್ತಾಗುವವು. ಈ ಗ್ರಂಥವನ್ನು ಸಮಾಸಪಟ್ಟು ಪ್ರಸಿದ್ಧಿಸಿ, ಶ್ರೀ. ವರ್ಧಮಾನಯ್ಯನವರ ಗುಣಗಳೂ ಸರ್ವರಿಗೂ ತಿಳಿಯುವ ಅವಕಾಶವನ್ನುಂಟುಮಾಡಿದ್ದಕ್ಕಾಗಿ ನಾವು "ವಿಶ್ವಬಂಧು"ವನ್ನು ಅಭಿನಂದಿಸುತ್ತೇವೆ.

(೨) The Mysore Blue Boook. Vol. III No 3 & 4

(೩) The Journal of the Mysore Agricultural & Exterimental Union Vol. VII No. 4

(೪) **ಶಾರದಾ** ಸಂಸ್ಕೃತದಲ್ಲಿ ಪ್ರತಿಪಕ್ಷದಲ್ಲಿಯೂ ಹೊರಡುವ ಪಕ್ಷಪತ್ರಿಕೆ. ಶೃಂಗೇರಿಯಲ್ಲಿ ಹುಟ್ಟಿ ಒಂದು ವರ್ಷವಾಯಿತು. ವಿದ್ವಾನ್ ಶೇಷ ಶಾಸ್ತ್ರಿಗಳು ಇದರ ಸಂಪಾದಕರು. ವಾರ್ಷಿಕ ಚಂದಾ ಅಂಚೆವೆಚ್ಚ ಸೇರಿ ೨--೮--೦ ಸುಲಭವಾದ ಸಂಸ್ಕೃತದಲ್ಲಿ ಲೇಖಗಳು ಬರೆಯಲ್ಪಡುತ್ತವೆ. ವಿದ್ಯಾರ್ಥಿಗಳು ಇದನ್ನೋದುತ್ತ ಹೋದರೆ ಅವರಿಗೆ ಪ್ರಚಲಿತ ಸಂಗತಿಗಳು ಗೊತ್ತಾಗಿ, ಅವರ ಸಂಸ್ಕೃತ ಭಾಷೆಯ ಪರಿಚಯವೂ ಹೆಚ್ಚುತ್ತ ಹೋಗುವದು. ಸಂಸ್ಕೃತ ಬಲ್ಲ ಪ್ರೌಢ ಜನರಿಗೆ ಈ ಪತ್ರಿಕೆಯು ಆನಂದವನ್ನೀಯದೇಯಿರದು. **ಕನ್ನ**ತ್ತನಾಡಿನಲ್ಲಿ ಜನ್ಮತಾಳಿ, ಕನ್ನಡದ ಅಭಿಮಾನಿಗಳಾದ ಸಂಪಾದಕರಿಂದ ನಡಿಸಲ್ಪಟ್ಟು, ಹಿಂದುಸ್ಥಾನದ ಎಲ್ಲ ಭಾಗಗಳಲ್ಲಿಯೂ ಸಂಚರಿಸುತ್ತಲಿರುವ ಈ ಪತ್ರಿಕೆಗೆ ಕನ್ನಡಿಗರೂ, ಕನ್ನಡ ನಾಡಿನ ಸರಕಾರಗಳೂ ಅತ್ಯವಶ್ಯವಾಗಿ ಸಹಾಯ ಮಾಡಬೇಕು.

ಭಾರತೀಯರ—ಇತಿಹಾಸ.

ಲೇಖಕರು— ಶ್ರೀ. ನಾರಾಯಣ ರಮಾರ್.

ಬೆಲೆ- ೨ - ೮—೦.

ಪುಟಗಳು ೩೩೩

ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಗ್ರಂಥಮಾಲೆಯ

೫ ನೇ ಪುಸ್ತಕವು.

ಇದೊಂದು ಹೊಸ ಮಾದರಿಯ ಇತಿಹಾಸವು. ನಮಗೆ ಇತಿಹಾಸದ ಅರಿವನ್ನುಂಟುಮಾಡಿಕೊಡುವ ಸದ್ಯದ ಪಠ್ಯಪುಸ್ತಕಗಳೆಂದರೆ ಕೇವಲ "ರಾಜಮಂಡಳಿಗಳ ಪಟ್ಟಿ ಹಾಗೂ ಯುದ್ಧದ ವರ್ಣನೆಯನ್ನು ಹೇಳುವ ಹಾಳೆಗಳು. ಇದರಲ್ಲಿ ಪ್ರಾಚೀನ ಕಾಲದ ಜನಜೀವನದ ಚಿತ್ರವಿಲ್ಲ ಭಾರತೀಯ ಸಂಸ್ಕೃತಿಯ ಅರಿವಿಲ್ಲ; ಭಾರತೀಯರ ಜೀವಂತ ರಾಜಕೀಯ ಸಾಮಾಜಿಕ ಧಾರ್ಮಿಕ ಸಂಸ್ಥೆಗಳ ಸಂಗತಿಯಿಲ್ಲ" ಒಟ್ಟಿನಮೇಲೆ ಹೇಳಬೇಕೆಂದರೆ ನಮ್ಮ ಇತಿಹಾಸದ ಕಲ್ಪನೆಯಂದರೆ ರಾಣಿಯನ್ನ ಕಾಣದ ಕುರುಡರ ಆನೆಯ ವಿಷಯಕ್ಕಿದ್ದ ಕಲ್ಪನೆಯಂತೆಯೇ!

ಇತಿಹಾಸದ ನಿರ್ಜೀವವಾದ ಈ ಬೇರೆ ಬೇರೆ ಅಂಗಗಳ ಜ್ಞಾನವು ತೀರ ಬೇಡವೆನ್ನುವದು ನಮ್ಮ ಮತವಲ್ಲ. ಆದರೆ ಈ ಎಲುಬಿನ ಹಂದರವನ್ನು ಸರಿಯಾಗಿ ಜೋಡಿಸಿ ಅದರಲ್ಲಿ ಜನಜೀವನದ ಕಳೆಯನ್ನು ತುಂಬಿಸಿ, ಸಂಸ್ಕೃತಿಯ ರಸವು ಹರಿದಾಡುವಂತೆ ಮಾಡಬೇಕು. ಇದೇ ನಿಜವಾದ ಇತಿಹಾಸವು. ಪ್ರಸ್ತುತ ಗ್ರಂಥದ ಗುರಿಯಾದರೂ ಇದೆ. !

ಇದರಲ್ಲಿ ಋಗ್ವೇದ ಕಾಲದಿಂದಲೂ ಹಿಂದೂ ದೇಶಕ್ಕೆ ಆರಬರು ಬರುವವರೆಗಿನ ಭಾರತೀಯರ ಚರಿತ್ರೆಯಿದೆ. ಆರ್ಯರು ಮಧ್ಯ ಏಸಿಯಾದಿಂದ ಹೊಸದಾಗಿ ಭಾರತಕ್ಕೆ ಬಂದವರೆಂಬ ವಿದೇಶಿಯರ ವಿಚಾರವನ್ನೇ ಇದುವರೆಗೆ ನುಡಿಯುತ್ತಿರುವ ಗಿಳಿಗಳು ನಾವು. ಆದರೆ, ಮೊದಲಿನಿಂದಲೂ ಅವರು ಇಲ್ಲಿಯವರೇ ಎಂಬ ಸಿದ್ಧಾಂತವನ್ನು ಹೆಚ್ಚು ಬೆಳಕಿನಲ್ಲಿ ತರಲು ಇದರಲ್ಲಿ ಯತ್ನಿಸಿದ್ದಾರೆ. ಭಾರತೀಯರೆಂದರೇ ನೀರು ಹೊರುವ-ಕಟ್ಟಿಗೆ ಕಡಿಯುವ ಕಾಡು ಜನರು. ಅವರ ಗ್ರಂಥಗಳೆಂದರೆ ಯುರೋಪದ ಹುಡಗಿಯರೂ ಕೂಡ ಹಾಸ್ಯಮಾಡಲನುವಾದ ರಾಕ್ಷಸ ಮೊದಲಾದ ಹುಚ್ಚು ಕಲ್ಪನೆಗಳಿಂದ ಕೂಡಿದ ಹೊತ್ತಿಗೆಗಳು. ಸ್ವಾಭಿಮಾನ ಘಾತಕಗಳಾದ ಇದೇ ವಿಚಾರಗಳನ್ನು ಮಾನ್ಯಮಾಡಿಯುತ್ತಿರುವ ನಮಗೆ ಈ ಗ್ರಂಥದಲ್ಲಿ ತೆಗೆದ ಆದಿಕಾಲದ ಸರ್ವಾಂಗ ಸುಂದರವಾದ ನಮ್ಮ ಸಮಾಜ ಚಿತ್ರವೂ. ದಿವೋದಾಸ ನಚಿಕೇತನ ಮೊದಲಾದ ವೀರರ ಚರಿತ್ರೆಗಳೂ ಚನ್ನಾಗಿ ಕಣ್ಣಿಗೆ ಅಂಜ ಹಾಕುವಂತೆ ಎಲ್ಲ ಬಗೆಯಿಂದಲೂ ಉದಾತ್ತ ಚರಿತನಾದ ಧರ್ಮರಾಜನಿಗೆ ದ್ಯೂತಪ್ರಿಯನೆಂದು ಹೇಳಿರುವದನ್ನು ಮಾತ್ರ ಮನಸ್ಸು ಒಪ್ಪಲಿಕ್ಕೆ ಒಲ್ಲೆನ್ನುತ್ತದೆ ಮಧ್ಯಯುಗದ ಮಹಾಪುರುಷರಾದ ಚಂದ್ರಗುಪ್ತ, ಅಶೋಕ, ಬುದ್ಧ ಮೊದಲಾದ ಚರಿತ್ರೆಗಳೂ, ಆ ಸಂದರ್ಭದಲ್ಲಿ ಬಂದ ಬೌದ್ಧ ಜೈನ ಮೊದಲಾದ ಧರ್ಮಗಳ ವಿವೇಚನೆಯೂ, ರಾಜಕೀಯ ಸಾಮಾಜಿಕ ಪರಿಸ್ಥಿತಿಗಳ ಚಿತ್ರವೂ ಕಣ್ಮುಂದೆ ಕಟ್ಟುವಂಥವುಗಳಾಗಿರುತ್ತವೆ. ಕರ್ನಾಟಕವೂ ಮಹಾರಾಷ್ಟ್ರವೆಂದೂ, ಪುಲಕೇಶಿ ಮೊದಲಾದ ಕರ್ನಾಟಕ ಸಾರ್ವಭೌಮರೂ ಶುದ್ಧ ಕನ್ನಡಿಗರೆಂದೂ ಗೊತ್ತು ಮಾಡಿ ಕರ್ನಾಟಕ ಪ್ರಾಚೀನ ಇತಿಹಾಸವನ್ನು ಹುರಿಗೊಳಿಸುವಂತೆ ಬರೆದಿರುವರು ಅಂತಃಕಲಹ, ಏಕರಾಷ್ಟ್ರೀಯ ಭಾವನೆಯ ಅಭಾವ, ಮೊದಲಾದ ದುರ್ಬಲತೆ ದುರ್ಗುಣಗಳನ್ನು ತನ್ನವೆಂದು ಮರೆಮಾಡಲು ಹೆಣಗದೆ ಚೈಲಿಗೆಳೆಯುವದರಲ್ಲಿ ಲೇಖಕರ ನೈತಿಕ ಧೈರ್ಯವೂ ದೇಶ ಹಿತದಬಗ್ಗೆ ಇರುವ ಕಳಕಳಿಯೂ ಕಂಡು ಬರುವವು

ಹೊತ್ತಿಗೆಯ ಹೊರರೂಪವು ಅಂದವಾಗಿವೆ. ಅಲ್ಲಲ್ಲಿ ಜೋಡಿಸಿರುವ ಚಿತ್ರಗಳು ಚಿತ್ತಾಕರ್ಷಕವಾಗಿವೆ. ಭಾಷೆಯು ಕೆಲವೆಡೆಯಲ್ಲಿ ವ್ಯಾಕರಣದ ವಕ್ರತ್ವವನ್ನು ತೋರುವಂತಿದೆ. ಜೋಡಿಸಿರುವ ಭಾಗದಲ್ಲಿ ಪರಭಾಷೆಯ ಕೆಲವು ಶಬ್ದಗಳು ಬಂದಿರುವವು. ಆದರೂ ಸರಾಗವಾಗಿಯೂ ಓಜಸ್ವಿಯಾಗಿಯೂ ಹರಿಯುವ ಈ ಕನ್ನಡದ ವಸ್ತುವಿನಲ್ಲಿ ಎಲ್ಲ ಬಗೆಯ ರಸಭಾವನೆಗಳನ್ನು ಮಾಪಾಡಿಸಬಹುದೆಂಬುದು ಒಡೆದು ಕಾಣುವಂತಿದೆ.

ಶಿಕ್ಷಣದೊಳಗೆ ನೈತಿಕ ಬೌದ್ಧಿಕ ಮೊದಲಾದ ಬೆಳವಣಿಗೆಯನ್ನು ಮಾಡುವದರಲ್ಲಿ ಇತಿಹಾಸದಂಥ ಬೇರೆ ಸಾಧನವಿಲ್ಲ. ಸ್ವಾಭಿಮಾನ, ಸ್ವಜನಾಭಿಮಾನ, ಸ್ವದೇಶಾಭಿಮಾನವೆಂಬ ಉಚ್ಚ, ಉತ್ತೇಜಕ, ಉತ್ತಮ ಗುಣಗಳನ್ನು ಹುಟ್ಟಿಸುವ ಈ ಭಾರತೀಯರ ಇತಿಹಾಸವನ್ನು ಎಲ್ಲರೂ ಅವಶ್ಯವಾಗಿ ಸಂಗ್ರಹಿಸಬೇಕೆಂದು ಬಿಡಿಸಿ ಹೇಳಬೇಕೇ? —**ಕಾಶ್ಯಪ**

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ!



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೇಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಿಣೀ, ಜೀರ್ಣಜ್ವರ, ಅಗ್ನಿಮಾಂಧ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವದಾ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು.) ಇದರಿಂದ ವೈಯ್ಯರಿ ವ ಗರ್ಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಕ್ರಾಯಕ:—

ಎಸ್. ಬಿ. ಕದಮ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳ ಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ತೆರುತ್ತಿದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರವನ್ನಿತ್ತು ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರು ಮಾಡುತ್ತಾರೆ. ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾನೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ರ ನಂ. ಬಿ. ೧೯೪೭ ವಾ. ಚಂದಾ ೧-೧೩-೦ ಮಾತ್ರ

ಕನ್ನಡಿಗ.

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

ಯದ್ಯತ್ ಪರವಶಂ ದುಃಖಂ । ಯದ್ಯದಾತ್ಮವಶಂ ಸುಖಮ್ ॥ — ಮನು

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಮಾರ್ಗಶಿರ ಶುದ್ಧ ೬ ಶಕೆ ೧೮೬೯ ತಾ|| ೧೨-೧೨-೧೯೪೭. | ಸಂಚಿಕೆ ೩೫

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೌನವಾಡಿ ಕಟ್ಟುವೆನಾನು ।
ನಿನ್ನ ಬೆಸಸವ ವಾಣಿದಂಥ ಮುಕ್ಕಳ ದೊಸ್ಸು ।
ಚಿನ್ನದಾದರು ಚಿನ್ನ ಮೌನಬನ್ನಿಯ ನೊಂದು ಚಿನ್ನಯಾಕಾಶದಕ್ಷ ॥
ನನ್ನ ದೇಹವು ನಿನ್ನ ವೀರಶಾಸನಕಾಗಿ ।
ಕನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೆ

—ಅಂಜಲಿ ಕವಿಯ ದತ್ತ

ಶ್ರೀ ಬೆಳವಿ ದತ್ತೋಪಂತರವರು ಲೆಜಿಸ್ಲೆಟಿವ್ ಅಸೆಂಬ್ಲಿಗೆ ಆರಿಸಿಬಂದದ್ದರ ಬಗ್ಗೆ ಈ ಮೊದಲೇ ನಾವು ಅವರನ್ನು ಅಭಿನಂದಿಸಿರುತ್ತೇವೆ. ಅವರು ಕರ್ತೃತ್ವಶಾಲಿಗಳೂ ಬುದ್ಧಿವಂತರೂ, ರಾಜಕಾರಣ ಕುಶಲರೂ ಎಂಬುದರ ಬಗ್ಗೆ ತಿಲಮಾತ್ರವಾದರೂ ಸಂಶಯವಿಲ್ಲ. 'ಬರುವ ಮೂರು ವರ್ಷಗಳಲ್ಲಿ ಅಸೆಂಬ್ಲಿಯಲ್ಲಿ ತಮ್ಮೆಲ್ಲರ ಸೇವೆಯನ್ನು ಮನಮುಟ್ಟಿ ಮಾಡಿ ತಮ್ಮೆಲ್ಲರ ವಿಶ್ವಾಸಕ್ಕೆ ಪಾತ್ರನಾಗಲು ಪ್ರಯತ್ನಪಡುವೆನೆ'ಂದು ಅವರು ಜಾಹೀರ ಮಾಡಿದ್ದಾರೆ. ಅದರಂತೆ ಅವರು ಮಾಡಿಯೇ ಮಾಡುವರೆಂದು ನಮ್ಮ ನಂಬುಗೆ. ಭಾರತಭೂಮಿಗೂ, ಭಾರತಭೂಮಿಯ ಅಂಗಭೂತವಾದ ಕರ್ನಾಟಕಕ್ಕೂ ಅವರ ಸೇವೆಯಿಂದ ಹಿತವಾಗದೆ ಇರದು. ಕರ್ನಾಟಕದ ಏಕೀಕರಣ, ಕರ್ನಾಟಕದ ಸಂಸ್ಕೃತಿ ರಕ್ಷಣ ಮೊದಲಾದ ಕೆಲಸಗಳಿಗೆ ಅವರಿಂದ ಪೋಷಣದೊರೆತು, ಅವು ಶೀಘ್ರವಾಗಿ ಸಾಧ್ಯವಾಗುವಂತೆ ಶ್ರೀ ಬೆಳವಿಯವರು ಅಂತಃಕರಣಪೂರ್ವಕವಾಗಿ ದುಡಿದೇ ದುಡಿಯುವರು. ಮನಸ್ಸಿನಲ್ಲಿ ನಿಚ್ಚಳವಾದ ಧ್ಯೇಯವನ್ನಿಟ್ಟುಕೊಂಡು, ಸತ್ಯದ ಆಶ್ರಯವನ್ನು ಪಡೆದು ಸತ್ಸಂಕಲ್ಪನ ಬೆಳಕಿನಲ್ಲಿ ನಡೆದರೆ, ಸಿದ್ಧಿಯು ಕಟ್ಟಿಟ್ಟಂತೆಯೇ ಸರಿ. ದೇವರು ಶ್ರೀ. ಬೆಳವಿಯವರ ಕಾರ್ಯಕ್ಕೆ ಯಶಸ್ಸು ಕೊಡಲೆಂದು ನಾವು ಪ್ರಾರ್ಥಿಸುತ್ತೇವೆ.

ಇನ್ ಕಮ್ ಟ್ಯಾಕ್ಸ (ಉತ್ಪನ್ನದ ಮೇಲೆ ಕರಕೊಡಿಸುವ) ಅಧಿಕಾರಿಗಳು ಮೊನ್ನೆ ಮೊನ್ನೆ ಬಾಗಲಕೋಟೆಗೆ ಬಂದಿದ್ದರು. ಅವರು ಇದ್ದೂರವರನ್ನೂ ಪರವೂರವರನ್ನೂ ಲೆಕ್ಕ ತಪಾಸಣೆಗಾಗಿ ಕರೆಯಿಸಿಕೊಳ್ಳುತ್ತಿದ್ದರು. ಒಂದು ದಿವಸಕ್ಕೆ ಎಷ್ಟು ಕೆಲಸವಾಗುತ್ತಿದೆಂಬುವರ ಸುಮಾರು ಅಧಿಕಾರಿಗಳಿಗೆ ಗೊತ್ತಿದ್ದಿಲ್ಲವೆಂದು ತೋರುತ್ತದೆ. ಗೊತ್ತಿದ್ದದ್ದೇ ಆಗಿದ್ದರೆ, ಅಥವಾ ಗೊತ್ತು ಮಾಡಿಕೊಳ್ಳಲು ತವಕ ಪಟ್ಟಿದ್ದರೆ, ಅವರಿಗೆ ಸುಲಭ ಸಾಧ್ಯವಾಗುತ್ತಿದ್ದಿತು. ತಮ್ಮ ಕೆಲಸಕ್ಕೆ ಅನುಕೂಲವಾಗುತ್ತಿತ್ತಲ್ಲದೆ, ಬೇರೆ ಜನರಿಗೆ ಅವರಿಂದ ತೊಂದರೆಯಾಗುತ್ತಿದ್ದಿಲ್ಲ. ಅಧಿಕಾರಿಗಳ ಅಂಜಿಕೆಗಾಗಿ ಜನರು ಬಂದು ನಿರುದ್ಯೋಗಿಗಳಾಗಿ ಅಲ್ಲಿಯೇ ಕುಳಿತು ಬಡುತ್ತಿದ್ದರು. ಆ ಹೊತ್ತು ಎಲ್ಲರ ಕೆಲಸವಾದರೂ ಆಗುತ್ತಿತ್ತೇ? ಇಲ್ಲ. ಮತ್ತೆ ಮುಂದಿನ ಊರಿಗೆ ಬರಲು ಅವರಿಗೆ ತಾಕೀತ. ಹೀಗಾಗುವದರಿಂದ ಜನರಿಗೆ ಹೇಳಕೂಡದಷ್ಟು ತೊಂದರೆಯಾಗುತ್ತಿದೆ. ಊರಿಂದ ಊರಿಗೆ ಹೋಗಬೇಕಾದರೆ ಪ್ರವಾಸ, ಧನವ್ಯಯ ಮೊದಲಾದವುಗಳು ಆಗುವವಲ್ಲದೆ, ಮನೆಯಲ್ಲಿಯ ನೂರಾರು ಕೆಲಸಗಳು ಕೆಡುವವು. ಹೀಗೆ ಮಾಡುವುದು ನ್ಯಾಯರೀತಿಯಿಂದಲೂ ವಿಹಿತವಾದುದಲ್ಲ. ತಮ್ಮ ಕೆಲಸವೂ ಸುಸೂತ್ರವಾಗಿ ಸಾಗಿ, ಎರಡನೇಯವರಿಗೂ ಸುಖವಾಗುವಂತೆ ನಡೆಯುವದು ಅಧಿಕಾರಿಗಳ ಧರ್ಮ. ಆದುದರಿಂದ ಅಧಿಕಾರಿಗಳು ಕೆಲಸದ ಸುಮಾರನ್ನೂ ತಾರೀಖುಗಳನ್ನೂ ಮೊದಲೇ ನಿಶ್ಚಯಿಸಿ, ಅಷ್ಟಷ್ಟೇ ಜನರನ್ನು ಅವರವರಿಗೆ ಅನುಕೂಲವಾಗಿರುವ ಸ್ಥಳಗಳಲ್ಲಿ ಕರೆಯಿಸಿಕೊಂಡು ಕೆಲಸ ನಿರ್ವಹಿಸಬೇಕಾಗಿ ಸೂಚನೆ. ಈ ಸೂಚನೆಗೆ ಒಪ್ಪಿ ಅಧಿಕಾರಿಗಳು ಆಯಾ ಜನರಿಗೆ ಅನುಕೂಲತೆಗಳನ್ನು ಕಲ್ಪಿಸಿಕೊಟ್ಟಲ್ಲಿ, ಅವರು ಅಧಿಕಾರಿಗಳಿಗೆ ಋಣಬದ್ಧರಾಗುವರು.

ನಮ್ಮ ಜಿಲ್ಲೆಯ ಕಲೆಕ್ಟರರಾದ **ಶ್ರೀಯುತ ವೆಂಕಣ್ಣಾ ಹೊಸಬ. ನಾಯಿಕ** ಇವರು 'ಕನ್ನಡಿಗ'ನ ಸಹಾಯಕರಾಗಿ (೧೦) ಹತ್ತು ರೂಪಾಯಿಗಳನ್ನು ದಯಪಾಲಿಸಿದುದಕ್ಕಾಗಿ "ಕನ್ನಡಿಗ"ನು ಅವರಿಗೆ ತುಂಬಾ ಋಣಿಯಾಗಿದ್ದಾನೆ. ಕನ್ನಡ ನಾಡಿನ ಅಭಿಮಾನಿಗಳೂ ಶ್ರೀಮಂತರೂ ಇದೇ ಬಗೆಯಾಗಿ ಅವನನ್ನು ಎತ್ತಿಹಿಡಿದರೆ, "ಕನ್ನಡಿಗ"ನು ವೃದ್ಧಿಹೊಂದದೆ ಇರಲಾರನು. ಹೊರಗಿನ ಜನರೆಲ್ಲ ಈ ಬಗೆಯಾಗಿ ಸಹಾಯಮಾಡುತ್ತಿರುವಾಗ ಬಾಗಲಕೋಟೆಯ ನಿವಾಸಿಗಳು ಪೋಷಕರೂ ಉಪಕಾರಕರ್ತೃಗಳೂ ಆಗಿ ಸಹಾಯಮಾಡಬೇಕೆಂದು "ಕನ್ನಡಿಗ"ನ ಬಿನ್ನಹವಿದೆ.

ಹಿಂದುಸ್ಥಾನಕ್ಕೆ ಮತದ ಪದ್ಧತಿಯು ಬಂದುದು ಕೆಡಕಿಗಾಗಿಯೇ. ಅದು ವೈಮನಸ್ಯದ ಬೀಜ, ವಿಷದ ಬೇರು; ಪಾಶ್ಚಿಮಾತ್ಯರ ಭೇದನೀತಿಯ ಬೇಟೆ. ಇದರಿಂದ ಹಿಂದುಮುಸಲ್ಮಾನರಲ್ಲಿ ಕಲಹಗಳೂ ಆದವು. ಇದರಿಂದ ಬ್ರಾಹ್ಮಣ ಬ್ರಾಹ್ಮಣೇತರರಲ್ಲಿ ವ್ಯಾಜ್ಯಗಳು ಉದ್ಭವಿಸಿದವು. ಈಗ ಕ್ರಿಶ್ಚನ್ನರ ಎರಡು ಪಂಗಡ

ಗಳಾದ ಕೆಥೋಲಿಕ್ ಮತ್ತು ಪ್ರೊಟೆಸ್ಟಂಟರಲ್ಲಿ ಇವರ ಬೇಗೆಯು ಹರಡಲು ಅಣಿಕೆ ನೋಡುತ್ತಿದೆ ಅನೇಕ ಹರಡಿದೆ ಉಳಿದೆಡೆಯಲ್ಲಿ ಒಬ್ಬರನ್ನೊಬ್ಬರು ಮತ್ಸರ್ಯ ದೃಷ್ಟಿಯಿಂದ ನೋಡುವಂತೆ ಕೆಥೋಲಿಕ್ ಪ್ರೋಟೆಸ್ಟಂಟರಾದರೂ ಪರಸ್ಪರರನ್ನು ವಿಕಾರದೃಷ್ಟಿಯಿಂದ ನೋಡಹೊಡಗಿದ್ದಾರೆ ನಾವಂದ ಮಾತಿನ ನಿದರ್ಶನಕ್ಕಾಗಿ ಮಂಗಳೂರಿನ 'ಸತ್ಯವ್ರತ' ಪತ್ರದಲ್ಲಿಯ ಕೆಲವು ಅವತರಣಿಕೆಗಳನ್ನು ಕೊಡುವೆವು. "ಜೆಮ್ಸಫೋರ್ಡ ಮೊಂಟೇಗೋರಿಫೋರ್ಮಿನ ಪ್ರಕಾರ ಸೋಲ್ ವೆಸ್ಟರ್ನ ಕ್ರಿಶ್ಚಿಯನ್ ಗ್ರೂಪ್ ಎಂಬ ಒಂದು ವಿಭಾಗವನ್ನು ಮಾಡಿ ೫ ಜಿಲ್ಲೆಗಳ ಕ್ರೈಸ್ತರ ಪರವಾಗಿ ಮದ್ರಾಸ ನ್ಯಾಯವಿಧಾಯಕ ಸಭೆಯಲ್ಲಿ ಒಂದು ಆಸನವನ್ನು ಪ್ರತ್ಯೇಕಿಸಿಟ್ಟಿರುವದಕ್ಕಾಗಿ ನಾವು ಸರಕಾರದವರಿಗೆ ಕೃತಜ್ಞರಾಗಿಯೇ ಇರುವೆವು. ಆದರೆ ಈ ಕ್ರೈಸ್ತ ಗ್ರೂಪಿನಲ್ಲಿ ಸರಕಾರದವರು ಕೆಥೋಲಿಕ ಕ್ರೈಸ್ತರು ಮತ್ತು ಪ್ರೊತೆಸ್ತಾಂತ ಕ್ರೈಸ್ತರೆಂಬ ಭೇದಾಭೇದವನ್ನು ನೋಡದೆ ಎರಡು ಪಂಗಡಗಳನ್ನೂ ಒಂದಾಗಿ ಸೇರಿಸಿರುವುದು ಒಂದು ದೊಡ್ಡ ತಪ್ಪಾಗಿದೆಂದು ಹೇಳಿದರೆ ಹೆಚ್ಚಾಗದು. ನಮ್ಮ ಜಿಲ್ಲೆಯಲ್ಲಿ ಈ ಎರಡು ಪಂಗಡಗಳನ್ನು ನೋಡಿದಲ್ಲಿ ಇಬ್ಬರೂ ಕ್ರೈಸ್ತರಾಗಿದ್ದ ಪಕ್ಷಕ್ಕೂ ಕೆಥೊಲಿಕ್ ಸಮಾಜದ ಧರ್ಮ ಆಚಾರ ವಿಚಾರಗಳೂ, ಭಾಷೆಯು ಒಂದಕ್ಕೊಂದು ಪ್ರತಿಕೂಲವಾಗಿಯೇ ಇರುತ್ತದೆ. ನಮ್ಮ ಜಿಲ್ಲೆಯ ಅವರ ಸಂಖ್ಯೆಯನ್ನೂ ನಮ್ಮ ಸಂಖ್ಯೆಯನ್ನೂ ನೋಡಿದರೆ ಅಲ್ಲಿಯೂ ಲೋಪ ಬರುತ್ತಿದೆ ನಮ್ಮ ಜಿಲ್ಲೆಯಲ್ಲಿ ೯೬೦೦೦ ಕೆಥೊಲಿಕ ಕ್ರೈಸ್ತರೂ ೧೨,೦೦೦ ಮಾತ್ರ ಪ್ರೊತೆಸ್ತಂತ ಕ್ರೈಸ್ತರೂ ಇರುತ್ತಾರೆ" ಈ ಸ್ಥಿತಿಯಲ್ಲಿ ಪ್ರೊತೆಸ್ತಂತ ಕ್ರೈಸ್ತನು ಆರಿಸಿ ಬರುವಂತಿಲ್ಲ ಇರಲಿ ಕಥೋಲಿಕ ಆರಿಸಿ ಬಂದರೆ ನಿಮ್ಮದೇನು ಹಾನಿಯೆಂದು ಕೇಳಬಹುದು ಆದರೆ ಅನುಭವದಿಂದ ನೋಡಲಾಗಿ ಕೆಥೋಲಿಕರು ಪ್ರೊತೆಸ್ತಂತರಿಗೆ ಯಾವ ಬಗೆಯ ಹಿತವನ್ನು ಮಾಡಿಲ್ಲ. "ಜಿಲ್ಲೆಯ ೫ ತಾಲುಕುಗಳಲ್ಲಿ ೧೨,೦೦೦ ಪ್ರೊತೆಸಂತ ಕ್ರೈಸ್ತರಿರುತ್ತಾ ಒಬ್ಬ ಪ್ರೊತೆಸ್ತಂತ ಕ್ರೈಸ್ತನಾದರು ಡಿಸ್ಟ್ರಿಕ್ಟ ಬೋರ್ಡಿನಲ್ಲಿ ಪ್ರತಿನಿಧಿಯಾಗಿ ನೇಮಿಸಲ್ಪಡಲಿಲ್ಲ. ಈ ಸ್ಥಳಿಕ ಸರಕಾರದ ಬೋರ್ಡುಗಳಿಗಾದರೂ ಈ ಪ್ರೊತೆಸ್ತಂತ ಕ್ರೈಸ್ತರು ಆರಿಸಿ ಬರುವ ಸಂಭವವಿಲ್ಲದಿರುತ್ತಾ ಸರಕಾರದಿಂದಲಾದರೂ ನೇಮಿಸಲ್ಪಡುವ ಬಗ್ಗೆ ಕ್ರೈಸ್ತರ ಪರವಾಗಿ ಕೆಥೊಲಿಕ ಪ್ರತಿನಿಧಿಯು ಈ ವರೆಗೆ ಸರಕಾರದವರೊಡನೆ ವಿಜ್ಞಾಪಿಸಿಕೊಳ್ಳಲಿಲ್ಲ ......ಒಂದೇ ಮಾತಿನಲ್ಲಿ ಹೇಳಬೇಕಾದರೆ, ಪ್ರೊತೆಸ್ತಂತ ಕ್ರೈಸ್ತರ ಕನಿಷ್ಠಾವಸ್ಥೆಗಳನ್ನೂ ಕಷ್ಟಗಳನ್ನೂ ಮಾನ್ಯ ಸರಕಾರದ ಮುಂದೆ ತಂದು ಅವರ ದೀನಾವಸ್ಥೆಯನ್ನು ತೋರಿಸಿ ಕೊಡಲಿಕ್ಕಾದರೂ ಯಾವ ಪ್ರತಿನಿಧಿಯಾದರೂ ಮದ್ರಾಸ ನ್ಯಾಯ ವಿಧಾಯಕ ಸಭೆಯಲ್ಲಿ ಇಲ್ಲವೆಂದು ಹೇಳಬೇಕಾಗಿದೆ." ಮೇಲಿನ ಅವತರಣಿಕೆಗಳಿಂದ ಜಾತಿ ವೈಷಮ್ಯದ ಕಿಚ್ಚು ಮುಖ್ಯ ಜಾತಿಗಳನ್ನಾವರಿಸಿದುದಲ್ಲದೆ, ಒಳಜಾತಿಗಳನ್ನೂ ಮುಸುಕಿದ್ದು ತಿಳಿಯುತ್ತದೆ. ಬ್ರಾಹ್ಮಣ ಬ್ರಾಹ್ಮಣೇತರರ ಜಗಳಗಳು ಹಿಮ್ಮೆಟ್ಟಿ ಬ್ರಾಹ್ಮಣೇತರರಲ್ಲಿಯೇ ಜಗಳಗಳು ಮೂಡಲು ತಾಡಿವೆ. ಕುರುಬರು ತಮ್ಮ ಹಿತಗಳು ಲಿಂಗಾಯತರು ನೋಡುವದಿಲ್ಲೆಂದೂ, ರಡ್ಡೀಜನರು ಲಿಂಗಾಯತರ ಮೇಲೆ ತಮ್ಮ ವಿಶ್ವಾಸವಿಲ್ಲೆಂದೂ ಕೂಗತೊಡಗಿದ್ದಾರೆ. ಹೀಗಾದರೆ ಸಮಾಜದಲ್ಲಿ ಸುಖಶಾಂತಿಗಳು ನಷ್ಟವಾಗಿ, ದೇಶಕ್ಕೆ ಹಿತವಾಗದೆ, ಅನಿಷ್ಟವೇ ಸಂಭವಿಸುವದೆಂಬುದು ನಿಜ ಮತದ ಪದ್ಧತಿಯು ಇಂಗ್ಲಂಡಕ್ಕೆ ಹಿತಕರವಾದುದಿರಬಹುದು. ಅಲ್ಲಿಯ ಸ್ಥಿತಿಯು ಬೇರೆ ಅಲ್ಲಿಯ ಮಾತೇ ಬೇರೆ ನಮ್ಮಲ್ಲಿಯ ಪರಿಸ್ಥಿತಿಗೆ ಅದು ಈಗಂತೂ ಅನುಕೂಲವಿಲ್ಲ ಯಾಕಂದರೆ ಜನರು ಲೋಕಹಿತ ಪ್ರವೃತ್ತರಿಲ್ಲ; ಆತ್ಮಹಿತ ಪ್ರವೃತ್ತರಿದ್ದಾರೆ. ಮತಗಳು ಯೋಗ್ಯತೆಯನ್ನೆಣಿಸಿ ಕೊಡಲ್ಪಡುವದಿಲ್ಲ. ಜಾತಿ ತತ್ವವನ್ನವಲಂಬಿಸಿ ಕೊಡಲ್ಪಡುತ್ತವೆ. ಈ ಪದ್ಧತಿಯು ಹಿತಕರವಾಗಬೇಕಾದರೆ, ಜನರಲ್ಲಿ ಜಾಗೃತಿಯು ಬೇಕು. ತಮ್ಮ ಹಿತ ಮತ್ತು ನಾಡಿನ ಹಿತ ಇದರ ಅರಿವು ಬೇಕು. ಜನರು ಜಾತಿ ತತ್ವಕ್ಕೆ ಮಾನ ಕೊಡದೆ, ಜನಹಿತ ಪರಾಯಣತೆ, ನಿಸ್ವಾರ್ಥತೆ, ಕಾರ್ಯಪಟುತ್ವ, ಇವೇ ಮೊದಲಾದ ಗುಣಗಳುಳ್ಳ ಮನುಷ್ಯರಿಗೆ ಮಾನ ಕೊಡುತ್ತ ಹೋದರೆ, ಅವರ ಹಿತವು ಸಾಧ್ಯವಾಗಿ, ನಾಡಿನ ಹಿತವೂ ಕೈಗೂಡುವದು. ಇಂತಹ ಕೃತಿಯಿಂದ ಇಹಪರಗಳೆರಡೂ ಪದರಿಗ ಬೀಳುವವು.

ಬಸವೇಶ್ವ ರಹಾಯಸ್ಕೂಲದ ಬಗ್ಗೆ "ಮುಂದಾಳು"ವಿನಲ್ಲಿ 'ಶಿವಭಕ್ತ' ರು ಒಂದುಪತ್ರವನ್ನು ಒರೆದಿದ್ದಾರೆ ರಾಮಭಕ್ತನು ಶಿಕ್ಷಕನಲ್ಲ ವೆಂಬುದನ್ನು ಶಿವಭಕ್ತನಿಗೆ ನಾವು ವಿಶ್ವಾಸದಿಂದ ಹೇಳುತ್ತೇವೆ. ಪ್ರಖ್ಯಾತರಾದ ಗ್ರಂಥಕಾರರ ಆಧಾರಗಳಿದ್ದರೆ ಶಿಕ್ಷಕರು ಅವನ್ನು ಪ್ರಕಟಿಸುವ ಧೈರ್ಯವನ್ನು ತಂದು ಕೊಳ್ಳಲಿ. ಸುಮ್ಮ ಸುಮ್ಮನೆ ವಿಜಯನಗರದರಾಜ್ಯವನ್ನು ಆಂಧ್ರರ ಕೊರಳಿಗೆ ಕಟ್ಟ ಹೋಗಲು ಯಾರು ಸಮ್ಮತಿಸುವರು? 'ಮುಂದಾಳು' ವಿಗಾದರೂ ಇದು ಸಮ್ಮತ ವಿದೆಯೇ? 'ಮುಂದಾಳು' ವಿನ ಕಾರ್ಯವು ಕನ್ನಡಿಗರ ಇತಿಹಾಸವನ್ನು ಕನ್ನಡಿಗರಿಗಾಗಿ ಕಾಯಲಿಕ್ಕೋ? ಅಥವಾ ಬೇಲಿಯಂತೆ ಮೇಯಲಿಕ್ಕೋ? ಬ್ರಾಹ್ಮಣೇತರರಿಗೆ ಎಂದೂ ದೋಷ ಕೊಡದೆ ಇರುವ ಓರ್ವರಾದರೂ ಬ್ರಾಹ್ಮಣನು ಇರುವದನ್ನು ಶೋಧಿಸಿದ್ದು ಈಗಿನ ಯುಗದಲ್ಲಿ ಮುಂದಾಳುವಿಗೆ ಭೂಷಣವೇ ಸರಿ. ಇನ್ನು ಶಾಲೆಯಲ್ಲಿ ಬ್ರಾಹ್ಮಣ ಪಠನೀಧರರು ಹೆಚ್ಚಾಗಿದ್ದರೂ ಅವರು ಬ್ರಾಹ್ಮಣ ಲಿಂಗೀ ಬ್ರಾಹ್ಮಣರಲ್ಲಿ (ಕೈ ವಾ. ವಾರದ ಮಲ್ಲಪ್ಪನವರ ಲಿಂಗೀ ಬ್ರಾಹ್ಮಣತ್ವದ ಗಾಳಿ ಮತ್ತೆ ಬಿಸುವದೋ?) ಮತಭೇಧವನ್ನುಂಟು ಮಾಡುತ್ತಿರುವದೂ ಲಿಂಗೀ ಬ್ರಾಹ್ಮಣರಿಗೆ ಕಲಿಸದಿರುವದೂ ನಿಜವಿದ್ದಲ್ಲಿ ಬಸವೇಶ್ವರ ಹಾಯಸ್ಕೂಲದ ಆಡಳಿತೆಯ ಅವ್ಯವಸ್ಥೆಯನ್ನು ಸಿದ್ಧಪಡಿಸುತ್ತದೆ. ಇನ್ನು ಲಿಂಗೀ ಬ್ರಾಹ್ಮಣ ಶಿಕ್ಷಕರು ಶಾಲೆಯ ವ್ಯವಸ್ಥಾಪಕ ಮಂಡಲವನ್ನು ಹಳಿಯುತ್ತಿರುವದು ಸಹ ಬ್ರಾಹ್ಮಣರದೇ ತಪ್ಪೇ? ಏನೇ ಆಗಲೀ ಇನ್ನು ಮೇಲಾದರೂ ಶಾಲೆಯ ವ್ಯವಸ್ಥೆಯು ಚೆನ್ನಾಗಿ ನಡೆಯುವಂತೆ ವ್ಯವಸ್ಥಾಪಕರು ಏರ್ಪಾಡು ಮಾಡಬೇಕೆಂದು ನಮ್ಮ ಸೂಚನೆ.

ವಿರಿಳಿತಗಳು ಪ್ರಪಂಚದಲ್ಲಿ ಬರತಕ್ಕವುಗಳೇ ಕನ್ನಡಕ್ಕೆ ಕೆಲವು ಕಾಲ ಅನಿಷ್ಟಗ್ರಹಗಳು ಹಿಡಿದಿದ್ದಿತು. ಆದುದರಿಂದ ಅದಕ್ಕೆ ಮೋರೆಯೆತ್ತಲು ಅನುವಿದ್ದಿಲ್ಲ. ಇತ್ತೀಚೆಗೆ ಪುನಃ ಶುಭಗೃಹಗಳ ಮಂಗಳ ದೃಷ್ಟಿ ಮೂಲಕವಾಗಿ ತಲೆಯೆತ್ತಹತ್ತಿದೆ. ಕನ್ನಡ ನುಡಿಯ ಸೇವೆಗಾಗಿ ಬೇರೆ ಬೇರೆ ತರದ ಮಾಸಿಕ ಪತ್ರಗಳೂ ವೃತ್ತಪತ್ರಗಳೂ ಹೊರಟಿವೆ. ದುಃಖದ ಮೇಲೆ ದುಃಖ ಎಂಬ ನಾಣ್ಣುಡಿಯು ನಿಜವಿರುವಂತೆ ಸುಖದ ಮೇಲೆ ಸುಖ ವೆಂಬ ನಾಣ್ಣುಡಿಯಾದರೂ ಸತ್ಯವಿರುತ್ತದೆ. ಈಗ ಕ್ಷಯನಾಮ ಸಂವತ್ಸರವಿದ್ದರೂ, ಕನ್ನಡ ನುಡಿಗೆ ಅದು ಅಕ್ಷಯ್ಯಸುಖದ ಸಾಧನವಾಗಿದೆ. ಜಯಕರ್ಣಾಟಕ. ರಂಗಭೂಮಿ. ಸತ್ಯವೃತ, ಪ್ರೇಮ ಇವುಗಳು ಎಲ್ಲ ಕುತ್ತುಗಳನ್ನು ದಾಟಿ ಹೊಸ ವರ್ಷವನ್ನು ಪ್ರಾರಂಭಿಸಿವೆ. ಶಕ್ತಿ, ನವನೀತ. ತರುಣ ಕರ್ಣಾಟಕ. ಮಕ್ಕಳ ಪುಸ್ತಕ. ಮುಂದಾಳು ಇವೇ ಮೊದಲಾದವುಗಳು ಇದೇ ವರ್ಷ ಜನ್ಮತಾಳಿ ಸುಖರೂಪದಿಂದ ಏಳ್ಗೆಯನ್ನು ಹೊಂದುತ್ತಲಿವೆಂಬುದು ಕನ್ನಡಿಗರಿಗೆಲ್ಲ ಹರುಷದ ಸಂಗತಿಯು. ಇವೆಲ್ಲ ಪತ್ರಿಕೆಗಳು ಶಕ್ತ್ಯನುಸಾರವಾಗಿ ತಮ್ಮ ಕರ್ತವ್ಯವನ್ನು ಮಾಡುತ್ತಲಿವೆ. ಇವುಗಳಿಗೆ ಉತ್ತರೋತ್ತರವಾಗಲೆಂದು ನಾವು ಹರಕೆಗಳನ್ನು ಕೊಡುವೆವಲ್ಲದೆ,

ಕನ್ನಡದ ಅಭಿಮಾನಿಗಳು ಕಾಲ ಕಾಲಕ್ಕೆ ಇವುಗಳಿಗೆ ಕಾಣಿಕೆ ಕೊಟ್ಟು, ಪ್ರೇಮದಿಂದ ಇವುಗಳನ್ನು ಬಲವಾಡಿಕೊಳ್ಳುವರೆಂದು ಕೋರುತ್ತೇವೆ. ಅನಿಷ್ಟ ಆಪತ್ತುಗಳು ಬಂದರೂ, ಪತ್ರಿಕಾ ಸಂಪಾದಕರು ಧೈರ್ಯಗುಂದಿ ಅಂಗೀಕೃತ ಕಾರ್ಯಪರಾಙ್ಮುಖರಾಗಕೂಡದು. ಸತ್ಯ ಬಲವನ್ನೇ ದೇವಬಲವು ಆಶ್ರಯಿಸುತ್ತದೆಂದು ನಂಬುಗೆಯನ್ನು ಕೊಟ್ಟು, ಎಲ್ಲ ಪತ್ರಿಕಾಸಂಪಾದಕರಿಗೂ ನಮ್ಮ ಅಭಿನಂದನಗಳನ್ನರ್ಪಿಸುತ್ತೇವೆ

ಆಚಾರ್ಯ ಪ್ರಫುಲ್ಲ ಚಂದ್ರರಾಯರ ಭೆಟ್ಟಿ.

(ನಮ್ಮ ಮೈಸೂರಿನ ಪತ್ರ)

ಆಚಾರ್ಯ ಪ್ರಫುಲ್ಲ ಚಂದ್ರರಾಯರವರು ಮೈಸೂರು ಸರ್ಕಾರದವರಿಂದ ಆಹ್ವಾನಿತರಾಗಿ ಬೆಂಗಳೂರಿಗೆ ನವಂಬರ್ ೧೫ಕ್ಕೆ ಬಂದು ಅನೇಕ ಉಪನ್ಯಾಸಗಳನ್ನಿತ್ತು ಮೈಸೂರಿಗೆ ೨೩ ನೇ ತಾ॥ ರಾತ್ರಿ ಬಂದರು. ರಾಯರು ಬರುವ ಸುದ್ದಿಯು ಮೊದಲೇ ಎಲ್ಲರಿಗೆ ಚೆನ್ನಾಗಿ ತಿಳಿದಿದ್ದದರಿಂದ ಸಂಜೆ ೬ ಘಂಟೆಯಿಂದಲೇ ಜನಸಂದಣಿಯು ಸೇರಲು ಪ್ರಾರಂಭವಾಗಿ ಸುಮಾರು 7½ ಘಂಟೆಗೆ ರೈಲ್ವೆ ಸ್ಟೇಶನ್ನಿನ ಪ್ಲಾಟ್‌ಫಾರ್ಮೆಲ್ಲಾ ಭರ್ತಿಯಾಗಿಹೋಗಿದ್ದಿತು. ಬೆಂಗಳೂರಿಂದ ರೈಲು ಗಾಡಿಯು ೭-೩೦ ಸರಿಯಾಗಿ ಬಂದಿತು. ತಕ್ಷಣವೇ ಮಹಾತ್ಮಾ ಗಾಂಧೀಕಿ ಜೈ, ಪಿ. ಸಿ. ರಾಯಕೀ ಜೈ ಎಂಬ ಜಯಘೋಷಗಳು ಅಂತರಿಕ್ಷವನ್ನು ಮುಟ್ಟಿದವು. ಮೈಸೂರಿನ ಪಿತಾಮಹರು ಮೆ॥ ಎಂ. ವೆಂಕಟಕೃಷ್ಣಯ್ಯನವರು ಹೂವಿನ ತುರಾಯಿಗಳನ್ನು ಒಪ್ಪಿಸಿ ಸುಸ್ವಾಗತವನ್ನು ಬಯಸಿದರು. ನಂತರ ಸ್ಟೇಷನ್ನಿನ ಹೊರಗಡೆ ಒಂದು ದೊಡ್ಡ ಜಾಹೀರ ಸಭೆಯು ಏರ್ಪಡಿಸಿತ್ತು. ಸುಮಾರು ೩೦೦೦ ಸಾವಿರ ಜನರು ನೆರೆದಿದ್ದರು. ಮೆ॥ ಸಿ ನರಸಿಂಹಯ್ಯನವರು ಸ್ವಾಗತಪತ್ರವನ್ನು ಓದಿದರು. ಅದಕ್ಕೆ ರಾಯರವರು ಯೋಗ್ಯವಾದ ಉತ್ತರವನ್ನಿತ್ತು ಅರಮನೆಯಿಂದ ಕಳುಹಿಸಲ್ಪಟ್ಟ ಮೋಟಾರು ಬಂಡಿಯಲ್ಲಿ ಕುಳಿತು ಮೆರವಣಿಗೆಹೊರಟು ರಾತ್ರಿ ಸುಮಾರು ೯ ಕ್ಕೆ ತಮ್ಮ ಬಿಡಾರವನ್ನು ಸೇರಿದರು. ವಿಶ್ವವಿದ್ಯಾಲಯದಿಂದ ಹೊರಬೀಳುವ ಪದವೀಧರರಿಗೆ ಬುದ್ಧಿವಾದಗಳನ್ನು ಹೇಳುವದಕ್ಕೆ ಇದುವರೆಗೆ ಎಷ್ಟೋ ಮಹನೀಯರು ಬಂದರು, ಹೋದರು ಆದರೆ ಶ್ರೀ ರಾಯರಿಗಾದಂಥಾ ಸನ್ಮಾನವು ಮೈಸೂರಿನಲ್ಲಿ ಎಂದೂ ಆಗಿರಲಿಲ್ಲ.

ಮರುದಿನ ಪ್ರಾತಃಕಾಲ ಮೈಸೂರು ಪಟ್ಟಣವನ್ನೆಲ್ಲಾ ಸಂದರ್ಶಿಸಿಕೊಂಡು ಬಂದರು. ಅದೇ ದಿವಸ ಸಾಯಂಕಾಲ ನಗರ ಮಂದಿರದ ಮೈದಾನದಲ್ಲಿ, ಕಾಂಗ್ರೆಸ್ ಕಮೀಟಿಯ ಪರವಾಗಿ ಒಂದು ದೊಡ್ಡ ಜಾಹೀರು ಸಭೆಯು ನೆರೆಯಿತು. ಸುಮಾರು ೩ ಸಾವಿರ ಜನಸಂದಣಿಯು ಸೇರಿತ್ತು. ಮೈಸೂರಿನ ಪಿತಾಮಹರಾದ ಮೆ॥ ಎ. ವೆಂಕಟಕೃಷ್ಣಯ್ಯನವರು ಅಗ್ರಾಸನವನ್ನು ವಹಿಸಿದರು. ರಾಯರವರು ಮಾನಪತ್ರಕ್ಕೆ ಉಚಿತವಾದ ಜವಾಬನ್ನು ಕೊಟ್ಟು "ರಾಷ್ಟ್ರನಿರ್ಮಾಣ" ಎಂಬ ವಿಷಯದಮೇಲೆ ಬಹಳ ಸ್ಫೂರ್ತಿದಾಯಕವಾದ ಭಾಷಣವನ್ನು ಮಾಡಿದರು ಈ ಮಧ್ಯ ಕರ್ನಾಟಕದ ಏಕೀಕರಣದ ವಿಷಯವಾಗಿ ಒಂದೆರಡು ಮಾತುಗಳನ್ನಾಡಿ, ಕರ್ನಾಟಕವು ಸ್ವತಂತ್ರ ಪ್ರಾಂತ್ಯವಾಗಲೆಂದು ಹರಸಿದರು.

ಮುಂದಿನ ದಿವಸ ಸ್ಕೌಟು ಸಂಘದವರು ತಮ್ಮ ಮಾನಪತ್ರವನ್ನು ಒಪ್ಪಿಸಿದರು. ಇದಾದಮೇಲೆ ೨೫ನೇ ತಾರೀಖಿನ ದಿವಸ ವಿಶ್ವವಿದ್ಯಾಲಯದ ಪದವೀದಾನ ಸಮಾರಂಭವು ಜರುಗಿತು. ಶ್ರೀಮನ್ಮಹಾರಾಜರವರು ಅಧ್ಯಕ್ಷರಿದ್ದರು. ಮಿ॥ ಜೆ ಜೆ ಬಾಬಾರವರಿಗೆ ಡಿ. ಲಿಟ್ ಎಂಬ ಪದವಿಯು ಕೊಡಲ್ಪಟ್ಟಿತು. ರಾಯರವರು ಉತ್ತಮೋತ್ತಮವಾದ ಭಾಷಣವನ್ನು ಮಾಡಿದರು. ಒಂದು ಮಹತ್ವದ ಸಂಗತಿಯೇನಂದರೆ, ಇದುವರೆಗೆ ಪದವೀಧರರಿಗೆ ಬುದ್ಧಿವಾದ ಪೂರ್ವಕ ವಾದ ಭಾಷಣ ಮಾಡಲಿಕ್ಕೆ ಬರುವವರು ದರ್ಬಾರು ಪೋಷಾಕಿನಲ್ಲಾಗಲಿ ಅಥವಾ ತಮಗೆ ದೊರಕಿರುವ ಗೌನು ಹೂಡ್ ಮೊದಲಾದವುಗಳನ್ನು ಧರಿಸಿ ಬರಬೇಕಾಗಿದ್ದಿತು. ರಾಯರವರು ಹಾಗೆ ಮಾಡದೆ ತಾವು ಯಾವಾಗಲೂ ಹಾಕಿಕೊಳ್ಳುವ ಪೋಷಾಕನ್ನೇ ಹಾಕಿಕೊಂಡು ಬರಿಯ ತಲೆಯಲ್ಲಿಯೇ ಭಾಷಣವನ್ನು ಮಾಡಿದರು. ಇದಕ್ಕಾಗಿ ಎಲ್ಲರೂ ರಾಯರನ್ನು ಕೊಂಡಾಡಿದರು. ಅದೇ ದಿವಸ ಸಂಧ್ಯಾಕಾಲದಲ್ಲಿ ನಗರದ ಮಂದಿರದ ಮೈದಾನದಲ್ಲಿ ವಿದ್ಯಾರ್ಥಿಗಳೆಲ್ಲರೂ ಸೇರಿ ತಮ್ಮ ಮಾನಪತ್ರವನ್ನು ಒಪ್ಪಿಸಿದರು. ಸಾವಿರಾರು ಮಂದಿ ಸ್ತ್ರೀಪುರುಷರು, ವಿದ್ಯಾರ್ಥಿಗಳೂ, ಮಹಿಳೆಯರೂ ನೆರೆದಿದ್ದರು. ಮಾರನೇ ದಿವಸ ಪ್ರಾತಃಕಾಲ ಕಿವುಡ ಮೂಕರ ಪಾಠಶಾಲೆಯನ್ನು ರಾಯರವರು ಸಂದರ್ಶಿಸಿದರು. ಈ ಮಧ್ಯೆ ನಗರಮಂದಿರದ ಮುಖಮಂಟಪದಲ್ಲಿ ಚರಕದ ಸಂಘವು ಏರ್ಪಡಿಸಲ್ಪಟ್ಟಿತು. ಅಂಜನ ಸಂಘದವರು ಒಂದಿದ್ದರು ಇದರಲ್ಲಿ ಮುಕ್ಕಾಲು ಪಾಲು ಮಂದಿ ಅರಮನೆಯ ಸವಾರು ಲೈನಿನ ಸಿಪಾಯಿಗಳು ಆಚಾರ್ಯರಾಯರು ಚರಕ ಸಂಘವನ್ನು ನೋಡಿ ಬಹು ಆನಂದಪಟ್ಟರು. ಸಂಘಕ್ಕೆ ಬಂದಿದ್ದವರನ್ನು ರಾಯರವರ ಜೊತೆಗೆ ಸೇರಿಸಿ ಫೋಟೋ ತೆಗೆಯಲ್ಪಟ್ಟಿತ್ತು. ಇದಾದಮೇಲೆ ನಗರಮಂದಿರದಲ್ಲಿ ಹಿಂದೀ ಪದವೀದಾನ ಸಮಾರಂಭವು ಏರ್ಪಡಿಸಲ್ಪಟ್ಟಿತ್ತು. ಈ ಸಮಾರಂಭಕ್ಕೆ ಸರ್ಕಾರದ ಅಧಿಕಾರಿಗಳು ಹಾಜರಿದ್ದರು. ಹಿಂದೀ ಪರೀಕ್ಷೆಗಳಲ್ಲಿ ಉತ್ತೀರ್ಣರಾದವರಿಗೆ ಸರ್ಟಿಫೀಕೇಟುಗಳು ರಾಯರವರ ಹಸ್ತದಿಂದ ಹಂಚಲ್ಪಟ್ಟವು.

ಅದೇ ದಿವಸ ಸಾಯಂಕಾಲ ೪ ಘಂಟೆಗೆ ರೇಲ್ವೆ ಸಂಘದವರು ಒಂದು ಮಾನಪತ್ರವನ್ನು ಒಪ್ಪಿಸಿದರು. ಇಲ್ಲಿ ಬಹಳ ಹೊತ್ತು ಮಾತನಾಡದೆ ಒಂದೆರಡು ಮಾತುಗಳಲ್ಲಿ ರೇಲ್ವೆ ಕೂಲಿಗಾರರಿಗೆ ಬುದ್ಧಿವಾದಗಳನ್ನು ಹೇಳಿ ಮಹಾರಾಜಾ ಕಾಲೇಜಿನಲ್ಲಿ ಏರ್ಪಡಿಸಿದ್ದ ಮುಹಮ್ಮದೀಯ ಸಭೆಗೆ ದಯಮಾಡಿಸಿದರು. ಆ ಸಭೆಗೆ ಜಹರುದ್ದೀನ್ ಮೆಕ್ಕಿ ಸಾಹೇಬರು ಅಧ್ಯಕ್ಷರಾಗಿದ್ದರು. ಆಚಾರ್ಯರಾಯರು 'ಹಿಂದೂ ಮುಸಲ್ಮಾನರ ಐಕ್ಯಮತ್ಯದ ವಿಷಯವಾಗಿ ಮಾತನಾಡಿದರು ಪುನಃ ಸಾಯಂಕಾಲ ೭ ಘಂಟೆಗೆ ಮುನಿಸಿಪಲ್ ಕಚೇರಿ ಕಟ್ಟಡದಲ್ಲಿ ಆಚಾರ್ಯರಾಯರವರಿಗೆ ಮಾನಪತ್ರವು ಅರ್ಪಿಸಲ್ಪಟ್ಟಿತ್ತು. ಈ ಮಧ್ಯೆ ಆಚಾರ್ಯರಾಯರವರು ಶ್ರೀಮನ್ ಮಹಾರಾಜರ ಭೇಟಿಯನ್ನು ತೆಗೆದುಕೊಂಡು, ಸಂಸ್ಥಾನ ಸ್ಥಿತಿಗಳನ್ನೂ ರಾಜಕೀಯ ಸುಧಾರಣೆಗಳ ವಿಷಯವನ್ನೂ ಕುರಿತು ಚರ್ಚಿಸಿದರು.

ಆಚಾರ್ಯರಾಯರವರು ೨೮ ನೇ ತಾರೀಖು ರಾತ್ರಿ ಮದರಾಸಿಗೆ ಪ್ರಯಾಣ ಬೆಳಸಿದರು.

ತಾವು ಹೊರಡುವಾಗ ಆಚಾರ್ಯ ಪ್ರಫುಲ್ಲ ಚಂದ್ರರಾಯರವರು ಮೈಸೂರಿನವರಿಗಿತ್ತ ಸಂದೇಶ ಹೇಗೆಂದರೆ—

"ಬ್ರಾಹ್ಮಣ, ಬ್ರಾಹ್ಮಣೇತರ, ಮದ್ರಾಸ, ಮೈಸೂರು, ಹಿಂದೂ, ಮುಸಲ್ಮಾನ ಈ ಭೇದಭಾವಗಳನ್ನು ಮರೆತು ಬಿಡಿ. ನಿಮ್ಮಲ್ಲಿ ಹಿಂದುಸ್ತಾನವೇ ಇದೆಯೆಂದು ನೆನಪುಮಾಡಿಕೊಳ್ಳಿರಿ. ಹಿಂದುಸ್ತಾನವು ಕೇವಲ ಬಡತನ ಸ್ಥಿತಿಯಲ್ಲಿದೆಯೆಂದು ತಿಳಿಯಿರಿ ಹಿಂದುಸ್ತಾನದ ಸ್ವತಂತ್ರವನ್ನು ಜ್ಞಾಪಿಸಿಕೊಳ್ಳಿರಿ. ಖದ್ದರನ್ನು ಧರಿಸುವುದನ್ನು ಮಾತ್ರ ಮರೆಯಬೇಡಿರಿ. ಮೈಸೂರು ಮುಂದಳ್ಳಿ ಇರಲಿ' ಎಂಬುದನ್ನು ಧ್ಯಾನಿಸುತ್ತಿರಿ. ನಿಮ್ಮ ಶ್ರೇಷ್ಠ ರಾಜರೂ, ನಿಮ್ಮ ದೇಶಾಭಿಮಾನವೂ, ಇಡೀ ಹಿಂದೂಸ್ಥಾನಕ್ಕೆ ಉದಾಹರಣೆಯಾಗಿರಲಿ."

ಕೌಶಿಕನಿಗೆ ರಂಗಭೂಮಿಯ ಉತ್ತರ.

ಸಂಪಾದಕ ಮಹಾಶಯ.

ತಮ್ಮ ೧೨-೧೧-೧೯೨೬ನೆಯ ತಾರೀಖಿನ ೨೧ನೆಯ ಸಂಚಿಕೆಯಲ್ಲಿ 'ಕೌಶಿಕ'ರು ನನ್ನಿಂದ ಉತ್ತರವನ್ನು ಅಪೇಕ್ಷಿಸಿ, ಕೆಲವು ಪ್ರಶ್ನೆಗಳನ್ನು ಕೇಳಿರುವರು. ಅವರ ಲೇಖನ ಮಾಲೆಯನ್ನು ನಾನು ನೋಡುತ್ತಿದ್ದೇನೆ. ಆದರೆ ಅವರು ಮೊದಲನೆಯ ಲೇಖನದಲ್ಲಿ ವೈಯ್ಯಕ್ತಿಕ ಮಂಡಳಿಗಳನ್ನು ಕುರಿತು ಖಂಡನೆಮಾಡುವ ಪದ್ಧತಿಯು ಸರಿಯಲ್ಲ. ಅವರ ಖಂಡನೆಗಳಿಂದ ಈಗಿರುವ ನಾಟಕ ಮಂಡಳಿಗಳು ಸುಧಾರಿಸಿಕೊಳ್ಳಲು ಯೋಗ್ಯವಾದ ಸೂಚನೆಗಳು ದೊರೆಯುವಂತಿದ್ದರೆ ಅದು ನಿಜವಾದ ಸುಧಾರಣೆಯ ಲೇಖನವೆನಿಸಿಕೊಳ್ಳುವುದು. ಅಲ್ಲದೆ ವೈಯ್ಯಕ್ತಿಕ ಮಂಡಳಿಗಳನ್ನು ತೆಗೆದುಕೊಂಡರೆ ಕೌಶಿಕರು ನಿಜವಾದ ಸುಧಾರಣೆಯನ್ನೇ ಬಯಸದೇ, ತಾವಿದ್ದ ಯಾವುದೋ ನಾಟಕ ಕಂಪನಿಯನ್ನು ಬಿಟ್ಟು ಅವರ ಮೇಲೆ ವಿಷಕಾರಲೆತ್ನಿಸಿರುವ ಒಬ್ಬ ವ್ಯಕ್ತಿಯೆಂದು ಮಂಡಳಿಯವರೂ ಜನರೂ ತಿಳಿದುಕೊಳ್ಳಲು ಮಾರ್ಗವಾಗುವುದು. ಆದುದರಿಂದ ಆ ವಿಧವಾದ ಖಂಡನ ಮಾರ್ಗದಿಂದ ಸುಧಾರಣೆ ಮಾಡಲು ಹೋಗಕೂಡದು. ಅದು ವಿನಾಶಕ ಮಾರ್ಗವೇ ವಿನಾ ಸಮರ್ಪಕ ಮಾರ್ಗವಲ್ಲವೆಂದು ನನ್ನದೊಂದು ನಮ್ರ ಸೂಚನೆ ಕೌಶಿಕರಿಗೆ.

ಇನ್ನು ಅವರು ಎಣಿಸಿರುವ ರಂಗಭೂಮಿಯ ಸುಧಾರಣೆ ನೆನೆಸಿದಾಕ್ಷಣವೇ ನೆರವೇರುವಂಥಾದ್ದಲ್ಲ. ಅದಕ್ಕೆ ಈಗ ಅಡಿಗಲ್ಲನ್ನು ಹಾಕುತ್ತಹೋದರೆ, ಇನ್ನು ೫೦ ವರ್ಷಗಳೊಳಗೆ ಅದರ ಸುಧಾರಣೆಯಾದರೆ ಅದು ನಮ್ಮ ಭಾಗ್ಯವೆನ್ನಬಹುದು. ಈ ಸುಧಾರಣೆಗಾಗಿಯೇ ನನಗೆ ಗೊತ್ತಿರುವ ಮಟ್ಟಿಗೆ ಕೆಲವು "ಹವ್ಯಾಸಿ ನಾಟಕ ಮಂಡಲಿ"ಗಳೂ ಕೆಲವು ನಾಟಕ ವ್ಯವಸಾಯಿ ಮಂಡಳಿಗಳೂ ಪ್ರಯತ್ನಮಾಡುತ್ತಿರುವವು. ಆದರೆ ಅವುಗಳಿಂದಲೂ ಸ್ವಲ್ಪ ಕಾಲದಲ್ಲಿ ವಿಶೇಷ ಕಾರ್ಯವಾದೀತೆಂಬ ಭರವಸೆಯಿಲ್ಲ. ಏಕಂದರೆ ಈಗ ಮೊದಲು ನಮ್ಮ ಸಮಾಜದಲ್ಲಿಯೆ ಎಷ್ಟೋ ದೋಷಗಳಿವೆ. ಆ ದೋಷಗಳನ್ನು ನಿವಾರಿಸಲು, ಮಹಾತ್ಮಾ ಗಾಂಧಿಯಂತಹ ಮಹನೀಯರು ಎಷ್ಟು ಪ್ರಯತ್ನಪಡುತ್ತಿರುವರೆಂಬುದು ಎಲ್ಲರಿಗೂ ತಿಳಿದ ಮಾತು. ಸಮಾಜ ಸುಧಾರಣೆಯಾಗುತ್ತಹೋದಂತೆ ಸಮಾಜದ ಇತರ ಅಂಗಗಳು ತಾವಾಗಿ ಸುಧಾರಣೆಹೊಂದುತ್ತಹೋಗುವವು. ನಿಜವಾಗಿ ನೋಡಿದರೆ ನಮ್ಮ ಪವಿತ್ರ ದೇವಾಲಯ ಕೂಟ ಪದ್ಧತಿಗಳೂ ಇತರ ಪರಿಷೆ, ಜಾತ್ರೆ ಇತ್ಯಾದಿ ಪದ್ಧತಿ ಈಗಿನ ಕಾಲದಲ್ಲೆಷ್ಟು ದೋಷಪೂರ್ಣವಾಗಿರುವವು ಎಂಬುದನ್ನು ನೋಡಿದರೆ, ಈಗಿನ ನಾಟಕ ಮಂಡಲಿಗಳು ಮಾತ್ರವೇ ಸಮಾಜದ ಅವನತಿಗೆ ಕಾರಣವಾಗಿರುವವೆಂದು ಹೇಳಲಿಕ್ಕಾಗದು. ನನ್ನ ಅಭಿಪ್ರಾಯದಲ್ಲಿ ಈಗಿನ ನಾಟಕ ಮಂಡಲಿಗಳಿಗಿಂತಲೂ ಪಾಶ್ಚಾತ್ಯ ದೇಶದಿಂದ ಬಂದು ಪ್ರತಿಯೊಂದು ಪಟ್ಟಣದಲ್ಲಿಯೂ ಹರಡುತ್ತಿರುವ 'ಸಿನಿಮಾ' 'ಬಾಯಸ್ಕೋಪ್' ಪ್ರದರ್ಶನಗಳಿಂದ ನಮ್ಮ ಸಮಾಜಕ್ಕೆ ಹೆಚ್ಚಿನ ನಷ್ಟವುಂಟಾಗುತ್ತಿದೆಯೆಂದು ತೋರುವುದು. ಆದಾಗ್ಗ್ಯೂ ನಮ್ಮಲ್ಲಿ ಸುಶಿಕ್ಷಿತ ಜನರೇ ಎಷ್ಟು ಮಂದಿ ಅವುಗಳಿಗೆ ಹಣವನ್ನು ಸೂರೆ ಮಾಡುತ್ತಿಲ್ಲ. ಶ್ರೀ ಕೌಶಿಕರು ಇಂತಹ ಸಿನಿಮಾ ಪ್ರದರ್ಶಕ ಮಂಡಳಿಗಳ ಮೇಲೆ ಟೀಕಿಸಿ, ಅದಕ್ಕೆ ನಮ್ಮ ಜನರು ಹಣ ಸೂರೆಮಾಡುವುದನ್ನು ನಿಲ್ಲಿಸಿದರೆ ಅದರಿಂದ ಎಷ್ಟೋ ಸಮಾಜ ಸುಧಾರಣೆ ಮಾಡಿದಂತಾಗುವುದು.

ಇನ್ನು ಈಗಿರುವ ನಾಟಕ ಮಂಡಳಿಗಳಿಂದ ಕಿಂಚಿತ್ತಾದರೂ ನಾಡಿಗೆ ಪ್ರಯೋಜನವುಂಟಾಗುತ್ತಿರುವುದೆಂದು ನನ್ನ ವಿಶ್ವಾಸ. ಏಕಂದರೆ ಕರ್ನಾಟಕದ-ಅದರಲ್ಲಿಯೂ ಮುಖ್ಯವಾಗಿ ಭಾಷೆಯ ಏಕೀಕರಣದ ವಿಚಾರದಲ್ಲಿ-ನಾಟಕ ಮಂಡಲಿಗಳಿಂದ, ಕೀರ್ತನಕಾರರಿಂದ ಎಷ್ಟೋ ಸಹಾಯವಾಗಿರುವುದು, ಆಗುತ್ತಿರುವುದು, ಮುಂದೆಯೂ ಆಗುವುದು. ಈ ವಿಧವಾದ ಐಕ್ಯವು ಮತ್ತಾವ ವಿಧದಿಂದಲೂ ಆಗಲಾರದು. ಆದುದರಿಂದ ನಾಟಕ ಮಂಡಳಿಗಳ ಈ ಉಪಯುಕ್ತತೆಯ ಕಡೆಗೆ ನಾವು ಲಕ್ಷ್ಯವಿಟ್ಟು, ಅವುಗಳ ಹಿತವನ್ನೇ ಬಯಸುತ್ತ ನಾವು ಮಾಡಬೇಕೆಂದಿರುವ ಸುಧಾರಣೆಯ ಮಾರ್ಗದ ಕಡೆಗೆ ಮಂಡಳಿಗಳನ್ನೆಳೆಯಲು ಎತ್ನಿಸಬೇಕು. ಆದರೆ ನಾಳೆಯ ದಿನವೇ ನಾಟಕ ಮಂಡಳಿಗಳು ನಾವು ಬಯಸುವಂತಾಗಬೇಕೆಂಬುದು 'ಆಕಾಶ ಕುಸುಮ' ವಿಚಾರವೇ ಸರಿ. ಏಕಂದರೆ ಮಂಡಲಿಗಳು ಮೊದಲು ತಮ್ಮ ಉದರ ನಿರ್ವಾಹವನ್ನು ಮಾಡಿಕೊಳ್ಳಬೇಕು. ಅದಕ್ಕಾಗಿ ಅವರಿಗೆ ಮುಖ್ಯ ಆಶ್ರಯದಾತರಿಂದ ನಾಲ್ಕಾಣೆ ಎಂಟಾಣೆ ವರ್ಗದವರ ಮನಸ್ಸನ್ನು ಆಕರ್ಷಿಸಬೇಕಾಗುವುದು. ಇದಕ್ಕಾಗಿ ಸ್ವಲ್ಪ ಮಟ್ಟಿಗಾದರೂ ಕವಿಯು (ನಾಟಕಕಾರನು) ಕೂಡ ಜನರಂಜನೆ ಮಾಡಲೆತ್ನಿಸಿ ನಾಟಕವನ್ನು ರಚಿಸಬೇಕಾಗುವುದು. ಈ ಅನುಭವವು ಒಂದು ನಾಟಕ ಮಂಡಳಿಗೆ ನಾಟಕಗಳನ್ನು ಬರೆದುಕೊಟ್ಟಿರುವ ಅನುಭವವು 'ಕೌಶಿಕ'ರಿಗೂ ಇದ್ದೇ ಇರುವುದು. ಈಗಣ ಉತ್ತರ ಕರ್ನಾಟಕ ನಾಟಕ ಮಂಡಳಿಗಳಾಡುವ ನಾಟಕಗಳಲ್ಲಿ ಮರಾಠೀ ನಾಟಕಗಳ ಛಾಯೆಯು ಎಷ್ಟೋ ಇರುವುದು. ಆದಾಗ್ಗ್ಯೂ ಅವುಗಳು ಕೂಡ ನಮ್ಮ ದೃಷ್ಟಿಗೆ ದೋಷಪೂರ್ಣವಾಗಿರುವೆಂದರೆ, ಕರ್ನಾಟಕಕ್ಕಿಂತಲೂ ಎಷ್ಟೋ ಮುಂದರಿದು ಹೋಗಿರುವ ಮರಾಠಿ ರಂಗಭೂಮಿಯ ಸ್ಥಿತಿಯೇ ಹಾಗಿರಬೇಕಾದರೆ, ಈಗೀಗ ಎಚ್ಚರಿಯುತ್ತಿರುವ ಕರ್ನಾಟಕದ ಸ್ಥಿತಿಯೆಂತಿರಬೇಕು? ಒಟ್ಟಿನಲ್ಲಿ ಹೇಳುವುದಾದರೆ ನಾವು ಸುಧಾರಣೆಯ ಧ್ಯೇಯವಿಟ್ಟುಕೊಂಡು, 'ಕೂತು ಮಲಗಬೇಕು' ಎಂಬ ನಾಣ್ಣುಡಿಯನ್ನನುಸರಿಸಿ, ನಮ್ಮ ಧ್ಯೇಯ ಮಾರ್ಗದಲ್ಲಿ ಮೆಲ್ಲಗೆ ಹೆಜ್ಜೆಯನ್ನಿಡುತ್ತ, ನಾಟಕ ಮಂಡಳಿಗಳನ್ನು ನಮ್ಮೊಂದಿಗೆ ಒಯ್ಯುವುದಾದರೆ ಯಾವ ಸುಧಾರಣೆಯಾದರೂ ಆದೀತೇ ವಿನಾ, ನಾವು "ಪುಡಿ ಪುಡಿ" ಮಾಡುವ ವಿನಾಶಕ ಮಾರ್ಗವನ್ನು ಹಿಡಿದರೆ ಅದರಿಂದ ಯಾವ ಪ್ರಯೋಜನವೂ ಆಗಲಾರದು; ಮಾತ್ರವಲ್ಲ, ಅಂತಹ ಲೇಖನಗಳಿಂದ ವ್ಯಥಾ ಕಾಗದ ಮಸಿಗಳ ನಷ್ಟವೇ ಆಗುವುದು. ಇದು ನನ್ನ ಉತ್ತರಕ್ಕೆ ಮೊದಲು ನನ್ನ ಮಿತ್ರರಾದ "ಕೌಶಿಕ"ರಿಗೆ ಸೂಚಿಸಬೇಕಾದ ನಮ್ರ ಸೂಚನೆಯಾಯಿತು. ಇನ್ನು ಉತ್ತರ.

(೧) "ರಂಗಭೂಮಿ"ಯ ಧ್ಯೇಯವಾವುದು? ಎಂಬುದನ್ನು ಕುರಿತು ರಂಗಭೂಮಿಯು ತನ್ನ ಜನ್ಮದ ಕಾರಣವನ್ನು ಪ್ರಥಮ ಸಂಚಿಕೆಯ ಅಗ್ರಲೇಖನದಲ್ಲಿಯೇ ಹೇಳಿಕೊಂಡಿರುವುದು. ಅದರ ಅಂಶವನ್ನು 'ಕನ್ನಡಿಗ'ನೂ ಪ್ರಕಟಿಸಿರುವನು. ಅದನ್ನು ನೋಡಿದರೆ ರಂಗಭೂಮಿಯ ಸುಧಾರಣೆ 'ರಂಗಭೂಮಿ' ಪತ್ರಿಕೆಯ ದೃಷ್ಟಿಯಿಂದ ಯಾವುದೆಂಬುದನ್ನು ತಿಳಿಯಬಹುದು.

(೨) ಈ ಪ್ರಶ್ನೆಗೆ ಉತ್ತರವನ್ನು ಕೌಶಿಕರೇ ತಮ್ಮ ಲೇಖನದ [ಪುಟ ೭] ಭಾಗದಲ್ಲಿಯೇ ಹೇಳಿಕೊಂಡಿರುವರು. ಅದೇ ರಂಗಭೂಮಿಯ ಅಭಿಪ್ರಾಯ.

(೩) ಸಮಾಜ ಸುಧಾರಣೆಯಾಗಿ ಅಂತಹ ಆದರ್ಶ ಮಂಡಳಿಯೊಂದು ನಿರ್ಮಾಣವಾಗಿ ಅಲ್ಲಿಗೆ ಬರುವ ಪತಿತರೂ ಪಾವನತರ ಮಾರ್ಗವನ್ನವಲಂಬಿಸುವಂತಿದ್ದರೆ ಆಗಕೂಡದೇಕೆ?

(೪) 'ಒಂದು ನಾಟಕ ಸಂಘವನ್ನು' ಸಂಪಾದಕರನ್ನು ಎಂದು ಕೇಳುವಾಗ ಅವರು ಸುಶಿಕ್ಷಿತ ಕುಲೀನಸ್ತ್ರೀಯರೇ (ಬಾಹ್ಯ ಜರೇ) ಬರುವದೆಂದು ಸಂಪಾದಕರಿಗೆ ಹೇಳಿದರು. ಅದಕ್ಕೆ ನಾನು ನಿಜವಾಗಿಯೂ ಹಾಗೆ ಸುಶಿಕ್ಷಿತರೂ ಕುಲವತಿಯರೂ ನಿಮ್ಮಲ್ಲಿಗೆ ಬಂದು, ನೀವೂ ನಾಟಕ ಮಂಡಲಿಗೆ ಬಂದಿರುವ ಕಲಂಕವನ್ನು ಹೋಗಲಾಡಿಸಲು ಆದರ್ಶ ಮಾರ್ಗವನ್ನವಲಂಬಿಸಿದರೆ, ಮಂಡಳಿ ನಿಜವಾಗಿ ನಾಡಿನ ಭಾಗ್ಯೋದಯ ಸೂಚನೆ ಯೆಂದೇ ಹೇಳಬಹುದು. ಆದರಿಂದ ನೀವೊಂದು ಖ ಷಿಕುಲ ಮಾದರಿಯನ್ನೇ ತೋರಿದಂತಾಗುವದು. ಆದರೆ ಇದರ ಜವಾಬ್ದಾರಿಯನ್ನು ನೀವು ಹೊತ್ತು ಕೊಳ್ಳುವಿರೊ ನೀವೇ ನೋಡಿಕೊಳ್ಳಿ!" ಎಂದಿಷ್ಟು ಹೇಳಿದ್ದೆನು ನಿಜ ಬ್ರಹ್ಮಚರ್ಯ ಬೋಧಕರಾಗಿದ್ದ ಶ್ರೀ ಕೌಶಿಕರಾದರೂ ಇದೇ ಉತ್ತರವನ್ನು ಕೊಡುತ್ತಿದ್ದರೆಂದು ನಂಬುತ್ತೇನೆ.

(೫) ರಂಗಭೂಮಿ ಪತ್ರಿಕೆಯಲ್ಲಿ ಈ ವಿಚಾರವನ್ನೆತ್ತಲು ಈಗ ಕಾಲವೇ ಬಂದಿಲ್ಲವೆಂದು ಹೇಳಿದರೆ ನನ್ನ ಪೂರ್ಣ ಆಶ್ರಯವು ಗೊತ್ತಾಗಬಹುದು. ರಂಗಭೂಮಿಯ ಸುಧಾರಣೆಯು ರಂಗಭೂಮಿ ಪತ್ರಿಕೆಯ ಧ್ಯೇಯವಂತಾದ ಮೇಲೆ ಅದರ ವಿಚಾರವನ್ನು ಮಾಡಬಹುದು.

ಇನ್ನೊಂದು ವಿಚಾರ. ರಂಗಭೂಮಿಯಂತಹ ಸುಧಾರಣೆಯನ್ನು ಬಯಸುವ ಪತ್ರಿಕೆಯೊಂದು ಅತ್ಯಾವಶ್ಯಕವೆಂಬುದನ್ನು ಎಂದರೆ ರಂಗಭೂಮಿಯ ಸುಧಾರಣೆಯನ್ನು ಬಯಸುವ ನಾಟಕ ಮಂಡಳಿಗಳೆಷ್ಟು ಕರ್ಣಾಟಕದಲ್ಲಿರುವುವೆಂಬುದನ್ನು ರಂಗಭೂಮಿ ಪತ್ರಿಕೆಯ ಪೋಷಕರ ಪಟ್ಟಿಯನ್ನು (ಪತ್ರಿಕೆಯ ರಕ್ಷಾಪತ್ರದಲ್ಲಿ ಅಚ್ಚಾಗಿರುವುದು) ನೋಡಿದರೆ ಗೊತ್ತಾಗುವುದು. ಆದಾಗ್ಗೂ 'ರಂಗಭೂಮಿ' ಯು ದ್ವಿತೀಯ ವರ್ಷದಲ್ಲಿ ಪದಾರ್ಪಣ ಮಾಡಿದೆ. ಇನ್ನು ಈ ವರ್ಷ ಎಷ್ಟು ಮಂಡಲಿಗಳು ಇದಕ್ಕೆ ಸಹಾನುಭೂತಿಯನ್ನು ತೋರುವವೊ ನೋಡಬೇಕು. ಇಂತಹ ಪರಿಸ್ಥಿತಿಯಲ್ಲಿ ನಾವೆಷ್ಟೋ ಜಾಗರೂಕತೆಯಿಂದ ಸುಧಾರಣೆಯ ಮಾರ್ಗವನ್ನನುಸರಿಸಬೇಕೆಂದು ಕೌಶಿಕರಿಗೆ ನನ್ನ ನಮ್ರ ಸೂಚನೆ. — ಇತಿ

ದ. ಕೃ. ಭಾರದ್ವಾಜ
ಸಂಪಾದಕ, "ರಂಗಭೂಮಿ"

ಲೇಖಕರ ಲೆಕ್ಕಾಚಾರ.

'ಅನಾರಂಭೋಹಿ ಕಾರ್ಯಾಣಾಂ ಪ್ರಥಮಂ ಬುದ್ಧಿ ಲಕ್ಷಣಂ'

'ಚಂದ್ರೋದಯ' ಕರ್ತರ ಒಂದು ಲಕ್ಷ ರೂಪಾಯಿಗಳ ಬೆಲೆಯ ಬರಹವು ಅತ್ಯಂತ ಉಚಿತವಾಗಿದೆ. ಸಂಪಾದಕ ಸಾಹೇಬರವರು ಕರ್ಣಾಟಕ ಭೂಷಣರಾಗಿರುವರು. ಅವರ ಮಾತಿನಲ್ಲಿ ನಮಗೆ ಅತ್ಯಂತ ಗೌರವವಿರುವದು ಒಬ್ಬನೇ ಸಂಪಾದಕನಾಗಿದ್ದರೂ ಸರಿ, ಸಾಲವಾದರೂ ಚಿಂತೆಯಿಲ್ಲ, ವರ್ಷ ಮುಗಿಯದೆ ಪತ್ರಿಕೆಯನ್ನು ನಿಲ್ಲಿಸಲಿಕ್ಕಿಲ್ಲವೆಂಬ ಕೃತನಿಶ್ಚಯದಿಂದಲೆ ಪ್ರತಿ ವರ್ಷಾರಂಭದಲ್ಲಿ ಲೇಖನಿಯನ್ನು ಧರಿಸಬೇಕೆಂದು ಪತ್ರಕರ್ತರಿಗೆ ನಾವು ಸೂಚಿಸಬೇಕಾಗಿರುವದು.

ಪತ್ರಿಕಾ ಕರ್ತರ ಗೋಳನ್ನು ಕೇಳಿದ ಮೇಲೆ ಬರೆಯುಗಾರರ ಬವಣೆಯನ್ನು ಕನ್ನಡಿಗರು ಕೇಳುವದು ಕ್ರಮಪ್ರಾಪ್ತವಾಗಿರುವದು. "ವಿವಿಧ ಜ್ಞಾನವಿಸ್ತಾರ"ದ ಇದೇ ಸಂಚಿಕೆಯಲ್ಲಿ "ಮುಕ್ತಮನವಾಗಿ ಬಂದ ಬರೆಹಗಳನ್ನು ಪ್ರಕಟಿಸಿ ದುಡ್ಡು ನಾವು ಕೊಳ್ಳುವ (ಅಥವಾ ದೊಡ್ಡವರಾಗುವ) ಪತ್ರಕರ್ತರಿಂದ ಸದಾಶ್ಯಯವು ಈಡೇರುವದು ಹೇಗೆ? ಲೇಖನಗಳನ್ನು ಪ್ರಕಟಿಸುವ ನಮ್ಮ ಉಪಕಾರಗಳನ್ನು ಈ ಜನ್ಮದಲ್ಲಿ ಬರೆ ಬರೆಹವವರು ಮುಟ್ಟಿಸಲಿಕ್ಕಿಲ್ಲವೆಂಬ ಭಾವನೆಯು ಸಂಪಾದಕರದೂ ಅಷ್ಟೇ ಸರಿ. ಗ್ರಂಥಕರ್ತನ ಕಾಲುಪಾಲಿನ ಜ್ಞಾನವೂ ಇಲ್ಲದ ವಕೀಲರೇ ಮೊದಲಾದವರು ಲಕ್ಷಾಧಿಪತಿಗಳಾಗುತ್ತಿರುವಲ್ಲಿ ಗ್ರಂಥಕರ್ತರು ಭಿಕ್ಷಾಧಿಪತಿಗಳಾದರೂ ಅವರಿಗೆ ಭಿಕ್ಷೆ ನೀಡುವವರೂ ಇಲ್ಲ. ಇದಕ್ಕುಪಾಯವೇನೂ ಇಲ್ಲ. ಪಾಶ್ಚಾತ್ಯರಲ್ಲಿಯೂ ಇದೇ ಸ್ಥಿತಿಯಿರುವದು. ನಿಯತಕಾಲಿಕಗಳಿಂದ ಗ್ರಂಥಪ್ರಚಾರವು ಮುಂದ ಗತಿಸೈಯುವ ಕಾಲವು ನಮ್ಮಲ್ಲಿಲ್ಲ. ವಾಙ್ಮಯ ವಿಚಾರದಲ್ಲಿ ಆಶೆಯ ಕಿರಣಗಳು ಶ್ರೀ. ಆಪಟೆಯವರಂತೆ ನಮಗೆ ತೋರುವದಿಲ್ಲ. ಈ ಮಾತುಗಳೆಲ್ಲ ನಮಗಿಂತ ಒಂದಿಷ್ಟು ಮುಂದೆ ಹೋದ ಮರಾಠಿಯವರ ಸಂಬಂಧದವು. ನಮ್ಮಲ್ಲಿ ಇನ್ನೂ ಏತಕ್ಕೂ ಆರಂಭವಿಲ್ಲ. ಪ. ವಾ. ಗಳಾದ ಪೂಜ್ಯ ಮೋರಮಕರರು ವರ್ಷಾನುವರ್ಷ ಸಾವಿರಾರು ರೂಪಾಯಿಗಳ ಸ್ವಂತವೆಚ್ಚದಿಂದ ಕೇವಲ ವಾಙ್ಮಯೋನ್ನತಿಯನ್ನೇ ಗುರಿಯಾಗಿಟ್ಟಿರುವ ವಿಶ್ವಾಸದವರು ಆ ಕಟೂಕ್ತಿಗಳನ್ನಾಡಲು ಸರ್ವಥಾ ಯೋಗ್ಯರಾಗಿರುವರು.

ನಮ್ಮಲ್ಲಿ ಮಾಸಪತ್ರಿಕೆಗಳಿಗೆ ಸಹ ಬರೆಯುವವರು ಅಪೂರ್ವ. ಇನ್ನು ಸಾಪ್ತಾಹಿಕದ ಮಾತೇನು? ಸಾಪ್ತಾಹಿಕದವರೇ ಲೇಖನ, ಮುದ್ರಣ, ಪ್ರಕಾಶನ, ಪ್ರೇಕ್ಷಣ ಇತ್ಯಾದಿ ಎಲ್ಲವನ್ನೂ ಒಬ್ಬರೇ ಮಾಡಬೇಕಾಗಿರುವದು. ಅದಕ್ಕನುಗುಣವಾಗಿ ಲೇಖಕರ ಗೋಳನ್ನು ಚಂದ್ರೋದಯ ಕರ್ತರು ಸೂಚಿಸದಿರುವದು ಸರಿಯೆ. 'ಸಿನೆಮಾ' ಚಿತ್ರಪಟಗಳ ತಯಾರಿಗಳಲ್ಲಿ ಅನೇಕ ದೃಶ್ಯಗಳ ಸಂಗ್ರಹಾರ್ಥವಾಗಿ ಅನೇಕ ಕೆಲಸಮಾಡಬೇಕಾಗಿ ಲಕ್ಷಾವಧಿ ದ್ರವ್ಯ ವ್ಯಯವಾಗುವಂತೆ ಉತ್ತಮ ಲೇಖನಗಳ ತಯಾರಿಯ ಕೆಲಸವೂ ಕೆಲಮಂಶದಿಂದ ಇರುವದು. ನಮ್ಮಲ್ಲಿಯ ಹರುಕು ಲೇಖಕರು ವೆಚ್ಚಮಾಡಿಯಾರೇನು? ಮಾಡಿದರೂ ಆದೀತೇನು? ಆದರೂ ಅವರ ಲಿಖಿತಗಳನ್ನೋದಿ ಸಂತೋಷ ಪಡುವವರೇ ಇಲ್ಲದಿರಲು, ಪ್ರಯೋಜನವಾದೀತೇನು?

ಹೀಗಿದ್ದರೂ ಹುರಿ ಸುಟ್ಟರೂ ಮುರಿಗೆ ಸುಡಲಿಲ್ಲವೆಂಬಂತೆ ಪತ್ರಕರ್ತರಂತೆ ತಲೆತಿರುಕರಾದ ಲೇಖಕರೂ ಇರುವರು. ಅವರಿಗೆ ತುತ್ತಿಗೆ ತತ್ವಾರವಾದರೂ ಅವರ ನೆತ್ತಿಯ ತುಂಬ ಇದ್ದ ನಾಮಕ್ಕೆ ಕಡಿಮೆಯಿಲ್ಲ. ಒಣ ಜಂಬವೋ, ಅಭಿಮಾನವೋ, ಹುಚ್ಚು ಕುಣಿತವೋ ಏನೋ ಒಂದು ಕೆಲವರನ್ನು ಬಿಡದುಕೊಂಡಿರುವದು. ನಿರ್ಗತಿಕರಾದ ಲೇಖಕರು ಬರೆದು ಕಳುಹಿಸಿದ ಬರೆಹವು ಪ್ರಕಟವಾದ ಒಂದೇ ಒಂದು ಪತ್ರಿಕೆಯನ್ನಾದರೂ ಕಳುಹಿಸುವ ಔದಾರ್ಯವು ನಮ್ಮ ಎಷ್ಟೋ ಪತ್ರಕರ್ತರಿಗೆ ಇಲ್ಲ! ಇಂತಹ ನಿರಾಶೆಯ ಕಗ್ಗತ್ತಲೆಯಲ್ಲಿ, ನಿರುತ್ಸಾಹದ ವಾತಾವರಣದಲ್ಲಿ, ನಿಂದಾಪಶಬ್ದಗಳ ಸುರಿಮಳೆಯಲ್ಲಿ ಸ್ವತಃ ವೆಚ್ಚಮಾಡಿ-ಅದುದು ವೆಚ್ಚ! ಭಯವೇಕೆ? ಭಿಕಾರಿಯ ಮುಷ್ಟಿ ಹಿಟ್ಟಿನ ದಾನದಲ್ಲಿ ರಾಜಾಧಿರಾಜನ ಅಶ್ವಮೇಧವೂ ಸೊಪ್ಪಾಗಾಯಿತೆಂಬ ಮಾತು ಸುಳ್ಳಲ್ಲ. ಲೇಖಕರಿಗೂ ವೆಚ್ಚವಿರುವದು— ಬರೆಯ ಬೇಕು!

ಪತ್ರಕರ್ತರು, ಲೇಖಕರು ಇಬ್ಬರೂ ಅಣ್ಣತಮ್ಮಂದಿರಲ್ಲವೇ? ವಾರವಾರಕ್ಕೆ ತಿಂಗತಿಂಗಳಿಗೆ ನಾಮವು ಪ್ರಕಟವಾಗುವದೆಂದು ಸಂಪಾದಕರು ತಿಳಿಯಬೇಕು. ಒಂದಿಷ್ಟು ಏಕೆ? ವಿಶೇಷ ಜವಾಬದಾರಿಯನ್ನೂ ಅವರು ಹೊರುತ್ತಿರುವರು ಹಿರಿಯಣ್ಣಯ್ಯಗಳು ತಮ್ಮಯ್ಯನ ಕಡೆಗೆ ಒಂದಿಷ್ಟು ಕೃಪಾದೃಷ್ಟಿಯ

ಸ್ನಿಡಬೇಕೆಂದು ಸೂಚಿಸುತ್ತೇವೆ. ವಾಙ್ಮಯ ಸೇವಕರಾದ ಇವರಿಬ್ಬರನ್ನು ಕಂಡೊಡನೆ ಶತ್ರುವನ್ನು ಕಂಡಂತೆ ಅಖಿಲ ಜನತೆಯೂ ಮಾಡುತ್ತಿರುವದು. ಸುವಿಖ್ಯಾತವಾದ ಕನ್ನಡ ದೇಶದಲ್ಲಿ ಕವಿಗಳನ್ನು ಬಂಗಾರದ ಮಳೆಗರೆಯಿಸಿ ಗೌರವಿಸಿದ ಕರ್ನಾಟಕದಲ್ಲಿ ಸಾವಿರಾರು ವರ್ಷಗಳ ಪೂರ್ವಪರಂಪರೆಯೂ ಉಜ್ವಲ ಇತಿಹಾಸವೂ ಉಳ್ಳ ನಮ್ಮ ಕನ್ನಡ ನಾಡಿನಲ್ಲಿ ಇಂತಹ ಹೀನ ದಸೆಬಂದಿತಲ್ಲ! ಇದನ್ನೆಲ್ಲ ನೆನೆದಲ್ಲಿ ನೇತ್ರಗಳು ಅಶ್ರುಪೂರ್ಣವಾಗುವವು ಕಂಠವು ಶೋಕಾವೇಗದಿಂದ ಬಿಗಿದು ಬರುವದು!? ಹೃದಯಸ್ಥನಾದ ನಾರಾಯಣನೇ! ಕನ್ನಡಿಗರ ಈ ಗೋಳನ್ನು ಎಷ್ಟು ದಿನ ನೋಡುತ್ತ ಸುಮ್ಮನಿರುವೆ? 'ನಿನ್ನನ್ನು ಬಿಟ್ಟರೆ ದಯೆಯಿಂದ ನೋಡುವವರಾರು? ಎಲ್ಲರೂ ನಿರ್ದಯರು' ಎಂದು ರತ್ನಾಕರನು ಹೇಳುವನು.

—ಅನಂತ

ವರ್ತಮಾನಸಾರ.

ಇಹವೃತ್ತ

ಮಳೆಯಂತೂ ಹಿಂದಕ್ಕೆ ಆಗಲಿಲ್ಲ. ಚಳಿಯೂ ಚನ್ನಾಗಿ ಬಿದ್ದಿಲ್ಲದು ಬೆಳೆಗಳ ಅವಸ್ಥೆಯು ಬೇಸರೀ ಇಲ್ಲ. ಒಣಗಾಲವು ಈ ಜಿಲ್ಲೆಗೆ ಬೆನ್ನು ಹತ್ತಿದಂತೆ ತೋರುತ್ತದೆ,

ಮುನಸಿಪಾಲ್ಟಿಯ ಒಂದನೇ ಸಾಧಾರಣಸಭೆಯು ನಾಳಿನ ರವಿವಾರ ಕೂಡುವದು ಈ ಸಭೆಗಳಲ್ಲಿ ಪ್ರತ್ಯಕ್ಷವಾಗಿ ಹೋಗಿ ನಗರ ಪಿತಾಮಹರು ಏನೇನುಮಾಡುವರೆಂಬುವದನ್ನು ತಿಳಿದುಕೊಳ್ಳಲು ಕನ್ನಡಿಗನು ಕುತೂಹಲವುಳ್ಳವನಾಗಿದ್ದಾನೆ. ಈ ಬಗ್ಗೆ ಚೀಫ ಆಫೀಸರರಿಗೂ ವ್ಹಾಯಿಸ್ ಪ್ರೆಸಿಡೆಂಟರವರಿಗೂ ಭೆಟ್ಟಿಯಾಗಿ ಹೇಳಿದ್ದೂ ಆಯಿತು ಅರ್ಜಗಳನ್ನು ಹಾಕಿದ್ದೂ ಆಯಿತು ಆದರೂ ನಮ್ಮ ಪ್ರತಿನಿಧಿಯು ಅಲ್ಲಿ ಹೋಗಲು ತಕ್ಕ ಏರ್ಪಾಟು ಆಗಿಲ್ಲ. ಇಂಥ ಸಣ್ಣ ವಿಷಯಗಳಲ್ಲಿಯೂ ಕೂಡ ಮ್ಯುನಸಿಪಾಲಿಟಿಯ ಕಾರಭಾರವು ಹೇಗೆ ಇದೆಯೆಂಬುದು ಚನ್ನಾಗಿ ಒಡೆದು ಕಾಣುತ್ತದೆ. ಇನ್ನು ದೊಡ್ಡ ದೊಡ್ಡ ವಿಷಯಗಳಬಗ್ಗೆ ದೊಡ್ಡ ದೊಡ್ಡ ಪಿತಾಮಹರನ್ನು ಕೇಳುವರಾರು?

ಬಾಗಲಕೋಟೆ ತಾ। ಕಾ। ಕ। ಸಾಧಾರಣ ಸಭೆಯು ಇದೇ ತಿಂಗಳ ೧೨ನೇ ತಾರೀಖು ರವಿವಾರ ದಿವಸ ಸಾಯಂಕಾಲ ೫॥ ಘಂಟೆಗೆ ಕಾ। ಕಮಿಟಿ ಕಾರ್ಯಾಲಯದಲ್ಲಿ ಕೂಡುವದು.

ತಾರೀಖು ೩೦।೧೧।೨೬ ನೇ ದಿವಸ ಇಲ್ಲಿಯ ಲೋಕಲ ಬೋರ್ಡಿನ ಕಟ್ಟಡದ ಪ್ರವೇಶ ಸಮಾರಂಭವು ನಮ್ಮ ಜಿಲ್ಲೆಯ ಕಲೇಕ್ಟರರಾದ ಮೆ। ಹಾಯುಕಂಡರವರಿಂದ ನೆರವೇರಿಸಲ್ಪಟ್ಟಿತು.

ಮುಂಬೈ ಕರ್ನಾಟಕ.

ಭಟಕಳವು ವಿಜಯನಗರದ ರಾಜ್ಯದಲ್ಲಿ ಪರದೇಶದ ವ್ಯಾಪಾರಕ್ಕೆ ಹೆಬ್ಬಾಗಿಲಿನಂತಿದ್ದಿತು. ಈಗ್ಗೆ ಬ್ರಿಟಿಶರ ರಾಜ್ಯದಲ್ಲಿ ಅದರ ಹೆಸರು ಸಹ ಕೇಳಬರುವದಿಲ್ಲ, ಪಶ್ಚಿಮ ಸಮುದ್ರತೀರದಲ್ಲಿ ಬಂದರಗಳನ್ನು ಪರಿಶೀಲಿಸಲು ಮುಂಬೈ ಸರಕಾರದಿಂದ ಡಾ। ಪರಾಂಜಪೆಯವರ ಅಧ್ಯಕ್ಷತೆಯಲ್ಲಿ ನಿಯಮಿಸಲ್ಪಟ್ಟ ಉಪಮಂಡಳದ ವರದಿಯು ಸರಕಾರದ ಯಾವ ಪಾಲಿಗೆಯಲ್ಲಿ ಬಿದ್ದಿತೋ ತಿಳಿಯದು, ಮುಂಬೈ ಕೊಲಂಬೋಗಳ ನಡುವೆ ಈ ಭಟಕಳ ಬಂದರದ ಸುಧಾರಣಾದರೆ ಕರ್ನಾಟಕದ ವ್ಯಾಪಾರವು ಬೆಳೆದು ಈ ಬಂದರವು ಬ್ರಿಟಿಶ ಕರ್ನಾಟಕದ ಹತ್ತಿಯ ವ್ಯಾಪಾರಕ್ಕೆ ಮುಖ್ಯವಾದ ಕೇಂದ್ರವಾಗುವದು. ಇದೇ ವಿಚಾರದಿಂದ ಶ್ರೀ ವಿಶ್ವೇಶ್ವರಯ್ಯನವರು ಭಟಕಳವನ್ನು ಬಂದರವನ್ನಾಗಿ ಮಾಡಬೇಕೆಂದು ಯೋಜಿಸಿದ್ದರು. ಆದರೆ ಹಿಂದುಸ್ಥಾನ ಸರಕಾರವು ಅದಕ್ಕೆ ತನ್ನ ಸ್ವಾರ್ಥದ ದೃಷ್ಟಿಯಿಂದ ಆತಂಕವನ್ನುಂಟುಮಾಡಿತು.

—[illegible]

ನವಂಬರ ೨೮ ತಾರೀಖಿನ ದಿನ ಕರ್ನಾಟಕ ಏಕೀಕರಣ ಸಂಘ ಧಾರವಾಡದ ಕಾರ್ಯಕಾರೀ ಸಭೆಯು ಸೇರಿ ಕೆಳಗೆ ಬರೆದ ಗೊತ್ತುವಳಿಗಳನ್ನು ನಿಶ್ಚಯಿಸಿರುವರು

(೧) ಕರ್ನಾಟಕ ಏಕೀಕರಣವು ಅವಶ್ಯವಾಗಿ ಆಗಬೇಕೆಂದು ಅಭಿಪ್ರಾಯಪಡುವ ಬ್ರಿಟಿಷ ಕರ್ನಾಟಕದ ಒಂದು ಲಕ್ಷ ಅಂಕಿತ (ಸಹಿ) ಗಳನ್ನು ಕೂಡಿಸುವದು

(೨) ಈ ಅಂಕಿತಗಳನ್ನು ಕೂಡಿಸಲು ಸೇನಾದಲದವರು ಒಪ್ಪಿದ ಸೇವೆಗೆ ಅವರಿಗೆ ೫೦೦ ರೂಪಾಯಿಗಳ ಸಹಾಯವನ್ನು ಕೊಡಬೇಕು

(೩) ಈ ಏಕೀಕರಣದ ವಿಷಯದಲ್ಲಿ ತಿಳುವಳಿಕೆಯನ್ನುಂಟುಮಾಡುವ ಲಕ್ಷ ಕನ್ನಡ ಮುಂದಾಳುಗಳ ಹೆಸರಿನಿಂದ ಒಂದು ವಿನಂತಿಪತ್ರ ಹೊರಡಿಸುವದು.

(೪) ಏಕೀಕರಣದ ಜೀವನ ಜಾಗೃತಿಗೊಳಿಸಲು ೧೨ ಜನಪ್ರಚಾರಕ ಮಂಡಳವು ಸ್ಥಾಪಿಸಲ್ಪಟ್ಟಿತು

ಧಾರವಾಡದಲ್ಲಿ ೩ ನೇ ತಾರೀಖಿನದಿವಸ ಧಾರವಾಡ ವೈದ್ಯಸಭೆಯ ದ್ವಿತೀಯ ವಾರ್ಷಿಕೋತ್ಸವವು ಉತ್ಸಾಹದಿಂದ ಜರಗಿತು. ಶ್ರೀ ಡಾಕ್ಟರ ಎಚ್. ... ಸವಣೂರರವರು ಅಧ್ಯಕ್ಷರಿದ್ದರು.

ಮೊನ್ನಿನ ರವಿವಾರದಿನ ಗದಗಿನಲ್ಲಿ ಕರ್ನಾಟಕ ಪ್ರಾಂತಿಕ ಕಾಂಗ್ರೆಸ್ ಕಮಿಟಿಯು ಸೇರಿತ್ತು ಅಖಿಲ ಭಾರತೀಯ ಮಹಾ ಸಭೆಗೆ ಪ್ರತಿನಿಧಿಗಳು ಆರಿಸಲ್ಪಟ್ಟರು ಈ ಸಲ ಅಖಿಲ ಭಾರತೀಯರ ಕಾರ್ಯನಿರ್ವಾಹಕ ಮಂಡಳಿಗೆ ಕರ್ನಾಟಕದ ಕೌನ್ಸಿಲ್ ದಾರರನ್ನೆಲ್ಲ ಆರಿಸಿಕಳುಹಿಸಿದ್ದು ಒಂದು ರೀತಿಯಿಂದ ಒಳ್ಳೇದಾಗಿದೆ.

ಮೈಸೂರ ಕರ್ನಾಟಕ.

ಡಾ। ರಾಯಪ್ರಫುಲ್ಲ ಚಂದ್ರರಿಗೆ ಮಾನಪತ್ರ ಕೊಡಬೇಕೆಂದು ಬೆಂಗಳೂರ ಮುನಸಿಪಾಲಿಟಿಯಲ್ಲಿ ಬಂದ ಠರಾವು ಸ್ವೀಕೃತವಾಗಲಿಲ್ಲ, ಇಡೀ ಜಗತ್ತೇ ಡಾಕ್ಟರರ ಪಾಂಡಿತ್ಯ ಹಾಗೂ ಲೋಕಸೇವೆಗಳಿಗಾಗಿ ತಲೆದೂಗುತ್ತಿರುವಾಗ್ಗೆ ಈ ಅಪಸ್ವರವು ಬೆಂಗಳೂರಿನಂತಹ ಪ್ರಮುಖ ಪಟ್ಟಣದಲ್ಲಿ ಹುಟ್ಟಿದ್ದು ಆಶ್ಚರ್ಯಕರ.

'ಜ್ಞಾನ ಜ್ಯೋತಿ' ಎಂಬ ಕನ್ನಡ ಮಾಸಪತ್ರಿಕೆಯು ಮೈಸೂರಲ್ಲಿ ಶ್ರೀ ರಾಯಚೂರ ಸೀತಾರಾಮರ ಸಂಪಾದಕತ್ವದಲ್ಲಿ ಹೊರಡುವದಿದೆ, ಇದು ಶ್ರೀ ಭಾರತಸಾಹಿತ್ಯಮಂದಿರದ ಮುಖಪತ್ರವಾಗುವದು ವ್ಹಾಯಿಸರಾಯರಾದ ಲಾರ್ಡ ಇರ್ವಿನ್ನರು ಈ ಮಂದಿರಕ್ಕೆ ತಮ್ಮ ಸಹಾನುಭೂತಿಯನ್ನು ತೋರಿಸಿದ್ದಾರೆ.

ಮದ್ರಾಸ ಕರ್ನಾಟಕ.

ಮಂಗಳೂರಿನ ಕೆನರಾ ಹಾಯಸ್ಕೂಲಿನಲ್ಲಿ ಒಂದು ಕೈಗಾರಿಕೆ ಶಾಲೆಯನ್ನೂ ನೆಚುರಲ್ ಸಾಯನ್ಸ ಕ್ಲಾಸನ್ನೂ ತೆಗೆಯುವ ವ್ಯವಸ್ಥೆ ನಡೆದಿದೆ.

ಪಂಜಾಬಿ(?) ಸಂಗೀತ ನಾಟಕ ಮಂಡಳಿಯವರು ಮಂಗಳೂರಿಗೆ ಬಂದು ಹಿಂದುಸ್ಥಾನ ಸಿನೇಮಾ ಥಿಯೇಟರಿನಲ್ಲಿ ನಾಲ್ಕೇ ನಾಟಕಗಳನ್ನು ಆಡಿ ತೋರಿಸುವರಂತೆ ಮೊದಲನೇ ನಾಟಕ ಶ್ರೀಕೃಷ್ಣಲೀಲಾ ಆಗುವದು

ಬಳ್ಳಾರಿಯ ಶ್ರೀಯುತ ರಂಗನಾಥ ಮೊದಲಿಯಾರವರು ಮದ್ರಾಸ ನ್ಯಾಯ ವಿಧಾಯಕ ಮಂತ್ರಿಗಳಾಗಿ ನಿಯಮಿಸಲ್ಪಟ್ಟಿದ್ದಾರೆ ಕನ್ನಡಿಗನು ಅವರನ್ನು ಅಭಿನಂದಿಸುತ್ತಾನೆ

ಉಡುಪಿಯಲ್ಲಿ ಹಿಂದೂ ದೇವಾದಾಯ, ಧರ್ಮಾದಾಯ ಬಿಲ್ಲಿನ ನಿಷೇಧಮಾಡುವ ಸಭೆಯು ಕೂಡಹತ್ತಿದೆ ಮದ್ರಾಸ ಕೌನ್ಸಿಲ್‌ದ ಮೆಂಬರರಾದ ವೆಂಕಟ ಚಲಮುಶೆಟ್ಟಿಯವರು ಅಧ್ಯಕ್ಷರಾಗಿದ್ದಾರೆ.

ಕೊಡಗು ಕರ್ನಾಟಕ

ಪೊನ್ನಂಪೇಟೆಯ ಹೆಡ್ ಮಾಸ್ತರರಾದ ಮಾ। ನಾಯುಡ ಚಿಕ್ಕಣ್ಣನವರ ಅಧ್ಯಕ್ಷತೆಯಲ್ಲಿ ಕೆಂಬಟ್ಟಿ ಹೊಲೆಯರ ಸಭೆ ಸೇರಿತ್ತು. ಕೆಂಬಟ್ಟಿ ಹೊಲೆಯರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವೆವೆಂದೂ ಸುರಾ ಸೇವನೆಮಾಡುವದಿಲ್ಲವೆಂದೂ ಸತ್ತ ಇಲ್ಲವೆ ಬದುಕಿರುವ ದನದ ಮಾಂಸವನ್ನು ತಿನ್ನುವದಿಲ್ಲವೆಂದೂ ಸರ್ವಸಮ್ಮತದಿಂದ ಗೊತ್ತುಮಾಡಿದರಂತೆ! ನಮ್ಮಲ್ಲಿಯ ಹೊಲೆಯರು ಇವರ ಅನುಕರಣವನ್ನು ಮಾಡುವರೋ?

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ៥.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಪೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯೆಂದು ಅಂಜುವ ಕಾರಣವಿಲ್ಲ ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅವರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ ೬ ೪.

ಮಂಗಳೂರ, ಬೆಂಗಳೂರ ಕಡೆಯ ನುರಿತಂಥಹ

ಪ್ರಿಂಟರರೂ ಕಂಪೋಜಿಟರರೂ

ಬೇಕಾಗಿದ್ದಾರೆ.

ಯೋಗ್ಯತೆಯ ಪ್ರಕಾರ ಪಗಾರವು ದೊರೆಯುವದು.

ಮ್ಯಾನೇಜರ. ವಿದ್ಯಾರಣ್ಯ ಮುದ್ರಾ ಮಂದಿರ ಬಾಗಲಕೋಟೆ

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚೆನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ៥, ೮ ಇವು ಒಕ್ಕಲಿಗರಿಗೆ ಬಹಳ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ, ಜಿಲ್ಹಾ— ಸಾತಾರಾ

ಗವರ್ನಮೆಂಟಿನಲ್ಲಿ ರಜಿಷ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ

ಅರ್ಕಶಫಾ ಅಥವಾ ಆರೋಗ್ಯ ಬಿಂದು.

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು. ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಸ್ಟ ಪಾವತಿಗಳು ಬಾರಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮುಗಳು:— ಕ್ಷಯರೋಗ, ಪ್ರಾಣಾಂತಿರೋಗ, ಹತಿವರಂಜು ದಮ್ಮು, ಕೆಮ್ಮು, ಅಡಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮೂಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಂಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ಮ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉತ್ತಿಕ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ៥ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕೊಂಡರೆ -ಕಮಿಶನ್ ಇಲ್ಲ. ವೆಚ್ಚ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ៥ ಆಣೆ.ಒಂದು ಎರಡುತಕ್ಕೊಂಡರೆಕಮಿಶನಇಲ್ಲ.ಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡಮತ್ತು ಮರಾಠಿ ಭಾಷೆಯಲ್ಲಿಛಾಪಿಸಿರುತ್ತವೆ.ಪಸಂದಿಪ್ರಕಾರ ಬಾಟ್ಲಿ ಗೂಡಿಗಿರುವದು ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಜಿಲ್ಲಾ ಪಗೈರೆ ಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:—ಎಚ್. ಎಮ್. ಮುಲ್ಲಾ.

ಸಂಪಾದಕ ಅರ್ಕಶಫಾ ಹೆಡ್ ಆಫೀಸ ಪೋಸ್ಟ ಕಹಾಪೂರ [ಬೆಳಗಾವಿ]

ಕನ್ನಡ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ.
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟುಹೋದ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಿಂಜರಿಯುವದಿಲ್ಲ. ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೆ ಬರೆಸುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ವಿದ್ಯಾರಣ್ಯ ಮುದ್ರಾಮಂದಿರದ

ಸ್ಥಳಾಂತರವು.

ವೆಂಕಟಪೇಟೆಯ ವೆಂಕಟೇಶದೇವರ ಗುಡಿಯಹತ್ತರ ಶ್ರೀ. ನರಸಾಪೂರದವರ ಮನೆಯಲ್ಲಿದ್ದ ನಮ್ಮ ಮುದ್ರಾಮಂದಿರವನ್ನು ಅದೇ ವೆಂಕಟಪೇಟೆಯ ನಮ್ಮ ಸ್ವಂತ ಮನೆಯ ಅಟ್ಟದ ಮೇಲೆ (ಮೊದಲು ಆನರರೀ ಮ್ಯಾಜಿಸ್ಟ್ರೇಟರ ಕಚೇರಿಯಿದ್ದ ಸ್ಥಳಕ್ಕೆ) ಒಯ್ದಿರುತ್ತದೆ.

ಶ್ರೀನಿವಾಸ ರಾಜೇರಾವ ಮಂಗಳವೇಢೆ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು. ಹಲ್ಲುಗಳ ನೋವುಗಳನ್ನು ಕಳೆಯುವೆವು. ಕಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ಶಕ್ಕಪುಷ್ಟ ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯ ನಡೆಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

S. U. Narayanacharya & Co.
Chaukkamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮಿ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರ ಶಾಲು, ತರವಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕಮಣಿ ಮೊದಲಾದ ಮಾಲುಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾದೀತು.

ವಿಳಾಸ-**ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ**

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾ ಮಂದಿರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ವಾಙ್ಮಯ ಪರಿಚಯ.

ಸ್ವೀಕಾರ.

(೫) Mysore Govt. Annual (1924–25) Reports of:— (a) Jails & Lock-ups (b) Hospitals & Dispensaries. (c) Sanitation. (d) Agricultarul Department. (e) Govt Gardens.

(೬) **ಶಾರದಾ ಸ್ತ್ರೀಸಮಾಜ. ನೇಯ ವರದಿ ೧೯೨೫-೨೬ ಬೆಂಗಳೂರ**

(೭) **ಮಹಿಳಾ ಪ್ರೇಮ ಸಮಾಜದ ವರದಿ ಬಳ್ಳಾರಿ**

(೮) Report on Enquiry into the attitude of Oriya-speaking population of the Madras Presidency towords amalgamation with other Oriya-speaking tracts.

ಕೊಡಗಿನ ರಾಮೇಶ್ವರ.

ಕೊಡುಗು ಪ್ರಾಂತ್ಯದ ಮುಖ್ಯ ಪಟ್ಟಣವಾದ ಮಡಿಕೇರಿ ಹತ್ತಿರಿರುವ ರಾಮಪುರವೆಂಬಲ್ಲಿ ಶ್ರೀ ರಾಮಚಂದ್ರನಿಂದ ಪ್ರತಿಷ್ಠಿತವಾದ ಈಶ್ವರ ದೇವಾಲಯವನ್ನು ಕುರಿತು ಶಿವಸುತರೆಂಬುವರಿಂದ ಬರೆಯಲ್ಪಟ್ಟ ಒಂದು ಚಿಕ್ಕ ಹೊತ್ತಿಗೆಯಿದು. ಪವಿತ್ ಕ್ಷೇತ್ರಸ್ಥಾನದ ಮತ್ತು ಸುತ್ತಲಿನ ಭೂಪ್ರದೇಶದ ಪೌರಾಣಿಕ ಐತಿಹಾಸಿಕ ಮಾಹಿತಿಯನ್ನೊಳಗೊಂಡ) ಪೂಜಾ ಉತ್ಸವಾದಿಗಳ ಸಮೀಚೀನ ವರ್ಣನೆಯಾಗಿರಬಹುದೆಂದು ಬಲು ಉಬ್ಬಿನಿಂದ ಓದಲು ಹಿಗ್ಗಿಸಿದ್ದೆವು- ನಾವು ಬಯಸಿದ್ದು ಒಂದು ಶಿವಸುತರು ನೀಡಿದ್ದು ಮತ್ತೊಂದು ಹೀಗಾಗಿ ವಿರಸವೇರಿತು. ಶಿವಸುತರು ನೀಡಿದ್ದಾದರೂ ಏನೆಂದು ಕೇಳಿದರೆ ಅದು ಇಂಥದೇ ಎಂದು ಹೇಳಲಿಕ್ಕೆ ಆಗದು. ಅದೊಂದು ಕಿಚಡಿಯ ಮುಷ್ಟಿ- ಅದರಲ್ಲಿ ಬೇಕಾದದ್ದು ಇದೆ-- ರಾಮಾಯಣವಿದೆ. ಭಾರತವಿದೆ, ಮತಸ್ಥಾಪಕರ ಪ್ರಚಾರ ಬಂದಿದೆ. ಯೋಗ ಮಾರ್ಗವಿದೆ, ಹಿಂದೂ ಧರ್ಮದ ಮಹಾತ್ಮೆ ಇದೆ, ಇನ್ನೂ ಏನೇನೋ ಇದೆ. ಇವೇ ಮೊದಲಾದ ವಿಷಯಗಳ ಪರಾಟದಲ್ಲಿ ರಾಮೇಶ್ವರನ ಐತಿಹ್ಯವೇ ಗೌಣವಾಗಿದೆ. ಪರಮ ಆಯಾಸದಿಂದ ಅನೇಕ ವಿಷಯಗಳನ್ನು ವಿವೇಚಿಸಿರುವರೇನೋ ನಿಜ ಆದರೆ ಅದರಲ್ಲಿ ಸ್ವೈಜವಾದ ಹೊಂದಿಕೆ ಇಲ್ಲ. ಕ್ರಮಪ್ರಾಪ್ತಿಯಿಲ್ಲ ಸಂಘಟನೆಯಿಲ್ಲ. ವಿಷಯಗಳ ಪ್ರತಿಪಾದನೆಯಾದರೂ ಯಥಾ ತಥಾ ವಾಗಿದೆ. 'ಏಕಮೇವಾ ದ್ವಿತೀಯಂ ಬ್ರಹ್ಮ' ಎಂಬೀ ಉಪನಿಷತ ವಾಕ್ಯದ, ಪರಮಾತ್ಮನು ಒಬ್ಬನಲ್ಲದೆ ಇಬ್ಬರಿಲ್ಲವೆಂದು ಶಂಕರನು ಬೋಧಿಸಿದನಂತೆ; ಎಲ್ಲ ಜಾತಿಯವರಿಗೂ ಅಭಿಮತವಾದ ಇದನ್ನಿಷ್ಟು ಹೇಳಲಿಕ್ಕೆ ಪಾಪ ಶಂಕರಾಚಾರ್ಯರು ಇಷ್ಟೇಕೆ ಶ್ರಮಪಡಬೇಕಾಗಿತ್ತು. ದಶಾವತಾರದ ಕಥೆಯನ್ನು ಡಾರವಿನ್ನನ ತತ್ವವನ್ನವಲಂಬಿಸಿ ಸಮರ್ಥಿಸಹೋಗಿರುವರು ಹೀಗೆ ಅನೇಕ ಉಂಟು.

ಭಾಷೆ ಹೊತ್ತಿಗೆಯ ತುಂಬೆಲ್ಲ ಸಂಸ್ಕೃತಶ್ಲೋಕಗಳನ್ನು ಹೇರಳವಾಗಿ ಉದಹರಿಸಿರುವರು. ಆದರೆ ಒಂದಾದರೂ ಕೂಡ ಶುದ್ಧ ಮುದ್ರಾಗಿರುವದಿಲ್ಲ; ಒಂದಿಲ್ಲೊಂದು ದೋಷದಿಂದ ಅಶುದ್ಧವಾಗಿವೆ. ಇದೆಲ್ಲ ಮುದ್ರಣಭೂತಗಳ ಚೇಷ್ಟೆಯಿಂದಾ ಲಕ್ಷ್ಯಕ್ಕೆ ಬರುವಂತಿಲ್ಲ; ಇರಲಿ ಭಾಷೆ ಏನೋ ಸರಳವಾಗಿದೆ ಆದರೆ ಅಷ್ಟು ಶುದ್ಧವಾಗಿಲ್ಲ. ನಮಗಂತೂ ಕೆಲವು ಶಬ್ದಗಳ ಅರ್ಥವೇ ಆಗಿಲ್ಲ; ಇದೇನು ಗ್ರಂಥಕರ್ತನ ದೋಷವಲ್ಲವೆಂದು ನಾವು ಒಪ್ಪುವೆವು. ಗ್ರಂಥಕರ್ತರು ಕೆಲವು ಶಬ್ದಗಳಿಗೆ ನವೀನ ಅರ್ಥ ಸಾಮರ್ಥ್ಯವನ್ನು ದಯಪಾಲಿಸಿದ್ದು ಸಾಹಸದ ಕೆಲಸವಾಗಿದೆ. ಧೋರಣಾಯಮಾನದಿಂದ (ಅಷ್ಟಕೆ ಯೆಂಬರ್ಥದಲ್ಲಿ) ಉತ್ತರೋತ್ತರ ಕಲ್ಯಾಣ ಎಂಬರ್ಥದಲ್ಲಿ ಚಿತ್ರೈಸಿದರು. ಬರುವವರಾದರು ಎಂಬ ಸಂದರ್ಭದಲ್ಲಿ 'ಷ' ಕಾರವನ್ನು ಕೊಡೆದೋಡಿಸಿ ಎಲ್ಲೆಲ್ಲಿಯೂ 'ಶ' ಶಕಾರವನ್ನೇ ಮನ್ನಿಸಿದ್ದು ನಮಗೆ ಅದು ಸೇರದು. ಶಿಷ್ಯ-ಶಿಶ್ಯ ದ್ವೇಷ-ದ್ವೇಶ.

—ಗುರುರಾವ

ಮಕ್ಕಳ ಪುಸ್ತಕ.

ಸಂ:-ದ ಕೃ. ಭಾರದ್ವಾಜ ಬಳೆಪೇಟೆ ಬೆಂಗಳೂರ ಸಿಟಿ.

ಚಿಕ್ಕ ಮಕ್ಕಳ ಸಲುವಾಗಿ ಮಾಸಪತ್ರಿಕೆಗಳೂ, ವಾರಪತ್ರಿಕೆಗಳೂ ಕನ್ನಡದಲ್ಲಿ ಬೇಕಿರುವವೆಂದು ನಾವು ಆಗಾಗ್ಗೆ ಪ್ರತಿಪಾದಿಸುತ್ತ ಬಂದಿರುವೆವು ಆಂಗ್ಲ ಭಾಷೆಯಲ್ಲಿ 'ಮಾಯ ಮ್ಯಾಗಜೀನ್' 'ಚಿಲ್ಡ್ರನ್ಸ್ ನ್ಯೂಜಪೇಪರ' ಎಂಬಿವೇ ಮೊದಲಾದ ಪತ್ರಿಕೆಗಳು ಬಳ್ಳೇ ಮನೋಹರವಾಗಿ ಹೊರಡುತ್ತಿವೆ. ಅವುಗಳಲ್ಲಿ ಅಂದಚೆಂದದ ಚಿತ್ರಗಳು, ಮಕ್ಕಳಿಗೆ ತಕ್ಕ ಕಥೆಗಳು, ಎಳೆ ಮಕ್ಕಳ ಹಾಡುಗಳು, ಬೇರೆ ಬೇರೆ ದೇಶದ ಚರಿತ್ರೆಗಳು, ಸ್ವದೇಶದ ಕವಿಗಳ, ತತ್ವಜ್ಞಾನಿಗಳ, ಮತ್ತು ವೀರರ ಕಥಾನಕಗಳು, ಪ್ರಾಣಿಗಳ ವರ್ಣನೆಗಳು, ಪಕ್ಷಿಗಳ ಗುಣಧರ್ಮಗಳು, ಭೂಗೋಲ ವಿಷಯ, ಖಗೋಲ ವಿಷಯ, ಪ್ರಾಚೀನ ವಸ್ತು, ಅರ್ವಾಚೀನ ಶೋಧ, ಸೃಷ್ಟಿಯ ಕೌತುಕ ಇವೆಲ್ಲವುಗಳು ಹೃದಯಂಗಮವಾಗಿ ಪ್ರಕಟವಾಗುತ್ತಿವೆ. ಇಂತಹ ವಿಸ್ತೃತ ಪ್ರಮಾಣದಿಂದ ಮಾಸಪತ್ರಿಕೆಗಳು ಕನ್ನಡದಲ್ಲಿ ಹೊರಡುವುದು ಅತ್ಯಾವಶ್ಯಕ. ಮೊದಲು ವಲ್ಲಭ ಮಹಾಲಿಂಗ ತಟ್ಟಿಯವರು 'ಬಾಲಮಿತ್ರ' ವೆಂಬ ಮಾಸಪತ್ರಿಕೆಯನ್ನು ಹೊರಡಿಸಿ, ಕನ್ನಡ ಮಕ್ಕಳಲ್ಲಿ ಅಲ್ಪ ಸ್ವಲ್ಪ ಜಾಗ್ರತಿಯನ್ನುಂಟುಮಾಡಿದರು. ಅವರು ಹುಡುಗರಿಗೆ ತಕ್ಕಂತಹ ಲೇಖಗಳನ್ನು ಸಂಪಾದಿಸಿ, ಮುದ್ರಿಸುತ್ತಿದ್ದರು. ಆದರೆ ಅವರ ಅಕಾಲ ನಿಧನದಿಂದ, ಅದೂ ಅವರೊಡನೆ ನಿರ್ವಾಣವನ್ನು ಹೊಂದಿತು. ಈಗ ದ. ಕೃ. ಭಾರದ್ವಾಜರು 'ಬಾಲಮಿತ್ರ'ನ ಬದಲಿನ್ನೆತ್ತಲು 'ಮಕ್ಕಳ ಪುಸ್ತಕ' ವೆಂಬುದನ್ನು ಹೊರಡಿಸಿದ್ದಾರೆ. ಅದರ ಮೊದಲನೆಯ ಸಂಚಿಕೆಯು ನಮಗೆ ತಲ್ಪಿದೆ. ಇದರಲ್ಲಿ ಮಕ್ಕಳಿಗಾಗಿ ಕಥೆಗಳೂ, ಹಾಡುಗಳೂ, ಕೊಡಲ್ಪಟ್ಟಿರುವವು. ವಿವಿಧ ವಿಷಯಗಳ ಸಮಾವೇಶವಾದರೂ ಇದರಲ್ಲಿದೆ. ಕರ್ಣಾಟಕದ ಬಗ್ಗೆ ಅಭಿಮಾನವನ್ನು ಹುಟ್ಟಿಸಲು, ಕನ್ನಡ ನಾಡಿನ ಮುಖ್ಯ ಮುಖ್ಯ ಸ್ಥಾನಗಳ ವರ್ಣನೆಗಳನ್ನೂ ಪ್ರಾಚೀನ ಇತಿಹಾಸದಲ್ಲಿಯ ಸ್ಫೂರ್ತಿದಾಯಕವಾದ ಸಂಗತಿಗಳನ್ನೂ ಕೊಡುವವರಿದ್ದಾರೆ. ಬೆಂಗಳೂರು ಪಟ್ಟಣದ ವರ್ಣನೆ, ಪಂಚತಂತ್ರ ಇವೆರಡು ಈ ಬಗೆಯ ಆಶಯಕ್ಕೆ ಸಂಚಕಾರವೆಂದು ಹೇಳಬಹುದು. 'ಮೋಡಣ್ಣನ ತಮ್ಮ' ಎಂಬ ಪದ್ಯರೂಪಿಯಾದ ನಾಟಕವು ಚೆನ್ನಾಗಿದೆ. ಕಾವ್ಯವು ಸುಲಭವಿದ್ದು ಅಲ್ಲಲ್ಲ ಭಾವದ ಮಿಂಚುಗಳು ಹೊಳೆಯುತ್ತಿವೆ. 'ಹೊಯ್ಸಳ' ದ ಹುಡುಗರು ಎಂಬ ಕವಿತೆಯು ಹೊಸದಾದಯಾಗಿದೆ. ಇದರಲ್ಲಿ ಮೇಲೆ ಹೇಳಿದಂತೆ ಎಲ್ಲ ವಿಷಯಗಳ ಸಂಗ್ರಹವನ್ನು ಸಂಪಾದಕರು ಮಾಡುವರೆಂದು ನಂಬಿ, ಧೈರ್ಯದಿಂದ ಸೇವೆ ಮಾಡಲು ಹೊರಟ ಭಾರದ್ವಾಜರಿಗೆ ನಾವು ಅಭಿನಂದನಗಳನ್ನರ್ಪಿಸುತ್ತೇವೆ. ಮಕ್ಕಳ ಪುಸ್ತಕ ಎಂಬ ಹೆಸರು ಅಷ್ಟೊಂದು ಚೆನ್ನಾಗಿಲ್ಲ. ಭಾಷಾಂತರದ ಮುಟ್ಟು ಅದಕ್ಕೆ ತಗಲಿದೆ

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಪಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ತಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೦ ಬುಧವಾರ ಪೆಠ ಜುನಿ ತಪಕೀರಗಲ್ಲಿ, ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ಥ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣಿ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿ ಮಾಡಿಕೊಳ್ಳಬಹುದು.) ಇದರಿಂದ ಪ್ರೆಯ್ಯರಿ ವ ಗರಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಕ್ರಾಪಕ:—

ಎಸ್. ಬಿ. ಕವಠೆ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೩,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳ ಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತಮೂರು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳಿಸುತ್ತಿದ್ದೇವೆ. ಮಹಾಜನರೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾವೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರವನ್ನೂ ಸ್ವದೇಶದ ಕೈಗಾರಿಕೆಗಳಿಗೆ ಅಪಕಾರವನ್ನೂ ಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನೂ ತಯಾರು ಮಾಡುತ್ತಾರೆ. ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛಿಸುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ರ ನಂ. ಬಿ. ೧೯೪೭ | ವಾ ಚಂದಾ ೧—೧೨—೦ ಮಾತ್ರ

ಕನ್ನಡಿಗ.

ಜಯ ಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ)

यद्यत् परवशं दुःखं । यद्यदात्मवशं सुखम् ॥ — मनु

ಸಂಪಾದಕರು — ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಮಾರ್ಗಶಿರ ಶುದ್ಧ ೧೩ ಶಕೆ ೧೮೪೮ ತಾ|| ೧೭ ೧೨-೧೯೨೬. | ಸಂಖ್ಯೆ ೩೬

ಸಂಪಾದಕರ ಭೂಮಿ

(೬೦)

ನಿನ್ನ ಮನಸಿನ ಮೋಹವಮಾಡಿ ಕಟ್ಟುವೆನಾನು ।
ನಿನ್ನ ಬೆಸನವ ಮಾಡಿದಂಥ ಮಾಕ್ಕಳ ದೊರೆಸ್ತು।
ಚಿನ್ನದಾದರು ಚಿನ್ನ ಸೋಲಬಿಟ್ಟವು ನೋಡದು ಚಿನ್ನದಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠದಾಸನದಾಗಿ ।
ಕಣ್ಣನನ್ನ ಕಣ್ಣಾಗಿ ದೀಪಗಳು ಸಿದ್ಧವಿದೆ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹನೆಂದು ತಿಳಿಯಿ॥

— ಅಂಬಿಕಾ ತನಯ ದತ್ತ

ಮೈಸೂರು ವಿಶ್ವವಿದ್ಯಾಲಯ ಮಂಡಳಿಯವರು "ರೀಡರಶಿಪ್" ಉಪನ್ಯಾಸಗಳನ್ನು ಪ್ರಾರಂಭಿಸಲುಪಕ್ರಮಿಸಿ ವಿಮರ್ಶ ವಿಚಕ್ಷಣರಾದ ರಾವ ಬಹಾದ್ದೂರ ಆರ್. ನರಸಿಂಹಾಚಾರ್ಯ ಎಮ್. ಎ. ಎಮ್. ಆರ್. ಎ. ಎಸ್. ಇವರನ್ನು ನಿಯಮಿಸಿದ ಸಂಗತಿಯು ಕನ್ನಡಿಗರಿಗೆಲ್ಲ ಗೊತ್ತಿದ್ದುದೇ ಆಗಿದೆ. ಇವರು ದ್ರಾವಿಡ ಭಾಷೆಗಳಲ್ಲಿ ಪಾರಂಗತರಿರುವರು; ಸಂಸ್ಕೃತದಲ್ಲಿ ಪರಿಶ್ರಮವುಳ್ಳವರು; ಶಾಸನ ಶಾಸ್ತ್ರದಲ್ಲಿ ನಿಪುಣರು; ಹೊಸ ತರದ ಸಂಶೋಧನ ಮಾರ್ಗಗಳಲ್ಲಿಯೂ ವಿಮರ್ಶನಾಶಕ್ತಿಯಲ್ಲಿಯೂ ಮೇಲಾದವರು. ಇಂಥವರನ್ನು ಆರಿಸಿದುದು ಕನ್ನಡ ನಾಡಿನ, ಕನ್ನಡ ನುಡಿಯ ಅತ್ಯಂತಿಕ ಹಿತಕ್ಕಾಗಿಯೇ ಇರುವುದು. ಕನ್ನಡ ನಾಡಿನಲ್ಲಿ ಮುತ್ತುಗಳೂ ರತ್ನಗಳೂ ಹೇರಳವಾಗಿವೆ. ಅವುಗಳಿಗೆ ತಮ್ಮ ಬೆಳಕನ್ನು ಬೆಳಗಲು ಅನುವಿಲ್ಲ. ಕರ್ನಾಟಕಕ್ಕೆ ಬೇರೊಂದು ವಿಶ್ವವಿದ್ಯಾಲಯವಿರುವುದಿಲ್ಲವಾದುದರಿಂದ, ಕನ್ನಡದ ಗ್ರಂಥಕಾರರಿಗೂ, ಬರಹಗಾರರಿಗೂ, ವಿಮರ್ಶಕರಿಗೂ ಏನೂ ಅವಕಾಶವಿಲ್ಲದಂತಾಗಿದೆ. ಇತ್ತೀಚೆಗೆ ಕರ್ನಾಟಕದ ಹಿತಕ್ಕಾಗಿ ಬೇರೆ ಬೇರೆ ಪ್ರಕಾರದ ಚಟುವಟಿಕೆಗಳು ತಲೆದೋರಿವೆ. ಇವೆಲ್ಲ ಚಟುವಟಿಕೆಗಳು ಫಲದ್ರೂಪವಾಗಲು, ಕರ್ನಾಟಕಕ್ಕೆ ಅಪ್ರತಿಹತವಾದ ಶಕ್ತಿಯು ಬರುವುದು; ಹೊವಲಿನಂತೆ ಇವರ ಕೀರ್ತಿ ದುಂದುಭಿಯು ದಿಕ್ತಟಗಳಲ್ಲೆಲ್ಲ ಮೊಳಗುವುದು. ಶ್ರೀ. ನರಸಿಂಹಾಚಾರ್ಯರು ಕನ್ನಡದ ಸೇವೆಯಲ್ಲಿಯೇ ನಿಷ್ಠಾಭಾವವುಳ್ಳವರಾಗಿ ತಮ್ಮ ಜೀವನವನ್ನು ಸವೆಸಿದ್ದಾರೆ. ಕರ್ನಾಟಕ ಕವಿಚರಿತೆಗಳನ್ನು ಮೂರು ಭಾಗಗಳಲ್ಲಿ ಪ್ರಕಟಿಸಿ, ಜಗತ್ತಿಗೆ ಕನ್ನಡದಲ್ಲಿಯ ಉದ್ದಾಮ ಕವಿಗಳ ಪರಿಚಯವನ್ನು ಮಾಡಿಕೊಟ್ಟ ಬಳಿಕ ಕನ್ನಡ ದೇವಿಯು ಇಷ್ಟರಿಂದಲೇ ತೃಪ್ತಳಾಗದೆ, ಅವರ ಕೈಯಿಂದ ಇನ್ನೂ ಸೇವೆಮಾಡಿಕೊಳ್ಳಬೇಕೆಂದು ಕಾತರಳಾಗಿ, ಅವರಿಗೆ ಇಂಥ ಸುಯೋಗವನ್ನು ತಂದುಕೊಟ್ಟಿದ್ದಾಳೆ. ಈಗಾಗಲೇ ಅವರು ಐದು ಉಪನ್ಯಾಸಗಳನ್ನು ಮಾಡಿರುವರು. ಮೊದಲನೆಯ ಉಪನ್ಯಾಸವು ಪೀಠಿಕಾರೂಪದಲ್ಲಿದ್ದಿತೆಂದು ಹೇಳಲು ಪ್ರತ್ಯವಾಯವಿಲ್ಲ. ಇದರಲ್ಲಿ ಆಚಾರ್ಯರು ಕನ್ನಡ ಭಾಷೆ, ಅದರಲ್ಲಿಯ ಸಾಹಿತ್ಯ, ಅದರ ಪ್ರಾಚೀನತೆ, ಅದರ ಪ್ರಾಬಲ್ಯ, ಇತರ ಭಾಷೆಗಳೊಡನೆ ಅದನ್ನು ತುಲನೆಮಾಡಿ ನೋಡಿದರೆ, ಅದಕ್ಕೆ ದೊರೆಯುವ ಸ್ಥಾನ, ಬೇರೆ ಬೇರೆ ಭಾಷೆಗಳಿಗಿರುವ ಪರಸ್ಪರ ಸಂಬಂಧ ಇವೆಲ್ಲವುಗಳ ಬಗ್ಗೆ ಚನ್ನಾಗಿ ಚರ್ಚಿಸಿದರು. ಕನ್ನಡದಲ್ಲಿ ಅನ್ಯತತ್ಸಮ ಸಾಧ್ಯವಾಗಿಸುವ ಶಕ್ತಿಯಿರುವುದರಿಂದ, ಅದೂ ಮೇಲಾದ ಭಾಷೆಯೇ ಎಂಬುದು ಅವರ ನುಡಿಯಿಂದ ಸ್ಪಷ್ಟವಾಗಿದೆ. ಎರಡನೆಯ ಉಪನ್ಯಾಸವು ನವ್ಹೆಂಬರ ಒಂದನೇ ತಾರೀಖಿಗೆ ಜರುಗಿತು. ಇದರಲ್ಲಿ ಕನ್ನಡ ಭಾಷೆಯ ಚರಿತ್ರೆ, ಧ್ವನಿಶಾಸ್ತ್ರ, ಶಬ್ದವ್ಯುತ್ಪತ್ತಿ, ಉಪಭಾಷೆಗಳ ವ್ಯತ್ಯಾಸ ಮತ್ತು ಸಂಧಿನಿಯಮ ಇವುಗಳ ಬಗ್ಗೆ ವಿವೇಚಿಸಲಾಯಿತು. ಡಿಸೆಂಬರ ೧ನೇ ತಾರೀಖಿಗಾದ ಮೂರನೆಯ ಉಪನ್ಯಾಸದಲ್ಲಿ ನಾಮಪದ, ವಿಶೇಷಣ, ಸಂಖ್ಯಾವಾಚಕ, ಸರ್ವನಾಮ, ಕ್ರಿಯಾಪದ, ಶಬ್ದ ಇವೇ ಮೊದಲಾದ ವ್ಯಾಕರಣ ಮರ್ಯಾದೆಗಳು ನಿರೂಪಿಸಲ್ಪಟ್ಟವು. ಮರುದಿವಸ ನಡೆದ ನಾಲ್ಕನೆಯದರಲ್ಲಿ ಕನ್ನಡ ದೇಶದ ದಕ್ಷಿಣ ಭಾಗ ಮತ್ತು ಉತ್ತರ ಭಾಗ ಇವುಗಳಲ್ಲಿಯ ಶಬ್ದಸಮುದಾಯದಲ್ಲಿಯ ವ್ಯತ್ಯಾಸಗಳು ಸೂಚಿಸಲ್ಪಟ್ಟವು. ಐದನೆಯದರಲ್ಲಿ ಭಾಷೆಯಲ್ಲಾಗತಕ್ಕ ಭೇದಗಳು, ಸ್ವರೂಪ, ಅರ್ಥ, ಸುಧಾರಣೆ, ಅಭಿವೃದ್ಧಿ. ಮೇಲಿನ ಕ್ರಮವನ್ನು ನೋಡಿದರೆ, ಅದು ವಿಸ್ತೃತವಾಗಿದೆಂಬುದು ಒಡೆದು ಕಾಣುವುದು. ಸಾಹಿತ್ಯವು ಸರ್ವಾಂಗ ಸುಂದರವಾಗಲು ಬೇಕಾಗುವ ಎಲ್ಲ ಸಾಧನಗಳ ವಿವೇಚನೆಯನ್ನು ಆಚಾರ್ಯರವರು ಮಾಡುತ್ತಿರುವರು. ಧರ್ಮಾರ್ಥ ಕಾಮ ಮೋಕ್ಷಗಳೆಂಬ ಚತುರ್ವರ್ಗ ಪುರುಷಾರ್ಥವೇ ವಾಙ್ಮಯವನ್ನವಲಂಬಿಸಿರುವುದರಿಂದ, ಅದರ ಅಭಿವೃದ್ಧಿಗಾಗಿ ಹೆಣಗುವುದು ಮೈಸೂರು ವಿಶ್ವವಿದ್ಯಾಲಯದ ಕರ್ತವ್ಯವೇ ಆಗಿದ್ದಿತು. ಭಾವ ಕ್ಷೇತ್ರದಲ್ಲಿಯ ಬೀಜಗಳು ಕಾರ್ಯಕ್ಷೇತ್ರದಲ್ಲಿ ಬಿದ್ದು ಈಗೀಗ ಅಂಕುರಿಸಹತ್ತಿವೆ. ಇದಕ್ಕೆ ಯೋಗ್ಯ ಕಾಲದಲ್ಲಿ ಗೊಬ್ಬರ ನೀರುಗಳು ದೊರೆತವೆಂದರೆ ಬೆಳೆಯು ಭರದಿಂದ ಬರುವುದು; ಸತ್ಫಲಗಳ ಸಮೃದ್ಧಿಯು ಎಲ್ಲೆಲ್ಲಿಯೂ ತೋರುವುದು. ಆದರೆ ಆಚಾರ್ಯರವರ ಉಪನ್ಯಾಸವು ಕನ್ನಡದಲ್ಲಿಯೇ ಆಗಲಿಲ್ಲವೆನ್ನುವದು ವಿಷಾದದ ವಿಷಯ!

ಮದ್ರಾಸ ವಿಶ್ವವಿದ್ಯಾಲಯದವರು (ಯುನಿವ್ಹರ್ಸಿಟಿ) ಪ್ರಾಚ್ಯ ವಿದ್ಯಾಭ್ಯಾಸ ಮತ್ತು ಸಂಶೋಧನ ಇವುಗಳ ಬಗ್ಗೆ ತೀವ್ರವಾಗಿಯೇ ಒಂದು ಸಂಸ್ಥೆಯನ್ನು ಸ್ಥಾಪಿಸಲಿರುವರು. ಅದರಲ್ಲಿ ದ್ರವಿಡಶಾಖೆ, ಸಂಸ್ಕೃತಶಾಖೆ, ಇಸ್ಲಾಮಿಶಾಖೆ, ಹೀಗೆ ಮೂರು ಶಾಖೆಗಳು ಕಲ್ಪಿಸಲ್ಪಡುವವು. ಈ ಸಂಸ್ಥೆಗೆ ಯೋಗ್ಯರಾದ ಚಾಲಕರೂ, ಕೆಲಸಮಾಡುವವರೂ ಬೇಕಾಗಿರುವರು. ದ್ರವಿಡಶಾಖೆಗೆ ಒಬ್ಬ ಚಾಲಕರೂ, ಭಾಷೆಗೊಬ್ಬರಂತೆ ನಾಲ್ಕುಮಂದಿ ಓದುವವರೂ, ತಮಿಳಿಗಿಬ್ಬರು, ತೆಲಗಿಗಿಬ್ಬರು ಕನ್ನಡಕ್ಕೊಬ್ಬರು, ಮಳಯಾಳಿಗೊಬ್ಬರು, ಹೀಗೆ ಆರುಜನ ಫೆಲೋಗಳೂ ಬೇಕಿರುವರು. ಸಂಸ್ಕೃತ ಶಾಖೆಗಾಗಿ ಒಬ್ಬ ಪಂಡಿತರೂ, ಇಬ್ಬರು ಫೆಲೋಗಳೂ, ಇಸ್ಲಾಮಿಶಾಖೆಗೆ ಅರಬೀಭಾಷೆಗೊಬ್ಬ, ಉರ್ದು ಅಥವಾ ಪಾರ್ಶಿ ಭಾಷೆಗೊಬ್ಬ ಹೀಗೆ ಇಬ್ಬರು ಓದುವವರೂ ಬೇಕಿದ್ದಾರೆ. ಆ ಯಾಸ್ಥಾನಗಳಿಗೆ ತಕ್ಕಂತೆ ಸಂಬಳವಾದರೂ ದೊರೆಯುತ್ತದೆ. ನೂರು ರೂಪಾಯಿಗಳಿಗಿಂತ ಕಡಿಮೆ ಸಂಬಳವು ಇಲ್ಲವೇ ಇಲ್ಲ. ದ್ರವಿಡಶಾಖೆಯ ಚಾಲಕರಿಗೆ ನಾಲ್ಕುನೂರು ರೂಪಾಯಿ ಸಂಬಳ. ಇವರು ತಮಿಳಿನಲ್ಲಿ ಅದ್ವಿತೀಯ ಪಂಡಿತರಿರಬೇಕಾಗುವದು. ಮತ್ತು ದ್ರವಿಡ ಭಾಷೆಗಳಲ್ಲಿ ಯಾವದಾದರೊಂದು ಭಾಷೆಯನ್ನು ವ್ಯವಹಾರದ ಮಟ್ಟಿಗಾದರೂ ಅರಿತವರಿರಬೇಕು. ಅರ್ವಾಚೀನ ವಿಮರ್ಶನ ಪದ್ಧತಿಯ ಮತ್ತು ಸಂಶೋಧನ ಪದ್ಧತಿಯ ಪೂರ್ಣಜ್ಞಾನವುಳ್ಳವರಿರಬೇಕು. ಓದುವವರಾದರೂ ತಮ್ಮ ತಮ್ಮ ಭಾಷೆಯಲ್ಲಿ ಪಾರಂಗತರಿದ್ದು ಸಮಾನ ಭಾಷೆಗಳಲ್ಲೊಂದು ಭಾಷೆಯನ್ನರಿತವರಾಗಿರಬೇಕು. ಇತ್ಯಾದಿ. ಇದರ ಬಗ್ಗೆ ಸಂಪೂರ್ಣವಾಗಿ ತಿಳಿದುಕೊಳ್ಳುವವರು ರಜಿಸ್ಟ್ರರವರ ಪ್ರಕಟನೆಗಳಿಂದ ತಿಳಿದುಕೊಳ್ಳಬಹುದು. ಪ್ರಾಚ್ಯ ವಿದ್ಯಾಭ್ಯಾಸ ಸಂಸ್ಥೆಯಿಂದ ದ್ರವಿಡ ಭಾಷೆಗಳಿಗೂ, ದ್ರವಿಡ ಸಂಸ್ಕೃತಿಗೂ ವಿಶೇಷ ಲಾಭವಾಗುವದು. ಕನ್ನಡದ ಪ್ರಾಚೀನತೆ, ಸ್ವತಂತ್ರತೆ, ಜಗತ್ತಿನ ಭಾಷೆಗಳಲ್ಲಿ ಅದಕ್ಕೆ ದೊರಕಬಹುದಾದ ಸ್ಥಾನ ಇವೆಲ್ಲವುಗಳು ತಮ್ಮಿಂದ ತಾವೇ ನಿರ್ದಿಷ್ಟವಾಗುವವು. ಯೋಗ್ಯರಾದ ಕನ್ನಡಿಗರು ಈ ಅಧಿಕಾರ ಸ್ಥಾನಗಳನ್ನು ಪಡೆದು, ತಮ್ಮ ನಾಡಿನ ಹಿತದ ದೃಷ್ಟಿಯಿಂದ ತ್ಯಾಗಬುದ್ಧಿಪೂರ್ವಕವಾಗಿ ದುಡಿಯುವರೆಂದು ನಾವು ಕೋರುತ್ತೇವೆ.

ದಿಲ್ಲಿಯಲ್ಲಿ ಜರುಗಿದ ನರೇಂದ್ರ ಮಂಡಲದ ಅಧಿವೇಶನಕಾಲದಲ್ಲಿ ವ್ಹಾಯಿಸರಾಯರವರು ರಾಜಪುತ್ರರ ಮತ್ತು ಸಂಸ್ಥಾನಿಕರ ಸಮಾಚಾರವನ್ನು ಚನ್ನಾಗಿ ತೆಗೆದುಕೊಂಡರೆಂದೇ ಹೇಳಬಹುದು. ರಾಜಪುತ್ರರು ತಮ್ಮ ಕರ್ತವ್ಯದಿಂದ ಚ್ಯುತರಾಗಿರುವುದರಿಂದಲೇ ಈ ತರಹದ ಅಪಹಾಸ್ಯಕ್ಕೆ ತಮ್ಮನ್ನು ಗುರಿಮಾಡಿಕೊಂಡರು. ವ್ಹಾಯಿಸರಾಯರು ಹೇಳಿದ್ದೇನೆಂದರೆ—"ನೀವು ಇಂಗ್ಲಂಡಕ್ಕೆ ಪ್ರತಿ ವರ್ಷ ಹೋಗುವುದನ್ನು ಬಿಟ್ಟುಕೊಡಿರಿ. ಅದರಿಂದ ಸಂಸ್ಥಾನಗಳಿಗೆ ಹೇರಳವಾದ ವೆಚ್ಚವು ತಗಲುತ್ತದೆ; ಮತ್ತು ರಾಜ್ಯದ ಆಡಳಿತವು ಕೆಡುತ್ತದೆ. ನೀವಿಲ್ಲದಿರುವದರಿಂದ ಮಂತ್ರಿಗಳೂ, ಉಳಿದ ಸೂತ್ರಧಾರರುಗಳೂ ಕೈಯಾಸೆ ಮಾಡುವವರಾಗಿ, ರಾಜ್ಯವನ್ನು ದಾಳುಮಾಡುತ್ತಾರೆ. ಆದ್ದರಿಂದ ನೀವೇ ಸಂಸ್ಥಾನಗಳಲ್ಲಿದ್ದುಕೊಂಡು, ಪ್ರಜಾಹಿತ ದೃಷ್ಟಿಯಿಂದ ಸುಧಾರಣೆಗಳನ್ನು ಮಾಡಬೇಕು. ರಾಜ್ಯದಲ್ಲಿ ಅವ್ಯವಸ್ಥೆ, ಪ್ರಜೆಗಳಲ್ಲಿ ಅಸಂತುಷ್ಟತೆ ಮೊದಲಾದವುಗಳು ನೆಲಿಸುವದರಿಂದ, ಸರಕಾರಕ್ಕೆ ಕೈಹಾಕಬೇಕಾಗುತ್ತದೆ. ಆದರೆ ನಾನಿರುವವರೆಗೆ ಸಂಸ್ಥಾನಗಳ ಕಾರಭಾರದಲ್ಲಿ ಕೈಹಾಕುವದಿಲ್ಲ. ಮೊದಲಿನ ಒಪ್ಪಂದಗಳನ್ನು ಮನ್ನಿಸುತ್ತೇನೆ" ನರೇಂದ್ರ ಮಂಡಲದವರು ಜಾಣರಾದರೆ ಎಚ್ಚರವುಳ್ಳವರಿರಬೇಕು. ಮದೋನ್ಮತ್ತ ಆನೆಗಳಂತೆ, ಉಚ್ಛೃಂಖಲರಾಗಿ ನಡೆಯಬಾರದು; ಮೇಲೆ ಅಂಕುಶವಿದೆ. ಸುಖ ವಿಲಾಸಗಳ ಭೂಮಿಯು ರಾಜ್ಯವಲ್ಲ. ಅದೊಂದು ಮುಳ್ಳಿನ ಹಾಸಿಗೆಯು. ಪ್ರಜಾರಂಜನ ತತ್ಪರರಾಗಿ ರಾಜಪುತ್ರರು ನಡೆಯುವದರಿಂದ, ರಾಜ್ಯವು ಹೂವಿನ ಹಾಸಿಗೆಯಾಗುವದು. ನಿಮ್ಮ ಅಧಿಕಾರವು ಚಿರವಾಗುವುದು ಸ್ಥಿರವಾಗುವದು. ಪ್ರಜೆಗಳ ಅಂತಃಕರಣದಲ್ಲಿ ಗಟ್ಟಿಯಾಗಿ ಕುಳಿತಿದ್ದರೆ, ನಿಮ್ಮನ್ನು ಗದ್ದುಗೆಯಿಂದ ತಳ್ಳುವುದು ಬ್ರಿಟಿಷ ಸರಕಾರದಿಂದೇಕೆ ದೇವರಿಂದಲೂ ಕೂಡ ಆಗದು. ಆದ್ದರಿಂದ ನೀವು ನಿಮ್ಮ ಪೂರ್ವಜರಾದ ದಿಲೀಪ ಮಹಾರಾಜರಂತೆ, ರಾಜ ಕ್ರಮ ಮುನಿಗಳಾಗಿರಿ ಮುಂದಿನವರಿಗೆ ಮಾರ್ಗದರ್ಶಕರಾಗಿರಿ!

ಕನ್ನಡ ಕ್ರಮಿಕ ಪುಸ್ತಕಗಳ ತಿದ್ದುಪಡಿಯ ವಿಚಾರದ ಬಗ್ಗೆ ಬರೆದು ಒಂದು ಒಂದು ಬರಹವನ್ನು ಹಿಂದೊಮ್ಮೆ ನಾವು ಮುದ್ರಿಸಿದ್ದೇವೆ ಈಗಿನ ಕ್ರಮಿಕ ಪುಸ್ತಕಗಳು ದೋಷಯುಕ್ತವಾದವುಗಳೂ, ನೀರಸವಾದವುಗಳೂ, ಕರ್ನಾಟಕ ಸಂಸ್ಕೃತಿ ಸಾಹಿತ್ಯ ಶಿಲ್ಪ ಮೊದಲಾದವುಗಳಿಗೆ ಅಪಕೃತಿ ಮಾಡತಕ್ಕಂಥವುಗಳೂ ಇರುವವೆಂದು ಹೇಳಿದರೆ ಏನೂ ತಪ್ಪಾಗದು. ರಾ. ವಾಸುದೇವಾಚಾರ್ಯ ಕೆರೂರು ಇವರು ತಮ್ಮ 'ಸಚಿತ್ರ ಭಾರತ'ದ ಸಂಚಿಕೆಗಳಲ್ಲಿ ಕ್ರಮಿಕ ಪುಸ್ತಕಗಳಲ್ಲಿಯ ದೋಷಗಳನ್ನೆಲ್ಲ ಬೈಲಿಗೆಳೆದಿರುವದರಿಂದ, ಇಲ್ಲಿ ಪುನಃ ಆ ವಿಷಯವನ್ನು ನಾವು ಚರ್ಚಿಸುವದಿಲ್ಲ. ಮೈಸೂರು, ಮುಂಬಯಿ, ಮಂಗಳೂರು, ಮದ್ರಾಸ ಇವೆಲ್ಲ ಪ್ರಾಂತಗಳಿಗಾಗಿ ಒಂದೇ ಕ್ರಮಿಕ ಪುಸ್ತಕಗಳಾಗುವುದು ಉಚಿತವೆಂದೂ, ಅದರಿಂದ ಪರಸ್ಪರರಲ್ಲಿ ಬಳಿಕೆ ಹೆಚ್ಚಾಗಿ ಸೌಹಾರ್ದ ಭಾವವು ಬೆಳೆಯುವದೆಂದೂ ನಾವು ಆಗಾಗ್ಗೆ ಹೇಳುತ್ತ ಬಂದಿರುವೆವು. ಇದರಿಂದ ಭಾಷೆಯ ಅಭಿವೃದ್ಧಿಗೆ ಎಷ್ಟು ಅನುಕೂಲವಾಗುವದೆಂದು ಬೇರೆ ಹೇಳಲವಶ್ಯವಿಲ್ಲ. ಎಲ್ಲಪ್ರಾಂತಗಳಿಗಾಗದಿದ್ದರೂ ಶಕ್ಯವಿದ್ದ ಕೆಲವು ಪ್ರಾಂತಗಳನ್ನಾದರೂ ಕೂಡಿಸಿಕೊಂಡು ಅವುಗಳಿಗೆ ಒಂದೇ ಕ್ರಮಿಕಪುಸ್ತಕಗಳ ಏರ್ಪಾಡುವಾಗುವಂತೆ ಮಾಡುವುದು ಎಲ್ಲ ಸುಶಿಕ್ಷಿತ ಕನ್ನಡಿಗರ ಕರ್ತವ್ಯವು. ಮುಂದೆ ಸಮಯ ಬಂದಾಗ ಉಳಿದ ಪ್ರಾಂತಗಳನ್ನು ಎಳೆದುಕೊಳ್ಳಲು ಅನುವು ದೊರೆಯುವದು. ಕ್ರಮಿಕಪುಸ್ತಕಗಳ ಮಾರ್ಪಾಟು ಮಾಡುವ ವಿಚಾರದಲ್ಲಿ ಬೇರೆ ಬೇರೆ ಪ್ರಾಂತಗಳ ತಜ್ಞರದೊಂದು ಮಂಡಲವನ್ನು ನಿಯಮಿಸಿ ಅದರಿಂದ ಕಾರ್ಯವನ್ನು ಜರಗಿಸಬೇಕು. ಕರ್ನಾಟಕದಲ್ಲಿ ಈಗ ಶಿಕ್ಷಣ ಸಾಹಿತ್ಯ ಇತಿಹಾಸ ಮೊದಲಾದವುಗಳಲ್ಲಿ ನುರಿತವರು ಅನೇಕ ಮಂದಿ ದೊರೆಯುವರು. ಸರಕಾರದವರು ಇತ್ತಕಡೆಗೆ ಲಕ್ಷ್ಯಕೊಟ್ಟು ಬೇರೆ ಬೇರೆ ವಿಷಯಗಳಲ್ಲಿ ಪಾರಂಗತರಿದ್ದವರ ಸಹಾಯವನ್ನಾಶ್ರಯಿಸಿ, ಮಾರ್ಪಾಟು ಮಾಡುವ ಕಾರ್ಯದಲ್ಲಿ ಉದ್ಯುಕ್ತರಾಗಬೇಕು.

ಪರದೇಶ.

ಕಾಕೇಶಿಯಾದಲ್ಲಿ. ಆಪಲಿಯಾದ್ದ ಭೂಕಂಪದಿಂದ ೫೦ ಜನರು ಮೃತರಾದರು ಮತ್ತು ೫೦೦ ಜನರಿಗೆ ಘಾಯವಾಗಿದೆ

ಎಮರ್, ಕ್ಲಾಡ ಮೊನೆಟ್ ಎಂಬ ಫ್ರಾನ್ಸಿನ ಪ್ರಸಿದ್ಧ ಚಿತ್ರಕಾರನು ಸತ್ತನೆಂಬ ಸುದ್ದಿ ಇದೆ.—

ಬ್ರಿಟಿಶ ಆಡ್ವೋಕೇಟ ಎಂಬ ಸ್ಟೀಮರು ಮತ್ತು ಕಂಬೈರ್ನ ಎಂಬ ಫ್ರೆಂಚ ಸ್ಟೀಮರು ಒಂದಕ್ಕೊಂದು ತಗಲಿದ್ದು ಎರಡೂ ಬಹಳ ಅಪಾಯವಾಗಿರುವವು.

ಬಾಗಲಕೋಟೆ ತಾ|| ಮಾಮಲೇದಾರ ಕಚೇರಿಯಿಂದ ಗ್ರಾ|| ಹು||

ಈ ವಿಜಾಪುರ ಜಿಲ್ಹಾದಲ್ಲಿ ಮಳೆ ಬಹಳ ಕಡಿಮೆ ಪ್ರಮಾಣದ ಮೇಲೆ ಆಗತಕ್ಕದ್ದರಿಂದ ಬಿದ್ದಷ್ಟು ಮಳೆ ನೀರು ಹರಿದು ಹೋಗದಂತೆ ಹೊಲಕ್ಕೆ ಬದು ಹಾಕಿಸಿ, ಬದಿ ಇಳಿಸಿಲ್ಲಿ ಸಸಿ ಕಾಯು ಕೊಂಡ ಹೊತ್ತು ಇದರ ಸಾಧ್ಯವಿದ್ದಲ್ಲಿ ಭಾವಿಗಳನ್ನು ತೆಗಿಸಿ, ಅವರ ನೀರಿನ ಮೇಲೆ ಬೆಳೆ ಮಾಡಿಕೊಂಡ ಹೊರತು ಬೇರೆ ಬರಕ್ಕೆ ದುಷ್ಕಾಳ ನಿವಾರಣೆಗೆ ಎರಡನೆ ಉಪಾಯವಿಲ್ಲ ಇದು ತಿಳಕೊಂಡು ಮುಂಬಯಿ ಸರಕಾರದವರು ಆಗಿ ಪರ್ವ ಸರ್ಕಾರ ಲಕ್ಷ ರೂಪಾಯಿ ತಗಾಯಿ, ಈ ವರ್ಷದ ಒಸರ ದಸಿಂದ ಸರಕಾರದವರು ಕೊಡುವದಕ್ಕೆ ಅನುಮೋದನ ಕೊಟ್ಟಿದ್ದಾರೆ. ಈ ರಕಮಿನ ಉಪಯೋಗ ಬರೋಬರಿ ರೀತಿಯಿಂದ ಮಾಡಿಕೊಳ್ಳುವ ಕರ್ತವ್ಯ ಸಾವ ಕಾರ ಜವಾಬದಾರ ಎಲ್ಲರ ಮೇಲೆ ಅದೆ ಕಾರಣ ಇಂಥ ಕಾಮಗಾರಿ ದಸಿಂದ ತಗಾಯಿ ಬೇಕಾದವರು ಬೇಡಿಕೆ ಮಾಡಬೇಕು; ಅಂತ ಎಲ್ಲ ಜನರಿಗೆ ಸಮ್ಮ ಊರಲ್ಲಿ ಡಂಗುರದಿಂದ ಪ್ರಸಿದ್ಧಮಾಡಿ, ಅರ್ಜಿ ಕೊಡುವಲಕ್ಕ ಉತ್ತೇಜನಕೊಟ್ಟು ಅರ್ಜಿಗಳು ತರೂ ಡ, ಕಳಿಸಬೇಕು. ಇದರಂತೆ ಮಾಡಿದ ಬಗ್ಗೆ ೭ ದಿವಸಗಳಲ್ಲಿ ರಿ| ಮಾಡಬೇಕು. ವಿಳಂಬ ಬಿಲ್ಕುಲ ಆಗಕೂಡದು.

ತಾ| ೧-೧೨-೧೯೨೬

(ಸಹಿ ಇಂಗ್ರೇಜಿ) ಬಿ ಬಿ ದೇಶಪಾಂಡೆ
ಮಾಮಲೇದಾರ

ನೋಟೀಸು.

ನಾವು ಕೆಳಗೆ ಸಹಿಮಾಡುವವರು. ಈ ನೋಟೀಸಿನಿಂದಾ -- ಯಾವತ್ತು ಜನರಿಗೆ ತಿಳಿಯಪಡಿಸುವದೇನಂದರೆ —

ಬಾಗಲಕೋಟೆಯಲ್ಲಿ ಈರಪ್ಪಾ ಸಂಗಪ್ಪಾ ಪಾಟೀಲ ಇವರ ಗಳ ಈ ಹಸರಿನ ನಮ್ಮ ಅಡತಿಅಂಗಡಿ ಇರುತ್ತದೆ. ಸದರ ಅಂಗಡಿಯಲ್ಲಿ ಅಲ್ಲಿಸಾ|| ವ|| ಗೌಸಸಾ|| ಟಕ್ಕಂಕೆ ಅಂತಾ ಗುಮಾಸ್ತ ಇದ್ದನು ಸದರಿಯವನು ನಮ್ಮ ಅಂಗಡಿಯಲ್ಲಿಯ ಕಾರಭಾರದಲ್ಲಿ ಬಹಳ ಅಪ್ರಾಮಾಣಿಕತನದಿಂದ ಅಪರಾತಪರಾಮಾಡಿದ್ದರಿಂದ ಒಂದು ತಿಂಗಳ ಹಿಂದೆ ಅವನನ್ನು ಗುಮಾಸ್ತ ಕೆಲಸದಿಂದ ದೂರ ಮಾಡಿರುತ್ತದೆ. ಆವನು ಈಗ ನಮ್ಮ ಅಂಗಡಿ ಗುಮಾಸ್ತ ಇರುವದಿಲ್ಲಾ ಅವನಿಗೆ ಅಂಗಡಿಬಾಬತ ಗುಮಾಸ್ತತನದ ಕೂಡತಕ್ಕೊಳ್ಳುವ ವ್ಯವಹಾರ ಯಾವದೂ ಮಾಡಲಿಕ್ಕೆ ಅಧಿಕಾರ ಇರುವದಿಲ್ಲಾ ಅವನಿಗೆ ಯಾರೂ ಅಂಗಡಿಬಾಕಿ ವಗೈರೆ ಏನೂ ವಸೂಲ ಕೊಡಬಾರದು ಮತ್ತೂ ಅಂಗಡಿ ಸಮ್ಮಂಧಿ ಅವನ ಸಂಗಡ ಕೊಡತಕ್ಕೊಳ್ಳುವ ಯಾವ ತರದ ವ್ಯವಹಾರ ಮಾಡಬಾರದು. ಹಾಗೆ ಮಾಡಿದಲ್ಲಿ ಅಂಗಡಿ ಏನೂ ಜವಾಬದಾರಿ ಇರೋದಿಲ್ಲಾ ಯಾರಾದರೂ ಈ ನೋಟೀಸಿನ ವಿರುದ್ಧ ವರ್ತಿಸಿ ವ್ಯವಹಾರ ಮಾಡಿದಲ್ಲಿ ಅದ ಲುಕ್ಸಾನಕ್ಕೆ ಅವರೇ ಜವಾಬದಾರರು ಇರತ್ತಾರೆ ಅಂತಾ ಕೊಟ್ಟ ನೋಟೀಸ ಸಹಿ ತಾ|| ೧೩|೧೨|೨೬ ಇಸ್ವಿ

(ಸಹಿ ಮರಾಠಿ) ಮಲ್ಲಪ್ಪಾ ಈರಪ್ಪಾ ಪಾಟೀಲ
ಹಳೆಅಂಗಡಿ ಅಡತ ದುಕಾನ ಬಾಗಲಕೋಟೆ.

೩ ನಂ ೫೦, ೪೯.

ಲೆವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ ೯
ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ ೭.



ಈ ಗಡಿಯಾರಗಳಲ್ಲಿಯು ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಪೇಕ್ಷ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಾದ ಬಹು ದಿವಸ ನಡೆಯುವವು ಮತ್ತು ತಾಳುವವು ಬೆಲೆ ಕಡಿಮೆಯೆಂದು ಅಂಜುವ ಕಾರಣವಿಲ್ಲ ಪರದೇಶಿ ದಿವಸನಿಯವರಿಗ ಯಂತ್ರಗಳನ್ನು ತಯಾರ ಮಾಡಲು ಸ್ಪರ್ಧೆಗಾಗಿ ಬಹು ವೆಚ್ಚ ತಗಲುತ್ತವೆ. ಆದರೆ ನಾವು ಯೋಗ್ಯ ರೀತ್ಯಾ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ

ಲಿಬೊರೋ ವಾಚ ಕಂ. (ಇಂಡಿಯಾ) ಬಾಂಬೆ ಕೆ ೪

ಅಮೃತ ವಚನಗಳು

ಲೇಖಕ : ಪಿ. ಡಿ ಲಕ್ಷ್ಮಣರಮಾರ, ಸುಂದಿಲಾಪುರ

ಈ ಜಗತ್ತಿನಲ್ಲಿ ಜುಲುಮೆ-ಜತ್ಕ್ರಾಯಗಳ ಬೀಜವು ಮೊದಲು ಸಣ್ಣ ಪ್ರಮಾಣದಲ್ಲಿತ್ತು. ಒಬ್ಬೊಬ್ಬರು ಸ್ವಲ್ಪ-ಸ್ವಲ್ಪ ಬೆಳಸಿ ಈಗ ಈ ಅವಸ್ಥೆಗೆ ಬಂದಿದೆ ರಾಜನು ರೈತನದೊಂದು ಹಣ್ಣು ತೆಗೆದುಕೊಂಡರೆ ಅವನಿಲ್ಲದಾಗ ಸೇವಕರು ರೈತನ ಗಿಡಗಳನ್ನೂ ತೋಟವನ್ನೂ ಎಷ್ಟುಸದ ಬಿಡರು.

× × × ×

ಅರಸಾಳುಗಳ ಪ್ರೀತಿಯನ್ನು ಸಂಪಾದಿಸುವದಕ್ಕಾಗಿ ಯಾವನು ಪರಮೇಶ್ವರನಿಂದ ಉತ್ಪನ್ನವಾದ ಪ್ರಜೆಗಳಿಗೆ ತ್ರಾಸಕೊಡುವನೋ ಅವನ ತಲೆಯನ್ನೊಡೆಯುವದಕ್ಕೆ ದೇವರು ಅದೇ ಜನರಿಗೆ ಉತ್ತೇಜನವನ್ನು ಕೊಡುತ್ತಾನೆ.

× × × ×

ಹುಲಿಯು ಕ್ರೂರಪ್ರಾಣಿಯೆಂದೂ ಕತ್ತೆಯೂ ನೀಚವೆಂದೂ ಜನರು ಹೇಳುತ್ತಾರೆ. ನಿಜವಾಗಿ ವಿಚಾರಮಾಡಿದರೆ ಮಂಡಿಯ ಭಾರವನ್ನು ಸಹಿಸುವ ಕತ್ತೆಯೇ ಜನರನ್ನು ಮುರಿಯುವ ಹುಲಿಯಗಿಂತ ಉತ್ತಮವೆನಬೇಕಾಗುತ್ತದೆ. ಇದೇ ಪ್ರಕಾರ ಭಾರ ಹೊರುವ ಎತ್ತು ಕತ್ತೆಗಳು ಜನರಿಗೆ ತ್ರಾಸ ಕೊಡುವ ಅರಸಾಳುಗಳಿಗಿಂತ ಒಳ್ಳೆಯವು.

× × × ×

ದುಷ್ಟರೂ ಜುಲುಮೆಯವರೂ ಆದ ಅರಸಾಳುಗಳು ಕಡೆಗೂ ಉಳಿಯುವದಿಲ್ಲ. ಆದರೆ ಜನರು ಅವರಿಗೆ ಕೊಡುವ ಶಾಪಗಳು ಮಾತ್ರ ಹಾಗೆ ಉಳಿಯುತ್ತವೆ. ಅರಸಾಳುಗಳು ಪ್ರಜೆಗಳ ಸಂರಕ್ಷಣೆಗಾಗಿದ್ದಾರೆ ಆದರೆ ಪ್ರಜೆಗಳು ಅರಸಾಳುಗಳ ಸೇವೆಗಲ್ಲ.

ಪರ್ಶಿಯನ್ ಕವಿ ಶೇಖಸಾದಿ.

ಕನ್ನಡ ಪುಸ್ತಕಗಳ ಸುಧಾರಣೆ

(ಬರೆದ ...)

ಸದ್ಯಕಾಲದಲ್ಲಿ ... ಪುಸ್ತಕಗಳನ್ನು ತಿದ್ದುವ ವಿಚಾರವು ನಡೆದಿದೆ ... ಬರೆ ... ! ಮಾರ್ಪಾಟು ಮಾಡುವ ವಿಚಾರ ... ತೀಕ್ಷ್ಣವಾದ ವಿಚಾರದಲ್ಲಿ ವಿಶೇಷ ಅಭ್ಯಾಸ ... ನುಡಿಯು ಮೋಡಿಯುಳ್ಳವರು ವುಗಳನ್ನು (...) ... ಕರ್ನಾಟಕದ ಏಕೀಕರಣದಲ್ಲಿ ಸಂಪೂರ್ಣ ... ಕಿದವರೂ, ಬಂಗಾಲಿ, ಮಹಾರಾಷ್ಟ್ರ, ... ಮೊದಲಾದ ... ಶಕ್ತಿಗಳಿಂದ ಹೊಸಗಿ ಬೆಳಗುವ ... ಕರ್ನಾಟಕದ ... ಕವಿಗಳೂ ಈ ಮೊತ್ತ ಸಾಧಿಸಿ ತಮ್ಮ ತಮ್ಮ ದೃಷ್ಟಿಯಿಂದ ಆಗಲೇ ಬೇಕಾದ ಸುಧಾರಣೆಗಳನ್ನು ಬೇರೆ ಬೇರೆ ... ದರೂ ಮಾಡಿಕೊಳ್ಳಲೇ ಬೇಕು; ಮಾಡಿಕೊಳ್ಳುವುದು ನಮ್ಮ ಕೈಯಲ್ಲಿಲ್ಲದಿದ್ದರೂ ಮಾಡಿಕೊಳ್ಳಲಿಕ್ಕೆ ಅವಶ್ಯವಾದ ಎಲ್ಲ ಪ್ರಯತ್ನಗಳನ್ನಾದರೂ ಮಾಡಲೇ ಬೇಕು. ಇದು ಮೇಲ್ಮಾಣಿಸಿದವರ ಮೊದಲ ಕೆಲಸವಾಗಿದೆ.

ಕ್ರಮಿಕ ಪುಸ್ತಕಗಳ ಸುಧಾರಣೆಯ ವಿಚಾರದಲ್ಲಿ ನನಗೆ ಸೂಚಿಸಬೇಕಾದ ಒಂದೆರಡು ಮಾತುಗಳನ್ನು ಇಲ್ಲಿ ಸ್ಥೂಲವಾಗಿ ಹೇಳುವವನಿದ್ದೇನೆ.

೧. ಮುಂಬಯಿ ಮದ್ರಾಸ, ಹಾಗೂ ಮೈಸೂರ ಕ್ರಮಿಕ ಪುಸ್ತಕಗಳು ಒಂದೇ ... ವಿಚಾರ ಮಾಡಬೇಕೆಂಬ ಹಳೆಯ ಸೂಚನೆಯನ್ನು ... ಲ್ಲಿ ತರುವುದಕ್ಕೆ ಇದು ಒಳ್ಳೇ ಸಮಯವಾಗಿದೆ. ಸಧ್ಯ ... ನ್ನು ಏನೇನು ಮಾಡಬೇಕೆಂಬುದಿಸಿ ಡೆಪುಟಿ ಇನಸ್ಪೆಕ್ಟರರಿಗೆ ಅಭಿಪ್ರಾಯಗಳು ಕೇಳಲಾಗಿವೆ. ಎಲ್ಲರೂ ಮೇಲ್ಕಾಣಿಸಿದಂತೆ ತಮ್ಮ ಅಭಿಪ್ರಾಯಗಳನ್ನು ... ಗೆ ತಿಳಿಸುವಂತೆ ಕೇಳಿಕೊಳ್ಳಬೇಕು. ಹಾಗೂ ಇನ್ಸ್ಪೆಕ್ಟರ ... ಣ ಖಾತೆ, ಡಿರೆಕ್ಟರ, ಮತ್ತು ವಿದ್ಯಾಖಾತೆಯ ಮಂತ್ರಿ ... (ಮುಂಬೈಯಿಲಾಖೆಯಲ್ಲಿ) ಏಕೀಕರಣ ಸಭೆಯವರು ಭೆಟ್ಟಿಯಾಗಿ ಈ ಮಾತಿಗೆ ಒಪ್ಪುವಂತೆ ಮಾಡಬೇಕು. ಇವಾಗ ಮುಂಬೈ, ಮದ್ರಾಸ, ಮೈಸೂರು ಮೂರೂ ಭಾಗದ ಪುಸ್ತಕಗಳು ಒಂದಾದ ... ರವೇ. ... ಎರಡು ಭಾಗದ ಕೆಲಸವಾದರೂ ಕಡಿಮೆಯಲ್ಲ.

೨. ಕ್ರಮಿಕ ಪುಸ್ತಕಗಳಲ್ಲಿ ಅಖಂಡ ಕರ್ನಾಟಕದ ಬಗ್ಗೆ ಪ್ರೀತಿ, ಅದರ ಅಭಿಮಾನಗಳು ಉಂಟಾಗುವಂತಹ ಪಾಠಗಳು ... ಳಿನಿಂದ ಕೊನೆಯವರೆಗಿನ ಪುಸ್ತಕಗಳಲ್ಲಿಯೂ ಏರ್ಪಾಟು ಮಾಡಬೇಕು. ಕರ್ನಾಟಕದ ಸೃಷ್ಟಿಸೌಂದರ್ಯ, ಕರ್ನಾಟಕದ ಕಟ್ಟಡಗಳು, ಜನರ ನಡೆ ನುಡಿ, ವೀರರು, ವಿದ್ವಾಂಸರು, ಕಲಾಕೌಶಲ್ಯ, ಸಾಹಿತ್ಯ ಮುಂತಾದವುಗಳ ಜ್ಞಾನಮಾಡಿಕೊಡುವ ಬಗೆಬಗೆಯ ಪಾಠಗಳನ್ನು ರಚಿಸಿ ಸೇರಿಸುವಂತೆ ಒತ್ತಾಯ ಪಡಿಸಬೇಕು. ಈಗಿನ ಪುಸ್ತಕಗಳಲ್ಲಿ ಕನ್ನಡನಾಡು ಕನ್ನಡ ಮಹಾಪುರುಷರ ಬಗ್ಗೆ ... ಕಸು ಉಳ್ಳೀಯಿದೆ. ಮಹಾರಾಷ್ಟ್ರ ಮೊದಲಾದವರ ಮಹಾಪುರುಷರ ಬಗ್ಗೆ ಇರುವಷ್ಟು ಪಾಠಗಳೂ ಕನ್ನಡ ... ಳ ಬಗ್ಗೆ ... ಬಂದಿಲ್ಲ!

೩. ಈಗಿನ ಪಾಠಗಳ ಭಾಷೆಯು ಬಹಳ ಅಶುದ್ಧವಾಗಿದೆ. ಅದನ್ನು ಸರಿಪಡಿಸುವುದು ಅತ್ಯವಶ್ಯ. ಇಂಗ್ಲಿಶ ರಾ ... ಓದಿದರೆ ವಿದ್ಯಾರ್ಥಿಯ ಬಾಯಲ್ಲಿ ಒಂದು ಒಳ್ಳೇ ಮೋಡಿಯು (Style) ನುಡಿಯು ಕೂಡುತ್ತದೆ. ಆದರೆ ಕನ್ನಡ ಏಳೂ ಪುಸ್ತಕಗಳ ಅಭ್ಯಾಸಮಾಡಿದರೂ ವಿದ್ಯಾರ್ಥಿಯ ಮಾತಿಗೆ ಕನ್ನಡತನದ ಒಪ್ಪವುಂಟಾಗುವದೇ ಇಲ್ಲ. ಮೇಲಿನ ತರಗತಿಯ ಪುಸ್ತಕಗಳಲ್ಲಿ ಕ್ರಮ ಕ್ರಮವಾಗಿ ಮೇಲ್ತರಗತಿಯ ಮೋಡಿಯ ನುಡಿಯು ಕಂಡು ಬರಲಿಕ್ಕೆ ಬೇಕು. ಈಗಿನ ಪುಸ್ತಕಗಳಲ್ಲಿ ಕೆಳಗಿನ ಇಯತ್ತೆಗೆ ... ವಾಕ್ಯಗಳು! ಮೇಲಿನ ಇಯತ್ತೆಗೆ ಉದ್ದುದ್ದ ವಾಕ್ಯಗಳು! ಇದೇ ಭೇದ! ಇದರ ಹೊರತು ಆ ಪುಸ್ತಕ ರಚನಾಕಾರರಿಗೆ ಮಾತಿನ ಬಗೆ ಬಗೆಯ ರೀತಿಗಳು, ಶೈಲಿಗಳು ಗೊತ್ತಿದ್ದಂತೆ ತೋರುವದೇ ಇಲ್ಲ. ಈ ಕುಂದು ತೆಗೆದು ಹಾಕಲಿಕ್ಕೆ ಕ್ರಮವಾಗಿ ಗಡಚಾದ ಮಾತಿನ ಮೋಡಿಯ ಪಾಠಗಳನ್ನು ಸೇರಿಸುವುದು ಅವಶ್ಯಕ. ಹೀಗಿಲ್ಲದ್ದರಿಂದಲೇ ಈಗಿನ ಮುಲ್ಕೀಪರೀಕ್ಷೆಯ ವಿದ್ಯಾರ್ಥಿಗಳಿಗೆ ... ಯೋ ಕಲ್ತಿಯುವ ಪುಸ್ತಕದ ಅಭ್ಯಾಸಮಾಡಿದ ... ಯ ಇಯತ್ತೆಯವರಿಗಿಂತ ಏನೂ ಕನ್ನಡ ಬರುವದಿಲ್ಲ.

೪. ಅರ್ವಾಚೀನ ಗದ್ಯ ಪದ್ಯ ವಾಙ್ಮಯದೊಳಗಿನ ಸುಂದರವಾದ ಭಾಗಗಳನ್ನು ಆಯ್ದು ಕ್ರಮಿಕ ಪುಸ್ತಕಗಳಲ್ಲಿ ಸೇರಿಸುವುದು ಅಗತ್ಯವಾಗಿದೆ. ಅದರಿಂದ ವಿದ್ಯಾರ್ಥಿಗಳಿಗೆ ಆಧುನಿಕ ಲೇಖಕರ ಪರಿಚಯವೂ ಅವರ ಬರವಣಿಗೆಯ ಗುಟ್ಟು ತಿಳಿಯುವುದು. ವಾಚನಾಭಿರುಚಿಯು ಹೆಚ್ಚುವುದು. ಅದ್ದರಿಂದ ಹೊಸ ಮಾರ್ಪಾಟುಗಳಲ್ಲಿ ಈ ಮಾತು ಆಗಲೇ ಬೇಕು. ಅದಕ್ಕಾಗಿ ನಾನು ಕೆಲವು ವಾಙ್ಮಯ ವಿಶಾರದರ ಹೆಸರುಗಳನ್ನು ಮಾತ್ರ ಸೂಚಿಸುತ್ತೇನೆ. ಇದು ಸಂಪೂರ್ಣ ಪಟ್ಟಿಯೆಂದು ತಿಳಿಯಬಾರದು.

ಗದ್ಯಪಾಠಗಳಿಗಾಗಿ ಶ್ರೀ. ಎಮ್. ವೆಂಕಟೇಶ ಅಯ್ಯಂಗಾರ M. A ಇವರ ಸಣ್ಣಕತೆಗಳು, ಶಾಂತಾ; ಕಂ. ಮಂಗೇಶರಾಯರು B. A. ಇವರ ಕೊಟಿಚೆನ್ನಯ; ಎಮ್. ಎಸ್. ಕಾಮತ ಇವರ ಪೆಗೌರ್ಯ ಸಿಂಹಾಸನ ಸ್ಥಾಪನೆ, ಕರ್ಣ, ಯಾದವ ಕೃಷ್ಣ ಮುಂತಾದವುಗಳು; ಮತ್ತೆಯ ತಿಮ್ಮಪ್ಪಯ್ಯ ಕನ್ನಡನುಡಿ ಬರೆಯರು, ಇವರ ಹಾಗೂ ಶ್ರೀಕಂಠಯ್ಯ, ಕೈಲಾಸಂ, ಗಳಗನಾಥ, ವಾಸುದೇವಾಚಾರ್ಯ ಕೆರೂರ ಮುಂತಾದವರ ಗ್ರಂಥಗಳನ್ನೂ,

ಪದ್ಯಪಾಠಗಳಿಗಾಗಿ ಶ್ರೀನಿವಾಸ; ಕವಿಶಿಷ್ಯ, ಹೊಯಿಸಳ, ಡಿ. ವಿ ಗುಂಡಪ್ಪ; ಶ್ರೀ. ಕುರಡಿ, ಆದೇ ನೇರಿಗೆ ಗೆಳೆಯರ ಗುಂಪಿನ ಸಂಪುಟಗಳನ್ನು ಮೊದಲಾದವರು ಇವರ ಕವಿತೆಗಳನ್ನೂ ತಕ್ಕೊಳ್ಳುವುದು ಅವಶ್ಯಕವಿದೆ.

ಹಾಗೂ ಇಂದಿನ 'ಏಳಿರೆಲ್ಲರೂ ಸಾಲುಗೊಳ್ಳಿರಿ' ಇಂಥ ನೀರಸ, ದೀರ್ಘ ಕವಿತೆಗಳೂ, 'ಸ್ಮರ ಕಾಂತಾರತಿ ಘರ್ಮಬಿಂದು' 'ಭಾವೋದ್ಭವಸಿಂ ಪರವಶೆಯಾದಿಂ' ಇಂಥ ವಿದ್ಯಾರ್ಥಿಗಳಿಗೆ ... ಶೃಂಗಾರಿಕ ಪದ್ಯಗಳೂ, 'ಕೊರಳು ಸುತ್ತಿದ ಹಾವು ಕಚ್ಚದೆ ಮರಳುವದೆ ಮಾಯಾ ಪ್ರಪಂಚದಿ ಹೊರಳುತಿ ... ?' ಎಂಬ ಗೊಡ್ಡು ವೇದಾಂತದ ಹಾಡುಗಳೂ ಕವಿತೆ ... ಹೋಗಿ ಅವುಗಳ ಸ್ಥಳದಲ್ಲಿ ಸ್ವಾಭಿಮಾನ, ಸ್ವದೇಶಾಭಿಮಾನ, ಸಂಸಾರ ಪ್ರೀತಿ, ರಸಿಕತೆಗಳನ್ನುಂಟುಮಾಡುವ ಹೊಸ ... ಹಾಡುಗಳಿಗೂ ಕವಿತೆಗಳಿಗೂ ಕ್ರಮಿಕ ಪುಸ್ತಕಗಳಲ್ಲಿ ... ದೊರೆಯಲೇ ಬೇಕು. ಅದುದರಿಂದಲೇ ವಿದ್ಯಾರ್ಥಿಗಳ ಭಾವನೆಗಳ ಶುದ್ಧೀಕರಣವೂ ಸುಸಂಸ್ಕರಣವೂ ಆಗುವುದು.

ಕ್ರಮಿಕ ಪುಸ್ತಕಗಳ ಸಂಸ್ಕರಣವು ಅಂಥ ಇಂಥ ಜನರಿಂದ ಆಗುವುದು ಶಕ್ಯವಿಲ್ಲ. ಅದಕ್ಕೆ ಶಿಕ್ಷಣ, ಮಾನಸಶಾಸ್ತ್ರ, ಹಾಗೂ ಕನ್ನಡ ವಾಙ್ಮಯದ ಒಳ್ಳೇ ಅಭ್ಯಾಸವುಳ್ಳ ಅದವರ ಮುಂದೆ ...

ಕ್ಕೆ ಸರಕಾರ ಅಧೀನದ ಕೆಲಸದ ಭಾರದಲ್ಲಿ ಹೊದಲೇ ... ನ್ನಾ ಮತ್ತು ನಾವ ಶ್ರೀ ರಾ. ಪ. ಹಿತ್ತಾಲ ಅವರಾ ... ಪ್ಪ, ಹಾ. ಇಂಥವರ ಕೃಪೆಯಿಂದ ಒಳ್ಳೇ ರೀತಿಯಿಂದ ಜರು... ಸಕ್ತವಿದೆ. ಅದಕಾರಣ ಈಗಾಗಲೇ ಈ ತರದ ಕ... ಸಂಘಟಿತವಾದ ಬೆಂಗಳೂರಿನ ಕರ್ನಾಟಕ ಸಂಘ, ದ... ಕ್ಷಣ ಮಂಡಳ, ಹಾಗೂ ಧಾರವಾಡ ಪ್ರಾಂತದ ... ಬಂದು ... ಗಳೊಳಭಾಗದ ಬಾಲಶಿಕ್ಷಣ ಮಂಡಳ ... ಗೆ ಈ ಕೆಲಸವನ್ನು ಭಾಗಶಃ ಒಪ್ಪಿಸಿದರೆ ಅದು ಸಮಾಧಾನಕರವಾಗಿ ಕೊನೆಗಂಡೀತೆಂದು ನಿಸ್ಸಂಶಯವಾಗಿ ಹೇಳಬಹುದು. ದೊಡ್ಡವರ ಈ ಪ್ರತಿಯೊಂದು ಗುಂಪಿನಲ್ಲಿ ಶಿಕ್ಷಣಕಾರ್ಯ ಹಾಗೂ ಶಿಕ್ಷಣಕಾರ್ಯದಲ್ಲಿ ಹಲವುದಿನಗಳಿಂದ ವ್ಯವಹರಿಸುವವರಿಂದ ಒಂದೇ ಮನಸ್ಸಿನಿಂದ ಸೇವೆಯಿಡುವ ಹಲವು ಯೋಗ್ಯತಾವಂತರನ್ನ ಗೃಹಸ್ಥರಿರುವರು. ಕ್ರಮಿಕ ಪುಸ್ತಕ ಸುಧಾರಣೆ ಮಾಡಬೇಕೆಂದು ಎತ್ತಿದ ನಡಿಸಿರುವ ಸರ್ಕಾರಿ ಅಧಿಕಾರಿಗಳು ದಯವಿಟ್ಟು ಮೇಲಿನ ಸಂಘಗಳಿಗೆ ಕೆಲಸಕ್ಕೆ ನೆರವಾಗಲು ಕೇಳಿಕೊಳ್ಳಬಹುದು. ಅದಾಗದಿದ್ದಲ್ಲಿ ಹಿಡಿದ ಪದ್ಧತಿ ಮೊದಲಾದವುಗಳ ಸೇರಿಸಿದ ವಿಚಾರದಲ್ಲಿ ಸಲಹೆಗಳನ್ನಾದರೂ ಪಡೆಯುವ ಹಾದಿ ಬೇಕೆಂದು ನನ್ನ ಅಭಿಪ್ರಾಯದ ಸೂಚನೆಯಿದೆ.

ಕನ್ನಡ ಪತ್ರಿಕಾಕಾರರ ಹಾಗೂ ಶಿಕ್ಷಣಾಭಿಮಾನಿಗಳಿಗೆ ಬೇಡಿಕೆ ಈ ವಿಷಯವು ಕನ್ನಡದ ಹಾಗೂ ಕರ್ನಾಟಕದ ಏಳ್ಗೆಗೆ ಅತ್ಯಂತ ನಿಕಟ ಸಂಬಂಧವುಳ್ಳದ್ದಿದೆ. ಮಕ್ಕಳ ತಲೆಯಲ್ಲಿ ಏನು ತುಂಬಬೇಕು ಎಂಬ ವಿಷಯವನ್ನು ಎಲ್ಲರೂ ವಿಚಾರಿಸುವುದು ಅತ್ಯವಶ್ಯಕವಿದೆ. ಅದಕಾರಣ ಎಲ್ಲರೂ ಈ ವಿಚಾರದಲ್ಲಿ ಮನಸ್ಸು ಹಾಕಿ ತಮ್ಮ ಮತವನ್ನು ಕೂಡಿಸಿಮುಟ್ಟಿಸುವ ಪ್ರಯತ್ನಗಳನ್ನು ಮಾಡದೆ ಕೈಮುಚ್ಚಿಕೊಂಡು ಕುಳಿತರೆ ಕರ್ತವ್ಯಕ್ಕೆ ತಪ್ಪಿದ ಪಾಪವು ತಟ್ಟದೆ ಇರಲಾರದು.

ಗೋಹಾಟಿಯ ರಾಷ್ಟ್ರೀಯ ಸಭೆಯೂ ಆಸಾಮು ಪ್ರಾಂತವೂ

ಇಲ್ಲಿಯ ಸ್ವಾಗತ ಮಂಡಲಿಯವರು ಅಖಿಲ ಭಾರತ ಕಾಂಗ್ರೆಸ ಕಮಿಟಿಯವರಿಗೆ "ನಮ್ಮ ಪ್ರಾಂತವು ಬಡತನದ್ದೂ ಮತ್ತು ಸಣ್ಣದೂ ಇರುವದರಿಂದ ಸಾಕಷ್ಟು ದುಡ್ಡು ಕೂಡಿಸುವದು ಅಶಕ್ಯವಾದ ಮಾತಾಗಿರುವದು. ಅದ್ದರಿಂದ ಪ್ರತಿನಿಧಿಗಳ ಫೀಯನ್ನು ೧೦ ರೂಪಾಯಿ ಮಾಡಬೇಕು" ಎಂದು ವಿನಂತಿ ಮಾಡಿ ಕೊಂಡಿದ್ದರೆಂದು ತಿಳಿದು ಬರುತ್ತದೆ. ಆ ಪ್ರಕಾರ ಅಖಿಲಭಾರತ ಕಾಂಗ್ರೆಸ ಕಮಿಟಿಯವರು ಫೀಯನ್ನು ೧೦ ರೂ. ಮಾಡಿದಾರೆ. ಇಲ್ಲಿಯವರೆಗೆ ಕೇವಲ ನೂರುನೂರು ಜನರು ಸ್ವಯಂ ಸೇವಕರಾಗಲು ಹೆಸರು ಕೊಟ್ಟಿದಾರೆ. ಕಾಂಗ್ರೆಸ ನಗರಕ್ಕೆ 'ಪಂಡುನಗರ' ಎಂಬ ಹೆಸರನ್ನು ಕೊಟ್ಟಿದ್ದಾರೆ. ಗೋಹಾಟಿಯಿಂದ ಸುಮಾರು ೪, ೫ ಮೈಲುಗಳ ಮೇಲೆ ಪಂಡು ಎಂಬ ಹಳ್ಳಿ ಇರುತ್ತದೆ. ಈ ಹಳ್ಳಿಯ ಹತ್ತರ ಪಾಂಡವರ ಸಂಚಾರವಾಗಿದೆಯೆಂದೂ ಅದಕ್ಕಾಗಿ ಇದಕ್ಕೆ ಈ ಹೆಸರು ಬಂದಿದೆ ಎಂದೂ ಹೇಳುತ್ತಾರೆ. ಈ ಹಳ್ಳಿಯ ಹತ್ತರದಲ್ಲಿಯೇ ಕಾಂಗ್ರೆಸದ ನಗರ ವಸತಿಯಿಂದ ಇವಕ್ಕೆ 'ಪಂಡುನಗರ' ಎಂಬ ಹೆಸರನ್ನು ಕೊಟ್ಟಿದ್ದಾರೆ. ಹೊಸ್ಪಿನ ದಿನ್ನ(ಡಿಸೆಂಬರ ೨೬ನೇ ತಾರೀಖು) ಪಂಡುನಗರದಲ್ಲಿಯ ಅಂಗಡಿಗಳನ್ನು ಲಿಲಾವಿನಿಂದ ಕೊಡುವದಾಗಿ ತೀರ್ಮಾನಿಸಿದ್ದಾರೆ.

ಆಸಾಮು ಪ್ರಾಂತದ ಸೃಷ್ಟಿ ಸೌಂದರ್ಯ—

ಆಸಾಮು ಪ್ರಾಂತವು ಗುಡ್ಡಗಾಡು ಪ್ರದೇಶವಷ್ಟೇ? ಇಲ್ಲಿ ... ಗುಡ್ಡಗಳು ನಿಬಿಡವಾದ ಅರಣ್ಯಗಳಿಂದ ಮುಚ್ಚಲ್ಪಟ್ಟಿವೆ. ದೂರದಲ್ಲಿ ಹಿಮಾಲಯ ಪರ್ವತಗಳ ಶಿಖರಗಳು ಬರ್ಫದಿಂದ ಮುಸುಕು ... ಕೊಂಡಿದ್ದು ಕಾಣಬರುತ್ತದೆ. ಇಲ್ಲಿ ಬೈಲು ಪ್ರದೇಶವೇ ಇಲ್ಲ. ಈ ಪ್ರಾಂತದಲ್ಲಿ ಬ್ರಹ್ಮಪುತ್ರಾನದಿಯು ಹರಿಯುತ್ತಿದೆ, ಇದು ಹಿಮಾಲಯದಿಂದ ಬಂದಂಥ ನದಿಯಾದ್ದರಿಂದ ಚಳಿ... ಇದರ ನೀರು ದಿನ ದಿನಕ್ಕೆ ಕಡಿಮೆಯಾಗುತ್ತದೆ. ಈ ... ಉಗಿಹಡಗಗಳು ಓಡಾಡುತ್ತಿರುತ್ತವೆ.

... ಹವೆಯು—

ಸದ್ಯಕ್ಕೆ ಇಲ್ಲಿ ಚಳಿಯು ವಿಶೇಷವಾಗಿರುವದು. ರಾತ್ರಿಯಲ್ಲಂತೂ ಮಂಜು ಬಹಳ ಬೀಳುವದು. ಹಗಲಿನಲ್ಲಿ ಒಂದು ದಿಕ್ಕಿನಲ್ಲಿ ಪರ್ವತಗಳ ಸಾಲುಗಳು ಕಾಣುತ್ತಿದ್ದರೆ, ನಾಳೆಗೆ ಅವುಗಳು ಮಂಜಿನ ಮೂಲಕ ಕಾಣದೆ ಆ ದಿಕ್ಕಿನಲ್ಲಿ ಕೇವಲ ಬೈಲೇ ಕಾಣುವದು. ಚಳಿಗಾಲದಲ್ಲಿಯ ಇಲ್ಲಿಯ ದಿವಸಗಳು ಬಹಳ ಸಣ್ಣವು. ಮುಂಜಾವಿನಲ್ಲಿ ಸೂರ್ಯನು ಸುಮಾರು ೬|| ೬||| ಗಂಟೆಗೆ ಉದಯಿಸುತ್ತಾನೆ. ಮತ್ತು ಸಂಜೆಯು ೫ ಗಂಟೆಯ ಸುಮಾರಕ್ಕೆ ಮುಳುಗುತ್ತಾನೆ. ಭೂಮಿಯು ಶೀತವಾದದ್ದು. ಇಲ್ಲಿ ಒಂದು ಭಯಂಕರವಾದ ಬೇನೆ ಯಿರುತ್ತದೆ. ಇದು ಈ ಪ್ರಾಂತದ ಹೊರತು ಬಹುತರವಾಗಿ ಎಲ್ಲಿಯೂ ಇಲ್ಲವಂತೆ. ಇದರ ಹೆಸರು "ಕಾಲಾಜ್ವರ" ಎಂಬದು. ಇದರಬಲಿಗೆ ಬಿದ್ದ ಮನುಷ್ಯನು ಒಂದು ಒಂದುವರೆ ವರ್ಷದವರೆಗೆ ಕ್ಷೀಣನಾಗುತ್ತ ನಡೆದು ಸಾಯುತ್ತಾನೆ. ಇದರ ಕೈಯೊಳಗಿಂದ ಪಾರಾಗುವದಕ್ಕಾದರೂ ಉಪಾಯಗಳುಂಟು. ಶೀತ ಹವೆಯು ಶ್ರೇಷ್ಠವಾದ್ದರಿಂದ ಇಲ್ಲಿಯ ಹವೆಯು ಉತ್ತಮವಾದದ್ದು.

ಈ ಪ್ರಾಂತದ ಹುಟ್ಟುವಳಿಯು—

ಇಲ್ಲಿ ಕೆಲವೊಂದು ಜಾತಿಯ ಹುಳಗಳಿಂದ ಎಂಡೀ ಮತ್ತು ಮೂಗಾ ಎಂಬ ಎರಡುಜಾತಿಯ ರೇಷ್ಮಿಯನ್ನು ತೆಗೆಯುತ್ತಾರೆ. ಇದರಿಂದಾದ ವಸ್ತ್ರಗಳು ಬಹಳ ಬೆಚ್ಚಗಿರುತ್ತವೆ. ಈ ರೇಷ್ಮಿಯು ಈ ಪ್ರಾಂತದ ಹೊರತು ಬೇರೆ ಎಲ್ಲಿಯೂ ಸಿಗುವದಿಲ್ಲವಂತೆ. ಆಸಾಮು ಪ್ರಾಂತವು ಚಹಾದ ಬೆಳೆಗಾಗಿ ಪ್ರಸಿದ್ಧವಾದದ್ದೆಂಬದು ಎಲ್ಲರಿಗೂ ತಿಳಿದಮಾತು. ಬಹುತರವಾಗಿ ಎಲ್ಲ ಚಹಾದ ತೋಟಗಳು ಯುರೋಪಿಯನ್ನರ ಅಧೀನದಲ್ಲಿರುತ್ತವೆ. ಇಲ್ಲಿ ಕಿತ್ತಳೀ ಹಣ್ಣುಗಳು ವಿಪರೀತವಾಗಿ ದೊರೆಯುತ್ತವೆ. ಈ ಹಣ್ಣುಗಳು ಬಹಳ ಶ್ರೇಷ್ಠತರದವಿದ್ದು ಸ್ವಲ್ಪ ಬೆಲೆಗೆ ದೊರೆಯುತವೆ. ಇಲ್ಲಿ ನಾನಾ ತರದ ಧಾತುಗಳ ಉತ್ತಮ ಪಾತ್ರೆಗಳು ಹುಟ್ಟುತ್ತವೆ. ಈ ಪ್ರಾಂತದಲ್ಲಿ ಅವು ಹುಟ್ಟುತ್ತಿದ್ದು ಅದನ್ನು ಸೇದುವವರಾದರೂ ಬಹಳ ಜನರಿರುತ್ತಾರೆ.

ಇಲ್ಲಿಯ ಜನರ ಭಾಷೆಯೂ, ನಡಾವಳಿಗಳೂ, ಆಹಾರವೂ. ಇದು ಬಂಗಾಲ ಪ್ರಾಂತಕ್ಕೆ ಹೊಂದಿರುವದರಿಂದ ಎಲ್ಲವೂ ಸ್ವಲ್ಪ ಹೆಚ್ಚು ಕಡಿಮೆ ಬಂಗಾಲದಂತೆಯೇ ಇರುತ್ತದೆ. ಇಲ್ಲಿಯ ಜನರ ಪೋಷಾಕುಗಳು ಬಂಗಾಲದ ಜನರಂತೆಯೇ. ಬಂಗಾಲದಂತೆಯೇ ಎಲ್ಲರು ಮಾಂಸಾಹಾರಿಗಳು. ಹೊರಗಿನಿಂದ ವ್ಯಾಪಾರಕ್ಕಾಗಿ ಬಂದ ಮಾರವಾಡಿಗಳ ಹೊರತು ಶಾಕಾಹಾರಿಗಳು ಇಲ್ಲಲೇ ಇಲ್ಲ. ಇದೇ ಕಾರಣದಿಂದ ಈಸಾರೆ ಕಾಂಗ್ರೆಸ್ಸಿನ ಕಾಲಕ್ಕೆ ಮಾಂಸಾಹಾರಿಗಳಿಗಾಗಿ ಮುಖ್ಯ ಅಡಿಗೇ ಮನೆಯೂ ಶಾಕಾಹಾರಿಗಳಿಗಾಗಿ ದೇಶದ ... ಗೊಂದು ಸಣ್ಣದಂ... ಮುಕ್ಕೆನರಿಗಾಗಿ ಮತ್ತೊಂದು ಹೀಗೆ

ಗೆ ಮೂರು ಅಡಿಗೆ ಮನೆಗಳಾಗುವವೆಂದು ತಿಳಿಯುತ್ತದೆ. ಯಾ ಕೆಂದರೆ ಈ ಸಾರೆ ಮಾರ್ವಾಡಿಗಳೇ ಹೆಚ್ಚು ಜನರು ಕೂಡುವ ದು ಸ್ವಾಭಾವಿಕವು.. ಅಸಾಮಿ ಭಾಷೆಯು, ಓಡ್ರ ಭಾಷೆಯನ್ನು ಹೋಲುವದು (ಗ್ರಾಮ್ಯ) ಬಂಗಾಲೀ ಭಾಷೆಯೆಂದರೆ ತಪ್ಪಾಗಲಾರದು. ಈ ಎರಡೂ ಭಾಷೆಗಳ ಅಕ್ಷರಗಳೂ ಒಂದೇ ಈ ಪ್ರಾಂತದಲ್ಲಿಯ ಬಹಳ ಜನರಿಗೆ ಹಿಂದೀ ಭಾಷೆಯು ಬರುತ್ತದೆ. ಆಸಾಮದಲ್ಲಿ ನೇಪಾಳೀ ಮತ್ತು ಭೂತಾನೀ ಜನರು ತುಂಬಿರುತ್ತಾರೆ. ಈ ಪ್ರಾಂತದಲ್ಲಿರುವ ನಾಗಾ, ಖಾಸಿಯಾ, ಮಿಯಂತ್ಯ ಎಂಬ ಗುಡ್ಡಗಳಲ್ಲಿ ಕಾಡು ಜನರು ಇರುತ್ತಾರೆ. ಇವರಿಗೆ ಶಿಕ್ಷಣ ಕೊಟ್ಟು ಕ್ರಿಶ್ಚನ್ನರನ್ನು ಮಾಡುವ ಉದ್ಯೋಗವನ್ನು ಕ್ರಿಶ್ಚನ್ನ ಪಾದ್ರಿಗಳು ಒಳ್ಳೇ ಭರದಿಂದ ನಡೆಯಿಸಿದ್ದಾರಂತೆ. ಇವರ ಕೆಲಸಕ್ಕೆ ಸರಕಾರದವರ ಸಹಾಯವಿರುವದರಿಂದ ಇವರನ್ನು ಹಿಡಿಯುವರಾರು? ಇಲ್ಲಿಯ ಶೀತ ಹವೆಯು ಮಲೇರಿಯುರೋಪಿಯನ್ನರ ವಸ್ತಿಯಾದರೂ ಬಹಳವುಂಟು. ಈ ಪ್ರಾಂತದಲ್ಲಿ ಹಿಂದೂ ಜನರ ವಸ್ತಿಯು ಬಹಳವಿದ್ದು ಮುಸಲ್ಮಾನರು ತೀರ ಸ್ವಲ್ಪ ಜನರಿರುತ್ತಾರೆ. ಇಲ್ಲಿ ಹಿಂದು ಮುಸಲ್ಮಾನರ ಕಲಹವಿರುವದಿಲ್ಲವೆಂಬದು, ಕಾಂಗ್ರೆಸ್ಸಿನ ಕೆಲಸದಲ್ಲಿ ವಿಶೇಷ ಭಾಗತೆಗೆದುಕೊಳ್ಳುತ್ತಿರುವ ಮುಸಲ್ಮಾನರನ್ನು ನೋಡಿದರೆ, ಕಂಡು ಬರುವದು. ಈ ಪ್ರಾಂತಕ್ಕೆ ಹೊಂದಿರುವ ಮತ್ತು ಬಂಗಾಲ ಪ್ರಾಂತಕ್ಕೆ ಸೇರಿರುವ ಮೈಮನಸಿಂಗ ಮೊದಲಾದ ಜಿಲ್ಹೆಗಳಿಂದ ಮುಸಲ್ಮಾನರು, ಪ್ರತಿವರ್ಷ ಗುಂಪು ಗುಂಪಾಗಿಬಂದು ಈ ಪ್ರಾಂತದಲ್ಲಿ ವಾಸಿಸಲು ಪ್ರಾರಂಭಿಸಿದ್ದಾರಂತೆ ಹೀಗೆ ಅನೇಕ ವರ್ಷಗಳವರೆಗೆ ನಡೆದರೆ ಮಾತ್ರ ಈ ಪ್ರಾಂತದಲ್ಲಿ ಮುಸಲ್ಮಾನರ ಸಂಖ್ಯೆಯು ಬೆಳೆಯುವ ಸಂಭವವಿರುತ್ತದೆ.

ನಾನು ಕಂಡ ಮತ್ತೊಂದು ಸಂಗತಿಯೇನೆಂದರೆ— ನಿನ್ನಿನ ದಿವಸ ನಾನು ಕಾಂಗ್ರೆಸ ಪ್ರದೇಶಕ್ಕೆ ಹೋದಾಗ್ಗೆ ಅಲ್ಲಿ ಕೆಲಸಮಾಡುತ್ತಿದ್ದ ಒಂದು ಕೂಲಿಕಾರರ ಗುಂಪನ್ನು ಕಂಡೆನು. ಅವರು ಕನ್ನಡ ಮಾತನಾಡುತ್ತಿದ್ದರು. ಆಶ್ಚರ್ಯದಿಂದ ಅವರ ಹತ್ತಿರ ಹೋಗಿ, “ ನೀವೆಲ್ಲಿಯವರು? ” ಎಂದು ಕೇಳಿದೆನು. ಆ ಸಮಯದಲ್ಲವರು ಬೆಚ್ಚಿಬಿದ್ದರು; ಅಲ್ಲದೆ ತಮ್ಮ ದೇಶದವನಾದ ನನ್ನನ್ನು ಕಂಡು ಅತ್ಯಾನಂದಪಟ್ಟರು. 'ಇವರನ್ನು ಸರಕಾರದವರು ಕರ್ನಾಟಕದಿಂದ ಚಹಾದ ತೋಟಗಳಲ್ಲಿ ಕೆಲಸಮಾಡಲು ಒಯ್ದಿದ್ದರಂತೆ. ಇವರು ಒಂದು ವರುಷದ ವರೆಗೆ ಅಲ್ಲಿ ಕೆಲಸಮಾಡಬೇಕೆಂದೂ ಆ ಬಳಿಕ ಸರಕಾರದವರು ಇವರನ್ನು ಊರಿಗೆ ಮುಟ್ಟಿಸಬೇಕೆಂದೂ ಕರಾರವಾಗಿತ್ತಂತೆ. ಇವರು ಹೋಗಿ ಒಂದೂವರೆ ವರ್ಷವಾದರೂ ಸರಕಾರದವರು, ತಿರುಗಿ ಕಳುಹಿಸುವ ಮಾತನ್ನೇ ಎತ್ತಲಿಲ್ಲವಂತೆ. ಇವರಲ್ಲಿ ಎಷ್ಟೋ ಜನರು ಸತ್ತರಂತೆ; ಮತ್ತು ನಿರುಪಯೋಗ್ಯರಾದ ಕೆಲವು ಜನರನ್ನು ಸರಕಾರದವರು ಊರಿಗೆ ಕಳುಹಿಸಿದರಂತೆ ಕಡೆಗೆ ಇವರೇ ಅಲ್ಲಿಂದ ಹೊರಬಿದ್ದು ಇಲ್ಲಿಯ ವರೆಗೆ ಬಂದರಂತೆ. ಬೇಜೇಕಾದರೆ ಇವರಿಗೆ ಸಲ್ಲುವ ಹಣವು ಕೂಡ ಇವರಿಗೆ ಪೂರ್ಣ ಸಿಗಲಿಲ್ಲವಂತೆ. ದುಡಿದ ಹಣದಲ್ಲಿ ಸ್ವಲ್ಪ ಸ್ವಲ್ಪ ಉಳಿಸಿಕೊಂಡು ವರ್ಷದ ನಂತರವಾದರೂ ಊರಿಗೆ ಹೋಗಿ ಬಿಡಬಹುದೆಂದು ಅವರು ನಿಶ್ಚಯಿಸಿಕೊಂಡಿದ್ದಾರೆ. ಅರ್ಧ ತಾಸಿನ ವರೆಗೆ ನನ್ನನ್ನು ಎತ್ತ ಕಡೆಗೂ ಬಿಡದೆ ಮಾತಾಡುತ್ತ ಆ ಬಡ ಜನರು ನಿಂತಿದ್ದರು. ಸರಕಾರದವರು ಬಡ ಜನರಿಗೆ ಏನಾದರೊಂದನ್ನು ಹೇಳಿ, ಪರದೇಶಗಳಿಗೆ ಕರೆದುಕೊಂಡು ಹೋಗಿ ಯಾವ ತರದ ತೊಂದರೆಗಳಿಗೀಡುಮಾಡುತ್ತಾರೆಂಬುದು ಇದರ ಮೇಲಿಂದ ಪೂರ್ಣ ತಿಳಿಯುವಂತಿದೆ.

ಗೋಹಾಟಿ. | ರಾ. ವೆ. ಕರಗುದರಿ
೧೨-೧೨-೩೨ | ಕರ್ನಾಟಕ — ಸ್ವಯಂಸೇವಕ

ವರ್ತಮಾನಸಾರ.

ಮುಂಬಯಿ ಕರ್ನಾಟಕ.

ನಮ್ಮ ಜಿಲ್ಹೆಯ ಕಲೆಕ್ಟರ ಸಾಹೇಬರವರು ಈ ತಿಂಗಳ ೧೬ನೆಯ ತಾರೀಖಿನಿಂದ ೩೧ನೆಯ ತಾರೀಖಿನ ವರೆಗೆ ಬಾದಾಮಿ ಮುಕ್ಕಾಮು, ಮುಂದೆ ಕ್ರಿಸ್‌ಮಸ್ ದಿನಗಳು ಅಂದರೆ ೧೯೩೨ ನೇ ಜನವರಿ ೨೮ ವರೆಗೆ ವಿಜಾಪೂರ ಮುಕ್ಕಾಮಿನಲ್ಲಿರುತ್ತಾರೆ.

ಈ ವರ್ಷ ಪ್ರಾಂತಿಕ ಸಹಕಾರೀ ಪರಿಷತ್ತು ಧಾರವಾಡದಲ್ಲಿಯೇ ನೆರವೇರಿತು. ಮುಂಬಯಿ, ಪುಣೆ ನಗರಗಳ ಹೊರತಾಗಿ ಇದುವರೆಯಲ್ಲಿಯವರೂ ಈ ಪರಿಷತ್ತನ್ನು ಕರೆದಿರಲಿಲ್ಲ. ಧಾರವಾಡದವರು ಧೈರ್ಯವಾಗಿ ತಮ್ಮಲ್ಲಿಯೇ ಪರಿಷತ್ತಿನ ಕಾರ್ಯವನ್ನು ಜರುಗಿಸಿದ್ದು ಕರ್ನಾಟಕಕ್ಕೆ ಭೂಷಣವಾದುದು. ಇನ್ನುಮೇಲೆ ಸಹಕಾರದ ವಿಷಯದಲ್ಲಿ ಕರ್ನಾಟಕವು ಮುಂದರಿವುದು ಸಂತೋಷಕರವಾದುದು.

ಬಿ. ಎಸ್. ಮೋಟಾರ ಕಂಪನಿಯವರೂ ಕಾಶೀನಾಥ ಶೇಠ ಮುಸುದ್ದೀನರವರೂ ಕಾದಾನೆಗಳ ಬೇಟೆಯಾಡುವವರಿಗೆ ಹೊನ್ನಾವರದಿಂದ ಶಿರಶಿ ಸಿದ್ದಾಪೂರ ಘಟ್ಟಗಳಿಗೆ ಮುಕ್ತಿಲ್ಲದೆ ಒಯ್ಯುವೆವೆಂದು ಒಪ್ಪಿರುವರು. ದೈವದಿಂದ ಈ ತರದ ವಿಚಾರವನ್ನು ತೋರಿಸಿದ್ದಕ್ಕೆ ನಾವು ಅವರಿಗೆ ಅಭಿನಂದಿಸುತ್ತೇವೆ.

ಮೈಸೂರ ಕರ್ನಾಟಕ.

“ಕರ್ನಾಟಕ ಸಂಘ”ದವರು ನಂದಳಿಕೆ ಲಕ್ಷ್ಮೀನಾರಾಯಣಪ್ಪನವರ ಜ್ಞಾಪಕಾರ್ಥವಾಗಿ ಕನ್ನಡ ಸಣ್ಣ ಕತೆಗಳ ಸ್ಪರ್ಧೆಯೊಂದನ್ನೇ ರ್ಪಡಿಸಿದ್ದಾರೆ. ಸ್ಪರ್ಧೆಗೆ ಬರುವ ಕತೆಗಳಲ್ಲಿ ಶ್ರೇಷ್ಠವಾದುದನ್ನು ಬರೆದವರಿಗೆ “ಮುದ್ದಣಪದಕ” ಎಂಬ ಸ್ವರ್ಣಪದಕವು ಬಹುಮಾನವಾಗಿ ಕೊಡಲ್ಪಡುವದು. ಕತೆಯು ಸ್ವಕಲ್ಪಿತವಾದದ್ದಾಗಿಯೂ ಈವರೆಗೆ ಪ್ರಕಟವಾಗದ್ದಾಗಿಯೂ ಇರಬೇಕು. ಸ್ಪರ್ಧೆಗೆ ಸೇರುವವರು ತಮ್ಮ ಕತೆಗಳನ್ನು ಪ್ರವೇಶಧನವಾದ ಎಂಟು ಆಣೆಗಳೊಡನೆ ೧೯೩೩ ನೇ ಜನವರಿ ೫ನೇ ತಾರೀಖಿನ ಒಳಗಾಗಿ ತಲಪುವಂತೆ ರಿಜಿಸ್ಟರಿನಿಂದ ಕಳುಹಿಸಬೇಕು. ಹೆಚ್ಚಿನಸಂಗತಿ ಬೇಕಾದವರು ಟಿ. ಎಸ್. ವೆಂಕಣ್ಣಯ್ಯಾ ಉಪಾಧ್ಯಕ್ಷ ಕರ್ನಾಟಕ ಸಂಘ ಸೆಂಟ್ರಲ್ ಕಾಲೇಜ ಬೆಂಗಳೂರ ಇವರಕಡೆಗೆ ಬರೆದು ತಿಳಿದುಕೊಳ್ಳಬಹುದು.

ಮೈಸೂರಿನಿಂದ ೩ ಮೈಲು ದೂರದಲ್ಲಿರುವ ಚಾಮರಾಜ ನಗರದವರು ಸಂತೆಮಾಡಿಕೊಂಡು ಹೋಗುವಾಗ ಸಾಯಂಕಾಲ ೭॥ ಘಂಟೆಯ ಸುಮಾರಿಗೆ ಕಳ್ಳರು ದಾರಿಯಲ್ಲಿ ಚಕ್ಕಡಿಯವರನ್ನು ಬಡಿದು ಸುಮಾರು ೬೦೦ ರೂಪಾಯಿಗಳನ್ನು ಸುಲಿದುಕೊಂಡಿರುವರಲ್ಲದೆ ಇಬ್ಬರನ್ನು ಬಲವಾಗಿ ಹೊಡೆದು ಹೋಗಿರುವರು. ಪೋಲೀಸರು ಲಕ್ಷ್ಯಕೊಡುವರೋ?

ಕೊಡಗು ಕರ್ನಾಟಕ

ಸುಮಾರು ೪೦ ವರ್ಷಗಳ ಪೂರ್ವದಲ್ಲಿ ಹೊರಡುತ್ತಿದ್ದ “ಕೊಡಗು ಚಂದ್ರಿಕೆ” ಎಂಬ ವಾರಪತ್ರದ ಎರಡು ಪ್ರತಿಗಳು ‘ಕೊಡಗು’ ಆಫೀಸಿನಲ್ಲಿ ಇಟ್ಟಿರುವರು. ನೋಡಬೇಕೆಂದಿರುವವರು ಪೋಸ್ಟೇಜನ್ನು ಕೇಳಿದಲ್ಲಿ ಸಿಗುವವು.

ಹಿಂದುಸ್ಥಾನ.

ಬಿಹಾರ ಕಾನ್ಫರೆನ್ಸಿಲಿನಲ್ಲಿ ಸ್ವರಾಜ್ಯಪಕ್ಷದವರು ೨೫ ಮಂದಿ ಆರಿಸಿ ಬಂದಿದ್ದಾರೆ. ಇವರ ಪಕ್ಷವು ಬಲಿಷ್ಠವಾಗಿದೆ.

ಬಂಗಾಲ ಪ್ರಾಂತಿಕ ಕಮಿಟಿ ಸಭೆ ಕೂಡಿದಾಗ್ಗೆ ಗಲಾಟೆ ಆಗುವಸಂಭವವಿತ್ತು. ಪೋಲೀಸರು ಸಮಯಕ್ಕೆಬಂದು ಅನರ್ಥವನ್ನು ನಿಲ್ಲಿಸಿದರು.

ಕಾನಪೂರದ ಡಿಸ್ಟ್ರಿಕ್ಟ ಲೋಕಲ್‌ಬೋರ್ಡವು ವ್ಹಾಯಿಸರಾಯರಿಗೆ ಮಾನಪತ್ರವನ್ನು ಅರ್ಪಿಸಿತು.

ಮುಂಬಯಿಯಲ್ಲಿ ಹೊಸದಾಗಿ ೯ ಜನರು ಕೂಡಿದ್ದರಿಂದ ರಾಷ್ಟ್ರೀಯ ಕಾರ್ಯದ ಶಕ್ತಿಯು ಹೆಚ್ಚುತ್ತಿದೆ.

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯುರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೩೬ ನೇ ಇಸ್ವಿಯ ಜುಲೈ ೩೧ ನೇ ತಾ|| ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಹುಸಾಮಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಇವರ ನಮ್ಮ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗೃಹಸ್ಥರಿಗೆ ಬಡ್ಡಿ ಮತ್ತು ಪತ್ತಿ ಇಲ್ಲದೆ ೧೦೦೦ ರೂ. ಗಳವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಪಿ. ಸಿ. ನಂ ೭೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ ಡೆಕ್ಕನ್ನ ರೂ. ೧೦೦೦

(೨) ಎಲ್. ಪಿ. ಸಿ. ನಂ ೫೧೭ ಮಿ ಸೈಯದ್ ಜಹೂರಅಲಿ ಬಿ. ಎ ಎ. ಟಿ ಶಾಖೆಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಪಿ. ಸಿ. ನಂ. ೨೧೭ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಇತ್ತರಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂಡ, ಅಕ್ಕಸಾಲೆ ಬೆಡಿಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೩೦೭ ಮಿ ಷೇಕ ಬಾಪುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೪ ಭವಾನಿಪೇಟ ಪುಣಾ ೧೦೦೦

ಬಿ. ಎನ್. ಆರಾಧ್ಯ
ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಮುಂಗಾರು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, **ಲಿಮಿಟೆಡ್.**	ಕಿರ್ಲೋಸ್ಕರವಾಡಿ ಜಿಲ್ಹೆ ಸಾತಾರಾ

ಗವರ್ನಮೆಂಟಿನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರಜಾಹಿತಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಆಗುತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳ ವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಕಾದ ಪತ್ರಗಳು ವ್ಹಿ. ಪಿ. ಮಾಡಿದ ಪಾವತಿಗಳು ಪೋಸ್ಟ ಪಾವತಿಗಳು ಬಾರಸಿಸಿ ಬುಕ್ಕುಗಳು ಇರುತ್ತವೆ ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಪಾಣಾಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗೈ, ಕಾಲರಾ (ಮಾರಿಕಾ), ಪ್ಲೇಗ, ಇನ್‌ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮೂಲರೋಗ, ಗಂಡಮಾಲೆ, ಸಾರಹುಂಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಪೊದರಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು. ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ರಿಕ ೯ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚ ಬೇರೆ ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು ಅದರ ಖರ್ಚ ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚ ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕೊಂಡರೆ ಕಮಿಶನ್ ಇಲ್ಲ ಪೋಷ್ಟ ೭ ಆಣೆ. ೧ ಕಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚ ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನಿಲ್ಲ ಖ ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ ಪಸಂದಿಪ್ರಕಾರ ಬಾಟ್ಲಿ ಗೂಡಿಗೆ ಸಿಗುವದು ಈ ಔಷಧವು ಮುಟ್ಟಿ ಹೊರಟರೆ ಶಿಲ್ಲಕ ಉಳಿದವಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತವೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಸ್ಟ ಜಿಲ್ಹಾ ವಗೈರೆ ಸ್ಪಷ್ಟವಾಗಿ ಬರೆಯಬೇಕು ನಮ್ಮ ವಿಳಾಸ:-ಎಚ್. ಎಮ್. ಮುಲ್ಲಾ.

ಸಂಪಾದಕ ಅರ್ಕಶಫಾ ಹೆಡ್ ಆಫೀಸ ಶಿವಾಜಿಸ್ಟ್ರೀಟ ಶಹಾಪೂರ [ಬೆಳಗಾವಿ

ಕನ್ನಡ ಬಂಧುಗಳಿರಾ! ಈ ... ವಿದ್ಯೆಯನ್ನು ಕಲಿತುಕೊಳ್ಳಬೇಕು.
ನಿಮ್ಮ ಸಲುವಾಗಿಯೇ ಕನ್ನಡ ನಾಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರುಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು. ಅವುಗಳೊಳಗಿನ ಕಟ್ಟುಪಟ್ಟ ಮುರಿದು ಹೋದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುತ್ತೇವೆ. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪರಿಣಿತರಾಗುತ್ತಾರೆ. ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ. ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಲಕ್ಷಣವು ಬೇರೆಡೆಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ. ಹೆಚ್ಚಿನ ಮಾಹಿತಿಗಾಗಿ ತ್ವರೆಯಿಂದ ಬರೆಸಿಕೊಳ್ಳಿರಿ!

ವಿಳಾಸ—ಕುಲಕರ್ಣಿ ಮೋಟಾರ ಸ್ಕೂಲ.

೪೫೫ ಶನಿವಾರ ಪೇಠ ಪಾನುಮಂತಿಕರ ಗಾಡಿ ಪುಣೆ ಶಹರ.

ಪುಕ್ಕಟೆ! ಪುಕ್ಕಟೆ!! ಪುಕ್ಕಟೆ!!!

ಕಂತುಗಳನ್ನು ಎಂದೂ ಕೊಡಬೇಡಿ!

ನೀವು ವಿಮೆ ಇಳಿಸಬೇಕಾಗಿದ್ದರೆ ನಾವು ನಿಮ್ಮ ಕಡೆಯಿಂದ ಹಣವನ್ನು ತೆಗೆದುಕೊಳ್ಳದೆ ಕೇವಲ ಪುಕ್ಕಟೆಯಾಗಿ ನಿಮ್ಮ ಜೀವದ ವಿಮೆ ಇಳಿಸುವೆವು.

ವಿಶೇಷ ಸಂಗತಿಗಳಿಗಾಗಿ ೨ ಆಣೆಗಳ ಟಿಕೇಟು ಕಳುಹಿಸಿರಿ.

ಇನ್‌ಸ್ಪೆಕ್ಟರ ಆಫ್ ಎಜೆನ್ಸಿ
ದಿ ವೇನಸ್ ಅಶ್ಯುರನ್ಸ ಬ್ಯಾಂಕ ಲಿಮಿಟೆಡ್
ಧಾರವಾಡ ಬ್ರ್ಯಾಂಚ ಧಾರವಾಡ.

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.
ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ.

ನಾವು ಹಲ್ಲುಗಳ ಕಳೆಯನ್ನು ಚನ್ನಾಗಿ ಅರಿತಿರುವೆವು ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿಯಾಗುವ ರಕ್ತಸ್ರಾವವನ್ನು ತೀವ್ರ ನಿಲ್ಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಲಿದ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

S. C. Narayanacharya & Co.
Chaukhamba Benares City.

ನಮ್ಮಲ್ಲಿ ಎಲ್ಲಾ ತರದ ರೇಶ್ಮೆ ಪೀತಾಂಬರ, ಜರಿಕಸ, ಜರಿಸೀರೆ, ಕಾಶ್ಮೀರ ಶಾಲು, ತರನಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕವೆ ಮೊದಲಾದ ಮಾಲೆಗಳ ಕ್ಯಾಟಲಾಗ ಕೇಳುವವರಿಗೆ ಇನಾಮವಾಗಿ ಕಳಿಸಲಾಗುತ್ತದೆ

ವಿಳಾಸ-ಶಿರೋಮಣಿ ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ...

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆಯ ಸ್ವಂತ ವಿದ್ಯಾರಣ್ಯ ಮುದ್ರಾ ಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ವಾಙ್ಮಯ ಪರಿಚಯ.

ಸಂಗೀತ.

ಶಿವಭಜನಾವಲಿ.

ಬರಹಗಾರರು. ಅಗರಖೇಡದ ಅಣ್ಣಾ.

ಹೊರವೈ:— ಇದೊಂದು ಶಿವಸ್ತೋತ್ರ ಪರವಾದ ಭಜನೇಗೀತಗಳ ಸಂಗ್ರಹವುಳ್ಳ ಚಿಕ್ಕ ಹೊತ್ತಿಗೆ. ಇದರಲ್ಲಿ ಈಗ ಎಲ್ಲೆಡೆಯಲ್ಲಿಯೂ, ಪ್ರಚಾರದಲ್ಲಿರುವ ಪ್ರಸಿದ್ಧವಾದ ನಾಟಕೀಯ ಧಾಟಿಗಳ ಮೇಲೆ ಕೂಡಿಸಿದ ೩೦ ಪದಗಳಿರುತ್ತವೆ.

ಒಳವೈ:— ಕವಿಯು ಪೀಠಿಕೆಯಲ್ಲಿ "ಕಾವ್ಯರಸವಿಲ್ಲ ಭಕ್ತನ ಹೃದಯದಿಂದ ಹೊರಸೂಸಿದ ಭಾವರಸವಿದೆ" "ಸುಲಲಿತ ಸಂಗೀತವಿಲ್ಲ ಶುಚಿಯಾದ ಭಕ್ತಿ ಗೀತವಿದೆ" ಎಂದು ಅಂದಿರುವನು ಅವರ ಭಕ್ತಿಗೀತಗಳೇನೋ ನಿಜ. ಎಲ್ಲ ಪದಗಳೂ ಭಾವಪೂರ್ಣವಿಲ್ಲ "ಜಯ ಜಯ ಜಾಹ್ನವೀಧರನೇ" "ಶಿವದೇವ ತವನಾಮ ಸವಿಯಲು ಬಲುಪ್ರೇಮ" ಜಗದಿ, ಸಾಂಬನಾಮ ಮಧುಪಾನಿಸುವ ನರನಿಗೆ ಕೈಲಾಸವೆ ಕಂದಿ ' ಎಂಬ ಪದ್ಯಗಳು ಕವಿಯ ಹೃದಯದಿಂದ ಹೊರಬಿದ್ದ ಪದ್ಯಗಳಾಗಿವೆ ಉಳಿದವುಗಳು ಕವಿಯು ಶ್ರಮಪಟ್ಟು ಒಡಿದು ಕಂದವುಗಳಾಗಿವೆ ಪದಗಳನ್ನು ಧಾಟಿಗಳ ಸರಿಯಾಗಿ ಹಾಡ ಹತ್ತಿದರೆ ಮನಸಾನಂದವಾಗುತ್ತದೆ.

ಭಾಷೆ:— ಸಾಹಿತ್ಯಸಿಯ ದೃಗಳು ಸಿಗಲಾರವು ವ್ಯಾಕರಣ ದೋಷಗಳೂ ಕೆಲವು ಕಾಣಬಹುದು. ಕುಸುಮ ಬಾಣನ ಹತಾ "ಕ್ರೋಧ ಪತಿ ನರ" ಇತ್ಯಾದಿ ಪ್ರಯೋಗಗಳನ್ನು ನೋಡಿದರೆ ಕವಿಯು ವಿಶೇಷವಾಗಿ ಓದಿದವನಲ್ಲವೆಂದು ತಿಳಿಯುತ್ತದೆ. ಒಟ್ಟಿನ ಮೇಲೆ ಹೇಳುವದೆಂದರೆ ಓದುವ ಪುಸ್ತಕವಿದಲ್ಲ ಓದಿದರೆ ಭಾವವೂ ಒಡೆದು ಬೀಳುವದಿಲ್ಲ. ಕವಿಯು ಅಪೇಕ್ಷಿಸುವ ಪ್ರಕೃತಿಸಬೇಕಾದರೆ ಆ ಆ ಪದಗಳಿಗೆ ಮೇಲೆ ಬರೆದ ರಾಗ ತಾಳಗಳಿಗೂ ಧಾಟಿಗಳಿಗೂ ಸರಿಯಾಗಿ ಹಾಡತೊಡಗಿದರೆ ಭಾವವುಟ್ಟಿ ಬೀಳುವದು, ಹೃದಯಾನಂದವಾಗುವದು ಧಾಟಿಗಳ ಮೋಹದಿಂದ ಅರ್ಥವಿಲ್ಲದ ಪದಗಳನ್ನು ಗುಣಗುಟ್ಟುವಯುವಕರು ಈ ಭಜನಾವಲಿಯನ್ನು ಉಪಯೋಗಿಸಿದರೆ ಇಹ ಪರವೆರಡೂ ಸಾಧಿಸಿದಂತಾಗುವದು.

ಸೂಚನೆ— ಕನ್ನಡಿಗರಲ್ಲಿ ಆಧುನಿಕ ಕವಿಗಳೇ ಕಡಿಮೆ ಅದರಲ್ಲಿಯೂ ಬರೆದವರ ಬರಹಗಳು ಅಚ್ಚಾಗುವದಂತೂ ತೀರ ಕಡಿಮೆ ಇಂತಹದರಲ್ಲಿ ಪ್ರಕಟವಾಗುವವೆಲ್ಲ ಹೆಚ್ಚು ಶುದ್ಧವಾಗಿರುವಂತೆ ಪ್ರಯತ್ನಿಸಬೇಕು, ಹೊಸದಾಗಿ ಕವಿತಾ ರಚನೆಗೆ ಕೈ ಇಕ್ಕಿದವರು ಒಂದೆರಡು ಹಳೇ ಹೊಸಗನ್ನಡ ವ್ಯಾಕರಣಗಳನ್ನೂ ಜೈಮಿನಿಯಂಥ ಕಾವ್ಯಗಳನ್ನೂ ಪರಿಶ್ರಮದಿಂದ ಓದುವದು ಒಳಿತು. ಕವಿಯು ಮುಂದಿನ ತನ್ನ ಕವಿತಗಳಲ್ಲಿ ಪದಪ್ರಯೋಗಗಳನ್ನೂ ವ್ಯಾಕರಣ ದೋಷಗಳನ್ನೂ ಆಗದಂತೆ ಎಚ್ಚರವಾಗಿದ್ದು ಕನ್ನಡ ಭಾಷೆಯ ದೃಷ್ಟಿಯಿಂದ ಸುಧಾರಿಸಿಕೊಳ್ಳಬೇಕೆಂದು ನಮ್ಮ ಸೂಚನೆ.

ಕಾಡಹಕ್ಕಿ.

ಸ್ವಧರ್ಮ.

ಇದೊಂದು ಮಾಸಪತ್ರಿಕೆ. ನಮ್ಮ ಧರ್ಮವನ್ನು ನಮಗೆ ತಿಳಿಸಲು ಹೆಣಗುವ ಸಮಾಜ ಸೇವಿಕೆ. ಸಮಾಜದ ಮನಸ್ಸನ್ನು ಸುಧಾರಿಸಲಿಕ್ಕೆ ಇವರ ಹಾದಿಯು ಹೊಸದು, ಅದರೊಡನೆ ಸಮಾಜದ ಭಾಷೆಯನ್ನೂ ಬಲಪಡಿಸುವುದಕ್ಕೆ ಇದರ ಹಾದಿಯು ಹೊಸದು. ಈ ವಿಷಯವೇ ಈ ಪುಟ್ಟ ಬರಹದ ಗುರಿಯು, ಕನ್ನಡ ನುಡಿಗೆ ಸದ್ಯಃ ಕಾಲದಲ್ಲಿ ಸರಿಯಾದ 'Standard' ಅಂದರೆ ಪ್ರಮಾಣ-ಭಾಷೆಯಿಲ್ಲ. ಸಂಸ್ಕೃತವನ್ನಾಗಲೀ ಅತಿಶಯವಾಗಿ ಬೇರೆ ಭಾಷೆಗಳ ಬೆರಿಕೆಯನ್ನಾಗಲೀ ಹಾಕಿ ನಾವು ಲೇಖಗಳನ್ನು ಬರೆಯುವುದುಂಟು. ಎಲ್ಲ ಪಾರಿಭಾಷಿಕ ಶಬ್ದಗಳನ್ನಂತೂ ಪರಭಾಷೆಗಳಿಂದಲೇ ಎತ್ತುತ್ತೇವೆ. ಕವಿತೆ ಕಥೆಗಳನ್ನು ಬರೆದರೆ ಭಾವನೆಗೆ ಸಮನಾಗಿ ಹೊಂದುವ ಉಚಿತ ಶಬ್ದವು ನಮಗೆ ಸಂಸ್ಕೃತದಿಂದ ವಿಶೇಷವಾಗಿ ದೊರೆಯುತ್ತದೆ. ಮತ್ತು ಕನ್ನಡದಲ್ಲ ಇಂಥ ವಾಙ್ಮಯವನ್ನೇ ಈ ವರೆಗೆ ಓದಿ 'ಸ್ವಧರ್ಮ'ದ ಹಾದಿಯನ್ನು ಹಳೆಗನ್ನಡವೆಂದು ಧಿಕ್ಕರಿಸುತ್ತೇವೆ. ಆದುದರಿಂದ ಕನ್ನಡಕ್ಕೇ ಒಂದು ತನ್ನತನವನ್ನು ಕಂಡುಹಿಡಿದ ಭಾಷೆಯಿದ್ದರೆ, ಶಕ್ಯವಿದ್ದಷ್ಟು ಹೆಚ್ಚು ಕನ್ನಡ ಶಬ್ದಗಳು ನಮಗೆ ಅರಿತಿದ್ದರೆ, ಪರಭಾಷೆಗಳ ಸಹಾಯವನ್ನು ಸ್ವಲ್ಪಾದರೂ ಕೈ ಬಿಡದೆ, ನಾವು ನಮ್ಮ ಮಾತಿನ ಬಲವುಗಳನ್ನೂ ಶಬ್ದಗಳ ಸಂಖ್ಯೆಯನ್ನೂ ಬೆಳೆಸಬಲ್ಲೆವು ನಾವು ಹಳೇ ಪ್ರತ್ಯಯಗಳನ್ನು ಮುಟ್ಟದೆ ಇರುವುದರಿಂದ, ಈ ರೀತಿಯು ಹಳೆಗನ್ನಡವಾಗಲಾರದು. ಅದೇ ನಮ್ಮ ಕೋಶವನ್ನು ಹಿಗ್ಗಿಸಿದರೆ, ಭಾಷೆಯು ವಿಷಯದಲ್ಲಿ ನಮ್ಮ 'ಸ್ವಧರ್ಮ'ವು ನಮಗೆ ತಿಳಿಯದೆ ಇರಲಿಕ್ಕಿಲ್ಲ. ಆಗ 'ಸ್ವಧರ್ಮ'ದ ಹಾದಿಯು ಹಳೆಯದಿರದೆ ಹೊಸದೇ ಎಂದು ನಾವು ತಿಳಿಯತೊಡಗುವೆವು. ಹೊಸದೆಂಬುದು ಎರಡು ತರದ್ದಿರುತ್ತದೆ. ಒಂದು— ಹಳೆಯದು ಕಾಲಾಗಿ ಹಳಸಿ ಇರುವ ಹುಚ್ಚು ಹೊಸತನ ಬೇರೊಂದು — ಹಳೆಯದು ವಿಚಾರಾಂತ್ಯದಲ್ಲಿ ಹಳೆಯದೆನಿಸಿ ಹುಟ್ಟುವ - ಹೊಚ್ಚ ಹೊಸತನ. ಮೊದಲನೆಯದು ವಿಚಿತ್ರ ವಿನೋದಕ್ಕೆ ಕಾರಣ. ಎರಡನೆಯದು ವಿಚಿತ್ರ ವಿಚಾರಕ್ಕೆ ಕಾರಣ. ಈಗಿನ ಭವ-ನಿಕಷಕ್ಕೆ 'ಸ್ವಧರ್ಮ'ದ ಭಾಷೆಯೊಂದನ್ನೇ ಹಚ್ಚಿದರೂ ಅದರಲ್ಲಿ ಹೊಚ್ಚ ಹೊಸತನವಿದೆಯೋ ಹೇಗೆಂಬ ದನ್ನು ವಿನೋದ-ಪ್ರಿಯರುಗಳು ಕೂಡ ವಿಚಾರಮಾಡಿ ತಿಳಿದುಕೊಳ್ಳಬೇಕು.

— ರಸಿಕ ರಂಗ.

ಸ್ವೀಕಾರ.

(೧) ೧೯೩೭ನೇ ಇಸ್ವಿಯ ಸ್ವರಾಜ್ಯ ಡಾಯರಿ ಸಂಪಾದಕರು ದ. ಕೃ. ಭಾರದ್ವಾಜರವರು. ಪ್ರತಿ ವರುಷದಂತೆ ಇದರಲ್ಲಿ ಎಲ್ಲ ವಿಷಯಗಳ ವಿವೇಚನೆಯಿರುವುದಲ್ಲದೆ ಈ ವರುಷ ಕರ್ನಾಟಕ ಏಕೀಕರಣದ ವಿಷಯಕ್ಕೆ ಸ್ವಲ್ಪ ಮಟ್ಟಿಗೆ ಸೂಚಿಸಿರುವರು. ಇದಕ್ಕೂ ಹೆಚ್ಚಾಗಿ ಏಕೀಕರಣದ ವಿಷಯಕ್ಕೆ ಬರೆದಿದ್ದರೆ ಹೆಚ್ಚು ಒಳಿತಾಗುತ್ತಿತ್ತು. ಒಟ್ಟಿನ ಮೇಲೆ ಕನ್ನಡಿಗರಿಗೆ ಕೈಗನ್ನಡಿಯಂತೆ ಹತ್ತಿರ ಇಡಲು ಯೋಗ್ಯವಾದ ದಿನಚರಿಯಾಗಿರುತ್ತದೆ.

(೨) ಪ್ರಾಣೇಶ ವಿಠ್ಠಲರ ಕೀರ್ತನೆಗಳು. ಸಂಪಾದಕರು:- ಹನುಮಂತರಾವ ಗೋರಾಬಾಳ (ಕರ) ಲಿಂಗಸುಗೂರು ಇವರಿಂದ ಈ ಕೀರ್ತನ ಪುಸ್ತಕವು ಕೈಸೇರಿದೆ. ವಿಮರ್ಶೆಯು ಮುಂದಿನ ಸಲ ಕೊಡಲ್ಪಡುವುದು.

ಬರಹಗಾರರಿಗೆ ಸೂಚನೆ.

'ಸಹಕಾರ' ಈ ಬರಹವು ವಾದಗ್ರಸ್ತ ವಿಷಯವಾದ್ದುದರಿಂದ ಪ್ರಕಟಿಸಲಾರೆವು. '**ಕೈ. ವಾ. ಶಾಹು ಛತ್ರಪತಿಗಳ ಅಂತಃಕವಾಣಿ**' ಬರಹಗಾರರು ಪ್ಲ್ಯಾಂಚೆಟ್‌ದ ಆಧಾರದಿಂದ ಬರೆದುದೆಂದು ಸಿದ್ಧಮಾಡಿಕೊಟ್ಟರೆ ಪ್ರಕಟಿಸಬಹುದು. ಸಂಪಾದಕ.

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ !



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರ್ದಿ ಹೆಚ್ಚಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಬ್ರಿಟಿಶ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ:—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ ಜುನಿ ತಪಕೀರಗಲ್ಲಿ. ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಶುಕ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ ಜನನೇಂದ್ರಿಯಕ್ಕ ಶಕ್ತಿಯುಂಟಾಗಿ ಪ್ರಾಪ್ತವಾ ನಪುಂಸಕತ್ವವು ಎಂದೂ ಇರುವದಿಲ್ಲ (ಏಕೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ಪ್ಯೆಯ್ಯುರಿ ಮ ಗರ್ಮಿಯ ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚು ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ

ವಿಳಾಸಃ—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ. ಬೆಳಗಾಂವ.)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳ ಗೋಸ್ಕರ ಪ್ರತಿವರ್ಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳಿಸುತ್ತಿದ್ದೇವೆ ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾನೇ ಈ ಹಣವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರವಾಗಿ ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ್ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನೂ ತಯಾರು ಮಾಡುತ್ತಾರೆ. ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿ ಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ರ ನಂ. ಬಿ. ೧೯೪೭ ವಾ. ಚಂದಾ ೧-೧೪-೦ ಮಾತ್ರ

ಜಯಕರ್ನಾಟಕ

(ಇದರಲ್ಲಿ ಕನ್ನಡ ನವಜೀವನವು ಸಮಾವಿಷ್ಟವಾಗಿದೆ.)

यद्यत् परवशं दुःखम् । यद्यदात्मवशं सुखम् ॥ — मनु

ಸಂಪಾದಕರು— ಮಂಗಳವೇಢೇ ರಾಜೇರಾಯರ ಮಕ್ಕಳಾದ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ ಶುಕ್ರವಾರ ಮಿತಿ ಮಾರ್ಗಶಿರ ಬಹುಳ ೫ ಶಕೆ ೧೮೬೦ ತಾ|| ೨೪ ೧೨ ೧೯೩೮. | ಸಂಚಿಕೆ ೩೭

ಸಂಪಾದಕರ ಭೂಮಿ

(ಓಂ)

ನನ್ನ ಮನಸಿನ ಮೇಣವಾದಿ ಕಟ್ಟುವೆನಾನು।
ನಿನ್ನ ಬೆಸನವ ಮಾಡಿದಂತೆ ಮಕ್ಕಳ ದೊರೆ।
ನನ್ನ ದಾದರು ಬೆನ್ನ ಮೇಣಬತ್ತಿಯು ನೊಂದು ಬಿನ್ನಯಾಕಾಶದಲ್ಲಿ॥
ನನ್ನ ದೇಹವು ನಿನ್ನ ನೀರಶಾಸನಕಾಗಿ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ।
ತನ್ನಪ್ರಾಣವು ನಿನ್ನ ಗಂಧವನು ಹೀರಬಹ ಗಂಧವಹವೆಂದು ತಿಳಿಯೊ।

— ಅಂಬಿಕಾ ತನಯ ದತ್ತ

ತಗಾಯಿ ಹಣದ ಸಲುವಾಗಿ ಮುಂಬಯಿ ಸರಕಾರವವರು ಸ್ವಲ್ಪ ಪ್ರಯತ್ನಿಸುತ್ತಲಿರುವುದು ಶ್ರೇಯಸ್ಕರವೇ. ಕೇವಲ ವಿಜಾಪುರ ಜಿಲ್ಲೆಗಾಗಿಯೇ ೨ ಲಕ್ಷ ರೂಪಾಯಿಗಳನ್ನು ಈಗಾಗಲೇ ಮಂಜೂರುಮಾಡಿದ್ದಾರೆ. ಈ ಹಣವನ್ನು ನಾಲ್ಕಿನ ಮಾಹಿತಿಂಗಳೊಳಗಾಗಿಯೇ ವೆಚ್ಚಮಾಡತಕ್ಕದ್ದಿದೆ. ಆದ್ದರಿಂದ ಈ ಜಿಲ್ಲೆಯ ರೈತರು ಇದರ ಲಾಭವನ್ನು ಸಂಪೂರ್ಣವಾಗಿ ಪಡೆಯುಕೊಳ್ಳಬೇಕೆಂದು ನಾವು ಒತ್ತಾಯದ ಸೂಚನೆಯನ್ನು ಕೊಡುತ್ತೇವೆ. ವಿಜಾಪುರ ಜಿಲ್ಲೆಯು ಬರಗಾಲದ ಬಗ್ಗೆ ಹೆಸರಾಗಿದೆ. ಬರಗಾಲದ ಕಷ್ಟಗಳನ್ನು ತಪ್ಪಿಸಿಕೊಳ್ಳುವುದಕ್ಕೆ ತೋಟ-ಪಟ್ಟಿಗಳನ್ನು ಮಾಡುವುದೊಂದು ಮಾರ್ಗ. ತಗಾಯಿ ಹಣವನ್ನು ರೈತರು ಈ ಬಗೆಯಾಗಿ ಉಪಯೋಗಿಸಿ ಬರಗಾಲದ ಭಯಗಳಿಂದ ದೂರಾಗುವುದು ವಿಹಿತ. ತಗಾಯಿ ಹಣವು ಎಷ್ಟಾದರೂ ಕೊಡಲ್ಪಡುವದೆಂದು ಆ ಬಗ್ಗೆ ತಾವು ಎಲ್ಲ ರೀತಿಯಿಂದಲೂ ಪ್ರಯತ್ನಿಸುವರೆಂದೂ ನಮ್ಮ ಜಿಲ್ಲೆಯ ಕಲೆಕ್ಟರ ಸಾ|| ರವರಾದ ನಾಯಕರವರು ನಮಗೆ ತಿಳಿಸುತ್ತಾರೆ. "ಫ್ಯಾಮಿನ್ ಇನ್ಶ್ಯೂರನ್ಸ ಫಂಡ" (ಅಂದರೆ ಬರಗಾಲದ ನಿವಾರಣ ನಿಧಿ,) ಎಂಬ ಹೆಸರಿನಿಂದ ಕೂಡಿದ ಹಣವು ಸರಕಾರದಲ್ಲಿ ಇದ್ದು ಈಗ್ಗೆ ತಗಾಯಿ ಹಣವು ಈ ನಿಧಿಯಿಂದಲೇ ಕೊಡಲ್ಪಡುತ್ತದೆ. ಆದ್ದರಿಂದ ಎಷ್ಟು ಜನ ರೈತರು ತಗಾಯಿ ಹಣವನ್ನು ಬೇಡಿದರೂ ಅದನ್ನು ಪೂರೈಸುವದು ಶಕ್ಯವಿದೆ. ಇದನ್ನರಿತು ರೈತರಲ್ಲಿರು ತಮಗೆ ಹಣದ ದೊರೆಯುವದೆಂಬ ಆವಿಶ್ವಾಸವನ್ನು ಕಿತ್ತಿ ಹಾಕಿ, ಕೂಡಲೇ ತಮ್ಮ ತಮ್ಮ ಹಾಮಲೇದಾರರ ಕಡೆಗೆ ಅರ್ಜಿಗಳನ್ನು ಕಳುಹಿಸಬೇಕು.

ವಿಜಾಪುರ ಜಿಲ್ಲೆಗೆ ಬರಗಾಲವು ಒಂದೇ ಸಮನೇ ಕೈಕೊಳೆದುಕೊಂಡು ಬೆನ್ನುಹತ್ತಿದಂತೆ ತೋರುತ್ತದೆ. ಅಂತೆಯೇ ಆರೇಳು ವರ್ಷಗಳಿಂದ ರೈತರು ಬೆಳೆಗಳನ್ನು ಕಾಣದೆ ಸತ್ವಹೀನರಾಗಿ ಹೋಗಿದ್ದಾರೆ. ಈ ವರ್ಷವೂ ಬೆಳೆಗಳಿಲ್ಲ. ಮುಂಗಾರಿಯಂತೂ ಅನೇಕ ಕಡೆಗೆ ಕೈಬಿಟ್ಟಹೋಗಿದೆ. ಹಿಂಗಾರೀ ಆಶೆಯಂತೂ ಇಲ್ಲವೇ ಇಲ್ಲ. ಕೆಲವು ಕಡೆಗೆ ಕುಡಿಯುವ ನೀರು ಕೂಡ ದೊರೆಯುವದಿಲ್ಲ. ಹೊಟ್ಟೆತುಂಬಿಕೊಳ್ಳುವದಕ್ಕಾಗಿ ಬಡಬಗ್ಗರು ಆಸಾಮ ಮಾರ್ಮುಗೋವಾಗಳಿಗೆ ಈಗಾಗಲೇ ಹೋಗಿದ್ದಾರೆ. ಇನ್ನೂ ಹೋಗುತ್ತಲಿದ್ದಾರೆ. ಸದಿಗಳಿಗೆ ಒಡ್ಡುಹಾಕಿ ಈ ಜಿಲ್ಹೆಯ ಎಲ್ಲ ಭಾಗಗಳಿಗೂ ಕಾಲುವೆಗಳನ್ನು ಏರ್ಪಡಿಸುವ ವಿಚಾರವನ್ನು ಸರಕಾರವು ಇನ್ನೂ ಅಷ್ಟೊಂದು ಕಳಕಳಿಯಿಂದ ಮಾಡಲೊಲ್ಲದು. ರೈತಜನರು ಇನ್ನು ಮೇಲೆ ಬದುಕುವದೇ ಬಹು ಕಠಿಣವಾಗಿಹೋಗಿದೆ. ಒಕ್ಕಲಿಗರು ಬದುಕದಿದ್ದರೆ ವ್ಯವಹಾರ ಉದ್ಯೋಗಗಳನ್ನು ಕೇಳುವರಾರು? ಬಾಗಲಕೋಟೆಯ ಒಂದೇ ಊರಿನಲ್ಲಿ ಕೇವಲ ದಲ್ಲಾಳಿ ಅಂಗಡಿಗಳಲ್ಲಿಯ ಅರವತ್ತು ಎಪ್ಪತ್ತು ಜನ ಗುಮಾಸ್ತರು ಹೊರಗೆ ದಬ್ಬಲ್ಪಟ್ಟಿದ್ದಾರೆ. ಇನ್ನು ಜಿಲ್ಹೆಯ ಎಲ್ಲ ಭಾಗಗಳ ಸ್ಥಿತಿಗತಿಗಳನ್ನು ಆ ತರಂತೂ ಎದೆ ಒಡೆದು ಹೋಗುವಹಾಗಿದೆ. ಇನ್ನು ಮೇಲೆ ಆಣೇವಾರಿಯು ಪ್ರಾರಂಭವಾಗತಕ್ಕದ್ದು. ಇಂಥ ಕಠಿಣಸ್ಥಿತಿಯಲ್ಲಿ ಆಣೇವಾರಿಯನ್ನ ಸರಕಾರದ ಅಮಲದಾರರು ಬಹು ದಕ್ಷತೆಯಿಂದ 'ರೈತರ ೭ ವರ್ಷದ ಕಷ್ಟಗಳನ್ನು ಲಕ್ಷ್ಯದಲ್ಲಿಟ್ಟುಕೊಂಡು' ಮಾಡಬೇಕಾಗಿ ನಾವು ಆಗ್ರಹಪೂರ್ವಕವಾಗಿ ಸೂಚಿಸುತ್ತೇವೆ. ಕೆಲವೆಡೆಯಲ್ಲಿ ಈ ಎರಡು ವರ್ಷಗಳಿಂದ ತೆರಿಗೆಯು 'ತಹಕೂಪ ಇಡಲ್ಪಟ್ಟಿದೆ. ಇನ್ನು ಈ ವರ್ಷವೂ ತೆರಿಗೆಯು ತಹಕೂಪವಾದರೆ, ರೈತರಿಗೆ ಸೂಟ ದೊರೆಯುವದು. ಆರ್ಥಾತ್ ಸರಕಾರದ ಹಾನಿಯಾಗುವದು. ಎಂಬದನ್ನು ಲಕ್ಷ್ಯದಲ್ಲಿಟ್ಟುಕೊಂಡು ಅಮಲದಾರ ಜನರು ಬೆಳೆಗಳು ಚೆನ್ನಾಗಿವೆ ಎಂಬದಾಗಿ ವರದಿಯನ್ನು ಕಳುಹಿಸಿಕೊಡತಕ್ಕದ್ದಲ್ಲ. ರೈತರ ಹೀನಸ್ಥಿತಿಯನ್ನು ಕಂಡು ಒಡೆದು ನಮ್ಮ ಜಿಲ್ಹೆಯ ಕಲೆಕ್ಟರಸಾಹೇಬರವರು ಎಲ್ಲ ತಾಲೂಕಿನ ಮಾಮಲೇದಾರರಿಗೆ ಮುಂಚಿತವಾಗಿ ಸೂಚನೆಗಳನ್ನು ಕಳುಹಿಸಿ ಸತ್ಯವಾದ ಆಣೇವಾರಿಯನ್ನು ಮಾಡಬೇಕೆಂದು ತಿಳಿಸುವಹಾಗೆ ಅಪ್ಪಣೆಕೊಡುವರಾಗಿ ಕೋರುತ್ತೇವೆ. ಕಾಂಗ್ರೇಸ ಕಮಿಟಿಯವರು ಆಣೇವಾರಿಯ ನಮೂನೆಗಳನ್ನು ಮುದ್ರಿಸಿ ಇಟ್ಟಿದ್ದಾರೆ. ತಮ್ಮ ತಮ್ಮ ತಾಲೂಕು ಕಾಂಗ್ರೆಸ ಕಮಿಟಿಗಳಿಂದ ರೈತಜನರು ಪಡೆದುಕೊಂಡು ಅವನ್ನು ತುಂಬಿ ಆ ಆ ಕಮಿಟಿಗಳಿಗೆ ಕೂಡಲೆ ಕಳಿಸಿಕೊಡಬೇಕು.

ಶ್ರೀಗರುಡರಿಗೆ ‘ಕನ್ನಡಿಗ’ನು ಕೇಳಿದ ಎಲ್ಲ ಪ್ರಶ್ನೆಗಳಿಗೂ ಉತ್ತರವನ್ನು ಕೊಡುವದು ಬೇಸರವಾಯಿತು. ಆದರೆ ಸ್ತ್ರೀಯರನ್ನು ನಾಟಕದಲ್ಲಿ ಸೇರಿಸಿಕೊಂಡು, ನಾಟಕವನ್ನೆಲ್ಲ ಸುತ್ತ ಹಾಕಿಬಿಡುವದೇಕೆ? ಎಂದು ನಾವು ಕೇಳಿದ್ದ ಉಪದ್ವ್ಯಾಪಿತನವಾಯಿತಂತೆ. ಇದರಲ್ಲಿ ಉಪದ್ವ್ಯಾಪಿತನವು ಯಾವದೆಂಬದನ್ನು ವಾಚಕರು ಸ್ಪಷ್ಟವಾಗಿ ನೋಡುತ್ತಿರುವದರಿಂದ ನಾವೇನೂ ಆ ಬಗೆಗೆ ಹೆಚ್ಚಾಗಿ ಬರೆಯಬಾರೆವು. ಇನ್ನು ನಮ್ಮ ಉಳಿದ ಪ್ರಶ್ನೆಗಳಿಗೆ ಪರಿಷ್ಕಾರವಾಗಿ ಉತ್ತರವನ್ನು ಕೊಡುವ ಧೈರ್ಯವನ್ನು ಶ್ರೀ ಸದಾಶಿವರಾಯರು ಈಗಲಾದರೂ ತೋರಿಸುವರೋ?

ಬೆಳಗಾವ ರೇಲ್ವೆ ಮಂಡಳದವರು ಪ್ರಾಸಂಗಿಕ ತೊಂದರೆಗಳನ್ನು ದೂರಮಾಡುವದಕ್ಕಾಗಿ ಅಖಂಡವಾಗಿ ಶ್ರಮಪಡುತ್ತಿರುವದು ಕನ್ನಡಿಗರಿಗೆಲ್ಲ ತಿಳಿದ ವಿಷಯವಾಗಿದೆ. ಈ ಮಂಡಳದ ಪರಿಶ್ರಮದಿಂದ ಈಗ್ಗೆ ಎರಡು ವರ್ಷಗಳಿಂದ ಡಿಸೆಂಬರ ತಿಂಗಳಲ್ಲಿ ಸವಲತ್ತಿನ ತಿಕೀಟುಗಳು ಮೂರನೇ ವರ್ಗದ ಪ್ರವಾಸಿಕರಿಗೆ ಸಹಾ ದೊರೆಯುವಹಾಗೆ ಪ್ರಯತ್ನವಾಗಿದೆ. ಕನ್ನಡಿಗರ ಸ್ನೇಹರೂಪಿ ಸಹಾಯವು ಈ ಮಂಡಲಕ್ಕೆ ಹೆಚ್ಚುತ್ತ ಹೋದಂತೆ ಮಂಡಳದ ಕರ್ನಾಟಕದ ಸೇವೆಯಾದರೂ ವಿಸ್ತೃತವಾಗುವದೆನ್ನುವದರಲ್ಲಿ ಸಂದೇಹವಿಲ್ಲ. ಇನ್ನು ಈ ಸವಲತ್ತಿನ ಲಾಭವು ವಿಜಾಪುರಜಿಲ್ಲೆಯವರಿಗೆ ಏನೂ ದೊರೆಯುವದಾಗಿಲ್ಲ. ಈ ಜಿಲ್ಲೆಯಿಂದ ಡಿಸೆಂಬರದಲ್ಲಿ ಪ್ರವಾಸಕ್ಕೆ ಹೊರಡುವವರು ತಿರುಪತಿಗೆ ಯಾತ್ರೆಗೆ ಹೋಗುವವರೂ ಅನೇಕರಿರುತ್ತಾರೆ ಆದುದರಿಂದ ಇದನ್ನು ಲಕ್ಷ್ಯದಲ್ಲಿಟ್ಟುಕೊಂಡು ಮುಂದಿನಸಾಲ ವಿಜಾಪುರ, ಬಾಗಲಕೋಟೆ ಸ್ಟೇಶನ್‌ಗಳಿಗೂ ಸವಲತ್ತಿನದರದ ಲಾಭವು ದೊರೆಯುವಹಾಗೆ ಪ್ರಯತ್ನಿಸಬೇಕಾಗಿ ಈ ಮಂಡಳದವರಿಗೆ ನಮ್ಮ ಸೂಚನೆ.

ಬಸವೇಶ್ವರ ಹಾಯಸ್ಕೂಲ.

“[illegible] ‘ರಾಮಭಕ್ತ’ರೆಂಬುವರು ನಮ್ಮ ಶಾಲೆಯ ವಿಷಯದಲ್ಲಿ ಒಂದು ಪತ್ರವನ್ನು ಬರೆದಿದ್ದರು. ಅವರು ಕಾರಣವಿಲ್ಲದೆ ಒಬ್ಬ ಶಿಕ್ಷಕರ ಮೇಲೆ ಟೀಕೆ ಮಾಡಲು ಹೋಗಿ, ಶಾಲೆಯನ್ನೂ, ಶಾಲೆಯ ವ್ಯವಸ್ಥೆಯನ್ನೂ ದೂಷಿಸಿದರು. ಆ ಬರಹಕ್ಕೆ ಇಲ್ಲಿ ಮಹತ್ವವನ್ನು ಕೊಟ್ಟು, ಗುಡ್ಡದಂತ ಗೊಂದಲವನ್ನು ಎಬ್ಬಿಸುವದು ನನಗಿಷ್ಟವಿದ್ದಿಲ್ಲ “ದಾಹ್ಯಾಭಾವಾತ್ ನ ಚೇದಾತ್” ಎಂಬಂತೆ ಅದು ಅಲ್ಲಿಂದಲ್ಲಿಯೇ ನೊಂದಿಹೋಗುವದೆಂದು ನಂಬಿ ನಾನು ಸುಮ್ಮನಿದ್ದೆನು. ಆದರೆ ‘ಮುಂದಾಳು’ ವಿನಲ್ಲಿ ‘ಶಿವಭಕ್ತ’ರೊಬ್ಬರು ‘ರಾಮಭಕ್ತ’ರಿಗೆ ಉತ್ತರರೂಪವಾಗಿ ಒಂದು ಬರಹವನ್ನು ಬರೆದರು. ಇಬ್ಬರೂ ಅನುದಾರಿಗಳೂ, ಅನುಚಿತಕಾರಿಗಳೂ, ಆಗಿರುವರು. ಅವರ ಬರಹದಿಂದ ಪುನಃ ಕನ್ನಡಿಗನು ಹುರಿಗೊಂಡು ಶಾಲೆಯ ವಿಷಯದಲ್ಲಿ ಸ್ಫುಟಲೇಖವನ್ನು ಮೊನ್ನೆ ಮೊನ್ನೆ ಬರೆದಿರುವನು ಅದರಲ್ಲಿ ಮತ್ತೊಮ್ಮೆ ಶಾಲೆಯ ವ್ಯವಸ್ಥೆಯನ್ನು ಕೇಳಿರುವನು. ಶಾಲೆಯ ಮುಖ್ಯಾಧ್ಯಾಪಕನಾದ್ದರಿಂದ, ನನಗೆ ಆ ಆ ವಿಧಾನಗಳ ಅಸತ್ಯತೆಯನ್ನು ತೋರಿಸಿಕೊಡುವದು ಅವಶ್ಯಕವಾದದು. ಸತ್ಯದ ವಿಪರ್ಯಾಸವನ್ನು ಮಾಡಿರುವದರಿಂದ ಜನರಲ್ಲಿ ತಪ್ಪು ತಿಳುವಳಿಕೆಯಾಗುವುದು ಸ್ವಾಭಾವಿಕ. ಶಾಲೆಯ ವ್ಯವಸ್ಥೆ ಚನ್ನಾಗಿದೆ. ಪಗಾರವು ಸರಿಯಾಗಿ ಸಿಗುತ್ತಿದೆ. ಹುಡುಗರ ಸಂಖ್ಯೆಯು ಏರುತ್ತಲಿದೆಯೆಂಬುದನ್ನು ನಾನು ಖಂಡಿತವಾಗಿ ಹೇಳುತ್ತೇನೆ. ಗೊತ್ತಿಲ್ಲದವರ ಬರಹವನ್ನು ಪ್ರಕಟಿಸುವದು ಉದಾರರಾದ ವೃತ್ತಪತ್ರಿಕಾ ಸಂಪಾದಕರ ಕರ್ತವ್ಯವಲ್ಲ. ‘ಮುಂದಾಳು’ ಪತ್ರವಾದರೂ ಎಚ್ಚರದಿಂದ ಬರಹಗಳನ್ನು ಸ್ವೀಕರಿಸಬೇಕು. ‘ಕನ್ನಡಿಗ’ನ ಆಶಯವು ಉದಾರವಾಗಿದ್ದುದೇ ಆದರೆ, ಒಬ್ಬ ಪ್ರತಿನಿಧಿಯನ್ನು ಕಳುಹಿಸಿ, ಶಾಲೆಯ ವಿಷಯದಲ್ಲಿ ಸರ್ವತಃ ಸುದ್ದಿಯನ್ನು ತಿಳಕೊಳ್ಳಬೇಕು. ನಿರಾಧಾರವಾದ ಬರಹಗಳನ್ನು ಮುದ್ರಿಸಕೂಡದು. ದೋಷವಿದ್ದುದಾದರೆ ಸಹಿಷ್ಣುತೆಯಿಂದ ಸೂಚನೆ ಮಾಡಬೇಕು. ಅದರಿಂದ ನಿಜವಾದ ಹಿತವಾಗುವದು. ಇಲ್ಲವಿದ್ದರೆ ಇಬ್ಬರೊಬ್ಬರಲ್ಲಿ ವೈಮನಸ್ಯವನ್ನು ಹುಟ್ಟಿಸಿದ ದೋಷವು ವೃತ್ತಪತ್ರಿಕಾಕರ್ತೃಗಳಿಗೆ ತಟ್ಟಿಟ್ಟದೇ. ಬೇಕಾದಾಗ ಶಾಲಕರಿಗೆ ಕೇಳಿದರೆ, ಎಲ್ಲವನ್ನು ತಿಳಿಸಲು ಸಿದ್ಧರಿದ್ದಾರೆ.

ಹಣಮಂತ ಬಳವಂತ ಕೋಣ್ಣೂರ.
ಹೆಡ್ ಮಾಸ್ತರ.
ಬಸವೇಶ್ವರ ಹಾಯಸ್ಕೂಲ ಬಾಗಲಕೋಟೆ.

[ಪತ್ರಗಳನ್ನು ಪ್ರಕಟಿಸುವದಕ್ಕಿಂತ ಪೂರ್ವದಲ್ಲಿ “ನಮ್ಮ ಹತ್ತರ ಹೀಗೆ ಪತ್ರಗಳು ಬಂದಿವೆ.” ಇದಕ್ಕೇನೆನ್ನುವಿರಿ ಎಂದು ಮೊದಲು ಕೇಳಿದ್ದರೆ ಒಳಿತಾಗುತ್ತಿತ್ತು.]

ಪುಣೆಯಲ್ಲಿ ಕೂಡಿದ ಅಖಿಲ ಕನ್ನಡ ವಿದ್ಯಾರ್ಥಿಗಳ ಸಮ್ಮೇಲನವು ಯಶಸ್ವಿಯಾಗಿ ಜರುಗಿತು. ಪುಣೆಯಂಥ ನಗರದಲ್ಲಿ ಬೇರೆ ಬೇರೆ ವಿದ್ಯಾಲಯಗಳಲ್ಲಿ ಅಭ್ಯಾಸಮಾಡತಕ್ಕ ಕನ್ನಡ ವಿದ್ಯಾರ್ಥಿಗಳನ್ನು ಒಟ್ಟುಗೂಡಿಸಿ ಸಂಘವನ್ನು ಸ್ಥಾಪಿಸಿದ್ದು ಯೋಗ್ಯವಾದುದು. ಬೇರೆ ಬೇರೆ ವಿದ್ಯಾಲಯಗಳಲ್ಲಿ ಸಾಕಷ್ಟು ವಿದ್ಯಾರ್ಥಿಗಳು ದೊರೆಯದ್ದರಿಂದ, ಅವುಗಳಲ್ಲಿ ಸಂಘಗಳನ್ನು ಸ್ಥಾಪಿಸಿದರೂ ಅವಕ್ಕೆ ವಿಸ್ತೃತ ಸ್ವರೂಪವು ಬರಲಾರದು. ಕಾರ್ಯದರ್ಶಿಗಳು ತಮ್ಮ ವರದಿಯಲ್ಲಿ ಹೇಳಿದಂತೆ ಕನ್ನಡಿಗರೆಲ್ಲರೂ ಈ ಸಂಘಕ್ಕೆ ಸೇರದಿದ್ದದ್ದು ನಿಜವಾಗಿಯೂ ಶೋಚನೀಯವು. ಒಂದು ವರ್ಷದಲ್ಲಿ ಸಂಘವು ಮಾಡಿದ ಕಾರ್ಯವು ಅಷ್ಟೊಂದು ತೃಪ್ತಿಕರವಾಗಿಲ್ಲ ಇದಕ್ಕೆ ಕಾರ್ಯದರ್ಶಿಗಳು ಹೇಳಿದಂತೆ ಅನೇಕ ಕಾರಣಗಳಿರುವವು. ಆದರೂ ಮುಂದಿನ ವರ್ಷದಿಂದ ಕಾರ್ಯವು ಚನ್ನಾಗಿ ಸಾಗುವಂತೆ ಯತ್ನಮಾಡಬೇಕು. ವಕ್ತೃತ್ವದಲ್ಲಿ ಹಾಗೂ ಉಳಿದ ಆಟಪಾಟಗಳಲ್ಲಿ ಇನಾಮುಗಳನ್ನು ಇಟ್ಟದ್ದು ಯೋಗ್ಯವು. ವಿದ್ಯಾರ್ಥಿಗಳು ಕೇವಲ ಕನ್ನಡದಲ್ಲಿಯೇ ಮಾತಾಡಬೇಕೆಂದು ನಿರ್ಬಂಧವನ್ನು ಹಾಕಿದ್ದು ಯೋಗ್ಯವು. ಆದರೆ ಮೂರನೆ ದಿನದ ಕಾರ್ಯಕ್ರಮವನ್ನು ನೋಡಿದರೆ ಎಲ್ಲವೂ ಆಂಗ್ಲ ಭಾಷೆಯಲ್ಲಿಯೇ! ಕನ್ನಡಿಗರ ಸಮ್ಮೇಲನದಲ್ಲಿ ಆಂಗ್ಲ ಭಾಷೆಯ ಪ್ರವೇಶವೇಕೆ? ಅಧ್ಯಕ್ಷರಾದ ಶ್ರೀ ನಾಡಗೀರ ಡಾಕ್ಟರರು ಅಚ್ಚಗನ್ನಡಿಗರು, ನೆರೆದ ಅತಿಥಿಗಳೂ ಕನ್ನಡಿಗರು, ಸಮ್ಮೇಲನದಲ್ಲಿ ಭಾಗ ತೆಗೆದುಕೊಂಡ ವಿದ್ಯಾರ್ಥಿಗಳಾದರೂ ಕನ್ನಡಿಗರೇ. ಹೀಗಿದ್ದು ಸಮ್ಮೇಲನ ಕಾರ್ಯಕ್ರಮವು ಇಂಗ್ಲೀಷಿನಲ್ಲೇಕೆ? ಸಂಘದ ಕಾರ್ಯದರ್ಶಿಗಳು ಕನ್ನಡದಲ್ಲಿ ತಮ್ಮ ವರದಿಯನ್ನು ಬರೆಯಬೇಕಿತ್ತು. ಇಂಥ ಸಮ್ಮೇಲನಗಳಲ್ಲಿ ಎರಡನೇ ಭಾಷೆಯನ್ನು ಉಪಯೋಗಿಸುವದು ಯಾವದೃಷ್ಟಿಯಿಂದಲೂ ಯೋಗ್ಯವಾದದ್ದಲ್ಲ. ಆದ್ದರಿಂದ ಮುಂದಿನ ವರ್ಷದಿಂದಾದರೂ ಸಮ್ಮೇಲನದ ಕಾರ್ಯಕ್ರಮವೆಲ್ಲವೂ ಶುದ್ಧ ಕನ್ನಡದಲ್ಲಿಯೇ ನಡೆಯುವಂತೆ ಪ್ರಯತ್ನ ಮಾಡಬೇಕೆಂದು ಸಂಘದ ಕಾರ್ಯದರ್ಶಿಗಳಿಗೆ ಮತ್ತೆ ಹೇಳುತ್ತೇನೆ.

ವಾಙ್ಮಯ ಪರಿಚಯ.

ಸ್ವೀಕಾರ.

" ಅನಾಥ ಬಂಧು " ಸಂಪಾದಕರು ಕೃ. ಶ್ರೀ ಬೆಟಗೇರಿ ಯವರು ಬೆಲೆ ೧ ಆಣೆ ೬ ಪೈ

" ಕರ್ನಾಟಕ ಸ್ಕೌಟ " ಸಂಪಾದಕರು ಬಿ. ಟಿ. ಚಾರ್. ಬಿ. ಎ. ಧಾರವಾಡ ವಿಮರ್ಶೆಯು ಯಥಾ ವಕಾಶ.

ಶಾಲೆಗೆ ಸನ್ಮಾನಶೀರು.

ತಾರೀಖು ೧-೧-೧೯೨೭ ನೇ ಶನಿವಾರ ದಿವಸ ಮ|| ರಾ|| ಲೋಕಲ್ ಬೋರ್ಡ, ಪ್ರೆಸಿಡೆಂಟ ಸಾ|| ಎಸ್. ಟಿ. ಪಾಟೀಲ ಇವರ ಅಧ್ಯಕ್ಷತೆಯ ಕೆಳಗೆ ಬಾಗಲಕೋಟೆಯಲ್ಲಿ ವಿಜಾಪೂರ ಜಿಲ್ಲೆಯ ಅ|| ಮಾಸ್ತರ ಜನರ ವ ಸಹಾನುಭೂತಿಯುಳ್ಳ ಹೆ|| ಮಾಸ್ತರ ಜನರ ಸಭೆಯು ನೆರೆಯುವದು. ಸಭೆಯಲ್ಲಿ ಚರ್ಚಿಸತಕ್ಕ ವಿಷಯಗಳು ಕೆಳಗಿನಂತೆ ಇರುತ್ತವೆ;

೧ ಹೆ|| ಮಾಸ್ತರ ಬಲಾವೃಸ್ಸ ನಿಷೇಧಪಡಿಸಿ, ಸಾ- ಪಸ್ಕೀಮು ತೀವ್ರ ಅಮಲಿನಲ್ಲಿ ತರುವದು.

೨ ಶಿಕ್ಷಕ ಸಂಘದ ಈಗಿನ್ನ ಎಲ್ಲ ಚಾಲಕರ ಅದಲುಬದಲು ಮಾಡುವದು.

ಕಾರಣ ಎಲ್ಲ ಮಾಸ್ತರ ಜನರು ಸದರೀ ದಿವಸ ಸಭೆಗೆ ಹಾಜರ ಇರಬೇಕಾಗಿ ವಿನಂತಿಯದೆ.

ಕಾರ್ಯದರ್ಶಿ,
ಅಪ್ಪಣ್ಣಾ ಶಿವಪ್ಪ ನಾಯಿಕ.
ಅ|| ಮಾ|| ಕೊಲ್ಹಾರ.

ಅಪರೋಕ್ಷ ಜ್ಞಾನಿಗಳಾದ

ಶ್ರೀ ಪ್ರಾಣೇಶ ವಿಠ್ಠಲ ವಿರಚಿತ

ಶ್ರೀ ಹರಿ ಕೀರ್ತನ ಮಾಲಾ

೧ ಪ್ರಥಮ ಪುಷ್ಪ ಶ್ರೀ ಕೃಷ್ಣ ಲೀಲಾಮೃತ ಬೆಲೆ ೮ ಆಣೆ

೨ ದ್ವಿತೀಯ ಪುಷ್ಪ ತಾರತಮ್ಯ ಸ್ತೋತ್ರ ಯುಕ್ತ ಮುಯ್ಯದ ಪದ ಬೆಲೆ ೮ ಆಣೆ

೩ ತೃತೀಯ ಪುಷ್ಪ ಕನ್ನಡ ವಾಯು ಸ್ತುತಿ ಬೆಲೆ ೫ ಆಣೆ

ಹನುಮಂತರಾವ ವಕೀಲ ಗೋರಾಬಾಳ.

ಪೋಸ್ಟ- ಲಿಂಗಸುಗೂರ ಜಿಲ್ಲಾ ರಾಯಚೂರು (ನಿಜಾಂ)

ಪ್ರಕಟನೆ.

ಆಯುರ್ವೇದ ವಿದ್ಯಾಲಯ ಬೆಳಗಾವಿ.

ಈ ವಿದ್ಯಾಲಯದ ಅಭ್ಯಾಸಕ್ರಮವು ಹೊಸದಾಗಿ ಜಾನೇವಾರಿ ೧೫ ನೇ ತಾರೀಖಿನಿಂದ ಪ್ರಾರಂಭವಾಗುವದಿದೆ. ಬರತಕ್ಕ ವಿದ್ಯಾರ್ಥಿಗಳು ೧೬ ವರ್ಷ ಮೀರಿದವರಿದ್ದು ಮ್ಯಾಟ್ರಿಕ್ಯುಲೇಶನ್ ಪರೀಕ್ಷೆಯಲ್ಲಿ ತೇರ್ಗಡೆಹೊಂದಿದವರಾಗಲಿ ಅಥವಾ ಅಲ್ಲಿಯವರೆಗೆ ಇಂಗ್ಲೀಷ, ಸಂಸ್ಕೃತ, ಮತ್ತು ಶಾಸ್ತ್ರೀಯವಿಷಯಗಳಲ್ಲಿ ಅಭ್ಯಾಸ ಮಾಡಿದಂಥವರಾಗಲಿ ಇರತಕ್ಕದ್ದು ; ಮ್ಯಾಟ್ರಿಕ್ ಪರೀಕ್ಷೆ ಪಾಸಾಗದಿದ್ದ ಪಕ್ಷದಲ್ಲಿ ವಿದ್ಯಾರ್ಥಿಗಳ ಪ್ರವೇಶ ಪರೀಕ್ಷೆಯು ತಕ್ಕೊಳ್ಳಲ್ಪಡುವುದು. ಶಿಕ್ಷಣ ಕ್ರಮದಲ್ಲಿ ಆಯುರ್ವೇದದ ವಿಷಯಗಳೂ ಪಾಶ್ಚಿಮಾತ್ಯ ವೈದ್ಯ ಶಾಸ್ತ್ರದವಿಷಯಗಳೂ ಸಮಾನವಾಗಿ ಸೇರಿಸಲ್ಪಟ್ಟಿವೆ. ಸಂಪೂರ್ಣ ಅಭ್ಯಾಸ ಕ್ರಮವು ನಾಲ್ಕು ವರ್ಷದ್ದಿದೆ. ಪ್ರತಿ-ವಾರ್ಷಿಕ ಫೀ ೨೪ ರೂಪಾಯಿಗಳು. ವಿದ್ಯಾಲಯಕ್ಕೆ ಬರಲಿಚ್ಛಿಸುವವರು ಅನೇ ಜಾನೇವಾರಿಯೊಳಗೆ ಕೆಳಗೆ ಬರೆದ ವಿಳಾಸಕ್ಕೆ ಬರೆದು ಕೇಳಿಕೊಳ್ಳಬೇಕು. ತಾ|| ೧೫-೧೨-೧೯೨೭

ಹಣಮಂತ ವೆಂಕಟೇಶ ಸವಣೂರ
ಎಲ್, ಎಮ್, ಎಸ್
ಪ್ರಿನ್ಸಿಪಾಲ ಆಯುರ್ವೇದ ವಿದ್ಯಾಲಯ ಬೆಳಗಾಂವಿ

ಲೆವರಿನ ಗಡಿಯಾರಗಳು.

ಲೆವರಿನ ಕೈ ಗಡಿಯಾರ ರೂ. ೯.

ಲೆವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಪೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವುದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚಬಗೆಉತ್ತದೆ. ಆದರೆ ನಾವು ಯೋಗ್ಯ ವೆಚ್ಚಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಅದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಚೋ ವಾಚ ಕಂ. (ಇಂಡಿಯಾ.) ಬಾಂಬೆ ಕೆ ೪.

ಹಿಂದುಸ್ಥಾನ.

ಹರಿದ್ವಾರದಲ್ಲಿ ಜರಗುವ ಕುಂಭಮೇಳೆಯ ಕಾಲಕ್ಕೆ ಲಕ್ಷ್ಮಣಝೂಲಾದಲ್ಲಿಯ ಗಂಗಾನದಿಯ ಪೂಲನ್ನು ಕಟ್ಟುವದು ಶಕ್ಯವಿಲ್ಲವೆಂದು. ಅದರೂ ಹತ್ತು ದೋಣಿಗಳನ್ನು ಇಟ್ಟು ಪ್ರವಾಸಿಕರ ವ್ಯವಸ್ಥೆಯನ್ನು ಮಾಡಿರುವೆವೆಂದೂ ಬದರೀಯಿಂದ ಹುರಳಿಬರುವಾಗ ಯಾತ್ರಿಕರನ್ನು ವ್ಯಾಸಘಾಟದಿಂದ ಬಾಣದಘಾಟದ ಮಾರ್ಗವಾಗಿ ಕೋಟದ್ವಾರದಲ್ಲಿ ಸ್ಟೇಶನ್ನಿಗೆ ಒಯ್ಯುವ ಏರ್ಪಾಡುಮಾಡಿರುವರೆಂದೂ ಸಂಯುಕ್ತಪ್ರಾಂತಕ ಸರಕಾರದವರು ತಿಳಿಸುತ್ತಾರೆ.

ಅಖಿಲ ವಿದ್ಯಾರ್ಥಿಗಳ ಒನೆಯ ಸಮ್ಮೇಲವು ೧೨-೧೨-೨೬ನೇ ದಿನ ಫರ್ಗ್ಯುಸನ್ ಕಾಲೇಜದ ಕಟ್ಟಡದಲ್ಲಿ ಜರಗಿತು ಈಗ ಅದಕ್ಕೆ ಜೀವಕಳೆಯು ತುಂಬಹತ್ತಿದೆ. ಡಾ ನಾಡಗೀರರವರು ಅಧ್ಯಕ್ಷರಾಗಿದ್ದರು. ಹೀಗೆ ಕನ್ನಡದ ಉತ್ತರೋತ್ತರವು ಎಲ್ಲ ಕಡೆಗೂ ಆಗುತ್ತಿರುವದು.

ಸರ್ವಮತಗಳಿಗೂ ಅನುಕೂಲವಾಗುವಂತಹ ಒಂದು ಕಾರ್ಯಕ್ರಮವನ್ನು ಗೊತ್ತುಪಡಿಸಬೇಕಾಗಿ ಮಹಾತ್ಮಾ ಗಾಂಧೀಯವರು ಗೋಹಾಟಿಯಲ್ಲಿ ಸರ್ವಪಕ್ಷೀಯರ ಸಭೆಯನ್ನು ಕರೆದಿದ್ದಾರೆ.

ಉತ್ತರ ಹಿಂದುಸ್ಥಾನದಲ್ಲಿಯ

ಪುಣ್ಯಕ್ಷೇತ್ರಗಳ ಪರಿಚಯ.

(ಲೇಖಾಂಕ ೧೫)

ಅಯೋಧ್ಯೆಯಲ್ಲಿ ಶರಯೂ ನದಿಯಿದೆ. ಊರಿನ ಹತ್ತರ ಸ್ವರ್ಗದ್ವಾರ ಘಾಟವೆಂಬ ಘಾಟವಿದೆ. ಈ ಘಾಟದಲ್ಲಿ ಸ್ನಾನಮಾಡುವುದರಿಂದ ಬಹಳ ಪುಣ್ಯವನ್ನು ಸಂಪಾದಿಸಿದಂತಾಯಿತೆಂದು ಜನರ ಭಾವನೆ. ಈ ನದಿಯಲ್ಲಿ ಕೂರ್ಮಗಳು ವಿಪುಲವಾಗಿವೆ. ದಿನಾಲು ಸಾಯಂಕಾಲದಲ್ಲಿ ನದಿಗೆ ಆರುತಿಯನ್ನು ಬೆಳಗುವರು. ಈ ಸಮಯದ ದೃಶ್ಯವು ಪ್ರೇಕ್ಷಣೀಯವಾಗಿರುತ್ತದೆ. ಮಾಡುವದೂ, ದೀಪಗಳನ್ನು ಹಚ್ಚುವದೂ, ಮೂರ್ತಿಗಳಿಂದ ಪೂಜೆಯನ್ನು ಮಾಡುವ ವೈಭವ ನಡೆಯುತ್ತದೆ. ಸ್ವರ್ಗದ್ವಾರ ಘಾಟಿನ ಹತ್ತರ ಶ್ರೀರಾಮ ಎಂಬ … ವಾಸಿಸಿದ ಮಂದಿರವಿದೆ. ದಕ್ಷಿಣ ದೇಶದಿಂದ ಹೋದ ಯಾತ್ರಿಕರು ಬಹುತರವಾಗಿ ಇಲ್ಲಿಯೇ ಇಳಿಯುವರಂತೆ.

ಇಷ್ಟಗೆ ಉತ್ತರ ಹಿಂದುಸ್ಥಾನದಲ್ಲಿಯ ಪುಣ್ಯಕ್ಷೇತ್ರಗಳ ಸಂದರ್ಶನಗಳನ್ನು ನಾವು ಮುಗಿಸಿದಂತಾಯಿತು. ಅಯೋಧ್ಯೆಯಿಂದ ನಾವು ಸಮಿಪದಲ್ಲಿರುವ ಕಾಶಿಗೆ ಅಲ್ಲಿಂದ ಬಂದ ಪ್ರಯಾಣವನ್ನು ಬೆಳೆಸಿದೆವು. ಈ ಬದರಿ ಯಾತ್ರೆಯ ವಿಷಯವನ್ನು ಕನ್ನಡಿಗರಿಗೆ ಮಾಹಿತಿಯ ಸಲುವಾಗಿ ಸಮ್ಮತಿ ಕೊಡೂರಲಿದೆ. ಆದರೆ ಈಗ್ಗೆ ಪ್ರಕಟವಾದ ಲೇಖಗಳು ವಾಚಕರಿಗೆ ರುಚಿಸಿದ್ದಾಗಿದ್ದರೆ, ಮುಂದೆ ಬದರೀ ಯಾತ್ರೆಯ ವರ್ಣನೆಯನ್ನು ಕ್ರಮೇಣ 'ಕನ್ನಡಿಗ'ದಲ್ಲಿ ಪ್ರಕಟಿಸಬೇಕೆಂದಿರುವೆವು. ಕನ್ನಡಿಗರಲ್ಲಿ ಬದರೀ ಯಾತ್ರೆಯನ್ನು ಮಾಡುವವರು ವಿರಳ. ವರ್ಣನೆಯನ್ನಂತೂ ಕನ್ನಡದಲ್ಲಿ ಈ ವರೆಗೆ ನಾವೆಲ್ಲಿಯೂ ನೋಡಲಿಲ್ಲ. ಈ ಯಾತ್ರೆಯ ಮಾರ್ಗವು ಸೃಷ್ಟಿಸೌಂದರ್ಯದಿಂದ ತುಂಬಿ ತುಳುಕುತ್ತದೆ. ಪ್ರಾಚೀನ ಭಾರತೀಯ ಋಷಿಗಳ ಆಶ್ರಮ, ಬದರ ತಪಶ್ಚರ್ಯದ ಸ್ಥಾನ ಇವೆಲ್ಲ ಈ ದಾರಿಯಲ್ಲಿ ಹತ್ತುತ್ತವೆ. ಇವನ್ನೆಲ್ಲ ತಿಳಿದುಕೊಳ್ಳಲು ಕನ್ನಡಿಗರು ಆತುರರಾಗಿದ್ದ ಪಕ್ಷದಲ್ಲಿ ನಮಗ ಹಾಗೆ ತಿಳಿಸಬೇಕು. ಬಂದಾದ ತರುವಾಯ ಎಷ್ಟು ಜನಗಳಿಂದ ಇದಕ್ಕೆ ಉತ್ತರ ಬರುವದೋ ನೋಡಿಕೊಂಡು ಈ ಲೇಖಾಂಕಗಳನ್ನು ಪ್ರಾರಂಭಿಸಬೇಕೋ ಅಥವಾ ಪ್ರಾರಂಭಿಸಬಾರದೋ ಎಂಬುದನ್ನು ನಿರ್ಣಯಿಸುವೆವು.

ಶ್ರೀನಿವಾಸ ರಾಜೇರಾವ ಮಂಗಳವೇಢೆ

ಪತ್ರವ್ಯವಹಾರ.

(೧)

ಅಯ್ಯಾ ಗರುಡರೇ!

ನಿಮ್ಮ ಸಂದೇಶವು "ವಿಜಯ"ದಿಂದ ತಿಳಿದಂತಾಯಿತು. 'ಹತ್ತು ಸಾವಿರ ರೂಪಾಯಿಗಳ ಸಾಹಿತ್ಯವನ್ನು ಒದಗಿಸಿಕೊಡುತ್ತೇನೆ'ಂದು ನುಡಿದ ನಿಮ್ಮ ಘನವಾದ ಔದಾರ್ಯದಿಂದ ಸಂತೋಷವಾಯಿತು.

ನೀವು ಕೌಶಿಕನಿಗೆ ಉತ್ತರ ಬರೆಯುವಾಗ ಅಂ. ಪ್ರ. ಕಂಪನಿಯನ್ನಾಗಲೀ, ದತ್ತಾತ್ರೇಯ … ಭವನನ್ನಾಗಲೀ ಕೂಡ ಉಳಿಸಿದ್ದವಿರುವೆನೆಂದು ಬರೆದಿದ್ದಿರೆಂದು ನಾವು ನಿಮ್ಮ ಸಂಘವನ್ನೂ ಅಂ. ಪ್ರ. ಕಂಪನಿಯನ್ನೂ ಎತ್ತಿ ಬರೆಯಬೇಕಾಯಿತು. ಮೊದಲೇ ಈ ಉದಾರತನವನ್ನು ತೋರಿಸಿದ್ದರೆ ನಾವು ಹಾಗೆ ಬರೆಯುವ ಪ್ರಸಂಗವಿರುತ್ತಿರಲಿಲ್ಲ. ಆಯಿತು ಇರಲಿ. ರೋಗಿಯು ಬಯಸಿದ್ದೇ ವೈದ್ಯನು ಹೇಳಿದ್ದಾಯಿತು. ಇನ್ನೇನು ನಾವೂ ನೀವೂ ಕೂಡಿ ಇಚ್ಛೆಯಂತೆ ಮಾದರಿಯ ಕಂಪನಿಯನ್ನು ನಿರ್ಮಾಣಮಾಡಬಹುದಲ್ಲವೇ? ಅದಕ್ಕಾಗಿ ಹೊಸ ಕಂಪನಿಯ ಆಶ್ರಮ, ಮನೆ, ನೆಲೆಗಳ ವಿಷಯದಲ್ಲಿ ಏನೇನು ಕಟ್ಟಳೆಗಳಾಗುವವೆಂಬುದನ್ನು ಸ್ಪಷ್ಟವಾಗಿ ತಿಳಿಸಬೇಕೆಂದು ನಮ್ಮ ನಮ್ರ ಸೂಚನೆ. ನಾವಂತೂ ವೃತ್ತಪತ್ರಗಳ ಗಲಭೆ ಎಬ್ಬಿಸುವವರಲ್ಲ ನಿಮ್ಮದೋ ಆ ಮಾರ್ಗದವರೆಂದು ನಿಮ್ಮ ಮಾರ್ಗವನ್ನೇ ಹಿಡಿಯಬೇಕಾಗಿದೆ. ವೃತ್ತಪತ್ರಗಳು ಬೇಸರಿಸಿದ್ದೇ ನಿಜವಾಗಿದ್ದರೆ 'ಕನ್ನಡಿಗ'ದ ಸಂಪಾದಕರ ವಿಳಾಸದಲ್ಲಿ ತಿಳಿಸಬಹುದು.

ಎಚ್. ಪಟೇಲರು

(೨)

'ಕರ್ನಾಟಕ ವೃತ್ತ'ದಲ್ಲಿ ಕಾಣಿಸಿಕೊಂಡ - ಪ್ರಸಂಗಿಗಳಿಗೆ:

ಮಹಾಸ್ವಾಮೀ + ಪ್ರಸಂಗಗಳೇ, ನಿಮಗೇನು ? ಹೇಳಿಕೇಳಿ + ಪ್ರಸಂಗಿಗಳು ಎಷ್ಟು ಕೊಳ್ಳಿ.. ನಿಮ್ಮ ಹೆಸರಿಗನುಗುಣವಾಗಿ ಯಾವುದನ್ನೂ ಅರಿಯದೇ ಪೂರ್ವಾಪರ ಸಂಬಂಧವನ್ನು ತಿಳಿಯದೇ ಒಳನುಗ್ಗುವದು ನಿಮ್ಮ ಸ್ವಭಾವವಲ್ಲವೇ? 'ಕಡೆಗೆ ಬಿದ್ದವರ ಕೈ ಕೆಳಗೆ' ಎಂದು ಒಂದು ಗಾದೆಯಿರುವದು. ಹಾಗೆಯೇ ನೀವು "ಹತ್ತ ಹರಿಯುತ್ತೊಳ್ಳಿದು ಕೊಳ್ಳು ವರಿಯುತೊಳ್ಳದು." ಎಂದು ಬರೆಯುವದು. ಈಗ ಚರ್ಚೆಯಲ್ಲಿ ಸಿಕ್ಕಿರುವ 'ರಂಗಭೂಮಿ'ಯ ವಿಷಯವು ಸಾಮಾನ್ಯವೇ? ಇಂಥ ಕಾರ್ಯದಲ್ಲಿ ನುರಿತವರಾದ ಗರುಡರಂಥವರ ಅಭಿಪ್ರಾಯಗಳನ್ನೂ ಸ್ಥಿತಿಗತಿಗಳನ್ನೂ ಕೇಳಲಾಗದೋ? ಇದೂ ಇರಲಿ ಅವರ ಕಾರ್ಯಕಾರಿ ಜನರನ್ನು ಹುಡುಕುವಾಗ ಎದುರುನಿಲ್ಲುವದು ತಪ್ಪೇ? ಗರುಡರು ಕೂಗಿದರೆಂದು ಹಿಡಿಯಂದರೆ ಇನ್ನೊಬ್ಬರ ಹೊಟ್ಟೆಗೆ ಕೇಡುಬಡಿದಂತಾಯಿತೇ? ನಮಗೆ ಅಂಥ ದುರ್ಬುದ್ಧಿಯು ಈ ವರೆಗೆ ಬರಲಿಲ್ಲವಲ್ಲ! ಮುಂದೆಯಾದರೂ ಬರಲಾರದು ತುಂಬಾ ನೆನಪಿನಲ್ಲಿರಲಿ.

ಅಯ್ಯಾ + ಪ್ರಸಂಗಿಗಳೇ ತಪ್ಪನ್ನು ತೋರಿಸುವವರು ಎಂದೂ ಅಪರಾಧಿಗಳಲ್ಲ. ಆಕ್ಷೇಪಕಾರರೆಲ್ಲರೂ ಶತ್ರುಗಳಲ್ಲವೆಂಬುದನ್ನು ಚನ್ನಾಗಿ ತಿಳಿದುಕೊಳ್ಳಿರಿ. ಆಕ್ಷೇಪಕಾರರು ತೆಗೆದ ಉದ್ಗಾರಗಳಿಗೆ ಸಮಂಜಸವಾಗಿ ಉತ್ತರಕೊಡದೆ ಬರೇ ಹೀಗೆ ಟಿಪ್ಪಣೆ ಬರೆದರೆ ಅದು ಪ್ರಸಂಗಿಯ + ಪ್ರಸಂಗವೇ ಸರಿ.

ಇನ್ನು ಮೇಲೆ ಯಾವದನ್ನೂ ಅರಿಯದೆ ನಿಮ್ಮ + ಪ್ರಸಂಗವನ್ನು ಬೆಳಸಬಾರದೆಂದು ಬಿನ್ನವಿಸುವೆವು.

— ಕೌಶಿಕ ಮಿತ್ರ

ಬಸವೇಶ್ವರ ಶಾಲೆಯ ಹಿರ್ದ ಶಿಕ್ಷಕರ

ಹಟವಾದಿತನವು.

(**ಲೇ ವೆಂಕಟೇಶ ಭೀಮರಾವ ಕುಲಕರ್ಣಿ ಬಾಗಲಕೋಟೆ**)

ಈಗೊಮ್ಮೆ "ಕನ್ನಡಿಗ"ದಲ್ಲಿ "ರಾಮಭಕ್ತ" … ರು ಬಸವೇಶ್ವರ ಶಾಲೆಯ ಹಿರ್ದ ಶಿಕ್ಷಕರು, ವಿಜ… (ರವ

ಆಂಧ್ರರಿಗೊಳಪಟ್ಟಿತ್ತೆಂದು ವಿಧಾನಿಸಹತ್ತಿದ್ದಾರೆಂದು ಬರೆದಿದ್ದರು ಆದರೆ ಈ ಶಿಕ್ಷಕರು, ರಾಮಭಕ್ತರು ಬರೆದಿದ್ದನ್ನು ಖಂಡಿಸಲಾರದೆ ಬ್ರಾಹ್ಮಣ ವಿದ್ಯಾರ್ಥಿಗಳ ಮೇಲೆ ಸಂಶಯವನ್ನು ತಕ್ಕೊಂಡು ನೀವೇ ಈ ಬರಹವನ್ನು ಬರೆದಿರುತ್ತೀರೆಂದು ಅವರನ್ನು ಬೆದರಿಸುತ್ತಿರುವರಂತೆ! ಮತ್ತು ಬ್ರಾಹ್ಮಣ ವಿದ್ಯಾರ್ಥಿಗಳು ಕೇಳಿದ ಪ್ರಶ್ನೆಗಳಿಗೆ ಲಕ್ಷ್ಯವನ್ನೇ ಕೊಡುವದಿಲ್ಲವಂತೆ! ಹೊಳೆಯು ಪಾಪವು ಅಗಸನಿಗೆ ಬಡಿಯುವಂತೆ ಈ ರಾಮಭಕ್ತರ ಬರಹವು ಹುಡುಗರನ್ನು ಬಡಕೊಂಡಿರುತ್ತದೆ. ಇರಲಿ. ತಮ್ಮ ವಿಧಾನಗಳನ್ನು ವಿರೋಧಿಸಿದ್ದರಿಂದ ಬ್ರಾಹ್ಮಣ ಹುಡುಗರು ಅಪರಾಧಿಗಳಾದರಂತೆ! ಶಿಕ್ಷಕರೇ, ವಿದ್ಯಾರ್ಥಿಗಳೇನು ಕುರಿಮರಿಗಳಲ್ಲ. ಸಾರಾಸಾರ ವಿಚಾರಗ್ರಹಣ ಶಕ್ತಿಯುಳ್ಳವರು. ತಮಗೆ ಸೇರದೆಯಿದ್ದುದನ್ನು ಯಾರಾದರೂ ವಿರೋಧಿಸುವವರೇ. ಬೇಕಾದರೆ ಸಮರ್ಪಕ ಉತ್ತರಗಳಿಂದ ಅವರನ್ನು ಸಮಾಧಾನಗೊಳಿಸಿರಿ. ಇಲ್ಲದಿದ್ದರೆ ಅವರು ನಿಮ್ಮ ಕಂಡ ಕಂಡ ವಿಧಾನಗಳಿಗೆ ಕೆಂಡದಂತೆ ಸಿಟ್ಟಾಗಬಹುದು. ಸುಮ್ಮ ಸುಮ್ಮನೆ ಸಂಶಯವನ್ನು ತಕ್ಕೊಂಡು ವಿದ್ಯಾರ್ಥಿಗಳ ಹಾನಿಮಾಡುವದು ಸರಿಯಲ್ಲ " ಆಧಾರಗಳಿದ್ದರೆ ಧೈರ್ಯಮಾಡಿ ಮುಂದೆ ಬನ್ನಿ "ರೆಂದು " ರಾಮಭಕ್ತ " ನೂ "ಕನ್ನಡಿಗ" ನೂ ಕೂಡಿಯೇ ಆಹ್ವಾನ ಮಾಡಿದ್ದಾರೆ ಈ ಆಹ್ವಾನಕ್ಕೆ ನಿಮ್ಮ ಉತ್ತರವೆಲ್ಲಿ? ಶಿಕ್ಷಕರೇ, ನಿಮ್ಮ ಹೇಳಿಕೆಯಂತೆ! ಕೀಳುತರದ ವೃತ್ತಪತ್ರವಾದ 'ಕನ್ನಡಿಗ' ನಲ್ಲಿ ನಿಮಗೆ ಉತ್ತರವನ್ನೀಯುವದು ಸರಿಬಾರದಿದ್ದರೆ, " Modern Review " ದಲ್ಲಿಯಾದರೂ ಕೊಡಿರಿ. ಈ ನಿಮ್ಮ ರೀತಿಯನ್ನು ಕಂಡು 'ಕನ್ನಡಿಗ'ನೂ ಮನ್ನಿಸುಗೊಳ್ಳಲಾರನು. ಆದರೆ ಎಳೆಯ ಹುಡುಗರ ಮುಂದೆ ಸಿಕ್ಕಸಿಕ್ಕಂತೆ ಬೊಗಳಬೇಡಿರಿ.

'ಮೋಲುಮೋರೆಯನ್ನು ಮಾಡಿಕೊಂಡು ಕುಳಿತ ಜಟ್ಟಿಯನ್ನು ಪ್ರತಿಸ್ಪರ್ಧಿಯಾದ ಜಟ್ಟಿಯು ತೊಡೆತಟ್ಟಿ ಹೊಡೆಹೊಡೆದು ಎಬ್ಬಿಸುವಂತೆ ಸ್ತಬ್ಧರಾಗಿ ಕುಳಿತ ನಿಮ್ಮನ್ನು, ಈ ಲೇಖಕನು ತನ್ನ ವಿಧಾನಗಳಿಂದ ಆಹ್ವಾನ ಮಾಡಿದ್ದಾನೆ. ನಿಮ್ಮ ಮನಸ್ಸಿಗೆ ಬಂದರೆ ಈ ಅಶ್ವಮೇಧ ಕುದರೆಯನ್ನು ಕಟ್ಟಿಹಾಕಿರಿ. ಇಲ್ಲವಾದರೆ ನಮ್ಮ ವಿಧಾನಗಳಿಗೆ ಒಪ್ಪಿಗೆಯನ್ನು ಕೊಡಿರಿ.

ನೀವು ಶಾಲೆಯ ಹುಡುಗರೆದುರಿಗೆ 'Smith's History' ಯೊಳಗಿನ ಆಧಾರಗಳನ್ನೂ ಮತ್ತು ' Sewell's Forgotton empire ' ದೊಳಗಿನ ಆಧಾರಗಳನ್ನೂ ತೋರಿಸಿದಿರಂತೆ! ಶಿಕ್ಷಕರೇ, ಮೆಚ್ಚಾಣಿಸಿದ ಹೊತ್ತಿಗೆಗಳಿಗೆ ಪ್ರತಿಯಾಗಿ ಪರಕೀಯರಲ್ಲದವರು ಬರೆದ ಹೊತ್ತಿಗೆಗಳಾದ " Surya . Narayana-rao's " Never to be Forgotton empire " ಮತ್ತು ಆಲೂರ ವೆಂಕಟರಾಯರು ಬರೆದ " ಕರ್ನಾಟಕ ಗತವೈಭವ " ವನ್ನೂ ಓದಿನೋಡಿರಿ ಅಂದರೆ ನಿಮಗೆ ವಿಜಯನಗರವು ಯಾರ ರಾಜ್ಯವೆಂಬುವದು ವಿದಿತವಾಗುವದು. ಶಾರದಾಂಬೆಯ ಪ್ರಸಾದ ಹೊಂದಿ, ಮೂರು ಮುಕ್ಕಾಲು ಗಳಿಗೆ ಚಿನ್ನದ ಮಳೆಯನ್ನು ಸುರಿಸಿ ಹುಕ್ಕನನ್ನು ಪಟ್ಟದ ಮೇಲೆ ಕುಳ್ಳಿರಿಸಿ, ವಿಜಯನಗರ ರಾಜ್ಯವನ್ನು ಸ್ಥಾಪಿಸಿದ ವಿದ್ಯಾರಣ್ಯರು " ಕರ್ನಾಟಕ ಸಿಂಹಾಸನ ಸ್ಥಾಪನಾಚಾರ್ಯ " ರೆಂಬ ಬಿರುದಿನಿಂದಲಂಕೃತರಾಗಿದ್ದರು. ಶಿಕ್ಷಕರೇ, ವಿಜಯನಗರವು ಆಂಧ್ರರದಾಗಿದ್ದರೆ ವಿದ್ಯಾರಣ್ಯರಿಗೆ ಈ ಬಿರುದೇಕೆ? ಮತ್ತು ಕೃಷ್ಣರಾಯನನ್ನು ತಾನೆ ಸ್ವತಃ "ಕನ್ನಡರಾಯ "ನೆಂದು ಸಂಬೋಧಿಸಿದ್ದಾನೆ. ಕೃಷ್ಣರಾಯನಿಗೆ ಕನ್ನಡ ರಾಜ್ಯ ರಮಾರಮಣ " ನೆಂಬ ಬಿರುದಾದರೂ ಇತ್ತು. ಅಂದಬಳಿಕ ವಿಜಯನಗರವು ಕನ್ನಡಿಗರದಲ್ಲವೇ? ವಿಜಯನಗರದೊಳಗಿನ ಪ್ರತಿಯೊಂದು ಪುರಾತನ ಕೋಟೆ, ಕಿಲ್ಲೆ, ಗುಡಿ, ಗುಂಡಾರ ಗವಿ, ಕಲ್ಲು ಕೂಡ ಮನುಷ್ಯನಂತೆ ಒಂದು ನಾಲಿಗೆಯಿಂದಲ್ಲ. ಬ್ರಹ್ಮನಂತೆ ನಾಲ್ಕು ಬಾಯಿಗಳಿಂದಲ್ಲ. ಆದರೆ ಆದಿಶೇಷನಂತೆ ಸಹಸ್ರ ಮುಖಗಳಿಂದ ಸತ್ಯವಾಗಿ ಕನ್ನಡಿಗರ ವೈಭವವನ್ನೂ, ವೈದಿಕರು ಮಂತ್ರಪುಷ್ಪವನ್ನು ಅನ್ನುವಂತೆ, ಏಕಕಂಠವಾಗಿ ಕಿವುಡರಿಗೆ ಕೂಡ ಕೇಳಿಸುವಂತೆ, ಗಟ್ಟಿಸಿ, ಸಾವಕಾಶವಾಗಿ ಬಿಡಿಬಿಡಿಯಾಗಿ ಯಾವಾಗಲೂ ಕನ್ನಡ ನಾಡಿನ ನರವೀರ ಶಿರೋಮಣಿ ಚರಿತಾಮೃತವನ್ನೂ ಹೃದಯಂಗಮವಾಗಿ ವರ್ಣಿಸುತ್ತವೆ" ಇಷ್ಟು ಪ್ರಮಾಣಗಳು ವಿಜಯನಗರವು ಕನ್ನಡಿಗರ ರಾಜ್ಯವೆಂದು ಸಿದ್ಧಗೊಳಿಸಲು ಸಾಕಲ್ಲವೇ?

ನಿಮ್ಮ ಎರಡನೇ ವಿಧಾನವೆಂದರೆ– " ವಿಜಯನಗರವನ್ನಾಳಿದವರು ಕನ್ನಡ ವಾಙ್ಮಯಕ್ಕೆ ಉತ್ತೇಜನವನ್ನೀಯಲಿಲ್ಲವೆಂಬುವದು " ವಿಜಯನಗರದ ಅರಸನಾದ ೨ನೇ ಹರಿಹರನಿಗೆ " ಕರ್ನಾಟಕ ವಿದ್ಯಾವಿಲಾಸ " ವೆಂಬ ಬಿರುದಿತ್ತು. ೧೯೨೦ ನೇ ಇಸ್ವಿಯ ಡಿಸೆಂಬರ್ ತಿಂಗಳಿನ 'ಮಾಡರ್ನ್ ರಿವ್ಯೂ'ದ ಸಂಚಿಕೆಯಲ್ಲಿ ಕೃಷ್ಣರಾಯನ ಮಾತೃಭಾಷೆಯು ಕನ್ನಡವೇ ಆಗಿತ್ತೆಂದು ಆಲೂರ ವೆಂಕಟರಾಯರು ಬರೆದಿದ್ದಾರೆ. " ವಿಷ್ಣುಚಿತ್ತೀಯ"ವೆಂಬ ತೆಲಗು ಹೊತ್ತಿಗೆಯ ಪ್ರಸ್ತಾವನೆಯಲ್ಲಿ, ಮಾತೃಭಾಷೆಯಾದ ಕನ್ನಡವನ್ನು ಬಿಟ್ಟುಗೊಟ್ಟು, ತೆಲಗು ಭಾಷೆಯಲ್ಲಿಯೇ ಏಕೆ ಗ್ರಂಥವು ಬರೆಯಲಟ್ಟೆತೆಂಬುವದರ ' ಕಾರಣಗಳನ್ನು, ಗ್ರಂಥಕರ್ತರಾದ ಕೃಷ್ಣರಾಜರೇ ಹೇಳಿದಾರೆ ಅವರು ತೆಲಗು ವಾಙ್ಮಯೋಪಾಸಕರಾಗಿದರೆ, ಅಂಥ, ವಿಷ್ಣುವು. ಅವರ ಕನಸಿನಲಿ ಬಂದು ತೆಲುಗು ಭಾಷೆಯಲ್ಲಿಯೆ ಹೊತ್ತಿಗೆಯನ್ನು ಬರೆಯಲು ಪ್ರಾರ್ಥಿಸುವ ಕಾರಣವೇನು? ಇಷ್ಟು ಪ್ರಮಾಣಗಳು ಸಾಕಾಗದಿದ್ದರೆ, ಕವಿಚರಿತೆಯನ್ನು ತೆಗೆದು ನೋಡಿ.

ಒರ್ವ ವಿದ್ಯಾರ್ಥಿಯು " ಆಲೂರ ವೆಂಕಟರಾಯರ ಕರ್ನಾಟಕ ಗತವೈಭವನ್ನು ಕತ್ತರಿದು ನೋಡಿರೆಂದು ಕೇಳಿಕೊಂಡದ್ದೇ ತಪ್ಪು! " ಅದಕ್ಕೆ ನೀವು " ಆಲೂರ ವೆಂಕಟರಾಯರು ಯಾವ ದೊಡ್ಡ ಪುರುಷರು " ಎಂದು ಹೀಯಾಳಿಸಿದಿರಂತೆ! ಶಿಕ್ಷಕರೇ, ಆಲೂರರವರು ಕರ್ನಾಟಕ ಸಂಶೋಧನೆಯ ಕಾರ್ಯದಲ್ಲಿ ನಿರತರು ಕರ್ನಾಟಕಕ್ಕಾದರ್ಶಭೂತರು ಅಮರಣ ಪರ್ಯಂತರ ಇತಿಹಾಸ ಸಂಶೋಧನಕ್ಕಾಗಿ ಕೈಕೊಟ್ಟುಕೊಂಡು ನಿಂತವರು. ಇಂಥವರನ್ನು ನೀವು ನಿಂದಿಸುವದು, ಹೊನ್ನೀ ಹುಳವು ಹಿಮಾಲಯವನ್ನು ಹಳಿದಂತೆಯೇ ಸರಿ. ಶಿಕ್ಷಕರೇ, ನೀವಾದರೂ ಏನು

" The really deserving are not valued w[illegible] they live " ಈ ಉಕ್ತಿಯನ್ನು ಅನುಸರಿಸಿರಬಹುದು.

[illegible] ಮುಂದಾದರೂ ನಿಜವಾದ ಶಿಕ್ಷಣಪಡೆಯಲು [illegible]ಗೆ ಅಲ್ಲದಸಲ್ಲದ ಕುಕಲ್ಪನೆಗಳನ್ನು ಕಾರಿ[illegible] ವ[illegible] ಕಾಲವನ್ನು ಕಳೆಯದೆ ನಿಜವಾದ ಶಿಕ್ಷಣವನ್ನು ಕೊಟ್ಟು ಕೀರ್ತಿಭಾಗಿಗಳಾಗುವಿರೆಂದು ಕೋರುತ್ತೇನೆ.

ವರ್ತಮಾನಸಾರ.

ಮುಂಬೈ ಕರ್ನಾಟಕ.

ವಿಜಾಪುರ ಜಿಲ್ಹೆಯ ಕಲೆಕ್ಟರ ಸಾ॥ ರವರ ಮುಕ್ಕಾಮುಗಳು [illegible] ೩೦ನೇ ಜಾನೇವಾರಿ ೧ನೇ ತಾರೀಖು ಕೆರೂರು [illegible] ಬೀಳಗಿ [illegible]ನೇ ತಾರೀಖು ವಿಜಾಪುರ ಈ ಪ್ರಕಾರ ಗೊತ್ತು ಮಾಡಿರುವರು.

ಮುಂಬೈ ಇಲಾಖೆಯಲ್ಲಿ ಕಳೆದ ಹತ್ತು ಸಾವಿರ ಮಣ ಉಪ್ಪು ಕಳೆದ ವರ್ಷದ [illegible] ಕಡಿಮೆಯಾಗಿದೆ ಅಂದರೆ ತಲೆಗೆ [illegible] ಬಿದ್ದಂತಾಯಿತು ಇದರಿಂದ ಸರಕಾರಕ್ಕೆ ಉಪ್ಪಿನ ಮೇಲೆ [illegible] ಉತ್ಪನ್ನವಾಗಿದೆ.

ಜನಾರ್ದನಸಾಗರ ವಾಸುದೇವರಾಯರು ಮಿರ್ಜಿಯಲ್ಲಿ ಶ್ರೀಮಹಾಲಕ್ಷ್ಮೀಪ್ರಸಾದಿಕ ಕರ್ನಾಟಕ ಸಂಗೀತ ನಾಟಕ ಮಂಡಳಿಯನ್ನು ಸ್ಥಾಪಿಸಿದ್ದಾರೆ ಮೊನ್ನಿನ ೧೦ನೇ ತಾರೀಖಿನದಿನ ಮಿರ್ಜಿಯ ಸರಕಾರೀ ನಾಟಕ ಶಾಲೆಯಲ್ಲಿ ಕಬೀರದಾಸ ನಾಟಕವು ಅಭಿನಯಿಸಲ್ಪಟ್ಟಿತು. ಈ ಮೊದಲನೇ ಆಖ್ಯಾನ ಪ್ರಾರಂಭಮಹೋತ್ಸವನ್ನು ಮಿರ್ಜಿಯ ಶ್ರೀಮಂತ ಸರಕಾರದವರು ತಮ್ಮ ಸ್ವಹಸ್ತದಿಂದ ನೆರವೇರಿಸಿ ಕರ್ನಾಟಕ ರಂಗಭೂಮಿಯನ್ನು ಕುರಿತು ಭಾಷಣವನ್ನು ಮಾಡಿದರು. ಶ್ರೀಮಂತರಿಗೆ ಕನ್ನಡ ಕಂಪನಿಯ ಪರವಾಗಿ ಹೂಮಾಲೆಯೂ ಅಭಿನಂದನೆಗಳೂ ಅರ್ಪಿಸಲ್ಪಟ್ಟವು.

ವಿಜಾಪುರ ಜಿಲ್ಲೆಯ ಮಂಡಿದಾರರ ವಿಶೇಷ ಸಹಾಯದಿಂದ ಶ್ರೀ [illegible]ಯವರು ಅರಿಸಿ ಬಂದಿದ್ದರಿಂದ ಅವರು ಈ ಜಿಲ್ಲೆಯ ಮತದಾರರ ಆಭಾರವನ್ನು ಪ್ರದರ್ಶಿಸುತ್ತಾರೆ.

ಗುಳೇದಗುಡ್ಡದ ಮಾರುತಿ ದೇವಸ್ಥಾನದ ಜೀರ್ಣೋದ್ಧಾರ ಕಾರ್ಯಕ್ಕೆ ಎಲ್ಲರೂ ಸಹಾಯಮಾಡಬೇಕೆಂದು ಅಲ್ಲಿಯ ಪಂಚರಾದ ಶ್ರೀ ಹನುಮಂತ ಶ್ರೀನಿವಾಸ ಜೋಶಿಯವರು ತಿಳಿಸುತ್ತಾರೆ ಈ ದೇವರು ವ್ಯಾಸರಿಂದ ಪ್ರತಿಷ್ಠಿತವಾದದ್ದಾದದರಿಂದ ಭಾವಿಕರು ಸಹಾಯ ಮಾಡಬೇಕು.

ವಿಜಾಪುರದಲ್ಲಿ ಉದ್ಯೋಗಿಕ ಶಾಲೆಯನ್ನು ಸರಕಾರದವರು ಬೇಗನೇ ಸ್ಥಾಪಿಸುವರಿದ್ದಾರೆ. ಸದ್ಯದಲ್ಲಿ ಜುಮ್ಮಾಮಸೀದ ಹತ್ತಿಯ ಕಳ್ಳೀ [illegible] ಕಟ್ಟಡದಲ್ಲಿ ಪ್ರಾರಂಭವಾಗುವದು.

[illegible]ಯ ಮುನಿಸಿಫರಾದ ಶ್ರೀ ಸವಣೂರ ಇವರು ಹೃದಯ [illegible] ವೈಕುಂಠವಾಸಿಗಳಾದರೆಂದು ತಿಳಿಸಲು ವಿಷಾದಪಡುತ್ತೇವೆ.

ತೃತೀಯ ಕರ್ನಾಟಕ ಆಯುರ್ವೇದ ಸಮ್ಮೇಲನವು [illegible]ನೇ ಮಾರ್ಚ ತಿಂಗಳಲ್ಲಿ ವಿಜಾಪುರದಲ್ಲಿ ನೆರವೇರುವದು.

ಹುಬ್ಬಳ್ಳಿಯಲ್ಲಿ ಕೂಡಬೇಕಾಗಿದ್ದ ಮೀರಜ್ಯದ ಮಹಾಸಭೆಯು ಜರುಗುವದಿಲ್ಲವಾಗಿ ತಿಳಿಯುತ್ತದೆ. ಹಿಂಗಿನ ಕಾರಣವು ಇನ್ನೂ ಪ್ರಕಟವಾಗಿಲ್ಲ

ಬೆಳಗಾಂವಿಕಾಂಗ್ರೆಸ್ಸಿನ ಸ್ವಾಗತಮಂಡಳದವರಿಗೆ ಕೆಲವು ಜನ ಸಿಂಧ [illegible] ಅದನ್ನು ಬಿಸಿಲು ಮಾಡುವದಕ್ಕಾಗಿ ದಿವಾನ ಅಥವಾ ಫೌಜದಾರೀ ಇಲಾಜಮಾಡಬೇಕೆಂದೂ ಕರ್ನಾಟಕ ಪ್ರಾಂತಿಕ ಕಾಂಗ್ರೆಸ ಕಮಿಟಿಯವರು ನಿರ್ಣಯಿಸಿದ್ದಾರೆ ಸ್ವಾತಃ ಕಾಂಗ್ರೆಸ್ಸೇ [illegible] ಹೋಗುವ ಪ್ರಸಂಗಬಂದಿತು. ಕಾಲಾಯ ತಸ್ಮೈನಮಃ

ಮೈಸೂರ ಕರ್ನಾಟಕ.

ಮೈಸೂರ ನಾಡಿಗೆ ಸ್ವಾಯತ್ತ [illegible] ಆಗಮಿಸಿದ್ದಾರೆ [illegible] ಸಾರ್ವಜನಿಕ [illegible] ಪ್ರಾರಂಭವಾಗದ [illegible] ದಿನಗಳಲ್ಲಿ [illegible] ವಿಷಯವು

ಡಾ. ಎಸ್. ಸಿ, ತುಮಕೂರ ಶೆಟ್ಟಿಯವರು ಎಂ ಎಸ್, ಸಿ, ಪಿ, ಎಚ್, ಡಿ, ಡಿ, ಎಸ್, ಸಿ, ಇತ್ಯಾದಿ ಪದವಿಗಳನ್ನು ತೆಗೆದುಕೊಂಡು ಅಮೇರಿಕೆಯ ಇಲಿನಾಯ ವಿಶ್ವವಿದ್ಯಾಲಯದಿಂದ ತಮ್ಮ ಶಿಕ್ಷಣವನ್ನು ಮುಗಿಸಿಕೊಂಡು ಕಳೆದ ವಾರದಲ್ಲಿ ಮಾತೃಭೂಮಿಗೆ ಬಂದು ಸೇರಿದರು

ವರದಾಚಾರ್ಯ ಮತ್ತು ಸನ್ಸ್ ಎಂಬ ಫೋಟೋ ತೆಗೆಯುವವರು ಮೈಸೂರ ಮಹಾರಾಜರ ಚಿತ್ರಗಳನ್ನು ಚೆನ್ನಾಗಿ ಚಿತ್ರಿಸಿದ್ದರಿಂದ ಮಹಾರಾಜರು ಅವರಿಗೆ ಒಂದು ಕ್ಯಾಮರಾ ಪಾರಿತೋಷಕವಾಗಿ ಕೊಟ್ಟಿದ್ದಾರೆ

ಬೆಂಗಳೂರು ದೇಶೀಯ ವಿದ್ಯಾಶಾಲಾ ಪ್ರವೇಶೋತ್ಸವವು ಮೈಸೂರು ಸಂಸ್ಥಾನದ ದಿವಾನ ಸಾಹೇಬರವರ ಅಧ್ಯಕ್ಷತೆಯಲ್ಲಿ ಇದೇ ತಿಂಗಳ ೧೮ನೇ ತಾರೀಖಿನಲ್ಲಿ ನೆರವೇರಿತು.

ಮೈಸೂರು ಸಂಸ್ಥಾನದಲ್ಲಿರುವ ಅನ್ನಸತ್ರಗಳನ್ನು ವಜಾಮಾಡಬೇಕೆಂಬ ಸರಕಾರದವರ ಯೋಜನೆಯು ಧರ್ಮಬುದ್ಧಿಯುಳ್ಳ ಅನೇಕ ಮಂದಿಯರಿಗೆ ಬಹಳ ಅಸಮಾಧಾನವುಂಟಾಗಿರುವುದು ಅನ್ನಸತ್ರವನ್ನು ವಜಾಮಾಡುವ ವಿಚಾರವು ಈಗಿನದಲ್ಲ ಅನೇಕ ವರ್ಷಗಳಿಂದ ಪ್ರಜಾಪ್ರತಿನಿಧಿ ಸಭೆಯಲ್ಲಿ ಚರ್ಚಿಸಲ್ಪಟ್ಟು, ಹೋದ ವರ್ಷ ಒಂದು ಕಮಿಟಿಯು ನಿರ್ಮಿಸಲ್ಪಟ್ಟಿತು ಸದರಿ ಕಮಿಟಿಯವರು ಕಾಶೀ, ತಿರುಪತಿ, ಸುಬ್ರಹ್ಮಣ್ಯ ಈ ಮೂರು ಸ್ಥಳಗಳ ಹೊರತು ಬಾಕಿ ಎಲ್ಲ ಅನ್ನ ಸತ್ರಗಳನ್ನು ವಜಾಮಾಡಬೇಕೆಂದು ಸರಕಾರದವರಿಗೆ ವರದಿಯನ್ನು ಒಪ್ಪಿಸಿದರು ಸರಕಾರದವರು ವರದಿಯನ್ನು ಮಂಜೂರುಮಾಡಿದರು ಈ ಅನ್ನಸತ್ರಗಳನ್ನು ನಿರ್ಮಿಸಲಿಕ್ಕೆ ಹಿಂದಿನವರು ಎಷ್ಟು ಕಾಲ ಶ್ರಮಪಟ್ಟಿದ್ದರೋ, ಅದನ್ನೆಲ್ಲ ಒಂದು ನಿಮಿಷದಲ್ಲಿ ಈಗಿನ ಸರಕಾರವು ನಿರ್ಮೂಲಮಾಡಿತು

ತಮ್ಮ ವಿರುದ್ಧ ಮತವನ್ನು ಪ್ರಕಟಪಡಿಸಲಿಕ್ಕೆ ಬೆಂಗಳೂರಿನಲ್ಲಿ ಈ ತಿಂಗಳು ೧೧ ನೇ ತಾರೀಖು ಒಂದು ಪ್ರಚಂಡ ಸಭೆಯು ನೆರೆದಿತ್ತು. ಈ ಸಭೆಯಲ್ಲಿ ಶ್ರೀಮನ್ ಮಹಾರಾಜರನ್ನು ಮತ್ತು ದಿವಾನರವರನ್ನೂ ನೋಡಿ ಮಾತನಾಡುವುದಕ್ಕೋಸ್ಕರ ಒಂದು ಉಪಮಂಡಲವು ನಿರ್ಮಾಣವಾಯಿತು. ಬೆಂಗಳೂರಿನಲ್ಲಿ ಮಾತ್ರವಲ್ಲದೆ ಸಂಸ್ಥಾನದ ಇತರ ಎಲ್ಲಾ ಭಾಗಗಳಲ್ಲಿಯೂ ವಿರುದ್ಧ ಸಭೆಗಳು ನೆರೆಯಲಿಕ್ಕಿರುವವು.

ಮೈಸೂರಿನಲ್ಲಿ ಸೂಳೆಯರ [illegible] ವಿಸರ್ಜನವಾಗಿರುವದು. ಆದರ ಸಾಧಾರಣಸಭೆಯು ಮೊನ್ನೆ ಭಾನುವಾರ ಜರಗಿತು

ಮದ್ರಾಸ ಕರ್ನಾಟಕ.

ಶ್ರೀ ದುರ್ಗಾರಂಬಾ ಪ್ರಾಸಾದಿಕ ನಾಟಕಮಂಡಳಿ ಸಾಸೂರ [illegible]ವರು ಇದೇ ತಿಂಗಳ ೫ನೇ ತಾರೀಖಿನದಿನ ಶಶಿಪ್ರಭಾಪರಿಣಯವೆಂಬ ಯಕ್ಷಗಾನ ನಾಟಕವನ್ನು ಮಂಗಳೂರಿನ ಸ್ವಾಂದರ್ಪ ಬೈಸ್ಕೋಪ ಕಂಪನಿಯ ಕಟ್ಟಡದಲ್ಲಿ ಪ್ರಥಮವಾಗಿ ಆಡಿತೋರಿಸಿದರು

ಇದೇ ತಿಂಗಳ ೨೮-೨೯ ತಾರೀಖುಗಳಲ್ಲಿ ದಕ್ಷಿಣಕನ್ನಡಜಿಲ್ಹಾ ದಾವಿದ ಬ್ರಾಹ್ಮಣರ ಸಪ್ತಮ ಪರಿಷತ್ತು ಮಹಾರಾಜ ಶ್ರೀ ಕಲ್ಯಾಟಿ ಲಕ್ಷ್ಮೀನಾರಾಯಣರಾವ ಬಿ, ಎ, ಎಲ್, ಬಿ, ಇವರ ಅಧ್ಯಕ್ಷತೆಯಲ್ಲಿ ಜರಗಲಿಕ್ಕಿರುವದು

ನಿರ್ಜಾಮ ಕರ್ನಾಟಕ.

ಸೇಡಂ ಗ್ರಾಮದ ಬಸವೇಶ್ವರಧರ್ಮವಾಯುದ ಒಗ್ಗಿ ವ್ಯಾಖ್ಯಾನ ನಡೆದಿದ್ದರಲ್ಲಿ ಗುರುಮಠದಲ್ಲಿ ಶ್ರೀಮನ್ನಿರಂಜನ ದಾಂತವೀರ ಮಹಾಸ್ವಾಮಿಗಳವರು ಒಂದು ಸಭೆಸೇರಿಸಿ ಧರ್ಮಪ್ರಚಾರದಿಂದ ಒಂದು ಶಿಕ್ಷಣಾಲಯ ಒಂದು ಇತಿಹಾಸದ ಗೋರಕ್ಷಣ ಸಮಾಜಕ್ಕಾಗಿ ಸಂಸ್ಥೆಗಳನ್ನು ಸ್ಥಾಪಿಸಬೇಕೆಂದು ಸಭೆಯು ಸರ್ವಾನುಮತದಿಂದ ನಿರ್ಣಯಿಸಿದರು

ದಿ ಏಶಿಯಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೬ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವಸ ೫-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇರಮನ್ನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತು:—

(೧) ಎಲ್. ಬಿ. ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲೆರಿಗಾರ್ಡ, ನಾರಾಯಣ ಗುಡ ಡಿಸ್ಟಿಲೆರಿ, ಹೈದರಾಬಾದ್ ಡೆಕ್ಕನ್ನ ರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ ಬಿ. ಟಿ ಶಾಲಾಗಳ ಡಿವಿಜನಲ್ ಇನ್‌ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦

(೩) ಎಲ್. ಬಿ. ಸಿ. ನಂ. ೨೦೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಪಡಪಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೭೦ ಮಿ. ಶಂಕರಪ್ಪಾ ಬಸಪ್ಪಾ ದೇವನಕೊಂತ, ಅಕ್ಕಸಾಲೆ ಬಿಡೀಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೬ ಮಿ. ಶೇಕ ಬಾಪುಮಿಯಾ ಶೇಕ ಮಹಮ್ಮದ ನಳ ತಯಾರ ಮಾಡುವವರು ೭೧೫ ಭವಾನಿಪೇಟ ಪುನಾ ೧೦೦೦

ಬಿ. ಎಸ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು.

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗ ಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗುತ್ತವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್.	ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರಾ

ಗವರ್ನಮೆಂಟನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗಪ್ರಸಿದ್ಧವಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಸಿಮಿತ್ರ, ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೬ ವರ್ಷಗಳು ಆಗುತ್ತ ಬಂದವು. ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತರ ಜೋಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟಿಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೇಟುಗಳು ನಮ್ಮ ಹತ್ತರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳು:— ಕ್ಷಯರೋಗ, ಪ್ರಾಣಾಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಅಡಗ್ಗೆ, ಕಾಲರಾ (ಮಾರಿಕಾ), ಪ್ಲೇಗ, ಇನ್ಪ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವೆ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು, ಮೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರುವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ಕಾಲುಶೇರಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ಧಿತ ೫ ಆಣೆ ಟೂಕದ ಬಾಟ್ಲಿ ಒಂದಕ್ಕೆ ೮ ಆ ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆಕಾರ ಬಂದರೆ ಕಳಿಸಲಾದೀತು ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ ಕಮಿಶನ್ ಇಲ್ಲ ಪೆಷ್ಟ ೭ ಆಣೆ. ೧ ಕಾಲುಶೇರಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ಒಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ. ಒಂದು ಎರಡು ತಕ್ಕೊಂಡರೆ ಕಮಿಶನಇಲ್ಲ ಮಿ. ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿ ಗೂಡೆ ಸಿಗುವದು ಈ ಔಷಧವು ಖೊಟ್ಟಿ ಹೊರಟರೆ ಶಿಲ್ಲಕ ಉಳಿದಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಲಾ ವಗೈರೆಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸ:—ಎಚ್. ಎಮ್. ಮುಲ್ಲಾ.

ಸಂಪಾದಕ ಅರ್ಕ ಶಫಾ ಹೆಡ್ ಆಫೀಸ ಪೋಷ್ಟ ಶಹಾಪೂರ [ಬೆಳಗಾವಿ]

ಕರ್ನಾಟಕ ಬಂಧುಗಳೇ! ಈ ಸುಸಂಧಿಯನ್ನು ಕಳೆದುಕೊಳ್ಳಬೇಡಿರಿ
ನಿಮ್ಮ ಸಲುವಾಗಿಯೇ ಕನ್ನಡ ನುಡಿಯಲ್ಲಿ ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯಿವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣಿ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಡಿಸುವುದು ಮತ್ತು ಜೋಡಿಸುವದು, ಅವುಗಳೊಳಗಿನ ಕೆಟ್ಟು-ಬಿಟ್ಟ ಮುರಿದ-ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು. ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಹಸಿಬಿಸಿಯುಳಿಯುವದಿಲ್ಲ ನುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವುದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳ ಸುಲಭವಾಗಿದ್ದು, ಮನಸಿಗೆ ಸೊಗಸುವಂತಹದಿರುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುವದನ್ನು ಲಕ್ಷ್ಯದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ್) ಒಂದು ತಿಂಗಳ ' ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರದಿ ಬರೆದು ಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.
ಸನಾ ಶನಿವಾರ ಪೇಠ ಜಮಖಂಡಿಕರ ವಾಡಾ ಪುಣೆ ಶಹರ.

ಫುಕ್ಕಟೆ! ಫುಕ್ಕಟೆ!! ಫುಕ್ಕಟೆ!!!

ಕಂತುಗಳನ್ನು ಎಂದೂ ಕೊಡಬೇಡಿ!

ನೀವು ವಿಮೆ ಇಳಿಸಬೇಕಾಗಿದ್ದರೆ ನಾವು ನಿಮ್ಮ ಕಡೆಯಿಂದ ಹಣವನ್ನು ತೆಗೆದುಕೊಳ್ಳದೆ ಕೇವಲ ಫುಕ್ಕಟೆಯಾಗಿ ನಿಮ್ಮ ಜೀವದ ವಿಮೆ ಇಳಿಸುವೆವು.

ವಿಶೇಷ ಸಂಗತಿಗಳಿಗಾಗಿ ೩ ಆಣೆಗಳ ಟಿಕೇಟು ಕಳಿಸಿರಿ.

ಇನ್‌ಸ್ಪೆಕ್ಟರ ಆಫ್ ಎಜೆನ್ಸಿ
ದಿ ಪೇನಸ್ ಅಶ್ಯುರನ್ಸ ಬ್ಯಾಂಕ ಲಿಮಿಟೆಡ್
ಧಾರವಾಡ ಬ್ರ್ಯಾಂಚ ಧಾರವಾಡ

ಡಾಕ್ಟರ ಬಸಪ್ಪಾ ಸಂಗಪ್ಪಾ ಪಾಟೀಲ.
ಡೆಂಟಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ಬಾಗಲಕೋಟೆ

ನಾವು ಹಲ್ಲುಗಳ ಕಲೆಯನ್ನು ಚನ್ನಾಗಿ ಅರಿತಿರುವೆವ ಹಲ್ಲುಗಳ ರೋಗಗಳನ್ನು ಕಳೆಯುವೆವು. ಹಲ್ಲಿನಲ್ಲಿರುವ ರಕ್ತ ಕೀವನ್ನು ನಿರ್ಮೂಲಿಸುವೆವು. ಹಲ್ಲುಗಳನ್ನು ಯಂತ್ರದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

S. C. Narayanacharya & Co.
Chowkhamba Benares City



ನಮ್ಮಲ್ಲಿ ಎಲ್ಲಾ ತರದ [illegible] ಜರತಾರ, [illegible] ಶಿವ[illegible] ರುದ್ರಾಕ್ಷಿ, [illegible] ಲಿಂಗಗಳು, ಸ್ಫಟಿಕದ [illegible] ಮಾರಾಟಕ್ಕೆ ಸಿದ್ಧವಾಗಿರುತ್ತವೆ.
[illegible]
ಕಂಪನಿ [illegible]

ಈ ಪತ್ರಿಕೆಯು ಮಂಗಳವೇಢೆ ರಾಜೇರಾಯರ ಮಕ್ಕಳಾದ ಶ್ರೀ. ವಾಸುದೇವರಾಯರಿಂದ ಬಾಗಲಕೋಟೆಯಲ್ಲಿಯ ವಿದ್ಯಾರಣ್ಯ ಮುದ್ರಾಯಂತ್ರದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.

ರಂಗಭೂಮಿಯ ಸುಧಾರಣೆ. (೪)

ನಟರೂ ನಟನೆಯೂ

ನಾಟಕಕಾರನ ಉದ್ದೇಶವನ್ನು ಸಫಲಿಸುವುದೇ ನಟನ ಉದ್ದೇಶ. ದೇವರಿಗೂ ಭಕ್ತರಿಗೂ ನಂಟಸ್ತಿಕೆಯನ್ನು ಗಂಟಿಕ್ಕುವ ಗುರುವಿನಂತೆ, ನಾಟಕದಲ್ಲಿ ಅಡಕವಾಗಿರುವ ತತ್ವಕ್ಕೂ ಪ್ರೇಕ್ಷಕ ವರ್ಗಕ್ಕೂ ಇವನು ಮಧ್ಯಸ್ಥನಾಗಬೇಕಿರುವುದರಿಂದ ಅವನ ಕರ್ತವ್ಯವಾದರೂ ಸುಲಭವಿಲ್ಲ. ತಾನರಿಯದ್ದನ್ನು ಗುರುವು ಶಿಷ್ಯನಿಗೆ ಹೇಗೆ ಬೋಧಿಸಲಾರನೋ ಹಾಗೆಯೇ ಇವನು ತಾನು ಕಾಣದ್ದನ್ನು ಇತರರಲ್ಲಿ ಪ್ರೇರಿಸಲಾರನು. ತನ್ನಲ್ಲಿ ಇಲ್ಲದ್ದನ್ನು ನಟಿಸುವುದು ನಟನೆಯೆಂಬುದು ನಿಜವಾದರೂ, ಅವನು ನಟಿಸತಕ್ಕ ವಿಷಯದ ಕಲ್ಪನೆಯಿಲ್ಲದೆ ಹೇಗೆ ನಟಿಸಬಲ್ಲನು? ಆ ಕಲ್ಪನೆಯನ್ನು ತಂದುಕೊಂಡು ಪ್ರೇಕ್ಷಕರ ಮುಂದೆ ಪರಿಣಾಮಕಾರಿಯಾಗುವಂತೆ ನಟಿಸುವುದರಲ್ಲಿ ಅವನ ಕರ್ತವ್ಯವು ಅಡಗಿದೆ.

ಮೊದಲು ನಟನು, ತಾನು ಯಾವ ನಾಟಕದ ಭೂಮಿಕೆಯನ್ನು ವಹಿಸಲಿರುವನೋ ಆ ನಾಟಕದ ಸಂಪೂರ್ಣ ಪರಿಶೀಲನೆಮಾಡಬೇಕು. ನಾಟಕಕಾರನು ಆ ನಾಟಕವನ್ನೇಕೆ ಬರೆದನು ಆ ಉದ್ದೇಶ ಪೂರ್ತಿಯ ಕೆಲಸದಲ್ಲಿ ಯಾವಾವ ಪಾತ್ರದ ಜವಾಬದಾರಿಯು ಎಷ್ಟೆಷ್ಟು ಇರುವುದು ಎಂಬುದನ್ನು ಅವನು ಮೊದಲು ಸ್ಪಷ್ಟಮಾಡಿಕೊಳ್ಳಬೇಕು. ಹೀಗೆ ಸ್ಪಷ್ಟಮಾಡಿಕೊಳ್ಳಲು ಅವನಿಗೆ ಆ ಗ್ರಂಥದ ಪ್ರತಿಯೊಂದು ಶಬ್ದವನ್ನು ತಿಳಿದುಕೊಳ್ಳುವಷ್ಟು ಭಾಷಾ ಜ್ಞಾನವೂ ವಿಷಯ ಜ್ಞಾನವೂ ಇರಬೇಕು. ಅಲ್ಲಿ ಬರೆದ ಶಬ್ದಗಳು ಅವನಿಗೆ ತಿಳಿಯದೇ ಇದ್ದರೆ ಅವನು ಅದರಲ್ಲಿ ಸೂಚಿಸುವ ಭಾವವನ್ನು ಪ್ರಕಟಿಸುವುದು ಶಕ್ಯವಿಲ್ಲ. ಅದರ ವಿಷಯವೂ ಅವನಿಗೆ ತಿಳಿಯಲೇಬೇಕು. ಈಗ ಭಕ್ತಿಯ ಕುರಿತು ಬರೆದಿರುವರೆಂದು ತಿಳಿಯಿರಿ. ಭಕ್ತಿಯೆನ್ನೆಂಬ ಸಂಗತಿಯರಿಯದವನು, ಏನು ಭಾವವನ್ನು ತೋರಿಸಬಹುದು? ಈಗ ನಮ್ಮಲ್ಲಿನ ನಟರಲ್ಲಿ ನೂರಕ್ಕೆ ಎಂಬತ್ತರವರು ಈ ಭಾಷಾ, ವಿಷಯ, ಜ್ಞಾನ ಶೂನ್ಯರು. ಹಾಗಾದರೆ 'ಆ ತಿಳುವಳಿಕೆಯಿಲ್ಲದೆ ನಟಿಸುತ್ತಲಿಲ್ಲವೇ?' ಎಂದು ಯಾರಾದರೂ ನಮ್ಮನ್ನು ಕೇಳಬಹುದು. ಎಷ್ಟೋ ಮಂದಿ ನಟಿಸುತ್ತಿರುವರು. ಅದರಿಂದಾಗಿಯೇ ಆ ನಟನೆಯು ಸಮಂಜಸವಾಗಿರುವುದಿಲ್ಲ. ಭಾಷಾ ಜ್ಞಾನವಿಲ್ಲದೆ ಆಡುವ ಅವರ ಮಾತುಗಳು ಗಿಣಿಯ ಪಾಠದಂತೆ ಅಸ್ಪಷ್ಟವೂ, ನೀರಸವೂ, ಆಗುವವು. ಒಬ್ಬ ಗುರುವು ಹೇಳಿದಂತೆ ಅವನು ಕೈ ತಿರುವುದು, ನೋರೆಮಾಡುವುದು ಇವೆಲ್ಲವನ್ನು ಅಭ್ಯಸಿಸಿದರೂ ಅದು ಬರೇ ಯಾಂತ್ರಿಕ ಕೆಲಸವೇ ಆಗುವುದು. ಏಕೆಂದರೆ ಯಾವುದು ಹೃದಯದಿಂದ ಉದ್ರೇಕವಾಗುವುದೋ ಅದು ಮಾತ್ರ ಇತರರ ಹೃದಯವನ್ನು ಪ್ರೇರಿಸಬಲ್ಲುದು. ಹೀಗೆ ಹೃದಯದಿಂದ ಭಾವಗಳು ಹೊರಡಲು, ನಟನಿಗೆ ವಿಷಯ ಮತ್ತು ಭಾಷಾ ಜ್ಞಾನವು ಇದ್ದೇ ತೀರಬೇಕೆಂದಾಯಿತು.

ಈಗ ನಾಟಕದ ಭಾಷಾ ವಿಷಯಗಳನ್ನು ಪರಿಶೀಲಿಸಿದ ನಟನು, ತನ್ನ ಭೂಮಿಕೆಯ ಮಾತಿನ ಪ್ರತಿಯೊಂದು ಅಕ್ಷರವನ್ನು ಪರಿಶೀಲಿಸಬೇಕು. ಯಾವ ಶಬ್ದವು, ಯಾವ ಉದ್ದೇಶದಿಂದಲೇ ಇರಿಸಲ್ಪಟ್ಟಿದೆ; ಆ ಉದ್ದೇಶವು ಹೇಗೆ ಮಾತನಾಡುವುದರಿಂದ ಮತ್ತು ನಟಿಸುವುದರಿಂದ ಪೂರ್ಣವಾದೀತು ಎಂಬುದನ್ನು ಅವನು ನಿರ್ಧರಿಸಬೇಕು. ಕವಿಯು ಇವನ ಮುಂದೆ ಮೃತ ದೇಹವನ್ನಿರಿಸಿದರೆ ಇವನು ಅದಕ್ಕೆ ಚೈತನ್ಯವನ್ನು ತುಂಬಿಸಬೇಕು. ಯೋಗ್ಯ ನಟನು, ಕವಿಯ ಅರ್ಥಕ್ಕೆ ಎಂದೂ ಭಂಗಬಾರದಂತೆ ಕವಿಯು ತಂದ ಯೋಜನೆಗೂ ಮಿಗಿಲಾದ ಭಾವವನ್ನು ತೋರಿಸಬಲ್ಲವನಾಗುವನು. ನಟನು ಮೊದಲಾಗಿ, ತನ್ನ ಭೂಮಿಕೆಯನ್ನು ಸಂಪೂರ್ಣ ಕಂಠಪಾಠಮಾಡಬೇಕು. ಯಾವ ಶಬ್ದಗಳೂ, ಯಾವ ಅರ್ಥವೂ ಅವನಿಂದ ಮರೆಯಾಗಿರಬಾರದು. ಅವನು ಹಿಂದೆ (ಪ್ರಾಂಪ್ಟರನ)ಸಹಾಯವನ್ನು ಅಪೇಕ್ಷಿಸಿದರೆ, ಅವನಿಗೆ ವಿಷಯವು ಮರೆತುಹೋಗಿ ಉದ್ದೇಶವನ್ನು ಮರೆಯುವನು. ಈ ನಟನೆಯ ಕಾಲದಲ್ಲಿ ಆತನಿಗೆ ತಾನು ವಹಿಸಿದ್ದ ಭೂಮಿಕೆಯು ನೆನಪಿರಬೇಕಲ್ಲದೆ, ತನ್ನ ವ್ಯಕ್ತಿತ್ವದ ವಿಚಾರವು ಲೇಶವಾದರೂ ಜ್ಞಾಪಕದಲ್ಲಿರಬಾರದು. ಹೀಗಿರಲು ಕಂಠಪಾಠ ಮಾಡುವ ಆವಶ್ಯಕತೆಯು ಎಷ್ಟಿರಬೇಕೆಂದು ನೀವೇ ನೋಡಿರಿ. ಮಾತುಗಳು ನಾವು ಯಾವಾಗಲೂ ಆಡುವಂತೆ, ಸ್ಪಷ್ಟವಾಗಿರಬೇಕು. ಯಾವ ಅಕ್ಷರವನ್ನು ಹೇಗೆ ಉಚ್ಚರಿಸಬೇಕು, ಯಾವಲ್ಲಿ ನಿಲ್ಲಿಸಬೇಕು, ಎಲ್ಲಿ ಉಚ್ಚ ಸ್ವರದಿಂದ ನುಡಿಯಬೇಕು ಎಂಬುದನ್ನು ತೋರಿಸಬೇಕು. 'ಮಧ್ಯ' ಎನ್ನುವಲ್ಲಿ 'ಮದ್ಯ'ವೆಂದರೆ ಎಷ್ಟು ಅನರ್ಥವಾಗಬಹುದು; ಇಲ್ಲವೆ 'ಕುದುರೆಗೆ ಕೊಂಬು ಇಲ್ಲ, ದನಕ್ಕೆ ನಾಲ್ಕು ಕಾಲು' ಎಂಬಲ್ಲಿ, ಮಧ್ಯವಿರಾಮವನ್ನು 'ಇಲ್ಲ' ಎಂಬುದರ ಬಳಿಕ ಇರಿಸುವ ಬದಲು ಅದರ ಪೂರ್ವದಲ್ಲಿ ತಂದರೆ ಎಷ್ಟು ಅನರ್ಥವಾಗಬಹುದು. 'ಅವನು ಹೋಗುವನೇ?' ಎಂಬ ಒಂದೇ ಮಾತಿನಲ್ಲಿ 'ಅವನು' ಎಂಬುದನ್ನು ಉಚ್ಚ ಸ್ವರದಲ್ಲಿ ನುಡಿದರೆ ಒಂದು ರೀತಿಯ 'ಗದರಿಸುವಿಕೆ'ಯೂ, ಎರಡನೇ ಪದವನ್ನು ಒತ್ತಿಹೇಳಿದರೆ 'ಸಂಶಯ'ವೂ ತೋರುವುದು. ಇನ್ನು ನಾವು ಮಾತನಾಡುವಾಗ ಗಡಿಬಿಡಿಯಿಂದ ಇರಲೂ ಬಾರದು. ಹಾಗೆ ತಲೆಕೆಡಿಸಿಕೊಂಡು ಕೆಲವರು, 'ದೇವ ಲೋಕವು ಹೊಗಳಿದರೆ ನಾಯಿ ಕೆಡುವುದೇ' ಎನ್ನುವರು. ಹೀಗೆ, ಮಾತನಾಡುವಾಗ ಯಾವ ರೀತಿಯ ಅಸಂಬದ್ಧಕ್ಕೂ ಎಡೆಗೊಡಬಾರದು. ಮಾತನಾಡುವಾಗ ನಾವು ಮುಂದೆ ಆಡತಕ್ಕ ಮಾತನ್ನು ಮೊದಲೇ 'ಅಡ್ವಾನ್ಸು' (ಸಂಚಕಾರಕೊಟ್ಟಂತೆ) ಆಡಬಾರದು. ಉದಾ:—

೧ ಪತಿ:- ನೀನು ಪತಿವ್ರತೆಯಷ್ಟೇ?
೨ ಸತಿ:- ಅಹುದು.
೩ ಪತಿ:- ನನಗೆ ದ್ರೋಹವನ್ನು ಬಗೆಯುವುದಿಲ್ಲವಷ್ಟೇ?
೪ ಸತಿ:- ಇಲ್ಲ.

ಈ ಪ್ರಶ್ನಮಾಲೆಯಲ್ಲಿ ೧ನೇ ಮಾತಿಗೆ ೨ನ್ನು ಉತ್ತರವಾಗಿ ಕೊಡುವ ಬದಲು ೪ನ್ನು ಕೊಡುವುದರಿಂದಾಗುವ ಅನರ್ಥವನ್ನು ಊಹಿಸಿರಿ. ಇನ್ನೂ ಕೆಲವರು, ತಮ್ಮ ಪಾಲಿಗೆ 'ಇಂತಿಷ್ಟು' ಮಾತುಗಳಿವೆ ಎಂಬ ಲಕ್ಷ್ಯವನ್ನಿರಿಸಿ ಕ್ರಮವಾಗಿ ಒಂದರ ಬಳಿಕ ಒಂದನ್ನು ಆಡುತ್ತಬರುವರು. ತಮ್ಮ ಎದುರಾಳಿಯು ಒಂದು ಮಾತನ್ನು ತಪ್ಪಿದರೂ ಇವರು ಅವನ ಮಾತಿಗೆ ಉತ್ತರಕೊಡುವುದರ ಬದಲು ತಮ್ಮ ಲೆಕ್ಕಾಚಾರವನ್ನು ಒಪ್ಪಿಸುವರು. ಉದಾ:- ಹಿಂದಿನ ಮಾತಿನಲ್ಲಿ 'ಸತಿ'ಗೆ ಎರಡು ಮಾತುಗಳಿರುವವು ೧ನೇದು 'ಅಹುದು' ೨ನೇದು 'ಇಲ್ಲ'ವೆಂದು. ಪತಿಯು ತನ್ನ ಮೊದಲನೇ ಮಾತನ್ನು ಕೇಳುವುದಕ್ಕೆ ಮರೆತು ೩ನೇ ಪ್ರಶ್ನೆಯನ್ನು ಕೇಳಿದರೆ, ಸತಿಯು ೧ನೇ ಉತ್ತರವನ್ನು ಕೊಟ್ಟರೆ ಹೇಗೆ ಸಮಂಜಸವಾದೀತು.

ಇನ್ನು ಮಾತನಾಡುವುದರಲ್ಲಿ ತಾನಾಗಲೀ, ತನ್ನ ಎದುರಾಳಿಯಾಗಲೀ ತಪ್ಪಿ ನಾಟಕದ ಪ್ರಸಂಗ ಕಲ್ಪನೆಗೆ ಬಾಧೆ ಬರುವಂತಿದ್ದರೆ ಜಾಣನಾದ ನಟನು ಉಪಾಯಾಂತರವನ್ನು ಕಲ್ಪಿಸಿ ಪ್ರಸಂಗವನ್ನು ಕಲ್ಪಿಸುವನು.

[ಮುಂದರಿಯುವುದು]

ಕನ್ನಡಿಗರ ಬಗ್ಗೆ ಸ್ಪೇಶಲ್ ವ್ಯವಸ್ಥೆ !!

ತ್ವರೆ ಮಾಡಿರಿ ! ತ್ವರೆ ಮಾಡಿರಿ

ಮೋಟಾರ ಡ್ರಾಯ್ವಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರಜು ತಕ್ಕಂಗಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡಿರುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡಿ ಬ್ರಿಟಿಷ ಹಿಂದುಸ್ಥಾನದ ಸರ್ಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಬಗ್ಗೆ ಪೂರ್ಣಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೭೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮಾ ಅಥವಾ ಪತ್ರದ್ವಾರ.

ಪತ್ತಾ.—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೭೨ ಬುಧವಾರ ಪೇಠ ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ ‘ಬಲವಂತ ಗುಟಿಕೆ’ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ವಗೈರೆ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವೈಯ್ಯಾರಿ ಮ.ಗಂಡು ಯು ಎಲ್ಲಾ ತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಖರೇ ಯೋಗ್ಯತೆಯು ಸೇವಿಸಿ ನೋಡಿದರೆ ತಾನೇತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೨-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಕ್ರೇತ:—

ಎಸ್ ಬಿ ಕವನ್ ಮತ್ತು ಸನ್ಸ್.

ಮು. ಪೋಸ್ಟ ನಿಪ್ಪಾಣಿ (ಜಿ ಬೆಳಗಾಂವ)

೧,೪೨,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳ ಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳಿಸುತ್ತೇವೆ. ಮಹಾಜನರೆಲ್ಲರೂ ಒಕ್ಕಟ್ಟಾಗಿ ಸಂಕಲ್ಪ ಮಾಡಿದರೆ ತಾನೇ ಈ ಹಣವನ್ನು ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯದೇಶದ ಕೈಗಾರಿಕೆಗಳಿಗೆ ಉಪಕಾರವಮಾಡಿ ಸ್ವದೇಶದ ಕೈಗಾರಿಕೆಗಳಿಗೆ ಅಪಕಾರ ಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳನು. ಮೈಸೂರು ಗವರ್ನಮೆಂಟ ಸೋಪ ಫ್ಯಾಕ್ಟರಿಯಲ್ಲಿ ಸರ್ವಗ್ರಾಹ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರು ಮಾಡುತ್ತಾರೆ. ನಾವು ತಯಾರು ಮಾಡುವ ಶ್ರೀಗಂಧ ಪರಿಮಳವುಳ್ಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆ ಮಾಡಿನೋಡಿರಿ. ತಮಗ ನಮ್ಮ ಸಾಬೂನುಗಳು ಸಿಗಲಸಾಧ್ಯವಾದಲ್ಲಿ ದಯವಿಟ್ಟು ನಮಗೆ ಪತ್ರವೊಂದನ್ನು ಬರೆದರೆ ತಾವು ಇಚ್ಛೆಪಡುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿ ಕೊಡುತ್ತೇವೆ.

ಗೌರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

ರ ನಂ. ಬಿ. ೧೯೪೭ ವಾ. ಚಂದಾ ೧—೧೩—೦ ಮಾತ್ರ

(ಇದು ಶ್ರೀ ಕನ್ನಡ ನವಜೀವನವು ಸಮಾವಿಷ್ಟವಾಗಿ.)

ಸಂಪಾದಕರು— ಮುಂಗಳ ಶ್ರೀ ರಾಜೇರಾಯರ ಮುಕ್ಕಳಾಚ ಶ್ರೀನಿವಾಸರಾಯರು.

ವರ್ಷ ೨ | ಬಾಗಲಕೋಟೆ [illegible] ಮಿತಿ ಮಾರ್ಗಶಿರ ಬಹುಳ ೧೨ ಶಕೆ ೧೮೪೮ ಶಾ|| ೩೧ ೧೨-೧೯೨೬. | ಸಂಚಿಕೆ ೩೮

ಸಂಪಾದಕರ ಭೂಮಿ.

(ಓಂ)

ನನ್ನ ಮನಸಿನ ಮೋಣಮಾಡಿ ಕಟ್ಟುವೆನಾನು ।
ನಿನ್ನ ಚಿಂತನವ ಮಾಡಿದಂಥ ಮಕ್ಕಳ ದೊಡ್ಡ।
ಚಿನ್ನದಾದರು ಚೆನ್ನ ಮೋಣಹಸ್ತಿಯ ನೊಂದು ಚಿನ್ಮಯಾಕಾಶದಲ್ಲಿ॥
ನನ್ನ ದೇಹವು ನಿನ್ನ ಪೀಠಶಾಸನಕಾಗಿ ।
ತನ್ನನ್ನು ಕಲ್ಲಾಗಿ ನಿಲ್ಲಿಸಲು ಸಿದ್ಧವಿದೆ ।
ನನ್ನ ಪ್ರಾಣವು ನಿನ್ನ ಗಂಧವನು ಬೀರಬಹ ಗಂಧವಹವೆಂದು ತಿಳಿಯೋ

— ಅಂಬಿಕಾ ತನಯ ದತ್ತ

ಸ್ವಾಮೀ ಶ್ರದ್ಧಾನಂದಜಿಯವರು ಮಡಿಗೆಲಸಕ್ಕಾಗಿ ತಮ್ಮ ಪ್ರಾಣವನ್ನರ್ಪಿಸಿದರು. ಸ್ವಧರ್ಮಾನಭಿಜ್ಞನೂ ಪರಧರ್ಮಾಸಹಿಷ್ಣುವೂ ಆದ ಅಬ್ದುಲ್ ರಶೀದನೆಂಬ ಮುಸಲ್ಮಾನನು ಮೊನ್ನೆ ದಿಲ್ಲಿಯಲ್ಲಿ ಅನಾರೋಗ್ಯದಿಂದ ಎದ್ದು ಕುಳಿತ ಅವರನ್ನು ಗುಂಡು ಹಾಕಿ ಕೊಂದು ಬಿಟ್ಟನು. ಸ್ವಾಮೀ ಶ್ರದ್ಧಾನಂದಜಿಯವರು ಶುದ್ಧೀ ಚಟುವಟಿಕೆಯಲ್ಲಿ ಅಗ್ರೇಸರತ್ವವನ್ನು ವಹಿಸಿದವರು. ಇವರನ್ನು ಕೊಂದು ಬಿಟ್ಟರೆ, ಶುದ್ಧೀ ಚಟುವಟಿಕೆಯೇ ನಿಂತು ಹೋಗುವದೆಂದು ಆ ಬಡ ಮುಸಲ್ಮಾನನ ಎಣಿಕೆ. ಈ ಜಗತ್ತಿನ ಹಂಬಲವನ್ನು ತೊರೆದು, ಪರಲೋಕದ ಸಾಧನವನ್ನು ಮಾಡತೊಡಗಿದ ಸ್ವಾಮಿಯವರಲ್ಲಿ ದ್ವೇಷದ ವಿಷವಿಲ್ಲವೆಂಬ ಮಾತು ಆ ತಿರುಕನ ಮನಸಿಗೆ ಹೇಗೆ ಹೊಳೆಯಬೇಕು. ಧರ್ಮದ ಹೆಸರಿನಿಂದ ಅಧರ್ಮದ ಕೆಲಸವನ್ನು ಮಾಡುವ ಕಾಳರಕ್ಕಸರ ಕೊಲೆಗೆ ಪ್ರಾಯಶ್ಚಿತ್ತವೇ ಇಲ್ಲ. ಇನ್ನು ಈ ತೆರದ ನಿರ್ಘೃಣತನದ ಕೃತಿಯಿಂದ ಮುಸಲ್ಮಾನೀ ಧರ್ಮದ ಉದ್ಧೃತಿಯಾಗುವ ಆಶೆಯಾದರೂ ಇರುವದೋ ? ಶ್ರದ್ಧಾನಂದಜಿಯವರ ಕೊಲೆಯಿಂದ ಆ ನಂತ ಜೀವಗಳು ಸಾತ್ವಿಕ ಭಾವಪ್ರೇರಿತರಾಗಿ ಚೈತನ್ಯಗೊಂಡು ಅವರ ಕಾರ್ಯವನ್ನು ಕೊನೆಗಾಣಿಸಲು ಅಹಮಹಮಿಕೆಯಿಂದ ಮುಂದೊರೆಯುವವು. ಅವರ ಪಾವಿತ್ರ್ಯದ ಕುಡಿಯು ಜಡಾಂತರಾತ್ಮನಾದವನಲ್ಲಿಯೂ ಕಿಡಿಯನ್ನು ಹೊತ್ತಿಸುವದು. ಈ ನೃಶಂಸನು ಗೂಢವಾಗಿರುವ ಅಂತಃಶಕ್ತಿಯನ್ನು ಎಬ್ಬಿಸಿ, ಬಿಟ್ಟುಗೊಡಿಸಿ, ತನ್ನ ಧರ್ಮಕ್ಕೆ ಅಹಿತವನ್ನೇ ಬಗೆದನೆಂದು ಹೇಳಬಹುದು. ಸ್ವಾಮೀ ಶ್ರದ್ಧಾನಂದಜಿಯವರ ಜೀವನಚರಿತವನ್ನು ಪರಾಮರ್ಶಿಸಿದರೆ ಅವರ ಶ್ರೇಷ್ಠತ್ವವು ತಾನಾಗಿಯೇ ಹೊಳೆದು ಕಾಣುವದು. ಇವರು ಪಂಜಾಬದಲ್ಲಿ ಜಲಂಧರ ಜಿಲ್ಲೆಯಲ್ಲಿ ಹುಟ್ಟಿ ಕಾಶಿಯಲ್ಲಿ [illegible]ಜ್ಞಾನೆಯನ್ನು ಮಾಡಿದರು. ಮುಂದೆ ತಮ್ಮ ಜಿಲ್ಲೆಗೆ ಬಂದು ೧೬ ವರ್ಷ ವಕೀಲ ವ್ಯವಸಾಯವನ್ನೂ ನಡಿಸಿದರು. ಸ್ವಾಮೀ ದಯಾನಂದರವರ ಪರಿಚಯವು ಇವರಿಗಾಗಿ ಇವರು ಆವರಿಂದ ಸ್ಥಾಪಿತವಾದ ಆರ್ಯ ಸಮಾಜಕ್ಕೆ ಸೇರಿದರು. ವಕೀಲಿ ವ್ಯವಸಾಯದಿಂದ ಆತ್ಯಂತಿಕ ಹಿತವಿಲ್ಲವೆಂಬ ಮಾತನ್ನು ಮನಗಂಡು ಇವರು ಆ ವೃತ್ತಿಯನ್ನು ಬಿಟ್ಟುಕೊಟ್ಟು ಗಂಗಾನದಿಯ ತೀರದಲ್ಲಿಯ ಹರಿದ್ವಾರದಲ್ಲಿ ಗುರುಕುಲವನ್ನು ಸ್ಥಾಪಿಸಿದರು. ೨೫ ವರ್ಷಗಳ ವರೆಗೆ ಪ್ರತಿಯೊಬ್ಬನು ಅವಿವಾಹಿತನಾಗಿ ಉಳಿದು, ತನ್ನ ಅಭ್ಯಾಸವನ್ನು ಚನ್ನಾಗಿ ಮಾಡಿಕೊಂಡು ಗೃಹಸ್ಥಾಶ್ರಮಿಯಾಗಬೇಕೆಂಬುದೇ ಆ ಗುರುಕುಲದ ಉದ್ದೇಶ. ಅವರು ಮೊದಲು ತಮ್ಮ ಇಬ್ಬರು ಮಕ್ಕಳನ್ನೂ ಗುರುಕುಲದಲ್ಲಿಯೇ ಸೇರಿಸಿಕೊಂಡು, 'ನುಡಿಯಂತೆ ನಡೆ'ಯುವವರೆಂಬುದನ್ನು ಜನರ ನಿದರ್ಶನಕ್ಕೆ ತಂದುಕೊಟ್ಟರು. ಅವರು ಆಮೇಲೆ ಸನ್ಯಾಸಾಶ್ರಮವನ್ನು ಕೈಕೊಂಡು, ಸಂಕುಚಿತ ಭಾವವನ್ನು ತೊರೆದು, 'ವಸುಧೈವ ಕುಟುಂಬಕ' ವೃತ್ತಿಯನ್ನು ಸ್ವೀಕರಿಸಿದರು. ೧೯೧೯ರ ವರೆಗೆ ಅವರು [illegible] ಪಟಾಂಗಣದಲ್ಲಿ ಬಂದಿದ್ದಿಲ್ಲ. ಮ. ಗಾಂಧಿಯವರ ಸತ್ಯಾಗ್ರಹ ಚಟುವಟಿಕೆಯು ವಿಶ್ವೋಪಕಾರಕವೆಂದು ಕಂಡುಬಂದ ಕೂಡಲೆ ಅದರಲ್ಲಿ ಅವರು ಸೇರಿದರು. 'ಜನಸೇವೆ' 'ಸಮಾಜ ಹಿತ' ಇವೇ ನನ್ನ ಜೀವನದ ಧ್ಯೇಯವೆಂದು ಅವರು ಸಾರಿ ಹೇಳಿದರು. ನಾನು ಹಿಂದುವೂ ಅಲ್ಲ; ಮುಸಲ್ಮಾನನೂ ಅಲ್ಲ; ಕ್ರಿಶ್ಚನ್ನನೂ ಅಲ್ಲ; ಯಹುದನೂ ಅಲ್ಲ. 'ನಾನು ಎಲ್ಲ ಜಾತಿಯವನು ಎಂದು ಅವರು ಅಮೃತಸರದಲ್ಲಿ ನುಡಿದರು. ಗುಲಾಮರ ದಂಡನ್ನು ತಯಾರ ಮಾಡುವ ಶಿಕ್ಷಣ ಸಂಸ್ಥೆಗಳಿಗೆ ಮಣ್ಣುಕೊಟ್ಟು, ವೀರ ಮಣಿಗಳನ್ನು ಹುಟ್ಟಿಸುವ ಸಂಸ್ಥೆಗಳನ್ನು ಸ್ಥಾಪಿಸುವದು- ಅಸ್ಪೃಶ್ಯತೆಯನ್ನು ಬೇರು ಸಹಿತ ಕಿತ್ತೊಗೆಯುವದು- ಇವೆರಡು ಅವರಿಗೆ ಸಪ್ರಿಯವಾದ ಕೆಲಸಗಳು. ಸ್ವರಾಜ್ಯವು ದೊರೆಯಬೇಕಾದರೆ, ಇವೆರಡು ಸಾಧ್ಯವಾಗಲಿಕ್ಕೆ ಬೇಕೆಂದು ಅವರ ನಂಬುಗೆ. ಆದ್ದರಿಂದ 'ಶುದ್ಧಿ'ಯ ಚಟುವಟಿಕೆಯನ್ನು ಪ್ರಾರಂಭಿಸಿದರು. ಅದಕ್ಕಾಗಿಯೇ ಅವರಿಗೆ [illegible] ಕೊಡಬೇಕಾಯಿತು. ಅವರು ಹೋದರೂ, ಅವರ ಕಾರ್ಯವನ್ನು ಪೂರೈಸುವದು ಹಿಂದುಗಳ ಕರ್ತವ್ಯ. [illegible]- ತೊಡುಪುಗಳಲ್ಲಿಯೂ, ಊಟ ಉಡಿಗೆಗಳಲ್ಲಿಯೂ, ಸ್ನಾನ ಪಾನಗಳ [illegible] ಪಾಶ್ಚಾತ್ಯರ ಅನುಕರಣ ಮಾಡಬೇಡಿರಿ. [illegible]ದ ವಿಲಾಸದಲ್ಲಿ ನಿಮ್ಮ ಆಯುಷ್ಯವನ್ನು ಕಳೆಯಬೇಡಿರಿ, ಅಂದರೆ

ಭಿನ್ನವಾದ ರಾಷ್ಟ್ರವು ಒಂದಾಗುವುದು. ಇದೇ ನಿಜವಾದ ರಾಷ್ಟ್ರೀಯ ಶಿಕ್ಷಣ. ಇದರಲ್ಲಿಯೇ ನಮ್ಮ ಜಯದ ದಾರಿಯಿರುವುದು.” ಮೇಲಿನ ವಾಕ್ಯಗಳಿಂದ ಹಿಂದುಗಳ ಕರ್ತವ್ಯವು ಸ್ಪಷ್ಟವಾಗಿರುವುದು. ದ್ವೇಷಾಸೂಯೆಗಳನ್ನು ಹಿಂದುಗಳು ಮೆಟ್ಟಿ ತುಳಿದು, ರಾಷ್ಟ್ರವು ಒಂದಾಗುವ ಉದ್ಯೋಗಕ್ಕೆ ತೊಡಗಬೇಕು.

ಶ್ರೀ ಚನ್ನಮಲ್ಲಪ್ಪ ನಿಡಗುಂದಿ ಇವರ ನಿಧನದಿಂದ ಇಲ್ಲಿಯ ಲಿಂಗಾಯತ ಸಮಾಜಕ್ಕೆ ಬಹಳ ಹಾನಿತಟ್ಟಿದಂತಾಯಿತೆಂದು ಹೇಳಲು ಪ್ರತ್ಯವಾಯವಿಲ್ಲ. ಇವರ ಕಾಲದಲ್ಲಿ ಬಾಗಲಕೋಟೆಗೊಂದು ನಾಟಕಗೃಹವು ನಿರ್ಮಿತವಾಯಿತು. ನಾಲ್ಕೈದು ವರ್ಷಗಳ ಕೆಳಗೆ ಬಂದ ಬರಗಾಲದಲ್ಲಿ ಇವರು ನಿರಾಶ್ರಿತರಾದ ಮತ್ತು ಉಪವಾಸ ಸಾಯುವ ಜನರಿಗೆ ಆಶ್ರಯಕೊಟ್ಟು, ಊಟಹಾಕಿ ಅವರನ್ನು ಪೋಷಿಸಿದರು. ಹನ್ನೆರಡೂ ತಿಂಗಳ ಜನರಿಗೆ ನೀರು ಸಿಗುವಂತೆ ಅರವಟ್ಟಿಗೆಯನ್ನು ಇವರು ಇಟ್ಟಿದ್ದರು. ಮುಂದೆ ಅದು ಹಾಗೆಯೇ ನಡೆಯಬೇಕೆಂದು ಮೂರು ಸಾವಿರ ಬೆಲೆಬಾಳುವ ಒಂದು ಹೊಲವನ್ನು ಕೊಟ್ಟು ವ್ಯವಸ್ಥೆಮಾಡಿದ್ದಾರೆ. ಇವರು ತಮ್ಮ ಮೃತ್ಯುಪತ್ರದಲ್ಲಿ ಬಸವೇಶ್ವರ ಶಾಲೆಯ ಕಟ್ಟಡಕ್ಕಾಗಿ ೫೦೦೦ ರೂ ಕೊಡಬೇಕೆಂದೂ, ತಮ್ಮ ನಾಟಕಗೃಹದ (ನಿಡಗುಂದಿ ಥಿಯೇಟರ) ವಾರ್ಷಿಕ ಉತ್ಪನ್ನವನ್ನು ಸಜ್ಜನ ವಿದ್ಯಾರ್ಥಿಗಳಿಗೆ ವಿದ್ಯಾವೃತ್ತಿಯನ್ನು ಕೊಡಲು ಉಪಯೋಗಿಸಬೇಕೆಂದೂ ಬರೆದಿಟ್ಟಿರುವರೆಂದು ವಾರ್ತೆಯಿದೆ. ಇವರು ಒಳ್ಳೆಯವರೆಂದು ಹೆಸರಾದವರು. ಇವರ ಆತ್ಮಕ್ಕೆ ದೇವರು ಶಾಂತಿಯನ್ನು ನೀಡಲಿ.

ರಂಗಭೂಮಿಯ ಸಲುವಾಗಿ ಮತ್ತೊಂದೆಡೆಯಲ್ಲಿ ಒಂದು ಬರಹವು ಮುದ್ರಿತವಾಗಿದೆ. ರಂಗದೇವಿಯ ಸೇವೆಮಾಡಲು ಇಚ್ಛಿಸುವವರು ತಮ್ಮ ತಮ್ಮ ಹೆಸರುಗಳನ್ನು ‘ಕನ್ನಡಿಗ’ನಿಗೆ ಕಳುಹಿಸಿಕೊಡಬೇಕೆಂದು ಲೇಖಕರು ಕೇಳಿಕೊಂಡಿದ್ದಾರೆ. ‘ನಂದಾನಿಲ’ ‘ಛಾಯಾದೇವಿ’ ‘ಕೌಶಿಕ’ ಮೊದಲಾದ ರಂಗಹಿತೇಚ್ಛುಗಳು ತಮ್ಮ ತಮ್ಮ ಸಹಾಯಸಂಪತ್ತನ್ನು ಒದಗಿಸಿಕೊಡಲು ಸಿದ್ಧರಿರುವರೋ?

ಸ್ವಾಗತಾಧ್ಯಕ್ಷರಾದ ಫೂಕನ್ನರವರ ಭಾಷಣದ ಸಾರಾಂಶ.

“ಮುಕ್ತಿ ರಾಷ್ಟ್ರಕ್ಕೆ ಮಾರ್ಗದರ್ಶಕರಾಗಿರಿ”

ಮಹಾತ್ಮರಿಗೆ ಸ್ವಾಗತಾಧ್ಯಕ್ಷರ ಬಿನ್ನಹ-

“ಬಂಧು ಬಂಧುಗಳಲ್ಲಿ ಕಲಹ ಬೇಡ”

ಆಸಾಮಪ್ರಾಂತವು ನಿಸರ್ಗದೇವಿಯ ನಂದನವನವು. ಭೂತಾನ್ಯ ಖಾಸಿಯಾ, ನಾಗಾ, ಗಾರೊ ಮೊದಲಾದ ಶ್ರೀಪರ್ವತಗಳಿಂದಲೂ, ಸೌಂದರ್ಯಲಕ್ಷ್ಮಿಗೆ ದರ್ಪಣದಂತಿರುವ ಸ್ಫಟಿಕನಿರ್ಮಲವಾದ ಜಲಪ್ರವಾಹಗಳಿಂದಲೂ, ಮಧ್ಯದಲ್ಲಿ ಮೇಖಲೆಯಂತಿರುವ ಗಂಭೀರವಾಹಿನಿಯಾದ ಬ್ರಹ್ಮಪುತ್ರೆಯಿಂದಲೂ, ವಿಸ್ತೀರ್ಣವಾದ ಕೈಟುಗಳಿಂದಲೂ, ಮನೋಹರವಾದ ಕೊಳ್ಳಗಳಿಂದಲೂ, ಆಸಾಮವು ರಮ್ಯವಾಗಿ ದೇವಭೂಮಿಯಂತಿರುವುದು. ಸೃಷ್ಟಿವೈಭವಕ್ಕೆ ಹೆಸರಾಗಿದ್ದಂತೆ, ಆಸಾಮವು ಐತಿಹಾಸಿಕ ದೃಷ್ಟಿಯಿಂದಲೂ ವೈಭವಶಾಲಿಯಾದುದು ಇರುತ್ತದೆ. ಇದಕ್ಕೆ ಸಂಸ್ಕೃತಿ ಭುವನ, ಪರಾಕ್ರಮೈಕಭೂಮಿ, ಶಾಸ್ತ್ರೀಯ ಶೋಧಗಳ ವೀಡು ಎಂದರೆ ಚೆನ್ನಾಗಿ ಸಲ್ಲುವುದು. ವನವಾಸಕ್ಕೆ ಬಂದಾಗ ಪಾಂಡವರು ಕಟ್ಟಿಸಿದ ಪಾಂಡುನಾಥ ದೇವಾಲಯವೂ, ಕಾಮಾಕ್ಷಿದೇವಿಯ ಗುಡಿಯನ್ನೊಳಗೊಂಡ ನೀಲಾಚಲ ಪರ್ವತವೂ ಇನ್ನೂ ಆಸಾಮದಲ್ಲಿವೆ. ನರಕಾಸುರನು ಆಳಿದ ರಾಜ್ಯವು ಇದೇ. ಕೌರವರ ಪಕ್ಷಪಾತಿಯಾದ ಭಗದತ್ತನು ಇದ್ದ ರಾಜ್ಯವಾದರೂ ಇದೇ. ಇಲ್ಲಿಯೇ ವಸಿಷ್ಠ, ಗಾಲವ, ಕಾಶ್ಯಪ ಮೊದಲಾದ ಋಷಿಗಳು ಅನನ್ಯ ಮನಸ್ಕರಾಗಿ ತಪಶ್ಚರಣವನ್ನು ಮಾಡಿದರು. ಈ ಪ್ರಾಚೀನ ಕಾಮರೂಪ ದೇಶದ ಹಿಂದಿನ ಸಂಸ್ಕೃತಿಯು ಮುಂದುವರಿದಾಗಿತ್ತು. ಕಾಮರೂಪದ ಕುಮಾರ ಭಾಸ್ಕರವರ್ಮನು ಹುವೆನತ್ಸಾಂಗನನ್ನು ಕರೆದುಕೊಂಡು ಹರ್ಷವರ್ಧನನಲ್ಲಿ ಪ್ರತಿನಿಧಿ ಕಾರ್ಯಕ್ಕಾಗಿ ಹೋದದ್ದು ಇತಿಹಾಸಪ್ರಸಿದ್ಧ. ಬಂಗಾಳದ ಬನ ದೊಡ್ಡ ಸೈನ್ಯವನ್ನು ಲಚಿತಬರಫೂಕನ್ನರವರು ಸೋಲಿಸಿದ್ದು ಇಲ್ಲಿಯೇ. ಗೋಹತಿ ಪಟ್ಟಣವು ನರಕಾಸುರನ ರಾಜಧಾನಿಯಾದ ಪ್ರಾಗ್ಜ್ಯೋತಿಷಪುರವು. ಉದಾರವಾದ ಮತ್ತು ವಿಶಾಲವಾದ ಹಿಂದೂ ಧರ್ಮವನ್ನು ಕಾಣಬೇಕಾದರೆ, ಆಸಾಮಕ್ಕೇ ಬರಬೇಕಾಗುವುದು. ಶಂಕರ ಮಾಧವರ ಉಪದೇಶ ಭೂಮಿಯೇ ಇದು. ಸಾಹಿತ್ಯ ದೃಷ್ಟಿಯಿಂದಲೂ ಆಸಾಮವು ಮುಂದರಿದಿದೆ. ಇದರಲ್ಲಿಯ ಸಾಹಿತ್ಯವು ಜಗತ್ತಿನಲ್ಲಿಯ ಉತ್ಕೃಷ್ಟ ಸಾಹಿತ್ಯದೊಡನೆ ಸ್ಥಾನ ಹೊಂದಲು ಯೋಗ್ಯವಾದುದಿರುತ್ತದೆ. ಶಿಲ್ಪಕಲೆಯಲ್ಲಿಯೂ ಆಸಾಮವು ಅಗ್ರಸ್ಥಾನವನ್ನು ಪಡೆಯಬಹುದು. ಎಲ್ಲಿ ನೋಡಿದರೂ ಸುಂದರವಾದ ದೇವಾಲಯಗಳೂ ಭವ್ಯವಾದ ಮೂರ್ತಿಗಳೂ ಪ್ರಾಚೀನ ಕೌಶಲ್ಯದ್ಯೋತಕವಾದ ಕೆತ್ತಿಗೆಯ ಕೆಲಸಗಳೂ ಕಂಗೊಳಿಸುವವು. ಮುಸಲ್ಮಾನರಿಗಾದರೂ ಆಸಾಮವು ಪವಿತ್ರ ಸ್ಥಾನವು. ಹಾಜೋ ಎಂಬಲ್ಲಿ ಪಾವ ಮಕ್ಕಾ ಇರುವುದು. ಇಲ್ಲಿ ಹಿಂದು ಮುಸಲ್ಮಾನರು ಹಿಂದಿನಿಂದ ಪ್ರೇಮದಿಂದ ಇರುತ್ತಿರುವರು. ಈಗಾದರೂ ಇರುವರು.

ನೂಲುವುದು ನೇಯುವುದು

“ನೂಲುವುದು ಮತ್ತು ನೇಯುವುದು ಇವೆರಡು ಅನಾದಿಯಿಂದ ಇಲ್ಲಿಯ ಮನೆತನಗಳಲ್ಲಿ ನಡೆದು ಬಂದ ವ್ಯವಸಾಯಗಳು. ಹಿಂದಕ್ಕೆ ಆಸಾಮದ ಜನರು ಈ ಕೆಲಸಗಳನ್ನು ಸುಲಭಸಾಧ್ಯವಾಗಿ ಮಾಡಿಬಿಟ್ಟಿದ್ದರು. ಆದರಂತೆಯೇ ಈಗ ವಿಚಾರಮಾಡಿದರೆ ‘ಪರದೇಶೀವಸ್ತ್ರದ ಬಹಿಷ್ಕಾರ’ದ ಗೊಡವೆಗೆ ಹೋಗುವ ಕಾರಣವೇ ಬೀಳುವದಿಲ್ಲ. ಎಲ್ಲಸ್ಥಾನಗಳಲ್ಲಿಯೂ ‘ನೂಲೋಣ ನೇಯೋಣ’ಗಳು ಪ್ರಚಾರದಲ್ಲಿ ಬರಬೇಕಾದರೆ ಖಾದಿಯನ್ನು ಹುಟ್ಟಿಸಬೇಕು. ನೂಲುವುದು ಜೀವಂತ ಸಂಸ್ಥೆಯಾಗಬೇಕು. ಮೊದಲು ಆಸಾಮದಲ್ಲಿ ಈ ಸ್ಥಿತಿಇದ್ದಿತು ನೂಲುವುದು ಈಗ ಅಷ್ಟೇ ಕಂಡುಬರದಿದ್ದರೂ. ನೇಯುವ ಕೆಲಸವನ್ನು ಮಾತ್ರ ಎಲ್ಲಕಡೆಯಲ್ಲಿಯೂ ಕಾಣಬಹುದು. ನೇಯುವ ಕಲೆಯಲ್ಲಿ ಆಸಾಮದ ಸ್ತ್ರೀಯರು ಅನ್ಯಾದೃಶರಿರುವರು ಆದ್ದರಿಂದಲೇ ಮಹಾತ್ಮರು “ಆಸಾಮದ ಹೆಂಗಳೆಯರು ಅರಿವೆಗಳಲ್ಲಿ ಭಾವದ ಬೆಡಗನ್ನೇ ಹೆಣೆಯುವರೆಂದು ಅವರನ್ನು ಹೊಗಳಿದ್ದಾರೆ ಆದ್ದರಿಂದ ಆಸಾಮದಲ್ಲಿ ಖಾದಿಯ ಬಗ್ಗೆ ಪ್ರಚಾರಮಾಡುವ ಕಾರಣವಿಲ್ಲ.” ಜಾಲಿಯನವಾಲಾಬಾಗದ ಬೆಳಕು ಇನ್ನೂ ಹೆಚ್ಚುತ್ತಲಿದೆ. ದೇವಭಾವದ ಚಿಕ್ಕ ಚಿಕ್ಕ ಮಕ್ಕಳ ರಕ್ತದ ಹನಿಗಳು ಇನ್ನೂ ಬಾಗದ ಗೋಡೆಗಳಮೇಲೆ ಆರದೆ ಹಸಿಯಾಗಿವೆ. ಇಂಥ ಕಾಲದಲ್ಲಿ ಸಹಕಾರವು ಶಕ್ಯವಿಲ್ಲ

ಈಗಿನ ಶಾಸನ ಪದ್ಧತಿಯು ಸಮೂಲ ನಷ್ಟವಾಗಬೇಕು. ಇಲ್ಲದಿದ್ದರೆ ಅದರಲ್ಲಿ ಸ್ವರೂಪತಃ ಬದಲಾಗಬೇಕು. ಅಂದರೆ ಸಹಕಾರವು ಶಕ್ಯವಾಗುವುದು. ಎಂದು ನನ್ನ ಮತ. ಎಲ್ಲವನ್ನೂ ಕಾಂಗ್ರೆಸ್ಸು ನಿರ್ಣಯಿಸಬೇಕಾಗಿ ಬೇಡಿಕೆ.

ನಮ್ಮ ಮುಂದೆ ಒಳ್ಳೇ ಬಿಕ್ಕಟ್ಟಿನ ಪ್ರಶ್ನವಿದೆ. ದಾಸ್ಯ ಅಥವಾ ಸ್ವಾತಂತ್ರ್ಯ, ಸಹಕಾರ ಅಥವಾ ಅಸಹಕಾರ, ಸ್ವಾವಲಂಬನ ಇಲ್ಲವೆ ಪರಾವಲಂಬನ ಇವೆರಡರಲ್ಲಿ ಒಂದನ್ನು ನಮಗೆ ಆರಿಸಬೇಕಾಗಿದೆ. ಹಿಂದುಸ್ತಾನದ ಭವಿತವ್ಯತೆಯೇ ನಿಮ್ಮೆಲ್ಲರ ದೂರದರ್ಶಿತ್ವವನ್ನು ಆಶ್ರಯಿಸಿದೆ. ನೀವೆಲ್ಲರೂ ಒಕ್ಕಟ್ಟಾಗಿ ಕೆಲಸ ಮಾಡುವದನ್ನು ಬಿಟ್ಟು ಪರಸ್ಪರದಲ್ಲಿ ಕಲಹಮಾಡುತ್ತಿರುವಿರಿ, ಇದು ಘಾತಕತನದ ಮಾರ್ಗವು.

ಹಿಂದೂ-ಮುಸಲ್ಮಾನರಲ್ಲಿ ಐಕ್ಯವನ್ನುಂಟುಮಾಡಿ, ಜಾತಿದ್ವೇಷವನ್ನು ಹೊಡೆದೋಡಿಸಬೇಕು. "ಕೂಡಿ ನಡೆಯುವಾ ಕೂಡಿ ಗೆಲ್ಲುವಾ ಕೂಡಿ ಸುಖವನ್ನು ಸೂರೆಮಾಡುವಾ' ಎಂದು ಹಾಡುತ್ತಾ ನಾವು ನಡೆಯಬೇಕು. ಈಗಿನ ಬಿಕ್ಕಟ್ಟಿನ ಸ್ಥಿತಿಯಲ್ಲಿ ನಮಗೆ ದಾರಿತೋರಿಸಲು ಸಾಬರಮತಿಯ ಸಾಧುವೇ ಸಮರ್ಥನು. ಅವನು [illegible], ಆ ಮಹಾತ್ಮನ ಚಿಕ್ಕ ಮೂರ್ತಿಯು ಪ್ರಾರಂಭಿಸಿದ ರೀತಿಯು ಜಗತ್ತಿನಲ್ಲೆಲ್ಲ ಅಹಿಂಸಾತ್ಮಕ ಅಸಹಕಾರದ ಪ್ರಚಂಡ ಶಕ್ತಿಯನ್ನು ಬೆಳೆಯಿಸಿ, ಪಾಶವೀ ಶಕ್ತಿಯನ್ನು-ಸಾಮ್ರಾಜ್ಯ ತತ್ವವನ್ನು-ಕಿತ್ತುಹಾಕಿ, ದುರ್ಬಲರನ್ನು ಬಲಿಷ್ಠರನ್ನಾಗಿ ಮಾಡಿ, ಗುಲಾಮರನ್ನು ಸ್ವಾತಂತ್ರ್ಯಶಾಲಿಗಳನ್ನಾಗಿ ಮಾಡುವುದು. ಇದರಲ್ಲಿ ಸಂದೇಹವಿಲ್ಲ. ಆದ್ದರಿಂದ ನೀವೆಲ್ಲರೂ ದೇಶಕ್ಕೆ ಮಾರ್ಗದರ್ಶಕರಾಗಿರಿ. ಅಸತ್ಯ ಅನ್ಯಾಯಗಳನ್ನು ನಷ್ಟಪಡಿಸಲು ಸಿದ್ಧರಾಗಿರಿ. ದೇಶದ ಸ್ವಾತಂತ್ರ್ಯಕ್ಕಾಗಿ- ಮಾತೃಭೂಮಿಯ ಮೋಚನಕ್ಕಾಗಿ- ಜೀವವಿರುವವರೆಗೆ ಹೋರಾಡುವೆವೆಂದು ಪ್ರತಿಜ್ಞೆಯನ್ನು ತೊಡಿರಿ. ಅಸಹಕಾರವನ್ನು ಚೆನ್ನಾಗಿ ತಿಳಿದು ನೋಡಿರಿ. ಸ್ವಲ್ಪ ಕಾಲದಲ್ಲಿಯೇ ಅದು ಜನರಲ್ಲಿ ಜಾಗೃತಿಯನ್ನುಂಟುಮಾಡಿತು. ಅವರನ್ನು ವೀರಪುರುಷರನ್ನಾಗಿ ಮಾಡಿತು. ಷಂಢರಾದ ಗಂಡಸರನ್ನು ನಿಜವಾದ ಗಂಡಸರನ್ನು ಮಾಡಿತು.

೪ ನೇ ಪುಟದಿಂದ ೬ ನೇ ಪುಟಕ್ಕೆ ಸಾಗಿದ್ದು.

ಜಾಹೀರ ನೋಟೀಸು.

ಯಾವತ್ತು ಜನರಿಗೆ ತಿಳಿಯ ಪಡಿಸುವದೇನಂದರೆ -

೧ ಬೀಳಗಿಯಲ್ಲಿ ಒಂದು ಹೊಸ ೩ ನೇ ಕ್ಲಾಸ ದವಾಖಾನೆ ಕಟ್ಟುವದು.

೨ ಇಂಡಿಯಲ್ಲಿ ತಾಲ್ಲೂಕ ಲೋಕಲ್ ಬೋರ್ಡ ಆಫೀಸ ಕಟ್ಟುವದು ಕ್ಲಾಸ ೩ ನೇದ್ದು.

೩. ಕವಂತಗಿಯಲ್ಲಿ ಒಂದು ಹೊಸ ಶಾಲೆ ಕಟ್ಟುವದು.

ಬಾಜೂಕ್ಕೆ ಬರೆದ ಕಾಮಗಾರಿಗಳನ್ನು ಇದೇ ಚಾಲು ಸಾಲಿನಲ್ಲಿ ಮಾರ್ಚ ೧೯೨೭ ನೇ ವರೆಗಾಗಿ ಮಕ್ತೆಯಿಂದ ಮಾಡಿಸತಕ್ಕದು ಅದೆ. ಯಾರಾದರೂ ಮಕ್ತೆ ಹಿಡಿಯಲಿಚ್ಛಿಸುವವರು. ಇದ್ದರೆ. ತಾರೀಖು ೧೫|೧|೧೯೨೭ ನೇವೊಳಗಾಗಿ ತಾವೇ ಟೆಂಡರಗಳನ್ನು ಅಥವಾ ಅರ್ಜಿಗಳನ್ನು ಮೋಹರಬಂದು ಮಾಡಿ ಮ|| ಪ್ರೆಸಿಡೆಂಟ ಸಾ|| ಡಿ|| ಲೋ|| ಬೋ|| ಜಿ|| ವಿಜಾಪುರ ಇವರಕಡೆಗೆ ಕಳಿಸತಕ್ಕದ್ದು. ಈ ತಾರೀಖಿನನಂತರ ಬಂದ ಟೆಂಡರಗಳನ್ನು ಸ್ವೀಕರಿಸುವದಿಲ್ಲ. ಈ ಕೆಲಸಗಳ ಸಮ್ಮಂಧಿ ವಿಶೇಷ ಮಾಹಿತಿ ಬೇಕಾದಲ್ಲಿ ಡಿ|| ಲೋ|| ಬೋರ್ಡ ಇಂಜನಿಯರ ವಿಜಾಪುರ ಇವರ ಕಚೇರಿಯಲ್ಲಿ ೧೨ ಘಂಟೆಯಿಂದ ೪ ಘಂಟೆಯ ವರೆಗೆ ಸಿಗುವದು. ಕಡಿಮೆದರದ ಟೆಂಡರಗಳನ್ನು ಸ್ವೀಕರಿಸುವದು ಬೋರ್ಡಿನ ಮರ್ಜಿಯಮೇಲೆ ಇರುತ್ತದೆ ತಾ|| ೩೦|೧೨|೧೯೨೬

ವಿಜಾಪುರ
ತಾ|| ೩೦|೧೨|೧೯೨೬

ಎಸ್. ಟಿ. ಪಾಟೀಲ
ಪ್ರೆಸಿಡೆಂಟ ಡಿ|| ಲೋ|| ಬೋ||
ವಿಜಾಪುರ.

ಲಿವರಿನ ಗಡಿಯಾರಗಳು.

ಲಿವರಿನ ಕೈ ಗಡಿಯಾರ ರೂ. ೯.

ಲಿವರಿನ ಕಿಸೆಯೊಳಗಿಡುವ ಗಡಿಯಾರ ರೂ. ೭.



ಈ ಗಡಿಯಾರಗಳಲ್ಲಿಯ ಯಂತ್ರ ರಚನೆಯು ಬೆಲೆಯುಳ್ಳ ಮತ್ತು ಅಮೌಲ್ಯವಾದ ಗಡಿಯಾರಗಳ ಯಂತ್ರ ರಚನೆಯಂತಿರುವದು. ಆದ್ದರಿಂದ ಗಡಿಯಾರಗಳು ಗಟ್ಟಿಯಿದ್ದು ಬಹು ದಿವಸ ನಡೆಯುವವು. ಮತ್ತು ತಾಳುವವು. ಬೆಲೆ ಕಡಿಮೆಯಿದೆಂದು ಅಂಜುವ ಕಾರಣವಿಲ್ಲ. ಪರದೇಶೀ ಕಂಪನಿಯವರಿಗೆ ಯಂತ್ರಗಳನ್ನು ತಯಾರ ಮಾಡಲು ವ್ಯರ್ಥವಾಗಿ ಬಹಳ ವೆಚ್ಚತಗಲುತ್ತದೆ. ಆದರೆ ನಾವು ಯೋಗ್ಯ ವೆಚ್ಚ ಮಾಡಿ, ಗಡಿಯಾರಗಳು ಬಾಳುವಂತೆ ತಯಾರಿಸಿದ್ದೇವೆ. ಆದರಿಂದ ಬೆಲೆ ಕಡಿಮೆ ಸಂಶಯಕ್ಕೆ ಕಾರಣವಿಲ್ಲ.

ಲಿಬೋ ವಾಚ ಕಂ. (ಇಂಡಿಯಾ.) ಬಾಂಬೆ ೪.

ಬಿ, ಎಂ. ಹೂಗಾರ ಕೃತ

ತಾಳಪ್ರಸ್ತಾರಸಾಗರ.

೧ ನೇ ಭಾಗ.

(ಮೃದಂಗ ವಿದ್ಯಾವಿನೋದ.)

ಈ ಗ್ರಂಥದಲ್ಲಿ ತಾಳಗಳ ಉತ್ಪತ್ತಿ, ಜಾತಿಭೇದದಿಂದ ಹುಟ್ಟಿದ ೩೫ ತಾಳಗಳನ್ನು ಹಿಡಿಯುವ ಕ್ರಮ, ತಬಲಾದಲ್ಲಿ ಅಕ್ಷರಗಳನ್ನು ನುಡಿಸುವ ಕ್ರಮ, (ಸಚಿತ್ರ) ಮರಿ, ಕಾಲು, ಮುಕ್ತಾಲು ತಾಳಗಳನ್ನೂ ಮುಗುತಾಯಗಳನ್ನೂ ಮಾಡುವ ರೀತಿ, ಮರ್ಮತಾಳ ಲಕ್ಷಣ ಗುಣವಾದ್ಯಶಬ್ದಗಳ ವಿಚಾರ, ಎರಡೂ ತಾಳಗಳನ್ನು ಗತಿಭೇದದಿಂದ ಎರಡೂ ಕೈಗಳಿಂದ ಒಮ್ಮೆಲೆ ನಡಿಸುವ ಕ್ರಮ, ಇತ್ಯಾದ್ಯನೇಕ ರಹಸ್ಯವಾದ ವಿಷಯಗಳು ಸ್ಪಷ್ಟವಾಗಿರುವವು. ಗ್ರಂಥದ ಬಗ್ಗೆ ಅನೇಕ ವಿದ್ವಾಂಸರು ತಮ್ಮ ಸದಭಿಪ್ರಾಯವನ್ನು ವ್ಯಕ್ತಪಡಿಸಿರುವರು, ಈ ಗ್ರಂಥವು ಹತ್ತರಿದ್ದರೆ ಒಬ್ಬ ಸಂಗೀತ ವಿದ್ವಾಂಸನೇ ಹತ್ತರಿದ್ದಂತಾಗಿ ಬೋಧಕರ ಸಹಾಯವೇ ಬೇಕಾಗಲಾರದು.

ಈ ಪುಸ್ತಕದ ಬೆಲೆ ೨—೮—೦ ರೂಪಾಯಿ, ಕಾಲ ವಿಲಂಬವಾದರೆ ಪುಸ್ತಕಗಳು ದೊರೆಯಲಾರವು. ಕೆಳಗಿನ ವಿಳಾಸಕ್ಕೆ ಬರೆದು ಬೇಕಾದವರು ತರಿಸಿಕೊಳ್ಳಬೇಕು.

ವಿಳಾಸ:-

ಬಸಪ್ಪಾ ಮಲ್ಲಪ್ಪಾ ಹೂಗಾರ.
ಸಾ|| ಚಿಂಚಲಿ. ತಾ. ಗದಗ.
ಪೋ|| ಮುಳಗುಂದ.
ಜಿಲ್ಹಾ ಧಾರವಾಡ.

ರಂಗಭೂಮಿಯ

ಸೇವಕರಿಗೊಂದು ಮಾತು.

“ರಂಗಭೂಮಿ”ಯು ವೃತ್ತಪತ್ರಗಳಲ್ಲಿ ಓಡಾಡ ಹತ್ತಿದೆ. [illegible] ಒಮ್ಮೆ ಒಂದು ನಾಟಕವಾಡಿದವರೂ, ಎಂದಾದರೊಂದು ನಾಟಕ ನೋಡಿದವರೂ, ಕನಸಿನಲ್ಲಿ ಕಂಡವರೂ ಒಂದೇ ದಿನದಲ್ಲಿ [illegible] ಬಳಿದುಕೊಂಡವರೂ ತಮ್ಮ ಅನುಭವ ತನ್ನು [illegible] ಬರೆಯುತ್ತಿರುವರು. ಇವರು ಬರೆಯುವ [illegible] ನಾಟಕ ಸಂಘದವರು [illegible] ರೀತಿಗಳನ್ನು ತಮ್ಮ ಅನುಭವಗಳನ್ನೂ ಬರೆದು [illegible] ರಂಗಭೂಮಿಯ ಸುಧಾರಣೆಗಾಗಿ ಬರಹಗಾರರು [illegible] ಹೀಗೆ ಮಾಡಬೇಕು, ಎಂದು ಬರೆಯುತ್ತ ಕುಳಿತರೆ ಪ್ರಯೋಜನವೇನು? ಈಗಿರುವ ಕಂಪನಿಯವರುಗೂ ಸುಧಾರಣೆಯನ್ನು [illegible] ಕೂಗುತ್ತಿರುವರು. ಪತ್ರಿಕಾಕರ್ತರೂ [illegible] ಗಳ ಕಡೆಗೆ ಲಕ್ಷ್ಯಕೊಡದೆ ಪ್ರಕಟಿಸುತ್ತಿರುವರು [illegible] ರಂಗಭೂಮಿಯನ್ನು ಸುಧಾರಿಸಬೇಕೆಂಬ [illegible] ಮುಂದೆ ಒಂದು ನಾಟಕ ಸಂಘವನ್ನು ಏರ್ಪಡಿಸಿ ಅದರ ಮೂಲಕ ಕಾರ್ಯವನ್ನು ಕೈಕೊಳ್ಳಬೇಕು. [illegible] ನಾಟಕ ಸಂಘಗಳನ್ನು [illegible] ಯಜಮಾನರನ್ನೂ ಅಭಿನಯಕಾರರನ್ನೂ [illegible] ಅವರೆದುರಿಗೆ [illegible] ಕಾರ್ಯವನ್ನಾಗಿಸಬೇಕು. ಇಷ್ಟು ಆಗದಿದ್ದಲ್ಲಿ ಬರೇ ಬರಹಗಳಿಂದ ಏನೂ ಸುಧಾರಣೆ ಆಗಲಾರದೆಂದು ನನ್ನ ತಿಳುವಳಿಕೆ.

ಬರಹಗಾರರು ಪ್ರಚಲಿತ ಸಂಘಗಳ ದೋಷಗಳನ್ನು ಅವರಿಗೇ ತಿಳಿಸದೆ ವೃತ್ತಪತ್ರಗಳ ಮೂಲಕ ತಿಳಿಸುವದರಿಂದ ಕೆಲವು ಮುಂದುವರಿಯುವ ಸಂಘಗಳಿಗೆ [illegible] ಅವರು ಸಿಟ್ಟಿಗೆ ಬರುವದು ಸ್ವಾಭಾವಿಕವೇ ಇದೆ. [illegible] ಒಳ್ಳೇಸಿಟ್ಟು ಬರುತ್ತದಂತೆ. ಈಗ ಏನೇನೋ ಪ್ರಯತ್ನದಿಂದ ಎಷ್ಟೆಷ್ಟೋ ಬಹುಮಾನಗಳನ್ನೂ ಬಿರುದುಗಳನ್ನೂ ಸಂಪಾದಿಸಬೇಕೆಂಬ ಹಂಬಲವು ಅವರಿಗಿದೆ. ಕೊಡುವವರು ಎಂತಹ ಜನರೇ ಇರಲಿ ಆ ಮಾತಿನ ವಿಚಾರವು ಬೇಡ. ಇಂತಹ ಬಿರುದಾಭಿಲಾಷಿಗಳಿಗೆ ಬರಹಗಳ ಮೂಲಕ ತಿಳಿಸುವದು ಅವರಿಗೆ ರೊಚ್ಚಿಗೆಬ್ಬಿಸುವದಕ್ಕೆ ಕಾರಣವಲ್ಲದೆ ಸುಧಾರಿಸುವ ಪ್ರಯತ್ನವಲ್ಲ.

ಈಗ ನಡೆಯುವ ಕಂಪನಿಗಳ ಸ್ಥಿತಿಗತಿಗಳು ಸರಿಯಿಲ್ಲವೆಂದು ಹೇಳುತ್ತ ಅವರನ್ನು ಹಳಿಯುತ್ತ ಅಲ್ಲೊಬ್ಬ ಇಲ್ಲೊಬ್ಬ ಹೀಗೆ ಹತ್ತು ಜನರು ಕೂಡಿ ಒಂದು ನಾಟಕವನ್ನು ಅಭಿನಯಿಸಿಬಿಟ್ಟರೆ ರಂಗಭೂಮಿಯನ್ನು ಸುಧಾರಿಸಿದಂತೆಯಾಯಿತೇ? ಇಂಥ ಮಹಾನುಭಾವರಿಂದಲೂ ಪ್ರಯೋಜನವಿಲ್ಲ.

ಯಾವದಾದರೊಂದು ಸಂಘಕ್ಕಾಗಿಯಾಗಲೀ ಇಲ್ಲವೇ ಬೇರೆ ರೀತಿಯಿಂದಾಗಲೀ ದುಡ್ಡು ಕೊಟ್ಟು ಸಹಾಯಮಾಡಿ ಬಹುಮಾನಗಳನ್ನು ದೊರಕಿಸಿಕೊಳ್ಳುವ ಹವ್ಯಾಸವುಳ್ಳವರು ನಾಟಕ ಸಂಘದ ಯಜಮಾನರಾಗುವದರಿಂದಲೂ, ಹೋದ ಹೋದಲ್ಲಿ ಜನರ ಮನವಲಿಸಿಕೊಂಡು ಟೀ, ಕಾಫಿ ಸೋಡಾಗಳನ್ನೂ ಕುಡಿಸಿ ಭೋಜನಾದಿಗಳನ್ನು ಮಾಡಿ ಬಿರುದುಗಳನ್ನೂ ಬಹುಮಾನಗಳನ್ನೂ ಪಡೆದುಕೊಳ್ಳುವ ಚಟವುಳ್ಳ ನಟರು ಸಂಘದಲ್ಲಿ ಸೇರುವದರಿಂದಲೂ ರಂಗಭೂಮಿಗೆ ಏನೂ ಸಹಾಯವಾಗುವದಿಲ್ಲ. ಹೀಗಾದರೆ ಸುಧಾರಿಸುವದು ಹೇಗೆ?

ಬರಹಗಳ ಓಡಾಟವು ಬೇಕಿಲ್ಲ. ಬರಹಗಳ ಪ್ರಯೋಜನವೇನು? ಒಂದೇ ಒಂದು ನೋಡಿರಿ ಕೌಶಿಕನ ಬರಹಕ್ಕಾಗಿ ಗರೂಡರವರು ಕಂಠೀರವ ವಿಜಯ, ಕರ್ನಾಟಕವೃತ್ತ, ಕನ್ನಡಿಗ ಮೊದಲಾದ ಪತ್ರಗಳಲ್ಲಿ ಬಂದ ಬರಹಗಳನ್ನು ಓದಿದ ವಾಚಕರಿಗೆ ನಮ್ಮ ನಾಟಕ ಸಂಘಗಳ ಯೋಗ್ಯತೆಯು ತಿಳಿಯದೇ ಇರಲಿಕ್ಕಿಲ್ಲ. ವೃತ್ತಪತ್ರಗಳನ್ನು ಕಪ್ಪುಗೊಳಿಸಬಾರದೆಂದು ನುಡಿಗಳಿಂದ [illegible] ವೃತ್ತಪತ್ರಗಳು ಸಾಲದೇ ನಡೆದವು. ಬಂದ ಮೇಲೆ ಸುಧಾರಿಸುವವರು ಸಾಧಿಸುವದೇನು?

ಎಲ್ಲಿಯವರೆಗೆ ಸ್ವಾರ್ಥತ್ಯಾಗಿಗಳಾದ ಕಲಾಧ್ಯೇಯವುಳ್ಳ ನಟರು ಸಿದ್ಧರಾಗುವದಿಲ್ಲವೋ ಅಲ್ಲಿಯವರೆಗೆ ರಂಗಭೂಮಿಯು ಸುಧಾರಿಸದು. ರಂಗಭೂಮಿಯ ಹಿತಚಿಂತಕರಾದ ಬರಹಗಾರರು ಮುಂದೆಬಂದು ಒಂದು ನಾಟಕಸಂಘವನ್ನು ಏರ್ಪಡಿಸಿ ತಮ್ಮ ಪರಾಕ್ರಮವನ್ನು ತೋರಿಸಿ ಕನ್ನಡ ರಂಗಭೂಮಿಯನ್ನು ಸುಧಾರಿಸಲು ಪ್ರಯತ್ನ ಮಾಡುವರೋ?

ಕಲಾಸೇವೆಯನ್ನೇ ಧ್ಯೇಯವನ್ನಿಟ್ಟುಕೊಂಡು ಸ್ವಾರ್ಥವನ್ನು ಬದಿಗೊತ್ತಿ ತಮ್ಮ ಜೀವನವನ್ನೇ ರಂಗಭೂಮಿಯ ಸೇವೆಯಲ್ಲಿ ಕಳೆಯಲು ಸಿದ್ಧರಾದವರು ‘ಕನ್ನಡಿಗ’ನಿಗೆ ತಮ್ಮ ಹೆಸರುಗಳನ್ನು ತಿಳಿಸುವರೋ? ಬೇಕು. ಇಂದು ಹೊಟ್ಟೆಗಿಲ್ಲದಿದ್ದರೂ ಉಪವಾಸ ಸೇವೆಮಾಡುವ ಧೀರರು ಬೇಕು. ಬಂದ ಸಂಕಟಗಳಿಗೆ ಎದುರಾಗುವ ಭಂಟರು ಬೇಕು. ಬರೇ ವಾಕ್ಚಾತುರ್ಯವನ್ನು ತೋರುವವರ ಯುಗವಿದಲ್ಲ. ಹೊಸಕಾಲವಿದು ಕಾರ್ಯದ ಕಾಲವಿದು ಆಡಿದರೇನು? ಮಾಡಿತೋರಿಸಬೇಕು.

ಶ್ರೀ ಗರೂಡರವರು ಕೌಶಿಕನಿಗೆ ಉತ್ತರಬರೆಯುವಾಗ ಸ್ವಲ್ಪ ಆಶೆಯನ್ನು ತೋರಿಸಿದ್ದರು. ಅದನ್ನು ನಂಬಿ ‘ಸುಧಾರಣೆಯ ದೃಷ್ಟಿಯಿಂದ ಯಾವದಾದರೊಂದು ಸಂಘವನ್ನು ಕಟ್ಟಿಕೊಳ್ಳಬೇಕೆಂಬ ಉದ್ದೇಶವೇನೋ ಈ ವರೆಗೆ ಇತ್ತು. ಆದರೆ ಅದೀಗ ಗಾಳಿಯಲ್ಲಿ ಸಂತತಾಯಿತು. ಆದುದರಿಂದ ನಿಜವಾದ ರಂಗಭೂಮಿಯ ಭಕ್ತರಿಗೆ ಬರಕೊಂಡ ಬಿನ್ನಹ ಪತ್ರವಿದು. ಒಂದೇ ಕೈಯಿಂದ ಚಪ್ಪಾಳೆಯಾಗದು. ರಂಗಭೂಮಿಯ ಸೇವಕರೆಲ್ಲ ಒಟ್ಟುಗೂಡಿದರೆ ಏನಾದರೂ ಕಾರ್ಯವಾದೀತೆಂದು ನನ್ನ ನಂಬುಗೆ ಇದೆ.

ಬರಹವನ್ನು ಗಮನಕ್ಕೆ ತಾರದೆ ಇಲ್ಲದ ಆಕ್ಷೇಪಗಳನ್ನೆತ್ತಿ ಬರೆಯುವ ಬರಹಗಾರರಿಗೆ ಉತ್ತರವು ದೊರೆಯಲಾರದು.

ಎಚ್. ಹಟೀಲರು.

ಸಾಹಿತ್ಯ ಸೂಚನೆಗಳು.

(೧) ಶ್ರೀಮದಾಚಾರ್ಯರು ಕೊಟ್ಟಿರುವ ವಾಙ್ಮಯಾತ್ಮಕವಾದ ಉಪನ್ಯಾಸಗಳ [illegible] ಕಾಣಿಸಿಕೊಂಡಿದೆ. ಇತ್ತೀಚೆಗೆ ಅದೆಂತ ಆದವೆಂಬುದನ್ನು ತಿಳಿ[illegible]ಯಿಂದ ಕೆಲವರು ಚರ್ಚೆ

ಕನ್ನಡಿಗರ ಒಳ್ಳೆ ಸ್ಟ್ರೈಕ್ ವ್ಯವಸ್ಥೆ !!
ತ್ವರೆ ಮಾಡಿರಿ ! ತ್ವರೆ ಮಾಡಿರಿ !



ಮೋಟಾರ ಡ್ರಾಯವ್ಹಿಂಗ ಕ್ಲಾಸ.

ಈ ಕ್ಲಾಸಿನಲ್ಲಿ ಕನ್ನಡಿಗರ ಗರಜ ಹುಟ್ಟಿಗೆಯಾದ ಕಾರಣ ಮುದ್ದಾಂ ಕನ್ನಡ ಭಾಷೆಯಲ್ಲಿ ಶಿಕ್ಷಣ ಕೊಡುವ ವ್ಯವಸ್ಥೆ ಮಾಡುತ್ತದೆ. ಕಾರಣ ಕನ್ನಡಿಗರು ಈ ಸುಸಂಧಿಯನ್ನು ಬಿಡದೆ, ಇದರ ಫಾಯದೆಯನ್ನು ಅವಶ್ಯವಾಗಿ ಪಡೆಯಬೇಕು. ಈ ಕ್ಲಾಸಿನಲ್ಲಿ ಮೋಟರ ರಿಪೇರಿ ಮಾಡುವದನ್ನು ಕಲಿಸಿ ಮೋಟಾರ ಡ್ರಾಯ್ವಿಂಗದ ಪೂರ್ಣ ಜ್ಞಾನವನ್ನು ಶಾಸ್ತ್ರೋಕ್ತ ಪದ್ಧತಿಯಲ್ಲಿ ಕೊಟ್ಟು ಇಡೀ ಪ್ರಿಟಿಶ ಹಿಂದುಸ್ಥಾನದ ಸರಕಾರಿ ಲಾಯಸನ್ಸವನ್ನು ಸಂಪಾದಿಸಿ ಕೊಡುತ್ತೇವೆ. ಇಂಥ ಪೂರ್ಣ ಶಿಕ್ಷಣವು ಬೇರೆಯಲ್ಲಿಯೂ ಸಿಗಲಿಕ್ಕಿಲ್ಲ. ಈ ಒಳ್ಳೆ ಮೋಕಾ ಖಾತ್ರಿ ಮಾಡಿಕೊಳ್ಳಿರಿ. ಕೋರ್ಸ ಫಕ್ತ ಒಂದೇ ತಿಂಗಳು. ಫೀ ರೂಪಾಯಿ ೨೦ ಇರುತ್ತದೆ. ವಿಶೇಷ ಮಾಹಿತಿ ಸಮಕ್ಷಮ ಅಥವಾ ಪತ್ರದ್ವಾರ.

ಪತ್ತಾ.—ದಿ ಪಾಪ್ಯುಲರ ಮೋಟಾರ ಡ್ರಾಯ್ವಿಂಗ ಮತ್ತು ಮೆಕ್ಯಾನಿಕಲ್ ಕ್ಲಾಸ ೫೧೧ ಬುಧವಾರ ಪೇಠ, ಜುನಿ ತಪಕೀರಗಲ್ಲಿ ಪುಣೆ ಸಿಟಿ.

ರಕ್ತಶುದ್ಧಿ ಮತ್ತು ಧಾತುವೃದ್ಧಿಕಾರಕ

ಬಲವಂತ

ಗುಟಿಕಾ.

ಈ 'ಬಲವಂತ ಗುಟಿಕೆ' ಯು ಉತ್ತಮ ವನಸ್ಪತಿ ಚೂರ್ಣದಿಂದ ಪೌಷ್ಟಿಕ ಮತ್ತು ಕಾಮೋತ್ತೇಜಕ ಅರ್ಕಗಳನ್ನು ಮಿಶ್ರಿತ ದೇಶಪದ್ಧತಿಯಿಂದ ತಯಾರಿಸಲ್ಪಟ್ಟಿದೆ. ಇದರ ಸೇವನೆಯಿಂದ ವಾತ, ಪಿತ್ತ, ಕಫಗಳ ದೋಷದಿಂದುಂಟಾದ ಎಲ್ಲ ವ್ಯಾಧಿಗಳೂ ಇದಲ್ಲದೆ ಅಶಕ್ತತೆ, ಸಂಗ್ರಹಣೀ, ಜೀರ್ಣಜ್ವರ, ಅಗ್ನಿಮಾಂದ್ಯ, ಕೃಶತ್ವ, ದಮ್ಮು ಮತ್ತು ಕೆಮ್ಮು ಮೊದಲಾದ ವಿಕಾರಗಳೂ, ನಾಶ ನಾಶವಾಗುವವು. ಹಾಗೂ ಮೂತ್ರ ಬಿಡುವ ಮುಂಚೆ ಅಥವಾ ನಂತರ ಧಾತು ಸುರಿಯುವದು ನಿಲ್ಲುತ್ತದೆ. ಸ್ವಪ್ನಾವಸ್ಥೆಯು ಆಗುವದಿಲ್ಲ. ಜನನೇಂದ್ರಿಯಕ್ಕೆ ಶಕ್ತಿಯುಂಟಾಗಿ ಪ್ರಾಪ್ತವಾದ ನಪುಂಸಕತ್ವವು ಎಂದೂ ಇರುವದಿಲ್ಲ. (ಏಳೇ ದಿವಸ ತಕ್ಕೊಂಡು ಖಾತ್ರಿಮಾಡಿಕೊಳ್ಳಬಹುದು) ಇದರಿಂದ ವೈಯ್ಯಾರಿ ವ ಗರಮಿಯ ಎಲ್ಲಾತರದ ವಿಕಾರಗಳು ನಾಶವಾಗುವವಲ್ಲದೆ ಧಾತುವೃದ್ಧಿಯಾಗಿ ಪೌಷ್ಟಿಕತ್ವವು ಪ್ರಾಪ್ತವಾಗುತ್ತದೆ. ಇದರ ಮಿಕ್ಕೇ ಯೋಗ್ಯತೆಯು ಸೇವಿಸಿ ನೋಡಿದರೆ ತಿಳಿಯುವದು.

೧ ಡಬ್ಬಿಗೆ ಕಿಮ್ಮತ್ತು ೦-೧೦-೦, ಟಪಾಲು ಖರ್ಚ ಸಹಿತ ೧ ಡಬ್ಬಿಗೆ ೦-೧೪-೦, ೩ ಡಬ್ಬಿಗಳಿಗೆ ೨-೪-೦, ೧೨ ಡಬ್ಬಿಗಳಿಗೆ ೭-೦-೦, ಇದಲ್ಲದೆ ೧ ಡಬ್ಬಿಯು ಕಮಿಶನು ಸಿಗುವದು. ಪೂರ್ಣ ಗುಣಕ್ಕೆ ಮೂರು ಡಬ್ಬಿ ಔಷಧ ಸೇವನ ಮಾಡಬೇಕಾಗುತ್ತದೆ.

ವಿಳಾಸ—

ಎಸ್. ಬಿ ಕದಮ್ ಮತ್ತು ಸನ್ಸ್.

ಮು. ಪೋಷ್ಟ ನಿಪ್ಪಾಣಿ (ಜಿ ಬೆಳಗಾಂವ)

೧,೪೩,೦೦,೦೦೦

ರೂಪಾಯಿಗಳು!

ಪರದೇಶಗಳಿಂದ ತರಿಸಲ್ಪಟ್ಟ ಸಾಬೂನುಗಳಿಗೋಸ್ಕರ ಪ್ರತಿವರುಷವೂ ಒಂದುಕೋಟಿ ನಾಲ್ವತ್ತೆರಡು ಲಕ್ಷ ರೂಪಾಯಿಗಳನ್ನು ನಮ್ಮ ದೇಶದಿಂದ ಪರದೇಶಕ್ಕೆ ಕಳಿಸುತ್ತಿದ್ದೇವೆ. ಮಹಾಜನಗಳೆಲ್ಲರೂ ಒಕ್ಕಟ್ಟಾಗಿ ಸಂಕಲ್ಪಮಾಡಿದರೆ ತಾನೇ ಈ ಧನವನ್ನೂ ನಮ್ಮ ದೇಶದಲ್ಲಿ ಉಳಿಸಿಕೊಳ್ಳಬಹುದು. ಸ್ವದೇಶದ ಸಾಬೂನನ್ನು ಬಿಟ್ಟು ಪರದೇಶದ ಸಾಬೂನನ್ನು ಕೊಳ್ಳುವ ಪ್ರತಿಯೊಬ್ಬ ವಿದ್ಯಾವಂತನೂ ಅನ್ಯ ದೇಶದ ಕೈಗಾರಿಕೆಗಳಿಗೆ ಉಪಕಾರಮಾಡಿ, ಸ್ವದೇಶದ ಕೈಗಾರಿಕೆಗಳಿಗೆ ಅಪಕಾರಮಾಡುತ್ತಾನೆ. ಪ್ರತಿಯೊಬ್ಬ ದೇಶಬಾಂಧವನೂ ಸ್ವದೇಶೀ ಮಾಲುಗಳನ್ನೇ ಕೊಳ್ಳುವನು. ಮೈಸೂರು ಗೌರ್ನಮೆಂಟ ಸೋಪ್ ಫ್ಯಾಕ್ಟರಿಯಲ್ಲಿ ಸರ್ವಾಗ್ರಗಣ್ಯವಾದ ಉತ್ತಮವಾದ ಸಾಬೂನುಗಳನ್ನು ತಯಾರುಮಾಡುತ್ತಾರೆ. ನಾವು ತಯಾರುಮಾಡುವ ಶ್ರೀಗಂಧ ಮುಂತಾದವುಗಳ ಸಾಬೂನೊಂದನ್ನು ಕೊಂಡು ತಾವೇ ಪರೀಕ್ಷೆಮಾಡಿನೋಡಿರಿ. ತಮಗೆ ನಮ್ಮ ಸಾಬೂನುಗಳು ಸಿಗಲಾರದ ಸ್ಥಳದಲ್ಲಿ ವಾಸವಿದ್ದು ನಮಗೆ ಪತ್ರವೊಂದನ್ನು ಬರೆದರೆ, ತಾವು ಇಚ್ಛಿಸುವ ಅಂಗಡಿಯಲ್ಲಿಯೇ ನಮ್ಮ ಮಾಲುಗಳು ತಮಗೆ ದೊರೆಯುವಂತೆ ಏರ್ಪಡಿಸಿಕೊಡುತ್ತೇವೆ.

ಗೌರ್ನಮೆಂಟ ಸೋಪ್ ಫ್ಯಾಕ್ಟರಿ

ಬೆಂಗಳೂರು.

ರಂಗಭೂಮಿಯ ಸುಧಾರಣೆ (೪)

ನಟರೂ ನಟನೆಯೂ

(ಕಳೆದ ಸಂಚಿಕೆಯಿಂದ ಮುಂದುವರಿದದ್ದು)

ಈಗ ನಟನೆಯ ಕುರಿತು ಕೆಲವು ಮಾತುಗಳನ್ನಾಡುವೆವು ನಟನಿಗೆ ಪ್ರಥಮ ಸಾಧನವೆಂದರೆ, ಅದು ತಾನು ವಹಿಸಿದ ಭೂಮಿಕೆಯಲ್ಲಿ ತನ್ನ ವ್ಯಕ್ತಿತ್ವವನ್ನು ಮರೆಯುವುದು ಹಾಗೆ ಮರೆತು, ನಮ್ಮ ಶರೀರದ ಅವಯವಗಳಿಂದ ಮುಖ್ಯವಾಗಿ, ಕೈ ಕಾಲುಗಳ ಚಲನೆ ಮತ್ತು ಮೋರೆಯ ಚಹರೆ ಬದಲ ವಣೆಯಿಂದ ಮಾತಿನ ಅರ್ಥವನ್ನು ಪ್ರಕಟಿಸಬೇಕು. ಈಗ ನಾವು ಕಾಣ ಮೂಕಚಿತ್ರಪಟಗಳಲ್ಲಿ (Cenema films) ಅಲ್ಲಿ ನಟರು ಮಾತನಾಡುವುದು ನಮಗೆ ಕೇಳಿಸುವುದಿಲ್ಲ ಆದರೆ ಅವರ ಹಾವ ಭಾವದಿಂದಲೇ ನಾವು ಕಥೆಯನ್ನೂ, ಅವರ ಅಭಿಪ್ರಾಯವನ್ನೂ ತಿಳಿಯಬಲ್ಲೆವು ಹಾಗೆಯೇ ನಟನು ಮಾತನಾಡದವನಾದರೂ ಕ್ರಿಯೆಯಿಂದಲೇ ನಟಿಸ [illegible] ತನ್ನ ಮುಖಭಾವದಿಂದಲೇ ಅಭಿಪ್ರಾಯವನ್ನು ಸೂಚಿಸಬೇಕು. ಮುಖ್ಯವಾಗಿ ನಟನ ಚಿತ್ತವು ಆತನ ಮೋರೆಯಿಂದಲೇ ತಿಳಿಯಲು ಬರುವುದು. ಮೋರೆಯ ಮೇಲೆ ಕಾಣಿಸಿಕೊಳ್ಳುವ ಅನೇಕ ಚಿಹ್ನೆಗಳಿಂದ ಭಾವದ ಅರ್ಥವನ್ನು ತಿಳಿಯಲು ಶಕ್ಯವಾಗಬೇಕು. ಇನ್ನು ಮಾತಿಗೂ, ಪ್ರಸಂಗಕ್ಕೂ ಅನುಸರಿಸಿ ಹಾಸ್ಯವನ್ನು ತೋರಿಸುತ್ತಿದ್ದ ಮೋರೆಯಲ್ಲಿ ಕೋಪ, ಕ್ರೌರ್ಯ, ದ್ವೇಷ, ಮಾತ್ಸರ್ಯ - ತಾಪ - ಇವುಗಳನ್ನು ನಿಮಿಷಾರ್ಧದಲ್ಲಿ ಪರಿವರ್ತಿಸಿ ತೋರಿಸಲು ನಿಲ್ಲಬೇಕು. ಮನವು ಎಷ್ಟು ವೇಗವಾಗಿ ಚಲಿಸುವುದೋ ತದನುಗುಣವಾಗಿ ಈ ಭಾವಗಳೂ ಅಷ್ಟೇ ತ್ವರೆಯಿಂದ ಬದಲಿಸಬೇಕು. ಉದಾ:— ಒಬ್ಬನು ಹುಚ್ಚನ ಭೂಮಿಕೆಯನ್ನು ವಹಿಸಿರುವನೆಂದು ಊಹಿಸಿರಿ ಅವನು ನಾಲ್ಕು ಕ್ಷಣದ ಅವಧಿಯಲ್ಲಿ ಹತ್ತೆಂಟು 'ರಸದ' ಮಾತುಗಳನ್ನಾಡುವನು. "ಅಪ್ಪಾ ನೀನು ಸತ್ತೆಯಾ, ನೀನು ಯಾಕೆ ಸತ್ತೀ? ಸತ್ತರೆ ಒಳಿತೇ ಆಯಿತು." ಇಲ್ಲಿ ಒಂದೇ ಮಾತಿನಲ್ಲಿ, ಮೊದಲು ಪ್ರಕಟವಾಗಬೇಕಾದ ತಾಪವು ಕೂಡಲೆ ಬದಲಾಯಿಸಿ, ಕೋಪ ತಿರುಗಿ ಆನಂದ ಹೀಗೆ ಆ ಮಾತನಾಡುವ ಅಲ್ಪಾವಧಿಯಲ್ಲಿ ಸಾಗಬೇಕು.

ನಟನು ಒಂದು ಕನ್ನಡಿಯ ಎದುರಿಗೆ ನಿಂತು ಮಾತನ್ನು ಗಟ್ಟಿಯಾಗಿ ಹೇಳುತ್ತ ತದನುಸಾರವಾಗಿ ತನ್ನ ಪ್ರತಿ ಬಿಂಬದ ಸಹಾಯದಿಂದ ಅಭಿನಯಿಸಬೇಕು. ಅದರಿಂದ ಅವನ ಕೊರತೆಗಳೆಷ್ಟೋ ಅವನಿಗೆ ಸೂಚಿಸುವವು. "ನಿಜವಾಗಿ ಭಾವವು ಮನದಲ್ಲಿ ಮೂಡಿದರೆ ಕನ್ನಡಿಯೇಕೆ" ಎಂದು ಕೆಲವರು ಹೇಳಬಹುದು, ಅದು ತೀರ ಅವಶ್ಯವಿದೆ. ಏಕೆಂದರೆ, ಕೆಲವರು ನಿಜವಾಗಿ ಭಾವಪೂರ್ಣವಾಗಿ ನಕ್ಕರೂ ಅವರ ಮೋರೆಯಲ್ಲಿ ಬರೇ ಅಳುವ ಚಿಹ್ನೆಯೇ ಕಾಣುವುದು, ಇಂತಹ ಅನೇಕ ನಟರ ನಿದರ್ಶನಗಳು ನಮ್ಮ ಅನುಭವದಲ್ಲಿವೆ. ಇತರ ವಿಚಾರಗಳನ್ನು ಮನದಿಂದ ಕಿತ್ತೊಗೆದು ಆ ವಿಷಯದ ಚಿಂತನೆಯನ್ನೇ ಮಾಡುತ್ತ, ಕನ್ನಡಿಯ ಸಹಾಯದಿಂದ ನಟನೆಯನ್ನು ಯುಕ್ತಿ ನಡೆಸಿದರೆ ಉತ್ತಮ ನಟನನಾಗುವುದು ಬಹಳ ಕಠಿಣ ಕೆಲಸವಲ್ಲ. ಕೆಲವು ನಟರು, ಅತಿರೇಕ ಅಭಿನಯವನ್ನು ಮಾಡುವರು. ನಾವು ನಮ್ಮ ಲೌಕಿಕ ವ್ಯವಹಾರದಲ್ಲಿ ಮಿತ್ರರ ಬಳಿ ಹೇಗೆ ವರ್ತಿಸುವೆವು ಎಂಬುದನ್ನು ಪರಿಶೀಲಿಸಿದರೆ ನಮಗೆ ನಟನೆಯ ಹದವು ಚೆನ್ನಾಗಿ ತಿಳಿಯುವುದು. ಇನ್ನು ಸ್ತ್ರೀ ಭೂಮಿಕೆಯನ್ನು ವಹಿಸುವ ನಟರು, ಆವಷ್ಟು ತಾಳ್ಮೆಯಿಂದ ತಮ್ಮನ್ನು ತಾವೇ ಹೆಣ್ಣಾಗಿ ತಿಳಿಯಬೇಕು. ಮಾತ್ರವಲ್ಲ ಸ್ತ್ರೀಯರ ಲೌಕಿಕ ವ್ಯವಹಾರಶೀಲನೆಯಿಂದ ಅವರ ನಟನೆಯನ್ನು ಕಲಿಯಬೇಕು. ಕೆಲವು ರಂಗಭೂಮಿಯಲ್ಲಿ ನಾವು, ಅಂತಹ ನಟರು, ಕೈಗಳಿಂದ ಅತಿರೇಕ ಹಾವಭಾವಗಳನ್ನು ತೋರಿಸುವುದನ್ನು ಕಾಣುವೆವು. ಪ್ರತಿ ಮಾತಿಗೂ, ಅವರ ಕೈಗಳು ಒಂದೊಂದು ವಿಧವಾಗಿ ನರ್ತಿಸುವುವು ಇದು ನಿಜವಾದ ಪರೀಕ್ಷಕರಿಗೆ ಅಸ್ವಾಭಾವಿಕತನ ಪರಮಾವಧಿಯೆಂದು ತೋರದಿರದು. ಸ್ತ್ರೀ ಅಭಿನಯವನ್ನು ದೇಹದ ಅಲ್ಪ ಸ್ವಲ್ಪ ಚಲನದಿಂದ ಕೂಡಿದ್ದು ಬಹು ಮಟ್ಟಿಗೆ ಮೋರೆಯಿಂದಲೇ ತೋರಿಸುವುದು ಒಳಿತು.

ಅನ್ಯರ ಕೂಡ ಮಾತನಾಡುವಾಗ ನಟನು ಒಂದು ಹೆಜ್ಜೆ ಮುಂದರಿದು ಸಭಿಕರ ಕಡೆಗೆ ಮೋರೆಮಾಡಿ ಆಡುವುದು ಒಳಿತು. ತನ್ನ ಸ್ಥಳವನ್ನು ಬಿಟ್ಟು ಬಹು ಮುಂದಕ್ಕೆ ಅದಕ್ಕಾಗಿ ಓಡುವುದು ಒಳಿತಲ್ಲ.

ರಂಗಭೂಮಿಯನ್ನು ಬಿಟ್ಟುಹೋಗುವ ಕಾಲದಲ್ಲಿ ಅವನು ತನ್ನ ಮಾತನ್ನು, ಭೂಮಿಯ ಬದಿಯಲ್ಲಿರುವ ಪಾರ್ಶ್ವಚಿತ್ರ (Side-wings)ಗಳ ಬಳಿಗೆ ಸರಿಸರಿದು, ಮುಗಿಸಿ ಒಳಕ್ಕೆ ಹೋಗಬೇಕು. ಹಾಗಲ್ಲದೆ ರಂಗಭೂಮಿಯ ನಡುವೆ ನಿಂತು, ಮಾತನ್ನು ಮುಗಿಸಿ, ಉಳಿದ ಹಾದಿಯನ್ನು ನಿರಸವಾಗಿ ನಡೆದು ಹೋಗುವುದರಲ್ಲಿ ಸೊಬಗಿಲ್ಲ.

ನಟನಿಗೆ ರಂಗಭೂಮಿಯು ಮನೆಯಂತಿರಬೇಕು. ಅವನು ಪಾರ್ಶ್ವಚಿತ್ರಗಳ ಬಳಿ ನಿಂತಿರುವ, ಇಲ್ಲವೇ, ಪ್ರೇಕ್ಷಕ ಗಣದಲ್ಲಿ ಕುಳಿತಿರುವ ತನ್ನ ಮಿತ್ರರ ದರ್ಶನದಿಂದ ಲಜ್ಜಿತನಾಗಿ ತನ್ನ ಉದ್ದೇಶವನ್ನು ಮರೆಯಬಾರದು.

ನಟನು ಯಾವಾಗಲೂ ತನ್ನ ಮೋರೆಯ ಅರ್ಥವು ಸಭಿಕರಿಗೆ ಕಾಣಿಸುವಂತೆ, ಮಾಡಬೇಕು. ಅವನ ಮಾತುಗಳು ಎದುರಾಳಿಗೆ ಸಂಬಂಧಿಸಿದುದಾದರೂ ಅವನು, ಆಗಾಗ ಸಭಿಕರ ಕಡೆಗೆ ಮೋರೆಮಾಡಿ ಮಾತನ್ನು ಮುಂದರಿಸಬೇಕು. ಈ ಕೆಲವು ನಿಯಮಗಳು ಸ್ವಾಭಾವಿಕತನವನ್ನು ಕೆಲವು ರೀತಿಯಲ್ಲಿ ಮೀರಬಹುದಾದರೂ, ನಾಟಕವು ಪ್ರೇಕ್ಷಕರ ಸಲುವಾಗಿ ಇರುವುದರಿಂದ ಹಾಗೆ ಮಾಡಲೇ ಬೇಕಾಗುವುದು.

ಇನ್ನು ನಮ್ಮ ನಾಡಿನ ಅನೇಕ ನಟರಲ್ಲಿ ಇದೊಂದು ಹಾಳು ಕೊರತೆಯಿರುವುದು. ಅದೇನೆಂದರೆ— ಅವರು ರಂಗಭೂಮಿಯಲ್ಲಿ ನಟಿಸುತ್ತಿರುವರಾದರೂ, ಅವರ ದೃಷ್ಟಿ ಪಥವು ಪಾಪ ದೃಷ್ಟಿಯಿಂದ ಪ್ರೇಕ್ಷಕರಲ್ಲಿನ ಕೆಲವು ವ್ಯಕ್ತಿಗಳ ಕಡೆಗೆ ಹರಿಯುತ್ತದೆ. ಇಂತಹ ನೀಚ ಹವ್ಯಾಸವುಳ್ಳ ನಟರಿಗೆ ಸಮಾಜದ ಎಲ್ಲಾ ತಿರಸ್ಕಾರವೂ ಇರಲಿ.

ಒಂದು ಕೊಲೆಯ ದೃಶ್ಯವನ್ನು ತೋರಿಸುವದಾದರೆ, 'ಕೊಲೆ ಮಾಡುವವನು' 'ಮಾಡಿಸಿಕೊಳ್ಳುವವನು' ಇವರೇ ತಕ್ಕ ನಟನೆಯನ್ನು ಮಾಡಿದರೆ ಸಾಕು ಎಂದು ಯಾರೂ ತಿಳಿಯಬಾರದು. ಆ ದೃಶ್ಯದ ಕಾಲದಲ್ಲಿ ಅಲ್ಲಿರತಕ್ಕ ಎಲ್ಲಾ ನಟರು (ಸೇವಕನ ವರೆಯಾಗಿ) ಸಮಯಕ್ಕೆ ತಕ್ಕಂತೆ ಕೋಪ, ತಾಪ ಇನ್ನು ತೋರಿಸಲೇ ಬೇಕಾಗುವುದು.

ಹೀಗೆ ನಾವು ನಟರಿಗೆ ಕೊಡಬಹುದಾದ ಅನೇಕ ಸೂಚನೆಗಳಿದ್ದರೂ ಮುಖ್ಯ ಕೆಲವನ್ನು ಸಂಕ್ಷಿಪ್ತವಾಗಿ ಮೇಲಿನ ಕೆಲವು ಸೂಚನೆಗಳ ಮೂಲಕ ತಿಳಿಸಿರುವೆವು. ಇದರ ಯಥಾಯೋಗ್ಯ ವಿಮರ್ಶೆಯನ್ನು ನಟರು ಮಾಡುವುದು ಅವಶ್ಯವಿದೆ. ಇತಿ —ಕೌಶಿಕ.


STOCK TAKING SALE!! SALE!!
2 Carat Rolled - Gold Wrist Watches with a guarantee stamp of ten years. Each watch is supplied with a silk strap. Durable & strong in Mechanism. Every watch is worth its weight in gold. Do not miss this opportunity. Else you may loose the chance.
No. 909 Rs. 13
No. 910 Rs. 11
No 911 Rs. 10
No. 912 Rs. 13
No. 310 Rs. 13
No. 914 Rs. 11
No. 915 Rs. 11
No. 916 Rs. 11
No. 917 Rs. 10
No. 918 Rs. 9
No. 919 Rs. 10
No. 920 Rs. 10
No. 921 Rs. 10
No. 922 Rs. 10
No. 923 Rs. 10
No. 924 Rs. 11
No.925 Rs. 8.
N.B.—When ordering, it is sufficient that the number of the watch is mentioned. All our watches are guaranteed for ten years. These present concessions are made simply as we have heavy supplies of the lines in question. These prices will be withdrawn as soon as our stocks are sold out. The prices of our watches are exceptionally low and cheap and these watches are absolutely unobtainable elsewhere for this excellent value.
P. S.—Our loss in these goods is your gain: Place your order while you have the chance and Tell your friends.
Write to
The "LUXOR" WATCH MART, P. B. 17, MADRAS.
Show Rooms: 164, China Bazaar, near Bairagi Matam Koil, Madras.

ರಂಗಭೂಮಿಯ ಸುಧಾರಣೆ (೪)
ನಟರೂ ನಟನೆಯೂ

(ಹಿಂದಿನ ಸಂಚಿಕೆಯಿಂದ ಮುಂದುವರಿದದ್ದು)

ಈಗ ನಟನೆಯ ಕುರಿತು ಕೆಲವು ಮಾತುಗಳನ್ನಾಡುವೆವು ನಟನಿಗೆ ಪ್ರಥಮ ಸಾಧನವೆಂದರೆ, ಅದು ತಾನು ವಹಿಸಿದ ಭೂಮಿಕೆಯಲ್ಲಿ ತನ್ನ ವ್ಯಕ್ತಿತ್ವವನ್ನು ಮರೆಯುವುದು ಹಾಗೆ ಮರೆತು, ನಮ್ಮ ಶರೀರದ ಅವಯವಗಳಿಂದ ಮುಖ್ಯವಾಗಿ, ಕೈ ಕಾಲುಗಳ ಚಲನೆ ಮತ್ತು ಮೋರೆಯ ಚರ್ಯೆ ಬದಲಾವಣೆಯಿಂದ ಮಾತಿನ ಅರ್ಥವನ್ನು ಪ್ರಕಟಿಸಬೇಕು. ಈಗ ನಾವು ಕಾಣುವ ಮೂಕಚಿತ್ರಪಟಗಳಲ್ಲಿ. (Cenema films) ಅಲ್ಲಿ ನಟರು ಮಾತನಾಡುವುದು ನಮಗೆ ಕೇಳಿಸುವುದಿಲ್ಲ ಅವರ ಅಂಗ ಹಾವಭಾವದಿಂದಲೇ ನಾವು ಕಥೆಯನ್ನೂ, ಅವರ ಅಭಿಪ್ರಾಯವನ್ನೂ ತಿಳಿಯಬಲ್ಲೆವು ಹಾಗೆಯೇ ನಟನು ಮಾತನಾಡುವುದರಲ್ಲಿ ... ಪ್ರಕೃತಿಯಿಂದಲೇ ನಟನು [illegible] ...ತಂತ್ರ...ವಾಗ ಮಾತ್ರವಲ್ಲ, ... ಕಥೆಗಳ ... ... ಹಸನಂತೆ, ತನ್ನ ಮುಖಭಾವದಿಂದಲೇ ಅಭಿಪ್ರಾಯವನ್ನು ಸೂಚಿಸಬೇಕು. ಮುಖ್ಯವಾಗಿ ನಟನ ಅಭಿಪ್ರಾಯವು ಅವನ ಮೋರೆಯಿಂದಲೇ ತಿಳಿಯಲು ಬರುವುದು. ಮೋರೆಯ ಮೇಲೆ ಕಾಣಿಸಿಕೊಳ್ಳುವ ಅನೇಕ ಚಿಹ್ನೆಗಳಿಂದ ಭಾವದ ಅರ್ಥವನ್ನು ತಿಳಿಯಲು ಶಕ್ಯವಾಗಬೇಕು. ಇನ್ನು ಮಾತಿಗೂ, ಪ್ರಸಂಗಕ್ಕೂ ಅನುಸರಿಸಿ ಹಾಸ್ಯವನ್ನು ತೋರುತ್ತಿದ್ದ ಮೋರೆಯಲ್ಲಿ ಕೋಪ, ಕ್ರೌರ್ಯ, ದ್ವೇಷ, ಮಾತ್ಸರ್ಯ –ತಾಪ – ಇವುಗಳನ್ನು ನಿಮಿಷಾರ್ಧದಲ್ಲಿ ಪರಿವರ್ತಿಸಿ ತೋರಿಸಲು ಸಿದ್ಧನಾಗಬೇಕು. ಮನವು ಎಷ್ಟು ವೇಗವಾಗಿ ಚಲಿಸುವುದೋ ತದನುಗುಣವಾಗಿ ಈ ಭಾವಗಳೂ ಅಷ್ಟೇ ತ್ವರೆಯಿಂದ ಚಲಿಸಬೇಕು. ಉದಾ:— ಒಬ್ಬನು ಹುಚ್ಚನ ಭೂಮಿಕೆಯನ್ನು ವಹಿಸಿರುವನೆಂದು ಊಹಿಸಿರಿ ಅವನು ನಾಲ್ಕು ಕ್ಷಣದ ಅವಧಿಯಲ್ಲಿ ಹತ್ತೆಂಟು 'ರಸದ' ಮಾತುಗಳನ್ನಾಡುವನು. "ಅಪ್ಪಾ ನೀನು ಸತ್ತೆಯಾ, ನೀನು ಯಾಕೆ ಸತ್ತೀ? ಸತ್ತರೆ ಒಳಿತೇ ಆಯಿತು." ಇಲ್ಲಿ ಒಂದೇ ಮಾತಿನಲ್ಲಿ, ಮೊದಲು ಪ್ರಕಟವಾಗಬೇಕಾದ ತಾಪವು ಕೂಡಲೆ ಬದಲಾಯಿಸಿ, ಕೋಪ ತಿರುಗಿ ಆನಂದ ಹೀಗೆ ಆ ಮಾತನಾಡುವ ಅಲ್ಪಾವಧಿಯಲ್ಲಿ ಸಾಗಬೇಕು.

ನಟನು ಒಂದು ಕನ್ನಡಿಯ ಎದುರಿಗೆ ನಿಂತು ಮಾತನ್ನು ಗಟ್ಟಿಯಾಗಿ ಹೇಳುತ್ತ ತದನುಸಾರವಾಗಿ ತನ್ನ ಪ್ರತಿಬಿಂಬದ ಸಹಾಯದಿಂದ ಅಭಿನಯಿಸಬೇಕು. ಅದರಿಂದ ಅವನ ಕುಂದುಗಳೆಷ್ಟೋ ಅವನಿಗೆ ಸೂಚಿಸುವುವು. "ನಿಜವಾಗಿ ಭಾವವು ಮನದಲ್ಲಿ ಮೂಡಿದರೆ ಕನ್ನಡಿಯೇಕೆ" ಎಂದು ಕೆಲವರು ಹೇಳಬಹುದು. ಅದು ತೀರ ಅವಶ್ಯವಿದೆ. ಏಕೆಂದರೆ, ಕೆಲವರು ನಿಜವಾಗಿ ಭಾವಪೂರ್ಣವಾಗಿ ನಕ್ಕರೂ ಅವರ ಮೋರೆಯಲ್ಲಿ ಅರೆ ಅಳುವ ಚಿಹ್ನೆಯೇ ಕಾಣುವುದು. ಇಂತಹ ಅನೇಕ ನಟರ ನಿದರ್ಶನಗಳು ನಮ್ಮ ಅನುಭವದಲ್ಲಿವೆ. ಇತರ ವಿಚಾರಗಳನ್ನು ಮನದಿಂದ ಕಿತ್ತೊಗೆದು ಆ ವಿಷಯದ ಚಿಂತನೆಯನ್ನೇ ಮಾಡುತ್ತ, ಕನ್ನಡಿಯ ಸಹಾಯದಿಂದ ನಟನೆಯನ್ನು ಕಲಿತುಕೊಂಡರೆ ಉತ್ತಮ ನಟನಾಗುವುದು ಬಹಳ ಕಠಿಣ ಕೆಲಸವಲ್ಲ. ಕೆಲವು ನಟರು, ಅತಿರೇಕ ಅಭಿನಯವನ್ನು ಮಾಡುವರು. ನಾವು ನಮ್ಮ ಲೌಕಿಕ ವ್ಯವಹಾರದಲ್ಲಿ ಮಿತ್ರರ ಬಳಿ ಹೇಗೆ ವರ್ತಿಸುವೆವು ಎಂಬುದನ್ನು ಪರಿಶೀಲಿಸಿದರೆ ನಮಗೆ ನಟನೆಯ ಹದವು ಚೆನ್ನಾಗಿ ತಿಳಿಯುವುದು. ಇನ್ನು ಸ್ತ್ರೀ ಭೂಮಿಕೆಯನ್ನು ವಹಿಸುವ ನಟರು, ಆದಷ್ಟು ಶಾಳ್ಮೆಯಿಂದ ತಮ್ಮನ್ನು ತಾವೇ ಹೆಣ್ಣಾಗಿ ತಿಳಿಯಬೇಕು. ಮಾತ್ರವಲ್ಲ ಸ್ತ್ರೀಯರ ಲೌಕಿಕ ವ್ಯವಹಾರಶೀಲನದಿಂದ ಅವರ ನಟನೆಯನ್ನು ಕಲಿಯಬೇಕು. ಕೆಲವು ರಂಗಭೂಮಿಯಲ್ಲಿ ನಾವು, ಅಂತಹ ನಟರು, ಕೈಗಳಿಂದ ಅತಿರೇಕ ಹಾವಭಾವಗಳನ್ನು ತೋರಿಸುವುದನ್ನು ಕಾಣುವೆವು. ಪ್ರತಿ ಮಾತಿಗೂ, ಅವರ ಕೈಗಳು ಒಂದೊಂದು ವಿಧವಾಗಿ ನರ್ತಿಸುವುವು ಇದು ನಿಜವಾದ ಪರಿಶೀಲಕರಿಗೆ ಅಸ್ವಾಭಾವಿಕತನದ ಪರಮಾವಧಿಯೆಂದು ತೋರುವದು. ಸ್ತ್ರೀ ಅಭಿನಯವನ್ನು ದೇಹದ ಅಲ್ಪ ಸ್ವಲ್ಪ ಚಲನದಿಂದ ಕೂಡಿದ್ದು ಬಹು ಮಟ್ಟಿಗೆ ಮೋರೆಯಿಂದಲೇ ತೋರಿಸುವುದು ಒಳಿತು.

ಅನ್ಯರೊಡನೆ ಮಾತನಾಡುವಾಗ ನಟನು ಒಂದು ಹೆಜ್ಜೆ ಮುಂದರಿದು ಸಭಿಕರ ಕಡೆಗೆ ಮೋರೆಮಾಡಿ ಆಡುವುದು ಒಳಿತು. ತನ್ನ ಸ್ಥಳವನ್ನು ಬಿಟ್ಟುಬಿಟ್ಟು ಮುಂದಕ್ಕೆ ಅದಕ್ಕಾಗಿ ಬರುವುದು ಒಳಿತಲ್ಲ.

ರಂಗಭೂಮಿಯನ್ನು ಬಿಟ್ಟುಹೋಗುವ ಕಾಲದಲ್ಲಿ ಅವನು ತನ್ನ ಮಾತನ್ನು, ಭೂಮಿಯ ಬದಿಯಲ್ಲಿರುವ ಪಾರ್ಶ್ವಚಿತ್ರ (Side-wings)ಗಳ ಬಳಿಗೆ ಸರಿಸರಿದು, ಮುಗಿಸಿ ಒಳಕ್ಕೆ ಹೋಗಬೇಕು. ಹಾಗಲ್ಲದೆ ರಂಗಭೂಮಿಯ ನಡುವೆ ನಿಂತು, ಮಾತನ್ನು ಮುಗಿಸಿ, ಉಳಿದ ಹಾದಿಯನ್ನು ನಿರಸವಾಗಿ ನಡೆದುಹೋಗುವುದರಲ್ಲಿ ಸೊಬಗಿಲ್ಲ.

ನಟನಿಗೆ ರಂಗಭೂಮಿಯು ಮನೆಯಂತಿರಬೇಕು. ಅವನು ಪಾರ್ಶ್ವಚಿತ್ರಗಳ ಬಳಿ ನಿಂತಿರುವ, ಇಲ್ಲವೇ, ಪ್ರೇಕ್ಷಕ ಗಣದಲ್ಲಿ ಕುಳಿತಿರುವ ತನ್ನ ಮಿತ್ರರ ದರ್ಶನದಿಂದ ಲಜ್ಜಿತನಾಗಿ ತನ್ನ ಉದ್ದೇಶವನ್ನು ಮರೆಯಬಾರದು.

ನಟನು ಯಾವಾಗಲೂ ತನ್ನ ಮೋರೆಯ ಅರ್ಧವು ಸಭಿಕರಿಗೆ ಕಾಣಿಸುವಂತೆ, ಮಾಡಬೇಕು. ಅವನ ಮಾತುಗಳು ಎದುರಾಳಿಗೆ ಸಂಬಂಧಿಸಿದುವಾದರೂ ಅವನು, ಆಗಾಗ ಸಭಿಕರ ಕಡೆಗೆ ಮೋರೆಮಾಡಿ ಮಾತನ್ನು ಮುಂದರಿಸಬೇಕು. ಈ ಕೆಲವು ಸಿದ್ಧಾಂತಗಳು ಸ್ವಾಭಾವಿಕತನವನ್ನು ಕೆಲವು ರೀತಿಯಲ್ಲಿ ತೊರೆಬಿಡುವುವಾದರೂ, ನಾಟಕವು ಪ್ರೇಕ್ಷಕರ ಸಲುವಾಗಿ ಇರುವುದರಿಂದ ಹಾಗೆ ಮಾಡಲೇ ಬೇಕಾಗುವುದು.

ಇನ್ನು ನಮ್ಮ ನಾಡಿನ ಅನೇಕ ನಟರಲ್ಲಿ ಇದೊಂದು ಹಾಳು ಕೊರತೆಯಿರುವುದು. ಅದೇನೆಂದರೆ— ಅವರು ರಂಗಭೂಮಿಯಲ್ಲಿ ನಟಿಸುತ್ತಿರುವರಾದರೂ, ಅವರ ದೃಷ್ಟಿ ಪಥವು ನಾಟಕ ದೃಶ್ಯದಿಂದ ಪ್ರೇಕ್ಷಕರೊಳಗಿನ ಕೆಲವು ವ್ಯಕ್ತಿಗಳ ಕಡೆಗೆ ಹರಿಯುತ್ತದೆ. ಇಂತಹ ನೀಚ ಹವ್ಯಾಸವುಳ್ಳ ನಟರಿಗೆ ಸಮಾಜದ ಎಲ್ಲಾ ತಿರಸ್ಕಾರವೂ ಇರಲಿ.

ಒಂದು ಕೊಲೆಯ ದೃಶ್ಯವನ್ನು ತೋರಿಸುವುದಾದರೆ, 'ಕೊಲೆ ಮಾಡುವವನು' 'ಮಾಡಿಸಿಕೊಳ್ಳುವವನು' ಇವರೇ, ತಕ್ಕ ನಟನೆಯನ್ನು ಮಾಡಿದರೆ ಸಾಕು ಎಂದು ಯಾರೂ ತಿಳಿಯಬಾರದು. ಆ ದೃಶ್ಯದ ಕಾಲದಲ್ಲಿ ಅಲ್ಲಿರತಕ್ಕ ಎಲ್ಲಾ ನಟರು (ಸೇವಕನ ವರೆಗೂ) ಸಮಯಕ್ಕೆ ತಕ್ಕಂತೆ ಕೋಪ, ತಾಪ ಇವುಗಳನ್ನು ತೋರಿಸಲೇ ಬೇಕಾಗುವುದು.

ಹೀಗೆ ನಾವು ನಟರಿಗೆ ಕೊಡಬಹುದಾದ ಅನೇಕ ಸೂಚನೆಗಳಿದ್ದರೂ ಮುಖ್ಯ ಕೆಲವನ್ನು ಸಂಕ್ಷಿಪ್ತವಾಗಿ ಮೇಲಿನ ಕೆಲವು ಸೂಚನೆಗಳ ಮೂಲಕ ತಿಳಿಸಿರುವೆವು. ಇದರ ಯಥಾಯೋಗ್ಯ ವಿಮರ್ಶೆಯನ್ನು ನಟರು ಮಾಡುವುದು ಅವಶ್ಯವಿದೆ. ಇತಿ —ಕೌಶಿಕ.

STOCK TAKING SALE!! SALE!!

22 Carat Rolled - Gold Wrist Watches with a guarantee stamp of ten years. Each watch is supplied with a silk strap. Durable & strong in Mechanism. Every watch is worth its weight in gold. Do not miss this opportunity. Else you may loose the chance.


No. 909 Rs. 13

No. 910 Rs. 11


No 911 Rs. 10


No. 912 Rs. 13


No. 310 Rs. 13

No. 914 Rs. 11


No. 915 Rs. 11


No. 916 Rs. 11


No. 917 Rs. 10

No. 918 Rs. 9

No. 919 Rs. 10

No. 920 Rs. 10


No. 921 Rs. 10

No. 922 Rs. 10

No. 923 Rs. 10

No. 924 Rs. 11

No.925 Rs. 8.

N.B.—When ordering, it is sufficient that the number of the watch is mentioned. All our watch es are guaranteed for ten years. These present concessions are made simply as we have heavy supplies of the lines in question. These prices will be withdrawn as soon as o ur stocks are sold out. The prices of our watches are exceptionally low and cheap and these watches are absolutely unobtainable elsewhere for this excellent value.

P. S.—Our loss in these goods is your gain; Place your order while you have the chance and Tell your friends.

—— Write to ——

The "LUXOR" WATCH MART, P. B. 17, MADRAS.

Show Rooms : 164, China Bazaar, near Bairagi Matam Koil, Madras.



OF QUALITY-DE-LUXE

THE MODERN REGULATOR = **Rs. 3**

MADE in the best wall-nut case and is guaranteed for five years. Gives correct time and is perfect. Largely used by leading Societies, Clubs and the public at large. A trial is solicited.

FREE! FREE!!

"C" Regd. TIME PIECE given FREE

TO ANY ONE



ordering for our "Tara Lever 18 carat rolled gold Pocket Watch" with engine turned back and guaranteed for five years which is duly stamped on the dial, by the manufacturers, costing **Rupees Five.**

We give as a **Free Offer**, our "C" Regd. Time Piece.

Write now. This Offer is limited.

Can be had from

The "LUXOR" WATCH MART, P.B.17, MADRAS

Show Rooms: 164, China Bazaar, near Bairagi Matam Koil, MADRAS.



OUR "TIC-TAK" RINGS IN EVERY HOME, EVERY OFFICE, AND IN EVERY PLACE ::

"TIC-TAK" CLOCK

Rs. 3

"TIC-TAK" (Regd). **Price Rs. 3**

Clocks have earned a name that cannot be beaten. See that each clock bears the name on the dial.

A SOUND INVESTMENT

You needn't bother yourself about your investment of a small sum of RUPEES FIVE. This investment will not be a loss but a sound investment.



Our Office Clock though it costs more than its price, we are giving away for this small sum of RUPEES FIVE made in the best and the most handsome wall-nut case.

Guaranteed for Five Years.

The best, the cheapest and the most economical Office Clock.

WRITE NOW - WRITE FOR PRICE LIST.

The "LUXOR" WATCH MART, P.B.17, MADRAS

Show Rooms: 164, China Bazaar, near Bairagi Matam Koil, MADRAS.

ಎಪ್ಪ-ವ್ಯಾಲಯವಾಧಿಕಾರಿಗಳನ್ನು ಕ ಸುವ ಪ್ರಶ್ನೆಗಳನ್ನು ದ್ದೇನೆ, ನಮ್ಮ ಕಡಿ (ಲೇಖನಿ) ಮುರಿವದು. ಬೇಕ ಮವನ್ನಾ ಯೂ ನಾವು ಊಥಿಗೆ ತರುವ ಅಸ್ತ್ರ ವೈಶಿಷ್ಟ್ಯದಲ್ಲಿ ಕ್ಷ ಹಾಸುವ ಧಿಕ ಪ್ರಸಂಗವು ಹಾಸ್ಯಾಸ್ಪದವೆಂದು ಸ್ಪಷ್ಟವಾಗಿ ಸೂಚಿಸಲು ರಾಜ್ಯದ ಸೇವಕರ ಅಪ್ಪಣೆಕೇಳುತ್ತೇವೆ.

ಭಾಷಾಭಿಮಾನಿ.

ಮೈಸೂರು ನ್ಯಾಯುವಿಧಾಯಕ ಸಭೆ.

ನನ್ನ ಟಿಪ್ಪಣಿ ಪುಸ್ತಕದಿಂದ

ಮೈಸೂರು ನ್ಯಾಯ ವಿಧಾಯಕ ಸಭೆಯು ೨೦ನೆಯ ತಾರೀ ಗೆ ಮುಗಿಯಿತು. ಅಂದರೆ ಮುಂದಿನ ಕೂಟದ ವರೆಗೂ ಸದಸ್ಯ ರಿ ತಿಂಡಿ ದೊರೆಯಲಿಕ್ಕಿಲ್ಲ!

† + †

ವರ್ತಮಾನ ಪತ್ರಿಕೆಗಳ ವರದಿಯ ಪ್ರಕಾರ ಪ್ರೇಕ್ಷಕ ಸ್ಥಾ ವು ಜನಜನಿತವಾಗಿತ್ತು. ಸತ್ಯಾಂಶದ ಪ್ರಕಾರ ನಿಬಿಡವಾಗಿದ್ದ . ಪ್ರೇಕ್ಷಕರಿಗೂ ಇನ್ನುಮೇಲೆ ತಿಂಡಿ ಕೊಡುತ್ತಹೋದರೆ ಹೆ ಜನ ಬಂದಾರು. ಇಲ್ಲದಿದ್ದರೆ ಬಿಟ್ಟದ್ದು ಬಿಟ್ಟು ಈ ಜರತಾರಿ ನಾಟಗಳ ಅಭಿನಯ ನೋಡಲಿಕ್ಕೆ ಯಾರು ಬಂದಾರು!

† + †

ಎಂಡಸನ್ ಕೌನ್ಸಿಲರ್ ಗಾಂಧಿ ಸಾಹೇಬರು ಸೌಖ್ಯವಾದಿ ಸ್ಟ್ರಮಿಸ್ಟ್) ಗಳೋ ದುಃಖವಾದಿಗಳೋ (ಪೆಸಿಮಿಸ್ಟ್)ಎಂಬ ವಿಚಾ ಲ್ಲಿ ನನಗೊಂದು ದೊಡ್ಡ ಸಂಶಯ. ಸಾರ್ವಜನಿಕ ಸದಸ್ಯರನ್ನು ರಿಪಲಿಸಿ ಅವರು ಮಾತನಾಡುತ್ತಿದುದನ್ನು ಕಂಡರೆ ಇವರು ಸಿ. ಎಸ್. ಪರೀಕ್ಷೆ ಕೊಟ್ಟು ಆ ಸ್ವರ್ಗಜನಿತ ಪದವಿಯಾದ ಕ್ಟರ್ ಕೆಲಸಕ್ಕೇಕೆ ಬರಲಿಲ್ಲವೋ ಎಂದು ಖೇದವಾಗುತ್ತದೆ. ಸುದ್ದಿಗೆ ಹೇಳಿಮಾಡಿಸಿದ ಹಾಗಿದ್ದಾರೆ.

† + †

ರೇವಿನ್ಯೂ ಕಮಿಷನರಾದ ಬಾಲ ಸುಂದರಮಯ್ಯರವರು ಮಾ ತ್ತ ಡುತ್ತಸದಸ್ಯರನ್ನು "ಪೇಡಿ" ಗಳೆಂದರು. ಏನಂದ ? ನಮ್ಮ ಜರತಾರಿ ಪೇಟಗಳ ಗುಂಡುಹೊಟ್ಟೆಯ ಸದಸ್ಯರ ಸತ್ಯ ಮೂರ್ತಿ, ಗೋಸ್ವಾಮಿ, ರಂಗಯ್ಯರ್, ಮುಂತಾದ ನ ಜನವಿದ್ದಿದ್ದರೆ.... ....ಕೇವಲ "ರೇ" ರಾಜ್ಯ.

† + +

ನ್ಯಾಯವಿಧಾಯಕ ಸಭೆಯೆಲ್ಲಾ ಮುದುಕರ ಗುಂಪು. ! ಮಾತೇ ಆಡಬಾರದೆಂತ ಅವರಿರುತ್ತಾರೆ ಏನೋ ಚಪಲ ತ್ ಒಂದು ಮಾತು ಆಡಿತೂಂದರೆ ಟೊಂಕ ಮುರಿಯ ಎದುರ ಸಿಂದ ಪೆಟ್ಟುತಿಂದು ಕುಳಿತುಕೊಳ್ಳುತ್ತಾರೆ. ಇನ್ನು ಮೇಲಾ ಜವರನ್ನು ಬಿಟ್ಟರೆ ಗತಿಯಿಲ್ಲವೇನೋ?

+ + +

೧೮ನೇಯ ತಾ|| ದಿವಸ ರೈಟ್ (ಯಾವಾಗಲೂ ಅಲ್ಲ) ಆನರೇಬಲ್ ಥಾಮಸ್. ಶಾ. ಎಮ್ ಸಿ. ಯವರು ಮಾಸ್ಯ ಪ್ರೇಕ್ಷ ಕರಾಗಿ ಬಂದರು. ಶ್ರೀನಿವಾಸಶಾಸ್ತ್ರಿಗಳಿಗೆ ದೊರಕಿದ ಮನ್ನ

ಆಕ್ಷೇಪದ ಬರಹದಲ್ಲಿ 'ವಾದವಿವಾದಕ್ಕೆ' 'ಮಾಡುವುದು'ಎಂದು ಕೆಲವು ಸಿಪ್ಪಿಯದ ಶಿಕ್ಷಣವು ನಮಗೆ ನಾಸ್ತಿಪಿಲ್ಲ, ನಾವು



FREE

"C"

given FREE

TO ANY ONE

ordering for our "Tara Lever 18 carat rolled gold Pocket Watch" with engine turned back and guaranteed for five years which is duly stamped on the dial, by the manufacturers, costing **Rupees Five.**

We give as a **Free Offer**, our "C" Regd. Time Piece.

Write now. This Offer is limited.

Can be had from

The "LUXOR" WATCH MART, P.B.17, MADRAS

Show Rooms: 164, China Bazaar,
near Bairagi Matam Koil, MADRAS.

AK"
OCK
. 3

lave earned that cannot m. See that ck bears the n the dial.

MENT

Office Clock ...t it costs more than its price, we are giving away for this small sum of RUPEES FIVE made in the best and the most handsome wall-nut case.

yourself about your investment of a small sum of RUPEES FIVE This investment will not be a loss but a sound investment.



Guaranteed for Five Years.

The best, the cheapest and the most economical Office Clock.

WRITE NOW - WRITE FOR PRICE LIST.

The "LUXOR" WATCH MART, P.B.17, MADRAS

Show Rooms: 164, China Bazaar,
near Bairagi Matam Koil, MADRAS.

..., ...ವಿದ್ಯಾಲಯಾಧಿಕಾರಿಗಳನ್ನು ಈ ...ವ ಪ್ರಶ್ನೆಗಳನ್ನು ...ರಲ್ಲಿ ಮಾಡುವದು ನ್ಯಾಯವಲ್ಲವೆಂದು ಸೂಚಿಸುತ್ತೇವೆ. ...) ಶ್ರೀ ಮನ್ಮಹಾರಾಜರವರ ಸರಕಾರ ಆಶ್ರಯದಲ್ಲಿ ನಿಂತಿ... ಸಾಹಿತ್ಯಸಭೆಯ ಪತ್ರಿಕೆಯು ಪರಮಾವಧಿಯು ...ಂಬದಿಂದ ...ವಾಗಿರುವದು. ಅನ್ಯರ ಸಮಾಜದ ಮಾತನ್ನೆತ್ತಿದರೆ ಸ್ವ...ರದು ಕೆಂಗಣ್ಣು ...ದರು ... ಟೀಕಾಕರ್ತರು ...ಯವರು ... ... ಬೆಳಗಾವಿ ...ವನು ...ಯೆಂದು ಆರಾದರೂ ಹೇಳಿಯಾರು. ...) 'ಕ್ರಮಿಕ ಪುಸ್ತಕ' ...ದಲ್ಲಿ, ಕನ್ನಡದ ಹಿರಿಯ ಮೈಸೂರಿನವರಂತ ಕೆಲವು ...ನ್ನು ಸ್ವೀಕರಿಸಬೇಕು. ...ಮಾಡಿದ್ದಾರೆ. ಕೆಲವನ್ನು ಅವರ ಕ್ರಮಿಕ ಪುಸ್ತಕ... ಅನ್ಯತ್ರದಿಂದಲೂ ...ಪಡಿಸಿ "ಅಕ್ಷರಶಃ" ಹಾಕ...

...ಕಥೆಗಳು '...ವೆ. ಆದರೆ ಅವು ವಿದ್ಯಾರ್ಥಿ ...ಕಮಲದಲ್ಲಿ ...ವಷ್ಟು ಧೈರ್ಯವು ನಮಗಿಲ್ಲ. ...ದಿಂದ ಕೈಕ್ಯ, ಮಂಗಳಾರತಿಯಿಂದ ...ವೆಂದು ...ದ ...ಸಿದ್ದಾರು. ಕ್ರಮಿಕ ಪುಸ್ತಕಗಳು ಸ್ವಾತಿಗಾದಾಯಕ... ಅನೇಕ ವಿಷಯಗಳನ್ನು ಒಳಗೊಂಡಿರಬೇಕೆಂದು ಅಪೇಕ್ಷಿಸಿ... ತಪ್ಪಾಗಲಿಕ್ಕಿಲ್ಲ.

'ಏಕೀಕರಣ' ದ ಗೊಂದಲವು 'ಕ್ರಮಿಕ' ದಲ್ಲಿ ಮತ್ತೇ ... 'ಏಕೀಕರಣ' ವೆಂಬ ಇದೊಂದು ಹುಚ್ಚು ಮಾತಾಗುವಷ್ಟು ...ವಿವಾದ ಮಾಡುವ ವಿಷಯವಲ್ಲ. ಮೈಸೂರಿನವರ ...ಯವು ... ಮಾದರಿ. ... ಪ್ರಯೋಗ ಮಾಡ... ಅವರ ವಾಙ್ಮಯವನ್ನು ...ವಾಗಿ ಅವಲೋಕಿಸಿ ...ರಲ್ಲಿಯ ಒಳ್ಳೆಯ ಭಾಗವನ್ನು ಸ್ವೀಕರಿಸಿದರೆ ...ಸರಿ ...ಗುವದು. ಕಮಿಟಿಯಲ್ಲಿ ಮೈಸೂರಿನವರಿದ್ದರೂ ... ... ಮೈಸೂರಿನವರ ಕೆಲವು ...ಗಳನ್ನು ಅಕ್ಷರಶಃ ಹಾಕ...ವೆಂದು ಮೇಲೆಯೇ ನಾವು ಸೂಚಿಸಿದ್ದೇವೆ ... ಮೇಲೆ ...ಕಾರವಾಗಿ ಏಕೀಕರಣ, ಏಕೀಕರಣವೆಂಬ ...ದಲ್ಲಿ ಅರ್ಥವಿಲ್ಲ.

...ತ್ತರಾದ ನಾವೆಲ್ಲರಿರುವಾಗ, ಪೂರ್ವಾಪರಾವಲೋಕನ ...ಗಳಿಂದ ಅವಲೋಕಿಸುವ ಸಂಪಾದಕರು ಪರಸ್ಪರವಾಗಿ ನಿಂತಿ... ...ಏಕೀಕರಣವು ಸಹಜ ಸಾಧ್ಯವೆಂದು ... ...ಲ್ಲಿ ತಪ್ಪಿಸಿಕೊಳ್ಳುವ ಏಕೀಕರಣದ ಭಾಷೆಯು ಬ್ಯಾಕನ್ನರ ... ... ಅವಿಚ್ಛಿನ್ನ ... "...ರ ...ವ್ಯಗಳನ್ನು ಸಂಪಾದಕರು ಅವಲೋಕಿಸಿದಲ್ಲಿ ... ಕನ್ನಡದ ...ಯು ಗೋಚರಿಸುವದು. ನಮ್ಮ ಸಂಪಾದಕರು ಅದನ್ನು ... ...ವಾಗಿ ಅಭ್ಯಾಸಿಸಬೇಕು." ಎಂದು 'ವಿಶ್ವಕರ್ನಾಟಕ' ಪತ್ರಿಕೆಯವರು ಹೇಳಿದ್ದು ...ರಣೀಯವಾಗಿರುವದು.

ಪ. ನಾ. ವಾಸುದೇವಾಚಾರ್ಯರು 'ಮಾಡುವುದು' ಎಂಬ ...ಯ 'ಪ್ರ...ಕಾರ'ವನ್ನು ...ಸಿದ್ದರು. ಅದು ಹೇಗಾದರೂ ಇರಲಿ. ...ದ ...ವಲ್ಲಿ 'ಮಾಡುವದಕ್ಕೆ' 'ಮಾಡುವುದು' ಎಂದು ... ...ಏಕೀಕರಣವು ನಮಗೆ ಸಾಧ್ಯವಿಲ್ಲ. ನಾವಿ...ದ್ದೇವೆ, ನಮ್ಮ ಕಡ್ಡಿ (ಲೇಖನಿ) ಯಿರುವದು. ಬೇಕಾದುವನ್ನು ಮಾ...ದರೂ ನಾವು ರೂಢಿಗೆ ತರುವ ಅನ್ಯರ ವೈಶಿಷ್ಟ್ಯದಲ್ಲಿ ಕ್ಷಿಪಿಸುವ ಅಧಿಕ ಪ್ರಸಂಗವು ಹಾಸ್ಯಾಸ್ಪದವೆಂದು ಸ್ಪಷ್ಟವಾಗಿ ಸೂಚಿಸಲು ವಾಙ್ಮಯ ಸೇವಕರ ಅಪ್ಪಣೆ ಕೇಳುತ್ತೇವೆ.

ಭಾಷಾಭಿಮಾನಿ.

ಮೈಸೂರು ನ್ಯಾಯವಿಧಾಯಕ ಸಭೆ.

ನನ್ನ ಟಿಪ್ಪಣಿ ವಹಿಯಿಂದ

ಮೈಸೂರು ನ್ಯಾಯ ವಿಧಾಯಕ ಸಭೆಯು ೨೦ನೆಯ ತಾರೀ ಖಿಗೆ ಮುಗಿಯಿತು. ಅಂದರೆ ಮುಂದಿನ ಕೂಟದ ವರೆಗೂ ಸದಸ್ಯ ರಿಗೆ ತಿಂಡಿ ದೊರೆಯಲಿಕ್ಕಿಲ್ಲ!

† + †

ವರ್ತಮಾನ ಪತ್ರಿಕೆಗಳ ವರದಿಯ ಪ್ರಕಾರ ಪ್ರೇಕ್ಷಕ ಸ್ಥಾನವು ಜನಜನಿತವಾಗಿತ್ತು. ಸತ್ಯಾಂಶದ ಪ್ರಕಾರ ನಿಬಿಡವಾಗಿದ್ದಿತು. ಪ್ರೇಕ್ಷಕರಿಗೂ ಇನ್ನುಮೇಲೆ ತಿಂಡಿ ಕೊಡುತ್ತಹೋದರೆ ಹೆಚ್ಚು ಜನ ಬಂದಾರು. ಇಲ್ಲದಿದ್ದರೆ ಬಿಟ್ಟಿದ್ದು ಬಿಟ್ಟು ಈ ಜರತಾರಿ ರುಮಾಲುಗಳ ಅಭಿನಯ ನೋಡಲಿಕ್ಕೆ ಯಾರು ಬಂದಾರು!!

† + †

ಎರಡನೆಯ ಕೌನ್ಸಿಲರ್ ಗಾಂಧಿ ಸಾಹೇಬರು ಸೌಖ್ಯವಾದಿ (ಆಪ್ಟಿಮಿಸ್ಟ್) ಗಳೋ ದುಃಖವಾದಿಗಳೋ (ಪೆಸಿಮಿಸ್ಟ್) ಎಂಬ ವಿಚಾರದಲ್ಲಿ ನನಗೊಂದು ದೊಡ್ಡ ಸಂಶಯ. ಸಾರ್ವಜನಿಕ ಸದಸ್ಯರನ್ನು ನೋಡಲಿಸಿ ಅವರು ಮಾತನಾಡುತ್ತಿದುದನ್ನು ಕಂಡರೆ ಇವರು ಐ. ಸಿ. ಎಸ್. ಪರೀಕ್ಷೆ ಕೊಟ್ಟು ಆ ಸ್ವರ್ಗಜನಿತ ಪದವಿಯಾದ ಕಲೆಕ್ಟರ್ ಕೆಲಸಕ್ಕೇಕೆ ಬರಲಿಲ್ಲವೋ ಎಂದು ಖೇದವಾಗುತ್ತದೆ. ಆ ಹುದ್ದೆಗೆ ಹೇಳಿಮಾಡಿಸಿದ ಹಾಗಿದ್ದಾರೆ.

† + †

ರೆವಿನ್ಯೂ ಕಮಿಷನರರಾದ ಬಾಲ ಸುಂದರಮಯ್ಯರವರು ಮಾತಾಡುತ್ತ ಆಡುತ್ತ ಸದಸ್ಯರನ್ನು "ಪೇಡಿ" ಗಳೆಂದರು. ಏನೆಂದರೇನು? ನಮ್ಮ ಜರತಾರಿ ಪೇಟಗಳ ಗುಂಡುಹೊಟ್ಟೆಯ ಸದಸ್ಯರ ಬದಲು ಸತ್ಯಮೂರ್ತಿ, ಗೋಸ್ವಾಮಿ, ರಂಗಯ್ಯರ್, ಮುಂತಾದ ತರಪಿನ ಜನರಿದ್ದಿದ್ದರೆ............ಕೇವಲ "ರೇ" ರಾಜ್ಯ.

† + †

ನ್ಯಾಯವಿಧಾಯಕ ಸಭೆಯೆಲ್ಲಾ ಮುದುಕರ ಗುಂಪು. ಪಾಪ! ಮಾತೇ ಆಡಬಾರದೊಂತ ಆವರಿರುತ್ತಾರೆ. ಏನೋ ಚಪಲ ವಶಾತ್ ಒಂದು ಮಾತು ಆಡಿತೊಂದರೆ ಟೊಂಕ ಮುರಿಯ ಎದುರ ಕಡೆಯಿಂದ ಪೆಟ್ಟು ತಿಂದು ಕುಳಿತುಕೊಳ್ಳುತ್ತಾರೆ. ಇನ್ನು ಮೇಲಾದರೂ ಇವರನ್ನು ಬಿಟ್ಟರೆ ಗತಿಯಿಲ್ಲವೇನೋ?

† + †

೧೮ ನೇಯ ತಾ|| ದಿವಸ ರೈಟ್ (ಯಾವಾಗಲೂ ಅಲ್ಲ) ಆನರೆಬಲ್ ಥಾಮಸ್, ಸಾ. ಎಮ್. ಸಿ. ಯವರು ಸಾಮಾನ್ಯ ಪ್ರೇಕ್ಷಕರಾಗಿ ಬಂದರು. ಶ್ರೀನಿವಾಸಶಾಸ್ತ್ರಿಗಳಿಗೆ ದೊರಕಿದ ಮನ್ನ

ಣೆಯು ಶಿವರಿಗೆ ಈ ಸಭೆಯಲ್ಲಿ ದೊರೆಯಲಿಲ್ಲ ಕೂಲಿಯವಂ ಪಂಗಡದವರಾಗಿರುವುದೇ ಪ್ರಾಯಃ ಕಾರಣವಿರಬಹುದು, ಶಿಕ್ಷಕರ್ಮನ ಕೃತಿಯನ್ನು ವಿಚಾರಿಸಲು ಹೇಗೆ ಅಶಕ್ಯವೋ, ಹಾಗೇ ನಮ್ಮ ವೈಸರಾಯ ಸರಕಾರದ ಕೃತಿಗಳನ್ನು ವಿಚಾರಿಸುವುದು ಅಶಕ್ಯ!

† + †

ದಿವಾನ ಮುಜಾಫರಸಾಹೇಬರು ಮಿಕ್ಕ ವಿಷಯಗಳಲ್ಲಿ ಹೇಗೆ ಇದ್ದರೂ ನಗುವುದರಲ್ಲಿ ಅದ್ವಿತೀಯರು. ಯಾವಾವುದರಲ್ಲಿ ಕಡಿಮೆಯಾದದ್ದನ್ನು ಇದರಲ್ಲಿ ಸರಿದೂಗಿಸುತ್ತಾರೆ. ಪ್ರಜಾಪಕ್ಷದ ನ್ಯಾಯವಿಧಾಯಕರ ತಾಮಸಕ್ಕೆ ಇವರ ನಗೆಯೇ ಕಾರಣವೋ ಎಂದು ನನಗೆ ಸಂದೇಹವಾಗುತ್ತದೆ.

† - †

"ವಿಶ್ವಭ್ರಾತಾ"

[ಇನೆಯ ಪುಟದಿಂದ ಬಂದಿದ್ದು]

ಸ್ವಾತಂತ್ರ್ಯದ ಜ್ಯೋತಿಯನ್ನು ನಾಡಿನಲ್ಲೆಲ್ಲ ಹೊತ್ತಿಸಿತು. ಪಾಶವೀ ಶಕ್ತಿಯು ಆತ್ಮಿಕ ಶಕ್ತಿಯ ಮುಂದೆ ಹೀನವಾದುದೆಂದು ತೋರಿಸಿಕೊಟ್ಟಿತು. ನಮ್ಮ ಮಾರ್ಗದಲ್ಲಿ ಅಡ್ಡಿಗಳು ಬಂದರೆ ಅವುಗಳನ್ನು ಎಲ್ಲರೂ ಒಟ್ಟಾಗಿ ದೂಡೋಣ. ರಾಷ್ಟ್ರಕ್ಕೆ ಗೆಲವನ್ನು ತರೋಣ.

ಗೋಹಾಟಿಯ ಮಹಾಸಭಾಧ್ಯಕ್ಷರಾದ

ಶ್ರೀನಿವಾಸ ಅಯ್ಯಂಗಾರರವರ ಭಾಷಣದ ಸಾರಾಂಶ.

'ಸ್ವಾತಂತ್ರ್ಯಕ್ಕಾಗಿ ಒಕ್ಕಟ್ಟಾಗಿ ನಿಲ್ಲಿರಿ' ಸುಧಾರಣೆಗಳು ಮಾರುಕಿಲ್ಲದ್ದು ಇದ್ದು ನಮಗೆ ಸ್ವರಾಜ್ಯವನ್ನು ತಂದುಕೊಡಲಾರವು. ಸರಕಾರೀ ಅಧಿಕಾರಗಳನ್ನು ಸ್ವೀಕರಿಸುವದರಿಂದ ಮಹಾಸಭೆಯು ನೌಕರಶಾಹಿಯ ಮಿತ್ರನಾಗುವುದು. ಜಾತಿತತ್ವವು ರಾಷ್ಟ್ರತತ್ವಕ್ಕೆ ವಿರೋಧಿಯಾಗಿರುವುದು. ನಮಗೆ ಈಗ ಬೇಕಾದುದು ಕ್ರಿಯೆಯು, ಸಂಘಟನೆಯು, ಶಿಸ್ತು. ಈಗ ನಮಗೆ ತತ್ವಜ್ಞಾನವು ಬೇಕಿಲ್ಲ. ಪ್ರತ್ಯಕ್ಷ ಕ್ರಿಯೆಯು ಬೇಕಾಗಿರುವುದು. ವ್ಯಕ್ತಿಸ್ವಾತಂತ್ರ್ಯವು ಬೇಕಿಲ್ಲ. ರಾಷ್ಟ್ರ ಸ್ವಾತಂತ್ರ್ಯವು ಬೇಕಾಗಿರುವುದು. ಕೇವಲ ಧ್ಯೇಯದ ಐಕ್ಯವು ಬೇಕಿಲ್ಲ. ಪದ್ಧತಿ ಮತ್ತು ಕ್ರಿಯೆಯಲ್ಲಿ ಐಕ್ಯವು ಬೇಕಾಗಿರುವುದು. ಮತವಿರೋಧವು ಬೇಕಿಲ್ಲ. ನಮ್ಮ ಮುಖ್ಯ ಕರ್ತವ್ಯವೆಂದರೆ ಎಲ್ಲ ಶಕ್ತಿಗಳನ್ನು ಒಟ್ಟುಗೂಡಿಸಿ, ರಾಷ್ಟ್ರದ ಬೇಡಿಕೆಯನ್ನು ಮನ್ನಿಸುವದು. ನಾವು ನಮ್ಮ ಸಾಧನಸಂಪತ್ತಿಯನ್ನು ಒಟ್ಟುಗೂಡಿಸಿ, ನಮ್ಮೊಡನೆ ಅಸಹಕಾರ ಮಾಡುತ್ತಿರುವ ನೌಕರಶಾಹಿಯೊಡನೆ ಹೋರಾಡಿ ಸ್ವರಾಜ್ಯವನ್ನು ಗಳಿಸತಕ್ಕದ್ದು. ಈ ಧಾರಣೆಯಲ್ಲಿ ಹುರುಳಿಲ್ಲವೆಂಬುವದು ಅನುಭವಸಿದ್ಧವಾದ ಮಾತು.

ರಾಷ್ಟ್ರತತ್ವವು ಜಾತಿತತ್ವವನ್ನು ಕ್ರಮಶಃ ಗೆಲಿಯುತ್ತಿದೆ. ಮುಸಲ್ಮಾನರು ಹಿಂದುಗಳೆಲ್ಲರು ಒಟ್ಟಾಗಿ ಶಾಂತಮನಸಿನಿಂದಲೂ ಕ್ರೋಧಾವೇಶವಿಮುಕ್ತರಾಗಿಯೂ ತಮ್ಮ ಬಂಧನ ಮುಕ್ತಿಗಾಗಿ ಹೆಣಗತಕ್ಕದ್ದು. ಖಾದಿ, ಮದ್ಯಪಾನ ನಿಷೇಧ, ಅಸ್ಪೃಶ್ಯತಾ ನಿವಾರಣೆ, ಇವು ರಾಷ್ಟ್ರೀಯ ಚಟುವಟಿಕೆಯ ಪ್ರಾಣಭೂತವಾದ ಅಂಗಗಳೆಂಬುವದನ್ನು ಬೇರೆ ಬೇರೆ ರಾಜಕೀಯಮತದವರು ನೆನೆ... ಪತಕ್ಕದ್ದು. ದಕ್ಷಿಣ ಆಫ್ರಿಕೆಯಲ್ಲಿಯವಂಥ ನಿಮ್ಮ ... ಬಾಂಧವರನ್ನು ಮರೆಯಬೇಡಿರಿ. ಸ್ವರಾಜ್ಯವಾದಿಗಳೂ ಸ್ವಾತಂತ್ರ್ಯವಾದಿಗಳೂ ಪ್ರತಿಸಹಕಾರಿಗಳೂ ವಿರೋಧಭಾವನೆಯನ್ನು ಬಿಟ್ಟುಕೊಡ ಬೇಕೆಂದು ನಾನು ವಿನಯದಿಂದ ಬೇಡಿಕೊಳ್ಳುತ್ತೇನೆ. ಸ್ವರಾಜ್ಯದ ಸಲುವಾಗಿ ನಿಮ್ಮ ಜ್ವಲನ್ನಿಷ್ಠೆ ಇರಬೇಕು. ಸ್ವರಾಜ್ಯದ ಹಂಬಲವು ಮತಮತಾಂತರಗಳು ಬದಲಾದಂತೆ ಬದಲಾಗತಕ್ಕದ್ದಲ್ಲ. ಕಾರಾಗ್ರಹದಿಂದ ಕುಗ್ಗಕೂಡದು. ಅಪಜಯದಿಂದ ಮಣಿಯಕೂಡದು. ಆದ್ದರಿಂದ ಫಲಾಭಿಸಂಧಿರಹಿತರಾಗಿ ಕ್ರಿಯೆನಡೆಯಿಸಿದರೆ ಜಯವು ಸಾಧ್ಯವಾಗುವದು. ಕ್ರಿಯೆಯಿಂದ ಜನಕಾದಿಗಳು ಸಿದ್ಧಿಯನ್ನು ಹೊಂದಿದರು. ಲೋಕಸಂಗ್ರಹಾರ್ಥವಾಗಿ ನೀವು ... ವರ್ತಿಸತಕ್ಕದ್ದು. ದೊಡ್ಡವರು ಆಚರಿಸಿದಂತೆ ಉಳಿದ ... ... ನಡೆಸುವರು.

ವರ್ತಮಾನಸಾರ.

ಇಹವೃತ್ತ

'ಸೇರಿಗೆ ಸವ್ವಾಸೇರು' ಎನ್ನುವ ಲೇಖದಲ್ಲಿ ಕಾಣಿಸಿದಂತೆ ಶ್ರೀ. ಎಸ್. ಟಿ ಪಾಟೀಲರು ಶಿಕ್ಷಕರ ಸಭೆಗೆ ಅಧ್ಯಕ್ಷಸ್ಥಾನವನ್ನು ಸ್ವೀಕರಿಸಿಲ್ಲವೆಂದು ನಮಗೆ ಒಂದು ಪತ್ರವು ವಿಜಾಪುರದಿಂದ ಬಂದಿದೆ. ಅದು ಶ್ರೀ. ಪಾಟೀಲರ ಹೆಸರಿನಿಂದಿದ್ದರೂ ನಿಜಯ... ಯಾರದೋ ನಮಗೆ ತಿಳಿಯದು.

ಪರಿಷತ್ತುಗಳ ಸುದ್ದಿಗಳು.

ಕಾಂಗ್ರೆಸ ಪಕ್ಷದವರು ಮಂತ್ರಿಪದವನ್ನು ಸ್ವೀಕರಿಸಬಾರದೆಂದೂ, ಸರಕಾರದವರು ರಾಷ್ಟ್ರದ ಬೇಡಿಕೆಯನ್ನು ಮನ್ನಿಸದಿದ್ದರೆ, ಬಜೆಟ್ಟುಗಳಿಗೆ (ಅಂದಾಜು ಪತ್ರಿಕೆ) ಸಮ್ಮತಿಯನ್ನು ಕೊಡಬಾರದೆಂದೂ ಕಾಂಗ್ರೆಸ್ಸದ ನಿರ್ಣಯವಾಯಿತು.

ಖಾದಿಯನ್ನು ಧರಿಸಬೇಕೆಂದೂ ಪರದೇಶದಲ್ಲಿ ಹಿಂದುಸ್ಥಾನದ ಹಿತಕ್ಕಾಗಿ ಪರದೇಶದಲ್ಲಿ ಪ್ರಚಾರದ ಕೆಲಸವನ್ನು ಮಾಡಬೇಕೆಂದೂ ವಿಷಯ ನಿಯಾಮಕ ಮಂಡಲದವರು ಗೊತ್ತುಮಾಡಿದರು.

೨೬ ನೇ ತಾರೀಖಿನ ದಿವಸ ನಿಖಿಲ ಭಾರತೀಯ ಮಹಮ್ಮದೀಯ ಶಿಕ್ಷಣ ಪರಿಷತ್ತಿನ ೪೯ ನೇ ಅಧಿವೇಶನವು ಜರಗಿತು. ಅಬ್ದುಲ್ ರಹೆಮಾನರವರು ಅಧ್ಯಕ್ಷರಿದ್ದರು. ಡಾಕ್ಟರ ಕಿಚಲೂ ಮೊದಲಾದ ಮಹಮ್ಮದೀಯ ಮುಖಂಡರು ಸಭೆಗೆ ಸೇರಿದ್ದರು. ಬೌದ್ಧಿಕ ಶಾರೀರಿಕ ಮತ್ತು ಔದ್ಯೋಗಿಕ ಶಿಕ್ಷಣದ ಕಡೆಗೆ ಮುಸಲ್ಮಾನರು ಹೆಚ್ಚು ಲಕ್ಷಕೊಡಬೇಕೆಂದು ಪರಿಷತ್ತಿನಲ್ಲಿ ನಿಶ್ಚಯವಾಯಿತು.

ನಿಖಿಲ ಭಾರತೀಯ ಸಾರಸ್ವತ ಪರಿಷತ್ತಿನ ೧ ಅಧಿವೇಶನವು ಕಳೆದ ಆದಿತ್ಯವಾರ ಮುಂಬೈಯಲ್ಲಿ ಜರಗಿತು. ಪಂಡಿತ ಹರಿನಾರಾಯಣ ಶಾಸ್ತ್ರಿ ವಿದ್ಯಾಸಾಗರರವರು ಅಧ್ಯಕ್ಷರಿದ್ದರು.

'ಇಂಡಿಯನ ನ್ಯಾಶನಲ್ ಲಿಬರಲ್ ಫೇಡರೇಶನ' (ಹಿಂದೀ ರಾಷ್ಟ್ರೀಯ ಉದಾರ ಮತವಾದಿಗಳ) ಪರಿಷತ್ತಿನ ೯ ನೇ ಅಧಿವೇಶನವು ೨೭ ನೇ ತಾರೀಖಿನ ದಿವಸ ಅಕೋಲೆಯಲ್ಲಿ ಜರಗಿತು. ಸದಾಶಿವಸ್ವಾಮಿ ಅಯ್ಯರವರು ಅಧ್ಯಕ್ಷರಿದ್ದರು. ಇವರು ರಿಫಾರ್ಮ ಬಂದಿನಿಂದ ಇತ್ತೀಚಿನ ರಾಜಕೀಯ ಪರಿಸ್ಥಿತಿಯನ್ನು ವರ್ಣಿಸಿ ಮೊಸ್ಲಿನ ಅರಿಸುವಿಕೆಯ ವಿಷಯವನ್ನು ಎತ್ತಿ ಸ್ವರಾಜ್ಯವಾದಿಗಳ ಪ್ರಯತ್ನಗಳೆಲ್ಲ ಹೇಗೆ ನಿಷ್ಫಲವಾದುವೆಂಬುದನ್ನು ತೋರಿಸಿದರು. ಸ್ಟ್ಯಾಟ್ಯೂಟರೀ ಕಮಿಶನ್ ನೇಮಿಸುವ ವೇಳೆಯು ಬಂದಿದ್ದು, ಸರಕಾರದವರು ಹಿಂದೀ ರಾಷ್ಟ್ರದವರೊಡನೆ ಉದಾರತನದ ಧೋರಣವನ್ನು ಸ್ವೀಕರಿಸಬೇಕೆಂದು ಅಧ್ಯಕ್ಷರು ಒತ್ತಿ ನುಡಿದರು. ಶಿವಸ್ವಾಮಿಯವರು ಕೊನೆಕೊನೆಗೆ ಅಂದದ್ದೇನಂದರೆ ಉದಾರ ಪಕ್ಷದವರು ಶಕ್ಯವಿದ್ದಲ್ಲಿ ಉಳಿದ ಪಕ್ಷದವರೊಡನೆ ಸಹಕಾರ ಮಾಡಲು ಸಿದ್ಧವಿರುವರು. ಆದರೆ ತನ್ನ ತತ್ವವನ್ನು ಬಿಡಲಿಕ್ಕೆ ಆಗಲೀ ತನ್ನ ಮುಖ್ಯತತ್ವಗಳಿಗೆ ಅಡ್ಡಿಯನ್ನುಂಟುಮಾಡುವಂತಹ ಪಕ್ಷದಲ್ಲಿ ಸೇರಿ ಬೆರೆತು ಹೋಗಲಿಕ್ಕಾಗಲೀ ಅದು ಸಿದ್ಧವಿಲ್ಲ.

ಬ್ರಾಹ್ಮಣೇತರ ಪರಿಷತ್ತು ... ಮದ್ರಾಸಿನಲ್ಲಿ ಪನಗಲ್ಲ ರಾಜರವರ ಅಧ್ಯಕ್ಷತೆಯಲ್ಲಿ ಕೂಡಿತ್ತು. ಪನಗಲ್ಲ ರಾಜರು ಹೇಳಿದ್ದೇನಂದರೆ ಬ್ರಾಹ್ಮಣೇತರ ಚಳವಳಿಯು ಎಲ್ಲರಿಗೂ ಸರಿಯಾಗಿ ಅನುಕೂಲತೆಗಳನ್ನು ಒದಗಿಸಿಕೊಡಲು ಹುಟ್ಟಿರುವದು.

ಮಹಾತ್ಮಾ ಗಾಂಧೀಯವರು ಖಾದೀ ಪ್ರದರ್ಶನವನ್ನು ೨೫ ನೇ ತಾರೀಖಿನ ದಿನ ಪ್ರಾರಂಭಿಸಿದರು. ಅಗ್ಗ ಕೊಳ್ಳುವ ಕಂಗಾಲಾದ ಬಡಜನರಿಗೆ ಖಾದಿಯೇ ಕಾಮಧೇನವು ಎಂದು ಪುನಃ ತಮ್ಮ ನಂಬುಗೆಯನ್ನು ವ್ಯಕ್ತಪಡಿಸಿದರು.

ಮೈಸೂರ ಕರ್ನಾಟಕ.

ಬೆಂಗಳೂರಿನ ಉದ್ಯೋಗ ಕಲಾಕ್ರಾಂತದ ಒಂದು ಭಾಗವು ಬೆಂಕಿಯಿಂದ ಸುಟ್ಟಿತು.

ದಿ ಶಿಯನಾಟಿಕ್ ಗೌರ್ನಮೆಂಟ ಸೆಕ್ಯೂರಿಟಿ ಲಾಯಿಫ ಅಶ್ಯೂರನ್ಸ ಕಂ. ಬೆಂಗಳೂರ ಸಿಟಿ.

ಪ್ರಕಟನೆ.

ಈ ಕಂಪನಿಯ ಬಾಂಡು ಹೋಲ್ಡರುಗಳ ಚೀಟಿ ಎತ್ತುವ ಕ್ರಮವು ೧೯೨೩ ನೇ ಇಸ್ವಿಯ ಜುಲೈ ೩೧ ನೇ ತಾ॥ ದಿವಸ ೪-೩೦ ಗಂಟೆಗೆ ಈ ಕಂಪನಿಯ ಹೆಡ್ ಆಫೀಸಿನ ಚುನಾಯಿಸಲ್ಪಟ್ಟ ಬೋರ್ಡ ಆಫ್ ಡಾಯರೆಕ್ಟರ್ಸ ಚೇಅರಮನರಾದ ರಾವಸಾಹೇಬ ಡಾಕ್ಟರ, ಕೆ. ಎಸ್. ಭಾಸ್ಕರ L. R. C. P M. R. C. S. ಇವರ ಅಧ್ಯಕ್ಷತೆಯಲ್ಲಿ ನಡೆದು ಕೆಳಗೆ ಕಾಣಿಸಿದ ಸದ್ಗ್ರಹಸ್ಥರಿಗೆ ಬಡ್ಡಿ ಮತ್ತು ವತ್ತಿ ಇಲ್ಲದೆ ೧೦೦೦ ರೂ. ಸಾಲವು ದೊರೆಯಬೇಕೆಂದು ನಿರ್ಣಯವಾಯಿತುಃ—

(೧) ಎಲ್. ಬಿ. ಸಿ. ನಂ. ೬೪೪. ಮಿ. ಮಹಮ್ಮದ ಯುಸುಫ ಡಿಸ್ಟಿಲರಿಗಾರ್ಡ, ನಾರಾಯಣ ಗುಡ ಡಿಸ್ಟಿಲರಿ, ಹೈದರಾಬಾದ್ಕೈಕನ್ನರೂ ೧೦೦೦

(೨) ಎಲ್. ಬಿ. ಸಿ. ನಂ. ೫೧೮ ಮಿ. ಸೈಯದ್ ಜಹೂರಅಲಿ ಬಿ. ಎ ಜಿ. ಟಿ. ಶಾಖಾಗಳ ಡಿವಿಜನಲ್ ಇನ್ಸ್ಪೆಕ್ಟರ್ ಔರಂಗಬಾದ ಸಿಟಿ, ನೈಜಾಮ ಇಲಾಖಾ ರೂ. ೧೦೦೦ ..

(೩) ಎಲ್. ಬಿ. ಸಿ ನಂ. ೨೦೭೯ ಮಿ. ದೇವನ ವಾಸುದೇವನ ನಂಬೂದ್ರಿಪಾದ ಜಮೀನದಾರ ಐಡಪಲ್ಲಿ ಅಲ್ವಾಯಿ ರೂ ೭೦೦

(೪) ಬಾಂಡ ನಂಬರು ೯೭೩೦ ಮಿ. ಶಂಕರಪ್ಪಾ ಬಸಪ್ಪಾ ದೆ-ವನಕೊಂಡ, ಅಕ್ಕಸಾಲೆ ಬೆಡಿಗಾರಗಲ್ಲಿ ಹುಬ್ಬಳ್ಳಿ ರೂ. ೧೦೦೦

(೫) ಬಾಂಡ ನಂಬರು ೧೪೨೦೭ ಮಿ. ಷೇಕ ಬಾಪುಮಿಯಾ ಷೇಕ ಮಹಮ್ಮದ ನಳ ತಯಾರ ಮಾಡುವವರು ೭೧೫ ಭವಾನಿಪೇಟ ಪುನಾ ೧೦೦೦

ಬಿ. ಎನ್. ಆರಾಧ್ಯ

ಚೀಫ ಏಜಂಟ ಹುಬ್ಬಳ್ಳಿ (ಮುಂಬಯಿ ಇಲಾಖಾ.)

ಕಿರ್ಲೋಸ್ಕರ

ಕಬ್ಬಿಣ ನೇಗಿಲುಗಳು

ಹಂಗಾಮು (ಸುಗ್ಗಿ) ಸಮೀಪಿಸಿತು. ಈ ವರ್ಷ ಮಳೆ ಬೆಳೆ ಚನ್ನಾಗಿರುವುದರಿಂದ ರೈತರು ಹೊಸ ಹೊಸ ಭೂಮಿಯನ್ನು ಸಾಗುವಳಿ ಮಾಡಲಿಕ್ಕೆ ಅನುಕೂಲವಾಗಿರುವುದು. ಕಿರ್ಲೋಸ್ಕರ ನೇಗಿಲು ನಂ. ೧೧, ೯, ೮ ಇವು ಒಕ್ಕಲಿಗರಿಗೆ ಬಹಳೇ ಉಪಯೋಗಬೀಳುತ್ತವೆ. ಈ ವರೆಗೆ ಲಕ್ಷಾವಧಿ ಜನರು ಇವುಗಳನ್ನುಪಯೋಗಿಸಿ, ಅನುಭವ ಪಡೆದುಕೊಂಡಿರುವರು. ಈ ನೇಗಿಲುಗಳು ಪರದೇಶೀ ನೇಗಿಲುಗಳಿಗಿಂತಲೂ ಉತ್ತಮವಿರುತ್ತವೆ. ಬಿಡಿ ಭಾಗಗಳು ನಮ್ಮಲ್ಲಿ ತಯಾರಾಗ್ತುವೆ.

ಸವಿಸ್ತಾರ ಸಂಗತಿಯ ಬಗ್ಗೆ ಹೊಸ ಕ್ಯಾಟಲಾಗನ್ನು ತರಿಸಿಕೊಳ್ಳಿರಿ.

ಕಿರ್ಲೋಸ್ಕರ ಬಂಧು, ಲಿಮಿಟೆಡ್. } ಕಿರ್ಲೋಸ್ಕರವಾಡಿ ಜಿಲ್ಲೆ ಸಾತಾರಿ

ಗವ್ಹರ್ನಮೆಂಟನಲ್ಲಿ ರಜಿಸ್ಟರ ಮಾಡಲ್ಪಟ್ಟ ಜಗತ್ಪ್ರಸಿದ್ಧನಾದ

ಎಲ್ಲ ರೋಗಗಳಿಗೆ ಒಂದೇ ಔಷಧ.

ಅರ್ಕಶಫಾ ಅಥವಾ ಆರೋಗ್ಯ ಬಿಂದು

ಪ್ರವಾಶಿಮಿತ್ರ. ಮೂರ್ತಿಮಂತವೈದ್ಯ

ಇದು ಅರ್ಕವಿದ್ದು ಇದರಲ್ಲಿ ನೀರು ರಸಾಯನ ಕೂಡಿರುವದಿಲ್ಲ. ಎಷ್ಟೋ ದಿವಸ ಇಟ್ಟರೂ ಕೆಡುವದಿಲ್ಲ. ಇದು ಪ್ರಸಿದ್ಧವಾಗಿ ೧೭ ವರ್ಷಗಳು ಜಗತ್ತ ಬಂದವು ಈವತ್ತಿನವರಿಗೆ ಎರಡು ಲಕ್ಷಗಳವರಿಗೆ ಬಾಟ್ಲಿಗಳು ಖರ್ಚಾಗಿರುತ್ತವೆ. ಇದರ ಬಗ್ಗೆ ನಮ್ಮ ಹತ್ತಿರ ಬೇಡುವ ಪತ್ರಗಳು ವ್ಹಿ. ಪಿ. ಮಾಡಿದ ದಾಖಲೆಗಳು ಪೋಷ್ಟ ಪಾವತಿಗಳು ಬಾರನಿಸಿ ಬುಕ್ಕುಗಳು ಇರುತ್ತವೆ. ಬೇಕಾದವರು ಖಾತ್ರಿಮಾಡಿಕೊಳ್ಳಬೇಕು. ಇದು ಸಟೆಯೆಂದು ಸಿದ್ಧ ಮಾಡಿಕೊಟ್ಟವರಿಗೆ (೫೦೦) ಐದುನೂರು ರೂಪಾಯಿಗಳು ಇನಾಮು ಕೊಡಲ್ಪಡುವವು. ಈ ಔಷಧವು ಅಮೃತಸರಿಯುಳ್ಳದ್ದು ಇರುವ ಕಾರಣ ಯಾವತ್ತು ರೋಗಕ್ಕೆ ತಾತ್ಕಾಲ ಗುಣಕೊಡುವದು. ಮತ್ತು ಎಂಥಾ ಭಯಂಕರ ರೋಗವು ಇದ್ದರೂ ಈ ಆರೋಗ್ಯಬಿಂದುವಿನಿಂದ ಗುಣಬಂದ ಬಗ್ಗೆ ಎಷ್ಟೋ ಸರಟಿಫಿಕೀಟುಗಳು ನಮ್ಮ ಹತ್ತಿರ ಹಾಜರ ಇರುತ್ತವೆ. ಇವನ್ನು ಬರೆಯಲಿಕ್ಕೆ ಕಾಗದವು ಸಾಲದು. ಕಾರಣ ಒಂದುಸಾರೆ ತಕ್ಕೊಂಡು ಅನುಭವ ನೋಡಿರಿ. ರೋಗದ ನಾಮಗಳುಃ— ಕ್ಷಯರೋಗ, ಬಾಣಂತಿರೋಗ, ಹಡೆದನಂಜು ದಮ್ಮು, ಕೆಮ್ಮು, ಆಡಗ್ಯೆ, ಕಾಲರಾ (ಮಾರಿಕಾ), ಪ್ಲೇಗ, ಇನ್ಫ್ಲುಯಂಜಾಜ್ವರ, ಅನೇಕ ಪ್ರಕಾರ ಜ್ವರ, ಗುಲ್ಮರೋಗ, ಮಲರೋಗ, ಗಂಡಮಾಲೆ, ನಾರಹುಣ್ಣು, ಶಸ್ತ್ರಗಾಯ, ಕಿವಿಶೂಲಿ ಮೂಗಿನೊಳಗಿನ ಪಿನಸಿ, ಮೊದಲಾದವುಗಳು. ಕಣ್ಣುನೋವು ಕಣ್ಣಿನೊಳಗೆ ಹೂವು ಬೀಳೋಣ, ಅಜೀರ್ಣ ಹೊಟ್ಟೆಶೂಲಿ, ಸಣ್ಣ ಕೂಸುಗಳಿಗೆ ಆದ ರೋಗಗಳು ಬಾಲಗ್ರಹ, ಅರಿವಿ ಮುಟ್ಟದೋಷ ಹೊಟ್ಟೆ ದೊಡ್ಡದಾಗೋಣ, ಕೋಡಿಗೆಮ್ಮು; ವೈ ಹೊರಬೀಳೋಣ, ಮತ್ತು ಡಾಕ್ಟರಿಗೆ ವೈದ್ಯರಿಗೂ ಸಹ ತಿಳಿಯದೆ ಇದ್ದ ರೋಗಗಳು ಈ ಆರೋಗ್ಯ ಬಿಂದುವಿನಿಂದ ಖಾತ್ರಿಯಿಂದ ಗುಣಬರವದು. ಚೇಳು ವ ಸರ್ಪದಂಶಕ್ಕೆ ತತಕ್ಷಣ ಗುಣಬರುವದು. ೧ ತಾಲುತೊಲಿ ಬಾಟ್ಲಿ ಒಂದಕ್ಕೆ ೨ ರೂಪಾಯಿ ನಮೂನೆ ಉದ್ರಿತ ೫ ಆಣೆ ತೂಕದ ಬಾಟ್ಲಿ ಒಂದಕ್ಕೆ ೮ ಆ. ಖರ್ಚು ಬೇರೆ. ೮ ಆಣೆಯ ಒಂದೇ ಬಾಟ್ಲಿ ಕಳಿಸಲಾಗದು. ೨ ರೂಪಾಯಿ ಆರ್ಡರ ಬಂದರೆ ಕಳಿಸಲಾದೀತು. ಅದರ ಖರ್ಚು ೭ ಆಣೆ ಚಿಕ್ಕ ಬಾಟ್ಲಿ ಒಂದು ಡಜನ ತಕ್ಕೊಳ್ಳುವವರಿಗೆ ನಾಲ್ಕುಬಾಟ್ಲಿಗಳು ಕಮಿಶನ್ ಸಿಗುತ್ತವೆ. ಖರ್ಚು ೯ ಆಣೆ. ಡಜನದ ಒಳಗಾಗಿ ಹನ್ನೊಂದು ಬಾಟ್ಲಿ ತಕ್ಕೊಂಡರೆ -ಕಮಿಶನ್ ಇಲ್ಲ. ವೆಚ್ಚ ೭ ಆಣೆ. ೧ ತಾಲುತೊಲಿ ಬಾಟ್ಲಿ ಒಂದೇಸಾರೆ ಮೂರು ತಕ್ಕೊಳ್ಳುವವರಿಗೆ ವಂದು ಬಾಟ್ಲಿ ಕಮಿಶನ್ ಸಿಗುತ್ತದೆ. ಖರ್ಚು ೯ ಆಣೆ.ವಂದು ಎರಡುತಕ್ಕೊಂಡರೆ ಕಮಿಶನಿಲ್ಲ ಮಿ. ೭ ಆ. ಪ್ರಮಾಣ ಅನುಪಾನ ಪತ್ರಿಕೆ ಕನ್ನಡ ಮತ್ತು ಮರಾಠಿ ಭಾಷೆಯಲ್ಲಿ ಛಾಪಿಸಿರುತ್ತವೆ. ಪಸಂದಿಪ್ರಕಾರ ಬಾಟ್ಲಿಗೂ ತಗುವದು ಈ ಔಷಧವು ಖೊಟಿ ಹೊರಟರೆ ಶಿಲ್ಲಕ ಉಳಿದ ಮಾಲು ಪರತ ತಕ್ಕೊಂಡು ಅದರ ಬೆಲೆ ವಾಪಸ ಕೊಡುವೆವು. ಈ ಅರ್ಕಶಫಾ ಇಡೀ ಕರ್ನಾಟಕದಲ್ಲೆಲ್ಲಾ ಹೋಗುತ್ತದೆ. ಇದರ ಬಗ್ಗೆ ನಮಗೆ ಬಹಳ ಶಿಫಾರಸ್ ಮಾಡಬೇಕಾಗಿಲ್ಲಾ ತಮ್ಮ ವಿಳಾಸ ಕನ್ನಡದಲ್ಲಿ ಅಥವಾ ಇಂಗ್ಲೀಷದಲ್ಲಿ ಪೋಷ್ಟ ಜಿಲ್ಹಾ ಪಗೈರೆಸ್ಪಷ್ಟವಾಗಿ ಬರೆಯಿರಿ ನಮ್ಮ ವಿಳಾಸಃ— **ಎಚ್. ಎಮ್. ಮುಲ್ಲಾ-**

ಸಂಪಾದಕ ಅರ್ಕ ಶಫಾಹೆಡ್ ಆಫಿಸ ಪೋಷ್ಟ ಶಹಾಪೂರ (ಬೆಳಗಾಂ

ಕನ್ನಡ ಬಂಧು ... ನಿಮ್ಮ ಸಲುವಾಗಿಯೆ ... ಶಿಕ್ಷಣವನ್ನು ಕೊಡುವ



ಮೋಟಾರ ಡ್ರಾಯವ್ಹಿಂಗ ಕ್ಲಾಸ

ನಮ್ಮ ವರ್ಗದಲ್ಲಿ ಕನ್ನಡ ಜನರ ದಟ್ಟಣೆ ಇರುವದರಿಂದ, ಅವರ ಸಲುವಾಗಿ ಕನ್ನಡ ಶಿಕ್ಷಕರನ್ನು ನಿಯಮಿಸಿ, ಕನ್ನಡ ಭಾಷೆಯಲ್ಲಿ ಮೋಟಾರ ನಡೆಯಿಸುವ ಶಿಕ್ಷಣವನ್ನು ಕೊಡುವ ಏರ್ಪಾಡು ಮಾಡಿದೆ. ಬೇರೆ ಬೇರೆ ಪ್ರಕಾರದ ಮೋಟಾರಗಳನ್ನು ನಡೆಯಿಸುವದು ಅವುಗಳೊಳಗಿನ ಯಂತ್ರಗಳನ್ನು ಬಿಚ್ಚುವದು ಮತ್ತು ಜೋಡಿಸುವದು. ಅವುಗಳೊಳಗಿನ ಕಟ್ಟುಜಟ್ಟು ಮುರಿದ ಹರಿದ ಭಾಗಗಳ ದುರುಸ್ತಿಯನ್ನು ಮಾಡುವದು ಇವೆಲ್ಲವುಗಳನ್ನು ನಾವು ಪ್ರತ್ಯಕ್ಷ ವಿದ್ಯಾರ್ಥಿಗಳ ಕೈಯಿಂದಲೇ ಮಾಡಿಸುವೆವು ಆದ್ದರಿಂದಲೇ ನಮ್ಮ ವಿದ್ಯಾರ್ಥಿಗಳು ಪರೀಕ್ಷೆಯಲ್ಲಿ ... ಸುರಿತವರಾಗುತ್ತಾರೆ ಆದ್ದರಿಂದ ಕನ್ನಡ ಜನರಿಗೆ ನಮ್ಮ ವರ್ಗವು ಹೆಚ್ಚು ಪ್ರಿಯಕರವಾಗಿದೆ ವಿದ್ಯಾರ್ಥಿಗಳಿಗೆ ಪೂರ್ಣ ಶಿಕ್ಷಣವನ್ನು ಕೊಟ್ಟು, ಬ್ರಿಟಿಶ್ ಹಿಂದುಸ್ಥಾನದಲ್ಲೆಲ್ಲ ಮೋಟಾರ ನಡೆಯಿಸಲು, ಸರಕಾರದ ಪರವಾನಗಿಯನ್ನು ತೆಗೆಸಿಕೊಡಲಾಗುವದು. ನಮ್ಮಲ್ಲಿ ಅಮೇರಿಕೆಯ ಪದ್ಧತಿಗನುಸಾರವಾಗಿ ಸಶಾಸ್ತ್ರ ಮೋಟಾರ ನಡೆಯಿಸಲು ಕಲಿಸುವ ರೀತಿಯು ಬಹಳೇ ಸುಲಭವಾಗಿದ್ದು, ಮನಸಿಗೆ ಸಮಾಧಾನವಾಗುತ್ತದೆ. ಒಮ್ಮೆ ಅನುಭವವನ್ನು ಪಡೆದು ನೋಡಿರಿ. ಇಷ್ಟೆಲ್ಲ ಶಿಕ್ಷಣವು ಬೇರೆ ಕಡೆ ಎಲ್ಲಿಯೂ ಇಷ್ಟು ಕಡಿಮೆ ಫೀಗೆ ದೊರೆಯುವದಿಲ್ಲೆಂಬುದನ್ನು ಲಕ್ಷದಲ್ಲಿಡಿರಿ.

ಕಲಿಸುವ ಅವಧಿಯು (ಕೋರ್ಸ) ಒಂದು ತಿಂಗಳ! ಫೀ ಬಹಳ ಸ್ವಲ್ಪ! ಹೆಚ್ಚಿನ ಮಾಹಿತಿಗಾಗಿ ತೀವ್ರವೇ ಬರೆದುಕೊಳ್ಳಿರಿ!

ವಿಳಾಸ:—ಕುಲಕರ್ಣಿ ಮೋಟಾರ ಸ್ಕೂಲ.

೪೯೫ ಶನಿವಾರ ಪೇಠ ಜಮಖಂಡಿಕರ ವಾಡೆ ಪುಣೆ ಶಹರ.

ಪುಕ್ಕಟೆ! ಪುಕ್ಕಟೆ!! ಪುಕ್ಕಟೆ!!!

ಕಂತುಗಳನ್ನು ಎಂದೂ ಕೊಡಬೇಡಿ!

ನೀವು ವಿಮೆ ಇಳಿಸಬೇಕಾಗಿದ್ದರೆ ನಾವು ನಿಮ್ಮ ಕಡೆಯಿಂದ ಹಣವನ್ನು ತೆಗೆದುಕೊಳ್ಳದೆ ಕೇವಲ ಪುಕ್ಕಟೆಯಾಗಿ ನಿಮ್ಮ ಜೀವದ ವಿಮೆ ಇಳಿಸುವೆವು.

ವಿಶೇಷ ಸಂಗತಿಗಳಿಗಾಗಿ ... ಬರೆಯಿರಿ.

ಇನ್‌ಸ್ಪೆಕ್ಟರ ಆಫ್ ಏಜೆನ್ಸಿ

ದಿ ವೇನಸ್ ಅಶ್ಯೂರನ್ಸ ಬ್ಯಾಂಕ ಲಿಮಿಟೆಡ್

ಧಾರವಾಡ ಬ್ರ್ಯಾಂಚ ಧಾರವಾಡ.

ಡಾಕ್ಟರ ಒಸವಾಲ್ಡ ಸಂಗಣ್ಣ ...

ಮೆಡಿಕಲ್ ಪ್ರ್ಯಾಕ್ಟೀಶನರ ಮತ್ತು ಡೆಂಟಿಸ್ಟ ... ಕೋಟೆ.

ನಾವು ಹಲ್ಲುಗಳ ರೋಗಗಳನ್ನು ... ಬಿಚ್ಚುವವು ಹಲ್ಲುಗಳ ರೋಗಗಳನ್ನು ಕಳೆದು ... ರಕ್ಷ... ವನ್ನು ತೀವ್ರಸಿಕ್ಕುವೆವು. ... ದಿಂದ ಸ್ವಚ್ಛ ಮಾಡುವೆವು ಅಗಳಾಡುವ ಹಲ್ಲುಗಳನ್ನು ಏನೂ ನೋವಾಗದಂತೆ ಕಿತ್ತುವೆವು ಬಿದ್ದ ಹಲ್ಲುಗಳ ಸ್ಥಳದಲ್ಲಿ ತಕ್ಕಷ್ಟು ಹೊಸಹಲ್ಲುಗಳನ್ನು ಕೂಡಿಸುವೆವು. ಪೊಳ್ಳಾದ ಹಲ್ಲುಗಳಲ್ಲಿ ಅವರ ಇಚ್ಛೆಯ ಪ್ರಕಾರ ಬಂಗಾರ, ಬೆಳ್ಳಿ, ಸಿಮೆಂಟುಗಳಿಂದ ತುಂಬಿ ಅವುಗಳ ಕ್ರಿಯೆಯು ಸಾಗುವಂತೆ ಮಾಡುವೆವು ಹಲ್ಲುಗಳ ಪೂರ್ಣ ಸೆಟ್ಟು ಕೂಡಿಸಿ ಮುಖಕ್ಕೆ ಸೌಂದರ್ಯ ತರುವೆವು

S. C. Nara[illegible]acharya & Co.

Chaukhamba Benares City.

ನಮ್ಮಲ್ಲಿ ಎಲ್ಲಾ ತರದ ರೇಷ್ಮಿ ಪೀತಾಂಬರ, ಜರಿಕಣ, ಜರಿಸೀರೆ, ಕಾಶ್ಮೀರಿ ಶಾಲು, ಶಿವನಾರಿ ರುದ್ರಾಕ್ಷಿ, ಕಸ್ತೂರಿ, ಲಿಂಗಗಳೂ, ಸ್ಫಟಿಕವು, ಈ ಮೊದಲಾದ ಮಾಲುಗಳ ಕ್ಯಾಟಲಾಗ ಕೋರುವವರಿಗೆ ಇನಾಮಾಗಿ ಕಳಿಸಲಾಗುವುದು

ಎಸ್. ಸಿ. ನಾರಾಯಣಾಚಾರ್ಯ ಕಂಪನಿ ಚೌಕಾಂಬಾ ...

ಈ ಪತ್ರಿಕೆಯು ... ರಾಯರ ಮಕ್ಕಳಾದ ಶ್ರೀನಿವಾಸರಾಯರಿಂದ ಬಾಗಲಕೋಟೆ ... ದಲ್ಲಿ ಮುದ್ರಿತವಾಗಿ ಅಲ್ಲಿಯೇ ಪ್ರಸಿದ್ಧಿಸಲ್ಪಟ್ಟಿತು.